
ನಾಗಮಲ್ಲಿ



ಶ್ರೀ ನಾಗೇಗೌಡ ಗೌರವ ಗ್ರಂಥ

೧೯೭೯



ನಾಗವಲ್ಲಿ

ಶ್ರೀ ನಾಗೇಗೌಡ ಗೌರವ ಗ್ರಂಥ

ಸಂಪಾದಕರು

ಡಾ. ಜೀ. ಶಂ. ಪರಮಶಿವಯ್ಯ
ಹ. ಕ. ರಾಜೇಗೌಡ
ಪ್ರಧಾನ್ ಗುರುದತ್ತ

ಶ್ರೀ ಎಚ್. ಎಲ್. ನಾಗೇಗೌಡ ಸನ್ಮಾನ ಸಮಿತಿ
ಚಾಮರಾಜಪೇಟೆ : : ಬೆಂಗಳೂರು-೧೮

NAGAVALLI, Felicitation Volume, presented to Sri H. L. Nage Gowda, a well known writer in Kannada ; Editors : Dr. J. S. Paramashivaiah, H. K. Raje Gowda, Pradhan Gurudatta ; Publishers : Sri H. L. Nage Gowda Felicitation Committee, Bangalore-18. First Edition 1979, pp xvi + 604 + 274.
Price Rs. 60-00

ಸಾದಾ ಪ್ರತಿ : ರೂ. 60-00
ಉತ್ತಮ ಪ್ರತಿ : ರೂ. 85-00

ರಕ್ಷಾಪುಟದ ನಿಸರ್ಗಚಿತ್ರ : ಕಲಾವಿದ ಪಿ. ಆರ್. ತಿಪ್ಪೇಸ್ವಾಮಿ

ಮುದ್ರಕರು
ಶ್ರೀ ಮೀರಾ ಪ್ರಿಂಟರ್ಸ್, ಶಿವರಾಮಪೇಟೆ, ಮೈಸೂರು-೧

ಸನ್ಮಾನ ಸಮಿತಿಯ ಪರವಾಗಿ

ದಕ್ಷ ಆಡಳಿತಗಾರರೂ ಖ್ಯಾತ ಸಾಹಿತಿಗಳೂ ಒಬ್ಬರೇ ಆಗಿರುವುದು ನಮ್ಮಲ್ಲಿ ತುಂಬ ವಿರಳ, ಅಂಥ ಪ್ರತಿಭಾವಂತ ಸವ್ಯಸಾಚಿಗಳಲ್ಲಿ ಶ್ರೀ ಎಚ್. ಎಲ್. ನಾಗೇಗೌಡರು ಒಬ್ಬರು. 1939ರಲ್ಲಿ ಸರಕಾರಿ ಸೇವೆಗೆ ಸೇರಿದ ನಾಗೇಗೌಡರು ತಮ್ಮ ಆಡಳಿತಾನುಭವದಿಂದ ತಹಶೀಲ್ದಾರರಾಗಿ, ಅಸಿಸ್ಟೆಂಟ್ ಕಮೀಷನರಾಗಿ, ಜಿಲ್ಲಾಧಿಕಾರಿಯಾಗಿ, ಅನೇಕ ಮಂಡಲಿಗಳ ಡೈರೆಕ್ಟರು ಮತ್ತು ಅಧ್ಯಕ್ಷರು ಆಗಿ, ಲೇಬರ್ ಕಮೀಷನರಾಗಿ, ಎಂಡೋಮೆಂಟ್ ಕಮೀಷನರಾಗಿ, ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿ ದಕ್ಷತೆಯಿಂದ ಸೇವೆ ಸಲ್ಲಿಸಿ ಸರ್ಕಾರದ ಮತ್ತು ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಹಾಗೆಯೇ ಸಾಹಿತ್ಯ ಕ್ಷೇತ್ರದಲ್ಲಿಯೂ ಕವಿತೆ, ಕಾದಂಬರಿ, ಪ್ರಬಂಧ, ಜಾನಪದ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ ಇತ್ಯಾದಿ ವಿವಿಧ ಪ್ರಕಾರಗಳಲ್ಲಿ ಉತ್ತಮ ಕೃತಿಗಳನ್ನು ರಚಿಸಿ ಹೆಸರುಗಳಿಸಿದ್ದಾರೆ. ಇವರ ಅನೇಕ ಕೃತಿಗಳು ಪುನರ್ಮುದ್ರಣವನ್ನು ಕಂಡಿರುವುದೇ ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಇವರ ಕೆಲವು ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನದ ಮನ್ನಣೆ ದೊರೆತಿರುವುದು ಇವರ ಸಾಹಿತ್ಯ ಮೌಲ್ಯವನ್ನು ಎತ್ತಿ ತೋರಿಸುತ್ತದೆ.

ಈಗ ಶ್ರೀ ನಾಗೇಗೌಡರಿಗೆ 62 ವರ್ಷ ತುಂಬಿದೆ. ಸರಕಾರಿ ಸೇವೆಯಿಂದ ನಿವೃತ್ತರಾಗಿದ್ದಾರೆ, ನಾಡು ನುಡಿಗೆ ಇವರು ಸಲ್ಲಿಸಿದ ಮಹತ್ವದ ಸೇವೆಯನ್ನು ಗುರುತಿಸಿದ ಅನೇಕ ಸಹೃದಯರು ಶ್ರೀಯುತರಿಗೆ ತಮ್ಮ ಗೌರವ ಸೂಚಿಸಲು ರಾಜ್ಯ ಮಟ್ಟದಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಬೇಕೆಂದು ತೀರ್ಮಾನಿಸಿದುದು ಉಚಿತವೂ ನ್ಯಾಯವೂ ಆಗಿದೆ. ಈ ಸಮಾರಂಭದ ವಿವಿಧ ಕಾರ್ಯಗಳನ್ನು ರೂಪಿಸಿ, ಅವುಗಳನ್ನು ಯಶಸ್ವಿಯಾಗಿ ನಡೆಸಲು ರಾಜ್ಯಮಟ್ಟದ ಸಮಿತಿಯೊಂದು ರಚನೆಯಾಗಿದೆ. ನಾನು ಆ ಸಮಿತಿಯ ಅಧ್ಯಕ್ಷನಾಗಿರುವುದು ನನ್ನ ಸೌಭಾಗ್ಯವೆಂದೇ ಭಾವಿಸಿದ್ದೇನೆ.

ಶ್ರೀ ನಾಗೇಗೌಡರ ಅಭಿಮಾನಿಗಳ ಅಪೇಕ್ಷೆಯಂತೆ ಶ್ರೀಯುತರಿಗೆ ಬೆಂಗಳೂರು ನಗರದಲ್ಲಿ ಉನ್ನತಮಟ್ಟದಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸುವುದು, ಸಮಾರಂಭದ ಅಂಗವಾಗಿ ಅಭಿನಂದನಾ ಗ್ರಂಥ ಹಾಗೂ ನೆನಪಿನ ಸಂಚಿಕೆ ಪ್ರಕಟಿಸುವುದು, ಕರ್ನಾಟಕದ ಮೂರೂ ವಿಶ್ವವಿದ್ಯಾಲಯಗಳಿಗೆ ಗೌಡರ ಹೆಸರಿನಲ್ಲಿ ದತ್ತಿ ನೀಡಿ ಪ್ರತಿವರ್ಷ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸುವಂತೆ ಮಾಡುವುದು,

ಅವರ ಹೆಸರಿನಲ್ಲಿ ಒಂದು ಟ್ರಸ್ಟ್ ಸ್ಥಾಪಿಸಿ,ಜಾನಪದ ಮತ್ತು ಸಾಹಿತ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವುದು. ಈ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಸಮಿತಿ ಕಾರ್ಯವನ್ನು ಆರಂಭಿಸಿತು. ಈ ಎಲ್ಲ ಕಾರ್ಯಗಳು ಒಬ್ಬ ವ್ಯಕ್ತಿಯ ಹೆಸರಿನಲ್ಲಿ ನಡೆದರೂ ಇದರ ಪ್ರಯೋಜನ ಸಾರ್ವಜನಿಕವಾಗಿ ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರದ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹದಾಯಕವಾಗಿರುತ್ತದೆ. ಲಕ್ಷಾಂತರ ರೂಪಾಯಿ ವೆಚ್ಚ ತಗಲುವ ಈ ಕಾರ್ಯಗಳು ಸಾರ್ವಜನಿಕರ ಸಹಾಯ ಸಹಕಾರಗಳಿಲ್ಲದಿದ್ದರೆ ಯಶಸ್ವಿಯಾಗುವುದು ಕಷ್ಟ. ಎಂದೇ ಸಾರ್ವಜನಿಕರ ಸಹಾಯ ಪಡೆಯಲು ಸಮಿತಿಯ ಹೆಸರಿನಲ್ಲಿ ಒಂದು ಮನವಿಯನ್ನು ಹೊರಡಿಸಲಾಯಿತು. ಈ ಪ್ರಾರ್ಥನೆಗೆ ಮಹಾಜನರಿಂದ ಒಳ್ಳೆಯ ಪ್ರೋತ್ಸಾಹ ದೊರೆಯಿತು. ನಾಡಿನ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಗೌಡರ ಅಭಿಮಾನಿಗಳು ಇದೊಂದು ಪುಣ್ಯ ಕಾರ್ಯವೆಂದು ಭಾವಿಸಿ ತಮ್ಮ ಶಕ್ತಿಮೀರಿ ಕಾಣಿಕೆ ಸಲ್ಲಿಸಿದ್ದಾರೆ. ಕೆಲವರು ಧನಸಂಗ್ರಹಣೆ ಕಾರ್ಯದಲ್ಲಿ ನೆರವಾಗಿದ್ದಾರೆ. ಇವರ ಸಹಾಯವನ್ನು ನಾವು ಎಂದೂ ಮರೆಯುವಂತಿಲ್ಲ. ಸಮಿತಿಯು ಈ ಎಲ್ಲ ಮಹನೀಯರಿಗೂ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಅಭಿನಂದನಾ ಸಮಾರಂಭದ ಅಂಗವಾಗಿ ಸಂಭಾವನಾ ಗ್ರಂಥವನ್ನೂ ನೆನಪಿನ ಸಂಚಿಕೆಯನ್ನೂ ಪ್ರಕಟಿಸಬೇಕೆಂದಿರುವ ವಿಷಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಶ್ರೀ ನಾಗೇಗೌಡರ ಅಭಿಮಾನಿಗಳೂ ಆದ ಡಾ. ಹಾ. ಮಾ. ನಾಯಕರ ಸಂಗಡ ಪ್ರಸ್ತಾಪಿಸಿದಾಗ ಸಂಭಾವನಾ ಗ್ರಂಥದ ಸಂಪೂರ್ಣ ಜವಾಬ್ದಾರಿಯನ್ನು ತಾವು ಹೊರುವುದಾಗಿ ತಿಳಿಸಿ ಅವರು ಮುಂದೆ ಬಂದುದು ಸಮಿತಿಯ ಹೊರೆಯನ್ನು ತುಂಬ ಹಗುರ ಮಾಡಿಕೊಟ್ಟಿತು. ಅವರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಿಭಾಗದ ಪ್ರಾಧ್ಯಾಪಕರಾದ ಡಾ. ಜೀ. ಶಂ. ಪರಮಶಿವಯ್ಯನವರು ಈ ಸಂಭಾವನಾ ಗ್ರಂಥದ ಪ್ರಧಾನ ಸಂಪಾದಕರಾಗಿ ಹಗಲಿರುಳು ದುಡಿದಿದ್ದಾರೆ. ಇವರುಗಳ ಶ್ರಮದಿಂದ ಸಂಭಾವನಾ ಗ್ರಂಥ 'ನಾಗವಲ್ಲಿ' ಎಲ್ಲ ಕಾಲಕ್ಕೂ ಉಪಯುಕ್ತವಾದ ಒಂದು ಉತ್ತಮ ಸಂಭಾವನಾ ಗ್ರಂಥವಾಗಿ ಪ್ರಕಟಗೊಂಡಿದೆ. ಸಮಿತಿಯು ಈ ಇಬ್ಬರೂ ಹಿರಿಯ ವಿದ್ವಾಂಸರುಗಳ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಧನಸಂಗ್ರಹವಾಗುತ್ತದೆ ; ಸಮಾರಂಭ ನಡೆಯುತ್ತದೆ ; ಸಂಭಾವನಾ ಗ್ರಂಥ ಪ್ರಕಟವಾಗುತ್ತದೆ. ಆದರೆ ನಾಗೇಗೌಡರ ಹೆಸರಿನಲ್ಲಿ ದತ್ತಿ ಸ್ಥಾಪಿಸಿ ಆ ಮೂಲಕ ಜಾನಪದ ಮತ್ತು ಸಾಹಿತ್ಯಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವುದು ಸಮಿತಿಯ ಮುಂದಿನ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯನ್ನು ನಿರ್ವಹಿಸಲು ಮಹಾಜನರು ಎಂದಿನಂತೆ ಮುಂದೆಯೂ ಸಮಿತಿಯೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಶ್ರೀ ನಾಗೇಗೌಡರದು ಈಗ ನಿವೃತ್ತ ಜೀವನ. ನಿವೃತ್ತ ಜೀವನ ಎಂದರೆ ಅವರ

ಪಾಲಿಗೆ ಬರೀ ವಿಶ್ರಾಂತಿಯ ಜೀವನ ಅಲ್ಲ ಎನ್ನುವುದು ಅವರನ್ನು ಬಲ್ಲವರಿಗೆಲ್ಲ ತಿಳಿದಿದೆ. ಈಗ ಗೌಡರಿಗೆ ನಿಜವಾಗಿ ಅವರ ಒಲವಿನ ಸಾಹಿತ್ಯಸೃಷ್ಟಿಗೆ, ಸಾಹಿತ್ಯ ಸೇವೆಗೆ ಹೆಚ್ಚಿನ ಅವಕಾಶ ಒದಗಿದೆ. ಅವರಿಂದ ಕನ್ನಡ ನಾಡು ನುಡಿಗಳಿಗೆ ಇನ್ನೂ ಬಹುಕಾಲ ನಿರಂತರ ಸೇವೆ ದೊರೆಯಲಿ ಎನ್ನುವುದೇ ಅವರ ಅಭಿಮಾನಿಗಳೆಲ್ಲರ ಹಾರೈಕೆಯಾಗಿದೆ.

ಬೆಂಗಳೂರು — **ದೇಶಹಳ್ಳಿ ಜಿ. ನಾರಾಯಣ**

೧೧-೨-೧೯೭೯ — ಅಧ್ಯಕ್ಷ

ಸಂಪಾದಕರ ಪರವಾಗಿ

ಕಳೆದ ಮೂರು ದಶಕಗಳಿಂದಲೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೀ ಎಚ್. ಎಲ್. ನಾಗೇಗೌಡರು ಅವ್ಯಾಹತವಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ. ಭಾಷಾಂತರ, ಪ್ರವಾಸ ಸಾಹಿತ್ಯ, ಕಾದಂಬರಿ, ಕತೆ, ಕವಿತೆ, ಜೀವನ ಚರಿತ್ರೆ, ಪ್ರಬಂಧ, ಜಾನಪದ ಹೀಗೆ ಬಹುಮುಖಿ ಸಾಹಿತ್ಯ ಸೇವೆಯ ಮೂಲಕ ಅವರು ಕನ್ನಡದ ಗಣ್ಯ ಲೇಖಕರಲ್ಲೊಬ್ಬರಾಗಿದ್ದಾರೆ. ಅವರ 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳು ದೊಡ್ಡ ಆಕರ ಗ್ರಂಥಗಳೆನಿಸಿವೆ. ದೊಡ್ಡ ಮನೆ, ಸನ್ನೂರು, ಭೂಮಿಗೆ ಬಂದ ಗಂಧರ್ವ, ಸೊನ್ನೆಯಿಂದ ಸೊನ್ನೆಗೆ ಮೊದಲಾದ ಗದ್ಯಕೃತಿಗಳು ನಾಗೇಗೌಡರ ಸತ್ವಯುತ ಬರವಣಿಗೆಗೆ ಸಾಕ್ಷಿಯಾಗಿವೆ. 'ಸೋಬಾನೆ ಚಿಕ್ಕಮ್ಮನ ಪದಗಳು', 'ಪದವೆ ನಮ್ಮ ಎದೆಯಲ್ಲಿ' ಮೊದಲಾದ ಜಾನಪದ ಸಂಕಲನಗಳು ಜಾನಪದ ಕ್ಷೇತ್ರದ ಅವರ ಸಾಧನೆಯನ್ನು ತೋರುತ್ತವೆ. ಭಾಷಾಂತರ ಕಲೆ ನಾಗೇಗೌಡರ ಒಂದು ಸಿದ್ಧಿ ಎಂಬುದನ್ನು ಅವರ ಅನೇಕ ಭಾಷಾಂತರಗಳು ವ್ಯಕ್ತಪಡಿಸುತ್ತವೆ. 'ಸರೋಜಿನಿದೇವಿ', 'ಬೆಟ್ಟದಿಂದ ಬಟ್ಟಲಿಗೆ' ಮೊದಲಾದ ಇತರ ಕೃತಿಗಳು ಅವರ ಕವಿತೆಗಳೂ ಕತೆಗಳೂ ನಾಗೇಗೌಡರ ಬರವಣಿಗೆಯ ವೈವಿಧ್ಯವನ್ನು ಸಾರುತ್ತವೆ. ತಮ್ಮ ವಿಪುಲವಾದ ಕೃತಿಗಳಿಂದ ಕನ್ನಡ ಕಣಜದ ಸಿರಿಯನ್ನು ಹೆಚ್ಚಿಸಿರುವ ಶ್ರೀಯುತರು ಎಲ್ಲ ಕನ್ನಡಿಗರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

ನಾಗೇಗೌಡರು ಸರಕಾರದ ವಿವಿಧ ಹಂತಗಳಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದವರು. ದಕ್ಷ ಆಡಳಿತಕ್ಕೆ, ನಿಷ್ಠಾವಂತ ದುಡಿಮೆಗೆ, ಅನನ್ಯ ಕರ್ತವ್ಯಪರತೆಗೆ ಹೆಸರಾದ ಅವರು ಎಲ್ಲರ ಹೃದಯವನ್ನೂ ಗೆದ್ದುಕೊಂಡವರು ; ತುಂಬ ಜನಪ್ರಿಯತೆಯನ್ನು ಸಾಧಿಸಿದವರು. ಕರ್ನಾಟಕದ ಮೂರು ಮಲೆನಾಡಿನ ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರುಗಳಲ್ಲಿ ಅವರ ಅಧಿಕಾರಿಜೀವನದ ಉತ್ಕರ್ಷವನ್ನು ನಾವು ಕಾಣಬಹುದು. ಇಲ್ಲಿ ಜಿಲ್ಲಾಧಿಕಾರಿಯಾಗಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ಲೇಬರ್ ಕಮಿಷನರಾಗಿ, ಲೋಕ ಸೇವಾ ಆಯೋಗದ ಸದಸ್ಯರಾಗಿ ಉನ್ನತ ಹುದ್ದೆಗಳನ್ನು ಅಲಂಕರಿಸಿದವರು

ಜನಾನುರಾಗಿ ಅಧಿಕಾರಿಯೆನಿಸಿದ್ದ ನಾಗೇಗೌಡರು ತಮ್ಮ ಸಾಹಿತ್ಯ ಸೇವೆಯ ಮೂಲಕ ಶ್ರೇಷ್ಠ ಲೇಖಕರಾಗಿಯೂ ಉತ್ತಮ ಸಾಧನೆಯನ್ನು ತೋರಿದವರು. ತಮ್ಮ ಬದುಕಿನ ಒಂದೊಂದು ಕ್ಷಣವನ್ನೂ ಹೀಗೆ ಸಾರ್ಥಕಪಡಿಸಿಕೊಂಡವರು. ಪಂಜೆ, ಮಾಸ್ತಿ, ಎಂ. ಆರ್. ಶ್ರೀ, ನವರತ್ನ ರಾಮರಾವ್, ಪು ತಿ.ನ. 'ಕಾವ್ಯನಂದ' ಅವರಂತೆ 'ಸಾಹಿತಿ-ಅಧಿಕಾರಿ' ಪರಂಪರೆಯನ್ನು ಕನ್ನಡದಲ್ಲಿ ಮುಂದುವರಿಸಿ ತಮ್ಮದೇ ಆದ ಗಟ್ಟಿಯಾದ

ಕಾಣಿಕೆಯನ್ನು ಅರ್ಪಿಸಿದವರು. ಅವರ ಅಧಿಕಾರಿ ಜೀವನ, ಸಾಹಿತ್ಯಿಕ ಜೀವನ ಒಂದಕ್ಕೊಂದು ಕಳಸವಿಟ್ಟಂತೆ ಅವರಿಗೆ ಕೀರ್ತಿ ಯಶಸ್ಸುಗಳನ್ನು ತಂದುಕೊಟ್ಟಿವೆ.

ನಾಗೇಗೌಡರ ಸನ್ಮಾನ ಸಮಾರಂಭದ ವೇಳೆಗೆ ಅವರನ್ನು ಕುರಿತ ಅಭಿನಂದನ ಗ್ರಂಥವೊಂದನ್ನು ಸಿದ್ಧಗೊಳಿಸುವ ಜವಾಬ್ದಾರಿ ನಮ್ಮ ಪಾಲಿಗೆ ಬಂದುದು ಒಂದು ದೊಡ್ಡ ಗೌರವವೆಂದು ಭಾವಿಸುತ್ತೇವೆ. ಇಲ್ಲಿಗೆ ಸರಿಯಾಗಿ ಎರಡೂವರೆ ತಿಂಗಳ ಹಿಂದೆ ಒಂದು ಸಂಜೆ ಡಾ. ಹಾ. ಮಾ. ನಾಯಕರು ತಮ್ಮ ಕೊಠಡಿಗೆ ನನ್ನನ್ನು ಬರಮಾಡಿ ಕೊಂಡರು. ಶ್ರೀ ಜಿ. ನಾರಾಯಣ ಅವರೂ ಅಲ್ಲಿದ್ದರು. "ನಾಗೇಗೌಡರ ಗೌರವ ಗ್ರಂಥದ ಜವಾಬ್ದಾರಿಯನ್ನು ನೀವು ಹೊರಬೇಕು." ಎಂದು ಅವರು ತಿಳಿಸಿದರು. ಫೆಬ್ರವರಿಯಲ್ಲಿ ಗ್ರಂಥ ಬಿಡುಗಡೆಯಾಗಬೇಕು ಎಂದು ತಿಳಿದಾಗ ನನಗೆ ತುಂಬ ಅಧೈರ್ಯವೇ ಆಯಿತು. ಆದರೂ ಜವಾಬ್ದಾರಿಯನ್ನು ಹೊರಿಸುತ್ತಿರುವವರು ನಾಯಕರಾದುದರಿಂದ ಶ್ರೀ ನಾರಾಯಣರಂಥ ಕಾರ್ಯಚತುರರು ಇದರ ಹಿಂದೆ ಇರುವುದರಿಂದ ತುಸು ಧೈರ್ಯವನ್ನು ತಂದುಕೊಂಡು ಒಪ್ಪಿಕೊಂಡೆ. ಏಕೆಂದರೆ ಈ ಎರಡು ಶಕ್ತಿಗಳೂ ಇದ್ದಕಡೆ ಕನ್ನಡದ ಯಾವುದೇ ಕೆಲಸವೂ ಹಿಂದೆ ಬೀಳಲಾರದು ಎಂಬ ಅನುಭವ ಎಲ್ಲರಿಗೂ ಇದ್ದದ್ದೆ. ಈ ಕೆಲಸಕ್ಕೆ ಪ್ರೇರಣೆಯಾಗಿ ನಿಂತು ಹಂತ ಹಂತದಲ್ಲಿಯೂ ನಮ್ಮ ಕೆಲಸದ ಪ್ರಗತಿಯನ್ನು ವಿಚಾರಿಸುತ್ತಾ ಮಾರ್ಗದರ್ಶನ ಮಾಡಿ ಡಾ. ಹಾ. ಮಾ. ನಾಯಕರು ಉಪಕರಿಸಿದ್ದಾರೆ.

ಈ ಗ್ರಂಥಕ್ಕೆ ನನ್ನನ್ನು ಪ್ರಧಾನ ಸಂಪಾದಕನಾಗಿರುವಂತೆ ಅವರು ಸೂಚಿಸಿದರು; ಆದರೆ, ಅವರೇ ಪರೋಕ್ಷವಾಗಿ ಆ ಸ್ಥಾನದಲ್ಲಿರಬೇಕಾದವರಾದರಿಂದ ನಾನು ಸಂಪಾದಕ ರಲ್ಲೊಬ್ಬನಾಗಿ ಮಾತ್ರ ಉಳಿದಿದ್ದೇನೆ.

ಇನ್ನು ಪುಸ್ತಕದ ಸಿದ್ಧತೆಯದೇ ಒಂದು ದಾಖಲೆ ! ಜನವರಿ ಅಂತ್ಯದ ವೇಳೆಗೂ ಲೇಖನಗಳು ಕೈಗೆ ಬಂದಿರಲಿಲ್ಲ. ಕನ್ನಡದಲ್ಲಿ ಅಧಿಕ ಸಂಖ್ಯೆಯಲ್ಲಿ ಬರುತ್ತಿರುವ ಸಂಭಾವನಾ ಗ್ರಂಥಗಳೂ ಲೇಖನಗಳ ಅಭಾವದಿಂದಾಗಿ ಹೇಗೆ ಬಳಲುತ್ತಿವೆ ಎಂಬುದನ್ನು ಎಲ್ಲ ಸಂಪಾದಕರೂ ಬಲ್ಲರು. ನಾಡಿನ ಅನೇಕ ಲೇಖಕರಿಗೆ ಡಿಸೆಂಬರ್ ಅಂತ್ಯದ ವೇಳೆಗೆ ಪತ್ರಗಳು ಹೋದವು. ಮುಂದಿನ ವಾರವೆ ಮತ್ತೊಂದು ಪತ್ರ, ಮಗದೊಂದು. ಕೆಲವರು ಒಪ್ಪಿಕೊಂಡರು, ಕೆಲವರು ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಬಹುಪಾಲು ಲೇಖಕರು ನಮ್ಮ ಪತ್ರಕ್ಕೆ ಮನ್ನಣೆಯಿತ್ತು ಲೇಖನಗಳನ್ನು ಕಳುಹಿಸಿದರು. ಆಶ್ಚರ್ಯದ ವಿಷಯವೆಂದರೆ ನಾಗೇಗೌಡರನ್ನು ಕುರಿತು ಬರೆಯಲು, ಅವರ ಕೃತಿಗಳನ್ನು ಕುರಿತು ಬರೆಯಲು ಅವರ ನಿಕಟವರ್ತಿಗಳೆನಿಸಿಕೊಂಡ ಕೆಲವರು ಸ್ಪಷ್ಟವಾಗಿ ನಿರಾಕರಿಸಿದುದು ; ಕೆಲವರು ಒಪ್ಪಿಕೊಂಡು ಕೊನೆಯ ಹಂತದಲ್ಲಿ ಕೈಬಿಟ್ಟು ನಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಿ ದುದು. ಹೀಗಾಗಿ 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳನ್ನು ನಾಗೇಗೌಡರ ಕೃತಿ ಸಮೀಕ್ಷೆಯ ಕೊನೆಯಲ್ಲಿ ಅಳವಡಿಸಬೇಕಾಗಿ ಬಂದಿತು. ಇದರ ಪರಿಣಾಮ ನಾವು ಬೇರೆ ಬರಹಗಾರರನ್ನು ಆಶ್ರಯಿಸಬೇಕಾಗಿ ಬಂದಿತು. ಹೀಗಾಗಿ ಆರನೆಯ ಸಂಪುಟದ ಲೇಖನ

ನಮ್ಮ ಕೈಸೇರಿದುದು, 9-2-1979 ರಂದು ಆದರೂ ಅನೇಕ ಅಭಿಮಾನಿಗಳ ನೆರವಿನಿಂದ ಈ ಕೃತಿ ನಮ್ಮ ನಿರೀಕ್ಷೆಯನ್ನೂ ಮೀರಿ ಬೆಳೆದುಹೋಗಿದೆ.

ಕಳೆದ ತಿಂಗಳ ಮಧ್ಯಭಾಗದಲ್ಲಿ ಶ್ರೀ ನಾರಾಯಣ ಅವರಿಂದ ಒಂದು ಪತ್ರ : ಸನ್ಮಾನ ಸಮಾರಂಭ ಫೆಬ್ರವರಿ ಹನ್ನೊಂದಕ್ಕೆ ಎಂದು. ತಿಂಗಳ ಕೊನೆಯ ವೇಳೆಗೆ ಹೇಳ ಬಹುದು ಎಂದು ನಮ್ಮ ಕಲ್ಪನೆ. ಪತ್ರ ಸಹಜವಾಗಿ ನಮಗೆ ದಿಗ್ಭ್ರಮೆಯನ್ನು ತಂದಿತು. ಓದಿ ಲೇಖನಗಳು ಮಾತ್ರ ಆಗ ನಮ್ಮ ಕೈಯಲ್ಲಿದ್ದವು. ಒಂದು ತಿಂಗಳ ಅವಧಿಯಲ್ಲಿ ಒಂಬೈನೂರು ಪುಟಗಳ ಗೌರವ ಗ್ರಂಥವೊಂದನ್ನು ತರುವಾಗ ಮುದ್ರಣದಲ್ಲಿ ತಪ್ಪುಗಳು ಉಳಿಯದಂತೆ ನೋಡಿಕೊಳ್ಳುವುದೆಂತು ! ಮುದ್ರಿಸುವುದೆಂತು ! ಲೇಖನದಲ್ಲಿ ಒಂದು ಕ್ರಮವನ್ನು ಇಟ್ಟುಕೊಳ್ಳುವುದೆಂತು ! ಅನಿವಾರ್ಯ, ನಾರಾಯಣರು ಕೆಲಸವನ್ನು ತೆಗೆಯುವುದೇ ಹೀಗೆ. ಮೊದಲ ಎರಡು ಕಾರ್ಯಗಳು ಹೇಗೋ ಸಾಧಿತವಾದುವು. ೨೫ ದಿನಗಳಲ್ಲಿ ಮುದ್ರಣ ಮುಗಿದು ಕೃತಿ ಹೊರ ಬರುತ್ತಿದೆ. ಈ ವೇಗ ಅಲ್ಲಲ್ಲಿ ಕೆಲವು ಸಣ್ಣ ಪುಟ್ಟ ಅನಾಹುತಗಳನ್ನು ಮಾಡಿದೆ ಎಂಬುದು ನಮಗೂ ಗೊತ್ತಿದೆ. ಹೀಗಾಗಿ ಕೆಲವು ಲೇಖನಗಳನ್ನು ಕೈಬಿಡಬೇಕಾಯಿತು. ಇದಕ್ಕಾಗಿ ಓದುಗರ ಕ್ಷಮೆ ಯನ್ನು ಯಾಚಿಸುತ್ತೇವೆ.

ನಾಗೇಗೌಡರ ಸಾಹಿತ್ಯಿಕ ನಾಂದಿಯಾದುದು ಭಾಷಾಂತರದಿಂದ. ಮುಂದೆ ತಮ್ಮ ಸ್ವತಂತ್ರ ಕೃತಿಗಳ ರಚನೆಯ ಜೊತೆಗೆ ಅವರು ಅನೇಕ ಕೃತಿಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸಿದರು. ಅವರ 'ಪ್ರವಾಸಿ ಕಂಡ ಇಂಡಿಯಾ' ಹಾಗೂ ಇತರ ಕೃತಿಗಳು ಭಾಷಾಂತರವನ್ನು ಅವರು ಹೇಗೆ ಒಂದು ಕಲೆಯನ್ನಾಗಿಸಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿವೆ. ಅವರ ಅಚ್ಚು ಮೆಚ್ಚಿನ ಕ್ಷೇತ್ರವೊಂದಕ್ಕೆ ಸಂಬಧಿಸಿದಂತೆ ಗೌರವ ಗ್ರಂಥ ದಲ್ಲಿ ಒಂದು ಭಾಗವನ್ನು ಭಾಷಾಂತರಕ್ಕೆ ಇಟ್ಟುಕೊಳ್ಳಬೇಕೆಂದು ಆಲೋಚಿಸಲಾಯಿತು. "ಭಾಷಾಂತರ ಕಲೆಯನ್ನು ಇಟ್ಟುಕೊಳ್ಳಿ, ನಾಗೇಗೌಡರು ಆ ಕ್ಷೇತ್ರದಲ್ಲಿ ತುಂಬ ಕೆಲಸಮಾಡಿದ್ದಾರೆ. ಅಲ್ಲದೆ ಭಾಷಾಂತರ ಈಗ ತುಂಬ ಬೆಳೆದಿದೆ. ದೊಡ್ಡ ಅಧ್ಯಯನ ವಿಷಯವಾಗಿದೆ. ಕನ್ನಡದಲ್ಲಿ ಈ ವಿಷಯವನ್ನು ಕುರಿತ ಪ್ರಥಮ ಗ್ರಂಥ ಇದಾಗಲಿ" ಎಂದು ಡಾ. ಹಾ. ಮಾ. ನಾಯಕರು ಸೂಚಿಸಿದರು. ಮಿತ್ರರಾದ ಪ್ರಧಾನ ಗುರುದತ್ತ ಅವರು ಆ ಬಗ್ಗೆ ಸಮಗ್ರವಾದ ಪಟ್ಟಿಯೊಂದನ್ನು ತಯಾರಿಸಿದರು. ಕಾಲಾವಕಾಶ ಕಡಿಮೆಯಿದ್ದುದರಿಂದ ಆ ಎಲ್ಲ ವಿಷಯಗಳಿಗೂ ಸಂಬಂಧಿಸಿದಂತೆ ಲೇಖನಗಳನ್ನು ದೊರಕಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆದರೂ ಹೆಚ್ಚು ಲೇಖನಗಳು ಲಭ್ಯವಾದುದು ಒಂದು ಸಂತೋಷದ ವಿಷಯ.

ಪ್ರಕೃತ ಗೌರವ ಗ್ರಂಥವನ್ನು 'ನಾಗವಲ್ಲಿ' ಎಂದು ಕರೆಯಲಾಗಿದೆ. 'ವೀಳೆಯ ದೆಲೆ' ಭಾರತೀಯ ಸಂಸ್ಕೃತಿಯಲ್ಲಿ ಒಂದು ವಿಶಿಷ್ಟಸ್ಥಾನವನ್ನು ಪಡೆದಿದೆ. ಎಲ್ಲ ಮಂಗಳಕಾರ್ಯಗಳಲ್ಲೂ ಅದು ಇರಬೇಕು ; ಎಲ್ಲ ಸಂತೋಷದ ಸಂದರ್ಭದಲ್ಲಿಯೂ

ಅದು ಇರಬೇಕು. ಅದನ್ನು ಸವಿದು ಸುಖ ಸಂತೃಪ್ತಿಪಡದವರಿಲ್ಲ. ಅಲ್ಲದೆ 'ವೀಳೆಯ' ವನ್ನು ನೀಡುವುದು ಒಂದು ಸಂಸ್ಕೃತಿ ಒಪ್ಪಿಕೊಂಡು ಬಂದ ಒಂದು ಶ್ರೇಷ್ಠ ಸಂಪ್ರದಾಯ. ಯಾವುದೇ ಒಳ್ಳೆಯ ಕಾರ್ಯಕ್ಕೆ ಒಪ್ಪಿ, ವೀಳೆಯವನ್ನು ಸ್ವೀಕರಿಸಿದ ಮೇಲೆ ಅದನ್ನು ನಿರಾಕರಿಸುವಂತಿಲ್ಲ. ವೀಳೆಯ ಈ ದೃಷ್ಟಿಯಿಂದ ಪವಿತ್ರವಸ್ತು, ನಾಗೇಗೌಡ ಗೌರವ ಗ್ರಂಥಕ್ಕೆ 'ನಾಗವಲ್ಲಿ' ಎಂಬ ಹೆಸರನ್ನು ನಾನು ಸೂಚಿಸಿದಾಗ ಡಾ. ನಾಯಕರು ತುಂಬ 'ಚೆನ್ನಾಗಿದೆ. ಇರಲಿ' ಎಂದರು.

ನಾಗೇಗೌಡ ಗೌರವ ಗ್ರಂಥದ ಸಿದ್ಧತೆಯಲ್ಲಿ ನನ್ನೊಡನೆ ಅನೇಕ ಮಿತ್ರರು ನೆರವಾಗಿದ್ದಾರೆ. ಅಭಿಮಾನಿ ಮಿತ್ರರ ನೆರವು ಇರುವುದರಿಂದಲೇ ಇಷ್ಟು ಅಲ್ಪ ಕಾಲದಲ್ಲಿ ಇಂಥದೊಂದು ದೊಡ್ಡ ಗ್ರಂಥವನ್ನು ತರಲು ಸಾಧ್ಯವಾಗಿದೆ. ಶ್ರೀ ಹ. ಕ. ರಾಜೇಗೌಡರು ಎಂದಿನ ಉತ್ಸಾಹ, ದಕ್ಷತೆಗಳಿಂದ ನನ್ನೊಡನೆ ಹಗಲಿರುಳೂ ಶ್ರಮಿಸಿದ್ದಾರೆ. ರಚನಾತ್ಮಕ ಕಾರ್ಯಗಳಲ್ಲಿ ಚತುರರಾದ ಅವರು ಗ್ರಂಥದ ಪ್ರತಿ ಹಂತದಲ್ಲೂ ವಿಶ್ವಾಸ ದಿಂದ ಸಹಕರಿಸಿದ್ದಾರೆ. ಶ್ರೀ ಪ್ರಧಾನ್ ಗುರುದತ್ತ ಅವರು ಭಾಷಾಂತರ ವಿಭಾಗದ ಪೂರ್ಣ ಜವಾಬ್ದಾರಿಯನ್ನು ಹೊತ್ತು ಅತ್ಯಂತ ಕಡಿಮೆಕಾಲದಲ್ಲಿ ಉತ್ತಮ ಲೇಖನ ಗಳನ್ನು ಕಲೆ ಹಾಕಿ, ಪ್ರಕೃತ ಗ್ರಂಥದ ಮೂರನೆಯ ಭಾಗ ಮೈತುಂಬಿಕೊಳ್ಳಲು ಶ್ರಮಿಸಿ ದ್ದಾರೆ. ಈ ಇಬ್ಬರು ಸಂಪಾದಕ ಮಿತ್ರರಿಗೆ ನಾನು ಋಣಿ.

ಈ ಗ್ರಂಥದ ಲೇಖಕರು ನಮಗೆ ನೀಡಿದ ಸಹಕಾರ ಅಪಾರವಾದುದು. ಕಾಲಾವಕಾಶವಿಲ್ಲದಿದ್ದರೂ ವಿದ್ವತ್ಪೂರ್ಣವಾದ ಬರಹಗಳನ್ನು ಸಿದ್ಧಗೊಳಿಸಿ ಕೃತಿಯ ಯಶಸ್ಸಿಗೆ ಕಾರಣರಾಗಿದ್ದಾರೆ. ಲೇಖಕರ ಸಹಕಾರವಿಲ್ಲದಿದ್ದರೆ ಇಂಥ ಕೃತಿಗಳ ಪ್ರಕಟಣೆ ಎಷ್ಟು ಕಷ್ಟಕರವಾದುದೆಂಬುದನ್ನು ನಾವು ಇಲ್ಲಿ ಮರೆಯುವಂತಿಲ್ಲ. 'ನಾಗವಲ್ಲಿ' ಗ್ರಂಥದ ಎಲ್ಲ ಲೇಖಕರಿಗೂ ನಾವು ಆಭಾರಿಯಾಗಿದ್ದೇವೆ.

ಮಿತ್ರರಾದ ಡಾ. ಡಿ. ಕೆ. ರಾಜೇಂದ್ರ ಅವರು ತಮ್ಮ ಅನೇಕ ಕೆಲಸಗಳನ್ನು ಬದಿಗೊತ್ತಿ ಅಪಾರ ಅಭಿಮಾನದಿಂದ ಸತತವಾಗಿ ನಮ್ಮೊಡನೆ ಕೆಲಸಮಾಡಿದ್ದಾರೆ. ಶ್ರೀ ಸದಾಶಿವ ಎಣ್ಣೆಹೊಳೆ ಹಾಗೂ ಬಸವರಾಜ ನೆಲ್ಲಿಸರ ಅವರು ನಮ್ಮೊಡನೆ ಅಚ್ಚಿನ ಮನೆಯಲ್ಲಿ ಕುಳಿತು ಕರಡು ತಿದ್ದುವುದರಲ್ಲಿ ನೆರವಾಗಿದ್ದಾರೆ. ಶ್ರೀ ನೆಲ್ಲಿಸರ ಅವರಂತೂ ಆರಂಭದಿಂದಲೂ ನಮ್ಮೊಡನಿದ್ದು ಎಲ್ಲ ರೀತಿಯಲ್ಲೂ ನೆರವಾಗಿದ್ದಾರೆ. ಈ ಮೂವರು ಮಿತ್ರರ ಸಹಕಾರವನ್ನು ಇಲ್ಲಿ ಎಷ್ಟು ಸ್ಮರಿಸಿಕೊಂಡರೂ ಸಾಲದು. ಇವರಲ್ಲದೆ ಇನ್ನೂ ಅನೇಕ ಮಿತ್ರರ ನೆರವನ್ನು ಕರಡು ತಿದ್ದುವಲ್ಲಿ ನಾವು ಪಡೆದುಕೊಂಡಿದ್ದೇವೆ-ಶ್ರೀಗಳಾದ ಜಿ. ಜಿ. ಮಂಜುನಾಥನ್, ಎಚ್. ಎಸ್. ರಾಮಚಂದ್ರಗೌಡ, ಚಂದ್ರಕಾಳೀನಹಳ್ಳಿ, ಎ. ಪಿರಿಯಣ್ಣ, ಎಚ್. ಎಸ್. ಹರಿಶಂಕರ, ಎನ್. ಎಸ್. ಶಾರದಾ ಪ್ರಸಾದ್, ಎಸ್. ಲಕ್ಷ್ಮೀನಾರಾಯಣ, ಕೆ.ಜಿ. ಪ್ರಕಾಶ್, ಎಚ್.ಗಣೇಶ ಐತಾಳ, ಕೆ ಆರ್. ಶೇಷಗಿರಿ ಹಾಗೂ ಶ್ರೀಮತಿ ವೈ. ಸಿ. ಭಾನುಮತಿ ಇವರೆಲ್ಲರನ್ನೂ ಇಲ್ಲಿ ಕೃತಜ್ಞತೆಯಿಂದ ನೆನೆಯುತ್ತೇವೆ.

ಆತ್ಮೀಯ ಮಿತ್ರರೂ, ಹಿರಿಯ ಕಲಾವಿದರೂ ಆದ ಶ್ರೀ ಪಿ ಆರ್. ತಿಪ್ಪೇಸ್ವಾಮಿಯವರು ಹೆರಗನಹಳ್ಳಿಯ ನಿಸರ್ಗವನ್ನು ತಮ್ಮದೊಂದು ವರ್ಣಚಿತ್ರದಲ್ಲಿ ಸೆರೆಹಿಡಿದು ಕೊಟ್ಟಿದ್ದಾರೆ ಆ ಚಿತ್ರ, ಕೃತಿಯ ಮುಖಪುಟಕ್ಕೆ ವಿಶೇಷ ಕಳೆಯನ್ನು ತಂದುಕೊಟ್ಟಿದೆ.

ಶ್ರೀ ಪಾರಾ ಪ್ರೆಸ್ಸಿನ ಮಾಲಿಕರೂ ಉತ್ಸಾಹ ಶಾಲಿಯೂ ಆದ ಶ್ರೀ ಕೆ. ಪಿ. ಪುಟ್ಟಸ್ವಾಮಿಯವರು ಮುದ್ರಣಕಲೆಯಲ್ಲಿ ಹೊಸ ದಾಖಲೆಯನ್ನೇ ಸ್ಥಾಪಿಸುತ್ತಿದ್ದಾರೆ. ಅತ್ಯಲ್ಪ ಕಾಲದಲ್ಲಿ ಇಷ್ಟು ಗಾತ್ರದ ಗ್ರಂಥ ಹೊರಬರಲು ಅವರು ತೋರಿದ ಆಸಕ್ತಿ ಅಪಾರವಾದುದು. ಅವರಿಗೂ ಸೋಲದೆ ಕೆಲಸಮಾಡಿ 'ಸೈ' ಎನ್ನಿಸಿಕೊಳ್ಳುವ ಅವರ ಕೆಲಸಗಾರರಿಗೂ ನಾವು ಋಣಿ.

ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸಿನ ಮಾಲಿಕರಾದ ಶ್ರೀ ಜಿ. ಎಚ್. ರಾಮರಾಯರು ಕೊನೆಯ ಭಾಗದ ಮುದ್ರಣಕಾರ್ಯಕ್ಕೆ ತಮ್ಮ ಪೂರ್ಣ ಸಹಕಾರವನ್ನು ನೀಡಿ ನೆರವಾಗಿದ್ದಾರೆ. ಅವರಿಗೂ ಅವರ ಸೋದರರಾದ ಶ್ರೀ ಜಿ.ಎಚ್. ಕೃಷ್ಣಮೂರ್ತಿಯವರಿಗೂ ನಮ್ಮ ವಂದನೆಗಳು ಸಲ್ಲಬೇಕು.

'ನಾಗವಲ್ಲಿ' ಗ್ರಂಥದ ಸಿದ್ಧತೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನೆರವಾದ ಎಲ್ಲ ಮಿತ್ರರಿಗೂ ನಾವು ಋಣಿಯಾಗಿದ್ದೇವೆ.

ಮೈಸೂರು   ಜೀ. ಶಂ. ಪರಮಶಿವಯ್ಯ

೧೨–೨–೧೯೭೯

ಪ ರಿ ವಿ ಡಿ

ಜೀವನ-ಸಾಧನೆ-ಕೃತಿಸಮೀಕ್ಷೆ

ಭಾಗ : ಒಂದು


ಭಾಗ : ಎರಡು

ಭಾಗ : ಮೂರು

ಭಾಷಾಂತರ ಕಲೆ

ಜೀವನ—ಸಾಧನೆ

ಭಾಗ : ಒಂದು



ರಾಷ್ಟ್ರಕವಿ ಕುವೆಂಪು ಅವರೊಡನೆ



ನಾಗೇಗೌಡ ದಂಪತಿ



ಪ್ರಾಥಮಿಕ ಶಾಲೆಯ ವಿದ್ಯಾರ್ಥಿ 'ನಾಗು': ಕುಳಿತಿರುವವರಲ್ಲಿ ಎಡದಿಂದ ಎರಡನೆಯವರು



ಫುಡ್ ಅಸಿಸ್ಟೆಂಟ್ ನಾಗೇಗೌಡರು ಕುಟುಂಬದ ಸದಸ್ಯರೊಡನೆ (1955)



ಶಿವಮೊಗ್ಗೆಯ ಜಿಲ್ಲಾಧಿಕಾರಿಯಾಗಿ ಶ್ರೀ ಜಯಚಾಮರಾಜ ಒಡೆಯರೊಡನೆ



ಪ್ರೌಢಶಾಲೆಯ ವಿದ್ಯಾರ್ಥಿ–ಚೆನ್ನಪಟ್ಟಣದಲ್ಲಿ 'ನಾಗು' ಕುಳಿತಿರುವವರಲ್ಲಿ ಎಡದಿಂದ ಐದನೆಯವರು ಎಸ್. ಕರಿಯಪ್ಪ, ವಿ.ವೆಂಕಟಪ್ಪ ಮೊದಲಾದವರನ್ನು ಗುರುತಿಸಬಹುದು.



ಹರಿಹರದ ತಹಶೀಲ್ದಾರರಾಗಿ (1945)




ಸರ್, ಎಂ ವಿಶ್ವೇಶ್ವರಯ್ಯ ಅವರೊಡನೆ, ಚಿಂತಾಮಣಿಯ ಗ್ರಾಮಾಂತರ ಕೈಗಾರಿಕಾ ಯೋಜನೆಯ ಉದ್ಘಾಟನೆಯ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ವಿಭಾಗದ ಸಬ್‌ಡಿವಿಸನ್ ಆಫೀಸರ್



ಪದವೀಧರ ನಾಗೇಗೌಡರು



ಅಮಲ್ದಾರ್ ನಾಗೇಗೌಡರು



ಶಿವಮೊಗ್ಗೆಯ ಜಿಲ್ಲಾ ವಸ್ತು ಸಂಗ್ರಹಾಲಯದ ಉದ್ಘಾಟನೆ, ಬೇಂದ್ರೆಯವರೊತ...



ಜಿಲ್ಲಾ ವಸ್ತು ಸಂಗ್ರಹಾಲಯದ ಉದ್ಘಾಟನೆ, ಬೇಂದ್ರೆಯವರು, ಎಸ್. ನಿಜಲಿಂಗಪ್ಪ ಅವರೊಡನೆ



ಕುಟುಂಬ ಸದಸ್ಯರೊಡನೆ



ಮಂಗಳೂರಿನಲ್ಲಿ ವೈಕುಂಠ ಬಾಳಿಗ, ಶ್ರೀ ಎಸ್. ನಿಜಲಿಂಗಪ್ಪ ಅವರೊಡನೆ



ಪ್ರವಾಸಿ ಕಂಡ ಇಂಡಿಯಾ 2ನೇ ಸಂಪುಟದ ಬಿಡುಗಡೆ;ಮಂಗಳೂರಿನಲ್ಲಿ. ಡಾ. ಪು. ತಿ ನ, ಡಾ. ಟಿ. ಎಂ. ಎ. ಪೈ, ಡಾ. ಪ್ರಭುಶಂಕರ ಅವರೊಡನೆ



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಪದ ಕಲಾ ಮೇಳಕ್ಕೆ ಆಗಮಿಸಿದ್ದ ಕಲಾವಿದರಿಗೆ ಜಿಲ್ಲಾಧಿಕಾರಿಗಳ ಬಂಗಲೆಯಲ್ಲಿ ಸತ್ಕಾರ, ಕುಟುಂಬದ ಸದಸ್ಯರು, ಡಾ. ಜೀಶಂಪ, ಪಿ. ಆರ್. ತಿಪ್ಪೇಸ್ವಾಮಿ ಅವರೊಡನೆ.



ಮಂಗಳೂರಿನಲ್ಲಿ ಜಾನಪದ ಮೇಳ, ಡಾ. ಶಿವರಾಮ ಕಾರಂತ, ಪ್ರೊ. ಆರ್. ತಿಪ್ಪೇಸ್ವಾಮಿ, ಡಾ. ಜೀಶಂಪ, ಲಕ್ಷ್ಮೀನಾರಾಯಣ ಆಳ್ವ ಮುಂತಾದವರು.



ಮೂರನೇ ಜಾನಪದ ಸಮ್ಮೇಳನಕ್ಕೆ ಅತಿಥಿಗಳೊಡನೆ : ಡಾ. ಜೀ. ಶಂ. ಪರಮಶಿವಯ್ಯ, ಡಾ. ಹಾ. ಮಾ. ನಾಯಕ
ಸಿಂಪಿ ಲಿಂಗಣ್ಣ, ಎಚ್. ಎಲ್. ನಾಗೇಗೌಡ, ಪಿ. ಆರ್. ತಿಪ್ಪೇಸ್ವಾಮಿ ಮುಂತಾದವರು



ಮೂರನೆಯ ಜಾನಪದ ಸಮ್ಮೇಳನ : ಪ್ರೊ ದೇ. ಜ. ಗೌ., ಸಿಂಪಿಲಿಂಗಣ್ಣ ಅವರೊಡನೆ



ಮೂರನೇ ಜಾನಪದ ಸಮ್ಮೇಳನದ ವಿಚಾರಗೋಷ್ಠಿ : ಸಿಂಪಿಲಿಂಗಣ್ಣ, ಡಾ. ಟಿ. ಎಂ. ಪೈ ಮುಂತಾದವರೊಡನೆ




ಜಾನಪದ ಪರಿಷತ್ತಿನ ಕ್ರಿಯಾಸಮಿತಿ, ಮಂಗಳೂರು ಸಮ್ಮೇಳನದಲ್ಲಿ : ಕೆ. ವಿ. ವಿರೂಪಾಕ್ಷಗೌಡ, ವರ್ಮ ಲಕ್ಷ್ಮೀನಾರಾಯಣ ಆಳ್ವ, ಡಾ. ಹಾ. ಮಾ. ನಾಯಕ, ಸಿಂಪಿಲಿಂಗಣ್ಣ, ಪ್ರೊ ದೇಜಗೌ, ಡಾ. ಎಲ್. ಆರ್. ಹೆಗಡೆ, ಡಾ. ಜೀ. ಶಂ. ಪರಮಶಿವಯ್ಯ, ಮತಿಘಟ್ಟ ಕೃಷ್ಣಮೂರ್ತಿ, ಗೊ. ರು. ಚೆನ್ನಬಸಪ್ಪ. ಪಿ. ಆರ್. ತಿಪ್ಪೇಸ್ವಾಮಿ, ಅವರೊಡನೆ




ಸೋಬಾನೆ ಚಿಕ್ಕಮ್ಮನ ಕುಟೀರದ ಬಳಿ, ಡಾ. ಜೀ. ಶಂ. ಪರಮಶಿವಯ್ಯ ಸೋಬಾನೆ ಚಿಕ್ಕಮ್ಮ ಅವರೊಡನೆ



ನಾಗಮಂಗಲ ಜಾನಪದ ಸಮ್ಮೇಳನದಲ್ಲಿ ಜನಪದ ಕಲಾವಿದರ ಸನ್ಮಾನ ಸಮಾರಂಭದ ಅಧ್ಯಕ್ಷತೆ ಚಿತ್ರದಲ್ಲಿ
ಸೋಬಾನೆ ಚಿಕ್ಕಮ್ಮ, ಡಾ. ಜೀ. ಶಂ. ಪರಮಶಿವಯ್ಯ



ಡಾ. ಶ್ರೀಮಾಲಿಯವರೊಡನೆ : ಪ್ರವಾಸಿ ಕಂಡ ಇಂಡಿಯಾ ಎರಡನೆ ಸಂಪುಟ ಸ್ವೀಕಾರ



ಕೇಂದ್ರ ಸಚಿವ ಸಿ. ಸುಬ್ರಹ್ಮಣ್ಯಂ ಅವರು ಮಂಗಳೂರಿಗೆ ಆಗಮಿಸಿದಾಗ



ನಾಗಮಂಗಲದಲ್ಲಿ ಸನ್ಮಾನ ಸಮಾರಂಭ, ಶ್ರೀಮತಿ ನಾಗೇಗೌಡ, ಗೊರೂರು ರಾಮಸ್ವಾಮಿ ಅಯ್ಯಾಂಗಾರ್,
ಎಲ್. ಎಸ್. ಶೇಷಗಿರಿರಾವ್, ಎಚ್. ಟಿ. ಕೃಷ್ಣಪ್ಪ, ಹ. ಕ. ರಾಜೇಗೌಡ ಅವರೊಡನೆ



ತೇರೂರಿನ ಅಭೂತಪೂರ್ವ ಸನ್ಮಾನ ಕೆ. ಸಿಂಗಾರಿಗೌಡ, ಡಾ. ಡಿ. ಕೆ. ರಾಜೇಂದ್ರ ಮುಂತಾದವರು



ರಾಜ್ಯಪಾಲ ಧರ್ಮವೀರ ಹಾಗೂ ಕೆ. ಪುಟ್ಟಸ್ವಾಮಿ ಅವರೊಡನೆ




ಲೇಬರ್ ಕಮಿಷನರಾಗಿ. ಮುಖ್ಯ ಮಂತ್ರಿ ದೇವರಾಜ ಅರಸ್. ಸಚಿವ ಅಜೀಜ್‌ಸೇಟ್ ಮುಂತಾದವರೊಡನೆ



೬೦ನೆಯ ಹುಟ್ಟುಹಬ್ಬ, ಬೆಂಗಳೂರು : ಮಾಸ್ತಿಯವರೊಡನೆ



ಬೆಂಗಳೂರಿನಲ್ಲಿ ೬೦ ನೇ ಹುಟ್ಟುಹಬ್ಬ : ಡಾ. ಮುಗಳಿ, ಡಾ. ಸಿದ್ದಯ್ಯ ಪುರಾಣಿಕ, ಮಾಸ್ತಿ ವೆಂಕಟೇಶ
ಅಯ್ಯಂಗಾರ್, ಶ್ರೀಮತಿ ನಾಗೇಗೌಡ ಅವರೊಡನೆ



'ಭೂಮಿಗೆ ಬಂದ ಗಂಧರ್ವ' ಕೃತಿಯ ಬಿಡುಗಡೆ ಸಮಾರಂಭ; ರಾಜ್ಯಪಾಲ ಗೋವಿಂದ ನಾರಾಯಣ ಮುಂತಾದವರೊಡನೆ



'ನನ್ನೂರಿನ' ತಲೆ ಕೆಳಗಿನ ಅರಳೀಮರ

೧ | ನಾನು ಬಾಳಿದ ಬಗೆ

ಎಚ್. ಎಲ್. ನಾಗೇಗೌಡ

ಡಿಸೆಂಬರ್ ಎಂಟು: ಮಾಮೂಲಾಗಿ ಐದು ಗಂಟೆಗೆ ಏಳಬೇಕಾದವನು ಒಂದು ಒಂದೂವರೆ ಗಂಟೆ ನಿಧಾನವಾಗಿ ಎದ್ದೆ. ಎದ್ದರೆ ಸಾಕು ಹೊರಗೆ ಅಡ್ಡಾಡಲು ಓಡುತ್ತಿದ್ದ ನನಗೆ ಹಾಗೆ ಮಾಡಲು ಮನಸ್ಸುಬಾರದು. ಕಾಫಿ ಕೊಡುವ ಮಹಾತಾಯಿ, ಅವರ ಆಫೀಸು ಬಾಗಿಲು ತೆರೆದಿರಲಿಲ್ಲ. ಚಳಿ ಬೇರೆ. ಹೊಟೇಲಿನಲ್ಲಾದರೂ ಕುಡಿಯೋಣವೆಂದು ಹೊರಟೆ. ಎಕ್ಕಡದ ಉಂಗುಟ ಕಿತ್ತುಹೋಯಿತು. ಅಪಶಕುನ. ಉಗುಂಟ ಕಿತ್ತರೂ ಕಾಲೆಳೆದುಕೊಂಡು ಹೋದೆ. ನನ್ನ ಬೆಳಗಿನ ವಾಕಿಂಗ್‌ನಲ್ಲಿ ಯಾರೂ ಸಿಕ್ಕುವುದಿಲ್ಲ. ಬೆಂಗಳೂರೇ ಎದ್ದಿರುವುದಿಲ್ಲ, ಇನ್ನು ಸಿಕ್ಕುವುದೆಲ್ಲಿ ಬಂತು! ಅಪ್ಪಿತಪ್ಪಿ ಸಿಕ್ಕುವವರು ಯಾರೆಂದರೆ, ಅಷ್ಟುಹೊತ್ತಿಗೆ ಬರುವ ರೈಲು ಬಸ್ಸುಗಳಲ್ಲಿ ಇಳಿದು ಅವರಿಗೆ ಬೇಕಾದ ಮನೆ ಹುಡುಕುವವರು; ಆಟೋದಲ್ಲೋ ನಡೆದುಕೊಂಡೋ ಕೈಯಲ್ಲಿ ಒಂದು ಚೀಟಿ ಹಿಡಿದು ನನ್ನನ್ನು ನಿಲ್ಲಿಸಿ 'ಈ ಮನೆ ಎಲ್ಲಿದೆ?' ಎಂದು ಕೇಳುವವರು. ಆದರೆ ಬೆಂಗಳೂರಿನಲ್ಲಿ ಮನೆ ಹುಡುಕುವುದೂ ಒಂದೆ, ಹುಲ್ಲಿನ ಹೊರೆಯಲ್ಲಿ ಸೂಜಿ ಹುಡುಕುವುದೂ ಒಂದೆ. ನಾನಿರುವ ಕುಮಾರಾ ಪಾರ್ಕ್ ನಾಲ್ಕನೆಯ ಬ್ಲಾಕಿನಲ್ಲೇ ಎಂಟನೆಯ ನಂಬರಿನ ಮನೆ ಎರಡು ಮೂರು ಇವೆ. ಅವರ ಕಾಗದ ನನಗೆ, ನನ್ನ ಕಾಗದ ಅವರಿಗೆ ಹೋದ ಎಷ್ಟೋ ಉದಾಹರಣೆಗಳುಂಟು. ಹೀಗಿರುವಾಗ ಬೆಳಗಿನ ನಸುಕಿನಲ್ಲಿ ನಾಲ್ಕು ಮೈಲಿ ವಾಕಿಂಗ್ ಮಾಡುವಾಗ ಸಿಕ್ಕುವ ಬೇರೆ ಬೇರೆ ಸ್ಥಳಗಳ ಪರಿಚಯ ನನಗೆ ಹೇಗಾಗಬೇಕು? ಒಮ್ಮೆ ಬೆಳಗಿನ ನಸುಕಿನಲ್ಲಿ ಕನ್ನಡಕ ಇಲ್ಲದೆ, ನನ್ನ ವಿಳಾಸವೇ ಇದ್ದ ಚೀಟಿ ಓದಿ ಅವರಿಗೆ ಜಯನಗರ ತೋರಿಸಿದ್ದೆ. ಈದಿನ ಅಂಥವರಾರೂ ಸಿಕ್ಕಲಿಲ್ಲ. ಸಿಕ್ಕಿದವರು ಎಲ್ಲೋ ಒಮ್ಮೆ ನೋಡಿದ್ದವರು. ನಾನು ಮೂಡುಮುಖನಾಗಿ, ಹರಿದ ಎಕ್ಕಡ ಎಳೆದುಕೊಂಡು ಕೈಯಲ್ಲಿ ಕೋಲು ಹಿಡಿದು ಸಾಗಿದ್ದೆ. ಅವರು ನನಗೆ ಅಡ್ಡಲಾಗಿ ಉತ್ತರ-ದಕ್ಷಿಣದ ರಸ್ತೆಯಲ್ಲಿ ಬಂದರು. ನನ್ನ ಎದುರಿಗೆ ನಾಲ್ಕುಮಾರು ದೂರದಲ್ಲಿ ನಿಂತು ಕೈಮುಗಿದರು. ನಾನು ಸುಮ್ಮನೆ ಕೋಲು ಸಮೇತ ಕೈಯೆತ್ತಿದೆ. ಅವರ ನಮಸ್ಕಾರ ನನಗೆ ಸರಿಯಾಗಿ ಸಲ್ಲಲಿಲ್ಲವೆಂದು ಭಾವಿಸಿಯೋ ಏನೋ ಕಾಲುಜೋಡಿಸಿ ತಲೆತಗ್ಗಿಸಿ ಕೈಮುಗಿದರು. ನಾನು ಆಗ ಎರಡು ಕೈಗಳನ್ನೂ ಜೋಡಿಸಿದೆ. ಅವರು ಎರಡು ದಾಪು ಮುಂದೆ ಹೋದರು. ನಾನು ಎಡಗಡೆಗೆ ತಿರುಗಿ ಅವರು ಬಂದ ದಾರಿಯಲ್ಲಿ

ಕಾಲು ಎಳೆಯುತ್ತ ಅವರು ಯಾರೆಂದು ಸರಿಯಾಗಿ ತಿಳಿಯಲು ಹಿಂದಿರುಗಿ ನೋಡಿದರೆ ಮತ್ತೆ ಬಹುಭಕ್ತಿಯಿಂದ ಕೈಮುಗಿಯುತ್ತಿದ್ದರು. ನನ್ನ ಬೆನ್ನುಹಿಂದೆ ಇದ್ದುದು ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ! ಪೆಚ್ಚುಮೋರೆ ಹಾಕಿಕೊಂಡು ಮುಂದೆ ಹೋದರೆ ರಸ್ತೆಗೆ ಅಡ್ಡಲಾಗಿ ಟಾರ್‌ಡ್ರಮ್ಮುಗಳು. ಬರ್ರೋ ಎಂದು ಉರಿಯುತ್ತಿದ್ದ ಬೆಂಕಿಯ ಜ್ವಾಲೆ. ದೊಡ್ಡ ಅಪಶಕುನ! ಟಾರಿನ ವಾಸನೆ ಬೇರೆ. ರಸ್ತೆಯ ಆಗ ಲಕ್ಕೊ ಜಲ್ಲಿ ಹರಡಿದ್ದರು. ಅದರ ಮೇಲೆ ಕಾಲಿಟ್ಟೆ. ಅಲ್ಪಸ್ವಲ್ಪ ತಗುಲಿಕೊಂಡಿದ್ದ ಬಾರೂ ಕಿತ್ತುಹೋಯಿತು. ಎಡಗೈಯಲ್ಲಿ ಎರಡು ಎಕ್ಕಡಗಳನ್ನು ಜೋಡಿಸಿ ಹಿಡಿದು ಬಲಗೈಯಲ್ಲಿ ಕೋಲು ಹಿಡಿದು ಸಾಗಿದ ನನ್ನನ್ನು ಕಂಡ ಬೀದಿನಾಯಿಗಳಿಗೆ ಏನನ್ನಿಸಿತೋ ಬೊಗಳಲಾರಂಭಿಸಿದುವು. ಬೊಗಳುವ ನಾಯಿ ಕಚ್ಚುವುದಿಲ್ಲವಂತೆ. ಆದರೆ ಈ ನಾಯಿಗಳು ಏಕೋ ಏನೋ ಕಚ್ಚುವುದಕ್ಕೇ ಬಂದುವು. ಎಡಗೈ ಎಕ್ಕಡಗಳನ್ನು ಗುರಾಣಿ ಮಾಡಿಕೊಂಡು ಬಲಗೈ ಕೋಲು ಬೀಸಿ ಸಿನೆಮಾ ಆಕ್ಷನ್ ಮಾಡಿದೆ. ಆ ನಾಯಿಗಳು ಸಿನಿಮಾ ನೋಡಿರಲಿಲ್ಲ ಎಂದು ಕಾಣುತ್ತೆ, ನನ್ನ ಆಕ್ಷನ್ ನೋಡಿ ಪಕ್ಕದ ಗಲ್ಲಿಗೆ ಓಡಿ ಬೊಗಳುತ್ತಾ ನಿಂತುಕೊಂಡುವು. ಎಕ್ಕಡ ಹಿಡಿದುಕೊಂಡು ಹೋಟೆಲಿಗೆ ಹೋಗಬಾರದೆಂದು ಸರ್ಪೆಂಟೈನ್ ರಸ್ತೆಗೆ ತಿರುಗಿದೆ. ಈ ರಸ್ತೆ ಹಾವು ಹರಿದಂತೆ ಸೊಟ್ಟ ಸೊಟ್ಟವಾಗಿ ಹೋಗುವ ಕಾರಣ ಇದಕ್ಕೆ ಆ ಹೆಸರು. ಆದಿನ ನನಗೆ ಸ್ಫೂರ್ತಿ ಬಂದು ಅದಕ್ಕೆ 'ನಾಗಮಾರ್ಗ' ಎಂಬ ಹೆಸರೇಕೆ ಇಡಬಾರದು ಎನಿಸಿತು. ದಿನಾ ಈ ಮಾರ್ಗದಲ್ಲಿ ನಡೆಯುವ ನನ್ನ ಹೆಸರನ್ನೂ ಇಟ್ಟಂತಾಯಿತು, ಕನ್ನಡೀಕರಣವೂ ಆದಂತಾಯಿತು, ಎಂದುಕೊಂಡೆ. 'ನನ್ನ ಹೆಸರು ಇಡಿ' ಎಂದು ನಾನೇ ಕೇಳಿದರೆ—ಏಕೆಂದರೆ ಬೇರೆಯವರು ಖಂಡಿತಾ ಹಾಗೆ ಮಾಡುವುದಿಲ್ಲ–ಇಡುವುದಿಲ್ಲ. ಹೀಗಾದರೂ ನನ್ನ ಹೆಸರು ಬೆಂಗಳೂರಿನ ಬೀದಿಯೊಂದಕ್ಕೆ ಇಟ್ಟಂತಾಗುವುದಲ್ಲ ಎಂದು ನನ್ನ ಘನತೆ ಗೌರವಗಳ ಬಗ್ಗೆ ಮನಸ್ಸಿನಲ್ಲಿಯೇ ಹಿಗ್ಗಿ ಅದೇ ರಸ್ತೆಯಲ್ಲಿ ಮನೆಗೆ ಬರುತ್ತಿದ್ದೆ. ಒಬ್ಬಿಬ್ಬರು ಪರಿಚಯದವರು ಹಾದು ಹೋದರು. ಇಲ್ಲಿಯವರೆಗೆ ಕೈಮುಗಿದು ಹೋಗುತ್ತಿದ್ದ ಅವರಲ್ಲಿ ಒಬ್ಬ ಎಡಗೈ ಎತ್ತಿದ, ಇನ್ನೊಬ್ಬ ಬಲಗೈ ಒದರಿದ. ಅವರ ಕೈಗಳಿಗೆ ಏನೋ ನೋವು ಗೀವು ಆಗಿರಬೇಕು ಎಂದುಕೊಂಡು, ಮನೆಗೆ ಬಂದು ಟೇಬಲ್ ಮುಂದೆ ಕುಳಿತು ಬರೆಯಬೇಕೆಂದು ನೆನ್ನೆ ಬೆಳಗ್ಗೆ ಬರೆಯಲಾರಂಭಿಸಿದ್ದ 'ಏನು ಗತಿ' ಎಂಬ ಸಣ್ಣ ಕಥೆ ಮುಗಿಸುವ ಮನಸ್ಸು ಮಾಡಿ ಸಿದ್ಧತೆ ಮಾಡಿಕೊಳ್ಳಲಾರಂಭಿಸಿದೆ. ಬರವಣಿಗೆ ಆರಂಭಿಸುವ ಮುನ್ನ ಎಡಗಡೆಗೆ ಕಾಫಿ ಲೋಟ ಇರಬೇಕು. ಅದನ್ನು ಎಡಗೈಯಲ್ಲಿ ಹೀರುತ್ತಾ ಬಲಗೈಯಲ್ಲಿ ಲೇಖನಿ ಸಾಗಿಸುತ್ತಾ ಹೋಗಬೇಕು. ಮಧ್ಯೆ ಮಧ್ಯೆ ಸೀಗರೇಟಿನ ದಮ್ಮು ಎಳೆಯಬೇಕು. ಒಂದೆರಡು ನಿಮಿಷ ಕಾದೆ. ಕಾಫಿ ಬರಲಿಲ್ಲ. 'ಕಾಫಿ, ಕಾಫಿ!' ಎಂದೆ. ಆಗಲೂ ಬರಲಿಲ್ಲ; ಕೂಗಿದೆ, ಅರಚಿದೆ, ಕಿರಚಿದೆ. ಊಹುಂ, ಅದರ ಸುದ್ದಿಯೇ ಇಲ್ಲ. ಇನ್ನೇನು ಸಿಟ್ಟಿನಿಂದ ಏಳಬೇಕು, ಅಷ್ಟರಲ್ಲಿ ಅಮ್ಮಾವರು ಕಾಫಿ ಹಿಡಿದು

ಬಂದರು. 'ಇಷ್ಟೊತ್ತ್ರೇ ಕಾಫಿ ಕೊಡಾಕೆ ?' ಎಂದೆ, 'ನಿಮ್ಮ ಗ್ಯಾಸು ನೆನ್ನೆಗೆ ಮುಗೀತು. ಸೀಮೆ ಎಣ್ಣೆ ಒಲೆ ಹಚ್ಚಿ ಮಾಡಾಕೆ ಇಷ್ಟೊತ್ತಾಯ್ತು !' ಎಂದರು. ದರಿದ್ರ ! ಸೀಮೆಎಣ್ಣೆ ವಾಸನೆ ! ಇನ್ನೇನು ಮಾಡುವುದೆಂದು ಅದನ್ನೇ ತುಸು ತುಸು ಕುಡಿಯಲಾರಂಭಿಸಿದೆ. ಸಿಗರೇಟ್ ಹಚ್ಚಲು ಬೆಂಕಿಕಡ್ಡಿ ಗೀಚಿದೆ. ನಿನ್ನೆ ತಾನೆ ಅಮ್ಮಾವರು ದೇವರಮನೆಯಿಂದ ಕಳಿಸಿಕೊಟ್ಟಿದ್ದ ಪೊಟ್ಟಣ ಇದು. ಎಣ್ಣೆ ಕುಡಿದು ದೇವರೇ ಬಂದು ಗೀಚಿದರೂ ಹಚ್ಚಿಕೊಳ್ಳುತ್ತಿರಲಿಲ್ಲ. ಬೇರೆ ಪೊಟ್ಟಣಕ್ಕಾಗಿ ಕೂಗಿದೆ. ಬಂದಿತು. ಸಿಗರೇಟ್ ಹಚ್ಚಿದ ಮೇಲೆ ಕೊಂಚ ಸಮಾಧಾನವಾಯಿತು. ಬಾಲ್ ಪೆನ್ ಎತ್ತಿಕೊಂಡು ಬರೆಯಲಾರಂಭಿಸಿದೆ. ನಿನ್ನೆ ತಾನೆ ಮೂರು ರೀಫಿಲ್ ತಂದಿದ್ದೆ. 'ಇವು ಗ್ಯಾರಂಟಿ, ಸಾರ್. ಬರೀದಿದ್ರೆ ವಾಪಸು ಕೊಡಿ' ಎಂದು ಮೆಹರ್ಬಾನಿ ಮಾಡಿ ಕೊಟ್ಟಿದ್ದ ಅಂಗಡಿಯವ. ಒಂದು ಪದ ಬರೆಯುವುದರಲ್ಲಿ ರೀಫಿಲ್ ಸುಸ್ತಾಯಿತು' ಗೀಚಿದೆ, ಕುಕ್ಕಿದೆ, ಅತ್ತಲಾಗಿ ಕಸದ ಬುಟ್ಟಿಗೆ ಬಿಸಾಡಿದೆ. ಇನ್ನೊಂದು ಹಾಕಿಕೊಂಡೆ. ಇದು ಅದರ ಅಪ್ಪ. ಮತ್ತೊಂದು ಅದರ ತಾತ. 'ಇದರ ಮನೆ ಹಾಳಾಗ !' ಎಂದು ಶಪಿಸುತ್ತಾ ಸುಮ್ಮನೆ ಕುಳಿತು ಕಾಫಿ ರೀಫಿಲ್‌ಗೆ ಆರ್ಡರು ಮಾಡಿದೆ. ಬೆಳಗಿನ ಹೊತ್ತು ಮೂರು ಕಪ್ ಬೇಕು. ಇನ್ನೂ ಎರಡು ಬಾಕಿ ಇದ್ದುವು, ನಿರ್ವಾಹವಿಲ್ಲದೆ ಕುಡಿದು ಸಿಗರೇಟ್ ಹಚ್ಚಿ ಫೋನಿಗೆ ಕೈಹಾಕಿದೆ – ಏಕೆ ಇನ್ನೂ ಯಾರೂ ಫೋನ್ ಮಾಡಲೇ ಇಲ್ಲವಲ್ಲ ಎಂದು. ದಿನಾ ಬೆಳಗೆದ್ದರೆ ಮೂರು ನಿಮಿಷಕ್ಕೊಂದು ಬರಾ-ಬರಾ ಎಂದು ಫೋನು. ಬುದ್ಧಿ ಓಡುತ್ತಾ ಲೇಖನಿ ಸಾಗುತ್ತಾ ಬರೆಯುತ್ತಿರುವಾಗ ಹಾಳು ಫೋನಿನಿಂದ ರಸಭಂಗ. ಈದಿನ ಯಾವ ಫೋನ್ ಕರೆಯೂ ಇಲ್ಲ. ಏಕೆ ಎಂದು ನೋಡಲು ಫೋನ್ ಎತ್ತಿದೆ, ಅದು ಕೊರ ಕೊರ ಎನ್ನಲೇ ಇಲ್ಲ. ಮಡಗಿದೆ, ಎತ್ತಿದೆ, ಊಹುಂ. ಕುಕ್ಕಿ ಪಕ್ಕದ ಮನೆಗೆ ಹೋದೆ – ದೂರು ಕೊಡಲು. ಹಿಂದೆ ಹೋದಾಗಲೆಲ್ಲ ನನ್ನನ್ನು ಸಾರು ಹುಳಿ ಎಂದು ಸಂಬೋಧಿಸುತ್ತಿದ್ದವರು ಇಂದು ಕಿಟಿಕಿಯಲ್ಲಿ ನೋಡಿ ಬಾಗಿಲು ತೆರೆಯಲು ಹತ್ತು ನಿಮಿಷ ತಡಮಾಡಿದರು. ಅವರ ಮುಖದ ಮೇಲೆ ತಾತ್ಸಾರ ಎದ್ದು ಕಾಣುತ್ತಿತ್ತು. 'ಕಂಪ್ಲೇಂಟ್ `ಕೊಡಬೇಕು' ಎಂದು ಅವರ ಅನುಮತಿಗಾಗಿ ಕಾಯದೆ 198ಕ್ಕೆ ಫೋನು ಮಾಡಿದೆ. 'Ring up 398' ಎಂದು ಉತ್ತರ ಬಂದಿತು. ಆ ನಂಬರಿಗೆ ರಿಂಗ್ ಮಾಡಿ 'My phone is dead ' ಎಂದೆ. ಏನು ಹೇಳಿದಳು ಗೊತ್ತೆ ಆ ....? 'Your phone is not dead. You are dead !' ಸಿಟ್ಟು ನೆತ್ತಿಗೇರಿತು. ತಿರುಗಿಸಿ ಅಂದುಬಿಡೋಣವೇ ಅನ್ನುವುದರೊಳಗೆ ಆಕೆ ಇಟ್ಟುಬಿಟ್ಟಿದ್ದಳು. ಪೆಚ್ಚುಮೋರೆ ಹಾಕಿಕೊಂಡು ಎದ್ದೆ. ಎಂಟು ದಿನಗಳ ಹಿಂದೆ ಟ್ರಂಕ್‌ಕಾಲ್ ಬಿಲ್ಲು ಬಂದಿತ್ತು. ಇನ್ನೂ ಕಟ್ಟಿರಲಿಲ್ಲ. ಅದಕ್ಕಾಗಿ disconnect ಮಾಡಿರಬೇಕೆಂದು ಮಾತೆತ್ತಿದರೆ ದೇಶಕ್ಕೆಲ್ಲಾ ಫೋನ್ ಮಾಡುವ ಹೆಂಡತಿಮಕ್ಕಳ ಮೇಲೆಲ್ಲ ರೇಗಾಡಿದೆ. ಅವರು ನಾನು ಮಾಡಿಲ್ಲ, ತಾನು ಮಾಡಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು.

ಬಿಲ್ಲು ತೆಗೆದು ನೋಡಿದೆ. ಎಲ್ಲಾ ನಾನು ಮಾಡಿದ ಕಾಲ್‌ಗಳೇ ! ಇಷ್ಟರಲ್ಲಿ ಎಲ್ಲರೂ ಓದಿಮುಗಿಸಿದ ಪೇಪರ್ ಕೈಗೆತ್ತಿಕೊಂಡೆ. ಮೊದಲು ಮೊನ್ನೆ ಮಾಡಿದ ನನ್ನ ಭಾಷಣ ಬಂದಿದೆಯೋ ಎಂದು ಕಣ್ಣು ಹಾಯಿಸಿದೆ. ಧರ್ಮಸ್ಥಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣ ಮಾಡಿದ್ದೆ. ಪತ್ರಿಕೆಯವರೂ ಬಂದಿದ್ದರು. ಭಾರಿ ಬರೆದುಕೊಂಡರು. ಆದರೆ ಸುದ್ದಿ ಮಾತ್ರ ಇಲ್ಲ. ಹುಡುಕಿದೆ, ತಡಕಿದೆ. ಅಲ್ಲಿತ್ತು, ಏಳನೆಯ ಪುಟದಲ್ಲಿನ ನಿತ್ಯಭವಿಷ್ಯದ ಮೇಲೆ ಕಂಡೂ ಕಾಣಿಸದಂತಹ ಅಕ್ಷರಗಳಲ್ಲಿ: 'ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನ ವಿಜೃಂಭಣೆಯಿಂದ ನಡೆಯಿತು : ಉದ್ಘಾಟನೆ, ಅಧ್ಯಕ್ಷ ಭಾಷಣ, ಇತರ ಭಾಷಣಗಳು. ಮತ್ತು ವಂದನಾರ್ಪಣೆ ಕಾರ್ಯಕ್ರಮಗಳು' ಎಲ್ಲಾ ಆರುಪಂಕ್ತಿಗಳಲ್ಲಿ ಮುಗಿದು ಹೋಗಿತ್ತು. ಅದೇ ಮೊದಲ ಪುಟದಲ್ಲಿ ಮಹಾ ಮಹಾನೇತಾರರು (ಇದು ಮುದ್ರಣ ದೋಷದಿಂದಾಗಿ ನೇಕಾರರು ಎಂದು ಬಿದ್ದಿತ್ತು) ಮಾಡಿದ ಭಾಷಣ ಚಾಚೂ ತಪ್ಪದೆ ಬಂದಿತ್ತು. ಜೊತೆಗೆ ಅವರು ಕೆಮ್ಮಿದ್ದು, ಕ್ಯಾಕರಿಸಿದ್ದು ಎಲ್ಲವೂ ವಿವರವಾಗಿ ಬಂದಿತ್ತು. ಧನುರ್ರಾಶಿಗೆ ನಿತ್ಯ ಭವಿಷ್ಯ ನೋಡಿದೆ ; 'ಕೌಟುಂಬಿಕ ಕಲಹ, ನಿರಾಶೆ, ಮಾನಹಾನಿ !' ಎಂಥದೋ ತಿಂಡಿ ತಿಂದು ಕಾರಿನಲ್ಲಿ ಎಲ್ಲಾದರೂ ಹೋಗಿ ಬರೋಣವೆಂದರೆ ಡ್ರೈವರ್ರೇ ಬಂದಿರಲಿಲ್ಲ. ಅದರ ಧೂಳು ಒರೆಸಿ ಮೂರು ದಿನ ಆಗಿತ್ತು. ಏನೋ ಕಾರಣ ಬಂದಿರಲಾರ ಎಂದು ನಾನೇ ಡ್ರೈವ್ ಮಾಡೋಣ ಎಂದು ಸ್ಟಾರ್ಟ್ ಮಾಡಿದೆ. ಒಂದು ಸಲ ಜರ್ಕ್ ಅಂತು. ಮತ್ತೊಂದು ಸಲ ಅದೂ ಇಲ್ಲ. ಬ್ಯಾಟರಿ ಡೌನ್ ಆಗಿತ್ತು. ಮತ್ತೆ ಕೋಣೆ ಸೇರಿದೆ. ಭಗವದ್ಗೀತೆ ಕಣ್ಣಿಗೆ ಬಿತ್ತು. 'ಸುಖದುಃಖೇ ಸಮೇ ಕೃತ್ವಾ.' ಇದರ ಮೇಲೆ ಕಣ್ಣು ಹಾಯಿಸಿದೆ. ಹೇಳೋದು ಸುಲಭ ಎಂದುಕೊಂಡು ಅದನ್ನು ಅತ್ಲಾಗಿ ಬಿಸಾಡಿ ಊಟದವರೆಗೆ ಹಾಸಿಗೆ ಮೇಲೆ ಬಿದ್ದುಕೊಂಡೆ. ನಿದ್ದೆಯೇನೋ ಬಂತು. ಏನೇನೊ ಕನಸು ! ಎದ್ದೆ ಎದ್ದವನು ಮುಖ ತೊಳೆದುಕೊಂಡು ಹೊರಗೆ ಕುರ್ಚಿಯಲ್ಲಿ ಕುಳಿತೆ. ಜನ ಬರುವ ಹೊತ್ತು, ಆದರೆ ಒಂದು ನರಪಿಳ್ಳೆಯೂ ಕಾಣಲಿಲ್ಲ. ಬೇರೆ ದಿನ ಬೀದಿ ತುಂಬ ಕಾರುಗಳು, ಮನೆತುಂಬ ಜನ. ಮೇಲಾಗಿ ಮೆಟ್ಟಿಲ ಮೇಲೆ ಕ್ಯೂ. ಬೀದಿಯಲ್ಲಿ ಹೋದವರು ಯಾರಾದರೂ ನನ್ನ ಮನೆ ಗೇಟು ತೆಗೆದಾರೆ ಎಂದು ಇಣಕಿ ಇಣಕಿ ನೋಡಿದೆ. ಹಾಕಿದ ಗೇಟು ತೆರೆಯಲೇ ಇಲ್ಲ. ಯಾರೂ ಬರಲಿಲ್ಲ. ಬಂದವಳು ಎರಡು ವರ್ಷದ ನನ್ನ ಮೊಮ್ಮಗಳು. 'ತಾತಾ ಬಾ ಇಲ್ಲಿ' ಎಂದು ತೊದಲು ಮಾತಿನಿಂದ ಕರೆದು ಕೈಹಿಡಿದು ಎಳೆದಳು. ಎದ್ದೆ. ಕೈಯಲ್ಲಿ ನಾಯಿ ಹೊಡೆಯುವ ಕೋಲು ಹಿಡಿದು ಒಂದು ಮೂಲೆ ತೋರಿಸಿ 'ಕೂಚು, ಕೂಚು' ಎಂದಳು. ನಾನು ಕೂರಲಿಲ್ಲ 'ಕೂಚ್ಕೊ !' ಎಂದು ಗದರಿಸಿದಳು. ಸರ್ಕಸ್ಸಿನಲ್ಲಿ ಆನೆ ಕುಳಿತಂತೆ ಕಷ್ಟಪಟ್ಟು ಕುಳಿತೆ. 'ಹಿಂಗೇ ಕೂಚ್ಕೊಂಡಿರು 'ಅಂತ ಹೇಳಿ ಒಳಗೆ ಹೋಗಿ ಅವಳ ಅಜ್ಜಿಯ ಅಲಂಕಾರದ ಪೆಟ್ಟಿಗೆ ತಂದಳು. ತಲೆ ಬಾಚಿದಳು ಪೌಡರು ಸವರಿದಳು.

ಕುಂಕುಮ ಹಚ್ಚಿದಳು. ಒಂದು ಸಾಲದು ಎಂಬಂತೆ ಹಣೆಗೆ ಹಚ್ಚುವ ಬಣ್ಣಗಳನ್ನೆಲ್ಲಾ ಒಂದೊಂದಾಗಿ ಅವಳಿಗೆ ಕಂಡ ಕಡೆ ಹಚ್ಚಿದಳು. ಒಂದೆರಡು ಬಳೆ ತೊಡಿಸಿದಳು, 'ಪಾಕ್ಕೋಗಾನ ಬಾ' ಎಂದು ಕರೆದಳು. ಎದ್ದೆ. ಅಲ್ಲೇ ಇದ್ದ ನೀಲುಗನ್ನಡಿಯಲ್ಲಿ ನೋಡಿಕೊಂಡೆ. ಬೃಹನ್ನಳೆ ವೇಷಕ್ಕೆ ಹತ್ತಿರ ಹತ್ತಿರ ಇತ್ತು ನನ್ನ ಮೊಮ್ಮಗಳ ಅಲಂಕಾರ. ಅವಳ ಕೈಹಿಡಿದು ಕೆಳಗಿಳಿದೆ, ಅಲ್ಲಿ ಒಬ್ಬರು ನಿಂತಿದ್ದರು. ಸದ್ಯ ಯಾರೋ ಕೆಲಸ ಮಾಡಿಸಿಕೊಂಡ ಪುಣ್ಯಾತ್ಮರು ತಮ್ಮ ಕೃತಜ್ಞತೆ ಸಲ್ಲಿಸಲು ಬಂದಿರ ಬೇಕೆಂದುಕೊಂಡೆ. ಆದರೆ ಹಾರಗೀರ ಏನೂ ಕಾಣಲಿಲ್ಲ. ಬುಟ್ಟಿಯಲ್ಲಿರಬೇಕೆಂದು ಆ ಕಡೆ ಈ ಕಡೆ ಕಣ್ಣು ಹಾಯಿಸಿದೆ. ಅಲ್ಲೆಲ್ಲೂ ಬುಟ್ಟಿಯೂ ಕಾಣಲಿಲ್ಲ. ಪಾಪ, ಹೇಳದೆ ಕೇಳದೆ ತರಲು ಹೆದರಿ ಈಗ ಕೇಳಿಕೊಂಡು ಹೋಗೋಣವೆಂದು ಬಂದಿರಬೇಕು ಎಂದು ಭಾವಿಸಿ 'ಏನು ಬಂದದ್ದು ?' ಎಂದೆ, ಎಂದಿಲ್ಲದ ವಿನಯದಿಂದ 'ಏನೂ ಇಲ್ಲ' ಎಂದು ಜೇಬಿನಿಂದ ಒಂದು ಚೀಟಿ ತೆಗೆದು, 'ಇವನಿಗೇನಾದ್ರೂ ಮಾಡಿದ್ದೀರಾ ?' ಎಂದರು. 'ಮಾರ್ಕ್ಸ್ ಕಡಿಮೆ, ಏನೂ ಮಾಡಾಕಾಗ್ಲಿಲ್ಲ... .... ಹೋದವರ್ಷ ಆಚೆ ವರ್ಷ ನಿಮ್ಮ ಮಗನಿಗೆ ಕೊಟ್ಟೆ, ಮಗಳಿಗೆ ಕೊಟ್ಟೆ, ಇನ್ನೇನಾಗ್ಬೇಕು?' ಎಂದೆ. 'ಇವನು ಅಳಿಯ ಮುಖ್ಯವಾಗಿ ಇವನಿಗಾಗ್ಬೇಕಾಗಿತ್ತು. ನಿವೃತ್ತಿಯಾದ ನೀವು ಮಾಡದಿದ್ರೆ ಮುಂದೆ ಬರೋರ ಕೈಯ್ಲಿ ಮಾಡಿಸಿಕೊತ್ತೀನಿ !' ಎಂಬ ಅರ್ಥ ಬರುವಂತೆ ನೋಡಿ, ಪ್ಯಾಂಟಿನ ಜೇಬಿನೊಳಗೆ ಕೈಹಾಕಿಕೊಂಡು ಹೊರಟುಹೋದರು.

'ನಿವೃತ್ತಿ !' ಕುಸಿದುಬೀಳುವುದರಲ್ಲಿದ್ದೆ–ನನ್ನ ಮೊಮ್ಮಗಳು ಪಾರ್ಕಿಗೆ ಎಳೆಯು ದಿದ್ದರೆ. ಪಾರ್ಕಿಗೆ ಹೋದೆ. ನಿವೃತ್ತನಾದ ಡ್ರೈವರ್ ಒಬ್ಬ ಎದ್ದು ಕೈಮುಗಿಯುತ್ತಿ ದ್ದವನು. ಈ ದಿನ ಕಾಲುಮೇಲೆ ಕಾಲುಹಾಕಿ ಠೀವಿಯಿಂದ ಕುಳಿತ. ಅವನು ಕುಳಿತ ಬೆಂಚಿನ ಮೇಲೆಯೇ ಕುಳಿತುಕೊಳ್ಳುವುದಕ್ಕೆ ಮೊಮ್ಮಗಳು ಹಟ ಹಿಡಿದಳು. ಒಂದೇಟು ಕೊಟ್ಟೆ. ಅಳಲಾರಂಭಿಸಿದಳು. ಅಲ್ಲಿ ಇಲ್ಲಿ ಅಡ್ಡಾಡಿ ಮೊಮ್ಮಗಳೊಡನೆ ಮನೆಗೆ ಮರಳಿದೆ. ಇಲ್ಲಿಯವರೆಗೆ ವರ್ಗವಾದಾಗಲೆಲ್ಲ ಅದೇನು ಹಾರ ತುರಾಯಿಗಳು ! ಹಣ್ಣು ಹಂಪಲುಗಳು ! ದಿನಾ ವರ್ಗವಾಗುತ್ತಿದ್ದರೆ ಎಷ್ಟು ಚಂದ ಎಂದು ಮನೆಮಕ್ಕಳೆಲ್ಲಾ ಅಂದುಕೊಳ್ಳುತ್ತಿದ್ದರು. ಆದರೆ ಈಗ ನಿವೃತ್ತಿಯಾದ ದಿನ ಏನೂ ಇರಲಿಲ್ಲ !

ಮತ್ತೆ ಕೋಣೆ ಸೇರಿದೆ. 'ಮುಂದೇನು ?' ಎಂದು ಕೇಳಿದೆ. ಪಿಂಚನಿಯಲ್ಲಿ ಮುದಿಬಾಳು ಸಾಗಿಸಬೇಕು. ಆಳಿಲ್ಲ ಕಾಳಿಲ್ಲ. ಕಾರಿಲ್ಲ, ಡ್ರೈವರಿಲ್ಲ. ಬರುವವರಿಲ್ಲ, ಹೋಗುವವರಿಲ್ಲ. ಶೂನ್ಯ ! ಶೂನ್ಯ ! ಬರಿಶೂನ್ಯ ! ಮತ್ತೆ ಭಗವದ್ಗೀತೆಯ ಕಡೆ ಕಣ್ಣು ಹೋಯಿತು. ಭಕ್ತಿಯಿಂದ ಕೈಗೆತ್ತಿಕೊಂಡು ಓದಿದೆ. 'ಕರ್ಮಣ್ಯೇವಾಧಿ ಕಾರಸ್ತೇ....' ನನ್ನ ಅರವತ್ತೆರಡುವರ್ಷದ ಕರ್ಮಜೀವನ ಪದರಪದರವಾಗಿ ನನ್ನ ಮುಂದೆ ತೆರೆಯಿತು. ಮುಂದಿನ ಬಾಳೂ ಸ್ಪಷ್ಟವಾಯಿತು. ಇಲ್ಲಿಯವರೆಗೆ ಕಟ್ಟಿ

ಕೊಂಡಿದ್ದ ಕಣ್ಣುರೆಗಳನ್ನು ಕಿತ್ತೆಸೆದೆ. ಹಿಂದೆಂದೂ ಕಾಣದ ವಿಶಾಲ ವಿಶ್ವ ಕಂಡಿತು ಮುದುಡಿದ ಮನಸ್ಸು ಮುದಗೊಂಡಿತು.

ಬರೆಯಲಾರಂಭಿಸಿದೆ. ಬರೆಯದಿದ್ದ ರೀಫಿಲ್ಲುಗಳು ಈಗ ಬರೆಯಲಾರಂಭಿಸಿದುವು. ಬರೆದೆ, ಬರೆದೆ, ಮೂರುನಾಲ್ಕು ರೀಫಿಲ್ಲುಗಳು ಮುಗಿಯುವವರೆಗೂ ಬರೆದೆ-ನನ್ನ ಹೃದಯಕ್ಕೆ ಹೊಸ ಹುಮ್ಮಸ್ಸನ್ನು ರೀಫಿಲ್ ಮಾಡಿಕೊಂಡು.

*** *** *** ***

ನನ್ನ ಹುಟ್ಟು, ಹಳ್ಳಿಯಲ್ಲಿ. ನಮ್ಮ ಮನೆಯ ಹೆಸರು 'ದೊಡ್ಡ ಮನೆ' ಎಂದು. ಮೂರು ಜನ ಅಣ್ಣತಮ್ಮಂದಿರು ಮತ್ತು ಅವರ ಹೆಂಡತಿಯರು ನಾಲ್ಕೈದು ಜನ ಅಕ್ಕ ತಂಗಿಯರು, ಅವರ ಒಂಬತ್ತು ಗಂಡುಮಕ್ಕಳು ಮತ್ತು ಮೂರು ಜನ ಹೆಣ್ಣುಮಕ್ಕಳು, ಆಳುಕಾಳು, ದನಕುರಿ ಕೋಳಿ ಇವರೆಲ್ಲಾ ಇಷ್ಟೆಲ್ಲಾ ಇದ್ದ ಮನೆ ಅದು. ಆ ಮನೆಯ ಹಿರಿಯ ಮಗನ ಹಿರಿಯಮಗನಾಗಿ ಹುಟ್ಟಿದೆ-ಇಲ್ಲಿಗೆ ೬೨ ವರ್ಷಗಳ ಹಿಂದೆ. ಹುಟ್ಟಿದ್ದು ನನ್ನ ತಾಯಿಯ ತೌರುಮನೆ 'ಬಂಗಲಿ'ಯಲ್ಲಿ. ಆಗ ಹೆರಿಗೆಗೆ ಮಿಡ್‌ವೈಫ್, ನರ್ಸು, ಡಾಕ್ಟರು, ವಾರ್ಡು-ಇವು ಬೇಕೆಂದು ತಿಳಿಯದಿದ್ದ ಕಾಲ ಅದು. ಈಗಲೂ ಅಂತಹ ಸ್ಥಿತಿ ಹಳ್ಳಿಗಳಲ್ಲಿರಬೇಕಾದರೆ ಆಗ ಕೇಳಬೇಕೆ ! ಹಸು ಎಮ್ಮೆ ಆಡು ಕುರಿಗಳ ಹೆರಿಗೆ ದೇವರಿಗೆ ಸೇರಿತ್ತು ; ಮನುಷ್ಯರ ಹೆರಿಗೆ ತಿಳಿದ ಅಥವಾ ತಿಳಿಯದ ಹೆಂಗಸಿಗೋ ಸೂಲಗಿತ್ತಿಗೋ ಸೇರಿತ್ತು. ಇಂದು ಬಹು ದೊಡ್ಡ ಹೆರಿಗೆ ಡಾಕ್ಟರೆನಿಸಿಕೊಂಡವರ ಹುಟ್ಟೆಲ್ಲ ಹೀಗೆಯೆ. ಮೊನ್ನೆ ತಾನೆ 'The Animals' ಎಂಬ ಚಿತ್ರ ನೋಡಿದೆ. ಅದನ್ನು ನಿರೂಪಿಸುತ್ತಿದ್ದ ಆಕೆ ಪ್ರಾಣಿಗಳು ತಮ್ಮ ಮರಿಗಳನ್ನು ತಾವೇ ಹೇಗೆ ಈದು ಅವನ್ನು ಸಾಕಿ ಮುದ್ದಾಡುತ್ತವೆ ಎನ್ನುವುದನ್ನು ಹೇಳುವಾಗ 'God could not be every-where. So he created mothers' ಎಂದು ಹೇಳಿದಳು. ಹಳ್ಳಿಗಳಲ್ಲಿ ದೇವರು ಇರಲಾಗದ ಕಾರಣ ತಾಯಂದಿರನ್ನು ಸೃಷ್ಟಿಮಾಡಿದ್ದಾನೆ.

ಹುಟ್ಟಿದ ಮೂರುವರ್ಷಕ್ಕೆ ಹೆತ್ತತಾಯಿ ಇನ್‌ಫ್ಲುಯೆಂಜಾದಲ್ಲಿ ಸತ್ತುಹೋದ ಳಂತೆ. ಹೀಗಾಗಿ ನಾನು ತಾಯಿಯ ಮುಖ ಕಂಡವನಲ್ಲ. ಅಜ್ಜಿಯ (ತಂದೆಯ ತಾಯಿಯ) ಆರೈಕೆಯಲ್ಲಿ ಬೆಳೆದೆ. ಬಾಲ್ಯದ ಬಹು ಹಿಂದಿನ ನೆನಪು ಎಂದರೆ ಮುಳ್ಳು ಊರಲೂ ತಾಣವಿಲ್ಲದಷ್ಟು ಸಿಡುಬಿನಿಂದ ಮನೆಯ ಜಗುಲಿಯ ಮೇಲೆ ಮಲಗಿದ್ದುದು, ಸುತ್ತಾ ಬೇವಿನ ಸೊಪ್ಪು, ಆದರೂ ನೊಣಗಳ ಕಾಟ. ಸಿಡುಬುಹುಣ್ಣಿನ ಕಡಿತ ತಡೆಯ ಲಾರದೆ ಉಪಾಯದಿಂದ ಕೆರೆದುಕೊಳ್ಳುತ್ತಿದ್ದುದು ಮತ್ತು ಆಗಾಗ ಬೇವಿನ ಸೊಪ್ಪಿನಿಂದ ಬೀಸಿಕೊಳ್ಳುತ್ತಿದ್ದುದು. ಅಂತೂ ಆ ಮಹಾಮಾರಿಗೆ ತುತ್ತಾಗದೆ ನಾನು ಬದುಕಿದೆ.

ಕೂಲಿಮಠದಲ್ಲಿ ಶ್ರೀ ಓನಾಮ ಕಲಿಯಲಾರಂಭಿಸಿದೆ. ಮನೆಯ ಜಗುಲಿಯ ಮೇಲೋ ಚಾವಡಿಯಲ್ಲೋ ಕೂಲಿಮಠ ನಡೆಯುತ್ತಿದ್ದುವು. ತಿಂಗಳಿಗೆ ಎರಡು ಮೂರು ರೂಪಾಯಿನ ಓಚಯ್ಯ. ಸಣ್ಣಮರಳು ಒಂದು ಮೂಲೆಯಲ್ಲಿ. ಅದನ್ನು ಹುಡುಗರ

ಮುಂದೆ ಹರಡಿದರೆ ಅದೇ ಸ್ಲೇಟು. ಬೆರಳೇ ಬಳಪ. ಊರಿನ ತೋಟದ ಬೇಲಿಗಳಲ್ಲಿ ಬೆಳೆಯುತ್ತಿದ್ದ ಗಜ್ಜುಗ ತಂದು ಅದನ್ನು ಅರ್ಧಕ್ಕೆ ಕೊಯ್ದು ತಿದ್ದುವ ಬೆರಳಿಗೆ ಹಾಕಿಕೊಂಡು ಮರಳಿನ ಮೇಲೆ ಅಕ್ಷರಗಳನ್ನು ತಿದ್ದಿದ್ದೂ ತಿದ್ದಿದ್ದೆ. ಮಠಕ್ಕೆ ಹೋಗಿ ಕುಳಿತುಕೊಳ್ಳುವ ಮುನ್ನ 'ಸ್ವಾಮಿ ದೇವನೆ ಲೋಕಪಾಲನೆ' ಹೇಳಿಸಿ, ಆಮೇಲೆ 'ಅಮರಾನಿರ್ಜರಾದೇವ' ಎಂಬಲ್ಲಿಂದ ಅಮರಕೋಶದ ಬಾಯಿಪಾಠ. 'ಧರಣಿಮಂಡಲ ಮಧ್ಯದೊಳಗೆ' ಎಂಬ ಗೋವಿನ ಹಾಡು. ಸಂಜೆ ಮಗ್ಗಿ ಪಾಠ. 'ಎರಡೊಂದ್ಲೆರಡೊ,' 'ಎರಡೆರಡ್ಲು ನಾಲ್ಕು'–ಹೀಗೆ ಹತ್ತರವರೆಗೂ, ಆಮೇಲೆ ನೂರರವರೆಗೂ ಮಗ್ಗಿ ಗಟ್ಟಿ ಮಾಡಬೇಕು, ಕಾಗುಣಿತ ಹೇಳಬೇಕು. ಕೊನೆಯಲ್ಲಿ 'ಕಾಯಗೌರ್ಶ್ರೀಗೌರಿ' ಹಾಡು. ಮನೆಗೆ ಹೋದರೆ ದೀಪ ಹತ್ತಿಸುವವರೆಗೆ ಅದು ಇದು ಆಟ ಅಥವಾ ರೈತಾಪಿ ಸಣ್ಣ ಪುಟ್ಟ ಕೆಲಸಗಳು. ಆಮೇಲೆ ಮತ್ತೆ ಮನೆಯಲ್ಲಿ ಮಗ್ಗಿ ಗಟ್ಟಿಮಾಡುವುದು, ಕಾಗುಣಿತ ಹೇಳಿಕೊಳ್ಳುವುದು.

ಕೂಲಿಮಠ ಮುಗಿದಮೇಲೆ ಪಕ್ಕದ ಹಳ್ಳಿಯಲ್ಲಿ ಪ್ರೈಮರಿ ಶಾಲೆ. ಇಲ್ಲಿ ಸ್ಲೇಟು ಬಳಪ ಪುಸ್ತಕಗಳು. ಸಂಜೆ ಮನೆಗೆ ಬಂದರೆ ಓದಿಕೊಳ್ಳುವುದು, ಹೇಳಿ ಬರೆಯಿಸುವುದು 'ಮನೆಯ ದೀಪ,' 'ರಾಗಿಯ ಪೈರು' ಇವನ್ನೆಲ್ಲಾ ಗಟ್ಟಿಮಾಡುವುದರ ಜೊತೆಗೆ ಬರೆದುಕೊಂಡು ಹೋಗಬೇಕು. ಶುಕ್ರವಾರ ಸರಸ್ವತಿ ಪೂಜೆ. ಶಾಲೆಯನ್ನು ಗುಡಿಸಿ ಸಾರಿಸಿ ಸ್ಲೇಟು ಪುಸ್ತಕಗಳನ್ನು ಒಂದು ಕಡೆ ಇಟ್ಟು ಪೂಜೆಮಾಡಿ ಚರುಪು ತಿನ್ನುತ್ತಿದ್ದೆವು. ಒಬ್ಬೊಬ್ಬರು ಒಂದೊಂದು ವಾರ ತೆಂಗಿನಕಾಯಿ ತರಬೇಕಾಗಿತ್ತು. ಅದಕ್ಕೆ ಬೆಲ್ಲ ಸೇರಿಸಿ ಮುಕ್ಕುತ್ತಿದ್ದೆವು.

ಇಲ್ಲಿಗೆ ಹಳ್ಳಿಯ ಅನೇಕ ಹುಡುಗರ ಓದು ಮುಗಿಯುತ್ತಿತ್ತು. ಆದರೆ ನನ್ನ ತಂದೆಗೆ ನಾನು ಲೋವರ್ ಸೆಕೆಂಡರಿಯನ್ನಾದರೂ ಮಾಡಬೇಕೆಂಬ ಆಸೆ. ಇದಕ್ಕಾಗಿ ಇನ್ನೊಂದು ಊರಿಗೆ ಹೋಗಬೇಕಾಯಿತು. ಆದರೆ ಅಲ್ಲಿದ್ದುದು ಕನ್ನಡ ಲೋವರ್ ಸೆಕೆಂಡರಿ ಮಾತ್ರ. ಅದನ್ನು ಪಾಸುಮಾಡಿಸುವುದರಲ್ಲಿ ಹೆಸರಾಗಿದ್ದರು ಒಬ್ಬ ಮೇಷ್ಟ್ರು. ಆ ಮೇಷ್ಟ್ರು ನನಗೆ ಕನ್ನಡ ಲೋವರ್ ಸೆಕೆಂಡರಿ ಪಾಸುಮಾಡಿಸಿದರು. ಪಾಸುಮಾಡದೆ ವಿಧಿಯಿರಲಿಲ್ಲ. ಕೈಯಲ್ಲಿ ಬೆತ್ತ ರೂಲುದೊಣ್ಣೆ ಹಿಡಿದು, ಸರಿಯಾಗಿ ಪಾಠ ಹೇಳದಿದ್ದರೆ ಬಡಿದು, ಓದಿಸುತ್ತಿದ್ದರು. ಅವರೂ ಪಾಸು ಮಾಡಿಸಿದ ನೂರಾರು ಮೇಷ್ಟ್ರುಗಳೂ ಇನ್ನೂ ಇದ್ದಾರೆ. ಪರೀಕ್ಷೆ ಹತ್ತಿರ ಬಂದಾಗ ಶಾಲೆಯಲ್ಲೇ ಮಲಗಿಸಿಕೊಂಡಿದ್ದು ಬೆಳಗ್ಗೆ ಹೊತ್ತಿನಂತೆ ಏಳಿಸಿ ಪಾಠ ಓದಿಸುತ್ತಿದ್ದರು. ಅವರು ಏಳಿಸಬೇಕಾಗಿರಲೇ ಇಲ್ಲ. ಏಕೆಂದರೆ, ತಿಗಣೆಗಳು ಆ ಕೆಲಸ ಮಾಡುತ್ತಿದ್ದುವು. ಬೆಳಗ್ಗೆ ಎದ್ದು ಓದಿಯಾದ ಮೇಲೆ 'ಹೊರಗಡೆಗೆ' ಹೋಗಿಬರುತ್ತಿದ್ದೆವು. ಆಗ ಉಪಯೋಗಿಸುತ್ತಿದ್ದ ನೀರನ್ನು ನೆನೆಸಿಕೊಂಡರೆ ! ಕ್ರಿಮಿಕೀಟಗಳ ತವರುಮನೆ ಆ ಕೊಳ ಅಥವಾ ಇಳಿಯುವ ಬಾವಿ. ಅಂತಹ ನೀರಿನಲ್ಲಿ 'ಶುಚಿ' ಮಾಡಿಕೊಂಡು, ವಾರಕ್ಕೊಂದು ದಿನ ಸ್ನಾನಮಾಡಿ, ನೆಂಟ

ರೊಬ್ಬರ ಮನೆಯಲ್ಲಿ ಹಿಟ್ಟು ರೊಟ್ಟಿ ತಿಂದು ಓದಿ ಪರೀಕ್ಷೆಗೆ ಕಟ್ಟಿದೆ. ಪರೀಕ್ಷೆಗೆ ಕಟ್ಟಿದ್ದಾನೆಂಬುದೇ ದೊಡ್ಡ ಸುದ್ದಿ ಆಗ ಹಳ್ಳಿಯಲ್ಲಿ. 'ನನ್ನ ಮಗ ಪರೀಕ್ಷೆಗೆ ಕಟ್ಟಿದ್ದಾನೆ' ಎಂದು ನಮ್ಮ ತಂದೆ ಹೇಳಿಕೊಂಡು ತಿರುಗಿದ್ದೂ ತಿರುಗಿದ್ದೆ. ಪರೀಕ್ಷೆಗೆ ಕಟ್ಟಲು ಮೂವತ್ತು ಮೈಲಿ ದೂರದ ಕುಣಿಗಲಿಗೆ ಹೋದೆ. ಗಾಡಿಯಲ್ಲಿ ದೂರ ಪ್ರಯಾಣ ಹೋದದ್ದು ಅದೇ ಮೊದಲು. ರಾತ್ರಿ ಕಳೆದು ಬೆಳಕು ಹರಿದಾಗ ನರಿಯೊಂದು ಅಡ್ಡ ಬಂದಿತು. 'ಒಳ್ಳೆಯ ಶಕುನ' ಎಂದುಕೊಂಡರು ಶಕುನ ತಿಳಿದ ದೊಡ್ಡವರು. ಕುಣಿಗಲಿನಲ್ಲಿ ಪರೀಕ್ಷೆ ಹುಡುಗರಿಗೆ ಅನ್ನ ಹಾಕಿಸುತ್ತಿದ್ದರು ಒಬ್ಬ ಗೌಡರು. ಈ ವಿಷಯವಂತೂ ನಾಡಿನಲ್ಲೆಲ್ಲಾ ಪ್ರಸಿದ್ಧಿಯಾಗಿತ್ತು. ಅಂಥವರನ್ನು ನಾವು ಕಕ್ಕಾಬಿಕ್ಕಿಯಾಗಿ ನೋಡಿದೆವು ; ಮೊಟ್ಟಮೊದಲಿಗೆ ಬ್ರಾಹ್ಮಣರ ಪುಳಿಚಾರು ಊಟ ಉಂಡೆವು. ಕನ್ನಡ ಲೋವರ್ ಸೆಕೆಂಡರಿ ಪಾಸಾಯಿತು.

ಪಾಸುಮಾಡಿದಾಗ ನಮ್ಮ ತಂದೆಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅವರ ಏಳೂರು ಆರಂಭಕ್ಕಾಗಿ ಅಲ್ಲಿಗೆ ಹೋದಾಗ 'ನನ್ನ ಮಗ ಪರೀಕ್ಷೆ ಪಾಸುಮಾಡಿದಾನೆ ಎಂದು ನಾಡಿಗೆಲ್ಲಾ ಸಾರಿಕೊಂಡು ಬಂದರು. ನಮ್ಮ ತಂದೆಗೆ ಮನಸ್ಸಿನಲ್ಲಿ ಆಸೆ ಅಂಕುರಿಸಿತು. ಆಗ 'ಶೇಕ್‌ದಾರ್' ಎಂಬುದೇ ದೊಡ್ಡ ಹೆಸರು ಹಳ್ಳಿಯವರಿಗೆ. ಏಕೆಂದರೆ, ಅವರೇ ಹೆಚ್ಚಾಗಿ ಬರುತ್ತಿದ್ದುದು ಹಳ್ಳಿಗಳಿಗೆ. ಅದೂ ಕುದುರೆಯ ಮೇಲೆ. ಆದರೆ ನಮ್ಮ ತಂದೆಗೆ ಅದಕ್ಕಿಂತಲೂ ದೊಡ್ಡ ಹುದ್ದೆ ನನ್ನ ಮಗನಿಗೆ ಸಿಗಬೇಕೆಂದು ಆಸೆ. 'ನನ್ನ ಮಗನ್ನ ಅಮಲ್ದಾರ್ನ ಮಾಡ್ತೀನಿ' ಎಂದು ಅವರೇ ಆ ಕೆಲಸ ಕೊಡುವ ಅಧಿಕಾರವಿದ್ದವರಂತೆ ಮಾತಾಡುತ್ತಿದ್ದರು. ನಾನು ಹಿಗ್ಗಿ ಹೀರೇಕಾಯಾಗುತ್ತಿದ್ದೆ. ಆದರೆ ಮುಂದೆ ಓದುವುದೆಲ್ಲಿ ? ಹತ್ತಿರ ಬೆಳ್ಳೂರಿನಲ್ಲಿ ಮಿಡ್ಲ್ ಸ್ಕೂಲು ಇದ್ದರೂ ಊಟಕ್ಕೆ ಸೌಕರ್ಯ ಇರಲಿಲ್ಲ.

ನಮ್ಮ ಊರಿಗೆ ಸುಮಾರು ಇಪ್ಪತ್ತು ಮೈಲಿ ದೂರದಲ್ಲಿರುವ ಚನ್ನರಾಯಪಟ್ಟಣದಲ್ಲಿ ಹತ್ತಿರದವರೊಬ್ಬರು ಇದ್ದರು. ಹೇಗೋ ಒಂದು ಸಣ್ಣ ಕೆಲಸಕ್ಕೆ ಸೇರಿ 'ಪಿಂಚಣಿ' ಆದಮೇಲೆ ಅಲ್ಲೇ ನೆಲಸಿದ್ದರು. ಒಂದು ಮನೆ ಮತ್ತು ಒಂದಿಷ್ಟು ಹೊಲ ಗದ್ದೆ ಮಾಡಿದ್ದರು. ಅವರು ಕಾಲವಾದ ಮೇಲೆ ಇಬ್ಬರು ಗಂಡುಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳನ್ನು ಕಟ್ಟಿಕೊಂಡು ಅವರ ಹೆಂಡತಿ ಅಲ್ಲೇ ಉಳಿದರು. ನನ್ನನ್ನು ಅಲ್ಲಿಗೆ ಸೇರಿಸಿದರು ನಮ್ಮ ತಂದೆ. ಇಂಗ್ಲಿಷ್ ಲೋವರ್ ಸೆಕೆಂಡರಿ ಓದಲು. ನಾನು ಹೋದಾಗ ಹೆಣ್ಣುಮಗಳು ತೀರಿಹೋಗಿದ್ದಳು. ಆದರೆ ಆಕೆಯನ್ನು ನೋಡಿದ್ದೆ. ಪಟ್ಟಣದ ಉಡುಪು ಹಾಕಿದ ಹುಡುಗಿ ಊರ ಕಡೆ ಒಮ್ಮೊಮ್ಮೆ ಬರುತ್ತಿದ್ದಳು. ನಾನು ಪಟ್ಟಣದ ಹುಡುಗಿಯನ್ನು ಅದೇ ಮೊದಲು ನೋಡಿದ್ದು. ಶುಚಿಯಾದ ಜರತಾರಿ ಲಂಗ ಜಂಪರ್ ತೊಟ್ಟು ಜಡೆ ಹಾಕಿಕೊಂಡಿದ್ದ ಆಕೆ ಇನ್ನೂ ನನ್ನ ಮನಸ್ಸಿನಲ್ಲಿ ಉಳಿದಿದ್ದಾಳೆ. ಬಾಲ್ಯದ ನೆನಪೇ ಇಷ್ಟು. ಎಲ್ಲವೂ ಅಚ್ಚೊತ್ತಿದಂತೆ ಮನಸ್ಸಿನಲ್ಲಿ ಉಳಿಯುತ್ತವೆ ; ಮರೆಯು

ಬೇಕೆಂದರೂ ಮರೆಯಲಾಗುವುದಿಲ್ಲ. ಇಡೀ ಒಂದು ರಾತ್ರಿಯೆಲ್ಲಾ ಕಮಾನುಗಾಡಿಗೆ ದವಸ ಧಾನ್ಯ ಕಾಳು ಕಡ್ಡಿ ಕಾಯಿ ಕಸಿಗಳನ್ನು ತುಂಬಿಸಿಕೊಂಡು ಕೋಳಿ ಕೂಗುವ ಹೊತ್ತಿಗೆ ಗಾಡಿ ಕಟ್ಟಿಸಿಕೊಂಡು ನಮ್ಮ ತಂದೆ ಹೊರಟರು. ಅವರಿಗೆ ಶಕುನಗಳಲ್ಲಿ ತುಂಬಾ ನಂಬಿಕೆ. ತಿಪ್ಪೆಹಳ್ಳದಲ್ಲಿ ಮೇಯುತ್ತಿದ್ದ ಕತ್ತೆಯೊಂದು ಕೂಗಿತು. 'ಒಳ್ಳೆ ಶಕುನಕಾಣ್ಲ ಹುಳ್ಳೀ ಚಿಕ್ಕ !' ಎಂದು ಗಾಡಿ ಹೊಡೆಯುತ್ತಿದ್ದವನಿಗೆ ಹೇಳಿ ಖುಷಿ ಯಿಂದ ಗಾಡಿ ಹೊಡೆಸಿದರು. ಒಂದು ರಾತ್ರಿ ಗಾಡಿ ಪ್ರಯಾಣಮಾಡಿ ಚನ್ನರಾಯ ಪಟ್ಟಣ ಮುಟ್ಟಿದೆವು, 1927ರ ಒಂದು ದಿನ.

ಮೂರು ವರ್ಷ ನನ್ನ ಇಂಗ್ಲಿಷ್ ಓದು. ಅಕ್ಷರಾಭ್ಯಾಸದಿಂದ ಆರಂಭವಾಯಿತು. ಊರಿನ ಬೆಕ್ಕು ನಾಯಿ ಅಲ್ಲಿ cat ಮತ್ತು dog ಆದುವು. ಆದರೆ ಈ ಇಂಗ್ಲಿಷ್ ಬೆಕ್ಕು ನಾಯಿಗಳೇ ಬೇರೆ ತರಹ ಎಂಬ ಭಾವನೆ ಹಳ್ಳಿಯವರಿಗೆ. ರಜೆಯಲ್ಲಿ ಊರಿಗೆ ಬಂದಾಗ ನಾನು ಇಂಗ್ಲಿಷ್ ಓದುತ್ತಿರುವುದನ್ನು ಕೇಳಿ ಊರಿನವರಿಗೆಲ್ಲಾ ನಾನೊಬ್ಬ ಇಂಗ್ಲಿಷ್ ಮನುಷ್ಯನಂತೆಯೇ ಕಾಣುತ್ತಿದ್ದೆ ಎಂದು ಕಾಣುತ್ತೆ. ಪ್ರತಿಯೊಂದಕ್ಕೂ ಇಂಗ್ಲಿಷಿನಲ್ಲಿ ಏನು ಎಂದು ಕೇಳುತ್ತಿದ್ದರು. 'ಇಂಗ್ಲಿಷಿನಲ್ಲಿ ನನ್ನ ಹೆಸರ್ಹೇಳು ಮತ್ತೆ' ಎಂದು ಕೇಳು ವರು ; 'ಇಂಗ್ಲಿಷಿನಲ್ಲೂ ನಿನ್ನ ಹೆಸರು ನಿಂಗಣ್ಣ ಅಂತ್ಲೆ' ಎಂದರೆ, 'ಇಷ್ಟೇಯಾ ನೀನು ಇಂಗ್ಲೀಷ್ ಓದಿದ್ದು ?' ಎಂದು ಅಲ್ಲಗಳೆಯುವರು. ಊರಿನವರಿಗೆಲ್ಲಾ ನಾನೊಬ್ಬ ದೊಡ್ಡ ವ್ಯಕ್ತಿಯಾಗಿದ್ದೆ. ಕುಂತಲ್ಲಿ ನಿಂತಲ್ಲಿ ನನಗೆ ಗೌರವ. ಹಣ್ಣು ಹಂಪಲು ಬೆಣ್ಣೆ ತುಪ್ಪ ನನಗೆ ಮೀಸಲು. ಮೇಣಿ ಹಿಡಿಯಲು ಬಿಡುತ್ತಿರಲಿಲ್ಲ. 'ಕೈ ಒರಟಾಗ್ತದೆ. ಸರಿಯಾಗಿ ಬರಿಯೋಕಾಗೋದಿಲ್ಲ' ಎಂದು ಹಳ್ಳಿಯವರ ತೀರ್ಮಾನ. ಆದರೆ ನನಗೆ ಹಳ್ಳಿ ಕೆಲಸ ಗಳೆಂದರೆ ಬಹು ಆನಂದ. ನಾನು ಮಾಡದ ಕೆಲಸಗಳಿರಲಿಲ್ಲ. ದನ ಕುರಿ ಮೇಯಿಸಿದೆ. ಆಡಿಗೆ ಸೊಪ್ಪು ಕಟ್ಟಿದೆ. ಗದ್ದೆಗೆ ನೀರು ಬಿಟ್ಟೆ. ತೆಂಗಿನಸೊಸಿ ಹುಳ ನೋಡಿದೆ. ಹಿಟ್ಟು ಸೊಪ್ಪು ಮಡ್ಡಿ ಮಾಂಸ ತಿಂದೆ.

ಊರಿನಲ್ಲಿ ಅಷ್ಟೇ ಅಲ್ಲ, ಚನ್ನರಾಯಪಟ್ಟಣದಲ್ಲೂ ಮಾಡದ ಕೆಲಸಗಳಿರಲಿಲ್ಲ. ಆ 'ದೊಡ್ಡಮ್ಮ' ಹೇಳಿದ ಕೆಲಸಗಳನ್ನೆಲ್ಲಾ ಮಾಡುತ್ತಿದ್ದೆ. ಜೀವನಕ್ಕಾಗಿ ಹಸು ಎಮ್ಮೆ ಸಾಕಿದ್ದರು. ದನದ ಕಸ ಗುಡಿಸುತ್ತಿದ್ದೆ. ಪುರಸೊತ್ತಿದ್ದಾಗ ಮೇಯಿಸಿಕೊಂಡುಬರು ತ್ತಿದ್ದೆ. ಹುಲ್ಲು ತರುತ್ತಿದ್ದೆ. 'ಕುನ್ನೀರುಕಟ್ಟೆ' (ಕುಡಿನೀರುಕಟ್ಟೆ)ಯಿಂದ ನೀರು ತರು ತ್ತಿದ್ದೆ. ಆ ನೀರು ತೆಳುವಾದ ಕಾಫಿ ಬಣ್ಣಕ್ಕಿತ್ತು. ಅದೇ ಕುಡಿಯಲು ಮತ್ತು ಬಳ ಸಲು. ಇದ್ದುದು ಒಂದೇ ತಾಮ್ರದ ಬಿಂದಿಗೆ. ಅದೂ ಸೋರುತ್ತಿತ್ತು. ಸುಮಾರು ಎರಡು ಫರ್ಲಾಂಗ್ ದೂರದಿಂದ ನೀರು ತರುವುದರೊಳಗೆ ನನ್ನ ಅಂಗಿಯೆಲ್ಲಾ ನೆಂದು ಹೋಗುತ್ತಿತ್ತು. ದಾರಿಯಲ್ಲಿ ತೂತಿಗೆ ಬಂಡೀಕಪ್ಪು ಮೆರೆದುಕೊಂಡು ಹೇಗೋ ಮಾಡಿ ನೀರು ತರುವುದು ನನ್ನ ನಿತ್ಯದ ಕೆಲಸವಾಗಿತ್ತು.

ದೇವರ ಗುಡಿಗೆ ಹೋಗದಿದ್ದರೂ ಪ್ರತಿ ಶುಕ್ರವಾರ ಮಸೀದಿಗೆ ಹೋಗಬೇಕಾ

ಗಿತ್ತು. ಹೋಗಿ ಸಕ್ಕರೆ ಓದಿಸಿಕೊಂಡು ಬರುತ್ತಿದ್ದೆ. ಹೋಗುವಾಗ ನನಗೆ ಸಾಬರ ಕಾಟ. ಮುಳ್ಳು ಮುಖದ ಜಡ್ಡಿಯು ಕರಿಯನನ್ನು ಕಂಡು ಅವರಿಗೆಲ್ಲ ಹಾಸ್ಯ. ಒಬ್ಬ ಬೆಳ್ಳಗಿದ್ದ ಸಾಬರ ಹುಡುಗನಂತೂ ನನ್ನನ್ನು ಪೀಡಿಸಿದ್ದೂ ಪೀಡಿಸಿದ್ದೆ. ಅವನಿಂದ ತಪ್ಪಿಸಿಕೊಳ್ಳಲು ನಾನು ಅಡ್ಡದಾರಿ ಓಡಿಯುತ್ತಿದ್ದೆ. ಆದರೆ ಅವನು ಮಸೀದಿ ಬಾಗಿಲಿನಲ್ಲಿಯೇ ಕಾದು ಅಣಕಿಸುತ್ತಿದ್ದ, ಹೆದರಿಸುತ್ತಿದ್ದ. ಆಗಿನಿಂದ ನನಗೆ ಸಾಬರೆಂದರೆ ಹೆದರಿಕೆ. 'ಸಾಬರ ಸಾವಾಸ ಸಾವಿರ ಕಾಲಕ್ಕೂ ಬೇಡ' ಎಂಬ ಮಾತು ನನಗೆ ಚೆನ್ನಾಗಿ ಮನದಟ್ಟಾಯಿತು.

ನಾನಿದ್ದ ಮನೆಗೆ ಇಬ್ಬರು ಆಫೀಸ್ ಜವಾನರು ಬರುತ್ತಿದ್ದರು. ಒಬ್ಬ ರೆವೆನ್ಯೂ ಇನ್‌ಸ್ಪೆಕ್ಟರ ಜವಾನ, ಇನ್ನೊಬ್ಬ ತಾಲ್ಲೂಕ್ ಆಫೀಸ್ ಜವಾನ. ಹೆಸರುಗಳು ಗಿಡ್ಡೇಗೌಡ ಮತ್ತು ಚಲುವಯ್ಯ ಎಂದು. ಅವರ ಆಫೀಸಿನ ಉಡುಪು ನೋಡುವುದೇ ನನಗೆ ಅಚ್ಚರಿ. ಅದಕ್ಕಿಂತ ಅಚ್ಚರಿ, ಅವರ ವಿಚಿತ್ರ ಭಾಷೆ. ಏತಕ್ಕೋ ಏನೋ ಅವರ ಮಾತು ನನಗೆ ತಿಳಿಯಬಾರದೆಂದು ಒಂದು ಬಗೆಯ ಹೊಸ ಭಾಷೆ ಆಡುತ್ತಿದ್ದರು. 'ನಾಫೀನು ನೀಫೀನು ಏಫಾನು....' 'ನಾನು', 'ನೀನು' 'ಏನು' ಎಂಬ ಪದಗಳಿಗೆ ಮಧ್ಯೆ 'ಫಾ' ಸೇರಿಸಿ ಮಾತಾಡುತ್ತಿದ್ದರು. ಒತ್ತಕ್ಷರಗಳು ಬಂದರೆ ಅಥವಾ ಬೇರೆ ಪದಗಳಿಗೆ ಏನು ಮಾಡುತ್ತಿದ್ದರೋ ಕಾಣೆ. ಕನ್ನಡದ ಎರಡಕ್ಷರದ ನುಡಿ ಅವರ ಹೊಸ ಭಾಷೆಗೆ ತುಂಬ ಅನುಕೂಲವಾಗಿತ್ತೆಂದು ಕಾಣುತ್ತದೆ. ಅವರಿನ್ನೂ ನನ್ನ ಮನಸ್ಸಿನಲ್ಲಿ ಉಳಿದಿದ್ದಾರೆ.

ಮನೆಯಲ್ಲಿದ್ದ ಇಬ್ಬರು ಮಕ್ಕಳಲ್ಲಿ ಕಿರಿಯ ಮಗ ಶ್ರೀನಿವಾಸ ಎಂಬ ಹುಡುಗ ಪ್ಲೇಗಿನಲ್ಲಿ ತೀರಿಹೋದ. ಆಗ ನಾನು ಬೇಸಗೆ ರಜಕ್ಕೆ ಊರಿಗೆ ಬಂದಿದ್ದೆ. ಇಲ್ಲದಿದ್ದರೆ ನಾನೂ ಅವನ ಹಿಂದೆಯೇ ಹೋಗುತ್ತಿದ್ದೆನೋ ಏನೋ ! ಪ್ಲೇಗಿದ್ದ ವೇಳೆ ಒಂದೆರಡು ತಿಂಗಳು ಬೇಲೂರಿನಲ್ಲಿ ಮಿಡ್ಲ್‌ಸ್ಕೂಲಿನಲ್ಲಿ ಓದಿಕೊಂಡಿದ್ದೆ. ಒಬ್ಬರ ಮನೆಯಲ್ಲಿ ಊಟ. ಒಬ್ಬಿಬ್ಬರು ಹೆಣ್ಣುಮಕ್ಕಳು ನಮ್ಮ ಕ್ಲಾಸಿನಲ್ಲಿ ಓದುತ್ತಿದ್ದರು. ನೋಡಲು ಚೆನ್ನಾಗಿಯೂ ಇದ್ದರು. ಆಗಲೇ ಹುಡುಗರು ಕಿತಾಪತಿ ಮಾಡುವುದನ್ನು ಕಲಿತಿದ್ದರು. 'ಕ್ಯಾತೆನಾಗ' ಎಂದು ಹಳ್ಳಿಯಲ್ಲಿ ಹೆಸರು ಪಡೆದಿದ್ದ ನಾನು ಕೀಟಲೆಯಲ್ಲಿ ಹಿಂದೆ ಬೀಳಲಿಲ್ಲ ಎಂದು ಕಾಣುತ್ತೆ. ಹನ್ನೆರಡು ಹದಿಮೂರು ವರ್ಷದ ಹುಡುಗನಲ್ಲಿ ಎಂತಹ ಮನೋವಿಕಾರ !

ಮತ್ತೆ ಚನ್ನರಾಯಪಟ್ಟಣಕ್ಕೆ ಹೋದೆ. ಮೂರು ವರ್ಷದ ಓದು ಮುಗಿಯಿತು. ನಮ್ಮ ಹೆಡ್‌ಮಾಸ್ಟರು ಸಿ. ನರಸಿಂಹಾಚಾರ್ ಎಂದು. ಉಳಿದ ನಾಲ್ಕು ಮೇಷ್ಟ್ರುಗಳ ಹೆಸರೂ ನನ್ನ ಸಹಪಾಠಿಗಳ ಹೆಸರೂ ಇನ್ನೂ ಜ್ಞಾಪಕ ಇವೆ. ಅಷ್ಟೇ ಅಲ್ಲ, ಅವರ ಮುಖಚರ್ಯೆಯೂ ಅವರು ಕೊಡುತ್ತಿದ್ದ ಏಟುಗಳೂ ಜ್ಞಾಪಕ ಇವೆ. ಮೂರು ನಾಮದ ಹೆಡ್‌ಮಾಸ್ಟರಿಗೂ ಶಂಕರನಾರಾಯಣರಾವ್ ಎಂಬ ಮೇಷ್ಟ್ರಿಗೂ ತುಂಬಾ

ಸಿಟ್ಟು. ರೂಲುದೊಣ್ಣೆ ಮುರಿದುಹೋಗುವವರೆಗೂ ಹೊಡೆಯುತ್ತಿದ್ದರು. ಅಷ್ಟೇ ಚೆನ್ನಾಗಿ ಪಾಠಾನು ಹೇಳುತ್ತಿದ್ದರು. ಹೆಡ್‌ಮಾಸ್ಟರ್ ಮನೆಯಲ್ಲಿ ರಾತ್ರಿ ಹೊತ್ತು ಪಾಠ ಹೇಳಿಸಿಕೊಳ್ಳುತ್ತಿದ್ದೆ. ಸಂಜೆಯಾಯಿತೆಂದರೆ ಲಾಟೀನು ಒರೆಸಿ ಎಣ್ಣೆ ಹಾಕಿ ಹತ್ತಿಸಿಕೊಂಡು ಕೈಯಲ್ಲಿ ಪುಸ್ತಕ ಹಿಡಿದು ಕೋಟೆಗೆ ಹೋಗುತ್ತಿದ್ದೆ. ಕೋಟೆ ಅಗಳು ದಾಟುವವರೆಗೂ ನನಗೆ ಹೆದರಿಕೆ. ಎರಡಕ್ಕೇ ನಾನು ಹೆದರಿಕೊಳ್ಳುತ್ತಿದ್ದುದು : ಒಂದು ಸಾಬರಿಗೆ, ಇನ್ನೊಂದು ಸಂತೆಮಾಳದಲ್ಲಿದ್ದ ಹೆಮ್ಮರಗಳ ಮೇಲಿನ ದೆವ್ವಗಳಿಗೆ. ದೆವ್ವ ಇದ್ದುವೋ ಏನೋ ಗೊತ್ತಿಲ್ಲ. ದೆವ್ವ ಮರದಲ್ಲಿ ಅಲ್ಲದೆ ಬೇರೆಲ್ಲಿ ಇದ್ದಾವು ಎಂಬ ಬಾಲ್ಯದಿಂದ ಬಂದ ನಂಬಿಕೆ ನನ್ನಲ್ಲಿ ಭೀತಿ ಹುಟ್ಟಿಸಿತ್ತು. ರಾತ್ರಿ ಮಲಗುವ ವರೆಗೆ ಪಾಠ. ಬೆಳಗ್ಗೆ ಹೆಡ್‌ಮಾಸ್ಟರೇ ಏಳಿಸುತ್ತಿದ್ದರು. 'ಗೌಡಾ, ಏಳೊ !' ಎನ್ನುತ್ತಿದ್ದರು. ಎದ್ದು ಪಾಠ ಓದಿಕೊಂಡು ಬೆಳಗಾದ ಮೇಲೆ ಕೆರೆ ಕಡೆ ಹೋಗಿ ಬರುತ್ತಿದ್ದೆ. ಹಿಂದಿರುಗಿ ಲಾಟೀನು ಸಮೇತ ಮನೆಗೆ ಬಂದು ಕೆಲಸ ಬೊಗಸೆ ಮಾಡಿ ಶಾಲೆಗೆ ಹೋಗಲು ಸಿದ್ಧನಾಗುತ್ತಿದ್ದೆ. ಸಂಜೆ ಶಾಲೆ ಬಿಡುವಾಗ ಹೆಡ್ ಮಾಸ್ಟರೂ ಇತರ ಮಾಸ್ಟರುಗಳೂ ಹಾರೆ ಗುದ್ದಲಿ ಪಿಕಾಸಿಗಳನ್ನು ಹಿಡಿದು ಕೆಲಸಕ್ಕೆ ನಿಲ್ಲುತ್ತಿದ್ದರು. ನಾವೂ ಸೇರಿಕೊಳ್ಳುತ್ತಿದ್ದೆವು. ಸ್ಕೂಲಿನ ಹಿಂಭಾಗದಲ್ಲಿದ್ದ ದಿಬ್ಬ ಮಟ್ಟಮಾಡಿ ಮರಗಿಡ ನೆಟ್ಟೆವು. ಮುಂಭಾಗದಲ್ಲಿ ಹೂದೋಟ ಮಾಡಿದೆವು. ಹೆಡ್‌ಮಾಸ್ಟರೇ ವಾಲೀಬಾಲಾಡಲು ಬರುತ್ತಿದ್ದರು. ನಾನೂ ವಾಲೀಬಾಲು ಆಡು ತ್ತಿದ್ದೆ. ಅದೇ ಮೊದಲು ಆ ಆಟ ಆಡಿದ್ದು. ಆಗ ಒಂದೊಂದು ಕಡೆ ಒಂಬತ್ತು ಜನ. ಹಬ್ಬಹರಿದಿನಗಳಲ್ಲಿ ಅಯ್ಯಂಗಾರರ ಮತ್ತು ಬ್ರಾಹ್ಮಣರ ಮನೆಯ ಪುಳಿಯೋಗರೆ, ಮುಸ್ರೋರಿ ಇತ್ಯಾದಿ ತಿಂಡಿಗಳು ಸಿಕ್ಕುತ್ತಿದ್ದುವು. ನನಗೆ ಎಲೆಯಲ್ಲಿ ಹಾಕಿಕೊಟ್ಟರೂ ಪ್ರೀತಿ ವಿಶ್ವಾಸಗಳಿಗೆ ಕಡಿಮೆ ಇರಲಿಲ್ಲ. ಆಗ ತಿಂದ ಪುಳಿಯೋಗರೆಯ ರುಚಿ ಇನ್ನೂ ನನ್ನ ನಾಲಗೆಯ ಮೇಲೆ ಇದೆ. ಮೊನ್ನೆ ನನ್ನ ಸಹಪಾಠಿ ಶ್ರೀನಿವಾಸಯ್ಯಂಗಾರರು ಹಾಸ್ಯಮಾಡಿದರು, 'ಪುಳಿಯೋಗರೆ ಬೇಕೆ ?' ಎಂದು. 'ಬೇಕು' ಎಂದರೂ ತಿನ್ನಲು ವೇಳೆ ಸಿಕ್ಕಲಿಲ್ಲ. ಅವರಿಗೂ ಆತುರ, ನನಗೂ ಆತುರ. ಅವರು ಈಗ ನವೋದಯ ಹೈಸ್ಕೂಲು ಕಾಲೇಜು ನಡೆಸುತ್ತಿದ್ದಾರೆ. ಒಂದು ಅರ್ಧ ಗಂಟೆ ಅವರೊಡನೆ ಹಳೆಯ ನೆನಪುಗಳನ್ನು ಮೆಲುಕುಹಾಕಿಕೊಂಡಿದ್ದಾಯಿತು.

ಮೂರನೆಯ ವರ್ಷದ ಕೊನೆಯಲ್ಲಿ ಗ್ರೂಪ್ ಫೋಟೊ. ಅದೇ ನನ್ನ ಮೊದಲ ಫೋಟೊ. ತೆಗೆದವರು ವಕೀಲಿ ಕೆಲಸವನ್ನೂ ಮಾಡುತ್ತಿದ್ದ ಲಕ್ಷ್ಮೀನರಸಿಂಹಯ್ಯ ಎಂಬುವರು. ಇಲ್ಲಿಗೆ ಐವತ್ತು ವರ್ಷಗಳ ಹಿಂದೆ ತೆಗೆದ ಫೋಟೋ ಈಗಲೂ ಹೇಗಿದೆ ನೋಡಿ. ಅದರಲ್ಲಿ ಅಷ್ಟೇ ವರ್ಷಗಳ ಹಿಂದಿನ 'ನಾಗು' ನೋಡಿ. ಆಗ ನಾನು ತೊಟ್ಟಿದ್ದ ಪಂಚೆ ಕೋಟು ಟೋಪಿ-ಇವೆಲ್ಲಾ ಪ್ಲೇಗಿನಲ್ಲಿ ಸತ್ತುಹೋದ ಶ್ರೀನಿವಾಸನವು !

1930 ರಲ್ಲಿ ಇಂಗ್ಲಿಷ್ ಲೋವರ್ ಸೆಕೆಂಡರಿ ಪಾಸಾಯಿತು. ಮುಂದೆಲ್ಲಿಗೆ ? ಚನ್ನರಾಯಪಟ್ಟಣದಲ್ಲಿ ಹೈಸ್ಕೂಲು ಇರಲಿಲ್ಲ. ಆಗ ನಮ್ಮ ಊರಿಗೆ ಪಶ್ಚಿಮ ದಿಕ್ಕಿನಲ್ಲಿ ಹಾಸನ, ಉತ್ತರ ದಿಕ್ಕಿನಲ್ಲಿ ತಿಪಟೂರು, ಪೂರ್ವ ದಿಕ್ಕಿನಲ್ಲಿ ಬೆಂಗಳೂರು ಮತ್ತು ದಕ್ಷಿಣ ದಿಕ್ಕಿನಲ್ಲಿ ಮೈಸೂರು ಚನ್ನಪಟ್ಟಣಗಳಲ್ಲಷ್ಟೇ ಹೈಸ್ಕೂಲುಗಳು ಇದ್ದುದು. ನನ್ನನ್ನು ಸಾಕಿದ ಚನ್ನರಾಯಪಟ್ಟಣದ ದೊಡ್ಡಮ್ಮನ ಹಿರಿಯಮಗ ಚನ್ನಪಟ್ಟಣದಲ್ಲಿ ಹೈಸ್ಕೂಲು ಓದಿ ಬೆಂಗಳೂರಿನಲ್ಲಿ ಎಲ್.ಎಂ.ಪಿ. ಓದುತ್ತಿದ್ದರು. ಅವರಿಂದಾಗಿ ನಾನು ಚನ್ನಪಟ್ಣ ಹೈಸ್ಕೂಲು ಸೇರಿದೆ. ತಿಟ್ಟಮಾರ್ನಹಳ್ಳಿ ವೆಂಕಟಪ್ಪನವರು ಒಕ್ಕಲಿಗರ ಹಾಸ್ಟೆಲಿನ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಆಗರ್ಭ ಶ್ರೀಮಂತರೂ ಧೀಮಂತ ವ್ಯಕ್ತಿಯೂ ಆಗಿದ್ದ ಅವರನ್ನು ನೋಡಿದ ನನಗೆ ಒಬ್ಬ ಮಹಾಪುರುಷನನ್ನು ನೋಡಿದಂತಾಗುತ್ತಿತ್ತು. ಸ್ವಾಮಿ ವಿವೇಕಾನಂದರ ಬಗ್ಗೆ ಆಗಾಗ್ಗೆ ಮಾತಾಡುತ್ತಿದ್ದರು. ಅವರಲ್ಲಿ ಇದ್ದ ವಿವೇಕಾನಂದರ ಪುಸ್ತಕಗಳನ್ನೂ ಬೇರೆಲ್ಲ ಪುಸ್ತಕಗಳನ್ನೂ ನೋಡಿ ನನಗೆ ಅಚ್ಚರಿ. ಅಂಥದೇ ಒಂದು ಲೈಬ್ರರಿ ಇಡಬೇಕೆಂಬ ಆಸೆ ನನ್ನಲ್ಲಿ ಅಂಕುರಿಸಿತು. ಆಗ ಕೊಂಡ ವಿವೇಕಾನಂದರ 'What is Religion ?' ಎಂಬ ಪುಸ್ತಕ ಈಗಲೂ ನನ್ನಲ್ಲಿದೆ. ದಯಾನಂದ ಸರಸ್ವತಿಯವರ 'ಸತ್ಯಾರ್ಥ ಪ್ರಕಾಶ' (ಕನ್ನಡದಲ್ಲಿ) ಎಂಬ ಹಳೆಯ ಪುಸ್ತಕವೂ ಇದೆ. ಆರ್ಯಸಮಾಜದ ಆರ್ಯಮೂರ್ತಿ ಎಂಬುವರು (ಇವರು ಈಚೆಗೆ ನಿಧನರಾದರೆಂದು ಕೇಳಿದೆ) ನಮ್ಮ ಮೇಲೆ ಪ್ರಭಾವ ಬೀರಿದವರಲ್ಲಿ ಒಬ್ಬರು. ಆಗ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಚಳುವಳಿ. ಮೈಸೂರಿನಲ್ಲಿ ಕಾಂಗ್ರೆಸ್ ಇನ್ನೂ ಹುಟ್ಟಬೇಕಾಗಿತ್ತು ಎಂದು ಕಾಣುತ್ತದೆ. ಪ್ರಜಾಪಕ್ಷ ಎಂಬ ಪಕ್ಷ ಮದರಾಸಿನ ಜಸ್ಟೀಸ್ ಪಾರ್ಟಿಯಂತೆ ಇಲ್ಲಿ ಕೆಲಸಮಾಡುತ್ತಿತ್ತು. ವಿ. ವೆಂಕಟಪ್ಪ, ಹೆಚ್. ಸಿ. ದಾಸಪ್ಪ, ಪಾಮಿಡಿ ಸುಬ್ಬರಾಮಚೆಟ್ಟಿ, ಚಂಗಲರಾಯರೆಡ್ಡಿ, ಮುಂತಾದ ಧುರೀಣರು ಕಾಂಗ್ರೆಸ್ ಸೇರುವ ಮುನ್ನ ಪ್ರಜಾಪಕ್ಷದಲ್ಲಿದ್ದರು. ಚನ್ನಪಟ್ಟಣದಲ್ಲಿ ನಡೆದ ಪ್ರಜಾಪಕ್ಷ ಸಮ್ಮೇಳನದಲ್ಲಿ ಸ್ವಯಂಸೇವಕನಾಗಿ ಕೆಲಸ ಮಾಡಿದ್ದು ಜ್ಞಾಪಕ. ಅಧ್ಯಕ್ಷರಾದ ಸುಬ್ಬರಾಮಚೆಟ್ಟರ ಮೆರವಣಿಗೆ, ಆಮೇಲೆ ನಡೆದ ಸಭೆ ಮತ್ತು ಭಾಷಣಗಳನ್ನು ಕೇಳುವ ನೋಡುವ ಪುಣ್ಯ ಒದಗಿತ್ತು. ಒಂದು ಬಗೆಯ ರಾಷ್ಟ್ರೀಯ ಭಾವನೆ ನನ್ನಲ್ಲಿ ಮೂಡಿತ್ತು. 1933 ರಲ್ಲಿ ಗಾಂಧೀಜಿಯವರು ಕೈಗೊಂಡ ಆಮರಣಾಂತ ಉಪವಾಸ ನಮ್ಮ ರಾಷ್ಟ್ರೀಯ ಭಾವನೆಯನ್ನು ಮತ್ತಷ್ಟು ಉರುಬಿ ಬೆಳಗಿಸಿತು. ಅಸ್ಪೃಶ್ಯರನ್ನು ಹಿಂದೂಗಳಿಂದ ಬೇರೆ ಮಾಡಿದ ಮ್ಯಾಕ್ಡೊನಾಲ್ಡ್ ಅವಾರ್ಡಿಗೆ ವಿರುದ್ಧವಾಗಿ ಗಾಂಧೀಜಿಯವರ ಉಪವಾಸ. ಪತ್ರಿಕೆಯಲ್ಲಿ ಬರುತ್ತಿದ್ದ ಸುದ್ದಿಗಳನ್ನು ಓದುವುದೇ ನಮಗೊಂದು ಪವಿತ್ರ ಕೆಲಸವಾಗಿತ್ತು. ಆಗ ರೇಡಿಯೋ ಟ್ರಾನ್ಸಿಸ್ಟರುಗಳು ಇರಲಿಲ್ಲ. ದೇಶವೆಲ್ಲಾ ಅಲ್ಲೋಲ ಕಲ್ಲೋಲವಾಯಿತು. ಎಲ್ಲೆಲ್ಲೂ ಉಪವಾಸ ವ್ರತಗಳು. ಹಾಸ್ಟೆಲಿನ ನಾವೂ ಮೂರುದಿನಗಳ ಉಪವಾಸ ಕೈಗೊಂಡೆವು.

ಪೂರ್ತಿ ಮೂರುದಿನ ಉಪವಾಸ ಎಷ್ಟು ಜನ ಮಾಡಿದರು, ಎಷ್ಟು ಜನ ಕದ್ದು ಬೆಣ್ಣೆ ದೋಸೆ ಹೋಟೇಲಿಗೆ ಹೋಗುತ್ತಿದ್ದರು ಹೇಳುವುದು ಕಷ್ಟ. ನಾನಂತೂ ಕಷ್ಟಪಟ್ಟು ಮೂರುದಿನ ಮಾಡಿ ರೂಮಿನಲ್ಲಿ ಸೊರಗಿ ಬಿದ್ದುಕೊಂಡಿದ್ದೆ. ಕೊನೆಯ ದಿನ ವಿದೇಶೀ ವಸ್ತ್ರಗಳ ದಹನ, ಖಾದಿ ಬಟ್ಟೆಯ ಧಾರಣ, ಚನ್ನಪಟ್ಟಣಕ್ಕೆ ಸೇರಿದ ಎಲೆಕೇರಿಯ ಹರಿಜನರ ಕೇರಿಗಳ ಸ್ವಚ್ಛತೆ, ಮಾಂಸಾಹಾರ ವರ್ಜನ—ಹೀಗೆಲ್ಲಾ ಗಾಂಧಿಭಕ್ತರು ಏನು ಮಾಡಬಹುದೋ ಅಷ್ಟನ್ನೆಲ್ಲಾ ಮಾಡಿದೆವು. ಅಲ್ಲಿಂದ ನಾನು ನಾನೇ ಮಾಡಿಕೊಂಡ ತಕಲಿಯಿಂದ ನೂಲು ತೆಗೆಯಲಾರಂಭಿಸಿದೆ. ನಮ್ಮ ಮನೆಯ ಅಟ್ಟದ ಮೇಲಿದ್ದ ಅಜ್ಜ ಅಜ್ಜಿ ಉಪಯೋಗಿಸಿ ಮೂಲೆಗೆಸೆದ ಚರಕವನ್ನು ನಮ್ಮೂರ ಬಡಗಿಯಿಂದ ಸರಿಮಾಡಿಸಿ ತೋಟದ ಬೇಲಿಗಳಲ್ಲಿ ಬೆಳೆದ ಜಡೆಹತ್ತಿಯ ನೂಲು ತೆಗೆದು ನಮ್ಮ ಊರಿನವರಿಗೆಲ್ಲ ಅಚ್ಚರಿಯನ್ನುಂಟುಮಾಡಿದೆ. ಹೊಲೆಮಗ್ಗದಲ್ಲಿ ಆ ನೂಲಿನಿಂದ ಬಟ್ಟೆ ನೇಯಿಸಿ ತೊಟ್ಟುಕೊಂಡೆ. ನಮ್ಮ ಊರಿನ ಹೊಲೆಯರಿಗೆ ಹೆಂಡ ಕುಡಿಯ ಬೇಡಿರೆಂದು ಬೋಧಿಸಿದೆ. ಆದರೆ ನಮ್ಮ ತಂದೆಯವರು ಮಾಡುತ್ತಿದ್ದ ಸೇಂದಿ ಬಾಬಿನಲ್ಲಿ ನನ್ನ ಕೈಲಾದ ಸಹಾಯ ಮಾಡುತ್ತಿದ್ದೆ.

ನನಗೆ ಆಗ ಮಲಬದ್ಧತೆ. ಅದರಿಂದಾಗಿ ತಲೆನೋವು. ಹೈಸ್ಕೂಲು ಹೆಡ್ ಮಾಸ್ಟರ್ ಸಿ. ನರಸಿಂಗರಾವ್ ಎನ್ನುವರು ಸಣ್ಣಪುಟ್ಟ ಕಾಯಿಲೆಗಳಿಗೆ ಔಷಧಿ ಕೊಡು ತ್ತಿದ್ದರು. ಅವರು ಕೊಕ್ಕೆಹುಳುವಿಗೆ ಔಷಧಿ ಕೊಟ್ಟರು. ಆಗಿನಿಂದ ಮಲಬದ್ಧತೆ ಕೊಂಚ ಕಮ್ಮಿಯಾಯಿತು. ಆ ಹೆಡ್‌ಮಾಸ್ಟರಿಗೆ 'ಕ್ರೋಕೆ' (croquet) ಎಂಬ ಆಟ ಇಷ್ಟ. ಹುಲ್ಲುಮೈದಾನದ ಮೇಲೆ ಮರದ ಚೆಂಡುಗಳನ್ನು ಉದ್ದನೆಯ ಹಿಡಿಯ ಮರದ ಕೊಡತಿಗಳಿಂದ ಹೊಡೆದು, ನೆಲದಲ್ಲಿ ನೇಗಿಲಿನ ಜಿಗಳದಂತೆ ನೆಟ್ಟ ಕಬ್ಬಿಣದ ಕಂಬಿಗಳ ಮೂಲಕ ತೂರಿಸುವ ಆಟ ಅದು. ಅದನ್ನು ನಾನೂ ಆಡುತ್ತಿದ್ದೆ-ಅವರ ಜೊತೆ ಸೇರಿಕೊಂಡು. ಫುಟ್‌ಬಾಲ್ ಕ್ರಿಕೆಟ್‌ಗಳನ್ನೂ ಆಡಿದೆ. ಒಂದು ಸಲ ಫುಟ್‌ಬಾಲ್ ಒದ್ದಾಗ ಬಲಗಡೆ ಕಾಲಿನ ಕಿರುಬೆರಳು ಬಳಿ ಸೀಳಿಹೋಯಿತು. ಅಷ್ಟು ಜೋರಾಗಿ ಒದ್ದೆ. ಬೆಳಗ್ಗೆ ಎಂತಹ ಚಳಿ ಇದ್ದರೂ ಒಂದು ಮೈಲಿ ದೂರದಲ್ಲಿದ್ದ ತೆಪ್ಪದ ಕೊಳಕ್ಕೆ ಈಜಲು ಹೋಗುತ್ತಿದ್ದೆ. ಆಮೇಲೆ ಮೈಸೂರಿನಲ್ಲಿ ಕುಕ್ಕನಹಳ್ಳಿ ಕೆರೆಯಲ್ಲಿ ಈಜಾಡಿ ದ್ದೇನೆ. ಒಂದು ಬಹುಮಾನವನ್ನೂ ಪಡೆದಿದ್ದೇನೆ. ಹೈಸ್ಕೂಲಿನ ವಾರ್ಷಿಕೋತ್ಸವದಲ್ಲಿ ಆಡಿದ 'ಸಾವಿನ ಸಮಸ್ಯೆ' ಎಂಬ ನಾಟಕದಲ್ಲಿ ಪಾರ್ಟುಮಾಡಿದ್ದೆ. ಕೆ. ವಿ. ಶಂಕರೇಗೌಡ ಮುಂತಾದವರೂ ಅದರಲ್ಲಿ ಪಾರ್ಟುಮಾಡಿದ್ದರು. ಹೆಂಡ ಕುಡಿದವನೊಬ್ಬನ ಪಾರ್ಟು ನಾನು ಮಾಡಿದ್ದು. ನಮ್ಮ ತಂದೆಯ ಸೇಂದಿಬಾಬಿನಿಂದ ನೀರು ಹಾಕದ ಅಪ್ಪಟ ಹೆಂಡ ಕುಡಿದು ನಮ್ಮೂರ ಗೆಂಡೆಕಾಳ ತೂರಾಡುತ್ತಾ ಆಡುತ್ತಿದ್ದ ಮಾತುಗಳನ್ನು ಕೇಳಿದ್ದೆ ನಾದ್ದರಿಂದ ಹೆಂಡಗುಡುಕನ ಪಾತ್ರ ಸೊಗಸಾಗಿ ಮಾಡಿದೆ. ಬಹುಮಾನವೂ ಬಂದಿತು.

ಹಾಸ್ಟೆಲ್‌ನಲ್ಲಿ ಶನಿವಾರ ಭಜನೆ. ಹಾರ್ಮೋನಿಯಂ ಅನ್ನು ಅವರಿಂದ ಇವರಿಂದ

ತರುತ್ತಿದ್ದೆವು. ಒಬ್ಬ ಮೇಷ್ಟ್ರ ಮನೆಯಲ್ಲಿ ಹಾರ್ಮೋನಿಯಂ ಇತ್ತು. ಅದನ್ನು ತರಲು ನಾನು ಹೋಗುತ್ತಿದ್ದೆ, ಹಾಸ್ಟೆಲಿನ ಹುಡುಗರು ಧಾಂಡಿಗರು. ಆಗಲೇ ಮದುವೆಯಾದವರು ಅಥವಾ ಇನ್ನೇನು ಮದುವೆಗೆ ಬಂದವರು. ಅಂಥವರನ್ನು ಮೇಷ್ಟ್ರರಿಲ್ಲದಾಗ ಮನೆಗೆ ಕಳುಹಿಸಬಾರದೆಂದು 'ಸಭ್ಯ'ನಾದ ನನ್ನನ್ನು ಕಳುಹಿಸುತ್ತಿದ್ದರು. ಆದರೆ ನಾನು ಅವರು ತಿಳಿದುಕೊಂಡಷ್ಟು ಸಭ್ಯನಾಗಿರಲಿಲ್ಲ. ಕ್ಲಾಸಿನಲ್ಲಿ ಮುಗ್ಧಮುದ್ದಾದ ಹುಡುಗರ ಬಳಿ ಹೇಗೋ ಮಾಡಿ ಕುಳಿತುಕೊಳ್ಳುತ್ತಿದ್ದೆ. ಅಷ್ಟೆ. ನೋಡಲು ಪೆದ್ದನಂತೆ ಕಾಣುತ್ತಿದ್ದ ಮೇಷ್ಟರುಗಳನ್ನು ಹಾಸ್ಯಮಾಡುತ್ತಿದ್ದೆ. ಒಂದು ಸಲ ಒಬ್ಬ ಬಿಕ್ಲುಮೇಷ್ಟ್ರನ್ನು ಹಾಸ್ಯಮಾಡಿದೆ. ಆಗ ಅವರು ನನ್ನ ಸಕಲ ರೂಪ ಲಾವಣ್ಯಗಳನ್ನು ಕನ್ನಡ ಮತ್ತು ಸಂಸ್ಕೃತಗಳಲ್ಲಿ (ಅವರು ಸಂಸ್ಕೃತ ಮೇಷ್ಟ್ರು ಆಗಿದ್ದರು) ವರ್ಣಿಸಿ ತೃಪ್ತಿಪಟ್ಟುಕೊಂಡರು. ಅಂದಿನಿಂದ ಮೇಷ್ಟ್ರುಗಳ ತಂಟೆಗೆ ಹೋಗುತ್ತಿರಲಿಲ್ಲ. ನಟೇಶ್ ಮೊದಲಿಯಾರ್ ಎಂಬ ಮೇಷ್ಟ್ರಿದ್ದರು. ಅವರು ಇಂಗ್ಲಿಷ್ ಪಾಠ ಹೇಳುತ್ತಿದ್ದರು. ಪಾಠದಲ್ಲಿ ಬರುವ ಪಾತ್ರಗಳನ್ನು ಅವರೇ ಅಭಿನಯಿಸಿ ತೋರಿಸುತ್ತಿದ್ದರು. ಸೊಗಸಾದ ಇಂಗ್ಲಿಷ್ ಅವರದು. ಅವರೇ ಮೊನ್ನೆ ಮೊನ್ನೆ ತೀರಿಕೊಂಡ ಆಕಾಶವಾಣಿ ನಿವೃತ್ತ ಡೈರೆಕ್ಟರ್ ಡಾ. ನಟೇಶ್ ಅವರು.

1933 ರಲ್ಲಿ ಎಸ್.ಎಸ್.ಎಲ್.ಸಿ. ಪಾಸುಮಾಡಿದೆ. ಮುಂದೆ ಎಲ್ಲಿಗೆ ಹೋಗಬೇಕೆಂದು ಆಲೋಚಿಸಿದ ಮೇಲೆ ನಮ್ಮ ತಂದೆಯವರು ಬಸ್ಸಿನಲ್ಲಿ ಬೆಂಗಳೂರಿಗೆ ಕರೆದುಕೊಂಡುಹೋದರು. ಇದೇ ಮೊದಲು ಬೆಂಗಳೂರು ನೋಡಿದ್ದು. ಆಗಿನ ಬೆಂಗಳೂರೇ ನನಗೆ ಕಕ್ಕಾಬಿಕ್ಕಿಯಾಯಿತು. ಬಳೇಪೇಟೆಯ ಆರಂಭದಲ್ಲಿದ್ದ 'ವೆಲ್‌ಕಂ ಲಾಡ್ಜ್'ನಲ್ಲಿ ಒಂದು ದಿನ ಕಳೆದು, ಮೊದಲಬಾರಿಗೆ ಹೋಟೇಲ್ ಊಟ ಉಂಡು, ಕಕ್ಕಸಿನ ವಾಸನೆ ಕುಡಿದು (ಈಗಲೂ ಆ ವಾಸನೆ ನನ್ನ ಮೂಗಿನಲ್ಲಿ ಇದ್ದೇ ಇದೆ) ಒಕ್ಕಲಿಗರ ಹಾಸ್ಟೆಲ್ ಸೇರಿದೆ. ಈ ಹಾಸ್ಟೆಲಿನ ಕಕ್ಕಸಿನ ವರ್ಣನೆ ಪಳು ಹೆಡೆಯ ಆದಿಶೇಷನಿಗೂ ಸಾಧ್ಯವಿಲ್ಲ. ಎಂದ ಮೇಲೆ ನನ್ನಂತಹ ಬಣಗು ಬರೆಹಗಾರನಿಂದ ಸಾಧ್ಯವೆ ! ಸುತ್ತ ಚಪ್ಪಡಿ ಕಲ್ಲುಗಳನ್ನು ನಿಲ್ಲಿಸಿ ಅದನ್ನು ಆಳೆತ್ತರದ ಕಲ್ಲುಗಳಿಂದ ಆರು ವಿಭಾಗಮಾಡಿ ಕೆಳಗಿನ ಚಪ್ಪಡಿಯಲ್ಲಿ ತೂತುಮಾಡಿ ಮರೆಗಾಗಿ ಎರಡು ಅಡಿ ಎತ್ತರದ ಜಿಂಕ್‌ಷೀಟ್ ಹಾಕಿದ್ದರು, ಅವು ತುಕ್ಕುಹಿಡಿದೋ ಮುರಿದೋ ಹೋಗಿರುತ್ತಿದ್ದ ಕಾರಣ ಎಲ್ಲವೂ ಕಾಣುತ್ತಿತ್ತು. ನೂರಿಪ್ಪತ್ತು ಜನ ಹುಡುಗರ ಮಲ ರಾಶಿರಾಶಿಯಾಗಿ ಬಿದ್ದಿರುತ್ತಿತ್ತು. ನಾವೆಲ್ಲಾ ಕಾಲೇಜಿಗೆ ಹೋದಮೇಲೆ ಪಕ್ಕದಲ್ಲಿದ್ದ ಕೊರಚರ ಪಾಳ್ಯದ ಜನರದೂ ಅದಕ್ಕೆ ಸೇರುತ್ತಿತ್ತು. ಮೂತ್ರ ಹೊಳೆಯಾಗಿ ಹರಿಯುತ್ತಿತ್ತು. ಹುಳ ಮಿತಿಗುಡುತ್ತಿದ್ದುವು. ಇದಕ್ಕೆ ಕ್ಯೂ ಬೇರೆ. ಕ್ಯೂನಲ್ಲಿ ನಿಂತು ಕಣ್ಣುಮೂಗುಗಳೆರಡನ್ನೂ ಮುಚ್ಚಿಕೊಂಡು ಹಾಳು ನಿತ್ಯಕರ್ಮ ತೀರಿಸುತ್ತಿದ್ದೆವು. ಇಂತಹ

ಸೊಗಸಾದ ಕಕ್ಕಸ್ಸುಗಳನ್ನು ಉಪಯೋಗಿಸುವ ಸೌಭಾಗ್ಯ ಪಡೆಯುತ್ತಿದ್ದವರು ಈಗ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿರುವ ಶಿವಪ್ಪ, ಎಂ. ಪಿ., ಕೆ. ಎಸ್. ಮಲ್ಲೇಗೌಡ, ಇತ್ಯಾದಿ ಗಣ್ಯಮಹನೀಯರು. ಇವರು ಈಗಷ್ಟೇ ಗಣ್ಯರಾಗಿಲ್ಲ. ಆಗಲೂ ಗಣ್ಯರಾಗಿದ್ದರು. ಕಾರಣ, ಸೈಕಲ್ಲಿಟ್ಟಿದ್ದರು ಸೈಕಲ್ ಇಟ್ಟವನೇ ಆಗ ಗಣ್ಯವಿದ್ಯಾರ್ಥಿ. ಅಂಥವರನ್ನು ಸೈಕಲ್ ಇಡದ ಹಳ್ಳಿಮುಕ್ಕನಾದ ನಾನು ಮಿಕಿ ಮಿಕಿ ನೋಡುತ್ತಿದ್ದೆ. ನಾನು ಇಂಟರ್ ಮೀಡಿಯಟ್ ಕಾಲೇಜಿಗೆ ನಡೆದೇ ಹೋಗುತ್ತಿದ್ದೆ. ಸೆಂಟ್ರಲ್ ಕಾಲೇಜಿಗೆ ಎದುರಿಗಿರುವ ಈಗಿನ ಫಸ್ಟ್‌ಗ್ರೇಡ್ ಕಾಲೇಜೇ ಆಗ ಇಂಟರ್‌ಮೀಡಿಯಟ್ ಕಾಲೇಜು. ವಿಶ್ವೇಶ್ವರ ಪುರದಲ್ಲಿದ್ದ–ಈಗಲೂ ಅಲ್ಲೇ ಇರುವ-ಒಕ್ಕಲಿಗರ ಹಾಸ್ಟೆಲ್‌ನಿಂದ ಹೊರಟು ಕೃಷ್ಣ ರಾಜ ರಸ್ತೆಯಲ್ಲಿ ಸಿಟಿಮಾರ್ಕೆಟ್‌ವರೆಗೆ ಹೋಗಿ ಮುಂದೆ ನೇರವಾಗಿ ದೊಡ್ಡಪೇಟೆ ಅವೆನ್ಯೂ ರಸ್ತೆಗಳಲ್ಲಿ ಹಾದು, ಕಾಲೇಜು ತಲುಪುತ್ತಿದ್ದೆ. ಸುಮಾರು ಎರಡು ಮೈಲಿ. ಈಗಿನ ಜೆ. ಸಿ. ರೋಡು ಆಗ ಇರಲಿಲ್ಲ. ಆ ಪ್ರದೇಶವೆಲ್ಲಾ ನಮ್ಮ ಕಕ್ಕಸು ಮತ್ತು ಕಸಗಳನ್ನು ಹಾಕುತ್ತಿದ್ದ ಜಾಗವಾಗಿತ್ತು. ಹತ್ತೂವರೆಯಿಂದ ಐದೂವರೆವರೆಗೆ ಪಾಠ ಮುಗಿಸಿಕೊಂಡು ಮತ್ತೆ ನಡೆದು ಹಾಸ್ಟೆಲಿಗೆ ವಾಪಸು. ದಿನಕ್ಕೆ ಎರಡು ಹೊತ್ತು ಊಟ. ಭಾನುವಾರ ಮಾತ್ರ ಬೆಳಗಿನ ತಿಂಡಿ, ಎಣ್ಣೆ ಸ್ನಾನ ಮತ್ತು ಮಧ್ಯಾಹ್ನ ಮಾಂಸದ ಊಟ. ದಿನದ ಎರಡು ಹೊತ್ತು ಊಟ ಹಸಿದ ಹೊಟ್ಟೆಗೆ ಅಮೃತ ವಾಗುತ್ತಿತ್ತು. ಇನ್ನು ಭಾನುವಾರದ ಮಾಂಸದ ಊಟವಂತೂ (ಇಷ್ಟರಲ್ಲಿ ನಾನು ಬಾಡು ತಿನ್ನುವುದನ್ನು ಶುರುಮಾಡಿದ್ದೆ)—ಏನು ಹೇಳಲಿ ಬಿಡಿ ! ಅದನ್ನು ಅನುಭವಿಸ ಬೇಕೇ ಹೊರತು, ವರ್ಣಿಸಿ ಉಪಯೋಗವಿಲ್ಲ. ಅನಂತಯ್ಯ ಎಂಬ ಒಬ್ಬ ಥಾಂಡಿಗ ಅಡಿಗೆಯವನಿದ್ದ. ಅವನು ಅದನ್ನು ಅಷ್ಟು ರುಚಿಯಾಗಿ ಮಾಡುತ್ತಿದ್ದ. ಒಂದೊಂದು ಖಂಡಕ್ಕೆ ಒಂದೊಂದು ಮೂಳೆಗೆ ಹೋರಾಟ ನಡೆಯುತ್ತಿತ್ತು. ಬರೀ ಮೂಳೆ ಬಿತ್ತು ಅನ್ನೋನೊಬ್ಬ ; ಬರೀ ಮಾಂಸ ಬಿತ್ತು ಅನ್ನೋನಿನ್ನೊಬ್ಬ ; ನಲ್ಲಿ ಮೂಳೆ ನನಗೆ ಬೀಳೋದು ತಪ್ಪಿ ಇನ್ನೊಬ್ಬನಿಗೆ ಬಿತ್ತೆಂದು ರೇಗಾಡುವುದು ಮಗದೊಬ್ಬ. ಒಂದು ದೊಡ್ಡ ಸಮಸ್ಯೆ ಅಂದರೆ ಸೊಟ್ಟುಗದಲ್ಲಿ ನೇತಾಡುತ್ತಿದ್ದ ಮಾಂಸದ ತುಂಡು ಯಾರಿಗೆ ಹೋಗಬೇಕು ಎಂಬುದು. ಯಾರಿಗೆ ಬೀಳಬೇಕಾಗಿತ್ತೋ ಅವನಿಗೋ ಇಲ್ಲ ಯಾರಿಗೆ ಬಿತ್ತೋ ಅವನಿಗೋ ? ಸರಿ, ಲಟಾಪಟಿ ಶುರುವಾಗುತ್ತಿತ್ತು. ಯಾರು ತೀರ್ಮಾನ ಮಾಡಬೇಕು ಈ ವ್ಯಾಜ್ಯಾನ ? ಎಲ್ಲರೂ ಬಾಡುಗಳ್ಳರೇ. ಕೊನೆಗೆ ಅಡಿಗೆ ಅನಂತಯ್ಯನದೇ ತೀರ್ಮಾನ. ಸಿಗೇಹಾಕಿಕೊಂಡಿದ್ದ ಎರಡು ತುಂಡುಗಳನ್ನು ಬೇರೆಮಾಡಿ ಒಂದವನಿಗೆ, ಒಂದಿವನಿಗೆ. ಎಷ್ಟೋ ಜನ ಅನಂತಯ್ಯನಿಗೆ ಸೀಸಿ ಮಾಡಿದ್ದೂ ಮಾಡಿದ್ದೆ ಗುಟ್ಟಾಗಿ 'ಚರಬಿ ನನಗೆ ಬರಂಗೆ ಮಾಡು, ನಲ್ಲಿಮೂಳೆ ನನಿಗೆ ಬೀಳಂಗೆ ಮಾಡು' ಎಂದು. ಬೆಲ್ಲು ಹೊಡೀತು ಎಂದರೆ, ಎಲ್ಲರೂ ಅವರವರ ತಟ್ಟೆ ಲೋಟ ಹಿಡಿದು ಒಂದೇ ಸಲ ಅಡುಗೆ ಮನೆ ಕಡೆ ಧಾವಿಸುತ್ತಿದ್ದ ದೃಶ್ಯವಂತೂ

ನೋಡತಕ್ಕದ್ದು. ಮೊದಲು ಮೊದಲು ಕುಳಿತವರಿಗೆ ಚರಬಿ ಬೀಳುವ ಸಂಭವ ಇದ್ದುದರಿಂದ ಆ ಸೀಟುಗಳಿಗಾಗಿ (ನೆಲದ ಮೇಲೆ) ಹೋರಾಟ. ಮೊದಲೇ ಟವಲ್ ಹಾಕಿದವನು ಒಬ್ಬ. ತಾನು ಕುಳಿತು ತನ್ನ ರೂಮ್‌ಮೇಟಿಗೆಂದು ಬಟ್ಟೆ ಹಾಸಿದವನು ಇನ್ನೊಬ್ಬ. ಅದನ್ನು ತೆಗೆದೆಸೆದು ಕುಳಿತುಕೊಳ್ಳುವವನಿನ್ನೊಬ್ಬ. ಹೀಗೆ ಸೀಟಿಗೂ ಜಗಳ. ಆಮೇಲೆ ಬಾಡೂಟ ತೇಗಿದ ಮೇಲೆ ಎಲ್ಲಾ ಸಮಾಧಾನ—ಒಕ್ಕಲಿಗರ ಜಗಳ ಬಾಡಿನೂಟದಲ್ಲಿ ತೀರಿಹೋಯ್ತು ಎಂಬ ಗಾದೆಯಂತೆ.

ಇದಿಷ್ಟೊ ಹಾಸ್ಟೆಲಿನ ಊಟದ ವೈಖರಿ. ಇನ್ನು ಚನ್ನಪಟ್ಟಣದಲ್ಲಿ ಇದ್ದಂತೆ ಭಜನೆಗಿಜನೆ ಇಲ್ಲ. ಬಹು ಮಂದಿ ಶೋಕಿಲಾಲರು. ನೇವಿ ಬ್ಲೂ ಕೋಟು ಹೊಲಿಸಿಬಿಟ್ಟ ಎಂದರೆ ಅವನ ಜನ್ಮ ಸಾರ್ಥಕವಾಗುತ್ತಿತ್ತು. ಹಾಸ್ಟೆಲಿನ ವಾರ್ಷಿಕೋತ್ಸವದಲ್ಲಿ ವಾಚನಸ್ಪರ್ಧೆ, ಚರ್ಚಾಸ್ಪರ್ಧೆ, ಇವನ್ನು ನಡೆಸುತ್ತಿದ್ದರು. ಇವುಗಳಲ್ಲಿ ಭಾಗವಹಿಸುತ್ತಿದ್ದವರು ನನ್ನಂತಹ ಹಳ್ಳಿಮಕ್ಕಳೇ. ಆದರೆ ಪೇಪರ್ ಛೇಸ್ ಆಟದಲ್ಲಿ ಶೋಕಿಲಾಲರು ಮುಂದೆ ; ನಾವು ಹಿಂದೆ. ಒಂದು ಮೊಲದ ತಂಡ, ಇನ್ನೊಂದು ನಾಯಿ ತಂಡ. ಒಕ್ಕಲಿಗರ ಪ್ರೆಸ್ಸಿನಲ್ಲಿ ವರ್ಷವೆಲ್ಲಾ ಕೂಡಿಹಾಕಿದ ಕಾಗದದ ಚೂರುಗಳ ಮೂಟೆಗಳನ್ನು ಹೊತ್ತು ಮೊಲಗಳು ಮುಂದೆ. ಅವು ಹೋಗುವಾಗ ಉದ್ದಕ್ಕೂ ಕಾಗದದ ಚೂರುಗಳನ್ನು ಬೀಳಿಸಿಕೊಳ್ಳುತ್ತಾ ಹೋಗಬೇಕು. ಅವು ಹೊರಟ ಅರ್ಧಗಂಟೆಯ ಮೇಲೆ ನಾಯಿಗಳು ಹೊರಡಬೇಕು. ಹೊರಟು, ಚೂರುಗಳು ಬಿದ್ದ ದಾರಿಯಲ್ಲಿಯೇ ಹೋಗಿ ಮೊಲಗಳನ್ನು ಹಿಡಿಯಬೇಕು. ಮೊಲಗಳು ಬೇಕಾಗಿಯೇ ಎರಡು ದಾರಿ ಮಾಡಿ ಸಂದೇಹ ಹುಟ್ಟಿಸುತ್ತವೆ. ಇದೇ ಸರಿಯಾದ ದಾರಿ ಎಂದು ನಾಯಿಗಳು ಒಂದು ಮೈಲಿ ಹೋದರೆ ಅಲ್ಲಿಗೆ ದಾರಿ ನಿಂತಿತು. ಮತ್ತೆ ಅದೇ ದಾರಿಯಲ್ಲಿ ಹಿಂದಿರುಗಿ ಕವಲೊಡೆದ ಕಡೆ ಇನ್ನೊಂದು ದಾರಿ ಹಿಡಿಯಬೇಕು. ಹೀಗೆ ಆ ತಿಂಗಳು ಬೆಳಕಿನ ಇಡೀ ರಾತ್ರಿಯೆಲ್ಲಾ ಸಿಟಿ ಕಾರ್ಪೊರೇಷನ್ ಸಿ.ಐ.ಟಿ.ಬಿ. ಮತ್ತು ಬಿ.ಡಿ.ಎ. ಇವು ಬೆಂಗಳೂರಿಗೆ ಬರುವ ಮುನ್ನ ಇದ್ದ ಕಾಡು ಮೇಡು ಹಳ್ಳ ಕೊಳ್ಳಗಳಲ್ಲಿ ಬೆಳಗಿನವರೆಗೆ ಅಲೆದು ಅಲ್ಲಾಡಿ ಸುಸ್ತಾಗಿ ಸಾಕಾಗಿ ಬರುತ್ತಿದ್ದೆವು. ಮೊಲಗಳು ಹಾಸ್ಟೆಲಿಗೆ ಹಿಂದಿರುಗುವ ಮುನ್ನ ಅವನ್ನು ಹಿಡಿದರೆ ನಾಯಿಗಳು ಗೆದ್ದಂತೆ ; ಇಲ್ಲದಿದ್ದರೆ ಸೋತಂತೆ. ಆ ಒಂದು ರಾತ್ರಿ ಕಳುವಾದ ಸೀಬೆಹಣ್ಣುಗಳೆಷ್ಟೋ ! ಲೂಟಿಯಾದ ಎಳನೀರು ತೆಂಗಿನಕಾಯಿಗಳೆಷ್ಟೋ ಇದರ ಮೇಲೆ ಅಲ್ಲಲ್ಲಿ ನಮ್ಮ ರಸಿಕತನದ ಬರೆವಣಿಗೆ ಬೇರೆ. 'ಸುಂದರ ವಿಲ್ಲಾ' (Sundara Villa) ಎಂದು ಒಂದು ಮನೆಯ ಮುಂಭಾಗದಲ್ಲಿದ್ದ ಹೆಸರಿನ ಫಲಕ. 'ವಿಲ್ಲಾ' ಎಂದರೆ ಫ್ರೆಂಚ್ ಭಾಷೆಯಲ್ಲಿ 'ಮನೆ' ಎಂದರ್ಥ. ಮನೆಯವನು ವಿಲ್ಲಾ ಎಂದರು ಬರೆಯುವ ಬದಲು 'ನಿಲಯ' ಅಥವಾ 'ಸೌಧ' ಎಂದು ಬರೆಯಬಾರದಾಗಿತ್ತೆ. ಹಾಗೆ ಮಾಡದೆ ತನ್ನ ಫ್ರೆಂಚ್ ಅಭಿಮಾನ ತೋರಿಸಿ ಹಾಕಿದ ಆ ಫಲಕದ ಕೆಳಗೆ 'ಪರವಾ

ಇಲ್ಲ' ಎಂದು ಬರೆಸಿಕೊಳ್ಳಬೇಕಾಯಿತು. ಬರೆದವನು, ನಾನಲ್ಲ, ಖಂಡಿತ ಅಲ್ಲ. ಬೆಂಗಳೂರಿನ ಘಟಾನುಘಟಿಗಳ ಮುಂದೆ ನನ್ನ ಕ್ಯಾತೆ ಹೇಗೆ ಸಾಗೀತು !

ನಾನೀಗ ಬಹಳ ಸಭ್ಯನಾಗಿದ್ದೆ. ಚನ್ನಪಟ್ಟಣದಲ್ಲಿ ಬೆಳೆಸಿಕೊಂಡ ಒಳ್ಳೆಯತನ ಈಗ ಇನ್ನೂ ಬೆಳೆದಿತ್ತು. ರಾಷ್ಟ್ರೀಯ ಭಾವನೆಯ ಜೊತೆಗೆ ಸೇವಾ ಮನೋ ಭಾವನೆಯೂ ಬೆಳೆದಿತ್ತು. ಆಗ ವಿಶ್ವೇಶ್ವರ ಪುರದಲ್ಲಿದ್ದ ರಾಮಕೃಷ್ಣಾಶ್ರಮಕ್ಕೆ ತಪ್ಪದೆ ಹೋಗುತ್ತಿದೆ. ಹಾಸ್ಟೆಲ್ ಆವರಣದಲ್ಲಿದ್ದ ಪ್ಯಾರಲೆಲ್ ಬಾರ್, ಡಂಬೆಲ್ಸ್‌ಗಳನ್ನು ಉಪಯೋಗಿಸಿಕೊಂಡು ವ್ಯಾಯಾಮ ಮಾಡುತ್ತಿದ್ದೆ. ಗಡೆ ತಿರುವುತ್ತಿದ್ದೆ. ನನ್ನ ಮಲಬದ್ಧತೆ ಇನ್ನೂ ಪೂರ್ತ ಹೋಗಿರಲಿಲ್ಲ. ಇದಕ್ಕಾಗಿ 'ಈನೋಸ್ ಫ್ರೂಟ್‌ಸಾಲ್ಟ್' ಶೀಸೆಗಳೆಷ್ಟೋ ಖಾಲಿಯಾದುವು. ವಿಶ್ವೇಶ್ವರಪುರದಲ್ಲಿ ಹತ್ತಿರವೇ ಇದ್ದ ಪಂಡಿತ ತಾರಾನಾಥರ ಸಲಹೆ ಪಡೆಯುತ್ತಿದ್ದೆ. ಅವರು ಕೊಡುತ್ತಿದ್ದ ಆಯುರ್ವೇಧ ಔಷಧಿ ಗಳನ್ನು ನುಂಗಿದೆ. ನಾನು ಹೋದಾಗಲೆಲ್ಲಾ ಅಗಲನೆಯ ಮುಖದ, ದೊಡ್ಡ ಕಣ್ಣುಗಳ, ಇಳಿಯಬಿಟ್ಟ ಕೂದಲಿನ ಆ ಪ್ರೇಮಮಯ ಮುಖವನ್ನು ನೋಡಿದ್ದೂ ನೋಡಿದ್ದೆ. ತಲೆನೋವಿಗೆ ಕಣ್ಣಿನ ದೃಷ್ಟಿ ಕಾರಣವಿರಬೇಕೆಂದು ಮಿಂಟೋ ಆಸ್ಪತ್ರೆಗೆ ಹೋದೆ. ಡಾ. ಮೇಕ್ರಿಯವರು ಪರೀಕ್ಷೆಮಾಡಿ ಕನ್ನಡಕ ಕೊಟ್ಟರು. ಅಂತಹ ಸೌಜನ್ಯದ ಡಾಕ್ಟರನ್ನು ನಾನಿಲ್ಲಿಯವರೆಗೆ ಕಂಡದ್ದೇ ಇಲ್ಲ. ಚನ್ನರಾಯಪಟ್ಣದ ಆ ಸಾಬಿಯಿಂದಾಗಿ ಸಾಬರನ್ನೆಲ್ಲಾ ದ್ವೇಷಿಸುತ್ತಿದ್ದ ನಾನು ಈ ಸಾಹೇಬರನ್ನು ಕಂಡಮೇಲೆ ಅದನ್ನು ಬಿಟ್ಟು ಬಿಟ್ಟೆ. ಈ ಇಬ್ಬರ ಹಸ್ತಗುಣದಿಂದಾಗಿ ನನಗೆ ಆಗಿನಿಂದಲೂ ಮಲಬದ್ಧತೆಯಶಾಗಲೀ ತಲೆನೋವಾಗಲೀ ಬಂದಿಲ್ಲ.

ಆರೋಗ್ಯ ಕುದುರಿತು. ಹೊಸ ಹುಮ್ಮಸ್ಸು ಮೂಡಿತು. ಬೆಂಗಳೂರಿಗೆ ಬಂದ ಪ್ರಸಿದ್ಧವಾಗ್ಮಿಗಳ ಭಾಷಣಗಳನ್ನೆಲ್ಲಾ ಕೇಳುತ್ತಿದ್ದೆ. ಅಂಥವರಲ್ಲಿ ಸರೋಜಿನೀನಾಯ್ಡು ಮತ್ತು ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ ಇಬ್ಬರು. ಗಾಂಧೀಜಿ ಬೆಂಗಳೂರಿಗೆ ಬಂದರು. ನ್ಯಾಷನಲ್ ಹೈಸ್ಕೂಲು ಮೈದಾನದಲ್ಲಿ ಅವರ ಭಾಷಣ. ಜನಸಂದಣಿ ಎಂದರೆ ಅದು. ಅವರನ್ನು ನೋಡುವ ಮತ್ತು ಅವರ ವಾಣಿಯನ್ನು ಕೇಳುವ ಪುಣ್ಯ ನನ್ನದಾಯಿತು. ಬಿಹಾರಿನಲ್ಲಿ ಭಾರಿ ಭೂಕಂಪ. ಸಾವಿರಾರು ಜನರ ಮರಣ. ಪರಿಹಾರ ನಿಧಿಗೆ ನಾನು ಹಾಸ್ಟೆಲ್ ಹುಡುಗರಿಂದ 149 ರೂಪಾಯಿ 8 ಆಣೆ ಸಂಗ್ರಹಿಸಿ ಬಾಬು ರಾಜೇಂದ್ರಪ್ರಸಾದರಿಗೆ ಕಳುಹಿಸಿಕೊಟ್ಟೆ. ಕೆಂಗೇರಿಯಲ್ಲಿ ಸ್ವಾಮಿ ವಿಶ್ವಾನಂದರು ಒಂದು ಗುರುಕುಲಾಶ್ರಮ ನಡೆಸುತ್ತಿದ್ದರು. ಬೇಸಗೆಯಲ್ಲಿ ಅವರು ನಡೆಸಿದ ಶಿಬಿರಕ್ಕೆ ನಾನೂ ಹೋಗಿ ಎಂಟು ಹತ್ತು ದಿನಗಳನ್ನು ಕಳೆದೆ. ಆಗ ಒಬ್ಬೊಬ್ಬರು ಒಂದೊಂದು ವಿಷಯದ ಮೇಲೆ ಮಾತಾಡಬೇಕಾಗಿತ್ತು. ನಾನು 'Rural Problem' ಎಂಬ ವಿಷಯದ ಮೇಲೆ ಇಂಗ್ಲಿಷಿನಲ್ಲಿ ಭಾಷಣ ಮಾಡಿದೆ. ಆಗ ಪೆನ್ಸಿಲ್‌ನಲ್ಲಿ ಬರೆದ ಆ ಭಾಷಣ ಈಗಲೂ ನನ್ನ ಬಳಿ ಇದೆ.

ಇನ್ನು ಕಾಲೇಜಿನ ವಿಷಯ. ಶೇಷಯ್ಯಂಗಾರ್ ಸೂಪರಿಂಟೆಂಡೆಂಟ್. ಅವರ ಬಗ್ಗೆ ಹುಡುಗರು ಗೋಡೆಯ ಮೇಲೆ ಏನೇನೋ ಬರೆಯುತ್ತಿದ್ದರು. ಪ್ಯಾಂಟು, ಕ್ಲೋಸ್‌ಕಾಲರ್ ಕೋಟು ಧರಿಸಿ ಎತ್ತರವಾದ ಚೂಪು ಪೇಟ ಸುತ್ತುತ್ತಿದ್ದ ಒಬ್ಬ ಮೇಷ್ಟ್ರನ್ನು 'ಕೋಚಮನ್,' ಎಂದು ಕರೆಯುತ್ತಿದ್ದರು. ಇನ್ನೊಬ್ಬರು ದಪ್ಪನಾಗಿದ್ದ ಕುಳ್ಳು ಮೇಷ್ಟ್ರಿದ್ದರು. ಅವರು ಕೆಲವರ ಹೆಸರುಗಳನ್ನು ಹೇಳುವಾಗ ಮಾತುಗಳನ್ನು ಅದಲು ಬದಲಾಗಿ ಹೇಳುತ್ತಿದ್ದರು. 'ಟೀಕಾಚಾರ್ಯರ ಪುಣ್ಯದಿನ' ಎನ್ನುವ ಬದಲು 'ಪೂಕಾಚಾರ್ಯರ ಟಿನ್ಯದಿನ' ಎಂದುಬಿಡುತ್ತಿದ್ದರು. 'ಬಿ. ಎಂ. ಶ್ರೀಕಂಠಯ್ಯ' ಎನ್ನುವ ಬದಲು 'ಶ್ರೀ ಎಂ. ಭೀಕಂಠಯ್ಯ' ಎನ್ನುತ್ತಿದ್ದರು. ಹೀಗಾಗಿ ಅವರಿಗೆ ಪೂಕಾಚಾರ್ಯರೆಂದೇ ಹೆಸರುಬಂದಿತ್ತು. ಶ್ರೀಕಂಠಯ್ಯನವರನ್ನು ಭೀಕಂಠಯ್ಯ ಎಂದುದರಲ್ಲಿ ತಪ್ಪೇನೂ ಕಾಣುವುದಿಲ್ಲ. ಏಕೆಂದರೆ, ಅವರು ಶ್ರೀಕಂಠಯ್ಯನವರೂ ಆಗಿದ್ದರು, ಭೀಕಂಠಯ್ಯನವರೂ ಆಗಿದ್ದರು. ಸೆಂಟ್ರಲ್ ಕಾಲೇಜಿನಿಂದ ಇಂಗ್ಲಿಷ್ ಡ್ರಾಮ ಪಾಠ ಹೇಳಲು ನಮ್ಮ ಕಾಲೇಜಿಗೆ ಬರುತ್ತಿದ್ದರು. ಬಂದ ಮೊದಲನೆಯ ದಿನವೇ ಅಟೆಂಡೆನ್ಸ್ ಕರೆಯುವಾಗ ನನ್ನ ಹೆಸರು ಊರು ಕೇಳಿ ತಾವೂ ಬೆಳ್ಳೂರಿನವರೆಂದು ಹೇಳಿಕೊಂಡಾಗ ನನಗೆ ಕೋಡುಮೂಡಿದ್ದುವು. ಷೇಕ್ಸ್‌ಪಿಯರನ ಮರ್ಚೆಂಟ್ ಆಫ್ ವೆನಿಸ್ ನಮಗಿಟ್ಟಿದ್ದ ಇಂಗ್ಲಿಷ್ ಡ್ರಾಮ. ವರ್ಷವೆಲ್ಲಾ ಪಾಠ ಮಾಡಿದಮೇಲೆ ಪರೀಕ್ಷೆಗೆ ಮುನ್ನ ಶ್ರೀಕಂಠಯ್ಯನವರ ಸ್ಪೆಷಲ್ ಲೆಕ್ಚರ್. ಒಂದು ಭಾನುವಾರ, ಕಾಲೇಜಿನ ದೊಡ್ಡ ಹಾಲ್—ಅದರ ತುಂಬ ಕ್ಲಾಸಿನ ಹುಡುಗರಲ್ಲದೆ ಕಾಲೇಜಿನ ಹುಡುಗರು ಕೂಡ. ಗರಿಗರಿ ಇಸ್ತ್ರಿಮಾಡಿದ ಕ್ಲೋಸ್‌ಕಾಲರ್ ಸೂಟು ತೊಟ್ಟು, ಸೊಗಸಾದ ಜರತಾರಿ ಪೇಟ ಹಾಕಿಕೊಂಡು ಮುದ್ದುಮುಖದ ಶ್ರೀಕಂಠಯ್ಯನವರು ತಮ್ಮ ಶ್ರೀಕಂಠದಿಂದ ಮಧ್ಯಾಹ್ನ ಮೂರು ಗಂಟೆಗೆ ಲೆಕ್ಚರ್ ಆರಂಭಿಸಿದರು. ಪೂರ್ತ ಎತ್ತಿದ ಕೆರೆಯ ತೂಬಿನಿಂದ ನೀರು ನುಗ್ಗಿಬಂದಂತೆ ಅವರ ಬಾಯಿಂದ ಭಾಷಣವು ಸರಳವಾದ ಇಂಗ್ಲಿಷಿನಲ್ಲಿ ಹರಿದು ಬರುತ್ತಿತ್ತು. ರಾತ್ರಿ ಒಂಬತ್ತು ಗಂಟೆಯಾದರೂ ಭಾಷಣ ನಡೆದಿತ್ತು! ಹುಡುಗರೆಲ್ಲ ಕುಳಿತೇ ಇದ್ದರು!

ಪೀಸಿಯವರು ನಮ್ಮ ಕನ್ನಡ ಮೇಷ್ಟ್ರು. ಉಡುಪಿನ ಶುಭ್ರತೆ ಎಂದರೆ ಇವರನ್ನು ನೋಡಬೇಕಾಗಿತ್ತು. ಪೇಟಕ್ಕೆ ಜರಿ ಇದ್ದರೆ ಆ ಶುಭ್ರತೆಗೆಲ್ಲಿ ಕುಂದುಂಟಾದಿತೋ ಎಂದು ಬಿಳಿಮಲ್ಲಿನ ಪೇಟ ಸುತ್ತಿ ಕ್ಲಾಸಿಗೆ ಬರುತ್ತಿದ್ದರು. ಆದರೆ ಅವರ ಮಾತು ಅರ್ಧ ಕನ್ನಡ, ಅರ್ಧ ಇಂಗ್ಲಿಷ್-ಅವರ ಉಡುಪಿಗೆ ವಿರುದ್ಧವಾಗಿ. ನಾವು ಬರೆದ ಪ್ರಬಂಧಗಳನ್ನು ಓದಿ ಒಬ್ಬೊಬ್ಬರನ್ನಾಗಿ ತಮ್ಮ ಕೋಣೆಗೆ ಕರೆಸಿಕೊಂಡು ತಪ್ಪುಗಳನ್ನು ಬಹು ವಿನಯದಿಂದ ತೋರಿಸಿಕೊಡುತ್ತಿದ್ದರು.

ಸಿ. ರಂಗಾಚಾರ್ ಎಂಬ ಸಂಸ್ಕೃತ ಮೇಷ್ಟ್ರು ಇದ್ದರು. ಇವರು ಕಾಲೇಜು ಹೊರಗಡೆ ಹಿಂದಿಯನ್ನೂ ಕಲಿಸುತ್ತಿದ್ದರು. ಆಗ ಎಲ್ಲೆಲ್ಲೂ ಹಿಂದಿ ಕಲಿಯಬೇಕೆಂಬ

ಚಳುವಳಿಯೇ ನಡೆಯುತ್ತಿತ್ತು. ನಾನೂ ಅವರ ಬಳಿ ಹಿಂದಿ ಕಲಿತೆ. ಪ್ರಯಾಗದ ಅಖಿಲ ಭಾರತ ಹಿಂದೀ ಸಾಹಿತ್ಯ ಸಮ್ಮೇಳನ ನಡೆಸುತ್ತಿದ್ದ 'ಪ್ರಥಮ' ಮತ್ತು 'ಪ್ರವೇಶ' ಪರೀಕ್ಷೆಗಳನ್ನೂ ಒಂದೇ ವರ್ಷದಲ್ಲಿ ಪಾಸುಮಾಡಿದೆ. 'ಕೋವಿದ'ಕ್ಕೆ ಓದಿ ಪರೀಕ್ಷೆಗೆ ಕಟ್ಟಬೇಕೆನ್ನುವಷ್ಟರಲ್ಲಿ ಬೆಂಗಳೂರು ಬಿಡಬೇಕಾಯಿತು.

ಇಂಟರ್‌ಮೀಡಿಯಟ್ ಪಾಸಾದ ಮೇಲೆ ಎದುರಿಗೆ ಇದ್ದ ಸೆಂಟ್ರಲ್ ಕಾಲೇಜು ಸೇರಬಹುದಿತ್ತು, ಆದರೆ ನಮ್ಮ ತಂದೆಗೆ ಈಚೆಗೆ ಏಕೋ ಏನೋ ನನ್ನನ್ನು ಲಾಯರು ಮಾಡಬೇಕೆಂಬ ಆಸೆ ಹುಟ್ಟಿಬಿಟ್ಟಿತ್ತು. ಬಹುಶಃ ಅವರು ಶ್ರೀರಂಗಪಟ್ಟಣ ಮತ್ತು ಮಂಡ್ಯ ಲಾಯರುಗಳಿಗೆ ಕೈತುಂಬ ಕೊಡುತ್ತಿದ್ದ ಫೀಜು, ಅವರ ಸುಖ ಜೀವನ, ಮತ್ತು ದೊಡ್ಡ ದೊಡ್ಡ ಸಾರ್ವಜನಿಕ ಮುಖಂಡರುಗಳು ಲಾಯರೇ ಆಗಿದ್ದುದು ಅದಕ್ಕೆ ಕಾರಣ ಇರಬಹುದು. ಸೆಂಟ್ರಲ್ ಕಾಲೇಜಿನಲ್ಲಿ ಆರ್ಟ್ಸ್ ಸಬ್ಜೆಕ್ಟುಗಳು ಇರಲಿಲ್ಲ. ಹೀಗಾಗಿ ನಾನು ಮೈಸೂರಿನ ಮಹಾರಾಜಾ ಕಾಲೇಜು ಸೇರಬೇಕಾಯಿತು; ಆದರೆ ಅಲ್ಲಿಯೂ ನನಗೆ ಬಿ.ಎಸ್ಸಿಯೇ ಸಿಕ್ಕಿದ್ದು. ವಿಷಯಗಳು ಎಕನಾಮಿಕ್ಸ್, ಸೋಷಿಯಾಲಜಿ ಮತ್ತು ಮ್ಯಾಥ್‌ಮ್ಯಾಟಿಕ್ಸ್. ವಿ. ಎಲ್. ಡಿಸೌಜಾ ಎಕನಾಮಿಕ್ಸ್ ಪ್ರೊಫೆಸರು ಎ. ಆರ್. ವಾಡಿಯಾ ಸೋಷಿಯಾಲಜಿ ಪ್ರೊಫೆಸರು ಮತ್ತು ಕೆ ಬಿ. ಮಾಧವ ಮ್ಯಾಥ್‌ಮ್ಯಾಟಿಕ್ಸ್ ಪ್ರೊಫೆಸರು ಮತ್ತು ಟಿ ಎಸ್. ವೆಂಕಣ್ಣಯ್ಯ ಕನ್ನಡ ಪ್ರೊಫೆಸರು ಎ. ಆರ್. ಕೃಷ್ಣಶಾಸ್ತ್ರಿ, ಟಿ. ಎನ್. ಶ್ರೀಕಂಠಯ್ಯ ಮತ್ತು ಡಿ. ಎಲ್, ನರಸಿಂಹಾಚಾರ್ ಕನ್ನಡ ಮೇಷ್ಟ್ರುಗಳು. ಕೆ. ವಿ. ಪುಟ್ಟಪ್ಪನವರು ಇಂಟರ್‌ಮೀಡಿಯಟ್ (ಈಗ ಯುವರಾಜಾ) ಕಾಲೇಜಿನಲ್ಲಿ ಇಂಟರ್‌ಮೀಡಿಯಟಿಗೆ ಪಾಠ ಹೇಳುತ್ತಿದ್ದರು. ಇಂಗ್ಲಿಷ್ ಮತ್ತು ಕನ್ನಡ ಪಾಠಗಳಿಗೆ ಕಾಮನ್ ಕ್ಲಾಸ್. ಬೇರೆ ವಿಷಯುಗಳಿಗೆ ಬೇರೆ ಬೇರೆ ಕ್ಲಾಸುಗಳು. ಎ. ಆರ್. ವಾಡಿಯಾರವರ ಕ್ಲಾಸಿನಲ್ಲಿ ಸುಮಾರು ಇಪ್ಪತ್ತು ಹುಡುಗರಿರಬಹುದು. ಮೊದಲ ದಿನ ಹಾಜರಾತಿ ಪುಸ್ತಕ ಮುಂದಿಟ್ಟುಕೊಂಡು ಹೆಸರು ಕರೆದರು. 'Present, Sir' ಎಂದು ಹುಡುಗ ಎದ್ದು ನಿಂತಾಗ ಅವನ ಮುಖ ಚರ್ಯೆ, ಅವನು ಕುಳಿತ ಜಾಗಗಳನ್ನು ಸೂಕ್ಷ್ಮವಾಗಿ ಗ್ರಹಿಸಿಕೊಂಡರು. ಎಲ್ಲರ ಹಾಜರಾತಿ ಮುಗಿದ ಮೇಲೆ 'From tomorrow you should occupy the same seat' ಎಂದರು. ಇದನ್ನು ಯಾರೂ ಅಷ್ಟು ತಲೆಗೆ ಹಚ್ಚಿಕೊಳ್ಳದೆ ಹುಡುಗರು ಎಲ್ಲೆಂದರೆ ಅಲ್ಲಿ ಕುಳಿತರು. ಮಾರನೆಯ ದಿನ ಅಟೆಂಡೆನ್ಸ್ ರಿಜಿಸ್ಟರು ಮುಂದಿಟ್ಟುಕೊಂಡು ಒಂದೊಂದಾಗಿ ಹೆಸರುಗಳನ್ನು ಮನಸ್ಸಿನಲ್ಲಿಯೇ ಓದಿಕೊಂಡು ತಲೆಯೆತ್ತಿ ಹುಡುಗನ ಕಡೆ ನೋಡಿ 'why have you changed your seat? go back to your place' ಎಂದು ಬಿಟ್ಟರು. ನಾವೆಲ್ಲಾ ತಬ್ಬಿಬ್ಬಾಗಿ ನಮ್ಮ ನಮ್ಮ ಸ್ಥಳದಲ್ಲಿ ಕುಳಿತೆವು. ಇಡೀ ಎರಡು ವರ್ಷಗಳ ಕಾಲ ಹೀಗೆ ನಡೆಯಿತು.

ಎರಡು ವರ್ಷಗಳನಂತರ ಪಬ್ಲಿಕ್ ಪರೀಕ್ಷೆಗೆ ಮುನ್ನ ಆ ಹುಡುಗರನ್ನು ಅವರ

ಮನೆಗೆ ಟೀಗೆ ಕರೆಯುತ್ತಿದ್ದರು. ಇದಕ್ಕೆ ಒಂದೆರಡು ತಿಂಗಳು ಮುನ್ನ "ನಿಮ್ಮ ಆತ್ಮಚರಿತ್ರೆ ಬರೆದುಕೊಡಿ" ಎಂದು ಕೇಳುತ್ತಿದ್ದರು. ಎಲ್ಲರೂ ಬರೆದುಕೊಡಬೇಕು. ಟೀಗೆ ಹೋದ ದಿನ. ಅದು ಮುಗಿದ ಮೇಲೆ ಒಬ್ಬೊಬ್ಬರನ್ನಾಗಿ ಅವರ ಕೋಣೆಗೆ ಕರೆಸಿಕೊಂಡು ಅವರವರ ಆತ್ಮಚರಿತ್ರೆಯನ್ನು ಕೈಗೆತ್ತಿಕೊಂಡು ಹಲವಾರು ವಿಷಯಗಳನ್ನು ಕೇಳುತ್ತಿದ್ದರು. ವಿದ್ಯಾವಂತ ಯುವಕರು ಯಾವ ಯಾವ ಪರಿಸರ ಮತ್ತು ಸನ್ನಿವೇಶಗಳಿಂದ ಬಂದಿದ್ದಾರೆ, ಅವರ ಆಸೆ ಆಕಾಂಕ್ಷೆಗಳೇನು ? ಇವನ್ನೆಲ್ಲಾ ತಿಳಿದುಕೊಳ್ಳುವ ಉದ್ದೇಶವಿತ್ತು ಎಂದು ಕಾಣುತ್ತೆ. ಇಷ್ಟಾದ ಮೇಲೆ ಆತ್ಮಚರಿತ್ರೆಯನ್ನೂ ಹಿಂದಿರುಗಿ ಕೊಟ್ಟುಬಿಡುತ್ತಿದ್ದರು. ನಾನೂ ಬರೆದುಕೊಟ್ಟಿದ್ದೆ. ಎಲ್ಲಾ ಬರೆದಿದ್ದೆನೆಂದು ಹೇಳಲಾರೆ. ಅಂತಹ ಪ್ರೊಫೆಸರು ನಮ್ಮಲ್ಲಿ ಅಷ್ಟೊಂದು ಆತ್ಮೀಯತೆಯಿಂದ ನಡೆದುಕೊಂಡುದು ಇನ್ನೂ ಮನಸ್ಸಿನಲ್ಲಿ ಉಳಿದಿದೆ.

ಆತ್ಮೀಯತೆ ಇದ್ದರೂ ಪ್ರೊಫೆಸರುಗಳಾಗಲೀ ಲೆಕ್ಚರರ್‌ಗಳಾಗಲೀ ಅಗ್ಗವಾಗಿ ನಡೆದುಕೊಳ್ಳುತ್ತಿರಲಿಲ್ಲ. ಎಲ್ಲರಲ್ಲೂ ಒಂದು ಬಗೆಯ ಗಾಂಭೀರ್ಯ ಇರುತ್ತಿತ್ತು. ಕ್ಲಾಸಿನಲ್ಲಿ ಹುಡುಗರು ಗೇಲಿ ಮಾಡುವಂತಿಲ್ಲ, ಗಲಾಟೆಮಾಡುವಂತಿಲ್ಲ. ಹಾಗೆ ಮಾಡಿದರೆ ಕೂಡಲೇ ಹೊರಗಟ್ಟುತ್ತಿದ್ದರು. ಕ್ಲಾಸ್ ನಡೆಯುವ ವೇಳೆ ಒಬ್ಬನಾದರೂ ಹುಡುಗ ಹೊರಗೆ ಅಡ್ಡಾಡುವಂತಿಲ್ಲ. ಪ್ರಿನ್ಸಿಪಾಲರಾದ ಪ್ರೊ. ರೋಲೋ ವರಾಂಡದಲ್ಲಿ ಅಡ್ಡಾಡಿ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದರು. ರೋಲೋ ಅವರು ಇಂಗ್ಲಿಷ್ ಪ್ರೊಫೆಸರು. ಈಚೆಗೆ ಇಂಗ್ಲೆಂಡಿನಲ್ಲಿ ತೀರಿಹೋದರೆಂದು ಗೊತ್ತಾಯಿತು. ಒಂದು ಬಗೆಯಲ್ಲಿ ತಮಾಷೆಯಾಗಿ ಮಾತಾಡುತ್ತಿದ್ದ ಅವರು ತಪ್ಪು ಇಂಗ್ಲಿಷ್ ಯಾವುದು ಎಂದು ಉದಾಹರಣೆಗಳ ಸಮೇತ ಹೇಳುತ್ತಿದ್ದರು. 'match box' ತಪ್ಪು, 'box of matches' ಸರಿ. 'chair's arm' ತಪ್ಪು. 'arm of the chair' ಸರಿ. 'So' ಎನ್ನುವುದನ್ನು ಯಾವಾಗ ಉಪಯೋಗಿಸಬಾರದೆಂಬುದನ್ನು ನಾಟಕೀಯವಾಗಿ ಹೇಳುತ್ತಿದ್ದರು. ಅವರು ನಗಬೇಕಾದಾಗ ಹಲ್ಲು ಕಾಣಿಸದಂತೆ ನಗಲು ಬಹಳ ಪ್ರಯತ್ನಪಡುತ್ತಿದ್ದರು.

ಪಕ್ಕದಲ್ಲಿಯೇ ಇದ್ದ ಇಂಟರ್‌ಮೀಡಿಯಟ್ ಕಾಲೇಜಿಗೆ ರಾಜಕುಮಾರ ಜಯಚಾಮರಾಜ ಒಡೆಯರು ಓದಲು ಬರುತ್ತಿದ್ದರು. ಆಗ ಅವರನ್ನು ನೋಡುವುದಕ್ಕೆ ಒಂದು ಚಂದ. ಆಗ್ಗೂ ಅವರು ಈಚೆಗೆ ಕಾಲವಾದಾಗ ನೋಡಿದ್ದಕ್ಕೂ ಎಷ್ಟೊಂದು ವ್ಯತ್ಯಾಸ ! ಎಂತಹ ದುರಂತ ಅವರ ಬಾಳು ! ಆಮೇಲೆ ಮಹಾರಾಜರಾದ ಮೇಲೆ ಅವರು ನನಗೆ ಮಾಡಿದ ಸಹಾಯ, ಅವರೊಡನೆ ಅಧಿಕಾರಿಯಾಗಿ ಪ್ರವಾಸ ಮಾಡಿದ ವಿಷಯ ಇವನ್ನೆಲ್ಲಾ ಆಮೇಲೆ ಹೇಳುತ್ತೇನೆ.

ನಾನು ಒಕ್ಕಲಿಗರ ಹಾಸ್ಟೆಲ್‌ನಲ್ಲಿ ಇದ್ದೆ. ಹೆಚ್.ಸಿ. ದಾಸಪ್ಪನವರು ಹಾಸ್ಟೆಲಿನ ಮೇಲ್ವಿಚಾರಕರು. ಹೆಸರಾಂತ ಅಡ್ವೊಕೇಟ್‌ರಾಗಿದ್ದ ಅವರು ಆಗಾಗ್ಗೆ ಹಾಸ್ಟೆಲಿಗೆ

ಬಂದು ನಮ್ಮ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದರು. ಆದರೆ ಎಲೆಮರೆಯ ಕಾಯಂತೆ ಹೆಚ್ಚು ಮಾತಾಡದೆ ಬಿ.ಎ, ಬಿ.ಎಸ್ಸಿ. ಓದುತ್ತಿದ್ದೇವೆಂದು ಬಿಂಕದಿಂದ ಮೆರೆಯುತ್ತಿದ್ದ ಧಾಂಡಿಗರ ಯೋಗಕ್ಷೇಮವನ್ನು ಚಾಕಚಕ್ಯತೆಯಿಂದ ನೋಡಿಕೊಳ್ಳುತ್ತಿದ್ದವರು ಎ. ಜಿ. ಗುಜ್ಜೇಗೌಡರು. ಆದರಿಂದಾಗಿ ಊಟೋಪಚಾರಗಳು ಚೆನ್ನಾಗಿರುತ್ತಿದ್ದುವು. ಬಾಡಿಗಾಗಿ ಇಲ್ಲಿ ಅಷ್ಟೊಂದು ಜಗಳ ಗುದ್ದಾಟಗಳು ನಡೆಯುತ್ತಿರಲಿಲ್ಲ. ಭಜನೆ ಇತ್ಯಾದಿಗಳೂ ಚರ್ಚಾಸ್ಪರ್ಧೆ ವಾಚನಸ್ಪರ್ಧೆ, ಈಜುವ ಸ್ಪರ್ಧೆಗಳೂ ನಡೆಯುತ್ತಿದ್ದುವು. ಕುಕ್ಕನಹಳ್ಳಿ ಕೆರೆಗೆ ದಿನಾ ಈಜಲು ಹೋಗುತ್ತಿದ್ದೆವು. ಯಾವುದೋ ಸ್ಪರ್ಧೆಯಲ್ಲಿ ಪುಟ್ಟಪ್ಪನವರ 'ಮಲೆನಾಡಿನ ಚಿತ್ರಗಳು' ಎಂಬ ಪುಸ್ತಕ ಬಹುಮಾನವಾಗಿ ಬಂದುದು ಜ್ಞಾಪಕ, ನನ್ನಲ್ಲಿ ಪುಸ್ತಕ ಓದುವ ಹವ್ಯಾಸ ಮೈಸೂರಿಗೆ ಬಂದಮೇಲೆ ಹೆಚ್ಚಾಯಿತು. ಹೊಸ ಪುಸ್ತಕಗಳನ್ನು ಕೊಳ್ಳಲು ದುಡ್ಡಿಲ್ಲದೆ ಎರಡಾಣೆ ಮೂರಾಣೆ ಕೊಟ್ಟು ಹಳೆಯ ಪುಸ್ತಕಗಳನ್ನು ಕೊಂಡು ನನ್ನ ಪುಟ್ಟ ಪುಸ್ತಕಭಂಡಾರದಲ್ಲಿಡುತ್ತಿದ್ದೆ. ಆಗಿನಿಂದಲೇ ನಾನು 'ಪ್ರಬುದ್ಧ ಕರ್ನಾಟಕ'ಕ್ಕೆ ಚಂದಾದಾರನಾಗುತ್ತಾ ಬಂದಿದ್ದೇನೆ. ಮನಸ್ಸು ಕೊಂಚ ಕೊಂಚ ಬರೆವಣಿಗೆಯ ಕಡೆ ತಿರುಗುತ್ತಿತ್ತು. ಟಿ. ಕೃಷ್ಣಮೂರ್ತಿ ಎಂಬ ಮ್ಯಾಥ್ಸ್ ಉಪಾಧ್ಯಾಯರು ಒಂದು ಬಗೆಯ ನಿರಾಡಂಬರ ವ್ಯಕ್ತಿ. ಖಾದಿ ಧರಿಸಿದ ಅವರು ಗ್ರಾಮೀಣರ ಬಗ್ಗೆ ಆಸಕ್ತಿ ವಹಿಸುತ್ತಿದ್ದರು. ನಮ್ಮ ಹಳ್ಳಿಗೂ ಬರುವುದಾಗಿ ಹೇಳಿದ್ದರು. ಆದರೆ ಬರಲಾಗಲಿಲ್ಲ. ಆದರೆ ಅವರಿಗಾಗಿ ಹಳ್ಳಿಯ ಚಿತ್ರಗಳನ್ನು ಬರೆಯಲಾರಂಭಿಸಿದೆ. 'ನಾಲ್ಕು ನೂರು' ಲೇಖನಗಳನ್ನು ಬರೆಯಬೇಕೆಂದು ಮನಸ್ಸುಮಾಡಿ ಅಷ್ಟೊಂದು ಬರೆಯಲು ಸಾಧ್ಯವಾಗದೆ ಕೆಲವನ್ನು ಮಾತ್ರ ಬರೆದೆ. ಇದೇ ಕೊನೆಗೆ 'ನನ್ನೂರು' ಆಯಿತು.

ಮಿಡ್ಲ್‌ಸ್ಕೂಲ್ ಸೇರಿದಂದಿನಿಂದ ನನಗೆ ಸ್ಕಾಲರ್‌ಶಿಪ್ ಬರುತ್ತಿತ್ತು. ಅದು ತಪ್ಪಿದರೆ ಫ್ರೀಶಿಪ್. ನನ್ನದು ದೊಡ್ಡಮನೆಯಾದರೂ ನನ್ನನ್ನು ಓದಿಸುವ ಖರ್ಚಿಗೆ ನಮ್ಮ ತಂದೆ ಪರದಾಡುತ್ತಿದ್ದರು. ಆ ದೊಡ್ಡಮನೆ ಸಂಸಾರ ಸಾಗಿಸುವುದಕ್ಕಾಗಿ ಅವರು ಬೇಸಾಯದ ಜೊತೆಗೆ ಕಬ್ಬಿನ ಗಾಣ ಮತ್ತು ಸೇಂದಿ ಬಾಬುಗಳನ್ನು ನಡೆಸುತ್ತಿದ್ದರು. ನನಗಾಗಿ ಅವರು ಪಡುತ್ತಿದ್ದ ಕಷ್ಟ ಹೇಳತೀರದು. ಮೊದಲಿನಿಂದಲೂ ಮನೆಯ ಖರ್ಚು ವೆಚ್ಚಗಳನ್ನು ಬರೆಯುತ್ತಿದ್ದರು. 1929ನೆಯ ಇಸವಿಯ ಡೈರಿಯಲ್ಲಿ ಬರೆದ ಕೆಲವು ಖರ್ಚು ಬಾಬುಗಳು ಸ್ವಾರಸ್ಯವಾಗಿವೆ :

		ರೂ. ಆ. ಪೈ
16/1/29 ಈ ದಿನ ಕುಣಿಗಲಿನಲ್ಲಿ ಮಾರಿದ ಬೆಲ್ಲ 1500		
ಅಚ್ಚು. 10ರೂನಂತೆ ನಗದು ಬಂದದ್ದು		149-12-0
	ಸೋಡಿ	0-4-0
	ಜುಮ್ಲಾ	150-0-0

	ಇದಕ್ಕೆ ಖರ್ಚು	ಸುಂಕ	0-6-0
		ಹೋಟೆಲ್	0-3-6
		ಬೀಡಿ	0-1-6
		ಬೆಂಕಿಪಟ್ಣ	0-0-3
		ನಿಕ್ಕರ್	0-15-0
		4 ಸೇರು ಅಡಕೆ	2-12-0
		ಹುಡುಗರಿಗೆ ತಿಂಡಿ	0-3-0
		ಎತ್ತಿಗೆ ಲಾಳ	2-9-6
		ದನ್ಯ (ಧನಿಯ)	10-0-0
28/1/29	ದಡಗದ ಅಂಗಡಿ ಸಾಪ್ರೆಂಟಿಗಾಗಿ (ಷಾಪ್ ರೆಂಟಿಗಾಗಿ) ನರಸುಮ್ಮಯ್ಯನಿಂದ		29-0-0
		ಬಾಕಿ	0-6-10
5/2/29	ಸೇಂದಿ ಗಡಿಗೆ 29ಕ್ಕೆ		2-0-0
7/2/29	ಕುರಿದೇವರು ಮಾಡಿದ್ದಕ್ಕೆ		1-8-0
9/2/29	10 ಮರಕ್ಕೆ ನಂಬರು ಹಾಕುವುದಕ್ಕೆ ಬಂದಿದ್ದವರಿಗೆ	ತುಪ್ಪ	0-6-0
		ಕೈಯಲ್ಲಿ	2-0-0
2/3/29	ಸಣ್ಣತಾಯಿ ಬಳೆ ತೊಟ್ಟದ್ದಕ್ಕೆ		1-0-0
	ತುಪ್ಪ		0-8-0
27/3/29	ನಮ್ಮ ಊರ ಸಗ್ಲಪ್ಪನ ಮಗಳ ಲಗ್ನಕ್ಕೆ ಮುಯ್ಯಿ ಹಾಕಿದ್ದು		2-0-0
29/3/29	ಚನ್ನರಾಯಪಟ್ಣಕ್ಕೆ ಹುಡುಗರಿಗೋಸ್ಕರ ಬೋರಮ್ಮನವರಿಗೆ		20-0-0
		ಬಕ್ಕನಿಗೆ	5-0-0
		ನಾಗುವಿಗೆ	1-0-0
11/4/29	ಬಂಗಲಿಯಿಂದ	ಖಾಸಾ ತರಕಾರಿಗೆ (ಮಾಂಸಕ್ಕೆ)	1-11-6
21/5/29	ಮಂಡ್ಯದಲ್ಲಿ ಲಾಯರಿಗೆ ಕದಬಳ್ಳಿ ಶಿಂಗ್ರಯ್ಯನ ದಾವಾಕ್ಕೆ		12-4-0
21/6/29	ದಾನ ಕೊಟ್ಬಾಗ ನವಗ್ರಹ ಖರ್ಚು ಮತ್ತು ಹಾಡಿದವರಿಗೆ		8-0-0
1/7/29	ನಾಗನಿಗೆ ಸ್ಕೂಲು ವಿಚಾರ ತಿಳಿದುಕೊಂಡು ಬರಲು		2-0-0
12/7/29	ದಾಟು ತೆಗೆಸಿದ್ದು		6-4-0
3/9/29	ನಾಗುವಿನ ತಿಂಡಿಗೋಸ್ಕರ (ಊಟಕ್ಕೋಸ್ಕರ)		6-0-0
	ಇದರಲ್ಲಿ 1 ರೂಪಾಯಿ ಬೆಲ್ಲ, 5 ರೂಪಾಯಿ ನಗದು		
	ರಾತ್ರಿ ಪಾಠ ಹೇಳುವ ಮೇಷ್ಟ್ರಿಗೆ ಬೆಲ್ಲ		2-0-0

	ಕೊಪರಿ	1-0-0
15/9/29	ಬೇಕಿಪುರಕ್ಕೆ (ಭದ್ರಾವತಿಗೆ) ಪೈಪು ತರಲು ಹೋಗಿ ಬಂದದಕ್ಕೆ ಮೋಟಾರು, ರೈಲು ತಿಂಡಿ ಖರ್ಚು ದೇಖಿಲ್	6-8-0
22/9/29	ಬಿಂಡಿಗನವಿಲೆ ಶೇಕದಾರನಿಗೆ	10-0-0
	ಹೆಡ್‌ಗುಮಾಸ್ತನಿಗೆ	1-0-0
28/9/29	ಮನೆಗಂದಾಯಕ್ಕೆ	10-0-0
9/10/29	ಬಸವಲಿಂಗ, ಕರಿಯಣ್ಣ-ಇವರುಗಳು ಮೈಸೂರು ದಸರಾ ನೋಡಲು ಹೋಗುವುದಕ್ಕೆ	16-0-0
4/12/29	ದರಕಾಸಿನಲ್ಲಿ ಕೊಂಡ ಹೋರಿಗಳಿಗೆ	230-0-0
	ಕಾಳುಳಿ ಹಗ್ಗ	6-12-0
	ನಾನು ಹೋಗಿ ಬಂದ ಖರ್ಚು	3-0-6
	ಜುಮ್ಲಾ ಹೋರಿಗಾಗಿ ಆಗಿರುವ ಖರ್ಚು	239-12-6
12/12/29	ಮಂಡ್ಯದಲ್ಲಿ 2 ಸೀರೆಗೆ	10-0-0
	2 ಸೀರೆಗೆ	6-4-0
	1 ಸೀರೆಗೆ	2-8-0
	1 ವಸ್ತ್ರಕ್ಕೆ	1-4-0
	ದಳ್ಳಾಳಿ	0-4-0

ಈ ಲೆಕ್ಕವನ್ನೆಲ್ಲಾ ಅವರು ತಾವೇ ಬರೆಯುತ್ತಿದ್ದರು ! ಬರಿ ಕೂಲಿಮಠದಲ್ಲಿ ಓದಿದ ಅವರು ಇಷ್ಟೆಲ್ಲಾ ಲೆಕ್ಕ ಪತ್ರ ಇಡುತ್ತಿದ್ದರೆಂದರೆ ಏನು ಹೇಳಬೇಕು !

ನಾನೂ ಲೆಕ್ಕಪತ್ರ ಇಡುತ್ತಿದ್ದೆ. ಒಂದು ದಿನದ ಲೆಕ್ಕ ಹೀಗಿದೆ :

5/4/35	ಬಾಚಣಿಗೆ	0-0-3
	ಸೀಸದ ಕಡ್ಡಿ	0-0-3
	ಮಾವಿನಹಣ್ಣು	0-0-3
	ಪಂಪರಾಮಾಯಣ	0-2-0
	ಹೋಟೇಲಿಗೆ	0-0-6

ಹೀಗೆಲ್ಲಾ ಕಷ್ಟಪಟ್ಟು ಕಾಸಿಗೆ ಕಾಸಿಗೆ ಲೆಕ್ಕ ಇಟ್ಟು ಓದಿದವ ನಾನು. ಮನೆಯ ಕಡೆ ತಾಪತ್ರಯವನ್ನು ಅರಿತು ಓದಿದೆ. ಬಿ.ಎಸ್‌ಸಿ. ಪಾಸಾಯಿತು—ಥರ್ಡ್ ಕ್ಲಾಸಿನಲ್ಲಿ. ನಾನು ಯಾವಾಗಲೂ ಸೆಕೆಂಡ್ ಕ್ಲಾಸಿನಲ್ಲಿ ಪಾಸಾಗಲಿಲ್ಲ. ಆಗ ಫಸ್ಟ್ ಕ್ಲಾಸ್ ಇತ್ತೋ ಏನೋ ಕಾಣೆ. 1933ರಲ್ಲಿ ಎಸ್. ಎಸ್. ಎಲ್. ಸಿ.ಯಲ್ಲಿ ಪಡೆದ ಮಾರ್ಕ್ಸ್ ಹೀಗಿವೆ : ಇಂಗ್ಲಿಷ್-55, ಕನ್ನಡ-62, ಚರಿತ್ರೆ, ಭೂಗೋಳ-44, ಲೆಕ್ಕ-

69, ಸೈನ್ಸ್–58, ಇತರ ವಿಷಯಗಳು 36. ಸರಾಸರಿ ಶೇಕಡ 54 ಬಂದಂತಾಯಿತು. ಇದು ಈಗಿನ ಸೆಕೆಂಡ್ ಕ್ಲಾಸ್.

ಈಚೆಗೆ ಒಂದು ವಿಸಿ ಕಾನ್ವಕೇಷನ್‌ಗೆ ಮುಖ್ಯ ಅತಿಥಿಯಾಗಿ ಹೋಗಿದ್ದೆ. ಅದನ್ನು ನೋಡಿದಾಗ ರಿಜಿಸ್ಟರ್ಡ್ ಮ್ಯಾರಿಯೇಜಿಗೂ ಶಾಸ್ತ್ರೋಕ್ತವಾಗಿ, ಚಪ್ಪರ, ನಾಗಸ್ವರ, ಧಾರೆ ಮುಹೂರ್ತ ನೆಂಟರು ಇಷ್ಟರು ಊಟ ಉಪಚಾರ ಇವುಗಳೆಲ್ಲಾ ಇದ್ದು ನಡೆಯುವ ಮದುವೆಗೂ ಎಷ್ಟು ವ್ಯತ್ಯಾಸವೋ ಅಷ್ಟು ವ್ಯತ್ಯಾಸ ಕಂಡಿತು. ಅವರವರ ಕಾಲೇಜಿನಲ್ಲಿ ಡಿಗ್ರಿ ಸರ್ಟಿಫಿಕೇಟ್‌ಗಳನ್ನು ಹಂಚುವ ಏರ್ಪಾಡು. ಒಂದು ಅಂದವಿಲ್ಲ, ಚೆಂದವಿಲ್ಲ. ಆದರೆ 1937ರಲ್ಲಿ ನಾನು ಡಿಗ್ರಿ ಪಡೆದದ್ದನ್ನು ನೋಡಲು ಎರಡು ಕಣ್ಣು ಸಾಲವು. ಸೂಟು ಧರಿಸಿ, ಟೈಕಟ್ಟಿ, ಪೇಟ ಹಾಕಿ, ಗೌನು ಧರಿಸಿದ ಪದವೀಧರರೇ ಜಗನ್ಮೋಹನ ಬಂಗಲೆಯ ತುಂಬ. ಕುಲಪತಿಗಳಾದ ಮಹಾರಾಜರು, ಉಪಕುಲಪತಿ ಇತ್ಯಾದಿ ಪರಿವಾರ ಸಮೇತ ಮೆರವಣಿಗೆಯಲ್ಲಿ ಬಂದದ್ದು, ಆಮೇಲೆ ಶಾಸ್ತ್ರೋಕ್ತವಾಗಿ ಪದವೀದಾನ ಮಾಡಿದ್ದು–ಇವೆಲ್ಲಾ ನಮ್ಮ ಜನ್ಮ ಸಾರ್ಥಕವಾಯಿತೆನ್ನುವಷ್ಟರಮಟ್ಟಿಗೆ ಇದ್ದುವು. ಹಾಕಿದ ಆ ವಿಶಿಷ್ಟ ಉಡುಪಿನಲ್ಲಿ–ಅದೆಲ್ಲಾ ಬಾಡಿಗೆಯದು–ನಾನು ಊರಲ್ಲೆಲ್ಲಾ ಅಡ್ಡಾಡಿ ಫೋಟೋ ತೆಗೆಸಿಕೊಂಡಾಗ ಪ್ರೊಫೆಸರ್ ಕೆಲಸ ಸಿಕ್ಕಿದಷ್ಟೇ ಆನಂದಪಟ್ಟೆ. ಅದೆಲ್ಲಿ, ಈಗಿನ ಮಿಡ್ಲ್‌ಸ್ಕೂಲ್ ಸರ್ಟಿಫಿಕೇಟ್ ಹಂಚಿದಂತೆ ಕಾಗದ ಹಂಚುವುದೆಲ್ಲಿ ?

ಬಿ.ಎಸ್ಸಿ. ಪಾಸಾದ ನನ್ನನ್ನು ನಮ್ಮ ನಾಡ ಜನ ದೇವಲೋಕದಿಂದ ಇಳಿದುಬಂದ ಗಂಧರ್ವನಂತೆಯೇ ಕಾಣುತ್ತಿದ್ದರು. ನನಗೆ ಕೇವಲ ಬೇಕಾದ ಸಾಹುಕಾರರೊಬ್ಬರಿಗೆ ಮಾತ್ರ ನಾನು ಡಿಗ್ರಿ ಪಡೆದದ್ದು ದಂಡ ಎನಿಸಿತು. ಏಕೆಂದರೆ, ಅವರ ಹೆಸರನ್ನು ಇಂಗ್ಲೀಷಿನಲ್ಲಿ ಹೇಳದೇ ಹೋದದ್ದು. ಈಗ ನಾನು ಒಬ್ಬ ದೊಡ್ಡ ಮನುಷ್ಯನಾದೆ. ಇಡೀ ತಾಲ್ಲೂಕಿಗೆ ಒಕ್ಕಲಿಗರಲ್ಲಿ ಎರಡನೆಯ ಗ್ರಾಜ್ಯುಯೇಟ್ ಎಂಬ ಸುದ್ದಿಯೂ ಪೇಪರಿನಲ್ಲಿ ಬಂದಿತು. ನಮ್ಮ ಊರಿನಲ್ಲಿ ಮಾಡಿದ ಒಂದು ಭಾಷಣ ಮತ್ತು ಠರಾವು ಅದರಲ್ಲಿ ಬಂದುವು. ಬಾಯ್ ಸ್ಕೌಟ್ ಸಂಸ್ಥೆಯನ್ನು ಸ್ಥಾಪಿಸಿದ್ದ ಬೇಡನ್ ಪೊವೆಲ್ ಎಂಬುವನು 'Indians have no self respect' ಎಂದು ಹೇಳಿದನೆಂದು ಪತ್ರಿಕೆಯಲ್ಲಿ ಬಂದಿತ್ತು. ಇದನ್ನು ಖಂಡಿಸಲು ನಮ್ಮ ಊರಿನಲ್ಲಿ ಒಂದು ಸಭೆ ಕರೆದಿದ್ದೆ. ಆ ಸಭೆಯಲ್ಲಿ ನಾನು ಭಾಷಣಮಾಡಿ ಆತ ಹೇಳಿದ್ದು ಶುದ್ಧ ತಪ್ಪೆಂದು ಖಂಡಿಸಿ ಒಂದು ಠರಾವು ಮಾಡಿಸಿದೆ. ಪಾಪ, ನಮ್ಮ ಹಳ್ಳಿಯವರಿಗೆ ಇದೆಲ್ಲಾ ಹೊಸದು. 'ಕೈ ಎತ್ತಿ' ಎಂದಾಗ ಎರಡು ಕೈಗಳನ್ನೂ ಎತ್ತಿ ತಮ್ಮ ಒಪ್ಪಿಗೆ ಸೂಚಿಸಿ ಚಪ್ಪಾಳೆ ತಟ್ಟಿಬಿಟ್ಟರು. ನಾನು ಪದವೀಧರನಾದುದಕ್ಕೆ ಸಾರ್ಥಕವಾಯಿತು ಎಂದುಕೊಂಡೆ.

ಹೀಗೆಲ್ಲಾ ಇದ್ದರೂ ಯಾರೂ ಹೆಣ್ಣು ಕೊಡಲೂ, ಪ್ರೊಫೆಸರ್ ಕೆಲಸ ಕೊಡಿಸಲೂ ಮುಂದೆ ಬರದೇ ಇದ್ದುದು ಆಶ್ಚರ್ಯವೇ ಸರಿ! ಒಂದು ಪದವಿ ಸಾಲದು,

ಅವರ ಜೊತೆಗೆ ಇನ್ನೊಂದು ಪಡೆದರೆ 'ಹೆಣ್ಣೋರೆಲ್ಲ ಕಾಲಿಗೆ ಬೀಳ್ತಾರೆ' ಎಂದುಕೊಂಡು ಎಲ್‌ಎಲ್.ಬಿ ಓದಲು ಪೂನಾಕ್ಕೆ ಹೋದೆ. ಆಗ ಮೈಸೂರು ಸಂಸ್ಥಾನದಲ್ಲಿ ಎಲ್ಲಿಯೂ ಲಾ ಕಾಲೇಜು ಇರಲಿಲ್ಲ. ಕೊಲ್ಲಾಪುರಕ್ಕೋ ಪೂನಾಕ್ಕೊ ಹೋಗಬೇಕಿತ್ತು. ನಾನು ಪೂನಾಕ್ಕೆ ಹೋದೆ. ಬಿ.ಎಲ್. ಓದುವುದಿದ್ದರೆ ಮದ್ರಾಸಿಗೆ ಹೋಗಬಹುದಿತ್ತು. ನನ್ನ ವಿದ್ಯಾರ್ಥಿ ದೆಸೆಯ ಅತ್ಯಂತ ಆನಂದದ ದಿನಗಳೆಂದರೆ ಪೂನಾದಲ್ಲಿ ಕಳೆದಎರಡು ವರ್ಷಗಳು. ಪುಣೆಯ ಡೆಕ್ಕನ್ ಜಂಖಾನ ಬಹು ಸುಂದರವಾದ ಪ್ರದೇಶ. ಪಶ್ಚಿಮ ಘಟ್ಟದ ಸೆರಗಿನಲ್ಲಿದ್ದ ಕಾರಣ ವರ್ಷದ ಬಹುಪಾಲು ಎಲ್ಲೆಲ್ಲೂ ಹಸಿರು ಉಕ್ಕುತ್ತಿತ್ತು, ಪಾರ್ವತಿ ಮತ್ತು ಥ್ಯಾಕರೆ ಎಂಬೆರಡು ಸುಂದರ ಗುಡ್ಡಗಳು ಕೈಬೀಸಿ ಕರೆಯುತ್ತಿದ್ದುವು. ಮೂಲನದಿ ಮತ್ತು ಮೂತ ನದಿಗಳು ಆ ಗುಡ್ಡಗಳ ಮೇಲೆ ನಿಂತು ನೋಡಿದರೆ ಪುಣೆಯ ಹೆಣ್ಣಿನ ಡಾಬು ಅಡ್ಡಿಕೆಗಳಂತೆ ಕಾಣಿಸುತ್ತಿದ್ದುವು. ಬೆಳಗ್ಗೆ ಏಳರಿಂದ ಎಂಟರವರೆಗೆ ಒಂದೇ ಗಂಟೆ ಪಾಠ. ಪ್ರಿನ್ಸಿಪಾಲ್ ಘಾರ್‌ಪೂರೆ ಒಬ್ಬರನ್ನು ಬಿಟ್ಟರೆ ಉಳಿದವರೆಲ್ಲ ಬೊಂಬಾಯಿಂದಲೋ ಧಾರವಾಡದಿಂದಲೋ ಬರುತ್ತಿದ್ದರು. ಹಿಂದೂ ಮಹಾಸಭೆ ಮುಖಂಡರಾದ ಎಲ್. ಬಿ. ಭೋಪಟ್‌ಕರ್ ಹಿಂದೂ ಲಾ ಪ್ರೊಫೆಸರ್. ಅಟೆಂಡೆನ್ಸ್ ನಾಮಕೇವಾಸ್ತೆ ಬೆಂಗಳೂರಿನ ದೇವದಾಸ್ ಎಂಬುವರಿಗೆ ರಾತ್ರಿ ನಿದ್ದೆಯೇ ಬರುತ್ತಿರಲಿಲ್ಲ. ಬೆಳಗಿನ ಹೊತ್ತು ಮಲಗಿ ಊಟದ ಹೊತ್ತಿಗೆ ಏಳುತ್ತಿದ್ದರು. ಹೀಗಿರುವಾಗ ಏಳುಗಂಟೆ ಕ್ಲಾಸಿಗೆ ಹೇಗೆ ಹೋದಾರು! ಭೊಪಟಕರ್ 'ದೇವದಾಸ್' ಎಂದು ಕೂಗಿದರು. 'Not present, Sir' ಎಂದ ಯಾರೋ ಒಬ್ಬ. 'Is he present in Poona at least ?' ಎಂದು ಕೇಳಿದರು. 'Yes Sir.' 'Then I will mark him present' ಎಂದರು. ಹೀಗೆ ಎಷ್ಟೋ ಜನ ಕ್ಲಾಸಿಗೆ ಬರದೆ ಅವರಿವರ ಕೈಯಲ್ಲಿ 'Present Sir' ಎಂದು ಹೇಳಿಸುತ್ತಿದ್ದರು. ನಾನು ಯಾವತ್ತೂ ಹಾಗೆ ಮಾಡಲಿಲ್ಲ. ಒಂದು ಗಂಟೆ ಕ್ಲಾಸು ಮುಗಿದರೆ ಸಾಕು ನಾನು ಪಾರ್ವತಿ ಗುಡ್ಡ ಸೇರುತ್ತಿದ್ದೆ. ಅಲ್ಲಿ ನಿಂತು ಪುಣೆಯ ಆ ಭವ್ಯದೃಶ್ಯವನ್ನು ನೋಡಿ ಹಿಗ್ಗುತ್ತಿದ್ದೆ. ಆ ಗುಡ್ಡದ ಮೇಲೆ ಬೆಳಗ್ಗೆ ಮತ್ತು ಸಂಜೆ ಕಳೆದ ದಿನಗಳೆಷ್ಟೊ. ಹಾಗೆಯೇ ನದಿಗೆ ಕಟ್ಟಿದ 'ಲಕಡಿ ಪೂಲ್' ಸೇತುವೆಯ ಮೇಲೆ ಕಳೆದ ದಿನಗಳೆಷ್ಟೊ. ಈ ಲಕಡಿ ಪೂಲ್ (ಕಟ್ಟಿಗೆ ಸೇತುವೆ) ಅಲ್ಲಿಗೆ ಬರುತ್ತಿದ್ದ ಹುಡುಗಿಯರ ಕಾರಣದಿಂದಾಗಿ 'ಲಡಕಿ ಪೂಲ್' ಎಂದು ಆಗಿತ್ತು.

ಈ ಆನಂದಕ್ಕೆಲ್ಲಾ ರುಚಿಯಾದ ಊಟವೂ ಕಾರಣವಾಗಿತ್ತು. ಪುಣೆಯಲ್ಲಿ ಖಾನಾವಳಿಗಳೇ ಹೆಚ್ಚು. ಹುಡುಗರೆಲ್ಲ ಬಾಡಿಗೆ ಕೋಣೆಗಳಲ್ಲಿ ಇರುತ್ತಿದ್ದರು. ಊಟಕ್ಕೆ ನಾಲ್ಕಾರು ಖಾನಾವಳಿಗಳಿದ್ದುವು. ಮೈಸೂರಿನ ಹುಡುಗರೆಲ್ಲ ದುಂಡಪ್ಪನ ಖಾನಾವಳಿಗೆ ಹೋಗುತ್ತಿದ್ದೆವು. ಗಂಡ ಹೆಂಡತಿ, ಒಬ್ಬಳು ಸಾಕು ಮಗಳು ಅಷ್ಟೇ ಇದ್ದುದು. ಒಬ್ಬರು ಇಬ್ಬರು ತಟ್ಟೆ ತೊಳೆಯುವ ಆಳುಗಳು. ಊಟ ಎಂದರೆ ಈ ಖಾನಾವಳಿಯ ಊಟ! ಮಕ್ಕಳಿಲ್ಲದ ಆ ದಂಪತಿಗಳಿಗೆ ನಾವೇ ಮಕ್ಕಳಾಗಿದ್ದೆವು. ಬಹು ಪ್ರೀತಿಯಿಂದ ಬಕರಿ

ಇತ್ಯಾದಿ ಮಾಡಿ ಬಡಿಸುವರು. ವಾರಕ್ಕೆರಡು ಫೀಸ್ಟ್. ಫೀಸ್ಟ್ ಎಂದರೆ ಬಕರಿ, ಚಪಾತಿ, ಮೂರು ನಾಲ್ಕು ತರಹ ಬಾಜಿ ಪಲ್ಯ. ಒಟ್ಟಲುಗಟ್ಟಲೆ ಬಾಸುಂದಿ, ಕೈತುಂಬ ತುಪ್ಪ, ಚಾಕುವಿನಲ್ಲಿ ಕೊಯ್ಯಬಹುದಾದಷ್ಟು ಗಟ್ಟಿ ಮೊಸರು! ತಿಂದಷ್ಟು ಕುಡಿದಷ್ಟು! ಇಷ್ಟಕ್ಕೆಲ್ಲಾ ತಿಂಗಳಿಗೆ 15 ರೂಪಾಯಿ. ನಾನು ಊರಿನಿಂದ ಎಲ್ಲಾ ಖರ್ಚಿಗೆ 50 ರೂಪಾಯಿ ತರಿಸಿಕೊಳ್ಳುತ್ತಿದ್ದೆ. 15 ರೂಪಾಯಿ ಖಾನಾವಳಿಗೆ ಕೊಟ್ಟರೆ ಇನ್ನು ಉಳಿದದ್ದು ಫೀಜು ಇತ್ಯಾದಿ ಖರ್ಚುಗಳಿಗೆ ಸಾಕಾಗುತ್ತಿತ್ತು. ರೇಸು ಗೀಸು ಅಂತ ನಾನು ಹೋಗುತ್ತಿರಲಿಲ್ಲ. ಬಹಳ ಅಂದರೆ ಲಕ್ಕೀ ರೆಸ್ಟಾರೆಂಟಿಗೆ ಹೋಗಿ ಟೀ ಕುಡಿದು ಬರುತ್ತಿದ್ದುದು. ಅಲ್ಲಿ ಕುಡಿದ ಟೀ ರುಚಿ ಇನ್ನೂ ಇದೆ. ಅದಕ್ಕೇನು ಹಾಕಿ ಮಾಡುತ್ತಿದ್ದರೊ ಏನೋ ಆ ರುಚಿಯೇ ಒಂದು ತರಹ. ಇರಾನಿ ಮನುಷ್ಯ ಇಟ್ಟ ಆ ರೆಸ್ಟೋರೆಂಟಿನಲ್ಲಿ ಕುಳಿತು ಆರು ಕಾಸು ಚಾ, ಮೂರು ಕಾಸು ಚಿವಡಾ, ಮೂರು ಕಾಸು ಪಸಿಡ್ಯೂ ಸಿಗರೇಟ್ ಎಲ್ಲಾ ಒಂದಾಣೆಯಲ್ಲಿ ಪೋಕಿಮಾಡಿ ಕನಿಷ್ಟ ಒಂದು ಗಂಟೆಯಾದರೂ ಗ್ರಾಮಾಫೋನ್ ರಿಕಾರ್ಡುಗಳನ್ನು ಕೇಳಿ ಬರುತ್ತಿದ್ದುದೇ ನನ್ನ ಹವ್ಯಾಸ. ಶಾಂತಾರಾಂ ಡೈರೆಕ್ಟ್ ಮಾಡಿದ ಮತ್ತು ಶಾಂತಾ ಆಪ್ಟೆ ಆಕ್ಟ್ ಮಾಡಿದ ಸಿನೆಮಾಗಳನ್ನು ನೋಡುವುದು ಇನ್ನೊಂದು ಹವ್ಯಾಸ. ಪ್ರಭಾತ್ ಸ್ಟುಡಿಯೋಕ್ಕೂ ಒಂದು ದಿವಸ ಹೋಗಿದ್ದೆ. ಪುಣೆಯಲ್ಲಿ ಶುಕ್ರವಾರಪೇಟೆ ಶನಿವಾರಪೇಟೆಗಳು ಹೆಸರುವಾಸಿ. ಒಂದು ದಿನ ನಾವು ಏಳೆಂಟು ಜನ ಹುಡುಗರು ಒಟ್ಟಿಗೇ ಹೋಗಿ ಅವು ಯಾವುದಕ್ಕೆ ಹೆಸರುವಾಸಿ ಎಂದು ನೋಡಿಕೊಂಡು ಬರಲು ತೀರ್ಮಾನಿಸಿದೆವು. ಸಂಜೆ ಸುಮಾರು ಐದು ಗಂಟೆಗೆ ಆ ಪೇಟೆಗಳಲ್ಲಿ ಕಾಲಿಟ್ಟಾಗ ನೂರಾರು ವೇಶ್ಯೆಯರು ಮಹಡಿ ಮನೆಗಳ ಕಿಟಕಿ ಬಾಗಿಲುಗಳಲ್ಲಿ ನಿಂತು 'ಆವ್ ಮಹಾರಾಜ್!' 'ಇಧರ್ ಆವ್ ಮಹಾರಾಜ್ !' ಎಂದು ನಾಚಿಕೆಯಿಲ್ಲದೆ ಕರೆಯಲಾರಂಭಿಸಿದರು. ನಮಗೇ ನಾಚಿಕೆಯಾಯಿತು. ಅವರ ಸಹವಾಸ ಬೇಡ ಎಂದು ಹಾಗೇ ಕಣ್ಣಿಗೆ ತೃಪ್ತಿಪಡಿಸಿ ನಮ್ಮ ಖೋಲಿಗಳಿಗೆ ಹಿಂದಿರುಗಿದೆವು.

ಪುಣೆಯಲ್ಲಿದ್ದಾಗಲೂ ನನ್ನ ದೇಶಪ್ರೇಮಕ್ಕೆ ಚ್ಯುತಿಬರಲಿಲ್ಲ. ಯಾರಾದರೂ ದೊಡ್ಡ ದೊಡ್ಡ ಮುಖಂಡರ ಭಾಷಣಗಳೆಂದರೆ ತಪ್ಪಿಸಿಕೊಳ್ಳುತ್ತಿರಲಿಲ್ಲ. 1937ರಲ್ಲಿ ಬ್ರಿಟಿಷ್ ಪ್ರಾಂತ್ಯಗಳಲ್ಲಿ ಒಂದು ಬಗೆಯ ಜವಾಬ್ದಾರಿ ಸರ್ಕಾರ ಬಂದಿತು. ಸಿ. ಆರ್. ರಾಜಗೋಪಾಲಾಚಾರಿ ಮದ್ರಾಸಿನಲ್ಲಿ ಚೀಫ್ ಮಿನಿಸ್ಟರ್, ಬಿ. ಜಿ. ಖೇರ್ ಬೊಂಬಾಯಲ್ಲಿ ಚೀಫ್ ಮಿನಿಸ್ಟರ್. ಅವರು ಪುಣೆಯಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಭಾರಿ ಸಭೆ. ಎಲ್ಲಾ ಮರಾಠಿಯಲ್ಲಿ. ಪುಣೆಯಲ್ಲಿ ಮರಾಠಿಯಲ್ಲದೆ ಶಾಸ್ತ್ರಕ್ಕಾದರೂ ಬೇರೆ ಭಾಷೆ ಸಿಕ್ಕುವುದಿಲ್ಲ. ಅಂಗಡಿ ಮುಂಗಟ್ಟುಗಳ ಹೆಸರುಗಳೆಲ್ಲಾ ಮರಾಠಿಯಲ್ಲಿ. 'ಕಾಯ್ ಪಾಯಿಜೆ ?' (ಏನು ಬೇಕು ?), 'ಕಸಾ ಕಾಯ್ ?' (ಏನು ಸಮಾಚಾರ ?) ಎಂಬ ಮಾತುಗಳನ್ನು ಬಿಟ್ಟರೆ ಬೇರೆ ಮಾತಿಲ್ಲ. ಸಭೆಯಲ್ಲಿ ನಾನು ಕಲಿತದ್ದು ಒಂದೇ ಮರಾಠಿ ಮಾತು : 'ಖಾಲಿ ಬಸಾ ಖಾಲಿ ಬಸಾ!'

(‘ಕೆಳಗೆ ಕುಳಿತುಕೊಳ್ಳಿ ಕೆಳಗೆ ಕುಳಿತುಕೊಳ್ಳಿ !’) ನಾನೊಬ್ಬನೇ ಈ ಸಭೆಗೆ ಹೋಗಿದ್ದು. ನಮ್ಮ ಹುಡುಗರು ಯಾರೂ ಬಂದಿರಲಿಲ್ಲ. ಅವರಿಗೆಲ್ಲಾ ಬೊಂಬಾಯಿ ಮಹಾಲಕ್ಷ್ಮಿ ರೇಸು ಇವುಗಳ ಕಡೆ ‘ಗ್ಯಾನ’. ಒಂದು ಸಲ ಬೊಂಬಾಯಿಗೂ ನನ್ನನ್ನು ಕರೆದುಕೊಂಡು ಹೋದರು. ಆದರೆ ನನ್ನನ್ನು ಫ್ಲೋರಾ ಫೌಂಟೆನ್ ಬಳಿ ಇದ್ದ ಒಂದು ಹೋಟೆಲಿನಲ್ಲಿ ಕುಳ್ಳಿರಿಸಿ ಮಜಾ ಮಾಡಲು ಹೊರಟು ಹೋದರು. ಏನೋ ಬೊಂಬಾಯಿ ನೋಡಿದೆನಲ್ಲಾ ಎಂದು ನನಗೆ ಸಮಾಧಾನ. ಇನ್ನೊಂದು ಸಲ ಹೆಸರಾದ ಕಲಾವಿದ ರವಿವರ್ಮ ಇದ್ದ ಸ್ಥಳ ಲೋನಾವಾಳ, ತುಕಾರಾಂ ಹುಟ್ಟಿದ ಸ್ಥಳ ಧೇನು, ಕಾರ್ಲಾ ಗುಹೆಗಳು-ಇವನ್ನೆಲ್ಲಾ ನೋಡಿಕೊಂಡು ಬಂದೆವು. ಒಟ್ಟಿನಲ್ಲಿ ಖುಷಿಯೋ ಖುಷಿ !

ಇಪ್ಪತ್ತೆರಡರ ಯುವಕ. ದಿನಬೆಳಗೆದ್ದರೆ ಓದುವ ತಾಪತ್ರಯವಿಲ್ಲ. ಅಪ್ಪನಿಂದ ತಪ್ಪದೆ 50 ರೂಪಾಯಿ. ದುಂಡಪ್ಪನ ಹೋಟಲು ಊಟ. ಆ ಪ್ರಕೃತಿಯ ಸೌಂದರ್ಯ–ಇವೆಲ್ಲಾ ಸೇರಿ ನನ್ನನ್ನು ಕವಿಯಾಗಿ ಮಾಡಿಬಿಟ್ಟವು. ನನ್ನ ‘ನಾನಾಗುವೆ ಗೀಜಗನಹಕ್ಕಿ’ ಎಂಬ ಕವನಸಂಗ್ರಹದಲ್ಲಿ ಬರುವ ಬಹುಪಾಲು ಕವಿತೆಗಳು ಪುಣೆಯಲ್ಲಿದ್ದಾಗ ಬರೆದವುಗಳು. ಆಗಲೇ ಭಾವೀ ಭಾರ್ಯೆಯ ಚಿತ್ರವನ್ನೂ ಕಂಡದ್ದು.

ಮಾವಿನ ಹೋಳ ಸರಳುಗಣ್ಣು
ಕದಪು ಅತ್ತಿ ಹಣ್ಣು
ಹಲ್ಲು ದಾಳಿಂಬೆ ಬಿತ್ತ
ಅಧರ ಮಧುರ ಗುಲಾಬಿ
ಕೂದಲು ಕೋಗಿಲೆ ಕಪ್ಪು
ಕಂಠವು ಕೋಗಿಲೆಗಿಂತಲು ಇಂಪು
ವದನ ಹಸುರು ವನ
ನಡಗೆ ಗಜಗಮನ
ಹೂ ಬಿಡುವ ಬಳ್ಳಿತನುವು
ಹಾಲ್ಕುಡಿವ ಮಗುವ ಮನವು.

ಭೇಷ್ ! ಸೊಗಸಾದ ಕವನ ! ನನಗೆ ಶಿಷ್ಯರು ಯಾರಾದರೂ ಇದ್ದಿದ್ದರೆ ಚೆನ್ನಾಗಿತ್ತು. ಅವರಿಲ್ಲದೆ ನಾನು ಕೇವಲ ಸಾಮಾನ್ಯ ಲೇಖಕನಾಗಿ ಉಳಿಯಬೇಕಾಯಿತು. ಗೊತ್ತಿಲ್ಲದವರಿಂದ ‘ಡಾ. ನಾಗೇಗೌಡ’ ಎಂದು ಕರೆಸಿಕೊಳ್ಳುವ ಬದಲು ನಿಜವಾದ ಡಾಕ್ಟರ್ ಆಗುತ್ತಿದ್ದೆ. ‘ಡಾಕ್ಟರ್ ಎಂದು ಕರೆದು ಬಿಟ್ಟರೆ ಏನಪ್ಪಾ’ ಎಂದು ಕೊಡುವವರಿಗೆ ಹೆದರಿಕೆ ಇದೆ. ಆದೇನೆಂದರೆ, ಹಾಯಿಲೆ ಕಸಾಲೆಗಳಿಗೆ ‘ಔಷಿ ಕೊಡಿ’ ಎಂದು ಜನ ಎಲ್ಲಿ ಸೀಸೆ ಹಿಡಕೊಂಡು ಬರ್‍ತಾರೊ ಅಂತ.

ಸರಸರನೆ ಪರೀಕ್ಷೆ ಮುಗಿಸಿಕೊಂಡು 112 ಇದ್ದವನು 128 ಆಗಿ ಗಂಟುಮೂಟೆ ಸಮೇತ ಭಾವಿ ಭಾರ್ಯೆಯನ್ನು ನೋಡಲು ರೈಲು ಹತ್ತಿದೆ. ಹೆಣ್ಣದ್ದಿವರೊಬ್ಬರು

ಪ್ರಾಣಕ್ಕೆ ಗಾಳ ಬೀಸಿದ್ದರು. 'ಹೀಗೇ ಬಂದು ನೋಡಿಕೊಂಡ್ಹೋಗಿ. ನಿಮ್ಮ ಮುಂದಿನ ಕೆಲಸ ಕಾರ್ಯ ಎಲ್ಲಾ ಸಮಗಿರಲಿ' ಎಂದು ಬರೆದಿದ್ದರು. ರೈಲಿನಲ್ಲಿ ಕುಳಿತು ಬರುತ್ತಿದ್ದರೆ ಅದೇ ಯೋಚನೆ. ಆಗ ಈಗಿನಷ್ಟು ರೈಲಿನಲ್ಲಿ ನೂಕು ನುಗ್ಗಾಟ ಇರಲಿಲ್ಲ. ಮೂರನೆಯ ತರಗತಿಯಲ್ಲಿ ಒಬ್ಬ ಮಧ್ಯಮ ವಯಸ್ಸಿನ ವಿದ್ಯಾವಂತ ಮಹಿಳೆ ಕುಳಿತಿದ್ದಳು. ಅವಳು ನನ್ನ ಮನಸ್ಸನ್ನು ಅರಿತೋ ಏನೋ “please take this. It is good for palpitation of the heart” ಎಂದು ದಾಳಿಂಬೆ ಹಣ್ಣು ಕೊಟ್ಟಳು. ಅದನ್ನು ತಿಂದು ಹೃದಯದ ಬಡಿತವನ್ನು ಹತೋಟಿಗೆ ತಂದು ರೈಲಿಳಿದು ಬಸ್ಸುಹತ್ತಿದೆ. ಬಸ್ಸು ಇಳಿದು ಮತ್ತೆ ಹಾಕಿದ ಗಾಡಿಯಲ್ಲಿ ಕುಳಿತೆ. ಸೀದಾ ಹೆಣ್ಣಿನ ಮನೆಗೆ ಹೋದೆ. ಆಗಲೇ ಅಳಿಯನಾದವನಂತೆ, ಊಟೋಪಚಾರ, ಹೆಣ್ಣಿನ ಜೊತೆ ಮಾತು-ಇವೆಲ್ಲಾ ನಡೆದುವು. ಸರಿ, ಎಲ್ಲಾ ಸೆಟ್ಲ್ ಆದಂತೆ ಎಂದು ಭಾವಿಸಿದ ಹೆಣ್ಣಿನ ಕಡೆಯವರು ತಲ್ಲೂಕು ಕಛೇರಿಗೆ ಕರೆದುಕೊಂಡು ಹೋಗಿ ಗೆಜೆಟ್‌ನೋಡಿ ಕೆಲಸಕ್ಕೆ ಅರ್ಜಿ ಬರೆಸಿ ಹಾಕಿಸಿದರು. ಬಸ್ಸು ಹತ್ತಿ ಊರಿಗೆ ಬಂದೆ-ಒಂದು ಕೈಯಲ್ಲಿ ಹಣ್ಣು, ಇನ್ನೊಂದು ಕೈಯಲ್ಲಿ ಕೆಲಸ ಹಿಡಿದು. ಕಾಯುತ್ತಾ ಕುಳಿತಿದ್ದರು ನಮ್ಮ ತಂದೆ. ಹೀಗೀಗೆ ಹೆಣ್ಣು ನೋಡಿಕೊಂಡು ಬರ್ತೀನಿ ಎಂದು ಮುಂಚೆಯೇ ಕಾಗದ ಬರೆದಿದ್ದೆ. ಕಂಡಕೂಡಲೇ ಒಂದೇ ಮಾತಿನಲ್ಲಿ ಮುಗಿಸಿ ಬಿಟ್ಟರು. 'ಆ ಹೆಣ್ಣು ನಿನಗೆ ಬ್ಯಾಡ. ಖಂಡಿತ ಬ್ಯಾಡ,' ಎಂದರು.

ಹೊಂಗನಸುಗಳು ಸಿಡಿದುವು ;
ಆಸೆ ಚಿತ್ರ ಮಾಸಿತು.
ದುಃಖದಂಬುಧಿಯಲ್ಲಿ
ಮನವು ಮುಳುಗೆದ್ದಿತು.
ಮನ ಬೆಂದು ಬೇಗುದಿಗೊಂಡಿತು.

ಆ ದಿನ ಇಡೀ ರಾತ್ರಿಯೆಲ್ಲಾ ನಾನು ಅತ್ತದ್ದೇ ಅತ್ತದ್ದು. ಮಧ್ಯೆ ಮಧ್ಯೆ ಹೊಸದಾಗಿ ಓದಿದ ನ್ಯಾಯಶಾಸ್ತ್ರ ನೋಡಿದ್ದೇ ನೋಡಿದ್ದು. ಅಪ್ಪನ ಮಾತಿನಂತೆ ಮದುವೆಯಾಗಬೇಕೆಂದು ಎಲ್ಲಿ ಹೇಳಿದೆ? ಹಾಗೆ ಹೀಗೆ ಎಂದು ಕೊಸರಾಡಿ ಮತ್ತೆ ಅಳುವುದಕ್ಕೆ ಶುರುಮಾಡಿದೆ. ಕಾಮ-ಪ್ರೇಮಗಳ ಬಡಿತ, ದುಡಿತ, ಕಡಿತ-ಇವನ್ನು ಅನುಭವಿಸಿ ಹಣ್ಣಾಗಿದ್ದ ನಮ್ಮ ತಂದೆ ತಮ್ಮ ನಾಲ್ಕನೆಯ ಮಡದಿಯ ಮಗ್ಗುಲಿನಿಂದ ಎದ್ದುಬಂದು ನನ್ನನ್ನು ಮನೆಯಿಂದ ದೂರ ಕರೆದುಕೊಂಡು ಹೋದರು. “ನೀನ್ಯಾಕಿಂಗೆ ಅಳ್ತಿ. ಈ ದೇಶದಲ್ಲಿ ಅದೊಂದೇಯ ಹೆಣ್ಣಿರೋದು. ಒಂದು ಗಂಡಿಗೆ ಒಂದು ಹೆಣ್ಣಿದ್ದೇ ಇದೆ. ನೀನು ಒಪ್ಪಿದ್ರೆ ನಾನು ತಂದು ಮದುವೆ ಮಾಡ್ತೀನಿ. ನಿನ್ನ ಇಷ್ಟು ಸಾಕಿ ಸಲಹಿ ಓದಿಸಿ ದೊಡ್ಡೋನ ಮಾಡಿದ ನಂಗೆ ಗೊತ್ತಿಲ್ಲವೇ ನಿಂಗೆ ಎಂತಾ

ಹೆಣ್ಣು ತರಬೇಕೂ ಅಂತ. ಅಳುಬ್ಯಾಡ. ಸುಮ್ಕಿರು"- ಹೀಗೆಲ್ಲಾ ಹೇಳಿದರು, ಬೆಳಕು ಹರಿಯಿತು. ಅಂತೆಯೇ ಹೆಣ್ಣಿನ ಚಿಂತೆಯೂ ಮರೆಯಿತು.

ಈಗ ಮೈಯೇರಿದ ಚಿಂತೆ ಎಂದರೆ ಮುಂದೇನು ಮಾಡುವುದು ಎಂಬುದು. ನನ್ನನ್ನು ಲಾಯರಾಗಿ ಮಾಡಬೇಕೆಂಬ ಮನಸ್ಸು ತಂದೆಗೆ. ಆದರೆ ನನಗೆ ಇಷ್ಟವಿಲ್ಲ. ಆದರೂ ಅವರ ಅಪೇಕ್ಷೆಯಂತೆ ಹಾಸನ ಬೆಂಗಳೂರು ಮೈಸೂರುಗಳಿಗೆ ಹೋಗಿ, ಹೆಚ್. ಬಿ. ಗುಂಡಪ್ಪಗೌಡರನ್ನು, ಹೆಚ್. ಸಿ. ದಾಸಪ್ಪನವರನ್ನು ಕಂಡೆ. ಗುಂಡಪ್ಪಗೌಡರ ಆಫೀಸಿನ ಧೂಳು ಹೊಡೆದು ಎಷ್ಟೋ ದಿನಗಳಾಗಿದ್ದವು. ಅವರು ಈಗ ರಾಜಕೀಯ ದಲ್ಲಿ ಮಗ್ನರಾಗಿದ್ದರು. ದಾಸಪ್ಪನವರನ್ನು ಕಂಡೆ. ಬಾರಯ್ಯ "ನನ್ನಾಫೀಸಿನಲ್ಲಿರು. ಮರಿಯಪ್ಪ ನಾನು ರಾಜಕೀಯ ಹಚ್ಚಿಕೊಂಡು ಆಫೀಸು ಕಡೆ ನೋಡಾಕಾಗಿಲ್ಲ. ನಮ್ಮ ರಾಮಯ್ಯ (ಆಫೀಸಿನ ಗುಮಾಸ್ತೆ) ಎಲ್ಲಾ ಹೇಳಿಕೊಡ್ತಾನೆ" ಎಂದರು. ನಾನು ತಲೆಕೆರೆದು ಕೊಳ್ಳುತ್ತಾ "ನೀವಿಲ್ದೆ ಹ್ಯಾಗೆ ಸಾರ್ ಆಫೀಸು ನಡಸೋದು" ಎಂದೆ. "ಓಹೋ, ಸೋ ಅಂದ್ರೆ ರಾಗ ಗೊತ್ತಾಗುತ್ತದೆ. ಸರ್ಕಾರಿ ಕೆಲ್ಸ ಬೇಕು ನಿನಗೆ. ಸರಿ, ನಿನ್ನಿಷ್ಟ ಇದ್ದಂಗೆ ಮಾಡು" ಎಂದರು. ಲಾಯರಾಗುವ ಯೋಚನೆ ಕೈಬಿಟ್ಟೆ. ಯಾವುದಾದರೂ ಕೆಲಸಕ್ಕೆ ಸೇರುವುದೆಂದು ತೀರ್ಮಾನಿಸಿದೆ. ಮನೆಯ ಕಡೆ ಸಂಸಾರದ ತಾಪತ್ರಯಗಳು ದಿನೇ ದಿನೇ ಹೆಚ್ಚುತ್ತಿದ್ದವು. ಸುಮಾರು ಐವತ್ತು ಅರವತ್ತು ಜನರ ದೊಡ್ಡಮನೆಯನ್ನು ಚಿಕ್ಕಮನೆ ಮಾಡುವ ಮಸಲತ್ತುಗಳು ನಡೆಯುತ್ತಿದ್ದವು. ಎಲ್ಲಕ್ಕೂ ನಮ್ಮ ತಂದೆ ತಲೆ ಕೊಡಬೇಕಾಗಿತ್ತು. ಈ ಸ್ಥಿತಿಯಲ್ಲಿ ಸಾವಿರಾರು ರೂಪಾಯಿ ಖರ್ಚುಮಾಡಿ ಓದಿದ ನಾನು ಮೂರು ಕಾಸಿಗೂ ಪ್ರಯೋಜನವಿಲ್ಲದವನಾದೆ. ಊರಿಗೆ ಗೆಜೆಟ್ ತರಿಸಿ ಕೊಳ್ಳುತ್ತಿದ್ದೆ. ಸಿ. ಆರ್. ಬಿ. ಗೆ (Central Recruitment Board) ಅರ್ಜಿಹಾಕಿದೆ. ಆರ್ಡರು ಕೂಡಲೇ ಬಂದಿತು. ಕೆಲಸ ಮುನ್ಸೀಫ್ ಕೋರ್ಟಿನ ಹೆಡ್ ಮುನ್ಸಿ. ಸಂಬಳ 48+2=50. ಎರಡು ರೂಪಾಯಿ ನನ್ನ ಎಲ್.ಎಲ್. ಬಿ. ಗೆ ಕೊಟ್ಟ ಸ್ಪೆಷಲ್ ಪೇ ಇಷ್ಟು ಕೊಟ್ಟು ಕಳಿಸಿದ್ದು ಎಲ್ಲಿಗೆ ? ನರಸಿಂಹರಾಜಪುರಕ್ಕೆ! ಬಸ್ಸು ಹತ್ತಿ, ದೊಡ್ಡ ರೈಲಿನ ಮೇಲೆ ಕುಳಿತು, ಆಮೇಲೆ ಚಿಕ್ಕರೈಲಿನಲ್ಲಿ ಆ ಮಹಾಪುರಕ್ಕೆ ಹೋದೆ. ತರೀಕೆರೆ ಯಿಂದ ಆ ಮಹಾಪುರ ಕೇವಲ 25 ಮೈಲಿ. ಅಷ್ಟು ದೂರದ ಪ್ರಯಾಣಕ್ಕೆ ಒಂದು ರಾತ್ರಿ ಹಿಡಿಯಿತು. ಬಹಳ ದಿನಗಳಿಂದ ಖಾಲಿ ಬಿದ್ದಿದ್ದ ಸ್ಥಾನ ಭರ್ತಿಮಾಡಲು ಹೋಗುತ್ತಿದ್ದ ನನ್ನನ್ನು ಕುಡಿದ ನೀರು ಅಳ್ಳಾಡದಂತೆ ಕರೆದುಕೊಂಡು ಹೋಯಿತು ಆ ರೈಲು. ರೈಲಿನಿಂದ ಇಳಿದು ಕೋರ್ಟಿನ ಅಮೀನರಿಂದ ಸ್ವಾಗತಿಸಿಕೊಂಡು ಒಕ್ಕಲಿಗರ ಹಾಸ್ಟೆಲಿನಲ್ಲಿ ಪೆಟ್ಟಿಗೆ ಇಟ್ಟು ಕೋರ್ಟಿಗೆ ಹೋಗಿ ಮುನ್ಸೀಫರಿಗೆ ಕೈಮುಗಿದು ಚಾರ್ಜ್ ವಹಿಸಿಕೊಂಡೆ. ಅದೇ ದಿನ ಎರಡನೆಯ ಮಹಾಯುದ್ಧವೂ ಆರಂಭವಾಯಿತು !

ನರಸಿಂಹರಾಜಪುರಕ್ಕೆ 'ಎಡೆಹಳ್ಳಿ' ಎಂದು ಮೊದಲಿದ್ದ ಹೆಸರು. ಹಳ್ಳಿಯಂತಿದ್ದ ಆ ಊರು. (ಜನಸಂಖ್ಯೆ ಕೇವಲ ಎರಡೋ ಎರಡೂವರೆ ಸಾವಿರವೋ ಇತ್ತು—ಮಲೇರಿಯ

ದಲ್ಲಿ ಸತ್ತುಕೆಟ್ಟು ಹೋದಮೇಲೆ) ಭೋರೆಂಬ ಮಳೆ, ಜೀಯೆಂಬ ಸೊಳ್ಳೆ, ಹೆಂಗಸರಷ್ಟೇ ಅಲ್ಲ ಗಂಡಸರೂ ಗರ್ಭಿಣಿಯರಾಗುತ್ತಿದ್ದುದ್ದು-ಇವನ್ನೆಲ್ಲಾ ಗಮನಿಸಿ ಆಗಿನ ಯುವರಾಜ ರಾದ ಕಂಠೀರವ ನರಸಿಂಹರಾಜ ಒಡೆಯರ ಹೆಸರನ್ನು ಆ ಊರಿಗೆ ಇಟ್ಟಿದ್ದರು. 'ತಪ್ಪು ಮಾಡಿದೋರನ್ನ ಕೊಪ್ಪಕ್ಕಾಕು' ಎಂದು ಆಗ ತಪ್ಪು ಮಾಡಿದ ಸರ್ಕಾರಿ ನೌಕರರಿಗೆ ಕೊಡುತ್ತಿದ್ದ ಶಿಕ್ಷೆ. ನರಸಿಂಹರಾಜಪುರವೂ ಮತ್ತೊಂದು ಕೊಪ್ಪ ! ನಾನು ಯಾವ ತಪ್ಪುಮಾಡಿದ್ದೆ ನೀವೇ ಹೇಳಿ ?

ಊರಿಗೆ ತಕ್ಕ ಕೋರ್ಟು. ನಾಲ್ಕೈದು ಜನ ಲಾಯರುಗಳು-ಪೂಟ್‌ಲಾಯರು ಗಳು ಸೇರಿ. ಮುನ್ಸೀಫರು ಮತ್ತು ಡೆಪ್ಯೂಟಿ ಅಮಲ್ದಾರ್ ಬಿಟ್ಟರೆ ನಾನೇ ದೊಡ್ಡ ಅಧಿಕಾರಿ ಅಲ್ಲಿಗೆ-ಹಾಳೂರಿಗೆ ಉಳಿದೋನೆ ಗೌಡ ಆದಂತೆ. ಕೋರ್ಟಿನಲ್ಲಿ ಮೂರೋ ನಾಲ್ಕೋ ಗುಮಾಸ್ತರು. ಅವರಿಗೆ ಹೆಡ್ ನಾನು. ಈ ಹುದ್ದೆಯ ಪರೀಕ್ಷೆ ಮೊದಲದಿನವೇ ನಡೆದು ಹೋಯಿತು. ದಾವಾ ದಾಖಲು ಮಾಡಲು, ರಿಟನ್ ಸ್ಟೇಟ್‌ಮೆಂಟ್ ಫೈಲ್ ಮಾಡಲು, ಅಫಿಡವಿಟ್ ಮಾಡಿಸಲು, ಸಾಕ್ಷಿ ಸಮ್ಮನ್ ಫೀಜು ಕಟ್ಟಲು ಲಾಯರುಗಳು ಹೆಡ್‌ಮುನ್ಷಿ ಹತ್ತಿರ ಬರಬೇಕು. ನಾನು ಸೀಟಿನಲ್ಲಿ ಕುಳಿತ ದಿನವೇ ಒಂದು ದಾವಾ ದಾಖಲ್ಮಾಡಲು ವಕೀಲರು ಬಂದರು. ಏನೇನು ನೋಡಬೇಕು ಎಂದು ಅನುಭವಸ್ಥರಾದ ಗುಮಾಸ್ತರೊಬ್ಬರು ಹೇಳಿಕೊಟ್ಟರು. ಅದರಂತೆ ಮಾಡಿದೆ. ಕೋರ್ಟು ಸೀಲು ಹಾಕಿ ದಾವೆಯನ್ನು ಆ ಕಡೆ ಇಟ್ಟೆ. ವಕೀಲರು ನಿಂತೇ ಇದ್ದರು. ಅದೇ ಅನುಭವಸ್ಥ ಗುಮಾಸ್ತರು 'ಸಾರ್, ನಿಮ್ಮ ಬಲಗಡೆ ಡ್ರಾಯರ್ ಎಳೆದಿಡಿ' ಎಂದರು. ನಾನು ಎಳೆದೆ. ಅದರಲ್ಲಿ ಐದುರೂಪಾಯಿ ನೋಟು ಹಾಕಿ ವಕೀಲರು ಹೊರಟು ಹೋದರು. "ಇದೇನು?" ಎಂದು ಕೇಳಿದೆ ಗುಮಾಸ್ತರನ್ನು. "ಇದು ಮಾಮೂಲು ಸಾರ್" ಎಂದರು. ಯೋಚಿಸಿದೆ. ಊರಿನಿಂದ ಬರುವಾಗ ನಮ್ಮ ತಂದೆ "ನಾಗೂ, ನೀನು ನನ್ನ ಕಷ್ಟ ನೋಡಿದ್ದೀ. ನಿನ್ನ ಕೈಲಾದಷ್ಟು ಕಳಿಸ್ತಾ ಇರು" ಎಂದು ಕಣ್ಣಲ್ಲಿ ನೀರುಹಾಕಿದ್ದರು. ಆದರೆ ತಂದೆಯ ಕಣ್ಣೀರೂ ನನ್ನ ನಿಸ್ಪೃಹತೆಯನ್ನು ಬದಲಾಯಿಸಲಿಲ್ಲ. ಗುಮಾಸ್ತರಿಗೆ ಹೇಳಿದೆ. "ಇದನ್ನೆಲ್ಲಾ ನೀವೇ ಹಂಚಿಕೊಳ್ಳಿ. ನನಗೆ ಬ್ಯಾಡ" ಎಂದು. "ಇರಲಿ, ಇಟ್ಟುಕೊಳಿ ಸಾರ್, ಚಳಿಜ್ವರಕ್ಕೆ ಔಷ್ದಿ ಖರ್ಚಿಗಾದ್ರೂ ಆಯ್ತದೆ !" "ಬ್ಯಾಡಿ, ಖಂಡಿತ ಬ್ಯಾಡಿ. ನೀವೇ ತಕ್ಕೊಳ್ಳಿ. ನಿಮ್ಮ ಮಾಮೂಲಿಗೆ ನಾನು ಅಡ್ಡಿ ಬರೋದಿಲ್ಲ." ಅಂದಿನಿಂದ ಮಾಮೂಲಿನ ಡ್ರಾಯರ್ ಮುಚ್ಚಿಬಿಟ್ಟೆ. ಇಷ್ಟೆಲ್ಲಾ ಗೊತ್ತಿದ್ದರೂ ಕೋರ್ಟಿನ ಜವಾನನೊಬ್ಬ ಖಾಲಿಯಾದ ದಫೇದಾರನ ಕೆಲಸಕ್ಕೆ ತನ್ನನ್ನು ನೇಮಿಸಬೇಕೆಂದು ಹತ್ತು ರೂಪಾಯಿ ಕೊಡಲು ಬಂದ. ಅಲ್ಲೇ ಒಂದು ಸೇದೋ ಹಗ್ಗ ಬಿದ್ದಿತ್ತು. ಅದನ್ನು ತೆಗೆದುಕೊಂಡು ಅವನನ್ನು ಕಂಬಕ್ಕೆ ಕಟ್ಟಲು ಹೋದೆ. ಅವನು ಓಡಿ ಹೋದ. ಆದರೂ ಅವನು ದಫೇದಾರನಾದ.

ನಾನು ಏಕಾಂಗಿಯಾದೆ. ಕೋರ್ಟು ಮುಗಿಯಿತೆಂದರೆ ಸುತ್ತಮುತ್ತ ಕಾಡಿನಲ್ಲಿ

ಅಲೆಯಲು ಹೋಗುತ್ತಿದ್ದೆ. ಹಾಸ್ಟೆಲಿನ ಬಡಹುಡುಗರ ಊಟ ಏನೆಂದು ಹೇಳುವುದು! ರಕ್ತಭೇದಿ ಕಾಣಿಸಿಕೊಂಡಿತು. ನನ್ನ ಕಷ್ಟ ನೋಡಿ ಕೋರ್ಟಿನಲ್ಲಿ ಗುಮಾಸ್ತರಾಗಿದ್ದ ನಮ್ಮ ಕಡೆಯವರೊಬ್ಬರು ಅವರ ಮನೆಗೆ ಕರೆದುಕೊಂಡು ಹೋಗಿ ಉಪಚಾರ ಮಾಡಿದರು, ಅಲ್ಲಿಯೇ ಇದ್ದಳು ನನ್ನ ಭಾವೀ ಭಾರ್ಯೆ ! 'Marriages are made in Heaven!' ಎಂಬ ಮಾತಿಗೆ ಹಳ್ಳಿಯವರು 'ಯಾರ ಹೆಂಡ್ತಿ ಯಾರು ಮದುವೆ ಯಾಗಾಕಾದತ್ತು !' ಎನ್ನುತ್ತಾರೆ. ತಂದೆ ನನಗೆ ಹೆಣ್ಣು ಹುಡುಕಲು ಆರಂಭಿಸಿದ್ದರು. ಗಂಟುನಂಟು ಎರಡೂ ಉಳೀಬೇಕು ಎಂಬಂತೆ ಹೆಣ್ಣೂ ಚೆನ್ನಾಗಿರಬೇಕು, ಒಳ್ಳೇ ಕೆಲಸ ಕೊಡಿಸೋರು ಆಗಬೇಕು – ಈ ಉದ್ದೇಶ ಇಟ್ಟುಕೊಂಡು ಬೆಂಗಳೂರು, ಮೈಸೂರು, ಹಾಸನಗಳಿಗೆ ಹೋಗಿಬಂದರಂತೆ. ಹೆಣ್ಣಿನ ರೂಪಲಕ್ಷಣಗಳನ್ನು ನೋಡುವುದರಲ್ಲಿ ನಾಲ್ಕು ಮದುವೆಯಾದ ಅವರು ಭಾರಿ ಅನುಭವಸ್ಥರಾಗಿದ್ದರು. ಒಂದು ಹೆಣ್ಣು ನೋಡಿ (ಅದು ದೊಡ್ಡ ಅಧಿಕಾರಿ ಮನೆ ಹೆಣ್ಣು) 'ಅದು ಅಂಚೀಕಡ್ಡಿಗೆ ಅರಬೆ ಸುತ್ತಿದಂಗದ' ಎಂದು ಊರಿನ ಅವರ ಆಪ್ತರಲ್ಲಿ ಹೇಳಿದರು. ಇನ್ನೊಂದು ಹೆಣ್ಣು ನೋಡಿ (ಆಕೆ ಅರಮನೆ ಡಾಕ್ಟರ ಮಗಳಂತೆ) 'ಉಫೆಂದ್ರೆ ಹಾರಿಹೋಗಂಗವ್ಳೆ' ಎಂದು ಶಹಭಾಷ್ ಕೊಟ್ಟರು. ಬೆಂಗಳೂರಿನಲ್ಲಿ ಇನ್ನೊಬ್ಬರು ಭಾರಿ ಆಫೀಸರ ಮನೆ ಮೆಟ್ಟಿಲಹತ್ತಿ ಹೆಣ್ಣು ನೋಡದೆಯೇ ಹಿಂದಿರುಗಿಬಂದು 'ಅವಳು ನಮ್ಮನೆ ಹಿಟ್ಟು ಮಾಡ್ಯಾಳೆ !' ಎಂದು ಕೈಬಿಟ್ಟರು, ಹಿಟ್ಟುಮಾಡುವಂತಹ ಸುಲಕ್ಷಣವಾದ ಹೆಣ್ಣು ಅವರಿಗೆ ಒಪ್ಪಿಗೆಯಾದದ್ದು ಒಬ್ಬ ಶೇಕದಾರರ ಮಗಳು. ನಾನು ನರಸಿಂಹರಾಜಪುರ ದಲ್ಲಿ ಯಾರ ಮನೆಯಲ್ಲಿದ್ದೆನೋ ಆ ಮನೆಯವರ ತಂಗಿ ! ಋಣಾನುಬಂಧ ಅಂದರೆ ಇದು. ತಂದೆ ಆಗ ದೊಡ್ಡದಾಗಿ ಸೇಂದಿಬಾಬು ಮಾಡುತ್ತ, ಸೆಲ್ಲೀಗೆರೆಯಲ್ಲಿ ಮನೆಮಾಡಿ ಕೊಂಡು ತಮ್ಮ ಕಿರೀಹೆಂಡತಿಯ ಜೊತೆ ಇದ್ದರು. ಅಲ್ಲಿಗೇ ಬಂದಳು ಆ ಹೆಣ್ಣು, 'ನನ್ನ ನೋಡಿ' ಎಂದು. ನೋಡಿದೆ. ಒಪ್ಪಿಗೆಯಾಯ್ತು. ಅವಳೇ ನಮ್ಮೂರಿಗೆ ಬಂದು ಮದುವೆಮಾಡಿಕೊಂಡು ನರಸಿಂಹರಾಜಪುರಕ್ಕೆ ಕರೆದುಕೊಂಡು ಹೋದಳು.

ನನ್ನ 'ಹನೀಮೂನ್' ಎಲ್ಲಾ ಚಿಟ್ಟು, ನರಸಿಂಹರಾಜಪುರದಲ್ಲಿ ಆರಂಭವಾಯಿತು. ಆ ಊರಿನಲ್ಲಿ ಮನೆ ಎಲ್ಲಿ ಸಿಕ್ಕಬೇಕು ! ಒಬ್ಬ ಅನುಕೂಲಸ್ಥರಾದ ವಕೀಲರು ಅವರ ತೋಟದಲ್ಲಿ ವಾಸಮಾಡುತ್ತಿದ್ದರು. ಅವರು ನನಗಾಗಿ ಒಂದು ಗುಡಿಸಲು ಕಟ್ಟಿಸಿ ಕೊಟ್ಟರು. ಆಗ ಸಿಮೆಂಟ್‌ಗಿಮೆಂಟುಗಳ ಉಪಯೋಗ ಕಡಮೆ. ಮಂಚಗಿಂಚಗಳಿರಲಿಲ್ಲ. ಇನ್ನೂರು ಇಂಚು ಮಳೆಯ ಕಾರಣ ನೆಲದಲ್ಲಿ ಜಲ ಉಕ್ಕಿಬರುತ್ತಿತ್ತು. ಅದರ ಮೇಲೆ ತೆಂಗಿನ ತಟ್ಟಿ ಹಾಸಿ, ಮಾವ ಕೊಟ್ಟ ಹಾಸಿಗೆ ಹಾಕಿ, ಸೊಳ್ಳೆಗಳ ಪರದೆಯಲ್ಲಿ ಅವರ ಮಗಳೊಡನೆ ನನ್ನ ಸಂಸಾರ ಆರಂಭವಾಯಿತು.

ನಾನು ಹೇಗಿದ್ದೇನೆಂದು ನೋಡಲೊ ಎಂಬಂತೆ ಚೀಫ್ ಜಸ್ಟೀಸ್ ರೈಲಿ ನರಸಿಂಹರಾಜಪುರಕ್ಕೆ ಇನ್‌ಸ್ಪೆಕ್ಷನಿಗೆ ಬಂದರು. ಒಂದು ವರ್ಷದ ಮೇಲೆ ಕೇಸುಗಳು

ಪೆಂಡಿಂಗ್ ಇದ್ದರೆ ಅವರಿಗೆ ಆಗುತ್ತಿರಲಿಲ್ಲ. ಕೇಸುಗಳ ವಿಲೇವಾರಿ ಮುನ್ಸೀಫರದು, ನನ್ನದಲ್ಲ. ಹಲವಾರು ಕೇಸುಗಳು ಒಂದು ವರ್ಷಕ್ಕೂ ಹೆಚ್ಚು ಕಾಲ ಪೆಂಡಿಂಗ್ ಇದ್ದುವು. ಇನ್‌ಸ್ಪೆಕ್ಷನ್ ಮುಗಿಸಿ ಹೊರಡುವಾಗ 'Sir I have recently married, I would like to have a change to a better place' ಎಂದೆ. 'you will have it, young man. This court requires better men' ಎಂದು ಹೇಳಿ ಹೋದವರು ನನಗೆ ಮತ್ತು ಮುನ್ಸೀಫರು ಇಬ್ಬರಿಗೂ ಅಲ್ಲಿಂದ ವರ್ಗಮಾಡಿದರು. ನನಗೆ ಚಿಕ್ಕಮಗಳೂರಿಗೆ ವರ್ಗವಾಯಿತು. ಅಲ್ಲಿ ಹೋಗಿ ಚಾರ್ಜು ತೆಗೆದುಕೊಂಡು. ಇನ್ನೂ ಹೆಚ್ಚು ಕಾಲ ಅದೇ ಕೆಲಸದಲ್ಲಿದ್ದರೆ ಅದರಲ್ಲೇ ಕಾಲಹಾಕಬೇಕಾಗುತ್ತೆ ಎಂದು ಎಂ.ಸಿ.ಎಸ್. ಪರೀಕ್ಷೆಗೆ ಕುಳಿತೆ. ಹಳ್ಳಿಯ ಹುಡುಗನೊಬ್ಬನ ಮೊದಲ ಸಾಹಸ ಇದು. ಈಗ ಕೆ. ಎ. ಎಸ್. ಪರೀಕ್ಷೆಗೆ ಏಳೆಂಟು ಸಾವಿರ ಕುಳಿತುಕೊಳ್ಳುತ್ತಾರೆ ಈಗ ಆಗ ಕುಳಿತವರು 43 ಮಾತ್ರ. ಆ 43 ಜನರ ಹೆಸರುಗಳಲ್ಲಿ ಹಳ್ಳಿಯವನ ಹೆಸರು ಒಂದೇ ಒಂದು ! ಅದು ನನ್ನದು !

ಪರೀಕ್ಷೆಗೆ ಕುಳಿತಿದ್ದ ಅನೇಕರ ಹೆಸರುಗಳು ಈಗ ಎಲ್ಲರಿಗೂ ಗೊತ್ತಿವೆ. ಜಿ. ವೆಂಕಟಕೃಷ್ಣರಾವ್ (ಈಗ ಜಿ.ವಿ.ಕೆ. ರಾವ್, ಎಂ. ಎಸ್. ಶಂಕರರಾವ್, ಎಂ.ಎ. ಶ್ರೀರಂಗರಾಜನ್ (ಎಂ.ಎ.ಎಸ್. ರಾಜನ್), ಎ.ಎಸ್. ರಾಮಚಂದ್ರ, ಡಿ.ಜೆ. ಬಾಲ ರಾಜ್, ಎಂ.ವಿ. ರಾಜಗೋಪಾಲ್, ಎಸ್.ಪಿ. ನಾರಾಯಣಶೆಟ್ಟಿ, ಎಸ್. ಸುಬ್ಬಾಭಟ್ಟ, ಎಂ.ಕೆ. ಶ್ರೀನಿವಾಸಯ್ಯಂಗಾರ್ (ಹೈಕೋರ್ಟು ಜಡ್ಜ್) ಇತ್ಯಾದಿ. ನನ್ನ ಧೈರ್ಯಕ್ಕೆ ನನಗೇ ಆಶ್ಚರ್ಯವಾಗುತ್ತಿದೆ. ಫಲಿತಾಂಶ ಹೊರಬಿತ್ತು. ಮುದ್ರಿಸಿದ 'Confidential Consolidated Marks List-1940'. ಇದು ಈಗಲೂ ನನ್ನ ಬಳಿ ಇದೆ, Compulsory Groupನಲ್ಲಿ ಶೇಕಡ 40ಕ್ಕೂ ಹೆಚ್ಚು ಅಂಕಗಳನ್ನು ತೆಗೆದುಕೊಂಡವರದು ಒಂದು ಪಟ್ಟಿ: ಅದಕ್ಕಿಂತ ಕಡಮೆ ತೆಗೆದುಕೊಂಡವರದು ಇನ್ನೊಂದು ಪಟ್ಟಿ. ಮೊದಲನೆಯ ಪಟ್ಟಿಯಲ್ಲಿ 34 ಜನ: ಎರಡನೆಯ ಪಟ್ಟಿಯಲ್ಲಿ 9 ಜನ. ನನ್ನ ಹೆಸರು ಮೊದಲನೆಯ ಪಟ್ಟಿಯಲ್ಲಿ. ನನ್ನ ರ‍್ಯಾಂಕ್ 25. ಪಡೆದ ಅಂಕಗಳು ಹೀಗಿವೆ :

Compulsory Subjects : (Max. marks 150)

Essay	77½
General knowledge	69
General English	50
English Literature (prescribed books)	61
Interview	52
	309½

Optional subjects

Kannada Language and Literature	300ಕ್ಕೆ	$169\frac{1}{2}$
General Economics	200ಕ್ಕೆ	72
Sociolology	100ಕ್ಕೆ	$60\frac{1}{2}$
		302

Total $309\frac{1}{2} + 302 = 611\frac{1}{2}$

Interview, Daly Memorial Hall ನಲ್ಲಿ ನಡೆಯಿತು. ಆಗ ಯಾರಾರು ಇದ್ದರೋ ಮರೆತುಹೋಗಿದೆ. 'Where is Korea ?' ಎಂಬ ಒಂದು ಪ್ರಶ್ನೆ ಜ್ಞಾಪಕವಿದೆ. ಆಗ ಕೊರಿಯಾ ಯುದ್ಧ ನಡೆಯುತ್ತಿತ್ತು. ಪೇಪರು ಓದಿಕೊಂಡು ಭೂಪಟ ನೋಡಿದ್ದರೆ ಖಚಿತವಾಗಿ ಹೇಳಬಹುದಿತ್ತು. ನಾನು 'ಆಸ್ಟ್ರೇಲಿಯಾದ ಮೇಲೆ ಇದೆ' ಎಂದೆ. 'ಆಸ್ಟ್ರೇಲಿಯಾದ ಮೇಲೆ ಎಷ್ಟು ದೂರದಲ್ಲಿದೆ ?' ನಾನು ಕ್ಷಣ ಕಾಲ ಯೋಚಿಸಿದೆ. ಆಸ್ಟ್ರೇಲಿಯಾದ ಮೇಲೆ 'K' ಎಂಬ ಅಕ್ಷರದಂತಿರುವ ಒಂದು ದ್ವೀಪ ಇದೆ. ಅದೇ ಇರಬೇಕೆಂದು 'ಅಲ್ಲಿಂದ ಸ್ವಲ್ಪ ದೂರದಲ್ಲಿದೆ' ಎಂದೆ. 'ಅದು ದ್ವೀಪಾನೋ ?' 'ಹೌದು'. 'ಸರಿ, ಹೋಗಿ' ಎಂದರು. ಒಂದು ಭೂಪಟ ನೋಡಿದರೆ ನಾನು ಹೇಳಿದ್ದು ಸೆಲಿಬೀಸ್ ದ್ವೀಪ (Celebes Island). ಕೊರಿಯಾ ಇರೋದು ಇನ್ನೂ ಮೇಲಕ್ಕೆ ಜಪಾನಿಗೆ ಎದುರಾಗಿ ! ಉತ್ತರ ತಪ್ಪಾಗಿತ್ತು. Interviewನಲ್ಲಿ ಶೇ. 35 ಅಂಕ ಬಂದದ್ದು ಸರಿ. ಬೇರೆ ಗ್ರಾಮೀಣ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದ್ದರೆ ಹೆಚ್ಚು ಅಂಕ ಪಡೆಯುತ್ತಿದ್ದೆ ಎಂದು ಕಾಣುತ್ತೆ. ಈಚೆಗೆ ನಾನು ಪಿ.ಎಸ್.ಸಿ. ಮೆಂಬರಾದಾಗ ಒಬ್ಬನನ್ನು 'ದನಕ್ಕೆ ಮೇಲೆಷ್ಟು ಹಲ್ಲು ? ಕೆಳಗೆಷ್ಟು ಹಲ್ಲು ?' ಎಂದು ಕೇಳಿದೆ. ನಮ್ಮ ಮೆಂಬರೊಬ್ಬರಿಗೆ – ಅವರಿಗೆ ಮೇಲೆ ಕೆಳಗೆ ಎಲ್ಲಾ ಹಲ್ಲಿದ್ದುವು — ದನ ನೋಡಿದ್ದು ಅಪರೂಪ. ಅದರಲ್ಲೂ ಹಲ್ಲು ಹಿಡಿದು ನೋಡಿದ್ದು ಇಲ್ಲವೇ ಇಲ್ಲ. 'I think this is a misleading question. Every animal has teeth in both the jaws' ಎಂದು ಹೇಳಿದ ಕಾರಣ, Candidate ಮುಂದೆ ನಮ್ಮ ನಮ್ಮಲ್ಲಿ ವಾಗ್ವಾದ ನಡೆಯಬಾರದೆಂದು ಬೇರೊಂದು ಪ್ರಶ್ನೆ ಹಾಕಿದೆ. ಈಗಲೂ ನಮ್ಮ ಮುಂದೆ ಬರುವ ಹುಡುಗರಿಗೆ ನನಗೆ 40 ವರ್ಷದ ಹಿಂದೆ ಹಾಕಿದಂತಹ ಪ್ರಶ್ನೆಗಳನ್ನೇ ಹಾಕುತ್ತಿದ್ದೇವೆ. ನಮಗೆ ವಿಷಯ ತಿಳಿಯದಿದ್ದರೂ ಏನೇನೊ ಕೇಳಿ ನಮ್ಮ ಪ್ರತಿಭೆಯನ್ನು ತೋರಿಸುತ್ತೇವೆ. ಆದರೆ ಹುಡುಗ ಹೇಳಿದ ಉತ್ತರ ಸರಿಯೇ ಅಲ್ಲವೇ ಹೇಳುವ ಬಂಡವಾಳ ನಮ್ಮಲ್ಲಿಲ್ಲ. ಏನು ಮಾಡುವುದು ? 'ಕೇಳೋನಿಗೆ ಹೇಳೋನು ಅಡಿಯಾಳು !'

ಇಂಟರ್‌ವ್ಯೂ ಬಿಟ್ಟರೆ ನನಗೆ ಕೈಕೊಟ್ಟದ್ದು ಇಂಗ್ಲಿಷ್ ; ಎತ್ತಿದ್ದು ಕನ್ನಡ. ಕನ್ನಡ ನನ್ನ ಆಪ್ಷನಲ್ ವಿಷಯ ಆಗಿರಲಿಲ್ಲ-ಬಿ.ಎಸ್‌ಸಿ.ನಲ್ಲಿ. ಅದು ನನ್ನ ದ್ವಿತೀಯ ಭಾಷೆ ಆಗಿತ್ತು. ಅಷ್ಟೆ. ಆದರೂ ಕನ್ನಡ ಪುಸ್ತಕಗಳನ್ನು ಓದುತ್ತಿದ್ದೆ. ಹೀಗಾಗಿ ಎಂ.ಸಿ.ಎಸ್. ಪರೀಕ್ಷೆಯಲ್ಲಿ ಶೇ 57 ತೆಗೆಯಲು ಕಾರಣವಾಯಿತು.

ಆಗ ಮೊದಲನೆಯ ಒಬ್ಬರನ್ನೋ ಇಬ್ಬರನ್ನೋ ಅಸಿಸ್ಟೆಂಟ್ ಕಮಿಷನರುಗಳಾಗಿ ತೆಗೆದುಕೊಳ್ಳುವ ಕ್ರಮ ಇತ್ತು. ಹೀಗಾಗಿ ಜಿ.ಪಿ.ಕೆ. ರಾವ್ ಮತ್ತು ಎಂ.ಎಸ್. ಶಂಕರರಾವ್ ಈ ಇಬ್ಬರನ್ನು ನೇಮಕ ಮಾಡಿದರು. ಪರೀಕ್ಷೆಗೆ ಕುಳಿತ ಅಥವಾ ಕುಳಿತುಕೊಳ್ಳದ ಒಬ್ಬಿಬ್ಬರನ್ನು ಅಸಿಸ್ಟೆಂಟ್ ಕಮಿಷನರುಗಳಾಗಿ ನಾಮಿನೇಷನ್ ಮಾಡುತ್ತಲೂ ಇದ್ದರು. ಅದಕ್ಕೂ ನಾನು ಪ್ರಯತ್ನಪಟ್ಟೆ. ಜಯಚಾಮರಾಜ ಒಡೆಯರು ಆಗ ಮಹಾರಾಜರಾಗಿದ್ದರು. ಅವರು ಯುವರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್‌ನಲ್ಲಿ ಓದುತ್ತಿದ್ದಾಗ ನಾನು ಮಹಾರಾಜ ಕಾಲೇಜಿನಲ್ಲಿ ಬಿ.ಎಸ್‌ಸಿ. ಓದುತ್ತಿದ್ದೆನಷ್ಟೆ. ಆಗ ಅವರು ಹಳೆಯ ಹುಡುಗರನ್ನು ಟೀಗೆ ಕರೆದು ಅವರ ಪರಿಚಯ ಮಾಡಿಕೊಳ್ಳುವ ಕ್ರಮ ಇಟ್ಟುಕೊಂಡಿದ್ದರು. ಆ ಟೀಗೆ ಹೋದವರಲ್ಲಿ ನಾನೂ ಒಬ್ಬ. 'ದಂಡಿನಲ್ಲಿ ಕಂಡ್ಯಾ ತುಂಡುಗಂಬೋನ' ಎಂಬಂತೆ ಅವರಿಗಲ್ಲಿ ನನ್ನ ಜ್ಞಾಪಕ ಇರಬೇಕು, ಅಷ್ಟೊಂದು ಜನರಲ್ಲಿ. ಆದರೂ ತುಂಡುಗಿರುವವನು ನಾನೊಬ್ಬನೇ ಇದ್ದದ್ದು ಎಂದು ಹೇಳಿ ಅವರಿಗೆ ಒಂದು ಮನವಿ ಕಳುಹಿಸಿಕೊಟ್ಟೆ. ಅದರ ಪರಿಣಾಮ ಏನಾಯಿತೆಂದರೆ, ನನಗೆ ಇದ್ದಕ್ಕಿದ್ದಂತೆ ಒಂದು ದಿನ ಚೀಫ್ ಸೆಕ್ರೆಟರಿ ಟಿ.ಟಿ. ಕೇಶವಯ್ಯಂಗಾರ್ ಅವರಿಂದ ತಮ್ಮನ್ನು ಇಂತಹ ದಿವಸ ಇಷ್ಟು ಹೊತ್ತಿಗೆ ನೋಡಬೇಕೆಂಬ ಒಂದು ಕಾಗದ ಬಂದಿತು. ಆಗ ಒಕ್ಕಲಿಗರ ಹಾಸ್ಟೆಲ್‌ನಲ್ಲಿ ಇಳಿದುಕೊಂಡಿದ್ದೆ. ಆ ಪತ್ರ ನೋಡಿ ನನಗೆ ಆಶ್ಚರ್ಯವಾಯಿತು. ಯಾರಿಗೂ ತೋರಿಸದೆ ಅದನ್ನು ಇಟ್ಟುಕೊಂಡು ಆ ದಿನ-ಅದು ಶುಕ್ರವಾರ-ಅವರನ್ನು ಬೆಳಗ್ಗೆ ಒಂಬತ್ತು ಗಂಟೆಗೆ ಅಠಾರಾ ಕಛೇರಿಯಲ್ಲಿ ಕಂಡೆ. ಅಠಾರಾ ಕಛೇರಿಗೆ ಕಾಲಿಟ್ಟದ್ದು ಅದೇ ಮೊದಲು. ಅವರು ನನ್ನನ್ನು ವಿಶ್ವಾಸದಿಂದ ಕಂಡು 'Button up your Coat. Go and see the Dewan' ಎಂದರು. ನನಗೆ ಹೆದರಿಕೆಯಾಯಿತು. 'Don't be afraid. Go and see him. The interview is arranged.' ಎದೆ ಢವ ಢವಾ ಅನ್ನುತ್ತಿತ್ತು. ದಿವಾನರ ಕೋಣೆಯ ಒಳಗೆ ಹೋದೆ. ಕೆಂಪು ನಿಲುವಂಗಿ, ಜರಿಪೇಟ, ಜರತಾರಿ ದವಾಲಿ ಹಾಕಿದ ಜಮೇದಾರ ಕೈಮುಗಿದ. ದಿವಾನರ ಛೇಂಬರಿನ ಬಾಗಿಲು ಸಲೀಸಾಗಿ ತೆರೆಯಿತು. ಒಳಗೆ ಬಲಗಾಲಿಟ್ಟೆ, ಮೊದಲು ಗಂಡನ ಮನೆಗೆ ಬರುವ ಹೆಣ್ಣು ಬಲಗಾಲಿಟ್ಟು ಹೋದಂತೆ. ಭವ್ಯವಾದ ಛೇಂಬರ್. ನೆಲಕ್ಕೆ ರತ್ನಗಂಬಳಿ. ಅರ್ಧ ಅಡಿ ಇಳಿಯುತ್ತಿತ್ತು ಕಾಲಿಟ್ಟರೆ. ಒಂದು ದೊಡ್ಡ ಮೇಜು. ಅದರ ಮೇಲೆ 'green blaze'. ಅಲ್ಲಿ ಕುಳಿತಿದ್ದರು ಸರ್ ಮಿರ್ಜಾ ಇಸ್ಮಾಯಿಲ್. [illegible] ಸೂಟು. ಟೈ, ತಲೆಗೆ ಮುಸಲ್ಮಾನರು ಸುತ್ತುವಂತಹ ಜರತಾರಿ

ಪೇಟ, ನನ್ನೊಳಹೊಗುವಷ್ಟು ಉದ್ದವಾದ ಗಿಣಿಮೂಗು, ಅದರ ಮೇಲೆ ಫಳಫಳಿಸುವ ಕನ್ನಡಕ. ಬಟನ್‌ಹೋಲಿನಿಂದ ಗಡಿಯಾರದ ಕಿಸೆಗೆ ಹೋಗಿದ್ದ ಚಿನ್ನದ ಸರಪಣಿ. 'Hallo Mr. Nage Gowda ! How are you ? Sit down' ಎಂದು ನಿಂತೇ ಹೇಳಿದರು. ಹೇಗಿದ್ದೇನೆ ಎಂದು ಹೇಳಲು ಆಗಲಿಲ್ಲ. ಬಾಯಿ ಒಣಗಿಹೋಗಿತ್ತು. 'I am happy to know that you had sat for the M.C.S. Examination. 'yes, sir.' 'Very good ! We will do something for you.' ಎಂದು ಕೈ ಚಾಚಿದರು. ನಾನು ಎದ್ದು ಕೈಹಿಡಿದು ಏನು ಮಾಡಿದೆನೋ ಕಾಣೆ, ಏನು ಹೇಳಿದೆನೋ ಕಾಣೆ. ಬಾಗಿಲವರೆಗೂ ಬಂದ ದಿವಾನರು 'Wish you good luck' ಎಂದರು. ಹೊರಗೆ ಬಂದು ಬೆವರೊರಸಿಕೊಂಡೆ. ಅವರು ಮೈಸೂರಿನ ದಿವಾನರು, ಆಗಿನ ದಿವಾನರೆಂದರೆ ಕೇಳಬೇಕೆ ! ಸರ್ವಾಧಿಕಾರಿ ! ಆದರೂ ಅವರು ನನ್ನಂತಹ ಹಳ್ಳಿಹುಡುಗನನ್ನು ನೋಡಿಕೊಂಡ ರೀತಿಗೆ ಕಣ್ಣಲ್ಲಿ ನೀರು ಬಂತು. ಒರೆಸಿಕೊಳ್ಳುತ್ತಲೇ ಕೇಶವಯ್ಯಂಗಾರರ ಕೋಣೆಗೆ ಹೋದೆ. 'Why are you Crying ?' ಎಂದು ಕೇಳಿದರು. ನಡೆದದ್ದನ್ನು ಹೇಳಿದೆ. ಆ ನಗುಮುಖದ, ಮುದ್ದುಮಾತಿನ ಚೀಫ್ ಸೆಕ್ರೆಟರಿ 'I see ! That is the reason ! very well. Now you go and see the First Member, Mr. Madhava Rao.' 'ಮತ್ತೇನು ಬಂತಪ್ಪಾ ಪರೀಕ್ಷೆ !' ಎಂದುಕೊಂಡು ದಿವಾನರ ಕೋಣೆಯ ಪಕ್ಕದಲ್ಲಿಯೇ ಇದ್ದ ಅವರ ಕೋಣೆಯ ಬಳಿಗೆ ಹೋದೆ. ಮಂತ್ರ ಹಾಕಿದಂತೆ ಅವರ ಕೋಣೆಯ half shutters ತೆರೆದುಕೊಂಡುವು. ಅಚ್ಚುಕಟ್ಟಾದ ಉಡುಪಿನ ನ್ಯಾಯಪತಿ ಮಾಧವರಾಯರು ನಿಂತು ನನ್ನನ್ನು ಸ್ವಾಗತಿಸಿದರು. ಹೆಚ್ಚು ಮಾತಾಡದಿದ್ದರೂ 'very pleased' ಎಂದಷ್ಟೇ ಹೇಳಿ ನನ್ನನ್ನು ಕಳುಹಿಸಿಕೊಟ್ಟರು. ಮತ್ತೆ ಚೀಫ್ ಸೆಕ್ರೆಟರಿಯವರ ಬಳಿಗೆ ಹೋದೆ. 'The Second Member, Mr. Anantharaman is away at Bombay. It does not matter. Go and see Mr. Appaji Gowda, The General Secretary,' ನಮ್ಮವರೇ ಆದ ಅವರ ಬಳಿಗೆ ಧೈರ್ಯದಿಂದಲೇ ಹೋದೆ. ಕುಳಿತುಕೊಂಡೆ. 'ಯಾವೂರಯ್ಯ ನೀನು ?' ಎಂದು ಕೇಳಿದರು. ನನ್ನ ಊರು ಯಾವುದು ಎಂದು ಹೇಳಿ ಅವರು ಮೈಸೂರು ಜಿಲ್ಲಾ (ಆಗ ಮಂಡ್ಯ ಜಿಲ್ಲೆ ಮೈಸೂರಿಗೇ ಸೇರಿತ್ತು) ಡೆಪ್ಯೂಟಿ ಕಮೀಷನರಾಗಿದ್ದ ವೇಳೆ ಇಡೀ ತಾಲ್ಲೂಕಿನ ಸೇಂದಿ ಬಾಬನ್ನು ನಮ್ಮ ತಂದೆ ಹೆಸರಿಗೆ ಮಾಡಿಕೊಟ್ಟಿದ್ದ ವಿಷಯ ಜ್ಞಾಪಿಸಿದೆ. 'ಓಹೋ ನೀನು ದೊಡ್ಡಮನೆ ಲಿಂಗೇಗೌಡ್ನ ಮಗನೊ ?' ಎಂದು ಕೇಳಿದರು. 'ಹೌದು, ಸಾರ್ ನಾನು ಡಬ್ಬಲ್ ಗ್ರಾಜುಯೇಟ್, ಸರ್. ಬಿ.ಎಸ್‌ಸಿ. ಮತ್ತು ಎಲ್‌ಎಲ್.ಬಿ.' ಓದಿದ್ದೀನಿ.' 'ಓ ಹೋಹೋ ಡಬ್ಬಲ್ ಗ್ರಾಜುಯೇಟೊ ! ಒಂದು ಸಾಲದು ಅಂತ ಎರಡು ಮಾಡಿದ್ದೀಯೋ ! ಅಗ್ಲಿ ನೋಡ್ತಾನ್ಹೋಗು !' ಎಂದು ಫೈಲುಗಳ ಕಡೆ ತಲೆಬಗ್ಗಿಸಿದರು. ಮೈ

ತಣ್ಣಗೆ ಮಾಡಿಕೊಂಡು ಮತ್ತೆ ಚೀಫ್ ಸೆಕ್ರೆಟರಿಯವರ ಕೋಣೆಗೆ ಹೋದೆ. 'ಏನು ಹೇಳಿದ್ರು ಅಪ್ಪಾಜಿಗೌಡ್ರು?' 'ಹೀಗೀಗಂದ್ರು ಸಾರ್' ಎಂದು ವಿವರಿಸಿದೆ. 'ಅವರು ಯಾವಾಗ್ಲೂ ಹಾಗೇ ಮಾತಾಡೋದು. He means nothing bad. Don't worry : You may please go' ಎಂದು ವಿನಯದಿಂದ ಹೇಳಿ ಕಳುಹಿಸಿಕೊಟ್ಟರು.

ಆ ಕೆಂಪು ಕಟ್ಟಡದಿಂದ ಹೊರಗೆ ಬಂದು ಹಾಸ್ಟೆಲ್‌ವರೆಗೆ ಅದು ಇದು ಮನಸ್ಸಿನಲ್ಲಿ ಅಳೆಯುತ್ತಾ ಸುರಿಯುತ್ತಾ ಆಗಾಗ್ಗೆ ತಲೆದೂಗುತ್ತಾ ನಡೆದುಕೊಂಡು ಬಂದು ನನ್ನ ಕೋಣೆ ಸೇರಿದೆ. ಮಹಾರಾಜರಿಗೆ ಕೊಟ್ಟ ಮನವಿ ಇಷ್ಟೊಂದು ಕೆಲಸಮಾಡಿತ್ತು. ಆದರೆ ಆಗ ನಾನು ಏಕಾಂಗಿ. ಯಾರೂ ಗೊತ್ತಿರಲಿಲ್ಲ. ಅವರಿವರನ್ನು ಹಿಡಿಯುವ ಈಗಿನ ಹುಡುಗರ ಚಾಲಾಕೂ ಇರಲಿಲ್ಲ. ಒಕ್ಕಲಿಗರ ಸಂಘದ ಅಧ್ಯಕ್ಷರೂ ಅಡ್ವೊಕೇಟ್ ಜನರಲ್‌ರೂ ಆಗಿದ್ದ ಲಕ್ಷ್ಮಣಗೌಡರ ಬಳಿಗೆ ಹೋದೆ. ನಡೆದದ್ದನ್ನೆಲ್ಲಾ ಹೇಳಿ, 'Sir I am the only vokkaliga who had sat for the M.C.S. Examination. ನನಗೆ ಯಾರೂ ದಿಕ್ಕಿಲ್ಲ ಸಾರ್. ನೀವು ಮನಸ್ಸು ಮಾಡಿದರೆ ಒಕ್ಕಲಿಗರಲ್ಲಿ ಒಬ್ಬರನ್ನು ಅಸಿಸ್ಟೆಂಟ್ ಕಮೀಷನರಾಗಿ ನಾಮಿನೇಟ್ ಮಾಡೋ ಸಂಭವವುಂಟು. ದಯವಿಟ್ಟು ಮನಸ್ಸುಮಾಡಿ, ಸಾರ್' ಎಂದೆ. 'Oh ! you are not the only vokkaliga aspiring for a job. Don't think it is so easy !' 'Sir, I am the only vokkaliga....' 'Don't repeat it. Better you forget about it.'

ನಾನು ಮರೆಯಲಿಲ್ಲ. ಮರೆಯದೆ ಬಿ. ಎನ್. ವಿಜಯದೇವ ಬಾರ್-ಅಟ್-ಲಾ ಅವರನ್ನೂ ಲಾಲ್‌ಬಾಗ್ ಸೂಪರಿಂಟೆಂಡೆಂಟರಾಗಿದ್ದ ಹೆಚ್. ಸಿ. ಜವರಯ್ಯನವರನ್ನೂ ಕಂಡೆ. ಹೆಚ್. ಸಿ. ಜವರಯ್ಯನವರು ಹೆಚ್. ಸಿ. ದಾಸಪ್ಪನವರ ಅಣ್ಣಂದಿರು ; ಸಿ. ಜೆ. ಪದ್ಮನಾಭ ಅವರ ತಂದೆ. ಸೌಜನ್ಯದಿಂದ ಮಾತಾಡಿ 'ಕೈಲಾದ್ದು ಮಾಡೋಣ' ಎಂದು ಕಳುಹಿಸಿಕೊಟ್ಟರು. ಮಾಡುವ ಪ್ರಯತ್ನ ಎಲ್ಲಾ ಮಾಡಿ ನಮ್ಮೂರ ಮಾರಮ್ಮನ ಮೇಲೆ ಎಲ್ಲಾ ಭಾರಾನೂ ಹಾಕಿ ಚಿಕ್ಕಮಗಳೂರಿಗೆ ಹಿಂದಿರುಗಿ ಪೆಡ್‌ಮುನ್ಸಿ ಕೆಲಸ ಆರಂಭಿಸಿದೆ. ಹೆಂಡತಿಯನ್ನೂ ಕರೆಸಿಕೊಂಡೆ. ಇನ್ನೊಂದು ಇಂಟರ್‌ವ್ಯೂಗೆ ಕರೆ ಬಂದಿತು—ಪೋಲೀಸ್ ಇಲಾಖೆಯಲ್ಲಿ ಎ.ಎಸ್.ಪಿ. ಹುದ್ದೆಗೆ. ಅದರಲ್ಲಿ ನನ್ನ ಆಯ್ಕೆ ಆಗಲಿಲ್ಲ. ಜಯಸಿಂಗ್ ಮತ್ತು ಇನ್ನೊಬ್ಬರು ಯಾರೋ ಆಯ್ಕೆ ಆದರು. ಚಿಕ್ಕಮಗಳೂರಿಗೆ ಹಿಂದಿರುಗಿದೆ. ಒಂದು ದಿನ ಸರ್ಕಾರದಿಂದ ಒಂದು ಲಕೋಟೆ ಬಂದಿತು. ನಡುಗುವ ಕೈಯಿಂದ ಒಡೆದೆ. 'The following persons are appointed as Revenue Probationers' ಎಂದಿತ್ತು. ಅದರಲ್ಲಿ ನನ್ನ ಹೆಸರೂ ಇತ್ತು. ಅಪ್ಪಾಜಿಗೌಡರ ಅಳಿಯನೊಬ್ಬನ ಹೆಸರೂ ಇತ್ತು. ಜೊತೆಗೆ ಒಬೇದುಲ್ಲಾ, ಹೆಚ್. ಮಹಾರುದ್ರಯ್ಯ ಮತ್ತು ಸಿ. ಎಂ. ಕೆಂಪಣ್ಣ—ಈ ಹೆಸರುಗಳೂ ಇದ್ದುವು. ಅಸಿಸ್ಟೆಂಟ್ ಕಮೀಷನರುಗಳಾಗಿ ರಾಮಚಂದ್ರ ಸಿಂಧ್ಯಾಜೀ

(ಮಹಾರಾಜರ ದೊಡ್ಡಮ್ಮನ ಸಂಬಂಧಿ), ಹೆಚ್. ಎಸ್. ಮಲ್ಲರಾಜ ಅರಸ್, ಎಮ್. ಲಕ್ಷ್ಮಣರಾವ್ (ಮಾಧವರಾಯರ ಮಗ), ಎ. ವಿಶ್ವನಾಥ್ (ಅನಂತರಾಮನ್ ಅವರ ಮಗ), ಮತ್ತು ಇನ್ನೊಬ್ಬರು—ಒಟ್ಟು ಐದು ಜನರನ್ನು ನಾಮಿನೇಷ್ ಮಾಡಲಾಗಿತ್ತು. 'ಪಾಲಿಗೆ ಬಂದದ್ದು ಪರಮಾನ್ನ' ಎಂದುಕೊಂಡೆ. ನನಗೆ ಅಸಿಸ್ಟೆಂಟ್ ಕಮೀಷನರ್ ಆಗಿ ನಾಮಿನೇಷ್ ಆಗದಿರಲು ಕಾರಣ ಮತ್ತು ರೆವೆನ್ಯೂ ಪ್ರೊಬೇಷನರ್ ಆಗಿ ನೇಮಕವಾಗಲು ಕಾರಣ ಏನು ಎಂಬುದನ್ನು ನೀವು ಸೂಕ್ಷ್ಮವಾಗಿ ಊಹಿಸಿ ಕೊಳ್ಳಬಹುದು. ರೆವೆನ್ಯೂ ಪ್ರೊಬೇಷನರಾಗಿ ನೇಮಿಸಲ್ಪಟ್ಟದ್ದಕ್ಕೆ ನಾನು ಇನ್ನೂ ಮದುವೆಯಾಗಿಲ್ಲ ಎಂಬ ತಪ್ಪು ಭಾವನೆಯೂ ಒಂದು ಕಾರಣವಾಗಿತ್ತೆಂದು ಆಮೇಲೆ ತಿಳಿಯಿತು. 'ಮದುವೆಯಾಗಿಬಿಟ್ಟಿದ್ದಾನೆ ಆಗಲೇ !' ಎಂದು ತಿಳಿದು ಅವರಿಗೆ ನಿರಾಶೆಯಾಗಿರಬೇಕು. ಆದರೂ ಅವರನ್ನು ನೋಡಿ ನನ್ನ ಕೃತಜ್ಞತೆ ಸಲ್ಲಿಸಿದೆ. 'ನಿಮ್ಮ ಫೋಟೋ ಕೊಡಿ ಸಾರ್, ನಾನು ಪೂಜೆ ಮಾಡಬೇಕು' ಎಂದು ಕೇಳಿಕೊಂಡೆ. 'ಆಗಲಿ, ಇನ್ನೊಂದು ಸಲ ಕೊಡ್ತೀನಿ. ಈಗ ಯಾವೂ ಇಲ್ಲ' ಎಂದರು, ಅವರನ್ನು ಈಗಲೂ ನಾನು ನೆನೆಯುತ್ತೇನೆ, ಕಣ್ಣಲ್ಲಿ ನೀರು ತಂದು.

ನನ್ನ ಬಾಳಿನ ಒಂದು ಹಂತ ಮುಗಿಯಿತು. ಹತ್ತಾರು ಮೆಟ್ಟಲುಗಳನ್ನು ಒಂದೇ ಸಲ ಹತ್ತಿಬಿಟ್ಟೆ. 1941 ರಲ್ಲಿ ನನ್ನ ಹೊಸ ಬಾಳು ಆರಂಭವಾಯಿತು. ಒಂದು ಗೆಜೆಟೆಡ್ ಹುದ್ದೆ ನನಗೆ ದೊರಕಿತ್ತು. ನನ್ನ ತಂದೆಗಾದ ಆನಂದ ಹೇಳತೀರದು. ಮದುವೆ ಮುಂಜಿಗಳಲ್ಲಿ ಅವರ ಮಗನ ಬಗ್ಗೆ ಹೇಳಿಕೊಂಡು ಹಿಗ್ಗಿದರು ; ನಾಡಿನ ಮೇಲೆಲ್ಲಾ ಮೆರೆಸಿದರು. 'ಪುರುಷನ ಪುಣ್ಯ ನಾರೀ ಭಾಗ್ಯ !' ಎಂದು ತಮ್ಮ ಸೊಸೆಯನ್ನು ಕುರಿತು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಹೇಳಿದರು.

ತಿಂಗಳಿಗೆ 80 ರೂಪಾಯಿ ಸಂಬಳದ ಮೇಲೆ ಎರಡು ವರ್ಷಗಳ ತರಬೇತಿ. ಅನೇಕರಿಗೆ ಈ ತರಬೇತಿ ಷೋಕಿಯ ತರಬೇತಿಯಾಗಿತ್ತು. ನಾನು ಷೋಕಿ ಕಂಡವನೇ ಅಲ್ಲ. ಒಮ್ಮೆ ದಿವಾನ್ ಸರ್ ಮಿರ್ಜಾ ಇಸ್ಮೈಲರು ಬೆಂಗಳೂರಿನಿಂದ ಹಾಸನಕ್ಕೆ ಹೋಗುತ್ತಾರೆಂಬ ಸುದ್ದಿ ಬಂದಿತು. ಮೈಲಾರಪಟ್ಟಣದ ಶಂಕರಲಿಂಗೇಗೌಡರು ಹೇಳಿಕಳುಹಿಸಿದರು. ಆಗ ದಿವಾನರು ಬರುತ್ತಾರೆಂದರೆ ಅಲ್ಲಲ್ಲಿ ಚಪ್ಪರಗಳನ್ನು ಹಾಕಿಕೊಂಡು ತಳಿರು ತೋರಣಗಳನ್ನು ಕಟ್ಟಿಕೊಂಡು ಜನ ಕಾಯುತ್ತಿದ್ದರು. ಬಾಟಾ ಮಾರ್ಗದಲ್ಲಿ ಕದಬಳ್ಳಿ ಬಳಿ ಗಡಿಯಲ್ಲಿ ಚಪ್ಪರ ಹಾಕಿದರು. ನಾನು ನನ್ನ ಹುಲಿಯ ಚರ್ಮದಂತಹ ಪಟೆಪಟೆ ಸೂಟು ಧರಿಸಿ ಅಲ್ಲಿಗೆ ಹೋಗುವುದರೊಳಗೆ ದಿವಾನರು ಹೊರಟುಹೋಗಿದ್ದರು. ಆದರೆ ಶಂಕರ ಲಿಂಗೇಗೌಡರು ಅಲ್ಲೇ ನಿಂತಿದ್ದರು. 'ಏನಯ್ಯಾ ಎಂಥಾ ಕೆಲ್ಸ ಮಾಡಿದೆ. ಅವರು ಹೋದಮ್ಯಾಲೆ ಬಂದ್ಯಲ್ಲಾ. ಮುಂಚೆ ಬಂದಿದ್ದರೆ ದಿವಾನ್ರಿಗೆ ನಿನ್ನ ವಿಷಯ ಹೇಳ್ತಿದ್ದೆ' ಎಂದು ಪಶ್ಚಾತ್ತಾಪಪಟ್ಟರು. ಯಾವುದಕ್ಕೂ ಕಾಲ ಬರಬೇಕು. ಆಗ ಪೆಟ್ಟಿಗೆಯಲ್ಲಿ ಮುದುರಿಟ್ಟಿದ್ದ ಸೂಟು

ಸರಿಮಾಡಿಕೊಂಡು ಬರಲು ಅಷ್ಟು ಹೊತ್ತಾಗಿತ್ತು. ಆ ಸೂಟಿನಿಂದ ಇಷ್ಟೆಲ್ಲಾ ಆಯಿತಲ್ಲಾ ಎಂದು ಅದನ್ನು ಬೆಂಗಳೂರಿಗೆ ಹೋದಾಗ ಅಡಿಗೆ ಆಳು ಬುಕ್ಲಸಿಗೆ ಕೊಟ್ಟು ಬೇರೊಂದು ಸೂಟು ಹೊಲಿಸಿದೆ. ಅದೂ ಕನಿಷ್ಟ ದರ್ಜೆಯ ಸೂಟು. ಉಳಿದವರೆಲ್ಲ ಕಮರ್ಷಿಯಲ್ ಸ್ಟ್ರೀಟ್ ಸೈಯದ್ ಜಾಕರ್‌ನಲ್ಲಿ ಹೊಲಿಸಿದ ಡಬ್ಬಲ್ ಬ್ರೆಸ್ಟ್ ಸೂಟು ಧರಿಸಿರುತ್ತಿದ್ದರು. ನನಗೆ ಎಂದೂ ಬಟ್ಟೆಹಾಕಿ ಷೋಕಿಮಾಡುವ ಮನಸ್ಸೇ ಇರಲಿಲ್ಲ. ಈಚೆಗೆ ಮನೆಯಲ್ಲಿ ಕುಳಿತಮೇಲೆ ಏಳುಮಕ್ಕಳ ತಾಯಿ, ಆರು ಮೊಮ್ಮಕ್ಕಳ ಅಜ್ಜಿ ಅಪ್ಪಣೆ ಕೊಡಿಸಿದರು : 'ನೀವು ನಂಗೊಂದೊಳ್ಳೆ ಸೀರೆ ತರಲಿಲ್ಲ, ನೀವೊಂದೊಳ್ಳೆ ಸೂಟು ಹೊಲಿಸಲಿಲ್ಲ' ಎಂದು. 'ಆಗ್ಲಿ, ಇನ್ನಮ್ಯಾಲೆ ಎಲ್ಲಾ ತರ್ತೀನಿ' ಎಂದು ಬರೀ ಬುರುಡೆ ಹೊಡೆದೆ. ಇಲ್ಲಿಯವರೆಗೂ ಹೊಟ್ಟೆಗೆ ಬಟ್ಟೆ ಹೊದಿಸಿದ್ದಾಯಿತು. ಇನ್ನಾದರೂ ಹೆಂಡತಿ ಮಕ್ಕಳನ್ನು ನೋಡಿಕೊಳ್ಳಬೇಕಾಗಿದೆ. ಈಗ ಅವರು ಎಂದಿಗಿಂತ ಹೆಚ್ಚಾಗಿ ಬೇಕಾಗಿದ್ದಾರೆ.

ವಿವಿಧ ಇಲಾಖೆಗಳಲ್ಲಿ ವಿವಿಧ ಬಗೆಯ ತರಬೇತಿ ಎರಡು ವರ್ಷ ಸಾಗಿತು. ಬೆಂಗಳೂರು, ಮಂಡ್ಯ, ಮೈಸೂರು, ಟೀ ನರಸೀಪುರ, ಪಾಂಡವಪುರ, ಮಂಡ್ಯ ವಿ. ಸಿ. ಫಾರಂ-- ಈ ಕಡೆಗಳಲ್ಲಿ ಅಡ್ಡಾಡಿದೆ. ಮಂಡ್ಯ ಕಸಬಾ ಹೋಬಳಿಯಲ್ಲಿ ಹೋಬಳಿ ರೆವಿನ್ಯೂ ಇನ್‌ಸ್ಪೆಕ್ಟರ್ ಟ್ರೈನಿಂಗ್. ಇದ್ದವರಿಗೆ ರಜಾ ಕೊಟ್ಟು ನನಗೆ ಹಾಕಿದ್ದರು. ಆ ಪುಣ್ಯಾತ್ಮ ಕಟ್ಟಿಟ್ಟಿದ್ದ ರಿಕಾರ್ಡುಗಳನ್ನೆಲ್ಲಾ ಪಟ್ಟಿಮಾಡಿ ನನಗೆ ಕೊಟ್ಟ. ಆದರೆ ಅವನ ನಿರೀಕ್ಷೆ ತಪ್ಪಾಯಿತು. ಶಾಸ್ತ್ರಕ್ಕೆ ರೆವಿನ್ಯೂ ಇನ್‌ಸ್ಪೆಕ್ಟರಾಗಿ ಬಂದಿರೋನು ರಿಕಾರ್ಡುಗಳ ವಿಲೇವಾರಿಗೆ ಏಕೆ ಕೈಹಾಕುತ್ತಾನೆ ಎಂದು ಆತ ಭಾವಿಸಿದ್ದ. ಆದರೆ ನಾನು ರಿಕಾರ್ಡುಗಳನ್ನು ಸೈಕಲಿಗೆ ಕಟ್ಟಿಕೊಂಡು ಊರೂರು ತಿರುಗಿದೆ. ಇದೇ ಮೊದಲು ನಾನು ಸೈಕಲ್ ಕೊಂಡದ್ದು. ಅದೂ ಹಳೆಯ ಹರ್ಕ್ಯುಲೀಸ್ ಸೈಕಲ್. ಬೆಲೆ ಇಪ್ಪತ್ತೊಂದು ರೂಪಾಯಿ. ಇಂಪಾಲ ಕಾರನ್ನು ಕೊಂಡಷ್ಟು ಸಂತೋಷ ನನಗೆ. ಅಷ್ಟೇ ಸಂತೋಷದಿಂದ ನೋಡುತ್ತಿದ್ದರು ಅದನ್ನು ಮಂಡ್ಯ ಹಳ್ಳಿಯ ಇನ್ನೂ ಸೈಕಲ್ ಇಡದ ಜನ. ಒಂದು ತಕರಾರು ತಂತ್ತೆ. ಇಂಗ್ಲಿಷಿನ ಟಿ. ಟಿ. ಒಬ್ಬ ಬಗರುಹುಕುಂ ಸರ್ಕಾರಿ ಜಮೀನಿನಲ್ಲಿ ಆಲೇಮನೆ ಹಾಕಿದ್ದ. ಮುಂಚೆಯೇ ಜವಾನನ್ನು ಕಳುಹಿಸಿ, ಸ್ಥಳದಲ್ಲಿರಬೇಕೆಂದು ತಿಳಿಸಿ ನಾನು ಸ್ಪಾಟ್ ಇನ್‌ಸ್ಪೆಕ್ಷನ್ನಿಗೆ ಹೋದೆ. ಆಲೇಮನೆ ಹೊರಗೆ ಬಿಸೀಬೆಲ್ಲದ ವಾಸನೆ ಮೂಸುತ್ತ ನಮ್ಮ ಹಳ್ಳಿಯಲ್ಲಿ ತಿಂದ ಬಿಸೀಬೆಲ್ಲ ನೆನೆದುಕೊಳ್ಳುತ್ತಿರುವಾಗ ಆಲೇಮನೆ ಗೌಡರು ಹೊರಗೆ ಬಂದರು—ಮಂಡ್ಯದ ಚಡ್ಡಿಯಲ್ಲಿ. ನನ್ನನ್ನು ದೂರದಿಂದಲೇ ನೋಡಿ ಒಳಗಿದ್ದ ಮಗನಿಗೆ ಕೂಗಿ ಹೇಳಿದರು, 'ಲೇ ಹೈದಾ, ಷೇಕ್‌ದಾರ್ರಿಗೆ ಒಂದು ಪಿಂಡಿ ಬೆಲ್ಲಾನೂ ಹತ್ತು ರೂಪಾಯ್ನೂ ತಕ್ಕೊಂಡು ಬಾರ್‍ಲ' ಎಂದು. ನೇರವಾಗಿ ಅವನ್ನು ತೆಗೆದುಕೊಳ್ಳಿ ಎಂದು ನನಗೆ ಹೇಳಲಾರದೆ ಬುದ್ಧಿವಂತಿಕೆಯಿಂದ ಹೀಗೆ ಹೇಳಿದ್ದರು.

'ಏನು ಗೌಡ್ರೇ ಲಂಚ ಕೊಟ್ಟು ಸರಿಮಾಡಿಕೊಳ್ಳಾಕೆ ಬಂದಿದೀರಾ ?' ಎಂದೆ. 'ಇಲ್ಲಾ ಸ್ವಾಮಿ, ಲಂಚಾನು ಅಲ್ಲ, ತಂಚಾನು ಅಲ್ಲ. ನಮ್ಮ ಮರ್‍ಯಾದೆ ನಾವು ಮಾಡುವಾ ಅಂತ ಹಂಗಂದಿ. ಹಿಂದಿನೋರಿಗೆ ಬರೀ ಒಂದು ಪಿಂಡಿ ಬೆಲ್ಲ ಕೊಡ್ತೀನಿ ಅಂದಿದ್ದೆ. ಕೆಲ್ಸ ಮಾಡಿಕೊಡ್ಲಿಲ್ಲ; ಹೋಗ್ಲಿ, ನೀವು ನಮ್ಮೋರು ಅಂತ ಹತ್ತುರೂಪಾಯಿ ಮರ್‍ಯಾದೆ ಮಾಡ್ತೀನಿ, ಮಾಡಿಕೊಡಿ. ಎಲ್ಲಾ ನಾವ್ಗಿಂಗೆ ಮರ್‍ಯಾದೆ ಮಾಡಕಾದತ್ತಾ ! ಏನೋ ನಮ್ಮೋರು ತಮ್ಮೋರು ಅಂತ ಇರ್‍ತದಲ್ಲ' ಎಂದರು. ನಾನು ಹೆಚ್ಚು ಮಾತಾಡಲಿಲ್ಲ. ರಿಕಾರ್ಡ್ರು ಮಾಡಿಕೊಂಡು ಹೊರಟೆ. ಕೊಂಚ ದೂರ ಹೋದ ಮೇಲೆ 'ನಮ್ಮವ್ಕೆ ತಿನ್ನಾಕೂ ಬರಾಕಿಲ್ಲ. ಬಡ್ಕೊತ್ತೋವ್ಕೆ' ಎಂಬ ಮಾತು ಕೇಳಿಸಿತು. ರಿಕಾರ್ಡ್ರು ಅಮಲ್ದಾರರಿಗೆ ಹೋಯಿತು. ನೆಪಕ್ಕೆ ರಜಾ ತೆಗೆದುಕೊಂಡಿದ್ದ ಷೇಕದಾರ ತಾಲ್ಲೂಕು ಕಛೇರಿಯಲ್ಲಿ ಹೋಬಳಿ ಗುಮಾಸ್ತರ ಬಳಿಯೇ ಕುಳಿತಿರುತ್ತಾ ಅಮಲ್ದಾರರಿಗೆ ನೆರವಾಗುತ್ತಿದ್ದರು. ಸರಿ, ಸರ್ಕಾರಕ್ಕೆ ದೂರು ಹೋಯಿತು. ಆಗಿದ್ದ ಕೌನ್ಸಿಲರ್ ಅವರಿಗೆ ಬೇಕಾಗಿದ್ದವರಂತೆ. 'If he is not fit to be an Amildar, promote him as Assistant Commissioner' ಎಂದು ಆರ್ಡರ್ ಮಾಡಿದರು.

ಮೈಸೂರಿನಲ್ಲಿ ಡಿಸ್ಟ್ರಿಕ್ಟ್ ಆಫೀಸ್ ಟ್ರೈನಿಂಗ್. ಹೋದ ಮೊದಲು ದಿನ ಡೀಸಿಯವರನ್ನು ಕಾಣಲು ಹೊರಗೆ ಕಾಯುತ್ತಿದ್ದೆ. ಒಳಗೆ ಡಿಸ್ಟ್ರಿಕ್ಟ್ ಶಿರಸ್ತೇದಾರರು ಹೋದರು. 'ಏನು ಬೇಕಂತ್ರೀ ಆ ಜೋಳಿಮಗನಿಗೆ!' ಎಂದು ಅಬ್ಬರಿಸಿದರು. ಹೊರಗಿದ್ದ ನಾನು ನಡುಗಿಹೋದೆ. ಆಮೇಲೆ 'Controller ಜೋಳಿಮಗನಿಗೆ ಏನಾಗ್ಬೇಕಂತ್ರಿ' ಎಂದಾಗ ನನ್ನನ್ನಲ್ಲ ಅವರು ಬೈದದ್ದು, Controller of State Accounts ಎಂದು ಸಮಾಧಾನಪಟ್ಟುಕೊಂಡು ಅವತಾರ ಇಳಿದಮೇಲೆ ಹೋಗಿ ನೋಡಿದಾಗ 'you must learn work of every branch. Work like a devil. I will be watching you. If you don't I will write to the Controller to withold your pay' ಎಂದು ಅಬ್ಬರಿಸಿದರು. 'ಆಗಲಿ ಸಾರ್' ಎಂದು ಹೇಳಿ ಹೊರಬಂದೆ. ಹೇಳಿದಂತೆ ಕೆಲಸಮಾಡಿದೆ. ಬೆಳಗಿನ ಹೊತ್ತು Equitation Training ಅಂದರೆ ಕುದುರೆ ಸವಾರಿ ಕಲಿತೆ. ಅದಕ್ಕೆ ಬೇಕಾದ ಕಾಕಿ ಬಟ್ಟೆ ಹೊಲಿಸಿ, ಕಾಲುಚೀಲ ಬೂಟು ಇತ್ಯಾದಿಗಳನ್ನು ಸಿದ್ಧಪಡಿಸಿಕೊಂಡೆ. ಚಿಕ್ಕಂದಿನಲ್ಲಿ ಊರಿಗೆ ಬಂದ ಷೇಕದಾರರ ಕುದುರೆ, ನಮ್ಮ ತಂದೆಯವರು ಇಟ್ಟಿದ್ದ ಕುದುರೆ, ಅವು ಯಾವೂ ಸಿಕ್ಕದಿದ್ದರೆ ನಾಗಮಂಗಲದ ಗಡ್ಡದ ಸಲಾರ್ ಸಾಬಿ ಊರಿಗೆ ಬಂದು ಅಂಗಡಿ ಇಟ್ಟಾಗ ತಿಪ್ಪೆಹಳ್ಳದಲ್ಲಿ ಮೇಯುತ್ತಿದ್ದ ಕುದುರೆ, ಬಹಳ ಕಾಲ ಏನೂ ಸಿಕ್ಕದಿದ್ದರೆ ಅಗಸರ ಲಕ್ಕಣ್ಣನ ಕತ್ತೆ–ಇವುಗಳ ಮೇಲೆ ಜೀನಿಲ್ಲದೆ ಸವಾರಿಮಾಡಿದ್ದೆ. ಅದು ಈಗ ಉಪಯೋಗವಾಯಿತು. ಜೀನು ಹಾಕಿದ ದೊಡ್ಡ ಕುದುರೆಯ ಮೇಲೆ ಠೀವಿಯಿಂದ ಕುಳಿತ ನನ್ನನ್ನು ಕಂಡು ಕಲಿಸುತ್ತಿದ್ದ ಹವಾಲ್ದಾರ. 'ದೇಖ್ರೇ ಕೈಸೆ ಬೈಠ್‌ತೇ ಹೈ ! ದೇಖೋ ದೇಖೋ'

ಎಂದು ಶಹಬಾಸ್‌ಗಿರಿ ಕೊಡುತ್ತಿದ್ದ. ಈ ಶಹಬಾಸ್‌ಗಿರಿ ಪಡೆದ ನಾನು ಒಂದು ದಿನ ಕ್ರಾಸ್ ಕಂಟ್ರಿ ಸವಾರಿಗೆ ಹೋದೆ. ಟ್ರಾಟಿಂಗ್ (ಕುಲುಕೋಟ), ಕ್ಯಾಂಟರ್ (ಆಯಾಸವಿಲ್ಲದ ನಾಗಾಲೋಟ), ಮತ್ತು ಗ್ಯಾಲಪ್ (ದೌಡು)–ಇವುಗಳನ್ನೆಲ್ಲಾ ಮಾಡಿ ಲಾಯಕ್ಕೆ ಹಿಂದಿರುಗುವಾಗ ಕುದುರೆಗೆ ಲಗಾಮು ಎಳೆದು ಅಡಿಹೊಟ್ಟೆಗೆ ತಿವಿದೆ. ಗ್ಯಾಲಪ್‌ಗಿಂತಲೂ ವೇಗವಾದ ವೇಗದಲ್ಲಿ ಹಳ್ಳಕೊಳ್ಳ ನೆಗೆದು ಕುದುರೆ ದೌಡಾಯಿಸಿತು. ಮೂರೇ ನಿಮಿಷದಲ್ಲಿ ಬಾಯಲ್ಲಿ ನೊರೆ ಚೀಲಿಸುತ್ತಾ ಲಾಯಕ್ಕೆ ಬಂದು ಬಿಟ್ಟಿತು. ಅಲ್ಲಿದ್ದ ಹವಾಲ್ದಾರರೂ ಇತರ ಸವಾರರೂ ಮೂಗಿನಮೇಲೆ ಬೆರಳಿಟ್ಟು ಕೊಂಡರು. ಹವಾಲ್ದಾರರು 'ಏನು ಸಾರ್ ಓಂಗ್ ಮಾಡಿದ್ರಿ ನೀವು ! ನೀವು ಬದುಕಿದ್ದೇ ಆಶ್ಚರ್ಯ. Never gallop a horse when it is returning to stables' ಎಂದು ಅಲ್ಲಿಯವರೆಗೂ ಹೇಳಿಕೊಡದಿದ್ದ ಪಾಠ ಹೇಳಿ ಬೆನ್ನು ತಟ್ಟಿ ಕಳುಹಿಸಿಕೊಟ್ಟರು.

ಎರಡು ವರ್ಷದ ತರಬೇತಿ ಮುಗಿಸಿ ಅಧಿಕಾರದ ಕುದುರೆಯನ್ನೇರಿ ಹರಿಹರಕ್ಕೆ ಅಮಲ್ದಾರನಾಗಿ ಹೋದೆ. ಅಲ್ಲಿಂದಾಚೆಗೂ ಹಾಕುತ್ತಿದ್ದರೇನೊ ! ಆದರೆ ಅದೇ ಆಗ 'ಮೈಸೂರು ಸಂಸ್ಥಾನದ' ಗಡಿ. ಅಲ್ಲಿ ಹರಿಯುವ ತುಂಗಭದ್ರಾ ನದಿಯಿಂದಾಚೆಗೆ 'ಬೊಂಬಾಯಿ ಪ್ರಾಂತ್ಯ'. ಬಹಳ ದೂರ ಹೋದವನಿಗೆ ನಮ್ಮ ಹಳ್ಳಿ ಕಡೆ 'ಅವನು ಹರಿಹಾರಕ್ಹೋಗವ್ನೆ !' ಎಂದು ಹೇಳುವುದುಂಟು. ಅಷ್ಟು ದೂರಕ್ಕೆ ನನ್ನನ್ನು ಹಾಕಿ ಬಿಟ್ಟರು. ಈಗಿನ ಪ್ರೊಬೆಷನರುಗಳಾಗಿದ್ದರೆ ಎಲ್ಲಿಗೆ ಹಾಕಿಸಿಕೊಳ್ಳಬೇಕೆಂಬ ಬಗ್ಗೆ ಪ್ರೊಬೇಷನರಿ ಕಾಲದಲ್ಲಿಯೇ ತರಬೇತಿ ಪಡೆಯುತ್ತಿದ್ದರು ! ನಾನು ನನ್ನ ಸರ್ವೀಸಿನಲ್ಲಿ ಇಂತಹ ಕಡೆ ಹಾಕಿ, ಇಂತಹ ಕಡೆ ಬೇಡ ಎಂದು ಕೇಳಿದವನಲ್ಲ. ಆಗುವುದೆಲ್ಲ ಒಳ್ಳೆಯದಕ್ಕೆ ಎಂದು ಹಾಕಿದ ಕಡೆ ಹೋಗುತ್ತಿದೆ. ಒಳ್ಳೆಯದೇ ಆಯಿತು.

ಅಧಿಕಾರ ಚಲಾಯಿಸಬೇಕೆಂಬ ಆಸೆ ಎಲ್ಲರಿಗೂ ಇದ್ದದ್ದೆ. ಅದರಲ್ಲೂ ಆಗಿನ ಕಾಲದ (1943) ಅಮಲ್ದಾರನೆಂದರೆ ಕೇಳಬೇಕೆ ! ನಮ್ಮೂರಿಗೆ ಅಮಲ್ದಾರರು ಬರುತ್ತಾರೆ ಎಂದರೆ ಮೂರು ದಿವಸ ನಮ್ಮ ಹೊಲೆಯರ ಹಟ್ಟಿಯವರಿಗೆ ಬಿಡುವಿಲ್ಲದ ಕೆಲಸ. ಮುಳ್ಳುಬರಲು ಹಾಕಿಕೊಂಡು ಊರನ್ನೆಲ್ಲಾ ಗುಡಿಸಿದ್ದೂ ಗುಡಿಸಿದ್ದೆ ; ಬಹಳ ದಿನಗಳಿಂದ ಬೆಳದಿದ್ದ ಧೂಳನ್ನೆಲ್ಲಾ ಎಬ್ಬಿಸಿದ್ದೂ ಎಬ್ಬಿಸಿದ್ದೆ. ಸರ್ಕಾರಿ ತೋಪಿನ ಮಾವಿನ ಮರಗಳಿಂದ ಸೊಪ್ಪು ತಂದು ಊರ ಹೆಬ್ಬಾಗಿಲಿಗೆ ತೋರಣ ಕಟ್ಟಿದ್ದೂ ಕಟ್ಟಿದ್ದೆ. ಇನ್ನು ಪಟೇಲರಂತೂ ಅವರ ಪೇಟ ಕೋಟು ಸರಿಮಾಡಿಕೊಂಡು ನಕಾಶೆ ಕೊಳವೆ ಒರೆಸಿಕೊಂಡು ಸಿದ್ಧರಾಗುತ್ತಿದ್ದರು. ಶ್ಯಾನುಭೋಗರು ದಫ್ತರ್ ಸಮೇತ ಊರಿಗೆ ಬಂದು, ಚಾವಡಿಯಲ್ಲಿ ಮೊಕ್ಕಾಂ ಮಾಡಿ ಕಂದಾಯದ ಬಾಕಿ ವಸೂಲಿಗೆ ಕುಳಿತುಕೊಳ್ಳುತ್ತಿದ್ದರು. ಕೊಂಬು ಕಹಳೆಗಳು ಊದುವುವು. ದೊಡ್ಡ ಕುದುರೆಯ ಮೇಲೆ ಕುಳಿತು ಅಮಲ್ದಾರರು ಬರುವರು. ಅವರನ್ನು ನೋಡಲು ಊರಿಗೆ ಊರೇ ನೆರೆಯುತ್ತಿತ್ತು. ಕುದುರೆಯ ಮೇಲೆ ಕುಳಿತೇ ನಿಂಬೇಹಣ್ಣುಗಳನ್ನು ಈಸಿಕೊಂಡು, ಎಳನೀರು ಕುಡಿದು, ಅದು ಇದು

ವಿಚಾರಿಸಿ, (ಇಳಿದರೆಲ್ಲಿ ತಾಪತ್ರಯವೋ ಎಂದು ಶ್ಯಾನುಭೋಗರು ಬಾಕಿ ಎಲ್ಲಾ ಚುಕ್ತ ಆಗಿದೆ ಎಂದು ಸಾರಾಸಗಟು ಉತ್ತರ ಹೇಳಿ ಕುದುರೆಯ ಮೇಲೆಯೇ ಇರುವಂತೆ ಮಾಡುತ್ತಿದ್ದರು) ಕುದುರೆಯ ಅಡಿಹೊಟ್ಟೆಗೆ ತಿವಿದು ದೌಡಾಯಿಸುವುದನ್ನು ನಾನು ನೋಡಿದ್ದೆ. ಈಗ ನನಗೆ ಅದೇ ಅಧಿಕಾರ ಸಿಕ್ಕಿತ್ತು. ಆದರೆ ಕುದುರೆ ಮಾತ್ರ ಸಿಕ್ಕ ಲಿಲ್ಲ. ನಾನು ಕುದುರೆ ಹುಡುಕುತ್ತಿರುವಾಗ ಸರ್ಕಾರದಿಂದ ಆರ್ಡರೊಂದು ಬಂದಿತು, 'ಇನ್ನು ಮೇಲೆ ಕುದುರೆ ಇಡಬೇಕಾಗಿಲ್ಲ' ಎಂದು. ಕುದುರೆಗಾಗಿ ಕೊಡುತ್ತಿದ್ದ ಐವತ್ತು ರೂಪಾಯಿಗಳನ್ನು ಅಮಲ್ದಾರರಿಗೆ ಎಫ್.ಟಿ.ಎ. (Fixed Travelling Allowance) ಎಂದು ಕೊಟ್ಟರು. ಸಂಬಳ 150 ರೂಪಾಯಿ. (ಗಿಂಬಳ ? ಅವರ ಯೋಗ್ಯತಾನು ಸಾರ). ಹೀಗಾಗಿ ಆಮೇಲೆ ಕುದುರೆ ಹತ್ತಲೇ ಇಲ್ಲ. ಗೆಜೆಟೆಡ್ ಹುದ್ದೆಗಳಲ್ಲಿದ್ದ ಅಧಿಕಾರಿಗಳೆಲ್ಲರ ಫೋಟೋಗಳು ಮೈಸೂರು ಮಹಾರಾಜರ ಅರಮನೆಯಲ್ಲಿ ರಾರಾಜಿ ಸುತ್ತಿದ್ದುವು. ನನ್ನದೂ ಒಂದು ಫೋಟೋ ಕಳುಹಿಸಬೇಕೆಂದು ಅರಮನೆಯಿಂದ ಒಂದು ಪತ್ರ ಬಂದಿತು. 'ಇನ್ನೇನು ಫೋಟೋ ತೆಗೆಸಬೇಕು, ಆಗ 'ನಿನ್ನ ಫೋಟೋ ಬೇಕಾಗಿಲ್ಲ' ಎಂಬ ಇನ್ನೊಂದು ಪತ್ರ ಬಂದಿತು. ಕೃಷ್ಣರಾಜ ಒಡೆಯರು ಕಾಲವಾಗಿ ನನ್ನ ಈ ಗೆಜೆಟೆಡ್ ಹುದ್ದೆಗೆ ಕಾರಣರಾಗಿದ್ದ ಜಯಚಾಮರಾಜ ಒಡೆಯರು ಈ ರೀತಿ ಅಪ್ಪಣೆ ಕೊಡಿಸಿ ನನಗೆ ಬಹಳ ನಿರಾಶೆಯನ್ನುಂಟುಮಾಡಿದ್ದರು. ಹಿಂದಿನ ಮಹಾರಾಜರು ಸಂಚಾರ ಹೊರಟಾಗ ಅವರ ಬಳಿ ಅಧಿಕಾರಿಗಳ ಫೋಟೊ ಮತ್ತು ಅವರ ಪೂರ್ವೋತ್ತರಗಳ ಕಥೆಗಳೆಲ್ಲಾ ಇರುತ್ತಿದ್ದುವಂತೆ. ಆದರೆ ಹೊಸ ಮಹಾರಾಜರಿಗೆ ಅವೆಲ್ಲಾ ಬೇಡ ವಾದುವು.

ಅಮಲ್ದಾರರ ಕ್ವಾರ್ಟರ್ಸ್ ಒಂದು ಹಳೆಯ ಕಛೇರಿ ಕಟ್ಟಡ. ಮೇಲೆ ಯಾರಾ ದರೂ ನಡೆದರೆ ಅದುರುತ್ತಿತ್ತು. ಮಹಡಿ ಇದ್ದ ಆ ಮನೆಯಲ್ಲಿ ಹೆಗ್ಗಣಗಳೂ ಅಮಲ್ದಾರರೂ ಒಟ್ಟಿಗೆ ಇರುತ್ತಿದ್ದರು. ಸಿಮೆಂಟು ಗಿಮೆಂಟು ಆಗ ಇರಲಿಲ್ಲ. ಮಣ್ಣಿನಿಂದ ಇಲಿ ಬಿಲ ಮೆತ್ತಿದರೆ ಅಲ್ಲಿ ಇನ್ನೊಂದು ಡೊಗರು ಕಾಣಿಸಿಕೊಳುತ್ತಿತ್ತು. ಹೆಗ್ಗಣ ತೋಡಿದ ಮಣ್ಣನದೇ ಒಂದು ದೊಡ್ಡ ರಾಶಿ ಬಿದ್ದಿತ್ತು. ಇಂತಹ ಮನೆಯಲ್ಲಿ ನನ್ನ ಸಂಸಾರ ಹೂಡಿದೆ. ಕೈಯಲ್ಲಿ ಒಂದು ಹೆಣ್ಣುಮಗು ಎತ್ತಿಕೊಂಡು ಕಾಲಿಗೆ ಚೈನು, ಸೊಂಟಕ್ಕೆ ಗಜ್ಜಡಾಬು ಧರಿಸಿ, ಅಮಲ್ದಾರ್ರಾಣಿ ರೈಲು ಇಳಿದರು. ಅವರನ್ನು ಸಕಲ ಮರ್ಯಾದೆಯೊಡನೆ ಆಳುಕಾಳುಗಳ ಪರಿವಾರ ಸಮೇತ ಅರಮನೆಗೆ ಕರೆತಂದುದಾಯಿತು. ಅಮಲ್ದಾರ್ರಾಣಿ ಕೈಯಲ್ಲಿ ಕೆಲಸ ಮಾಡಿದರೆ ಮರ್ಯಾದೆಗೆ ಕಡಮೆ ಎಂದು ಕಸ ಗುಡಿಸುವುದಕ್ಕೊಬ್ಬ, ಹಾಸಿಗೆ ಹಾಸುವುದಕ್ಕೊಬ್ಬ, ಅಡಿಗೆ ಮಾಡುವುದಕ್ಕೊಬ್ಬ, ತರಕಾರಿ ತರುವುದಕ್ಕೊಬ್ಬ ಜವಾನರುಗಳನ್ನು ನೇಮಿಸಿದ್ದಾಯಿತು. ಆಗ ಜವಾನರು ಗಳಿಗೇನೂ ಕೊರತೆ ಇರಲಿಲ್ಲ. ಅಡುಗೆಗೆ ಒಬ್ಬ ನಾಯರ್ ಇದ್ದ. ಅಡುಗೆಗೆ ಬೇರೊಂದು ಮನೆ ಇತ್ತು. ಅಲ್ಲಿ ಆಡುಗೆಮಾಡಿ ಇಲ್ಲಿಗೆ ತಂದು ಬಡಿಸುವ ವ್ಯವಸ್ಥೆ.

ಚೆನ್ನಾಗೇನೋ ಇತ್ತು. ಆದರೆ ಖರ್ಚು ಒಂದಕ್ಕೆ ನಾಲ್ಕರಷ್ಟಾಗಲು ಶುರುವಾಯಿತು. ಎಷ್ಟು ಬೆಣ್ಣೆ ತರಲಿ, ಎಷ್ಟು ತುಪ್ಪ ತರಲಿ ಆ ಎರಡು ಕಾಲಿನ ಹೆಗ್ಗಣಗಳಿಗೆ ಸಾಕಾಗುತ್ತಿರಲಿಲ್ಲ. ಆದರೆ ತಪ್ಪನ್ನೆಲ್ಲಾ ನಾಲ್ಕುಕಾಲಿನ ಹೆಗ್ಗಣಗಳ ಮೇಲೆ ಹಾಕಲಾಗುತ್ತಿತ್ತು. ಸಂಬಳ ಸಾಲದೆ ಬಂತು. ಗಿಂಬಳ ನಾನು ತೆಗೆದುಕೊಳ್ಳುತ್ತಿರಲಿಲ್ಲ. ಆದ್ದರಿಂದ ಅಮಲ್ದಾರ್ರಾಣಿಯವರೆ ಅಡುಗೆಮನೆ ಚಾರ್ಜು ವಹಿಸಿಕೊಂಡರು. ಅಲ್ಲಿಂದ ಇಲ್ಲಿಯವರೆಗೆ ಆ ಚಾರ್ಜು ಇನ್ನಾರಿಗೂ ಕೊಟ್ಟಿಲ್ಲ. ಇಲಿ ಹೆಗ್ಗಣಗಳ ಕಾಟವೂ ಕಡಮೆಯಾಯಿತು.

ಆಗೇನು ಸಿನೆಮಾಗಳಿದ್ದುವೇ ಬೇಜಾರು ಕಳೆಯುವುದಕ್ಕೆ ! ಒಮ್ಮೊಮ್ಮೆ ಟೆಂಟ್ ಸಿನೆಮಾ ಬರುತ್ತಿತ್ತು. ಅದನ್ನು ನೋಡಲು ಬರಬೇಕೆಂದು ಸಿನೆಮಾ ಮಾಲೀಕರು ಹಾರ ತುರಾಯಿ ಹಿಡಿದುಕೊಂಡು ಬಂದು ಆಹ್ವಾನಿಸಿ ಹೋಗುತ್ತಿದ್ದರು. ಸ್ಪೆಷಲ್ ಕುರ್ಚಿ ಹಾಕಿಸುತ್ತಿದ್ದರು. ಒಂದುಸಲ ಅಮಲ್ದಾರರೂ (ಆಗ ಹರಿಹರದಲ್ಲಿ ಅಮಲ್ದಾರರನ್ನು ಜನರು ಮಾಮ್ಲೇದಾರ್ ಎಂದೇ ಹೆಚ್ಚಾಗಿ ಕರೆಯುತ್ತಿದ್ದುದು) ಅಮಲ್ದಾರ್ರಾಣಿಯವರು ಸಕುಟುಂಬ ಸಪರಿವಾರ ಸಮೇತರಾಗಿ ದಯಮಾಡಿಸಿದರು. ಅವರೆಲ್ಲಾ ಬಂದು ಶುರುಮಾಡಬಹುದು ಎಂದಾಗಲೇ ಸಿನೆಮಾ ಶುರುವಾಗುತ್ತಿತ್ತು. ಆಗೇನು ಮಾತಿಲ್ಲ ಕತೆಯಿಲ್ಲ ; ಮೂಕಿ ಚಿತ್ರ. ಒಂದು ಸಲ ಮಾತಾಡೋ ಸಿನೆಮಾ ಬಂದಿತು. ಅದನ್ನು ನೋಡಲು ನಾವೆಲ್ಲಾ ದಯಮಾಡಿಸಿದ್ದೆವು. ಆಗ ತಾಲ್ಲೂಕುಗಳಲ್ಲಿ ಇಬ್ಬರು ದೊಡ್ಡ ಧಣಿಗಳು : ಒಬ್ಬರು ಅಮಲ್ದಾರರು, ಇನ್ನೊಬ್ಬರು ಪೋಲೀಸ್ ಇನ್‌ಸ್ಪೆಕ್ಟರು. ಅಮಲ್ದಾರರು ತಾಲ್ಲೂಕು ಮ್ಯಾಜಿಸ್ಟ್ರೇಟ್ ಅಷ್ಟೇ ಅಲ್ಲ, Head of the Taluq Police. ಆದರೆ ಕಾಕಿ ಬಟ್ಟೆ ಹಾಕಿದ ಇನ್‌ಸ್ಪೆಕ್ಟರಿಗೆ, ಅದರಲ್ಲೂ ಭಾರಿ 'ಅನುಭವ' ಇದ್ದಂಥವನಿಗೆ, ಇಸ್ತ್ರಿಮಾಡದ ದೊಗಳೆ ಶರಾಯಿ ಹಾಕಿಕೊಂಡ, ಸಿಂಬಿ ಸುತ್ತಿದಂತಹ ಪೇಟ ಸುತ್ತಿಕೊಂಡ ನೆನ್ನೆ ಮೊನ್ನೆ ಹುಡುಗನಿಗೆ ಸಲಾಮು ಹೊಡೆಯಬೇಕು ಎಂದರೆ ಭಾರಿ ಕಷ್ಟವಾಗುತ್ತಿತ್ತು. ಕೈಮುರ ಪೂರ್ತಿ ಏಳದೆ ಎದ್ದಿತೊ ಇಲ್ಲವೊ ಎನ್ನುವ ಹಾಗೆ ಎದ್ದು ಕೆಳಗೆ ಬೀಳುತ್ತಿತ್ತು. ಅವರು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ಲಟಾಪಟಿ ಶುರುವಾಗುತ್ತಿತ್ತು. ಹಾಗೆಯೇ ನನಗೂ ಹರಿಹರದಲ್ಲಿದ್ದ ಇನ್‌ಸ್ಪೆಕ್ಟರಿಗೂ ಶುರುವಾಯಿತು. ಅದನ್ನು ಆಮೇಲೆ ಹೇಳುತ್ತೇನೆ. ಈಗ ಇನ್‌ಸ್ಪೆಕ್ಟರ ವಿಷಯ ಅಲ್ಲ ಹೇಳೋದು ಇನ್‌ಸ್ಪೆಕ್ಟ್ರಾಣಿಯ ವಿಷಯ. ಕಟ್ಟಿಕೊಂಡೋಳಿಗಿಂತ ಇಟ್ಟುಕೊಂಡೋಳ ಜೋರು ಜಾಸ್ತಿ. ನಮ್ಮ ಇನ್‌ಸ್ಪೆಕ್ಟ್ರಾಣಿ ಇಟ್ಟುಕೊಂಡೋಳು. ಕಟ್ಟಿಕೊಂಡೋಳ ಎಲ್ಲಿದ್ದಳೋ ಕಾಣೆ. ನನ್ನ ಅಮಲ್ದಾರ್ರಾಣಿಗೆ ಮೊದಲಿಂದಲೂ ದರ್ಬಾರು ಮಾಡಿ ಗೊತ್ತಿಲ್ಲ ಸಿನಿಮಾಕ್ಕೆ ಮುಂಚೆಯೇ ಕರೆದುಕೊಂಡು ಹೋದರು—ಎಲ್ಲಿಯಾದರೂ ಒಂದು ಸೀನೇನಾದರೂ ಮುಗಿದುಹೋದೀತೋ ಎಂದು. ಆಗ ಒಂದೊಂದು ಸೀನಿಗೂ ಮಧ್ಯೆ ನಿಲ್ಲಿಸಿ ಹೊಸ ರೀಲನ್ನು ಜೋಡಿಸಿ ಪರದೆಯ ಮೇಲೆ ಬಿಡಬೇಕಾಗಿತ್ತು. ಅಂತಹ

ಸಿನೇಮಾ ನೋಡಿದ ಭಾಗ್ಯ ನಮ್ಮದು ! ಹೀಗೆ ನಾಲ್ಕೈದು ಸೀನು ಆದಮೇಲೆ ಭಾಗ್ಯ ಲಕ್ಷ್ಮಿ–ಇನ್‌ಸ್ಪೆಕ್ಟ್ರಣಿಯ ಹೆಸರು ಅದು–ದಯಮಾಡಿಸಿದರು. ದಫೇದಾರನೊಬ್ಬ ಒಂದು ಬೆತ್ತದ ಕುರ್ಚಿ ಹೊತ್ತುಕೊಂಡು ಬಂದು ನಾವಿದ್ದ ಕಡೆ ನಮ್ಮ ಮುಂದೆ ಹಾಕಿದ. ಗಜಗಮನೆಯಾದ ಇನ್‌ಸ್ಪೆಕ್ಟ್ರಣಿ ನಿಧಾನವಾಗಿ ದಯಮಾಡಿಸಿ (ಆ ನಿಧಾನಕ್ಕೆ ಮೈಮೇಲೆ ಹೇರಿಕೊಂಡಿದ್ದ ಹೇರಳವಾದ ಆಭರಣಗಳೂ ಕಾರಣವಾಗಿದ್ದುವು) ಸುತ್ತ ಮುತ್ತ ನೋಡಿ ಮೂಗು ಸಿಂಡರಿಸಿ ಪೀಠದಲ್ಲಿ ಮಂಡಿಸಿದರು. ಸಿನೇಮಾ ಮೊದಲಿನಿಂದ ಶುರುವಾಯಿತು ! 'ರೆಡ್ಡೊಚ್ಚಿ ಮೊದಲೊಟ್ಟು' (ರೆಡ್ಡಿ ಬಂದ್ರು ಮೊದಲಿಂದ ಶುರು ಮಾಡು) ಎಂಬಂತೆ ಇನ್‌ಸ್ಪೆಕ್ಟ್ರಣಿ ಯಾವಾಗ ಬರಲಿ ಮತ್ತೆ ಶುರುವಾಗಬೇಕಾಗಿತ್ತು. ಹಾಗೆ ಆಯಿತು ಆ ದಿನ. ಪ್ರೇಕ್ಷಕರ ಆಕ್ಷೇಪಣೆ ಏನೂ ಇರಲಿಲ್ಲ. ಏಕೆಂದರೆ, ಪುಗಸಟ್ಟೆ ಇನ್ನೊಂದು ಸಲ ನೋಡುವ ಪುಣ್ಯವನ್ನು ಅವರೇಕೆ ಕಳೆದುಕೊಳ್ಳಬೇಕು ! ಅಧಿಕಾರ ಅಂದರೆ ಹೀಗಿರಬೇಕು !

ಇನ್ನು ಬಸ್ಸುಗಳ ಮೇಲೂ ನಮ್ಮ ಅಧಿಕಾರ ಮತ್ತಷ್ಟು ಜೋರಾಗಿತ್ತು. ಆಗ ಇದ್ದವುಗಳು ಒಂದೆರಡು ಬಸ್ಸುಗಳು. ಅಡ್ಡಡ್ಡಲಾಗಿ ಸಾಲು ಸೀಟುಗಳನ್ನು ಜೋಡಿಸಿದ್ದ ಆ ಬಸ್ಸುಗಳನ್ನು ಹತ್ತೂಕಡೆಗಳಿಂದ ಹತ್ತಬಹುದಾಗಿತ್ತು. ಇಳಿಯಬಹುದಾಗಿತ್ತು. ಅದೆಲ್ಲಾ ಸಾಮಾನ್ಯರಿಗೆ. ಅಮಲ್ದಾರರೂ ಪೋಲೀಸ್ ಇನ್‌ಸ್ಪೆಕ್ಟರೂ ಹತ್ತುತಿದ್ದುದು ಒಂದೇ ಕಡೆ. ಅದು ಡ್ರೈವರಿನ ಬಳಿ ಇದ್ದ ಸೀಟಿನ ಕಡೆಯಿಂದ. ಈ ಸೀಟು ಯಾವಾಗಲೂ ರಿಸರ್ವ್. ಈ ರಿಸರ್ವ್ ಸೀಟಿನಲ್ಲಿ ನಾವು ಬಸ್‌ಸ್ಟ್ಯಾಂಡಿಗೆ ಹೋಗಿ ಕುಳಿತುಕೊಳ್ಳಬೇಕಾಗಿರಲಿಲ್ಲ. ಬಸ್‌ಸ್ಟ್ಯಾಂಡೇ ಇರಲಿಲ್ಲ. ಹೊರಡುವುದು ಬರುವುದು ಇಷ್ಟು ಹೊತ್ತಿಗೆ ಎಂಬ ನಿಯಮವೂ ಇರಲಿಲ್ಲ. ಜನರನ್ನು ಕುಳ್ಳಿರಿಸಿಕೊಂಡು ಬಸ್ಸು ಅಮಲ್ದಾರರ ಮನೆ ಹತ್ತಿರ ಬರಬೇಕು. ಬರಲು ಜಾಗ ಇಲ್ಲದಿದ್ದರೂ ಹೇಗೋ ಜಾಗ ಮಾಡಿಕೊಂಡು ಬಂದು ಗೇಟ್ ಬಳಿ ಸರಿಯಾಗಿ ನಿಲ್ಲಿಸಬೇಕು–ರಿಸರ್ವ್ ಸೀಟು ಗೇಟಿನ ಕಡೆ ಇರುವಂತೆ. ಹಾರನ್ ಮಾಡಕೂಡದು. ಏಕೆಂದರೆ, ಅದು ಸಾಹೇಬರ ನಿದ್ರೆಗೆ ಭಂಗವಾಗುತ್ತಿತ್ತು. ಆಗಿನ ಹಾರನ್ ಈಗೆಲ್ಲಿ ಬರಬೇಕು ! ಹಾರನ್‌ಗಳೆಲ್ಲಾ ಹೊರಗೆ. ಸರ್ಪದಂತಹ ಹಾರನ್ ಡ್ರೈವರು ಕುಳಿತುಕೊಳ್ಳುವ ಸ್ಥಳದಿಂದ ಇಂಜಿನ್ ಕೊನೆಯವರೆಗೂ ಹೋಗಿ, ರಬ್ಬರ್ ಬಲ್ಬನ್ನು ಅಲ್ಲಿ ಅದುಮಿದರೆ ಇಲ್ಲಿ ಎಮ್ಮೆ ಕರ ಅರಚಿದಂತೆ ಶಬ್ದಮಾಡುತ್ತಿತ್ತು. ಅಷ್ಟೇನೂ ಕರ್ಕಶವಲ್ಲದಿದ್ದರೂ ಅದನ್ನೂ ಮಾಡಬಾರದು ಅಮಲ್ದಾರರ ಮನೆಯ ಬಳಿ. ಬಸ್ಸು ಬಂದು ನಿಂತ ಮೇಲೆ ಸಾಹೇಬರು ಎದ್ದು ಮುಖ ಮಜ್ಜನಮಾಡಿ, ಉಡುಪು ಧರಿಸಿ (ಅವನ್ನು ಧರಿಸುವುದಕ್ಕೇ ಒಬ್ಬ ಸೇವಕ) ಅಮಲ್ದಾರ್ರಣಿಯವರು ಕೊಟ್ಟಂತಹ ವೀಳೆಯವನ್ನು ಸಿಧಾನವಾಗಿ ಸೇವಿಸಿ, ಅವರು ಹಳ್ಳಿಗಳಿಂದ ತರಬೇಕೆಂದು ಹೇಳಿದ ಸಾಮಾನುಗಳ ಪಟ್ಟಿಯನ್ನು ಜೇಬಿನಲ್ಲಿಟ್ಟು ಲೀವಿಯಿಂದ ಹೊರಬಂದರೆ ಇಡೀ ಬಸ್ಸಿನ ಜನ ಡ್ರೈವರ್ ಸಮೇತ ಇಳಿದು ಮಹಾಸ್ವಾಮಿಗಳನ್ನು

ಇದ್ದುದರಲ್ಲಿ ಒರೆಸಿ 'ಕ್ಲೀನ್' ಮಾಡಿ ಮೇಲೊಂದು ಮಡಿಬಟ್ಟೆ ಹಾಸಿದ ಸಿಂಹಾಸನದಲ್ಲಿ
ಕುಳ್ಳಿರಿಸಿ, ಅವರ ದಫೇದಾರರನ್ನು ಹಿಂದೆ ಕುಳ್ಳಿರಿಸಿ ಅವನ ಬಳಿ ಅಡುಗೆಪೆಟ್ಟಿಗೆ, ಹಾಸಿಗೆ
ಮುಂತಾದ ಒಂದು ಗಾಡಿಯಷ್ಟು ಸಾಮಾನನ್ನು ಅಲ್ಲಾಡದಂತೆ ಇಟ್ಟು ಅಡುಗೆಯವನೂ
ಕುಳಿತುಕೊಂಡಮೇಲೆ ಉಳಿದವರೆಲ್ಲಾ ಕುಳಿತುಕೊಂಡು ನಿಧಾನವಾಗಿ ಕುಡಿದ ನೀರು
ಅಲ್ಲಾಡದಂತೆ ಹೋಗಬೇಕು. ಇದೆಲ್ಲಿ, ಈಗಿನಂತೆ ಬಸ್‌ಸ್ಟ್ಯಾಂಡಿಗೆ ಹೋಗಿ ಕಂಡಕ್ಟರಿಗೆ
ಸಲಾಮು ಹಾಕಿ ಅವನು ಅಂದದ್ದು ಆಡಿದ್ದನ್ನೆಲ್ಲಾ ಕೇಳಿಸಿಕೊಂಡು 'ಸ್ಟ್ಯಾಂಡಿಂಗ್
ಸೀಟ್'ನಲ್ಲಿ ಹೋಗುವ ಇಂದಿನ ತಹಸೀಲ್ದಾರನ ಸ್ಥಿತಿ ಎಲ್ಲಿ ? ಇದನ್ನೆಲ್ಲಾ ಗಮನಿಸಿಯೇ
ಅಮಲ್ದಾರರು ಕುದುರೆ ಇಡಬೇಕೆಂದು ಹಿಂದಿನವರು ಮಾಡಿದ್ದು ಎಂದು ಕಾಣುತ್ತೆ.
ಕುದುರೆ ಇದ್ದರೆ ಯಾವಾಗೆಂದರೆ ಆಗ ಹೋಗಬಹುದು ; ಎಲ್ಲಿಗೆಂದರೆ ಅಲ್ಲಿಗೆ ಹೋಗ
ಬಹುದು.

ಕುದುರೆ ಇಲ್ಲದ ನಾನು ಮೊದಲು ಒಂದು ವಾರ ಸಂಚಾರಕ್ಕೆ ಹೊರಟಾಗ
ಬಸ್ಸಿನಲ್ಲಿ ಹೋಗಿ ಆ ವೈಭವದ ಪ್ರಯಾಣ ಮಾಡಿದ್ದೆ. ಇಷ್ಟರಲ್ಲಿ ನನ್ನ ಹಳೇ
ಷೇಕ್‌ದಾರಿ ಸೈಕಲನ್ನು ರಿಪೇರಿ ಮಾಡಿಸಿದ್ದೆ. ಆ ಸೈಕಲನ್ನು ಉಪಯೋಗಿಸಲೇ
ಬೇಕಾದ ತುರ್ತು ಸಂದರ್ಭ ಒಂದು ಒದಗಿಬಂದಿತು. ಸಂಕಲೀಪುರ ಎಂಬ
ಎಪ್ಪತ್ತು ಮನೆಗಳ ಊರು ಬೆಂಕಿಯಲ್ಲಿ ಸುಟ್ಟುಹೋಯಿತೆಂಬ ಸುದ್ದಿ ಬಂದಿತು.
ಆ ಕಡೆಗಿದ್ದ ಒಂದು ಬಸ್ಸು ಹೊರಟುಹೋಗಿತ್ತು. ಗಾಡಿ ಮೇಲೆ ಹೋದರೆ
ಒಂದು ದಿನ ಹಿಡಿಯುತ್ತಿತ್ತು. ಸರಿ, ಸೈಕಲ್ ಹತ್ತಿದೆ. ಹದಿನೆಂಟು ಮೈಲಿ ದೂರ
ವನ್ನು ಎರಡೇ ಗಂಟೆಯಲ್ಲಿ ಮುಗಿಸಿ ಸುಟ್ಟ ಊರಿಗೆ ಹೋದೆ. ಊರೆಲ್ಲಾ ಭಸ್ಮ
ವಾಗಿತ್ತು. ಹತ್ತಾರು ಜಾನುವಾರುಗಳೂ ಸತ್ತಿದ್ದುವು. ಜನರು ಇದ್ದು ಬದ್ದದ್ದನ್ನೆಲ್ಲಾ
ಕಳೆದುಕೊಂಡು ನಿರ್ಗತಿಕರಾಗಿದ್ದರು. ಅಮಲ್ದಾರರನ್ನು 'ತಳದ ತಾಯಿ' ಎಂದು ಕರೆ
ಯುತ್ತಿದ್ದರು. ತಾಯಿಯ ಹತ್ತಿರ ಮಕ್ಕಳು ಅಳುವಂತೆ ಆ ಜನ ಗೋಳೋ ಎಂದು
ಅತ್ತರು. ಮನಸ್ಸು ಕರಗಿ ನೀರಾಯಿತು. ಆಗ ಬೆಂಕಿಯಲ್ಲಿ ನೊಂದವರಿಗೆ ಕೊಡುತ್ತಿ
ದ್ದುದು ಹತ್ತಿಪ್ಪತ್ತು ರೂಪಾಯಿ. ಅದೂ ಸಿಕ್ಕಬೇಕಾದರೆ ಇನ್ನೊಂದು ಸಲ ಬೆಂಕಿ
ಹತ್ತಿಕೊಂಡಾಗಲೇ ! ನೊಂದವರಿಗೆ ಸಮಾಧಾನ ಹೇಳಿ ಕಸಬೆಗೆ ಹಿಂದಿರುಗಿದೆ. ಆಗಿದ್ದ
ಅನಾಹುತವನ್ನು ವರ್ಣಿಸಿ (ನನ್ನ ಕನ್ನಡ ಈಗ ಉಪಯೋಗಕ್ಕೆ ಬಂದಿತ್ತು) ಒಂದು
ಮನವಿ ಹೊರಡಿಸಿದೆ. ಹರಿಹರ ಮತ್ತು ದಾವಣಗೆರೆ ವರ್ತಕರನ್ನೂ ಬೇರೆ ಅನು
ಕೂಲಸ್ಥರನ್ನೂ ಕಂಡೆ. ಎಲ್ಲರೂ ಮುಕ್ತಹಸ್ತದಿಂದ ಕೊಟ್ಟರು ಆರು ಲಾರಿ ತುಂಬ ಗಳು
ಬೊಂಬು, ಜಿಂಕ್‌ಶೀಟು, ಮೂರು ಲಾರಿ ತುಂಬ ದವಸ ಧಾನ್ಯ, ಒಂದು ಲಾರಿ
ತುಂಬ ಬಟ್ಟೆಬರೆ ಹೇರಿಸಿಕೊಂಡು ಬಂದೆ. ದಾನಕೊಟ್ಟವರನ್ನೆಲ್ಲಾ ಆ ಊರಿಗೆ ಕರೆದು
ಕೊಂಡು ಹೋಗಿ ಅವರಿಂದಲೇ ಆ ನತದೃಷ್ಟರಿಗೆ ಹಂಚಿಸಿದೆ. ಎಲ್ಲರೂ ಮನೆಗಳನ್ನು
ಹೊಸದಾಗಿ ಕಟ್ಟಿಕೊಂಡರು. ಮುಂದಿನ 'ಪೀಕು' ಬರುವವರೆಗೆ ಬೇಕಾದ ದವಸ

ಧಾನ್ಯಗಳನ್ನು ಮನೆಯಲ್ಲಿ ಹಾಕಿಕೊಂಡರು. ನನ್ನನ್ನು ಕೃತಜ್ಞತೆಯಿಂದ ಕೈಮುಗಿದು ಕಳುಹಿಸಿಕೊಟ್ಟರು. ಇದು ನಾನು ಹರಿಹರಕ್ಕೆ ಹೋದ ಹತ್ತು ದಿವಸಗಳಲ್ಲಿ ನಡೆದು ಹೋಯಿತು. ಅಂದಿನಿಂದ ನನಗೆ ಅಧಿಕಾರವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಪಾಠ ಆಯಿತು. ಬೆಂಕಿ ಅನಾಹುತಗಳು ಆಗಾಗ್ಗೆ ಆಗುತ್ತಲೇ ಇದ್ದುವು. ಆಮೇಲೆ ಅದಕ್ಕಾಗಿ ಒಂದು ನಿಧಿಯನ್ನೇ ಏರ್ಪಡಿಸಿದೆ.

ಸೈಕಲ್ ಸವಾರಿ ನನಗೆ ಹಿತವಾಯಿತು. ಹರಿಹರ ಸಣ್ಣ ತಾಲ್ಲೂಕು. ಎರಡೇ ಹೋಬಳಿಗಳು. ಒಂದುದಿನ ಒಂದು ಹೋಬಳಿಯನ್ನು ಇನ್ನೊಂದು ದಿನ ಇನ್ನೊಂದು ಹೋಬಳಿಯನ್ನು ಸುತ್ತಿಬರುವ ಸಾಹಸವನ್ನು ಮಾಡಿದೆ. ಆಗ, ಕೇವಲ 120 ಪೌಂಡು ಗಳಿದ್ದ ನನಗೆ ಅದು ಸಾಧ್ಯವಾಯಿತು. ತೀರಾ ಒಳಹಳ್ಳಿಗಳಿಗೆ, ಅದರಲ್ಲೂ ಮಳೆಗಾಲ ದಲ್ಲಿ, ಸೈಕಲ್ ಮೇಲೆ ಹೋಗಲು ಆಗುತ್ತಿರಲಿಲ್ಲ. ಹೋದರೆ ಆ ಎರೆಸೀಮೆಯಲ್ಲಿ ಸೈಕಲ್ ಟೈರು ಕಾರ್ ಟೈರ್ ಆಗುತ್ತಿತ್ತು. ಆಗ ಗಾಡಿಯ ಮೇಲೆ ಪ್ರಯಾಣ. ಇಂಥ ಊರಿಗೆ ಎಂದು ಪ್ರೋಗ್ರಾಂ ಹಾಕಿದರೆ ಅಲ್ಲಿಂದ ಗಾಡಿ ಬರುತ್ತಿತ್ತು. ಗುಡಾರ ಹೊದಿಸಿ ಹಂಗಾಮಿಯಾಗಿ ಕಟ್ಟಿದ ಕಮಾನು. ಗೂಟದವರೆಗೂ ತುಂಬಿದ ಹುಲ್ಲು. ಅದರ ಮೇಲೆ ಹಾಸಿಗೆ. ಅದರ ಮೇಲೆ ಜಮಖಾನ ಅಥವಾ ಗುಡಾರ. ಒರಗಲು ದಿಂಬು. ಗೆಜ್ಜೆಸರ ಕಟ್ಟಿದ ಎತ್ತುಗಳು. ಮುಂದೆ ಕೊಂಬು ಕಹಳೆ. ಹಿಂದೆ ಗಾಡಿ ಹಿಡಿಯಲು ತೋಟಿ ತಳವಾರರು. ನಿಂತಕಡೆ ನಿಂಬೆಹಣ್ಣು ಬಾಳೆಹಣ್ಣು ಪಾನಕ ಪಣ್ಯಾರಗಳು, ಹಾರ ತುರಾಯಿಗಳು. ಊರಿನ ಚಾವಡಿಯಲ್ಲಿ ಬಿಡಾರ. ಯಾವತ್ತೂ ಕಾಣದ ಸುಣ್ಣ ಬಣ್ಣ ಸಾರಣೆ ಅದಕ್ಕೆ. ಚಾವಡಿಯ ಒಂದು ಭಾಗ ಮರೆಮಾಡಿದ ಶಯನಸ್ಥಳ. ಊರಿನಲ್ಲಿ ಸಿಕ್ಕಬಹುದಾದ ತಿಗಣೆ ಗಿಗಣೆ ಇಲ್ಲದ ಮಂಚ. ಒಂದು ಕಾಲಿಲ್ಲದಿದ್ದರೆ ಅದಕ್ಕೆ ಏನಾದ ರೊಂದು ಊರೆ. ಅದರ ಮೇಲೆ ಹಾಸಿಗೆ. ಪಟೇಲರ ಮನೆಯ ಹೆಣ್ಣುಮಕ್ಕಳು ಕಸೂತಿ ಹಾಕಿದ ತಲೆದಿಂಬು. ಷಡ್ರಸ ಭೋಜನ. ಮಲಬಾಧೆ ಜಲಬಾಧೆ ತೀರಿಸಿಕೊಳ್ಳಲು ಪಕ್ಕದಲ್ಲಿಯೇ ಕಟ್ಟಿಸಿದ ಒಲೆ ಕಕ್ಕಸು. ಮೊಕ್ಕಾಂ ಮಾಡಿದರೆ ಸಂಜೆ ಕೋಲಾಟ ಅಥವಾ ಏನಾದರೊಂದು ಹಳ್ಳಿಯ ಕಲಾಪ್ರದರ್ಶನ. ಹೇಳಿದ ಕೆಲಸ ಸಲೀಸು, ಕಂದಾಯ ಕವಳಿಗೆ ನೂರಕ್ಕೆ ನೂರು ವಸೂಲಿ. ತಪ್ಪದೆ ಸೋಮವಾರದ ಕೆಲಸ. ಹಾಳುಗೋಡೆ ಗಳ ನಿರ್ನಾಮ. ಮನೆಗಳಿಗೆ ಸುಣ್ಣ ಬಣ್ಣ, ರಸ್ತೆ ಕೆಲಸ, ಗುಂಡಿ ಗೊಟಾರಗಳಿಗೆ ಮಣ್ಣುಭರ್ತಿ, ಇಂಗುಬಚ್ಚಲುಗಳು. ಕಾಂಪೋಸ್ಟ್ ಗುಂಡಿಗಳು. ಇಷ್ಟೆಲ್ಲಾ 'ದರ್ಬಾರು' ಮಾಡಿದೆ, ಕೆಲಸಮಾಡಿದೆ ಐದುವರ್ಷಗಳ ಅಮಲ್ದಾರಿ ಕಾಲದಲ್ಲಿ. ಅಧಿಕಾರ ಹೆಚ್ಚುತ್ತಾ ಹೋದಂತೆ ಜನರ ಸಂಪರ್ಕ ಕಡಮೆಯಾಗುತ್ತಾ ಹೋಗುತ್ತದೆ. ಸಂಪರ್ಕ ಮಾಡಿ ಕೊಳ್ಳುವ ಜನರೂ ಬೇರೆ ತರಹ. ಹಳ್ಳಿಗಳಿಗೆ ನಿಜವಾದ ತಾಯಿಯೆಂದರೆ ಅಮಲ್ದಾರ ಒಬ್ಬನೇ. ಡೀಸಿ ಜಿಲ್ಲೆಗೆ ತಂದೆ. ಆದರೆ ತಂದೆ ತಾಯಿಯರಲ್ಲಿ ಎಷ್ಟು ವ್ಯತ್ಯಾಸವೋ ಅಷ್ಟೇ ವ್ಯತ್ಯಾಸ ಡೀಸಿ ಮತ್ತು ಅಮಲ್ದಾರರುಗಳಲ್ಲಿ.

ನಾನೆಂದೂ ಮೇಲಾಧಿಕಾರಿಗಳಿದ್ದರೆ, ಅವರು ಹೇಳಿದಷ್ಟನ್ನೇ ಮಾಡಬೇಕೆಂಬ ಭಾವನೆ ಹೊಂದಿದವನಲ್ಲ. ಇಂದು ಬಂದು ನಾಳೆ ಹೋಗುವ ಮಂತ್ರಿಮಂಡಲದ ಮರ್ಜಿ ಹಿಡಿದವನಲ್ಲ. ಬೇಕಾದ್ದನ್ನು ತಂದುಕೊಟ್ಟರೆ ಮಕ್ಕಳಿಗೂ ಗಂಡನಿಗೂ ಬೇಕುಬೇಕಾದ ರುಚಿರುಚಿಯಾದ ಅಡುಗೆಮಾಡಿ ಬಡಿಸುವ ಗೃಹಿಣಿಯಂತಹ ಸ್ವಭಾವ ನನ್ನದು. ನಾನೇ ಕೆಲಸಗಳನ್ನು ಹುಡುಕಿಕೊಂಡು ಹೋಗುತ್ತಿದ್ದೆ. ಕೆಲಸ ಎಂದರೆ ರಸದಾಳಿ ಕಬ್ಬು ನನಗೆ. ನಾನು ಮಾಡಿದ ಅನೇಕ ಕೆಲಸಗಳು ರೂಲ್ಸು ರೆಗ್ಯುಲೇಷನ್ನಲ್ಲಿ ಇದ್ದವುಗಳಲ್ಲ. ಇದ್ದವುಗಳನ್ನು ನಿಷ್ಠೆ ನೇಮದಿಂದ ಮಾಡುತ್ತಿದ್ದೆ. ಆಗತಾನೇ ಸುಮಾರಾಗಿ ಕಂಟ್ರೋಲ್ ಬಂದಿತ್ತು. ಗ್ರೈನ್ ಪರ್ಚೇಜಿಂಗ್ ಆರ್ಡರು ಜಾರಿಗೆ ತರಲಾಗಿತ್ತು. ಆಗ ರಾಗಿ ಜೋಳ ಪಲ್ಲಕ್ಕೆ ಏಳೆಂಟುರೂಪಾಯಿ ! ನಾನಿದ್ದ ಕಡೆ ರಾಗಿ ಬೆಳೆದರೂ ಅದನ್ನು ದನಗಳಿಗೆ ಗಂಜಿಮಾಡಿ ಹಾಕುತ್ತಿದ್ದರು. ಜೋಳ ಸಜ್ಜೆ ನವಣೆಗಳನ್ನಷ್ಟೇ ತಿನ್ನುತ್ತಿದ್ದುದು. ಯುದ್ಧದ ಕಾಲ. ಹೇರಳವಾಗಿ ದವಸ ಸಂಗ್ರಹಿಸಬೇಕೆಂದು ಸರ್ಕಾರದ ಆಜ್ಞೆಯಾಯಿತು. ಸರಿ, ಹೊರಟೆ. ಊರೂರು ತಿರುಗಿ ಸಾವಿರಸಾವಿರ ಪಲ್ಲ ಜೋಳ ಸಂಗ್ರಹಿಸಿದೆ. ಒಂದು ಊರಿಗೆ ಹೋದರೆ ಸಾಕು, ಬೀದಿಯಲ್ಲಿ ಉಬ್ಬಿದ್ದ ಸ್ಥಳಗಳೆಲ್ಲಾ ಹಗೇವುಗಳು. ಅವನ್ನು ಕೀಳಿಸಿ, ಈಚೆಗೆ ಜೋಳ ಹಾಕಿಸಿ, ಅಳೆದು ಚೀಲಗಳಿಗೆ ತುಂಬಿಸಿದ್ದೂ ತುಂಬಿಸಿದ್ದೆ. ಒಂದುದಿನ ಒಂದುಸಾವಿರ ಚೀಲ ಜೋಳ ಅಳೆದು ಡೀಸಿಯವರಿಗೆ ಟೆಲಿಗ್ರಾಂ ಕಳುಹಿಸಿದೆ–ಅವರ ಆಜ್ಞೆಯಂತೆ ಮಾರು ಟೆಲಿಗ್ರಾಂ ಬಂತು ; 'Congratulations keep it up' ಎಂದು,

ದವಸ ಧಾನ್ಯಗಳು ದನಕರುಗಳು ಸಂಸ್ಥಾನದ ಹೊರಗೆ ಹೋಗಕೂಡದೆಂಬ ಆಜ್ಞೆ ಇತ್ತು. ಆದರೆ ಕಳ್ಳತನದಿಂದಲೂ, ನಮ್ಮ ಪೋಲೀಸ್ ಇನ್ಸ್ಪೆಕ್ಟರ ಕುಮ್ಮಕ್ಕಿನಿಂದಲೂ, ಎಷ್ಟೋ ಸಾಗಿಹೋಗುತ್ತಿತ್ತು. ಅದನ್ನು ತಪ್ಪಿಸಲು ನಾನು ಮೂರು ಹಗಲು ಮೂರು ರಾತ್ರಿ ಏಕಾಂಗಿಯಾಗಿ ಗಾಡಿಯಲ್ಲಿ ಹೊರಟು ನದೀ ದಡದ ಊರುಗಳನ್ನೆಲ್ಲಾ ಸುತ್ತಿದೆ, ಹಿಂಡು ಹಿಂಡಾಗಿ ದನಗಳನ್ನು ಹಿಡಿದೆ. ಮೂಟೆಕಟ್ಟಿ ನದೀ ದಡದಲ್ಲಿ ಒಟ್ಟಿದ್ದ ಜೋಳವನ್ನು ವಶಪಡಿಸಿಕೊಂಡೆ. ಜನರು ದನಗಳ ಹಗ್ಗಗಳನ್ನು ಕೊಂಬಿಗೆ ಸುತ್ತಿ ನದಿಯಲ್ಲಿ ಈಜುಬಿಡುತ್ತಿದ್ದರು. ಅವು ನದಿ ದಾಟಿ ಆ ಕಡೆ ಹೋದರೆ ಅಲ್ಲಿ ಅವನ್ನು ಹಿಡಿದು ಕೊಳ್ಳುತ್ತಿದ್ದರು. ಹರಿಗೋಲಿನಲ್ಲಿ ಚೀಲಗಳನ್ನು ಹೇರಿ ತೇಲಿಬಿಡುತ್ತಿದ್ದರು. ಆ ಕಡೆ ದಡದಲ್ಲಿ ಕಾಯುತ್ತಿದ್ದವರು ಅವನ್ನು ದಡಕ್ಕೆ ಎಳೆದುಕೊಳ್ಳುತ್ತಿದ್ದರು. ಆದರೂ ನಾನು ಮಾಡುವ ಕೆಲಸ ಮಾಡಿ ಹತ್ತು ಪೇಜಿನ ವರದಿ ಕಳುಹಿಸಿದೆ. ಡೀಸಿಯವರಿಗೆ. ಆ ಹತ್ತು ಪೇಜುಗಳು ಕೈಯಿಂದ ಬರೆದದ್ದು. ಟೈಪ್‌ರೈಟರ್ ಇಲ್ಲ. ಸರಿಯಾಗಿ ಕಾಪಿ ಮಾಡಲು ಇಂಗ್ಲಿಷ್ ಬಲ್ಲವರಿಲ್ಲ. ಆಗ ಹೆಚ್ಚಾಗಿ ಪತ್ರವ್ಯವಹಾರ ಕನ್ನಡದಲ್ಲಿ. ನನ್ನ ವರದಿ ನೋಡಿ ಡೀಸಿಯವರು ಬರೆದ ಪತ್ರ ಅತ್ಯಂತ ಸಂತೋಷವನ್ನುಂಟುಮಾಡಿತು. ಇಂಥವುಗಳನ್ನು ನಾನು ಇಟ್ಟು ಕೊಂಡಿದ್ದರೆ ಚೆನ್ನಾಗಿತ್ತು. ಆದರೆ ಅವು ಈಗ ಬೇಕಾಗುತ್ತವೆಯೆಂದು ಆಗ ಅನ್ನಿಸಲಿಲ್ಲ. ಈಚೆಗೆ ಹರಿಹರ

ಮುಂತಾದ ಕಡೆ ಹೋಗಿ ರಿಕಾರ್ಡುರೂಮುಗಳಲ್ಲಿ ತಡಕಿದೆ. ಅವೇನು ರಿಕಾರ್ಡುರೂಮು ಗಳೇ! ಅವ್ಯವಸ್ಥೆ ಹೇಳತೀರದು. ಯಾವುದು ಉತ್ತಮವಾದರೂ ತಾಲ್ಲೂಕು ಕಛೇರಿ ಗಳು ಉತ್ತಮವಾಗಲಿಲ್ಲ. ಯಾರಿಗೆ ಏನು ಅನುಕೂಲ ಮಾಡಿಕೊಟ್ಟರು ತಹಸೀಲ್ದಾರ ರಿಗೆ ಅನುಕೂಲ ಮಾಡಿಕೊಟ್ಟಿಲ್ಲ. ಹರಿಹರದಲ್ಲಿ ಎಲ್ಲರಿಗೂ ಕ್ವಾರ್ಟರ್ಸ್‌ಗಳಿವೆ. ಆದರೆ ಈಗ ಅವರಿಗೆ ಆ ಹಳೆ ಹೆಗ್ಗಣದ ಮನೆಯೂ ಇಲ್ಲ. ಇದು ಬಹುತೇಕ ತಾಲ್ಲೂಕುಗಳಲ್ಲಿ ಇರುವ ಸ್ಥಿತಿ. ಆದರೆ ಯಾವುದಕ್ಕೂ ಅವರಿರಬೇಕು. ಯಾವ ಮಂತ್ರಿಗಳು ಬರಲಿ ಅವರು ಹಾಜರಿದ್ದು ಅಜೂಜಿ ನೋಡಬೇಕು. ಬಂದ 'ಸೆಂಟರಿಪ್ಪ'ರಿಗೆಲ್ಲಾ ಊಟೋಪ ಚಾರ ನಡೆಸಬೇಕು. ಬೇರೆ ಇಲಾಖೆಯವರೆಲ್ಲ ಮೆಹರ್ಬಾನಿ ಪಡೆಯಬೇಕು. ಹೆಚ್ಚು ಕಮ್ಮಿ ಆದರೆ ತಹಸಿಲ್ದಾರನ ತಲೆಗೆ ಕಟ್ಟಬೇಕು. ನಾನು ಮಂಗಳೂರಿನಲ್ಲಿ ಡೀಸಿಯಾಗಿದ್ದಾಗ ಈ ವಿಪರ್ಯಾಸವನ್ನು ಸರ್ಕಾರಕ್ಕೆ ತಿಳಿಸಿ ಆಯಾ ಮಂತ್ರಿಗಳ ಯೋಗಕ್ಷೇಮವನ್ನು ಆಯಾ ಇಲಾಖೆಯ ಅಧಿಕಾರಿಗಳೇ ನೋಡಿಕೊಳ್ಳುವಂತೆ ಮಾಡಿದೆ. ಇದರಿಂದ ಮಂತ್ರಿಗಳಿಗೂ ಅನುಕೂಲವಾಯಿತು. ಒಂದೇ ಅಡುಗೆಯ ಬದಲು ಹಲವಾರು ಬಗೆಯ ಅಡುಗೆ ರುಚಿ ನೋಡುವಂತಾಯಿತು.

ಮೊದಮೊದಲು ಹಳ್ಳಿಗಳಿಗೆ ಮೊಕ್ಕಾಂ ಹೋದಾಗ ನನ್ನ ಅಡುಗೆ ನಾನೇ ಮಾಡಿಸಿಕೊಳ್ಳುತ್ತಿದ್ದೆ. ಮನೆಯಿಂದಲೇ ಉಪ್ಪು ಹುಣಸೆ ಹಣ್ಣುಗಳನ್ನು ತೆಗೆದುಕೊಂಡು ಹೋಗುತ್ತಿದ್ದೆ. ಅಡುಗೆಯವನು ಮುಂಚೆಯೇ ಹೋಗಿ ಅಡುಗೆ ತಯಾರಿಸುತ್ತಿದ್ದ. ಹಾಲು ಮೊಸರಿಗೆ ದುಡ್ಡು ಕೊಡುತ್ತಿದ್ದೆ. ಹಿಂದಿನ ಕಾಲದಲ್ಲಿ ಹಾಲು ಮೊಸರನ್ನು ಮಾರುತ್ತಿರಲಿಲ್ಲ. ನಾನು ಹಾಲು ಮೊಸರಿಗೆ ದುಡ್ಡು ಕೊಡುವುದು ಅನೇಕರಿಗೆ ಬೇಜಾರನ್ನುಂಟುಮಾಡುತ್ತಿತ್ತು. ಒಂದು ದಿನ ಒಬ್ಬರು ಪಟೇಲರು ಧೈರ್ಯಮಾಡಿ ಹೇಳಿಬಿಟ್ಟರು: 'ನೀವು ಕೊಡೋದು ನ್ಯಾಯವಾದ್ರೂ ನಾವು ತಕ್ಕೊಳ್ಳೋದು ನ್ಯಾಯವಲ್ಲ. ನೀವು ಕೊಡೋದ್ರಲ್ಲಿ ನಾವು ನಮ್ಮನೀಗೆ ಕಳಸ ಹಾಕೇವ? ಯಾಕಿಂಗ್ ಮಾಡ್ತೀರಿ? ನಮ್ಮನೇಲಿ ಮಕ್ಕಳು ಚೆಲ್ಲಾಡೋವಷ್ಟು ನೀವು ಊಟ ಮಾಡೋದಿಲ್ಲ. ಯಾಕೆ ಇಷ್ಟೆಲ್ಲಾ ತೊಂದರೆ, ನೀವಿಲ್ಲಿರೋದರೋಳಗೆ ಒಂದಿವಸ ಬಂದೀರಿ, ಎರಡುದಿವಸ ಬಂದೀರಿ ನಮ್ಮೂರಿಗೆ. ಆಮ್ಯಾಲೆ ನೀವೆಲ್ಲೋ ನಾವೆಲ್ಲೊ! ಇಲ್ಲಿರೋ ನಾಕು ದಿವಸ ನಮ್ಮನೇಲಿರೋ ಅಂಬಲಿ ತುಂಬೇಸೊಪ್ಪು ಹಾಕೋದಕ್ಕೆ ಅವಕಾಶ ಕೊಡಿ. ನಮ್ಮ ಮನಸಿಗೆ ಬೇಜಾರು ಮಾಡಬ್ಯಾಡಿ' ಎಂದರು. ಅವರು ಆ ಮಾತು ಹೇಳಿದಾಗ ಕಣ್ಣನ್ನು ಒರೆಸಿಕೊಂಡರು. ನನ್ನ ಮನಸ್ಸೂ ಕರಗಿತು. 'ಆಗಲಿ' ಎಂದೆ. ಅಂದಿನಿಂದ ನಗೆಗೆ ಹೊದೆಡೆಯಲ್ಲೆಲ್ಲಾ ಬೇಕು ಬೇಕಾದ ಊಟ. ಹಾಗೆ ಮಾಡದಿದ್ದರೆ ಹರಿಹರ ದಾವಣಗೆರೆ ಕಡೆಗಳ ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಎಣ್ಣೆಗಾಯಿ, ಕುರೇಸಾನಿ ಚಟ್ನಿ, ಮಾಲ್ದಿ, ಗಿಣ್ಣು ಮುಂತಾದ ರುಚಿ

ಊಟಗಳನ್ನು ಸವಿಯುವ ಅವಕಾಶ ಸಿಕ್ಕುತ್ತಿರಲಿಲ್ಲ. ನನ್ನ ಸೇವಾವಧಿಯಲ್ಲಿ ಎಷ್ಟು ತಾಯಂದಿರ ಕೈಯ ಅನ್ನ ಉಂಡಿದ್ದೇನೆಯೊ !

ಆಗ ಎಲ್. ಆರ್, ಕಲೆಕ್ಷನ್ ಎನ್ನುವುದು ರೆವಿನ್ಯೂ ಇಲಾಖೆಯ ಬೀಜಮಂತ್ರವಾಗಿತ್ತು. ಬೇರೆ ಏನಾರ ಮಾಡಲಿ ಅಥವಾ ಮಾಡದಿರಲಿ. ರೆವಿನ್ಯೂ ಕಂದಾಯ ಬೇಬಾಕಾಗಬೇಕು. ಫೆಬ್ರುವರಿ ತಿಂಗಳಿನಿಂದ ಆರಂಭವಾದ ವಸೂಲಿ ಮೇ ತಿಂಗಳಿನಲ್ಲಿ ನಲ್ಲಿ ಮುಕ್ತಾಯವಾಗುತ್ತಿತ್ತು. ತಿಂಗಳು ತಿಂಗಳ ಡಿ. ಸಿ. ಬಿ. (ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕಲ್ಲ, ಡಿಮ್ಯಾಂಡ್ ಕಲೆಕ್ಷನ್ ಬ್ಯಾಲೆನ್ಸ್) ತಪ್ಪದೇ ಹೋಗಬೇಕು. ಅದರ ಮೇಲೆ ಎಲ್ಲರ ಕಣ್ಣು. ಅದು ಹೋಗುವ ಮುನ್ನ ಕಲೆಕ್ಷನ್ ಎಷ್ಟು ಪರ್‌ಸೆಂಟ್ ಎಂದು ಟೆಲಿಗ್ರಾಂ ಹೋಗಬೇಕು, ಒಬ್ಬ ಅಮಲ್ದಾರನ ದಕ್ಷತೆ ಅವನ ಕಂದಾಯದ ವಸೂಲಿಯ ಮೇಲೆ ನಿರ್ಧಾರವಾಗುತ್ತಿತ್ತು. ಹೀಗಾಗಿ ಅಮಲ್ದಾರರುಗಳಲ್ಲೇ ಪೈಪೋಟಿ ಆಗ ಟ್ರೆಜರಿ ಅಮಲ್ದಾರರ ಹತೋಟಿಯಲ್ಲಿತ್ತು. ತಿಂಗಳು ತಿಂಗಳು ಟ್ರೆಜರಿ ಚೆಕ್ ಮಾಡಿ ಹಣ ಎಣಿಸಿ ಸಾಕಾಗಿ ಹೋಗುತ್ತಿತ್ತು. ಟ್ರೆಜರಿ ನಮ್ಮ ಕೈಯಲ್ಲಿದ್ದ ಕಾರಣ ತಿಂಗಳಾಖೈರಿಗೆ ಟ್ರೆಜರಿ ಲೆಕ್ಕ ಕ್ಲೋಸ್‌ಮಾಡುತ್ತಿರಲಿಲ್ಲ. ಐದು ದಿನ ಆರುದಿನ ಕೊನೆಗೆ ಹತ್ತು ದಿನಗಳ ತನಕ ಟ್ರೆಜರಿ 'open ಮಾಡಿ' ಇಟ್ಟುಕೊಳ್ಳುತ್ತಿದ್ದೆವು. ಆ ಊರಿನ ಪಟೇಲ ಇರಸಾಲ್ ತರಲಿಲ್ಲ. ಈ ಊರಿನ ಪಟೇಲ ಪತ್ತೇನೆ ಇಲ್ಲ. ಅವನ್ನ ಹಿಡತರಿಸು ಇವನ್ನ ಹಿಡತರಿಸು ಎಂಬ ತರದೂದುಗಳು ನಡೆಯುತ್ತಿದ್ದುವು. ರೆವಿನ್ಯೂ ಇನ್‌ಸ್ಪೆಕ್ಟರನ್ನು ಹಿಡಿಸಿ ಅವನ ಮನೆ ಜಫ್ತಿಮಾಡು. ಇವನ ಮನೆ ದನ ಹಿಡಿ ಎಂದು ಕೊನೆಗಳಿಗೆಯ ಹಾರಾಟಗಳು ಆಗುತ್ತಿದ್ದುವು. ಇಷ್ಟೆಲ್ಲಾ ಮಾಡಿ ಬಾಕಿಯೆಲ್ಲಾ ಬೇಬಾಕಾಯ್ತು, ನೂರಕ್ಕೆ ನೂರು ಕಲೆಕ್ಷನ್ ಆಯ್ತು ಎಂದು ಟೆಲಿಗ್ರಾಂ ಕಳುಹಿಸಿದಾಗ ಬಿ. ಟಿ. ಎಸ್. ಬಸ್ಸಿಗೆ ಕಾದು ಕಾದು ಸಾಕಾಗಿ ಕೊನೆಗೆ ನೂಕಾಡಿ ಸೀಟು ಪಡೆದಷ್ಟು ಸಂತೋಷವಾಗುತ್ತಿತ್ತು,

ಪಂಚಾಯ್ತಿ ಕಂದಾಯ ಈಗಿನಂತೆ ಆಗಲೂ ಮುಲ್ಕಿಬೀಳುತ್ತಿತ್ತು. ಹೊಸದಾಗಿ ಬಂದ ಮಂತ್ರಿಗಳೊಬ್ಬರು (ಎಲ್. ಸಿದ್ದಪ್ಪನವರು) ಅದರ ಮೇಲೆ ಕಣ್ಣು ಹಾಕಿದರು. ಅದರ ವಸೂಲಿಯನ್ನು ಅವರು ಖುದ್ದಾಗಿ ನೋಡಿಕೊಳ್ಳುತ್ತಿದ್ದರು. ಹಾತನ ಕಾಲದ ಬಾಕಿ; ನಿನ್ನೆ ಮೊನ್ನೆದಲ್ಲ. ಸರಿ, ನೋಡೋಣ ಒಂದು ಕೈ ಎಂದು ಅದರ ವಸೂಲಿಗೆ ಹೊರಟೆ. ದುಡ್ಡಿದ್ದು ಕೊಡುವವರಿಂದ ಮುಲಾಜಿಲ್ಲದೆ ವಸೂಲು ಮಾಡಿದೆ. ಬಡಬಗ್ಗರಿಂದ ವಾರದ ಕೆಲಸ ಮಾಡಿಸಿದೆ. ನಾಮಿನಲ್ ರೋಲಿಟ್ಟು ಅದರ ಮೇಲೆ ಮನೆಗಂದಾಯ ಉತಾರು ಹಾಕಿದೆ. ಮಂತ್ರಿಗಳು ಬಂದರು. ತಾಲ್ಲೂಕಿನ ಒಂದು ಕಡೆಯಿಂದ ಕೇಳಿಕೊಂಡು ಬಂದರು : 'ಪಂಚಾಯ್ತಿ ಬಾಕಿ ಎಷ್ಟು ?' ಎಂದು. 'ಬಾಕಿ ಏನೂ ಇಲ್ಲ. ಎಲ್ಲಾ ಚುಕ್ತಾ ಆಗೋಯ್ತು !' ಎಂದು ಶ್ಯಾನುಭೋಗರೂ ಪಟೇಲರೂ ಛೇರ್‌ಮನ್ನರೂ ನಾನು ಮುಂದೆ ತಾನು ಮುಂದೆ ಎಂದು ನುಗ್ಗಿ ಹೇಳಿದರು, ಬಾಕಿ ಇಲ್ಲವಾದ

ಕಾರಣ ಮಂತ್ರಿಗಳ ಮೆಹರ್ಬಾನಿ ಪಡೆಯಲು ಇಷ್ಟು ಸೂಕುನುಗ್ಗಲು, ಸಂತೋಷ. ಅವರಿಗೂ ಮೆಹರ್ಬಾನಿ ಸಿಕ್ಕಲಿ ಎಂದು ನನ್ನ ಆಸೆ. ಏಕೆಂದರೆ, ಅವರುಗಳೆಲ್ಲ ಮೆರೇ ದೇವರುಗಳಿದ್ದಂತೆ. ನಾನು ಮೂಲ ದೇವರು. ಊರೆಲ್ಲಾ ಓಡಾಡಿ, ಅವನ್ನ ಓಡತಲಿ, ಇವನ್ನ ಎಳತಂದು ಕೂಗಿ ಗೌಜೆಬ್ಬಿಸಿ ಕೆಲಸಮಾಡಿಸುತ್ತಿದ್ದವರು ಅವರು. ಮಂತ್ರಿಗಳು ಇಡೀ ತಾಲ್ಲೂಕನ್ನೆಲ್ಲಾ ಸುತ್ತಾಡಿ 'Mr. Nage Gowda what is the arrears for the whole Taluq' ಎಂದು ಕೇಳಿದರು. Sir, Only five hundred ? Only five hundred ! Are you still an Amildar? 'Yes sir, an unconfirmed Amildar!' ಅಲ್ಲಿಗೆ ಆಗಲೇ ನನಗೆ ಐದು ವರ್ಷ ಅಮುಲ್ದಾರಿ ಸರ್ವೀಸ್ ಆಗಿತ್ತು. ಜಿಲ್ಲೆಯನ್ನೆಲ್ಲಾ ಸುತ್ತಿಕೊಂಡು ಚಿತ್ರದುರ್ಗದಲ್ಲಿ ಅಧಿಕಾರಿಗಳ ಸಭೆ ನಡೆಸಿದರು ಅಲ್ಲಿ ಎಲ್ಲಾ ತಾಲ್ಲೂಕುಗಳ ಪಂಚಾಯ್ತಿ ಡಿ. ಸಿ. ಬಿ. ಗಳ ಪರಿಶೀಲನೆ ಆಯಿತು. ಕೆಲವು ಗ್ರಾಮಗಳಲ್ಲಿ ಐದ್ಯೆದು ಸಾವಿರ ಬಾಕಿ ಇತ್ತು. 'I must Congratulate the Amildar of Davangere Tq, Mr. Nage Gowda on the excellent work he has done' ಎಂದು ಬಹಿರಂಗವಾಗಿ ಹೇಳಿಬಿಟ್ಟರು.

ಇವೆಲ್ಲಾ ನನ್ನ ಅಮುಲ್ದಾರಿಯ ಒಂದು ಮುಖ ; ನಗುಮುಖ. ಇನ್ನೊಂದು ಮುಖನೋಡಿ ಈಗ : ಹೆಳವನಕಟ್ಟೆ ಗಿರಿಯಮ್ಮನ ಹೆಸರು ಕೇಳಿ ಸಾಹಿತಿ ಅಮುಲ್ದಾರರು ಕೊಮಾರನಹಳ್ಳಿಗೆ ಧಾವಿಸಿದರು. ಅಲ್ಲಿದ್ದ ದೇವಸ್ಥಾನಕ್ಕೆ ಭೇಟಿಕೊಟ್ಟರು. 'ಅನುಭವ ಇಲ್ದ ಹಾರುವಯ್ಯ ಗಡ್ಡ ಸೀಯ್ಕೊಂಡ' ಎಂಬಂತೆ, ನಮ್ಮೂರ ಮಾರಮ್ಮನ ಗುಡಿಗೆ ಹೋಗುವಂತೆ ಸಲೀಸಾಗಿ ದೇವಸ್ಥಾನದ ಒಳಗೆ ನಡೆದುಬಿಟ್ಟೆ. ನಮ್ಮೂರ ಮಾರಮ್ಮನಿಗೆ ಗರ್ಭಗುಡಿ ಅನ್ನೋದೆ ಇಲ್ಲ. ಅರ್ಚಕರು ಅಮುಲ್ದಾರರಿಗೆ ಸಲ್ಲಿಸುವ ಮರ್ಯಾದೆಗಳನ್ನು ಸಲ್ಲಿಸಿ ನಗುಮುಖದಿಂದಲೇ ಕಳುಹಿಸಿಕೊಟ್ಟರು. ಆದರೆ 'ನಾಗೇಗೌಡನೆಂಬ ಶೂದ್ರ ಗರ್ಭಗುಡಿಯನ್ನು ಪ್ರವೇಶಿಸಿದ ಕಾರಣ ತಕ್ಕ ಬಂದೂಬಸ್ತಾಗಬೇಕು ಮತ್ತು ಗುಡಿಗೆ ಪುಣ್ಯಾಹ ಆಗಬೇಕು' ಎಂಬ ಅರ್ಜಿ ಬೆಂಗಳೂರಿಗೆ ಹೋಗಿ ಡೀಸಿ ಮೂಲಕ ಎಸೀಗೆ ತನಿಖೆಗೆ ಬಂತು. ಆಗ ಬಿ. ಬೀರಪ್ಪನವರು ದಾವಣಗೆರೆ ಸಬ್ ಡಿವಿಜನ್ ಆಫೀಸರು. ಅವರಿಗೆ ನಾನು ತಮ್ಮ, ನನಗೆ ಅವರು ಅಣ್ಣ. ಇಂತಹ ಸಾವಿರ ಅರ್ಜಿಗಳು ಬಂದರೂ 'ಎಡಭುಜಕಾಯ್ತು, ಬಲಭುಜಕ್ಕೇನು ? ಎನ್ನುವ ಗಂಡು ಅವರು 'ಎಲ್ಲಾ ಸುಳ್ಳು' ಎಂದು ವರದಿಮಾಡಿದರು. ಆದರೆ ದೇವಸ್ಥಾನದ ಅರ್ಚಕರು ಸ್ವಂತ ಖರ್ಚಿನಲ್ಲಿ ಪುಣ್ಯಾಹ ನಡೆಸದೆ ಬಿಡಲಿಲ್ಲ. ಇದಾದ ಮೇಲೆ ನಾನು ದೇವಸ್ಥಾನಗಳಿಗೆ ಹೋದಾಗಲೆಲ್ಲ ಹತ್ತಿರ ಬನ್ನಿ ಎಂದು ಅರ್ಚಕರುಗಳ ಅಪ್ಪಣೆಯಾದರೂ 'ಪರವಾಯಿಲ್ಲ' ಎಂದು ದೂರದಲ್ಲಿಯೇ ನಿಂತು ದೇವರಿಗೆ ಕೈಮುಗಿದು ಬರುತ್ತಿದ್ದೇನೆ.

ಬೀರಪ್ಪನವರ ವಿಷಯ ಹೇಳಬೇಕಾದ್ದು ಬೇಕಾದಷ್ಟಿದೆ. ಒಂದೆರಡು ಮಾತ್ರ ಹೇಳುತ್ತೇನೆ. ಮನೆಗೆ ಹೋದರೆ ಊಟದ ಸಮಯ ಆಗಿದ್ದರೆ ಊಟ, ತಿಂಡಿ ಸಮಯ

ಆಗಿದ್ದರೆ ತಿಂಡಿ ಕೊಡದೆ ಕಳುಹಿಸುತ್ತಿರಲಿಲ್ಲ. ಅಷ್ಟೊಂದು ಪ್ರೀತಿ ವಿಶ್ವಾಸ ನನ್ನ ಮೇಲಷ್ಟೇ ಅಲ್ಲ, ಎಲ್ಲರ ಮೇಲೂ. ನಮ್ಮ ನಾಗಮಂಗಲ ತಾಲ್ಲೂಕಿನಲ್ಲೂ ಅವರು ಅಮಲ್ದಾರರಾಗಿದ್ದರು. ಅವರ ಕಾಲದಲ್ಲಿ ಮೂಲೆಗೆ ಬಿದ್ದಿದ್ದ ಕೊಂಬು ಕಹಳೆಗಳೆಲ್ಲಾ ಈಚೆಗೆ ಬಂದುವು. ಹಾಗೆಯೇ ಕೊಂಬಿನ ಟಗರುಗಳೂ ಕುರಿಕೊಪ್ಪಲಿನಿಂದ ಈಚೆಗೆ ಬರಬೇಕಾಯಿತು. ಅವರೇ ಹೇಳುತ್ತಿದ್ದರು, 'ನಾಗಮಂಗಲದಲ್ಲಿ ತಿಂದಷ್ಟು ಕುರಿ ಕೋಳಿ ನಾನೆಲ್ಲೂ ತಿನ್ನಲಿಲ್ಲ' ಎಂದು. ತಲೆ ಬಾಡು ಅವರಿಗೇ ಮೀಸಲಂತೆ. ಹೆಗ್ಗಡದೇವನಕೋಟೆ ಯಲ್ಲಿ ಡೆಪ್ಯೂಟಿ ಅಮಲ್ದಾರರಾಗಿದ್ದಾಗ ಒಂದು ಕೋಳಿ ಅವರಿಗೆ ಸಾಕಾಗುತ್ತಿರಲಿಲ್ಲವಂತೆ. ಈಗ ನಾಸಿರುವಂತೆ ಅವರು ಇದ್ದಾಗ (ತೂಕದಲ್ಲಿ) ಸೈಕಲ್ ಮೇಲೆ ಬೆಳಿಗ್ಗೆ ಎದ್ದರೆ ಹತ್ತು ಹಳ್ಳಿ ತಿರುಗಿ ಕೊಂಡು ಬರೋರಂತೆ! ಆ ಸೈಕಲ್ ಯಾವ ಮೇಕು ಅನ್ನೋ ದನ್ನು ಇಲ್ಲಿಯವರೆಗೂ ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಅವರಷ್ಟೇ ಅಲ್ಲ, ಅವರ ಕೆಳಗಿನವರೆಲ್ಲಾ ತೃಪ್ತಿಯಿಂದ ತಿಂದು ತೇಗಬೇಕು. ಅವರ ಶರೀರವೆಷ್ಟು ದೊಡ್ಡದೋ ಮನಸ್ಸೂ ಅಷ್ಟೇ ದೊಡ್ಡದು.

ಒಮ್ಮೆ ಡೀಸಿ ಮತ್ತು ಅವರು ಇಬ್ಬರೂ ಹರಿಹರದಲ್ಲಿ ಕ್ಯಾಂಪ್‌ಮಾಡಿ ದರು. ಡೀಸಿಯವರನ್ನು ಕಿರ್ಲೋಸ್ಕರ್ ಕಂಪನಿಯವರು ನೋಡಿಕೊಂಡರು. ಅವರು ನೋಡಿಕೊಂಡರೂ ಸರಿಯಾಗಿ ನೋಡಿಕೊಳ್ಳುತ್ತಾರೆಯೋ ಹೇಗೆ ಎಂದು ನಾನೂ ನೋಡಿಕೊಂಡು ಸಂಜೆ ಮಬ್ಬಿಗೆ ಮುನಿಸಿಪಲ್ ಆಫೀಸಿಗೆ ಬಂದೆ. ಅಲ್ಲಿ ಶ್ರೀ ಬೀರಪ್ಪ ನವರ ಬಿಡಾರ. ಟೀಬಿಯಲ್ಲಿ ಇನ್ನು ಯಾರೋ ದೊಡ್ಡವರಿದ್ದರು ಅಂತ ಕಾಣುತ್ತೆ. ಮುನಿಸಿಪಲ್ ಆಫೀಸಿನ ಒಳಗೆ ಸೀಮೆಎಣ್ಣೆ ಲಾಟೀನು ಮಿಣಿ ಮಿಣಿ ಉರಿ ಯುತ್ತಿತ್ತು. ಬೀರಪ್ಪನವರು ಬುಸುಗುಟ್ಟುತ್ತಾ ಬಾಗಿಲ ತುಂಬ ನಿಂತಿದ್ದರು. ಯಾರೂ ಅವರನ್ನು ವಿಚಾರಿಸಿಕೊಂಡಂತೆ ಕಾಣಲಿಲ್ಲ. ಡೀಸಿಯನ್ನು ಅಮಲ್ದಾರ್ ನೋಡಿ ಕೊಂಡರೆ ಏಸಿಯನ್ನು ರೆವೆನ್ಯೂ ಇನ್‌ಸ್ಪೆಕ್ಟರು ನೋಡಿಕೊಳ್ಳಬೇಕಾಗಿತ್ತು. ಇವೆಲ್ಲಾ ಆಗಿನ ಮಾಮೂಲುಗಳು. ನನ್ನ ಮುಖ ಕಂಡ ಕೂಡಲೇ 'Mr. Nage Gowda you should never neglect your immediate superior officer' ಎಂದರು. ನಾನು ಭೂಮಿಗೆ ಇಳಿದು ಹೋದೆ. 'ತಪ್ಪಾಯ್ತು ಸಾರ್, ಕ್ಷಮಿಸಿ' ಎಂದೆ. ಬೇರೊಂದು ಕೆಟ್ಟಮಾತು ಆಡಲಿಲ್ಲ. ನನಗೇ ಹೀಗಾಗಿದ್ದರೆ ಏನು ಮಾಡುತ್ತಿದ್ದೆ ಎಂದು ಹೇಳಲಾರೆ.

ಬೀರಪ್ಪನವರು ನನಗಿತ್ತ ರಕ್ಷೆ ಒಂದಲ್ಲ,ಎರಡಲ್ಲ. ಹರಿಹರದ ಬಳಿ ಎರಡು ಮಿಲಿಟರಿ ಕ್ಯಾಂಪುಗಳಿದ್ದುವು—'A Camp', 'B Camp' ಎಂದು. 'B Camp'ನ ಕಮ್ಯಾಂಡರ್ ಕರ್ನಲ್ ಬ್ರಾಂಡ್ ಎಂದು. ಆದರೆ ಅವನಿಗೆ ಸರಿಯಾದ ಹೆಸರು Fire brand ಎಂದಿರಬೇಕಾಗಿತ್ತು. ಆ ಬ್ರಾಂಡನನ್ನು ಫೈರ್ ಬ್ರಾಂಡ್ ಮಾಡುತ್ತಿದ್ದವನು ನಮ್ಮ ಪೋಲೀಸ್ ಇನ್‌ಸ್ಪೆಕ್ಟರು. ಅವನ ಕ್ಯಾಂಪಿಗೆ ದನಕರ ಹೋಗಕೂಡದು. ಆದರೆ ಸುತ್ತಾ ಎಲ್ಲಿಯೂ ಕಾಣದ ದನ ಹಸಿರು ಕಾಣುತ್ತಿದ್ದ ಆ ಕ್ಯಾಂಪಿಗೆ ನುಗ್ಗುತ್ತಿದ್ದವು.

ಬೇರೆ ದೇಶ ಆಗಿದ್ದರೆ ಗುಂಡು ಹೊಡೆದು ತಿಂದುಹಾಕುತ್ತಿದ್ದ. ಇಲ್ಲಿ ಹಾಗೆ ಮಾಡಿದರೆ ಏನು ಅನಾಹುತವಾದೀತೊ ಎಂದು ಬಂದೂಕ ಹಿಡಿದು ನನ್ನ ಮನೆಗೆ ಬರುತ್ತಿದ್ದ. ಜೊತೆಗೆ ಹೆಂಡತಿ ಬೇರೆ ಬರುತ್ತಿದ್ದಳು-ಸಪೋರ್ಟಿಗೆ. ಕೆಂಪು ಮೋರೆಯ ಆ ಎತ್ತರದ ವ್ಯಕ್ತಿಯನ್ನು ನೋಡಿ ಹಳ್ಳಿ ಹುಡುಗನಾದ ನಾನು ಹೆದರಿ ಹೋಗುತ್ತಿದ್ದೆ. ಬೆಂಗಳೂರಿನಲ್ಲಿದ್ದಾಗಲೂ ಕಂಟೋನ್‌ಮೆಂಟ್ ಕಡೆ ಕಾಲಿಡುತ್ತಿರಲಿಲ್ಲ ಆ ಕೆಂಪು ಮೋರೆಗಳಿಗೆ ಹೆದರಿ. ಹೀಗಿರುವಾಗ ಕೆಂಪು ಮೋರೆ ನನ್ನ ಮನೆಗೇ ಬಂದರೆ ನಾನೆಷ್ಟು ಹೆದರಿಕೊಂಡಿರಬೇಕು. 'You are allowing cattle to stray into the camp! Do you understand Mr. Tahasildar?' ಎಂದು ಅಬ್ಬರಿಸುತ್ತಿದ್ದ. ನನ್ನ ಬಾಯೊಣಗಿ ತುಟಿ ಆರಿ 'Yes yes Colonel. I will look into it' ಎನ್ನುವೆ. 'Yes, you must look into it. I will shoot them next time if they enter my camp' ಎಂದು ಎಚ್ಚರಿಕೆ ಕೊಟ್ಟು ಹೋಗುತ್ತಿದ್ದ, ಎಂಥಾ ಕಡೆ ಅಮಲ್ದಾರನಾಗಿ ಬಂದುಬಿಟ್ಟೆನಪ್ಪ ಎನ್ನಿಸುತ್ತಿತ್ತು ನನಗೆ. ಸದ್ಯ, ಈ ಪರಂಗಿಗಳು ತೊಲಗಿದರೆ ಸಾಕಲ್ಲ ಎಂದು ಹರಕೆ ಕಟ್ಟುತ್ತಿದ್ದೆ. ಆ ಹರಕೆ ಸಂದಾಯವಾಗಬೇಕಾದರೆ ಆ ಮೇಲೆ ಎರಡು ವರ್ಷ ಬೇಕಾಯಿತು. ಇರಲಿ, ತಿಂಗಳಿಗೊಂದು ಸಲ ಎರಡು ಕ್ಯಾಂಪಿನವರೂ ಹರಿಹರದ ಸಾರ್ವಜನಿಕ ಮುಖಂಡರೂ ಟೌನ್ ಹಾಲ್‌ನಲ್ಲಿ Tete-a-tete (ಟೇಟಾ ಟೇಟ್)ಗೆ ಸೇರುತ್ತಿದ್ದರು. ಕಾಫಿ ಟೀ ಕುಡಿದು ಸರಸ ಸಲ್ಲಾಪದ ಮಾತಾಡಿಕೊಂಡು ಹೋಗುವುದಕ್ಕಷ್ಟೇ ಇದರ ಉದ್ದೇಶ. ಇದನ್ನು ಏರ್ಪಡಿಸಬೇಕಾದವನು ಅಮಲ್ದಾರ್. ಆಗ ಬರುತ್ತಿದ್ದ ಆ ಫೈರ್‌ಬ್ರಾಂಡ್ ತುಟಿಪಿಟಕ್ಕೆನ್ನುತ್ತಿರಲಿಲ್ಲ. ಆಗ ಸುಮ್ಮನಿದ್ದವನು ಬೇರೆ ದಿನ ನನ್ನ ಮನೆಗೆ ನುಗ್ಗುತ್ತಿದ್ದ. ಆಫೀಸಿಗೆ ಬರುತ್ತಿರಲಿಲ್ಲ. ಆ ಮೇಲೆ ಗೊತ್ತಾಯಿತು. 'My business is to look after men and the Amildar's business is to look after cattle' ಎಂದು ಆ ಪೋಲೀಸ್ ಇನ್‌ಸ್ಪೆಕ್ಟರು ಫೈರ್‌ಬ್ರಾಂಡನ ಕಿವಿಯಲ್ಲಿ ಹೇಳಿದ್ದ ಎಂದು.

ಫೈರ್‌ಬ್ರಾಂಡನ ಮದ್ದು ಗುಂಡುಗಳೆಲ್ಲಾ ಮುಗಿದ ಮೇಲೆ ಅವನು ನನ್ನನ್ನು ಅಲ್ಲಿಂದ ಕದಲಿಸುವ ಆಲೋಚನೆ ಮಾಡಿದ ಇನ್‌ಸ್ಪೆಕ್ಟರೊಡನೆ ಸೇರಿ. ರೆವೆನ್ಯೂ ಕಮೀಷನರು ಹರಿಹರಕ್ಕೆ ಬಂದಿದ್ದರು. ಮಿಲಿಟರಿ ಕ್ಯಾಂಪುಗಳನ್ನು ನೋಡಿಕೊಂಡು ಕಮ್ಯಾಂಡರುಗಳೊಡನೆ ಮಾತಾಡಿಕೊಂಡು ರೈಲು ಹತ್ತಲು ದಾವಣಗೆರೆಗೆ ಹೋದರು. ಬೀರಪ್ಪನವರು ಜೊತೆಯಲ್ಲಿರಲಿಲ್ಲ. ಆದರೆ ಕಳುಹಿಸಿಕೊಡಲು ಸ್ಟೇಷನ್ನಿಗೆ ಬಂದಿದ್ದರು. ಅಲ್ಲಿ ರೆವೆನ್ಯೂ ಕಮೀಷನರು 'Mr. Beerappa, I wanted to ask you one thing. There are lot of complaints against Nage gowda by the military people I want to transfer him.' ಎಂದರಂತೆ. ಕೂಡಲೇ ತಲೆ ಓಡಿಸಿದ ಬೀರಪ್ಪನವರು 'I know why the military officer has complained.

It is all the conspiracy of the Police Inspector. Don't believe it for a moment'. 'I see. I understand it It is good that I told you.'

ಇದನ್ನು ಬೀರಪ್ಪನವರೇ ನನಗೆ ಆಮೇಲೆ ಹೇಳಿದರು. ಸಮಯ ಸ್ಫೂರ್ತಿ ಎಂದರೆ ಬೀರಪ್ಪನವರ ಹೆಸರು ಹೇಳಬೇಕು. ನಾನು ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫೀಸರು.ಆಗ ವಿಶ್ವೇಶ್ವರಯ್ಯ ಸ್ಕೀಮ್ ಎಂದು Rural Industrialisation Scheme ಜಾರಿಗೆ ಬಂದಿತು. ಬೀರಪ್ಪನವರು ಅದಕ್ಕೆ ಸ್ಪೆಷಲ್ ಆಫೀಸರ್. ಖುದ್ದು ವಿಶ್ವೇಶ್ವರಯ್ಯನವರೇ ಬಂದರು ನನ್ನ ಸಬ್ ಡಿವಿಜನ್‌ಗೆ ಸೇರಿದ ಚಿಂತಾಮಣಿಗೆ. ನಾವು ಏನೇನೊ ಅಂಕಿ ಅಂಶಗಳನ್ನು ಕಲೆಹಾಕಿ ಇಟ್ಟುಕೊಂಡಿದ್ದೆವು. ವಿಶ್ವೇಶ್ವರಯ್ಯನವರಿಗೆ ಊಟ ಇಲ್ಲದೇ ಇದ್ರೂ ಪರವಾಯಿಲ್ಲ, 'Statistical information' ಬೇಕು. ಡೀಸಿಯವರ ಹತ್ತಿರ ನಾನು ಮತ್ತು ಅಮಲ್ದಾರರು 'ಸಾರ್, ಎಲ್ಲಾ ಅಂಕಿಗಳನ್ನು ಸಂಗ್ರಹಿಸಿದ್ದೀವಿ ಆದರೆ ಅವರೇನು ಕೇಳ್ತಾರೊ ಗೊತ್ತಾಗಲ್ಲ' ಎಂದೆವು. ಡೀಸಿಯವರು 'ಸುಮ್ನಿರಪ್ಪ ನೀನು. ಆ ಮುದುಕನ್ನ ಬೀರಪ್ಪ ನೋಡಿಕೊಳ್ತಾನೆ ಬಿಡು.' ಎಂದುಬಿಟ್ಟರು. ಸರಿ, ವಿಶ್ವೇಶ್ವರಯ್ಯನವರನ್ನು ಕರೆದುಕೊಂಡು ಬೀರಪ್ಪನವರು ಬೆಂಗಳೂರಿನಿಂದ ಬಂದರು. ಎಲ್ಲಾ ಕೇಳಿದರು. ನಮಗೆ ತಿಳಿದದ್ದು ನಾವು ಹೇಳಿದೆವು. 'Sir, it will be late for the photo. People are waiting' ಎಂದರು ಬೀರಪ್ಪ ಅವರಿಗೂ ಸಾಕಾಗಿ. 'Wait a minute Beerappa. I want to know the population of pigs in this Tq' ಎಂದು ಕೇಳಿಬಿಡೋದೆ ಆ ವಿಶ್ವೇಶ್ವರಯ್ಯನವರು. ನಾವು ಕುರಿ ಕೋಳಿಗಳನ್ನೆಲ್ಲಾ ಲೆಕ್ಕ ಹಾಕಿಟ್ಟಿದ್ದೆವು. ಹಂದಿಗಳನ್ನು ಮರೆತುಬಿಟ್ಟಿದ್ದೆವು. ಬೀರಪ್ಪನವರು ನಮ್ಮ ಕಡೆ ಸೂಕ್ಷ್ಮವಾಗಿ ನೋಡಿದರು. ನಾವು ಬಾಯಿಬಿಡಲಿಲ್ಲ. 'Sir, it is 339' ಎಂದರು. 'What is the growth rate?' 'It is very good, Sir. Since the introduction of the scheme it is 25 percent !' 'What is the growth rate you said Beerappa ? — ಕಿವಿ ಸರಿಯಾಗಿ ಕೇಳಿಸದ ವಿಶ್ವೇಶ್ವರಯ್ಯನವರು ಕೇಳಿದರು. ಕಿವಿಗಳಿಗೆ ಎರಡು ಕೈಗಳನ್ನು ಒತ್ತಿಕೊಂಡು. 'To be exact, Sir, it is 24.92 per cent'. 'Very good !' ಎಂದು ಹಸನ್ಮುಖಿಗಳಾಗಿ ಬೀರಪ್ಪನವರು ಕೈಕೊಟ್ಟರೂ ಅದನ್ನು ಹಿಡಿಯದೆ ಫೋಟೋ ತೆಗೆಸಿಕೊಳ್ಳಲು ಹೋದರು. ಅವರು ಬೆಂಗಳೂರಿಗೆ ಹೋದಮೇಲೆ ಡೀಸಿಯವರು 'ನಾನು ಹೇಳ್ಲಿಲ್ಲವೇನಪ್ಪ, ಎಲ್ಲರೂ ಬೀರಪ್ಪನಿಗೆ ಬಿಡಿ ಅಂತ! ಶೇಕಡ 25 ರಿಂದ 24.92ಕ್ಕೆ ಇಳಿಸಿದ್ಯಾಕೆ ಗೊತ್ತೆ ? ಅವನು ಹೇಳುವುದರೊಳಗೆ ಎಷ್ಟು ಹಂದಿಗಳನ್ನು ಜನ ತಿಂದು ಹಾಕಿರಬಹುದೆಂದು ಲೆಕ್ಕ ಹಾಕಿ ಬೀರಪ್ಪ ಹೇಳಿದ್ದು. ಅದು ಬೀರಪ್ಪನ ತಲೆ .'

ಮನುಷ್ಯರ ಲೆಕ್ಕವೇ ಸರಿಯಾಗಿ ಸಿಕ್ಕದ ಈ ದೇಶದಲ್ಲಿ ಕುರಿ ಕೋಳಿ ಹಂದಿ ಲೆಕ್ಕ ಹೇಳುವುದು ಬ್ರಹ್ಮನಿಗೂ ಸಾಧ್ಯವಿಲ್ಲದಿರುವಾಗ ಬೀರಪ್ಪನವರು ಕೆಳ ಅಧಿಕಾರಿಗಳ ಸಹಾಯುಕ್ತಿ ಬಂದುದು ಸರಿಯಾಗಿಯೇ ಇತ್ತು. ಇದು ಸಣ್ಣ ವಿಷಯ. ಬೀರಪ್ಪ ನವರಲ್ಲಿ ಮೆಚ್ಚಬೇಕಾದ್ದು ನನ್ನಂಥವರಲ್ಲಿ ಅವರು ಇಟ್ಟಿದ್ದ ಪ್ರೀತಿ ವಿಶ್ವಾಸ. ಅವರು ಕಾಯಿಲೆ ಬಿದ್ದು ಮನೆಯಲ್ಲಿ ಮಲಗಿದ್ದಾಗ ನಾನೂ ನನ್ನ ಹೆಂಡತಿಯೂ ಹೋಗಿ ಕಾಲುಮುಟ್ಟಿ ನಮಸ್ಕಾರಮಾಡಿ ಬಂದೆವು. ಅವರು ಕಾಲವಾದಾಗ ನಾನು ನನ್ನ ತಂದೆ ಯನ್ನು ಕಳೆದುಕೊಂಡಾಗ ಅತ್ತಷ್ಟೇ ಅತ್ತುಬಿಟ್ಟೆ.

ಬೀರಪ್ಪನವರು ವರ್ಗವಾದ ಮೇಲೆ ನನ್ನ ಮೇಲೆ ಒಂದು ಆಪಾದನೆ ಬಂದಿತು. ಕಸಬಾ ಹೋಬಳಿ ಡಿಟ್ಟಂ ಜಮಾಬಂದಿ (ತಾಲ್ಲೂಕು ಜಮಾಬಂದಿ) ಆಗಬೇಕಾಗಿತ್ತು. ಆದರೆ ಶ್ಯಾನುಭೋಗರು ಲೆಕ್ಕ ತಯಾರ್ಮಾಡಿರಲಿಲ್ಲ. ರೇಗಿಹೋಯಿತು. 'ನೀವ್ಮಾ ಕಿರೋದು ? ಸಗಣಿ ತಿಂದಹಾಗೆ ಪ್ರೋಟಿಗೆ ತಿನ್ನೋದಿಲ್ವೆ' ಎಂದೆ. ನನಗೆ ಸಿಟ್ಟುಬಂದಾಗ ಏನು ಆಡುತ್ತೇನೆ ಏನು ಆಡುವುದಿಲ್ಲ ಎಂದು ಹೇಳುವಂತಿಲ್ಲ. ಎಲ್ಲಾದರೂ ಸಗಣಿ ತಿನ್ನೋದುಂಟೆ ! ಸರಿ, ನನ್ನ ಮೇಲೆ ದೂರುಹೋಯಿತು, ಹೊಸ ಸಬ್‌ಡಿವಿಜನ್ ಆಫೀಸರು enquiry ನಡೆಸಿದರು. ಅವರು ತುಂಬಾ ಯೋಗ್ಯರು. ಅಗ್ನಿಹೋತ್ರಿ ಗಳಾದ ಅವರು ಮಡಿ ಮೈಲಿಗೆ ಪೂಜೆ ಪುರಸ್ಕಾರಗಳಲ್ಲಿ ತುಂಬಾ ಕಟ್ಟುನಿಟ್ಟು. ಒಂದು ತಾಲ್ಲೂಕಿಗೆ ಕ್ಯಾಂಪ್ ಹೋಗಿದ್ದಾಗ ಹಳ್ಳಿಗಳನ್ನು ಸುತ್ತಿ ಸಂಜೆಯು ತಮ್ಮ ಬಿಡಾರಕ್ಕೆ ಬಂದರು. ಸ್ನಾನಮಾಡಲು ಅಡುಗೆ ಮನೆಕಡೆ ಹೋದರು. ಅವರ ಅಡುಗೆಭಟ್ಟ ಸಾರಿಸಿ ಗುಡಿಸಿ ಅಡುಗೆಮಾಡಿ ಬೀಡಿ ಸೇದುತ್ತಾ ಕುಳಿತಿದ್ದ. ಸರಿ, ಆವತ್ತು ಊಟ ಮಾಡಲೇ ಇಲ್ಲ. ಬೆಳಗ್ಗೆ ಏಕಾದಶಿ. ಮಾರನೆಯದಿನ ದ್ವಾದಶಿ. ಆ ದಿನ ಯಾರೋ ಮಂತ್ರಿಗಳ ಆಗಮನ. ಅವರ ಜೊತೆ ಸುತ್ತಿ ಆದಿನ ಸಂಜೆ ದಾವಣಗೆರೆಗೆ ಬಂದು ನಿತ್ಯಕರ್ಮಗಳನ್ನು ಮುಗಿಸಿ ಆಮೇಲೆ ಊಟ. ಮೂರು ದಿನ ಊಟಮಾಡದಿದ್ದರೂ ಊಟಮಾಡಿದವರಂತೆಯೇ ಇರುತ್ತಿದ್ದರು. ಇವರು ವಿಚಾರಣೆಗೆ ಬಂದರು. ಮನಸ್ಸಿಲ್ಲ ದಿದ್ದರೂ ಶಾಸ್ತ್ರಕ್ಕಾಗಿ ಮಾಡಬೇಕಾಗಿತ್ತು. ಏಕೆಂದರೆ, ಅವರಿಗೆ ನನ್ನ ಬಗ್ಗೆ ತುಂಬಾ ವಿಶ್ವಾಸ. 'Mr. Nage Gowda I will make a semblance of an enquiry. Don't mistake me' ಎಂದು ಹೇಳಿ ತನಿಖೆ ನಡೆಸಿ ಡೀಸಿಗೆ ವರದಿಮಾಡಿದರು. ಒಂದು ಹೋಬಳಿ ಶ್ಯಾನುಭೋಗರು ನನ್ನ ಬಗ್ಗೆ ವಿರೋಧವಾಗಿದ್ದರೆ ಇನ್ನೊಂದು ಹೋಬಳಿಯವರು ನನ್ನ ಪರ ಇದ್ದರು. ಡೀಸಿಯವರಿಗೆ ಅರ್ಜಿ ಬರೆದು ಕಸಬಾ ಹೋಬಳಿ ಶ್ಯಾನುಭೋಗರ ದೂರಿಗೆ ಬೆಲೆ ಕೊಡಬಾರದೆಂದೂ ನನ್ನನ್ನು ವರ್ಗಮಾಡ ಬಾರದೆಂದೂ ಮನವಿ ಮಾಡಿಕೊಂಡರು. ಆದರೂ ಪರಿಪರದಿಂದ ದಾವಣಗೆರೆಗೆ ನನ್ನ ವರ್ಗ ಆಯಿತು. ತಮ್ಮ ಡಿಸ್ಟ್ರಿಕ್ಟ್‌ನಲ್ಲಿಯೇ ಇಟ್ಟುಕೊಳ್ಳಬೇಕೆಂದು ಡೀಸಿಯ ಇಷ್ಟ ವಾಗಿತ್ತು. ಹೀಗಾಗಿ ಕೇವಲ ಒಂಬತ್ತು ಮೈಲಿ ದೂರಕ್ಕೆ ನನ್ನ ವರ್ಗ ಆಯಿತು. ಹೀಗೆ

ಮಾಡಲು ಕಾರಣ ಅವರು ಈ ಹಿಂದೆಯೇ ಹೇಳಿದ ಕಾರಣಗಳಿಗಾಗಿ ನನ್ನ ಕೆಲಸ ಮೆಚ್ಚಿಕೊಂಡಿದ್ದುದು. ಇಂಥವರೂ ಒಂದು ಸಲ ಹರಿಹರದಲ್ಲಿದ್ದಾಗ ನನ್ನ ಮೇಲೆ ರೇಗಿದ್ದರು. ಒಬ್ಬರು ಸಿನೆಮಾ ಥಿಯೇಟರ್ ಕಟ್ಟಲು ಲೈಸೆನ್ಸ್ ಕೇಳಿದ್ದರು. ರೂಲ್ಸು ಪ್ರಕಾರ ಲೈಸೆನ್ಸ್ ಕೊಡುವಂತಿರಲಿಲ್ಲ. ನನ್ನ ವರದಿ ನೋಡಿ ಅವರಿಗೆ ಸಿಟ್ಟಾಗಿ ನೆರೆದವರ ಮುಂದೆಲ್ಲ 'you are an idiot' ಎಂದರು. ನನ್ನ ಮಾನಭಂಗದ ಮಾತಾಗಿತ್ತು ಅದು. ಸಿಟ್ಟು ಉಕ್ಕೇರಿ ಬಾಯಲ್ಲಿ ನೊರೆ ಉಕ್ಕಿಬಂತು. ಇನ್ನೇನು ಹಿಂದಿರುಗಿ ಅನ್ನಬೇಕು. ಆಗ ಅವರೇ ತಮ್ಮ ತಪ್ಪನ್ನು ಅರಿತು ಒಂದು ಬಗೆಯ ಕನಿಕರದಿಂದ ನೋಡಿದರು. 'That is alright. Don't worry' ಎಂದರು. ನಾನು ಸುಮ್ಮನಾದೆ.

ಹರಿಹರ ಬಿಡುವ ಮುನ್ನ ಹೇಳುವುದು ಇನ್ನೂ ಇದೆ. ಅಮಲ್ದಾರನಾದ ನಾನು ಹರಿಹರ ಮುನಿಸಿಪಾಲಿಟಿಯ ಅಧ್ಯಕ್ಷನೂ ಆಗಿದ್ದೆ. ನನಗೆ ಹಿಂದಿದ್ದ ಅಮಲ್ದಾರರು ಒಂದು ಕಂಬೈನ್ಡ್ ಡಿಸ್‌ಪೆನ್ಸರಿಯನ್ನು ಮಾಡಿಸಿದ್ದರು. ನಾನು ಒಂದು ಮುನಿಸಿಪಲ್ ಹೈಸ್ಕೂಲು ಆರಂಭಿಸಬೇಕೆಂದು ನಿರ್ಧರಿಸಿದೆ. ಆಗ 33,000 ರೂಪಾಯಿ ಕಟ್ಟಬೇಕಾಗಿತ್ತು. ಮುನಿಸಿಪಾಲಿಟಿಯಲ್ಲಿ ದುಡ್ಡಿರಲಿಲ್ಲ. ದಾವಣಗೆರೆಗೆ ಹೋದೆ. ಹರಿಹರ ತಾಲ್ಲೂಕಿನ ರಾಜೇನಹಳ್ಳಿಯ ವೈಶ್ಯರೊಬ್ಬರು ಅಲ್ಲಿ ಸರಾಫ್ ಅಂಗಡಿ ಇಟ್ಟಿದ್ದರು. ನಾನು ಹೋಗಿ ನಿಮ್ಮ ಹೆಸರಿನಲ್ಲಿ ಒಂದು ಹೈಸ್ಕೂಲ್ ಮಾಡಿಸಿ ಎಂದು ಪುಸಲಾಯಿಸಿದೆ. ಒಪ್ಪಿಕೊಂಡರು. 33,000 ರೂಪಾಯಿಗಳನ್ನು ಆಗಲೇ ಕೊಟ್ಟುಬಿಟ್ಟರು. 'ರಾಜೇನಹಳ್ಳಿ ಮುದ್ದೂರಾಯಪ್ಪ ಮುನಿಸಿಪಲ್ ಹೈಸ್ಕೂಲು' ಎಂಬ ಹೈಸ್ಕೂಲು ಸ್ಥಾಪನೆಯಾಯಿತು. ಅಲ್ಲಿಂದ ಅವರ ದಾನಧರ್ಮಗಳು ಶುರುವಾದುವು. ಅದಕ್ಕಿಂತ ದೊಡ್ಡ ಧರ್ಮವನ್ನು ದಾವಣಗೆರೆಯಲ್ಲಿ ಮಾಡಿದ್ದಾರೆ.

ತುಂಗಭದ್ರಾನದೀ ತೀರದಲ್ಲಿ 'ಐರಣಿ ಹೊಳೆಮಠ' ಎಂಬ ಕ್ಷೇತ್ರವಿದೆ. ನದಿ ದಾಟಿದರೆ ಹರಿಹರದಿಂದ ಆರೇ ಮೈಲಿ. ಆದರೆ ಅದು ಬೊಂಬಾಯಿ ಪ್ರಾಂತದ ರಾಣಿ ಬೆನ್ನೂರಿಗೆ ಸೇರಿತ್ತು. ವರ್ಷ ವರ್ಷ ಸಪ್ತಾಹ. ಆ ವೇಳೆ ಎಂಟು ಹತ್ತು ಸಾವಿರ ಸಾಧು ಸಂತರಿಗೆ ದಾಸೋಹ. ಭಕ್ತರು ಹೆಚ್ಚಾಗಿದ್ದ ಹರಿಹರ ದಾವಣಗೆರೆ ತಾಲ್ಲೂಕು ಹಳ್ಳಿಗಳಿಂದ ದವಸ ಧಾನ್ಯ ಸಂಗ್ರಹಿಸಿ ಹತ್ತಿಪ್ಪತ್ತು ಗಾಡಿಗಳಲ್ಲಿ ಹೇರಿಕೊಂಡು ಮೆರವಣಿಗೆಯ ಮೂಲಕ ಸೇತುವೆಯ ಮೇಲೆ ನದಿ ದಾಟಬೇಕು. ಆಗ ಪೋಲೀಸಿನವರು ತಡೆದುಬಿಟ್ಟರು. ಸ್ವತಃ ಮುಪ್ಪಿನಾರ್ಯ ಸ್ವಾಮಿಗಳೇ ಮುಂದಿನ ಗಾಡಿಯಲ್ಲಿ ಕುಳಿತಿದ್ದರು. ಆದರೇನು ? ಕಾನೂನು ಅಡ್ಡಿಬಂದಿತು. ದಿಕ್ಕೆಟ್ಟ ಸ್ವಾಮಿಗಳು ನನ್ನ ಮನೆಗೇ ಬಂದುಬಿಟ್ಟರು. ಅಲ್ಲಿಯವರೆಗೆ ನಾನು ಸ್ವಾಮಿ ಗೀಮಿಗಳ ತಂಟೆಗೆ ಹೋದವನಲ್ಲ. ಆದರೆ ಈ ಸ್ವಾಮಿಗಳ ನಿಷ್ಕಳಂಕವಾದ ಹೃದಯಮುಟ್ಟುವ ಮಾತುಗಳಿಗೆ ನಾನು ಮರುಳಾದೆ. ನಾನೇ ಹೊರಟೆ ಸೇತುವೆಯ ಬಳಿಗೆ. ಸರ್ಕಾರ

ದಿಂದ ಪರವಾನಗಿ ತರಿಸಿಕೊಡುವ ಜವಾಬ್ದಾರಿ ನನ್ನದು ಎಂದು ಹೇಳಿ ಗಾಡಿಗಳನ್ನು ಬಿಡಿಸಿದೆ. ಆಮೇಲೆ ಸರ್ಕಾರಕ್ಕೆ ಬರೆದು ವರ್ಷೆ ವರ್ಷೆ ದವಸ ಸಾಗಿಸಲು ಪರವಾನಗಿ ತರಿಸಿಕೊಟ್ಟೆ. ಇಷ್ಟೇ ಅಲ್ಲ ಸ್ವಾಮಿಗಳಿಗಿದ್ದ ಇನ್ನೂ ಹಲವಾರು ತೊಂದರೆಗಳನ್ನು ನಿವಾರಿಸಿಕೊಟ್ಟೆ. ಅಂದಿನಿಂದ ನಾನು ಅವರ ಶಿಷ್ಯನಾದೆ; ಅವರು ನನ್ನ ಗುರುಗಳಾದರು. ತಾಯಿ ನನಗೆ ತುತ್ತುಮಾಡಿ ಉಣಿಸಿದ್ದು ಜ್ಞಾಪಕವಿಲ್ಲ. ತಂದೆ ಎಂದೂ ಹಾಗೆ ಮಾಡಿದವರಲ್ಲ. ಈಗ ನನಗೆ ತುತ್ತು ಮಾಡಿ ಉಣಿಸುವ ಆತ್ಮೋದ್ಧಾರಕರೊಬ್ಬರು ದೊರೆತರು. ಮೂವತ್ತೈದು ವರುಷಗಳಿಂದ ಆ ಮಹಾತ್ಮರ ಆಶೀರ್ವಾದ ಮತ್ತು ಶ್ರೀರಕ್ಷೆಗಳು ನನಗೂ ನನ್ನ ಹೆಂಡತಿ ಮಕ್ಕಳಿಗೂ ದೊರೆಯುತ್ತಾ ಬಂದಿವೆ.

ಈ ಶ್ರೀರಕ್ಷೆಯಿಂದಲೋ ಏನೋ ನನಗೆ ಏನು ಕಷ್ಟ ಬಂದರೂ ಪರಿಹಾರ ವಾಗುತ್ತಾ ಬಂದಿವೆ. ಹರಿಹರದ ಮುನಿಸಿಪಾಲಿಟಿ ಅಧ್ಯಕ್ಷನಾಗಿದ್ದೆನಷ್ಟೆ. ಕೌನ್ಸಿಲಿನ ಮೆಂಬರೊಬ್ಬರು ಬಗರ್‌ಹುಕುಂ ಮನೆ ಕಟ್ಟಿದ್ದರು. ಕೀಳಿಸಿಹಾಕಬೇಕೆಂದು ನೋಟೀಸು ಕೊಟ್ಟೆ. ಕೇರ್ ಮಾಡಲಿಲ್ಲ. ಒಂದು ದಿನ ನಾನೇ ನಿಂತು ಮನೆ ಕೆಡವಿಸಿಬಿಟ್ಟೆ. ಹರಿಹರ ಹಿಂದೂ ಮುಸಲ್ಮಾನರ ಜಗಳಕ್ಕೆ ಹೆಸರಾದ ಊರಾಗಿತ್ತು. ಗಣೇಶನ ಹಬ್ಬ ಬಂತು ಎಂದರೆ ಭಾರಿ ಪೋಲೀಸ್ ಪಡೆಯೇ ಅಲ್ಲಿ ಇರುತ್ತಿತ್ತು. ಹೀಗಿರುವಾಗ ಮುಸಲ್ಮಾನರೊಬ್ಬರ ಮನೆ ಕೆಡವಿಸಿದ್ದು ದೊಡ್ಡ ದೊಂಬಿಗೆ ಕಾರಣವಾಗಬೇಕಾಗಿತ್ತು. ಆದರೆ ಈಗ ಹಾಗಾಗಲಿಲ್ಲ. ಆದರ ಬದಲು ದಾವಣಗೆರೆ ಮ್ಯಾಜಿಸ್ಟ್ರೇಟ್ ಕೋರ್ಟಿ ನಲ್ಲಿ ನನ್ನ ಮೇಲೆ tress passಕೇಸ್ಸೀರು ದಾಖಲಾಯಿತು. ಕೋರ್ಟಿನಿಂದ ಸಮನ್ ಬಂತು. ನಾನು ಲಾಯರಿಟ್ಟೆ. ಆದರೂ ಮರ್ಯಾದೆ ಹೋಗುವ ಪ್ರಶ್ನೆ. ಇಂತಹ ವಿಷಯಗಳನ್ನು ನಾನು ಎಂದೂ ನನ್ನ ಮನೆಯಲ್ಲಿ ಮಾತಾಡುತ್ತಿರಲಿಲ್ಲ. ಆಪ್ತರಲ್ಲಿ —ನನಗೆ ಆಪ್ತರೇ ಬಹಳ ಕಡಿಮೆ—ಹೇಳಿಕೊಳ್ಳುತ್ತಿರಲಿಲ್ಲ. ನಾನೇ ಅಂಥವನ್ನು ಅನು ಭವಿಸುತ್ತಿದ್ದೆ. ಹಲವಾರು ದಿನಗಳನ್ನು ಭಾರಿ ಚಿಂತೆಯಲ್ಲಿ ಕಳೆದೆ. ನನಗೆ ಆಪ್ತರಿಲ್ಲ ದಿದ್ದರೂ ನನ್ನ ಬಗ್ಗೆ ಗೌರವ ಇಟ್ಟುಕೊಂಡಿದ್ದವರು ತುಂಬಾ ಜನ ಇದ್ದರು. ಅವರೆಲ್ಲ ಸೇರಿ ಆ ಮುಸಲ್ಮಾನನಿಗೆ ಹೇಳಿ ಕೇಸು ವಾಪಸು ತೆಗೆಸಿದರು. ಆಮೇಲೆ ಆ ಮುಸಲ್ಮಾನ ನನಗೆ ಬಹಳ ಬೇಕಾದವರಾದರು. ಈಗ ನಾನೆಷ್ಟಿದ್ದೇನೊ ಅದರ ಎರಡಷ್ಟಿದ್ದ ಆತ. ಕಟುಕನಾದರೂ ಆತನ ಹೃದಯ ತುಂಬಾ ಒಳ್ಳೆಯದು. ನನ್ನ ವರ್ಗವಾದಾಗ ಆತ ಹಾಕಿದ ಹಾರ ಅವನ ಎರಡರಷ್ಟಿತ್ತು.

ನಾನು ಹರಿಹರದಲ್ಲಿ ಯಾವ ಪೋಲೀಸ್ ಸಹಾಯವೂ ಇಲ್ಲದೆ ಏಕಾಂಗಿಯಾಗಿ ನಡೆಸಿದ ಕೆಲಸಗಳಿಂದಾಗಿ ಬಡಿದು ಹಗೇವಿಗೆ ತುಂಬಬಹುದಾಗಿತ್ತು. ಕಡಿದು ಹೊಳೆಗೆ ಎಸೆಯಬಹುದಾಗಿತ್ತು. ಕತ್ತರಿಸಿ ತುಂಡುಮಾಡಿ ಬೇರೆ ಮಾಂಸದ ಜೊತೆಗೆ ಸೇರಿಸಿ ಮಾರಬಹುದಾಗಿತ್ತು. ಸದ್ಯ, ಅವೇನೂ ಆಗದಿದ್ದುದು ನನ್ನ ಮತ್ತು ನನ್ನ ಹೆಂಡತಿ

ಮಕ್ಕಳ ಪೈಕಿ-ಹಾರ ತುರಾಯಿಗಳ ಹೇರೊತ್ತು ದಾವಣಗೆರೆಗೆ ಬಂದೆ. ಮೊದಲು ಒಂದು ವಾರ ಛತ್ರದಲ್ಲಿ ವಾಸವಾಗಿ ಆಮೇಲೆ ಒಂದು ಸಾಧಾರಣ ಮನೆಗೆ ಹೋದೆ. ಬಂದ ಹದಿನೈದು ದಿವಸದಲ್ಲಿ ನನ್ನ ಹಿರಿಯ ಮಗ ಹುಟ್ಟಿದ. ಆಸ್ಪತ್ರೆಗೂ ಸೇರಿಸದೆ ಡಾಕ್ಟರಿಗೂ ಹೇಳದೆ ನನ್ನ ಊರು ದನ ಕಾಯುವ ಕೆಲಸಕ್ಕೆ ಹಕ್ಕಿಗಳ ಮೇಲೆ ಹೋಗಿದ್ದೆ. ಒಟ್ಟು ಹಳ್ಳಿಯವನಂತೆ ನಡೆದುಕೊಂಡಿದ್ದೆ. ಈಗ ಅದನ್ನೆಲ್ಲಾ ಹೇಳಬೇಕೆಂದರೆ ನಾಚಿಕೆಯಾಗುತ್ತೆ. ಹೆಂಡತಿ ಮಕ್ಕಳ ಕಡೆ ಗಮನ ಕೊಡದೆ ಸರ್ಕಾರಿ ಕೆಲಸ ಎಂದರೆ ದೇವರ ಕೆಲಸ ಎಂದು ಭಾವಿಸಿ ಊರೂರು ಸುತ್ತಾ ಒದ್ದಾಡುತ್ತಿದ್ದ ಮನುಷ್ಯ ನಾನು. ನನ್ನ ಸರ್ವೀಸಿನಲ್ಲಿ ರಜೆ ತೆಗೆದುಕೊಂಡದ್ದೇ ಅಪರೂಪ. ವರ್ಷಕ್ಕೊಂದು ತಿಂಗಳಿನಂತೆ 40 ತಿಂಗಳು ಪ್ರಿವಿಲೇಜ್ ರಜೆ, ಅಷ್ಟೇ ತಿಂಗಳು ಅರ್ಧ ಸಂಬಳದ ಫರ್ಲೋ ರಜೆಗಳನ್ನು ಸರ್ಕಾರಕ್ಕೆ ದಾನಮಾಡಿ ಬಿಟ್ಟಿದ್ದೇನೆ. ಕ್ಯಾಜುಯೆಲ್ ರಜೆಯೂ ಎಷ್ಟೋ ಸಲ ಲ್ಯಾಪ್ಸ್ ಆಯಿತು. ಹೆಂಡತಿಗೆ ಸೀರೆ ತರದಿದ್ದರೂ ಬೀದಿಯಲ್ಲಿ ನೋಡುವರಿಗೆ ಸೀರೆ ಪಂಚೆ ಕೊಡಿಸುವುದರಲ್ಲಿ ನಿರತನಾಗಿರುತ್ತಿದ್ದೆ. ಮನೆಯಲ್ಲಿ ನಾಲ್ಕೈದು ಹುಡುಗರು ಓದಿಕೊಂಡಿದ್ದರು. ಕಂಟ್ರೋಲ್‌ನಲ್ಲಿ ತಿಂಗಳಿಗೊಂದು ಚೀಲ ಅಕ್ಕಿ, ಎರಡು ಚೀಲ ರಾಗಿ ತಂದುಹಾಕಿ ಬೇಯಿಸಿಹಾಕುವ ಕೆಲಸ ಹೆಂಡತಿಗೆ ಬಿಟ್ಟು (ಈಗ ಅವರದೇ ಅಡುಗೆ ಚಾರ್ಜ್) ನನ್ನ ಪಾಡಿಗೆ ನಾನು ಇದ್ದು ಬಿಡುತ್ತಿದ್ದೆ. ಹೀಗಾಗಿ ನನ್ನ ಎರಡನೆಯ ಮಗನ ಹೆರಿಗೆಗೆ—ಅದೂ ದಾವಣಗೆರೆಯಲ್ಲಿ ಎರಡು ವರ್ಷಗಳ ನಂತರ, ದೇಶಕ್ಕೆ ಸ್ವಾತಂತ್ರ್ಯ ಬಂದ ದಿನ-ಬಂದಿದ್ದ ಲೇಡಿ ಡಾಕ್ಟರು ನನ್ನ ಹೆಂಡತಿ ಕೇಳಿದರಂತೆ 'ನೀವು ಗಂಡ ಹೆಂಡ್ರು ಮಾತಾಡೋದಿಲ್ವೆ' ಅಂತ. 'ಮಾತಾಡ್ದೆ ಏನಂತೆ. ಮಾತಾಡ್ತಿವಿ-ರಾತ್ರಿ ಹೊತ್ತು' ಎಂದು ಮಾರಾಗಿತ್ತಿ ನನ್ನ ಮಾನ ಉಳಿಸಿದಳು.

ದಾವಣಗೆರೆಯಲ್ಲಿ ನಾನು ಕಳೆದ ದಿನಗಳು ಅತ್ಯಂತ ಆನಂದದಾಯಕವಾಗಿದ್ದುವು. ಈಗ ನಾನು ಹುಳಿಮುರಿದ ಹಣ್ಣಾಗಿದ್ದೆ. ಹರಿಹರಕ್ಕೆ ಹೋದಾಗ ನನ್ನ ದರ್ಪ ತೋರಿಸಿದ್ದೂ ತೋರಿಸಿದ್ದೆ. ಇಪ್ಪತ್ತೈದು ಹರೆಯದ ಯುವಕನಾದರೂ ವಾಕಿಂಗ್‌ಸ್ಟಿಕ್ ಹಿಡಿದು ಹರಿಹರದ ಬೀದಿಯಲ್ಲಿ ಸಾಗುತ್ತಿದ್ದೆ. ಮುಂದೆ ದಫೇದಾರ ಲಾಟೀನ್ ಹಿಡಿದು ಅನಾವಶ್ಯಕವಾಗಿದ್ದರೂ ಒಂದು ಛತ್ರಿ ಹಿಡಿದು ದಪಾಲಿ ಹಾಕಿಕೊಂಡು ಹೋಗುತ್ತಿದ್ದ. ಅಂಗಡಿ ಮುಂಗಟ್ಟುಗಳಲ್ಲಿದ್ದ ಜನ ಎದ್ದು ನಿಂತು "ನಮಸ್ಕಾರ ಸ್ವಾಮಿ!" ಎಂದು ಕೈಜೋಡಿಸಿ ಕಾಲ್ಮೊಡಿಸಿ ಭಕ್ತಿಯಿಂದ ನಮಸ್ಕಾರ ಮಾಡುತ್ತಿದ್ದರು. ಇದು ಸಾಲದು ಎಂದು ಎಸ್.ಪಿ. ಜನರು ಪೋಲೀಸ್ ಇನ್‌ಸ್ಪೆಕ್ಟರಿಗೆ ಕೊಡುತ್ತಿದ್ದ ಮಿಲಿಟರಿ ನಮಸ್ಕಾರ ನನಗೂ ಸಿಗಬೇಕೆಂದು ಕಾಕಿ ಬಟ್ಟೆಯ ಪೋಲೀಸ್ ಸೂಟ್ ಹೊಲಿಸಿದೆ. ಕೈಯಲ್ಲಿ ತುಂಡುಗೋಲು ಹಿಡಿದು ನಡೆದೆ. ಆಗ ನನಗೆ ಕೊಟ್ಟ ಮರ್ಯಾದೆ ಪೋಲೀಸ್ ಕಾನ್ಸ್ಟೇಬಲಿಗೆ ಕೊಟ್ಟಂತಾಯಿತು. ಹಾಳಾದ್ದು ಬೇಡ ಎಂದು ಅದನ್ನು ಬಿಚ್ಚಿಸಿದೆ.

ಇಂತಹ ಓರೆಕೋರೆಗಳಿಲ್ಲದೆ ಬಿಂಕಬಡಿವಾರಗಳನ್ನು ಬಿಟ್ಟು ನನಗೆ ದಾವಣಗೆರೆ

ಯಂತಹ ಪಟ್ಟಣದಲ್ಲೂ ತುಂಬಾ ಮರ್ಯಾದೆ ಸಿಕ್ಕಿತು. ಭಾರಿ ಭಾರಿ ವರ್ತಕರ ಊರು ಅದು. ಅವರೆಲ್ಲ ತಮ್ಮ ಅಂಗಡಿಗೆ ಬನ್ನಿ ಎಂದು ಕರೆಯುತ್ತಿದ್ದರು. ಭೀತಿಗಿಂತ ಪ್ರೀತಿ ಹೆಚ್ಚಾಯಿತು. ಆಗ ಆಹಾರಕ್ಕಲ್ಲದೆ ಬಟ್ಟೆಗೂ ಕಂಟ್ರೋಲ್ ಬಂತು. ದಾವಣಗೆರೆ ಜನಕ್ಕೆ ಪಂಚೆ ಎಂದರೆ ಪಂಚಪ್ರಾಣ. ಒಳ್ಳೆಯ ಮಲ್ಲುಪಂಚೆಗೆ ಪ್ರಾಣ ಬೇಕಾದರೂ ಕೊಡುತ್ತಿದ್ದರು. ರೈಲಿನಲ್ಲಿ ಬಸ್ಸುಗಳಲ್ಲಿ ಪಂಚೆಗೆ ಪರ್ಮಿಟ್ ಪಡೆಯಲು ಜನ ಬರುತ್ತಿದ್ದರು. ಪರ್ಮಿಟ್ ಚೀಟಿಗಳನ್ನು ಪ್ರಿಂಟ್ ಮಾಡಿಸಿ ರೇಷನ್ ಕಾರ್ಡುಮೇಲೆ ಪಂಚೆ ಹಂಚುವ ವ್ಯವಸ್ಥೆ ಮಾಡಿದೆ. ಇದೆಲ್ಲಾ ನನ್ನ ವ್ಯವಸ್ಥೆ. ನನ್ನ ಮೂಗು ಮುಂದೆಯೇ ಸಬ್ ಡಿವಿಜನ್ ಆಫೀಸರಿದ್ದರೂ ಅವರನ್ನು ಕೇಳಿ ಮಾಡುವ ಎಂಬ ಮನಸ್ಸಿರಲಿಲ್ಲ. ಪಂಚೆಯ ಪರ್ಮಿಟ್ ಜೊತೆಗೆ ಒಂದು ರೂಪಾಯಿ ರಸೀದಿಯನ್ನೂ ಕೊಡುತ್ತಿದ್ದೆ. ಆ ಒಂದು ರೂಪಾಯಿ ಬೆಂಕಿ ಅನಾಹುತದ ಪರಿಹಾರ ನಿಧಿಗೆ. ಬೇಸಗೆ ಬಂತೆಂದರೆ ನಾಲ್ಕಾರು ಊರುಗಳಲ್ಲಿ ಬೆಂಕಿ ಅನಾಹುತ. ಆ ನಿಧಿಯನ್ನು ನೊಂದವರ ಸಹಾಯಕ್ಕೆ ಉಪಯೋಗಿಸುತ್ತಿದ್ದೆ. ಸಾವಿರಾರು ರೂಪಾಯಿ ವಸೂಲಾಯಿತು. ಯುಗಾದಿಹಬ್ಬದ ದಿನ ಹೊಸ ಪಂಚೆ ಉಡುವ ಮನಸ್ಸು ಎಲ್ಲರಿಗೂ. ಪಂಚೆ ಸೀರೆಗಳಿಗೆ ಪರದಾಟ ಹೇಳತೀರದು. ಲೆಕ್ಕ ಕೊಟ್ಟಿದ್ದ ಪಂಚೆಗಳನ್ನೆಲ್ಲಾ ಹಂಚಿದ್ದಾಯಿತು. ಇನ್ನೂ ನೂರಾರು ಜನ ಹೊರಗೆ ಕಾದಿದ್ದರು. ಒಬ್ಬರ ಅಂಗಡಿಯಲ್ಲಿ ಬಚ್ಚಿಟ್ಟಿದ್ದಾರೆಂದು ತಿಳಿಯಿತು. ಆಗಾಗ್ಗೆ ನಾನು ಅವರ ಅಂಗಡಿಗೆ ಸಂಜೆ ಹೊತ್ತು ಹೋಗಿ ಕಾಫಿ ಕುಡಿದು ಬರುತ್ತಿದ್ದೆ. ಅಷ್ಟು ವಿಶ್ವಾಸ ಇತ್ತು ಇಬ್ಬರಿಗೂ. ಆದರೆ ಸುದ್ದಿ ತಿಳಿದ ನಾನು ಈಗ ಮುಲಾಜಿಲ್ಲದೆ ಅವರ ಅಂಗಡಿಗೆ ನುಗ್ಗಿ ಒಳಗಿದ್ದ ಸ್ಟಾಕನ್ನೆಲ್ಲಾ ಹೊರಗೆ ತೆಗೆಸಿ ಹಂಚಿಬಿಟ್ಟೆ. ಕೊನೆಗೆ ಹಬ್ಬಕ್ಕೆ ನನಗೇ ಒಂದು ಪಂಚೆ ಸಿಕ್ಕಲಿಲ್ಲ.

ನನ್ನ ಮಗ ಕಾರಿನಲ್ಲಿ ಓಡಾಡಬೇಕೆಂಬ ಆಸೆ ನಮ್ಮ ತಂದೆಗೆ. ಆದರೆ ಅಷ್ಟು ದುಡ್ಡಿನ ದೌಲತ್ತು ಅವರಿಗಿರಲಿಲ್ಲ. ನಾನು ಮನಸ್ಸುಮಾಡಿದ್ದರೆ ಹರಿಹರದಲ್ಲಿ ಒಂದು ಜೀಪನ್ನಾದರೂ ಕೊಳ್ಳಬಹುದಾಗಿತ್ತು. ಏಳುನೂರು ರೂಪಾಯಿಗೆ ಒಂದು ಜೀಪು. ಅದೂ ಮಾಡಲಿಲ್ಲ. ನೂರೈವತ್ತು ರೂಪಾಯಿ ಸಂಬಳದಲ್ಲೇ ಕಾಲಹಾಕುತ್ತಿದ್ದೆ. ಖಾಯಂ ಆಗದ ಕಾರಣ ಸಂಬಳದಲ್ಲಿ ಬಡ್ತಿ ಇರಲೇ ಇಲ್ಲ. ಸಂಬಳ ಕಡಮೆಯಾದರೂ ಗಿಂಬಳ ಮಾಡಬಹುದಿತ್ತು. ಹಾಗೆ ಮಾಡಲಿಲ್ಲ. ಮನೆಗೆ ಯಾರಾದರೂ ಸಾಮಾನು ಗೀಮಾನು ತಂದುಕೊಟ್ಟರೆ ರೇಗಿಬೀಳುತ್ತಿದ್ದೆ. ಹೀಗಾಗಿ ಎತ್ತಿನ ಗಾಡಿಯೇ ನನಗೆ ಗತಿಯಾಯಿತು. ದಾವಣಗೆರೆ ದೊಡ್ಡ ತಾಲ್ಲೂಕು. ಸೈಕಲ್ ಸವಾರಿ ಕಷ್ಟವಾಗುತ್ತಾ ಬಂದಿತು. ಬಸ್ಸುಗಳು ಹೆಚ್ಚಿರಲಿಲ್ಲ. ನನ್ನ ಕಷ್ಟ ಅರಿತ ನಮ್ಮ ತಂದೆಯವರು ಒಂದು ಸಲ ಬಂದು ಒಂದು ಸವಾರಿಗಾಡಿ ಕೊಂಡುಕೊಟ್ಟು, ಊರಿನಿಂದ ಎತ್ತುಗಳನ್ನು ಕಳುಹಿಸಿಕೊಡುವುದಾಗಿ ಹೇಳಿ ಹೋದರು. ಅದರಂತೆ ಇನ್ನೂರು ಮೈಲಿ ದೂರದಿಂದ ಒಂದು ಜೊತೆ ಭರ್ಜರಿ ಎತ್ತು ಕಳುಹಿಸಿದರು. ಮನೆಯ ಕಾಂಪೌಂಡಿನಲ್ಲಿ ಎತ್ತು ಗಾಡಿಗಳು, ಸಣ್ಣ ಹುಲ್ಲಿನಮೆದೆ. ಎತ್ತು

ಗಳಿಗೆ ಗಂಟೆ ಸರ ಹಾಕಿಸಿದೆ.ಹುಲ್ಲು ತುಂಬಿಸಿ ಜಂಖಾನ ಹಾಸಿ ಮೆತ್ತೆಗಳನ್ನು ಒರಗಿ ಹಳ್ಳಿಗಳಿಗೆ ಹೋಗುತ್ತಿದ್ದೆ. ಇಲ್ಲಿ ಆಗಲೇ ಕೊಂಬು ಕಹಳೆಗಳ ಸದ್ದು ಅಡಗಿತ್ತು. ಆದರೂ ಅಮಲ್ದಾರರು ಬರುತ್ತಾರೆಂದರೆ ಊರಿನಲ್ಲಿ ಒಂದು ಜೊತೆ ಎತ್ತುಗಳ ಸಮೇತ ಪಟೇಲರೂ ತೋಟಿ ತಳವಾರರೂ ಕಾಯುತ್ತಿದ್ದರು. ನನ್ನ ಎತ್ತುಗಳನ್ನು ಬಿಚ್ಚಿ ಅವರ ಎತ್ತುಗಳನ್ನು ಹೂಡುತ್ತಿದ್ದರು. ಮುಂದಿನ ಊರಿನಲ್ಲಿ ಆ ಊರಿನ ಎತ್ತುಗಳು. ನನ್ನ ಎತ್ತುಗಳು ಹಿಂದೆ ಬರುತ್ತಿದ್ದುವು. ಹಿಂದಿರುಗುವಾಗ ಕೊನೆಯ ಊರಿನಲ್ಲಿ ಅವನ್ನು ಗಾಡಿಗೆ ಕಟ್ಟಲಾಗುತ್ತಿತ್ತು. ಆಗ ತಿಂಗಳಿಗೊಂದು ವಾರ, ಹೋಬಳಿ ಇನ್‌ಟೆನ್ಸೀವ್ ಇನ್‌ಸ್ಪೆಕ್ಷನ್ ಮಾಡಬೇಕಾಗಿತ್ತು. ಸಬ್ ಡಿವಿಜನ್ ಆಫೀಸರಿಗೂ ಡೀಸಿಯವರಿಗೂ ಈ ನಿಯಮ ಇತ್ತು. ಆಗೆಲ್ಲಾ ಅವರಿಗೆ ನನ್ನ ಗಾಡಿಯಲ್ಲಿ ಸವಾರಿ ಮಾಡಿಸಿದ್ದೇನೆ. ರಿಕಾರ್ಡ್ಸ್ ಆಫ್ ರೈಟ್ಸ್ ಮತ್ತು ಮ್ಯುಟೇಷನ್ (R. R. and Mutation)-ಇವು ವರ್ಷಗಟ್ಟಲೆ ಬಿದ್ದಿರುತ್ತಿದ್ದುವು. ಮೊಮ್ಮಗನ ಕಾಲಕ್ಕೂ ಖಾತೆ ಬದಲಾವಣೆ ಆಗುತ್ತಿರಲಿಲ್ಲ. ಜನ ಅರ್ಜಿ ಸಲ್ಲಿಸಬೇಕು, ವಕೀಲರು ಹಾಜರಾಗಬೇಕು, ಹೀರಿಂಗು, ಸಾಕ್ಷಿ, ವಾದ ವಿವಾದ ಇಷ್ಟೆಲ್ಲಾ ನಡೆಯಬೇಕು, ನೂರಾರು ರೂಪಾಯಿ ಖರ್ಚಾಗಬೇಕು. ಮಾಜಿ ಮಂತ್ರಿಗಳಾಗಿರುವ ಸಿದ್ಧವೀರಪ್ಪನವರು ಎಷ್ಟೋ ಸಲ ನನ್ನ ಕೋರ್ಟಿಗೆ ಆರ್. ಆರ್. ಕೇಸುಗಳಿಗೆ ಹಾಜರಾದದ್ದುಂಟು. ಇವೆಲ್ಲಾ ತೊಂದರೆ ಏಕೆ ಎಂದು ಆರ್. ಆರ್. ಮ್ಯುಟೇಷನ್ನುಗಳನ್ನು ಹೋಬಳಿವಾರ್ ವಿಂಗಡಿಸಿ ಹೋಬಳಿ ಇನ್‌ಸ್ಪೆಕ್ಷನ್ ವೇಳೆ ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದೆ. ಊರಿನಲ್ಲಿ ನಿಂತು ವಿಚಾರಿಸಿದರೆ ಮೂರೇ ಗಳಿಗೆಯಲ್ಲಿ ವಾರಸು ಗೊತ್ತಾಗುತ್ತಿತ್ತು. ಸರಿ, ಅಲ್ಲೇ ಆರ್ಡರು. ಇನ್ನು ವಾರದಕೆಲಸ, ರೆವಿನ್ಯೂ ಮತ್ತು ಪಂಚಾಯಿತಿ ಕಂದಾಯಗಳ ಬಾಕಿ ವಸೂಲಿ ಇತ್ಯಾದಿಗಳ ವೈಖರಿಯನ್ನು ಆಗಲೇ ಹೇಳಿದ್ದೇನೆ. ನನ್ನ ಗಾಡಿ ಈ ಕೆಲಸಗಳಿಗೆ ತುಂಬಾ ಅನುಕೂಲವಾಯಿತು.

ಕಾಡುವ ಕಾಲ ಹತ್ತಿರ ಬರುತ್ತಿತ್ತು. ಆದರೆ ಅದನ್ನು ನೋಡುವ ಪುಣ್ಯ ನನ್ನ ತಂದೆಗೆ ಒದಗಲಿಲ್ಲ. ನನ್ನ ಮಗನನ್ನು ಅಮಲ್ದಾರನನ್ನಾಗಿ ಮಾಡಬೇಕೆಂಬ ಅವರ ಆಸೆ ಈಡೇರಿತ್ತು. ಹಿರಿಯ ಮಗನ ನಾಮಕರಣಕ್ಕೆ ಬಂದು ಗಾಡಿಮಾಡಿಕೊಟ್ಟು ಹೋಗಿದ್ದರು. ಏಳೆಂಟು ತಿಂಗಳನಂತರ ಮತ್ತೊಮ್ಮೆ ಬಂದರು. ಆಗ ತಮ್ಮ ಮೊಮ್ಮಗನನ್ನು ಕಂಡು ಹಿಗ್ಗಿದರು ನನ್ನಂತೆ ನನ್ನ ಮೊಮ್ಮಗ ಎಂದುಕೊಂಡರು. ನನ್ನ ಮನೆಯಲ್ಲಿದ್ದ ಎರಡು ಕಿರ್ಲೋಸ್ಕರ್ ಕಂಪೆನಿಯ ಕಬ್ಬಿಣದ ಮಂಚಗಳಂತಹ ಮಂಚ ಹಾಕಿ ದೊಡ್ಡ ಮನೆಯಲ್ಲಿ ಮಲಗಬೇಕೆಂಬ ಆಸೆ ವ್ಯಕ್ತಪಡಿಸಿದರು. ಆದರೆ ಅದನ್ನು ನಾನು ನಡೆಸಿಕೊಡಲಿಲ್ಲ. ನೂರೆಂಟು ಫೋಟೋ ತೆಗೆಸಿಕೊಂಡ ನಾನು ಹೆತ್ತತಂದೆಯ ಫೋಟೊ ತೆಗೆಸಲಿಲ್ಲ. ಐವತ್ತಾರು ವರುಷ ; ನಾಲ್ಕನೆಯ ಹೆಂಡತಿ. ನಾನು ಮೊದಲನೆಯ ಹೆಂಡತಿಯ ಹಿರಿಯಮಗ. ಯಾರನ್ನು ಕಟ್ಟಿಕೊಳ್ಳುವುದೋ ಯಾರನ್ನು ಬಿಡುವುದೋ

ಈ ಸಂಕಟದಲ್ಲಿ ತೊಳಲಾಡುತ್ತಿದ್ದರು ನನ್ನ ತಂದೆ. ಕೊನೆಯ ಸಲ ಬಂದಾಗ ಏತಕ್ಕೋ ಏನೋ ಕಣ್ಣಿನಲ್ಲಿ ನೀರುತಂದರು. ಕಣ್ಣೀರು ಸುರಿಸುತ್ತಲೇ ರೈಲು ಹತ್ತಿದರು. ಆ ಕಣ್ಣೀರಿಗೆ ಕಾರಣ ಈ ಪಾಪಿ ! ಹೋದ ಒಂದು ತಿಂಗಳಿಗೆ ಮಂಚದಮೇಲೆ ಮಲಗುವ ಬದಲು ಊರ ಹೊರಗಡೆ ಹಾಕಿದ ಷೆಡ್ಡಿನಲ್ಲಿ ಉತ್ತ ಹೊಲದಲ್ಲಿ ಮಲಗಿ ಇಹಲೋಕ ತ್ಯಜಿಸಿದರು. ಪ್ಲೇಗಿನಮಾರಿ ಅವರನ್ನು ಕೊಂಡೊಯ್ದಿತ್ತು.

ಚಿತ್ರದುರ್ಗದ ಡೀಸಿಯವರು ಅಧಿಕಾರಿಗಳ ಮೀಟಿಂಗ್ ನಡೆಸುತ್ತಿದ್ದರು. ಆಗ ತಂದೆಗೆ ಪ್ಲೇಗ್ ತಗುಲಿರುವುದೆಂದು ಟೆಲಿಗ್ರಾಂ ಬಂದಿತು. ಹಾಗಿಂದಹಾಗೆಯೇ ಹೊರಟೆ. ರಾತ್ರಿ ರೈಲು ಹತ್ತಿ, ಹಗಲು ಬಸ್ಸು ಹತ್ತಿ ಇಳಿದು ಗಾಡಿ ಮೇಲೆ ಊರಿಗೆ ಹೋದೆ. ಬರುವ ದಾರಿಯಲ್ಲಿ ಸಿಕ್ಕಿದ ಡಾಕ್ಟರನ್ನು ಊರಿಗೆ ಕರೆದೆ. ಅವರು ಎಲ್ಲಾ ಮುಗಿದು ಹೋಗಿದೆ ಎಂಬ ಘೋರಸುದ್ದಿ ತಿಳಿಸಿದರು. ಬಿಕ್ಕಿಬಿಕ್ಕಿ ಅಳುತ್ತಾ ಹೊರಟೆ. ಇಡೀ ನಾಡು ಅಳುತ್ತಾ ಕುಳಿತಿತ್ತು ಉತ್ತಹೊಲದಲ್ಲಿ. ನನ್ನ ಭಾಗ್ಯದ ದೇವರನ್ನೇ ಕಳೆದುಕೊಂಡ ನತದೃಷ್ಟ ನಾನಾದೆ !

ನನಗೆ ಏಸಿ ಆಗಿ ಪ್ರಮೋಷನ್ ಆಯಿತು-1947ರಲ್ಲಿ. ಚಿಕ್ಕಬಳ್ಳಾಪುರ ಸಬ್ ಡಿವಿಜನ್ನಿಗೆ ಹಾಕಿದರು. ಇನ್ನೇನು ಚಾರ್ಜ್ ಕೊಡಬೇಕು, ಆಗ ಸರ್ಕಾರದಿಂದ ಟೆಲಿಗ್ರಾಂ ಬಂದಿತು ಕೊಡಕೂಡದು ಎಂದು. ಮಾರನೆಯದಿನ ಬಂದ ಸರ್ಕಾರದ ಕಾಗದದಲ್ಲಿ 'ನೀವು ಅಸಿಸ್ಟೆಂಟ್ ಕಮೀಷನರಾಗಿ ಬಡ್ತಿಹೊಂದಿ ಮುಂದಿನ ಆಜ್ಞೆಯವರೆಗೆ ದಾವಣಗೆರೆ ತಾಲ್ಲೂಕು ಅಮಲ್ದಾರರಾಗಿ ಮುಂದುವರಿಯಬೇಕು' ಎಂದು ತಿಳಿಸಲಾಗಿತ್ತು. 1947ನೆಯ ಆಗಸ್ಟ್ 15 ರಂದು ಭಾರತ ಸ್ವಾತಂತ್ರ್ಯ ಪಡೆಯಿತು. ಫೈರ್‌ಬ್ರಾಂಡ್ ಹೋಗಿದ್ದ. ಹರಿಹರದಲ್ಲಿದ್ದಾಗಲೇ ನಾನೊಂದು ರೇಡಿಯೋ ಇಟ್ಟಿದ್ದೆ, ಇಂಗ್ಲಿಷ್ ಮೇಕ್-ಫೆರಾಂಟಿ ಎಂದು ಅದರ ಹೆಸರು. ಹೆಚ್ಚು ಕಡಮೆ ಒಂದು ಪುಟ್ಟ ಬೀರಿನಷ್ಟು ದೊಡ್ಡದಾಗಿತ್ತು. ಆ ರೇಡಿಯೋ ಮುಂದೆ ಕುಳಿತು ಇಡೀ ರಾತ್ರಿ ಆಗಸ್ಟ್ 15ರಂದು ನಡೆದ ಸಮಾರಂಭದ ರೇಡಿಯೋ ವರದಿಯನ್ನು ಮೆಲ್‌ವೆಲ್ ಡಿಮೆಲೋ ಅವರ ಬಾಯಿಂದ ಕೇಳುವ, ನೆಹರೂ ಮುಂತಾದವರ ಭಾಷಣಗಳನ್ನು ಆಲಿಸುವ ಸೌಭಾಗ್ಯ ನನ್ನದಾಗಿತ್ತು. ಈ ಮೆಲ್‌ವೆಲ್ ಡಿಮೆಲೋ ಒಮ್ಮೆ ಮಂಗಳೂರಿಗೆ ಬಂದು ನನ್ನನ್ನು ಕಂಡು ಜಿಲ್ಲೆಯ ಪ್ರಗತಿಯ ಬಗ್ಗೆ ನಾಲ್ಕು ಮಾತು ಹೇಳಿ ಎಂದು ರಿಕಾರ್ಡುಮಾಡಿ ಕೊಂಡರು. ಆಗ ಅವರು ಅಂದಿದ್ದರು 'your voice is exceedingly well suited for broadcasting purposes' ಎಂದು. ಹರಿಹರದಲ್ಲಿದ್ದಾಗ ಒಮ್ಮೆ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಧಾರವಾಡಕ್ಕೆ ಹೋಗಲು ಮಾಸ್ತಿ ವೆಂಕಟೇಶ ಯ್ಯಂಗಾರರು ರೈಲಿನಲ್ಲಿ ಬರುತ್ತಿದ್ದಾರೆಂಬ ಸುದ್ದಿ ತಿಳಿಯಿತು. ಅಧಿಕಾರಿ-ಸಾಹಿತಿ ಯಾದ ಅವರನ್ನು ಕಾಣುವ ಆಸೆಯಾಯಿತು ನನಗೆ. ಸ್ಟೇಷನ್ನಿಗೆ ಹೋಗಿ ಅವರನ್ನು ಕಂಡು ಕಾಫಿ ತಿಂಡಿಕೊಟ್ಟು ಮಾತಾಡಿಸಿದೆ. ಹೋಗುವಾಗ 'Are you a musician?'

ಎಂದು ಕೇಳಿದರು. 'ಇಲ್ಲ' ಎಂದೆ. 'Your voice is very well suited for music' ಎಂದರು. ಈಗಲಾದರೂ A. I. R. ಮತ್ತು ಸಂಗೀತ ಸಭೆಗಳು ನನ್ನನ್ನು ಕರೆಯುವುದೊಳ್ಳೆಯದು !

ಹೊಸ ಸ್ವಾತಂತ್ರ್ಯವನ್ನು ಅನುಭವಿಸುವ ಆಸೆ ಎಲ್ಲರಿಗೂ. ಆದರೆ ಮೈಸೂರು ಸಂಸ್ಥಾನದಲ್ಲಿ ಅರಸೊತ್ತಿಗೆ ಇನ್ನೂ ಇತ್ತು. ಮೈಸೂರು ಭಾರತದ ಒಕ್ಕೂಟಕ್ಕೆ ಸೇರಲಿಲ್ಲ. ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮುದಲಿಯಾರು ಆಗ ದಿವಾನರು. ಸರಿ, ಚಳುವಳಿ ಆರಂಭವಾಯಿತು. ರೈಲು ಹಳಿ ಕೀಳುವುದು, ತಾಲ್ಲೂಕು ಕಛೇರಿಗಳಿಗೆ ಬೆಂಕಿ ಹಚ್ಚುವುದು ಇತ್ಯಾದಿ ವಿಧ್ವಂಸಕ ಕೆಲಸಗಳು ನಡೆದುವು. ದಾವಣಗೆರೆಯಲ್ಲಿ ಇದು ಬಹು ಜೋರಾಗಿ ನಡೆಯಿತು. ಸೈನ್ಯ ಪಡೆಯೊಂದು ದಾವಣಗೆರೆಯಲ್ಲಿ ಮೊಕ್ಕಾಂ ಮಾಡಿತು. ಹೀಗಿರುವಾಗ ಅನುಭವಸ್ಥರಾದ ಅಮಲ್ದಾರರ ಸೇವೆಯನ್ನು ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸರ್ಕಾರ ನನ್ನನ್ನು ದಾವಣಗೆರೆಯಲ್ಲಿ ಇರಿಸಿತು. ಚಳುವಳಿ ಉಗ್ರವಾಯಿತು. ಕೊನೆಗೆ ದಿವಾನರು ಸಂಧಾನ ನಡೆಸಿದರು. ಮೈಸೂರು ಸಂಸ್ಥಾನ ಭಾರತದ ಒಕ್ಕೂಟಕ್ಕೆ ಸೇರಿತು. ಇಷ್ಟೆಲ್ಲಾ ಆಗಲು ಮೂರು ತಿಂಗಳುಗಳೇ ಆದುವು. ಆರ್ಕಾಟರು ದಿವಾನರಾಗಿಯೇ ಉಳಿದರೂ ಕೆ. ಸಿ. ರೆಡ್ಡಿಯವರು ಮುಖ್ಯಮಂತ್ರಿಗಳಾದರು. ಹೊಸ ಮಂತ್ರಿಮಂಡಲ ರಚನೆಯಾಯಿತು. ನನ್ನನ್ನು ಚಿಕ್ಕಬಳ್ಳಾಪುರಕ್ಕೆ ಬದಲು ಹಾಸನಕ್ಕೆ ಡಿಸ್ಟ್ರಿಕ್ ಡೆವಲಪ್‌ಮೆಂಟ್ ಆಫೀಸರಾಗಿ ಹಾಕಿದರು.

ಎಲ್ಲಿಗೆ ಹಾಕಿದರೆ ಅಲ್ಲಿಗೆ ಹೋಗುವುದು ನನ್ನ ಸ್ವಭಾವವಾದೆ! ಹಾಸನಕ್ಕೆ ರೈಲಿನಲ್ಲಿ ಹೊರಟೆ. ಇಡೀ ಬೋಗಿ ಹಾರತುರಾಯಿಗಳಿಂದ ತುಂಬಿಹೋಗಿತ್ತು. ಅಷ್ಟೊಂದು ಆತ್ಮೀಯತೆಯಿಂದ ದಾವಣಗೆರೆಯ ಮಂದಿ ನನ್ನನ್ನು ಕಳುಹಿಸಿಕೊಟ್ಟರು.

ಹಾಸನದಲ್ಲಿ ಕೇವಲ ಒಂದೇ ವರ್ಷ. ಅಧಿಕಾರವಿಲ್ಲದ ಅಧಿಕಾರ. ಕುಳಿತುಕೊಳ್ಳಲು ಆಫೀಸಿಲ್ಲ. ಇರಲು ಮನೆಯಿಲ್ಲ, ಅಜಮಾಯಿಷಿಮಾಡುವ ಜನ ಇಲ್ಲ. ಇಪ್ಪತ್ತುವರ್ಷ ದರ್ಬಾರು ನಡೆಸಿದ ಈ ಜೀವಕ್ಕೆ ಕೊಂಚ ಕಷ್ಟವೇ ಆಯಿತು ಹೊಸ ಕೆಲಸಕ್ಕೆ ಹೊಂದಿಕೊಳ್ಳಲು. ರೂರಲ್ ಡೆವಲಪ್‌ಮೆಂಟ್ ಎಂಬುದೇ ಹೊಸದಾಗಿತ್ತು. ಆದರೆ ಇಷ್ಟು ಒಂದು ಕಡೆ ಆದರೂ ಶಾಶ್ವತವಾಗಿ ನೆನೆಯಬೇಕಾದ ಒಂದು ಕೆಲಸ ಮಾಡಿದೆ. ಅದೇನೆಂದರೆ, ಜಿನಾರ ಎಂಬ ಗ್ರಾಮವನ್ನು ಮಾದರಿಗ್ರಾಮವನ್ನಾಗಿ ಮಾಡಿದ್ದು. ಆ ಊರಿನ ಶ್ಯಾನುಭೋಗರು ಗ್ರಾಮಸ್ಥರಿಗೆಲ್ಲ ತಿಳುವಳಿಕೆ ಕೊಟ್ಟು ಹುರಿದುಂಬಿಸಿದರು. ಗ್ರಾಮಾಭ್ಯುದಯದಲ್ಲಿ ಏನೇನು ಕೆಲಸಗಳಾಗಬೇಕಾಗಿದ್ದುವೋ ಅವೆಲ್ಲಾ ಆದುವು. ಇಂದಿಗೂ ಆ ಗ್ರಾಮ ಮಾದರಿಯಾಗಿ ಉಳಿದಿದೆ. ಅನೇಕ ಊರುಗಳಿಗೆ ಕುಡಿಯುವ ನೀರಿನ ಬಾವಿ ಒದಗಿದೆ. ಇದನ್ನು ಅಮಲ್ದಾರನಾದಂದಿನಿಂದಲೂ ಮಾಡುತ್ತ ಬಂದಿದ್ದೇನೆ. ನಾನು ತೋರಿಸಿದ ಜಾಗದಲ್ಲಿ ಬಾವಿ ತೋಡಿಸಿದರೆ ಖಂಡಿತ ಸಿಹಿನೀರು ಬೀಳುತ್ತಿತ್ತು. ಹುತ್ತ, ಉತ್ತರಾಣಿಗಿಡ, ಈಚಲಮರ, ಎಕ್ಕದಗಿಡ—ಇವು ಇರುವ ಸ್ಥಳ

ತೋರಿಸುತ್ತಿದ್ದೆ. ಸೀನೀರು ಸಮೃದ್ಧಿಯಾಗಿ ಬರುತ್ತಿತ್ತು. ಹೀಗಾಗಿ ನಾನೊಬ್ಬ water diviner ಆಗಿಬಿಟ್ಟಿದ್ದೆ. ಆದಿಕರ್ನಾಟಕರು ಮತ್ತು ಆದಿದ್ರಾವಿಡರಿಗೆ ಹೆಂಚುಗಳ ಕೊಡುವುದು ಡಿಸ್ಟ್ರಿಕ್ಟ್ ಡೆವಲಪ್ ಮೆಂಟ್ ಆಫೀಸರ ಒಂದು ಮುಖ್ಯ ಕೆಲಸ. ಇವನ್ನು ಮನಸ್ಸಿಟ್ಟು ಮಾಡಿದೆ. ಕಾರಣ, ನಾನು ಯಾವಾಗಲೂ ಆ ಜನರ ಬಗ್ಗೆ ಆಸಕ್ತಿ ವಹಿಸುತ್ತಿದ್ದೆ. ನಾನು ರೆವೆನ್ಯೂ ಇಲಾಖೆಯ ಅಥವಾ ಅಭಿವೃದ್ಧಿ ಇಲಾಖೆಯ ಯಾವ ಕೆಲಸದಲ್ಲಿರಲಿ ತಪ್ಪದೆ ಅವರ ಕೇರಿಗಳಿಗೆ ಭೇಟಿ ಕೊಡುತ್ತಿದ್ದೆ. ಆಗ ಒಂದು ಮೂಢನಂಬಿಕೆ ಇತ್ತು. ಉತ್ತಮರು ಹೊಲೆಯರ ಕೇರಿಗೆ ಹೋದರೆ ಹೊಲೆಯರಿಗೆ ಏಳಿಗೆ ಇಲ್ಲ ಎಂಬುದು ಆ ಮೂಢನಂಬಿಕೆ. ಹೀಗಾಗಿ ಬ್ರಾಹ್ಮಣರನ್ನು ಅವರ ಕೇರಿಗ ಸೇರಿಸುತ್ತಿರಲಿಲ್ಲವಂತೆ. ಅಕಸ್ಮಾತ್ ಹೋದರೆ ಅವರಿಗೆ ಗಂಜಲ ಹಾಕಿ ಕಸಪೊರಕೆಯಿಂದ ಹೊಡೆದು ಕಳುಹಿಸುತ್ತಿದ್ದರಂತೆ. ಇದು ನಿಜವೋ ಹೇಗೋ ಕಾಣೆ. ನಾನಂತು ಇಂಥವಕ್ಕೆ ಹೆದರದೆ ಅವರ ಕೇರಿಗಳಿಗೆ ನುಗ್ಗುತ್ತಿದ್ದೆ. ಕೇರಿಯ ಜನರನ್ನು ಮಾತಾಡಿಸಿ ಹೆಂಡ ಕುಡಿಯಬೇಡಿ, ದನ ತಿನ್ನಬೇಡಿ ಎಂದು ಬುದ್ಧಿವಾದ ಹೇಳಿ ಅವರ ಸೌಕರ್ಯಕ್ಕೆ ಏನು ಬೇಕೋ ಅಷ್ಟೆಲ್ಲಾ ಮಾಡಿಬರುತ್ತಿದ್ದೆ. ಅವರ ಬಗ್ಗೆ ನನ್ನ ಒಲವು ಅಷ್ಟಿತ್ತು.

ಹೀಗಿರುವಲ್ಲಿ ಕೇವಲ ಒಂದು ವರ್ಷದಲ್ಲಿ ಇಲ್ಲಿಂದ ವರ್ಗಾಯಿಸಲ್ಪಟ್ಟೆ. ಅದೂ ಎಲ್ಲಿಗೆ ? ಬೇಡವಾದ ಬೆಂಗಳೂರಿಗೆ, ಸರ್ಕಾರದ ಅಂಡರ್ ಸೆಕ್ರೆಟರಿಯಾಗಿ. ಯಾರು ಈ ಕೆಲಸ ಮಾಡಿದರೆಂದು ತಿಳಿಯಲು ಮೈಸೂರಿಗೆ ಹೋದೆ. ಅಲ್ಲಿ ವರ್ಷೆ ವರ್ಷೆ ದಸರಾ ವೇಳೆ ಪ್ರಜಾಪ್ರತಿನಿಧಿ ಸಭೆ ಜಗನ್ಮೋಹನ ಬಂಗಲೆಯಲ್ಲಿ ನಡೆಯುತ್ತಿತ್ತು. ಎಲ್ಲಾ ಸೆಕ್ರೆಟರಿಗಳು–ಆಗ ಇದ್ದವರು ನಾಲ್ಕೊ ಐದೊ-ಟೆಂಟ್‌ಗಳಲ್ಲಿ ಬಿಡಾರಮಾಡಿದ್ದರು. ಎಜುಕೇಷನ್ ಸೆಕ್ರೆಟರಿ ನಿರ್ವಾಣೆಗೌಡರ ಬಳಿಗೆ ಹೋದೆ. ನನ್ನನ್ನು ಕಂಡಕೂಡಲೇ ಅವರು ತಮ್ಮ ಕೀಚಲು ದನಿಯಲ್ಲಿ 'I know your capacities. Simply I selected you' ಎಂದು ಬಿಟ್ಟರು. ಇವರೇ ನನ್ನನ್ನು 'idiot' ಎಂದಿದ್ದವರು. ಬೇರೆ ಮಾರ್ಗ ಕಾಣದೆ ರಿಪೋರ್ಟ್ ಮಾಡಿಕೊಂಡೆ. ಆಗ ಜಾತೀಯತೆ ಈಗಿನಷ್ಟು ಇರಲಿಲ್ಲ.

ಆಗ ಅಠಾರಾ ಕಛೇರಿಯ ವಿದ್ಯಾ ಇಲಾಖೆಗೆ ಒಬ್ಬ ಸೆಕ್ರೆಟರಿ, ಒಬ್ಬ ಅಂಡರ್ ಸೆಕ್ರೆಟರಿ ಅಷ್ಟೆ. ಸೆಕ್ರೆಟರಿಗೆ ವಿದ್ಯಾ ಇಲಾಖೆಯಲ್ಲದೆ ಬೇರೆ ಇಲಾಖೆಗಳು ಸೇರಿದ್ದುವು. ಅಂಡರ್ ಸೆಕ್ರೆಟರಿಗೆ ಇಡೀ ವಿದ್ಯಾ ಇಲಾಖೆ, ಯೂನಿವರ್ಸಿಟಿ (ಆಗ ಇದ್ದುದು ಮೈಸೂರು ಯೂನಿವರ್ಸಿಟಿ ಒಂದೇ), ಟೆಕ್ನಿಕಲ್ ವಿದ್ಯಾಭ್ಯಾಸ, ದಾಮೋದರದಾಸ್ ಮತ್ತು ಇತರ ವಿದೇಶೀ ಸ್ಕಾಲರ್‌ಷಿಪ್‌ಗಳು ಇತ್ಯಾದಿ ಇತ್ಯಾದಿ. ಇಷ್ಟು ಸಾಲದು ಎಂಬಂತೆ Beggar Relief Committee Secretary ಬೇರೆ. ಇದಕ್ಕೆ 50 ರೂಪಾಯಿ ಅಲೋಯೆನ್ಸ್. ಸಂಬಳ 300 ರೂಪಾಯಿ. ಮೈತುಂಬ ಕೆಲಸ. ಎರಡನೆಯ ಶನಿವಾರ ರಜಾ ಆಗ ಇರಲಿಲ್ಲ. ಆರು ದಿನ ಕಛೇರಿಯಲ್ಲಿ ದುಡಿದದ್ದು ಸಾಲದೆ ಶನಿವಾರ ಸಂಜೆ ಕಾರಿನಲ್ಲಿ ನಾಲ್ಕೈದು ಪೆಟ್ಟಿಗೆ ರಿಕಾರ್ಡುಗಳನ್ನು ಮನೆಗೆ

ಹೊತ್ತುಕೊಂಡು ಹೋಗುತ್ತಿದ್ದೆ. ಸದ್ಯ ಒಳ್ಳೆಯ ಸಿಬ್ಬಂದಿ. ಶ್ರದ್ಧಾವಂತರಾಗಿ ಕೆಲಸ ಮಾಡುತ್ತಿದ್ದರು. ನೋಟಿಂಗ್ ಮುಂತಾದುವುಗಳನ್ನು ಬಹಳ ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಡಿ. ಎಚ್. ಚಂದ್ರಶೇಖರಯ್ಯನವರು ಮಂತ್ರಿಗಳು. ಆ ಪುಣ್ಯಾತ್ಮ ಗುಮಾಸ್ತರಿಗಿಂತ ಹೆಚ್ಚಾಗಿ ಫೈಲು ನೋಡುತ್ತಿದ್ದರು. ರಿಕಾರ್ಡನ್ನು A to Z ನೋಡದೆ ಆರ್ಡರು ಮಾಡುತ್ತಿರಲಿಲ್ಲ. ಅವರು ಫೈಲ್ ನೋಡುತ್ತ ನೋಡುತ್ತ ಅದರಲ್ಲಿ ಮಗ್ನರಾದಾಗ ಅವರ ಖಾದಿ ಟೋಪಿ ಅಡ್ಡಡ್ಡವಾಗುತ್ತಿತ್ತು. ಆದರೂ ಅದರ ಕಡೆ ಗಮನ ಅವರಿಗಿರಲಿಲ್ಲ. ಆರ್ಡರೆಂದರೆ 'yes' 'no' ಅಲ್ಲ. ದೀರ್ಘವಾದ ಆರ್ಡರು. ಒಂದು ಪುಟ ಆಗಲಿ ಹತ್ತು ಪುಟ ಆಗಲಿ ಅವರೇ ಬರೆಯುತ್ತಿದ್ದರು. ಆಮೇಲೆ ಬಂದ ಟಿ. ಸಿದ್ಧಲಿಂಗಯ್ಯನವರು ಅದಕ್ಕೆ ವಿರುದ್ಧ. ಫೈಲುಗಳೆಂದರೆ ಅವರಿಗೆ ಆಗುತ್ತಿರಲಿಲ್ಲ. 'ಏನು ಆರ್ಡರು ಮಾಡಬೇಕಪ್ಪ '?' ಎಂದು ನನ್ನನ್ನೇ ಕೇಳುತ್ತಿದ್ದರು. ನನ್ನಲ್ಲಿ ಅವರಿಗೆ ತುಂಬಾ ನಂಬಿಕೆ ಹಾಗೂ ಪ್ರೀತಿ. ಎಲ್ಲಾ ವಿಷಯಗಳನ್ನು ಮುಚ್ಚುಮರೆಯಿಲ್ಲದೆ ಹೇಳುತ್ತಿದ್ದರು.

ಯಾವ ಅಧಿಕಾರಿಯೇ ಆಗಲಿ ಸೆಕ್ರೆಟೇರಿಯಟ್‌ನಲ್ಲಿ ಒಂದೆರಡು ವರ್ಷಗಳಾದರೂ ಕೆಲಸ ಮಾಡಬೇಕು. ಬೇರೆ ಕೆಲಸ ಕೇವಲ ಗಡಿಯಾರದ ಮುಳ್ಳುಗಳನ್ನು ನೋಡಿದಂತೆ. ಆದರೆ ಸೆಕ್ರೆಟೇರಿಯಟ್ ಕೆಲಸ ಅದರ ಒಳಗೆ ಸೇರಿಕೊಂಡು ಗಡಿಯಾರ ಹೇಗೆ ನಡೆಯುತ್ತೆ ಎಂದು ನೋಡಿದಂತೆ. ಸರ್ಕಾರದ ಯಂತ್ರ ಹೇಗೆ ನಡೆಯುತ್ತೆ, ಎಂತೆಂತಹ ವಿಷಯಗಳು ಬರುತ್ತವೆ. ಅವುಗಳ ವಿಲೇವಾರಿ ಹೇಗೆ, ಕ್ಯಾಬಿನೆಟ್ ನೋಟೆಂದರೆ ಏನು, ಸಬ್‌ಮಿಷನ್ ನೋಟೆಂದರೆ ಏನು. ಆ ನೋಟುಗಳಲ್ಲಿ ಇಡೀ ವಿಷಯವನ್ನು ಹೇಗೆ ಕ್ರೋಢೀಕರಿಸಿ ಬರೆಯಬೇಕು–ಇವೆಲ್ಲಾ ತಿಳಿಯುತ್ತವೆ. ಮಹಾರಾಜರಿಗೆ ಕಳುಹಿಸಬೇಕಾದ್ದು submission note. ಅವರು ಬೇರೊಂದು ಹಾಳೆಯಲ್ಲಿ (ಅವರಿಗೆಂದೇ ದಪ್ಪ ಹಾಳೆ) 'J.C.R.W' ಎಂದು ಇನಿಷಿಯಲ್ ಹಾಕಿ ಕಳುಹಿಸುತ್ತಿದ್ದರು. ಇವನ್ನೆಲ್ಲಾ ತಿಳಿದುಕೊಳ್ಳುವ ಆಸಕ್ತಿ ಜೊತೆಗೆ ಕೆಲಸ ಮಾಡಿ ಹೆಸರು ತೆಗೆದುಕೊಳ್ಳಬೇಕೆಂಬ ಆಸೆ. ಹಗಲು ರಾತ್ರಿ ದುಡಿದೆ. Mt. Carmel College ಗೆ ಈಗ ಇರುವ ಕಟ್ಟಡವನ್ನು ಜಾಗದ ಸಮೇತ ಮಾರುವ ಒಂದು ಫೈಲ್ ಬಂದಿತು. ನಾನು ಅದನ್ನು ಪರಿಶೀಲಿಸಿ ಜಾಗದ ಚಕ್ಕುಬಂದಿಗಳನ್ನು ವಿವರವಾಗಿ ಬರೆದೆ. 'It is bounded.... ಎಂಬ ವಾಕ್ಯ ಬರೆದಿದ್ದೆ. ಫೈನಾನ್ಸ್ ಸೆಕ್ರೆಟರಿ ಎಸ್. ಶಾಮಣ್ಣ (ಇವರಿಗೆ ಕಮಲದ ಶಾಮಣ್ಣ ಅಂತಲೂ ಅಡ್ಡಹೆಸರಿತ್ತು. ಏಕೆಂದರೆ, ಅವರು ಇನಿಷಿಯಲ್, ಹಾಕಿದರೆ ಕಮಲದಂತೆ ಕಾಣುತ್ತಿತ್ತು!) 'bounded' ಎಂಬ ಪದವನ್ನು underline ಮಾಡಿ question mark ಹಾಕಿದ್ದರು. ಈ ಪದ ತಪ್ಪೆ ? ಇಲ್ಲ. ಇಂಗ್ಲಿಷ್ ನಿಘಂಟಿನಲ್ಲಿ ಈ ಪದ ಇತ್ತು. ಸಮಾಧಾನ ಪಟ್ಟುಕೊಂಡು ಸುಮ್ಮನಾದೆ.

ಒಮ್ಮೆ ವಿದ್ಯಾ ಇಲಾಖೆ ಅಧಿಕಾರಿಗಳ ಸಮ್ಮೇಳನ ನಡೆಯಿತು. ಇಲಾಖೆಯ ಡಿ.ಪಿ.ಐ.

ಮತ್ತು ಒಂಬತ್ತು ಜನ ಡಿ.ಈ.ಓ.ಗಳಷ್ಟೇ ಇದ್ದುದು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತರ ಪತ್ರಿಕೆಗಳ valuation ಮಾಡುವುದರಲ್ಲಿ ಮೋಸ ನಡೆಯುತ್ತಿದೆ ಎಂಬ ದೂರು ಬಂದಿತ್ತು. ಆಗ ನಾನು ಬೆಂಗಳೂರಿಗೆ ಎಲ್ಲಾ ಪರೀಕ್ಷಕರನ್ನು ಕರೆಸಿ ಒಂದು ಕಡೆ ಕುಳ್ಳಿರಿಸಿ ದಿನಾ ಇಂತಿಷ್ಟು ಪತ್ರಿಕೆಗಳನ್ನು ಕೊಟ್ಟು valuation ಮಾಡಿಸುವುದೊಳ್ಳೆಯದೆಂಬ ಸಲಹೆಮಾಡಿದೆ. ಇದು 1949 ರಲ್ಲಿ, ಎಲ್ಲರೂ ನಕ್ಕುಬಿಟ್ಟರು. ಈಗ ಅದನ್ನೇ ಇಲಾಖೆ ಮಾಡುತ್ತಿರುವುದು. ಆಮೇಲೆ ರೆವೆನ್ಯೂ ಕಮೀಷನರ ಮೊದಲ ಸಹಾಯಕ ನಾಗಿ ಕೆಲಸಮಾಡುತ್ತಿದ್ದಾಗ ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಎಲ್ಲಾ ತಾಲ್ಲೂಕು ಕಛೇರಿ ಗಳಿಗೂ ಟೈಪರೈಟರ್ ಒದಗಿಸಬೇಕೆಂದು ಸಲಹೆಮಾಡಿದೆ. 'What ? typewriter to a Taluq Office' ಎಂದು ಅಲ್ಲಗಳೆದರು. ಈಗ ಅವನ್ನು ಒದಗಿಸಲು ಶತಪ್ರಯತ್ನ ನಡೆದಿದೆ. ಡೀಸಿ ಆಗಿದ್ದಾಗ ಗ್ಯಾಲ್ಲನ್‌ಗೆ ಆರುಮೈಲಿ ಕೊಡುವ ಮನೆ ಎತ್ತರದ ವ್ಯಾನ್ ಬೇಡ, ಮೂವತ್ತುಮೈಲಿ ಕೊಡುವ ಅಂಬಾಸಿಡರ್ ಕಾರ್ ಒದಗಿಸಿ ಎಂದು ಸರ್ಕಾರಕ್ಕೆ ಬರೆದೆ. ಸರ್ಕಾರದಿಂದ ಕೂಡಲೇ ಉತ್ತರಬಂದಿತು : 'It is a farfetched idea. Deputy Commissioners do not need cars.' ಈಗ ? ಸರ್ಕಾರಿ ಕಾರಿಲ್ಲದ ಆಫೀಸರೇ ಪಾಪಿ ! ಹೀಗೆ ನನ್ನ ಆಲೋಚನೆಗಳು ಕಾಲು ಶತಮಾನದ ಮುಂದಿರು ತ್ತಿದ್ದುವು. ಆದರೆ ಸರ್ಕಾರದ ಆಲೋಚನೆ ಯಾವಾಗಲೂ ಕಾಲು ಶತಮಾನ ಹಿಂದೆಯೇ.

ಡಾ. ಸಿ. ಆರ್. ರೆಡ್ಡಿಯವರನ್ನು ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದ ಬಗ್ಗೆ ವರದಿ ಸಲ್ಲಿಸಲು ಸರ್ಕಾರ ಪ್ರೊಛಾನ್ಸಲರ್ ಆಗಿ ನೇಮಿಸಿತು. ಅಂಡರ್ ಸೆಕ್ರೆಟರಿಯಾದ ನಾನು ಆಗಾಗ್ಗೆ ಅವರನ್ನು ನೋಡಬೇಕಾಗಿತ್ತು. ಇದಕ್ಕೆ ಮೊದಲು ನನ್ನನ್ನು ಅವರ ಆಪ್ತ ಕಾರ್ಯದರ್ಶಿಯಾಗಿ ನೇಮಿಸಬೇಕೆಂಬ ಆಲೋಚನೆ ಇದ್ದು ಅದಕ್ಕಾಗಿ ಕೆ. ಸಿ. ರೆಡ್ಡಿಯವರು ನನ್ನನ್ನು ಕರೆಸಿದರು. ಯಾವುದೋ ವಿಷಯ ಕೇಳುವಂತೆ ಮಾತಾಡಿಸಿ ನನ್ನನ್ನು ಕಳುಹಿಸಿಕೊಟ್ಟರು. ಅಲ್ಲಿಯವರೆಗೆ ಅವರನ್ನು ನೋಡಿರಲೇ ಇಲ್ಲ. ಹಾಗೆ ನೋಡುವುದು ನನ್ನ ಸ್ವಭಾವಕ್ಕೆ ಒಗ್ಗುತ್ತಿರಲಿಲ್ಲ. ಮೊದಲು ಹರಿಹರ ಅಮಲ್ದಾರ ನಾಗಿ ಚಾರ್ಜ್ ವಹಿಸಿಕೊಳ್ಳಲು ಹೋದಾಗ ಚಿತ್ರದುರ್ಗದಲ್ಲಿದ್ದ ಡೀಸಿಯವರನ್ನು ನೋಡಲು ಅವರ ಬಂಗಲೆಗೆ ಹೋದೆ. ಬಹಳ ಹೊತ್ತು ಹೊರಗಡೆ ಕಾದಮೇಲೆ ಬಂದರು. ನಾನು ಹತ್ತು ಮೆಟ್ಟಲುಗಳ ಕೆಳಗೆ, ಅವರು ಮೇಲೆ. ಸಿ.ತಲ್ಲಿಯೇ 'Go and take charge' ಎನಿಸಿಕೊಂಡು ಹೊರಟುಬಂದೆ. ಪ್ರೀತಿಯಿಂದ ಕಂಡರೆ ಇನ್ನೊಬ್ಬರ ಮನೆಯ ಬಾಗಿಲು ಕಾಯುತ್ತಿದ್ದೆ. ಇಲ್ಲದಿದ್ದರೆ ಎಷ್ಟೋ ಅಷ್ಟು. ಮಹಾರಾಜರು ತಿರುಪತಿಗೆ ಹೋಗಬೇಕಾಗಿತ್ತು, ಅದಕ್ಕೆ ತಕ್ಕ ವ್ಯವಸ್ಥೆಮಾಡಬೇಕೆಂದು ಅರಮನೆಯಿಂದ ಕಾಗದ ಬಂದಿತು. ವಿಷಯ ಅರ್ಜೆಂಟಾಗಿತ್ತು. ರೆವೆನ್ಯೂ ಕಮೀಷನರು ಸಂಚಾರ ದಲ್ಲಿದ್ದರು. ಅವರು ಬೆಂಗಳೂರಿನಲ್ಲಿದ್ದರೂ ಬೇಡ ಎಂದು ಹೇಳಲಾರರೆಂದು ನಾನೇ

ಅವರ ಪರವಾಗಿ ತೀರ್ಮಾನಿಸಿದೆ. ಇದು ಅವರಿಗೆ ಸರಿಕಾಣಲಿಲ್ಲ ಎಂದು ಕಾಣುತ್ತೆ. ಆ ವರ್ಷದ Confidential Report ನಲ್ಲಿ 'He takes too much for granted' ಎಂದು ಬರೆದರು. ಇದೊಂದೇ ನನ್ನ 40 ವರ್ಷದ ಸೇವೆಯಲ್ಲಿ ಬರೆಸಿಕೊಂಡ 'Bad Report.'

ಬೆಂಗಳೂರಿನಲ್ಲಿ ಸಂಸಾರ ಸಾಗಿಸುವುದು ಕಷ್ಟವಾಯಿತು. ಆಗಲೇ ನಾಲ್ಕು ಮಕ್ಕಳು. ಬೆಳೆಯುತ್ತಿದ್ದ ಮಕ್ಕಳು ಬೇರೆ. ಇದ್ದೊಂದು ಸಂಸಾರ ಕಟ್ಟಿಕೊಂಡಿದ್ದೆ. ಮಾಂಡವ್ಯರುಗಳಿಂದ 6,000 ರೂಪಾಯಿ ಕಾರ್ ಸಾಲ ಪಡೆದಿದ್ದೆ. ಬೆಂಗಳೂರಿಗೆ ಬಂದ ಮೇಲೆ 3,000 ರೂಪಾಯಿ ಕೊಟ್ಟು ಒಂದು ಹಳೆ ಕಾರ್ ಕೊಂಡೆ. ಅದಕ್ಕೆ 3,000 ರೂಪಾಯಿ ಖರ್ಚುಮಾಡಿದೆ. ಬಿಳಿಯಾನೆ ಅದು. ಮನೆ ಬಾಡಿಗೆ ನಾಲ್ಕು ಜನರ [illegible] ಬಾಗಿಲಿಗೆ ಹಿಡಿದುಕೊಳ್ಳಬೇಕು. ಗ್ಯಾಲನ್‌ಗೆ 35–40 ಮೈಲಿ ಕೊಡುತ್ತಿತ್ತು. ಅದರಿಂದ ನನ್ನಲ್ಲಿ ನೋಡುವುದಕ್ಕೆ ಅದೇ ಹೋಗುತ್ತಿತ್ತು. ಆದರೂ ಬಹಳ ಕಷ್ಟದಿಂದ ಸಂಸಾರ ಕಟ್ಟಿಕೊಳ್ಳಬೇಕಾಯಿತು. ಬೆಂಗಳೂರು ಬಿಡಬೇಕೆಂದು ಮನಸ್ಸು ಮಾಡಿ [illegible] ಕೇಳಿಕೊಂಡೆ. '[illegible], ನನ್ನ [illegible]! [illegible] ಸರಿಯಿಲ್ಲ. ಹೋಗಿ ಬಾ' ಎಂದರು. ಸರಿ ಚಿಕ್ಕಬಳ್ಳಾಪುರಕ್ಕೆ ಸಬ್ ಡಿವಿಜನ್ ಅಧಿಕಾರಿಯಾಗಿ ಹೋದೆ.

'Everything that happens is for good' ಎಂಬ ಮಾತು ನನ್ನ ಬಗ್ಗೆ ನೂರಕ್ಕೆ ನೂರೂ ಸತ್ಯ. ಬೆಂಗಳೂರಿಗೆ ಗೊಣಗಿಕೊಂಡು ಬಂದೆನಷ್ಟೆ. ಆದರೆ ಇಲ್ಲಿಗೆ ಬಂದದ್ದರಿಂದ ಒಂದು ಮನೆ ಮಾಡಿದೆ ಕಟ್ಟಿದ ಮನೆ 11,200 ರೂಪಾಯಿ. ಸೈಟು ಬೆಲೆ, ಆಗ ಚದರ ಗಜಕ್ಕೆ ಒಂದು ರೂಪಾಯಿ. ಅದೂ ಕುಮಾರಪಾರ್ಕ್‌ನಲ್ಲಿ. ಈಗ ಅದು ನೂರು ರೂಪಾಯಿ ?

ಚಿಕ್ಕಬಳ್ಳಾಪುರಕ್ಕೆ ಹೋದಾಗ ಕೈಯಲ್ಲಿ ಕಾಸಿರಲಿಲ್ಲ. ತುಂಬಾ ಸ್ನೇಹಿತರೆನಿಸಿಕೊಂಡವರನ್ನು 300 ರೂಪಾಯಿ ಸಾಲ ಕೊಡಿ ಎಂದೆ. ಹೇಗೋ ನೆಪ ಹೇಳಿ ತಪ್ಪಿಸಿಕೊಂಡರು. ಆ ದಿನದ ಪ್ರಸಂಗದಿಂದ ಭಾವನೆಗೆ ಹೋಗುವಾಗಲೂ ಹೀಗೇ ಆಯಿತು. ಅಂದಿನಿಂದ ಯಾರನ್ನೂ ಯಾವ ಸಂದರ್ಭದಲ್ಲೂ ಸಾಲ ಕೇಳಬಾರದೆಂದು ತೀರ್ಮಾನಿಸಿಕೊಂಡೆ. ಖರ್ಚು ಕಡಿಮೆ ಮಾಡಬೇಕೆಂದೂ ನಿರ್ಧಾರಮಾಡಿ ಇಲ್ಲಿಯವರೆಗೂ ನನ್ನೊಡನಿದ್ದ ಅಡಿಗೆಯ ಹುಡುಗನನ್ನು ಕೈಬಿಟ್ಟೆ.

ಮತ್ತೆ ಅಧಿಕಾರವುಳ್ಳ ಅಧಿಕಾರ ಸಿಕ್ಕಿತು. ಐದು ತಾಲ್ಲೂಕುಗಳು. ಐದು ಅಮಲ್ದಾರರುಗಳು. ದೊಡ್ಡ ಸಬ್ ಡಿವಿಜನ್: ಸಾಮಾನ್ಯವಾಗಿ ಚಿಕ್ಕಬಳ್ಳಾಪುರ ಸಬ್ ಡಿವಿಜನ್ [illegible] ದೊಡ್ಡವರ ಮಕ್ಕಳ ತರಬೇತಿ ಸ್ಥಳವಾಗಿತ್ತು. [illegible] ಮೂರು ತಿಂಗಳು ಆರು ತಿಂಗಳು ಇದ್ದು ಹೊರಟು ಹೋಗುತ್ತಿದ್ದರು. [illegible] ಸಬ್ ಡಿವಿಜನ್ನಿನ ಸಮಸ್ಯೆಗಳ ಬಗ್ಗೆ ಹೆಚ್ಚು ಗಮನ

ಇರುತ್ತಿರಲಿಲ್ಲ. ರಿಕಾರ್ಡುಗಳ ವಿಲೇವಾರಿಯಂತೂ ಬಹಳ ನಿಧಾನ. ಶ್ಯಾನುಭೋಗರು ಆಡಿದ್ದೇ ಆಟ. ನಾನು ಸುಮ್ಮನಿರಬೇಕಲ್ಲ! ಎಲ್ಲವನ್ನೂ ಕೆದಕಲಾರಂಭಿಸಿದೆ. ಒಬ್ಬ ಅಧಿಕಾರಿ ಕಷ್ಟನಷ್ಟ ವಿಚಾರಿಸುತ್ತಾರೆಂದು ಗೊತ್ತಾದರೆ ಬಡಬಗ್ಗರು ಧೈರ್ಯವಾಗಿ ಅರ್ಜಿಕೊಡುತ್ತಾರೆ. ಸರಿ, ಅರ್ಜಿಗಳು ಬರಲಾರಂಭಿಸಿದುವು. ಬಂದ ಅರ್ಜಿಗಳನ್ನು ರಿಪೋರ್ಟಿಗೆ ಕಳುಹಿಸಿ ಸುಮ್ಮನೆ ಕುಳಿತುಕೊಂಡರೆ ಆ ರಿಪೋರ್ಟು ಬರುವುದು, ನಾನು ಅಲ್ಲಿಂದ ಹೊರಟುಹೋದ ಮೇಲೆಯೇ. ಇದನ್ನು ಅರಿತ ನಾನು ಇಷ್ಟು ದಿನದೊಳಗೆ ರಿಪೋರ್ಟು ಬರಬೇಕೆಂದು ಕಡ್ಡಾಯ ಮಾಡುತ್ತಿದ್ದೆ. ನಿಗದಿಯಾದ ದಿನ ಅರ್ಜಿದಾರನು ಹಾಜರಿರಬೇಕೆಂದೂ ತಿಳಿಸುತ್ತಿದ್ದೆ. ಹೀಗಾಗಿ ರಿಪೋರ್ಟುಗಳು ಹೇಳಿದ ದಿನದೊಳಗೆ ಬರಲಾರಂಭಿಸಿದುವು. ಒಂದು ರಿಜಿಸ್ಟರ್ ಇಟ್ಟು ಅದರಲ್ಲಿ ಇವನ್ನೆಲ್ಲಾ ನಾನೇ ಬರೆದುಕೊಳ್ಳುತ್ತಿದ್ದೆ. ಇವರಿಂದ ಎಷ್ಟೋ ವಿಷಯಗಳು ಬಯಲಿಗೆ ಬಂದುವು. ಒಬ್ಬ ಹೆಂಗಸಿಗೆ ಭಾರಿ ಮೋಸ ನಡೆದಿತ್ತು, ಪಟ್ಟಾಗಿ ಹಿಡಿದೆ ಆ ಫೈಲನ್ನು. ಸ್ಥಳ ಪರೀಕ್ಷೆ ತನಿಖೆಗಳನ್ನು ಮಾಡಿದೆ. ಕಿತಾಪತಿ ಮಾಡಿದ್ದ ಶ್ಯಾನುಭೋಗನನ್ನು ಸಸ್ಪೆಂಡ್ ಮಾಡಿದೆ. ಇದು ಇಡೀ ಶ್ಯಾನುಭೋಗರ ದಂಡನ್ನೇ ಹೆದರಿಸಿಬಿಟ್ಟಿತು. ಒಂದಾದ ಮೇಲೆ ಒಂದು ಶ್ಯಾನುಭೋಗರ ಮೇಲೆ ದೂರುಗಳು ಬರಲಾರಂಭಿಸಿದುವು. ಹಳ್ಳಿಗಳಿಗೆ ಹೋಗದೆ ವಿಷಯ ಸರಿಯಾಗಿ ಗೊತ್ತಾಗುವುದಿಲ್ಲ ಎಂದು ರೆವೆನ್ಯೂ ಇನ್‌ಸ್ಪೆಕ್ಟರೂ ಹೋಗದ ಊರುಗಳಿಗೆ ನುಗ್ಗಿದೆ. ಸರಕಾರಿ ಅಧಿಕಾರಿಯಾಗಿ ನನ್ನನ್ನೇ ಎಷ್ಟೋ ಹಳ್ಳಿಗಳು ಮೊದಲು ಕಂಡದ್ದು, ಶ್ಯಾನುಭೋಗರಿಗೆ ನಾನು ಸಿಂಹಸ್ವಪ್ನವಾಗಿಬಿಟ್ಟೆ. ಮೇಲೆ ಹೇಳಿದ ಹೆಂಗಸಿಗೆ ಮತ್ತೆ ಜಮೀನು ಕೊಡಿಸಿ ಡೀಸಿ, ಕೆ. ನಾರಾಯಣಸ್ವಾಮಿಯವರಿಗೆ ವರದಿ ಮಾಡಿದೆ. ಅವರಿಗೆ ಬಡಜನರೆಂದರೆ ಬಹಳ ಪ್ರೇಮ. ಅವರ ಬಗ್ಗೆ ಕೆಲಸಮಾಡುವವರ ಮೇಲೂ ಅಷ್ಟೇ ಪ್ರೇಮ. ನಾನು ಮಾಡಿದ ಕೆಲಸ ಮೆಚ್ಚಿ ಒಂದು ಶಹಭಾಷ್ ಪತ್ರ ಬರೆದರು. ಈ ಪತ್ರ ನನ್ನ ಉತ್ಸಾಹಕ್ಕೆ ಗರಿ ಮೂಡಿಸಿತು.

ಇಲ್ಲಿದ್ದಾಗ ಮಹಾರಾಜರು ಎರಡು ದಿನಗಳ ಪ್ರವಾಸ ಕಾರ್ಯಕ್ರಮ ಇಟ್ಟುಕೊಂಡರು. ಅವರ ಪ್ರವಾಸವೆಂದರೆ ಮಾಡಬೇಕಾದ ವ್ಯವಸ್ಥೆ ಏನು ನೀವೇ ಆಲೋಚಿಸಿ, ಯಾರು ಬರಲಿ ರೆವೆನ್ಯೂ ಅಧಿಕಾರಿಗಳೇ ನೋಡಿಕೊಳ್ಳಬೇಕಾಗಿತ್ತು. ಅವರಲ್ಲಿ ಖರ್ಚಿಗೆ ತಲೆಕೊಡುವವನು ರೆವೆನ್ಯೂ ಇನ್‌ಸ್ಪೆಕ್ಟರ್. ಅದರಂತಹ ಹೀನಾಯದ ಹುದ್ದೆ ಇಡೀ ಸರ್ಕಾರದಲ್ಲಿ ಇಲ್ಲ. ಅವನಿಗೆ ಆಫೀಸು ಎಂಬುದಿಲ್ಲ. ಇದು ಮಾಡಬೇಕು ಅದು ಮಾಡಬಾರದು ಎಂಬುದಿಲ್ಲ. ಇನ್ನು ಬೇರೆಯ ಖರ್ಚುವೆಚ್ಚಗಳಿಗೆಲ್ಲ ಅವನೇ ಜವಾಬ್ದಾರ. ಖರ್ಚು ನಲವತ್ತಾದರೂ ಸಾಹೇಬರು ಕರುಣಿಸುವುದು ನಾಲ್ಕು. ಅದಕ್ಕೆ ರಸೀದಿ ಬೇರೆ ಕೊಡಬೇಕು! ಉಳಿದದ್ದನ್ನು ಅವನ ಸಂಬಳದಿಂದ ಕೊಟ್ಟಾನೆ! ಸರಿ, ಗಿಂಬಳ. ಆ ಗಿಂಬಳ ರೈತರ ಮೇಲೆ. ಸರಿ, ರೆವೆನ್ಯೂ ಇನ್‌ಸ್ಪೆಕ್ಟರು ಭಾರಿ ಲಂಚಕೋರ ಎಂಬ ದೂರು. ಬೇರೆಯವರ ಮಾತಾಗಲಿ ರೆವೆನ್ಯೂ ಇಲಾಖೆಯಲ್ಲಿ ಲಂಚ. ಪಟ್ಟಣಗಳಲ್ಲಿರುವ

ಆಫೀಸಿನ ಮಾಮೂಲುಗಳು ಬಹಿರಂಗವಾಗುವುದಿಲ್ಲ. ಆದರೆ ಹಳ್ಳಿಯಲ್ಲಿ ಕೊಡುವ ಮಾಮೂಲು ಲಂಚ ಎಂದು ಜಗಜ್ಜಾಹೀರ್. ಇರಲಿ, ಆ ವಿಷಯ. ಮಹಾರಾಜರು ಬರುತ್ತಾರೆಂದ ಮೇಲೆ ಏನು ಮಾಡಬೇಕೆಂಬ ಬಗ್ಗೆ ಚಿಂತೆ ಹುಟ್ಟಿತು. ಕೋಲಾರದಿಂದ ಡೀಸಿ ಓಡೋಡಿ ಬಂದರು. ಮಂಚದಿಂದ ಹಿಡಿದು ಲಂಚದವರೆಗೆ ಅವರ ಇನ್‌ಸ್ಪೆಕ್ಷನ್. ಮಂಚ ಮಹಾರಾಜರಿಗೆ ; ಲಂಚ ಸೇವಕ ವೃಂದಕ್ಕೆ. ಟೀಬಿಯಲ್ಲಿದ್ದ ಮಂಚ ಮಹಾರಾಜರ ಸೈಜಿಗೆ ತಡೆಯುತ್ತಿರಲಿಲ್ಲ. ಅದಕ್ಕಾಗಿ ಊರನ್ನೆಲ್ಲಾ ಹುಡುಕಿ ಹಳೆಯ ಕಾಲದ ಮಂಚ ತರಿಸಿದವು. ಅದನ್ನು ಮೂರು ದಿವಸ ಬಿಸಿಲಲ್ಲಿ ಹಾಕಿಸಿದೆವು. ಹಾಗೂ ಸಾಯದೆ ಉಳಿದ ತಿಗಣೆಗಳಿಗೆ ಡಿ.ಡಿ.ಟಿ. ಹೊಡೆಸಿದೆವು. ಎರಡು ಸಲ ಪಾಲಿಷ್ ಕೊಟ್ಟು ಟೀಬಿಯಲ್ಲಿ ಹಾಕಿದೆವು. ಹೊಸ ಹಾಸಿಗೆ ಮುಂತಾದುವುಗಳನ್ನು ಸಿದ್ಧಪಡಿಸಿದ್ದಾಯಿತು. ಆದರೆ ಮಹಾರಾಜರು ಆ ಹಾಸಿಗೆ ಮೇಲೆ ಮಲಗಲೇ ಇಲ್ಲ. ಅರಮನೆಯಿಂದಲೇ ಹಾಸಿಗೆ ಬಂದಿತ್ತು. ಇನ್ನು ಕೋಣೆಗೆ ಜಮಾಖಾನ, ಇಂಗ್ಲಿಷ್ ಕಮೋಡು ಹೀಗೆ ಎಲ್ಲಾ ಏರ್ಪಾಡು ಮಾಡಿದೆವು. ಇದೇ ಮೊದಲ ಸಲ ಅಲ್ಲ ನಾನು ಮಹಾರಾಜರಿಗೆ ವ್ಯವಸ್ಥೆ ಮಾಡಿದ್ದು. ಹರಿಹರ ದಾವಣಗೆರೆಗಳಲ್ಲಿದ್ದಾಗ ಎಲ್ಲಿಗೋ ಹೋಗುವುದಕ್ಕೆ ರೈಲಿನಲ್ಲಿ ಬಂದಿದ್ದರು. ಆದರೆ ಅವರ ಸೆಲೂನ್ ಬಿಟ್ಟು ಹೊರಗೆ ಬರಲಿಲ್ಲ. ಹರಿಹರದಲ್ಲಿ ಬೆಳಗಿನ ಕಾಫಿ ಹಾಲಿಗೆ ಒಂದಲ್ಲ, ಎರಡು ಹಸು ಕಟ್ಟಿಸಿದ್ದೆ. ಒಂದು ಒದ್ದರೆ ಇನ್ನೊಂದು ಇರಲಿ ಅಂತ. ದಾವಣಗೆರೆಯಲ್ಲಿ ದುರ್ಗದ ನಾರಣಪ್ಪನ ಹೋಟೆಲಿನಿಂದ ಡಜನ್‌ಗಟ್ಟಲೆ ಮಸಾಲೆ ದೋಸೆಗಳನ್ನು ಒಳಗೆ ಕಳುಹಿಸಿಕೊಟ್ಟಿದ್ದೆ. ಮಹಾರಾಜರಿಗೆ ಮಸಾಲೆದೋಸೆ ಬಹಳ ಇಷ್ಟವಾಗಿತ್ತಂತೆ — ನಮಗೆಲ್ಲಾ ಇಷ್ಟವಾಗಿರುವಂತೆ, ಐದಾರಕ್ಕೆ ಕಮ್ಮಿ ತಿನ್ನುತ್ತಿರಲಿಲ್ಲವಂತೆ. ಚಿಕ್ಕಬಳ್ಳಾಪುರದಲ್ಲಿ ಅಂಥದು ಏನೂ ಸಿಕ್ಕುತ್ತಿರಲಿಲ್ಲ. ಎಲ್ಲವೂ ಅರಮನೆಯಿಂದ ಬಂದ ಬಿಡದಿಯವರಿಂದಲೇ ತಯಾರಾಗುತ್ತಿತ್ತು. ನಾವೇನಿದ್ದರೂ ಅವರಿಗೆ ತಯಾರಿ ಕೊಡೋದು ಅಷ್ಟೆ. ದಿವಾನ್ ಮಿರ್ಜಾ ಸಾಹೇಬರಿದ್ದಾಗ ಇಂಜಿನಿಯರುಗಳು ಅವರ ಡ್ರೈವರಿಗೆ ಕಾಣಿಕೆ ಸಲ್ಲಿಸಿ ಕೈ ಮುಗಿದು ಕಾರು ಕುಲುಕದಂತೆ ನೋಡಿಕೊಳ್ಳಪ್ಪ ಎಂದು ಕೇಳಿಕೊಳ್ಳುತ್ತಿದ್ದರಂತೆ.

ಮಹಾರಾಜರು ಬರುತ್ತಾರೆಂದಾಗ ಮುಖ್ಯ ಮಂತ್ರಿಗಳಾದ ಕೆ.ಸಿ. ರೆಡ್ಡಿಯವರೇ ಬಂದರು. ಬಹುಶಃ ಅವರಿಂದಾಗಿಯೇ ಮಹಾರಾಜರು ಪ್ರೋಗ್ರಾಂ ಹಾಕಿಕೊಂಡಿದ್ದರೆಂದು ಕಾಣುತ್ತದೆ. ಟೀಬಿಯಲ್ಲಿ ಜಾಗ ಇಲ್ಲದ ಕಾರಣ ಅವರಿಗೆ ನನ್ನ ಬಂಗಲೆ ಬಿಟ್ಟುಕೊಟ್ಟು ನಾನು ಮತ್ತು ನನ್ನ ಸಂಸಾರ ಔಟ್‌ಹೌಸ್‌ನಲ್ಲಿ ಸೇರಿಕೊಂಡೆವು.

ಎರಡು ದಿನ ಮಹಾರಾಜರು ಚಿಕ್ಕಬಳ್ಳಾಪುರ ಸಬ್‌ಡಿವಿಜನ್‌ನಲ್ಲಿ ಪ್ರವಾಸಮಾಡಿದರು. ಅವರ ಜೊತೆ ರೆಡ್ಡಿಯವರು ಮತ್ತು ಡೀಸಿ. ನಾವು ಹಿಂದಿನ ಕಾರಿನಲ್ಲಿ ಧೂಳು ಕುಡಿದುಕೊಂಡು ಅವರು ನಿಂತಾಗ ಧೂಳು ಕೊಡವಿಕೊಂಡು ಓಡಿಹೋಗುವುದು. ನಾವು ಹೋಗುವುದರೊಳಗೆ ಕಾರು ಬುರ್ರೆಂದು ಹೋಗಿಬಿಡುತ್ತಿತ್ತು. ಆಗ

ಲೋಕೋಪಯೋಗಿ ಇಲಾಖೆ ರಸ್ತೆಗಳಿಗೆ ಟಾರ್ ಹಾಕುವ ಬದಲು ಧೂಳು ಹಾಕಿಸುತ್ತಿದ್ದರು. ಅವರೆ ಸಾಲುಮರಗಳಿಗೆ ಸುಣ್ಣ ಕೆಮ್ಮಣ್ಣು ಪಟ್ಟೆ ಬಳಿಸುವುದೆಲ್ಲ ರೆವೆನ್ಯೂ ಇಲಾಖೆ ಕೆಲಸ. ಊರಿನ ಜನರನ್ನೆಲ್ಲಾ ಹಿಡಿದು ಪಟೇಲ ಶ್ಯಾನುಭೋಗರು ಆ ಕೆಲಸ ಮಾಡಿಸಬೇಕು. ಆ ಕೆಲಸ ಆಗಿದೆಯೋ ಇಲ್ಲವೊ ಎಂದು ಮುಂಚಿನ ದಿನವೇ ಹೋಗಿ ನೋಡಿಕೊಂಡು ಬರಬೇಕು. ಚಪ್ಪರ ಮೇಲ್ಕಟ್ಟು, ತಳಿರು ತೋರಣ, ಹಾರ ತುರಾಯಿ, ಇವನ್ನೆಲ್ಲಾ ಕಣ್ಣಲ್ಲಿ, ಕಣ್ಣಿಟ್ಟು ನೋಡಿಕೊಳ್ಳಬೇಕು. ಏನಾದರೂ ಹೆಚ್ಚು ಕಡಮೆಯಾದರೆ ಡೀಸಿ ಕಣ್ಣು ಮೆಡ್ಡರಿಸುತ್ತಿದ್ದರು ಸರಿ, ನಾನು ಅಮಲ್ದಾರರ ಮೇಲೆ. ಅವರು ಇನ್ನೊಬ್ಬರ ಮೇಲೆ. ಕೊನೆಗೆ ಪಟೇಲರ ಮೇಲೆ. ಅವರು ಊರಿನವರೆಲ್ಲರ ಮೇಲೆ. ಹಿಂದೆ ಅಮಲ್ದಾರನಾಗಿದ್ದ ವೇಳೆ ಮಂತ್ರಿಗಳು ಬಂದಾಗಲೆಲ್ಲಾ ಇಡೀ ತಾಲ್ಲೂಕಿಗೆಲ್ಲಾ ಬೇಕಾದ ಹಾರ ತುರಾಯಿಗಳಿಗೆ ಒಟ್ಟಿಗೆ ಆರ್ಡರು ಕೊಡುತ್ತಿದ್ದೆ. ಆ ದುಡ್ಡನ್ನು ಆಮೇಲೆ ಪಂಚಾಯ್ತಿಗಳಿಗೆ ಹಂಚಿ ವಸೂಲು ಮಾಡುತ್ತಿದ್ದೆ. ಹಾರಗಳು ಸಾಲದೆ ಬಂದರೆ ಮಂತ್ರಿಗಳ ಕೊರಳಿನಿಂದ ಹಿಂದಕ್ಕೆ ಬಂದ ಹಾರಗಳು ಮತ್ತೆ ಮುಂದಕ್ಕೆ ಹೋಗುತ್ತಿದ್ದುವು ! ಈಗಲೂ ಹೀಗೆಲ್ಲ ಮಾಡಿ ಮಹಾರಾಜರ ಟೂರ್ ಯಶಸ್ವಿಯಾಗುವಂತೆ ಮಾಡಿದ್ದಾಯಿತು. ಅವರು ಏಕೆ ಬಂದಿದ್ದರೋ ಗೊತ್ತಾಗಲಿಲ್ಲ. ಒಂದು ಕೆಲಸ ಮಾತ್ರ ಅವರು ತಪ್ಪದೆ ಮಾಡುತ್ತಿದ್ದರು. ಎಂಟು ಹತ್ತು ಪುಸ್ತಕಗಳು ಅವರ ಮಂಚದ ಬಳಿ ಪೇರಿಸಲ್ಪಡುತ್ತಿದ್ದುವು. ಅವನ್ನೆಲ್ಲಾ ಅವರು ಓದುತ್ತಿದ್ದರಂತೆ. ಪುಸ್ತಕಗಳನ್ನು ತಿರುವಿಹಾಕಿ ಓದಬೇಕಾದ ಭಾಗಗಳನ್ನು ಮಾತ್ರ ಓದಿ ಮನಸ್ಸಿಗೆ ಬಂದದ್ದನ್ನು ಕೆಂಪು ಪೆನ್ಸಿಲ್‌ನಲ್ಲಿ ಗುರುತು ಮಾಡುತ್ತಿದ್ದರು.

ಮಹಾರಾಜರು ಬಂದು ಹೋದಮೇಲೆ ನಿಟ್ಟುಸಿರುಬಿಟ್ಟು ನಾಲ್ಕು ದಿನ ಸುಧಾರಿಸಿಕೊಂಡೆವು. ಆದರೆ ಕಾಡಿ ಬೇಡಿ ತಂದ ಮಂಚ ಟೀಬಿಯಲ್ಲೇ ಉಳಿಯಿತು. ಅದಕ್ಕೆ ಹಾಕಿದ ಪಾಲಿಷ್ ಖರ್ಚನ್ನು ಯಾರು ಕೊಡಬೇಕೆಂಬ ಬಗ್ಗೆ ತಕರಾರು ಹುಟ್ಟಿತು. ಲೋಕೋಪಯೋಗಿ ಇಲಾಖೆ ತನಗೆ ಲೋಕಾಪವಾದ ಬರುತ್ತೆ ಎಂದು ಖರ್ಚು ಕೊಡಲು ಒಪ್ಪಲಿಲ್ಲ. ಕೊನೆಗೆ ಎಲ್ಲಾ ಅಪವಾದಕ್ಕೂ ತಲೆಕೊಡುವ ರೆವೆನ್ಯೂ ಇನ್‌ಸ್ಪೆಕ್ಟರ ತಲೆಗೆ ಕಟ್ಟಿ ನಿಶ್ಚಿಂತರಾದೆವು ಅವನು ತಾನೆ ಎಲ್ಲಿಂದ ತಂದಾನು ! ಇದು ಮತ್ತು ಇನ್ನಿತರ ಖರ್ಚುಗಳನ್ನು ಸಬ್ಸಿಡಿ ಸ್ಕೀಮಿನಲ್ಲಿ ತೋಡಿಸಬೇಕಾದ ಬಾವಿಗಳ ಮೇಲೆ ಹಂಚಿಹಾಕಿದ. ಜೇನುಬಿಚ್ಚಿದವನು ಕೈನೆಕ್ಕದೆ ಇರುತ್ತಾನೆಯೇ ! ಚೆನ್ನಾಗಿಯೇ ನೆಕ್ಕಿದ.

ತಿಪ್ಪೇರುದ್ರಯ್ಯನವರ ಡೀಸೀತನವೇ ಒಂದು ವೈಶಿಷ್ಟ್ಯ. ಮೊಟ್ಟಮೊದಲು ಚಿಕ್ಕಬಳ್ಳಾಪುರಕ್ಕೆ ಬಂದಾಗ 'ಬಾ ಇಲ್ಲಿ' ಎಂದು ಅವರ ಕೋಣೆಗೆ ಕರೆದರು. ಅಲ್ಲಿ ಸೀಮೆ ಎಣ್ಣೆ ಸ್ಟೋವಿನ ಮೇಲೆ ಅನ್ನಪೂರ್ಣ ಕುಕ್ಕರ್‌ನಲ್ಲಿ ಅಡುಗೆ ಆಗುತ್ತಿತ್ತು. 'ನೋಡು ಹೀಗಿರಬೇಕು ನಮ್ಮ ಆಫೀಸರುಗಳು' ಎಂದರು. ಹೊರಗೆ ಬಂದಾಗ ಒಬ್ಬ ಅರ್ಜಿ

ತೆಗೆದುಕೊಂಡು ಬಂದು 'ಸ್ವಾಮಿ, ಒಂದು ಫ್ಲೋರ್‌ಮಿಲ್ ಇಡಾಕೆ ಲೈಸೆನ್ಸ್ ಬೇಕು' ಎಂದು ಕೇಳಿದ. 'ಫೆನ್ ತಕ್ಕೋ ಬರಕೊ' ಎಂದರು ಅವನಿಗೆ. ಅವನಿಗೆ ಭಾರಿ ಖುಷಿ ಲೈಸೆನ್ಸ್ ಸಿಕ್ಕಿತು ಅಂತ. 'ಈ ಜಿಲ್ಲೆಯಲ್ಲಿ ತಿಪ್ಪೇರುದ್ರಯ್ಯ ಡೀಸಿ ಆಗಿರುವವರೆಗೆ ಫ್ಲೋರ್‌ಮಿಲ್ ಹಲ್ಲರ್‌ಗಳಿಗೆ ಲೈಸೆನ್ಸ್ ಕೊಡೋದಿಲ್ಲ. ಇನ್ನೂ ಬರಕೊ. ಜಾತ್ರೆ ಮುಂತಾದವುಗಳೆಲ್ಲ ಬಂದ್. ಹೋಗು' ಮತ್ತೆ ಎಂದರು. ನನ್ನ ಕಡೆ ತಿರುಗಿ 'ಯಾಕೆ ಲೈಸೆನ್ಸ್ ಕೊಡಬಾರದು ಗೊತ್ತೆ? ಮನೇಲಿ ಹೆಂಗಸರು ರಾಗಿ ಬೀಸಾಕಿಲ್ಲ, ಬತ್ತ ಕುಟ್ಟಾಕಿಲ್ಲ, ನೀರು ಸೇದಾಕಿಲ್ಲ. ಎಲ್ಲಾ ಮಿಲ್ಲಿಗೆ ಬರ್ತಾರೆ. ಅವರ ಮನೆ ಹಸು ಬಡಕಲು. ಮಿಲ್ಲಿನೋರ ಮನೆ ಹಸು ಕೊಬ್ಬಿ ಚೆನ್ನಾಗಿ ಹಾಲು ಕರೀತಾವೆ. ಗೊತ್ತಾ ಯಪ್ಪೋನಪ್ಪ ?' ಎಂದರು. 'ಗೊತ್ತಾಯಿತು, ಸಾರ್'. 'ಜನಾರ ಡಿಪಾರ್ಟ್‌ಮೆಂಟೀಯ ಇಂತೋವ್ಕೆ ನಿನ್ನ ವಿಷಯ ಕೇಳಿದ್ದೀನಿ ದಾವಣಗೆರೇಲಿ.' ದಾವಣಗೆರೆ ತಾಲ್ಲೂಕಿನ ಮಾಯಕೊಂಡ ಅವರ ಸೋದರಮಾವನ ಊರಂತೆ.

ಗುಡಿಬಂಡೆ ತಾಲ್ಲೂಕು ಹುಜೂರ್ ಜಮಾಬಂದಿ. ಪಟೇಲ ಶ್ಯಾನುಭೋಗರೂ ಅರ್ಜಿದಾರರು ನೆರೆದಿದ್ದಾರೆ. ತಿಪ್ಪೇರುದ್ರಯ್ಯನವರು ಮಾಮೂಲಾಗಿ ಚಪ್ಪರಗಿಪ್ಪರ ಹಾಕಿದ ಕಡೆ ಕೂತುಕೊಳ್ಳುತ್ತಾ ಇರಲಿಲ್ಲ. ಅಲ್ಲಲ್ಲೇ ಇದ್ದ ಕಲ್ಲುಬಟ್ಟೆ ಮೇಲೋ ಜಗಲೀ ಮೇಲೋ ಕುಂತುಕೊಂಡು ಜಮಾಬಂದೀನೂ ಮಾಡಿದ್ದುಂಟು. ಈಗ ಅದಾವ್ದೂ ಇಲ್ಲದ ಕಾರಣ ತಾಲ್ಲೂಕು ಕಛೇರಿಯಲ್ಲಿ ಹಾಕಿದ್ದ ಪೀಠದಲ್ಲಿ ಮಂಡಿಸಿದರು. ಹುಜೂರ್ ಜಮಾಬಂದಿಗೆ ಏಸಿ ಇರಬೇಕಾಗಿರಲಿಲ್ಲ. ಏಕೆಂದರೆ ಅವರೂ ಬೇರೆ ತಾಲ್ಲೂಕುಗಳ ಹುಜೂರ್ ಜಮಾಬಂದಿ ಆಫೀಸರ್. ಅದರೂ ನನ್ನ ಕರೆದರು. 'ಬಾ ಹೋಗಾನ. ಜಮಾಬಂದಿ ಮಾಡೋದೆಂಗೆ ಅಂತ ತೋರುಸ್ತೀನಿ' ಅಂತ. ಹೋದೆ. ಅವರು ಪೀಠದಲ್ಲಿ ಮಂಡಿಸಿ ತಮ್ಮ ತಕಲಿ ತೆಗೆದರು. ನೂಲು ತೆಗೆಯುತ್ತಾ ಅರ್ಜಿ. ಸುಲಾವಣೆಗೆ ತೆಗೆದುಕೊಂಡರು. ಅಲ್ಲಲ್ಲೇ ಆರ್ಡರು. ಆಮೇಲೆ ಚಾರ್‌ಮಿನಾರ್ ಸಿಗರೇಟು ಹಚ್ಚಿದರು. ಬೀಡಿಯನ್ನೇ ಅವರು ಸೇದುತ್ತಾ ಇದ್ದುದು. ಈ ದಿನ ಹುಜೂರ್ ಜಮಾಬಂದಿಯ ಕಾರಣ ಚಾರ್ ಮಿನಾರ್ ಹಚ್ಚಿದರು. ರಾಗಿ ವಸೂಲಿಗೆ ಒಬ್ಬ ಸ್ಪೆಷಲ್ ಶಿರಸ್ತೇದಾರರ ನೇಮಕ ಆಗಿತ್ತು. ಅತನಿಗಾಗಲೇ ವಯಸ್ಸಾಗಿ ಇನ್ನೇನು ರಿಟೈರ್ ಆಗೋ ಕಾಲ. ಹೆಚ್. ಎ. ಎಲ್.ನಲ್ಲಿ ಓ.ಓ.ಡಿ. ಇದ್ದು ಈಗ ಇಲಾಖೆಗೆ ವಾಪಸಾಗಿ ರಾಗಿ ವಸೂಲಿಗೆ ಬಂದಿದ್ದರು. ಆ ಶಿರಸ್ತೇದಾರರು 'ಸ್ವಾಮಿ, ಯಾರು ಕೇಳಿದರೂ ರಾಗಿ ಕೊಡ್ತಾ ಇಲ್ಲ. ಏನು ಮಾಡೋದೊ ಗೊತ್ತಾಗೋದಿಲ್ಲ ಸ್ವಾಮಿ' ಎಂದು ತಲೆ ಅಲ್ಲಾಡಿಸುತ್ತ (ವಯಸ್ಸಿನ ಕಾರಣ) ಹೇಳಿದರು. ಡೀಸಿಯವರು. 'ಶಿರಸ್ತೇದಾರ್ರೆ, ಒಂದು ಕೆಲಸ ಮಾಡಿ ಮತ್ತೆ. ನೀವು ಹಂಗೆ ಕೇಳಿದರೆ ಜನ ರಾಗಿ ಕೊಡೋದಿಲ್ಲ. ಹೆಗಲಿಗೆ ಒಂದು ತಂಬೂರಿ ಹಾಕ್ಕೊಳ್ಳಿ. ರಾಗೀಯ ಕೊಡಿರಮ್ಮ ರಾಗೀಯ ಕೊಡಿರಯ್ಯ ಎಂದು ಮನೆ ಮನೆಗೆ ಪುರಂದರದಾಸರಂಗೆ ತಿರುಗಿ, ಕೊಡ್ತಾರೆ. ಅಲ್ಲಾ ಕಣಯ್ಯ ನಿನಗಾಗ್ಲೆ ವಯಸ್ಸಾಯ್ತು. ತಲೆ ಎಲ್ಲಾ ಬೆಳ್ಳಗಾಗಿದೆ....'

ಆಮೇಲೆ ಅವರ ಅಣಿಮುತ್ತುಗಳು. ಅವೆಲ್ಲಾ ಜನಜನಿತವಾಗಿರುವುದರಿಂದ ಹೇಳುವುದು ಅನಾವಶ್ಯಕ. ಹೀಗೆ ಅವರ ಅಧಿಕಾರದ ವೈಖರಿ !

1952 ರಲ್ಲಿ ಮೊಟ್ಟಮೊದಲ ಮಹಾ ಚುನಾವಣೆ. 1947ರಲ್ಲಿ ಸ್ವಾತಂತ್ರ್ಯ ಬಂದನಂತರ 1950 ರಲ್ಲಿ ಭಾರತಕ್ಕೆ ರಾಜ್ಯಾಂಗ ರಚನೆ ಆದಮೇಲೆ ಈ ಮಹಾ ಚುನಾವಣೆ. ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಕ್ಷೇತ್ರದ ಎಲ್ಲಾ ಸ್ಥಾನಗಳಿಗೂ ನಾನೇ ರಿಟರ್ನಿಂಗ್ ಆಫೀಸರು. ಕಾಂಗ್ರೆಸ್ ಒಂದೇ ಆಗ ರಾಜಕೀಯ ಪಕ್ಷ. ಅವರ ಉಮೇದುವಾರರುಗಳನ್ನು ಬಿಟ್ಟರೆ ಉಳಿದವರೆಲ್ಲಾ ಸ್ವತಂತ್ರ ಉಮೇದುವಾರರು. ನಾಮಪತ್ರಗಳನ್ನು ಸಲ್ಲಿಸಿಯಾಗಿತ್ತು. ನಾಳೆ ಬೆಳಗ್ಗೆ ಅವುಗಳ ಸ್ಕ್ರೂಟಿನಿ. ನಾನು ನನ್ನ ಬಂಗಲೆಯಲ್ಲಿ ಸುಖವಾಗಿ ನಿದ್ದೆ ಮಾಡುತ್ತಿದ್ದೆ. ರಾತ್ರಿ ಒಂದು ಗಂಟೆ ಇರಬಹುದು. ಯಾರೋ ಬಾಗಿಲು ತಟ್ಟಿದರು. (ಆಗಿನ್ನೂ ಬೆಲ್ಲು ಗಿಲ್ಲು ಇರಲಿಲ್ಲ), ಎದ್ದು ಬಾಗಿಲು ತೆರೆದೆ. 'ನಾನು ಕೋಲಾರದ ಅಸಿಸ್ಟೆಂಟ್ ಇಂಜಿನಿಯರ್, ನನ್ನ ಹೆಸರು ಅಬ್ದುಲ್ ಹಮೀದ್. ನಿಮ್ಮನ್ನು ಡೀಸಿ ಕರಕೊಂಡು ಬರಾಕೆ ಹೇಳಿದಾರೆ. ಕಾರು ತಂದಿದೀನಿ' ಎಂದರು, 'ಯಾಕೆ?' 'ಗೊತ್ತಿಲ್ಲ. ಈಗ್ಲೆ ಬರಬೇಕಂತೆ'. ಸರಿ, ಬಟ್ಟೆ ಹಾಕಿಕೊಂಡು ಹೊರಟೆ. ಕಾರನ್ನು ಅವರೇ ಡ್ರೈವ್ ಮಾಡಿಕೊಂಡು ಬಂದಿದ್ದರು. 40 ಮೈಲಿ ಪ್ರಯಾಣ. ಕಲ್ಲು ರಸ್ತೆ. ಕೋಲಾರದ ಡೀಸಿ ಬಂಗಲೆ ಕಾಂಪೌಂಡ್ ಮುಟ್ಟಿದಾಗ ಮೂರು ಗಂಟೆ ಆಗಿತ್ತು. ಡೀಸಿ, ಕೆ. ನಾರಾಯಣಸ್ವಾಮಿಯವರೂ ಎಕ್ಸಿಕ್ಯೂಟೀವ್ ಇಂಜಿನಿಯರ್ ಮುನಿಯಪ್ಪನವರೂ ಕಾಂಪೌಂಡಿನಲ್ಲಿ ಠಳಾಯಿಸುತ್ತ ಇದ್ದರು. 'Oh ! you have come ! very good, very good. Mr. Muniyappa, tell Mr. Nage Gowda what all the Minister told you at Bangalore' ಎಂದು ಮೆಲ್ಲಗೆ ಹೇಳಿದರು-ಯಾರಿಗೂ ಕೇಳಿಸ ಬಾರದೆಂದು. 'Sir, I had been to Bangalore today. I had met the P.W.D. Minister. So and so is an independent candidate from such and such a constituency; But he is a P.W.D. Contractor. Hence his nomination paper should be rejected. I have been asked to communicate this to the D.C.' ನನಗೆ ಹೇಳಬೇಕೆಂದು ಡೀಸಿ ಹೇಳಿದರೂ ಮುನಿಯಪ್ಪನವರು ಹೇಳಿದ್ದು ಡೀಸಿಗೆ. 'Now you have heard everything Mr. Nage Gowda.' 'Yes, Sir.' 'What yes Sir !' 'Sir you are my D.C. you must tell me what I should do ?' 'No ! No ! ಇಲ್ಲಪ್ಪ ! ಇಲ್ಲಪ್ಪ ! you have heard Mr Muniyappa,' 'I have heard him, Sir. But you have to give instructions. I will do as your desire.' 'No no I say.' 'ಮತ್ತೆ ನಾನೇನು ಮಾಡ್ಬೇಕು ಹೇಳಿ ಸಾರ್.' ಹೀಗೆ ಸುಮಾರು ಒಂದು ಗಂಟೆಯ ಕಾಲ

ಕಾಂಪೌಂಡಿನೊಳಗಿದ್ದ ಕಾಲು ದಾರಿಗಳಲ್ಲಿ ಸುತ್ತಾಡಿ ಮಾತಾಡಿದ್ದಾಯಿತು. ಮನೆಯೊಳಗೆ ಕುಳಿತು ಮಾತಾಡಿದರೆ ಹೆಂಗಸರು ಮಕ್ಕಳು ಕೇಳಿಸಿಕೊಂಡಾರೆಂದು ಇಷ್ಟೆಲ್ಲಾ ಎಚ್ಚರಿಕೆ. ಡೀಸಿಯವರಿಗೆ ನನಗೆ ಹೀಗೆ ಮಾಡು ಎಂದು ಹೇಳುವುದಕ್ಕೆ ಇಷ್ಟ ಇಲ್ಲ. ಅದು ಅವರ ಮನಸ್ಸಿಗೆ ವಿರುದ್ಧವಾಗಿತ್ತು. ಮಂತ್ರಿಗಳು ಹೇಳಿಕಳುಹಿಸಿದ್ದನ್ನು ನನಗೆ ತಿಳಿಸದೆ ಇರಲೂ ಆಗಿರಲಿಲ್ಲ. ಹೀಗೆ ಮಾಡು, ಹಾಗೆ ಮಾಡು ಎಂದು ಹೇಳಿದರೆ ತಪ್ಪಾಗುತ್ತದೆಯೆಂದು ನನಗೂ ಮುನಿಯಪ್ಪನವರಿಗೂ ಮೊಖಾಬಿಲೆ ಮಾಡಿಸಿದ್ದರು. ಆದರೆ ನಾನು ಪಟ್ಟು ಹಿಡಿದೆ. 'ನೀವು ಹೇಳಿದ್ರೆ ಮಾಡ್ತೀನಿ, ಸಾರ್. ಇಲ್ಲದಿದ್ರೆ ಮಾಡೋದಿಲ್ಲ,' ಎಂದೆ. 'ಸರಿ, ಹೋಗ್ಲಿಬಿಡಪ್ಪ. I have done my duty. Muniyappa tell the Assistant Engineer to take him back safely to C.B.Pur.' ಎಂದು ಕಳುಹಿಸಿಕೊಟ್ಟರು. ಸಿ.ಬಿ.ಪುರ ಮುಟ್ಟಿದಾಗ ಬೆಳಗಿನ 5 ಗಂಟೆ. ಹೋಗುವಾಗ ಬರುವಾಗ ವಿಷಯ ಮಾತಾಡಲಿಲ್ಲ. ಯಾರಿಗೂ ತಿಳಿಯದು ನಾವು ಮೂರು ಜನ ಬಿಟ್ಟರೆ.

ಬೆಳಗ್ಗೆ ಸ್ಕ್ರೂಟಿನಿ. ಈಗಿನಂತೆ ಆಗ ಹೊಸದಾಗಿ ಬಂದಿದ್ದ Peoples Representation Act ಮತ್ತು ಅದರ ರೂಲ್ಸುಗಳಲ್ಲಿ ವಿವರವಾದ ತಿಳುವಳಿಕೆಗಳು ಇರಲಿಲ್ಲ. ಕೋರ್ಟ್‌ಹಾಲಿನಲ್ಲಿ ಕುಳಿತು ಸ್ಕ್ರೂಟಿನಿ ತೆಗೆದುಕೊಂಡೆ. ಒಂದು ಕಡೆ ವೆಂಕಟರಂಗಯ್ಯಂಗಾರ್, ಇನ್ನೊಂದು ಕಡೆ ಸೋಮನಾಥಯ್ಯರ್ ಎಂದು ಕಾಣುತ್ತೆ. ಘಟಾನುಘಟ್ಟಿಗಳು. ಸುಮಾರು ಒಂದು ಗಂಟೆ ವಾದ ವಿವಾದಗಳಾದುವು. Case law ಏನೆಂಬುದನ್ನು ಹೇಳಲು ಎರಡೂ ಕಡೆಯವರು ದಪ್ಪ ದಪ್ಪ ಪುಸ್ತಕಗಳನ್ನು ಮೇಜಿನ ಮೇಲಿಟ್ಟರು. 'I will let you know the decision' ಎಂದು ಛೇಂಬರಿಗೆ ಹೋದೆ. ಒಂದು ಗಂಟೆಯ ನಂತರ ಹೊರಬಂದು 'Since the Contract is not a subsisting one, the Candidate is not disqualified' ಎಂದು ಆರ್ಡರ್ ಓದಿದೆ. ಆ ಕ್ಯಾಂಡಿಡೇಟ್ ಲೋಕೋಪಯೋಗಿ ಇಲಾಖೆಯಿಂದ ಒಂದು ಕಟ್ಟಡದ ಕಾಂಟ್ರ್ಯಾಕ್ಟ್ ಪಡೆದು, ಕೆಲಸ ಮುಗಿಸಿ ಫೈನಲ್ ಬಿಲ್ ಕೊಟ್ಟಿದ್ದರು. ಆದರೆ ಹಣ ಪಾವತಿಯಾಗಿರಲಿಲ್ಲ. ಇಂಥದೇ ಒಂದು ಕೇಸು ಬ್ರಿಟನ್ನಿನ ಎಂ. ಪಿ. ಯ ಮೇಲೆ ನಡೆದು 'when the final bill has been submitted, the Contract is no longer subsisting and when the Contract is not subsisting, there is no bar for standing for election' ಎಂಬ ತೀರ್ಮಾನ ಆಗಿತ್ತು. ಈ ತೀರ್ಮಾನ ಕೋಟ್‌ಮಾಡಿ ನಾಮಿನೇಷನ್ ಪತ್ರ ಅಂಗೀಕರಿಸಿದೆ. ಹೊರಗಡೆ ನೂರಾರು ಜನ ಕಾಯುತ್ತಿದ್ದರು. ಚುನಾವಣೆ ಆಯಿತು. ಆ ಉಮೇದುವಾರನೇ ಗೆದ್ದ. ಆಮೇಲೆ ಡೀಸಿ ಸಿಕ್ಕಿ, 'I say you are hard nut to Crack' ಎಂದರು. ಆದರೇನು, ಸರ್ಕಾರಕ್ಕೆ ಹಾರ್ಡೇ. ಚುನಾವಣೆ

ಮುಗಿದ ಮೇಲೆ ನನ್ನನ್ನು ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿದರು. ನಿಯೋಗವೊಂದು ನನ್ನ ಪರ ಹೋಯಿತು. 'ಹೊಸದಾಗಿ ಬಂದಿದ್ದ ಮುಖ್ಯ ಮಂತ್ರಿಗಳು 'No. He shall not stay there even for a moment' ಎಂದು ಹೋದವರ ಮುಖಕ್ಕೆ ಹೊಡೆದಂತೆ ಹೇಳಿ ಕಳುಹಿಸಿಬಿಟ್ಟರು.

ಆಗಿನ ಎಲೆಕ್ಷನ್ ವೈಖರಿ ಹೇಳದಿದ್ದರೆ ತಪ್ಪಾಗುತ್ತದೆ. ಈಗಿನಂತೆ ಆಗ ಎಲ್ಲಾ ಕ್ಷೇತ್ರಗಳಿಗೂ ಒಂದೇ ದಿನ ಎಲೆಕ್ಷನ್ ನಡೆಯುತ್ತಿರಲಿಲ್ಲ. ಒಂದು ಕ್ಷೇತ್ರ ಆದಮೇಲೆ ಇನ್ನೊಂದು ಕ್ಷೇತ್ರ. ಒಬ್ಬೊಬ್ಬ ಉಮೇದುವಾರನಿಗೆ ಒಂದೊಂದು ಪೆಟ್ಟಿಗೆ. 150 ಬಸ್ಸು ಲಾರಿಗಳು. ಅವುಗಳ ತುಂಬ ಪ್ರಿಸೈಡಿಂಗ್ ಆಫೀಸರು, ಪೋಲಿಂಗ್ ಆಫೀಸರು, ಸಿಬ್ಬಂದಿ, ಪೋಲೀಸರು ಇತ್ಯಾದಿ ಸುಮಾರು ಸಾವಿರ ಜನ. ಅವರಿಗೆಲ್ಲಾ ಒಂದೇ ಕಡೆ ಊಟೋಪಚಾರ. ಊರ ಹೊರಗಡೆ ಹಿಂದೆ ಯಾರೋ ಪುಣ್ಯಾತ್ಮರು ಕಟ್ಟಿಸಿದ ಹಳೆ ಛತ್ರವೊಂದಿತ್ತು. ಅದನ್ನು ಸಾರಿಸಿ ಗುಡಿಸಿ ತೋರಣ ಕಟ್ಟಿಸಿ ರಂಗೋಲೆ ಹಾಕಿಸಿ ಊಟದ ವ್ಯವಸ್ಥೆ ಮಾಡಿಸಿದೆ. ಷಡ್ರಸ ಭೋಜನ. ನನ್ನ ಮಕ್ಕಳ ಮದುವೆಗೂ ಆ ತರಹ ಭೋಜನ ಮಾಡಿಸಿರಲಿಲ್ಲ. ಎಲ್ಲರೂ ಉಂಡು ತಿಂದು ತೇಗಿಬಿಟ್ಟರು. 'ಎಲ್ಲಾ ಕಡೆಗೂ ನೀವೇ ಬನ್ನಿ ಸಾರ್' ಎಂದು ಕೇಳಿಕೊಂಡರು. 'ಒಂದು ಸಾಕು ಹೋಗಿರಪ್ಪಾ' ಎಂದು ಕಳುಹಿಸಿಕೊಟ್ಟೆ.

ನನ್ನ ಹಳೆಯ ಕಾರನ್ನು ಹತ್ತಿ (ಅದರ ಇರ್ಜಿ ಈಚೆಗೆ ಎಲೆಕ್ಷನ್‌ನಲ್ಲಿ ಮುರಿದು ಹೋಗಿತ್ತು. ಅದನ್ನು ರಿಪೇರಿ ಮಾಡಿಸಿದ್ದೆ) ಬೇಡವಾದ ಬೆಂಗಳೂರಿಗೆ ಬಂದೆ–ರೆವೆನ್ಯೂ ಕಮೀಷನರ ಫಸ್ಟ್ ಗೆಜೆಟೆಡ್ ಅಸಿಸ್ಟೆಂಟ್ ಆಗಿ. ಸೀನಿಯರ್ ಅಸಿಸ್ಟೆಂಟ್ ಕಮೀಷನರಿಗೆ ಮೀಸಲಾದ ಆ ಹುದ್ದೆ ಜೂನಿಯರ್ ಅಸಿಸ್ಟೆಂಟ್ ಕಮೀಷನರ್ ಆದ ನನಗೆ ಸಿಕ್ಕಿತು. ಅದಕ್ಕೋ ಏನೋ ಎಂಟೊಂಬತ್ತು ತಿಂಗಳು ಮಾತ್ರ ನಾನು ಇಲ್ಲಿದ್ದುದು. ಆದರೆ ಆ ಒಂಬತ್ತು ತಿಂಗಳಿನಲ್ಲಿ ನನಗೆ ಒಂಬತ್ತು ವರ್ಷದ ಅನುಭವ ಸಿಕ್ಕಿತು. ರೆವೆನ್ಯೂ ಕಮೀಷನರು ರಾಜ್ಯದ ರೆಫ್ಯೂಜಿ ಕಮೀಷನರೂ ಆಗಿದ್ದರು. ರೆಫ್ಯೂಜಿಗಳ (ಪಾಕಿಸ್ಥಾನದಿಂದ ಬಂದ ನಿರಾಶ್ರಿತರ) ಸಮಸ್ಯೆಗಳನ್ನು ಬಗೆಹರಿಸುವ ಕೆಲಸವೂ ನನಗೆ ಅನುಭವ ತಂದುಕೊಟ್ಟಿತು. ಕಾಮರ್ಸ್ ಕಾಲೇಜ್ ಕಟ್ಟಿಸಿಕೊಟ್ಟಿರುವ ರಾಮನಾರಾಯಣ್ ಚೆಲ್ಲಾರಾಮ್ ಆಗಾಗ್ಗ ನನ್ನ ಬಳಿ ಬರುತ್ತಿದ್ದರು. ಅವರ ಸಲಹೆ ಪಡೆದು ಅನೇಕ ನಿರಾಶ್ರಿತರಿಗೆ ನನ್ನ ಕೈಲಾದ ನೆರವು ನೀಡಿದೆ.

ಮತ್ತೆ ಮಹಾರಾಜರ ಸಂಪರ್ಕ. ಸ್ಪೆಷಲ್ ಟ್ರೈನಿನಲ್ಲಿ ಅವರು ಮತ್ತು ಪರಿವಾರವೆಲ್ಲ ದಕ್ಷಿಣ ಭಾರತದ ಯಾತ್ರೆ ಹೊರಟಿದ್ದರು. ತಿರುಪತಿಗೂ ಭೇಟಿ. ತಿರುಪತಿ ತಿಮ್ಮಪ್ಪನಿಗೆ ಹಿಂದಿನ ಮಹಾರಾಜರುಗಳು ಒಪ್ಪಿಸಿರುವ ಆಭರಣಗಳು ಹೇರಳ. ನಡೆಯುತ್ತಿದ್ದ ಸೇವೆಗಳೂ ಬಹಳ. ಹೀಗಾಗಿ ರೆವೆನ್ಯೂ ಕಮೀಷನರ (ಮುಜರಾಯಿ ಕಮೀಷನರೂ ಅವರೇ ಆಗಿದ್ದರು) ಪ್ರತಿನಿಧಿಯಾಗಿ ತಿರುಪತಿಗೆ ನಾನು ಹೋಗ

ಬೇಕಾಯಿತು. ನಾನು ನನ್ನ ಸಂಸಾರ ಸಮೇತ ಹೊರಟೆ. ಈಗ ದೊಡ್ಡದಾಗಿ ಬೆಳೆದಿದ್ದ ನನ್ನ ಸಂಸಾರಕ್ಕೆ ಸಣ್ಣ ಕಾರು ಸಾಲದೆಂದು ಅಬ್ಕಾರಿ ಕಂಟ್ರಾಕ್ಟರ್ ಕದಿರಪ್ಪನವರು ಕೊಟ್ಟ ಸ್ಟುಡಿ ಬೇಕರ್ ಕಾರಿನಲ್ಲಿ ತಿರುಪತಿಗೆ ಹೋದೆ. ಮಹಾರಾಜರ ರೈಲು ರೇಣಿಗುಂಟ ಸ್ಟೇಷನ್ನಲ್ಲಿ ನಿಂತಿತು. ಅಲ್ಲಿಂದ ತಿರುಪತಿಗೆ ಕಾರಿನಲ್ಲಿ ಹೋಗಬೇಕು. ಮದರಾಸು ಸರ್ಕಾರ ಮಹಾರಾಜರ ಉಪಯೋಗಕ್ಕೆ ಒಂದೆರಡು ಕಾರುಗಳನ್ನು ಒದಗಿಸಿತ್ತು. ಆದರೆ ಅವೆಲ್ಲಾ ಅಷ್ಟು ದೊಡ್ಡ ಕಾರುಗಳಲ್ಲ. ಸರಿ, ಎಲ್ಲರ ಕಣ್ಣೂ ನನ್ನ ಕಾರಿನ ಮೇಲೆ. ರಾಜದೃಷ್ಟಿ ನನ್ನ ಕಾರಿನ ಮೇಲೆ ಬೀಳುವ ಮೊದಲೇ ನನ್ನ ಕಾರನ್ನು ಮಹಾರಾಜರಿಗೆ ಕೊಟ್ಟು ಬೇರೊಂದು ಕಾರನ್ನು ನಾನು ತೆಗೆದುಕೊಂಡೆ. ಬೆಟ್ಟದ ಮೇಲಕ್ಕೆ ಹೋದೆವು. ಆಗ ಅಲ್ಲಿ ಈಗಿರುವಂತಹ ಸೌಕರ್ಯಗಳಿರಲಿಲ್ಲ. ಒಂದು ಸಾಧಾರಣ ಮನೆಯಲ್ಲಿ ಮಹಾರಾಜರ ಮತ್ತು ಅವರ ಪರಿವಾರದವರ ಬಿಡಾರ. ಅದನ್ನು ನೋಡಿದಕೂಡಲೇ ಮಹಾರಾಣಿಯವರು 'ಇಲ್ಲೇನಾ ನಾವಿರಬೇಕಾದ್ದು ?' ಎಂದರು ಮಹಾರಾಜರಿಗೆ. 'ಹೌದು, ಮಹಾರಾಣಿಯವರಿಗೆ ಎಲ್ಲಿ ಹೋದ್ರೂ ಅರಮನೆ ಬೇಕೇನು ?' ಎಂದು ತಮಾಷೆ ಮಾಡಿದರು. ಮಹಾರಾಜರಿಂದಾಗಿ ನನಗೆ ಬೆಳಗಿನಿಂದ ರಾತ್ರಿಯವರೆಗೆ ಎಲ್ಲಾ ದರ್ಶನಗಳನ್ನು ಮಾಡುವ ಪುಣ್ಯ ಸಿಕ್ಕಿತು.

ಮಹಾರಾಜರ ಪರಿವಾರ ಕಾಳಹಸ್ತಿಗೂ ಹೋಯಿತು. ನಾವೂ ಹೋಗಿದ್ದೆವು. ಸಾವಿರ ಕಂಬಗಳ ಆ ದೊಡ್ಡ ದೇವಸ್ಥಾನವನ್ನು ನೋಡುತ್ತಾ ಹೊರಟರು ಮಹಾರಾಜರು. ಹೆಗಲಮೇಲೆ ಒಂದು ಭಾರಿ ಕ್ಯಾಮರಾ ಹೊತ್ತಿದ್ದರು. ಅದೇನು ಆಟೋಮ್ಯಾಟಿಕೋ ಏನೋ ಗೊತ್ತಿಲ್ಲ. ದೇವಸ್ಥಾನದ ಒಳಕ್ಕೂ ಅದನ್ನು ಹೊತ್ತೇ ಹೋದರು. ಪೂಜಾರಿ ಕೆಲಸದಿಂದ ಮೂರು ಕಾಸು ಫಾಯಿದೆ ಇಲ್ಲದಿದ್ದರೂ ಅದರ ಹಕ್ಕು ಮಾತ್ರ ಯಾರೂ ಬಿಟ್ಟುಕೊಡಲು ಇಷ್ಟಪಡುವುದಿಲ್ಲ. ಹಕ್ಕುದಾರರು ಎಲ್ಲೋ ಇರುತ್ತಾರೆ. ಅವರ ಪರ ಪೂಜೆ ಯಾರೋ ಮಾಡುತ್ತಾರೆ. ಮೈಸೂರು ಮಹಾರಾಜರು ಬರುತ್ತಾರೆಂದಾಗ ಎಲ್ಲೆಲ್ಲೋ ಇದ್ದ ಹಕ್ಕುದಾರರೆಲ್ಲ ಗರ್ಭಗುಡಿಯೊಳಗೆ ಸೇರಿಕೊಂಡಿದ್ದರು. ಅವರಲ್ಲಿ ಒಬ್ಬ ಲಾಯರಾಗಿದ್ದನಂತೆ. ಪೂಜೆ ಆರಂಭವಾಯಿತು. ಆ ತಲೆಹರಟೆ ಲಾಯರು 'Photography is not allowed, Sir' ಎಂದುಬಿಟ್ಟ. ಅದನ್ನು ಹೇಳಿದ ರೀತಿ, 'Sir' ಎಂಬ ಪದ, ಮಹಾರಾಜರನ್ನು ರೇಗಿಸಿಬಿಟ್ಟಿತು. 'I know it. You need not dictate it to me' ಎಂದು ಅವರದೇ ಒಂದು ಬಗೆಯ ಠೀವಿಯಲ್ಲಿ ಹೇಳುತ್ತಾ ಸಿಟ್ಟಾದ ಆನೆ ಕೊಸರಿಕೊಂಡಂತೆ ಏಕದಂ ಹೊರಗೆ ನಡೆದುಬಿಟ್ಟರು. ಮಂಗಳಾರತಿಯನ್ನೂ ತೆಗೆದುಕೊಳ್ಳಲಿಲ್ಲ. ಎಲ್ಲರಿಗೂ ದಿಗ್ಭ್ರಮೆ ! ಆಗ ಮಹಾದೇವಯ್ಯ ಹಿಂದೆ ಓಡಿದರು. ಏನು ಹೇಳಿದರೋ ಏನೋ, ಮಹಾರಾಜರು ಪಳಗಿದ ಆನೆಯಂತೆ ಹಿಂದೆಬಂದರು. ಸಾಷ್ಟಾಂಗ ನಮಸ್ಕಾರ ಮಾಡಿದರು. ಕೆನ್ನೆಗಳನ್ನು ತಟ್ಟಿಕೊಂಡರು. ಮಂಗಳಾರತಿಯನ್ನು ಭಕ್ತಿಯಿಂದ

ಸ್ವೀಕರಿಸಿ ಮತ್ತೊಮ್ಮೆ ಆ ಭಾರಿ ದೇಹವನ್ನು ನೆಲದಮೇಲೆ ಮಲಗಿಸಿ ದೀರ್ಘದಂಡ ನಮಸ್ಕಾರ ಮಾಡಿ ದೇವರುಗಳಿಗೆಂದು ತಂದಿದ್ದ ನಲವತ್ತು ಐವತ್ತು ಚಿನ್ನದ ಹಾರಗಳಲ್ಲಿ ಎರಡನ್ನು ದೇವರಿಗೆ ಒಪ್ಪಿಸಿದರು. ಸದ್ಯ, ಆ ದೇವಸ್ಥಾನದ ಮೇಲಿನ ಹತೋಟಿ ನಮಗಿಂಲಿಲ್ಲವಲ್ಲ ಎಂಬ ಸಮಾಧಾನ ನಮಗೆ.

ಹೊರಡುವಾಗ ರೇಣುಗುಂಟ ಸ್ಟೇಷನಲ್ಲಿ ಅವರ ಸಲೂನಿಗೆ ನನ್ನನ್ನು ಕರೆಸಿದರು. 'ನಾವು ಚಿಕ್ಕಬಳ್ಳಾಪುರದಲ್ಲಿ ಪ್ರವಾಸ ಮಾಡಿದಾಗ ಒಳ್ಳೆ ವ್ಯವಸ್ಥೆ ಮಾಡಿದ್ದಿರಿ. ಈಗಲೂ ತುಂಬಾ ಚೆನ್ನಾಗಿತ್ತು. ಸಂತೋಷ !' ಎಂದು ಒಂದು ಪುಟ್ಟ ಪೆಟ್ಟಿಗೆಯನ್ನು ಮುಂದೆ ಚಾಚಿದರು. ಅವರ ಮಾತು ಕೊಂಚ ಎಲೆಅಡಕೆ ತಂಬುಲ ಬಾಯಲ್ಲಿದ್ದಂತೆ. ದರ್ಬಾರದ ಉಡುಪಿನಲ್ಲಿದ್ದ ನಾನು ನಡುಬಗ್ಗಿ ನಮಸ್ಕಾರ ಮಾಡಿ ಅದನ್ನು ಈಸಿಕೊಂಡು ಹೊರಗೆ ಬಂದೆ. ರೈಲು ಹೋದಮೇಲೆ ಪೆಟ್ಟಿಗೆ ತೆರೆದು ನೋಡಿದೆ. ಒಂದು ಜೊತೆ ಚಿನ್ನದ ಕೈಗುಂಡಿಗಳು. ಚಿಕ್ಕಬಳ್ಳಾಪುರದಲ್ಲಿ ಒಂದು ಟೈಪಿನ್ ಕೊಟ್ಟಿದ್ದರು. ದಾವಣಗೆರೆಯಲ್ಲಿ ಮಸಾಲೆದೋಸೆ ಒದಗಿಸಿದ್ದಕ್ಕೆ ಏನೂ ಕೊಟ್ಟಿರಲಿಲ್ಲ. ಬಹುಶಃ ಹೋಟೆಲ್ ನಾರಣಪ್ಪ ಏನಾದರೂ ಗಿಟ್ಟಿಸಿಕೊಂಡಿರಬೇಕು.

ಇದಾದಮೇಲೆ ನಾನು ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಮಂಗಳೂರುಗಳಲ್ಲಿ ಡೀಸಿಯಾಗಿದ್ದಾಗ ಮೂರು ನಾಲ್ಕು ಸಲ ಅವರೊಡನೆ ಪ್ರವಾಸಮಾಡಿದೆ. ಆಗ ನಾನೂ ತೂಕ ಹಾಗೂ ಗಾತ್ರಗಳಲ್ಲಿ ಪುಟ್ಟ ಮಹಾರಾಜರಂತೆಯೇ ಕಾಣುತ್ತಿದ್ದೆ. ಅವರ ಪಕ್ಕದಲ್ಲಿ ಕುಳಿತು ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳಿ ಸಾಕಾಗುತ್ತಿತ್ತು. ಆ ಮರದ ಹೆಸರೇನು ? ಈ ಮರದ ಹೆಸರೇನು ? ಹೀಗೆಲ್ಲಾ ಕೇಳಿದರೆ ಏನು ಹೇಳಲಿ. ಹಾಳು ಆ ಮರಗಳು ಆ ರಸ್ತೆ ಪಕ್ಕದಲ್ಲೇ ಏಕೆ ಬೆಳೆದು ನಿಂತಿದ್ದವೋ ಕಾಣೆ. ಮಾತುಮಾತಿಗೆ 'your Highness' ಎಂದು ಬೇರೆ ಸೇರಿಸಬೇಕಾಗಿದ್ದ ಕಾರಣ 'Sir' ಎಂದು ಎಲ್ಲಿ ಬಾಯಿಂದ ಬರುವುದೋ ಎಂದು ಹೆದರಿ ಸರಿಯಾಗಿ ಹೇಳುವುದರಲ್ಲೇ ನನ್ನ ತಲೆ ಕೆಲಸ ಮಾಡುತ್ತಿತ್ತು. ಇನ್ನು ಆ ಮರ ಗಿಡ ಎಲ್ಲಿ ನನ್ನ ತಲೇಲಿ ಇಟ್ಟುಕೊಳ್ಳಲಿ ! ಸದ್ಯ ಕಾರಿನಿಂದ ಇಳಿದರೆ ಸಾಕೆನಿಸುತ್ತಿತ್ತು. ಮಹಾರಾಜರಾದರೂ ಮಾತಿನಲ್ಲಿ ಸರಸಿ. ಏನಾದರೊಂದು ವಿಷಯ ಎತ್ತಿಕೊಂಡು ಮಾತಾಡುವರು. ಉದಯಪುರಕ್ಕೋ ಎಲ್ಲಿಗೋ ಹೋಗಿದ್ದಾಗ 'I shot ten Tigers before breakpast, and eleven before lunch' ಎಂದು ಅಪ್ಪಣೆಕೊಡಿಸಿದರು. ಮನಸ್ಸಿನಲ್ಲಿ ನಾನು ಇದು ಸಾಹಸಕ್ಕಿಂತ ಮಹಾಪಾಪ ಎಂದುಕೊಂಡೆ. ಈ ಕಾರಣಕ್ಕೇ ಇರಬೇಕು, ಆಮೇಲೆ ಇವರನ್ನು All India Wild Life preservation Board ನ ಅಧ್ಯಕ್ಷರನ್ನಾಗಿ ಮಾಡಿದ್ದು !

ಒಮ್ಮೆ ಶೃಂಗೇರಿಗೆ ದಯಮಾಡಿಸಿದರು. ಜೊತೆಯಲ್ಲಿ ತಾಯಿಯೂ ಇದ್ದರು. ಹೆಂಡತಿ ಮಕ್ಕಳು ಬಂದಿರಲಿಲ್ಲ. ಬಂದವರು ಕಾರಿನಿಂದ ಇಳಿದು ನಡುಬಗ್ಗಿಸಿ ನಮಸ್ಕಾರ

ಮಾಡಿ ಒಂಭಾಗದ ಬಾಗಿಲನ್ನು ಹಿಡಿದು ನಿಂತರು. ತಾಯಿಯನ್ನು ಕೈಕೊಟ್ಟು ಇಳಿಸಿಕೊಂಡು ಬಿಡಾರಕ್ಕೆ ನಿಧಾನವಾಗಿ ನಡೆಸಿಕೊಂಡು ಹೋದರು. ಅಲ್ಲಿ ವಿಶ್ರಾಂತಿ ಆದ ಮೇಲೆ ಶಾರದಾ ಸನ್ನಿಧಿಗೆ ಸವಾರಿ ಹೊರಟಿತು. ಅಷ್ಟು ದೂರ ನಡೆಯಲಾರದ ತಾಯಿಗೆ ಒಂದು 'ಮೇನಾ'. ಮಗ ಅದರಲ್ಲಿ ತಾಯಿಯನ್ನು ಕುಳ್ಳಿರಿಸಿ ಹೊತ್ತವರ ಜೊತೆ ಅವರೂ ನಡೆಯುತ್ತಾ ಹೋದರು. ನೋಡಿದವರ ಕಣ್ಣುಗಳು ಹನಿಯಾದುವು.

ಇಂತಹ ಮಹಾರಾಜರಿಗೆ ಎಂತಹ ಅವಸಾನ. ದೊಡ್ಡವರಿಗೆ ದಡ್ಡತನ ಹೆಚ್ಚು. They lack in commonsence. ಒಮ್ಮೆ ಮಂಗಳೂರಿಗೆ ಬಂದಿದ್ದಾಗ ಅವರ ಆಪ್ತ ಕಾರ್ಯದರ್ಶಿ ಯಾರಿಗೋ 5,000 ರೂಪಾಯಿ ಕೊಡಲು ಅಪ್ಪಣೆ ಕೇಳಲು ಹೋದರು. ಮಹಾರಾಜರ ಪರವಾಗಿ ಹಣ ಕೊಡುವುದು ಬಿಡುವುದು ಎಲ್ಲಾ ಹುಜೂರ್ ಸೆಕ್ರೆಟರಿಯ ಕೆಲಸ. ಮಹಾರಾಜರೇನಿದ್ದರೂ ಆಗಬಹುದು ಎಂದು ಕೋಲೆ ಬಸವನಂತೆ ತಲೆ ಹಾಕುವುದಷ್ಟೇ ಕೆಲಸ. ಕಾಗದದ ಮೇಲೆ ಆರ್ಡರಿಲ್ಲ ಏನಿಲ್ಲ. ನಾನು ಅಲ್ಲೇ ನಿಂತು ಒಳಗೆ ನಡೆಯುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಿದ್ದೆ. 'ಮಹಾಸ್ವಾಮಿ........ಗೆ 5,000 ರೂಪಾಯಿ ಕೊಡಲು ಅಪ್ಪಣೆಯಾಗಬೇಕು.' 'ಕೊಡಿ, ಕೊಡಿ, ಬೇಕಾದ್ರೆ ನೀವು ಇಷ್ಟು ತಕ್ಕೊಳ್ಳಿ!' ಎಂತಹ ಔದಾರ್ಯ! ಆದರೆ ಇದು ಇರಬಾರದಾಗಿತ್ತು. ಬೆಂದಮನೆಯಲ್ಲಿ ಹಿರಿದಷ್ಟೇ ಲಾಭ' ಎಂಬಂತೆ ಮೈಸೂರು ಅರಮನೆ ಮತ್ತು ಮಹಾರಾಜರು ಏನೇನೋ ಆಗಿಬಿಟ್ಟರು. ಮಹಾದುರಂತ! 'ಸೊನ್ನೆಯಿಂದ ಸೊನ್ನೆಗೆ.' ನನ್ನ ಈ ಕಾದಂಬರಿಗೆ ಇದೂ ಒಂದು ಪ್ರಚೋದನೆ. ಅವರ ಖಾಸಗಿ ಡಾಕ್ಟರು ಮಂಗಳೂರಿಗೆ ಬಂದಾಗ ಹೇಳಿದರು; 'ನಾನು ದಿನಾ ಒಂದು ಸೇರು ನೀರು ತೆಗೀತಿನಿ ಅವರ ಶರೀರದಿಂದ,' ಎಂದು. ಅಹುದು. ಅಷ್ಟು ಸಾಲದು ಎಂಬಂತೆ ಜನ ಅವರ ರಕ್ತವನ್ನೇ ಹೀರಿದರು.

ಮೈಸೂರಿಗೆ ಫುಡ್ ಅಸಿಸ್ಟೆಂಟ್ ಹಾಗೂ ಸಿಟಿ ರೇಷನಿಂಗ್ ಆಫೀಸರ್ ಆಗಿ ಹೋದೆ. ಬೆಂಗಳೂರು ಬೇಡ ಮೈಸೂರು ಬೇಕು ಎಂದು ಹೇಳಿರಲಿಲ್ಲ. ಆಗುವುದೆಲ್ಲಾ ಒಳ್ಳೆಯದಕ್ಕೆ. ಮೈಸೂರು ನನಗೆ ಹಿಡಿಸಿತು. ಬೆಂಗಳೂರಿನ ಗಡಿಬಿಡಿಯಿಲ್ಲ. ಅಷ್ಟು ಖರ್ಚು ಇಲ್ಲ. ಆಗ ಮೈಸೂರು ಒಂದು ಮಾದರಿ ಹಳ್ಳಿಯಂತಿತ್ತು.

ನನ್ನ ಕೆಲಸದ ವ್ಯಾಪ್ತಿ ಇಡೀ ಜಿಲ್ಲೆ. ದವಸಧಾನ್ಯಗಳ ವಸೂಲಿ. ಅವುಗಳ ಸಂಗ್ರಹಣೆ ಹಾಗೂ ವಿತರಣೆ, ರೈಸ್ ಮಿಲ್ಲುಗಳ ಮೇಲಿನ ಉಸ್ತುವಾರಿ, ಗೋಣೀ ಚೀಲ, ಸೇರು, ತಕ್ಕಡಿ, ಲೆಕ್ಕಪಕ್ಕ, ರೇಷನ್ ಕಾರ್ಡು ಇತ್ಯಾದಿ ಕೆಲಸಗಳು. ಒಟ್ಟೆ ಕಾರು ಮಾರಿದ್ದೆ. ಬೇರೆ ಕಾರು ತೆಗೆದುಕೊಂಡಿರಲಿಲ್ಲ. ಇಷ್ಟು ಹೊತ್ತಿಗೆ ಬಸ್ಸುಗಳು ಹೆಚ್ಚಾಗಿದ್ದುವು. ಆದರೆ ಅವು ಪೆಟ್ರೋಲ್ ಅಥವಾ ಡೀಸೆಲ್ ಬಸ್ಸುಗಳಲ್ಲ ಚಾರ್‌ಕೋಲ್ (ಇದ್ದಿಲು) ಬಸ್ಸುಗಳು. ಪೆಟ್ರೋಲ್ ಅಭಾವದಿಂದ ಪ್ರತಿ ಬಸ್ಸಿಗೂ

ಇದ್ದಿಲಿನಿಂದ ನೀರು ಕಾಯಿಸಿ ಆವಿ ತಯಾರಿಸುವ ಕಡಾಯಿ ಜೋಡಿಸಿದ್ದರು. ಅದು ಆರಿಹೋಗದಂತೆ ಆಗಾಗ್ಗೆ ತಿದಿ ಒತ್ತುತ್ತಾ ಇರಬೇಕು. ಕಂಡಕ್ಟರ್ ಜೊತೆಗೆ ತಿದಿ ಒತ್ತುವುದಕ್ಕೆ ಒಬ್ಬ ಹುಡುಗ ಇರುತ್ತಿದ್ದ. ಸ್ಪೀಡ್ ಅಷ್ಟಿಲ್ಲ. ಅಪಘಾತಗಳು ಕಡಮೆ. ಹೀಗಾಗಿ ಎಲ್ಲಿಗೆ ಹೋದರೂ ಜೀವಸಹಿತ ಹಿಂದಿರುಗಿ ಬರಬಹುದಾಗಿತ್ತು.

ಜಿಲ್ಲೆಯಲ್ಲಿದ್ದ ಹತ್ತಿಪ್ಪತ್ತು ರೈಸ್ ಮಿಲ್‌ಗಳಲ್ಲಿ ಸ್ಟಾಕ್ ಮಾಡಿದ ಲಕ್ಷಾಂತರ ಚೀಲ ಬತ್ತವನ್ನು ಪ್ರತಿ ತಿಂಗಳೂ ಚೆಕ್‌ಮಾಡಿ ವರದಿಮಾಡಬೇಕಾಗಿತ್ತು. ನೋಟು ರೂಪಾಯೇ ಎಣಿಸೋದಕ್ಕೆ ! ಚೀಲದಲ್ಲಿ ಮೂಟೆ ಕಟ್ಟಿ ಹಾಕಿದರಾದರೂ ಎಣಿಸ ಬಹುದಾಗಿತ್ತು. ಅದೂ ಕಷ್ಟವೆ. ಮುಂದೆ ಬತ್ತದ ಚೀಲ, ಹಿಂದೆ ಹೊಟ್ಟಿನ ಚೀಲ ಇದ್ದರೇನು ಮಾಡುವುದು ! ಆದರೆ ಮಿಲ್ಲುಗಳಲ್ಲಿ ಬತ್ತವನ್ನು ಅದಕ್ಕೆಂದೇ ಮಾಡಿದ ಕೋಣೆಗಳಲ್ಲಿ ತುಂಬುತ್ತಿದ್ದರು. ಒಂದೊಂದು ಕೋಣೆಯಲ್ಲಿ ಇನ್ನೂರು ಮುನ್ನೂರು ಪಲ್ಲ. ಇಷ್ಟನ್ನೂ ಅಳೆಸಿ ಚೆಕ್‌ಮಾಡುವುದೆಂದರೆ ಆಗದ ಕೆಲಸ ಎಂದು ಚೆಕ್ ಮಾಡ ದೆಯೇ 'Checked and found correct' ಎಂದು ಸರ್ಟಿಫಿಕೇಟ್ ಕೊಡುವುದೂ ತಪ್ಪಾಗುತ್ತದೆ. ನಾನೇನು ಮಾಡಿದೆ ಎಂದರೆ, ಮೊದಲು ಬತ್ತ ಅಳೆಸಿ ಕೋಣೆಗೆ ತುಂಬಿಸಿದೆ. ತುಂಬಿದ ಬತ್ತ ಮಟ್ಟ ಮಾಡಿಸಿ ಆ ಮಟ್ಟಕ್ಕೆ ಸುತ್ತ ಸುಣ್ಣದ ಪಟ್ಟೆ ಬಳಿಸಿದೆ. ಕೋಣೆಗೆ ಬೀಗ ಹಾಕಿಸಿ, ಸೀಲು ಮಾಡಿಸಿದೆ. ಗೋಡೌನುಗಳಿಗೆಲ್ಲ ನಂಬರು ಹಾಕಿಸಿ, ಇಷ್ಟನೆಯ ನಂಬರು ಗೋಡೌನಿನಲ್ಲಿ ಇಷ್ಟು ಪಲ್ಲ ಬತ್ತ ಎಂದು ಲೆಕ್ಕ ಬರೆಸಿದೆ. ಪ್ರತಿ ತಿಂಗಳು ಸೀಲು ಒಡೆಸಿ, ಬೀಗ ತೆಗೆದು, ಇರಬೇಕಾದ ಮಟ್ಟಕ್ಕೆ ಬತ್ತ ಇದೆಯೋ ಇಲ್ಲವೇ ಎಂದು ನೋಡಿ 'checked and found correct' ಎಂದು ಬರೆಯುತ್ತಿದ್ದೆ. ಇದು ಮಿಲ್ಲಿನವರಿಗೆ ಅನಾನುಕೂಲವಾಯಿತೋ ಇಲ್ಲ ಇಷ್ಟು ಸಲೀಸು ಮಾಡಿಬಿಟ್ಟನಲ್ಲ ಕೆಲಸ ಎಂದು ಫುಡ್ ಇನ್‌ಸ್ಪೆಕ್ಟರುಗಳು ಇತ್ಯಾದಿಯವರಿಗೆ ಆದ ಹೊಟ್ಟೆಕಿಚ್ಚಿನಿಂದಲೋ ಏನೋ ನನ್ನ ಮೇಲೆ ಅರ್ಜಿ ಬರೆದರು. ಫುಡ್ ಸಪ್ಲೈ ಡೈರೆಕ್ಟರ್ (ಕೆ.ಪಿ. ರಾಮ ನಾಥಯ್ಯನವರು) ನನ್ನಿಂದ ರಿಪೋರ್ಟು ಕೇಳಿದರು. ಬರೆದೆ. ನನ್ನ ಬುದ್ಧಿ ಮೆಚ್ಚಿ ಕೊಂಡು ಉತ್ತರ ಬರೆದರು. ಹೀಗೆಲ್ಲಾ ಮೂರು ವರುಷ ಕೆಲಸ ಮಾಡಿ ಫುಡ್ ಇಲಾಖೆ wind up ಮಾಡಿ ಗೋಣಿಚೀಲ ಸೇರು ತಕ್ಕಡಿಗಳನ್ನೆಲ್ಲಾ ಹರಾಜು ಮಾಡಿ ಮೈಸೂರು ಬಿಟ್ಟೆ.

ಮೈಸೂರಿನಲ್ಲಿರುವಾಗ ನನ್ನ ಸಾಹಿತ್ಯದ ಕೆಲಸ ಕ್ರಮವಾಗಿ ಆರಂಭವಾದದ್ದು ಒಂದು ವಿಶೇಷ. 1941–42ರಲ್ಲಿ ಮೈಸೂರಿನಲ್ಲಿ ಟ್ರೈನಿಂಗ್ ತೆಗೆದುಕೊಳ್ಳುತ್ತಾ ಬೆಳಗಿನ ಹೊತ್ತು ಕುದುರೆ ಸವಾರಿ ಕಲಿಯುತ್ತಾ ಖುಷಿಯಾಗಿದ್ದಾಗ ಒಂದು ದಿನ ಸರ್ ವಾಲ್ಟರ್ ಸ್ಕಾಟ್‌ನ ಕೆನಿಲ್‌ವರ್ತ್ ಕಾದಂಬರಿ ನನ್ನ ಕಣ್ಣಿಗೆ ಬಿತ್ತು. ಆಗ ನಾನು ಹೆಂಡತಿಯನ್ನು ತೌರುಮನೆಗೆ ಕಳುಹಿಸಿದ್ದೆ. ಏಕೆಂದರೆ, ಅವರಿಗೂ ಪ್ರೊಬೇಷನರಿ ಪೀರಿಯಡ್. ಅಂದರೆ ಚೊಚ್ಚಲು ಬಸಿರಿ. ನಾನಿದ್ದುದು ನಜರ್‌ಬಾದಿನ ಒಕ್ಕಲಿಗರ

ಹಾಸ್ಟೆಲಿನಲ್ಲಿ. ಆ ದೊಡ್ಡ ಮನೆಯಲ್ಲಿ ನಾನೊಬ್ಬನೆ. ಹುಡುಗರೆಲ್ಲ ಬೇಸಗೆ ರಜೆಗೆ ಊರಿಗೆ ಹೋಗಿದ್ದರು. ಯಾರೋ ಹುಡುಗರು ಬಿಸಾಡಿ ಹೋಗಿದ್ದ ಕೆನಿಲ್‌ವರ್ತ್ ಕಾದಂಬರಿ ನನ್ನ ಕೈಗೆ ಸಿಕ್ಕಿತು. ಸಣ್ಣ ಅಕ್ಷರದಲ್ಲಿ ಮುದ್ರಣವಾಗಿದ್ದ 800 ಪುಟಗಳ ಕಾದಂಬರಿ ಅದು. ಓದುತ್ತಾ ಓದುತ್ತಾ ಅದು ನನಗೆ ತುಂಬಾ ಹಿಡಿಸಿತು. ಓದಿ ಮುಗಿಸಿದ ಮೇಲೆ ಅದನ್ನು ಕನ್ನಡಕ್ಕೆ ಅನುವಾದಿಸಬೇಕೆಂಬ ಮನಸ್ಸಾಯಿತು. ಆ ಕೂಡಲೇ ಅದಕ್ಕೆ ಕೈಹಾಕಿದೆ. ಆ ಮೇಲೆ ಗೊತ್ತಾಯಿತು, ಅದು ಸ್ಕಾಟ್‌ನ Master piece ಎಂದು. ಅನುವಾದ ಮಾಡಿದ ಮೇಲೆ ಅದು ನನ್ನ ಜೊತೆ ಸುಮಾರು ಹತ್ತು ವರ್ಷ ಸುತ್ತಾಡಿ ಮತ್ತೆ ಮೈಸೂರಿಗೆ ಬಂದಿತು. ಈಗ ಅದನ್ನು ಹೊರದೆಗೆದು ಕುವೆಂಪು ಅವರಿಗೆ ತೋರಿಸಿದೆ. ಅಲ್ಲಿಯವರೆಗೆ ಅವರಿಗೂ ನನಗೂ ಪರಿಚಯವಿರಲಿಲ್ಲ. ಅವರು ಕೃಪೆಮಾಡಿ ಅದನ್ನು ಅವಲೋಕಿಸಿ 'ಚೆನ್ನಾಗಿದೆ. ಆದರೆ ಮೂಲದಲ್ಲಿರುವ ಹೆಸರು ಸನ್ನಿವೇಶ–ಇವುಗಳನ್ನೇ ಇಟ್ಟುಕೊಳ್ಳಿ' ಎಂದರು. ಹಾಗೆಯೇ ಮಾಡಿದೆ. ಇಷ್ಟು ಮಾಡಿದ ಮೇಲೆ ದೇ. ಜವರೇಗೌಡರ ಪರಿಚಯ ಆಯಿತು. ಅವರ ಮೂಲಕ ಎಸ್. ಎಂ. ರಂಗನಾರಾಯಣರಾವ್ ಅವರ ಸಂಪರ್ಕವಾಯಿತು. ಅವರು ಇದನ್ನು ಪ್ರಕಟಿಸಲು ಮುಂದೆ ಬಂದರು. ಇಂಟರ್‌ಮೀಡಿಯಟ್ ತರಗತಿಗೆ ಪಠ್ಯಪುಸ್ತಕವೂ ಆಯಿತು. ಇಲ್ಲಿಂದ ಸಾಹಿತ್ಯ ರಚನೆ ಒಂದೇ ಸಮನೆ ಸಾಗಿತು. ಮಾರ್ಕೋಪೋಲೋ ಪ್ರವಾಸ ಕಥನ ಬಂದಿತು. ಇದರಿಂದಾಗಿ ವಿದೇಶೀ ಪ್ರವಾಸಿಗಳ ಸಾಹಿತ್ಯಭಂಡಾರದ ಹೆಬ್ಬಾಗಿಲು ತೆರೆದಂತಾಯಿತು; ಆರು ಬೃಹತ್ ಸಂಪುಟಗಳು ಹೊರಬಂದಿವೆ. ಇನ್ನೂ ನಾಲ್ಕಾದರೂ ಬರಬೇಕಾಗಿದೆ. ಪ್ರಕಟವಾದ ಆರು ಸಂಪುಟಗಳಲ್ಲಿ ಮೊದಲ ಸಂಪುಟ ಚಿಕ್ಕಮಗಳೂರಿನಲ್ಲಿದ್ದಾಗ ಪ್ರಕಟಗೊಂಡಿತು. ಎರಡು ಮತ್ತು ಮೂರನೆಯ ಸಂಪುಟಗಳು ಮಂಗಳೂರಿನಲ್ಲಿಯೂ, ನಾಲ್ಕು, ಐದು ಮತ್ತು ಆರು ಬೆಂಗಳೂರಿನಲ್ಲಿದ್ದಾಗಲೂ ಪ್ರಕಟಗೊಂಡವು. ಸರೋಜಿನೀದೇವಿ ಜೀವನ ಚರಿತ್ರೆ ಬರೆದೆ. ಇದು ಹೈಸ್ಕೂಲಿಗೆ ಟೆಕ್ಸ್ಟ್ ಆಯಿತು. "ನಮ್ಮೂರು" ರೂಪತಾಳಿದ ಬಗೆ ಆಗಲೇ ಹೇಳಿದ್ದೇನೆ. ಪ್ರಜೆಯಲ್ಲಿದ್ದಾಗ ನಾನು ಬರೆದ ಕವಿತೆಗಳನ್ನು 'ಸಾಟಾಗುವೆ ಗೀಜಗನ ಹಕ್ಕಿ' ಮತ್ತು 'ಕಥೆ ವೃಕ್ಷ' ಎಂಬ ಎರಡು ಸಂಗ್ರಹಗಳಲ್ಲಿ ಹೊರತಂದೆ. ಚಿಕ್ಕಮಗಳೂರು ಡೀಸಿಯಾಗಿದ್ದಾಗ ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಅಧ್ಯಕ್ಷನೂ ಆಗಿದ್ದೆ. ಆಗ ಅದರ ವಜ್ರ ಮಹೋತ್ಸವ ನಡೆಯಿತು. ಆ ಸಂದರ್ಭದಲ್ಲಿ ಪತ್ರಿಕೆಗಳ ವಿಶೇಷ ಸಂಚಿಕೆಗೆ ಒಂದು ಲೇಖನ ಬರೆದೆ. ಅದಕ್ಕೆ 'ಬೆಟ್ಟದಿಂದ ಬಟ್ಟಲಿಗೆ' ಎಂದು ಹೆಸರಿಟ್ಟೆ. ಮೂರು ನಾಲ್ಕು ವರ್ಷಗಳ ಸತತ ಶ್ರಮದಿಂದ ಕಾಫಿಯ ಮೇಲೆ 'ಬೆಟ್ಟದಿಂದ ಬಟ್ಟಲಿಗೆ' ಎಂಬ ಕೃತಿರಚನೆಯಾಯಿತು. ಕಾಫಿಯ ಮೇಲೆ ಅಧಿಕೃತ ಕೃತಿಯೆಂದರೆ ಇದೊಂದೆ. ಮಂಗಳೂರಿನಲ್ಲಿರುವಾಗ 'ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ' ಎಂಬ ಅನುವಾದ ಕೃತಿ ಹೊರಬಂದಿತು. ಬೆಂಗಳೂರಿಗೆ ಬಂದಮೇಲೆ 'ದೊಡ್ಡಮನೆ', 'ಸೊನ್ನೆಯಿಂದ ಸೊನ್ನೆಗೆ', ಮತ್ತು

'ಭೂಮಿಗೆ ಬಂದ ಗಂಧರ್ವ' ಈ ಕಾದಂಬರಿಗಳ ರಚನೆ ಹಾಗೂ ಪ್ರಕಟಣೆ ಆದುವು. ಜಾನಪದದ ಬಗ್ಗೆ ನಾನು ಹುಟ್ಟಿ ಕಣ್ಣು ಬಿಟ್ಟಂದಿನಿಂದ ಒಲವು ಉಂಟು. ಆ ಸಾಹಿತ್ಯವನ್ನು ಇಲ್ಲಿಗೆ ಸುಮಾರು ಹದಿನೈದು ವರ್ಷಗಳಿಂದ ಧ್ವನಿಮುದ್ರಿಸುತ್ತಾ ಬಂದಿದ್ದೇನೆ. ಈಗ ಎರಡು ಸಂಗ್ರಹಗಳು ಹೊರಬಂದಿವೆ. ಒಂದು 'ಸೋಬಾನೆ ಚಿಕ್ಕಮ್ಮನ ಪದಗಳು', ಇನ್ನೊಂದು 'ಪದವವೆ ನಮ್ಮ ಎದೆಯಲ್ಲಿ.' ಇವುಗಳ ಜೊತೆ ಜೊತೆಗೇ ಸಂಗ್ರಹಿಸಿದ 'ಹೆಳವರು ಮತ್ತು ಅವರ ಪದಗಳು' ಇನ್ನೇನು ಪ್ರಕಟವಾಗುವುದರಲ್ಲಿದೆ. ಕನ್ನಡ ಸಾಹಿತ್ಯ ಪರಿಷತ್ತಿಗಾಗಿ 'ಕರ್ನಾಟಕ ಜನಪದ ಕಥೆ'ಗಳನ್ನು ಸಂಪಾದಿಸಿ ಕೊಟ್ಟಿದ್ದೇನೆ. ಸುಮಾರು ನಲವತ್ತೈದು ವರ್ಷಗಳ ಹಿಂದೆ ಬರೆದ ಒಂದೆರಡು ಸಣ್ಣಕಥೆಗಳನ್ನೂ ಸೇರಿಸಿ ಈಗ ಎಂಟು ಸಣ್ಣಕಥೆಗಳ ಒಂದು ಪುಸ್ತಕವನ್ನು 'ಕಂಡು-ಕೇಳಿದ ಕಥೆಗಳು' ಎಂದು ಪ್ರಕಟಿಸಿದ್ದೇನೆ.

ಇಷ್ಟೆಲ್ಲಾ ಕೆಲಸ ನಡೆಯುತ್ತಾ ಬಂದಿದೆ. ಎಷ್ಟೇ ಬಿಡುವಿಲ್ಲದ ಸರ್ಕಾರಿ ಕೆಲಸ ಇದ್ದರೂ ದಿನಕ್ಕೆ ಒಂದೆರಡು ಗಂಟೆಗಳ ಕಾಲ ಬಿಡುವು ಮಾಡಿಕೊಂಡು ಬರೆಯುತ್ತಾ ಬರುವುದನ್ನು ಬಿಟ್ಟಿಲ್ಲ. ಬೆಳಗಿನ ಹೊತ್ತು ಬರುವವರು ಹೋಗುವವರು ಇಲ್ಲದಾಗ, ಫೋನುಗೀನುಗಳ ತಾಪತ್ರಯ ಇಲ್ಲದಾಗ ಮನೆಯ ಮಕ್ಕಳು ಮತ್ತು ಊರು ಇನ್ನೂ ಮಲಗಿರುವಾಗ ವಾಕಿಂಗ್ ಮುಗಿಸಿಕೊಂಡು ಬಂದು ನನ್ನ ಬರವಣಿಗೆಯ ಕೆಲಸ. ಇನ್ನು ರಜಾದಿನಗಳು ಇದಕ್ಕೇ ಮೀಸಲು. ಕ್ಲಬ್ ಗಿಬ್ಬು ಇವು ನನಗೆ ದೂರ. ಹೋದಕಡೆಗಳಲ್ಲೆಲ್ಲ (ಬೆಂಗಳೂರು ಬಿಟ್ಟರೆ) ನಾನೇ ಸ್ಥಳದ ಕ್ಲಬ್ಬಿನ ಅಧ್ಯಕ್ಷ. ಅದು ಗೌರವಕ್ಕಷ್ಟೇ. ಇಸ್ಪೀಟು ಮುಂತಾದ ಆಟಗಳು ನನಗೆ ಹಿಡಿಸುವುದಿಲ್ಲ. ಬಿಲಿಯರ್ಡ್ಸ್ ಟೇಬಲ್ ಇದ್ದರೆ ಅದೊಂದು ಆಟ ಆಡುತ್ತೇನೆ. ಹೀಗಾಗಿ ದಿನದ 24 ಗಂಟೆಗಳಲ್ಲಿ 12 ಗಂಟೆ ಸರ್ಕಾರದ ಕೆಲಸಕ್ಕೆ, ಇನ್ನು 12 ಗಂಟೆ ಊಟ ನಿದ್ದೆ ಮತ್ತು ಬರವಣಿಗೆಗೆ. ಓದುವುದಕ್ಕಿಂತ ಬರೆಯುವುದೇ ಹೆಚ್ಚು. ನಾನು ಬರೆದ ಮೇಲೆ ಯಾರಿಗೋ ಮುದ್ರಣ ಮಾಡಿಕೊಳ್ಳಿ ಎಂದು ಕೊಟ್ಟು ಬಿಡುವುದಿಲ್ಲ. ಪ್ರಕಾಶಕರು ಯಾರೇ ಆಗಲಿ ಪ್ರೂಫ್ ನೋಡುವ ಕೆಲಸ ನನ್ನದೇ. ಅದರಂತಹ ಬೇಜಿಗೆ ಕೆಲಸ ಬೇರೊಂದಿಲ್ಲ. ಏನನ್ನೇ ಆದರೂ ಮೊದಲು ನಾನು ಒಂದು ಸಲ ಬರೆದು ಆಮೇಲೆ ಇನ್ನೊಂದು ಸಲ ಬರೆಯುತ್ತೇನೆ. ಹಾಗೆ ಬರೆದು ಇನ್ನೊಬ್ಬರಿಗೆ ಪ್ರತಿ ಮಾಡಲು ಕೊಡುತ್ತೇನೆ. ಅವರು ಪ್ರತಿಮಾಡಿರುವುದು ಸರಿಯಾಗಿದೆಯೋ ಇಲ್ಲವೇ ಎಂದು ಮೊದಲಿನಿಂದ ಕೊನೆಯವರೆಗೆ ಕಣ್ಣಲ್ಲಿ ಕಣ್ಣಿಟ್ಟು ಓದುತ್ತೇನೆ. ಆವಶ್ಯಕವಿದ್ದರೆ ತಿದ್ದುತ್ತೇನೆ. ಹೆಚ್ಚು ತಿದ್ದಿದರೆ ಮತ್ತೆ ಪ್ರತಿ ಮಾಡಿಸುತ್ತೇನೆ. ಆಮೇಲೆ ಓದಿ ಪ್ರೆಸ್ಸಿಗೆ ಕೊಡುತ್ತೇನೆ. ಪ್ರೆಸ್ಸಿನ ಪ್ರೂಫ್‌ಗಳನ್ನು ನೋಡದೆ— ಒಂದು ಸಲ ಅಲ್ಲ, ಎರಡು ಮೂರು ಸಲ ನೋಡದೆ—ಮುದ್ರಣ ಮಾಡಿ ಎಂದು ಹೇಳುವುದೇ ಇಲ್ಲ. ಆದರೂ ತಪ್ಪುಗಳು ಉಳಿಯುತ್ತವೆ. ಹೀಗೆ ಐದಾರು ಸಲವಾದರು ಒಂದು ಪುಸ್ತಕ ನನ್ನಿಂದ ನೋಡಿಸಿಕೊಂಡು ಹೊರಬರುತ್ತದೆ. ಸುಮಾರು 6,000

ಪುಟಗಳಷ್ಟು ಸಾಹಿತ್ಯ ಈ ಕ್ರಮ ಹಾಗು ಶ್ರಮ ಅನುಸರಿಸಿಯೇ ಬಂದಿರುವುದು. ಇನ್ನು ಹೆಚ್ಚು ಹೇಳಿಕೊಂಡರೆ ನನ್ನ ಪರಾಕ್ರಮ ಹೇಳಿಕೊಂಡಂತಾಗುವುದೆಂದು ಆ ವಿಷಯ ಇಲ್ಲಿಗೆ ನಿಲ್ಲಿಸಿ ನನ್ನ ಕಥೆ ಮುಂದುವರಿಸುತ್ತೇನೆ.

ಮೈಸೂರಿನಿಂದ ಹೋದದ್ದು ಭದ್ರಾವತಿಗೆ-ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಆಡಳಿತಮಂಡಳಿಯ ಕಾರ್ಯದರ್ಶಿಯಾಗಿ. ಯಾರು ಇದನ್ನು ಆಲೋಚನೆಮಾಡಿದರೋ ಕಾಣೆ. ಯಾರಾದರು ಮಾಡಲಿ ಒಂದು ಹೊಸ ಕ್ಷೇತ್ರದಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತು. ಕೈಗಾರಿಕೆ, ಕಾರ್ಮಿಕರು, ಅವರ ಬೇಡಿಕೆಗಳು, ಕಷ್ಟ ಸುಖಗಳು, ಕಾರ್ಖಾನೆಯನ್ನು ಅದರಲ್ಲಿಯೂ ದೊಡ್ಡ ಕಾರ್ಖಾನೆಗಳನ್ನು ನಡೆಸುವಲ್ಲಿ ಇರುವ ಕಷ್ಟಗಳು ಬಂಡವಾಳ, ಸಾಲ ಸೋಲ, ಲಾಭನಷ್ಟ. ಓವರ್‌ಟೈಂ, ಷಿಫ್ಟ್, ಸ್ಟ್ರೈಕು. ಒಂದೇ ಎರಡೇ ಸಮಸ್ಯೆಗಳು. ಇವನ್ನೆಲ್ಲಾ ತಿಳಿದುಕೊಳ್ಳುವ, ಆಡಳಿತಮಂಡಳಿಯ ಕಾಯದರ್ಶಿಯಾಗಿ ಅವನ್ನೆಲ್ಲಾ ಬೋರ್ಡು ಮುಂದೆ ತಂದು ತೀರ್ಪು ಪಡೆಯುವ, ಕಾರ್ಖಾನೆಗೆ ಬಂದ ವಿದೇಶೀ ಹಾಗೂ ಇಂಡಿಯಾದ ಬೇರೆ ಬೇರೆ ತರಹ ಜನರ ಸಂಪರ್ಕ ಪಡೆಯುವ ಸದವಕಾಶ ನನಗೆ ದೊರೆಯಿತು. ಇದಿಲ್ಲದಿದ್ದರೆ ನನ್ನ ಅನುಭವ ಅಪೂರ್ಣವಾಗುತ್ತಿತ್ತು. ನಾನು ಕೇವಲ ಸೆಕ್ರೆಟರಿ ಅಷ್ಟೇ ಅಲ್ಲ, ಒಂದು ಗಣ್ಯ ಹುದ್ದೆಯನ್ನು ಅಲಂಕರಿಸಿದ ವ್ಯಕ್ತಿಯೂ ಆಗಿದ್ದೆ. ಆಗ ಸೆಕ್ರೆಟರಿಗೆ ತುಂಬಾ ಗೌರವ ಇತ್ತು. ಮನೆಗಳನ್ನು ಕಟ್ಟಿಸುವುದು, ಅವನ್ನು ಕಾರ್ಮಿಕರಿಗೆ ಹಂಚುವುದು, ನ್ಯೂಟೌನ್ ಬೋರ್ಡು ಅಧ್ಯಕ್ಷನಾಗಿ ಒಂದು ಮುನಿಸಿಪಾಲಿಟಿಯು ಏನು ಕೆಲಸ ಮಾಡಬೇಕೋ ಆ ಕೆಲಸಗಳನ್ನೆಲ್ಲಾ ಮಾಡುವುದು ಇವೆಲ್ಲಾ ಮನಸ್ಸಿಗೆ ಹಿತವಾಗಿದ್ದ ಕೆಲಸಗಳು. ಮೊಟ್ಟಮೊದಲಿಗೆ ದೇಶನೋಡಿದ್ದು ಇಲ್ಲಿದ್ದಾಗಲೇ. ಪಾಟಿಯಾಲದಲ್ಲಿ ನಡೆದ Town planners conference ನಲ್ಲಿ ಭಾಗವಹಿಸಿದೆ. ಜೆಮ್‌ಷೆಡ್‌ಪುರ, ದುರ್ಗಾಪುರ, ರೂರ್ಕೆಲಾಗಳಲ್ಲಿ ಹೇಗೆ ಕಾರ್ಮಿಕರ ವಸತಿ ಇತ್ಯಾದಿಗಳ ಬಗ್ಗೆ ಕೆಲಸ ನಡೆದಿದೆ ಎಂದು ಅಲ್ಲಿಗೆಲ್ಲಾ ಹೋಗಿ ತಿಳಿದುಕೊಂಡು ಬಂದೆ. ಒಟ್ಟಿನಲ್ಲಿ ಒಂದು ಕಡೆ ಕೊಳಕು ಬಟ್ಟೆಗಳನ್ನು ತೊಟ್ಟ ಕೂಲಿಗಾರರ ಸಂಪರ್ಕ, ಇನ್ನೊಂದು ಕಡೆ ಕಾರ್ಖಾನೆ ಆಡಳಿತ ನಡೆಸುವವರ ಸಹವಾಸ-ಇವುಗಳಲ್ಲಿ ತೇಲಿದೆ ಮುಳುಗಿದೆ. ಕಾರ್ಮಿಕರ ಮನೋಭಾವನೆ ಎಂಥದು, ಸಂಪು ಹೂಡಿದಾಗ ನಡೆದು ಕೊಳ್ಳಬೇಕಾದ ಬಗೆ ಹೇಗೆ, ಅವರನ್ನು ಒಲಿಸಿಕೊಳ್ಳುವ ಮಾರ್ಗ ಏನು, ಅವರು ಮುನಿದರೆ ಆಡುವ ಮಾತುಗಳೆಂಥವು-ಇವುಗಳ ಸಂಪೂರ್ಣ ಅನುಭವ ಆಯಿತು. ಕಾರ್ಮಿಕರು ಸಂಪು ಹೂಡಿದ ಮೇಲೆ ಅವರೊಡನೆ ಮಾಡಿದ ದಿನಗಟ್ಟಲೇ ಸಂಧಾನ, ಅವರ ಬೆಟ್ಟದಷ್ಟು ಬೇಡಿಕೆ ಆಡಳಿತದ ಗುಲ್ಗಂದಷ್ಟು ನೀಡಿಕೆ, ಆಮೇಲೆ ರಾಜೀ ಕಬೂಲಿ, ಅಗ್ರಿಮೆಂಟ್, ಅದಕ್ಕೆ ರುಜು ಹಾಕುವುದು ಇತ್ಯಾದಿ ಒಂದು ಹೊಸ ಪ್ರಪಂಚದ ಅನುಭವ ತರಂಗಗಳು ನನ್ನನ್ನು ಒಂದು ಬಗೆಯ ಹೊಸ ಮನುಷ್ಯನನ್ನಾಗಿ ಮಾಡಿದವು. ಇಲ್ಲಿದ್ದಾಗ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕುವೆಂಪು ಅವರನ್ನು ಕರೆಸಿ ಅಪೂರ್ವರಿಯ ಸನ್ಮಾನ ಮಾಡಿದೆ.

ಹರಿಹರಕ್ಕೆ ಹೋದಾಗ ಕೈಕೂಸಾಗಿದ್ದ ನನ್ನ ಮೊದಲ ಮಗಳ ಮದುವೆಯನ್ನು ಇಲ್ಲಿ ಮಾಡಿದೆ.

ಸಗಣಿಯುವನೊಡನೆ ಸರಸ ಆಡೋದಕ್ಕಿಂತ ಗಂಧದವನೊಡನೆ ಗುದ್ದಾಡುವುದು ಲೇಸಂತೆ. ಆದರೆ ಸಗಣಿಯುವನ ಜೊತೆ ಗುದ್ದಾಡಬೇಕಾಗಿ ಬಂದರೆ ? ಹೀಗಾಯಿತು ಪರಿಸ್ಥಿತಿ ನಾನು ಹೋದ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ. ಕಾರ್ಖಾನೆ ಎಂದು ಹೆಸರು ಅಷ್ಟೆ. ಕಾರ್ಖಾನೆಯನ್ನು ಇನ್ನೂ ಕಟ್ಟಬೇಕಾಗಿತ್ತು. ಜರ್ಮನಿಯಿಂದ (ಆಗ ಸಕ್ಕರೆ ಕಾರ್ಖಾನೆ ಯಂತ್ರಗಳು ಪರದೇಶದಿಂದ ಬರುತ್ತಿದ್ದುವು) ಯಂತ್ರಗಳು ಬರುತ್ತಾಇದ್ದುವು. ಯಂತ್ರಗಳಿಗೆ ತಳಪಾಯ ಅಗೆಯುತ್ತಿದ್ದರು. ಜರ್ಮನಿಯ ಬುಕಾವ್ ಉಲ್ಫ್ (Bukov wolf) ಕಂಪೆನಿಯ ಪರವಾಗಿ ಮೂರು ನಾಲ್ಕು ಜನ ಯಂತ್ರ ಜೋಡಿಸುವ ಜನಬಂದಿದ್ದರು. ಅವರಿಗೇ ಇಳಿದುಕೊಳ್ಳಲು ಜಾಗಇಲ್ಲ. ಇನ್ನು ನನಗೆಲ್ಲಿ ? ನಾನು ಮೈಸೂರಿನಲ್ಲಿದ್ದು ದಿನಾ ಬಂದು ಹೋಗುತ್ತಿದ್ದೆ. ಭದ್ರಾವತಿ ಬೆಳೆದ ಆನೆ (ಬಿಳಿ ಆನೆಯಲ್ಲ ಅದನ್ನು ಒಮ್ಮೆ ಕರೆದಂತೆ). ಇದು ಇನ್ನೂ ಹುಟ್ಟಬೇಕಾದ ಆನೆಮರಿ. ಹೆತ್ತು ಹೊತ್ತು ಸಾಕಿ ಸಲಹಿ ಕಷ್ಟಸುಖ ಅನುಭವಿಸಿದ ಅತ್ತೆಯಾದರೆ ಸೊಸೆಯಂದಿರನ್ನು ಸರಿಯಾಗಿ ನೋಡಿಕೊಂಡಾಳು. ಆದರೆ ಏನೂ ಅನುಭವವಿಲ್ಲದೆ ಹದಿನೈದು ಜನರಲ್ಲಿ ಒಬ್ಬಳಾದ ಅತ್ತೆ ಸೊಸೆಗೆ ಕೊಡಬಾರದ ಕಷ್ಟಕೊಟ್ಟಳು. ಕಾರ್ಖಾನೆ ಎಂದರೆ ಏನು ಎಂದು ತಿಳಿಯದ ಹಳ್ಳಿಯ ಜನರನ್ನು ಮರುಳುಮಾಡಿ ಮುಖಂಡನೆನಿಸಿಕೊಳ್ಳುವುದು ಬಹಳ ಸುಲಭ. ಹಾಗೆ ಇದ್ದರು ಒಬ್ಬರು ಮುಖಂಡರು. ಅವರೇನು ಛೇರ್‌ಮನ್ ಅಲ್ಲ, ವೈಸ್ ಛೇರ್‌ಮನ್ ಅಲ್ಲ, ಮ್ಯಾನೇಜಿಂಗ್ ಡೈರೆಕ್ಟರೂ ಅಲ್ಲ. ಎಲ್ಲರಂತೆ ಅವರೂ ಒಬ್ಬ ಡೈರೆಕ್ಟರು. ಅವಾವೂ ಆಗಿಲ್ಲದಕಾರಣ ಎಲ್ಲರ ಅಧಿಕಾರಗಳನ್ನು ಚಲಾಯಿಸಲು ಹೊರಟರು ಹೀಗಾಗಿ ನಮಗೆಲ್ಲಾ ಇಲ್ಲದ ತಾಪತ್ರಯಗಳು. ಕರಡಿಯ ಕೈಗೆ ಸಿಕ್ಕಿದಂತಾಯಿತು. ಹತ್ತು ಹೆತ್ತವಳಿಗೆ ಹನ್ನೊಂದನೆಯದನ್ನು ಹೆರುವುದು ಹೇಗೆ ಎಂದು ಹೇಳಿಕೊಡಲು ಬಂದ ಆ ಪುಣ್ಯಾತ್ಮ, ಇಂಥವರನ್ನು ಇಷ್ಟರಲ್ಲಿ ಎಷ್ಟೋ ನೋಡಿದ್ದ ನಾನು ನನ್ನ ಕೆಲಸ ಸಾಗಿಸಿಕೊಂಡು ಹೋದೆ. ಜರ್ಮನಿಯಿಂದ ಬಂದ ಒಬ್ಬ (ಸಾಂಟಾಗ್ ಎಂದು ಹೆಸರು) ಮತ್ತು ಅವನ ಹೆಂಡತಿಗೆ ಹೇಳಿಕೊಡುವುದು ಅದು ಬೇಕು ಇದು ಬೇಕು, ಈವತ್ತೇ ತರಿಸಿಕೊಡಬೇಕು ಎಂದು. ನಾನೇನು ಸರ್ವಾಧಿಕಾರಿಯೇ ಅಥವಾ ಮಂತ್ರಗಾರನೇ ಚಿಟಿಕೆ ಹಾಕಿ ತರಿಸಿಕೊಡುವುದಕ್ಕೆ. ಎಲ್ಲಕ್ಕೂ ಆಡಳಿತ ಮಂಡಳಿಯ ಅನುಮತಿ ಬೇಕಾಗಿತ್ತು. ಏನಾದರೂ ಅನುಮತಿ ಇಲ್ಲದೆ ಮಾಡಿದರೆ ಅದಕ್ಕೆ ಆಕ್ಷೇಪಣೆ. ಹೀಗೆ ಸಾಗಿತು ಇಲ್ಲಿ ನನ್ನ ಮೂರುವರ್ಷಗಳ ಅವಧಿ. ಏನೇ ಬಂದರೂ ಕಾರ್ಖಾನೆಯನ್ನು ಕಟ್ಟಿ, ಕಬ್ಬು ಅರೆದು, ಸಕ್ಕರೆ ತಯಾರ್ಮಾಡಿಯೇ ಹೋಗಬೇಕೆಂದು ನಿರ್ಧರಿಸಿದೆ. ಹಾಗೆ ಮಾಡಿಯೂ ಮಾಡಿದೆ. ಕಾರ್ಖಾನೆ ತಯಾರಾಯಿತು. ಕಬ್ಬು ಅರದದ್ದಾಯಿತು. ಸಕ್ಕರೆ ತಿಂದದ್ದೂ ಆಯಿತು. ಬೇಕಾದ ಸಿಬ್ಬಂದಿಯನ್ನು

ನೇಮಕ ಮಾಡಿಕೊಳ್ಳುವಾಗ ಇನ್ನಷ್ಟು ಕಿರುಕುಳ. ಯೋಗ್ಯತೆ ಅರ್ಹತೆ ಇವು ಯಾವೂ ಬೇಡ, ತನಗೆ ಬೇಕಾದವರನ್ನು ನೇಮಕಮಾಡಬೇಕೆಂಬ ಕಿತಾಪತಿ. ಅವನ್ನೆಲ್ಲಾ ಎದುರಿಸಿ ಸರಿಯಾದ ಸಿಬ್ಬಂದಿಯನ್ನು ನೇಮಿಸಿ ಒಂದುವರ್ಷ ಸಕ್ಕರೆ ತಯಾರಿಸಿ ಲಾಭ ಗಳಿಸಿ ಕಾರ್ಖಾನೆ ಬಿಟ್ಟೆ. ಆದರೆ ಕೊನೆಯದಿನ ಕಣ್ಣೀರು ಹಾಕಬೇಕಾಯಿತು ಬೋರ್ಡ್ ಮೀಟಿಂಗ್. ಬೀರಪ್ಪನವರು ಅಧ್ಯಕ್ಷರು. ಆ ಮಹನೀಯ ಏನೇನೊ ಆಪಾದನೆಮಾಡಿದರು. ಮೂಟೆಗಟ್ಟಲೆ ಸಕ್ಕರೆ ಸಾಗಿಸಿದೆ, ಗೆಸ್ಟ್‌ಹೌಸಿನಲ್ಲಿ (ಅದನ್ನು ಗೆಸ್ಟ್‌ಹೌಸ್ ಎಂದು ಕರೆಯಲೂ ಅರ್ಹವಲ್ಲ) ಏನೇನೊ ಮಾಡಿಕೊಂಡು ತಿಂದೆ, ಅಲ್ಲಿ ದುಡ್ಡು ತಿಂದೆ ಇಲ್ಲಿ ದುಡ್ಡು ತಿಂದೆ ಎಂದು. ಸಕ್ಕರೆ ಈಚೆಗೆ ಬಂದ ಮೊದಲದಿನ ಎಲ್ಲಾ ಡೈರೆಕ್ಟರುಗಳಿಗೂ ಕೊಟ್ಟಂತೆ ನನಗೂ ಒಂದು ಕೆ. ಜಿ. ಸಕ್ಕರೆಯನ್ನು Complimentary ಯಾಗಿ ಕೊಟ್ಟಿದ್ದರು. ಅದು ಬಿಟ್ಟರೆ ಇನ್ನೊಂದು ಕೆಜಿ. ಸಕ್ಕರೆಯನ್ನು ಪುಕ್ಕಟೆ ತೆಗೆದು ಕೊಂಡವನಲ್ಲ. ಗೆಸ್ಟ್‌ಹೌಸಿನಲ್ಲಿ ನಾನೆಂದೂ ಊಟಮಾಡಿದವನೇ ಅಲ್ಲ. ಕಾರ್ಖಾನೆಯ ವ್ಯಾನಿನಲ್ಲಿ ನನ್ನ ಮಕ್ಕಳು ಮರಿಗಳೂ ಕುಳಿತು ಕೊಳ್ಳುವುದಕ್ಕೆ ಬಿಟ್ಟಿಲ್ಲ. ಮೈಸೂರಿನಿಂದ ಬಸ್ಸಿನಲ್ಲಿ ಬಂದ ಅನ್ನ ಬುತ್ತಿ ಸೊಪ್ಪು ನನ್ನ ಊಟ. ಬೋರ್ಡ್ ಮೀಟಿಂಗುಗಳು ಇದ್ದ ದಿನ ಡೈರೆಕ್ಟರುಗಳಿಗಾಗಿ ಮಾಡಿದ ವಿಶೇಷ ಊಟವನ್ನೂ ನಾನು ಮಾಡುತ್ತಿರಲಿಲ್ಲ. ಇನ್ನು ದುಡ್ಡುಪಡ್ಡು ತಿನ್ನುವುದು ನನ್ನ ಜಾಯಮಾನಕ್ಕೆ ಬಂದಿರಲಿಲ್ಲ ಈ ಆಪಾದನೆಗಳನ್ನು ಆತ ಕೊನೆಯ ದಿನಕ್ಕಾಗಿ ಮೀಸಲಿಟ್ಟಿದ್ದ. ಕೇಳಿ ನನ್ನ ಕಣ್ಣಲ್ಲಿ ನೀರು ಬಂತು. ಆದರೆ ಉಳಿದ ಡೈರೆಕ್ಟರುಗಳಿಗೆ ಸಿಟ್ಟುಬಂತು. ಅವನ ಕುತ್ತಿಗೆಗೆ ಕೈಹಾಕಿ ಇನ್ನೇನು ಬಿಸುಕಬೇಕು, ಆಗ ಬೇರೆಯವರು ಬಂದು ಬಿಡಿಸಿದರು.

ಇಲ್ಲಿಗೆ ಬಂದಾಗ ಸೆಕ್ರೆಟರಿಯಾಗಿ ಬಂದೆ. ಹೋಗುವಾಗ ಐ.ಎ.ಎಸ್ ಸೀನಿಯರ್ ಸ್ಕೇಲಿಗೆ ಬಡ್ತಿಹೊಂದಿ ಇಲ್ಲಿಯೇ ಮ್ಯಾನೇಜಿಂಗ್ ಡೈರೆಕ್ಟರಾದೆ. ಮೂರು ವರ್ಷಗಳು ಇದ್ದು ಶಿವಮೊಗ್ಗೆಗೆ ಜಿಲ್ಲಾಧಿಕಾರಿಯಾಗಿ ಹೋದೆ. ಮ್ಯಾನೇಜಿಂಗ್ ಡೈರೆಕ್ಟರಾಗಿದ್ದ ವೇಳೆ ನಾಲ್ಕು ತಿಂಗಳು ಮಂಡ್ಯ ಜಿಲ್ಲೆ ಜಿಲ್ಲಾಧಿಕಾರಿಯಾಗಿದ್ದೆ. ಸ್ವಜಾತೀಯರಿರುವ ಕಡೆ ಎಂದೂ ಅಧಿಕಾರಿಯಾಗಿ ಹೋಗಬಾರದು ಎಂಬ ಅನುಭವ ಇಲ್ಲಿರುವಾಗ ನನಗೆ ಬಂದಿತು.

ಸ್ವತಃ ಬೀರಪ್ಪನವರೇ ರೈಲ್ವೆಸ್ಟೇಷನ್ನಿಗೆ ಬಂದು ನನ್ನನ್ನು ಕಳುಹಿಸಿಕೊಟ್ಟರು. ಶಿವಮೊಗ್ಗ ಜಿಲ್ಲೆಗೆ ಹೋಗಲು ಆಗ ರೆವಿನ್ಯೂ ಮಂತ್ರಿಯಾಗಿದ್ದ ಕಡಿದಾಳ್ ಮಂಜಪ್ಪನವರೇ ಕಾರಣ. ಜಿಲ್ಲಾಧಿಕಾರಿಯೆಂದರೆ ಜಿಲ್ಲೆಯ ಧಣಿಯೇ ಸರಿ. ಮನಸ್ಸಿದ್ದರೆ ಈ ಧಣಿ ಮಾಡಬಹುದಾದ ಕೆಲಸ ಅಪಾರ. ಎಲ್ಲಕ್ಕೂ ಎಲ್ಲರೊಡನೆಯೂ ಸಂಪರ್ಕ ಆತನಿಗೆ. ಕೈತುಂಬ ಅಧಿಕಾರ, ಮೈತುಂಬ ಸೌಕರ್ಯ ಇರುವುದು ಜಿಲ್ಲಾಧಿಕಾರಿಯೊಬ್ಬನಿಗೆ. ಇದನ್ನು ನಾನು ಸಂಪೂರ್ಣ ಉಪಯೋಗಿಸಿಕೊಂಡೆ. ಜಿಲ್ಲೆಯ ಅಭಿವೃದ್ಧಿಗೆ ನನ್ನ ಕೈಲಾದ ಕೆಲಸಮಾಡಿದೆ. ಇಷ್ಟರಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಒಂದು ವ್ಯವಸ್ಥಿತ

ರೀತಿಗೆ ಬಂದಿತ್ತು. ತಾಲ್ಲೂಕು ಬೋರ್ಡುಗಳೂ, ಬಿ.ಡಿ.ಓ. ಗಳೂ, ಹೇರಳವಾದ ಸಿಬ್ಬಂದಿಯೂ, ಜೀಪು ಗೀಪುಗಳೂ ಹಣವೂ ಸಾಕಷ್ಟು ಇದ್ದುವು. ಇವರನ್ನೆಲ್ಲಾ ಉಪಯೋಗಿಸಿಕೊಂಡು ಜಿಲ್ಲೆಯ ಅಧಿಕಾರಿ-ಮುಖಂಡನಾಗಿ ಕೆಲಸಮಾಡಿದೆ. ಗ್ರಾಮಾಭಿವೃದ್ಧಿ ನನಗೆ ಎಂದಿನಂತೆ ಮೆಚ್ಚುಗೆಯ ಕೆಲಸವಾಯಿತು. ಈಗ ಒಂದು ಗ್ರಾಮವನ್ನು ದತ್ತು ತೆಗೆದುಕೊಳ್ಳುವ ವಿಷಯ ಮಾತಾಡುತ್ತಾರೆ, ಆದರೆ ಅದನ್ನು ಹದಿನೇಳು ವರ್ಷಗಳ ಹಿಂದೆಯೇ ಜಾರಿಗೆ ತಂದೆ. ಒಬ್ಬೊಬ್ಬ ಅಧಿಕಾರಿಗೆ–ಅವರು ಯಾವ ಇಲಾಖೆಯವರೇ ಆಗಿರಲಿ–ಒಂದೊಂದು ಗ್ರಾಮ ಹಂಚಿಕೊಟ್ಟೆ. ಆ ಊರಿನ ಸರ್ವತೋಮುಖ ಅಭಿವೃದ್ಧಿ ಅವರದು ಎಂದು ಮಾಡಿದೆ. ಅವರಿಗೆ ನೆರವಾಗುವುದು ಉಳಿದೆಲ್ಲ ಅಧಿಕಾರಿಗಳ ಕರ್ತವ್ಯವಾಗಿತ್ತು. ಹೀಗೆ ಒಂದು ವರ್ಷ ನಡೆಯಿತು. ಗ್ರಾಮಾಭಿವೃದ್ಧಿಯನ್ನು ಕುರಿತ ಒಂದು ಕಲ್ಲಚ್ಚಿನ ಮಾಸಪತ್ರಿಕೆಯನ್ನೇ ಹೊರಡಿಸುತ್ತಿದ್ದೆ. ಈ ಜಿಲ್ಲೆಯಲ್ಲಿ ಸಾಗುವಳಿಗೆ ಯೋಗ್ಯವಾದ ಜಮೀನು ಹೇರಳವಾಗಿತ್ತು, ಅದಕ್ಕೆ ಅರ್ಜಿಗಳೂ ಹೇರಳವಾಗಿದ್ದುವು. ಉತ್ಪ್ರೇಕ್ಷೆ ಇಲ್ಲದೆ ಹೇಳುವುದಾದರೆ, ಒಂದೊಂದು ತಾಲ್ಲೂಕು ಕಛೇರಿಯಲ್ಲಿ ಒಂದೊಂದು ಗಾಡಿಯಲ್ಲಿ ತುಂಬ ಬಹುದಾದಷ್ಟು ದರಖಾಸ್ತು ಅರ್ಜಿಗಳು ಅಥವಾ ರಿಕಾರ್ಡುಗಳು! ತುಂಗಾ ಮತ್ತು ಭದ್ರಾ ಅಣೆಕಟ್ಟುಗಳ ನಿರ್ಮಾಣದಿಂದ ನೀರಾವರಿಯಾಗುವ ಜಮೀನುಗಳಿಗೆ ಹೇರಳ ಬೇಡಿಕೆ ಇತ್ತು. ಆದರೆ ಇವೆಲ್ಲಾ ಅನುಕೂಲಸ್ಥರ ವಶೀಲ್‌ಬಾಜಿ ಮಾಡುವವರ ಪಾಲಾಗುತ್ತಿದ್ದುವು. ಬಡವರನ್ನು ಕೇಳುವವರೇ ಇರಲಿಲ್ಲ. ದುಡ್ಡು ಕೊಟ್ಟರೆ ರಿಕಾರ್ಡು. ಇಲ್ಲದಿದ್ದರೆ ಅವು ಹಾಗೆಯೇ ರಿಕಾರ್ಡಾಗುತ್ತಿದ್ದುವು. ಒಂದು ವರ್ಷ ನೋಡಿದೆ. ಇದಕ್ಕೆ ಬೇರೆ ಪರಿಹಾರ ಕಂಡು ಹಿಡಿಯಬೇಕೆಂದು ಆಲೋಚಿಸಿದೆ. ಒಂದು ಹೊಸ ಯೋಜನೆ ಹಾಕಿದೆ. ಜಮೀನು ಹೆಚ್ಚಾಗಿದ್ದ ನಾಲ್ಕು ತಾಲ್ಲೂಕುಗಳನ್ನು ನಾಲ್ಕು ಜನ ಅಸಿಸ್ಟೆಂಟ್‌ಕಮೀಷನರುಗಳಿಗೆ ಹಂಚಿದೆ. ನಾನೊಂದು ತಾಲ್ಲೂಕು ಇಟ್ಟುಕೊಂಡೆ. ದರಖಾಸ್ತು ವಿಲೇವಾರಿ ಕ್ರಮ ಹೀಗಿತ್ತು: ಮೂರುತಿಂಗಳ ಮೊದಲೇ ಯಾವ ಗ್ರಾಮಕ್ಕೆ ಹೋಗಬೇಕೆಂಬ ಪ್ರೋಗ್ರಾಂ ತಯಾರಾಯಿತು. ನಿಗದಿಯಾದ ದಿನ ನಾನೊ ಏಸೀನೋ ಆ ಗ್ರಾಮಕ್ಕೆ, ತಹಸೀಲ್ದಾರ್ (ಇಷ್ಟು ಹೊತ್ತಿಗೆ ಅಮಲ್ದಾರ್ ತಹಸೀಲ್ದಾರನಾಗಿದ್ದ), ರೆವಿನ್ಯೂ ಇನ್‌ಸ್ಪೆಕ್ಟರ್, ಅಳತೆಗೆ ಮೋಜಿಣಿದಾರ್ ಮುಂತಾದವರ ಜೊತೆ ಆ ಗ್ರಾಮಕ್ಕೆ ಹೋಗಬೇಕು. ಡಂಗುರ ಹೊಡೆಸಿ ಊರಿನವರನ್ನೆಲ್ಲಾ ಸೇರಿಸಬೇಕು. ಶ್ಯಾನುಭೋಗರು ಅವರ ಮುಂದೆ ದರಖಾಸ್ತಿನಲ್ಲಿಕೊಡಬಹುದಾದ ಜಮೀನುಗಳ ವಿವರಗಳನ್ನು ಗಟ್ಟಿಯಾಗಿ ಓದಬೇಕು. ಹಾಗೆಯೇ ಆ ಊರಿನಲ್ಲಿ ಇರುವ ಜಮೀನಿಲ್ಲದವರ ಹೆಸರುಗಳನ್ನು ಹೇಳಬೇಕು. ಅದು ಸರಿ ಎಂದು ನೆರೆದ ಊರಿನವರು ಒಪ್ಪಬೇಕು. ಇನ್ನೂರು ಎಕರೆ ಜಮೀನಿದ್ದು ನೂರು ಜನ ಜಮೀನಿಲ್ಲದವರಿದ್ದಾರೆಂದು ಇಟ್ಟುಕೊಂಡರೆ ತಲಾ ಎರಡು ಎಕರೆ ಜಮೀನು ಕೊಡಲಾಗಿದೆಯೆಂದು ನಾನೊ ಏಸೀನೋ ಘೋಷಿಸಬೇಕು. ಹಾಗೆಂದು ಒಂದು ಆರ್ಡರನ್ನು

ಅಲ್ಲಿಯೇ ಬರೆಯಬೇಕು. ಆಮೇಲೆ ರಿಕಾರ್ಡನ್ನು ತಯಾರಿಸಬೇಕು. ಏಸಿಯ ಅಧಿಕಾರಕ್ಕೊಳಪಟ್ಟರೆ ಅವರೇ ಜಮೀನು ಮಂಜೂರುಮಾಡಿ ಸಾಗುವಳಿ ಚೀಟಿ ಕೊಡಬೇಕು. ಇಲ್ಲದಿದ್ದರೆ ಡೀಸಿಗೆ ಕಳುಹಿಸಬೇಕು. ಹೀಗೆ ಮೂರು ನಾಲ್ಕು ತಿಂಗಳು ಇದೇ ಕೆಲಸಮಾಡಬೇಕು. ಪರಿಣಾಮ ? ಎಲ್ಲಾ ದರಖಾಸ್ತು ಅರ್ಜಿಗಳೂ ವಿಲೇವಾರಿಯಾದವು. ಸುಮಾರು ಹತ್ತು ಸಾವಿರ ಎಕರೆ ಜಮೀನು ನಾಲ್ಕೈದು ಸಾವಿರ ಬಡವರಿಗೆ ದೊರೆಯಿತು. ಆ ಬಡವರೇನೋ ತಮ್ಮ ಗುಡಿಸಲಿಗೆ ದೀಪಹಚ್ಚಿ ಕೈ ಮುಗಿದರು. ಆದರೆ ಒಳ್ಳೊಳ್ಳೆಯ ಜಮೀನು ಲಪಟಾಯಿಸಿಕೊಳ್ಳಬೇಕೆಂದಿದ್ದವರು ನನ್ನನ್ನು ಶಪಿಸಿ ನಟಿಕೆಮುರಿದರು, ಅಷ್ಟು ಹೊತ್ತಿಗೆ ಪೂಜಾರಿಗಳು ಹುಟ್ಟಿಕೊಂಡಿದ್ದರು. ಅವರು ನನ್ನನ್ನು ಜಿಲ್ಲೆಯಿಂದ ಹೊರಡಿಸಿದರು.

ಇಷ್ಟೇ ಅಲ್ಲ, ನನ್ನ ಕಾರುಬಾರು ಒಂದು ಊರಿನ ಅಥವಾ ಜಿಲ್ಲೆಯ ಸಾಹಿತ್ಯ ಹಾಗೂ ಸಂಸ್ಕೃತಿಗಳನ್ನು ಅರಿತುಕೊಳ್ಳುವ ಮತ್ತು ಅವುಗಳಿಗೆ ಸೂಕ್ತ ಪ್ರೋತ್ಸಾಹ ಕೊಡುವ ಮನಸ್ಸು ನನ್ನದು. ಸರ್ಕಾರಿ ಕೆಲಸ ಮುಗಿದ ಮೇಲೆ ಅವುಗಳ ಕಡೆ ಗಮನ. ಒಮ್ಮೆ ಸಾಗರ ತಾಲ್ಲೂಕಿನ ಒಂದು ಹಳ್ಳಿಗೆ ಹೋಗಿದ್ದೆ. ಆಗಲೇ ಸಂಜೆ ಹೊತ್ತು. ಸಾಕಾಗಿತ್ತು. ಮಲೆನಾಡಿನ ಜನರ ಆತಿಥ್ಯ ಸ್ವೀಕರಿಸುತ್ತ ಒಂದು ಮನೆಯ ಹೊರಗೆ ಕುಳಿತಿದ್ದೆ. ಎರಡು ಗಾಡಿಚಕ್ರಗಳು ಕಣ್ಣಿಗೆ ಬಿದ್ದುವು. ಅವು ಎಲ್ಲಾ ಚಕ್ರಗಳಂತೆ ಇರಲಿಲ್ಲ. ಹಳೆಯ ಕಾಲದ ಅವು ತಮ್ಮ ಕೆಲಸ ಮುಗಿಸಿ ಸವೆದು ಅಲ್ಲೊಂದು ಕಡೆ ಬಿದ್ದಿದ್ದುವು. ಆ ಚಕ್ರಗಳಿಗೆ ನಾಜೂಕಾದ ಬಡಗಿ ಕೆಲಸ ಮಾಡಲಾಗಿತ್ತು. ಕೊಂಚ ದಿನಗಳಲ್ಲಿ ಅವುಗಳನ್ನು ಕೊಡಲಿಯಲ್ಲಿ ಹೋಳಕಿ ಒಲೆಗೊಟ್ಟುವ ಸಂಭವ ಇತ್ತು. ಒಂದು ಮದುವೆಗೋ ತಿಥಿಗೋ ಕಾಯುತ್ತಿದ್ದುವು. ಇಂಥವನ್ನು ಏಕೆ ಒಂದು ಕಡೆ ಇಡಬಾರದೆಂಬ ಯೋಚನೆ ಹೊಳೆಯಿತು. ಈವತ್ತು ಅವು ಮರ. ನಾಳೆ ವರ. ಆ ಸಂಜೆಯೇ ನಿರ್ಧರಿಸಿದೆ ಜಿಲ್ಲೆಯಲ್ಲಿ ಒಂದು ಮ್ಯೂಸಿಯಂ ಸ್ಥಾಪಿಸಬೇಕೆಂದು. ಶರಾವತಿನದಿಗೆ ಲಿಂಗನಮಕ್ಕಿ ಅಣೆಕಟ್ಟು ಕಟ್ಟುವ ಕೆಲಸ ಸಾಗಿತ್ತು. ಲಕ್ಷಾಂತರ ಎಕರೆಗಳ ಮುಳುಗಡೆ, ಸಾವಿರಾರು ಜನರ ಮತ್ತು ಊರುಗಳ ಸ್ಥಳಾಂತರ ಇತ್ಯಾದಿಗಳು ಭಾರಿ ಬಿರುಸಿನಿಂದ ನಡೆಯುತ್ತಿದ್ದುವು. ಜನರೇನೋ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತಾರೆ. ಆದರೆ ಅವರ ಗುಡಿಗೋಪುರಗಳ ಗತಿಯೇನು? ಹಳೆಯ ಶಿಲಾವಿಗ್ರಹಗಳನ್ನು ಕೇಳುವರಾರು ? ತಲೆತಲಾಂತರದಿಂದ ಅವರ ಬಳಿ ಇದ್ದಂತಹ ಸಾಮಾನು ಸಲಕರಣೆಗಳು ಏನಾಗಬೇಕು ? ಇವನ್ನೆಲ್ಲಾ ಶೇಖರಿಸಿ ಇಟ್ಟರೆ ಅವು ಮುಂದೆ ತಮ್ಮದೇ ಆದ ಕಥೆ ಹೇಳಿಯಾವು–ಹೀಗೆ ನನ್ನ ಮನಸ್ಸಿಗೆ ಬಂದಿತು. ಒಂದು ಮನೆಯನ್ನು ಹೊಸದಾಗಿ ಕಟ್ಟಿದಾಗ ಹಳೆಯದೆಲ್ಲ ಬೇಕಿಲ್ಲ. ಮನೆ ಸುಟ್ಟಾಗಲಂತೂ ಎಲ್ಲಾ ನಿರ್ನಾಮ. ಹೀಗಾಗಿ ಅಸಂಖ್ಯಾತ ಪುರಾತನ ವಸ್ತು ಈಗಿಲ್ಲವಾಗಿವೆ. ಇಂಥದು ಮತ್ತೊಮ್ಮೆ ಆಗಬಾರದು. ಸಿಕ್ಕಿದಷ್ಟನ್ನು ಶೇಖರಿಸಿಡಬೇಕು ಎಂಬ ಮನಸ್ಸಾಯಿತು. ಸರಿ ಊರೂರು ಕೇರಿ ಕೇರಿಗಳನ್ನು ಅಲೆದೆ. ಬೆಟ್ಟ

ಏರಿದೆ. ಅಟ್ಟ ಹತ್ತಿದೆ. ಗುಡಿಗೊಂಡಾರಗಳನ್ನು ಹುಡುಕಿದೆ, ತಡಕಿದೆ. ತಿಪ್ಪೆಗುಂಡಿ ಗಳನ್ನು ಕೆದಕಿದೆ. ಸಿಕ್ಕಿದವುಗಳನ್ನೆಲ್ಲಾ ತಂದು ಶಿವಮೊಗ್ಗೆಯಲ್ಲಿ ಒಂದು ಮ್ಯೂಸಿಯಂ ಮಾಡಿದೆ. ಮುಖ್ಯಮಂತ್ರಿ ನಿಜಲಿಂಗಪ್ಪನವರು ಅದನ್ನು ಉದ್ಘಾಟಿಸಿದರು. ದ. ರಾ. ಬೇಂದ್ರೆಯವರು ಅಧ್ಯಕ್ಷತೆ ವಹಿಸಿದರು. ಒಂದು ಸಾರ್ಥಕ ಕೆಲಸ ಮಾಡಿದ ತೃಪ್ತಿಯಲ್ಲಿ ನಾನು ತೇಲಾಡಿದೆ. ಇಂದು ಆ ಮ್ಯೂಸಿಯಂ ಹಿಂದಿನ ಕಥೆ ಹೇಳುತ್ತಾ ಇದೆ.

ಚಾರ್ಜು ಕೊಟ್ಟು ಹೊರಡುವ ದಿನ ಬಂಗಲೆಯ ಕಾಂಪೌಂಡ್ ತುಂಬಾ ಜನರು. ಹೆಚ್ಚಾಗಿ ನೌಕರರು. ಅವರಿಗಾಗಿ ತುಂಬ ಕೆಲಸ ಮಾಡಿದ್ದೆ. ನಾನ್‌ಗೆಜೆಟೆಡ್ ನೌಕರರು ಸರ್ಕಾರದ ಬೆನ್ನುಮೂಳೆ, ರೈತರು ದೇಶದ ಬೆನ್ನುಮೂಳೆ ಇದ್ದಂತೆ. ಅವರ ಸಂಘಕ್ಕೆ ಒಂದು ಕಟ್ಟಡ ಕಟ್ಟಿಸಿಕೊಟ್ಟಿದ್ದೆ. ಅನೇಕರಿಗೆ ಜಮೀನು ಮಂಜೂರುಮಾಡಿದ್ದೆ. ಹೊಟ್ಟೆಯ ಮೇಲೆ ಹೊಡೆಯದೆ ಬೆನ್ನುಮೇಲೆ ಹೊಡೆದು ಕೆಲಸ ತೆಗದುಕೊಂಡಿದ್ದೆ. ಕೃತಜ್ಞತೆ ತೋರಿಸಲು ಅವರೆಲ್ಲಾ ಅಲ್ಲಿ ಬಂದಿದ್ದರು. ಕಣ್ಣಲ್ಲಿ ಹನಿ ಸುರಿಸುತ್ತಾ ಶಿವಮೊಗ್ಗ ಬಿಟ್ಟೆ. ನಾನು ಹಣ ಗಳಿಸಿರಲಿಲ್ಲ. ಜನ ಗಳಿಸಿದ್ದೆ. ಅದೇ ನನ್ನ ಬಾಳಿನ ಗುಟ್ಟಾಗಿತ್ತು. ಇಂದಿಗೂ ನಾನಿದ್ದೆಡೆಯಲ್ಲೆಲ್ಲಾ ಜನ ನೆನೆಸಿಕೊಳ್ಳುತ್ತಾರೆ. ಅದೇ ನನ್ನ ಆಸ್ತಿ.

ಚಿಕ್ಕಮಗಳೂರು ಜಿಲ್ಲೆ ಕಾಫಿಗೆ ತೌರುಮನೆ. ದಟ್ಟವಾದ ಕಾಡು ಕಣಿವೆ ಕಂದರ ಗಳು. ಬಹು ಸುಂದರವಾದ ಜಿಲ್ಲೆ. ಅಷ್ಟೇ ಸೋಮಾರಿತನದ ಜಿಲ್ಲೆಯೂ ಆಗಿತ್ತು. ಕಾಫಿತೋಟದ ಮಾಲೀಕರು ಅವರ ಬಂಗಲೆಗಳಲ್ಲಿದ್ದುಕೊಂಡು ಕೂಲಿಗಳಿಂದ ಕೆಲಸ ಮಾಡಿಸಿಕೊಂಡು ಅವರ ಪಾಡಿಗೆ ಅವರು ಇದ್ದುಬಿಡುತ್ತಿದ್ದರು. ಚಿಕ್ಕಮಗಳೂರು ಪಟ್ಟಣವು ಸಹ ಯಾವ ಚಟುವಟಿಕೆಗಳಿಲ್ಲದ ಊರಾಗಿತ್ತು. ಆದರೆ ದಟ್ಟವಾದ ಕಾಡಿ ನೊಳಗೆ ಮರಗಡುಕರ ಕೆಲಸ ಸಾಗಿತ್ತು. ಆ ಕಾಡಿನೊಳಗೆ ಏನು ನಡೆಯುತ್ತಿತ್ತು, ಏನು ನಡೆಯುತ್ತಿರಲಿಲ್ಲ ಎಂದು ಹೇಳುವಂತಿಲ್ಲ. ಭೂಮಿ ಹುಟ್ಟಿದಂದಿನಿಂದ ಬೆಳೆದು ಬಂದ ಕಾಡಿನ ನಿರ್ನಾಮ ಸತತವಾಗಿ ಸಾಗಿತ್ತು. ಈಗಲೂ ಸಾಗುತ್ತಿದೆ. ಬೆಲೆಬಾಳುವ ಗಂಧದಮರ, ಸಾಗುವಾನಿ, ಬೀಟೆ ಮುಂತಾದ ನಮ್ಮ ಸಂಪತ್ತು ನಿರ್ನಾಮವಾಗುತ್ತಿತ್ತು. ಇದರಲ್ಲಿ ಕೇರಳದ ಕಳ್ಳ ಕದೀಮರದೇ ಮೇಲುಗೈ. ಜೊತೆಗೆ ನಮ್ಮವರದೂ ಒಂದು ಕೈ. ಕೇರಳದ ಜನ ಏನೂ ಕಾಣದವರಂತೆ ಒಂದು ಕಾಡಿನ ಮಧ್ಯೆ ನೆಲೆಸಿ ಒಂದು ಗುಡಿಸಲು ಕಟ್ಟುವುದು. ಅಕ್ಕಪಕ್ಕದ ಮರಗಳಿಗೆ ರಾತ್ರಿ ಬೆಂಕಿ ಹಚ್ಚುವುದು, ಅವೇ ಸುಟ್ಟು ಹೋದುವೆಂದು ಹೇಳುವುದು, ಆ ಜಾಗ ಸಾಗುವಳಿ ಮಾಡುವುದು, ಏಂಥದೋ ಹುಲ್ಲು ಬೆಳೆಯುತ್ತೇವೆ, ಟೋಪಿಯೋಕ (ಮರಗೆಣಸು) ಹಾಕಿದ್ದೇವೆಂದು ಹೇಳುವುದು, ಸರ್ಕಾರಕ್ಕೆ ಟೋಪಿ ಹಾಕುವುದು. ಆ ಜಾಗ ಗಿಟ್ಟಿಸಿಕೊಳ್ಳುವುದು, ಆಮೇಲೆ ಮರ ಕಡಿದು ಸಾಗಿಸುವುದು—ಇವೆಲ್ಲಾ ಒಂದೇಸಮನೆ ನಡೆದುಬರುತ್ತಾ ಇದ್ದುವು. ಇವನ್ನೆಲ್ಲಾ ಕಂಡು ಮನಸ್ಸಿಗೆ ತುಂಬಾ ಕಿರಿಕಿರಿಯಾಗುತ್ತಿತ್ತು. ಶಿವಮೊಗ್ಗ ಜಿಲ್ಲೆಯಲ್ಲೇ ಇಂತಹ

ಅಕ್ರಮಗಳನ್ನು ತಡೆಯಲು ಪ್ರಯತ್ನಪಟ್ಟಿದ್ದೆ. ಆದರೆ ಅದು ಒಬ್ಬನ ಕೈಯಿಂದ ಆಗುವ ಕೆಲಸವೆ ! ಅನೇಕರು ಅವರಿಗೆ ಶರೀಕಾಗುತ್ತಿದ್ದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮತ್ತೆ ಈ ಕೆಲಸ ಆರಂಭಿಸಿದೆ. ಹುಚ್ಚನಂತೆ ಕಾಡುಮೇಡುಗಳನ್ನು ಅಲೆದೆ. ಒಂದು ಬಗೆಯ ಭೀತಿ ಹುಟ್ಟಿಸಿದೆ. ನರಸಿಂಹರಾಜಪುರಕ್ಕೆ ಮೊದಲು ಹೆಪ್‌ಮುನ್ನಿಯಾಗಿ ಹೋಗಿದ್ದಾಗ ನೋಡಿದ ಕಾಡು ಈಗ ಇರಲಿಲ್ಲ. ಅಬ್ಬರಿಸಿದೆ. ಆರ್ಭಟಿಸಿದೆ. ನನ್ನ ಅಬ್ಬರ ಕೇಳಿ ಒಬ್ಬ ಸಿರಿಯನ್ ಕ್ರಿಶ್ಚಿಯನ್ ಚಿನ್ನದ ಕೊಡಲಿಯನ್ನೇ ಮಾಡಿಸಿಟ್ಟ. ನನ್ನಂತೆ-ದೇಶಿಯಂತಹ ಮನುಷ್ಯನನ್ನು ಅಂಥ ಇಂಥ ಕೊಡಲಿಯಿಂದ ಕಡಿಯಬಾರದು, ಚಿನ್ನದ ಕೊಡಲಿಯಿಂದಲೇ ಕಡಿಯಬೇಕೆಂದು. ಇತ್ತೀಚೆಗೆ ಮತ್ತೊಮ್ಮೆ ನರಸಿಂಹರಾಜಪುರಕ್ಕೆ ಹೋಗಿದ್ದೆ. ಅವನ ಚಿನ್ನದ ಕೊಡಲಿ ರನ್ನದಂತಹ ಮರಗಳನ್ನು ಕಡಿದು ದಟ್ಟವಾದ ಕಾಡನ್ನು ಕಡಿದು ಬಟ್ಟಬಯಲು ಮಾಡಿತ್ತು. ಬೆಲೆಬಾಳುವ ಮರಗಳಿದ್ದ ಕಡೆ ಬಿರ್ಲಾರವರ ಹರಿಹರ ಪಾಲಿಫೈಬರ್ ಕಾರ್ಖಾನೆಗೆ ಮಾತ್ರ ಉಪಯೋಗವಾಗುವ, ಆದರೆ ರೈತರಿಗೆ ಯಾತಕ್ಕೂ ಬಾರದ ನೀಲಗಿರಿ ಮರಗಳು ಬೆಳೆದಿದ್ದುವು. ಕಾಡು ಉಳಿಸುವುದಕ್ಕೆ ನನ್ನ ಶಕ್ತಿಮೀರಿ ಕೆಲಸ ಮಾಡಿದೆನೆಂಬ ತೃಪ್ತಿ ಮಾತ್ರ ನನಗುಂಟು. ಕಾಡು ನಾಡಿನ ಆಸ್ತಿ. ಅದನ್ನು ಉಳಿಸುವ ಆಸಕ್ತಿ ಎಲ್ಲರಿಗೂ ಬರಬೇಕು. ಆದರೆ ಗಂಡಾಗುಂಡಿ ಮಾಡಿಯಾದರೂ ಗಡಿಗೆ ತುಪ್ಪ ಕುಡಿಯುವ ಜನಕ್ಕೆ ಅದನ್ನು ಉಳಿಸುವ ಮನಸ್ಸೆಲ್ಲಿ ಬರಬೇಕು !

ನನ್ನನ್ನು ಚಿನ್ನದ ಕೊಡಲಿಯಿಂದ ಕಡಿಯುವ ಪ್ರಯತ್ನ ಕೈಗೂಡದಿದ್ದರೂ ಇನ್ನೊಬ್ಬ ಕೇರಳೀಯ ಕಬ್ಬಿಣದ ಮಚ್ಚಿನಿಂದ ಕಡಿಯುವ ಪ್ರಯತ್ನ ನಡೆಸಿದ. ಬಗರ್ ಹುಕುಂ ಸಾಗುವಳಿ ಮುಂತಾದುವು ಲೆಕ್ಕವಿಲ್ಲದಷ್ಟು. ಒಂದು ಸಲ ತರೀಕೆರೆ ತಾಲ್ಲೂಕಿನಲ್ಲಿ ಇಂಥವನ್ನು ತಪ್ಪಿಸುವ ತೀವ್ರ ಕಾರ್ಯಕ್ರಮ ನಡೆಸಿದೆ. ಸಿಬ್ಬಂದಿಯನ್ನೆಲ್ಲಾ ಆ ಕೆಲಸಕ್ಕೆ ಹಚ್ಚಿ ನಾನು ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದೆ. ಕೆಮ್ಮಣ್ಣುಗುಂಡಿ ಪ್ರದೇಶದಲ್ಲಿ ಕಾಡಿನ ಮಧ್ಯೆ ಅನುಮತಿ ಇಲ್ಲದೆ ಸಾಗುವಳಿ ಮಾಡುತ್ತಿದ್ದುದನ್ನು ತಡೆಯಲು ರೆವಿನ್ಯೂ ಇನ್‌ಸ್ಪೆಕ್ಟರ್ ಮುಂತಾದವರು ಹೋದಾಗ ಅವರನ್ನೇ ಹೊಡೆಯಲು ಹೋದ ಬಗರ್‌ಹುಕುಂ ಸಾಗುವಳಿ ಮಾಡಿದವ. ನಾನು ಹೋದಾಗ ಅವರಿಬ್ಬರಿಗೂ ಲಟಪಟಿ ನಡೆಯುತ್ತಿತ್ತು. ನಾನು ಮುನ್ನುಗ್ಗಿ ಅವನ ಕೈಯಲ್ಲಿದ್ದ ಮಚ್ಚನ್ನು ಕಿತ್ತುಕೊಂಡೆ. ಅವನು ನನ್ನಮೇಲೆ ಬಿದ್ದು ಮಚ್ಚನ್ನು ಕೈಯಿಂದ ಕಿತ್ತುಕೊಂಡು ಅದನ್ನು ನನ್ನ ಮೇಲೆ ಪ್ರಯೋಗ ಮಾಡುವುದರಲ್ಲಿದ್ದ. ಆತ ಕಾಫಿ ತೋಟದ ಆಳು. ಇಷ್ಟರಲ್ಲಿ ತೋಟದ ಮಾಲೀಕರು ಬಂದು ನನ್ನ ಪ್ರಾಣ ಉಳಿಸಿದರು. ಆದರೆ ನಾನೇ ಆತನನ್ನು ಕಡಿಯಲು ಹೋದೆನೆಂದು ಆತ ದೂರು ಕೊಟ್ಟ. ಡಿವಿಜನಲ್ ಕಮೀಷನರು ತನಿಖೆಗೆ ಬಂದರು. ನನ್ನನ್ನೇನೂ ಕೇಳಲಿಲ್ಲ. ಅವರೇ ಯಾರನ್ನು ಬೇಕೋ ಅವರನ್ನು ವಿಚಾರಿಸಿಕೊಂಡು ಹೋದರು. ಅಮೇಲೆ ಏನಾಯಿತೋ ಕಾಣೆ. ಈ ಡಿವಿಜನಲ್ ಕಮಿಷನರಿಗೆ ಕನ್ನಡ

ಬರುತ್ತಿರಲಿಲ್ಲ. ತಮಿಳು ಅವರ ಮಾತೃಭಾಷೆ. ಕನ್ನಡ ಕಲಿಯುತ್ತಿದ್ದ ಅವರು 'ಹಣ' 'ಹೆಣ' ಇವೆರಡಕ್ಕೂ ಏನೂ ವ್ಯತ್ಯಾಸಮಾಡುತ್ತಿರಲಿಲ್ಲ. ತಾಲ್ಲೂಕು ಬೋರ್ಡು ಮೆಂಬರುಗಳು ಅದಕ್ಕೆ ಹಣ ಬೇಕು, ಇದಕ್ಕೆ ಹಣ ಬೇಕು ಎಂದರೆ ಇವರು 'ಗಜಾನೇಲಿ ಹೆಣ ಇದ್ದರೆ ತಾನೆ ಕೊಡಲು ಸಾಧ್ಯ' ಎನ್ನುತ್ತಿದ್ದರು. ತಮಿಳಿನಲ್ಲಿ 'ಖ' ಇಲ್ಲವಂತೆ. ಆದ್ದರಿಂದ 'ಖಜಾನೆ' 'ಗಜಾನೆ' ಆಗಿತ್ತು. 'ಹಣ' 'ಹೆಣ' ಆಗಿತ್ತು. ನಮಗೆಲ್ಲಾ ನಗು.

ನಾನು ಜಾತಿವಾದಿಯಲ್ಲ. ಎಲ್ಲರ ಬಗ್ಗೆಯೂ ಪ್ರೀತಿ ವಿಶ್ವಾಸ ಇಟ್ಟೇ ಇದ್ದೆ. ಸ್ವಜಾತಿಯವರು ಹೆಚ್ಚಾಗಿ ನನ್ನ ಬಳಿ ಬರುತ್ತಿದ್ದರೆ ಅದು ನನ್ನ ತಪ್ಪಲ್ಲ. ಚಿಕ್ಕಮಗ ಳೂರಿನಲ್ಲಿ ಒಕ್ಕಲಿಗರ ಹಾಸ್ಟೆಲ್ ಕಟ್ಟಲು ಸಂಘದವರು ಜಾಗ ಕೇಳಿದರು. ನಾಲ್ಕು ಎಕರೆ ಪಾಳು ಜಮೀನು ಕೊಟ್ಟೆ. ಎರಡು ಲಕ್ಷ ರೂಪಾಯಿ ಹಣವೂ ಸಂಗ್ರಹಮಾಡಿದೆ. ನಾಳೆ ಮುಖ್ಯಮಂತ್ರಿ ನಿಜಲಿಂಗಪ್ಪನವರು ಬಂದು ಅಸ್ತಿಭಾರ ಶಿಲೆ ಹಾಕಬೇಕು, ಈ ದಿನ ದೊಡ್ಡ ಕೂಟ ಸೇರಿತು. ಆ ಸ್ಥಳದಲ್ಲಿ ಹೇಗೆ ಅಸ್ತಿಭಾರ ಶಿಲೆ ಹಾಕುತ್ತಾರೊ ನೋಡೋಣ, ನಮಗೂ ಜಾಗ ಕೊಡಬೇಕು ಎಂದು ದೊಣ್ಣೆ ಗುದಿಗೆಗಳನ್ನು ಹಿಡಿದು ನಿಂತರು. ಅವರು ಅಲ್ಲಿಯವರೆಗೂ ಜಾಗ ಕೇಳಿದ್ದಿಲ್ಲ. ನಿಮಗೂ ಜಾಗ ಬೇಕೇ ಎಂದು ಕೇಳಿದೆ, ಬೇಕು ಎಂದರು. ಒಕ್ಕಲಿಗರ ಸಂಘಕ್ಕೆ ಕೊಟ್ಟ ನಾಲ್ಕು ಎಕರೆಯಲ್ಲಿ ಅವರಿಗೆ ಎರಡು ಎಕರೆ ಕೊಟ್ಟೆ. ಎರಡು ಕಡೆಯೂ ಒಂದೇ ದಿನ ಅಸ್ತಿಭಾರ ಶಿಲೆ ಹಾಕಿಸ ಲಾಯಿತು. ಒಂದರ ಕಟ್ಟಡ ಮುಗಿದು ಎಷ್ಟೋ ವರ್ಷಗಳಾದುವು. ಇನ್ನೊಂದರ ಶಿಲೆಯೇ ನಾಪತ್ತೆ. ಹೀಗೆ ಜನರು ಮನಸ್ಸಿನಲ್ಲಿ ಏನೇನೊ ಕಲ್ಪನೆಗಳನ್ನು ಮಾಡಿ ಕೊಂಡು, ಜಾತಿಯ ಬಣ್ಣ ಕಟ್ಟಿ, ಆಗದ ಕೆಲಸಕ್ಕೆ ಕುಮ್ಮಕ್ಕು ಆಗುವ ಕೆಲಸಕ್ಕೆ ಹರಕತ್ ಮಾಡುತ್ತಾರೆ. ನನ್ನ ಮೇಲೆ ಲಂಚ ರುಷುವತ್ತಿನ ಆಪಾದನೆ ಮಾಡಲಾರದ ಅವರು ಜಾತಿವಾದಿ ಎಂಬ ಆಪಾದನೆಯನ್ನು ಬಹಿರಂಗವಾಗಿ ಮಾಡದೆ ಒಳಗೊಳಗೇ ಮಾಡು ತ್ತಿದ್ದರು. ಈ ಆಪಾದನೆಯ ಮೇಲೆಯೇ ನನಗೆ ಚಿಕ್ಕಮಗಳೂರಿನಿಂದ ಮಂಗಳೂರಿಗೆ ವರ್ಗವಾಯಿತು. ವರ್ಗಮಾಡಿಸಿದವರು ಮೀಸೆ ತಿರುವಿದರು. ಅವರಿಗೆ ಅಂದೆ 'ನೀವು ನಾಳೆ ಹೋಗೋನ್ನ ಈವತ್ತು ಕಳುಹಿಸಿದ್ದಿರಿ, ಅಷ್ಟೆ. ನಿಮಗೆ ಮೀಸೆ ಇದ್ದರೆ ನಾನಿಲ್ಲೇ ಖಾಯಂ ಆಗಿ ಇರುವಂತೆ ಮಾಡಿ' ಎಂದೆ. ಅದೆಲ್ಲಿ ಆದೀತು ಅವರ ಕೈಯಲ್ಲಿ !

ಚಿಕ್ಕಮಗಳೂರಿನ ಮುಳ್ಳಯ್ಯನಗಿರಿಯ ಆರುಸಾವಿರ ಅಡಿ ಎತ್ತರದಿಂದ ಸಮುದ್ರ ಮಟ್ಟಕ್ಕೆ ಹೋದಾಗ ಹೊಸ ದೇಶವೊಂದಕ್ಕೆ ಹೋದಂತಾಯಿತು. ಚಾರ್ಮಾಡಿ ಘಾಟ್ ಮೂಲಕ ಇಳಿದಾಗ ಶುರುವಾದುವು.— ಮೀನಿನ ವಾಸನೆ, ಸೆಖೆ ಇತ್ಯಾದಿಗಳು. ಸೂಟು ಬೂಟು ಮಂಗಳೂರಿನಲ್ಲಿ ನಡೆಯಲಿಲ್ಲ. ಬಟ್ಟೆ ಬಿಚ್ಚಿ ಕೆಲಸಕ್ಕೆ ಇಳಿದೆ.

ನಾಲ್ಕು ದಿನಗಳು ಟೀಬಿಯಲ್ಲಿದ್ದು ಡೀಸಿ ಬಂಗಲೆಗೆ ಹೋಗಿ ಸಂಸಾರ ಕರೆಸಿ ಕೊಂಡೆ. ಇಲ್ಲಿಗೆ ನನ್ನ ಸಂಸಾರ ಸಂಪೂರ್ಣವಾಗಿತ್ತು. ಹುಟ್ಟಬೇಕಾದ ಮಕ್ಕಳೆಲ್ಲ ಹುಟ್ಟಿದ್ದರು. ಆ ಬಂಗಲೆ ಇದ್ದ ಸ್ಥಳ ಬಹು ಸುಂದರವಾದ ತಾಣ. ಮೈಲಿಗಟ್ಟಲೆ

ತೆಂಗಿನಮರಗಳಲ್ಲದೆ ಏನೂ ಕಾಣದ ಹಸಿರುವನ. ಅಲ್ಲಿಂದಾಚೆ ನೀಲಿ ಸಮುದ್ರ. ಅದರ ಮೇಲೆ ಹಡಗುಗಳು ದೋಣಿಗಳು. ಇಂತಹ ಸೌಂದರ್ಯದ ತಾಣವನ್ನು ಚಿಕ್ಕಮಗಳೂರಿನಲ್ಲಿಯೇ ಇದ್ದರೆ ಕಳೆದುಕೊಳ್ಳುತ್ತಿದ್ದೆನಲ್ಲಾ ಎನಿಸಿತು. ಸಾಮಾನಿನ ಲಾರಿ ಬಂದಿತು. ಅದನ್ನು ಆಳುಕಾಳುಗಳು ಸೇರಿಕೊಂಡು 'ಇಳಿಸಿದರು. ಎಲ್ಲೆಲ್ಲಿ ಬೇಕೊ ಅಲ್ಲಲ್ಲಿ ಇಟ್ಟರು. ಮಾರನೆಯ ದಿನ ಬೆಳಗ್ಗೆ ಮನೆ ಕಸಗುಡಿಸಲು ಒಬ್ಬರೂ ಇಲ್ಲ! ಇನ್ನಾರೂ ಹತ್ತಿರ ಬರಲಿಲ್ಲ. ಅಡುಗೆ ಕೆಲಸವನ್ನು ಆಳಿನಿಂದ ತಪ್ಪಿಸಿ ಅಮ್ಮವರೇ ವಹಿಸಿಕೊಂಡು ಎಷ್ಟೋ ವರ್ಷಗಳಾಗಿದ್ದುವು. ಹೋಗಲಿ ಯಾರಾದರೂ ಕಸ ಗುಡಿಸಿ ಯಾರೇ ಎಂದರೆ ಯಾರೂ ಇಲ್ಲ. ಕಾರಣವೂ ಗೊತ್ತಾಗಲಿಲ್ಲ. ಸರಿ ಮನೆ ಮಕ್ಕಳೆಲ್ಲ ಸೇರಿ ಆ ಕೆಲಸ ಮಾಡಿಕೊಂಡರು. ಪಾತ್ರೆ ಗೀತ್ರೆ ಇವುಗಳನ್ನೆಲ್ಲಾ ಅವರೇ ತೊಳೆದು ಕೊಂಡರು. ಹೀಗೆ ನಾಲ್ಕೈದು ದಿನ ನಡೆಯಿತು. 'ಆಳುಗಳೆಲ್ಲಿ ?' ಎಂದು ದಫೇದಾರ ನನ್ನು ಕೇಳಿದರೆ 'ಇಜ್ಜಿ' 'ಇಲ್ಲ' ಎಂದ. ಇಲ್ಲಿಯ ಪದ್ಧತಿಯೇ ಹೀಗಿರಬೇಕೆಂದುಕೊಂಡು ಕೆಲಸಬೊಗಸೆಗಳನ್ನೆಲ್ಲಾ ನಾವೇ ಮಾಡಿಕೊಳ್ಳಲಾರಂಭಿಸಿದೆವು—ಈಗ ರಿಟೈರಾದ ಮೇಲೆ ಮಾಡಿಕೊಳ್ಳುತ್ತಿರುವಂತೆ. ಆದರೆ ಆ ಆಳುಗಳಿಗೆ ಏನನ್ನಿಸಿತೋ ಏನೋ ಅವರೇ ಆಗಿ ಒಬ್ಬೊಬ್ಬರಾಗಿ ಬರಲಾರಂಭಿಸಿದರು. ಎಲ್ಲಾ ಕೆಲಸಗಳನ್ನೂ ಮಾಡಲಾರಂಭಿಸಿದರು. ಇದ್ದವರು ಎರಡೋ ಮೂರೋ, ಹಿಂದೆ ಕಲೆಕ್ಟರ ಕಾಲದಲ್ಲಿ ಹದಿನೇಳು ಮಂದಿ ಸೇವಕರು : ಹೆಡ್ ಬಟ್ಲರ್, ಬಟ್ಲರ್, ಅಸಿಸ್ಟೆಂಟ್ ಬಟ್ಲರ್, ಹೆಡ್‌ಕುಕ್, ಅಸಿಸ್ಟೆಂಟ್ ಕುಕ್, ಬಾರ್ಬರ್, ದೋಭಿ, ಮಸಾಲ್ಚಿ ಹೀಗೆ ಇದರ ಮೇಲೆ ಆಗ ಅಂದರೆ ಸುಮಾರು 1800 ರಲ್ಲಿ ಕಲೆಕ್ಟರಿಗೆ ಇದ್ದ ಸಂಬಳ ಎಷ್ಟು ಗೊತ್ತೆ ? 2500 ರೂಪಾಯಿ! ಈಗ ಇದ್ದವರು ಎಷ್ಟು ಮುತುವರ್ಜಿಯಿಂದ ಹಾಗೂ ನಂಬಿಕೆಯಿಂದ ಕೆಲಸಮಾಡಿದರೆಂದರೆ ಅವರನ್ನು ಬಿಟ್ಟು ಬರುವಾಗ ನಮಗೆ ವ್ಯಸನವೇ ಆಯಿತು. ಡೀಸಿ ಬಂಗಲೆ ಗಾಜಿನಮನೆ. ಸುತ್ತ ಕಾಡು. ಏನಾದರೂ ಆಗಬಹುದು. ಆದರೆ ಒಂದು ನಯಾಪೈಸೇಗೂ ಮೋಸ ಆಗಲಿಲ್ಲ. ಒಂದು ಸಾಮಾನು ಕಳುವಾಗಲಿಲ್ಲ. ಒಂದು ದಿನ ಒಬ್ಬರು ಕಾಯಿಲೆ ಬೀಳಲಿಲ್ಲ. ಆನೆ ಕಾಲುರೋಗಕ್ಕೆ ಹೆದರಿದ್ದೆವು. ಅದೃಷ್ಟದಿಂದ ಅಂಥದೇನೂ ಕಾಣಿಸಿ ಕೊಳ್ಳಲಿಲ್ಲ. ಎಲ್ಲಾ ಆ ಮಂಗಳಾದೇವಿಯ ಕೃಪೆ. ಬರುವಾಗ ಒಬ್ಬೊಬ್ಬ ಆಳಿಗೆ ಐವತ್ತು ರೂಪಾಯಿ ಕೊಟ್ಟೆ. ಡ್ರೈವರ್ ಶಾಂತಪ್ಪಶೆಟ್ಟಿಗೆ ನೂರು ರೂಪಾಯಿ ಕೊಟ್ಟೆ.

ಮಂಗಳೂರು ಕಲೆಕ್ಟರ ಆಫೀಸು—ಅಲ್ಲಿ ಡೀಸಿ ಆಫೀಸನ್ನು ಹೀಗೇ ಕರೆಯು ವುದು, ಮತ್ತು ಡೀಸಿಯನ್ನು ಕಲೆಕ್ಟರ್ ಎಂದೇ ಕರೆಯುವ ಹಳೆಯ ವಾಡಿಕೆ ಉಂಟು—ಸಮುದ್ರ ತೀರದಲ್ಲಿದೆ. ಛೇಂಬರಿನಲ್ಲಿ ಕುಳಿತರೆ ಅರಬ್ಬೀ ಸಮುದ್ರ ಕಾಣಿಸುತ್ತದೆ ; ಹಾಗೆಯೇ ಮೀನಿನ ವಾಸನೆಯೂ ಮೂಗಿಗೆ ಬಡಿಯುತ್ತದೆ. ಇಲ್ಲಿಯ ಜನರ ಚುರುಕಿಗೆ ಮೀನು ಮುಖ್ಯ ಕಾರಣ ಎಂಬುದರಲ್ಲಿ ಸಂದೇಹವಿಲ್ಲ.

ನಾನಿದ್ದಾಗ ಜನರು ಹಳೆಯ ಕಟ್ಟುಪಾಡಿಗೆ ಒಳಪಟ್ಟು ಒಂದು ಶಿಸ್ತು ಹಾಗೂ ಸಂಯಮಗಳಿಂದ ವರ್ತಿಸುತ್ತಿದ್ದರು. ನನ್ನನ್ನು ನೋಡಲು ನಿಗದಿಯಾದ ವೇಳೆಯಲ್ಲಿ ಬರುವುದು, ಹೇಳಬೇಕಾದ ವಿಷಯವನ್ನು ನೇರವಾಗಿ ಹೇಳಿ ಕೈಮುಗಿದು ಹೋಗುವುದು ಇಲ್ಲಿಯ ಜನರ ವಾಡಿಕೆ. ಹಳೆಯ ಮೈಸೂರು ಕಡೆಯವರಂತೆ ನಮ್ಮ ಊರು ಕೇರಿ, ಸಂಸಾರ ಮಕ್ಕಳು ಮರಿಗಳು ಮದುವೆ ಮುಂಜಿ,—ಹೀಗೆಲ್ಲಾ ನಮ್ಮನ್ನು ಉದ್ಧಾರಮಾಡಲು ಬಂದವರಂತೆ ಕೇಳಿ, ಕೊನೆಯಲ್ಲಿ ಬಂದ ವಿಷಯವನ್ನು ಹಾಗೂ ಹೀಗೂ ಹೇಳಿ ಖಂಡಿತ ಮಾಡಿಕೊಡಬೇಕೆಂದೂ ಆವರು ಇವರು ನಿಮಗೆ ಫೋನ್ ಮಾಡಬಹುದೆಂದೂ ಹೆದರಿಸಿ ಬೆದರಿಸುವ ಕ್ರಮ ಇಲ್ಲ. ಇಲ್ಲಿಯ ಜನ ಕಾನೂನು ಕಟ್ಟಲೆಗಳೇನೆಂಬುದನ್ನು ಸರಿಯಾಗಿ ತಿಳಿದುಕೊಂಡು ವಕೀಲರಂತೆ ಮಾತಾಡಿ ಹೋಗುತ್ತಿದ್ದರು. ಅವರಿಗೆ ವಿರುದ್ಧವಾಗಿ ಆರ್ಡರಾದರೆ ಕಾಪಿ ತೆಗೆದುಕೊಂಡು ಅಪೀಲು ಮಾಡುತ್ತಿದ್ದರು. ತಮಗೆ ಅನುಕೂಲವಾಗಿ ಆಗದಿದ್ದರೆ ಆಫೀಸರ ಮೇಲೆ ಅಪಾದನೆ ಮಾಡುತ್ತಿರಲಿಲ್ಲ. ; ಹಿಂದೆ ಏನಾದರೂ ಆಡುವ ಅಭ್ಯಾಸವಿರಲಿಲ್ಲ. ಈಗ ಅಲ್ಲಿಗೂ ಹಳೆಯ ಮೈಸೂರಿನ ಗಾಳಿ ಬೀಸಿದೆಯೆಂದು ತಿಳಿದುಬಂದಿದೆ.

ಆಫೀಸಿನ ಸಿಬ್ಬಂದಿಯೂ ಚೆನ್ನಾಗಿತ್ತು. ಮತ್ತು ಸಾಕಷ್ಟು ಇರುತ್ತಿತ್ತು. ಇಲ್ಲಿಯ ಹಾಗೆ ಕೆಲಸ ಎಷ್ಟೇ ಇರಲಿ ಒಂದೇ ಸಿಬ್ಬಂದಿ ಇಲ್ಲ. ಕೆಲಸ ಹೆಚ್ಚಿದಂತೆ ಸಿಬ್ಬಂದಿಯೂ ಹೆಚ್ಚುತ್ತಿತ್ತು. ನೋಟಿಂಗ್ ಮುಂತಾದುವುಗಳನ್ನು ಚೆನ್ನಾಗಿ ಹಾಕುತ್ತಿದ್ದರು. ಲಂಚ ರುಷುವತ್ತುಗಳಿಗಾಗಿ ಫೈಲುಗಳನ್ನು ನಿಧಾನಮಾಡುವ ಪ್ರವೃತ್ತಿ ಕಾಣಲಿಲ್ಲ. ಸಾರ್ವಜನಿಕರು ಆಫೀಸಿಗೆ ನುಗ್ಗುವುದು, ಗುಮಾಸ್ತರನ್ನು ಕಾಫಿ ತಿಂಡಿಗೆ ಕರೆದುಕೊಂಡು ಹೋಗುವುದು—ಇವು ಇರಲಿಲ್ಲ. ಇವೆಲ್ಲಾ ನನ್ನ ಕೆಲಸ ಸಲೀಸಾಗಿ ಸಾಗಲು ಅನುಕೂಲವಾದುವು.

ವಾರಕ್ಕೆರಡು ದಿನ—ಸೋಮವಾರ ಮತ್ತು ಮಂಗಳವಾರ—ಕೋರ್ಟು ನಡೆಸುತ್ತಿದ್ದೆ. ಈ ಕ್ರಮವನ್ನು ಶಿವಮೊಗ್ಗ ಮತ್ತು ಚಿಕ್ಕಮಗಳೂರುಗಳಲ್ಲಿಯೂ ಅನುಸರಿಸುತ್ತಿದ್ದೆ. ಅಲ್ಲಿಯ ಅನುಭವದ ಮೇಲೆ ಇಲ್ಲಿಯ ಲಾಯರುಗಳಿಗೆ ಹೇಳಿದೆ, ದಯವಿಟ್ಟು ಅನಾವಶ್ಯಕವಾಗಿ ಅಡ್ಜರ್ನ್‌ಮೆಂಟ್ ಕೇಳಬೇಡಿ. ನಿಮಗೊಂದು, ನಿಮ್ಮ ಕಕ್ಷಿದಾರರಿಗೊಂದು ಮತ್ತು ನನಗೊಂದು—ಹೀಗೆ ಮೂರಕ್ಕಿಂತ ಹೆಚ್ಚಿಗೆ ಅಡ್ಜರ್ನ್‌ಮೆಂಟ್ ಕೊಡಲಾಗುವುದಿಲ್ಲ' ಎಂದು. ಅದರಂತೆ ನಡೆಸಲು ಪ್ರಯತ್ನಪಟ್ಟೆ. ರೆವೆನ್ಯೂ ಕೇಸುಗಳ ಆರ್ಡರ್‌ಶೀಟಿನಲ್ಲಿ ಬರಿ ಅಡ್ಜರ್ನ್‌ಮೆಂಟುಗಳೇ. ಇದನ್ನು ತಪ್ಪಿಸಿ ಕಕ್ಷಿದಾರರ ಹಿತದ ದೃಷ್ಟಿಯಿಂದ ಈ ನಿಯಮ ಹಾಕಿಕೊಂಡೆ. ತುಂಬ ಅನುಕೂಲವಾಯಿತು. ಆದರೆ ಕೋರ್ಟನ್ನು ಮೂರು ಗಂಟೆಗೆ ಮುಂಚೆ ಶುರುಮಾಡಲು ಆಗುತ್ತಿರಲಿಲ್ಲ. ಏಕೆಂದರೆ ಅಮಲ್ದಾರಿ ಮಾಡಲೇಬೇಕು. ಅಮಲ್ದಾರಿ ಎಂದರೆ ಏನು ಎಂದು ಗೊತ್ತಿಲ್ಲದವರಿಗೆ ಅದನ್ನು ಸಂಕ್ಷೇಪವಾಗಿ 'ಮಧ್ಯಾಹ್ನದ ಸಿದ್ದೆ' ಎಂದು

ಹೇಳಬಯಸುತ್ತೇನೆ. ಇದೇ ನನ್ನ ಸರ್ವಿಸಿನಲ್ಲಿ ಯಾವ ಸ್ಥಾನದಲ್ಲಿರಲಿ, ಎಲ್ಲಿರಲಿ ಅಮಲ್ದಾರಿ ಮಾಡದ ದಿನವೇ ಇಲ್ಲ. ನನಗೆ ಕೆಲವು ಹಳೆಯ ಪದ್ಧತಿಗಳಲ್ಲಿ ತುಂಬಾ ನಂಬಿಕೆ. ಅದರಲ್ಲಿ ಮಧ್ಯಾಹ್ನ ಊಟವಾದಮೇಲೆ ಮಲಗುವುದೂ ಒಂದು!

ಡೀಸಿ ಎಂದರೆ ಹತ್ತಿಪ್ಪತ್ತು ಕಮಿಟಿಗಳಿಗೆ ಅಧ್ಯಕ್ಷ. ಮಂಗಳೂರಿನಲ್ಲಿ ಸುಮಾರು 60 ಕಮಿಟಿಗಳಿಗೆ ಅಧ್ಯಕ್ಷನಾಗಿದ್ದೆ. ಎತ್ತು ಈಯ್ತು ಎಂದರೆ ಕೊಟ್ಟಿಗ್ಗೆ ಕಟ್ಟು ಎಂಬ ಹಾಗೆ ಒಂದು ಕಮಿಟಿ ಮಾಡಿದರು ಎಂದರೆ ಅದಕ್ಕೆ ಡೀಸಿ ಅಧ್ಯಕ್ಷ. ಇದು ಒಂದು ದೃಷ್ಟಿಯಿಂದ ಅನಿವಾರ್ಯವೂ ಆಗಿತ್ತು. ಎಷ್ಟೋ ಕಮಿಟಿಗಳು ಮೂರು ತಿಂಗಳಿಗೋ ಆರು ತಿಂಗಳಿಗೋ ಒಂದು ಸಲ ಸೇರುತ್ತಿದ್ದವು. ನನಗೆ ಬಹಳ ಮುಖ್ಯವಾಗಿ ಕಂಡವುಗಳು ಜಿಲ್ಲಾ ಅಭಿವೃದ್ಧಿ ಸಮಿತಿ, ಜಿಲ್ಲಾ ಸಮನ್ವಯ ಸಮಿತಿ (District Coordination Committee) ಮತ್ತು ಹಿಂದ್ ಕುಷ್ಟ್ ನಿವಾರಣಾ ಸಮಿತಿ. ಜಿಲ್ಲಾ ಅಭಿವೃದ್ಧಿ ಸಮಿತಿಗೆ ಜಿಲ್ಲೆಯ ಮುಖ್ಯಾಧಿಕಾರಿಗಳೂ, ಎಂ.ಎಲ್.ಎ. ಮತ್ತು ಎಂ.ಪಿ. ಗಳೂ ಜಿಲ್ಲೆಯ ವಿವಿಧ ಇಲಾಖೆಗಳ ಮುಖ್ಯಾಧಿಕಾರಿಗಳೂ ಬರುತ್ತಿದ್ದರು. ಅನೇಕ ಅಭಿವೃದ್ಧಿ ವಿಷಯಗಳು ಚರ್ಚೆಯಾಗಿ ತೀರ್ಮಾನವಾಗುತ್ತಿದ್ದುವು. ಜಿಲ್ಲೆಯ ಸಮನ್ವಯ ಸಮಿತಿಯಲ್ಲಿ ಜಿಲ್ಲೆಯ ವಿವಿಧ ಅಧಿಕಾರಿಗಳ ನಿಕಟ ಪರಿಚಯ ಮಾಡಿಕೊಳ್ಳುವುದರ ಜೊತೆಗೆ ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ಇರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಪ್ರಯತ್ನ ನಡೆಯುತ್ತಿತ್ತು. ಹಿಂದ್ ಕುಷ್ಟ್ ನಿವಾರಣಾ ಸಮಿತಿ ಕುಷ್ಟರೋಗಿಗಳ ಯೋಗಕ್ಷೇಮ ನೋಡಿಕೊಳ್ಳುವ ಸಮಿತಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಷ್ಟರೋಗಿಗಳ ಸಂಖ್ಯೆ ಹೆಚ್ಚಾಗಿಯೇ ಇತ್ತು. ಬಹುಶಃ ಇದಕ್ಕೆ ಕಾರಣ ಇದ್ದವರ ಸಂಖ್ಯೆಯನ್ನು ಸರಿಯಾಗಿ ಲೆಕ್ಕ ಹಾಕಿದ್ದುದು ಎಂದು ಕಾಣುತ್ತದೆ. ಡಾ. ಲೋಬೋ ಎಂಬುವರು ಸಮಿತಿಯ ಕಾರ್ಯದರ್ಶಿ. ಅವರು ತಮ್ಮ ಕಾಲವನ್ನೆಲ್ಲಾ ಇದಕ್ಕೋಸ್ಕರವೇ ಮುಡುಪು ಇಟ್ಟಿದ್ದರು. ತುಂಬಾ ಒಳ್ಳೆಯ ಕೆಲಸ ಮಾಡಿದರು. ನಾನು ಜಿಲ್ಲೆ ಬಿಡುವ ವೇಳೆ ಮುದುರಂಗಡಿ ಎಂಬ ಊರಿನಲ್ಲಿ ನಲವತ್ತು ಐವತ್ತು ಎಕರೆ ಸರ್ಕಾರಿ ಭೂಮಿಯನ್ನು burnt out cases ಅಂದರೆ ರೋಗ ಗುಣವಾದವರು—ಇವರಿಗಾಗಿ ಒಂದು ಕಾಲೋನಿ ಮಾಡಲು ಕೊಟ್ಟುದಲ್ಲದೆ, ಅವರಿಗಾಗಿ ಹಲವಾರು ಮನೆಗಳನ್ನೂ ಕಟ್ಟಿಸಿ ನೆಮ್ಮದಿಯಿಂದ ನೆಲೆಸಲು ಮಾಡಿದ ಒಂದು ಸತ್ಕಾರ್ಯ ನನ್ನಿಂದ ಆಯಿತು.

ನನ್ನ ಶ್ರದ್ಧೆ, ಆಸಕ್ತಿ ಹಾಗೂ ಉತ್ಸಾಹಗಳಿಗೆ ಈ ಜಿಲ್ಲೆ ಇಂಬುಕೊಟ್ಟಿತು. ಒಳ್ಳೆಯ ಕೆಲಸಗಳಿಗೆ ಜನ ಮುಂದಾದರು. ಆಗಲಿ ಎಂದು ಹೇಳುತ್ತಿದ್ದರೇ ಹೊರತು ಬೇಡ ಎಂದು ತಕರಾರು ಮಾಡುತ್ತಿರಲಿಲ್ಲ. ಬೇರೆ ಜಿಲ್ಲೆಗಳಲ್ಲಿ ಒಂದು ನದಿಗೆ ಸೇತುವೆ ಆಗಬೇಕೆಂದರೆ ಒಂದು ಪಕ್ಷ ಅಲ್ಲಿ ಬೇಡ ಇಲ್ಲಿ ಕಟ್ಟಿ ಎಂದು ಹೇಳುವುದು, ಇನ್ನೊಂದು ಪಕ್ಷ ಅಲ್ಲೇ ಆಗಬೇಕೆನ್ನುವುದು, ಹೀಗಾಗಿ ದಶಕಗಳವರೆಗೆ ಸೇತುವೆ ಕಟ್ಟದೆ ನಿಂತು

ಹೋಗಿರುವ ನಿದರ್ಶನಗಳುಂಟು. ಇಲ್ಲಿ ಹಾಗಲ್ಲ. 'ಆಯಿತು, ಅಲ್ಲಿ ಆಗಲಿ' ಎಂದು ಹೇಳಿ ಅದು ಆದ ಮೇಲೆ ಇಲ್ಲಿಯೂ ಆಗಲಿ ಎಂದು ಒಂದಕ್ಕೆ ಎರಡು ಸೇತುವೆ ಮಾಡಿಸಿಕೊಳ್ಳುವ ಮುತ್ಸದ್ದಿತನ ಉಂಟು. ಜಿಲ್ಲೆಯ ಅಭಿವೃದ್ಧಿ ಎಂದರೆ ಎಲ್ಲಾ ಪಕ್ಷಗಳೂ ಒಗ್ಗಟ್ಟು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಷ್ಟು ರಾಜಕೀಯ ಪಕ್ಷಗಳು ಬೇರೆಲ್ಲಿಯೂ ಇರಲಾರವು. ಆದರೆ ಜಿಲ್ಲೆಯ ವಿಷಯ ಬಂದರೆ ಯಾವ ಪಕ್ಷವೂ ಇಲ್ಲವೋ ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ಗೇರುಬೀಜದ ಕಾರ್ಖಾನೆಗಳು, ಕಾಫಿ ಕ್ಯೂರಿಂಗ್ ಕಾರ್ಖಾನೆಗಳು, ಹೆಂಚಿನ ಕಾರ್ಖಾನೆಗಳು, ಇಲ್ಲಿ ಹೇರಳವಾಗಿ ಉಂಟು. ಇವುಗಳ ಕಾರ್ಮಿಕರು ಮತ್ತು ಬೀಡಿ ಕಟ್ಟುವ ಜನ ಸಂಪು ಹೂಡಿದರೆ ಅವರು ನಡೆದುಕೊಳ್ಳುವ ರೀತಿಯೇ ಬೇರೆ. ದೊಂಬಿ, ಗಲಾಟೆ, ಆಸ್ತಿನಾಶ ಮುಂತಾದ ಕೆಲಸಗಳೇ ಇಲ್ಲ. ಶಾಂತವಾಗಿ ಹೆಂಗಸರು ಗಂಡಸರೆಲ್ಲ ಬಾವುಟ ಹಿಡಿದು ಮೆರವಣಿಗೆ ಬಂದು ಆಫೀಸಿನ ಮುಂದೆ ಕುಳಿತು ಮನವಿ ಒಪ್ಪಿಸಿ ಹೋಗುತ್ತಿದ್ದರು. ಕಾರ್ಮಿಕ ಮುಂದಾಳುಗಳೂ ತಮ್ಮ ಜವಾಬ್ದಾರಿಯನ್ನು ಅರಿತು ವರ್ತಿಸುತ್ತಿದ್ದರು. ಇವೆಲ್ಲಾ ಇತರ ಜಿಲ್ಲೆಗಳಿಗೆ ಮೇಲ್ಪಂಕ್ತಿ.

ಇನ್ನು ಸಾಂಸ್ಕೃತಿಕ ಚಟುವಟಿಕೆಗಳಿಗೆ ಜಿಲ್ಲೆ ಹೆಸರಾದದ್ದು. ಯಕ್ಷಗಾನ ಬಯ ಲಾಟ ಇಲ್ಲಿಯವರ ಮುಖ್ಯ ಕಲೆ. ಅದಕ್ಕೆ ಕಲೆಕ್ಟರು ಹೋದರೆ ಸಾಕು ಅದಕ್ಕಿಂತ ಹೆಚ್ಚಿನ ಪ್ರೋತ್ಸಾಹ ಬೇಕಿರಲಿಲ್ಲ. ನನ್ನ ನಾಲ್ಕು ವರ್ಷಗಳ ಅವಧಿಯಲ್ಲಿ ನಾನು ನೋಡಿದ ಬಯಲಾಟಗಳೆಷ್ಟೊ ! ಕೇಳಿದ ತಾಳಮದ್ದಳೆಗಳೆಷ್ಟೊ ! ಹಲವು ದಶಕಗಳ ಹಿಂದೆ ಈ ಕಲೆ ಪುಂಡು ಪೋಕರಿಗಳ ಕಲೆ ಎಂಬ ಮಟ್ಟಕ್ಕೆ ಇಳಿದಿತ್ತು. ಈಚೆಗೆ ಶಿವರಾಮ ಕಾರಂತ ಮುಂತಾದವರಿಂದಾಗಿ ಅದರ ಸ್ಥಾನಮಾನ ತುಂಬಾ ಹೆಚ್ಚಿದೆ. ಅಡ್ವೋಕೇಟರುಗಳು, ಘನವಿದ್ವಾಂಸರುಗಳು ಈಗ ಯಕ್ಷಗಾನ ಬಯಲಾಟ ತಾಳ ಮದ್ದಳೆಗಳಲ್ಲಿ ಭಾಗವಹಿಸುತ್ತಾರೆ. ಇಲ್ಲಿಯ ಆಟಗಳಲ್ಲಿ ಪಾತ್ರಧಾರಿಗಳು ಆಡುವ ಮಾತಿನ ವೈಖರಿ ಒಂದು ವಿಶಿಷ್ಟವಾದುದು. ಘಟ್ಟದ ಮೇಲಿನ ಆಟಗಳಲ್ಲಿ ಪಾತ್ರಗಳು ಭಾಗವತನು ಬರೆದುಕೊಟ್ಟ ಮಾತುಗಳನ್ನು ಗಟ್ಟಿಮಾಡಿ ಗಿಳಿಯಂತೆ ಹೇಳುವುದುಂಟು. ಆದರೆ ಇಲ್ಲಿ ಸಮಯಕ್ಕೆ ತಕ್ಕಂತೆ ಸ್ಫೂರ್ತಿಯಿಂದ ಆಡುವ ಮಾತುಗಳನ್ನು ಕೇಳಬೇಕು. ಹಾಗೆ ಆಡುವವರು ಪಂಡಿತರಲ್ಲ. ಸಾಮಾನ್ಯ ಜನರು, ಹೊಲಗದ್ದೆ ತೋಟಗಳಲ್ಲಿ ಕೆಲಸ ಮಾಡುವವರು. ಇನ್ನು ತಾಳ ಮದ್ದಳೆಗಳಲ್ಲಿಯಂತೂ ಇಲ್ಲಿಯ ಜನರ ಪಾಂಡಿತ್ಯವನ್ನು ನೋಡಿ ಮೂಗಿನಮೇಲೆ ಬೆರಳಿಟ್ಟುಕೊಂಡಿದ್ದೇನೆ. ಇವುಗಳನ್ನು ನಿದ್ದೆಗೆಟ್ಟು ನೋಡಿ ಪ್ರತ್ಯಕ್ಷವಾಗಿಯಲ್ಲದಿದ್ದರೂ ಪರೋಕ್ಷವಾಗಿ ಈ ಕಲೆಯ ಅಭಿ ವೃದ್ಧಿಗೆ ನೆರವಾದೆ. ಇನ್ನು ಕಂಬಳ, ಜೋಡುಗಂಬಳ, ಭೂತದ ಕೋಲ. ಕೋಳಿ ಕಟ್ಟ — ಇವುಗಳನ್ನು ನೋಡದೆ ಇರುತ್ತಿರಲಿಲ್ಲ. ಇಲ್ಲಿಯ ಜನ ಆಧುನಿಕ ಸಂಸ್ಕೃತಿಗೆ ಮಾರು ಹೋದರೂ ಸಂಪ್ರದಾಯವನ್ನು ಬಿಡದವರು. ಇಲ್ಲಿ ಎಲ್ಲಿಯೂ ಇಲ್ಲದಷ್ಟು

ದೇವಸ್ಥಾನಗಳಿವೆ. ಆ ದೇವಸ್ಥಾನಗಳನ್ನು ನಡೆಸುವ ಕ್ರಮ, ಅವುಗಳಿಗೆ ಹೋಗುವ ಜನ, ಪೂಜಾ ವಿಶೇಷಗಳು, ಅಲ್ಲಿರುವ ಶಿಸ್ತು ಇವನ್ನೆಲ್ಲಾ ನೋಡಿ ಆಶ್ಚರ್ಯವಾಗುತ್ತದೆ. ಅವರವರ ಜಮೀನಿನಲ್ಲಿ ಮನೆ ಕಟ್ಟಿ ನೆಲೆಸಿರುವ ಈ ಜನ ಹಬ್ಬ ಹರಿದಿನಗಳಲ್ಲಿ ಒಳ್ಳೆಯ ಬಟ್ಟೆ ಉಟ್ಟು ಹೂಮುಡಿದು ರಸ್ತೆಗಳಲ್ಲಿ ಹೋಗುವುದನ್ನು ನೋಡುವುದಕ್ಕೇ ಒಂದು ಚಂದ. ಶಾಲೆಗೆ ಹೋಗುವ ಮಕ್ಕಳಲ್ಲೂ ಒಂದು ಶಿಸ್ತು. ಅರ್ಧ ಫರ್ಲಾಂಗು ದೂರ ಇರುವ ಶಾಲೆಗೆ ಹೋಗಲು ನಮ್ಮ ಮಕ್ಕಳಿಗೆ ಅಂಜಿಕೆ ಹಾಗೂ ಬೇಸರ. ಆದರೆ ಇಲ್ಲಿ ಎರಡು ಮೂರು ಮೈಲಿ ದೂರವನ್ನು ಹತ್ತಿ ಇಳಿದು ಮಳೆ ಗಾಳಿ ಬಿಸಿಲುಗಳನ್ನು ಲೆಕ್ಕಿಸದೆ ಶಾಲಾ ಕಾಲೇಜುಗಳಿಗೆ ಹೋಗಿಬರುತ್ತಾರೆ. ಹೀಗಿಲ್ಲದಿದ್ದರೆ ಎಷ್ಟೋ ಹೈಸ್ಕೂಲುಗಳಲ್ಲಿ ನೂರಕ್ಕೆ ನೂರು ಪಾಸಾಗುವುದು,, ಯೂನಿವರ್ಸಿಟಿಯ ಪ್ರಥಮ ಹತ್ತು ರ್‍ಯಾಂಕುಗಳನ್ನು ಅವರೇ ಪಡೆಯುವುದು ಸಾಧ್ಯವೇ ! ಇಲ್ಲಿ ಒಂದೊಂದು ಹೈಸ್ಕೂಲು ಘಟ್ಟದ ಮೇಲಿನ ಕಾಲೇಜಿನಂತೆ, ಪಂಚಾಯ್ತಿ ಆಫೀಸು ತಾಲ್ಲೂಕು ಆಫೀಸಿನಂತೆ ಅಷ್ಟು ದೊಡ್ಡವು. ಬಹುತೇಕ ಹೈಸ್ಕೂಲು ಕಾಲೇಜುಗಳು ಖಾಸಗಿಯವು ಎಂದರೆ ಇಲ್ಲಿಯ ಜನರ ಸ್ವಪ್ರಯತ್ನಕ್ಕೆ ಏನೆಂದು ಹೇಳಬೇಕು !

ಈ ಜಿಲ್ಲೆ 1956ಕ್ಕೆ ಮುಂಚೆ ಮದರಾಸು ಪ್ರಾಂತ್ಯಕ್ಕೆ ಸೇರಿತ್ತು. ಹೀಗಾಗಿ ಈ ಜಿಲ್ಲೆಯವರ ಸರ್ಕಾರಿ ವ್ಯವಹಾರ ಮದರಾಸಿನಲ್ಲಿ, ಆದರೆ ವ್ಯಾಪಾರ ಇತ್ಯಾದಿ ಬೊಂಬಾಯಿನಲ್ಲಿ. ಹಳೆಯ ಮೈಸೂರಿನೊಡನೆ ಏನೇನೂ ಸಂಪರ್ಕ ಪಡೆದಿರಲಿಲ್ಲ ಹೀಗಾಗಿ ಈ ಜಿಲ್ಲೆ 'So near and so far' ಎಂಬಂತಾಗಿತ್ತು. ಮುಖ್ಯವಾಗಿ ಸಾಂಸ್ಕೃತಿಕ ಸಂಪರ್ಕ ಮತ್ತು ವಿನಿಮಯವಾದರೆ ಮನಸ್ಸು ಒಂದಾಗುವುದೆಂದು ಅರಿತ ನಾನು ಇಲ್ಲಿಯ ಜಾನಪದ ಕಲಾವಿದರನ್ನು ಆ ಜಿಲ್ಲೆಗೆ ಕರೆಸಿ ಅವರ ಕಲಾಪ್ರದರ್ಶನವನ್ನು ಜನರು ನೋಡುವಂತೆ ಮಾಡಿದೆ. ಎರಡನೆಯ ಜಾನಪದ ಸಮ್ಮೇಳನವನ್ನು ಮಂಗಳೂರಿನಲ್ಲಿ ಏರ್ಪಡಿಸಿದೆ. ಭರ್ಜರಿಯಾಗಿ ನಡೆಯಿತು. ಅನಂತರ ಲೇಬರ್ ಕಮೀಷನರಾಗಿದ್ದ ವೇಳೆ ನಾಗಮಂಗಲದಲ್ಲಿ ಮೂರನೆಯ ಜಾನಪದ ಸಮ್ಮೇಳನ ನಡೆಯಿತು.

ಒಬ್ಬ ಜಿಲ್ಲಾಧಿಕಾರಿ ಮನಸ್ಸು ಮಾಡಿದರೆ ಏನೆಲ್ಲಾ ಮಾಡಬಹುದು ಎಂಬುದಕ್ಕೆ ಒಂದು ಉದಾಹರಣೆ. ಜಿಲ್ಲೆಯ ಉತ್ತರದ ಕೊನೆಯಲ್ಲಿ ಶಿರೂರು ಎಂಬ ಸ್ಥಳವುಂಟು. ಅಲ್ಲಿ ದೋಣಿಗಳ ಸ್ಪರ್ಧೆ ಏರ್ಪಡಿಸಿ ಒಂದು ವಿಕ್ರಮವನ್ನೇ ಸಾಧಿಸಿದೆ. ಸಣ್ಣ ತೋಡು ದೋಣಿಗಳಲ್ಲಿ (Canoes) ಒಬ್ಬನೇ ಕುಳಿತು ಹುಟ್ಟುಹಾಕಿ ಸಮುದ್ರದ ಪರ್ವತರೆಗಳ ಮೇಲೆ ಏರಿಳಿದು, ಕಣ್ಮರೆಯಾಗಿ, ಮತ್ತೆ ಕಾಣಿಸಿಕೊಂಡು ದೋಣಿ ನಡೆಸುವ ಸಾಹಸ ನೋಡತಕ್ಕದ್ದು. ಇಂಥ ಸ್ಪರ್ಧೆ ನಡೆಸಿ ಎಲ್ಲರಿಗೂ ಅಕ್ಕಿ–ಆಗ ಒಂದು ಕೇಜಿ ಅಕ್ಕಿ ಸಿಕ್ಕಬೇಕಾದರೂ ಕಷ್ಟವಾಗಿತ್ತು–ಗೆದ್ದವರಿಗೆ ಬಟ್ಟೆಬರೆ ಷೀಲ್ಡುಗಳ ಬಹುಮಾನ ವಿತರಣೆ

ಮಾಡಿದೆ. ಇಂತಹ ಸ್ಪರ್ಧೆಯನ್ನು ಮುಂದೆಯೂ ನಡೆಸಿಕೊಂಡು ಬರುವಂತೆ ಹೇಳಿ ಬಂದೆ. ಆದರೆ ಯಾರಿಗೆ ಬೇಕು ಇವೆಲ್ಲ !

ಮಂಗಳೂರಿನ ಡೀಸಿ ಪೋರ್ಟ್ ಟ್ರಸ್ಟಿನ ಛೇರ್ಮನ್ನೂ ಕೂಡ. ಇದರಿಂದಾಗಿ ವಿದೇಶಗಳಿಂದ ಬಂದು ಸಮುದ್ರದಲ್ಲಿ ತಂಗಿದ ಭಾರಿ ಹಡಗುಗಳಿಗೆ ಹೋಗಿಬರುವ, ವಿದೇಶೀ ಜನರೊಡನೆ ಸಂಪರ್ಕ ಬೆಳೆಸುವ ಸದವಕಾಶಗಳು ಆಗಾಗ್ಗೆ ದೊರೆಯುತ್ತಿದ್ದುವು. ವರ್ಷಕ್ಕೊಂದು ಸಲ Navy Day ನಡೆಯುತ್ತಿತ್ತು. ಆಗ ಒಂದುಸಲ ಪೋರ್ಟ್ ಟ್ರಸ್ಟಿನ ಟಗ್‌ನಲ್ಲಿ (ಹಡಗುಗಳನ್ನು ಬಂದರಿಗೆ ಎಳೆದು ತರುವ ಭಾರಿ ಶಕ್ತಿಯ ದೋಣಿ) ಊರಿನ ಗಣ್ಯ ಮಹನೀಯರು ಮತ್ತು ಮಹಿಳೆಯರ ಸಮೇತ ಸಮುದ್ರ ಮಧ್ಯದಲ್ಲಿದ್ದ ವಿದೇಶಿ ಹಡಗೊಂದಕ್ಕೆ ಹೋಗಿ ಅಲ್ಲಿ ನಡೆದ ಭಾರಿ ಸತ್ಕಾರದಲ್ಲಿ ಭಾಗವಹಿಸಿ ಬಂದ ಅನುಭವ ಇನ್ನೂ ಮನಸ್ಸಿನಲ್ಲಿ ಉಳಿದಿದೆ. ರಾತ್ರಿಯ ವೇಳೆ ಮಾಡಿದ ಆ ಸಮುದ್ರ ಪ್ರಯಾಣದಲ್ಲಿ ಸಮುದ್ರದ ಅಲೆಗಳು ತಿಂಗಳ ಬೆಳಕಿನಲ್ಲಿ ಮಿಂಚಿ ಮೇಲೆದ್ದು ಕೆಳಗಿಳಿಯುವ ಆ ದೃಶ್ಯ ಮನೋಹರವಾಗಿತ್ತಲ್ಲದೆ ಭಯಾನಕವೂ ಆಗಿತ್ತು. ಆ ದಿನ ಸಮುದ್ರವು ಕೊಂಚ ಅಲ್ಲೋಲಕಲ್ಲೋಲವಾಗಿದ್ದುದು ನಮ್ಮ ಭಯಭೀತಿಗಳಿಗೆ ಕಾರಣವಾಗಿತ್ತು. ಒಮ್ಮೊಮ್ಮೆ ನಮ್ಮ ಹೃದಯಕ್ರಿಯೆ ನಿಂತುಹೋದಂತಾಗುತ್ತಿತ್ತು. ಒಮ್ಮೆ ರಾಜ್ಯಪಾಲರೊಬ್ಬರು ಟಗ್‌ನಲ್ಲಿ ಹೋಗಿ ಹಡಗು ನೋಡಿಕೊಂಡು ಬರಬೇಕೆಂದರು. ಆ ವಿದೇಶೀ ಹಡಗಿನ ಕ್ಯಾಪ್ಟನ್ ಕೂಡ ಮಂಗಳೂರಿಗೆ ಬಂದಿದ್ದ. ಅವನೂ ನಮ್ಮೊಡನೆ ಇದ್ದ. ರಾಜ್ಯಪಾಲರ ಹೆಂಡತಿ ಮಕ್ಕಳೂ ಇದ್ದರು. ಆ ದಿನ ಗೌರ್ನರ್ ಬಂದರೆಂಬ ಸಂತೋಷದಿಂದಲೋ ಏನೋ ಸಮುದ್ರರಾಜ ಉಬ್ಬಿಬಿಟ್ಟ. ನಾಲ್ಕೈದು ಅಡಿ ಎತ್ತರದ ಅಲೆಗಳು ! ಒಂದು ದೊಡ್ಡ ಅಲೆ ನಮ್ಮ ತಲೆಯಮೇಲೆ ಕಣ್ಣುಮುಚ್ಚುವುದರೊಳಗೆ ಹಾದುಹೋಯಿತು ! ನಾವೆಲ್ಲಾ ತೊಯ್ದುಹೋದೆವು. ವಿದೇಶೀ ಹಡಗಿನ ಕ್ಯಾಪ್ಟನ್ ಹೇಳಿದ, 'ನಿಮ್ಮ ಅದೃಷ್ಟ ಚೆನ್ನಾಗಿತ್ತು' ಎಂದು. ಇಲ್ಲದಿದ್ದರೆ ಎಂತಹ ಸುದ್ದಿ ಪತ್ರಿಕೆಗಳಿಗೆ ! ಇಷ್ಟಾದ ಮೇಲೆ ಹಡಗಿನವರೆಗೂ ಹೋಗುವುದು ಬೇಡ ಎಂದು ಹಿಂದಿರುಗಿದೆವು. ಮನೆಗೆ ಬಂದು ಉಪ್ಪುನೀರಿನಲ್ಲಿ ತೊಯ್ದ ಬಟ್ಟೆಗಳನ್ನು ಬದಲಾಯಿಸಿಕೊಂಡೆವು. ಹೆಂಡತಿ ಮಕ್ಕಳ ಮುಖ ನೋಡಿದೆವು.

ಬಗೆಬಗೆಯ ಮೀನು ಮತ್ತು ಕಟ್ಟದ ಕೋಳಿಗಳನ್ನು (ಇವು ಬಹು ರುಚಿ !) ತಿನ್ನುತಿದ್ದ ನನ್ನ ಬುದ್ಧಿ ಇಲ್ಲಿ ಬಹು ಚುರುಕಾಯಿತು. ಅಖಿಲ ಕರ್ನಾಟಕ ಮಕ್ಕಳ ಕೂಟ ಮಂಗಳೂರಿನಲ್ಲಿ ನಡೆದಾಗ ನಾನು ಸ್ವಾಗತ ಭಾಷಣ ಮಾಡಿದೆ. ಭಾಷಣ ಗೀತೆಯ ರೂಪದಲ್ಲಿತ್ತು. ಅದನ್ನು ಕೊಂಚ ಕೇಳಿ :

ಹತ್ತೆಂಟು ಜಿಲ್ಲೆಯ
ಮುತ್ತಿನಂಥ ಮಕ್ಕಳೇ !
ಸುತ್ತೇಳು ಲೋಕಕ್ಕೆ

ಸಲುವಂಥ ಶಿಶುಗಳೇ !
ನಿಮಗಿದೋ ಹಾಡಿನ ಸ್ವಾಗತ,
ಮಾಡುವನು ಜಿಲ್ಲೆಯ ಭಾಗವತ

ಬಲು ಚೆಲುವು ಈ ನಾಡು
ತುಳುವರೀ ಕನ್ನಡ ಬೀಡು ;
ಎತ್ತರದ ಕಣಿವೆಗಳಿಲ್ಲ
ಕತ್ತಲೆಯ ಕಣಿವೆಗಳಿಲ್ಲ ;
ಆದರೂ ಮಲೆನಾಡ ಮರಿಯಿದು,
ಮನಸೆಳೆವ ಮುದ್ದುಮಗುವಂತೆ !
ಕಟ್ಟಾಣಿ ಪುಟ್ಟಕಂದನಂತೆ !

ಸುರಿವ ಮಳೆ
ಹರಿವ ಹೊಳೆ
ಹಚ್ಚ ಹಸಿರು
ಏನಿಲ್ಲ ಕೆಸರು
ಬಲು ಸೊಗಸು ಈ ನಾಡು !
ಅಲೆದಲೆದು ನೀ ನೋಡು !
ಹತ್ತಾರು ತಿಂಗಳು
ಸುತ್ತಾಡಿ ನೋಡಿದರೂ
ಹೊತ್ತು ಸಾಲದು

ನೋಡಿ ಮುಗಿಸಲೀ ಸಿರಿಯ !
ಕೋಳಿಗಳ ಕಟ್ಟವನು
ಭೂತಗಳ ಕೋಲವನು
ತಾಳಮದ್ದಳೆ ಬಯಲಾಟವನು
ನೋಡಬೇಕು ನೀವೂ !
ಕಲಿಯಬೇಕು ನಾವೂ !
ಬಣ್ಣದ ಸೀರೆಯುಟ್ಟು
ಮುಡಿಗೆ ಹೂವನಿಟ್ಟು
ಸಲ್ಲದ ನಾಚಿಕೆ ಬಿಟ್ಟು
ದಿಟ್ಟ ನಡಿಗೆ ಇಟ್ಟು

ನಡೆದಳೆಂದರೆ ಅಬ್ಬಕ್ಕ
ಕುಣಿಯಬೇಕು ತಕ್ಕ ತಕ್ಕ !
ಕಂಡಿರಬೇಕು ಮಕ್ಕಳೇ
ಇಲ್ಲಿ ನೀವೊಂದು ಅಚ್ಚರಿಯ !
ಕೆಲವರ ಕಾಲೇಕೆ ಇಷ್ಟು
'ಸಣ್ಣ' ಎಂಬ ಪರಿಯ !
ಅಹುದು, ಎಲ್ಲ ಚೆಂದ ಇಲ್ಲಿ
ಆದರೆ ಕೊರತೆ ಕಾಲಲ್ಲಿ !
ಪಾಪ ! ಹಾಸ್ಯವು ಬೇಡ,
ಇರಬೇಕಲ್ಲವೆ ನಾವವರ ಕೂಡ

ಸ್ವಾಗತ ಸ್ವಾಗತ
ಸುಸ್ವಾಗತ ಮಕ್ಕಳೇ !
ಭವ್ಯಭಾರತದ ದಿವ್ಯ ದೀವಟಿಗೆಗಳೇ !
ಯಾವುದಕೂ ಇಲ್ಲ
ನಮಗೆ ಕೊರತೆ ;
ಎಲ್ಲವೂ ಇಲ್ಲಿಹುದು
ಬತ್ತದಿಹ ಒರತೆ
ಒಳ್ಳೆಯ ನೆಲವುಂಟು
ಹಳ್ಳಕೊಳ್ಳಗಳುಂಟು.
ಕಾಡುಂಟು ಕಲ್ಲುಂಟು
ಹಿಮಗಿರಿಯು ಉಂಟು
ಶಂಕರರು ಉಂಟು
ಕಿಂಕರರು ಉಂಟು.
ಬುದ್ಧ ಗಾಂಧಿಯರುಂಟು
ಸಿದ್ಧ ನೆಹರುಗಳುಂಟು.
ವೀರಯೋಧರು ಉಂಟು
ತರತರದ ಕವಿಗಳುಂಟು
....ಆದರೊಂದಿಲ್ಲ
ಮನಸಿನಂತೆ ನುಡಿವ
ನುಡಿದಂತೆ ನಡೆವ

ಬುದ್ಧಿ ಒಂದಿಲ್ಲ.
ಹಾಗೆ ನಡೆವರಿಗೆ
ಮನ್ನಣೆಯು ಇಲ್ಲ.
ಇದೊಂದ ಕಲಿತರೆ
ನಮಗಾರಾದರು ಇದಿದೆ !
ನೀವಾದರು ಕಲಿಯಿರಿ
ಈ ಗುಣವ !
ನೀವಾವರು ಹಿಡಿಯಿರಿ
ಈ ಛಲವ !

ಮಕ್ಕಳ ಸಮ್ಮೇಳನದಲ್ಲಿ ಮಕ್ಕಳಷ್ಟೇ ಅಲ್ಲದೆ ಡಾ. ಟಿ. ಎಂ. ಎ. ಪೈ ಮುಂತಾದ ಗಣ್ಯರು ನೆರೆದಿದ್ದರು. ಅವರೆಲ್ಲ ಕೇಳಿ ಮೆಚ್ಚಿದ ಕವಿತೆ ಸ್ಥಳದ ಪತ್ರಿಕೆಯೊಂದರಲ್ಲಿ ಪರಿಪರಿಯ ಬಣ್ಣನೆಗೆ ಗುರಿಯಾಯಿತು. ಇದನ್ನು ಹಾಡಿದ ಒಂದು ತಿಂಗಳ ಕಾಲ ಸುಮ್ಮನಿದ್ದ ಪತ್ರಿಕೆ ನನ್ನ ಮೇಲೆ ಜಿಲ್ಲೆಯ ಜನರನ್ನು ಅವಮಾನ ಮಾಡಿದ್ದಾನೆಂದು ಬರೆಯತೊಡಗಿತು. ಕಾರಣ, ಬೊಂಬಾಯಿಗೆ ಬಸ್ ಪರ್ಮಿಟ್ ಸಿಕ್ಕದೇ ಹೋದುದು. ಡೀಸಿಗೆ ರೆವೆನ್ಯೂ ಅಧಿಕಾರಗಳಲ್ಲದೆ ಬೇರೆಲ್ಲ ಅಧಿಕಾರಗಳು ಇದ್ದಂತೆ, ಪತ್ರಿಕೆಯವರಿಗೆ ಬಸ್ಸು ಇತ್ಯಾದಿ ವ್ಯವಹಾರಗಳು ಇದ್ದುವು. ಅವರು ಮಂಗಳೂರಿನಿಂದ ಬೊಂಬಾಯಿಗೆ ಬಸ್ಸುಗಳನ್ನು ಓಡಿಸುತ್ತಿದ್ದರು. ಇವು ದಿನನಿತ್ಯ ಓಡುವ ಸ್ಟೇಜ್ ಕ್ಯಾರಿಯೇಜ್‌ಗಳಂತಲ್ಲ. ಜಾತ್ರೆ, ಮದುವೆ, ಹಬ್ಬ ಮುಂತಾದ ವಿಶೇಷ ಸಂದರ್ಭಗಳಲ್ಲಿ ಮಾತ್ರ ಓಡಿಸಬೇಕಾದ ಸ್ಪೆಷಲ್ ಬಸ್ಸುಗಳು. ಪ್ರಯಾಣಿಕರ ಪಟ್ಟಿಕೊಡಬೇಕು, ಅದೇ ಪ್ರಯಾಣಿಕರು ವಾಪಸು ಬರಬೇಕು, ಮಧ್ಯೆ ಹತ್ತಿಸುವುದು ಇಳಿಸುವುದು ಕೂಡದು-ಇವೆಲ್ಲಾ ನಿಯಮಗಳು. ಆದರೆ ಈ ನಿಯಮಗಳನ್ನು ಗಾಳಿಗೆ ತೂರಿ ಸ್ಟೇಜ್ ಕ್ಯಾರಿಯೆಜ್‌ಗಳಂತೆ ಓಡಿಸುತ್ತಿದ್ದುದು ಮಹಾರಾಷ್ಟ್ರ ಸರ್ಕಾರದ ಗಮನಕ್ಕೆ ಬಂದು ಅವರು ನಮ್ಮ ಸರ್ಕಾರಕ್ಕೆ ಪತ್ರ ಬರೆದು ದಕ್ಷಿಣ ಕನ್ನಡ ಜಿಲ್ಲಾ ಆರ್. ಟಿ. ಎ (Regional Transport Authority) ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ, ಇಂತಹ ಕಂಪನಿಗೆ ಸ್ಪೆಷಲ್ ಪರ್ಮಿಟ್ ಕೊಡುತ್ತಿದೆ, ಅದರಿಂದ ನಮ್ಮ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್‌ಗೆ ಲುಕ್ಸಾನು ಆಗುತ್ತಿದೆ ಎಂದು ಬರೆದು ತಿಳಿಸಿತು.ಇದುನಮ್ಮ ಆರ್.ಟಿ.ಎ.ಯ.ಮುಂದೆ ಬಂದಿತು. ಈ ಆರ್ ಟಿ. ಎಗೆ ಡೀಸಿ ಅಧ್ಯಕ್ಷ, ಎಸ್. ಪಿ., ಎಕ್ಸಿಕ್ಯುಟೀವ್ ಇಂಜಿನಿಯರ್ ಮತ್ತು ಒಬ್ಬರು ಖಾಸಗಿ ಮನುಷ್ಯರು ಸದಸ್ಯರು. ತಿಂಗಳಿನಲ್ಲಿ ಮೂರು ದಿನ ಬಸ್ಸು ಪರ್ಮಿಟ್ ಕೊಡುವ ಕೆಲಸ ತಲೆನೋವಿನ ಕೆಲಸ. ಮಹಾರಾಷ್ಟ್ರ ಸರ್ಕಾರದಿಂದ ಬಂದ ಪತ್ರವನ್ನು ನಮ್ಮ ಅಥಾರಿಟಿ ಸರಿಯಾಗಿ ಪರಿಶೀಲಿಸಿ ರೂಲ್ಸು ಪ್ರಕಾರ ಪರ್ಮಿಟ್ ಕೊಡಬೇಕು ಎಂದು ಆರ್

ಟಿ. ಓಗೆ (Regional Transport Officer) ತಿಳಿಸಿತು. ಹೀಗೆ ಸ್ಟ್ರಿಕ್ಟ್ ಆದಾಗ ಪರ್ಮಿಟ್ ಗಳು ದೊರೆಯುವುದು ಕಂಪನಿಗೆ ಕಷ್ಟವಾಯಿತು. ಸರಿ, ಆಗ ಶುರುವಾಯಿತು ನನ್ನ ಮೇಲೆ ಆಪಾದನೆ. ಬೇರೇನೂ ಸಿಕ್ಕದ ಕಂಪನಿಗೆ ನನ್ನ ಸ್ವಾಗತಗೀತೆ ಸಿಕ್ಕಿತು. ಅದನ್ನು ಹಿಗ್ಗಾ ಮುಗ್ಗ ಎಳೆದು ನನ್ನ ಕನಸು ಮನಸ್ಸಿನಲ್ಲಿಯೂ ಇಲ್ಲದ ಅರ್ಥಗಳನ್ನು ಅದರಲ್ಲಿ ಕಲ್ಪಿಸಿ ಮುಖಪುಟದಲ್ಲಿ ಏನೆಲ್ಲಾ ಬರೆಯಲಾರಂಭಿಸಿದರು. ನನ್ನ ಗೀತೆಯಲ್ಲಿ ಬರುವ 'ಅಬ್ಬಕ್ಕ' ಎಂಬುವಳು ಯೂರೋಪಿನಿಂದ ಮೊಟ್ಟಮೊದಲು ಭಾರತಕ್ಕೆ ಬಂದ ಪೋರ್ಚು ಗೀಸರನ್ನು ಎದುರಿಸಿದ ರಾಣಿ ಅಬ್ಬಕ್ಕ. ಅಬ್ಬಕ್ಕ ಎಂಬ ವೇಶ್ಯೆ ಇದ್ದಳಂತೆ ಮಂಗಳೂರಿನಲ್ಲಿ. ಅವಳ ಪರಿಚಯವಿದ್ದವರು ನಾನು ಜಿಲ್ಲೆಯ ಮಹಿಳೆಯರನ್ನು ಆ ವೇಶ್ಯೆಗೆ ಹೋಲಿಸಿದೆ ಎಂದು ನನ್ನ ಮೇಲೆ ಖಾರವಾದರು. ಜನರನ್ನು ನನ್ನ ಮೇಲೆ ಎತ್ತಿ ಕಟ್ಟುವ ಪ್ರಯತ್ನ ದಿನವೂ ಪತ್ರಿಕೆಯಲ್ಲಿ ನಡೆಯಿತು. ಬೆಂಗಳೂರಿನ ಪತ್ರಿಕೆಯೊಂದು ಕೂಡ ಆ ಬಾಣ ಈ ಬಾಣಗಳನ್ನು ಬಿಟ್ಟಿತು. ಅದರ ಉಪಸಂಪಾದಕರಾಗಿದ್ದವರೊಬ್ಬರು 'ಅಧಿಕಾರಿಗಳಿಗ್ಯಾಕ್ರೀ ಕವನ ಬರೆಯೋ ಕೆಲಸ!' ಎಂದು ಟೀಕಿಸಿದರಂತೆ–ಕವನ ಬರೆಯೋದು ಅವರಪ್ಪನ ಜಪ್ತೋಡು ಎಂಬಂತೆ. ಕಂಪನಿಗೆ ಯಾವಾಗ ಪರ್ಮಿಟ್ ಸಿಕ್ಕಲಿಲ್ಲವೋ 'ನಾವು ಅವರ ಸ್ವಾಗತಗೀತೆಯನ್ನು ಟೀಕಿಸಿದ ಕಾರಣ ನಮಗೆ ಪರ್ಮಿಟ್ ಕೊಟ್ಟಿಲ್ಲ' ಎಂದು ಹೈಕೋರ್ಟಿ ನಲ್ಲಿ ರಿಟ್ ಹಾಕಿತು. ನಾನು ಜಗ್ಗಲಿಲ್ಲ. ಜಿಲ್ಲೆಯ ಜನ ಆ ಗೀತೆಯ ಅಂತರಾರ್ಥವನ್ನು ಅರಿತು ಕೊಳ್ಳಲಾರದಂತಹ ದಡ್ಡರಲ್ಲ. ಜಿಲ್ಲೆಯ ಅನೇಕ ವಿದ್ವಾಂಸರು ಕವಿಗಳು ಅದನ್ನು ಮೆಚ್ಚಿ ಬರೆದರು. ಆಗ ಪತ್ರಿಕೆ ತಣ್ಣಗಾಯಿತು. ನನ್ನನ್ನು ಅಲ್ಲಿಂದ ಕದಲಿಸಬೇಕೆಂಬ ಪ್ರಯತ್ನ ಬೆಂಗಳೂರಿನಲ್ಲಿ ನಡೆಯಿತು. ಅದು ನೆರವೇರಲಿಲ್ಲ. ಈ ಧೂಳೆಬ್ಬಿಸಿದ ಮೇಲು ಎರಡು ವರ್ಷಗಳ ಕಾಲ ಮಂಗಳೂರಿನಲ್ಲಿ ಉಳಿದೆ. ಬರುವ ಮುನ್ನ ಒಂದು ಹೊಸ ಪತ್ರಿಕೆ ಉದಯವಾಗಲು ಏರ್ಪಡಿಸಿಯೇ ಬಂದೆ.

ಕಡಲು ತೀರದ ಜನರಿಗೆ ಸಮುದ್ರದ ನೆರೆಯ ಹಾವಳಿ ತಪ್ಪಿದ್ದಲ್ಲ. ಅದಕ್ಕೆ ಅವರು ಅಂಜುತ್ತಿರಲೂಇಲ್ಲ–ಸಮುದ್ರತೀರದಲ್ಲಿ ಮನೆಯ ಮಾಡಿ ನೆರೆಗಂಜಿದರೆಂತಯ್ಯ ಎಂಬಂತೆ ಸಮುದ್ರ ತೀರದಲ್ಲಿ ಅಷ್ಟೇ ಅಲ್ಲ, ನದಿಯ ತೀರದಲ್ಲಿರುವವರೂ ಹಾಗೆಯೇ. ಮನೆಗೆ ನೀರು ನುಗ್ಗಿದರೂ ಅಂಜದೆ ನಾಲ್ಕಾರು ದಿನ ಅದನ್ನು ಹೇಗೋ ಸಹಿಸಿಕೊಂಡು ಮತ್ತೆ ಅಲ್ಲೇ ಇರುತ್ತಾರೆ. ಆದರೆ ಒಂದು ವರ್ಷ ಭಾರಿ ನೆರೆ. ಒಂದೇಸಮನೆ ಹೊಯ್ದ ಮಳೆಯಿಂದಾಗಿ ನದಿಗಳು ಉಕ್ಕಿ ಉಕ್ಕಿ ಹರಿದುವು. ಸಮುದ್ರದ ಮೇಲಿನ ಬಿರುಗಾಳಿ ನೆರೆಗೆ ನೆರವು ಮಾಡಿತು. ಭಾರಿ ಅನಾಹುತವಾಯಿತು. ಮನೆ ಮಠಗಳು ಕೊಚ್ಚಿ ಹೋದುವು. ಮರಗಿಡಗಳು ಬುಡಮೇಲಾದುವು. ಜನರು ಅಪಾರ ಹಾನಿಗೊಳಗಾದರು. ಆಗ ನಾನು ಮಾಡಿದ ಸಾಹಸ ನನಗೆ ಹೆಮ್ಮೆಯನ್ನು ತೃಪ್ತಿಯನ್ನು ನೀಡಿತು. ಭಾರಿಯಾಗಿ ಪರಿಹಾರ ಕಾರ್ಯಕ್ರಮಗಳನ್ನು ಕೈಕೊಂಡೆ. ಬಟ್ಟೆ ಬರೆ ದವಸ ಧಾನ್ಯ ಹಣ ಇತ್ಯಾದಿ ಗಳನ್ನು ಹೇರಳವಾಗಿ ಒದಗಿಸಿದೆ. ಜಿಲ್ಲೆಯಲ್ಲಷ್ಟೇ ಅಲ್ಲದೆ, ಬೊಂಬಾಯಿವರೆಗೂ

ಹೋಗಿ ಸಿಧಿ ಸಂಗ್ರಹಿಸಿದೆ. ಅವನ್ನೆಲ್ಲಾ ಸೂಕ್ತವಾದ ರೀತಿಯಲ್ಲಿ ಹಂಚಿ, ಮುಂದೆ ಬರಬಹುದಾದ ನೆರೆಗೂ ಇರಲಿ ಎಂದು ಇನ್ನಷ್ಟು ಹಣ ಇಟ್ಟು ಜಿಲ್ಲೆಯನ್ನು ಬಿಟ್ಟೆ.

ಒಟ್ಟು ನಾಲ್ಕು ವರ್ಷಗಳ ಕಾಲ ಆ ಜಿಲ್ಲೆಯಲ್ಲಿದ್ದೆ. ಜಿಲ್ಲೆಯ ಇತಿಹಾಸದ ವಿಶಿಷ್ಟ ಮೈಲಿಗಲ್ಲುಗಳನ್ನು ಗುರುತಿಸಿ ಅವನ್ನೆಲ್ಲಾ ಬರೆಸಿ ಡೀಸಿಯುವರ ಕೋರ್ಟ್‌ಹಾಲಿನಲ್ಲಿ ಹಾಕಿಸಿದೆ. 1799 ರಲ್ಲಿ ಸರ್ ಥಾಮಸ್ ಮನ್ರೋ ಜಿಲ್ಲೆಯ ಮೊದಲ ಕಲೆಕ್ಟರ್ ಆಗಿದ್ದ. ಅಂದಿನಿಂದ ನನ್ನ ವರೆಗೆ ಇದ್ದ ಎಲ್ಲಾ ಕಲೆಕ್ಟರ್‌ಗಳ ಹೆಸರುಗಳನ್ನು ಕೆತ್ತಿಸಿದೆ. ಜಿಲ್ಲೆಯ ಮುಖ್ಯ ಅಂಕಿ ಅಂಶಗಳನ್ನು ಹೇಳುವ ಫಲಕಗಳನ್ನು ನೇತುಹಾಕಿದೆ. ಅವೆಲ್ಲಾ ನನ್ನ ಕಾರ್ಯತತ್ಪರತೆಯ ಹಾಗೂ ಅಭಿಮಾನದ ಕುರುಹುಗಳಾಗಿ ಇನ್ನೂ ಉಳಿದು ಬಂದಿವೆ.

ಬೆಂಗಳೂರು ಬಿಟ್ಟು ಇಪ್ಪತ್ತು ವರ್ಷಗಳೇ ಉರುಳಿದ್ದುವು. 1950ರಲ್ಲಿ ಮಾಡಿದ್ದ ಮನೆಯಲ್ಲಿ ಇಲ್ಲಿಯುವರೆಗೆ ನಾನು ಇದ್ದದ್ದೇ ಇಲ್ಲ. ಈಗ ಆ ಮನೆಗೆ ಬಂದು ಇರತೊಡಗಿದೆ. ರಾಜ್ಯದ ಲೇಬರ್ ಕಮೀಷನರ್ ಆಗಿ ಕಾರ್ಯ ನಿರ್ವಹಿಸಲಾರಂಭಿಸಿದೆ. ಎಲ್ಲೆಲ್ಲೂ ಲೇಬರ್ ಕಮೀಷನರಿಗೆ ಕೆಲಸ ಇತ್ತು. ರಾಜ್ಯದಲ್ಲೆಲ್ಲಾ ಸುತ್ತಾಡಿದೆ ಇಡೀ ಕರ್ಣಾಟಕವನ್ನು ನೋಡುವ ಸದವಕಾಶ ದೊರೆಯಿತು. ಅಂತೆಯೇ ಕಾರ್ಮಿಕರ ಸಮಸ್ಯೆಗಳನ್ನು ಇನ್ನಷ್ಟು ಆಳವಾಗಿ ಅಭ್ಯಾಸಮಾಡುವ ಅನುಕೂಲವೂ ದೊರೆಯಿತು. ಭದ್ರಾವತಿ ಕಾರ್ಖಾನೆಯ ಸೆಕ್ರೆಟರಿಯಾಗಿ ಮತ್ತು ಪಾಂಡವಪುರ ಸಕ್ಕರೆಯ ಕಾರ್ಖಾನೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಪಡೆದ ಅನುಭವ ಈಗ ಉಪಯೋಗಕ್ಕೆ ಬಂದಿತು. ಲೇಬರ್ ಕಮೀಷನರ ಮುಖ್ಯ ಕೆಲಸ ಕಾರ್ಮಿಕರಿಗೂ ಮಾಲೀಕರಿಗೂ ನಡುವೆ ಹುಟ್ಟುವ ವಿವಾದಗಳನ್ನು ಬಗೆಹರಿಸುವುದು ಮತ್ತು ಕಾರ್ಮಿಕರ ಕಲ್ಯಾಣಕ್ಕಾಗಿ ಮಾಡಿರುವ ಕಾನೂನು ಕಟ್ಟಳೆಗಳನ್ನು ಸರಿಯಾಗಿ ಜಾರಿಮಾಡುವುದು. ಈ ಎರಡು ಕೆಲಸಗಳನ್ನು ನಿಸ್ಪೃಹತೆ ಹಾಗೂ ನಿಸ್ಸಂಕೋಚಗಳಿಂದ ನಿರ್ವಹಿಸಿದೆನೆಂಬ ಸಮಾಧಾನವಿದೆ. 'East is East West is West, Never the twine shall meet !' ಎಂದು ಕಿಪ್ಲಿಂಗ್ ಹೇಳಿದ್ದಾನೆ. ಇದು ಈಗ ಸುಳ್ಳಾಗಿದೆ ; ಎರಡೂ ಸಂಧಿಸುತ್ತಿವೆ. ಆದರೆ ಇದಕ್ಕಿಂತಲೂ ಕಷ್ಟ, ಮಾಲೀಕರೂ ಕಾರ್ಮಿಕರೂ ಸಂಧಿಸುವುದು. ಇಬ್ಬರ ಮನೋಭಾವ ಬೇರೆ ಬೇರೆ. ಒಬ್ಬರ ಬಗ್ಗೆ ಇನ್ನೊಬ್ಬರಿಗೆ ಅನುಮಾನ, ಸಂದೇಹ. ತಮ್ಮನ್ನು ದುಡಿಸಿಕೊಂಡು ಹೇರಳವಾಗಿ ಲಾಭ ಸಂಪಾದಿಸಿ ಮೋಸ ಮಾಡುತ್ತಾರೆಂದು ಕಾರ್ಮಿಕರ ಭಾವನೆ. ಅಪಾರವಾದ ಭಂಡವಾಳ ಹಾಕಿ, ಹಗಲು ರಾತ್ರಿ ಕಾರ್ಖಾನೆ ನಡೆಸುವ ಚಿಂತೆಯಲ್ಲಿಯೇ ಕಳೆಯುವ ನಾವು ಲಾಭ ಸಂಪಾದಿಸಬಾರದೆ? ಬಂದ ಲಾಭವನ್ನೆಲ್ಲಾ ಹಂಚಿಬಿಟ್ಟರೆ ಮುಂದೆ ಕಾರ್ಖಾನೆಯ ಬೆಳವಣಿಗೆಗೆ ದುಡ್ಡೆಲ್ಲಿ ತರುವುದು? less work and more pay ಎಂಬ ತತ್ವವನ್ನು ಕಾರ್ಮಿಕರು ಅನುಸರಿಸಿದರೆ ಹೇಗೆ, ಹೆಚ್ಚು ಉತ್ಪನ್ನಮಾಡಲಿ ಹೆಚ್ಚು ಸಂಪಾದನೆ ಮಾಡಲಿ–ಹೀಗೆಲ್ಲಾ ಮಾಲೀಕರ ವಾದ.

ಇಬ್ಬರ ವಾದದಲ್ಲಿಯೂ ಹುರುಳಿದೆ. ಹೇಗೋ ಕಾಲಹಾಕಿ ಹೊರಬರುವ ಕಾರ್ಮಿಕ ರಿದ್ದಾರೆ. ಕೂಲಿಯವರಿಂದ ದುಡಿಸಿಕೊಳ್ಳುವುದೊಂದೇ ಧ್ಯೇಯವಾಗುಳ್ಳ ಮಾಲೀಕ ರಿದ್ದಾರೆ. ಆದರೆ ಬಹುಮಂದಿ ಕಾರ್ಮಿಕರು ಮನಸ್ಸಿಟ್ಟು ಕೆಲಸಮಾಡುತ್ತಾರೆ. ಅವರ ಕಷ್ಟಕಾರ್ಪಣ್ಯಗಳನ್ನೂ ಮರೆತು ಕಾರ್ಖಾನೆಯ ಏಳಿಗೆಗಾಗಿ ಶ್ರಮಿಸುತ್ತಾರೆ. ಅವರಿಗೆ ಹೊಟ್ಟೆ ತುಂಬ ಅನ್ನ ಬೇಡವೆ ? ಮೈತುಂಬ ಬಟ್ಟೆ ಬೇಡವೆ ? ನಾಯಿ ಹಸಿದಿತ್ತು, ಅನ್ನ ಹಳಸಿತ್ತು' ಎನ್ನುವ ಭಾವನೆ ಸರಿಯೇ ? ಇವೆಲ್ಲಾ ಕಾರ್ಮಿಕ ಕ್ಷೇತ್ರದ ದೊಡ್ಡ ಸಮಸ್ಯೆಗಳು. ಈ ಸಮಸ್ಯೆಗಳು ಉದ್ಭವವಾದಾಗಲೆಲ್ಲ ಕಾರ್ಮಿಕರಿಗೂ ಮಾಲೀಕರಿಗೂ ಸಮಜಾಯಿಷಿ ಹೇಳಿ ಒಂದು ಒಡಂಬಡಿಕೆಯನ್ನೇರ್ಪಡಿಸುವ ಕೆಲಸ ತುಂಬ ಕಷ್ಟದ ಕೆಲಸ. ಆದರೂ ದಿನಗಟ್ಟಲೆ, ವಾರಗಟ್ಟಲೆ ಇಬ್ಬರ ಮಧ್ಯೆ ಸಂಧಾನ ನಡೆಸಿದ್ದುಂಟು. ಸಂಧಾನ ಮುರಿದುಬಿದ್ದ ಪ್ರಸಂಗಗಳೇ ಕಮ್ಮಿ. ಅದು ಯಶಸ್ವಿಯಾಗಿ ಒಪ್ಪಂದಕ್ಕೆ ಇಬ್ಬರೂ ಸಹಿ ಹಾಕಿ ನಗುಮುಖ ಮಾಡಿದಾಗ ನಾನೂ ನಕ್ಕು ತೃಪ್ತಿಪಟ್ಟುಕೊಂಡಿ ದ್ದೇನೆ.

ಇನ್ನು ಕಾರ್ಮಿಕರ ಕಲ್ಯಾಣಕ್ಕಾಗಿ ಮಾಡಿದ ನಿಯಮಗಳನ್ನು ಅನುಷ್ಠಾನಕ್ಕೆ ತರದೆ ಬಿಡಲಿಲ್ಲ. ಕೇಳಿದ ಕೂಲಿ ಕೊಡದಿದ್ದರೂ ಕೂಲಿಗಳ ಪ್ರಾಣಕ್ಕೆ ಅಪಾಯವಾಗದ ರೀತಿಯಲ್ಲಿ ಕೆಲಸದ ವ್ಯವಸ್ಥೆ ಮಾಡುವುದು, ಕಾರ್ಖಾನೆಯ ಮಾಲಿನ್ಯದ ನಿವಾರಣೆ, ತಿಂಡಿ ತೀರ್ಥಗಳನ್ನು ಸೂಕ್ತವಾದ ಬೆಲೆಗೆ ಒದಗಿಸುವುದು, ಕಾರ್ಮಿಕರಿಗೆ ವಸತಿ, ನೀರು, ಔಷಧಿ, ವಿದ್ಯಾಭ್ಯಾಸ ಈ ಸೌಕರ್ಯಗಳನ್ನು ಕೊಡುವುದು–ಇವೆಲ್ಲಾ ನನ್ನ ಮುಖ್ಯ ಗಮನವನ್ನು ಪಡೆದುವು. ಈ ವಿಷಯಗಳಲ್ಲಿ ಮಾಲೀಕರ ಬಗ್ಗೆ ಮುಲಾಜಿಲ್ಲದೆ ನಡೆದು ಕೊಂಡೆ.

ಒಟ್ಟಿನಲ್ಲಿ ಕಾರ್ಮಿಕ ಇಲಾಖೆಯ ಮುಖ್ಯಾಧಿಕಾರಿಯಾದದ್ದು ನನಗೆ ಹೊಸ ಅನುಭವ ತಂದುಕೊಟ್ಟಿತು. ಒಂದು ಹೊಸ ಪ್ರಪಂಚವನ್ನೇ ತೋರಿಸಿಕೊಟ್ಟಿತು.

ಈ ಇಲಾಖೆಯಲ್ಲಿ ಸುಮಾರು ನಾಲ್ಕು ವರ್ಷಗಳಿದ್ದು ಸರ್ವೆ ಇಲಾಖೆಯ ಮುಖ್ಯಾಧಿಕಾರಿಯಾಗಿ ಹೋದೆ. ಅತ್ಯಂತ ಹಳೆಯ ಇಲಾಖೆ ಇದು. ಈ ಇಲಾಖೆಯ ಮುಖ್ಯಾಧಿಕಾರಿಯಾಗಿ ನಾಲಾಯಖ್ಖಾದವರನ್ನೇ ಹಾಕುತ್ತಾರೆಂಬ ಮಾತಿದೆ. ಇದು ತಪ್ಪು. ರೈತರು ಕೋರ್ಟು ಕಛೇರಿಗಳಿಗೆ ಹೋಗದೆ ನೆಮ್ಮದಿಯಿಂದ ಬಾಳಬೇಕೆಂದರೆ, ಈ ಇಲಾಖೆ ಅತ್ಯಂತ ಚುರುಕಾದ ರೀತಿಯಲ್ಲಿ ಕೆಲಸ ಮಾಡಬೇಕು. ಜಮೀನು ಅಳತೆ, ಬಾಂದು ಕಲ್ಲುಗಳನ್ನು ಹಾಕಿಸುವುದು. ಅವು ಸರಿಯಾಗಿರುವಂತೆ ನೋಡಿಕೊಳ್ಳುವುದು—ಇವೆಲ್ಲಾ ಬಹುಮುಖ್ಯವಾದ ಕೆಲಸಗಳು. ಆದರೆ ಇವು ನಡೆಯುತ್ತಿಲ್ಲ. ಒಂದು ಕಲ್ಲುಗಳು ಇಲ್ಲವೇ ಇಲ್ಲ, ಇದ್ದರೂ ಅವು ಬೇಕಾದ ಕಡೆ ಇವೆ. ಸರ್ಕಾರಿ ಜಮೀನು, ದಾರಿ, ಹಳ್ಳಕೊಳ್ಳ ಇವುಗಳ ಒತ್ತುವರಿ ಹೇಳತೀರದು. ಸರ್ಕಾರವೇ ಇಲ್ಲ ಎಂಬ ಮಟ್ಟಿಗೆ ನಡೆಯುತ್ತಿದೆ. ನಾನು ನನ್ನ ಮಟ್ಟಿಗೆ ನನ್ನ

ಅಧಿಕಾರದ ಅವಧಿಯಲ್ಲಿ ಸರ್ಕಾರ ಬದುಕಿದೆ ಎಂದು ತೋರಿಸಿಕೊಡುತ್ತಲೇ ಬಂದೆ. ಸರ್ವೆ ಇಲಾಖೆಯಲ್ಲೂ ಅದನ್ನು ತೋರಿಸಿದೆ. ರೆವಿನ್ಯೂ ಪ್ರೊಬೇಷನರ್ ಆಗಿ ಸರ್ವೆ ಟ್ರೈನಿಂಗ್‌ನಲ್ಲಿದ್ದಾಗ ನಾನೇ ಶಂಕು ಸರಪಳಿ ಹಿಡಿದು ಅಳತೆ ಮಾಡುವುದರಲ್ಲಿ ನಿಷ್ಣಾತನಾಗಿದ್ದೆ. ಉಳಿದ ಪ್ರೊಬೇಷನರುಗಳಿಗೆ ತಮಾಷೆ. ನನ್ನನ್ನು 'ಸರ್ವೆ ಮೇಸ್ತ್ರಿ' ಎಂದೇ ಕರೆಯುತ್ತಿದ್ದರು. ಮಾವಳ್ಳಿ ಟಿಫಿನ್ ರೂಮ್ಸ್‌ನಿಂದ ಬರುತ್ತಿದ್ದ ರುಚಿ ರುಚಿಯಾದ ತಿಂಡಿಯಲ್ಲಿ ಒಂದು ಪಾಲು ಹೆಚ್ಚಾಗಿ ಕೊಡುತ್ತಿದ್ದರು.

ನನಗೆ ಯಾವಾಗಲೂ ಅನ್ನಿಸುತ್ತದೆ, ಹೆಚ್ಚಿಗೆ ಸಂಬಳದವರೇ ಕಡಿಮೆ ಕೆಲಸ ಮಾಡುತ್ತಾರೆ ಎಂದು. ಅತ್ಯಲ್ಪ ಸಂಬಳ, ಬಾಡಿಗೆ, ಸೌಕರ್ಯಗಳನ್ನು ಪಡೆದವರು ಹಗಲು ರಾತ್ರಿ ದುಡಿಯಬೇಕು. ಪಾಪ, ಜವಾನ ಏನೆಲ್ಲಾ ಕಷ್ಟದಲ್ಲಿ ಎಷ್ಟೊಂದು ದುಡಿಯುತ್ತಾನೆ! ಬಹುಮಂದಿ ದೊಡ್ಡ ಅಧಿಕಾರಿಗಳೆಲ್ಲ ಅವರ ಇನ್‌ಕ್ರಿಮೆಂಟ್, ಪ್ರಮೋಷನ್, ಟ್ರಾನ್ಸ್‌ಫರ್, ಕಾರು, ಟಿ.ಎ, ಡಿ.ಎ, ಟೂರು, ಟೂರಿನಲ್ಲಿ ಆಗಬೇಕಾದ ಸಕಲ ಸೌಕರ್ಯ — ಇವುಗಳನ್ನು ಯೋಚಿಸುವುದೇ ಹೆಚ್ಚು. ಕೆಳಗಿನವರಿಗೆ ಹೋಲಿಸಿದರೆ ಮೇಲಿನವರು ಸ್ವರ್ಗದಲ್ಲಿದ್ದಾರೆಂದೇ ನನ್ನ ಭಾವನೆ. ದೇವರು ನಮಗಿಂತಹ ಸ್ಥಿತಿ ಒದಗಿಸಿದ್ದಾನಲ್ಲ ಎಂಬ ತೃಪ್ತಿಯಿಂದ ಕೆಲಸ ಮಾಡಿದರೆ ಜನರಿಗೆ ಎಷ್ಟು ಸುಖವಾದೀತು! ದಿನೇ ದಿನೇ ಹೊಸ ಹೊಸ ಹುದ್ದೆಗಳ ನಿರ್ಮಾಣವಾಗುತ್ತಿದೆ. ಆದರೆ ಅವರೇನು ಕೆಲಸ ಮಾಡುತ್ತಿದ್ದಾರೆಂಬ ಬಗ್ಗೆ ಸರಿಯಾಗಿ ನೋಡುವ ವ್ಯವಸ್ಥೆ ಇಲ್ಲ. ಮಂತ್ರಿಗಳ ಅಜ್ಞಾಪಿ ಮಾಡಿದರೆ ದೊಡ್ಡ ಅಧಿಕಾರಿಗಳ ಕೆಲಸ ಮುಗಿಯಿತು. ಈಗ ಭಾರಿ ವೆಚ್ಚದಲ್ಲಿ ನಡೆಯುತ್ತಿರುವ ಸರ್ಕಾರದ ಕೆಲಸ ಬೆಟ್ಟ ಅಗೆದು ಇಲಿ ಹಿಡಿದಂತಾಗಿದೆ!

'ಸರ್ವೆ ಜನ ಸುಖಿನೋ ಭವಂತು' ಎಂದು ಸರ್ವೆ ಇಲಾಖೆಗೆ ಹೇಳಿ (ಈ ಇಲಾಖೆಯ ಕೆಲಸದ ಜೊತೆಗೆ ರಿಜಿಸ್ಟ್ರೇಷನ್ ಇಲಾಖೆ ಮತ್ತು ಧಾರ್ಮಿಕ ಇಲಾಖೆಗಳ ಮುಖ್ಯಾಧಿಕಾರಿಯೂ ಆಗಿ ಕೆಲಸ ಮಾಡಿ, ಅಲ್ಲಿಯೂ ನನ್ನ ಹೆಸರು ರಜಿಸ್ಟರ್ ಮಾಡಿ) ಲೋಕಸೇವಾ ಆಯೋಗದ ಸದಸ್ಯನಾದೆ. ಐವತ್ತು ರೂಪಾಯಿ ನಾನ್ ಗೆಜೆಟೆಡ್ ಹುದ್ದೆಗೆ ಸೇರಿದ ನಾನು ಗೆಜೆಟೆಡ್ ಹುದ್ದೆಗಳನ್ನು ಕೊಡುವ ಸ್ಥಾನದಲ್ಲಿ ಕುಳಿತೆ. ಸಾವಿರಾರು ಜನ ಗ್ರಾಮೀಣ ಮಕ್ಕಳು ಗೆಜೆಟೆಡ್ ಅಧಿಕಾರಿಗಳಾದರು. ಈ ಸ್ಥಾನದಲ್ಲಿ ನನ್ನ ಅನುಭವಗಳು ಅನೇಕವಾಗಿವೆ. ಅವನ್ನೆಲ್ಲಾ ಮುಂದೆ ವಿವರವಾಗಿ ಹೇಳುತ್ತೇನೆ. ಈಗ ಇಷ್ಟು ಹೇಳಿದರೆ ಸಾಕು: ಲೋಕಸೇವೆ ಮಾಡಲು ಹೋಗಿ ಲೋಕಾಪವಾದಕ್ಕೆ ಗುರಿಯಾಗಬೇಕೆನ್ನುವವನು ಇಲ್ಲಿಗೆ ಬರಬೇಕು. ಕೊಟ್ಟೋನು ಕೋಡಂಗಿ ಈಸ್ಕೊಂಡವನು ಈರಭದ್ರ—ಎಂಬ ನಾಣ್ಣುಡಿಯ ಸತ್ಯದ ಅರಿವಾಗಬೇಕಾದರೆ ಇಲ್ಲಿ ಕೊಟ್ಟು ನೋಡಬೇಕು. ಜನರು ಹೇಗೆ ಬಣ್ಣ ಬದಲಾಯಿಸುತ್ತಾರೆಂಬ ಅನುಭವ ಇಲ್ಲಿ ಪಡೆಯಬೇಕು. ಮಿತ್ರರು ಶತೃಗಳಾಗುವುದು, ಶತ್ರುಗಳು ಶರಣಾಗುವುದು ಇಂತಹ

ಸ್ಥಾನಗಳಲ್ಲಿರುವಾಗ. ಒಬ್ಬನಿಗೆ ಕೊಟ್ಟು ಒಂಬತ್ತು ಜನರಿಂದ ಬೈಯಿಸಿಕೊಳ್ಳ ಬೇಕಾದರೆ ಇಂತಹ ಜಾಗ ಬಿಟ್ಟರೆ ಇಲ್ಲ.

ಇದು ನಾನು ಬಾಳಿದ ಬಗೆ. ಸಾರ್ಥಕವಾಗಿಯೇ ಬಾಳು ನಡೆಸಿದೆನೆಂಬ ಸಮಾಧಾನವುಂಟು. ನಾನು 'ವ್ಯಾಘ್ರಮುಖ ಗೋವು !'—ಹೀಗೆಂದು ಜನರೇ ನನ್ನನ್ನು ಕರೆಯುತ್ತಿದ್ದರು ನೋಡಲು ಭೀತಿಯನ್ನುಂಟುಮಾಡುವ ಮುಖ ಇರಬಹುದು. ಅದಕ್ಕೆ ನಾನು ಜವಾಬ್ದಾರನಲ್ಲ. ಆ ಭೀತಿಯ ಮುಖವಿಲ್ಲದಿದ್ದರೆ ಮೀಸೆಗಳನ್ನು ಕಿತ್ತು ಆಟವಾಡಿಬಿಡುತ್ತಿದ್ದರು ಜನ. ಆದರೆ ನನ್ನ ಮನಸ್ಸು ಬಡ ಬಗ್ಗರ ಬಗ್ಗೆ ಕರಗಿ ಹೋಗುತ್ತದೆ, ಹರಕಲು ಬಟ್ಟೆಯಲ್ಲಿ ಅರ್ಜಿ ಹಿಡಿದು ಬಂದವನು ದೂರ ನಿಂತಿದ್ದರೂ ಅವನು ನನಗೆ ಹತ್ತಿರ. ಬಾಯಿದ್ದವನು ಬರದಲ್ಲಿಯೂ ಗೆಲ್ಲು ತ್ತಾನೆ. ಬಾಯಿಲ್ಲದವನು ಸಮೃದ್ಧಿಯಲ್ಲಿಯೂ ಹೊಟ್ಟೆಗಿಲ್ಲದೆ ಸಾಯುತ್ತಾನೆ. ಇದಾಗ ಬಾರದೆಂದು ನಲವತ್ತು ವರ್ಷಗಳ ದೀರ್ಘಕಾಲ ಕೆಲಸಮಾಡಿದೆ. ಇನ್ನೊಬ್ಬರ ಕಣ್ಣೀರೊರೆಸಿದೆನೇ ಹೊರತು, ಬರಿಸಲಿಲ್ಲ. ದೀಪ ಹಚ್ಚಿದೆನೇ ಹೊರತು ಆರಿಸಲಿಲ್ಲ. ಇಂತಹ ಕೆಲಸ ಮಾಡಿದವರು ಅನೇಕರುಂಟು. ನಾನೊಬ್ಬನೇ ಎಂಬ ಅಹಂಕಾರ ನನಗಿಲ್ಲ. 'ದೇವರೇ ಇಷ್ಟಾದರೂ ಮಾಡಲು ನನಗೆ ಎಂತಹ ಅವಕಾಶ ಕೊಟ್ಟೆ !' ಎಂಬುದೇ ನನ್ನ ಮನಸ್ಸಿನಲ್ಲಿರುವುದು.

ಸರ್ಕಾರದ ನಿಯಮಗಳಿಗನುಸಾರ ನಾನು ನಿವೃತ್ತಿಯಾದರೂ ದೇವರ ನಿಯಮ ಗಳಂತೆ ಇನ್ನೂ ನಿವೃತ್ತಿಯಾಗಿಲ್ಲ. ನನ್ನ ತಂದೆ ತಾಯಿ ಕೊಟ್ಟುಹೋದ ಆರೋಗ್ಯವಿದೆ, ಕಣ್ಣು ಕಾಣಿಸುತ್ತಿವೆ, ಕಿವಿ ಕೇಳಿಸುತ್ತಿವೆ. ನಾಲ್ಕೈದು ಮೈಲಿ ವಾಕಿಂಗ್ ನನಗೆ ಸಲೀಸು. ಆರೋಗ್ಯವೇ ಭಾಗ್ಯ. ಅನೇಕರಿಗೆ ಸರ್ಕಾರಿ ಕೆಲಸದಿಂದ ನಿವೃತ್ತಿಯೆಂದರೆ ಈ ಪ್ರಪಂಚದಿಂದಲೇ ನಿವೃತ್ತಿ ಎಂಬ ಭಾವನೆ ಬರುತ್ತದೆ. ಅದು ಸ್ವಾಭಾವಿಕ. ಮೂವತ್ತು ನಲವತ್ತು ವರ್ಷ ಆಳು ಕಾಳು ಅಧಿಕಾರ ಸಂಬಳ ಇತ್ಯಾದಿ ಸೌಕರ್ಯಗಳನ್ನು ಹೊಂದಿ air conditioned ಕೋಣೆಯಲ್ಲಿ ಇದ್ದಂತೆ ಇದ್ದು ಏಕದಂ ಹೊರಗೆ ಬಂದರೆ ಆಗುವ ಸ್ಥಿತಿಯೇ ಅವರಿಗೂ. ಅದೃಷ್ಟವಶಾತ್ ನಾನು ಇಂತಹ ಸ್ಥಿತಿಯಲ್ಲಿ ಇಲ್ಲ. ಮಾಡ ಬೇಕಾದ ಕೆಲಸ ಬೇಕಾದಷ್ಟಿದೆ. ಮಾಡಿಯೂ ಮಾಡುತ್ತೇನೆ.

ನಾನು ಏನೆಲ್ಲಾ ಹೇಳಿದ್ದೇನೆ ನನ್ನ ಬಾಳನ್ನು ಕುರಿತು—ಅದೆಲ್ಲಾ ಕೇವಲ ನನ್ನ ನೆನಪಿನ ಮೇಲೆ ಹೇಳಿರುವುದು. ಇನ್ನೂ ನನ್ನ ಹಳೆಯ ಕಡತಗಳನ್ನು ಬಿಚ್ಚಿಲ್ಲ. ನನ್ನ ಸರ್ಕಾರಿ ಮತ್ತು ಖಾಸಗಿ ಡೈರಿಗಳನ್ನು ನೋಡಿಲ್ಲ. ಅವನ್ನೆಲ್ಲಾ ನೋಡಿ ಬರೆಯು ವುದು ಬೇಕಾದಷ್ಟಿದೆ. ಬರೆದು ಮುಂದೆ ಪುಸ್ತಕರೂಪದಲ್ಲಿ ತರುತ್ತೇನೆ. ಇಲ್ಲಿಗೆ ಇಷ್ಟು ಸಾಕು.

೨ ನಮ್ಮೂರಿನ ನಾಗೇಗೌಡರು

ಜೀ. ಶಂ. ಪರಮಶಿವಯ್ಯ

ನಮ್ಮೂರಿನ ಮೇದರಕಲ್ಲಿನ ಮೇಲೆ ನಿಂತು ಪಡುವಣಕ್ಕೆ ನೋಡಿದರೆ ಉತ್ಕೃಷ್ಟ ಸ್ವರ್ಗೀಯ ದೃಶ್ಯಗಳು ಕಣ್ಣಿಗೆ ಹಬ್ಬವನ್ನು ತರುತ್ತವೆ. ವೀರವೈಷ್ಣವಿ ನದಿ, ಅದರ ಆಚೆಯ ದಾಸನ ಕೆರೆಯ ವಿಸ್ತಾರವಾದ ಬಯಲು, ಅದರ ಹಿಂದೆಯೇ ಕಿರಿಯ ಕಡಲಿನಂತೆ ವ್ಯಾಪಿಸಿ ನಿಂತ ದಾಸನ ಕೆರೆಯ ಜಲ ವಿಸ್ತಾರ. ಅದರ ಬೆನ್ನಿನಲ್ಲಿಯೇ ಅನಂತವಾಗಿ ಹಬ್ಬಿಹೋಗಿರುವ ತೆಂಗಿನ ಬನಗಳ ಮಹಾಪೂರ. ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಆ ರಮಣೀಯ ಕಲ್ಪತರು ರಾಶಿ ನೆಲದ ಸಿರಿಯನ್ನು ಹೊತ್ತು ನಿಂತಂತೆ ಗೋಚರಿಸುತ್ತದೆ. ಎಲ್ಲೆಲ್ಲೂ ಹಸಿರೋ ಹಸಿರು ಆ ಹಸಿರಿನ ನಡುವೆ ಅದರ ಮಡಿಲಲ್ಲಿ ತೇಲುವ ನೌಕೆಗಳಂತೆ ಅಲ್ಲೊಂದು ಇಲ್ಲೊಂದು ಊರುಗಳು. ಶ್ರೀರಂಗಪುರ, ಚಾಕೇನಹಳ್ಳಿ, ಆರಣಿ, ನಾಗತಿಹಳ್ಳಿ . ಕದಬಹಳ್ಳಿ, ಮಾವಿನಕೆರೆ, ಹೆರಗನಹಳ್ಳಿ' ಒಂದೊಂದು ತೆಂಗಿನಸಿರಿಯಿಂದ ಬೀಗುವ ಹಳ್ಳಿಗಳು.

ಬೆಳ್ಳೂರಾಚೆಯ ತೆಂಗಿನ ಬನಗಳ ನಡುವಿನ ಸೀಳುದಾರಿಯಲ್ಲಿ ಒಪ್ಪತ್ತಿನ ದಾರಿಯನ್ನು ನಡೆದರೆ, ಸಹಸ್ರಾರು ವರ್ಷಗಳಿಂದ ಸಂಸ್ಕೃತಿಯ ಕೇಂದ್ರಗಳಾಗಿ ಮೆರೆದ ಈ ಗ್ರಾಮಗಳು ಗೋಚರಿಸುತ್ತವೆ. ಅತ್ತ 'ಅಳಿಯ ಸಂದ್ರ' ಇತ್ತ 'ಕದಬಹಳ್ಳಿ' ಮುಂದೆ 'ನಾಗತಿಹಳ್ಳಿ'. ಇವುಗಳ ಬೆನ್ನಿನಲ್ಲೇ ಹೆರಗನಹಳ್ಳಿ ನಾಗೇಗೌಡರ "ನಮ್ಮೂರು". ಬೆಂಗಳೂರು ಮಂಗಳೂರು ಹೆದ್ದಾರಿ ಬೆಳ್ಳೂರು ಚನ್ನರಾಯಪಟ್ಟಣಗಳ ನಡುವಿನ ಇಪ್ಪತ್ತೈದು ಮೈಲಿಗಳ ಅಂತರದಲ್ಲಿ ಕವಿದ ತೆಂಗಿನ ತೋಟಗಳ ನಡುವೆ ಸೀಳಿಕೊಂಡು ಹೋಗುತ್ತದೆ. ಬೆಳ್ಳೂರಿಗೆ ಏಳೆಂಟು ಮೈಲಿಗಳ ಅಂತರದಲ್ಲಿಯೇ ಹೆದ್ದಾರಿಯಲ್ಲದಿದ್ದರೂ ತುಸು ಹಿಂದೆ ಹೆರಗನಹಳ್ಳಿ ಸಿಗುತ್ತದೆ. ಕಾವೇಟಿರಂಗನ ಕದಬಹಳ್ಳಿಯ ಬಳಿ ಬಸ್ಸು ಇಳಿಯಿರಿ. ಒಂದು ಮೈಲಿ ಬಂಡಿ ಜಾಡಿನಲ್ಲಿ ಮಾರನವಮಿ ದಿಬ್ಬದ ಪಕ್ಕದಲ್ಲಿ ಬಡಗಣಕ್ಕೆ ನಡೆದು ಹೋಗಿರಿ. ದಿಬ್ಬ ಕ್ರಮೇಣ ಕರುಗಿ ತೆಂಗಿನ ತೋಟಗಳ ಹಸಿರು ಕಣ್ಣಿಗೆ ರಾಚ ತೊಡಗುತ್ತದೆ. ಆದರ ನಡುವಿನಲ್ಲೆಲ್ಲೋ, ಒಂದೋ ಎರಡೋ ಮನೆಗಳು. ಸಮೀಪಿಸಿ ಕೊಂಡಂತೆ ಒಂದು ದೊಡ್ಡ ಗ್ರಾಮವೇ ಕಣ್ಣನ್ನು ಸೆಳೆಯುತ್ತದೆ. ಊರಿನ ನಡುಬೀದಿಯಲ್ಲಿ ನಾವು ಬಂದ ಬಂಡಿಯ ಜಾಡು ಐಕ್ಯವಾಗುತ್ತದೆ. ಎರಡನೆಯದೋ ಮೂರನೆಯದೋ "ದೊಡ್ಡಮನೆ". ಬಹಳ

ದೊಡ್ಡದಲ್ಲದಿದ್ದರೂ ಸಾಧಾರಣ ಸೀಮೆಹೆಂಚಿನ ಮನೆ. ಬಾಳಿ ಬದುಕಿದ ಮನೆಯಾದುದರಿಂದ, ಊರಿಗೆ ದೊಡ್ಡಕುಳವೆನಿಸಿದುದರಿಂದ ಲಿಂಗೇಗೌಡರಂಥ ದೊಡ್ಡ ವ್ಯಕ್ತಿ ಕಟ್ಟಿದ ಮನೆಯಾದುದರಿಂದ ಅದು "ದೊಡ್ಡಮನೆ"ಯಾಗಿರಬೇಕು. ಈಗ ದೊಡ್ಡ ಮನೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶಾಶ್ವತವಾಗಿ ಉಳಿದು ಹೋದ ಒಂದು ಅದೃಷ್ಟ ಶಾಲಿ ಹಳ್ಳಿಯ ಮನೆಯಾಗಿದೆ. ಆ ಮನೆ, ಅಲ್ಲಿನ ವ್ಯಕ್ತಿಗಳು, ಅದರ ಸುತ್ತ ಹಬ್ಬಿ ಕೊಂಡ ಸಾಂಸ್ಕೃತಿಕ ಪರಿಸರ, ನಕಲಿಶಾಮು, ಗೊಬ್ಬರದ ಗುಲಾಬಿ, ಆಯಿತೇ ಆಚಾರ್ರು, ಅರ್ಜಿ ಕೋಂಬಲ್ಲ, ಉದುಕಮಾವಯ್ಯ, ನೆನೆಯುಬಾರದ ರಂಗಣ್ಣ, ದಸರೆಯ ದಾಸಪ್ಪ, ಸನ್ಯಾಸಿಸೇಠ್, ಚಾರ್ಲಿ ಚಾಪ್ಲಿನ್, ಕಿವುಡು ಕೆಂಚಣ್ಣ, ಒಬ್ಬರೇ ಇಬ್ಬರೇ— ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದ ವಿಲಕ್ಷಣ ನಡತೆಗಳಿಂದ ನನ್ನೂರಿನ ಸೃಷ್ಟಿಗೆ ಕಾರಣರಾಗಿ ಮೆರೆದವರು. ಹೆರಗನಹಳ್ಳಿ ಇಂಥ ಹತ್ತು ಹಲವರ ಬದುಕನ್ನು ತನ್ನ ಮಡಿಲಲ್ಲಿ ತುಂಬಿಕೊಂಡು ಪೋಷಿಸಿಕೊಂಡು ಬಂದ ಸುಂದರ ಗ್ರಾಮ. ಹೆರಗನಹಳ್ಳಿ ಸೋಬಾನೆಯ ಚಿಕ್ಕಮ್ಮನ ಕುಟೀರ ಇರುವುದೂ ಈ ಊರಿನಲ್ಲೇ. ಲಕ್ಕವ್ವ, ಉಡಸಲವ್ವ, ದೊಡ್ಡಮ್ಮ ಮೊದಲಾದ ಗ್ರಾಮದೇವತೆಗಳು ಅವರ ಮೇಲೆ ಹಾಡುವ ನೂರಾರು ಗೀತೆಗಳು. ಹೆರಗನಹಳ್ಳಿ ತನ್ನ ವಿಶಿಷ್ಟವಾದ ನೈಸರ್ಗಿಕ ಹಿನ್ನೆಲೆಗೂ ಹೆಸರಾದುದು. ಹೆರಗನಹಳ್ಳಿಯ ಕೆರೆ ತೆಂಗುಗಳ ತೋಳಿನಲ್ಲಿ ಹಬ್ಬಿಕೊಂಡಿದೆ. ಅದರ ಏರಿಯ ಮೇಲೆ ನಡೆದುಹೋದರೆ, ಇತ್ತ ಹಾಸಿಕೊಂಡ ನೀರಿನ ಸಿರಿಯಾದರೆ ಅತ್ತ ದೂರ ದೂರದವರೆಗೆ ಹಬ್ಬಿ ಹರಡಿಕೊಂಡ ತೋಟಗದ್ದೆಗಳ ರಮಣೀಯ ನೋಟ. ಕೆರೆಯ ಏರಿಯ ಬೆನ್ನಿನಲ್ಲೇ ಒಂದು ಸಣ್ಣ ಹೂದೋಟ. ಬೆಳಗಿನ ಮಬ್ಬಿನಲ್ಲೇ ಎದ್ದು ತೋಟ ತುಡಿಕೆಗಳನ್ನು ಸುತ್ತಿ ಕೆರೆಯಲ್ಲಿ ಕೈ ಕಾಲುಗಳನ್ನು ತೊಳೆದುಕೊಂಡು 'ನಾಗು' ಬರುವುದು ಈ ಹೂದೋಟಕ್ಕೆ. ಹೂದೋಟದ ನಡುವೆ ಇರುವ ಒಂದು ಪವಿತ್ರ ಸಮಾಧಿಗೆ ಹೂವನ್ನು ಇಟ್ಟು ಶರಣುಮಾಡುವಲ್ಲಿ ಸೂರ್ಯನ ಕಿರಣಗಳು ತೆಂಗಿನ ಗರಿಗಳ ಮೇಲೆ ಲೀಲೆಯಾಡುತ್ತವೆ. ಅದು ದೊಡ್ಡಮನೆ ಲಿಂಗೇಗೌಡರ ಸಮಾಧಿ, ನಾಗೇಗೌಡರಂಥ ಸುಪುತ್ರನನ್ನು ಕನ್ನಡನಾಡಿಗೆ ನೀಡಿದ ಪುಣ್ಯಜೀವಿ ತನ್ನ ನೆಲದ ಮಡಿಲಲ್ಲಿ ಕರಗಿದ ನೆಲೆ.

ನಾಗೇಗೌಡರನ್ನು ನಾನು ನೋಡಿದುದು ತುಂಬಾ ತಡವಾಗಿ. ನಮ್ಮ ಸುತ್ತಿನ ಹಿರಿಯ ಅಧಿಕಾರಿಗಳಲ್ಲಿ ಆಗಾಗ ನನ್ನ ಕಿವಿಯ ಮೇಲೆ ಎರಡು ಹೆಸರುಗಳು ಬೀಳುತ್ತಿದ್ದವು. ಒಂದು, ನನ್ನ ತಾಯಿಯ ಹುಟ್ಟೂರಾದ ಶ್ರೀರಂಗಪುರದ ಡಿ.ಆರ್. ರಾಮಯ್ಯನವರದು. ಇನ್ನೊಂದು ಹೆರಗನಹಳ್ಳಿಯ ನಾಗೇಗೌಡರದು. ಆ ಕಾಲಕ್ಕೆ ಪದವೀಧರರಾಗಿ ಹಳ್ಳಿಗರ ಮನಸ್ಸಿನ ಮೇಲೆ ಪ್ರಭಾವ ಬೀರಿದ್ದ ವ್ಯಕ್ತಿಗಳು ಇವರು. ನಾಗೇಗೌಡರು ಅಮಲ್ದಾರರಾದ ಮೇಲೆ ಸುತ್ತಣ ಹಳ್ಳಿಗಳಲ್ಲೆಲ್ಲಾ ಅದೇ ಸುದ್ದಿ. ಅದೇ ಸೋಜಿಗ. ಕೂಲಿ ಮಠಗಳಲ್ಲಿ ಓದುತ್ತಿದ್ದ ನಮ್ಮಂತಹವರಿಗೆ ಆಗಾಗ ಅವರ

ಹೆಸರನ್ನು ಹೇಳಿ ಸ್ಫೂರ್ತಿಯನ್ನು ತುಂಬುತ್ತಿದ್ದ ದಿನಗಳು ಅವು. ನಾಗೇಗೌಡರ ವಿಚಾರವನ್ನು ಆಗಾಗ ಕೇಳಿ ಅವರನ್ನು ನೋಡುವ ಕುತೂಹಲ ನನ್ನಲ್ಲಿ ಸಹಜವಾಗಿಯೇ ಉಳಿದು ಬಂದಿತು. ಆದರೆ ಅವರನ್ನು ಮೊದಲ ಬಾರಿಗೆ ನೋಡಿದುದು ನಾನು ಸಾಹಿತ್ಯಕ್ಷೇತ್ರಕ್ಕೆ ಕಾಲಿಟ್ಟ ಮೇಲೆಯೇ. ೧೯೫೩ ಎಂದು ನೆನಪು. ನನ್ನ "ಜೀವನ ಗೀತ" ಆಗ ತಾನೆ ಪ್ರಕಟವಾಗಿತ್ತು. ಮಿತ್ರರೊಬ್ಬರು. ಆ ಪುಸ್ತಕವನ್ನು ನಾಗೇಗೌಡರಿಗೆ ಕೊಟ್ಟು ಬಂದಿದ್ದರು ಅದನ್ನು ಓದಿದ ಅವರು ಸಂತೋಷಪಟ್ಟು ತಮ್ಮ ಮನೆಗೆ ಬರುವಂತೆ, ನನಗೆ ಹೇಳಿ ಕಳುಹಿಸಿದರು. ನಾಗೇಗೌಡರ ಪರಿಚಯ ನನಗೆ ಆವರೆಗೆ ಆಗಿರಲಿಲ್ಲ. ನನ್ನಂಥ ಕಿರಿಯ ಲೇಖಕನನ್ನು ಬರಮಾಡಿಕೊಂಡ ಅವರ ಸಾಹಿತ್ಯಕ ಆಸಕ್ತಿ ನನ್ನಲ್ಲಿ ಕುತೂಹಲವನ್ನು ಕೆರಳಿಸಿತ್ತು. ಅವರಿಂದ ಕರೆಬಂದ ಮೇಲೆ ಇನ್ನೂ ಚಿಕ್ಕವನಾಗಿದ್ದ ನಾನು ಅತ್ಯಂತ ಸಂಕೋಚದಿಂದಲೇ ಅವರ ಮನೆಗೆ ಹೋದೆ. ಅವರು, ದೊಡ್ಡ ಅಧಿಕಾರಿಯಾಗಿದ್ದುದರಿಂದ ಒಂದು ರೀತಿಯ ಭಯಮಿಶ್ರಿತ ಗೌರವ. ಆದರೂ ನನ್ನ ಸಾಹಿತ್ಯವನ್ನು ಮೆಚ್ಚಿ ಅವರಾಗಿ ಬರಮಾಡಿಕೊಂಡಿದ್ದುದು, ಒಂದು ರೀತಿಯ ಹೆಮ್ಮೆ, ಸಂತೋಷ. ನಾಗೇಗೌಡರ ಮನೆ ಚಾಮುಂಡಿಪುರಂ ಬಡಾವಣೆಯಲ್ಲಿತ್ತು. ಗೆಳೆಯ ತಿಪ್ಪೇಸ್ವಾಮಿ ಅವರು ಕರಾಕೃ ಅವರು, ನನ್ನೊಡನೆ ಬಂದಿದ್ದರು. ನಮ್ಮನ್ನು ನಾಗೇಗೌಡರು ಅಭಿಮಾನದಿಂದ ಒಳಗೆ ಬರಮಾಡಿಕೊಂಡರು. ಗಂಭೀರ ಮುಖಮುದ್ರೆ, ಅದಕ್ಕೆ ಒಪ್ಪುವ ಕಂಚಿನ ಕಂಠ, ನಾಗೇಗೌಡರ ಭೀಮಕಾಯ ಆಗಂತುಕರಿಗೆ ಅಂಜಿಕೆಯನ್ನು ತರುವಂತೆ ಕಂಡರೂ ಅಂತಃಕರಣ 'ತಿಳಿಜಲ' ಎಂಬುದು ಆಗ ನನಗೆ ವೇದ್ಯವಾಯಿತು. ನನ್ನ ಪುಸ್ತಕದ ಬಗ್ಗೆ ಅವರು ಮಾತನಾಡಿದರು. ಅವರ ಸಾಹಿತ್ಯರಚನೆಯ ಬಗ್ಗೆಯೂ ಹೇಳಿದರು. ಆಗಿನ್ನೂ ಇಪ್ಪತ್ತರ ಹೊಸ್ತಿಲಲ್ಲಿದ್ದ ನನ್ನೊಡನೆ ಅವರು ತೋರಿದ ಸ್ನೇಹ, ವಿಶ್ವಾಸಗಳು ನನ್ನ ಮನಸ್ಸಿನಲ್ಲಿ ಇನ್ನೂ ಅಚ್ಚೊತ್ತಿ ನಿಂತಿವೆ. ಅಧಿಕಾರದ ದರ್ಪವಿಲ್ಲದೆ, ಅಹಂಕಾರದ ಲವಲೇಶವೂ ಇಲ್ಲದೆ ನನ್ನಂಥ ಕಿರಿಯನನ್ನು ಮನೆಗೆ ಬರಮಾಡಿಕೊಂಡು ಆದರಿಸಿದ ಅವರ ಉದಾರ ಗುಣ ನನ್ನನ್ನು ಮೂಕಗೊಳಿಸಿತು. ಮನೆಯಲ್ಲಿ ಪುಷ್ಕಳವಾದ ಊಟವೂ ಆಯಿತು. ದೊಡ್ಡ ಮನೆ ಸಂಸ್ಕೃತಿ ಮೈಸೂರಿನಂಥ ನಗರದಲ್ಲೂ ಅವರ ಮನೆಯಲ್ಲಿ ಹಬ್ಬಿಕೊಂಡಿತ್ತು. ಅವರ ಸೌಜನ್ಯಕ್ಕೆ ಪ್ರೀತಿಗೆ ನಮ್ಮ ಕೃತಜ್ಞತೆಗಳನ್ನರ್ಪಿಸಿ ನಾವು ಹೊರಬಂದೆವು.

ಕಳೆದ ಎರಡೂವರೆ ದಶಕಗಳಿಂದ ನಾಗೇಗೌಡರು ಮತ್ತು ನನ್ನ ಸಂಬಂಧ ನಿಚ್ಚಳವಾಗಿ ಉಳಿದುಬಂದಿದೆ. ಅವರು ಮುಂದೆ ಬೇರೆಬೇರೆ ಅಧಿಕಾರ ಸ್ಥಾನಗಳನ್ನು ಅಲಂಕರಿಸಿದರು. ಮೈಸೂರಿನ ಹೊರಗೆ ಇದ್ದಾಗ ಹೆಚ್ಚು ಸಂಪರ್ಕವನ್ನೂ ಬೆಳೆಸಿಕೊಳ್ಳಲು ಸಾಧ್ಯವಾಗದಿದ್ದರೂ ಮತ್ತೆ ಅವರು ಪಾಂಡವಪುರ ಸಕ್ಕರೆ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಬಂದ ಮೇಲೆ ಹೆಚ್ಚು ಸಂಪರ್ಕವನ್ನು ಬೆಳೆಸಿಕೊಂಡೆ. ಆಗ ಅವರು ಮೈಸೂರಿನಿಂದಲೇ ಹೋಗಿಬರುತ್ತಿದ್ದರು. ಒಂಟಿಕೊಪ್ಪಲಿನಲ್ಲಿ ಅವರ

ಮನೆ. ಪ್ರವಾಸಿ ಕಂಡ ಇಂಡಿಯಾದ ಸಿದ್ಧತೆಯಲ್ಲಿ ಅವರಿದ್ದರು. ಮೊದಲನೆ ಸಂಪುಟ ಅಚ್ಚಿಗೆ ಹೋಗುವುದರಲ್ಲಿತ್ತು. ಹಸ್ತಪ್ರತಿಯನ್ನು ನನಗೆ ಕೊಟ್ಟು ಓದಿಕೊಂಡು ಬನ್ನಿ ಎಂದರು. ಆ ಹಸ್ತಪ್ರತಿಯನ್ನು ಓದಿದ ನಾನು, ಅದರ ಹಿಂದಿನ ನಾಗೇಗೌಡರ ಪರಿಶ್ರಮವನ್ನು ಕಂಡು ಬೆರಗಾದೆ. ವಿವಿಧ ಮೂಲಗಳಿಂದ ಪ್ರವಾಸಿ ಸಾಹಿತ್ಯವನ್ನು ಅಭ್ಯಾಸಮಾಡಿ ವಿಷಯುಗಳನ್ನು ಕಲೆಹಾಕಿ ವಿದೇಶಿಯರ ಕಣ್ಣಿನಲ್ಲಿ ಭಾರತ ಕಂಡ ಬಗೆಯನ್ನು ನಾಗೇಗೌಡರು ಈ ಕೃತಿಯ ಮೂಲಕ ಪರಿಚಯಿಸಿಕೊಡುವ ಸಾಹಸದಲ್ಲಿ ತೊಡಗಿದ್ದರು. ಇದಕ್ಕಾಗಿ ಅವರು ದೊಡ್ಡ ಸಂಶೋಧನೆಯನ್ನೇ ನಡೆಸಿದ್ದುದು ವೇದ್ಯವಾಗುತ್ತಿತ್ತು. ಅವರ ಸುಲಲಿತವಾದ ಕನ್ನಡ ವಿಷಯ ಸಂಗ್ರಹದ ವೈಖರಿ ಸ್ವತಂತ್ರ ಕೃತಿಯೇ ಎಂಬಷ್ಟು ಅನನ್ಯವಾಗಿ ಕೃತಿಯನ್ನು ಬೆಳೆಸಿಕೊಂಡು ಹೋದ ರೀತಿ ಇವುಗಳು ನಾಗೇಗೌಡರ ಲೇಖನಿಯ ಸಾಮರ್ಥ್ಯವನ್ನು ಮೆರೆಯುವಂತಿದ್ದವು. ಆ ಕೃತಿಯನ್ನು ಸಮಗ್ರವಾಗಿ ಓದಿ ಹೃದಯ ತುಂಬಿ ಅದರ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದೆ. ಅದನ್ನು ಪ್ರತಿ ಮಾಡಿಸುವುದಕ್ಕಾಗಿ ನಾಗೇಗೌಡರು ಯಾರನ್ನಾದರೂ ದೊರಕಿಸಿಕೊಡುವಂತೆ ನನ್ನನ್ನು ಕೇಳಿದರು. ನನ್ನ ಅಕ್ಷರ ಮುದ್ದಾಗಿದ್ದಿದ್ದರೆ ನಾನೇ ಆ ಕೆಲಸವನ್ನು ಮಾಡುತ್ತಿದ್ದೆ. ಆದರೆ ಆ ಕಾರ್ಯವನ್ನು ನನ್ನ ಮಿತ್ರರೊಬ್ಬರಿಗೆ ವಹಿಸಿಕೊಟ್ಟೆ. ನಾಗೇಗೌಡರು ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದವರು. ನನ್ನ ಮಿತ್ರರು ನಿರುದ್ಯೋಗಿ. ಮುಂದೆ ಅವರಿಗೆ ಏನಾದರೂ ಅನುಕೂಲವಾದರೂ ಆಗಬಹುದೆಂಬ ಸ್ವಾರ್ಥ ಮನಸ್ಸಿನ ಮೂಲೆಯಲ್ಲಿ. ಅವರು ಅತ್ಯಂತ ಶ್ರದ್ಧೆಯಿಂದಲೇ ಪ್ರತಿ ಮಾಡುವ ಕೆಲಸದಲ್ಲಿ ತೊಡಗಿದರು. ಪ್ರತಿಫಲ ದೊರೆಯದೆ ಇರಲಿಲ್ಲ. ನಾಗೇಗೌಡರು ಸಣ್ಣ ಉಪಕಾರವನ್ನೂ ಸ್ಮರಿಸಿಕೊಳ್ಳುವಂತಹವರು. ಆ ಮಿತ್ರರು ಸಕ್ಕರೆ ಕಾರ್ಖಾನೆಯಲ್ಲಿ ಈಗಲೂ ಕೆಲಸದಲ್ಲಿದ್ದಾರೆ. ನಾಗೇಗೌಡರ ನೆರವನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

ನಾಗೇಗೌಡರು ಮುಂದೆ ಶಿವಮೊಗ್ಗೆಯ ಜಿಲ್ಲಾಧಿಕಾರಿಗಳಾದರು. ಆ ವೇಳೆಗಾಗಲೇ ಅವರ ಪ್ರವಾಸಿ ಕಂಡ ಇಂಡಿಯಾ ಹಾಗೂ ಇತರ ಕೃತಿಗಳು ಅವರಿಗೆ ಸಾಕಷ್ಟು ಕೀರ್ತಿಯನ್ನು ತಂದುಕೊಟ್ಟಿದ್ದುವು. ಸಂಸ್ಕೃತಿ ಪ್ರಿಯರಾದ ಈ ಸಾಹಿತಿ ಅಧಿಕಾರಿ ದಕ್ಷ ಆಡಳಿತಗಾರರಾಗಿಯೂ ಕೀರ್ತಿಗಳಿಸಲು ಅವರ ಈ ಅಧಿಕಾರ ಸ್ಥಾನ ಅವಕಾಶ ಕಲ್ಪಿಸಿತು. ನಿಷ್ಠೆ ಹಾಗೂ ಪ್ರಾಮಾಣಿಕತನಕ್ಕೆ ಹೆಸರಾದ ಇವರು ಬಡಬಗ್ಗರನ್ನು ಕಂಡರೆ ವಿಶೇಷವಾಗಿ ಮರುಗುವವರು. ಶಿವಮೊಗ್ಗ ಜಿಲ್ಲೆಯಲ್ಲಿ ಅವರು ಆಗ ಹಂಚಿದ ಸಾವಿರಾರು ಎಕರೆ ಜಮೀನು ಈಗ ಉತ್ಕೃಷ್ಟ ಭೂಮಿಯಾಗಿ ಕಂಗೊಳಿಸುತ್ತಿದೆ. ಸಾವಿರಾರು ಬಡರೈತರು ಕಾಡನ್ನು ಕಡಿದು ಆ ಪ್ರದೇಶವನ್ನು ಈಗ ನಂದನವನವನ್ನಾಗಿ ಮಾಡಿದ್ದಾರೆ. ಶಿವಮೊಗ್ಗ, ಭದ್ರಾವತಿಗಳ ಸುತ್ತಿನ ಗದ್ದೆಯ ಬಯಲು ಈಗ ಆ ಭಾಗದ ಶ್ರೀಮಂತಿಕೆಯನ್ನು ಸಂಕೇತಿಸುವಂತೆ ಬೀಗಿ ಬೆಳೆಯುತ್ತಿವೆ. ಈ ಜಿಲ್ಲೆಯಲ್ಲಿ

ನಾಗೇಗೌಡರ ಮತ್ತೊಂದು ದೊಡ್ಡ ಸಾಧನೆಯೆಂದರೆ ಸಾಂಸ್ಕೃತಿಕ ಸಂಪತ್ತಿನ ಸಂರಕ್ಷಣೆ. ಜಿಲ್ಲಾ ವಸ್ತುಸಂಗ್ರಹಾಲಯವೊಂದನ್ನು ಬೆಳಸಿದ ಕೀರ್ತಿ ಅವರದು. ಜಿಲ್ಲೆಯ ನಾನಾ ಭಾಗಗಳಲ್ಲಿ ಮೂಲೆಗುಂಪಾಗಿದ್ದ ಅನೇಕ ಅಪೂರ್ವ ವಸ್ತುಗಳನ್ನು ಅವರು ಸಂಗ್ರಹಿಸಿ ತಂದು ಜಿಲ್ಲಾ ಕೇಂದ್ರದಲ್ಲಿ ವಸ್ತುಸಂಗ್ರಹಾಲಯವೊಂದನ್ನು ಸ್ಥಾಪಿಸಿದರು. ಆ ವಸ್ತು ಸಂಗ್ರಹಾಲಯದ ಉದ್ಘಾಟನೆಗಾಗಿ ಹಿರಿಯ ಕವಿ 'ಬೇಂದ್ರೆ'ಯವರನ್ನು ಶಿವಮೊಗ್ಗಕ್ಕೆ ಆಹ್ವಾನಿಸಿದ್ದರು.

ನಾಗೇಗೌಡರು ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿದ್ದಾಗ ನನ್ನನ್ನು ಒಮ್ಮೆ ಇದ್ದಕ್ಕಿದ್ದಂತೆಯೇ ಅವರ ಮನೆಗೆ ಬರಮಾಡಿಕೊಂಡಿದ್ದರು. ಅವರ ಬಂಧುಗಳೊಬ್ಬ ರಿಗೆ ನನ್ನನ್ನು ಪರಿಚಯ ಮಾಡಿಕೊಟ್ಟರು. ಆ ಮಾತುಕಥೆಗಳ ಹಿನ್ನೆಲೆಯಲ್ಲಿ ನಾನು ಯಾವ ವಿಶೇಷವಾದ ಅರ್ಥವನ್ನು ಗ್ರಹಿಸಲಿಲ್ಲ. ಎರಡು ಮೂರು ದಿನಗಳ ಅನಂತರ ನಾಗೇಗೌಡರು ಮತ್ತೆ ನನ್ನನ್ನು ಕರೆಸಿಕೊಂಡರು. ಬಿಚ್ಚುಮನಸ್ಸಿನಿಂದ ಕೆಲವು ವೈಯಕ್ತಿಕ ವಿಷಯಗಳನ್ನು ಪ್ರಸ್ತಾಪಿಸಿದರು. ನನ್ನ ಹಿತೈಷಿಗಳಾದ ಅವರ ಮಾತನ್ನು ನಾನು ತಳ್ಳಿಹಾಕದಿದ್ದರೂ ಆಗಿನ್ನೂ ನನ್ನ ಬದುಕು ಒಂದು ನೆಲೆಯನ್ನು ಕಾಣದಿದ್ದುದ ರಿಂದ ಮುಂದೆ ನೋಡೋಣ ಎಂದು ಹೇಳಿ ಮರಳಿದೆ.

ಶಿವಮೊಗ್ಗೆಯ ಜಿಲ್ಲಾಧಿಕಾರಿಯಾಗಿದ್ದಾಗ ಕಲಾವಿದ ತಿಪ್ಪೇಸ್ವಾಮಿಯವರು, ಅವರನ್ನು ಕಾಣಲು ಹೋಗಿದ್ದರು. ಅವರ ಚಿತ್ರಗಳ ಬಗ್ಗೆ ನಾಗೇಗೌಡರಿಗೆ ವಿಶೇಷ ವಾದ ಆಸಕ್ತಿ. ಪ್ರವಾಸಿ ಕಂಡ ಇಂಡಿಯಾದ ಮೊದಲನೆ ಸಂಪುಟಕ್ಕೆ ಅವರಿಂದಲೇ ಚಿತ್ರಗಳನ್ನು ಬರೆಸಿದ್ದರು. ಶ್ರೀ ತಿಪ್ಪೇಸ್ವಾಮಿಗಳು ಮೈಸೂರಿಗೆ ಮರಳುವ ಮುನ್ನ ನಾಗೇಗೌಡರೂ ಬೆಂಗಳೂರಿಗೆ ಹೋಗಬೇಕಾಗಿದ್ದುದರಿಂದ ಅವರನ್ನು ಜೊತೆಯಲ್ಲೇ ಕರೆದುಕೊಂಡು ಬಂದರು. ಅರಸೀಕೆರೆಯನ್ನು ದಾಟಿದ ಮೇಲೆ ಒಂಬತ್ತು ಮೈಲಿಗಳ ಪ್ರಯಾಣ. ತಿಪಟೂರು ಹಾದಿಯಲ್ಲಿ ತೆಂಗಿನತೋಟಗಳ ನಡುವೆ ಇದ್ದ ಒಂದು ಪುಟ್ಟ ಗ್ರಾಮ. ಅದರಲ್ಲೊಂದು ದೊಡ್ಡ ಮನೆ. ಊಟ ಉಪಚಾರಗಳು ಆದವು. ಕೊನೆ ಯಲ್ಲಿ ನಾಗೇಗೌಡರು ಮನೆಯ ಎಲ್ಲರನ್ನೂ ಕಲಾವಿದರಿಗೆ ಪರಿಚಯ ಮಾಡಿಕೊಟ್ಟರು. ಅಲ್ಲಿನ ಸೌಜನ್ಯ, ಸಂಸ್ಕೃತಿ, ಅತಿಥಿ ಸತ್ಕಾರದ ವೈಖರಿಯನ್ನು ನೋಡಿ ಕಲಾವಿದರು ತಲೆದೂಗಿದರು. ತುಂಬಿದ ಮನೆ. ಅಣ್ಣ ತಮ್ಮಂದಿರಲ್ಲಿ ಅನ್ಯೋನ್ಯತೆ! ಆದರ್ಶ ಸಂಸಾರ. ಮೈಸೂರಿಗೆ ಮರಳಿದ ಮೇಲೆ ನನ್ನೊಡನೆ ಆ ವಿಷಯವನ್ನೆತ್ತಿಕೊಂಡರು ತಿಪ್ಪೇ ಸ್ವಾಮಿಯವರು. ಆದರೂ ನಾನು ಒಂದೆರಡು ವರ್ಷಗಳ ಕಾಲ ಆ ವಿಷಯವನ್ನು ಅನಿವಾರ್ಯವಾಗಿ ಮುಂದೂಡಲೇಬೇಕಾಯಿತು. ಕಲಾವಿದರು ಬಿಡಲಿಲ್ಲ. ಆ ಊರಿಗೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿಯ ಜನ ತೋಟ ತುಡಿಕೆ, ಅಂಗಡಿ ಮುಂಗಟ್ಟು ಎಲ್ಲವನ್ನೂ ಪರಿಚಯಿಸಿದರು. ಒಂದೆರಡು ವರ್ಷ ಹೀಗೆಯೇ ತಳ್ಳುತ್ತಾ ಬಂದೆ.

೧೯೬೩ರ ಡಿಸೆಂಬರ್ ಇರಬೇಕು, ಬೆಂಗಳೂರಲ್ಲಿ ಮಲ್ಲೇಶ್ವರಂ ಕಾರ್ಪೊರೇಷನ್ ಪ್ರೌಢಶಾಲೆಯ ಅಧ್ಯಾಪಕನಾಗಿದ್ದೆ. ಒಂದು ದಿನ ಎಂದಿನಂತೆ ಶಾಲೆಗೆ ಹೊರಟೆ. ಶಾಲೆಯ ಹೊರಭಾಗದಲ್ಲಿ ಸರ್ಕಾರಿ ವಾಹನವೊಂದು ನಿಂತಿತ್ತು. ಯಾವುದೋ ವಾಹನ ನಿಂತಿದೆ ಎಂದುಕೊಂಡು ನಾನು ನೇರವಾಗಿ ಶಾಲೆಯ ಒಳಗೆ ಹೊರಟೆ. ಹಿಂದಿನಿಂದ ಯಾರೋ ಬಂದು ಕರೆದರು. ನಾಗೇಗೌಡರ ವಾಹನದ ಚಾಲಕ ಎಂದು ತಿಳಿದು ಆ ವ್ಯಾನಿನತ್ತ ಹೋದೆ. ಗೌಡರು ಮುಗುಳ್ನಗೆಯಿಂದ ನನ್ನನ್ನು ಬರಮಾಡಿಕೊಂಡು ಒಳಗೆ ಕೂರಿಸಿ ಕೊಂಡರು. ಅದೂ ಇದೂ ಮಾತನಾಡಿ ಮುಖ್ಯ ವಿಷಯಕ್ಕೆ ಬಂದರು. "ಒಳ್ಳೆ ಸುಸಂಸ್ಕೃತ ಮನೆ, ತುಂಬಾ ಒಳ್ಳೆಯ ಜನ, ಯೋಗ್ಯವಾದ ವಧು, ಏಕೆ ಹಿಂದೆ ಮುಂದೆ ನೋಡುತ್ತೀರಿ" ಎಂದು ನುಡಿದರು. ಅವರ ಮಾತಿನ ರೀತಿಯಲ್ಲಿ ಎಲ್ಲಿಯೂ ಒತ್ತಾಯದ ಧಾಟಿ ಇರಲಿಲ್ಲ. ಆತ್ಮೀಯ ಹಿರಿಯರಂತೆ ಅವರು ನಡೆದುಕೊಂಡರು. ನಾನು ಅವರ ಹಿರಿತನಕ್ಕೆ ಮಣಿದು ಎಷ್ಟೋ ದಿನಗಳಿಂದ ತಳ್ಳಿಕೊಂಡು ಬಂದಿದ್ದ ವಿಷಯಕ್ಕೆ ಒಪ್ಪಿಗೆಯನ್ನು ನೀಡಿದೆ. ಬಹುಶಃ ನಾಗೇಗೌಡರಿಗೆ ಪರಮಸಂತೋಷವಾಯಿತೆಂಬುದು ಅವರ ಮುಖ ಮುದ್ರೆಯಲ್ಲಿ ವ್ಯಕ್ತವಾಗುತ್ತಿತ್ತು. ಅರವತ್ತನಾಲ್ಕರ ಮಾರ್ಚಿಯಲ್ಲಿ ಅವರ ಸಾಹಿತ್ಯಕ ಬಂಧುವಾಗಿದ್ದ ನಾನು, ಈಗ ಹತ್ತಿರದ ನೆಂಟನೂ ಆದೆ.

ನಾಗೇಗೌಡರು ಕಿರಿಗಂಚಿಗೆ ನಮ್ಮ ಊರಿಗೂ ಅನಿರೀಕ್ಷಿತವಾಗಿ ಬಂದರು. ಆಗ ಅವರದೊಂದು ಪುಟ್ಟ ಕಾರು. ಹಿರಿಯ ಕವಿ ಡಿ. ಆರ್. ರಾಮಯ್ಯನವರೂ ಅಂದು ಅಲ್ಲಿದ್ದರು. ನಮ್ಮ ಹಳ್ಳಿಯಲ್ಲಿ ಮೊದಲ ಬಾರಿಗೆ ಆ ಹಿರಿಯರಿಬ್ಬರೂ ಸೇರಿದುದು ನನಗೆ ತುಂಬಾ ಅಭಿಮಾನದ ವಿಷಯವಾಯಿತು. ನನ್ನ ಸಾಹಿತ್ಯದಲ್ಲಿ ವರ್ಣಿತವಾಗಿದ್ದ ಜೀರಹಳ್ಳಿಯ ಸುತ್ತಿನ ಹೊಲ ಬೈಲುಗಳನ್ನು, ಬೆಟ್ಟಗುಡ್ಡಗಳನ್ನು, ನದಿಕೆರೆಗಳನ್ನೂ ನಾಗೇಗೌಡರಿಗೆ ದೂರದಿಂದಲೇ ನಾನು ಪರಿಚಯಿಸಿದೆ. ಅವರ ಕಾರಿನಲ್ಲಿ ನಮ್ಮ ಬಂಧುಗಳ ಊರಾದ ಕೊನೇಹಳ್ಳಿಗೆ ಹೊಸದಂಪತಿಗಳು ಪ್ರಯಾಣ ಮಾಡಿದೆವು. ದಾರಿ ಯುದ್ದಕ್ಕೂ ಸಾಹಿತ್ಯಕ ಚರ್ಚೆ. ಪ್ರವಾಸಿಕಂಡ ಇಂಡಿಯಾದ ಕೆಲವು ಆಕರ್ಷಕ ವಿಷಯ ಗಳನೆತ್ತಿಕೊಂಡು ಕನ್ನಡದಲ್ಲಿ ಈ ಸಂಪುಟಗಳು ಎಂಥ ಮೌಲಿಕವಾದ ಕೊಡುಗೆಗಳಾಗಿ ನಿಲ್ಲುತ್ತವೆ, ಎಂಬುದನ್ನು ನಾನು ಪ್ರಸ್ತಾಪಿಸಿದೆ. ಅವರು ಮಾಹಿತಿ ಸಂಗ್ರಹದ ತೊಡಕುಗಳನ್ನು ಪರಿಶ್ರಮವನ್ನು ಸಂಪಾದನೆಯ ಕಷ್ಟಗಳನ್ನು ವಿವರಿಸಿದರು. ಮಾಹಿತಿ ಸಂಗ್ರಹಕ್ಕಾಗಿ ಭಾರತದ ನಾನಾ ನಗರಗಳ ಗ್ರಂಥಾಲಯಗಳಿಗೆ ಖುದ್ದಾಗಿ ಹೋಗಿಬಂದು ಅಧ್ಯಯನ ನಡೆಸಿದ ವಿಚಾರವನ್ನು ಕೇಳಿ ನಾನಂತೂ ಮೂಕ ವಿಸ್ಮಿತನಾದೆ. ಈ ಗ್ರಂಥ ರಚನೆಗೆ ಎಷ್ಟು ಕಾಲ, ಎಷ್ಟು ಹಣ ವೆಚ್ಚವಾಗಿದೆ ಎಂಬುದನ್ನು ನಾನು ಊಹಿಸಿಕೊಳ್ಳ ಬಹುದಾಗಿತ್ತು. ನಾಗೇಗೌಡರು ಆಗ ಚಿಕ್ಕಮಗಳೂರು ಜಿಲ್ಲಾಧಿಕಾರಿ. ಅತ್ಯಂತ ಸಮರ್ಥರಾದ ಜನಪ್ರಿಯರಾದ ಜಿಲ್ಲಾಧಿಕಾರಿ ಎಂದು ಆ ವೇಳೆಗಾಗಲೇ ಹೆಸರು ಪಡೆ ದಿದ್ದರು. ಇಂತಹ ಜವಾಬ್ದಾರಿಯುತವಾದ ಸ್ಥಾನದಲ್ಲಿದ್ದು ಒಂದು ತಪಸ್ಸಿನಂತೆ

ಪ್ರವಾಸಿಕಂಡ ಇಂಡಿಯಾದ ಮಹಾ ಸಂಪುಟಗಳ ರಚನೆಯನ್ನು ಅವರು ನಡೆಸಿದುದು ಆಶ್ಚರ್ಯದ ವಿಷಯವೇ ಸರಿ. ಅದು ಕನ್ನಡದ ಮಹಾಪುಣ್ಯ.

ನಾಗೇಗೌಡರು ನಮ್ಮನ್ನು ಚಿಕ್ಕಮಗಳೂರಿಗೆ ಬರಮಾಡಿಕೊಂಡರು. ಜಿಲ್ಲಾಧಿಕಾರಿಗಳ ದೊಡ್ಡ ಬಂಗಲೆಯ ಸುಖವನ್ನು ನಾವು ಕೆಲವು ದಿನ ಅನುಭವಿಸಿದೆವು. ಅವಕ್ಕಿಂತ ಮುಖ್ಯವಾಗಿ ಅವರ ಆದರ, ಆತಿಥ್ಯ ನಮ್ಮನ್ನು ಬೆರಗುಗೊಳಿಸಿತು. ಚಿಕ್ಕಮಗಳೂರು ಜಿಲ್ಲೆ ನಿಸರ್ಗರಮಣೀಯತೆಗೆ ಹೆಸರಾದ ಪ್ರದೇಶ. ಪರ್ವತಾರಣ್ಯಗಳ ಭೀಮದೃಶ್ಯವನ್ನು ನೋಡಲು ಈ ಜಿಲ್ಲೆಗೆ ಹೋಗಬೇಕು. ಬಾಬಾಬುಡನ್‌ಗಿರಿ, ಕುದುರೆಮುಖ, ಕೊಡಚಾದ್ರಿ, ಕೆಮ್ಮಣ್ಣುಗುಂಡಿ ಪರ್ವತಶ್ರೇಣಿ ಮುಂತಾದುವು ಬಯಲು ಸೀಮೆಯ ನನ್ನಂಥವನನ್ನು ದಂಗುಬಡಿಸಿದುವು. ನಾಗೇಗೌಡರು ನಮ್ಮನ್ನು ಕೆಮ್ಮಣ್ಣುಗುಂಡಿಗೆ ಕರೆದೊಯ್ದರು. ಜಿಲ್ಲಾಧಿಕಾರಿಗಳ ಅತಿಥಿಗಳಾದ ನಮಗೆ ವಿಶೇಷವಾದ ಸತ್ಕಾರ. ಶ್ರೀಕೃಷ್ಣರಾಜೇಂದ್ರ ಗಿರಿಧಾಮದಲ್ಲಿ ತಂಗಣೆ. ಕೆಮ್ಮಣ್ಣುಗುಂಡಿಯ ರಮ್ಯ ನಿಸರ್ಗ, ಪ್ರವಾಸಿಗರ ಮನಸ್ಸನ್ನು ಸೂರೆಗೊಳ್ಳುವ ದೃಶ್ಯಾವಳಿ. ಅಲ್ಲಿನ ಒಂದು ದಿನದ ನಮ್ಮ ತಂಗಣೆ ವಿಶಿಷ್ಟವಾದ ಅನುಭವವಾಗಿ ಈಗಲೂ ನನ್ನ ಮನಸ್ಸಿನಲ್ಲಿ ಉಳಿದಿದೆ.

ನಾಗೇಗೌಡರ ಜೊತೆಯಲ್ಲಿ ಪ್ರವಾಸ ಮಾಡುವುದೇ ಒಂದು ಆನಂದದ ವಿಷಯ. ಚಿಕ್ಕಮಗಳೂರಿನ ಅನೇಕ ಕಡೆಗಳಿಗೆ ನಮ್ಮನ್ನು ಕರೆದೊಯ್ದರು. ಅಲ್ಲಿಯ ಕಾಫಿಯ ತೋಟಗಳು, ಟೀ ತೋಟಗಳು, ಕಣಿವೆಗಳಲ್ಲಿ ಹಸಿರನ್ನು ಚೆಲ್ಲಿದಂತೆ ತೋರುತ್ತಿದ್ದ ಗದ್ದೆಯ ಬಯಲುಗಳು, ದಟ್ಟವಾದ ಕಾಡುಗಳು ಇವುಗಳ ನಡುವೆ ಸಂಚರಿಸುವುದೇ ಒಂದು ರೀತಿಯ ರೋಮಾಂಚಕಾರಕ ವಿಷಯ. ನಾಗೇಗೌಡರ ಜೊತೆಯಲ್ಲಿ 'ಕಳಸ' ಪ್ರಾಂತಕ್ಕೆ ನಾವು ಹೋಗುವ ಅವಕಾಶ ಲಭ್ಯವಾಯಿತು. ಅಲ್ಲಿನ ಪ್ರಕೃತಿ ಸೌಂದರ್ಯವೂ ಅಸದಳವಾದುದೆ. ನಾಗೇಗೌಡರು ಕಳಸದ ದೇವಾಲಯಕ್ಕೆ ನಮ್ಮನ್ನು ಕರೆದೊಯ್ದರು. ಅವರು ಅಲ್ಲಿಗೆ ಕೇವಲ ಭಕ್ತರಾಗಿ ಹೋದವರಲ್ಲ. ಆ ದೇಗುಲ, ಆ ಸ್ಥಳದ ಹಿನ್ನೆಲೆ, ಅವುಗಳ ಮೂಲ ಜಾಲವನ್ನೆಲ್ಲ ಅವರು ಶೋಧಿಸಿದರು. ಕಳಸದ ದೇವಾಲಯದ ಬಗ್ಗೆ ಅನೇಕ ಸ್ವಾರಸ್ಯವಾದ ವಿಷಯಗಳನ್ನು ಅಲ್ಲಿನ ಕೆಲವು ಅನುಭವಿಗಳು ವಿವರಿಸಿದರು. ಮುಂದೆ ನಾವು ಹೊರನಾಡು ಎಂಬ ಭಾಗಕ್ಕೆ ಹೋಗಿದ್ದೆವು. ಇದೊಂದು ನಿಸರ್ಗದ ಬೆಡಗಿನ ಬೀಡು. ಯಾವುದೋ ಹೊರ ಪ್ರಾಂತದಲ್ಲಿಯೋ ನಾವು ಇದ್ದ ಅನುಭವವನ್ನು ಅವು ತಂದುಕೊಡುತ್ತವೆ. ಅಲ್ಲಿನ ಪರ್ವತಶ್ರೇಣಿಗಳ ಆಕರ್ಷಣೆ ಮರೆಯಲಾಗದಂತಹದ್ದು. ಹೊರನಾಡಿನಲ್ಲಿ ಒಬ್ಬ ಪಂಡಿತರು. ಅವರು ಭೂಮಿಯ ರಚನೆಯ ಬಗ್ಗೆ ಮತ್ತು ಅದರ ಅಳಿವು ಉಳಿವಿನ ಬಗ್ಗೆ ತಮ್ಮದೇ ಆದ ಸಿದ್ಧಾಂತವನ್ನು ಹೊಂದಿದ್ದಂತಹವರು. ನಾಗೇಗೌಡರು ಅಲ್ಲಿಗೂ ನಮ್ಮನ್ನು ಕರೆದೊಯ್ದರು. ಅವರ ಸಂಶೋಧ

ನೆಗಳನ್ನು ಪರಿಚಯಿಸಿದರು. ಅನೇಕ ಕುತೂಹಲಕಾರಿ ವಿಷಯಗಳನ್ನು ಕೇಳಿ ಆ ಬಗ್ಗೆ ನಾವು ಚರ್ಚಿಸಿದೆವು.

ಚಿಕ್ಕಮಗಳೂರಿಗೆ ಹಿಂದಿರುಗುವಾಗ ಸಂಜೆಯಾಗುತ್ತಿತ್ತು. ಮಾರ್ಗಮಧ್ಯದಲ್ಲಿನ ಯಾವ ಗಳಿಗೆಯೂ ನಮಗೆ ವ್ಯರ್ಥವಾಗಲಿಲ್ಲ. ಆ ನಿಸರ್ಗದ ನೆಲೆವೀಡಿನಲ್ಲಿ ಹಾದು ಬರುತ್ತಿದ್ದ ನಮಗೆ ಕುವೆಂಪುರವರ ಪ್ರಕೃತಿ ಗೀತೆಗಳು ಒಂದೊಂದಾಗಿ ನೆನಪಿಗೆ ಬರತೊಡಗಿದುವು. "ಹೋಗುವೆನು ನಾ" "ಬಾ ಫಾಲ್ಗುಣ ದರ್ಶನಕೆ." "ಪಕ್ಷಿಕಾಶಿ" ಮೊದಲಾದ ಗೀತೆಗಳನ್ನು ಮೆಲಕು ಹಾಕುತ್ತಾ ಬರುತ್ತಿದ್ದೆವು. ಅಲ್ಲೊಂದು ಕಡೆ ನಾಗೇಗೌಡರು ಕಾರನ್ನು ಎಡಕ್ಕೆ ತಿರುಗಿಸುವಂತೆ ಚಾಲಕ ರಂಗಪ್ಪನಿಗೆ ತಿಳಿಸಿದರು. ಕಾರು ಆ ಮಲೆನಾಡಿನ ಕಿರಿದಾದ ದಾರಿಯೊಂದಕ್ಕೆ ಸಾಗಿ ಒಂದು ಮನೆಯ ಮುಂದೆ ನಿಂತುಕೊಂಡಿತು. ನಾಗೇಗೌಡರು ಇಲ್ಲಿ ಅಪೂರ್ವವಾದ ವಸ್ತುಗಳನ್ನು ತೋರಿಸುತ್ತೇನೆ ಎಂದು ಒಂದು ಮನೆಗೆ ಕರೆದೊಯ್ದರು. ಅಲ್ಲಿದ್ದ ವ್ಯಕ್ತಿಯೊಬ್ಬರು ಜಿಲ್ಲಾಧಿಕಾರಿಗಳನ್ನು ಕಂಡು ಹರ್ಷತುಂದಿಲರಾಗಿ ನಮ್ಮನ್ನು ಸ್ವಾಗತಿಸಿದರು. ಅವರ ಸಂಗ್ರಹದಿಂದ ಅಪೂರ್ವವಾದ ನಾಣ್ಯಗಳನ್ನು ತೋರಿಸಿದರು ಅನೇಕ ರಾಜಮನೆತನಗಳ ಆ ನಾಣ್ಯಗಳ ವೈವಿಧ್ಯಕ್ಕೆ ನಾವು ಸಹಜವಾಗಿ ಬೆರಗಾದೆವು. ಮಲೆನಾಡಿನ ಮೂಲೆಯೊಂದರಲ್ಲಿ ಒಂದು ಜೀವಮಾನದ ಸಾಧನೆಯಾಗಿ ಅಂತಹ ಸಂಗ್ರಹ ಕಾರ್ಯವನ್ನು ನಡೆಸಿದ್ದವರೊಬ್ಬರನ್ನು ಗುರುತಿಸಿ ಅವರನ್ನು ಮೆಚ್ಚಿ ಪ್ರೋತ್ಸಾಹಿಸಿದ್ದರು ಈ ಜಿಲ್ಲಾಧಿಕಾರಿ. ಅಷ್ಟೆ ಅಲ್ಲ ಆಪ್ತರನ್ನು ಕರೆದೊಯ್ದು ಆ ವ್ಯಕ್ತಿಯ ಪರಿಚಯ ಮಾಡಿಕೊಟ್ಟು; ಮತ್ತಷ್ಟು ಹುರಿದುಂಬಿಸುವ ಸಂಸ್ಕೃತಿ ಪ್ರೇಮಿಯೆನಿಸಿದರು.

ಅಲ್ಲಿಂದ ಮುಂದೆ ಕಾರು ಹಳುವಿನ ನಡುವೆ ಸಾಗಿತು. ಅಲ್ಲೊಂದು ಕಡೆ ಹಣ್ಣುಹಣ್ಣಾದ ಒಬ್ಬ ಮುದುಕ. ಅವನ ಬಟ್ಟೆಯನ್ನು ನೋಡಿದರೆ ಕಡುಬಡವನಂತೆ ತೋರುತ್ತಿದ್ದ. ರಸ್ತೆಯ ಬದಿಯಲ್ಲಿ ನಿಂತು, ಕೈಯಲ್ಲಿ ಕಾಗದವೊಂದನ್ನು ಹಿಡಿದುಕೊಂಡು ನಿಂತಿದ್ದವನು, ನಮ್ಮ ಕಾರು ಸಮೀಪಿಸುತ್ತಿದ್ದಂತೆಯೇ ಕೈ ತೋರಿಸಿದ. ಎರಡು ಕೈಗಳನ್ನು ಜೋಡಿಸಿ ಮುಗಿದ. ಡ್ರೈವರ್ ಕಾರನ್ನು ನಿಲ್ಲಿಸದೆ ಹತ್ತುಗಜ ಮುಂದೆ ಓಡಿಸಿದ. ನನ್ನೊಡನೆ ಮಾತನಾಡುತ್ತಿದ್ದ ನಾಗೇಗೌಡರು ಕೂಡಲೇ ಅದನ್ನು ಗಮನಿಸಿ ಕಾರನ್ನು ನಿಲ್ಲಿಸುವಂತೆ ಸೂಚಿಸಿದರು. ಕಾರು ಆ ಮುದುಕ ನಿಂತಿದ್ದಲ್ಲಿಗೆ ಹಿಂದುವರಿಯಿತು. ನಾಗೇಗೌಡರು ವಿನಯದಿಂದ ಮಾತನಾಡಿಸಿದರು. ಅವನು ಅತ್ಯಂತ ಸೌಜನ್ಯದಿಂದ ವಿನಮ್ರಭಾವದಿಂದ ತನ್ನ ಕಷ್ಟವನ್ನು ತೋಡಿಕೊಂಡು ಕಣ್ಣೀರಿಟ್ಟ. ಅರ್ಜಿಯನ್ನು ಸಲ್ಲಿಸಿ ಜಿಲ್ಲಾಧಿಕಾರಿಗಳ ನೆರವನ್ನು ಕೋರಿದ. ಅವರು ಅದನ್ನು ಸ್ವೀಕರಿಸಿ ಖಂಡಿತಾ ಸಹಾಯ ಮಾಡುವುದಾಗಿ ತಿಳಿಸಿದರು. ನಾಗೇಗೌಡರನ್ನು ಹತ್ತಿರದಿಂದ ಬಲ್ಲ ಯಾರಿಗಾದರೂ ಇಂಥ ಹಲವಾರು ಅನುಭವಗಳು ಆಗದೇ ಇರವು. ನಾಗೇಗೌಡರಿಗೆ ಶ್ರೀಮಂತರ ಬಗ್ಗೆ ದ್ವೇಷವಿಲ್ಲ. ದರ್ಪದಬ್ಬಾಳಿಕೆಗಳ ವ್ಯಕ್ತಿಗಳನ್ನು ಕಂಡಾಗ ಮಾತ್ರ

ಸಹಿಸರು. ಬಡವರಿಗೆ ದೀನದಲಿತರಿಗೆ ಅವರು ನ್ಯಾಯವನ್ನು ದೊರಕಿಸಿಕೊಡುವಲ್ಲಿ ಯಾವ ಶ್ರೀಮಂತಿಕೆಗೂ ಸೊಪ್ಪು ಹಾಕಿದವರಲ್ಲ. ಇಂಥ ಕೆಲವು ನಿದರ್ಶನಗಳನ್ನು ಕೊಡಬಹುದು. ನಮ್ಮ ಜೊತೆಯಲ್ಲಿ ಪ್ರವಾಸ ಮಾಡುತ್ತಿದ್ದಾಗಲೇ ಚಿಕ್ಕಮಗಳೂರು ಜಿಲ್ಲೆಯ ಒಬ್ಬ ಪ್ರಭಾವಿತ ವ್ಯಕ್ತಿ, ಯಾರದೋ ಜಮೀನಿನ ಮೇಲೆ ಕಣ್ಣುಹಾಕಿ ಜಿಲ್ಲಾಧಿಕಾರಿಗಳನ್ನು ಸ್ಥಳ ಪರಿಶೀಲನೆಗೆ ಬರಮಾಡಿಕೊಂಡಿದ್ದರು. ಎಲ್ಲವನ್ನು ಸಾವಧಾನದಿಂದ ಪರಿಶೀಲಿಸಿದ ಇವರು ಸ್ಥಳದಲ್ಲಿ ಯಾವುದೇ ರೀತಿಯ ಉದ್ವೇಗಕ್ಕೊಳಗಾಗದೆ ಹಿಂದಿರುಗಿದರು. ಆದರೆ ದಾರಿಯಲ್ಲಿ ಅದರ ಹಿನ್ನೆಲೆಯನ್ನು ವಿವರಿಸಿ ಆ ಬಡಪಾಯಿಯ ಕಡೆಗೇ ತಮ್ಮ ಒಲವನ್ನು ವ್ಯಕ್ತಪಡಿಸಿದರು.

ಶಿವಮೊಗ್ಗ ಮತ್ತು ಚಿಕ್ಕಮಗಳೂರು ಎರಡು ಕಡೆಗಳಲ್ಲೂ ನಾಗೇಗೌಡರ ಈ ನಿರ್ದಾಕ್ಷಿಣ್ಯ ಪ್ರವೃತ್ತಿ ಕೆಲವರ ಆಗ್ರಹಕ್ಕೆ ಗುರಿಯಾಗಿದ್ದರೂ, ಜನ ಸಾಮಾನ್ಯರಲ್ಲಿ ಅವರು ಇಂದಿಗೂ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿಯೇ ನೆನಪಿನಲ್ಲಿ ಉಳಿದಿದ್ದಾರೆ. ಅನೇಕ ಜನ ಬಡವರ ಕಣ್ಣೀರನ್ನು ಒರೆಸಿದ ದೊಡ್ಡ ಅಂತಃಕರಣದ ವ್ಯಕ್ತಿ ಅವರು. ಇದಕ್ಕೆ ಇನ್ನು ಉತ್ತಮ ಉದಾಹರಣೆಗಳೆಂದರೆ ಅವರು ಲೇಬರ್ ಕಮಿಷನರ್ ಆಗಿದ್ದಾಗ, ಲೋಕ ಸೇವಾ ಆಯೋಗದ ಸದಸ್ಯರಾಗಿದ್ದಾಗ ಅನೇಕ ಅಸಹಾಯಕರಿಗೆ ಎಸಗಿದ ಸೇವೆಯನ್ನು ಇಂದಿಗೂ ನಾನು ನೆನೆಸಿಕೊಳ್ಳುತ್ತೇನೆ. ಒಂದು ನಿದರ್ಶನವನ್ನು ಇಲ್ಲಿ ಹೇಳಬೇಕು. ನಮ್ಮೂರಿನ ತೀರಾ ಕಡುಬಡವಾದ ವ್ಯಕ್ತಿಯೊಬ್ಬರು ತನ್ನ ಮಗನಿಗೆ ಒಂದು ಕೆಲಸವನ್ನು ಕೊಡಿಸಬೇಕೆಂದು ನನಗೆ ಬಹಳ ದಿನಗಳಿಂದಲೂ ಹೇಳುತ್ತಿದ್ದರು. ನಾನು ನಾಗೇಗೌಡರನ್ನು ಕಂಡಾಗಲೆಲ್ಲ ಆ ವಿಷಯವನ್ನು ಅವರ ಕಿವಿಯ ಮೇಲೆ ಹಾಕುತ್ತಿದ್ದೆ. ಅತ್ಯಂತ ಸಾವಧಾನದಿಂದ ಅವರು ಕೇಳಿ ನೋಡೋಣ ಎಂದು ಹೇಳುತ್ತಿದ್ದರು. ನಮ್ಮ ಊರಿನ ಸಮೀಪದ 'ಹದ್ದಿನ ಕಲ್ಲು' ಪ್ರಕೃತಿ ಸೌಂದರ್ಯಕ್ಕೆ ಹೆಸರಾದ ನೆಲೆ. ಅದನ್ನು ಒಮ್ಮೆ ನೋಡಬೇಕೆಂದು ನಾನು ಅವರಿಗೆ ಕಾಗದ ಬರೆದೆ. ಒಮ್ಮೆ ಆ ಕಡೆ ಬರುವುದಾಗಿ ತಿಳಿಸಿದರು. ಬೆಂಗಳೂರಿನಿಂದ ಅವರು ಬರುವ ದಿನವನ್ನು ತಿಳಿದು ಮೈಸೂರಿನಿಂದ ಕೆಲವು ಮಿತ್ರರು ಅಲ್ಲಿಗೆ ಹೋದೆವು. ಬೆಟ್ಟದ ತಪ್ಪಲಲ್ಲಿ ಊರಿನವರ ಊಟ ಉಪಚಾರಗಳು ನಡೆದವು. ಜೊತೆಗೆ ಜನಪದ ಕಲೆಗೆ ಹೆಸರಾದ ಚೋರಸಂದ್ರದ ಕಲಾವಿದರು ಪಟಾ ಕುಣಿತ, ಭಾಗವಂತಿಕೆ ಮೇಳ, ಸೋಮನ ಕುಣಿತ ಮುಂತಾದುವನ್ನು ಪ್ರದರ್ಶಿಸಿದರು. ಹದ್ದಿನಕಲ್ಲು, ಹನುಮಂತರಾಯನ ಕ್ಷೇತ್ರ, ಬೆಟ್ಟದ ನೆತ್ತಿಯಲ್ಲಿ ಹನುಮಂತರಾಯ ನೆಲೆಸಿರುವ ಕುರುಹಾಗಿ ಒಂದು ಶಿಲಾಸ್ತಂಭ. ಬೆಟ್ಟ ಅತ್ಯಂತ ಎತ್ತರವಾಗಿ ಕಡಿದಾಗಿ ನೋಡಿದವರ ಎದೆಯನ್ನು ತಲ್ಲಣಗೊಳಿಸುವಂತಿದೆ. ಮೆಟ್ಟಿಲುಗಳನ್ನು ಹತ್ತಿ ಸಾಗುವುದೆಂದರೆ ದೊಡ್ಡ ಸಾಹಸದ ವಿಷಯ. ನಾಗೇಗೌಡರು ನಮ್ಮ ಜೊತೆಯಲ್ಲಿ ಬೆಟ್ಟವನ್ನು ಹತ್ತಿದರು. ಭೂತಗಳನ್ನು ಬಿಡಿಸಲು ಈ ಕ್ಷೇತ್ರ ಹೆಸರಾದುದು. ಮೆಟ್ಟಿಲ ಉದ್ದಕ್ಕೂ ಬಂಡೆಗಳ ಮೇಲೆ ಗುಳಿಯ ಕಲ್ಲುಗಳು. ನಮ್ಮೂರಿನ "ಆ ವ್ಯಕ್ತಿಯನ್ನು" ಇಲ್ಲಿಗೆ ಬರುವಂತೆ

ತಿಳಿಸಿದ್ದೆ. ನಾಗೇಗೌಡರಿಗೆ ಅವರನ್ನು ಪರಿಚಯ ಮಾಡಿಕೊಟ್ಟೆ. ಒಳ್ಳೆಯ ಅನುಭವಿಯೂ ಕುಶಲಿಯಾದ ಮಾತುಗಾರನೂ ಆದ ಆ ವ್ಯಕ್ತಿ ಅಪೂರ್ವ ರೀತಿಯಲ್ಲಿ ಅಲ್ಲಿನ ಸ್ವಾರಸ್ಯ ಗಳನ್ನು ವಿವರಿಸುತ್ತ ನಾಗೇಗೌಡರ ಹೃದಯವನ್ನು ಗೆದ್ದುಕೊಂಡ. ನಾಗೇಗೌಡರು ಆ ವ್ಯಕ್ತಿಯ ಬಗ್ಗೆ ತುಂಬಾ ಆಸಕ್ತಿಯನ್ನು ತೋರಿದರು. ವಿಷಯವನ್ನು ಬೆದಕಿ ಬೆದಕಿ ಕೇಳುತ್ತಿದ್ದರು. ಇದೇ ಸಮಯವನ್ನು ಸಾಧಿಸಿ, ನಾನು ಅವರ ಮಗನಿಗೊಂದು ಕೆಲಸ ಕೊಡಿಸಬೇಕೆಂದು ನೆನಪು ಮಾಡಿದೆ ಅವರ ಜೊತೆಯಲ್ಲಿಯೇ ಅವರ ಕಾರಿನಲ್ಲಿಯೇ ಆ ವ್ಯಕ್ತಿ ಬೆಂಗಳೂರಿಗೆ ಹೋಗುವ ಅವಕಾಶ ದೊರೆಯಿತು. ಅವರ ಮಗನಿಗೆ ಬೆಂಗಳೂರಿನ ಕಾರ್ಖಾನೆಯೊಂದರಲ್ಲಿ ಒಳ್ಳೆಯ ಕೆಲಸವೇ ದೊರೆಯಿತು.

ನಾಗೇಗೌಡರು ತುಂಬಾ ಚತುರರು. ಅವರು ಕೆಲಸಗಳನ್ನು ಕೊಡಿಸುತ್ತಿದ್ದ ಸಂದರ್ಭಗಳ ಸ್ವಾರಸ್ಯವು ಗಮನಾರ್ಹವಾದುದು. ಈ ಹುಡುಗನಿಗೆ ಕೆಲಸ ಕೊಡಿ ಸುವಾಗ ಇವರು ಒಂದು ಸಂದರ್ಭವನ್ನು ಬಳಸಿಕೊಂಡರು. ಆ ಕಾರ್ಖಾನೆಯಲ್ಲಿ ಎಲ್ಲ ಕಡೆಯೂ ತಮಿಳು ಬೋರ್ಡುಗಳನ್ನು ಹಾಕಲಾಗಿತ್ತು. ಅದುವರೆಗೂ ಬಂದ ಯಾವ ಲೇಬರ್ ಕಮೀಷನರು ಅದರ ಬಗ್ಗೆ ಅಷ್ಟಾಗಿ ಹಚ್ಚಿಕೊಳ್ಳಲು ಹೋಗಿರಲಿಲ್ಲ. ನಾಗೇ ಗೌಡರು ಆ ಬೋರ್ಡುಗಳನ್ನು ನೋಡಿ ಕಾರ್ಖಾನೆಯ ಮಾಲಿಕರ ಮೇಲೆ ಸಿಟ್ಟಿಗೆದ್ದರು. ಕೂಡಲೆ ಅವನ್ನು ಬದಲಿಸಿ ಕನ್ನಡ ಬೋರ್ಡುಗಳನ್ನು ಹಾಕಬೇಕೆಂದು ನೋಟಿಸ್ ಜಾರಿ ಮಾಡಿದರು. ಆ ಮಾಲಿಕರು ನೋಟಿಸನ್ನು ನೋಡಿ ಲೇಬರ್ ಕಮೀಷನರ್‌ರವರ ಕಛೇರಿಗೆ ಧಾವಿಸಿ ಬಂದರು. ಕನ್ನಡ ಬೋರ್ಡುಗಳನ್ನು ಹಾಕಲು ಒಪ್ಪಿದ್ದಲ್ಲದೆ ನಾಗೇ ಗೌಡರು ಸೂಚಿಸಿದ ಹುಡುಗನಿಗೆ ಕೆಲಸವನ್ನು ಕೊಟ್ಟರು. ನಾಗೇಗೌಡರಂಥ ಕನ್ನಡ ಪ್ರೇಮಿ ಅಧಿಕಾರಿ ಎಲ್ಲ ಕಡೆಯೂ ಇದ್ದರೆ ಕರ್ನಾಟಕದ ರಾಜಧಾನಿಯಲ್ಲಿ ಕನ್ನಡವೇ ಮೂಲೆ ಗುಂಪಾಗಿ ಇದುವರೆಗೂ ಉಳಿಯುತ್ತಿರಲಿಲ್ಲ.

ನಾಗೇಗೌಡರು ನಾನು ಸೂಚಿಸಿದ ಅನೇಕರಿಗೆ ಕೆಲಸಗಳನ್ನು ಕೊಟ್ಟಿದ್ದಾರೆ, ಅವರೆಲ್ಲಾ ಅರ್ಹರಾದವರು ಬಡವರಾದವರು. ಅವರೆಲ್ಲಾ ಇಂದು ತಮ್ಮ ಬದುಕಿನಲ್ಲಿ ದಾರಿ ತೋರಿದ ದೊಡ್ಡಮನೆಯ ದೊಡ್ಡಗುಣದ ಈ ವ್ಯಕ್ತಿಯನ್ನು ಮನಸಾರ ನೆನೆ ಯುತ್ತಾರೆ, ತಂಪು ಹೊತ್ತಿನಲ್ಲಿ.

ನಾಗೇಗೌಡರ ಅಧಿಕಾರಿ ಜೀವನ, ಅವರ ಸಾಹಿತ್ಯಕ ಜೀವನದೊಡನೆ ಬೆರೆತು ಅವರ ವ್ಯಕ್ತಿತ್ವಕ್ಕೆ ತನ್ನದೇ ಆದ ಎತ್ತರವನ್ನು ತಂದುಕೊಟ್ಟಿತು. ಸಾಹಿತ್ಯ ಕ್ಷೇತ್ರದಲ್ಲಿ ಅವರು ಕೈಗೊಂಡ ಸಾಧನೆಗಳು ಹಲವು ತೆರನಾದವು. ಭಾಷಾಂತರದಿಂದ ಆರಂಭಿಸಿ ಕ್ರಿಯಾತ್ಮಕ ಸಾಹಿತ್ಯ ಸೃಷ್ಟಿಯವರೆಗೆ ಅವರ ಸಾಹಿತ್ಯದ ದಿಗಂತ ವ್ಯಾಪಿಸಿದೆ. ಇದಕ್ಕೆ ಸರಿಮಿಗಿಲೆನಿಸುವಂತೆ ನಮ್ಮ ಜಾನಪದ ಕ್ಷೇತ್ರದಲ್ಲಿಯೂ ಅವರ ಹೆಸರು ಅಗ್ರ ಪಂಕ್ತಿ ಯಲ್ಲಿ ಉಳಿದುಬಂದಿದೆ. ಜನಪದ ಸಾಹಿತ್ಯದ ಬಗ್ಗೆ ಅವರಿಗೆ ಎಂದಿಲ್ಲದ ಒಲವು. ಆ ಸಾಹಿತ್ಯದ ಸಂರಕ್ಷಣೆಯ ಬಗೆಗೆ ಅಪರಿಮಿತವಾದ ಉತ್ಸಾಹ, ಜಾನಪದದ ಬಗ್ಗೆ ಅವರ

ಮರ್ಜಿಯನ್ನು ತಿಳಿದುಕೊಂಡಿದ್ದ ನಾವು ಆವಾಗ ಅವರನ್ನು ಚೆನ್ನಾಗಿಯೇ ಬಳಸಿಕೊಂಡದ್ದು ಉಂಟು. ನಾಗೇಗೌಡರು ಮಂಗಳೂರಿನ ಜಿಲ್ಲಾಧಿಕಾರಿಯಾಗಿದ್ದಾಗ, ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಬಯಲಾಟಗಳನ್ನು ಅಲ್ಲಿನ ವೈವಿಧ್ಯಮಯವಾದ ಜನಪದ ಕಲೆಗಳನ್ನು ಮೆಚ್ಚಿ ಅವುಗಳ ಬಗ್ಗೆ ಆಗಾಗ ಮಾತನಾಡುವುದನ್ನು ಕೇಳುತ್ತಿದ್ದೆವು. ಒಮ್ಮೆ ಅವರು ಮೈಸೂರಿಗೆ ಬಂದಿದ್ದಾಗ, ನಾನು ಅವರ ಮುಂದೆ ಒಂದು ಯೋಜನೆಯನ್ನು ಇಟ್ಟೆ. ನಮ್ಮ ಜನಪದ ಕಲೆಗಳ ವಿನಿಮಯ ಆಗಬೇಕು. ಬಯಲು ಸೀಮೆಯ ಮತ್ತು ಮಲೆನಾಡಿನ ಅನೇಕ ಕಲೆಗಳನ್ನು ಈಗಾಗಲೇ ಗುರುತಿಸಲಾಗಿದೆ. ಅವುಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರದರ್ಶಿಸುವ ಅವಕಾಶವನ್ನು ಕಲ್ಪಿಸಿಕೊಟ್ಟರೆ ನಮ್ಮ ಕಲೆಗಳ ವೈವಿಧ್ಯವೂ ಅಲ್ಲಿನವರಿಗೆ ಪರಿಚಯವಾಗುತ್ತದೆ ಎಂದು ತಿಳಿಸಿದೆ. ನಾಗೇಗೌಡರು ಕೂಡಲೇ ಒಪ್ಪಿಕೊಂಡರು. ೧೯೬೬ರ ಜನವರಿ ೨೬ಕ್ಕೆ ಕಲಾತಂಡವನ್ನು ಕರೆಸುವುದಾಗಿ ಭರವಸೆ ಕೊಟ್ಟರು. ದಕ್ಷಿಣ ಕರ್ನಾಟಕದ, ಮೂಲೆ ಮೂಲೆಯ ಕಲಾತಂಡಗಳನ್ನು ಕಲೆ ಹಾಕಲು ನಾನೂ ಗೆಳೆಯ ತಿಪ್ಪೇಸ್ವಾಮಿಯವರೂ ದಿಕ್ಕು ದಿಕ್ಕಿಗೆ ಹೊರಟೆವು. ಸೋಮನ ಕುಣಿತ, ಪಟಾಕುಣಿತ, ವೀರಗಾಸೆ ಕುಣಿತ, ಕಂಸಾಳೆ ಮೇಳ, ನೀಲಗಾರರ ಮೇಳ, ಸೋಬಾನೆ ಮೇಳ, ಭಾಗವಂತಿಕೆ ಮೇಳ, ಕೋಲಾಟಮೇಳ, ಕರಪಾಲಮೇಳ, ಪೆಳವರ ಮೇಳ, ಡೊಳ್ಳುಮೇಳ, ಚೌಡಿಕೆ ಮೇಳ, ಗೊಂಬೆಯಾಟ ಮೊದಲಾದ ಅಪಾರ ಸಂಖ್ಯೆಯ ಕಲೆಗಳಿಗೆ ಸಂಬಂಧಿಸಿದ ಕಲಾ ತಂಡಗಳನ್ನು ತಿಪಟೂರು ತಾಲ್ಲೂಕು ಕೊನೆ ಹಳ್ಳಿಯ ನಮ್ಮ ಬಂಧುಗಳ ಮನೆಯಲ್ಲಿ ಕಲೆಹಾಕಿದೆವು. ಆಕರ್ಷಕವಾದ ರಂಗು ರಂಗಿನ ವೇಷಭೂಷಣಗಳು, ಮುಖವಾಡಗಳು, ವಾದ್ಯ ವಿಶೇಷಗಳು, ಇವುಗಳೊಡನೆ ಕಲಾವಿದರು ಘಟ್ಟಗಳನ್ನು ಇಳಿಯಲು ಸಿದ್ಧರಾದರು. ಮಂಗಳೂರಿನಿಂದ ಅವರನ್ನು ಕರೆದೊಯ್ಯಲು ಎರಡು ಬಸ್ಸುಗಳು ಬಂದವು. ಜನವರಿ ೨೬ರ ಬೆಳಿಗ್ಗೆ ಮಂಗಳೂರಿನ ಪುರಸಭಾ ಮೈದಾನದಲ್ಲಿ ಕೆಲವು ಬಯಲು ಕುಣಿತಗಳ ಪ್ರದರ್ಶನ. ಜಿಲ್ಲಾಧಿಕಾರಿಗಳೇ ಮುಖ್ಯ ಅತಿಥಿ. ಅವರು ಆ ಕಲೆಗಳ ವೈಶಿಷ್ಟ್ಯವನ್ನು ಕುರಿತು ಮಾತನಾಡಿದರು. ಹತ್ತು ಸಹಸ್ರ ಜನ ತೆರೆದ ಬಯಲಿನ ಸುತ್ತಲೂ ನಿಂತು ಆ ಕುಣಿತಗಳಿಗೆ ಬೆರಗಾದರು. ನಾನು ಆ ಒಂದೊಂದು ಕಲೆಗಳನ್ನು ಪರಿಚಯಿಸಿದೆ. ಡೊಳ್ಳು ಕುಣಿತ, ಪಟಾಕುಣಿತಗಳಂತೂ ಎಲ್ಲರನ್ನು ಆಕರ್ಷಿಸಿದವು. ಆ ಸಂಜೆ ಮಂಗಳೂರಿನ ಪುರಭವನದಲ್ಲಿ ಸಮಗ್ರ ಕಲೆಗಳ ಪ್ರದರ್ಶನ. ಶಿವರಾಮ ಕಾರಂತರು ಮುಖ್ಯ ಅತಿಥಿ. ಆ ವೇಳೆಗಾಗಲೇ ಅನೇಕ ಜನಪದ ಕಲೆಗಳನ್ನು ಕುರಿತು, ನಾನು ನಾಡಿನ ಪತ್ರಿಕೆಗಳಲ್ಲಿ ಪರಿಚಯ ಲೇಖನಗಳನ್ನು ಬರೆದಿದ್ದೆ. ಕಾರಂತರು, ಕಂಸಾಳೆ ಮೇಳದ ಬಗ್ಗೆ ಕುತೂಹಲವನ್ನು ವ್ಯಕ್ತಪಡಿಸಿದರು. ಘಟ್ಟದ ಮೇಲಿನ ವಿವಿಧ ಮೇಳಗಳನ್ನು ನೋಡಿ, ಅವರು ಆ ವೈವಿಧ್ಯಕ್ಕೆ ತಲೆದೂಗಿದರು. ನಾಗೇಗೌಡರಿಗೆ ತಮ್ಮ ತವರಿನ ಕಲೆಗಳೆಲ್ಲಾ ಕಡಲು ತಡಿಯ ಕನ್ನಡಿಗರಿಗೆ ರಸದೌತಣವಾದುದು ಹೆಮ್ಮೆಯನ್ನು ತಂದಿತ್ತು. ಅವರ ಉತ್ಸಾಹ ಹೇಳತೀರದು. ಕಲಾ

ವಿದರಿಗೆ ರಾಜ ಸತ್ಕಾರ. ಬಯಲುಸಾಡಿನಲ್ಲಿ ಹತ್ತಿರದ ಜಿಲ್ಲಾ ಕೇಂದ್ರವನ್ನು ನೋಡದ ಮುಗ್ಧ ಕಲಾವಿದರು ಅನೇಕರಿದ್ದರು. ಅವರಿಗೆಲ್ಲಾ ಹತ್ತಾರು ಮೈಲಿಗಳ ಸಮುದ್ರ ಯಾನದ ಸವಲತ್ತು, ಪುಷ್ಕಳವಾದ ಊಟೋಪಚಾರ, ಜಿಲ್ಲಾಧಿಕಾರಿಗಳ ಮನೆಯಲ್ಲಿ ಸತ್ಕಾರಕೂಟ. ಈ ಕಲಾವಿದರಿಗೆಲ್ಲಾ ಅನಿರೀಕ್ಷಿತವಾದ ಇಂತಹ ಸ್ವರ್ಗೀಯ ಅನುಭವ ದಿಂದ ರೋಮಾಂಚನ. ಮಂಗಳೂರು, ಉಡುಪಿ, ಪುತ್ತೂರುಗಳಲ್ಲಿ ಎಡೆಬಿಡದೆ ಕಾರ್ಯ ಕ್ರಮ. ಕಲಾವಿದರು ಉತ್ಸಾಹದಿಂದ ಹಾಡಿದರು, ಹುಮ್ಮಸ್ಸಿನಿಂದ ಕುಣಿದರು. ಮಂಗಳೂರಿನ ನಮ್ಮ 'ರಸಯಾತ್ರೆ' ನನ್ನ ಮನಸ್ಸಿನಲ್ಲಿ ಇಂದಿಗೂ ಹಸಿರಾಗಿ ಉಳಿದಿದೆ.

ನಾಗೇಗೌಡರು ಮಂಗಳೂರಿನಲ್ಲಿ ಇರುವಾಗಲೇ ಜಾನಪದ ಸಮ್ಮೇಳನವೊಂದನ್ನು ನಡೆಸಿಬಿಡಬೇಕೆಂದು, ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯದರ್ಶಿಯಾದ ನನಗೆ ಒಂದು ಆಲೋಚನೆ ಹೊಳೆಯಿತು ಅಧ್ಯಕ್ಷರಾಗಿದ್ದ ಪ್ರೊ.ದೇಜಗೌ, ಹಾಗೂ ಕೋಶಾಧ್ಯಕ್ಷರಾಗಿದ್ದ ಹಾ. ಮಾ, ನಾಯಕರಿಗೂ ಈ ವಿಷಯವನ್ನು ತಿಳಿಸಿದೆ. ಓಹೋ! ನಡೆಸಿಬಿಡಿ ಎಂದು ಅವರು ಸಮ್ಮತಿಸಿದರು. ಜಾನಪದ ವಿಷಯದಲ್ಲಿ ನಾಗೇಗೌಡರ ಆಸಕ್ತಿ ಏನೆಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ಆದೊಂದರಿಂದ ಅವರನ್ನು ಸುಲಭವಾಗಿ ಗೆದ್ದುಕೊಳ್ಳಬಹು ದಿತ್ತು. ನಾಗೇಗೌಡರು ಸಂತೋಷದಿಂದಲೇ ನಮ್ಮ ಯೋಜನೆಯನ್ನು ಅಂಗೀಕರಿಸಿ ದರು. ಸಮ್ಮೇಳನ ನಡೆಸುವುದು, ಸಾಧಾರಣವಾದ ವಿಷಯವಲ್ಲ. ಆದರೆ ಜಿಲ್ಲೆಯ ಧಣಿ ಸಂಸ್ಕೃತಿ ಸಂಪನ್ನನಾದರೆ, ಸಾಕಷ್ಟು ಜನಪ್ರಿಯನಾಗಿದ್ದರೆ, ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಮಂಗಳೂರಿನ ಜಾನಪದ ಸಮ್ಮೇಳನವೇ ಸಾಕ್ಷಿ. ಸಮ್ಮೇಳನ ಅದ್ದೂರಿಯಿಂದಲೇ ನಡೆಯಿತು. ಸಿಂಪಿ ಲಿಂಗಣ್ಣ ಸಮ್ಮೇಳನದ ಅಧ್ಯಕ್ಷರು. ನಾಡಿನ ನಾನಾ ಮೂಲೆಗಳಿಂದ ಜನಪದ ಕಲೆಗಳ ತಂಡಗಳೂ ಬಂದಿದ್ದವು. ಇದೆಲ್ಲಕ್ಕೂ ಮಿಗಿಲಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸಮಗ್ರ ಜನಪದ ಕಲೆಗಳು ಆ ಮೂರು ದಿನ ಗಳಲ್ಲಿ ನಮಗೆ ಲಭ್ಯವಾಗುವಂತಾಯಿತು. ಕಂಡೂ ಕೇಳದ ಅನೇಕ ಕಲೆಗಳು ಅಲ್ಲಿ ಬೆಳಕಿಗೆ ಬಂದವು. ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿದ ಪಂಡಿತರು, ಯಕ್ಷಗಾನ ಬಯ ಲಾಟ, ಗೊಂಬೆಯಾಟಗಳ ಕಲಾವಿದರು, ಅನೇಕ ಕಡೆಗಳಿಂದ ಬಂದಿದ್ದ ಜಾನಪದ ಆಸಕ್ತರು —ಹಾಗೆ ಮಂಗಳೂರಿನಲ್ಲಿ ಆ ಮೂರು ದಿನ ಒಂದು ದೊಡ್ಡ ಹಬ್ಬವೇ ನಡೆದಂತಾ ಯಿತು. ಸಮ್ಮೇಳನ ತುಂಬಾ ಯಶಸ್ವಿಯಾಗಿ ನೆರವೇರಿತು. ಆ ಯಶಸ್ಸಿನ ಹಿಂದೆ ನಾಗೇ ಗೌಡರ ಅಚಲವಾದ ಜಾನಪದ ಪ್ರೇಮ, ಸಂಘಟನಾಶಕ್ತಿ, ಸ್ಥಳೀಯರ ಹೃದಯಗಳನ್ನು ಗೆದ್ದು, ಅವರಿಂದ ಕೆಲಸ ತೆಗೆಯುವ ಚಾಕಚಕ್ಯತೆ, ಇವು ಸ್ಪಷ್ಟವಾಗಿದ್ದವು. ನಾಗೇಗೌಡರು ಮಂಗಳೂರು ಜಿಲ್ಲೆಗೆ ಏನನ್ನು ಮಾಡಿದ್ದಾರೋ ಇಲ್ಲವೋ ನನಗೆ ತಿಳಿಯದು, ಆದರೆ ಅವರು ನಡೆಸಿದ ಜನಪದ ಕಲಾ ಮಹೋತ್ಸವ ಹಾಗೂ ಅಖಿಲ ಕರ್ನಾಟಕ ದ್ವಿತೀಯ ಜಾನಪದ ಮಹಾ ಸಮ್ಮೇಳನ ಇಂದಿಗೂ ದೊಡ್ಡ ದಾಖಲೆಗಳಾಗಿ ಉಳಿದಿವೆ.

ನಮ್ಮೂರಿನ ಸಮೀಪದ ಹದ್ದಿನಕಲ್ಲಿಗೆ ನಾಗೇಗೌಡರನ್ನು ಆಹ್ವಾನಿಸಿದ ಸಂದರ್ಭವನ್ನು ಈ ಹಿಂದೆಯೇ ಪ್ರಸ್ತಾಪಿಸಿದೆ. ಮೂರನೆಯ ಜಾನಪದ ಸಮ್ಮೇಳನವನ್ನು ನಾಗಮಂಗಲದಲ್ಲಿ ನಡೆಸಬೇಕೆಂದು ನಾನು, ರಾಜೇಗೌಡರು ಮಾತಾಡಿಕೊಂಡಿದ್ದೆವು. ರಾಜೇಗೌಡರು ತಾಲ್ಲೂಕಿನ ಸಭೆಯೊಂದರಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಸ್ಥಳೀಯ ನಾಯಕರನ್ನು ಆಗಲೇ ಪ್ರಭಾವಿಸಿದ್ದರು. ನಾಗಮಂಗಲ ತಾಲ್ಲೂಕಿನವರೇ ಆದ ನಾಗೇಗೌಡರನ್ನು ಸಮಿತಿಗೆ ಎಳೆದುಕೊಂಡರೆ ನಮ್ಮ ಕೆಲಸ ಸುಗಮವಾಗುತ್ತದೆ ಎಂಬುದನ್ನು ನಾವು ಸಹಜವಾಗಿಯೇ ಯೋಚಿಸಿದೆವು. ಹದ್ದಿನಕಲ್ಲು ಬೆಟ್ಟದ ತಪ್ಪಲಲ್ಲಿ ನಾಗೇಗೌಡರು ಹಾಡು ಕಥೆಗಳಿಂದ ಸಂತುಷ್ಟರಾಗಿ ಕುಳಿತಿದ್ದಾಗ ಈ ವಿಷಯವನ್ನು ಅವರ ಕಿವಿಯ ಮೇಲೆ ಹಾಕಿದೆವು. ನಾಗೇಗೌಡರು, ಹಿಂದೆ ಮುಂದೆ ನೋಡದೆ ಒಪ್ಪಿಯೇ ಬಿಟ್ಟರು. 'ಲೇಬರ್ ಕಮಿಷನರ್' ನಾಗೇಗೌಡರು ಸಮ್ಮೇಳನದ ಮಹಾ ಪೋಷಕರಾದರು. ತಾಲ್ಲೂಕಿನ ಉತ್ಸಾಹಿ ನಾಯಕ ಹೆಚ್. ಟಿ. ಕೃಷ್ಣಪ್ಪನವರು, ಸ್ವಾಗತ ಸಮಿತಿಯ ಅಧ್ಯಕ್ಷರಾದರು. ನಿಷ್ಠಾವಂತ ರಾಜಕಾರಣಿ 'ಸಿಂಗಾರಿ ಗೌಡ' ಮೊದಲಾದವರು ಸ್ವಾಗತ ಸಮಿತಿಯಲ್ಲಿ ಸೇರಲು ಒಪ್ಪಿದರು. ಮೈಸೂರಿನಲ್ಲಿದ್ದರೂ ಶ್ರೀ ರಾಜೇಗೌಡರು ಸ್ವಾಗತ ಸಮಿತಿಯ ಉಪಾಧ್ಯಕ್ಷರಾದರು. ಡಾ. ಬೆಸಗರಹಳ್ಳಿ ರಾಮಣ್ಣ. ಎಸ್. ಎ. ನಿಂಗಪ್ಪ, ಕಾರ್ಯದರ್ಶಿಗಳಾದರು. ಸಮ್ಮೇಳನಕ್ಕೆ ಸಿದ್ಧತೆಗಳು ಆರಂಭವಾದವು. ನಾಗೇಗೌಡರು, ವಾರಕ್ಕೊಮ್ಮೆ ಸೇರುತ್ತಿದ್ದ ಸ್ವಾಗತಸಮಿತಿಯ ಸಭೆಗೆ ಬೆಂಗಳೂರಿನಿಂದ ಬರುತ್ತಿದುದು ನಮಗೆ ಆಶ್ಚರ್ಯವನ್ನುಂಟುಮಾಡಿತು. ಕುಳಿತಲ್ಲಿಂದಲೇ ಅವರ ಹೆಸರನ್ನು ಸೂಚಿಸಿ ಹಣ ಸಂಗ್ರಹಿಸಲಾಯಿತು. ಅಪಾರ ಜಾಹಿರಾತುಗಳನ್ನು ಸಂಗ್ರಹಿಸಲಾಯಿತು. ತಮ್ಮ ತಾಲ್ಲೂಕಿನಲ್ಲಿ ನಡೆಯುವ ಈ ಸಮ್ಮೇಳನಕ್ಕೆ ನಾಗೇಗೌಡರು ಹೊರಗಿನಿಂದ, ಬೇರೆ ಬೇರೆ ಮೂಲಗಳಿಂದಲೂ ಹಣ ಒದಗುವಂತೆ ಮಾಡಿದರು. ಸಮ್ಮೇಳನ ವೈಭವದಿಂದ ಆರಂಭವಾಯಿತು. ನಾಗಮಂಗಲದ ಬೀದಿಬೀದಿಗಳಲ್ಲಿ ಕಲಾವಿದರು ತುಂಬಿ ಹೋದರು. ರಾಷ್ಟ್ರಕವಿ ಕುವೆಂಪು, ಸಮ್ಮೇಳನವನ್ನು ಉದ್ಘಾಟಿಸಲು ಆಗಮಿಸಿದ್ದರು ಹತ್ತುಮಂದಿ ಹಿರಿಯ ಜನಪದ ಕಲಾವಿದರಿಗೆ ಸನ್ಮಾನ. ಆ ಸನ್ಮಾನ ಸಮಾರಂಭಕ್ಕೆ ಅಧ್ಯಕ್ಷರು ನಾಗೇಗೌಡರೇ ಜನಪದ ಕಲಾವಿದರ ಹಾಗೂ ಜನಪದ ಕಲೆಗಳ ಬಗ್ಗೆ ಅವರು ಹೃದಯ ತುಂಬಿ ಮಾತನಾಡಿದರು. ಜನಪದ ಕಲಾವಿದರ ಉದ್ಧಾರದ ಬಗ್ಗೆ ಒತ್ತಿ ಹೇಳಿದರು. ನಾಡಿನ ಜನಪದ ಸಾಹಿತ್ಯ ಸಂರಕ್ಷಣೆಯ ಅಗತ್ಯವನ್ನು ಮತ್ತೆ ಮತ್ತೆ ಉಚ್ಚರಿಸಿದರು. ಬೆಟಗೇರಿ ಕೃಷ್ಣಶರ್ಮರು ಸಮ್ಮೇಳನದ ಅಧ್ಯಕ್ಷರು. ಸಮ್ಮೇಳನದಲ್ಲಿ ನಾಡಿನ ಅನೇಕ ಮಂದಿ ಗಣ್ಯ ವಿದ್ವಾಂಸರು ಭಾಗವಹಿಸಿದ್ದರು. ಈ ಸಮ್ಮೇಳನದ ಯಶಸ್ವಿಗಾಗಿ ಅನೇಕ ಮಹನೀಯರು ದುಡಿದಿದ್ದರೂ ಅದರಲ್ಲಿ ನಾಗೇಗೌಡರದು

ಸಿಂಹಪಾಲು. ಅವರ ಸಾಧನೆಗಳಲ್ಲಿ ಇದು ಅವರ ಟೊಪ್ಪಿಗೆಯ ಒಂದು ಚಿನ್ನದಗರಿ.

ನಾಗೇಗೌಡರು ಲೋಕಸೇವಾ ಆಯೋಗದ ಸದಸ್ಯರಾದ ಮೇಲೆ ಬೆಂಗಳೂರಿನಲ್ಲಿ ಅವರ ಜಾನಪದ ಚಟುವಟಿಕೆಗಳು ಆರಂಭವಾದವು. ಸಾಹಿತ್ಯ ಪರಿಷತ್ತು ಅವರ ಮುಖ್ಯ ಕೇಂದ್ರವಾಯಿತು. ಪರಿಷತ್ತಿನ ಜಿಲ್ಲಾ ಸಮಿತಿಗಳನ್ನು ಬಳಸಿಕೊಂಡು ಕ್ಷೇತ್ರ ಕಾರ್ಯಕರ್ತರನ್ನು ಪ್ರತಿ ಜಿಲ್ಲೆಗೂ ನೇಮಿಸಿ ಜನಪದ ಕಲೆಗಳ ಬಗ್ಗೆ ವ್ಯಾಪಕವಾಗಿ ಮಾಹಿತಿ ಸಂಗ್ರಹ ಕಾರ್ಯವನ್ನು ನಡೆಸಲಾಯಿತು. ಅನೇಕ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಕಲಾ ಮಹೋತ್ಸವಗಳು ನಡೆದುವು. ರಾಜ್ಯಮಟ್ಟದ ಕಲಾ ಮಹೋತ್ಸವವಂತೂ ಅತ್ಯಂತ ವೈಭವಯುತವಾಗಿ ನಡೆದ ಅಭೂತಪೂರ್ವ ಸಮಾರಂಭವೆಂದೇ ಹೇಳಬೇಕು. ಕರ್ನಾಟಕದ ಜನಪದ ಕಲೆಗಳ ಅಪಾರ ವೈವಿಧ್ಯ ಈ ಮಹೋತ್ಸವದ ಮೂಲಕ ವ್ಯಕ್ತವಾಗುವಂತಿತ್ತು. ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ, ಜಾನಪದ ಚಟುವಟಿಕೆಗಳಿಗೆ, ವಿಶೇಷವಾದ ಸ್ಥಾನವನ್ನು ಪರಿಷತ್ತಿನ ಚಟುವಟಿಕೆಗಳಲ್ಲಿ ಕಲ್ಪಿಸಿಕೊಟ್ಟರು. ಜನಪದ ಕಲೆಗಳ ಬಗ್ಗೆ ಗ್ರಂಥ ಪ್ರಕಟಣೆ ಜನಪದ ಕಲೆಗಳ ಚಲನ ಚಿತ್ರೀಕರಣ, ನಾಡಿನ ಜನಪದ ಸಾಹಿತ್ಯದ ಪ್ರಕಟಣೆ, ಇಂಥ ಕೆಲವು ಪ್ರಮುಖ ಚಟುವಟಿಕೆಗಳ ಹಿನ್ನೆಲೆಯಲ್ಲಿ ನಾಗೇಗೌಡರು ಜಾನಪದ ಆಸಕ್ತಿ ವಿಶೇಷವಾಗಿ ಕೆಲಸ ಮಾಡಿರುವುದನ್ನು ಕಾಣಬಹುದು. ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಸಂಸ್ಕೃತಿಯ ಪ್ರಮುಖ ಅಂಗವಾದ ಜಾನಪದಕ್ಕೆ ಏನನ್ನೂ ಮಾಡಬಹುದು ಎಂಬುದಕ್ಕೆ ಈ ಮೂಲಕ ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿತು.

ಸಂಘ ಸಂಸ್ಥೆಗಳ ಮೂಲಕ ಜಾನಪದ ಚಟುವಟಿಕೆಗಳಿಗೆ ಪ್ರೇರಕರಾಗಿ ನಿಂತ ನಾಗೇಗೌಡರು ಒಳ್ಳೆಯ ಸಂಗ್ರಹಕರಾಗಿಯೂ ಹೆಸರಾದವರು. ಸೋಬಾನೆ ಚಿಕ್ಕಮ್ಮನಂಥ ಪ್ರತಿಭಾವಂತ ಕಲಾವಿದೆಯ ಸಮಗ್ರ ಸಾಹಿತ್ಯವನ್ನು ಕನ್ನಡಕ್ಕೆ ಉಳಿಸಿಕೊಟ್ಟವರು ಅವರು. ಅವರ ಸಂಗ್ರಹ ಕಾರ್ಯದ ಅನೇಕ ಸಂದರ್ಭಗಳಲ್ಲಿ ನಾನೂ ಸಹ ಅವರ ಜೊತೆಯಲ್ಲಿ ಕೆಲಸ ಮಾಡುವ ಅವಕಾಶವಿದ್ದಿತು. ಹೆರಗನಹಳ್ಳಿ, ಕೊನೆ ಹಳ್ಳಿಗಳು ನಮ್ಮ ಮುಖ್ಯ ಕೇಂದ್ರಗಳು, ಸೋಬಾನೆಯವರು, ಕೋಲಾಟದವರು, ಹೆಳವರು, ದೊಂಬಿದಾಸರು, ಮೊದಲಾದ ಅನೇಕ ಬಗೆಯ ಕಲಾವಿದರನ್ನು ಬರಮಾಡಿಕೊಂಡು ಅವರ ನಡುವೆ ಕಾಲ ಕಳೆಯುವುದೆಂದರೆ ನಾಗೇಗೌಡರಿಗೆ ಇನ್ನಿಲ್ಲದ ಆನಂದ. ನಾಲ್ಕು ಟ್ರಾಕಿನ ಅವರ ಗ್ರಂಡಿಗ್ ಧ್ವನಿಮುದ್ರಣಯಂತ್ರ ಬೆಳಗ್ಗೆ ಧ್ವನಿ ಮುದ್ರಣವನ್ನು ಆರಂಭಿಸಿದರೆ, ಅದು ನಿಲ್ಲುವುದು ರಾತ್ರಿ ಎಷ್ಟೋ ಹೊತ್ತಿನ ಮೇಲೆ. ಚಿಕ್ಕಮ್ಮನೆಂದರೆ ನಾಗೇಗೌಡರಿಗೆ ಅಪಾರ ಗೌರವ. ನನ್ನೊಡನೆ ಆಕೆಯ ಬಡ ಕುಟೀರಕ್ಕೆ ಅವರು ಎಷ್ಟೋ ಬಾರಿ ಬಂದಿದ್ದಾರೆ. ಅವಳನ್ನು ಬೆಂಗಳೂರಿಗೂ

ಕರೆಸಿಕೊಂಡಿದ್ದಾರೆ, ಬೆಂಗಳೂರಿಗೂ ಕರೆಸಿಕೊಂಡಿದ್ದಾರೆ. ಆಕೆಯ ಸಾಹಿತ್ಯವನ್ನು ಮತ್ತೆ ಮತ್ತೆ ಸಂಗ್ರಹಿಸಿ ಮರೆತು ಹೋದ ಭಾಗಗಳನ್ನು ಹೆಕ್ಕಿ ತೆಗೆದಿದ್ದಾರೆ. ಹೆರಗನಹಳ್ಳಿಯ ಮುರುಕಲು ಮನೆಯೊಂದರಲ್ಲಿ ಎಷ್ಟೋ ವರ್ಷ ಅಜ್ಞಾತಳಾಗಿ ಉಳಿದಿದ್ದ ಚಿಕ್ಕಮ್ಮ ತನ್ನ ಎಂಬತ್ತು ತೊಂಬತ್ತರ ಗಡಿಯಲ್ಲಿ ನಾಗೇಗೌಡರ ಜನಪದ ಜೋಳಿಗೆಗೆ ತನ್ನ ಸಮಸ್ತ ಸಾಹಿತ್ಯವನ್ನು ಧಾರೆ ಎರೆದು ತನ್ನ ಜನ್ಮವನ್ನು ಸಾರ್ಥಕ ಪಡಿಸಿಕೊಂಡಳು. ಚಿಕ್ಕಮ್ಮನ ಸಾಹಿತ್ಯವನ್ನು ಹಿಡಿದಿಟ್ಟ ನಾಗೇಗೌಡರು, ತಾವೂ ಕೃತಕೃತ್ಯರಾದರು.

ಜನಪದ ಕಲಾವಿದರು, ಕಲೆಗಳು ಹೊಸದಾಗಿ ನನ್ನ ಕಣ್ಣಿಗೆ ಬಿದ್ದಾಗ ನಾಗೇಗೌಡರೊಡನೆ, ಆ ವಿಷಯವನ್ನು ಪ್ರಸ್ತಾಪಿಸುತ್ತಿದ್ದುದುಂಟು. ನಾಗೇಗೌಡರು, ತುಂಬಾ ಆಸಕ್ತಿಯಿಂದ ಅಂಥ ವಿಷಯಗಳನ್ನು ಕೇಳುತ್ತಿದ್ದರು. ಸಾಧ್ಯವಾದರೆ ಆ ಕಲಾವಿದರನ್ನು ಹುಡುಕಿಕೊಂಡು ಹೋಗಿ ಮಾಡಿಸಿ ಕೇಳಿ ಬರುತ್ತಿದ್ದರು. ಕರಪಾಲ ಮೇಳವನ್ನು ನಾನು ಗುರುತಿಸಿ ಅದರ ವೈಶಿಷ್ಟ್ಯಗಳನ್ನು ನಾಗೇಗೌಡರಿಗೆ ವಿವರಿಸಿ ಹೇಳಿದಾಗ 1965 ರಲ್ಲಿ ಅವರು ಕುಟುಂಬ ಸಮೇತ ಕೊನೆಹಳ್ಳಿಗೆ ಬಂದು ಆ ಕಲೆಯನ್ನು ನೋಡಿ ಕಲಾವಿದರಿಗೆ ಕಾಣಿಕೆಯನ್ನು ಕೊಟ್ಟು ಗೌರವಿಸಿದರು. ಚೌಡಿಕೆ ಎಲ್ಲಮ್ಮನವರನ್ನು ಹಾಗೆಯೇ ನಾನು ಅವರಿಗೆ ಪರಿಚಯಿಸಿಕೊಟ್ಟಾಗ ಆ ಮೇಳವನ್ನು ನೋಡಲು ಬೆಂಗಳೂರಿನಿಂದ ತೊಂಬತ್ತು ಮೈಲಿಗಳು ಪ್ರಯಾಣ ಮಾಡಿ ಬಂದರು. ಮೂಲೆಗುಂಪಾಗಿ ಮರೆತು ಹೋಗುತ್ತಿದ್ದ ಮೂಡಲಪಾಯ ಯಕ್ಷಗಾನ ಕಲೆಗೆ ಒಂದು ರೂಪವನ್ನು ಕೊಡಲು ನಾನು ಪ್ರಯತ್ನಿಸಿ ಕೊನೆಹಳ್ಳಿ ಸುತ್ತಿನ ಕಲಾವಿದರನ್ನೆಲ್ಲಾ ಕಲೆಹಾಕಿ ಒಂದು ಸಂಘವನ್ನು ಸ್ಥಾಪಿಸಿದೆ. ವಿದ್ಯಾವಂತರೂ ನುರಿತ ಕಲಾವಿದರೂ ಆ ತಂಡದಲ್ಲಿ ಸೇರಿ "ಬಿದರೆಯಮ್ಮ ಯಕ್ಷಗಾನ ಮಂಡಲಿ" ಸ್ಥಾಪಿತವಾಯಿತು. ಅದರ ಒಂದು ಪ್ರದರ್ಶನಕ್ಕೆ ಬರಬೇಕೆಂದು ನಾಗೇಗೌಡರನ್ನು ಆಹ್ವಾನಿಸಿದಾಗ ಉತ್ಸಾಹದಿಂದ ಬಂದರು. ಹೀಗೆ ಯಾವುದೇ ಜನಪದ ಕಲೆ ಅಪೂರ್ವವಾದದು, ಎಂದು ತಿಳಿದರೆ ನಾಗೇಗೌಡರು ಅದು ಎಲ್ಲಿಯೇ ಇರಲಿ ಹುಡುಕಿಕೊಂಡು ಹೋಗಿ ಪ್ರದರ್ಶನವನ್ನು ನೋಡಿ ಸಂತೋಷಪಟ್ಟು ಬರುವವರು. ಇತ್ತೀಚೆಗೆ ಕನ್ನಡ ಅಧ್ಯಯನ ಸಂಸ್ಥೆಯಿಂದ ತರೀಕೆರೆ, ಕಡೂರು ಭಾಗಗಳಲ್ಲಿ ಜನಪದ ಸಂಗ್ರಹ ಕಾರ್ಯವನ್ನು ಕೈಗೊಂಡಾಗ ಚೌಡಿಕೆ ಗೋವಿಂದಯ್ಯನವರ ಪರಿಚಯ ನನಗಾಯಿತು. ಆ ಅಪೂರ್ವ ಕಲಾವಿದನ ಸಾಹಿತ್ಯವನ್ನೆಲ್ಲಾ ಸಂಗ್ರಹಿಸಲಾಯಿತು. ಗೋವಿಂದಯ್ಯನವರ ಅಭಿನಯ ಚಾತುರ್ಯ, ಕಥಾ ನಿರೂಪಣೆಯ ವೈಖರಿ, ಹಾಡುಗಾರಿಕೆಯ ಮೋಜು, ನೃತ್ಯವಿನ್ಯಾಸದ ಸೊಬಗು ಇವುಗಳನ್ನು ಕುರಿತು ನಾನು ನಾಗೇಗೌಡರಿಗೆ ಬಣ್ಣಿಸಿ ಹೇಳಿ, ಅವರ ಕುತೂಹಲವನ್ನು ಕೆರಳಿಸಿದ್ದೆ. ಅಂಥ ಅನುಭವ ಹಿರಿಯ ಕಲಾವಿದನನ್ನು ನೋಡುವ ಸಲುವಾಗಿ ನಾಗೇಗೌಡರು ಕಡೂರು

ತಾಲೂಕಿನ ಹಿರೇನಲ್ಲೂರಿಗೂ ಹೋಗಿದ್ದರು ಎಂಬುದನ್ನು ತಿಳಿದ ನಾನು ಅವರ ತೀವ್ರವಾದ ಜಾನಪದ ಅಭಿಮಾನಕ್ಕೆ ಆಶ್ಚರ್ಯಪಟ್ಟೆ.

ನಾಗೇಗೌಡರು ಜನಪದ ಕಲಾವಿದರಿಗೆ ಅನೇಕ ರೀತಿಯಲ್ಲಿ ನೆರವಾಗಿದ್ದಾರೆ; ಅವರಿಗಾಗಿ ಅಪಾರ ಹಣವನ್ನು ವೆಚ್ಚ ಮಾಡಿದ್ದಾರೆ. ಜನಪದ ಸಾಹಿತ್ಯದ ಹೆಸರನ್ನು ಹೇಳಿಕೊಂಡು ಅನೇಕರು ಅವರಿಂದ ಕೆಲಸಗಳನ್ನು ಗಿಟ್ಟಿಸಿದ್ದಾರೆ. ಹೊಸ ಸಂಗ್ರಾಹಕರೊಬ್ಬರು ಅವರ ಗಮನಕ್ಕೆ ಬಂದರೆ ಅವರನ್ನು ಪ್ರೋತ್ಸಾಹಿಸುವ ಹಿರಿಯ ಗುಣ ನಾಗೇಗೌಡರದು. ಅನೇಕ ತರುಣ ಸಂಗ್ರಾಹಕರು ತಮ್ಮ ಇತರ ಅರ್ಹತೆಗಳಿಗಿಂತ ಜಾನಪದ ಆಸಕ್ತಿಯೇ ಒಂದು ಪ್ರಧಾನ ಅರ್ಹತೆಯಾಗಿ ಒಳ್ಳೆಯ ಕೆಲಸಗಳನ್ನು ಪಡೆದಿದ್ದಾರೆ.

ನಾಗೇಗೌಡರು ನನ್ನ ಹತ್ತಿರದ ಬಂಧುಗಳು; ಹತ್ತಿರದ ಬಂಧುಗಳು ಅನೇಕರಿರುತ್ತಾರೆ. ಆದರೆ ನಾಗೇಗೌಡರ ಹಾಗೂ ನನ್ನ ಬಾಂಧವ್ಯ ಬೇರೆ ತೆರನಾದುದು. ಅವರ ಸಾಹಿತ್ಯಕ ಸಾಧನೆ ಹಾಗೂ ಜಾನಪದ ಅಭಿಮಾನಗಳು ಮುಖ್ಯ ಕಾರಣವಾಗಿ ನಮ್ಮ ಬಾಂಧವ್ಯ ಹೆಚ್ಚು ನಿಕಟವಾಗಿದೆ. ನಮ್ಮ ಬಂಧುಗಳ ಮನೆಗಳಲ್ಲಿ ಕೆಲವು ವಿಶೇಷ ಸಂದರ್ಭಗಳಲ್ಲಿ ನೆಂಟರಿಷ್ಟರೆಲ್ಲಾ ಕಲೆಯುವಾಗ ನಾವೂ ಹೋಗಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ನಾವಿಬ್ಬರೂ ಸಮಾನ ಧರ್ಮಿಗಳು ಒಂದೆಡೆ ಸೇರಿಕೊಳ್ಳುವುದು ಸಹಜ. ಆಗ ನಮ್ಮ ಮಾತುಕಥೆಯ ಮುಖ್ಯ ಕ್ಷೇತ್ರ ಜಾನಪದ ಹಾಗೂ ಸಾಹಿತ್ಯ. ಕೆಲವರು ನಮ್ಮೊಡನೆ ಕುಳಿತರೂ ಆಕಳಿಸಿ, ತೂಕಡಿಸಿ ದೂರ ಸರಿಯುವಷ್ಟರ ಮಟ್ಟಿಗೆ ನಾವು ನಮ್ಮ ಪ್ರಪಂಚದಲ್ಲಿ ಮುಳುಗುತ್ತೇವೆ.

ನಾಗೇಗೌಡರು ನಮ್ಮೂರಿನವರು, ನಮ್ಮ ಬಂಧುಗಳು ಎಂಬ ಅಭಿಮಾನ ನನಗೆ ಇದ್ದೇ ಇದೆ. ಆದರೆ ಅದಕ್ಕಿಂತ ಮುಖ್ಯವಾಗಿ ಅವರ ಸಾಧನೆಗಳು, ಬಡಬಗ್ಗರಿಗೆ ಅವರು ನೀಡಿದ ಉದಾರ ಹಸ್ತ ನನ್ನ ಮನಸ್ಸನ್ನು ಗೆದ್ದುಕೊಂಡ ಮುಖ್ಯ ವಿಷಯಗಳಾಗಿವೆ. ನಾನು ಈವರೆಗೆ ಅನೇಕರಿಗೆ ಸಹಾಯ ಮಾಡಿದ್ದೇನೆ; ಈ ಸಹಾಯಗಳಲ್ಲಿ ಬಹುಪಾಲು ನಾಗೇಗೌಡರ ಮೂಲಕ ಆದುದು. ಈ ಉಪಕಾರಕ್ಕಾಗಿ ನಾನು ಅವರನ್ನು ನೆನೆಯುತ್ತೇನೆ. ಅವರ ಉದಾರ ನೆರವಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

೩ | ಸಹಪಾಠಿ

ಕೆ. ಎ. ಶಂಕರಗೌಡ

ಶ್ರೀ ಎಚ್. ಎಲ್. ನಾಗೇಗೌಡರೂ ನಾನೂ ಚನ್ನಪಟ್ಟಣ ಪ್ರೌಢಶಾಲೆಯಲ್ಲಿ ಸಹಪಾಠಿಗಳಾಗಿದ್ದೆವು. ಇಬ್ಬರ ವಾಸವೂ ಚನ್ನಪಟ್ಟಣದ ಒಕ್ಕಲಿಗರ ವಿದ್ಯಾರ್ಥಿನಿಲಯ ದಲ್ಲಿ. ಶ್ರೀ ಗೌಡರು ಯಾವಾಗಲೂ ಮೌನಿಯಾಗಿರುತ್ತಿದ್ದರು; ಮಿತ ಭಾಷಿಯಾಗಿ ರುತ್ತಿದ್ದರು, ಸದಾ ಓದುವುದರಲ್ಲಿ ಮಗ್ನರಾಗಿರುತ್ತಿದ್ದರು. ಒಂದು ವಿಧವಾದ ಅಂತ ರ್ಮುಖಿಯಂತೆ ಕಾಣುತ್ತಿದ್ದರು. ಯಾವ ಸಡಗರ ಸಂಭ್ರಮಗಳಲ್ಲೂ ಅಷ್ಟಾಗಿ ಭಾಗ ವಹಿಸುತ್ತಿರಲಿಲ್ಲ. ಇದನ್ನೆಲ್ಲಾ ಕಂಡ ನನ್ನ ಆಗಿನ ಮುಗ್ಧ ಮನಸ್ಸಿಗೆ ಶ್ರೀ. ಗೌಡರು ಸಾಮಾಜಿಕ ವ್ಯಕ್ತಿಯಲ್ಲವೇನೋ ಎಂದು ಅನ್ನಿಸುತ್ತಿತ್ತು.

ಪ್ರೌಢಶಾಲೆಯ ವಿದ್ಯಾಭ್ಯಾಸ ಮುಗಿದ ಮೇಲೆ ನಾವಿಬ್ಬರೂ ಬೇರೆಬೇರೆ ಯಾದೆವು. ನನ್ನ ಅವರ ನಡುವೆ ಎಂದೂ ನಿಕಟ ಸಂಪರ್ಕ ಬೆಳೆಯಲಿಲ್ಲ. ಹೀಗಾಗಿ ಅವರ ವ್ಯಕ್ತಿತ್ವದ ಪೂರ್ಣ ಪರಿಚಯ ನನಗಾಗಲಿಲ್ಲ. ಆದರೆ ಒಂದು ಮಾತು ಸತ್ಯ. ಅದಾವುದೆಂದರೆ ಸರ್ಕಾರ ಉನ್ನತ ಅಧಿಕಾರದಲ್ಲಿದ್ದೂ ಯಾವ ದೋಷಾರೋಪಣೆಗೂ ಗುರಿಯಾಗದೆ ನಿಸ್ಪೃಹತೆಯಿಂದ ಸೇವೆ ಸಲ್ಲಿಸಿರುವುದು. ಇಂಥ ಗೌರವ ಎಲ್ಲಾ ಸರ್ಕಾರೀ ಅಧಿಕಾರಿಗಳಿಗೂ ಸುಲಭವಾಗಿ ಸಲ್ಲುವ ಗೌರವವಲ್ಲ. ಆದ ಕಾರಣ ಶ್ರೀ ಗೌಡರು ಅಭಿನಂದನಾರ್ಹರು.

ನಾನು ಅವರ ತಾರುಣ್ಯದಲ್ಲಿ ಕಂಡ ಬಾಹ್ಯ ತಾಟಸ್ಥ್ಯ ಇಂದೂ ಗೌಡರಲ್ಲಿ ಎದ್ದು ಕಾಣುತ್ತಿದೆ. ಅಂದರೆ ಶ್ರೀಸಾಮಾನ್ಯನ ಪುರೋಭಿವೃದ್ಧಿ ಬಗ್ಗೆ ಅವರಲ್ಲಿ ಕಳ ಕಳಿ ಇಲ್ಲವೆಂದಲ್ಲ. ಅವನ ಬಗ್ಗೆ ಅವರ ಹೃದಯದಲ್ಲಿ ಅಪಾರ ಅನುಕಂಪ, ಕರುಣೆ ತುಂಬಿದೆ. ಆದರೆ ಆರಿಸಿಕೊಂಡ ಕಾರ್ಯಕ್ಷೇತ್ರದ ಪರಿಣಾಮವಾಗಿ ಅಂಥವರ ಪ್ರಗತಿಗೆ ಸಹಾಯಕವಾಗುವ ಯಾವ ಚಟುವಟಿಕೆಯಲ್ಲಿಯೂ, ರಚನಾತ್ಮಕವಾಗಿ, ಸಕ್ರಿಯ ವಾಗಿ ಭಾಗವಹಿಸುವ ಅವಕಾಶದಿಂದ ಅವರು ವಂಚಿತರಾದರು. ಆದರೂ ಅವರ ಏಕಾಂತ ಜೀವನ ಸಮಾಜಕ್ಕೆ ಅತ್ಯವಶ್ಯಕವಾದ ಸಾಹಿತ್ಯಚಿಂತನೆಗೆ ಅನುವು ಮಾಡಿ ಕೊಟ್ಟಿತು. ತತ್ಪರಿಣಾಮವಾಗಿ ಅವರಿಂದ ಅನೇಕ ಉತ್ತಮ ಸಾಹಿತ್ಯಕೃತಿಗಳು ರಚಿತ ವಾದುವು, ಇದು ಲಘು ಸಾಧನೆಯಲ್ಲ. ಉನ್ನತ ಸಾಧನೆ.

ಉತ್ತಮ ಸರ್ಕಾರೀ ಅಧಿಕಾರಿಯಾಗಿ, ಸಾಹಿತಿಯಾಗಿ ಸಮಾಜಕ್ಕೆ ಸೇವೆ ಸಲ್ಲಿಸಿ ರುವ ಗೌಡರಿಗೆ ಅಭಿನಂದನಾ ಗ್ರಂಥ ಸಮರ್ಪಿಸುವುದಲ್ಲದೆ ಸನ್ಮಾನಕ್ಕೂ ಏರ್ಪಾಡು

ಮಾಡಿರುವುದು ಅಭಿಮಾನದ ಸಂಗತಿ. ಅದಕ್ಕೆ ಕಾರಣಕರ್ತರಾಗಿರುವ ಎಲ್ಲರಿಗೂ ಅವರ ಸಹಪಾಠಿಯಾಗಿದ್ದ ನನ್ನ ಅಭಿನಂದನೆಗಳು.

ಶ್ರೀ ಗೌಡರು ಯಾವ ದುರಭ್ಯಾಸಕ್ಕೂ ಈಡಾಗದೆ ದೃಢಕಾಯರಾಗಿರುವುದು ಸಂತಸದ ಸಂಗತಿ. ಅವರು ಇನ್ನೂ ದೀರ್ಘ ಕಾಲಬಾಳಲಿದ್ದಾರೆ. ಮಹಾತ್ಮಾಜಿಯುವರ ಸಿದ್ಧಾಂತದಂತೆ ಅವರು ನೂರ ಇಪ್ಪತ್ತೈದು ವರ್ಷಗಳ ಕಾಲ ಬಾಳುವಂತಾಗಲಿ. ಇನ್ನಷ್ಟು ಉತ್ತಮ ಸಾಹಿತ್ಯ ಕೃತಿಗಳು ಅವರಿಂದ ರಚಿತವಾಗಲಿ. ಶ್ರೀ ಸಾಮಾನ್ಯನ ಏಳಿಗೆ ಅವರು ಶ್ರಮಿಸುವಂತಾಗಲಿ. ಅವರ ಕೀರ್ತಿ ಶಾಶ್ವತವಾಗಿ ಉಳಿಯಲಿ.

೪ ದೂರದಿಂದ, ಹತ್ತಿರದಿಂದ

ಜಿ. ವೆಂಕಟಸುಬ್ಬಯ್ಯ.

ನಾನು ಕಾಲೇಜಿನ ಕನ್ನಡ ಅಧ್ಯಾಪಕನಾಗಿ ಅಧ್ಯಾಪನವನ್ನು ಪ್ರಾರಂಭ ಮಾಡಿದ ಕಾಲದಲ್ಲಿ ಸ್ಕಾಟ್ ಬರೆದ ಇಂಗ್ಲಿಷ್ ಕಾದಂಬರಿಯ ಕನ್ನಡ ಅನುವಾದವನ್ನು ಪಾಠ ಹೇಳಬೇಕಾದ ಅವಕಾಶವುಂಟಾಯಿತು. ನನಗೆ ಮೆಚ್ಚಿಕೆಯಾದ ಸ್ಕಾಟನ ಕಾದಂಬರಿಗಳಲ್ಲಿ ಕೆನಿಲ್‌ವರ್ತ್ ಒಂದು. ಆತನ ಕ್ವೆಂಟಿನ್ ಡರ್ವಿಡ್ ಕಾದಂಬರಿಯನ್ನು ಮೊದಲ ಸಲ ಓದಿದಾಗ ಅದನ್ನು ಕನ್ನಡಕ್ಕೆ ಅನುವಾದಮಾಡಬೇಕೆಂದು ಮೊದಲ 20, 25 ಪುಟಗಳನ್ನು ಅನುವಾದಮಾಡಿ ಸ್ಕಾಟನ ಇಂಗ್ಲಿಷ್ ಭಾಷೆಯನ್ನೆ ಕನ್ನಡಕ್ಕೆ ಅನುವಾದ ಮಾಡುವ ಕಷ್ಟವನ್ನು ಅನುಭವಿಸಿ ಅದು ಕಷ್ಟಸಾಧ್ಯವೆಂದು, ಬಹುಕಾಲ ಹಿಡಿಯುವುದೆಂದು ಮುಂಗಂಡು ಅದನ್ನು ಕೈಬಿಟ್ಟೆ. ಆ ಕೆಲಸವೂ ಆಗಲಿಲ್ಲ. ಬೇರೆಯ ಕೆಲಸಗಳನ್ನು ಮಾಡಲಿಲ್ಲ. ಸೋಮಾರಿತನದ ಸ್ವಾರಸ್ಯವೇ ಅಂಥದು. ಹೀಗಿರುವಾಗ ಕೆನಿಲ್‌ವರ್ತ್ ಕಾದಂಬರಿಯ ಸಂಗ್ರಹಾನುವಾದದ ಭಾಷೆ ನನಗೆ ಮೆಚ್ಚಿಕೆಯಾಯಿತು. ಮೂಲದ ಸ್ವಾರಸ್ಯವನ್ನೆ ಕನ್ನಡದಲ್ಲಿ ಅನುವಾದಕರು ಸೆರೆಹಿಡಿದಿದ್ದಾರೆಂದು ಮನಬಿಚ್ಚಿ ತರಗತಿಗಳಲ್ಲಿ ಹೇಳಿದೆ. ಆದರೆ ಶ್ರೀ ನಾಗೇಗೌಡರನ್ನು ಕಾಣುವ ಅವಕಾಶ ನನಗೆ ಸಿಕ್ಕಲಿಲ್ಲ.

ಆ ಬಳಿಕ ಅವರೆ ಬರೆದ ಪ್ರವಾಸಿ ಕಂಡ ಇಂಡಿಯಾ ಎಂಬ ಸಂಪುಟ ನನ್ನ ಕೈಗೆ ಸಿಕ್ಕಿತು. ಅದನ್ನು ಕೂಡ ನಾನು ಓದಿದೆ. ಅನೇಕರ ಅನುಭವಗಳನ್ನು ಸ್ವಂತದ್ದಾಗಿಸಿಕೊಂಡು ಬರೆದ ಆ ಬರೆವಣಿಗೆಯ ರೀತಿಯನ್ನು ಮೆಚ್ಚಿಕೊಂಡೆ. ಆ ಬಳಿಕ ಅವರು ಸರಕಾರದ ಆಡಳಿತದಲ್ಲಿ ಉನ್ನತ ಅಧಿಕಾರಿಯಾಗಿದ್ದು ಈ ಕಾರ್ಯವನ್ನು ಮಾಡುತ್ತಿರುವುದು ತಿಳಿದು ನನಗೆ ಅವರನ್ನು ಕಾಣಬೇಕೆಂಬ ಆಕಾಂಕ್ಷೆಯುಂಟಾಯಿತು. ಆದರೆ ನನಗೆ ಬಹುಕಾಲ ಈ ಆಸೆ ಫಲಿಸಲೇ ಇಲ್ಲ.

ಆದರೂ ಅವರ ಗ್ರಂಥಗಳನ್ನು ಅವು ಬಂದಾಗ ಓದುತ್ತಿದ್ದೆ. 'ನಮ್ಮೂರು' ನನಗೆ ಗ್ರಾಮೀಣ ಜೀವನದ ಉತ್ತಮ ಚಿತ್ರವಾಗಿ ಕಂಡು ಬಂದಿತು. ಶಿವಮೊಗ್ಗದಲ್ಲಿ ಮಂಗಳೂರಿನಲ್ಲಿ ಶ್ರೀ ನಾಗೇಗೌಡರು ಸರಕಾರದ ವತಿಯಿಂದ ಮಾಡಿಸಿದ ಕೆಲವು ಲೋಕ ಕಲ್ಯಾಣ ಕಾರ್ಯಗಳು ನನಗೆ ತಿಳಿದು ಬಂದು ದೂರದಿಂದಲೇ ಅವರ ಬಗ್ಗೆ ಗೌರವ ಬೆಳೆಯಿತು.

ಶ್ರೀ ನಾಗೇಗೌಡರು ಬೆಂಗಳೂರಿಗೆ ಬಂದು ನೆಲಸಿದ ಮೇಲೆ ಅವರ ಪರಿಚಯ ನನಗೆ ಆಯಿತು. ಅದೂ ಪರಿಷತ್ತಿನ ಚಟುವಟಿಕೆಯಲ್ಲಿ ಅವರು ಆಸಕ್ತಿ ವಹಿಸಿ ಪ್ರತಿ

ಯೊಂದು ಜಿಲ್ಲೆಯುಲ್ಲಿಯೂ ಜಾನಪದ ಸಮ್ಮೇಳನಗಳನ್ನು ನಡೆಸುವಂತೆ ಶ್ರೀ ಜಿ. ನಾರಾಯಣರಿಗೆ ಒತ್ತಾಸೆ ಹಾಕಿ ಆ ಮಹಾಕಾರ್ಯವನ್ನು ಮಾಡಿಸಿದಾಗ ಅವರೊಡನೆ ಓಡಾಡುವ ಅವಕಾಶ ಲಭಿಸಿತು. ಕೆಲವು ಜಿಲ್ಲೆಗಳಲ್ಲಿ ನಡೆದ ಸಮ್ಮೇಳನಗಳಲ್ಲಿ ನಾನೂ ಅವರೊಡನೆ ಭಾಗವಹಿಸಿ ಅವರ ಆಸಕ್ತಿಯ ಮೂಲವನ್ನು ಕಂಡುಕೊಂಡೆ.

ನಾನವರನ್ನು ಮೊದಲ ಸಲ ಕಂಡಾಗ ಅವರು ಬೇಗ ಸ್ನೇಹವನ್ನು ಬೆಳೆಸುವವ ರಲ್ಲವೇನೋ ಹೆಚ್ಚು ಗಂಭೀರವೇನೋ ಅನ್ನಿಸಿತು. ಆದರೆ ಬಿಡುವಿನ ವೇಳೆ ಮಾತಿಗೆ ಕೂತಾಗ ಯಾವ ಹಿಡಿತ, ಬಿಗು, ಇಲ್ಲದೆ ಸ್ನೇಹದ ವಾತಾವರಣವನ್ನೇ ನಿರ್ಮಾಣ ಮಾಡುವ ಅವರ ಸ್ವಭಾವದ ಸರಳತೆಯನ್ನು ಬಿಚ್ಚು ಮಾತಿನ ರೀತಿಯನ್ನು ಕಂಡು ಅವರಲ್ಲಿ ಆತ್ಮೀಯತೆ ಬೆಳೆಯಿತು. ಹೀಗಾಗಿ ನಾನೀಗ ನನ್ನ ಹತ್ತಿರದ ಗೆಳೆಯರಲ್ಲಿ ಒಬ್ಬರನ್ನು ಕಂಡಂತೆ ಅವರನ್ನು ಕಾಣುತ್ತೇನೆ.

ಅವರ ಬೃಹತ್ಕಾದಂಬರಿ 'ದೊಡ್ಡಮನೆ'ಯನ್ನು ಬಿಡುಗಡೆ ಮಾಡುವ ಸೌಭಾಗ್ಯವು ನನ್ನ ಪಾಲಿಗೆ ಬಂತು. ಆ ಕಾದಂಬರಿಯ ಪ್ರತಿಯನ್ನು ಶ್ರೀ ನಾಗೇಗೌಡರು ನನಗೆ ಮುಂಚೆಯೇ ಕಳುಹಿಸಿದ್ದರು. ನಾನು ದೊಡ್ಡ ಕಾದಂಬರಿಯನ್ನು ಹಿಡಿದದ್ದು ಬಿಡದೆ ಓದಿ ಪೂರೈಸಿದೆ. ಅದು ಮೈಸೂರಿನ ಕಡೆಯ 'ಗ್ರಾಮಾಯಣ'ದಂಥ ಕಾದಂಬರಿಯಾಗಿರುವುದು ನನ್ನ ಮನಸ್ಸಿಗೆ ತಟ್ಟಿತು. ಅಲ್ಲಿರುವ ಸರಿಕಾದ ಚಿತ್ರಗಳು ಹಿರಿಯ ಕಿರಿಯರ ನಡುವಿನ ಬಾಂಧವ್ಯ, ಹಳ್ಳಿಯ ಸಂಸಾರದ ಆಧುನಿಕ ವಿಪರ್ಯಾಸ ಹೃದಯವನ್ನು ಕಿತ್ತೆಸೆಯುವಂತೆ ಬರುವ ದುಃಖ ಚಿತ್ರಗಳು, ಕ್ರೋಧ, ತಾಮಸ, ಪ್ರೇಮ, ಕರುಣೆ, ತಾಳ್ಮೆ, ಸಹನೆ–ಇವುಗಳ ಪ್ರತೀಕವಾದ ಅನೇಕ ವ್ಯಕ್ತಿಗಳು ಕಣ್ಣೆದುರಿಗೆ ಹಾದು ಹೋದರು. ಇವುಗಳನ್ನು ಕುರಿತು ನಾನು ಅಂದಿನ ಸಭೆಯುಲ್ಲಿ ನನ್ನ ವಿಶ್ವಾಸ ಗೌರವಗಳನ್ನು ವಿವರಿಸಿದೆ.

ಎಲ್ಲಕ್ಕಿಂತ ಹೆಚ್ಚಾಗಿ ಮರೆಯಾಗುತ್ತಿರುವ ಗ್ರಾಮೀಣ ಪದಗಳನ್ನು ಶ್ರೀ ಗೌಡರು ತಮ್ಮ ಪುಸ್ತಕಗಳಲ್ಲಿ ಸೆರೆಹಿಡಿದಿಟ್ಟಿದ್ದಾರೆ. ನಿಘಂಟುಕಾರನಾದ ನನಗೆ ಇದು ಒಳ್ಳೆಯ ಆಕಾರವಾಗಿ ಕಂಡು ಬಂದಿತು. ಜನಪದವನ್ನು ಕುರಿತ ಅವರು ಮಾಡುವ ಸಾಹಿತ್ಯ ಸಂಗ್ರಹಕಾರ್ಯ ಅಮೋಘವಾಗಿದೆ. 'ಸೋಬಾನೆ ಚಿಕ್ಕಮ್ಮನ ಪದಗಳು' 'ಪದವವೆ ನಮ್ಮ ಎದೆಯಲ್ಲಿ' 'ಕರ್ನಾಟಕ ಜನಪದ ಕತೆಗಳು'–ಈ ಮೂರು ಪುಸ್ತಕಗಳಿಂದ ನಾವು ನಮ್ಮ ನಿಘಂಟಿಗೆ ಎಷ್ಟೋ ಹೊಸ ಪದಗಳನ್ನು ಸೇರಿಸಬಹುದು. 'ಬೆಟ್ಟದಿಂದ ಬಟ್ಟಲಿಗೆ' ತುಂಬಾ ಚೆನ್ನಾಗಿ ರಚಿತವಾಗಿರುವ ರಸ ನಿರೂಪಣೆ.

ಅವರ ಇತ್ತೀಚಿನ ಕಾದಂಬರಿ 'ಭೂಮಿಗೆ ಬಂದ ಗಂಧರ್ವ' ಎಂಬುದನ್ನು ಬರೆ ಯುವ ಮುಂಚೆ ಅದನ್ನು ನನ್ನೊಡನೆ ಒಂದೆರಡು ಸಲ ಚರ್ಚಿಸಿದ್ದರು. ಒಂದೆರಡು ಸನ್ನಿವೇಶಗಳನ್ನು ನನಗೆ ವಿವರಿಸಿದ್ದರು. ಭೈರವಿ ಕೆಂಪೇಗೌಡರ ಬಗೆಗೆ ಹೊಸ ವಿಷಯ ಗಳೇನಾದರು ದೊರಕಬಹುದೆಂದು ಅವರ ಅಪೇಕ್ಷೆಯಂತೆ ಅವರನ್ನು ನಾನು ನನ್ನಗುರು ಗಳಾದ ಶ್ರೀ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರಲ್ಲಿ ಕರೆದುಕೊಂಡು ಹೋಗಿದ್ದೆ. ಅಲ್ಲಿ

ನಡೆದ ಒಂದು ಗಂಟೆಯ ಮಾತುಕತೆಯಲ್ಲಿ ಕರ್ನಾಟಕ ಸಂಗೀತದ ಬಗೆಗೆ ಶ್ರೀ ಗೌಡರು ಎಷ್ಟು ಆಳವಾಗಿ ಅಭ್ಯಾಸಮಾಡಿದ್ದರೆಂಬುದು ನನಗೆ ಗೋಚರವಾಯಿತು,

ಹೀಗೆ ಬೆಳೆಯುತ್ತಿರುವ ನಮ್ಮ ಸ್ನೇಹದಲ್ಲಿ ನಾನು ಹೆಚ್ಚು ಹೇಳಿದರೆ ಅದು ಹೊಗಳಿಕೆಯೆಂಬ ಮಾತಿಗೆ ಒಳಗಾದೀತೆಂಬ ಹೆದರಿಕೆಯಿಂದ ನಾನು ವಿರಮಿಸುತ್ತೇನೆ.

ನಾವಿಬ್ಬರು ಈಗ ನಿವೃತ್ತರು. ಸಾಹಿತ್ಯದಲ್ಲಿ ಆಸಕ್ತರು. ಶ್ರೀ ಗೌಡರಿಗಂತು ಜಾನಪದ ಸಾಹಿತ್ಯ ಅಕಾಡೆಮಿಯನ್ನು ಸರಕಾರವು ಸ್ಥಾಪಿಸಬೇಕೆಂಬ ಮಹತ್ವಾದ ಆಕಾಂಕ್ಷೆಯಿದೆ. ಇದು ಸಾಧಾರವಾದ ಸ್ವಾಗತಹನವಾದ ಅಪೇಕ್ಷೆ. ಅಂಥ ಅಕಾಡೆಮಿ ಸ್ಥಾಪಿತವಾಗಿ ಅದರ ಕಾರ್ಯವನ್ನು ನಿರ್ದೇಶಿಸುವ ಹೊಣೆ ಶ್ರೀ ನಾಗೇಗೌಡರಿಗೆ ದೊರಕಿದರೆ ಕರ್ನಾಟಕ ಜಾನಪದ ಸಾಹಿತ್ಯಕ್ಕೆ ಅಪಾರಸೇವೆ ಸಲ್ಲಿಸುತ್ತದೆಂಬ ಬಗ್ಗೆ ನನಗೆ ಪೂರ್ಣ ಭರವಸೆಯಿದೆ.

ಅವರ ಸ್ನೇಹವನ್ನು ಹತ್ತಿರದಿಂದ ಸವಿದಿರುವ ನನಗೆ ಅದನ್ನು ಬೆಳೆಸಿಕೊಳ್ಳಬೇಕೆಂಬ ಹಂಬಲವಿದೆ.

ಈ ಶ್ರದ್ಧಾವಂತ ಸಾಹಿತಿಯು ಬಾಳು ಸಾರ್ಥಕವಾಗಿ ಬಹುಕಾಲ ನಮ್ಮ ಸಾಹಿತ್ಯ ಲೋಕವನ್ನು ಬೆಳಗುತ್ತಿರಲೆಂದು ಹಾರೈಸುತ್ತೇನೆ.

೫ | ನನ್ನ ಅಣ್ಣಾ

ಸಿದ್ಧಯ್ಯ ಪುರಾಣಿಕ

ಆಡಳಿತಗಾರರಾಗಿ ನಾನು ಶ್ರೀ ನಾಗೇಗೌಡರು ಒಬ್ಬರನ್ನೊಬ್ಬರು ಸಂಧಿಸುವ ಮೊದಲೇ ಬರಹಗಾರರಾಗಿ ಹೊಂದಿಕೊಂಡಿದ್ದೆವು. ಆಡಳಿತ ರಂಗದಲ್ಲಿ ನಾವಿಬ್ಬರೂ ಹತ್ತಿರದವರಾಗಲು ಕರ್ಣಾಟಕದ ಏಕೀಕರಣವಾದ ಮೇಲೆ ಸ್ವಲ್ಪಕಾಲ ಕಾಯಬೇಕಾಯಿತು. ಆದರೆ ಬರಹಗಾರರಾಗಿ ಬೇಗ ಹತ್ತಿರದವರಾದೆವು. ಬರಬರುತ್ತ ಅಣ್ಣ ತಮ್ಮಂದಿರಾದೆವು.

'ದೊಡ್ಡಮನೆ'ಯನ್ನು ಬರೆದ ನಾಗೇಗೌಡರು ದೊಡ್ಡಮನದವರು. ಆಡಳಿತಗಾರರಾಗಿ ಅವರಿದಕ್ಕೆ ಪುರಾವೆ ಒದಗಿಸಿದ್ದಾರೆ; ಬರಹಗಾರರಾಗಿ ಇದಕ್ಕೆ ನಿದರ್ಶನ ನೀಡಿದ್ದಾರೆ. ಸಣ್ಣತನ ಅವರ ಬಳಿ ಸುಳಿಯಲೂ ಹಿಂಜರಿಯುತ್ತದೆ. ಆದರೆ ಸಣ್ಣವರ ಬಗ್ಗೆ, ಶ್ರೀ ಸಾಮಾನ್ಯರ ಬಗ್ಗೆ ಅವರ ಸಹಾನುಭೂತಿ ದೊಡ್ಡದು. ಅವರ ಅಧಿಕಾರಾವಧಿಯಲ್ಲಿ ಅವರು ಗೈದ ಜನಹಿತ ಕಾರ್ಯಗಳು ಅನೇಕ, ಪರಿಹಾರ ಕಾರ್ಯಗಳು ಅನೇಕ, ಲೋಕೋಪಕಾರಕ ಕಾರ್ಯಗಳು ಅನೇಕ. ಅವರನ್ನು ಮೊದಲ ಸಲ ನೋಡುವವರಿಗೆ ಅವರಲ್ಲಿ ಇಷ್ಟೊಂದು ಜನಾನುಕಂಪೆ ಇರಲು ಸಾಧ್ಯವೆ ? ಎಂದೆನ್ನಿಸಬಹುದು. ಅವರ ಮುಖಮುದ್ರೆ ಗಂಭೀರವಾದುದು. ಅವರು ಬಿಗುಮಾನದವರೆಂದೂ ಕೆಲವರಿಗೆ ತೋರಿದ್ದರೆ ಆಶ್ಚರ್ಯವಿಲ್ಲ. ಆದರೆ ಈ ತೋರಿಕೆಯ ಬಿಗುಮಾನದ ಹಿಂದೆ ಸದಯ ಹೃದಯವೊಂದು ಇರುವುದನ್ನು ಅವರಿಂದ ಉಪಕೃತರಾದ ಈ ನಾಡಿನ ಸಾವಿರ ಸಾವಿರ ಶ್ರೀಸಾಮಾನ್ಯರು ಕಂಡುಕೊಂಡಿದ್ದಾರೆ. ಆಡಳಿತದಲ್ಲಿ ಅವರು ಉಕ್ಕಿನ ಮನುಷ್ಯರೆಂದು ಹೆಸರಾದವರೂ ಆ ಉಕ್ಕು ಜನರ ದುಃಖವನ್ನು ಕಾಣುತ್ತಲೆ ಕರಗುವ ಉಕ್ಕಾಗಿದ್ದಿತು. ಆಡಳಿತದಲ್ಲಿ ನಿಷ್ಣಾತರಾಗಿದ್ದ ಅವರು ಆಡಳಿತದ ವ್ಯವಹಾರಗಳಲ್ಲಿ ಎಂದೂ ತಪ್ಪು ಮಾಡಿದವರಲ್ಲ; ತಪ್ಪು ಮಾಡಿದುದೇ ಇದ್ದರೆ ಅದು ಜನರ ಹಿತಕ್ಕಾಗಿಯೇ ಮಾಡಿದುದು ಇರಬಹುದು. ತಮ್ಮ ಆಡಳಿತದ ನೈಪುಣ್ಯವನ್ನು, ದಿಟ್ಟತನವನ್ನು ಗಟ್ಟಿತನವನ್ನು ಎಟ್ಟಿತನವನ್ನು—ಎಲ್ಲವನ್ನು ಲೋಕಹಿತಕ್ಕಾಗಿ ವಿನಿಯೋಗಿಸಿ ಅವರು ಧನ್ಯರಾಗಿದ್ದಾರೆ. ಅವರು ಕಾರ್ಯನಿರ್ವಹಿಸಿದ ಜಿಲ್ಲೆಗಳಲ್ಲೆಲ್ಲ ಇಂದಿಗೂ ಅನೇಕರು ಅವರನ್ನು ನೆನೆಯುತ್ತಿರುವುದು ಅವರ ಜನಾನುರಾಗಕ್ಕೆ, ಜನಪ್ರಿಯತೆಗೆ, ಜನಾಭಿಮುಖಿಯಾಗಿಯೇ ನಡೆದ ಆಡಳಿತದ ವಿಧಾನಕ್ಕೆ ಜೀವಂತ ನಿದರ್ಶನವಾಗಿದೆ.

ಅವರು ಮಂಗಳೂರಿನಲ್ಲಿಯೂ, ನಾನು ಮಡಿಕೇರಿಯಲ್ಲಿಯೂ ಇದ್ದಾಗ ಅವರನ್ನು ತುಂಬ ಸಮೀಪದಿಂದ ಅರಿಯುವ ಅವಕಾಶಗಳು ನನಗೆ ದೊರೆತವು. ತಿಂಗಳಿಗೊಮ್ಮೆ ಮೈಸೂರಿನ ವಿಭಾಗಾಧಿಕಾರಿಗಳ ಕಾರ್ಯಾಲಯದಲ್ಲಿ ಸೇರುತ್ತಿದ್ದ ಸಭೆಗಳಲ್ಲಿ

ಪಾಲುಗೊಳ್ಳುತ್ತಿದ್ದುದಂತೂ ಸರಿಯೆ; ಇದಲ್ಲದೆ ಗಡಿಹಳ್ಳಿಗಳ ಸಾಮಾನ್ಯ ಸಮಸ್ಯೆಗಳನ್ನು ಬಿಡಿಸಲೋಸುಗ ನಾವಿಬ್ಬರೂ ಹಲವು ಸಲ ಗಡಿಹಳ್ಳಿಗಳಲ್ಲಿ ಸೇರಿದುದುಂಟು. ಆಗ ಅವರ ಆಡಳಿತದ ಅನುಭವದಿಂದ ಪ್ರಯೋಜನ ಪಡೆದುದಲ್ಲದೆ ಅವರೊಡನೆ ಸಾಹಿತ್ಯ ವಿಷಯಕ ಚರ್ಚೆಗಳನ್ನೂ ನಡೆಸಿದ ಲಾಭ ನನ್ನದಾಯಿತು. ಅವರು ಹಾಸ್ಯಪ್ರಿಯರೆಂಬುದೂ ಸರಸ ಹರಟೆಗಳಲ್ಲಿ ಬಲ್ಲಿದರೆಂಬುದೂ ನನಗೆ ಗೊತ್ತಾದುದು ಆಗಲೇ ಹಳ್ಳಿಗರೊಡನೆ ಹಳ್ಳಿಗರಂತೆ, ಪಟ್ಟಣಿಗರೊಡನೆ ಪಟ್ಟಣಿಗರಂತೆ ಬೆರೆಯುತ್ತಿದ್ದ ಅವರು ಎಲ್ಲರಿಗೂ ಬೆಲ್ಲವಾಗುತ್ತಿದ್ದರು.

ಆಡಳಿತದಲ್ಲಿಯೇ ಆಗಲಿ, ಬರವಣಿಗೆಯಲ್ಲಿಯೇ ಆಗಲಿ, ನಿಯಮಿತತನ ಅವರ ಹೆಗ್ಗುರುತು. ಕೋಳಿಕೂಗುವ ಮುನ್ನ ಏಳುವುದು ವಾಯುವಿಹಾರ, ವ್ಯಾಸಂಗ, ಲೇಖನ ವ್ಯವಸಾಯ, ಸರಕಾರದ ಸಾರ್ವಜನಿಕ ಸೇವೆ ಮತ್ತು ಗಾಳಿಸವಾರಿ, ಮತ್ತೆ ವ್ಯಾಸಂಗ, ಮತ್ತೆ ಲೇಖನ ವ್ಯವಸಾಯ—ಇವೆಲ್ಲ ಚಾಚೂ ತಪ್ಪದಂತೆ ನಿತ್ಯ ನಡೆಯಲೇಬೇಕು. ಅವರ ಮನೆಯು ಗಡಿಯಾರವಾದರೂ ನಿಂತೀತು, ಅವರ ನಿತ್ಯ ಕಾರ್ಯಕ್ರಮಗಳು ನಿಲ್ಲಲಾರವು! ಏತನ್ಮಧ್ಯೆ ಗೆಳೆಯರೊಡನೆ ಸಲ್ಲಾಪ. ನೆರವು ಬೇಡ ಬಂದವರಿಗೆ ನೆರವು, ಜನಪದ ಸಾಹಿತ್ಯ ಸಂಗ್ರಹ ಕಾರ್ಯ, ಅದರ ಪುನರುತ್ಥಾನಕ್ಕಾಗಿ ಹೋರಾಟ—ಇತ್ಯಾದಿಗಳು ನಡೆಯಲೇಬೇಕು. ಬಿಡುವಿಲ್ಲದೆ ದುಡಿದರೂ ದಣಿವೆಂಬುದಿಲ್ಲ ಗೌಡರಿಗೆ.

ಗೌಡರಲ್ಲಿ ಒಳಗೊಂದು ಹೊರಗೊಂದು ಇಲ್ಲ: ಎರಡೆರಡು ಮಾನದಂಡಗಳಿಲ್ಲ; ಆನೆಯಂತೆ ತಿನ್ನುವ ಹಲ್ಲು ಬೇರೆ, ತೋರುವ ಹಲ್ಲು ಬೇರೆ ಇಲ್ಲ: ವಿಭಕ್ತ ವ್ಯಕ್ತಿತ್ವವಿಲ್ಲ; ಸಂಕುಚಿತ ಭಾವನೆಗಳಿಲ್ಲ. ನೇರನುಡಿ, ನೇರನಡೆ, ನೇರ ದಾರಿ. ಯಾರಲ್ಲಿಯಾದರೂ ಏನಾದರೂ ಸರಿಯಾಗಿಲ್ಲದುದು ತೋರಿದರೆ ಅವರ ಸಮ್ಮುಖದಲ್ಲಿಯೇ ಅದನ್ನು ಖಂಡಿಸಿಯಾರು—ಅವರ ಬೆನ್ನ ಹಿಂದೆ ಆಡಿಕೊಳ್ಳಲಾರರು. ನಾನು ಹಿಡಿದುದೇ ಕಡಲಿಗೆ ಎಂಬ ಹಟವೂ ಅವರಲ್ಲಿಲ್ಲ: ಬೇರೆಯವರು ತಮಗಿಂತ ಸೂಕ್ತವಾದುದನ್ನು ಹೇಳಿದರೆ ಒಪ್ಪಿಕೊಳ್ಳುವ ಉದಾರತೆಯಿದೆ. ಆಡಳಿತದಲ್ಲಿಯೂ ಬರವಣಿಗೆಯಲ್ಲಿಯೂ ಉನ್ನತ ಸ್ಥಾನ ಪಡೆದೂ ಬಿಮ್ಮನೆ ಬೀಗದ ವಿನಯಶೀಲ ಅವರು. ಒಳ್ಳೆಯದನ್ನು ಮಾಡುವ ಅವಕಾಶ ಸಿಕ್ಕಾಗ ಅದನ್ನು ಕಳೆದುಕೊಳ್ಳಕೂಡದೆಂದು ಛಲದಿಂದ ದುಡಿದ ಅವರು ಅನ್ಯರಿಗೆ ಅಪಕಾರವಾಗಲಿ, ಅಪಚಾರವಾಗಲಿ ತಮ್ಮಿಂದ ಘಟಿಸದಂತೆ ಎಚ್ಚರಿಕೆ ವಹಿಸಿದರು; ತಮಗೆ ಕೇಡುಮಾಡಿದವರಿಗೂ ಕೇಡು ಮಾಡದೆ ಅವರಿಗೆ ಒಳಿತನ್ನೇ ಬಯಸಿದರು.

ಜೀವನದಲ್ಲಿ ಸಫಲತೆಗಿಂತ ಸಾರ್ಥಕತೆ ದೊಡ್ಡದು. ಗೌಡರ ಜೀವನ ಸಾಫಲ್ಯ ಸಾರ್ಥಕ್ಯಗಳೆರಡನ್ನೂ ಸಾಕಷ್ಟು ಸಾಧಿಸಿ ಶೋಭಿಸುತ್ತಿರುವ ಜೀವನ. ಕನ್ನಡಿಗರು ಕನ್ನಡನಾಡು ನುಡಿಗಳಿಗೆ ನಾಗೇಗೌಡರು ಮಾಡಿದ ಸೇವೆಯನ್ನೂ, ನೀಡಿದ ಕಾಣಿಕೆಯನ್ನೂ ಎಂದೂ ಮರೆಯಲಾರರು, ಮರೆಯಬಾರದು.

೬ | ಬಿಚ್ಚು ಹೃದಯಿ

ಸಿಂಪಿ ಲಿಂಗಣ್ಣ

ಮೊಟ್ಟಮೊದಲು ಶ್ರೀ ನಾಗೇಗೌಡರನ್ನು ನಾನು ಕಂಡದ್ದು, ಮಂಗಳೂರಿನ ಅವರ ನಿವಾಸದಲ್ಲಿ, ೧೯೬೯ನೇ ವರುಷ. ಮೈಸೂರು ವಿಶ್ವವಿದ್ಯಾನಿಲಯದವರು ಏರ್ಪಡಿಸಿದ ಕರ್ನಾಟಕ ಜನಪದ ಸಾಹಿತ್ಯದ ೨ನೇ ಸಮ್ಮೇಲನದ ಅಧ್ಯಕ್ಷನಾಗಿ ಹೋಗಿದ್ದೆ. ಡಾ. ಜವರೇಗೌಡರು ಮತ್ತು ಡಾ. ಹಾ. ಮಾ. ನಾಯಕರು, ಪ್ರವಾಸಿ ಮಂದಿರದಲ್ಲಿ ನನಗಾಗಿ ವಾಸ್ತವ್ಯವನ್ನು ಏರ್ಪಡಿಸಿದ್ದರು. ಶ್ರೀ ನಾಗೇಗೌಡರು ಆಗ ಮಂಗಳೂರು ಜಿಲ್ಲೆಯ ಡೆಪ್ಯುಟಿ ಕಮಿಷನರಾಗಿದ್ದರು. ನನ್ನನ್ನವರು ಉಪಾಹಾರಕ್ಕಾಗಿ ಆಮಂತ್ರಿಸಿದ್ದರಿಂದ ಅವರ ಭವ್ಯವಾದ ನಿವಾಸವನ್ನು ನೋಡುವ ಭಾಗ್ಯವೊದಗಿತು. ಡೆಪ್ಯುಟಿ ಕಮಿಷನರರಂಥ ಉಚ್ಚ ಅಧಿಕಾರಿಗಳೂ, ಉನ್ನತಮಟ್ಟದ ಶಿಷ್ಟ ಹಾಗೂ ಜಾನಪದ ಸಾಹಿತಿಗಳೂ ಆದ ಅವರ ಅಪೇಕ್ಷೆಯಂತೆ, ಹಳ್ಳಿಗನಾದ ನಾನು ತುಸು ಸಂಕೋಚದಿಂದಲೇ ಅವರ ನಿವಾಸಕ್ಕೆ ಡಾ. ಹಾ. ಮಾ. ನಾಯಕರನ್ನು ಓಂಬಾಲಿಸಿ ಹೋದೆ. ಶ್ರೀ ನಾಗೇಗೌಡರ ಬಿಚ್ಚುಹೃದಯದ ಸ್ವಾಗತವು ಸಿದ್ಧವಾಗಿತ್ತು.

ಮುಗುಳುನಗೆಯೊಡನೆ ಮುಂಬಂದು ನನ್ನ ಕೈಕುಲುಕಿ, ನಮ್ಮನ್ನು ಒಳಗೆ ಕರೆದೊಯ್ದರು. ನಿವಾಸದ ಒಂದು ವಲಯವು ನಮಗಾಗಿ ಸುಸಜ್ಜಿತವಾಗಿತ್ತು. ಅಲ್ಲಿ ಕುಳಿತೆವು. ಪರಿಸರವು ಪ್ರಶಾಂತವಾಗಿತ್ತು, ಪ್ರಸನ್ನವೂ ಆಗಿತ್ತು. ಎತ್ತನೋಡಿದರೂ ಎತ್ತರದ ಬಿತ್ತರದ ಮರಗಳು ಕಣ್ಣುಕೋರಯಿಸುವಂತಿದ್ದವು. ಪಶ್ಚಿಮ ನಿಟ್ಟಿಗೆ ಮುಖ ಮಾಡಿ ಕುಳಿತ ನನ್ನಲ್ಲಿ, ಬಹುದೂರದವರೆಗೆ ತೆಂಗಿನ ಬನವು ಹರಡಿಕೊಂಡಿರುವುದು, ನೂತನವೇ ಆದ ಒಂದು ಉಲ್ಲಾಸವನ್ನು ಅರಳಿಸಿತು. ದೃಷ್ಟಿಯನ್ನು ಮತ್ತೂ ಮುಂದೋಡಿಸಿದರೆ ಅರಬೀಸಮುದ್ರದ ತಿಳಿನೀಲ ನೀರಿನಲ್ಲಿ ಅಲೆಗಳು ಆಟವಾಡುತ್ತಿದ್ದುದು ನನ್ನಲ್ಲಿ ಅಲೌಕಿಕವಾದ ಒಂದು ಉತ್ಸಾಹವನ್ನು ಕೆರಳಿಸಿತು. ದೃಷ್ಟಿ ಇನ್ನೂ ಮುಂದೆ ಹರಿದು, ಕ್ಷಿತಿಜ–ನೀಲಗಗನಗಳ ಸೇರುವೆಯಲ್ಲಿ ನಿಂತಾಗ ಇನ್ನಾವುದೋ ಅಗೋಚರ ರಾಜ್ಯಕ್ಕೆ ಕೆರಳಿಸಿತು.

ಸುಪ್ರಸನ್ನವಾದ ಸೃಷ್ಟಿಯ ಪ್ರಭಾವಳಿಯಲ್ಲಿ ಶ್ರೀ ನಾಗೇಗೌಡರ, ಪ್ರಸನ್ನ ಮೂರ್ತಿಯು ನನ್ನ ಹೃದಯವನ್ನು ತಟ್ಟಿ ಆತ್ಮೀಯತೆಯನ್ನು ನೀಡಿತು. ಅವರು ಅಂದು, ಭೌತಿಕ ದೇಹಕ್ಕೆ ನೀಡಿದ ಉಪಾಹಾರವು ಅಧರದಂತೆ ಉದರಕ್ಕೂ ಸಿಹಿಯಾಗಿ ಸಹೃದಯತೆಗೆ ದಾರಿಮಾಡಿತು. ನಾಗೇಗೌಡರ ಆ ಸಹೃದಯತೆಯು, ನನ್ನಲ್ಲಿ ಮೂಡಿದ

ಸಂಕೋಚವನ್ನು ದೂಡಿತು. ಅದರಿಂದ ಅವರು ನಮ್ಮವರೆಂಬ ಭಾವನೆಯು ಮುಗುಳಿತು.

ದರ್ಶನ, ಪರಿಚಯ, ಸಂಭಾಷಣೆಗಳು ಮುಂದುವರಿದು, ಸಹವಾಸ-ಸಖ್ಯಗಳ ಸೀಮೆಯನ್ನು ತಲಪಿಸಿದುವು. "ಇವನಾರವ ಇವನಾರವ" ಎಂಬುದು ಅಡಗಿ "ಇವ ನಮ್ಮವ, ಇವ ನಮ್ಮವ" ಎನ್ನುವ ಹತ್ತಗಡೆಯನ್ನು ಒದಗಿಸಿತು.

ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ನಾರಾಯಣರು ದೂತಿಯಾಗಿ ನಮ್ಮ ಪ್ರೀತಿಯನ್ನು ಹದಗೊಳಿಸಿದರು. ಅವರು ಪರಿಷತ್ತು ಪೊತ್ತುಹೊತ್ತಿಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿ, ಬೆಟ್ಟದ ನೆಲ್ಲಿ, ಸಮುದ್ರದ ಉಪ್ಪು ಒಂದು ಭರಣಿಯಲ್ಲಿ ಹೊಂದುಗೂಡುವ ಏರ್ಪಾಡಿಗೆ ಕಾರಣರಾದರು. ಅದರಿಂದ ನಾವು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಹಲವು ಯೋಜನೆಗಳಲ್ಲಿ ಸದಸ್ಯರಾದೆವು. ಮೀಟಿಂಗಿನ ಸಲುವಾಗಿ ಕರ್ನಾಟಕದ ವಾಯುವ್ಯ ಮೂಲೆಯಲ್ಲಿರುವ ಚಡಚಣ ಗ್ರಾಮದಿಂದ ನಾನು, ಅದೇ ಕರ್ನಾಟಕದ ಆಗ್ನೇಯ ಮೂಲೆಯ ಬೆಂಗಳೂರಿನಂಥ ಮಹಾನಗರದಲ್ಲಿ ಮಾನ್ಯ ನಾಗೇಗೌಡರನ್ನು ಆಗಾಗ ಕಾಣುವ ಸಂದರ್ಭವೊದಗಿತು.

ಶ್ರೀ ವಿಶ್ವನಾಥರೆಡ್ಡಿಯವರು ಏರ್ಪಡಿಸಿದ ಲಾವಣಿಕಾರರ ಸ್ಪರ್ಧೆಗಾಗಿ ನಾನು ಪರೀಕ್ಷಕನಾಗಿ, ನಾಗೇಗೌಡರು ನಿರೀಕ್ಷಕರಾಗಿ ಕಲಬುರ್ಗಿಯಲ್ಲಿ ಸಂಧಿಸಿದೆವು. ಬೆಂಗಳೂರೇನು ಕಲಬುರ್ಗಿಯೇನು, ಎಲ್ಲಿ ಕಂಡರೂ ನಾಗೇಗೌಡರು ನಾಗೇಗೌಡರೇ. ಅದೇ ಸೌಜನ್ಯ, ಅದೇ ಸಹೃದಯತೆ. ಅವರೊಂದು ತುಂಬಿದ ಕೊಡ. ತುಂಬಿಯೇ ಇರುವಂಥದು. ತುಳುಕುವ ಸ್ವಭಾವ ಅದಕ್ಕೆ ಗೊತ್ತೇ ಇಲ್ಲವಷ್ಟೆ.

ಶ್ರೀ ಜಿ. ನಾರಾಯಣರು, 'ಕರ್ನಾಟಕ ಜನಪದ ಕಥೆಗಳು' ಎಂಬ ಸಂಕಲನವನ್ನು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಗೊಳಿಸುವ ಎತ್ತುಗಡೆಯನ್ನು ನಡೆಸಿದರು. (೧೯೭೭ ?) ಆ ಸಂಕಲನಕ್ಕೆ ನಾಗೇಗೌಡರು ಸಂಪಾದಕರೆಂದು ತೀರ್ಮಾನಿಸಲಾಯಿತು. ಪತ್ತೊಂಬತ್ತು ಜಿಲ್ಲೆಗಳ ಪ್ರಾತಿನಿಧಿಕ ಕಥೆಗಳನ್ನು ಒದಗಿಸುವ ಕೆಲಸವನ್ನು ಮೂವತ್ತೆರಡು ಜನರಿಗೆ ವಹಿಸಿಕೊಡಲಾಯಿತು. ಅದರಂತೆ 'ಕರ್ನಾಟಕ ಜನಪದ ಕಲೆಗಳು' ಎಂಬ ಸಚಿತ್ರ ಗ್ರಂಥವನ್ನು ಸಂಪಾದಿಸುವ ಸಾಹಸವನ್ನೂ ಕ. ಸಾ. ಪರಿಷತ್ತು ಕೈಕೊಂಡಿತು. ಅದಕ್ಕೆ ಶ್ರೀ ಗೋ. ರು. ಚೆನ್ನಬಸಪ್ಪ ಮುಖ್ಯ ಸಂಪಾದಕರೆಂದೂ ನಾವು ಸಂಪಾದಕ ಸದಸ್ಯರೆಂದೂ ಗೊತ್ತಾಯಿತು. ಈ ಎರಡು ಗ್ರಂಥಗಳ ರಚನೆ ಹಾಗೂ ಪ್ರಕಟಣೆಗಳನ್ನು ಸುಗಮಗೊಳಿಸುವ ಸಲುವಾಗಿ ಕರೆದ ಮೀಟಿಂಗಿಗೆ ನಾನು ಹಲವು ಸಾರೆ ಬೆಂಗಳೂರಿಗೆ ಹೋಗಿ ಅದರಲ್ಲಿ ಭಾಗವಹಿಸುವುದು ಅನಿವಾರ್ಯವಾಯಿತು. ಆ ಕಾರಣದಿಂದ ಶ್ರೀಯುತರುಗಳಾದ ನಾಗೇಗೌಡ, ಜಿ. ನಾರಾಯಣ, ಜೀ. ಶಂ. ಪರಮಶಿವಯ್ಯ, ಗೋ. ರು. ಚೆನ್ನಬಸಪ್ಪ ಮೊದಲಾದವರೊಡನೆ ಸ್ನೇಹವು ನಿಷ್ಠವಾಯಿತು.

ಕ. ಸಾ. ಪರಿಷನ್ಮಂದಿರದಲ್ಲಿ ಮೀಟಿಂಗು, ವಾಡಿಕೆಯಂತೆ ಅಲ್ಪೋಪಹಾರ ಹಾಗೂ

ಚಹಾಪಾನ ಮುಗಿದ ಬಳಿಕ ನಾಗೇಗೌಡರು, ಪಾಕೀಟಿನೊಳಗಿಂದ ಸಿಗರೇಟು, ಕಡ್ಡಿಪೆಟ್ಟಿಗೆ ಹೊರತೆಗೆದು-"ಅಪ್ಪಣೆಯೇ" ಎಂದು ನನ್ನನ್ನು ಕೇಳಿದರು. ಹಾಗೆ ಕೇಳಿದ್ದು ಔಪಚಾರಿಕ ವೆಂದು ಬಗೆದು ನಾನು ಬರೇ ನಕ್ಕೆನು. ಗೌಡರು ಅಷ್ಟಕ್ಕೇ ಬಿಡಲಿಲ್ಲ. "ಇಲ್ಲಿ ಹಿರಿಯ ರಾದ ನಿಮ್ಮ ಸಮ್ಮತಿ ಬೇಕೇ ಬೇಕು" ಎಂದು ಸದುವಿನಯವನ್ನು ಪ್ರಕಟಿಸಿದ್ದರಿಂದ ನಾನು, ನಿರ್ವಾಹವಿಲ್ಲದೆ-"ಕೇಳುವುದೇನು, ಸಮ್ಮತಿ ಇದ್ದೇ ಇದೆ" ಎಂದೆನು.

ಆ ಬಳಿಕ ಅವರು ಮುಂದಿನ ಕ್ರಮ ಕೈಕೊಂಡರು.

ಕಲಬುರಗಿಯ ಲಾವಣಿಕಾರರ ಸ್ಪರ್ಧೆಯ ಕಾಲಕ್ಕೆ ಉತ್ತರ ಕರ್ನಾಟಕದವರ ಹಾಗೂ ಹಳೆಯ ಮೈಸೂರು ಭಾಗದವರ ಹಲವು ಲಾವಣಿಗಳನ್ನು ಕೇಳಿ, ಸ್ಪರ್ಧೆ ನಡೆಸು ವವರಿಗೆ ಒಂದು ಸೂಚನೆಯನ್ನು ಮಾನ್ಯಮಾಡಬೇಕೆಂದು ಶ್ರೀ ನಾಗೇಗೌಡರು ಆತ್ಮೀಯತೆಯಿಂದ ಕೇಳಿಕೊಂಡರು. ಹೇಗೆಂದರೆ—

"ಉತ್ತರಕರ್ನಾಟಕದ ಲಾವಣಿಗಳನ್ನು ಹಿಮ್ಮೇಳದೊಂದಿಗೆ, ದಪ್ಪ-ತುಂತೂನಿ ವಾದ್ಯ ಸಮೇತವಾಗಿ ಹಾಡಿದಾಗ ತೀವ್ರ ಮನೋರಂಜನೆ ಒದಗಿಬರುತ್ತದೆ. ಹಾಗೂ ಲಾವಣೀ ಪದದಲ್ಲಿ ಬರುವ ಏರು ಇಳುವು, ಡಾಲಪಲ್ಲವಿಗಳಂತೆ ಅಂತ್ಯ ಪ್ರಾಸದ ಸೊಬಗು ಶ್ರೋತೃಗಳ ಮನಸ್ಸನ್ನು ಸೂರೆಗೊಂಡು ಸೆರೆಹಿಡಿಯುತ್ತವೆ. ಈ ಬಂಡವಲು ದಕ್ಷಿಣ ಕರ್ನಾಟಕದ ಲಾವಣಿಗಳಲ್ಲಿ ಇಲ್ಲ. ಆದ್ದರಿಂದ ಅವರು ಸ್ಪರ್ಧೆಯಲ್ಲಿ ವಿಜೇತ ರಾಗಲು ಸಾಧ್ಯವೇ ಇಲ್ಲ. ಆದ್ದರಿಂದ ಉತ್ತರದವರ ಒಂದು ಗುಂಪು, ದಕ್ಷಿಣದವರ ಒಂದು ಗುಂಪು ಮಾಡಿ, ಬೇರೆಬೇರೆಯಾದ ಸ್ಪರ್ಧೆಗಳನ್ನು ಹಂಚುವ ಏರ್ಪಾಡು ಮಾಡುವುದು ಸೂಕ್ತವೆಂದು ತೋರುತ್ತದೆ."

ಶ್ರೀ ನಾಗೇಗೌಡರ ಸೂಚನೆಯನ್ನು ಸ್ಪರ್ಧಾಮಂಡಲವು ಮಾನ್ಯ ಮಾಡಿತೆಂದು ಬೇರೆ ಹೇಳುವ ಕಾರಣವೇ ಇಲ್ಲ.

ಮೂವತ್ತು ಮೂವತ್ತೈದು ವರುಷ ಉಚ್ಚಮಟ್ಟದ ಅಧಿಕಾರವನ್ನು ನಿರ್ವಹಿಸಿ, ಅದನ್ನೇ ಉಂಡು, ಅದನ್ನೇ ಉಸಿರಾಡಿಸಿದರೂ ಅವರು ಜನಪದಕ್ಕೆ ಹತ್ತಿರದವರಾಗಿಯೇ ಉಳಿದಿದ್ದಾರೆ ಎನ್ನುವುದಕ್ಕೆ ಅವರ ಸಾಹಿತ್ಯ ಕೃತಿಗಳೇ ಸಾಕ್ಷಿಯಾಗಿವೆ. ಸಾಹಿತ್ಯದ ವಿಷಯವಾಗಲಿ, ಅದನ್ನು ನಿರೂಪಿಸುವ ಕ್ರಮವಾಗಲಿ ಜಾನಪದಕ್ಕೆ ತೀರ ಹಾಳತ ವಾಗಿರುವಂತೆ ಎಚ್ಚರಿಕೆ ವಹಿಸುತ್ತಿರುವುದನ್ನು ಅವರ ಯಾವುದೇ ಸಾಹಿತ್ಯ ಕೃತಿಯನ್ನು ಅವಲೋಕಿಸಿ ಮನಗಾಣಬಹುದಾಗಿದೆ. ಹೀಗೆ, ನಾನು ಕಂಡ ನಾಗೇಗೌಡರು, ಮುಗಿಲಲ್ಲಿ ಹಾರಿದರೂ ನೆಲದಲ್ಲಿ ಕಾಲೂರಿದವರಾಗಿದ್ದಾರೆ.

೭ | ಹಿರಿಯ ಗುಣ

ಹ. ಕ. ರಾಜೇಗೌಡ

1955ರಲ್ಲಿ ನಾನು ಶಿವಮೊಗ್ಗೆಯ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದೆ. ನನ್ನ ದೊಡ್ಡಪ್ಪನವರ ಮಗ ಈ ಮೊದಲೇ ತಾಂತ್ರಿಕ ಶಿಕ್ಷಣವನ್ನು ಮುಗಿಸಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ಅವನು ನನಗಿಂತ ಸ್ವಲ್ಪ ಹಿರಿಯನಾದರೂ ನಮ್ಮಿಬ್ಬರಲ್ಲಿ ಒಂದು ರೀತಿಯ ಅವಿನಾ ಸಂಬಂಧ. ನಾವಿಬ್ಬರೂ ನಮ್ಮ ಹಳ್ಳಿಯಲ್ಲಿ ಯಾವಾಗಲೂ ಒಟ್ಟಿಗಿರುತ್ತಿದ್ದೆವು, ಒಟ್ಟಿಗೆ ಅಲೆಯುತ್ತಿದ್ದೆವು. ಸ್ವಲ್ಪ ಹೆಚ್ಚು ಕಡಮೆ ಶಾಲೆಯಲ್ಲಿ ಬೇರೆ ಬೇರೆ ತರಗತಿಗಳಲ್ಲಿ ಕುಳಿತರೂ ಒಂದೇ ಶಾಲೆಯಲ್ಲಿ ಅವನು ಮುಂದೆ ನಾನು ಹಿಂದೆ ಬಂದೆವು. ಹೀಗೆ ಅವನು ತಾಂತ್ರಿಕದತ್ತ ನಾನು ಸಾಹಿತ್ಯದತ್ತ ತಿರುಗಿದರೂ ನಮ್ಮ ಸಂಬಂಧ ಹಾಗೆಯೆ ನಡೆದಿತ್ತು. ಈ ಕಾರಣದಿಂದಾಗಿ ನಾನು ಶಿವಮೊಗ್ಗೆಯ ಕಾಲೇಜಿಗೆ ಸೇರಿದೆ. ಆಗ ಭದ್ರಾವತಿಯಿಂದ ನೂರಾರು ಮಂದಿ ವಿದ್ಯಾರ್ಥಿಗಳು ರೈಲಿನಲ್ಲಿ ಶಿವಮೊಗ್ಗೆಯ ಕಾಲೇಜಿಗೆ ಹೋಗಿಬರುತ್ತಿದ್ದರು. ಈ ರೈಲಿನ ವಿದ್ಯಾರ್ಥಿಗಳೆಲ್ಲಾ ಸೇರಿ 'ಹೊಗೆ ಬಂಡಿ ವಿದ್ಯಾರ್ಥಿ ಸಂಘ' ಎಂಬ ಒಂದು ಸಂಘ ಸ್ಥಾಪಿಸಿಕೊಂಡಿದ್ದರು. ಈ ಸಂಘವು 'ಪಯಣಿಗ' ಎಂಬ ಪತ್ರಿಕೆಯೊಂದನ್ನು ಹೊರಡಿಸುತ್ತಿತ್ತು. ರೈಲಿನಲ್ಲಿ ಪ್ರಯಾಣ ಮಾಡುವ ವಿದ್ಯಾರ್ಥಿಗಳ ಹಿತರಕ್ಷಣೆಯೊಂದಿಗೆ ಸಾಹಿತ್ಯಿಕ ಚಟುವಟಿಕೆಗಳಿಗೂ ಈ ಸಂಘ ಪ್ರಧಾನವಾಗಿ ಗಮನ ಕೊಡುತ್ತಿತ್ತು. ನಾನೂ ಒಮ್ಮೆ ಆ ಸಂಘದ ಅಧ್ಯಕ್ಷನಾಗಿದ್ದೆ. ಈ ಸಂದರ್ಭದಲ್ಲಿಯೆ ನಾನು ಮೊಟ್ಟಮೊದಲು ಶ್ರೀಮಾನ್ ಎಚ್. ಎಲ್. ನಾಗೇಗೌಡರನ್ನು ಕಂಡದ್ದು.

ಹೊಗೇ ಬಂಡಿ ವಿದ್ಯಾರ್ಥಿ ಸಂಘದ ವಿದ್ಯಾರ್ಥಿಗಳು ತಮ್ಮ ಸಂಘದ ಆರ್ಥಿಕ ಸ್ಥಿತಿಯನ್ನು ದುರಸ್ತುಪಡಿಸಿಕೊಳ್ಳಲು ಒಂದು ನಾಟಕ ಆಡಬೇಕೆಂದು ತೀರ್ಮಾನಿಸಲಾಯಿತು ಆಡಿದ್ದು ಯಾವ ನಾಟಕ ಎಂದು ಈಗ ನನಗೆ ಸರಿಯಾಗಿ ನೆನಪಿಲ್ಲ. ನಾನೇ ಅದರಲ್ಲಿ ನಾಯಕ ಪಾತ್ರವನ್ನು ವಹಿಸಬೇಕಾಗಿತ್ತು. ರಶೀತಿ ಪುಸ್ತಕ ಅಚ್ಚು ಹಾಕಿಸಿದೆವು. ಭದ್ರಾವತಿಯಲ್ಲಿ ಆಗ ಒಂದು ಸಿನೆಮಾ ಮಂದಿರವಿತ್ತು. ಅದನ್ನು ಕಾರ್ಖಾನೆಯವರು ಕಟ್ಟಿಸಿ ಬಾಡಿಗೆಗೆ ಕೊಟ್ಟಿದ್ದರು. ಆದರೆ ಕಾರ್ಖಾನೆಯ ಕಾರ್ಮಿಕರ ಅಥವಾ ಅವರಿಗೆ ಸಂಬಂಧಿಸಿದವರ ಯಾವುದಾದರೂ ಸಮಾರಂಭವಿದ್ದಲ್ಲಿ ಅಂಥ ದಿನ ಸಿನೆಮಾ ನಿಲ್ಲಿಸಿ ಅವರಿಗೆ ಕೊಡಬೇಕಾಗಿತ್ತು. ನಾವು ಆ ಮಂದಿರವನ್ನೇ ಇನ್ನೂರೋ ಮುನ್ನೂರೋ ರೂಪಾಯಿಗಳನ್ನು ಕಟ್ಟಿ ನಮ್ಮ ನಾಟಕಕ್ಕಾಗಿ ಕಾದಿರಿಸಿದ್ದೆವು. ನಾಟಕ ನಡೆಯಬೇಕಾದ

ದಿನ ಸುಮಾರು ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ನಾನು ಆ ಮಂದಿರದ ಹತ್ತಿರ ಹೋದೆ. ಅದು ಬಿಕೋ ಎನ್ನುತ್ತಿತ್ತು. ಅಲ್ಲಿ ಯಾರೂ ಇರಲಿಲ್ಲ. ಅಲ್ಲಿ ನಾಟಕ ಆಡುವವರಿಗೆ, ಸಭೆ ಸಮಾರಂಭ ನಡೆಸುವವರಿಗೆ ದೀಪ, ಪರದೆ ಕಟ್ಟುವುದು ಕುರ್ಚಿ ಮೇಜುಗಳನ್ನು ಹಾಕುವುದು ಇತ್ಯಾದಿ ವ್ಯವಸ್ಥೆ ಕಾರ್ಖಾನೆಯವರ ಕೆಲಸ, ಅವಕ್ಕಾಗಿಯೇ ನಾವು ಹಣ ಕಟ್ಟುತ್ತಿದ್ದುದು. ಆದರೆ ಆ ದಿನ ಅಲ್ಲಿ ಯಾರೂ ಬಂದಂತೆ ಕಾಣಲಿಲ್ಲ. ಕೂಡಲೆ ನಾನು ನೇರವಾಗಿ ಸಂಬಂಧಪಟ್ಟ ಅಧಿಕಾರಿಯಲ್ಲಿಗೆ ಹೋದೆ. ಆತ ತೀರಾ ಉದಾಸೀನ ಮನೋಭಾವದಿಂದಲೂ, ಅದರಿಂದ ಈಗ ಅಂತಹ ನಷ್ಟ ಏನಾಗಿದೆ ಎಂಬ ಭಾವನೆಯಿಂದಲೂ "ನಮಗೆ ಕಾರ್ಯದರ್ಶಿಯವರಿಂದ ಯಾವ ಸೂಚನೆಯೂ ಬಂದಿಲ್ಲ" ಎಂದು ಉತ್ತರಿಸಿದ. ಕೂಡಲೆ ನಾನು ನೇರವಾಗಿ ಆಡಳಿತ ಮಂಡಲಿಯ ಕಾರ್ಯದರ್ಶಿಯವರ ಕಚೇರಿಗೆ ಹೋದೆ. ಅವರು ಮನೆಗೆ ಹೋದುದಾಗಿ ತಿಳಿಯಿತು. ಕೂಡಲೆ ಅವರ ಮನೆಯತ್ತ ಓಡಿದೆ. ಆಗ ಕಾರ್ಯದರ್ಶಿಯಾಗಿದ್ದವರು ಶ್ರೀಮಾನ್ ಎಚ್.ಎಲ್. ನಾಗೇಗೌಡರು.

ಭದ್ರಾವತಿಯ ಹೊಸನಗರ (New Town) ಬಡಾವಣೆಯಲ್ಲಿ ಕಾರ್ಖಾನೆಯ ಆಡಳಿತ ಮಂಡಳಿಯ ಕಾರ್ಯದರ್ಶಿಯವರ ಮನೆ. ನಾನು ಆ ಮನೆ ಬಾಗಿಲು ಸೇರಿದಾಗ ಸಂಜೆಗೆಂಪು ಹರಡಿತ್ತು. ಮುಂದಿನ ವೆರಾಂಡಾದಲ್ಲಿ ಯಾರೋ ಮೂರು ನಾಲ್ಕು ಮಂದಿ ಹೆಣ್ಣುಮಕ್ಕಳೊಂದಿಗೆ ಗೌಡರ ಹಿರಿಯ ಮಗಳು ಎಂದು ಕಾಣುತ್ತದೆ, ಮಾತನಾಡುತ್ತಾ ಕುಳಿತಿದ್ದರು. ನಾನು ಕರೆಗಂಟೆಯನ್ನು ಒತ್ತಿದೆ. ಒಮ್ಮೆ ಗೌಡರು ಇಣುಕಿನೋಡಿದರೊ ಅಥವಾ ಒಂದು ಕೊಠಡಿಯಿಂದ ಮತ್ತೊಂದು ಕೊಠಡಿಗೆ ಹೋಗುತ್ತಿದ್ದರೊ ಅಂತೂ ನಾನು ಅಲ್ಲಿ ನಿಂತಿದ್ದುದನ್ನು ಗಮನಿಸಿದರು. ನಾನು ನೋಡಿದರು ಬಂದು ವಿಚಾರಿಸುತ್ತಾರೆಂದು ಅಲ್ಲಿಯೇ ನಿಂತೆ. ಹತ್ತಿರ ಹತ್ತಿರ ಒಂದು ಘಂಟೆಯ ಕಾಲ ನಾನು ಅಲ್ಲಿ ನಿಂತಿದ್ದೆ. ಆದರೆ ಯಾರೂ ಬರಲಿಲ್ಲ. ನನಗೆ ಅಪರಿಮಿತ ಸಿಟ್ಟುಬಂದಿತು. ಕಡೆಗೆ ಅವರು ಹೊರ ಬರುವವರೆಗೆ ಕರೆಗಂಟೆ ಅದುಮಿ ಹಿಡಿದಿದೆ. ಗೌಡರು ಬಹಳ ಉಗ್ರವಾಗಿಯೇ ಹೊರಬಂದರು. ನಾನೂ ಉಗ್ರವಾಗಿಯೆ ಇದ್ದೆ. ವಿಷಯ ತಿಳಿದ ಮೇಲೆ, ನಾನೊಬ್ಬ ವಿದ್ಯಾರ್ಥಿ ಎಂದು ತಿಳಿದೊಡನೆಯೇ ಅವರು ಸೌಜನ್ಯಮೂರ್ತಿಯಾದರು. ನಾನು ಆಮೇಲೆಯೂ ಒರಟಾಗಿಯೇ ಮಾತನಾಡುತ್ತಿದ್ದೆ. ಅವರು ಸಮಾಧಾನದಿಂದ "ನೀನು ಹೋಗುವ ಹೊತ್ತಿಗೆ ಎಲ್ಲಾ ವ್ಯವಸ್ಥೆಯಾಗಿರುತ್ತದೆ ಹೆದರಬೇಡ. ಯಾರೊ ಕೆಲಸ ಕೇಳಲು ಬಂದ ಹುಡುಗ ಎಂದು ಸುಮ್ಮನಿದ್ದೆ" ಎಂದರು."ಕೆಲಸ ಕೇಳಲು ಬಂದರೆ ಇಲ್ಲ ಹೋಗು ಎಂದು ಹೇಳಿ. ಆದರೆ ಮನುಷ್ಯರನ್ನು ಹೀಗೆ ಬಾಗಿಲಲ್ಲಿ ನಿಲ್ಲಿಸುವುದೆ ?" ಎಂದೆ. ಆಗ ಅವರು "ನಿನಗೆ ತಿಳಿಯದು. ನಾನು ಏನೇ ಹೇಳಿದರೂ ಅವರು ಅಲ್ಲಿಂದ ಕದಲುವುದಿಲ್ಲ. ಕೆಲಸಗಳಿದ್ದರೆ ಅವನ್ನು ಕೊಡಲು ಅಧಿಕಾರ ಇದ್ದರೆ ಕೊಡಬಲ್ಲೆ, ಆದರೆ ಅದು ಸಾಧ್ಯವಿಲ್ಲ. ಆದರೂ ಈ ಜನರಿಗೆ ನನ್ನ ಕಷ್ಟ ಅರ್ಥವಾಗದು. ನಾನೇನು

ಮಾಡಲಿ" ಎಂದರು. ಆಗ ನಾನು ಇವರು ಹೊರಗೆ ಕಾಣುವಷ್ಟು ಕಠಿಣ ಹೃದಯದವರಿರಲಾರರು ಎಂದುಕೊಂಡೆನಾದರೂ ನನಗೆ ಸಿಟ್ಟು ಇಳಿದಿರಲಿಲ್ಲ. ಗೌಡರು "ನಿನ್ನ ಊರು ಯಾವುದು?" ಎಂದರು.ನಾನು "ಅದು ಕಟ್ಟಿಕೊಂಡು ನೀವೇನು ಮಾಡ್ತೀರಿ.ನಾಗಮಂಗಲ ಎಂಬ ಬೆಂಗಾಡಿನ ಒಂದು ಹಳ್ಳಿ. ಹನುಮನ ಹಳ್ಳಿ ಅಂತ" ಎಂದು ಹೇಳಿದೆ. ಕೂಡಲೇ ಅವರು "ನಾಗಮಂಗಲವೇ? ಅದಕ್ಕೆ ಇಷ್ಟೊಂದು ಜೋರಾಗಿದ್ದಿ" ಎಂದು ಹೇಳಿ ತಂದೆ, ತಾಯಿ, ಅಣ್ಣ, ತಮ್ಮ, ಓದುವ ತರಗತಿ ಎಲ್ಲಾ ವಿಚಾರಿಸಿದರು. ತಾವೂ ನಾಟಕಕ್ಕೆ ಬರುವುದಾಗಿ ಹೇಳಿದರು. ಹಾಗೆಯೇ ಬಂದರೂ ಕೂಡ, ನಾವೆಷ್ಟೇ ಹೇಳಿದರೂ ಟಿಕೆಟ್ ಕೊಂಡೇ ಅವರು ಬಂದುದು. ನನಗೆ ಅವರಲ್ಲಿ ಗೌರವ ಮೂಡಿತು. ನನ್ನ ಮತ್ತು ನಾಗೇಗೌಡರ ಪರಿಚಯ ಆದುದು ಹೀಗೆ.

ಮರುವರ್ಷ ನನ್ನ ಸಹೋದರನಿಗೆ ಮದುವೆಯಾದುದರಿಂದ ನಾನು ಶಿವಮೊಗ್ಗಯ ಒಕ್ಕಲಿಗರ ವಿದ್ಯಾರ್ಥಿನಿಲಯ ಸೇರಿದೆ. ಆದರೂ ಸಾಹಿತ್ಯ ಪ್ರವೃತ್ತಿಯ ನಾನು ಸಾಹಿತಿ ನಾಗೇಗೌಡರನ್ನು ಆಗಾಗ ಭೇಟಿಯಾಗುತ್ತಿದ್ದೆ. ಆ ವರ್ಷ ಒಕ್ಕಲಿಗರ ಸಂಘ ವಿದ್ಯಾರ್ಥಿ ನಿಲಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾದೆ. ಈಗ ಮುಖ್ಯ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಶ್ರೀ ಎಸ್.ಡಿ. ವೆಂಕಟೇಶ್ ಅವರು ನಮ್ಮ ನಿಲಯದ ಅಧ್ಯಕ್ಷರಾಗಿದ್ದರು. ಅವರು ತುಂಬಾ ಜನಪ್ರಿಯರೂ, ವಿದ್ಯಾರ್ಥಿವತ್ಸಲರೂ ಆಗಿದ್ದು ನಮಗೆ ಬಹಳ ಪ್ರೋತ್ಸಾಹ ಕೊಡುತ್ತಿದ್ದರು. ನಮ್ಮ ಸಂಘದ ಮುಕ್ತಾಯ ಸಮಾರಂಭಕ್ಕೆ ಶ್ರೀ ನಾಗೇಗೌಡರನ್ನು ಮುಖ್ಯ ಅತಿಥಿಯಾಗಿ ಕರೆದೆವು. ಅವರು ಒಪ್ಪಿ ಬಂದರು. ಆ ದಿನ ಗ್ರಾಮಾಂತರ ಶಿಕ್ಷಣದ ಸಮಸ್ಯೆಗಳನ್ನೂ, ಅಲ್ಲಿನ ವಿದ್ಯಾರ್ಥಿಗಳಿಗಿರುವ ತೊಂದರೆಗಳನ್ನು ಕುರಿತು ಅವರು ಹೇಳಿದ ಕಳಕಳಿಯ ಮಾತುಗಳು ನನಗೆ ಗೌಡರಲ್ಲಿದ್ದ ಗೌರವವನ್ನು ಇಮ್ಮಡಿಸಿದವು.

೨

ನಾನು ಮುಂದಿನ ಓದಿಗೆ ಮೈಸೂರಿಗೆ ಬಂದೆ. ನಾಗೇಗೌಡರು ಜಿಲ್ಲಾಧಿಕಾರಿಯಾದರು. ನನಗೆ ಸುಮ್ಮಸುಮ್ಮನೆ ಅಧಿಕಾರಿಗಳು, ಮತ್ತು ಉನ್ನತ ಸ್ಥಾನದಲ್ಲಿರುವವರ ಹತ್ತಿರ ಹೋಗಿ ನಿಲ್ಲುವುದು ಒಗ್ಗದ ಮಾತು. ಹೀಗಾಗಿ ನಾನು ಮತ್ತು ನಾಗೇಗೌಡರು ಸರಿ ಸುಮಾರು 1971ರ ವರೆಗೆ ಭೇಟಿಯಾಗಲೇ ಇಲ್ಲ. ಡಾ. ಜೀ.ಶಂ. ಪರಮಶಿವಯ್ಯನವರು ಒಮ್ಮೆ "ನಾಗೇಗೌಡರು ಹದ್ದಿನ ಕಲ್ಲು ಹನುಮಂತರಾಯನ ಬೆಟ್ಟಕ್ಕೆ ಬರುತ್ತಾರೆ. ಹೋಗಿಬರೋಣ ಬನ್ನಿ" ಎಂದರು. ಬಹಳ ದಿನಗಳನಂತರ ಗೌಡರನ್ನು ಕಾಣುತ್ತಿದ್ದ ಸಂದರ್ಭವಾದುದರಿಂದ ನಾನೂ ಅವರೊಂದಿಗೆ ಹೊರಟೆ. ಆಗ ಅವರು ತಮ್ಮ ದೊಡ್ಡ ಮನೆ ಕಾದಂಬರಿ ಬರೆಯುತ್ತಿದ್ದರು. ಆ ಕಾದಂಬರಿಯ ಕಥೆಗೆ ಒಂದು ಹೊಸ ತಿರುವು ಕೊಡುವಂಥ ಕೊಲೆಯೊಂದು ಈ ಬೆಟ್ಟದಲ್ಲಿ ನಡೆಯುತ್ತದೆ. ಹದ್ದಿನ ಕಲ್ಲು ಬೆಟ್ಟ ನಾಗೇಗೌಡರಿಗೆ ಅಪರಿಚಿತ ಸ್ಥಳವೇನೂ ಅಲ್ಲ. ಅವರೂ ಮತ್ತೊಮ್ಮೆ ಅಲ್ಲಿ ಅಡ್ಡಾಡಿಯೇ

ಆ ದೃಶ್ಯ ಕಲ್ಪನೆ ಮಾಡುವುದು ಸರಿ ಎಂದು ಅವರಿಗೆ ಅನ್ನಿಸಿರಬೇಕು. ಅಲ್ಲಿನ ಜನರೊಂದಿಗೆ ಬೆರೆತು, ಅವರ ಕ್ಷೇಮ ಸಮಾಚಾರ ವಿಚಾರಿಸಿ, ಅವರ ತಾತ ಮುತ್ತಾತನ ಕಾಲದ ಘಟನೆಗಳನ್ನು ಕೆದಕಿ ಕೇಳಿ ಬೆಟ್ಟದ ಪ್ರತಿಯೊಂದು ಹಂತವನ್ನು ಪರೀಕ್ಷಿಸಿ ತಮ್ಮ ಕಾದಂಬರಿಯ ಮೈತುಂಬಿಸಲು ಯತ್ನಿಸುತ್ತಿದ್ದ ಗೌಡರ ಪ್ರಾಮಾಣಿಕ ಪ್ರಯತ್ನ ನನ್ನ ಮೇಲೆ ತುಂಬಾ ಪ್ರಭಾವಬೀರಿತು.

ಸರಿಸುಮಾರು ಇದೇ ಕಾಲದಲ್ಲಿ ನಾಗಮಂಗಲದಲ್ಲಿ ಮೂರನೆಯ ಜಾನಪದ ಸಮ್ಮೇಳನ ನಡೆಸಬೇಕೆಂದು ನಾವು ಡಾ. ಜೀ.ಶಂ.ಪ. ಅವರ ಮುಂದಾಳತ್ವದಲ್ಲಿ ತಾಲೂಕಿನ ನಾಯಕರುಗಳಾದ ಕೆ. ಸಿಂಗಾರಿಗೌಡರು ಮತ್ತು ಎಚ್ ಟಿ. ಕೃಷ್ಣಪ್ಪನವರನ್ನು ಕೂಡಿಕೊಂಡು ಪ್ರಯತ್ನಿಸುತ್ತಿದ್ದೆವು. ಆ ದಿನವೇ ನಾಗೇಗೌಡರೂ ಹದ್ದಿನಕಲ್ಲಿಗೆ ಬರುವುದಿದ್ದುದರಿಂದ ಅವರನ್ನೂ ಆ ಸಭೆಗೆ ಕರೆದು ತಂದೆವು. ಅಷ್ಟೇ ಅಲ್ಲ ಅವರ ಅಧ್ಯಕ್ಷತೆಯಲ್ಲಿಯೇ ಆ ದಿನದ ಸಭೆ ನಡೆಯಿತು. ಸ್ವಾಗತ ಸಮಿತಿಯ ರಚನೆಯ ಕಾಲಕ್ಕೆ ಶ್ರೀಗೌಡರು ನಿರ್ಲಿಪ್ತರಾಗಿದ್ದುಬಿಟ್ಟರು. ಅವರು ಈ ಹೊತ್ತಿಗಾಗಲೆ ತರೀಕೆರೆಯ ಮೊದಲನೆ ಜಾನಪದ ಸಮ್ಮೇಳನದಲ್ಲಿ ಓಡಾಡಿ, ಮಂಗಳೂರಿನ ಎರಡನೆ ಸಮ್ಮೇಳನದ ನೇತಾರರಾಗಿದ್ದು ಕಾರ್ಯನಡೆಸಿದ್ದುದು ನಮಗೆ ಗೊತ್ತಿತ್ತು. ಆದುದರಿಂದ ನಾನು ಮತ್ತು ಜೀಶಂಪ ಗೌಡರ ಅಪ್ಪಣೆಯನ್ನೂ ಪಡೆಯದೆ ಅವರನ್ನು ಮಹಾಪೋಷಕರೆಂದು ಹಾಕಿ ಸ್ವಾಗತ ಸಮಿತಿಯ ಪಟ್ಟಿಯನ್ನು ಪ್ರಕಟಿಸಿದೆವು. ಈ ಬಗ್ಗೆ ಗೌಡರ ಅನುಮತಿಯನ್ನು ಪಡೆಯದೆ ಅವರ ಹೆಸರನ್ನು ಪ್ರಕಟಿಸಿದ್ದೇವೆ. ಅವರು ತಪ್ಪು ತಿಳಿದರೇನು ಗತಿ ಎಂಬ ಹೆದರಿಕೆ ನನಗಿತ್ತು. ಆದರೆ ಮುಂದೆ ಹತ್ತಿರ ಹತ್ತಿರ ಮೂರು ತಿಂಗಳ ಕಾಲ ಅವರು ಬೆಂಗಳೂರಿನಿಂದ ಸ್ವಾಗತ ಸಮಿತಿಯ ಸಭೆಗಳಿಗೆ ಬಂದುದು, ಅವುಗಳಲ್ಲಿ ಅವರು ನೀಡುತ್ತಿದ್ದ ಸಲಹೆ ಸಹಕಾರಗಳು ಅವರ ದೊಡ್ಡತನದ ಪ್ರತೀಕವಾಗಿದ್ದುವು. ಮೂರನೆಯ ಜಾನಪದ ಸಮ್ಮೇಳ ನಡೆಯುತ್ತಿರುವುದು ನನ್ನ ತಾಲೂಕಿನಲ್ಲಿ, ಆದುದರಿಂದ ಅದು ತುಂಬಾ ಯಶಸ್ವಿಯಾಗಬೇಕೆಂಬುದು ನಾಗೇಗೌಡರ ಆಸೆಯಾಗಿದ್ದಿತು. ಅದರಂತೆಯೇ ಅದು ಮೂರು ದಿನಗಳ ಕಾಲ ಅದ್ದೂರಿಯಿಂದ ನಡೆದೂ ಹೋಯಿತು.

ನಾಗಮಂಗಲ ಸಮ್ಮೇಳನದಲ್ಲಿ ನನ್ನ ಮತ್ತು ಗೌಡರ ಸಂಬಂಧದ ದೂರ ಕಡಿಮೆಯಾಗಿತ್ತು. ನಾಗೇಗೌಡರೂ ಸಹ ತೂಗಿನೋಡದೆ, ಒರೆಹಚ್ಚದೆ ಯಾರನ್ನೂ ನಿಕಟಕ್ಕೆ ಸೇರಿಸುವವರಲ್ಲ. ಅವರ ಆ ಪರೀಕ್ಷೆಯಲ್ಲಿ ನಾನು ತೇರ್ಗಡೆಯಾದೆನೆಂಬುದಕ್ಕೆ ಆ ನಂತರ ಅವರು ನನಗೆ ಬರೆದ ಕೆಲವು ಕಾಗದಗಳು ಸಾಕ್ಷಿಯಾಗಿವೆ. ನಾನು ಕೂಡ ಕೇವಲ ಅಧಿಕಾರ ಅಂತಸ್ತುಗಳಿಗೆ ಬೀಗಿ ಯಾರಿಗೂ ಮಣಿಯುವವನಲ್ಲ ಯಾರ ಹತ್ತಿರ ಹೋದವನೂ ಅಲ್ಲ. ನನಗೆ ಅನ್ನಿಸಿದ ಮಟ್ಟಿಗೆ ಇಂಥ ಒಂದು ಗುಣ ಒಕ್ಕಲಿಗರಲ್ಲಿ ಅತಿಯೆನಿಸುವ ಹಾಗೆ, ತಿಳಿಯದವರು ಅಹಂಕಾರ ಎಂದು ಅಂದುಕೊಳ್ಳುವ ಹಾಗೆ ಕಂಡು ಬರುತ್ತದೆ. ಆದರೆ ವಾಸ್ತವಾಗಿ ಇದು ರಕ್ತಗತವಾಗಿ ಬಂದ

ಮಣ್ಣಿನ ಗುಣ. ಸ್ವತಂತ್ರವಾಗಿ, ತನ್ನ ಸ್ವಶಕ್ತಿಯಿಂದ ಬದುಕಿದ ಈ ಜನರಿಗೆ ಅದು ವಂಶಾನುಗತವಾಗಿ ಹರಿದು ಬಂದಿರುವ ಸ್ವಭಾವ ಎಂದು ನನ್ನ ಅನಿಸಿಕೆ. ಹಾಗೆಯೇ ಶ್ರೀನಾಗೇಗೌಡರ ಹೊರವ್ಯಕ್ತಿತ್ವ ಮಾತಿನ ರೀತಿಗಳು ಸಹ ಹೊಸಬರಲ್ಲಿ ಇದು ಅಹಂಕಾರ ಎನಿಸುವಷ್ಟು ಕಠಿನವಾಗಿ ಕಾಣುತ್ತವೆ. ಅವರ ಮಾತಿನ ರೀತಿಯೂ ಗಡುಸಿನದೆ. ಹೀಗಾಗಿ ಅನೇಕರು ನಾಗೇಗೌಡರನ್ನು ತಪ್ಪು ತಿಳಿದದ್ದೂ ಉಂಟು. ಇದರಿಂದ ನಾನು ಹೊರತಲ್ಲ ಎಂಬುದನ್ನು ಈ ಲೇಖನದ ಆರಂಭದಲ್ಲಿಯೇ ಕಾಣಬಹುದು. ಹೊರಗೆ ಒರಟಾಗಿ ಕಂಡರೂ ಗೌಡರು ತುಂಬಾ ಮೃದುಹೃದಯಿ. ಬಡವರನ್ನ ದೀನ ದಲಿತರನ್ನು ಕಂಡರೆ ತುಂಬಾ ಅನುಕಂಪ ಅವರಿಗೆ. ನಾಗಮಂಗಲದ ಮೂರನೆಯ ಜಾನಪದ ಸಮ್ಮೇಳನದಲ್ಲಿ ಜನಪದ ಕಲಾವಿದರಿಗೆ ಸನ್ಮಾನ ಮಾಡಿದಾಗ ಅವರು "ಈ ಕಲಾವಿದರಿಗೆ ಎರಡು ಹೊತ್ತಿನ ಅನ್ನ, ಹೊದೆಯಲು ತುಂಡು ಬಟ್ಟೆ ಸಿಕ್ಕಬೇಕು" ಎಂದು ವ್ಯಕ್ತಪಡಿಸಿದ ಕಳಕಳಿ ಹೃದಯ ಸ್ಪರ್ಶಿಯಾಗಿತ್ತು. ಹೀಗೆ ಶಿವಮೊಗ್ಗೆಯ ಪರಿಚಯದ ನಂತರ ತುಂಡುಗಡಿದಿದ್ದ ಗೌಡರ ಮತ್ತು ನನ್ನ ಸಂಬಂಧ ನಾಗಮಂಗಲದಲ್ಲಿ ಕುಡಿವರಿದು ಎಲೆಯೊಡೆದು, ಚಿಗುರಿತೆಂದು ಹೇಳಬಹುದು.

೩

ನಾಗೇಗೌಡರು ಲೋಕಸೇವಾ ಆಯೋಗದ ಸದಸ್ಯರಾದರು. ನಾನಾ ಕಾರಣಗಳಿಗಾಗಿ ವಿವಿಧ ರೀತಿಯ ಜನರು ಅವರ ಸುತ್ತ ಮುತ್ತಲಾರಂಭಿಸಿದರು. ಗೌಡರು ಬಡಬಗ್ಗರಿಗೆ ಎಟುಕುವವರಲ್ಲ ಎಂಬ ದೂರು ಕೇಳಿಬರಲಾರಂಭಿಸಿತು. ಅವರ ಮನೆಗೆ ಸಾಮಾನ್ಯರಿಗೆ ಪ್ರವೇಶ ದೊರೆಯುವುದು ಪ್ರಯಾಸದ ಕೆಲಸ ಎಂಬ ಅಭಿಪ್ರಾಯ ಮೂಡಿತ್ತು. ನನಗೆ ಈ ಅಭಿಪ್ರಾಯ ಸರಿಯಾದುದಲ್ಲ ಎಂಬುದು ಗೊತ್ತಿತ್ತು. ನಾನೂ ಆಗೀಗ ಹಳ್ಳಿಗಳ ಕಡೆಯ ಹುಡುಗರಿಗೆ ಸಹಾಯ ಮಾಡಲು ಗೌಡರನ್ನು ಪ್ರಾರ್ಥಿಸುತ್ತಿದ್ದೆ. ಅಂತಹವರಲ್ಲಿ ಅನೇಕರಿಗೆ ಅವರು ನಿಯಮದಂತೆ ಸಹಾಯ ಮಾಡಿದ್ದುಂಟು. ನಾಗೇಗೌಡರಿಗೆ ರಾಜಕಾರಣಿಗಳನ್ನು ಕಂಡರೆ ಮಾತ್ರ ಆಗದು. ಅವರು ಮನೆಗೆ ಬಂದರೆ ಸಿಡಿಮಿಡಿಗೊಳ್ಳುವುದನ್ನು ನಾನು ಕಂಡಿದ್ದೇನೆ. ಹಾಗೆಯೇ ಶಿಫಾರಸಿಗೂ ಅವರು ವ್ಯಗ್ರರಾಗುವುದುಂಟು. ಆದರೆ ಅಸಹಾಯಕರ ಬಗ್ಗೆ, ಬಡವರ ಬಗ್ಗೆ, ವಿಶೇಷವಾಗಿ ಹಳ್ಳಿಗರ ಬಗ್ಗೆ ಮಾತ್ರ ಅವರಿಗೆ ಅಪಾರ ಅನುಕಂಪ. ನನ್ನ ಹತ್ತಿರ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಪಡೆದ ಯುವಕನೊಬ್ಬ ಒಂದು ದಿನ ಬಂದ. ತಾನು ಜೂನಿಯರ್ ಕಾಲೇಜಿನ ಅಧ್ಯಾಪಕ ಹುದ್ದೆಗೆ ಅರ್ಜಿಹಾಕಿರುವುದಾಗಿಯೂ, ತನ್ನ ವಿಧವೆ ತಾಯಿಯನ್ನು ಬಿಟ್ಟರೆ ಸಹಾಯ ಶಿಫಾರಸು ಮಾಡುವರು ಬೇರಾರೂ ಇಲ್ಲವೆಂದೂ, ಶ್ರೀ ನಾಗೇಗೌಡರಿಗೆ ಹೇಳಬೇಕೆಂದೂ ಪ್ರಾರ್ಥಿಸಿದ. ಆ ಹೊತ್ತಿಗಾಗಲೇ ನಾನು ನನ್ನ ಸೋದರಳಿಯನಿಗೆ ಸರ್ಕಾರಿ ಕಾಲೇಜಿನ ಅಧ್ಯಾಪಕರ ಆಯ್ಕೆಯಲ್ಲಿ ಶಿಫಾರಸು ಮಾಡಿದ್ದೆ. ಎಲ್ಲರೂ ನಾಗೇಗೌಡರಂತಿದ್ದರೆ ಶಿಫಾರಸು ಅನಗತ್ಯ. ಏಕೆಂದರೆ ನನ್ನ ಸೋದರಳಿಯ ಎರಡನೆ ರ್ಯಾಂಕ್

ಪಡೆದವನು. ಶಿಫಾರಸಿಗೆ ಬಂದ ಈತನೂ ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾದವನು. ನಾನು ಒಂದು ರೀತಿಯಲ್ಲಿ ಧರ್ಮಸಂಕಟದಲ್ಲಿ ಸಿಕ್ಕಿ ಹಾಕಿಕೊಂಡಿದ್ದೆ. ಆ ಯುವಕ ನನ್ನು ಮಾರನೆಯ ದಿನ ಬರುವಂತೆ ಹೇಳಿಕಳಿಸಿದೆ.

ಆತ ಮತ್ತೆ ಬಂದಾಗ ನಾನು ಈ ಸಮಸ್ಯೆಗೊಂದು ಪರಿಹಾರ ಕಂಡುಕೊಂಡಿದ್ದೆ. ಅವನಿಗೆ "ನಿನ್ನ ತಾಯಿಯನ್ನು ಕರೆದುಕೊಂಡು ನೇರವಾಗಿ ಗೌಡರ ಮನೆಗೆ ಹೋಗು. ನನ್ನ ಹತ್ತಿರ ಹೇಳಿದಂತೆಯೇ ನಿನ್ನ ಸ್ಥಿತಿಯನ್ನು ಅವರಲ್ಲಿ ಹೇಳು. ಮನೆಯೊಳಗೆ ಪ್ರವೇಶ ಸುಲಭವಾಗಿ ದೊರೆಯಲು ನನ್ನ ಹೆಸರು ಉಪಯೋಗಿಸಿಕೊ" ಎಂದು ಹೇಳಿ ಗೌಡರ ಮನೆ ವಿಳಾಸ ಬರೆದುಕೊಟ್ಟೆ. ಆತ ನಾನು ಹೇಳಿದ ಹಾಗೆ ಮಾಡಿದ. ಅವನಿಗೆ ನ್ಯಾಯ ದೊರಕಿತು. ಈ ಹಿಂದೆ ಪ್ರಯತ್ನ ಮಾಡಿ ನಿರಾಶನಾಗಿದ್ದ ಆತನಿಗೆ ಶ್ರೀ ಗೌಡರ ಬಗ್ಗೆ ಇಂದೂ ಅಪಾರ ಗೌರವ. ಕೆಲಸ ಸಿಕ್ಕಿದ ಎಷ್ಟೋ ದಿನಗಳ ನಂತರ ಆತ ಮತ್ತೆ ನನ್ನ ಹತ್ತಿರ ಬಂದು "ನಾಗೇಗೌಡರನ್ನು ನಮ್ಮ ಮನೆಗೆ ಬರುವಂತೆ ಮಾಡಿ ಎಂದ. "ನೀನೇ ಹೋಗಿ ಕರಿ. ಅವರು ಬರಬಹುದೆಂಬ ನಂಬಿಕೆ ನನಗಿಲ್ಲ" ಎಂದೆ. ಆದರೆ ಆತ ಕರೆದಾಗ ಅವರು ಸಂತೋಷದಿಂದ ಬರಲೊಪ್ಪಿದರು. ನನಗೆ ಹೆಮ್ಮೆ ಯೆನಿಸಿತು. ನಾಗೇಗೌಡರ ದೊಡ್ಡ ಗುಣ ಕಂಡು ಅವರಲ್ಲಿ ಗೌರವ ಇಮ್ಮಡಿಸಿತು. ಇಂತಹ ಅನೇಕ ಉದಾಹರಣೆಗಳನ್ನು ನಾನು ಕಂಡಿದ್ದೇನೆ. ಈ ದೇಶದಲ್ಲಿ ಸ್ವಾತಂತ್ರ್ಯ ಬಂದ ಮೂವತ್ತು ವರ್ಷಗಳ ನಂತರವೂ ಇಂಗ್ಲೀಷರ ಕಾಲಕ್ಕಿಂತ ಮೇಲುಗೈಯಾಗಿ ಬದುಕಿರುವ ಅಧಿಕಾರಶಾಯಿಯ ಅಹಂಕಾರದ ದರ್ಬಾರಿನ ಮಧ್ಯದಲ್ಲಿಯೂ ನಾಗೇ ಗೌಡರಂತಹ ದೊಡ್ಡ ಗುಣದವರು ಇದ್ದಾರೆಂಬುದು ಆಶ್ಚರ್ಯದ ಸಂಗತಿಯೇ ಸರಿ,

ನಾನು ಸಂಶೋಧಿಸಿದ್ದ ಭೈರವಿ ಕೆಂಪೇಗೌಡರ ವಿಷಯ ಗೌಡರಿಗೆ ಹೇಳಿ ಅವರ ಜೀವನ ಕುರಿತು ಒಂದು ಕಾದಂಬರಿ ಬರೆಯಿರಿ ಎಂದು ಹೇಳಿದೆ. ಈ ಕಥೆ ಅವರನ್ನು ಬಹುವಾಗಿ ಆಕರ್ಷಿಸಿತು. ನಾಗೇಗೌಡರು ಒಂದು ವಿಷಯ ಹಿಡಿದರೆ ಅದರ ಮೂಲ ಚೂಲಗಳನ್ನೆಲ್ಲಾ ತಡಕಾಡಿ ಬಿಡಿಸುತ್ತಾರೆ. ಭೈರವಿ ಕೆಂಪೇಗೌಡರ ಇಡೀ ಕಥೆ ಅದು ಕಾದಂಬರಿಯಲ್ಲಿ ಹೇಗೆ ಮೂಡ ಬಹುದೆಂಬ ಕಲ್ಪನೆಯ ಬಗ್ಗೆ ನಾನು ತುಣುಕು ತುಣುಕಾಗಿ ಅವರಿಗೆ ಹೇಳುತ್ತಿದ್ದೆ. ಅದು ಅವರ ದಾಹ ಇಂಗಿಸಲಿಲ್ಲ. ಒಮ್ಮೆ ಅವರು ಮೈಸೂರಿಗೆ ಬಂದಿದ್ದರು. ಹಾಗೆ ಬಂದಾಗಲೆಲ್ಲಾ ನಾನು ಅಲ್ಲಿರುತ್ತಿದ್ದೆ ಎಂದು ಹೇಳಬೇಕಾಗಿಲ್ಲ. ಆ ದಿನ ನಾನು ಮಿತ್ರರೊಬ್ಬರ ಹಳ್ಳಿಗೆ ಕ್ಷೇತ್ರಕಾರ್ಯಕ್ಕೆ ಹೊರಟಿದ್ದೆ. ಆ ವಿಷಯ ಹೇಳೋಣವೆಂದು ಗೌಡರಲ್ಲಿಗೆ ಹೋದೆವು. ಅವರು "ನಾಳೆ ನಾನೂ ಬೆಂಗಳೂರಿಗೆ ಹೊರಡುತ್ತಿದ್ದೇನೆ. ನಿಮ್ಮನ್ನು ಮದ್ದೂರು ಹತ್ತಿರ ಇಳಿಸುತ್ತೇನೆ" ಎಂದರು. ಬಸ್ಸು ಕಾಯುವುದಕ್ಕಿಂತ ಇದು ವಾಸಿ ಎಂದು ನಾವೂ ಕಾರು ಹತ್ತಿದೆವು. ಡ್ರೈವರ್ ಪೆಟ್ರೋಲ್ ಹಾಕಿಸಬೇಕು" ಎಂದ. "ಮಂಡ್ಯದವರೆಗೆ ಆಗುತ್ತದೆ ನಡಿ" ಎಂದರು ಗೌಡರು. ಅವನು ಅನುಮಾನದಿಂದ ಗೌಡರ ಕಡೆಗೆ ನೋಡಿ ದೇವರೆ ಗತಿ ಎಂದು

ಹೊರಟ. ಕಾರು ಮಂಡ್ಯ ಮೈಸೂರಿನ ರಸ್ತೆಯಲ್ಲಿ ಸಮವಾಗಿ ಅರ್ಧದಾರಿಯಲ್ಲಿ ನಿಂತಿತು. ಡ್ರೈವರ್ ಪೆಟ್ರೊಲ್ ತೀರಿತು ಎಂದ. "ಆ ಮರದ ನೆರಳಿನಲ್ಲಿ ನಿಲ್ಲಿಸಿ ನೀನು ಮಂಡ್ಯಕ್ಕೊ ಮೈಸೂರಿಗೂ ಹೋಗಿ ಪೆಟ್ರೋಲ್ ತೆಗೆದುಕೊಂಡು ಬಾ" ಎಂದು ನಿರ್ವಿಕಾರವಾಗಿ ಹೇಳಿ ಅವನಿಗೆ ಹಣ ಕೊಟ್ಟರು. ನಾನು ಕುತೂಹಲಿತನಾದೆ. ಆದರೆ ಮರುಕ್ಷಣದಲ್ಲಿಯೇ ಗೌಡರು ತಮ್ಮ ಧ್ವನಿಮುದ್ರಣ ಯಂತ್ರ ಈಚೆ ತೆಗೆದು "ಎಲ್ಲಿ ಕಾದಂಬರಿ ಹೇಗೆ ಆರಂಭವಾಗಬೇಕು ಹೇಳಿ" ಎಂದರು ಆಗ ಗೌಡರ ನಿರ್ವಿಕಾರತೆ ನಮಗೆ ಅರ್ಥವಾಯಿತು. ನಾನು ಹೇಳಲಾರಂಭಿಸಿದೆ. ಗಂಟೆಗಳ ಕಾಲ ನಮ್ಮ ಧ್ವನಿ ಮುದ್ರಣ ನಡೆದು ಊಟದ ಹೊತ್ತು ಮೀರುತ್ತಿತ್ತು. "ನೋಡಿ ಇವರು ಎಷ್ಟೊಂದು ಸರಕು ಇಟ್ಟಿದ್ದಾರೆ" ಎಂದು ಮಿತ್ರ ಚಲುವೇಗೌಡರತ್ತ ತಿರುಗಿ ಉದ್ಗರಿಸಿದರು ಗೌಡರು. ಡ್ರೈವರ್ ಪೆಟ್ರೋಲಿನೊಂದಿಗೆ ಬಂದ. ಮಂಡ್ಯದ ಸಕ್ಕರೆ ಕಾರ್ಖಾನೆಯ ಅತಿಥಿಗೃಹದಲ್ಲಿ ನಾಗೇಗೌಡರು ನಮಗೆ ಸೊಗಸಾದ ಊಟ ಹಾಕಿಸಿದರು ಆದರೆ ಅದಕ್ಕಿಂತಲೂ ಸೊಗಸಾದ ಆಡಿನ ಬಾಡಿನ ಊಟ ತಳಗವಾಡಿಯ ಮಿತ್ರರ ಮನೆಯಲ್ಲಿ ನಮಗಾಗಿ ಕಾಯುತ್ತಿತ್ತು.

ಭೈರಪ್ಪ ಕೆಂಪೇಗೌಡರನ್ನು ಕುರಿತು ಕಾದಂಬರಿ ಬರೆಯಲು ಹೇಳಿದ ಮೇಲೆ ನಾವು ತೀರಾ ನಿಕಟವಾದೆವು. ನಾನು ಕ್ಷೇತ್ರಕಾರ್ಯ ಮಾಡಿದ್ದ ಕಡೆಗೆಲ್ಲಾ ಗೌಡರನ್ನು ಕರೆದೊಯ್ದೆ. ಮೈಸೂರಿಗೆ ಬಂದರೆ ಫೋನ್‌ಮಾಡಿ ಕರೆಯಿಸುತ್ತಿದ್ದರು. ಇಲ್ಲವೇ ಮನೆಗೆ ಬರುತ್ತಿದ್ದರು. ಪ್ರಾಯಃ ಇದು ನಮ್ಮ ಮಿತ್ರರು ಕೆಲವರಿಗೆ ಸಹಿಸದಾಯಿತೆಂದು ತೋರುತ್ತದೆ. ಅವರು ಗೌಡರಲ್ಲಿ ಹೋಗಿ ನಾನು ಕೆಲಸ ಕೊಡಿಸುತ್ತಿರುವವರಿಂದ ಹಣ ತೆಗೆದುಕೊಳ್ಳುತ್ತಿದ್ದೇನೆಂದು ಗೌಡರಲ್ಲಿಯೂ, ನಾಗೇಗೌಡರು ಹಣ ತೆಗೆದುಕೊಂಡು ಕೆಲಸ ಕೊಡುತ್ತಾರೆಂದು ನನ್ನಲ್ಲಿಯೂ ಹೇಳಿದರು. ಇದನ್ನು ಗೌಡರು ನಂಬಿದರೊ ಬಿಟ್ಟರೊ ನನಗೆ ತಿಳಿಯದು. ಏಕೆಂದರೆ ಅವರು ಎಂದೂ ನನಗೆ ಆ ಬಗ್ಗೆ ಹೇಳಿಲ್ಲ. ನಾನೇ ಅವರಿಗೆ ಒಂದು ಕಾಗದ ಬರೆದು ವಿಷಯಗಳನ್ನೆಲ್ಲ ವಿವರಿಸಿ "ನೀವು ಲೋಕ ಸೇವಾ ಆಯೋಗದ ಸದಸ್ಯತ್ವದಿಂದ ನಿವೃತ್ತಿಯಾಗುವವರೆಗೆ ನಾನು ನಿಮ್ಮ ಮನೆಗೆ ಬರುವುದಿಲ್ಲ. ನಿಮ್ಮನ್ನು ಭೇಟಿ ಮಾಡುವುದಿಲ್ಲ" ಎಂದು ತಿಳಿಸಿದೆ. ನಾನು ಹಾಗೆಯೇ ನಡೆದುಕೊಂಡೆನಾದರೂ ಅವರು ನಿವೃತ್ತಿಯಾಗುವುದಕ್ಕೆ ಇನ್ನೂ ಏಳೆಂಟು ದಿನ ಇರುವ ಹಾಗೆಯೇ ಒಮ್ಮೆ ಅವರ ಮನೆಗೆ ಹೋಗಲೇಬೇಕಾಗಿ ಬಂದಿತು. ಅದನ್ನು ಮುಂದೆ ವಿವರಿಸುತ್ತೇನೆ. ನನ್ನ ಈ ನಿರ್ಧಾರದಿಂದ ನಮ್ಮಿಬ್ಬರ ಮಧ್ಯೆ ಹಣದ ವಿಷಯವಾಗಿಯೇ ದೊಡ್ಡ ಹಗರಣವಾಗಿದೆ ಎಂದೆಲ್ಲಾ ಈ ಮಿತ್ರರು ಪ್ರಚಾರ ಮಾಡಿದರು. ಯಾರು ಯಾರೋ ಅನಾಮಿಕರು ಅತೃಪ್ತರನ್ನು ಹಿಡಿದು ನನ್ನ ಮೇಲೆ ಕಥೆ ಕಟ್ಟಿದರು. ನಾಗೇಗೌಡರ ಸುತ್ತ ಓಡಾಡಿದರು. ಅವರಿಗೆ ಭೋಜನ ಕೂಟ ಏರ್ಪಡಿಸಿದರು. ಸನ್ಮಾನ ಗೌರವ ಗ್ರಂಥಗಳನ್ನು ಅರ್ಪಿಸುತ್ತೇವೆಂದು ಪತ್ರಿಕೆಗಳಲ್ಲಿ ಪ್ರಚಾರ ಮಾಡಿದರು. ನಾವು

ಡಾ.ಜೀಶಂಪ, ಡಾ. ಡಿ. ಕೆ. ರಾಜೇಂದ್ರ ನಮ್ಮನು ಬಿಟ್ಟು ಮಾಡುತ್ತೇವೆ ಎಂದರು. ಯಾವುದರಿಂದಲೂ ನಾಗೇಗೌಡರ ಮತ್ತು ನನ್ನ ಸಂಬಂಧ ಕೆಡಲಿಲ್ಲ. ನಾನು ಸಹಾಯ ಅಪೇಕ್ಷಿಸಿ ಬಂದವರೊಂದಿಗೆ ಕಾಗದ ಕಳಿಸುತ್ತಿದ್ದೆ. ಅವರು ಕೈಲಾದ ಸಹಾಯ ಮಾಡು ತ್ತಿದ್ದರು. ಯಾರನ್ನು ಬಿಟ್ಟು ಗೌರವಗ್ರಂಥ ಮಾಡಬೇಕೆಂದು ಆ ಮಿತ್ರರು ಇಷ್ಟೆಲ್ಲಾ ಹಗರಣ ಮಾಡಿದರೋ ಅವರಿಂದಲೇ ಈ ಗ್ರಂಥ ಆಗುತ್ತಿರುವುದು ನಾಗೇಗೌಡರು ಮತ್ತು ನಮ್ಮ ಮಧ್ಯದ ನಿಷ್ಕಲ್ಮಸಂಬಂಧದ ಪ್ರತೀಕವೆಂದೇ ನಾನು ತಿಳಿದಿದ್ದೇನೆ.

ನಾನು ಮತ್ತು ನಾಗೇಗೌಡರು ಒಂದೇ ರಾಷ್ಟ್ರ, ಒಂದೇ ನಾಡು, ಒಂದೇ ಜಿಲ್ಲೆ, ಒಂದೇ ತಾಲ್ಲೂಕು ಒಂದೇ ಹೋಬಳಿ, ಒಂದೇ ಕುಲದವರು. ಹುಟ್ಟಿದ ಊರು ಮಾತ್ರ ಬೇರೆ. ಅಷ್ಟರ ಮಟ್ಟಿಗೆ ನಮ್ಮಲ್ಲಿ ಅಭಿಪ್ರಾಯ ಭೇದಗಳೂ ಇರಬಹುದು. ಆದರೆ ಒಂದಕ್ಕಿಂತ ಹನ್ನೊಂದು ಕಡಿಮೆ ಎನ್ನುವ ಜನರ ಬಗ್ಗೆ ಅನುಕಂಪ ತೋರಿಸಬೇಕು ಅಷ್ಟೆ. ಇಂದು ನಾಗೇಗೌಡರಿಗೆ ಅಧಿಕಾರ ಇಲ್ಲ. ಆದರೆ ಅಂತಸ್ತಿದೆ. ಬೇರಾವ ಈ ದರ್ಜೆಯ ಅಧಿಕಾರಿಗೂ ಇಲ್ಲದ ಅಂತಸ್ತು ಅದು. ಸಾಹಿತ್ಯ ದೇವಿಯ ಸಾನ್ನಿಧ್ಯದ ಅಂತಸ್ತು. ಆದುದರಿಂದಲೇ ಲೋಕಸೇವಾ ಆಯೋಗದ ಸದಸ್ಯ ನಾಗೇಗೌಡರಿಗಿಂತ ಸಾಹಿತಿ ನಾಗೇಗೌಡರಲ್ಲಿ ನನಗೆ ಹೆಚ್ಚು ಗೌರವ, ಅದು ಅವಿನಾಶಿ.

೮ | ಸೃಜನಶೀಲ

ಕೆ. ಆರ್. ಲಿಂಗಪ್ಪ

ಶ್ರೀಮಾನ್ ಎಚ್. ಎಲ್. ನಾಗೇಗೌಡರು ನನಗೆ ಮೊದಲು ಪರಿಚಯವಾದದ್ದು ಅವರ ಕೃತಿಗಳ ಮುಖಾಂತರ. ಪ್ರವಾಸಿ ಕಂಡ ಇಂಡಿಯಾ ಸಂಪುಟಗಳನ್ನು ಓದಿದಂದಿನಿಂದ ನನಗೆ ಅವರ ಬಗ್ಗೆ ತುಂಬಾ ಗೌರವ ಮೂಡಿತು. ತದನಂತರದಿಂದ ಅವರ ಎಲ್ಲ ಕೃತಿಗಳನ್ನು ಓದಬೇಕೆಂಬ ಅಭಿಲಾಷೆ ಹತ್ತಿತು. ಒಂದೊಮ್ಮೆ ಆಕಸ್ಮಿಕವಾಗಿ ಅವರನ್ನು ಭೇಟಿ ಮಾಡುವ ಸಂದರ್ಭವೂ ಒದಗಿ ಬಂದಿತು. ಶಿವಮೊಗ್ಗಕ್ಕೆ ಜಿಲ್ಲಾಧಿಕಾರಿಯಾಗಿ ಬಂದಾಗ, ನಾನು ವಕೀಲನಾಗಿ ಅವರನ್ನು ಪರಿಚಯಿಸಿಕೊಂಡೆ. ಆಗ ಅವರು 'ಕೆ. ಆರ್. ಲಿಂಗಪ್ಪ ನಾನು' ಎಂದ ಕೂಡಲೇ, ತಮ್ಮ ಕಛೇರಿಯ ಕೆಲಸವನ್ನು ಬದಿಗೊತ್ತಿ ತುಂಬಾ ವಿಶ್ವಾಸದಿಂದ ಆದರದಿಂದ ಮಾತನಾಡಿಸಿ ನನ್ನ ಹಾಡುಗಾರಿಕೆಯ ಬಗ್ಗೆ ನಾಲ್ಕು ಮೆಚ್ಚುಗೆಯ ಮಾತುಗಳನ್ನಾಡಿದರು. ಅಂದಿನಿಂದಲೇ ನನ್ನ ಅವರ ಪತ್ರ ವ್ಯವಹಾರ ಆರಂಭವಾಯಿತು.

ಗೌಡರ ಸಾಧನೆ ಬಹುಮುಖವಾದಂತಹುದು. ಅಧಿಕಾರಿಯಾಗಿ ಉನ್ನತ ಸ್ಥಾನವನ್ನಲಂಕರಿಸಿ ದೇಶಕ್ಕೆ ಸಲ್ಲಿಸಿದ ಸೇವೆ ಒಂದು ವಿಧವಾದರೆ, ಸಾಹಿತಿಯಾಗಿ, ಕವಿಯಾಗಿ, ಭಾಷಾಂತರಕಾರರಾಗಿ, ಭಾಷಣಕಾರರಾಗಿ, ಜಾನಪದ ಸಂಗ್ರಹಕರಾಗಿ ನಾಡಿಗೆ ನೀಡಿರುವ ಕೊಡುಗೆ ಅಪಾರ ಅನಂತ. ಇಂಗ್ಲಿಷ್ ಮತ್ತು ಕನ್ನಡದಲ್ಲಿ ಉತ್ತಮ ಪಾಂಡಿತ್ಯ ಪ್ರಭುತ್ವಗಳನ್ನು ಗಳಿಸಿಕೊಂಡಿರುವವರು. ಇವರ ಇಂಗ್ಲಿಷ್ ಮತ್ತು ಕನ್ನಡ ಭಾಷಣ ಕೇಳಿದವರಿಗೆ, ಕೃತಿಗಳನ್ನು ಓದಿದವರಿಗೆ, ಗೌಡರ ಭಾಷಾಶೈಲಿ, ಏನೆಂಬುದು ತಿಳಿದಿರುತ್ತದೆ. 'ಇಂಗ್ಲಿಷ್'ನಲ್ಲಿ ಭಾಷಣವಾಗಲಿ, ಮಾತುಕಥೆಯಾಗಲಿ ಆರಂಭಿಸಿದರೆಂದರೆ, 'ಕನ್ನಡ' ಬರುವುದಿಲ್ಲವೇನೋ ಎನ್ನಿಸುತ್ತದೆ. ಹಾಗೆಯೇ 'ಕನ್ನಡದಲ್ಲಿ' ಆರಂಭಿಸಿದರೆ ಇವರಷ್ಟು ನಿರರ್ಗಳವಾಗಿ, ಸ್ಫುಟವಾಗಿ ಮಾತಾಡುವ ವೈಖರಿ, ಪ್ರಾಯಶಃ ನಮ್ಮಲ್ಲಿನ ಕೆಲವು ಪಂಡಿತ ಮಹಾಶಯರುಗಳಿಗೂ ಬರಲಾರದು.

ಓದಿದ್ದು ಐ.ಎ.ಎಸ್., ಸೇರಿದ್ದು ಆಡಳಿತ ಕ್ಷೇತ್ರದ ಹುದ್ದೆ, ಹಾಗಿದ್ದರೂ ಇವರಿಗೆ ಸಾಹಿತ್ಯದ ಗೀಳು ಅಂಟಿಕೊಂಡದ್ದು ಹೇಗೆ ? ಎಂದು ಒಮ್ಮೊಮ್ಮೆ ನನಗನಿಸುತ್ತಿತ್ತು. ಆದರೆ ಇಂತಹ ಸಾಧನೆ ಎಲ್ಲರಿಗೂ ಸಾಧ್ಯವಿಲ್ಲ. ಮಾಸ್ತಿಯಂತಹವರಿಗೆ, ತೀನಂಶ್ರೀ ಅಂಥವರಿಗೆ ಮಾತ್ರ ಸಾಧ್ಯ. ಅಧಿಕಾರದಲ್ಲೇ ಇದ್ದು ಇಷ್ಟೊಂದು ಕೃತಿ ರಚನೆ ಮಾಡಿ ಕನ್ನಡ ಸಾರಸ್ವತ ಲೋಕದಲ್ಲಿ ಚಿರಸ್ಥಾಯಿ ಸ್ಥಾನ ಗಳಿಸಿರುವ

ಶ್ರೀಯುತರು, ಸಂಪೂರ್ಣವಾಗಿ ತಮ್ಮನ್ನು ಸಾಹಿತ್ಯ ಕ್ಷೇತ್ರಕ್ಕೆ ಅರ್ಪಿಸಿಕೊಂಡಿದಿದ್ದರೆ ಇನ್ನೂ ಎಂತೆಂತಹ ಅಮೂಲ್ಯ ಕೃತಿಗಳು ಹೊರಬರುತ್ತಿದ್ದವೋ ಹೇಳಲಾಗದು.

ನನ್ನೂರು ಮತ್ತು ದೊಡ್ಡಮನೆ ಕಾದಂಬರಿಗಳು ಜಾನಪದ ಸತ್ವವನ್ನು ಮೈಗೂಡಿಸಿಕೊಂಡು, ಸೃಜಿತವಾದ ಕೃತಿಗಳೆನ್ನಬಹುದು. ನನ್ನ ಮಿತ್ರರಾದ ಡಾ॥ ಜೀ. ಶಂ. ಪರಮಶಿವಯ್ಯ ಅವರ 'ಮಬ್ಬು ಜಾರಿದ ಕಣಿವೆಯಲ್ಲಿ' ಕೃತಿಯನ್ನು ಓದಿದೆ. ಅದರಲ್ಲಿ ಬಯಲು ಸೀಮೆಯ ಹಳ್ಳಿಗಾಡಿನ ದಟ್ಟವಾದ ಚಿತ್ರಣ ಕಣ್ಣಿಗೆ ಕಟ್ಟುವಂತಿದೆ. ಕುವೆಂಪುರವರ ಕಾದಂಬರಿಗಳನ್ನು ಓದಿದಾಗ ಆದ ಅನುಭವವೇ ಜೀಶಂಪ ಅವರ ಕೃತಿಯಲ್ಲೂ ಕಾಣುತ್ತಿದ್ದೆ. ಹೀಗೆಯೇ ಗೌಡರ ಕೃತಿಗಳಿಂದಲೂ ಆ ಅನುಭವ ಪಡೆದೆ. ಬಯಲು ಸೀಮೆಯ ಜನಪದ ನಂಬಿಕೆ, ನಡವಳಿಕೆ, ಆಚಾರವಿಚಾರ ಹಬ್ಬಹರಿದಿನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಹಿಡಿದಿಟ್ಟಿದ್ದಾರೆ. ಇಂತಹದೇ ಅನುಭವವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಅರ್ಚಕ ಬಿ. ರಂಗಸ್ವಾಮಿಯವರ ಕೃತಿಗಳಲ್ಲಿ ನಾವು ಕಾಣುತ್ತೇವೆ.

ಪ್ರವಾಸಿ ಕಂಡ ಇಂಡಿಯಾ ಸಂಪುಟಗಳಿಂದಾಗಿ ಗೌಡರ ಹೆಸರು ನಿಂತಿರುವುದು ಎನ್ನಬಹುದು. ಈ ಕೃತಿಗಳು ಕನ್ನಡಕ್ಕೆ ಮಹತ್ತರವಾದ ಕೊಡುಗೆ. ಅವುಗಳನ್ನು ಓದಿದಾಗ ಗೌಡರ ಭಾಷಾಂತರದ ಮಹತ್ವ ಕಾಣುತ್ತೇವೆ. ಹಾಗೆಯೇ ಅವರ ಅಧ್ಯಯನದ ಹರವೂ ಗೋಚರವಾಗುತ್ತದೆ. ಇದರಂತೆಯೇ ಕೆನಿಲ್ ವರ್ತ್, ಮಾರ್ಕೊಪೋಲೋ ಪ್ರವಾಸ ಕಥನ, ಸರೋಜಿನಿದೇವಿ, ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ, ಕಥೆವ್ಯಥೆ, ನಾನಾಗುಪೆ ಗೀಜಗನ ಹಕ್ಕಿ ಮುಂತಾದುವುಗಳು ಅವರ ಲೇಖನಿಯಿಂದ ಮೂಡಿಬಂದಿವೆ.

ಗೌಡರಿಗೂ ನನಗೂ ಇದ್ದ ಪರಿಚಯ ಸ್ನೇಹದೆಡೆಗೆ ತಿರುಗಿದ್ದು ಇಬ್ಬರಲ್ಲೂ ಇದ್ದ ಜಾನಪದದ ಮೇಲಿನ ಪ್ರೇಮದಿಂದ. ಜಾನಪದ ಸಾಗರದ ಮುತ್ತು ರತ್ನಗಳನ್ನು ಜನತೆಗೆ ಪರಿಚಯ ಮಾಡಿಸಬೇಕು, ಅಳಿದುಹೋಗುತ್ತಿರುವ ನಮ್ಮ ಜನಪದ ಸಾಹಿತ್ಯ ಮತ್ತು ಜನಪದ ಕಲೆಗಳನ್ನು ಹೇಗಾದರೂ ಉಳಿಸಲೇಬೇಕೆಂದು ಕಂಕಣ ಕಟ್ಟಿ ನಿಂತು, ಕೆಲಸ ಮಾಡುತ್ತಾ ಬಂದೆವು. ಗೌಡರು ಮಂಗಳೂರಿನಲ್ಲಿ ಜಿಲ್ಲಾಧಿಕಾರಿಯಾಗಿದ್ದಾಗ ಬಯಲು ಸೀಮೆಯ ಕಲೆಗಳನ್ನೆಲ್ಲಾ ಆ ಕಡೆ ಜನರಿಗೆ ಪರಿಚಯಿಸಬೇಕೆಂದು ಎಪ್ಪತ್ತೈದು ಜನ ಕಲಾವಿದರ ಬೃಹತ್ ತಂಡವನ್ನು, ಡಾ॥ ಜೀಶಂಪ ಅವರ ನೇತೃತ್ವದಲ್ಲಿ ಕರೆಯಿಸಿ, ಮಂಗಳೂರು, ಪುತ್ತೂರು, ಉಡುಪಿಗಳಲ್ಲಿ ಪ್ರದರ್ಶನ ನಡೆಸಿದರು. 1966 ಜನವರಿ 26 ನೇ ತಾರೀಖು ಮಂಗಳೂರಿನಲ್ಲಿ ನಡೆದ ಕಲಾಪ್ರದರ್ಶನದಲ್ಲಿ ಅಧ್ಯಕ್ಷತೆ ವಹಿಸಿದ್ದ ಶಿವರಾಮ ಕಾರಂತರು, ಮುಖವೀಣೆ, ದೊಡ್ಡಾಟ, ಕರಪಾಲ ಮೇಳ, ದೊಂಬಿದಾಸರ ಮೇಳವನ್ನು

ಕಂಡು ತುಂಬಾ ಸಂತೋಷ ವ್ಯಕ್ತಪಡಿಸಿ, ಸರ್ಕಾರಿ ಅಧಿಕಾರಿಯಾದ ನಾಗೇಗೌಡರ ಜಾನಪದದ ಮೇಲಿನ ಆಸಕ್ತಿಯನ್ನು, ಅಭಿಮಾನವನ್ನು ಕಂಡು ಅಚ್ಚರಿ ಪಟ್ಟಿದ್ದನ್ನು ಕಂಡೆ.

ತರೀಕೆರೆಯಲ್ಲಿ ನಡೆದ ಪ್ರಥಮ ಜಾನಪದ ಸಮ್ಮೇಳನದಲ್ಲಿ ಭಾಗವಹಿಸಿ ಜಾನಪದ ಸರಸ್ವತಿಯ ನೆಚ್ಚಿನ ಮಕ್ಕಳಲ್ಲಿ ಒಬ್ಬರಾಗಿ ತಮ್ಮನ್ನು ಗುರುತಿಸಿಕೊಂಡರು. ಇದು ಜಾನಪದದ ಅಭಿವೃದ್ಧಿಗೆ ಚಾಲನೆ ಕೊಟ್ಟ ಬೃಹತ್ ಸಮ್ಮೇಳನ. ಕರ್ನಾಟಕದ ಯಾವ ಭಾಗದಲ್ಲಿ ಜಾನಪದ ಸಮ್ಮೇಳನ ನಡೆಯುತ್ತದೆಂದು ತಿಳಿದುಬಂದರೂ. ತಮ್ಮ ಕಛೇರಿಯ ಕೆಲಸಕ್ಕೆ ವಿರಾಮ ನೀಡಿ, ಅಲ್ಲಿ ಬಂದು ಉಪಸ್ಥಿತರಿದ್ದು ಕಲಾವಿದರ ಯೋಗಕ್ಷೇಮ ವಿಚಾರಿಸಿ, ಅವರ ಕಲೆಗಳನ್ನು ವೀಕ್ಷಿಸಿ, ಅವರಿಗೆ ಹಲವು ಪ್ರಶ್ನೆಗಳನ್ನು ಹಾಕಿ, ಸೂಕ್ತ ಉತ್ತರ ಪಡೆದು ಸಂಭಾವನೆ ಕೊಟ್ಟು ಗೌರವಿಸಿ ಕಳುಹಿಸುತ್ತಿದ್ದರು. ಇಷ್ಟೇ ಅಲ್ಲದೆ ರಾಜ್ಯ ಸರ್ಕಾರದಿಂದ ಕೆಲವು ಉತ್ತಮ ಕಲಾವಿದರಿಗೆ ಮಾಸಾಶನ ಬರುವಂತೆ ಕೂಡ ಮಾಡಿದ್ದಾರೆ. "ಸೋಬಾನೆ ಚಿಕ್ಕಮ್ಮ" ನಾಗೇಗೌಡರ ಕಣ್ಣಿಗೆ ಬಿದ್ದ ಅತ್ಯುತ್ತಮ ಕಲಾವಿದೆ. ಪ್ರಾಯಶಃ ನಾಗೇಗೌಡರು ಸೋಬಾನೆ ಚಿಕ್ಕಮ್ಮನಿಗೆ ತೋರುವಷ್ಟು ಗೌರವಾದರಗಳನ್ನು ಯಾವ ವ್ಯಕ್ತಿಗೂ ತೋರಲಾರರು. ಇದು ನಾಗೇಗೌಡರ ಕಲೆಯ ಮೇಲಿನ ಗೌರವವನ್ನೂ ತೋರಿಸುತ್ತದೆ.

1971 ಅಕ್ಟೋಬರ್ 27, 28, 29 ಮೂರು ದಿನಗಳು ನಾಗಮಂಗಲದಲ್ಲಿ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ನಡೆಯಲು ಮೂಲ ಕಾರಣಕರ್ತರಾದವರು ನಾಗೇಗೌಡರೆಂದರೆ ತಪ್ಪಾಗಲಾರದು. ಆ ಸಮ್ಮೇಳನದಲ್ಲಿ ಎಲ್ಲಾ ಕಲಾವಿದರ ವಿವಿಧ ಕಲಾಪ್ರದರ್ಶನಗಳನ್ನೇರ್ಪಡಿಸಿದ್ದರು. ರಾಷ್ಟ್ರಕವಿ ಕುವೆಂಪುರವರನ್ನೂ ಅಲ್ಲಿಗೆ ಕರೆಸಿ, ಜಾನಪದ ತೇರನ್ನು ಹರಿಸಿ ಒಂದು ದೊಡ್ಡ "ಜಾನಪದ ಹಬ್ಬ"ವನ್ನೇ ಆಚರಿಸಿದರು. ಆಗ ಆ ಮಹಾ ಸಮ್ಮೇಳನಕ್ಕೆ ಶ್ರೀ ಗೌಡರು ಸಂಭ್ರಮ ಉಲ್ಲಾಸಗಳಿಂದ ನೆರೆದ ಜನ ಸಾಗರವನ್ನು ಸ್ವಾಗತಿಸುತ್ತಾ ಹೇಳಿದ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ಮಾರ್ಮೊಳಗುತ್ತಿವೆ. "ಇಲ್ಲಿ ನಡೆಯುತ್ತಿರುವ ಹಬ್ಬಕ್ಕೆ ಯಾವ ಪಂಚಾಂಗದಲ್ಲೂ ದಾಖಲಾತಿ ಸಿಗುವುದಿಲ್ಲ. ಬೇಕಾದರೆ ಮುಂದೆ ಸೇರಬಹುದು. ಇದು ಜಾನಪದ ಹಬ್ಬ. ಇದು ಕುಲಗೋತ್ರಗಳಿಲ್ಲದ ಕಟ್ಟುಪಾಡುಗಳಿಲ್ಲದ..ನಮ್ಮ ಸಂಸ್ಕೃತಿಯ ಹೆಮ್ಮೆಯ ನಾಡಹಬ್ಬ. ಜನಪದ ಕಥೆ, ಗೀತೆ, ಕಲೆ, ಹಳ್ಳಿಯ ಬಾಳಿನ ಉಸಿರು, ಹಳ್ಳಿಯ ಬಾಳಿನ ಬೆಳಕು. ಇದು ಕಿವಿಮರೆ ಕಣ್ಮರೆಯಾಗುವ ಮೊದಲೇ ಹಿಡಿದಿಡಬೇಕು. ಶರಾವತಿಯ ಕಾರ್ಯ ಹತ್ತು ವರ್ಷ ತಡವಾದರೆ ಅಷ್ಟೇನೂ ನಷ್ಟವಿಲ್ಲ. ಆದರೆ ಜನಪದ ಸಂಗ್ರಹ ಕಾರ್ಯ ತಡವಾದರೆ ಅದು ಜನ ಸಂಸ್ಕೃತಿಯ ನಷ್ಟ" ಎಂದು ಎಚ್ಚರಿಸಿದರು. ಹೀಗೆ, ಮಂಗಳೂರಿನಿಂದ ನಾಗಮಂಗಲದವರೆಗೆ ನಡೆದ ಎಲ್ಲ ಜನಪದ ಕಲಾ ಮಹೋತ್ಸವಗಳ ಜೀವನಾಡಿಯಾಗಿದ್ದರಿವರು.

ಒಂದೊಮ್ಮೆ ನಾನು ಮತ್ತು ಗೌಡರೂ ಬೆಂಗಳೂರಿನಲ್ಲಿ ನಗರ ಕೇಂದ್ರ ಗ್ರಂಥಾಲಯದ ಸಮ್ಮೇಳನದಲ್ಲಿ ಭಾಗವಹಿಸಿದ್ದೆವು. ನಾನು ಭಾಷಣಕಾರ, ಅವರು ಅಧ್ಯಕ್ಷರು. ಅಲ್ಲಿ ನಾನು ಜನಪದ ಸಾಹಿತ್ಯದ ವಿವಿಧ ಮಟ್ಟುಗಳನ್ನು ಪರಿಚಯಿಸುತ್ತಾ ಬೀಸೇಕಲ್ಲಿನ ಹಾಡುಗಳು, ಸೋಬಾನೆ ಹಾಡುಗಳು, ಬಾಂಧವ್ಯದ ಹಾಡುಗಳು, 'ಜೋಗದ ಗುಂಡಿ' ಲಾವಣಿ ಮತ್ತು ಭಕ್ತಿ ಗೀತೆಗಳನ್ನು ಹಾಡಿದೆ. ಒಂದೊಂದನ್ನು ಒಂದೊಂದು ವಿಶಿಷ್ಟ ಶೈಲಿಯಲ್ಲಿ ಹಾಡುತ್ತಾ ಜನಪದ ಗೀತೆಯಲ್ಲಿನ ಸೌಂದರ್ಯವನ್ನು, ಅರ್ಥಗಾಂಭೀರ್ಯವನ್ನು ಕುರಿತು ಮಾತನಾಡಿದೆ. ಗೌಡರು ಅಧ್ಯಕ್ಷ ಭಾಷಣ ಮಾಡುತ್ತಾ "ನಮ್ಮ ಸರ್ಕಾರಕ್ಕೆ ಸರಿಯಾದ ವ್ಯಕ್ತಿಗಳನ್ನು ಸರಿಯಾದ ಕೆಲಸಕ್ಕೆ ನೇಮಿಸಿಕೊಂಡು ಪ್ರಯೋಜನ ಪಡೆಯುವುದು ಗೊತ್ತಿಲ್ಲ—To use wrong men at the right place and to use right maen at the wrong place—ಎಂದು ಹೇಳಿ, ನಾನೇನಾದರೂ ಮಂತ್ರಿಯಾಗಿದ್ದಿದ್ದರೆ ಲಿಂಗಪ್ಪನವರಿಗೆ ಜಾನಪದ ಸಂರಕ್ಷಣೆಯ ಮತ್ತು ಪ್ರಸಾರ ಕಾರ್ಯಕ್ಕಾಗಿ ತಿಂಗಳಿಗೆ ಮೂರು ಸಾವಿರ ರೂಪಾಯಿ ಗೌರವಧನ ಕೊಟ್ಟು ಕರ್ನಾಟಕದ ಮೂಲೆ ಮೂಲೆಗೂ ಜಾನಪದ ರಸವಾಹಿನಿ ತಲುಪು ವಂತೆ ಮಾಡಿ, ಜಾನಪದ ರಸಗಂಗೆ ಬತ್ತದಂತೆ ಮಾಡುವ ಮೊದಲ ಕಾರ್ಯ ಮಾಡುತ್ತಿದ್ದೆ, ಎಂದಮಾತು ಭಾವಾವೇಗದ ಮಾತೆಂದೇ ಭಾವಿಸಿದರೂ ಜಾನಪದದ ಬಗ್ಗೆ ಅವರಿಗಿರುವ ಕಳಕಳಿ ಏನು ಎಂಬುದು ಅರಿವಾಗದಿರದು. ಅಷ್ಟೇ ಅಲ್ಲ ಅವರು ಜಾನಪದದ ಅವಸಾನದ ಬಗ್ಗೆ ಹೇಳುವ ಮಾತಿನಲ್ಲಿ ಸತ್ಯಾಂಶವಿಲ್ಲದಿಲ್ಲ. "ಜಾನಪದ ಸಂಗ್ರಹಣೆ, ಸಂಪಾದನೆ, ಧ್ವನಿಮುದ್ರಣ ಕಾರ್ಯ ಮೊದಲು ಆಗಬೇಕಾದ ಕೆಲಸ. ಈಗ ನಾಗರಿಕತೆಯ ಸೋಂಕಿನಿಂದಾಗಿ ಜಾನಪದ ಮೂಲೆ ಗುಂಪಾಗುತ್ತಿದೆ. ಆ ದಿಸೆಯತ್ತ ಸಾಹಿತಿಗಳು, ವಿದ್ವಾಂಸರು, ಬುದ್ಧಿಜೀವಿಗಳು ಗಮನ ಹರಿಸಬೇಕು. ಒಬ್ಬೊಬ್ಬ ಜಾನಪದ ಕಲಾವಿದ ಅಥವಾ ಕಲಾವಿದೆ ಸತ್ತರೂ ಒಂದು ಗ್ರಂಥಭಂಡಾರವೇ ಮುಳುಗಿ ಹೋದ ಹಾಗೆ" ಎನ್ನುವ ಈ ಮಾತುಗಳಿಂದ ಜಾನಪದದ ಬಗ್ಗೆ ಅವರ ಅಭಿಮಾನ ಆಸಕ್ತಿ ಎಂತಹದೆಂಬುದು ನಮಗೆ ತಿಳಿಯುತ್ತದೆ. ಜಾನಪದದ ಇಂತಹದೇ ಕಳಕಳಿ ನಮ್ಮ ಕರ್ನಾಟಕದಲ್ಲಿನ ಹಿಡಿಮಂದಿ ಐ. ಎ. ಎಸ್. ಅಧಿಕಾರಿಗಳಿಗೆ ಬಂದರೆ "ಜಾನಪದದ ಉಗ್ರಾಣ" ಇಂದಿಗಿಂತ ಹತ್ತುಪಟ್ಟು ತುಂಬುತ್ತಿತ್ತು. ಆದರೆ ನಮ್ಮ ಅಧಿಕಾರಿಗಳೆಲ್ಲಾ ಹೊರದೇಶದಿಂದ ಬಂದವರಂತೆ ನಡೆದುಕೊಳ್ಳುತ್ತಾರೆ.

ನಾನೊಬ್ಬ ಜಾನಪದ ವಿದ್ವಾಂಸ ಎನ್ನಿಸಿಕೊಳ್ಳಬೇಕೆಂದಾಗಲಿ, ಕೀರ್ತಿಗಾಗಲಿ, ಪ್ರಚಾರಕ್ಕಾಗಲಿ, ಹಣ ಸಂಪಾದನೆಯ ಉದ್ದೇಶಕ್ಕಾಗಲಿ ಈ ಜನಪದ ಸಾಹಿತ್ಯ ಸಂಗ್ರಹ ಕಾರ್ಯವನ್ನು ಇವರು ಕೈಗೊಳ್ಳಲಿಲ್ಲ. ಇವರು ಹಣ ಸಂಪಾದಿಸಬೇಕೆಂದಿದ್ದರೆ ನೂರಾರು ಮಾರ್ಗಗಳಿದ್ದವು. ಅದ್ಯಾವುದೂ ಗೌಡರ ಮನಸ್ಸಿಗೆ ಒಗ್ಗಲಿಲ್ಲ. ಜನಪದವನ್ನು ಸಂಗ್ರಹಿಸಬೇಕಾದರೂ ಅಷ್ಟೆ. ಕಲಾವಿದರ ಊರುಗಳಿಗೇ ಹೋಗಿ, ಅವರ ಬಡತನಕ್ಕೆ

ಮೂಗು ಮುರಿಯದೆ ಅವರ ಮಕ್ಕಳ ಕೊಳಕುತನಕ್ಕೆ ಅಸಹ್ಯಪಡದೆ, ಅವರ ತಟ್ಟೆಯಲ್ಲೇ ಅವರು ಕೊಟ್ಟ ಅನ್ನವನ್ನೋ ರೊಟ್ಟಿಯನ್ನೋ ಪ್ರೀತಿಯಿಂದ ಉಂಡು ಅವರೊಡನೆ ಸ್ನೇಹ ಬೆಳೆಸಿ, ನಿಜವಾದ ಜಾನಪದ ಸಂಶೋಧಕನ ಎಲ್ಲಾ ಅರ್ಹತೆಗಳನ್ನು ಹೊಂದಿದ್ದು, ಒಂದೊಂದು ಹಾಡನ್ನು ಹತ್ತಾರು ಬಾರಿ ಹಾಡಿಸಿ ಮೂಲ ಧಾಟಿಯನ್ನು ಧ್ವನಿಮುದ್ರಣ ಮಾಡಿ, ಅನುಮಾನ ಬಂದಲ್ಲಿ ಹತ್ತಾರು ಪ್ರಶ್ನೆಗಳನ್ನು ಹಾಕಿ ಶಾಸ್ತ್ರೀಯ ರೀತಿಯಲ್ಲಿ ಸಂಗ್ರಹಿಸಿ ತಂದು, ಅದನ್ನು ವಿರೂಪಗೊಳಿಸದೆ ಮೂಲ ದಾಟಿಯಲ್ಲೇ ಇಟ್ಟಿದ್ದಾರೆ. ಈಗ ಅವರು ಸಂಪಾದಿಸಿರುವ ಕೃತಿಗಳು ಮೂರು: 'ಸೋಬಾನೆ ಚಿಕ್ಕಮ್ಮನ ಪದಗಳು,' 'ಪದವವೆ ನಮ್ಮ ಎದೆಯುಲ್ಲಿ' ಮತ್ತು 'ಹೆಳವರ ಕಾವ್ಯಗಳು' ಇವು ಮೂರು ಕೃತಿಗಳು ಜಾನಪದ ಸಂಶೋಧಕರಿಗೆ, ಸಂಪಾದಕರಿಗೆ, ಸಂಗ್ರಹಕರಿಗೆ ಮಾರ್ಗದರ್ಶನವಾಗಿ ಸಿಲ್ಲಬಲ್ಲ ಅಮೂಲ್ಯ ಸಂಗ್ರಹಗಳಾಗಿವೆ.

ನಾಗೇಗೌಡರು ಅಧಿಕಾರದ ಮೆಟ್ಟಿಲುಗಳನ್ನು ಹಂತ ಹಂತವಾಗಿ ಮೇಲೇರಿದವರು ಚಿಕ್ಕ ಬಳ್ಳಾಪುರದಲ್ಲಿ ಸಬ್ ಡಿವಿಜನ್ ಅಧಿಕಾರಿಯಾಗಿ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಆಡಳಿತ ಮಂಡಲಿಯ ಕಾರ್ಯದರ್ಶಿಯಾಗಿ, ಶಿವಮೊಗ್ಗ ಜಿಲ್ಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿ ಅನಂತರ ಲೋಕಸೇವಾ ಆಯೋಗದ ಸದಸ್ಯರಾಗಿ ಕಾರ್ಯ ನಿರ್ವಹಿಸಿ ನಿವೃತ್ತಿಯಾದರು. ನಾನು ಇಲ್ಲಿ ಅವರು ಅಲಂಕರಿಸಿದ ಎಲ್ಲಾ ಹುದ್ದೆಗಳನ್ನು ಹೇಳಲಿಕ್ಕೆ ಹೋಗಿಲ್ಲ. ಕೆಲವನ್ನು ಮಾತ್ರ ಉಲ್ಲೇಖಿಸಿದ್ದೇನೆ. ಇವರ ಸಂಪೂರ್ಣ ಅಧಿಕಾರವಧಿಯನ್ನು ನಾನು ಕಂಡಿಲ್ಲವಾದರೂ ನನ್ನ ಅವರ ಗೆಳೆತನ ಪ್ರಾರಂಭವಾದಂದಿನಿಂದ ನಾನು ಅವರಲ್ಲಿ ಕಂಡ ಗುಣವೆಂದರೆ ಬಡವರಿಗೆ ದೀನದಲಿತರಿಗೆ ಶಕ್ತಿಮೀರಿ ಸಹಾಯ ಮಾಡುವಂತಹದು. ಯೋಗ್ಯತೆಯಿಲ್ಲದ ವಿದ್ಯಾರ್ಥಿಗೆ, ಕೆಲಸದ ಶಿಫಾರಸ್ಸು ಮಂತ್ರಿಗಳಿಂದ ಬಂದಿರಲಿ, ಹಣವಂತನಿಂದ ಬಂದಿರಲಿ, ಮುಖಕ್ಕೆ ಹೊಡೆದಂತೆ ನೇರವಾಗಿ ಹೇಳಿ ಕಳುಹಿಸುವ ಸ್ವಭಾವ ಅವರದು. ನಾಗೇಗೌಡರು ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿ ಬಂದಾಗ–ತರೀಕೆರೆಯ ಹೆದ್ದಾರಿಯ ಅಕ್ಕಪಕ್ಕದಲ್ಲೇ ಅಡ್ಡಾದಿಡ್ಡಿ ಅನೇಕ ಗುಡಿಸಲುಗಳನ್ನು ಕಟ್ಟಿಕೊಂಡು ಅವುಗಳನ್ನು ತಮ್ಮ ಸ್ವತ್ತಾಗಿ ಮಾಡಿಕೊಂಡಿದ್ದನ್ನು ಕಂಡು ಜಿಲ್ಲಾಧಿಕಾರಿ ಅವುಗಳನ್ನೆಲ್ಲಾ ತೆಗೆಸಿದರಲ್ಲದೆ, ಅದೇ ರೀತಿ ಒಬ್ಬ ಶ್ರೀಮಂತ ತನಗಿಷ್ಟಬಂದಂತೆ ಮಹಡಿ ಮನೆಯೊಂದನ್ನು ರಸ್ತೆಗೆ ಹತ್ತಿರವಾಗಿ ಕಟ್ಟುಬಿಟ್ಟಿದ್ದ. ಅದನ್ನು ಕೂಡ ಯಾವ ಮುಲಾಜಿಲ್ಲದೆ ತಾವೇ ಅಲ್ಲಿ ನಿಂತು ಒಡೆಸಿ ತೆಗೆಸಿದರು. ಬಡವ ಬಲ್ಲಿದ, ಎಂಬ ಯಾವ ಭೇದ ಭಾವವೂ ಕಾನೂನಿಗೆ ಇಲ್ಲ ಎಂಬುದನ್ನು ಖುಜುವಾತು ಪಡಿಸಿದರು. ಬಡವರ ಅನುಕೂಲಕ್ಕಾಗಿ ಊರ ಪಕ್ಕಕ್ಕೆ ಸೈಟುಗಳನ್ನು ಮಾಡಿಸಿ ಮನೆ ಕಟ್ಟಲು ಅನುವುಮಾಡಿ ಕೊಟ್ಟರು. ಇದು ಇವರ ಮಾನವೀಯ ಗುಣವನ್ನು ತೋರಿಸುತ್ತದೆ. ಹೀಗೆ ಅಧಿಕಾರಿಯಾಗಿ "ನ್ಯಾಯನಿಷ್ಠುರ ದಾಕ್ಷಿಣ್ಯಪರ ನಾನಲ್ಲಯ್ಯ, ಲೋಕವಿರೋಧಿ

ಶರಣ ಯಾರಿಗೂ ಅಂಜುವವನಲ್ಲ" ಎಂಬ ಶರಣರ ವಾಣಿಯಂತೆ ಅಧಿಕಾರಿಗಳಲ್ಲಿ ಶರಣನಾಗಿ ಬಾಳಿದ ಕೀರ್ತಿ ಗೌಡರದು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಜಿ. ನಾರಾಯಣರಿಗೆ ಚಾಲನೆ ಕೊಟ್ಟು ಅವರ ಕೆಲಸದಲ್ಲಿ ಹೊಯಿಕೈ ಆಗಿ ದುಡಿದು, ಪರಿಷತ್ತಿನ ಹಲವಾರು ಕಾರ್ಯಕ್ರಮಗಳಿಗೆ ಚೈತನ್ಯಸ್ವರೂಪಿಗಳಾಗಿದ್ದಾರೆನ್ನಬಹುದು.

ಒಮ್ಮೆ ಅವರು ಡೆಲ್ಲಿಗೆ ಹೊರಟಿದ್ದರು, ನಾನೂ ಕೂಡ ಮದ್ರಾಸಿಗೆ ಹೊರಟಿದ್ದೆ. ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ಇಬ್ಬರೂ ಭೇಟಿಯಾದೆವು. ನಾನು, 'ಏನು ಸಾರ್ — ಚೆನ್ನಾಗಿದ್ದೀರಾ, ಹೇಗಿದೆ ಮಂಗಳೂರು' ಎಂದೆ. (ಆಗ ಅವರಿಗೆ ಚಿಕ್ಕಮಗಳೂರಿನಿಂದ ಮಂಗಳೂರಿಗೆ ವರ್ಗಾವಣೆಯಾಗಿತ್ತು) ಅದಕ್ಕೆ ಗೌಡರು, 'ಏನೋ ಹೀಗಿದ್ದೇನೆ, ಲಿಂಗಪ್ಪನವರೇ. ಮಂಗಳೂರಿನವರು ಚಿಕ್ಕಮಗಳೂರಿನವರಿಗಿಂತಲೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ನಿಮ್ಮಲ್ಲಿಯಷ್ಟು ತೊಂದರೆಯೇನು ಜನಾ ಕೊಡ್ತಿಲ್ಲ" ಎಂದು ಹೇಳಿದರು. ಹೀಗೆ ಯಾವುದೇ ವಿಚಾರವಿರಲಿ ನೇರವಾಗಿ ಚಾಟಿಯಿಂದ ಹೊಡೆದಂತೆ ಮಾತಾಡುವುದು ಇವರ ಲಕ್ಷಣ. ಈ ಕಾಲದಲ್ಲಿ ಬಹುಶಃ ಭೂತಗನ್ನಡಿ ಹಾಕಿ ಹುಡುಕಿದರೂ ಇಂತಹ ಅಧಿಕಾರಿ ಸಿಗುವುದು ದುರ್ಲಭ.

ನಾನು ಅವರ ಮನೆಗೆ ಯಾವಾಗ ಹೋದರೂ ತುಂಬಾ ವಿಶ್ವಾಸದಿಂದ ಮಾತನಾಡಿಸುತ್ತಿದ್ದರು. ಜಾನಪದದ ರಸದೌತಣ ಮಾಡಿಸದೆ ಎಂದೂ ನನ್ನನ್ನು ಬಿಟ್ಟು ಕೊಟ್ಟದ್ದಿಲ್ಲ. ನಮ್ಮ ಬಹುಪಾಲು ಮಾತು ನಡೆಯುತ್ತಿದ್ದುದೂ ಜಾನಪದ ಪ್ರಪಂಚದಲ್ಲೇ.

ಅಧಿಕಾರದಲ್ಲಿ ನಿಷ್ಣಾತನಾಗಿ, ಸಂಸಾರದಲ್ಲಿ ನೆಚ್ಚಿನ ತಂದೆಯಾಗಿ, ಆದರ್ಶ ಪತಿಯಾಗಿ, ಜಾನಪದದ ಉಸಿರಾಗಿ,ಉತ್ತಮ ಬರಹಗಾರರಾಗಿ, ತೀಕ್ಷ್ಣ ವಿಚಾರಮತಿಯಾಗಿ, ಚತುರ ವಾಗ್ಮಿಗಳಾಗಿ, ಆತ್ಮೀಯ ಹಿರಿಯರಾಗಿ, ಅಚ್ಚುಮೆಚ್ಚಿನ ಗೆಳೆಯರಾಗಿ, ಕಂಡಿರುವ ನಾಗೇಗೌಡರು ಇಂದು ನಮಗೆಲ್ಲರಿಗೂ ಮಾರ್ಗದರ್ಶಕರಾಗಿದ್ದಾರೆ.

೯ | ಅಧಿಕಾರದೂರವಾದ ನಯ

ಏರ್ಯ ಲಕ್ಷ್ಮೀನಾರಾಯಣ ಆಳ್ವ

1965ರ ಸುಮಾರಿಗೆ ಗೌಡರು ನಮ್ಮ ಜಿಲ್ಲೆಗೆ ಜಿಲ್ಲಾಧಿಕಾರಿಗಳಾಗಿ ಬರುವಾಗ ನಾನು ಜಿಲ್ಲೆಯ ಸಾರ್ವಜನಿಕ ಕ್ಷೇತ್ರದಲ್ಲಿ ಸ್ವಲ್ಪ ಸುತ್ತಾಡುತ್ತಿದ್ದೆ. ಆದ್ದರಿಂದ ನಾನು ಬಯಸದೆಯೂ ಜಿಲ್ಲಾಧಿಕಾರಿಗಳ ಸಂಪರ್ಕ, ಸಂಬಂಧಗಳು ಬಂದೇ ಬರುವಂತಿತ್ತು, ಆಗಿನ ನನ್ನ ಸಾಮಾಜಿಕ ಸ್ಥಿತಿಗತಿಗಳು. ಹೀಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಎಚ್. ಎಲ್. ನಾಗೇಗೌಡ ಐ.ಎ.ಎಸ್., ಇವರ ಸಂಪರ್ಕ ನನಗೆ ಬೇಕೆನ್ನದೆಯೂ ಬಂತು. ಪರಿಚಯ ಅನಿವಾರ್ಯವಾಗಿ ಆಯಿತು.

ನಮ್ಮ ಮೊದಲ ಭೇಟಿ ನನ್ನ ಪಾಲಿಗೆ ಸ್ವಲ್ಪ ಭಯ ಮಿಶ್ರಿತ ಗೌರವದಿಂದಲೇ ಮೊದಲಾದಂತೆ ನೆನಪು. ಜಿಲ್ಲಾಧಿಕಾರಿಗಳೊಬ್ಬರ ಪರಿಚಯ ಆ ರೀತಿಯಿಂದ ಮೊದಲಾಗುವುದು ಸ್ವಾಭಾವಿಕವೂ ಆಗಿತ್ತು. ಅಲ್ಲದೆ ಪ್ರಥಮ ನೋಟಕ್ಕೆ ಸ್ವಲ್ಪ ಭಯ ಹುಟ್ಟಿಸುವ ವ್ಯಕ್ತಿತ್ವವೂ ಹೌದು ಗೌಡರದು. ದುಂಡು ಮುಖದ ದಪ್ಪ ದೇಹದ ದೊಡ್ಡ ಆಳು ಗೌಡರು. ಆಕರ್ಷಕ ಎಂದು ಹೇಳುವಂತಹದಲ್ಲವಾದರೂ ನೆನಪಿಟ್ಟುಕೊಳ್ಳಬೇಕಾದ ದೇಹಾಕೃತಿ ಅವರದು. ದೇಹಕ್ಕೆ ಒಪ್ಪುವ ಭರ್ಜರಿ ವೇಷ ಭೂಷಣಗಳೊಡನೆ ಆಫೀಸಿಗೆ ಬರುವ ಪದ್ಧತಿ ಅವರದು. ಪರಿಚಯವಿದ್ದರೂ ಹದವಾದ ನಸು ನಗು, ಮಿತವಾದ ಮಾತು.

ನಮ್ಮ ಸಂಪರ್ಕ ಹೆಚ್ಚಾದಂತೆ ಅವರ ಮಿತವಾದ ಮಾತಿನಲ್ಲಿ ಅಧಿಕಾರಕ್ಕೆ ದೂರವಾದ ನಯವೊಂದು ಸೂಸುವ ಅನುಭವ ನನಗೆ ಆಗತೊಡಗಿತು. ಅವರ ತುಟಿಯೊಳಗಣ ನಗುವಿನಲ್ಲಿ ಕೊಂಕು ಕಾಣದ ಜನಪದ ನಿಷ್ಕಲ್ಮಶತೆ ಬೆಳಗುತ್ತಿರುವುದರ ಅನುಭವವಾಗ ತೊಡಗಿತು. ದಪ್ಪ ಒರಟು ದೇಹದ ಒಳಗೆ ರಸಪೂರ್ಣ ಪ್ರೇಮದ ಹೃದಯವೊಂದರ ಇರುವಿಕೆಯ ಅರಿವಾಗತೊಡಗಿತು. ಪರಿಣಾಮವಾಗಿ ಅವರ ಕುರಿತಾದ ಭಯದ ಸ್ಥಾನವನ್ನು ಮೆಲ್ಲಮೆಲ್ಲನೆ ಒಲವು ಆಕ್ರಮಿಸಿಕೊಳ್ಳತೊಡಗಿದುದು ಮೊದಲು ನನ್ನ ಅನುಭವಕ್ಕೆ ಬರಲೇ ಇಲ್ಲ ಎಂದು ಕಾಣುತ್ತದೆ. ಬದಲಾಗುತ್ತಿರುವ ನನ್ನ ಮನಸ್ಥಿತಿಯು ಈ ಹೊತ್ತಿಗೆ ಸರಿಯಾಗಿ ಅವರು ಸಾಹಿತಿ ಕೂಡಾ ಎನ್ನುವುದು ನನ್ನ ತಿಳಿವಿಕೆ ಬಂತು ಇದರಿಂದಾಗಿ ನನ್ನ ಹೃದಯ ಒಮ್ಮೆಲೇ ಅವರ ತೀರಾ ಸನಿಯಕ್ಕೆ ಜಿಗಿದು ನಿಲ್ಲುವಂತಾಯಿತು. ನನಗೂ ಸಾಹಿತ್ಯದ ಅಭಿರುಚಿ ಇದ್ದ ವಿಚಾರ ಆಗಲೇ ಅವರಿಗೆ ತಿಳಿದಿರಬೇಕು. ಹಾಗಾಗಿ ಆತ್ಮೀಯವಾದ, ಸಾಮಾಜಿಕ

ಸಾಮಾಜಿಕ ಸ್ಥಾನಮಾನಗಳಿಗೆ ಹೊರತಾದ ಸಂಬಂಧ ಒಂದು ನಮ್ಮನ್ನು ಬೆಸೆಯಿತು. ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ನಾವು ಬೆರೆತಾಗ ವ್ಯವಹಾರಿಕ ಮಾತುಗಳು ಕಡಿಮೆಯಾಗಿ ಸಾಹಿತ್ಯಿಕ ಸಾಂಸ್ಕೃತಿಕ ವಿಚಾರಗಳ ಮಾತುಕತೆ ಹೆಚ್ಚಾಗತೊಡಗಿತು. ಆಗ ನನ್ನ ಗಮನಕ್ಕೆ ಬಂದ ಒಂದು ವಿಚಾರವೆಂದರೆ ಈ ಐ.ಎ.ಎಸ್. ಅಧಿಕಾರಿ ನಗರನಾಗರಿಕತೆಗೆ ಮಾರು ಹೋಗಿಲ್ಲ ; ಇವರಲ್ಲಿ ಗ್ರಾಮೀಣ ಸೊಗಡು ಸೊಂಪು, ಇಂಪು ಕಂಪು ಇನ್ನೂ ಸೂಸುತ್ತಿವೆ. ಇವರಿಗೆ ಜಾನಪದ ಸಾಹಿತ್ಯ ಕಲೆಗಳೆಂದರೆ ಜೀವ ಸಮಾನ. ಆಧುನಿಕರಿಗೆ ಅನಾಗರಿಕವೆನಿಸುವ, ಐ.ಎ.ಎಸ್., ಅಧಿಕಾರಿಗೆ ಅಸ್ಪೃಶ್ಯವೆನಿಸುವ ಈ ಗ್ರಾಮೀಣ ಸಂಸ್ಕೃತಿ ಗೌಡರಿಗೆ ಅತ್ಯಂತ ಪ್ರಿಯವಾದುದು. ಇದು ತಿಳಿದಾಗ ನನಗೆ ಅವರ ಕುರಿತು ಅಭಿಮಾನ ಮೂಡಿತು. ಪ್ರೀತಿ ಬೆಳೆಯಿತು. ಗೌರವ ಹೆಚ್ಚಿತು. ನನಗೂ ಈ ವಿಚಾರದಲ್ಲಿ ಸ್ವಲ್ಪ ಆಸಕ್ತಿ ಇರುವುದನ್ನು ಅರಿತ ಅವರೂ ಸ್ವಲ್ಪ ನನ್ನ ಹತ್ತಿರ ಸರಿದಂತೆ ಭಾಸವಾಗ ತೊಡಗಿತು. ಹೀಗೆ ಮೆಲ್ಲಮೆಲ್ಲನೆ ಒಬ್ಬರ ಕಡೆಗೊಬ್ಬರು ಸರಿಯುತ್ತಾ ಕೊನೆಗೆ ಬಿಡಿಸಲಾರದಂತೆ ಅಂಟಿಕೊಂಡೆವು. ಜನ್ಮಜನ್ಮಾಂತರದ ಬಂಧುಗಳು ಬಹಳ ದಿನ ತಪ್ಪಿಸಿಕೊಂಡಿದ್ದು ಮತ್ತೆ ಒಂದಾದಂತೆ ನಾವು ಏರಿನಿಂತುದು, ಬಾಹ್ಯ ಅಡೆತಡೆಗಳನ್ನು ಮೀರಿ ಬೆರೆತುದು ಹೇಗೆ ಯಾವಾಗ ಎಂಬುದು ನಮಗೆ ಅರಿವಾಗದೆಯೇ ಸ್ವಾಭಾವಿಕ ಅನ್ನುವ ರೀತಿಯಲ್ಲಿ ನಮ್ಮ ಬೆಸುಗೆ ನಡೆದು ಹೋಗಿತ್ತು.

ಇದೇ ಹೊತ್ತಿಗೆ ಸರಿಯಾಗಿ ಜಿಲ್ಲಾಧಿಕಾರಿ ಗೌಡರ ವಿರುದ್ಧ ಆಸಕ್ತ ವರ್ಗ ಒಂದು ಪ್ರಬಲವಾದ ದಾಳಿಯನ್ನು ಮಾಡಿತು. ಬಲವತ್ತರವಾದ ಬಿರುಗಾಳಿಯೊಂದನ್ನು ಅವರ ವಿರುದ್ಧವಾಗಿ ಎಬ್ಬಿಸಲಾಯಿತು. ಜಿಲ್ಲೆಯ ದಿನ ಪತ್ರಿಕೆಯೊಂದನ್ನು ಅವರ ವಿರುದ್ಧ ಪ್ರಚಾರದ ಸಾಧನವಾಗಿ ಬಳಸಿಕೊಳ್ಳಲಾಯಿತು.

ಆ ಜನ ತಮ್ಮ ವೈಯಕ್ತಿಕ ಆಸೆಆಮಿಷಗಳನ್ನು ಹಿಂದಿಟ್ಟು ಮುಂದೆ ಎತ್ತಿ ಹಿಡಿದುದು ಗೌಡರ ಪದ್ಯ ಒಂದನ್ನು. ಸಾಹಿತಿಯೊಬ್ಬನಿಗೆ ಅವನ ಸಾಹಿತ್ಯವನ್ನೇ ಎತ್ತಿಕೊಂಡು ಅವನ ವಿರುದ್ಧವಾಗಿ ಕತ್ತಿಯಂತೆ ಝಳಪಿಸಿದ ಉದಾಹರಣೆ ಸಾಹಿತ್ಯೇತಿಹಾಸದಲ್ಲಿ ಸಿಗುವುದಿಲ್ಲವೆಂದಲ್ಲ. ಹೆಚ್ಚಿನ ಕಡೆ ಕವಿಯ ಉದ್ದೇಶವೇ ಅದಕ್ಕೆ ನಿಮಿತ್ತವಾಗಿರಬಹುದು. ಆದರೆ ಇಲ್ಲಿ ಮಾತ್ರ ಕವಿಯ ಉದ್ದೇಶವನ್ನೇ ತಿರುವಿಸಿ ಬಳಸಿಕೊಳ್ಳಲಾಯಿತು

11-11-1966 ರಲ್ಲಿ ಮಂಗಳೂರಲ್ಲಿ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನ ಸೇರಿತು. ಜಿಲ್ಲಾಧಿಕಾರಿಗಳಾಗಿ ಗೌಡರು ನೆರೆದು ಬಂದ ನಾಡಿನ ಪುಟ್ಟ ಪುಟಾಣಿಗಳನ್ನು ಸ್ವಾಗತಿಸಬೇಕಾಯಿತು. ಆಗ ಅವರು ಮಕ್ಕಳ ಮನಸ್ಸಿಗೆ ಒಗ್ಗುವಂತೆ ಸ್ವಾಗತ ಪದ್ಯ ಒಂದನ್ನು ಬರೆದು ಓದಿದರು. 'ತುಳುವಾಡಿಗೆ ಸ್ವಾಗತ' ಪದ್ಯ ಹೀಗೆ ಹುಟ್ಟಿತು. ಈ ಪದ್ಯದ ಕೆಲವು ಭಾಗಗಳನ್ನಷ್ಟೆ ಎತ್ತಿಕೊಂಡು ತಮಗೆ ಬೇಕಾದ ಹಾಗೆ ಬಾಗಿಸಿ,

ಬಳುಕಿಸಿ, ಅರ್ಥವಿಸಿ ಗೌಡರು ಜಿಲ್ಲೆಯ ಜನರ ಅವಹೇಳನ ಮಾಡಿದ್ದಾರೆ ಎಂದು ಅಪವಾದ ಹೊರಿಸಿ ಪ್ರಚಾರ ಮಾಡಲಾಯಿತು. ದಿನ ಪತ್ರಿಕೆಯೊಂದು ಇದರ ಮುಖವಾಣಿಯಾಗಿ ನಿಂತು ಪ್ರಚಾರಕ್ಕೆ ತೊಡಗಿದಾಗ ಗೌಡರು ತುಂಬಾ ನೊಂದುಕೊಂಡರು. ರಾಜಧಾನಿಯ ಇನ್ನೂ ಒಂದು ಪತ್ರಿಕೆ ನಿಜಸ್ಥಿತಿ ಅರಿಯದೆ ಇದಕ್ಕೆ ಒಗ್ಗರಣೆ ಹಾಕಿತು ಎನ್ನುವುದು ಇನ್ನೂ ವ್ಯಥೆಯ ಸಂಗತಿ.

ಗೌಡರು ನೊಂದುಕೊಂಡದು ಅಪವಾದದ ಹೆದರಿಕೆಯಿಂದಿಲ್ಲ. ತಾನು ಯಾರನ್ನು ಹೃದಯಾಳದಿಂದ ಪ್ರೀತಿಸುತ್ತೇನೋ, ಯಾರ ಕುರಿತು ಅಭಿಮಾನ ಗೌರವಗಳು ತನ್ನಲ್ಲಿ ತುಂಬಿ ತುಳುಕುತ್ತಿವೆಯೋ ಎಲ್ಲಿನ ಕಲಾಸಂಸ್ಕೃತಿಗಳನ್ನು ತಾನು ಎತ್ತಿ ಹೊತ್ತು ಹಾಡಿ ಹೊಗಳಿದೆನೊ ಅಂತಹ ನೆಲದ ಜನರೇ ತನ್ನನ್ನು ತಪ್ಪು ತಿಳಿದುಕೊಳ್ಳುವ ರೀತಿಯಲ್ಲಿ ಪ್ರಚಾರ ವ್ಯವಸ್ಥಿತವಾಗಿ ನಡೆಯುತ್ತಿದೆಯೆಲ್ಲಾ; ಆಸಕ್ತ ಜನರು ಯಾವುದೋ ಉದ್ದೇಶ ಸಾಧನೆಗಾಗಿ ಈ ರೀತಿ ಪ್ರಚಾರವನ್ನು ನಡೆಸುತ್ತಿದ್ದಾರಲ್ಲಾ; ಸತ್ಯವನ್ನು ಹೆಚ್ಚಿನವರು ಅರಿತಿದ್ದರೂ ಎತ್ತಿ ಹೇಳುತ್ತಿಲ್ಲವಲ್ಲ ಎಂದು.

ಆ ಹೊತ್ತಿಗೆ ಅಧಿಕಾರಿಗಳಾಗಿ ಅವರು ಜನಪ್ರಿಯರಾದರು. ಜಿಲ್ಲೆಯ ಸಂಬಂಧಿತ ಆಫೀಸುಗಳು ಅವರ ಕುರಿತು ಗೌರವದ ಭಾವ ತಳೆದಿದ್ದುವು. ಜನಸಾಮಾನ್ಯರು ಸಮಾಧಾನ ಮನಃಸ್ಥಿತಿ ಹೊಂದಿದ್ದರು. ರಾಜಧಾನಿ ತೃಪ್ತಿಯ ಸ್ಥಿತಿಯಲ್ಲಿತ್ತು. ಅವರ ಸಾಮಾಜಿಕ ಸಂಪರ್ಕ ಚೆನ್ನಾಗಿತ್ತು—ಬಹಳ ಚೆನ್ನಾಗಿತ್ತು. ಜಿಲ್ಲೆಯ ಕಲೆ, ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳಲ್ಲಿ ಗೌಡರು ಸಕ್ರಿಯವಾಗಿ ಪಾಲುದಾರರಾಗಿ ಬೆರೆತುಕೊಂಡಿದ್ದರು. ಇಂತಹ ಹೊತ್ತಿಗೆ ಅಪಪ್ರಚಾರದ ಅಪಶ್ರುತಿ ಹೊರಡಬೇಕೆ? ಸತ್ಯವನ್ನು ಅರಿತ ಜನರೂ ಇದಕ್ಕೆ ಮೌನ ಪ್ರೇಕ್ಷಕರಾಗಿರಬೇಕೆ?

ಈ ಪ್ರಚಾರ ಉಲ್ಬಣಾವಸ್ಥೆಯಲ್ಲಿರುವಾಗ ಒಮ್ಮೆ ಗೌಡರು ಈ ನೋವನ್ನು ನನ್ನೊಡನೆ ಹೇಳಿದರು. ಈ ಸತ್ಯ ನನ್ನ ಎದೆಯನ್ನು ತಟ್ಟಿತು. ತಾನು ಮೆಚ್ಚಿಕೊಂಡ, ತಾನು ನೆಚ್ಚಿಕೊಂಡ ಜನಗಳೇ ತನ್ನನ್ನು ಅಪಾರ್ಥ ಮಾಡಿಕೊಂಡಾಗ ಒಬ್ಬ ಸಹೃದಯನಿಗೆ ಎಂತಹ ನೋವು ಆಗಬಹುದು ಎಂಬುದನ್ನು ನಾನು ಅರ್ಥವಿಸಿಕೊಂಡೆ. ಪರಿಣಾಮವಾಗಿ ಗೌಡರ 'ತುಳುನಾಡಿಗೆ ಸ್ವಾಗತ' ಗೀತವನ್ನು ಓದಿದೆ. ಸಮಾಧಾನ ಚಿತ್ತನಾಗಿ ಓದಿದಾಗ ಗೌಡರಿಗೆ ಜಿಲ್ಲೆಯ ಜನರು ಕುರಿತು ಇರುವ ಆದರ ಅಭಿಮಾನಗಳನ್ನು ಕಂಡು ನನ್ನ ಹೃದಯ ಆಶ್ಚರ್ಯ ಸಂತೋಷಗಳಿಂದ ತುಂಬಿಹೋಯಿತು. ಜಿಲ್ಲೆಯ ಕುರಿತ ಅಭಿಮಾನ ಉಕ್ಕಿ ಹರಿಯುವ ಗೌರವ ತುಂಬಿ ತುಳುಕುವ ಈ ಪದ್ಯವನ್ನು ಹೇಗೆ ಒಂದೆರಡು ಕಡೆಗಳ ಅರೆಕೊರೆಗಳನ್ನೇ ಎತ್ತಿ ಹಿಡಿದು ತಿರುಚಿ ವಿಕೃತಾರ್ಥ ಹೊರಡಿಸಲಾಗಿದೆ ಎಂಬುದನ್ನು ಕಂಡು ನಾನೂ

ಗೌಡರಷ್ಟೇ ನೊಂದುಕೊಂಡೆ. ಪರಿಣಾಮವಾಗಿ ಆ ಗೀತದ ರಸಭಾವಗಳನ್ನು ವಿವರಿಸಿ ಒಂದು ಲೇಖನ ಬರೆದು ಪ್ರಕಟಿಸಿದೆ. ಜೊತೆಗೆ ಪದ್ಯದ ಪೂರ್ಣಪಾಠವನ್ನೂ ಮುದ್ರಿಸಿದೆ. ಇದು ನನಗಂತೂ ತುಂಬಾ ತೃಪ್ತಿಯನ್ನು ಕೊಟ್ಟಿತು. ಗೌಡರಿಗೂ ಸಮಾಧಾನ ತಂದಿರಬೇಕು. ಸತ್ಯವನ್ನು 'ಅರಿಯದ ಜಿಲ್ಲೆಯ ಎಲ್ಲಾ ಸಹೃದಯರು ಈ ವಿಮರ್ಶೆ ಮತ್ತು ಪದ್ಯದ ಪೂರ್ಣ ಪಾಠವನ್ನು ಓದಿ ಗೌಡರ ಕುರಿತು ಮತ್ತಷ್ಟು ಅಭಿಮಾನ ತಳೆಯುವಂತಾಯಿತು. ಜೊತೆಗೆ ಸಹೃದಯಿ ಕಲಾವಿದರಾದ ಶ್ರೀ ಎಲ್ಲೂರು ಉಮೇಶರಾಯರು, ಶ್ರೀ ರಾಧಾಕೃಷ್ಣರಾವ್ ಇವರೆಲ್ಲರ ಸಹಕಾರದಿಂದ ಈ ಪದ್ಯವನ್ನು ರಾಗಕ್ಕೆ ಅಳವಡಿಸಿ ಹಾಡುವ ವ್ಯವಸ್ಥೆ ಮಾಡಲಾಯಿತು. ಇದು ಅತ್ಯಂತ ಜನಪ್ರಿಯವಾಗುವುದರ ಜೊತೆಗೆ ತುಳುನಾಡಿನ ಕುರಿತು ಗೌಡರ ಅಭಿಮಾನ ಸಾಮಾನ್ಯನಿಗೂ ತಿಳಿಯುವಂತಾಯಿತು. ಈ ಬೆಳವಣಿಗೆ ಗೌಡರಿಗೆ ಆ ದಿನಗಳಲ್ಲಿ ಮಾನಸಿಕ ಶಾಂತಿಯನ್ನೂ, ಸಂತೃಪ್ತಿಯನ್ನೂ ತಂದಿರಬಹುದೆಂದು ಭಾವಿಸುತ್ತೇನೆ.

ಆ ಬಳಿಕದ ದಿನಗಳಲ್ಲಿ ನಾವು ಬಹಳಷ್ಟು ಹೊಂದಿಕೊಂಡು ಬಾಳುವಂತಾಯಿತು. ಅವರ ಅಂತರಂಗವನ್ನು ನಾನು ಅರ್ಥ ಮಾಡಿಕೊಂಡಿದ್ದೆ. ನನ್ನ ಒಳಗನ್ನು ಅವರು ತಿಳಿದುಕೊಂಡಿದ್ದರು. ಮಂಗಳೂರಿಗೆ ಬಂದಾಗಲೆಲ್ಲಾ ನಾನು ಅವರ ಬಂಗಲೆಗೆ ಹೋಗು ತ್ತಿದ್ದೆ. ನಮ್ಮ ಕಡೆ ಬಂದಾಗಲೆಲ್ಲ ಅವರು ನನ್ನ ಹಳ್ಳಿ ಮನೆಗೆ ಬರುತ್ತಿದ್ದರು. ಬಿಡು ವಿನ ಹಗಲು ನಮ್ಮ ಮಾತಿಗೆ ಸಾಕಾಗದೆ ರಾತ್ರಿಗಳನ್ನೂ ನಮ್ಮ ಸಂಭಾಷಣೆಗೆ ಬಳಸಿ ಕೊಂಡೆವು. ಆಗ ಅವರು ನಾಗಮಂಗಲದ ಹಳ್ಳಿಯೊಂದರ ಹಳ್ಳಿನಾಡಿನ ಗೌಡ ನಾನು ಬಂಟವಾಳದ ಗ್ರಾಮೀಣ ಪ್ರದೇಶದ ಕೃಷಿಕ. ನಮ್ಮ ಮಾತು ನಮಗೆ ಸಮಾನ ಅಭಿರುಚಿಯ ಸಾಹಿತ್ಯ ಜಾನಪದಗಳ ಕುರಿತಾಗಿತ್ತು. ಎಷ್ಟೋ ರಾತ್ರಿಗಳಲ್ಲಿ ಅವರ ಬಂಗಲೆಯಲ್ಲಿ ಕುಳಿತು ಮಾತನಾಡುತ್ತಾ ಹೊತ್ತು ಕಳೆದುದೇ ತಿಳಿಯುತ್ತಿರಲಿಲ್ಲ. ಹೊರ ಗಣ ಪಟ್ಟಣದ ಸದ್ದೆಲ್ಲ ಅಡಗಿ ಕಡಲ ಭೋರ್ಗರೆತವಷ್ಟೇ ನಮ್ಮ ಮಾತಿಗೆ ಹಿಮ್ಮೇಳ ವಾಗಿ ಉಳಿಯುತ್ತಿತ್ತು. ಕೆಲವೊಮ್ಮೆ ನಮ್ಮ ಹಳ್ಳಿಯ ಗದ್ದೆ ಹುಣಿಗಳಲ್ಲಿ ಕೂತು ಪಾಡ್ದನಗಳನ್ನು, ಕಬಿತಗಳನ್ನು ಕೇಳಿದೆವು. ಯಕ್ಷಗಾನಗಳನ್ನು ಕಂಡೆವು. ನಾಟಕ ಗಳನ್ನು ನೋಡಿದವು. ಈ ಎಲ್ಲವುಗಳ ಕುರಿತು ಚರ್ಚಿಸಿದೆವು. ಈ ಮಧ್ಯೆ ಅವರ ಗ್ರಂಥ ರಚನೆ ಅವ್ಯಾಹತವಾಗಿ ನಡೆದಿತ್ತು. ಅವುಗಳ ಕುರಿತೂ ಚರ್ಚಿಸಿದೆವು. ಅವರ ಗ್ರಂಥಗಳನ್ನು ಮುದ್ರಣಕ್ಕೆ ಮೊದಲೇ ನಾನು ಓದುವುದು ಮತ್ತೆ ಜೊತೆಯಾಗಿ ಚರ್ಚಿಸು ವುದು. ಹೀಗೆ ನಡೆದಿತ್ತು. ನಮ್ಮ ಸೇರಿಕೆಯ ದಿನಗಳಲ್ಲಿ ಅವರ ಮನೆಯಲ್ಲಿ ನಾನು ಅತಿಥಿಯಾಗಿರಲಿಲ್ಲ ಮನೆಯವನೇ ಆಗಿದ್ದೆ. ಸ್ಥಾನಮಾನ, ಜಾತಿ ಊರು ಇವು ಒಂದಕ್ಕೊಂದು ಸಂಬಂಧವಿಲ್ಲದ ನಾವು ಇಷ್ಟು ಆತ್ಮೀಯವಾಗಿ ಬೆಸೆದುಕೊಂಡುದು ನಿಜವಾಗಿದರೂ ದೈವ ಪ್ರೇರಿತವಾಗಿತ್ತು. 'ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯಾ!

ಅವರು ಜಿಲ್ಲೆಯಲ್ಲಿ ಇರುವಾಗ ಬಹಳಷ್ಟು ಗ್ರಂಥಗಳನ್ನು ರಚಿಸಿದರು. ಆದರೆ ಯಾವ ಗ್ರಂಥವೂ ನನ್ನ ಕಣ್ಣು ಮುಂದೆ ಹಾಯದೆ ಮುದ್ರಣ ಶಾಲೆ ಸೇರಲಿಲ್ಲ. ನಾನು ಪಂಡಿತನೆಂದಲ್ಲ. ನಾನು ವಿಮರ್ಶಕನೆಂದಲ್ಲ. ನಾನು ಅವರ ಗ್ರಂಥಗಳನ್ನು ತಿದ್ದಿ ತೀಡುವ ಯೋಗ್ಯತೆಯುಳ್ಳವನೂ ಅಲ್ಲ. ಆದರೆ ಅವರ ನನ್ನ ಪ್ರೀತಿಯಿಂದಾಗಿ ನಾನು ಒಮ್ಮೆ ಅವರ ರಚನೆಯನ್ನು ಓದಿದರೆ ಅವರಿಗೆ ತೃಪ್ತಿಯಾಗುತ್ತಿತ್ತು. ಆತ್ಮೀಯನೊಬ್ಬ ಓದಿ ಸೂಚಿಸಿದ ಸಮಾಧಾನ ಅವರಿಗೆ ದೊರಕುತ್ತಿತ್ತು ಎಂದು ಕಾಣುತ್ತದೆ.

ವರುಷಗಳು ಉರುಳಿದುವು. ಅವರಿಗೆ ವಿರುದ್ಧವಾಗಿ ಹೋರಾಡಿದವರು ಸೋತು ಸುಣ್ಣವಾಗಿದ್ದರು. ಸಣ್ಣಗಾಗಿದ್ದರು. ಗೌಡರು ಜಿಲ್ಲೆಯ ಅತ್ಯಂತ ಜನಪ್ರಿಯ ಜಿಲ್ಲಾಧಿಕಾರಿಗಳಾಗಿದ್ದು ನಿಂತಿದ್ದರು. ಅವರು ಅಧಿಕಾರಿ ಅಧಿಕಾರೇತರರಿಂದ ಪ್ರೀತಿಸಲ್ಪಡುತ್ತಿದ್ದರು. ಇಂತಹ ಸಮಯಕ್ಕೆ ಅವರಿಗೆ ವರ್ಗಾವಣೆಯ ಆಜ್ಞೆ ಬಂತು. ಯಾವ ಅಧಿಕಾರಿಯೂ ಎಲ್ಲಿಯೂ ಶಾಶ್ವತವಾಗಿ ಇರಲಾರ. ಅವರು ಅತಿಥಿಗಳಂತೆ. ಇಂದಲ್ಲ ನಾಳೆ ಹೊರಡಲೇಬೇಕು. ನಿತ್ಯಕ್ಕೆ ನಿಲ್ಲಲು ಬಂದವರಲ್ಲ. ಗೌಡರಿಗೆ ವರ್ಗಾವಣೆಯ ಆಜ್ಞೆ ಬಂದಾಗ ಜಿಲ್ಲೆಯ ಉದ್ದಗಲಗಳಲ್ಲಿ ವಿದಾಯ ಸಮಾರಂಭಗಳು ಏರ್ಪಟ್ಟುವು. ಎಲ್ಲವೂ ಹೃದಯಸ್ಪರ್ಶಿಯಾಗಿತ್ತು. ಜನರಿಗೆ ಅವರನ್ನು ಅಗಲುವುದೆಂದರೆ ತಮ್ಮ ಬಂಧು ಒಬ್ಬರನ್ನೇ ಬೀಳ್ಕೊಡುವಷ್ಟು ಕಷ್ಟವಾಗಿತ್ತು. ಗೌಡರಿಗೂ ಈ ಜಿಲ್ಲೆ ಎಂದರೆ ಅಷ್ಟೆ ಪ್ರಿಯವಾಗಿತ್ತು. ಆತ್ಮೀಯವಾಗಿತ್ತು. ಅವರು ಆಗಲೇ ಈ ಮಣ್ಣಿನ ಮಗನಾಗಿ ಹೋಗಿದ್ದರು. ಏನಾದರೇನು ಅಗಲುವಿಕೆ ಅನಿವಾರ್ಯವಾಗಿತ್ತು. ವ್ಯಥೆ ತುಂಬಿದ ಹೃದಯದೊಡನೆ ಜಿಲ್ಲೆಯ ಜನ ಅವರನ್ನು ಬೀಳು ಕೊಟ್ಟರು. ದುಃಖದ ಹೃದಯದೊಡನೆ ಗೌಡರು ಬೀಳ್ಕೊಂಡರು. ನನ್ನ ಒಳಗುದಿಗೆ ಇತಿಮಿತಿಯಿರಲಿಲ್ಲ. ಪರಿಣಾಮವಾಗಿ ಗೌಡರು ನನ್ನ ಪಾಲಿಗೆ ಮುಂದಿನ ದಿನಗಳಲ್ಲಿ ಅತ್ಯಂತ ಆತ್ಮೀಯರಾಗಿ ಉಳಿದರು. ಅವರು ಊರಿನ ದೃಷ್ಟಿಯಿಂದ ದೂರ ಸರಿದಷ್ಟು ಅಂತರಂಗದ ದೃಷ್ಟಿಯಿಂದ ಹತ್ತಿರ ನಿಂತರು.

ಜಾನಪದ ಸಾಹಿತ್ಯ ಕಲೆಗಳು ಗೌಡರ ಜೀವಾಳ. ಅವರು ಜಿಲ್ಲಾಧಿಕಾರಿಗಳಾಗಿದ್ದ ಪ್ರಾರಂಭದಲ್ಲೇ ನನಗೆ ಇದರ ಸುಳಿವು ಸಿಕ್ಕಿತು. ಒಂದು ಸಣ್ಣ ಉದಾಹರಣೆ ಹೇಳಬಹುದು. ಒಮ್ಮೆ ಕುಂದಾಪುರದಲ್ಲಿ ಒಂದು ಸಹಕಾರಿ ಸಮಾರಂಭಕ್ಕೆ ಗೌಡರೂ ಹೋಗಿದ್ದರು. ನಾನೂ ಹೋಗಿದ್ದೆ. ಅಲ್ಲಿ ಲೋಕಾಭಿರಾಮವಾಗಿ ಮಾತಾಡುತ್ತಿರುವಾಗ ಸ್ಥಳೀಯ ಶಾಸಕ ಶ್ರೀ ಯಡ್ತರೆ ಮಂಜಯ್ಯ ಶೆಟ್ಟರು ಹೋರಿಗಳ ಬೀಜ ತೆಗೆಯುವ ಕ್ರಿಯೆಗೆ ಕುಂದಾಪುರದ ಕಡೆ 'ಶೀಲ ಮಾಡುವುದು' ಎನ್ನುವ ಪದ ಬಳಕೆಯಲ್ಲಿದೆ ಎಂದರು. ಈ ಮಾತು ಕೇಳಿದ ಕೂಡಲೇ ಗೌಡರು ಕಡವರವನ್ನು ಎಡವಿದ ಬಡವನಂತೆ ಸಂತೋಷಿತರಾದರು. ಒಮ್ಮೆಲೇ ತಮ್ಮ ನೋಟುಬುಕ್ಕನ್ನು ಕಾರಿನಿಂದ ತರಿಸಿ ಅದರಲ್ಲಿ ಆ ಪ್ರಯೋಗವನ್ನೂ ಅದರ ಅರ್ಥವನ್ನೂ ಬರೆದುಕೊಂಡರು. ಮತ್ತೊಮ್ಮೆ

ಅವರಪ್ಪಕ್ಕೇ ಅಂದುಕೊಂಡರು 'ಶೀಲ ಮಾಡುವುದು'. ನನಗೂ ಆ ಪ್ರಯೋಗ ಕೇಳಿ ಸಂತೋಷವಾಗಿತ್ತು. ಆದರೆ ಜಿಲ್ಲಾಧಿಕಾರಿಯೊಬ್ಬರು ಈ ಮಟ್ಟದಲ್ಲಿ ಹಸಿದವನಂತೆ ಆ ಪ್ರಯೋಗ ಕುರಿತು ಆಸಕ್ತಿ ತೋರಿದುದು ನನಗೆ ತುಂಬಾ ಕುತೂಹಲ ಹುಟ್ಟಿಸಿತು ಸಂತೋಷ ಕೊಟ್ಟಿತು. ಅದು ಅವರ ಸಾಹಿತ್ಯದ ಅಭಿರುಚಿಗೂ ಗ್ರಾಮೀಣ ಸಂಸ್ಕೃತಿಯ ಕುರಿತು ಆಸಕ್ತಿಗೂ ಕನ್ನಡಿ ಹಿಡಿಯಿತು.

ಆ ಬಳಿಕದ ದಿನಗಳಲ್ಲಿ ನನಗೆ ತಿಳಿಯಿತು— ಜಾನಪದ, ಕಲೆ, ಸಾಹಿತ್ಯ, ಸಂಸ್ಕೃತಿಗಳ ಕುರಿತು ಅವರಿಗೆ ಅಭಿರುಚಿ ಆಸಕ್ತಿ ಮಾತ್ರವಲ್ಲ ಅದು ಅವರ ಜೀವವಾಗಿತ್ತು ಎಂಬುದು. ತರೀಕೆರೆಯಲ್ಲಿ ಪ್ರಥಮ ಜಾನಪದ ಸಮ್ಮೇಳನ ಸೇರಿದಾಗ ಅವರು ಅಲ್ಲಿ ಒಂದು ಗೋಷ್ಠಿಯ ಅಧ್ಯಕ್ಷರಾಗಿ ಹೋಗಬೇಕಿತ್ತು. ಜೊತೆಗೆ ನನ್ನನ್ನೂ ಬರುವಂತೆ ಒತ್ತಾಯಿಸಿದರು. ನಾವು ಜೊತೆಯಾಗಿ ಹೋದೆವು. ಸಮ್ಮೇಳನ ಅತ್ಯಂತ ಯಶಸ್ವಿಯಾಗಿತ್ತು. ಗೌಡರಿಗೆ ಅವರೇ ಗೆದ್ದಂತೆ ಅನಿಸಿತ್ತು. ಮುಂದೆ ಮಂಗಳೂರಲ್ಲಿ ಎರಡನೇ ಜಾನಪದ ಸಮ್ಮೇಳನ ಸೇರಿಸಲು ಅವರು ಉತ್ಸಾಹಿತರಾದರು. ನಾನು ಕಾರ್ಯದರ್ಶಿಯಾಗಿ ಅವರು ಅಧ್ಯಕ್ಷರಾಗಿದ್ದುಕೊಂಡು ಈ ಸಮ್ಮೇಳನಕ್ಕೆ ಕಾರ್ಯಪ್ರವೃತ್ತರಾಗುತ್ತಿರುವಂತೆಯೇ ಅವರಿಗೆ ಜಿಲ್ಲೆಯಿಂದ ವರ್ಗವಾಯಿತು. ಸಮ್ಮೇಳನ ಬಹಳ ಚೆನ್ನಾಗಿ ನಡೆಯಿತು. ಆಗ ಗೌಡರು ಜಿಲ್ಲೆಯನ್ನು ಬಿಟ್ಟಿದ್ದರೂ ಸಮ್ಮೇಳನಕ್ಕೆ ಆಗಮಿಸಿ ಮೂರು ದಿನಗಳು ಮಂಗಳೂರಿನಲ್ಲೇ ಇದ್ದು ಮಾರ್ಗದರ್ಶನ ಮಾಡಿದರು. ಮತ್ತೆ ಮೂರನೆಯ ಜಾನಪದ ಸಮ್ಮೇಳನವನ್ನು ಅವರೇ ಅವರ ಊರಿನಲ್ಲಿ—ನಾಗಮಂಗಲದಲ್ಲಿ ಜರುಗಿಸಿದರು. ಜನಪದ ಕಲಾವಿದರ ತಂಡವೊಂದನ್ನು ಕಟ್ಟಿಕೊಂಡು ನಾನೂ ಹೋಗಿದ್ದೆ. ಅತ್ಯಂತ ಯಶಸ್ವಿಯಾಗಿ ಆ ಸಮ್ಮೇಳನ ಜರುಗಿತು. ಅಲ್ಲಿಂದ ಕೆಲವು ವರುಷಗಳು ಸಂದಿವೆ. ಗೌಡರ ಜಾನಪದ ಸಾಹಿತ್ಯ ಕಲೆಗಳ ಆಸಕ್ತಿ ನಿರಂತರವಾಗಿದೆ. ಅದು ಹರಿಗಡಿಯದೆ ನಡೆದಿದೆ.

ಗೌಡರ ಕೃತಿಗಳು ಹತ್ತಾರು. ಪ್ರವಾಸಿ ಕಂಡ ಇಂಡಿಯಾ, ದೊಡ್ಡಮನೆ, ಭೂಮಿಗೆ ಬಂದ ಗಂಧರ್ವ ಇತ್ಯಾದಿ ಶ್ರೇಷ್ಠ ಕೃತಿಗಳನ್ನು ಅವರು ರಚಿಸಿದ್ದಾರೆ. ಅವೆಲ್ಲ ಉತ್ತಮ ಕೃತಿಗಳು. ಆದರೆ ನನಗೆ ಪ್ರಿಯವಾದುದು ಅವರ 'ನನ್ನೂರು'. ಅವರು ಕಂಡ ಉಂಡ ಗ್ರಾಮೀಣ ಪ್ರದೇಶದ ಸಮಗ್ರ ಚಿತ್ರ ಕಲಾತ್ಮಕವಾಗಿ, ತಿಳಿಯಾದ ಹಾಸ್ಯದೊಡನೆ ಅಲ್ಲಿ ಅಭಿವ್ಯಕ್ತಿಗೊಂಡಿದೆ. ಆದ್ದರಿಂದಲೇ ಗೌಡರನ್ನು ನೆನೆಸುವಾಗ 'ನನ್ನೂರು' ನನ್ನ ನೆನಪಿನಲ್ಲಿ ಸುಳಿಯುತ್ತದೆ. ಹೀಗಾಗಿ ನನಗೆ ಗೌಡರು ನನ್ನೂರ ನಾಗೇಗೌಡರಾಗಿ ಕಾಣುತ್ತಾರೆ. ಅಷ್ಟೆ ಅಲ್ಲ ಅವರು ಮೊದಲು ಜಿಲ್ಲಾಧಿಕಾರಿಗಳಾಗಿ ಬಂದಾಗ ನಾಗಮಂಗಲದ ಗೌಡರಾಗಿದ್ದರು. ಆದರೆ ಮೆಲ್ಲ ಮೆಲ್ಲನೆ, ನನ್ನ ಅಂತರಂಗದಲ್ಲಿ ಅವರ ಸನಿಯ ಸನಿಯ ಬರುತ್ತಾ ನನ್ನೂರ ಗೌಡರೇ ಆದರು. ಈಗಂತೂ ಅವರು ಎಲ್ಲೇ ಇದ್ದರು ನನ್ನವರೇ ಆಗಿದ್ದಾರೆ. ಸದಾ ಆಗಿರುತ್ತಾರೆ!

೧೦ ನನ್ನ ಹತ್ತಿರದ ಬಂಧು

—ಎಚ್. ಟಿ. ಕೃಷ್ಣಪ್ಪ

ಶ್ರೀ ನಾಗೇಗೌಡರು ನನ್ನ ಹತ್ತಿರದ ಬಂಧುಗಳು. ನಮ್ಮೂರಿನವರು. ನನ್ನ ಹಿತೈಷಿಗಳು. ನಾನು ಕೂಲಿಮಠದಲ್ಲಿ ಓದುತ್ತಿದ್ದಾಗ ಅವರಾಗಲೇ ಕಾಲೇಜು ವಿದ್ಯಾರ್ಥಿ. ಬಿ. ಎ. ವ್ಯಾಸಂಗ ಮಾಡುತ್ತಿದ್ದರು. ತಮ್ಮ ಗಂಭೀರ ವ್ಯಕ್ತಿತ್ವದಿಂದ ನಮ್ಮ ಊರಿನವರ ಪ್ರೀತಿ, ಗೌರವಗಳಿಗೆ ಅವರು ಆಗಲೇ ಪಾತ್ರರಾಗಿದ್ದರು. ಅವರ ಸ್ವದೇಶಪ್ರೇಮ ಅಪಾರವಾದುದು. ಭಾರತದ ಸ್ವಾತಂತ್ರ್ಯ ಚಳವಳಿ ಅವರ ಮೇಲೂ ಪ್ರಭಾವ ಬೀರಿತ್ತು. ವಿದ್ಯಾರ್ಥಿಯಾಗಿದ್ದಾಗಲೇ ಶುದ್ಧ ಖಾದಿಯನ್ನು ಅವರು ಧರಿಸುತ್ತಿದ್ದರು. ಅವರ ಶುಭ್ರವಾದ ಬಿಳಿಯ ಖಾದಿ ಪಾಯಜಾಮ, ಅಂಗಿಗಳು ಇನ್ನೂ ನನಗೆ ಚೆನ್ನಾಗಿ ನೆನಪಿದೆ. ರಜಾಕಾಲದಲ್ಲಿ ಊರಿಗೆ ಬಂದರೆ ಗ್ರಾಮಜೀವನದಲ್ಲಿ ಸಂಪೂರ್ಣವಾಗಿ ಅವರು ಮುಳುಗುತ್ತಿದ್ದರು. ಜನರ ಜೊತೆ ಬೆರೆತು ಅನೇಕ ರೀತಿಯ ಸಲಹೆಗಳನ್ನು ಅವರಿಗೆ ನೀಡುತ್ತಿದ್ದರು. ಗ್ರಾಮದ ಬಿಕ್ಕಟ್ಟುಗಳನ್ನು ಪರಿಹರಿಸುವಲ್ಲಿ ಅವರ ತಂದೆ ದೊಡ್ಡಮನೆ ಲಿಂಗೇಗೌಡರು ನೆರವಾದರೆ, ಇವರು ಅನೇಕ ಹೊಸ ವಿಷಯಗಳನ್ನು ಹೇಳಿ, ಜನರಿಗೆ ದೇಶಪ್ರೇಮ ಸ್ವಾತಂತ್ರ್ಯದ ಅಗತ್ಯ ಮುಂತಾದ ವಿಚಾರಗಳನ್ನು ತಿಳಿಸುತ್ತಿದ್ದರು.

ನಾಗೇಗೌಡರು ನಮ್ಮ ಸುತ್ತಿನ ವಿದ್ಯಾವಂತರಲ್ಲಿ ಹಳಬರು. ತಾಲ್ಲೂಕಿನ ಪದವೀಧರರಲ್ಲಿ ಎರಡನೆಯವರು. ಹಾಗೆಂದ ಮಾತ್ರಕ್ಕೆ ಅವರು ಎಂದೂ ಬೀಗಿ ನಡೆದವರಲ್ಲ. ಜನರನ್ನು ಅವರು ನಡೆಸಿಕೊಳ್ಳುತ್ತಿದ್ದ ರೀತಿ ಇಂದಿಗೂ ನನ್ನ ಮನಸ್ಸಿನಲ್ಲಿ ನಿಂತಿದೆ. ಊರಿನಲ್ಲಿ ಅವರ ದಿನಚರಿಯಂತೂ ನಮ್ಮನ್ನು ಆಶ್ಚರ್ಯಗೊಳಿಸುತ್ತಿತ್ತು. ಮುಂಜಾವಿನಲ್ಲಿಯೇ ಎದ್ದು, ಊರಿನ ಕೆರೆ ಬಯಲುಗಳಲ್ಲಿ ಸುತ್ತಾಡಿಕೊಂಡು ಬರುವುದು ಅವರ ನಿತ್ಯದ ಕಾರ್ಯಕ್ರಮ. ಇದು ಎಂದೂ ತಪ್ಪುತ್ತಿದ್ದಿಲ್ಲ. ನಾವು ಕಣ್ಣುಜ್ಜಿಕೊಂಡು ಎದ್ದು ಎಳೆಬಿಸಿಲನ್ನು ಕಾಯಿಸಲು ಬರುವುದರೊಳಗೆ ಅವರು ತಮ್ಮ ಸಂಚಾರವನ್ನು ಮುಗಿಸಿ ವಾಪಸ್ಸು ಬರುತ್ತಿದ್ದರು. ಹೀಗೆ ಬರುವಾಗ ಅವರ ಬಲಗೈಲಿ ಯಾವಾಗಲೂ ಒಂದು ಹಸಿಯ ಬೇವಿನ ಕಡ್ಡಿ ಇದ್ದೇ ಇರುತ್ತಿತ್ತು. ಈ ನಿಸರ್ಗದತ್ತ ಬ್ರಷ್ಷಿನಿಂದ ಅವರು ಹಲ್ಲು ಶುಚಿಗೊಳಿಸುವುದು ವಾಡಿಕೆ. ಇಂದಿಗೂ ಊರಿಗೆ ಬಂದರೆ ಬೇವಿನ ಕಡ್ಡಿಯನ್ನು ಅವರು ಮರೆಯುವುದಿಲ್ಲ. ಬಂದ ಮೇಲೆ ಪಕ್ಕದ ಅಳಿಯ ಸಂದ್ರಕ್ಕೆ ಹೋಗಿ ದಿನದ ಅಂಚೆಯನ್ನು ನೋಡಿಬರುವುದು ವಾಡಿಕೆ. ದಿನಪತ್ರಿಕೆಯನ್ನು ತಪ್ಪದೆ ಓದುತ್ತಿದ್ದವರು. ಓದಿದ ವಿಷಯಗಳನ್ನು ಊರಿನಲ್ಲಿ ಹಿರಿಯರಿಗೆ ವಿವರಿಸಿ ಹೇಳುತ್ತಿದ್ದರು. ಇದಾದ ಮೇಲೆ

ಯಾವುದಾದರು ಪುಸ್ತಕವನ್ನು ಹಿಡಿದು ಓದುವುದು ಅವರ ಅಭ್ಯಾಸ. ಓದಿದ ಪುಸ್ತಕಗಳಲ್ಲಿ ಅವರಲ್ಲಿಯೇ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಸ್ವಂತ ಅಭಿಪ್ರಾಯಗಳನ್ನು ಬರೆಯುತ್ತಿದ್ದರು.

ಮನೆಗೆಲಸಗಳಲ್ಲೂ ಶ್ರೀ ನಾಗೇಗೌಡರು ನೆರವಾಗುತ್ತಿದ್ದುದು ನೆನಪು. ಹೊಲಗದ್ದೆಗಳಲ್ಲಿ ಅವರು ಕೆಲಸ ಮಾಡುವ ಅಗತ್ಯವಿರಲಿಲ್ಲ. ದೊಡ್ಡಮನೆಯಲ್ಲಿ ಒಳ್ಳೊಳ್ಳೆಯ ಹೋರಿಗಳನ್ನು ಸಾಕಿದ್ದರು. ಅವುಗಳಿಗೆ ಜಗಲಿಯಲ್ಲಿ ಕುಳಿತು, ಜೋಳದ ಕಡ್ಡಿಯನ್ನು ತಿನ್ನಿಸುತ್ತಿದ್ದರು.

ನಾಗೇಗೌಡರಿಗೆ ಅವರ ತೀರ್ಥರೂಪುರವರಾಗಿದ್ದ ದೊಡ್ಡಮನೆ ಲಿಂಗೇಗೌಡರಲ್ಲಿ ಅಪಾರವಾದ ಪ್ರೀತಿ. ಅವರೆಂದರೆ ಇವರಿಗೆ ಒಂದು ರೀತಿಯ ಭಯಮಿಶ್ರಿತವಾದ ಗೌರವ. ಅವರ ಎದುರು ಎಂದೂ ನಿಂತು ಮಾತನಾಡಿದವರಲ್ಲ. ಲಿಂಗೇಗೌಡರದು ನಮ್ಮ ಸುತ್ತಿಗೆ ಒಂದು ಎತ್ತರದ ವ್ಯಕ್ತಿತ್ವ. ತಮ್ಮ ಮಗನನ್ನು ದೊಡ್ಡ ವಿದ್ಯಾವಂತನನ್ನಾಗಿ ಮಾಡಬೇಕು, ಅಮಲ್ದಾರನನ್ನಾಗಿ ಮಾಡಬೇಕು ಎಂದು ಅವರು ಹಂಬಲಿಸಿದವರು. ಅವರ ಕನಸು ನನಸಾಯಿತು. ಅವರು ಬದುಕಿರುವಾಗಲೇ ಮಣ್ಣಿನ ಮಗನಾದ ನಾಗೇಗೌಡರು ದೊಡ್ಡ ವಿದ್ಯಾವಂತರಾಗಿ ಅಮಲ್ದಾರರೂ ಆದರು, ಮುಂದೆ ಉನ್ನತ ಪದವಿಗಳನ್ನು ಪಡೆದರು. ತಮ್ಮ ತಂದೆಯವರಲ್ಲಿ ಅವರು ಇಟ್ಟಿದ್ದ ಅಚಲವಾದ ಗೌರವ ಎಂದೂ ಕಡಮೆಯಾಗಲಿಲ್ಲ. ಎಲ್ಲಿದ್ದರೂ ತಂದೆಯವರ ವರ್ಷದ ತಿಥಿಗೆ ತಪ್ಪಿಸಿಕೊಳ್ಳದೆ ಊರಿಗೆ ಬರುತ್ತಿದ್ದರು. ನಾಗೇಗೌಡರಂತೆ ಊರಿನ ಸಂಬಂಧವನ್ನು ಇಟ್ಟುಕೊಂಡ ಅಧಿಕಾರಿಗಳು ವಿರಳವೆಂದೇ ಹೇಳಬೇಕು.

ನಾಗೇಗೌಡರು ದೊಡ್ಡ ಅಧಿಕಾರಕ್ಕೆ ಏರಿದರೂ ಗ್ರಾಮದ ಬಗ್ಗೆ ತಮ್ಮ ಅಪಾರವಾದ ಒಲವನ್ನು ಬಿಟ್ಟವರಲ್ಲ. ನಾನು ಶಾಸಕನಾದ ಮೇಲೂ "ಗ್ರಾಮದ ಬಗ್ಗೆ ಹೆಚ್ಚು ಆಸಕ್ತಿವಹಿಸಲಿಲ್ಲ" ಎಂದು ನನ್ನನ್ನು ಆಕ್ಷೇಪಿಸುತ್ತಿದ್ದುದುಂಟು. ನಾಗೇಗೌಡರು ತುಂಬ ಗಂಭೀರಸ್ವಭಾವದವರು. ಯಾವ ರಾಜಕೀಯವೂ ಅವರಿಗೆ ತಿಳಿಯದು; ಊರಿಗೆ ಒಳ್ಳೆಯದಿದ್ದರೆ ಅವರು ಮಾಡುತ್ತಿದ್ದರು. ಉಳಿದ ವ್ಯವಹಾರಗಳಲ್ಲಿ ಅವರು ತಲೆ ಹಾಕುತ್ತಿರಲಿಲ್ಲ. ಅಗತ್ಯಬಿದ್ದಾಗ ಮಾರ್ಗದರ್ಶನ ಮಾಡುತ್ತಿದ್ದರು. ಊರಿನ ಐಕಮತ್ಯ ಹಾಳಾಗದಂತೆ ಯಾವ ಒಂದು ಪಕ್ಷವನ್ನೂ ಅವರು ಹಿಡಿದು ಹೋದವರಲ್ಲ. ಊರಿನ ರಸ್ತೆ, ದೇವಸ್ಥಾನ, ಶಾಲೆ ಇವುಗಳ ಬಗ್ಗೆ ಸದಾ ಅವರಿಗೆ ಆಸಕ್ತಿ. ಸಂಬಂಧಪಟ್ಟ ಅಧಿಕಾರಿಗಳಿಗೆ ಆಗಾಗ್ಗೆ ಹೇಳಿ ಆಗಬೇಕಾದ ಕೆಲಸವನ್ನು ಮುತುವರ್ಜಿಯಿಂದ ಮಾಡಿಸುತ್ತಿದ್ದರು.

ನಾಗೇಗೌಡರು ನನ್ನ ಹತ್ತಿರದ ಬಂಧುಗಳು. ನನ್ನ ಜೀವನದಲ್ಲಿ ಅನೇಕ ಸಮಸ್ಯೆಗಳು ಬಂದಾಗ ನಮ್ಮ ತಂದೆಯವರು ನನ್ನನ್ನು ಅವರ ಬಳಿಗೆ ಕರೆದುಕೊಂಡು ಹೋಗುತ್ತಿದ್ದರು. ನಾನು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಒಮ್ಮೆ ಅನುತ್ತೀರ್ಣನಾದೆ.

ನಾಗೇಗೌಡರು ಊರಿಗೆ ಬಂದು, ನನ್ನನ್ನು ಕರೆದೊಯ್ದು ಒಂದು ಶಾಲೆಯಲ್ಲಿ ಉಪಾಧ್ಯಾಯವೃತ್ತಿಯನ್ನು ಕೊಡಿಸಿದರು. ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆಯಾದಾಗ ನಮ್ಮ ತಂದೆಯವರು ಯಾವುದಾದರೂ ಡಿಪ್ಲೊಮಾ ತರಗತಿಗೆ ಸೇರಿಸಬೇಕೆಂದು ಅಲ್ಲಿಗೆ ನನ್ನನ್ನು ಕರೆದೊಯ್ದರು. ಆಗ ಅವರು ಬೆಂಗಳೂರಿನಲ್ಲಿ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿಯಾಗಿದ್ದರು. ಅವರಿಗೆ ನನ್ನನ್ನು ನೋಡಿ ಏನೆನಿಸಿತೋ, "ಚಿಕ್ಕ ಹುಡುಗ, ಮುಂದೆ ಓದಲಿ ಡಿಪ್ಲೊಮಾ ಬೇಡ" ಎಂದರು. ಆದರೂ ತಂದೆಯವರ ಒತ್ತಾಯಕ್ಕೆ ಮಣಿದು ಒಂದು ಕಡೆ ಡಿಪ್ಲೊಮದಲ್ಲಿ ಸೀಟು ಕೊಡಿಸಿದರು. ನಾನು ಕಲಾ ವಿಭಾಗದ ವಿದ್ಯಾರ್ಥಿ. ಪಂಚೆಯಲ್ಲಿ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ಪ್ಯಾಂಟ್ ಅಗತ್ಯ ಎಂದು ಅವರು ತಿಳಿಸಿದ್ದರಿಂದ ಆ ಶಿಕ್ಷಣವೇ ಬೇಡ ಎಂದು ನಾನು ಕೈಬಿಟ್ಟೆ. ನನಗೆ ಬಿ.ಎ. ಪದವಿ ದೊರೆತಾಗ ಇನ್ನೂ ಇಪ್ಪತ್ತಮೂರು ವರ್ಷ. ನಮ್ಮ ತಂದೆಯವರು ಮದುವೆ ಏರ್ಪಾಟು ಮಾಡಿ ಅವರ ಸಲಹೆಗಳನ್ನು ಕೇಳಲು ಹೋದರು ! ಅವರೆ, ಅವರು "ಈಗಲೇ ಮದುವೆಯೇಕೆ ? ಓದಲಿ" ಎಂದರು. ಆದರೆ ನನ್ನ ಮದುವೆ ನಿಲ್ಲಲಿಲ್ಲ. ಮಾಜಿ ಶಾಸಕ ಮಾದಪ್ಪಗೌಡರು ನಿಂತು ಮದುವೆಯನ್ನು ಮಾಡಿಸಿದರು. ಮುಂದೆ 'ಲಾ' ಓದಿ ಮಂಡ್ಯದಲ್ಲಿ ಅಡ್ವೋಕೇಟ್ ಆದೆ.

ನಾಗೇಗೌಡರು ದಕ್ಷ ಅಧಿಕಾರಿಗಳು, ಪ್ರಾಮಾಣಿಕತೆಗೆ ಹೆಸರಾದವರು. ಎಂದೂ ಸ್ವಜನ ಪಕ್ಷಪಾತವನ್ನು ಅವರು ತೋರಿದವರಲ್ಲ. ಅಧಿಕಾರಿ ಎಂದರೆ ಹೇಗೆ ಆಡಳಿತ ನಡೆಸಿ ಬಡವರಿಗೆ, ಅಸಹಾಯಕರಿಗೆ ನ್ಯಾಯ ದೊರಕಿಸಬೇಕು, ಅವರ ಸೇವೆಗಾಗಿ ನಾವು ಇರುವವರು ಎಂಬುದನ್ನು ಚೆನ್ನಾಗಿ ಅರಿತವರು. ಅವರು ಜಿಲ್ಲಾಧಿಕಾರಿಯಾಗಿದ್ದಾಗ ನೀಡಿದ ಕೆಲವು ತೀರ್ಪುಗಳು ಅವರ ಪ್ರಾಮಾಣಿಕತನಕ್ಕೆ ಸಾಕ್ಷಿಯಾಗಿವೆ. ನಾನು ಮಂಡ್ಯದಲ್ಲಿ ವಕೀಲನಾಗಿದ್ದಾಗ, ಇವರು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ. ಬತ್ತದ ಲಾರಿಯೊಂದನ್ನು ಪೋಲಿಸರು ಹಿಡಿದು ಹಾಕಿದರು. ಆ ಲಾರಿಯ ಮಾಲೀಕರು ನನ್ನನ್ನು ಬಂದು ಹಿಡಿದರು. ಅವರ ಪರವಾಗಿ ವಕಾಲತ್ತುವಹಿಸಿ ನಾನು ಮಂಗಳೂರಿಗೆ ಹೋದೆ. ನಾಗೇಗೌಡರ ಮನೆಯಲ್ಲೇ ಉಳಿದೆ. ವಿಚಾರವನ್ನೆಲ್ಲ ವಿವರಿಸಿದೆ. ಸಾವಧಾನವಾಗಿ ಕೇಳಿ, "ಕೋರ್ಟಿಗೆ ಹೋಗಿ ಫೈಲ್ ನೋಡುತ್ತೇನೆ, ಕಾನೂನಿಗೆ ಅನುಗುಣವಾಗಿ ಏನು ಮಾಡಬಹುದೋ ಅದನ್ನು ಮಾಡುತ್ತೇನೆ" ಎಂದರು. ಲಾರಿಯ ಬಿಡುಗಡೆಯೇನೋ ಆಯಿತು. ಆದರೆ ಪೋಲಿಸರು ದಾಖಲು ಪಡಿಸಿದ್ದ ವರದಿಗಳು ಬರುವವರೆಗೆ ತೀರ್ಪು ಕೊಡಲಿಲ್ಲ.

ಮಂಡ್ಯದಲ್ಲಿ ನಾಗೇಗೌಡರು ಮೂರು ತಿಂಗಳ ಕಾಲ ಜಿಲ್ಲಾಧಿಕಾರಿಯಾಗಿದ್ದರು. ಆಗ ಮೂರು ನಾಲ್ಕು ಮೊಕದ್ದಮೆಗಳಲ್ಲಿ ನಾನು ವಕೀಲನಾಗಿ ಅವರ ಎದುರು ಹಾಜರಾದೆ. ನಮ್ಮ ಹುಡುಗನೆಂದು ಅವರೇನೂ ರಿಯಾಯಿತಿ ತೋರಲಿಲ್ಲ. ನ್ಯಾಯಕ್ಕೆ

ಅಂಟಿಕೊಂಡು ತೀರ್ಪಿತ್ತರು. ಕೆಲವು ಮೊಕದ್ದಮೆಗಳು ಬಿದ್ದು ಹೋದದ್ದುಂಟು. ಈ ಅವಧಿಯಲ್ಲಿ ನಾಗೇಗೌಡರು ಮಾಡಿದ ಮತ್ತೊಂದು ಗಮನಾರ್ಹ ಸಾಧನೆ ; ಎಷ್ಟೋ ವರ್ಷಗಳಿಂದ ಕೊಳೆತುಬಿದ್ದಿದ್ದ ಕಡತಗಳನ್ನು ತೆಗೆಸಿ, ಮೊಕದ್ದಮೆಗಳನ್ನು ಮೂರೇ ತಿಂಗಳಲ್ಲಿ ಮುಗಿಸಿದ್ದು ಇದರಿಂದ ರೈತರೂ, ವಕೀಲರೂ ದೊಡ್ಡ ನಿಟ್ಟುಸಿರನ್ನು ಬಿಡುವಂತೆ ಆಯಿತು.

ನಾಗೇಗೌಡರು ರಾಜ್ಯದ ಉನ್ನತ ಅಧಿಕಾರ ಸ್ಥಾನದಲ್ಲಿದ್ದರೂ ಸಾಹಿತ್ಯ ಕ್ಷೇತ್ರದಲ್ಲಿಯೂ ಕೆಲಸ ಮಾಡಿದವರು. ನಾಗಮಂಗಲ ತಾಲ್ಲೂಕಿನ ಸಾಹಿತ್ಯಿಕ ಪರಂಪರೆಯನ್ನು ಉಳಿಸಿಕೊಂಡು ಬಂದವರು. ಬಿ. ಎಂ. ಶ್ರೀ, ಬಿ. ವೆಂಕಟಾಚಾರ್ಯ ಮೊದಲಾದವರಂತೆ ಇವರೂ ಸಾಹಿತ್ಯ ದಿಗ್ಗಜವಾಗಿ ಮೆರೆದವರು. ಇವರು ರಾಜ್ಯದ ಲೇಬರ್ ಕಮಿಷನರಾಗಿದ್ದಾಗ ನಾಗಮಂಗಲದಲ್ಲಿ ರಾಜ್ಯಮಟ್ಟದ ಜಾನಪದ ಸಮ್ಮೇಳನ ನಡೆಯಲು ಕಾರಣರಾದವರು. ನಾನು ಸ್ವಾಗತ ಸಮಿತಿಯ ಅಧ್ಯಕ್ಷ. ಅವರು ಮಹಾ ಪೋಷಕರು. ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ಅಭೂತಪೂರ್ವವಾಗಿ ನಡೆಯುವಂತೆ ಇವರು ತುಂಬ ಶ್ರಮವಹಿಸಿದರು.

ನಾಗೇಗೌಡರು ಕರ್ತವ್ಯದ ಬಗ್ಗೆ ನಿಷ್ಠುರರಾದವರು. ಸದಾಕಾರ್ಯಶೀಲರು, ಚತುರರು. ಆದರ್ಶಗುಣಗಳನ್ನು ಉಳಿಸಿಕೊಂಡು ಬಂದವರು. ಬಡಬಗ್ಗರಿಗಾಗಿ ಸದಾ ಮರುಗಿದವರು. ಅವರಂಥ ಅಧಿಕಾರಿ ನನ್ನ ಗಮನಕ್ಕೆ ಇನ್ನೂ ಬಂದಿಲ್ಲ ಎಂದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಅವರ ಆದರ್ಶ ವ್ಯಕ್ತಿತ್ವವೇ ನಮ್ಮೆಲ್ಲರಿಗೂ ಸ್ಫೂರ್ತಿದಾಯಕ.

೧೧ ಆತ್ಮೀಯ ಸ್ನೇಹಿತ

ಎಲ್. ಟಿ. ಕಾರ್ಲೆ

ಶ್ರೀ ಹೆಚ್. ಎಲ್. ನಾಗೇಗೌಡರು ನನಗೆ ಪರಿಚಯವಾದದ್ದು 1949ರಲ್ಲಿ, ಅವರು ಹಾಸನ ಜಿಲ್ಲಾ ಅಭಿವೃದ್ಧಿ ಅಧಿಕಾರಿಯಾಗಿದ್ದಾಗ. ಅವರು ನಮ್ಮ ಜಿಲ್ಲೆಯ ಪಕ್ಕದ ಹಳ್ಳಿಗೆ ಸೇರಿದವರು. ಪರಿಚಯವಾದ ತಕ್ಷಣ ಆತ್ಮೀಯ ಸ್ನೇಹಿತರಾದೆವು. ಇಲ್ಲಿಯವರೆವಿಗೂ ನಮ್ಮಿಬ್ಬರ ಸ್ನೇಹ ಹಾಗೆಯೇ ಉಳಿದಿದೆ. ಒಂದಿನ ಕಾಲದಲ್ಲಿ ನನ್ನದು ಸ್ವಲ್ಪ ಉಗ್ರಸ್ವಭಾವ. ಅವರದು ಮೃದುಸ್ವಭಾವ. ಒಂದಕ್ಕೊಂದು ಎದುರಾಗಿರುವ ಧ್ರುವಗಳು ಹೊಂದಿಕೊಳ್ಳುವಂತೆ ನಾವಿಬ್ಬರೂ ಹೊಂದಿಕೊಂಡೆವು.

ಶ್ರೀ ನಾಗೇಗೌಡರು ಅತಿ ಹಿಂದುಳಿದ ಹಳ್ಳಿಯಿಂದ ಬಂದವರಾದರೂ, ಸುಸಂಸ್ಕೃತ ವ್ಯಕ್ತಿಯಾಗಿ ಬೆಳೆದಿದ್ದಾರೆ. ಸರಳವಾದ, ಬಿಗಿಯಾದ ಜೀವನ ನಡೆಸಿಕೊಂಡು ಬಂದಿದ್ದಾರೆ, ಎಷ್ಟೇ ದೊಡ್ಡ ಪದವಿಗೆ ಏರಿದರೂ.

ಹಳ್ಳಿಗರ, ಹಳ್ಳಿಗಳ ಅಭಿವೃದ್ಧಿ ಅವರ ಜೀವನದ ಮುಖ್ಯ ಗುರಿ. ಅದಕ್ಕಾಗಿ ಬಹಳ ಶ್ರಮಿಸಿದ್ದಾರೆ. ಹಳ್ಳಿಗರ ಕಷ್ಟ ಕಂಡು ಮರುಗುತ್ತಾರೆ. ಅವರ ಅಭಿವೃದ್ಧಿ ನೋಡಿ ಆನಂದಿಸುತ್ತಾರೆ. ಹಳ್ಳಿಗರ ಜತೆ ಅನ್ಯೋನ್ಯವಾಗಿ ಮಿಳಿತವಾಗುತ್ತಾರೆ. ಅಧಿಕಾರಿಗಳಲ್ಲಿ ಇಂತಹ ಸ್ವಭಾವ ವಿರಳ.

ಸರ್ಕಾರಿ ಅಧಿಕಾರಿಯಾಗಿ ತಮಗೆ ಸರಿಯೆಂದು ತೋರಿದ್ದನ್ನು ಅಂಜದೆ ಮಾಡುವುದು ಅವರ ಸ್ವಭಾವ. ಬಾಲಬಡುಕತನ ಅವರಲ್ಲಿ ಎಂದೂ ಕಾಣಲಿಲ್ಲ.

ಸಾಹಿತ್ಯದಲ್ಲಿ ಅವರಿಗೆ ಬಹಳ ಅಭಿರುಚಿ. ಇಂತಹವರಿಗೆ ಕಾಲ ಸವೆದಿದ್ದೇ ಕಾಣುವುದಿಲ್ಲ. ಓದುವ, ಜ್ಞಾನಾರ್ಜನೆಯ ಹಂಬಲ ಇದ್ದವರಿಗೆ ಪುಸ್ತಕಗಳು ಪರಮ ಸ್ನೇಹಿತರು. ಕೆಲವು ಸಂದರ್ಭಗಳಲ್ಲಿ ಅವರ ಪುಸ್ತಕದ ಸ್ನೇಹಿತರನ್ನು ನೋಡಿ ಅವರ ಪತ್ನಿಯವರಿಗೆ ಅಸೂಯೆ ಉಂಟಾಗಿರಬಹುದು. ಅವರ ಬರವಣಿಗೆಯಲ್ಲಿ ಪದಗಳ ಚೆಲ್ಲಾಟವಿಲ್ಲ. ವ್ಯಕ್ತಿ, ಸಮಾಜದ ಅಭಿವೃದ್ಧಿ ಕಡೆ ಗುರಿ ಇದೆ. ಇವರ ಬರವಣಿಗೆ ಸಂಪಾದನೆಗಲ್ಲ ; ಆತ್ಮ ತೃಪ್ತಿಗೆ. ಒಂದು ಉದ್ದೇಶ ಸಾಧನೆಗೆ ಬರೆಯುವ ಸ್ವಭಾವ ಇವರದು.

ಹಳ್ಳಿಗರಲ್ಲಿ ಇವರು ಸತ್ಪುರುಷರು ಎಂಬ ಭಾವನೆ ಮೂಡಿರುವುದು ಅನೇಕ ವೇಳೆ ವ್ಯಕ್ತವಾಗಿದೆ. ನನ್ನ ಊರಾದ ಕಾರ್ಲೆಯಲ್ಲಿ ಎಲ್ಲಿ ಬಾವಿ ತೋಡಿದರೂ ನೀರು ಸಿಕ್ಕುತ್ತಿರಲಿಲ್ಲ. ಎಲ್ಲೆಲ್ಲೂ ಬಂಡೆ. ಇವರು ಜಿಲ್ಲಾಭಿವೃದ್ಧಿ ಅಧಿಕಾರಿಯಾಗಿದ್ದಾಗ

ಕಾರ್ಲೆಗೆ ಬಂದು ಬಾವಿ ತೆಗೆಯಲು ಒಂದು ಜಾಗ ತೋರಿಸಿದರು. ಬಾವಿ ತೆಗೆಸಿದರು. ಆ ಬಾವಿಯಲ್ಲಿ ಬೇಕಾದಷ್ಟು ಜಲ ಬಂದು ಈಗಲೂ ಸಹ ಹಳ್ಳಿಗರು ಅವರನ್ನು ನೆನೆಸಿಕೊಳ್ಳುತ್ತಾರೆ. ಆ ಸತ್ಪುರುಷರಿಂದ ನೀರು ಸಿಕ್ಕಿತು ಎಂದುಕೊಳ್ಳುತ್ತಾರೆ.

ಅವರ ಸ್ಥೂಲ ಶರೀರವನ್ನು ನೋಡಿ ನಾನು ಅವರನ್ನು ಕಂಡಾಗಲೆಲ್ಲಾ ಚೇಷ್ಟೆ ಮಾಡುವುದುಂಟು. "ಶ್ರೀ ಜಯಚಾಮರಾಜೇಂದ್ರ ಒಡೆಯರಿಗೆ ನಮೋ ನಮೋ" ಎಂಬುದಾಗಿ ಅವರನ್ನು ನೋಡಿದಾಗಲೆಲ್ಲಾ ಸಂಬೋಧಿಸುತ್ತೇನೆ. ಅವರಲ್ಲಿ ಹಾಸ್ಯ ಪ್ರವೃತ್ತಿಯೂ ಇದೆ. ನಾನು ಅತಿ ಹಾಸ್ಯದ ಮನುಷ್ಯ. ನನ್ನ ಹಾಸ್ಯಗಳನ್ನು ಕೇಳಿ ಅವರು ಯಾವಾಗಲೂ ಆನಂದಿಸುತ್ತಾರೆ.

ಅವರ ಮನಸ್ಸಿನಲ್ಲಿ ದುಗುಡವಿಲ್ಲ, ಅತಿ ಆಸೆ ಇಲ್ಲ. ನಿರಾಶೆಯೂ ಇಲ್ಲ. ಅವರು, ಮುಂಗಾರಿನಲ್ಲಿ ದಡಗಳನ್ನು ಕೊಚ್ಚಿಕೊಂಡು ಭೋರ್ಗರೆಯುವ ಹೊಳೆಯಲ್ಲ. ಬೇಸಿಗೆಯಲ್ಲಿ ನೀರು ಇಂಗಿಹೋದ ಹೊಳೆಯೂ ಅಲ್ಲ. ಮಧ್ಯಕಾಲದಲ್ಲಿ ಪಾತ್ರದ ತುಂಬಾ ನಿಧಾನವಾಗಿ ಹರಿಯುವ ಹೊಳೆಯಂತೆ. ಇಂತಹವರು ನನ್ನ ಸ್ನೇಹಿತರಾಗಿರುವುದು ನನಗೊಂದು ಹೆಮ್ಮೆ.

ಅವರು ಒಳ್ಳೆಯ ಸ್ಥಾನದಲ್ಲಿದ್ದು ಒಳ್ಳೆಯ ಕೆಲಸಗಳನ್ನು ಮಾಡಲಿ ಎಂಬುದು ಮೊದಲಿನಿಂದಲೂ ನನ್ನ ಬಯಕೆ. ಬಡತನ, ತಿಳಿಗೇಡಿತನ, ಕಷ್ಟ ಕಾರ್ಪಣ್ಯ, ಅತಿಯಾದ ಶೋಷಣೆಗಳಿಂದ ನರಳುತ್ತಿರುವ ನಮ್ಮ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳು ಮಾಡಬೇಕಾದ ಕೆಲಸ ಬಹಳ ಇದೆ. ಜನಗಳ ಕಷ್ಟಗಳನ್ನು ನಿವಾರಿಸುವುದರಲ್ಲಿ, ಜನಗಳ ಜ್ಞಾನಾಭಿವೃದ್ಧಿ ಮಾಡುವುದರಲ್ಲಿ ಶ್ರೀ ನಾಗೇಗೌಡರ ಜೀವನ ಮುಂದುವರಿಯಲಿ, ಅವರಿಗೆ ಪರಮಾತ್ಮ ಆಯುರಾರೋಗ್ಯವನ್ನು ಕರುಣಿಸಿ ಅವರ ತುಂಬುಜೀವನ ಅನೇಕ ವರ್ಷಗಳ ಕಾಲ ಮುಂದುವರಿಯುವಂತೆ ಮಾಡಲಿ.

೧೨ ಎಚ್. ಎಲ್. ನಾಗೇಗೌಡರು ಮತ್ತು ನಾನು

ಎಚ್. ಎಚ್. ಅಣ್ಣಯ್ಯಗೌಡ

ನಾನು ಎಚ್.ಎಲ್. ನಾಗೇಗೌಡ ಅವರನ್ನು ಮೊದಲು ಕಂಡದ್ದು ಮೈಸೂರಿನ ಜಿಲ್ಲಾಧಿಕಾರಿಗಳ ಆಫೀಸಿನಲ್ಲಿ, ಸುಮಾರು 25 ವರ್ಷಗಳ ಹಿಂದೆ. ಆಗ ಅವರು ಹೆಚ್ಚಿಗೆ ಬರೆದಿರಲಿಲ್ಲ. ನಾನು ಉಪನ್ಯಾಸಕನಾಗಿದ್ದೆ. ಆಗ ನನ್ನ 'ಮೃಗಪ್ರಭುತ್ವ'ವನ್ನು ಅವರು ಓದಿದ್ದರು. ಮೈಸಿಂಡಿಯಾ ಎಂಬ ವಾರಪತ್ರಿಕೆಯಲ್ಲಿ ಅಚ್ಚು ಆಗಿದ್ದ ನನ್ನ ಕೆಲವು ಲೇಖನಗಳನ್ನು ಓದಿದ್ದರು. ಮೆಚ್ಚುಗೆಯಿಂದ ಮಾತನಾಡಿದರು. ನಂತರ ನಾವು ಸ್ನೇಹಿತರಾದೆವು. ಇದಾದ ಒಂದು ವರ್ಷದಮೇಲೆ ನಾನು ಆಗ ಮುಖ್ಯ ಮಂತ್ರಿಯವ ರಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರ ಸಾಹಿತ್ಯಕ ಆಪ್ತ ಕಾರ್ಯದರ್ಶಿಯಾದ ಮೇಲೆ ಇವರ ಸ್ನೇಹ ಹೆಚ್ಚುಬೆಳೆಯಿತು. ಅಷ್ಟುಹೊತ್ತಿಗೆ ಶ್ರೀಯುತರು ಸಾಹಿತ್ಯ ಪ್ರಪಂಚಕ್ಕೆ ದಿಟ್ಟ ಹೆಜ್ಜೆ ಇಟ್ಟಿದ್ದರು. ಇವರು ಆಗಲೇ ಅನುವಾದ ಮಾಡಿದ್ದ ಸರ್ ವಾಲ್ಟರ್ ಸ್ಕಾಟ್‌ನ "ಕೆನಿಲ್ ವರ್ತ್" ಎಂಬ ಕಾದಂಬರಿಯನ್ನು ನೋಡಿದ್ದೆ.

ಇದಾದ ಮೇಲೆ ೧೯೫೫ ರಲ್ಲಿ ನಾನು ಮುಖ್ಯಮಂತ್ರಿಯವರೊಡನೆ ಭದ್ರಾವತಿಗೆ ಹೋಗಿದ್ದೆ. ಶ್ರೀ ನಾಗೇಗೌಡರು ಅಲ್ಲಿದ್ದರು. ಅವರು ಆಗ ಶಾಲೆಯ ಉತ್ಸವಕ್ಕೆ ಬಂದ ಮುಖ್ಯಮಂತ್ರಿಯ ಗೌರವಾರ್ಥವಾಗಿ ಒಂದು ಸ್ವಾಗತ ಪದ್ಯ ಬರೆದಿದ್ದರು. ಬಹಳ ಚೆನ್ನಾಗಿತ್ತು. ಅದನ್ನು ಕೇಳಿದವರೆಲ್ಲ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇಷ್ಟು ಹೊತ್ತಿಗೆ ಅನುವಾದಗಳ ಮೂಲಕ ಪ್ರವಾಸ ಸಾಹಿತ್ಯದಲ್ಲಿ ಕೃತಿಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಸ್ಥಿರವಾದ ಸ್ಥಾನಪಡೆದಿದ್ದರು. ಅವರು ಸರ್ಕಾರದ ಕೆಲಸ ಹೇಗೆ ಮಾಡಿದ್ದಾರೋ ನಾನು ಕಾಣೆ, ಆದರೆ ಸಾಹಿತ್ಯ ಸೇವೆಯಂತೂ ಚೆನ್ನಾಗಿ, ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಯಾವುದೇ ಕೃತಿಯನ್ನು ಬರೆಯಬೇಕೆಂದು ತೆಗೆದುಕೊಂಡರೇ ಸಂಶೋಧನೆಯ ವಿದ್ಯಾರ್ಥಿ ಎಷ್ಟುಶ್ರಮವಹಿಸುತ್ತಿದ್ದನೋ ಅಷ್ಟೇಶ್ರಮಪಡುತ್ತಿದ್ದರು. ಇವರ "ಮಾರ್ಕೊಪೋಲೊ ಪ್ರವಾಸ ಕಥನ"ಕ್ಕೆ ಬೇಕಾದ ಕೆಲವು ಅಂಶಗಳನ್ನು ಲಂಡನ್ನಿನಲ್ಲಿರುವ, ಹಿಂದೆ "ಬ್ರಿಟಿಷ್ ಮ್ಯೂಸಿಯಂ", ಈಗ "ಬ್ರಿಟಿಷ್ ಲೈಬ್ರರಿ ಎಂದು ನಾಮಾಂಕಿತವಾಗಿರುವ ಗ್ರಂಥಾಲಯಕ್ಕೆ ಬರೆದು ಮೂಲದ ಅಂಶಗಳನ್ನು ಪರಿಶೋಧಿಸು ತ್ತಿದ್ದರು. ೧೯೬೭ ರಲ್ಲಿ ಅಮೇರಿಕೆಯಿಂದ ವಾಪಸು ಬಂದೆ. ಮಂಗಳೂರಿನಲ್ಲಿ ಮದ್ರಾಸಿನ USIS ಸಂಸ್ಥೆ ಒಂದು ಪ್ರಾಸಂಗ ಗೋಷ್ಠಿಯನ್ನು ಏರ್ಪಡಿಸಿತು. ಅದರಲ್ಲೂ ನಾನು ಭಾಗವಹಿಸಿದ್ದೆ. ಶ್ರೀಯುತರು ನನ್ನನ್ನು ಒಂದು ದಿನ ಬೆಳಿಗ್ಗೆ ಉಪಾಹಾರಕ್ಕೆ ಕರೆದರು.

ಮಂಗಳೂರು ಜಿಲ್ಲಾಧಿಕಾರಿಯವರ ಬಂಗಲೆ ವಿಶಾಲವಾದುದು ; ಭವ್ಯವಾದುದು. ಕೂತುಕೊಳ್ಳುವ ಕೊಠಡಿಯಿಂದ ಕಣ್ಣು ಕೋರೈಸುವಂತಹ ಹಸುರು ಪ್ರಕೃತಿಯು ಭವ್ಯತೆ. ಒಂದರಡು ಗಂಟೆ ಮಾತನಾಡುತ್ತಾ ಕಾಲಕಳೆದೆವು. ಆಗ ಅವರು ಕಾಫಿಯು ಬೆಳೆವಣಿಗೆ ವಿಷಯವಾಗಿ ಒಂದು ಪುಸ್ತಕವನ್ನು ಬರೆಯುತ್ತಿದ್ದೇನೆಂದು ಹೇಳಿದರು. ಅವರ ಉತ್ಸಾಹ ಅಪರಿಮಿತವಾದುದು, ಪುಸ್ತಕ ಭಂಡಾರಕ್ಕೆ ಹೋಗುವುದು ಅಲ್ಲಿನ ಗ್ರಂಥಗಳ ಪಠನೆ ಮುಂತಾದುವನ್ನು ಕುರಿತು ಆಗ ಅಲ್ಲಿ ಸರ್ಕಾರಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ದಿವಂಗತ ವೆಸ್ಲಿಯವರು ನನಗೆ ಹೇಳುತ್ತಿದ್ದರು. ಅನಂತರ ಇವರ "ನನ್ನೂರು" ಹೊರಬಿದ್ದಾಗ ಪ್ರಜಾವಾಣಿ ಪತ್ರಿಕೆಗೆ ನಾನು ವಿಮರ್ಶೆಮಾಡಿದೆ. ಇದಾದ ಕೆಲವು ದಿವಸಗಳ ಮೇಲೆ ನಾನು ಮತ್ತು ಮಿತ್ರ ಶ್ರೀ ಬಿ. ಪಿ. ಮಲ್ಲರಾಜೇಅರಸು ಅವರು ಮಾತನಾಡುತ್ತಾ ಕುಳಿತಿದ್ದೆವು. ಆಗ ಇವರು ಬೆಳಗಿನ ಸಂಚಾರ ಮುಗಿಸಿ ಕೊಂಡು ಹಿಂದಿರುಗುತ್ತಿದ್ದರು. ನನ್ನ ವಿಮರ್ಶೆಯನ್ನು ಮೆಚ್ಚಿ ಮಾತನಾಡಿದರು. ಅನಂತರ ಇವರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಬಂದಿದ್ದರು. ಆಗ ನಾನು ಅನುವಾದ ಮಾಡಿದ್ದ ಜೆ.ಎಲ್. ಸಿಂಗನ 'ಸಂತರವಿ' ಎಂಬ ನಾಟಕವನ್ನು ಹುಡುಗರು ಆಡಿದರು. ನಾವಿಬ್ಬರು ಕನ್ನಡದಲ್ಲಿ ಇಂತಹ ನಾಟಕಗಳು ಏಕೆಬರುತ್ತಿಲ್ಲ ಎಂಬುದರ ವಿಷಯ ಮಾತನಾಡಿದೆವು.

ಸರ್ಕಾರದ ಕೆಲಸ ಬಹಳ ಡ್ರೈವರ್ಕ್. ಇಂಗ್ಲಿಷ್ ಪ್ರಬಂಧಕಾರನಾದ ಲ್ಯಾಂಬ್ ಈಸ್ಟ್ ಇಂಡಿಯ ಕಂಪನಿಯಲ್ಲಿ ಗುಮಾಸ್ತನಾಗಿದ್ದ. ಅವನು ಹೇಳಿದ್ದ "Dry wood makes me live" ಎಂದು. ಆದರೆ ಅವನು ಆಫೀಸಿನಲ್ಲಿಯೇ ಪ್ರಬಂಧವನ್ನು ಬರೆಯು ತ್ತಿದ್ದುದು. T.S. Eliot ಇಂಗ್ಲೆಂಡಿನ ಒಂದು ಬ್ಯಾಂಕಿನಲ್ಲಿ ಗುಮಾಸ್ತನಾಗಿದ್ದಾಗ ಪದ್ಯ ಗಳನ್ನುಬರೆಯುತ್ತಿದ್ದ. ಕೆಲಸದಲ್ಲಿದ್ದಾಗ ಫೈಲ್‌ಗಳು ಬರುತ್ತವೆ, ಹೋಗುತ್ತವೆ. ಅನೇಕ ಅಧಿಕಾರಗಳ ಮುಂದೆ ಅವೇ ರಾಶಿರಾಶಿಯಾಗಿ ಇವೇ ಅವರ ಕಲೆಕ್ಟೆಡ್ ವರ್ಕ್ಸ್ ಎಂಬಂತೆ ನಿಲ್ಲುತ್ತವೆ. ಈ ಫೈಲುಗಳ ಜಂಜಾಟದಿಂದ ಮನಸ್ಸನ್ನು ಸಾಹಿತ್ಯದ ಕಡೆಗೆ ತಿರುಗಿಸುವುದು ಬಹಳ ಆರೋಗ್ಯಕರವಾದುದು. ಸರ್ಕಾರಿ ಅಧಿಕಾರಿ ಎಷ್ಟೇ ಚೆನ್ನಾಗಿ ಫೈಲಿನ ಮೇಲೆ ನೋಟ್ಸ್ ಬರೆದರೂ ಅದು ನೋಟ್ಸೇ ; ಆದರೆ ಒಂದೆರಡು ಪೇಜು ಒಳ್ಳೆಯ ಬರವಣಿಗೆ ಸಾಹಿತ್ಯವಾಗಬಹುದು. ಇದು ಅವನ ಹೆಸರನ್ನು ಶಾಶ್ವತಗೊಳಿಸುವುದು. ನಾಗೇಗೌಡರು ಸರಕಾರಿ ಅಧಿಕಾರದಲ್ಲಿದ್ದರೂ ಹೀಗೆ ಸಾಹಿತ್ಯ ರಚಿಸಿ ಹೆಸರು ಮಾಡಿದವರು.

೧೩ ದಕ್ಷ ಆಡಳಿತಗಾರ

ಡಾ. ಬಿ. ಎನ್. ರಂಗಪ್ಪ

ಶ್ರೀ ಎಚ್. ಎಲ್. ನಾಗೇಗೌಡರ ಅರುವತ್ತೆರಡನೆಯ ಹುಟ್ಟುಹಬ್ಬದ ಶುಭ ಸಂದರ್ಭದಲ್ಲಿ ಹೊರಬರುತ್ತಿರುವ ಗೌರವ ಗ್ರಂಥದಲ್ಲಿ ಅವರ ಬಗೆಗೆ ಏನಾದರೂ ಬರೆಯಬೇಕು ಎನ್ನಿಸಿತು. ಆದರೆ, ಕನ್ನಡ ನಾಡಿನ ಉದ್ದಗಲಕ್ಕೂ ದಕ್ಷ ಆಡಳಿತಗಾರರಾಗಿ, ಉದ್ದಾಮ ಸಾಹಿತಿಯಾಗಿ, ಗಣ್ಯವ್ಯಕ್ತಿಯಾಗಿ, ಸಂಚರಿಸಿ ಕೆಲಸ ಮಾಡಿದ ಶ್ರೀ ನಾಗೇಗೌಡರ ಮಹಾವ್ಯಕ್ತಿತ್ವವನ್ನು ಕುರಿತು ಜನತೆಗೆ ನಾನು ಹೊಸದಾಗಿ ಹೇಳುವುದು ಏನಾದರೂ ಇದೆಯೇ ಎಂಬ ಸಂದೇಹವೂ ನನ್ನಲ್ಲಿದೆ. ಆದರೂ ಹಲವಾರು ವರ್ಷಗಳ ಅವರ ಮತ್ತು ನನ್ನ ನಿಕಟಬಾಂಧವ್ಯದ ನಡುವೆ ಅವರ ದೊಡ್ಡತನದ ಪರಿಚಯ ಸಾಕಷ್ಟು ಬಾರಿ ನನಗಾಗಿದೆ. ಅವುಗಳಲ್ಲಿ ಒಂದೆರಡನ್ನು ಮಾತ್ರ ಹೇಳುತ್ತೇನೆ. ಏಕೆಂದರೆ ಅವರು ಸಾಹಿತಿಯಾಗಿ, ಸಾಹಿತ್ಯ ಪ್ರಪಂಚದಲ್ಲಿ ಮಾಡಿದ ಚಿರಂತನವಾಗುಳಿಯುವ ಸಾಧನೆಗಳನ್ನು ಸಾಹಿತ್ಯ ವಿದ್ವಾಂಸರು ನನಗಿಂತ ಚೆನ್ನಾಗಿ ವಿವರಿಸುತ್ತಾರೆ. ದಕ್ಷ ಹಾಗೂ ಪ್ರಾಮಾಣಿಕ ಆಡಳಿತಗಾರರಾಗಿ ಅವರು ಸಲ್ಲಿಸಿದ ಸೇವೆಯನ್ನು ಕನ್ನಡ ನಾಡಿನ ಜನ ಸದಾ ಸ್ಮರಣೆಯಲ್ಲಿಟ್ಟಿರುತ್ತಾರೆ. ಸಾವಿರಾರು ಜನ ಬಡವರು ಇವರ ವಿದ್ಯಾಭಿಮಾನ ಹಾಗೂ ಸಹಾನುಭೂತಿಯ ಮಡಿಲಿನಲ್ಲಿ ಉಂಡು, ಬದುಕನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ಲಕ್ಷಾಂತರ ಜನ ಇವರ ಮಾತು, ಉಪದೇಶಗಳಿಂದ, ಪ್ರೇರಣೆ-ಪ್ರೋತ್ಸಾಹಗಳಿಂದ, ಬದುಕು-ಕೃತಿಗಳಿಂದ ತಮ್ಮ ಬದುಕನ್ನು ಉಜ್ವಲಗೊಳಿಸಿಕೊಂಡಿದ್ದಾರೆ.

ವಿದ್ಯಾಪಕ್ಷಪಾತಿಯಾದ ನನಗೆ, ನಮ್ಮ ತೀರ್ಥಹಳ್ಳಿ ತಾಲೂಕಿನಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಿದವರು ಶ್ರೀ ನಾಗೇಗೌಡರೆಂದರೆ ತಪ್ಪಾಗಲಾರದು. ಶ್ರೀಯುತರು ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದಾಗ ಆಗ ತಾನೇ ತಾಲ್ಲೋಕು ಅಭಿವೃದ್ಧಿ ಮಂಡಳಿಗಳ ಉದಯದ ಕಾಲ, ತಾಲೂಕಿನ ಸರ್ವತೋಮುಖ ಅಭಿವೃದ್ಧಿಯಲ್ಲಿ ಯಾವುಯಾವುದಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕೆಂಬ ಸಮಸ್ಯೆ; ಅಂತಹ ಹೊತ್ತಿನಲ್ಲಿ ಶ್ರೀ ನಾಗೇಗೌಡರು ಮಾಳೂರು ಹೈಸ್ಕೂಲಿನ ಉದ್ಘಾಟನಾ ಸಮಾರಂಭದಲ್ಲಿ ಒಂದು ಮಾತನ್ನು ಹೇಳಿದ್ದರು. 'ಯಾವ ಪ್ರದೇಶದಲ್ಲಿ ವಿದ್ಯಾಭ್ಯಾಸದ ಸೌಕರ್ಯ ಹೆಚ್ಚಾಗಿ ದೊರೆಯುವುದೋ ಅಲ್ಲಿ ಉಳಿದ ಸೌಕರ್ಯಗಳು ತಾವಾಗಿಯೇ ಒದಗಿ ಬರುತ್ತವೆ. ಮೊದಲು ತಾಲೂಕಿನ ಯುವಜನತೆಯನ್ನು ವಿದ್ಯಾವಂತರನ್ನಾಗಿ ಮಾಡಿ, ನಂತರ ಅವರೇ ತಾಲೂಕಿನ ಎಲ್ಲ ಅಭಿವೃದ್ಧಿಗಳಲ್ಲೂ ಪಾಲ್ಗೊಳ್ಳುತ್ತಾರೆ'. ಅವರ ಅಂದಿನ ಮಾತು ಮತ್ತು ಜಿಲ್ಲಾಧಿಕಾರಿಗಳಾಗಿ ನೀಡಿದ ಪ್ರೋತ್ಸಾಹದ ಕಾರಣವಾಗಿ ಇಂದು ತೀರ್ಥಹಳ್ಳಿ ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆ

ಯಲ್ಲಿ ಗ್ರಾಮಾಂತರ ಪ್ರೌಢಶಾಲೆಗಳು ಮತ್ತು ತನ್ಮೂಲಕ ಪ್ರಥಮ ದರ್ಜೆ ಕಾಲೇಜೊಂದರ ಸ್ಥಾಪನೆ ಸಾಧ್ಯವಾಯಿತು.

ಕನ್ನಡ ನಾಡಿನಲ್ಲಿ ಅಸಂಖ್ಯ ಸಾಹಿತಿಗಳಿದ್ದಾರೆ, ಆದರೆ ಶ್ರೀ ಎಚ್. ಎಲ್. ನಾಗೇಗೌಡರಂತಹ ಅಧಿಕಾರಿ–ಸಾಹಿತಿಗಳು ಅಪರೂಪ. ಈ ಮಾತನ್ನು ನಾನು ಹೇಳಲು ಕಾರಣ, ತಮ್ಮ ಕಾರ್ಯಭಾರದ ಎಲ್ಲ ಜಂಜಡಗಳ ನಡುವೆಯೂ ಜನತೆಯ ಜೊತೆ ಜೀವಂತಸಂಬಂಧವನ್ನಿರಿಸಿಕೊಂಡು, ಜನಮನದ ನಾಡಿಯನ್ನು ಹಿಡಿದು ಅದನ್ನು ಸಾಹಿತ್ಯ ಕೃತಿಯಲ್ಲಿ ತುಂಬುವ ಅಸಾಧಾರಣ ಸಿದ್ಧಿ ಶ್ರೀನಾಗೇಗೌಡರಿಗೆ ವಿಶಿಷ್ಟವಾದುದು. ಅವರು ಯಾವ ಪ್ರದೇಶದಲ್ಲೇ ಕೆಲಸ ಮಾಡುತ್ತಿರಲಿ, ಅಲ್ಲಿಯ ಶ್ರೀಸಾಮಾನ್ಯನ ಜೊತೆ ನೇರ ಸಂಪರ್ಕವನ್ನಿಟ್ಟುಕೊಳ್ಳುತ್ತಿದ್ದರು, ಅಲ್ಲಿಯ ಜನಪದ, ಭಾಷೆ, ಜೀವನದ ರೀತಿ ಮುಂತಾದುವನ್ನು ಗುರುತಿಸಿ, ವೈಶಿಷ್ಟ್ಯತೆಗಳನ್ನು ಹೊರತೆಗೆದು ಅವನ್ನು ಸಾಹಿತ್ಯ ಕೃತಿಯಲ್ಲಿ ಶಾಶ್ವತಗೊಳಿಸುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ ಅವರು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದಾಗ ಅವರ ಕಮನವೊಂದರ ಮೇಲೆ ನಡೆದ ವಿವಾದ, ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾಗಿದ್ದಾಗ ಅಲ್ಲಿಯ ಮುಖ್ಯ ಬೆಳೆ 'ಕಾಫಿ'ಯ ಬಗೆಗೆ ಅವರ ಅಧ್ಯಯನ ಪೂರ್ಣ ಲೇಖನ, ಹಲವಾರು ಜಿಲ್ಲೆಗಳ ಜನಪದ ಸಾಹಿತ್ಯ, ಕಲೆಗಳ ಸಂಗ್ರಹ ಮತ್ತು ಅಧ್ಯಯನ—ಇವುಗಳನ್ನು ನೆನಪಿಸಿಕೊಳ್ಳಬಹುದು. ನಾನೊಮ್ಮೆ ಅವರನ್ನು ಕೇಳಿದ್ದೆ—'ನೀವು ಇಷ್ಟೆಲ್ಲಾ ಕಾರ್ಯಭಾರಗಳ ನಡುವೆಯೂ ನಿರಂತರ ಸಾಹಿತ್ಯದ ಅಧ್ಯಯನ ಮತ್ತು ಕೃಷಿಯನ್ನು ಮಾಡುತ್ತೀರಲ್ಲಾ ಇದಕ್ಕೆ ನಿಮಗೆ ಸಮಯ ಸಿಕ್ಕುವುದಾದರೂ ಹೇಗೆ? ' ಎಂದು. ಅದಕ್ಕವರು 'ನಾನು ಪ್ರತಿದಿನ ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದು ಆರು–ಆರೂವರೆಯವರೆಗಿನ ಸಮಯವನ್ನು ಸಾಹಿತ್ಯಕ್ಕಾಗಿಯೇ ವಿನಿಯೋಗಿಸುತ್ತೇನೆ'-ಎಂದರು. ಇಂದಿನ ಎಷ್ಟುಜನ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಾಹಿತ್ಯಾಭಿಮಾನಿಗಳು ಈ ಮಟ್ಟದ ನಿಷ್ಠೆಯಿಟ್ಟುಕೊಂಡಿದ್ದಾರೋ ತಿಳಿಯದು. ಆದರೂ ಅಂತಹವರು ಅಪರೂಪ ಎಂದಷ್ಟೇ ಹೇಳಬಲ್ಲೆ. ಇದು ಶ್ರೀ ನಾಗೆಗೌಡರ ಸಾಹಿತ್ಯ ನಿಷ್ಠೆಯನ್ನು ಕುರಿತಂತೆ ನಾನು ಹೇಳಬಹುದಾದ ಮಾತು.

ಇನ್ನು ವೈಯಕ್ತಿಕವಾಗಿ ಶ್ರೀ ನಾಗೇಗೌಡರ ಬಗೆಗೆ ಹೇಳುವುದಾದರೆ ಅವರ ದಕ್ಷ ಹಾಗೂ ಪ್ರಾಮಾಣಿಕ ವ್ಯಕ್ತಿತ್ವದ ಬಗೆಗೆ ನನಗೆ ಸಂಪೂರ್ಣ ಗೌರವವಿದೆ. ಅನೇಕ ಜನ ಬಡ ವಿದ್ಯಾವಂತರಿಗೆ ಅವರು ಬದುಕಿಗೆ ಬೆಳಕಾಗಿದ್ದಾರೆ. ಬಡತನ ಹಾಗೂ ಬಡ ರೈತರ ಕುಟುಂಬಗಳ ಪರಿಸ್ಥಿತಿಯ ಪೂರ್ಣ ಅರಿವಿಟ್ಟುಕೊಂಡಿರುವ ಇವರಿಂದ ದೇಶದ ಬಡಜನತೆ ನಿರೀಕ್ಷಿಸಬೇಕಾದುದೂ ಬಹಳಷ್ಟಿದೆ. ಇಂತಹ ಮಹಾ ವ್ಯಕ್ತಿಗಳ ಸಾಲಿನಲ್ಲಿ ನಿಲ್ಲಬಲ್ಲ ಶ್ರೀ ನಾಗೇಗೌಡರು ಇನ್ನೂ ಹಲವಾರು ಕಾಲ ನಾಡಿನ–ಸಾಹಿತ್ಯದ ಸೇವೆ ಮಾಡುವಂತಾಗಲಿ, ಅದರ ಪೂರ್ಣ ಪ್ರಯೋಜನ ಕನ್ನಡ ನಾಡಿನ ಜನತೆಗೆ ದೊರೆಯಲಿ ಎಂದು ಹಾರೈಸುತ್ತೇನೆ,

೧೪ ಮಣ್ಣಿನ ಮಗ

ಎಸ್. ಮಲ್ಲಿಕಾರ್ಜುನಯ್ಯ

ಭದ್ರಾವತಿ ಕನ್ನಡ ನಾಡಿನ ಕೈಗಾರಿಕೆಗಳ ಮುಖ್ಯ ಪಟ್ಟಣ. ದಕ್ಷಿಣ ಭಾರತದ ಉಕ್ಕಿನ ಕೇಂದ್ರ. ಭಾರತ ಸ್ವಾತಂತ್ರ್ಯವಾಗುವುದಕ್ಕಿಂತ ಮುಂಚೆಯೇ ಸಾರ್ವಜನಿಕ ಕ್ಷೇತ್ರದಲ್ಲಿ, ಭಾರತರತ್ನ ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಇರುವ ತಾಣ ಇದು. ಪ್ರಾರಂಭದಲ್ಲಿ ಕಾಡಿನಲ್ಲಿ ದೊರೆಯುವ ಸೌದೆ ಭಟ್ಟಿ ಇಳಿಸಿ, ಇದ್ದಿಲು ಮಾಡಿ ಅದನ್ನು ಉಪಯೋಗಿಸಿ ಬೀಡು ಕಬ್ಬಿಣ ಮಾಡುತ್ತಿದ್ದು, (Mysore Iron & Distillation Plant) ಆಮೇಲೆ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಎನ್ನುವ ನಾಮಾಂಕಿತದಲ್ಲಿ ಬದಲಾವಣೆ ಆಗಿ, ಈಗ ಭಾರತದಲ್ಲೇ ದೊಡ್ಡದಾದ ವಿಶೇಷ ಉಕ್ಕಿನ ಉತ್ಪಾದನೆಯಾಗುತ್ತಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಾಗಿ ಸುಮಾರು 13 ಸಾವಿರ ಜನರಿಗೆ ಉದ್ಯೋಗ ಕೊಟ್ಟಿರುವ ನಾಡಿನ ಹೆಮ್ಮೆಯ ನಗರ. ಸಿಮೆಂಟು, ಫೆರೋಸಿಲಿಕಾನ್, ಬೀಡು ಮತ್ತು ಉಕ್ಕಿನ ಎರಕದ ಸಾಮಾನುಗಳು, ಕಾಗದ, ಇತ್ಯಾದಿ ವಸ್ತುಗಳು ಉತ್ಪಾದನೆ ಇಲ್ಲಿ ಆಗುತ್ತಿವೆ.

ಈ ಕೈಗಾರಿಕಾ ನಗರದ ನವೀಕರಣಕ್ಕೆ ಶ್ರೀ ಹೆಚ್.ಎಲ್. ನಾಗೇಗೌಡರ ಕೊಡುಗೆ ಅತ್ಯಂತ ಮಹತ್ವದ್ದು. ಅಂದಿನ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಆಡಳಿತ ವ್ಯವಸ್ಥೆಯಲ್ಲಿ ಡೈರೆಕ್ಟರ್ ಮತ್ತು ವೈಸ್ ಚೇರ್‌ಮನ್ ಮೊದಲಿಗರಾದರೆ, ಕಾರ್ಖಾನೆಯಲ್ಲಿ ಜನರಲ್ ಮ್ಯಾನೇಜರದು ಎರಡನೆಯ ಸ್ಥಾನ. ಸರ್ಕಾರಕ್ಕೂ ಮತ್ತು ಕಂಪನಿಗೂ ಸಂಪರ್ಕ ಕಲ್ಪಿಸುವಲ್ಲಿ ಆಡಳಿತ ಮತ್ತು ಕೈಗಾರಿಕಾ ನಗರದ ಬದಲಾವಣೆಯಲ್ಲಿ ಆಡಳಿತ ಮಂಡಳಿಯ ಕಾರ್ಯದರ್ಶಿಯ ಸ್ಥಾನ ಮೂರನೆಯದಾಗಿತ್ತು. ಇಂತಹ ಜವಾಬ್ದಾರಿಯುತ ಸ್ಥಾನವನ್ನು ಶ್ರೀ ನಾಗೇಗೌಡರು ಅವರ ಮೂರು ವರ್ಷ ಅವಧಿಯಲ್ಲಿ ಅತ್ಯಂತ ದಕ್ಷತೆಯಿಂದ ಯಶಸ್ವಿಯಾಗಿ ನಿರ್ವಹಿಸಿ ಅವರು ಮಾಡಿರುವ ಕೆಲಸಗಳು ಇಂದಿಗೂ ಅವರನ್ನು ನೆನಸುತ್ತವೆ. ಆರಂಭದಲ್ಲಿ ಇಲ್ಲಿ ಸರ್. ಎಮ್. ವಿಶ್ವೇಶ್ವರಯ್ಯನವರು ಸಾಕುತ್ತಿದ್ದ ಬಿಳಿ ಆನೆ ಎಂದಾಗಿ ಹೆಸರಾಗಿತ್ತು. ಅವರ ದೂರದರ್ಶಿತ್ವ, ಆಳವಾದ ಆಸಕ್ತಿ, ಶ್ರದ್ಧೆಯಿಂದಾಗಿ ಅದು ಲಾಭದಾಯಕ ಉದ್ದಿಮೆಯಾಗಿ ಬೆಳೆಯಿತಲ್ಲದೆ ಎರಡನೆಯ ಮಹಾಯುದ್ಧದಲ್ಲಿ ಇಲ್ಲಿ ತಯಾರಾದ ಕೆಲವು ಸಾಮಾನುಗಳು ದೇಶದ ರಕ್ಷಣೆಗೆ ಹೋಗುತ್ತಿದ್ದವು. ಲಾಭದಾಯಕ ಉದ್ದಿಮೆಯಾಗಿಯೂ ಬೆಳೆಯಿತು.

ಸ್ವಾತಂತ್ರ್ಯ ದೊರೆತ ಮೇಲೆ ಕೈಗಾರಿಕೆಗಳ ಬಡಾವಣೆಗೆ ಅನೇಕ ಯೋಜನೆಗಳು ರೂಪಿತಗೊಂಡವು. ಅದರಲ್ಲಿ ಭದ್ರಾವತಿಯೂ ಹೊರತಾಗಿರಲಿಲ್ಲ. ಸಾವಿರಾರು ಹೊಸ ಕಾರ್ಮಿಕರ ನೂರಾರು ಮೇಲ್ವಿಚಾರಕರ ಮತ್ತು ಹತ್ತಾರು ನೂತನ ತರುಣ ಅಧಿಕಾರಿಗಳ ನೇಮಕಗಳು ಆಯಿತು. ಸರ್ಕಾರದ ಹೊಸ ನೀತಿಗೆ ಅನುಗುಣವಾಗಿ ಸ್ಥಳೀಯ ದುರ್ಬಲ ವರ್ಗದ ಜನರೇ ಎಲ್ಲ ಹುದ್ದೆಗಳಿಗೆ ಬಂದದ್ದು ಒಂದು ವಿಶೇಷ. ಹೊಸದಾಗಿ ಬಂದ ಅಧಿಕಾರಿಗಳು ಕಾರ್ಮಿಕರ ಯೋಗಕ್ಷೇಮದ ಕಡೆ ಹೆಚ್ಚಾಗಿ ಗಮನ ಹರಿಸಿದರು. ಸ್ವಾತಂತ್ರ್ಯಪೂರ್ವದ ಮುಂಚೆ ಕಾರ್ಮಿಕರ ಪಾತ್ರ ಜೀತದಾಳುಗಳ ಹಾಗೆ ದುಡಿಯುವುದೇ ಮುಖ್ಯವಾಗಿತ್ತು. ಅದಕ್ಕೆ ಕಾರಣ ಹಳ್ಳಿಯಲ್ಲಿ ಬೆಳೆದು ರೈತಾಪಿ ಜನರ ಮಕ್ಕಳಾಗಿ ಬಂದು ಅಪರ ಊರುಗಳಿಂದ ಬಂದ ಜನರ ಮೇಲಿನ ವ್ಯಾಮೋಹ ಸ್ವಾಭಾವಿಕವಾದದ್ದೇ. ಭದ್ರಾವತಿಯಲ್ಲಿ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರಿಗೆ ಗೃಹನಿರ್ಮಾಣ, ಹೊಸರಸ್ತೆ ಕಾಂಗಾರಿಗಳು ನೀರಾವರಿ ಇತ್ಯಾದಿ ಸೌಲಭ್ಯಗಳು ಪ್ರಾರಂಭವಾದವು. ಪ್ರತಿಯೊಂದು ಕಾಲೋನಿಯಲ್ಲಿ ಭಜನೆ ಮಂದಿರ, ದೇವಸ್ಥಾನ ನಿರ್ಮಾಣಗಳು ಪ್ರಾರಂಭವಾದವು. ಸಾಂಸ್ಕೃತಿಕಕಾರ್ಯಕ್ರಮಗಳಿಗೆ ಹಿಂದೆಂದೂ ಕಾಣದಂತಹ ಪ್ರೋತ್ಸಾಹಗಳು ದೊರೆತವು. ಇದರ ಪರಿಣಾಮ ಕಾರ್ಮಿಕ ವರ್ಗದ ಮೇಲೆ ನೇರವಾಗಿ ಪ್ರಭಾವ ಬೀಳಲಾರಂಭವಾಗಿ, ಅಧಿಕಾರಿಗಳು ತಮ್ಮಗಳ ಹಿತಕ್ಕೆ ಕೆಲಸ ಮಾಡುತ್ತಿದ್ದಾರೆ ಎನ್ನುವ ಅಭಿಪ್ರಾಯ ಸಹಜವಾಗಿಯೆ ಬೆಳೆದಿತ್ತು. ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಟ್ಟು ಕೆಲಸ ಮಾಡಿದವರಲ್ಲಿ ಆಗಿನ ಕಾರ್ಯದರ್ಶಿಯಾಗಿದ್ದ ಶ್ರೀ ಎಂ. ಚಿನ್ನಸ್ವಾಮಿಯವರು ಮೊದಲಿಗರು. ಅವರು ಆರು ವರ್ಷ ಕೆಲಸ ಮಾಡಿ ಬೆಂಗಳೂರಿಗೆ ವರ್ಗವಾಗಿ ಹೋದ ಮೇಲೆ ಶ್ರೀ ಹೆಚ್. ಎಲ್. ನಾಗೇಗೌಡರು ಆಡಳಿತ ಮಂಡಳಿಯ ಕಾರ್ಯದರ್ಶಿಯಾಗಿ ಬಂದರು. ಊರಿನಲ್ಲಿ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಚಟುವಟಿಕೆ ನೋಡಿದವರು ಹೊಸದಾಗಿ ಬಂದ ಅಧಿಕಾರಿ ಎಷ್ಟರ ಮಟ್ಟಿಗೆ ಕಾರ್ಮಿಕವರ್ಗದ ಜನರ ಆಶೋತ್ತರಗಳನ್ನು ಈಡೇರಿಸುತ್ತಾರೋ ಎನ್ನುವ ಶಂಕೆ ಮೂಡಿತ್ತು. ಅವರು ಮೇಲು ನೋಟಕ್ಕೆ ಕೂಡ ಆಕರ್ಷಕ ವ್ಯಕ್ತಿಯಾಗಿ ಕಾಣುತ್ತಿರಲಿಲ್ಲ. ಸಿಡುಕಿನ ಸ್ವಭಾವದ ಅಧಿಕಾರಿಯಾಗಿ, ದರ್ಪದ ವ್ಯಕ್ತಿಯಾಗಿ ಕಾಣುತ್ತಿದ್ದರು. ತಮ್ಮ ಕೆಳಗಡೆ ಕೆಲಸ ಮಾಡುವ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಲ್ಯಾಣ ಕೆಲಸಗಳನ್ನು ಮಾಡುತ್ತಾರೆ ಎನ್ನುವುದನ್ನು ಕಾಲವೇ ತೀರ್ಮಾನ ಮಾಡಬೇಕಾಗಿತ್ತು.

ಕಾರ್ಖಾನೆ ಬಡಾವಣೆ ಕೆಲಸಗಳು ಭರದಿಂದ ಸಾಗಿದ್ದವು. ಸಣ್ಣ ಕಾರ್ಖಾನೆಯಾಗಿದ್ದಾಗ, ಭದ್ರಾನದಿಯ ದಂಡೆಯಮೇಲೆಯೆ ಕೆಲಸಗಾರರಿಗೆ ಅನುಕೂಲವಾಗುವ ಹಾಗೆ, ಸಮೀಪದಲ್ಲಿಯೇ ಕಾರ್ಮಿಕರ ನೂರಾರು ಗುಡಿಸಲುಗಳಿದ್ದ "ಮೇಲೂರುಷೆಡ್ಡು" ಇತ್ತು. ಸಾವಿರಾರು ಜನರು ವಾಸವಾಗಿದ್ದ ಕಾರ್ಮಿಕರ ಬಡಾವಣೆ ಅದು. ಅಲ್ಲಿ

ಸುಮಾರು 30 ವರ್ಷಗಳಿಂದ ಜನರು ಬೀಡುಬಿಟ್ಟಿದ್ದರು. ಕಾರ್ಖಾನೆ ಬಡಾವಣೆಗೆ ಆ ಪ್ರದೇಶ ಬೇಕಾಗಿತ್ತು. ಆಡಳಿತ ಮಂಡಳಿಯವರು ಅಲ್ಲಿನ ಮನೆಗಳನ್ನು, ಜನರನ್ನು ಬೇರೆಡೆಗೆ ಸ್ಥಳಾಂತರಿಸಲು ತೀರ್ಮಾನಮಾಡಿ ಆ ಕಷ್ಟಕರವಾದ ಕೆಲಸವನ್ನು ಹೊಸತಾಗಿ ಬಂದ ಶ್ರೀ ನಾಗೇಗೌಡರಿಗೆ ವಹಿಸಿದರು. ಅದು ಹೊಸದಾಗಿ ಕಟ್ಟಿದ ಮನೆಗಳ ಕಾಲೋನಿ. ಇಲ್ಲಿ ಕಾರ್ಖಾನೆಯಲ್ಲಿ ನೇರವಾಗಿ ಕೆಲಸ ಮಾಡದ ಕಾರ್ಮಿಕರು ನೂರಾರು ಜನರಿದ್ದರು. ಹತ್ತಾರು ವರ್ಷಗಳು ಅಲ್ಲಿ ನೆಲೆಸಿದ್ದವರನ್ನು ಬೇರೆ ಕಡೆ ಹೋಗಿ ಎಂದು ಹೇಳಿದರೆ ಹೋಗೋದಿಲ್ಲ ಎನ್ನುವ ವಿರೋಧ. ಇದೊಂದು ಮಾನವೀಯ ಸಾಮಾಜಿಕ ಸಮಸ್ಯೆಯಾಗಿತ್ತು. ಅದನ್ನು ಸ್ಥಳಾಂತರಿಸುವುದು ಆಡಳಿತ ಮಂಡಳಿಗೆ ಸವಾಲಾಗಿತ್ತು. ಶ್ರೀ ನಾಗೇಗೌಡರ ದಕ್ಷತೆಗೆ, ಚಾಕಚಕ್ಯತೆಗೆ, ವ್ಯವಹಾರ ಚತುರತೆಗೆ ಪರೀಕ್ಷೆ ಸಮಯವು ಆಗಿತ್ತು. ಬುಸುಬುಸುಗುಟ್ಟುವ ನಾಗಪ್ಪ ಏನು ಮಾಡಬಹುದು ಎಂದು ಕುತೂಹಲದಿಂದ ತಮಾಷೆ ನೋಡುವ ಜನರಿದ್ದರು. ಈ ಸವಾಲನ್ನು ಅತ್ಯಂತ ಯಶಸ್ವಿಯಾಗಿ ಶ್ರೀ ನಾಗೇಗೌಡರು ಎದುರಿಸಿ, ಅಲ್ಲಿ ವಾಸವಾಗಿದ್ದ ಜನರಿಗೆ ಉಚಿತವಾಗಿ ಹೊಸ ಊರಿನ ಬಡಾವಣೆ ಅಂಚಿನಲ್ಲಿ ಜಾಗ ಹಂಚಿ, ಒಳ್ಳೆಯ ರಸ್ತೆಗಳನ್ನು ಮಾಡಿಸಿದರು. ಮನೆಗಳನ್ನು ಕಟ್ಟಿಕೊಳ್ಳಲು ಅರಣ್ಯ ಇಲಾಖೆಯಿಂದ ಮರ, ಮುಟ್ಟು, ಬಂಬುಗಳನ್ನೂ ಒದಗಿಸಿದರು. ಹೆಂಚು, ತಗಡುಗಳನ್ನು ಇಲ್ಲಿಂದ ಒದಗಿಸಿದರು. ಸಾಮೂಹಿಕ ಸ್ನಾನಗೃಹಗಳನ್ನು, ಕಕ್ಕಸುಗಳನ್ನು, ಅಂಗಡಿಗಳನ್ನು, ಕುಡಿಯುವ ನೀರಿನ ಸೌಕರ್ಯಗಳನ್ನು ಒಂದು ವರ್ಷದಲ್ಲಿಯೇ ಮಾಡಿ ಮುಗಿಸಿದರು. ಸ್ಥಳಾಂತರಗೊಂಡ ಜನರಿಗೆ ಯಾವ ಕೊರತೆಗಳೂ ಆಗದ ಹಾಗೆ, ಅವರು ಹೇಳಿದ ಕಷ್ಟಗಳನ್ನು ಕೇಳಿ ಅವರುಗಳಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದರು. ಇಂದಿಗೂ ಕೂಡ ಅಲ್ಲಿಯ ಜನ ಸ್ನಾನ ಮಾಡಲು ಬಿಸಿನೀರಿನ ಅನುಕೂಲ ಒದಗಿಸುವ ಸಾಮೂಹಿಕ ಸ್ನಾನ ಗೃಹಗಳು ಉಂಟು. ಸಾಮೂಹಿಕ ಜೀವನ ನಡೆಸಲು ಇದೊಂದು ಪ್ರಯೋಗ ಮಂದಿರವಾಗಿದೆ. ಈ ದೊಡ್ಡ ಸಾಧನೆಯನ್ನು ಮಾಡಿದ್ದು ಶ್ರೀ ಗೌಡರ ಮೇಲೆ ಆಡಳಿತ ಮಂಡಳಿಯಲ್ಲಿ ಹೆಚ್ಚಿನ ವಿಶ್ವಾಸ ಬಂದಿತು. ಜನರಲ್ಲಿ, ಹಿಡಿದ ಕೆಲಸ ಬಿಡುವುದಿಲ್ಲ ಎನ್ನುವ ಗೌರವ ಬಂತು. ಮುಂದೆ ಭದ್ರಾವತಿಯಲ್ಲಿ ಅವರ ಯಶಸ್ಸಿನ ಸರಮಾಲೆ ಪ್ರಾರಂಭವಾಯಿತು.

ಭದ್ರಾವತಿಯಲ್ಲಿ ಹಿಂದಿನ ತಲೆಮಾರಿನವರು ವಾಸವಾಗಿದ್ದು, ಈಗ ಬಂದು ನೋಡಿದರೆ ಆ ಊರೇ ಬದಲಾಗಿರುವುದಾಗಿ ಕಾಣುತ್ತೆ. ಅದರಲ್ಲೂ ಉಕ್ಕಿನ ಪುರದ ಹೊಸನಗರದಲ್ಲಿನ ಉದ್ಯಾನಗಳು ಕಣ್ಣಿಗೊಂದು ಹಬ್ಬವನ್ನುಂಟುಮಾಡುತ್ತವೆ. ಸಾಲಾಗಿ ಬೆಳೆದು ನಿಂತಿರುವ ಹೆಮ್ಮರಗಳು, ಅದರ ಪಕ್ಕದಲ್ಲಿನ ಮಹಾತ್ಮಾ ಗಾಂಧಿ ಪಾರ್ಕ್, ಅದರ ಸನಿಹದಲ್ಲಿಯ ನೆಹ್ರು ಮಕ್ಕಳ ಉದ್ಯಾನ. ಮಕ್ಕಳ ಆಟದ ಉದ್ಯಾನ, ಅತಿಥಿಗೃಹಗಳ ಮುಂಭಾಗದಲ್ಲಿನ ಹೂತೋಟಗಳು ನೋಡಿದವರ ಮೇಲೆಲ್ಲ ಮಹತ್ತರ ಪರಿಣಾಮವನ್ನುಂಟುಮಾಡುತ್ತೆ. ಪಾರ್ಕ್ ಒಳಗಡೆ ಸುಂದರವಾದ ಬ್ಯಾಂಡ್ ಸ್ಟ್ಯಾಂಡ್,

ಪಕ್ಷಿಗಳು ವಾಸಿಸಲು ಸೃಷ್ಟಿಸಿರುವ ನೀರುತೊಟ್ಟಿ, ಬಂದವರು ಕುಳಿತು ಸಂತೋಷಪಡಲು ಕಾಂಕ್ರೀಟ್ ಆಸನಗಳು ಇತ್ಯಾದಿ ಎಲ್ಲಾ ಉಂಟು. ಆದರ ಕಾರಣ ಕರ್ತೃ ಶ್ರೀ ನಾಗೇಗೌಡರು. ಅಲಂಕಾರದ ಗಿಡಮರಗಳ ಸಸಿ ತರಿಸಿ ನೆಟ್ಟು ಬೆಳಸಿ ಪೋಷಿಸಿದವರು ಅವರು. ಪ್ರತಿದಿನ ಬೆಳಿಗ್ಗೆ ಸಂಜೆ ಪ್ರತಿಯೊಂದು ಗಿಡಗಳು ಬೆಳೆಯುತ್ತಿದ್ದನ್ನು ನೋಡಿ ಸಂತೋಷಪಡುತ್ತಿದ್ದರು. ಬೇರೆಯವರು ಕೂಡ ನೂರಾರು ವರ್ಷಗಳು ಆನಂದ ಪಡಲು ನಿರ್ಮಿಸಿದ ಹಸಿರಿನ ತಾಣ ಇದು. ಅಷ್ಟೇ ಅಲ್ಲ ಬಡಾವಣೆಗಳಲ್ಲಿ ಇಂದು ಹುಲಸಾಗಿ ಬೆಳೆದು ನಿಂತಿರುವ ತೆಂಗಿನ ಮರಗಳು ಅವರ ಹೆಸರನ್ನು ಹೇಳುತ್ತಿವೆ. ಯಾರೋ ಹಾಕಿದ ತೆಂಗಿನ ಸಸಿಗಳು ಇಂದು ಬೆಳೆದು ಮರವಾಗಿ ಫಲ ಬಿಡುತ್ತಿವೆ. ಪುಣ್ಯಾತ್ಮರು ಹಾಕಿದ ಮರಗಳ ಫಲವನ್ನು ಉಣ್ಣುವ ಜನರು ಶ್ರೀ ನಾಗೇಗೌಡರ ಹೆಸರು ಮರೆತಿರ ಬಹುದು. ಆದರೆ ಮರಗಳು ಮಾತ್ರ ಮರೆತಿಲ್ಲ. ಸಸಿಗಳನ್ನು ಬೆಳೆಸುವ, ಹೂಗಿಡಗಳ ಅಂಟನ್ನು ಮಾಡಿ ಬೆಳೆಸುವ ಹೂದೋಟ (ನರ್ಸರಿ) ಸಣ್ಣದಾಗಿತ್ತು. ಅದು ಗೌಡರ ಕಾಲದಲ್ಲಿ ದೊಡ್ಡದಾಗಿ ಬೆಳದದ್ದು. ಬೆಂಗಳೂರು, ಮೈಸೂರು ನಗರಗಳನ್ನು ಬಿಟ್ಟರೆ ಬಹುಶಃ ಕನ್ನಡನಾಡಿನಲ್ಲಿ ಭದ್ರಾವತಿಯದೆ ದೊಡ್ಡದು. ಎಷ್ಟು ತರಾವರಿ ಗಿಡಗಳಿವೆ ಎನ್ನುವುದನ್ನು ನೋಡಿಯೇ ಸಂತೋಷ ಪಡಬೇಕು. ಪ್ರತಿವರ್ಷ ಶಿವಮೊಗ್ಗ ಜಿಲ್ಲೆ ಯಲ್ಲಿ ನಡೆಯುವ ಹೂಗಿಡಗಳ ಸ್ಪರ್ಧೆಯಲ್ಲಿ ಕಬ್ಬಿಣ ಕಾರ್ಖಾನೆಗೆ ಅರ್ಧಕ್ಕಿಂತ ಹೆಚ್ಚಾಗಿ ಪಾರಿತೋಷಕಗಳು ಈಗಲೂ ಬರುತ್ತವೆ. ಅವುಗಳನ್ನು ಇಡಲು ಕಪಾಟು ಗಳು ಸಾಲದಾಗಿ ಪ್ರತ್ಯೇಕ ಕೋಣೆಗಳ ನಿರ್ಮಾಣವೆ ಆಗಿವೆ. ಇದಕ್ಕೆಲ್ಲ ಕಾರಣ ಶ್ರೀ ಗೌಡರ ಅಭಿರುಚಿ, ಮೇಲಿನವರ ಒಪ್ಪಿಗೆ ಪಡೆಯಲು ಮನದಟ್ಟಾಗುವಂತೆ ಹೇಳುವ ಚಾಕ ಚಾಕ್ಯತೆ ಕಾರಣ. ಶ್ರೀ ನಾಗೇಗೌಡರು ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದಾಗ, ಲೇಬರ್ ಕಮೀಷನರ್ ಆಗಿದ್ದಾಗ ಭದ್ರಾವತಿಗೆ ಬಂದು ಹೋಗುವ ಅನೇಕ ಸಂದರ್ಭ ಗಳು ಬಂದಿದ್ದವು. ಅವರು ಇಲ್ಲಿ ತಂಗಿದ್ದಾಗಲೆಲ್ಲ, ಸೂರ್ಯನ ಹೊಂಬಿಸಲು ಗಿಡಗಳ ಮೇಲೆ ಬೀಳುವ ಸಮಯಕ್ಕೆ ಸರಿಯಾಗಿ ಅವರು ಉದ್ಯಾನಗಳಿಗೆ ಭೇಟಿ ಕೊಟ್ಟು ಅವರು ಹಾಕಿದ ಸಸಿಗಳು ಎಷ್ಟು ದೊಡ್ಡದಾಗಿ ನಿಂತಿವೆ ? ಅವುಗಳ ಹಾರೈಕೆ ಸರಿಯಾಗಿದೆಯೆ ? ಇಲ್ಲವೆ ಎನ್ನುವುದನ್ನು ಅವರೇ ಖುದ್ದಾಗಿ ನೋಡಿ ಅವುಗಳ ಯೋಗಕ್ಷೇಮವನ್ನು ವಿಚಾರಿಸಿ ಹೋಗುವುದು ವಾಡಿಕೆ.

ಹೊಸ ನಗರದ ನೂರಾರು ರಸ್ತೆಗಳನ್ನು ಗುರುತಿಸುವುದು ಹೇಗೆ ? ಮುಖ್ಯರಸ್ತೆ, ಅಡ್ಡರಸ್ತೆ ಎಂಬುದಾಗಿ ವಿಂಗಡಿಸಿ ಅದರ ಮುಂದೆ ಸಂಖ್ಯಾನುಕ್ರಮವಾಗಿ 1-2-3 ಇತ್ಯಾದಿ ಬರೆಯುವುದು ಸಾಮಾನ್ಯ ಪದ್ಧತಿ. ಊರಿನ ಪ್ರಮುಖರ, ಸೇವೆ ಸಲ್ಲಿಸಿದ ಅಧಿಕಾರಿಗಳ ಹೆಸರಿಟ್ಟರೆ ರಾಜಕೀಯಕ್ಕೆ ಎಡೆ ಕೊಡುತ್ತಿತ್ತು. ಶ್ರೀ ನಾಗೇಗೌಡರ ಅಧಿಕಾರಾವಧಿಯಲ್ಲಿ ವಿವಿಧ ಜಾತಿಯ ಮರಗಳ, ಹೂಗಿಡಗಳ, ಹಣ್ಣುಗಳ ಹೆಸರಿಸಿಟ್ಟು ಹೊಸ ಪ್ರಯೋಗವನ್ನು ಮಾಡಿ ಜನರ ಪ್ರೇಮಾದರಗಳನ್ನು ಗಳಿಸಿದರು.

“ಭದ್ರಾವತಿ” ಎಂದು ಹೆಸರಿಸಿದ ತಕ್ಷಣ ಸಾಮಾನ್ಯ ಜನರ ಗಮನಕ್ಕೆ ಬರುವುದು ಇಲ್ಲಿರುವ ಕೈಗಾರಿಕೆಗಳು ಮತ್ತು ಕಾರ್ಮಿಕವರ್ಗದ ಜನ. ಆದರೆ ಇಲ್ಲಿಯ ಜನರ ಸಾಹಿತ್ಯ ಕಲಾಪ್ರೇಮ ಅನೇಕರಿಗೆ ತಿಳಿಯದು. ಇಲ್ಲಿ ಸುಮಾರು ಇಪ್ಪತ್ತಕ್ಕೂ ಮೇಲ್ಪಟ್ಟು ರಿಜಿಸ್ಟರ್ಡ್ ನಾಟಕ ಸಂಸ್ಥೆಗಳಿದ್ದವು. ಪ್ರತಿವರ್ಷವೂ ಅದ್ದೂರಿಯಿಂದ ಕಾರ್ಖಾನೆ ವಾರ್ಷಿಕೋತ್ಸವ ನಡೆಯುತ್ತಿತ್ತು. ಕಾರ್ಖಾನೆಯವರೆ ಅನೇಕ ರೀತಿಯಲ್ಲಿ ನಾಟಕ ಆಡಲು ಪ್ರತ್ಯೇಕ ನಾಟ್ಯ ಮಂದಿರವೆ ಇತ್ತು. ಅದು ಮುಂದೆ ಸಿನಿಮಾ ಥಿಯೇಟರಾಗಿ ಪರಿವರ್ತನೆಯಾದರೂ ನಾಟಕ ಆಡುವವರಿಗೆ ಮಂದಿರ ಬಿಟ್ಟುಕೊಡಬೇಕೆಂಬ ಶರತ್ತನ್ನು ಸೇರಿಸಲಾಗಿತ್ತು. ಅದರ ಜತೆಗೆ ನೂರಾರು ಜನಸೇರಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಅನುಕೂಲವಾಗುವ ಹಾಗೆ ನ್ಯೂಟವನ್ ಮಂಡ್ಯದಲ್ಲಿ ಒಂದು ಮಂದಿರ ಕಟ್ಟಲಾಯಿತು. ಹಿಂಬದಿಯಲ್ಲಿ ಕರ್ನಾಟಕ ಸಂಘ, ಹಿಂದಿ ಪ್ರೇಮಿ ಮಂಡಳಿ, ತಮಿಳು ಸಂಘಗಳಿಗೆ ಪ್ರತ್ಯೇಕ ಕೋಣೆಗಳಿದ್ದವು. ಬೇರೆ ಬೇರೆ ಬಡಾವಣೆಗಳಲ್ಲಿ ಸಾಮಾನ್ಯ ಜನಕ್ಕೆ ಅನುಕೂಲವಾಗುವಂತೆ ತಮ್ಮ ಗ್ರಂಥಾಲಯಗಳಿದ್ದವು. ಓದುಗರ ಸಂಖ್ಯೆ ಹೆಚ್ಚಾದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಪ್ರಿಯವಾದಂತೆ ಸಣ್ಣ ಮಂದಿರವನ್ನು ಬದಲಾಯಿಸುವ ಕೆಲಸ ಶ್ರೀಗೌಡರ ಕಾಲದಲ್ಲಿ ನಡೆಯಿತು ಬೇರೆ ಸಂಘ ಸಂಸ್ಥೆಗಳಲ್ಲಿದ್ದ ಪುಸ್ತಕಗಳನ್ನು ಒಂದೆಡೆ ಸೇರಿಸಿ ಕೇಂದ್ರೀಕೃತ ಗ್ರಂಥಾಲಯವನ್ನಾಗಿ ಮಾಡಿ ಅದಕ್ಕೆ “ಶಾರದಾ ಮಂದಿರ” ಎನ್ನುವ ಹೊಸ ನಾಮಾಂಕಿತದೊಡನೆ ತುಂಬ ಜನಪ್ರಿಯವಾಯಿತು.

‘ಇಂದಿಗೂ ಕೂಡ ದೊಡ್ಡ ಸಾಂಸ್ಕೃತಿಕ ಕಾರ್ಯಕ್ರಮಗಳು ಇದೇ ಜಾಗದಲ್ಲಿ ನಡೆಯುತ್ತವೆ. ಜ್ಞಾನಪೀಠ ಪ್ರಶಸ್ತಿ ವಿಜೇತರಿಗೆಲ್ಲ ಇದೇ ಮಂದಿರದಲ್ಲಿ ಸನ್ಮಾನ ಮಾಡಲಾಯಿತು. ಸುಮಾರು 800ಜನ ಕುಳಿತುಕೊಳ್ಳುವ ಅವಕಾಶವಿದೆ. ಇವರ ಅವಧಿಯಲ್ಲಿ ತರಿಸಿದ 800 ಕಬ್ಬಿಣದ ಕುರ್ಚಿಗಳು ಮುರಿದರೂ ಹೊಸತು ತರಿಸುವ ಪ್ರಯತ್ನ ಯಾರೂ ಮಾಡಿಲ್ಲ. ಮಂದಿರದ ವೇದಿಕೆಯ ಮೇಲೆ ಕಲಾತ್ಮಕವಾಗಿ ಶ್ರೀ ಭಾಸ್ಕರಾಚಾರ್ಯರು ಬರೆದ ಶಾರದಾ ಚಿತ್ರ, ಸುಸಜ್ಜಿತವಾದ ದೀಪದ, ಶಬ್ದದ ವ್ಯವಸ್ಥೆ, ಮುಂಭಾಗದ ಬಣ್ಣ ಬಣ್ಣಗಳ ದೀಪಗಳು ಎಲ್ಲಾ ಈಗ ಅಲ್ಲಿ ನೋಡುವವರಿಗೆ ಗತ ಕಾಲದ ವೈಭವವನ್ನು ನೆನಪಿಗೆ ತರುತ್ತವೆ.

ಶ್ರೀನಾಗೇಗೌಡರು ರೈತಾಪಿ ಕುಟುಂಬದಲ್ಲಿ ಹುಟ್ಟಿ ಹಳ್ಳಿಯ ವಾತಾವರಣದಲ್ಲಿ ಬೆಳೆದವರು. ಬಡವರ ಕಷ್ಟಕಾರ್ಪಣ್ಯಗಳು ಏನು ಎನ್ನುವುದನ್ನು ಅನುಭವಿಸಿ ಪ್ರೊಬೇಷನರಿ ಅಮಲ್ದಾರರಾಗಿ ಮುಂದೆ ದೊಡ್ಡ ಹುದ್ದೆಗಳಿಗೆ ಏರಿದವರು. ಸಮಾಜದಲ್ಲಿ ವರ್ಗ ಭೇದ ಕಲ್ಪಿಸಿ ಕೆಲವೇ ಜನ ಸುಖ ಜೀವನ ನಡೆಸಲು ನಿರ್ಮಿಸಿದ ಸಮಾಜ ವ್ಯವಸ್ಥೆಯ ಕಡು ವಿರೋಧಿಗಳು ಸಾಮಾಜಿಕ ಅನ್ಯಾಯದ ವಿರುದ್ಧ ಸಿಡಿದೇಳುವ ಪ್ರವೃತ್ತಿ ಅವರದು. ಬಡರೈತರನ್ನೂ, ಹಳ್ಳಿ ಜನರನ್ನು ಕಂಡರೆ ಅವರಿಗೆ ಎಲ್ಲಿಲ್ಲದ ಅನುಕಂಪ ಅವಕಾಶ

ಸಿಕ್ಕಾಗಲೆಲ್ಲ ಆ ದುರ್ಬಲ ವರ್ಗದ ಜನರಿಗೆ ಶಕ್ತಿ ಮೀರಿ ಸೇವೆ ಮಾಡುವ ಹಂಬಲ. ಅದಕ್ಕೆ ಹಿನ್ನೆಲೆ ಮಣ್ಣಿನ ರೈತಾಪಿ ಮಗನಾಗಿ ಹುಟ್ಟಿ ಬೆಳೆದುದೆ ಮುಖ್ಯ ಕಾರಣ.

ಭದ್ರಾವತಿ, ಪ್ರಾರಂಭದಲ್ಲಿ ಮಲೇರಿಯಾ ತೌರುಮನೆಯಾಗಿತ್ತು. ಇಲ್ಲಿ ಬಂದು ಕೆಲಸ ಮಾಡಲು ಜನರೆ ಸಿಕ್ಕುತ್ತಿರಲಿಲ್ಲ. ಕಂಪನಿಯವರು ಜನರಿಗೆ ಮುಂಗಡವಾಗಿ ಹಣ ಕೊಟ್ಟು ಜನರನ್ನು ಕರೆತಂದು ಕೆಲಸ ಮಾಡಿಸುತ್ತಿದ್ದ ಕಾಲ ಅದಾಗಿತ್ತು. ದಕ್ಷಿಣ ಕನ್ನಡ ನಾಡಿನ (ಹಳೇ ಮೈಸೂರು) ಜನ ಸಾಹಸಿಗಳು. ಇದ್ದ ಊರಿನಲ್ಲೇ, ಸ್ವಲ್ಪ ಆದಾಯದಲ್ಲೇ, ತೃಪ್ತಿಗೊಂಡು ಯಾವುದಾದರೂ ಜೀವನೋಪಾಯಕ್ಕೆ ಹೊರಗಡೆ ಹೋದವರಲ್ಲಿ ಮಂಡ್ಯ ಮತ್ತು ಮೈಸೂರು ಜಿಲ್ಲೆಯ ಕೆಲವು ತಾಲೋಕುಗಳವರು. ಅವರಲ್ಲಿಯೂ ನಾಗಮಂಗಲದವರು ಹೆಚ್ಚು. ಉಕ್ಕಿನ ಕಾರ್ಖಾನೆಯಲ್ಲಿ ಅವರ ಸಂಖ್ಯೆ ಗಣನೀಯವಾಗಿತ್ತು. ಆ ಜಿಲ್ಲೆಯವರೆ ಆದ ಶ್ರೀ ನಾಗೇಗೌಡರು ಇಲ್ಲಿಗೆ ದೊಡ್ಡ ಅಧಿಕಾರಿಯಾಗಿ ಬಂದಾಗ ಸ್ವಾಭಾವಿಕವಾಗಿಯೇ ಅವರಿಗೆಲ್ಲ ಸಂತೋಷ ಮತ್ತು ಅವರ ಏಳ್ಗೆ ಹಿತ ರಕ್ಷಣೆ ಮಾಡುತ್ತಾರೆ ಎಂದು ಆಸೆ ಹುಟ್ಟಿದ್ದರಲ್ಲಿ ತಪ್ಪೇನೂ ಇರಲಿಲ್ಲ.

ಕಾರ್ಮಿಕರ ಮುಂದಿನ ಪೀಳಿಗೆಗಳನ್ನು ವಿದ್ಯಾವಂತರನ್ನಾಗಿ ಮಾಡಲು ಶ್ರೀಗೌಡರ ಕಾಲದಲ್ಲಿ ಗಣನೀಯ ಹಾಗು ಪ್ರಗತಿದಾಯಕ ಕಾರ್ಯ ಕ್ರಮಗಳು ರೂಪಗೊಂಡವು. ಹುತ್ತಾ ಕಾಲೋನಿಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಕಟ್ಟಡ, ಮಹಿಳಾ ವಿದ್ಯಾಮಂದಿರ ಆಟದ ಬೈಲು ಪ್ರೌಢಶಾಲೆ ಹಾಸ್ಪೆಟಲ್ ಬಡಾವಣೆ, ಊರಲ್ಲಿ ಕಾಂಕ್ರೀಟು ರಸ್ತೆಗಳು, ಹೊಸ ಅತಿಥಿಗೃಹ ಇತ್ಯಾದಿ ಅನೇಕ ಸಾರ್ವಜನಿಕ ಕಟ್ಟಡಗಳು ಹೊಸ ನಗರಕ್ಕೆ ಶೋಭೆ ತಂದವು.

ಕಾರ್ಖಾನೆಯ ಪ್ರಾರಂಭದೆಸೆಯಲ್ಲಿ ಕಾರ್ಮಿಕರ ಮನೆಗಳಿಗೆ ಪ್ರತ್ಯೇಕವಾಗಿ ಸಾಮೂಹಿಕ ಕಕ್ಕಸ್ಸುಗಳು, ನೀರು ಸರಬರಾಜು ವ್ಯವಸ್ಥೆ ಇತ್ತು. ಇದನ್ನು ತಪ್ಪಿಸಿ, ಪ್ರತಿಯೊಂದು ಮನೆಗೆ ಹೊಂದಿಕೊಂಡಹಾಗೆ ಕಕ್ಕಸ್ಸು, ನಲ್ಲಿಗಳನ್ನು ಕೊಡಲು ಹಂತ ಹಂತವಾಗಿ ವ್ಯವಸ್ಥೆಯಾಯಿತು. ಪ್ರತಿ ವರ್ಷವೂ ಕಾರ್ಮಿಕರ ವಾಸಕ್ಕೆಂದೇ ಕನಿಷ್ಟಪಕ್ಷ ನೂರು ಮನೆಗಳನ್ನು ಕಟ್ಟುವ ಯೋಜನೆ ಕಾರ್ಯರೂಪಕ್ಕೆ ಬಂದಿತು. ಹುತ್ತಾ ಕಾಲೋನಿಯಲ್ಲಿ ಮತ್ತು ನ್ಯೂ ಕಾಲೋನಿಯ ಹಾಸ್ಪೆಟಲ್ ಸಮೀಪದಲ್ಲಿ ಲಕ್ಷಗ್ಯಾಲನ್ನುಗಳ ಹೊಸ ನೀರಿನ ಟ್ಯಾಂಕುಗಳು ರಚಿತವಾದವು. ಹೀಗೆ ಸಾರ್ವಜನಿಕರಿಗೆ ಉಪಯೋಗವಾಗುವ ಹತ್ತಾರು ಕಾಂಗಾರಿಗಳು ನಡೆದವು.

ಕಾರ್ಖಾನೆಗೆ ಸೇರಿದ ಸಾವಿರಾರು ಎಕರೆ ಜಮೀನು ಇತ್ತು. ಅದರ ಗಡಿ ಎಲ್ಲಿದೆ ಎಂದು ಹೇಳುವ ಜನರಿರಲಿಲ್ಲ. ಊರ ಬಡಾವಣೆ ಮಾಡಲು ಇರುವ ಗಡಿ ಗುರುತಿಸಿ, ಹೊಸದಾಗಿ ಜಮೀನು ಕೊಳ್ಳಲು ಒಂದು ನಕ್ಷೆ ಅತಿ ಅವಶ್ಯಕವಾಗಿ ಬೇಕಾಗಿತ್ತು. ಶ್ರೀ ಗೌಡರು ಅದನ್ನು ಅತಿ ಯಶಸ್ವಿಯಾಗಿ ನಿರ್ವಹಿಸಿದರು.ನಿವೃತ್ತ ಸರ್ವೆಯರ್ ಶ್ರೀ ಬಸಪ್ಪ ಎನ್ನುವವರನ್ನು ನೇಮಿಸಿ ಈ ಕೆಲಸವನ್ನು ಕಡಿಮೆ ವೆಚ್ಚದಲ್ಲಿ ಒಂದು ದೊಡ್ಡ ಭೂಪಟ

ಮಾಡಿ ಗಡಿಗಳಿಗೆಲ್ಲ ಗಡಿ ಕಲ್ಲು ಹಾಕಿಸಿದ್ದು ಇವರ ಕಾಲದಲ್ಲೆ. ಆ ನಿವೃತ್ತ ಸರ್ವೆಯರು ಇವರ ಠೀವಿಯನ್ನು ನೋಡಿಯೇ ನಡುಗಿ ಬಿಡುತ್ತಿದ್ದರು. ಕೆಲವು ಅಧಿಕಾರಿಗಳು ಅವರಿಗೆ ಬೇಕಾದ ಸವಲತ್ತು, ಸಿಬ್ಬಂದಿ ಕೊಡಲು ತೊಂದರೆ ಕೊಡುತ್ತಿದ್ದಾಗ ಇವರೇ ನೇರವಾಗಿ ಅವರ ಹಿರಿಯ ಅಧಿಕಾರಿಗಳಿಗೆ "ಅವರಿಗೆ ಕೆಲಸಕ್ಕೆ ಯಾರಾದರು ಸಹಕಾರ ಕೊಡದಿದ್ದರೆ ನಿಮ್ಮ ಭವಿಷ್ಯತ್ತಿಗೆ ತೊಂದರೆಯಾಗುತ್ತೆ" ಎಂದು ಎಚ್ಚರಿಕೆ ಕೊಟ್ಟ ಮಹಾನುಭಾವ. ಸರ್ಕಾರಿ ನಿಯಮಾವಳಿ ಪ್ರಕಾರ ಅವರಿಗೆ ಬೋನಸ್ಸು ಕೊಡುವ ಹಾಗಿರಲಿಲ್ಲ, ಅವರು ಮಾಡುತ್ತಿದ್ದ ಒಳ್ಳೆಯ ಕೆಲಸ ನೋಡಿ ಅವರಿಗೆ ತಿಳಿಸದೆಯೆ ಆಡಳಿತ ಮಂಡಳಿಯಿಂದ ಗೌರವ ಧನ ಕೊಟ್ಟರು.

ದೇವಸ್ಥಾನ ನಿರ್ಮಾಣ, ದೇವರು ಪೂಜೆ ಮಾಡುವ ಹಕ್ಕು ಕೂಡ ಕೆಲವರಿಗೆ ಮೀಸಲಾಗಿಸಿಕೊಂಡಿದ್ದ ಸಮಾಜದಲ್ಲಿ ಸಾಮಾನ್ಯ ಜನ ತಾವೇ ದುಡ್ಡು ಎತ್ತಿ ದೇವಸ್ಥಾನ ಕಟ್ಟಿಸುವುದು, ಭಜನೆ ಮಾಡುವುದು, ಎಲ್ಲರೂ ಮಾಡಬಹುದಾದ ಕೆಲಸ ಎನ್ನುವುದನ್ನು ಭದ್ರಾವತಿಯ ವಿವಿಧ ಬಡಾವಣೆಗಳಲ್ಲಿ ನೋಡಬಹುದು. "ಚಂದ್ರಾಲಯ" "ಕಲ್ಯಾಣ ಮಂದಿರ"ವನ್ನು ಸಾರ್ವಜನಿಕರೆ ನಡೆಸುತ್ತಿದ್ದಾರೆ. ದೇವಸ್ಥಾನದ ಮುಂದೆ ಒಳ್ಳೆಯ ಉದ್ಯಾನ ಕೂಡ ಹುತ್ತಾ ಕಾಲೋನಿಯಲ್ಲಿದೆ. ದೇವಸ್ಥಾನಗಳ ದುರಸ್ತಿಗೆ ಮೇಲ್ವಿಚಾರಣೆ ನಡೆಸಲು ಬೇಕಾದ ಹಣವನ್ನು ಪ್ರತಿ ತಿಂಗಳು ಬರುವ ಹಾಗೆ ಶ್ರೀ ಗೌಡರ ಕಾಲದಲ್ಲಿ ವ್ಯವಸ್ಥಿತವಾಯಿತು. ಜನ್ನಾಪುರದ ಈಶ್ವರ ದೇವಸ್ಥಾನದ ಜೀರ್ಣೋದ್ಧಾರದ ಕೆಲಸ ಇವರ ದಿಟ್ಟತನದ ನಿಲುವಿನಿಂದಾಗಿ ನಡೆಯಿತು.

ಅನೇಕ ರಾಜಕಾರಣಿಗಳು, ಮಂತ್ರಿಗಳು, "ದೊಡ್ಡ ಕಾರ್ಖಾನೆಗಳು ಸುತ್ತ ಮುತ್ತಲಿನ ಹಳ್ಳಿಗಳನ್ನು ದತ್ತು ತೆಗೆದುಕೊಂಡು ಅವುಗಳನ್ನು ಅಭಿವೃದ್ಧಿಗೆ ತರಲು ಸಹಾಯ ಮಾಡಬೇಕು" ಎಂದು ಹೇಳುತ್ತಾರೆ. ಆದರೆ ಈ ಜನರು ಹೇಳುವುದಕ್ಕಿಂತ ಮುಂಚೆಯೆ ಭದ್ರಾವತಿಯಲ್ಲಿ ಈ ಪ್ರಯೋಗ ಸುಮಾರು 30 ವರ್ಷಗಳಿಂದ ನಡೆದಿದೆ. ಈಗ ಬೆಳೆದಿರುವ ಕಾರ್ಖಾನೆ, ಊರು ಇಲ್ಲಿ ಹಿಂದೆ ಇದ್ದ ಆನೇಹಳ್ಳಿ, ಹುತ್ತಾ, ಜನ್ನಾಪುರ, ಬುಳ್ಳಾಪುರ, ಉಜ್ಜನಿಪುರ, ಹಳ್ಳಿಗಳಿಗೆ ಸೇರಿದ ಪ್ರದೇಶಗಳು ಈಗ ಜನ್ನಾಪುರ ಮತ್ತು ಹುತ್ತ ಹಳ್ಳಿಗಳು ಮಾತ್ರ ಇವೆ. ಈಗ ಅವುಗಳು ಹಳ್ಳಿಗಳಲ್ಲ ಪಟ್ಟಣಗಳು. ಅವುಗಳ ಸರ್ವತೋಮುಖವಾದ ಅಭಿವೃದ್ಧಿಯಾಗಲು ಉಕ್ಕಿನ ಮತ್ತು ಕಾಗದ ಕಾರ್ಖಾನೆ, ವಿದ್ಯುತ್ ಮಂಡಳಿ ಬಡಾವಣೆಗಳೆಲ್ಲವನ್ನೂ ಸೇರಿಸಿ "ಹೊಸ ನಗರ ಆಡಳಿತ ಮಂಡಳಿ" ಎನ್ನುವ ಸರ್ಕಾರದಿಂದ ನೇಮಿತವಾದ ಮಂಡಳಿ ಇದೆ. ಅದಕ್ಕೆ ಶ್ರೀ ನಾಗೇಗೌಡರು ಕಾರ್ಯದರ್ಶಿಗಳು. ಇವರ ಕಾಲದಲ್ಲಿ ಆ ಹಳ್ಳಿಗಳು ಸಣ್ಣ ಪಟ್ಟಣಗಳಾಗಿಯೆ ಬೆಳೆದುವು. ಸಾರ್ವಜನಿಕರ ಕುಂದುಕೊರತೆಗಳನ್ನು ಕೇಳಿ ಅವರಿಗೆ ತಕ್ಷಣ ಪರಿಹಾರ ನೀಡಿದವರಿವರು. "ಆಗುತ್ತೆ, ಇಲ್ಲ" ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದರು. ನೋಡುವ, ಪರಿಶೀಲಿಸುವ ಇತ್ಯಾದಿ ವಿಳಂಬ ನೀತಿ

ಇವರಲ್ಲಿರಲಿಲ್ಲ. ಅವರ ನಿರ್ಧಾರಗಳು ತ್ವರಿತವಾಗಿ ಕಾರ್ಯಾಚರಣೆಗೆ ಬರುತ್ತಿದ್ದವು. ಕಾರ್ಖಾನೆ ವತಿಯಿಂದ ಅನೇಕ ಈ ದತ್ತು ಹಳ್ಳಿಗಳ ಕೆಲಸ ಕಾರ್ಯಗಳನ್ನು ಮಾಡಿಸಿ ಕೊಡುತ್ತಿದ್ದರು. ಆ ಹಳ್ಳಿ ಜನರ ಜಮೀನು ವಶಪಡಿಸಿಕೊಳ್ಳಲು ಕಾರ್ಖಾನೆ ಬಲಿಷ್ಠವಾಗಿ ಬೆಳೆಯಬಹುದಾದರೆ, ಅವರಿಗೆ ನಮ್ಮಿಂದ ಸಹಾಯ ಏಕೆ ಮಾಡಬಾರದು ಎನ್ನುವುದು ಅವರ ವಾದ. ಅದು ತರ್ಕಬದ್ಧ ಮತ್ತು ಸಾಮಾಜಿಕ ನ್ಯಾಯಮಾರ್ಗ ಕೂಡ. ಇವರ ಕಾಲದಲ್ಲಿ ಆ ಹಳ್ಳಿಗಳಲ್ಲಿ ಅನೇಕ ಲೋಕೋಪಯೋಗಿ ಕೆಲಸಗಳು ನಡೆದವು.

ಹಿಂದೆ ಕಾರ್ಖಾನೆ ಆಡಳಿತ ಮಂಡಳಿ ಕಾರ್ಯದರ್ಶಿ ಅನೇಕ ರೀತಿಯ ಜವಾಬ್ದಾರಿ ಕೆಲಸಗಳನ್ನು ನಿರ್ವಹಿಸಬೇಕಾಗಿತ್ತು. ಅದರಲ್ಲಿ ಕಾರ್ಖಾನೆಯ ಸಹಕಾರ ಸಂಘಗಳ ಉಸ್ತುವಾರಿ, ಅದರಲ್ಲಿ ಇವರು ಸಂಘದ ಆಡಳಿತ ಮಂಡಳಿಯ ಪರವಾಗಿ ನಾಮಾಂಕಿತ ಡೈರೆಕ್ಟರ್. ಇದರಲ್ಲಿ ಕಾರ್ಮಿಕರಿಗೆ ಪಡಿತರ ಒದಗಿಸುವುದೇ ದೊಡ್ಡ ಕೆಲಸ. ದೊಡ್ಡ ಆಡಳಿತಾಧಿಕಾರಿ, ಪ್ರಾಮಾಣಿಕ ನಿಷ್ಪಕ್ಷಪಾತದ ಅಧಿಕಾರಿ ಇದ್ದರೆ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳೆಲ್ಲವನ್ನು ಮರೆತು ಬೇರೆ ಎಲ್ಲ ಡೈರೆಕ್ಟರುಗಳೂ ಸಹಕಾರ ಕೊಡುತ್ತಾರೆ. ಅದಕ್ಕೆ ಶ್ರೀ ನಾಗೇಗೌಡರೇ ನಿದರ್ಶನ: ಚುನಾವಣೆಯಿಂದ ಬಂದ ಕಾರ್ಮಿಕ ವರ್ಗದವರೂ ಒಳ್ಳೆಯ ಕೆಲಸ ಮಾಡುವುದನ್ನು ನೋಡಿ, ಸಂತೋಷಪಟ್ಟು ಸಹಕಾರ ಕೊಡುತ್ತಿದ್ದರು. ದೊಡ್ಡ ಅಧಿಕಾರಿಯನ್ನು ಮೈಮೇಲೆ ಹಾಕಿಕೊಂಡರೆ ಮುಂದೆ ತಮ್ಮ ಕೆಲಸಗಳು ಆಗದೆ ತೊಂದರೆ ಆಗುತ್ತೆ ಎಂಬ ಹೆದರಿಕೆ ಕೂಡ ಇತ್ತು.

ಶ್ರೀ ನಾಗೇಗೌಡರು ನೋಡಲಿಕ್ಕೆ ಅಂತಹ ಆಕರ್ಷಕ ವ್ಯಕ್ತಿಯೇನಲ್ಲ. ನೋಡುವುದಕ್ಕೆ ಯಾವಾಗಲು ಬಿಗುಮಾನದಲ್ಲೇ ಇರುತ್ತಿದ್ದರು. ಮಿತಭಾಷಿ. ಬಹಳ ಜನರ ಸ್ನೇಹ ಬೆಳೆಸುವ, ಅಗ್ಗದ ಜನಪ್ರಿಯತೆ ಗಳಿಸುವ ಮನೋಭಾವ ಅವರದಲ್ಲ. ಅವರಿಗೆ ಕೆಲವೆ ಮಿತ್ರರು. ಅವರ ವಿಶ್ವಾಸಗಳಿಸಿ ಸ್ನೇಹಿತರಾಗುವುದು ಬಹಳ ಸಾಹಸದ ಕೆಲಸವೆ. ವ್ಯಕ್ತಿಯ ಎಲ್ಲ ಗುಣದೋಷಗಳನ್ನು ಕೂಲಂಕಶವಾಗಿ ನೋಡಿ, ಯೋಗ್ಯತೆಯ ಒರೆಗಲ್ಲಿಗೆ ಹಚ್ಚಿ ಅದರಲ್ಲಿ ಪಾಸಾದವರನ್ನು ಮಾತ್ರ ಅವರು ಹತ್ತಿರ ಸೇರಿಸಿಕೊಳ್ಳುತ್ತಿದ್ದರು. ಅವರ ಹಾಸ್ಯ ಪ್ರವೃತ್ತಿ ಕೆಲವರಿಗೆ ಮಾತ್ರ ಗೊತ್ತು. ದಕ್ಷ ಆಡಳಿತಗಾರರಿಗೆ ಬೇಕಾದ ಗತ್ತುಗಾರಿಕೆಯೆಲ್ಲಾ ಇತ್ತು. ಬಡವರ ಕಷ್ಟ ಕೇಳುವುದರಲ್ಲಿ ಬಹಳ ಅನುಕಂಪ ತೋರುತ್ತಿದ್ದರು. ಅವರ ಅಧಿಕಾರದ ಮಿತಿಗೊಳಪಟ್ಟಂತೆ ಯಾವ ರೀತಿಯ ಸಹಾಯ ಮಾಡಲಿಕ್ಕೂ ಸಿದ್ಧ. ಆದರೆ ಅದು ಸಕಾರಣವಾಗಿರಬೇಕಾಗಿತ್ತು. ಬಳಸುಮಾರ್ಗದ ಪ್ರಭಾವ ಅವರಿಗೆ ನಾಟುತ್ತಿರಲಿಲ್ಲ.

ಭದ್ರಾವತಿಯಲ್ಲಿ ಇದ್ದ ಕಾಲದಲ್ಲಿ ಅವರ ಸಾಹಿತ್ಯ ಕೃತಿಗಳ ರಚನೆ ಆದದ್ದು ಕಡಿಮೆ. ನಾನಾತರಹ ಕೆಲಸಗಳ ಒತ್ತಡವೇ ಅದಕ್ಕೆ ಕಾರಣ. ಬಿಡುವು

ದೊರೆತಾಗಲೆಲ್ಲ ಏನಾದರೂ ಓದುವುದು, ಅವರಿಗೆ ತೋಚಿದ ಕೆಲವು ಭಾವನೆಗಳನ್ನು ಗುರುತು ಹಾಕಿ ಇಡುವುದು ಅವರ ಅಭ್ಯಾಸವಾಗಿತ್ತು. ಗಾಳಿವಿಹಾರವೆಂದರೆ ಅವರಿಗೆ ಬಹಳ ಇಷ್ಟ. ಅದರ ಜತೆಗೆ ಊರಿನ (Inspection) ವೀಕ್ಷಣೆ ಆಗಬೇಕಾಗಿತ್ತು, ಮಳೆಗಾಲದಲ್ಲಿ. ಅವರ ಕೆಳಗಡೆ ಕೆಲಸ ಮಾಡುತ್ತಿದ್ದ ಅಧಿಕಾರಿ ವರ್ಗದವರಿಗೆ, "ಸಂಜೆ ಮನೆಯಲ್ಲಿದ್ದು ಏನು ಮಾಡುತ್ತೀರ ಬನ್ನಿ" ಎಂದು ನಗರದ ಎಲ್ಲಾ ರಸ್ತೆಗಳಲ್ಲೂ ಅವರೊಡನೆ ಓಡಾಟ. ಆ ಕೇರಿಗಳ ವಾತಾವರಣವನ್ನು ಎಷ್ಟರ ಮಟ್ಟಿಗೆ ಉತ್ತಮ ಗೊಳಿಸಬಹುದು, ಹೊಸನಗರದ ಅಭಿವೃದ್ಧಿಗೆ ಏನು ಮಾಡಬಹುದು ಎನ್ನುವ ವಿಷಯವಾಗಿ ವಿಚಾರ ವಿನಿಮಯ, ನಗರಾಭಿವೃದ್ಧಿ ವಿಚಾರವಾಗಿ, ವೈಜ್ಞಾನಿಕವಾಗಿ ತಿಳಿದು ಕಾರ್ಯರೂಪಕ್ಕೆ ತರುವ ಖಯಾಲಿ. ಆ ವಿಚಾರ ಅಧ್ಯಯನ ಮಾಡಲು ಬೇರೆ ಉಕ್ಕಿನ ನಗರಗಳಿಗೆ ಹೋಗಿ ಬಂದಿದ್ದರು. ಪಟ್ಟಣದಲ್ಲಿನ ಮನೆಗಳು ಆಕರ್ಷಕವಾಗಿರಬೇಕೆಂದು, ಖಾಯಂ ಕಟ್ಟಡಗಳ ಪಕ್ಕದಲ್ಲಿನ ತಾತ್ಕಾಲಿಕ ಜೋಪಡಿ ಗಳನ್ನು ಕೆಡಹುವುದರಲ್ಲಿ ಜನರ ವಿರೋಧ ತುಂಬ. ಆಫೀಸರ ಮನೆಯವರು ಅವರ ಮನೆ ಹಿಂದೆ ಷೆಡ್ಡು ಕಟ್ಟಿಕೊಂಡು ದನ ಇತ್ಯಾದಿ ಸಾಕುವುದಾದರೆ ಕೂಲಿಗಾರರ ಮನೆಗಳವರು ಯಾಕೆ ಬೇಡ ? ಸಾಮೂಹಿಕ ದನದ ಕೊಟ್ಟಿಗೆಗಳನ್ನು ಕಟ್ಟಬೇಕೆಂಬ ಪ್ರಯೋಗ ಸಫಲವಾಗದೆ ಸೋತರು. ಅವರು ಸೋತದ್ದು ಇದೊಂದರಲ್ಲಿ ಮಾತ್ರ. ನಮ್ಮ ಅಜ್ಞಾನದಲ್ಲಿರುವ ಸ್ವಾರ್ಥಿ ಸಮಾಜದಲ್ಲಿ ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಬಹಳ ಎಡರು ತೊಡರುಗಳಿದ್ದವು.

ಶ್ರೀ ನಾಗೇಗೌಡರದು ಸರಳ ಜೀವನ. ಆ ವಿಚಾರದಲ್ಲಿ ಎಲ್ಲರಿಗೂ ಮೇಲ್ಪಂಕ್ತಿ ಯಾಗಿದ್ದರು. ಅವರಿಗೆ ಯಾವುದಾದರೂ ವಿಚಾರದಲ್ಲಿ ನ್ಯಾಯ ಸರಿ ಎಂದು ಮನವರಿಕೆಯಾದಲ್ಲಿ ಅವರು ತೆಗೆದುಕೊಂಡ ತೀರ್ಮಾನವನ್ನು ಎಂದೂ ಬದಲಿಸು ವವರಲ್ಲ. ಆ ವಿಚಾರದಲ್ಲಿ ಅವರು ಹಠವಾದಿ ಎಂದರೂ ತಪ್ಪಿಲ್ಲ. ಮಿತವ್ಯಯದಲ್ಲೂ ಅವರು ಆದರ್ಶವಾದಿ. ಎಂತಹ ದೊಡ್ಡ ಹುದ್ದೆಯಲ್ಲಿದ್ದರೂ ಅವರು ಕಾರ್ಡು ಬರೆದು ಮುಗಿಸುವವರು. ಅವರ ದೊಡ್ಡ ಪದವಿ ಯಾವುದಕ್ಕೂ ಅಡ್ಡಿ ಬರುತ್ತಿರಲಿಲ್ಲ.

ಆಡಳಿತಗಾರನಾಗಿ, ಸಾಹಿತಿಯಾಗಿ, ಅಷ್ಟೇ ಅಲ್ಲ, ಸಾಮಾಜಿಕ ಸೇವೆಯನ್ನು ಎಷ್ಟರ ಮಟ್ಟಿಗೆ ಮಾಡಬಹುದು ಎನ್ನುವುದನ್ನು ಭದ್ರಾವತಿಯಲ್ಲಿ ಅವರು ಮಾಡಿರುವ ಕೆಲಸಗಳನ್ನು ನೋಡಿಯೆ ಸಂತೋಷಪಡಬೇಕು. ಸಾರ್ವಜನಿಕ ನೆನಪು ಬಹಳ ಕಡಿಮೆ ಎನ್ನುವುದು ನಿಜ, ಅವರು ಹಾಕಿ ಬೆಳಸಿರುವ ಗಿಡಮರಗಳು, ಕಟ್ಟಿದ ಕಟ್ಟಡಗಳು, ಮಾಡಿದ ರಸ್ತೆಗಳು ಇಂದಿಗೂ ಭದ್ರಾವತಿಯಲ್ಲಿ ಅವರನ್ನು ಸ್ಮರಿಸುತ್ತಿವೆ.

೧೫ | ನಾಗೇಗೌಡರ ಹೆರಗನ ಹಳ್ಳಿ

ಪಿ. ಎಸ್. ಜವರಪ್ಪಗೌಡ

ಶ್ರೀ ಎಚ್. ಎಲ್. ನಾಗೇಗೌಡರ ಊರು ಹೆರಗನಹಳ್ಳಿ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿಗೆ ಸೇರಿದೆ. ಮಂಡ್ಯ ಮತ್ತು ಹಾಸನಜಿಲ್ಲೆಗಳು ಸೇರುವ ಗಡಿಗೆ ಹೊಂದಿದಂತೆ ಸುಪ್ರಸಿದ್ಧ ಶ್ರೀ ಕಾವೇಟಿರಂಗನ ಪದತಲದಲ್ಲಿದೆ ಹೆರಗನಹಳ್ಳಿ. ಹೆರಗನಹಳ್ಳಿ ತೆಂಗಿನ ಕಾಯಿ, ತೆಂಗಿನಕಾಯ ವ್ಯಾಪಾರ ಕ್ಷೇತ್ರದಲ್ಲಿ ಹೆಸರುಗಳಿಸಿವೆ. ತೆಂಗಿನಕಾಯಿ ದಪ್ಪನಾಗಿರುವುದನ್ನು ಎಲ್ಲರೂ ಕಂಡಿದ್ದೇವೆ. ಆದರೆ ಹೆರಗನಹಳ್ಳಿ ಕಾಯಿ ಎಂದರೆ ಈಗಿನ ನಾಗೇಗೌಡರ ದಡೂತಿಯನ್ನು ಹೊಂದಿದ್ದು ಬಹುರುಚಿಯಾಗಿರುವುದರ ಜೊತೆಗೆ ದಡೂತಿ ನಾಗೇಗೌಡರ ಮನದಲ್ಲಿ ಸಾಹಿತ್ಯ, ಕಲೆ ಮನೆಮಾಡಿರುವಂತೆಯೆ ಹೆರಗನಹಳ್ಳಿ ತೆಂಗಿನಕಾಯಿಯ ಒಳಪದರವು ದಪ್ಪಗಿದ್ದು ಬೆಣ್ಣೆಯಂತೆ ಅಧಿಕವಾಗಿದೆ. ಕೆಲವು ಹಳ್ಳಿಗಳ ಹೆಸರಿಂದ ವ್ಯಕ್ತಿಗಳ ಪರಿಚಯ. ಅಂತೆಯೆ ಕೆಲವು ವಿಶಿಷ್ಟ ವ್ಯಕ್ತಿಗಳ ಹುಟ್ಟಿನಿಂದಾಗಿ ವ್ಯಕ್ತಿಯ ಹಳ್ಳಿಗಳ ಪರಿಚಯ ಆಗುವುದುಂಟು. ಉದಾಹರಣೆಗೆ ಕನಕದಾಸರ 'ಕಾಗಿನೆಲೆ', ಕುವೆಂಪು ಅವರ 'ಕುಪ್ಪಳ್ಳಿ', ಲಕ್ಷ್ಮೀಶ ಕವಿಯ 'ದೇವನೂರು, ನಾರಣಪ್ಪನ 'ಗದುಗು', ಬಿಎಂಶ್ರೀ ಅವರ 'ಬೆಳ್ಳೂರು', ಪಂಪನ 'ಬನವಾಸಿ'. ಹೀಗೆ ನಾನಾ ಹಳ್ಳಿಗಳು ಹೆಸರುಗಳಿಸಿರುವಂತೆ, ಕೇವಲ ತೆಂಗಿನ ವ್ಯಾಪಾರ ಕ್ಷೇತ್ರದಲ್ಲಿ ಹೆಸರುಗಳಿಸಿದ್ದ ಹೆರಗನಹಳ್ಳಿ ಶ್ರೀ ನಾಗೇಗೌಡರ ಹೆಸರಿನಿಂದಾಗಿ ಸಾಹಿತ್ಯದಲ್ಲಿಯೂ ಹೆಸರು ಗಳಿಸಿಕೊಂಡಿದೆ.

1938ನೇ ಇಸವಿ ಏಪ್ರಿಲ್‌ನಲ್ಲಿ ಐತಿಹಾಸಿಕ ಮೈಸೂರು ಕಾಂಗ್ರೆಸ್ ರಾಷ್ಟ್ರ ಕೂಟವು ಮದ್ದೂರಿನ ಬಳಿ ಶಿವಪುರದಲ್ಲಿ ಸಮಾವೇಶವಾಗಿತ್ತು. ಅದಾದ ತರುಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಗ್ರಾಮಾಂತರಗಳಲ್ಲಿ ಸುತ್ತಾಡಿ ಜವಾಬ್ದಾರಿ ಸರ್ಕಾರದ ಹೋರಾಟಕ್ಕೆ ಜನರನ್ನು ಸಜ್ಜುಗೊಳಿಸುತ್ತಿದ್ದರು. ನಾನು, ನಾಗಮಂಗಲದ ಶ್ರೀ ಎಂ.ಆರ್.ಎಸ್. ಶಾಸ್ತ್ರಿ ಮತ್ತು ಶ್ರೀ ಎ. ಅಶ್ವತ್ಥನಾರಾಯಣ ಇನ್ನು ಕೆಲವರಿದ್ದ ಕಾಂಗ್ರೆಸ್ ಕಾರ್ಯಕರ್ತರ ತಂಡವೊಂದು ಹೆರಗನಹಳ್ಳಿಯ ದೊಡ್ಡಮನೆಯಲ್ಲಿ ಬಿಡಾರ ಮಾಡಿದ್ದೆವು. ಅಬ್ಕಾರಿ ಕಂಟ್ರಾಕ್ಟ್‌ದಾರರಾಗಿದ್ದ ಶ್ರೀ ಎಚ್.ಎಲ್, ನಾಗೇಗೌಡರ ತಂದೆ ಶ್ರೀ ಲಿಂಗೇಗೌಡರು ಕಾಂಗ್ರೆಸ್ ತತ್ವದ ಬಗ್ಗೆ ಅಭಿಮಾನ ಹೊಂದಿದ್ದು ಕಾರ್ಯಕರ್ತರ ಯೋಗಕ್ಷೇಮವನ್ನು ಚೆನ್ನಾಗಿ ನೋಡುತ್ತಿದ್ದುದರ ಜೊತೆಗೆ ಕಾಂಗ್ರೆಸ್

ಕಾರ್ಯಕ್ರಮಗಳ ಬಗ್ಗೆ ನೆರವನ್ನೂ ನೀಡುತ್ತಿದ್ದರು. ದೊಡ್ಡಮನೆಯಲ್ಲಿ ಹೆಸರಿಗೆ ತಕ್ಕಂತೆ ಹೆಚ್ಚು ಜನರು ಇದ್ದರು. ಪುಣೆ ಲಾ ಕಾಲೇಜಿಗೆ ಅದೇ ವರ್ಷ ಲಾ ಓದಲು ಕಳುಹಿಸಿದ್ದ ಮಗ ಶ್ರೀ ನಾಗೇಗೌಡರ ಓರಿಮೆ, ಆತನಿಗೆ ಕಾಂಗ್ರೆಸ್ಸಿನಲ್ಲಿರುವ ಅಭಿಮಾನ ದೇಶ ಪ್ರೇಮಗಳ ಬಗ್ಗೆ ಆಗಾಗ ನಮ್ಮೊಡನೆ ಮಾತನಾಡುವಾಗ ಮಗನ ಹೆಗ್ಗಳಿಕೆ ಬಗ್ಗೆ ಲಿಂಗೇಗೌಡರು ಹೇಳುತ್ತಿದ್ದರು. ಶ್ರೀ ನಾಗೇಗೌಡರ ಪರಿಚಯ ಅಲ್ಲ, ಅವರ ಮುಖ ಪರಿಚಯವೂ ಸಹ ಇರಲಿಲ್ಲ. ಮಗ ನಾಗೇಗೌಡರು ರಜಕ್ಕೆ ಬರುವರೆಂದೂ, ಆತನು ನಿಮ್ಮ ತಂಡದೊಡನೆ ಕಾಂಗ್ರೆಸ್ ಪ್ರಚಾರಕ್ಕೆ ಸೇರಿ ಅಜುಬಾಜು ಹಳ್ಳಿಗಳ ಜನರ ಬೆಂಬಲ ವನ್ನು ಕಾಂಗ್ರೆಸ್ಸಿಗೆ ದೊರಕಿಸಿಕೊಡುವನೆಂದೂ ಹೇಳುತ್ತಿದ್ದರು ಶ್ರೀ ಲಿಂಗೇಗೌಡರು. ಮಗನು ರಜಕ್ಕೆ ಊರಿಗೆ ಬರುವುದನ್ನು ತಂದೆ ಲಿಂಗೇಗೌಡರು ಕಾಯುತ್ತಿದ್ದಂತೆಯೇ ನಾವು ಸಹ ಕಾತುರದಿಂದ ಶ್ರೀ ನಾಗೇಗೌಡರ ಬರುವನ್ನು ನಿರೀಕ್ಷಿಸುತ್ತಿದ್ದೆವು.

ನಮ್ಮ ತಂಡವು ಹೆರಗನಹಳ್ಳಿಯಲ್ಲಿ ಬಿಡಾರ ಮಾಡಲು ಮತ್ತೊಂದು ಕಾರಣವೂ ಇತ್ತು. ಶ್ರೀ ನಾಗೇಗೌಡರ ತಾಯಿಯ ತೌರೂರು ನಾಗತಿಹಳ್ಳಿ, ಹೆರಗನಹಳ್ಳಿಗೆ ಕೇವಲ ಮೈಲಿ ದೂರ. ಶ್ರೀ ಶನಿಮಹಾತ್ಮೆ ನಾಟಕ ಅಭ್ಯಾಸ ಮಾಡಿದ್ದರು ನಾಗತಿಹಳ್ಳಿಯ ಯುವಕರು. ನಾಟಕ ಕಲಿತಿದ್ದುದರ ಜೊತೆಗೆ ರಂಗಮಂಟಪ ಸಜ್ಜಿಕೆಯನ್ನೂ ಸ್ವಂತ ಏರ್ಪಡಿಸಿಕೊಂಡಿದ್ದರು. ಶ್ರೀ ಶನಿಮಹಾತ್ಮೆ ಯುವಕರ ತಂಡದ ಎಲ್ಲಾ ಪಾತ್ರಧಾರಿ ಗಳೂ ಕಾಂಗ್ರೆಸ್ ಸಂಸ್ಥೆಗೆ ಸೇರಿದ್ದರು. ನಾಗಮಂಗಲ ತಾಲ್ಲೂಕಿನ ಬೆಳ್ಳೂರು, ಬಿಂಡಿಗ ನವಿಲೆ ಹೋಬಳಿಗಳ ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಮತ್ತು ಹಿರಿ ಸಾವೆ ಹೋಬಳಿಯ ನಾನಾ ಗ್ರಾಮಗಳಲ್ಲಿ ಶನಿಮಹಾತ್ಮೆ ನಾಟಕವನ್ನು ಅಭಿನಯಿಸು ತ್ತಿದ್ದರು. ಶನಿಮಹಾತ್ಮೆ ನಾಟಕ ಎಲ್ಲಿ ಅಭಿನಯಿಸಿದರೂ ಆ ವೇದಿಕೆಯಿಂದ ಕಾಂಗ್ರೆಸ್ ಪ್ರಚಾರ ಮಾಡಲು ಅನೇಕೂಲವಿದ್ದು ಹೆರಗನಹಳ್ಳಿಯಲ್ಲಿ ಬಿಡಾರ ಮಾಡಲು ಕಾರಣವಾಗಿತ್ತು. ಹೆರಗನಹಳ್ಳಿ ಸಮೀಪದ ಮಣೆಯೂರು ಹೊನ್ನೇನಹಳ್ಳಿಯಲ್ಲಿ ಶ್ರೀ ಶನಿಮಹಾತ್ಮೆ ನಾಟಕ ನಡೆಯಿತು. ನಮ್ಮ ತಂಡದವರು ನಾಟಕತಂಡದೊಡನೆ ಕಾಂಗ್ರೆಸ್ ಪ್ರಚಾರಕ್ಕೆ ಹೋಗಿದ್ದೆವು. ನಾಟಕ ಮುಗಿದ ಪ್ರಾತಃಕಾಲ ಹೆರಗನಹಳ್ಳಿಗೆ ಹಿಂತಿರುಗಿದೆವು. ಊರಿನ ಪಕ್ಕದಲ್ಲೇ ಹರಿಯುವ ಹೆರಗನಹಳ್ಳಿ ಕೆರೆಯ ದೊಡ್ಡ ಕಾಲುವೆಯಲ್ಲಿ ಪ್ರಾತಃ ವಿಧಿಗಳನ್ನು ಮುಗಿಸಿ ನಾಲೆ ಸಮೀಪಿಸಿದೆವು. ಕಾಸಾಳೆ ಕಡ್ಡಿಯಿಂದ ಹಲ್ಲುಜ್ಜುತ್ತಾ ನಿಂತಿದ್ದ ಇಪ್ಪತ್ತು ವರ್ಷದ ತರುಣನನ್ನು ಕಂಡೆವು. ಹೆಗಲಿನಲ್ಲಿ ಟವಲು, ತುಂಬು ತೋಳಿನ ಶರಟು. ಪಂಚೆ ಉಟ್ಟಿದ್ದು ಕಣ್ಣಿಗೆ ಕನ್ನಡಕಧರಿಸಿದ್ದ ಯುವಕನ ವ್ಯಕ್ತಿತ್ವ ಆಕರ್ಷಕವಾಗಿತ್ತು. ನಮ್ಮ ಮತ್ತು ಅವರ ಪರಿಚಯ ವಿನಿಮಯದ ನಂತರ ಹಿಂದಿನ ರಾತ್ರಿ ನಡೆದ ಕಾಂಗ್ರೆಸ್ ಪ್ರಚಾರದ ಪರಿಚಯ ಮಾಡಿದೆವು, ನಾವು ಎರಡು ಮೂರು ತಿಂಗಳಿಂದಲೂ ನೀವು ರಜದಲ್ಲಿ ಊರಿಗೆ ಬರುವ ನಿರೀಕ್ಷಣೆಯಲ್ಲಿ ಇದ್ದುದಾಗಿ ತಿಳಿಸಿದೆವು,, ಕಾಲುವೆಯ ನೀರಿಗಾಗಿ ಬಂದ ಯುವತಿ

ಯೊಬ್ಬಳು ನಾಲೆ ಪಕ್ಕದಲ್ಲಿ ತನ್ನ ಹರಬಿಯನ್ನಿಟ್ಟು ದಡದ ಮರಳನ್ನು ಎರಡು ಬೆರಳಿನಲ್ಲಿ ಹಿಡಿದು ಹಲ್ಲುಜ್ಜಲು ಹವಣಿಸಿದ್ದಳು. ತರುಣ ನಾಗೇಗೌಡರು ಆಕೆಯನ್ನು ಎಚ್ಚರಿಸಿ "ಮರಳನ್ನು ಬಿಸಾಡು ನಿನ್ನ ಹಲ್ಲಿನ ವಸಡು ಹಾಳಾಗಿ ಹಲ್ಲು ಸಹ ಶಕ್ತಿಯನ್ನು ಕಳೆದುಕೊಳ್ಳುವುವು. ಇಲ್ಲಿ ನೋಡು ನಾನು ಹಲ್ಲುಜ್ಜುತ್ತಿರುವ ಕಾಸಾಳೆ ಕಡ್ಡಿಯಿಂದ ಅಥವಾ ಬೇವಿನ ಕಡ್ಡಿಯಿಂದ ಹಲ್ಲುಜ್ಜು" ಎಂದು ಹೇಳಿದರು. ಯುವತಿಯು ಅಂತೆಯೇ ಕಾಸಾಳೆ ಕಡ್ಡಿಯಿಂದ ಹಲ್ಲುಜ್ಜಿದಳು. ಶ್ರೀ ನಾಗೇಗೌಡರು ಹಲ್ಲುಜ್ಜಿ ಮುಖ ತೊಳೆದು ಮುಗಿಸುವಲ್ಲಿ ನಾಲೆ ನೀರಿಗೆ ಬಂದ ಯುವತಿಯರನ್ನು ಮೊದಲಿನ ಯುವತಿ ಪಿಸುಮಾತಿನಲ್ಲಿ ಎಚ್ಚರಿಸಿ ಕಾಸಾಳೆ ಕಡ್ಡಿಯಿಂದ ಹಲ್ಲುಜ್ಜುವಂತೆ ಮಾಡಿದಳು. ಊರ ಹೆಬ್ಬಾಗಿಲಿಗೆ ಹೊಂದಿದಂತೆ ಚಾವಡಿ, ಅಂದು ಅಲ್ಲಿದ್ದುದು ಕೂಲಿ ಮಠವೋ ಎಂಟು ರೂಪಾಯಿ ಸಂಬಳದ ಗ್ರ್ಯಾಂಟ್ ಸ್ಕೂಲೋ ಜ್ಞಾಪಕವಿಲ್ಲ. ಸ್ಕೂಲ್ ನಡೆಸುತ್ತಿದ್ದ ಉಪಾಧ್ಯಾಯರು ಸಹ ಕಾಂಗ್ರೆಸ್ ಅಭಿಮಾನಿಗಳೇ ಆಗಿದ್ದರು. ಪಾಠಶಾಲೆಗೆ ಹುಡುಗರು ಬರಲುಪಕ್ರಮಿಸಿದ್ದರು. ನಾಲೆ ನೀರಿಗೆ ಹೋಗುವಾಗ ತಾಯಂದಿರು, ಅಕ್ಕತಂಗಿಯರು ಮಕ್ಕಳನ್ನು ಶಾಲೆಗೆ ಕರೆತಂದು ಬಿಟ್ಟು ಹೋಗುತ್ತಿದ್ದರು. ನಾಲೆಯಿಂದ ಬಂದ ನಾವು ಮತ್ತು ನಾಗೇಗೌಡರು ಶಾಲೆ ನಡೆಯುವ ಚಾವಡಿಯಲ್ಲೇ ಕುಳಿತಿದ್ದೆವು. ಮಕ್ಕಳನ್ನು ಕರೆತಂದು ಬಿಡುವ ಹೆಂಗಸರಿಗೆ ಬಟ್ಟೆಯನ್ನು ಚೊಕ್ಕಟಮಾಡಿ ತೊಡಿಸಬೇಕೆಂದೂ, ಮಕ್ಕಳಿಗೆ ಸ್ನಾನ ಮಾಡಿಸಿ ಶುದ್ಧವಾಗಿ ಕರೆತರಬೇಕೆಂದೂ ಉಪದೇಶ ಮಾಡುತ್ತಿದ್ದರು. ಉಪದೇಶ ಮಾಡುತ್ತಿದ್ದುದೇ ಅಲ್ಲ, ಕೊಳಕು ಬಟ್ಟೆಯಲ್ಲಿ ಕರೆತಂದ ಮಗುವನ್ನು ವಾಪಸ್ಸು ಮನೆಗೆ ಕಳುಹಿಸಿ ಚೊಕ್ಕಟವಾದ ಬಟ್ಟೆ ತೊಡಿಸಿ ಕರೆತರುವಂತೆ ಮಾಡಿದ ಸಲಹೆಗೆ ಅಂತೆಯೇ ನಡೆದುಕೊಂಡರು ಮಕ್ಕಳ ತಾಯಂದಿರು. "ನೋಡಿ, ನಾನು ದಿನಬೆಳಗಾದರೆ ನಿಮ್ಮಂತೆಯೇ ಹೇಳುತ್ತೇನಾದರು ನನ್ನ ಮಾತಿಗೆ ಈ ಹಳ್ಳಿ ಹೆಂಗಸರೇನು, ಗಂಡಸರೂ ಮಣಿಯುತ್ತಿರಲಿಲ್ಲ. ಎಷ್ಟಾದರು ವಿದ್ಯಾವಂತರು ಆದರ್ಶ ಪ್ರಾಯರಾದ ತರುಣ ನಾಗೇಗೌಡರ ಮಾತಿಗೆ ಶಾಲೆಯ ಮಕ್ಕಳನ್ನು ಎಷ್ಟು ಚೊಕ್ಕಟಗೊಳಿಸಿ ಕರೆತಂದರು" ಎಂದರು ಉಪಾಧ್ಯಾಯರು. ಈ ಮಾತನ್ನು ನಾನೇಕೆ ಇಲ್ಲಿ ಉಲ್ಲೇಖಿಸುತ್ತಿದ್ದೇನೆಂದರೆ, ಮುಂದೆ ದೊಡ್ಡ ವ್ಯಕ್ತಿ ಆಗುವ ತರುಣ ನಾಗೇಗೌಡರು ತಾನೊಬ್ಬ ಬುದ್ಧಿವಂತನಾಗುವುದಲ್ಲ. ತಾನೊಬ್ಬ ಚೊಕ್ಕಟವಾಗಿ ವಿದ್ಯಾವಂತನಾಗುವುದರಿಂದಲೇ ನನ್ನ ಹಳ್ಳಿ ಮತ್ತು ದೇಶ ಮುಂದೆ ಬರಲಾರದು ಎಂಬುದನ್ನು ಮನಗಂಡಿದ್ದರು. ಹಳ್ಳಿಗರ ಅಂಕುಡೊಂಕುಗಳನ್ನು ತಿದ್ದಿ ತನ್ನ ಪರಿಸರವು ಮುಂದುವರಿದಾಗ ದೇಶವು ಪ್ರಗತಿ ಆಗುವುದೆಂದು ನಂಬಿಕೆಯುಳ್ಳವರಾಗಿದ್ದರು.

ನಾವು ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಮಾಡಬೇಕಾದ ಹೋರಾಟ ಮತ್ತು ಜನರ ಕರ್ತವ್ಯ, ಹೀಗೆ ಭಾಷಣಗಳಲ್ಲಿ ಮಾತನಾಡುತ್ತಿದ್ದೆವು. ಪುಣೆಯ ಸ್ವರಾಜ್ಯ

ಹೋರಾಟದ ರಾಷ್ಟ್ರೀಯ ಮುಖಂಡರ ಪ್ರಭಾವ ಬೀರಿತ್ತು. ಅಲ್ಲಿನ ಕಾಂಗ್ರೆಸ್ ಪ್ರಮುಖರ ಭಾಷಣ ಅವರ ಕಾರ್ಯದಕ್ಷತೆಗಳನ್ನು ಪ್ರತ್ಯಕ್ಷವಾಗಿ ಕಂಡು ಕೇಳಿದ್ದ ನಾಗೇಗೌಡರಿಗೆ ಕಾಂಗ್ರೆಸ್‌ನ ಇತಿಹಾಸ ಮತ್ತು ಅದರ ರಚನಾತ್ಮಕ ಕಾರ್ಯಕ್ರಮಗಳ ಯೋಜನೆಗಳೂ ನಮ್ಮ ತಂಡದವರಿಗಿಂತ ಹೆಚ್ಚಿಗೆ ತಿಳಿದಿದ್ದಿತು.

ಸ್ವತಃ ಖಾದಿದಾರಿಗಳಾಗಿದ್ದ ನಾಗೇಗೌಡರು ತಮ್ಮೂರಿನ ಆಜುಬಾಜು ಆರೇಳು ಹಳ್ಳಿಗಳಲ್ಲಿ ಕಾಂಗ್ರೆಸ್ ಪ್ರಚಾರವನ್ನು ನಮ್ಮ ತಂಡದೊಡಗೂಡಿ ಕೈಗೊಂಡರು. ಮೈಸೂರಿನ ಶ್ರೀಮನ್‌ಮಹರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಮಾಡುವ ವಿಚಾರವಾಗೇ ಮಾತನಾಡುತ್ತಿದ್ದೆವು. ನಾಗೇಗೌಡರು ನಮ್ಮ ತಂಡದೊಡನೆ ಸೇರಿದಮೇಲೆ ಗ್ರಾಮಾಭಿವೃದ್ಧಿ, ಪಾನನಿರೋಧ, ಖಾದಿಬಟ್ಟೆ ಮತ್ತು ಸ್ವದೇಶಿ ಸಾಮಾನುಗಳ ಬಳಕೆಯಿಂದ ಹೇಗೆ ನಮ್ಮ ದುಡಿಮೆಯ ಬಹುಭಾಗ ಹಣ ನಮ್ಮ ನಮ್ಮಲ್ಲೇ ವಿನಿಮಯವಾಗುವುದೆಂಬ ಅರಿವನ್ನು ಜನರಿಗೆ ಹೇಳಿ ಎಚ್ಚರಿಸಿದರು. ಹೆಂಡದ ಬಳಕೆ ಹೆಚ್ಚಾಗಿ ಹರಿಜನರಲ್ಲಿತ್ತು. ದೊಡ್ಡಮನೆ ಲಿಂಗೇಗೌಡರ ಮಗ ನಾಗೇಗೌಡರೆಂದರೆ ಹಳ್ಳಿಗರಿಗೆ ಅಪಾರ ವಾತ್ಸಲ್ಯ. ಪಾನನಿರೋಧ ಪ್ರಚಾರಕ್ಕೆ ಹರಿಜನರ ಕೇರಿಗಳಿಗೆ ಹೋದಾಗ ನಾಗೇಗೌಡರಿಗೆ ಜನರು ಸಂಭ್ರಮದ ಸ್ವಾಗತ ನೀಡಿ ಕರೆದೊಯ್ಯುತ್ತಿದ್ದರು. ಸುರಾಪಾನದಿಂದ ಆಗುವ ತೊಂದರೆಗಳನ್ನು ನಾಗೇಗೌಡರು ಜನರಿಗೆ ಮನದಟ್ಟಾಗುವ ರೀತಿಯಲ್ಲಿ ವಿವರಿಸಿ ಮಾತನಾಡುತ್ತಿದ್ದರು. ಭಾಷಣ ಮುಗಿದಮೇಲೆ ಹರಿಜನ ಕೇರಿಗೆ ಕೇರಿಯೇ ಹೆಂಡಕುಡಿಯುವುದಿಲ್ಲ ಎಂಬ ಪ್ರಮಾಣವಚನ ಸ್ವೀಕರಿಸಿತ್ತು. ಇಂತಹ ಪ್ರಸಂಗಗಳು ನಾಲ್ಕಾರು ಹಳ್ಳಿಗಳ ಹರಿಜನ ಕೇರಿಗಳಲ್ಲಿ ನಡೆದು ಹರಿಜನರು ಪ್ರಮಾಣಮಾಡಿ ಹೆಂಡಕುಡಿವುದನ್ನು ಬಿಟ್ಟರು. ನಾಗೇಗೌಡರ ತಂದೆಯವರೆ ಸ್ವತಃ ಅಬ್ಕಾರಿ ಕಂಟ್ರಾಕ್ಟರಾಗಿದ್ದು ಪಾನನಿರೋಧ ಪ್ರಚಾರದಿಂದ ಪರಿಸ್ಥಿತಿ ಏನಾದೀತೋ ಎಂಬ ಕುತೂಹಲ ನಮಗೆ, ಸಾಧಾರಣವಾಗಿ ನಮ್ಮ ಪ್ರಚಾರ ಕಾರ್ಯಗಳು ಸಂಜೆ ಆದಮೇಲೆ ನಡೆಯುತ್ತಿದ್ದುದು

ಸಂಜೆಯ ಕಾರ್ಯಕ್ರಮಗಳ ವರದಿಯನ್ನು ಬೆಳಗಾದಮೇಲೆ ನಾಗೇಗೌಡರ ತಂದೆಗೆ ವರದಿ ಮಾಡುತ್ತಿದ್ದೆವು. ಪಾನನಿರೋಧದ ಬಗ್ಗೆ ಹರಿಜನರು ಪ್ರಮಾಣ ಕೈಗೊಂಡ ವಿಚಾರವನ್ನು ಸಹ ಶ್ರೀ ಲಿಂಗೇಗೌಡರಿಗೆ ತಿಳಿಸಿದವು. "ಸದ್ಯ ಒಳ್ಳೆಯದು ಮಾಡಿದರು. ಹಾಳುಬಡ್ಡಿ ಮಕ್ಕಳಿಗೆ ಮೊದಲೇ ಬಡತನ, ಜೊತೆಗೆ ಹೆಂಡಕುಡಿದು ಹಾಳಾಗುತ್ತಿದ್ದರು. ಸದ್ಯ ಬದುಕಿದರು" ಎಂದು ಪ್ರಮಾಣ ಮಾಡಿದ ಹರಿಜನರ ಬಗ್ಗೆ ಒಳ್ಳೆಯ ಮಾತು ಗಳನ್ನೇ ಆಡಿದರು. ಕೆಲವರು ಹರಿಜನರು ಪಾನಪ್ರತಿಬಂಧದಿಂದ ಗೌಡರಿಗೆ ನಷ್ಟ ವಾಯಿತೋ ಏನೋ ಗೊತ್ತಾಗಲಿಲ್ಲವಾದರೂ ಗೌಡರು ಆ ಬಡ ಹರಿಜನರ ಬಗ್ಗೆ ಅನುಕಂಪ ವ್ಯಕ್ತಪಡಿಸಿದ್ದನ್ನು ಕಂಡು ನಮಗೆ ಗೌಡರಲ್ಲಿದ್ದ ಮರ್ಯಾದೆ ನೂರ್ಮಡಿ

ಯಾಯಿತು. ಮಗ ನಾಗೇಗೌಡರೊಡನೆ ತಂದೆ ಲಿಂಗೇಗೌಡರು ನೇರವಾಗಿ ವಿಚಾರ ವಿನಿಮಯ ಮಾಡುತ್ತಿದ್ದುದು ಅಷ್ಟಕ್ಕಷ್ಟೇ ಇತ್ತು.

ನನ್ನ ಮಗ ಶೇಕದಾರನಾದರೂ ಆಗಿ ನೌಕರಿ ಮಾಡಬೇಕೆಂಬ ಆಸೆ ತಂದೆ ಲಿಂಗೇಗೌಡರದು. ಈಗಿನ ತಹಸಿಲ್ದಾರಿಕೆಯನ್ನು ಅಂದು ಸುಬೇದಾರ ಅಥವಾ ಅಮಲ್ದಾರರೆಂದು ಕರೆಯುವ ರೂಢಿ. ಚಿನ್ನಪ್ಪ ಎಂಬುವರು ಬಿ.ಎ. ಪಾಡಿ ನಾಗಮಂಗಲ ತಾಲ್ಲೂಕಿನ ಅಮಲ್ದಾರರಾಗಿದ್ದರು. ಕೇವಲ ಬಿ.ಎ. ಮಾಡಿರುವ ಚಿನ್ನಪ್ಪನವರೇ ಅಮಲ್ದಾರರಾಗಿರುವಾಗ ಬಿ. ಎ. ಎಲ್. ಎಲ್. ಬಿ. ಮಾಡಿ ಬರುವ ನಿಮ್ಮ ಮಗ ನಾಗೇಗೌಡರಿಗೆ ಕೇವಲ ಶೇಕದಾರಿಕೆ ಆದರೆ ಸಾಕೇನು ? ಎಂದು ನಾವು ಕೇಳಿದೆವು. ನಮ್ಮೂರ ಅಮಲ್ದಾರರಿಗೆ ಮಿಲಿಟರಿಯಿಂದ ಬಂದ ಹರಾಮಿ ಕುದುರೆ ಕೊಟ್ಟಿದ್ದಾರೆ. ಅದರ ಮೇಲೆ ಸವಾರಿ ಮಾಡುವ ಆ ಅಮಲ್ದಾರರ ಪಾಡು ಯಾರಿಗೂ ಬೇಡವ್ವೋ ಸಧ್ಯ ! ಅಮಲ್ದಾರರು ಹೋಗುವ ಊರಮುಂದೆ 'ಕಹಳೆ' ಕಾಳಯ್ಯ ಕಹಳೆ ಊದಿ ಅಮಲ್ದಾರರು ಊರಿಗೆ ಬರುವರೆಂಬ ಸೂಚನೆಯಿತ್ತು. ಆ ಊರಿನ ಸೇದುವ ಬಾವಿ ಹತ್ತಿರ ಓಡಿ ಯಾರೂ ನೀರು ಸೇದಿ ರಾಟೆಯ ಶಬ್ದವಾಗದಂತೆ ಎಚ್ಚರಿಕೆ ವಹಿಸುತ್ತಾನೆ. ಕಾರಣ ರಾಟೆ ಶಬ್ದ ಕೇಳಿದರೆ ಅಮಲ್ದಾರರ ಕುದುರೆ ಮುಂದಿನ ಕಾಲುಗಳನ್ನು ಮೇಲೆತ್ತಿ ಅಮಲ್ದಾರರನ್ನೇ ಕೆಳಕ್ಕೆ ಕೆಡಹುವುದಂತೆ. ಹೋಗಲಿ ಒಳ್ಳೆ ಕುದುರೆ ದೊರೆತರೂ ದೊರೆಯಬಹುದು. ಹಳ್ಳಿಹುಡುಗರಿಗೆ ಅಮಲ್ದಾರಿಕೆ ಕೊಡುವವರ್‍ಯಾರು ಎನ್ನುತ್ತಿದ್ದರು.

ಈ ಮಧ್ಯೆ ನಾಗೇಗೌಡರು ಕಾಂಗ್ರೆಸ್ ಕಾರ್ಯಕರ್ತರೊಡನೆ ಹಳ್ಳಿಗಳಲ್ಲಿ ಇಂಗ್ಲೀಷರ ವಿರುದ್ಧ ಮಾಡುತ್ತಿದ್ದ ವರದಿ ಅಮಲ್ದಾರರಿಗೆ ತಲುಪಿತು. ಒಮ್ಮೆ ಅಮಲ್ದಾರರು ಹೆರಗನಹಳ್ಳಿಗೆ ಬಂದರು. ದೊಡ್ಡಮನೆ ಮುಂದೆ ಕುದುರೆ ನಿಂತರೆ ಲಿಂಗೇಗೌಡರು ಸ್ವಾಗತಿಸಿ ಜಗಲಿಯಲ್ಲಿ ಕುರ್ಚಿ ಹಾಕಿಸಿ ಎಳನೀರಿನ ಆತಿಥ್ಯ ನೀಡಿದರು. ಶ್ರೀ ನಾಗೇಗೌಡರು ಪುಣೆಗೆ ಪ್ರಯಾಣಮಾಡಿ ಆಗಲೆ ಎರಡು ಮೂರು ದಿನಗಳಾಗಿದ್ದುವು. ಕಾಂಗ್ರೆಸ್ ತಂಡದ ನಮ್ಮನ್ನು ಅಮಲ್ದಾರರಿಗೆ ಪರಿಚಯ ಮಾಡಿದರು. "ಇವರುಗಳ ವಿಚಾರವಾಗೇ ನಿಮ್ಮೊಡನೆ ಮಾತನಾಡಲು ಅವಸರವಾಗಿ ಬಂದೆ. ಎಲ್ಲಿ ? ನಿಮ್ಮ ಮಗ ಲಾ ಓದುತ್ತಿದ್ದಾನಂತೆ" ಎಂದರು ಅಮಲ್ದಾರರು. ಇವರ ಬಗ್ಗೇನು ಅಂತಹ ವಿಚಾರ ಮಾತನಾಡುವುದಿತ್ತು ಎಂದ ಲಿಂಗೇಗೌಡರು ಮಗ ನಾಗೇಗೌಡ ಪುಣೆಗೆ ಮೊನ್ನೆ ಪ್ರಯಾಣ ಮಾಡಿದ ವಿಚಾರವನ್ನು ತಿಳಿಸಿದರು. "ಇಂಗ್ಲೀಷರ ವಿರುದ್ಧ ಪ್ರಚಾರ ಮಾಡುವ ಇವರಿಗೆ ತಾವು ಅವಕಾಶಕೊಟ್ಟಿರುವುದೇ ಅಲ್ಲದೆ ಮುಂದೆ ಬರುವ ಮಗನನ್ನು ಇವರ ಜೊತೆ ಸೇರಿಸಿದ್ದೀರಿ, ಈ ಬಗ್ಗೆ ಸರ್ಕಾರ ಸುಮ್ಮನಿರದು" ಎಂದರು ಅಮಲ್ದಾರರು. "ಏನು ಸ್ವಾಮಿ ನೀವು ಹೇಳುವುದು, ಈ ಹುಡುಗರು ಪ್ರಚಾರಮಾಡುವುದು ಇಲ್ಲಿ ಅದರಿಂದ ಇಂಗ್ಲೀಷರು ಊರುಬಿಡುವರೆ ? ಸರಿಹೋಯ್ತು. ಅಲ್ಲ ಸ್ವಾಮಿ ನಮ್ಮ ಶ್ರೀಮರ್ನ ಮಹರಾಜರ ಬಗ್ಗೆ ಅವರ ಸರ್ಕಾರದ ಬಗ್ಗೆ ಲವಲೇಶವು ವಿರುದ್ಧ

ಮಾತನಾಡರು" ಎಂದು ಸಮಾಧಾನ ಹೇಳಿ ಅಮಲ್ದಾರರನ್ನು ಕಳುಹಿಸಿದರು ಲಿಂಗೇಗೌಡರು.

ಇದಾದ ಸ್ವಲ್ಪ ದಿನದಲ್ಲೇ ಮೈಸೂರಿನಲ್ಲಿ ನಡೆದ ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹದಲ್ಲಿ ನಾಲ್ಕು ವರ್ಷದ ಶಿಕ್ಷೆ ಪಡೆದು ಮೈಸೂರು, ಶಿವಮೊಗ್ಗ ಮತ್ತು ತೀರ್ಥಹಳ್ಳಿ ಕಾರಾಗೃಹಗಳಲ್ಲಿ ಶಿಕ್ಷೆ ಅವಧಿ ಮುಗಿಸಿ ಬಂದು, ನಾಗೇಗೌಡರನ್ನು ಕಾಣಲು ಹೋದೆ. ಶ್ರೀ ನಾಗೇಗೌಡರು ತಮ್ಮ ಎರಡನೇ ವರ್ಷದ ಲಾ ಮುಗಿಸಿ ರಜೆಗೆ ಊರಿಗೆ ಬಂದಿದ್ದರು. ಈ ರಜೆಗೆ ಬರುವಾಗ ತಾನೆ 'ದಾಸಯ್ಯನ ದಸರಾ ದಿವಾಕು' ಎಂಬ ನೀಳ್ಗತೆ ಅಲ್ಲದಿದ್ದರೂ ಚಿಕ್ಕತೆಯಲ್ಲದ ಕತೆಯೊಂದನ್ನು ಬರೆದು ತಂದಿದ್ದರು. ಈ ಕತೆಯೇ ನಾಗೇಗೌಡರ ಸಾಹಿತ್ಯ ಬೇಸಾಯಕ್ಕೆ ಮೂಲವೆಂದು ತೋರುತ್ತದೆ.

ಇದಾದ ಮೇಲೆ ನಾನು "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಚಳುವಳಿಯಿಂದ ಕಾರಾಗೃಹ ಸೇರಿದೆ. ಈ ಅವಧಿಯಲ್ಲಿ ಶ್ರೀ ನಾಗೇಗೌಡರಿಗೆ ಲಾ ಮುಗಿದು ಶ್ರೀಮತಿ ಲಕ್ಷ್ಮಮ್ಮನವರೊಡನೆ ಮದುವೆ ಆಗಿತ್ತು. ಶ್ರೀಮತಿ ಲಕ್ಷ್ಮಮ್ಮನವರು ಶ್ರೀ ನಾಗೇಗೌಡರ ಭಾಗ್ಯದೇವತೆಯಾಗಿ ಏಕ್‌ದಂ ಅಮಲ್ದಾರಿಕೆಯನ್ನು ತಮ್ಮ ಮಡಲಿನಲ್ಲಿ ಕಟ್ಟಿಕೊಂಡೇ ಬಂದಿದ್ದರು. ಹೊಸದಾಗಿ ಜಿಲ್ಲಾ ಕೇಂದ್ರವಾಗಿದ್ದ ಮಂಡ್ಯದಲ್ಲಿ ನಾನು ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಕೆಲಸಮಾಡುತ್ತಿದ್ದೆ. ಶ್ರೀ ನಾಗೇಗೌಡರು ಮಂಡ್ಯದ ತಾಲ್ಲೋಕು ಕಛೇರಿ ಮತ್ತು ವಿ. ಸಿ. ಫಾರಂಗೆ ತರಬೇತಿಗಾಗಿ ಬಂದರು. ದಿನವೂ ನಾನು ಮತ್ತು ಶ್ರೀ ನಾಗೇಗೌಡರು ಸೇರಿ ಏನಾದರೊಂದು ವಿಚಾರದ ಬಗ್ಗೆ ಚರ್ಚಿಸುತ್ತಿದ್ದೆವು. ಅಮಲ್ದಾರರಾಗಿ ಹೋಗುವ ಶ್ರೀ ನಾಗೇಗೌಡರು ಗ್ರಾಮಾಂತರ ಜನರ ಪುರೋಭಿವೃದ್ಧಿಗೆ ಸಹಾಯಕರಾಗುವುದೆಂಬುದೇ ನಮ್ಮ ಚರ್ಚೆಯ ಪ್ರಮುಖ ವಿಷಯಗಳಾಗಿರುತ್ತಿದ್ದುವು. ವಿದ್ಯಾ ಪ್ರಚಾರವೇ ಗ್ರಾಮಾಂತರ ಏಳಿಗೆಗೆ ಬುನಾದಿ ಎಂಬುದು ಶ್ರೀ ನಾಗೇಗೌಡರ ಖಚಿತಾಭಿಪ್ರಾಯವಾಗಿತ್ತು. ಅನಕ್ಷರತೆಯಿಂದಾಗಿ ಹೇಗೆ ಹಳ್ಳಿಗರು ತಿಳಿದವರ ಸುಲಿಗೆಗೆ ಈಡಾಗುತ್ತಾರೆ ಎಂಬುದನ್ನು ಅವರ ಹೆಸರಾಂತ 'ನನ್ನೂರು' ಪುಸ್ತಕದಲ್ಲಿ ವಿವರಿಸಿದ್ದಾರೆ. ವಿದ್ಯಾ ಪ್ರಚಾರದ ಬಗ್ಗೆ ಶ್ರೀ ನಾಗೇಗೌಡರು ನಡೆಸುತ್ತಿದ್ದ ವಿಚಾರ ವಿನಿಮಯದಿಂದಾಗಿ ಮುಂದೆ ನಾನು ರಾಜ್ಯದ ವಯಸ್ಕರ ಶಿಕ್ಷಣ ಸಮಿತಿ ಕಾರ್ಯಕರ್ತನಾಗಿ ಸೇರಿ ಕೊನೆಗೆ ಆ ಸಂಸ್ಥೆಯ ಅಧ್ಯಕ್ಷನಾಗಿ ಶ್ರಮಿಸುವಂತಾಗಲು ಶ್ರೀ ನಾಗೇಗೌಡರೂ ಸ್ವಲ್ಪ ಮಟ್ಟಿಗೆ ಕಾರಣ

ಶ್ರೀ ನಾಗೇಗೌಡರು ಯಾವುದೇ ವಿಷಯದಲ್ಲೂ ವಿಚಾರಮಾಡಿ ಮಾತನಾಡುವರು ಎಂಬ ಬಗ್ಗೆ ಪ್ರಕಟಣೆಯೊಂದನ್ನು ಪ್ರಸ್ತಾಪ ಮಾಡುತ್ತೇನೆ. ಈಗಿನ ರಾಜ್ಯ ಸಭಾ ಸದಸ್ಯರಾದ ಶ್ರೀ ಕೆ. ಎಸ್. ಮಲ್ಲೇಗೌಡರು (Rural Development officer) ಗ್ರಾಮಾಭಿವೃದ್ಧಿ ಅಧಿಕಾರಿಗಳಾಗಿದ್ದರು. ಮಂಡ್ಯದ ಬಳಿಯ ಹೊಳಲಿನ ಕೃತಕ ಗೊಬ್ಬರವನ್ನು ಬಳಸುವ ಬಗ್ಗೆ ರೈತರಲ್ಲಿ ಪ್ರಚಾರ ಮಾಡಲು

ಸಭೆ ಕರೆಯಲಾಗಿತ್ತು. ಶ್ರೀ ನಾಗೇಗೌಡರು ವಿ. ಸಿ. ಫಾರಂನಿಂದ ಹೊಳಲು ಮಾರ್ಗವಾಗಿ ಮಂಡ್ಯಕ್ಕೆ ಬರುತ್ತಿದ್ದರು. ಶ್ರೀ ನಾಗೇಗೌಡರನ್ನು ನಿಲ್ಲಿಸಿ ಮಲ್ಲೇಗೌಡರು ಸಭೆಗೆ ಕರೆತಂದರು. ಶ್ರೀ ನಾಗೇಗೌಡರು ಕೃತಕ ಗೊಬ್ಬರವನ್ನು ಬಳಸುವುದರಿಂದ ರೈತರ ಆರ್ಥಿಕಾಭಿವೃದ್ಧಿಯಾಗುವುದು. ಈ ಬಗ್ಗೆ ಕಡ್ಡಾಯವಾಗಿ ಕೃತಕ ಗೊಬ್ಬರ ಬಳಸುವ ಬಗ್ಗೆ ಆಲೋಚನೆ ಮಾಡಲು ಆಡಳಿತಗಾರರಿಗೆ ಕರೆಯಿತ್ತರು. 'ಜನವಾಣಿ' ದೈನಿಕ ಪ್ರತಿನಿಧಿಯಾಗಿ ಸಭೆಯಲ್ಲಿ ಭಾಗವಹಿಸಿದ್ದ ನಾನು ಪತ್ರಿಕೆಗೆ ವಿವರವಾಗಿ ವರದಿಮಾಡಿದೆ. ಆ ವರದಿಯು ಸರ್ಕಾರದ ಗಮನ ಸೆಳೆಯಿತು. ಕಡ್ಡಾಯ ಕೃತಕ ಗೊಬ್ಬರ ಬಳಸುವ ಯೋಜನೆಯೊಂದನ್ನು ತಯಾರಿಸಿ ರೇಡಿಯೋ ಮೂಲಕ ಪ್ರಚಾರ ಭಾಷಣ ಮಾಡಲು ಶ್ರೀ ಮಲ್ಲೇಗೌಡರಿಗೆ ಸರ್ಕಾರದಿಂದ ಕರೆಬಂತು. ಶ್ರೀ ಮಲ್ಲೆಗೌಡರು ಮತ್ತು ವ್ಯವಸಾಯಾಧಿಕಾರಿಗಳು ಸೇರಿಯೋಜನೆಯೊಂದನ್ನು ತಯಾರಿಸಿ ಈ ಯೋಜನೆಯ ಪ್ರಚಾರ ಭಾಷಣವನ್ನು ಶ್ರೀ ಮಲ್ಲೇಗೌಡರು ನೆರವೇರಿಸಿದರು. ಈ ಪ್ರಚಾರದಿಂದ ಪ್ರಭಾವಿತರಾದ ವಿ. ಸಿ. ನಾಲಾ ಬಯಲ ರೈತರು ಕೃತಕ ಗೊಬ್ಬರದ ಬಳಕೆಯನ್ನು ತೀವ್ರತರವಾಗಿ ಕೈಗೊಂಡಂ ಹಳೇ ಮೈಸೂರು ಭಾಗದಲ್ಲಿ ಖರ್ಚಾಗುವ ರಸಾಯನಿಕ ಕೃತಕ ಗೊಬ್ಬರದಲ್ಲಿ ಹೆಚ್ಚು ಭಾಗ ಗೊಬ್ಬರವನ್ನು ಈ ನಾಲಾ ಬಯಲೊಂದರಲ್ಲೇ ರೈತರು ಬಳಸುತ್ತಿದ್ದುದಕ್ಕೆ ಶ್ರೀ ನಾಗೇಗೌಡರು ಹೊಳಲಿನಲ್ಲಿ ಮಾಡಿದ ಭಾಷಣ ಬುನಾದಿಯಾಯಿತು.

ಶ್ರೀ ನಾಗೇಗೌಡರು ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿ, ಭದ್ರಾವತಿ ಕಬ್ಬಿಣ ಕಾರ್ಖಾನೆ ಕಾರ್ಯದರ್ಶಿಗಳಾಗಿ, ಚಿಕ್ಕಮಗಳೂರು ಮತ್ತು ಮಂಗಳೂರುಗಳಲ್ಲಿ ಜಿಲ್ಲಾಧಿಕಾರಿಗಳಾಗಿ, ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಆಡಳಿತಾಧಿಕಾರಿಗಳಾಗಿ, ಕಾರ್ಮಿಕಶಾಖೆ ಕಮಿಷನರಾಗಿ ಸೇವೆ ಸಲ್ಲಿಸಿ ಸಾಹಿತಿಗಳಾಗಿ ನಾಡಿನಲ್ಲಿ ಕೀರ್ತಿ ಪತಾಕೆ ಹಾರಿಸಿದರು.

ಶ್ರೀ ನಾಗೇಗೌಡರು ಪ್ರತಿಭೆಗೆ ಬೆಲೆಯಿತ್ತು ಒಬ್ಬನಲ್ಲಿರುವ ಪ್ರತಿಭೆಯು ನಾಡಿನ ಸ್ವತ್ತು. ಆ ಪ್ರತಿಭೆಯನ್ನು ಕಡೆಗಾಣುವುದು ನಾಡಿನ ಏಳ್ಗೆಗೆ ಹಾಕುವ ಪೆಟ್ಟು ಎಂಬುದನ್ನು ಮನಗಂಡವರು. ಇಂತಹ ಪ್ರಕರಣವೊಂದನ್ನು, ಮಾನ್ಯ ಓದುಗರ ಗಮನಕ್ಕೆ ತರಬಯಸುತ್ತೇನೆ.

ನನ್ನ ಆಳಿಯಂದಿರಲ್ಲೊಬ್ಬರು Sales Tax Officer ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ನೌಕರಿ ದೊರಕಿಸಿ ಉಪಕರಿಸುವಂತೆ ಶ್ರೀ ಗೌಡರಲ್ಲಿ ನಾನು ಶಿಫಾರ್ಸು ಮಾಡಿದೆ. ಸಂದರ್ಶನಾನಂತರ ಅರ್ಜಿದಾರರ ಆಯ್ಕೆಯ ಕಾಲಕ್ಕೆ ನಾಗೇಗೌಡರು ದೂರವಾಣಿಯಿಂದ ನನಗೆ ಕರೆಯಿತ್ತು ಬರಮಾಡಿಕೊಂಡರು. "ಸಾಹಿತ್ಯ ಕ್ಷೇತ್ರದ ಮಿತ್ರರೊಬ್ಬರು ಅವರ ಅಳಿಯನಿಗೆ ನೌಕರಿ ದೊರಕಿಸಿ ಕೊಡಲಿಲ್ಲವೆಂಬ ಮುನಿಸಿನಿಂದ ದೂರವಾದರು. ನನ್ನ ಆತ್ಮೀಯರಲ್ಲಿ ನೀವೊಬ್ಬರಿದ್ದು

ಅಳಿಯನ ಆಯ್ಕೆ ಆಗಲಿಲ್ಲವೆಂದು ಅಸಮಾಧಾನದಿಂದ ನನ್ನಿಂದ ದೂರವಾದೀರೆಂಬ ಅನುಮಾನದಿಂದ ಆಯ್ಕೆಗೆ ಇರುವ ತೊಡಕುಗಳನ್ನು ನಿಮ್ಮೊಡನೆ ಮಾತನಾಡಲು ಕರೆಸಿ ಕೊಂಡಿದ್ದೇನೆ. ನಿಮ್ಮ ಅಳಿಯನಿಗಿಂತ ಅಧಿಕ ಅಂಕ ಪಡೆದ ಹತ್ತಾರು ಮಂದಿ ಪ್ರತಿಭಾವಂತರು ಅವರ ಮೇಲಿದ್ದಾರೆ. ಒಬ್ಬರಿಗೆ ಅನುಕೂಲ ಮಾಡಲು ಪ್ರತಿಭಾ ವಂತರನ್ನು ತುಳಿಯುವುದು ನಾಡಿನ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಅಸಮಾಧಾನ ಮಾಡಿಕೊಳ್ಳಬೇಡಿ" ಎಂದು ತಿಳಿಸಿದರು. ಆತ್ಮೀಯರೊಬ್ಬರ ಅಳಿಯಂದಿರಿಗೆ ನೌಕರಿ ದೊರೆಯಲಿಲ್ಲವೆಂಬ ಕೊರಗು ಶ್ರೀ ನಾಗೇಗೌಡರಿಗೆ. ಸ್ವತಃ ತಾವೇ ಒಂದೆರಡು ಬ್ಯಾಂಕುಗಳ ಅಧಿಕಾರ ವರ್ಗದವರಿಗೆ ಕಾಗದ ಬರೆದು ನನ್ನ ಅಳಿಯಂದಿರಿಗೆ ನೌಕರಿ ದೊರಕಿಸಿಕೊಡುವ ಬಗ್ಗೆ ಪ್ರಯತ್ನಿಸಿದರು.

ಶ್ರಿ ಎಚ್. ಎಲ್. ನಾಗೇಗೌಡರು ನಿವೃತ್ತಿಯೇ ಇಲ್ಲದ ಸಾಹಿತ್ಯ ಬೇಸಾಯದಲ್ಲಿ ಮುನ್ನಡೆಯುತ್ತಿದ್ದು, ಅಧಿಕಾರಿಗಳಾಗಿ ಆಡಳಿತ ನಡೆಸಿ ನಿವೃತ್ತರಾದರು. ಜನಪ್ರಿಯತೆ ಯನ್ನು ಗಳಿಸಿ ಪ್ರೀತ್ಯಾದರಗಳಿಗೆ ಪಾತ್ರರಾದರು. ಶ್ರೀಯುತ ಗೌಡರು ಹುಟ್ಟಿ ಬೆಳೆದ ಹೆರಗನ ಹಳ್ಳಿಯು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿಗೆ ಸೇರಿದೆ. ಮಂಡ್ಯ ಮತ್ತು ಹಾಸನ ಜಿಲ್ಲೆಗಳ ಗಡಿಯಲ್ಲಿದೆ. ಪುರಾಣ ಪ್ರಸಿದ್ಧ ಶ್ರೀ ಕಾವೇಟಿ ರಂಗನ ಪದತಲದಲ್ಲಿ ಆತನ ಕೃಪಾಶ್ರಯದ ಆಶೀರ್ವಾದ ಬಲದಿಂದ ಬಾಳನ್ನು ನಡೆಸುತ್ತಾ ಬಂದಿದೆ. ಹೆರಗನಹಳ್ಳಿಯ ಶ್ರಿ ನಾಗೇಗೌಡರಂತಹ ಪ್ರಸಿದ್ಧ ಸಾಹಿತಿಗಳಿಗೆ ಜನ್ಮವಿತ್ತ ನಾಗಮಂಗಲದ ನೆಲದ ಗುಣವನ್ನು ಕೊಂಚ ತಿಳಿಯುವುದು ಅಗತ್ಯವೆನಿಸುತ್ತದೆ.

ನಾಗಮಂಗಲ ಕಲೆ ಮತ್ತು ಸಾಹಿತ್ಯಗಳಿಗೆ ಹದವಾದ ನೆಲ. ಈ ನೆಲದ ಮಣ್ಣಿನಿಂದ ಹುಟ್ಟಿಬಂದ ಕವಿಗಳು, ಕಲಾವಿದರು, ರಾಜಕಾರಣಿಗಳು, ಲೋಕವಿಖ್ಯಾತರಾಗಿದ್ದಾರೆ. ನೃತ್ಯ ಗೀತ ಶಾಸ್ತ್ರಗಳಲ್ಲಿ ಎಂದೆಂದಿಗೂ ಜನಮನದಿಂದ ಅಳಿಸಲಾರದಂತಹ ಖ್ಯಾತಿಗಳಿಸಿದ ಹೊಯ್ಸಳರಾಣಿಯರು ಮೂವರು ಹೆರಗನಹಳ್ಳಿ ಪಕ್ಕದ ಅಳಿಯಸಂದ್ರದವರು. ಜನಪದದಲ್ಲಿ ಕೀರ್ತಿಪ್ರಾಯವಾದ ಶ್ರೀ ಆದಿಚುಂಚನಗಿರಿಯ ಸಿದ್ಧಸಿಂಹಾಸನಪೀಠದ ಪುಣ್ಯಭೂಮಿ ಇದು. ಲೋಕ ವಿಖ್ಯಾತ ಕಲಾಪೂರ್ಣ ದೇವಾಲಯಗಳ ನೆಲವೀಡು ನಾಗಮಂಗಲ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಪ್ರಜಾಪ್ರತಿನಿಧಿ ಸಭೆಯಲ್ಲಿ ನಾಗಮಂಗಲ ಕ್ಷೇತ್ರದ ಪ್ರತಿನಿಧಿ ಎಂ. ಶಂಕರಲಿಂಗೇಗೌಡರು "ಸ್ವಾಮಿ, ಗುಡ್‌ಹೋಪ್ ಭೂಶಿರಕ್ಕೆ ಬಂದ ವಾಸ್ಕೋಡಿಗಾಮನನ್ನು ನಾಗಮಂಗಲದವನೊಬ್ಬ ಸ್ವಾಗತಿಸಿ ಹಾಲು ಕೊಟ್ಟು ಸತ್ಕರಿಸಿದಂತಹ ಭೂಪ" ಎಂದು ಹೇಳಿದರು.

ಒಮ್ಮೆ ಶ್ರೀಪಲ್ಲಾರೆಡ್ಡಿಯವರು "ಮೈಸೂರು ಸಿಟಿ ಮುನಿಸಿಪಾಲಿಟಿ ಖಾಸಗಿ ಚುನಾಯಿತ ಮೊದಲ ಅಧ್ಯಕ್ಷ ಟಿ. ಮರಿಯಪ್ಪ ನಾಗಮಂಗಲದವರು. ಬೆಂಗಳೂರು ಸಿಟಿ ಮುನಿಸಿಪಾಲಿಟಿ ಮೊದಲ ಖಾಸಗಿ ಅಧ್ಯಕ್ಷ ಗರುಡಾಚಾರ್ ನಾಗಮಂಗಲದವರು," ಎಂದು ಮಾತನಾಡುತ್ತಿದ್ದಾಗ "ಹೊಸದಾಗಿ ನಿರ್ಮಿತವಾದ ಮಂಡ್ಯ ಜಿಲ್ಲಾ ಬೋರ್ಡ್

ಪ್ರಥಮ ಅಧ್ಯಕ್ಷರಾರು ಎಂದ ಧ್ವನಿಗೆ ?" ಶ್ರೀ ಶಂಕರಲಿಂಗೇಗೌಡರು "ಶ್ರೀ ಚಿಕ್ಕ ಲಿಂಗಯ್ಯ ಅವರು ಮಂಡ್ಯದವರಾದರೂ ನಾಗಮಂಗಲದ ಅಳಿಯಂದಿರು" ಎಂದು ಉತ್ತರಿಸಿ ಪ್ರಶ್ನಿಸಿದವರ ಬಾಯಿ ಮುಚ್ಚಿಸಿದರು. ಮುಂದುವರಿದು "ಸಾಹಿತ್ಯ ಕ್ಷೇತ್ರದ ಧ್ರುವ ತಾರೆಯಂತಹ ಖ್ಯಾತ ಬಿ. ವೆಂಕಟಾಚಾರ್ಯರು ನಾಗ ಮಂಗಲದವರು. ಕನ್ನಡದ ಕಣ್ವರೆಂದು ಪ್ರಸಿದ್ಧರಾದ ಬಿ. ಎಂ. ಶ್ರೀಕಂಠಯ್ಯ ಅವರು ನಾಗಮಂಗಲದವರು." ಮುಂತಾಗಿ ನಾನಾ ಉದಾಹರಣೆಗಳ ಮೂಲಕ ನಾಗಮಂಗಲದ ಮಣ್ಣಿನ ಫಲವತ್ತತೆಯನ್ನು ಪ್ರಶಂಸಿಸಿ ಮಾತನಾಡಿ, ನಾಗಮಂಗಲದ ಬಡತನ ನೀಗಲು ಸರ್ವ ವಿಧದ ಸಹಾಯ ಸೌಲಭ್ಯ ಕಲ್ಪಿಸಿ ತನ್ಮೂಖೇನ ನಾಗಮಂಗಲದ ಮಣ್ಣಿನ ಮಕ್ಕಳ ಪ್ರತಿಭೆಗೆ ಸರ್ವತೋಮುಖ ಅಭಿವೃದ್ಧಿಗೆ, ದಾರಿಮಾಡಿಕೊಡಿ" ಎಂದು ಪ್ರಜಾಪ್ರತಿನಿಧಿ ಸಭೆಯ ಅಂದಿನ ಅಧ್ಯಕ್ಷತೆ ವಹಿಸಿದ್ದ ರೆವಿನ್ಯೂ ಸಚಿವರಾದ ಪುಲ್ಲಾರೆಡ್ಡಿಯವರನ್ನು ಉದ್ದೇಶಿಸಿ ಮಾತನಾಡಿದರು.

ಇತ್ತೀಚಿನ ವರ್ಷಗಳಲ್ಲಿ ಶ್ರೀ ಆದಿ ಚುಂಚನಗಿರಿಕ್ಷೇತ್ರಕ್ಕೆ ಹೊಂದಿದಂತಿರುವ ಅಂಬಲ ಜೀರಹಳ್ಳಿ. ಡಾ. ಜೆ. ಎಸ್. ಪರಮಶಿವಯ್ಯ (ಜೀಶಂಪ) ಅವರು ಜನಪದ ಸಾಹಿತ್ಯಕ್ಷೇತ್ರದಲ್ಲಿ ಆಳವಾದ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದು ಸಾಹಿತ್ಯ ಕ್ಷೇತ್ರದಲ್ಲಿಯೂ ಹೆಸರಾಗಿದ್ದಾರೆ, ನಾಗಮಂಗಲ ತಾಲ್ಲೂಕಿನ ಪಶ್ಚಿಮ ಗಡಿಯಲ್ಲಿ ಹಾಸನ ಜಿಲ್ಲೆಗೆ ಹೊಂದಿದಂತಿರುವ ಹನುಮನಹಳ್ಳಿಯ ಹ .ಕ. ರಾಜೇಗೌಡರು ಆಡುಮುಟ್ಟದ ಸೊಪ್ಪಿಲ್ಲ ಎಂಬಂತೆ ಸಾಹಿತ್ಯಕ್ಷೇತ್ರದ ನಾನಾ ಮುಖಗಳ ಸಂಶೋಧಕರಾಗಿ ಸಾಹಿತ್ಯ ಸೇವೆ ಸಲ್ಲಿಸುತ್ತಿದ್ದಾರೆ. ಹೆರಗನಹಳ್ಳಿ ದೊಡ್ಡ ಮನೆಯ ಎಚ್.ಎಲ್. ಕೇಶವಮೂರ್ತಿ ಅವರು ತಮ್ಮ ವಿಡಂಬನ ಲೇಖನ ಮೂಲಕ ಹೆಸರು ಗಳಿಸಿದ್ದಾರೆ

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಾ. ದೇ. ಜವರೇಗೌಡ ಅವರಿಗೆ ಬಲಗೈ ಆಗಿ ನಿಂತು ಮೈಸೂರಲ್ಲಿ ಸ್ಥಾಪಿತವಾಗಿರುವ ಕುವೆಂಪು ಟ್ರಸ್ಟಿಗೆ ದುಡಿದವರು ಶ್ರೀ. ಎಚ್. ಎಲ್. ನಾಗೇಗೌಡರು. ಟ್ರಸ್ಟಿಗೆ ದುಡಿಯುವುದರ ಮೂಲಕ ಶ್ರೀ ನಾಗೇಗೌಡರು ಕುವೆಂಪು ಅವರಲ್ಲಿರುವ ತಮ್ಮ ಭಕ್ತಿ ಗೌರವಗಳನ್ನು ಸಮರ್ಪಿಸಿದ್ದಾರೆ. ಸಾಹಿತ್ಯಕ್ಷೇತ್ರದಲ್ಲಿ ಬೆನ್ನುತಟ್ಟಿ ಮುಂದೆ ತಂದ ಶ್ರೀ ದೇ. ಜವರೇ ಗೌಡರ ಹೆಸರನ್ನು ಶ್ರೀ ನಾಗೇಗೌಡರು ಮಾತನಾಡುವ ವೇದಿಕೆಗಳಲ್ಲಿ ಹೇಳದೆ ತಪ್ಪಿಸಿ ಕೊಳ್ಳುವುದು ಅತಿ ವಿರಳ. ಇಂತಹ ಹೆಸರಾಂತ ನೆಲದ ನಮ್ಮ ನಾಗೇಗೌಡರು ನೂರ್ಕಾಲ ಬದುಕಲಿ. ನಾಗಮಂಗಲ ನಾಡಿಗೆ ಕೀರ್ತಿ ತರಲಿ.

೧೬ | ನನ್ನ ತಂದೆ

ಎಚ್. ಎಲ್. ನಂಜರಾಜ್

ನಾನು ನನ್ನ ತಂದೆಯ ಹಿರಿಯಮಗ. ನನ್ನ ಅಕ್ಕನ ಹಿಂದೆ ಬಂದವನು. ನನಗೆ ಹುಡುಗಾಟ ಹೋಗಿ ತಿಳಿವಳಿಕೆ ಬಂದಾಗಿನಿಂದಲೂ —ಸ್ವಲ್ಪ ತಡವಾಯಿತು— ನನ್ನ ತಂದೆ ನನಗೊಂದು ಮಾದರಿಯಾಗಿದ್ದಾರೆ—ಕೆಲವು ಗುಣಗಳನ್ನು ಬಿಟ್ಟು. ಅದಕ್ಕೆ ಮುಂಚೆ ನನ್ನ ತಂದೆಯವರ ಹತ್ತಿರ ಮಾತಾಡೋದು ಅಂದರೆ ಹಿಂದಿನ ಕಾಲದ ಅಮಲ್ದಾರರು, ಡೆಪ್ಯುಟಿ ಕಮಿಷನರ ಹತ್ತಿರ ಮಾತಾಡಿದಂತೆ. ನನ್ನ ತಂದೆಯವರು ಬೇಲದ ಹಣ್ಣಿನಂತೆ. ಹೊರನೋಟಕ್ಕೆ ಒರಟು. ಮೊದಲ ಬಾರಿಗೆ ನನ್ನ ತಂದೆಯವರನ್ನು ಭೇಟಿಮಾಡಿದವರಿಗೆ ಆಗುವ ಅನುಭವ ಇದು. ಆದರೆ ಬೇಲದ ಹಣ್ಣಿನ ಸವಿಯನ್ನು ಅನುಭವಿಸಬೇಕಾದರೆ ಬಹಳ ತಾಳ್ಮೆಬೇಕು. ಬಾಳೆಹಣ್ಣಿನಂತೆ ಸುಲಭವಾಗಿ ಸುಲಿದು ತಿನ್ನುವ ಹಣ್ಣಲ್ಲ ಅದು. ಬರಿಯ ಹೊರಕರಟವನ್ನು ಒಡೆದು ತಿನ್ನಲೂ ಬಾರದು. ಸ್ವಲ್ಪ ಸಕ್ಕರೆಯನ್ನು ಬೆರಸಬೇಕಾಗಲೂ ಬಹುದು. ಇದನ್ನೆಲ್ಲಾ ಮಾಡಿ ತಾಳ್ಮೆಯಿಂದ ತಿಂದರೆ ಅದರ ರುಚಿಯೇ ಬೇರೆ ಅಸಾಮಾನ್ಯ; ಇಷ್ಟೆಲ್ಲಾ ಮಾಡಿ ತಿನ್ನಲು ಎಷ್ಟು ಜನಕ್ಕೆ ತಾಳ್ಮೆಯಿದೆ. ಆದುದರಿಂದಲೋ ಏನೋ ಬಹು ಜನರ ಅನುಭವ ಬೇಲದ ಹಣ್ಣನ್ನು ಮೊದಲು ನೋಡಿದ ಅಥವಾ ಮುಟ್ಟಿದ ಅನುಭವ. ಒಮ್ಮೆ ತಿಂದವರು ಅದರ ರುಚಿಯನ್ನು ಎಂದೂ ಮರೆಯುವುದಿಲ್ಲ. ಹಲವಾರು ವರ್ಷಗಳು ನನ್ನ ನೆನಪಿನಲ್ಲಿ ಎಷ್ಟೊ ಜನರು ನನ್ನ ತಂದೆಯವರನ್ನು ಭೇಟಿ ಮಾಡಲು ಬರುತ್ತಿದ್ದುದು ಉಳಿದಿದೆ. ಅವರಲ್ಲಿ ಬಹಳ ಜನ ಮೊದಲ ಭೇಟಿಗೇ 'ಸಾಕಪ್ಪ ಇವರ ಸಹವಾಸ' ಅಂತ ಹೋದವರುಂಟು. ಆದರೇ ಧೈರ್ಯವಾಗಿ, ಸಂದರ್ಭೋಚಿತರಾಗಿ ಮಾತನಾಡುವ ಹಲವಾರು ಜನ ನನ್ನ ತಂದೆಯವರ ನಿಜವಾದ ವ್ಯಕ್ತಿತ್ವವನ್ನು ಅರಿತಿದ್ದಾರೆ. ಉಳಿದವರೆಲ್ಲ 'ಈ ಒರಟು ಬೇಲದ ಹಣ್ಣು ಯಾರಿಗ್ಬೇಕು ನಡಿಯೋ' ಅಂತ ಹೋದವರೇ.

ಯಾರಿಗೂ ಒಂದೆರಡು ಭೇಟಿಗಳಲ್ಲಿ ಅವರ ವ್ಯಕ್ತಿತ್ವವನ್ನು ಅಳೆಯಲು ಸಾಧ್ಯವಿಲ್ಲ. ದುಡಿಕಿದರೆ ಕೆಲಸ ಹಾಳು. ಇಷ್ಟೆಲ್ಲಕ್ಕೂ, ಕಾರಣ ಅವರ ಸಿಡುಕಿನ ಸ್ವಭಾವ. ಎಲ್ಲ ದಿನಚರಿಗಳೂ ಅವರ ಎಣಿಕೆಯಂತೆ ನಡೆದುಕೊಂಡು ಹೋದರೆ ಸರಿ. ಇಲ್ಲದಿದ್ದರೆ ಕಾಳಮ್ಮ ಬಂದ್ಲೂ ಅಂತಾನೇ. ಆ ಘಳಿಗೆಯಿಂದ ಎಲ್ಲರ ಮೇಲೂ ಅಸ್ತ್ರವೇ. ನನ್ನ ಮನೆಯವರಿಗೆಲ್ಲರಿಗೂ ಇದರ ಅನುಭವ ಚೆನ್ನಾಗಿದೆ. ಅವರ ಮುಖ ನೋಡಿದ

ಕೂಡಲೇ ಎಲ್ಲರಿಗೂ ಗೊತ್ತಾಗುತ್ತೆ—ಕಾಳಮ್ಮ ಬಂದಿದ್ದಾಳೆ ಅಂತ. ಎಲ್ಲರ ಮಾತು ಗಳೂ ಅಷ್ಟಕ್ಕಷ್ಟೆ. ಇವತ್ತಿಗೂ ಬ್ಯಾಂಕಿನಲ್ಲಿ ಆಫೀಸರ್‌ಗಿರೀಲಿರೋ ನನ್ನ ಚಿಕ್ಕಮ್ಮನ ಮಗ ನನ್ನ ತಂದೆಯ ಜೊತೆ ಮಾತಾಡೋವಾಗ ಬೆದರ್ತಾನೆ. ಸರಿಯಾಗಿ ಮಾತ ನಾಡೋರಿಗೂ ತೊದಲಿಕೆ ಬರುತ್ತೆ. ಕಾರಣ ಅವರ ಸಿಡುಕು. ಒಂದು ಸಲ ಗುಡುಗಿದರು ಅಂದರೆ ಸಾಕು ಗುಡಿಗಿಸಿಕೊಂಡವನು, ಕಡೇ ಪಕ್ಷ ಎರಡು ವರ್ಷಗಳಾದರೂ ಮರಿಯೋ ಹಾಗಿಲ್ಲ. ಇವೆಲ್ಲ ಹೊರನೋಟಕ್ಕೆ ಮಾತ್ರ. ಒಳಗಡೆ ಮೆದು ತಿರುಳು. ಕೈಲಿರೊ ಎಲ್ಲಾ ಬೆರಳುಗಳೂ ಕಿರುಬೆರುಳೇ ಆಗಿದ್ದಿದ್ದರೆ ಏನು ಪ್ರಯೋಜನ? ಹೆಬ್ಬೆಟ್ಟಿನ ಶಕ್ತಿ ಕಿರುಬೆರಳಿಗೆಲ್ಲಿ? ಕಿರುಬೆರಳಿನ ಯುಕ್ತಿ ಹೆಬ್ಬೆಟ್ಟಿಗೆಲ್ಲಿ? ಎರಡು ಬೆರಳಿನ ರೀತಿಯ ಜನರೂ ಇದ್ದರೇನೇ ಕೈ ಅನ್ನಿಸಿಕೊಳ್ಳೋದು—ಅಲ್ಲವೇ?

ನನ್ನ ತಂದೆಯವರ ಒಂದು ಗುಣ ನನ್ನ ಮೇಲೆ ತೀವ್ರವಾದ ಪ್ರಭಾವ ಬೀರಿದ್ದು ಅಂದರೆ ಅವರ ದಿನಚರಿ. ಅದು ನನಗೊಂದು ಮಾದರಿ. ಬೆಳಿಗ್ಗೆ ಐದುವರೆ ಘಂಟೆಯಿಂದ ಹಿಡಿದು ರಾತ್ರಿ ಹತ್ತು ಘಂಟೆವರೆಗಿನ ಬಿಡುವಿಲ್ಲದ ಕಾರ್ಯಕ್ರಮ, ಒಂದು ನಿಮಿಷವನ್ನೂ ವ್ಯರ್ಥಮಾಡದ ದಿನಚರಿ. ನನ್ನ ಅನಿಸಿಕೆಯಲ್ಲಿ ಹಲವಾರು ವರುಷಗಳ ಕಠಿಣ ಪರಿಶ್ರಮವೇ ಅವರ ಇಂದಿನ ಸ್ಥಾನಮಾನಕ್ಕೆ ಮೂಲಕಾರಣ. ಬರವಣಿಗೆ ಅವರ ಒಂದು ನೆಚ್ಚಿನ ಹವ್ಯಾಸ. ಬರೆಯುವುದಕ್ಕೆ ಕುಳಿತರೆ ಘಂಟೆಗಳು ಉರುಳಿ ಹೋಗುತ್ತವೆ. ಬೇರೆ ಎಲ್ಲರಿಗಿಂತಲೂ ಸಾಹಿತ್ಯ, ಅದರಲ್ಲೂ ಜನಪದ ಸಾಹಿತ್ಯದಲ್ಲಿ ಕೆಲಸಮಾಡುವವರು ಅವರ ಆಪ್ತರು. ಬರವಣಿಗೆಯ ಹವ್ಯಾಸ ನಮ್ಮ ಮನೆಯವರಲ್ಲಿ ಇನ್ಯಾರಿಗೂ ಬೆಳೆದು ಬಂದ ಹಾಗೆ ಕಾಣುವುದಿಲ್ಲ. ಎಲ್ಲರೂ ಸಾಹಿತಿ ಗಳೇ ಆದರೆ ಓದುವವರಾರು? ನನ್ನ ತಾತನವರು—ದೊಡ್ಡಮನೆ ಲಿಂಗೇಗೌಡರು—ಸಾಹಿತಿಗಳೇನಲ್ಲ.

ನಾನು ಅವರನ್ನು ನೋಡಿಯೂ ಇಲ್ಲ. ಆದರೆ ಅವರ ಸಮಕಾಲೀನರು ಹೇಳುವ ರೀತಿಯನ್ನು ನೋಡಿದರೆ ಅವರು ಅವರ ಕಾಲಕ್ಕೆ ಒಳ್ಳೆ ನುರಿತ ವ್ಯವ ಹಾರಸ್ಥರಾಗಿದ್ದರು ಅಂತ ಅನ್ನಿಸುತ್ತದೆ. ಅವರ ದಾರಿಯಲ್ಲೇ ಈಗ ನಾನೂ ಇರೋದು—ಅಂದರೆ ಸ್ವಂತ ಉದ್ಯೋಗದಲ್ಲಿರೋದು. ನಾನು ಎಂಜನಿಯರಿಂಗ್ ಪದವಿಯನಂತರ ಉದ್ಯೋಗದಲ್ಲೇ ಇದ್ದೆ. ಆ ಜಾಡಿನಿಂದ ಈಗಿನ ಜಾಡಿಗೆ ಬರು ವಂತೆ ಮಾಡಿದ್ದು ನನ್ನ ತಂದೆಯವರ ಪ್ರೇರಣೆಯೇ. ಮೊದಮೊದಲು ಅಪ್ಪಾಗಿ ಹಿಡಿಸದಿದ್ದರೂ ನಂತರ ಮೇಲೆನಿಸಿತು. ನನ್ನ ತಾತನವರು ತನ್ನಮಗ ಡೆಪ್ಯೂಟಿ ಕಮೀಷನರ್ ಆಗಬೇಕೂಂತ ಆಸೆ ಇಟ್ಟುಕೊಂಡಿದ್ದರಂತೆ. ಅದರಂತೆಯೇ ಆಯಿತು. ನನ್ನ ತಂದೆಯವರದು ನಾನು ಒಬ್ಬ ದೊಡ್ಡ ಕೈಗಾರಿಕೋದ್ಯಮಿಯಾಗಬೇಕು ಅನ್ನೋ ಅಭಿಲಾಷೆ. ಆದರೂ ಆಗಬಹುದು. ಜಾಡಿನಲ್ಲಂತೂ ಇದೀನಿ. ಇವತ್ತಲ್ಲ ನಾಳೆ ಊರು ಸೇರೇ ಸೇರ್ತೀನಿ. ಎಷ್ಟು ಜಾಗ್ರತೆ ಅನ್ನೋ ಪ್ರಶ್ನೆ ಒಂದೇ ಅಷ್ಟೇ. ಹೊರ

ನಾಡಿನವರು ಬೆಂಗಳೂರಿಗೆ ಬಂದು ಕೈಗಾರಿಕೆಗಳನ್ನು ಹಾಕಿ ಮುಂದು ಬರ್‍ತಿರೋವಾಗ ಇಲ್ಲಿನವರು ಯಾಕೆ ಮಾಡಬಾರದು ಅನ್ನೋದು ಅವರ ವಾದ.

ಅವರ ಒಂದೇ ಒಂದು ದುರ್ಬಲತೆ ಎಂದರೇ "ಅವರೇ ಕಾಳು." ಅವರೆಕಾಯಿ ಕಾಲದಲ್ಲಂತೂ ಬೆಳಿಗ್ಗೆ ಸಾಯಂಕಾಲ ಊಟಕ್ಕೆ ಅದು ಇರಬೇಕು. ಅವರೆಕಾಯಿ ಅಂದರೆ ಪಂಚಪ್ರಾಣ. ಅವರು ಸರಕಾರಿ ಹುದ್ದೆಯಲ್ಲಿದ್ದಾಗ ಯಾರಾದರೂ ಒಂದು ಮೂಟೆ, ಸೊಗಡು ಅವರೆಕಾಯಿ ತಂದುಕೊಟ್ಟಿದ್ದಿದ್ದರೆ ಅವರ ಕೆಲಸ ಖಂಡಿತ ಆಗುತ್ತಿತ್ತೇನೋ? ಆದರೆ ಈಗ ಕಾಲ ಮೀರಿಹೋಗಿದೆ. ನಿವೃತ್ತಿಯಾಗಿದೆ. ಆದ್ದರಿಂದ ಯಾರೂ ಅವರೆ ಕಾಯಿಯ ಪ್ರಭಾವ ತಿಳಿಯೋಹಾಗಿಲ್ಲ.

ಆಫೀಸ್ ಕೆಲಸ ಎಷ್ಟೇ ಇದ್ದರೂ ನಮ್ಮ ತಂದೆಯವರು, ನಮ್ಮ ವಿದ್ಯಾಭ್ಯಾಸದ ಮೇಲೆ ಗಮನ ಇಟ್ಟೇ ಇರುತ್ತಿದ್ದರು. ತಂದೆಯವರು 1955ರಲ್ಲಿ ಭದ್ರಾವತಿಯಲ್ಲಿದ್ದಾಗ ನಾನು ಹೈಸ್ಕೂಲಿನಲ್ಲಿ ಮತ್ತು ನನ್ನ ತಮ್ಮ ಸುಂದರು ಮಿಡಲ್ ಸ್ಕೂಲಿನಲ್ಲಿ ಓದುತ್ತಿದ್ದೆವು. ಆಗ ನಡೆದ ಪ್ರಸಂಗವೊಂದು ಇಂದಿಗೂ ಅಚ್ಚಳಿಯದೆ ನನ್ನ ನೆನಪಿನ ಶೇಖರಣದಲ್ಲುಳಿದಿದೆ. ಆಗ ನಮ್ಮಿಬ್ಬರ ಕೈ ಬರಹ ಬಹಳ ವಕ್ರವಾಗಿತ್ತು ಅಂತ ಕಾಣುತ್ತದೆ. ಒಂದು ದಿವಸ ಎರಡು ಹೊಸಪೆರುಮಾಳ್‌ಚೆಟ್ಟಿ ಪೆನ್ಸಿಲ್ ಮತ್ತು ಎರಡು ಕಾಪಿ ಪುಸ್ತಕ ತರಿಸಿ ಒಂದು ದಿವಸವೂ ತಪ್ಪದಂತೆ ಎರಡು ವಾರ ಕಾಪಿ ಬರೆಸಿದರು. ಕಾಪಿ ಪುಸ್ತಕಗಳಾದ ಮೇಲೆ ಇಂಗ್ಲಿಷ್ ವೃತ್ತಪತ್ರಿಕೆಯಿಂದ ಪಂಕ್ತಿಗಳನ್ನು ಬರೆದು ತೋರಿಸುವಂತೆ ಕಟ್ಟು ಮಾಡಿದ್ದರು. ಆ ಎರಡು ವಾರಗಳನಂತರ ನಮ್ಮಿಬ್ಬರ ಕೈಬರಹ ನಂಬಲಾರದಷ್ಟು ಬದಲಾಗಿತ್ತು. ಇಂದಿಗೂ ಏನಾದರೂ ಬರೆಯಲು ಕುಳಿತಾಗ ಆ ಕಾಪಿ ಬರೆದ ದಿನಗಳು ಜ್ಞಾಪಕಕ್ಕೆ ಬರುತ್ತವೆ. ಈಗ ಅನ್ನಿಸುತ್ತದೆ—ಆಗ ಅವರು ಕಟ್ಟುಮಾಡಿ ಕಾಪಿ ಬರೆಸದಿದ್ದಿದ್ದರೆ ನನ್ನ ಕೈಬರಹ ಮುಂಚಿನಂತೆಯೇ ವಕ್ರವಾಗಿ ಉಳಿಯುತ್ತಿತ್ತೋ ಏನೋ ಎಂದು.

ಅವರ ದಿನಚರಿ ಬಾಲ್ಯದಿಂದಲೂ ನಮ್ಮ ಮೇಲೆ ಪ್ರಭಾವ ಬೀರುತ್ತಲೇ ಬಂದಿದೆ. ನಾನು, ನನ್ನ ತಮ್ಮ ಭದ್ರಾವತಿಯಲ್ಲಿ ಓದುತ್ತಿದ್ದಾಗ ನಮ್ಮ ತಂದೆಯವರ ಬಿಡುವಿಲ್ಲದ ದಿನಚರಿಯಿಂದ ಪ್ರಭಾವಿತರಾಗಿ ಶಾಲೆಗೆ ಸೇರಿದ ಹೊಸದರಲ್ಲಿ ಒಂದು ದಿನ ಬಹಳ ಆಸಕ್ತಿಯಿಂದ ಶಾಲೆಯ ಹೊರಗಡೆ ಮೈದಾನದಲ್ಲಿ ಕುಳಿತುಕೊಂಡು ಮಾತಾಡಿಕೊಂಡೆವು.

"ಲೇ ಸುಂದ್ರು, ಅಣ್ಣಯ್ಯ ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗೋವರ್‍ಗೂ ಏನಾರೂ ಮಾಡ್ತೇ ಇರ್‍ತಾರೆ. ಹಾಗೇನೆ ನಾವೂನೂ ಒಂದು ಟೈಂ ಟೇಬಲ್ ಹಾಕಿ ಅದರಂತೆ ನಡೆಯೋಣ ಕಣೋ" ಅಂದೆ.

ಸುಂದ್ರು "ಹೂ ಕಣೋ" ಅಂದ.

ಅದರಂತೆ ಹುಮ್ಮಸ್ಸಿನಿಂದ ಕುಳಿತು 'ಟೈಂಟೇಬಲ್' ಹಾಕಿದ್ವಿ—ಬೆಳಿಗ್ಗೆ

ಎದ್ದಾಗಿನಿಂದ ರಾತ್ರಿ ಮಲಗೋವರೆಗೂ ಯಾವ್ಯಾವ ವೇಳೆಯಲ್ಲಿ ಏನೇನು ಮಾಡ್ಬೇಕು ಅಂತ. ಮಾರನೇ ದಿವಸದಿಂದಲೇ ಟೈಂಟೇಬಲ್ ಆಚರಣೆಗೆ ಬಂತು. ಮೊದಲನೇ ದಿವಸ ಟೈಂಟೇಬಲ್ ಪ್ರಕಾರ ಹಾಸಿಗೆಗೆ ಬೀಳುವಾಗ ಖುಷಿಯೋ ಖುಷಿ. ಎರಡನೇ ದಿವಸ ಕಾರ್ಯಕ್ರಮದ ಬಿಗಿ ಸಡಿಲವಾಯ್ತು. ಮೂರನೇ ದಿನದಿಂದ ಯಥಾ ಪ್ರಕಾರ ಮಾಮೂಲಿ ಹಳೇ ಹುಡುಗಾಟದ ದಿನಚರಿಗೆ ಬಂತು. ಅಲ್ಲಿಗೆ ಮುಗಿಯಿತು, ನಮ್ಮ ದಿನಚರಿ, ಅನುಕರಣೆಯ ಪ್ರಯತ್ನ. ಆಗ ನಮ್ಮ ದಿನಚರಿಯ ಅನುಕರಣೆಯ ಪ್ರಯತ್ನ ಯಶಸ್ವಿಯಾಗದಿದ್ದರೂ ಅದರ ಪ್ರಭಾವವಂತೂ ಮಾಸದಂತೆ ಉಳಿದಿದೆ.

ಒಟ್ಟಿನಲ್ಲಿ ನನ್ನ ತಂದೆಯವರು ದೊಡ್ಡ ಆಲದ ಮರದ ಹಾಗೆ ಬಹಳ ಜನಕ್ಕೆ ನೆರಳಾಗಿ, ಹಣ್ಣಾಗಿ ಬಾಳಿದ್ದಾರೆ. ಅವರ ಮಗನೆಂದು ನನಗೆ ನಿಜಕ್ಕೂ ಹೆಮ್ಮೆಯೇ. ಆದರೆ ಆಲದ ಮರದ ಕೆಳಗಿನ ಹಣಬೆಯಾಗದೆ ಆ ದೊಡ್ಡ ಆಲದ ಮರದ ಪಕ್ಕದಲ್ಲಿ ಮತ್ತೊಂದು ದೊಡ್ಡ ಆಲದ ಮರವಲ್ಲದಿದ್ದರೂ ಒಂದು ಸಣ್ಣಮಾವಿನ ಮರವಾದರೂ ಆಗಬೇಕೆಂಬುದು ನನ್ನ ಆಕಾಂಕ್ಷೆ. ಇದು ನನ್ನ ತಂದೆಯವರ ಆಕಾಂಕ್ಷೆಯೂ ಕೂಡ. ಅದಕ್ಕೆ ಅವರ ಆಶೀರ್ವಾದವಿದೆಯೆಲ್ಲ ಸಾಕು.

೧೨ | ಶಿವಮೊಗ್ಗ ವಸ್ತು ಸಂಗ್ರಹಾಲಯ ಮತ್ತು ನಾಗೇಗೌಡರು

ಕೆಳದಿ ಗುಂಡಾಜೋಯಿಸ್

ಅಂದು ೧೯೬೩ ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಒಂದು ದಿನ. ಶಿವಮೊಗ್ಗ ಜಿಲ್ಲಾಧಿಕಾರಿಗಳು ನಮ್ಮ ಮನೆಗೆ ಬರುವರೆಂದೂ ಒಂದೆರಡು ದಿನ ತಂಗುವರೆಂದೂ ಆದೇಶ ಬಂದಿತ್ತು. ಆಗ ನಾನು ಒಬ್ಬ ಸಾಮಾನ್ಯ ಸರಕಾರಿ ಅಧಿಕಾರಿಯಾಗಿದ್ದೆನು; ಅದೂ ಆಗಿನ ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದ ಶ್ರೀ ನಾಗೇಗೌಡರ ಕೈಕೆಳಗಿನ ಅಧಿಕಾರಿಯೆಂದರೆ ತಪ್ಪಾಗಲಾರದು. ನನಗೋ ಆ ಸಮಯದಲ್ಲಿ ಒಂದು ರೀತಿಯ ಭಯವೇ ಈ ಆದೇಶ ದಿಂದ ಉಂಟಾಗಿತ್ತು. ಯಾವ ಕಾರಣಕ್ಕಾಗಿ ಬರುವರೋ ? ಏನು ಸಂದರ್ಭ ಕಾದಿದೆಯೋ ಎಂಬ ಮಾನಸಿಕ ದುಗುಡತೆಯು ಬೇರೆ ನನ್ನನ್ನು ಆವರಿಸಿಕೊಂಡು ಪೇಚಿಗೀಡು ಮಾಡಿತ್ತು; ನನ್ನ ಮೇಲೆ ಏನಾದರು ತನಿಖೆ ನಡೆಯುವುದೇ ಎಂಬ ಸಂದೇಹವೂ ತಲೆ ಯಲ್ಲಿತ್ತು; ಏಕೆಂದರೆ ನಾನೂ ಆಗ ಸಾಮಾನ್ಯ ಸರಕಾರಿ ಅಧಿಕಾರಿಯಾಗಿದ್ದರೂ ಅನೇಕ ಪ್ರಭಾವಯುತರೊಡನೆ ಸಂಪರ್ಕವಿರಿಸಿಕೊಂಡು ಗ್ರಾಮಾಂತರ ಅಭಿವೃದ್ಧಿ ಕಾರ್ಯ ಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅನೇಕ ಸಾಮಾಜಿಕ ಮಹತ್ಕಾರ್ಯಗಳನ್ನೇ ನಿರ್ವಹಿಸಿದ್ದೆನು. ಇವುಗಳು ಸರಕಾರಿ ನೀತಿ ನಿಯಮಗಳ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿ ಪರಿಣಮಿಸುವು ದೆಂಬುದಾಗಿ ಅಧಿಕಾರಿಗಳನೇಕರು ನನಗೆ ವಿವಿಧ ಮಾರ್ಗಗಳಿಂದ ಎಚ್ಚರಿಕೆ ಕೊಟ್ಟಿದ್ದರು. ಈ ಕಾರಣದಿಂದಲೇ ಮತ್ತೇನು ಕಾದಿದೆಯೋ ಎಂಬುದಾಗಿ ಶ್ರೀ ನಾಗೇಗೌಡರ ಆಗಮನ ವನ್ನು ತುಸು ಭಯದಿಂದಲೇ ಎದುರು ನೋಡುತ್ತಿದ್ದೆನು.

ವ್ಯವಸ್ಥಿತ ಕಾರ್ಯಕ್ರಮದಂತೆ ಶಿವಮೊಗ್ಗ ಜಿಲ್ಲಾಧಿಕಾರಿ ಶ್ರೀ ನಾಗೇಗೌಡರು ನಮ್ಮ ಮನೆಗೆ ಆಗಮಿಸಿದರು. ಅವರ ಸಂಗಡ ಆಗಿನ ಪ್ರಾಂತ್ಯಾಧಿಕಾರಿ ಶ್ರೀ ಮೋಹನ ದಾಸ್ ಮೋಸೆಸ್, ಐ. ಎ. ಎಸ್, ಶ್ರೀ ಜೆ. ಬಸಪ್ಪ ಹಾಗೂ ಶ್ರೀ ತಿರುಮಲೈರಾಜ್ ಮುಂತಾದವರು ಇದ್ದರು. ಬಂದನರೇ ಶ್ರೀ ಗೌಡರು ನನ್ನನ್ನು ಕೈಕುಲುಕುತ್ತಾ "ಕೆಳದಿ ಸಂಸ್ಥಾನಾಧೀಶರೇ ಆರೋಗ್ಯವಾಗಿದ್ದೀರಾ ?" ಎಂದು ಸಂಬೋಧಿಸಬೇಕೇ ? ಅದೂ ಅಲ್ಲದೆ ನನ್ನನ್ನು ಯಾವುದೋ ಒಂದು ವಿಧವಾದ ಆತ್ಮೀಯತೆಯಿಂದ ಆಲಂಗಿಸಬಹುದೇ ? ಅವರು ಜಿಲ್ಲಾಧಿಕಾರಿ; ನಾನೋ ಅವರ ಕೈಕೆಳಗಿನ ಸಾಮಾನ್ಯಾಧಿಕಾರಿ; ಇದೇನು ವೈಚಿತ್ರ್ಯ ? ಇಂತಹ ನಡೆವಳಿಕೆಗಳು ಅಧಿಕಾರಿಗಳಿಗೆ ತಕ್ಕ ಕ್ರಮವಹುದೇ ? ಉಳಿದ ಅಧಿಕಾರಿಗಳು ಏನೆಂದುಕೊಂಡಾರು ! ಎಂಬ ವಿಚಾರಗಳೆಲ್ಲವೂ ನನ್ನ ತಲೆತುಂಬಾ ಕಿರುಚಾಡಿದುವು.

ಆದರೆ ಏನೂ ಮಾಡಲು ಸಾಧ್ಯವಾಗದೆ ಅವರ ಮುಂದೆ ನಾನು ದಿಙ್ಮೂಢನಾದೆನು. ಸ್ವಲ್ಪ ಸಮಯದ ನಂತರದಲ್ಲಿ ಅವರೇ ಮುಂದುವರಿದು—

"ಜೋಯಿಸರೇ", ನಿಮ್ಮ ಮನೆತನವು ಕೆಳದಿ ಸಂಸ್ಥಾನದ ಅರಸರಿಗೆ ನಿಕಟವರ್ತಿಗಳಾಗಿದ್ದುದರಿಂದ ಅನೇಕ ಸಂಗ್ರಹಗಳು ನಿಮ್ಮಲ್ಲಿವೆಯೆಂದು ಕೇಳಿದ್ದೇನೆ. ಆದ್ದರಿಂದ ಅಂತಹ ಅಪೂರ್ವ ಪ್ರಾಚ್ಯ ಸಾಮಗ್ರಿಗಳು ಏನೇನಿವೆ, ದಯಮಾಡಿ ತಿಳಿಸಿ ತೋರಿಸುವಿರಾ ?" ಎಂದು ಆರಂಭಿಸಿದರು.

"ಸ್ವಾಮಿ," ಈಗ ಭೋಜನದ ವೇಳೆಯಾಗಿದೆ, ಮೊದಲು ತಾವು ಆತಿಥ್ಯ ಕೈಗೊಂಡ ನಂತರ ಇದನ್ನು ವಿವರಿಸಿ ಎಲ್ಲವನ್ನು ತೋರಿಸುವೆನು" ಎಂಬುದಾಗಿ ಮಾರುತ್ತರವಿತ್ತೆನು.

ಕೂಡಲೇ ಗೌಡರು–"ಜೋಯ್ಸರೇ, ಈಗ ಊಟ ಬೇಡ; ನನಗೆ ಬೇಕಾಗುವ ಊಟವೇ ಬೇರೆ ಇದೆ; ಅದನ್ನು ಮೊದಲು ನಡೆಸಿಕೊಡಿರಿ; ನಂತರ ನೋಡೋಣ" ಎಂದು ಮಾರ್ನುಡಿದು ನನ್ನಲ್ಲಿದ್ದ ರೆವಿನ್ಯೂ ನಡೆವಳಿಕೆ ಬದಿಗಿರಿಸಿ, ಸಂಶೋಧನಾಕ್ರಮ ಶಕ್ತಿಯನ್ನು ಪ್ರೇರಿಸಿ ಹುರಿದುಂಬಿಸಿದರು.

ಹೀಗೆ ಆರಂಭಗೊಂಡ ಸಂಭಾಷಣೆಯು ಒಂದು ರೀತಿಯಲ್ಲಿ ಸಂಶೋಧನೆಯಲ್ಲಿ ತೊಡಗಿದ್ದ ನನಗೆ ಅಧ್ಯಯನೋತ್ಸಾಹವನ್ನೇ ತಂದಿತ್ತು. ತಾವು ಶಿವಮೊಗ್ಗದಲ್ಲಿ ಜಿಲ್ಲಾ ವಸ್ತು ಸಂಗ್ರಹಾಲಯವೊಂದನ್ನು ಸ್ಥಾಪಿಸಲಿರುವುದಾಗಿಯೂ, ನನ್ನನ್ನು ಹಲವು ತಾಲ್ಲೂಕುಗಳಿಗೆ ಗೌರವ ಸಂಗ್ರಾಹಕನನ್ನಾಗಿ ನೇಮಕ ಮಾಡಿರುವುದಾಗಿಯೂ, ಇದಕ್ಕೆ ಸಂಬಂಧಪಟ್ಟಂತೆ ನನ್ನ ಸಹಕಾರಕ್ಕೆ ಬೇಕಾದ ಸಿಬ್ಬಂದಿಗಳನ್ನು ಆಗಲೇ ಒದಗಿಸಿ, ಅವರಿಗೆ ಸೂಚನೆಗಳನ್ನು ನೀಡಿರುವುದಾಗಿಯೂ, ಈಗಿನಿಂದಲೇ ಕಾರ್ಯಪ್ರವೃತ್ತನಾಗಬೇಕಾಗಿಯೂ ನನಗೆ ವಿವರಿಸಿ ಆದೇಶದ ಪ್ರತಿಯೊಂದನ್ನು ನೀಡಿದರು. ತಾವು ಜಿಲ್ಲೆಯ ಹಿರಿಯ ಅಧಿಕಾರಿಯಾಗಿದ್ದು, ಇದನ್ನು ಕೈಕೆಳಗಿನ ಅಧಿಕಾರಿಗಳ ಮೂಲಕ ಕ್ರಮ ಪ್ರಕಾರವಾಗಿ ತಲುಪಿಸದೇ ನೇರವಾಗಿಯೇ ಕೊಡುತ್ತಿರುವುದನ್ನು ವಿನಮ್ರನಾಗಿ ಸೂಚಿಸಿ ಅತಿ ಸಂಕೋಚದಿಂದಲೇ ಪಡೆದುಕೊಳ್ಳುವಂತಾಯಿತು. ಹೀಗೆ ನಾನು ಅವರ ಕೈಕೆಳಗಿನ ಅಧಿಕಾರಿಯಾದರೂ ಅದನ್ನು ಪರಿಗಣಿಸದೆ ನನ್ನಲ್ಲಿದ್ದ ಯಾವುದೋ ಸುಪ್ತ ಶಕ್ತಿಯನ್ನು ಶ್ರೀ ನಾಗೇಗೌಡರ ಸೌಜನ್ಯವು ಕಂಡುಹಿಡಿದು ಉದ್ದೀಪನಗೊಳಿಸಿತ್ತು.

ಕೆಲವು ವರ್ಷಗಳ ಕೆಳಗೆ ಪ್ರಜಾಮತದಲ್ಲಿ ಪ್ರಕಟವಾದ 'ಕೆಳದಿ ಅರಸರ ಕಾಲದ ಗತ ಮನೆತನಗಳು' ಎಂಬ ನನ್ನ ಲೇಖನವೊಂದನ್ನು ಅವರು ಅವಲೋಕಿಸಿದ್ದರಂತೆ. ಆ ಪ್ರಕಾರವೇ ನಮ್ಮ ಮನೆಯನ್ನು ಅವರು ಹುಡುಕಿಕೊಂಡು ಬಂದಿದ್ದುದಾಗಿ ತಿಳಿಸಿದ್ದರು.

*****

ಶಿವಮೊಗ್ಗ ಜಿಲ್ಲೆಯು ಪ್ರಾಚ್ಯ ಅವಶೇಷಗಳ ಸಂಪತ್ತನ್ನು ಹೊಂದಿರುವ ಆಗರ. ವಿವಿಧ ಅಪೂರ್ವ ಕಲಾಕೃತಿಗಳನ್ನೊಳಗೊಂಡ ಪ್ರಾಚ್ಯ ಹಾಗೂ ಇತರ ವಸ್ತುಗಳು ಈ ಜಿಲ್ಲೆಯ ಅನೇಕ ಭಾಗಗಳಲ್ಲಿ ಉಪಲಬ್ಧವಿದ್ದು ಕಳಾಹೀನವಾಗಿ ಅಲ್ಲಲ್ಲಿಯೇ ಹುದುಗಿ ಕೊಂಡು ಹರಡಿದ್ದುವು. ತುಂಗಾಭದ್ರಾ ತೀರದ ಹಳ್ಳೂರಿನ ಉತ್ಖನನೇತ್ಯಾದಿಗಳಿಂದ–ಶಿಲಾಯುಗದಿಂದ ಆರಂಭಿಸಿ ಕ್ರಾಂತಿಕಾರಿ ಭೂಸುಧಾರಣೆಯ ಚಾರಿತ್ರಿಕಾಂಶವೆನಿಸಿದ ಕಾಗೋಡು ಸತ್ಯಾಗ್ರಹಗಳವರೆಗಿನ ಅನೇಕ ಸಂಗತಿಗಳ ವಸ್ತುಗಳು ಇಲ್ಲಿ ದೊರಕುತ್ತವೆ. ಈ ಜಿಲ್ಲೆಯಲ್ಲಿ ನಂದರು, ಮೌರ್ಯರು, ಶಾತವಾಹನರು, ಪಲ್ಲವರು ಕದಂಬರು, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಸಾಂತಾರ, ನೊಳಂಬ, ಪಾಂಡ್ಯ, ವಿಜಯನಗರ, ಕೆಳದಿ ಇತ್ಯಾದಿ ಯಾಗಿ ರಾಜಪರಂಪರೆಯ ಭವ್ಯ ಇತಿಹಾಸವಿದೆ. ಇದು ಕ್ರಿ. ಶ. 992 ರಿಂದಲೂ ಆರಂಭಗೊಳ್ಳುತ್ತದೆ. ಅನೇಕ ರಾಜಧಾನಿಗಳು, ಮೂಲ ಸಂಸ್ಥಾನಗಳು, ಪಾಳೆಯ ಪಟ್ಟುಗಳು ಈ ಜಿಲ್ಲೆಯಲ್ಲಿ ಬೇಕಾದಷ್ಟು ಉಪಲಬ್ಧವಿವೆ. ಬ್ರಿಟಿಶರ ಕಾಲದಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮದ ಅಸ್ತಿಭಾರವನ್ನು ಹಾಕಿರುವ ಪ್ರದೇಶವೂ ಶಿವಮೊಗ್ಗ ಜಿಲ್ಲೆ ಯಲ್ಲಿಯೇ ಇದ್ದು ಈಗಲೂ 'ಈಸೂರು ದಂಗೆಯು' ವೆಂಬುದಾಗಿ ಪ್ರಸಿದ್ಧಿಗೊಳಿಸ ಲ್ಪಟ್ಟಿದೆ. ಶಿವಮೊಗ್ಗ ಜಿಲ್ಲೆಯ ಪ್ರಾಕೃತಿಕ ಸಂಪತ್ತುಗಳು ವಿಶ್ವವಿಖ್ಯಾತವಾಗಿದ್ದು ಮಲೆನಾಡಿನ ಮಡಿಲಲ್ಲಿ ಸ್ವಾಭಾವಿಕ ವಸ್ತುಸಂಗ್ರಹಾಲಯಗಳೋಪಾದಿಯಲ್ಲಿವೆ. ಏಕೆಂದರೆ ಪ್ರಾಚೀನ ದೇಗುಲಗಳು, ಸಂಸ್ಥಾನಗಳ ಅವಶೇಷಗಳು, ರಾಜಧಾನಿಯ ಅವಶೇಷಗಳು, ಜೋಗ್ ಜಲಪಾತ, ವಿಶ್ವವಿಖ್ಯಾತ ಗಂಧದ ಕುಶಲ ಕಲೆಗಳು, ಭದ್ರಾವತಿ ಕಾರ್ಖಾನೆಗಳು, ಶರಾವತಿ, ತುಂಗಾ ಅಣೆಕಟ್ಟು ಹಾಗೂ ವಿದ್ಯುದಾಗಾರಗಳು, ಪಕ್ಷಿಧಾಮಗಳು, ವಿಹಾರ ಕೇಂದ್ರಗಳು, ಭತ್ತ, ಅಡಿಕೆ ಮುಂತಾದ ಆಹಾರೋದ್ಯಮ ಗಳು ಮುಂತಾಗಿ ಅಮೂಲ್ಯ ಸಂಗ್ರಹಗಳು ಈ ಜಿಲ್ಲೆಯಲ್ಲಿ ಅಪಾರವಾಗಿ ಸಿಲುಕುತ್ತವೆ. ಹಲವು ಹಳೆಯ ಮನೆಗಳಲ್ಲಿಯೂ ತಾಮ್ರ ಶಾಸನಗಳು, ಕಡತಗಳು, ಓಲೆಗರಿಗಳು, ಪಾತ್ರೆಗಳು, ನಾಣ್ಯಗಳು ಮುಂತಾದುವುಗಳು ಇಲ್ಲಿ ಉಪಲಬ್ಧವಿರುವಷ್ಟು ಇನ್ನೆಲ್ಲೂ ನಿಲುಕಲಾರವೆಂದರೆ ತಪ್ಪಾಗಲಾರದು.

ಸಾಮಾನ್ಯವಾಗಿ ರೆವಿನ್ಯೂ ಅಧಿಕಾರಿಗಳಿಗೆ ವರ್ಷಪೂರ್ತಿಯೂ ಸಂಚಾರವೂ ಹಾಗೂ ಬಿಡುವಿಲ್ಲದ ಕಾರ್ಯಬಾಹುಳ್ಯವೂ ವಿಶೇಷವಾಗಿರುತ್ತವೆ. ಜಿಲ್ಲಾಧಿಕಾರಿಗಳಿಗೆ ಇದು ಹೆಚ್ಚಿನ ಜವಾಬ್ದಾರಿಯನ್ನೇ ಉಂಟುಮಾಡುತ್ತದೆ. ಸಾಹಿತ್ಯ, ಸಾಂಸ್ಕೃತಿಕ ಹಾಗೂ ಸಂಶೋಧನಾ ಚಟುವಟಿಕೆಯ ಅಧ್ಯಯನಾಸಕ್ತಿಯಿರುವ ಜಿಲ್ಲಾಧಿಕಾರಿ ಶ್ರೀನಾಗೇಗೌಡರಿಗೆ ಇದೊಂದು ಸೂಕ್ಷ್ಮರೂಪದ ವರದಾನವಾಗಿ ಪರಿಣಮಿಸಿತ್ತು. ಈ ಕಾರಣದಿಂದಲೇ ಜಿಲ್ಲೆಯ ಅನೇಕ ಅಪೂರ್ವ ವಸ್ತುಗಳೆಲ್ಲವನ್ನೂ ಶೇಖರಿಸಿ ಶಿವಮೊಗ್ಗದಲ್ಲೊಂದು ವಸ್ತು ಸಂಗ್ರಹಾಲಯವನ್ನು ಏಕೆ ತೆರೆಯಬಾರದು ಎಂಬುದಾಗಿ ದೀರ್ಘವಾಗಿ ಯೋಚಿಸಿ ಕಾರ್ಯ ಪ್ರವೃತ್ತರಾದರು. ಶಿವಮೊಗ್ಗ ಜಿಲ್ಲೆಯ ಹಲವಾರು ಪ್ರಮುಖರೊಂದಿಗೆ ಈ

ದಿಸೆಯಲ್ಲಿ ಚರ್ಚಿಸಿ ಹೆಜ್ಜೆಯನಿರಿಸಿದರು. ಆರಂಭದಲ್ಲಿ ವಿರುದ್ಧ ಪ್ರತಿಕ್ರಿಯೆಗಳು ವ್ಯಕ್ತ ಪಟ್ಟಿದ್ದರೂ ಜಿಲ್ಲಾಧಿಕಾರಿಗಳೆಂಬ ಆಂತರಿಕ ಭಯದಿಂದ ಹಲವರು ಸುಮ್ಮನಿದ್ದರು, ಕಾಲಕ್ರಮೇಣ ಇದು ಪ್ರೋತ್ಸಾಹದಾಯಕವಾಗಿ ಬೆಳೆಯಿತು. ಇದಕ್ಕಾಗಿ ಹಲವಾರು ಕಾರ್ಯಕರ್ತರ ತಂಡವೊಂದನ್ನು ರಚಿಸಲಾಯಿತು. ಅವರಲ್ಲಿ ನಾನು ಹಾಗೂ ಖ್ಯಾತ ನಾಟಕಕಾರ ಶ್ರೀ ಕೆ. ವಿ. ಸುಬ್ಬಣ್ಣನವರೂ ಸೇರಿದ್ದೆವು. ನನ್ನನ್ನು ಸಾಗರ, ಸೊರಬ, ಹೊಸನಗರ, ಶಿಕಾರಿಪುರ ಹಾಗು ತೀರ್ಥಹಳ್ಳಿ ತಾಲ್ಲೂಕುಗಳಿಗೂ ಉಳಿದವುಗಳಿಗೆ ಶ್ರಿ ಕೆ. ವಿ. ಸುಬ್ಬಣ್ಣನವರನ್ನೂ ಗೌರವ ಸಂಗ್ರಾಹಕರನ್ನಾಗಿ ಕೇಳಿಕೊಂಡು ನಿಯುಮಿಸ ಲಾಯಿತು. ಇದಲ್ಲದೆ ಹಲವಾರು ಪ್ರಮುಖ ಹಿರಿಯ ಅಧಿಕಾರಿಗಳೂ ಶ್ರೀ ನಾಗೇ ಗೌಡರಿಗೆ ಈ ರಚನಾತ್ಮಕ ಕಾರ್ಯದಲ್ಲಿ ಬೆಂಬಲವಿತ್ತರು. ಭಾರತ ಸರಕಾರದ ಹಾಗೂ ಅಂತರರಾಷ್ಟ್ರೀಯ ಖ್ಯಾತ ಪ್ರಾಚ್ಯ ಸಂಶೋಧನಾ ತಜ್ಞ ಶ್ರೀ ಎಸ್. ಆರ್. ರಾವ್ ರವರೂ ಈ ದಿಸೆಯಲ್ಲಿ ಪ್ರಮುಖ ಪಾತ್ರ ವಹಿಸಿ ಶ್ರೀ ಗೌಡರ ಕೆಲಸಕ್ಕೆ ಚಾಲನೆಯಿತ್ತು ಸಚೇತನಗೊಳಿಸಿದರು. ಆಗಿನ ಪ್ರಾಚ್ಯ ಸಂಶೋಧನಾ ನಿರ್ದೇಶಕ ಶ್ರೀ ಶೇಷಾದ್ರಿ ಯುವರೂ ಇವರಿಗೆ ಸಹಾಯ ಹಸ್ತವನ್ನು ನೀಡಿದ್ದರು. ಒಂದು ರೀತಿಯಲ್ಲಿ ಈಗ ಯೋಜಿಸಿರುವ ಜಿಲ್ಲಾ ಮ್ಯೂಜಿಯಂ ಕಲ್ಪನೆಯ ರೂಪು ರೇಷೆಯು ಇವರಿಂದಲೇ ಸಂಸ್ಥಾಪಿಸಲ್ಪಟ್ಟಿತೆಂದ ಮೇಲೆ ಇದರ ಶ್ರೇಯಸ್ಸು ಶ್ರೀ ಗೌಡರಿಗೇ ಸಲ್ಲತಕ್ಕದಾಗಿದೆ ಎಂದು ಹೇಳಬಹುದು.

ಒಮ್ಮೆ ನಾನು ಜಿಲ್ಲಾಧಿಕಾರಿಗಳೊಡನೆ ಹಲವು ಸಮಯ ಸಮಾಲೋಚನೆಯೊಂದ ರಲ್ಲಿ ತೊಡಗಿದ್ದೆನು. ತಹಸೀಲ್ದಾರ್‌ರವರಲ್ಲಿ ಒಬ್ಬರು—ಒಂದು ಹಳ್ಳಿಯ ಪ್ರತಿಷ್ಠಿತ ರೊಬ್ಬರಲ್ಲಿರುವ ಅಪೂರ್ವ ವಸ್ತುವೊಂದು ಸಂಗ್ರಹಾಲಯದಲ್ಲಿಡಲು ಯೋಗ್ಯವಾಗಿರು ವುದಾಗಿ ಪ್ರಸ್ತಾಪಿಸುತ್ತಿದ್ದರು, ಕೂಡಲೇ ನನ್ನನ್ನು ಅಲ್ಲಿಗೆ ಕಳಿಸಿ ವಾಸ್ತವಿಕ ಸಂಗತಿ ಯನ್ನು ಸಂಗ್ರಹಿಸಲಾಯಿತು. ಆದರೆ ಆ ವಸ್ತುವಿನ ಮಾಲಿಕರು ವಿವಿಧ ರೀತಿಗಳಿಂದ ಪ್ರಯತ್ನಿಸಿದರೂ ಅದನ್ನು ಕೊಡಲು ಒಡಂಬಡಲಿಲ್ಲ, ಶ್ರೀ ನಾಗೇಗೌಡರಿಗೆ ಇದನ್ನು ನಿವೇದಿಸಿಕೊಳ್ಳಲಾಯಿತು, ಶ್ರೀ ಗೌಡರು ತಡಮಾಡದೇ ಮಾಲೀಕರಲ್ಲಿಗೇ ನೇರವಾಗಿ ಹೋಗಿ ಅನೇಕ ಬಗೆಗಳಲ್ಲಿ ಯಾಚಿಸಿ. ಬೇಡಿದರು, ಮ್ಯೂಜಿಯಂನಲ್ಲಿರುವುದರಿಂದ ಆಗುವ ಪ್ರಯೋಜನವನ್ನು ಆಮೂಲಾಗ್ರವಾಗಿ ವಿವರಿಸಿದರು. ಆ ವಸ್ತುವಿನ ಮಾಲಕರು ಏನೇನೋ ಸಬೂಬು ಹೇಳಿ ಹಲವು ಕಾಲ ತಪ್ಪಿಸಿಕೊಳ್ಳುತ್ತಿದ್ದರು, ಒಟ್ಟಿನಲ್ಲಿ ಅದು ಹೇಗೋ ಶ್ರೀ ಗೌಡರ ಪ್ರಭಾವದಿಂದಲೇ ಎಬಂತೆ ಆ ಜಿಲ್ಲಾ ವಸ್ತು ಸಂಗ್ರಹಾಲಯವನ್ನು ಸೇರಿತು.

ಶ್ರೀ ನಾಗೇಗೌಡರು ಗ್ರಾಮಕ್ಕೆ ಆಗಮಿಸಿದ ಕೂಡಲೇ ಮೊದಲು ವಿಚಾರಿಸುವುದು ಆ ಊರಿನ ಕಥೆಗಳು ಹಾಗೂ ಎಲ್ಲೆಲ್ಲಿ ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಭಗ್ನಾವ ಶೇಷಗಳು ದೊರಕುತ್ತವೆ ಎಂಬುದನ್ನು ತಿಳಿಯುವ ಪರಿಪಾಠವನ್ನಿಟ್ಟುಕೊಂಡಿದ್ದರು, ಅನೇಕ ಸಂದರ್ಭಗಳಲ್ಲಿ ಶ್ರೀ ಗೌಡರು ಕಾಲ್ನಡಗೆಯಿಂದ ತಾವೇ ನೇರವಾಗಿ ಅರಣ್ಯ

ಗಳಲ್ಲಿ ಸುತ್ತಾಡಿದ್ದೂ ಉಂಟು. ಹಲವಾರು ಕಂಟ್ರಾಕ್ಟರುಗಳನ್ನು ನಯವಿನಯಗಳಿಂದ ಮನ ಒಲಿಸಿ ಕಾಡಿನಲ್ಲಿ ಹಾಗೂ ಇತರೆಡೆಗಳಲ್ಲಿ ಅನಾಥರಂತೆ ಬಿದ್ದಿರುವ ಕಲ್ಲುಗಳೆಲ್ಲವನ್ನೂ ಮತ್ತು ಭಗ್ನಾವಶೇಷ ವಸ್ತುಗಳನ್ನೂ ಜಿಲ್ಲಾಧಿಕಾರಿಗಳ ಆಫೀಸಿಗೆ ತರಿಸುವುದು, ಅವುಗಳನ್ನು ಅಲ್ಲಿನ ಸಿಬ್ಬಂದಿಗಳಿಗೆ ವ್ಯವಸ್ಥಿತವಾಗಿರಿಸಲು ಏರ್ಪಡಿಸುವುದೇ ಒಂದು ದೊಡ್ಡ ಕೆಲಸವಾಗಿತ್ತು. ಒಬ್ಬ ಆಫೀಸ್ ಸಿಬ್ಬಂದಿಯು ಭಗ್ನಮೂರ್ತಿಯನ್ನು ಮುಟ್ಟಲೂ ಹೆದರುತ್ತಿದ್ದನು. ಅವನನ್ನು ಧೈರ್ಯತುಂಬಿ ಸಾಂತ್ವನಗೊಳಿಸುವ ಮೂಲಕ ಕಾರ್ಯ ಪ್ರವೃತ್ತನನ್ನಾಗಿಸಿದರು. ಅನೇಕ ಗ್ರಾಮಗಳಲ್ಲಿ ದೊರಕುವ ವಿಗ್ರಹ ಮುಂತಾದುವುಗಳನ್ನು ಆಯಾ ಹಳ್ಳಿಗಳ ಮುಖಂಡರಿಂದಲೇ ಶೇಖರಿಸುವಂತೆ ಮಾಡಿದರು. ನನಗೆ ಸಾಧ್ಯವಾಗದ ಹಲವು ವಿಶಿಷ್ಟ ಜವಾಬ್ದಾರಿಗಳಲ್ಲಿ ತಾವೇ ನೇರವಾಗಿ ಪ್ರವೇಶಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಫೋನ್ ಮೂಲಕ ವ್ಯವಹರಿಸಿ ಸರಿಪಡಿಸುತ್ತಿದ್ದರು. ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಇವರ ಸಾಮಾಜಿಕ ಕಾರ್ಯ ಚಟುವಟಿಕೆಗಳನ್ನು ಬಹುವಾಗಿ ಶ್ಲಾಘಿಸಿದ್ದರು. ಸರಕಾರದಿಂದ ಆರ್ಥಿಕ ಸೌಲಭ್ಯವನ್ನು ಪಡೆಯಲು ಶ್ರೀ ಗೌಡರು ಕಳಿಸಿದ ಅಂದಾಜುವರದಿಯನ್ನು ನೋಡಿದ ಮುಖ್ಯಮಂತ್ರಿಗಳು—ಇಂತಹ ಕೆಲಸಗಳಿಗೆ ಅಪಾರ ಹಣ ಬೇಕಾಗಿರುವುದರಿಂದ ಸಕೆ ಅಲ್ಪ ಹಣವನ್ನು ಮಾತ್ರ ಕೇಳಿದ್ದೀರಿ ಎಂಬ ಆಕ್ಷೇಪವನ್ನೆತ್ತಿದ್ದರು

ಶ್ರೀ ನಾಗೇಗೌಡರು ಐತಿಹಾಸಿಕ ಪ್ರಜ್ಞೆಯನ್ನು ತಮ್ಮ ಜೀವನದಲ್ಲಿ ಬೆಳೆಸಿಕೊಂಡವರು. ಇವರ ಅನೇಕ ಕೃತಿಗಳೇ ಇದಕ್ಕೆ ಸಾಕ್ಷಿಯಾಗಿವೆ. 'ಪ್ರವಾಸಿ ಕಂಡ ಇಂಡಿಯಾ' ಹೊತ್ತಿಗೆಯಲ್ಲಿ ಮೇಳೈಸಿರುವ ಇವರ ಅಧ್ಯಯನ ಶೀಲತೆಯನ್ನು ಕಂಡುಕೊಳ್ಳಬಹುದು. ಈ ಕಾರಣದಿಂದಲೇ ಶ್ರೀ ಗೌಡರಿಗೆ ಶಿವಮೊಗ್ಗದಲ್ಲಿ ಜಿಲ್ಲಾ ವಸ್ತು ಸಂಗ್ರಹಾಲಯವನ್ನು ಕಟ್ಟುವಲ್ಲಿ ಇವುಗಳೆಲ್ಲವೂ ವಿಶೇಷ ಸಹಕಾರಿಯಾಗಿ ಪರಿಣಮಿಸಿದವು. ಶ್ರೀ ಗೌಡರ ಈ ರೀತಿಯ ಸಾಮಾಜಿಕ ಸೇವೆ ಹಾಗೂ ಹಿಂದೂ ಸಂಸ್ಕೃತಿಯ ಪುನರುದ್ಧಾರಕ್ಕಾಗಿ ಪ್ರಾಚೀನ ವಸ್ತುಗಳ ಕಲೆ ಹಾಕುತ್ತಿರುವುದನ್ನು ಮನಗಂಡ ಪ್ರಮುಖರನೇಕರು ತಮ್ಮಲ್ಲಿದ್ದ ಅಪೂರ್ವ ಸಂಗ್ರಹಗಳನ್ನು ತಾವಾಗಿಯೇ ತಂದುಕೊಡಲು ಆರಂಭಿಸಿದರು. ಹಲವು ಸಂಗ್ರಾಹಕರು ಗೌಡರನ್ನು ಕಂಡ ಕೂಡಲೇ ತಮ್ಮ ಮನೆಗೇ ಕರದು ಕೊಂಡು ಹೋಗಿ ಆತಿಥ್ಯವಿತ್ತು ತಮ್ಮಲ್ಲಿದ್ದ ಅಪೂರ್ವ ಸಂಗ್ರಹಗಳನ್ನು ಉದಾರವಾಗಿತ್ತು ಕಳಿಸಿದ್ದೂ ಉಂಟು. ಹಳೇನಗರದ ದಿ. ಕೃಷ್ಣ ಉಪಾಧ್ಯರು ಕೆಳದಿ ಅರಸರ ಕಾಲದ ಅನೇಕ ಅಪೂರ್ವ ನಾಣ್ಯಗಳನ್ನು ಕಲೆ ಹಾಕಿದ್ದರು: ಈ ನಿಟ್ಟಿನಲ್ಲಿ ಅವುಗಳು ಶ್ರೀ ಗೌಡರನ್ನು ಅರಸಿಕೊಂಡು ಬಂದು ವಸ್ತು ಸಂಗ್ರಹಾಲಯಕ್ಕಾಗಿ ಅವರ ಬತ್ತಳಿಕೆ ಸೇರಿದುವು; ಅಂತೆಯೇ ಹಳೆಯ ಮನೆಗಳ ಯಾವುದೋ ಮೂಲೆಯಲ್ಲಿದ್ದ ಕತ್ತಿಗಳು, ತಾಮ್ರಪಟಗಳು ಗುರಾಣಿಗಳು, ಆಭರಣಗಳು, ವಿವಿಧ ಆಯುಧಗಳು, ತಾಳೆಗರಿಗಳು, ಕಡತಗಳು, ಫೋಟೋಗಳು, ನಿಲುವಂಗಿಗಳು ಮುಂತಾದುವುಗಳೆಲ್ಲವೂ ಸಂಗ್ರಹಿಸಲ್ಪಟ್ಟಿರುವುದನ್ನು

ಅವಲೋಕಿಸಬಹುದಾಗಿದೆ. ಸಾಗರ ಹಾಗೂ ಸ್ಲೊರಬದ ಗುಡಿಗಾರರ ಕುಶಲ ಕಲೆಗಳ ಸಂಗ್ರಹಗಳು ಸಂಗ್ರಹಾಲಯದಲ್ಲಿ ಶೋಭೆಯನ್ನು ತಂದಿವೆ. ಸ್ನಾತಕೋತ್ತರ ಅಧ್ಯಯನ ಶೀಲರಿಗೆ ಇದೊಂದು ವರದಾನವಾಗಿ ಪರಿಣಮಿಸಿದೆ.

ಅಮೇರಿಕಾದಿಂದ ಸಂಶೋಧನೆಗಾಗಿ ಪ್ರಮುಖ ವಿದ್ವಾಂಸರೋರ್ವರು ಈ ಜಿಲ್ಲೆಯ ಸಾಗರಕ್ಕೆ ಬಂದಾಗ ಅನೇಕ ಅಪೂರ್ವ ಕಲಾಕೃತಿಗಳನ್ನು ವಿದೇಶಗಳಿಗೆ ಕೊಂಡೊಯ್ದಿದ್ದರು, ನಾನು ಇವುಗಳನ್ನು ತಡೆದು ಶ್ರೀ ಗೌಡರಲ್ಲಿ ನಿವೇದಿಸಿಕೊಂಡಿದ್ದೆನು. ಅಳಿದುಳಿದುದನ್ನಾದರೂ ಒಂದೂ ಬಿಡದೆ ಸಂಗ್ರಹಿಸಲು ನನಗೆ ಸೂಚನೆ ನೀಡಿದ್ದರಿಂದ ಸಾಧ್ಯವಿದ್ದಷ್ಟು ಜನರ ಮನ ಒಲಿಸಿಕೊಂಡೇ ಸಂಗ್ರಹ ಕಾರ್ಯಗಳನ್ನು ಕೈಕೊಂಡೆವು.

ಈಗ ಸ್ಥಾಪಿಸಿ, ಕಲೆಹಾಕಿರುವ ಶಿವಮೊಗ್ಗ ಜಿಲ್ಲಾ ವಸ್ತು ಸಂಗ್ರಹಾಲಯದ ಸಂಗ್ರಹಗಳನ್ನು ಶಾಸ್ತ್ರೀಯ ರೀತಿಯಲ್ಲಿ ವ್ಯವಸ್ಥಿತವಾಗಿ ಪ್ರದರ್ಶಿಸಿದಲ್ಲಿ ಭಾರತದಲ್ಲಿರುವ ಮಥುರಾ ವಸ್ತು ಸಂಗ್ರಹಾಲಯಕ್ಕಿಂತಲೂ ಅಷ್ಟೇನೂ ಕಿರಿದಾಗುವುದಿಲ್ಲವೆಂಬುದನ್ನು ವಸ್ತು ಸಂಗ್ರಹಾಲಯ ತಜ್ಞರು ಮನಗಾಣಬಹುದಾಗಿದೆ.

ಶ್ರೀ ನಾಗೇಗೌಡರು ವಸ್ತುಸಂಗ್ರಹಾಲಯ ತಜ್ಞರಲ್ಲದಿದ್ದರೂ ಅವರಿಗಿಂತ ಕಡಮೆಯೇನಲ್ಲ ; ಅಲ್ಲದೆ ಆ ಗುಣದ ಪ್ರತಿಧ್ವನಿಯು ಅವರ ನಾಡಿ ನಾಡಿಗಳಲ್ಲಿಯೂ ಮಿಳಿತಗೊಂಡಿವೆಯೆನ್ನಬಹುದು. ಅವರ ಜೀವನದ ಸಾಧನೆಯಲ್ಲಿ ಶಿವಮೊಗ್ಗ ಜಿಲ್ಲಾ ವಸ್ತು ಸಂಗ್ರಹಾಲಯವು ಸ್ಮಾರಕದೋಪಾದಿಯಲ್ಲಿ ಆಜನ್ಮ ಪರಿಯಂತರವೂ ಅವರನ್ನು ರಾಷ್ಟ್ರಕ್ಕೆ ಕಾಣಿಕೆಯಿತ್ತ ಮಗನಂತೆ ಸ್ಮರಿಸುತ್ತದೆ.

ಡಾ. ಡಿ.ವಿ.ಜಿ. ಅವರೇ ನಿರೂಪಿಸಿದಂತೆ 'ಅನೇಕ ಸಂಶೋಧನೆಗಳನ್ನು ಕೈಗೊಳ್ಳಬಹುದು ; ಸಾಹಿತ್ಯ ಕೃತಿಗಳನ್ನು ಸಿದ್ಧಪಡಿಸಿ ರಚಿಸಬಹುದು. ಆದರೆ ಒಂದು ಸಂಸ್ಥೆಯನ್ನು ಸ್ಥಾಪಿಸುವುದು ಜೀವನದಲ್ಲಿ ಒಂದು ಮಹಾನ್ ಸಾಧನೆ.' ಶ್ರೀ ನಾಗೇಗೌಡರು ತಮ್ಮ ಅಧಿಕಾರವನ್ನು ಹಿಂದೂ ಧರ್ಮ ಸಂಸ್ಕೃತಿಯಲ್ಲಿ ಮಿಳಿತಗೊಳಿಸಿ ಸದುಪಯೋಗ ಪಡಿಸಿಕೊಂಡು, ಇದನ್ನು ಸಾಧಿಸಿ ಇತರರಿಗೆ ಮಾದರಿಯಾಗಿದ್ದಾರೆ ; ಭಾರತದಲ್ಲಿ ಇಂತಹ ಒಂದೊಂದನ್ನೂ ಆಯಾ ಸಂದರ್ಭ ಹಾಗೂ ವಸ್ತುನಿಷ್ಠೆಯ ಪ್ರಜ್ಞೆಗನುಗುಣವಾಗಿ ವಿವಿಧ ಕ್ಷೇತ್ರಗಳಲ್ಲಿ ಅಧಿಕಾರಿಗಳು ರಾಷ್ಟ್ರಕಾರ್ಯದಲ್ಲಿ ನಿರ್ವಹಿಸಬಲ್ಲರೆಂಬುದನ್ನು ಎತ್ತಿ ತೋರಿಸಿಕೊಟ್ಟಿದ್ದಾರೆ.

ಕೆಳದಿ ಮ್ಯೂಜಿಯಂ ಸ್ಥಾಪನೆಯಲ್ಲಿ ಶ್ರೀ ನಾಗೇಗೌಡರು ನನಗಿತ್ತ ಹಲವಾರು ಪ್ರೋತ್ಸಾಹಗಳು ನನ್ನನ್ನು ಕಾರ್ಯ ಪ್ರವೃತ್ತನನ್ನಾಗಿಸಿರುವುದರಿಂದ ಈ ಸಂದರ್ಭದಲ್ಲಿ ನನ್ನ ಅಲ್ಪ ಲೇಖನದ ಮೂಲಕ ಅವರನ್ನು ನೆನೆಯದಿರಲಾರೆನು.

೧೮ | ನಾಡು ನುಡಿ ಪ್ರೇಮಿ

ಪು. ತಿ. ನರಸಿಂಹಾಚಾರ್

ಶ್ರೀ ನಾಗೇಗೌಡರನ್ನು ಅಭಿನಂದಿಸುವ ಈ ಗ್ರಂಥದಲ್ಲಿ ನನ್ನದೊಂದೆರಡು ಮಾತುಗಳಿರಬೇಕೆಂದು, ಪ್ರೊ. ಜೀ. ಶಂ. ಪರಮಶಿವಯ್ಯನವರು ಅಪೇಕ್ಷಿಸಿರುವುದು ಆತ ನನ್ನಲ್ಲಿಟ್ಟಿರುವ ವಿಶ್ವಾಸವನ್ನು ತೋರಿಸುತ್ತದೆ. ಆ ಅಪೇಕ್ಷೆಯನ್ನು ನಾನು ಸಂತೋಷದಿಂದ ಸಲ್ಲಿಸುತ್ತಿದ್ದೇನೆ.

ಕೆಲವು ವರ್ಷಗಳ ಹಿಂದೆ ಮದ್ದೂರಿನಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನವೊಂದು ಅದ್ದೂರಿಯಿಂದ ನಡೆಯಿತು. ಆ ಸಮಾರಂಭದಲ್ಲಿ ಶ್ರೀಮಾನ್ ನಾಗೇಗೌಡರನ್ನು ಅಭಿನಂದಿಸಲಾಯಿತು. ಆ ಸ್ಥಳದವರ ಹಾಗೂ ವ್ಯವಸ್ಥಾಪಕರ ಔದಾರ್ಯ ಹಿರಿಯದು. ಶ್ರೀ ಗೌಡರ ಜತೆಗೆ ನನ್ನನ್ನೂ ಕೂರಿಸಿ ನನಗೂ ಒಂದು ಜರತಾರಿ ಶಾಲು ಹೊದ್ದಿಸಿ ಗೌರವಿಸಿದರು. ಅಲ್ಲಿನವರ ಪ್ರೀತಿ ವಿಶ್ವಾಸಗಳಿಗೆ ನಾವಿಬ್ಬರೂ ಸಮಭಾಗಿಗಳಾದೆವು. ಆ ಸಭೆಯಲ್ಲಿ ಶ್ರೀ ಗೌಡರು ಬಹಳ ಸ್ಫೂರ್ತಿಯಿಂದ ಮಾತನಾಡಿದರು. ಅವರ ಮಾತಿನಲ್ಲಿ ನಾಡು ನುಡಿಗಳ ಮಮತೆ ತುಂಬಿ ಹರಿಯುತ್ತಿತ್ತು. ಎದೆಯಾಳದಿಂದ ಬಂದ ನುಡಿಗಳವು; ಸದ್ಭಾವವನ್ನು ಎಲ್ಲೆಡೆಯೂ ಹರಿಸುವಂಥವು. ಅವರ ಆ ವಾಗ್ಮಿತೆ ಬಹು ಹೃದ್ಯವಾಗಿತ್ತು. ನಾನು ತುಂಬ ಉಲ್ಲಾಸಗೊಂಡೆ. ಅದಕ್ಕೂ ಹಿಂದೆ ಶ್ರೀಮಾನ್ ನಾಗೇಗೌಡರ ಅಮೋಘ ಕೃತಿಗಳಾದ "ಪ್ರವಾಸಿ ಕಂಡ ಇಂಡಿಯಾ" ಎಂಬ ಗ್ರಂಥ ಸಂಪುಟಗಳಲ್ಲಿ ಎರಡನೆಯದನ್ನು ಮಂಗಳೂರಿನಲ್ಲಿ ಉದ್ಘಾಟಿಸಲಾಯಿತು. ಆ ಪ್ರಕಾಶನವನ್ನು ಶ್ರೀಮಾನ್ ಪ್ರಭುಶಂಕರ ಅವರು ನನ್ನ ಕೈಯಿಂದ ಮಾಡಿಸಿದರು. ಶ್ರೀಮಾನ್ ನಾಗೇಗೌಡರು ಅಲ್ಲಿ ಆಗ ಜಿಲ್ಲಾಧಿಕಾರಿಗಳಾಗಿದ್ದರು. ನಾನು ಬಂದುದಕ್ಕೆ ಅವರು ತುಂಬ ಹರ್ಷಿತರಾದುದಲ್ಲದೆ ನನ್ನ ವಿಷಯದಲ್ಲಿ ತುಂಬ ಆತ್ಮೀಯವಾಗಿ ನಡೆದುಕೊಂಡು ವಿಶ್ವಾಸ ತೋರಿಸಿದರು. ಮದ್ದೂರಿನಲ್ಲಿ ನಾವು ಒಂದು ವೇದಿಕೆಯ ಮೇಲೆ ಕಲೆತಿದ್ದಾಗಲೂ ಈ ವಿಶ್ವಾಸ ಹೊರಸೂಮ್ಮಿತ್ತು.

ಇದಾದಮೇಲೆ ಅವರ ಮಗನ ಮದುವೆ ಮೈಸೂರಿನಲ್ಲಿ ಜರುಗಿದಾಗ ನಾನು ಆ ಸಮಾರಂಭಕ್ಕೆ ಹೋಗಿದ್ದೆ. ಕಣ್ತುಂಬ ನೋಡಿ ಆನಂದಪಡುವಂಥ ಜೋಡಿ ಅದು, ಆ ವಧೂವರರದು. ಶ್ರೀ ನಾಗೇಗೌಡರು ತುಂಬ ಮಮತೆಯಿಂದ ನನ್ನನ್ನು ಮಾತಾಡಿಸಿ ವಧುವರರಿಗೆ ಪರಿಚಯ ಮಾಡಿಸಿಕೊಟ್ಟರು. ಹೀಗೆ ಅವರ ವಿಶ್ವಾಸ ನನ್ನ ವಿಷಯದಲ್ಲಿ ಕುಂದದೆ ಬೆಳೆಯುತ್ತಲೇ ಬಂದಿದೆ.

ಅಧಿಕಾರದಲ್ಲಿರುವವರು ಸರಸಸಾಹಿತಿಗಳಾಗಿರುವುದು ಅಪರೂಪ. ಈ ದಿಸೆಯಲ್ಲಿ ಶ್ರೀ ನಾಗೇಗೌಡರಂಥವರು ತುಂಬ ವಿರಳ. ನಾಡುನುಡಿಯಲ್ಲೂ ಕಲೆಗಳಲ್ಲೂ ಅಪಾರವೂ ಕುಶಲವೂ ಆದ ಆಸಕ್ತಿಯನ್ನು ಶ್ರೀ ಗೌಡರು ತಳೆದಿದ್ದಾರೆ. ಅವರು "ಸೋಬಾನೆ ಚಿಕ್ಕಮ್ಮ"ನನ್ನು ನಮಗೆ ಪರಿಚಯ ಮಾಡಿಕೊಡುವ ರೀತಿ ಅನ್ಯಾದೃಶವಾಗಿದೆ. ಆಕೆಯ ಮಾತಿನಲ್ಲೇ ಆಕೆಯ ಕತೆಯನ್ನು ರೇಖಿಸಿರುವುದು ಕಲೆಯ ಪರಿಣತ ಜಾಣ್ಮೆಯನ್ನು ತೋರಿಸುತ್ತದೆ. ಬದುಕಿನಲ್ಲಿ ಪಡಬಹುದಾದ ಕಷ್ಟಕಾರ್ಪಣ್ಯಗಳಿಗೆ ತಾನು ತುತ್ತಾಗಿದ್ದರೂ ಖುಷಿಗೆಡದಿರುವ ಆಕೆಯ ಜೀವಸತ್ವ ತುಂಬ ದೊಡ್ಡದು. ಬಹು ಮನೋಜ್ಞವಾಗಿದೆ ಆ ನಿರೂಪಣೆ. ಶ್ರೀ ನಾಗೇಗೌಡರು ಒಂದು ಉಜ್ವಲರತ್ನವನ್ನು ಕನ್ನಡ ಸಾಹಿತ್ಯಕ್ಕೆ ಈ ಕತೆಯ ಮೂಲಕ ಅರ್ಪಿಸಿದ್ದಾರೆ. ಅವರ ಶಾಸ್ತ್ರೀಯವಾದ ಬರವಣಿಗೆಯಲ್ಲೂ ಸ್ವಾರಸ್ಯಕ್ಕೆ ಏನೂ ಕಡಮೆಯಿಲ್ಲ. ಉದಾಹರಣೆಗೆ, ಕಾಫಿಯ ವ್ಯವಸಾಯವನ್ನು ಕುರಿತ "ಬೆಟ್ಟದಿಂದ ಬಟ್ಟಲಿಗೆ" ಎಂಬ ಸುಂದರ ಶೀರ್ಷಿಕೆಯ ಅವರ ಗ್ರಂಥವನ್ನು ಓದಿ ನೋಡಬಹುದು. ಅವರ "ಪ್ರವಾಸಿ ಕಂಡ ಇಂಡಿಯಾ" ಸಂಪುಟಗಳಂತೂ ಅವರ ಶ್ರದ್ಧೆಯ ಹಾಗೂ ಬುದ್ಧಿಯ ಬಹು ಶ್ರೇಷ್ಠ ಮಟ್ಟವನ್ನು ತೋರಿಸುತ್ತವೆ. ಕನ್ನಡದಲ್ಲಿ ಭಾರತದ ಚರಿತ್ರೆಯನ್ನು ಬರೆಯುವವರಿಗೆ ಆಕರ ಗ್ರಂಥಗಳಿವು. ಜತೆಗೆ ಶ್ರೀ ನಾಗೇಗೌಡರು ಕತೆ, ಕಾದಂಬರಿ ಕವನಗಳನ್ನೂ ಬರೆದಿದ್ದಾರೆ. ಅವುಗಳ ವಿಮರ್ಶೆ ಈ ಅಭಿನಂದನ ಗ್ರಂಥದಲ್ಲಿ ಓದುಗರಿಗೆ ದೊರೆಯುತ್ತದೆ. ಜ್ಞಾನಕ್ಕೂ ರಸಕ್ಕೂ ಹಂಬಲಿಸುವ ಚೇತನ ಶ್ರೀ ಗೌಡರವರದು. ಇಂಥ ಚೇತನಗಳು ನಮ್ಮ ನಾಡು ಅಭ್ಯುದಯ ಪಥದಲ್ಲಿರುವುದನ್ನು ದ್ಯೋತಿಸುತ್ತವೆ. ಇಂಥವರ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸಿ, ಅವರ ಸತ್‌ಪ್ರವರ್ತನೆಯಿಂದ ನಾಡು ಮತ್ತು ನುಡಿಗಳಿಗೆ ಆಗಿರುವ ಮತ್ತು ಆಗುತ್ತಿರುವ ಉಪಕಾರವನ್ನು ಸ್ಮರಿಸಿ ಈ ರೀತಿ ಅಭಿನಂದಿಸುವುದು ಕನ್ನಡಿಗರು ಗುಣ ಗ್ರಾಹಿಗಳೆಂಬುದಕ್ಕೆ ಸಾಕ್ಷಿಯಾಗಿದೆ.

ಮಿತ್ರರು ಹಾಗೂ ಸಹೃದಯರ ಜತೆಗೆ ನಾನೂ ಸೇರಿಕೊಂಡು ಶ್ರೀಮಾನ್ ನಾಗೇಗೌಡರನ್ನು ಹಾರ್ದವಾಗಿ ಅಭಿನಂದಿಸುತ್ತೇನೆ. ಸರ್ಕಾರಿ ಕೆಲಸದಿಂದ ವಿಶ್ರಾಂತಿ ಹೊಂದಿರುವ ಶ್ರೀಯುತರು ಇನ್ನು ಮುಂದೆ ತಮ್ಮನ್ನು ತಾವು ಸಂಪೂರ್ಣವಾಗಿ ನಾಡಿಗೂ ನುಡಿಗೂ ಕಲೆಗಳಿಗೂ ನಿವೇದಿಸಿಕೊಳ್ಳಬಹುದಲ್ಲವೆ ?

ದೇವರು ಶ್ರೀ ಗೌಡರನ್ನು ಸದಾ ಚೆನ್ನಾಗಿ ಇಟ್ಟಿರಲಿ.

೧೯ ನಾಗೇಗೌಡರು ನೂರು ವರುಷ ಬಾಳಲಿ

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಶ್ರೀಮಾನ್ ಹೆಚ್. ಎಲ್. ನಾಗೇಗೌಡರು ದೀರ್ಘಾವಧಿಯ ಸರ್ಕಾರಿ ನೌಕರಿಯಿಂದ ಈಗ ನಿವೃತ್ತರಾಗಿದ್ದಾರೆ. ಇನ್ನು ಅವರ ಉಳಿದ ಕಾಲ ಸಾಹಿತ್ಯ ಮತ್ತು ಜಾನಪದಕ್ಕೆ ಮೀಸಲು. ಇದರಿಂದ ಜನತೆಗೆ ಲಾಭ ಮತ್ತು ಪ್ರಯೋಜನ.

ಶ್ರೀಮಾನ್ ನಾಗೇಗೌಡರು, ಸರ್ಕಾರಿ ವೃತ್ತಿಯಲ್ಲಿದ್ದಾಗಲೂ ಸಾಹಿತ್ಯ ಕಾರ್ಯವನ್ನೂ ಮಾಡುತ್ತಿದ್ದರು. ಅವರು ಬರೆದಿರುವ "ಪ್ರವಾಸಿ ಕಂಡ ಇಂಡಿಯಾ"ದ ಸಂಪುಟಗಳು, ಜಗತ್ತಿನ ದೃಷ್ಟಿಯಲ್ಲಿ ಭಾರತ ಹೊಂದಿದ್ದ ಉನ್ನತಸ್ಥಾನವನ್ನು ತೋರಿಸುತ್ತವೆ. ಇದರಿಂದ ಭಾರತದ ಸಂಸ್ಕೃತಿ, ಹಿರಿಮೆಯನ್ನೇ ಅರಿಯದ, ಅರಿಯಲು ಪ್ರಯತ್ನಿಸದ—ನಮ್ಮ ಆಧುನಿಕರಿಗೆ (ಯುವಜನಾಂಗಕ್ಕೆ) ಭಾರತದ ಆಧ್ಯಾತ್ಮ ಔನ್ನತ್ಯ. ಚಾರಿತ್ರ್ಯಿಕ ಹಿರಿಮೆ, ಸಾಹಿತ್ಯ ವೇದಾಂತಗಳ ಪರಾಕಾಷ್ಠೆ ಇವುಗಳ ಪರಿಚಯವಾಗುತ್ತದೆ. ಇದೇನೂ ಸಣ್ಣ ಪ್ರಯೋಜನವಲ್ಲ.

ಇದಲ್ಲದೆ ನಾಗೇಗೌಡರು ಅನೇಕ ಸ್ವತಂತ್ರ ಸೃಜನಶೀಲ ಕೃತಿಗಳನ್ನು ರಚಿಸಿದ್ದಾರೆ. ಅವರ "ನನ್ನೂರು", "ದೊಡ್ಡಮನೆ" ಮುಂತಾದ ಗ್ರಂಥಗಳು ನಮ್ಮ ನಾಡಿನ—ಈಗಾಗಲೇ ಮರೆಯಾಗುತ್ತಿರುವ ಗ್ರಾಮಜೀವನದ ಚಿತ್ರಣವನ್ನೂ, ಗ್ರಾಮಜೀವನದ ಅತ್ಯುತ್ಕೃಷ್ಟ ಅಂಶವನ್ನೂ, ಗ್ರಾಮಜೀವನದಿಂದ ನಾವು ಅರಿಯಬಹುದಾದ ಸರಳಸುಂದರ ಜೀವನ ವೇದಾಂತವನ್ನೂ ನಮಗೆ ಪ್ರತ್ಯಕ್ಷಮಾಡಿ ಕೊಡುತ್ತವೆ. ಇವರು ಒಳ್ಳೆಯ ಕಾದಂಬರಿಕಾರರೂ ಹೌದು. ಯಾವ ವಸ್ತುವನ್ನು ಕೈಗೆತ್ತಿಕೊಂಡರೂ ಅದಕ್ಕೆ ಸುಂದರರೂಪವನ್ನು ಕೊಟ್ಟು ಆಕರ್ಷಣೀಯವಾಗಿ ಮಾಡಿ ನಮ್ಮ ಮುಂದೆ ನಿಲ್ಲಿಸುತ್ತಾರೆ.

ಜಾನಪದದಲ್ಲಿ ಇವರ ಶ್ರದ್ಧೆ ಅಪಾರ. ಜಾನಪದದಲ್ಲಿ ತುಂಬ ಕೆಲಸ ಮಾಡಿದ್ದಾರೆ. ಮಂಗಳೂರು, ನಾಗಮಂಗಲಗಳಲ್ಲಿ ಜಾನಪದ ಸಮ್ಮೇಳನ, ಮೇಳಗಳನ್ನು ಅತ್ಯುತ್ತಮವಾಗಿ ನಡೆಸಿ,—ಎಲ್ಲ ವ್ಯವಸ್ಥೆಯನ್ನೂ ವಹಿಸಿ ತುಂಬ ಅಚ್ಚುಕಟ್ಟಾಗಿ ನಡೆಸಿ ಜನಪದ ಕಲಾವಿದರಿಗೆ ಪ್ರೋತ್ಸಾಹವನ್ನು ಕೊಟ್ಟರು. ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೆಲಸ ಮಾಡಿದ್ದಾರೆ. ಸರ್ಕಾರಿ ಅಧಿಕಾರದಲ್ಲಿ ದೀರ್ಘಕಾಲ ಇದ್ದು, ನಾನಾ ಅನುಭವಗಳ ಲಾಭ, ಗ್ರಾಮಾಂತರ ಪ್ರದೇಶಗಳ ನಿಕಟಪರಿಚಯ, ಸಮಸ್ಯೆಯ ಅಧ್ಯಯನ

ಇವುಗಳನ್ನು ಪಡೆದಿದ್ದಾರೆ. ನಿವೃತ್ತರಾದರೂ ಆರೋಗದೃಢಕಾಯರೂ ಉತ್ಸಾಹಿಗಳೂ ಆಗಿರುವುದರಿಂದ, ಇವರಿಂದ ಸಾಹಿತ್ಯಕಾರ್ಯದ ಒಂದು ನವಪರ್ವವನ್ನು ನಾವು ನಿರೀಕ್ಷಿಸಬಹುದು.

ಶ್ರೀಮಾನ್ ಹೆಚ್. ಎಲ್. ನಾಗೇಗೌಡರು, ತಮ್ಮ ಬಾಳಿನ ಮತ್ತು ಕೃತಿಗಳ ಪರಿಪಕ್ವಫಲ, ಸಹೃದಯತೆ ಉನ್ನತ ಮೌಲ್ಯಗಳನ್ನು ಪ್ರದರ್ಶಿಸುತ್ತ, ನೂರುಕಾಲ ನಮ್ಮೊಂದಿಗೆ, ನಮ್ಮ ನಡುವೆ ಇರುವಂತೆ ಭಗವಂತ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

೨೦ ಪರಂಪರೆಯ ಪ್ರತಿಮೂರ್ತಿ

ಬಿ. ನಂಜುಂಡಪ್ಪ

ಶ್ರೀ ನಾಗೇಗೌಡರು ನನ್ನ ಹತ್ತಿರದ ಬಂಧು. ಅವರು ಮತ್ತು ನಾನು ನಮ್ಮ ಬಾಲ್ಯದ ದಿನಗಳಲ್ಲಿ ಕೆಲವು ಕಾಲ ಒಟ್ಟಿಗೆ ಇದ್ದವರು. ನಾನು ಹೆರಗನಹಳ್ಳಿಯಲ್ಲಿದ್ದೆ. ಆಳೀ ಸಂದ್ರದಲ್ಲಿ ಸೊಳ್ಳೇಕೊಪ್ಪಲು ಕೆಂಪೇಗೌಡರಿಂದ ಖಾಸಗಿಯಾಗಿ ಪಾಠ ಹೇಳಿಸಿಕೊಂಡು ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕುಳಿತಿದ್ದೆವು. ಆಗ ಶ್ರೀರಂಗಪಟ್ಟಣದಲ್ಲಿ ಈ ಪರೀಕ್ಷೆ ನಡೆಯುತ್ತಿದ್ದಿತು. ಹಳ್ಳಿಗಳಲ್ಲಿ ಓದುವ ಹುಡುಗರಿಗೆ ಪಟ್ಟಣದವರಂತೆ ದಿನದ ಇಪ್ಪತ್ತು ನಾಲ್ಕು ಗಂಟೆ ಕಾಲವೂ ಓದುವುದೇ ಕೆಲಸವಲ್ಲ. ಆತ ಮನೆಯ ಕೆಲಸಗಳಿಗೂ ನೆರವಾಗಬೇಕು. ಅನೇಕ ಗ್ರಾಮಾಂತರದ ಪ್ರತಿಭಾವಂತ ಮಕ್ಕಳು ಓದದೆ ಹಿಂದುಳಿಯಲು ಈ ಪರಿಸರವೂ ಒಂದು ಕಾರಣ ಎಂದು ನನಗನ್ನಿಸುತ್ತದೆ. ಇಂದಿಗೂ ಹಳ್ಳಿಯ ಮಕ್ಕಳಿಗೆ ಸರಿಯಾದ ವಾತಾವರಣ ಉಂಟಾಗಿಲ್ಲ. ಅದೇ ಮುರುಕಲು ಶಾಲೆಗಳು, ಅನಾಸಕ್ತ ಉಪಾಧ್ಯಾಯರು. ನಮ್ಮ ಸರ್ಕಾರ ಮತ್ತು ಪ್ರಜಾಪ್ರತಿನಿಧಿಗಳು ಸದಾ ನಗರ ಜೀವನಕ್ಕೆ ಅನುಕೂಲ ಕಲ್ಪಿಸುವುದರಲ್ಲಿಯೇ ನಮ್ಮ ಹಣದ ಬಹುಭಾಗವನ್ನು ಖರ್ಚು ಮಾಡುತ್ತಿದ್ದಾರೆ.

ಹೆರಗನಹಳ್ಳಿಯಲ್ಲಿದ್ದಾಗ ನಾನು ಮತ್ತು ನಾಗೇಗೌಡರು ಮನೆಯ ಸಣ್ಣ ಪುಟ್ಟ ಕೆಲಸಗಳು—ತೆಂಗಿನ ಸಸಿ ಹುಳ ನೋಡುವುದು, ಕುರಿ ಮರಿಗಳಿಗೆ ಅಕ್ಕಿಮರಿ ಹುಲ್ಲು ಕಿತ್ತುತರುವುದು, ಆರು ಉಳುವುದು, ಕೊಪ್ಪಲಿನಿಂದ ಹುಲ್ಲು ಓರಿದು ತರುವುದು—ಹೀಗೆ ಮಾಡುತ್ತಿದ್ದೆವು. ಇವುಗಳೊಂದಿಗೆ ಅಲೆತ ಮತ್ತು ಆಟಗಳು ಇದ್ದೇ ಇರುತ್ತಿದ್ದುವು. ಆ ಪ್ರಕೃತಿ ಮಧ್ಯದಲ್ಲಿ ಕಳೆದ ದಿನಗಳು ಈಗ ಸ್ಮರಣೆಗೆ ಬಂದರೆ ಸಂತೋಷವಾಗುತ್ತದೆ. ಆ ದಿನಗಳು ಮನುಷ್ಯನ ಜೀವನದಲ್ಲಿ ಮರೆಯಲಾರದಂತಹವು. ಇಂತಹ ಸುಂದರ ದಿನಗಳನ್ನು ನಾನು ಮತ್ತು ನಾಗೇಗೌಡರು ಒಟ್ಟಿಗೆ ಕಳೆದೆವು.

ನಮ್ಮ ತಂದೆಯವರು ಲಿಂಗೇಗೌಡರಲ್ಲಿ "ಇವನು ಸರಿಯಾಗಿ ಓದುವುದಿಲ್ಲ. ನಿಮ್ಮ ಹುಡುಗನ ಜೊತೆ ಸೇರಿಸಣ್ಣ" ಎಂದು ಹೇಳಿ ನನ್ನನ್ನೂ ಗೌಡರನ್ನೂ ಚನ್ನಪಟ್ಟಣದಲ್ಲಿ ಪ್ರೌಢಶಾಲೆಗೆ ಸೇರಿಸಿದರು. ಆ ಕಾಲದಲ್ಲಿ ಚನ್ನಪಟ್ಟಣದ ಒಕ್ಕಲಿಗರ ವಿದ್ಯಾರ್ಥಿನಿಲಯ ಗ್ರಾಮಾಂತರದ ವಿದ್ಯಾರ್ಥಿಗಳಿಗೆ ವರವಾಗಿ ಪರಿಣಮಿಸಿತ್ತು. ನಾನು ಮತ್ತು ನಾಗೇಗೌಡರು ಚನ್ನಪಟ್ಟಣದಲ್ಲಿ ಮತ್ತೆ ಒಟ್ಟಿಗೆ ಸೇರಿದೆವು. ಓದೋದನ್ನು ಬಿಟ್ಟು ಮಿಕ್ಕೆಲ್ಲಾ ವಿಚಾರಗಳಲ್ಲಿಯೂ ನಾವಿಬ್ಬರೂ

ಸಮಾನಧರ್ಮಿಗಳು ಎಂದೇ ನನ್ನ ಭಾವನೆ. ಶ್ರೀ ನಾಗೇಗೌಡರು ಮೊದಲಿಂದಲೂ ಓದಿನಲ್ಲಿ ಮುಂದೆಯೇ. ನಾನು ಅದು ಸಹವಾಸ ದೋಷ ಎಂದು ಹೇಳಬೇಕೋ ಏನೊ ತಿಳಿಯದು, ಓದಿನಲ್ಲಿ ಹಿಂದು. ಹೀಗಾಗಿ ಅವರು ಎಸ್.ಎಸ್.ಎಲ್.ಸಿ., ಪಾಸಾಗಿ ಕಾಲೇಜು ಸೇರಿದರು. ನಾನು ಊರು ಸೇರಿದೆ. ಆದರೂ ಶಕ್ತಿಮೀರಿ ಕನ್ನಡ ಮತ್ತು ಇಂಗ್ಲಿಷ್ ಪರಿಚಯ ಮಾಡಿಕೊಂಡೆನೆಂಬ ಆತ್ಮವಿಶ್ವಾಸ ನನಗೆ.

ಚನ್ನಪಟ್ಟಣದಲ್ಲಿದ್ದಾಗ ನಾಗೇಗೌಡರು ತಮ್ಮ ಪಾಡಿಗೆ ತಾವು ಓದುತ್ತಿದ್ದರು. ಅಧ್ಯಾಪಕರು ಕೊಡುತ್ತಿದ್ದ ಹೋಂವರ್ಕ್ ನಿಗದಿಯಾಗಿ ಮಾಡುತ್ತಿದ್ದ ಕೆಲವರಲ್ಲಿ ನಾಗೇಗೌಡರು ಒಬ್ಬರು. ಅಂದ ಮಾತ್ರಕ್ಕೆ ಅವರು ಪುಸ್ತಕದ ಹುಳು ಎಂದು ನನ್ನ ಅಭಿಪ್ರಾಯವಲ್ಲ. ಒಕ್ಕಲಿಗರ ವಿದ್ಯಾರ್ಥಿನಿಲಯದ ಹುಡುಗರೆಲ್ಲ ಸೇರಿ ಒಂದು ನಾಟಕ ಆಡಿದೆವು. ನಾಗೇಗೌಡರು ಅದರಲ್ಲಿ ಅಮಾನನ ಪಾತ್ರವಹಿಸಿದ್ದರು. ಬಹಳ ಸೊಗಸಾಗಿ ಅಭಿನಯಿಸಿ ಪ್ರೇಕ್ಷಕರ ಮನಸ್ಸನ್ನು ಸಂತೋಷಪಡಿಸಿದರು. ನಾನೂ ಸಹ ಆ ನಾಟಕದಲ್ಲಿ ಒಂದು ಪಾತ್ರ ವಹಿಸಿದ್ದೆ. ಅದು ಹೇಗಿತ್ತೋ ದೇವರೇ ಬಲ್ಲ. ಬೆಳೆಯುವ ಪೈರು ಮೊಳಕೆಯಲ್ಲಿ ನೋಡು ಎಂಬ ಮಾತಿದೆ. ಶ್ರೀ ನಾಗೇಗೌಡರು ಓದುವುದರಲ್ಲಿ ಹೇಗೆ ಮೊದಲ ಮಟ್ಟದಲ್ಲಿದ್ದರೊ ಹಾಗೆಯೇ ಪಠ್ಯೇತರ ವಿಷಯಗಳಲ್ಲಿಯೂ ಮೊದಲ ಮಟ್ಟದಲ್ಲಿಯೇ ಇದ್ದರು.

ನಾಗೇಗೌಡರು ಪದವೀದರರಾಗಿ ಎಲ್. ಎಲ್. ಬಿ. ಓದಲು ಪೂನಾಕ್ಕೆ ಹೋಗಿ ಬಂದರು. ನಮ್ಮಲ್ಲಿ ಬೊಂಬಾಯಿಗೆ ಹೋಗಿ ಕೂಲಿ ಕೆಲಸಮಾಡಿ ಬರುವವರೂ ನಮ್ಮ ಹಳ್ಳಿಗಳ ಪದ್ಧತಿ ಪರಂಪರೆಗಳನ್ನು ಟೀಕಿಸಿಬಿಡುತ್ತಾರೆ. ಆದರೆ ನಾಗೇಗೌಡರು ಎರಡು ಪದವಿ ಪಡೆದರೂ ನಮ್ಮ ಹಳ್ಳಿಯ ಊಟ ತಿಂಡಿಗಳ ಬಗ್ಗೆ ಅನಾದರ ತಳೆದವರಲ್ಲ. ಹುರಿದವರೆಕಾಳು ಮತ್ತು ಸೊಪ್ಪು ಸೇರಿದ ಬಸಿದ ಸಾರು, ಬಿಸಿ ಮುದ್ದೆ ಅವರಿಗೆ ಅತ್ಯಂತ ಪ್ರಿಯವಾದ ಊಟ. ಅವರು ಕೆಲಸಕ್ಕೆ ಸೇರಿದ ಎಷ್ಟೋ ವರ್ಷಗಳ ನಂತರ ಒಮ್ಮೆ ನಾನು ಅವರ ಮನೆಗೆ ಹೋದೆ. ಆ ದಿನ ಅವರ ಪ್ರೀತಿಯ ಹುರಿದರೆ, ಸೊಪ್ಪು, ಬಸಿದ ಸಾರು, ಬಿಸಿ ಮುದ್ದೆ. ಇಂದಿಗೂ ಅದು ಅವರ ಅತ್ಯಂತ ಪ್ರೀತಿಯ ಊಟವಾಗಿಯೇ ಉಳಿದಿದೆ. ಈ ಮಾತುಗಳನ್ನು ನಾನು ಹೇಳಲು ಕಾರಣ, ನಾಗೇಗೌಡರ ಸಂಸ್ಕೃತಿಯ ತಾಯಿಬೇರು ಇಂದಿಗೂ ಹಳ್ಳಿಯಲ್ಲಿಯೇ ಇದೆ ಎಂಬುದನ್ನು ಮನದಟ್ಟು ಮಾಡಲು. ಅಮಲ್ದಾರರಾಗಿ ಸೇರಿದ ಅವರು ಐ. ಎ. ಎಸ್. ದರ್ಜೆಗೇರಿ, ಸರ್ಕಾರದ ಅತ್ಯುನ್ನತ ಪದವಿಗಳನ್ನಲಂಕರಿಸಿ, ನವನಾಗರಿಕತೆಯನ್ನು ಕಂಡರೂ, ಅದು ತಮ್ಮ ಸುತ್ತ ತಮ್ಮ ಮನೆಯಲ್ಲೇ ಇದ್ದರೂ ಅದರಲ್ಲಿ ನೀರೊಳಗಿನ ತಾವರೆ ಎಲೆಯಂತೆ ಉಳಿದ ಗೌಡರ ಶಕ್ತಿ, ಆ ಗುಣ ದೊಡ್ಡದು. ಇಂದಿಗೂ ಅವರು ಹಳ್ಳಿಗಳಿಗೆ ಬಂದಾಗ ಪಡುವಷ್ಟು ಆನಂದವನ್ನು ನಗರದಲ್ಲಿ ಪಡುವುದಿಲ್ಲ ಎಂಬುದನ್ನು ನಾನು ಹತ್ತಿರದಿಂದ ಅರಿತು ಬಲ್ಲೆ.

ಲೋಕ ಸೇವಾ ಆಯೋಗದ ಸದಸ್ಯರಾಗಿ ನಾಗೇಗೌಡರ ಸೇವೆ ಅಮೋಘವಾದುದು. ಈ ಕೆಲಸ ಎಷ್ಟು ಉಪಯುಕ್ತವೋ ಅಷ್ಟೇ ಅಪಾಯಕಾರಿಯಾದುದು. ಒಂದು ರೀತಿಯಲ್ಲಿ ತೆಗಳಿಕೆಗೆ, ಅನುಮಾನಕ್ಕೆ ಅಸ್ಪದ ಕೊಡುವಂಥ ಸ್ಥಾನ ಅದು. ಆದರೆ ನಾಗೇಗೌಡರು ತುಂಬಾ ನಿರ್ಲಿಪ್ತರಾಗಿ, ದಕ್ಷತೆಯಿಂದ ಅದನ್ನು ನಿಭಾಯಿಸಿದರು. ತೀರಾ ಹತ್ತಿರದ ಬಂಧುಗಳಾದ ನಾವು ಸಹ ಅವರಿಗೆ ಏನಾದರೂ ಶಿಫಾರಸು ಮಾಡಬೇಕೆಂದರೆ ಹಿಂದೆಮುಂದೆ ನೋಡುತ್ತಿದ್ದೆವು. ಆದರೆ ಬಡವರಿಗೆ, ದೀನದಲಿತರಿಗೆ ಅವರ ಹೃದಯ ಮರುಗಿ ಕಣ್ಣೀರು ಸುರಿಸುವುದುಂಟು. ಅವರು ತಮ್ಮ ಅಧಿಕಾರದ ಎಲ್ಲಾ ಹಂತದಲ್ಲಿಯೂ ಹೀಗೆಯೇ ನಡೆದುಕೊಂಡು ಬಂದಿದ್ದಾರೆಂಬುದರಲ್ಲಿ ಅನುಮಾನವಿಲ್ಲ. ಅದನ್ನು ನಾನು ಕಂಡಿದ್ದೇನೆ, ಕೇಳಿದ್ದೇನೆ.

ಗ್ರಾಮಕಲೆಗಳ ಬಗ್ಗೆ ನಾಗೇಗೌಡರಿಗೆ ಅಪಾರ ಅಭಿಮಾನ. ಅವರೆಷ್ಟು ಅವಸರದಿಂದ ಧಾವಿಸುತ್ತಿರಲಿ ಒಂದು ತಂಬೂರಿಯ ನಾದ, ಒಂದು ತಮಟೆಯಸದ್ದು, ಕಹಳೆಯ, ಕೂಗು ಕಿವಿಗೆ ಬಿದ್ದರೆ ಅವಸರ ಮರೆತು ಅತ್ತ ತಿರುಗುವರು. ತಮ್ಮ ಇಂತಹ ಕೆಲಸಗಳಿಗೆ ಅವರು ನಮ್ಮ ಕೋನೇಹಳ್ಳಿಗೆ ಅನೇಕ ಸಲ ಬಂದುದುಂಟು. ಆಗೆಲ್ಲ ಈ ಕಲೆಗಳ ಬಗೆಗೆ ಅವರ ಆಸಕ್ತಿ ಕಂಡು ನಾನು ಬೆರಗಾಗಿದ್ದೇನೆ. ಈ ವಿಷಯ ಕುರಿತ ಅನೇಕ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಈಗ ನಿವೃತ್ತರಾಗಿರುವ ಅವರು ಈ ಕಾರ್ಯ ಇನ್ನೂ ಹೆಚ್ಚು ಹೆಚ್ಚಾಗಿ ಮಾಡುತ್ತಾರೆಂದು ನಮಗೆ ಗೊತ್ತು. ಶ್ರೀ ನಾಗೇಗೌಡರು ಒಳ್ಳೆಯ ನೆಂಟರು. ಅಧಿಕಾರಿ ಅದರಲ್ಲೂ ಉನ್ನತ ಅಧಿಕಾರಿಯಾದ ನೆಂಟರು ಯಾವಾಗಲೂ ಅಪಾಯಕಾರಿ, ಅಹಂಕಾರಿಯಾಗುವುದುಂಟು. ಆದರೆ ಇವರು ನಮ್ಮಲ್ಲಿ ನಮ್ಮವರು. ಹಳ್ಳಿಗರಲ್ಲಿ ಹಳ್ಳಿಗರು. ಈ ನನ್ನ ಬಂಧು ನೂರ್ಕಾಲ ನಮ್ಮೊಂದಿಗೆ ಹಾಯಾಗಿ ಬದುಕಿರಲಿ.

೨೧ | ನಾಗೇಗೌಡರು—ಕೆಲವು ನೆನಪುಗಳು

ಪಿ. ಆರ್. ತಿಪ್ಪೇಸ್ವಾಮಿ

1955–56 ರ ಸಮಯ. ನಾಗೇಗೌಡರ ಹೆಸರನ್ನು ನನ್ನ ಚಿಕ್ಕಪ್ಪ ದೇವಯ್ಯ ನವರು ಆಗಾಗ ನೆನಪುಮಾಡಿಕೊಳ್ಳುತ್ತಿದ್ದರು. ಮೊದಲ ಸಾರಿ ಇವರ ಸಂದರ್ಶನ ಮಾಡಿದ್ದು ಮೈಸೂರಿನಲ್ಲಿ. ಇವರು ಆಗ ಫುಡ್ ಆಫೀಸರ್ ಆಗಿದ್ದರು. ಮಿತ್ರ ಕ. ರಾ. ಕೃಷ್ಣಸ್ವಾಮಿ ನಾಗೇಗೌಡರ ಹೆಸರನ್ನು ಜ್ಞಾಪಿಸುತ್ತಿದ್ದರು. ಗೌಡರು ಬರೆದ ಕವನಗಳು ಅವರಲ್ಲಿದ್ದವು. ಅವು ಹಿಂದೆ ಜಯಕರ್ನಾಟಕದಲ್ಲಿ ಪ್ರಕಟವಾಗಿದ್ದವು. ಅವುಗಳಲ್ಲಿ ಒಂದೆರಡನ್ನು ಓದಿದ್ದೆ. ಗೌಡರನ್ನು ನೋಡಬೇಕೆಂಬ ಆಸೆ ನನಗಾಯಿತು.

ಒಂದು ಭಾನುವಾರ ನನ್ನನ್ನೂ 'ಜೀಶಂಪ'ರನ್ನೂ ಕೃಷ್ಣಸ್ವಾಮಿಯವರು ಗೌಡರ ಬಳಿ ಕರೆದುಕೊಂಡು ಹೋದರು. ಗೌಡರು ಚಾಮುಂಡಿಪುರಂ ಸಿಲ್ಕ್‌ಫಾರಂ ಎದುರಿನ ಮನೆಯಲ್ಲಿ ವಾಸವಾಗಿದ್ದರು. ನಾವು ಅವರನ್ನು ಕಾಣಲು ಹೋದಾಗ ಮಧ್ಯಾಹ್ನ ಸುಮಾರು ಹನ್ನೆರಡರ ಸಮಯ. ಪಂಚೆಯನ್ನೇ ಲುಂಗಿಯಾಗಿ ಸೊಂಟಕ್ಕೆ ಸುತ್ತಿದ್ದರು. ಅರೆ ತೋಳಿನ ಬನಿಯನ್‌ನಲ್ಲಿದ್ದರು. ಗಡಸು ಮುಖದ ಜಿಗಿ ಮೈಕಟ್ಟಿನ ಗೌಡರನ್ನು ನೋಡಿ ನನಗೆ ಕೊಂಚ ಭಯವಾಯಿತು. ಅವರನ್ನು ನೋಡಿದಾಕ್ಷಣ ಅಳುಕು. ಮನಸ್ಸಿನಲ್ಲೇ ವಂದಿಸಿದೆ. 'ಬನ್ನಿ ಬನ್ನಿ' ಎಂದು ಮೃದುವಾಗಿ ಕರೆದರು. ಅವರ ಸೌಜನ್ಯದ ನುಡಿಗಳಿಂದಾಗಿ ನನಗಿದ್ದ ದಿಗಿಲು ಮಾಯವಾಯಿತು. ಆ ವೇಳೆಗೆ ಕಲಾಕ್ಷೇತ್ರದ ಮೂಲಕ ನಾವು ಹೊರತಂದ ಜೀಶಂಪರ ದಿಬ್ಬದಾಚೆ, ಜೀವನಗೀತ ಪುಸ್ತಕಗಳನ್ನು ಗೌಡರ ಕೈಯಲ್ಲಿಟ್ಟೆವು. ಗೌಡರು ಆ ಕೃತಿಗಳನ್ನು ತಿರುವಿಹಾಕಿದರು. 'ಒಳ್ಳೆಯ ಕೆಲಸಮಾಡಿದ್ದೀರಿ' ಎಂದು ಅಭಿಮಾನದಿಂದ ನುಡಿದರು.

*

ಮತ್ತೆ ಕೆಲವು ವರ್ಷಗಳ ನಂತರ ಗೌಡರು ಪಾಂಡವಪುರದ ಸಕ್ಕರೆ ಕಾರ್ಖಾನೆಗೆ ಜನರಲ್ ಮೇನೇಜರ್ ಆಗಿಯೋ ಏನೋ ಅಧಿಕಾರವಹಿಸಿಕೊಂಡರು. ಮೈಸೂರಿನ ವಾಣಿ ವಿಲಾಸ ಮೊಹಲ್ಲದಲ್ಲಿ ವಾಸವಾಗಿದ್ದರು. ಆಗಾಗ ಅವರ ಮನೆಗೆ ಹೋಗಿ ಬರುತ್ತಿದ್ದೆವು ನಾನೂ ಜೀಶಂಪ. ಆ ವೇಳೆಗಾಗಲೇ ನನ್ನ ಕೆಲವಾರು ವರ್ಣ ಚಿತ್ರಗಳು ತ್ರಿವರ್ಣದಲ್ಲಿ ಪ್ರಕಟವಾಗಿದ್ದವು. ಕುವೆಂಪು ಉದಯರವಿಯಲ್ಲೂ ಅವುಗಳ ಮೂಲ ಚಿತ್ರಗಳು ರಾರಾಜಿಸುತ್ತಿದ್ದವು. ಅಲ್ಲಿ ಗೌಡರು ನನ್ನ ಚಿತ್ರಗಳನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದರು ಅಭಿಮಾನ ತಾಳಿ ಪ್ರೋತ್ಸಾಹದ ಮಾತಾಡಿದ್ದರು.

ಒಮ್ಮೆ ಗೌಡರು ನನ್ನನ್ನು ಪಾಂಡವಪುರದ ಸಕ್ಕರೆ ಕಾರ್ಖಾನೆಗೆ ಬರುವಂತೆ ಕರೆ ಇತ್ತರು. ಅವರು ಕಾರ್ಖಾನೆಯ ಅತಿಥಿ ಗೃಹದಲ್ಲಿ ತಂಗಿದ್ದರು. ಅಲ್ಲಿ ಅವರನ್ನು ಭೇಟಿಮಾಡಿದೆ. 'ನೋಡಿ ತಿಪ್ಪೇಸ್ವಾಮಿ ನೀವು ನಮಗೊಂದು ಕ್ಯಾಲೆಂಡರ್ ಚಿತ್ರಬರೆದು ಕೊಡಿ. ಅದು ನಮ್ಮ ಕಾರ್ಖಾನೆಯನ್ನು ಪ್ರತಿಬಿಂಬಿಸಬೇಕು' ಎಂದರು. ಐವತ್ತು ರೂಗಳನ್ನು ಮುಂಗಡವಾಗಿ ಕೊಡಿಸಿದರು. ನಾನು ಕೆಲವೇ ಸಮಯದಲ್ಲಿ ಅವರಿಗೆ ಒಪ್ಪುವಂಥ ಚಿತ್ರ ರಚಿಸಿಕೊಟ್ಟೆ. ಏಕೋ ಏನೋ ಅದು ಆ ವರ್ಷ ಹೊರಬರಲೇ ಇಲ್ಲ. ಗೌಡರಿಗೂ ಬೇರೆ ಕಡೆ ಜಿಲ್ಲಾಧಿಕಾರಿಗಳಾಗಿ ವರ್ಗವಾಯಿತು.

*

ಗೌಡರಿಂದ ಒಮ್ಮೆ ನನಗೊಂದು ಪತ್ರಬಂತು. ಆಗ ಅವರು ಶಿವಮೊಗ್ಗೆಯ ಜಿಲ್ಲಾಧಿಕಾರಿಗಳಾಗಿದ್ದರು. ನಾನು ಆ ವೇಳೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರಕಟಣಾ ವಿಭಾಗಕ್ಕೆ ಬೇಕಾದ ರೇಖಾಚಿತ್ರಗಳನ್ನು ರಚಿಸಿ ಕೊಡುತ್ತಿದ್ದೆ. ಇದರ ಅವಕಾಶವನ್ನು ಮಾನ್ಯ ದೇಜಗೌ ಹಾಗೂ ತ.ಸು. ಶಾಮರಾಯರು ಮಾಡಿ ಕೊಟ್ಟಿದ್ದರು. ಆ ವೇಳೆಗೆ ಗೌಡರ 'ಪ್ರವಾಸಿ ಕಂಡ ಇಂಡಿಯಾ'ದ ಪ್ರಥಮ ಸಂಪುಟಕ್ಕೆ ಕೆಲವಾರು ರೇಖಾಚಿತ್ರಗಳು ಬೇಕಾಗಿತ್ತು. ಇದರ ಸಲುವಾಗಿಯೇ ನನ್ನನ್ನು ಆಹ್ವಾನಿಸಿದ್ದರು. ನಾನು ಶಿವಮೊಗ್ಗೆಗೆ ಹೋದೆ–ಅವರ ಅತಿಥಿಯಂತೆ, ದೊಡ್ಡ ಬಂಗಲೆಯಲ್ಲಿ ಗೌಡರನ್ನು ಕಂಡೆ. ನನಗಾಗಿ ಒಂದು ವಿಶಾಲವಾದ ಕೋಣೆಯನ್ನು ಬಿಟ್ಟುಕೊಟ್ಟಿದ್ದರು. ಚಿತ್ರ ರಚಿಸಲು ಕೆಲವಾರು ಮೂಲ ಚಿತ್ರಗಳನ್ನು ಕೊಟ್ಟು ಸೂಚನೆ ಇತ್ತರು. 'ನಿಧಾನವಾದರೂ ಚಿಂತೆ ಇಲ್ಲ ಚೆನ್ನಾಗಿ ಚಿತ್ರ ಬಿಡಿಸಿ' ಎಂದರು. ಅಲ್ಲಿ ಇದ್ದ ಐದು ಆರು ದಿನಗಳಲ್ಲಿ ಆ ಪ್ರಶಾಂತ ವಾತಾವರಣದಲ್ಲಿ ಅವರು ನನಗೊಪ್ಪಿಸಿದ ಚಿತ್ರಗಳನ್ನೆಲ್ಲಾ ಮುಗಿಸುತ್ತಾ ಬಂದೆ. ನನ್ನನ್ನು ಮನೆಯವರಲ್ಲಿ ಒಬ್ಬನಂತೆ ಭಾವಿಸಿದರು. ಗೌಡರ ದಿನಚರಿ ನನಗೆ ಆಗ ತಿಳಿದಿರಲಿಲ್ಲ. ನಾನು ನಿತ್ಯ ಹಾಸಿಗೆಯಿಂದ ಮೇಲೇಳುವುದೇ ತಡವಾಗುತ್ತಿತ್ತು. ಆದರೂ ಮನೆಮಕ್ಕಳಾಗಲೀ ಜವಾನರಾಗಲೀ ಯಾರೂ ಬಂದು ಎಚ್ಚರಮಾಡುತ್ತಿರಲಿಲ್ಲ. ಗೌಡರು ಬೆಳಗಿನ ವೇಳೆ ನಾಲ್ಕಕ್ಕೆ ಎದ್ದು ತಮ್ಮ ಆಫೀಸಿನ ಕಾಗದ ಪತ್ರಗಳ ಕಡೆ ಗಮನಹರಿಸಿ ಮುಗಿಸುತ್ತಾರೆ, ವಾಕ್ ಹೋಗುತ್ತಾರೆ, ಮಕ್ಕಳ ಜೊತೆ ಟೆನ್ನಿಸ್ ಆಡುತ್ತಾರೆ ಎಂದು ತಡವಾಗಿ ತಿಳಿಯಿತು. ಗೌಡರು ನನ್ನನ್ನು ಬಿಟ್ಟು ಒಬ್ಬರೇ ಊಟಮಾಡುತ್ತಿರಲಿಲ್ಲ, ತಿಂಡಿ ತಿನ್ನುತ್ತಿರಲಿಲ್ಲ. ಊಟಮಾಡುವಾಗ ಅವರ ಪತ್ನಿ ಲಕ್ಷ್ಮಮ್ಮನವರೇ ಬಡಿಸಬೇಕು. ಜಿಲ್ಲಾಧಿಕಾರಿಗಳ ಪತ್ನಿ ಎಂದೇನೂ ಆ ತಾಯಿಗೆ ಅಹಂ ಇರಲಿಲ್ಲ. ಅವರೇ ಸ್ವತಃ ಅಡಿಗೆಮಾಡಿ ಬಡಿಸುತ್ತಿದ್ದರೆ ಗೌಡರಿಗೆ ತೃಪ್ತಿ. ಅವರ ಕೈ ಅಡಿಗೆ ರುಚಿ ನನಗೂ ತಿಳಿದಿತ್ತು. ಗೌಡರಿಗೆ ರಾಗಿಹಿಟ್ಟು ಸೊಪ್ಪಿನಸಾರು ಎಂದರೆ ಪಂಚಪ್ರಾಣ. ಯಾವ ಸಂಕೋಚವೂ ಇಲ್ಲದೆ ಎಂದಿನಂತೆ ಸರಳವಾದ ಊಟದ ಅಭ್ಯಾಸ ಮುಂದುವರಿಸಿಕೊಂಡು ಬಂದಿದ್ದರು. ಗೌಡರ ಹೃದಯ ಯಾವುದೋ

ನೋವಿನಲ್ಲಿ ತೊಳಲಾಡುತ್ತಿತ್ತು. ಅವರ ಅರಿವಿಲ್ಲದೆಯೇ ಕೆಲವಾರು ನುಡಿಗಳು ನನ್ನ ಮುಂದೆ ಬಂದುವು. 'ನೋಡಿ ನನ್ನವರಿಗೆ—ನಾನು ಏನೂ ಮಾಡಲಿಲ್ಲವಂತೆ ಇದೊಂದು ದೂರಿನ ನೋವು ನನಗಿದೆ,ಈ ಕಾಲದಲ್ಲಿ ಗೌರವದಿಂದ ಜೀವಿಸುವುದೇ ಕಷ್ಟ; ನಾನು ಏನು ತಾನೆ ಮಾಡಬಲ್ಲೆ' ಎಂದೆಲ್ಲಾ ಹೇಳಿದರು. 'ನಮ್ಮ ಮನೆಯಲ್ಲಿ ನಮ್ಮ ಚಿಕ್ಕಪ್ಪನವರ ಬಗ್ಗೆಯೂ ನಮ್ಮ ದಾಯಾದಿಗಳು ಈ ರೀತಿಯೇ ದೂರುತ್ತಾರೆ, ಇದು ಸ್ವಭಾವ, ಮನಸ್ಸಿಗೆ ತೆದುಕೊಳ್ಳಬೇಡಿ ಸಾರ್' ಎಂದೇನೋ ಸಮಾಧಾನ ಮಾಡಿದ್ದೆ.

ಗೌಡರು ತಮ್ಮ ಆಫೀಸಿನ ಕೆಲಸದ ಮೇಲೆ ಸಾಗರ ಸೊರಬದ ಕಡೆ ಹೋಗಿ ಬರುವುದೆಂದು ನಿಶ್ಚಯವಾಗಿತ್ತು. 'ಕಲಾವಿದರು ಬನ್ನಿ, ಮಲೆನಾಡ ವನಶ್ರೀ ನೋಡು ವಿರಂತೆ' ಎಂದು ಅವರ ಜೊತೆಯಲ್ಲೇ ಕರೆದುಕೊಂಡು ಹೋದರು. ಸಾಗರದ ಪ್ರವಾಸಿ ಮಂದಿರದಲ್ಲಿ ನಮ್ಮ ಬಿಡಾರ. ಜಿಲ್ಲಾಧಿಕಾರಿಗಳಿಗೆ ಸಿಗುವ ಎಲ್ಲ ಸವಲತ್ತುಗಳೂ ನನಗೂ ದೊರೆತವು. ಸಾಗರ, ಸೊರಬದಲ್ಲಿರುವ ಗುಡಿಗಾರರ ಕುಸುರಿ ಕೆತ್ತನೆ ಕಲೆ ಗಾರಿಕೆಯನ್ನು ಕಣ್ಣಾರೆ ನೋಡಿ ಬರಲು ಈ ಪ್ರವಾಸ ದಾರಿಮಾಡಿಕೊಟ್ಟಿತು; ಗೌಡರನ್ನು ಮನದಲ್ಲೇ ಸ್ಮರಿಸಿದೆ.

ಗೌಡರಿಗೆ ಬೇಕಾದ ಚಿತ್ರಗಳೆಲ್ಲವನ್ನೂ ಮುಗಿಸಿಕೊಟ್ಟೆ. ಬೆಂಗಳೂರಿಗೆ ಹೊರಟರು. ನನ್ನನ್ನು ಜೊತೆಯಲ್ಲೇ ಕರೆದೊಯ್ದರು ಕಾರಿನಲ್ಲಿ.

ನಾನು ಜಾನಪದ ವಸ್ತು ಸಂಗ್ರಹಾಲಯಕ್ಕೆ ಸೇರಲು ಮುಖ್ಯ ಕಾರಣ ಆತ್ಮೀಯ ಮಿತ್ರ ಜೀಶಂಪ ಅವರು. ಅಲ್ಲದೆ ಡಾ. ಹಾ ಮಾ. ನಾಯಕರ ಒಲವು ಹಾಗೂ ದೇಜಗೌ ಅವರ ಅಭಿಮಾನವೂ ಕಾರಣ. ಜಾನಪದ ವಸ್ತುಗಳ ಸಂಗ್ರಾಹಕನಾಗಿ ಕೆಲಸಕ್ಕೆ ಸೇರಿದೆ. ಆದರೆ ವಸ್ತುಗಳನ್ನು ಸಂಗ್ರಹಿಸುವುದು ಎಷ್ಟು ಕಷ್ಟ ! ನಾನಿಂಥ ಕೆಲಸಕ್ಕೆ ಸೇರಿದೆನಲ್ಲ ! ಎಂಬ ಅಳುಕು ಮಾತ್ರ ಮೊದಲು ಇತ್ತು. ಜೀಶಂಪ ಮಾತ್ರ ಹೆದರಬೇಕಾದ್ದಿಲ್ಲ, ನೀವು ಸಂಗ್ರಹ ಮಾಡಬಲ್ಲಿರಿ ಎಂದು ಮೊದಲಿನಿಂದಲೂ ಹುರಿದುಂಬಿಸುತ್ತಿದ್ದರು. ಏನೇನು ಸಂಗ್ರಹಿಸಬೇಕೆಂಬುದನ್ನು ಜೀಶಂಪರು ಒಂದು ಪಟ್ಟಿಮಾಡಿ ಕೊಟ್ಟರು. 'ಈ ಸಾರಿ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿಬನ್ನಿ. ನಿಮಗೆ ಕಷ್ಟವಾಗುವುದಿಲ್ಲ. ಹೇಗೂ ನಾಗೇಗೌಡರಿದ್ದಾರೆ, ಜಿಲ್ಲಾಧಿಕಾರಿಗಳು, ಅವರ ನೆರವು ಪಡೆಯಬಹುದು' ಎಂದು ನನಗೆ ಆಸೆ ಹುಟ್ಟಿಸಿದರು. ಸಾಹೇಬರು ಬಂದರು. 'ಬಂದಿರಾ....ಬನ್ನಿ' ಎಂದು ಕರೆದೊಯ್ದು ಅವರ ವಿರಾಮ ಕುರ್ಚಿಗಳ ಸಮೀಪ ಕೂರಿಸಿಕೊಂಡರು. ಆತ್ಮೀಯವಾಗಿ ಮಾತಾಡಿಸಿ ದರು. ಬಂದ ವಿಷಯ ತಿಳಿಸಿದೆ. ಕುವೆಂಪು ಅವರ ಬಗ್ಗೆ ಮಾತು ಬಂತು. ಶಿವಮೊಗ್ಗ ಚಿಕ್ಕಮಗಳೂರಿನಲ್ಲಿ ಕುವೆಂಪು ಅವರಿಗೆ ಸನ್ಮಾನ ಮಾಡುವ ಬಗ್ಗೆ ವಿವರಿಸಿದರು. ಜೀಶಂಪರನ್ನು ವಿಚಾರಿಸಿದರು. ಅವರು ತಮ್ಮ ವಿದ್ಯಾರ್ಥಿಗಳ ಜೊತೆ ಇಷ್ಟರಲ್ಲೇ ಬರುತ್ತಾರೆಂದು ತಿಳಿಸಿದೆ. ಅಂದು ರಾತ್ರಿ ಜೊತೆಯಲ್ಲಿ ಕೂರಿಸಿಕೊಂಡು ಊಟ ಮಾಡಿ ದರು. ರಾತ್ರಿಯ ವೇಳೆ ಚಪಾತಿ ಸೊಪ್ಪು ರೂಢಿ ಮಾಡಿಕೊಂಡಿದ್ದರು. ಅನ್ನ ಕಡಿಮೆ

ಬಳಸುತ್ತಿದ್ದರು. ಬೆಳಗಿನ ತಿಂಡಿಗೆ ಜೊತೆಯಲ್ಲೇ ಕೂರಿಸಿಕೊಂಡರು. ಲಕ್ಷ್ಮಮ್ಮನವರೇ ದೋಸೆ ಮಾಡಿ ತಂದು ಬಡಿಸಿದರು. ಗೌಡರು ಎರಡೇ ದೋಸೆ ಮುಗಿಸಿ ಕೈತೊಳೆದುಕೊಂಡರು. ನನಗಾಗಿ ಬಂದ ದೋಸೆಯನ್ನು ಕಂಡ ಗೌಡರು 'ನನಗೆ ಕೊಡೋದಿಲ್ಲಪ್ಪ' ಎಂದು ಅವರ ಪತ್ನಿ ಜೊತೆ ಹಾಸ್ಯಮಾಡಿದರು. ಗೌಡರು ಊಟ ತಿಂಡಿ ಸೇವನೆಯಲ್ಲಿ ಬಹಳ ಎಚ್ಚರಿಕೆ ವಹಿಸುತ್ತಾ ಬಂದಿದ್ದಾರೆ. ಆದರಿಂದಾಗಿ ಅವರ ದೇಹವನ್ನು ಆರೋಗ್ಯವಾಗಿ ಕಾಪಾಡಿಕೊಂಡುಬರಲು ದಾರಿಯಾಗಿದೆ.

'ನೋಡಿ ಕುಂದಾಪುರಕ್ಕೆ ಹೋಗುತ್ತೇನೆ. ನೀವೂ ಜೊತೆಯಲ್ಲಿ ಬರಬಹುದು' ಎಂದರು. ಬೆಳಗಿನ ತಿಂಡಿ ಮುಗಿಸಿ ಅವರ ಜೊತೆಯಲ್ಲೇ ವ್ಯಾನಿನಲ್ಲಿ ಹೊರಟೆ. ಉಡುಪಿಗೆ ಬಂದಾಗ ಅಲ್ಲಿನ ಪೆಟ್ರೋಲ್‌ಬಂಕಿನ ತಕರಾರು ಅರ್ಜಿ ಬಗ್ಗೆ ಸ್ಥಳಪರೀಕ್ಷೆ ನಡೆಸಿದರು. ಏನನ್ನೋ ಸೂಚಿಸಿದರು. ಮುಂದೆ ಸಾಗಿದೆವು. ಕುಂದಾಪುರದ ಪ್ರವಾಸಿಮಂದಿರದಲ್ಲಿ ನಮ್ಮ ಬಿಡಾರ. ನಾನು ಒಂದು ಕೋಣೆಯಲ್ಲಿ ಅವರು ಮತ್ತೊಂದು ಕೋಣೆಯಲ್ಲಿ ಇದ್ದೆವು. ಅಲ್ಲಿನ ತಾಲ್ಲೂಕ್ ಬೋರ್ಡ್ ಸದಸ್ಯರು ಅನೇಕರು ಸಾಹೇಬರನ್ನು ಭೇಟಿಮಾಡಿದರು. ಅವರೆಲ್ಲರ ಪರಿಚಯವನ್ನು ನನಗೆ ಮಾಡಿಕೊಟ್ಟರು. ಭತ್ತದ ಲೆವಿ ವಸೂಲಿಗಾಗಿ ಈ ಸಾಹೇಬರು ಬಂದಿದ್ದಾರೆಂದು ಅವರ ಅಧಿಕಾರಿಗಳೆಲ್ಲ ತರಾತುರಿಯಿಂದ ಓಡಾಡುತ್ತಿದ್ದರು. 19-12-68ರ ಬೆಳಗ್ಗೆ ಬಸರೂರಿಗೆ ಸಾಹೇಬರ ಜೊತೆ ನಾನೂ ಹೋದೆ. ಆ ಊರಿನ ಶ್ರೀಮಂತರೊಬ್ಬರು ಊಟಕ್ಕೆ ಸಾಹೇಬರನ್ನು ಆಹ್ವಾನಿಸಿದ್ದರು. ಬಂಟ್ಸ್ ಜನಾಂಗದಲ್ಲೇ ಶ್ರೀಮಂತ ಮನೆತನ ಅದು. ಹಿಂದೆ ಪ್ರಸಿದ್ಧ ಬಟ್ಟೆ ವ್ಯಾಪಾರಿಗಳಾಗಿದ್ದರಂತೆ. ಆದರೆ ಈಗ ಗ್ಲಾಸ್ ಟೆಕ್ನಾಲಜಿಯಲ್ಲಿ ತರಬೇತಿ ಪಡೆದಿದ್ದು ಮೊಜಾಯಿಕ್ ಟೈಲ್ಸ್ ತಯಾರಿಕೆಗೆ ತೊಡಗಿ ಖ್ಯಾತರಾಗಿದ್ದಾರೆ. ಇವರ ಮನೆಯ ಭೋಜನ ಸುಲಭವಾಗಿ ಮರೆಯುವಂತಿಲ್ಲ. ಅಲ್ಲಿ ಪ್ರದರ್ಶಿತವಾಗಿದ್ದ ವಸ್ತುಗಳೇ ಸಾಕು, ಆ ಮನೆತನದ ಶ್ರೀಮಂತಿಕೆಯನ್ನೂ ಸುಸಂಸ್ಕೃತಿಯನ್ನೂ ಸಾರಲು. ಊಟಕ್ಕೆ ಕುಳಿತೆವು. ಊಟಕ್ಕೆ ಮುಂಚೆ ಕುಡಿಯಲು ತಿಳಿಸಾರು ಕೊಟ್ಟರು. ಇಲ್ಲೂ ಸ್ಪೆಷಲ್ ಊಟವೇ ಆಗಿತ್ತು. ಆದರಲ್ಲೂ ಮೀನಿನ ವಿವಿಧ ರೀತಿಯ ಭಕ್ಷ್ಯ. ನನ್ನ ಮೂಗಿಗೆ ಆ ವಾಸನೆ ಸೇರಲಿಲ್ಲ. ಸಾಹೇಬರು ನನ್ನ ಮುಖ ನೋಡಿ 'ನಿಮ್ಮ ಗ್ರಹಚಾರ' ಎಂದರಷ್ಟೆ. 'ಪರವಾಗಿಲ್ಲ ಸಾರ್ ತಿಳಿಸಾರು ಮೊಸರು ಇದೆಯಲ್ಲ' ಎಂದೆ.

ಊಟಮುಗಿಸಿ ಶಂಕರನಾರಾಯಣ ದೇವಾಲಯವನ್ನು ನೋಡಿಬಂದೆ. ಅಲ್ಲಿ ಕೆಲವು ವಸ್ತುಗಳನ್ನು ಕಂಡೆ. ಮರದ ಮೂರು ವಿಗ್ರಹಗಳು, ನಗಾರಿ ಮುಂತಾದುವನ್ನು ಕೊಡಿಸಲು ಸಾಹೇಬರಿಗೆ ಒತ್ತಾಯಮಾಡಿದೆ. ದೇವಾಲಯದ ಕಮಿಟಿ ಮೀಟಿಂಗ್ ಮಾಡಿ ಕೊಡುವುದಾಗಿ ಕನ್‌ವೀನರ್ ಅಪ್ಪಣ್ಣಹೆಗಡೆ ಮಾತುಕೊಟ್ಟರು ಸಾಹೇಬರಿಗೆ. ಬಸರೂರು ಪುರಾತನ ಹಾಗೂ ಐತಿಹಾಸಿಕ ಸ್ಥಳ. ಕಲೆಕ್ಟರ್ ಮಂಡ್ರೊ ಕಿ. ಪೂ. 1800 ರಲ್ಲಿ ಇಲ್ಲಿ ಒಂದು ಬಾವಿ ಕಟ್ಟಿಸಿದ್ದಾನೆ. ಈಗಲೂ ಆ ಬಾವಿಯನ್ನು

'ಮುಂಡ್ರೋವೆಲ್' ಎಂದೇ ಕರೆಯಲಾಗುತ್ತದೆ. ಬಸರೂರು ಪಕ್ಕದಲ್ಲಿ ಗಂಗೊಳ್ಳಿ ನದಿ ಹರಿಯುತ್ತದೆ. ಹಿಂಬದಿಗೆ ಕೊಡಚಾದ್ರಿ ಗಿರಿಪಂಕ್ತಿಯ ರಮಣೀಯ ನಿಸರ್ಗ ದೃಶ್ಯ ಇವೆ. ದೂರದಲ್ಲಿ ಕಾರ್ಖಾನೆಯೊಂದು ಕಾಣಿಸಿತು. ಅದರ ಪಕ್ಕದಲ್ಲೇ ಹಾಲಾಡಿ ಹೊಳೆ ಹರಿಯುತ್ತದೆ. ಆ ಕಾರ್ಖಾನೆ ತೋರಿಸುತ್ತಾ ಸಾಹೇಬರು ಬೈಬಲ್ ಓದಿ ಓದಿ ತೋಳಾರ್ ವಂಶದ ಹಿರಿಯ ಅಜ್ಜನೊಬ್ಬ ಪ್ರಾಟೆಸ್ಟೆಂಟ್ ಕ್ರಿಸ್ತನಾದ ಬಗ್ಗೆ ವಿವರಿಸಿದರು. ದಾರಿಯಲ್ಲಿ ಬರುವಾಗ ದೊಡ್ಡ ಬಂಗಲೆ ತೋರಿಸುತ್ತ ಅವರು "ಜರ್ಮನಿಯ ಬಾಸಲ್ ಮಿಷನ್‌ನವರ ದೊಡ್ಡ ಬಂಗಲೆಯನ್ನು ಕೇವಲ ಐದು ಸಾವಿರ ರೂಪಾಯಿಗಳಿಗೆ ನೂರು ವರ್ಷಗಳ ಹಿಂದೆಯೇ ಹೈಸ್ಕೂಲಿಗೆ ಬಿಟ್ಟುಕೊಟ್ಟಿದ್ದಾನೆ" ಎಂದರು. ನೂರುವರ್ಷದ ಹಿಂದೆಯೇ ಈ ಬಂಗಲೆಯಲ್ಲಿ ರೂಮುಗಳಿಗೆ ಬಾತ್‌ರೂಮು ಸೇರಿದಂತೆ ಕಟ್ಟಿರುವುದರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದರು.

ಸಾಹೇಬರು ಭತ್ತದ ಲೆವಿ ವಸೂಲಿಗೆ ಹಳ್ಳಿಗಳ ಮೇಲೆ ಬಂದವರು ದಾರಿಯಲ್ಲಿ ಕೋಳಿಪಂದ್ಯ ಕಂಡು ತಮ್ಮ ವ್ಯಾನನ್ನು ನಿಲ್ಲಿಸಿದರು. ಕೋಳಿಗಳ ಬಗ್ಗೆ ಪಂದ್ಯದ ಬಗ್ಗೆ ತಿಳಿಸಿದರು. ಅವರ ಕೈ ಚಮತ್ಕಾರ ನೋಡಿ, ನನ್ನ ಕಡೆ ತಿರುಗಿ 'ಬರೆದುಕೊಳ್ಳುತ್ತಿದ್ದೀರಲ್ಲ ಒಳ್ಳೆಯದು'—ಎಂದರು. ಮತ್ತೆ ವ್ಯಾನು ಮುಂದೆ ಸಾಗಿತು. ಕುಂದಾಪುರಕ್ಕೆ ಬಂದು ತಲುಪಿದೆವು. ನಾನು ಗೊಂಬೆ ಆಟದ ದೇವಣ್ಣ ಕಾಮತರನ್ನು ಭೇಟಿಮಾಡಲು ಹೋದೆ. ಅವರ ಮಗ ಕೊಗ್ಗ ಕಾಮತರು ಅವರ ಗೊಂಬೆ ತಯಾರಿಕಾ ವಿಧಾನವನ್ನು ವಿವರಿಸಿದರು.

ಕುಂದಾಪುರದಲ್ಲಿ ಯಕ್ಷಗಾನ ನಾಟಕಕ್ಕೆ ಅಂದು ರಾತ್ರಿ ಸಾಹೇಬರ ಜೊತೆ ನಾನೂ ಹೋಗಿದ್ದೆ. ರಸ್ತೆಯ ಬದಿಯಲ್ಲೇ ನಾಟಕದ ರಂಗಸಜ್ಜಿಕೆ. ಹಸಿರು ತೋರಣದಿಂದ ಸಿಂಗರಿಸಿದ ನಾಲ್ಕು ಬಿದಿರಿನ ಗಳುಗಳ ಬಯಲು ರಂಗಮಂದಿರ, ಹಿಂಬದಿ ಬೆಂಚಿನ ಮೇಲೆ ಚಂಡೆ, ತಾಳ ಹಿಡಿದ ಭಾಗವತರು. ರಂಗದ ಮುಂದೆ ಅಕ್ಕ ಪಕ್ಕದಲ್ಲಿ ಜನರು ನೆಲದ ಮೇಲೆ ಕುಳಿತಿದ್ದರು. ಕೃಷ್ಣಪಾರಿಜಾತ ಅಂದಿನ ನಾಟಕ. ನಮಗಾಗಿ ಎಡ ಭಾಗದಲ್ಲಿ ಕುರ್ಚಿಹಾಕಿಸಿ ಕೂರಿಸಲಾಗಿತ್ತು. ಒಂದೊಂದೆ ಪಾತ್ರಗಳು ಬಂದು ಹೋದವು. ವಿದ್ಯುತ್ ಬೆಳಕಿನಲ್ಲಿ ಅವರ ವೇಷಭೂಷಣಗಳು ಕಣ್ಣಿಗೆ ಹಬ್ಬ ತಂದವು. ಆದರೆ ಕೃಷ್ಣ ಪಾತ್ರಧಾರಿಯಿಂದ ಬರುವ ಅನುಚಿತ ನುಡಿಗಳು ನನಗೆ ಹಿಡಿಸಲಿಲ್ಲ. ಪಾತ್ರಧಾರಿಯ ಮಾತಿನ ಚಮತ್ಕಾರಿಕೆ ಅಲ್ಲಿನ ಜನರಿಗೆ ಉಲ್ಲಾಸ ತರುತ್ತಿತ್ತು. ಕಥೆಯ ಮೂಲದ ಬಗ್ಗೆ ಯೋಚಿಸುವಂತಿರಲಿಲ್ಲ ಅನಿಸಿತು. ಒಂದು ತಾಸು ಈ ನಾಟಕ ವೀಕ್ಷಿಸಿ ಬಂದೆವು. ಯಕ್ಷಗಾನ ನಾಟಕ ನೋಡಿದ್ದು ಇದೇ ಪ್ರಥಮ ಅನ್ನಬಹುದು.

ಮರುದಿನ ಭತ್ತದ ಲೆವಿಗೆಂದು ಮತ್ತೆ ಕುಂದುಬಾರಂದಂಡಿಗೆ ಸಾಹೇಬರ ಜೊತೆ ಹೋದೆ. ಅಲ್ಲಿ ಸೂರಪ್ಪಶೆಟ್ಟರ ಮನೆ ಕಂಡು ಯಾವುದೋ ದೇವಾಲಯದ ನೆನಪಾಯಿತು. ದೊಡ್ಡ ಪಟ್ಟೇದಾರರ ಮನೆ ಅದು. ಇವರ ಮನೆಯಲ್ಲಿ ಕೋಣನ

ವ್ಯವಸಾಯಕ್ಕೆ ಬಳಸುವ ನಾಗದಕಡೆ ನೊಗ ಮುಂತಾದುವನ್ನು ಸಂಗ್ರಹಿಸಿದೆ. ಈ ಮನೆಯ ಸುತ್ತಲೂ ತೆಂಗಿನ ತೋಟ : ನಡುವೆ ಒಂದೊಂದು ಮನೆ. ಭತ್ತದ ಗದ್ದೆಗಳು ಬೆಳೆದು ನಿಂತ ಹಸಿರು ಪೈರು. ಅಲ್ಲಿ ಚಿಕ್ಕಹೊಳೆ ದಾಟಲು ಪುಟ್ಟ ದೋಣಿಯ ಸಹಾಯ ಪಡೆದೆವು. ಆ ದಂಡೆಯಲ್ಲಿರುವ ಭತ್ತದ ಡಿಪ್ಪೋ ತಲುಪಿದೆವು. ಸಾಹೇಬರು ಲೆಕ್ಕ ಪತ್ರಗಳನ್ನು ಪರಿಶೀಲಿಸುತ್ತಿದ್ದರು. ಅಲ್ಲಿ ಒಬ್ಬ ಕೊರಗ (ಹೊಲೆಯರ) ಚಂಡೆ ಬಡಿದು ಮುಂದಿನ ಮನೆಗೆ ಹೋಗುತ್ತ ಭತ್ತವನ್ನು ಬೇಡುತ್ತಿದ್ದ ದೃಶ್ಯ ಕಣ್ಣಿಗೆ ಬಿತ್ತು. ಆ ಕೊರಗನನ್ನು ಕರೆಸಿಕೊಂಡೆವು. ಅವನ ತಲೆಯ ಮೇಲಿದ್ದ ಮುಟ್ಟಾಳೆ ಬೇಡಿದೆ. ಸಂತೋಷವಾಗಿಯೇ ಕೊಟ್ಟ. ಸಾಹೇಬರು ಅವರ ಕೆಲಸದಲ್ಲಿದ್ದರು. ನಾನು ಅಲ್ಲೇ ಸಮೀಪದ ಇನ್ನ ಹಳ್ಳಾಡಿ ಗ್ರಾಮಕ್ಕೆ ಹೋದೆ. ವಿಶ್ವೇಶ್ವರಯ್ಯನವರೇ ಶ್ಯಾನುಭೋಗರು. ಅವರ ಹಳೆಯ ಕಾಲದ ದೊಡ್ಡ ಮನೆಗೆ ಕರೆದೊಯ್ದರು. ಆ ಮನೆಯ ಒಂದೊಂದು ಕಂಬವನ್ನೂ ದೇವಾಲಯದಲ್ಲಿರುವಂತೆ ಚಿತ್ತಾರವಾಗಿ ಕಡೆಯಲಾಗಿತ್ತು. ನನ್ನನ್ನು ಅವರ ಅಟ್ಟಕ್ಕೆ ಕರೆದುಕೊಂಡು ಹೋಗುವಂತೆ ಕೇಳಿಕೊಂಡೆ. ಜಗದೀಶಯ್ಯನವರ ಜೊತೆ ಅಟ್ಟವನ್ನೇರಿದೆ. ಅಲ್ಲಿ ಕತ್ತಲ ಕೋಣೆಯಲ್ಲಿ ಕೆಲವಾರು ವಸ್ತುಗಳು ಅಸ್ಪಷ್ಟ ವಾಗಿ ಕಂಡವು, ದೀಪವನ್ನು ತರಿಸಿದೆ. ಹುಡುಕಿದೆ. ಅನೇಕ ಅನೇಕ ಓಲೆಗರಿಯ ಬಿಡಿ ಗ್ರಂಥಗಳು ಬಿದ್ದಿದ್ದವು. ಲೆಕ್ಕದ 'ಕಡತದ, ಪುಸ್ತಕ, ಹಿತ್ತಾಳೆ ನಾರ ದೀಪ, ಮದ್ದಲೆ, ಕಳಸಿಗೆ, ಭತ್ತದ ಕಿಸಲಿಕೆ, ಪಟ್ಟುಮಣೆ, ಜಗಜಪ್ಪ ಮುಂತಾದುವನ್ನು ಅಲ್ಲಿ ಸಂಗ್ರಹಿಸಿ ತಂದು ಬ್ಯಾಗಿನಲ್ಲಿ ತುಂಬಿದೆ. ಇದನ್ನು ಕಂಡ ಸಾಹೇಬರು 'ಬೇಷ್ ನಾನು ರೈತರಿಂದ ಭತ್ತದ ಲೆವಿ ವಸೂಲಿ ಮಾಡಿದ್ರೆ ನೀವು ಒಂದು ರೀತಿ ಲೆವಿನ ವಸೂಲಿ ಮಾಡಿದ್ರಿ' ಎಂದು ನಗೆಯಾಡಿದರು. 'ಯೂನಿವರ್ಸಿಟಿ ವ್ಯಾನು ತಂದ್ರೆ ಇಂಥ ವಸ್ತುಗಳನ್ನು ತುಂಬಿಕೊಂಡು ಹೋಗಬಹುದು, ಇವಕ್ಕೆ ಒಳ್ಳೆ ಸ್ಥಾನ ದೊರಕಿದಂತಾಯಿತು.' ಎಂದು ಅಭಿಮಾನದಿಂದ ಮಾತಾಡಿ ಸ್ಫೂರ್ತಿ ತುಂಬಿದರು. ಅಂದು ಸಂಜೆ ಮಂಗಳೂರಿಗೆ ಬಂದು ಸೇರಿದೆವು.

ಜಿಲ್ಲಾಧಿಕಾರಿಗಳ ಬಂಗಲೆಯಲ್ಲಿ 24-12-68ರ ರಾತ್ರಿ, ನವಭಾರತ ಪತ್ರಿಕೆಯಲ್ಲಿ ಉಪಸಂಪಾದಕರಾಗಿದ್ದ ನನ್ನ ಮಿತ್ರ ಗಣಪತಿಭಟ್ ಅವರಿಗೆ ಫೋನ್ ಮಾಡಿದೆ. 'ನಾನು ತಿಪ್ಪೇಸ್ವಾಮಿ, ಮೈಸೂರಿನಿಂದ ಬಂದಿದ್ದೇನೆ' ಎಂದೆ. ಅದೇ ವೇಳೆಯಲ್ಲಿ ಸಾಹೇಬರನ್ನು ಭೇಟಿಮಾಡಲು ಬಂದು ಅಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬರು 'ನೀವೇ ತಿಪ್ಪೇಸ್ವಾಮಿಯವರೇ ?' ಎಂದು ವಿಚಾರಿಸಿದರು ಆಶ್ಚರ್ಯದಿಂದ. ಅವರ ಪರಿಚಯ ಮಾಡಿಕೊಂಡೆ. ಕುರಾಡಿ ಸೀತಾರಾಮ ಅಡಿಗರು. ಕವಿಗಳು. ಫಲಿಮಾರು ಗ್ರಾಮದಲ್ಲಿ ಉಪಾಧ್ಯಾಯರು. ನಾನು ಬಂದಿರುವ ಉದ್ದೇಶ ಅವರಿಗೆ ಅರ್ಥವಾಯಿತು. 'ನನ್ನ ಜೊತೆ ಬನ್ನಿ. ಪಲಿಮಾರು ಮಠದ ಸ್ವಾಮಿಗಳಿಗೆ ಪರಿಚಯ ಮಾಡಿಸುತ್ತೇನೆ. ಏನಾದರೂ ಅಲ್ಲಿ ನಿಮಗೆ ಸಿಗಬಹುದು' ಎಂದರು. ಅಡಿಗರ ಜೊತೆಯಲ್ಲಿ ಅಂದೇ

ಹೊರಟುಬಿಟ್ವೆ, ಪಲಿಮಾರು ತಲುಪಿದೆವು. ಸ್ವಾಮೀಗಳಿಗೆ ನನ್ನ ಪರಿಚಯ ಮಾಡಿ ಕೊಟ್ಟರು. ನಾನು ಅವರಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿದೆ. ಬಂದ ಸಮಾಚಾರ ತಿಳಿಸಿದೆ. "ಏನು ಮಾಡುವುದು ಹಿಂದಿದ್ದ ಜಿಲ್ಲಾಧಿಕಾರಿ ಪದ್ಮನಾಭನ್ ನಮ್ಮಲ್ಲಿದ್ದ ವಿಗ್ರಹಗಳನ್ನೆಲ್ಲಾ ಕೊಂಡು ಹೋಗಿದ್ದಾರೆ. ಅವು ಮಂಗಳೂರು ಮ್ಯೂಜಿಯಂನಲ್ಲಿವೆ" ಎಂದರು. "ನಮಗೆ ಬೇಕಾಗಿರುವುದು ಕಂಚಿನ ವಿಗ್ರಹಗಳಲ್ಲ ಜಾನಪದ ವಸ್ತುಗಳು" ಅಂದೆ. "ನಮ್ಮಲ್ಲಿ ಏನೂ ಕಾಣುವುದಿಲ್ಲವಲ್ಲ" ಎಂದರು. "ನಿಮ್ಮ ಮಠದ ಅಟ್ಟಕ್ಕೆ ನನ್ನನ್ನು ಬಿಡಿ, ಹುಡುಕುತ್ತೇನೆ". ಎಂದೆ. "ಆಗಬಹುದು ಅಟ್ಟದ ಬಾಗಿಲ ಬೀಗ ಬಿಚ್ಚಿ ಎಷ್ಟೋ ವರ್ಷಗಳು ಸಂದಿವೆ. ಧೂಳು ತುಂಬಿ ಹೋಗಿದೆ" ಎಂದರು. ಅಲ್ಲಿ ಅವರು ಹೇಳಿ ದಂತೆಯೇ ಇತ್ತು! ಧೂಳಿನಿಂದ ಉಪಯೋಗಿಸಿ ಬಿಸುಟ ಎಷ್ಟೋ ಹಳೆಯ ವಸ್ತುಗಳ ದೊಡ್ಡ ಸಂಗ್ರಹವೇ ಅಲ್ಲಿತ್ತು. ನನಗೆ ದೊಡ್ಡ ನಿಧಿ ಕಂಡಂತಾಯಿತು. ಇದು ಬೇಕು ಅದು ಬೇಕು. ಎಂದು ಒಂದೇ ಉಸಿರಿಗೆ ಹೇಳುತ್ತಾ ಹೋದೆ. 'ಏನು ಬೇಕೋ ಎಲ್ಲವನ್ನೂ ಒಂದು ಪಟ್ಟಿಮಾಡಿ ಕೊಡುವುದಾಗುತ್ತೆ. ಎಂದರು. ಅಡಿಗರೇ ಪಟ್ಟಿಮಾಡಿದರು. ಅವು ಗಳಲ್ಲಿ ಚಂಡೆ, ರಣಕಹಳೆ, ಗುಮ್ಮಟೆ ವಾದ್ಯ, ಸ್ಯಾವಿಗೆ ಮಣೆ, ಅವಲಕ್ಕಿ ಕುಟ್ಟುವ ಬಲ್ಲೆ, ಹುಣಸೇಹಣ್ಣು ಕುಟ್ಟುವ ಕೊದಂಟೆ ಗೋರುಮಣೆ, ಓಲೆಕೊಡೆ, ಬೀಸಣಿಗೆ ಮುಂತಾದ ಅಪರೂಪ ವಸ್ತುಗಳಿದ್ದವು.

"ಸರಿ ಇವೆಲ್ಲ ಬೇಕುತಾನೆ, ಯಾವಾಗ ಬಂದು ಕೊಂಡು ಹೋಗುವಿರಿ ?" ಎಂದು ವಿಚಾರಿಸಿದರು,' ನಾಳೆ ನಾಡಿದ್ದರಲ್ಲಿ ಬರುವೆ ಎಂದು ತಿಳಿಸಿ ಸ್ವಾಮೀಗಳಿಗೆ ಮನಸಾರ ವಂದಿಸಿ, ಮಂಗಳೂರಿಗೆ ಹಿಂದಿರುಗಿದೆ.

ಕನ್ನಡ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿಗಳ ತಂಡ ಖಾಸಗಿ ಬಸ್ಸಿನಲ್ಲಿ ಮಂಗಳೂರಿಗೆ ಪ್ರವಾಸ ಬರುತ್ತದೆಂದೂ, ಜೊತೆಯಲ್ಲಿ ಜೀಶಂಪರೂ ಇರುತ್ತಾರೆಂದೂ ಮೊದಲೇ ತಿಳಿದಿತ್ತು. ಬಂಟವಾಳಕ್ಕೆ ಸಮೀಪವಿರುವ ವದ್ಯಾಬೀಡಿನಲ್ಲಿ ಸಾಹೇಬರ ಮಿತ್ರರಾದ ಲಕ್ಷ್ಮೀನಾರಾಯಣ ಆಳ್ವರ ಆಹ್ವಾನದಂತೆ ಸಾಹೇಬರ ಜೊತೆ ನಾನೂ ಹೋಗಿದ್ದೆ. ಅಲ್ಲಿ ಕೆಲವಾರು ವಸ್ತುಗಳನ್ನು ಸಂಗ್ರಹಿಸಿಡಲಾಗಿತ್ತು. ಈ ವಸ್ತುಗಳನ್ನು ತರಲು ಜೀಶಂಪ ಅವರು ವಿದ್ಯಾರ್ಥಿಗಳಿಗೆ ಪುಸಲಾಯಿಸಿ ಅವರಿದ್ದ ಬಸ್ಸನ್ನು ಆಳ್ವರ ಮನೆಯ ಮುಂದೆ ತಂದು ನಿಲ್ಲಿಸಿದರು. ಆ ಸುತ್ತಿನಲ್ಲಿ ಸಂಗ್ರಹಿಸಿಟ್ಟ ವಸ್ತುಗಳನ್ನೆಲ್ಲಾ ವಿದ್ಯಾರ್ಥಿ ಗಳ ಗಮನಕ್ಕೆ ಬಾರದಂತೆ ಬಸ್ಸಿನ ಟಾಪಿಗೆ ಏರಿಸಲಾಯಿತು, ನಾನು ಈ ನಮ್ಮ ಪ್ರವಾಸಿ ವಿದ್ಯಾರ್ಥಿಗಳ ತಂಡದ ಜೊತೆಗೆ ಸೇರಿಕೊಂಡೆ, ಅವರ ಗೈಡ್ ರೂಪದಲ್ಲಿ. ಮೂಡ ಬಿದ್ರೆ, ಮಣಿಪಾಲ್, ಉಡುಪಿ, ಮಲ್ಪೆಗೆ ಅವರನ್ನು ಸುತ್ತಾಡಿಸಿಕೊಂಡು ಬಂದೆ, ಬರುವ ದಾರಿಯಲ್ಲಿ 'ನಿಮಗೊಂದು ಅದ್ಭುತ ಮಠ ತೋರಿಸುವುದಾಗಿ ಅವರನ್ನು ಆಕರ್ಷಿಸಿದೆ. ಬಸ್ಸನ್ನು ಪಲಿಮಾರಿನ ಕಡೆ ತಿರುಗಿಸಿದೆ. ಮಠದ ಸ್ವಾಮಿಗಳಿಗೆ ವಿದ್ಯಾರ್ಥಿಗಳನ್ನು ಪರಿಚಯಮಾಡಿಕೊಟ್ಟೆ. ಸ್ವಾಮಿಗಳೊಂದಿಗೆ ಅವರು ಸಂಭಾಷಣೆ

ಮಾಡುತ್ತಿದ್ದಾಗ ಮಠದ ಅಟ್ಟದಲ್ಲಿ ಸಂಗ್ರಹಿಸಿಟ್ಟಿದ್ದ ಇನ್ನೂರು ವಸ್ತುಗಳು ಬಸ್ಸಿನ ಟಾಪಿಗೆ ಸೇರಿದ್ದು ಒಂದು ಪವಾಡವೇ ಅನ್ನಬೇಕು. ಅವು ಸುಲಭವಾಗಿ ನಮ್ಮ ಸಂಗ್ರಹಾಲಯ ಸೇರಿದ್ದು ಹೀಗೆ.

ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆ ಅವರಿಗೆ ಒಂದು ಪತ್ರ ತೆಗೆದುಕೊಂಡು ಹೋಗಿ ಕೊಟ್ಟೆ. ಜಿಲ್ಲಾಧಿಕಾರಿಗಳ ಕಡೆಯವನೆಂದು ನನ್ನನ್ನು ಆತಿಥಿಯಂತೆ ನೋಡಿ ಕೊಂಡರು ಹೆಗಡೆ ಅವರು. ಅಂದು ರಾತ್ರಿ ಹೆಗಡೆಯವರು ನನ್ನನ್ನು ಅವರ ನಾಟಕ ಕಂಪನಿ ಆಡುತ್ತಿದ್ದ ನಾಟಕಕ್ಕೆ ತಮ್ಮ ಕಾರಿನಲ್ಲೇ ಕರೆದೊಯ್ದರು. ನಾಟಕ "ಕನ್ಯಾಕುಮಾರಿ ಕ್ಷೇತ್ರ ಮಹಾತ್ಮೆ" ಹೊಸ ರಂಗಸಜ್ಜಿಕೆ, ನೂತನ ವೇಷಭೂಷಣದಲ್ಲಿ ಆಧುನಿಕತೆ ತಲೆ ಹಾಕಿತ್ತು. ಜನರ ಆಕರ್ಷಣೆಗಾಗಿ. ಅಂದು ರಾತ್ರಿ ಕೊಂಚವೇಳೆ ನಾಟಕ ನೋಡಿ ಹಿಂದಿರುಗಿದೆವು. ಮರುದಿನ ಬೆಳಗ್ಗೆ ಹೆಗಡೆಯವರು ನನ್ನನ್ನು ದೇವಾಲಯದ ಹಿಂಬದಿಯ ಹಳೆಯ ಮಹಡಿಗೆ ಹೋಗಿಬರುವಂತೆ ಅವರ ಸೇವಕನ ಸಂಗಡ ಕಳಿಸಿದರು. ಮಹಡಿಯ ಬಾಗಿಲು ಬೀಗ ಬಿಚ್ಚಿ ಎಷ್ಟೋ ವರ್ಷಗಳು ಆಗಿತ್ತು. ಮಹಡಿಯಲ್ಲಿ ಎದುರು ಬದರು ಕಿಟಿಕಿಗೆ ಹಗ್ಗ ಕಟ್ಟಿ ಈ ಹಗ್ಗದ ಮೇಲೆ ನೂರಾರು ಹಳೆಯ ವೇಷಭೂಷಣಗಳನ್ನು ತೂಗುಹಾಕಲಾಗಿತ್ತು, ಇವೆಲ್ಲಾ ಒಂದು ಕಾಲಕ್ಕೆ ಯಕ್ಷಗಾನ ನಾಟಕದಲ್ಲಿ ಬಳಸಿಬಿಟ್ಟ ವಸ್ತುಗಳು. ನನಗೆ ಬೇಕಾದವನ್ನೆಲ್ಲಾ ಮಾದರಿಗೆ ಸಂಗ್ರಹಿಸಿದೆ. ಅಲ್ಲಿ ಬಿದ್ದಿದ್ದ ದೊಡ್ಡ ಬಿದಿರಿನ ಬುಟ್ಟಿಯೊಂದನ್ನು ಪಡೆದು—ಅದರಲ್ಲಿ ಎಲ್ಲವನ್ನೂ ತುಂಬಿದೆ. ಆಳುಗಳು ಹೆಗಡೆ ಅವರಿದ್ದಲ್ಲಿಗೆ ತಂದರು. ಎಲ್ಲವನ್ನೂ ಪರಿಶೀಲಿಸಿ "ತೆಗೆದುಕೊಂಡು ಹೋಗಬಹುದು" ಎಂದರು. ತೆಂಕತಿಟ್ಟಿನ ವೇಷಭೂಷಣಗಳ ಎಲ್ಲ ಮಾದರಿಗಳೂ ದೊರೆತದ್ದು ಹೀಗೆ. ಇವುಗಳಲ್ಲಿ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಉಪಯೋಗಿಸಿದ ಮರದ ಕಿರೀಟಗಳೂ ದೊರೆತದ್ದು ನಮ್ಮ ಭಾಗ್ಯ ಎನಿಸಿತು. ತಕ್ಷಣ ಅವುಗಳನ್ನೆಲ್ಲಾ ಪ್ಯಾಕುಮಾಡಿ ಸಿ.ಪಿ.ಸಿ. ಲಾರಿ ಸರ್ವೀಸ್ ಮೂಲಕ ಮೈಸೂರಿಗೆ ಸಾಗಿಸಿದೆ.

ಸಾಹೇಬರನ್ನು ಒತ್ತಾಯಿಸಿ ಅವರ ಕಡೆಯಿಂದ ಒಂದು ದೋಣಿ, ಮೀನಿನ ಬಲೆ ಗಳನ್ನು ಸಂಗ್ರಹಿಸಿದ್ದಾಯಿತು.

ಮೈಸೂರಿನ ಖ್ಯಾತ ದಂತಶಿಲ್ಪಿ ಎಚ್. ವೆಂಕಪ್ಪನವರ ಮಗನಿಗೆ ಕೆಲಸ ಇಲ್ಲದೆ ಅವರ ಸಂಸಾರ ಬಹಳ ಕಷ್ಟದ ಪರಿಸ್ಥಿತಿಯಲ್ಲಿತ್ತು. ಅದನ್ನು ಕಂಡ ನಾನು ಗೌಡರಿಗೆ ಒಂದು ಪತ್ರ ಬರೆದೆ. ಬೆಂಗಳೂರಿನ ಯಾವುದಾದರೂ ಒಂದು ಫ್ಯಾಕ್ಟರಿಯಲ್ಲಿ ವೆಂಕಟಪ್ಪ ನವರ ಮಗನಿಗೆ ಕೆಲಸ ಕೊಡಿಸುವಂತೆ ಕೇಳಿಕೊಂಡೆ. ಗೌಡರು ಸಂತೋಷದಿಂದ ಪ್ರಯತ್ನಿಸಿದರು. ಕೆಲಸವೂ ದೊರೆಯಿತು. ಆದರೆ ಆ ಕೆಲಸಕ್ಕೆ ಹುಡುಗನ ಆರೋಗ್ಯ ಸರಿಇಲ್ಲ—ಎಂದು ಸಿಕ್ಕ ಅವಕಾಶ ತಪ್ಪಿಹೋಯಿತು. ಮತ್ತೆ ಕಾಗದ ಬರೆದೆ ಗೌಡರಿಗೆ. "ಆ ಹುಡುಗನ ತಮ್ಮನಿಗಾದರೂ ಕೊಡಿಸಿ" ಎಂದು. ಬೇಸರ ಪಡದೆ ಮತ್ತೆ ಕೆಲಸ ಕೊಡಿಸಿದರು. ಅದೂ ಮೈಕೋದಲ್ಲಿ. ಈ ವೇಳೆಗೂ ಆ ಸಂಸಾರ ಗೌಡರ ಹೆಸರು ಹೇಳಿ

ಕೊಂಡು ಜೀವನ ಮಾಡುತ್ತಿದೆ. ಕಲಾವಿದರು, ಸಾಹಿತಿಗಳು ಎಂದರೆ ಗೌಡರು ಎಷ್ಟು ಉದಾರವಾಗಿ ನಡೆದುಕೊಳ್ಳುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ ಅಷ್ಟೆ.

ಹೆರಗನಹಳ್ಳಿಗೆ ಒಮ್ಮೆ ಮಿತ್ರ ಕರಾಕೃ ನಾನೂ ಹೋಗಿ ಬಂದೆವು. ಈ ಬಯಲು ನಾಡಿನಲ್ಲೂ ನಿಸರ್ಗ ರಮಣೀಯ ತಾಣ ಅದು. ಇಲ್ಲಿನ ದೊಡ್ಡಕೆರೆ, ದೊಡ್ಡಬಂಗಲೆ (ಐರೋಪ್ಯನೊಬ್ಬ ಇದ್ದು ಹೋದ ಮನೆ), ತೆಂಗಿನ ತೋಟ. ಗೌಡರ ದೊಡ್ಡಮನೆ, ರಂಗಕುಣಿತದ ಬಯಲು, ಸೋಬಾನೆ ಚಿಕ್ಕಮ್ಮನ ಕಂಠಶ್ರೀ ಎಲ್ಲವೂ ನನ್ನನ್ನು ಸೆರೆ ಹಿಡಿದುವು. ಮೂರು ನಾಲ್ಕು ವರ್ಣಚಿತ್ರಗಳನ್ನೂ ಚಿತ್ರಿಸಿಕೊಂಡು ಬಂದೆ. ಆ ಚಿತ್ರ ಗಳ ರಚನೆಯ ಸಂದರ್ಭದ ನೆನಪು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿ ನಿಂತಿದೆ. ಬಯಲುಸೀಮೆಯಲ್ಲಿ ಒಂದು ಮಲೆನಾಡನ್ನು ಕಂಡು ನನ್ನ ಹೃದಯ ಆ ಸಂದರ್ಭದಲ್ಲಿ ಅತೀವವಾದ ಆನಂದವನ್ನು ಅನುಭವಿಸಿತು.

ನಾಗೇಗೌಡರನ್ನು ಅತಿ ಸಮೀಪದಿಂದ ನೋಡುವ, ಮಾತಾಡುವ, ಓಡಾಡುವ ಅವಕಾಶ ದೊರೆತದ್ದು ನನ್ನ ಪುಣ್ಯ ಎಂದೇ ನಾನು ಭಾವಿಸುತ್ತೇನೆ. ಮಂಗಳೂರಿಗೆ 1968ರಲ್ಲಿ ಹೋಗಿ ಗೌಡರ ಮನೆಯಲ್ಲಿ ಇದ್ದಾಗ ಚಿತ್ರಕಲೆ ಬಗ್ಗೆ ಮಾತು ಬಂದಾಗ ತಮ್ಮ ನಾಲ್ಕನೆ ಪುತ್ರಿಗೆ ಚಿತ್ರಕಲೆಯಲ್ಲಿ ಅಭಿರುಚಿ ಇದೆ ಎಂದು ತಿಳಿಸಿದರು. ಚಿತ್ರ ಬರೆಯಲು ಏನೇನು ಬೇಕು ಎಂದೆಲ್ಲಾ ಕೇಳಿದರು. ನನ್ನ ಕೆಲವು ಸಲಹೆ ಗಳನ್ನು ಸ್ವೀಕರಿಸಿದರು. ಈಗ ಅವರು ಬ್ಯಾಂಕಿನ ಮುಖ್ಯ ಉದ್ಯೋಗಿಗಳಾಗಿದ್ದಾರೆ. ಆದರೆ ಅವರ ತಂಗಿ 'ಶೀಲ' ಅವರು ಚಿತ್ರಕಲೆಯ ಅಭ್ಯಾಸವನ್ನು ಕೆನ್ ಕಲಾಶಾಲೆಗಳಲ್ಲಿ ನಡೆಸುತ್ತಾ ಬಂದಿರುವುದು, ಅವರ ನವ್ಯ ಚಿತ್ರಗಳು ಬಹುಮಾನಕ್ಕೆ ಯೋಗ್ಯವಾಗಿರು ವುದು ನನ್ನಂಥ ಕಲಾವಿದರು ಅಭಿಮಾನ ಪಡುವಂತಹದು. ಗೌಡರ ಮನೆತನದಲ್ಲಿದ್ದ ಕಲಾಕಿರಣ ಇವರ ಮೂಲಕ ಹೊರಹೊಮ್ಮುತ್ತಿರುವುದು ಒಂದು ಶುಭ ಸೂಚನೆ.

ಗೌಡರನ್ನು ನೂರಾರು ಸಾರಿ ನಾನು ಭೇಟಿ ಮಾಡಿರುವೆ. ಯಾರು ಯಾರಿಗೋ ಕೆಲಸ ಕೊಡಿಸಲು ಪೀಡಿಸಿರುವೆ. ಯಾವ ಘಳಿಗೆಯಲ್ಲೂ ಸಿಟ್ಟು ಮಾಡಿದ್ದಿಲ್ಲ. ಸೌಜನ್ಯದಿಂದ ಉತ್ತರ ಕೊಟ್ಟಿದ್ದಾರೆ. ಗೌರವದಿಂದ ಕಂಡು ಕಳಿಸಿದ್ದಾರೆ. ಹಿರಿಯ ಸಾಹಿತಿಯೂ, ಕಲಾಭಿಮಾನಿಗಳೂ ಆದ ಶ್ರೀ ನಾಗೇಗೌಡರಲ್ಲಿರುವಂಥ ಹಿರಿಯ ಗುಣಗಳು ನಮ್ಮನ್ನು ಆಕರ್ಷಿಸಿವೆ. ಇಂದು ಅವರ ಕೃತಿಗಳು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿ ಅವರಿಗೆ ಕೀರ್ತಿಯನ್ನು ತಂದುಕೊಡುತ್ತಿವೆ, ನಿಜ. ಆದರೆ ಅವರು ದಕ್ಷ ಅಧಿಕಾರಿಯಾಗಿ ಇಮ್ಮಡಿಯಾದ ಕೀರ್ತಿಯನ್ನು ಗಳಿಸಿದ್ದರು ಎಂಬು ದನ್ನು ಯಾರೂ ಮರೆಯುವಂತಿಲ್ಲ.

೨೨ ದೊಡ್ಡಮನೆಯ ದೊಡ್ಡಮಗ

ಎಚ್. ಎಂ. ತಿಮ್ಮಶೆಟ್ಟಿಗೌಡ

ನಮ್ಮ ಊರಿನ ದೊಡ್ಡಮನೆ ಸುತ್ತಮುತ್ತ ಹತ್ತೆಂಟು ಹಳ್ಳಿಗಳಿಗೆ ಪ್ರಸಿದ್ಧಿಯಾಗಿತ್ತು. ಅದಕ್ಕೆ ಕಾರಣ ಆ ಮನೆಯಲ್ಲಿದ್ದ ಹೆಚ್ಚು ಜನರೆಂದಾಗಲಿ, ಆ ಮನೆಯ ಗಾತ್ರವೆಂದಾಗಲಿ ಅಲ್ಲವೆಂದು ನನಗನ್ನಿಸುತ್ತದೆ. ಈ ಪ್ರಸಿದ್ಧಿಗೆ ಪ್ರಬಲವಾದ ಕಾರಣ ಆ ಮನೆಯ ಯಜಮಾನರುಗಳು ಅಯ್ಯೋ ಎಂದು ಬಂದವರಿಗೆ, ಅಸಹಾಯಕರಿಗೆ, ಬಡಬಗ್ಗರಿಗೆ, "ನಾವೆಲ್ಲ ಇಲ್ವೆ. ಕಷ್ಟ ಮನುಷರಿಗಲ್ದೆ ಮರಕ್ಕೆ ಬಂದಾತೆ. ಅದೇನೇಳಿ ಕೈಲಾದ್ದು ಮಾಡಾನ" ಎಂದು ನಾಲ್ಕು ಸಾಂತ್ವನದ ಮಾತು ಹೇಳಿ, ಹಸಿದು ಬಂದವರಿಗೆ ಒಂದು ತುತ್ತು ಅನ್ನ ಹಾಕಿದ್ದು ಎಂದೇ ನನ್ನ ಭಾವನೆ. ದೊಡ್ಡತನ ದೊಡ್ಡಗುಣ ಇವೇ ಹೊರತು ಮನೆಯ ಗಾತ್ರವಲ್ಲ. ನಾಗೇಗೌಡರ ತಂದೆ ಲಿಂಗೇಗೌಡರು ಇಂತಹ ದೊಡ್ಡ ಗುಣದವರಾಗಿದ್ದರು. ಅವರಿಗೂ ಹಿಂದಿನವರದು ಯಾವ ತಟವಟವೂ ಇಲ್ಲದ ಒಳ್ಳೆಯ ಗುಣವೆಂದೇ ಕೇಳಿದ್ದೇನೆ. ಇಂತಹ ಹೆಸರುವಾಸಿಯಾದ ದೊಡ್ಡಮನೆಯ ದೊಡ್ಡ ಮಗ ನಮ್ಮ ನಾಗೇಗೌಡರು.

ನಾನು ನಾಗೇಗೌಡರಿಗಿಂತ ಸ್ವಲ್ಪ ಹಿರಿಯ. ಆದರೂ ನಮ್ಮಿಬ್ಬರಲ್ಲಿ ತುಂಬಾ ಆತ್ಮೀಯತೆ. ಅವರು ಊರಿಗೆ ಬಂದರೆ ಹೆಚ್ಚಾಗಿ ಇರುವುದು ನನ್ನೊಂದಿಗೆ. ಹೀಗಾಗಿ ಅವರನ್ನು ತೀರಾ ಹತ್ತಿರದಿಂದ ಕಾಣುವ ಅವಕಾಶ ನನಗಾಯಿತು. ನಮ್ಮ ಊರಿನಲ್ಲಿ ಕೂಲಿಮಠ ಬಿಟ್ಟು ಶಾಲೆಯಿಲ್ಲದಿದ್ದರೂ ಲಿಂಗೇಗೌಡರಿಗೆ ಮಗನನ್ನು ದೊಡ್ಡ ವಿದ್ಯಾವಂತನನ್ನಾಗಿ ಮಾಡಬೇಕೆಂಬ ಆಸೆಯಿದ್ದುದರಿಂದ ಹತ್ತಿರದ ಆಳೀಸಂದ್ರದಿಂದ ದೂರದ ಬೆಂಗಳೂರು, ಮೈಸೂರುಗಳಿಗೂ ಕಳಿಸಿ ಓದಿಸಿದರು. ಅಪ್ಪನಿಗೆ ಆಸೆ ಇದ್ದರೂ ಮಗನಿಗೆ ಅದಿಲ್ಲದಿದ್ದರೆ ಓದು ಸಾಧ್ಯವಾಗುತ್ತಿರಲಿಲ್ಲ. ನಾಗೇಗೌಡರಿಗೆ ಚಿಕ್ಕಂದಿನಿಂದಲೂ ಓದುವುದರಲ್ಲಿ ತುಂಬಾ ಆಸೆ. ತಂದೆಯ ಬಯಕೆ ಮಗನ ಆಸಕ್ತಿ ಎರಡೂ ಸೇರಿದುದರಿಂದ ಇದು ಸಾಧ್ಯವಾಯಿತು. ಆಗಿನ ಕಾಲದಲ್ಲಿ ಹಣ ಈಗಿನಂತೆ ಓಡಾಡುತ್ತಿರಲಿಲ್ಲ. ನೂರು ನೂರೈವತ್ತಕ್ಕೆ ಎತ್ತು ತಂದಿದ್ದಾರೆ ಎಂದರೆ ಅಬ್ಬಾ ಎಂದು ಮೂಗಿನಮೇಲೆ ಬೆರಳಿಟ್ಟು ನೋಡಲು ಜನರು ಬರುತ್ತಿದ್ದಕಾಲ. ಐನೂರು ರೂಪಾಯಿ ಇಟ್ಟವನೇ ಸಾಹುಕಾರ. ಇಂಥ ಪರಿಸ್ಥಿತಿಯಲ್ಲಿಯೂ ಲಿಂಗೇಗೌಡರು ಮಗನನ್ನು ಓದಿಸಿದರು. ಮಗ ಬುದ್ಧಿವಂತಿಕೆಯಿಂದ ಓದಿದ. ನಮ್ಮ ಊರು ಹೆರಗನಹಳ್ಳಿ. ನಾಗೇಗೌಡರು ಇಲ್ಲಿ ಹುಟ್ಟದೆ ಹೋಗಿ

ದ್ದಲ್ಲಿ ಕದಬ ಹಳ್ಳಿ ಗಡಿ ದಾಟುತ್ತಿತ್ತೋ ಇಲ್ಲವೋ. ಆದರೆ ಇಂದು ಅದು ಇಡೀ ದೇಶ ದಲ್ಲೆಲ್ಲಾ ಪ್ರಸಿದ್ಧಿ ಪಡೆದಿದೆ. ಊರಿನವರಾದ ನಮಗೆ ಇದಕ್ಕಿಂತ ಇನ್ನೇನು ಸಂತೋಷ ಬೇಕು.

ತಮ್ಮ ಊರು, ತಮ್ಮ ಮನೆ; ತಮ್ಮ ಜನರ ಬಗ್ಗೆ ನಾಗೇಗೌಡರಿಗೆ ತುಂಬಾ ಅಭಿ ಮಾನ. ಆಗಿನ ಕಾಲಕ್ಕೆ ಅವರು ನಗರದ ದೊರೆಸಾನಿಯಂತಹ ಹೆಣ್ಣನ್ನು ಬಯಸಿ ಮದುವೆ ಯಾಗಬಹುದಿತ್ತು. ಆದರೆ ತಂದೆಯ ಮಾತನ್ನು ತೆಗೆದು ಹಾಕದೆ ಅವರು ಹೇಳಿದ ಮನೆಯ ಹೆಣ್ಣನ್ನೇ ಮದುವೆಯಾದರು. ನಮ್ಮೂರಿನ ಸೋಬಾನೆ ಚಿಕ್ಕಮ್ಮನನ್ನು ನಗರದಲ್ಲಿ ದೊಡ್ಡ ದೊಡ್ಡವರ ಜೊತೆಯಲ್ಲೆಲ್ಲಾ ಕೂರಿಸಿದರು. ಇದಕ್ಕಿಂತ ಇನ್ನೇನು ಬೇಕು ? ಬಿಡುವಾದಾಗಲೆಲ್ಲಾ ಊರಿಗೆ ಬರುವ ಗೌಡರು ಹಿಂದಿನ ಕಾಲದ ಜೀವನ ನೆನೆದು ಅಂತಹ ಕಾಲ ಹೋಯಿತೆ ಅಂದು ಕೊಳ್ಳುತ್ತಾರೆ. ಅಂತಹ ಸಂಸ್ಕೃತಿ ಪ್ರೇಮಿ ಅವರು. ಲಿಂಗೇಗೌಡರಿಗೆ ಮಗ ಅಮಲ್ದಾರನಾಗಬೇಕೆಂಬ ಆಸೆಯಿತ್ತು. ಆಗಿನ ಕಾಲಕ್ಕೆ ಹಳ್ಳಿಗನಿಗೆ ಅದು ಮಹಾರಾಜರ ಸ್ಥಾನಕ್ಕೆ ಆಶಿಸಿದಂತೆ. ನಾಗೇಗೌಡರು ಅದಕ್ಕಿಂತ ದೊಡ್ಡದಾದ, ಜಿಲ್ಲಾಧಿಕಾರಿ, ಕಮಿಷನರು ಇತ್ಯಾದಿ ಹುದ್ದೆ ಅಲಂಕರಿಸಿದರು. ಈ ಎಲ್ಲಾ ಸ್ಥಾನಗಳಿಗಿಂತ ಹೆಚ್ಚಾಗಿ ಅವರು ಬರೆದಿರುವ ಪುಸ್ತಕಗಳನ್ನೂ ಅವುಗಳ ಕೀರ್ತಿಯನ್ನೂ ಕಂಡಿದ್ದರೆ ಅವರಿನ್ನೆಷ್ಟು ಸಂತೋಷ ಪಡುತ್ತಿದ್ದರೊ ? ಈಗಲೂ ಅವರು ಸ್ವರ್ಗದಿಂದ ಮಗನ ಅಭ್ಯುದಯ ಕಂಡು ಹಿಗ್ಗುತ್ತಿದ್ದಾರೆಂದೇ ನಾನು ನಂಬಿದ್ದೇನೆ. ಈ ಸಂತೋಷ ದಲ್ಲಿ ನನ್ನೂರಿನ ಜನರ ಪರವಾಗಿ ನಾನೂ ಸೇರುತ್ತೇನೆ.

ಕೃತಿ ಸಮೀಕ್ಷೆ

ಭಾಗ : ಎರಡು

೧ | # ಕೆನಿಲ್‌ವರ್ತ್

ವೈ. ಸಿ. ಭಾನುಮತಿ

೧

ಇಂಗ್ಲಿಷಿನ Novel ಪ್ರಕಾರ ಕನ್ನಡದಲ್ಲಿ ಕಾದಂಬರಿ ಎಂಬ ಹೆಸರಿನಿಂದ ಬೆಳೆದು ಬಂದಿದೆ. ಕನ್ನಡದಲ್ಲಿ ಅನುವಾದಿತ ಕೃತಿಗಳ ಮೂಲಕ ಕಾದಂಬರಿ ಜನ್ಮತಾಳಿತು. ಆ ಬಳಿಕ ಸ್ವತಂತ್ರ ಕೃತಿಗಳು ರಚಿತವಾದವು. ಈಗ ಕನ್ನಡ ಕಾದಂಬರಿಯು ಬೆಳೆ ಹುಲುಸಾಗಿದ್ದು ಜನಸಾಮಾನ್ಯರಿಗೆ ಅಚ್ಚುಮೆಚ್ಚಿನ ಸಾಹಿತ್ಯ ಪ್ರಕಾರವಾಗಿದೆ. ಆದರೂ ಅನ್ಯಭಾಷೆಗಳಲ್ಲಿರುವ ಉತ್ಕೃಷ್ಟ ಕಾದಂಬರಿಗಳನ್ನು ಕನ್ನಡಕ್ಕೆ ತರುವ ಪರಿಪಾಠ ಇಂದಿಗೂ ನಡೆದುಬಂದಿದೆ. ಇಂತಹ ಒಂದು ಪ್ರಯತ್ನ ಎಚ್. ಎಲ್. ನಾಗೇಗೌಡರ 'ಕೆನಿಲ್‌ವರ್ತ್. ಇದು ಇಂಗ್ಲಿಷ್ ಕೆನಿಲ್‌ವರ್ತ್‌ನ ಸಂಗ್ರಹಾನುವಾದವೇ ಹೊರತು ಸ್ವತಂತ್ರ ಕೃತಿಯಲ್ಲ.

ಇಂಗ್ಲಿಷ್ ಕೆನಿಲ್‌ವರ್ತ್‌ನ ಕರ್ತೃ ಸರ್‌ವಾಲ್ಟರ್‌ಸ್ಕಾಟ್. ಈತ 1771ರಲ್ಲಿ ಸ್ಕಾಟ್‌ಲೆಂಡಿನ ಎಡಿನ್‌ಬರೋದಲ್ಲಿ ಜನಿಸಿದನು. ಈತ 18 ತಿಂಗಳ ಮಗುವಾಗಿದ್ದಾಗ ಒಂದು ಬಗೆಯ ಜ್ವರಕ್ಕೆ ತುತ್ತಾಗಿ ಕುಂಟನಾದ. ಇದಾವುದೂ ಆತನ ಸಾಹಿತ್ಯ ಕೃಷಿಗೆ ಅಡ್ಡಿಯಾಗಲಿಲ್ಲ. ಸ್ಕಾಟ್ ಚಿಕ್ಕವನಾಗಿದ್ದಾಗಲೇ ಆತನ ತಾಯಿ ರುದರ್‌ಫರ್ಡ್ ಮಗನಿಗೆ ಮುಂದೆ ಕಾದಂಬರಿಯನ್ನೊ ಕಥನ ಕಾವ್ಯವನ್ನೊ ರಚಿಸುವುದಕ್ಕೆ ಉತ್ಕೃಷ್ಟ ಮೂಲಸಾಮಗ್ರಿಯಾಗಬಲ್ಲ ಘಟನೆ ದೃಶ್ಯ ಕಾರ್ಯಾವಳಿಗಳನ್ನು ಅಚ್ಚೊತ್ತಿ ನಿಲ್ಲುವಂತೆ ವಿವರಿಸಿ ಉಪಕಾರ ಮಾಡಿದಳು." ಸ್ಕಾಟ್ ತನ್ನ ಜೀವಿತದ ಅವಧಿಯಲ್ಲಿ ಅನೇಕ ಲಾವಣಿಗಳನ್ನು, ಹಲವಾರು ಕಾದಂಬರಿಗಳನ್ನು ರಚಿಸಿ ಅಪಾರ ಯಶಸ್ಸು ಗಳಿಸಿ 1832ರಲ್ಲಿ ಮರಣಹೊಂದಿದನು.

೨

ಇಂಗ್ಲೆಂಡಿನ ರಾಣಿ ಒಂದನೆಯ ಎಲಿಜಬೆತ್ತಳ (1558–1600) ಆಳ್ವಿಕೆಯಲ್ಲಿ ನಡೆದ ಕಥೆ ಇದು. ಎಲಿಜಬೆತ್ತಳಿಗೆ ಇಬ್ಬರು ಮಂತ್ರಿಗಳಿದ್ದರು: ಅವರು ಲಾರ್ಡ್ ಸಸೆಕ್ಸ್ ಮತ್ತು ಲಾರ್ಡ್ ಲೀಸೆಸ್ಟರ್. ಲೀಸೆಸ್ಟರ್ ತನ್ನ ಅಂದಚೆಂದ ಮತ್ತು ಒಪ್ಪುವ ನಡತೆಗಳಿಂದ ರಾಣಿಗೆ ಅಚ್ಚುಮೆಚ್ಚಿನವನಾಗಿದ್ದನು. ಸಸೆಕ್ಸ್ ತನ್ನ ಶೂರತ್ವದಿಂದ ರಾಣಿಗೆ ಬೇಕಾಗಿದ್ದವನಾಗಿದ್ದನು. ಸಸೆಕ್ಸ್ ಮತ್ತು ಲಿಸೆಸ್ಟರ್ ಪರಸ್ಪರ ವೈರಿಗಳಾಗಿದ್ದು ಒಬ್ಬರ ಪತನದಿಂದ ಮತ್ತೊಬ್ಬನು ಮೇಲೇರಲು ಪೈಪೋಟಿ ನಡೆಸುತ್ತಿದ್ದರು.

ಡೆವನ್‌ಷೈರಿನ ಸರ್‌ಹ್ಯೂ ರೋಬ್ಸಾರ್ಟ್ ಎಂಬ ಮುದುಕನಿಗೆ ಅಮಿ ಎಂಬ ಮಗಳಿದ್ದಳು. ಆಕೆ ಅನುಪಮ ಸುಂದರಿ. ರೋಬ್ಸಾರ್ಟ್ ತನ್ನ ಗೆಳೆಯನ ಮಗನಾದ ಟ್ರೆಸಿಲಿಯನ್ ಎಂಬವನಿಗೆ ಅಮಿಯನ್ನು ಮದುವೆ ಮಾಡಲು ನಿಶ್ಚಯಿಸಿದ್ದ. ಟ್ರೆಸಿಲಿಯನ್ ಸತ್ಯಸಂಧ. ಆಕೆ ಮತ್ತು ಅಮಿ ಬಾಲ್ಯ ಗೆಳೆಯರು. ಟ್ರೆಸಿಲಿಯನ್ ಅಮಿಯ ಅಪಾರ ಸೌಂದರ್ಯಕ್ಕೆ ಮೆಚ್ಚಿ ಆಕೆಯನ್ನು ಪ್ರೀತಿಸಿದ. ಆದರೆ ಅಮಿ ಆತನನ್ನು ಗೌರವಿಸುತ್ತಿದ್ದಳೇ ಹೊರತು ಪ್ರೀತಿಸುತ್ತಿರಲಿಲ್ಲ. ಒಂದು ದಿನ ಇವರಿಬ್ಬರ ಮದುವೆಯ ಮಾತುಕತೆಗಳು ನಡೆದು ಅಮಿಯ ಕೋರಿಕೆಯಂತೆ ಮದುವೆಯನ್ನು ಒಂದುವರ್ಷ ಮುಂದೂಡಿದರು. ಈ ನಡುವೆ ಲಾರ್ಡ್‌ಲೀಸೆಸ್ಟರನ ಸೇವಕ ವಾರ್ನಿ ಅಮಿಯ ತಂದೆ ರೋಬ್ಸಾರ್ಟನ ಸ್ನೇಹ ಬೆಳೆಸಿದ. ಇತ್ತ ಲೆಸೆಸ್ಟರ್ ಅಮಿಯ ಸೌಂದರ್ಯಕ್ಕೆ ಮಾರುಹೋಗಿ ಆಕೆಯನ್ನು ಪ್ರೀತಿಸಿದ. ಅಮಿ ಕೂಡ ಲೆಸೆಸ್ಟರನಲ್ಲಿ ಅನುರಕ್ತಳಾದಳು. ಒಂದುದಿನ ವಾರ್ನಿ, ಅಮಿಗೆ ತಂದೆಯ ಮನೆಯಿಂದ ಓಡಿಬರುವಂತೆ ಮಾಡಿ ಆಕೆಯನ್ನು ಒಡೆಯ ಲೆಸೆಸ್ಟರನ ವಶಕ್ಕೆ ಒಪ್ಪಿಸಿದನು. ಲೆಸೆಸ್ಟರ್ ಆಕೆಯನ್ನು ಗುಪ್ತವಿವಾಹವಾಗಿ ಕುಮ್ನಾರ್ ಹಳ್ಳಿಯ ತನ್ನ ಭವನದಲ್ಲಿ ಇಟ್ಟನು. ತನ್ನ ಅಂತಸ್ತಿಗೆ ತಕ್ಕಂತೆ ಆ ಭವನವನ್ನು ಸಜ್ಜುಗೊಳಿಸಿದನು. ಆ ಭವನದ ಮೇಲ್ವಿಚಾರಣೆಗೆ ಅಂತೋಣಿ ಫಾಸ್ಟರ್‌ನನ್ನು ನೇಮಿಸಿದನು. ಫಾಸ್ಟರನ ಮಗಳು ಜೆನೆಟ್ ಅಮಿಯ ಸೇವೆಗೆ ನಿಂತಳು. ಹೊರಗಿನ ಪ್ರಪಂಚಕ್ಕೂ ಅಮಿ ಇರುವ ಕುಮ್ನಾರ್ ಭವನಕ್ಕೂ ಯಾವ ಸಂಪರ್ಕವೂ ಇಲ್ಲದಂತೆ ನೋಡಿಕೊಳ್ಳಲಾಗಿತ್ತು.

ಇತ್ತ ರೊಬ್ಸಾರ್ಟನ ಮನೆಯಿಂದ ಇದ್ದಕ್ಕಿದ್ದಂತೆ ಅಮಿ ಅದೃಶ್ಯಳಾದಾಗ ಆಕೆ ವಾರ್ನಿಯೊಡನೆ ಹೊರಟು ಹೋದಳೆಂದು ಅವಳ ತಂದೆ ಊಹಿಸಿದ. ಆಕೆ ವಾರ್ನಿಯ ಪ್ರೇಯಸಿಯಾಗಿರಬಹುದೆಂದೇ ಎಲ್ಲರೂ ಭಾವಿಸಿದರು. ಮಗಳ ಅಗಲಿಕೆಯ ದುಃಖದಿಂದ ವೃದ್ಧ ರೋಬ್ಸಾರ್ಟ್ ಕಾಯಿಲೆ ಬಿದ್ದನು. ಆಗ ಅಮಿಯೊಡನೆ ಮದುವೆಯಾಗಬೇಕಾಗಿದ್ದ ಟ್ರೆಸಿಲಿಯನ್ ಅಮಿಯನ್ನು ಹುಡುಕಿತಂದು ಆಕೆಯ ದುಃಖತಪ್ತ ತಂದೆಗೆ ಒಪ್ಪಿಸಬೇಕೆಂದು ಹೊರಟನು. ಹೀಗೆ ಹೊರಟ ಆತ ಕುಮ್ನಾರ್ ಹಳ್ಳಿಗೆ ಬಂದು, ಅಲ್ಲಿಯ ಒಂದು ಛತ್ರದಲ್ಲಿ ತಂಗಿದ. ಈ ಛತ್ರದ ಒಡೆಯ ಗೈಲ್ಸ್‌ಗ್ಲಾಸಿಂಗ್. ಇದೇ ಸಮಯದಲ್ಲಿ ಯುವಕನೊಬ್ಬ ಈ ಛತ್ರಕ್ಕೆ ಬಂದಿಳಿದ. ಬಾಲ್ಯದಲ್ಲೇ ದೇಶಾಂತರ ಹೋಗಿದ್ದ ಗೈಲ್ಸ್‌ಗ್ಲಾಸಿಂಗನ ತಂಗಿಯ ಮಗ ಮೈಕೇಲ್‌ಲಾಂಬೋರ್ನ್‌ನೇ ಈ ಯುವಕನಾಗಿದ್ದ. ಲಾಂಬೋರ್ನ್ ಕುಡುಕ, ಬಾಯಿಬಡುಕ. ಚೆನ್ನಾಗಿ ಕುಡಿದು ಹರಟೆಗೆ ಪ್ರಾರಂಭಿಸಿದ. ಛತ್ರದಲ್ಲಿ ಇಳಿದುಕೊಂಡಿದ್ದ ಕೆಲವರೂ ಇವನೊಡನೆ ಮಾತಿಗೆ ಸೇರಿದರು. ಲಾಂಬೋರ್ನ್ ತನ್ನ ಹಳೆಯ ಮಿತ್ರರ ಬಗ್ಗೆ ವಿಚಾರಿಸುತ್ತ ಅಂತೋಣಿಫಾಸ್ಟರ್ ಬಗ್ಗೆಯೂ ಕೇಳಿಕೊಂಡ. ಫಾಸ್ಟರ್ ಈಗ ಉತ್ತಮ ಸ್ಥಿತಿಯಲ್ಲಿದ್ದು ಕುಮ್ನಾರ್ ಭವನದ ಮೇಲ್ವಿಚಾರಕ

ನಾಗಿರುವುದು ತಿಳಿಯಿತು. ಆಗ ಅಲ್ಲಿದ್ದ ಬಟ್ಟೆ ವ್ಯಾಪಾರಿ ಲಾರೆನ್ಸ್ ಕುಮ್ನಾರ್ ಭವನದಲ್ಲಿ ರೂಪವತಿಯಾದ ಒಬ್ಬ ಯುವತಿ ಇದ್ದಾಳೆಂದು ಆದರೆ ಅಲ್ಲಿಗೆ ಹೋಗಲು ಫಾಸ್ಟರ್ ಬಿಡುವುದಿಲ್ಲವೆಂದೂ ತಿಳಿಸಿದ. ಅದಕ್ಕೆ ಮೈಕೆಲ್ ಅದೆಂತಹ ಸಾಹಸದ ಕೆಲಸ ನಾಳೆ ಆ ಮುದ್ದುಮುಖಿಯನ್ನು ಫಾಸ್ಟರನು ನನಗೆ ತೋರಿಸುವಂತೆ ಮಾಡುತ್ತೇನೆಂದು ಹೇಳಿದ. ಈ ಕೆಲಸಕ್ಕೆ ವ್ಯಾಪಾರಿ ಐದು ಚಿನ್ನದ ನಾಣ್ಯಗಳನ್ನು ಪಣವಾಗಿಟ್ಟ. ಆಗ ಅಲ್ಲಿದ್ದ ಟ್ರೆಸಿಲಿಯನ್ ಆ ಪಣದಲ್ಲಿ ಅರ್ಧಭಾಗ ನಾನು ವಹಿಸಿಕೊಳ್ಳುತ್ತೇನೆ, ನನ್ನನ್ನೂ ನಿಮ್ಮೊಡನೆ ಕರೆದುಕೊಂಡುಹೋಗಿ ಎಂದು ಮೈಕೆಲನನ್ನು ಕೇಳಿದ. ಇದರಿಂದ ಮೈಕೆಲನಿಗೆ ಟ್ರೆಸಿಲಿಯನ್‌ನ ಮೇಲೆ ಅನುಮಾನ ಉಂಟಾಗಲು ಟ್ರೆಸಿಲಿಯನ್ ಕೇವಲ ಕುತೂಹಲದಿಂದ ತಾನು ಬರುತ್ತಿರುವುದಾಗಿ ಹೇಳಿದನು. ಮೈಕೆಲ್ ಆತನನ್ನು ಕರೆದೊಯ್ಯಲು ಒಪ್ಪಿದನು. ಅಂದು ರಾತ್ರಿ ಛತ್ರದೊಡೆಯ ಟ್ರೆಸಿಲಿಯನನನ್ನು ಗುಪ್ತವಾಗಿ ಭೇಟಿಮಾಡಿ ಮೈಕೆಲ್ ಮತ್ತು ಫಾಸ್ಟರರೊಡನೆ ಎಚ್ಚರಿಕೆಯಿಂದಿರುವಂತೆ ತಿಳಿಸಿದ.

ಮರುದಿನ ಮೈಕೆಲ್ ಮತ್ತು ಟ್ರೆಸಿಲಿಯನ್ ಕುಮ್ನಾರ್‌ಭವನಕ್ಕೆ ಹೋದರು. ಫಾಸ್ಟರನನ್ನು ನೋಡಬೇಕೆಂದು ಮೈಕೆಲ್ ಹೇಳಿದುದರಿಂದ ಭವನದೊಳಗೆ ಹೋಗಲು ಅಂತಹ ಅಡ್ಡಿ ಆತಂಕಗಳು ಉಂಟಾಗಲಿಲ್ಲ. ಮೈಕೆಲ್, ಫಾಸ್ಟರನಿಗೆ ಟ್ರೆಸಿಲಿಯನನನ್ನು ಪರಿಚಯ ಮಾಡಿಕೊಟ್ಟನು. ಅನಂತರ ಟ್ರೆಸಿಲಿಯನನ್ನು ಒಂದು ರೂಮಿನಲ್ಲಿ ಕುಳ್ಳಿರಿಸಿ ಅವರಿಬ್ಬರೂ ಬೇರೊಂದು ಕೋಣೆಗೆ ಮಾತನಾಡಲು ಹೋದರು. ಅಮಿ, ಲಿಸೆಸ್ಟರ್ ಬಂದಿರಬಹುದೆಂದುಕೊಂಡು ಆಕಸ್ಮಿಕವಾಗಿ ಟ್ರೆಸಿಲಿಯನ್ ಇದ್ದ ಕೋಣೆಗೆ ಕಾಲಿಟ್ಟಳು. ಅಲ್ಲಿ ಟ್ರೆಸಿಲಿಯನನನ್ನು ನೋಡಿ ಆಕೆಗೆ ಆಶ್ಚರ್ಯವಾಯಿತು. ಟ್ರೆಸಿಲಿಯನ್, ಆಕೆಗೆ ತಂದೆ ಅಸ್ವಸ್ಥನಾಗಿರುವುದನ್ನು ತಿಳಿಸಿ ಈ ಕೂಡಲೆ ನನ್ನೊಡನೆ ಬಾ ಎಂದು ಹೇಳಿದ. ಅದಕ್ಕೆ ಅಮಿ ತನ್ನ ಪತಿಯ ಅಪ್ಪಣೆಯನ್ನು ಪಡೆದನಂತರ ಬರುವುದಾಗಿ ತಿಳಿಸಿದಳು. ಅಮಿ ವಾರ್ನಿಯ ಪ್ರೇಯಸಿಯಾಗಿರುವಳೆಂದು ತಿಳಿದಿದ್ದ ಟ್ರೆಸಿಲಿಯನ್ ಆಕೆಯ ಪತಿಯನ್ನು ಮೂದಲಿಸಿದ. ಇದಾವುದನ್ನೂ ತಿಳಿಯದ ಅಮಿ ಪತಿಯ ಮೂದಲಿಕೆಯನ್ನು ಕೇಳದಾದಳು. ನಿನ್ನನ್ನು ಈ ಬಂಧನದಿಂದ ಪಾರುಮಾಡುತ್ತೇನೆಂದು ಹೇಳಿ ಟ್ರೆಸಿಲಿಯನ್ ಮುಂದೆ ಬಂದಾಗ ಆಕೆ ಕಿರುಚಿದಳು. ಆಕೆಯ ಕೂಗನ್ನು ಕೇಳಿ ಫಾಸ್ಟರ್ ಮತ್ತು ಮೈಕೆಲ್ ಓಡಿಬಂದರು. ಅವರು ಟ್ರೆಸಿಲಿಯನನನ್ನು ಹೊರಕ್ಕೆ ಕಳಿಸಿದರು. ಟ್ರೆಸಿಲಿಯನ್ ದಾರಿ ತಪ್ಪಿ ಆ ಭವನದ ಹಿಂಬಾಗಿಲ ಬಳಿ ಬಂದಾಗ ವಾರ್ನಿ ಎದುರಾದನು. ಇಬ್ಬರಿಗೂ ದ್ವಂದ್ವಯುದ್ಧ ವಾಯಿತು. ಅಷ್ಟರಲ್ಲಿ ಮೈಕೆಲ್ ಬಂದು ಅವರಿಬ್ಬರನ್ನೂ ಬಿಡಿಸಿದ. ಟ್ರೆಸಿಲಿಯನ್ ಅಲ್ಲಿಂದ ಹೊರಬಿದ್ದ. ನೀಚ ವಾರ್ನಿಗೆ ಮೈಕೆಲ್‌ನಂಥ ಸಹಾಯಕ ಬೇಕಾಗಿತ್ತು. ಅಂದಿನಿಂದ ಮೈಕೆಲ್ ವಾರ್ನಿಯ ಗುಂಪು ಸೇರಿದ.

ಟ್ರಿಸಿಲಿಯನ್ ಛತ್ರವನ್ನು ಸೇರಿದಾಗ ಛತ್ರದೊಡೆಯು ಆತನನ್ನು ಪ್ರೀತಿಯಿಂದ ಮಾತನಾಡಿಸಿ ವಾರ್ನಿಯಿಂದ ಕೇಡುಂಟಾಗುವ ಮೊದಲೇ ಆದಷ್ಟು ಬೇಗ ಛತ್ರವನ್ನು ಬಿಡುವಂತೆ ಹೇಳಿದ. ಟ್ರಿಸಿಲಿಯನ್ ತಾನು ಬಂದ ಉದ್ದೇಶವನ್ನು ತಿಳಿಸಿದಾಗ ಛತ್ರದೊಡೆಯು ತನ್ನ ಕೈಲಾದ ಸಹಾಯ ಮಾಡುವುದಾಗಿ ತಿಳಿಸಿದ. ಟ್ರಿಸಿಲಿಯನ್ ಅಂದು ರಾತ್ರಿಯೇ ಛತ್ರವನ್ನು ಬಿಟ್ಟು ಕುದುರೆ ಏರಿ ಪ್ರಯಾಣ ಬೆಳಸಿದ.

ಇತ್ತ ಅಮಿಗೆ ತಂದೆಯ ಅಸ್ವಸ್ಥತೆಯ ವಿಚಾರ ಕೇಳಿ ದುಃಖವಾಯಿತು. ಅಷ್ಟರಲ್ಲಿ ವಾರ್ನಿ ಬಂದು ಅಮಿಗೆ ಲಿಸಸ್ಟರನ ಆಗಮನವನ್ನು ತಿಳಿಸಿ ಆತನು ಅಮಿಗೆ ಕಳುಹಿಸಿದ್ದ ಪೆಟ್ಟಿಗೆಯನ್ನು ಕೊಟ್ಟನು. ಅಮಿ ಪೆಟ್ಟಿಗೆಯಲ್ಲಿದ್ದ ಪತಿಯ ಪತ್ರವನ್ನು ಓದಿ ಹಿಗ್ಗಿದಳು. ಆತ ಆಭರಣಗಳನ್ನೂ ಕಳುಹಿಸಿದ್ದ. ಆ ದಿನ ರಾತ್ರಿ ಲಿಸೆಸ್ಟರ್ ಬಂದನು. ಅಮಿ ಸಂತೋಷದಿಂದ ಆತನೊಡನೆ ಕಳೆದಳು. ಮರುದಿನ ಲಿಸೆಸ್ಟರ್ ಹೊರಡುವಾಗ ಅಮಿ ಅವನಲ್ಲಿ ತಮ್ಮ ಮದುವೆಯನ್ನು ಬಹಿರಂಗಪಡಿಸುವಂತೆ ಕೇಳಿಕೊಂಡಳು. ಅದಕ್ಕೆ ಲಿಸೆಸ್ಟರ್ 'ನನ್ನ ಲಗ್ನವನ್ನು ಬಹಿರಂಗಪಡಿಸಿದರೆ ನನ್ನ ನಾಶಕ್ಕೆ ನಾನೇ ಕಾರಣನಾದಂತೆ. ಅದಕ್ಕಿನ್ನೂ ಕಾಲವಿದೆ ಎಂದು ಹೇಳಿದನು. ರಾಜಕೀಯ ಕಾರಣಗಳಿಗಾಗಿ ಅವನು ಈ ರೀತಿ ತನ್ನ ವಿವಾಹವನ್ನು ರಹಸ್ಯವಾಗಿಟ್ಟಿದ್ದನು. ಕೊನೆಗೆ ಅಮಿ ಮತ್ತೊಂದು ಬಯಕೆಯನ್ನು ಆತನ ಮುಂದಿಟ್ಟಳು. ಈ ಗುಪ್ತಲಗ್ನದ ವಿಚಾರ ತಂದೆಗಾದರೂ ತಿಳಿಯಲಿ ಆತನಿಗೆ ಕಾಯಿಲೆಯೆಂದು ಹೇಳುತ್ತಾರೆ ಎಂದಳು ಲಿಸೆಸ್ಟರ್ ಇದಕ್ಕೂ ಅವಕಾಶಕೊಡಲಿಲ್ಲ. ಅಮಿ ಪತಿ ಕೋಪಗೊಳ್ಳಬಹುದೆಂದು ಭಾವಿಸಿ ಟ್ರಿಸಿಲಿಯನ್ ಬಂದುಹೋದ ವಿಚಾರವನ್ನು ತಿಳಿಸಲಿಲ್ಲ.

ಟ್ರಿಸಿಲಿಯನ್ ಕುಮ್ನಾರ್ ಛತ್ರದಿಂದ ಹೊರಟವನು ವೈಟ್‌ಹಾರ್ಸ್ ಎಂಬ ಪ್ರದೇಶವನ್ನು ತಲುಪುವ ವೇಳೆಗೆ ಆತನ ಕುದುರೆಯ ಲಾಳ ಬಿದ್ದುಹೋಗಿತ್ತು. ಲಾಳ ಕಟ್ಟುವವರನ್ನು ಹುಡುಕಿಕೊಂಡು ಹೊರಟಾಗ ಡಿಕ್ಕೀಸ್ಲಡ್ಜ್ ಎಂಬ ತುಂಟ ಹುಡುಗನ ಪರಿಚಯವಾಯಿತು. ಆತ ಲಾಳ ಕಟ್ಟುವವನನ್ನು ತೋರಿಸಲು ಟ್ರಿಸಿಲಿಯನ್ ಜತೆ ಹೊರಟನು. ಆ ಕಮ್ಮಾರನು ವಿಚಿತ್ರ ರೀತಿಯಲ್ಲಿ ಲಾಳ ಕಟ್ಟುವ ವಿಚಾರವನ್ನು ಟ್ರಿಸಿಲಿಯನ್‌ಗೆ ತಿಳಿಸಿದನು. ಇವನ್ನು ಕೇಳಿದ ಟ್ರಿಸಿಲಿಯನ್‌ಗೆ ಇದರಲ್ಲಿ ಏನೊ ಮೋಸವಿದೆಯೆಂದು ತೋರಿತು. ಕಮ್ಮಾರ ವೇಲಾಂಡ್ ಲಾಳ ಕಟ್ಟಿದ ಮೇಲೆ ಟ್ರಿಸಿಲಿಯನ್ ಆತನ ಮೋಸವನ್ನು ಬಹಿರಂಗಪಡಿಸಿದನು. ವೇಲಾಂಡ್ ಟ್ರಿಸಿಲಿಯನ್‌ಗೆ ತನ್ನ ಪೂರ್ವಕಥೆಯನ್ನೆಲ್ಲ ಹೇಳಿದನು. ಅವನು ಡಾಕ್ಟರ್ ಡೂಬಿಯ ಬಳಿ ಇದ್ದು ವೈದ್ಯವನ್ನು ಕಲಿತದ್ದು, ಡೂಬಿ ಇದ್ದಕ್ಕಿದ್ದಂತೆ ಆತನನ್ನು ಬಿಟ್ಟು ಹೊರಟು ಹೋದದ್ದು ಇವೆಲ್ಲವನ್ನೂ ತಿಳಿಸಿದ. ವೇಲಾಂಡ್ ತನಗೆ ಸಹಾಯಕನಾಗಬಹುದೆಂದು ಯೋಚಿಸಿ ಟ್ರಿಸಿಲಿಯನ್ ಆತನನ್ನು ತನ್ನೊಡನೆ ಕರೆದೊಯ್ದ. ಅವರಿಬ್ಬರೂ

ಅಮಿಯ ತಂದೆ ಸರ್‌ಹ್ಯೂರೋಬ್ಸಾರ್ಟನು ವಾಸವಾಗಿದ್ದ ಲಿಡ್‌ಕೋಟ್‌ಹಾಲ್ ಎಂಬ ಸ್ಥಳವನ್ನು ತಲಪಿದರು.

ಅಮಿಯ ತಂದೆ ಟ್ರೆಸಿಲಿಯನನನ್ನು ನೋಡಿದ ಕೂಡಲೇ ಕಣ್ಣೀರುಗರೆದನು. ಆ ಮುದುಕ ಸ್ವಲ್ಪ ಸುಧಾರಿಸಿಕೊಂಡ ಬಳಿಕ ಟ್ರೆಸಿಲಿಯನ್ ಅಮಿಯನ್ನು ಕಂಡ ಸುದ್ದಿಯನ್ನು ತಿಳಿಸಿದನು. ಟ್ರೆಸಿಲಿಯನ್ ಮುಂದೇನು ಮಾಡಬೇಕೆಂದು ಯೋಚಿಸಿ ಅಮಿಯ ವಿಚಾರವಾಗಿ ರಾಣಿಯಲ್ಲಿ ದೂರು ಕೊಡಬೇಕೆಂದು ನಿರ್ಧರಿಸಿದನು. ರೋಬ್ಸಾರ್ಟ್ ಈ ಸಲಹೆಯನ್ನು ಮೊದಮೊದಲು ಒಪ್ಪದಿದ್ದರೂ ಮಗಳ ಸೆರೆ ಬಿಡಿಸುವುದಕ್ಕಾಗಿ ಟ್ರೆಸಿಲಿಯನನನ್ನು ರಾಜಾಸ್ಥಾನಕ್ಕೆ ಕಳುಹಿಸಲು ತೀರ್ಮಾನಿಸಿದ. ಟ್ರೆಸಿಲಿಯನ್ ಮುಂದೆ ಮಾಡಬೇಕಾದ ಕೆಲಸಗಳಿಗಾಗಿ ಪುನಃ ಪ್ರಯಾಣಕ್ಕೆ ಸಿದ್ಧನಾದನು. ಅಷ್ಟರಲ್ಲಿ ಆತನಿಗೆ ಲಾರ್ಡ್‌ಸಸೆಕ್ಸ್‌ನಿಂದ ತಕ್ಷಣವೆ ಹೊರಟು ಬರುವಂತೆ ಪತ್ರ ಬಂದಿತು. ಟ್ರೆಸಿಲಿಯನ್ ಸಸೆಕ್ಸ್‌ನ ಮಿತ್ರನಾಗಿದ್ದನು. ಟ್ರೆಸಿಲಿಯನ್ ವೇಲಾಂಡನನ್ನು ಕರೆದುಕೊಂಡು ಡೆಟ್‌ಫೋರ್ಡಿನಲ್ಲಿದ್ದ ಸಸೆಕ್ಸನ ಮನೆಗೆ ಹೋದನು. ಕಾಯಿಲೆಯಿಂದ ಸಸೆಕ್ಸ್ ಗುರುತು ಸಿಕ್ಕದಂತಾಗಿದ್ದನು. ಟ್ರೆಸಿಲಿಯನ್ ಆತನಿಗೆ ವೇಲಾಂಡನನ್ನು ಪರಿಚಯಿಸಿ ಈತ ಕಾಯಿಲೆಯನ್ನು ಗುಣಪಡಿಸುತ್ತಾನೆಂದು ತಿಳಿಸಿದನು. ವೇಲಾಂಡ್ ಕಷಾಯಮಾಡಿ ಸಸೆಕ್ಸನಿಗೆ ಕುಡಿಸಿ ಮತ್ತಾರೂ ರೋಗಿಗೆ ಔಷಧಿ ಕೊಡಬಾರದೆಂದು ಹೇಳಿದನು. ಇತ್ತ ಎಲಿಜಬೆತ್‌ರಾಣಿ ತನ್ನ ಮಂತ್ರಿ ಸಸೆಕ್ಸ್ ಕಾಯಿಲೆ ಬಿದ್ದಿರುವುದನ್ನು ತಿಳಿದು ರಾಜವೈದ್ಯರನ್ನು ಕಳಿಸಿದಳು. ಆದರೆ ವೇಲಾಂಡ್ ಈಗಾಗಲೇ ಸಸೆಕ್ಸನಿಗೆ ಔಷಧಿಯನ್ನು ಮಾಡಿದ್ದುದರಿಂದ ಉಳಿದವರಾರೂ ರೋಗಿಯ ಬಳಿ ಹೋಗುವಂತಿರಲಿಲ್ಲ. ಹಾಗಾಗಿ ರಾಜವೈದ್ಯರನ್ನು ಒಳಗೆ ಬಿಡಲಿಲ್ಲ. ಇದರಿಂದ ಸಸೆಕ್ಸ್‌ನು ರಾಣಿಯ ಕೋಪಕ್ಕೆ ಪಾತ್ರನಾಗಬೇಕಾಯಿತು. ಆಗ ರಾಣಿಯಲ್ಲಿ ಕ್ಷಮಾಪಣೆಯನ್ನು ಕೇಳಿ ಬರಲು ಸಸೆಕ್ಸ್‌ನ ನೆಚ್ಚಿನ ಸೇವಕ ವಾಲ್ಟರ್‌ರಾಲೆ ಅರಮನೆಗೆ ಹೋದನು. ವಾಲ್ಟರ್ ತನ್ನ ನಡತೆಗಳಿಂದ ರಾಣಿಯನ್ನು ಮೆಚ್ಚಿಸಿದುದಲ್ಲದೆ ಸಸೆಕ್ಸನ ಪರವಾಗಿ ಕ್ಷಮಾಪಣೆಯನ್ನೂ ಕೇಳಿದನು. ಸಸೆಕ್ಸ್‌ನನ್ನು ನೋಡುವುದಕ್ಕೆ ಸ್ವತಃ ರಾಣಿಯೇ ಆತನ ನಿವಾಸಕ್ಕೆ ಬಂದು ಹೋದಳು.

ಅಮಿಯ ವಿಚಾರವಾಗಿ ಟ್ರೆಸಿಲಿಯನ್ ತಯಾರಿಸಿದ್ದ ಅಹವಾಲು ರಾಣಿಯ ಕೈಸೇರಿತು. ರಾಜಾಸ್ಥಾನದಲ್ಲಿ ಸಸೆಕ್ಸ್, ಲಿಸೆಸ್ಟರ್ ಮತ್ತು ಅವರ ಪರಿವಾರವೆಲ್ಲ ಸೇರಿದರು. ಸಸೆಕ್ಸ್ ಮತ್ತು ಲಿಸೆಸ್ಟರ್ ಇವರಿಗೆ ತಮ್ಮ ವೈರವನ್ನು ತೊರೆಯಬೇಕೆಂದು ರಾಣಿ ಹೇಳಿ ಅವರಿಬ್ಬರಿಗೂ ಪರಸ್ಪರ ಕೈಜೋಡಿಸುವಂತೆ ಆಜ್ಞಾಪಿಸಿದಳು. ರಾಣಿಯ ಆಜ್ಞೆಯನ್ನು ಮೀರಲಾರದೆ ಮೇಲುನೋಟಕ್ಕಾದರೂ ಅವರಿಬ್ಬರೂ ಕೈ ಜೋಡಿಸಿದರು. ರಾಣಿ ಟ್ರೆಸಿಲಿಯನನನ್ನೂ ವಾರ್ನಿಯನ್ನೂ ಕರೆಸಿ ಅಮಿಯ ವಿಷಯವನ್ನು ಕುರಿತು ವಿಚಾರಣೆ ನಡೆಸಿದಳು. ಏಕೆಂದರೆ ಟ್ರೆಸಿಲಿಯನ್ ಕಡೆಯವರು

ಅಮಿಯನ್ನು ವಾರ್ನಿ ಮದುವೆಯಾಗಿದ್ದಾನೆಂದು ಭಾವಿಸಿದ್ದರಿಂದ ವಾರ್ನಿಯ ವಿರುದ್ಧ ದೂರು ಕೊಟ್ಟಿದ್ದರು. ರಾಣಿ ಲಿಸೆಸ್ಟರನನ್ನು ಕರೆದು 'ನಿಮ್ಮ ಸೇವಕ ವಾರ್ನಿ ರೋಬ್ಸಾರ್ಟನ ಮಗಳನ್ನು ಪ್ರಲೋಭಿಸಿ ತನ್ನೊಡನೆ ಓಡಿಬರುವಂತೆ ಮಾಡಿದ್ದಾನೆ' ಎಂದಳು. ಲಿಸೆಸ್ಟರನ ಮುಖ ಬಿಳುಪೇರಿತು. ಒಂದು ಕ್ಷಣ ಅವನು ಮಾತನಾಡದಾದ. ಆದರೆ ಇದನ್ನು ಗಮನಿಸಿದ ವಾರ್ನಿ ತನ್ನ ಸಮಯೋಚಿತ ಬುದ್ಧಿಯಿಂದ ಮುಂದೆ ಬಂದು ರಾಣಿಯಲ್ಲಿ ಅಮಿಗೂ ನನಗೂ ಪ್ರೇಮ ವ್ಯವಹಾರವಿತ್ತು ಎಂದನು. ವಾರ್ನಿಯ ಮಾತನ್ನು ಕೇಳಿದ ಲೀಸೆಸ್ಟರ್ ತನ್ನ ಗುಪ್ತ ಲಗ್ನವನ್ನು ಬಹಿರಂಗಪಡಿಸಲು ಯೋಚಿಸಿದನು. ಆದರೆ ರಾಜಾಸ್ಥಾನದಲ್ಲಿ ಸಸೆಕ್ಸನನ್ನು ಮೀರಿಸಬೇಕಾದರೆ ತನ್ನ ಲಗ್ನವನ್ನು ರಹಸ್ಯವಾಗಿ ಇಡುವುದೇ ಲೇಸೆಂದು ಬಗೆದು ವಾರ್ನಿಯ ಮಾತುಗಳನ್ನು ಕೇಳತೊಡಗಿದನು. ವಾರ್ನಿ ಸುಳ್ಳಿನ ಕಥೆಕಟ್ಟಿ ಅಮಿಯನ್ನು ಲಗ್ನವಾಗಿರುವೆನೆಂದು ರಾಣಿಗೆ ಹೇಳಿದನು. ರಾಣಿ ಕೇಳಿದ ಪ್ರಶ್ನೆಗಳಿಗೆ ವಾರ್ನಿ ಧೈರ್ಯದಿಂದ ಉತ್ತರಿಸಿದನು. ಆ ಬಳಿಕ ರಾಣಿ ಟ್ರೆಸಿಲಿಯನನನ್ನು ವಿಚಾರಿಸಿದಳು. ಅಮಿ ವಾರ್ನಿಯನ್ನು ಮದುವೆಯಾಗಿರುವುದು ಸುಳ್ಳು ಎಂದು ಆತ ವಾದಿಸಿದನು. ಆಗ ರಾಣಿ ಈ ವಿಚಾರವನ್ನು ನಿಧಾನವಾಗಿ ಪರಿಶೀಲಿಸುತ್ತೇನೆಂದು ಹೇಳಿ ಲಿಸೆಸ್ಟರನನ್ನು ಕರೆದು 'ಮುಂದಿನವಾರ ನಾವು ನಿಮ್ಮ ಕೆನಿಲ್‌ವರ್ತ್‌ಭವನದಲ್ಲಿ ಕೆಲವು ದಿನಗಳು ಕಾಲ ಕಳೆಯಬೇಕೆಂದಿದ್ದೇವೆ. ಆಗ ಸಸೆಕ್ಸನನ್ನೂ ಆಮಂತ್ರಿಸಿ, ವಾರ್ನಿಯ ಹೆಂಡತಿ ಅಮಿಯನ್ನೂ ಅಲ್ಲಿಗೆ ಹಾಜರ್ಪಡಿಸಿ' ಎಂದು ಆಜ್ಞೆಯಿತ್ತಳು. ಕವಿತಾಶಕ್ತಿಯನ್ನುಳ್ಳ ಟ್ರೆಸಿಲಿಯನನನ್ನು ಒಲ್ಲದೆ ವಾರ್ನಿಗೆ ಒಲಿದ ಅಮಿಯನ್ನು ರಾಣಿಗೆ ನೋಡಬೇಕೆನಿಸಿತು. ಅಂದಿನ ಸಭೆಯಲ್ಲಿ ಲಿಸೆಸ್ಟರ್ ತನ್ನ ವಾಗ್ವೈಖರಿಯಿಂದ ರಾಣಿಯನ್ನು ಬಹುವಾಗಿ ಮೆಚ್ಚಿಸಿದನು. ಇದರಿಂದ ರಾಣಿಗೆ ಸಂತೋಷವಾಯಿತು.

ಸಭೆ ಮುಗಿದ ಬಳಿಕ ಲಿಸೆಸ್ಟರ್ ತನ್ನ ಕೋಣೆಯನ್ನು ಸೇರಿ ಅಮಿಯ ವಿಚಾರವಾಗಿ ಚಿಂತಿಸುತ್ತಿದ್ದ. ಅಷ್ಟರಲ್ಲಿ ಅಲ್ಲಿಗೆ ವಾರ್ನಿ ಬಂದನು. ನನ್ನನ್ನು ಸುಳ್ಳಿನ ಬಲೆಯಲ್ಲಿ ಸಿಕ್ಕಿಸಿರುವೆ ಎಂದು ಲೀಸೆಸ್ಟರ್ ಆತನಿಗೆ ಹೇಳಿದನು. ಅದಕ್ಕೆ ವಾರ್ನಿ 'ನೀನು ಅಮಿಯುವರನ್ನು ಸಾಮಂತಿಣಿಯಾಗಿ ಮಾಡಲು ಹೋಗಿ ಇಂಗ್ಲೆಂಡ್‌ದೇಶದ ರಾಜನಾಗುವುದನ್ನು ಕಳೆದುಕೊಂಡಿರುವೆ' ಎಂದು ಲೀಸೆಸ್ಟರನಿಗೆ ದುರ್ಬೋಧೆ ಮಾಡಿದನು. ಲೀಸೆಸ್ಟರನ ಭವಿಷ್ಯ ಉಜ್ವಲವಾಗಿದೆಯೆಂದು ಅಲಾಸ್ಕೊನಿಂದ ಸುಳ್ಳು ಭವಿಷ್ಯವನ್ನು ನುಡಿಸಿದನು. ಈ ಅಲಾಸ್ಕೊ ವೇಲ್ಯಾಂಡ್‌ನ ಓಡಿಹೋದ ಗುರು ಡಾಕ್ಟರ್ ಡೂಬಿ. ಈತ ವಾರ್ನಿಯ ನೀಚಕೃತ್ಯಗಳಿಗೆ ಸಹಾಯಕನಾಗಿ ಅಲಾಸ್ಕೊ ಎಂದು ಹೆಸರು ಬದಲಾಯಿಸಿಕೊಂಡಿದ್ದ.

ಕೆನಿಲ್‌ವರ್ತ್‌ಗೆ ಅಮಿಯನ್ನು ಕರೆತಂದರೆ ಆಕೆ ಲೀಸೆಸ್ಟರನ ಹೆಂಡತಿ ಎಂಬುದು ಬಹಿರಂಗವಾಗುತ್ತದೆ. ಒಂದು ವೇಳೆ ಆಕೆಯನ್ನು ಕರೆತರದಿದ್ದರೆ ರಾಣಿ ಸುಮ್ಮನೆ

ಬಿಡುವುದಿಲ್ಲ. ಈ ಸಮಸ್ಯೆಯನ್ನು ಹೇಗೆ ಬಿಡಿಸುವುದೆಂದು ಲೀಸೆಸ್ಟರ್ ಯೋಚಿಸುತ್ತಿರುವಾಗ ಇದನ್ನೂ ನಾನೇ ನೋಡಿಕೊಳ್ಳುವೆನೆಂದು ವಾರ್ನಿ ಒಡೆಯನಿಗೆ ಸಮಾಧಾನ ಹೇಳಿದನು. ವಾರ್ನಿ ಅಮಿಗೆ ದೇಹಾಲಸ್ಯ ಉಂಟಾಗುವಂತೆ ಮಾಡಲು ಅಲಾಸ್ಕೊ (ಡೂಬಿ)ಯನ್ನು ಕುಮ್ನಾರ್ ಭವನಕ್ಕೆ ಕರೆದುಕೊಂಡು ಹೋದನು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಟ್ರೆಸಿಲಿಯನ್ ಕಡೆಯ ವೇಲಾಂಡ್ ಕುಮ್ನಾರ್ ಭವನಕ್ಕೆ ಬಟ್ಟೆ ವ್ಯಾಪಾರಿಯಂತೆ ಹೋಗಿ ಅಮಿಗೆ ಪ್ರಾಣಾಪಾಯವಾಗದಂತಹ ಔಷಧಿಯನ್ನು ಕೊಟ್ಟು ತುಂಬಾ ಜಾಗ್ರತೆಯಾಗಿ ಇರಬೇಕೆಂದು ಎಚ್ಚರಿಸಿ ಹೋದನು.

ಕೆನಿಲ್‌ವರ್ತ್‌ಭವನದಲ್ಲಿ ರಾಣಿಯ ಸ್ವಾಗತಕ್ಕೆ ಬಿರುಸಿನ ಸಿದ್ಧತೆಗಳಾದುವು. ಇತ್ತ ವಾರ್ನಿ ಕುಮ್ನಾರ್‌ಭವನದಲ್ಲಿ ಅಮಿಯನ್ನು ಕಂಡು, ಕೆನಿಲ್‌ವರ್ತ್‌ಗೆ ನನ್ನೊಡನೆ ಬಂದು ನನ್ನ ಪತ್ನಿ ಎಂದು ಒಪ್ಪಿಕೊಳ್ಳುವಂತೆ ಲೀಸೆಸ್ಟರ್ ತಿಳಿಸಿದ್ದಾನೆಂದನು. ಈ ಮಾತನ್ನು ಕೇಳಿದ ಅಮಿ ಕೆರಳಿದ ಸಿಂಹಿಣಿಯಾದಳು. ಇದು ಪತಿಯ ಆಜ್ಞೆಯಲ್ಲ ವಾರ್ನಿಯ ಮೋಸವೆಂದು ಬಗೆದಳು. ವಾರ್ನಿಯ ಮೇಲೆ ಇನ್ನಿಲ್ಲದ ಸಿಟ್ಟು, ಭಯಗಳು ಉಂಟಾದುವು. ವಾರ್ನಿಯನ್ನು ನೋಡಿದರೇ ಆಕೆಗೆ ಅಸಹ್ಯವಾಗುತ್ತಿತ್ತು. ಈ ಮಧ್ಯೆ ಅಮಿಗೆ ಪತಿಯ ಭೇಟಿಯೂ ಕಡಮೆಯಾಯಿತು. ರಾಣಿಯ ಸ್ವಾಗತದ ಸಿದ್ಧತೆಯಿಂದಾಗಿ ಪತಿ ಬಂದಿಲ್ಲವೆಂದು ಆಕೆ ಭಾವಿಸಿದಳು. ಅಮಿಗೆ ಬೇಗ ಕುಮ್ನಾರ್ ಭವನದಿಂದ ಹೊರಟುಹೋಗಬೇಕೆನಿಸಿತು ಆದರೆ ಹಾಗೆ ಹೋಗುವ ಸ್ವಾತಂತ್ರ್ಯ ಎಲ್ಲಿ ? ವಾರ್ನಿ ಅಲಾಸ್ಕೊನಿಂದ ಒಂದು ಬಗೆಯ ಪಾನೀಯವನ್ನು ತಯಾರಿಸಿ ಅಮಿಗೆ ಕುಡಿಯುವಂತೆ ಮಾಡಿದನು. ಅಮಿ ವೇಲಾಂಡ್ ಕೊಟ್ಟ ಔಷಧವನ್ನು ಮೊದಲೇ ಸೇವಿಸಿದ್ದರಿಂದ ಹಾನಿಕರ ಘಟನೆಯೇನೂ ನಡೆಯಲಿಲ್ಲ. ಆದರೆ ದೇಹದಲ್ಲಿ ಆಲಸ್ಯ ಉಂಟಾಯಿತು. ಅಮಿ ಆ ಭವನವನ್ನು ಬಿಟ್ಟುಹೋಗಲು ಚಡಪಡಿಸಿದಳು. ಆಗ ಅವಳ ಸೇವಕಿ ಜೇನೆಟ್ ಯಾರಿಗೂ ತಿಳಿಯದಂತೆ ವೇಲಾಂಡನೊಡನೆ ಅಮಿ ಹೊರಗೆ ಹೋಗಲು ಸಹಾಯ ಮಾಡಿದಳು. ಅಮಿ ಈ ಸ್ಥಿತಿಯಲ್ಲಿ ತಂದೆಯ ಮನೆಗೆ ಹೋಗಲು ಇಚ್ಛಿಸದೆ ಪತಿಯ ಭವನವಾದ ಕೆನಿಲ್‌ವರ್ತ್‌ಗೆ ಕರೆದುಕೊಂಡು ಹೋಗಲು ವೆಲಾಂಡನಿಗೆ ಹೇಳಿದಳು. ಅವರಿಬ್ಬರೂ ಕೆನಿಲ್‌ವರ್ತ್‌ನ ಕಡೆ ಪ್ರಯಾಣ ಬೆಳಸಿದರು. ಸ್ವಲ್ಪದೂರ ಪ್ರಯಾಣಮಾಡಿದಾಗ ವಾರ್ನಿ ಹಿಂಬಾಲಿಸುತ್ತಿರುವುದು ತಿಳಿಯಿತು. ಆಗ ಅವರು ಕೆನಿಲ್‌ವರ್ತ್ ಕಡೆಗೆ ಹೋಗುತ್ತಿದ್ದ ನಾಟಕದ—ತಂಡದೊಡನೆ ಸೇರಿಕೊಂಡು ರಕ್ಷಣೆ ಪಡೆದರು. ಹೀಗೆ ಅನೇಕ ಅಪಾಯಗಳಿಂದ ಪಾರಾಗಿ ಅವರು ಕೆನಿಲ್‌ವರ್ತ್ ತಲಪಿದರು. ಅಮಿಗೆ ಸಾಕಷ್ಟು ಆಯಾಸವಾಗಿತ್ತು. ಅವರಿಬ್ಬರು ಡಿಕ್ಕಿಯ ಸಹಾಯದಿಂದ ನಾಟಕದ ಮೇಳದವರೆಂದು ಹೇಳಿಕೊಂಡು ಕೆನಿಲ್‌ವರ್ತ್ ಭವನದೊಳಗೆ ಹೋದರು. ಅಮಿಗೆ ವಿಶ್ರಾಂತಿ ಬೇಕಾಗಿತ್ತು. ವೇಲಾಂಡ್ ಆಕೆಯನ್ನು ಒಂದು ಕೋಣೆಗೆ ಕರೆದುಕೊಂಡು ಹೋದನು. ಅಮಿ ತಾನು ಕುಮ್ನಾರ್ ಭವನವನ್ನು ಬಿಟ್ಟು

ಬಂದಿರುವ ವಿಚಾರ, ಹಾಗೆ ಮಾಡಬೇಕಾಗಿ ಬಂದ ಸಂದರ್ಭವನ್ನು ವಿವರಿಸಿ ಲಿಸೆಸ್ಟರನಿಗೆ ಪತ್ರ ಬರೆದು ವೇಲಾಂಡನ ಮೂಲಕ ಕಳಿಸಿದಳು. ವೇಲಾಂಡ್ ಆ ಪತ್ರವನ್ನು ಲೀಸೆಸ್ಟರನಿಗೆ ತಲಪಿಸುವ ಮೊದಲು ಟ್ರಿಸಿಲಿಯನನ್ನು ನೋಡಿ ಆತನಿಗೆ ಅದು ಬಂದಿರುವ ವಿಷಯವನ್ನು ತಿಳಿಸಬೇಕೆಂದು ಆತನಿಗಾಗಿ ಹುಡುಕಿದನು. ಆ ಜನ ಸಮುದ್ರದಲ್ಲಿ ಟ್ರಿಸಿಲಿಯನ್ ಕಾಣಲಿಲ್ಲ. ಆದರೆ ಟ್ರಿಸಿಲಿಯನ್ ಮತ್ತೊಂದು ಬಾಗಿಲಿನಿಂದ ಕೆನಿಲ್‌ವರ್ತ್ ಭವನಕ್ಕೆ ಹೋದನು. ಆತನಿಗೆ ತನ್ನ ಕೋಣೆಯಲ್ಲಿದ್ದ ಅಮಿಯನ್ನು ನೋಡಿ ಆಶ್ಚರ್ಯವಾಯಿತು. ಅಮಿಗೆ ಅದು ಯಾರ ಕೋಣೆ ಯೆಂದು ತಿಳಿದಿರಲಿಲ್ಲ. ಅಮಿಯ ಅಸಹಾಯ ಪರಿಸ್ಥಿತಿಯನ್ನು ಕಂಡು ಟ್ರಿಸಿಲಿಯನ್ನನ ಮನಸ್ಸು ಕರಗಿತು. ಆಕೆಗೆ ಸಹಾಯ ಮಾಡಲು ಮುಂದಾದನು. ಅಮಿ ೨೪ ಗಂಟೆಗಳ ಕಾಲ ಅವನ ಕೋಣೆಯಲ್ಲಿ ಇರಲು ಅವಕಾಶ ಕೇಳಿದಳು. ಹಾಗೆಯೇ ೨೪ ಗಂಟೆಗಳ ತನಕ ತನ್ನ ವಿಷಯದಲ್ಲಿ ಪ್ರವೇಶಿಸಬಾರದೆಂದು ಕೋರಿದಳು. ಟ್ರಿಸಿಲಿಯನ್ ಆ ರೀತಿ ನಡೆಯುವುದಾಗಿ ಆಕೆಗೆ ಭಾಷೆ ಕೊಟ್ಟನು. ಅಮಿ ಕೊಟ್ಟ ಪತ್ರವನ್ನು ಇಟ್ಟುಕೊಂಡು ವೇಲಾಂಡ್ ಟ್ರಿಸಿಲಿಯನನನ್ನು ನಿರೀಕ್ಷಿಸುತ್ತ ಮಲಗಿದ್ದನು. ಅವನು ಎಚ್ಚರವಾದಾಗ ಆ ಪತ್ರವಿರಲಿಲ್ಲ. ಅನಂತರ ವೇಲಾಂಡ್ ಯಾರಿಗೂ ಹೇಳದೆ ಕೆನಿಲ್‌ವರ್ತ್‌ನಿಂದ ಅದೃಶ್ಯನಾದನು. ಒಟ್ಟಿನಲ್ಲಿ ಲೀಸೆಸ್ಟರನಿಗೆ ಅಮಿಯ ಪತ್ರ ಸಿಗಲಿಲ್ಲ. ಇತ್ತ ಅಮಿ ಪತ್ರ ನೋಡಿದ ಕೂಡಲೆ ಲಿಸೆಸ್ಟರ್ ಬರುತ್ತಾನೆಂದು ಆತನ ನಿರೀಕ್ಷೆಯಲ್ಲಿಯೇ ಕಾಲ ಕಳೆದಳು.

ಎಲಿಜಬೆತ್‌ರಾಣಿ ಕೆನಿಲ್‌ವರ್ತ್ ಭವನವನ್ನು ಪ್ರವೇಶಿಸಿದಳು. ಆಕೆಗೆ ಅದ್ದೂರಿಯ ಸ್ವಾಗತ ನೀಡಲಾಯಿತು. ಸ್ವಾಗತ ಮುಗಿದಮೇಲೆ ರಾಣಿಯು ವಾರ್ನಿ, ಟ್ರಿಸಿಲಿಯನ್ ಇವರುಗಳ ವಿಚಾರಣೆಗೆ ತೊಡಗಿದಳು. ಅಮಿಯನ್ನು ಕರೆತರಲು ರಾಣಿ ವಾರ್ನಿಗೆ ಹೇಳಿದಳು. ಅಮಿಗೆ ಸ್ವಸ್ಥವಿಲ್ಲದ್ದುದರಿಂದ ಕೆನಿಲ್‌ವರ್ತ್‌ಗೆ ಆಕೆಯನ್ನು ಕರೆತರ ಲಾಗಲಿಲ್ಲವೆಂದು ವಾರ್ನಿ ಹೇಳಿ, ಅದನ್ನು ರುಜುವಾತು ಪಡಿಸಲು ಪ್ರಮಾಣ ಪತ್ರ ಗಳನ್ನು ರಾಣಿಯ ಮುಂದಿಟ್ಟನು. ಇವು ಸುಳ್ಳು ಪ್ರಮಾಣ ಪತ್ರಗಳೆಂದು ಟ್ರಿಸಿಲಿಯನ್ ವಾದಿಸಿದನು. ಅಮಿಗೆ ಭಾಷೆಕೊಟ್ಟಿದ್ದುದರಿಂದ ಟ್ರಿಸಿಲಿಯನ್ ಆ ಕೂಡಲೆ ಏನನ್ನೂ ಮಾಡುವಂತಿರಲಿಲ್ಲ. ಆದ್ದರಿಂದ ಈ ಪ್ರಮಾಣಪತ್ರಗಳು ಸುಳ್ಳೆಂದು ರುಜುವಾತು ಪಡಿಸಲು ೨೪ ಗಂಟೆಗಳ ಅವಧಿಯನ್ನು ದಯಪಾಲಿಸಬೇಕೆಂದು ರಾಣಿಯಲ್ಲಿ ಕೇಳಿ ಕೊಂಡನು. ಆದರೆ ರಾಣಿ ಟ್ರಿಸಿಲಿಯನ್‌ಗೆ ಹುಚ್ಚು ಹಿಡಿದಿರಬಹುದೆಂದು ತಿಳಿದು ಅವನನ್ನು ರಕ್ಷಣೆಯಲ್ಲಿ ಇಡಬೇಕೆಂದು ಆಜ್ಞಾಪಿಸಿದಳು. ಇದರ ಫಲವಾಗಿ ಆತ ೨೪ ಗಂಟೆಗಳ ಕಾಲ ಬಂಧನಕ್ಕೊಳಗಾದನು.

ಇತ್ತ ಲಿಸೆಸ್ಟರನ ನಿರೀಕ್ಷೆಯಲ್ಲಿ ಅಮಿ ಇದ್ದಾಗ ಮೈಕೇಲ್ ಬಂದು ಬಾಗಿಲು ಬಡಿದನು. ಆತ ಲಿಸೆಸ್ಟರನೆಂದು ಭಾವಿಸಿ ಅಮಿ ಬಾಗಿಲು ತೆರೆದಳು. ಚೆನ್ನಾಗಿ

ಕುಡಿದು ಬಂದಿದ್ದ ಮೈಕೆಲ್ ಅಮಿಯನ್ನು ಹಿಡಿದುಕೊಂಡನು. ಅಮಿ ತನ್ನೆಲ್ಲ ಶಕ್ತಿಯನ್ನು ಬಿಟ್ಟು ಸಹಾಯಕ್ಕಾಗಿ ಕಿರುಚಿದಳು. ಗಲಾಟೆಯನ್ನು ಕೇಳಿ ಕೆಳಗಿನ ಕೋಣೆಯಲ್ಲಿದ್ದ ಲಾರ್ನ್ಸ್ ಬಂದು ಅಮಿಯನ್ನು ಬಿಡಿಸಿದನು, ಆದರೂ ಲಾರ್ನ್ಸ್ ಮತ್ತು ಮೈಕೆಲ್‌ನಿಗೆ ಗುದ್ದಾಟ ನಡದೇ ಇತ್ತು. ಆಗ ಅಮಿ ಅಲ್ಲಿಂದ ತಪ್ಪಿಸಿಕೊಂಡು ವಿಹಾರೋಪವನದ ಕಡೆಗೆ ಓಡಿದಳು. ನಿರಾಶೆ, ಭಯ,ದೇಹಾಲಸ್ಯ ಇವೆಲ್ಲವೂ ಸೇರಿ ಆಕೆ ಕಂದಿಹೋಗಿದ್ದಳು. ತನ್ನ ಪತಿಯ ಭವನದಲ್ಲಿಯೇ ಅಮಿಗೆ ಇಂತಹ ದುಃಸ್ಥಿತಿ ಒದಗಿ ಬಂದಿತ್ತು.

ಕೆನಿಲ್‌ವರ್ತ್‌ನಲ್ಲಿ ರಾಣಿ ಲೀಸೆಸ್ಟರನೊಂದಿಗೆ ಎಂದಿಗಿಂತ ಸಲಿಗೆಯಿಂದಿದ್ದಳು. ಲೀಸೆಸ್ಟರ್ ಈ ಅವಿವಾಹಿತ ರಾಣಿಯ ಕೈಹಿಡಿಯಬಹುದೆಂದು ಜನರೆಲ್ಲರೂ ಮಾತನಾಡಿ ಕೊಳ್ಳುತ್ತಿದ್ದರು. ಓಡಿಬಂದ ಅಮಿ ವಿಹಾರೋಪವನದಲ್ಲಿದ್ದ ಒಂದು ಕೃತಕಗುಹೆಯಲ್ಲಿ ಕುಳಿತುಕೊಂಡಿದ್ದಳು. ರಾಣಿ ಅಂದು ಮೃಗವಿಹಾರಕ್ಕೆ ಸಿದ್ಧಳಾಗಿ ವಿಹಾರೋಪವನದ ಕಡೆಗೆ ಬಂದಳು. ಆಕೆ ಅಲ್ಲಿಯೇ ಅಡ್ಡಾಡುತ್ತ ಅಮಿ ಇದ್ದ ಗುಹೆಯ ಬಳಿಗೇ ಬಂದಳು. ಅಮಿಯ ಸೌಂದರ್ಯವನ್ನು ನೋಡಿ ನಾಟಕದವಳಿರಬಹುದೆಂದು ರಾಣಿ ಊಹಿಸಿದಳು. ರಾಣಿಯನ್ನು ನೋಡಿ ಅಮಿಗೆ ಸ್ವಲ್ಪ ಹೊತ್ತು ಮಾತೇ ಬರದಾಯಿತು. ರಾಣಿಯೇ ಅಮಿಯನ್ನು ಮಾತನಾಡಿಸಿದಾಗ ಅಮಿ ಆಕೆಯಲ್ಲಿ ವಾರ್ನಿಯಿಂದ ರಕ್ಷಣೆ ಕೊಡಬೇಕೆಂದು ಬೇಡಿದಳು, ಅಮಿ ರೋಬ್ಸಾರ್ಟನ ರಾಣಿಗೆ ಮಗಳೆಂದು ತಿಳಿಯಿತು. ಆಗ ರಾಣಿ ನೀನು ವಾರ್ನಿಯ ಪತ್ನಿಯಲ್ಲವೆ ಎಂದು ಅಮಿಯನ್ನು ಕೇಳಿದಳು. ಅಮಿ 'ನಾನು ಆತನ ಪತ್ನಿಯಲ್ಲ,' ಎಂದಾಗ ರಾಣಿ ನೀನಾರ ಪ್ರೇಯಸಿ ಹೇಳು ಎಂದಳು. ಅಮಿ ಕಷ್ಟದಲ್ಲಿ ಸಿಲುಕಿಕೊಂಡಳು. ತನ್ನ ಗುಪ್ತ ಲಗ್ನದ ವಿಚಾರ ತಿಳಿಸಲು ಗಂಡನಿಂದ ಅಪ್ಪಣೆಯಿರಲಿಲ್ಲ, ಆದ್ದರಿಂದ ಆಕೆಗೆ ಏನು ಹೇಳಬೇಕೆಂಬುದೇ ತಿಳಿಯದಾಯಿತು. ಕೊನೆಗೆ 'ಲಿಸೆಸ್ಟರ್ ಅವರಿಗೆ ಎಲ್ಲವೂ ಗೊತ್ತು' ಎಂದುಬಿಟ್ಟಳು. ರಾಣಿಗೆ ಅತ್ಯಾಶ್ಚರ್ಯವಾಯಿತು. ಲಿಸೆಸ್ಟರನ ಮೇಲೆ ಕೋಪವೂ ಉಂಟಾಯಿತು. ರಾಣಿ ಅಮಿಯನ್ನು ಎಳೆದುಕೊಂಡು ಹೋಗಿ ಲಿಸೆಸ್ಟರನ ಮುಂದೆ ನಿಲ್ಲಿಸಿ 'ನಿಮಗೆ ಈ ಹೆಂಗಸು ಗೊತ್ತೇ' ಎಂದಳು. ಲಿಸೆಸ್ಟರ್ ಕೂಡ ಪೇಚಿಗೆ ಸಿಕ್ಕಿದನು. ಅವನು ತಕ್ಷಣ ಉತ್ತರಿಸದಿದ್ದಾಗ ರಾಣಿ ಸಿಟ್ಟುಗೊಂಡು ಲಿಸೆಸ್ಟರನನ್ನು ಬಂಧಿಸಿ ಎಂದು ಆಜ್ಞಾಪಿಸಿದಳು. ಅಮಿ ತನ್ನ ಪತಿಗೆ ಒದಗಿದ ಕಷ್ಟ ವನ್ನು ನೋಡಿ ಅವರು ನಿರಪರಾಧಿ ಎಂದಳು. ರಾಣಿಗೆ ಅಮಿಯ ಮೇಲೆ ಎಲ್ಲಿಲ್ಲದ ಸಿಟ್ಟುಬಂತು. ಅಷ್ಟರಲ್ಲಿ ಎಲ್ಲಿಂದಲೋ ವಾರ್ನಿ ಬಂದನು.

ವಾರ್ನಿಯನ್ನು ನೋಡಿ ಅಸಹ್ಯಗೊಂಡ ಅಮಿ ಮಹಾರಾಣಿ ನನ್ನನ್ನು ಅವನಿಂದ ಪಾರುಮಾಡಿ ಎಂದು ಬೇಡಿಕೊಂಡಳು. ರಾಣಿ ಅಮಿಗೆ ಹುಚ್ಚುಹಿಡಿದಿದೆ ಎಂದು ಭಾವಿಸಿ ಲಾರ್ಡ್ ಹನ್ಸ್‌ಡನ್ನರಿಗೆ ಆಕೆಯನ್ನು ನೋಡಿಕೊಳ್ಳಲು ಹೇಳಿದಳು.

ಅಮಿಯನ್ನು ಹನ್ಸ್‌ಡನ್ ಕರೆದುಕೊಂಡು ಹೋದ ಬಳಿಕ ವಾರ್ನಿ ಅಮಿಗೆ ಬುದ್ಧಿಪಲ್ಲಟವಾಗಿದೆಯೆಂದು ರಾಣಿಯಲ್ಲಿ ಹೇಳಿದನು. ಎಲ್ಲರೂ ಅವನ ಮಾತನ್ನು ನಂಬಿ

ದರು ರಾಣಿಗೆ ಲಿಸೆಸ್ಟರನ ಮೇಲಿನ ಕೋಪ ಶಮನವಾಯಿತು. ಲಿಸೆಸ್ಟರ್ ಮತ್ತು ವಾರ್ನಿ ಏಕಾಂತವಾಗಿ ಕುಳಿತು ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸಿಕೊಂಡು ಅಮಿ ಇದ್ದ ಕೋಣೆಗೆ ಹೋದರು. ಅಮಿಗೆ ಪತಿಯನ್ನು ನೋಡಿ ಅತ್ಯಾನಂದವಾಯಿತು, ಲಿಸೆಸ್ಟರ್ ಅಮಿಗೆ 'ನನ್ನಾಜ್ಞೆಯಿಲ್ಲದೆ ಇಲ್ಲಿಗೆ ಬಂದು ನನಗೆ ಎರಡು ಬಗೆದಿರುವೆ' ಎಂದು ಹೇಳಿದನು. ಸ್ವಲ್ಪ ದಿನದ ವರೆಗೆ ವಾರ್ನಿಯ ಪತ್ನಿಯಂತೆ ನಟಿಸಬೇಕೆಂದು ಸೂಚಿಸಿದನು. ಅಮಿ ಇದನ್ನು ಒಪ್ಪಲಿಲ್ಲ. ಈ ರಹಸ್ಯಲಗ್ನವನ್ನು ಒಪ್ಪಿಕೊಳ್ಳುವಂತೆ ಲಿಸೆಸ್ಟರನಲ್ಲಿ ಬೇಡಿದಳು. ಲೀಸೆಸ್ಟರನಿಗೆ ಹೆಚ್ಚು ಮಾತನಾಡಲು ಅವಕಾಶ ವಿರಲಿಲ್ಲ.

ಲೀಸೆಸ್ಟರ್ ತನ್ನ ಕೋಣೆಗೆ ಬಂದು ಈ ಗುಪ್ತಲಗ್ನವನ್ನು ಒಪ್ಪಿಕೊಂಡು ಅಮಿ ಯೊಡನೆ ಸಂತೋಷದಿಂದ ಬಾಳಬೇಕೆಂದು ಯೋಚಿಸಿದನು. ಒಡೆಯನ ಮನಸ್ಸನ್ನು ಸೂಕ್ಷ್ಮವಾಗಿ ಅರಿತ ವಾರ್ನಿ ನಟನೆ ಮಾಡುತ್ತಾ ಅಮಿಗೂ ಟ್ರಿಸಿಲಿಯನನಿಗೂ ಗುಪ್ತ ವ್ಯವಹಾರ ಇತ್ತೆಂದೂ,ಕೆನಿಲ್‌ವರ್ತ್‌ಭವನದಲ್ಲಿ ಕೂಡ ಆಕೆ ಅವನೊಡನೆ ತಂಗಿದ್ದಳೆಂದೂ ಸುಳ್ಳು ಹೇಳಿ ವಿಷ ಬೀಜ ಬಿತ್ತಿದನು. ಲಿಸೆಸ್ಟರನ ಮನಸ್ಸು ಬದಲಾಯಿಸಿತು. ಪ್ರೀತಿಯ ಸ್ಥಾನದಲ್ಲಿ ಕೋಪ ತಿರಸ್ಕಾರಗಳು ಮೂಡಿದವು. ಅಮಿ ಮತ್ತು ಟ್ರಿಸಿಲಿಯ ನರು ಸಾಯಲೇಬೇಕೆಂದು ತೀರ್ಮಾನಿಸಿದ. ವಾರ್ನಿ ಬಯಸಿದ್ದೂ ಇದೇ ಆಗಿತ್ತು. ಲಿಸೆಸ್ಟರ್ ರಾಣಿಯ ಆತಿಥ್ಯಕ್ಕೆ ಹೊರಟುಹೋದ, ಅಷ್ಟರಲ್ಲಿ ವಾರ್ನಿ ಅಮಿಯನ್ನು ಮನೆಗೆ ಕರೆದುಕೊಂಡು ಹೋಗಲು ರಾಣಿಯಿಂದ ಅಪ್ಪಣೆ ಪಡೆದನು. ಅಮಿಯನ್ನು ಆ ಸಂಜೆಯೇ ಕುಮ್ನಾರ್‌ಭವನಕ್ಕೆ ಸಾಗಿಸುವ ಏರ್ಪಾಟಾಯಿತು. ಇದಕ್ಕಾಗಿ ವಾರ್ನಿ ಫಾಸ್ಟರನನ್ನು ಕರೆಸಿಕೊಂಡನು. ತಾನು ಮಾಡುವ ಕೆಲಸಗಳಿಗೆ ಲಿಸೆಸ್ಟರನ ಸಮ್ಮತಿಯಿದೆ ಎಂದು ತಿಳಿಸಲು ಆತನ ಮುದ್ರೆ ಉಂಗುರವನ್ನು ತೆಗೆದುಕೊಂಡನು. ಅಮಿಗೆ ಕುಮ್ನಾರ್ ಭವನಕ್ಕೆ ಹಿಂತಿರುಗುವ ವಿಚಾರವನ್ನು ತಿಳಿಸಿದನು. ಅಮಿ ಮೊದಲು ಒಪ್ಪಲಿಲ್ಲ. ಆದರೆ ತನ್ನ ಪತಿಯ ಆಜ್ಞೆಯಿದೆ ಎಂದು ತಿಳಿದಾಗ ಹೊರಡಲು ಸಿದ್ಧಳಾದಳು. ಅವಳನ್ನು ಡೋಲಿಯಲ್ಲಿ ಕರೆದುಕೊಂಡು ಹೋದರು.

ಇತ್ತ ಲಿಸೆಸ್ಟರ್ ತನ್ನ ಮನಸ್ಸಿನ ದುಗುಡವನ್ನು ತೋರಿಸಿಕೊಳ್ಳದೆ ರಾಣಿ ಯೊಡನೆ ನಾಟಕವನ್ನು ನೋಡುತ್ತಿದ್ದ. ಆಗ ಟ್ರಿಸಿಲಿಯನ್ ಲಿಸೆಸ್ಟರನೊಡನೆ ಗುಪ್ತ ವಾಗಿ ಮಾತನಾಡಲು ಇಚ್ಛಿಸಿದನು. ಇಬ್ಬರೂ ಭವನದಿಂದ ಹೊರಗೆ ಬಂದರು. ಟ್ರಿಸಿಲಿಯನನನ್ನು ನೋಡಿದ ಕೂಡಲೆ ಲಿಸೆಸ್ಟರನ ಕೋಪ ನೆತ್ತಿಗೇರಿತ್ತು. ಆ ತಕ್ಷಣವೇ ಅವನನ್ನು ಮುಗಿಸಲು ಯೋಚಿಸಿದ. ಆದರೂ ಅವನು ಏನು ಹೇಳುತ್ತಾನೆ ಕೇಳೋಣ ವೆಂದುಕೊಂಡ. ಅಮಿಗೆ ಸ್ವಾತಂತ್ರ್ಯ, ಘನತೆ, ಗೌರವಗಳನ್ನು ದೊರಕಿಸಿಕೊಡಬೇಕೆಂದು ಟ್ರಿಸಿಲಿಯನ್ ಕೋರಿದ. ಲಿಸೆಸ್ಟರ್ ಖಡ್ಗವನ್ನು ಸೆಳೆದು ಆತನನ್ನು ಕೊಲ್ಲಲು ಮುಂದಾದ. ಅಷ್ಟರಲ್ಲಿ ಹಿಂದಿನಿಂದ ತುಂಟ ಹುಡುಗ ಡಿಕ್ಕಿಸ್ಲಡ್ಜ್ ಲಿಸೆಸ್ಟರನನ್ನು

ತಪೆದು ಆತನಿಗೆ ಒಂದು ಪತ್ರವನ್ನು ಕೊಟ್ಟನು. ವೇಲಾಂಡನಲ್ಲಿದ್ದ ಈ ಪತ್ರವನ್ನು ಕುತೂಹಲಕ್ಕಾಗಿ ಹಾರಿಸಿಕೊಂಡು ಹೋಗಿ ಸಕಾಲದಲ್ಲಿ ಅದನ್ನು ಲಿಸಸ್ಟರನಿಗೆ ಕೊಡ ಲಾಗದಿದುದ್ದಕ್ಕೆ ಕ್ಷಮೆಯನ್ನು ಕೋರಿದನು. ಅದು ಲಿಸೆಸ್ಟರನಿಗೆ ಬರೆದ ಅಮಿಯ ಪತ್ರವಾಗಿತ್ತು. ಲಿಸೆಸ್ಟರ್ ಆ ಪತ್ರವನ್ನು ಓದಿದ. ಅಮಿಯ ಪತ್ರದಲ್ಲಿ ಕುಮ್ನಾರ್ ಭವನವನ್ನು ಬಿಡಲು ಕಾರಣ, ಲಿಸೆಸ್ಟರನ ಮೇಲಿರುವ ಪ್ರೀತಿ ಎಲ್ಲವೂ ವ್ಯಕ್ತವಾಗಿ ದ್ದವು. ಲಿಸೆಸ್ಟರ್‌ಗೆ ವಾರ್ನಿ ಎಂತಹ ದ್ರೋಹಿ ಎಂಬುದು ತಿಳಿಯಿತು. ಟ್ರಿಸಿಲಿಯನ್‌ನ ಉದಾತ್ತತೆಯು ಅರಿವಾಯಿತು. ಆ ಪತ್ರವನ್ನು ಟ್ರಿಸಿಲಿಯನ್‌ಗೆ ಓದಲು ಕೊಟ್ಟನು. ಅಮಿ ಲೀಸೆಸ್ಟರನ ಹೆಂಡತಿ ಎಂದು ತಿಳಿದು ಆತನಿಗೆ ಆಶ್ಚರ್ಯವಾಯಿತು. ಲಿಸೆಸ್ಟರ್ ರಾಣಿಯಲ್ಲಿ ತನ್ನ ಮದುವೆಯ ವಿಚಾರವನ್ನು ತಿಳಿಸಲು ಓಡಿ ಹೋದ. ರಾಣಿಗೆ ಇವನ ಮೇಲೆ ಸಿಟ್ಟು ಆಕ್ರೋಶಗಳು ಉಂಟಾದವು. ಆಕೆ ಇವನನ್ನು ಚೆನ್ನಾಗಿ ಮೂದಲಿಸಿದಳು. ಲಿಸೆಸ್ಟರ್ ಅಮಿಯ ಬಳಿಗೆ ಹೋಗಲು ತವಕಿಸಿದ. ಆದರೆ ರಾಣಿ ಟ್ರಿಸಿಲಿಯನ್ ಮತ್ತು ರಾಲೆಗೆ ಅಮಿಯನ್ನು ಕರೆತರಲು ತಿಳಿಸಿದಳು. ವಾರ್ನಿಯನ್ನು ಸೆರೆಹಿಡಿಯಲು ಆಜ್ಞಾಪಿಸಿದಳು.

ಲಿಸೆಸ್ಟರ್ ಟ್ರಿಸಿಲಿಯನನನ್ನು ಭೇಟಿ ಮಾಡುವ ಮೊದಲು ವಾರ್ನಿಗೆ ಮುದ್ರೆ ಯುಂಗುರವನ್ನು ಹಿಂತಿರುಗಿಸುವಂತೆ ಮತ್ತು ಸಾಮಂತಿಣಿಯನ್ನು ಕೊಲ್ಲುವ ವಿಚಾರ ವನ್ನು ಮುಂದೂಡುವಂತೆ ತಿಳಿಸಿ ಪತ್ರ ಬರೆದು ಅದನ್ನು ಮೈಕೆಲನೊಂದಿಗೆ ಕಳಿಸಿಕೊಟ್ಟಿ ದ್ದನು. ಮೈಕೆಲ್ ಅರ್ಧದಾರಿಯಲ್ಲಿ ವಾರ್ನಿಗೆ ಸಿಕ್ಕಿ ಲಿಸೆಸ್ಟರನ ಪತ್ರವನ್ನು ಆತನಿಗೆ ತೋರಿಸಿದನು. ವಾರ್ನಿ ಆ ಪತ್ರವನ್ನು ಓದಿ, ಒಡೆಯನ ನಿರ್ಧಾರ ಸಡಿಲವಾಗುತ್ತಿರು ವುದನ್ನು ಗಮನಿಸಿ ಆ ಪತ್ರವೇ ತಲಪಿಲ್ಲದಂತೆ ಮಾಡಲು ಮೈಕೆಲನಿಗೆ ಗುಂಡಿನಿಂದ ಹೊಡೆದು ಮುಂದೆ ಹೊರಟುಹೋದನು.

ವಾರ್ನಿ ಕುಮ್ನಾರ್ ಭವನವನ್ನು ತಲಪಿದ ಕೂಡಲೆ ಅಮಿಯನ್ನು ಆಕೆಯ ಕೋಣೆಗೆ ಕೊಂಡೊಯ್ಯದೆ ಫಾಸ್ಟರ್‌ನು ಚಿನ್ನ ಇಟ್ಟಿದ್ದ ಕೋಣೆಗೆ ಕರೆದುಕೊಂಡು ಹೋದನು. ಫಾಸ್ಟರ್ ಮೊದಮೊದಲು ಅಮಿಯನ್ನು ಸಾಯಿಸುವ ವಿಚಾರಕ್ಕೆ ಮನಸ್ಸು ಕೊಡಲಿಲ್ಲ. ಆದರೆ ವಾರ್ನಿ ಅತನಿಗೆ ಕುಮ್ನಾರ್ ಭವನದ ಆಸೆ ತೋರಿಸಿದ. ದುರಾಸೆ ಉಳ್ಳವನಾದ ಫಾಸ್ಟರ್ ಇದಕ್ಕೆ ಒಪ್ಪಿದನು. ಅಮಿಗೆ ಲಿಸೆಸ್ಟರ್ ಬರುವನೆಂದೂ ಅಲ್ಲಿಯವರೆಗೂ ಆ ಕೋಣೆಯಲ್ಲಿ ಇರಬೇಕೆಂದು ಹೇಳಿದರು. ಅಮಿಯನ್ನು ಇಟ್ಟಿದ್ದ ಕೋಣೆಯ ಗೋಡೆಯಲ್ಲಿ ಒಂದು ಯಂತ್ರವಿತ್ತು: ಆ ಯಂತ್ರಕ್ಕೆ ಒಂದು ಹಗ್ಗವನ್ನು ಕಟ್ಟಿದ್ದರು. ಅದನ್ನು ಎಳೆದರೆ ಆ ಕೈಸಾಲೆ ಕೆಳಗಿಳಿಯುತ್ತಿತ್ತು ಮತ್ತು ಮೇಲೇರಿ ಬರಲು ಆಗುತ್ತಿರಲಿಲ್ಲ. ಈ ತಂತ್ರವನ್ನು ತಿಳಿದುಕೊಂಡ ವಾರ್ನಿ ಮರುದಿನ ಆ ಹಗ್ಗ ವನ್ನು ಎಳೆದನು. ಅಮಿಯ ಶರೀರ ಧೊಪ್ಪನೆ ಕೆಳಗೆ ಬಿತ್ತು. ಟ್ರಿಸಿಲಿಯನ್ ಮತ್ತು ರಾಲೆ ಕುಮ್ನಾರ್ ಭವನಕ್ಕೆ ಬರುವ ಹೊತ್ತಿಗೆ ಅಮಿಯ ಸಾವು ಸಂಭವಿಸಿತ್ತು. ವಾರ್ನಿ

ಅವರಿಗೆ ಅಮಿಯ ಶವವನ್ನು ತೋರಿಸಿದನು. ವಾರ್ನಿಯಲ್ಲಿ ಸ್ವಲ್ಪವೂ ಪಶ್ಚಾತ್ತಾಪ ವಿರಲಿಲ್ಲ. ವಾರ್ನಿಯನ್ನು ಅವರು ಸೆರೆ ಹಿಡಿಯುವಷ್ಟರಲ್ಲಿ ಆತ ವಿಷಕುಡಿದು ಆತ್ಮಹತ್ಯೆ ಮಾಡಿಕೊಂಡನು. ಟ್ರಿಸಿಲಿಯನ್ ಮುದ್ದೆಯಾಗಿ ಬಿದ್ದಿದ್ದ ಅಮಿಯ ಕಳೇಬರವನ್ನು ನೋಡಿ ಬಿಕ್ಕಿ ಬಿಕ್ಕಿ ಅತ್ತನು. ಫಾಸ್ಟರ್ ತಾನು ಇಟ್ಟಿದ್ದ ಚಿನ್ನದ ಪೆಟ್ಟಿಗೆಯನ್ನು ತರಲು ಹೋಗಿ ಅಲ್ಲಿಯ ಬೀಗದ ಎಸಳನ್ನು ಮರೆಶಿದ್ದರಿಂದ ಹೊರ ಬರಲಾರದೆ ಅಲ್ಲಿಯೇ ಸತ್ತುಹೋದನು. ಲಿಸೆಸ್ಟರ್ ಸ್ವಲ್ಪ ಕಾಲ ದುಃಖದಲ್ಲಿದ್ದು ಪುನಃ ರಾಜಾ ಸ್ಥಾನವನ್ನು ಸೇರಿಕೊಂಡನು. ರೋಬ್ಸಾರ್ಟ್ ಮಗಳ ಸಾವಿನಿಂದ ಉಂಟಾದ ದುಃಖ ದಿಂದ ಚೇತರಿಸಿ ಕೊಳ್ಳಲಾರದೆ ಸತ್ತುಹೋದನು. ಟ್ರಿಸಿಲಿಯನ್ ಕೂಡ ಗೆಳತಿಯ ಅಗಲಿಕೆಯನ್ನು ಮರೆಯಲಾರದೆ ಬಹುಬೇಗ ಸತ್ತುಹೋದನು. ಹೀಗೆ ಮುಕ್ತಾಯ ವಾಗುತ್ತದೆ ಕೆನಿಲ್‌ವರ್ತ್‌ನ ಕಥೆ.

೩

ಕೆನಿಲ್‌ವರ್ತ್‌ನಲ್ಲಿ ಬರುವ ಪಾತ್ರಗಳು ಹಲವಾರು. ಈ ಪಾತ್ರಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಚಾರಿತ್ರಿಕ ಪಾತ್ರಗಳು ಮತ್ತು ಕಾಲ್ಪನಿಕ ಪಾತ್ರಗಳು. ಸ್ಕಾಟ್‌ಚಾರಿತ್ರಿಕ ಪಾತ್ರಗಳಷ್ಟೆ ಸಮರ್ಥವಾಗಿ ಕಾಲ್ಪನಿಕ ಪಾತ್ರಗಳನ್ನು ನಿರೂಪಿಸಿದ್ದಾನೆ.

ಕೆನಿಲ್‌ವರ್ತ್‌ನ ನಾಯಕಿ ಅಮಿ. ಕಾದಂಬರಿಯಲ್ಲಿ ಆಕೆ ಕಾಣಸಿಕೊಳ್ಳುವ ಮೊದಲೇ ನಮಗೆ ಅವಳ ಸೌಂದರ್ಯದ ಪರಿಚಯವಾಗುತ್ತದೆ. ಸತ್ರದೊಡೆಯ ಗೈಲ್ಸ್‌ಗ್ಲಾಸಿಂಗ್ "ಅವಳು ಅಪ್ಸರೆಯಷ್ಟು ಅಂದವಾಗಿದ್ದಾಳೆಂದು ಹೇಳುತ್ತಾರೆ" ಎಂದರೆ ಲಾರೆನ್ಸ್ "ನಾನು ಎಷ್ಟೋ ಜನ ರೂಪವತಿಯರನ್ನು ನೋಡಿದ್ದೇನೆ. ಆದರೆ ಆಕೆಯಷ್ಟು ರೂಪ ವತಿಯರನ್ನು ನೋಡಿಲ್ಲ" ಎನ್ನುತ್ತಾನೆ. ಇದರಿಂದ ಅಮಿ ಎಂಥ ಸುಂದರಿ ಎಂಬುದು ಗೊತ್ತಾಗುತ್ತದೆ. ಆಕೆ ಲಾರ್ಡ್ ಲಿಸೆಸ್ಟರನ ವಿವಾಹಿತ ಮಡದಿ. ಆದರೆ ಅವಳ ಪತಿ ಈ ವಿವಾಹವನ್ನು ಗುಪ್ತವಾಗಿಟ್ಟಿರುತ್ತಾನೆ. ಆಕೆ ಲಿಸೆಸ್ಟರನನ್ನು ಅತಿಯಾಗಿ ಪ್ರೀತಿಸು ತ್ತಿರುತ್ತಾಳೆ. ಅವಳು ಎಲ್ಲಿ, ಯಾವಾಗ ಲಿಸೆಸ್ಟರನನ್ನು ನೋಡಿದಳು. ಆತನೊಡನೆ ಆಕೆಗೆ ಹೇಗೆ ಸ್ನೇಹ ಉಂಟಾಯಿತು ಎಂಬುದಕ್ಕೆ ಕಾದಂಬರಿಯಲ್ಲಿ ಉತ್ತರವಿಲ್ಲ. ಆದರೆ ವಾರ್ನಿಯ ಮೂಲಕ ಲಿಸೆಸ್ಟರ್ ಆಕೆಯನ್ನು ಪಡೆದನೆಂಬುದು ವಾರ್ನಿ ಮತ್ತು ಟ್ರಿಸಿಲಿಯನರ ಮಾತುಗಳಿಂದ ತಿಳಿದುಕೊಳ್ಳಬಹುದು ಅಮಿಯ ತಂದೆ ಮೊದಲಾದವ ರೆಲ್ಲ ಅಮಿ, ವಾರ್ನಿಯ ಪ್ರೇಯಸಿಯಾಗಿದ್ದಾಳೆಂದು ತಿಳಿದಿರುತ್ತಾರೆ. ಅಮಿ ಲೀಸೆಸ್ಟರನ ಪತ್ನಿ ಎಂಬುದು ಅವರಿಗೆ ತಿಳಿದಿದ್ದರೆ ಅಮಿಯ ಜೀವನ ಸುಖಮಯವಾಗಿರುತ್ತಿತ್ತೊ ಏನೊ? ಅಮಿ ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡಿದ್ದರೂ ತಂದೆಯ ಅಮಿತ ಪ್ರೀತಿಯಲ್ಲಿ ಬೆಳೆದಿರುತ್ತಾಳೆ. ಟ್ರಿಸಿಲಿಯನ್ ಆಕೆಯ ಬಾಲ್ಯ ಗೆಳೆಯ ಅಮಿಗೆ ಟ್ರಿಸಿಲಿಯನ್ ಉದಾತ್ತ ವ್ಯಕ್ತಿಯೆಂದು ತಿಳಿದಿದ್ದರೂ ಸಹ ಆತನನ್ನು ಗೌರವಿಸು ತ್ತಿದ್ದಳೇ ಹೊರತು ಪ್ರೀತಿಸುತ್ತಿರಲಿಲ್ಲ. ಲಿಸೆಸ್ಟರ್ ತನ್ನ ಅಂದಚೆಂದಗಳಿಂದ ಗೌರವ ಘನತೆಗಳಿಂದ ಅಮಿಯ ಹೃದಯವನ್ನು ಗೆದ್ದಿದ್ದನು. ಲಿಸೆಸ್ಟರನಿಗಾಗಿ ಅಮಿ ವೃದ್ಧ

ತಂದೆಯನ್ನು ಬಿಟ್ಟು ಓಡಿಬರುತ್ತಾಳೆ. ಕುಮ್ನಾರ್ ಭವನದಲ್ಲಿ ಆಕೆ ಬಂಗಾರದ ಪಂಜರ ದಲ್ಲಿ ಇದ್ದಂತಿರುತ್ತಾಳೆ. ಅಲ್ಲಿ ಅವಳಿಗೆ ಹೊರಗಿನ ಪ್ರಪಂಚದ ಸಂಪರ್ಕವೇ ಇರುವು ದಿಲ್ಲ. ಆದರೆ ಲೀಸೆಸ್ಟರನಲ್ಲಿ ಅನುರಕ್ತಳಾದ ಅವಳಿಗೆ ಮೊದಮೊದಲು ಇವುಗಳ ಪರಿವೆಯೇ ಇರುವುದಿಲ್ಲ. ಶೃಂಗಾರಪ್ರಿಯಳಾದ ಆಕೆ ತನ್ನ ಶೃಂಗಾರದಲ್ಲೆ ಹೆಚ್ಚಿನ ಕಾಲ ಕಳೆಯುತ್ತಿರುತ್ತಾಳೆ. ಆಕೆಗೆ ಆದಷ್ಟು ಬೇಗ ತಮ್ಮ ಗುಪ್ತವಿವಾಹ ಬಹಿರಂಗವಾಗಿ ತಾನು ಇಂಗ್ಲೆಂಡಿನ ಸಾಮಂತಿಣಿಯಾಗಿ ಮೆರೆಯುಬೇಕೆಂಬ ಉತ್ಕಟ ಆಕಾಂಕ್ಷೆ ಇರುತ್ತದೆ. ಆದರೆ ಈ ಆಸೆ ಅವಳು ಬದುಕಿರುವವರೆಗೂ ಈಡೇರುವುದಿಲ್ಲ.

ವಾರ್ನಿಯ ಹೆಂಡತಿಯೆಂದು ತಾತ್ಕಾಲಿಕವಾಗಿಯಾದರೂ ನಾಟಕವಾಡಲು ಅವಳಿಗೆ ಇಷ್ಟವಿರುವುದಿಲ್ಲ. ಅವಳು ಆತ್ಮಾಭಿಮಾನಿ. ಪದವಿ ಐಶ್ವರ್ಯಗಳಿಗಾಗಿ ತನ್ನನ್ನು ಮಾರಿಕೊಳ್ಳಲು ಸಿದ್ಧಳಿಲ್ಲ. ಇದನ್ನು ಆಕೆಯ ಪತಿ ಚೆನ್ನಾಗಿ ಅರಿತಿರುತ್ತಾನೆ. ಆತ ಒಮ್ಮೆ ವಾರ್ನಿಯೊಡನೆ "ಡವಾನ್‌ಷೈರಿನ ಸಾಮಾನ್ಯ ಮನುಷ್ಯನ ಆ ಮಗಳಲ್ಲಿ ಸಿಂಹಾಸನ ವನ್ನಲಂಕರಿಸುವ ರಾಣಿಗಿಂತಲೂ ಕೆಚ್ಚಿದೆ ಯೆಂಬುದನ್ನು ಅನೇಕ ವಿಚಾರಗಳಲ್ಲಿ ಆಕೆ ನನ್ನನ್ನು ಅನುಸರಿಸಿಕೊಂಡು ಹೋಗುವಳು. ಆದರೆ ತನ್ನ ಆತ್ಮಗೌರವದ ಪ್ರಶ್ನೆ ಬಂದಾಗ ಸಿಡಿಲ ಮರಿಗಳು" ಎಂದು ಹೇಳುವ ಮಾತುಗಳು ಅಮಿಯ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತವೆ. ಅಮಿಗೆ ರೂಪಿಗೆ ತಕ್ಕಂತೆ ಶಿಶುಸಹಜ ಮುಗ್ಧತೆಯೂ ಇರುತ್ತದೆ. ಟ್ರೆಸಿಲಿಯನ್ ಕರೆದಾಗ ಆಕೆ ತಂದೆಯ ಮನೆಗೆ ಹೋಗಲು ಇಷ್ಟಪಡುವುದಿಲ್ಲ. ತಂದೆಯ ಬಗ್ಗೆ ಆಕೆಗೆ ಪ್ರೀತಿ ಗೌರವಗಳಿವೆ. ಆದರೆ ತಾನು ಲೀಸೆಸ್ಟರನ ಸಾಮಂತಿಣಿ ಎನಿಸಿಕೊಂಡು ತಂದೆಯ ಬಳಿಗೆ ಹೋಗುವ ನಿರ್ಧಾರ ವಿರುತ್ತದೆ. ಆದ್ದರಿಂದ ಆಕೆ ಜೆನೆಟ ಳೊಡನೆ "ನಾನು ನಮ್ಮಪ್ಪನ ಮನೆಯನ್ನು ಬಿಟ್ಟುಬಂದೆನೆಂದಲ್ಲವೇ ಬಹುಶಃ ಜನರಾಡಿ ಕೊಳ್ಳುವುದು ? ಅಹುದು ಅದು ನನ್ನ ತಪ್ಪು. ಆದರೆ ಆ ತಪ್ಪನ್ನು ಕೂಡಲೇ ಸರಿ ಪಡಿಸುವೆ. ಸರಿಪಡಿಸಲೇ ಬೇಕು. ನಾನು ಶುಭ್ರವಾದ ಬಾಳನ್ನು ಬಾಳುತ್ತೇನೆ, ಇಲ್ಲಾ ಪ್ರಾಣ ನೀಗುತ್ತೇನೆ" ಎನ್ನುತ್ತಾಳೆ.

ಅಮಿ ಸಾಮಂತಿಣಿಯಾದರೂ ಅನೇಕ ಕಷ್ಟಗಳನ್ನು ಎದುರಿಸುತ್ತಾಳೆ. ಪತಿಯ ಭವನಕ್ಕೆ ಪರಕೀಯಳಂತೆ ಕಾಲಿಡುತ್ತಾಳೆ. ಅಲ್ಲಿ ಅವಳಿಗೆ ನಿಲ್ಲಲೂ ಸ್ಥಾನವಿಲ್ಲ. ಟ್ರೆಸಿ ಲಿಯನ್‌ನ ಕೋಣೆಯಲ್ಲಿಯೇ ತಂಗುತ್ತಾಳೆ. ಆಕೆಯ ಪತ್ರ ಸಕಾಲದಲ್ಲಿ ಲೀಸೆಸ್ಟರನಿಗೆ ತಲುಪಿದ್ದರೆ ಆಕೆಯ ಜೀವನದ ಗತಿಯೇ ಬದಲಾಗುತ್ತಿತ್ತು. ಲೀಸೆಸ್ಟರ್ ಅಮಿಯನ್ನು ಬಿಡಲಾರ, ರಾಣಿಯನ್ನು ತೊರೆಯಲಾರ. ಆದರೆ ಅಮಿ ಲೀಸೆಸ್ಟರನಿಗೆ ತನ್ನನ್ನೆ ಸಮರ್ಪಿಸಿ ಕೊಂಡಿದ್ದಳು. "ಸ್ತ್ರೀ ಅರ್ಪಿಸಬಹುದಾದುದೆಲ್ಲವನ್ನು ಅವನಿಗೆ ಅರ್ಪಿಸಿದ್ದೇನೆ. ನನ್ನ ಹೆಸರನ್ನೇ, ಯಶಸ್ಸನ್ನೇ ಹೃದಯ ಹಾಗು ಹಸ್ತವನ್ನೇ ಈ ಭವನ ದೊಡೆಯನಿಗೆ ಧಾರೆ ಯೆರೆದಿದ್ದೇನೆ. ಇದಕ್ಕಿಂತ ಹೆಚ್ಚಾಗಿ ಇನ್ನೇನನ್ನು ತಾನೆ ಈ ಇಂಗ್ಲೆಂಡಿನ ರಾಣಿ ಕೊಡ ಬಲ್ಲಳು ! ಅವನೆನ್ನ ಪತಿ; ನಾನವನ ಸತಿ. ದೇವರು ನಮ್ಮಿಬ್ಬರನ್ನೂ ಬೆಸೆದಿದ್ದಾನೆ.

ಮಾನವ ಅದನ್ನು ಬಿಡಿಸಲಾರ. ನನ್ನ ಹಕ್ಕನ್ನು ಸಾಧಿಸಲು ನಾನು ಹಿಂಜರಿಯುವುದಿಲ್ಲ ಎಂಬ ಮಾತಿನಲ್ಲಿ ಆಕೆಯ ಆತ್ಮ ವಿಮರ್ಶೆಯಿದೆ.

ಅಮಿ ಗಂಡನನ್ನು ಬಹಳವಾಗಿ ನಂಬಿದ್ದಳು. ಇದೇ ಅವಳ ಅಧಃಪತನಕ್ಕೆ ಕಾರಣವಾಯಿತು. ರಾಣಿ ಲೀಸೆಸ್ಟರನನ್ನು ಅಮಿಯಾ ಎದುರಿನಲ್ಲಿ ಬಂಧಿಸಲು ಹೇಳಿದಾಗ ಆತನದು ತಪ್ಪಿಲ್ಲವೆಂದು ಹೇಳಿ ತನ್ನ ಅಭ್ಯುದಯಕ್ಕೆ ತಾನೇ ಕೊಡಲಿ ಪೆಟ್ಟು ಹಾಕುತ್ತಾಳೆ. ಇದರಿಂದಾಗಿ ಎಲ್ಲರೂ ಅವಳನ್ನು ಹುಚ್ಚಿಯೆಂದು ತಿಳಿಯುತ್ತಾರೆ. ಲೀಸೆಸ್ಟರನೇ ಬಂದು ಅಮಿಗೆ ವಾರ್ನಿಯ ಹೆಂಡತಿಯಂತೆ ನಟಿಸಲು ಹೇಳಿದಾಗ ಆಕೆ ಆತ್ಮಗೌರವಕ್ಕೆ ಕಳಂಕ ತರುವಂಥದುದನ್ನು ನಾನು ಕಿಂಚಿತ್ತು ಮಾಡಲಾರೆ ಎನ್ನುತ್ತಾಳೆ. ಆ ಸಮಯದಲ್ಲಿ ಅಮಿ ಲೀಸೆಸ್ಟರನಿಗೆ "ನಮ್ಮ ಸತ್ಯ ಮತ್ತು ಗೌರವದ ವರ್ತನೆಯನ್ನು ಬಿಟ್ಟರೆ ಮತ್ತಾವ ಸ್ನೇಹಿತನೂ ನಮಗೆ ಸಹಾಯ ಮಾಡಲಾರ. ಈ ಗುಣಗಳನ್ನು ನೀನು ಪ್ರಕಟಿಸು. ಆಗ ಎಂಥ ಬದ್ಧವೈರದ ಶತ್ರುಸೇನೆಯ ಮಧ್ಯದಲ್ಲಿದ್ದರೂ ನಿನಗೆ ಕ್ಷೇಮವಾಗುವುದು. ಇದನ್ನು ಬಿಟ್ಟರೆ ಮತ್ತಾವ ರಕ್ಷಣೆಯೂ ವ್ಯರ್ಥ. ಸತ್ಯ ಶಸ್ತ್ರಕ್ಕಿಂತ ಮೇಲು" ಎಂದು ಹೇಳುವ ಮಾತುಗಳು ಆಕೆಯ ಉದಾತ್ತ ಗುಣಗಳಿಗೆ ಸಾಕ್ಷಿಯಾಗಿವೆ. ಕೊನೆಗೆ ವಾರ್ನಿಯ ನೀಚತನದಿಂದ ಅಮಿ ಸಾಯುತ್ತಾಳೆ. ಅಮಿಯ ಆ ಹೃದಯವಿದ್ರಾವಕ ಸಾವು ಕಲ್ಲೆದೆಯನ್ನೂ ಕರಗಿಸುತ್ತದೆ. ಹೀಗೆ ಮುಗ್ಧ ಅಮಿ ಲೀಸೆಸ್ಟರನಿಗಾಗಿ ತನ್ನ ಪ್ರಾಣವನ್ನೇ ಅರ್ಪಿಸುತ್ತಳೆ.

ಲೀಸೆಸ್ಟರ್ ಕೆನಿಲ್‌ವರ್ತ್ ಕಾದಂಬರಿಯ ನಾಯಕ. ಇಂಗ್ಲೆಂಡಿನ ರಾಣಿ ಎಲಿಜಬೆತ್ತಳ ಮಂತ್ರಿ. ಅಮಿಯ ಪತಿ. ಈತನಲ್ಲಿ ಸ್ತ್ರೀಯರನ್ನು ಆಕರ್ಷಿಸುವ ಗುಣವಿತ್ತು. ಇದರಿಂದಾಗಿ ಆತ ಅಮಿ ಮತ್ತು ರಾಣಿ ಇಬ್ಬರಿಗೂ ಪ್ರಿಯನಾಗಿದ್ದ. ಆತ ಅಮಿಯನ್ನು ಪ್ರೀತಿಸಿದಷ್ಟೇ ಪದವಿ, ಅಧಿಕಾರಗಳಿಗೆ ಅಂಟಿಕೊಂಡಿರುತ್ತಾನೆ. ರಾಜಕೀಯದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸುವ ಆಸೆಯಿಂದ ತನ್ನ ವಿವಾಹವನ್ನು ಗುಪ್ತವಾಗಿಟ್ಟಿರುತ್ತಾನೆ. ಅಮಿ ತಮ್ಮ ಮದುವೆಯನ್ನು ಬೇಗ ಬಹಿರಂಗಗೊಳಿಸುವಂತೆ ಕೇಳಿಕೊಂಡಾಗ "ರಾಜಾಸ್ಥಾನದಲ್ಲಿರುವವರು ಮರಳಿನ ಬೆಟ್ಟವನ್ನು ಹತ್ತುವವರ ಹಾಗೆ. ಎಲ್ಲಿಯಾದರು ಒಂದು ಚಾಚಿದ ಬಂಡೆ ಸಿಕ್ಕುವವರೆಗು ನಿಲ್ಲುವಂತಿಲ್ಲ. ಅದಕ್ಕೆ ಮೊದಲೇ ನಿಂತರೆ ನೋಡುವವರು ನಗುವಂತೆ ನಮ್ಮ ಭಾರದಿಂದಲೇ ಜಾರಿ ಬಿಡುತ್ತೇವೆ. ನಾನೇನೊ ತುಂಬ ಎತ್ತರದಲ್ಲಿ ನಿಂತಿದ್ದೇನೆ. ಆದರ ನನ್ನ ಇಷ್ಟಾನುಸಾರ ನಡೆಯುವಷ್ಟು ಭದ್ರವಾಗಿ ನಿಂತಿಲ್ಲ. ನನ್ನ ಲಗ್ನವನ್ನು ಬಹಿರಂಗಪಡಿಸಿದರೆ ನನ್ನ ನಾಶಕ್ಕೆ ನಾನೇ ಕಾರಣವಾದಂತೆ" ಎಂದು ಹೇಳಿ ಅಮಿಯನ್ನು ಸಮಾಧಾನ ಪಡಿಸುತ್ತಾನೆ.

ಲೀಸೆಸ್ಟರ್ ವಾರ್ನಿಯನ್ನು ಸಂಪೂರ್ಣ ನಂಬಿರುತ್ತಾನೆ. ಅವನಿಂದಾಗಿ ಸುಳ್ಳು ಹೇಳುತ್ತಾನೆ. ಒಂದು ಸುಳ್ಳಿನಿಂದ ಪಾರಾಗಲು ಹೋಗಿ ಅನೇಕ ಸುಳ್ಳುಗಳನ್ನು ಹೇಳಬೇಕಾಗುತ್ತದೆ. ಲೀಸೆಸ್ಟರ್‌ನಿಗೆ ತನ್ನ ವೈರಿ ಸಸೆಕ್ಸನಿಗಿಂತ ಮೇಲೇರಬೇಕೆಂಬ

ಆಸೆಯಿರುತ್ತದೆ. ಆದಕ್ಕಾಗಿ ರಾಣಿಯನ್ನು ವಿವಾಹವಾಗಿ ಇಂಗ್ಲೆಂಡಿನ ರಾಜನಾಗಬೇಕೆಂದು ಪ್ರಯತ್ನಿಸುತ್ತಾನೆ. ಆದ್ದರಿಂದ ರಾಣಿಯ ಜೊತೆಯಲ್ಲಿ ಸಲುಗೆಯಿಂದಿರುವುದಲ್ಲದೆ ಆಕೆಯನ್ನು ವಿವಾಹವಾಗುವ ಇಚ್ಛೆಯನ್ನೂ ಪ್ರಕಟಿಸುತ್ತಾನೆ. ಇತ್ತ ಅಮಿಯನ್ನೂ ಪ್ರೀತಿಸುತ್ತಾನೆ. ಸಮಸ್ಯೆಗಳು ಹೆಚ್ಚಾದಾಗ ವಿವೇಚನಾ ಶಕ್ತಿಯನ್ನು ಕಳೆದುಕೊಂಡು ವಾರ್ನಿಯ ಕೈಗೊಂಬೆಯಾಗುತ್ತಾನೆ. ವಾರ್ನಿ ಅಮಿಯ ಶೀಲದ ಬಗ್ಗೆ ಸುಳ್ಳು ಹೇಳಿದಾಗಲೂ ಲೆಸೆಸ್ಟರ್ ಆಕೆಯ ಉದಾತ್ತ ಗುಣಗಳನ್ನು ಗುರುತಿಸಲಾರದವನಾಗಿರುತ್ತಾನೆ. ಇಲ್ಲೆಲ್ಲ ಲೆಸೆಸ್ಟರ್ ದುರ್ಬಲ ವ್ಯಕ್ತಿಯಂತೆ ಕಂಡುಬರುತ್ತಾನೆ. ರಾಣಿಯ ಎದುರು ತನ್ನ ಗುಪ್ತವಿವಾಹವನ್ನು ಒಪ್ಪಿಕೊಳ್ಳುವ ಧೈರ್ಯ ಈತನಿಗೆ ಬರುವುದರೊಳಗೆ ಅಮಿ ಸಾವನ್ನಪ್ಪಿರುತ್ತಾಳೆ. ಹೀಗೆ ಈತ ಅಮಿಯನ್ನೂ ಉಳಿಸಿಕೊಳ್ಳಲಾಗಲಿಲ್ಲ ರಾಣಿಯನ್ನೂ ಮದುವೆಯಾಗುವುದಿಲ್ಲ. ಅಮಿಯ ಸಾವಿನ ಬಳಿಕ ಲೀಸೆಸ್ಟರ್ ಸ್ವಲ್ಪ ಸಮಯ ದುಃಖದಲ್ಲಿದ್ದು ಪುನಃ ರಾಜಾಸ್ಥಾನವನ್ನು ಸೇರುತ್ತಾನೆ. ಹೀಗೆ ಲೀಸೆಸ್ಟರ್ ಈ ಕಾದಂಬರಿಯಲ್ಲಿ ಇಬ್ಬಂದಿ ವ್ಯಕ್ತಿತ್ವವುಳ್ಳವನಂತೆ ಚಿತ್ರಿತನಾಗಿದ್ದಾನೆ.

ಈ ಕಾದಂಬರಿಯಲ್ಲಿ ಬರುವ ಮತ್ತೊಂದು ಪ್ರಮುಖ ಪಾತ್ರ, ಟ್ರೆಸಿಲಿಯನ್. ಈತ ಸದ್ಗುಣಗಳ ಪ್ರತೀಕ. ಓದುಗರಿಗೆ ಮೊದಲ ಅಧ್ಯಾಯದಲ್ಲೆ ಈತನ ಪರಿಚಯವಾಗುತ್ತದೆ. ಟ್ರೆಸಿಲಿಯನ್ ಅಮಿಯನ್ನು ಪ್ರೀತಿಸುತ್ತಿದ್ದ. ಅಮಿಗೆ ಈತ ಬಾಲ್ಯದ ಗೆಳೆಯ. ಈತ ಚೆನ್ನಾಗಿ ಓದಿಕೊಂಡಿದ್ದ. ಅಮಿಗೆ ತಾನು ತಿಳಿದಿರುವುದನ್ನು ಉಪದೇಶಕನಂತೆ ಹೇಳುತ್ತಿದ್ದ. ಇದರಿಂದಾಗಿ ಅಮಿಗೆ ಈತನಲ್ಲಿ ಗೌರವ ಅಂಜಿಕೆಗಳು ಮೂಡಿದವೇ ಹೊರತು ಪ್ರೀತಿ ಉಂಟಾಗಲಿಲ್ಲ. ಟ್ರೆಸಿಲಿಯನ್ ಒಳ್ಳೆಯವನೆಂದು ಅಮಿಗೂ ತಿಳಿದಿತ್ತು. ಒಮ್ಮೆ ವಾರ್ನಿ ಈತನ ಬಗ್ಗೆ ಹಗುರವಾಗಿ ಮಾತನಾಡಿದಾಗ ಅಮಿ ಅವನಿಗೆ "ಟ್ರೆಸಿಲಿಯನನಷ್ಟು ಘನತೆಯ ಹಾಗೂ ಸತ್ಯಸಂಧರಾದ ಮನುಷ್ಯರು ಸಿಕ್ಕುವುದು ಬಹಳ ಅಪರೂಪ" ಎನ್ನುತ್ತಾಳೆ. ಕಾದಂಬರಿಯನ್ನು ಓದಿದಾಗ ಈ ಮಾತಿನ ಸತ್ಯತೆ ಅರಿವಾಗುತ್ತದೆ.

ಅಮಿ ಟ್ರೆಸಿಲಿಯನನ್ನು ಮದುವೆಯಾಗದಿದ್ದರೂ ಅವಳ ಮೇಲೆ ಆತನಿಗೆ ಪ್ರತೀಕಾರ ಮನೋಭಾವವಿರುವುದಿಲ್ಲ. ವಾರ್ನಿಯ ಸೆರೆಯಿಂದ ಬಿಡಿಸಿ ಅಮಿಯನ್ನು ಅವಳ ತಂದೆಗೆ ಒಪ್ಪಿಸಲು ತುಂಬಾ ಶ್ರಮಪಡುತ್ತಾನೆ. ಹಲವು ತೊಂದರೆಗಳನ್ನು ಎದುರಿಸುತ್ತಾನೆ. ಆದರೂ ಅಮಿಯನ್ನು ಬದುಕಿಸಿಕೊಳ್ಳಲಾಗುವುದಿಲ್ಲ. ಬಾಲ್ಯಗೆಳತಿ ಅಮಿಯ ಸಾವಿನಿಂದ ಈತ ಚೇತರಿಸಿಕೊಳ್ಳಲಾಗಲಿಲ್ಲ. ರಾಜಾಸ್ಥಾನದ ಆಸೆಯೂ ಈತನ ಖಿನ್ನತೆಯನ್ನು ಕಡಮೆ ಮಾಡುವುದಿಲ್ಲ. ಆದ್ದರಿಂದ ಕಿರಿಯ ವಯಸ್ಸಿನಲ್ಲಿಯೇ ಮರಣ ಹೊಂದುತ್ತಾನೆ. ಟ್ರೆಸಿಲಿಯನ್ ತನ್ನ ಸಚ್ಚಾರಿತ್ರದಿಂದ ಓದುಗರ ಮನಸ್ಸನ್ನು ಸೆರೆಹಿಡಿಯುತ್ತಾನೆ.

ವಾರ್ನಿ ಈ ಕಾದಂಬರಿಯಲ್ಲಿ ಖಳನಾಯಕನಂತೆ ಕಾಣಿಸಿಕೊಳ್ಳುತ್ತಾನೆ. ಲೀಸೆಸ್ಟರನ ಎಲ್ಲ ಚಟುವಟಿಕೆಗಳಿಗೂ ಪ್ರೇರಕ, ಪೋಷಕ. ಈತ ಪರಮದ್ರೋಹಿ. ಕಾರ್ಯಸಾಧನೆಗಾಗಿ ಎಂಥ ನೀಚ ಕೆಲಸವನ್ನು ಮಾಡಲು ಸಿದ್ಧ. ಲೀಸೆಸ್ಟರ್, ಅಮಿ ಟ್ರೆಸಿಲಿಯನ್ ಇವರ ಜೀವನದ ಏರುಪೇರುಗಳಿಗೆ ಈತನೇ ಕಾರಣ. ತಂದೆಯ ಮನೆಯಿಂದ ಅಮಿ ಓಡಿಬರುವುದಕ್ಕೆ ಇವನೇ ಸಹಾಯಕ. ಆಕೆಯ ಸಾವಿಗೂ ಇವನೇ ಮೂಲ. ಲೀಸೆಸ್ಟರನಿಗೆ ಇಂಗ್ಲೆಂಡಿನ ರಾಜನಾಗುವ ಆಸೆಯನ್ನು ಬಿತ್ತಿ ಆ ಮೂಲಕ ತಾನು ರಾಜಾಸ್ಥಾನದಲ್ಲಿ ಉನ್ನತ ಶಿಖರವನ್ನೇರಲು ಸಂಚುಮಾಡುತ್ತಾನೆ. ಲೀಸೆಸ್ಟರನನ್ನು ಕುರಿತು ಯೋಚಿಸುತ್ತ "ನಿನ್ನ ಆ ಆಸೆಯು ಬೆಟ್ಟವನ್ನೇರಿದರೆ ನನ್ನನ್ನೂ ಎಳೆದುಕೊಂಡು ಮೇಲೇರುವೆ. ನೀನು ಮೇಲೇರಬೇಕೆಂಬ ನನ್ನ ಆಸೆಗೆ ಕಾರಣ ನಾನೂ ಅದರಿಂದ ಅನುಕೂಲ ಪಡೆಯಬೇಕೆಂದು" ಎಂದು ಹೇಳುವ ಮಾತಿನಲ್ಲಿ ಈತನ ಉದ್ದೇಶ ವ್ಯಕ್ತವಾಗುತ್ತದೆ.

"ವಾರ್ನಿಯಲ್ಲಿ ಕುಯುಕ್ತಿ ಮತ್ತು ಕುಬುದ್ಧಿಯಿದ್ದಂತೆ, ಧೈರ್ಯವೂ ಸಮಯೋಚಿತ ಚಾತುರ್ಯವೂ ಇದ್ದುವು. ಅವನು ಕಷ್ಟಬಂದಾಗ ಸುಗಮವಾಗಿ ನಾವೆಯನ್ನು ನಡೆಸಬಲ್ಲ ನಾವಿಕನಾಗಿದ್ದನು." ಈ ಗುಣಗಳಿಂದ ಆತ ರಾಣಿಯನ್ನೂ ಮೆಚ್ಚಿಸಿ ಸರ್‌ಪದವಿಯನ್ನು ಗಿಟ್ಟಿಸಿದ್ದ. ವಾರ್ನಿಯ ನಿಜವಾದ ಬಣ್ಣ ಅಮಿಗೆ ಮಾತ್ರ ತಿಳಿದಿತ್ತು. ಸಸೆಕ್ಸನಿಗೆ ಕಾಯಿಲೆ ಬರುವಂತೆ ಮಾಡಿ, ಲೀಸೆಸ್ಟರನಿಗೆ ಅಲಾಸ್ಕೊನಿಂದ ಸುಳ್ಳು ಭವಿಷ್ಯ ಹೇಳಿಸಿ, ಅಮಿಯ ಮೇಲೆ ಅಪಪ್ರಚಾರ ಮಾಡಿ ಒಂದಾದ ಮೇಲೊಂದರಂತೆ ಹೇಯವಾದ ಕೆಲಸಗಳನ್ನು ಮಾಡುತ್ತಾನೆ. ವಾರ್ನಿ ತನ್ನ ಹೀನ ಕೃತ್ಯಗಳಿಗೆ ಸಾಯುವಾಗ ಕೂಡ ಪಶ್ಚಾತ್ತಾಪ ಪಡದಿದ್ದುದು ಆಶ್ಚರ್ಯವನ್ನುಂಟುಮಾಡುತ್ತದೆ. ಹೀಗೆ ವಾರ್ನಿ ಕಾದಂಬರಿಯ ದುರಂತಕ್ಕೆ ಕೇಂದ್ರಬಿಂದುವಾಗಿ ನಿಲ್ಲುತ್ತಾನೆ.

ಈ ಕಾದಂಬರಿಯಲ್ಲಿ ಬರುವ ಮತ್ತೊಂದು ಸ್ತ್ರೀ ಪಾತ್ರ ಎಲಿಜಬೆತ್. ಈಕೆ ಇಂಗ್ಲೆಂಡಿನ ರಾಣಿ. ಮಂತ್ರಿಗಳಾದ ಸಸೆಕ್ಸ್ ಮತ್ತು ಲೀಸೆಸ್ಟರ್ ಇವರುಗಳಲ್ಲಿ ಲೀಸೆಸ್ಟರ್ ರಾಣಿಗೆ ಅಚ್ಚುಮೆಚ್ಚಿನವನಾಗಿದ್ದನು. "ಅವಿವಾಹಿತ ರಾಣಿಗೆ ಅಂದ ಚೆಂದಗಳಲ್ಲದೆ ಮತ್ತೇತರ ಮೇಲೆ ಮನಸ್ಸು ಹೋದೀತು ! ಆದರೆ ಅವಳಲ್ಲಿ ಒಂದು ವಿಶೇಷ ಗುಣವಿತ್ತು. ತನ್ನ ಅಂತರಂಗವನ್ನು ಮಾತ್ರ ಆಕೆ ಬಹಿರಂಗಪಡಿಸುತ್ತಿರಲಿಲ್ಲ ; ಇರ್ವರನ್ನೂ ಒಂದೇ ಸಮನಾಗಿ ಭಾವಿಸುವಳೋ ಎಂಬ ರೀತಿಯಲ್ಲಿ ವರ್ತಿಸುತ್ತಿದ್ದಳು. "ಈಕೆ ರಾಜನೀತಿ ನಿಪುಣೆ. ಇವಳಲ್ಲಿ ಹೆಂಗಸಿನ ದೌರ್ಬಲ್ಯ ಗಂಡಸಿನ ದಿಟ್ಟತನ ಎರಡೂ ಬೆರೆತಿದ್ದುವು. ರಾಣಿ ಲೀಸೆಸ್ಟರನೊಡನೆ ಸಲಿಗೆಯಿಂದ ವರ್ತಿಸಿದರೂ ಅವನನ್ನು ಮದುವೆಯಾಗುತ್ತೇನೆಂದು ನಿರ್ಧರವಾಗಿ ಹೇಳುತ್ತಿರಲಿಲ್ಲ. ಸಿಟ್ಟು ಬಂದಾಗ ಎಂಟನೇ ಹೆನ್ರಿಯ ಮಗಳೆಂಬುದನ್ನೂ ತೋರಿಸುತ್ತಿದ್ದಳು. "ಅವಳು

ನಕ್ಕರೆ ಎಳೆಬಿಸಿಲಿನಷ್ಟು ಆನಂದ; ಕೆಕ್ಕರಿಸಿದರೆ ಬರಸಿಡಿಲಿನಷ್ಟು ಭಯಂಕರ." ಲೀಸೆಸ್ಟರನ ವಿವಾಹದಿಂದಾಗಿ ಈಕೆ ಅವಿವಾಹಿತಳಾಗಿಯೇ ಉಳಿದಳು. ಆದರೆ ಇಂಗ್ಲೆಂಡಿನ ಪ್ರಜೆಗಳಿಗೆ ಒಳ್ಳೆಯ ರಾಣಿಯಾಗಿ ಇತಿಹಾಸ ಪ್ರಸಿದ್ಧಳಾದಳು.

ಈ ಕಾದಂಬರಿಯಲ್ಲಿ ಬರುವ ಇತರ ಕೆಲವು ಪಾತ್ರಗಳೆಂದರೆ ಸಸೆಕ್ಸ್, ಅಂತೋಣಿ, ಫಾಸ್ಟರ್, ಮೈಕೆಲ್ ಲ್ಯಾಂಬರ್ನ್, ವೇಲಾಂಡ್, ರಾಲೆ, ಜೆನೆಟ್, ಗೈಲ್ಸ್‌ಗ್ಲಾಸಿಂಗ್, ಡಿಕ್ಕಿ, ಅಲಾಸ್ಕೊ, ರೊಬ್ಸಾರ್ಟ್.

ಸಸೆಕ್ಸ್ ರಣಕಲಿ. ಉತ್ತಮ ಕುಟುಂಬದಿಂದ ಬಂದವನು. ಐರ್‌ಲೆಂಡ್ ಮತ್ತು ಸ್ಕಾಟ್‌ಲೆಂಡ್ ಯುದ್ಧಗಳಲ್ಲಿ ವೀರಾವೇಶದಿಂದ ಕಾದಾಡಿದವನು. ರಾಲೆ ಈತನ ಸೇವಕ. ತನ್ನ ಉನ್ನತಗುಣಗಳಿಂದ ರಾಜಾಸ್ಥಾನದಲ್ಲಿ ಒಳ್ಳೆಯ ಹೆಸರನ್ನು ಪಡೆದು ಇತಿಹಾಸ ಪ್ರಸಿದ್ಧನಾಗುತ್ತಾನೆ.

ಅಂತೋಣಿ ಫಾಸ್ಟರ್ ಕುಮ್ನಾರ್ ಭವನದ ಮೇಲ್ವಿಚಾರಕ, ಅತಿಯಾಸೆ ಉಳ್ಳವ. ಹಣ ಚಿನ್ನಗಳಿಗಾಗಿ ಯಾವ ಕೆಟ್ಟ ಕೆಲಸಗಳನ್ನಾದರೂ ಮಾಡಬಲ್ಲ. ವಾರ್ನಿಗೆ ಸಹಾಯಕನಾಗಿರುತ್ತಾನೆ. ಆದರೆ ಪಾಪ-ಪುಣ್ಯಗಳ ಅರಿವಿದೆ. ಅದರಿಂದಾಗಿ ಮಗಳು ಜೆನಟಳನ್ನು ನೀಚ ಕೆಲಸಗಳಿಗೆ ಬಳಸಿಕೊಳ್ಳುವುದಿಲ್ಲ. ಪರಮಲೋಭಿಯಾದ ಈತ ಚಿನ್ನದ ಪೆಟ್ಟಿಗೆಯನ್ನು ಹಿಡಿದುಕೊಂಡೇ ಸಾಯುತ್ತಾನೆ.

ವೇಲಾಂಡ್ ಕಮ್ಮಾರ. ತನ್ನ ವೃತ್ತಿಯಿಂದ ಬೇಸತ್ತು ಗಾರುಡಿಗನೊಬ್ಬನೊಡನೆ ಹೋಗುತ್ತಾನೆ. ಆತ ಇವನನ್ನು ಕೈಬಿಟ್ಟ ಮೇಲೆ ಡಾಕ್ಟರ್ ಡೂಬಿಯೊಡನೆ ಇದ್ದು ಕೆಲವು ಔಷಧಗಳನ್ನು ಕಲಿಯುತ್ತಾನೆ. ಆತನೂ ಓಡಿ ಹೋದ ಮೇಲೆ ಕಮ್ಮಾರನಾಗಿ ಉಳಿಯುತ್ತಾನೆ. ಟ್ರೆಸಿಲಿಯ ನನ್ನ ಪರಿಚಯವಾದಮೇಲೆ ಆತನಿಗೆ ಸಹಾಯಕನಾಗಿದ್ದು ತನ್ನ ಮೋಸದ ಜೀವನಕ್ಕೆ ಶರಣು ಹೊಡೆದು ಜೆನೆಟಳನ್ನು ಮದುವೆಯಾಗಿ ಫಾಸ್ಟರ್ ಬಿಟ್ಟುಹೋದ ಐಶ್ವರ್ಯಕ್ಕೆ ಒಡೆಯನಾಗುತ್ತಾನೆ.

ಜೆನೆಟ್ ಕುಮ್ನಾರ್ ಭವನದ ಕೆಸರಿನಲ್ಲಿ ಕಮಲವಿದ್ದಂತೆ. ಅಮಿಗೆ ಸಹಾಯಕಿ. ಫಾಸ್ಟರನ ಮಗಳಾದರೂ ಆತನ ಕೆಟ್ಟಗುಣಗಳು ಈಕೆಯಲ್ಲಿಲ್ಲ. ತನ್ನ ಮಿತಿಯಲ್ಲೇ ಕೈಲಾದಷ್ಟು ಮಟ್ಟಿಗೆ ಅಮಿಗೆ ಒಳ್ಳೆಯದನ್ನು ಮಾಡುತ್ತಾಳೆ.

ಮೈಕೆಲ್ ಕುಡುಕ, ಜಗಳಗಂಟಿ, ಬಾಯಿಬಡುಕ. ಪಾಪ-ಪುಣ್ಯಗಳ ಭೇದವಿಲ್ಲ. ಅಲಾಸ್ಕೊ ದುಷ್ಟ. ಮೊದಲು ಡಾಕ್ಟರ್ ಡೂಬಿಯಾಗಿ ಅನಂತರ ಭವಿಷ್ಯಕಾರನಾಗಿ ಈತ ಕಾಣಿಸಿಕೊಳ್ಳುತ್ತಾನೆ. ಗೈಲ್ಸ್‌ಗ್ಲಾಸೀಗ್ ಕುಮ್ನಾರ್ ಛತ್ರದ ಒಡೆಯ. ಚಾತುರ್ಯದಿಂದ ಮಾತನಾಡಬಲ್ಲ. ಡಿಕ್ಕಿ ಹನ್ನೆರಡು ವರ್ಷದ ಹುಡುಗ. ಅಪ್ಪಾವಕ್ರಮೂರ್ತಿ. ಅತಿತುಂಟ. ತನ್ನ ಚುರುಕು ಬುದ್ಧಿಯಿಂದ ಅಪಾಯವನ್ನು ತಪ್ಪಿಸಬಲ್ಲ. ಈತ ಅಲ್ಲಲ್ಲಿ ಮಿಂಚಿಮರೆಯಾದರೂ ಮರೆಯಲಾಗದ ಪಾತ್ರ.

ಒಟ್ಟಿನಲ್ಲಿ ಸ್ಕಾಟನ ಪಾತ್ರಗಳು ವೈವಿಧ್ಯದಿಂದ ಕೂಡಿರುವುದಲ್ಲದೆ ಸಜೀವತೆಯಿಂದ ಮೈತುಂಬಿಕೊಳ್ಳುತ್ತದೆ.

ಕೆನಿಲ್‌ವರ್ತ್ 19ನೆಯ ಶತಮಾನದ ಆದಿಯಲ್ಲಿ ಹೊರಬಂದ ಕೃತಿ. ಆದ್ದರಿಂದ ಈ ಕಾದಂಬರಿ ಅಂದಿನ ಸಾಹಿತ್ಯದ ರೀತಿ ನೀತಿಗಳಿಗೆ ಅನುಗುಣವಾಗಿದೆ, ಕಾದಂಬರಿಯಲ್ಲಿ ವಸ್ತುವೇ ಎದ್ದು ಕಾಣುತ್ತದೆ. ಸ್ಕಾಟ್ ಯಾವ Philosophyಯನ್ನು ಕೂಡ ಹೇಳುವುದಿಲ್ಲ. ಇನ್ನು ಈತನ ನಿರೂಪಣಾ ವೈಖರಿ ಕೂಡ ಆರಂಭದ ಕಾದಂಬರಿಗಳ ಶೈಲಿಯನ್ನು ಹೋಲುತ್ತದೆ. ಒಂದು ಘಟನೆಯನ್ನು ವಿವರಿಸುತ್ತಾ ಮತ್ತೊಂದು ಘಟನೆಗೆ ನೆಗೆಯುತ್ತಾನೆ. ಹಿಂದಿನ ಘಟನೆಯನ್ನು ಮುಂದುವರಿಸುವಾಗ ಓದುಗನಿಗೆ ಆ ಸಂದರ್ಭವನ್ನು ನೆನಪಿಗೆ ತಂದುಕೊಟ್ಟು ಮುಂದೆ ಹೋಗುತ್ತಾನೆ. ನಮ್ಮಲ್ಲಿ ಗಳಗನಾಥ ಮೊದಲಾದವರ ಕಾದಂಬರಿಯಲ್ಲಿ ಈ ರೀತಿಯ ವಾಚಕಮಹಾಶಯ ಶೈಲಿಯನ್ನು ನೋಡಬಹುದು. ಆರಂಭಿಕ ಕಾದಂಬರಿಗಳ ಮೂಲಭೂತವಾದ ಲಕ್ಷಣಗಳು ಸ್ಕಾಟನಲ್ಲಿವೆ.

ಸ್ಕಾಟ್ ಇಂಗ್ಲೆಂಡಿನ ಮೊದಲನೆಯ ರಾಣಿ ಎಲಿಜಬೆತ್ತಳ ಕಾಲದ ಇತಿಹಾಸವನ್ನು ಓದಿಕೊಂಡಂತೆ ಆ ಕಾಲದ ಸಾಹಿತ್ಯವನ್ನೂ ಚೆನ್ನಾಗಿ ಅಭ್ಯಾಸಮಾಡಿದ್ದಂತೆ ಕಂಡುಬರುತ್ತದೆ. ಆದ್ದರಿಂದ ಆತನ ಕಾದಂಬರಿಯಲ್ಲಿ ಷೇಕ್ಸ್‌ಪಿಯರನ ದಟ್ಟವಾದ ಪ್ರಭಾವವನ್ನು ಗುರುತಿಸಬಹುದು. ಇಲ್ಲಿಯ ವಾರ್ನಿ ಷೇಕ್ಸ್‌ಪಿಯರನ ಒಥೆಲೊ ನಾಟಕದ ಅಯಾಗೊವನ್ನು ಹೋಲುತ್ತಾನೆ. ಆಮಿ ಡೆಸ್ಡಿಮೋನಳನ್ನು ನೆನಪಿಗೆ ತರುತ್ತಾಳೆ. ಆಮಿ ಕೂಡ ಡೆಸ್ಡಿಮೋನಳಂತೆ ಸುಂದರಿ. ಅಯಾಗೊ ಡೆಸ್ಡಿಮೋನಳ ಮೇಲೆ ಹಾದರದ ಆರೋಪ ಹೊರಿಸಿದಂತೆ ವಾರ್ನಿ ಆಮಿಯ ಮೇಲೆ ಸುಳ್ಳು ಹೇಳುತ್ತಾನೆ. ಒಥೆಲೊ ನಾಟಕದಲ್ಲಿ ಪತ್ರ ದುರಂತಕ್ಕೆ ಎಡೆಮಾಡಿದಂತೆ ಇಲ್ಲಿಯೂ ಆಮಿಯ ಪತ್ರ ಸಕಾಲದಲ್ಲಿ ದೊರೆಯದೆ ಅನಾಹುತಕ್ಕೆ ಅವಕಾಶವಾಗುತ್ತದೆ. ಇಂಥ ಕೆಲವು ಸನ್ನಿವೇಶಗಳು ಒಥೆಲೊ ನಾಟಕವನ್ನು ನೆನಪಿಗೆ ತರುತ್ತವೆ. ಕಾದಂಬರಿಯಲ್ಲಿ ಬರುವ ಕೆಲವು ಮಾತುಗಳಲ್ಲೂ ಸಹ ಷೇಕ್ಸ್‌ಪಿಯರನ ಹೊಳಹುಗಳಿವೆ.

ಕೆನಿಲ್‌ವರ್ತ್ ಒಂದು ಐತಿಹಾಸಿಕ ಕಾದಂಬರಿ. ಇಲ್ಲಿ ಬರುವ ಸಸೆಕ್ಸ್, ಲೀಸೆಸ್ಟರ್, ರಾಲಿ ಇವರುಗಳೆಲ್ಲ ಐತಿಹಾಸಿಕ ವ್ಯಕ್ತಿಗಳು. ಇತಿಹಾಸ ಪ್ರಸಿದ್ಧರಾಗಿ ಬಾಳಿ ಬದುಕಿದ ವ್ಯಕ್ತಿಗಳ ಜೀವನದಲ್ಲಿ ನಡೆದ ಎಲ್ಲ ಘಟನೆಗಳೂ ಬೆಳಕಿಗೆ ಬಂದಿರುವುದಿಲ್ಲ. ನಮಗೆ ಕಾಣುವುದು ಅವರ ಜೀವನದ ಒಂದು ಮುಖ ಮಾತ್ರ. ಅವರ ವೈಯಕ್ತಿಕ ಜೀವನದ ಕೆಲವು ಎಳೆಗಳನ್ನು ಹೊರತೆಗೆದಾಗಲೆ ಮತ್ತೊಂದು ಮುಖ ಗೋಚರವಾಗುವುದು. ಇಲ್ಲಿ ಲೀಸೆಸ್ಟರನ ಗುಪ್ತಲಗ್ನದ ಪ್ರಣಯ ಕಥೆಯನ್ನೂ ತಂದಿರುವುದರಿಂದ ಈ ಕಾದಂಬರಿಗೆ ಐತಿಹಾಸಿಕತೆಯ ಜೊತೆಗೆ ರೊಮ್ಯಾಂಟಿಕ್ ಸ್ಪರ್ಶವನ್ನೂ ಕೊಟ್ಟಂತಾಗಿದೆ. ಈ ಬಗೆಯ ಬರವಣಿಗೆ ಸ್ಕಾಟನ ವೈಶಿಷ್ಟ್ಯ. ಈ ಕಾದಂಬರಿ ಪರಿಣಾಮಕಾರಿಯಾಗಿ ಮೂಡಿ ಬರಲು ಕಾರಣ ಐತಿಹಾಸಿಕ ವಸ್ತು ಮತ್ತು ಪಾತ್ರಗಳನ್ನು ಸಮಕಾಲೀನ

ಇಂಗ್ಲೆಂಡಿನ ಜೀವನದಲ್ಲಿ ಬೆಸೆದುಕೊಂಡಿರುವುದರಿಂದ. ಐತಿಹಾಸಿಕ ಸಿದ್ಧಪಾತ್ರಗಳನ್ನು ಪರಿಚಯಿಸುವಾಗ ಅವರ ಪೂರ್ವ ವೃತ್ತಾಂತವನ್ನಾಗಲಿ ಅಥವಾ ಅಮಿಯ ಸಾವಿನ ಬಳಿಕದ ಜೀವನವನ್ನಾಗಲಿ ಚಿತ್ರಿಸುವುದಿಲ್ಲ. ಉದಾಹರಣೆಗೆ ಕಥಾನಾಯಕ ಲೀಸೆಸ್ಟರ ನನ್ನೆ ತೆಗೆದುಕೊಂಡರೆ ಆತನ ಬಾಲ್ಯ ವೃತ್ತಾಂತವನ್ನಾಗಲಿ, ಅಮಿಯ ಮರಣೋತ್ತರದ ಆತನ ಜೀವನವನ್ನಾಗಲಿ ಸ್ಕಾಟ್ ನಿರೂಪಿಸಿಲ್ಲ. ಆದರೆ ಆತನ ಕಾಲ್ಪನಿಕ ಪಾತ್ರಗಳಾದ ಡಿಕ್ಕಿ, ವೇಲಾಂಡ್ ಮೊದಲಾದವರ ಪೂರ್ಣವಿವರಗಳು ಕಾದಂಬರಿಯಲ್ಲಿ ಸಿಕ್ಕುತ್ತವೆ.

ಈ ಕಾದಂಬರಿಗೆ 'ಕೆನಿಲ್‌ವರ್ತ್' ಎಂಬ ಶೀರ್ಷಿಕೆಯೂ ತುಂಬ ಅರ್ಥವತ್ತಾಗಿದೆ. ಕೆನಿಲ್‌ವರ್ತ್ ಒಂದು ಭವನದ ಹೆಸರು. ಈ ಭವನದಲ್ಲಿಯೇ ಅಮಿ, ಲೀಸೆಸ್ಟರ್ ಇವರುಗಳ ಭವಿಷ್ಯ ನಿರ್ಣಯವಾಗುವುದು. ಅನೇಕ ದಿನಗಳಿಂದ ರಹಸ್ಯವಾಗಿದ್ದ ವಿಚಾರಗಳು ಹೊರ ಬೀಳುವುದು, ಅಮಿಯನ್ನು ಸಾಯಿಸಬೇಕೆಂದು ನಿರ್ಧರಿಸುವುದು, ಇಂಗ್ಲೆಂಡಿನ ರಾಣಿ ಅವಿವಾಹಿತಳಾಗಿ ಉಳಿಯುವುದು ಎಲ್ಲವೂ ಕೆನಿಲ್‌ವರ್ತ್‌ನಲ್ಲಿಯೇ ನಡೆಯುತ್ತವೆ. ಹೀಗೆ ಕಾದಂಬರಿಯ ಎಲ್ಲ ಘಟನೆಗಳಿಗು ಕೆನಿಲ್‌ವರ್ತ್ ಒಂದು ನಿರ್ಣಾಯಕ ತಿರುವನ್ನು ಕೊಡುತ್ತದೆ. ಈ ದೃಷ್ಟಿಯಿಂದ 'ಕೆನಿಲ್‌ವರ್ತ್' ಎಂಬ ಶಿರೋನಾಮೆ ಸಾರ್ಥಕವಾಗಿದೆ.

ಐತಿಹಾಸಿಕತೆ ಕಾಲ್ಪನಿಕತೆ ಇವುಗಳ ಜೊತೆಗೆ ಈ ಕಾದಂಬರಿಯಲ್ಲಿ ಇಗ್ಲೆಂಡಿನ ಜನತೆಯ ಆ ಕಾಲದ ಜನ ಜೀವನ, ಸಂಸ್ಕೃತಿ, ಸಂಪ್ರದಾಯ, ಜನತೆಯ ಆಚಾರ ವಿಚಾರ ಮೂಢನಂಬಿಕೆ ಇವುಗಳು ಮೇಳೈಸಿವೆ. ಇಂಗ್ಲೆಂಡಿನ ಜನರಿಗೆ ಭವಿಷ್ಯದಲ್ಲಿ ಅಪಾರ ನಂಬಿಕೆ. ಆದ್ದರಿಂದ ಅವರು ಆಗಾಗಿ ಜಾತಕ ನೋಡಿಸುತ್ತಿರುತ್ತಾರೆ. ಈ ಕಾದಂಬರಿಯಲ್ಲಿ ಲೀಸೆಸ್ಟರ್ ಅಲಾಸ್ಕೊನಿಂದ ತನ್ನ ಭವಿಷ್ಯವನ್ನು ತಿಳಿಯಕೊಳ್ಳುತ್ತಾನೆ. ಇಂಗ್ಲೆಂಡಿನಲ್ಲಿ ಕೈಯನ್ನು ಚುಂಬಿಸುವುದು ಗೌರವದ ಸಂಕೇತ. ಆದ್ದರಿಂದ ಅಲ್ಲಿನ ಪ್ರಜೆಗಳು ರಾಣಿಯ ಕೈಯನ್ನು ಚುಂಬಿಸುವುದರ ಮೂಲಕ, ಭಕ್ತಿ, ಗೌರವಗಳನ್ನು ಸೂಚಿಸುತ್ತಾರೆ. ಅಲ್ಲಿ ವ್ಯಾಪಾರಿಗಳು ಸ್ತ್ರೀಯರಿಗಾಗಿ ಸಿದ್ಧ ಉಡುಪುಗಳನ್ನು ತಯಾರಿಸಿ ಊರೂರು ಅಲೆದು ಮಾರುತ್ತಿದ್ದರು. ಆ ಕಾಲದ ಸತ್ರದ ವರ್ಣನೆ, ಕೆನಿಲ್‌ವರ್ತ್ ಭವನದ ವೈಭವ ಇವುಗಳನ್ನು ಮರೆಯಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಸ್ಕಾಟ್ ಎಲಿಜಬೆತ್ತಳ ಆಳ್ವಿಕೆಯನ್ನು ಪ್ರತಿಬಿಂಬಿಸುವುದರ ಜೊತೆಗೆ ಆಗಿನ ಸಮಾಜದ ಚಿತ್ರವನ್ನೇ ನಮ್ಮ ಮುಂದೆ ಇಡುತ್ತಾನೆ.

ಮೊದಲೇ ತಿಳಿಸಿದಂತೆ ಈ ಕಾದಂಬರಿಯ ಜೀವಾಳ ಸ್ಕಾಟನು ಆಯ್ದುಕೊಂಡಿರುವ ವಸ್ತು. ದುಃಖಾಂತವಾಗಿ ಕೊನೆಗೊಳ್ಳುವ ಈ ಕಾದಂಬರಿ ಸ್ಕಾಟನ ಕೈಚಳಕದಿಂದ ಕುತೂಹಲಕಾರಿಯಾಗಿ ಓದಿಸಿಕೊಂಡು ಹೋಗುತ್ತದೆ. ಈ ಕಾದಂಬರಿ ಐತಿಹಾಸಿಕ ದಾಖಲೆಯಾಗಿರುವುದರಿಂದ ಸಮಕಾಲೀನ ಸಾಹಿತ್ಯದಲ್ಲೂ ಕೂಡ ಮಹತ್ವಪೂರ್ಣ ವಾಗಿದೆ.

೫

ಕೆನಿಲ್‌ವರ್ತ್, ಮೊದಲೇ ತಿಳಿಸಿದಂತೆ ಇಂಗ್ಲಿಷ್ "Kenil worth"ನ ಕನ್ನಡ ಅನುವಾದ. ಮೂಲ ಕಾದಂಬರಿ 453 ಪುಟಗಳಷ್ಟಿದೆ. (The Gresham Publishing company, 34 and 35 Southamdton street strand London) ಕನ್ನಡ ಕೆನಿಲ್‌ವರ್ತ್ 240 ಪುಟಗಳಲ್ಲಿ ಹರಡಿದೆ. ಮೂಲದ ಬೃಹದ್ಗ್ರಂತವನ್ನು ಕನ್ನಡಕ್ಕೆ ತರುವಾಗ ಶ್ರೀ ಎಚ್. ಎಲ್. ನಾಗೇಗೌಡರು ಸಂಗ್ರಹಮಾಡಿ ಅನುವಾದಿಸಿದ್ದಾರೆ.

ಇಂಗ್ಲಿಷ್ ಕೆನಿಲ್‌ವರ್ತ್‌ನಲ್ಲಿ 31 ಅಧ್ಯಾಯಗಳಿವೆ. ಕನ್ನಡದಲ್ಲಿ 32 ಅಧ್ಯಾಯಗಳಿವೆ. ಕನ್ನಡದಲ್ಲಿ ಪ್ರತಿಯೊಂದಕ್ಕೂ ಶಿರೋನಾಮೆಯನ್ನು ಕೊಟ್ಟಿದೆ. ಇದು ಮೂಲದಲ್ಲಿಲ್ಲ. ಮೂಲದಲ್ಲಿ ಪ್ರತಿ ಅಧ್ಯಾಯದ ಆರಂಭದಲ್ಲಿ ಪದ್ಯಭಾಗವಿದೆ. ಕನ್ನಡದಲ್ಲಿ ಇಲ್ಲ.

ಸ್ಕಾಟ್ ವರ್ಣನಾಪ್ರಿಯ. ಆದ್ದರಿಂದ ಮೂಲ ಕೆನಿಲ್‌ವರ್ತ್ ವರ್ಣನೆಗಳಿಂದ ತುಂಬಿದೆ. ಆದರೆ ಕನ್ನಡದಲ್ಲಿ ಆ ವರ್ಣನೆಗಳು ಮಿತಮಿತವಾಗಿ ಬಂದಿವೆ. ಉದಾಹರಣೆಗೆ ಕುಮ್ನಾರ್ ಭವನದ ವರ್ಣನೆಯನ್ನು ನೋಡಬಹುದು. ಮೂಲದಲ್ಲಿ (ಪು.52 ಅಧ್ಯಾಯ vi) ಈ ವರ್ಣನೆ 2 ಪುಟಗಳಿಗಿಂತಲೂ ವಿಸ್ತಾರವಾಗಿದ್ದರೆ ಕನ್ನಡದಲ್ಲಿ ಒಂದು ಪ್ಯಾರಾದಲ್ಲಿ ಮುಕ್ತಾಯವಾಗುತ್ತದೆ (ಪು. 29)

ಶ್ರೀ ನಾಗೇಗೌಡರು ಸಂಭಾಷಣೆಗಳಲ್ಲೂ ಸಹ ಸಂಗ್ರಹಗುಣವನ್ನು ಕಾಪಾಡಿಕೊಂಡು ಬಂದಿದ್ದಾರೆ. ಉದಾಹರಣೆಗೆ ಕುಡುಕ ಮೈಕಲ್‌ನ ಮಾತುಗಳು ಮೂಲದಲ್ಲಿ ದೀರ್ಘವಾಗಿ ಬಂದಿದ್ದರೆ ಕನ್ನಡದಲ್ಲಿ ಕಥೆಗೆ ಅಗತ್ಯವಿರುವಷ್ಟು ಭಾಗವನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಕೆಲವೊಮ್ಮೆ ಆ ಸಂಭಾಷಣೆಯ ಸಾರಾಂಶಗಳನ್ನು ಮಾತ್ರ ಕೊಡುತ್ತಾರೆ. ಮೂಲದಲ್ಲಿ ಒಂದು ಪುಟದಷ್ಟಿರುವ ಮೈಕಲ್ ಲ್ಯಾಂಬರ್ನ್ ಮತ್ತು ಫಾಸ್ಟರನ ಮಾತು ಕತೆಗಳನ್ನು "ಲ್ಯಾಂಬೊರ್ನ್ ಫಾಸ್ಟರನ ಹಿಂದಿನ ಕೆಟ್ಟ ನಡತೆಯನ್ನೆತ್ತಿ ಮೂದಲಿಸಿ ಮಾತನಾಡಿದನು. ಫಾಸ್ಟರನು ಮೂದಲಿಸಿದನು. ಅವರಿಬ್ಬರಿಗೂ ಬಿಸಿಬಿಸಿ ಮಾತುಗಳು ನಡೆದವು" ಎಂದು ಸಂಗ್ರಹಿಸಿದ್ದಾರೆ. ಇದು ಒಂದು ಬಗೆ, ಇವರ ಮತ್ತೊಂದು ಬಗೆಯ ಸಂಗ್ರಹಾನುವಾದಕ್ಕೆ ನಿದರ್ಶನವಾಗಿ ಈ ಭಾಗವನ್ನು ನೋಡಬಹುದು. ಮೂಲದಲ್ಲಿ ಸಸೆಕ್ಸ್‌ನ ಪರಿಚಯ ಕೊಡುವಾಗ ಬರುವ "Sussex was according to the pharse of the times, a martialist : had done good service in Ireland and Scotland, especially in the great northern rebelliod in 1569, which was quelled, in a great measure by his military talents. He was, therefore, naturally surrounded and looked upto by those who whished to make arms their road to distinction. The Earl of sussex, moreover, was or more adcient and honourable descent than his rival,

uniting in his person the representation of the Fitz walters, as well as of the Ratcliffes" (p. 152) ಭಾಗ ಕನ್ನಡದಲ್ಲಿ "ಸಸೆಕ್ಸ್ ರಣಕಲಿ. ಐರ್‌ಲೆಂಡ್ ಮತ್ತು ಸ್ಕಾಟ್‌ಲೆಂಡ್ ಮುತ್ತಿಗೆಗಳಲ್ಲಿ ವೀರಾವೇಶದಿಂದ ಹೋರಾಡಿ ಶತ್ರು ನಿಗ್ರಹಕ್ಕೆ ರಾಣಿಗೆ ಅತ್ಯಂತ ಅವಶ್ಯಕವಾಗಿ ಬೇಕಾಗಿದ್ದವನು. ಅಲ್ಲದೆ ಅವನ ಪೂರ್ವಜರು ಬಹಳ ಹೆಸರುವಾಸಿಯಾದವರು ಮತ್ತು ಹಿರಿಯ ಮನೆತನಕ್ಕೆ ಸೇರಿದವರು" ಎಂದು ಅನುವಾದವಾಗಿದೆ.

ಹೀಗೆ ಇವರು ಕಥೆಯ ಉದ್ದೇಶಕ್ಕೆ ಆಗತ್ಯವಾದ ಅಂಶಗಳನ್ನು ಮಾತ್ರ ಇಟ್ಟು ಕೊಂಡು ಉಳಿದ ಅಂಶಗಳನ್ನು ಕೈಬಿಟ್ಟಿದ್ದಾರೆ. ಕಥೆಯ ಉಳಿದ ಸ್ವಾರಸ್ಯವಾದ ಭಾವಗಳು ಮೂಲದ ಖಚಿತವಾದ ಅನುವಾದಗಳಾಗಿವೆ. ಈ ರೀತಿ ಮೂಲದ ಅಂದಚೆಂದಗಳು ನಷ್ಟವಾಗದಂತೆ, ಕಥೆಯ ಓಟಕ್ಕೆ ಚ್ಯುತಿ ಬಾರದಂತೆ ಅನುವಾದವನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆ. ಮೂಲದ ವಿಸ್ತಾರವಾದ ವರ್ಣನೆಗಳನ್ನು ಸಂಕ್ಷಿಪ್ತಗೊಳಿಸಿರುವುದರಿಂದ ಕನ್ನಡ ಕೆನಿಲ್‌ವರ್ತ್‌ಗೆ ಅಚ್ಚುಕಟ್ಟು ದೊರೆಯುವುದು ಸಾಧ್ಯವಾಗಿದೆ. ಭಾಷಾಂತರದಲ್ಲಿ ಕ್ಲಿಷ್ಟತೆಯಾಗಲಿ, ಕೃತಕತೆಯಾಗಲಿ ಕಂಡುಬರುವುದಿಲ್ಲ. ಈ ಕೃತಿಯ ಅನುವಾದದ ಮೂಲಕ ಕನ್ನಡ ಸಾರಸ್ವತ ಪ್ರಪಂಚಕ್ಕೆ ಸ್ಕಾಟನನ್ನು ಪರಿಚಯ ಮಾಡಿಕೊಟ್ಟ ಶ್ರೀ ಎಚ್. ಎಲ್ ನಾಗೇಗೌಡರು ಅಭಿನಂದನಾರ್ಹರು.

೨ ಮಾರ್ಕೋ ಪೋಲೋ ಪ್ರವಾಸ ಕಥನ

ಹು. ಕಾ. ಜಯದೇವ್

‘ಮಾರ್ಕೋ ಪೋಲೋ ಪ್ರವಾಸ ಕಥನ’ದ ಬಗ್ಗೆ ಬರೆಯುವ ಮುನ್ನ ಪ್ರವಾಸಿ ಎಂದರೆ ಯಾರು, ಪ್ರವಾಸದ ಉದ್ದೇಶವೇನು, ಪ್ರವಾಸ ಸಾಹಿತ್ಯದ ಇತಿಮಿತಿಗಳೇನು, ಪ್ರವಾಸ ಸಾಹಿತ್ಯದ ಸ್ವರೂಪವೇನು, ಪ್ರವಾಸ ಸಾಹಿತ್ಯದ ಪ್ರಯೋಜನಗಳೇನು, ಉತ್ತಮ ಪ್ರವಾಸ ಸಾಹಿತ್ಯ ಯಾವುದು. ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ಹುಟ್ಟು ಬೆಳವಣಿಗೆ ಹೇಗಿದೆ ಎಂಬುದನ್ನು ಸ್ಥೂಲವಾಗಿ ಅರಿಯುವುದೊಳ್ಳೆಯದು.

ಇತ್ತೀಚೆಗೆ ಪ್ರವಾಸವನ್ನು ಒಂದು ಉದ್ಯಮವನ್ನಾಗಿ ಪರಿಗಣಿಸಿದ್ದಾರೆ. ಪ್ರವಾಸಿಗರನ್ನು ಆಕರ್ಷಿಸಲು ಪ್ರತಿಯೊಂದು ದೇಶವೂ ನಾನಾ ರೀತಿಯ ಆಕರ್ಷಣೆಗಳನ್ನೊಡ್ಡುತ್ತಿವೆ, ಮತ್ತು ಸೌಲಭ್ಯಗಳನ್ನೊದಗಿಸುತ್ತಿವೆ. ಅವು ಪ್ರವಾಸಿಯೆಂದರೆ ಯಾರೆಂದು ಸ್ಥೂಲವಾಗಿ ಹೀಗೆ ಗುರುತಿಸಿವೆ. ವಿಹಾರಾರ್ಥವಾಗಿ, ಕೌಟುಂಬಿಕ ಕಾರಣಗಳಿಗಾಗಿ, ಆರೋಗ್ಯಕ್ಕಾಗಿ, ಪ್ರವಾಸಮಾಡುವವರು. ಅಂತರರಾಷ್ಟ್ರೀಯ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಸಲುವಾಗಿ ಪ್ರವಾಸ ಮಾಡುವವರು, ವ್ಯಾಪಾರೋದ್ದೇಶದಿಂದ ಪ್ರವಾಸ ಮಾಡುವವರು, ನೌಕಾಪಾತದಿಂದಾಗಿ ಪರದೇಶವೊಂದರಲ್ಲಿ–ಇಪ್ಪತ್ತನಾಲ್ಕು ಗಂಟೆಗಳಿಗಿಂತ ಕಡಿಮೆ ಅವಧಿಯಾದರೂ–ತಂಗಬೇಕಾಗಿ ಬಂದವರು ಎಲ್ಲರೂ ಪ್ರವಾಸಿಗಳೆ. ಇವರನ್ನು ಹವ್ಯಾಸಿ ಮತ್ತು ನಿಯೋಗಿ ಪ್ರವಾಸಿಗಳೆಂದು ವಿಂಗಡಿಸುತ್ತಾರೆ. ಈ ಗುಂಪಿಗೆ ಅನಿವಾರ್ಯ ಮತ್ತು ಆಕಸ್ಮಿಕ ಎಂಬ ಎರಡು ಗುಂಪನ್ನು ಸೇರಿಸಬಹುದು. ಇದೆಲ್ಲವೂ ಆಧುನಿಕ ಪ್ರವಾಸಿಗರನ್ನು ಕುರಿತ ಮಾತಾಯಿತು. ಪ್ರಾಚೀನ ಕಾಲದಲ್ಲಿ ಪ್ರವಾಸಿಯೆಂದರೆ ಯಾರು ? ಜ್ಞಾನಪಿಪಾಸುಗಳಾಗಿ, ರಾಯಭಾರಿಗಳಾಗಿ, ಧರ್ಮವನ್ನರಸುತ್ತ, ಧರ್ಮಪ್ರಚಾರಕ್ಕಾಗಿ, ಹೊಸ ನಾಡ ಅನ್ವೇಷಣೆಗಾಗಿ, ಅಪೂರ್ವ ಅನುಭವಗಳಿಗಾಗಿ, ಸಂಪತ್ತಿಗಾಗಿ, ಹೊರನಾಡುಗಳಿಗೆ ಹೋಗುತ್ತಿದ್ದವರನ್ನು ಪ್ರವಾಸಿಗಳೆಂದು ಕರೆಯುತ್ತಿದ್ದರು. ಈ ವಿಂಗಡಣೆ ಹೇಗಾದರೂ ಇರಲಿ ಒಂದು ವ್ಯತ್ಯಾಸವಂತೂ ಎದ್ದು ಕಾಣುತ್ತದೆ. ಆಧುನಿಕ ಪ್ರವಾಸಿಗಳು ಕೆಲವೇ ಗಂಟೆಗಳಲ್ಲಿ ಪ್ರಪಂಚವನ್ನೇ ಸುತ್ತಿ ಬರಬೇಕು. ಹೋಗಿ ಸೇರುವ ಗುರಿಯಿಲ್ಲದ, ಹಿಂದಿರುಗಿ ಬರುವ ಭರವಸೆಯಿಲ್ಲದ ಹಿಂದಿನವರ ಪ್ರವಾಸ ನಿಜಕ್ಕೂ ಸಾಹಸಮಯವಾದುದು. ಅವರ ಕ್ರಮ ಇಂದಿನ ನಮಗೆ ಕಲ್ಪನಾತೀತ.

ಪ್ರವಾಸಕ್ಕೆ ಒಂದು ಉದ್ದೇಶ ಇರಲೇಬೇಕೆಂದಿಲ್ಲ. ಗೊತ್ತುಗುರಿಯಿಲ್ಲದೆ ಕಾಲ

ಮಿತಿಯಿಲ್ಲದೆ ದಾರಿಯಲ್ಲಿ ಸಿಗುವ ಕೌತುಕ ಪೂರ್ಣವಾದುದೆಲ್ಲವನ್ನೂ ಅವಲೋಕಿಸುತ್ತ ಸಾಗುವ ಪ್ರವಾಸದಷ್ಟು ಆನಂದವಾದುದು ಯಾವುದೂ ಇಲ್ಲ. (It is good to be out on the road and going one knows not where–John Masefield) ಆದರೂ ಮೇಲೆ ವಿವರಿಸಿರುವ ಯಾವುದಾದರೂ ಒಂದು ಉದ್ದೇಶ ಪ್ರವಾಸಕ್ಕಿದ್ದೇ ಇರುತ್ತದೆ.

ಹೀಗೆ ಪ್ರವಾಸ ಮಾಡಿದ ಪ್ರವಾಸಿಗರು ತಾವು ಕಂಡುದನ್ನು, ಅನುಭವಿಸಿದ್ದನ್ನು ಇತರರಿಗೂ ತಿಳಿಸಬೇಕೆಂಬ ಉದ್ದೇಶದಿಂದ ತಮ್ಮ ಅನುಭವಗಳನ್ನು ಬರೆದಿಟ್ಟಿದ್ದಾರೆ. ಆಧುನಿಕ ಪ್ರವಾಸಿಗರೂ ತಮ್ಮ ಪ್ರವಾಸಾನುಭವಗಳನ್ನು ಬರೆಯುತ್ತಿದ್ದಾರೆ. ಪಾಶ್ಚಾತ್ಯರಲ್ಲಿ ಪ್ರವಾಸದ ಹಿನ್ನೆಲೆಯಲ್ಲಿ ರಚನೆಯಾದ ಸಾಹಿತ್ಯದ ವಿವಿಧ ಪ್ರಕಾರಗಳು ೧೮ನೆಯ ಶತಮಾನದಿಂದಲೆ ಆಗುತ್ತಿವೆ. ಅಂತಹ ಸಾಹಿತ್ಯ ರಚನೆ ನಮ್ಮಲ್ಲಿ ಇಲ್ಲವೆಂದರೂ ಅದೀತು ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಕಾಣಿಸಿಕೊಂಡ ಈ ಸಾಹಿತ್ಯ ಕಳೆದೆರಡು ದಶಕಗಳಲ್ಲಿ ಹೆಚ್ಚಾಗಿದೆ. ನಾನಾ ಕಾರಣ ಗಳಿಂದ ವಿದೇಶಗಳಿಗೆ ಹೋಗುತ್ತಿರುವವರ ಸಂಖ್ಯೆ ಹೆಚ್ಚಾಗಿದ್ದು ಅವರೆಲ್ಲರೂ ತಮ್ಮ ಅನುಭವಗಳನ್ನು ಬರಹ ರೂಪಕ್ಕಿಳಿಸುತ್ತಿರುವುದೇ ಕಾರಣ. 'ಕೇವಲ ಶೋಕಿ ಗಾಗಿ ವಿದೇಶಯಾತ್ರೆ ಸಲ್ಲದು....ಆ ಯಾತ್ರೆಯ ಪ್ರಯೋಜನ ಒಂದಲ್ಲ ಒಂದು ರೀತಿಯಲ್ಲಿ ಅಲ್ಪಸ್ವಲ್ಪ ಪ್ರಮಾಣದಲ್ಲಾದರೂ ಜನತೆಗೆ ಲಭಿಸಬೇಕಾದ್ದು ಧರ್ಮ. ಜನತೆಗೆ ಲಾಭವಾಗದ ಯಾತ್ರೆ ವ್ಯರ್ಥ...."ಈ ಉದ್ದೇಶ ಅನೇಕ ಪ್ರವಾಸಾನುಭವಗಳ ಹಿಂದೆಯಿದೆ. ಈ ನಿಲುವೇನೇ ಇರಲಿ ಎಲ್ಲ ಪ್ರವಾಸಿಗರೂ ಒಳ್ಳೆಯ ಸಾಹಿತ್ಯವನ್ನು ಕೊಡಲಾರರೆಂಬುದು ಮಾತ್ರ ಸತ್ಯ. ಪ್ರವಾಸ ಸಾಹಿತ್ಯ ಶ್ರೀಮಂತವಾಗಿರಬೇಕಾದರೆ ಅದು ರಸಾನುಭವವನ್ನು ಕೊಡುವುದಕ್ಕೆ ಸೀಮಿತವಾಗದಿರಬೇಕಾದರೆ ಒಂದು ಜನಾಂಗದ ಸಂಸ್ಕೃತಿಯ, ಭೌತಿಕಾಭಿವೃದ್ಧಿಯ ಚಿತ್ರಣವನ್ನು ಕೊಡಬೇಕಾದರೆ ಲೇಖಕ ತೀಕ್ಷ್ಣಮತಿ ಯುಳ್ಳವನೂ, ತೆರೆದ ಹೃದಯವುಳ್ಳವನೂ, ಸಾಹಸಿಯೂ ಆಗಿರಬೇಕಾಗುತ್ತದೆ. ತನ್ನ ಅನುಭವಗಳನ್ನು ಕಲಾತ್ಮಕವಾಗಿ ನಿರೂಪಿಸುವ ಕೌಶಲ ಅವನಿಗಿರಬೇಕಾಗುತ್ತದೆ. ಆದರೆ ಪ್ರಾಚೀನ ಪ್ರವಾಸಿಗರಲ್ಲಿ ಗಣ್ಯರೆಂದು ಪ್ರಸಿದ್ಧರಾದವರಲ್ಲಿ ಸಾಹಿತಿಗಳಿಲ್ಲ. ಪ್ರಖ್ಯಾತ ರೆಲ್ಲ ನಾವಿಕರು, ಸಂಶೋಧಕರು. ವೈದ್ಯರು, ವಿಜ್ಞಾನಿಗಳೇ ಮೊದಲಾದವರು. It is the wonderful traveller who sees a wonder, and only five travellers in the world's history have seen wonder–John Masefield. ಮಾರ್ಕೊ ಪೋಲೊ ಅವರಲ್ಲಿ ಒಬ್ಬ.

ಪ್ರವಾಸ ಸಾಹಿತ್ಯದ ಪ್ರಯೋಜನ ಏನು ಎಂದು ಈ ವೇಳೆಗೆ ಗೊತ್ತಾಗಿರಬೇಕು. ಪ್ರವಾಸಮಾಡಲು ಅನುಕೂಲವಿಲ್ಲದ ನತದೃಷ್ಟನಿಗೆ ಪ್ರವಾಸಿ ಸಾಹಿತಿಯ ಕಣ್ಣಿನಿಂದ ಲಾದರೂ ಬೇರೊಂದು ನಾಡನ್ನು ನೋಡುವ, ಅಲ್ಲಿಯ ಜನಾಂಗವನ್ನು ಅರಿಯುವ

ಅನುಕೂಲ ಉಂಟು. ಇಂದಿನ ಪ್ರವಾಸ ಸಾಹಿತ್ಯಕ್ಕಿಂತ ಹಿಂದಿನ ಪ್ರವಾಸಿ ಸಾಹಿತ್ಯ ಅಥವಾ ಪ್ರವಾಸಿಗಳ ಬರಹಗಳು ಭಾರತೀಯರಾದ ನಮಗೆ ಅತ್ಯಮೂಲ್ಯವಾದುವು. ಇತಿಹಾಸ ಪ್ರಜ್ಞೆಯ ಬಗೆಗಿದ್ದ ಭಾರತೀಯರ ಅವಜ್ಞೆ ಪ್ರಸಿದ್ಧವಾದುದು. ಹೀಗಾಗಿ ನಮ್ಮ ನಾಡಿನ ಇತಿಹಾಸವನ್ನು ಅರಿಯಲು ಸಾಹಿತ್ಯ ಮತ್ತು ಪ್ರಾಚ್ಯ ಸಂಶೋಧನೆ ಗಳೊಂದಿಗೆ ಪ್ರವಾಸಿಗಳ ಬರವಣಿಗೆಗಳು ಅತ್ಯಮೂಲ್ಯ ಆಕರಗಳಾಗಿವೆ. ಕ್ರಿ. ಪೂ. ೫ನೇ ಶತಮಾನದಿಂದ ಹಿಡಿದು ಕ್ರಿ. ಶ. ೧೮ನೆಯ ಶತಮಾನದವರೆಗಿನ ಅವಧಿಯಲ್ಲಿ ಭಾರತಕ್ಕೆ ಬಂದು ಹೋದ ಪ್ರವಾಸಿಗರ ಸಂಖ್ಯೆ ಅಪಾರವಾಗಿದೆ. ಅವರು ತಾವು ಕಂಡ ಇಲ್ಲಿಯ ಸಾಂಸ್ಕೃತಿಕ ವ್ಯಾಪಾರಗಳನ್ನೂ, ರಾಜಕೀಯ ಸಾಮಾಜಿಕ ಜೀವನವನ್ನೂ ಬರೆದಿಟ್ಟಿದ್ದಾರೆ. ಅವರ ಬರವಣಿಗೆಗಳಲ್ಲಿ ಕೆಲವು ವೇಳೆ ತಪ್ಪು ಕಲ್ಪನೆಗಳು ಅತಿರೇಕಗಳು ಇರಬಹುದು. ಆದರೆ ಬಹುತೇಕ ತಾವು ಕಂಡ ನೈಜ ಚಿತ್ರಣವನ್ನು ಕೊಟ್ಟಿದ್ದಾರೆನ್ನುವುದರಲ್ಲಿ ಸಂಶಯ ಪಡಬೇಕಾಗಿಲ್ಲ.

ಭಾರತೀಯರು ಬಹುಮಟ್ಟಿಗೆ ಶಾಂತಿಪ್ರಿಯರು. ಇದ್ದಲ್ಲೆ ನೆಮ್ಮದಿಯನ್ನು ಕಂಡು ಕೊಳ್ಳುವುದು ಅವರ ಸ್ವಭಾವ. ಹಾಗಾಗಿ ಯಾವುದೇ ಕಾರಣದಿಂದ ಅವರು ಹೊರ ದೇಶಗಳಿಗೆ ಹೋಗಿರುವುದು ವಿರಳ. ಹೋಗಿದ್ದರೂ ತಮ್ಮ ಅನುಭವಗಳನ್ನು ಬರೆದಿಡ ಬೇಕೆಂದು ಅವರಿಗೆಂದೂ ಅನ್ನಿಸಿದ್ದಿಲ್ಲ. ಈ ಮಾತು ಕನ್ನಡಿಗರಿಗೂ ಅನ್ವಯಿಸುತ್ತದೆ. ಹೀಗಾಗಿ ಪ್ರವಾಸ ಸಾಹಿತ್ಯ ಎಂಬ ಪ್ರಕಾರವೊಂದು ನಮ್ಮಲ್ಲಿರಲಿಲ್ಲ. ಅದು ಏನಿದ್ದರೂ ಇತ್ತೀಚಿನದು-ತೀರ ಇತ್ತೀಚಿನದು. ಆದ್ದರಿಂದ ಅದರ ಲಕ್ಷಣಗಳನ್ನು ಇನ್ನೂ ಗುರುತಿಸ ಬೇಕಾಗಿದೆ. ಆದರೂ ಅದು ವರ್ಣನಾತ್ಮಕ ಬರವಣಿಗೆಯ ಗುಂಪಿಗೆ ಸೇರುತ್ತದೆಂದು ಬಹುಮಟ್ಟಿಗೆ ಪ್ರಬಂಧ ಸಾಹಿತ್ಯವನ್ನು ಹೋಲುತ್ತದೆಂದು ಹೇಳಬಹುದು. ಈ ವರ್ಣನಾತ್ಮಕ ಬರವಣಿಗೆಯೂ ಕೂಡ ದಿನಚರಿಯ ರೂಪದಲ್ಲೂ ಇರಬಹುದು ಪತ್ರ ರೂಪದಲ್ಲೂ ಇರಬಹುದು. ಒಟ್ಟಿನಲ್ಲಿ ಬರವಣಿಗೆ ಪಾಂಡಿತ್ಯಪೂರ್ಣವಾಗಿರಬಾರದು. ಸರಳವಾಗಿರಬೇಕು. ಯಾವ ಅನುಭವ ತನ್ನದಾಗಿ ಪರರಿಗೂ ಹೇಳಬಹುದೊ ಅಂಥ ದೆಲ್ಲವೂ ಪ್ರವಾಸ ಸಾಹಿತ್ಯಕ್ಕೆ ವಸ್ತುವಾಗಬಲ್ಲುದು.

ಕನ್ನಡದಲ್ಲಿ ಬಂದ ಮೊಟ್ಟಮೊದಲ ಪ್ರವಾಸ ಕಥನ ಎಂದರೆ ಉತ್ತರ ಕನ್ನಡದ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಅವರು ಬರೆದ "ದಕ್ಷಿಣ ಭಾರತ ಯಾತ್ರೆ". ಇದು ಕ್ರಿ. ಶ. ೧೮೯೦ರಲ್ಲಿ ಮುಂಬಯಿಯಲ್ಲಿ ಪ್ರಕಟವಾಯಿತು. ಇದು ಹೆಸರೇ ಸೂಚಿಸು ವಂತೆ ದಕ್ಷಿಣದ ತೀರ್ಥಕ್ಷೇತ್ರಗಳನ್ನು ವರ್ಣಿಸುವ ಕೃತಿ. ಕನ್ನಡದ ಬಹುತೇಕ ಪ್ರವಾಸ ಕಥನಗಳು ಇಂಥವೇ. ಅದೇನೆ ಇರಲಿ ಮತ್ತೆ ಕನ್ನಡದಲ್ಲಿ ಪ್ರವಾಸ ಕಥನ ಕಾಣಿಸಿ ಕೊಂಡುದು ಮುವ್ವತ್ತು ವರ್ಷಗಳ ನಂತರ ಕ್ರಿ. ಶ. ೧೯೨೫ರಲ್ಲಿ. ಅದು ವೀ. ಸಿ. ಅವರ 'ಪಂಪಾಯಾತ್ರೆ'. ಅದೊಂದು ಅಪೂರ್ವ ಕೃತಿ. ಅಲ್ಲಿಂದೀಚೆಗೆ ಅನೇಕ ಸಾಹಿತಿಗಳು ಮತ್ತು ಇತರರು ತಮ್ಮ ವಿದೇಶದ ಅಥವಾ ನಾಡಿನೊಳಗಣ ಅನುಭವಗಳನ್ನು ಕೃತಿಗಳ

ರೂಪದಲ್ಲಿ ಕನ್ನಡದಲ್ಲಿ ರಚಿಸಿದ್ದಾರೆ. ಕ್ರಿ. ಶ. ೧೯೫೬ರಲ್ಲಿ ಶ್ರೀ ಎಚ್. ಎಲ್. ನಾಗೇಗೌಡರು 'ಮಾರ್ಕೊ ಪೋಲೊ ಪ್ರವಾಸ ಕಥನ'ವನ್ನು ಕನ್ನಡಿಗರಿಗೆ ಕೊಟ್ಟರು. ಅವರು ಮುನ್ನುಡಿಯಲ್ಲಿ "....ಪ್ರವಾಸ ಸಾಹಿತ್ಯ ಕನ್ನಡದಲ್ಲಿ ಇಲ್ಲವೇ ಇಲ್ಲ ಎಂದು ಹೇಳಬಹುದು...." ಎಂದಿದ್ದಾರೆ. ಅವರು ಈ ಮಾತನ್ನು ಐತಿಹಾಸಿಕ ಮಹತ್ವವುಳ್ಳ ಪ್ರವಾಸ ಕಥನಗಳನ್ನು ಕುರಿತು ಹೇಳುತ್ತಿದ್ದರಾದರೂ ಒಪ್ಪಲಾಗದು. ಏಕೆಂದರೆ ಆ ವೇಳೆಗಾಗಲೆ ಶ್ರೀ ಜಿ. ಪಿ. ರಾಜರತ್ನಂ ಅವರು "ಚೀನಾದೇಶದ ಬೌದ್ಧ ಯಾತ್ರಿಕರು" ಎಂಬ ಗ್ರಂಥವನ್ನು ಮತ್ತು ಶ್ರೀ ತ. ರಾ. ಸು. ಅವರು "ಬಾರ್ಬೋಸ ಕಂಡ ವಿಜಯನಗರ" ಎಂಬ ಗ್ರಂಥವನ್ನು ಕನ್ನಡಿಗರಿಗೆ ಕೊಟ್ಟಿದ್ದರು. ಈ ಎರಡೂ ಕೃತಿಗಳೂ ಕೂಡ ವಿಷಯ ವೈಶಾಲ್ಯದಲ್ಲಾಗಲೀ ಅನುವಾದ ಸಂಕೀರ್ಣತೆಯಲ್ಲಾಗಲೀ 'ಮಾರ್ಕೊ ಪೋಲೊ ಪ್ರವಾಸ ಕಥನ'ಕ್ಕೆ ಸಾಟಿಯಾಗಲಾರವು. ಈ ಮೂರೂ ಕೃತಿಗಳು ಇತ್ತೀಚಿನ ಪ್ರವಾಸ ಸಾಹಿತ್ಯದಿಂದ ತುಸು ಭಿನ್ನ ಎನಿಸಿದರೆ ತಪ್ಪಾಗಲಾರದು. 'ಮಾರ್ಕೊ ಪೋಲೊ ಪ್ರವಾಸ ಕಥನ'ದ ಮುನ್ನುಡಿಯಲ್ಲಿ ಹೇಳಿದಂತೆ ಶ್ರೀ ಎಚ್. ಎಲ್. ನಾಗೇಗೌಡರು 'ಪ್ರವಾಸಿ ಕಂಡ ಇಂಡಿಯಾ' ಎಂಬ ಆರು ಬೃಹತ್ ಸಂಪುಟಗಳನ್ನು ಕನ್ನಡಿಗರಿಗೆ ಕೊಟ್ಟು ಮಹದುಪಕಾರವನ್ನು ಮಾಡಿದ್ದಾರೆ.

ಮಾರ್ಕೊ ಪೋಲೊ ಪ್ರಪಂಚದ ಮೊದಲ ಪ್ರವಾಸಿಗನೇನೂ ಅಲ್ಲ. ಭಾರತಕ್ಕೆ ಮೊದಲು ಬಂದ ಪ್ರವಾಸಿಗನಂತೂ ಅಲ್ಲವೇ ಅಲ್ಲ. ಆದರೂ ಅವನನ್ನು ಮಧ್ಯ ಯುಗದ ಪ್ರವಾಸಿಗಳ ಪ್ರಮುಖ ಎಂದು ಕರೆಯುತ್ತಾರೆ. ಇಂದಿಗೆ "ಏಳು ಶತಮಾನಗಳ ಹಿಂದೆ ಈ ಪ್ರಪಂಚದ ಭೂಪಟವನ್ನೇ ಇನ್ನೂ ಬರೆಯದಿದ್ದಾಗ, ಪ್ರಪಂಚದ ರೂಪುರೇಷೆಗಳನ್ನೆ ಸ್ಥಿರವಾಗಿ ಅರಿಯದಿದ್ದಾಗ ಪ್ರಯಾಣಕ್ಕೆ ಕಾಲ್ನಡಗೆ, ಒಂಟೆ, ಕತ್ತೆ, ಕುದುರೆ, ದೋಣಿಗಳಲ್ಲದೆ ಬೇರೆ ಯಾವ ಸೌಕರ್ಯವೂ ಇಲ್ಲದಿರುವಾಗ ಅಪಾರ ಕಷ್ಟಗಳನ್ನನುಭವಿಸಿ ಇಟಲಿ ದೇಶದಿಂದ ಹೊರಟು ಈಗಿನ ತುರ್ಕಿ, ಇರಾಕ್, ಇರಾನ್, ಆಫ್ಘಾನಿಸ್ಥಾನ, ತಿಬೆಟ್, ದಕ್ಷಿಣ ರಷ್ಯಾ, ಮಂಗೋಲಿಯಾ, ಚೀನಾ, ಜಪಾನ್, ಜಾವಾ, ಸುಮಾತ್ರ, ಸಿಲೋನ್, ಇಂಡಿಯಾ ದೇಶಗಳನ್ನೂ, ಗೋಬಿ ಮರುಭೂಮಿಯಂಥ ಮರುಳುಗಾಡನ್ನೂ, ಹಿಂದೂಸಾಗರದಂಥ ಮಹಾಸಾಗರಗಳನ್ನೂ ಸುತ್ತಿ ಬಂದ ಪ್ರವಾಸಿ ಮಾರ್ಕೊ ಪೋಲೊವನ್ನು ಪ್ರವಾಸಿಗಳ ಪ್ರಮುಖ ಅಥವಾ ಚಕ್ರವರ್ತಿ ಎಂದಲ್ಲದೆ ಮತ್ತೇನೆಂದು ಕರೆಯಬೇಕು ! ಅವನು ಹೇಳಿದ ಅದ್ಭುತ ವಿಷಯಗಳನ್ನು ಕೇಳಿದರೇ ಮೈ ಜುಮ್ಮೆನ್ನುತ್ತದೆ. ಹೀಗಿರುವಾಗ ಅವನ ಅನುಭವ ಎಷ್ಟು ಅವರ್ಣನೀಯ !' "ಅವನು ನೋಡಿದ್ದ ಸ್ಥಳಗಳನ್ನು ಯುರೋಪಿಯನ್ನರು ನೋಡಿದ್ದು ನೂರಾರು ವರ್ಷಗಳ ಅನಂತರ. ಅದರಲ್ಲಿಯೂ ಮಧ್ಯ ಏಷ್ಯಾದ ಕೆಲವು ಸ್ಥಳಗಳನ್ನು ಕ್ರಿ.ಶ. ೧೮೬೦ರವರೆಗೆ ನೋಡಿರಲೇ ಇಲ್ಲವಂತೆ !" "ನಾನು ಕಂಡುದರಲ್ಲಿ ಅರ್ಧ ಹೇಳಿಲ್ಲ" ಎಂದು ಅವನೇ ತನ್ನ ಕೊನೆಯುಸಿರೆಳೆಯುವಾಗ ಹೇಳಿದ್ದಾನೆ.

ಇಷ್ಟಕ್ಕೇ ಅವನಿಗೆ ಸುಳ್ಳಿನ ಕೋಟಿಗಳ ಮಾರ್ಕೊ ಎಂಬ ಬಿರುದು ಬಂದಿತ್ತು. ಪೂರ್ತಿ ಹೇಳಿದ್ದರೆ ಇನ್ನೇನು ಹೆಸರಿಡುತ್ತಿದ್ದರೋ. ಇವನ ಪ್ರವಾಸ ಕಥನ ಮುಂದಿನ ಅನೇಕ ಪರ್ಯಟನದ ಅನ್ವೇಷಕರಿಗೆ ಕೈದೀಪಿಗೆಯಾಯಿತು. ಅದರಲ್ಲಿಯೂ ಅವನು ವರ್ಣಿಸಿದ್ದ ಪೂರ್ವದೇಶದ ಅಪಾರಸಂಪತ್ತು ಹೊಸನಾಡ ಅನ್ವೇಷಕರಿಗೆ ಚುಂಬಕ ಶಕ್ತಿಯಾಯಿತು. ೧೫ನೆಯ ಶತಮಾನದಲ್ಲಿ ಅಮೆರಿಕವನ್ನು ಸ್ಪೇನ್ ರಾಜನ ನೆರವಿನಿಂದ ಕಂಡು ಹಿಡಿದ ಇಟಲಿಯ ಕ್ರಿಸ್ಟೋಫರ್ ಕೊಲಂಬಸ್ಸನಿಗೆ ಮಾರ್ಕೊ ಪೋಲೋನ ಪ್ರವಾಸ ಕಥನವೇ ಪ್ರೇರಕ. ಅವನ ಬಳಿಯಲ್ಲಿ ಮಾರ್ಕೊಪೋಲ್‌ನ ಪ್ರವಾಸ ಕಥನದ ಇಟಾಲಿಯನ್ ಪ್ರತಿಯಿತ್ತಂತೆ. ಅದರಲ್ಲಿ ಟಿಪ್ಪಣಿಗಳೂ ಇದ್ದುವಂತೆ. ಅದು ಈಗಲೂ ಇದೆಯಂತೆ. ಹಾಗೆಯೆ ಸೈಬೀರಿಯಾ ದೇಶದಲ್ಲಿ ಸಿಗುವ ತುಪ್ಪಳು ಚರ್ಮದ ಆಸೆಯಿಂದ ಹಡ್ಸನ್‌ಬೇ ಕಂಪೆನಿ ಸ್ಥಾಪಿತವಾಯಿತಂತೆ! ಹೀಗೆ ಇನ್ನೂ ಅನೇಕ ವಿಚಾರಗಳಲ್ಲಿ ಆಧುನಿಕ ಭೂಗೋಳ ಶಾಸ್ತ್ರಜ್ಞರಿಗೂ, ಇತಿಹಾಸಕಾರರಿಗೂ, ಮಧ್ಯ ಮತ್ತು ಪೂರ್ವ ಏಷ್ಯಾದ ಸಮಾಜ ಶಾಸ್ತ್ರದ ಮತ್ತು ಮಾನವ ಶಾಸ್ತ್ರದ ವಿದ್ಯಾರ್ಥಿಗಳಿಗೆ ಮಾರ್ಕೊ ಪೋಲೊ ಮಾರ್ಗದರ್ಶಿ. ಅವನ ಕೃತಿ 'ಮಾರ್ಕೊ ಪೋಲೊ ಪ್ರವಾಸ ಕಥನ' ಅಮೂಲ್ಯ ಕೃತಿ. ಇದಕ್ಕಾಗಿ ಇಡೀ ಜಗತ್ತೆ ಅವನಿಗೆ ಕೃತಜ್ಞವಾಗಿರಬೇಕು.

'ಮಾರ್ಕೊ ಪೋಲೊ ಪ್ರವಾಸ ಕಥನ' ಅತ್ಯಂತ ಶ್ರೇಷ್ಠ ಪ್ರವಾಸಿಗರ ಕೃತಿಗಳಲ್ಲೊಂದು. ಇಷ್ಟು ಶತಮಾನಗಳು ಕಳೆದ ಮೇಲೂ ಮಧ್ಯ ಏಷ್ಯಾದ ಅನೇಕ ಭಾಗಗಳ ಬಗ್ಗೆ, ವಿಸ್ತಾರವಾದ ಚೀನಾ ಸಾಮ್ರಾಜ್ಯದ ಬಗ್ಗೆ ಮಾರ್ಕೊ ಪೋಲೊದೆ ಅಧಿಕೃತ ಹೇಳಿಕೆ.

ಮಾರ್ಕೊ ಪೋಲೊ ತನ್ನ ಬಗ್ಗೆ ಹೆಚ್ಚಿಗೆ ಏನನ್ನೂ ಹೇಳಿಕೊಂಡಿಲ್ಲ, ಇತರ ಆಕರಗಳಿಂದಲೂ ಅವನ ಬಗ್ಗೆ ಹೆಚ್ಚಿಗೆ ತಿಳಿದು ಬರುವುದಿಲ್ಲ. ಮಾರ್ಕೊ ಪೋಲೊವಿನ ತಂದೆ ನಿಕೊಲೊ ಪೋಲೊ ವೆನಿಸಿನ ಗಣ್ಯ ವರ್ತಕರ ಮನೆತನಕ್ಕೆ ಸೇರಿದವನು. ಇವನ ತಮ್ಮ ಮಾಫಿಯೊ ಪೋಲೊ. ಇವರ ಪೂರ್ವಿಕರ ಬಗ್ಗೆ ಹೆಚ್ಚಿಗೆ ತಿಳಿಯದು. ಮಾರ್ಕೊ ಪೋಲೊಗೆ ಆರು ವರ್ಷವಾಗಿದ್ದಾಗ ಕ್ರಿ.ಶ. ೧೨೬೦ರಲ್ಲಿ ಪೋಲೋ ಸಹೋದರರು ವ್ಯಾಪಾರಾರ್ಥವಾಗಿ ತಮ್ಮ ಸ್ವಂತ ಹಡಗಿನಲ್ಲಿ ಕಾನ್‌ಸ್ಟಾಂಟಿನೋಪಲ್ಗೆ ಹೋದರು. ಅನಿವಾರ್ಯ ಕಾರಣಗಳಿಂದಾಗಿ ಅಲ್ಲಿಂದ ಪೋಲೋ ಸಹೋದರರು ಭೂಮಾರ್ಗವಾಗಿ ಚೀನಾದೇಶಕ್ಕೆ ಹೋಗಬೇಕಾಯಿತು. ಅಲ್ಲಿ ಕುಬ್ಲಾಯ್‌ಖಾನನ ಔದಾರ್ಯದ ಆತಿಥ್ಯವನ್ನು ಸ್ವೀಕರಿಸಿ ಖಾನನ ಕ್ರೈಸ್ತ ಧರ್ಮದ ಬಗೆಗಿನ ಆಸಕ್ತಿಯನ್ನು ತಣಿಸಲು ಧರ್ಮ ಪ್ರಚಾರಕರನ್ನು ಕರೆದುಕೊಂಡು ಹೋಗುವ ಸಲುವಾಗಿ ಕ್ರಿ.ಶ. ೧೨೬೯ರಲ್ಲಿ ಹಿಂದಿರುಗಿದರು. ಚೀನಾದೇಶಕ್ಕೆ ಭೇಟಿಕೊಟ್ಟ ಮಧ್ಯಯುಗದ ಪ್ರವಾಸಿಗಳಲ್ಲಿ ಪೋಲೊ ಸಹೋದರರ ಹೆಸರು ಮೊದಲು ಬರುತ್ತದೆ. ಆಗ ಮಾರ್ಕೊ ಪೋಲೊಗೆ ಹದಿನೈದು ವರ್ಷ. ಕುಬ್ಲಾಯ್ ಖಾನನು ತರಲು ಹೇಳಿದ್ದ ಜರುಸಲೇಮಿನಲ್ಲಿ ಪವಿತ್ರ ಎಣ್ಣೆಯನ್ನು

ತೆಗೆದುಕೊಂಡು ನಾಲ್ಕನೆ ಕ್ಲಿಮೆಂಟ್ (Pope Clement IV) ಅನಂತರ ಹತ್ತನೆ ಗ್ರಿಗರಿ (Gregory X) ಎಂದು ಧರ್ಮಾಧಿಕಾರಿಯಾಗಿದ್ದ ಟೆಡಲ್ಡೊ (Tedaldo) ವಿನಿಂದ ಶ್ರೀಮುಖವನ್ನು ಪಡೆದು ಕ್ರಿ.ಶ.೧೨೭೧ರಲ್ಲಿ ೧೭ ವರ್ಷದ ಮಾರ್ಕೊ ಪೋಲೊ ಸಹಿತವಾಗಿ ಪ್ರಯಾಣ ಹೊರಟು ಆಕ್ರೆ, ಆರ್ಮೇನಿಯಾ, ಪರ್ಷಿಯಾ, ಆಫ್ಘಾನಿಸ್ತಾನ ಗಳ ಮಾರ್ಗವಾಗಿ ಪಾಮಿರ್ ಪ್ರಸ್ಥಭೂಮಿ, ಗೋಬಿ ಮರುಳುಗಾಡುಗಳನ್ನು ದಾಟಿ ಮೂರುವರೆ ವರ್ಷಗಳ ಸುದೀರ್ಘವೂ ಕ್ಲೇಶಕರವೂ ಆದ ಪ್ರಯಾಣದ ನಂತರ ಕ್ರಿ.ಶ. ೧೨೭೫ರಲ್ಲಿ ಪೋಲೋ ಸಹೋದರರು ಚೀನಾವನ್ನು ತಲುಪಿದರು. ಆಗ ಮಾರ್ಕೊ ಪೋಲೊಗೆ ಇಪ್ಪತ್ತೊಂದು ವರ್ಷ. ಉತ್ಸಾಹದ ಬುಗ್ಗೆ. ಬಹುಬೇಗನೆ ನಾಲ್ಕು ಭಾಷೆಗಳನ್ನು ಕಲಿತುಕೊಂಡನು. ಕುಬ್ಲಾಯ್‌ಖಾನನ ಕೃಪೆಗೆ ಪಾತ್ರನಾಗಿ ಹದಿನೇಳು ವರ್ಷಗಳು ಅವನ ಸೇವೆಯನ್ನು ಮಾಡಿದನು. ಈ ಅವಧಿಯಲ್ಲಿ ಯಾಂಗ್ ಚು (Yang Chow) ಎಂಬಲ್ಲಿ ಪ್ರಾಂತಾಧಿಕಾರಿಯಾಗಿದ್ದನು. ಮಾರ್ಕೊ ಪೋಲೊನ ಸೇವಾವಧಿಯ ಕೊನೆಯಲ್ಲಿ ಪರ್ಷಿಯಾ ದೇಶದ ರಾಜ, ಕುಬ್ಲಾಯ್ ಖಾನನ ಸಹೋದರನಾದ ಹುಲಾಗು (Hulagu) ವಿನ ಮೊಮ್ಮಗನಾದ ಆರ್ಘೋನ (Arghun Khan)ನ ರಾಣಿ ಬೋಲ್ಗಾನ (Bolgana) ಎಂಬುವಳು ಮೃತಳಾಗಿದ್ದಳು. ಅವಳ ಕೋರಿಕೆಯಂತೆ ಅವಳ ಸ್ಥಾನಕ್ಕೆ ಅವಳ ಹತ್ತಿರದ ಸಂಬಂಧಿಕರನ್ನೇ ತರುವ ಉದ್ದೇಶದಿಂದ ಆರ್ಘೋನ್ ಕುಬ್ಲಾಯ್‌ಖಾನನ ಬಳಿಗೆ ರಾಯಭಾರಿಗಳನ್ನು ಕಳುಹಿಸಿದ್ದನು. ಈ ರಾಯಭಾರಿಗಳ ಜೊತೆಯಲ್ಲಿ ಕುಬ್ಲಾಯ್ ಖಾನನು ಮನಸ್ಸಿಲ್ಲದ ಮನಸ್ಸಿನಿಂದ ಮಾರ್ಕೊ ಪೋಲೊ ಅವನ ತಂದೆ ಮತ್ತು ಚಿಕ್ಕಪ್ಪನನ್ನು ಮರಳಿ ಬರಬೇಕೆಂಬ ಷರತ್ತಿನ ಮೇಲೆ ಕ್ರಿ.ಶ. ೧೨೯೨ರಲ್ಲಿ ಕಳುಹಿಸಿಕೊಟ್ಟನು. ಪರ್ಷಿಯದಲ್ಲಿ ಕ್ರಿ.ಶ. ೧೨೯೧ರಲ್ಲೆ ಆರ್ಘೋನ್ ಮೃತನಾಗಿದ್ದನು ಆದ್ದರಿಂದ ಅವನಿಗೆಂದು ಕರೆತಂದಿದ್ದ ಕೋಗತಾಯ್ (Kogatin) ಎಂಬ ಯುವತಿಯನ್ನು ಅವನ ಮಗ ಕಾಸಾನ್‌ಗೆ (Ghan Khan) ಒಪ್ಪಿಸಿ ಸ್ವದೇಶವನ್ನು ಬಿಟ್ಟ ಇಪ್ಪತ್ತನಾಲ್ಕು ವರ್ಷಗಳನಂತರ ಕ್ರಿ.ಶ. ೧೨೯೫ರಲ್ಲಿ ವೆನಿಸ್ ನಗರವನ್ನು ಪೋಲೊಗಳು ತಲುಪಿದರು. ಈ ಮಧ್ಯೆ ಕುಬ್ಲಾಯ್‌ಖಾನನ ಮರಣದ ವಾರ್ತೆ (ಕ್ರಿ.ಶ. ೧೨೯೪ರ ಪ್ರಾರಂಭದಲ್ಲಿ) ಪೋಲೊಗಳಿಗೆ ತಿಳಿಯಿತು, ಮರಳಿ ಚೀನಾಕ್ಕೆ ಹೋಗಬೇಕಾಗಿಲ್ಲವೆಂದು ಕೊಂಡರು. ಅವರ ಕಷ್ಟಕಾರ್ಪಣ್ಯ ಅಲ್ಲಿಗೇ ಮುಗಿಯಲಿಲ್ಲ. ಅವರು ಹಿಂದಿರುಗಿಬಂದ ಮರು ವರ್ಷ ಅಂದರೆ ಕ್ರಿಸ್ತಾಬ್ದ ಸೆಪ್ಟೆಂಬರ್ ಏಳನೆ ೧೨೯೬ರಲ್ಲಿ ವೆನೀಸಿಯನ್ನರಿಗೂ ಜಿನೋವನ್ನರಿಗೂ ಯುದ್ಧ ಪ್ರಾರಂಭವಾಯಿತು. ಈ ಯುದ್ಧದಲ್ಲಿ ವೆನಿಸಿಯನ್ನರ ಪರವಾಗಿ ಮಾರ್ಕೊ ಪೋಲೊ ತಾಕಾತುಕಡಿಯೊಂದರ ಸೇನಾನಿಯಾಗಿ ಹೋರಾಡಬೇಕಾಯಿತು. ಮಾರ್ಕೊ ಜಿನೋವನ್ನರಿಗೆ ಸೆರೆಸಿಕ್ಕಿ ಮೂರು ವರ್ಷ ಸೆರೆಯಲ್ಲಿರಬೇಕಾಯಿತು. ಈ ಅವಧಿಯಲ್ಲೆ ಬಹುಶಃ ಮಾರ್ಕೊ ಪೋಲೊ ತನ್ನ ಅನುಭವಗಳನ್ನು ಸಹ ಖೈದಿ ಪೀಸಾದ ರಸ್ಟಿಗಿಯೊಲೊ

(Rustigielo of Pisa) ಎಂಬುವನಿಗೆ "ತಾನು ಕಂಡು ಕೇಳಿದ ವಿಷಯಗಳನ್ನು ಕಾಣದವರಿಗೆ, ಕೇಳದವರಿಗೆ ತಿಳಿಸಬೇಕೆಂಬ ಆಂತರಿಕ ಆಲೋಚನೆಯಿಂದ ಕ್ರಿ.ಶ. ೧೨೯೮ರಲ್ಲಿ ಹೇಳಿ ಬರೆಯಿಸಿದನು. ಆಗ ಶಿಷ್ಟ ಸಮಾಜದಲ್ಲಿ ಮಾನ್ಯತೆ ಪಡೆದಿದ್ದ ಫ್ರೆಂಚ್ ಭಾಷೆಯಲ್ಲಿಯ ಬಹುಶಃ ಮಾರ್ಕೊ ಪೋಲೊ ತನ್ನ ಪ್ರವಾಸ ಕಥನವನ್ನು ಬರೆಸಿರಬೇಕು. ಕ್ರಿ. ಶ. ೧೨೯೯ರಲ್ಲಿ ಸೆರೆಯಿಂದ ಬಿಡುಗಡೆ ಹೊಂದಿದ ಮಾರ್ಕೊ ಡೆನೊಟ (Denota) ಎಂಬುವಳನ್ನು ಮದುವೆಯಾಗಿ ಕೊನೆಯವರೆಗೂ ನೆಮ್ಮದಿಯ ಜೀವನವನ್ನು ನಡೆಸಿದನು. ಅವನ ತೃಪ್ತ ಕೌಟುಂಬಿಕ ಜೀವನದ ಫಲ ಮೂವರು ಹೆಣ್ಣು ಮಕ್ಕಳು. (Fantina, Bellele and Morete). ಕ್ರಿ.ಶ. ೧೩೨೩ರ ಜನವರಿ ಒಂಬತ್ತರಲ್ಲಿ ತನ್ನ ಆರೋಗ್ಯ ಕೆಡುತ್ತಿರುವುದನ್ನು ಗಮನಿಸಿ ಪತ್ನಿ ಡೆನೊಟ ಮತ್ತು ಮೂವರ ಪುತ್ರಿಯರಿಗೆ ತನ್ನ ಆಸ್ತಿಯನ್ನು ಬರೆದು ಉಯಿಲು ಮಾಡಿದನು. (ಈ ಉಯಿಲು ಇಂದಿಗೂ ಸುರಕ್ಷಿತವಾಗಿದೆ.) ಇದಾದ ಕೆಲವೇ ದಿನಗಳಲ್ಲಿ ಕ್ರಿ.ಶ. ೧೩೨೪ರಲ್ಲಿ ಮರಣ ಹೊಂದಿದನು. ಸಾನ್ ಲೊರೆಂಜೊ (San Lorenzo) ಚರ್ಚಿನಲ್ಲಿ ಅವನ ಶವವನ್ನು ಹೂಳಲಾಯಿತು.

ಈ ಮಹಾಪ್ರವಾಸಿಯ ಅಧಿಕೃತವಾದ ಚಿತ್ರಗಳಾವುವೂ ಇಲ್ಲ. ಕ್ರಿಸ್ಟೋಫರ್ ಕೊಲಂಬಸ್ಸನ ಚಿತ್ರಗಳಂತೆ ಇವನ ಬಗ್ಗೆಯೂ ಕ್ರಿ.ಶ. ೧೭ನೆಯ ಶತಮಾನದಿಂದ ಅನೇಕ ಕಾಲ್ಪನಿಕ ಚಿತ್ರಗಳು ದೊರೆಯುತ್ತವೆ.

ಮಾರ್ಕೊ ಪೋಲೊನ ಪ್ರವಾಸ ಕಥನದ ಮಹಾಕೃತಿಯ ಬಗ್ಗೆ ಸಾಕಷ್ಟು ಗಮನ ೧೯ನೇ ಶತಮಾನದವರೆಗೂ ಹರಿಯಲಿಲ್ಲ. ಕುಬ್ಲಾಯ್ ಖಾನನ ವೈಭವವನ್ನೂ ಅದ್ಭುತಾಶ್ಚರ್ಯಕರ ಕಥೆಗಳನ್ನೂ ಹೇಳುವ ಸುಳ್ಳಿನ ಕಥೆಯೆಂದೇ ಅದನ್ನು ಭಾವಿಸಲಾಗಿತ್ತು. ಕೋಟಿಗಳ ಮಾರ್ಕೊ ಪೋಲೊ ಎಂಬ ಅಡ್ಡ ಹೆಸರು ಮಾರ್ಕೊವಿಗೆ ದೊರಕಿತ್ತು. ಭಾಗಶಃ ಅದನ್ನು ಅವನಿಗೆ ಸಂದ ಪ್ರಶಸ್ತಿಯೆಂದೂ ಭಾವಿಸಬಹುದು.

ಮಾರ್ಕೊಪೋಲೋ ತನ್ನ ಪ್ರವಾಸ ಕಥನವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾನೆ. ಈ ಮೂರು ಭಾಗಗಳಿಗೂ ಮೊದಲು ಪೀಠಿಕಾರೂಪದಲ್ಲಿ ನಿಕೊಲೊ ಮತ್ತು ಮಾಫಿಯೊ ಸಹೋದರರು ವೆನಿಸ್ಸಿನಿಂದ ಚೀನಾಕ್ಕೆ ಹೋಗಿಬಂದ ಕಥೆಯನ್ನು ಕೊಟ್ಟಿದ್ದಾನೆ. ಕಿರಿಯ ಆರ್ಮೇನಿಯಾ (Armenia) ದಿಂದ ಪೀಕಿಂಗ್ (Peking)ವರೆಗಿನ ದಾರಿಯಲ್ಲಿ ಸಿಗುವ ರಾಜ್ಯಗಳು, ಪ್ರಾಂತ್ಯಗಳು, ಪಟ್ಟಣಗಳು ಮೊದಲಾದುವನ್ನು ಬಣ್ಣಿಸುತ್ತ ಅಲ್ಲಿನ ಜನರ ಧರ್ಮ, ನಡೆನುಡಿ ಮತ್ತು ಅಲ್ಲಿನ ವಾಯುಗುಣವನ್ನು ವಿವರಿಸುತ್ತ ಹೋಗಿದ್ದಾನೆ. ಇಂಥ ವಿವರಣೆಯನ್ನು ಕೊಟ್ಟ ಐರೋಪ್ಯಖಂಡದ ಪ್ರವಾಸಿಗರಲ್ಲಿ ಮಾರ್ಕೊ ಪೋಲೊನೆ ಮೊಟ್ಟಮೊದಲಿಗ. ಈ ಭಾಗದಲ್ಲಿಯೆ ಟಾರ್ಟರರ (Tartars) ಚರಿತ್ರೆ, ಅವರ ವಸತಿಗೆ, ರಾಜ್ಯಸ್ಥಾಪನೆ, ಗುಣಸ್ವಭಾವ, ಕಷ್ಟಸಹಿಷ್ಣುತೆ, ಸ್ತ್ರೀಯರ ಪಾತಿವ್ರತ್ಯಗಳ ಬಣ್ಣನೆ ಬರುತ್ತದೆ. ಎರಡನೆಯ

ಭಾಗದಲ್ಲಿ ಕುಬ್ಲಾಯ್ ಖಾನನ ವೈಭವ, ರಾಣೀವಾಸದ ವಿವರಗಳು, ಆಡಳಿತ ಕ್ರಮ, ಧಾರ್ಮಿಕ ಸಹಿಷ್ಣುತೆ, ಸೇನಾವ್ಯವಸ್ಥೆ, ನಗರಾಡಳಿತ. ಟಪಾಲು ವ್ಯವಸ್ಥೆ, ಇತರೆ ಪ್ರಜಾಹಿತ ಕಾರ್ಯಗಳ ಮತ್ತು ಬೇಟೆಯ ವಿವರಗಳು ಬರುತ್ತದೆ. ಇಲ್ಲಿಯ ಟಿಬೆಟ್ ದೇಶದ ವಿವರ, ಅಲ್ಲಿಯ ಜನರ ಆಚಾರ ವಿವರಗಳ ವಿವರಣೆ ಬರುತ್ತದೆ. ಮೂರನೆಯ ಭಾಗದಲ್ಲಿ ಚೀನಾದೇಶದಿಂದ ಪರ್ಷಿಯಕ್ಕೆ ಸಮುದ್ರಮಾರ್ಗವಾಗಿ ಪ್ರಯಾಣ ಮಾಡುವಾಗ ತಾನು ಕಂಡ ದೀಪಗಳಲ್ಲಿನ ಜನರ ಧರ್ಮ, ಆಚಾರ, ನಡೆನುಡಿ ಮೊದಲಾದುವನ್ನು ವಿವರಿಸುತ್ತಾ ಹೋಗಿದ್ದಾನೆ. ಈ ಭಾಗದಲ್ಲಿಯೆ ಜಾವ. ಸುಮಾತ್ರ, ಅಂಡಮಾನ್, ನಿಕೋಬಾರ್, ಸಿಲೋನ್, ಇಂಡಿಯಾಗಳ ಬಗ್ಗೆ ವಿವರಗಳು ಬರುವುದು.

ಮಾರ್ಕೊ ಪೋಲೊ ಪ್ರವಾಸ ಕಥನದ ಮೂರು ಭಾಗಗಳಲ್ಲಿಯೂ ಇಂಡಿಯಾದ ಪ್ರಸ್ತಾಪ ಬರುತ್ತದೆ. ಪ್ರಥಮ ಭಾಗದಲ್ಲಿ ಕಾಶ್ಮೀರ ಜನರ ಸ್ವಭಾವದ ವರ್ಣನೆಯಿದೆ. ಎರಡನೆಯ ಭಾಗದಲ್ಲಿ ಬರುವ ಪೂರ್ವ ಭಾರತದ ವರ್ಣನೆ ಬಹುಶಃ ತಾನು ಕಣ್ಣಾರೆ ಕಾಣದೆ ಬೇರೆಯವರಿಂದ ಕೇಳಿದುದನ್ನು ತನ್ನದೆಂಬಂತೆ ನಿರೂಪಿಸುತ್ತಾನೆ. ಮೂರನೆಯ ಭಾಗದಲ್ಲಿ ಹಿಂದೂ ಸಾಗರದಲ್ಲಿನ ದ್ವೀಪಗಳ ಜನರ ನಡೆನುಡಿ ಆಚಾರ ವಿಚಾರ ಮತ್ತು ಸಂಪತ್ತಿನ ವಿವರಣೆ ಕೊಡುತ್ತಾನೆ. ಮುಖ್ಯವಾಗಿ ಸಿಂಹಳ ಮತ್ತು ಕನ್ಯಾಕುಮಾರಿಯಿಂದ ಗುಜರಾತ್‌ವರೆಗಿನ ತೀರಪ್ರದೇಶಗಳ ವರ್ಣನೆಯನ್ನು ಕೊಡುತ್ತಾನೆ. ಅವನ ವಿವರಣೆಯಿಂದ ಸಿಂಹಳ ಮತ್ತು ಭಾರತದಲ್ಲಿ ಆ ವೇಳೆಗಾಗಲೆ ಕ್ರೈಸ್ತ ಮತ್ತು ಮಹಮದೀಯ ಧರ್ಮ ತಳವೂರಿತ್ತೆಂದು ತಿಳಿದುಬರುತ್ತದೆ. ಸಿಂಹಳದ tomb of Adam ಅನ್ನು ಬೌದ್ಧರು ಮತ್ತು ಮಹಮದೀಯರು ತಮ್ಮ ಮತಸ್ಥಾಪಕನದೆಂದು ಹೇಳಿಕೊಳ್ಳುತ್ತಾರೆಂದು ತಿಳಿದು ಬರುತ್ತದೆ. ಮದರಾಸಿನ ಬಳಿಯ ಮೈಲಾಪುರದ ಬಳಿಯ St. Thomas Apostleನ ದೈವೀ ಶಕ್ತಿಯ ವಿವರಣೆಯನ್ನು ಕೊಡುತ್ತಾನೆ. ದಕ್ಷಿಣ ಭಾರತದ ಬ್ರಾಹ್ಮಣರ ಸಾತ್ವಿಕ ಗುಣಗಳನ್ನೂ ಮತ್ತು ಇಲ್ಲಿಯ ಜನರ ವಿಶೇಷ ಸ್ವಭಾವವನ್ನೂ ವಿವರಿಸುತ್ತಾ ಹೋಗುತ್ತಾನೆ. ಸತಿಪದ್ಧತಿ, ದೇವದಾಸಿ ಪದ್ಧತಿ, ವೃಷಭ ಮತ್ತು ಅದರ ಸೆಗಣಿಯಿಂದ ಅಥವಾ ಅಸ್ಥಿಯಿಂದ ತಯಾರಿಸಿದ ಭಸ್ಮಕ್ಕಿರುವ ಭಾವನಾತ್ಮಕ ಮಹತ್ವ, ತಾಂಬೂಲಕ್ಕಿರುವ ಮಹತ್ವ, ಎಡಗೈ ಬಲಗೈಗಳಿಗಿರುವ ಭೇದ, ತುಟಿಗಳಿಗೆ ಪಾತ್ರೆಯನ್ನು ಸೋಕಿಸದಂತೆ ನೀರು ಕುಡಿಯುವುದು, ವಿಚಿತ್ರ ರೀತಿಯ ಸಾಲವಸೂಲಿ, ಸಮುದ್ರದಲ್ಲಿ ಮುತ್ತನ್ನು ತೆಗೆಯುವ ಮತ್ತು ತಿಮಿಂಗಿಲವನ್ನು ಹಿಡಿಯುವ ರೀತಿ, ವಜ್ರಗಳನ್ನು ಆರಿಸುವ ರೀತಿ, ಗಂಡಸರು ಮತ್ತು ಹೆಂಗಸರ ದ್ವೀಪಗಳ ವರ್ಣನೆ ಮೊದಲಾದುವು ಭಾರತದ ಬಗ್ಗೆ ಅವನು ಹೇಳಿರವ ವಿಷಯಗಳಲ್ಲಿ ಕೆಲವು. ಅವನ ವರ್ಣನೆಗಳಲ್ಲಿ ನೂರಕ್ಕೆ ತೊಂಬತ್ತು ಭಾಗ ನಿಜವಾಗಿದೆ. ಇದು ಅವನ ನಿರೀಕ್ಷಣಾ ಶಕ್ತಿಯನ್ನು ತೋರಿಸುತ್ತದೆ. ಅವನು ಪ್ರವಾಸಿಯ ಯಾವ

ಉದ್ದೇಶವೂ ಇಲ್ಲದೆ ತಂದೆ ಮತ್ತು ಚಿಕ್ಕಪ್ಪನ ಜೊತೆ ಹೋದವನು. ಕುಬ್ಲಾಯ್ ಖಾನನ ಆಸ್ಥಾನದಲ್ಲಿದ್ದಾಗ ಕುಬ್ಲಾಯ್ ಖಾನನ ಬೇರೆ ಬೇರೆ ನಾಡಿನ ಜನರ ಗುಣ ಸ್ವಾಭಾವಗಳ ಬಗೆಗಿನ ಜ್ಞಾನದಾಹವನ್ನು ಇಂಗಿಸಬೇಕಾದಾಗ ಸಹಜವಾಗಿಯೆ ಮಾರ್ಕೊವಿನ ನಿರೀಕ್ಷಣಾ ಸಾಮರ್ಥ್ಯ ಹೆಚ್ಚಾಯಿತು. ಅವನ ಪ್ರವೃತ್ತಿಯೂ ಅದೇ ಆಗಿದ್ದುದರಿಂದ ಅದು ಸೂಕ್ಷ್ಮತರವೂ ಆಯಿತು. ತಾನು ಕಣ್ಣಾರೆ ಕಾಣದೆ ಬೇರೆಯವರಿಂದ ಸಂಗ್ರಹಿಸಿ ನಿರೂಪಿಸಿರುವ ವಿಷಯಗಳು ನೂರಕ್ಕೆ ತೊಂಬತ್ತು ಪಾಲು ನಿಜವಾಗಿವೆ.

ಮಾರ್ಕೊ ಪೋಲೋ ಪ್ರವಾಸ ಕಥನವನ್ನು ಮೊದಲು ಕನ್ನಡಕ್ಕೆ ತಂದ ಕೀರ್ತಿ ಶ್ರೀ ಎಚ್. ಎಲ್. ನಾಗೇಗೌಡರಿಗೆ ಸಲ್ಲುತ್ತದೆ. ಈ ಕಾರ್ಯಕ್ಕೆ ಶ್ರೀ ನಾಗೇಗೌಡರನ್ನು ಪ್ರೇರೇಪಿಸಿದ ಶ್ರೀ ದೇಜಗೌ ಅವರು ಅಭಿನಂದನಾರ್ಹರು. ಮಾರ್ಕೊ ಪೋಲೊ ಹೇಳಿ ಬರೆಸಿದ ಪ್ರವಾಸ ಕಥನ (ಫ್ರೆಂಚ್)ರ ಮೂಲ ಪ್ರತಿ ನಾಶವಾಗಿರಬೇಕೆಂಬ ನಂಬಿಕೆಯಿದೆ. ಆದರೂ ಫ್ರೆಂಚ್ ಇಟಾಲಿಯನ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಪ್ರವಾಸ ಕಥನದ ಸುಮಾರು ಎಂಬತ್ತೈದು (ಇನ್ನೊಂದು ಮೂಲದ ಪ್ರಕಾರ ನೂರ ನಲವತ್ತು) ಮಾತೃಕೆಗಳು ಇವೆಯೆಂದೂ ಇವುಗಳನ್ನು ಅನಂತರ ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ಕಾಲಗಳಲ್ಲಿ ಸಂಪಾದಿಸಿದರೆಂದೂ ತಿಳಿದು ಬರುತ್ತದೆ. ಕ್ರಿ. ಶ ೧೫೫೯ರಲ್ಲಿ ಜಾನ್ ಬಾಪ್ಟಿಸ್ಟ್ ರಾಮುಸ್ಸಿಯೊ (John Baptist Ramnsio) ಎಂಬುವನಿಂದ ಇಟಾಲಿಯನ್ ಭಾಷೆಯಲ್ಲಿ ಮೊದಲ ಸಂಪಾದಿತ ಕೃತಿ ಬಂದಿತು. ಹೀಗೆ ಬೇರೆ ಬೇರೆಯ ಭಾಷೆಗಳಲ್ಲಿ ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ಕಾಲಗಳಲ್ಲಿ 'ಮಾರ್ಕೊಪೋಲೊ ಪ್ರವಾಸ ಕಥನ' ವನ್ನು ಸಂಪಾದಿಸಿದ್ದಾರೆ, ಶ್ರೀ ಎಚ್. ಎಲ್. ನಾಗೇಗೌಡರು ಇಂಗ್ಲಿಷಿನ ಯಾವ ಸಂಪಾದಿತ ಕೃತಿಯನ್ನು ಅನುವಾದಿಸಿದ್ದಾರೆಂದು ಹೇಳಿಲ್ಲ. ಆದರೂ ಕನ್ನಡದ 'ಮಾರ್ಕೊ ಪೋಲೊ ಪ್ರವಾಸ ಕಥನ' ಅನುವಾದವಲ್ಲ. ಸಂಗ್ರಹ. ಮೊದಲನೋಟಕ್ಕೆ ಅನುವಾದದಂತೆ ಕಾಣುತ್ತದೆ. ಮೂಲದಲ್ಲಿ ಪೀಠಿಕೆ ಮತ್ತು ಮೂರು ಭಾಗಗಳಿರುವಂತೆ ಇಲ್ಲಿಯೂ ಇವೆ. ಮೂಲದಲ್ಲಿ ಪ್ರತಿಯೊಂದು ಭಾಗದಲ್ಲಿಯೂ ಕ್ರಮವಾಗಿ ೫೭, ೭೭ ಮತ್ತು ೭೧ ಅಧ್ಯಾಯಗಳಿರುವಂತೆ ಇಲ್ಲಿಯೂ ೩೭ ೮೯ ಮತ್ತು ೫೩ ಅಧ್ಯಾಯಗಳಿವೆ. ಇಷ್ಟರಿಂದ ಮೂಲಕ್ಕೆ ಹತ್ತಿರವಾದ ಸಂಗ್ರಹ ಎಂಬ ನಿಲುವಿಗೆ ಬಂದುದಾದರೆ ತಪ್ಪಾಗುತ್ತದೆ. ಮೂಲದ ಮೂರನೆಯ ಭಾಗದ Of the Province of Mabbar ಎಂಬ ೨೦ನೆಯ ಅಧ್ಯಾಯವನ್ನು ಮೊಬಾರ್ ನಾಡು. ದೇವರಿಗೆ ಬಲಿದಾನ, ಗೋಪೂಜೆ. ಬಲಗೈ ಎಡಗೈ ಭೇದ, ಸಾಲ ವಸೂಲಿ ಮಾಡುವ ವಿಚಿತ್ರ ರೀತಿ, ಶಕುನ ಮತ್ತು ಜಾತಕಗಳು, ಗಂಡುಮಕ್ಕಳಿಗೆ ಸ್ವಾತಂತ್ರ್ಯ, ದೇವದಾಸಿ ಪದ್ಧತಿ, ಸೆಂಟ್ ಥಾಮಸ್, ಕಪ್ಪಾಗಿದ್ದಷ್ಟೂ ಸೌಂದರ್ಯ ಹೆಚ್ಚು ಎಂದು ಹತ್ತು ಅಧ್ಯಾಯಗಳನ್ನಾಗಿ (೨೩ ರಿಂದ ೩೨) ಮಾಡಿಕೊಂಡಿದ್ದಾರೆ. ಹೀಗಾಗಿ ಮೂಲ

ದಲ್ಲಿನ ಅಧ್ಯಾಯಗಳ ಸಂಖ್ಯೆಯು ಹಿಂಚುಮುಂಚಿನಲ್ಲಿ ಇಲ್ಲಿನ ಅಧ್ಯಾಯಗಳ ಸಂಖ್ಯೆಯೂ ತಿರುಗುತ್ತವೆ.

ಶ್ರೀ ಎಚ್. ಎಲ್. ನಾಗೇಗೌಡರ ಸಂಗ್ರಹ ರೀತಿಯನ್ನು ಗಮನಿಸಲು ಈ ಎರಡು ಉದಾಹರಣೆಗಳನ್ನು ನೋಡೋಣ. ಇವುಗಳನ್ನು ಮೇಲೆ ಹೇಳಿರುವ Of The Province of Mabbar ಎಂಬ ಅಧ್ಯಾಯದಿಂದ ತೆಗೆದುಕೊಂಡಿದೆ. ಮೊದಲ ಉದಾಹರಣೆ—

........He has at least one thousand wives and concubines; and when he sees a woman whose beauty pleases him, he immediately signifies his desire to possess her. In this manner he appropriated the wife of his brother, who being a discreet and sensible man, was prevailed upon not to make it the subject of a broil, alhough repeatedly on the point of having recourse to arms. On these occasions their mother remonstrated with them, and exposing her breasts, said : "If you my children disgrace yourselves by acts of hostility against each other, I shall instantly sever from my body these breasts from which you drew your nourishment"; and thus the irritation was allowed to subside.

ಅನುವಾದ ಅಥವಾ ಸಂಗ್ರಹ ಹೀಗಿದೆ:

ಈ ರಾಜನಿಗೆ ಏನಿಲ್ಲ ಅಂದರೂ ಐನೂರು ಜನ ಹೆಂಡತಿಯರಿದ್ದಾರೆ. ರೂಪವತಿಯಾದ ಯಾವ ಹೆಂಗಸು ಇವನ ಕಣ್ಣಿಗೆ ಬಿದ್ದರೆ ಸಾಕು, ಅವಳು ತನ್ನ ವಶಳಾಗಬೇಕೆಂಬ ಆಸೆಯನ್ನು ಸೂಚಿಸುತ್ತಾನೆ. ಹಾಗೆ ಸೂಚಿಸಿಬಿಟ್ಟರೆ ಸಾಕು, ಅವಳು ಇವನ ವಶಳಾಗಬೇಕು. ಈ ರೀತಿ ಇವನು ತನ್ನ ಸಹೋದರನ ಹೆಂಡತಿಯನ್ನೇ ಸ್ವಾಧೀನ ಮಾಡಿಕೊಂಡಿದ್ದನು.

ಎರಡನೆಯ ಉದಾಹರಣೆ—

No horses being bred in this country, the king and his three royal brothers expend large sums of money annualy in the purchase of them from merchants of Ormus, Dinfar, Pecher and Adem, who carry them thither for sale, and become rich by the traffic, as they import to the number of five thousand, and

for each of them obtain five hundred saggi of gold, being equal to one hundred marks of silver. At the end of the year, in consequence, as it is supposed, of their not having persons properly qualified to take care of them or to administer the requisite medicines, perhaps not three hundred of these remain alive, and thus the necessity is occasioned for replacing them annualy. But it is my opinion that the climate ot the provinee is unfavourable to the race of horses and that from hence arises the difficulty in breeding or preserving them. For food they give them flesh dressed with rice and other prepared meats the country not producing any grain besides rice. A mare, although of a large size, and covered by a handsome house, produces only a small ill-made colt, with distorted legs and unfit to be trained for riding.

ಅನುವಾದ ಅಥವಾ ಸಂಗ್ರಹ ಹೀಗಿದೆ :

ಈ ದೇಶದಲ್ಲಿ ಕುದುರೆಗಳನ್ನು ಸಾಕುವುದಿಲ್ಲ. ಹವಾಗುಣದಿಂದಲೋ ಏನೋ ಇಲ್ಲಿ ಒಳ್ಳೆಯ ತಳಿಗೆ ಹುಟ್ಟಿದ ಮರಿಗಳೂ ವಕ್ರ ವಕ್ರವಾಗಿಯೇ ಹುಟ್ಟುತ್ತವೆ. ರಾಜನೂ ಅವನ ಮೂರು ಜನ ಸಹೋದರರೂ ವರ್ಷ ವರ್ಷ ಸುಮಾರು ಐದು ಸಾವಿರ ಕುದುರೆಗಳನ್ನು ಪರದೇಶದ ವರ್ತಕರಿಂದ ಕೊಂಡು ಕೊಂಡು ಅವುಗಳನ್ನು ಮಾರಿ ಹೇರಳವಾದ ಲಾಭ ಸಂಪಾದಿಸುತ್ತಾರೆ.

ಮೇಲಿನ ಎರಡು ಮೂಲ ಮತ್ತು ಸಂಗ್ರಹಗಳನ್ನು ನೋಡಿದವರಿಗೆ ಸಂಗ್ರಹ ತೀರ ಸಂಕ್ಷಿಪ್ತವಾಯಿತೆಂದು ಹೇಳುವಂತಾಗುತ್ತದೆ. ಆದರೆ ಔಚಿತ್ಯರಾಹಿತ್ಯವಾಗಿದೆ ಎನ್ನುವಂತಿಲ್ಲ. ಪುನರಾವರ್ತನೆಯನ್ನು ಆದಷ್ಟು ತಪ್ಪಿಸಲಾಗಿದೆ. ದೊಡ್ಡ ದೊಡ್ಡ ವಾಕ್ಯಗಳನ್ನು ಸಣ್ಣ ಸಣ್ಣ ವಾಕ್ಯಗಳನ್ನಾಗಿ ಮಾಡಿಕೊಂಡಿದ್ದಾರೆ. ಎಲ್ಲಿಯೂ ಭಾಷೆ ಜಡಸು ಅಥವಾ ಪಾಂಡಿತ್ಯಪೂರ್ಣವಾದುದು ಎನಿಸದೆ ಸರಳವಾಗಿದೆ. ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಇಷ್ಟು ಹೇಳಿದರೂ ಈ ಒಂದು ಮಾತನ್ನು ಹೇಳಿದರೆ ಅನುಚಿತವಾಗಲಾರದು ಎಂದುಕೊಂಡಿದ್ದೇನೆ : ಮೂಲವನ್ನು ನೋಡಿದವರಿಗೆ ಇದು ರಕ್ತ ಮಾಂಸ ರಹಿತವಾದ ಅಸ್ಥಿಪಂಜರದಂತೆ ಕಾಣುತ್ತದೆ.

ಮಾರ್ಕೊ ಪೋಲೊನ ಪ್ರವಾಸ ಕಥನವನ್ನು ಓದುತ್ತಿದ್ದರೆ ಯಾವುದೊ ಕಿನ್ನರ ಲೋಕದಲ್ಲಿ ವಿಹರಿಸಿದಂತಾಗುತ್ತದೆ. ಅದೊಂದು ಕನಸಿನ ರಾಜ್ಯ. ಕುಬ್ಲಾಯ್ ಖಾನನಂತಹ ಆದರ್ಶ ರಾಜ, ಜ್ಞಾನ ಪಿಪಾಸು, ದಕ್ಷ ಆಡಳಿತಗಾರ, ಪ್ರಜಾಪ್ರೇಮಿ

ಇದುವರೆಗಿನ ಚರಿತ್ರೆಯಲ್ಲಿ ಬಂದಿಲ್ಲ. ಕ್ರೈಸ್ತ ಧರ್ಮದ ಬಗ್ಗೆ ಆಸಕ್ತಿ ತಳೆದು ಅದನ್ನು ಅರಿಯುವ ಸಲುವಾಗಿ ಧರ್ಮ ಪ್ರಚಾರಕರನ್ನು ಕರೆತರುವಂತೆ ಕಾನ್‌ಸ್ಟ್ಯಾಂಟಿನೋಪಲ್‌ಗೆ ಪೋಲೊ ಸಹೋದರರನ್ನು ಕಳುಹಿಸಿದ. ಶಾಕ್ಯಮುನಿಯ ಉದಾತ್ತ ಚರಿತವನ್ನು ಕೇಳಿ ಸಿಂಹಳದಿಂದ ಅವನ ಅವಶೇಷಗಳನ್ನು ಸೂಕ್ತ ಮರ್ಯಾದೆಯಿಂದ ತರಿಸಿಕೊಂಡ. ಧರ್ಮದ ಬಗ್ಗೆ ಮಾತ್ರವಲ್ಲದೆ ಜನರ ಆಚಾರವಿಚಾರಗಳ ಬಗ್ಗೆ ಅವನಿಗಿದ್ದ ಜ್ಞಾನ ದಾಹ ಆಶ್ಚರ್ಯಕರವಾದುದು. ಅವನು ಭೋಗದಲ್ಲಿ ಮೈಮರೆತು ಆಡಳಿತವನ್ನು ಮರೆತವನಲ್ಲ. ಪ್ರಜೆಗಳ ಕ್ಷೇಮವೇ ತನ್ನ ಕರ್ತವ್ಯವೆಂದು ರಾಜ್ಯಭಾರ ಮಾಡಿದವನು. 'ಸರ್ವೇ ಜನ ಸುಖಿನೋ ಭವಂತು,' 'ಸರ್ವ ಮಂಗಳಾನಿ ಭವಂತು' ಎಂಬ ಆದರ್ಶ ಅವನದು. ಅವನ ರಾಜ್ಯದ ನಗರಗಳ ವರ್ತನೆಯನ್ನು ಓದಿದರೆ ವಿಜಯನಗರ ಕಣ್ಣಮುಂದೆ ಬರುತ್ತದೆ. ಹೀಗೆ ಎಲ್ಲ ರಂಗಗಳಲ್ಲಿಯೂ ನಮ್ಮ ಮೆಚ್ಚುಗೆಗೆ ಕುಬ್ಲಾಯ್‌ಖಾನ್ ಪಾತ್ರನಾಗುತ್ತಾನೆ. ಮಾರ್ಕೊ ಪೋಲೋ ವಿವರಿಸುವ ಜನರ ನಡೆನುಡಿ ಆಚಾರ ವಿಚಾರ ಮೊದಲಾದುವನ್ನು ಓದುತ್ತಿದ್ದರೆ ಜ್ಞಾನ ಸರೋವರದಲ್ಲಿ ಮಿಂದಂತೆ ಭಾಸವಾಗುತ್ತದೆ. ಸಂಪಾದಕರು ಕೊಟ್ಟಿರುವ ಅಡಿ ಟಿಪ್ಪಣಿಗಳನ್ನೋದುತ್ತಿದ್ದರೆ ವಿದ್ವದ್ಗೋಷ್ಠಿಯಲ್ಲಿ ವಿಹರಿಸಿದಂತೆ ಮನಸ್ಸು ಮುದಗೊಳ್ಳುತ್ತದೆ. (ಈ ವಿಚಾರವಾಗಿ ಶ್ರೀ ಎಚ್. ಎಲ್. ನಾಗೇಗೌಡರು "ಈ ಕಥನದಲ್ಲಿರುವ ಊರು ಪಟ್ಟಣಗಳ, ನಡೆನುಡಿಗಳ ಮತ್ತು ಇತರ ವಿಚಾರಗಳ ಬಗ್ಗೆ ಸಾಧ್ಯವಾದಷ್ಟು ಅಡಿ ಟಿಪ್ಪಣಿಗಳನ್ನು ಕೊಟ್ಟಿದ್ದೇನೆ ಅಥವಾ ಅಲ್ಲಿಯೇ ಆವರಣ ಚಿಹ್ನೆಯೊಳಗೆ ವಿವರಿಸಿದ್ದೇನೆ. ಇವಕ್ಕೆ ಆಧಾರ ವಿದ್ವಾಂಸರುಗಳ ವಿಚಾರಪೂರಿತ ಅಭಿಪ್ರಾಯವೇ ಹೊರತು ನನ್ನ ಸ್ವಂತ ಸಂಶೋಧನೆಯಲ್ಲ. ಅಂಥ ಯೋಗ್ಯತೆ ನನ್ನಲ್ಲಿ ಇಲ್ಲ" ಎಂದು ತಮ್ಮ ವಿನಯವನ್ನು ಮಾರ್ಕೊ ಪೋಲೊ ಪ್ರವಾಸ ಕಥನದ ಮುನ್ನುಡಿಯಲ್ಲಿ ವ್ಯಕ್ತಪಡಿಸಿದ್ದಾರೆ.)

ಮೂಲವನ್ನು ನೋಡದೆ ಸಂಗ್ರಹವನ್ನು ನೋಡಿದರೆ ಅದೇ ನಮಗೆ ತೃಪ್ತಿಯನ್ನು ಕೊಡುತ್ತದೆ. ಮೂಲವನ್ನು ನೋಡಿದರೆ ಅದರ ಮುಂದೆ ಇದು ಕುಬ್ಜ ಎನಿಸುತ್ತದೆ. ಮೂಲದ ನಾಲ್ಕನೆಯ ಒಂದು ಭಾಗಕ್ಕಿಂತಲೂ ಗಾತ್ರದಲ್ಲಿ ಸೊರಗಿದೆ. ಶ್ರೀ ಎಚ್. ಎಲ್. ನಾಗೇಗೌಡರು ಸಂಗ್ರಹಿಸಿ (ಸಂಗ್ರಹಾನುವಾದ ಎನ್ನಬಹುದೆ?) ಕೊಟ್ಟಿರುವ ಈ 'ಮಾರ್ಕೊ ಪೋಲೊ ಪ್ರವಾಸ ಕಥನ' ಸಮಗ್ರಾನುವಾದಕ್ಕೆ ಯಾರಿಗಾದರೂ ಪ್ರೇರೇಪಿಸಿ ಕಾರ್ಯ ಪ್ರವೃತ್ತರಾಗುವಂತೆ ಮಾಡಿದರೆ ಶ್ರೀ ಎಚ್. ಎಲ್. ನಾಗೇಗೌಡರ ಶ್ರಮಕ್ಕೆ ತಕ್ಕ ಬೆಲೆಯನ್ನು ಕೊಟ್ಟಂತಾಗುತ್ತದೆ.

೩ | ಎಲ್ವಿನ್ನರ ಗಿರಿಜನ ಪ್ರಪಂಚ

ತೀ. ನಂ. ಶಂಕರನಾರಾಯಣ

೧

"ಯುರೋಪು ನನ್ನ ಮೂಳೆ ಮೂಳೆಯಲ್ಲಿದೆ. ಆದರೆ ಇಂಡಿಯಾ ನನ್ನ ರಕ್ತಗತವಾಗಿದೆ."[1] ಈ ಮಾತನ್ನು ಹೇಳಿದ ವ್ಯಕ್ತಿ ಶ್ರೇಷ್ಠದರ್ಜೆಯ ಮಾನವ ವಿಜ್ಞಾನಿ ಮತ್ತು ಮಾನವತಾ ವಾದಿಯಾಗಿದ್ದ ವೆರಿಯರ್ ಎಲ್ವಿನ್ ಅವರು. ಇಂಗ್ಲೆಂಡಿನಲ್ಲಿ ಹುಟ್ಟಿ, ವೃತ್ತಿಯಿಂದ ಪಾದ್ರಿಯಾಗಿ ಭಾರತವನ್ನು ಪ್ರವೇಶಿಸಿ, ಗಾಂಧೀಜಿಯವರಿಂದ ಪ್ರಭಾವಿತರಾಗಿ ಭಾರತೀಯ ಸಂಸ್ಕೃತಿಗೆ ಮಾರುಹೋಗಿ, ಭಾರತೀಯ ಗಿರಿಜನರ ನಡುವೆ ಬದುಕಿ, ಬಾಳಿ, ಗಿರಿಜನ ಹೆಣ್ಣನ್ನು ಮದುವೆಯಾಗಿ ಭಾರತೀಯ ಪೌರತ್ವವನ್ನು ಪಡೆದು ಅಪಾರ ಸೇವೆ ಸಲ್ಲಿಸಿದ ಎಲ್ವಿನ್ನರ ಹೆಸರು ಭಾರತದ ಮಾನವ ವಿಜ್ಞಾನ ಮತ್ತು ಜಾನಪದ ಕ್ಷೇತ್ರದಲ್ಲಿ ಶಾಶ್ವತವಾಗಿ ನಿಲ್ಲುವಂತಹದಾಗಿದೆ. ಇಂತಹ ಮೇಧಾವಿ ಭಾರತದ ಬಗ್ಗೆ ಅಪಾರ ಅಭಿಮಾನವನ್ನು ಹೊಂದಿ ಇಲ್ಲಿನ ಗಿರಿಜನರ ಆಳವಾದ ಅಧ್ಯಯನ ನಡೆಸಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಈ ಮಹಾನ್ ವ್ಯಕ್ತಿಯ ಆತ್ಮಚರಿತ್ರೆ "The tribal world of Verrier Elvin" ತುಂಬಾ ಪ್ರಸಿದ್ಧವಾದ ಕೃತಿಯಾಗಿದೆ. 1965 ರಲ್ಲಿ ಈ ಕೃತಿಗೆ ಭಾರತದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರೆಯಿತು. ಇದು ಬಹಳ ಮೇಲ್ಮಟ್ಟದ ಒಂದು ಆತ್ಮಕಥನವಾಗಿದ್ದು ಮಾನವ ವಿಜ್ಞಾನ, ಜಾನಪದ, ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ಮಾರ್ಗದರ್ಶಕ ಕೃತಿಯಾಗಿಯೂ ಉಳಿದವರಿಗೆ ತುಂಬಾ ಕುತೂಹಲಕರವಾದ ಉತ್ತಮ ಸಾಹಿತ್ಯವಾಗಿಯೂ ಪರಿಣಮಿಸಿದೆ. ಇಂತಹ ಕೃತಿ ಕನ್ನಡಕ್ಕೆ ಅಗತ್ಯವಾಗಿ ಅನುವಾದಗೊಳ್ಳಬೇಕಾಗಿತ್ತು. ಬಹುಮುಖ ಪ್ರತಿಭೆಯ ಶ್ರೀ. ಎಚ್. ಎಲ್. ನಾಗೇಗೌಡ ಅವರು ಈ ಕೃತಿಯ ಸಂಗ್ರಹಾನುವಾದವನ್ನು "ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ" ಎಂಬ ಹೆಸರಿಸಿಂದ ಕನ್ನಡಕ್ಕೆ ತಂದಿದ್ದಾರೆ. ಡಾ. ಶಿವರಾಮ ಕಾರಂತರು ಹೇಳುವಂತೆ ಈ ಕೃತಿ "ನಿಸ್ಪೃಹವಾದ ಒಬ್ಬ ವ್ಯಕ್ತಿ ಸತ್ಯ ಸೌಂದರ್ಯಗಳ ಅನ್ವೇಷಣೆಯಲ್ಲಿ ಇರಿಸಿದ ಗಾಢ ಹೆಜ್ಜೆಗಳು.[2] ಜಾನಪದದಲ್ಲಿ ತುಂಬಾ ಮಹತ್ವಪೂರ್ಣ ಕೆಲಸ ಮಾಡಿರುವ ಮತ್ತು ಜಾನಪದದ ಜೀವನಾಡಿ

---

1. ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ. ಪುಟ 2.
2. ಅದೇ. ಪುಟ vi.

ಯನ್ನು ಹಿಡಿಯುವ ಸಾಮರ್ಥ್ಯವುಳ್ಳ ಶ್ರೀ ಎಚ್. ಎಲ್. ನಾಗೇಗೌಡರು ಈ ಕೃತಿಯನ್ನು ಕನ್ನಡಕ್ಕೆ ತಂದಿರುವುದು ಶ್ಲಾಘನೀಯವಾದ ಕೆಲಸವಾಗಿದೆ. ಈ ಲೇಖನದಲ್ಲಿ ಈ ಕೃತಿಯ ಪರಿಚಯ ಮಾಡಿಕೊಡುವುದರ ಮೂಲಕ, ಇದರ ಸ್ವಾರಸ್ಯ ಹಾಗೂ ಮಹತ್ವವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

೨

ವೆರಿಯರ್ ಎಲ್ವಿನ್ 1912 ಆಗಸ್ಟ್ 29ರಂದು ಇಂಗ್ಲೆಂಡ್‌ನಲ್ಲಿ, ಎಡ್ಮಂಡ್ ಹೆನ್ರಿ ಎಂಬ ಕ್ರೈಸ್ತ ಪಾದ್ರಿಯವರ ಮಗನಾಗಿ ಜನಿಸಿದರು. ತಂದೆಯ ನಿಧನದ ನಂತರ ತಾಯಿಯಿಂದ ಪ್ರಭಾವಿತರಾಗಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಓದುವಾಗ ವರ್ಡ್ಸ್‌ವರ್ತ್, ಕೋಲೆರಿಜ್, ಎಲಿಯಟ್, ಬ್ಲೇಕ್, ಷೇಕ್ಸ್ಪಿಯರ್, ಜೇನ್ ಆಸ್ಟಿನ್ ಮೊದಲಾದ ಇಂಗ್ಲಿಷ್ ಸಾಹಿತಿಗಳ ಸಾಹಿತ್ಯದ ಬಗ್ಗೆ ಅಪಾರ ಆಸಕ್ತಿಯನ್ನು ಬೆಳಸಿಕೊಂಡರು. ಸಾಹಿತ್ಯದ ಜೊತೆಗೆ ಧರ್ಮಶಾಸ್ತ್ರವನ್ನು ಅಭ್ಯಾಸಮಾಡಿ ಕ್ಯಾಥೊಲಿಕ್ ಪಾದ್ರಿಯಾದರು. ಆ ಸಂದರ್ಭದಲ್ಲಿ ಭಾರತದಲ್ಲಿ ಕೆಲಸ ಮಾಡಬೇಕು ಎಂಬ ಭಾವನೆ ಅವರಲ್ಲಿ ಉಂಟಾಯಿತು. ಅವರ ಮಾತುಗಳಲ್ಲೇ ಹೇಳುವುದಾದರೆ "ಆಕ್ಸ್‌ಫರ್ಡ್‌ನ ನನ್ನ ಕೊನೆಯ ದಿನಗಳಲ್ಲಿ ಈ ಅರ್ಪಣಾ ಭಾವನೆ ನನ್ನಲ್ಲಿ ಬೇರೂರಿತು. ನಮ್ಮ ಪೂರ್ವಿಕರು ಇಂಡಿಯಾದಲ್ಲಿ ಹಣ ಸಂಪಾದಿಸಿದ್ದರು. ನನ್ನ ದೇಶದವರು ಇಂಡಿಯಾಕ್ಕೆ ಹೋಗಿ ಅದನ್ನು ಶೋಷಿಸಿ, ಅದರ ಮೇಲೆ ತಮ್ಮ ಅಧಿಪತ್ಯ ಸ್ಥಾಪಿಸಿದ್ದರು. ಈ ಕಾರಣ ಅದರ ಪ್ರಾಯಶ್ಚಿತ್ತಕ್ಕಾಗಿ ನಾನು ಇಂಡಿಯಾಕ್ಕೆ ಹೋಗಬೇಕೆನ್ನಿಸಿತು. ನನ್ನ ಮನೆತನದವರಲ್ಲಿ ಒಬ್ಬರಾದರೂ ಇಂಡಿಯಾದಿಂದ ತರುವುದನ್ನು ಬಿಟ್ಟು, ಕೊಡುವುದಕ್ಕಾಗಿ ಅಲ್ಲಿಗೆ ಹೋಗಬೇಕೆನ್ನಿಸಿತು. ಹೋಗಿ, ಆ ಬಡಜನರನ್ನು ಆಳುವ ಬದಲು, ಅವರ ಸೇವೆ ಮಾಡಬೇಕು ಮತ್ತು ಆ ದೇಶದಲ್ಲಿ ಐಕ್ಯವಾಗಬೇಕು ಎಂದು ಅನ್ನಿಸಿತು. ಈ ಭಾವನೆಯಲ್ಲಿ ನನ್ನನ್ನು ಆಕ್ಸ್‌ಫರ್ಡ್‌ನಿಂದ ಬೇರ್ಪಡಿಸಲು ಮುಖ್ಯವಾದದ್ದು; ಈ ಭಾವನೆಯೇ ನನಗೊದಗಿದ ಅನೇಕ ಕಷ್ಟಗಳಿಂದ ನನ್ನನ್ನು ಪಾರುಮಾಡಿದ್ದು."[3] ವೆರಿಯರ್ ಎಲ್ವಿನ್ ವಿದ್ವತ್ ಪ್ರಪಂಚವನ್ನು ಬಿಟ್ಟು ಭಾರತಕ್ಕೆ ಧರ್ಮಬೋಧೆ ಮಾಡುವ ಉದ್ದೇಶದಿಂದ ಬಂದರು. ಆ ವೇಳೆಯಲ್ಲಿಯೇ ಅವರು ಬ್ರಿಟಿಷರ ದಬ್ಬಾಳಿಕೆ ಮತ್ತು ಸಾಮ್ರಾಜ್ಯಶಾಹಿಯನ್ನು ವಿರೋಧಿಸಿ ತಾವು ಭಾರತೀಯರು ಎಂಬ ಭಾವನೆಯನ್ನು ಬೆಳೆಸಿಕೊಂಡರು. ಮಹಾತ್ಮಾಗಾಂಧಿ ಮತ್ತು ರವೀಂದ್ರನಾಥ ಠಾಕೂರರ ಜೀವನ ಮತ್ತು ಬರಹಗಳಿಂದ ಪ್ರೇರಿತರಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ತಮ್ಮ ಶಕ್ತ್ಯಾನುಸಾರ ಭಾಗವಹಿಸಿದರು. ಮಹಾತ್ಮಾಗಾಂಧಿಯವರ ಸಬರಮತಿ ಆಶ್ರಮದಲ್ಲಿ ಸಾಕಷ್ಟು ಕಾಲ ಇದ್ದು ಸನ್ಯಾಸಿಗಳ ಮತ್ತು ಸತ್ಯಾಗ್ರಹಿಗಳ

---

3. ಅದೇ. ಪುಟ 32.

ಬಗ್ಗೆ ಹೆಚ್ಚಿನ ಜ್ಞಾನವನ್ನು ಸಂಪಾದಿಸಿದರು. "1930ನೆಯ ಇಸವಿಯಲ್ಲಿ ಒಂದು ದಿನ ಅವರು ನನ್ನನ್ನು ಕುರಿತು 'ಮೀರಾಬೆನ್ ನನ್ನ ಮಗಳಾಗಿರುವಂತೆ, ನೀನು ನನ್ನ ಮಗನಾಗಿರುವೆ' ಎಂದಾಗ ನನಗಾದ ಆನಂದ ಅಷ್ಟಿಷ್ಟಲ್ಲ. ಅಂದಿನಿಂದ ನಾನು ಇಂಡಿಯಾಕ್ಕೆ ಸೇರಿದವನೆಂದು ಭಾವಿಸಿದೆ,"[4] ಎಂದು ಗಾಂಧೀಜಿಯವರನ್ನು ಕುರಿತು ಹೇಳಿಕೊಂಡಿದ್ದಾರೆ. ಗಾಂಧೀಜಿಯವರ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರೂ ಕೂಡ ಪಾನನಿರೋಧ, ಬ್ರಹ್ಮಚರ್ಯ ಮೊದಲಾದ ಕೆಲವು ವಿಷಯಗಳಲ್ಲಿ ಅವರು ಗಾಂಧೀಜಿಯವರ ವಿಷಯಗಳನ್ನು ಒಪ್ಪಲಿಲ್ಲ. ಖಾದಿ ಕಾರ್ಯಕ್ರಮ ಗಿರಿಜನರಿಗೆ ಸರಿಹೊಂದುವುದಿಲ್ಲ ಎಂಬುದನ್ನು ಎಲ್ವಿನ್ ಅರ್ಥಮಾಡಿಕೊಂಡಿದ್ದರು. ಹೀಗಾಗಿ 1940ನೆಯ ದಶಕದಲ್ಲಿ ಗಾಂಧೀಜಿಯವರಿಗೆ ಮತ್ತು ಅವರಿಗೆ ಇದ್ದ ಸಂಪರ್ಕ ಕಡಿಮೆಯಾಯಿತು. ಆದರೂ ಗಾಂಧೀಜಿಯವರ ಬಗ್ಗೆ ಅವರ ಪ್ರೀತಿಯೇನೂ ಕಡಿಮೆಯಾಗಲಿಲ್ಲ.

ರಾಷ್ಟ್ರೀಯತೆ, ಸ್ವಾತಂತ್ರ್ಯದ ಹೋರಾಟ, ಬ್ರಹ್ಮಚರ್ಯ, ಆಶ್ರಮ ಮೊದಲಾದ ಕ್ಷೇತ್ರಗಳಿಂದ ಎಲ್ವಿನ್ನರ ಗಮನ ಭಾರತದ ಗಿರಿಜನರ ಅಧ್ಯಯನದ ಕಡೆಗೆ ಹರಿದದ್ದು ಸರ್ದಾರ್ ಪಟೇಲ್ ಮತ್ತು ಜಮುನಾಲಾಲ್ ಬಜಾಜ್ ಅವರ ಪ್ರೇರಣೆಯಿಂದ ಎಂದು ಹೇಳಬಹುದು. ಗೋಂಡಾ ಎಂಬ ಆದಿವಾಸಿಗಳ ಬಗ್ಗೆ ಕೇಳಿದ್ದೂ ಆಗಲೆ. ಅಂದಿನಿಂದ ಎಲ್ವಿನ್ ಭಾರತದ ಗಿರಿಜನರ ನಡುವೆ ವಾಸಮಾಡುತ್ತಾ, ಅವರ ಕಷ್ಟಸುಖಗಲ್ಲಿ ಭಾಗಿಯಾಗುತ್ತಾ, ಅವರ ಜೀವನದ ಬಗ್ಗೆ ಆಳವಾದ ಅಧ್ಯಯನ ನಡೆಸುತ್ತಾ ತಮ್ಮ ಜೀವನದ ಕೆಲವು ದಶಕಗಳನ್ನು ಅವರೊಡನೆ ಕಳೆದರು. ಗೋಂಡಾ, ಅಗರಿಯಾ, ಮುರಿಯಾ, ಮೇರಿಯಾ, ಸವೋರಾ, ಘರೋತಿಯಾ ಭೂಮಿಯಾ, ಕೊನ್ಯಾಕ್, ಮೊದಲಾದ ಒರಿಸ್ಸಾ ಮತ್ತು ಮಧ್ಯಪ್ರದೇಶದ ಆದಿವಾಸಿ ಬುಡಕಟ್ಟುಗಳ ಅಧ್ಯಯನವನ್ನು ಎಲ್ವಿನ್ ಅವರು ಮಾಡಿ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಹಾಗೆಯೇ ಅಸ್ಸಾಂ, ನೇಫಾ ಪ್ರದೇಶಗಳಲ್ಲಿನ ನಾಗಾ ಮೊದಲಾದ ಬುಡಕಟ್ಟುಗಳ ಬಗ್ಗೆ ಗ್ರಂಥಗಳನ್ನು ಪ್ರಕಟಿಸಿದ್ದಾರೆ. "The Muria and Their Ghotul". "The Religion of an Indian Tribe". "The Baiga" "The Agana", "Maria Murdeu and Suicide", "Bondo Highlander" "Folk-Tales of Mohakoshal", "Folk-songs of chattisgharh", "Myths of Middle India", "The Tribal Art of Middle India", Tribal Myths of Orissa", "Myths of NEFA", "A Philasophy for NEFA" ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಮಾನವ ವಿಜ್ಞಾನದಲ್ಲಿ ವಿದ್ವಾಂಸರಾದ ಶಾಮರಾವ್ ಹಿವಾಲೆ ಅವರೊಡನೆ "Songs of the Porest", Folk-Songs of the Maikal Hills" ಮೊದಲಾದ ಕೃತಿ

4. ಅದೇ. ಪುಟ 48.

ಗಳನ್ನು ರಚಿಸಿದ್ದಾರೆ. ಭಾರತದ ಆದಿವಾಸಿಗಳ ಕಲೆ, ಪುರಾಣ, ಜನಪದ ಸಾಹಿತ್ಯ, ಮದುವೆ, ಆತ್ಮಹತ್ಯೆ, ಮೊದಲಾದ ಅನೇಕ ವಿಷಯಗಳ ಬಗ್ಗೆ ವೆರಿಯರ್ ಎಲ್ವಿನ್ ಅವರು ಬರೆದಿದ್ದಾರೆ. ಇವರು ಬರೆದ ಗ್ರಂಥಗಳು 25ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿವೆ. ಗಿರಿಜನ ಕನ್ಯೆ ಲೀಲಾ ಅವರನ್ನು ಮದುವೆಯಾಗಿ, ಮಕ್ಕಳನ್ನು ಪಡೆದು ಭಾರತದ ಪ್ರಜೆಯಾಗುವವರೆಗೂ ಇವರ ಭಾರತದ ಮೇಲಿನ ಅಭಿಮಾನ ಬೆಳೆಯಿತು. ಭಾರತ ಸರ್ಕಾರ ಇವರ ಸೇವೆಯನ್ನು ಗುರುತಿಸಿ 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿತು ; ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಎಸ್.ಸಿ., ಪದವಿಯನ್ನು ನೀಡಿತು. ಪ್ರಧಾನಿ ನೆಹರು ಮತ್ತು ಇತರ ಅನೇಕ ಗಣ್ಯರು ಇವರ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರು ಭಾರತ ಸರ್ಕಾರ ಗಿರಿಜನರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಾಗ ವೆರಿಯರ್ ಎಲ್ವಿನ್ನರ ಮಾರ್ಗದರ್ಶನ ಪಡೆದಿದೆ. ಭಾರತದ ಗಿರಿಜನರ ಅಭಿವೃದ್ಧಿಗಾಗಿ ಅಪಾರವಾಗಿ ಶ್ರಮಿಸಿ ಗಿರಿಜನ ಪ್ರಪಂಚದಲ್ಲಿ ವೇರಿಯರ್ ಎಲ್ವಿನ್ ಅವರು ತಮ್ಮ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿದ್ದಾರೆ. ಭಾರತದ ಮಾನವ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಜಾನಪದ ಕ್ಷೇತ್ರದಲ್ಲಿ ತಮ್ಮ ಹೆಸರನ್ನು ಶಾಶ್ವತಗೊಳಿಸಿದ್ದಾರೆ 1964ರಲ್ಲಿ ವೆರಿಯರ್ ಎಲ್ವಿನ್ ತೀರಿಕೊಂಡರು. ಮನಸ್ಸು ಮಾಡಿದ್ದರೆ ಅಪಾರ ಅಧಿಕಾರ, ಸಂಪತ್ತು, ಎಲ್ಲವನ್ನೂ ಪಡೆದು ಪಟ್ಟಣದಲ್ಲಿ ಭೋಗಜೀವನ ನಡೆಸಬಹುದಾಗಿದ್ದ ಈ ಮಹಾನ್‌ವ್ಯಕ್ತಿ ನಿಜವಾಗಿ ತ್ಯಾಗಿಯಾದರು; ಗಿರಿಜನ ಬಂಧುವಾದರು.

೩

ಮಾನವ ವಿಜ್ಞಾನ ಇಂದು ಜಗತ್ತಿನಾದ್ಯಂತ ತೀವ್ರಗತಿಯಲ್ಲಿ ಬೆಳೆಯುತ್ತಿರುವ ವಿಜ್ಞಾನವಾಗಿದೆ. ಈ ಕ್ಷೇತ್ರದಲ್ಲಿ ಅನೇಕ ಪರಿಣತರು, ಉತ್ಸಾಹಿಗಳು, ಕೆಲಸಮಾಡುತ್ತಿದ್ದಾರೆ. ವೆರಿಯರ್ ಎಲ್ವಿನ್ ಮಾನವ ವಿಜ್ಞಾನ ಕೇತ್ರದಲ್ಲಿ ಪ್ರವೇಶಮಾಡಿದ್ದು ಯಾವುದೇ ಅಧಿಕಾರವನ್ನು, ಪದವಿಯನ್ನು ಪಡೆಯುವ ಉದ್ದೇಶದಿಂದಲ್ಲ; ವಿಶ್ವವಿದ್ಯಾನಿಲಯದಲ್ಲಿ ಮಾನವ ವಿಜ್ಞಾನವನ್ನು ಅವರು ಅಭ್ಯಾಸ ಮಾಡಿದವರೂ ಅಲ್ಲ. ಅವರು ಸ್ವಂತ ಅಧ್ಯಯನದಿಂದ ಈ ಕ್ಷೇತ್ರದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡರು. ಸಾಹಿತ್ಯದ ಮೂಲಕ ಮಾನವ ವಿಜ್ಞಾನವನ್ನು ಪ್ರವೇಶಿಸಿದ ಈ ವ್ಯಕ್ತಿಗೆ ತಾವು ಅಪರಿಚಿತ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದೇನೆಂಬ ಭಾವನೆಯೇ ಬರಲಿಲ್ಲ. "ಕಳೆದ ಮೂವತ್ತು ವರ್ಷಗಳಲ್ಲಿ ನಾನು ಮಾನವ ಶಾಸ್ತ್ರವನ್ನು ಬಹಳ ಅಭ್ಯಾಸಮಾಡಿದೆ. ಆದರೆ ಎಲ್ಲ ಮಾನವ ಶಾಸ್ತ್ರಜ್ಞರಂತೆ ನಾನು ಮೊದಲು ಆರಂಭಿಸಿದ್ದು ಮಾನವ ಶಾಸ್ತ್ರವನ್ನಲ್ಲ. ಮಾನವರ ಬಗ್ಗೆ ನನ್ನ ಆಸಕ್ತಿ ಕೆರಳಿದ್ದು ಸಾಹಿತ್ಯದ ಮೂಲಕ"[5] ನನಗೆ ಮಾನವಶಾಸ್ತ್ರವೆಂದರೆ ಹೊರಗಡೆಯ

---

5 ಅದೇ. ಪುಟ 12.

ಕೆಲಸ ಅಷ್ಟೇ ಅಲ್ಲ; ನನ್ನ ಬಾಳೇ ಅದಾಗಿತ್ತು. ಜನರ ಮಧ್ಯೆ ನೆಲಸಿ, ಅವರೊಡನೆ ಬಾಳಿ, ಹೊರಗಡೆಯುವನೊಬ್ಬ ಎಷ್ಟರ ಮಟ್ಟಿಗೆ ಅವರೊಡನೆ ಬೆರೆಯಬಹುದೋ ಅಷ್ಟರ ಮಟ್ಟಿಗೆ ಬೆರೆತು, ಹಲವಾರು ಗ್ರಂಥಗಳನ್ನು ಒಟ್ಟಿಗೆ ಬರೆಯುವುದು ನನ್ನ ಕ್ರಮ ವಾಗಿತ್ತು"[6]—ಎಂದು ಅವರೇ ಹೇಳಿಕೊಂಡಿದ್ದಾರೆ. ಈ ಮಾತುಗಳಲ್ಲಿ ವೆರಿಯರ್ ಎಲ್ವಿನ್ ಅವರ ದೃಷ್ಟಿ ಸಾಮಾನ್ಯ ಮಾನವ ವಿಜ್ಞಾನಿಗಳಿಗಿಂತ ಹೇಗೆ ಭಿನ್ನವಾಗಿತ್ತು ಎಂದೂ, ಅವರು ವಿಶಿಷ್ಟ ಮಾನವ ವಿಜ್ಞಾನಿಯೆಂದೂ ತಿಳಿಯುತ್ತದೆ.

ವೆರಿಯರ್ ಎಲ್ವಿನ್ ಅವರು ಮಾನವ ವಿಜ್ಞಾನ ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿದ್ದರೂ ಕೂಡ ಅನೇಕ ಮಾನವ ವಿಜ್ಞಾನಿಗಳು ಅವರನ್ನು ಸಂಶಯದಿಂದ ನೋಡಿರುವುದುಂಟು. ಆದರೆ ಈ ಸಂಶಯ ಅನಗತ್ಯ. ಮಾನವ ಶಾಸ್ತ್ರಜ್ಞರಾಗಿ ಗಿರಿ ಜನರ ನಡುವೆ ಕೆಲಸಮಾಡುವಾಗ ತಮಗೆ ಉಂಟಾದ ಸ್ವಾರಸ್ಯಕರ ಅನುಭವಗಳನ್ನು ಎಲ್ವಿನ್ ತಮ್ಮ ಈ ಆತ್ಮ ಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ತಾವು ಗಿರಿಜನರ ನಡುವೆ ಕ್ಷೇತ್ರಕಾರ್ಯ ಮಾಡಿದ ಸಂದರ್ಭದಲ್ಲಿ ಆ ಜನಗಳ ಮೂಢನಂಬಿಕೆ, ಹೆದರಿಕೆ, ಹಾಸ್ಯದ ಪ್ರಸಂಗಗಳು, ಕಷ್ಟನಿಷ್ಠುರಗಳು, ಮೊದಲಾದುವುಗಳನ್ನೆಲ್ಲ ಪ್ರಾಮಾಣಿಕವಾಗಿ ಹೇಳಿ ಕೊಂಡಿದ್ದಾರೆ. "ಗಿರಿಜನರು ನನ್ನ ಜೀವನದ ಹಾಸು ಹೊಕ್ಕಾಗಿದ್ದರು. ಅವರಿಂದ ನನ್ನ ಜೀವನದಲ್ಲಿ ಆಸಕ್ತಿ ಹಾಗೂ ಆನಂದ ಮೂಡಿತ್ತು. ಬೈಗರು, ಮರಿಯರು, ಬೊಂಡೋಗಳು, ಕೊಂಡರು ಮತ್ತು ಸವೋರಾಗಳು ನನ್ನ ಜೀವನ ಕಥೆಯ ಮುಖ್ಯ ಆಧಾರಗಳು. ಬೈಗರು ಕಗ್ಗಾಡುಗಳಿಗೆ ನನ್ನನ್ನು ಕರೆದುಕೊಂಡು ಹೋದರು. ಕುಟ್ಟಿಯ ಕೊಂಡರು ಮತ್ತು ಮರಿಯರು ಸೌಂದರ್ಯದ ಕಡೆ ನನ್ನ ಮನಸ್ಸನ್ನು ತಿರುಗಿಸಿ ಅದನ್ನು ಪಕ್ವಮಾಡಿದರು. ಸವೋರಾರನ್ನು ನಾನು ಕಂಡು ಮಾತಾಡಿದ್ದೇನೆ; ಪ್ರೀತಿಸಿದ್ದೇನೆ. ಮತ್ತು ವರ್ಷಾನುಗಟ್ಟಲೆ ಅವರ ಬಗ್ಗೆ ಆಸಕ್ತಿ ವಹಿಸಿದ್ದೇನೆ"[7] ಎಂಬ ಅವರ ಮಾತು ಗಳು ಉಲ್ಲೇಖಾರ್ಹವಾದುವು. ಈ ಮುಂದೆ ಕೆಲವು ಅನುಭವಗಳನ್ನು ಕೊಡಲಾಗಿದೆ :

"ಒಮ್ಮೆ ಒಂದು ಸಂತೋಷಕೂಟದಲ್ಲಿ ಒಬ್ಬ ಬ್ರಿಟಿಷ್ ಕರ್ನಲನ ಹೆಂಡತಿಗೆ ನಾನೊಬ್ಬ ಆಂತ್ರೊಪಾಲೊಜಿಸ್ಟ್ (ಮಾನವ ಶಾಸ್ತ್ರಜ್ಞ) ಎಂದು ಒಬ್ಬರು ಪರಿಚಯ ಮಾಡಿಕೊಟ್ಟರು ನನ್ನೊಡನೆ ದೂರ ಸರಿದು. ಕಿರುಗಣ್ಣಿನಲ್ಲಿಯೇ ನನ್ನನ್ನು ನೋಡಿ ದಳು. ಮೂರು ನಾಲ್ಕು ಲೋಟ ಜಿನ್ ಕುಡಿದು ಧೈರ್ಯ ಬಂದ ಮೇಲೆ ನನ್ನ ಕಡೆ ತಿರುಗಿ ಪಿಸುದನಿಯಲ್ಲಿ 'ಡಾ॥ ಎಲ್ವಿನ್, ನಿಮ್ಮ ಜಿಲ್ಲೆಯಲ್ಲಿ ಆಂತ್ರೋಪಲಾಜಿ ರೋಗ ಹಬ್ಬಿದೆಯೇನು ?' ಎಂದು ಕೇಳಿದಳು ಆ ಮಾರಾಗಿತ್ತಿ!"[8] ಈ ಮಾತುಗಳಿಂದ ಆ ಕಾಲಕ್ಕೆ ಮಾನವ ವಿಜ್ಞಾನದ ಕಲ್ಪನೆ ಜನರಲ್ಲಿ ಹೇಗಿತ್ತು ಎಂಬುದು ತಿಳಿಯುತ್ತದೆ.

---

6 ಅದೇ. ಪುಟ 103.

7 ಅದೇ. ಪುಟ 112 ಮತ್ತು 113.

8 ಅದೇ. ಪುಟ 102.

"ಮರಿಯರಿಗೆ ಸೆನ್ಸಸ್ ಕಂಡರೆ ಆಗುತ್ತಿರಲಿಲ್ಲ. 1931ನೆಯ ಸೆನ್ಸಸ್ ಆದ ಮೇಲೆ ಕಾಡಿನಲ್ಲಿ ಹುಲಿಗಳು ಹೆಚ್ಚಾದುವೆಂದು ಅವರು ಹೇಳುತ್ತಿದ್ದರು. ಯಾವಾಗಲೂ ಎಣಿಸುವುದು ಮತ್ತು ಅಳೆಯುವುದು ಅಪಾಯ ಎಂದು ಅವರ ಭಾವನೆ. ಜನಗಳಿಗೆ ನಂಬರು ಹಾಕುವುದು ಪಾಪ, ಅದರಿಂದ ಮಕ್ಕಳಾಗುವುದು ಕಡಿಮೆಯಾಗುತ್ತದೆ ಎಂದು ಅವರ ಹೆದರಿಕೆ. ಈ ಕಾರಣ 1941ನೆಯ ಸೆನ್ಸಸ್ ಆದಮೇಲೆ ಸೆನ್ಸಸ್ ಆದ ಮೇಲೆ ಬಹಳ ಗ್ರಾಮಗಳಲ್ಲಿ ಮನೆಗೆ ತಗುಲಿಸಿದ್ದ ಮನೆ ನಂಬರು ಪ್ಲೇಟುಗಳನ್ನು ತೆಗೆದು ಹಾಕಿ, ಅವುಗಳಿಗೆ ಹಂದಿಯನ್ನು ಬಲಿಕೊಟ್ಟು ಶಾಂತಿಮಾಡಿದರು."[9] ಈ ಒಂದು ಅನುಭವದಿಂದ ಗಿರಿಜನರ ಹೆದರಿಕೆ ಮತ್ತು ಮೂಢನಂಬಿಕೆ ಎಷ್ಟು ಆಳವಾಗಿತ್ತು ಎಂಬುದು ತಿಳಿಯುತ್ತದೆ.

"ಹೆದರಿಕೊಂಡ ಜನರನ್ನು ಒಲಿಸಿಕೊಳ್ಳಲು ಒಂದು ಹಳ್ಳಿಯಲ್ಲಿ ಗ್ರ್ಯಾಮಫೋನ್ ಹಾಕಿದೆ. ಆದರೆ ನಾನು ಹಾಕಿದ ರಿಕಾರ್ಡ್‌ನ್ನು ಕೇಳಿ ಮುದುಕಿಯೊಬ್ಬಳು ಮೂರ್ಛೆ ಹೋದಳು. ಕೆಲವರು ದೇವರನ್ನು ಪೂಜಿಸುವ ಹಾಗೆ ನೆಲದ ಮೇಲೆ ಮಲಗಿದರು. ಹುಡುಗರೆಲ್ಲ ಅರಚುತ್ತಾ ಓಡಿಹೋದರು. ದೊಡ್ಡವರು ಕೆಲವರು ಬಂದು ಆ ಅರಚುವಿಕೆಯನ್ನು ನಿಲ್ಲಿಸಬೇಕೆಂದು ಕೇಳಿಕೊಂಡರು. ನನ್ನ ಗ್ರ್ಯಾಮಫೋನ್ ಪೆಟ್ಟಿಗೆಯೊಳಗೆ ಏನೋ ಸೇರಿಕೊಂಡಿದೆ, ಅದರ ಗೋಜಿಗೆ ಹೋಗುವುದು ಬೇಡ ಎಂದು ಅವರು ಅಂಗಲಾಚಿದರು."[10] ಈ ಪ್ರಸಂಗದಲ್ಲಿ ಗಿರಿಜನರ ಹೆದರಿಕೆ, ಅಜ್ಞಾನ ಅರಿವಾಗುತ್ತದೆ.

"ಹೊರಗಡೆಯವರು ಬರುವುದು ಅವರಿಗೇನೂ ಅಷ್ಟು ಹಿಡಿಸುತ್ತಿರಲಿಲ್ಲ. ಏನಾದರೊಂದು ಆಗುವುದೆಂದು ಅದಕ್ಕೆ ಶಾಂತಿ ಮಾಡುತ್ತಿದ್ದರು. ಒಂದು ಕಡೆಯಲ್ಲಿ ಯಾರು ಬಂದರೆ ಯಾವುದನ್ನು ಬಲಿಕೊಡಬೇಕೆಂದು ತೀರ್ಮಾನವಾಗಿಬಿಟ್ಟಿತ್ತು. ಫಾರೆಸ್ಟ್ ಅಧಿಕಾರಿ ಬಂದರೆ ಆಡು, ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಬಂದರೆ ಕೋಳಿ ಮತ್ತು ನನ್ನಂತ ಮಾನವಶಾಸ್ತ್ರಜ್ಞ ಬಂದರೆ ಹಂದಿ ಬಲಿಕೊಡುತ್ತಿದ್ದರು."[11] ಈ ಪ್ರಸಂಗದಲ್ಲಿ ಗಿರಿಜನರ ಮೂಢ ಆಚರಣೆಗಳ ಸ್ಪಷ್ಟ ಚಿತ್ರಣವಾಗುತ್ತದೆ.

ಇಲ್ಲಿ ಇನ್ನೂ ವಿಚಿತ್ರವಾದ ಪ್ರಸಂಗವಿದೆ. ಅದು ವೆರಿಯರ್ ಎಲ್ವಿನ್ ಅವರು ಒಳಗಾಡಿನಲ್ಲಿ ಚಿತ್ರ ತೆಗೆಯುವುದಕ್ಕೆ ಹೋದಾಗಾದ ಅನುಭವ [11] ಅನೇಕ ಜನ ಆದಿವಾಸಿಗಳಿಗೆ ಕ್ಯಾಮರಾ ಅಚ್ಚರಿಯನ್ನಷ್ಟೇ ಅಲ್ಲ, ಭೀತಿಯನ್ನೂ ಉಂಟುಮಾಡುತ್ತಿತ್ತು. ಅವರ ಕಡೆಗೆ ಮೂತಿ ತಿರುಗಿಸಿಕೊಂಡು ನಿಂತ ಮೂರು ಕಾಲಿನ ಆ ಯಂತ್ರ ಅವರಿಗೆ ಹೆದರಿಕೆ

---

9. ಅದೇ. ಪುಟ 108 ಮತ್ತು 109

10. ಅದೇ. ಪುಟ 116

11. ಅದೇ. ಪುಟ 117

ಯನ್ನುಂಟುಮಾಡುತ್ತಿತ್ತು. ಒಮ್ಮೆ ಒಬ್ಬ ಕಮ್ಮಾರನ ಚಿತ್ರವನ್ನು ತೆಗೆಯಬೇಕೆಂದು ಅವನ ಕಡೆಗೆ ನನ್ನ ಕ್ಯಾಮರಾ ತಿರುಗಿಸಿದೆ. ಹಾಗೆ ಮಾಡಿದೆನೋ ಇಲ್ಲವೋ ಅಲ್ಲಿದ್ದ ಜನರೆಲ್ಲಾ ದಿಕ್ಕಾಪಾಲಾಗಿ ಓಡಲಾರಂಭಿಸಿದರು. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಬಂದು ಶಿಸ್ತಿನಿಂದ ಸಲಾಮು ಮಾಡಿ 'ನಿಮಗೆ ಬೇಕಾದರೆ ಇನ್ನೂ ಉತ್ತಮನಾದವನನ್ನು ತೋರಿಸಬಲ್ಲೆ' ಎಂದು ಹೇಳಿದ. ಅವನು ಹೇಳಿದುದನ್ನು ಅರ್ಥಮಾಡಿಕೊಳ್ಳುವಷ್ಟರಲ್ಲಿ ಸಂತೆಗೆ ಸೇರಿದ್ದ ಜನರೆಲ್ಲ ಓಡಲಾರಂಭಿಸಿದರು. ಹೂಡಿದ್ದ ಅಂಗಡಿಗಳನ್ನು ಅಲ್ಲೇ ಬಿಟ್ಟು, ತರಕಾರಿ ತುಂಬಿದ ಮಂಕರಿಗಳನ್ನು ಎಸೆದು, ಒಟ್ಟೆಬೇಲುಗಳನ್ನು ತುಳಿದು ಕೊಂಡು ಕಾಡಿನ ಕಡೆ ಪರಾರಿಯಾಗಲಾರಂಭಿಸಿದರು. ಆ ಮೇಲೆ ನನಗೆ ತಿಳಿದು ಬಂತು ನನ್ನ ಕ್ಯಾಮರಾ ಮಿಲಿಟರಿಗೆ ಸೇರಲು ಅರ್ಹರಾದ ಜನರ ಆಳತೆ ತೆಗೆಯುವ ಯಂತ್ರ ಎಂದು ಆ ಕಾನ್‌ಸ್ಟೇಬಲ್ ಅರ್ಥ ಮಾಡಿಕೊಂಡ ಎಂದು.

ಒಮ್ಮೆ ನಾನು ಫೋಟೋ ತೆಗೆಯುತ್ತಿರಬೇಕಾದರೆ ಜನ ಸುಮ್ಮನೆ ಗಡಗಡ ನಡುಗಿ ಬಿಟ್ಟರು. ಆಮೇಲೆ ಹೇಳಿದರು 'ನಮ್ಮ ಶಕ್ತಿಯನ್ನೆಲ್ಲಾ ಎಳೆದುಕೊಂಡು ಆ ಸಣ್ಣ ಪೆಟ್ಟಿಗೆಯಲ್ಲಿ ಹಾಕಿಕೊಂಡು ಬಿಟ್ಟಿದ್ದೀರಿ' ಎಂದು. ಮತ್ತೊಂದು ಸ್ಥಳದಲ್ಲಿ ಕ್ಯಾಮರಾ ಒಂದು ತರಹ ಎಕ್ಸ್-ರೇ ಯಂತ್ರವೆಂದೂ ಆ ಯಂತ್ರ ದೇಹವನ್ನು ಹೊಕ್ಕು ಒಳಗಿರುವ ಈಲಿಯನ್ನು ಹಿಡಿಯಬಲ್ಲದೆಂದೂ ಹೇಳಿದರು. ಮಾಟಮಂತ್ರದಲ್ಲಿ ಈಲಿ ಬಹಳ ಮುಖ್ಯವಾದದ್ದು. ಮೊದಲು ಈಲಿಗೆ ತೊಂದರೆ ಮಾಡಿದರೆ ಮುಂದಿನ ಕೆಲಸ ಸುಲಭ.

ಈ ರೀತಿ ನನ್ನ ಅನುಭವಗಳು ವಿಚಿತ್ರವಾಗಿದ್ದವು. ಜನರ ಮೂಢನಂಬಿಕೆಗಳು ನನ್ನ ಕೆಲಸಕ್ಕೆ ಅಡ್ಡಿ ತರುತ್ತಿದ್ದವು, ಚಿತ್ರ ತೆಗೆಸಿಕೊಂಡರೆ ಸತ್ತುಹೋಗುತ್ತಾರೆಂಬ ಭಾವನೆ ಇತ್ತು. ಇದನ್ನು ಹೋಗಲಾಡಿಸಲು ನಾನು, ನನ್ನ ಮತ್ತು ನನ್ನ ಹೆಂಡತಿ ಮಕ್ಕಳ ಫೋಟೋ ತೋರಿಸಿ, ನಾವು ಸತ್ತಿಲ್ಲ ಬದುಕಿದ್ದೇವೆಂದು ಹೇಳಿ, ಅವರ ಮನಸ್ಸನ್ನು ಒಲಿಸಿಕೊಳ್ಳಬೇಕಾಯಿತು. ಒಮ್ಮೆ ಪುರೋಹಿತನ ಚಿತ್ರ ತೆಗೆದು ಜನರನ್ನು ಸಮಾಧಾನ ಮಾಡಬೇಕಾಯಿತು. ಅವನು ಮೊದಲಿಗೆ ತನ್ನ ಅಗಲವಾದ ಬೆನ್ನು ತೋರಿಸಿದ. ಕಷ್ಟ ಪಟ್ಟು ಅವನ ಮುಖ ಕ್ಯಾಮರಾ ಕಡೆ ತಿರುಗುವಂತೆ ಮಾಡಿದೆ. ಆ ಮಹಾರಾಜನ ಫೋಟೋ ತೋರಿಸಿ ಜನರನ್ನು ಒಪ್ಪಿಸಿದೆ."[12] ಇಲ್ಲಿ ಒಬ್ಬ ಸಂಶೋಧಕ ಯಾವ ಯಾಂತ್ರಿಕ ವಸ್ತುಗಳ ಪರಿಚಯವೂ ಇಲ್ಲದ ಜನರೊಡನೆ ಎದುರಿಸಬೇಕಾದ ಕಷ್ಟ ಸ್ಪಷ್ಟವಾಗುತ್ತದೆ ಮತ್ತು ಹೇಗೆ ವೆರಿಯರ್ ಎಲ್ವಿನ್ ಅವರು ಗಿರಿಜನರ ನಡುವೆ ಈ ಸಮಸ್ಯೆಯನ್ನೂ ನಿವಾರಿಸಿಕೊಂಡರು ಎಂಬುದೂ ಸ್ಪಷ್ಟವಾಗುತ್ತದೆ.

ಬರುಬರುತ್ತಾ ಗಿರಿಜನರು ತಿಳಿವಳಿಕೆಯಲ್ಲಿ ಆಸಕ್ತಿಹೊಂದಿ, ತಮ್ಮ ಹಕ್ಕು ಬಾಧ್ಯತೆ ತಿಳಿಯಲಾರಂಭಿಸಿದರು ಎಂಬುದಕ್ಕೆ ಒಂದು ಪ್ರಸಂಗವನ್ನು ನಾವು ಕಾಣಬಹುದು.

---

12. ಅದೇ ಪುಟ. 119

"ಸ್ವಾತಂತ್ರ್ಯ ಬಂದ ನಂತರ ಒಬ್ಬ ಗೋಂಡ ಹೆಂಗಸನ್ನು ಪೋಲೀಸ್ ಸ್ಟೇಷನ್ನಿನಲ್ಲಿ ಸಬ್‌ಇನಸ್ಪೆಕ್ಟರ್ ಗದರಿಸಿದಾಗ ,ಆಕೆ 'ಇದು ನಮ್ಮ ಪೋಲೀಸ್ ಸ್ಟೇರ್ಷ, ನಿಮ್ಮದಲ್ಲ' ಎಂದು ಹೇಳಿದಳಂತೆ"[13]

ಮತ್ತೊಮ್ಮೆ "ಒಬ್ಬ ಬ್ರಾಹ್ಮಣ ರೆವೆನ್ಯೂ ಅಧಿಕಾರಿ ಗೋಂಡನೊಬ್ಬನನ್ನು ಕುರಿತು ಮಕ್ಕಳನ್ನು ಓದಿಸುವುದರಿಂದ ಉಪಯೋಗವಿಲ್ಲ ಎಂದು ಹೇಳಿದಾಗ, ಆ ಗೋಂಡ' ನೀವು ಹೇಳಬೇಕಾದ್ದೇ, ಬಿಡಿ : ನಮ್ಮ ಮಕ್ಕಳು ಓದಿದರೆ ನಿಮ್ಮ ಮಕ್ಕಳ ಕೆಲಸಕ್ಕೆ ಕಲ್ಲು ಬೀಳುತ್ತೆ,' ಎಂದು ಜವಾಬು ಕೊಟ್ಟನಂತೆ"[14]

ಗಿರಿಜನರ ಸುಲಿಗೆ ಹೇಗೆ ನಡೆಯುತ್ತಿತ್ತು ಎಂಬದರ ಬಗ್ಗೆ ಒಂದು ಪ್ರಸಂಗ"ಅರ್ಜಿ ಬರೆಯುವವರು ಹೇಗೆ ಈ ಹಳ್ಳಿ ಜನರಿಂದ ದುಡ್ಡು ಕೀಳುತ್ತಾರೆನ್ನುವುದಕ್ಕೆ ಒಂದು ಉದಾಹರಣೆ. ಅರ್ಜಿ ಬರೆಯುವುದಕ್ಕೆ ಸಾಮಾನ್ಯವಾಗಿ ಕೊಡಬೇಕಾದ ದುಡ್ಡಲ್ಲದೆ, ಫೌಂಟನ್ ಪೆನ್ನಿನಲ್ಲಿ ಬರೆದರೆ ನಾಲ್ಕಾಣೆ ಜಾಸ್ತಿ, ಕೆಂಪು ಲಾ ಪುಸ್ತಕ ನೋಡಿ ಬರೆದರೆ ಎಂಟಾಣೆಜಾಸ್ತಿ, ಮತ್ತು ಬರೆಯುವುದರಲ್ಲಿ ಸ್ವಲ್ಪ ಉಪ್ಪು ಕಾರ ಸೇರಿಸಿ ಬರೆದರೆ ಹತ್ತು ಹನ್ನೆರಡು ಆಣೆ ಜಾಸ್ತಿ. ಇಷ್ಟೆಲ್ಲ ಆದ ಮೇಲೆ ಬರೆದ ಅರ್ಜಿ ಸರಿಯಾಗಿ ಅಧಿಕಾರಿಗೆ ಮುಟ್ಟುವಂತೆ ನೋಡಿಕೊಳ್ಳಲು ಒಂದೆರಡು ರೂಪಾಯಿ ಬೇರೆ ಕೊಡಬೇಕು.[15] ಇದು ಸಾಮಾನ್ಯವಾಗಿ ಸಮಾಜ ಸುಧಾರಣೆ ಎಂಬ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆ.

ಈ ರೀತಿ ಹಲವಾರು ಅನುಭವಗಳನ್ನು ಈ ಆತ್ಮಚರಿತ್ರೆಯಲ್ಲಿ ನಾವು ಕಾಣಬಹುದಾಗಿದೆ. ಒಟ್ಟಾರೆ 'ಎಲ್ವಿನ್ನರ ಗಿರಿಜನ ಪ್ರಪಂಚ', ಅವರ ಗಿರಿಜನ ನಡುವಣ ಕ್ಷೇತ್ರ ಕಾರ್ಯದ ಸ್ವಾರಸ್ಯಕರ ಅನುಭವಗಳ ದಾಖಲೆಯಾಗಿದೆ. ಭಾರತದಲ್ಲಿ ಮಾನವ ವಿಜ್ಞಾನ, ಸಮಾಜ ವಿಜ್ಞಾನ, ಜಾನಪದ ಈ ಕ್ಷೇತ್ರಗಳಲ್ಲಿ ಕೆಲಸಮಾಡುವ ಪ್ರತಿಯೊಬ್ಬ ವ್ಯಕ್ತಿಯೂ ಅಭ್ಯಸಿಸಲೇಬೇಕಾದ ಕೃತಿ.

೪

ವೆರಿಯರ್ ಎಲ್ವಿನ್ನರದು ಉಳಿದ ಮಾನವ ವಿಜ್ಞಾನಿಗಳಂತೆ ಬುಡಕಟ್ಟುಗಳ ಅಧ್ಯಯನ ಕೇವಲ ಬೌದ್ಧಿಕ ಕುತೂಹಲವಾಗಿರಲಿಲ್ಲ. ಅವರೊಡನೆ ಬೆರತು ಅವರ ಜೀವನವನ್ನು ಉತ್ತಮಗೊಳಿಸುವ ಒಬ್ಬ ಸಮಾಜ ಸುಧಾರಕನ ಕೆಲಸವಾಗಿತ್ತು. ಆ ಜನಗಳ ಸರಳತೆ, ಪ್ರಕೃಯಲ್ಲಿ ಒಂದಾಗಿ-ಬದುಕುವ ಅವರ ಕ್ರಮ, ಮುಗ್ಧತೆ ಎಲ್ವಿನ್ ಅವರನ್ನು ಆಕರ್ಷಿಸಿತು. ಗಿರಿಜನರ ಉನ್ನತಿಗಾಗಿ ಭಾರತ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡಿತು. ಆ ಸಂದರ್ಭಗಳಲ್ಲಿ ಎಲ್ವಿನ್ ಗೌರವ ಮಾನವ ವಿಜ್ಞಾನಿ

---

13. ಅದೇ ಪುಟ. 85
14. ಅದೇ ಪುಟ. 86
15. ಅದೇ. ಪುಟ 83

ಯಾಗಿ ಕೆಲಸ ಮಾಡಿದರು. ಆದಿವಾಸಿಗಳೆಂದರೆ ತೊಂದರೆ ಕೊಡುವ ಕ್ರೂರ ಜನ ಅಥವಾ ಲೈಂಗಿಕ ವರ್ತನೆಗಳಲ್ಲಿ ತೊಡಗಿದವರು, ನರಬಲಿ ಕೊಡುವವರು, ತಲೆಬುರುಡೆ ಬೇಟೆಯಾಡುವ ಬಣ್ಣ ಬಣ್ಣದ ಜನ, ಅವರು ಕರುಣೆ ಅರ್ಹತೆ ಹೊರತು ಗೌರವಕ್ಕೆ ಪಾತ್ರರಲ್ಲ ಎಂಬ ಅಭಿಪ್ರಾಯವಿತ್ತು. ಎಲ್ವಿನ್ ತಮ್ಮ ಅಧ್ಯಯನ ಮತ್ತು ಕೃತಿಗಳ ಮೂಲಕ ಈ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಿ ಅವರಲ್ಲಿನ ಸೌಂದರ್ಯ ಪ್ರಜ್ಞೆ ಪ್ರೀತಿ, ಜೀವನವನ್ನು ಒದುಕುವ ಉತ್ಕಟತೆ, ಕಲಾತ್ಮಕ ಶಕ್ತಿ ಮೊದಲಾದ ಅನೇಕ ಒಳ್ಳೆಯ ಅಂಶಗಳನ್ನು ತೋರಿಸಿಕೊಟ್ಟರು.

ಎಲ್ವಿನ್ ಅವರ ಪ್ರಕಾರ ಗಿರಿಜನರು ಕಾಲಕ್ರಮೇಣ ನಾಗರೀಕರಾಗಿಯೇ ಆಗುತ್ತಾರೆ. ಆದರೆ ಅವರ ಅಭಿವೃದ್ಧಿಯನ್ನು ಅವರ ಮನೋಧರ್ಮಕ್ಕನುಸರಿಸಿಯೇ ಮಾಡುವುದೊಳ್ಳೆಯದು. ಅವರ ಸಂಸ್ಕೃತಿಯ ಒಳ್ಳೆಯ ಅಂಶಗಳನ್ನು ಉಳಿಸಿಕೊಳ್ಳಬೇಕು. ಅವರ ಭೂಮಿಯನ್ನು ಅವರಿಗೆ ಉಳಿಸಬೇಕು. ಅವರನ್ನು ಪ್ರತ್ಯೇಕವಾಗಿಡುವುದನ್ನು ಬಿಟ್ಟು ಸಮಾನತೆಯಿಂದ ನಡೆಸಿಕೊಳ್ಳಬೇಕು. ಹೀಗೆ ಎಲ್ವಿನ್ ಅವರು ಗಿರಿಜನರ ಸುಧಾರಣೆಗಾಗಿ ಅನೇಕ ಮಾರ್ಗದರ್ಶಕ ಸೂತ್ರಗಳನ್ನು ಹಾಕಿಕೊಟ್ಟಿದ್ದಾರೆ, ಸರ್ಕಾರ ಮತ್ತು ಜನತೆ ಅದನ್ನು ಅನುಸರಿಸಿದ್ದೇ ಆದರೆ, ಗಿರಿಜನರ ಅಭಿವೃದ್ಧಿಕಾರ್ಯ ಚೆನ್ನಾಗಿ ನಡೆಯುತ್ತದೆ.

ಮಾನವ ವಿಜ್ಞಾನದಲ್ಲಿ ಮೇಲೆ ಹೇಳಿದ ಅಂಶಗಳೆಲ್ಲ ಅನ್ವಿಕ ಮಾನವ ವಿಜ್ಞಾನ (Applied Anthropology) ಎಂಬ ವಿಷಯ ವ್ಯಾಪ್ತಿಯಲ್ಲಿ ಬರುತ್ತವೆ. ಇದರ ಪ್ರಕಾರ ಮಾನವ ವಿಜ್ಞಾನದ ಕೆಲಸ ಆದಿವಾಸಿ ಬುಡಕಟ್ಟುಗಳ ಪರಿಸ್ಥಿತಿಯನ್ನು ಕುರಿತು ಅಧ್ಯಯನ ಮಾಡುವಷ್ಟಕ್ಕೆ ಸೀಮಿತವಾಗುವುದಿಲ್ಲ. ಅದನ್ನು ಅನ್ವಯಿಸಿ ಅವರ ಅಭಿವೃದ್ಧಿಗೆ ಅವಳಿತಕ್ಕೆ ಮಾರ್ಗದರ್ಶನ ನೀಡುವುದೂ ಆಗಿದೆ. ಈ ದೃಷ್ಟಿಯಿಂದ, ಎಲ್ವಿನ್ ಅವರನ್ನು ಅನ್ವಯಿಕ ಮಾನವ ವಿಜ್ಞಾನಿ ಎಂದು ಹೇಳಬಹುದು.

ಗಿರಿಜನರ ಬಗ್ಗೆ ಇವರಿಗಿರುವ ಆಳವಾದ ಆಸಕ್ತಿ ಮತ್ತು ವಿದ್ವತ್ತನ್ನು ಗಮನಿಸಿದ ಭಾರತ ಸರ್ಕಾರ ಇವರಿಗೆ ಆ ಕ್ಷೇತ್ರದ ಉನ್ನತ ಹುದ್ದೆಗಳನ್ನು ನೀಡಲು ಬಯಸಿತು ಆದರೆ ಆಫೀಸುಗಳಲ್ಲಿ ಕುಳಿತು ಪುಸ್ತಕದ ಕೀಟಗಳಾಗಿ, ಅಧಿಕಾರಶಾಹಿಯಾಗಿ ಕೆಂಪುಪಟ್ಟಿಯಿಂದ ಆವೃತರಾಗಿ ನಿಜಜೀವನದಿಂದ ದೂರವಾಗುವ ಹಂಬಲ ಎಲ್ವಿನ್ ಅವರಿಗೆ ಇರಲಿಲ್ಲ. ಹೀಗಾಗಿ ಅವರು ಆ ರೀತಿಯ ಸ್ಥಾನಗಳನ್ನು ಒಪ್ಪಿಕೊಳ್ಳಲಿಲ್ಲ. ಗೌರವ ಮಾನವ ವಿಜ್ಞಾನಿಯಾಗಿ ಮಾತ್ರ ಕೆಲಸ ಮಾಡಿದರು. ಇದು ಅವರ ಸ್ವತಂತ್ರ ಪ್ರವೃತ್ತಿಯನ್ನು ಸೂಚಿಸುತ್ತದೆ. ಮಾನವ ವಿಜ್ಞಾನದಲ್ಲಿ ತಾಂತ್ರಿಕ ಪರಿಭಾಷೆಯ ಬಗ್ಗೆ ಇದ್ದ ವ್ಯಾಮೋಹ ಅವರಿಗೆ ಅಷ್ಟಾಗಿ ಪ್ರಿಯವಾಗಿರಲಿಲ್ಲ. ಹೇಳುವುದನ್ನು ಸರಳವಾಗಿ ಹೇಳಬೇಕು. ಎಲ್ಲರಿಗೂ ಅರ್ಥವಾಗುವಂತಿರಬೇಕು ಎಂಬುದು ಅವರ ನಿಲುವು. ಈ ಸಂಬಂಧವಾದ ಅವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು.

"ಸಾಮೂಹಿಕ ಅಭಿವೃದ್ಧಿ ಇಲಾಖೆಯಲ್ಲಿ ಕೆಲಸ ಮಾಡುವ ಜನರಿಗೆ ಆಸಕ್ತಿ ಬುದ್ಧಿ ಎರಡೂ ಇವೆ. ಆದರೆ ಒಂದೇ ಒಂದು ತಾಪತ್ರಯವೆಂದರೆ ಅವರು ಏನು ಹೇಳುತ್ತಾರೆ ಎನ್ನುವುದೇ ಅರ್ಥವಾಗುವುದಿಲ್ಲ. ಇದಕ್ಕಿಂತ ಹೆಚ್ಚು ತಾಪತ್ರಯವಾದುದೆಂದರೆ ನಾನು ಹೇಳುವುದು ಅವರಿಗೆ ಅರ್ಥವಾಗದಿರುವುದು. ಉದಾಹರಣೆಗೆ 'ಹೇಗೆ ಮಾಡುವಿರಿ ಅದನ್ನು ?' ಎಂದು ನಾನು ಕೇಳಬಹುದಾದ್ದನ್ನು ಅವರು 'What is your methodological approach ?' ಎಂದು ಕೇಳುತ್ತಾರೆ.

ಒಮ್ಮೆ ಒಂದು ಫೈಲಿನ ಮೇಲೆ ನಾನು ಬರೆದೆ : When tribal girls go to the towns, they sometimes becomes tarts- ಗಿರಿಜನ ಹುಡುಗಿಯರು ಪಟ್ಟಣಗಳಿಗೆ ಹೋದಾಗ ಅವರು ಕೆಲವು ವೇಳೆ ಕೆಟ್ಟ ಚಾಳಿ ಕಲಿಯುತ್ತಾರೆ' ಎಂದು 'ಟಾರ್ಟ್' ಎಂಬ ಪದ ತಾಪತ್ರಯಕ್ಕಿಟ್ಟುಕೊಂಡಿತು. ಸರ್ಕಾರಿ ಕಾಗದ ಪತ್ರಗಳಲ್ಲಿ ಆ ಪದ ಉಪಯೋಗಿಸಿದ್ದಕ್ಕಾಗಿ ನನ್ನನ್ನು ದೊಡ್ಡವರೊಬ್ಬರು ತರಾಟೆಗೆ ತೆಗೆದುಕೊಂಡರು, ನಾನು ಬರೆದ ವಾಕ್ಯವನ್ನು ತಿದ್ದಿ ಹೀಗೆ ಬರೆಯಬೇಕೆಂದರು : 'When females belonging to the schedule Tribes become occultured to the socio-economic conditions of urban society, they become psychologically maladjusted and adopt anti-social practices.'

ಇದೇ ಆಗಬೇಕಾಗಿರುವುದು ! ಇದನ್ನೇ ಅರ್ಥಮಾಡಿಕೊಳ್ಳುವುದು !! [16]

ಮತ್ತೊಂದು ಘಟನೆಯನ್ನು ಎಲ್ವಿನ್ ಉಲ್ಲೇಖಿಸಿದ್ದಾರೆ- "ನನ್ನನ್ನು ಬಸ್ತಾರಿನ Hon. ethnographer-ಗೌರವ ಮಾನವ ಕುಲಶಾಸ್ತ್ರಜ್ಞ ಆಗಿ ನೇಮಿಸಿದರು. ಆದರೆ ಸ್ಥಳದ ಪತ್ರಿಕೆಯೊಂದರಲ್ಲಿ ನಾನು Hon. stenographe ಗೌರವ ಶೀಘ್ರಲಿಪಿಗಾರ ಆಗಿ ನೇಮಕವಾಗಿರುವೆನೆಂದು ಪ್ರಕಟವಾಯಿತು."[17] ಇಂತಹ ಪ್ರಸಂಗಗಳನ್ನು ಉಲ್ಲೇಖಿಸುವಾಗ ಎಲ್ವಿನ್ ಭಾರತದ ಸಮಕಾಲೀನ ಆಡಳಿತ, ಪತ್ರಿಕೋದ್ಯಮ, ಮಾನವ ವಿಜ್ಞಾನ ಇಲಾಖೆಗಳು ಇವುಗಳಲ್ಲಿನ ಲೋಪ ದೋಷಗಳನ್ನು ಹಾಸ್ಯ, ವಿಡಂಬನೆಗಳ ಮೂಲಕ ಸೂಚಿಸಲು ಪ್ರಯತ್ನಿಸಿದ್ದಾರೆ.

೫

ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ ಜನಸಾಮಾನ್ಯರೂ ಓದಿ ಆನಂದಿಸಬಹುದಾದ ಕೃತಿಯಾಗಿದೆ. ಇದರಲ್ಲಿ ಕಾವ್ಯ ಸೌಂದರ್ಯ, ಸಾಹಿತ್ಯಕ ಮೌಲ್ಯಗಳನ್ನು ಗಮನಿಸಿ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನವನ್ನು ಈ ಕೃತಿಗೆ ನೀಡಿರುವುದು ಸೂಕ್ತವಾಗಿದೆ. ಈ ಕೃತಿಯನ್ನು ಓದುತ್ತಿದ್ದರೆ ಒಂದು ಕಾವ್ಯವನ್ನು ಓದಿದ

---

16 ಅದೇ. ಪುಟ 138.

17 ಅದೇ. ಪುಟ 108

ಅನುಭವವಾಗುತ್ತದೆ. ಎಲ್ವಿನ್ನರಿಗೆ ಸತ್ಯ ಎಷ್ಟು ಮುಖ್ಯವೋ ಸೌಂದರ್ಯವೂ ಅಷ್ಟೇ ಮುಖ್ಯ. ಗಿರಿಜನರ ನೃತ್ಯಗಳಲ್ಲಿ, ಸಾಹಿತ್ಯದಲ್ಲಿ, ಜೀವನದಲ್ಲಿ, ಇವರು ಸೌಂದರ್ಯವನ್ನು ಗುರುತಿಸಿದ್ದಾರೆ. ಅತ್ಯಂತ ಆತ್ಮೀಯರಾದ ಗಾಂಧಿಯವರೊಡನೆ ಇವರಿಗೆ ಭಿನ್ನಾಭಿಪ್ರಾಯವಿದ್ದದ್ದು ಸೌಂದರ್ಯ ಪರವಾದ ಇವರ ದೃಷ್ಟಿಕೋನದಿಂದ. ಇವರ ಬರವಣಿಗೆಯಲ್ಲಿ ಆತ್ಮೀಯತೆ, ಹಾಸ್ಯ, ವಿಡಂಬನೆ, ಸಹಾನುಭೂತಿ, ಅನುಕಂಪೆ, ಆತ್ಮ ವಿಶ್ಲೇಷಣೆ, ಪ್ರಾಮಾಣಿಕತೆ ಈ ಎಲ್ಲ ಗುಣಗಳನ್ನು ಕಾಣಬಹುದು. ಈ ಕೃತಿಯನ್ನು ಬರೆಯುವಲ್ಲಿ ಇವರಲ್ಲಿನ ಸಾಹಿತಿ ಜಾಗೃತನಾಗಿದ್ದಾನೆ. ಮೂಲತಃ ರೊಮ್ಯಾಂಟಿಕ್ ಪ್ರವೃತ್ತಿಯ ಈ ಮಾತುಗಳನ್ನು ಗಮನಿಸಿ-"ನಾನು ಗಿರಿಜನರ ಗುಡ್ಡಗಳಲ್ಲಿ ನೆಲೆಸಲು ಹೋದಾಗ ನನ್ನ ವರ್ಡ್ಸ್‌ವರ್ತ್, ಇಲಿಯಟ್, ಬ್ಲೇಕ್ ಮತ್ತು ಷೇಕ್ಸ್‌ಪಿಯರ್-ಇವರುಗಳು ನನ್ನ ಮಣ್ಣಿನ ಗುಡಿಸಲುಗಳಿಗೆ ಹಣತೆಗಳಾದರು. ಹೀಗಿರುವಲ್ಲಿ ನಾನು ಕಾವ್ಯವನ್ನು ಆಶ್ರಯಿಸಿದ್ದು ತಪ್ಪಾಗುವುದೇ ? ಇದಲ್ಲದೆ, ಆ ಸರಳ ಹಾಗೂ ಭಾವನಾಶೀಲ ಗಿರಿಜನರಲ್ಲಿ ಮಾತು ಮಾತಿಗೆ ಕಾವ್ಯ ಹೊರಹೊಮ್ಮುತ್ತದೆ. ಎಲ್ಲೆಲ್ಲಿಯೂ ಅವರ ಕಣ್ಣಿನಲ್ಲಿ, ತುಟಿಯ ಮೇಲೆ, ಅವರ ಕೆಲಸದಲ್ಲಿ ಕೂಡ ಕಾವ್ಯವನ್ನು ಕಾಣಬಹುದು. ಹೀಗಾಗಿ ಕಾವ್ಯ ನನ್ನ ಒಂದು ಅಂಗವಾಯಿತು ; ಅದು ನನ್ನ ಸ್ವಂತ ಆಸ್ತಿಯಾಯಿತು. ಕಾವ್ಯದ ಹೆಸರಿನಲ್ಲಿ ನಾನೇನಾದರೂ ಮಾಡಿದ್ದರೆ ಅದಕ್ಕೆ ಕಾರಣ ನಾನು ನನ್ನ ಗಿರಿಜನ ಕವಿ ಸ್ನೇಹಿತರೊಡನೆ ನಡೆಸಿದ ಕೆಲಸ.

ಜನರ ಮಾತೂ ಕಾವ್ಯಮಯವಾಗಿದ್ದುದನ್ನು ಕಂಡೆ. ಬೆಂಕಿ ಒಣಗಿದ ಮರ ಹೂ ಬಿಟ್ಟಂತೆ ಎಂದು ಮುದುಕಿಯೊಬ್ಬಳು ಹೇಳುತ್ತಾಳೆ. ಕೊಡೆ ಒಂಟಿ ಕಾಲಿನ ನವಿಲಂತೆ................ಲ್ಯಾಂಪು ಮನೆಯಲ್ಲೆಲ್ಲ ಗರಿಗಳನ್ನು ಉದುರಿಸುವ ಪುಟ್ಟ ಗುಬ್ಬಚ್ಚಿ. ಗರ್ಭಿಣಿಯಾದ ಹೆಂಡತಿಯನ್ನು ಕುರಿತು ಗಂಡ ನನಗೆ ಹೇಳುತ್ತಾನೆ 'ಆಕೆಯನ್ನು ಹೂವಿನಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹೂವಿನೊಳಗಿನ ಬೆಳಕು ನಂದಿ ಹೋಗುತ್ತದೆ' ಎಂದು................ಹೊಲದ ಕಾಳು ಕಡ್ಡಿ, ಕಾಡಿನಬೇರು ನಾರು-ಇವೆಲ್ಲ ಸುಂದರ ಕಾಡಿನಲ್ಲಿ ನೇಯಲ್ಪಡುತ್ತವೆ. ತನ್ನ ಪ್ರೇಯಸಿ ಮಲಗಿರುವ ಬಡಗುಡಿಸಿಲಿನ ಮಂಚ ಪ್ರೇಮಿಗೆ ಸುವರ್ಣಖಚಿತ ಸುಪ್ಪತ್ತಿಗೆ."[18]

ಎಲ್ವಿನ್ನರ ಹಾಸ್ಯ ಪ್ರವೃತ್ತಿಗೆ ಮತ್ತು ಪ್ರಾಮಾಣಿಕ ಅಭಿವ್ಯಕ್ತಿಗೆ ಈ ಉದಾಹರಣೆಗಳನ್ನು ಗಮನಿಸಬಹುದು- "ಪದ್ಮಭೂಷಣ ಪ್ರಶಸ್ತಿ ದೊರೆತ ಮೇಲೆ ನನಗೆ ಹೋದ ಕಡೆಯಲ್ಲೆಲ್ಲಾ ಅಭಿನಂದನೆಗಳ ಸುರಿಮಳೆ ಆರಂಭವಾಯಿತು. ಇದರಿಂದಾಗಿ ಎಲ್ಲಿಗೆ ಹೋದರೂ ಅಭಿನಂದನೆಗಳು ದೊರೆಯುತ್ತವೆ ಎಂಬ ನಿರೀಕ್ಷಣೆ ಮಾಡಿದೆ ಅಂತ ಕಾಣುತ್ತೆ. ಒಂದು ದಿನ ಸಿನಿಮಾಕ್ಕೆ ಹೋದೆ. ಟಿಕೇಟು ಮಾರುತ್ತಿದ್ದವ ನನ್ನ

18 ಅದೇ ಪುಟ, 104–105.

ಸ್ನೇಹಿತ. ಟಿಕೆಟ್ ಕೊಟ್ಟ ಮೇಲೆ ಆತ ತನ್ನ ಕೈಯನ್ನು ಹೊರಕ್ಕೆ ಚಾಚಿದ. ಅವನ್ನು ನಾನು ಭದ್ರವಾಗಿ ಹಿಡಿದುಕೊಂಡು 'Thank you so very much–ನಿಮಗೆ ತುಂಬಾ ವಂದನೆ' ಎಂದೆ. ಆದರೆ ಅವನು ಕೈಚಾಚಿದ್ದು ಟಿಕೇಟಿಗೆ ಹನ್ನೆರಡು ಪೈಸೆ ಸಾಲದು, ಕೊಡು ಅಂತ.[19] ಮತ್ತೊಂದು ಪ್ರಸಂಗ–"ಒಮ್ಮೆ ನಾನೂ ಲೀಲಾನೂ ಪಸಿಘಾಟಿಗೆ ವಿಮಾನದಲ್ಲಿ ಹಾರಿ ಹೋದೆವೆ. ವಿಮಾನ ಇಳಿಯುತ್ತಿದ್ದಾಗ ದೊಡ್ಡ ಜನ ಸಮೂಹ ಸೇರಿತ್ತು. ಅವರೆಲ್ಲ ನಮಗಾಗಿ ಕಾಯುತ್ತಾ ಇದ್ದಾರೆ ಎಂದು ತಿಳಿದು ನಮಗೆ ಆನಂದ ವಾಯಿತು. ಕೆಳಕ್ಕೆ ಇಳಿದೆವು. ಇಳಿದು ಸ್ಥಳದ ಅಧಿಕಾರಿಗಳೂ ಉತ್ಸಾಹಭರಿತ ಜನಗಳೂ ಇದ್ದ ಕಡೆಗೆ ನಡೆದೆವು. ನಮ್ಮನ್ನು ನೋಡಿದ ಕೂಡಲೇ ಅವರ ಉತ್ಸಾಹ ವೆಲ್ಲಾ ತಣ್ಣಗಾಯಿತು. 'ಯಾರ್ಕ್‌ಷೈರ್ ಹಂದಿಗಳ ಒಂದು ಲೋಡು ಬರುತ್ತೆ ಎಂದು ಭಾವಿಸಿದ್ದೆವು' ಎಂದು ಆ ಜನ ಹೇಳಿ ಬಿಟ್ಟರು."[20]

ಹೀಗೆ ಈ ಗ್ರಂಥದ ಶೈಲಿ ಲೀಲಾಜಾಲವಾಗಿ ಸಾಗುವಂತದು. ಸರಳವಾದ ಸುಂದರವಾದ ಮಾತುಗಳ ಮೂಲಕ, ಸ್ವಾರಸ್ಯಕರ ಅನುಭವಗಳ ಮೂಲಕ ಎಲ್ವಿನ್ ಅವರು ಓದುಗರಿಗೆ ತಮ್ಮ ಜೀವನದ ಉದ್ದೇಶ, ಸಾಧನೆ, ಸಿದ್ಧಿ ಇವುಗಳ ಪರಿಚಯ ಮಾಡಿಕೊಟ್ಟಿದ್ದಾರೆ.

೬

ಎಲ್ವಿನ್ ಬಹು ದೊಡ್ಡ ಮಾನವತಾ ವಾದಿ. ಮಾನವ ವಿಜ್ಞಾನವನ್ನು ಅವರು ಮಾನವ ಪ್ರೇಮಶಾಸ್ತ್ರ ಎಂದು ಭಾವಿಸುತ್ತಾರೆ. "ಮನುಷ್ಯ ಹುಟ್ಟುವುದು ಬದುಕುವುದು, ಸಹಕಾರಕ್ಕಾಗಿ ಮತ್ತು ಸಹಬಾಳುವೆಗಾಗಿಯೇ ಹೊರತು, ಪೈಪೋಟಿ ನಡೆಸುವುದು ಅಥವಾ ವಿರೋಧ ಕಟ್ಟಿಕೊಳ್ಳುವುದಕ್ಕಲ್ಲ. ಹಾಗಿದ್ದರೆ ಮಾತ್ರ ಮನುಷ್ಯ ನಿಜವಾಗಿಯೂ ಮಾನವೀಯತೆಯ ಮಾನವನಾಗುತ್ತಾನೆ"[21] "ಮಾನವ ಪ್ರೇಮದ ಆನಂದ ಪರವಶತೆ, ಸೌಂದರ್ಯಾನುಭವ, ಒಳ್ಳೆಯದನ್ನು ಅಂಗೀಕರಿಸುವಿಕೆ—ಇವುಗಳಲ್ಲಿ ನಮ್ಮ ಸಾಮಾನ್ಯ ಜೀವನದಲ್ಲಿ ಕಾಣುವುದಕ್ಕಿಂತ ಹೆಚ್ಚು ಪ್ರೇಮ ಹಾಗೂ ಹೆಚ್ಚಿನ ವಾಸ್ತವಿಕತೆ ಇದೆ ಎಂಬುದರ ಅಲ್ಪಸ್ವಲ್ಪ ಸುಳಿವು ಹೂವುಗಳನ್ನು ಕಾಣುತ್ತೇವೆ. ಅತೀಂದ್ರಿಯ ಅನುಭವ (mystical experience) ನಮ್ಮಿಂದ ಆಚೆ ಬೇರೊಂದಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ ಎಂದು ನನಗನ್ನಿಸುತ್ತದೆ"[22]— ಈ ಮಾತುಗಳನ್ನು ನೋಡಿದಾಗ ಎಲ್ವಿನ್ನರು ದೊಡ್ಡ ಮಾನವವಾದಿ ಎಂದು ಅರ್ಥವಾಗುತ್ತದೆ.

---

19 ಅದೇ ಪುಟ. 144.

20 ಅದೇ ಪುಟ. 147

21 ಅದೇ ಪುಟ 184

22 ಅದೇ ಪುಟ 182.

"ಈಗ ದೇಶದಲ್ಲಿ ಸ್ವಾಭಿಮಾನದ ಹಾಗೂ ಸ್ವಧರ್ಮಾಭಿಮಾನದ ಮಹಾಸ್ಫೋಟವೇ ಇದೆ. ಇದು ಜೀವನದ ಎಷ್ಟೋ ಸೌಂದರ್ಯೋಪಾಸ್ಯ ಸಂಬಂಧವಾದ ಮೌಲ್ಯಗಳಿಗೆ ಕುಠಾರಪ್ರಾಯವಾಗಿದೆ"[23]—ಎಂಬ ಭಾರತದ ಬಗ್ಗೆ ವಿಚಾರ ಮಾಡುತ್ತಾ ಹೇಳುವ ಈ ಮಾತುಗಳಲ್ಲಿ ಕಟುಸತ್ಯವನ್ನು ಕಾಣಬಹುದಾಗಿದೆ. ಈ ದೇಶದ ಬಗ್ಗೆ ಇಷ್ಟೊಂದು ಕಳಕಳಿಯುಳ್ಳ ಈ ವ್ಯಕ್ತಿಯನ್ನು ಕುರಿತು ಡೆಲ್ಲಿಯ ಪತ್ರಿಕೆಯೊಂದು "ಬ್ರಿಟಿಷ್ ಜನ್ಮ ಪಡೆದ ಇಂಡಿಯಾದವನು" ಎಂದು ಬರೆದದ್ದು ತುಂಬಾ ಸಮರ್ಪಕವಾದ ಮಾತುಗಳು.

ಕೊನೆಯದಾಗಿ, ವೆರಿಯರ್ ಎಲ್ವಿನ್ನರ ಸ್ಪಷ್ಟವಾದ ಜೀವನದೃಷ್ಟಿ ಈ ಮಾತುಗಳಲ್ಲಿ ಕಾಣುತ್ತದೆ—"ನನ್ನ ಇಡೀ ಬಾಳಿನಲ್ಲೆಲ್ಲಾ ನಾನು ಒಂದಲ್ಲ ಒಂದನ್ನ ಪ್ರೇಮಿಸುತ್ತಾ ಬಂದಿದ್ದೇನೆ. ಅದು ಒಂದು ಧ್ಯೇಯವಾಗಿರಬಹುದು, ಒಂದು ಗಿರಿಜನ ಪಂಗಡವಿರಬಹುದು ಅಥವಾ ಒಬ್ಬ ಮನುಷ್ಯನಿರಬಹುದು. ನಾನು ಅಭ್ಯಾಸಮಾಡಿದ ಪ್ರತಿಯೊಂದು ಗಿರಿಜನ ಪಂಗಡವನ್ನೂ ನಾನು ಪ್ರೇಮಿಸುತ್ತೇನೆ. ಒಟ್ಟಿನಲ್ಲಿ ಈ ಪ್ರಪಂಚವು ಬಹಳ ಪ್ರೀತಿಯೋಗ್ಯ ಸ್ಥಳ. ಮತ್ತು ಇಲ್ಲಿರುವ ಜನರೂ, ಒಂದು ಸಲ ತಿಳಿದುಕೊಂಡರೆ ಸಾಕು, ಪ್ರೀತಿಯೋಗ್ಯರು."[24]

೭

ಹೀಗೆ ಮಾನವ ವಿಜ್ಞಾನ, ಸಮಾಜ ವಿಜ್ಞಾನ, ಜಾನಪದ ಮತ್ತು ಸಾಹಿತ್ಯ ಈ ಎಲ್ಲ ಕ್ಷೇತ್ರಗಳಲ್ಲಿಯೂ ತುಂಬ ಮಹತ್ವಪೂರ್ಣ ಕೃತಿಯೆನಿಸುವ 'ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ' ವನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಶ್ರೀ ಎಚ್.ಎಲ್. ನಾಗೇಗೌಡರು ಕನ್ನಡದಲ್ಲಿದ್ದ ಒಂದು ಕೊರತೆಯನ್ನು ತುಂಬಿದ್ದಾರೆ. "'ಗಿರಿಜನ ಪ್ರಪಂಚ'ದ ಸಂಗ್ರಹಾನುವಾದವನ್ನು ಆಮೂಲಾಗ್ರವಾಗಿ ಓದಿದಾಗ ವಿಷಯ ಮತ್ತು ಭಾಷೆಗಳ ಓಟ ನನ್ನನ್ನು ಮುಗ್ಧನನ್ನಾಗಿ ಮಾಡಿತು. ಮೂಲ ಲೇಖಕರೇ ಕನ್ನಡದಲ್ಲಿ ಬರೆದಷ್ಟು ಓಜಸ್ಸು ಇದರಲ್ಲಿ ಕಂಡುಬರುತ್ತಿದೆ ....ಅತ್ಯಂತ ಅಮೂಲ್ಯವಾದ ಈ ಆತ್ಮಕಥನವನ್ನು ಕನ್ನಡಕ್ಕೆ ಒದಗಿಸಿದ ಶ್ರೇಯಸ್ಸು ಶ್ರೀ ನಾಗೇಗೌಡರಿಗೆ ಸಲ್ಲುತ್ತದೆ. ಅದು ಅವರ ಅಪೇಕ್ಷೆಯಿಲ್ಲದೆ ಹೋದರೂ, ಈ ಗ್ರಂಥ ಕನ್ನಡ ಜನಗಳ ಜೀವನಕ್ಕೆ ಒಂದು ನವೀನ ದೃಷ್ಟಿಯನ್ನು ಒದಗಿಸಬಲ್ಲಷ್ಟು ಶಕ್ತಿಯುತವಾಗಿರುವುದರಿಂದ. ಅದರ ಶ್ರೇಯಸ್ಸಿನ ಪಾಲು ಅನುವಾದಕರಿಗೂ ತಪ್ಪಿದ್ದಲ್ಲ" ಎಂಬ ಶಿವರಾಮ ಕಾರಂತರ ಮಾತುಗಳಾಗಲೀ, "ಎಲ್ವಿನರ ಬರವಣಿಗೆಯ ಸೊಬಗನ್ನು ಅನುಭವಿಸಿ ಅನುವಾದಿಸುವ ಸಾಮರ್ಥ್ಯ ಬಹುಶಃ ಶ್ರೀ. ಎಚ್.ಎಲ್. ನಾಗೇಗೌಡರಿಗೇ ಮೀಸಲಾದುದೋ ಎಂಬಷ್ಟು ಸೊಗಸಾಗಿ ಕನ್ನಡಕ್ಕೆ ಈ ಪುಸ್ತಕವನ್ನು ಅನುವಾದಿಸಿದ್ದಾರೆ. ಭಾಷಾಂತರಿಸಿದ್ದಾರೆ

---

23 ಅದೇ ಪುಟ 174.

24 ಅದೇ ಪುಟ 166

ಎನ್ನುವುದಕ್ಕಿಂತ ತಮ್ಮದೇ ಸಹಜ ಕೃತಿಯೋ ಎಂಬಷ್ಟು ಮೋಹಕವಾದ ಆತ್ಮೀಯ ಶೈಲಿಯಲ್ಲಿ ಶ್ರೀ ಎಚ್. ಎಲ್. ಎನ್ ಅವರು ಇದನ್ನು ಕನ್ನಡಿಸಿದ್ದಾರೆ" ಎಂದು ಪ್ರಕಾಶಕ ಕರಾಕೃ ಅವರ ಮಾತುಗಳಾಗಲೀ ಈ ಕೃತಿಯ ಅನುವಾದದ ಶ್ರೇಷ್ಠತೆ ಹಾಗೂ ಮಹತ್ವ ಎಷ್ಟು ಮೇಲ್ಮಟ್ಟದ್ದು ಎಂಬುದನ್ನು ಸೂಚಿಸುತ್ತದೆ. ಕನ್ನಡದಲ್ಲಿ ಜಾನಪದ, ಮಾನವ ವಿಜ್ಞಾನ ಮತ್ತು ಸಮಾಜ ವಿಜ್ಞಾನದ ಕ್ಷೇತ್ರಗಳಲ್ಲಿ ಈಚಿನ ವರ್ಷಗಳಲ್ಲಿ ಉತ್ಸಾಹದಿಂದ ಕೆಲಸ ಸಾಗುತ್ತಿದೆ. ಒಂದು ದಶಕದ ಹಿಂದೆಯೇ ಅನುವಾದಗೊಂಡ ಈ ಕೃತಿ ಅನೇಕರಿಗೆ ಪ್ರೇರಣೆ ಸ್ಫೂರ್ತಿಯನ್ನು ನೀಡಿದ್ದರೆ ಆಶ್ಚರ್ಯವೇನಿಲ್ಲ.

ಶ್ರೀ ನಾಗೇಗೌಡರು ಕನ್ನಡನಾಡಿನ ಪ್ರಸಿದ್ಧ ಲೇಖಕರಲ್ಲಿ ಒಬ್ಬರು. ವೆರಿಯರ್ ಎಲ್ವಿನ್ನರ ಆತ್ಮಕತೆಯನ್ನು ಕನ್ನಡಕ್ಕೆ ತರುವುದರ ಮೂಲಕ ಅವರು ತಮ್ಮ ಬಹುಮುಖ ಸಾಹಿತ್ಯಕ ವ್ಯಕ್ತಿತ್ವಕ್ಕೆ ಹೊಸ ಮೆರುಗನ್ನು ಕೊಟ್ಟಿದ್ದಾರೆ. ಸ್ವತಃ ಶ್ರೇಷ್ಠ ಜಾನಪದ ಸಂಗ್ರಾಹಕರಾದ ಅವರು ಈ ಕೃತಿಯನ್ನು ಅನುವಾದ ಮಾಡಿರುವುದು ಎಲ್ವಿನ್ ಅವರ ಬಗ್ಗೆ ಇವರಿಗಿರುವ ಅಪಾರ ಗೌರವ, ಮಾನವ ವಿಜ್ಞಾನದ ಬಗೆಗಿರುವ ಇವರ ಆಸಕ್ತಿ, ಸುಲಲಿತವಾದ ಹಾಗೂ ಆಕರ್ಷಕವಾದ ಗದ್ಯಶೈಲಿ—ಇವುಗಳಿಗೆ ನಿದರ್ಶನವಾಗಿದೆ. ಈ ಗ್ರಂಥಕ್ಕೆ ಶ್ರೀ ಎಚ್. ಎಲ್. ನಾಗೇಗೌಡರು ವಿದ್ವತ್ ಪೂರ್ಣವಾದ ಪೀಠಿಕೆಯನ್ನು ಬರೆದು, ಭಾರತದಲ್ಲಿ ಧರ್ಮಪ್ರಸಾರಕ್ಕೆ ಬಂದ ಕ್ರೈಸ್ತಮಿಷನರಿಗಳ ಬಗ್ಗೆ ಅಪೂರ್ವವಾದ ಮಾಹಿತಿಯನ್ನು ಕೊಟ್ಟು, ಎಲ್ವಿನ್ನರ ಸಾಧನೆಗಳನ್ನು ವಿವರಿಸಿದ್ದಾರೆ. ಈ ಪೀಠಿಕೆ ತುಂಬಾ ಉಪಯುಕ್ತವಾಗಿದ್ದು, ಈ ಗ್ರಂಥದ ಮಹತ್ವವನ್ನು ಹೆಚ್ಚಿಸುವಂತಹದಾಗಿದೆ. ಡಾ ಶಿವರಾಮಕಾರಂತರು ಇದಕ್ಕೆ ಒಳ್ಳೆಯ ಮುನ್ನುಡಿಯನ್ನು ಬರೆದು ಗ್ರಂಥದ ಹಾಗೂ ನಾಗೇಗೌಡರ ಮಹತ್ವವನ್ನೂ ಸ್ಪಷ್ಟಗೊಳಿಸಿಧ್ದಾರೆ. ಇವೆಲ್ಲವನ್ನೂ ಒಳಗೊಂಡು ಮೈತುಂಬಿಕೊಂಡ 'ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ' ಕನ್ನಡ ಅನುವಾದ ಸಾಹಿತ್ಯಕ್ಕೆ ಎಚ್.ಎಲ್. ನಾಗೇಗೌಡರ ಬಹು ಮುಖ್ಯ ಕೊಡುಗೆಯಾಗಿದ್ದು, ಈ ಕ್ಷೇತ್ರವನ್ನು ಶ್ರೀಮಂತಗೊಳಿಸಿದೆ.

೪ ಸರೋಜಿನೀದೇವಿ

ಟಿ. ವಿ. ಪದ್ಮಾವತಿ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ, ಯಾವುದೇ ಪ್ರಸಿದ್ಧ ವ್ಯಕ್ತಿಯ ಬದುಕು–ಬರಹದ ಸಂಪೂರ್ಣ ವಿವರವನ್ನು ನೀಡುವಂಥ ಕೃತಿಗಳ ಕೊರತೆ ಸಾಕಷ್ಟಿದೆ. ವಿರಳವಾಗಿ ಇಂಥ ಬರಹಗಳನ್ನು ಅಲ್ಲಲ್ಲಿ ನೋಡುತ್ತೇವೆಯಾದರೂ, ಅವುಗಳು ಆ ವ್ಯಕ್ತಿ ಚಿತ್ರಣವನ್ನು ಜೀವನಚರಿತ್ರೆಯನ್ನು ಪೂರ್ಣವಾಗಿ ಕೊಟ್ಟಿವೆಯೇ ? ಇಲ್ಲವೇ ? ಎಂಬ ದೂರುಗಳು ಇದ್ದೇ ಇವೆ. ಆದರೆ ಎಚ್. ಎಲ್. ನಾಗೇಗೌಡರ "ಸರೋಜಿನೀದೇವಿ" ಮೇಲಿನ ಆರೋಪಕ್ಕೆ ಹೊರತಾದ ಅಪರೂಪದ ಕೃತಿಯೆಂದೇ ಹೇಳಬೇಕು.

'ಸರೋಜಿನಿನಾಯ್ಡು' ಅವರ ಚಾರಿತ್ರ್ಯ, ಬದುಕು ಬರಹವನ್ನು ಕಾಣದ ಕೇಳದ ಕನ್ನಡಿಗನಿಲ್ಲ. ನಿಜ. ಆದರೆ ಅವರು ಕಂಡದ್ದು, ಕೇಳಿದ್ದೆಲ್ಲಾ ಬಾಳಿನ ಒಂದೋ ಎರಡೋ ಘಟನೆಗಳನ್ನು ಮಾತ್ರ. ಇವನ್ನು ಇಡೀಯಾಗಿ ಆಸ್ವಾದಿಸುವ, ಅನುಭವಕ್ಕೊಳಗು ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಿದ ಕೃತಿ 'ಸರೋಜಿನಿದೇವಿ'. ತನ್ನ ಕೃತಿರಚನೆಯ ಕಾರ್ಯಕ್ಷೇತ್ರವನ್ನು ಕುರಿತಂತೆ ಕೃತಿಕಾರರ ಹೇಳಿಕೆಯಿದು "ಇಡೀ ಭಾರತದ ಯಾವ ಭಾಷೆಯಲ್ಲಿಯೂ ಸರೋಜಿನಿಯ ಬಗ್ಗೆ ಇಷ್ಟು ವಿವರವಾದ, ಇಷ್ಟು ವ್ಯಾಪ್ತಿಯುಳ್ಳ ಗ್ರಂಥ ಇಲ್ಲವೇ ಇಲ್ಲ" (ನೋಡಿ-ಮುನ್ನುಡಿಭಾಗ) ಈ ಹೇಳಿಕೆ ಕೃತಿಯ ಉದ್ದೇಶ ವ್ಯಾಪ್ತಿಯನ್ನು ಶ್ರುತಪಡಿಸಬಲ್ಲದು. ಬಿಡಿ ಲೇಖನಗಳ ರೂಪದಲ್ಲಿ ಸರೋಜಿನಿಯವರ ವೈಚಾರಿಕ ನಿಲುವನ್ನು ನಾವು ದರ್ಶಿಸಬಲ್ಲೆವಾದರೂ 'ಇಡಿಗಂಟಾಗಿ' ಕಾಣುತ್ತಿರುವ ಮೊದಲ ಕೃತಿಯಿದು.

ಸರೋಜಿನೀದೇವಿಯೇ ಕೃತಿಯ ಕೇಂದ್ರವ್ಯಕ್ತಿ. ಆದರೂ ಗಾಂಧೀಜಿ, ಕಸ್ತೂರಿಬಾ. ನೆಹರೂ ಮೊದಲಾದವರ ಪಾತ್ರದ ಒಂದೊಂದು ಮುಖವನ್ನು ಇಲ್ಲಿ ಕಾಣಬಹುದು. ಕಾರಣವಿಷ್ಟೇ, ಕೃತಿಕಾರರಿಗೆ ಸರೋಜಿನಿಯ ಜೀವನವಷ್ಟೇ ಮುಖ್ಯ ಅಲ್ಲ ; ಪರಿಸರವೂ ಮುಖ್ಯವಾಗಿದೆ. ಆದ್ದರಿಂದಲೇ ಇವರನ್ನು ಪರಿಸರದ ಮಧ್ಯೆ ನಿಲ್ಲಿಸಿ, ಇವರು ಹೇಗೆ ? ಯಾವ ರೀತಿಯಲ್ಲಿ ಬದುಕಿಗೆ, ಸ್ಪಂದಿಸಬಲ್ಲವರಾಗಿದ್ದರು. ಅವರ ಆ ಸ್ಪಂದನವಾದರೂ ಯಾವ ಬಗೆಯದು ಎಂಬ ವಿಶ್ಲೇಷಣೆಯ ವಿಮರ್ಶನಾ ಚತುರತೆಯೂ ಇಲ್ಲಿದೆ.

"ಸರೋಜಿನೀದೇವಿ" ಜೀವನಚರಿತ್ರೆಯಾದುದರಿಂದ ಅವರ ವ್ಯಕ್ತಿತ್ವವನ್ನು

ಕುರಿತಾದ ಪರಿಚಯವನ್ನು ಲೇಖನದ ಉದ್ದೇಶವಾಗಿಸಿಕೊಂಡಿದ್ದೇನೆ. ಅವಶ್ಯಕವೆನಿಸಿದ ಕಡೆ (ಉದಾ : ಕವಿಯಾಗಿ ಸರೋಜಿನಿ) ವಿಮರ್ಶನವನ್ನು ಒಳಗು ಮಾಡಿಕೊಂಡಿದ್ದೇನೆ.

'ಸರೋಜಿನಿ'ಯವರನ್ನು ಪರಿಚಯಿಸುವ ಮೊದಲು ಲೇಖಕರು ಭದ್ರ ತಳಪಾಯವನ್ನು ಕಟ್ಟಿದ್ದಾರೆ. "ನಾನು ನಿನಗೆ ಮನಬಿಚ್ಚಿ ಹೇಳುತ್ತೇನೆ ನಿವೇದಿತಾ ! ನಿನಗೆ ಭಾರತದಲ್ಲಿ ಭವ್ಯ ಭವಿಷ್ಯವಿದೆ. ನಮಗಿಂದು ಬೇಕಾಗಿರುವುದು ಪುರುಷನಲ್ಲ. ಸ್ತ್ರೀ. ಭಾರತೀಯರಿಗಾಗಿ, ಅದರಲ್ಲಿಯೂ ಸ್ತ್ರೀಯರಿಗಾಗಿ, ಕೆಲಸ ಮಾಡಬಲ್ಲ ನಿಜವಾದ ಸಿಂಹಿಣಿ ಭಾರತಕ್ಕಿಂದು ಬೇಕಾಗಿದೆ. ಸದ್ಯದಲ್ಲಿ ಭಾರತ ಅಂಥ ಮಹಿಳೆಯರನ್ನು ಸೃಷ್ಟಿಮಾಡಲಾರದು. ಆದ್ದರಿಂದ ಅವರನ್ನು ಹೊರಗಡೆಯಿಂದ ಎರವು ತೆಗೆದು ಕೊಳ್ಳಬೇಕಾಗಿದೆ. ವಿದ್ಯೆ, ನಿಷ್ಕಪಟವರ್ತನೆ, ಸ್ವಚ್ಛತೆ, ಅಮರಪ್ರೇಮ ನಿರ್ಧಾರಶಕ್ತಿ ಇವೆಲ್ಲಕ್ಕಿಂತ ಹೆಚ್ಚಾಗಿ, ಉನ್ನತಕುಲ ನಿನ್ನಲಿವೆ. ನಿನ್ನಂಥ ಸ್ತ್ರೀ ನಮಗಿಂದು ಬೇಕಾಗಿದೆ" (ಪುಟ : ೧)–ಇದು ಸ್ವಾಮಿ ವಿವೇಕಾನಂದರು ಸೋದರಿ ನಿವೇದಿತಾರಿಗೆ ಮಂಡಿಸಿದ ಅಹವಾಲು. ಆದರೆ ಈ ಮಾತನ್ನು ವಿವೇಕಾನಂದರು ಉದ್ಗರಿಸುವ ೩೦ ವರ್ಷ ಮೊದಲೇ ಸರೋಜಿನಿಯವರ ಜನ್ಮವಾಗಿತ್ತು. ಆ ಕಿರಿವಯಸ್ಸಿನಲ್ಲೆ ಮಹತ್ತಾದ ಪ್ರಸಿದ್ಧಿಯನ್ನು ಅವರು ಹೊಂದಿದ್ದರು ; ಜಗತ್ತು ಅವರನ್ನು ಗುರುತಿಸಿತ್ತು. ಆದರೂ ವಿವೇಕಾನಂದರಂಥವರ ದೃಷ್ಟಿಯಲ್ಲಿ ಸರೋಜಿನಿಯವರು ಮರೆಯಾಗಿರುವುದೂ ವಿಷಾದನೀಯ. ಆದರೆ, ನಿಧಾನವಾದರೂ, ಲೇಖಕರು ಇದನ್ನು ಗುರುತಿಸಿ 'ಭಾರತಕ್ಕೆ ಬೇಕಾಗಿದ್ದುದು ಪುರುಷನಲ್ಲ, ಸ್ತ್ರೀ ಎಂಬ ವಿವೇಕಾನಂದರ ಹಾರೈಕೆಯಂತೆ ಸ್ತ್ರೀಯೊಬ್ಬಳು ಜನ್ಮಧಾರಣೆ ಮಾಡಿದ್ದಳು' (ಪುಟ : ೧) ಎಂದಿದ್ದಾರೆ. ಈ ನೆಲಗಟ್ಟಿನ ಮೇಲೆ ಸರೋಜಿನಿಯ ಹುಟ್ಟು ಬಾಲ್ಯವನ್ನು ನಿರೂಪಿಸಿರುವ ಲೇಖಕರ ಸೂಕ್ಷ್ಮಾವಲೋಕನ ಮೆಚ್ಚುವಂತಹುದು. ಸರೋಜಿನಿ "ಭಾರತದ ಕೋಗಿಲೆ"ಯಾಗಿ, ಸಮರ್ಥ ರಾಜಕೀಯ ಧುರೀಣಳಾಗಿ ಪ್ರಖ್ಯಾತರಾಗಿ ವಿವೇಕರು ಬಯಸಿದ "ಸ್ತ್ರೀ" ಯನ್ನು ಹೊರಗಿನಿಂದ ಎರವಲು ತರುವ ಅನಾವಶ್ಯಕತೆಯನ್ನು ಎತ್ತಿ ತೋರಿಸಿದ್ದಾರೆ ; ಭಾರತಮಾತೆಯ ತಾಯ್ತನದ ಹಿರಿಮೆಯನ್ನು ಮೆರೆದಿದ್ದಾರೆ.

ಸರೋಜಿನಿಯವರು ಹುಟ್ಟಿದ್ದು ಹೈದರಾಬಾದಿನ ಸುಶಿಕ್ಷಿತ ಬ್ರಾಹ್ಮಣ ಮನೆತನದಲ್ಲಿ ; 1879ರ ಫೆಬ್ರುವರಿ 13ರಲ್ಲಿ. ತಂದೆ ಅಘೋರನಾಥ ಚಟ್ಟೋಪಾಧ್ಯಾಯರು. ವಿಜ್ಞಾನಸಬೋಧಕರು. ತಾಯಿ ವರದಸುಂದರಿದೇವಿ. ರಚಯಿತ್ರಿ. ಇವೆರಡು ಅಪೂರ್ವ ಚೇತನಗಳ ಸಂಗಮವೇ ಸರೋಜಿನಿ.

ಸರೋಜಿನಿಯವರಿಗೆ 'ಮನೆ'ಯೇ ಮೊದಲ ಪಾಠಶಾಲೆಯಾಯ್ತು. ತಂದೆ ಅಘೋರನಾಥರು ವೈಜ್ಞಾನಿಕ ಚಿಂತನೆಯನ್ನು ಮಗಳಲ್ಲಿ ಮೈಗೂಡಿಸಿದರೆ, ತಾಯಿ ವರದಸುಂದರಿ ಸಾಹಿತ್ಯ ಆರಾಧನೆಯ ಭಾವುಕ ಚಿಂತನೆಯನ್ನು ತುಂಬಿದರು. ಇವೆರಡನ್ನು ಸಮನಾಗಿ ಪೋಷಿಸಿ, ಪುಷ್ಟೀಕರಿಸುತ್ತಿದ್ದ ತಂದೆತಾಯ್ಗಳ ಆರೈಕೆಯಲ್ಲಿ

ವಯಸ್ಸಿಗೂ ಮೀರಿದ ಬುದ್ಧಿವಂತಿಕೆ, ಪ್ರತಿಭೆಯನ್ನು ಕರಗತಮಾಡಿಕೊಂಡರು ; ಬೆಳಸಿಕೊಂಡರು.

ಸರೋಜಿನಿಯವರನ್ನು "ಕಡೆದ ವಿಗ್ರಹ"ವಾಗಿಸಿದ್ದು ಅವರ ತಂದೆತಾಯ್ಗಳ ಬದುಕು ; ನಡವಳಿಕೆ. ಅಘೋರನಾಥರು ಬಡವಬಲ್ಲಿದನೆನ್ನದೆ, ಮೇಲುಕೀಳೆಂಬ ಭಾವಕ್ಕೆ ಹೊರತಾದ ವಾತ್ಸಲ್ಯ. ಅತಿ ಕಿರಿವಯಸ್ಸಿನಲ್ಲೇ ಡಕಾಯಿತರೊಂದಿಗೆ 'ಸ್ನೇಹ' ಸಂಪಾದಿಸಿದ್ದು ಅವರ ವಾತ್ಸಲ್ಯದ ಪ್ರತೀಕ. ಇದಕ್ಕಾಗಿ ಎಂಥ ಸಂಪ್ರದಾಯದ ಸರಳನ್ನು ಸುಲಭವಾಗಿ ಕಿತ್ತೆಸೆಯಬಲ್ಲ ಸಾಹಸಿ. ಒಂದು ಬಾರಿ ಜನಿವಾರವನ್ನೇ ನದಿಗೆ ಬೀಸಿ ಒಗೆದರು. ವಿಸ್ಮಿತರಾದ ಗೆಳೆಯ ವರ್ಗ ನಡೆದ ಅಚಾತುರ್ಯವನ್ನು ಬೆಕ್ಕಸ ಬೆರಗಾಗಿ ನೋಡಿತು. ಆದರೆ ಇವರು 'ಇದು ಕೇವಲ ಹೊಸೆದ ದಾರ. ಇದರಲ್ಲಿ ಪವಿತ್ರತೆಯೇನೂ ಇಲ್ಲ. ಪವಿತ್ರತೆಯಿರುವುದು ಮನಸ್ಸಿನಲ್ಲಿ ; ಹೃದಯದಲ್ಲಿ' (ಪುಟ ೬) ಎಂದರಂತೆ. ಇಂಥ ವಿಶಾಲಮನಸ್ಕಭಾವವೇ ಕಿರುಪೆಯಿಂದ ಮೇಲ್ಮನೆಯ ವರೆಗಿದ್ದ ಆತ್ಮೀಯರನ್ನು ಗಳಿಸಿಕೊಟ್ಟಿತು. ಅವರ ಮನೆಯಲ್ಲಿ ನಡೆಯುತ್ತಿದ್ದ ಉಪನ್ಯಾಸ ಇವರ ಅಪೂರ್ವ ಮನಸ್ಥಿತಿಯನ್ನು ತೋರಿಸುತ್ತದೆ, ಇಂಥವರಿಗೆ ತಕ್ಕ ಮಡದಿ ವರದಸುಂದರಿ. ತಮ್ಮ ಒಂಬತ್ತನೇ ವಯಸ್ಸಿನಲ್ಲಿ ಆಕಸ್ಮಿಕವಾಗಿ ಅಘೋರರನ್ನು ಸಂಧಿಸಿ ಇವರು ಪ್ರೇಮವಶರಾದರು ಮತಾಂತರವನ್ನೇ ಊಹಿಸದ ಜನತೆ ಕಾಲವದು. ಕಾಲ ದೇಶ ಜಾತಿಮತಗಳನ್ನು ಮೀರಿನಿಂತ ಇವರ ಪ್ರೇಮ ಇಬ್ಬರನ್ನು ಒಂದುಗೂಡಿಸಿತು. ಇವರಿಬ್ಬರ ಸಾಹಸ ಬದುಕಿನ "ಸಿಹಿಕಹಿ"ಯ ತುಂಬು ಚೈತನ್ಯವೇ ಮಗಳು ಸರೋಜಿನಿಯವರಿಗೆ ಧಾರೆಯಾಗಿ ಬಂದಿತ್ತು. "ಒಟ್ಟಿನಲ್ಲಿ ಸರೋಜಿನಿಯ ತಂದೆತಾಯ್ಗಳು ಕೇವಲ ಸಾಮಾನ್ಯ ತಂದೆತಾಯಿಗಳಾಗಿರಲಿಲ್ಲ. ಅವರು ಅಪೂರ್ವ ಆಧ್ಯಾತ್ಮಿಕ ವ್ಯಕ್ತಿಗಳಾಗಿದ್ದರು. ಮಾನವ ವಿಕಾಸದಲ್ಲಿ ಅವರು ಉನ್ನತ ಶಿಖರಗಳಾಗಿದ್ದರು. ಕತ್ತಲೆಯ ಜೀವನದಲ್ಲಿ ನಡೆಸುತ್ತಿದ್ದ ಎರಡು ಅಲೌಕಿಕ ದೀಪಗಳಾಗಿದ್ದರು" (ಪುಟ ೫). ಆದ್ದರಿಂದಲೇ ಸರೋಜಿನಿ ಒಂದು ನಿಲುವಿನಲ್ಲಿ ಅವರ ಪಡಿಯಚ್ಚಾಗಿ, ಮತ್ತೊಂದು ನಿಲುವಿನಲ್ಲಿ ಆ ಮಿತಿಯನ್ನು ಮೀರಿ ಅಸಾಮಾನ್ಯ ವಾಗಿ ಬೆಳೆದರು ; ಬೆಳಗಿಸಿದರು.

ಚಿಕ್ಕಂದಿನಿಂದಲೂ ಸರೋಜಿನಿಯವರಿಗೆ ಸೌಂದರ್ಯ, ಸ್ವಚ್ಛತೆ, ಶುದ್ಧತೆ ಬಗ್ಗೆ ಅಪಾರ ಆಸಕ್ತಿ. ತಾಯಿಯೂ ಸಮರ್ಥ ರೀತಿಯಲ್ಲಿವನ್ನು ಪೋಷಿಸಿದರು ; ಉತ್ತೇಜಿಸಿದರು. ಪುರಾಣ ಪುಣ್ಯ ಕಥೆಗಳನ್ನು ಮನದಟ್ಟು ಮಾಡಿ 'ಸಾತ್ವಿಕತೆ'ಯನ್ನು ಮೂಡಿಸಿದರು, "ಸೋಲಿನಲ್ಲಿ ಕುಗ್ಗದೆ, ಗೆಲುವಿನಲ್ಲಿ ಅತಿ ಹಿಗ್ಗದೆ ಬಾಳುವುದೇ ಮಾನವೀಯತೆ ಆದರ್ಶ" (ಪುಟ ೮) ಎಂಬ ಜಾಗೃತಿಯನ್ನು ಬೆಳೆಸಿದರು. ಹೀಗೆ ಹೆಣ್ಣಾಗಿ ಬಾಳುವ ಪಾಠವನ್ನು ತಾಯಿಯಿಂದ ಕಲಿತಂತೆ, ಬದುಕಲು ನಡೆಸುವ

ಹೋರಾಟಕ್ಕೆ ಬೇಕಾದ ಮನಸ್ಥೈರ್ಯ, ನಂಬಿಕೆ, ಸತ್ಯಸಂಧತೆಯನ್ನು ತಂದೆಯಿಂದ ಬಳುವಳಿಯಾಗಿ ಪಡೆದರು.

"ಮೆಟ್ರಿಕ್ಯುಲೇಷನ್" ಅನ್ನು ಪ್ರಥಮಸ್ಥಾನದಲ್ಲಿ ತೇರ್ಗಡೆಯಾದುದು ಸರೋಜಿನಿಯವರಿಗೆ ಓದಿನಲ್ಲಿದ್ದ ತೀವ್ರ ಆಸಕ್ತಿಯ ದ್ಯೋತಕ. ಆದರೆ ಮುಂದಿನ ಕಾಲೇಜು ವಿದ್ಯಾಭ್ಯಾಸಕ್ಕೆ ಅನಾರೋಗ್ಯ ಮುಳುವಾಯ್ತು. ವಿಧಿಯಿಲ್ಲದೆ ಓದಿಗೆ ಮಂಗಳ ಹಾಡಿದರು. ಇಷ್ಟುಮಾತ್ರಕ್ಕೆ 'ನಿರಸನ' ಅವರ ಜಾಡಿನ ಲಕ್ಷಣವಲ್ಲ. ಮನೆಯಲ್ಲಿದ್ದುಕೊಂಡೇ ಸಾಹಿತ್ಯ ಆರಾಧನೆಗೆ ತೊಡಗಿದರು. ಅವರ ಪ್ರತಿಭೆ ಕಾವ್ಯಸಂಪತ್ತು, ಅನುಭವ ಸಾಂದ್ರತೆಯಿಂದ ತೆನೆಯಾಯ್ತು. ಅವರಲ್ಲಿದ್ದ 'ಪ್ರಕೃತಿ ಆರಾಧನಭಾವ' ಹೊಸ ಉಡುಪು ತೊಟ್ಟಿತು. ವಿಚಾರಮಂಥನ ಮೊದಲಾಯ್ತು. ಸುಪ್ತ ಕವಿತ್ವ ಬೆಳಕಿಗೆ ಅಡಿಯಿಟ್ಟಿತು. ಹೀಗೆ ಅಡಿಯಿಟ್ಟ ಮೊದಲ ಕವನ 'ಸರೋವರ ಸುಕನ್ಯೆ' ಇದು 1400 ಸಾಲುಗಳ ನೀಳ್ಗವನ. ಮುಂದೆ 2000 ಸಾಲಿನ ಪುಟ್ಟ ನಾಟಕವನ್ನು ಬರೆದರು. ಆದರೆ ಇವಾವು ಸಾಹಿತ್ಯಕ್ಷೇತ್ರದಲ್ಲಿ ಅವರನ್ನು ಗುರುತಿಸುವಂತೆ ಮಾಡಲಿಲ್ಲ. ಆದರೂ ಕಿರಿವಯಸ್ಸಿನ ಈ ಸಾಧನೆ ಮಾತ್ರ ಕಿರಿದಲ್ಲ. ಇಂಗ್ಲೀಷ್ ನಾಟಕವನ್ನು ಪರ್ಷಿಯನ್ ಭಾಷೆಗೆ ತರ್ಜುಮೆ ಮಾಡಿದ ಸರೋಜಿನಿಯವರ ಕೃತಿ "ಮೆಹರ್‌ಮುನೀರ್" ಎಂಬುದು "ಸರೋಜಿನೀ ಹುಟ್ಟುಕವಿ ಹೊರತು ಕಟ್ಟುಕವಿಯಲ್ಲ" (ಪುಟ ೧೪) ಎಂಬುದನ್ನು ವ್ಯಕ್ತಪಡಿಸಿತಲ್ಲದೆ ಅವರ ಬದುಕಿಗೊಂದು ಹೊಸ ತಿರುವನ್ನು ತಂದಿತು. ನಿಜಾಮರಿಗೆ ತಲುಪಿದ ಇದರ ಪ್ರತಿಯೊಂದರಿಂದ ಸಂತುಷ್ಟರಾದ ನಿಜಾಮರು 'ವಿದೇಶಿ ವಿದ್ಯಾರ್ಥಿವೇತನ'ವನ್ನು ದಯಪಾಲಿಸಿದರು. ರಾಜಾಜ್ಞೆ ಮೀರುವಂತಿಲ್ಲ. ಹೀಗಾಗಿ ಇಷ್ಟವಿಲ್ಲದಿದ್ದರೂ ತಮ್ಮ ಷೋಡಷದ ಹೊಸ್ತಿಲಲ್ಲೆ ಸರೋಜಿನಿಯವರು 'ಇಂಗ್ಲೆಂಡಿ'ಗೆ ಪ್ರಯಾಣ ಬೆಳೆಸಿದರು.

ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಕ್ಕೆ ಸೇರಬೇಕಾದರೆ ಕನಿಷ್ಟವೆಂದರೂ ಹದಿನೆಂಟು ವರ್ಷವಾಗಬೇಕಿತ್ತು. ಸರೋಜಿನಿ ಕಾಲೇಜಿಗೆ ಸೇರಲು ಅನರ್ಹರೆನಿಸಿದ್ದು, ಅವರ ವಯಸ್ಸು. ಸಮಕಾಲೀನರೊಬ್ಬರು ಹೀಗೆ ಹೇಳಿದ್ದಾರೆ "ಇಲ್ಲಿ ಭಾರತದ ಪುಟ್ಟ ಹುಡುಗಿಯೊಬ್ಬಳಿದ್ದಾಳೆ. ಅವಳಿಗೆ ಕವಿತೆಯನ್ನು ಕಟ್ಟುವುದಲ್ಲದೆ ಬೇರೊಂದು ಕೆಲಸವಿಲ್ಲ" (ಪುಟ ೧೬). ಸ್ವದೇಶದ ಹಂಬಲವೋ, ಭಿನ್ನ ವಾತಾವರಣ ದಿಸೆಯಿಂದಲೋ ಆರೋಗ್ಯ ಹದಗೆಟ್ಟಿತು. ಸುಪ್ತವಾಗಿದ್ದ ಸ್ವಾತಂತ್ರ್ಯವಾಸನೆ ಗರಿಗೆದರಿತು. ಹವಬದಲಾವಣೆಯ ನೆಪದಿಂದ ಇವರು ದೇಶಸಂಚಾರಕ್ಕೆ ಹೊರಟರು. ಸ್ವಿಟ್ಸರ್‌ಲ್ಯಾಂಡ್, ಇಟಲಿ ಮೊದಲಾದ ಪ್ರಸಿದ್ಧ ನಗರಗಳಲ್ಲಿ ವಿಹರಿಸಿ, ಗತಕಾಲದ ತುಂಬು ಬದುಕನ್ನು ಅನುಭವವನ್ನು ಮೈಗೂಡಿಸಿಕೊಂಡರು. ಹೀಗೆ ಮೂರುವರ್ಷ ವಿದೇಶದಲ್ಲಿದ್ದೂ ಏನನ್ನೂ ಸಾಧಿಸದೆ ಸರೋಜಿನಿ ಭಾರತಕ್ಕೆ ಹಿಂದಿರುಗಿದರಾದರೂ

‘ಇದೊಂದು ದೊಡ್ಡ ಅಪರಾಧ’ ಎಂಬ ಕೊರಗು ಅವರಲ್ಲಿ ಇಲ್ಲ. ಅದೇ ಸ್ಥಿತಿಯಲ್ಲಿ ಹಾರ್ದಿಕವಾಗಿ ಸ್ವಾಗತಿಸಿದ ಅವರ ತಂದೆತಾಯ್ಗಳ ‘ದೊಡ್ಡತನ’ ಮೆಚ್ಚುವಂತಹುದು.

ಸರೋಜಿನೀಯವರು ಇಂಗ್ಲೆಂಡಿನಲ್ಲಿದ್ದಾಗ ಆರ್ಥರ್‌ಸೈಮನ್ಸ್, ಹೀನೇಮನ್, ಎಡ್ಮಂಡ್‌ಗಾಸೆ ಮೊದಲಾದ ವಿಮರ್ಶಕರ ಪರಿಚಯವಾಯ್ತು. ಅದರಲ್ಲೂ ಎಡ್ಮಂಡ್‌ಗಾಸೆಯವರನ್ನು ಸರೋಜಿನೀಯವರ ‘ಸಾಹಿತ್ಯಗುರು’ವೆಂದರೂ ಸರಿಯೇ. ಸ್ವದೇಶದ ಬಣ್ಣವಾಸನೆಬಿಟ್ಟು ಪಾಶ್ಚಾತ್ಯವನ್ನು ಮೈಗೂಡಿಸಿಕೊಳ್ಳಲು ಹವಣಿಸಿದ್ದ ಸರೋಜಿನೀಯವರ ಭ್ರಮೆಯನ್ನು ತುಂಡರಿಸಿ ‘ನಿಜವಾದ ಭಾರತೀಯತೆ’ಯನ್ನು ಬೆಳೆಸುವಂತೆ, ಆರಾಧಿಸುವಂತೆ ಹಾರೈಸಿದರು. ಸರೋಜಿನಿಯವರು ಬರೆದಿದ್ದ ಆಂಗ್ಲಕವಿತೆಗಳು ಮೆಚ್ಚುವಂತಿದ್ದರೂ ಒಪ್ಪದೆ “ನಾವು ಹಾರೈಸಿದ್ದು ಆಂಗ್ಲೇಯ ಭಾವನೆಗಳನ್ನೇ ಆಂಗ್ಲೇಯ ಓಡಿನಲ್ಲಿ ಜಿಕಿಮಾಡಿ ಒಡಿಸುವುದನ್ನಲ್ಲ ;........ ಇಂಡಿಯಾದೇಶದ ಹೃದಯ ದರ್ಶನವನ್ನು ; ಅಲ್ಲಿಯ ಮೂಲಭಾವನೆಗಳ ನೈಜ ವಿಶ್ಲೇಷಣವನ್ನು ; ಪುರಾತನ ಮತದ ತತ್ವಗಳನ್ನು : ತನಗೊಂದು ಆತ್ಮವಿದೆಯೆಂದು ಪಾಶ್ಚಾತ್ಯವು ಕನಸು ಕಾಣುವ ಮೊದಲು ಪೌರ್ವಾತ್ಯದ ಆತ್ಮವನ್ನು ಉಜ್ವಲಗೊಳಿಸಿದ ನಿಗೂಢ ಸಂದೇಶಗಳನ್ನು” ಎಂದು ಅರಿವು ಮೂಡಿಸಿದ ಅವರ ಭಾತೃಪ್ರೇಮ ಮರೆಯುವಂತಹುದಲ್ಲ. ಇದನ್ನು ಅಕ್ಷರಸಹ ಪಾಲಿಸಿ “ಗುರುಕಾಣಿಕೆ”ಯನ್ನು ಸಲ್ಲಿಸಿದ್ದು ಸರೋಜಿನೀಯವರ ಪ್ರಾಮಾಣಿಕತೆಯನ್ನು ನಮಗೆ ಮನಗಾಣಿಸುತ್ತದೆ.

ಇಂಥ ಪ್ರಬುದ್ಧ ಸರೋಜಿನೀಯವರು ಅಂತರ್ಜಾತಿಯವರಾದ ಗೋವಿಂದ ರಾಜುಲು ನಾಯ್ಡುರವರನ್ನು ವಿವಾಹವಾದುದು ಅವರು ಇಟ್ಟ ಮೊದಲ ದಿಟ್ಟ ಹೆಜ್ಜೆ. ಇವರ ವಿವಾಹದ ಒಪ್ಪಂದದಲ್ಲಿ ಎರಡು ಮನೆತನಗಳು ಸ್ವೀಕರಿಸಿದ ನಿಲುವು ಶ್ಲಾಘನೀಯವಾದುದು. ಪ್ರೇಮದ ಮಹತ್ವವನ್ನು ಮೊದಲೇ ಅರಿತಿದ್ದ ಅಘೋರನಾಥರು ಮಗಳನ್ನು ದಂಡಿಸಹೋಗದೆ ‘ವಿದೇಶಿ’ ನೆಪದಲ್ಲಿ ಮಗಳ ಪ್ರೇಮದ ಸತ್ವಪರೀಕ್ಷೆ ನಡೆಸಿದರು, ಎಷ್ಟಾದರೂ ಸರೋಜಿನೀ ಅವರ ಮಗಳು ತಾನೆ ! ‘ನೈಜ ಪ್ರೇಮ ಬದಲಾವಣೆಗೆ ಹೊರತಾದುದು. ವಿದೇಶದಿಂದ ಮರಳಿ ಬಂದಾಗಲೂ ಮಗಳಲ್ಲಿದ್ದ ಅಚಲಪ್ರೇಮವನ್ನು ಗ್ರಹಿಸಿ ಶುಭಹಾರೈಕೆಯೊಂದಿಗೆ ಡಾ॥ ಗೋವಿಂದರಾಜುಲು ನಾಯ್ಡು ಅವರೊಂದಿಗೆ ವಿವಾಹ ಕಾರ್ಯವನ್ನು ನೆರವೇರಿಸಿದರು.

ಇವರ ದಾಂಪತ್ಯ ಜೀವನದಲ್ಲಿ ಪ್ರೀತಿ ಪುರಸ್ಕಾರಗಳ ಹೊಳೆ ಹರಿದಿತ್ತು. “ಷಲ್ಲಿ ಹೇಳುವ ‘ಆನಂದದ ಅಪ್ಸರೆ’ಯೇ ಇಲ್ಲಿ, ನನ್ನ ಪುಟ್ಟ ಮನೆಯಲ್ಲಿ ವಾಸಮಾಡುತ್ತಿದ್ದಾಳೆ. ತೋಟದಲ್ಲಿರುವ ಹಕ್ಕಿಗಳ ಗಾನದಲ್ಲಿ ನನ್ನಮನೆ ಅದ್ದಿಹೋಗಿದೆ ; ಪಡಸಾಲೆಯಲ್ಲಿ ಆಡುತ್ತಿರುವ ಮಕ್ಕಳ ಗಲಿಬಿಲಿಯಲ್ಲಿ ನನ್ನ ಮನೆ ತೇಲಿಹೋಗಿದೆ” (ಪುಟ 20) ಎಂಬ ಸರೋಜಿನೀಯವರ ಮಾತು ಅವರ ಮಧುರ ದಾಂಪತ್ಯದ ಸಂಕೇತವಾಗಿದೆ.

ಪದ್ಮಜಾ ನೀಲಾವತಿಯೆಂಬೆರಡು ಹೆಣ್ಣುಮಕ್ಕಳು ಜಯಸೂರ್ಯ ರಣಧೀರರೆಂಬ ಗಂಡು ಮಕ್ಕಳಿಂದ ಅವರ ಪ್ರೇಮ ಕವಲೊಡೆಯಿತು. ತುಂಬು ಸಂಸಾರದಲ್ಲಿದ್ದ ಸರೋಜಿನಿಯವರನ್ನು ಆಗಾಗ ಅಸ್ವಸ್ಥರನ್ನಾಗಿಸುತ್ತಿದ್ದುದು ಅವರ 'ಅನಾರೋಗ್ಯ' ಇದರಿಂದ ಸಾವಿನ ಭಯ ಎಷ್ಟೋ ಬಾರಿ ಅವರನ್ನು ಕಾಡಿದ್ದು ಉಂಟು.

ಇಲ್ಲಿಗೆ ಸರೋಜಿನಿಯವರ ಬದುಕಿನ ಪ್ರಾರಂಭಿಕ ಹಂತ ಮುಗಿಯುತ್ತದೆ. ಎಲ್ಲಾ ಸಾಮಾನ್ಯ ಹೆಣ್ಣುಗಳಂತೆ ಸರೋಜಿನಿಯವರು ಪತಿಯನ್ನು ಪಡೆದರು ; ತಾಯ್ತನವನ್ನು ತುಂಬಿದರು. ಇದು ಅತಿಶಯೋಕ್ತಿಯಲ್ಲ. ಆದರೆ ಇಷ್ಟೇ ಅವರ ನೈಜಪ್ರಕೃತಿಯಲ್ಲ. ಸರೋಜಿನಿ ಸರೋಜ-ರೋಜ್-ಆಗಿ ಅರಳಿದ್ದು ತಮ್ಮ ರಚನಾ ಕೌಶಲ್ಯದಿಂದ. ಎಚ್. ಎಲ್ ನಾಗೇಗೌಡರು ಈ ಹಂತದಲ್ಲಿ ಕೊಟ್ಟಿರುವ ಶಿರೋನಾಮೆ 'ಸರೋಜ ಅರಳಿತು-ಕೋಗಿಲೆ ಹಾಡಿತು' ಎಂಬುದು ಸಮರ್ಥನೀಯ. ಮರಿಯಾಗಿ ಬೆಚ್ಚನೆ ಮನೆಯಲ್ಲಿ ಅವುಚಿ ಕುಳಿತಿದ್ದ ಸರೋಜಿನಿಯವರು ಹಕ್ಕಿಯಂತೆ ಹಾರಾಡಿದ್ದು-ಹಾಡಿದ್ದು-ಈಗಲೇ.

ಸರೋಜಿನೀ ಪ್ರೇಮಲ ಮನಸ್ಕರು ; ಪ್ರಕೃತಿಯ ಉಪಾಸಕರು ; ಸೌಂದರ್ಯದ ಆರಾಧಕರು. ಗಿರಿಗಹ್ವರದಿಂದ ಹಕ್ಕಿಗಳ ಕಲರವದವರೆಗೂ, ಭಿಕ್ಷುಕನಿಂದ ಬಲಿದನವರೆಗೂ ಇವರ ಕಾವ್ಯ ವಸ್ತುವಿನ ಹರಹು. ಅವರ ಈ ಸೃಷ್ಟಿಗೆ ಸ್ಫೂರ್ತಿ ಆತ್ಮ. ಆತ್ಮ ತೃಪ್ತಿಗೆ ಮಿಗಿಲಾದ ಸಂತೋಷ ಬೇರೊಂದಿಲ್ಲ ; ಅವರ ದೃಷ್ಟಿಯಲ್ಲಿ.

'ಕಲೆಗಾಗಿ ಕಲೆ'ಯನ್ನು ಸೃಷ್ಟಿಸದೆ 'ತನಗಾಗಿ' ಸೃಷ್ಟಿಸಿದ ಇವರ ಕವನಗಳು ಮೂರು ಸಂಕಲನಗಳಾಗಿ ಬೆಳಕಿಗೆ ಬಂದುವು. ಮೊದಲಿನದು 1905ರಲ್ಲಿ ಪ್ರಕಟವಾದ 'ಚಿನ್ನದ ಹೊಸ್ತಿಲು' (The Golden Threshold), ಎರಡನೆಯದು 'ಕಾಲದಪಕ್ಷಿ (The Bird of Time), ಕೊನೆಯದು 'ಮುರಿದರೆಕ್ಕೆ.' (The Broken Wing).

ಆಂಗ್ಲ ಮೂಲವನ್ನು ನೋಡಲು ಅಸಾಧ್ಯವಾದುದರಿಂದ ಲೇಖಕರು ಅನುವಾದಿಸಿರುವ (ಕೊಟ್ಟಿರುವ) ಕೆಲವು ಕವನಗಳನ್ನೇ ವಿಮರ್ಶೆಗಾಗಿಲ್ಲಿ ಬಳಸಿಕೊಂಡಿದ್ದೇನೆ.

ಕವನ–೧ "ಪಲ್ಲಕ್ಕಿ ಹೊರುವವರು"

ನಮ್ಮ ಹಾಡಿನ ಗಾಳಿಯಲಿ
ಈಕೆ ಹೂವಿನಂತೆ ಒನೆಯುತಿಹಳು
ಹೊಳೆಯ ನೊರೆಯನ್ನು ಸೋಂಕಿ
ಹಕ್ಕಿ ಚಿಮ್ಮುವಂತೆ ಈಕೆ ಚಿಮ್ಮುತಿಹಳು
ಕನಸಿನ ತುಟಿಗಳಿಂದ ತಿಳಿನಗು ತೇಲಿ ಬರುವಂತೆ
ಈಕೆ ತೇಲಿ ಬರುತಿಹಳು".

'ಚಿನ್ನದ ಹೊಸ್ತಿಲು' ಸಂಕಲನದ ಮೊದಲ ಕವನವಿದು. ಪತಿಮನೆಗೆ ತೆರಳುತ್ತಿರುವ ಸುಂದರ ವಧುವಿನ ಚಿತ್ರಣವಿದು. ವಧು ಪಲ್ಲಕ್ಕಿಯಲ್ಲಿ ಕುಳಿತಿದ್ದಾಳೆ. ಇವಳ ಯೌವನ ಹೊಳೆಯು ನೊರೆಯಂತೆ ಚಿಮ್ಮುತ್ತಿದೆ. ಮುಂದೆ ಹೊಂದುವ ಮನೆ-ಮನದ ಮಧುರ ಮಿಲನ ಈಕೆಯಲ್ಲಿ ಹರ್ಷ ತಂದಿದೆ. ಭವಿಷತ್ತಿನ ನೆನಪು ಮೊಗದ ತಿಳಿನಗುವನ್ನು ಸೂಸಿದೆ. ಪಲ್ಲಕ್ಕಿ ಹೊರುವವರೂ ಅಷ್ಟೇ. 'ಹಗುರಾಗಿ, ಬಹು ಹಗುರಾಗಿ' ನಾವೀಕೆಯನ್ನು ಸಾಗಿಸಬಲ್ಲೆವೆಂಬ ಭರವಸೆಯನ್ನು ಹೊಂದಿದ್ದಾರೆ. ಅವರಿಗೆ ತಾವು ಹೊತ್ತಿರುವುದು 'ಭಾರ'ವೆಂಬ ಭಾವವಿಲ್ಲ,-ಸರಳ ಭಾಷೆಯಲ್ಲಿ ಸವಿರಾದ ಚಿತ್ರಣ ಕೊಟ್ಟಿದ್ದಾರೆ. ಸರೋಜಿನೀಯವರೇ ಅನುಭವಜನ್ಯನಾದ ತಮ್ಮ 'ವಧುತನ'ವನ್ನು ಹೇಳಿದ್ದಾರೆ ಎನಿಸುತ್ತದೆ. ಏಕೆಂದರೆ 'ಚಿನ್ನದ ಹೊಸ್ತಿಲು' ಸಂಕಲನ ಆದಿಕವನ ಎಂಬುದು ಗಮನಾರ್ಹ. ಸರೋಜಿನೀಯವರ ಮನೆಯ ಅಂಕಿತವೂ 'ಚಿನ್ನದ ಹೊಸ್ತಿಲೇ'. ಇವರು ತಾವು ಪ್ರಬಲರು ಅಂದುಕೊಂಡರೂ, ಹಿನ್ನಲೆಯಲ್ಲಿ ಹಿತವನ್ನು ಕೋರುವ ತಂದೆ, ತಾಯಿ, ಸೋದರ ಮಿಗಿಲಾಗಿ ಪತಿಯಿದ್ದಾರೆ. ಇವರೆಲ್ಲರೂ 'ಪಲ್ಲಕ್ಕಿ'ಯಲ್ಲಿ ಕುಳಿತಿರುವ 'ಸೌಂದರ್ಯರಾಶಿ'ಯನ್ನು ಮೆಲ್ಲಗೆ ಬಹುಮೆಲ್ಲಗೆ ಸಾಗುತ್ತಿದ್ದಾರೆ.

ಕವನ ೨- 'ಬೀಸುವರು'

'ಬೀಸುವರು'-ಹೆಸರೇ ಸೂಚಿಸುವಂತೆ ಬಲೆ ಬೀಸಿದ್ದು ತಿಳಿಯುತ್ತಿದೆ. ಅಂಥಿಂಥ ಬಲೆಯಲ್ಲ. 'ಸಾವಿ'ನ ಬಲೆ. ಹೀಗೆ ಬಲಿಗೊಳಗಾದ ಶೋಕದ ಮೂರು ಚಿತ್ರಣಗಳ ಸಂಗಮ ಈ ಕವನ. 'ಕವನ' ಎನ್ನುವುದಕ್ಕಿಂತ 'ಜಿಡಿ ಮುಕ್ತಕ'ಗಳೆಂದರೆ ಹೆಚ್ಚು ಒಪ್ಪುತ್ತದೆ.

ಇಲ್ಲಿ 'ಪ್ರೇಮ'ವೇ 'ಪ್ರತಿಮೆ'. ಪತಿ-ಪತ್ನಿಭಾವ ಇದರ ರೂಪಕ. ಪ್ರೇಮದ ಅಗಲಿಕೆ' ಪ್ರಾಣಿ ಜಗತ್ತಿನಿಂದ ಮಾನವ ಜಗತ್ತಿಗೆ ಜಿಗಿದಾಗ, ಪರಿಸರದ ಬಲದಿಂದ ಮಿಡಿಯುವ 'ಭಾವ' ಯಾವ ತೆರನಾಗಿರುತ್ತದೆ ಎಂಬುದನ್ನು ಇಲ್ಲಿ ಕಾಣಬಹುದು.

ನನ್ನ ಪ್ರಿಯ ಸತ್ತು ಹೋದನೇ !
ಇನ್ನು ನನ್ನ ಕಣ್ಣೀರೊರಸುವರು ಯಾರು !
ಸಿರಿವಂತ ರೈತನೊಬ್ಬನ ಕಣಜದಲಿ ಒಂದು ಕಾಳು ತಿನ್ನಲುಹೋದ,
ನನ್ನ ಪ್ರಿಯನನ್ನು ಬೋನೊಡ್ಡಿ ಹಿಡಿದು ಕೊಂದರಲ್ಲಾ !
ಅಯ್ಯೋ, ಅಯ್ಯೋ ನನ್ನ ಪ್ರಿಯ ಸತ್ತು ಹೋದನೆ !

ಪ್ರಿಯನನ್ನು ಅಗಲಿದ ಇಲಿಯೊಂದರ ಶೋಕವಿದು. ದುಃಖಗಳಲ್ಲಿ ಸಮಭಾಗಿಯಾಗಿದ್ದ ಪ್ರಿಯನ ಸಾವು, ಅಗಲಿಕೆ, ಈ ಇಲಿಯಲ್ಲಿ ತಳಮಳವನ್ನುಂಟುಮಾಡಿದೆ. ಯಾವುದೇ ಬದುಕಿನಲ್ಲಿ 'ಪ್ರೇಮ' ಮೂಲಭೂತವಾಗಿ ವ್ಯವಹರಿಸುತ್ತದೆ ಎಂಬುದಿಲ್ಲಿ ಗೊತ್ತಾಗುತ್ತದೆ. 'ಸಿರಿವಂತ ರೈತ' ಮತ್ತು 'ಬೋನು' ಪರಸ್ಪರ ಪೂರಕ ಹೇಳಿಕೆ. ಸಿರಿವಂತನ

ಜಿಪುಣತನ, ಕ್ರೌರ್ಯ ಇಲಿಯನ್ನು 'ಬೋನೊಡ್ಡಿ' ಕೊಂದಿತು. ಸಿರಿವಂತನ ಸ್ಥಾನದಲ್ಲಿ ಬಡವನಿದ್ದಿದ್ದರೆ ಬದುಕು ಬವಣೆಯ ಕಹಿ ನಂಜನ್ನು ಉಂಡಿದ್ದ ಅವನು ಇಲಿಗೂ ಸ್ವಲ್ಪ ಪಾಲುಕೊಡುವಷ್ಟು ಹೃದಯವುಳ್ಳವನಾಗಿರುತ್ತಿದ್ದನೇನೋ. ಸತ್ತ ಪ್ರಿಯನಿಗಾಗಿ ಜೀವಂತ ಇಲಿ ರೋದಿಸಿದ್ದು 'ನಿಸ್ವಾರ್ಥತೆ'ಯನ್ನು ಪ್ರತಿಬಿಂಬಿಸುವುದು. ಹೀಗೆಯೇ ಬಾಣದಿಂದ ಹತನಾದ ತನ್ನ ನಲ್ಲನಿಗಾಗಿ ಜಿಂಕೆಯೊಂದು ರೋದಿಸುವಲ್ಲಿಯೂ ಇದೇ ಭಾವ ತುಂಬಿದೆ. 'ಬೇಟೆಗಾರ'ನ ದೃಷ್ಟಿಯಲ್ಲಿ 'ನಿರಪರಾಧ'ವೂ ಅಪರಾಧವೇ. ಅವನು 'ಬೇಟೆಗಾರ'ನಾದ್ದರಿಂದ ! ನೀರಡಿಕೆಯನ್ನು ನೀಗಲು ನದಿಗೆ ಹೋಗಿ ತನ್ನ ಪ್ರಾಣವನ್ನೇ ಎರವಾಗಿತ್ತಿತು ಆ ಜಿಂಕೆ. ಈ ಪ್ರತಿಮೆಯು 'ವಾಲ್ಮೀಕಿ ರಾಮಾಯಣ'ದ ಕ್ರೌಂಚ ಪಕ್ಷಿಯ ಪ್ರಸಂಗವನ್ನು ನೆನಪಿಸುತ್ತದೆ. 'ರಾಮಾಯಣ—ಭಾರತ'ಗಳೂ ಸರೋಜಿನೀಯವರಿಗೆ ಆದರಣೀಯ ಕಾವ್ಯಗಳಾಗಿದ್ದಿರಬಹುದಾದ ಸಾಧ್ಯತೆಯನ್ನು ತೋರಿಸುತ್ತದೆ.

ಮತ್ತೊಂದು ಚಿತ್ರ-'ಜಗವೆಲ್ಲ ಮಲಗಿ ನಿದ್ರಿಸುವ' ವೇಳೆ ಅವೇಳೆಯಲ್ಲಿ ದುಃಖಿಸುತ್ತಿರುವ "ವಧು"ವಿನದು.

> ಮುಂದಿನ ವರುಷಗಳ ಹಿಂಗದ ತೃಷೆಯನ್ನು
> ತಣಿಸುವವರು ಯಾರು ?
> ಮಂಚದಲಿ ಮುತ್ತಿಟ್ಟು ಪ್ರೀತಿಸುವವರು ಯಾರು ?
> ಅಯ್ಯೋ ನನ್ನಿನಿಯನ ಚಿತೆಗಿಟ್ಟ ಆರದ ಬೆಂಕಿಯಲಿ
> ದಹಿಸುತಿದೆ ನನ್ನಾತ್ಮ ಧಗಧಗಿಸಿ !
> ಅಯ್ಯೋ, ನನ್ನ ಕಾಂತ ಕಣ್ಮರೆಯಾದನೆ ?

ನಿಸ್ವಾರ್ಥದೊಂದಿಗೆ ಸ್ವಾರ್ಥದ ಲೇಪನವೂ ಬೆರೆತಿದೆ. ಮನುಷ್ಯನಿಗೆ ಪ್ರೇಮವೆಷ್ಟು ಅವಶ್ಯಕವೋ ಕಾಮವೂ ಅಷ್ಟೇ ಅವಶ್ಯಕ. ಪ್ರೇಮ-ಕಾಮದ ಮಿಲನದಲ್ಲಿ ಹೆಣ್ಣು ಎಂಥ ಕಷ್ಟವನ್ನು ಸಹಿಸಲು ಶಕ್ತಳು. ಇಂಥ ಅನುಭವ 'ಪತಿ'ಯಿಂದ ಮಾತ್ರ ಪಡೆಯಲು ಸಾಧ್ಯ. ಪತಿಗೆ ಹೊರತಾಗಿ ಬದುಕಲು ಸಾಧ್ಯವಿದ್ದರೂ ಅದು ನ್ಯಾಯ ಬಾಹಿರವಾದುದು. 'ಹಿಂದೂ ಸಂಸ್ಕೃತಿ'ಗೆ ಬಗ್ಗದ್ದು. ಆದ್ದರಿಂದಲೇ ಈ ವಿಧವೆ ವಧು ಸಮಾಜಕ್ಕೆ 'ತನ್ನನ್ನು ಪ್ರೀತಿಸುವವರು ಯಾರು ?' ಎಂದು ಪ್ರಶ್ನಿಸುತ್ತಾಳೆ. ಒಡಲುರಿಯೇ ಇದಕ್ಕೆ ಉತ್ತರವಾಗುತ್ತದೆ. ಮೌನ ರೋದನ ಮುಂದುವರಿಯುತ್ತದೆ. ಆಪತೆ ಯೌವನದ ಬೇಗೆಯನ್ನು ಆರಿಸಲೂ ಆಗದೆ ಇನಿಯನ ಚಿತೆಗಿಟ್ಟ ಬೆಂಕಿ ಆರುವ ಮೊದಲೇ 'ದಹಿಸುತಿದೆ ನನ್ನಾತ್ಮ ಧಗಧಗಿಸಿ !' ಎಂದು ಹೊರಳಾಡುತ್ತಾಳೆ,

ಹೀಗೆ ಸರೋಜಿನೀಯವರು ಪ್ರೇಮದ ಭಿನ್ನಸ್ತರವನ್ನು ಪೂರಕವಾಗಿ ನಿರ್ದೇಶಿಸುವ ಮೂಲಕ ಪ್ರಾಣಿ ಪ್ರೇಮ-ಮಾನವ ಪ್ರೇಮದ ಸ್ಪಂದನವು ಯಾವ ಬಗೆಯದು ಎಂದು ಮನದಟ್ಟು ಮಾಡಿದ್ದಾರೆ. ಮೃತ್ಯುಪಂಜರದಿಂದ ಹೊರಬರಲೂ ಎಂಥವರೂ

ಅಶಕ್ತರೆಂಬ 'ವಿಧಿಯಣಕ' ವನ್ನು ಚಿತ್ರಿಸಿದ್ದಾರೆ ; ತಮ್ಮ ಅನುಭವಕ್ಕೆ ಸಂದ ಇಂಥ 'ಶೋಕಗಳನ್ನು ಶ್ಲೋಕ'ಗಳಾಗಿ ಸಮಗುಣಬಡಿಸಿದ್ದಾರೆ.

ಕವನ ೩-"ನಶ್ವರತೆ". (ನೋಡಿ ಪುಟ ೩೫)

ಶಾಶ್ವತ-ಅಶಾಶ್ವತದ ಚಿಂತನೆ ನಮಗೆ ಹೊಸತಲ್ಲ. ಮಹಾ-ಮಹಾನ್ ಪುರುಷ ರೆಲ್ಲ ಇದರ ಚಿಂತನೆಗಾಗಿ ಎಷ್ಟೋ ಕಾಲವನ್ನು ವ್ಯಯಿಸಿದ್ದಾರೆ ; ವ್ಯಯಿಸುತ್ತಲೇ ಇದ್ದಾರೆ. ಆದರೆ ಸರೋಜಿನಿಯವರು ಸೂಚಿಸಿರುವ 'ನಶ್ವರತೆ' ವಾಸ್ತವ್ಯವನ್ನು ಕಾಣಿ ಸುವುದು. ಜೀವನದಲ್ಲಿ ಕಷ್ಟಗಳು ಬರುವುದು ಸಹಜ. ಜೀವನ ನಿಂತ ನೀರಲ್ಲ ; ಹರಿವ ಹೊಳೆ. ಇದೇ ಜೀವಂತಿಕೆಯ ಲಕ್ಷಣ. ಇದನ್ನು ತಿಳಿದು ತಿಳಿದೂ ಕಷ್ಟ ಬಂದರೆ ಅಳುತ್ತಿದ್ದರೆ "ಉಷೆ ತನ್ನ ಉತ್ಸಾಹವನ್ನು ಮುಚ್ಚಿಕೊಳ್ಳುವುದಿಲ್ಲ....ಕಾಲ ನಿಲ್ಲುವು ದಿಲ್ಲ" ಅದು ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಯಾವ ಕೋಟಲೆಗಳ ಬಂಧನ ಅದಕ್ಕಿಲ್ಲ. ಬೆಳಕಿನ ನಂತರ ಕತ್ತಲೆ ; ಕತ್ತಲೆ ನಂತರ ಬೆಳಕು ಬರಲೇಬೇಕು. ಇದು ವಿಧಿನಿಯಮ ಕೂಡ. ಆದ್ದರಿಂದ ಜೀವವೇ ದುಃಖಿಸದಿರು. ಏಕೆಂದರೆ ಇಷ್ಟು ಕಹಿ ಯಾದ, ಇಷ್ಟು ನೀಳವಾದ, ಇಷ್ಟು ವಿಚಿತ್ರವಾದ ಇಂದಿನ ದಿನ ಬಹು ಕ್ಷಿಪ್ರದಲ್ಲಿಯೇ ಮರೆತ ನಿನ್ನೆಯಾಗುವುದು" ಅಷ್ಟು ಮಾತ್ರವಲ್ಲ, 'ನಿನ್ನ ಕಣ್ಣೀರನ್ನೇ ನಿನ್ನ ಕಣ್ಣುಗಳು ನಂಬದಂತಾಗುವುದು" ಎಂಬ ಭರವಸೆ ನಂಬಿಕೆಯನ್ನು ಕೊಡುತ್ತಾರೆ.

ಹೀಗೆ ಕವಿಯಾಗಿ ಸರೋಜಿನಿಯವರು ಜನಮನವನ್ನು ಸೂರೆಗೊಳ್ಳುತ್ತಾರೆ. ಪ್ರತಿಯೊಂದು ಸ್ತರದಲ್ಲೂ ಬದುಕನ್ನು ವೀಕ್ಷಿಸುವ ಇವರು ದಾರ್ಶನಿಕರೂ ಹೌದು. ಸರಳತೆಯಲ್ಲಿಯೇ ಸೊಗಸನ್ನು ತುಂಬುವ ಚತುರಮತಿಯಿವರು. ಇವರ ಭಾಷೆ ನಿರಾಡಂಬರವಾದುದು ; ಸರಳವಾದುದು ; ಪ್ರತಿಸ್ಪಂದಿಸುವಂತಹುದು. ಇವರ ಕವನ ಗಳಲ್ಲಿ ಬದುಕಿನ ಬಗ್ಗೆ ಗಂಭೀರ ಚಿಂತನೆಯಿದೆ ; ವಿಮರ್ಶನಾ ಮನೋಭಾವವಿದೆ ; ಮಿಗಿಲಾಗಿ 'ವಾತ್ಸಲ್ಯ'ದ ಹರಹೂ ಇದೆ. ಇದನ್ನು ಗುರುತಿಸಿದ್ದ ಎಡ್ಮಂಡ್ ಗಾಸೆ ಯವರು "ಇಂಗ್ಲೀಷಿನಲ್ಲಿ ಬರೆದ ಭಾರತೀಯರಲ್ಲೆಲ್ಲಾ ಇವರು ಅತ್ಯಂತ ಉಜ್ವಲರೀತಿ ಯಲ್ಲಿ ಬರೆದಿದ್ದಾರೆ. ಇವರ ಕವನಗಳು ಅತ್ಯಂತ ಮೂಲಭೂತವಾದವುಗಳು.... ಬಹು ನಿಖರವಾದವುಗಳು" (ಪುಟ ೩೩) ಎಂದು ಅಭಿನಂದಿಸಿರುವುದು ಒಪ್ಪುವಂತಹ ನುಡಿಮುತ್ತುಗಳಾಗಿವೆ.

'ತಂದೆತಾಯಿಗಳಿಗೆ ಆದರ್ಶ ಮಗಳಾಗಿ, ಗಂಡನಿಗೆ ಆದರ್ಶ ಸತಿಯಾಗಿ, ಮಕ್ಕಳಿಗೆ ಆದರ್ಶ ತಾಯಾಗಿ' ತುಂಬು ಜೀವನವನ್ನು ಉಂಡ ಸರೋಜಿನಿಯವರ ಚೇತನ ಇಷ್ಟರಲ್ಲೇ ತೃಪ್ತಿಪಟ್ಟುಕೊಳ್ಳಲು ಸಿದ್ಧವಿರಲಿಲ್ಲ. ಇದೇ ವೇಳೆಗಾಗಿ ಪ್ರಕ್ಷುಬ್ಧಗೊಳ್ಳು ತ್ತಿದ್ದ ರಾಜಕೀಯ ವಾತಾವರಣ ಇವರತ್ತ ಕೈ ಬೀಸಿತು. ಸೂಕ್ತ ಸಮಯಕ್ಕಾಗಿ ನಿರೀಕ್ಷಿಸುತ್ತಿದ್ದ ಸರೋಜಿನಿಯವರಿಗೆ 'ಹೈದರಾಬಾದು ಸಂಸ್ಥಾನದ ಪ್ರವಾಹ ಘಟನೆ' ಸದವಕಾಶವನ್ನು ಕಲ್ಪಿಸಿತು. ಅವರ ಮಾತೃಪ್ರೇಮ ವಿಶ್ವಪ್ರೇಮಕ್ಕೇರಿತು. ತಮಗೆ

ಸಾಧ್ಯವಾದಷ್ಟು ಹಣ ವಸ್ತ್ರಾದಿಗಳನ್ನು ಸಂಗ್ರಹಿಸಿ ಜನತೆಗೆ ನೀಡಿದರು. ತಮ್ಮ ಮನೆ 'ಚಿನ್ನದ ಹೊಸ್ತಿಲ'ನ್ನು ಅಭಯಾಶ್ರಮವನ್ನಾಗಿಸಿದ್ದು ಅವರಿಗೆ ದೇಶಭಕ್ತಿ-ವಿಶ್ವಪ್ರೇಮವನ್ನು ಅಮರವಾಗಿಸಿತು. ಇದು ಮೊದಲ್ಗೊಂಡು ಪ್ರಾರಂಭವಾದ ಅವರ ಸಮಾಜ ಸಂಧಾರಣಾ ಚಟುವಟಿಕೆ ಸ್ತ್ರೀ ಆಂದೋಲನದತ್ತ ಹಾಯಿತು. ಗೋಖಲೆಯವರು ನೀನು ನನ್ನ ಸಂಗಡ ದೀಕ್ಷೆ ತೊಡು ; ನನ್ನ ಜೀವನ, ನನ್ನ ಪ್ರತಿಭೆ, ನನ್ನ ಹಾಡು, ನನ್ನ ನುಡಿ, ನನ್ನ ಆಲೋಚನೆ ಮತ್ತು ನನ್ನ ಕನಸು ಇವೆಲ್ಲ ಮಾತೃಭೂಮಿಗೆ ಮುಡಿಪು" ಎಂದಿತ್ತ ಆಶೀರ್ವಚನವನ್ನು ತಲೆಯ ಮೇಲೆ ಹೊತ್ತು ನಡೆದರು. ಮೆಲ್ಲಮೆಲ್ಲಗೆ ರಾಜಕೀಯವನ್ನು ಪ್ರವೇಶಿಸಿದರು.

ರಾಜನೀತಜ್ಞಳಾಗಿರದ ಸರೋಜಿನೀಯವರು ಕೈಗೊಂಡ ನಿರ್ಧಾರ ಕೇಳಿ 'ಇದು ಸರಿಯೆ ?' ಎಂದು ತಲೆಕೆಡಿಸಿಕೊಂಡುದ್ದುಂಟು. ಇದಕ್ಕೆ ಕೃತಿಕಾರರು ಕೊಡುವ ಉತ್ತರ ವಿದು. ಸರೋಜಿನಿಯವರಲ್ಲಿದ್ದ "ಕವಿ ನಷ್ಟವಾಗಲಿಲ್ಲ. ಅವನು ವಿಕಸಿತವಾಗಿ ಬಂಧನಗಳನ್ನು ಬಿಚ್ಚಿ, ಸೀಮೆಗಳನ್ನು ದಾಟಿ ಹೊರಗೆ ಬಂದ" ನಿಜ. 'ರವಿ ಕಾಣದ್ದನ್ನು ಕವಿ ಕಂಡ'ನಂತೆ. ಒಬ್ಬ ಕವಿಯನ್ನು ಯಾವುದೇ ಕಟ್ಟುಗಳು ಬಂಧಿಸಲಾರವು. ಅವನು ಹೇಗೆಂದರೆ ಹಾಗೆ ವಿಹರಿಸಬಲ್ಲ. ನಲಿಯಬಲ್ಲ, ಈಜಬಲ್ಲ. ಆದರೆ ಸರೋಜಿನಿಯವರ ಎದುರಿದ್ದ ಸಮಸ್ಯೆ ಒಂದೇ 'ಭಾರತಮಾತೆಯ ಬಂಧನ ಮುಕ್ತತೆ'. ಕವಿತ್ವದ ಭಾವುಕತೆಯನ್ನು ಕಳಚಿಕೊಳ್ಳಲು ಸಾಧ್ಯವಾದ್ದರಿಂದಲೇ ಸರೋಜಿನೀಯವರಿಗೆ ರಾಜಕೀಯ ಒಗ್ಗಿತು. ಇಲ್ಲದಿದ್ದಲ್ಲಿ ಇವೆರಡನ್ನೂ ಸರಿತೂಗಿಸಲಾರದೆ ಮುಗ್ಗರಿಸುವ ಸಾಧ್ಯತೆಯೂ ಹೆಚ್ಚಿತ್ತು.

1915ರಲ್ಲಿ ಸರೋಜಿನಿಯವರು ಮೊತ್ತಮೊದಲ ಬಾರಿ ಸ್ವರಾಜ್ಯ ಕುರಿತು ಭಾಷಣಮಾಡಿದರು. ಅಲ್ಲಿಂದ ಮುಂದೆ ಇಂಥ ಭಾಷಣಗಳು ಮೇಲಿಂದ ಮೇಲೆ ಜರಗುತ್ತಲೇ ಸಾಗಿದವು. ಜಗತ್ತಿಗೆ ಸರೋಜಿನಿಯ 'ಕರ್ತೃತ್ವ ಶಕ್ತಿ, ಅರಿವು ಮೂಡತೊಡಗಿತು. ಆದರೆ ಇದೇ ವರ್ಷ ತಂದೆ ಚಟ್ಟೋಪಾಧ್ಯಾಯರು ನಿಧನರಾದರು. ರಾಜಕೀಯ ಕೈದೀವಿಗೆಯಾಗಿಸಿಕೊಂಡಿದ್ದ ಗೋಖಲೆಯವರೂ ನಿಧನರಾದರು. ಹೆತ್ತ ತಂದೆ ಹೊತ್ತ ತಂದೆ ಇಬ್ಬರನ್ನೂ ಕಳೆದುಕೊಂಡು ಇವರು ತಬ್ಬಲಿಯಾದರು. ಆಗ ಅವರು ತೋರಿದ ಸಂಯಮ ಹೆಮ್ಮೆತರಿಸುವಂತಹುದು. ಎದೆಗುಂದದೆ ಗಾಂಧೀಜಿಯವರನ್ನೇ ತಮ್ಮ ಕೈದೀವಿಗೆಯನ್ನಾಗಿಸಿಕೊಂಡರು.

ಗಾಂಧೀಜಿ–ಸರೋಜಿನಿಯವರ ಪರಿಚಯ ಹೊಸತಲ್ಲ. ಆದರೆ ಮುಖತಃ ಬೆಟ್ಟಿಯಾದುದು 'ಇಂಗ್ಲೆಂಡ್ ರಾಯಲ್ ಸೊಸೈಟಿಯವರಿಂದ ಸನ್ಮಾನಿತರಾಗಲು (ಗೌರವ ಸಮಾರಂಭ) ಸರೋಜಿನೀಯವರು ಲಂಡನ್ನಿಗೆ ತೆರಳಿದಾಗ. ಅದೇ ವೇಳೆಗೆ ಲಂಡನ್ನಿನಲ್ಲಿ ಗಾಂಧೀಜಿಯವರು ತಮ್ಮ ಪತ್ನಿ ಕಸ್ತೂರಿಬಾ ಅವರೊಂದಿಗೆ ನಿರಾಶ್ರಿತರಿಗೆ ಉಚಿತ 'ಚಿಕಿತ್ಸೆ'ಯನ್ನು ಒದಗಿಸುವ ಕಾರ್ಯದಲ್ಲಿ ತೊಡಗಿದ್ದರು. ಇದೇ ನೆಪದಿಂದ ಸರೋಜಿನಿ

ಯವರು ಗಾಂಧೀಜಿಯವರನ್ನು ಕಂಡಾಗ ಅವರಿದ್ದ ಸ್ಥಿತಿಯಿದು "ಯಾವ ನಾಜೂಕು ಇಲ್ಲದ ಹಳೆಯ ಮನೆ....ಮೇಲೆ ಹತ್ತಲು ಕಡಿದಾದ ಮೆಟ್ಟಿಲು ... ಬಾಗಿಲೇ ಚೌಕಟ್ಟಾದರೆ, ಆ ಚೌಕಟ್ಟಿನೊಳಗೆ ಒಂದು ಜೀವಂತ ವ್ಯಕ್ತಿಯ ಚಿತ್ರವಿತ್ತು. ತಲೆ ಬೋಳಿಸಿಕೊಂಡ ಒಂದು ಪುಟ್ಟ ವ್ಯಕ್ತಿ ನೆಲದ ಮೇಲೆ ಹಾಸಿದ್ದ ಕರಿಯ ಕಂಬಳಿಯ ಮೇಲೆ ಕುಳಿತಿತ್ತು. ಟೊಮಾಟೋ ಹಣ್ಣನ್ನು ಸೆರೆಮನೆಯ ಮರದ ಬೋಗುಣಿಯಲ್ಲಿದ್ದ ಆಲೀವ್ ಎಣ್ಣೆಯಲ್ಲಿ ಅದ್ದಿ ತಿನ್ನುತ್ತಿತ್ತು" (ಪುಟ ೫೨) ಇಂಥ ಭಾಗ್ಯವಿಧಾತೃವಿನ ಸಖ್ಯ ಬಯಸಿ ಬಂದಿದ್ದ ಶ್ರೀಮಂತ ಸರೋಜಿನೀ ಗಾಂಧೀಜಿಯವರು ತೊಟ್ಟಿದ್ದ ವಕ್ರ ರೀತಿಯ ಉಡುಪನ್ನು ಕಂಡು 'ಗೊಳ್ಳೆಂದು' ನಕ್ಕರಂತೆ. ಈ ಭಾವ ಬಹುಕಾಲ ನಿಲ್ಲಲಿಲ್ಲ. ಸಹವಾಸ ದಟ್ಟವಾದಂತೆ "ಗಾಂಧೀಜಿ ಮಣ್ಣಿನಲ್ಲಿ ಮಹಾಪುರುಷರನ್ನು ಮಾಡುವ ವ್ಯಕ್ತಿ" ಎಂದು ಅನುಭವಕ್ಕೆ ಬಂದಿತಂತೆ.

1914 ರಲ್ಲಿನ ಮೊದಲನೆ ಮಹಾಯುದ್ಧದ ಪ್ರಾರಂಭವಾದಾಗ ಸರೋಜಿನೀಯವರು 'ಬ್ರಿಟಿಷರು ಪರಕೀಯರಲ್ಲ–ನಮ್ಮವರೇ" ಎಂದು ನಂಬಿ. ಅವಶ್ಯಕ ಧನಧಾನ್ಯ ಶೇಖರಿಸಿದ್ದು ಅವರ ವಿಶಾಲ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ಆದರೆ ಸಮಯ ಬಂದಾಗ ಅಷ್ಟೇ ಕಟುವಾಗಿ ಟೀಕಿಸುತ್ತಿದ್ದರು ; ನಿರ್ದಯೆಯಿಂದ ವರ್ತಿಸುತ್ತಿದ್ದರು. ಉದಾಹರಣೆಗೆ 1919 ರಲ್ಲಿ ಭಾರತೀಯರಾರೂ ಬಂದೂಕು ಮೊದಲಾದ ಆಯುಧಗಳನ್ನು ಹೊಂದಬಾರದೆಂಬ 'ಆರ್ಮ್ಸ್ ಆಕ್ಟ್ (Arms act)ಅನ್ನು ತೀವ್ರವಾಗಿ ವಿರೋಧಿಸಿದರಲ್ಲದೆ, ತುಂಬಿದ ಸಭೆಯಲ್ಲಿ, ಗೌರ್ನರರು ಉಪಸ್ಥಿತರಿದ್ದು ಬ್ರಿಟಿಷರ ಸಾಮ್ರಾಜ್ಯಶಾಹಿ ಧೋರಣೆಯನ್ನು ಟೀಕಿಸಿದ್ದು-ಗಮನಿಸಬಹುದಾದುದು. ಇಂಥ ಪ್ರಯೋಗ ಒಂದಲ್ಲ ಎರಡಲ್ಲ ಹಲವಾರು. ಕ್ಯಾಥರೀನ್ ಮೇಯೋ ಎಂಬ ಅಮೆರಿಕನ್ ಮಹಿಳೆ ತನ್ನ ಕೃತಿಯಾದ 'Mother India" ದಲ್ಲಿ 'ಭಾರತ ಕೊಚ್ಚೆ ಗುಂಡಿ, ಸೂಳೆಗೇರಿ', 'ಭಾರತದಲ್ಲಿ ತಮ್ಮನ್ನು ತಾವು ಆಳಿಕೊಳ್ಳಬಲ್ಲಂಥ ಜನರಿಲ್ಲ' ಎಂದೆಲ್ಲಾ ತುಚ್ಛ ಹೇಳಿಕೆಯನ್ನು ನೀಡಿದ್ದರು. ಗಾಂಧೀಜಿ ಇದನ್ನು 'ಗಲ್ಲಿ ಇನ್ಸ್‌ಪೆಕ್ಟರ್ ವರದಿ' ಎಂದು ತಳ್ಳಿ ಹಾಕಿದರು. ಆದರೆ ಸರೋಜಿನಿ ಕನಲಿ ಕೆಂಡವಾದರು. ಭಾರತದ ನೈಜ ಸ್ವರೂಪವನ್ನು ವಿದೇಶಿಗೆ ಪರಿಚಯಿಸಲು ದೀರ್ಘ ಪ್ರಯಾಣವನ್ನೇ ಕೈಗೊಂಡರು. ಇಂಥ ಸಂದರ್ಭದಲ್ಲಿ ಎದುರಾದ ಪತ್ರಿಕಾ ಪ್ರತಿನಿಧಿಯೊಬ್ಬರು 'ಕ್ಯಾಥರೀನ್ ಮೇಯೋ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಎಂದು ಕೇಳಿದರಂತೆ, ಸರೋಜಿನೀಯವರು "ಕ್ಯಾಥರೀನ್ ಮೇಯೋ ! ಯಾರೀಕೆ ?" ಎಂದು ಮರುಪ್ರಶ್ನಿಸಿದರಂತೆ. ಈವೊಂದು ಮಾತು ಕ್ಯಾಥರೀನ್ ಬಗ್ಗೆ ಅವರು ತಳೆದಿದ್ದ ಧೋರಣೆ, ರೊಚ್ಚು ಮೊದಲಾದ ಭಾವವನ್ನು ಒಮ್ಮೆಗೆ ಸ್ಪಷ್ಟಪಡಿಸುತ್ತದೆ. ಇಂತಹುದೇ ಮತ್ತೊಂದು ಸಂದರ್ಭ. ದಕ್ಷಿಣ ಆಫ್ರಿಕಾಗೆ ಆಮಂತ್ರಣವನ್ನು ಸ್ವೀಕರಿಸಿ ಹೋಗಿದ್ದ ಸರೋಜಿನೀಯವರನ್ನು ಸೇನಾಪತಿ 'ಹೆರಟ್ಜೋಜರ' 'ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರು ತಮ್ಮ ಸ್ವದೇಶಕ್ಕೆ ಏಕೆ ಹೋಗಬಾರದು ?' ಎಂದು

ಪ್ರಶ್ನಿಸಿದರು. ತಕ್ಷಣ ಇವರು 'ದಕ್ಷಿಣ ಆಫ್ರಿಕಾದಲ್ಲಿ ನೆಲಸಿರುವ ಹಾಲೆಂಡಿನವರಾದ ನೀವು ನಿಮ್ಮ ಸ್ವದೇಶವಾದ ನೆದರ್‌ಲ್ಯಾಂಡ್ಸಿಗೆ ಏಕೆ ಹೋಗಬಾರದು ?' ಎಂದು ಕೇಳಿದಾಗ ಸೇನಾಪತಿ ಉತ್ತರಿಸಲಾಗದೆ ಕಕ್ಕಾಬಿಕ್ಕಿಯಾದರಂತೆ- ಇಂಥ ಸ್ವಾರಸ್ಯಗಳು ಸರೋಜಿನೀಯ ಬಾಳಪುಟದಲ್ಲಿ ಎಷ್ಟೋ ಇವೆ. ಇವೆಲ್ಲ ಸರೋಜಿನೀಯವರ ಸೂಕ್ಷ್ಮ ಪ್ರಜ್ಞೆ ಸನ್ನಿವೇಶವನ್ನು ಎದುರಿಸುವ ತಾಕತ್ತು, ಮಿಗಿಲಾಗಿ ಅವರಲ್ಲಿದ್ದ 'ಸರಸಹೃದಯ' ವನ್ನು ತೋರಿಸುತ್ತದೆ. ಎಂಥ ಆಪತ್‌ಸ್ಥಿತಿಯಲ್ಲಿ 'ನಗು'ವನ್ನು ಕಳೆದುಕೊಂಡವರಲ್ಲ. ನಗುತ್ತಲೇ ಭೀಕರ ಪರಿಣಾಮವನ್ನು ಎದುರಿಸಬಲ್ಲ ಧೀರೆ ಇವರು.

ಮೊದಮೊದಲು ಕಾಂಗ್ರೆಸ್ ಅಧಿವೇಶನಕ್ಕೆ ಭಾರತೀಯ ಸ್ತ್ರೀ ಅಧ್ಯಕ್ಷಿಣಿಯಾಗಿ ಸರೋಜಿನೀನಾಯ್ಡುರವರು 1925 ರಲ್ಲಿ ಆಯ್ಕೆಯಾದರು. ಗಾಂಧೀಜಿಯವರ ಬಹು ದಿನದ ಹಂಬಲವೂ ಇದಾಗಿತ್ತು. ಅಧಿವೇಶನ ಕಾನ್ಪುರದಲ್ಲಿ ನಡೆಯಿತು. ರಾಜರಿಂದ ವಿದ್ಯಾರ್ಥಿಗಳವರೆಗೂ ಸಭಾಸದನ ತುಂಬಿತ್ತು. ಅಧ್ಯಕ್ಷಿಣಿಯವರನ್ನು ಪರಿಚಯಿಸುತ್ತಾ ಗಾಂಧೀಜಿಯವರು "ಈ ಮಹಾಗೌರವ ಈ ವರ್ಷ ಸರೋಜಿನೀಗೆ ದೊರೆತದ್ದು ಈಕೆಯ ಹಕ್ಕು" ಎಂದಿದ್ದಾರೆ. ಮಾತನ್ನು ತೂಕ ಮಾಡುವ ಗಾಂಧೀಜಿಯವರು ಇದು 'ಈಕೆಯ ಹಕ್ಕು' ಎಂದು ನಿರ್ಧರಿಸುವಲ್ಲಿ, ಅದರ ಹಿನ್ನೆಲೆಯಲ್ಲಿ ಸರೋಜಿನೀಯವರು ವಹಿಸಿರುವ 'ಶ್ರಮ'ದ ಅರಿವು ನಮಗೆ ಊಹಿಸಲು ಅಸಾಧ್ಯವೇ ! ಈ ಅಧಿವೇಶನಕ್ಕೆ ಠಾಕೂರರು ಕಳುಹಿಸಿದ ಸಂದೇಶ ಹೀಗಿತ್ತು-'ನಮ್ಮ ಅಧ್ಯಕ್ಷಿಣಿ ಸ್ತ್ರೀಯೂ ಹೌದು, ಕವಿಯೂ ಹೌದು ಕಾಂಗ್ರೆಸ್ಸಿನ ಚಟುವಟಿಕೆಗಳನ್ನು ಪ್ರೇಮದ ಹಾಗು ಸೇವೆಯ ದಿಸೆಯಲ್ಲಿ ಕೊಂಡೊಯ್ಯುವ ಶಕ್ತಿಯುಳ್ಳವರು. ಬಡತನ, ಅಜ್ಞಾನ, ರೋಗ ರುಜಿನ ಹಾಗೂ ಅನೈಕ್ಯಮತ್ಯದಿಂದ ನಮ್ಮ ಮಹಾತಾಯಿಯ ಎದೆ ಹಾಲು ಬತ್ತಿದೆ ; ದೇಹ ಕುಟುಕು ಜೀವ ಹಾಕುತ್ತಿದೆ; ಸಂತೋಷವೆಂಬ ಬೆಳಕು ನಂದಿಹೋಗುತ್ತಿದೆ. ಇಂತಹ ಭಾರತದ ಜನತೆಯ ತೊಟ್ಟಿಲನ್ನು ತೂಗಿ ಸರೋಜಿನಿ ಮಕ್ಕಳನ್ನು ಸಾಕುವಳೆಂದು ನಾನು ಸಂಪೂರ್ಣ ನಂಬಿದ್ದೇನೆ" (ಪುಟ ೭೬). ಕಾವ್ಯದ ತುಣುಕಾಗಿ ಕಾಣುವ ಈ ವಾಕ್ಯ ಪುಂಜವಷ್ಟೇ ಸಾಕು ಸರೋಜಿನಿಯವರ ಮಹತ್ವವನ್ನು ತೂಗಲು.

ಗಾಂಧೀಜಿಯವರು 'ದಂಡಿ' ಯಲ್ಲಿ ಕೈಗೊಂಡ 'ಉಪ್ಪಿನ ಸತ್ಯಾಗ್ರಹ" ದಲ್ಲಿ ಸರೋಜಿನೀಯವರು ವಹಿಸಿದ ಪಾತ್ರ ಚಿರಸ್ಮರಣೀಯ. ಗಾಂಧೀಜಿಯವರು ದಸ್ತಗಿರಿಯಾದರೂ ಹಿಮ್ಮೆಟ್ಟದೆ ಸ್ತ್ರೀ ಸೇನೆಯನ್ನೆ ಕಟ್ಟಿ ಕಾನೂನನ್ನು ಉಲ್ಲಂಘಿಸಲು ಮುಂದಾದರು. 'ದರಸನ' ಎಂಬ ಉಪ್ಪಿನ ಕೋಠಿಯ ಮೇಲೆ ದಾಳಿ ಮಾಡಿದ್ದು ಎಂಥ ಕೆಲಸವಾದರೂ ಸಮರ್ಥವಾಗಿ ನಿರ್ವಹಿಸಬಲ್ಲರು ಎಂಬುದನ್ನು ತೋರಿಸುವುದು, ಪೋಲೀಸರು ದೌರ್ಜನ್ಯದಿಂದ ವರ್ತಿಸಿದಾಗಲೂ ಸರೋಜಿನಿ ಗಾಂಧೀಜಿಯವರ 'ಅಹಿಂಸಾ ತತ್ವ'ವನ್ನು ಪಾಲಿಸಿದ್ದಲ್ಲದೆ ಅದೇ ಮಾರ್ಗದಲ್ಲಿ ನಡೆಯುವಂತೆ ತಮ್ಮ ಹಿಂಬಾಲಕರಲ್ಲಿ ವಿನಂತಿಸಿದ್ದು 'ಗಾಂಧೀತತ್ವ'ದ ಮೇಲಿದ್ದ ಅಚಲ ನಂಬಿಕೆಯನ್ನು ದೃಢ ಪಡಿಸುತ್ತದೆ.

ಇವರಿಂದ ಸೆರೆಮನೆ ವಾಸ ಸೇರಬೇಕಾಯಿತಾದರೂ ನಗು ಮುಖದಿಂದಲೇ ಅದನ್ನು ಸ್ವಾಗತಿಸಿದ ಇವರ 'ಸ್ಥಿತಿ ಪ್ರಜ್ಞೆ' ಗಣಿಸುವಂತಹುದು. ಸರೋಜಿನಿಯವರ ಇಂಥ ವ್ಯಕ್ತಿತ್ವವೇ "ಅಮ್ಮಾಜಾನ್" ಎಂಬ ಹೆಸರನ್ನು ಪಡೆಯಿತು. ಗಾಂಧೀಜಿಯವರು ಪ್ರೀತಿಯಿಂದ "ಅಮ್ಮಾಜಾನ್" ಎಂದು ನಾಮಕರಣ ಮಾಡಿದರು. ಅಮ್ಮಾಜಾನ್ ಎಂದರೆ ದೊಡ್ಡಮ್ಮ ಎಂದರ್ಥ.

ನೋಡುವವರ ದೃಷ್ಟಿಯಲ್ಲಿ ಸರೋಜಿನೀಯವರು ಒಬ್ಬ ಹೆಣ್ಣು. ನಿಜದೃಷ್ಟಿಯಲ್ಲಿ ಭಾರತ ಸ್ತ್ರೀಕೋಟಿಯ ಪ್ರತಿನಿಧಿ. ಇವರನ್ನು ಬಂಧಿಸಿದಾಗ ವಿಠಲಬಾಯಿ ಪಟೇಲರು "ಭಾರತಕ್ಕೂ ಬ್ರಿಟಿಷ್ ಸಾಮ್ರಾಜ್ಯಕ್ಕೂ ಹೊಂದಾಣಿಕೆಯ ಮಾತು ಇನ್ನು ಮುಗಿಯಿತು" (ಪುಟ ೮೮) ಎಂದು ಉದ್ಗರಿಸಿದರಂತೆ, ಲಂಡನ್ನಿನಲ್ಲಿ ನಡೆದ 'ರೌಂಡ್ ಟೇಬಲ್ ಕಾನ್ಫರೆನ್ಸ್'ನಲ್ಲಿ ಗಾಂಧೀಜಿಯವರೊಂದಿಗೆ ಸ್ತ್ರೀ ಪ್ರತಿನಿಧಿಯಾಗಿ ಸರೋಜಿನಿಯವರು ಭಾಗವಹಿಸಿದ್ದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ವಹಿಸಿದ್ದ ಪಾತ್ರ, ಹೊಣೆಗಾರಿಕೆಯನ್ನು ಸೂಚಿಸುವುದು.

ಇಷ್ಟೊಂದು ರಾಜಕೀಯದ ಮಧ್ಯದಲ್ಲಿಯೂ ಸರೋಜಿನೀಯವರು ತಾವು 'ಮಾತೆ' ಎಂಬುದನ್ನು ಮರೆಯಲಿಲ್ಲ. 'ಅವರ ಮಾತೃತ್ವ ರಾಜಕೀಯ ನೀತಿಯನ್ನು ಮೀರಿನಿಂತದ್ದೇ ಆಗಿತ್ತು' ಸೆರೆಮನೆಯಲ್ಲಿ ಉಪವಾಸ ಕೈಗೊಂಡಿದ್ದ ಗಾಂಧೀಜಿಯವರ ಆರೋಗ್ಯ ಹದಗೆಟ್ಟಾಗ ಅವರನ್ನು ನೋಡಿಕೊಳ್ಳಲು ಸರೋಜಿನೀಯವರನ್ನು ನೇಮಿಸಲಾಯಿತು. ಅಲ್ಲಿದ್ದ ಕೆಲವೇ ದಿನಗಳ ಅವಧಿಯಲ್ಲಿ ಸರೋಜಿನೀಯವರು ಗುಲಾಬಿ ಸಸಿಯೊಂದನ್ನು ನೆಟ್ಟು ಸಾಕಿದ್ದರಂತೆ. ಇನ್ನೇನು ಅದು ಹೂ ಬಿಡಬೇಕು ಎನ್ನುವ ವೇಳೆಗೆ 'ಬಿಡುಗಡೆ' ಎಂಬ ಸುದ್ದಿ ಕೇಳಿ ದುಃಖಪಟ್ಟು 'ಇನ್ನೊಂದು ವಾರ ಇಲ್ಲಿಯೇ ಇರಿಸಿ' ಎಂದು ಜೈಲರನ್ನು ಕೇಳಿಕೊಂಡರಂತೆ. ಕಸದಲ್ಲಿ ರಸವನ್ನು ಸಂಗ್ರಹಿಸುವ ಇವರು ಬೇಕೆಂದಾಗ 'ಸುಖ'ವನ್ನು ಇದ್ದ ಪರಿಸರದಲ್ಲೇ ದೊರೆಯುವ ಸಾಮರ್ಥ್ಯವುಳ್ಳವರು.

ಹೀಗೆ ಪ್ರಾರಂಭವಾದ ಸ್ವಾತಂತ್ರ್ಯ ಆಂದೋಲನ ಗಾಂಧೀಜಿ, ನೆಹರೂ, ಬಾಬು ರಾಜೇಂದ್ರಪ್ರಸಾದ್, ಮೊದಲಾದವರ ನಾಯಕತ್ವದಲ್ಲಿ ಮುಂದುವರೆದು ಕೊನೆಗೆ 1947ರಲ್ಲಿ "ಸ್ವಾತಂತ್ರ್ಯ"ವನ್ನು ಪಡೆಯಿತು. ಸರೋಜಿನೀಯವರ ಮೂವತ್ತು ವರ್ಷದ ಸ್ತ್ರೀ ಆಂದೋಲನದ ಯಾತ್ರೆಯೂ ಅಂದಿಗೆ ಕೊನೆಯಾಯ್ತು. ಸರೋಜಿನೀಯವರು ಅಧಿಕಾರವನ್ನು ಬಯಸಿರಲಿಲ್ಲವಾದರೂ ಗೌರ್ನರ್ ಹುದ್ದೆ ಅವರನ್ನು ಸ್ವಾಗತಿಸಿತು. ಹೀಗಾಗಿ ಉತ್ತರಪ್ರದೇಶದ ಗೌರ್ನರ್ ಆದರು. ಮುಂದೆ ಅವರು ಬಹುಕಾಲ ಬದುಕಲಿಲ್ಲ. ಹುಟ್ಟಿನಿಂದಲೇ ಆರೋಗ್ಯವಂಚಿತರಾಗಿಯೂ ಎಪ್ಪತ್ತು ವಸಂತಗಳ ರುಚಿ ಉಂಡಿದ್ದ ಇವರ ದೇಹ 1949ರ ಮಾರ್ಚಿ 3ರಂದು ಹಸ್ತಗತವಾಯಿತ್ತು

ಸರೋಜಿನೀಯವರ ದಿವ್ಯ ಚೇತನ 'ಯಾವ ವಿಶೇಷಣಕ್ಕು ಸಿಲುಕದಂತದ್ದು', ಇವರು 'ಪಾಂಡಿತ್ಯದಲ್ಲಿ ಅನಸೂಯ, ಮೈತ್ರೇಯಿ ಹಾಗೂ ಗಾರ್ಗೇಯರನ್ನೂ, ದೇಶ

ಪ್ರೇಮದಲ್ಲಿ ರಾಣಿ ಲಕ್ಷ್ಮಿಬಾಯಿ ಮತ್ತು ಫ್ರಾನ್ಸಿನ ಜೋನ್ ಆಫ್ ಆರ್ಕಳನ್ನೂ, ಶೀಲದಲ್ಲಿ ರಾಣಿ ಅಹಲ್ಯಾಬಾಯಿಯನ್ನೂ, ಸ್ತ್ರೀ ಸ್ವಾತಂತ್ರ್ಯ ಗಳಿಸಿದವರಲ್ಲಿ ಶ್ರೀಮತಿ ಪ್ಯಾಂಕ್ ಹರ್ಸ್ಟ್ ಮತ್ತು ಎಲಿನಾರ್ ರೂಸವೆಲ್ಟರನ್ನೂ, ಪಾರ್ಲಿಮೆಂಟರಿ ಕಾರ್ಯಕ್ಷೇತ್ರದಲ್ಲಿ ಶ್ರೀಮತಿ ವಿಲ್ಕಿನ್‌ಸನ್ನರನ್ನೂ, ಸಾಹಿತ್ಯ ಪ್ರತಿಭೆಯಲ್ಲಿ ಶ್ರೀಮತಿ ಪರ್ಲ್ ಬಕ್ಕರನ್ನು, ರಸಮಯ ಮಾತುಕತೆ ಹಾಗೂ ಸಂಭಾಷಣೆಯಲ್ಲಿ ಮಾಡಾಂದೆ ಸ್ಟೆಯಲಿರನ್ನೂ ಮತ್ತು ಮಾಡಾಂ ರೋಲಾಂಡರನ್ನು ಹೋಲುತ್ತಿದ್ದರು" (೧೧೫) ಇವರು "ಪ್ರಜ್ವಲಿಸಿದ ಪ್ರಸಿದ್ಧವ್ಯಕ್ತಿ, ಕವಿಯಾಗಿ ಪ್ರಾರಂಭವಾದ ಅವರ ಬಾಳು ಕಾಗದ ಮಸಿಗಳಿಂದ ಕವಿತೆ ಕಟ್ಟುವುದನ್ನು ಬಿಟ್ಟು ಇಡೀ ಜೀವನವನ್ನೇ ಕಾವ್ಯಮಯವಾಗಿ, ಗಾನಮಯವಾಗಿ ಮಾಡುವುದರಲ್ಲಿ ಪರ್ಯಾವಸಾನಗೊಂಡಿತು" ಎಂಬ ಕೃತಿಕಾರರಾದ ಎಚ್. ಎಲ್. ನಾಗೇಗೌಡರ ಹೇಳಿಕೆಯೂ ಅಷ್ಟೇ ಸತ್ಯಪೂರ್ಣವಾದುದು ; ಗಮನಾರ್ಹವಾದುದು.

ಇನ್ನು 'ಕೃತಿ'ಯ ವಿಚಾರವಾಗಿ ಒಂದೆರಡು ಮಾತು. ಎಚ್.ಎಲ್. ನಾಗೇಗೌಡರು ಕೃತಿಗೆ ತಮ್ಮದೇ ಆದ ರೀತಿಯಲ್ಲಿ 'ಬಂಧ'ವನ್ನು ಬಳಸಿದ್ದಾರೆ ; ಸರೋಜಿನೀಯವರು ಹುಟ್ಟುವುದಕ್ಕೆ ಮೊದಲು ಅವರ ತಂದೆತಾಯಿಯವರ ವಿಚಾರ, ಸರೋಜನೀಯವರು ಹುಟ್ಟುವಾಗ ಅವರಿದ್ದ ಪರಿಸ್ಥಿತಿ, ಸರೋಜಿನೀಯವರ ಬೆಳವಣಿಗೆ, ಪ್ರತಿಭೆ, ಪ್ರೇಮ, ವಿವಾಹ, ದಾಂಪತ್ಯ—ಹೀಗೆ ಹಂತ ಹಂತವಾಗಿಯೇ 'ವಸ್ತು'ವನ್ನು ನಿರೂಪಿಸುತ್ತಾ, ಅವಶ್ಯಕವೆನ್ನುವಲ್ಲಿ ಸ್ವಾರಸ್ಯ ಘಟನೆಗಳನ್ನೂ ಬೆಸೆಯುತ್ತಾ ಸಾಗಿರುವ ಕೃತಿಕಾರರ ಜಾಣ್ಮೆ ಮೆಚ್ಚುವಂತಹುದು. ಅಲ್ಲದೆ ಪ್ರತಿಯೊಂದು ಹಂತದ ನಿರೂಪಣೆಗೂ ಪ್ರತ್ಯೇಕವಾಗಿ 'ಶಿರೋನಾಮೆ'ಯನ್ನು ಬಳಸಿದ್ದಾರೆ. ಬಳಸಿದರೆ ಸಾಲದು, ಸಾರ್ಥಕವಾದ ನಿರೂಪಣೆಯನ್ನೂ ಅಳವಡಿಸಿದ್ದಾರೆ. ಉದಾಹರಣೆಗೆ ಸರೋಜವರಳಿತು—ಕೋಗಿಲೆ ಹಾಡಿತು (ಪುಟ ೨೩) 'ಬಾ ಇಲ್ಲದ ಬಾಪು' (ಪುಟ ೧೦೨) 'ಸರೋಜಿನಿಯಲ್ಲ—ಭಾರತದ ವೀರನಾರಿ' (ಪುಟ ೬೩) ಇತ್ಯಾದಿ. ಸರೋಜೀನಿಯವರ ಹುಟ್ಟಿನಿಂದ ಆರಂಭಗೊಂಡ ಕೃತಿ ಸಾವಿನೊಂದಿಗೆ ಮುಕ್ತಾಯವಾಗುವುದರಿಂದ 'ಸರೋಜಿನೀದೇವಿ' ಎಂಬ ಕೃತಿಯ ಹೆಸರೇ ಕೃತಿಯ 'ಬಂಧ'ವನ್ನು ಕಾಯ್ದುಕೊಂಡಿದೆ ಎನ್ನಲಡ್ಡಿಯಿಲ್ಲ.

ಕೃತಿಕಾರರು ಬಳಸಿಕೊಂಡಿರುವ ಭಾಷೆ ಸರಳವಾಗಿದೆ. ತೊಡಕಿಲ್ಲದೆ ಓದುಗರನ್ನು ನಿರರ್ಗಳವಾಗಿ ಓದಿಸಿಕೊಂಡು ಹೋಗುವುದು. ಕೆಲವೆಡೆಯಂತೂ ಒಂದೇ ವಾಕ್ಯ ಸಾಕು, ವ್ಯಕ್ತಿಯ ವ್ಯಕ್ತಿತ್ವವನ್ನು ಇಲ್ಲವೆ ಸಂದರ್ಭ ಚಿತ್ರಣವನ್ನು ಪ್ರತಿಬಿಂಬಿಸಲು ಅಷ್ಟು ಶಕ್ತಿಯುತವಾಗಿದೆ ಅವರ ಬರವಣಿಗೆ. ಉದಾಹರಣೆಗೆ 'ಸರೋಜಿನಿ' ಕಟ್ಟು ಕವಿಯಲ್ಲ ಹುಟ್ಟುಕವಿ' (ಪುಟ ೧೪) ; 'ಭಾರತದೇಶವು ಪುಣ್ಯಭೂಮಿಯಾಗಿದೆ; ಯಾತ್ರಾಸ್ಥಾನವಾಗಿದೆ ; ತೀರ್ಥಕ್ಷೇತ್ರವಾಗಿದೆ' (ಪುಟ ೧೮) ; 'ದೇವರುಗಳಿಗೆ ಸಾವಿಲ್ಲ' (ಪುಟ

೨೬) : 'ಜೀವನವು ಅಗಣಿತ ಮಕ್ಕಳಲ್ಲಿ ಹಂಚಿಹೋಗಿ ವಿಸ್ತೃತವಾಯಿತು' (ಪುಟ ೪೬) ಇತ್ಯಾದಿ. ಸ್ವಾರಸ್ಯವಾದ ಘಟನೆಗಳನ್ನು ಅಷ್ಟೇ ಸ್ವಾರಸ್ಯವಾಗಿ ಓದುಗರ ಮುಂದೆ ಇಡಬಲ್ಲರು ಎಚ್. ಎಲ್. ನಾಗೇಗೌಡರು. (ನೋಡಿ ಪುಟ. ೧೫, ೧೦೮ ಇತ್ಯಾದಿ). ಎಲ್ಲಕ್ಕೂ ಮಿಗಿಲಾಗಿ ಈ ಕೃತಿ ಚರಿತ್ರಾರ್ಹ ವಿಷಯಗಳನ್ನಾಯ್ದು ಚರಿತ್ರೆಗೆ ಭಂಗ ಬಾರದಂತೆ ಕೃತಿ ಸೃಷ್ಟಿಗೊಂಡಿರುವುದು ಕೃತಿಕಾರರ ಸಫಲತೆಯನ್ನೂ ವೈಶಿಷ್ಟ್ಯವನ್ನೂ ತೋರಿಸುತ್ತದೆ.

ಇದೊಂದು ಯಶಸ್ವೀಕೃತಿ ಎನ್ನಲು ಯಾವ ಅಡ್ಡಿಯಿಲ್ಲದಿದ್ದರೂ ದೋಷ ಮುಕ್ತ ಎಂದು ಹೇಳುವುದು ಔಪಚಾರಿಕವಾದೀತು. ಉದಾಹರಣೆಗೆ ಸರೋಜಿನೀ ದೇವಿಯವರ ಜೀವನದ ಇನ್ನೊಂದು ಮುಖವಾದ ರಾಜಕೀಯ ಚಿತ್ರಣವನ್ನು ಕೊಡುವಲ್ಲಿ, ರಾಜಕೀಯದಲ್ಲಿದ್ದರೂ ಮನೆಯ ಕಡೆಗಿದ್ದ ಅವರ ಒಲವು ನಿಲುವನ್ನು, ಮಧುರ ಬಾಂಧವ್ಯವನ್ನು ಸ್ಪಷ್ಟೀಕರಿಸದೆ, ಹೇಳುವ ಮಾತುಗಳು, ಕೃತಿಕಾರರ ಹೇಳಿಕೆಯಾಗಿಯೇ ಉಳಿದುಬಿಡುವುದು ; ಔಪಚಾರಿಕವಾಗಿ ತಂದಿರುವ ಸರೋಜಿನೀಯವರ ಸೋದರ ಹರೀಂದ್ರನಾಥ ಚಟ್ಟೋಪಾಧ್ಯಾಯರ ಪಾತ್ರ ಇತ್ಯಾದಿ. ಗಣಿಸುವಂತವು. ಇಷ್ಟಾದರೂ, ಈ ಯಾವ ಕೊರತೆಗಳೂ ಕೃತಿಯ ಒಟ್ಟುಮೌಲ್ಯಕ್ಕೆ ಭಂಗತರುವುದಿಲ್ಲ.

೫ | # ಬೆಟ್ಟದಿಂದ ಬಟ್ಟಲಿಗೆ

ಎಂ. ವಿ. ಸೀತಾರಾಮಯ್ಯ

ಒಂದು ಮುಖ್ಯ ವಿಚಾರದಲ್ಲಿ ಶ್ರೀ ಎಚ್.ಎಲ್. ನಾಗೇಗೌಡರು ದಿವಂಗತ ನವರತ್ನ ರಾಮರಾಯರು ಮತ್ತು ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರರು, ಇವರೊಂದಿಗೆ ಹೋಲಿಕೆಗೆ ಬರುತ್ತಾರೆ. ಈ ಮೂವರೂ ನಮ್ಮ ಸರ್ಕಾರದಲ್ಲಿ ಉನ್ನತ ಅಧಿಕಾರಸ್ಥಾನಗಳನ್ನು ಅಲಂಕರಿಸಿ ಬಹಳ ದಕ್ಷತೆಯಿಂದಲೂ ಪ್ರಾಮಾಣಿಕತೆಯಿಂದಲೂ ಅಧಿಕಾರ ನಿರ್ವಹಣೆ ಮಾಡಿ, ಜನಾನುರಾಗವನ್ನು ಗಳಿಸಿಕೊಂಡವರು, ಅಧಿಕಾರ ನಿಮಿತ್ತದಿಂದ, ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಸುತ್ತಾಡುವ, ಅಲ್ಲಿ ಕೆಲ ಕಾಲ ನೆಲಸುವ, ಸಾಮಾನ್ಯ ಜನರ ಜೀವನದೊಂದಿಗೆ ಬೆರೆಯುವ, ಅವರ ನೋವು ನಲಿವುಗಳನ್ನು ಕಂಡು ಅರಿಯುವ, ಅವರ ಕಲೆ, ಸಾಹಿತ್ಯ ಸಂಸ್ಕೃತಿಗಳ ಸಹಜ ಸೌಂದರ್ಯವನ್ನೂ ವೈವಿಧ್ಯವನ್ನೂ ಕಂಡು ನೋಡಿ ಅನುಭವಿಸಿ ಅವುಗಳ ಸಾರವನ್ನು ಗ್ರಹಿಸಿ ತಮ್ಮ ಜೀವನಾನುಭವದ ಒಂದು ಅಮೂಲ್ಯಭಾಗವನ್ನಾಗಿ ಮಾಡಿಕೊಳ್ಳುವ, ಅಪೂರ್ವ ಸದವಕಾಶಗಳನ್ನು ಪಡೆದವರು. ಹೀಗೆ ಪಡೆದುಕೊಂಡ ಗ್ರಾಮಾಂತರ ಪ್ರದೇಶಗಳ ಜೀವನಾನುಭವ ಹಾಗೂ ಪ್ರಕೃತಿ ಸೌಂದರ್ಯ ದರ್ಶನಾನುಭವಗಳು ಇವರ ಹಲವಾರು ಸಾಹಿತ್ಯಕೃತಿಗಳಿಗೆ ವಾಸ್ತವಿಕ ಹಿನ್ನೆಲೆಯನ್ನೂ ಮೂಲಸಾಮಗ್ರಿಯನ್ನೂ ಒದಗಿಸಿವೆ. ತಾವು ಪಡೆದುಕೊಂಡ ಜೀವನಾನುಭವವನ್ನು ಸಾರ್ಥಕವಾಗಿ ದುಡಿಸಿಕೊಂಡ ಮಹನೀಯರು ಇವರು.

ಶ್ರೀ ನಾಗೇಗೌಡರ ಲೇಖನ ವ್ಯವಸಾಯ ಪಾಶ್ಚಾತ್ಯ ಲೇಖಕರ ಆಂಗ್ಲಭಾಷಾ ಗ್ರಂಥಗಳನ್ನು ಆಧರಿಸಿ ಬರೆದ ಕೃತಿಗಳಿಂದ ಮೊದಲಾಯಿತು. 'ಪ್ರವಾಸಿ ಕಂಡ ಇಂಡಿಯಾ'. 'ಕೆನಿಲ್‌ವರ್ತ್', 'ಮಾರ್ಕೊಪೋಲೊ', ಮುಂತಾದ ಗ್ರಂಥಗಳ ಅನುವಾದ ಕಾರ್ಯದಲ್ಲಿ ಪಳಗಿದ ಇವರ ಕೈ ಸ್ವತಂತ್ರ ಕೃತಿಗಳ ರಚನೆಗೆ ತೊಡಗಿದಾಗ ವಸ್ತುನಿಷ್ಠ ನಿರೂಪಣ ವಿಧಾನಕ್ಕೆ ಬಹು ಸುಲಭವಾಗಿ, ಪರಿಣಾಮಕಾರಿಯಾಗಿ, ತೊಡಗಿಕೊಂಡಿತು. ವಿಸ್ತಾರವಾದ ಜೀವನಾನುಭವದಿಂದ ವಿಶಾಲವಾದ ಇವರ ದೃಷ್ಟಿ ಅನುವಾದ ಕಾರ್ಯದ ಫಲವಾಗಿ ಮತ್ತಷ್ಟು ವಿಶಾಲವಾಯಿತು, ಉದಾರವಾಯಿತು. ಲೇಖಕನಲ್ಲಿ ಅಗತ್ಯವಾಗಿ ಇರಬೇಕಾದ ಈ ಗುಣವನ್ನು ಇವರ ಸ್ವತಂತ್ರ ಕಾದಂಬರಿಗಳಲ್ಲಿ ಗುರುತಿಸಬಹುದು. ನಾಗೇಗೌಡರು ಜನಪದಸಾಹಿತ್ಯ ಮತ್ತು ಜನಪದಕಲೆಗಳಿಗೆ ಅಮೂಲ್ಯ ಕೃತಿಗಳ ಮೂಲಕ ಸಲ್ಲಿಸಿರುವ ಸೇವೆ ದೇಶ ಅವರ ಪರ್ಯಟನ ಫಲ.

ಈ ಚಿಕ್ಕಲೇಖನಕ್ಕೆ ವಿಷಯವಾದ 'ಬೆಟ್ಟದಿಂದ ಬಟ್ಟಲಿಗೆ' ಎಂಬ ಕೃತಿ ಬಹುಶಃ ಕನ್ನಡ ವಾಚಕಲೋಕಕ್ಕೆ ಅವರ ಇತರ ಕೃತಿಗಳಷ್ಟು ಪರಿಚಿತವಾಗಿರಲಾರದು. ನಾನು ಓದಿರುವ ಶ್ರೀ ಗೌಡರ ಕೆಲವು ಕೃತಿಗಳ ಪೈಕಿ ಇದು ಶ್ರೇಷ್ಠವಾದದ್ದೇನೂ ಅಲ್ಲ. ಈ ಕೃತಿಯನ್ನು ಲೇಖನದ ಲಘು ಸಮೀಕ್ಷೆಗೆ ಆಯ್ದುಕೊಂಡ ಉದ್ದೇಶಗಳಲ್ಲಿ ಮುಖ್ಯವಾದದ್ದು—ಶ್ರೀ ನಾಗೇಗೌಡರ ಅನೇಕ ಕೃತಿಗಳಲ್ಲಿ ಅಭಿವ್ಯಕ್ತವಾಗಿರುವಂತೆ, ಅವರು ನೆಲಸಿದ ನೆಲದ ಮಹಿಮೆ ಕೃತಿರಚನೆಗೆ ಹೇಗೆ ಪ್ರೇರಕವಾಗುತ್ತದೆ ಎನ್ನುವುದನ್ನು ತೋರಿಸುವುದು; ಈ ಕೃತಿ ಕಾಫಿ ಬೆಳೆಯನ್ನು ಕುರಿತಿದ್ದು ಕರ್ನಾಟಕದಲ್ಲಿ ಕೊಡಗನ್ನು ಬಿಟ್ಟರೆ ಕಾಫಿ ವ್ಯವಸಾಯಕ್ಕೆ ಹೆಸರಾದ ಚಿಕ್ಕಮಗಳೂರಿನಲ್ಲಿ ಅವರು ನೆಲಸದೆ ಹೋಗಿದ್ದರೆ ಈ ಕೃತಿಯನ್ನು ಅವರು ರಚಿಸುತ್ತಲೇ ಇರಲಿಲ್ಲವೇನೋ ಎಂದು ನನ್ನ ಭಾವನೆ. ಎರಡನೆಯದಾಗಿ, ಕಾಫಿ ಪ್ರಿಯನಾದ ನಾನು ಈ ಕೃತಿಯ ಬಗೆಗೆ ತಳೆದ ಸಹಜವಾದ ಆಸಕ್ತಿ. ಮೂರನೆಯದಾಗಿ, ಒಂದು ಸಾಮಾನ್ಯ ವಿಷಯವನ್ನು ಕುರಿತು ಕಥೆ ಕಾದಂಬರಿಯಂತೆಯೇ ಹೇಗೆ ಮನೋಜ್ಞವಾಗಿ ಬರೆಯಬಲ್ಲರು ಶ್ರೀ ನಾಗೇಗೌಡರು ಎನ್ನುವ, ನಾನು ಕಂಡುಕೊಂಡ ಸಂಗತಿಯನ್ನು ತಿಳಿಸುವುದು.

ಇನ್ನು ಪುಸ್ತಕದ ವಿಚಾರ: 'ಬೆಟ್ಟದಿಂದ ಬಟ್ಟಲಿಗೆ' ಎಂಬ ಹೆಸರು ('ಮರಳಿ ಮಣ್ಣಿಗೆ' ಎನ್ನುವಂತೆ) ಒಂದು ಕಾದಂಬರಿಯ ಹೆಸರಿನಷ್ಟೆ ಆಕರ್ಷಕವಾಗಿದೆ. ಪುಸ್ತಕದ (ನಾನು ನೋಡಿದ ಪ್ರಥಮ ಮುದ್ರಣದ) ಮೇಲು ಹೊದಿಕೆಯ ಚಿತ್ರ—ಅದರಲ್ಲಿ ಹಬೆಯಾಡುತ್ತಿರುವ ಕಾಫಿ ಪಾನೀಯವುಳ್ಳ ಬಟ್ಟಲು, ಕಾಫಿ ಪ್ರಿಯರಾದ ನನ್ನಂಥ ವಾಚಕರನ್ನು ಪುಸ್ತಕದ ಪುಟಗಳನ್ನು ತಿರುವಿಹಾಕಲು ಆಹ್ವಾನಿಸುತ್ತದೆ. ಹೊದಿಕೆಯ ಬಣ್ಣ ಕೂಡ ಕಾಫಿಯ ಕಥೆ ಎಂಬ ಮಾತು ಸರಸವಾಚನದ ಆಮಿಷದ ಬಲೆ ಬೀಸಿ ಓದುಗರನ್ನು ಸೆಳೆದುಕೊಳ್ಳುತ್ತದೆ.

ಕರ್ನಾಟಕ ರಾಜ್ಯದ ಕಾಫಿ ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ಒಂದಾದ ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದಾಗ ಶ್ರೀ ನಾಗೇಗೌಡರು ಅಲ್ಲಿನ ಕಾಫಿ ತೋಟಗಳ ಪ್ರತ್ಯಕ್ಷ ಪರಿಚಯ ಮಾಡಿಕೊಳ್ಳುವ ಸದವಕಾಶವನ್ನು ಪಡೆದಿದ್ದರು. ಜೊತೆಗೆ ಅಧಿಕಾರಸ್ಥಾನದಿಂದ ನಿವೃತ್ತರಾಗುವ ಮುನ್ನ ರಾಜ್ಯ ಲೇಬರ್ ಕಮಿಷನರ್ ಆಗಿದ್ದ ಗೌಡರಿಗೆ ಕಾಫಿ ತೋಟಗಾರರ, ತೋಟದ ಕೆಲಸಗಾರರ ಸಮಸ್ಯೆಗಳ ತಿಳಿವಳಿಕೆ ಸುಲಭವಾಗಿ ಲಭಿಸಿತು. ಅವರ ಈ ಪ್ರತ್ಯಕ್ಷಾನುಭವಕ್ಕೆ ಅಧ್ಯಯನಶೀಲತೆ ನೆರವಾಗಿ, ಪಾಶ್ಚಾತ್ಯ ಕಾಫಿ ತೋಟಗಾರರೂ ಇತರರೂ ಬರೆದಿರುವ ಅನೇಕ ಇಂಗ್ಲಿಷ್ ಗ್ರಂಥಗಳಿಂದ ವಿಷಯ ಸಂಗ್ರಹ ಮಾಡಿ ಗ್ರಂಥವನ್ನು ಪ್ರಮಾಣಭೂತ ಮಾಡಲು ಅವರಿಗೆ ಸಾಧ್ಯವಾಯಿತು. ಅನುವಾದ ಕಾರ್ಯದ ಫಲವಾಗಿ ಪಳಗಿದ್ದ ಕೈ ಇಂಥ ಜ್ಞಾನ ಪ್ರಧಾನವಾದ ಗ್ರಂಥರಚನೆಗೆ ಸಾಕಷ್ಟು ವಸ್ತುನಿಷ್ಠ ಭಾಷಾಶೈಲಿಯನ್ನು ಗಳಿಸಿಕೊಂಡಿತ್ತು. 1881ರಷ್ಟು ಹಿಂದೆಯೇ F. B. ತರ್ಬರ್ ಎಂಬಾತ ರಚಿಸಿದ್ದ

Coffee from Plantation to Cup ಎಂಬ ಪುಸ್ತಕದ ಶೀರ್ಷಿಕೆ ಕನ್ನಡದ ಹೊತ್ತಗೆಗೆ ಹೆಸರಿಡಲು ಸ್ಫೂರ್ತಿ ನೀಡಿತು. ಕನ್ನಡದ ಹೆಸರು ಇಂಗ್ಲಿಷಿನದಕ್ಕಿಂತ ಹೆಚ್ಚು ಅಡಕವಾಗಿದೆ, ಆಕರ್ಷಕವಾಗಿದೆ.

ಗ್ರಂಥದ ಮೊದಲ ಹದಿಮೂರು ಅಧ್ಯಾಯಗಳಲ್ಲಿ ಕಾಫಿಯ ಹುಟ್ಟು, ಅದರ ಬೆಳವಣಿಗೆ ವ್ಯಾಪ್ತಿ, ಹಾಗೂ, ವೈಶಿಷ್ಟ್ಯಗಳನ್ನು ಅಂಕಿಅಂಶಗಳೊಡನೆ ತಿಳಿಯಾದ ಕನ್ನಡದಲ್ಲಿ ನಿರೂಪಿಸಿದೆ. ಪ್ರತಿನಿತ್ಯ ಮನೆಯಲ್ಲೂ ಮನೆಯ ಹೊರಗೂ ಹತ್ತಾರುಸಲ ಕಾಫಿ ಹೀರುವವರಿಗೆ ಕೂಡ ಕಾಫಿಯ ವಿಚಾರವಾಗಿ ಗೊತ್ತಿಲ್ಲದ ಎಷ್ಟೋ ಸ್ವಾರಸ್ಯದ ಸಂಗತಿಗಳು ಇದರಲ್ಲಿವೆ. ಉದಾಹರಣೆಗೆ, ಕಾಫಿಯ ಮೊದಲ ಹೆಸರು 'ಬೂನ್ಡ್', ಅಬಿಸೀನಿಯಾದಲ್ಲಿ 'ಬುನ್' ಎಂದು ನಾಮಾಂತರ,. 1880ರ ಮೈಸೂರು ಸೀಮೆಯ ದಾಖಲೆಗಳಲ್ಲಿ 'ಬೂನ್ಡ್' ಕಾಡು, ಬುನ್‌ಕಾನು ಎಂಬ ಉಲ್ಲೇಖಗಳಿವೆ. (ಕಿಟ್ಟೆಲ್ಲರನಿಘಂಟಿನಲ್ಲಿ, 1894ರ ಮುದ್ರಣ, ಪು. 1131, ಬುನ್ದು, ಬೂನ್ದು, ಬೊನ್ದು, ಈ ಶಬ್ದರೂಪಗಳನ್ನು ಉಲ್ಲೇಖಿಸಿ, Coffee-berry ಎಂದರೆ ಕಾಫಿಯ ಹಣ್ಣು ಎಂಬ ಅರ್ಥವನ್ನು ಕೊಟ್ಟಿದೆ. ಮರಾಠಿ ಮತ್ತು ಹಿಂದಿ ಭಾಷೆಗಳಲ್ಲೂ ಈ ಮಾತು ಉಂಟು.) ಫ್ರಾನ್ಸ್ ದೇಶದ ದೊರೆ ಲೂಯಿ 1712 ರಲ್ಲಿ ತನ್ನ ಅರಮನೆಯಲ್ಲಿ ಬೆಳಸಿದ ಕಾಫಿ ಗಿಡವೂ, ಅದಕ್ಕೂ ಮುಂಚೆ ಚಿಕ್ಕಮಗಳೂರಿಗೆ ಬಂದ ಕಾಫಿ ಗಿಡವೂ ಒಂದೇ ತಾಯಿಗಿಡದ ತಳಿಗಳಂತೆ. ಬಾಬಾ ಬುಡನ್ ಸಾಹೇಬ ಮೆಕ್ಕಾಯಾತ್ರೆ ಮಾಡಿದಾಗ ಅರೇಬಿಯಾದಿಂದ ಇಲ್ಲಿಗೆ ಏಳು ಬೀಜ ತಂದು ಬೆಳಸಿ ಕಾಫಿ ಯುಗವನ್ನು ನಮ್ಮ ನಾಡಿನಲ್ಲಿ ಪ್ರಾರಂಭಿಸಿದ ಸಂಗತಿಯ ವಿಚಾರ ವಿಮರ್ಶೆಯನ್ನು ಲೇಖಕರು ಮರೆತಿಲ್ಲ. ಕುಡಿಯುವ ಕಾಫಿಯಿಂದ ತಿನ್ನಬಹುದಾದ ತಿಂಡಿತಿನಿಸು ಮಾಡುವ ವಿಚಾರ ಹೊಸರುಚಿ ಬಯಸುವವನಿಗೆ ಬಾಯಲ್ಲಿ ನಿರೂರಿಸುತ್ತದೆ. ಪಾಶ್ಚಾತ್ಯ ಕಾಫಿತೋಟಗಾರರ ಅನುಭವಗಳ ಸಂಗ್ರಹ ತುಂಬ ಸ್ವಾರಸ್ಯವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಕಚೇರಿಯ ಕ್ರಾಫರ್ಡ್‌ಹಾಲ್ ಕಾಫಿ ತೋಟಗಾರರಾಗಿದ್ದ ಕ್ರಾಫರ್ಡ್ ಸಹೋದರರ ದಾನ. ಇಂಥ ನೂರಾರು ಸಂಗತಿಗಳಿಂದ ತುಂಬಿ, ಉಪಯುಕ್ತವಾಗಿರುವ ಈ ಗ್ರಂಥ ಕಾಫಿ ಪ್ರಿಯರಿಗಂತೂ ರುಚಿಕರವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

ಕನ್ನಡ ವಾಙ್ಮಯ ವೈವಿಧ್ಯಪೂರ್ಣವಾಗಿ ಸಮೃದ್ಧವಾಗಬೇಕಾದರೆ ಈ ಬಗೆಯ ಪುಸ್ತಕಗಳ ರಚನೆ ಹೆಚ್ಚಾಗಿ ಆಗಬೇಕು. ಈ ಪ್ರಕಾರದಲ್ಲಿ ಇದೊಂದು ಮಾದರಿಯಾದ ಬರವಣಿಗೆ. ಕಾಫಿ ಭಾರತಕ್ಕೆ ಕರ್ನಾಟಕದ ಕೊಡುಗೆಯಾದರೆ, 'ಬೆಟ್ಟದಿಂದ ಬಟ್ಟಲಿಗೆ' ಕನ್ನಡ ಸಾಹಿತ್ಯಕ್ಕೆ ನಾಗೇಗೌಡರು ನೀಡಿರುವ ಒಂದು ವಿಶಿಷ್ಟವಾದ ಕೊಡುಗೆ.

೬ | ನನ್ನೂರು—ಸಾಹಿತ್ಯಿಕ ಮೌಲ್ಯ

ಶ್ರೀಕಂಠ ಕೂಡಿಗೆ

'The verse will be read a hundred times where the prose is read once'[1] ಎಂಬುದು ಒಂದು ಅಭಿಪ್ರಾಯ. ಕೆಲವೊಮ್ಮೆ ಉತ್ತಮ ಗದ್ಯವೂ ಉತ್ತಮ ಪದ್ಯದ ಗುಣವನ್ನು ಹೊಂದಿರಲು ಸಾಧ್ಯವಿರುವುದರಿಂದ ಎಲ್ಲಾ ಸಂದರ್ಭದಲ್ಲೂ ಈ ಮಾತನ್ನು ಒಪ್ಪುವುದು ಕಷ್ಟವಾಗುತ್ತದೆ. ಒಂದು ಮಾತಂತೂ ಸತ್ಯ: ತನ್ನ ವಿಶಿಷ್ಟ ಲಯ, ನಾದ, ಛಂದಸ್ಸುಗಳಿಂದಾಗಿ ಕಾವ್ಯ ಯಥಾವತ್ತಾಗಿ ನಮ್ಮ ಸ್ಮರಣೆಯಲ್ಲಿ ಉಳಿಯುತ್ತದೆ. ಆದ್ದರಿಂದಲೇ ಒಂದು ಜನಪ್ರಿಯ ಪದ್ಯಖಂಡವನ್ನು ಇದ್ದ ಹಾಗೆ ನೆನಪಿಸಿಕೊಳ್ಳಲು ಬರುವಂತೆ ಗದ್ಯ ಭಾಗವನ್ನು ಸೇರಿಸಿಕೊಳ್ಳುವುದು ಕಷ್ಟಸಾಧ್ಯವಾಗಿದ್ದೂ ಅವೆರಡೂ ಪ್ರತಿನಿಧಿಸುವ ಅನುಭವ ಉಂಟುಮಾಡುವ ಪರಿಣಾಮಗಳಲ್ಲಿ ಒಂದೇ ಆಗಿರುತ್ತವೆ.

ಪ್ರಸ್ತುತ ಎಚ್. ಎಲ್. ನಾಗೇಗೌಡರ ನನ್ನೂರು—ಕಳೆದುಹೋದ ಜನಪದ ಬದುಕನ್ನು ಚಿತ್ರಿಸುವ ಗದ್ಯಕೃತಿ. ಇಲ್ಲಿನ ನನ್ನೂರು ಕೇವಲ ಒಂದು ಊರಿನ ಚಿತ್ರ ಮಾತ್ರವಲ್ಲ ಇಂಥ ಹಲವಾರು ಊರು-ಬದುಕುಗಳ ಪ್ರತಿನಿಧಿ. ನಿರ್ದಿಷ್ಟ ಜನಸಮುದಾಯದ ಸಂಸ್ಕೃತಿ, ಆಚಾರ, ನಡುವಳಿ, ನಂಬಿಕೆ, ಹಬ್ಬಹರಿದಿನಗಳು, ಸೇಡು, ಸ್ನೇಹ, ರಸಿಕತೆ, ಉದಾತ್ತತೆಗಳು ಇಲ್ಲಿ ಚಿತ್ರಣಗೊಂಡಿವೆ. ಸಂಕಲನದ ಎಲ್ಲಾ ಪ್ರಬಂಧಗಳನ್ನು ಒಟ್ಟಾರೆ ಎರಡು ಗುಂಪುಗಳಲ್ಲಿ ನೋಡಬಹುದು. ಮೊದಲನೆಯದರಲ್ಲಿ ಹಬ್ಬಗಳು—ಅವುಗಳ ಆಚರಣೆ, ಸಂಪ್ರದಾಯಗಳು ಕಂಡುಬಂದರೆ ಎರಡನೆಯದರಲ್ಲಿ ಘನತೆಯ ಗೌಡರು, ಗೊಬ್ಬರದ ಗುಲಾಬಿ, ಆಯಿರೇ ಆಚಾರ್ರು. ಅರ್ಜಿಕೊಂಬಲ್ಲಿ, ದಸರೆಯ ದಾಸಪ್ಪ ಮುಂತಾದ ಮನೋಜ್ಞ ವ್ಯಕ್ತಿಚಿತ್ರಗಳಿವೆ. ಸಂಕಲನದ ಪ್ರತಿಸನ್ನಿವೇಶ, ಘಟನೆಗಳ ಅಭಿವ್ಯಕ್ತಿಯಲ್ಲಿ ತನ್ಮಯತೆ ಮತ್ತು ಉತ್ಸಾಹವನ್ನು ಗುರುತಿಸಬಹುದಾಗಿದೆ. ಉತ್ಸಾಹ ಹಲವು ಬಾರಿ ಉತ್ಪ್ರೇಕ್ಷೆಗೂ ಎಡೆಮಾಡಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ನನ್ನೂರು ಬರವಣಿಗೆಯ ಬಲ ಮತ್ತು ದೌರ್ಬಲ್ಯಗಳನ್ನು ಒಟ್ಟೊಟ್ಟಿಗೆ ಗುರುತಿಸಲು ಸಾಧ್ಯವಾಗುತ್ತದೆ.

---

[1] Poetry and Poetic Diction : William Wordsworth-English Critical Essays 19th Century Ed. Edmund D. Jones.

ಕೃತಿಯ ಪೀಠಿಕೆರೂಪದ ಮಾತು ಹೀಗಿದೆ : "ಹಳ್ಳಿಯ ಬಾಳಿನ ಚಿತ್ರಣ ಬಾಳೆ ಹಣ್ಣು ತಿನ್ನುವಷ್ಟು ಸುಲಭವಲ್ಲ. ಅದು ಹಲಸಿನ ಹಣ್ಣು ತಿನ್ನುವಷ್ಟು ಕಷ್ಟ. ಹಲಸಿನ ಹಣ್ಣನ್ನು ಕುಡಲಿನಿಂದ ಕೊಯ್ದು, ಸೋಲೆ ತೆಗೆದು, ಬಿತ್ತಬಿಡಿಸಿ, ತೊಳೆಗಳನ್ನು ಲಕ್ಷಣ ವಾಗಿ ತಟ್ಟೆಯಲ್ಲಿಟ್ಟು ಕೊಡುವುದು ಸಾಮಾನ್ಯ ರೀತಿ. ಆದರೆ ನಾನು ಇಲ್ಲಿ ಇಟ್ಟಿರು ವುದು ಇಡೀ ಉಂಡೆ ಹಣ್ಣನ್ನು— 'ನೀವೇ ಕೊಯ್ದು ತಿನ್ನಿ' ಎಂದು... ಕೇವಲ ತೊಳೆ ಯನ್ನು ತಿನ್ನುವವನಿಗೆ ಹಣ್ಣಿನ ಪೂರ್ಣ ಪರಿಚಯವಾಗುವುದು ಸಾಧ್ಯವಿಲ್ಲ. ಹಣ್ಣಿನ ಆಕಾರ, ಗಾತ್ರ, ಬಣ್ಣ, ತೊಳೆಗಳ ಜೋಡಣೆ, ಬಿಡಿಸುವ ಕ್ರಮ, ಅಂಟು-ಪಂಟು— ಇವೆಲ್ಲದರ ಅರ್ಥವಾಗಲಿಕ್ಕಿಲ್ಲ"[2] ಕೃತಿಯ ಸ್ವರೂಪಕ್ಕೆ ಹಲಸಿನ ಹಣ್ಣಿನ ಸಾದೃಶ ಚೆನ್ನಾಗಿಯೇ ಒಪ್ಪುತ್ತದೆ. ಅನುಭವ—ಅಭಿವ್ಯಕ್ತಿ ಅದಕ್ಕೆ ಪೂರಕವಾಗಿ ಬರುವ ಸಾಮಗ್ರಿಗಳು ಕೃತಿಯ ದೇಹದಲ್ಲಿ ಸಂಪೃಕ್ತ ಘಟಕಗಳಾಗಿಯೇ ಬರುತ್ತವೆಯಾದ್ದರಿಂದ ಒಂದು ಕೃತಿಯ ಸಾಹಿತ್ಯಕ ಮೌಲ್ಯವನ್ನು ಹಲಸ ಹಣ್ಣಿನ ಸೋಲೆ, ಬಿತ್ತ, ತೊಳೆ ಗಳಂತೆ ಅದರ ಒಪ್ಪದಿಂದ ಪ್ರತ್ಯೇಕಿಸಿ ನೋಡುವುದು ಕಷ್ಟದ ಕೆಲಸವೇ. ಹಾಗೆಯೇ ತೊಳೆಯ ರುಚಿ ನೋಡಲು ಅದನ್ನು ಬಿಡಿಸುವುದು ಅನಿವಾರ್ಯವೆ. ಮಾತು ಹೇಗೂ ಇರಲಿ.ನನ್ನೂರು ಪ್ರಬಂಧಸಂಕಲನದಲ್ಲಿ ಸಾಹಿತ್ಯಕ ಆಕರ್ಷಣೆ ಸಿದ್ಧಿಸಿರುವುದು ಮೊದಲ ನೆಯದಾಗಿ ಅದರ ನಿರೂಪಣೆಯಲ್ಲಿ, ಎರಡನೆಯದಾಗಿ ಅಲ್ಲಲ್ಲಿ ಬಳಸಿಕೊಂಡಿರುವ ಜನಪದ ಹಾಡು, ಗಾದೆಮಾತುಗಳಲ್ಲಿ ಅನ್ನಿಸುತ್ತದೆ.

ಮೊದಲಿನ ಅಧ್ಯಾಯಗಳಲ್ಲಿ ನನ್ನೂರಿನ ಭೌಗೋಳಿಕ ಹಾಗೂ ಸ್ಥಳ ಐತಿಹ್ಯಗಳ ವಿವರಪೂರ್ಣ ಚಿತ್ರಗಳು ಬರುತ್ತವೆ. ಹೇರಳವಾದ ಸ್ಥಳ ಐತಿಹ್ಯಗಳು, ಜನಪದ ಶಬ್ದಗಳ ಉತ್ಪತ್ತಿಯ ಮೂಲದ ವಿವರಗಳು, ಊರಿನ ಹಾಗೂ ಜನತೆಯ ಉದ್ದೇಶ್ಯಿತ ಚಿತ್ರವನ್ನು ಮೂಡಿಸಲು ಸಹಕಾರಿಯಾಗಿವೇನೊ ನಿಜ. ಆದರೆ ಜೋಗಿಪುರ ಎಂದೊಡನೆ ಅದರ ಇತಿವೃತ್ತಾಂತದ ಕಡೆಗೊ, ಬಂಗಲಿ (ಬಂಗಲೊ) ಎಂದೊಡನೆ ಆ ಅಂಗ್ಲ ಪದದ ಹೆಸರಿನ ಮೂಲ ಹಿಡಿದೊ ವಿವರಿಸ ಹೊರಡುವುದರಲ್ಲಿ ಪ್ರಬಂಧ ತನ್ನ ಏಕಾಗ್ರತೆಯಿಂದ ವಂಚಿತ ವಾಗುತ್ತಿರುವುದನ್ನು ನಾವು ಗಮನಿಸದೇ ಇರುವುದಿಲ್ಲ. ಅನುಭವಕ್ಕೆ ಬಂದದ್ದು ನಷ್ಟವಾಗಬಾರದೆಂಬ ಧೋರಣೆ ಇದೆಂಬ ಊಹೆಗೂ ಅವಕಾಶಮಾಡಿಕೊಡುತ್ತದೆ. ಆದ್ದರಿಂದ ಅಗತ್ಯಕ್ಕೆ ಮೀರಿದ ವಿವರಗಳು ಮೈಪಡೆದು ರಚನೆಯಲ್ಲಿ ಶೈಥಿಲ್ಯ ಗೋಚರಿಸುತ್ತದೆ. "ಇಲ್ಲಿನ ಶೈಲಿಯಲ್ಲಿ ಸಾಹಿತ್ಯಕ ಹಾಗೂ ಆಡುಮಾತಿನ ಮಿಶ್ರಣ ವಿದ್ದು, ಬರವಣಿಗೆಯಲ್ಲಿ ಕೆಲವು ಕಡೆ ಅನಾವಶ್ಯಕವಾಗಿ ಲಂಬಿಸಲಾಗಿದೆ. ಇದರಿಂದ ಪ್ರಬಂಧಗಳ ಬಂಧದಲ್ಲಿ ಶಿಥಿಲತೆ ತಲೆಹಾಕುತ್ತದೆ"[3] ಎಂಬ ಡಾ. ಹಾ. ಮಾ. ನಾಯಕರ

---

2. ನನ್ನೂರು, ಪೀಠಿಕೆ ಪು. 13.

3. ಒಂದು ದಶಕದ ಕನ್ನಡ ಕಾವ್ಯ, ಸಮೀಕ್ಷೆ–ಡಾ. ಹಾ. ಮಾ. ನಾಯಕ. ಪುಟ. 110

ಅಭಿಪ್ರಾಯವನ್ನು ಈ ಒಸ್ನೆಲೆಯಲ್ಲಿ ಅನುಮೋದಿಸಬೇಕಾಗುತ್ತದೆ. "ನನ್ನೂರಿನಲ್ಲಿ ಬುದ್ಧಿಯ ಕುಸುರಿ ಕೆಲಸ ವಿಶೇಷವಾಗಿ ನಡೆದಿದೆ ನಿಜ. ಇದು ಉದ್ದೇಶಪೂರ್ವಕ ವಾಗಿಯ ನಡೆದಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ" ಎಂಬ ಲೇಖಕರ ಘೋಷಣೆ ಇದನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ.

ಗ್ರಾಮೀಣ ಬದುಕಿನ ನಿಕಟತೆಯಿಂದ ಬರೆಯುವ, ಜನಸಮಷ್ಟಿಯ ಸಾಹಿತ್ಯ ಉತ್ಪನ್ನವನ್ನು ಸಾಂದರ್ಭಿಕವಾಗಿ ಬಳಸುವ ಈ ಕೃತಿಯಲ್ಲಿ ಸಾಹಿತ್ಯದ ಮುಖ ಒರಿ ದಾಗಿದೆ. 'ಧರಣಿ ಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ನಾಟಕದೇಶದಿ ಇರುವ ನನ್ನೂರಿನ ಪರಿಯ ನಾನೆಂತು ಪೇಳಲಿ' ಎಂಬಿತ್ಯಾದಿ ಜನಪ್ರಿಯ ಪದ್ಯಸಾಲುಗಳ ಬಳಕೆಯನ್ನೊ, 'ಮುಡಿದಾರೆ ಮುಡಿಬೇಕು ಮರುಗ ಮಲ್ಲಿಗೆ ಹೂವ' ಎಂಬ ಕಾವ್ಯಾತ್ಮಕ ಮಾತನ್ನೋ ವಿವರಣೆಗಳಲ್ಲಿ ಒಳಸೇರಿಸಿ ಬಿಡುವುದು ಈ ಕೃತಿಯ ವೈಶಿಷ್ಟ್ಯ. ಆ ಊರಿನ ಕಣಿಗಲ ಗಿಡ, ಕೀರೇ ಸೊಪ್ಪು, ಹಳೆಊರು, ಹೊಸಊರು ಕಡೆಕೇರಿ, ತಲೆ ಕೆಳಗಿನ ಅಂಗಳದ ವರ್ಣನೆಯ ಭಾಗಗಳು ಅನುಭವ ಸ್ವಾರಸ್ಯದಿಂದಲೇ ಪರಿಣಾಮ ಕಾರಿ ಬರವಣಿಗೆಯಾಗಿ ಬಿಡುತ್ತವೆ. ನಿದರ್ಶನಕ್ಕಾಗಿ ಎರಡು ಸ್ಯಾಂಪಲುಗಳು ಇವು.

(i) "ದೀಪ ಕಣಿಗಲು ಹೂವಿನ ಈ ಮರಗಳನ್ನು ಯಾವ ಕಾಲದಲ್ಲಿ ನೋಡಿ ದರೂ ಚೆಂದ. ಹೂವು ಬಿಟ್ಟಾಗ ಎಲೆಯೆಲ್ಲಾ ಉದುರಿ ಹೋಗಿರುತ್ತದೆ. ಆಗ ಮರವೆಲ್ಲಾ ಬಿಳಿ ಹೂವು. ಹೂವಿಲ್ಲದಾಗ ಮರವೆಲ್ಲಾ ಹಸಿರು ಎಲೆ. ಈ ಎಲೆಗಳನ್ನು, ಹೂವು ಗಳನ್ನು ಮನಸ್ಸುಮಾಡಿದರೆ ಎಣಿಸಿಬಿಡಬಹುದು. ಈ ಮರಗಳು ನನ್ನೂರಿಗೆ ಪ್ರಕೃತಿ ದೇವಿ ಒಡಿದುಸಿಂತ ತುರಾಯಿಗಳೆನ್ನಬಹುದು.

(ii) "ನನ್ನೂರಿನ ತುಪ್ಪವಂತೂ ಘಮ ಘಮ. ಅದರಲ್ಲಿಯೂ ಪರಿಕಾರ ಹಾಕಿದ ತುಪ್ಪದ ಪರಿಮಳವಂತೂ ಹೇಳತೀರದು ಬಿಡಿ. ಊಟಮಾಡಿದ ಮೇಲೆ ಇನ್ನೊಂದು ಸಲ ಊಟಮಾಡುವವರೆಗೆ ಕೈ ಮೂಸಿಕೊಂಡೇ ಉಪಹಾರ, ಅಲ್ಪಾಹಾರ ಮುಂತಾದ ಚಪಲಗಳನ್ನು ತೀರಿಸಿಕೊಳ್ಳಬಹುದು. ಇನ್ನು ಹಾಲು ಮೊಸರಿನ ವಿಚಾರ ಕೇಳಬೇಕೇ! ಆ ಬನಿ! ಆ ತನಿ!"

ಸರಳ ಮಾತುಗಳಲ್ಲಿ ವಸ್ತುಸ್ಥಿತಿಯನ್ನು ಪರಿಣಾಮಕಾರಿಯಾಗಿ ದರ್ಶಿಸುವ ಬರ ವಣಿಗೆಯ ರೀತಿಯನ್ನು ನಾವು ಲಕ್ಷಿಸಬೇಕಾಗುತ್ತದೆ. ಉತ್ತಮ ಪ್ರಬಂಧಗುಣ ಇಲ್ಲೆಲ್ಲಾ ನಿರಾಯಾಸವಾಗಿ ಲಭ್ಯವಾಗಿ ಬಿಡುತ್ತದೆ. ನನ್ನೂರಿನ ಬಗೆಗಿನ ಹಂಬಲ–ಮಮತೆ ಉತ್ಸಾಹಕ್ಕೆ ಬಿದ್ದು ವಿಚಾರಗಳ ಪುನರಾವರ್ತನೆಗೂ ಎಡೆಮಾಡಿಕೊಟ್ಟಿರುವುದುಂಟು. ಕೃತಿಯ ಪೂರ್ವಾರ್ಧದಲ್ಲಿ ಸೋಬಾನೆ ಚಿಕ್ಕಮ್ಮ ಹಾಡುತ್ತಿದ್ದ ಹಾಡುಗಳನ್ನು ಯತೇಚ್ಛ ವಾಗಿ ಲೇಖಕರು ಬಳಸಿದ್ದಾರೆ. ಉದಾಹರಣೆಗೆ —

ಆರುಹಳ್ಳಿಗಿಂತ ಮೇಲು ಕಾಣೆ ನನ್ನೂರು
ಆಲದ ತೋಪು ತೊರೆಸಾಲು । ಒಳ್ಳೇದೆಂದು
ಅಮ್ಮ ದೊಡ್ಡಮ್ಮ ನೆಲೆಗೊಂಡ್ಲು.

ನಡೆಮಡಿಯು ಮೇಲೆ ನಡೆದು ಬಾರೆ ನನ್ನಮ್ಮ
ನಡೆಮಡಿ ತಪ್ಪಿದರೆ ಪಡಿಹೊನ್ನು । ಕೊಡುವೇನು
ನಡೆದು ಬಾರೆ ನವಿಲಗರಿಹಂಗೆ.

ಕಿಡಿಕಿಡಿ ಗುಟ್ಟೂತ ಮುಡಿಯನ್ನು ಒದರೂತ
ಕಡೆಗಣ್ಣಲಿ ನೀರ ಒರೆಸೂತ-ಸಜ್ಜರಣೆ
ಬಂದಳು ತನ್ನ ಅರಮನೆಗೆ.

ಒಂದರ್ಥದಲ್ಲಿ ಅತ್ಯುತ್ತಮ ಜನಪದ ಗೀತೆ, ಗಾದೆ, ಐತಿಹ್ಯಗಳ ಭಂಡಾರವೇ ಇದಾಗಿದೆ. ಊರೊ, ಕೆರೆಯೊ, ತವರ ಹಂಬಲವೊ, ಸರಸವೊ ಸೆಡಮಾನವೊ ಯಾವುದೇ ಸಂದರ್ಭವಿರಲಿ ನಿರೂಪಣೆಗೆ ಜನಪದ ಸಾಮಗ್ರಿ ಸಹಾಯಕ್ಕೆ ಬರುತ್ತದೆ. ಸನ್ನಿವೇಶದ ಘನತೆ ಅಥವಾ ಸೊಬಗನ್ನು ಅವು ಪೋಷಿಸುತ್ತವೆ. ಆದರೆ ಪ್ರಬಂಧದ ಒಟ್ಟು ಉದ್ದೇಶದಲ್ಲಿ ಬೇರೆಯಾಗಿ ನಿಲ್ಲುವ ಇವು ಅಪರೂಪದ ಸಂಗ್ರಹಣೆ ಜೊತೆಗೆ ಮನ ಸೆಳೆಯಬಲ್ಲ ಕಾವ್ಯಾಂಶವನ್ನು ಹೊಂದಿರುವಂತವು. ಜನಪದ ಸಾಮಗ್ರಿ ಕೆಲವೊಮ್ಮೆ ವಿವರಣಾತ್ಮಕ ಅಭಿವ್ಯಕ್ತಿಯ ಶ್ರಮವನ್ನು ತಪ್ಪಿಸಲು ಸಹಾಯಕವಾಗಿ ಬಂದಿದೆ. ಇಲ್ಲವೆ ವಿವರಣೆಗಳ ಸೋಲನ್ನು ಹಾಡುಗಳ ಬಳಕೆಯಲ್ಲಿ ತುಂಬಿಕೊಳ್ಳಲಾಗಿದೆ-ಅನ್ನಿಸುತ್ತದೆ. 'ಚಿಂತಿಲ್ಲದವನಿಗೆ ಸಂತೆಯಲ್ಲೂ ನಿದ್ದೆ ಬರುತ್ತೆ. ಬೆದೆಬಂದಾಗ ಬಿತ್ತು ಹದ ಬಂದಾಗ ಹರಗು, ಕೆಮ್ಮೊಳಾದರೂ ನಮ್ಮೊಳೆ ವಾಸಿ, ಆಚಾರಿ ಆಳಲ್ಲ ಏಡಿ ಬಾಡಲ್ಲ, ಪೂಜೆ ಮಾಡೋರ ಕಂಡ್ರೆ ದೇವರು ಘನ ; ಇಕ್ಕೋದು ಕಂಡ್ರೆ ಉಣ್ಣೋರು ಘನ' ಮುಂತಾಗಿ ಹಲವಾರು ಗಾದೆಯ ಮಾತುಗಳು ಸಂಕಲನದ ಉದ್ದಕ್ಕೂ ವಿವರಣೆಗಳ ಮಧ್ಯೆ ಇಣುಕು ನೋಡುತ್ತಾ ಅಭಿವ್ಯಕ್ತಿಗೆ ಜೀವತುಂಬಿವೆ. ಆದರೆ ಅವುಗಳ ಬಳಕೆಗೆ ಸಂಬಂಧಿಸಿದ ಹಾಗೆ ಹೇಳುವುದಾದರೆ ಮೇಲೆ ಹಾಡುಗಳ ಬಳಕೆಗೆ ಅನ್ವಯಿಸಿದ ಮಾತನ್ನು ಇಲ್ಲೂ ಹೇಳ ಬೇಕಾಗುತ್ತದೆ.

ಸೂಕ್ಷ್ಮಾವಲೋಕನ ಯಾವುದೇ ಬರವಣಿಗೆಯ ಜೀವದ್ರವ. ಬರವಣಿಗೆಯ ಕುಸುರಿ ಕೆಲಸ ಸಾಧ್ಯವಾಗುವುದು ಇಂಥ ಅವಲೋಕನದಿಂದಲೇ. ಘನತೆಯ ಗೌಡರು, ಅರ್ಜಿಕೊಂಬಲ್ಲ ಉದಕ ಮಾವಯ್ಯ, ದಸರೆಯ ದಾಸಪ್ಪ, ಮುಂತಾದ ವ್ಯಕ್ತಿ ಚಿತ್ರ ಗಳನ್ನು ಕೊಡುವಲ್ಲಿಯಾಗಲಿ, ಗಾವು ಸಿಗಿಯುವಲ್ಲಿ ಮಡೆಹಬ್ಬ, ಹಸುರಬ್ಬ, ಕಾರಬ್ಬ ಆಚರಣೆಯ ವಿವರಗಳಲ್ಲಾಗಲಿ ಈ ಗುಣ ಎದ್ದು ತೋರುತ್ತದೆ. ನಿದರ್ಶನವಾಗಿ ಅಂಥ ಭಾಗಗಳಲ್ಲಿ ಕೆಲವನ್ನು ಸಮೀಕ್ಷಿಸಬಹುದು.

(i) "ಕಲ್ಲು ಹಾಸಿರುವ ಕೊಟ್ಟಿಗೆಯಲ್ಲಿ ಒಮ್ಮೊಮ್ಮೆ ಲಾಳಕಟ್ಟಿದ ಎತ್ತುಗಳ ಗೊರಸಿನ ಶಬ್ದ ಕೇಳಬಹುದು. ಅಥವಾ ಉಸಿರುಗಟ್ಟಿ ಮಲಗಿ ಮೆಲಕು ಹಾಕುತ್ತಿರುವ ಹೋರಿಯೊಂದು ಬೆನ್ಜ್ ಲಾರಿ ಅಥವಾ ಬಸ್ಸು ಹೆಚ್ಚಾದ 'ಬ್ರೇಕ್‌ಪ್ರೆಷರ್' ಬಿಟ್ಟಾಗ ಆಗುವ 'ಶಸ್ಸ್' ಶಬ್ದದಂತೆ ಉಸಿರುಬಿಡುವುದನ್ನು ಕೇಳಬಹುದು."

(ii) ಗಾವಿನ ಗಂಗಣ್ಣ "ದೇವರ ಗುಡಿಯ ಮುಂದೆ ಹಿಡಿ ಕಂಬದ ಬಳಿ ಸಾರಿಸಿ ರಂಗೋಲಿ ಇಟ್ಟು, ಪೂಜೆಮಾಡಿದ ಒಂದು ಸ್ಥಳದಲ್ಲಿ ಬಂದು ನಿಂತು ದೊಡ್ಡದಾಗಿ ಹೋ ಎಂದು ಅಬ್ಬರಿಸುತ್ತಾನೆ. ಪಕ್ಕದಲ್ಲೇ ಹಿಡಿದು ಕೊಂಡಿರುವ ಫಲಮರಿಯನ್ನು ಒಂದೊಂದಾಗಿ ಅವನ ಕೈಗೆ ಕೊಡುತ್ತಾನೆ, ಕೊಡುವುದೇನು ? ಅವನೇ ಕಿತ್ತುಕೊಳ್ಳುತ್ತಾನೆ. ಮರಿಯ ಮುಂಗಾಲನ್ನು ಒಂದು ಕೈಯಲ್ಲಿಯೂ ತಲೆಯನ್ನು ಇನ್ನೊಂದು ಕೈಯಲ್ಲಿಯೂ ಬಿಗಿಯಾಗಿ ಹಿಡಿದು ಬಾಯನ್ನು ಮರಿಯ ಗೋಮ್ಯಾಳಿಗೆ ಹಾಕಿ, ಕಿತ್ತು, ರಕ್ತಹೀರಿ, ನೆತ್ತರು ಸೋರುವ ಬಾಯನ್ನು 'ಹಾ' ಎಂದು ತೆರೆಯುತ್ತಾನೆ. ಕಿತ್ತ ಗೋಮ್ಯಾಳಿಯ ಮಾಂಸ ಅವನ ಬಾಯಲ್ಲಿರುತ್ತದೆ. ಗಸಗಸ ಅಗಿಯುತ್ತಾನೆ. ಅಗಿದು ಉಗಿಯುತ್ತಾನೆ. ಒಂದೊಂದು ಸಲ ನುಂಗುತ್ತಾನೆ. ಹೀಗೆ ಒಂದು ಮರಿಯ ರಕ್ತವನ್ನು ಹೀರಿ ಅದನ್ನು ಬಿಸಾಡುತ್ತಾನೆ. ಅದು ವಿಲಿವಿಲಿ ಒದ್ದಾಡುತ್ತಿದ್ದಾಗ ಹೊಲೆಯರು ಅದನ್ನು ಎತ್ತಿಕೊಳ್ಳುತ್ತಾರೆ" (ಪು. 64).

ಬರವಣಿಗೆಯ ಚಿತ್ರಕಗುಣಕ್ಕೆ ಹೀಗೆ ಉದಾಹರಣೆಗಳನ್ನು ಸಾಕಷ್ಟು ಕೊಡಬಹುದು. ವಾಸ್ತವ ಸನ್ನಿವೇಶಗಳನ್ನು ಚಿತ್ರವತ್ತಾಗಿ ಮೂಡಿಸುವ ಬರವಣಿಗೆಯಂತೆಯೇ ಕಾವ್ಯಾನುಭವನ್ನುಂಟುಮಾಡುವ ಭಾವಪ್ರಧಾನ ಬರವಣಿಗೆಯನ್ನು ಅಲ್ಲಲ್ಲಿ ಗುರುತಿಸಲು ಸಾಧ್ಯವಿದೆ. ಉದಾಹರಣೆಗೆ—"ಈಶಾನ್ಯ ದಿಕ್ಕಿನಲ್ಲಿ ಮೂಡಲು ಬೋರೆಯ ಮೇಲೆ ಮಳೆಯ ಹೊಸಮೋಡಗಳು ವಿವಿಧ ಆಕಾರಗಳನ್ನು ಪಡೆಯುತ್ತಿವೆ. ಅವು ಬಸವ, ಆನೆ, ಒಂಟೆ, ಕುದುರೆ, ಕೋತಿ ಮೊದಲಾದ ಆಕಾರಗಳನ್ನು ಪಡೆದು ಬೇರೊಂದು ದೊಡ್ಡ ಮೋಡದಲ್ಲಿ ಸೇರಿ ಹೋಗುತ್ತಿವೆ. ಆ ದೊಡ್ಡ ಮೋಡದಿಂದ ಮಳೆ ಕಾಲೂರಿದೆ—ಭಾರಿ ಜೀರಣಬೆಯಂತೆ. ಮುಂಗಾರು ಮಳೆಯಿಂದ ಕೆರೆ ತುಂಬಿ ತೇಪಾಡುತ್ತಿದೆ. ಸುಳಿಗಾಳಿಗೆ ಕೆರೆಯ ನೀರು ತೆರೆತೆರೆಯಾಗಿ ಮರಿನಾದ ಮಾಡುತ್ತಿದೆ-ಚಿನ್ನದ ಹೂಗಳನ್ನು ನೀರ ಮೊರದಲ್ಲಿ ಒಸೆವಂತೆ" (ಪು. 13) ಗದ್ಯ ಪದ್ಯಗುಣವನ್ನು ರೂಪಿಸಿಕೊಂಡಿರುವುದಕ್ಕೆ ಅತ್ಯುತ್ತಮ ನಿದರ್ಶನವಾಗಿದೆ.

ನನ್ನೂರು ಸಂಕಲನದ ಪ್ರಬಂಧಗಳಲ್ಲಿ ಗಮನ ಸೆಳೆಯುವ ಮತ್ತೊಂದು ಮುಖ್ಯ ಅಂಶವೆಂದರೆ ನಿರಾಯಾಸವಾಗಿ ಹುಟ್ಟುವ ಹಾಸ್ಯ. ಕೃತಿಯ ಬಹಳಷ್ಟು ಉಲ್ಲಾಸದ ಓದಿಗೆ ಇದು ಕಾರಣವಾಗಿದೆ. ಪ್ರಬಂಧಗಳ ಅಂತಃಸೂತ್ರದಲ್ಲಿ ಮುಖ್ಯವ್ಯಕ್ತಿಯಾಗಿ ಬರುವ ಗೌಡರು ಘನತೆಯವರು, ಉದಾರಿಗಳು ಮಾತ್ರವಲ್ಲದೆ ರಸಿಕರು, ತಾವು ನಗುವುದಲ್ಲದೆ ಪರರನ್ನು ನಗಿಸುವ ಮನೋಧರ್ಮದವರು. ಆಗಾಗ ನಡೆಯುವ

ಒಂದೊಂದು ರಸಪ್ರಸಂಗದ ಆಧಾರದ ಮೇಲೆ ಒಬ್ಬೊಬ್ಬರಿಗೆ ಒಂದೊಂದು ಅಡ್ಡಹೆಸರು ಇಡುವಂಥ ರಸಿಕರು. ಅವರ ಹಾಸ್ಯ-ರಸಿಕತೆಯ ಪ್ರತೀಕಗಳೇ "ಏಳುಮುದ್ದೆ, ಒಣ ಸುಣ್ಣ, ಬುಂಡೇದಾಸ, ಜಳ್ಳುಭತ್ತ, ಉದಕಮಾದಯ್ಯ, ಆಯಿತೇ ಆಚಾರ್ರು" ಮುಂತಾದ ಅಡ್ಡಹೆಸರಿನ ಪಾತ್ರಗಳು ಗೌಡರು ಊರಿಗೆ ಬಂದ ಉದ್ದಾನೆ ಅಳಿಮಯ್ಯನಿಗೆ ಏಣಿ ಹಾಕಿ ಹಾರ ಹಾಕಿದುದು, ಆತನಿಗೆ ಗೊತ್ತಿಲ್ಲದಂತೆ ಬಾಲ ಕಟ್ಟಿದ್ದು, ಆತನ ಜುಟ್ಟನ್ನೆ ಲಗಾಮು ಮಾಡಿಕೊಂಡು 'ಕ್ಲ್‌ಕ್‌ಕ್ಲ್‌ಕ್' ಅನ್ನುತ್ತಾ ಕಾಲುಗಳನ್ನು ಅವನ ಪಕ್ಕೆಗೆ ತಿವಿಯುತ್ತಾ ಸವಾರಿಮಾಡಿದ್ದು, ಪ್ರತಿಯಾಗಿ ಉದ್ದಾನೆ ಆಳಿಮಯ್ಯ ಗೌಡರ ಡೊಳ್ಳು ಹೊಟ್ಟೆ ಅಳೆಯಲು ಹೋಗಿ ಟೇಪು ಸಾಕಾಗದೆ ಕೈ ಬಿಟ್ಟದ್ದು, ಇಳ್ಳುಗಣ್ಣು ಅಳಿಮಯ್ಯ ತನ್ನ ಅತ್ತೆಮನೆ ಬಿಟ್ಟು ಪಕ್ಕದ ಮನೆಗೆ ಹೋಗಿ ಕುಳಿತು ಕೊಂಡದ್ದು, ಅಳಿಯಂದಿರು ಹೊತ್ತಿಗೆ ಮುಂಚೆಯೆ ಊರಿಗೆ ಬರಬೇಕೆಂದು ಗೌಡರು ಆಜ್ಞೆ ಹೊರಡಿಸಿದ್ದು, ಕ್ಷೌರಿಕ ರಂಗಣ್ಣನ ಮಾತುಕೇಳಿ ಮೀಸೆಬಾರದ ಬಿಕ್ಕಲ ಕಪ್ಪರಶೆಟ್ಟಿ ಬೂದಿಮಾಡಿ ಹಚ್ಚಿ ಇದ್ದ ಎರಡು ಮೀಸೆ ಕಳೆದುಕೊಂಡದ್ದು-ಮುಂತಾದುವು ಅತ್ಯುತ್ತಮ ಹಾಸ್ಯಪ್ರಸಂಗಗಳು. ಅಲ್ಲದೆ ಇವು ಗ್ರಾಮೀಣ ಬದುಕಿನಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿದ್ದ ಅಳಿಯ-ಮಾವಂದಿರ ನಡುವಿನ ಸಲಿಗೆಯ ಸಂಬಂಧಗಳನ್ನು (Joking Relalionship) ಕೂಡ ಸೂಚಿಸುತ್ತವೆ. ಹಾಸ್ಯಪ್ರಧಾನವಾದ ಇಳುಗಣ್ಣು ಅಳಿಯನ ಈ ಪ್ರಸಂಗ ಹೀಗೆ ನಿರೂಪಿತವಾಗಿದೆ—

"ನನ್ನೂರಿಗೆ ಒಬ್ಬ ಇಳುಗಣ್ಣ ಅಳೀಮಯ್ಯ ಬಂದ. ಅವನಿಗೆ ಹಗಲು ಹೊತ್ತು ಮಾತ್ರ ಕಣ್ಣು ಕಾಣಿಸುತ್ತಿತ್ತು. ರಾತ್ರಿ ಹೊತ್ತು ಎದ್ದಾಟಾಗಿ ಮಾತ್ರ ಕಾಣಿಸುತ್ತಿತ್ತು. ಮನೆ ಅಥವಾ ಮನುಷ್ಯರು ಸಬಾಗಿ ಕಾಣಿಸುವುದು ಬಿಟ್ಟರೆ, ಯಾರ ಮನೆ, ಯಾವ ಮನುಷ್ಯರು ಅಂತ ಸರಿಯಾಗಿ ಕಾಣಿಸುತ್ತಿರಲಿಲ್ಲ. ಅವನ ಅತ್ತೆಮನೆ ಮತ್ತು ಮಗ್ಗುಲಲ್ಲಿದ್ದ ತಿಮ್ಮೀ ಮನೆ ಎರಡೂ ಒಂದೇ ತರ ಇದ್ದುವು.... ಈಗ ಅತ್ತೆಮನೆಗೆ ಹೋಗುವ ಬದಲು ಇಳ್ಳುಗಣ್ಣ ಅಳೀಮಯ್ಯ ಪಕ್ಕದ ತಿಮ್ಮಿ ಮನೆಗೆ ಹೋದ. ತಿಮ್ಮಿ ಮನೆಗೂ ಹೊಸ ಅಳಿಯ ಬರಬೇಕಾಗಿತ್ತು. ಮಿಣಮಿಣನೆ ಉರಿಯುತ್ತಿದ್ದ ಹಣತೆಯ ಬೆಳಕಿನಲ್ಲಿ ಅಳಿಯ ಅದಲು ಬದಲಾಗಿದ್ದು ಗೊತ್ತಾಗಲಿಲ್ಲ. ಚಾಪೆಹಾಕಿ ಕುಳ್ಳಿರಿಸಿದಳು ಸಾದಿನಿ"—'Humour is the best philosophic of life' ಎಂಬ ಮಾತು ಇಲ್ಲೆಲ್ಲಾ ನಮ್ಮ ಅನುಭವಕ್ಕೆ ಬರುತ್ತದೆ.

ವೈಚಾರಿಕತೆ ಸಫಲ ಕೃತಿಯೊಂದರ ಅನಿವಾರ್ಯ ಅಂಗ. ನನ್ನೂರು ತನ್ನ ಮಿತಿಯಲ್ಲಿಯೇ ಇದನ್ನು ಪ್ರಕಟಿಸಿದೆ. ಗ್ರಾಮೀಣ ಜೀವನವನ್ನು ಸಾದಾ-ಸೀದವಾಗಿ ಮುಂದಿಟ್ಟಂತೆಯೇ ವಿಚಾರದ ಮಸೆತವೂ ಅಲ್ಲಲ್ಲಿ ನಡೆದಿದೆ. "ಶಕುನ ಅಪಶಕುನ ಹೆಣ್ಣಿನ ಲಕ್ಷಣ ಮತ್ತು ಅವಲಕ್ಷಣಗಳನ್ನು ಮುಂದೆ ಮದುವೆಯಾಗುವವರು ಮನಸ್ಸಿಗೆ ಹಚ್ಚಿಕೊಳ್ಳದಿರುವುದೇ ಒಳ್ಳೆಯದು'....ಹೆಣ್ಣಿನ ಪರೀಕ್ಷೆಯಲ್ಲಿ ಎತ್ತಿದಕ್ಕೆ ಎನಿಸಿಕೊಂಡ

ಮೂಲೆಮನೆ ಮಾಯಮ್ಮ ಮದುವೆಯಾದ ಹದಿನೈದು ವರ್ಷಕ್ಕೆ ಗಂಡನನ್ನು ತಿಂದುಕೊಂಡಳು. ಆವಳಿಗೆ ಮಾತ್ರ ಮುಂಡೆಸಾವು ತಪ್ಪಲಿಲ್ಲ" (ಪು. 71) ಎಂದು ಮುಂತಾಗಿ ಬರುತ್ತದೆ. ಇಲ್ಲಿ ವೈಚಾರಿಕತೆ ಪ್ರತ್ಯೇಕವಾಗಿ ನಿಲ್ಲದೆ ವಿವರಣೆಯ ಒಳಅಂಶವಾಗಿ ರೂಪುಗೊಂಡಿರುವುದು ಮೆಚ್ಚಬೇಕಾದ ಅಂಶ. ಉತ್ಪ್ರೇಕ್ಷೆ ಕೃತಿಗೆ ರೋಚಕತೆಯನ್ನು ತರುವ ಮತ್ತೊಂದು ಮುಖ್ಯ ಅಂಶ. ಇಲ್ಲಿನ ಪ್ರಬಂಧಗಳಲ್ಲಿ ಹಲವು ಬಾರಿ ಅದು ಬುದ್ಧಿಪೂರ್ವಕವಾಗಿ ನಡೆದಂತೆ ತೋರುತ್ತದೆ. ಜಮಾಬಂದಿಗೆ ಊರಿಗೆ ಬಿಡಾರ ಮಾಡಲು ಬಂದ ಡಿ. ಸಿ. ಯವರು ಬಿಡಾರದಲ್ಲಿ ಸಕ್ಕರೆಗೆ ಬದಲಾಗಿ ಉಪ್ಪನ್ನು ಕಾಫಿಗೆ ಬಳಸಿ 'ಫೂ' ಎಂದು ಉಗಿಯುವುದಾಗಲಿ, ಎತ್ತು ಮೂಗ ಆಯಿತೇ ಆಚಾರ್ರು ತಯಾರಿಸಿದ ಉಂಡೆನಶ್ಯ ಸೇದಾಗ" ಎತ್ತುಮೂಗ ಯಂಕನ ಮೂಗಂತೂ ಮತ್ತಷ್ಟು ಎತ್ತಿಕೊಂಡು ಬಿಟ್ಟಿತು. ಮೊದಲೇ ಅವನ ಮೂಗಿನ ಪೊಳ್ಳೆಯು ಬಿಡ ಕಾಣಿಸುತ್ತಿತ್ತು. ಈಗ ಮತ್ತಷ್ಟು ಎತ್ತಿಕೊಂಡದ್ದರಿಂದ ಗಂಟಲೂ, ಅದರೊಳಗೆ ಇದ್ದ ಕಿರುನಾಲಿಗೆಯೂ ಮೂಗಿನ ಮೂಲಕ ಕಾಣಿಸುತ್ತಿದ್ದುವು" (ಪು. 184) ಎಂಬುದು ಬುದ್ಧಿಪೂರ್ವಕ ಉತ್ಪ್ರೇಕ್ಷೆಯಲ್ಲದೆ ಬೇರಲ್ಲ. ಸಂಕಲನದಲ್ಲಿ ಹಲವಾರು ಹೃದಯಸ್ಪರ್ಶಿ ಚಿತ್ರಗಳೂ ಇವೆ. ನಿಂತ ವಿವಾಹವನ್ನು ನೆರವೇರಿಸುವ ಗೌಡರ ಘನತೆಯಾಗಲಿ, ದಾಸಪ್ಪ ಮತ್ತು ಅವನ ಕುಟುಂಬದ ಮೈಸೂರು ದಸರಾದಲ್ಲಿನ ಪ್ರಸಂಗವಾಗಲಿ ಉತ್ತಮ ಆಧಾರಗಳು.

ಸಾಹಿತ್ಯಿಕವಾಗಿ ಮನಸೆಳೆಯಬಲ್ಲ ಭಾಗಗಳಲ್ಲದೆ, ಕೃತಿಯಲ್ಲಿ ಬಳಕೆಗೊಂಡಿರುವ ಜನಪದ ಬೈಗುಳಗಳು, ಗಾದೆಮಾತುಗಳು ಬರವಣಿಗೆಯ ರೀತಿಗೆ ಅನನ್ಯ ಸಹಜತೆಯನ್ನು ತಂದುಕೊಟ್ಟಿವೆ. ಕೊಣ, ತದ್ದಲು, ಹರವಿ, ಜಾಗಾರ, ಕರಾವು, ಬುಜ್ಜಣಿಕೆ, ಬೇಚರಾಕು, ಮುಗುವಳಿ, ಅವರೆಸ್ವಾಡಿಗೆ, ಉದಕ, ಮಜ್ಜಿಗಂಬರ, ಮೊಸರಾಳೆ, ಹಾಲುಪಜ್ಜಿ ಮುಂತಾದ ಪದಗಳು ; 'ಇಡೀ ಬೆನ್ನೆಲ್ಲ ಹುಳು ಬಿದ್ದು ಮಿತಿಮಿತಿ ಎನ್ನುತ್ತಿತ್ತು ; ಉಸಿರುಕಟ್ಟಿ ಮುಕ್ಕರಿದು ಎತ್ತಿ ಎತ್ತಿ ಸಾಕಾದ' ಮುಂತಾದ ಜನಭಾಷೆ ಕೃತಿಯ ಭಾಷಿಕ, ಸಾಹಿತ್ಯಿಕಸೊಗಡನ್ನು ಆವಿಯಾಗದಂತೆ ತಡೆದಿದೆ. ಈ ಬಗೆಯ ಕೃತಿಯ ಸೊಗಡು ಮೇಲುನೋಟಕ್ಕೆ ನಯವಿಲಾಸದ, ಕುಸುರಿ ಕೆಲಸದ ಕೊರತೆಯಾಗಿ ತೋರಬಹುದು. ಆದರೆ ನಾಗರಿಕ ಸಮಾಜಕ್ಕಿಂತ ಭಿನ್ನವಾದ ಬದುಕಿನ ಚಿತ್ರಣಕ್ಕೆ ಇವೆಲ್ಲಾ ಅನಿವಾರ್ಯ ಪರಿಕರಗಳಾಗಿಯೇ ಬಂದಿವೆ ಎಂದು ಅನ್ನಿಸುತ್ತದೆ.

೭ | ನನ್ನೂರಿನ ಕೆಲವು ಮರೆಯಲಾಗದ ವ್ಯಕ್ತಿಗಳು

ಡಿ. ಕೆ. ಈರೇಗೌಡ

ಆಧುನಿಕ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ 'ನನ್ನೂರು' ಒಂದು ವಿಶಿಷ್ಟ ಸ್ಥಾನ ಪಡೆದು ಕೊಂಡಿದೆ. ಗ್ರಾಮೀಣ ಬದುಕಿನ ಸೊಗಸು ಕೃತಿಯ ಉದ್ದಕ್ಕೂ ಹರಡಿಕೊಂಡಿದೆ. ಇಲ್ಲಿ ಚಿತ್ರಿತವಾಗಿರುವ ವ್ಯಕ್ತಿಗಳು ನೆಲದಿಂದ ಮೂಡಿ ಬಂದವರಾಗಿದ್ದಾರೆ. ಕೃತಿಯನ್ನು ಓದುತ್ತಾ ಹೋದಂತೆ ಹಳ್ಳಿಯ ಕೌತುಕಮಯ ಬದುಕಿನ ದರ್ಶನವಾಗುತ್ತದೆ. ಅದು ತನ್ನ ಸಹಜ ಸುಂದರ ಬದುಕನ್ನು ಬಿಚ್ಚುತ್ತಾ ಹೋಗುತ್ತದೆ. ಓದುಗ ಆಗಂತುಕನಂತೆ ವಿಸ್ಮಯನಾಗಿ ಈ ಕೌತುಕಮಯ ಜಗತ್ತನ್ನು ನೋಡುತ್ತಾ ತನ್ಮಯನಾಗಿ ಬಿಡುತ್ತಾನೆ. ಎತ್ತ ದೃಷ್ಟಿ ಹರಿಸಿದರೂ ಆ ಸಹಜ ಸುಂದರ ದೃಶ್ಯಗಳಿಂದ ಸಂತೃಪ್ತನಾಗುತ್ತಾನೆ. ಗ್ರಾಮೀಣ ಜೀವನದ ಸಂಸ್ಕೃತಿಗೆ, ಸರಳ ಹಾಗು ಕಪಟರಹಿತ ನಡೆವಳಿಕೆಗಳಿಗೆ ಮಾರು ಹೋಗುತ್ತಾನೆ. ಅರ್ಜಿಕೊಂಬಲ್ಲನನ್ನು ಕಂಡು ಇವನ ಬುದ್ಧಿಯು ತಳಕೆಳಕ್ಕಾಗುತ್ತದೆ ! ಉದಕ ಶಾಮಯ್ಯನನ್ನು ನೆನೆದು ಇವನೂ ಜೊಲ್ಲು ಸುರಿಸುತ್ತಾನೆ. ನೆನೆಯಬಾರದ ರಂಗಣ್ಣ ಮರೆಯಬಾರದ ರಂಗಣ್ಣನಾಗುತ್ತಾನೆ. ಹೀಗೆ ಚಿತ್ರವಿಚಿತ್ರಗಳು, ಸುದ್ದಿ ಸಮಾಚಾರಗಳು, ರೀತಿನೀತಿಗಳು, ನಡೆನುಡಿಗಳು ಗ್ರಾಮೀಣ ಜೀವನದ ಕೋಶವಾದ ನನ್ನೂರಿನಲ್ಲಿ ಅಡಗಿದೆ. ಇಂಥ ಒಂದು ಸಂಪದ್ಭರಿತ ಬದುಕಿನ ದರ್ಶನ ಮಾಡಿಸಿದ ಶ್ರೀ ನಾಗೇಗೌಡರು ಅಭಿನಂದನಾರ್ಹರು. ಅವರ ಹದ್ದಿನ ಕಣ್ಣಿನ ದೃಷ್ಟಿಯಿಂದ ಸಣ್ಣ ಘಟನೆಗಳು ನುಸುಳಿಕೊಂಡಿಲ್ಲ. ಗೊಬ್ಬರದ ಗುಲಾಬಿಯ ಹೃದಯ ಶ್ರೀಮಂತಿಕೆಯನ್ನು ಕಂಡುಕೊಳ್ಳುವಲ್ಲಾಗಲಿ, ಶಾನುಭೋಗ ಸಿಂಗಪ್ಪಯ್ಯನ ತಳಕನ್ನು ಹೊರಗೆಳೆಯು ವಲ್ಲಾಗಲಿ ಗೌಡರ ಲೇಖನಿ ನಿಸ್ಸಂಗತ್ವದಿಂದ ಕೆಲಸ ಮಾಡುತ್ತದೆ. ಕೆಲವು ಕಡೆ ಬುದ್ಧಿಗೆ ಪ್ರಾಧಾನ್ಯತೆ ನೀಡಿರುವುದು ಗೋಚರವಾದರೂ ಭಾವ ಪ್ರಭಾವದಿಂದ ಅದು ಮರೆಯಾಗಿಬಿಡುತ್ತದೆ. ಜನಪದ ನುಡಿಗಟ್ಟುಗಳು, ಗಾದೆಗಳು, ಸಂಪ್ರದಾಯಗಳು ಓದುಗನ ರುಚಿಯನ್ನು ಮತ್ತೂ ಕೆರಳಿಸುತ್ತವೆ. ಆಸೆಗಣ್ಣುಗಳಿಂದ ನನ್ನೂರಿನ ಚಿತ್ರಶಾಲೆ ಯಲ್ಲಿ ಸುತ್ತಲೂ ತಿರುಗುವಂತೆ ಮಾಡುತ್ತವೆ. ಕೊನೆಗೆ 'ನನ್ನೂರು' 'ಎಲ್ಲರ ಊರಾಗಿ' ಪರಿಣಮಿಸುತ್ತದೆ. ಇಲ್ಲಿ ಚಿತ್ರಿತವಾಗಿರುವ ವ್ಯಕ್ತಿಗಳು ಮರೆಯಲಾಗದ ವ್ಯಕ್ತಿಗಳಾಗು ತ್ತಾರೆ. ಆ ಕೆಲವು ವ್ಯಕ್ತಿಗಳ ಪರಿಚಯ ಮಾತ್ರ ಈ ಲೇಖನದ ಉದ್ದೇಶ.

'ಘನತೆಯ ಗೌಡರು' ನನ್ನೂರಿನ ಯಜಮಾನರೆಂದೇ ಹೇಳಬೇಕು. ಅವರು ಒಳ್ಳೆಯ ಕಾರ್ಕತ್‌ಗಾರರೆಂದು ಹೆಸರಾದವರು ಮಾಡದ ಕೆಲಸವಿಲ್ಲ, ಒಂದು ರೀತಿಯಲ್ಲಿ

'ದರ್ಬಾರು' ನಡೆಸಿದರೆಂದೇ ಹೇಳಬೇಕು. ಹುಲ್ಲು ಗುಡಿಸಲುಗಳೇ ಹೆಚ್ಚಾಗಿದ್ದ ನನ್ನೂರಿನಲ್ಲಿ ಹೊಸದಾಗಿ ಮಂಗಳೂರು ಹೆಂಚಿನ ಮನೆ ಕಟ್ಟಿದರು. ಸೀಮೆ ನೇಗಿಲು ತಂದು ಬೇಸಾಯ ಮಾಡಿಸಿದರು. ಬಿಳೀ ಸೀಮೆಯೆಣ್ಣೆ ಬಳಸಿದರು. ಕುಡಿಯುವ ಬಾವಿ ತೆಗೆಸಿದರು. ಇವೆಲ್ಲ ಅವರ ದಕ್ಷತೆಯ ಕುರುಹುಗಳು.

ಗೌಡರು ಒಳ್ಳೆ ರಸಿಕರು. ಒಂದಲ್ಲ ನಾಲ್ಕು ಮದುವೆ ಮಾಡಿಕೊಂಡರು. 'ಪ್ರಾಯಕ್ಕೆ ಬಂದ ಮಕ್ಕಳಿದ್ದಾರೆ, ಮದುವೆ ಬೇಡ' ಎಂದು ಯಾರಾದರೂ ಹೇಳಿದರೆ 'ಮಕ್ಕಳು ಮನೆ ವಾರ್ತೆ ಮಾಡಿದರೆ ಅಪ್ಪಗ್ಯಾಕೆ ಇಬ್ಬರು ಹೆಂಡಿರು' ಎಂದು ಹೇಳಿ ಅವರ ಬಾಯಿಮುಚ್ಚಿಸಿದರು. ಎಲೆ ಅಡಿಕೆ ಹಾಕಿದರು, ಸಿಗರೇಟು ಸೇವಲು ಮಾಡಿದರು. ನಶ್ಯ ಸೇದಿದರು. ರೇಶ್ಮೆ ವಸ್ತ್ರ ಹೊದ್ದರು. ಜರಿ ಪೇಟ ಸುತ್ತಿದರು. ವಾರಕ್ಕೊಮ್ಮೆ ಮುಖಕ್ಷೌರ ಮಾಡಿಸಿದರು. ರಾಗಿರೊಟ್ಟಿಯೇ ಗತಿಯಾಗಿದ್ದ ನನ್ನೂರಿನ ಜನಕ್ಕೆ ಕಾಫಿ ಉಪ್ಪಿಟ್ಟುಗಳ ಪರಿಚಯ ಮಾಡಿಸಿದರು. ಗಂಧದ ಬಿಲ್ಲೆ ಸೆಂಟು ಹಾಕಿದರು. 'ಸ್ಪೆಷಲ್ಲಾಗಿ' ಬಟ್ಟೆ ಒಗೆಸಿದರು. ಚಡ್ಡಿಯೇ ಗತಿಯಾಗಿದ್ದ ಊರಿನಲ್ಲಿ ಕಚ್ಚೆ ಪಂಚೆ ಸುತ್ತಿದರು. ಶರಟಿಗೆ ಬೆಳ್ಳಿಯ ಗುಂಡಿಗಳನ್ನು ಹಾಕಿದರು. ಹೀಗೆ ಅವರು ಮಾಡದ ಶೋಕಿಯಿಲ್ಲ. ಇಷ್ಟೆಲ್ಲಾ ಮಾಡಿದರೂ ಮನೆಯ ಯಜಮಾನಿಕೆಯನ್ನು ಸರಿಯಾಗಿಯೇ ನಡೆಸಿದರು. ಓದಿಗೂ ತನಗೂ ಎಣ್ಣೆ ಸೀಗೆಕಾಯಿ ಸಂಬಂಧ ಎಂದು ತಿಳಿದಿದ್ದ ಗೌಡರು ತಂದೆ ಸತ್ತ ಮೇಲೆ ಇಂಥ ಹುಡುಗ 'ಇನ್ನಿಲ್ಲ' ಎನಿಸಿಕೊಂಡರು. ತಮ್ಮ ಆದಾಯ ತಮ್ಮ ಅವಿಭಕ್ತ ಕುಟುಂಬಕ್ಕೆ ಸಾಕಾಗುವುದಿಲ್ಲ ಎಂದು ತಿಳಿದ ಮೇಲೆ ದುಡಿಮೆಯ ಬೇರೆ ಬೇರೆ ಮಾರ್ಗ ಹುಡುಕಿದರು. ಊರಿಗೆ ಹೊಸದಾಗಿ ಆಲೂಗಡ್ಡೆ, ದಪ್ಪ ಈರುಳ್ಳಿ, ಬೆಳ್ಳುಳ್ಳಿ, ಅಡಕೆ ಕಬ್ಬು ಬೆಳೆ ತಂದರು. ಗಾಣ ಇಟ್ಟರು, ಇಷ್ಟೆಲ್ಲಾ ಸಾಲದೆಂಬಂತೆ 'ಹೆಂಡದ ಕಂಟ್ರ್ಯಾಕ್ಟು' ಮಾಡಿದರು. ಹೀಗೆ ಹತ್ತು ಹಲವಾರು ಕಾರುಬಾರು ನಡೆಸಿ ನನ್ನೂರಿನಲ್ಲೇಕೆ ಸುತ್ತ ಮುತ್ತಲ ಹಳ್ಳಿಯಲ್ಲಿಯೇ ಇಂಥ ಗೌಡರಿನ್ನಿಲ್ಲ ಎನಿಸಿಕೊಂಡರು.

ಗೌಡರು ತುಂಬ ಹಾಸ್ಯಪ್ರಿಯರು. ಕಂಡಕಂಡವರನ್ನೆಲ್ಲ ಕೀಟಲೆ ಮಾಡುವುದರಲ್ಲಿ ಎತ್ತಿದ ಕೈ. ಊರಿನಲ್ಲಿ ಯಾವುದೇ ಮದುವೆಯಾದರು ಗೌಡರು ಹಾಜರು. ಅಥವಾ ಗೌಡರಿಲ್ಲದೆ ಯಾವ ಮದುವೆಯೂ ನಡೆಯುವುದೇ ಇಲ್ಲ ಎಂದು ಹೇಳಬಹುದು. ತಮ್ಮ ಕುಚೇಷ್ಟೆಗಳಿಂದ ನೆರೆದಿದ್ದವರನ್ನೆಲ್ಲ ನಗಿಸುವುದು ಗೌಡರ ಜಾಯಮಾನಕ್ಕೆ ಒಗ್ಗಿಬಂದ ಪ್ರವೃತ್ತಿ. ಚೇಳು ಹಿಡಿಸಿ ಅವರ ಕೊಂಡಿ ಮುರಿಸಿ ಬೀಗರ ಜೇಬಿಗೆ ಬಿಡಿಸುವುದು, ರಬ್ಬರ್ ಹಾವನ್ನು ಅವರ ಜೇಬಿಗೆ ಬಿಟ್ಟು ಅವರು ಹೆದರಿ ಓಡಾಡುವುದನ್ನು ಕಂಡು ನಗುವುದು, ಹಿಂದಿನಿಂದ ಬೀಗರ ಪಂಚೆ ಎಳೆಸುವುದು, ಬೀಗತಿ ಮಲಗಿದ್ದಾಗ ಮಸಿಯಿಂದ ಮೀಸೆ ಬರೆಸುವುದು, ಹೊಸ ಅಳಿಯ ಬಂದಾಗ ಅವನನ್ನು ದರ್ಜಿ ಅಂಗಡಿಯಲ್ಲಿ ಕೂರಿಸಿ ಅವನಿಗೆ ತಿಳಿಯದಂತೆ ಹಿಂಭಾಗದಲ್ಲಿ ಅಂಗಿಗೆ ಬಟ್ಟೆ ತುಂಡುಗಳಿಂದ ಹೊಲಿಸಿ ಊರಿನ ಬೀದಿಯಲ್ಲಿ ಮೆರವಣಿಗೆ ಕರೆದುಕೊಂಡು

ಹೋಗುವುದು ಇತ್ಯಾದಿ ಇತ್ಯಾದಿ ಅವರ ಹಾಸ್ಯಭಂಡಾರಗಳಲ್ಲಿ ಸೇರಿದ್ದ ಅನರ್ಘ್ಯ ರತ್ನಗಳು.

ಗೌಡರು ನನ್ನೂರಿನ ಕೇಂದ್ರವ್ಯಕ್ತಿ. ಅವರೊಂದಿಗೆ ನನ್ನೂರಿನ ಹಲವು ಹತ್ತಾರು ವ್ಯಕ್ತಿಗಳು ಒಂದಲ್ಲ ಒಂದು ರೀತಿಯಲ್ಲಿ ಸಂಬಂಧ ಹೊಂದಿದ್ದರು. ತಮ್ಮ ಹಾಸ್ಯ ಪ್ರವೃತ್ತಿಯಿಂದ, ಉದಾರತೆಯಿಂದ, ಪರೋಪಕಾರ ಬುದ್ಧಿಯಿಂದ ಊರಿನಲ್ಲಿರುವ ಎಲ್ಲರ ಮನಸ್ಸನ್ನು ಗೆದ್ದುಕೊಂಡು ಬಿಟ್ಟಿದ್ದರು. ಅವರು ಹಾಸ್ಯ ಮಾಡಿ ಬೀಗರನ್ನು, ನೆಂಟರನ್ನು. ಹೊಸ ಅಳಿಯಂದಿರನ್ನು ಗೋಳು ಹುಯ್ದು ಕೊಳ್ಳುತ್ತಿದ್ದುದು ನಿಜ. ಅದು ಮಾರಕವಾಗಿರುತ್ತಿರಲಿಲ್ಲ. ಪ್ರೇರಕವಾಗಿರುತ್ತಿತ್ತು. ಅವರ ಚೇಷ್ಟೆಗೆ ಒಳಗಾದವರಿಗೆ ಭಾರಿ ಭೋಜನವೇ ಕಾದಿರುತ್ತಿತ್ತು. ಅದು ಬೇಳೆ ಅಥವಾ ಕೋಳಿಯದಲ್ಲ—ಮರಿಯದು ! ಗೌಡರಲ್ಲಿ ಹಾಸ್ಯ ಪ್ರವೃತ್ತಿ ಮನೆ ಮಾಡಿಕೊಂಡಿದ್ದರೂ ಕಷ್ಟ ಸುಖಗಳಿಗೆ 'ಆಗುವ' ಮನುಷ್ಯರಾಗಿದ್ದರು. ಕೊನೆಯ ಘಳಿಗೆಯಲ್ಲಿ ಗಂಗಣ್ಣನ ಮಗನಿಗೆ ಹೆಣ್ಣು ಕೊಡುವುದಿಲ್ಲ ಎಂದು ಮಾಕೋನ ಹಳ್ಳಿಯವರು ಕೈ ಎತ್ತಿಬಿಟ್ಟರು. ಆಗ ಗಂಗಣ್ಣನ 'ಮಾನ' ಹರಾಜಾಗುವ ಸ್ಥಿತಿಗೆ ಬಂತು. ಅಂಥ ಕಷ್ಟ ಸಮಯದಲ್ಲೂ ಗೌಡರು ಧೈರ್ಯಗೆಡದೆ ಚಾಕಚಕ್ಯತೆಯಿಂದ, ವ್ಯವಹಾರ ಕುಶಲತೆಯಿಂದ ಬೇರೊಂದು ಹೆಣ್ಣು ತಂದು ಅದೇ ದಿನ ಮದುವೆಮಾಡಿ ಗಂಗಣ್ಣನ ಮಾನ ಊರಿನ ಮಾನ ಎರಡನ್ನೂ ಕಾಪಾಡಿದರು. ಗೌಡರು ಊರಿನಲ್ಲಿ ಇರದಿದ್ದಾಗ ಊರಿನಜನ ಕಂಗಾಲಾಗುತ್ತಿದ್ದರು. ಗೌಡರಿದ್ದರೆ "ಆ ನನ್ನಪ್ಪ ಇದ್ದರೆ ನಿಶ್ಚಿಂತೆಬಿಡು" ಎನ್ನುತ್ತಿದ್ದರು. ಒಟ್ಟಿನಲ್ಲಿ ಊರನ್ನೇ ಗೆದ್ದುಕೋಂಡುಬಿಟ್ಟಿದ್ದರು. ಊರಿನ ಕಷ್ಟಸುಖಗಳನ್ನು ತನ್ನವೆಂದು ಭಾವಿಸಿ ಬಾಳಿದರು—ಘನತೆಯ ಗೌಡರೆನಿಸಿ ಕೊಂಡರು.

'ಗೊಬ್ಬರದ ಗುಲಾಬಿ' ಅರ್ಥಾತ್ ಗೌಡರ 'ಬಿಸಿನೆಸ್ ಮ್ಯಾನೇಜರ್' ಬುಂಡೇದಾಸನಿಗೂ ಗೌಡರಿಗೂ ಪ್ರಾಣ ಸಖ್ಯ. ಗೌಡರು ತಮ್ಮ ಹೆಂಡದ ವ್ಯಾಪಾರ ನಡೆಸುತ್ತಿದ್ದುದೇ ಇವನ ಮೂಲಕ. ಇವನು ಎಷ್ಟೇ ಹೆಂಡ ಕುಡಿದರು ನಿಯತ್ತಿಗೆ ತಪ್ಪದ ಮನುಷ್ಯ. ಹೆಂಡ ಕುಡಿದು ಮೈ ಮೇಲೆ ಜ್ಞಾನವಿಲ್ಲದಿದ್ದರೂ ಹೆಂಡ ಮಾರಿಬಂದ ಹಣವನ್ನು ಗೌಡರಿಗೆ ಸರಿಯಾಗಿ ತಲುಪಿಸುತ್ತಿದ್ದ. ಅದರಲ್ಲಿ ಒಂದುಕಾಸೂ ವ್ಯತ್ಯಾಸಬರುತ್ತಿರಲಿಲ್ಲ. ಒಡತನ ಕಿತ್ತು ತಿನ್ನುತ್ತಿದ್ದರೂ ಒಂದು ಕಾಸನ್ನೂ ಮುಟ್ಟು ತ್ತಿರಲಿಲ್ಲ. ಅವನ ಸ್ವಾಮಿನಿಷ್ಠೆ, ಪ್ರಾಮಾಣಿಕತೆಗಳಿಂದಾಗಿ ನನ್ನೂರಿನಲ್ಲೇ ಎದ್ದುಕಾಣುವ ವ್ಯಕ್ತಿ. ಆದರೆ ತನ್ನ ಸ್ವಾಭಿಮಾನಕ್ಕೆ ಕುಂದುಬಂದರೆ ಎಂಥವರನ್ನಾದರೂ ಎದುರಿಸು ವಂಥ ಖ್ಯಾತಿವಂತ. ಗಾವುಸಿಗಿಯುವಾಗ ಎಲ್ಲರಿದುರಿನಲ್ಲಿ ಗಾವಿನಗಂಗಣ್ಣ ಇವನಿಗೆ ಹೊಡೆದಾಗ, ಅವನು ಮೇಲು ಕುಲದವನಾದರೂ ತನ್ನ ದೋಣಿನಿಂದಲೇ ಬಾರಿಸುತ್ತಾನೆ. ನಿಯತ್ತಿಗೆ ನಿಯತ್ತು, ಪ್ರತಿಕಾರಕ್ಕೆ ಪ್ರತಿಕಾರ ಎಂಬ ತತ್ವವನ್ನು

ಅಳವಡಿಸಿಕೊಂಡು ಬದುಕಿದವನು. ಬುಂದೇದಾಸ ತನ್ನ ಇಂಥ ಆಕರ್ಷಕ ಗುಣಗಳಿಂದ ಗೊಬ್ಬರದಲ್ಲಿ ಹುಟ್ಟಿದ ಗುಲಾಬಿಯಾಗಿದ್ದಾನೆ.

'ಶ್ಯಾನುಭೋಗ ಸಿಂಗಪ್ಪಯ್ಯ' ನವರು ಅವರ ಹೆಸರೇ ಹೇಳುವಂತೆ ನನ್ನೂರು ಮತ್ತು ಸುತ್ತಮುತ್ತಲ ಹಳ್ಳಿಗಳಿಗೆ ಶಾನುಭೋಗರು. ಅಕ್ಷರ ಜ್ಞಾನವಿಲ್ಲದ ಹಳ್ಳಿಗರ ಮುನ್ನೆ ಇವರು ನಡೆಸಿದ್ದೇ ದರ್ಬಾರು, ಮಾಡಿದ್ದೇ ಕಾರುಬಾರು. 'ಶೇಖದಾರರು ಬರುತ್ತಾರೆ' ಎನ್ನುವುದೇ ದೊಡ್ಡ ವಿಚಾರವಾಗಿದ್ದಂಥ ನನ್ನೂರಿನಲ್ಲಿ ಇನ್ನು ಅಮಲ್ದಾರರು ಬರುತ್ತಾರೆ ಎಂದರೆ ಕೇಳಬೇಕೆ ? ಊರೇ ಅಲ್ಲೋಲ ಕಲ್ಲೋಲವಾಗಿ ಬಿಡುತ್ತದೆ. ಇಂಥ ಸುದ್ದಿಗಳನ್ನು ಆಗಿಂದಾಗ್ಗೆ ಊರಿನಲ್ಲಿ ಹುಟ್ಟಿಸಿ ತಮ್ಮ ಹೊಟ್ಟೆ ಹೊರೆದುಕೊಳ್ಳಲು ಶ್ಯಾನುಭೋಗರ ಒಕಮುತ್ತು. ಅಮಲ್ದಾರರು ಬರುತ್ತಾರೆಂದು ಸುದ್ದಿ ಹುಟ್ಟಿಸಿ ಹಳ್ಳಿಯವರನ್ನು ಹೆದರಿಸಿ ಬೆದರಿಸಿ ಅವರಿಂದ ಕಾಯಿ ಪಲ್ಲೆ, ಹಣ್ಣು ಹಂಪಲು, ತೆಂಗಿನಕಾಯಿ, ಕೊಬ್ಬರಿ, ಬಾಳೆಗೊನೆ, ಕಾಳುಕಡ್ಡಿಗಳನ್ನು ವಸೂಲು ಮಾಡುವುದು, ಇವುಗಳನ್ನೆಲ್ಲಾ ಅಮಲ್ದಾರರಿಗೆ ಕಳುಹಿಸುತ್ತೇನೆಂದು ಹೇಳಿ ತಮ್ಮ ಮನೆಗೆ ಸಾಗಿಸುವುದು ಇವೆಲ್ಲಾ ಶ್ಯಾನುಭೋಗರ ಮಾಮೂಲಿ ಕೆಲಸಗಳು. ಇದರಿಂದ ಅವರ ಮಗನ ಓದು, ಮಗಳ ಪ್ರಸ್ತ, ಹಬ್ಬಹರಿದಿನಗಳು ಸಲೀಸಾಗಿ ಸಾಗಿಹೋಗುತ್ತಿದ್ದವು. ಇಷ್ಟಕ್ಕೆ ಅವರ ಕಾರುಬಾರು ಸೀಮಿತವಾಗಿರಲಿಲ್ಲ. ಕಂದಾಯ ತೆಗೆದುಕೊಂಡರೂ ರಶೀತಿ ಕೊಡದೆ ಜಮೀನನ್ನು ಹರಾಜಿಗೆ ತಂದು ಮೊದಲು ಬೇರೆಯವರ ಹೆಸರಿಗೆ ಅದನ್ನು ನಿಲ್ಲಿಸಿ ಅನಂತರ ತಮ್ಮದನ್ನಾಗಿ ಮಾಡಿಕೊಳ್ಳುತ್ತಿದ್ದರು. ಖಾತೆಯನ್ನು ಬೇರೆ ಹೆಸರಿನಲ್ಲಿಡುವುದು, ಪಹಣೆಯಲ್ಲಿ ಬಾಳೆಗೆ ಬದಲು ತೆಂಗಿನ ಫಸಲು, ರಾಗಿಗೆ ಬದಲು ಬತ್ತ ಎಂದು ಬರೆಯುವುದು—ಇಂಥ ಕೆಲಸಗಳಲ್ಲೆಲ್ಲಾ ನಿಸ್ಸೀಮರಾಗಿದ್ದರು. ಹೀಗೆ ತನ್ನ ಕಿತಾಪತಿಗಳಿಂದ ಊರಿನ ಜನರನ್ನೇ ಹುರಿದುಕೊಂಡು ತಿಂದರೂ, ಅವರಿಂದಲೇ ಬದುಕುತ್ತಿದ್ದರೂ, ಹಳ್ಳಿಯ ಜನರ ಬಗ್ಗೆ ಗೌರವವಾಗಲಿ ಆದರವಾಗಲಿ ಇರಲಿಲ್ಲ. ತಮ್ಮ ಪಹಣೆಯಲ್ಲಿ ಒಕ್ಕಲು ಮಕ್ಕಳ ಯಾರ ಹೆಸರಿಗೂ ಗೌರವ ಸೂಚಕವಾದ ಒಂದು ಪ್ರತ್ಯಯವನ್ನಾದರೂ ಸೇರಿಸುವ ಶ್ರಮ ತೆಗೆದುಕೊಂಡಿರಲಿಲ್ಲ. ಮರೆತೂ ಸೇರದಂತೆ ಎಚ್ಚರವಹಿಸುತ್ತಿದ್ದರು. ಅವರ ದ್ಯಾಸ ಗುಟ್ಟಿನ ರಿಕಾರ್ಡುಗಳಾದ ಖಾತೆ, ಪಹಣೆಗಳಲ್ಲಂತೂ ನಿಂಗ ಬಿನ್ ನಂಜ, ನಂಜ ಬಿನ್ ನಿಂಗ, ರಂಗ ಬಿನ್ ನಿಂಗ, ದ್ಯಾವ ಬಿನ್ ಕಾಳ, ಕಾಳ ಬಿನ್ ಬೋಳ ಇತ್ಯಾದಿಯಾಗಿ ಬರೆದಿರುತ್ತಿದ್ದರು." ಅವರಿಗೆ ಬಹು ವಚನದಲ್ಲಿ ಬರೆಯಲು ಬರುತ್ತಿರಲಿಲ್ಲವೆಂದು ಅರ್ಥವಲ್ಲ. ಶೂದ್ರ ಮಕ್ಕಳಿಗೆ ಗೌರವ ತೋರಿಸುವಷ್ಟು ದಡ್ಡರಾಗಿರಲಿಲ್ಲ ಶ್ಯಾನುಭೋಗರು. ತಮ್ಮ ಶ್ಯಾನುಭೋಗಿಕೆಗೆ ಸೇರಿದ್ದ ಆಡೇನಹಳ್ಳಿಗೆ ಬೆಂಕಿಬಿದ್ದಾಗ "ಆಡೇನಳ್ಳಿ ಹಾಳಾದರೆ ಬರೆಯೋದೊಂದು ಪಂಕ್ತೀನೆ ತಪ್ಪಿತೋಪ್ಪ" ಎಂದು ಅವರಾಡುವ ಮಾತು, ಅವರ ಹೃದಯ ಹೀನತೆಗೆ, ಸಂಸ್ಕೃತಿಗೆ ಸಾಕ್ಷಿಯಾಗಿದೆ.

ಶ್ಯಾನುಭೋಗರು ಬಲು ಘಾಟಿ ಆಸಾಮಿ, ಕದೀಮ. ಯಾರಿಗೂ ಜುಮ್ಮೆನ್ನು ತ್ತಿರಲಿಲ್ಲ. ಶೇಖದಾರರು, ಅಮಲ್ದಾರರಿಲಿ ಡೆಪ್ಯೂಟಿ ಕಮಿಷನರಿಗೂ ಹೆದರುತ್ತಿರಲಿಲ್ಲ. ಡೆಪ್ಯೂಟಿ ಕಮೀಷನರ್ ಜಮಾಬಂದಿಗೆ ಬರುತ್ತೇನೆಂದರೆ 'ಊರಿಗೆ ಪ್ಲೇಗು' ಬಂದು ರಿಪೋರ್ಟು ಮಾಡಲು ಹಿಂಜರಿಯಲಿಲ್ಲ. ಹೀಗೆ ಶ್ಯಾನುಭೋಗರು ಸಿಂಗಪ್ಪಯ್ಯನವರು ತಮ್ಮ ಕಿತಾಪತಿಗಳಿಂದ, ಹಿಕಮತ್ತಿನಿಂದ ನನ್ನೂರಿನಲ್ಲಿ ನೆನೆಯಬಾರದವರಾಗಿದ್ದರೂ ಮರೆಯಬಾರದರಾಗಿದ್ದಾರೆ.

'ಆಯಿತೇ ಆಚಾರ್ರು' 'ರಜತ ಹಾಗೂ ಸುವರ್ಣ ಚೋರ ನಿಪುಣ' ಎಂಬ ಬಿರುದಾಂಕಿತ ನನ್ನೂರಿನ ರಂಜಕ ಪುರುಷ. ಚಿನ್ನ ಯಾರದ್ದೇ ಇರಲಿ (ದೇವರದೇ ಆಗಿರಲಿ) ಅದರಲ್ಲಿ ಸ್ವಲ್ಪವಾದರೂ ಹಾರಿಸಿಯೇ ಹಾರಿಸುತ್ತೇನೆ ಎಂದು 'ಭೀಷ್ಮ ಪ್ರತಿಜ್ಞೆ' ಮಾಡಿದ್ದವರು. ಹಾಗೆ ಚಿನ್ನ ಕದಿಯದಿದ್ದರೆ ತನ್ನ ಕುಲಕಸಬಿಗೆ ಯಶಸ್ಸಿಲ್ಲ ಎಂದು ಭಾವಿಸಿದ್ದಂತೆ ಕಾಣುತ್ತದೆ. ಈ ಕಲೆಗಾರಿಯನ್ನು ಕೊನೆಯವರೆಗೂ ಕಾಪಾಡಿ ಕೊಂಡು ಬಂದರು. ಆಚಾರ್ರು ತಮ್ಮ ಕುಲಕಸಬಾಗಿದ್ದ ಚಿನ್ನ ಬೆಳ್ಳಿ ಒಡವೆಗಳನ್ನು ಮಾಡಿಕೊಡುವುದರ ಜೊತೆಗೆ ಇತರ ಉಪಕಸುಬುಗಳನ್ನು ಅವಲಂಭಿಸಿದ್ದರು. ನನ್ನೂರಿ ನಲ್ಲಿ ಅರ್ಜಿಕೊಂಬಲ್ಲನನ್ನು ಬಿಟ್ಟರೆ ಸ್ವಲ್ಪ ಓದುಬರಹ ಬರುತ್ತಿದ್ದುದು ಆಚಾರ್ರಿಗೆ ಮಾತ್ರವೇ. ಈ ಅವಕಾಶವನ್ನು ಬಹಳ ಚೆನ್ನಾಗಿಯೇ ಆಚಾರ್ರು ಬಳಸಿಕೊಳ್ಳುತ್ತಿದ್ದರು. ಆಗಿಂದಾಗ್ಗೆ ಅಪರೂಪವಾಗಿ ಊರಿನಲ್ಲಿ ಯಾರಿಗಾದರು ಮನಿಯಾರ್ಡರು ಬಂದರೆ ಓದು ಬರಹ ಬಾರದ ನನ್ನೂರಿನವರು ಆಚಾರ್ರನ್ನೇ ಅವಲಂಬಿಸಬೇಕಾಗಿತ್ತು. ಆಚಾರ್ರು ತಾವು ಓದುಬರಹ ಕಲಿತದ್ದಕ್ಕೆ ಪ್ರಯೋಜನ ಪಡೆದುಕೊಳ್ಳುತ್ತಿದ್ದರು. ಇಪ್ಪತ್ತು ಬಂದರೆ ಹದಿನೈದು ಎಂದು ಹೇಳಿ ಉಳಿದಿದ್ದನ್ನು ಕಿಸೆಗೆ ಇಳಿಬಿಡುತ್ತಿದ್ದರು. ಅಥವಾ ಹದಿನೈದನ್ನೇ ಇಪ್ಪತ್ತು ಎಂದು ಹೇಳಿ ನೋಟುಗಳನ್ನು ಎಣಿಸಿಕೊಟ್ಟು ತಮ್ಮ ಕೈಚಳಕ ವನ್ನು ಮೆರೆಯುತ್ತಿದ್ದರು. ಆಚಾರ್ರ ಜಾಯಮಾನವನ್ನು ತಿಳಿದಿದ್ದ ನನ್ನೂರಿನವರು ಕಾವಲು ಕುಳಿತಿದ್ದರೂ ದೇವರ ಬೆಳ್ಳಿಯನ್ನೇ ಕರಗಿಸುವ ನೆಪದಲ್ಲಿ ಹಾರಿಸಿದ್ದ ಆಚಾರ್ರಿಗೆ ಇವೆಲ್ಲ ದೊಡ್ಡ ಕೆಲಸಗಳಾಗಿರಲಿಲ್ಲ. ಇದರ ಜೊತೆಗೆ ಹಳ್ಳಿಯವರಿಗೆಲ್ಲಾ ಔಷಧಿಕೊಡುವ ಘನಪಾಂಡಿತ್ಯ ಬೇರೆ. ಆಚಾರ್ರ ಔಷಧಿ ಪ್ರಭಾವದಿಂದ ಅನೇಕ ಜನ ಕಂತೆ ಒಗೆದು ಭೂಭಾರ ಕಡಮೆಯಾಗಿದ್ದರೂ ಕೆಲವರಿಗೆ ಕಾಯಿಲೆ ವಾಸಿಯಾಗಿತ್ತಂತೆ. ಅದು ಇವರ ಔಷಧಿಯ ಪ್ರಭಾವದಿಂದಲೊ ಅಥವಾ ಮತ್ತಾವ ಕಾರಣದಿಂದಲೊ ವಾಸಿಯಾಗಿ ದ್ದರೂ ಇವರಿಗೆ ಅದರಿಂದ ಅಷ್ಟೊ ಇಷ್ಟೊ ಕಾಣಿಕೆ ದಕ್ಕುತ್ತಿತ್ತು. ಆಚಾರ್ರು ಯಾರಿಗೂ ಕಾಣದಂತೆ ಬಿಳಿಮಜ್ಜಿಗೆ ಸೇವಿಸಿದರೂ, ಲಾಲ್ ತರಕಾರಿ ಬಳಸುತ್ತಿದ್ದರೂ ಬೇರೆಯವರನ್ನು ಮಾತ್ರ ಶೂದ್ರ ಎನ್ನುವುದನ್ನು ಬಿಡುತ್ತಿರಲಿಲ್ಲ. ಜೀವಿಸಿದ್ದಾಗ ನನ್ನೂರಿನ ಜನರ ಚಿನ್ನಬೆಳ್ಳಿ ಕದ್ದು ಬದುಕುತ್ತಿದ್ದ ಆಚಾರ್ರು ಸತ್ತ ಮೇಲೂ ದೆವ್ವವಾಗಿ ಕಾಡುವುದನ್ನು ಮರೆಯಲಿಲ್ಲವಂತೆ !

ತಲೆಕೆಳಗಿನ ಅರಳಿಮರದಂತೆ 'ಅರ್ಜಿಕೊಂಬಲ್ಲನ' ಬುದ್ಧಿಯೂ ತಲೆಕೆಳಗಾಗಿ ಬೆಳೆದಿತ್ತು. ಹುಟ್ಟು ಹೆಸರು ಕೆಂಗೇಗೌಡ ಎಂದಿದ್ದರೂ ಮೂಗರ್ಜಿ ಬರೆಯುವುದರಲ್ಲಿ ನಿಪುಣನಾಗಿದ್ದರಿಂದ ಮತ್ತು ಹಲ್ಲು ಕೊಂಬಿನಂತೆ ಈಚೆಗೆ ಚಾಚಿದ್ದರಿಂದ 'ಅರ್ಜಿಕೊಂಬಲ್ಲ' ಎಂಬ ಅನ್ವರ್ಥ ಹೆಸರೇ ಶಾಶ್ವತವಾಗಿ ನಿಂತುಹೋಯಿತು. ಬಹಳ ಗುಟ್ಟಿನ ವಿಷಯಗಳನ್ನು ಬರೆಯುವಾಗ ಎಡಗಾಲಿನಲ್ಲಿ ಬರೆಯುತ್ತಿದ್ದ ಎಂದರೆ ಊಹಿಸಿಕೊಳ್ಳಲೂ ಸಾಧ್ಯವಿಲ್ಲ! ಇವನ ಮೂಗರ್ಜಿಗಳಿಂದ ನಮ್ಮೂರಿನ ಜನರಿಗೆ ನೆಮ್ಮದಿಯಿಲ್ಲ. ಶ್ಯಾನುಭೋಗ ಸಿಂಗಪ್ಪಯ್ಯನಿಗೂ ಇವನ ಕಾಟ ತಪ್ಪಲಿಲ್ಲ ಎಂದ ಮೇಲೆ ಉಳಿದವರ ಪಾಡೇನು ?

ನಯವಂಚನೆಯಿಂದ ಊರಿನ ಜನರನ್ನು ಹುರಿದು ತಿನ್ನುತ್ತಿದ್ದ ಶ್ಯಾನುಭೋಗರ ಆಟ ಅರ್ಜಿಕೊಂಬಲ್ಲನ ಮುಂದೆ ಸಾಗಲಿಲ್ಲ. ಇವನ ಮೂಗರ್ಜಿಯ ಪ್ರಭಾವದಿಂದಲೇ ಡೆಪ್ಯೂಟಿ ಕಮೀಷನರು ಜವಾಬಿಗೆ ನಮ್ಮೂರಿಗೆ ಬಂದದ್ದು. ಇವನ ದೆಸೆಯಿಂದಾಗಿ ಸುತ್ತಮುತ್ತಲ ಹಳ್ಳಿಯ ಎಷ್ಟೋ ಗುಟ್ಟಿನ ವಿಷಯಗಳು ಬೀದಿಪಾಲಾಗುತ್ತಿದ್ದವು. ಅಷ್ಟೇ ಅಲ್ಲ ಅನೇಕರಿಗೆ ತಲೆನೋವಾಗಿ ಪರಿಣಮಿಸುತ್ತಿದ್ದವು. ಇತರರ ಮೇಲೆ ಮೂಗರ್ಜಿ ಬರೆಯುತ್ತಿದ್ದ ಅರ್ಜಿಕೊಂಬಲ್ಲ ಕದ್ದು ಆಡುಕುರಿ ತಿನ್ನುವುದರಲ್ಲಿ ನಿಸ್ಸೀಮನಾಗಿದ್ದ. ಕೊನೆಗೊಮ್ಮೆ ಸಿಕ್ಕಿಬಿದ್ದು ಊರಿನವರೆಲ್ಲರಿಂದ ಒದೆ ತಿಂದ. ಸಾಲದೆಂಬಂತೆ ಜೈಲು ಕಂಡು ಊರು ಸೇರಿದ.

'ನೆನೆಯಬಾರದ ರಂಗಣ್ಣ' ನಮ್ಮೂರಿನ ಮಹಾಕ್ಷೌರಿಕ. ನಮ್ಮೂರಿನಲ್ಲೇ ಸಿದ್ಧವಾದ ಮೊಂಡು ಕತ್ತಿಗಳಿಂದ ಊರಿನಜನರೆಲ್ಲರ ಕೂದಲಿನ ಮೋಕ್ಷ ಕಾಣಿಸುತ್ತಿದ್ದ. ಅವನ ಕೈಯಲ್ಲಿ ಕ್ಷೌರಮಾಡಿಸಿಕೊಳ್ಳುವುದಕ್ಕೆ ಪುಣ್ಯ ಮಾಡಿರಬೇಕಿತ್ತು. ಒರಟಾದ, ಜಡ್ಡು ಹಿಡಿದಿದ್ದ, ಮೊಂಡಾದ ಕತ್ತಿಗಳು ಕೂದಲನ್ನು ಹರೆಯುತ್ತಿದ್ದವು ಎಂಬುದು ಸುಳ್ಳು. ಅವು ನಿಜಕ್ಕೂ ಚರ್ಮವನ್ನೇ ಹರಿದಿರಬೇಕು. ಆದರೆ ಆರು ತಿಂಗಳಿಗೊ ಅಥವಾ ವರ್ಷಕ್ಕೊಂದು ಸಾರಿಯೋ ಕ್ಷೌರ ಮಾಡಿಸಿಕೊಳ್ಳುತ್ತಿದ್ದ ನಮ್ಮೂರಿನ ಜನರಿಗೆ ಕೂದಲಿಗೂ ಚರ್ಮಕ್ಕೂ ಅಷ್ಟೊಂದು ವ್ಯತ್ಯಾಸ ಕಾಣುತ್ತಿರಲಿಲ್ಲ ಎಂದು ಕಾಣುತ್ತದೆ ಎಣ್ಣೆಯನ್ನೇ ಕಾಣದ, ಒರಟಾಗಿ ತನಗೆ ಇಚ್ಛೆಬಂದಂತೆ ಸ್ವತಂತ್ರವಾಗಿ ಬೆಳೆದಿದ್ದ ಕೂದಲನ್ನು ಮೋಕ್ಷ ಕಾಣಿಸಲು ರಂಗಣ್ಣ ಇನ್ನೆಂಥ ಕತ್ತಿಯನ್ನು ಬಳಸಿಯಾನು! ಹೋಗಲಿ ಆಯಾವನ್ನಾದರೂ ಸರಿಯಾಗಿ ಕೊಡುತ್ತಿದ್ದರೂ ಅದೂ ಇಲ್ಲ. ಆಯಾ ಸರಿಯಾಗಿ ಕೊಡದಿದ್ದ ಮಂದಿಗೆ ರಂಗಣ್ಣ ಸರಿಯಾಗಿಯೆ ಬುದ್ಧಿ ಕಲಿಸುತ್ತಿದ್ದ ಅನ್ನಿ. ಅರ್ಧ ಕ್ಷೌರ ಮಾಡಿ ನಿಲ್ಲಿಸಿ ಆಯಾ ತಂದುಕೊಡು ಎಂದು ಕೇಳುವುದು, ಕೊಡದಿದ್ದರೆ ಕ್ಷೌರ ಮುಂದುವರಿಸುವುದಿಲ್ಲ ಎಂದು ಹೇಳುವುದು, ಕೊನೆಗೆ ಮತ್ತೊಮ್ಮೆ ಕ್ಷೌರಕ್ಕೆ ಬರುವವೇಳೆಗಾದರೂ ಆಯಾ ಕೊಡಬೇಕೆಂಬ ಅರಿವು ಮೂಡಿಸುವುದು ಇವೆಲ್ಲಾ ರಂಗಣ್ಣನ ಪಟ್ಟುಗಳು.

ರಂಗಣ್ಣ ತುಂಬಾ ಸ್ವಾಭಿಮಾನಿ ಅವನ ಕತ್ತಿ ಮೊಂಡಾದರೂ ಅವನ ಸ್ವಾಭಿಮಾನ ಹರಿತವಾಗಿತ್ತು. ಒಮ್ಮೆ ಮಾಯಿ ಇವನನ್ನು ಬೈದಾಗ ತನ್ನ ಕತ್ತಿಯಿಂದ ಅವಳ ತಲೆಯನ್ನೇ ಬೋಳಿಸಿ ತನ್ನ ಸ್ವಾಭಿಮಾನದ ವೈಖರಿಯನ್ನು ತೋರಿದ ಭೂಪ! ಆದುದರಿಂದೇ ಇರಬೇಕು ನನ್ನೂರಿನಲ್ಲಿ ಈಗಲೂ ಮಕ್ಕಳು ರಂಗಣ್ಣನ ಹೆಸರು ಹೇಳಿದ ತಕ್ಷಣ ಅಳುನಿಲ್ಲಿಸುವುದು!

ಬಾಡಿನೆಸರಿನ ವಾಸನೆ ಹಿಡಿದು ಊರೂರು ಅಲೆಯುವ 'ಉದಕ ಮಾವಯ್ಯ' ಸುತ್ತ ಮುತ್ತಲ ಹಳ್ಳಿಗಳಿಗೆಲ್ಲ ಪರಿಚಿತ. ತನ್ನ ನಾಲಿಗೆ ಚಪಲಕ್ಕಾಗಿ ಊರೂರು ತಿರುಗುವ ಇವನ ರೀತಿ, ಬಾಡಿನೆಸರು ಮಾಡುವವರ ಮನೆಮುಂದೆ ಸುಳಿದಾಡಿ, ಅವರೇ ಕರೆಯುವಂತೆ ಮಾಡಿ. ಕೊನೆಗೆ ತಳವೂರಿ ತನ್ನ ನಾಲಿಗೆ ರುಚಿತೀರಿಸಿಕೊಳ್ಳುವ ಇವನ ರೀತಿಯನ್ನು ನೋಡಿದರೆ ಮರುಕ ಉಂಟಾಗುತ್ತದೆ. ಕದ್ದು ಬಸರಾಗಿದ್ದ ತಿಮ್ಮಿಯ ಮನೆಯಲ್ಲಿ ಯಾರೂ ಊಟಮಾಡಬಾರದೆಂದು ಊರಿನವರೆಲ್ಲ 'ಕಟ್ಟು' ಮಾಡಿದ್ದರೂ, ತಿಮ್ಮಿಯ ಮನೆಯಲ್ಲಿ ಕೋಳಿಕುಯ್ಯುವ ಶಬ್ದ ಕೇಳಿದೊಡನೆಯೇ ಯಾರಿಗೂ ಕಾಣದಂತೆ ಹೋಗಿ ಅವಳ ಮನೆಯಲ್ಲಿ ಊಟಮಾಡುವುದು, ಇದು ಹೇಗೊ ಊರಿನವರಿಗೆ ತಿಳಿದು ಪಂಚಾಯ್ತಿಮಾಡಿ ದಂಡ ಹಾಕುವುದು, ಇವುಗಳನ್ನು ನೋಡಿದರೆ ಇವನ ನಾಲಿಗೆ ಚಪಲದ ಬಗ್ಗೆ ಅನುಕಂಪಉಂಟಾಗುತ್ತದೆ. ಮಾಳ ಪಕ್ಷದಲ್ಲಿ ಊರಿನವರೆಲ್ಲ, ವಡೆ, ಕಜ್ಜಾಯ, ಸುಕ್ಕಿಉಂಡೆಮಾಡಿ ಎಡೆಮಾಡಿದರೆ ಇವನ ಹೆಂಡತಿ ಮೊಣಸಕ್ಕ ಗಂಡ ಸತ್ತ ಮೇಲೆ ಬಾಡಿನೆಡೆ ಮಾಡುತ್ತಿದ್ದಳಂತೆ. ಬಹುಶಃ ಬಾಡನ್ನು ನೆನೆದುಕೊಂಡು ಮತ್ತೆ ಎಲ್ಲಿ ವಾಪಸ್ಸು ಬಂದು ಬಿಡುತ್ತಾನೋ ಎಂಬ ಭಯವಿರಬೇಕು ಆಕೆಗೆ!

'ಚಾರ್ಲಿ ಚಾಪ್ಲಿನ್' ನನ್ನೂರಿನ ನಕಲಿಶಾಮ. 'ಗುಡ್ ಈವ್ನಿಂಗ್ ಸಾರ್! ಹಾಲ್ ಕುಡಿಯಾಕೆ ಬಂದಿರ್ ಸಾರ್! ಆಲ್ ರೈಟ್ ಸಾರ್!" ಎಂದು ನನ್ನೂರಿಗೆ ಬಂದವರನ್ನು ಸ್ವಾಗತಿಸುತ್ತಿದ್ದ ಗಂಟೆಟ್ಟಿನ ನಿಂಗ ನೀಲಗಿರಿಯಿಂದ ಹಿಂದಿರುಗಿದ ಮೇಲೆ ತನ್ನ ವೇಶಭೂಷಣಗಳಿಂದ ಚಾರ್ಲಿ ಚಾಪ್ಲಿನ್‌ನಂತೆ ಕಾಣುತ್ತಿದ್ದ. ಕಾರಣಾಂತರಗಳಿಂದ ನೀಲಗಿರಿಗೆ ಹೋಗಿದ್ದ ನನ್ನೂರಿನ ಗಂಟೆಟ್ಟಿನ ನಿಂಗ ಇಂಗ್ಲಿಷ್ ದೊರೆಮನೆಯಲ್ಲಿ ಬಟ್ಲರ್ ಆಗಿ ಸೇವೆ ಸಲ್ಲಿಸುತ್ತಿದ್ದ. ಆ ತನ್ನ ದೊರೆ ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಅವನಿಂದ ದಾನವಾಗಿ ಬಂದಿದ್ದ ಹರಕಲು ಬೂಟು, ಹಳೆ ಟೈ, ಹರಿದ ಪೈಜಾಮ, ಬಳಸಿ ಉಳಿದಿದ್ದ ಪಾಲಿಷ್ ಡಬ್ಬಿ ಇತ್ಯಾದಿ ಇತ್ಯಾದಿ ಸಾಮಗ್ರಿಗಳೊಂದಿಗೆ ತನ್ನ ಊರಿಗೆ ಹಿಂದಿರುಗಿದ್ದ. ತನ್ನ ಹುಲ್ಲು ಗುಡಿಸಿಲಿನಲ್ಲೂ ತನ್ನ ಈ ಉಳಿಕೆ ಶೋಕಿಯನ್ನು ಸ್ವಲ್ಪ ದಿನಗಳು ಮುಂದುವರಿಸಲು ಪ್ರಯತ್ನಪಟ್ಟ. ಆದರೆ ಅದು ಹೆಚ್ಚು ದಿನಗಳು ನಡೆದು ಬರಲಿಲ್ಲ. ಕೊನೆಗೆ ನನ್ನೂರಿನ ಜನರೊಂದಿಗೆ ಬೆರೆತು ಅವರನ್ನು ನಕ್ಕು ನಗಿಸುವ ನಕಲಿ ಶಾಮನಾದ. ಅವನು ಏನೇ ಕೆಲಸ ಮಾಡುತ್ತಿರಲಿ 'ಎಸ್ ಪ್ಲೀಸ್' 'ನೋ ಪ್ಲೀಸ್' 'ನೋ ಮಿಸ್ಟರ್' 'ವೆರಿ ಗುಡ್', 'ಯು ಆರ್ ಡರ್ಟಿ' 'ನೋ ಗುಡ್', 'ಲೇಡಿಸ್ ಅಂಡ್

ಜಂಟಲ್ ಮೆನ್ 'ಮುಂತಾದ ತನ್ನ ಬಟ್ಲರ್ ಇಂಗ್ಲಿಷ್ ನಿಂದಸುತ್ತಮುತ್ತ ಇದ್ದವರನ್ನೆಲ್ಲ ನಗಿಸುತ್ತಿದ್ದ. ನೀಲಗಿರಿಯಿಂದ ಬಂದಾಗ ಯಾರಿಗೂ ಬೇಡವಾಗಿದ್ದ ಗಂಟಿಟ್ಟು ಕೊನೆಗೆ ಎಲ್ಲರಿಗೂ ಬೇಕಾದವನಾಗಿದ್ದ ! ಗಂಟಿಟ್ಟಿನ ಜೊತೆಗೆ ಹೆಣ್ಣಿಗ ಎಂಬ ಬಿರುದೂ ಸೇರಿಕೊಂಡಿತ್ತು. ತಾನು ಸರಿಯಾಗಿ ಕೆಲಸ ಮಾಡದಿದ್ದರೂ ತನ್ನ ಹಾಸ್ಯದಿಂದ ಬೇರೆ ಯುವರ ಕೆಲಸ ಹಗುರ ಮಾಡುತ್ತಿದ್ದ. ಬೇಕಾದರೆ ನಾಟಕದಲ್ಲಿ ಕೋಡಂಗಿ ಪಾರ್ಟು ಮಾಡುತ್ತಿದ್ದ ; 'ಪಾಳಾಡಮ್ಮ'ನ ವೇಷ ಹಾಕುತ್ತಿದ್ದ, ಬತ್ತದ ಕೊಮ್ಮೆ ಕವುಚಿಕೊಂಡು ಎಲ್ಲರನ್ನೂ ನಗಿಸುತ್ತಿದ್ದ, ಕರೀಮಣಿ, ಬಿಳೀಮಣಿ, ಬಿಚ್ಚೋಲೆ, ನಕಲಿಸು, ಓಲೇ ಬುಗುಡಿ, ಚಿಂತಾಕಗಳನ್ನು ಮಾರುವನಂತೆ ವೇಷ ಹಾಕುತ್ತಿದ್ದ. ಮಕ್ಕಳನ್ನು ಕೂರಿಸಿ ಕೊಂಡು ಒಗಟುಗಳನ್ನು ಹೇಳುತ್ತಿದ್ದ. ಅವುಗಳನ್ನು ಬಿಡಿಸಿ ಹೇಳಿ ಅವರನ್ನು ನಗಿಸು ತ್ತಿದ್ದ. ಹೀಗೆ ಮೊದಲು ಯಾರಿಗೂ ಬೇಡವಾಗಿದ್ದ ಚಾರ್ಲಿ ಕೊನೆಗೆ ಎಲ್ಲರಿಗೂ ಬೇಕಾ ದವನಾಗಿ, ಹಾಸ್ಯಗಾರನಾಗಿ, ತನ್ನ ಹಾಸ್ಯದಲೆಗಳನ್ನು ಸುತ್ತಲೂ ಹರಿಸುತ್ತಾ ಬದುಕಿದ.

ಶ್ರೀ ನಾಗೇಗೌಡರು ಹಳ್ಳಿಯ ಬದುಕನ್ನು ತೆರೆದ ಕಣ್ಣುಗಳಿಂದ ನೋಡಿದ್ದಾರೆ. ತಾವು ಕಂಡುಂಡ ಸುಖದುಃಖಗಳನ್ನು, ಚಿತ್ರವಿಚಿತ್ರಗಳನ್ನು, ಒಳಹೊರಗನ್ನು ತೆರೆದ ಮನಸ್ಸಿನಿಂದ ಚಿತ್ರಿಸಿದ್ದಾರೆ. ಆಯಿತೇ ಆಚಾರ್ರ ಮೈಪಾಸನೆಗೆ ಮೂಗು ಸಿಂಡರಿಸದೆ, ಬುಂಡೇದಾಸನ ಹೆಂಡದ ವಾಸನೆಗೆ ಮುಖ ತಿರುಗಿಸದೆ, ಹಾವಿನ ಗಂಗಣ್ಣನ ರೌದ್ರಾವ ತಾರಕ್ಕೆ ಹೆದರದೆ, ಅರ್ಜಿಕೊಂಬಲ್ಲನ ಮೂಗರ್ಜಿಗೆ ಬೆಚ್ಚದೆ ಬಿಚ್ಚುಮನಸ್ಸಿನಿಂದ, ಸಹನೆ ಯಿಂದ, ಸಹಾನುಭೂತಿಯಿಂದ ಈ ವ್ಯಕ್ತಿಗಳನ್ನು ನೋಡಿದ್ದಾರೆ–ಕಡೆದಿದ್ದಾರೆ, ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಇಂಥ ವ್ಯಕ್ತಿಗಳ ಚಿತ್ರಣ ಕನ್ನಡ ಸಾಹಿತ್ಯ ದಲ್ಲಿ ಅಪರೂಪ. ನಾಗೇಗೌಡರ 'ನನ್ನೂರಿನಲ್ಲಿ' ಚಿತ್ರಿತವಾಗಿರುವ ಈವ್ಯಕ್ತಿಚಿತ್ರಗಳು ಆ ಕೊರತೆಯನ್ನು ಸ್ವಲ್ಪಮಟ್ಟಿಗಾದರೂ ತುಂಬಿಕೊಡುತ್ತವೆ ಎಂದು ಹೇಳಬಹುದು.

೮ | ‘ನನ್ನೂರು’–ಒಂದು ಜಾನಪದೀಯ ಅಧ್ಯಯನ

ಬಸವರಾಜ್ ನೆಲ್ಲಿಸರ

ಜಾನಪದವೆಂದರೆ, ಜನಪದ ಸಾಹಿತ್ಯದ ಪ್ರಕಾರಗಳಾದ ಕಥೆ, ಗೀತೆ, ಲಾವಣಿ ಗಾದೆ, ಒಗಟು ಮುಂತಾದ ವಾಚಕ ರೂಪಗಳಿಗೆ ಸಂಬಂಧ ಪಡುತ್ತದೆ. ಇವುಗಳ ಜೊತೆಗೆ ಜನಪದ ಜೀವನವನ್ನು ಪ್ರತಿಬಿಂಬಿಸುವ, ಜನಪದ ಉದ್ಯೋಗ, ವಸತಿ, ಜೀವನವಿಧಾನ, ಭಾಷೆ, ಚಿತ್ರಕಲೆ, ಆಚರಣೆ, ನಂಬಿಕೆ, ವೈದ್ಯ, ಜ್ಯೋತಿಷ್ಯ, ಧರ್ಮ ಮುಂತಾದ ವಿಷಯ ಗಳನ್ನೂ ಒಳಗೊಂಡಾಗ ಜಾನಪದ (Folklore) ಎನಿಸುತ್ತದೆ. ವಿದ್ವಾಂಸರು ಜನಪದ ಜೀವನ (Folk life) ಎಂಬ ವ್ಯಾಪಕ ಅರ್ಥದ ಶಬ್ದವನ್ನು, ಸಮಗ್ರ ಜನಪದ ಜೀವನ ವನ್ನು ದೃಷ್ಟಿಯಲ್ಲಿಟ್ಟು ಕೊಂಡು ಬಳಸಿದ್ದಾರೆ. ತದನಂತರದಿಂದ ಜಾನಪದದ ವೈಜ್ಞಾನಿಕ ಅಧ್ಯಯನ ಎಲ್ಲೆಡೆಯಲ್ಲೂ ಆರಂಭವಾಯಿತು.

“ಜಾನಪದ ಸಾಮಗ್ರಿಯಲ್ಲಿ ಜನಾಂಗದ ಸಂಪೂರ್ಣ ಜೀವನ ವಿಧಾನವೇ ಸಂಗ್ರಹ ವಾಗಿದೆ. ಈ ಸಂಗ್ರಹವನ್ನು ಮತ್ತೆ ಸಂಗ್ರಹಿಸಿ ಅದನ್ನು ತಿಳಿದು ಕೊಳ್ಳಬೇಕಾಗಿರುವುದೇ ಈಗಿನ ಕೆಲಸ”[1] ಎಂದು ಡಾ ಹಾ. ಮಾ. ನಾಯಕರಂಥ ವಿದ್ವಾಂಸರು ಇದರ ಮಹತ್ವ ವನ್ನು ಒತ್ತಿ ಹೇಳಿದ ಮೇಲೆ ಜಾನಪದಾಸಕ್ತರ ಗಮನ ಹೆಚ್ಚಾಗಿ ಇತ್ತ ಹರಿದು ಈಗ ನೂರಾರು ಕೈಗಳು ಜಾನಪದದಲ್ಲಿ ಕೆಲಸ ಮಾಡುತ್ತಿವೆ. “ಒಂದೊಂದು ಹಳ್ಳಿಯೂ ಒಂದೊಂದು ಕಾದಂಬರಿಗೆ ವಸ್ತು. ಒಂದೊಂದು ಕಥನ ಗೀತಕ್ಕೆ ಸೊತ್ತು. ಪಟ್ಟಣದ ಕಟ್ಟು ಬಾಳಿನ ವರ್ಣನೆ ಮಾಡಿ ಅದನ್ನೇ ಪುನಃ ಮಗುಚಿ ಹಾಕಿ ಹೇಳುವ ಸಾಹಿತ್ಯ ರಚನೆಯ ಜೊತೆಗೆ ಹಳ್ಳಿಯ ಹುಟ್ಟು ಬಾಳಿನ ವರ್ಣನೆಗೆ ಕೈ ಹಾಕಿದರೆ ಬರೆಯುವ ಕೈ ಗಳು ಎಷ್ಟಾದರು ಸಾಲವು! ಕಣ್ಮರೆಯಾಗುತ್ತಿರುವ ಹಳ್ಳಿಯ ಬಾಳನ್ನು ಯಥಾವತ್ತಾಗಿ ಚಿತ್ರಿಸುವ ...”[2] ಮನಸ್ಸು ನಾಗೇಗೌಡರದು. ಇದನ್ನು “ನನ್ನೂರು” ಕೃತಿಯ ಮುಖಾಂತರ ತೋರಿಸಿದ್ದು, ‘ಜನವಾಣಿ ಬೇರು ಕವಿವಾಣಿ ಹೂವು’ ಎಂಬ ಮಾತಿನ ಸತ್ಯತೆಯ ಅರಿವನ್ನು ತೋರಿಸಿದ್ದಾರೆ.

“ನನ್ನೂರು” ಒಂದು ಕ್ರಿಯಾತ್ಮಕ ಕೃತಿ. ಇದರ ಒಳಹೊಕ್ಕು ನೋಡಿದಾಗ, ಇದೊಂದು ಅತ್ಯುತ್ತಮ ಜಾನಪದ ಸಂಗ್ರಹವಾಗಿ ಕಂಡುಬಂದರೆ ಅಚ್ಚರಿಯಲ್ಲ. ಕೃತಿಯ

---

1 ಡಾ. ಹಾ. ಮಾ. ನಾಯಕ, ಜಾನಪದ ಸ್ವರೂಪ. ಪು. ೩೯

2 ಹೆಚ್. ಎಲ್ ನಾಗೇಗೌಡ, ನನ್ನೂರು ಪೀಠಿಕೆ.

ಸ್ವಾರಸ್ಯವಾದ ಭಾಗಗಳಲ್ಲಿ ಹುದುಗಿ ಹೋಗಿರುವ ಜಾನಪದೀಯ ಅಂಶಗಳನ್ನು ಪ್ರತ್ಯೇಕಿಸಿ ನೋಡಿದಾಗ ಇದು ಸ್ಪಷ್ಟವಾಗುತ್ತದೆ. ಒಂದು ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಜಾನಪದೀಯವಾಗಿ ಅಧ್ಯಯನ ಮಾಡಿರುವುದು ಇಲ್ಲಿ ಕಂಡು ಬರುತ್ತದೆ. ನನ್ನೂರು ಕೃತಿಯಲ್ಲಿ ಕಂಡುಬರುವ ಪಾತ್ರಗಳು, ಸನ್ನಿವೇಶಗಳು, ಹಬ್ಬಗಳು, ಆಚರಣೆಗಳು ಒಂದು-ಊರಿಗೇ ಮಾತ್ರ ಸೀಮಿತವಾದಂತಹವಲ್ಲ. ಎಲ್ಲ ಊರಿನಲ್ಲಿಯೂ ಕಂಡು ಬರುವಂತಹವು. ಬಯಲು ಸೀಮೆಯ ಒಕ್ಕಲು ಮಕ್ಕಳ ಜೀವನವನ್ನು ಅತ್ಯಂತ ಸಹಜವಾಗಿ, ಸ್ವಾರಸ್ಯಪೂರ್ಣವಾಗಿ ಚಿತ್ರಿಸಿದ್ದಾರೆ. ಅರ್ಚಕ ಬಿ. ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ' ಗೊರೂರರ 'ನಮ್ಮೂರಿನ ರಸಿಕರು' 'ಹೇಮಾವತಿಯ ತೀರದಲ್ಲಿ' 'ಹಳ್ಳಿಯ ಬಾಳು' ಕೃತಿಗಳಲ್ಲೂ, ಬೆಟಗೇರಿ ಕೃಷ್ಣಶರ್ಮ ಅವರ ನಮ್ಮ ಸಂಸ್ಕೃತಿ ಪರಂಪರೆಯಲ್ಲೂ ಗ್ರಾಮೀಣ ಬದುಕಿನ ವಿವಿಧ ಮುಖಗಳ ಚಿತ್ರಣವಿದೆ.

ನಾಗೇಗೌಡರ 'ನನ್ನೂರು' ಈ ಎಲ್ಲ ಕೃತಿಗಳಿಗಿಂತಲೂ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಜಾನಪದ ಅಂಶಗಳು ನಿಚ್ಚಳವಾಗಿ ಬೆರೆತಿರುವುದರಿಂದ ವಾಸ್ತವಿಕ ನೆಲೆಗಟ್ಟಿನ ಮೇಲೆ ನಿಂತಗಟ್ಟಿ ಕೃತಿಯಾಗಿದೆ. ಹಳ್ಳಿಯ ಹಲವಾರು ವ್ಯಕ್ತಿಗಳನ್ನು ಹಲವು ನಿಟ್ಟಿನಲ್ಲಿ ನೋಡಿ, ಅವರವರ ವ್ಯಕ್ತಿತ್ವವನ್ನು ಪರಿಸ್ಫುಟವಾಗಿ ಮೂಡಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. ಹೀಗೆ ವ್ಯಕ್ತಿತ್ವವನ್ನು ತರುವಾಗ ಕೇವಲ ಶುಷ್ಕ ನಿರೂಪಣೆಯಾಗಿರದೆ ಒಂದೊಂದು ಪಾತ್ರದ ಅಂತರಂಗವನ್ನು ಹೊಕ್ಕು ಒಂದೊಂದು ಚಿತ್ರವನ್ನು ಕಡೆದಿದ್ದಾರೆ. ಇಲ್ಲಿಯ ಪ್ರಬಂಧಗಳೆಲ್ಲಾ ಒಂದು ಸೂತ್ರಕ್ಕೆ ಕಟ್ಟಿ ಬಿದ್ದು, ಏಕತಾನತೆಗೆ ಚ್ಯುತಿ ಬರದಂತೆ ಕಾಪಾಡಿಕೊಂಡು ಬಂದಿದೆ. ಹಾಗಾಗಿ ಇದು ಬಿಡಿಬಿಡಿಯಾದ ವ್ಯಕ್ತಿ ಚಿತ್ರಣವೂ ಹೌದು, ಅಖಂಡವಾದ ಒಂದು ಗ್ರಾಮಜೀವನದ ಚಿತ್ರಣವೂ ಹೌದು, ಜೊತೆಗೆ ಜಾನಪದೀಯ ಅಧ್ಯಯನವೂ ಹೌದು.

ಜಾನಪದವನ್ನು ಕ್ರಿಯಾತ್ಮಕ ಸಾಹಿತ್ಯದೊಡನೆ ಬೆರಸಿ ಕೊಟ್ಟಿರುವುದರಿಂದ, ಅದು ಹೇಗೆ ನಿಜಜೀವನದಲ್ಲಿ ಬದುಕುತ್ತದೆ? ಸಾಮಾಜಿಕ ಸಂಬಂಧ ಏನೆಂಬುದು ವ್ಯಕ್ತವಾಗುತ್ತದೆ. ಜೀವನದಿಂದ ಪ್ರತ್ಯೇಕಿಸಿ ಕೊಟ್ಟಾಗ ಅದು ಸಂಪೂರ್ಣ ಬಡವಾಗುತ್ತದೆ. ಸಹಜವಾಗಿ ಕೂಡಿಕೊಂಡು ಬರುವುದಿಲ್ಲ. ನಾಗೇಗೌಡರು ಮಣ್ಣಿನ ಮಗನಾಗಿ ಬಂದವರು. ಶಾಪ್ರ ಜೀವನದಲ್ಲಿ, ಚೆನ್ನಾಗಿ ಬದುಕಿ ಅನುಭವಿಸಿದರು. ಜಾನಪದ ಸತ್ವವನ್ನು ಚೆನ್ನಾಗಿ ಮೈಗೂಡಿಸಿಕೊಂಡವರಾದ್ದರಿಂದ, ಜನಪದ ಸಂಸ್ಕೃತಿಯಲ್ಲಿ ಆಳವಾಗಿ ಬೇರು ಬಿಟ್ಟಿರುವವರಾದ್ದರಿಂದ, ಇವರ ಮಾತು ಮಾತಿನಲ್ಲಿಯೂ 'ಜಾನಪದ' ಹೊರಸೂಸುತ್ತದೆ. ನಾನಾರೀತಿಯ ಆಚರಣೆಗಳು, ಸಾಂಪ್ರದಾಯಿಕ ರೀತಿನೀತಿಗಳು, ವರ್ತನೆಗಳು, ಸಂತೆ ಜಾತ್ರೆಗಳು ಈ ಕೃತಿಯಲ್ಲಿ ಸಂಮಿಳಿತವಾಗಿರುವುದರಿಂದ, ಇದನ್ನು ಅಧ್ಯಯನದ ದೃಷ್ಟಿಯಿಂದ ಎರಡು ಪ್ರಮುಖ ವರ್ಗಗಳಲ್ಲಿ ವಿಂಗಡಿಸಿ ನೋಡಬಹುದು.

೧ ಜನಪದ ಸಾಹಿತ್ಯ.

೨ ಜನಪದ ಸಂಪ್ರದಾಯಗಳು.

ಈ ಕೃತಿಯಲ್ಲಿ ಜನಪದ ಸಾಹಿತ್ಯದ ಅಂಶಗಳೇ ಹೆಚ್ಚಾಗಿದ್ದು, ಮಾರಮ್ಮನ ಹಬ್ಬ, ಮದುವೆ, ಮೈನೆರೆದಾಗ, ಮತ್ತು ಊರವರ್ಣನೆ ಮಾಡುವಂತಹ ಸಂದರ್ಭಗಳಲ್ಲೆಲ್ಲಾ ಸಮಯೋಚಿತವಾಗಿ ಇವನ್ನೂ ಬಳಸಿರುವುದು ಕಂಡು ಬರುತ್ತದೆ. ಹಳ್ಳಿಯ ಗರತಿ ಮುಂಜಾನೆ ಎದ್ದು, ರಾಗಿಯ ಕಲ್ಲಿನೊಂದಿಗೆ ತನ್ನ ದಿನನಿತ್ಯದ ಕೆಲಸವನ್ನು ಆರಂಭಿಸುತ್ತಾಳೆ.

ಕಲ್ಲವ್ವ ತಾಯಿ ಮೆಲ್ಲವ್ವ ರಾಗಿಯ
ಜಲ್ಲ ಜಲ್ಲಾನೆ ಉದುರವ್ವ ನಮ್ಮನೆ
ಬೆಲ್ಲದಾರುತಿಯ ಬೆಳಗೇನು. (ಪು ೨೧)

ರಾಗಿಯನ್ನು ಬೀಸುತ್ತಾ ಅವಳ ಹೃದಯದ ಭಾವನೆಗಳನ್ನೆಲ್ಲಾ, ಅಂತರಂಗದ ತಳಮಳವನ್ನೆಲ್ಲಾ ಅದರೊಂದಿಗೆ ತೋಡಿಕೊಳ್ಳುತ್ತಾಳೆ. ಅದು ಅವಳ ಪಾಲಿಗೆ ಜಡವಾದ ಕಲ್ಲಲ್ಲ. ಲಕ್ಷ್ಮಿ, ಸರಸ್ವತಿ, ಜಗತ್ತಿನ ತಾಯಿ. ಜಲ್ಲ ಜಲ್ಲನೆ ಅವಳು ಉದುರಿಸಿದರೆ ಲೋಕದ ಸರ್ವಸ್ವವೂ ಸುಖವಾಗಿ ಸಾಗುತ್ತದೆಂದು ನಂಬಿಕೆ. ಗರತಿಯಾದವಳು, ಇಂತಹ ದೇವರಿಗೆ ಮುತ್ತಿನಾರತಿ, ಬೆಲ್ಲದಾರತಿ, ಏನು ಬೆಳಗಿದರೂ ತೃಪ್ತಿಯಿಲ್ಲ. ಜನಪದರು ತಮ್ಮ ದುಡಿಮೆಯನ್ನೇ ದೇವರೆಂದು ಭಾವಿಸುತ್ತಿದ್ದರೆಂಬುದಕ್ಕೆ ಈ ತ್ರಿಪದಿ ಸಾಕ್ಷಿಯಾಗಿದೆ.

ಸಂಜೆಯಾದೊಡನೆ ಹಳ್ಳಿಯ ಪ್ರತಿ ಮನೆ ಮನೆಗಳಲ್ಲೂ ಗರತಿಯರು ಬಾಗಿಲು ಬಳಿದು ರಂಗೋಲೆ ಬಿಟ್ಟು, ಸಗಣಿಯನ್ನು ತಟ್ಟಿ ಹಣತೆಯ ಗೂಡಿಗಿಟ್ಟು, ಮಣ್ಣಿನ ದೀಪ ಹಚ್ಚಿ 'ಹೂ' ಸಿಗಿಸಿ ಕೈಮುಗಿದು ಹಾಡುವ ಹಾಡು ನೋಡಿ

ಕತ್ತಲಾದ ಮನೆಗೆ ಎತ್ತವ್ವ ಜ್ಯೋತಿಯ
ಮುತ್ತಿನ ಹಣತೀಗೆ ಹವಳಾದ ಬತ್ತಿಯನ್ಹಾಕಿ
ನಾವು ಹತ್ತು ಬೆಂಳ್ಬೊಡ್ಡಿ ಕೈಯ ಮುಗಿದೇವು.

ದಿನನಿತ್ಯ ಬೆಳಿಗ್ಗೆ, ಸಂಜೆ, ಸೊಸೆಯಂದಿರು ಅತ್ತೆ ಮಾವಂದಿರ ಪಾದ ಮುಟ್ಟಿ ನಮಸ್ಕಾರ ಮಾಡಿ ಕೆಲಸ ಆರಂಬಿಸುತ್ತಿದ್ದರು. ಹಳ್ಳಿಗಳಲ್ಲಿ, ಊರಿಗೊಂದು, ಕೇರಿಗೊಂದು ಹೀಗೆ ಹಲವಾರು ದೇವರುಗಳಿರುತ್ತವೆ. ದೇವರನ್ನು ಪೂಜಿಸದ ಮನೆಗಳಿರಬಹುದು, ಆದರೆ ದೀಪವನ್ನು ಪೂಜಿಸದ ಮನೆಗಳನ್ನು ಕಾಣುವುದೇ ಇಲ್ಲ. 'ಜ್ಯೋತಿ', ಬದುಕಿಗೆ ಮಾರ್ಗದರ್ಶಕದ ಸಂಕೇತ, ಅದರಂತೆ ನಮ್ಮ ಬದುಕು ಕತ್ತಲಿಂದ ಬೆಳಕಿಗೆ ಬರಲಿ ಎಂದು ನಂಬಿ ನಡೆಯುತ್ತಾರೆ. ಹಳ್ಳಿಗಳಲ್ಲಿ ಜನರು ಬೆಳಿಗ್ಗೆ ಎದ್ದು ಸೂರ್ಯದೇವನಿಗೆ ನಮಸ್ಕರಿಸಿ, ಭೂಮಿತಾಯಿಯನ್ನು ನೆನೆದು ತಮ್ಮ ಕೆಲಸವನ್ನು ಆರಂಭಿಸುತ್ತಾರೆ.

ಭೀಮ ಭಿಕ್ಷವ ಮಾಡಿ ಕುಂತಿ ಕೊಟ್ನವ ಕುಟ್ಟಿ
ಅರಶಿನ ರಾಯ ಕರ ಕಾದು ಕಂಬಳಿ ಹೊದ್ದು
ಎಂಥೋರಿಗೆಂಥ ವನವಾಸ

ಜನಪದ ಗೀತ ಸಾಹಿತ್ಯದಲ್ಲಿ ಪಾಂಡವರ ಬಗ್ಗೆ ಅತ್ಯಂತ ಪ್ರೀತಿ, ವಾತ್ಸಲ್ಯದಿಂದ, ಕರುಣೆ, ಭಕ್ತಿಯಿಂದ ಹಾಡಿರುವುದನ್ನು ಕಾಣುತ್ತೇವೆ. ಸತ್ಯ, ನ್ಯಾಯ, ಧರ್ಮಕ್ಕಾಗಿ ಸಿರಿವಂತ ಪಾಂಡವರು ನೂರಾರು ಕಷ್ಟಗಳನ್ನು ಅನುಭವಿಸಿದರು. ಸುಖ ಸಂಪತ್ತಿನಲ್ಲಿದ್ದವರು, ಘೋರ ವನವಾಸವನ್ನು ಅನುಭವಿಸಿದರು. ಭೀಮನಂತಹ ಮಹಾವೀರ ಭಿಕ್ಷ ಮಾಡಿದ. ಇಂಥ ಶೂರಾದಿ ಶೂರರನ್ನು ಪಡೆದ ತಾಯಿ ಕುಂತಿ ಸುಖವನ್ನು ಅನುಭವಿಸಲಿಲ್ಲ. ವಿಧಿ ಯಾರನ್ನೂ ಬಿಟ್ಟಿದ್ದಲ್ಲ, ಅಂಥೋರಿಗೆ ಅಂಥ ಕಷ್ಟಬಂದಾಗ, ನನಗೆ ಬಂದ ಕಷ್ಟ ಯಾವುದುಮಹಾ! ಎಂದು ಅವರ ಕಷ್ಟದ ಜೊತೆಯಲ್ಲಿ ತನ್ನದನ್ನು ಹೋಲಿಸಿಕೊಂಡು, ಮನಸ್ಸಿಗೆ ನೆಮ್ಮದಿಯನ್ನು ತಂದು ಕೊಳ್ಳುತ್ತಿದ್ದಾಳೆ. ಕಷ್ಟವನ್ನು ಮರೆಯಲು ಪ್ರಯತ್ನಿಸಿದ್ದಾಳೆ. ಅವರ ಬಾಳು, ಇವಳ ಜೀವನಕ್ಕೆ ಚೈತನ್ಯದಾಯಕವಾಗಿದೆ.

ಜನಪದ ಸಾಹಿತ್ಯದ ಸೊಗಡನ್ನು ಸೌಂದರ್ಯವನ್ನು ಗುರುತಿಸಬೇಕಾದರೆ ಗರತಿ ಹಾಡುವ ಸೋಬಾನೆ ಹಾಡುಗಳಿಗೆ ಮೊರೆ ಹೊಗಬೇಕು. ಹಾಗೆಯೇ ಇಲ್ಲಿ ಸೋಬಾನೆ ಚಿಕ್ಕಮ್ಮ. ಮದುವೆಯ ಒಂದೊಂದು ಶಾಸ್ತ್ರಕ್ಕೂ ಹಲವಾರು ಹಾಡುಗಳನ್ನು ಹೇಳುತ್ತ ಮಂಗಳಕರವಾಗಿ ಮಾಡುತ್ತಿದ್ದಾಳೆ. ಮದುವೆಯ ಎಲ್ಲ ಹಂತಗಳ ವರ್ಣನೆಯು ಈ ಹಾಡುಗಳಲ್ಲಿ ಬರುತ್ತದೆ.

'ಸೋಬಾನವೆಲ್ಲ ಶಿವನೀಗೆ' ಎಂದು ಆರಂಭಿಸಿದ್ದಾಳೆ. ಸೋಬಾನ ನಡೆಯುತ್ತಿರುವುದು ಹರಗಿರಿಜೆಯರಿಗೆ ಎಂಬ ನಂಬಿಕೆ. ಸರಸ್ವತಿಯನ್ನು ತವ್ಮ ಅಧಿದೈವವಾಗಿ ನೆನೆದಿದ್ದಾಳೆ.

ಅತ್ತೀಯ ಮರತಕ ಮುತ್ತೀನ ಕೊಳತಕ
ಅಕ್ಕ ಲಕ್ಕವ್ವನ ಗುಡಿತಕ್ಕ-ನವ್ಹಾಡು
ಮುತ್ತಿನ ಮಳೆಯಾಗಿ ಸುರಿದಾವೆ.

ಈ ಹಾಡು ಸುರುವಾದನೆ ಆಯ್ತು. ನಿಲುಗಡೆಯೇ ಇಲ್ಲ. ಮುತ್ತಿನ ಸೋನೆ ಮಳೆಯಾಗಿ ಪ್ರತಿಯೊಂದು ಶಾಸ್ತ್ರ ಸಂಪ್ರದಾಯಗಳನ್ನು ಕ್ರಮವಾಗಿ ವಿಧಿವತ್ತಾಗಿ ನಡೆಸುತ್ತಾ ಸಾಗುತ್ತವೆ. ಮದುವೆಯ ಒಂದೊಂದು ಹಂತದ ವೈವಿಧ್ಯವನ್ನೂ ಪರಿಚಯಿಸುತ್ತವೆ.

ಶಾಸ್ತ್ರದ ಛತ್ತ ಕಟ್ಟುವಾಗ, ಚಪ್ಪರ ಹಾಕುವಾಗ, ಬಳೆ ತೊಡಿಸುವಾಗ, ಅರಿಶಿನ ಹಚ್ಚುವಾಗ, ಹಸೆ ಹಚ್ಚುವಾಗ, ಮುಹೂರ್ತ ಮಾಡುವಾಗ ಹೀಗೆ ಹತ್ತಾರು ಶಾಸ್ತ್ರಗಳಿಗೆ ತಕ್ಕಂತೆ ನೂರಾರು ಹಾಡುಗಳನ್ನು ಚಿಕ್ಕಮ್ಮ ಹಾಡಬಲ್ಲಳೆಂದು ಗೌಡರು ಹೇಳುತ್ತಾರೆ. ಅತ್ಯುತ್ತಮವಾದ ಹಾಡುಗಳನ್ನು ಅಲ್ಲಲ್ಲಿ ಇಲ್ಲಿ ತಂದಿದ್ದಾರೆ.

ಚಪ್ಪರದಟ್ಟಿಲಿ ಸೊಪ್ಪನೆ ಸೋಸೋಳೆ
ಉಪ್ಪಿಗು ಮನೆ ಮನೆಯ ತಿರುಗೋಳೆ ಬೀಗತಿ
ಉಪ್ಪಾರಿತಿಗೂ ನಿನಗೂ ಮುಕಮುನಸೆ

ಬೀಗತ್ತಿಯನ್ನು ಹತ್ತಾರು ವಿಧದಲ್ಲಿ ಜರಿಯುತ್ತಾರೆ. ಅವಳ ಮೂಗು, ಹಲ್ಲು ಅವಳು ಉಟ್ಟಿರುವ ಸೀರೆ, ಅವಳ ಬಣ್ಣ, ಕೊನೆಗೆ ಅವಳ ಮನೆ, ಮಕ್ಕಳು ಎಲ್ಲರನ್ನು ಕುರಿತು ಜರಿಯುತ್ತಾರೆ. ಹೀಗೆ ಹೀಯಾಳಿಸುವುದರಿಂದ ಅವರ ಬಾಂಧವ್ಯದ ನಂಟು ಇನ್ನಷ್ಟು ಬಿಗಿಯಾಗುತ್ತದೆಂದು ಹೇಳಬಹುದು. ಬೀಗರ ಸಂತೋಷ, ಸಲ್ಲಾಪವನ್ನು ಕಾಣಬೇಕಾದರೆ ಜರಿಯುವ ಹಾಡಿಗೇ ಶರಣು ಹೋಗಬೇಕು.

ಪಟ್ಟೆಯ ಸೀರೆಯ ಮೆಟ್ಟ್ಯಾತ ತುಳಿಯೂತ
ಬಟ್ಟಲಗಣ್ಣಾಗೆ ಪುರುಷರ ನೋಡುತ
ಹತ್ತಾಳೆ ಹಸೆಯ ಜಗಲಿಯ (ಪುಟ ೯೦)

ಹೆಣ್ಣಿನ ಅಲಂಕಾರ ಮನೆಯೊಳಗಡೆ ಮುಗಿದಿರುತ್ತದೆ. ಹೊರಗೆ ಹಸೆಯ ಮಣೆಗಳನ್ನಿಟ್ಟು ಧಾರೆಗೆ ಸಿದ್ಧತೆ ಮಾಡಿದ್ದಾರೆ. ಮದುವೆಯ ಮುಖ್ಯ ಘಟ್ಟ ಸನ್ನಿಹಿತ ವಾಗಿದೆ. ಗಂಡನ್ನು ಆಗಲೇ ತಂದು ಕೂರಿಸಿದ್ದಾರೆ. ಬಿಳಿಯ ವಸ್ತ್ರವನ್ನು ಅಡ್ಡ ಹಿಡಿದಿದ್ದಾರೆ. ಹೆಣ್ಣನ್ನು ಮನೆಯ ಒಳಗಿಂದ ಅವಳ ಸೋದರ ಮಾವ ಕರೆಯುತ್ತಿದ್ದಾನೆ. ತನ್ನ ಜೀವನ ಸಂಗಾತಿಯನ್ನು ನೋಡಬೇಕೆಂಬ ಆಸೆ ಆಕಾಂಕ್ಷೆ ಗಂಡಿನ ಮನಸ್ಸಿನಲ್ಲೂ ಇದೆ. ತನ್ನ ನಲ್ಲನನ್ನು ನೋಡುವ ಕುತೂಹಲ ಹೆಣ್ಣಿಗೂ ಇದೆ. ತನ್ನ ಪುರುಷನನ್ನು "ಬಟ್ಟಲ ಗಣ್ಣಿನಲ್ಲಿ" ತುಂಬಿಕೊಳ್ಳುತ್ತಾ, ಒಳ್ಳೆಯ ದೊಡ್ಡ ಪಟ್ಟೆಯ ಸೀರೆಯನ್ನು ಮನದ ಚಂಚಲತೆಯಿಂದಾಗಿ ನಡೆಯುತ್ತಾ ತುಳಿಯುತ್ತಿದ್ದಾಳೆ. ಎಂತಹ ಅತ್ಯಂತ ಅಪೂರ್ವವಾದ ವರ್ಣನೆಯಿದು. ಶೃಂಗಾರಭರಿತಳಾದ ವಧುವಿನ ಪೂರ್ಣ ಚಿತ್ರಣವೇ ಕಣ್ಣು ಮುಂದೆ ಕಟ್ಟುವಂತೆ ವರ್ಣಿಸಿದ್ದಾಳೆ.

ಮದುವೆಯಲ್ಲಾ ಮುಗಿದಿದೆ. ಗಂಡನ ಮನೆಗೆ ಹೆಣ್ಣನ್ನು ಕರೆತಂದಿದ್ದಾರೆ. ಅಲ್ಲೂ ಅನೇಕ ಶಾಸ್ತ್ರಗಳನ್ನು ಮಾಡುತ್ತಿದ್ದಾರೆ.

ಮಗ : "ಅವ್ವ! ಅವ್ವ! ಎನ್ನುತ್ತಾನೆ.
"ಏನು ತಂದೆ ಮಗನೆ ?" ಎನ್ನುತ್ತಾಳೆ ತಾಯಿ.
"ಮನೆಗೆ ಮಾಣಿಕ್ಯ ತಂದೆ, ನಿನಗೆ ಸೊಸೆ ತಂದೆ
ಅಟ್ಟಿಕ್ಕೊಳ ಗೌಡೀ ತಂದೆ" ಎನ್ನುತ್ತಾನೆ ಮಗ (ಪುಟ ೧೦೦)

''ಸೊಸೆ' ಮನೆಗೆ ಮಾಣಿಕ್ಯ ಇದ್ದಹಾಗೆ. ಅವಳಿಂದ ವಂಶದ ಕುಡಿ ಬೆಳೆಯ ಬೇಕಾಗಿದೆ. ಕೀರ್ತಿಹಬ್ಬಬೇಕಾಗಿದೆ. ಮುಪ್ಪಿನಲ್ಲಿರುವ ಅತ್ತೆಗೆ ನೆರವಾಗಿದ್ದಾಳೆ.

ಜನಪದ ಸಾಹಿತ್ಯದಲ್ಲಿ ಗೀತೆ, ಲಾವಣಿಗಳಂತೆ. ಗಾದೆಗೂ ಪ್ರಮುಖ ಸ್ಥಾನವಿದೆ. ಗಾದೆಗಳಿಲ್ಲದ ಭಾಷೆಯಿಲ್ಲ. ಇದು ಹೆಚ್ಚು ಜನಪ್ರಿಯವೂ ವ್ಯಾಪಕವೂ ಆದುದು. ಸಾಮಾನ್ಯ ಜನರು ತಮ್ಮ ಸುತ್ತಮುತ್ತಲಿನ ಜೀವನವನ್ನು ಹೇಗೆ ಗಾದೆಗಳ ಮುಖಾಂತರ ವ್ಯಕ್ತಪಡಿಸುತ್ತಾರೆಂಬುದಕ್ಕೆ ಈ ಕೃತಿಯಲ್ಲಿ ಬರುವ ಕೆಲವನ್ನು ನೋಡಬಹುದು.

> ಗುಡ್ಡದ ಸೀಮೆ ದನ ತರಬೇಕಂತೆ
> ತಿಳಿದ ಕಡೆ ಹೆಣ್ಣು ತರಬೇಕಂತೆ (ಪು ೭೦)

ದನಕರುಗಳು ಎತ್ತು ಎಮ್ಮೆಗಳು ರೈತನ ಸಂಜೀವಿನಿ. ಬಾಳಿನ ಬೆನ್ನೆಲುಬು. ಅವು ಚೆನ್ನಾಗಿದ್ದರೆ ತನ್ನ ಬೇಸಾಯ ಸುಸೂತ್ರವಾಗಿ ಸಾಗುತ್ತೆ. ಹಸುಗಳು. ಹುಲ್ಲು ನೀರು ಕುಡಿದು, ಕಟ್ಟು ಮಸ್ತಾಗಿದ್ದರೆ, ಹೆಚ್ಚಾಗಿ ಹಾಲುಕರೆದರೆ ಮಕ್ಕಳು ಮರಿಗಳು ಉಂಡು ತಿಂದು ನಲಿಯುತ್ತಾರೆ. ಹಾಗೆಯೇ ಬೇರೊಂದು ಮನೆಯಿಂದ ತಂದ ಹೆಣ್ಣು, ಗಂಡನ ಮನೆಯನ್ನು ಬೆಳಗಿಸುವಂಥವಳು. “ನಾರಿ ಭಾಗ್ಯವೋ—ಹೋರಿ ಭಾಗ್ಯವೋ” ಎಂಬಂತೆ, ಕೈಹಿಡಿದ ನಾರಿ ಪುಣ್ಯ ಚೆನ್ನಾಗಿದ್ದರೆ ಮುಂದಿನ ಜೀವನ ಸಂತೃಪ್ತಿಯಾಗಿರುತ್ತದೆ. ‘ಬರುತ ಬರುತ ಸೊಸೇರ ಪುಣ್ಯ, ಹುಟ್ಟುತ ಹುಟ್ಟುತ ಮಕ್ಕಳ ಪುಣ್ಯ’ ಎಂಬ ಗಾದೆ ಇದನ್ನೇ ಹೇಳುತ್ತದೆ. ಅದಕ್ಕಾಗಿ ಮದುವೆ ಮಾಡಿಕೊಳ್ಳುವುದಕ್ಕಿಂತ ಮುಂಚೆ, ಹೆಣ್ಣಿನ ಗುಣ ಶೀಲ ಸ್ವಭಾವಗಳನ್ನು, ಅವರ ಮನೆತನ, ಪರಿಸರ, ಎಲ್ಲವನ್ನೂ ನೋಡಬೇಕು. ಹಾಗೆ ನೋಡಬೇಕಾದರೆ ಕಂಡುಂಡಕಡೆ, ನೆಂಟರಿಷ್ಟರ, ಹತ್ತಿರದ ಊರಿನ ಮನೆಯ ಹೆಣ್ಣಾದರೆ ಅವಳ ನಡೆ ನುಡಿಯೆಲ್ಲವೂ ಪರಿಚಯವಿರುತ್ತದೆ. ತಮ್ಮ ಮನೆಗೆ ಹೊಂದಿಕೊಳ್ಳಬಲ್ಲಳು ಎಂದು ಹಿರಿಯರು ನೋಡಿ ಮಾಡುತ್ತಿದ್ದರು. ಹಿಂದೆ ಹೆಣ್ಣು ನೋಡಲಿಕ್ಕೆ ಏಳು ಜೊತೆ ಎಕ್ಕಡಗಳು ಸವೆಯುತ್ತಿದ್ದವಂತೆ. ಅಂದ ಮೇಲೆ ಹೆಣ್ಣಿನ ಹುಡುಕಾಟ ಹೇಗಿತ್ತು ಎಂಬುದು ವೇದ್ಯವಾಗುತ್ತದೆ.

‘ಹುಚ್ಚು ಮುಕ್ಕನ ಮದುವೆಗ್ಹೋಗಿ ತಿಕ್ಕೊಂದು ಗುಬ್ಬಿ ಕಾಣೊ’ (ಪು ೧೦೫) ‘ಮದುವೆ ಮಾಡಿನೋಡು, ಮನೆಕಟ್ಟಿನೋಡು’, ಎಂದು ಒಂದು ಗಾದೆ ಇದೆ. ಮದುವೆ ಮಾಡುವುದು, ಮನೆಕಟ್ಟುವುದು, ಅಷ್ಟೊಂದು ಶ್ರಮದಾಯಕವಾದ ಕೆಲಸ. ಎಷ್ಟೇ ಸಂಭ್ರಮದಿಂದ ಕಟ್ಟುನಿಟ್ಟಾಗಿ ಸಂಪ್ರದಾಯ ಬದ್ಧವಾಗಿ ಮಾಡಿದರೂ ‘ಒಂದು ಕೊಂಕು ಮಾತು’ ಇದ್ದದ್ದೇ. ಮದುವೆಯಲ್ಲಿ ಹತ್ತಾರು ಸಂಪ್ರದಾಯಗಳನ್ನು ಆಚರಿಸುತ್ತಾರೆ. ಮದುವೆ ಮುಹೂರ್ತವಾದ ಮೇಲೆ ಊಟಮಾಡಿ ಬೀಗರೆಲ್ಲಾ ಉಂಡು, ಸೊಂಪಾಗಿ ಮಲಗಿರುತ್ತಾರೆ. ಆಗ ಹಾಸ್ಯಕ್ಕಾಗಿ, ಚಿಪ್ಪಿನ ಕರಟಕ್ಕೆ ಸುಣ್ಣ ಬಳಿದು ಬೀಗರ ಕುಂಡೆಗಳ ಮೇಲೆಲ್ಲಾ ಒತ್ತುತ್ತಿದ್ದರು. ಸೆರಗು ಗಂಟಾಕುತ್ತಿದ್ದರು. ಮುಖಕ್ಕೆ ಕಪ್ಪು ಬಿಳಿ ನಾಮ ಹಚ್ಚುತ್ತಿದ್ದರು. ಇವೆಲ್ಲಾ ವಿನೋದಕ್ಕಾಗಿಯೇ. ಆದರೆ ಹುಚ್ಚ ಮದುವೆಗೆ ಹೋದರೆ

ಅಥವಾ ಅಷ್ಟಾದಿಡ್ಡಿ ಮದುವೆ ಮಾಡುವವನ ಮದುವೆಗೆ ಹೋದರೆ ಇದೆಲ್ಲಾ ಎಲ್ಲಿ ಕಾಣಬೇಕು ? ಅದೆಲ್ಲಕ್ಕಿಂತ ಹೆಚ್ಚಾಗಿ ಮದುವೆಗೆ ಬಂದ ನೆಂಟರಿಷ್ಟರನ್ನು ಅತ್ಯಂತ ಆತ್ಮೀಯತೆಯಿಂದ, ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಕಳುಹಿಸಿಕೊಡಬೇಕೆಂಬುದೇ ಈ ಗಾದೆಯ ಧ್ವನಿಯಾಗಿದೆ ಹಿಂದಿನ ಕಾಲದಲ್ಲಿ ಮದುವೆ ಮೂರು ನಾಲ್ಕು ದಿವಸವಕೆ, ಏಳೆಂಟು ದಿವಸಗಳ ಕಾಲ ನಡೆಯುತ್ತಿದ್ದವಂತೆ, ಕಷ್ಟದಲ್ಲಿದ್ದ ಹೆಣ್ಣಿನ ತಂದೆಯೊಬ್ಬ ನೆಂಟರಿಷ್ಟರ ಯೋಗಕ್ಷೇಮ ನೋಡಿಕೊಳ್ಳುವುದರ ಬಗ್ಗೆ ಸ್ವಲ್ಪ ಅನಾದರವನ್ನು ತೋರಿಸಿರಬೇಕು, ಆಗ ಈ ಗಾದೆ ಹುಟ್ಟಿಕೊಂಡಿರಬೇಕು.

ಗೌರಿ ಹಬ್ಬದೊತ್ತಿಗೆ ಗಡಿಗೆ ಮುಳುಗುವ ಬೆಳೆ
ಮಹರ್ನವಮಿ ಹೊತ್ತಿಗೆ ಮಾರುದ್ದ ಹೊಡೆ.

ಆಯಾ ಹಬ್ಬದ ಹೊತ್ತಿಗೆ ಕೆಲಸ ಕಾರ್ಯಗಳು ಯಾವ್ಯಾವುದು ಎಷ್ಟೆಷ್ಟು ಆಗಿರಬೇಕು, ಯಾವ್ಯಾವ ಬೆಳೆ ಹೇಗೇಗೆ ಬೆಳೆದಿರಬೇಕೆಂಬುದನ್ನು, ಹಬ್ಬದ ಮೂಲಕ ಈ ಗಾದೆ ಹೇಳುತ್ತವೆ. ರೈತರಿಗೆ ಹಬ್ಬ ಹುಣ್ಣಿಮೆಗಳೇ ಕೆಲಸ ಕಾರ್ಯ ಮುಗಿಸುವ, ಪಂಚಾಂಗಗಳಾಗಿದ್ದವೆನ್ನಬಹುದು ಕೆಲವು ಹಬ್ಬಗಳಿಂದ ವಾತಾವರಣದಲ್ಲಾಗುವ ಬದಲಾವಣೆಗಳನ್ನು ಗುರುತಿಸುತ್ತಾರೆ. ಉದಾಹರಣೆಗೆ, "ಸಂಕ್ರಾಂತಿ ಹೊತ್ತಿಗೆ ಶಂಕಿನ ಗಾತ್ರ ಚಳಿ ಹೋಗಿ, ಸಾಸಿವೆ ಕಾಳು ಗಾತ್ರ ಸೆಖೆ ಹುಟ್ಟುತ್ತೆ" "ಶಿವರಾತ್ರಿ ಹೊತ್ತಿಗೆ ಶಿವಶಿವಾ ಅಂಥ ಚಳಿಹೋಗುತ್ತೆ." ಇತ್ಯಾದಿ ಗಾದೆಗಳು ರೈತರಿಗೆ ಋತುಮಾನದ ಬದಲಾವಣೆ, ಕೆಲಸದ ಆರಂಭಕ್ಕೆ, ಆರೋಗ್ಯದ ವಿಚಾರಕ್ಕೆ ಅತ್ಯಂತ ಉಪಯುಕ್ತವಾಗಿದ್ದವೆನ್ನಬಹುದು.

ಇಂತಹ ನೂರಾರು ಗಾದೆಗಳು 'ನನ್ನೂರು' ಕೃತಿಯ ಗರ್ಭದಲ್ಲಿ ಗೋಚರಿಸುತ್ತವೆ. ಒಂದೊಂದರ ಅಂತರಾಳವನ್ನು ಹೊಕ್ಕು ವಿಶ್ಲೇಷಿಸಿದಾಗ. ಸಂಸ್ಕೃತಿಯ ಸಾರವೇ ಅಡಗಿರುವುದು ಗೋಚರಿಸುತ್ತದೆ. ಇಂತಹ ಗಾದೆಗಳನ್ನು ಪಾತ್ರಕ್ಕನುಗುಣವಾಗಿ, ಸನ್ನಿವೇಶ ಸಂದರ್ಭಕ್ಕನುಗುಣವಾಗಿ ತಂದು ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ.

ಜನಪದರು ಹಬ್ಬ ಹುಣ್ಣಿಮೆಗಳನ್ನು, ಜಾತ್ರೆ ಉತ್ಸವಗಳನ್ನು ಕೇವಲ ಉಂಡು ನಲಿಯುವುದಕ್ಕಾಗಿಯೇ ಆಚರಿಸುವಂತಹರಲ್ಲ. ಅದು ಪೂಜನೀಯವೂ ಪವಿತ್ರವೂ ಆಗಿದ್ದು, ಶ್ರದ್ಧೆ ಭಕ್ತಿಗಳನ್ನು ಬೆಳೆಸುವ, ಮನಸ್ಸಿಗೆ ನೆಮ್ಮದಿಯನ್ನು ತಂದು ಕೊಡುವ ನೆಂಟರಿಷ್ಟರಲ್ಲಿ ಸ್ನೇಹ ಸೇತುವೆಯನ್ನು ಬೆಳೆಸುವ, ದೇಹಕ್ಕೆ ದಣಿವು ನಿವಾರಿಸುವ ಮಾರ್ಗಗಳಾಗಿದ್ದವೆನ್ನಬಹುದು. ಅಷ್ಟೇ ಅಲ್ಲದೆ ಊರಿನ ಒಗ್ಗಟ್ಟಿಗೆ, ಪುರೋಭಿವೃದ್ಧಿಗೆ ಸಹಾಯಕವಾಗಿವೆ. ಹಬ್ಬಗಳನ್ನು ವಿಧಿವತ್ತಾಗಿ ಆಚರಿಸುತ್ತಾರೆ. ದೇವರು, ಜನಪದರಿಗೆ ಗುಡಿಯಲ್ಲಿರುವ ಕೇವಲ ಕಲ್ಲಿನ ಮೂರ್ತಿಯಲ್ಲ ; ಅದು ಜೀವ ಭಾವದಿಂದ ಕೂಡಿದ, ನಮ್ಮಂತೆಯೇ ಕಷ್ಟ ಸುಖಗಳನ್ನು ಕಂಡುಂಡ, ಬಂಧು ಬಾಂಧವರನ್ನೊಳಗೊಂಡ ವ್ಯಕ್ತಿಯೆಂದೇ ಭಾವಿಸುತ್ತಾರೆ.

ಗದ್ದಿಗೆ ಮೇಲಿಂದ ಎದ್ದು ಬಾರೆ ದೊಡ್ಡಮ್ಮ
ಇದ್ದಾರೆ ನಿನಗೆ ಶಿವನಾಣೆ । ಸೀರೇವ್ದ
ಮೊಗ್ಗು ಬಂದಾವೆ ಮುಡಿ ಬಾರೆ (ಪು ೫೧)
ಏಳಮ್ಮ ಏಳೆ ತಾಯೆ ಏಳು ಕಳಸದ ಮೇಲೆ
ಏಟ್ಕೊತ್ತು ಸುಖನಿದ್ರೆ ಏಳಮ್ಮ ಬೆಳಗಾದವು (ಪು ೫೨)

ಮಡೆಯ ಅನ್ನವನ್ನುಂಡು, ಕಗ್ಗಲಿಯಮ್ಮ ಸುಖನಿದ್ರೆ ಮಾಡುತ್ತಾಳಂತೆ. ಎಂಥ ಸೊಗಸಾದ ಕಲ್ಪನೆ ಇದು. ನಿದ್ದೆಯಿಂದ ತಾಯನ್ನು ಎಬ್ಬರಿಸಿಕೊಂಡು ಎಲ್ಲರೂ ಕೊಂಡ ಹಾಯುತ್ತಾರೆ ಬಂದ ಭಕ್ತಾದಿಗಳು ಕೆಲವರು ಹರಕೆ ತೀರಿಸುತ್ತಾರೆ. ಬಾಯಿ ಬೀಗ, ದಿಂಡುರುಳು, ಸೋಮಗಳಿಗೆ ಮಣೇವು ಹಾಕಿಸುವುದು, ಮುಂತಾದವನ್ನು ಮಾಡುತ್ತಾರೆ.

ಇಂತಹ ಗ್ರಾಮದೇವತೆಗಳ ಹಬ್ಬಗಳಲ್ಲದೆ, ಎಲ್ಲ ಕಡೆಯೂ ಆಚರಿಸುವಂತಹ ಶಿವರಾತ್ರಿ ನವರಾತ್ರಿಗಳನ್ನು ಆಚರಿಸುತ್ತಾರೆ. ಆದರೆ 'ಬಾಡು' ತಿನ್ನುವವರಿಗೆ, 'ಸೀ' ಅಡಿಗೆ ಹಬ್ಬ ರುಚಿಸುವುದಿಲ್ಲ.

"ನಮ್ಮೂರಿನಲ್ಲಿ ಎಲ್ಲ ಕಡೆಯೂ ನಡೆಯುವಂತೆ ಯುಗಾದಿ, ಗೌರಿ, ದೀಪಾವಳಿ. ಶಿವರಾತ್ರಿ ಹಬ್ಬಗಳೂ ನಡೆಯುತ್ತವೆ. ಆದರೆ ನಮ್ಮೂರಿನವರಿಗೆ ಇವೆಲ್ಲಾ ಅಂಥ ರುಚಿಯಾದ ಹಬ್ಬಗಳಲ್ಲ ಏಕೆಂದರೆ ಈ ಹಬ್ಬದಲ್ಲಿ ಮಾಡುವ ಹೋಳಿಗೆ, ವಡೆ, ಕಜ್ಜಾಯ, ಕಡಲೆದೋಸೆ, ಬಾಳೆಹಣ್ಣಿನ ದೋಸೆಗಳು ಅಷ್ಟೇನು ಹಿತವಾಗುವುದಿಲ್ಲ. ಯುಗಾದಿ ಹಬ್ಬದ ಮಾರನೆ ದಿನ ಬಾಡಿನ 'ವರ್ಷದ ತೊಡಕು' ಮಾಡದ ಹೊರತು ನಮ್ಮೂರಿನ ತೊಡಕು ಸಮಾಧಾನವಾಗುವುದಿಲ್ಲ," (ಪು ೩೬) ಸಂಕ್ರಾಂತಿ ಹಬ್ಬವನ್ನು ಎಲ್ಲ ಕಡೆಯ ಜನಪದರು ಸಾಮಾನ್ಯವಾಗಿ ಆಚರಿಸುತ್ತಾರೆ. ಇದು ರೈತನ ಹಬ್ಬ. ಸುಗ್ಗಿ ಮುಗಿಯುತ್ತಾ ಬಂದಿದ್ದು ದವಸ ಧಾನ್ಯಗಳು ಮನೆಯನ್ನು ತುಂಬುತ್ತಿರುವುದರಿಂದ ರೈತನ ಮನವೂ ಉಲ್ಲಾಸದಿಂದಿರುತ್ತದೆ. ಈ ಹಬ್ಬದಲ್ಲಿ 'ಅವರೆಕಾಳಿನ'ದೇ ಪ್ರಮುಖ ಪಾತ್ರ. ದನಗಳ ರೋಗ ನಿವಾರಣೆಗೆಂದು, ಯಾವುದಾದರೂ ಪ್ರಾಣಿಯನ್ನು ಬೇಟೆಯಾಡಿ ಹಿಡಿದು ತಂದು "ಬೆನ್ನಿಗೆ ಬಿರುಸುಕಟ್ಟಿ, ಕೊರಳಿಗೆ ಹೂವಮಾಲೆ ಹಾಕಿ ಕಿವಿಗೆ ಕೊಂಡ್ಲು ಚುಚ್ಚಿ. ತೀರ್ಥ ಎಸೆದು" ರಂಗದ ಮಧ್ಯದಲ್ಲಿ ಬಿಡುತ್ತಾರೆ. ಅದು ದಿಕ್ಕು ಪಾಲಾಗಿ ಓಡುತ್ತದೆ. ಅಲ್ಲದೆ "ದೀವಳಿಗೆಯಲ್ಲಿ ದನ ಕೆಣಕಬೇಡ ಸಂಕ್ರಾಂತಿಯಲ್ಲಿ ಜನ ಕೆಣಕಬೇಡ" ಎಂಬ ಗಾದೆ ಮಾತೊಂದಿದೆ. ಸಂಕ್ರಾಂತಿಯಲ್ಲಿ ಜನರಿಗೆ ಬಿಡುವು ಸಿಕ್ಕಿರುವುದರಿಂದ ಒಳ್ಳೊಳ್ಳೆಯ ಆಹಾರ ತುಪ್ಪ ತಿಂದು ಕಟ್ಟು ಮಸ್ತಾಗಿರುತ್ತಾರೆ. ಏನಾದರೂ ಅಂದ್ರೆ ಮೈಮೇಲೆ ಬೀಳುತ್ತಾರೆ. ಇದನ್ನು ಕಂಡೇ ಈ ಗಾದೆಗಳು ಹುಟ್ಟಿಕೊಂಡಿರಬೇಕು.

ಹಬ್ಬಗಳಲ್ಲಿ ನಡೆಯುವ ಆಚರಣೆ ಸಂಪ್ರದಾಯಗಳನ್ನು ಸೊಗಸಾಗಿ ತಂದಿರುವಂತೆಯೇ, 'ಅಮ್ಮ' ಊರಿಗೆ ಬಂದು ನೆಲಸಿದ ಬಗೆ, ಗುಡಿಯನ್ನು ಕಟ್ಟಿಸಿದ ಕಾರಣ ಮುಂತಾದ ಐತಿಹ್ಯಗಳನ್ನು ಅಲ್ಲಲ್ಲೆ ತಂದಿದ್ದಾರೆ. ಸ್ಥಳೀಯ ಐತಿಹ್ಯ, ಮತ್ತು ಸ್ಥಳ ಪುರಾಣಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. "ಹಿಂದೆ ಕಗ್ಗಲಿ ಪ್ರದೇಶವೆಲ್ಲಾ ದಟ್ಟವಾದ ಕಾಡಂತೆ, ಅಲ್ಲಿ ಒಂದು ಹುತ್ತವಿತ್ತಂತೆ. ಆ ಹುತ್ತದಲ್ಲಿ ಒಂದು ಏಳೆಡೆ ಸರ್ಪವಿತ್ತಂತೆ. ದಿನವೂ ಒಂದು ಹಸು ಬಂದು ಹಾಲು ಕರೆದು ಹೋಗುತ್ತಿತ್ತಂತೆ. ಆ ಹಸುವನ್ನು ಒಂದು ದಿನ 'ಚಿರತೆ' ಹಿಡಿದು ತಿಂದು ಹಾಕಿದಾಗ ಆ ಹುತ್ತದಿಂದ ರಕ್ತ ಚಿಲ್ಲೆಂದು ಚಿಮ್ಮಿತಂತೆ.....ಜನ ಚಿರತೆಯನ್ನು ಕೊಂದು ಹುತ್ತಕ್ಕೆ ಹಾಲು ಹೊಯ್ದು ಪೂಜೆ ಮಾಡಿದರಂತೆ, ಹಾಲು ಹೊಯ್ಯಲು ಆರಂಭಿಸಿದ ಮೇಲೆ ರಕ್ತ ಚಿಮ್ಮುವುದು ನಿಂತಿತಂತೆ", (ಪು ೨೯) "ಹಿಂದೆ ಹೇರೆತ್ತಿನ ಮೇಲೆ ವ್ಯಾಪಾರ ಮಾಡುತ್ತಿದ್ದ ಹೆಂಗಸೊಬ್ಬಳು ಕಣ್ಣು ಕಳೆದುಕೊಂಡು, ಅವಳಿಗೆ ಕಣ್ಣು ಕಾಣಿಸಿದ ಕಡೆ ಗುಡಿಕಟ್ಟಿಸುತ್ತೇನೆಂದು ಹರಕೆಮಾಡಿಕೊಂಡಳೆಂಬುದು, ಅವಳಿಗೆ ಕಣ್ಣು ಕಾಣಿಸಿದ ಕಡೆ ಕಟ್ಟಿಸಿದ ಗುಡಿಯೇ ಕಾವೇಟಿರಂಗನ ಗುಡಿಯಂತೆ (ಪು ೧) ಇಂತಹ ಸ್ಥಳಪುರಾಣಗಳು ಪ್ರತಿಯೊಂದು ಊರಲ್ಲಿಯೂ ದೊರೆಯುತ್ತವೆ. ಸಾಮಾನ್ಯವಾಗಿ ಗ್ರಾಮದೇವತೆಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಗುರುತಿಸಬೇಕಾದರೆ, ಐತಿಹ್ಯ ಮತ್ತು ಕಟ್ಟುಕಥೆಗಳಿಗೇ ಶರಣು ಹೋಗಬೇಕಾಗುತ್ತದೆ. ಗ್ರಾಮದೇವತೆಗಳ ಆರಾಧನೆ ಮತ್ತು ನಂಬಿಕೆ ನಡವಳಿಕೆಗಳು ಆಯಾ ಜಾತಿಯ, ಆಯಾವರ್ಗದ ಜನರ ಅಭಿರುಚಿಗಳಿಗೆ, ಆಕಾಂಕ್ಷೆಗಳಿಗೆ ಅನುಗುಣವಾಗಿರುತ್ತದೆ.

ಜನಪದರ ಜೀವನ ಸೀಮಿತವಲಯವನ್ನೊಳಗೊಂಡದ್ದು, ದೇವರು ದೊಡ್ಡವರು, ಎಂದರೆ ಭಯಭಕ್ತಿಯಿಂದ ನಡೆದುಕೊಳ್ಳುವರು. ಕುತಂತ್ರ, ಕುಟಿಲತೆಗಳನ್ನರಿಯದ ಮುಗ್ಧರು. ಅವರಿಗೆ ದೇಶದ, ಸುದ್ದಿ ಸಮಾಚಾರ ಬೇಕಾಗಿಲ್ಲ. ತನ್ನೂರಿನ, ಹೆಚ್ಚೆಂದರೆ ತನ್ನ ನೆರೆಯೂರಿನಲ್ಲಿ ನಡೆಯುವ ವಿಚಾರಗಳೇ ಬಹಳ ದೊಡ್ಡ ಸುದ್ದಿ. ಊರಿಗೊಂದು ಹೊಸ ಸೈಕಲ್ಲೋ, ಮೋಟಾರೋ ಬಂತೆಂದರೆ ಎಲ್ಲರೂ ಆಶ್ಚರ್ಯದಿಂದ ನಿಂತುನೋಡುವಂತಹ ಮುಗ್ಧರು. "ಅವರ ಊರ ಸುದ್ದಿಗಿಂತ ಪತ್ರಿಕೆಗಳ ಸುದ್ದಿ ಹೆಚ್ಚೆಂದು ಕಾಣಿಸುವುದಿಲ್ಲ. ಅವರಿಗೆ ದೊಡ್ಡ ಸುದ್ದಿ ಎಂದರೆ ಮೊಟ್ಟೆಗೆ ಬಂದ ನನ್ನೂರಿನ ಮಾಯಿಯ ಕೋಳಿಯನ್ನು ಗುಳ್ಳೇನರಿ ಮಂಕರಿ ಎತ್ತಿ ಕೊಕ್ ಎನ್ನಿಸದೆ ಕಚ್ಚಿಕೊಂಡು ಹೋದದ್ದು, ಮೂಲೆ ಮನೆ ಮಾದನಿಗೂ ಹಟ್ಟೀ ಮನೆ ಕುಳ್ಳನಿಗೂ ಜಗಳ ಆಗಿ ಅವರು ಗುದ್ದಲಿಯಲ್ಲೇ ಹೊಡೆದಾಡಿದ್ದು. ಮೇಗಲಮನೆ ಕುಂಟಿಯ ಮಗಳು ಮೆಳ್ಳುಗಣ್ಣಿಗೆ ಮದುವೆಯಾದದ್ದು." (ಪು ೩೯) ಇಂತಹವೇ ಅವರಿಗೆ ದೊಡ್ಡ ಸುದ್ದಿಗಳು. ಹಳ್ಳಿಯ ಜೀವನ ಸಹಬಾಳ್ವೆಯಿಂದ ಕೂಡಿದ್ದರಿಂದ ಎಲ್ಲರೂ ಒಬ್ಬರನ್ನೊಬ್ಬರು ಹತ್ತಿರದಿಂದ ಬಲ್ಲವರಾಗಿರುತ್ತಾರೆ. ಯಾರದೇ ಮನೆಯಲ್ಲಿ ಜಗಳ

ಬೊಂಬೆಯಾಗಲಿ, ಸಾವು ನೋವುಗಳು ಸಂಭವಿಸಲಿ ಊರೆಲ್ಲಾ ಅಲ್ಲಿ ಸೇರುತ್ತದೆ. ಆ ಮನೆಯ ಕಷ್ಟ ಸುಖವನ್ನೂ ಊರವರೆಲ್ಲಾ ಹಂಚಿಕೊಳ್ಳುತ್ತಾರೆ, ಹೀಗಾಗಿ ಪ್ರತಿಯೊಬ್ಬರ ಗುಣಸ್ವಭಾವಗಳೇನೆಂಬುದು ಎಲ್ಲರಿಗೂ ತಿಳಿದಿರುತ್ತದೆ ಹಾಗಾಗಿ ತಂದೆ ತಾಯಿಗಳು ಮಕ್ಕಳು ಹುಟ್ಟಿದಾಗ ಇಟ್ಟ ಹೆಸರು ಒಂದಾದರೆ, ಜನ ಅವರ ರೀತಿ ನೀತಿ ನಡೆನುಡಿಗಳಿಗೆ ಕೊಟ್ಟ ಹೆಸರು ಬೇರೆಯಾಗಿರುತ್ತದೆ. ಇದನ್ನು ಅಡ್ಡ ಹೆಸರು ಎಂದು ಕರೆಯುತ್ತಾರೆ : ಗೊಬ್ಬರದ ಗುಲಾಬಿ, ಆಯಿತೇ ಆಚಾರ್ರು, ಸೋಬಾನೆ ಚಿಕ್ಕಮ್ಮ ಹೀಗೆ ಅವರವರ ವೃತ್ತಿಯನ್ನು ಸೇರಿಸಿ ಕರೆಯುವ ಹೆಸರುಗಳು ಒಂದು ತೆರನಾದರೆ, ಅವರವರ ಅಂಗಾಂಗಳ ಬೆಳವಣಿಗೆಯನ್ನು, ಸ್ವಭಾವವನ್ನು ಗುರುತಿಸಿ ಕರೆಯುವ ಹೆಸರುಗಳು ಬೇರೆ. ಉದಾಹರಣೆಗೆ "ಕಿವುಡು ಕೆಂಚಣ್ಣ, ಗಾಡೀ ವೀರಣ್ಣ, ಕೊಕ್ಕರಗಾಲಿ ಕರಿಯ. ಬೀಸುಗಾಲಿ ಬಸ್ಯ" (ಪು ೬೦) ಮುಂತಾದವು. ಇಂತಹ ಹೆಸರುಗಳನ್ನು ಪಟ್ಟಣದಲ್ಲಿ ಕಾಣಲಾರೆವು. ಹಳ್ಳಿಯಲ್ಲಿ ಈ ಅಡ್ಡ ಹೆಸರುಗಳೇ ಅವರ ನಿಜ ನಾಮಧೇಯಗಳಾಗಿ ಬೇಗ ಅವರನ್ನು ಗುರುತಿಸುತ್ತವೆ. ಅದು ಹೇಗೋ ಮೊದಲು ಒಬ್ಬ ಕರೆದಿದ್ದು, ಅನಂತರ ಅದೇ ಹತ್ತಾರು ಬಾಯಲ್ಲಿ ಬಂದು ರೂಢಿಯಲ್ಲಿ ಉಳಿದು ಬರುತ್ತದೆ.

ನಾಗೇಗೌಡರು ಜನಪದರ ಜೀವನದಲ್ಲಿ ಎಷ್ಟು ಆಳವಾಗಿ ಬೇರುಬಿಟ್ಟಿದ್ದರು. ಜಾನಪದ ಸತ್ವವನ್ನು ಹೇಗೆ ಮೈಗೂಡಿಸಿಕೊಂಡಿದ್ದರೆಂಬುದಕ್ಕೆ, ಗ್ರಾಮ್ಯಭಾಷೆಯ ಬಳಕೆಯನ್ನು ನೋಡಬಹುದಾಗಿದೆ. ಹಳ್ಳಿಯ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸಿ ತಮ್ಮ ಸಾಹಿತ್ಯದಲ್ಲಿ ಸಮಯೋಚಿತವಾಗಿ ಬಳಸಿರುವುದನ್ನು 'ಕುವೆಂಪು ಅವರ ಕಾದಂಬರಿಗಳನ್ನು ಓದಿದ ಯಾರಿಗಾದರೂ ತಿಳಿಯುತ್ತದೆ, ಹಾಗೆಯೇ ಪ್ರಾದೇಶಿಕ ಶಬ್ದಗಳನ್ನು, ಅರ್ಥವತ್ತಾದ ಗಾದೆಗಳನ್ನು, ನುಡಿಗಟ್ಟುಗಳನ್ನು ಡಾ. ಬೇಶಂಪ ಅವರು ತಮ್ಮ ಕೃತಿ 'ಮಬ್ಬು ಜಾರಿದ ಕಣಿವೆ''ಯಲ್ಲಿ ಬಳಸಿದ್ದು, ನವ್ಯರು ಕಾವ್ಯದಲ್ಲಿ 'ಮಣ್ಣಿನವಾಸನೆ' ಇರಬೇಕು ಎಂದು ಏನು ಹೇಳುತ್ತಿದ್ದಾರೋ ಅದು ಅವರಲ್ಲಿ ರಾಚುವಷ್ಟು ಪ್ರಖರವಾಗಿ ಕಾಣುತ್ತದೆ, ತಮ್ಮ ವರ್ಗದ ಜನಜೀವನವನ್ನೇ ಇವರುಗಳು ಚಿತ್ರಿಸಿದ್ದರಿಂದ ಜಾನಪದದ ಸೊಗಡು ಅಪ್ರಜ್ಞಾಪೂರ್ವಕವಾಗಿಯೇ ಅವರ ಬರವಣಿಗೆಯಲ್ಲಿ ಬಂದಿದೆ ಎನ್ನಬಹುದು. ಆದರೆ ಗೊರೂರರು, ಬೆಟಗೇರಿಯವರು, ಅರ್ಚಕರಂಗಸ್ವಾಮಿ ಮುಂತಾದವರು ತಾವು ಅನುಭವಿಸಿದ ಬದುಕಿಗಿಂತಲೂ ಕಂಡ ಜೀವನವನ್ನು ಚಿತ್ರಿಸಲು ಹೊರಟಿದ್ದರಿಂದ, ಬ್ರಾಹ್ಮಣನೊಬ್ಬ ಶೂದ್ರನ ಬದುಕನ್ನು ಎಷ್ಟೇ ಸಹಜವಾಗಿ ಕಂಡರಿಸಬಲ್ಲನೆಂದರೂ ಅವನು ಬೆಳೆದು ಬಂದ ಸಂಸ್ಕೃತಿ, ಧರ್ಮ, ರೀತಿನೀತಿ, ಪರಂಪರೆ, ವಾತಾವರಣ, ಆತನ ಬರವಣಿಗೆಯಲ್ಲಿ ಅಪ್ರಜ್ಞಾಪೂರ್ವಕವಾಗಿ ಬಂದು, ಅಲ್ಲಲ್ಲೆ ಕೃತಕತೆ ತಲೆಹಾಕಲು ಸಾಧ್ಯತೆಗಳಿದ್ದೇ ಇರುತ್ತವೆ. ಆದರೆ ಆ ಕಷ್ಟ ಈ ಲೇಖಕರಿಗಿಲ್ಲವಾಗಿದೆ, ಎಷ್ಟು ಸೂಕ್ಷ್ಮವಾಗಿ

ಗ್ರಾಮಜೀವನದ ತಂತು ತಂತುಗಳನ್ನು ಗಮನಿಸಿದ್ದಾರೆಂಬುದಕ್ಕೆ ಈ ಮಾತುಗಳನ್ನು ನೋಡಿ. "ಒಬ್ಬರ ಮೇಲೊಬ್ಬರು ಬಿಟ್ಟಿರಾ ! ಗಲ್ಲೀ ನುಗ್ಗಿ ಏನಾರ ಬಂದಿರಾ !....ಲೇ ಅವನ್ಯಾರೋ ಹೊಡೆಯೊ ಹಿಂದಕ್ಕೆ ಹೋರಿಯ ! ನಾನಿನ್ನು ಹುಂ ಅಂದಿಲ್ಲ, ಆಗಲೇ ಹೊರಟ ಮುಂದಕ್ಕೆ ! ಹೋ ! ಹೋ ! ಬುಡ್ಡನ ಹೋರಿ ನೋಡ್ಲಾ ಯಂಗೋಯ್ತದೆ....;" (ಪು. ೩೮)

"ಮಾಯಣ್ಣನ ಹೋರಿ ಮುಂದೆ ನುಗ್ತು !
ಅಲ್ನೋಡ್ಲ ! ಹೆಂಗೆ ನುಗ್ಗಿ ಬಿಡ್ತು, ಜಳ್ಳ ಭತ್ತನ ಹೋರಿ !
ಆಗೋ ! ಆಗೋ ! ಬಂದೇಬಿಟ್ಟ ಹೆಣ್ಣಂಗ ಕೆಂದಮಳಕ ಓಡಿಸಿಕೊಂಡು !
........ಸೈ ಕಣೋ ಅವನೇ ಗಂಡಸು ! (ಪು. ೩೯)
"ಈಸು ತಿಂಗಳ ತನಕ ಎಲ್ಲಿಗೋಗಿದ್ರಯ್ಯ ಮಾಡಿಸಿಕೊಳ್ಳದೇ ?"
ನೀನು ಕೈಗೆ ಸಿಕ್ಕಿದರಲ್ಲವೇನಪ್ಪಯ್ಯಾ ಮಾಡಿಸಿಕೊಳ್ಳೋದು ? (ಪುಟ ೪೮)

ಹೀಗೆ ಉತ್ಸಾಹದಲ್ಲಿ ಆಡುವ ಮಾತುಗಳು, ಕಷ್ಟದಲ್ಲಿದ್ದಾಗ ಬರುವ ನುಡಿಗಳು, ಎಲ್ಲವನ್ನು ಅತ್ಯಂತ ಸಹಜವಾಗಿ ತಂದಿದ್ದಾರೆ, "ಹೂದಕ್ಕ ಬೆಯ್ಯೋದಿಲ್ಲ. ಯಮುದೋನು ಮುರಕೊಂಡ" ಮುಂತಾದ ಪ್ರಾದೇಶಿಕ ನುಡಿಗಟ್ಟುಗಳನ್ನು ಮತ್ತು ಮಜ್ಜಿಗಂಬರ, ಹಾಲ್ಪಜ್ಜಿ, ಮಸೊಪ್ಪು, ತೊಕ್ಕಲು, ಇತ್ಯಾದಿ ಅಡಿಗೆಗೆ ಸಂಬಂಧಿಸಿದ ಹೆಸರುಗಳನ್ನು ಅಲ್ಲಲ್ಲೆ ಬಳಸಿದ್ದಾರೆ. ಇವಲ್ಲದೆ—ಹಳ್ಳಿಯ ನ್ಯಾಯ ತೀರ್ಮಾನದ ರೀತಿ, ಹಬ್ಬ ಹರಿದಿನಗಳ ಸಡಗರ, ಜನರು ನಡೆದುಕೊಳ್ಳುವ ರೀತಿಯನ್ನು ಕಣ್ಣಿಗೆ ರಾಚುವಂತೆ ತಂದು ಸಮಗ್ರ ಜನಪದ ಜೀವನವೇ ಈ ಕೃತಿಯ ಮೂಲಕ ಪರಿಚಯವಾಗುತ್ತದೆ.

ಎಷ್ಟೋ ಸಂದರ್ಭದಲ್ಲಿ ಇದೊಂದು ಕ್ರಿಯಾತ್ಮಕ ಕೃತಿ ಎಂಬುದನ್ನು ಮರೆತು ಜಾನಪದ ಅಂಶಗಳನ್ನು ಹೆಚ್ಚಾಗಿ ತಂದು ಸಂಪ್ರದಾಯದ ವರ್ಣನೆಯಲ್ಲಿ ತಲ್ಲೀನರಾಗುತ್ತಾರೆ. ಇದರಿಂದ ಕೃತಿಯ ಕಲಾತ್ಮಕತೆ ಸೊರಗಿದರೂ ಜಾನಪದದ ದೃಷ್ಟಿಯಿಂದ ಮಹತ್ವ ಎದ್ದು ತೋರುತ್ತದೆ. ಕೆಲವು ಕಡೆಗಳಲ್ಲಿ ಅನವಶ್ಯಕವಾದ ವರ್ಣನೆಗಳನ್ನು ದೀರ್ಘವಾಗಿ ಬೆಳಸಿದು ಜಾನಪದ ಅಂಶಗಳನ್ನು ಉದ್ದೇಶಕಪೂರ್ವಕವಾಗಿ ತಂದು ತುರುಕಿ, ಸಾವಯುವ ಸಂಬಂಧ ಕೃತಕವಾಗಿ ತೋರಲು ಅನುವು ಮಾಡಿಕೊಟ್ಟಿದ್ದಾರೆ. ಏನೇ ಮಿತಿಗಳಿದ್ದರೂ, ಜಾನಪದ ಸಾಮಗ್ರಿಯನ್ನು ಅಲ್ಲಲ್ಲೆ ಪೋಣಿಸುತ್ತಾ ಸುಂದರ ಮಾಲೆಯಾಗಿ ಹೆಣೆದು. ಬದುಕಿನ ವಿವಿಧ ಮುಖಗಳ ಚಿತ್ರಣವನ್ನು ಕಂಡರಿಸಿರುವ ಅಪೂರ್ವ ಕೃತಿಯಾಗಿದೆ. ಕೃತಿಯ ಕೊನೆಯಲ್ಲಿ ಕೊಟ್ಟಿರುವ ಟಿಪ್ಪಣಿಗಳಂತೂ ಮಹತ್ವ ಪೂರ್ಣವಾಗಿವೆ, ಜಾನಪದ ಸಂಶೋಧಕನ ಎಲ್ಲ ಅರ್ಹತೆಗಳನ್ನು ಸಾಬೀತು ಪಡಿಸುತ್ತವೆ. ಇಂತಹ ಟಿಪ್ಪಣಿಗಳಿಂದ ಜಾನಪದದಲ್ಲಿ ಕೆಲಸ ಮಾಡುವವರಿಗೆ ಉಪಯುಕ್ತ ಮಾಹಿತಿ ಪಡೆಯಲು ಅನುಕೂಲವಾಗುತ್ತದೆ.

ನನ್ನೂರು ಕೃತಿ ಜಾನಪದ ಸಂಸ್ಕೃತಿ ಎಂಬ ಫಲವತ್ತಾದ ಮಣ್ಣಿನಲ್ಲಿ ಆಳವಾಗಿ ಬೇರುಬಿಟ್ಟು ಸೊಂಪಾಗಿ ಬೆಳೆದ ಮಹಾವೃಕ್ಷವೆನ್ನಬಹುದು. ನಾಗೇಗೌಡರ ಜಾನಪದ ಕುಸುರಿ ಕೆಲಸದಿಂದ ಮೂಡಿಬಂದ 'ನನ್ನೂರು, "ಹಳ್ಳಿಯ ದಿನನಿತ್ಯದ ಜೀವನವೇ ಒಂದು ಜಾತ್ರೆ" ಎಂಬುದನ್ನು ಸೊಗಸಾಗಿ ನಿರೂಪಿಸಿದ್ದಾರೆ.

೯ ದೊಡ್ಡಮನೆ ಕಾದಂಬರಿಯಲ್ಲಿ ಜನಪದೀಯ ಚಿತ್ರಗಳು

ಚಂದ್ರು, ಕಾಳೇನಹಳ್ಳಿ

ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ತೋರಿರುವ ಶ್ರೀ ಹೆಚ್. ಎಲ್. ನಾಗೇಗೌಡರ 'ದೊಡ್ಡಮನೆ' ಕಾದಂಬರಿ ಹಳ್ಳಿಯೊಂದರ ಸಹಜನೋವು ನಲಿವುಗಳನ್ನು ತೆರೆಯುತ್ತದೆ. ಕಾದಂಬರಿಕಾರರಿಗೆ ಅಲ್ಲಿನ ಬದುಕು ಕಾಲ್ಪನಿಕವಾದುವಲ್ಲ ಅಥವಾ ಕಡ ಪಡೆದದ್ದಲ್ಲ. ಬಯಲು ಸೀಮೆಯ ಹಳ್ಳಿಯೊಂದರ ಮಣ್ಣಿನ ಮಗನಾಗಿ ಬೆಳೆದಿರುವ ಕಾದಂಬರಿಕಾರರಿಗೆ ಸಹಜವಾಗಿಯೇ ಆ ನೆಲದ ಗುಣವನ್ನು ಕಾದಂಬರಿಯಲ್ಲಿ ಎರಕಹುಯ್ಯಲು ಸಾಧ್ಯವಾಯಿತು. ಕವಿಯಾಗಲೀ, ಕಾದಂಬರಿಕಾರನಾಗಲೀ ಯಾವುದನ್ನು ನೋಡುತ್ತಾನೋ, ಅನುಭವಿಸುತ್ತಾನೋ ಅದನ್ನು ಸತ್ವಪೂರ್ಣವಾಗಿ ಕೃತಿಗಿಳಿಸಬಲ್ಲನೇ ಹೊರತು, ಕಾಣದ, ಕೇಳದ ಊಹಾಪೋಹಗಳಿಂದ ಬಂಧಿತವಾದ ಕೃತಿ ಸಹೃದಯನಿಂದ ಸಹಜವಾಗಿಯೇ ತಿರಸ್ಕರಿಸಲ್ಪಡುತ್ತದೆ. ಹಾಗೆಯೇ ಓದುಗನಿಗೂ ಒಂದು ಕಲಾತ್ಮಕ ಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಕೃತಿ ಒಳಗೊಂಡಿರುವ ವಸ್ತುವಿನ ಬಗೆಗೆ ಸಾಕಷ್ಟು ಪರಿಜ್ಞಾನ ಅವನಿಗಿರಬೇಕಾಗುತ್ತದೆ. ನಾಗೇಗೌಡರ ದೊಡ್ಡಮನೆ ಅವರ ಸ್ವಂತ ಜೀವನವನ್ನೆ ವೈವೆತ್ತ ಕೃತಿ. ಒಂದು ಹಳ್ಳಿಯ ಸಮಾಜದ ಕಲ್ಪನೆಯೇ ಇಲ್ಲದ ಸಾಮಾನ್ಯ ಓದುಗನಿಗೆ ಅದು ಸಪ್ಪೆ ಎನ್ನಿಸಿದರೂ ಹಳ್ಳಿಯ ಜೀವನದ ರೀತಿನೀತಿಗಳನ್ನು ತಿಳಿದ ಯಾವೊಬ್ಬ ಓದುಗನಾದರೂ ಅದನ್ನು ಮೆಚ್ಚುತ್ತಾನೆ. ಹಳ್ಳಿಯ ಜೀವನದ ನಿಜವಾದ ಅನುಭವವಿರುವವನಿಗೆ ಕಾದಂಬರಿಯಲ್ಲಿ ಬರುವ ಯಾವುದೇ ಸಂದರ್ಭ ಹೊಸದಲ್ಲದಿದ್ದರೂ ಅಲ್ಲೇನೋ ಹೊಸದು ಇದೆ ಎಂದು ಅವನಿಗನ್ನಿಸುತ್ತದೆ. ಕಾದಂಬರಿ ಸತ್ವಯುತದ್ದಾಗಿರುವುದರ ಜೊತೆಗೆ ಜನಪ್ರಿಯವೂ ಆದುದಾಗಿದೆ. ಅದು ಜನಪ್ರಿಯವಾಗಿರುವುದು ಅದು ಒಳಗೊಂಡಿರುವ ವಸ್ತುವಿನಿಂದ. ವಸ್ತು ಸರಳವಾದುದು, ಅದು ನಗರದಂತೆ ಸಂಕೀರ್ಣ ಸಮಾಜದ್ದಲ್ಲ. ಹೀಗಾಗಿ ಅದನ್ನು ಅರ್ಥಮಾಡಿಕೊಳ್ಳಲು ಅನುಭವಿಸಲು ಹೆಚ್ಚಿನ ವ್ಯವಧಾನ ಬೇಕಾಗಿಲ್ಲ.

ಈ ಕಾದಂಬರಿಯೊಳಗೆ ಕಾದಂಬರಿಕಾರರ ಪರಿಪಕ್ವ ಗ್ರಾಮೀಣ ಜೀವನ ಮೊಟ್ಟೆಯೊಡೆದು ಮರಿ ಹೊರಬರುವಂತೆ ಬರುತ್ತವೆ. ಒಂದು ಗ್ರಾಮೀಣ ಜೀವನದ ಹಿಂದೆ ಅಡಗಿರುವ ಸಂಸ್ಕೃತಿಯ ಚಿತ್ರಗಳು ಪುಟಪುಟಕ್ಕೂ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಅವರ ಲೇಖನಿಯ ಹಾಳೆಯ ಹಿಂದೆ ಒಂದು ಗ್ರಾಮೀಣ ಬದುಕು ಹಾದುಹೋಗುತ್ತದೆ. ಹಾಗೆಯೇ ಕಾದಂಬರಿಯನ್ನು ಮುಚ್ಚಿಟ್ಟ ಮೇಲೂ ಅವು ಅಚ್ಚಳಿಯದೆ ನೆನಪಿನಲ್ಲಿ

ಉಳಿದುಬಿಡುತ್ತವೆ. ಕಾದಂಬರಿಕಾರರಿಗೆ ಬದಲಾಗುತ್ತಿರುವ ಈ ಗ್ರಾಮೀಣ ಬದುಕಿನ ಬಗೆಗೆ ಸಹಜವಾಗಿಯೇ ಕಾಳಜಿ ಇರುವಂತಿದೆ. "ಗ್ರಾಮೀಣ ಬಾಳು ಬಹು ಜಾಗ್ರತೆಯಾಗಿ ಬದಲಾವಣೆಯಾಗುತ್ತಿದೆ. ಒಂದೆರಡು ದಶಕಗಳು ಕಳೆದರೆ ಕೋಟಿಕೋಟಿ ಕೊಡುತ್ತೇವೆಂದರೂ ನೋಡಲು ಸಿಗಲಾರದು". ಕಾದಂಬರಿಕಾರರ ಊಹನೆಯಂತೆ ನಗರೀಕರಣದ ಹೊಸ ಪೂರ ಅಲ್ಲಲ್ಲಿ ಕಾದಂಬರಿಯೊಳಗೆ ಹರಿದಾಡಿದಂತೆ ಕಾಣಿಸಿದರೂ ಎಲ್ಲಿಯೂ ಗ್ರಾಮೀಣ ಬದುಕಿಗೆ ಊನವಾಗಿದೆ ಎಂದು ಅನ್ನಿಸುವುದಿಲ್ಲ. ಆದರೆ ನಾಗರಿಕತೆಯ ಕೆಲವಾರು ಅಂಶಗಳು ಅಲ್ಲಲ್ಲಿ ಕಾದಂಬರಿಯೊಳಗೆ ಸೇರಿಕೊಳ್ಳುತ್ತಾ ಕಾದಂಬರಿಕಾರನ ಸಮಕಾಲೀನತೆಯತ್ತ ಬದುಕನ್ನು ಒಯ್ಯುತ್ತವೆ. ಇಡೀ ಗ್ರಾಮೀಣ ಸಂಸ್ಕೃತಿ ಹಾಳಾದಂತೆ ಕಾದಂಬರಿಯಲ್ಲಿ ಎಲ್ಲಿಯೂ ಚಿತ್ರಿತವಾಗಿಲ್ಲ. ಹೀಗಾಗಿ ಕಾದಂಬರಿಕಾರರು ಗ್ರಾಮೀಣ ಸಂಸ್ಕೃತಿ ಯಾವುದೇ ಕಾರಣದಿಂದ ಸಂಪೂರ್ಣವಾಗಿ ಹಾಳಾಗುವುದಿಲ್ಲ. ಅಲ್ಪಸ್ವಲ್ಪ ಮಾರ್ಪಾಟಿನೊಡನೆ ಮೂಲಭೂತ ಅಂಶ ಉಳಿದೇ ಉಳಿಯುತ್ತದೆ ಎಂಬುದನು ಪರೋಕ್ಷವಾಗಿ ಒಪ್ಪಿಕೊಂಡಂತಿದೆ.

ಕಾದಂಬರಿ ಆರಂಭವಾಗುವುದೇ ಒಂದು ಜನಪದ ಸಮಾಜ ಎಚ್ಚರಗೊಳ್ಳುವ ಸೊಲ್ಲಿನಿಂದ "ಮುಂಗೋಳಿಗಳು ಕೂಗಿದವು ಎಂದರೆ ರಾಗಿಕಲ್ಲುಗಳು ಬೀಸಲು ಆರಂಭಿಸುತ್ತವೆ. ಅವು ದರ್‌ರ್! ಎಂದು ಶ್ರುತಿಮಾಡಿದರೆ ಆ ಶ್ರುತಿಗೆ ದನಿಗೊಟ್ಟು ಊರಿನಲ್ಲೆಲ್ಲಾ ಹಾಡೇ ಹಾಡು, ಆದರೆ ಯುಗಾದಿಯ ದಿನ ರಾಗಿಕಲ್ಲುಗಳಿಗೂ ಬಿಡುವು. 'ಆ ದಿನ ಬೀಸಿದರೆ ವರ್ಷವೆಲ್ಲಾ ಬೀಸುವುದು ತಪ್ಪುವುದಿಲ್ಲ' ಎಂಬ ಭಾವನೆಯಿಂದ ಬೀಸುವ ಕೆಲಸ ಇಲ್ಲ. ಆದರೂ ಸೋಬಾನೆ ಚಿಕ್ಕಮ್ಮನ ಮನೆಯಲ್ಲಿ ಹಬ್ಬಕ್ಕಾಗಿ ಅಕ್ಕಿಬೀಸಿದಾಗ ಬೆಳಗಿನ ತಂಪು ಹೂಗಾಳಿಯಲ್ಲಿ ಒಂದೆರಡು ಇಂಪಾದ ಹಾಡುಗಳು ತೇಲಿಬಂದವು" ಇಲ್ಲಿ ಬರುವ ಸೋಬಾನೆ ಚಿಕ್ಕಮ್ಮ ಕಾದಂಬರಿಕಾರರ ಸಮಕಾಲೀನ ವ್ಯಕ್ತಿ. ಅವಳು ಜೀವಂತ ಸಮಾಜದಲ್ಲಿಯಂತೆಯೇ ಇಲ್ಲಿಯೂ ಹಾಡುಗಾರ್ತಿಯಾಗಿ ಬಂದಿರುವುದು ಬರೀ ಕಲ್ಪನೆಯಾಗಿ ಅಷ್ಟೇ ಉಳಿಯುವುದಿಲ್ಲ.

ಕಾದಂಬರಿಕಾರರು ಆಗಾಗ ಹೇಳುವ 'ನನ್ನೂರು' ಎಂಬ ಮಾತೇ ತುಂಬಾ ಅರ್ಥಗರ್ಭಿತವಾಗಿದೆ. ಇಲ್ಲಿಯ ನನ್ನೂರು ಒಂದು 'ಜನಪದ'ವಾಗಿರುವುದನ್ನು ಅದರಲ್ಲಿ ಬರುವ ಪ್ರತಿಯೊಂದು ಪಾತ್ರವೂ ಅದರ ಸದಸ್ಯತ್ವವಹಿಸಿರುವುದನ್ನೂ ಕಾಣುತ್ತೇವೆ.

'ದೊಡ್ಡಮನೆ' ಬರೀ ದೊಡ್ಡಮನೆಯೊಂದರ ಕತೆಯಷ್ಟೇ ಅಲ್ಲ. ಕಾದಂಬರಿಯಲ್ಲಿ ಬರುವ ದೊಡ್ಡಮನೆ ಕಾದಂಬರಿಯ ಕೇಂದ್ರ ಬಿಂದು. ಈ ಬಿಂದುವಿನ ಸುತ್ತ ಅನೇಕ ಸಣ್ಣ ಮನೆಗಳೂ, ಹಳ್ಳಿಗಳೂ, ಪಾತ್ರಗಳೂ ಸುತ್ತುಹಾಕುತ್ತವೆ. ಇವರೆಲ್ಲರನ್ನೂ ದೊಡ್ಡಮನೆ ಗುರುತ್ವ ಕೇಂದ್ರದಂತೆ ಹಿಡಿದಿದೆ. ಈ ಬಗೆಯ ಹಿಡಿತಕ್ಕೆ ಅದು ಪರಂಪರೆಯಿಂದ ಉಳಿಸಿಕೊಂಡುಬಂದಿರುವ ಗೌರವಾದರಗಳೇ ಕಾರಣ.

'ದೊಡ್ಡಮನೆ'ಯಲ್ಲಿ ಬದಲಾಗುತ್ತಿರುವ ಹಳ್ಳಿಯ ಚಿತ್ರವೂ ಇದೆ. ಕಾದಂಬರಿಯ

ಮೊದಲನೆಯ ತಲೆಮಾರಿನಿಂದ ನಾಗುವಿನ ತಲೆಮಾರಿಗೆ ಬರುವ ವೇಳೆಗೆ ಎಷ್ಟೋ ಬದಲಾವಣೆಗಳು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ನಡೆದು ಬಿಡುತ್ತವೆ. ಹೀಗೆ ಬದಲಾಗುತ್ತಿರುವ ನಾಗರಿಕತೆಯ ಅಂಶಗಳನ್ನು ಒಪ್ಪಿಕೊಳ್ಳುವಲ್ಲಿ ಅವರಲ್ಲಿ ಯಾವುದೇ ಪ್ರತಿಭಟನೆ ಕಾಣಿಸುವುದಿಲ್ಲ. ಅವರ ಬದುಕು ನಾಗರಿಕತೆಯತ್ತ ಎಷ್ಟೇ ವಾಲಿದರೂ ಅವರ ವಾದ ನಂಬಿಕೆಗಳನ್ನು ಬಿಟ್ಟುಕೊಡಲೊಲ್ಲರು. ಗೌಡರು ಆಸ್ಪತ್ರೆಗೆ ಬೆಂಗಳೂರಿಗೆ ಹೊರಟಾಗಲೂ "....ಏನೋ ಭೀತಿ ಅವರಿಗೂ ಸಹಾ. ಗಾಡಿ ಹೊಡೆಯುವಾಗ ಸರಿಯಾದ ಶಕುನಗಳಾಗಲಿಲ್ಲ. ಊರ ಎಡಗಡೆ ಇರುವ ಪಂಚೆ ಹೊಲ ದಲ್ಲಿ ಗೊಬ್ಬಳಿ ಮುಳ್ಳು ಗುಡಿಸಿ ಎಡೂರಪ್ಪ ಬೆಂಕಿ ಹಚ್ಚಿದ್ದ. ಅದರ ಉರಿ ಗಾಡಿ ಹೊರಟಾಗ ಎರಡಾಳೆತ್ತರ ಕಾಣಿಸುತ್ತಿತ್ತು" ಶಕುನ ಸರಿಯಾಗಿ ಆಗಿದ್ದರೆ ಬಹುಶಃ ಗೌಡರು ಮತ್ತೆ ಬದುಕಿ ಬರುತ್ತಿದ್ದರೋ ಏನೋ. ಈ ಬೆಂಕಿಯನ್ನು ಕಂಡ ಶಕುನ ದಿಂದಾಗಿ ತಾನು ಇನ್ನು ಉಳಿಯುವುದಿಲ್ಲ ಎಂಬ ವ್ಯಥೆಯನ್ನೇ ಮನಸ್ಸಿನಲ್ಲಿ ಅಂಟಿಸಿ ಕೊಂಡು ಸತ್ತಿರಲೂ ಸಾಧ್ಯ. ಇಂಥ ಹಳೆಯ ಕಂದಾಚಾರಗಳನ್ನು ಬಿಡದ ಗೌಡರು ಹೇಗೋ ತಮ್ಮ ಖಾಯಿಲೆಯ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಲು ಒಪ್ಪುತ್ತಾರೆ. ಬೆಂಗಳೂರಿನ ನಗರಜೀವನ ಅನುಭವದಲ್ಲಿ ಅವರಿಗೆ ಯಾವುದೋ ಹೊಸ ಅನುಭವ ಉಂಟಾಗುತ್ತಲೇ ಇರುತ್ತದೆ "ಗೌಡರು ರೈಲು ನೋಡಿ ದ್ದರು ; ಆದರೆ ಅದರಲ್ಲಿ ಕುಳಿತಿರಲಿಲ್ಲ. ಪುಟ್ಟುವಿಗಂತೂ ರೈಲು ನೋಡಿದ್ದು ಇದೇ ಮೊದಲು....ರೈಲು ಹಿಂದಕ್ಕೂ ಮುಂದಕ್ಕೂ ಓಡಾಡಿದಾಗ ಬಹುಪುಕ್ಕಲು ಸ್ವಭಾವದ ಪುಟ್ಟು ತಂದೆಯ ಸಮೀಪಕ್ಕೆ ಹೋಗಿ ಅವರ ಕೈಹಿಡಿದುಕೊಳ್ಳುತ್ತಿದ್ದ." ಒಟ್ಟಿನಲ್ಲಿ ಒಂದು ಗ್ರಾಮೀಣ ಸಮಾಜದ ಪ್ರತಿನಿಧಿಯಾದ ಗೌಡರು ನಗರದ ಚಿಕಿತ್ಸೆಗಾಗಿ ಒಪ್ಪಿ ಕೊಂಡಿದ್ದಾಗಲೀ, ಅವರು ರೈಲಿನಲ್ಲಿ ಕುಳಿತಿದ್ದಾಗಲೀ ಸರ್ವಸಾಮಾನ್ಯ ಘಟನೆ ಎಂದು ನಾವು ಪರಿಗಣಿಸಿಬಿಡಬಹುದು. ಆದರೆ ಅದಕ್ಕೆ ಅವರ ಒಪ್ಪಿಗೆಯ ಮುದ್ರೆ ಬೀಳುವ ಮುನ್ನ ತಮ್ಮ ಪರಂಪರಾಗತ ಬದುಕಿನಿಂದ ಸ್ವಲ್ಪವಾದರೂ ಬಿಡಿಸಿಕೊಳ್ಳಬೇಕು ಎಂಬ ತೀರ್ಮಾನ ಇದ್ದಕ್ಕಿದ್ದಂತೆ ಬರುವುದಂತೂ ಅಲ್ಲ.

ಇಷ್ಟುಮಾತ್ರಕ್ಕೆ ನಾವು ಅವರು ಸಂಪೂರ್ಣವಾಗಿ ನಗರ ಜೀವನದ ಅಂಶಗಳನ್ನು ಒಳಗೊಳ್ಳುತ್ತಿದ್ದಾರೆ, ಹಳೆಯದನ್ನು ಕೈಬಿಡುತ್ತಿದ್ದಾರೆ ಎಂದು ಹೇಳಲು ಸಾಧ್ಯವೇ ಇಲ್ಲ. ಇಂಥ ನಾಗರಿಕತೆಯ ಸ್ವೀಕರಣ ಕೇವಲ ಒಂದೆರಡು ಅಂಶಗಳಿಂದಷ್ಟೇ ಮುಗಿಯು ತ್ತದೆ. ಉಳಿದ ಕಡೆ ಪರಂಪರಾಗತ ಬದುಕು ಇನ್ನೂ ಆಳಕ್ಕೆ ಬೇರೂರುತ್ತದೆ. ಅವರು ಯುಗಾದಿ ಕಳೆದ ಮೇಲೆ ಮೊದಲ ದಿನ ಹೊನ್ನಾರು ಕಟ್ಟುವುದಾಗಲೀ, ಯುಗಾದಿಯ ದಿನ ಬೇವು-ಬೆಲ್ಲ ತಿನ್ನುವುದಾಗಲೀ ಕೊಯಿಲಿಗೆ ಬಂದ ರಾಗಿಯನ್ನು 'ಹೆಚ್ಚುವರಾಡಿ' ಕೊಯ್ಯುವುದಾಗಲೀ ಇಂತಹ ಯಾವೊಂದು ಸಂದರ್ಭವನ್ನು ಯಾವ ಹಳ್ಳಿಗನೂ

ಕೈಬಿಡುವಂತೆಯೇ ಇಲ್ಲ. ಇದೆಲ್ಲಾ ಏಕೆ ಎಂಬ ಪ್ರಶ್ನೆಯನ್ನೇ ಎತ್ತುವಹಾಗಿಲ್ಲ. ಹಿಂದಿನಿಂದ ನಡೆದುಬಂದಿದೆ. ಈಗಲೂ ನಡೆಯಬೇಕು ಎಂಬುದೇ ಉತ್ತರ.

ಎಂಥದೇ ಪರಿಸ್ಥಿತಿಯಲ್ಲಿಯೂ ಈ ಗ್ರಾಮೀಣ ಸಮಾಜ ತನ್ನ ಪರಂಪರೆ ಹಾಳಾಗಲು ಬಿಟ್ಟುಕೊಡುವುದಿಲ್ಲ. ಸಾಯುವ ಸ್ಥಿತಿಯಲ್ಲಿದ್ದ ಗೌಡರಿಗೂ ತಾವು ಸಾಯುತ್ತಿದ್ದೇನಲ್ಲಾ ಎಂಬ ದುಃಖಕ್ಕಿಂತ ಹೆಚ್ಚಾಗಿ ತಮ್ಮ ತಾತ ಮುತ್ತಾತಂದಿರ ಪರಂಪರೆ ಹಾಳಾಗಬಾರದು ಎಂಬ ಕಾಳಜಿಯೇ ಮುಖ್ಯವಾಗುತ್ತದೆ. ಅವರು ಸಾಯುವಾಗ ತಾನು ಸಾಯುತ್ತಿದ್ದೇನೆ ಉಳಿಸಿಕೊಳ್ಳಿ ಎಂದು ಕೇಳುವುದಿಲ್ಲ. ಅವರು ರೋಗಿಯಾಗಿದ್ದರೂ "ನಮ್ಮದು ಬೆಳ್ಳಿಕುಲವಂತೆ. ನೇಣವರು ಅದ್ನೆಲ್ಲ ಹೇಳ್ತಾರೆ. ನಮ್ಮ ಹಿರಿಯೋರು ಪೊದ್ಲಿಗೆ ಬೆಳಗಳ್ಳಿಯೋರಂತೆ. ನಮ್ಮ ಕುಲದಲ್ಲಿ ಒಬ್ಬ ಸುಂದರವಾದ ಮಗಳಿದ್ದಳಂತೆ. ಬೆಳಗಳ್ಳಿಗೆ ಕಂದಾಯ ಕವಳಿಗೆ ವಸೂಲ್ಮಾಡೋಕೆ ಬಂದಿದ್ದ ತರೀಕೆರೆ ಪಾಳೆಗಾರ ಅವಳಮೇಲೆ ಕಣ್ಣಾಕಿಬಿಟ್ಟ. ಆಗ ನಮ್ಮ ಹಿರಿಯೋರು ಊರ್ನೇಬಿಟ್ಟು ಓಡಿಬಂದ್ರು. ಹೆಣ್ಣುಮಗಳು ನಾನಿನ್ನು ಧರೆಮ್ಯಾಲಿರೊದಿಲ್ಲ ಅಂತಾಹೇಳಿ ಈ ಊರ್ನಲ್ಲಿ ಕೆಂಡಕೊಂಡವಾದ್ಲು. ಲಕ್ಕಮ್ಮನ ಗುಡಿ ಅದಲ್ಲ ಅದು ಅವಳಗುಡಿ" ಗೌಡರು ಈ ಕತೆಯನ್ನು ಮನರಂಜನೆಗಾಗಿ ಹೇಳುತ್ತಿಲ್ಲ. ಅವರ ಹಿಂದಿನವರು ಬದುಕಿಬಂದುದರ ಒಳತಿರುಳು ಇಲ್ಲಿದೆ. ಅವರು ಹಾಗೆ ಬದುಕಿದರು ನಾವೂ ಹಾಗೇ ಬದುಕಬೇಕು ಎಂಬ ಧ್ವನಿ ಇಲ್ಲಿದೆ.

ಒಂದು ಸಂಕ್ರಾಂತಿಯದಿನ ಗೌಡರ ಸಾವು ಘಟಿಸುತ್ತದೆ. ಮುಂದಿನ ಕ್ರಿಯೆಗಳು ಒಂದು ಜನಪದ ಸಮಾಜದ ನಿಯಮಾವಳಿಗಳಿಗೆ ಬದ್ಧವಾದಂತೆ ನಡೆಯುತ್ತವೆ. "ಬೆಳ್ಳೂರಿನಿಂದ ಹೊಸ ಬಿಳಿಯ ಬಟ್ಟೆಬಂದಿತು. ಬಿದಿರುಮೆಳೆಯಿಂದ ಹಸಿರುಬಿದಿರು ಕಡಿದುತಂದು ಚಟ್ಟಸಿದ್ಧಮಾಡಿದರು. ಚಿಕ್ಕೂರಿನಿಂದ ಕೊನೆಯಸಾರಿ ಗೌಡರ ಮೈತೊಳೆದು ಹೊಸಬಟ್ಟೆ ಉಡಿಸಿದರು....ಶವವನ್ನು ಚಟ್ಟದಮೇಲಿಡಲು ಎತ್ತಿದಾಗ ಎಲ್ಲರೂ 'ಗೋಳೋ' ಎಂದು ಹತ್ತು ಹಳ್ಳಿಗಳಿಗೆ ಕೇಳುವಂತೆ ರೋದಿಸಿದರು" ಸತ್ತವರಿಗಾಗಿ ಕಣ್ಣೀರು ಹಾಕುವುದು ಸಹಜವಾದರೂ ನಗರಗಳಲ್ಲಿ ಇಂತಹ ದುಃಖದ ತೀವ್ರತೆಯನ್ನು ಕಾಣಲಾರೆವು. ನಗರಗಳಲ್ಲಿ ಒಂದು ಮನೆಯಲ್ಲಿ ಯಾರಾದರೂ ಸತ್ತರೆ ಅವರ ಪಕ್ಕದ ಮನೆಯವರಿಗೇ ಆ ಸುದ್ದಿ ತಿಳಿದಿರುವುದಿಲ್ಲ. ಆದರೆ ಒಂದು ಹಳ್ಳಿಯಲ್ಲಿ ಜನಾನುರಾಗಿಯೊಬ್ಬ ಸತ್ತನೆಂದರೆ ಇಡೀ ಹಳ್ಳಿಯೇ 'ಗೋಳೋ' ಎಂದು ಶೋಕ ವ್ಯಕ್ತಪಡಿಸುತ್ತದೆ. ಗ್ರಾಮೀಣ ಸಮಾಜದಲ್ಲಿ ಒಂದು ಕುಟುಂಬದ ನೋವು-ನಲಿವು ಇಡೀ ಹಳ್ಳಿಯದಾಗುತ್ತದೆ ಎಂದು ಹೇಳಲು ಇದಕ್ಕಿಂತ ಒಳ್ಳೆಯ ನಿದರ್ಶನ ನಮಗೆ ಬೇಕಾಗಿಲ್ಲ. ಅನಂತರದಲ್ಲಿ ಸಂಸ್ಕಾರ ಪರಂಪರೆಯ ನಿಯಮಾವಳಿಗಳಂತೆ ನಡೆಯುತ್ತದೆ. ಇಲ್ಲಿಯೇ ಇನ್ನೊಂದು ವಿಷಯವನ್ನು ಸಂಸ್ಕೃತಿಗೆ ಸಂಬಂಧಿಸಿದಂತೆ ಹೇಳಬಹುದು. ಸತ್ತವನಿಗೆ ಯಾರು ಯಾರು ಎಷ್ಟೆಷ್ಟು ಲೀಟರ್ ಕಣ್ಣೀರು

ಸುರಿಸಿದವರೆಂಬುದು ಲೆಕ್ಕಕ್ಕೆ ಬರುವುದಿಲ್ಲ. ಸತ್ತವನಿಗೆ ಮಾಡಬೇಕಾದ ಅಂತ್ಯಸಂಸ್ಕಾರದ ನಿಯಮಗಳನ್ನು ಸರಿಯಾಗಿ ಪಾಲಿಸಿದರೆ ಎಂಬುದರ ಕಡೆಗೆ ಗಮನ ಇದ್ದೇ ಇರುತ್ತದೆ.

ಜನಪದ ಸಮಾಜದ ನಡುವೆ ಬೆಳೆಯುವ ಮಗು ಹೆಜ್ಜೆಹೆಜ್ಜೆಗೂ ತನ್ನ ಸುತ್ತಣ ಪರಿಸರಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತದೆ. ಇದಕ್ಕೆ ಅದರ ಮುಂದಿನ ತಲೆಮಾರಿನ ಮಾರ್ಗದರ್ಶನವೂ ಇರುತ್ತದೆ ಎಂಬುದಕ್ಕೆ ನಾಗುವಿನ ಪಾತ್ರ ಒಂದು ನಿದರ್ಶನವಾಗುತ್ತದೆ. ಕಾದಂಬರಿಕಾರರ ಈ ಪಾತ್ರದ ಕುಸುರಿಯ ಕೆಲಸ ಪರಿಣಾಮ ಕಾರಿಯಾಗಿ ಬಂದಿದೆ. ಲೇಖಕರು ಮಗುವಾಗಿಯೇ ಅದನ್ನೆಲ್ಲ ಕಂಡಿರುವುದರಲ್ಲಿ ಅಚ್ಚರಿ ಏನಿಲ್ಲ.

ಇದೇ ಲೇಖಕರ 'ನಸ್ನೂರು'ನಲ್ಲಿಯೂ ಗ್ರಾಮೀಣ ಸಮಾಜದ ನೋವು ನಲಿವುಗಳು ಚಿತ್ರಿತವಾಗಿರುವುವಾದರೂ ಅಲ್ಲಿ ಅವು ಕೇವಲ ಅನುಭವಗಳಾಗಿಯೇ, ಜನಪದೀಯ ಚಿತ್ರಗಳಾಗಿಯೇ ಬಿಡಿ ಬಿಡಿಯಾಗಿ ನಿಂತುಬಿಡುತ್ತವೆ. ಆದರೆ ದೊಡ್ಡ ಮನೆಯಲ್ಲಿ ಹಾಗಾಗಿಲ್ಲ ಈ ಬಿಡಿ ಬಿಡಿಯಾದ ಚಿತ್ರಗಳು ಕಾದಂಬರಿಯ ಘಟನೆಗಳಿಗೆ ಪೋಷಕವಾಗಿ ಅದರ ಒಟ್ಟುಕ್ರಿಯೆಯಲ್ಲಿ ಒಂದಾಗುತ್ತವೆ. ಕಾದಂಬರಿಯ ಕ್ರಿಯೆಯನ್ನು ಪರಿಣಾಮಕಾರಿಯಾಗಿ ಮಾಡುತ್ತವೆ. ಈ ಬಗೆಯ ಚಿತ್ರಗಳೆಲ್ಲ ಇಲ್ಲದಿದ್ದರೆ ಕಾದಂಬರಿ ಇಷ್ಟು ಎತ್ತರಕ್ಕೆ ಬೆಳೆಯುತ್ತಿರಲಿಲ್ಲವೇನೋ ಎನ್ನಿಸುತ್ತದೆ.

ಕಾದಂಬರಿ ಒಂದು ಗ್ರಾಮೀಣ ಬದುಕನ್ನು ಯಥಾವತ್ತಾಗಿ ಮತ್ತು ಪ್ರಾಮಾಣಿಕವಾಗಿ ಚಿತ್ರಿಸುತ್ತದೆಯೇ ಹೊರತು ಯಾವುದೇ ಕ್ರಾಂತಿಕಾರಕ ಧೋರಣೆ ಯನ್ನು ಪೂರ್ವಭಾವಿಯಾಗಿ ಹೊಂದಿ ಬರೆದದ್ದಲ್ಲ. ಆದುದರಿಂದಲೇ ಅಲ್ಲಿನ ಪಾತ್ರಗಳು ಆದರ್ಶೀಕರಣಕ್ಕೆ ಒಳಪಡುವುದಿಲ್ಲ ಅಥವಾ ಲೇಖಕರ ಕೈಗೊಂಬೆಗಳಾಗಿ ಲೇಖಕರ ಧೋರಣೆಗಳನ್ನೇ ಹೊತ್ತು ಕುಣಿಯುವುದಲ್ಲ. ಸಹಜವಾಗಿ ಬರುತ್ತವೆ, ಸಹಜವಾಗಿ ಓಡಾಡುತ್ತವೆ. ಆದುದರಿಂದಲೇ ಇವರ ಕಾದಂಬರಿಯಲ್ಲಿ ಬರುವ ಬ್ರಾಹ್ಮಣ-ಶೂದ್ರ-ದಲಿತ ಇವರೆಲ್ಲ ಅವರವರ ಸ್ತರದಲ್ಲಿಯೇ ಉಳಿಯುತ್ತಾರೆಯೇ ಹೊರತು ಒಬ್ಬರನ್ನೊಬ್ಬರು ಉಡಾಫೆಮಾಡುವುದಿಲ್ಲ. ಇಲ್ಲೆಲ್ಲ ಈ ಬಗೆಯ ಸಮಾಜ ವ್ಯವಸ್ಥೆಯನ್ನು ಲೇಖಕರು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೋ ಅಥವಾ ಆ ಪಾತ್ರಗಳೇ ತಮ್ಮ ಹಳೆಯ ಕಂದಾಚಾರಗಳನ್ನು ಬಿಡದೆಯೇ ಹಾಗೇ ವರ್ತಿಸುತ್ತವೆಯೋ ಎಂಬುದು ಸ್ಪಷ್ಟವಾಗುವುದಿಲ್ಲ. ಏನಾದರಾಗಲೀ ಆ ಪಾತ್ರಗಳು ಸಹಜವಾಗಿ ಬಂದಿವೆ.

ಒಟ್ಟಿನಲ್ಲಿ ದೊಡ್ಡಮನೆ ಪರಂಪರೆಯೊಂದರ ಕತೆ. ನಂಜೇಗೌಡರು, ಅವರ ಸಮಕಾಲೀನರಾಗಲೀ ಆ ಹಳೆಯ ಪರಂಪರೆಯೊಂದರ ಮೊತ್ತ. ಶತಶತಮಾನಗಳ ಬದುಕು ಅವರಲ್ಲಿ ಹರಳುಗೊಂಡಿದೆ. ಅದರೊಳಕ್ಕೆ ನಂಜೇಗೌಡರ ಹಾಗೂ ಅವರ ಸಮಕಾಲೀನರೆಷ್ಟೋ ಜನರ ಬದುಕಿನ ಹೊಸನೀರೂ ಸಂಗಮವಾಗಿದೆ. ಈ ಮೊತ್ತ ಹಾಗೆಯೇ ಉಳಿಯುವುದಿಲ್ಲ. ಮುಂದೆ ಬರುವ ತಲೆಮಾರು ಅದನ್ನು ಸ್ವೀಕರಿಸುತ್ತದೆ.

ತನ್ನ ಸಾಂಸ್ಕೃತಿಕ ಅಂಶಗಳನ್ನು ಅದಕ್ಕೆ ಸೇರಿಸಿ ಸಮೃದ್ಧಿ ಮಾಡುತ್ತದೆ. ಹೀಗಾಗಿ ದೊಡ್ಡಮನೆ ತಲೆಮಾರುಗಳ ಕತೆಯಾಗುತ್ತದೆ. ಬದುಕು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುವಾಗ ಆಗುವ ಘಟನೆಗಳನ್ನು ಸೂಕ್ಷ್ಮವಾಗಿ ಚಿತ್ರಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿದೆ. ಈ ತಲೆಮಾರುಗಳ ಕತೆ ನಿಂತಿರುವುದು ತಲೆ ತಲಾಂತರದಿಂದ ಉಳಿದುಬಂದಿರುವ ಸಂಸ್ಕೃತಿಯ ಗಟ್ಟಿಯಾದ ಅಸ್ತಿಭಾರದ ಮೇಲೆ. ಇಲ್ಲಿ ಬರುವ ಜನಪದೀಯ ಚಿತ್ರಗಳನ್ನು ಬಿಡಿಬಿಡಿಯಾಗಿ ತೆರೆಯಬಹುದಾದರೂ ಈ ಭಾಗಗಳೆಲ್ಲ ಸೇರಿದಾಗಲೇ ಕಾದಂಬರಿಗೆ ಒಳ್ಳೆಯ ಕೈಕಾಲು ಮೂಡಿವೆ. ಕಾದಂಬರಿಯಲ್ಲಿ ತಲೆಗಳು ಬೀಳುತ್ತವೆ ತಲೆಗಳು ಏಳುತ್ತವೆ ಆದರೆ ಆ ತಲೆಗಳು ಅನುಭವಿಸಿದ ಸಂಸ್ಕೃತಿ, ಸಂಪತ್ತು ಬಿದ್ದ ಹಾಗೂ ಎದ್ದ ತಲೆಗಳನ್ನು ಪ್ರತಿನಿಧಿಸುತ್ತಾ ಅದೆಷ್ಟೊ ವರ್ಷಗಳಿಂದ ಹಾಗೆಯೇ ಉಳಿದಿದೆ.

೧೦ | ದೊಡ್ಡಮನೆ–ಒಟ್ಟುನೋಟ

ರಂಗಾರೆಡ್ಡಿ ಕೋಡಿರಾಂಪುರ

ಕನ್ನಡ ಕಾದಂಬರೀ ಕ್ಷೇತ್ರದಲ್ಲಿ ಗಾತ್ರದಲ್ಲಿಯೂ, ಗುಣದಲ್ಲಿಯೂ ದೊಡ್ಡದಾಗಿ, ಅವಸಾನವಾಗುತ್ತಿರುವ ನಮ್ಮ ಸಂಸ್ಕೃತಿಯ ಚಿತ್ರವನ್ನು ನೀಡುವ ಕೆಲವೇ ಪ್ರಾದೇಶಿಕ ಕಾದಂಬರಿಗಳಲ್ಲಿ 'ದೊಡ್ಡಮನೆ'ಯೂ ಒಂದು. ಮೈಸೂರು ಮತ್ತು ಮಂಡ್ಯಜಿಲ್ಲೆಗಳ ಬಯಲುಸೀಮೆಯ ಒಕ್ಕಲು ಮಕ್ಕಳ ಬಾಳಿನ ವಿವರ ವಿವರಗಳನ್ನು ಈ ಕಾದಂಬರಿ ಚಿತ್ರಿಸಿದಂತೆ ಈ ಭಾಗದ ಬೇರಾವ ಕಾದಂಬರಿಯೂ ಚಿತ್ರಿಸಿಲ್ಲ. ಹಾಗೆಂದಾಕ್ಷಣ ಬದುಕನ್ನು ಬಹಳ ಗಂಭೀರವಾಗಿ ಪರಿಗಣಿಸಿದ ಕಾದಂಬರಿಗಳು ಇಲ್ಲವೆಂದಲ್ಲ. ಬದುಕಿನ ಯಾವುದೋ ಅಂಶವನ್ನು ಕುರಿತಂತೆ ಘನೀಭೂತವಾಗಿ ಬರೆದ ಕಾದಂಬರಿಗಳಿವೆಯೇ ಹೊರತು, ಎಲ್ಲಾ ಅಂಶಗಳನ್ನು–ಮುಖ್ಯವಾಗಿ ರೀತಿ–ನೀತಿ ಆಚಾರ ವಿಚಾರಗಳನ್ನು ಕಂಡದ್ದನ್ನು ಕಂಡ ಹಾಗೇ ಮುಂದಿಡುವ ಕಾದಂಬರಿಗಳು ವಿರಳ.

ದೊಡ್ಡಮನೆ ಕಾದಂಬರಿ ಶಿಥಿಲವಾಗುತ್ತಿರುವ ನಮ್ಮ ಕೌಟುಂಬಿಕ ವ್ಯವಸ್ಥೆಯ ಕರಾಳ ಚಿತ್ರವನ್ನು ಕೊಡುವುದರ ಜೊತೆಗೇ ಒಂದು ಮನೆಗೆ ಸಂಬಂಧಿಸಿದಂತೆ ಅದು ವಿಘಟನೆಗೊಳ್ಳುವುದನ್ನೂ ಚಿತ್ರಿಸುತ್ತದೆ. ಅಂದರೆ ಅವಿಭಕ್ತ ಕುಟುಂಬವೊಂದು ಒಡೆದು ಪಾಲಾಗುವುದು ಈ ಕಾದಂಬರಿಯ ವಸ್ತು. 'ನನಗಾಗಿ ಎಲ್ಲರೂ, ಎಲ್ಲರಿಗಾಗಿ ನಾನು,' ಎಂಬ ಸಾಮೂಹಿಕ ಹಿತದೃಷ್ಟಿಯ ತಿಳಿವಳಿಕೆಯಿಂದ ಬದ್ಧವಾದ ಸಾಮಾಜಿಕ ವ್ಯವಸ್ಥೆಯಲ್ಲಿ ವೈಯಕ್ತಿಕತೆ ತಲೆ ಹಾಕಿದಾಗ ಆಗುವ ಅನಾಹುತವನ್ನು ಹಂತಹಂತವಾಗಿ ಚಿತ್ರಿಸುತ್ತಾ ಸಾಗುತ್ತದೆ 'ದೊಡ್ಡಮನೆ' ಕಾದಂಬರಿ.

ಮೂರು ತಲೆಮಾರುಗಳ ಜೀವನವನ್ನು ವಿಸ್ತಾರವಾಗಿ ಚಿತ್ರಿಸ ಹೊರಟಿರುವ ಈ ಕಾದಂಬರಿಯ ದೀರ್ಘವರ್ಣನೆ ಮತ್ತು ಆಳ–ಅಗಲಗಳ ನಿರೂಪಣೆಯಲ್ಲಿ ನಿರ್ಲಿಪ್ತತೆಯ ಜೊತೆಗೇ ಸಂಯಮವಿದೆ. ಇಂಥ ಸಂಯಮಪೂರ್ಣವಾದ ಬರವಣಿಗೆ ಈ ತರಹ ವಸ್ತುವನ್ನಾರಿಸಿಕೊಂಡಾಗ ಅಗತ್ಯವೂ ಆಗುತ್ತದೆ. ಪ್ರಾರಂಭದಲ್ಲಿ ಮಂದಗತಿಯಲ್ಲಿ ಸಾಗುವ ಈ ಕಾದಂಬರಿ ಬರುಬರುತ್ತಾ ತನ್ನ ವೇಗವನ್ನು ಹೆಚ್ಚಿಸಿಕೊಂಡು ಕೊನೆಕೊನೆಗೆ ಅತಿ ಕ್ಷಿಪ್ರದಲ್ಲಿ ಮುಕ್ತಾಯವಾಗುತ್ತದೆ. ಮೂರು ತಲೆಮಾರುಗಳ ಜೀವನವನ್ನು ಚಿತ್ರಿಸಬೇಕೆಂದಿರುವ ಈ ಕಾದಂಬರಿಯಲ್ಲಿ ಮಧ್ಯದ ತಲೆಮಾರನ್ನು ಬಿಟ್ಟರೆ, ಮೊದಲ ಮತ್ತು ಕೊನೆಯ ತಲೆಮಾರಿನ ಪೂರ್ಣ ವಿವರಗಳು ಸಿಗುವುದಿಲ್ಲ. ಜೊತೆಗೆ ಈ ಎರಡು ತಲೆ

ಮಾರುಗಳಲ್ಲಿ ಸಂಯಮಪೂರ್ಣವಾದ ನಿರೂಪಣೆಯೂ ಇಲ್ಲ. ಮಧ್ಯದ ತಲೆಮಾರನ್ನು ಚಿತ್ರಿಸುವಷ್ಟಕ್ಕೆ ಕಾದಂಬರಿಕಾರರು ಆಸಕ್ತರಾಗಿರುವುದು ಎದ್ದು ಕಾಣುತ್ತದೆ.

ಸ್ಥೂಲವಾಗಿ ಕಾದಂಬರಿಯ ಕತೆ ಹೀಗಿದೆ : ನನ್ನೂರಿನ ದೊಡ್ಡಮನೆ ನಂಜೇಗೌಡರದು ತುಂಬಾ ದೊಡ್ಡ ಗುಣ : ಜೊತೆಗೆ ಅವಿಭಕ್ತ ದೊಡ್ಡ ಸಂಸಾರ. ಸುತ್ತಮುತ್ತೆಲ್ಲ 'ದೊಡ್ಡಮನೆ' ಎಂಬ ಗೌರವವನ್ನು ಸಂಪಾದಿಸಿಕೊಂಡಿದೆ. ಇದು ನಂಜೇಗೌಡರ ದಾಯಾದಿ ಮುದ್ದೇಗೌಡರಿಗೆ ಸಹಿಸುತ್ತಿಲ್ಲ. 'ದೊಡ್ಡ ಮನೆ' 'ಚಿಕ್ಕ ಮನೆ' ಯಾಗುವುದನ್ನು ಹಗಲಿರುಳೂ ಬಯಸುತ್ತಿದ್ದಾರೆ, ಅದಕ್ಕಾಗಿ ಪ್ರಯತ್ನಿಸುತ್ತಲೂ ಇದ್ದಾರೆ. ಯಾವುದೋ ಒಳ್ಳೆ ಸಮಯದಲ್ಲಿ ನಂಜೇಗೌಡರು ಮುದ್ದೇಗೌಡರನ್ನು ಬೇಡಿಕೊಂಡು ಇಂಥ ಕಹಿ ಹಾಗೂ ವಿಷ ಭಾವನೆಯನ್ನು ತೊಡೆದು ಹಾಕಿದರು. ಇವರಿಬ್ಬರ ಕಾಲವಾದನಂತರ ಬಾಡ ಮಕ್ಕಳಲ್ಲಿ ಈ ವಿಷಭಾವನೆ ತಾನೇ ತಾನಾಗಿ ಹರಿಯ ತೊಡಗಿತು. ನಂಜೇಗೌಡರ ಮಗ ಲಿಂಗೇಗೌಡ ತಂದೆಯಂತೆಯೇ ದೊಡ್ಡ ವ್ಯಕ್ತಿತ್ವ ಉಳ್ಳವನಾಗಿ ಸುತ್ತಮುತ್ತೆಲ್ಲ ಹೆಸರಾದರೆ ಮುದ್ದೇಗೌಡರ ಮಗ ರಂಗೇಗೌಡ ಅಸೂಯೆ ಮತ್ತು ಕೀಳುತನದಿಂದಾಗಿ ನನ್ನೂರಿನ ಜನರಿಗೆಲ್ಲ ಮುಖ್ಯವಾಗಿ ದೊಡ್ಡ ಮನೆ ಲಿಂಗೇಗೌಡರಿಗೆ ಪೀಡಕನಾಗಿರುತ್ತಾನೆ. ಕೊನೆಗೆ ಅವನ ಪಿತೂರಿಯಿಂದ ದೊಡ್ಡ ಮನೆ ಒಡೆದು ಚಿಕ್ಕಮನೆಯಾಗುತ್ತದೆ. ಲಿಂಗೇಗೌಡ ಮತ್ತು ರಂಗೇಗೌಡ ಇಬ್ಬರ ಮೇಲೂ ಕೊಲೆಯ ಆಪಾದನೆ ಬರುತ್ತದೆ. ಲಿಂಗೇಗೌಡನ ಮಗ ನಾಗು ದೊಡ್ಡ ಅಧಿಕಾರಿಯಾಗುತ್ತಾನೆ. ಕೊನೆಗೆ ದೊಡ್ಡಮನೆಯ ಘನತೆ ಗೌರವಗಳನ್ನು ಆತ ಎತ್ತಿ ಹಿಡಿಯುತ್ತಾನೆ ಎಂಬ ಆಶಾಭಾವನೆಯಿಂದ ಕಾದಂಬರಿ ಕೊನೆಯಾಗುತ್ತದೆ.

ದೊಡ್ಡಮನೆಯ ಉಳಿವು ಮತ್ತು ಅಳಿವಿಗಾಗಿ ಲಿಂಗೇಗೌಡ ಮತ್ತು ರಂಗೇಗೌಡ ಸತತವಾಗಿ ಹೋರಾಟ ಮಾಡುವುದರಿಂದ ಇವರಿಬ್ಬರೂ ಕಾದಂಬರಿಯಲ್ಲಿ ಪ್ರಧಾನ ಪಾತ್ರಗಳಾಗುತ್ತಾರೆ. ಆದರೆ ಕಾದಂಬರಿಕಾರರು ಲಿಂಗೇಗೌಡರ ವ್ಯಕ್ತಿತ್ವದ ಮೇಲೇ ತಮ್ಮ ಗಮನವನ್ನೆಲ್ಲ ಹೆಚ್ಚು ಕೇಂದ್ರೀಕರಿಸುವುದರಿಂದ ರಂಗೇಗೌಡ ಓದುಗರ ಅಲಕ್ಷ್ಯಕ್ಕೆ ಗುರಿಯಾಗುತ್ತಾನೆ. ಲಿಂಗೇಗೌಡ ದೊಡ್ಡ ಮನೆಯನ್ನು ಉಳಿಸಲು ಯಾವ ಪ್ರಮಾಣದ ಹೋರಾಟ ಮಾಡಿದನು ; ಅದಕ್ಕಿಂತಲೂ ಹೆಚ್ಚಿನದು ರಂಗೇಗೌಡ ಆ ಮನೆಯನ್ನು ಅಳಿಸಲು ಮಾಡಿದ ಹೋರಾಟ. ಆದ್ದರಿಂದ ಇವರಿಬ್ಬರ ಪಾತ್ರ ಚಿತ್ರಣದಲ್ಲಿ ಸಮತೋಲನವಿರಬೇಕಿತ್ತು.

'ಬೇವು-ಬೆಲ್ಲ' ಎಂಬ ಪ್ರಕರಣಾಬದ್ಧವಾದ ಅಧ್ಯಾಯದಿಂದ ಆರಂಭವಾದ ಕಾದಂಬರಿ ದೊಡ್ಡಮನೆಯ ಬಗ್ಗೆ, ತುಂಬಾ ಕಾಳಜಿಯುಳ್ಳ, ಉಜ್ವಲ ವ್ಯಕ್ತಿತ್ವದ ನಂಜೇಗೌಡರನ್ನು ಪರಿಚಯ ಮಾಡಿಕೊಡುವಾಗಲೇ ಪಟೇಲ್ ಮುದ್ದೇಗೌಡರನ್ನು ಅವರ ಮಗ ರಂಗೇಗೌಡನನ್ನು ಪರಿಚಯ ಮಾಡಿಕೊಟ್ಟು ಅವರು ಆ ಮನೆಗೆ ಮುಳ್ಳುಗಳು ಎಂಬುದನ್ನು ಸೂಚಿಸುತ್ತದೆ. ಇದರ ಜೊತೆಗೆ ನಂಜೇಗೌಡರಿಗೆ ಬೀಳುವ ಕನಸು

ದೊಡ್ಡ ಮನೆಯ ದುರಂತವನ್ನು ಸೂಚಿಸಿಬಿಡುವುದರಿಂದ ಓದುಗರಿಗೆ ಕುತೂಹಲ ಉಳಿಯುವುದಿಲ್ಲ. ಅಲ್ಲದೆ ಆಖಾಡಕ್ಕಿಳಿದ ಇಬ್ಬರು ಜಟ್ಟಿಗಳ ಹಾಗೆ ದೊಡ್ಡಮನೆಯ ವರೂ, ಪಟೇಲರ ಮನೆಯವರೂ ವರ್ತಿಸುವ ರೀತಿ ಹಾಗೂ ಕಾದಂಬರಿಯಲ್ಲಿ ಬರುವ ದೊಡ್ಡಮನೆಯ ಬಗ್ಗೆ ಕಾದಂಬರಿಕಾರರ ಕೆಲವು ಅಭಿಪ್ರಾಯಗಳನ್ನು ನೋಡಿದರೆ ದೊಡ್ಡಮನೆಯ ಬಗ್ಗೆ ಆಳದಲ್ಲೆಲ್ಲೋ ಪಕ್ಷಪಾತ ಮಾಡುತ್ತಿದ್ದಾರೇನೋ ಎನ್ನಿಸುತ್ತದೆ. "ಸುಳ್ಳು ತಟವಟ ಹೇಳಬಾರ್ದು, ಯಾರೂ ಒಂದು ಬೆಳ್ಳಿತ್ತಿ ಈ ಮನೆ ಕಡೆ ತೋರಿಸ ಬಾರ್ದು ಹಂಗೆ ನಡೀಬೇಕು. ಅದಕ್ಕೇ ಈ ಮನೆಗೆ ದೊಡ್ಡಮನೆ ದೊಡ್ಡಮನೆ ಅಂತ ಹೆಸರು ಬಂದಿರೋದು" ಎಂಬ ನಂಜೇಗೌಡರ ಮಾತು ಕಾದಂಬರಿಕಾರರ ಮಾತೂ ಆಗಿ ಬಿಡುತ್ತದೆ. ಆರಂಭದಲ್ಲೇ ಇಬ್ಬರು ದಾಯಾದಿಗಳು ಬಂದು, ಅವರ ವರ್ತನೆಗಳಿಂದ ದೊಡ್ಡಮನೆ, ದುರಂತದ ಮನೆಯಾಗುತ್ತದೆ ಎಂಬುದರ ಸೂಚನೆ ಕನಸಿನಲ್ಲಿ ಬಂದಿರು ವುದರಿಂದ ಕಾದಂಬರಿಯ ಉದ್ದೇಶ ಸ್ಪಷ್ಟವಾಗಿ, ಕಾದಂಬರಿಕಾರರು ಅತ್ತಿತ್ತ ನೋಡದೇ ಅದೇ ದಿಕ್ಕಿನಲ್ಲಿ ಸಾಗಿ ಗುರಿಮುಟ್ಟುತ್ತಾರೆ. ಉದ್ದೇಶ ಇರಬೇಕು, ಆದರೆ ಅದು ಏಕಮುಖವಾಗಿರಬಾರದು, ಬೇರೆಬೇರೆ ಮಜಲುಗಳಿಂದ ಅರಳಿ ಬಂದಂತಿದ್ದರೆ ಆಗ ಸಹಜವಾದದ್ದಾಗಿರುತ್ತದೆ.

ಈ ಕಾದಂಬರಿಯ ಕೇಂದ್ರವ್ಯಕ್ತಿ ಲಿಂಗೇಗೌಡ. ಮಿಕ್ಕೆಲ್ಲ ಪಾತ್ರಗಳಿಗೂ ಅವುಗಳದ್ದೇ ಆದ ಬೆಳವಣಿಗೆಗೆ ಬಹಳಷ್ಟು ಅವಕಾಶಗಳಿದ್ದರೂ ಕಾದಂಬರಿಕಾರರು ಲಿಂಗೇಗೌಡರ ವ್ಯಕ್ತಿತ್ವದ ಮುಂದೆ ಅವುಗಳನ್ನು ಕುಬ್ಜವಾಗಿಸುತ್ತಾರೆ. ಆರಂಭದಲ್ಲಿ ಚೆಲ್ಲುಚೆಲ್ಲಾಗಿ ಆಡಿಕೊಂಡಿದ್ದ ಹುಡುಗ ಬರುಬರುತ್ತಾ ಗಂಭೀರನಾಗಿ ದೊಡ್ಡಮನೆಯ ಯಜಮಾನಿಕೆ ವಹಿಸಿಕೊಂಡು ಕೊನೆಗೆ ನನ್ನೂರಿನ ರಾಜ'ನಾಗಿ ಮೆರೆದ. ಆದರೆ ದೊಡ್ಡಮನೆಯ ಯಜಮಾನಿಕೆ ವಹಿಸಿಕೊಳ್ಳುವ ತಾಕತ್ತನ್ನು ಅವನು ಮೊದಲೇ ತೋರಿಸಿದ್ದ ತನ್ನ ಮತ್ತು ರಂಗೇಗೌಡನ ಜಗಳದಲ್ಲಿ. "ಇದೊಂದೇ ಮನೆ ನಮ್ಮ ದೊಡ್ಡಮನೆ ಅಂತ ತಿಳ್ಕೊಂಡೇನೋ ! ನಮ್ಮಪ್ಪನಿಗೆ ನಾನು ಹುಟ್ಟೀ ಇದ್ರೆ, ಇನ್ನೊಂದು ಸೀಮೆಹಂಚಿನ ಮನೆಕಟ್ಟಿ, ನಮ್ಮಪ್ಪನ ಹೆಸರ್ನೂ ನಮ್ಮ ಚಿಕ್ಕಪ್ಪದೀರ ಹೆಸರ್ನೂ ಮೆರುಸ್ತೀನಿ ಕಣೋ ! ದೊಡ್ಡಮನೆ ! ದೊಡ್ಡಮನೆ ! ಅಂತ ಸುತ್ತ ನಾಕ್ಹಳ್ಳಿ ಅಲ್ಲ ನಾಡೇ ಅನ್ನಬೇಕು ! ಹಂಗೆ ನಾನು ಮಾಡ್ದೇ ಇದ್ರೆ ನಮ್ಮಪ್ಪನಿಗ್ಹುಟ್ಟಿದೋನೇ ಅಲ್ಲ" ಎಂದು ಸಿಟ್ಟಿನ ಭರದಲ್ಲಿ ನುಡಿಯುವುದನ್ನು ನೋಡಿದರೆ ಅವನಲ್ಲಿ ಹುದುಗಿರುವ ಛಲ ಎದ್ದು ಕಾಣುತ್ತದೆ. ಈ ಜಗಳ ರಂಗೇಗೌಡ—ಲಿಂಗೇಗೌಡರಿಬ್ಬರ ಸ್ವಭಾವದಲ್ಲಿರುವ ಭಿನ್ನತೆಯನ್ನು ಸೂಚಿಸುವುದರ ಜೊತೆಗೇ ಇದೇ ಕಾದಂಬರಿಯ ಪ್ರಮುಖ ಕ್ರಿಯೆಯಾಗಿ ಮುಂದುವರಿಯುತ್ತದೆ.

"ಆಡಳಿತ ಸೂತ್ರವನ್ನು ಹಿಡಿದ ಯಜಮಾನರು ಹೇಗೆ ನಿಸ್ವಾರ್ಥ ದೃಷ್ಟಿಯಿಂದ ದುಡಿಯಬೇಕು, ನಿಷ್ಪಕ್ಷಪಾತವಾಗಿ ವರ್ತಿಸಬೇಕು. ಒಳಗಿನ ಹೊರಗಿನ ಪಿಡುಗು

ಅಡಗುವಂತೆ ಸದಾ ಎಚ್ಚರ ಎಚ್ಚರದಿಂದ ಮುಂಜಾಗರೂಕ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದಕ್ಕೆ ಗೌಡರ ಪಾತ್ರ ನಿದರ್ಶನವಾಗಿದೆ. ಹಿಗ್ಗದೆ ಕುಗ್ಗದೆ, ತಪ್ಪು–ನೆಪ್ಪುಗಳನ್ನು ಧೈರ್ಯದಿಂದ ಎದುರಿಸುವ, ಜೀವನದ ಸಮಸ್ಯೆಗಳಿಗೆ ಬೆನ್ನು ತಿರುಗಿಸದೆ ಹೋರಾಡುವ ದಿಟ್ಟತನದ ಮನಸ್ಸು ಅಪೂರ್ವವಾದದ್ದು" ಎಂಬ ಸುಧಾಕರರ ಮಾತುಗಳು ಗೌಡರ ವಿಷಯಕ್ಕೆ ಹೆಚ್ಚು ಮಾಹಿತಿಗಳನ್ನು ಸಂಗ್ರಹಿಸಿ ಕೊಡುತ್ತವೆ.

ಗೌಡರು ಮನೆ ಮತ್ತು ಜನ ದೊಡ್ಡದಾಗುತ್ತಾ ನಡೆದಂತೆಯೇ ಆರ್ಥಿಕ ಅನುಕೂಲತೆಗಳನ್ನು ಜಾಸ್ತಿಮಾಡಿಕೊಳ್ಳುತ್ತಾ ಹೋಗುತ್ತಾರೆ. ತಮ್ಮ ಮನೆಯ ಕಷ್ಟಸುಖಗಳಂತೆಯೇ ಊರಿನ ಕಷ್ಟಸುಖಗಳಲ್ಲಿಯೂ ವಿಶೇಷ ಆಸಕ್ತಿ ವಹಿಸುತ್ತಿದ್ದರು; ಊರಿಗೆ ಬೇಕಾದ ಬಾವಿ ತೋಡಿಸಿದರು. ಊರವರ ಬೇಸರ, ಏಕತಾನತೆಗಳನ್ನು ಕಳೆಯಲು ಬಯಲಾಟ, ತೊಗಲುಗೊಂಬೆಯಾಟ, ದೊಂಬರಾಟ–ಮುಂತಾದುವನ್ನು ಆಡಲು ಏರ್ಪಾಟು ಮಾಡಿಕೊಟ್ಟರು. ಈ ಕಲಾವಿದರಿಗೆಲ್ಲ ನಮ್ಮೂರಿನಲ್ಲೇ ಉಳಿಯಲು ಬೇಕಾದ ಅನುಕೂಲಗಳನ್ನು ಮಾಡಿಕೊಟ್ಟರು. ಅಂದರೆ ನಮ್ಮೂರಿನ ಬದುಕಿನಲ್ಲಿ ಒಂದು ವಿಧದ ಚೈತನ್ಯ ತುಂಬಿದರು. ಬದುಕಿನಲ್ಲಿ ಇಂಥ ವೈವಿಧ್ಯ ತಂದ ನಮ್ಮೂರಿನ ಗೌಡರಿಗೆ ಮನೆಯಲ್ಲೂ ಇಂಥ ವೈವಿಧ್ಯ ತರಲು ಯಾಕೆ ಆಗಲಿಲ್ಲ ಎಂಬ ಪ್ರಶ್ನೆಗೆ ಮನೆತನದ ಕೀರ್ತಿಪ್ರತಿಷ್ಠೆ, ಮರ್ಯಾದೆಗಳು ಗೌಡರನ್ನು ಆ ದಿಕ್ಕಿನಲ್ಲಿ ಯೋಚಿಸಲು ಬಿಡಲಿಲ್ಲ ಎಂಬುದೇ ಉತ್ತರ.

ದೊಡ್ಡಮನೆ ಕಾದಂಬರಿಯಲ್ಲಿ ಬಂದಿರುವ ಈ ಲಿಂಗೇಗೌಡರ ಪಾತ್ರದಲ್ಲಿ ಹುಡುಕಿದರೂ ಒಂದಾದರೂ ತಪ್ಪು ಸಿಗುವುದಿಲ್ಲ. ಪ್ರಾಚೀನ ಕಾವ್ಯಗಳಲ್ಲಿ ಬರುವ ಧೀರೋದಾತ್ತ ನಾಯಕರ ರೀತಿ ಈ ಪಾತ್ರ ಚಿತ್ರಣ ನಡೆಯುತ್ತದೆ. ಆ ಕಾವ್ಯಗಳಲ್ಲಾದರೂ ಸಿಟ್ಟು ಬಂದಾಗ ಆ ಪಾತ್ರಗಳು ಸಿಡಿದುಕೊಂಡು ವರ್ತಿಸುತ್ತವೆ. ಇಲ್ಲಿ ಗೌಡರ ದರ್ಪ, ಸಿಟ್ಟು, ಅನ್ಯಾಯಗಳ ವಿರುದ್ಧ ರೊಚ್ಚಿಗೇಳುವ ಸ್ವಭಾವ ಕಾದಂಬರಿಯಲ್ಲಿ ಕಾಣುವುದೇ ಇಲ್ಲ. ಇವರ ತಂದೆ ನಂಜೇಗೌಡರದೂ ತುಂಬಾ ಸಾತ್ವಿಕ ಸ್ವಭಾವ. ಅವರೂ ಸಹ ಯಾರಿಗೂ ಕೇಡುಮಾಡದೆ ಒಳ್ಳೆಯತನದಿಂದ ಬದುಕಿದ ವ್ಯಕ್ತಿ. ಈ ಇಬ್ಬರವ್ಯಕ್ತಿತ್ವದಲ್ಲಿ ಒಂದಾದರೂ ದೋಷ ಇಲ್ಲ. ಇವರ ನಂತರದ ಪೀಳಿಗೆಯಾದ ನಾಗುವಿನಲ್ಲೂ ಹಾಗೆ ಸಾತ್ವಿಕಗುಣಗಳು ಕಾಣಿಸಿಕೊಳ್ಳುತ್ತವೆ. ಒಂದು ಕಡೆಯೂ ಈ ಮೂರು ಪಾತ್ರಗಳು ಅಪ್ಪಿತಪ್ಪಿಯೂ ಒಂದು ತಪ್ಪನ್ನು ಮಾಡದಿರುವಷ್ಟರ ಮಟ್ಟಿಗೆ ಕಾದಂಬರಿ ಎಚ್ಚರಿಕೆಯಿಂದ ವರ್ತಿಸಿದೆ. ಆದರೆ ರಂಗೇಗೌಡನ ಮಗನಲ್ಲಿ ಮಾತ್ರ ಬದಲಾವಣೆಗಳು ತಲೆದೋರಿವೆ. ಸಾತ್ವಿಕ ವ್ಯಕ್ತಿಗಳಾದ ಗೌಡರ ಪೀಳಿಗೆಯವರಲ್ಲಿ ಒಂದಾದರೂ ಮಾನವ ಸಹಜ ದೌರ್ಬಲ್ಯ ಇಲ್ಲವೆ ಎಂಬ ಪ್ರಶ್ನೆ ಏಳುತ್ತದೆ. ಸಾತ್ವಿಕಾದರ್ಶದ ಕಡೆಗೆ ಕೊಟ್ಟಂತಹದೇ ಮಹತ್ವವನ್ನು ಈ ದಿಕ್ಕಿನಲ್ಲಿಯೂ ಕಾದಂಬರಿಕಾರರು ಹರಿಸಿದ್ದರೆ ಪಾತ್ರಕಲ್ಪನೆಯಲ್ಲಿ ಸಮತೋಲನ ಸಾಧಿಸಿದಂತಾಗುತ್ತಿತ್ತು. ಅಲ್ಲದೆ ಇನ್ನೊಂದು

ಮುಖವನ್ನು ಚಿತ್ರಿಸಿದ್ದರೆ ಇಡೀ ಕಾದಂಬರಿಗೇ ಹೊಸ ಆಯಾಮ ಒಂದು ಇನ್ನೂ ಹೆಚ್ಚು ಸಂಕೀರ್ಣವಾಗುತ್ತಿತ್ತು. ಯಾಕೆಂದರೆ ಗೌಡರಿರುವಂತಹ ಪರಿಸ್ಥಿತಿಯಲ್ಲಿ ಸುತ್ತ ಇರುವ ವ್ಯಕ್ತಿಗಳೆಲ್ಲ ಒಂದೇ ರೀತಿ ಇರಲು ಸಾಧ್ಯವಿಲ್ಲ. "ನಾಲ್ಕು ಜನ ಹೆಂಡತಿಯರಜೊತೆಯಲ್ಲಿ, ಅವರ ಮಕ್ಕಳ ಜೊತೆಯಲ್ಲಿ, ತಮ್ಮಂದಿರು ಅವರ ಹೆಂಡತಿಯರು, ಅವರ ಮಕ್ಕಳು ಹೀಗೆ ರಕ್ತ ಸಂಬಂಧದಲ್ಲಿಯೇ ಸಂಕೀರ್ಣವಾಗಿರುವ ಹತ್ತಾರು ಸ್ವಭಾವಗಳ ನಡುವೆ ಸಮತಾಭಾವ ತೀರಾ ಅಸಾಧ್ಯ. ಯಾಕೆಂದರೆ ಮಾನವ ಸ್ವಭಾವ ಅದರ ಸಹಜತೆಯಲ್ಲಿಯೇ ಸರಳವಾದುದಾಗಿಲ್ಲ. ಈ ಮಾನಸಿಕ ತೊಳಲಾಟವನ್ನು ಚಿತ್ರಿಸುವ ಸನ್ನಿವೇಶಗಳನ್ನು ಚಿತ್ರಿಸಲು, ಬೇಕಾದ ಅವಕಾಶ ಕಾದಂಬರಿಯಲ್ಲಿ ಬೇಕಷ್ಟಿದ್ದಾಗಲೂ ಅದನ್ನು ಸ್ವಲ್ಪದರಲ್ಲಿ ಕಳೆದುಕೊಂಡ ನಾಗೇಗೌಡರು ಹುಟ್ಟು ಕಲಾವಿದರಲ್ಲ ಎನಿಸಿ ಬಿಡುತ್ತದೆ. ಕನ್ನಡ ಸಾಹಿತ್ಯಪ್ರಪಂಚಕ್ಕೆ ಲಿಂಗೇಗೌಡರ ಪಾತ್ರ ಒಂದು ವಿಶಿಷ್ಟ ಕೊಡುಗೆಯಾಗುತ್ತಿತ್ತು—ಈ ಅಂಶಗಳಲ್ಲಿ ಕಾದಂಬರಿ ನಿಗ ಹರಿಸಿದ್ದಲ್ಲಿ"[1] ಎಂಬ ಸರಸ್ವತಿಯವರ ಮಾತುಗಳಲ್ಲಿ ಸತ್ಯಾಂಶವಿದೆ ಎನಿಸುತ್ತದೆ.

ಗೌಡರ ಪಾತ್ರದ ಬಗ್ಗೆ ಕಾದಂಬರಿಕಾರರು ಪರವಹಿಸಿ ಚಿತ್ರಿಸುತ್ತಿರುವಾಗ ಸಹಜ ವಾಗಿಯೇ ರಂಗೇಗೌಡನ ಪಾತ್ರದ ಬಗ್ಗೆ ನಿರ್ಲಕ್ಷ್ಯವಹಿಸುತ್ತಾರೆ. ಅವನನ್ನು ಅಧ್ಯಾಯ ಗಳ ಕೊನೆಯಲ್ಲಿ ಬರುವಂತೆ ಮಾಡಿ ಹೊಟ್ಟೆ ಉರಿದುಕೊಂಡ ಎಂಬಷ್ಟಕ್ಕೆ ಸೀಮಿತ ಗೊಳಿಸಿಬಿಡುತ್ತಾರೆ. ಅವನಿಗೂ ಅವನದೇ ಮನೆ, ಹೆಂಡತಿ, ಮಕ್ಕಳು, ಹೊಲಗದ್ದೆ ಇದೆ ; ಅಲ್ಲಿ ಅವನ ಬದುಕು ಇದೆ ಎಂಬುದನ್ನು ಮರೆತಂತಿದೆ. ಅವನು ಯಾವಾಗಲೂ ದೊಡ್ಡಮನೆಯನ್ನು ಒಡೆಯುವುದರತ್ತ ಕಣ್ಣು ಹಾಕಿರುತ್ತಾನೇ ಹೊರತು ತನ್ನ ಮನೆ ಯನ್ನು ಹೇಗೆ ಸಂಪಾದಿಸಬೇಕು ಎಂಬುದನ್ನು ಒಂದು ದಿನವಾದರೂ ಯೋಚಿಸಿದವನಲ್ಲ. ಈ ಪಾತ್ರದ ಬಗ್ಗೆಯಂತೂ ಕಾದಂಬರಿಕಾರರು ಬೇಕೆಂದೇ ನಿರ್ಲಕ್ಷ್ಯವಹಿಸಿದ್ದಾರೆ. ಕೀಳು ಪಾತ್ರವನ್ನಾಗಿಯೇ ಸೃಜಿಸಬೇಕೆನ್ನುವ ಇಚ್ಛೆಯನ್ನು ಒಡೆದು ಕಾಣುವಂತೆ ಮಾಡಿಬಿಟ್ಟಿದ್ದಾರೆ. ಗೌಡರಲ್ಲಿ ಹೇಗೆ ಒಂದೂ ದುರ್ಗುಣಗಳಿಲ್ಲವೋ ಹಾಗೆಯೇ ರಂಗೇಗೌಡನಲ್ಲಿ ಒಂದೂ ಒಳ್ಳೇ ಗುಣಗಳಿಲ್ಲ. ಇಂಥ ಚಿತ್ರಣ ಪಾತ್ರಗಳ ಬಗ್ಗೆ ಆರೋಪಿತ ವ್ಯಕ್ತಿತ್ವವಾಗುತ್ತದೆಯೇ ವಿನಾ ಪಾತ್ರಗಳ ಒಡಲಿನಿಂದ ಅರಳುವಂಥ ವ್ಯಕ್ತಿತ್ವವಿಕಾಸದ ಚಿತ್ರಣವಾಗುವುದಿಲ್ಲ.

ಕಾದಂಬರಿಯಲ್ಲಿ ದೊಡ್ಡಮನೆಯ ಬಗ್ಗೆ ಚಿತ್ರಿಸುತ್ತಾ ಹೋಗುತ್ತಾರೆಯೇ ಹೊರತು ಅದಕ್ಕೆ ಸಂಬಂಧಪಟ್ಟ ಆಶ್ರಯ ಹೊಂದಿದವರ, ಇತರರ ಬಗ್ಗೆ ಕಾದಂಬರಿ ಯಲ್ಲಿ ಹೆಚ್ಚಿನ ವಿವರಗಳು ಸಿಗುವುದಿಲ್ಲ. ಗೌಡರ ಮನೆಯ ಏಳು ಬೀಳುಗಳೇ ನಮ್ಮೂರಿನ ಏಳು ಬೀಳುಗಳಲ್ಲ. ಯಾಕೆಂದರೆ ಸಾಂಸ್ಕೃತಿಕ ಮತ್ತು ಅಧಿಕಾರಯುತವಾಗಿ ನಮ್ಮೂರನ್ನು

---

1 ಸರಸ್ವತಿ ಎಚ್. ಎಲ್. ನಾಗೇಗೌಡರ ದೊಡ್ಡಮನೆ. ಪುಟ. ೫೫.

ನಿಯಂತ್ರಿಸುವ ಪಟೇಲಗಿರಿಯನ್ನು ಆ ಮನೆಯೇನೂ ಪಡೆದಿರಲಿಲ್ಲ. ಅಂದರೆ ನನ್ನೂರಿನ ಸಾಮಾನ್ಯ ಗೆಂಡೆಕಾಳನ ಮನೆಯಂತೆಯೇ ದೊಡ್ಡಮನೆಯೂ ಒಂದು. ದೊಡ್ಡದಾಗಿದ್ದ ಕಾರಣಕ್ಕೆ ಮತ್ತು ಮನೆತನದವರ ಒಳ್ಳೆಯತನದಿಂದ ಅದು ದೊಡ್ಡಮನೆಯಾಯಿತೇ ಹೊರತು ಚಾರಿತ್ರಿಕ ಮಹತ್ವ ಮತ್ತು ಪ್ರತಿಷ್ಠೆಗಳಿಂದೇನೂ ದೊಡ್ಡಮನೆ ಅನ್ನಿಸಿ ಕೊಂಡಿರಲಿಲ್ಲ. ಆದ್ದರಿಂದ ನನ್ನೂರಿನ ಬದುಕನ್ನು ಅರ್ಥೈಸಿಕೊಳ್ಳಲು ನಾವು ಆ ಮನೆಯನ್ನು ಪ್ರಾತಿನಿಧಿಕವಾಗಿ ಆರಿಸಿಕೊಳ್ಳಲು ಕಷ್ಟವಾಗುತ್ತದೆ. ಈ ಮನೆಯ ಜೊತೆ ಸಂಬಂಧವನ್ನು ಸ್ಥಾಪಿಸಿಕೊಂಡವರಿಗೆಲ್ಲ ಅದು ಅಭಿಮಾನವೇ ಹೊರತು ಅಗತ್ಯವಾಗಿರ ಲಿಲ್ಲ. ಅಗತ್ಯವಾಗಿದ್ದರೆ ಅವರ ಮನೆಯ ಸ್ಥಿತಿಗತಿಗಳು, ಯಾವ ಕಾರಣಕ್ಕೆ ಅವರಿಗೆ ಈ ಮನೆಯ ಆಶ್ರಯ ಇತ್ಯಾದಿಗಳಿರಬೇಕಿತ್ತು. ಜೋಯಿಸರ ಮನೆಯ ಚಿತ್ರಣ ಬಿಟ್ಟರೆ ನನ್ನೂರಿನಲ್ಲಿ ಮಿಕ್ಕ ಯಾವ ವ್ಯಕ್ತಿಗಳ ವೈಯಕ್ತಿಕ ಬದುಕಿನ ಚಿತ್ರಣ ಇಲ್ಲ. ಜೋಯಿಸರು ದೊಡ್ಡಮನೆ ಎಂದೂ ಚಿಕ್ಕದಾಗದಿರಲಿ ಎಂದೇ ಹಾರೈಸಿದವರು. ನಂಜೇಗೌಡರಿಗೆ ತುಂಬಾ ಆತ್ಮೀಯರಾಗಿದ್ದವರು. ತಾವಿಬ್ಬರೂ ತುಂಬಾ ಅನ್ಯೋನ್ಯ ವಾಗಿದ್ದೆವೆಂಬ ಕಾರಣದಿಂದ ತಮ್ಮ ಮಕ್ಕಳಿಬ್ಬರಲ್ಲಿ ಗೆಳೆತನವನ್ನು ಏರ್ಪಡಿಸುತ್ತಾರೆಯೇ ವಿನಾ ಅವರಿಬ್ಬರೇ ಸಂಧಿಸಿ ವ್ಯಕ್ತಿತ್ವಗಳನ್ನು ಪ್ರಕಟಪಡಿಸಿಕೊಂಡು ಗೆಳೆಯರಾಗಲಿಲ್ಲ. ಮುಂದೆ ಒಬ್ಬರ ಬಗ್ಗೆ ಇನ್ನೊಬ್ಬರಿಗಿರುವ ಅಭಿಮಾನವೇ ಗೆಳೆತನವನ್ನು ಬೆಸೆದುಕೊಂಡು ಹೋಗುತ್ತದೆ. ಅದೇ ರೀತಿ ಸಮಾಜದ ಕೆಳವರ್ಗಕ್ಕೆ ಸೇರಿದ ಈರಬೊಮ್ಮ, ಗೆಂಡೇಕಾಳರ ಬದುಕಿನ ವೈಯಕ್ತಿಕ ಜರೂರುಗಳು ಕಡಿಮೆ. ಇವರು ತಮ್ಮ ವರ್ಗಕ್ಕೆ ಸಹಜವಾದಂಥ ಸ್ವಭಾವಗಳಿಂದ ವರ್ತಿಸದೆ ಗೌಡರ ನಡವಳಿಕೆಯಿಂದ ಶಿಷ್ಟಾಚಾರದ ವ್ಯಕ್ತಿಗಳಾಗಿದ್ದಾರೆ. ಹೀಗಾಗಬಾರದೆಂದೇನೂ ಇಲ್ಲ. ಆದರೆ ಅವರದ್ದೇ ಆದ ಬದುಕಿಗೆ ಸಂಬಂಧಿಸಿದಂತೆ ಒಂದು ಸ್ವಂತ ವ್ಯಕ್ತಿತ್ವವಿರುತ್ತದೆ ಎಂಬುದು ಕಾದಂಬರಿ ಯಲ್ಲಿ ತಿಳಿದು ಬರುವುದಿಲ್ಲ. ಎಲ್ಲರ ಹಾರೈಕೆಯೂ ಒಂದೇ ದೊಡ್ಡಮನೆ ದೊಡ್ಡ ದಾಗಬೇಕೆಂಬುದು. ದೊಡ್ಡದಾಗಬೇಕೆನ್ನುವುದರ ಹಿನ್ನೆಲೆಯಲ್ಲಿ ಸ್ವಾರ್ಥವಿರುತ್ತದೆ ಎಂಬುದನ್ನು ಕಾದಂಬರಿಕಾರರು ಗಮನಿಸಿಲ್ಲ. ಈರಬೊಮ್ಮ ಗೌಡರನ್ನು ಸೇಂದೀ ಬಾಬಿಗೆ ಪ್ರಚೋದಿಸುವಾಗ ಬಾಯಿ ಬಿಟ್ಟೇ ಹೇಳುತ್ತಾನೆ : ತನ್ನ ಮಗ ಅವನ್ನೆಲ್ಲ ನೋಡಿಕೊಳ್ಳುತ್ತಾನೆ ಎಂದು. ಮುಂದೆ ಗೆಂಡೇಕಾಳ ಗೌಡರಿಗೆ ಬಲಗೈಯಾಗುತ್ತಾನೆ. ಹೆಂಡದಂಗಡಿಗೆ ಚಿಕ್ಕ ಯಜಮಾನನಾಗುತ್ತಾನೆ. ಗೌಡರು ಅವನನ್ನು ಎಂದೂ ಅನುಮಾನಿಸುವುದಿಲ್ಲ. ಅವನು ಇಂಥ ಪರಾವಲಂಬಿಯಾದ್ದರಿಂದಲೇ ಓದುಗರ ಸಹಾನುಭೂತಿ ಅವನಿಗೆ ದೊರಕಿಬಿಡುತ್ತದೆ. ಜೋಯಿಸರ ಮನೆತನವಾಗಲೀ, ಈರಬೊಮ್ಮನ ಸಂಸಾರವಾಗಲೀ ಹರಕೆ, ಆಶೀರ್ವಾದಗಳಿಂದ ಗೌಡರ ಮನೆತನವನ್ನು ಕಾಯುವ ಶಿಷ್ಟ ಶಕ್ತಿಗಳಾಗುತ್ತವೆ.

ಈ ಕಾದಂಬರಿಯಲ್ಲಿ ಕುತೂಹಲ ಕೆರಳಿಸುವ ಪಾತ್ರ ನಾಗು. ಕಾಡುವಿನ ಕಿಟ್ಟಿಗೆ

ಹೋಲಿಸಿಕೊಂಡರೆ ನಾಗು ಪಾತ್ರದ ಮಹತ್ವ ಇನ್ನೂ ಹೆಚ್ಚಿನದಾಗುತ್ತದೆ. ಕಿಟ್ಟಿ ಎಲ್ಲವನ್ನೂ ತನ್ನದೇ ಆದ ದೃಷ್ಟಿಕೋನದಿಂದ ವೀಕ್ಷಿಸುತ್ತಾಹೋಗುತ್ತಾನೆ. ಬಾಲಕ ಸಹಜವಾದ ಕ್ರಿಯೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದಿಲ್ಲ. ಆದರೆ ನಾಗು, ಬಾಲ್ಯ ಸಹಜ ಕೌತುಕದೊಂದಿಗೆ ವೀಕ್ಷಿಸುತ್ತಾ ಹೋಗುವುದರ ಜೊತೆಗೆ ಸೃಷ್ಟಿಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುತ್ತಾನೆ. ಈ ಸೃಷ್ಟಿಕ್ರಿಯೆಯ ವಿಕಾಸದ ಜೊತೆಗೆ ನಾಗುವಿನ ಚೇತನ ವಿಕಾಸವಾಗುವುದನ್ನು ಚಿತ್ರಿಸಲಾಗಿದೆ. ಸೃಷ್ಟಿಯ ಅತೀವ ಮುಗ್ಧ ವಾತಾವರಣವನ್ನು ವ್ಯಂಜಿಸುವ ಕುರಿ, ಕೋಳಿ, ಹಸುಗಳ ಪ್ರಸವ ಪ್ರಸಂಗ, ಸೃಷ್ಟಿಯ ಮುಖ್ಯದ್ಯೋತಕವಾದ ಸೌಂದರ್ಯಾಕರ್ಷಣೆಯನ್ನು ಕೆರಳಿಸುವ ಪ್ರಕೃತಿಲೀಲೆ ಮತ್ತು ಜೀರುಂಡೆಗಳಿಂದ ಮೊಟ್ಟೆಗಳನ್ನು ಪಡೆಯುವಿಕೆ ಈ ಮೂರೂ ಅಂಶಗಳು ಪರಸ್ಪರ ಆಂತರಿಕ ಸಂಬಂಧವನ್ನು ಹೊಂದಿಸಿಕೊಂಡು ಸೃಷ್ಟಿಯ ಒಂದು ಪ್ರೋಸೆಸನ್ನು ಪರಿಕಲ್ಪಿಸು ತ್ತಿರುವುದರಲ್ಲಿ ಸಹಕರಿಸುತ್ತಿರುವುದರ ಅನುಭವ ಇಲ್ಲಿ ಮೂಡುತ್ತದೆ".[1] ಪ್ರಕೃತಿಯ ಸೃಷ್ಟಿಯನ್ನು ಕುತೂಹಲಭರಿತ ಕಣ್ಣುಗಳಿಂದ ನೋಡುವುದರ ಜೊತೆಗೆ ತನ್ನ ಚಿಕ್ಕಪ್ಪಂದಿರ ಜೊತೆಯಲ್ಲಿ ಹೊಲಕ್ಕೆ ಹೋಗಿ ನೇಗಿಲು ಹೊಡೆಯುವುದರಲ್ಲಿ ಉತ್ಸಾಹಿತ ನಾಗುತ್ತಾನೆ. ಅವನ ಚಿಕ್ಕಪ್ಪ ಅವನಿಗೆ ಮೇಣಿಹಾಲು ಕುಡಿಸುತ್ತಾನೆ. ಇದು ಹಳ್ಳಿ ಗಳಲ್ಲಿ ಹಿರಿಯರು ತಮ್ಮ ಕುಲಕಸುಬನ್ನು ಮಕ್ಕಳಿಗೆ ವರ್ಗಾಯಿಸಿಕೊಡುವುದರ ಸೂಚಕ ವಾಗುವುದರ ಜೊತೆಗೇ ಆ ಮಕ್ಕಳ ಬದುಕಿನ ಅನುಭವಗಳ ವಿಕಾಸ ಕ್ರಿಯೆಯೂ ಆಗುತ್ತದೆ. ಅಷ್ಟೇ ಅಲ್ಲದೆ ತಾವೇ ಸ್ವತಃ ಆ ಸೃಷ್ಟಿಕ್ರಿಯೆಯಲ್ಲಿ ಪಾಲ್ಗೊಳ್ಳುವುದನ್ನು ಸೂಚಿಸುವುದೂ ಆಗುತ್ತದೆ. ಇದು ದೈಹಿಕ ಬೆಳವಣಿಗೆಯ ಜೊತೆಯಲ್ಲಿಯೇ ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಯ ಸಹಜಕ್ರಿಯೆ. ಯಾವನೊಬ್ಬನ ಬದುಕಿ ನಲ್ಲಾದರೂ ಇದು ನಡೆಯಲೇಬೇಕಾದುದು. ಕಿಟ್ಟಿಯ ಪ್ರಸಂಗದಲ್ಲಿ ಇಂಥ ಒಂದು ಅನುಭವ ಕೋಶ ವಿಶಾಲವಾಗುವುದರ ಸಹಜಕ್ರಿಯೆ ಇಲ್ಲ. ಆ ದೃಷ್ಟಿಯಿಂದ 'ನಾಗುವಿನಬಾಲ್ಯ' ಎಂಬ ಅಧ್ಯಾಯ ಕಾದಂಬರಿಯ ಒಳಗಿದ್ದರೂ, ಹೊರಗಿದ್ದರೂ ಒಂದು ಶ್ರೇಷ್ಠ ಅಧ್ಯಾಯವಾಗಿದೆ.

ನಾಗುವಿನ ಬಾಲ್ಯವನ್ನು ಸಹಜ ರೀತಿಯಲ್ಲಿ ಚಿತ್ರಿಸಿದ ಕಾದಂಬರಿಕಾರರು ಈ ಪಾತ್ರದ ಬೆಳವಣಿಗೆಯನ್ನು ಹಾಗೇ ಸಹಜವಾಗಿ ಚಿತ್ರಿಸಿಲ್ಲ. ತಂದೆ ಲಿಂಗೇಗೌಡ, ತಾತ ನಂಜೇಗೌಡರಂತೆಯೇ ಇವನ ಬದುಕೂ ಉಜ್ವಲ, ಎಂಬುದನ್ನು ಮುಂಚೆಯಿಂದಲೇ ನಂಬಿಸುತ್ತಾರೆ. ಅಂದರೆ ಇಲ್ಲೂ ಸಹ ಒಂದು ಚೌಕಟ್ಟನ್ನು ನಿರ್ಮಿಸಿಬಿಟ್ಟಿದ್ದಾರೆ. ಆದ ರೊಳಕ್ಕೆ ಬೆಳೆದ ನಾಗುವನ್ನು ತುರುಕಿಬಿಡುತ್ತಾರೆ. ಮುಂದೆ ಅವನು ಓದಿ ದೊಡ್ಡ ಹುದ್ದೆಯನ್ನು ಹಿಡಿಯುವುದೂ, ಅವನ ಹತ್ತಿರ ದಾಯಾದಿ ರಂಗೇಗೌಡ ಓಡುವುದೂ,

---

1 ಎನ್. ಬೋರಲಿಂಗಯ್ಯ, ಪರಂಪರೆ ೪.

ಆಗ ನಾಗು ದೊಡ್ಡ ಮೇಧಾವಿಯಂತೆ ಉಪದೇಶ ಕೊಡುವುದೂ ಇವೆಲ್ಲ ಪೂರ್ವನಿಶ್ಚಿತ ಎನ್ನಿಸಿಬಿಡುತ್ತವೆ. ನಾಗು ಈ ಸಂದರ್ಭದಲ್ಲಿ ಹೆಚ್ಚು ಮಾನವೀಯವಾಗಿ ವರ್ತಿಸಲು ಸಾಧ್ಯವಿತ್ತು. ಇಂಥ ಒಂದು ಇಕ್ಕಟ್ಟಿನ ಸಂದರ್ಭದಲ್ಲೂ ನಾಗೂ ತನ್ನ ದೊಡ್ಡಮನೆಯ ಗೌರವವನ್ನು ಕೊಂಡಾಡಲು ಬಂದ ಹೆಳವರನ್ನು ಒಳಗೆ ಕರೆದುಕೊಂಡು ಹೋಗಿ ಅವರಿಂದ ತನ್ನ ಮನೆತನದ ಗೌರವವನ್ನು ಕೊಂಡಾಡಿಸುತ್ತಾ ಆನಂದತುಂಬಿದವನಾಗಿ ಕೂರುವುದು ಒಂದು ರೀತಿಯ ಧಿಮಾಕು ಆಗುತ್ತದೆ. ರಂಗೇಗೌಡ ತನ್ನ ಮಗನನ್ನೂ ಮರೆತು ದೊಡ್ಡಮನೆಯ ಕೊಂಡಾಟದಲ್ಲಿ ಭಾಗಿಯಾಗುವುದು ತಪ್ಪಿಗೆ ತಕ್ಕ ಪ್ರಾಯಶ್ಚಿತ್ತವೆಂಬಂತಿದೆ.

ಇನ್ನು ಈ ಕಾದಂಬರಿಯಲ್ಲೆಲ್ಲಾ ಕೊಂಚ ಸ್ವಂತಿಕೆ ಉಳಿಸಿಕೊಂಡಿರುವ ಪಾತ್ರಗಳೆಂದರೆ ಕೆಂಗಣ್ಣ ಮತ್ತು ರತ್ನ. ಇವರಿಬ್ಬರಿಂದ ಕಾದಂಬರಿಯಲ್ಲಿ ಕೊಂಚಮಟ್ಟಿನ ಘರ್ಷಣೆ ಉಂಟಾಗಿದೆ. ಇವರಿಬ್ಬರ ಪ್ರಣಯ ವ್ಯವಹಾರವನ್ನು ಚಿತ್ರಿಸುವಾಗಲೇ ಮುಂದೆ ಇವರು ದೊಡ್ಡಮನೆಯಿಂದ ಸಿಡಿದುಬರುತ್ತಾರೆಂಬುದರ ಸಾಂಕೇತಿಕ ನಿರೂಪಣೆಯಿದೆ. ಅಲ್ಲದೆ ಕಾದಂಬರಿಕಾರರು ಇವರಿಬ್ಬರೂ ದೊಡ್ಡಮನೆಯನ್ನು ಪಾಲು ಮಾಡಿ ಗೌರವವನ್ನೆಲ್ಲ ಮಣ್ಣುಗೂಡಿಸಿದರು ಎಂಬ ಆಶಯವನ್ನು ವ್ಯಕ್ತಪಡಿಸುವುದು, ಮುಂದೆ ಪಾಲಾದ ಕಾರಣಕ್ಕಾಗಿಯೇ ರಂಗೇಗೌಡನಿಗೆ ಕಷ್ಟಗಳನ್ನು ಬರಿಸುವುದು-ಇವೆಲ್ಲವನ್ನು ಸಮತೋಲನದಿಂದ ಪರಿಹರಿಸಿಕೊಂಡಿದ್ದರೆ ಕಾದಂಬರಿಯ ಗತಿಯೇ ಬೇರೆಯಾಗಿರುತ್ತಿತ್ತು.

ಇಂಥ ಕಾದಂಬರಿಗಳನ್ನು ಓದಿ ಮೌಲ್ಯ ನಿರ್ಣಯಿಸುವಾಗ ಕೇವಲ ಸೂತ್ರಬದ್ಧವಾದ ವಿಮರ್ಶ ಸೂತ್ರಗಳಿಗೆ ಜೋತುಬೀಳದೆ ಸಾಂಸ್ಕೃತಿಕವಾಗಿಯೂ ನೋಡಬೇಕಾಗುತ್ತದೆ. ಈ ಕಾದಂಬರಿಯಲ್ಲಿ ಬರುವ ಹಬ್ಬಗಳ ಆಚರಣೆ, ದೇವರುಗಳ ಆರಾಧನೆ, ಜಾತ್ರೆ ಮುಂತಾದುವುಗಳ ವಿವರಗಳು ಕಳೆದು ಹೋದ ನಮ್ಮ ಸಂಸ್ಕೃತಿಯ ಪುನರ್‌ಸೃಷ್ಟಿಗೆ ಸಹಾಯಕವಾಗುತ್ತವೆ. ಅದರರ್ಥ ಅವುಗಳನ್ನೇ ಇಂದೂ ಕಣ್ಣು ಮುಚ್ಚಿಕೊಂಡು ಅನುಸರಿಸಬೇಕೆಂದಲ್ಲ. ಹಿಂದೆ ಇದ್ದಂಥ ಸಂಸ್ಕೃತಿಯ ಒಳ್ಳೆ ಅಂಶಗಳ ಹಿನ್ನೆಲೆಯಲ್ಲಿ ನವಸಂಸ್ಕೃತಿಯನ್ನು ನಿರ್ಮಿಸುವುದಾಗಿದೆ. ಆ ದೃಷ್ಟಿಯಿಂದ ದೊಡ್ಡಮನೆ ಅಂಥ ಸಂಸ್ಕೃತಿಯನ್ನು ತಿಳಿಯಲು ದೊಡ್ಡ ಉಗ್ರಾಣ. ಇಂದಿನ ಯುವ ಪೀಳಿಗೆಯ ಅನೇಕರಿಗೆ ಇಲ್ಲಿ ಚಿತ್ರಿತವಾಗಿರುವ ಬದುಕು ಪೂರ್ತಿ ಹೊಸದು. ಇಂಥದೊಂದು ಸಂಸ್ಕೃತಿ ಇತ್ತು ಎಂಬುದು ಕೇಳಿಯೂ ಗೊತ್ತಿಲ್ಲ. ಈ ಕಾದಂಬರಿ ಇತಿಹಾಸಕಾರರಿಗೆ, ಸಮಾಜಶಾಸ್ತ್ರಜ್ಞರಿಗೆ, ಅರ್ಥಶಾಸ್ತ್ರಜ್ಞರಿಗೆ ಅನೇಕ ವಿಷಯಗಳನ್ನು ತಿಳಿಸಿಕೊಡುವಂಥದ್ದಾಗಿದೆ. ಇಲ್ಲಿ ಚಿತ್ರಿತವಾಗಿರುವ ಬದುಕನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಕಳೆದುಹೋದ ಚಾರಿತ್ರಿಕ ಬದುಕನ್ನು ಸಾಂಸ್ಕೃತಿಕ ವಿವರಗಳಲ್ಲಿ ಪುನಃ ಸೃಷ್ಟಿಗೊಳಿಸಿ ಕೊಡುತ್ತಿರುವುದರ ಅನುಭವವಾಗುತ್ತದೆ. ಆದರೆ ಒಂದು ಮನೆಗೇ

ನೇರವಾಗಿ ಸಂಬಂಧಪಟ್ಟಂತೆ ಕಾದಂಬರಿಕಾರರ ಪ್ರಜ್ಞೆ ಕೆಲಸ ಮಾಡುತ್ತಿರುವುದರಿಂದ ಅಖಂಡ ನೂತನ ಜೀವನ ದೃಷ್ಟಿಯನ್ನು ಮೆರೆಯದಿರಲು ತಾಂತ್ರಿಕವಾಗಿ ಕೆಲವು ಮಿತಿಗಳಿಗೆ ಒಳಗಾಗಿದ್ದಾರೇನೋ ಎನ್ನಿಸುತ್ತದೆ. ಆರಿಸಿಕೊಂಡ ವಸ್ತು ಸಂಘರ್ಷಣಾ ಸಾಮರ್ಥ್ಯವನ್ನು ಉಳ್ಳದ್ದಾದರೂ ಕಾದಂಬರಿಕಾರರ ಔದಾರ್ಯದಿಂದ ಸರಳವಾಗುತ್ತಾ ಹೋಗುತ್ತದೆ.

ಭಾಷೆಯ ದೃಷ್ಟಿಯಿಂದ ಕನ್ನಡದ ಕಾದಂಬರೀ ಪ್ರಪಂಚದಲ್ಲಿ ಈ ಕಾದಂಬರಿ ಒಂದು ವಿಶಿಷ್ಟ ಸ್ಥಾನವನ್ನು ಪಡೆಯುತ್ತದೆ. ಕಾದಂಬರಿಕಾರರು ಉದ್ದೇಶ ಪೂರ್ವಕವಾಗಿ ಇಲ್ಲಿ ಭಾಷೆಯನ್ನು ಬಳಸಿಲ್ಲ. ವಸ್ತುವಿಗೆ ಅನುಗುಣವೆಂಬಂತೆ ಸಹಜವಾಗಿ, ಯಾವ ನಯ ನಾಜೂಕುಗಳನ್ನು ತಾರದೆ ಜನಪದ ಭಾಷೆಯನ್ನು ಅಖಂಡವಾಗಿ ಬಳಸಿಕೊಂಡಿದ್ದಾರೆ. ಬಯಲುಸೀಮೆಯ ಒಕ್ಕಲುಮಕ್ಕಳ ಘನೀಭೂತ ವಾದ ಭಾಷೆಯನ್ನು ಇದ್ದ ಹಾಗೇ ಬಳಸಿಕೊಂಡು ಪೂರ್ಣವಾಗಿ ಯಶಸ್ವಿಯಾದ ಕಾದಂಬರಿಕಾರರು ಬಹುಶಃ ನಾಗೇಗೌಡರೊಬ್ಬರೇ. ಒಂದೇ ಒಂದು ಉದಾ :

> "ಶಿಖರನಹಳ್ಳಿ ದೊಡ್ಡತಿಮ್ಮೇಗೌಡರು ಬರುತ್ತಾರೆಂದು ಯಾರೋ ಹೇಳಿದರು ಗೌಡರು ಮೆಟ್ಟಿಲಿಳಿದು ಬೀದಿಯಲ್ಲಿ ನಿಂತು "ಬಂದಿರಾ ಮಾವಯ್ಯ !" ಎಂದು ಪ್ರೀತಿಯಿಂದ ಮಾತಾಡಿದರು. ಕಲಾಪತ್ತಿನ ಪೇಟ ಸುತ್ತಿದ ಆ ಗೌಡರ ಕಾಲುಗಳಿಗೆ ಹಾಕಿದ ಎಕ್ಕಡಗಳು, ಅವಕ್ಕೆ ಆ ಹೊತ್ತೆ ಹಚ್ಚಿದ ಎಣ್ಣೆಯ ಕಾರಣ, ಮೂರು ಮೈಲಿ ದೂರದ ದಾರಿಯಲ್ಲಿ ಇದ್ದ ಕೆಂಧೂಳನ್ನೆಲ್ಲ ಕೂಡಿ ಹಾಕಿಕೊಂಡು ಕೆಂಪುಬಣ್ಣದ ಎಕ್ಕಡಗಳಾಗಿ ಗೌಡರ ಮನೆಯ ಮೆಟ್ಟಲಿನ ಕೆಳಗೆ ನಿಂತವು. ಆದರೆ ಆ ಎಕ್ಕಡಗಳನ್ನು ಇಕ್ಕಿದ್ದ ಕಾಲುಗಳು, ಎಕ್ಕಡದ ಪಟ್ಟಿಗಳು ಕಾಲಿಗೆ ತಾಗಿಕೊಂಡಿದ್ದ ಜಾಗಬಿಟ್ಟು ಬೇರೆ ಕಡೆಯಲ್ಲೆಲ್ಲಾ ಅದೇ ಧೂಳನ್ನು ಹೊತ್ತಿವೆ. ಆದೇನು ಸುಲಭವಾಗಿ ತೊಳೆಯುವ ಧೂಳಾಗಿರಲಿಲ್ಲ. ಅದನ್ನು ಕಂಡ ಗೌಡರು "ಮಾವಯ್ಯ ನಿಮ್ಮ ಕಾಲ ಸಮ್ಮೂರ ಆಗಸನಿಗೆ ಉಬ್ಬೆಗೆ ಹಾಕಾನಾ" ಎಂದು ಹೇಳಿ ತಮಾಷೆ ಮಾಡಿ, ಬಿಸಿ ನೀರು ತರಿಸಿ ಕಾಲು ತೊಳೆಯಲು ಕೊಟ್ಟರು."

ಇದಲ್ಲದೆ ಹಾಸ್ಯೋಕ್ತಿಗಳು, ನುಡಿಗಟ್ಟುಗಳು, ಗಾದೆಗಳು, ಪದ್ಯಗಳು ಇವೆಲ್ಲ ಕೆಲವು ಕಡೆ ಬಿಟ್ಟರೆ ಮಿಕ್ಕಂತೆ ಸಹಜವಾಗಿ ವಸ್ತುವಿಗನುಗುಣವಾಗಿ ಬಳಕೆಯಾಗಿ ವಿವರಣೆಗಿಂತ ಉತ್ಕೃಷ್ಟ ಪರಿಣಾಮ ಉಂಟುಮಾಡುವಲ್ಲಿ ಸಾರ್ಥಕವಾಗಿವೆ.

ದೊಡ್ಡಮನೆ ಕಾದಂಬರಿಯನ್ನು ಪೂರ್ತಿಯಾಗಿ ಓದಿ ಮುಗಿಸಿದ ಮೇಲೆ ಯಾರಿಗೇ ಆಗಲಿ ಅಂಥ ಮನೆಯನ್ನು ಒಡೆಯಬಾರದೆನ್ನುವ ಭಾವನೆ ಬರುವುದು ಸಹಜ. ಅಂಥ ಪರಿಣಾಮ ಉಂಟು ಮಾಡುವಲ್ಲಿ ಕಾದಂಬರಿಕಾರರು ಯಶಸ್ವಿಯಾಗಿಯೂ

ಇದ್ದಾರೆ. ಆದರೆ ಎಷ್ಟು ತಲೆಮಾರಿನವರೆಗೆ ಈ ರೀತಿ ದೊಡ್ಡಮನೆಯಾಗೇ ಮುಂದು ವರಿಯಲು ಸಾಧ್ಯ ? ಯಾಕೆಂದರೆ ಹಿರಿಯರು ಇಂಥದೊಂದು ಮನೆಕಟ್ಟಲು ಎಷ್ಟು ಕಷ್ಟಪಟ್ಟಿರುತ್ತಾರೆ ಎಂಬುದು ಗೊತ್ತಿರುವುದು ನೋಡಿದ ವ್ಯಕ್ತಿಗಳಿಗೆ ಮಾತ್ರ. ಅದೇ ಮನೆಯಲ್ಲಿ ಹುಟ್ಟಿದ ಮಕ್ಕಳಿಗೆ ಅದೆಲ್ಲ ಕೇಳಿ ಗೊತ್ತೇ ಹೊರತು ನೋಡಿರುವುದಿಲ್ಲ. ಆಗ ಗೌರವ, ಪ್ರತಿಷ್ಠೆ, ಮತ್ತು ಅಭಿಮಾನಗಳು ಎಲ್ಲರನ್ನು ಏಕಮನೆಯಲ್ಲಿ ಬಂಧಿಸಿಡಲು ಎಷ್ಟು ದಿನದವರೆಗೆ ಸಾಧ್ಯ ? ಒಂದು ವೇಳೆ ಹಾಗೇ ಉಳಿಯುತ್ತಾ ಹೋದರೆ ವೈಯಕ್ತಿಕವಾದ ಆಸೆ ಆಕಾಂಕ್ಷೆಗಳನ್ನು ತೀರಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಅಲ್ಲದೆ ಸ್ವಂತಿಕೆಯನ್ನು ಕಳೆದುಕೊಂಡು ಪರಾವಲಂಬಿಗಳಾಗುತ್ತಾರೆ. ಅಲ್ಲದೆ ಸ್ವಲ್ಪ ಚಾಣಾಕ್ಷರಾದವರು ಕದಿಯಲು ಆರಂಭಿಸುತ್ತಾರೆ ತೀರ ಮುಗ್ಧರು ದಡ್ಡರು ಮೂಲೆ ಗುಂಪಾಗುತ್ತಾರೆ. ಸಂಸಾರ ಭಾರಿಯಾದಷ್ಟೂ ಇದೆಲ್ಲವನ್ನೂ ಸಮಪ್ರಮಾಣದಲ್ಲಿ ಸರಿದೂಗಿಸುವುದು ಎಂಟೆದೆಯವನಿಗೂ ಕಷ್ಟವಾಗುತ್ತದೆ. ಹೆಚ್ಚುತ್ತಾ ಹೆಚ್ಚುತ್ತಾ ಹೋದಂತೆ ಅದು ಒಡೆಯಲೇಬೇಕಾಗುತ್ತದೆ. ಸೂರ್ಯ ಹುಟ್ಟಬೇಕು ಮುಳುಗಬೇಕು. ಮರುದಿನ ಹೊಸದಾಗಿ ಮೂಡಬೇಕು. ಆಗ ಅದರ ಸೌಂದರ್ಯ ಹೆಚ್ಚುತ್ತಿರುತ್ತದೆ. ಹಣ್ಣೆಲೆ ಉದುರಬೇಕು ಚಿಗುರೆಲೆ ಮೂಡಬೇಕು ಇಲ್ಲದಿದ್ದರೆ ಚಿಗುರಿಗೆ ಸ್ಥಾನವೆಲ್ಲಿ ? ಇದೆಲ್ಲ ಕಾದಂಬರಿಯಲ್ಲೇ ಬರುವ ವಿವರಣೆಗಳು. ಪ್ರಕೃತಿಯ ಇಂಥ ಸಹಜ ವ್ಯಾಪಾರ ಗಳನ್ನು ನಿರ್ಲಿಪ್ತರಾಗಿ ಚಿತ್ರಿಸಿದ ಕಾದಂಬರಿಕಾರರು ಇದೇ ಧಾಟಿಯಲ್ಲಿ ದೊಡ್ಡಮನೆಯ ಆಗುಹೋಗುಗಳನ್ನು ಚಿತ್ರಿಸಿದ್ದರೆ ಕಾದಂಬರಿಯ ಧೋರಣೆಯೇ ಬೇರೆಯಾಗಿರುತ್ತಿತ್ತು. ದೊಡ್ಡಮನೆ—ಲಿಂಗೇಗೌಡ—ಅವರ ತಂದೆ ನಂಜೇಗೌಡರ ಬಗ್ಗೆ ಬರೆಯುವಾಗ ತುಂಬಾ ಉತ್ಸುಕರಾಗುತ್ತಾರೆ. ಅನಭಿಷಕ್ತ ರಾಜರೇನೋ ಎನ್ನುವಷ್ಟು ಗೌರವದಿಂದ ಅವರನ್ನು ಆದರಿಸುತ್ತಾರೆ. ದೊಡ್ಡಮನೆ ಪಾಲಾಗದಿರಲಿ ಎನ್ನುವುದೇ ಕಾದಂಬರಿ ಕಾರರ ಆಶಯ. ದೊಡ್ಡಮನೆಯ ಬಗ್ಗೆ ಎಷ್ಟು ಭಾವುಕರಾಗಿ ಬರೆಯುತ್ತಾರೆಂದರೆ ಉದಾತ್ತ ವ್ಯಕ್ತಿತ್ವದ ಗೌಡರನ್ನು ಲೆಕ್ಕಿಸುವುದಿಲ್ಲ. ಅವರ ಮೇಲೆ ಕೊಲೆಯ ಆಪಾದನೆ ಬಂದಾಗ "ಸೂರ್ಯನ ಸುಳಿವೇ ಇರಲಿಲ್ಲ. ಅವನು ಈ ಹೊತ್ತು ಕಾಣಿಸುವುದೇ ಇಲ್ಲ. ಹೇಗೆ ಕಾಣಿಸಿಕೊಂಡಾನು ! ಬಾಳಿ ಬದುಕಿದ ದೊಡ್ಡಮನೆಗೆ ಈ ಕೆಟ್ಟ ಹೆಸರನ್ನು ತಂದ ಗೌಡರನ್ನು ಹೇಗೆ ನೋಡಿಯಾನು !" (ಪುಟ ೩೬೭) ದೊಡ್ಡಮನೆಯ ಬಗ್ಗೆ ಇಂಥ ಅತಿಯಾದ ಅಭಿಮಾನ, ನಿರೂಪಣೆಗಳಿಂದ ಅತ್ಯಂತ ಸಂಕೀರ್ಣವಾಗುವಂತಿದ್ದ ಈ ಕಾದಂಬರಿ ಸರಳವಾಯಿತು, ಆದರೆ ಭಾಷೆಯ ಕಸುವಿನಿಂದ ಬಿಗಿಯಾಯಿತು.

ಪರಿಣಾಮ, ಧೋರಣೆ ಏನೇ ಇರಲಿ ಕನ್ನಡದ ಕೆಲವೇ ಪ್ರಮುಖ ಪ್ರಾದೇಶಿಕ ಕಾದಂಬರಿಗಳಲ್ಲಿ ಒಂದಾದ 'ದೊಡ್ಡಮನೆ' ಕಾದಂಬರಿ ಬದುಕನ್ನು ತೀರ ಗಂಭೀರವಾಗಿ,

ಬಿಡಿಸಿ ಬಿಡಿಸಿ ತೋರಿಸುವುದರಲ್ಲಿ ಗಣನೀಯ ಸ್ಥಾನವಹಿಸಿದೆ. "ಈ ನೆಲದ ನೀರು ಗೊಬ್ಬರಗೋಡು, ಮೆಕ್ಕಲುಮಣ್ಣಿನ ಸಾರವನ್ನು ಹೀರಿ ಅರಳಿರುವ ಇದು ಬದುಕಿನ ಸತ್ವದ ದೃಷ್ಟಿಯಿಂದ ಒಂದು ಗಣನೀಯ ಕಾದಂಬರಿ ಎನ್ನುವುದನ್ನು ಅಲ್ಲಗಳೆಯು ವಂತಿಲ್ಲ.[1]"

---

1 ಸುಧಾಕರ—ಪರಂಪರೆ 4.

೧೧ 'ದೊಡ್ಡಮನೆ' ಕಾದಂಬರಿಯಲ್ಲಿ ಪ್ರಾದೇಶಿಕತೆ

ಸುಶೀಲಾ ಸೊಂಡೂರು.

ಒಂದು ಕಾದಂಬರಿ ರಚಿತವಾದ ಹಿನ್ನೆಲೆಯಲ್ಲಿ ಪ್ರಾದೇಶಿಕತೆ ಅಥವಾ ಮಣ್ಣಿನ ಗುಣ ಎಂದು ಏನು ಕರೆಯುತ್ತೇವೆಯೋ ಅದು ಅನಿವಾರ್ಯವಾಗಿಯೆಂಬಂತೆ ಬೆಸೆದು ಬಂದಿರುತ್ತದೆ. ಪ್ರಾದೇಶಿಕತೆಯನ್ನು ಬಿಂಬಿಸುವ ಬಹುತೇಕ ಕಾದಂಬರಿಗಳಲ್ಲಿ ಒಂದು ಸೀಮಿತ ಪ್ರದೇಶದ ಆಚಾರ ವಿಚಾರ, ನಡೆನುಡಿ, ಊಟೋಪಚಾರ, ರೂಢಿಸಂಪ್ರದಾಯ, ಭಾಷೆ ಮುಂತಾದುವುಗಳ ತಾಜಾತನವನ್ನು ಕಾಣಬಹುದು. ಆದರೂ ಆಯಾ ಪ್ರದೇಶದ ಹೆಗ್ಗುಣಗಳನ್ನು ಮೈಗೂಡಿಸಿಕೊಂಡು ರಚಿತವಾದ ಕಾದಂಬರಿಗಳು ಸರ್ವಕಾಲಿಕ ಮೌಲ್ಯಗಳನ್ನು ಪ್ರತಿನಿಧಿಸುವ ಮಟ್ಟಕ್ಕೂ ಬೆಳೆಯುವುದು ಅಸಂಭವವಲ್ಲ. 'ಪ್ರಾದೇಶಿಕ ಕಾದಂಬರಿ'-ಎಂಬ ಮಿತಿಗೊಳಪಡಿಸಿದ ಕೂಡಲೇ ಯಾವುದೋ ಒಂದು ಪರಿಮಿತವಾದ ವ್ಯಾಪ್ತಿಯಲ್ಲಿ ಅರ್ಥೈಸಿಕೊಳ್ಳುವುದು ಸಹಜ, ಆದರೆ ಅಂತಹ ಪರಿಮಿತಿಯಲ್ಲೇ ಸಾರ್ವತ್ರಿಕಗುಣಗಳನ್ನು ಒಳಗೊಂಡಿರುವುದಕ್ಕೆ ಕುವೆಂಪುರವರ ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು, ರಾವಬಹದ್ದೂರರ ಗ್ರಾಮಾಯಣ, ಕಾರಂತರ ಕೆಲವು ಕಾದಂಬರಿಗಳು, ಮಿರ್ಜಿ ಅಣ್ಣಾರಾಯರ ನಿಸರ್ಗ ಮುಂತಾದ ಕಾದಂಬರಿಗಳು ನಿದರ್ಶನಗಳಾಗಬಲ್ಲವು. ಮಲೆನಾಡಿನ ಘನೀಭೂತವಾದ ಅನುಭವಗಳ ದಟ್ಟ ಚಿತ್ರಣವನ್ನು ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗಳು ಕೊಟ್ಟರೆ; 'ಗ್ರಾಮಾಯಣ' 'ನಿಸರ್ಗ' ದಂತಹ ಕಾದಂಬರಿಗಳು ಬಯಲು ಸೀಮೆಯ ಮಕ್ಕಳ ಚಿತ್ರಣವನ್ನು ಕಾರಂತರ ಕಾದಂಬರಿಗಳು ಕಡಲತಡಿಯ ಮಕ್ಕಳ ಜೀವನ ವಿಧಾನವನ್ನು ಕೊಡುವಲ್ಲಿ ಯಶಸ್ವಿಯಾಗಿವೆ.

ಇದೇ ದಿಶೆಯಲ್ಲಿ ಬಂದ 'ದೊಡ್ಡಮನೆ' ಪ್ರಾದೇಶಿಕ ಕಾದಂಬರಿಯಾಗಿ ಓದುಗರನ್ನು ಸೆರೆ ಹಿಡಿಯುವಲ್ಲಿ ಸಮರ್ಥವಾಗಿದೆ; 'ಪ್ರಾದೇಶಿಕತೆ'ಯೆಂಬುದು ಲೇಖಕ ನಿರ್ಮಿಸುವ ಕಥಾ ಸಂವಿಧಾನದಲ್ಲಿ, ಘಟನೆಗಳ ನಿರೂಪಣೆಯಲ್ಲಿ, ಪಾತ್ರಗಳ ಪ್ರತಿಕ್ರಿಯೆಯಲ್ಲಿ ಮೂರ್ತೀಭವಿಸಿರಬಹುದು. ಆದರೂ ಒಂದು ಕೃತಿಯ ಸತ್ವವನ್ನು ಗುರುತಿಸುವುದು ಕೇವಲ ಪ್ರಾದೇಶಿಕತೆಯ ಸತ್ವದಿಂದಾಗಲೀ, ಪಾತ್ರಗಳ ವೈವಿಧ್ಯದಿಂದಾಗಲೀ, ವಸ್ತುವಿನ ಆಯ್ಕೆಯಿಂದಾಗಲೀ, ಅದರ ಬೃಹತ್ಪ್ರಮಾಣದ ದರ್ಶನದಿಂದಾಗಲೀ ಅಲ್ಲವೆನ್ನಬಹುದು. ಒಂದು ಕಲಾಕೃತಿಯ ನಿರ್ಮಾಣ ಹಂತದಲ್ಲಿ ಈ ಎಲ್ಲ ಅಂಶಗಳೂ

ಅನಿವಾರ್ಯ ಅಂಗಗಳಾಗಿ ಮೂಡಿ ಬಂದಿವೆಯೋ ಎಂಬ ದೃಷ್ಟಿಯಿಂದ ಆ ಕೃತಿ ಮುಖ್ಯವಾಗಿ ಪರಿಣಮಿಸುತ್ತದೆ.

ಈ ಎಲ್ಲ ಹಿನ್ನೆಲೆಯಲ್ಲಿ ರಚಿತವಾದ ಪ್ರಸ್ತುತ 'ದೊಡ್ಡಮನೆ' ಕಾದಂಬರಿ, ಒಂದು ಪ್ರಾದೇಶಿಕ ಕೃತಿಯ ಪ್ರಾಮಾಣಿಕ ಪ್ರಯತ್ನವೆನ್ನಬಹುದು. " ಈ ಬೃಹತ್ ಕಾದಂಬರಿ ಬಯಲು ಸೀಮೆಯ ಒಕ್ಕಲು ಮಕ್ಕಳ ಬಾಳಿನ ಚಿತ್ರ 'ನನ್ನೂರು'. ಆ ಊರಿನಲ್ಲಿ ಒಂದು 'ದೊಡ್ಡಮನೆ' ಘನತೆ ಗೌರವಗಳಲ್ಲಿಯೂ ಬೇರೆ ವಿಧದಲ್ಲಿಯೂ ದೊಡ್ಡದಾಗಿದ್ದ ಆ ದೊಡ್ಡಮನೆಯನ್ನು ಒಡೆಯಲು ಅಸೂಯಾಪರನಾದ ಒಬ್ಬ ದಾಯಾದಿ ಒಳಗೊಳಗೇ ಕುತಂತ್ರದ ಶಕುನಿಕೆಲಸ ಮಾಡುತ್ತಾನೆ. ದೊಡ್ಡಮನೆಯ 'ಗೌಡರು' ಬಹು ಧೀರೋದಾತ್ತ ವ್ಯಕ್ತಿ. ತಂದೆಯ ಕಾಲದಿಂದ ಬೆಳೆದುಬಂದ ಆ ಮನೆಯನ್ನು ಮತ್ತಷ್ಟು ಬೆಳಸಿ ಸುತ್ತಲ ನಾಡಿಗೆ ಹೆಸರಾಗುವಂತೆ ಮಾಡುತ್ತಾರೆ ; ದಾಯಾದಿಮತ್ಸರದ ಕಿಡಿ ದೊಡ್ಡಮನೆಗೆ ತಾಕದಂತೆ ಕೊನೆಯವರೆಗೂ ಹೋರಾಡುತ್ತಾರೆ. ಕೊನೆಗೆ ಆ ದಾಯಾದಿಯ ತಂಗಿಯ ಮಗಳು ಗೌಡರ ಕೊನೆಯ ತಮ್ಮನ ಕೈಹಿಡಿದು ದೊಡ್ಡಮನೆಗೆ ಬಂದದ್ದೇ ಒಡಕಿಗೆ ಕಾರಣವಾಗಿ, ದೊಡ್ಡಮನೆ ಸಣ್ಣ ಸಣ್ಣ ಮನೆಗಳಾಗಿ ಒಡೆಯುತ್ತದೆ. ಸ್ಥೂಲವಾಗಿ ಇಷ್ಟೇ ಎಂದು ಹೇಳಬಹುದಾದ ಈ ಕಥಾ ಹಂದರದ ಮೇಲೆ ಹಳ್ಳಿಯ ಬದುಕಿನಲ್ಲಿ ಬಂದು ಹೋಗುವ ಅನೇಕ ಪಾತ್ರಗಳು, ಘಟನೆಗಳು, ವರ್ಣನೆಗಳು ಸುತ್ತುವರಿದಿವೆ. ಇಲ್ಲಿಯ ಕಥಾವಸ್ತು 'ದೊಡ್ಡಮನೆ'ಗೆ ದೊಡ್ಡಮನೆಯ ಜನಗಳಿಗೇ ಸೀಮಿತವಾಗಿರದೆ, ಅದಕ್ಕೆ ಪೂರಕವಾಗುವಂತೆ "ಸುತ್ತ ಮುತ್ತಣ ನಾಡಿನ ಹತ್ತಾರು ವ್ಯಕ್ತಿಗಳು ಬಂದು ಅವರವರ ಪಾತ್ರವಹಿಸಿ ಹೋಗುತ್ತಾರೆ. ಒಮ್ಮೊಮ್ಮೆ ಲೇಖಕರು ಕಥಾವಸ್ತುವನ್ನು ಅನಾವಶ್ಯಕವಾಗಿ ಹಿಂಜಿದ್ದಾರೋ ಎಂಬ ಭಾವನೆ ಬರುತ್ತದೆ. ಆದರೆ 'ದೊಡ್ಡಮನೆ'ಯ ಚೌಕಟ್ಟಿಗೆ ಧಕ್ಕೆ ಬರದಂತೆ ಆ ವಸ್ತುವನ್ನು ಹಿಗ್ಗಿಸಿರುವುದರಿಂದ ಕಥಾಬಂಧದಲ್ಲಿನ ಬಿರುಕು ಮುಚ್ಚಲು ಸಹಾಯಕವಾಗಿದೆ.

ನನ್ನೂರಿನಂಥ ಬಯಲು ಸೀಮೆಯ ಹಬ್ಬ ಹರಿದಿನಗಳ ಆಚರಣೆಯಲ್ಲಿ ಕಂಡು ಬರುವ ಜನರ ಸೌಮ್ಯನಡವಳಿಕೆಯ ಚಿತ್ರಣ ಕಾದಂಬರಿಯ ಮೊದಲಲ್ಲೇ ಕಣ್ತೆರೆಯುತ್ತದೆ. "ಹಬ್ಬಕ್ಕೆ ಅಣಿಮಾಡಲು ನನ್ನೂರಿನ ನಿಸ್ತ್ರೀಯರು ಎಂದಿಗಿಂತ ಮೊದಲು ಎದ್ದರು. ಅವರಿಗಿಂತ ಮೊದಲೇ ಮನೆಯ ಮುದುಕ ಮುದುಕಿಯರು ಎದ್ದು, ಸೊಸೆಯರನ್ನು, ಮನೆಯ ಮಕ್ಕಳನ್ನು ಮೆಲುದನಿಯಲ್ಲಿ ಪ್ರೀತಿಯ ಮಾತುಗಳಲ್ಲಿ ಕರೆದು ಕೂಗಿ ಏಳಿಸುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿ ಹಿಂಕೋಳಿಗಳಾಗಿ ಮನೆ ಮನೆಯಲ್ಲೂ ರೆಕ್ಕೆ ಬಡಿದು ಬಂದಾದ ಮೇಲೊಂದು ಕೂಗಿದುವು. ಹಕ್ಕಿಗಳು ಚಿಲಿಪಿಲಿಗುಟ್ಟಲಾರಂಭಿಸಿದವು-ಹೊಸ ವರ್ಷದ ಹರುಷದಿಂದ ಬೆಳಗಿನ ತಂಗಾಳಿ ಮೆಲ್ಲನೆ ಬೀಸಲೋ ಬೇಡವೋ ಎಂಬಂತೆ ತುಂಬಿದ ಮನೆಗೆ ಹೊಸದಾಗಿ ಮದುವೆಯಾಗಿ ಬಂದ ಗಂಡಹೆಂಡಿರ ಮೆಲು ಮಾತಿನಂತೆ ಬೀಸುತ್ತಿತ್ತು. ಬ್ರಹ್ಮಾಂಡವನ್ನು ಕವುಚಿ ಹಾಕಿಕೊಂಡ

ಕರೀಮಂಡಕೆಯಲ್ಲಿ ಬಿರುಕುಬಿಟ್ಟಂತೆ ಮೂಡಣದ ದಿಕ್ಕಿನಲ್ಲಿ ಮುಂಬೆಳಗಿನ ಗೆರೆ ಕಾಣಿಸಿಕೊಂಡಿತು" (ಪು-೨) ಇಲ್ಲಿ ಹಬ್ಬಕ್ಕೆ ಸಿದ್ಧತೆಯನ್ನು ಮಾಡುವ ಹೆಂಗೆಳೆಯರ ಚಿತ್ರದೊಂದಿಗೆ, ನನ್ನೂರಿನ ಜನಗಳ ಜೊತೆಗೆ ಸಹಭಾಗಿಯಾಗಿ ನಡೆಯುವ ಪ್ರಕೃತಿಯ ವರ್ಣನೆ ಬಂದಿದೆ. ಔಚಿತ್ಯಪರಿತ ಪ್ರಕೃತಿಯ ವರ್ಣನೆ ಕಾದಂಬರಿಯ ಪ್ರತಿಯೊಂದು ಘಟ್ಟಗಳಲ್ಲೂ ಮೂಡಿಬಂದಿದೆ : ಲೇಖಕರ ಔಚಿತ್ಯ ಪ್ರಜ್ಞೆಗೆ ಪ್ರಕೃತಿಯ ವರ್ಣನೆ ಸಾಕ್ಷಿಯಾಗಿ ನಿಲ್ಲಬಹುದು. ಗೌಡರು ತೀರಿಕೊಂಡಾಗ, ಲಿಂಗೇಗೌಡರು ಬೆಳ್ಳೂರಿನಿಂದ ವಾಪಾಸಾಗುವಾಗ, ಗೌಡರು ಮೂಗಿಗೆ ನಶ್ಯವೇರಿಸಿ ಸೀನಿದಾಗ, ನಾಗುವಿನ ಬಾಲ್ಯವನ್ನು ವರ್ಣಿಸುವಾಗ ಹೀಗೆ ಕಾದಂಬರಿಯ ಅನೇಕ ಸಂದರ್ಭಗಳಲ್ಲಿ ಪ್ರಕೃತಿಯ ಸಹಜವರ್ಣನೆ ಆ ಪ್ರದೇಶದ ಸಾಂದರ್ಭಿಕ ಘಟನೆಗಳ ಅರ್ಥಪೂರ್ಣತೆಗೆ ಮೆರಗು ಕೊಟ್ಟಿದೆ.

ಒಂದು ಹಳ್ಳಿಯಲ್ಲಿ ಆ ಪ್ರದೇಶಕ್ಕೇ ವಿಶಿಷ್ಟವಾದ ವೇಶಭೂಷಣ, ಮನೆಯ ಮಾದರಿ, ಊಟೋಪಚಾರ ಇವುಗಳನ್ನು ಕಾಣಬಹುದು. ಅಂಥ ಒಂದು ವೈಶಿಷ್ಟ್ಯಪೂರ್ಣವಾದ ಜೀವನ ರೀತಿ ನನ್ನೂರಿನ ಜನಗಳದು. ಅವರ ದೈನಂದಿನ ಬದುಕಿನ ಸಾಮಾನ್ಯ ಚಿತ್ರವನ್ನ ದೊಡ್ಡಮನೆಯ ಸಂಪರ್ಕದೊಂದಿಗೆ ಕಾದಂಬರಿಕಾರರು ಕೊಡುತ್ತಾರೆ. "ಎಲ್ಲ ಮನೆಗಳಲ್ಲಿ ಆಗಿನ ಕಾಲದಲ್ಲಿ ಇದ್ದಂತೆ, ದೊಡ್ಡಮನೆಯಲ್ಲೂ ಎರಡು ಮೂರು ಚರಕಗಳು. ಚರಕದಲ್ಲಿ ನೂಲು ತೆಗೆದು ಹೊಲೆಯರಿಗೆ ಕೊಟ್ಟರೆ ದಟ್ಟಿ, ದುಪಟಿ, ಹಚ್ಚಡ ಬಿಳೀಸೀರೆ ನೇಯ್ದುಕೊಡುತ್ತಿದ್ದರು. ಗಂಡಸರು ದಟ್ಟಿ ದುಪಟಿ ಅಥವ ಹಚ್ಚಡ ಹೊದ್ದರೆ, ಹೆಂಗಸರು ಬಿಳೀಸೀರೆ ಅಥವಾ ಕಾಗಿನ ಸೀರೆಯನ್ನು ಎಲ್ಲೋ ಅಪರೂಪವಾಗಿ ಬಣ್ಣದ ಸೀರೆಯನ್ನು ಉಡುತ್ತಿದ್ದರು. ಉಪ್ಪು ಮೆಣಸು ಇವೆರಡಕ್ಕೆ ಮಾತ್ರ ಸಂತೆಗೆ ಹೋಗಬೇಕಾಗುತ್ತಿತ್ತು. ಸೀಮೆಎಣ್ಣೆಯು ಆಗ ಇರಲಿಲ್ಲ. ಮನೆಯಲ್ಲಿ ಹಿಪ್ಪೆಎಣ್ಣೆ ಬೇವಿನ ಎಣ್ಣೆಗಳ ಹಣತೆಗಳನ್ನು ಹಚ್ಚುತ್ತಿದ್ದರು. ಕಿಟಕಿಗಳಿಲ್ಲದ ಮಾಳಿಗೆ ಮನೆಯಲ್ಲಿ ಹತ್ತು ಹಣತೆಗಳನ್ನು ಹಚ್ಚಿದರೂ ಹೊಗೆಯಾಗುತ್ತಿರಲಿಲ್ಲ. ಇದರ ಮೇಲೆ ಆ ಬೆಳಕು ಕಣ್ಣಿಗೆ ತಂಪು, ಬಟ್ಟೆಬರೆ ಒಗೆಯುವುದಕ್ಕೆ ಚೌಳು. ಅನೇಕ ವೇಳೆ ಉಪ್ಪಿಗೂ ಹೊರಗಡೆ ಹೋಗುತ್ತಿರಲಿಲ್ಲ. ಉಪ್ಪಾರರು ಉಪ್ಪಿನ ಮಾಳೆಗಳಲ್ಲಿ ಮಾಡಿದ ಚೌಳುಪ್ಪನ್ನು ಉಪಯೋಗಿಸುತ್ತಿದ್ದುದ್ದು ಈ ಚೌಳುಪ್ಪು ಗೆಂಡೆಗೆ ಬಹಳ ಒಳ್ಳೆಯದಂತೆ. ಕೋಳಿ ಮೊಟ್ಟೆಯನ್ನು ಬೇಯಿಸಿ, ಸಿಪ್ಪೆ ಸುಲಿದು ರಾತ್ರಿ ಚೌಳುಪ್ಪಿನಲ್ಲಿ ಊಣಿಚಿ, ಹೊತ್ತಾರೆ ಎದ್ದು ಉಪ್ಪುಪ್ಪಾದ ಆ ಮೊಟ್ಟೆಯನ್ನು ಕಡಿದುಕೊಂಡು ತಿಂದರೆ ಗೆಂಡೆ ನಾಪತ್ತೆಯಾಗುವುದೆಂದು ನಾಗೇಗೌಡರು ಹೇಳುತ್ತಿದ್ದರು" (ಪು ೨೨) ಎಂದು ಅಲ್ಲಿಯ ಜೀವನ ವಿಧಾನದೊಂದಿಗೆ ಅವರು ಬಾಳಿ ಬದುಕುವುದಕ್ಕೆ ಆಧಾರವಾದ ಆರೋಗ್ಯದ ಬಗ್ಗೆಯೂ ಸ್ವತಃ ತಾವೇ ಮದ್ದನ್ನು ಯಾವ ರೀತಿ ಕಂಡುಕೊಂಡಿದ್ದರೆಂಬುದನ್ನು 'ಗೆಂಡೆ'ಯ ನಿವಾರಣೆಗಾಗಿ ಅವರು ಪ್ರಯೋಗಿಸುತ್ತಿದ್ದ ವೈದ್ಯದ ಬಗೆಗೆ ಮಾಹಿತಿಗಳನ್ನು ಕೊಟ್ಟಿದ್ದಾರೆ.

ಇನ್ನು ಇಲ್ಲಿ ಬರುವ ಸಂಪ್ರದಾಯದ ಆಚರಣೆಗಳು, ಪದ್ಧತಿಗಳು, ಜನನ ಮರಣ ದಲ್ಲಿ ನಡೆಸುವ ಕ್ರಿಯೆಗಳು, ವಿಧಿನಿಷೇಧಗಳ ಬಗ್ಗೆಯೂ ಹಳ್ಳಿಯ ಜನರು ಅನುಸರಿಸುವ ಮಾರ್ಗಗಳನ್ನು ಲೇಖಕರು ಉಲ್ಲೇಖಿಸಿದ್ದಾರೆ. ಗೌಡರು ತೀರಿಕೊಂಡಾಗ ನಡೆಸುವ ಮರಣೋತ್ತರಕ್ರಿಯೆ ನಮ್ಮೂರಿನ ಜನಗಳ ವಿಶಿಷ್ಟ ಪದ್ಧತಿಯನ್ನು ಎತ್ತಿತೋರಿಸುವುದ ರೊಂದಿಗೆ, ಬಯಲು ಸೀಮೆಯಲ್ಲಿ ವಿಶೇಷವಾಗಿ ಆಚರಣೆಯಲ್ಲಿರುವ ಸಂಪ್ರದಾಯ ನಂಬಿಕೆಗಳಿಗೆ ಕನ್ನಡಿ ಹಿಡಿಯುತ್ತವೆ. "ಬೆಳಿಗ್ಗೆ ಉಳ್ಳಿವಾಡಿದ ಸ್ಥಳದಲ್ಲಿ ಅಸ್ತಿ ಮತ್ತು ಬೂದಿತೆಗೆಯುವ ಕೆಲಸ. ತೆಗೆದು ನಾಲ್ಕಾರು ಹೊಸ ಗಡಿಗೆಗಳಲ್ಲಿ ತುಂಬಿದರು. ಆಮೇಲೆ ನೂರೊಂದು ಸ್ಥಳದ ಮಧ್ಯೆ ತುಳಸಿ ಗಿಡನೆಟ್ಟರು. ಮೊಸರು ಅನ್ನದ ಐದು ಎಡೆ ಇಟ್ಟರು. ಕೂಳನ್ನು ಗೌಡರ ಹೆಂಡತಿ ಚಿಕ್ಕಮ್ಮನವರೇ ಹಾಕಿದರು. ಅಳು ಬಂದರೂ ಕೂಳು ಹಾಕುವಾಗ ಅಳಬಾರದೆಂದು ಅಳುವನ್ನು ನುಂಗಿಕೊಂಡು 'ಕಾಗೆಕೂಳು' ಹಾಕಿ ದರು. ಗೌಡರ ಹಿರಿಯಮಗ 'ಲಿಂಗು' ತಂದೆಗೆ ತಲೆಕೊಳ್ಳಿ ಇರಿದ, ಒಂದು ಹೊಸ ಮೊಗೆ ತುಂಬ ನೀರು. ಅದನ್ನು ಎಡಹೆಗಲ ಮೇಲೆ ಇಟ್ಟು ಎರಡು ಕೈಯಲ್ಲೂ ಹಿಡಿಸಿ ದರು. ಕುಡುಲಿನ ತುದಿಯಿಂದ ಒಂದು ತೂತು ಕುಕ್ಕಲು ನೀರು ಚಿಲ್ಲೆಂದು ಚಿಮ್ಮಿತು. ನೀರು ಸೋರಿಸುತ್ತಾ ಒಂದು ಸುತ್ತು ಬಂದ ನಂತರ, ಮತ್ತೊಂದು ತೂತು. ಆಮೇಲೆ ಮೂರನೆಯ ತೂತು. ಮೂರುಸಲ ನೀರನ್ನು ಸುತ್ತಲೂ ಬಿಟ್ಟಮೇಲೆ, ದಕ್ಷಿಣದ ಕಡೆ ತಲೆಯ ಬಳಿ ಇಟ್ಟ ಕಲ್ಲಿನ ಮೇಲೆ ಅದನ್ನು ಧೊಪ್ಪೆಂದು ಎತ್ತಿಹಾಕಿ ಬಾಯಿಬಡ ಕೊಂಡದ್ದು ಆಯಿತು." ಹೀಗೆ ಒಂದು ಪ್ರದೇಶದಲ್ಲಿ ನಡೆಯುವ ಮರಣೋತ್ತರ ಕ್ರಿಯೆ ಗಳನ್ನು ಲೇಖಕರು ಸಮರ್ಥವಾಗಿ ನಿರೂಪಿಸಿದ್ದಾರೆ. ಹಾಗೆಯೇ ಒಂದು ಪ್ರದೇಶದಲ್ಲಿ ಹೊಂದಿಕೊಂಡು ಬಾಳಬೇಕಾದವರ ನಡುವೆಯು ಇರಲೇಬೇಕಾದ ವಿಧಿನಿಷೇಧಗಳು ಗಮ ನೀಯವಾದರೂ ಭಾವನಾತ್ಮಕ ಹಾಗೂ ನೈತಿಕ ಸಂಬಂಧಗಳನ್ನು ಮರೆಯುವುದು ಅಸಾಧ್ಯ ಅಂಥ ಭಾವನಾತ್ಮಕತೆಯೊಂದಿಗೆ ನೈತಿಕ ಅರಿವನ್ನು ಹೊಂದಿದ್ದ ಲಿಂಗೇಗೌಡರು ಮಾವ ತೀರಿಕೊಂಡಾಗ ಆ ಮನೆಯ ಎಲ್ಲ ಜವಾಬ್ದಾರಿಗಳನ್ನು ಹೊತ್ತು ನಡೆಸಬೇಕಾಗಿಬಂದಾಗ ಅತ್ತೆಯೊಡನೆ ನಡೆಸುವ ಸಂಭಾಷಣೆಯಲ್ಲಿ ಒಂದು ಗ್ರಾಮೀಣ ಪ್ರದೇಶದಲ್ಲಿ ಗೌರ ವಾನ್ವಿತವಾಗಿ ಬದುಕುವ ವ್ಯಕ್ತಿ ತನ್ನ ಪರಿಸರಕ್ಕೆ ಹೇಗೆ ಸ್ಪಂದಿಸಬಲ್ಲ ; ಯಾವ ರೀತಿ ಸನ್ನಿವೇಶವನ್ನು ಅರ್ಥೈಸಿಕೊಳ್ಳಬಲ್ಲ ; ತನ್ನ ಸ್ಥಾನವನ್ನು ಹೇಗೆ ಕಂಡುಕೊಳ್ಳಬಲ್ಲ ಎಷ್ಟು ಮರ್ಯಾದೆಯಾಗಿ ವರ್ತಿಸಬಲ್ಲ ಎಂಬೆಲ್ಲಾ ಅಂಶಗಳಿಗೆ ಸವಾಲಾಗುತ್ತದೆ.

"ಮಾವಾರು ಎಷ್ಟು ಸಾಲ ಮಾಡಿದ್ದರು ? ಎಂದು ಕೇಳಿದರು ಗೌಡರು ಅಡ್ಡ ಗೋಡೆಯ ಈಚೆಕಡೆ ಕುಳಿತು.

ಎಷ್ಟು ಮಾಡಿದ್ರಪ್ಪಾ ಕಾಣೆ ! ನಮ್ಮಿಗೆ ಹೇಳ್ತಿದ್ರೆ ! ಈಗ ಅವರು ಸತ್ತಮೇಲೆ ಗೊತ್ತಾಯ್ತು ಅದೆ ಯಾರ್ಯಾರತ್ತಿರ ಎಷ್ಟೆಷ್ಟು ಮಾಡಿದ್ರು ಅಂತ" ಎಂದು ಅತ್ತೆ ಅಡ್ಡ ಗೋಡೆಯ ಆ ಕಡೆಯಿಂದ. ಹೀಗೆ ಇಲ್ಲಿ ಅಡ್ಡಗೋಡೆಯ ಈಚೆಕಡೆಯಿಂದ ಮತ್ತು

ಆಚೆಕಡೆಯಿಂದಲೇ ನಡೆಯುವ ಸಂಭಾಷಣೆಯಲ್ಲಿ ಇಂದಿಗೂ ಬಳಕೆಯಲ್ಲಿರುವ ವಿಧಿನಿಷೇಧಗಳ ಪರಿಚಯ ದೊರಕುತ್ತದೆ. ಅಲ್ಲದೆ, ಈ ಸಂಭಾಷಣೆ ಹಳ್ಳಿಗಳಲ್ಲಿ ಹೆಂಗಸರು ಮನೆಯ ಹೊರಗಿನ ವ್ಯವಹಾರಗಳಲ್ಲಿ ತೋರುವ ನಿರ್ಲಕ್ಷ್ಯ ಅಥವಾ ಅಜ್ಞಾನದ ಕುರುಹಾಗಿರುವಂತೆಯೇ ಅಂಥ ವ್ಯವಹಾರಗಳಲ್ಲಿ ತಲೆ ಹಾಕದೆ ಗಂಡಸರ ಅಧೀನವಾಗಿ ಆತನ ಅಧಿಕಾರದಲ್ಲಿ ತಗ್ಗಿ ಬಗ್ಗಿ ಬಾಳುತ್ತಿದ್ದ ಹೆಣ್ಣಿನ ಸಹಜಸ್ಥಿತಿಯನ್ನು ಕಲ್ಪಿಸಿಕೊಡುತ್ತದೆ.

ಗ್ರಾಮೀಣ ಜೀವನದ ಮತ್ತೊಂದು ಮುಖ ಹೊಲೆಯರ ಅಸ್ತಿತ್ವದಲ್ಲಿ ಅಡಗಿರುವುದನ್ನು ಕಾದಂಬರಿಕಾರರು ಮರೆತಿಲ್ಲ. ಅವರಲ್ಲಿರುವ ಹೆಂಡದ ತೆವಲು, ಅದನ್ನು ಪೂರೈಸಿಕೊಳ್ಳುವಲ್ಲಿನ ಅವರ ಅದಮ್ಯ ಬಯಕೆಯ ಪರಿಪಾಟ. ಕಾದಂಬರಿಯ ಓಟದಲ್ಲಿ ಒಂದಾಗಿ ಬಂದಿದೆ. ಹೆಂಡದ ಚಪಲ ಹತ್ತಿದ್ದ ಈರಬೊಮ್ಮ ಗೌಡರೊಡನೆ ಬೆಳ್ಳೂರು ದಾಟಿ ಬರುವಾಗ ಅವರ ಅಪ್ಪಣೆಪಡೆದು ಎರಡು ಸೇರು ಹೆಂಡ ಹೊಟ್ಟೆಗೆ ಸೇರಿಸಿ ನಂತರ ಅವರೊಡನೆ ಸಂಭಾಷಣೆಯಲ್ಲಿ ತೊಡಗಿದಾಗ ನಗೆಯ ಹೊನಲೇ ಹರಿಯುತ್ತದೆ.

ಗೌಡರು "ನಿನಗೆಷ್ಟು ವರ್ಷ ಬೊಮ್ಮಣ್ಣ ?" ಎಂದು ಕೇಳಿದರು. "ನಂಗಾ ? ಇಪ್ಪೊರ್ಸ ಅಪ್ಪೊರ್ಸ ಅಂತ ಗೊತ್ತಿಲ್ಲಪ್ಪ ! ನಿಮ್ಮಪ್ಪಾರಿಗೂ ನನಗೂ ಒಂದು ಹತ್ತೊರ್ಸ ಹೆಚ್ಚು ಕಡಿಮೆ ಅಷ್ಟೆಯ. ನೋಡಿಕೊಳ್ಳಪ್ಪ ನೀನೇಯ ಎಷ್ಟೊರ್ಸಾಯ್ತು ಅಂತ ! ಹೋದ ಜಡದಲ್ಲಿಲ್ಲವೆ ಸತ್ತೋಯ್ತಿದ್ದು ನಾನು ? ಎಂದ ಈರಬೊಮ್ಮ ; ಗೌಡರು ಹಿಂದಿರುಗಿ ನೋಡಿದರು : ಹಿಂದೆ ಬರುವವನು ಈರಬೊಮ್ಮನೋ ಅಥವಾ ಅವನ ದೆವ್ವವೋ ಎಂದು ತಿಳಿದುಕೊಳ್ಳಲು. ಅದೇ ಈರಬೊಮ್ಮ ಅದರಲ್ಲೇನೂ ಅನುಮಾನವಿಲ್ಲ. ಕುಡಿದ ಅಮಲು. ಅದಕ್ಕೇ ಹೇಗೋಗೋ ಮಾತಾಡ್ತನೆ ಅಂದುಕೊಂಡು, "ಸತ್ತೋದೋನು ಅದೆಂಗೆ ಬದುಕಿದೆ ಮತ್ತೆ ?" ಎಂದು ಹೇಳಿದರು. ನಿಜವಾಗೂ ಸತ್ತೋದೆ ಗೌಡಪ್ಪ ! ನಾನೇನು ಅಕಾಲಾಮಾಡ್ತಾ ಇಲ್ಲ. ದೊಡ್ಡ ಜಡ ಬಂದಿತ್ತಲ್ಲಾ ಈ ದೇಸಕ್ಕೆಲ್ಲಾ, ಆಗ ನಂಗೆ ನಿಂಗಿಂತಾ ಒಂದೀಟು ಕಮ್ಮ್ಯಾಗಿ ವಯಸ್ಸಾಗಿತ್ತು ನಿಮ್ಮಲ್ಲೇ ಆಳ್ವೇ ಕೆಲಸಕ್ಕಿದ್ದದ್ದು ! ಆಗ ನಮ್ಮಪ್ಪ ನಾನು ಇಬ್ರೇವಲ್ಲಿ ; ನಮ್ಮವ್ವ ಆಗ್ಲೇ ಸತ್ತೋಗಿದ್ಲು. ಊರಲೆಲ್ಲಾ ವಾಂತಿ ಭೇದಿ. ಮೂರು ಸಲ ವ್ಯಾಕ್ ! ವ್ಯಾಕ್ ! ವಾಂತಿಮಾಡಿದರೆ ಹಂಗೆ ಮಲಗಿಕೊಳ್ತೋರು !" ಎಂದು ಮುಂದುವರೆಸಿ ತಾನು ಸತ್ತು ಬದುಕಿದ ಕಥೆಯನ್ನು ಹೇಳುತ್ತಾನೆ. ಇಲ್ಲಿ ಕುಡಿದ ಅಮಲಿನಲ್ಲಿಯಾಗಲೀ ಗೌಡರೊಡನೆ ಆತ್ಮೀಯವಾಗಿ ಸಂಭಾಷಿಸುವ, ಹೊಲೆಯ ಈರಬೊಮ್ಮ ಹಾಗೂ ಗೌಡರ ನಡುವಿನ ಸಂಬಂಧದ ಎಳೆ ಗಟ್ಟಿಯಾದದ್ದು. ಒಂದು ಹಳ್ಳಿಯಲ್ಲಿ ಒಗ್ಗಟ್ಟಾಗಿ ಬಾಳಬೇಕಾದರೆ ಎಲ್ಲ ರೀತಿಯ ಜನಗಳೊಡನೆಯೂ ಆತ್ಮೀಯವಾದ ಸಂಬಂಧ ಅಗತ್ಯ ಎಂಬಂಶವನ್ನು ಈ ಸನ್ನಿವೇಶ ಎತ್ತಿತೋರಿಸುತ್ತದೆ. ಅಂತೆಯೇ ಗೌಡರು ಮತ್ತು ಗೆಂಪೇಕಾರನ ನಡುವೆ ನಡೆಯುವ ಸಂಭಾಷಣೆಯಲ್ಲಿ. ವ್ಯವಹಾರಗಳಲ್ಲಿ ಮಾನವೀಯತೆಯಿಂದ ವರ್ತಿಸಿ, ಬಾಂಧವ್ಯವನ್ನು ನೆಲೆಗೊಳಿಸುವಲ್ಲಿ ಮೇಲುಕೀಳು, ಉತ್ತಮ ಹೊಲೆಯ ಎಂಬ ಭೇದವಿಲ್ಲ

ಎಂಬ ವಿಶ್ವಮಾನವ ತತ್ವವನ್ನು ಸಾರಿದ್ದಾರೆ. ಇದೇ ಹೊಲೆಯ ಗೆಂಡೇಕಾಳ ಪಟೇಲ ರಂಗೇಗೌಡನೊಡನೆ ನಡೆಸುವ ಸಂಭಾಷಣೆಯಲ್ಲಿ ಆತನ 'ಶಕುನಿಬುದ್ಧಿ'ಯನ್ನು ಅರಿತಿದ್ದ ಗೆಂಡೇಕಾಳ ತಾನು ಹೊಲೆಯನಾದರೂ ಆತನನ್ನು ತಿರಸ್ಕಾರ ದೃಷ್ಟಿಯಿಂದ ನೋಡಿ ನಡೆದುಕೊಳ್ಳುವ ರೀತಿಯಲ್ಲಿ ಮಾನವೀಯ ಸಂಬಂಧಗಳ ಶಿಥಿಲತೆಯನ್ನು, ಮಾನುಷ ಸಹಜ ಗುಣಗಳನ್ನು ಅನಾವರಣಮಾಡಿದ್ದಾರೆ.

ಸ್ಥಳೀಯ ಜನಪದ ಆಟಗಳನ್ನು, ಆ ಪ್ರದೇಶದ ಮಕ್ಕಳಲ್ಲಿ ವಿಶೇಷವಾಗಿ ಕಂಡು ಬರುವ ಆಟದ ಬಗೆಗಳನ್ನು 'ನಾಗುವಿನ ಬಾಲ್ಯವನ್ನು ವಿವರಿಸುವ ಸಂದರ್ಭದಲ್ಲಿ ಕಾದಂಬರಿಕಾರರು ಪರಿಚಯ ಮಾಡಿಕೊಡುತ್ತಾರೆ. ನಾಗುವಿನ ಆಟಪಾಟ ಕೋಳಿಮರಿ ಯೊಂದಿಗೆ ಆರಂಭವಾಗಿ, ಕುರಿಮರಿ, ಹಸುವಿನಕರು, ಎಮ್ಮೆಯಕರುವಿನೊಂದಿಗೆ ಸಾಗಿ ; ಜೀರುಂಡೆಗಳನ್ನು ಸಾಕುವುದು, ಮಳೆ-ಆಲಿಕಲ್ಲಿನೊಂದಿಗೆ ಆಟವಾಡುವುದು, ಕಪ್ಪೆಗಳ ಸಂಗೀತವನ್ನು ಕೇಳಿ ಕುಣಿದು ಕುಪ್ಪಳಿಸುವುದು. ಉಪ್ಪಚ್ಚಿ ಹಣ್ಣುಗಳನ್ನು ಕಿತ್ತು ತಿನ್ನುವುದು, ಹೂಲಿ ಹಣ್ಣನ್ನು ತಿನ್ನುವುದು, ಪಬ್ಬಿದ ಉಗಣಿ ಹಂಬನ್ನು ಕಿತ್ತು ಮರಕ್ಕೆ ಜೋಗಾಲೆ ಕಟ್ಟಿ ಆಡುವುದು, ಕಳ್ಳಿ ಹಾಲನ್ನು ಒಂದು ದೊನ್ನೆಗೆ ಹಾಕಿಕೊಂಡು ಕಳ್ಳಿಕಡ್ಡಿಯ ಪೀಪಿಮಾಡಿಕೊಂಡು ಹಾಲಿಗೆ ಅದ್ದಿ ಊದುವುದು. ತೆಂಗಿನಗರಿಯ ಗಿರಗಟ್ಟಲೆ ಮಾಡಿ ಅದಕ್ಕೆ ಮಧ್ಯೆ ಗೊಬ್ಬಳಿ ಮುಳ್ಳುಚುಚ್ಚಿ. ಆ ಮುಳ್ಳಿನ ತುದಿಗೆ ಕುರಿಯ ಹಿಕ್ಕೆ ಸಿಕ್ಕಿಸಿ, ಆ ಮುಳ್ಳನ್ನು ಜೋಳದ ದಿಂಡಿಗೆ ಸಿಕ್ಕಿಸಿ, ಗಾಳಿಗೆದುರಾಗಿ ಹಿಡಿದು ಆಡಿಸುವುದು. ಹಂಚಿಕಡ್ಡಿಗಳನ್ನು ಒಂದರ ತುದಿಗೆ ಇನ್ನೊಂದು ಸೇರಿಸಿ ಚಕ್ರಮಾಡಿ ಗಾಳಿಗೆ ನಿಲ್ಲಿಸಿ ಆಟವಾಡಿಸುವುದು. ಇಳ್ಳೆ ಆಡುವುದು. ಲಗ್ಗೆಚೆಂಡು ಕಪ್ಪೆಚೆಂಡು, ಕುದುರೆ ಚೆಂಡಾಟಗಳನ್ನಾಡುವುದು. ಬೆಳದಿಂಗಳ ರಾತ್ರಿಗಳಲ್ಲಿ ಅಪ್ಪಾಲೆ ತಿಪ್ಪಾಲೆ. ಅಕ್ಕಮಕ್ಕ ಚೆಂಡಾಟ- ಇಂಥವೇ ಅನೇಕ ಆಟಗಳು, ಇತರರು ಕೇಳರಿಯದ, ಕಂಡರಿಯದ ಈ ಆಟಗಳ ಹೆಸರುಗಳು, ಅವುಗಳನ್ನು ಆಡುವ ವಿಧಾನ, ಬಳಸುವ ಸಾಧನಗಳೊಂದಿನ ವಿವರಣೆಯನ್ನು ಕಾದಂಬರಿಕಾರರು ಅನುಕರಣೀಯವಾಗಿ ಕೊಟ್ಟಿದ್ದಾರೆ. (ಪು ೨೮೧-೩೦೦)

ನಾಗುವಿನ ಬಾಲ್ಯದ ವಿವರಣೆಯೊಂದಿಗೇ ಬೆಸೆದು ಬಂದಿರುವ ಒಕ್ಕಲ ಮಕ್ಕಳ ಬೇಸಾಯದ ಚಿತ್ರ ರೈತರ ದೈನಂದಿನ ಬದುಕಿನ ಪುಟಗಳನ್ನು ತೆರೆದು ತೋರಿಸುವಂತಿದೆ. "ನಾಲ್ಕು ಆರುಗಳು ಉಳುತ್ತಿದ್ದರೆ ಇಬ್ಬರು ಮೂವರು ಕೈಯಲಿ ಗುದ್ದಲಿ ಹಿಡಿದು, ಗೊಬ್ಬರದ ಗುಡ್ಡೆಗಳಿಗೆ ಮಣ್ಣು ಹೇರಾಕಿ ಮುಚ್ಚುತ್ತಿದ್ದಾರೆ, .ನಾಲ್ಕಾಳುದ್ದ ಹೊತ್ತು, ಮನೆಯಿಂದ ದೊಡ್ಡ ಕುಕ್ಕೆಯಲ್ಲಿ ಬಿಟ್ಟು ಹೊತ್ತುತಂದರು ಮನೆಯ ಹೆಂಗಸರು. ಅಲ್ಲಿದ್ದ ಹೊಂಗೆ ಮರದಡಿಯಲ್ಲಿ ಹಿಟ್ಟು ತಂದ ಇಬ್ಬರು ಚಿಕ್ಕವ್ವದೀರು ಕುಕ್ಕೆಯನ್ನಿಟ್ಟು ಕುಳಿತುಕೊಳ್ಳುತ್ತಾರೆ. ಆರು ಉಳುವುದನ್ನು ನಿಲ್ಲಿಸಿ ಚಿಕ್ಕಪ್ಪಂದಿರು ಮರದಡಿಗೆ ಬರುತ್ತಾರೆ. ಕೈಕಾಲು ತೊಳೆದುಕೊಂಡು ಉತ್ತ ಬರಿ ನೆಲದ ಮೇಲೆ ಊಟಕ್ಕೆ ಕುಳಿತುಕೊಳ್ಳು

ತ್ತಾರೆ. ಒಬ್ಬೊಬ್ಬರ ಮುಂದೆ ಒಂದೊಂದು ಗಂಗಳ. ಒಂದು ಅಂಗೈತೋರ ಮುದ್ದೆ ಒಂದು ಕಡೆಗೆ ಸಾರು. ಇನ್ನೊಂದು ಕಡೆಗೆ ಕಾಳೋ ಸೊಪ್ಪೋ. ನಾಗು ಇನ್ನು ಚಿಕ್ಕವ ಒಬ್ಬ ಚಿಕ್ಕಪ್ಪನ ಜೊತೆ ಊಟಕ್ಕೆ ಕುಳಿತುಕೊಳ್ಳುತ್ತಾನೆ. ಹಸಿದಹೊಟ್ಟೆ, ಉತ್ತನೆಲ, ಸುತ್ತಬಯಲು. ಮೇಲೆ ನೀಲಿ ಆಕಾಶ. ಮಳೆಯಿಂದಾಗಿ ಬೀಸುವ ತಂಪಾದ ಗಾಳಿ. ಉಂಡದ್ದೇ ಪರಮಾನ್ನ ! ಮೇಲೆ ಒಂದಿಷ್ಟು ಅನ್ನ, ಸಾರಿನಲ್ಲಿ ಒಂದಿಷ್ಟು ಅನ್ನ ಉಂಡ ಮೇಲೆ, ಮಜ್ಜಿಗೆಯಲ್ಲಿ ಒಂದಿಷ್ಟು. ಉಂಡು ತೇಗಿದರು ಎಲ್ಲರೂ. ಒಂದು ಗಳಿಗೆ ಹಾಗೇ ಕುಳಿತಿದ್ದು ಮತ್ತೆ ಉಳುವ ಕಡೆಗೆ. ನಾಗು ಹಿಟ್ಟು ತಂದ ಚಿಕ್ಕವ್ವದೀರೊಡನೆ ಮನೆಗೆ ಬರುತ್ತಾನೆ. ಎತ್ತುಗಳು ಕೆಲವು ನಿಂತಿವೆ ; ಕೆಲವು ಮಲಗಿವೆ, ಹೂಡಿದ ಕೊಳ್ಳಿನಲ್ಲಿ. ಮಲಗಿದ್ದ ಎತ್ತುಗಳನ್ನು ಏಳಿಸಿ ಮತ್ತೆ ಉಳುವ ಕೆಲಸ. ಹೊತ್ತು ನಾಲುವವರೆಗೂ ಉತ್ತು, ಮನೆಗೆ ಬಂದು ಎತ್ತುಗಳಿಗೆ ನೀರು ಕುಡಿಸಿ ಗೋದಲಿಕೆಯ ಗೊಂತಿಗೆ ಕಟ್ಟಿ ಅವಕ್ಕೆ ಹುಲ್ಲು ಹಾಕುತ್ತಾರೆ. ಸಂಜೆ ಮೂರು ಗಂಟೆಯುವರೆಗೂ ಹುಲ್ಲು ತಿನ್ನುತ್ತವೆ ಅವು. ಉತ್ತವರು ಒಂದು ಗಳಿಗೆ ಮಲಗಿದ್ದು ಎದ್ದು. ಎತ್ತುಗಳಿಗೆ ನೀರುಕುಡಿಸಿ, ಮತ್ತೆ ಹೊಲಕ್ಕೆ ಹೋಗುತ್ತಾರೆ. ಉಳುವುದಕ್ಕೆ ಸಂಜೆಯುವರೆಗೆ ಉತ್ತು ಸುಸ್ತಾಗಿ ಮನೆಗೆ ಬರುತ್ತಾರೆ.”

ಬಯಲು ಸೀಮೆಯ ಜನಗಳು ರೊಚ್ಚಿಗೆದ್ದಾಗ ನಡೆಸುವ ಕ್ರೌರ್ಯ ಹಿಂಸೆ ಕೊಲೆಗಡುಕುತನದ ಚಿತ್ರವನ್ನು ‘ಬಕ್ಕಪ್ಪನ ಅಮಾನುತ್ತು ಕೊಲೆ’ಯ ಪ್ರಸಂಗದಲ್ಲಿ ಲೇಖಕರು ಮನಗಾಣಿಸುತ್ತಾರೆ. ಆ ಕೊಲೆಯ ಆರೋಪಣೆ ತಮ್ಮ ಮೇಲೆ ಬರಬಾರದೆಂದು ಕಡಿದ ತಲೆಯನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳಾಂತರಿಸುವ ರಂಗೇಗೌಡ ಹಾಗೂ ‘ನಸ್ನೂರ ಕರಿಯು’ ಇವರ ಕುತಂತ್ರ ಬುದ್ಧಿಯ ಚಿತ್ರಣವೂ ಕಾದಂಬರಿಯಲ್ಲಿ ಮೂಡಿ ಬಂದು ಪ್ರಾದೇಶಿಕತೆಯ ಚೌಕಟ್ಟಿಗೆ ಬಣ್ಣಕೊಟ್ಟಿವೆ. ಅಲ್ಲದೆ ಗ್ರಾಮಪಂಚಾಯ್ತಿಗಳಲ್ಲಿ ಪಂಚಾಯ್ತಿದಾರರಲ್ಲಿ ನಡೆಯುವ ಪಕ್ಷಪಾತ ತನದ ಶಿಕ್ಕಾಟವನ್ನು ಹಂದಿಯಬೇಟೆಯ ನಂತರ ಅದನ್ನು ಪಾಲುಮಾಡಿ ‘ರಾಜಪಾಲು’ ಯಾರಿಗೆ ಸಲ್ಲಬೇಕೆಂದು ನ್ಯಾಯ ತೀರ್ಮಾನ ಮಾಡುವ ಸನ್ನಿವೇಶದಲ್ಲಿ ತೋರಿಸಿಕೊಟ್ಟಿದ್ದಾರೆ,

ಗೌಡರ ದರ್ಬಾರಿನಲ್ಲಿ ನಡೆಯುವ ನಾಟಕ, ಬಯಲಾಟ, ಹಾಡು, ಕುಣಿತ ಇವುಗಳ ವಿವರಣೆ ಒಂದು ಪ್ರದೇಶದ ಕಲೆಯನ್ನು ಪರಿಚಯಿಸುವಲ್ಲಿ ಸಹಕಾರಿಯಾದರೆ, ಗೌಡರಿಂದ ಪುರಸ್ಕಾರ ಪಡೆಯುತ್ತಿದ್ದ ಗೊಂಬೇರಾಮರ ಕೋಲೆಬಸವನಾಡಿಸುವವರು, ಹಕ್ಕಿಪುಕ್ಕರು, ಗಂಟೆ ಹೆಳವರು, ಬುಡು-ಬುಡುಕೆಯವರು, ದೊಂಬರ ಮಾರಮ್ಮ, ಕುಕ್ಕೆಮಾರಮ್ಮ, ಪೆಟ್ಟಿಗೆಮಾರಮ್ಮ, ಮುಂತಾದವರು ಜನಪದ ಕಲಾವಿದರೆಂದು ಗುರುತಿಸುವಲ್ಲಿ ಸಹಾಯಕರಾಗಿದ್ದಾರೆ.

ಪ್ರಾದೇಶಿಕ ಕಾದಂಬರಿಯು ಆವರಣವನ್ನು ಸೃಷ್ಟಿಸುವಲ್ಲಿ ಭಾಷೆ ಬಹುಮುಖ್ಯ ಪಾತ್ರವಹಿಸುತ್ತದೆ. ಒಂದು ಪ್ರದೇಶದ ನಂಬಿಕೆ ನಡಾವಳಿವಳು, ಜನರ ರೀತಿನೀತಿಗಳು,

ಪ್ರಚಲಿತ ನುಡಿಗಟ್ಟುಗಳು ಭಾಷಾಮಾಧ್ಯಮದ ಮೂಲಕ ಪ್ರತಿಬಿಂಬಿಸುವುದು ಅನಿವಾರ್ಯ. ಲೇಖಕ ಒಂದು ಕೃತಿಯಲ್ಲಿ ಬಳಸುವ ಭಾಷೆ ಆತನ ಅನುಭವದ ಗಟ್ಟಿತನದಿಂದ ಸಮರ್ಥವಾದ ಅಭಿವ್ಯಕ್ತಿಯಾಗಿ ಮೈತಾಳಿದಾಗ ಕಲಾಕೃತಿಗೆ ಮೆರಗು ಬರುತ್ತದೆ. ಒಂದು ವಿಷಯದ ಸ್ಪಷ್ಟತೆಗೆ ಗಾದೆ, ನಂಬಿಕೆಗಳು ಊರುಗೋಲಾಗಿ ಬರುತ್ತವೆ. ಸಂಕೇತ ಪ್ರತಿಮೆಗಳು ಘಟನೆಗಳ ಪರಿಣಾಮಕತೆಗೆ ತೀವ್ರತೆಯನ್ನು ತಂದುಕೊಡುತ್ತವೆ. ದೊಡ್ಡಮನೆ ಕಾದಂಬರಿಯಲ್ಲಿ ಮೂಡಿಬಂದಿರುವ ಭಾಷೆ ಬಯಲುಸೀಮೆಯ ಜನರ ಅಪ್ಪಟ ಆಡುಭಾಷೆ, ಇಲ್ಲಿಯ ಪ್ರತಿಯೊಂದು ಪುಟದಲ್ಲಿಯೂ ಆ ಭಾಷೆಯ ಮೂಲ ಸತ್ವವನ್ನು ಬಳಸಿರುವುದರಿಂದ ಕಾದಂಬರಿಯ ಜೀವಂತಿಕೆಯನ್ನು ಹೆಚ್ಚಿಸಲು ಕಾರಣವಾಗಿದೆ. ಇಲ್ಲಿ ಬಳಕೆಯಾಗಿರುವ ಗಾದೆಗಳಂತೂ ಒಂದು ಗಾದೆಯಕೋರ ತೆರೆಯುವಷ್ಟರ ಮಟ್ಟಿನ ಬಾಹುಳ್ಯದಿಂದ ಕೂಡಿವೆ. ಸಮಯ ಸಂದರ್ಭಕ್ಕನುಗುಣವಾಗಿ ಸಿಡಿದು ಬಂದಿರುವ ಈ ನಾಣ್ಣುಡಿಗಳಲ್ಲಿ ಗ್ರಾಮೀಣ ಜೀವಿಗಳ ಅನುಭವದ ಸಾರವನ್ನು, ಮಣ್ಣಿನ ವಾಸನೆಯನ್ನು ಆಘ್ರಾಣಿಸಬಹುದಾಗಿದೆ. ಉದಾಹರಣೆಗಾಗಿ ಕೆಲವನ್ನು ಹೆಸರಿಸಬಹುದು. 'ಬಾಳೋ ಮನೆಗೆ ಬಗಳೋ ನಾಯಿ' ; 'ಬಾಡಿನ ಮುಂದೆ ಬಳ್ಳೀ ಸೊಪ್ಪೇ' 'ಹುಟ್ಟಿದಾಗ ಬಂದದ್ದು ಹೂಳಿದಾಗ ಹೋದೀತೇ ?' 'ಮಾತು ಆಡಿ ಕೆಟ್ಟಿತು–ಮುತ್ತು ಕೆಟ್ಟಿತು' ; 'ತಂದೆಯಂತೆ ಮಗ·ಮರದಂತೆ ನೊಗ' ; 'ಮಳೆಹನಿ ನಿಂತರೂ ಮರದ ಹನಿ ನಿಲ್ಲಲಿಲ್ಲ' 'ಹಾರವರ ಮಾತು ಹಲವಂಗ' ಹಂಚಿದರೆ ಕಂಚುಪಾಲು, ಮಾರ್‍ನೋಮಿ ಹೊತ್ತಿಗೆ ಮಾರುದ್ದ ಹೊಡೆ, 'ತಾಳಿಕಟ್ಟಿದ ಮ್ಯಾಲೆ ಮದುವಾಯ್ತು, ಖಾರ ಅರೆದ ಮ್ಯಾಲೆ ಅಡಿಗಾಯ್ತು, ಕಂಡಕಡೆ ಹೆಣ್ಣು ತರಬಾರದು ಉಂಡ ಕಡೆ ಮಲಗಬಾರದು, ಇಂಥವೇ ಇನ್ನೂ ಅನೇಕ ಗಾದೆಗಳು ಕಾದಂಬರಿಯ ಸೂಕ್ತ ಸಂದರ್ಭಗಳಲ್ಲಿ ಬಳಕೆಯಾಗಿ ಅದರ ಸಮಗ್ರ ಶಿಲ್ಪಕ್ಕೆ ಸಹಜತೆಯನ್ನೊದಗಿಸಲು ಸಹಾಯವಾಗಿದೆ, ಭಾಷೆಯ ಬನಿ ಆಡುಮಾತುಗಳ ಮೂಲಕ ಸ್ಫುರಿಸಿದೆ. ಮದುವೆ, ಪ್ರಣಯ, ಸಂಭ್ರಮ, ಸಡಗರ, ಸುಖದುಃಖ ಮುಂತಾದ ಸನ್ನಿವೇಶಗಳಲ್ಲಿ ಬಳಸಿಕೊಂಡಿರುವ ಜನಪದ ಹಾಡುಗಳು, ಶಿಶುಪ್ರಾಸಗಳು ಪ್ರಾದೇಶಿಕತೆಗೆ ಹೆಚ್ಚು ಒತ್ತುಕೊಟ್ಟಿವೆ. ಕೆಲವು ವಿಶಿಷ್ಟವಾದ ಪದಗಳಾದ–ಯದಾರು, ತೀವಟಿಗೆ, ಹೊನ್ನಾರು, ಪಡಸಾಲೆ, ನಿಸೂರು, ಧಾತಿ, ಹಲವಂಗ, ಜಂಭರ, ಓಮ್ಮಣ್ಣಿಚೀಲ, ಬರಾಪರ್ದು, ಉಣಬೆ, ಮುಕ್ಕು ಮುಂತಾದವುಗಳು ಪ್ರಾದೇಶಿಕತೆಗೆ ಪುಷ್ಟಿಕೊಟ್ಟಿದೆ.

ಇಷ್ಟಲ್ಲದೆ ಕೆಂಪಣ್ಣನ ಸಾವಿನ ಪ್ರಸಂಗದ ನಿರೂಪಣೆ, ಕರೀಗೌಡರು ಒಳಸಂಚು ನಡೆಸುತ್ತಿದ್ದ ಪ್ರಸಂಗದಲ್ಲಿನ ಚಿತ್ರಕ ಶಕ್ತಿ, ದೊಡ್ಡಮನೆ ಓರಗಿತ್ತಿಯರು ಒಬ್ಬರಿಗೊಬ್ಬರು ಕಚ್ಚಾಡಿಕೊಂಡು ತಮ್ಮನ್ನು ತಾವೇ ಸಂತೈಸಿಕೊಳ್ಳುವಲ್ಲಿನ ನಿರೀಕ್ಷಣ ಪ್ರಜ್ಞೆ ; ಕೆಂಗಣ್ಣ ಹಾಗೂ ರತ್ನರ ಪ್ರಣಯ ಪ್ರಸಂಗದಲ್ಲಿ ವ್ಯಕ್ತವಾಗುವ ಸೂಕ್ಷ್ಮ ಅವಲೋಕನ ದೃಷ್ಟಿ ಬಳಸಿಕೊಂಡಿರುವ ಜನಪದ ಗೀತೆಗಳ ಜೋಡಣೆ, ಇಡೀ ಊರಿಗೇ

ಪ್ಲೇಗು ಬಂದಾಗ ಗೌಡರಾದಿಯಾಗಿ ಮಡಿಯುವ ಪ್ರಸಂಗದಲ್ಲಿ ಅವರು ತೋರುವ ಮಾನವೀಯತೆಯ ಲಕ್ಷಣಗಳ ನಿರೂಪಣೆ, ಕಾದಂಬರಿಯ ಪುಟಗಳಲ್ಲಿ ಹಾಸುಹೊಕ್ಕಾಗಿ ಬಂದು ಪ್ರಾದೇಶಿಕತೆಯ ಗಾಢ ಅನುಭವವನ್ನು ತಂದುಕೊಡುತ್ತವೆ. "ಒಂದು ಉತ್ತಮ ಕಾದಂಬರಿಯು ಅನುಭವ ಪ್ರಪಂಚ ಬದುಕಿನ ಬಗೆಗೆ ನಮಗಿರುವ ಪ್ರಜ್ಞೆಯನ್ನು ವಿಸ್ತರಿಸಬೇಕೆಂಬ" ಅಭಿಪ್ರಾಯಕ್ಕನುಗುಣವಾಗಿ ಪ್ರತಿಯೊಂದು ಪಾತ್ರಗಳೂ ದುಡಿದು ಆ ಅನುಭವವನ್ನು ನಮ್ಮದಾಗಿಸುತ್ತವೆ.

'ದೊಡ್ಡಮನೆ' ಕಾದಂಬರಿ ಒಂದು ಅವಿಭಕ್ತ ಕುಟುಂಬದ ವಾಸಸ್ಥಾನವಾದ 'ದೊಡ್ಡಮನೆ'ಯ ಕಥೆಯನ್ನು ಹೇಳುವ ಮುಖ್ಯ ಉದ್ದೇಶವನ್ನುಹೊಂದಿದ್ದರೂ ಮನೆಯ ನೆಲೆಬೀಡಾದ ನನ್ನೂರಿನ ಗ್ರಾಮವಾಸಿಗಳ, ಅವರ ಕಾರ್ಯಕ್ಷೇತ್ರಗಳ ಪರಿಚಯ ವನ್ನು ಚೆನ್ನಾಗಿ ಮಾಡಿಕೊಡುತ್ತದೆ. ಶ್ರೀಯುತ ನಾಗೇಗೌಡರ ಉಳಿದ 'ಸೊನ್ನೆಯಿಂದ ಸೊನ್ನೆಗೆ' ; 'ನನ್ನೂರು' ಕಾದಂಬರಿಗಳು ಪ್ರಾದೇಶಿಕತೆಯನ್ನು ಅತ್ಯಂತ ದಟ್ಟವಾಗಿ ಪ್ರತಿನಿಧಿಸುವ ಕಾದಂಬರಿಗಳೆಂದು ಹೇಳಬಹುದು. 'ನನ್ನೂರು' ಕಾದಂಬರಿ ಒಂದು ಗ್ರಾಮದಲ್ಲಿ ವಾಸವಾಗಿರುವ ವಿವಿಧ ವೃತ್ತಿಗಳ ವಿವಿಧ ರೀತಿಯ ಮನೋಭಾವದ ಜನ ಗಳ, ವಿವಿಧ ಆಚರಣೆಗಳ, ನಂಬಿಕೆಗಳ, ಸಂಪ್ರದಾಯಗಳ, ವೇಷ ಭೂಷಣಗಳ, ಭಾಷೆಯ ಸ್ಥೂಲವಾದ ಚಿತ್ರವನ್ನು ಕೊಡುವಲ್ಲಿ ಸಫಲಕಾರಿಯಾಗಿದೆ. ಅಂತೆಯೇ 'ಸೊನ್ನೆಯಿಂದ ಸೊನ್ನೆಗೆ' ಕಾದಂಬರಿ ಪ್ರಾದೇಶಿಕತೆಯ ಎಲ್ಲ ಲಕ್ಷಣಗಳನ್ನು ಮೈಗೂಡಿಸಿ ಕೊಂಡು ಅವತರಿಸಿದೆ. ದೊಡ್ಡಮನೆ ಕಾದಂಬರಿಯ ಅಭ್ಯಾಸದಿಂದ ಒಂದು ಗಾದೆಯ ಕೋಶವನ್ನು ನಿರ್ಮಿಸಬಹುದಾದರೆ, ಸೊನ್ನೆಯಿಂದ ಸೊನ್ನೆಗೆ ಕಾದಂಬರಿಯ ಅವ ಲೋಕನದಿಂದ ಒಂದು ಅರ್ಥಕೋಶವನ್ನು ತೆರೆಯುವ ಸಾಧ್ಯತೆಯಿದೆ. ಅಪ್ಪಟ ಬಯಲುಸೀಮೆಯ ಪದಗಳು, ನುಡಿಗಟ್ಟುಗಳು ಆ ಕಾದಂಬರಿಯಲ್ಲಿ ದೊರಕುತ್ತವೆ. ನಾಗೇಗೌಡರ ಕಾದಂಬರಿಗಳಲ್ಲಿ ಆಡುಮಾತುಗಳಿಗೂ ಜನ ಜೀವನಕ್ಕೂ ಅರ್ಥಪೂರ್ಣ ವಾದ ಸಂಬಂಧವೇರ್ಪಡುವುದರಿಂದ ಗ್ರಾಮೀಣ ಭಾಷೆಯ ಸತ್ವವನ್ನು ಮಣ್ಣಿನ ಗುಣ ವನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. "ಗ್ರಾಮೀಣ ಬಾಳನ್ನು ಕುರಿತು ಕಾದಂಬರಿ ಬರೆಯುವುದು ಸುಲಭವಲ್ಲ ಅದನ್ನು ಬರೆದವರಿಗೇ ಆ ಕಷ್ಟ ಗೊತ್ತು" ಎಂದು ಲೇಖ ಕರು ಒಂದೆಡೆ ಹೇಳಿದ್ದಾರೆ. ಆದರೆ ಅವರ ಕಾದಂಬರಿಗಳು ಗ್ರಾಮೀಣ ಬಾಳಿನ ಪರಿಪೂರ್ಣ ಚಿತ್ರವನ್ನು ಕೊಡುವಲ್ಲಿ ಯಶಸ್ವಿಯಾಗಿವೆ.

೧೨ | ದೊಡ್ಡಮನೆ ಕಾದಂಬರಿಯ ಕೆಂಗಣ್ಣನ ಪಾತ್ರವಿಮರ್ಶೆ

ಸಿ. ಪಿ. ಸಿದ್ಧಾಶ್ರಮ

'ದೊಡ್ಡಮನೆ' ಕಾದಂಬರಿಯ ಕೆಂಗಣ್ಣನ ಪಾತ್ರವನ್ನು ಕುರಿತು ವಿವೇಚಿಸುವುದಕ್ಕಿಂತ ಮೊದಲು ಒಟ್ಟು ಕಾದಂಬರಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾದ ಅವಶ್ಯಕತೆ ಇದೆ ಎಂದು ನಾನು ಭಾವಿಸಿದ್ದೇನೆ. ಗ್ರಾಮೀಣ ಬದುಕನ್ನು ದಟ್ಟ ಅನುಭವದಿಂದ ಚಿತ್ರಿಸುವ ಕನ್ನಡದ ಕೆಲವೇ ಒಳ್ಳೆಯ ಕಾದಂಬರಿಗಳ ಸಾಲಿನಲ್ಲಿ ಈ ಕಾದಂಬರಿ ಸೇರುತ್ತದೆ. ಇಂದು ನಾವು ಯಾವ 'ಮಣ್ಣಿನ ವಾಸನೆ', 'ಸಾಮಾಜಿಕ ಪ್ರಜ್ಞೆ', 'ಜನಸಾಮಾನ್ಯನ ಬದುಕಿನ ಚಿತ್ರಣ'—ಇತ್ಯಾದಿಗಳು ಸಾಹಿತ್ಯದಲ್ಲಿ ಸಿಗಬೇಕೆಂದು ಘೋಷಿಸ ತೊಡಗಿದ್ದೇವೆಯೋ ಅವೆಲ್ಲ ಈ ಕಾದಂಬರಿಯ ಅಂತರಂಗದಲ್ಲಿ ಹುದುಗಿಕೊಂಡಿರುವುದನ್ನು ಓದುಗರು ಗಮನಿಸುವಂಥ ಸಂಗತಿಯಾಗಿದೆ. ಈ ಕಾರಣಗಳಿಂದಾಗಿ ಈ ಕಾದಂಬರಿ ಹೆಚ್ಚು ಮಹತ್ವವನ್ನು ಪಡೆದುಕೊಂಡು ಬಿಡುತ್ತದೆ. ಅಲ್ಲದೆ ಬಯಲುಸೀಮೆಯ ಒಕ್ಕಲು ಮಕ್ಕಳ ಆಡುನುಡಿಯನ್ನೇ ಕಾದಂಬರಿಯ ಭಾಷೆಯನ್ನಾಗಿ ಬಳಸಿಕೊಂಡಿದ್ದರಿಂದ, ಕಾದಂಬರಿಗೆ ಜಾನಪದೀಯ ಹೊಸ ಆಯಾಮವೂ ಒದಗಿ, ಕೃತಿ ವಿಶಿಷ್ಟವಾಗಿ ನಿಲ್ಲುತ್ತದೆ.

ನಮ್ಮಲ್ಲಿ 'ಮಣ್ಣಿನ ವಾಸನೆ"ಯ ಹಾವಳಿ ಒಂದು ವಿಷವರ್ತುಲದಲ್ಲಿಯೇ ಆರಂಭವಾಗಿ ಅದರಲ್ಲಿಯೇ ಅಂತ್ಯಗೊಂಡುದನ್ನು ನಾವು ನೋಡಿಯಾಗಿದೆ. ಈ ಮಣ್ಣಿನ ವಾಸನೆಯ ಘಾಟು ಕೇವಲ ಗಂಟುಗಂಟಾದ ಸಂಕೇತ ಪ್ರತಿಮೆಗಳಲ್ಲಿಯೇ ತನ್ನ ಸಾರ್ಥಕತೆಯನ್ನು ಪಡೆಯಲು ಹವಣಿಸಿ, ಸಾಹಿತ್ಯಕ್ಕೆ ಯಾವ ಹೊಸ ಆಯಾಮವನ್ನು ನೀಡದೆ, ಜನಸಾಮಾನ್ಯನ ಹತ್ತಿರವೂ ಸುಳಿಯದೆ ಭಾರೀ ಸೋಲನ್ನು ಅನುಭವಿಸಿದ್ದನ್ನೂ ನಾವು ನೋಡಿಯಾಗಿದೆ. ಹೀಗೆಲ್ಲ ಆಗುವುದಕ್ಕೆ ಕಾರಣ : ಸಾಹಿತ್ಯವೆಂಬುದು ಕೇವಲ ಹೊಸೆಯುವ ಕೆಲಸ ಎಂದು ಈ ಜನ ತಿಳಿದುಕೊಂಡದ್ದು; ಜೀವನಾನುಭವಕ್ಕೆ ಮಹತ್ವ ಕೊಡದೆ ಹೋದದ್ದು; ಭಾಷೆಯ ಹೊಸ ಹೊಸ ಆವಿಷ್ಕಾರಗಳತ್ತ ಗಮನ ಹರಿಸದೆ ಹೋದದ್ದು ; ಕೂಪಮಂಡೂಕತನವನ್ನು ಬಿಟ್ಟು ವಿಶಾಲ ಪ್ರಪಂಚವನ್ನು ನೋಡುವ ಅವಕಾಶವನ್ನು ಕಳೆದುಕೊಂಡದ್ದು; ಕಾಮವನ್ನು ಒಂದು ಸಮಸ್ಯೆಯನ್ನಾಗಿ ಪರಿಗಣಿಸಿದರೂ, ಅದರ ಆವಿಷ್ಕಾರಕ್ಕೆ ತೊಡಗದೆ, ಕೇವಲ ಹೆಣ್ಣಿನ ವಾಸನೆಯಲ್ಲಿ ಖುಷಿಪಟ್ಟದ್ದು ಇತ್ಯಾದಿ ಆದರೆ ಮಧ್ಯಮ ವರ್ಗದ ಈ ಸಾಹಿತಿಗಳಿಗೆ ಕೆಲವು ಸಹಜ ಮಿತಿಗಳಿದ್ದವೂ ಎಂಬುದನ್ನು ನಾವು ಮರೆಯಬಾರದು.

ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವಿತವಾದ ಕೆಲವು ಕನ್ನಡ ಕಾದಂಬರಿಗಳು ಹುಟ್ಟಿಕೊಂಡಿರುವುದು ನಮಗೆ ಈಗಾಗಲೇ ತಿಳಿದ ಸಂಗತಿ. ಆ ಕಾದಂಬರಿಗಳನ್ನು ಓದುತ್ತ ಹೋದಂತೆಲ್ಲ ಯಾವುದೇ ಪಾಶ್ಚಾತ್ಯ ದೇಶದ ಕಾದಂಬರಿಯೊಂದನ್ನು ನಕಲು ಮಾಡಿದಂತೆ ಇದೆ ಅಲ್ಲ? ಎಂಬ ಗುಮಾನಿ ಬರತೊಡಗುತ್ತದೆ. ಅಂದರೆ ಅಷ್ಟರಮಟ್ಟಿಗೆ ಆ ಕಾದಂಬರಿಗಳು ಅನ್ಯರಿಂದ ಪ್ರಭಾವಿತವಾದವುಗಳು. ಬೇರೆಯವರಿಂದ ಪ್ರಭಾವಿತವಾಗುವುದು, ಹೊಸತನವನ್ನು ಬರಮಾಡಿಕೊಳ್ಳುವುದು ತಪ್ಪು ಎಂದು ಅರ್ಥ ಅಲ್ಲ; ಹೊಸತನ ನಮ್ಮ ಮನೆಯನ್ನು ಶ್ರೀಮಂತಗೊಳಿಸಬೇಕೇ ವಿನಾ ಅದು ನಮ್ಮತನವನ್ನೇ ಸಂಪೂರ್ಣವಾಗಿ ನಾಶಮಾಡಿ ಹುಯ್ಲು ಎಬ್ಬಿಸಬಾರದು; ದಾರಿ ತಪ್ಪಿಸಬಾರದು.

ಪ್ರಸ್ತುತ ಎಚ್. ಎಲ್. ನಾಗೇಗೌಡ ಅವರ ದೊಡ್ಡಮನೆ ಕಾದಂಬರಿ ಗ್ರಾಮೀಣ ಬದುಕಿನ ಇಡಿಯಾದ ಚಿತ್ರಣವನ್ನು ಕೊಡುವುದರಲ್ಲಿ ಯಶಸ್ವಿಯಾಗಿದೆ. ಇದು ಒಂದು ಪ್ರಾದೇಶಿಕ ಕಾದಂಬರಿಯಾದರೂ ಹಳ್ಳಿಗಳ ದೇಶವಾದ ಭಾರತದ ಒಟ್ಟು ಬದುಕಿನ ಚಿತ್ರಣವನ್ನು ಸಂಕೇತಿಸುತ್ತದೆ. ಕಾದಂಬರಿಕಾರರಿಗೆ ತನ್ನತನದ ಅರಿವು ಇದೆ; ಮೇಲಾಗಿ ದಟ್ಟ ಜೀವನಾನುಭವವಿದೆ. ಕಾದಂಬರಿಯನ್ನು ಓದುತ್ತ ಹೋದಂತೆಲ್ಲ ವಾಚಕರು ಕಾದಂಬರಿಯಲ್ಲಿ ಹೊಮ್ಮುವ ಜೀವನಾನುಭವದ ಸಾಂದ್ರತೆಯಲ್ಲಿ ತಲ್ಲೀನವಾಗಿ, ಸುಖಿಸಿ ಕೊನೆಗೆ ಒಂದು ತಾತ್ತ್ವಿಕ ಚಿಂತನೆಗೆ ಬರುವಂತಾಗುತ್ತದೆ. ಇದು ಈ ಕಾದಂಬರಿಯ ಯಶಸ್ಸಿನ ಇನ್ನೊಂದು ಗುಟ್ಟೂ ಹೌದು.

ಆದರೆ ಈ ಕಾದಂಬರಿ ಕಲಾತ್ಮಕವಾಗಿ ಸೋತಿದೆ ಎಂದು ಕೆಲವರು ಹೇಳುವುದುಂಟು. ಇದನ್ನು ಆಂಶಿಕವಾಗಿ ಒಪ್ಪಿಕೊಂಡರೂ ಪೂರ್ಣವಾಗಿ ಒಪ್ಪಲಿಕ್ಕೆ ಸಾಧ್ಯವಾಗುವುದಿಲ್ಲ. ಯಾಕೆಂದರೆ ಕಾದಂಬರಿ ಹಮ್ಮಿಕೊಂಡ ಹರವು ಬಹು ದೊಡ್ಡದು. ಇಂಥ ವಿಶಾಲ ಹರವುಳ್ಳ ಕಾದಂಬರಿಯಲ್ಲಿ ಕಾದಂಬರಿಕಾರರು ಸಾಕಷ್ಟು ಕಲಾತ್ಮಕತೆಯನ್ನು ಮೆರೆದಿದ್ದಾರೆ. ಅಲ್ಲದೆ ಕಾದಂಬರಿಕಾರರಿಗೆ ಸಾಕಷ್ಟು ಸಂಯಮ ಮತ್ತು ರೋಚಕ ನಿರೂಪಣಾ ನೈಪುಣ್ಯತೆಯೂ ಇರುವುದನ್ನು ಕಾಣಬಹುದು. ಇಲ್ಲಿ ಕಾದಂಬರಿಗೆ ಮಾನವ ಬದುಕು ಮುಖ್ಯವಾಗಿ ನಿಂತುಕೊಂಡಿದೆಯೇ ಹೊರತು ಕೇವಲ ತಂತ್ರ ಮುಖ್ಯವಾಗಿ ನಿಂತುಕೊಂಡಿಲ್ಲ. ನಾಗೇಗೌಡರು ಮಾನವ ಬದುಕಿನ ದಟ್ಟ ಮತ್ತು ಸೂಕ್ಷ್ಮ ವಿವರಣೆಯನ್ನು ಕೊಡುವುದರ ಜೊತೆಗೆ ಕಲಾತ್ಮಕತೆಯನ್ನೂ ಸಾಧಿಸಿದ್ದು ಅವರ ಇನ್ನೊಂದು ಕ್ರೆಡಿಟ್ಟೂ ಹೌದು. ಆದರೆ ಕೇವಲ ತಾಂತ್ರಿಕವಾಗಿ ಒಂದು ಕೃತಿ ಯಶಸ್ಸನ್ನು ಸಾಧಿಸಿಬಿಟ್ಟಿದ್ದೇ ಆದರೆ ಆಗ ಅದಕ್ಕೆ ದಕ್ಕಬಹುದಾದ ಬೆಲೆಯಾದರೂ ಏನು? ಹೊರಗಿನ ಆಲಂಕಾರಿಕ ವಸ್ತುಗಳಿಂದ ಸಿಂಗರಿಸಿಕೊಂಡು ಸುಂದರಿಯಂತೆ ಕಾಣುವ ಒಂದು ಹೆಣ್ಣನ್ನು ಇವಳು ತುಂಬಾ ಒಳ್ಳೆಯವಳು, ಸೌಂದರ್ಯದ ದೇವತೆ— ಹೀಗೆ ಮುಂತಾಗಿ ಹೊಗಳಿದರೆ ಆಗುವ ಅಸಹಜ, ಅನಾಹುತಗಳಂತೆಯೇ ಇದೂ ಕೂಡಾ ಆಗಿಬಿಡುತ್ತದೆ. ಆದ್ದರಿಂದ ಒಂದು ಕೃತಿ ನೀಡುವ ಜೀವನಾನುಭವ, ದೃಷ್ಟಿ

ಕೋನ ಮತ್ತು ತಾಳುವ ಧೋರಣೆಗಳೇ ಮುಖ್ಯ ಎಂಬುದನ್ನು ತಾಂತ್ರಿಕತೆಗೆ ಅಲ್ಲ ಸಲ್ಲದ ಬೆಲೆ ಕೊಡುವ ಜನರು ತಿಳಿದುಕೊಳ್ಳುವುದು ತೀರಾ ಜರೂರಾಗಿದೆ. ಕೇವಲ ತಾಂತ್ರಿಕತೆಯ ನೆಪದಲ್ಲಿ ಒಂದು ಕೃತಿ ನೀಡುತ್ತಿರುವ ಬದುಕಿನ ಸಹಜ ಮತ್ತು ಜೀವಂತ ವಾದ ಗಟ್ಟಿ ಅನುಭವಗಳನ್ನು ಬಲಿ ಕೊಡುವುದು ಯಾವ ನ್ಯಾಯ ? ಎಲ್ಲವನ್ನೂ ನಮ್ಮ ಮೂಗಿನ ನೇರಕ್ಕೆ ನೋಡಿ ತೂಕ ಮಾಡುವುದು ಸರಿಯಾದ ನಿಲುವಲ್ಲ. ನಮ್ಮ ಕೆಲವು ಪೂರ್ವಾಗ್ರಹಪೀಡಿತ ಧೋರಣೆಗಳನ್ನು ಬಿಟ್ಟು ವಿಶಾಲ ಮನಸ್ಸನ್ನೂ ಪಡೆದುಕೊಳ್ಳು ವುದು, ಮುಕ್ತ ವಾತಾವರಣವನ್ನು ನಿರ್ಮಿಸಿಕೊಳ್ಳುವುದು ವಾಸಿಯಲ್ಲವೆ ?

ಒಂದೊಂದು ಸಾಹಿತ್ಯ ಪ್ರಕಾರ ಒಂದೊಂದು ರೀತಿಯ ಕಲಾತ್ಮಕತೆಯನ್ನು ಪಡೆದುಕೊಂಡಿರುತ್ತದೆ ಎಂಬುದೇನೋ ನಿಜ. ಆದರೆ ಕಲಾತ್ಮಕತೆ ಎನ್ನುವುದು ಯಾವ ರೀತಿ ಇರಬೇಕು, ಎಷ್ಟು ಇರಬೇಕು ಎಂದು ಹೇಗೆ ನಿಖರವಾಗಿ, ನಿರ್ದುಷ್ಟವಾಗಿ ಹೇಳು ವುದು ? ಒಂದೇ ರೀತಿಯ ಜೀವನಾನುಭವವುಳ್ಳ (ಅಥವಾ ಇಲ್ಲದ) ಜನರು ಒಂದೇ ಬಗೆಯ ಸಾಹಿತ್ಯಿಕ ಕಲಾತ್ಮಕತೆಯನ್ನು ಅಥವಾ ತಂತ್ರವನ್ನು ರೂಪಿಸಿಕೊಂಡು ಅದುವೇ ಪರಮ ಶ್ರೇಷ್ಠವಾದುದು ಎಂದು ಘೋಷಿಸಲು ಶುರುಮಾಡುತ್ತಾರೆ. ಕೆಲವು ಚೈತನ್ಯ ಹೀನ, ಅಪಕ್ವ ಮತ್ತು ಅರೆ ಅನುಭವಗಳನ್ನು 'ತಂತ್ರ' ಎನ್ನುವ ಕುಸುರಿ ಕೆಲಸದಲ್ಲಿ ಹೆಣೆದು, ಇದೊಂದು ಕಲಾತ್ಮಕ ಯಶಸ್ಸನ್ನು ಪಡೆದ ಶ್ರೇಷ್ಠ ಕೃತಿ ಎಂದು ಹೇಳ ಹೊರಟರೆ, ಅಂಥ ಕೃತಿಗೆ ನಿಜವಾದ ಬೆಲೆ ದಕ್ಕಿದಂತಾಗುವುದಿಲ್ಲ. ಇರಲಿ, ಆದರೆ ಬೇರೆ ರೀತಿಯವಾದ ಜೀವಂತ ಮತ್ತು ಹಸಿ ಹಸಿ ಅನುಭವಗಳನ್ನು ಪಡೆದವನಿಂದ ಒಂದು ಉತ್ತಮ ಕೃತಿ ರಚಿತವಾದಾಗ, ಅದರ ವಸ್ತು, ಭಾಷೆ, ಶೈಲಿ, ಧೋರಣೆ, ನಿರೂಪಣಾ ಕ್ರಮ—ಇವು ಭಿನ್ನ ಮತ್ತು ವಿಶಿಷ್ಟವಾಗಿರುವುದು ಸಹಜವೇ ಆಗಿರುತ್ತದೆ. ಆಗ ಅಂಥ ಕೃತಿಯನ್ನು ಯಾವ ಮಾನದಂಡಗಳಿಂದ ಅಳೆದು ಮೌಲ್ಯಮಾಪನ ಮಾಡುವುದು? ಆಗ ನಮ್ಮ ಪೂರ್ವ ನಿಯೋಜಿತ, ಪೂರ್ವಾಗ್ರಹಪೀಡಿತ ಮತ್ತು ಚೈತನ್ಯಹೀನ ರೂಢಗತ ಮಾನದಂಡಗಳನ್ನು ಬಿಟ್ಟು', ಆ ಹೊಸ ಕೃತಿಯ ಹರವು, ವಸ್ತುವಿನ್ಯಾಸ, ಭಾಷೆ, ನಿರೂಪಣಾಕ್ರಮ, ಧೋರಣೆ—ಇವುಗಳಿಗೆ ತಕ್ಕನಾದ ರೀತಿಯಲ್ಲಿ, ಚೈತನ್ಯ ಶಾಲಿಯಾದ, ಪೂರ್ವಾಗ್ರಹರಹಿತ ಮತ್ತು ಪೊಚ್ಚ ಪೊಸತಾದ ಮಾನದಂಡಗಳನ್ನು ಸೃಷ್ಟಿಸಿಕೊಳ್ಳುವುದು ಅನಿವಾರ್ಯವೇ ಆಗುತ್ತದೆ. ಈ ರೀತಿಯ ಹೊಸ ಮಾನದಂಡ ಗಳನ್ನು ರೂಪಿಸಿಕೊಳ್ಳಲಿಕ್ಕೆ ಹೊಸ ಆಯಾಮಗಳನ್ನು ಪಡೆದ ಆ ಕೃತಿಯೇ ಪ್ರೇರಕ ಶಕ್ತಿಯಾಗಿ ನಿಂತುಕೊಳ್ಳುತ್ತದೆಂಬುದನ್ನೂ ಗಮನದಲ್ಲಿಡಬೇಕು.

ಇನ್ನು ನೇರವಾಗಿ ಕೆಂಗಣ್ಣನ ಪಾತ್ರದ ಕಡೆಗೆ ಬರೋಣ. ಕೆಂಗಣ್ಣ ಲಿಂಗೇಗೌಡರ ಚಿಕ್ಕಪ್ಪನ ಮಗ ಕೊನೆಯ ತಮ್ಮ. ಕಾದಂಬರಿಯಲ್ಲಿ ಕೆಂಗಣ್ಣನ ಪ್ರವೇಶ ಒಂದು ಹೊಸ ತಿರುವನ್ನೇ ತಂದುಕೊಡುತ್ತದೆ. ಇಲ್ಲಿಯವರೆಗೂ ನಿಧಾನಗತಿಯಿಂದ ಸಾಗುತ್ತಿದ್ದ ಕಾದಂಬರಿ, ಕೆಂಗಣ್ಣ ರತ್ನರ ಪ್ರವೇಶದಿಂದ ಹೊಸ ಚಾಲನೆ ಮತ್ತು ಶಕ್ತಿ ಪಡೆದು

ಉತ್ಸಾಹಶಾಲಿಯಾಗಿ ತೀವ್ರಗತಿಯಿಂದ ಸಾಗತೊಡಗುತ್ತದೆ. ಸ್ವತಂತ್ರ ಲಹರಿಯ ಕೆಂಗಣ್ಣ ಮತ್ತು ಪ್ಯಾಟಿಯ ತಳುಕು ಬಳುಕಿನ ರತ್ನ ಇವರಲ್ಲಿ ಬೆಳೆಯುವ ಪ್ರೇಮ, ಅವರು ಆಡುವ ಪ್ರೇಮಕಾಮದ ಆಟ, ಹುಡುಗಾಟಗಳು, ಭರ್ಜರಿಯಾಗಿ ನಡೆಯುವ ಇವರ ಮದುವೆ, ಅನಂತರದ ನನ್ನೂರಿನಲ್ಲಿ ನಡೆಯುವ ಇವರಿಬ್ಬರ ಮಧುಚಂದ್ರ, ಕೊನೆಗೆ ದಾಯಾದಿಯಾದ ಧೂರ್ತ ರಂಗೇಗೌಡ ಮತ್ತು ಲಿಂಗೇಗೌಡರ ಪ್ರೀತಿಯ ತಮ್ಮ ಕೆಂಪಣ್ಣನ ವಿಧವೆ ಹೆಂಡತಿ, ದೇವೀರಮ್ಮನ ತಂದೆ ಕರೀಗೌಡ-ಇವರ ಕುತಂತ್ರ ಮಾತ್ಸರ್ಯ ಗಳಿಂದ ದೊಡ್ಡಮನೆ ಒಡೆದು ಸಣ್ಣದಾಗುವವರೆಗೂ ಕೆಂಗಣ್ಣ ಕಾದಂಬರಿಯಲ್ಲಿ ವಿಶೇಷ ಪಾತ್ರವನ್ನು ವಹಿಸಿದ್ದಾನೆ. ಆದ್ದರಿಂದಲೇ ವಾಚಕರು ಈ ಪಾತ್ರದ ಬಗ್ಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ.

ಮಾರೀಹಬ್ಬದ ನಿಮಿತ್ತವಾಗಿ ಪಂಜು ಹಿಡಿದೇ ಕೆಂಗಣ್ಣನ ಪ್ರವೇಶವಾಗುತ್ತದೆ. ಈಪಂಜು ಕೆಂಗಣ್ಣನ ಸ್ವಭಾವವನ್ನು ಮತ್ತು ಅವನ ಇಡೀ ವ್ಯಕ್ತಿತ್ವವನ್ನೇ ಸಂಕೇತಿಸು ವಂಥದ್ದು. ಇವನ ಭಾವೀ ಪತ್ನಿ ರತ್ನಳೂ ಈ ಮಾರೀ ಹಬ್ಬದಲ್ಲೇ ಬಂದು ನಿಲ್ಲು ತ್ತಾಳೆ. ಹಳ್ಳಿಯ ಒರಟುತನವಿಲ್ಲದ, ಪ್ಯಾಟಿಯ ತಳುಕು ಬಳುಕಿನ ಸುಂದರಿ ಯಾದ ಈ ರತ್ನಳ ರೂಪಕ್ಕೆ ಹರೆಯದ ಚಿಗುರು ಮೀಸೆಯ ಈ ಕೆಂಗಣ್ಣ ಮರಳಾಗು ತ್ತಾನೆ. ಇಬ್ಬರೂ ತಮ್ಮ ಒಲವು ಬಯಕೆಗಳನ್ನು ಕಣ್ಣಿನಲ್ಲೇ ಸಂವಹನ ಮಾಡಿಕೊಳ್ಳು ತ್ತಾರೆ. ಅಂತೂ ಮಾರೀಹಬ್ಬ ಕೆಂಗಣ್ಣ ರತ್ನರ ಪ್ರೇಮದ ಬುನಾದಿಯ ಮೊದಲ ಹಂತವಾಗಿ ರೂಪುಗೊಂಡಿದೆ. ರತ್ನ ಕೆಂಗಣ್ಣರನ್ನು ಒಂದುಗೂಡಿಸಿದ ಈ ಮಾರೀಹಬ್ಬ ಮುಂದೆ ದೊಡ್ಡಮನೆಯನ್ನು ಒಡೆಯುವುದಕ್ಕೂ ಪರೋಕ್ಷವಾಗಿ ಯಾದರೂ ಕಾರಣ ವಾಗುತ್ತದೆಂಬುದನ್ನು ಇಲ್ಲಿಯೇ ಸ್ಮರಿಸಬಹುದು.

ಕೆಂಗಣ್ಣರತ್ನರ ಪ್ರೇಮ ಮಹಾನವಮಿಯ ಸಮೃದ್ಧ ಬೆಳೆಯಂತೆ ಬೆಳೆಯುತ್ತಲೇ ಹೋಯಿತು. ಇವರ ಪ್ರೇಮದ ಸಮೃದ್ಧತೆಗೆ ಮಹಾನವಮಿಯ ಬೆಳೆಯ ಸಮೃದ್ಧತೆಯನ್ನು ಹೋಲಿಸಿರುವುದು ತೀರಾ ಔಚಿತ್ಯಪೂರ್ಣವೂ, ಸಹಜವೂ, ಮತ್ತು ವಾಸ್ತವವೂ ಆಗಿದೆ. ಕಾದಂಬರಿಕಾರರು ಬಯಲು ಸೀಮೆಯ ಆ ಒಕ್ಕಲು ಮಕ್ಕಳ ಪ್ರೇಮ ಕಾಮದಾಟಗಳನ್ನು ಹೆಚ್ಚು ಸಂಯಮದಿಂದ, ಔಚಿತ್ಯಪೂರ್ಣವಾಗಿ, ಸಹಜ ವಾಗಿ, ಓದುಗರು ಆ ಪ್ರೇಮದಲ್ಲಿ ಖುಷಿಪಡುವಂತೆ ಚಿತ್ರಿಸಿದ್ದಾರೆ. ಕೆಂಗಣ್ಣ ಹಳ್ಳಿಯ ಹೈದ. ಹಳ್ಳಿಗಳಲ್ಲಿ ಪ್ರೇಮ ಕಾಮದಾಟಗಳನ್ನು ಮದುವೆಯ ಮುಂಚೆ ಬಹಿರಂಗವಾಗಿ ಆಡಲು ಸಾಧ್ಯವಿಲ್ಲ. ಯಾಕೆಂದರೆ ಪ್ರೇಮ ಕಾಮದ ಬಗ್ಗೆ ಹಳ್ಳಿಯ ಪರಿಸರದಲ್ಲಿ ಸ್ವಚ್ಛಂದವಾಗಿ ನಡೆದುಕೊಳ್ಳುವುದು ದೊಡ್ಡ ಅಪರಾಧ. ಹಳ್ಳಿಗರು ಇಂಥ ವಿಷಯಗಳ ಬಗ್ಗೆ ಕೆಲವೊಂದು ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸುತ್ತಾರೆ. ಆದರೆ ಸ್ವತಂತ್ರ ಬುದ್ಧಿಯ ಹಳ್ಳಿಯ ಹೈದ ಕೆಂಗಣ್ಣ ಇದಾವುದನ್ನೂ ಗಮನಕ್ಕೆ ತೆಗೆದುಕೊಳ್ಳದೆ, ಕದ್ದು ಮುಚ್ಚಿಯಾದರೂ ರತ್ನಳ ಜೊತೆಗೆ ಆ ಎಲ್ಲ ಆಟಗಳನ್ನೂ ಆಡಿದ, ಕೊನೆಗೆ ತಾನು

ಅವಳನ್ನು ಮದುವೆಯಾಗುವುದಾಗಿಯೂ ವಚನ ಕೊಟ್ಟ. ಹೀಗೆ ಇವರಿಬ್ಬರ ನಡುವಿನ ಪ್ರೇಮ ಗರಿಕಟ್ಟಿಕೊಂಡು ನಿಂತಿತು. ಸೋದರಮಾವನಾದ ಈ ಕೆಂಗಣ್ಣ ಸಂಪ್ರದಾಯ ದಂತೆ ರತ್ನಳ ಮುಂಗೈ ಮೇಲೆ ಅರಗಿಣಿಯನ್ನು ತನ್ನ ಹೆಸರಿನ ಮೇಲೆ ಹಚ್ಚೆ ಹುಯ್ಯಿಸಿದ್ದು ಅವರಿಬ್ಬರ ನಡುವೆ ಬೆಳೆದ ಪ್ರೇಮದ ಆಧಿಕ್ಯವನ್ನು ಧ್ವನಿಸುತ್ತದೆ. ಅರಗಿಣಿ ಜೀವರಸವನ್ನು ಸಂಕೇತಿಸುವುದರಿಂದ ರತ್ನಳ ಮುಂಗೈ ಮೇಲಿನ ಆ ಅರಗಿಣಿ ಮುಂದೆ ಕೆಂಗಣ್ಣ ರತ್ನಳನ್ನು ಪಡೆದುಕೊಳ್ಳುವುದನ್ನು ಧ್ವನಿಸುತ್ತದೆ.

ಆದರೆ ಕೆಂಗಣ್ಣನ ಪ್ರೇಮದ ಪುತ್ಥಳಿಯಾದ ರತ್ನ, ದೊಡ್ಡಮನೆಯ ಯಜಮಾನ ಲಿಂಗೇಗೌಡರ ದಾಯಾದಿ ರಂಗೇಗೌಡರ ತಂಗಿ ಮೈಸೂರಮ್ಮನ ಮಗಳು. ದಾಯಾದಿ ಮಾತ್ಸರ್ಯದಿಂದ ಉರಿಯುತ್ತಿರುವ ಕುತಂತ್ರಿ ರಂಗೇಗೌಡನ ಮನೆಯ ಹೆಣ್ಣನ್ನು ತಮ್ಮ ಮನೆಗೆ ತಂದು ತುಂಬಿಸಿಕೊಳ್ಳುವುದು ಲಿಂಗೇಗೌಡರಿಗೆ ಸರಿಕಾಣಲಿಲ್ಲ, ಆದರೆ ಕೆಂಗಣ್ಣ ಕೇಳಬೇಕಲ್ಲ. ಮದುವೆಯಾಗುವುದಾದರೆ ತಾನು ರತ್ನಳನ್ನೇ ಮದುವೆಯಾಗುವುದಾಗಿ ಹಟಹಿಡಿದ. ತನ್ನ ಅಣ್ಣ ತನ್ನ ಮೇಲೆ ಎರಡು ಬಗೆಯುತ್ತಿದ್ದಾನೇದು ಬೇರೆಯವರ ಎದುರಿಗೆ ಹೇಳಿಕೊಂಡು ತಿರುಗಾಡಲು ಶುರುಮಾಡಿದ. ಸಿಕ್ಕ ಸಿಕ್ಕ ಹೆಣ್ಣುಗಳನ್ನು ಕಟ್ಟಿಕೊಳ್ಳಲು ತಾನೇನು ಹುಲ್ಲುತಿನ್ನುವ ದನವೆ ? ಎಂದು ಅಂದುಕೊಂಡ. ಕೊನೆಗೆ ಮನೆಯ ಕೆಲಸಕಾರ್ಯಗಳಿಗೆ ಹೋಗುವುದನ್ನೂ ನಿಲ್ಲಿಸಿ ರತ್ನಳನ್ನೇ ಮದುವೆಯಾಗುವುದಾಗಿ ಚಳುವಳಿ ಆರಂಭ ಮಾಡಿಬಿಟ್ಟ. ಇಲ್ಲಿಯೆ ನಮಗೆ ಕೆಂಗಣ್ಣನ ಪಾತ್ರ ಹೆಚ್ಚು ಆತ್ಮೀಯವಾಗಿ, ವಿಶಿಷ್ಟವಾಗಿ ಕಾಣಲು ಶುರುಮಾಡುತ್ತದೆ. ಯಾಕೆಂದರೆ ಲಿಂಗೇಗೌಡರ ಉಳಿದ ಎಲ್ಲ ತಮ್ಮಂದಿರೂ ತಮ್ಮ ಎಲ್ಲ ಜವಾಬ್ದಾರಿಗಳನ್ನೂ ಕಳೆದುಕೊಂಡು ಮನೆಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ತೆಪ್ಪಗೆ ಇದ್ದುಬಿಟ್ಟಿದ್ದರು. ಅವರಾರಿಗೂ ಓದು ಬರಹ ಬರುತ್ತಿರಲಿಲ್ಲ. ವ್ಯವಹಾರಜ್ಞಾನವೂ ಇರಲಿಲ್ಲ. ಕೆಂಗಣ್ಣನಿಗೂ ಓದು ಬರಹ ಗೊತ್ತಿರಲಿಲ್ಲ, ವ್ಯವಹಾರಜ್ಞಾನವೂ ಇರಲಿಲ್ಲ. ಆದರೆ ತಾನು ಮೆಚ್ಚಿದ ಕಡೆಗೇ ಮದುವೆ ಮಾಡಬೇಕೆಂದು ಹಟಹಿಡಿಯುತ್ತಾನೆ. ತನ್ನ ಸ್ವಂತಿಕೆಯನ್ನು ಮೆರೆದು ಬಿಡುತ್ತಾನೆ. ಅಣ್ಣನಿಗೆ ಎದುರು ಮಾತಾಡುವುದರಲ್ಲಿಯೂ ಹಿಂತೆಗೆಯುವುದಿಲ್ಲ. ಆದರೆ ಉಳಿದ ಎಲ್ಲ ತಮ್ಮಂದಿರು ಎಂದೂ ಅಣ್ಣನಿಗೆ ಬಾಯಿತಪ್ಪಿಯೂ ಕೂಡ ಎದುರು ಮಾತಾಡಿದ್ದಿಲ್ಲ. ಹೀಗೆ ತನ್ನ ಮದುವೆ ವಿಚಾರದಲ್ಲೆ ಸ್ವಂತಿಕೆಯನ್ನು ಕೆಂಗಣ್ಣ ಮೆರೆದು ಉಳಿದ ಎಲ್ಲ ತನ್ನ ಅಣ್ಣಂದಿರಿಗಿಂತ ವಿಶಿಷ್ಟವಾಗಿ ನಿಲ್ಲುತ್ತಾನೆ ; ಒಂದು ರೀತಿಯಲ್ಲಿ ಓದುಗರ ಅನುಕಂಪವನ್ನು ಗಿಟ್ಟಿಸಿಕೊಂಡು ಬಿಡುತ್ತಾನೆ. ಇದು ಈ ಪಾತ್ರಕ್ಕೆ ದಕ್ಕಿದ ಹೊಸ ಆಯಾಮವೂ ಕೂಡ ಹೌದು.

ತಮ್ಮನ ಮನಸ್ಸಿಗೆ ಅಡ್ಡ ಬರದ ಗೌಡರು ರತ್ನಳನ್ನೆ ತಂದು ಭರ್ಜರಿಯಾಗಿ ಲಗ್ನ ಮಾಡುತ್ತಾರೆ. ಅನೇಕ ವರ್ಷಗಳಿಂದ ದೊಡ್ಡಮನೆಯನ್ನು ಒಡೆದು ಸಣ್ಣಮನೆಯನ್ನಾಗಿ ಮಾಡಬೇಕೆಂದು ಹೊಂಚು ಹಾಕುತ್ತಿದ್ದ ರಂಗೇಗೌಡ, ತನ್ನ ತಂಗಿಯ ಮಗಳಾದ

ರತ್ನಳಿಂದ ಮನೆ ಒಡೆಸುವ ಕೆಲಸವನ್ನು ಮತ್ತೆ ಶುರುಮಾಡುತ್ತಾನೆ. ಓದಿದ ಮಗನಿಗೆ ಕೆಲಸಕೊಡಿಸಬೇಕೆಂದು ಲಾಯರುಗಳ ಬೆನ್ನುಹತ್ತಿ ತಿರುಗುತ್ತಿದ್ದ ಲಿಂಗೇಗೌಡರನ್ನು ಕಂಡು, ದೊಡ್ಡ ಮನೆಯ ಆಸ್ತಿಪಾಸ್ತಿಯನ್ನೆಲ್ಲ ಮಗನ ಹೆಸರಿಗೇ ಬರೆಯಲು ಲಾಯರುಗಳನ್ನು ಹುಡುಕುತ್ತಿದ್ದಾರೆ ಎಂದು ರತ್ನ ಮತ್ತು ವಿಧವೆ ದೇವಿರಮ್ಮನ ಕಿವಿಗೆ ತುಂಬುತ್ತಾನೆ. ಬೇಲಿಗೆ ಓತಿ ಸಾಕ್ಷಿಯೆಂಬಂತೆ ದೇವಿರಮ್ಮನ ತಂದೆ ಕರೀಗೌಡನೂ ರಂಗೇಗೌಡನ ಈ ಮಾತಿಗೆ ಪುಷ್ಟಿಕೊಡುತ್ತಾನೆ. ರತ್ನಳ ಮುಖಾಂತರ ಕೆಂಗಣ್ಣನ ಕಿವಿಗೆ ತಲುಪಿದ ಈ ಮಾತು ಕೆಂಗಣ್ಣನನ್ನು ಕಾದ ಕಬ್ಬಿಣದಂತೆ ಮಾಡಿಬಿಡುತ್ತದೆ. ಹೊಲಕ್ಕೆ ಕೆಲಸಕ್ಕೆ ಹೋಗದೆ ಹರತಾಳ ಹೂಡಿ ಅಣ್ಣನಿಗೆ ತೋಚಿದ ಹಾಗೆ ಬೈದುಬಿಡುತ್ತಾನೆ. ಲಿಂಗೇಗೌಡರ ವ್ಯಕ್ತಿತ್ವಕ್ಕೆ ಸ್ವಲ್ಪವೂ ಸರಿಹೋಗದ ಮಾತುಗಳನ್ನಾಡಿ ಅವರ ಮನಸ್ಸನ್ನು ನೋಯಿಸಿಬಿಡುತ್ತಾನೆ. ಇಲ್ಲಿ ಇವನ ವ್ಯಕ್ತಿತ್ವ ತೀರಾ ಕಳಪೆಯಾಗಿ ಕಾಣುತ್ತದೆ. ಯಾಕೆಂದರೆ ಯಾರೋ ಹೇಳಿದ ಮನೆಮುರುಕ ಚಾಡಿ ಮಾತುಗಳನ್ನು ಸ್ವಲ್ಪವೂ ವಿಚಾರಿಸದೆಯೇ, ಆ ಮಾತುಗಳ ಹಿಂದುಮುಂದನ್ನೂ ಅರಿಯದೇ ಉದಾತ್ತ ವ್ಯಕ್ತಿತ್ವವನ್ನುಳ್ಳ ಗೌಡರನ್ನು ನಿಂದಿಸುವ ಈತ ನಿಜಕ್ಕೂ ಖಳನಾಯಕನಾಗಿಯೇ ಗೋಚರಿಸುತ್ತಾನೆ. ಮನುಷ್ಯ ಯಾವ ಕೆಲಸವನ್ನಾದರೂ ಮಾಡಬೇಕಾದರೆ ಯೋಚಿಸುವುದು ತೀರಾ ಅಗತ್ಯವಾಗಿರುತ್ತದೆ. ಯೋಚನಾಶಕ್ತಿಯೊಂದರಿಂದಲೇ ಮನುಷ್ಯ ಪ್ರಾಣಿವರ್ಗದಿಂದ ಭಿನ್ನವಾಗಿದ್ದಾನಲ್ಲವೆ ? ಸಹನೆ, ಸಂಯಮ, ಪ್ರೀತಿ, ವಾತ್ಸಲ್ಯ, ವೈಶಾಲ್ಯತೆ ಇತ್ಯಾದಿ ಒಳ್ಳೆಯ ಗುಣಗಳನ್ನು ಹೊಂದಿದ ಉದಾತ್ತ ವ್ಯಕ್ತಿತ್ವವುಳ್ಳ ಲಿಂಗೇಗೌಡರ ಪಾತ್ರದ ಮುಂದೆ ವಿಚಾರಹೀನ, ದುಡುಕಿನ ಮತ್ತು ಸಿಡುಕಿನ ಈ ಕೆಂಗಣ್ಣನ ಪಾತ್ರ ತೀರಾ ಕಳಪೆಯಾಗಿ ಗೋಚರಿಸುತ್ತದೆ. ಆದರೆ ಮುಂದೆ ತನ್ನ ಹೆಂಡತಿ ಹಡೆದಾಗ ಅವಳ ಬಾಣಂತನವನ್ನು ಹೆಚ್ಚು ವೈಭವದಿಂದ ಮಾಡಿಸಿದ ಲಿಂಗೇಗೌಡರ ದೊಡ್ಡಗುಣವನ್ನು ಕಂಡು ಈ ಕೆಂಗಣ್ಣ ಪಶ್ಚಾತ್ತಾಪ ಪಡುವುದನ್ನು ನೋಡಿ ಓದುಗರು ಅವನಕಡೆಗೆ ಅನುಕಂಪವನ್ನು ವ್ಯಕ್ತಪಡಿಸುವಂತಾಗುತ್ತದೆ. ಇಲ್ಲಿ ರತ್ನಳ ಪಾತ್ರವೂ ಕೆಂಗಣ್ಣನ ಪಾತ್ರದಂತೆಯೇ, ಅದರ ಇನ್ನೊಂದು ಪ್ರತಿಮೆಯಂತೆಯೇ ಸಾಗುತ್ತದೆ.

ಲಿಂಗೇಗೌಡರ ದೊಡ್ಡಗುಣಕ್ಕೆ ತಲೆಬಾಗಿದ ಕೆಂಗಣ್ಣನು ಮುಂದೆ ಯಾರ ಮಾತಿಗೂ ಬಲಿಬಿದ್ದು ಮನೆ ಒಡೆಯುವ ಕೆಲಸಕ್ಕೆ ಕೈಹಾಕುವುದಿಲ್ಲ. 'ಯಾಕೆಂದರೆ ಲಿಂಗೇಗೌಡರು ಇಡೀ ಮನೆತನದ ಭಾರವನ್ನೆಲ್ಲ ತಲೆಯ ಮೇಲೆಯೇ ಹೊತ್ತುಕೊಂಡು, ಅನೇಕ ಕಷ್ಟನಷ್ಟಗಳನ್ನು ಎದುರಿಸುತ್ತ ಸಾಗಿದ್ದರು. ಈಗ ಕೆಂಗಣ್ಣನಿಗೆ ಮನೆತನ ನಡೆಸುವ ಜವಾಬ್ದಾರಿಯ ಅರಿವು ಆಗತೊಡಗಿತ್ತು. ಕೂಡಿ ಬಾಳುವುದೇ ಒಳ್ಳೆಯದೆಂದು ಅನ್ನಿಸತೊಡಗಿತ್ತು. ಪಾಲು ತೆಗೆದು ಕೊಂಡು ಬೇರೆಯಾದರೆ ತುಂಬಾ ಕಷ್ಟಪಡಬೇಕಾಗುತ್ತದೆಂಬ ಅನಿಸಿಕೆಯು ಬರತೊಡಗಿತ್ತು. ಮೇಲಾಗಿ ಅಣ್ಣ ತುಂಬಾ ಒಳ್ಳೆಯವರು, ಯಾರಿಗೂ ಅನ್ಯಾಯ ಮಾಡುವಂಥವರಲ್ಲ ಇಂಥದರಲ್ಲಿ ಪಾಲುಕೇಳಿ ಪಡೆಯುವುದಾದರೂ ಯಾವ

ಸುಖಕ್ಕೆ ? ಎಂಬ ತೀರ್ಮಾನಕ್ಕೆ ಬರತೊಡಗಿದ್ದ. ಲಿಂಗೇಗೌಡರು ತಮ್ಮ ಸ್ವಂತ ಸ್ವಾರ್ಥಕ್ಕಾಗಿ ಮನೆ ಒಂದೇ ಆಗಿ ಇರಲೆಂದು ಬಯಸಿದ್ದರೆ ಕೆಂಗಣ್ಣ ಪಾಲುಕೇಳುವುದರಲ್ಲೆ ಯಾವ ತಪ್ಪೂ ಇಲ್ಲ. ಆದರೆ ಗೌಡರು ಎಂದೂ ತಮ್ಮ ಸ್ವಂತ ಸ್ವಾರ್ಥವನ್ನು ಬಯಸಿದವರಲ್ಲ. ಎಲ್ಲರಿಗೂ ಒಳ್ಳೆಯದನ್ನು ಬಯಸುವುದೇ ಅವರ ಕರ್ತವ್ಯವನ್ನಾಗಿ ಮಾಡಿಕೊಂಡಿದ್ದರು. ಹಾಗೆ ನಡೆದೂ ತೋರಿಸಿದ್ದರು, ತೋರಿಸುತ್ತಿದ್ದರು. ಆದರೆ ಕೆಂಗಣ್ಣ ಪಾಲು ಕೇಳುವ ತೆ ಅವನ ಉಳಿದ ಅಣ್ಣಂದಿರು ಪಾಲು ಕೇಳುವುದಿಲ್ಲ. ಅವರೆಲ್ಲ ಗೌಡರಿಗೆ ಹೊಂದಿಕೊಂಡು ಬಾಳುವೆ ಮಾಡುತ್ತಿದ್ದಾರೆ. ಅವರಿಗೆ ತಮ್ಮ ಅಣ್ಣ ಮೋಸಮಾಡಲಾರ ಎಂಬ ಖಚಿತ ನಿಲುವು ಮೂಡಿದೆ. ಆದರೆ ಕೆಂಗಣ್ಣನಿಗೆ ಆ ನಿಲುವು 'ಏಕೆ ಬಂದಿಲ್ಲ ? ಎಂದು ನಮಗೆ ಗುಮಾನಿ ಹುಟ್ಟುತ್ತದೆ. ಇದುವೆ ಆ ಪಾತ್ರದ ವೈಶಿಷ್ಟ್ಯ. ಇಲ್ಲೆಲ್ಲ ಕೆಂಗಣ್ಣನ ಸ್ವತಂತ್ರಪ್ರಿಯತೆ, ಸ್ವಾರ್ಥಧೋರಣೆ, ಒಡೆದು ಕಾಣುತ್ತದೆ.

ಕೆಂಗಣ್ಣನ ಪ್ರೀತಿಯ ಎತ್ತು ಸುಂಟರಗಾಳಿ ಸತ್ತನಂತರ ಶಾಸ್ತ್ರ ಕೇಳಲು ಹೋದಾಗ ಶಾಸ್ತ್ರಗಾರ ರಂಗೇಗೌಡನ ಮನೆಮುರುಕ ಮಾತಿನಂತೆ 'ಆ ಪ್ರಾಣಿ ಮನೆಗೆ ಬಂದಗಳಿಗೆ, ತಂದವರ ಮನಸ್ಸು ಚಂದಾಗಿಲ್ಲ. ಅದು ನಿನ್ನ ಪ್ರಾಣ ತೆಗೆಯೋ ಬದಲು ಆದರ ಪ್ರಾಣ ಅದೇ ತಕ್ಕೊಂಬುಡ್ತು—ಅದು ನಿನ್ನ ಅದೃಷ್ಟ" ಎಂದು ಹೇಳಿ ಇನ್ನೂ ಮುಂದೆ ಹೋಗಿ "ಆ ಎತ್ತು ಸತ್ತದ್ದು ನಿನಗೆ ಸೂಚನೆ ಅಂತ ತಿಳಕೊ, ಅದು ಸತ್ತಮನೆಯ ತಲೆಬಾಗಿಲಿನಲ್ಲಿ ನಿಮ್ಮ ಅಣ್ಣದೀರು ತಮ್ಮದೀರು ಒಟ್ಟಿಗೆ ತಿರುಗಾಡ ಕೂಡ್ದು ! ಗೊತ್ತಾಯಿತೇ ? ಇನ್ನು ಮೂರು ತಿಂಗಳೊಳಗೆ ಬೇರೆ ಮನೆ ಮಾಡಿಕೊಂಡು ಇದ್ದರೆ ಸರಿಯಾಯ್ತು. ಇಲ್ಲದಿದ್ದರೆ ಎರಡು ಕಾಲಿನ ಪ್ರಾಣಿ ನಷ್ಟ ಅಂತ ಶಾಸ್ತ್ರದಲ್ಲಿ ಹುಟ್ಟದೆ"—ಎಂದೂ ಹೇಳಿದ. ಹಳ್ಳಿಯಲ್ಲಿ ಇಂಥ ಶಾಸ್ತ್ರಗಾರರಮಾತುಗಳೇ ವೇದವಾಕ್ಯಗಳಾಗಿರುವಾಗ ಕೆಂಗಣ್ಣ ಮನೆ ಪಾಲುಕೇಳಿ ಪಡೆದ. ಆದರೆ ಪಾಲು ಕೇಳಿ ತೆಗೆದುಕೊಳ್ಳುವಾಗ, ತೀರಾ ಸಣ್ಣವನಾಗಿ ನಡೆದುಕೊಂಡ. ಅವನ ಹೆಂಡತಿ ರತ್ನಳೂ ಹಾಗೇ ವರ್ತಿಸಿದಳು.

ಹೀಗೆ ಕೆಂಗಣ್ಣನ ಪಾತ್ರ ಕಾದಂಬರಿಯಲ್ಲಿ ತನ್ನ ಸ್ವಂತಿಕೆಯನ್ನು ಮೆರೆದರೂ, ಕೆಲವೊಂದು ಸಣ್ಣತನದ ನಡವಳಿಕೆಗಳನ್ನು ಪ್ರಕಟ ಪಡಿಸಿ, ಆ ಸ್ವಂತಿಕೆಗೆ ಕುಂದುಬರುವಂತೆ ನಡೆದು ಕೊಳ್ಳುತ್ತದೆ. ಕಾದಂಬರಿಯಲ್ಲೆ ಯಾರಿಗೂ ಇಲ್ಲದ ಸ್ವಂತಿಕೆಯನ್ನು ಹೊಂದಿದ ಈ ಪಾತ್ರ ಸ್ವಲ್ಪ ಉದಾತ್ತವಾಗಿ ವರ್ತಿಸಿದ್ದರೆ ಪಾತ್ರದ ಆ ಸ್ವಂತಿಕೆಗೆ ಇನ್ನಷ್ಟು ಮೆರುಗು ಬರುತ್ತಿತ್ತು. ಆದರೆ ಮಾನವ ಸಹಜ ಬಲದೌರ್ಬಲ್ಯಗಳನ್ನು ಹೊಂದಿದ ಈ ಪಾತ್ರ ಕಾದಂಬರಿಯಲ್ಲಿ ಒಡೆದು ಕಾಣುವಂಥದ್ದು. ಅಲ್ಲದೆ ಕಾದಂಬರಿಯ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಪಾತ್ರವನ್ನೂ ವಹಿಸಿದೆ.

ರಂಗೇಗೌಡರ ಪಾತ್ರ ಕೇವಲ ದುಷ್ಟಪಾತ್ರವಾಗಿಯೇ ರಚಿತವಾಗಿರುವುದು ಸರಿ ಅಲ್ಲ ಎಂದು ಅನಿಸುತ್ತದೆ. ಲಿಂಗೇಗೌಡರ ಪಾತ್ರ ತಕ್ಕಮಟ್ಟಿಗೆ ಸರಿಯಾಗಿಯೇ ಸೃಷ್ಟಿಯಾಗಿದ್ದರೂ, ಆ ಪಾತ್ರ ಸೃಷ್ಟಿಯಲ್ಲಿ ಕಾದಂಬರಿಕಾರರು ಸ್ವಲ್ಪ ರಿಯಾಯಿತಿ ತೋರಿದ್ದಾರೆಂದೆನಿಸುತ್ತದೆ.

೧೩ ‘ದೊಡ್ಡಮನೆ’ಯ ದೊಡ್ಡವರು : ಕೆಲವು ಪಾತ್ರಗಳ ವಿಶ್ಲೇಷಣೆ

ಸದಾಶಿವ ಎಣ್ಣೆಹೊಳೆ

ಕನ್ನಡ ಕಾದಂಬರಿಯ ಹುಲುಸು ಬೆಳೆಯಲ್ಲಿ ಗಾತ್ರ, ಸೂತ್ರಗಳೆರಡರ ದೃಷ್ಟಿಯಿಂದಲೂ ಹೆಸರಿಸಬಹುದಾದ ಕಾನೂರು ಹೆಗ್ಗಡತಿ, ಮರಳಿ ಮಣ್ಣಿಗೆ, ಗ್ರಾಮಾಯಣದಂಥ ಕೆಲವೇ ಅತ್ಯುತ್ತಮ ಪ್ರಾದೇಶಿಕ ಕಾದಂಬರಿಗಳ ಸಾಲಿಗೆ ಸೇರಬಲ್ಲ ಎಚ್. ಎಲ್. ನಾಗೇಗೌಡರ ‘ದೊಡ್ಡಮನೆ’ ಬಯಲು ಸೀಮೆಯ ಒಕ್ಕಲು ಮಕ್ಕಳ ಜೀವನವನ್ನು ಕುರಿತದ್ದು. ಕುವೆಂಪು ಕೃತ ಹೆಗ್ಗಡತಿಯಲ್ಲಿ ಮಲೆನಾಡಿನ, ಕಾರಂತರ ಮರಳಿ ಮಣ್ಣಿಗೆಯಲ್ಲಿ ಘಟ್ಟದ ಕೆಳಗಿನ, ರಾವ್‌ಬಹದ್ದೂರರ ಗ್ರಾಮಾಯಣದಲ್ಲಿ ಉತ್ತರ ಕನ್ನಡದ ನೆಲದ ಸೊಗಡು ಪ್ರತಿಬಿಂಬಿತವಾಗಿರುವಷ್ಟು ದಟ್ಟವಾಗಿ ‘ದೊಡ್ಡಮನೆ’ಯಲ್ಲಿ ಕಾಣಿಸಿಕೊಂಡಿಲ್ಲವಾದರೂ ಬಯಲು ಸೀಮೆಯ ಜನಜೀವನವನ್ನು ಕುರಿತ ಮೊದಲ ಕಾದಂಬರಿಯೆಂಬ ಹೆಮ್ಮೆ ಅದಕ್ಕಿದೆ.

‘ಮರಳಿ ಮಣ್ಣಿಗೆ’ಯಂತೆ ‘ದೊಡ್ಡಮನೆ’ ಕೂಡ ಮೂರು ತಲೆಮಾರಿನ ಜೀವನವನ್ನು ಕುರಿತದ್ದು. ನಂಜೇಗೌಡರಿಂದ ಪ್ರಾರಂಭವಾಗುವ ಕಥೆ ಮೊಮ್ಮಗ ನಾಗುವಿಗೆ ಬಂದು ಮುಟ್ಟುತ್ತದೆ. ನಂಜೇಗೌಡರಾದಿಯಾಗಿ ಸುಮಾರು ಐವತ್ತು ಪಾತ್ರಗಳು ಕಾದಂಬರಿಯಲ್ಲಿ ಕಂಡು ಬರುತ್ತವೆ. ಅರ್ಜಿ ಕೊಂಬಲ್ಲ, ಪಂಡಿತ ನಿಂಗಣ್ಣ, ಪೂಜಾರಿ ಕರಿಯಣ್ಣ, ನರೀಹಳ್ಳಿ ಕರೀಗೌಡ, ಪಟೇಲ್ ರಂಗೇಗೌಡ, ದರ್ಜಿ ಶಾಮಣ್ಣ, ಮಗ್ಗದ ನರಸಿಂಹ, ಗೆಂಡೇಕಾಳ, ಗಾಣಿಗರ ವೆಂಕಟರಮಣ ಶೆಟ್ಟಿ, ಗಂಟೆಪ್ಪಿನ ಸಿಂಗಯ್ಯ, ಸುಸ್ತಿಗೌಡ, ಕಕ್ಕನಹಳ್ಳ, ಉಪಾಧ್ರಿ ಚನ್ನಪ್ಪ, ಕೊರಮರ ನರಸಮ್ಮ ಹೀಗೆ ಕಾದಂಬರಿಯಲ್ಲಿನ ಬಹುಪಾಲು ಪಾತ್ರಗಳು ತಮ್ಮ ಹೆಸರಿನ ಹಿಂದೆ, ಊರಿನ ಅಥವಾ ವೃತ್ತಿಯ ಅಥವಾ ಮತ್ತಾವುದೋ ವಿಶೇಷಣವನ್ನು ಅಂಟಿಸಿಕೊಂಡೇ ಬರುತ್ತವೆ. ಪಾತ್ರಗಳ ಹಾಗೆ ಹೆಸರುಗಳು ಕೂಡ ವಿಚಿತ್ರವೂ, ವೈವಿಧ್ಯಮಯವೂ ಆಗಿವೆ. ಈ ಬಗೆಯ ವೈವಿಧ್ಯಮಯ ಪಾತ್ರ ಸರಣಿಯಲ್ಲಿ ತಮ್ಮ ಗುಣ ನಡತೆಗಳಿಂದ ಆದರ್ಶವೆನ್ನಿಸಿಕೊಳ್ಳುವಂಥ ಕೆಲವು ಮಂದಿಯ ವಿಶ್ಲೇಷಣೆ ಈ ಲೇಖನದ ಉದ್ದೇಶ.

ನನ್ನೂರು ಎನ್ನುವ ಒಂದು ಊರು. ಅಲ್ಲಿ ದೊಡ್ಡಮನೆ ಎನ್ನುವುದು ಒಂದು ಮನೆ, ಆ ಮನೆ ಹೆಸರಿಗೆ ತಕ್ಕಂತೆ ದೊಡ್ಡದೇ ಹೌದು. ಮನೆಯಷ್ಟೇ ಅಲ್ಲ ಮನೆಯಲ್ಲಿರುವವರ ಗುಣ ಕೂಡ ದೊಡ್ಡದೆ. ದೊಡ್ಡಮನೆಗೆ ಕಳಶವಿಟ್ಟಂತೆ ನಂಜೇಗೌಡರು

ಅವರ ಯಜಮಾನರು ; ಭೂಮಿತೂಕದ ಮನುಷ್ಯ. ಇಲ್ಲದ್ದಕ್ಕೆ ಆಸೆಪಡದೆ ಇದ್ದುದಕ್ಕೆ ಅಸಹ್ಯಪಡದೆ ಬಡತನ ಸಿರಿತನಗಳನ್ನು ಸಮನಾಗಿ ಕಾಣುತ್ತ ಬಾಳುತ್ತಿದ್ದರು.

ಊರು ಅಂದಮೇಲೆ ಹೊಲಗೇರಿ ಇದ್ದದ್ದೆ. ನಂಜೇಗೌಡರ ದಾಯಾದಿ ಪಟೇಲ್ ಮುದ್ದೇಗೌಡರು. ನಂಜೇಗೌಡರಿಗಿರುವ 'ದೊಡ್ಡಮನೆಯವರು' ಎನ್ನುವ ಬಿರುದನ್ನು ಹೇಗಾದರು ಮಾಡಿ ತಾನು ಪಡೆಯಬೇಕು. ಆ ಗೌರವ ತನಗೆ ಲಭಿಸುವಂತೆ ಮಾಡಬೇಕೆನ್ನುವ ಹೊಂಚಿಕೆಯಲ್ಲಿ ಸದಾ ಇರುವವರು. ಅಂಥ ಯೋಗ್ಯತೆ ತನ್ನಲ್ಲಿಲ್ಲವಾದರೂ ತಾನು ದೊಡ್ಡವನು ಎನ್ನಿಸಿಕೊಳ್ಳಬೇಕೆಂಬ ಕ್ಷುದ್ರ ಬಯಕೆ ಮುದ್ದೇಗೌಡರದು. ದಾಯಾದಿ ಮತ್ಸರದ ಕೆಂಡ ಬೂದಿ ಮುಚ್ಚಿದಂತೆ ಇತ್ತು.

ಪಟೇಲರ ಗುಣಕ್ಕೆ ತದ್ವಿರುದ್ಧವಾದದ್ದು ನಂಜೇಗೌಡರ ಗುಣ. ಸುಮ್ಮಗೆ ಅವರಿವರ ಮಾತುಕೇಳಿ ಅಣ್ಣ ತಮ್ಮ ತನದಲ್ಲಿ ವೈಷಮ್ಯ ತಂದು ಕೊಳ್ಳಬಾರದೆಂಬುದು ಅವರ ಭಾವನೆ. 'ಅವರ ಪಾಡಿಗೆ ಅವರು, ನಮ್ಮ ಪಾಡಿಗೆ ನಾವು' ಎಂಬ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದರು. ಯಾರು ಶಾಶ್ವತ ಈ ಪ್ರಪಂಚದಲ್ಲಿ, ಇರೋವರೆಗೂ ನಾಲ್ಕು ದಿವಸ ನೆಮ್ಮದಿಯಾಗಿ ಬಾಳೋದು ಬಿಟ್ಟು ಜಗಳ ಗುದ್ದಾಟ ಯಾಕೆ ಎಂಬುದು ನಂಜೇಗೌಡರ ನೀತಿ.

ಪಟೇಲ್ ಮುದ್ದೇಗೌಡರ ಮಗ ರಂಗೇಗೌಡ ಸಣ್ಣತನ, ಕಿತಾಪತಿಯಲ್ಲಿ ಅಪ್ಪನಿಗೂ ಒಂದು ಕೈ ಮಿಗಿಲು. ಅವಕಾಶ ಸಿಕ್ಕಿದಾಗಲೆಲ್ಲ ದೊಡ್ಡಮನೆಯವರನ್ನು ಕುರಿತು ಲಘುವಾಗಿ ಮಾತಾಡಿ ಸೈರಣೆಯನ್ನು ಕೆಣಕುತ್ತಿದ್ದ. ತಾಳ್ಮೆಯೇ ಮೂರ್ತಿವೆತ್ತಂಥ ನಂಜೇಗೌಡರು ಇಂಥ ಮಕ್ಕಳಾಟಿಕೆಗೆಲ್ಲ ಬೆಲೆಕೊಟ್ಟು ಕಾಲುಕೆರೆದು ಬೀದಿಗಿಳಿಯುತ್ತಿರಲಿಲ್ಲ, ಆದರೆ ಇನ್ನೂ ಬಿಸಿರಕ್ತದ ಯುವಕ ನಂಜೇಗೌಡರ ಮಗ ಲಿಂಗಯ್ಯನಿಗೆ ರಂಗೇಗೌಡನ ಕೆಣಕುಮಾತನ್ನು ಸಹಿಸಿಕೊಳ್ಳುವಷ್ಟು ತಾಳ್ಮೆಯಿರಲಿಲ್ಲ. "ಓಹೋಹೋ ದೊಡ್ಡಮನೆ ಅಂತ ಕರಿಸಿಕೊಂಡ್ಬುಟ್ರಾಯ್ತು ಅದ್ಕೂ ಯೋಗ್ತೆ ಬೇಕು" ಎಂದ ರಂಗೇಗೌಡನ ಕೆಣಕು ಮಾತಿಗೆ ಪ್ರತಿಯಾಗಿ ಲಿಂಗಯ್ಯ "ಲೇ ರಂಡ, ಮುಂಡೇ ಅಕ್ಕಿ ನುಂಗೋ ಹೆಣ್ಣಿಗಾ.... ಇದೊಂದೇ ನಮ್ಮ ದೊಡ್ಡಮನೆ ಅಂತ ತಿಳಕೊಂಡೇನೊ ! ನಮ್ಮಪ್ಪನಿಗೆ ನಾನು ಹುಟ್ಟೇ ಇದ್ರೆ ಇನ್ನೊಂದು ಸೀಮೆಹುಂಚಿನ ಮನೆಕಟ್ಸಿ ನಮ್ಮಪ್ಪನ ಹೆಸರ್ನೂ ನಮ್ಮ ಚಿಕ್ಕಪ್ಪದೀರ ಹೆಸರ್ನು ಮೆರಸ್ತೀನಿ ಕಣೊ ! ದೊಡ್ಡಮನೆ. ದೊಡ್ಡಮನೆ ಅಂತ ಸುತ್ತ ನಾಕಳ್ಳಿ ಅಲ್ಲ, ಈ ನಾಡೇ ಅನ್ನಬೇಕು. ಹಾಗೆ ನಾನು ಮಾಡ್ದೇ ಇದ್ರೆ ನಮ್ಮಪ್ಪನಿಗ್ಹುಟ್ಟಿದೋನೇ ಅಲ್ಲ !" ಎಂದು ಸವಾಲು ಹಾಕಿ ಚಿಗುರು ಮೀಸೆಯ ಮೇಲೆ ಕೈ ಹಾಕಿ ತೊಡೆತಟ್ಟಿದ.

ಕೋಪದ ಭರದಲ್ಲಿ ಅರಿತೋ ಅರಿಯದೆಯೋ ಅಂದುಬಿಟ್ಟ. ಆದರೆ ಅಲ್ಲಿಯೇ ಇದ್ದ ನಂಜೇಗೌಡರಿಗೆ ಮಗನ ವರ್ತನೆ ಹಿಡಿಸಲಿಲ್ಲ. ಸರೀಕರ ಮುಂದೆ ಹಾಗೆ ಅಂದದ್ದು ಸರಿ ಅನ್ನಿಸಲಿಲ್ಲ. ಸಿಟ್ಟಿನಿಂದ"ಲೇ ಒದೀತಿನ್ನೋಡು ನಿಂಗೆ ! ನನ್ನ ಮಗನಾಗಿ ಹುಟ್ಟಿ ನನ್ಮುಂದೆ ಇಂಥ ಮಾತಾಡೋದೆ ? ಸೈರಣೆಬೇಕೋ ಮನುಷ್ಯನಿಗೆ ಸರೀಕರನ್ನ ಹೆಣ್ಣಿಗಾ

ಅನ್ನಬಹುದಾ ? ಇದು ನನ್ನ ಮಗ್ನ ಬಾಯಿಲ್ಲಿ ಬರೋ ಮಾತಾ ? ನಾಲಗೆ ಚೆನ್ನಾಗಿದ್ರೆ ನಾಡಿಗೆ ಒಳ್ಳೇದು, ನಾಲಿಗೆ ಕೆಡಿಸಿಕೊಂಡ ಮ್ಯಾಲೆ ಮನುಷ್ನೇ ಅವ್ನು ಮರ" ಎಂದು ಬುದ್ಧಿ ಬುದ್ಧಿ ಹೇಳಿದರು. ತನ್ನ ತಪ್ಪಿನ ಅರಿವಾದ ಲಿಂಗೇಗೌಡ ಹಿರಿಯರು ಹೇಳಿದಾತೆ"ತಪ್ಪು" ಎಂದು ಒಪ್ಪಿಕೊಂಡು ಮತ್ತೆ ಗೊಣಗುತ್ತಿದ್ದ. ಅವನ ಗೊಣಗಾಟವನ್ನು ಸಹಿಸದ ನಂಜೇಗೌಡರು "ಪುನಃ ಅದೇ ರಾಗ ಎತ್ತೀಯಾ, ಕಳ್ಳ ಬಡವ! ಮುಚ್ಕೊತ್ತೀಯೋ ಇಲ್ಲವೋ ಬಾಯಾ ?" ಎಂದು ಏಟು ಹಾಕಲು ಎದ್ದರು. ಅಲ್ಲಿಯೇ ಇದ್ದ ಬೆಳ್ಳೂರ ಫತೇಸಾಬಿ ಹಿಡಿದುಕೊಳ್ಳಲಾಗಿ ಜೆನ್ನು ಚುರುಗುಟ್ಟುವುದು ತಪ್ಪಿತು.

ಘಟನೆ ನಡೆದಾಗ ಪಟೇಲರು ಸ್ಥಳದಲ್ಲಿರಲಿಲ್ಲ. ಸುದ್ದಿ ಮುಟ್ಟಿದಾಗ ಕೆಣಕಿದ ಫಣಿಯಾದರು. ಬುಸುಗುಡುತ್ತಾ "ಹಂಗೇನೋ ! ಇರ್ಲಿ, ನೋಡಿಕೊತ್ತೀನಿ ! ಅವರ ಸೊಕ್ಕು ಹೆಚ್ಚಾಯ್ತು. ಆ ದೊಡ್ಡಮನೆ ಮುರಿದು ಚಿಕ್ಕಮನೆ ಮಾಡ್ದಿದ್ರೆ ನಾನು ಪಟೇಲನೇ ಅಲ್ಲ" ಎಂದು ಶಕುನಿ ಶಪಥ ಮಾಡಿದರು. ಉರಿಯುವುದಕ್ಕೆ ಉಪ್ಪುಹಾಕಿದಂತೆ ಮಗನನ್ನು ಉದ್ದೇಶಿಸಿ "ಲೇ ನೀನು ನನ್ನ ಮಗನಾಗೇ ಹುಟ್ಟಿದ್ರೆ ಈ ಸೇಡು ತೀರಿಸಿಕೊಳ್ಳದೆ ಬಿಡಬ್ಯಾಡ ಗೊತ್ತಾಯಿತೇನೋ" ಎಂದು ಮಗನ ಮನಸ್ಸಿನಲ್ಲಿ ದ್ವೇಷದ, ನಂಜಿನ ಬೀಜ ಬಿತ್ತಿದರು. ಹಾಗೆ ನೆಟ್ಟ ಬೀಜ ಮೊಳೆತು, ಫಲಿತು ಮುಂದೆ ದುಷ್ಫಲವನ್ನು ಕೊಟ್ಟಿತು. ಅದು ಬೇರೆ ವಿಚಾರ ಹಾಗಿರಲಿ. ಮುಂದೆ ನೋಡೋಣ.

ಮನುಷ್ಯ ಎಂದಮೇಲೆ ಎಲ್ಲರೂ ಒಂದೇ. ಒಬ್ಬನ ನೋವೇ ತನ್ನ ನೋವು ಒಬ್ಬನಿಗಾದ ಸಂಕಟವೇ ತನಗಾದ ಸಂಕಟ ಎಂದು ಯಾವ ವ್ಯಕ್ತಿ ಭಾವಿಸುತ್ತಾನೋ ಅವನೇ ಯೋಗ್ಯನಾದ ಮನುಷ್ಯ; ಅಂಥ ಯೋಗ್ಯತೆ ನಂಜೇಗೌಡರಲ್ಲಿತ್ತು. ಮನೆಗೆ ಹಿಂದಿರುಗಿದ ಗೌಡರ ಚಿತ್ತ ನಡೆದ ಘಟನೆಯಿಂದಾಗಿ ಇನ್ನೂ ಸ್ಥಿಮಿತಕ್ಕೆ ಬಂದಿರಲಿಲ್ಲ. ತಮ್ಮ ಮಗನದೇ ತಪ್ಪೆಂದು ಅವರಿಗನ್ನಿಸಿತು. ಆಡಬಾರದ ಮಾತು ಆಡಿ ನಾಲಿಗೆ ಕೆಡಿಸಿಕೊಂಡನಲ್ಲ ಎಂದು ಅವರಿಗೆ ಸಂಕಟ. ನೆಮ್ಮದಿಯಿಂದ ಬಾಳಬೇಕೆಂಬ ಅವರ ಆಸೆಗೆ ಮಗನ ಮಾತು ಭಂಗ ತಂದಿತ್ತು. ಮಲಗುವಮುನ್ನ ಒಂದು ತೀರ್ಮಾನ ಮಾಡಿಕೊಂಡರು, ಹೊತ್ತಿನಂತೆ ಎದ್ದು ಮುದ್ದಣ್ಣಯ್ಯನನ್ನು ಕಂಡು ಮಾತಾಡಬೇಕು ಎಂದು.

ಎಲೆ ಹಂಬಿನ ತೋಟದಲ್ಲಿ ಮರವೊಂದನ್ನು ಹತ್ತಿ ಎಲೆ ಕುಯ್ಯುತ್ತಿದ್ದ ಪಟೇಲ್ ಮುದ್ದೇಗೌಡರನ್ನು ಸಮೀಪಿಸಿ "ಮುದ್ದಣ್ಣಯ್ಯ" ಎಂದರು. 'ಮುದ್ದಣ್ಣಯ್ಯ' ಎನ್ನುವ ಮಾತಿನಲ್ಲಿ ಎಂಥ ಕೋಮಲ ಭಾವ ! ಎಂಥ ಸದ್ವಿನಯ ! ಪಟೇಲರಿಗೆ ಅದೆಲ್ಲ ಅರ್ಥವಾಗುವಂಥದಲ್ಲ. ಇದೇ ಸಮಯವೆಂದು ಅರಿತು "ದೊಡ್ಡಮನೆ ದೊಡ್ಡಮನೆ ಅನ್ನೋ ದೊಡ್ಡಸ್ತಿಕೇಲಿ ಮೆರೀತಾ ಇದೀರಿ ನೀವು. ಕಣ್ಣಲ್ಲಿ ನೆಣಾ ಒಡ್ದು ಕಂಡ್ರೆ ಕಣ್ಣು ಕಾಣಸ್ತವಾ ? ಅಂತ ದವಲತ್ತು ಬಂದದೆ ನಿಮ್ಗ" ಹೊಟ್ಟೆಯ ಸಿಟ್ಟು ಮೂದಲಿಕೆಯಾಗಿ ಹೊರಬಂತು. ನಂಜೇಗೌಡರ ಬಾಯಿ ಕಟ್ಟಿತು. ಮುಂದೆ ಏನು ಮಾತನಾಡಬೇಕೆಂದು ಕ್ಷಣ ತೋಚಲಿಲ್ಲ. ಒಂದಾಡಿದರೆ ಹೆಚ್ಚು ಒಂದಾಡಿದರೆ ಕಡಿಮೆ ಎನ್ನುವ

ಸ್ಥಿತಿ ಅವರದು. ಪಟೇಲರು ಬಗೆದಂತೆ ನಂಜೇಗೌಡರಿಗೆ ದವಲತ್ತು ಬಂದಿದ್ದರೆ, ನೆಣ ಒದ್ದು ಕಂಡಿದ್ದರೆ 'ಮುದ್ದಣ್ಣಯ್ಯ' ಎಂದು ಪ್ರೀತಿಯಿಂದ ಮಾತನಾಡಿಸಿಕೊಂಡು ಗೌಡರು ಇಲ್ಲಿಯವರೆಗೆ ತನ್ನನ್ನು ಹುಡುಕಿಕೊಂಡು ಬರುತ್ತಿದ್ದರೇ ಎಂಬುದನ್ನು ಪಟೇಲರು ಯೋಚಿಸಲಿಲ್ಲ. ನಂಜೇಗೌಡರು ಸಾವರಿಸಿಕೊಂಡು "ನನ್ನ ಹಂಗೆ ತಿಳಕೋ ಬ್ಯಾಡಣ್ಣಯ್ಯ. ಹುಡುಗರಾಡಿದ ಮಾತ ದೊಡ್ಡೋರು ಮನಸ್ಸಿಗಾಕ್ಕೋಬಾರ್ದು. ಕಾಲ್ಹಿಡಿದು ಕೇಳಿಕೊತ್ತೀನಿ. ಹಿಂದ್ದು ಮರತುಬುಡು. ಯಾವ ಸಂಪತ್ತಿಗಣ್ಣ ನಂಗೂ ನಿಂಗೂ ಮನಸ್ತಾಪ ? ದೇವರಾಣೆಗು ಹೇಳ್ತೀನಿ ನಿನ್ನ ಮ್ಯಾಲೆ ನಂಗೇನೂ ದ್ವೇಷ ಇಲ್ಲ. ನೀನು ನನಗೆ ಒಂದಿಗುಟ್ಟಿದ ಅಣ್ಣನಂಗೆ....ಇಬ್ರಿಗೂ ವಯಸ್ಸಾಯ್ತು. ಊರಿಗೆ ಕಣ್ಣಾದ ಕುಳನಾವು ನಾವೇ ಹಿಂಗಾಡಿದ್ರೆ ಊರೇನಂದಾತು. ಹುಡುಗರ ಜಗಳ ದೊಡ್ಡೋರು ಕಟ್ಟಿಗೋಬಾರ್ದಣ್ಣ" ಎಂದರು. ನಂಜೇಗೌಡರು ವಿನಯದಿಂದ ಹೇಳಿದ ಮಾತುಗಳು ಪಟೇಲರ ಸಿಟ್ಟನ್ನು ಕಡಿಮೆ ಮಾಡಲಿಲ್ಲ. ನಂಜೇಗೌಡರು ಪುನಃ ತಮ್ಮ ಮಾತುಗಳನ್ನು ಮುಂದುವರಿಸಿದರು. "ಅಣ್ಣಯ್ಯ, ನನ್ನ ಕಾಲ ಮುಗೀತಾ ಬಂತು! ಎಲ್ಲಾ ಮರ್ತು ಬುಡಣ್ಣ. ನೀನು ಮ್ಯಾಲಿದ್ದಿ, ನನಗೆ ನೀನು ಎಟುಗಿದ್ರೆ ನಿನ್ನ ಕಾಲ್ಹಿಡೀತಿದ್ದೆ...." ಕಂಠ ಗದ್ಗದಿತವಾಯಿತು. ಏಣಿಯ ಕಾಲುಗಳನ್ನೇ ಅಣ್ಣನ ಕಾಲುಗಳೆಂಬಂತೆ ಬಿಗಿಯಾಗಿ ಹಿಡಿದು ಬಿಕ್ಕಳಿಸಿದರು.

ನಂಜೇಗೌಡರ ವರ್ತನೆಯಿಂದ ಪಟೇಲರ ಕಲ್ಲಿನಂಥ ಮನಸ್ಸು ಕರಗಿಹೋಯಿತು. ನಿಧಾನವಾಗಿ ಇಳಿದು ಬಂದವರೇ "ನಂಜೂ ಎಂತಾ ಮಾತಾಡ್ತಿಯೋ ನೀನು! ನಿನ್ನ ಮಾತ್ಕೇಳಿ ನನ್ನ ಮನಸ್ಸು ಕರಗಿ ನೀರಾಯ್ತಪ್ಪ. ಎಲ್ಲಾ ಮರೆತುಬುಟ್ಟೆ ಬುಡು ಈವತ್ತಿಗೆ" ಎಂದು ಗೊಪ್ಪೆಯಿಂದ ಒಂದಷ್ಟು ವೀಳೆಯದೆಲೆಗಳನ್ನು ಕೈಯೊಡ್ಡಿದ ತಮ್ಮನಿಗೆ ಪ್ರೀತಿಯಿಂದ ಹಾಕಿದರು.

ಸಮಾಧಾನದ ಮನಸ್ಸಿನಿಂದ ನಂಜೇಗೌಡರು ಹಿಂದಿರುಗಿದರು. ತಮ್ಮ ಮಗ ಲಿಂಗುವಿನ ಬಗೆಗೆ ಯೋಚನೆ ಬಂತು. ಸ್ವಂತ ಮಗನೇ ಆದರೂ ಕೂಡ ನಾಲ್ಕು ಜನಗಳ ಮುಂದೆ ತಂದೆಯಾದವನು ಬಯ್ದು ಬುದ್ಧಿ ಹೇಳಿದಾಗ ತನ್ನ ಅಭಿಮಾನಕ್ಕೆ ಧಕ್ಕೆಯಾಯಿತೆಂದು ಮಗನು ಭಾವಿಸುವುದು ಸಹಜ. ಒಂದು ವೇಳೆ ಲಿಂಗು ಆ ರೀತಿ ಭಾವಿಸಿದ್ದರೆ ? ಆದ್ದರಿಂದಲೇ ಮಗನನ್ನು ಕುರಿತು "ನೆನ್ನೆ ನಾನು ಸಿಟ್ಟಿನಲ್ಲಿ ಏನೋ ಅಡ್ಬಿಟ್ಟೆ. ಅದು ಮನಸ್ಸಿಗಾಕ್ಕೋಬ್ಯಾಡ, ಕಂದ, ಮುಂದೆ ಈ ಮನೆ ಮುಂದಕೆ ತರೋ ಮಗ ನೀನು. ಬೇರೆಯವರು ಹತ್ತಾಡಬಹುದು. ಆದ್ರೆ ನೀನು ಒಂದಾಡಿದ್ರೂ ತಪ್ಪು, ಮನುಷ್ಯನಿಗೆ ನೆಮ್ಮದಿ ಮುಖ್ಯಾನಪ್ಪ. ಅದಿಲ್ದೆ ಇನ್ನೇನಿದ್ರೆ ತಾನೆ ಏನು ? ರಂಗಪ್ಪ ನಿನ್ನ ತಪ್ಪು ಅಂತ ತಿಳಕೊ......ಅವರಿವರ ಚಾಡಿ ಮಾತು ಕೇಳ ಬ್ಯಾಡ" ಲಿಂಗು ಬದುಕ ಬಾಳಬೇಕಾದ ವಿಧಾನವನ್ನು ಕುರಿತು ತಿಳಿಯ ಹೇಳಿದರು.

ಎಂಥ ಆದರ್ಶವಾದಿ ತಂದೆ. ಮಗನನ್ನು ನಾಲ್ಕು ಮಂದಿಯ ಮುಂದೆ

ಗವರಿಸಿ, ಆ ಎಳೆ ವಯಸ್ಸಿನ ಮನಸ್ಸಿಗೇನಾದರೂ ನೋವಾಯಿತೋ ಎಂದು ಪಶ್ಚಾತ್ತಾಪಪಟ್ಟು, ಬದುಕಿ ಬಾಳುವ ಬಗೆಗೆ ಮಾರ್ಗ ತೋರುವ ಆ ಹಿರಿಯ ಜೀವ ನಿಜವಾಗಿಯೂ ಆದರ್ಶಪುರುಷನೇ ಸರಿ. ಹೊಟ್ಟೆಯಲ್ಲಿ ಹುಟ್ಟಿದ ಮಗ ಎನ್ನುವ ಅಭಿಮಾನದಿಂದ ತಪ್ಪೆಸಗಿದರೂ ಸರಿ ಎಂದು ವಾದಿಸಿ ಕಲಹ ಮಾಡುವ ತಂದೆಯರೆಲ್ಲಿ; ದಾಯಾದಿಯ ಕಾಲ್ಹಿಡಿದು ಮಗನ ಪರವಾಗಿ ತಪ್ಪಾಯಿತೆಂದು ಕ್ಷಮೆ ಬೇಡುವ ನಂಜೇಗೌಡರೆಲ್ಲಿ ? ಇಂಥ ಜನ ನಮ್ಮ ಸಮಾಜದಲ್ಲಿ ಎಷ್ಟು ಜನ ಇದ್ದಾರು ? ಇದಕ್ಕೆಲ್ಲ ಮುಖ್ಯ ಕಾರಣ ಜೀವನದಲ್ಲಿ ಸದಾ ಶಾಂತಿ ಸುಖ ನೆಮ್ಮದಿಗಳು ನೆಲಸಿರಬೇಕೆಂಬ ಅಪೇಕ್ಷೆ. ಇಂಥ ಅಪೇಕ್ಷೆಯನ್ನಿರಿಸಿಕೊಂಡಿರುವ ಮನುಷ್ಯ ಎಂದೂ ಕೂಡ ಸಣ್ಣತನ ಕೈಕೊಳಸುವುದಿಲ್ಲ. ಜೀವನದಲ್ಲಿ ಸೋತು ಗೆಲ್ಲುತ್ತಾನೆ. ತಮ್ಮ ಸಂಸಾರದಲ್ಲಿ ಕೂಡ ಯಾವತ್ತೂ ನೆಮ್ಮದಿಭಂಗಕ್ಕೆ ಅವಕಾಶಕೊಟ್ಟವರಲ್ಲ ನಂಜೇಗೌಡರು.

ಹಣಕಾಸಿನ ವಿಚಾರದಲ್ಲಿ ಮತ್ತೊಬ್ಬರದಕ್ಕೆ ಆಸೆ ಪಡಲಿಲ್ಲ. ತಾನು ಬೆವರು ಸುರಿಸಿ ದುಡಿದು ಸಂಪಾದಿಸಿದ್ದಷ್ಟೆ ತನ್ನದು ಎಂದು ತಿಳಿದವರು. ಮಗನನ್ನು ಕುರಿತು ಹೇಳುವ ಈ ಮಾತು ನೋಡಿ “ದುಡ್ನಾ ಕಷ್ಟಪಟ್ಟು ಬೆವರು ಸುರ್ಸಿ ದುಡೀಬೇಕು ಲಿಂಗೂ. ಕರ್ಚು ಮಾಡೋವಾಗ಼್ೂ ಯಾವುದಕ್ಕೆ ಮಾಡ್ಬೇಕು ಯಾವದಕ್ಕೆ ಮಾಡ್ಬಾರ್ದು ಅಂತ ತಿಳದು ಮಾಡಬೇಕು.”

ತಮ್ಮ ಜೀವನದಲ್ಲಿ ಎಂದೂ ಯಾರಿಗೂ ಕೇಡೆಣಿಸದ ನಂಜೇಗೌಡರಿಗೆ ಕಾಯಿಲೆ ಬಂದದ್ದು ದುರ್ದೈವದ ಸಂಗತಿ. ಸುದ್ದಿ ತಿಳಿದದ್ದೇ ತಡ ಸುತ್ತಮುತ್ತಲ ಊರುಗಳಿಂದ ಜನ ದಂಡಿಯಾಗಿ ಬಂದು ಗೌಡರ ಕ್ಷೇಮವನ್ನು ವಿಚಾರಿಸಿಕೊಂಡು ಹೋದರು. ಬರ ಬರುತ್ತಾ ಕಾಯಿಲೆ ಹೆಚ್ಚಾಗಿ ಗೌಡರು ಹಾಸಿಗೆ ಹಿಡಿದರು. ದೊಡ್ಡಮನೆಗೆ ಮಂಕು ಕವಿದಂತಾಯಿತು, ಆರೇಳು ತಿಂಗಳು ಔಷಧೋಪಚಾರ ನಡೆಸಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಬೆಂಗಳೂರಿನಂಥ ದೊಡ್ಡಪಟ್ಟಣದಲ್ಲಿ ತೋರಿಸಿಕೊಂಡು ಬರುವುದೆಂದು ನಿರ್ಧಾರವಾಯಿತು. ಗೌಡರ ಜನಪ್ರಿಯತೆಗೆ ಸಾಕ್ಷಿಯಾಗಿ ಅವರು ಹೊರಡುವ ಸಮಯದಲ್ಲಿ ಊರಿಗೆ ಊರೇ ಸೇರಿತ್ತು.

ಪಟ್ಟಣದಲ್ಲಿಯೂ ಗುಣ ಕಂಡು ಬರಲಿಲ್ಲ. ಕೊನೆಗೆ ಒಂದು ತೀರ್ಮಾನಕ್ಕೆ ಬಂದರು. ‘ನನ್ನ ಕಾಯಿಲೆ ಆಸ್ಪತ್ರೆಯಲ್ಲಿ ವಾಸಿಯಾಗುವುದಿಲ್ಲ, ಬಹಳ ದಿನ ನಾನು ಬದುಕುವುದೂ ಇಲ್ಲ. ಸಾಯುವುದಾದರೆ ಊರಿಗೆ ಹೋಗಿ ಅಲ್ಲೇ ಸಾಯೋದೊಳ್ಳೇದು’ ಎಂದು ಅನ್ನಿಸಿದ್ದೆ ಡಾಕ್ಟರಿಂದ ಅಪ್ಪಣೆ ಪಡೆದು ನನ್ನೂರಿಗೆ ಮರು ಪ್ರಯಾಣ ಬೆಳೆಸಿದರು.

ಹಿಂದಿರುಗಿ ಬಂದ ಸುದ್ದಿ ಕೇಳಿ ಪುನಃ ಊರ ಜನ ಗೌಡರ ಪಟ್ಟೆಯಲ್ಲಿ ನೆರೆದರು. ದಾಯಾದಿಯ ಮಗ ರಂಗಯ್ಯ ಯಾರೂ ಇಲ್ಲದಾಗ ಒಬ್ಬನೇ ಬಂದ. “ಹ್ಯಾಂಗದೆ ಚಿಕ್ಕಪ್ಪ ಈಗ ?” ಎಂದು ಕೇಳಿದ. ಕಪಟವರಿಯದ ಗೌಡರು ಅಂತರಂಗದಲ್ಲೊಂದು

ಬಹಿರಂಗದಲ್ಲೊಂದು ಇಟ್ಟುಕೊಂಡು ದೊಡ್ಡಮನೆ ಯಾವತ್ತು ಛಿದ್ರವಾದೀತೆಂದು ಕಾಯುತ್ತ ಅದಕ್ಕಾಗಿ ಮಾಡಬಾರದ್ದನ್ನೆಲ್ಲ ಮಾಡುತ್ತ ಯಜಮಾನರ ಸಾವನ್ನು ನಿರೀಕ್ಷಿಸುತ್ತಿರುವ ರಂಗಯ್ಯನ ಹೃದಯದಲ್ಲಿ ತುಂಬಿರುವ ಹಾಲಹಲವನ್ನು ತೊಡೆದು ಹಾಕಿ ಅಮೃತ ಸೇಚನ ಮಾಡಲೆಂದು "ಹ್ಯಾಂಗಿದ್ರೇನು ಬಿಡೊ ರಂಗು ಹಳೆಮರ ಇದ್ರೇನು ಬಿದ್ರೇನು. ನಮ್ಮ ಕಾಲ ಮುಗೀತಪ್ಪ. ಮುಂದೇ ಬಾಳೋರು ಬದು ಕೋರು ನೀವು ಚೆನ್ನಾಗಿರಬೇಕಪ್ಪ" ಎಂದರು. ಮುಂದುವರಿದು "ಬಾಳಿನಲ್ಲಿ ನೆಮ್ಮದಿ ಮುಖ್ಯಾನಪ್ಪ ಆ ನೆಮ್ದಿ ಕೆಡದಂಗೆ ಇರಬೇಕು. ನನ್ನ ಮಗ ಬ್ಯಾರೇ ಅಲ್ಲ. ನೀನು ಬ್ಯಾರೇ ಅಲ್ಲ. ನೀವಿಬ್ರೂ ನಗ್‌ನಗ್ತಾ ಇದ್ರೆ ನಂಗೆ ಸಂತೋಷವಪ್ಪಾ. ಒಂದು ಹೆಚ್ಚುಕಮ್ಮಿಯಾದ್ರೆ ಅನುಸರಿಸಿಕೊಂಡ್ಹೋಗು ಕಂಡ್ಯಾ" ಎಂದು ಕಳಕಳಿಯಿಂದ ನುಡಿದರು. ಅದಕ್ಕೆ ಉತ್ತರವಾಗಿ ರಂಗಯ್ಯ "ಅಯ್ಯೊ ಚಿಕ್ಕಪ್ಪ, ನೀವ್ಹೇಳಬೇಕೆ ಬಿಡಿ ಆ ವಿಚಾರವಾ. ನಾವಿಬ್ರೂ ಅಡಿನ ಮಲೀಯಂಗಿರ್ತೀವಿ" ಅಂದ. ರಂಗಯ್ಯನ ಬಾಯಿಂದ ಬಂದ ಮಾತುಗಳನ್ನು ಕೇಳಿದ ಗೌಡರಿಗೆ ಹೊಟ್ಟೆಗೆ ಹಾಲು ಕುಡಿದಂತಾ ಯಿತು. ಆ ಮುಗ್ಧಾಮಯಿ ತಂದೆಗೆ ತಮ್ಮನ್ನು ದ್ವೇಷಿಸುತ್ತಿರುವ ವ್ಯಕ್ತಿಯ ಬಾಯಿಂದ ಅಂಥ ಮಾತುಗಳು ಬಂದಾಗ ಎಷ್ಟು ಸಂತೋಷವಾಗಿರಲಿಕ್ಕಿಲ್ಲ. ರಂಗ ಯ್ಯನ ಮಾತಿಗೆ ಮರುಳಾದರು. ನಿಜವೆಂದೇ ನಂಬಿದರು,

ದೊಡ್ಡಮನೆಯನ್ನು ಬಿಟ್ಟು ಹೊರಬಂದ ರಂಗಯ್ಯನ ಬಣ್ಣ ಬದಲಾಯಿತು. ಆತನ ದ್ವಿಮುಖ ವ್ಯಕ್ತಿತ್ವ ಬಯಲಾಯಿತು ಅರ್ಜಿಕೊಂಬಲ್ಲಿನೊಡನೆ ಆತ ಹೇಳಿದ "ಸತ್ತ ಮ್ಯಾಲೆ ದೊಡ್ಡಮನೆ ಕಿಸ್ಕೊತ್ತದಲ್ಲ ಅಂತ ಈಗ್ಲೇ ಸುದ್ದಮಾಡಕೊಂಟವ್ನೆ ಆ ಅಪಾಪ್ರೋಲಿ ನಿಂಗ ಮನೆ ಹಾಳ್ಮಾಡ್ತೋದು ದಿಟ ಅಂತ ನಮ್ಮನೆಲ್ಲ ಅನುಸರಿಸೋದು ಅದೇನು ಅಂತಾದ್ದು ಇವರಿಗೆ ನಾವು ಬಗ್ಗಿ ನಡೀಬೇಕೂ ಅನ್ನೋದು ? " ಈ ಮಾತು ಗಳಿಂದ ಗೌಡರ ಮುಂದೆ ಆತ ಆಡಿದ್ದು ಬರಿಯ ನಾಟಕ ಎಂಬುದು ವೇದ್ಯವಾಗುತ್ತದೆ.

* * *

ತಮಗೆ ಅನ್ನ ಆಶ್ರಯ ಕೊಡುವ ಭೂಮಿತಾಯಿಯೆಂದರೆ ನಂಜೇಗೌಡರಿಗೆ ಅಪಾರ ಅಕ್ಕರೆ. ಹೊನ್ನೊಲ್ಕ ಹೆಚ್ಚು ಮಾಡಿ ಕೊಯ್ಯುವುದಕ್ಕೆ ಆರಂಭಿಸುವ ದಿನ. ನಡೆಯಲಾಗದಿದ್ದರೂ ಭೂತಾಯಿಯ ಮೇಲಿನ ಪ್ರೇಮದಿಂದ ಮಗನ ಕೈಹಿಡಿದು ಕೊಂಡು ಗದ್ದೆಯ ಬಳಿ ಬಂದರು. ಒಂದುಕಡೆ ಬದುವಿನ ಮೇಲೆ ಕೂತರು. ಪೂಜೆಮಾಡು ವಾಗ ತಡವರಿಸಿಕೊಂಡು ಎದ್ದು 'ನಾನೊಂದಿಷ್ಟು ಬೆಳಗಿಬಿಡ್ತೀನಿ' ಎಂದು ಕೊಳ್ಳಿ ಯನ್ನು ಈಸಿಕೊಂಡು 'ತಾಯಿ, ಮ್ಮಪ್ಪಾ, ಭೂಮಿತಾಯಿ, ನೀನು ಕೊಟ್ಟನ್ನ ಉಂಡು ನಾವು ಬೆಳೆದೊ, ನೀನು ಕೊಟ್ಟರೆ ಉಂಟು. ಇಲ್ಲದಿದ್ದರೆ ಇಲ್ಲ. ಬೆಳೆದ ಬೆಳೆ ಹೆಚ್ಚಲಪ್ಪಾ ! ನನ್ನ ತಮ್ಮದೀರೂ ನನ್ನ ಮಕ್ಕಳು ಮರಿಗಳೂ ಎಲ್ಲ ಸುಖವಾಗಿ

ಇರೋ ಹಾಗೆ ಮಾಡು ನನ್ನ ತಾಯಿ ! ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತಾ ಸ್ವಲ್ಪ ಹೊತ್ತು ಕಣ್ಣು ಮುಚ್ಚಿದರು.

ಕೊಯ್ಲಿನ ಕೆಲಸ ನಡೆಯುತ್ತಿತ್ತು. ತಮ್ಮ ಕೊನೆಯ ದಿನ ಸಮೀಪಿಸುತ್ತಿದೆ ಎಂದು ಅನ್ನಿಸಿತೋ ಏನೋ ? ಮುಂದಿನ ಜವಾಬ್ದಾರಿಯ ಹೊರೆ ಹೊರಬೇಕಾದ ಲಿಂಗಯ್ಯನನ್ನು ಹತ್ತಿರ ಕರೆದು ಕೊನೆಯ ಬಾರಿಗೆ ಬುದ್ಧಿವಾದ ಹೇಳಿದರು. "ನೀನು ಈ ಮನೆ ಹಿರೀಮಗನಪ್ಪ, ಹಿರಿಯೋರು ಬಾಳಿದಂಥ ಮನೆತನ ಇದು. ಊರಲ್ಲಿ ಎಲ್ಲರ ಬಂಗ-ಬಡತನಕ್ಕೂ, ಕಷ್ಟ-ನಷ್ಟಕ್ಕೂ ದೊಡ್ಡಮನೆ ಹೊಣೆ. ಯಾರಿಗೇ ಸಾದ್ರೂ ಆದ್ರೆ ಈ ಮನೆ ನೋಡ್ಕೊಬೇಕು. ಒಬ್ಬರಿಗೆ ಒಂದು ಮೋಸ ಮುಂತಾದ್ದು ಮಾಡಬಾರ್ದು. ಸುಳ್ಳು ತಟವಟ ಹೇಳಬಾರ್ದು. ಯಾರೂ ಒಂದು ಬೆಳ್ಳಿತ್ತಿ ಈ ಮನೆ ಕಡೆ ಕೈ ತೋರಿಸಬಾರ್ದು—ಹಂಗೆ ನಡೀಬೇಕು. ನಿನ್ನ ತಲೆಮ್ಯಾಲೆ ದೊಡ್ಡ ಹೊರೆ ಹೊರುಸ್ತಾ ಇದೀನಿ. ದೇವರ ಮೇಲೆ ಭಾರಹಾಕಿ, ನಿಮ್ಮ ಹಿರಿಯೋರ್ನ ನೆನಕೊಂಡು ನಡಕೋ ಮಗ. ಇದರ ಮ್ಯಾಲೆ ಭಗವಂತ ತೋರಿದಂತಾಗಲಿ. ಈವೊತ್ತು ನಮ್ಮತ್ರ ಚೆನ್ನಾಗಿರೋರು ನಾಳೆ ಕೆಟ್ಟೋರಾಗ್ತಾರೆ. ಬದುಕೋರ ನೋಡಿದ್ರೆ ಹೊಟ್ಟೆ ಉರುಕೊಳ್ಳೋ ಜನ ಯಾವೂರಲ್ಲೂ ಅವರೆ ಅವರೂ ಬಾಳೋ ದಿಲ್ಲ. ನಮ್ಮನ್ನೂ ಬಾಳಗೊಡಸೋದಿಲ್ಲ."

ಲೋಕಾನುಭವದ ನಾಲ್ಕು ಮಾತು ಆಡಿದರು. ಆ ನಾಲ್ಕುಮಾತಿನಲ್ಲಿ ಬದುಕಿನ ನೀತಿ ಸಂಹಿತೆಯೇ ಅಡಕವಾಗಿತ್ತು. ಕೊನೆಯ ಬಾರಿ ಎಂಬಂತೆ ಬಾಳೆ, ಅಡಿಕೆ, ತೆಂಗಿನ ತೋಟಗಳನ್ನು ಕಣ್ತುಂಬ ನೋಡಿದರು. ಹಚ್ಚಿನ ಮೊಸರನ್ನ ಉಂಡು, ಮಾಗಿಯ ಬಿಸಿಲು ಕಾಯಿಸಿ, ಹೊಲಗದ್ದೆತೋಟ ತಿರುಗಿ, ಮಗನಿಗೆ ವಿವೇಕ ಹೇಳಿ ಮಲಗಿದ ಗೌಡರು ಮೇಲೇಳಲಿಲ್ಲ. ಎಪ್ಪತ್ತು ವರ್ಷ ಬಾಳಿ ಹತ್ತುಹಳ್ಳಿಗೆ ಒಳ್ಳೆಯವರೆನಿಸಿದ್ದ ಸಂಜೀಗೌಡರು ನಗುನಗುತ್ತ ಕಣ್ಮುಚ್ಚಿದರು. ದೊಡ್ಡಮನೆ ಮಾತ್ರವಲ್ಲ ನನ್ನೂರು ಬಿಕ್ಕಿಬಿಕ್ಕಿ ಅತ್ತಿತ್ತು—ರಂಗಯ್ಯನ ಹೊರತಾಗಿ. ಶವವನ್ನು ಚಟ್ಟದ ಮೇಲಿಡಲು ಎತ್ತಿದಾಗ ಅತ್ತ ರೋದನ ಹತ್ತು ಹಳ್ಳಿಗಳಿಗೆ ಕೇಳಿಸುವಂತಿತ್ತು.

ಸಂಜೀಗೌಡರದು ನಿಜವಾಗಿಯೂ ಆದರ್ಶವಾದ ವ್ಯಕ್ತಿತ್ವ. 'ನನ್ನೂರಿನ' ಕ್ಷೇಮವನ್ನೇ ಸದಾ ಬಯಸುತ್ತ 'ದೊಡ್ಡಮನೆ'ಗೆ ಅನ್ವರ್ಥವಾಗಿ ದೊಡ್ಡವ್ಯಕ್ತಿಯಾಗಿ ಬಾಳಿದ ಗೌಡರು ಸಾಮಾನ್ಯ ಮನುಷ್ಯರಲ್ಲ; ತಮಗೆ ದ್ರೋಹಮಾಡುವವರನ್ನು ಸಹಿಸಿದರು. ಜೀವನದಲ್ಲಿ ನೆಮ್ಮದಿ ಎಲ್ಲಕ್ಕಿಂತ ಮುಖ್ಯವಾದುದು ಎಂದು ಭಾವಿಸಿದ್ದ ಅವರು ಅದನ್ನು ಪಡೆಯಲು ಎಂತಹ ತ್ಯಾಗಕ್ಕಾಗಿಯಾದರೂ ಸಿದ್ಧವಾಗಿದ್ದರು. ದಾಯಾದಿಯ ಕಾಲುಹಿಡಿಯುವ ದೊಡ್ಡತನ ತೋರಿದರು. ರಂಗಯ್ಯನವರಿಗೆ ವಿವೇಕ ಬೋಧಿಸಿದರು. ಊರವರ ಬಂಗ ಬಡತನಕ್ಕೆ ಕಷ್ಟನಷ್ಟಕ್ಕೆ ದೊಡ್ಡಮನೆ ಹೊಣೆ ಎನ್ನುವ ಮಾತಿನಲ್ಲಿ ದೊಡ್ಡಮನೆಗೂ ನನ್ನೂರಿಗೂ ಇದ್ದ ಬಾಂಧವ್ಯ ಎಂಥದು

ಎಂಬುದು ವ್ಯಕ್ತವಾಗುತ್ತದೆ. ಆ ಬಾಂಧವ್ಯಕ್ಕೆ ಲೋಪ ಬರದಂತೆ ಕೊನೆಯುವರೆಗೂ ನಡೆದುಕೊಂಡರು, ಮುಂದೆಯೂ ನಡೆಸಿಕೊಂಡು ಹೋಗುವಂತೆ ಮಗನಿಗೆ ಬುದ್ಧಿ ಹೇಳಿದರು. ದೊಡ್ಡ ಮನೆಯ ಯಜಮಾನರು ಮಾತ್ರವಲ್ಲದೆ ನನ್ನೂರಿನ ನಂಜೇಗೌಡರು ನನ್ನೂರಿನ ಜನತೆಯಲ್ಲಿ ಎಂದೂ ಮಾಸದ ನೆನಪನ್ನು ಉಳಿಸಿಹೋದರು,

* * *

ನಂಜೇಗೌಡರಲ್ಲಿದ್ದಂಥ ದೊಡ್ಡ ಮನಸ್ಸು ಉಳಿದ ತಮ್ಮಂದಿರಲ್ಲಿ ಯಾರಿಗಾದರೂ ಒಬ್ಬರಿಗೆ ಇರದಿದ್ದ ಪಕ್ಷಕ್ಕೆ ಬಹುಶಃ ದೊಡ್ಡ ಮನೆ ಇಷ್ಟು ಹೊತ್ತಿಗೆ ಚಿಕ್ಕ ಮನೆಯಾಗಿ ಒಡೆದುಹೋಗುತ್ತಿತ್ತೆಂದು ಕಾಣುತ್ತದೆ. ಆದರೆ ಆ ಸಹೋದರರು ಗುಣನಡತೆಯಲ್ಲಿ ಅಣ್ಣನ ತದ್ರೂಪು. ಎಂದೂ ಯಾವುದಕ್ಕೂ ಪರಸ್ಪರ ಕಚ್ಚಾಡಿದವರಲ್ಲ. ದುಡಿಮೆಯಲ್ಲದೆ ಬೇರಾವುದಕ್ಕೂ ತಲೆಹಾಕಿದವರಲ್ಲ. ನಂಜೇಗೌಡರ ಬಗೆಗೆ ಅವರಿಗೆ ವಿಶ್ವಾಸವಿತ್ತು, ಗೌರವವಿತ್ತು. ಯಜಮಾನಿಕೆಯ ಭಾರ ಹೊರುವುದಕ್ಕಿಂತ ಕೈಲಾದ್ದು ಮಾಡಿಕೊಂಡಿರುವುದು ಕ್ಷೇಮವೆಂದು ತಿಳಿದಿದ್ದರು. ಅವರ ದೊಡ್ಡತನಕ್ಕೆ ಮುಂದಿನ ಪ್ರಕರಣ ಒಂದು ಸಾಕ್ಷಿ.

ನಂಜೇಗೌಡರ ನಿಧನಾನಂತರ ದೊಡ್ಡ ಮನೆಯ ಜವಾಬ್ದಾರಿಯನ್ನು ಮುಂದೆ ಯಾರು ನಿರ್ವಹಿಸಬೇಕೆಂಬ ಪ್ರಸ್ತಾಪ ಬಂತು. ಯಜಮಾನರು ಸಾಯುವಾಗ ಲಿಂಗಯ್ಯನೇ ಮುಂದೆ 'ದೊಡ್ಡ ಮನೆ'ಯ ಯಜಮಾನನಾಗಲು ತಕ್ಕವನು ಎಂದು ಹೇಳಿ ಹೋಗಿದ್ದರೂ ಲಿಂಗಯ್ಯ, ಇನ್ನೂ ಇಬ್ಬರು ತನ್ನ ಚಿಕ್ಕಪ್ಪಂದಿರು ಇರುವಾಗ ತನಗೇಕೆ ಉಸಾಬರಿ ಎಂದು ಸುಮ್ಮನಿದ್ದ. ದೊಡ್ಡ ಮನೆಯ ಹಿತೈಷಿಗಳಾಗಿದ್ದ ನಾಲ್ಕಾರು ಮಂದಿ ಯಜಮಾನರು ಉಪಸ್ಥಿತರಿದ್ದರು. ನಂಜೇಗೌಡರ ನಿಧನಾನಂತರ ತಮ್ಮಂದಿರಲ್ಲಿ ಯಾರಿಗಾದರೂ ಒಬ್ಬರಿಗೆ ಸಹಜವಾಗಿ ದೊಡ್ಡ ಮನೆಯ ಯಜಮಾನಿಕೆ ಹೋಗಬೇಕಿತ್ತು. ಆದರೆ ನಾನು ಮೊದಲೇ ತಿಳಿಸಿದಂತೆ ಆ ಸಹೋದರರು ಎಂದೂ ಅಂಥದಕ್ಕೆ ಆಸೆಪಟ್ಟವರಲ್ಲ. ಚಿಕ್ಕೇಗೌಡರು ಹೇಳಿದರು. "ನಾವು ಹಿಂದೂ ಒಂದೇ, ಮುಂದೂ ಒಂದೇ ಒಳಗೊಂದು ಹೊರಗೊಂದು ನಮಗೆ ಆಡಾಕೆ ಬರಾದಿಲ್ಲ. ಇವತ್ತು ಅಷ್ಟೇಯ, ನಾಳೀಕು ಅಷ್ಟೇಯ. ಹಿಂದೆ ನಮ್ಮಣ್ಣರೋವಾಗ್ಲೇ ಹೇಳಿದೀವಿ. ನಾವು ಎಂದಿನಂಗೆ ದುಡೀತೀವಿ. ಈ ಮನೆ ಆದೀಕ ಯಚ್ಚ ಎಲ್ಲಾನೂ ನಮ್ಮ ಹಿರೀ ಮಗ ಲಿಂಗು ನೋಡಿಕೊಂಡ್ಹೋಗ್ಲಿ ಅಂತ. ಈವತ್ತು ನಮ್ಮಣ್ಣಿಲ್ಲಾಂತ ನಾವು ಬೇರೊಂದಾಡೋರಲ್ಲ. ನಮ್ಮಕ್ಕಳು ಬ್ಯಾರೆ, ನಮ್ಮಣ್ಣನ ಮಕ್ಕಳು ಬ್ಯಾರೆ ಅಂತ ನಾವು ಭಾವಿಸಿಲ್ಲ. ನಮ್ಮಕ್ಕಳಿಗೆಲ್ಲಾ ಹಿರಿಯೋನು ಲಿಂಗು ಅವನೆ. ವಯಸ್ಸು ಕಮ್ಮಿಯಾದ್ರೂ ಬುದ್ಧಿ ಕಮ್ಮಿ ಇಲ್ಲ. ನಮ್ಮಣ್ಣನ ಯಂಗೆ ನೋಡ್ತಿದ್ನೋ ಹಂಗೆ ನಮ್ಮೂ ನೋಡಿಕಂಡವನೆ....ಅವನೇ ಎಲ್ಲಾ ನೋಡಿಕೊಂಡ್ಹೋಗಲಿ. ನಾವು ನಮ್ಮ ಕೈಮೀರಿ ದುಡಿತೀವಿ. ಅವನು ಹೊರಗಡೆ ಆದೀಕ ನಷ್ಟ, ಹೋಗೋರು ಬರೋರು–ಇಷ್ಟು ನೋಡಿಕೊಂಡ್ಹೋದ್ರೆ ಸಾಕು" ಅಣ್ಣನಾದ

ವಸು ತೀರಿಕೊಂಡರೆ ಸಾಕು ತಾನು ಯಜಮಾನನಾಗಬಹುದೆಂದು ಯಜಮಾನಿಕೆಗಾಗಿ ಬಾಯ್ಬಿಡುವ ಅಸಂಖ್ಯಾತ ಮಂದಿಯ ನಡುವೆ ನನ್ನೂರಿನ ಈ ಸೋದರರ ಮಾತು ಅಚ್ಚರಿ ಉಂಟುಮಾಡುತ್ತವಲ್ಲವೇ ? ಬಂಗಲಿ ಸುಬ್ಬೇಗೌಡರು ಹೇಳುವ ಹಾಗೆ ಇಂಥ ಜನ ಎಲ್ಲಿ ಹುಡುಕಿದರೆ ಸಿಕ್ಕಾರು ? ಲೋಕವೇ ಮೆಚ್ಚುವಂಥ ಅಪರೂಪದವರು ನನ್ನೂರಿನ ದೊಡ್ಡಮನೆಯ ಈ ಸಹೋದರರು.

ಇಲ್ಲಿ ಗಮನಿಸಬೇಕಾದ ಸಂಗತಿಯೊಂದಿದೆ. ದೊಡ್ಡಮನೆಯ ಯಜಮಾನರಾಗಲು ಆ ಸೋದರರು ಅನರ್ಹರೇನಲ್ಲ ಅಥವಾ ತಮ್ಮ ಮುಂದಿನ ಮಗನ ಮೇಲೆ ಜವಾಬ್ದಾರಿಯನ್ನು ಹೊರಿಸಿ ತಾವು ನೆಮ್ಮದಿಯಿಂದ ಕೈತೊಳೆದುಕೊಂಡಿರಬೇಕೆಂಬ ಸನ್ನಾಹವೂ ಅವರದಲ್ಲ. ಇಬ್ಬರೂ ಕೂಡಿಯೇ ಹೇಳುತ್ತಾರೆ "ಲಿಂಗೂ ನಾವಿದೀವಪ್ಪ. ನಿಂಗಾಗಿ ದುಡೀತೀವಿ. ಈ ದೊಡ್ಡಮನೆಗಾಗಿ ಕಷ್ಟಪಡ್ತೀವಿ. ಈ ಮನೆ ದೀಪ ಇನ್ನೂ ಚೆನ್ನಾಗಿ ಬೆಳಗೋ ಹಂಗೆ ಮಾಡೋ ಕೆಲಸ ನಿಂದು. ಮಕ್ಕಳಿಗೆಲ್ಲ ಹಿರಿಯೋನಾಗಿ ನೀನು ಈ ಮನೆ ನಡಸು. ಈ ದೊಡ್ಡಮನೆ ಹೆಸರು ಉಳಸು." ಎಂದು ಕಳಕಳಿಯಿಂದ ಹೇಳಿ ಕಣ್ಣೊರಸಿಕೊಂಡರು.

ಲಿಂಗುವಾದರೂ ಅಷ್ಟೆ. ಇಂಥ ಅವಕಾಶ ಸಿಕ್ಕೀತೇ ಎಂದು ತವಕಿಸಿದವನಲ್ಲ. "ಅಯ್ಯಾ, ನನಗಿನ್ನೂ ಚಿಕ್ಕ ವಯಸ್ಸು. ಯಾಕೆ ಈ ಭಾರ ನನ್ನ ಮೇಲೆ ಹೇರ್ತೀರಿ ? ಚಿಕ್ಕಪ್ಪದೀರು ಇರುವಾಗ ಯಾಕೆ ನನಗೀ ಸಂಸಾರದ ಯಜಮಾನಿಕೆ" ಸೌಜನ್ಯದಿಂದಲೇ ಇಂಥ ದೊಡ್ಡ ಜವಾಬ್ದಾರಿಯನ್ನು ಹೊರಲು ತಾನಿನ್ನೂ ಸಮರ್ಥನಲ್ಲ ಎಂಬುದನ್ನು ಹಿರಿಯರ ಮುಂದೆ ಒಪ್ಪಿಕೊಂಡ. ಹಿರಿಯರೆಲ್ಲರ ಒತ್ತಾಯಕ್ಕೆ ಕೊನೆಗೂ ಕಟ್ಟುಬಿದ್ದು "ಆಗಲ್ರಯ್ಯಾ" ಎಂದ. "ನನ್ನ ಕೈಲಾದ್ದು ನಾನು ಮಾಡ್ತೀನಿ. ದೊಡ್ಡಮನೆ ಹೆಸರು, ನಮ್ಮಪ್ಪನ್ಹೆಸರು, ನಮ್ಮ ಚಿಕ್ಕಪ್ಪದೀರ್ಹೆಸರು ಉಳಿಸೋದಕ್ಕೆ ಎಷ್ಟು ಮಾಡ್ಬೇಕೊ ಅಷ್ಟು ಮಾಡ್ತೀನಿ. ನಾನು ಅಪ್ಪಿತಪ್ಪಿದರೆ ನಮ್ಮ ಚಿಕ್ಕಪ್ಪದೀರು ಬುದ್ಧಿ ಹೇಳ್ಬೇಕು" ಎಂದ ದೊಡ್ಡಮನೆಯ ಹೊಸ ಗೌಡ ನಮ್ರನಾಗಿ.

ಲಿಂಗು, ಲಿಂಗಯ್ಯ ಎಂದು ಕರೆಸಿಕೊಳ್ಳುತ್ತಿದ್ದ ವ್ಯಕ್ತಿ ಅವತ್ತಿನಿಂದ ಲಿಂಗೇಗೌಡರಾದರು. ಆದರೂ ತಾನು ದೊಡ್ಡಮನೆಯ ಯಜಮಾನನೆಂಬ ಗರ್ವ, ಅಹಂಕಾರ ಎಳ್ಳಷ್ಟೂ ಸುಳಿಯಲಿಲ್ಲ. ಯಜಮಾನನಾದರೂ ತಾನಿನ್ನೂ ಚಿಕ್ಕವನೇ ಎಂಬ ಭಾವ ಲಿಂಗೇಗೌಡರ ಮನದಲ್ಲಿ. ಹಿರಿಯರ ಬಗೆಗೆ ನಮ್ರತೆ. ಪಟೇಲ್ ಮುದ್ದೇಗೌಡರು ಲಿಂಗೇಗೌಡರ ಈಚಿನ ಗುಣ ಸ್ವಭಾವಗಳನ್ನು ನೋಡಿ 'ನನಗೂ ಇಂಥ ಮಗ ಇರಬಾರದಾಗಿತ್ತೆ' ಎಂದು ಆಸೆಪಡುವಷ್ಟುಮಟ್ಟಿಗೆ ಲಿಂಗೇಗೌಡರು ತಮ್ಮ ಗುಣ ಸ್ವಭಾವಗಳನ್ನು ಬೆಳೆಸಿಕೊಂಡರು. ವಯಸ್ಸು ಚಿಕ್ಕದಾದರೂ ಮಾತುಕತೆಗಳಲ್ಲಿ ತೋರಿಸುತ್ತಿದ್ದ ಪ್ರೀತಿ, ವಿಶ್ವಾಸ, ಬಡವರ ಕಷ್ಟಕ್ಕೆ ಆಗುತ್ತಿದ್ದ ರೀತಿ ಇವೆಲ್ಲ ಊರ ಜನರ ಮೇಲೆ ಪರಿಣಾಮ ಬೀರಿದುವು. ಸತ್ತ ತಂದೆಯ ಅಪೇಕ್ಷೆಯಂತೆ ಹೊಸಮನೆಯ ತಯಾರಿ ನಡೆಯಿತು.

ಈ ಮಧ್ಯೆ ಕೈ ಹಿಡಿದ ಹೆಂಡತಿ ಪುಟ್ಟಮ್ಮ ತೀರಿಹೋದರು. ಪುನಃ ಮದುವೆಯಾದರು. ಕೆಲವು ಕಾಲ ಮಾತ್ರ ಬಾಳಿ ಆಕೆಯೂ ಹಿರಿಯವಳನ್ನು ಅನುಸರಿಸಿದಳು. ಅನಂತರ ನರೀಹಳ್ಳಿಯ ಕರೀಗೌಡರ ಮಗಳಿಗೆ ಹೊಸಮನೆಯಲ್ಲಿ ಸಂಸಾರ ನಡೆಸುವ ಭಾಗ್ಯ ಬಂತು.

ದೊಡ್ಡಮನೆಯ ಸಂಸಾರದ ಹೊರೆಯೇ ಸಾಕಷ್ಟು ಇರುವಾಗ ತನ್ನ ಮಾವ ಬಂಗಲಿ ಸುಬ್ಬೇಗೌಡರು ಸಾಯುವಾಗ ಉಳಿಸಿಹೋಗಿದ್ದ ಅಪಾರ ಸಾಲವನ್ನು ತೀರಿಸುವ ಜವಾಬ್ದಾರಿ ಗೌಡರ ತಲೆಗೇ ಗಂಟುಬಿತ್ತು. ಆರುಸಾವಿರ ಆ ಕಾಲದಲ್ಲಿ ಕಡಿಮೆಯೇನಲ್ಲ. ಹಿಂಜರಿಯಲಿಲ್ಲ. ವಿಧವೆಯಾದ ತನ್ನತ್ತೆ, ಪ್ರಪಂಚ ತಿಳಿಯದ ಭಾವಮೈದುನರನ್ನು ನಡುನೀರಿನಲ್ಲಿ ಕೈ ಬಿಡಬಾರದೆಂದು ಸಂಕಲ್ಪಿಸಿ ಸಾಲದಿಂದ ವಿಮುಕ್ತವಾಗುವ ಬಗೆಗೆ ತಾವೇ ಒಂದು ಮಾರ್ಗವನ್ನು ಸೂಚಿಸಿದರು. ಅತ್ತೆ ಗಿರಿಯಮ್ಮನವರನ್ನು ಕುರಿತು "ಜಮೀನೆಲ್ಲಾ ನನ್ಹೆಸರಿಗೆ ಬರೀರಿ. ನಾನು ಹ್ಯಾಗೋ ಮಾಡಿ ಸಾಲನೆಲ್ಲಾ ತೀರಿಸ್ತೀನಿ. ನಾನು ಯಾವ ಸಾಲ ತೀರಿಸ್ತೀನೊ ಆ ಸಾಲಕ್ಕಾಗುವಷ್ಟು ಜಮೀನು ಇಟ್ಕೊಂಡು ಉಳಿದದ್ದು ನಿಮಗೆ ಬರಕೊಡ್ತೀನಿ. ನಾಲ್ಕು ಜನ ಪಂಚಾಯ್ತರು ಹ್ಯಾಂಗೆ ಹೇಳ್ತಾರೊ ಹಂಗೆ. ನನಗೂ ತಮ್ಮದೀರವ್ರೆ. ಅವರು ನಾಳೆ ನನ್ನ ತಪ್ಪಿಗೆ ಸಿಗೇಹಾಕಿಸ್ಕೋಬಾರ್ದು, ನಮ್ಮಣ್ಣ ಮಾವನಮನೆ ಉದ್ಧಾರ ಮಾಡಾಕ್ಕೋಗಿ ನಮ್ಮ ತಲೆಮ್ಯಾಲೆ ಸಾಲ ಹೊರಿಸ್ದ ಅಂತ ಅನ್ನಬಾರ್ದು" ಎಂದು ಹೇಳಿ ಅತ್ತೆಯ ಒಪ್ಪಿಗೆ ಪಡೆದು ಊರಿಗೆ ಹಿಂದಿರುಗಿದರು.

ಎಂಥ ದೂರಾಲೋಚನೆ ! ಕಾಲ ಒಂದೇ ರೀತಿ ಇರುತ್ತದೆಂದು ಭಾವಿಸಲಾಗದು. ಇಂದು ಒಂದಾಗಿರುವವರು ನಾಳೆ ತಿರುಗಿ ಬೀಳಬಹುದು. ಆಗದವರು ಚಿಕ್ಕಪ್ಪಂದಿರ ತಲೆ ಕೆಡಿಸಿ ಲಿಂಗೇಗೌಡ ಎಲ್ಲ ಹಾಳುಮಾಡಿಬಿಟ್ಟ ಎಂದು ದೂರಬಹುದು. ಚಿಕ್ಕಪ್ಪಂದಿರಾಗಲೀ ಅವರ ಮಕ್ಕಳಾಗಲೀ ತನ್ನ ಮೇಲೆ ತಪ್ಪು ತಿಳಿಯಬಾರದೆಂದು ಆಲೋಚಿಸಿ ಅತ್ತೆಯ ಜಮೀನನ್ನು ಸಾಲ ತೀರಿಸುವಷ್ಟು ದಿನ ತಮ್ಮ ಹೆಸರಿನಲ್ಲಿ ಇರಲೆಂದು ಬರೆಸಿಕೊಂಡ ಗೌಡರ ಲೌಕಿಕ ಬುದ್ಧಿಗೆ ತಲೆದೂಗಬೇಕು.

ತಂದೆಯಂತೆ ಮಗನಲ್ಲೂ ಕೂಡ ಎಂಥ ಕಠಿಣ ಮನುಷ್ಯರನ್ನು ಕೂಡ ಪರಿವರ್ತಿಸಿ ಒಲಿಸಿಕೊಳ್ಳಬಲ್ಲ ಒಂದು ಅಸಾಧಾರಣ ಶಕ್ತಿಯಿತ್ತು. ಗೌಡರ ನಯ ವಿನಯ, ಸದ್ವರ್ತನೆಗಳಿಗೆ ಜನ ಮಾರುಹೋಗಿದ್ದರು. ತನ್ನ ಜೀವಮಾನದಲ್ಲಿ ಯಾರಿಗೂ ಒಂದು ಕಾಸು ಬಡ್ಡಿ ಬಿಡದ ದಡಗದ ಹೊನ್ನಯ್ಯ ಎರಡುಸಾವಿರ ಬಡ್ಡಿ ಬಿಟ್ಟುಕೊಟ್ಟ. ಎರಡು ವರ್ಷಗಳೊಳಗೆ ಬೆಟ್ಟದಂಥ ಸಾಲವನ್ನು ತೀರಿಸಿ ಬಂಗಲಿ ಮನೆಯನ್ನು ಋಣವಿಮುಕ್ತವಾಗಿ ಮಾಡಿದರು. ಸುತ್ತಲಹಳ್ಳಿ ಬೆರಗಾಗುವಂಥ ಸಾಹಸ ಮಾಡಿ ತೋರಿಸಿದರು.

ತಾನೆಣಿಸಿದಂತೆ ದೊಡ್ಡಮನೆ ಕೂಳೆಯಾಗಿ ಹೋಗುವ ಬದಲು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವುದನ್ನು ಗಮನಿಸಿದ ರಂಗೇಗೌಡರಿಗೆ ಹೊಟ್ಟೆಗೆ ಬೆಂಕಿ ಸುರಿದಂತಾಗಿತ್ತು. ಮನೆ ಮುರಿಯುವ ಕೆಲಸವನ್ನು ಹೇಗೆ ಮಾಡಿದರೆ ಸಾಧ್ಯ ಎಂದು

ಹಗಲಿರುಳು ಲೆಕ್ಕ ಹಾಕುತ್ತಿದ್ದರು. ದೊಡ್ಡ ಮನೆಯಲ್ಲೇ ಒಬ್ಬರಿಗೊಬ್ಬರಿಗೆ ತಂದು ಹಾಕದಿದ್ದರೆ ತಮ್ಮ ಕೆಲಸ ಸುಲಭವಾಗಲಾರದು ಎನ್ನಿಸಿತು. ಗೌಡರ ಚಿಕ್ಕಪ್ಪ, ಚಿಕ್ಕೇಗೌಡರ ಒಬ್ಬನೇ ಮಗ ಕೆಂಪಣ್ಣನನ್ನು ಸಮಯ ನೋಡಿ ತಮ್ಮೆಡೆಗೆ ಎಳೆದುಕೊಂಡರು. "ನನ್ನ ವಯಸ್ಸಪ್ಪಾ ನಿಮ್ಮಣ್ಣಂಗೆ ಆಗ್ಲೇ ಮೂರ್ಮದುವೆ ಆದ. ಪ್ರಾಯಕ್ಬಂದ ನಿಮ್ನ ಕುಂಡ್ರಿಸ್ಬುಟ್ಟು. ತಬ್ಲಿ ಮಕ್ಳು (ಈ ವೇಳೆಗೆ ಚಿಕ್ಕೇಗೌಡರು ತೀರಿಕೊಂಡಿದ್ದರು) ಅನ್ನೊ ಒಂದಿಷ್ಟಾದ್ರೂ ಕನಿಕರ ಬ್ಯಾಡ್ವಾ ?" ಕೆಂಪಣ್ಣನ ಮನಸ್ಸಿನಲ್ಲಿ ವಿಷಬೀಜ ಬಿತ್ತಿದರು. ರಂಗೇಗೌಡರ ಕುಯುಕ್ತಿಯ ಮಾತುಗಳನ್ನು ಅರ್ಥೈಸಿಕೊಳ್ಳಲಾರದ ಕೆಂಪಣ್ಣ ತಲೆಕೆಡಿಸಿಕೊಂಡು ಗಂಟೆಟ್ಟಿನ ನಿಂಗಯ್ಯನ ಸಂಗಡ ಮನೆಯಲ್ಲಿ ಹಣ ಕದ್ದು ನೀಲಗಿರಿಗೆ ಓಡಿಹೋದ.

ಗೌಡರಿಗೆ ಗಾಬರಿಯಾಯಿತು. ದುಡ್ಡು ಹೋದರೆ ಹೋಗಲಿ, ತಬ್ಬಲಿ ಹುಡುಗ ಎಲ್ಲಿ ಹೋದನೋ ಎಂದು ಚಿಂತೆಗಿಟ್ಟುಕೊಂಡಿತು. ನೀಲಗಿರಿಗೆ ಹೋಗಿರುವ ಸೂಚನೆ ತಿಳಿಯಿತು. ಹೋದರೆ ಹೋದ ಸಾಕಾದಾಗ ತಾನೇ ಬರುತ್ತಾನೆಂದು ಉಪೇಕ್ಷೆ ಮಾಡಲಿಲ್ಲ. ತಾಯಿ ತಂದೆಗಳಿಲ್ಲದ ತಬ್ಬಲಿ ಮಕ್ಕಳನ್ನು ಹೆತ್ತ ತಂದೆಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದ ಲಿಂಗೇಗೌಡರು ನೀಲಗಿರಿ ತಲುಪಿ ಕೆಂಪಣ್ಣನನ್ನು ಪತ್ತೇಮಾಡಿ ಹಿಂದಕ್ಕೆ ಕರೆತಂದರು. ನಾಗಮಂಗಲ ಸಮೀಪಿಸುವವರೆಗೆ ಏನೊಂದೂ ಮಾತಾಡಲಿಲ್ಲ. ಗಾಡಿ ಇಳಿದರು. "ಲೋ ಕೆಂಪು, ನೀನು ಹೀಗೆ ಮಾಡಬಹುದೇನೋ ? ಹೊಟ್ಟೇಲಿ ಹುಟ್ಟಿದ ತಮ್ಮನಿಗಿಂತ ನಿನ್ನ ಹೆಚ್ಚಾಗಿ ಕಂಡರೂ ನನಗೆ ಮೋಸಮಾಡಿಬಿಟ್ಟೆಯಲ್ಲ. ನಮ್ಮ ಚಿಕ್ಕಪ್ಪ ನಿನಗಿಂತ ಹೆಚ್ಚಾಗಿ ನಮಗೋಸ್ಕರ ದುಡಿದರು. ನಿನಗೇನು ಮೋಸ ಮಾಡೇನೋ ನಾನು. ಹಗಲು ರಾತ್ರಿ ದುಡೀತಾ ಇರೋದು ನನಗೂ ನನ್ನ ಮಕ್ಕಳಿಗೂ ಅಂದುಕೊಂಡ್ಯಾ ?....ಎಂದು ಹೇಳಿ ಗದ್ಗದಿತರಾದರು. ಕೆಂಪಣ್ಣನ ಕಣ್ಣಲ್ಲಿ ಪಶ್ಚಾತ್ತಾಪದ ಕಣ್ಣೀರು ತೊಟ್ಟಿಕ್ಕುತ್ತಿತ್ತು. ಬಿಕ್ಕಳಿಸಿ ಅಳತೊಡಗಿದ.

* * *

ನಿಂತ ನೀರಿನಂತೆ ಯಾವ ಪರಿವರ್ತನೆಯೂ ಇಲ್ಲದಿದ್ದ ನನ್ನೂರಿಗೆ ಲಿಂಗೇಗೌಡರು ಹೊಸ ಚಾಲನೆ ಕೊಟ್ಟರು. ಕಾಲ ಬದಲಾದಂತೆ ಹಳ್ಳಿಯ ನಡೆನುಡಿಗಳು ಬದಲಾಗಬೇಕೆಂದು ನಾಟಕ, ಬಯಲಾಟ, ಹಾಡು, ಕುಣಿತಗಳಿಗೆ ಊರಿನಲ್ಲಿ ಅವಕಾಶಮಾಡಿಕೊಟ್ಟರು. ಸ್ವತಃ ತಮ್ಮ ಮಗಳಿಗೆ ಸಂಗೀತ ಕಲಿಸಲು ನರಸಿಂಹ ಶೆಟ್ಟಿಯನ್ನು ಗೊತ್ತುಮಾಡಿದರು. ನನ್ನೂರಿಗೆ ಹೊಸ ಕಳೆ ಬಂತು. ಹೊಸ ಉತ್ಸಾಹ, ಉಲ್ಲಾಸ, ಸಂಭ್ರಮದಿಂದ ನನ್ನೂರು ಸಕ್ಕು ನಲಿಯಿತು.

ಕುಟುಂಬದ ಸದಸ್ಯರ ಸಂಖ್ಯೆ ದಿನೇ ದಿನೇ ಬೆಳೆಯುತ್ತ ಬಂತು. ಉತ್ಪತ್ತಿ ಸಂಸಾರ ನಿರ್ವಹಣೆಗೆ ಸಾಲದಾಯಿತು. ಬೇರೊಂದು ಆದಾಯದ ಮಾರ್ಗವನ್ನು

ಹಿಡಿಯಬೇಕೆಂದು ಸೇಂದಿಯ ವ್ಯಾಪಾರಕ್ಕೆ ತೊಡಗಿದರು. ಸಾಕಷ್ಟು ಸಂಪಾದನೆಯಾಯಿತು. ಸಂಸಾರ ಸರಾಗವಾಗಿ ಸಾಗುತ್ತಿತ್ತು. ಆದರೇನು ?

ಬದುಕಿನಲ್ಲಿ ನೆಮ್ಮದಿಯಿರಬೇಕೆಂದು ಯೋಗ್ಯನಾದ ಮನುಷ್ಯನು ಬಯಸುವುದು ಸಹಜ. ಆದರೆ ಅಂಥ ನೆಮ್ಮದಿ ತಾನು ಅಂದುಕೊಂಡಷ್ಟು ಸುಲಭವಾಗಿ ದೊರಕುವುದಾಗಿದ್ದರೆ ಬದುಕಿನಲ್ಲಿ ಸ್ವಾರಸ್ಯವೇ ಇರುತ್ತಿರಲಿಲ್ಲವೇನೊ ! ಕಾರಣ ; ವ್ಯಕ್ತಿಯೊಬ್ಬ ಯೋಗ್ಯನಾಗಿದ್ದ ಮಾತ್ರಕ್ಕೆ ಸಮಾಜದ ಎಲ್ಲರೂ ಹಾಗೆಯೇ ಇರುವುದಿಲ್ಲವಲ್ಲ. ಅಯೋಗ್ಯರು ದುಷ್ಟರು ಇರುವತನಕ ಜೀವನ ವ್ಯಾಪಾರದಲ್ಲಿ ನೆಮ್ಮದಿಯನ್ನು ಪಡೆಯಲು ಆಗಾಗ್ಗೆ ಸಾಕಷ್ಟು ತೆರುತ್ತಿರಬೇಕೆಂದು ಕಾಣುತ್ತದೆ.

ಪರಿಕಿತ ಬಾಳಿನ ಸಹಜ ಗುಣ. ಕಂಟಕಗಳಾದರೂ ಅಷ್ಟೆ. ಉತ್ತಮರಿಗೇ ತೊಡರಿಕೊಳ್ಳುತ್ತವೆ. ಈ ಅಗ್ನಿಪರೀಕ್ಷೆಗಳಿಂದ ಪಾರಾಗಿ ಬಂದರೇನೇ ಮನುಷ್ಯ ಪುಟಕ್ಕಿಟ್ಟ ಚಿನ್ನವಾಗುವುದು. ಇಂಥ ಅನಿರೀಕ್ಷಿತ ದುರ್ಘಟನೆಗಳು ಲಿಂಗೇಗೌಡರ ಬಾಳಿನಲ್ಲೂ ವಕ್ರಿಸಿದುವು.

ಈಚಲು ಗಿಡಗಳಲ್ಲಿ ಕದ್ದು ಸೇಂದಿ ಇಳಿಸುತ್ತಿದ್ದ ನೆರೂರಿನ ಬಕ್ಕಪ್ಪ ಸಿಕ್ಕಿಬಿದ್ದು ದಂಡಕೊಟ್ಟು ಅವಮಾನವಾಯಿತೆಂದು ಗೌಡರ ಮೇಲೆ ಬೆಟ್ಟದಷ್ಟು ಸಿಟ್ಟು ಇಟ್ಟುಕೊಂಡಿದ್ದ. ಆ ಸಿಟ್ಟಿನ ಬೆಟ್ಟಕ್ಕೆ ಪಟೇಲ್ ರಂಗೇಗೌಡರು ಬೆಂಕಿ ಹಚ್ಚಿದರು. “ನೋಡು ಅವನು ಕಾಲುವೆ ತೋಡಿಸ್ಕವನಲ್ಲ ಅದ ಯಾರ್ನ ಕೇಳಿ ತೋಡಿಸಿದ್ನಯ್ಯಾ ? ನಿನ್ನ ಗದ್ದೆ ಇಲ್ವಾ ಅಡೆ ಕೆಳಗಡೆ ? ನಿನ್ನ ಕೇಳಿದ್ನಾ ? ದೊಡ್ಡಮನೆ ಗೌಡ ಅಂತಾರೆ ಅಂತ ಹೇಳಿ, ಇಲ್ಲದ ಕಾರುಬಾರು ಮಾಡೋದೇನಯ್ಯಾ.” ರಂಗೇಗೌಡನ ಮಾತುಗಳಿಂದ ಬಕ್ಕಪ್ಪನಿಗೆ ಕೋಡು ಮೂಡಿತು. ನೋಡ್ತೀನಿ ಒಂದು ಕೈ ಹಾಗಾದರೆ ಅಂದುಕೊಂಡ.

ತೊರೆಹಳ್ಳದ ಈಚೆ ನಾಲ್ಕಾರು ಆಳುಗಳನ್ನು ಕಟ್ಟಿಕೊಂಡು ತೆವರೆ ಹಾಕುತ್ತಿದ್ದ. ಹೊಸ ಕಾಲುವೆಗೆ ನೀರು ಹೋಗದಂತೆ ಅಡ್ಡಗಟ್ಟಿ ಹಾಕಿರುವುದನ್ನು ಕಂಡು ಗೌಡರು ಬಗ್ಗಿ ಕಟ್ಟನ್ನು ಕೀಳಲಾರಂಭಿಸಿದರು. “ಯಾವನೋ ಅವನು ಅಡ್ಡಗಟ್ಟೆ ಕೀಳ್ತಾ ಇರೋನು ?” ಎನ್ನುತ್ತ ಬಕ್ಕಪ್ಪ ಗುದ್ದಲಿ ಹಿಡಿದುಕೊಂಡೇ ಆಳುಗಳ ಸಮೇತ ಬಂದ. ಮಾತು ಮಾತು ಬೆಳೆಯಿತು. ಬಕ್ಕಪ್ಪ ಗೌಡರ ಮೇಲೆ ಬಿದ್ದ. ಒಬ್ಬರ ಮೇಲೆ ಐದು ಜನ. ಸುತ್ತಮುತ್ತಲಿಂದ ಜನ ಓಡಿ ಬಂದರು. ಹತ್ತಿರದಲ್ಲೇ ಕೆಲಸ ಮಾಡುತ್ತಿದ್ದ ಗೌಡರ ಭಾವಮೈದುನದಿರು ಬಿದ್ದೇಬೀಳ ಬಂದರು. ಅವರು ಬಂದ ರಭಸ ನೋಡಿ ಏನಾದರೂ ಅನಾಹುತವಾದೀತೆಂದು ಗೌಡರೇ ಅವರನ್ನು ತಡೆದು ಸಮಾಧಾನ ಮಾಡಲಾರಂಭಿಸಿದರು. ಸುದ್ದಿ ನನ್ನೂರಿಗೆ ಹೋಯಿತು. ಊರಿಗೆ ಊರೇ ಸೈನ್ಯದಂತೆ ನುಗ್ಗಿತು. ಹಾಗೆ ಬಂದ ಜನವನ್ನು ಕಂಡ ಗೌಡರಿಗೆ ಕಣ್ಣಲ್ಲಿ ನೀರು ಬಂದವು. ಸಂತೋಷದ ಕಣ್ಣೀರು—ತನ್ನ ಬೆನ್ನಹಿಂದೆ ಇಷ್ಟೊಂದು ಜನ ಇದ್ದಾರಲ್ಲ

ಎಂದು. "ಆ ಪಾಪಿ ಏನೋ ಮಾಡಿದ ಅಂತ ನೀವು ಅವನ ಪ್ರಾಣ ತೆಗೀಬ್ಯಾಡಿ. ಕೋಪದಲ್ಲಿ ಕೂದ ಮೂಗು ಶಾಂತವಾದಾಗ ಬರೋದಿಲ್ಲಾ. ಸುಮ್ಮನಿರಿ" ಎಂದು ನನ್ನೂರಿನ ಬಾಂಧವರಿಗೆ ಕೈಮುಗಿದು ಕೇಳಿಕೊಂಡರು. ಗೌಡರ ದೊಡ್ಡತನಕ್ಕೆ ಇದಕ್ಕಿಂತ ಬೇರೇನು ಬೇಕು ?

ಅದೇ ಬಕ್ಕಪ್ಪ, ಬೇರೆ ರೀತಿಯಲ್ಲಿ ಪಿಶಾಚಿಯ ಹಾಗೆ ಕಾಡುತ್ತಾನೆಂದು ಗೌಡರು ನೆನಸಿರಲಿಲ್ಲ. ಒಂದು ದಿನ ನನ್ನೂರು ಕರಿಯ ಮುಳ್ಳುಕಟ್ಟಿ ಹಬ್ಬಕ್ಕೆ ಜೋಗೀಪುರಕ್ಕೆ ಹೋಗಿದ್ದವನು ಹಬ್ಬ ಮುಗಿಸಿಕೊಂಡು ನನ್ನೂರಿಗೆ ಬರುತ್ತಿದ್ದ. ರಂಗೇಗೌಡರ ತೋಟದ ಬಾವಿಯ ಮೇಲೆ ಹದ್ದುಗಳು ಹಾರಾಡುತ್ತಿದ್ದವು. ಹತ್ತಿರ ಬಂದ. ಅಲ್ಲೇನೋ ಇರುವುದು ಕಾಣಿಸಿತು. 'ಓ' ಅಂದ, ಹುಳ ನೋಡುತ್ತಿದ್ದ ರಂಗೇಗೌಡರು ಬಂದರು. ಅವರಿಗೂ ತೇಲುತ್ತಿರುವ ಗಂಟು ಏನು ಎಂಬುದು ತಿಳಿಯಲಿಲ್ಲ. ಯಾಕೋ ನಡುಕ ಶುರುವಾಯಿತು. ಕೊಂಬಲ್ಲನನ್ನು ಜೊತೆಗೆ ಕರೆದುಕೊಂಡು ಪುನಃ ಬಾವಿಯ ಬಳಿ ಬಂದು ಚೀಲದ ಗಂಟನ್ನು ಮೇಲೆಳೆದು ಬಿಚ್ಚಿ ನೋಡಿದರು. ಬಕ್ಕಪ್ಪನ ತಲೆ !? ಇದು ದೊಡ್ಡಮನೆ ಗೌಡನ ಕೆಲಸವೇ ಇರಬೇಕೆಂದು ಊಹಿಸಿದರು. ಲಿಂಗೇಗೌಡರ ಮೇಲೆ ಸೇಡು ತೀರಿಸಿಕೊಳ್ಳಲು ಇದಕ್ಕಿಂತ ಅವಕಾಶ ಸಿಕ್ಕೀತೇ ? ತಲೆಯನ್ನು ಅದೇ ಚೀಲದಲ್ಲಿ ಕಟ್ಟಿ ಗೌಡರ ತೆಂಗಿನ ಮರದ ಮೇಲಿಟ್ಟರು. ಕೊಲೆಮಾಡಿದ ಮನುಷ್ಯ ಕೊಲೆಯಾದ ವ್ಯಕ್ತಿಯ ಅವಶೇಷವನ್ನು ತನ್ನಲ್ಲಿಯೇ ಇಟ್ಟುಕೊಳ್ಳುತ್ತಾನೆಯೇ ಎಂಬ ಸಾಧಾರಣ ಜ್ಞಾನವೂ ರಂಗೇಗೌಡರಿಗೆ ಇರಲಿಲ್ಲ. ಗೌಡರ ತೋಟದಲ್ಲಿ ರುಂಡವನ್ನು ಇಡುವುದರಿಂದ ಕೊಲೆಯ ಅಪವಾದ ಅವರ ಮೇಲೆ ಬಲವಾಗಿ ತಗಲಿಕೊಳ್ಳುತ್ತದೆಂದು ಭಾವಿಸಿದರೇನೋ ?

ಲಿಂಗೇಗೌಡರು ಕನಸು ಮನಸಿನಲ್ಲಿಯೂ ಎಣಿಸದ, ಎಂದೂ ಊಹಿಸಲೂ ಸಾಧ್ಯವಿಲ್ಲದ ಅಪರಾಧವೊಂದಕ್ಕೆ ನಿರಪರಾಧಿಯಾಗಿದ್ದು ಸಿಕ್ಕುಹಾಕಿಕೊಂಡರು. ಯಾವ 'ಸ್ವಯಂಕೃತಾಪರಾಧವನ್ನು ಮಾಡದಿದ್ದರೂ ಕೊಲೆಯಂತಹ ಭೀಕರ ಅಪರಾಧದ ಕಳಂಕ ಗೌಡರನ್ನು ತಬ್ಬಿಕೊಂಡಿತು. ದೊಡ್ಡಮನೆಯ ಶ್ವೇತವಸ್ತ್ರದ ಮೇಲೆ ಕಪ್ಪು ಕಲೆಯೊಂದು ಬಿತ್ತು. ಗೌಡರು ಧೃತಿಗೆಡಲಿಲ್ಲ. ಕದ್ದವನಿಗೆ ಕಳ್ಳತನದ ಭಯವಿರುತ್ತದೆ. ಕದಿಯದಿದ್ದ ಮನುಷ್ಯನಿಗೆ ಭಯವೆಲ್ಲಿಯದು ? ಶುದ್ಧ ಚಾರಿತ್ರ್ಯದ ಲಿಂಗೇಗೌಡರು ವಿಚಲಿತರಾಗಲಿಲ್ಲ. ವಿಚಾರಣೆ ನಡೆದಾಗ ವಸ್ತುಸ್ಥಿತಿ ಬೇರೆಯಾಗಿತ್ತು. ಕೊಲೆಗೆ ಮತ್ತಾವುದೋ ಪ್ರೇರಣೆ ಕಾರಣವಾಗಿದ್ದು ಕೊಲೆ ಮಾಡಿದವರು ಬೇರೆ ಯಾರೋ ಆಗಿದ್ದರು. ವಿಷಯ ಬಯಲಾದಾಗ ನನ್ನೂರಿನ ಜನ ಸಮಾಧಾನದ ನಿಟ್ಟುಸಿರುಬಿಟ್ಟರು. ಮಂಕಾಗಿದ್ದ ನನ್ನೂರಿನಲ್ಲಿ ಪುನಃ ಗೆಲುವು ಮೂಡಿತು. ಲಿಂಗೇಗೌಡರು ಅಗ್ನಿಪರೀಕ್ಷೆಯಲ್ಲಿ ಗೆದ್ದು ಬಂದಿದ್ದರು. ಅವರ ವ್ಯಕ್ತಿತ್ವ ಮತ್ತಷ್ಟು ಜಾಜ್ವಲ್ಯಮಾನವಾಗಿ ಬೆಳಗತೊಡಗಿತು.

ತಮ್ಮ ತೋಟದಲ್ಲಿ ಕಂಡ ತಲೆಯನ್ನು ಅಲ್ಲಿಯೇ ಇರಗೊಡದೆ ಮತ್ತು ಆ ಕೂಡಲೆ ಪೋಲೀಸರಿಗೆ ತಿಳಿಸದೆ ಬೇರೆಕಡೆ ಸಾಗಿಸಿದ ತಪ್ಪಿಗಾಗಿ ರಂಗೇಗೌಡರನ್ನು ಪೋಲೀಸಿನವರು ಒಡಿದರು. ಆಗ ಲಿಂಗೇಗೌಡರು ನಡೆದುಕೊಂಡ ರೀತಿ ಅಸಾಧಾರಣವೇ ಸರಿ. ಸಮಯ ಕಾದು ಅಮಲ್ದಾರ್ ಶಂಕರಪ್ಪನವರಲ್ಲಿ "ಏನಾದರೂ ಮಾಡಿ ನಮ್ಮ ಅಣ್ಣತಮ್ಮತನಕ್ಕೆ ಸೇರಿದ ಪಟೇಲ್ ರಂಗೇಗೌಡರನ್ನು ಬಿಟ್ಟುಬಿಡಿ. ಏನೋ ಒಂದು ಸಣ್ಣ ತಪ್ಪು ಮಾಡಿದ. ಅವನ್ನ ಕ್ಷಮಿಸಿ. ಇಲ್ಲದಿದ್ದರೆ ಮನೆತನದ ಮರ್ಯಾದೆ ಹೋಯ್ತುದೆ." ಎಂದು ಬೇಡಿಕೊಂಡರು. ದೊಡ್ಡತನ ಅಂದರೆ ಇದಲ್ಲವೇ ? ಯಾವಾತ ದೊಡ್ಡಮನೆಯನ್ನು ಮುರಿಯಬೇಕೆಂದು ಒಂದಲ್ಲ ಒಂದು ಸನ್ನಾಹ ಮಾಡಿ ಕೊನೆಗೆ ಕೊಲೆಯಂಥ ಗುರುತರವಾದ ಅಪರಾಧವನ್ನು ಸಾಧುವಿನಂಥ ಲಿಂಗೇಗೌಡರ ಮೇಲೆ ಹೊರಿಸಲು ಮುಂದಾದನೋ ಅಂಥ ವ್ಯಕ್ತಿಯ ಪರವಾಗಿ ಮನ್ನಿಸಿರೆಂದು ಪೋಲೀಸಿನವರಲ್ಲಿ ಕ್ಷಮೆ ಬೇಡುವ ಲಿಂಗೇಗೌಡರೆಲ್ಲಿ ? ಮನೆಮುರುಕ ರಂಗೇಗೌಡರೆಲ್ಲಿ ? ಚಿನ್ನ ಎಂದೂ ಚಿನ್ನವೇ ! ಅಣ್ಣತಮ್ಮತನದಲ್ಲಿ ರಂಗೇಗೌಡ ಬೇರೆಯಲ್ಲ ನಾನು ಬೇರೆಯಲ್ಲ, ಅವನಿಗಾದ ಅವಮಾನವೇ ತನಗೂ ಆದದ್ದೆಂದು ಭಾವಿಸುವ, ತಮ್ಮ ಮನೆತನಕ್ಕೆ ಕಳಂಕ ತಟ್ಟಬಾರದೆಂದು ಹಂಬಲಿಸುವ ಲಿಂಗೇಗೌಡರು ಅಪರೂಪದ ವ್ಯಕ್ತಿ.

ಇಷ್ಟಾದರೂ ರಂಗೇಗೌಡರು ತಮ್ಮ ಸಣ್ಣತನವನ್ನು ಬಿಟ್ಟರೆ ? ಖಂಡಿತ ಇಲ್ಲ. ದೊಡ್ಡ ಮನೆಯನ್ನು ಮುರಿಯಲು ಈಗ ಕೆಂಗಣ್ಣನನ್ನು ಅಸ್ತ್ರ ಮಾಡಿಕೊಂಡರು. ಕೆಂಗಣ್ಣ ರಂಗೇಗೌಡರ ಮಾತಿಗೆ ಕಿವಿಕೊಟ್ಟ. ಅವರ ತಾಳಕ್ಕೆ ತಕ್ಕ ಹಾಗೆ ಹೆಜ್ಜೆ ಹಾಕಿದ.

ಮನುಷ್ಯ ಹೊರಗಿನ ಪೆಟ್ಟುಗಳಿಂದ ರಕ್ಷಿಸಿಕೊಳ್ಳುವ ಉಪಾಯವನ್ನು ಹೇಗಾದರೂ ಕಂಡುಹಿಡಿಯುತ್ತಾನೆ. ಆದರೆ ಶರೀರದ ಒಳಗೇ ಕುಟ್ಟೆಹುಳುವಿನಂತೆ ಅಗೋಚರವಾಗಿ ಕೊರೆಯುತ್ತಾ ಹೋದರೆ ಅದರಿಂದ ರಕ್ಷಿಸಿಕೊಳ್ಳುವುದು ಸುಲಭವಲ್ಲ. ಗೌಡರ ಬಾಳಿನಲ್ಲಿ ಇದೇ ಆಯಿತು. ತಾವು ಯಜಮಾನರಾಗಿ ಸಂಸಾರದ ನಿರ್ವಹಣೆಯನ್ನು ವಹಿಸಿಕೊಂಡ ಮೇಲೆ ಅಹರ್ನಿಶಿ ದುಡಿದು 'ದೊಡ್ಡಮನೆ'ಯ ಕೀರ್ತಿಗೆ ಲೋಪ ಬರದಂತೆ ಯಶಸ್ವಿಯಾಗಿ ಮುಂದುವರಿಸಿಕೊಂಡು ಬಂದರು. ಹೊಸ ಮನೆ ಕಟ್ಟಿದರು. ಉತ್ತಮರ ಮನೆಯಲ್ಲಿ ಸಂಬಂಧ ಬೆಳೆಸಿದರು. ಹೊಟ್ಟೆಕ್ಕಾಗುವಷ್ಟು ಸಂಪಾದನೆಯ ಮಾರ್ಗವನ್ನು ಕಂಡುಕೊಂಡರು, ಬಡಬಗ್ಗರ ಪಾಲಿಗೆ ದೇವರಾದರು. ಯಾವ ಅರೆಕೊರೆಯೂ ಇಲ್ಲದಂತೆ ಸಂಸಾರವೆಂಬ ದೋಣಿ ಶಾಂತಸಾಗರದಲ್ಲಿ ಸರಾಗವಾಗಿ ಮುಂದುವರಿಯುತ್ತಿತ್ತು. ಆದರೆ ಅದಕ್ಕೂ ಕಲ್ಲು ಬಿತ್ತು. ಬಿರುಗಾಳಿ ಎದ್ದು ಭಯಂಕರ ಉಬ್ಬರವಿಳಿತಗಳಾಗಿ ದೋಣಿ ಬಂಡೆಗೆ ಬಡಿದು ನುಚ್ಚು ನೂರಾಯಿತು.

ವಿನಾಕಾರಣ ಕೆಂಗಣ್ಣ ಮುನಿಸಿಕೊಂಡ. ತನ್ನ ಅಸಮಾಧಾನವನ್ನು ವ್ಯಕ್ತಪಡಿಸಲು ಹೊಲಗದ್ದೆಯ ಕೆಲಸದಲ್ಲಿ ಬೇಜವಾಬ್ದಾರಿಯನ್ನು ತೋರಿಸಿದ. ಕೆಂಗಣ್ಣನ ವರ್ತನೆ ಗೌಡರಿಗೆ ವ್ಯಾಕುಲ ತಂದಿತು. ತಾವೇ ನೇರವಾಗಿ ಕೇಳಿದರೆ ಹೇಳಲು ಹಿಂಜರಿಯ ಬಹುದೆಂದು ಪೂಜಾರಿ ಕರಿಯಣ್ಣನನ್ನು ಕರೆದು "ಕರಿಯಣ್ಣಾ, ಒಂದಿಷ್ಟು ವಿಚಾರಿಸ್ತೀಯಾ, ಯಾಕೆ ಅಂತ ? ಈ ತಬ್ಬಲಿ ಮಕ್ಳು ಒಂದಿನ ಮುನಿಸಿಕಂಡ್ರೂ ನನಗೆ ಯಂಗೆಂಗೋ ಆಯ್ತದೆ. ತಾಯಿದ್ರೆ ಹೇಳಿಕೊಳ್ಳೋವು. ಈಗ ಯಾರ ಕೇಳಿಕೋಡಾವು ಹೇಳು. ನಾವೇ ಕೇಳಬೇಕು. ಒಂದಿಷ್ಟು ಕೇಳು ಯಾಕೆ ಅಂತ". ತಬ್ಬಲಿ ಎಂದು ಕೆಂಗಣ್ಣನ ಬಗೆಗೆ ಗೌಡರಿಗೆ ಕನಿಕರ, ಅವನ ಮುನಿಸಿಗೆ ಕಾರಣವನ್ನು ತಿಳಿಯುವ ಅಪೇಕ್ಷೆ. ಅದಕ್ಕಾಗಿ ಕರಿಯಣ್ಣನನ್ನು ಕಳುಹಿಸಿದರು. ಇನ್ನೂ ಮದುವೆ ಮಾಡದಿರುವುದೇ ಅವನ ಮುನಿಸಿಗೆ ಕಾರಣವೆಂದು ತಿಳಿಯಿತು. ಅವನ ಮನಸ್ಸು ಯಾವ ಕಾರಣಕ್ಕೂ ನೋಯಬಾರದೆಂದು ತಮಗಿಷ್ಟವಿಲ್ಲದಿದ್ದರೂ ಕೆಂಗಣ್ಣ ಬಯಸಿದ, ಮೆಚ್ಚಿದ ರತ್ನಳನ್ನು ತಂದುಕೊಳ್ಳಲು ನಿರ್ಧರಿಸಿದರು. ಮದುವೆ ಅಂದರೆ ಅಂತಿಂಥ ಮದುವೆಯಲ್ಲ. ದೊಡ್ಡಮನೆಯಲ್ಲಿ ಹಿಂದೆಂದೂ ಆಗಿರದಷ್ಟು ಅದ್ದೂರಿ ಯಿಂದ ನೋಡಿದವರು ಭಲೇ, ಭೇಷ್ ಅನ್ನಬೇಕು ಹಾಗೆ ಮಾಡಿ ಮುಗಿಸಿದರು. ಅದರ ವೈಭವವನ್ನು ನೋಡಿ.

ಬೆಳ್ಳೂರಿನಿಂದ ಬಾಣಬಿರುಸು, ಕೋಣಕಾಲ್ಲೂರಿನ ರೇಷ್ಮೆ ವಸ್ತ್ರ, ಮೈಸೂರಿನ ಪಟ್ಟೆ ಪೀತಾಂಬರ, ಬೀರೂರಿನ ಅಡಕೆ, ಮುತ್ತುಗದೂರು ಸುಣ್ಣ, ಹುಚ್ಚೆಳ್ಳೆಣ್ಣೆಗೆ ಬದಲು ಹಸುವಿನ ಬೆಣ್ಣೆ, ಹಿಟ್ಟಿಗೆ ಬದಲು ಕುಣಿಗಲು ಬೈಲಿನ ನೆಲ್ಲಕ್ಕಿ. ಪುರದ ಮಾದಿಗನಿಂದ ಗಿರಕಿ ಜೋಡು, ಕುಣಿಗಲ್ಲಿನ ದೊಡ್ಡ ಕುದುರೆ. ಅಬ್ಬ ! ಏನು ವೈಭವ ! ಏನು ಅದ್ದೂರಿ ? ಇವನು ತನ್ನ ಮಗ ಇವನು ಬೇರೆಯವನ ಮಗ ಎನ್ನುವ ಪಕ್ಷಪಾತ ಬುದ್ಧಿ ಕಿಂಚಿತ್ತೂಯಿಲ್ಲದ ಗೌಡರು ಕೆಂಗಣ್ಣನ ಮದುವೆಯನ್ನು ಯಾರೂ ಕಂಡು ಕೇಳರಿಯದಿದ್ದ ಹಾಗೆ ಮಾಡಿದರು

ಗೌಡರ ಇಂಥ ದೊಡ್ಡಗುಣ, ನಿರ್ಮತ್ಸರ ಭಾವ, ನಿಷ್ಪಕ್ಷಪಾತವಾದ ಸನ್ನಡತೆ ಗಳನ್ನು ನೋಡಿಯಾದರೂ ಕೆಂಗಣ್ಣನ ಕಣ್ತೆರೆಯಿತೇ ? ಹೌದು ತೆರೆಯಿತು. ಆದರೆ ಕ್ಷಣ ಕಾಲ ಮಾತ್ರ.ಶಾಶ್ವತವಾಗಲ್ಲ. ರತ್ನಳನ್ನು ಸೊಸೆಯಾಗಿ ಕರೆತಂದದ್ದೇ ಮುಳುವಾಯ್ತು. ದೊಡ್ಡಮನೆ ಏಳಿಗೆಯಾಗಲಿಲ್ಲ. ಪಟೇಲ್ ರಂಗೇಗೌಡರು ದೊಡ್ಡಮನೆಯ ಅವನತಿ ಗಾಗಿ ರತ್ನಳನ್ನು ಚೆನ್ನಾಗಿ ಬಳಸಿಕೊಂಡರು. ಹೆಂಡತಿಯ ಮಾತಿಗೆ ಕೆಂಗಣ್ಣ ಒಲಿದ. ದೇವರಂಥ ಚಿಕ್ಕಪ್ಪನಿಗೆ ತಿರುಗಿಬಿದ್ದ. ಯಾರ ಮೇಲಿನ ಪ್ರೀತಿಗಾಗಿ ಆಗದವನ ಮನೆಯ ಹೆಣ್ಣು ತರಲು ಹಿಂದುಮುಂದೆ ನೋಡಲಿಲ್ಲವೋ, ಯಾವನನ್ನು ಮೂರು ವರ್ಷದ ಮಗುವಿನಿಂದ ಸಾಕಿ ಸಲಹಿದರೋ ಅಂಥ ಕೆಂಗಣ್ಣ ಎದುರುಬಿದ್ದ. ಗೌಡರಿಗೆ ತಾಳಿ ಕೊಳ್ಳಲಾರದ ಸಂಕಟ. 'ಇಪ್ಪತ್ತೈದು ವರ್ಷಗಳಿಂದ ನಾನು ಮಾಡಿದ ಕಷ್ಟವೆಲ್ಲ

ಹೊಳೆಯಲ್ಲಿ ಹುಣಸೆಹಣ್ಣು ಕಿವುಚಿದಂತಾಯಿತಲ್ಲಾ' ಎಂದು ಆಲೋಚಿಸಿದರು. 'ನಾನು ಮಾಡಿದ್ದೇನು ಇವನಿಗೆ ? ಯಾವ ಅನ್ಯಾಯ ಮಾಡಿದೆ ? ಚಿಕ್ಕಪ್ಪನ ಮಕ್ಕಳು ಎಂದು ಭಾವಿಸಲೇ ಇಲ್ಲವಲ್ಲ' ತಮಗೆ ತಾವೇ ಪ್ರಶ್ನಿಸಿಕೊಂಡರು.

ಮುಂದಿನ ಅಶುಭದ ಸೂಚನೆಯೋ ಎಂಬಂತೆ ಬಿರುಗಾಳಿ ಬೀಸಿ, ಜಡಿಮಳೆ ಜಡಿದು ಮನೆಯ ಮೇಲೆ ಮರ ಬಿದ್ದಿತು. ಬೆಲ್ಲದ ರಾಶಿ ಕರಗಿ ನೀರಾಯಿತು. ನಾದಿನಿಯರು ಕಾದಾಟಕ್ಕೆ ಸಿದ್ಧರಾದರು. ಯಾರೋ ನನ್ನ ಸಂಸಾರಕ್ಕೆ ಹುಳಿ ಹಿಂಡುತ್ತಿದ್ದಾರೆ ಅನ್ನಿಸಿತು ಗೌಡರಿಗೆ. ದೊಡ್ಡಮನೆಗೆ ಅಪಾಯ ಉಂಟಾಗದಂತೆ ದೇವರನ್ನು ಕೇಳಿಕೊಂಡರು.

ಪುನಃ ತಮಗೆ ತಾವೇ ಅಂದುಕೊಳ್ಳುವರು : 'ನಾನು ಪಡುವ ಕಷ್ಟ ಅವರಿಗೆ ಗೊತ್ತಾಗಲಾರದೆ ? ಆಗಿಯೇ ಆಗುತ್ತೆ. ಮನುಷ್ಯ ಸ್ವಭಾವ, ಒಂದೊಂದು ಸಲ ಏನೋ ಬೇಜಾರಿನಿಂದ ಒಂದು ಮಾತಾಡುವುದು. ಅವೆಲ್ಲ ಸಂಸಾರದಲ್ಲಿ ಬರುವ ಮಾತುಗಳೇ. ಕೆಂಗಣ್ಣ ಎಷ್ಟಾದರೂ ಹುಡುಗ. ಈವತ್ತಲ್ಲ ನಾಳೆ ಬುದ್ಧಿ ಬಂದೇ ಬರುತ್ತೆ. ಸಣ್ಣ ಪುಟ್ಟವುಗಳನ್ನು ದೊಡ್ಡದು ಮಾಡುವುದು ಬೇಡ' ಹೀಗೆ ದೊಡ್ಡ ಮನೆಯ ಹಿತವೊಂದನ್ನೇ ಬಯಸಿ ಸಮಾಧಾನ ಪಡೆಯಲೆತ್ನಿಸುವರು.

ಕೆಂಗಣ್ಣನಿಗೆ ಹೋರಿಗಳನ್ನು ಕಂಡರೆ ಅಪಾರ ಪ್ರೀತಿ ಎಂದು ತಿಳಿದು ಸುತ್ತಲ ಹಳ್ಳಿಗಳಲ್ಲಿ ಯಾರೂ ಕಟ್ಟದ ಅಮೃತಮಹಲ್ ಹೋರಿಗಳನ್ನು ಆರುನೂರು ರೂಪಾಯಿಗಳಿಗೆ ಹರಾಜಿನಲ್ಲಿ ಕೊಂಡು ತಂದರು. ಹೊಸ ಹೋರಿಗಳ ಸಿರಿಯಲ್ಲಿ ತಲ್ಲೀನನಾದ ಗಂಡನನ್ನು ಸ್ವಲ್ಪ ಕಾಲ ತನ್ನತ್ತ ಆಕರ್ಷಿಸುವುದು ರತ್ನಳಿಂದ ಆಗಲಿಲ್ಲ. ರತ್ನಳ ಚಾಡಿ ಮಾತುಗಳಿಗೆ ಸೊಪ್ಪು ಹಾಕದೆ 'ನಮ್ಮಣ್ಣ ಏನೂ ಅಂತ ನಂಗೆ ಗೊತ್ತು. ನೀನು ಅವರ್ನ ಆಳತೆ ಮಾಡಕ್ಹೋಗಬೇಡ' ಎಂದು ಗದರಿಸಿದ. ಹೋರಿಗಳಿರುವವರೆಗೆ ಕೆಂಗಣ್ಣ ಹೆಂಡತಿಯ ಮಾತು ಕೇಳುವುದಿಲ್ಲ ಅಂದುಕೊಂಡರು ಕಿತಾಪತಿ ರಂಗೇಗೌಡರು. ಕೆಲವು ದಿನದಲ್ಲೇ ಹೋರಿ ಸತ್ತಿತು. ಮನೆಯಲ್ಲಿ ಗೋವು ಸತ್ತಿದ್ದು ಅಶುಭ ಅನ್ನಿಸಿತು ಲಿಂಗೇಗೌಡರಿಗೆ. ಕಾಡು ಹೊಸೂರಿನ 'ಕಾಯಿತುರಿ'ಯ ಹತ್ತಿರ ಶಾಸ್ತ್ರ ಕೇಳಿ ಬರುವಂತೆ ಕೆಂಗಣ್ಣನನ್ನು ಕಳುಹಿಸಿಕೊಟ್ಟರು.

'ಪ್ರಾಣಿ ಮನೆಗೆ ಬಂದಗಳಿಗೆ ಮತ್ತು ತಂದವರ ಮನಸ್ಸು ಚಂದಾಗಿಲ್ಲ. ಅದು ನಿನ್ನ ಪ್ರಾಣ ತೆಗೆಯೋ ಬದಲು ಅದರ ಪ್ರಾಣ ಅದೇ ತಕ್ಕೊಂಡು ಬಿಟ್ಟಿತು ನಿನ್ನ ಅದೃಷ್ಟ' ಎಂದ ಜೋಯಿಸ. ಪ್ರಾಣ ಅಂದಕೂಡಲೇ ಕೆಂಗಣ್ಣ ಬೆಚ್ಚಿದ. 'ನಮ್ಮಣ್ಣ ನಂಗಿಂಥ ಮೋಸಾ ಮಾಡಾಕೆ ಮಾಡಿದ್ನ' ಅಂದುಕೊಂಡು "ಮುಂದೇನು?" ಅಂದ. ಜೋಯಿಸ ಮುಂದಿನದನ್ನು ಹೇಳುವುದೋ ಬೇಡವೋ ಎಂದು ಅನುಮಾನಿಸುತ್ತಿರುವಾಗ ಕೆಂಗಣ್ಣ "ಒಳ್ಳೇದೋ ಕೆಟ್ಟದ್ದೋ ಏನು ಹೇಳಿ" ಅಂದ. ಒಡನೆ ಜೋಯಿಸ "ಇನ್ನು ಮೂರು ತಿಂಗಳೊಳಗೆ ಬೇರೆ ಮನೆ ಮಾಡಿಕೊಂಡು ಇದ್ದರೆ ಸರಿಯಾಯ್ತು, ಇಲ್ಲ

ದಿದ್ದರೆ ಎರಡು ಕಾಲಿನ ಪ್ರಾಣಿ ನಷ್ಟ ಅಂತ ಶಾಸ್ತ್ರದಲ್ಲಿ ಹೇಳ್ತದೆ" ಜೋಯಿಸ ಅಪ್ಪಣೆ ಕೊಡಿಸಿದ. ನಿಜವಾಗಿ ಹೇಳುವುದಾದರೆ ಜೋಯಿಸ ಶಾಸ್ತ್ರ ಹೇಳಲೇಯಿಲ್ಲ! ರಂಗೇಗೌಡ ನಿಂದ ಲಂಚ ತಿಂದು ಅವನು ಹೇಳಿಕೊಟ್ಟಿದ್ದಂತೆ ಒದರಿದ್ದ. ಪರೋಕ್ಷವಾಗಿ ವಂಚನೆ ಮಾಡಿದ್ದ. ರಂಗೇಗೌಡನ ಒಳಸಂಚು ತಿಳಿಯದ ಕೆಂಗಣ್ಣ ಜೋಯಿಸನ ಮಾತನ್ನು ಪೂರ್ಣವಾಗಿ ನಂಬಿದ. ಶಾಸ್ತ್ರ ಎಂದಮೇಲೆ ನಮ್ಮ ಜನಗಳಿಗೆ ವೇದವಾಕ್ಯತಾನೆ ? ಅದೆಂ ದಾದರೂ ಸುಳ್ಳಾಗುವುದುಂಟೇ? ಆದರಲ್ಲೂ ಪ್ರಾಣಕ್ಕೆ ಅಪಾಯವೆಂಬ ಸುದ್ದಿಕೇಳಿದ ಯಾವನ ತಲೆ ತಾನೆ ನೆಟ್ಟಗಿದ್ದೀತು? ಅಣ್ಣ ಅಪ್ಪ ಮನೆ ಮಠ ಯಾವುದೂ ಪ್ರಾಣ ಕ್ಕಿಂತ ಹೆಚ್ಚಲ್ಲವಲ್ಲ. ಇನ್ನು ಒಂದಿಗಿರುವುದು ಸಾಧ್ಯವೇಯಿಲ್ಲ ಎಂದು ಕೆಂಗಣ್ಣ ತೀರ್ಮಾ ನಿಸಿ ಪಾಲಿಗೆ ಕೂತ. ದೊಡ್ಡಮನೆಗೆ ಶನಿ ವಕ್ರಿಸಿತು.

ಕೆಂಗಣ್ಣನಿಗೆ ಪಾಲುಬೇಕಂತೆ ಎಂಬ ಸುದ್ದಿ ಕೇಳಿದ ಲಿಂಗೇಗೌಡರು ತಮ್ಮ ಕಿವಿ ಗಳನ್ನು ತಾವೇ ನಂಬಲಾರದಾದರು. ಎದೆ ಒಡೆದಂತಾಯಿತು. ಪಾಲು ಯಾಕೆ ಬೇಕು ಎಂಬುದನ್ನು ಕೆಂಗಣ್ಣ ಏನು ಮಾಡಿದರೂ ಬಾಯ್ಬಿಡಲಿಲ್ಲ. ಹೊಸ ಮನೆಯ ಜಗಲಿ ಯೇರಿ ಗಲ್ಲಕ್ಕೆ ಕೈಕೊಟ್ಟು ಚಿಂತಿಸಿದರು. ನನ್ನ ತಲೆಯಲ್ಲಿ ಈ ಮನೆ ಒಡೆಯಬಾರ ದೆಂದಿದ್ದೆ. ಈಗ ಅದು ಒದಗಿಬಂತೇ? ಎಂದು ಸಂಕಟವಾಯಿತು. ದೊಡ್ಡಮನೆ ಪಾಲಾಗದಂತೆ ತಡೆಯಲು ಕಂಡಕಂಡವರನ್ನು ಕೇಳಿದರು. ಪೂಜಾರಿ ಕರಿಯಣ್ಣ, ಆಯಿತೇ ಆಚಾರ್ರು, ಗೊರಗಿ ಮೂಡೆಪ್ಪ, ಗುಡಿಗೌಡ, ಮಗ್ಗದ ನರಸಿಂಹಶೆಟ್ಟಿ, ಹೊಲೆ ಯರ ಗೆಂಡೆಕಾಳ, ಮಾದಿಗರ ಚೆನ್ನ, ಕೊಡಮರ ಕೆಂಚಶೆಟ್ಟಿ, ಕುರುಬರ ದೊಡ್ಡಹೈದ, ಕುಂಬಾರರ ಮರಿಶೆಟ್ಟಿ, ಗಾಣಿಗರ ಗವಿಶೆಟ್ಟಿ ಹೀಗೆ ಒಬ್ಬರೇ? ಇಬ್ಬರೇ? ಅವರಿವರೆನ್ನದೆ ಕೇಳಬಾರದವರನ್ನೆಲ್ಲ ಕೇಳಿದರು, ದೊಡ್ಡಮನೆ ಉಳಿದರೆ ಸಾಕೆಂದು. ಲಿಂಗೇಗೌಡರ ಮಾನಸಿಕ ವೇದನೆ ಆ ಸಂದರ್ಭದಲ್ಲಿ ಹೇಗಿದ್ದಿರಬಹುದೆಂದು ಊಹಿಸಲು ಸಾಧ್ಯವಿಲ್ಲ.

ಯಾರ ಹಿತೋಪದೇಶವೂ ಕೆಂಗಣ್ಣನಲ್ಲಿ ಜ್ಞಾನೋದಯವನ್ನುಂಟುಮಾಡಲಿಲ್ಲ. ಕಿವಿ ಕಿವುಡಾಗಿದ್ದುವು, ಹೃದಯ ಕಲ್ಲಾಗಿತ್ತು. ದೊಡ್ಡಮನೆಯ ಆಯುಸ್ಸು ಇಷ್ಟೇ ಎಂದು ಅರಿವಾಗಿರಬೇಕು ಗೌಡರಿಗೆ. ವಿಧಿಯಿಲ್ಲದೆ ಪಾಲಿಗೆ ಒಪ್ಪಿ 'ಆಗಲಿ' ಎಂದರು.

ಸ್ಥಿರ ಆಸ್ತಿಯನ್ನೆಲ್ಲ ಹಿಸ್ಸೆ ಮಾಡಲು ಎರಡು ವಾರ ಹಿಡಿಯಿತು. ಕೆಂಗಣ್ಣನ ಹೊರತು ಉಳಿದ ತಮ್ಮಂದಿರು ಆ ಜಾಗದಲ್ಲಿ ಇರುತ್ತಿರಲಿಲ್ಲ. ಅಣ್ಣನಾಗಲೀ ಪಂಚಾಯ್ತಿ ರಾಗಲೀ ತಮಗೆ ಮೋಸಮಾಡುವುದಿಲ್ಲವೆಂದು ಅವರಿಗೆ ಗೊತ್ತು. ಲೇಣೆ ದೇಣೆಯ ವಿಷಯ ಬಂದಾಗ ಕೆಂಗಣ್ಣ ಆಡಬಾರದ ಮಾತು ಆಡಿದ. 'ಗೌಡರು ತಮ್ಮಂದಿರಿಗೆ ಮೋಸ ಮಾಡಾಕಾಗಿ ಜಮೀನ್ನಿಂದ ಬಂದ ಆದಾಯನೆಲ್ಲಾ ಬಚ್ಚಿಟ್ಟುಕೊಂಡವರೆ. ಆ ಹಣವೆಲ್ಲಾ ಅವರ ನಾಲ್ಕನೇ ಹೆಂಡತಿ ಮನೇಲಿರೋ ಕಬ್ಬಿಣದ ಪೆಟ್ಗೆ ಸೇರ್ಕೈದೆ' ಎಂದ. ಇದನ್ನು ಕೇಳಿಸಿಕೊಂಡ ಗೌಡರಿಗೆ ಎದೆಗೆ ಕೊಳ್ಳಿ ಇಟ್ಟಂತೆ, ಹೃದಯಕ್ಕೆ ಭರ್ಜಿ ಯಿಂದ ಇರಿದಂತೆ ಯಾತನೆಯಾಯಿತು. ಒಂದು ಬಿಡಿ ಕಾಸಿಗೂ ಲೋಪ ಬರದಂತೆ

ದೊಡ್ಡಮನೆಯ ವ್ಯವಹಾರವನ್ನು ನಡೆಸಿಕೊಂಡು ಬಂದಿದ್ದ ಲಿಂಗೇಗೌಡರಿಗೆ ತಮ್ಮನ ಬಾಯಿಂದ ಇಂಥ ಮಾತು ಕೇಳಬೇಕಾಯಿತೇ ಎಂದು ವ್ಯಥೆಯಾಯಿತು.

ದೊಡ್ಡಮನೆಗಾದ ಗತಿಯನ್ನು ನೆನೆದು ಆ ರಾತ್ರಿ ನಿದ್ದೆಬರಲಿಲ್ಲ. ಇಡೀ ರಾತ್ರಿ ಬಾವಿಯ ಬಳಿ ಕುಳಿತು ಓದಿನದನ್ನೆಲ್ಲ ನೆನಸಿಕೊಂಡು ಗಳಗಳನೆ ಅತ್ತರು. ಅಪ್ಪ ಚಿಕ್ಕಪ್ಪಂದಿರು ಕಟ್ಟಿದ ಮನೆ, ಮಾಡಿದ ಆಸ್ತಿ. ತಾವು ತಮ್ಮ ತಮ್ಮಂದಿರೊಡಗೂಡಿ ಕಟ್ಟಿಸಿದ ಹೊಸಮನೆ, ಮಾಡಿದ ಸೇಂದಿ ಬಾಬು, ನಡೆಸಿದ ಆಲೆಮನೆ, ಸಂಪಾದಿಸಿದ ದುಡ್ಡು, ತೆಗೆದ ಆಸ್ತಿ—ಎಲ್ಲ ಒಂದೊಂದಾಗಿ ಮನದ ಮುಂದೆ ತೇಲಿಬಂದುವು. ಒಂದೊಂದು ನೆನಪೂ ಅವರ ಕಣ್ಣಲ್ಲಿ ಹನಿ ಮೂಡಿಸುತ್ತಿತ್ತು.

ಆಸ್ತಿ ಹಂಚಿಕೆಯೇನೋ ಆಯ್ತು. ಆದರೆ ದೊಡ್ಡಮನೆ ಒಡೆದು ಛಿದ್ರವಾಗುವುದು ಬೇಡ. ಒಂಬತ್ತು ಒಲೆಯ ಬದಲು ಒಂದೇ ಒಲೆ ಉರಿಯುವಂತೆ ಮಾಡಬೇಕು ಎಂದು ಕೆಂಗಣ್ಣನನ್ನು ಕುರಿತು ಗೌಡರು "ದೊಡ್ಡಮನೆಯಲ್ಲಿ ಒಂಬತ್ತು ಒಲೆ ಉರೀಲೇಬೇಕೇ ಕೆಂಗಣ್ಣಾ? ಸ್ವಲ್ಪ ಯೋಚ್ನೆ ಮಾಡು. ದುಡುಕಬೇಡ ಬುದುಕಿ ಕೆಟ್ಟೋರ್ನ ಈ ಕಣ್ಣು ನೋಡಬಾರದು. ದೊಡ್ಡಮನೆ ಬದುಕಿನ ಮನೆ. ಕೆಟ್ಟರೆ ನೋಡಾಕಾದೀತೇ ಅದ್ನ! ನಾಸಿರೋವರೆಗಾದ್ರೂ, ಈ ಘಟ ಭೂಮಿಯ ಮೇಲೆ ಓಡಾಡ್ತಿರೋವರೆಗಾದ್ರೂ ಎಲ್ಲರೂ ಒಂದು ಪಂಕ್ತೀಲಿ ಕುಳಿತು ಉಣ್ಣಾನ. ನಿನ್ನೊಬ್ಬನಿಂದ ನಮ್ಮ ಅಪ್ಪ ಅಮ್ಮಂದೀರು ಕಟ್ಟಿದ ಮನೆ, ನಾನೂ ನೀನೂ ಬೆಳಸಿದ ಮನೆ ಅಳೀಬಾರ್ದು. ನಿನ್ನ ಕಾಲಕ್ಕೂ ಅಳೀಬಾರ್ದು. ಯೋಚ್ನೆ ಮಾಡು ಕೆಂಗಣ್ಣಾ. ಮುಂದೆ ನನ್ನ ಮಕ್ಳು ನಿನ್ನ ಮಕ್ಳು ಏನು ಮಾಡಿಕೋಳ್ತಾರೋ ಗೊತ್ತಿಲ್ಲ. ಆದ್ರೆ ನಾವಿಬ್ರೂ ತಿಳಿದೂ ತಿಳಿದು ಮಾಡಬಾರ್ದ ಮಾಡೋದೆ? ಕಂಡೂ ಕಂಡೂ ಕೈ ಕತ್ತರಿಸಿಕೊಳ್ಳೋದೆ? ನಾವು ಒಂಬತ್ತು ಜನ ದೊಡ್ಡಮನೆ ದೊಡ್ಡ ಕೆರೆಗೆ ಏರಿ ಇದ್ದಂತೆ. ಈ ಏರಿ ಒಂದು ಕಲ್ಲು ಸಡ್ಲಿದ್ರೆ ಸಾಕು ಏರಿ ಪೊಳೆ ಬೀಳ್ತದೆ. ಆಗ ಕೆರೆ ಬರಿದು. ಹಂಗೇನೇ ದೊಡ್ಡ ಮನೇನೂ. ಬ್ಯಾಡ, ನನ್ನಪ್ಪಾ! ಇನ್ನಷ್ಟು ದಿನ ನೋಡು. ಆಮೇಲೆ ಬೇಕಾದ್ರೆ ನಿನ್ನಿಷ್ಟದಂಗೆ ಮಾಡು. ನಿನ್ನಿಂದಾಗಿ ಈ ಮನೆ ಪಾಲಾಯ್ತು ಅನ್ನೋದು ಬೇಡ. ಇದೊಂದು ಮಾತು ನಡೆಸಿ ಕೊಡು...."ಮಾತನಾಡುತ್ತ ಅಳುತ್ತಾ ಗಂಟಲು ಬಿಗಿದು ಬಂತು.

ಇತ್ತ ನಾಲ್ಕಾರು ಆಳುಗಳು ಗುದ್ದಲಿ ಪಿಕಾಸಿ ಹಿಡಿದು ಗೋಡೆಯನ್ನು ಕೆಡವುತ್ತಿದ್ದರು. ದೊಡ್ಡಮನೆಗೆ ಕನ್ನಬಿತ್ತು. ಯಾವುದು ಆಗಬಾರದೆಂದು ಹಂಬಲಿಸಿದರೋ ಅದು ಆಗಿಹೋಯಿತು. ಗೌಡರಿಗೆ ತಮ್ಮ ಎದೆಗೇ ಕನ್ನ ಹಾಕಿದಂತಾಗಿತ್ತು. ಮಣ್ಣಿನ ಇಂಟೆಯ ಮೇಲೆ ಕುಸಿದರು. ಕಣ್ಣೀರು ಬರುವವರೆಗೂ ಅತ್ತರು. ಜನ ಕಿಕ್ಕಿರಿದು ತುಂಬಿತ್ತು. ಎಲ್ಲರ ಕಣ್ಣಲ್ಲೂ ನೀರು. ಆ ಜನಸ್ತೋಮದಲ್ಲಿ ಅಳದವರು ಒಬ್ಬರೇ ಒಬ್ಬರು ಮಾತ್ರ. ಅವರೇ ಪಟೇಲ್ ರಂಗೇಗೌಡರು. ಬಹುಶಃ ತಮ್ಮ ಪ್ರತಿಜ್ಞೆಯನ್ನು ತೀರಿಸಿಕೊಂಡ ಸಂತೋಷ ಉಕ್ಕಿಹರಿದಿರಬೇಕು?

ಪ್ಲೇಗು ಮಾರಿ ಕಾಣಿಸಿಕೊಂಡು ಊರಿಗೆ ಊರೇ ನನ್ನೂರು ಬಿಟ್ಟು ದೂರದಲ್ಲಿ ಷೆಡ್ಡುಗಳನ್ನು ಹಾಕಿಕೊಂಡು ನೆಲಸಿತು. ಕಟ್ಟಿದ ಮನೆ ಬಿಟ್ಟು ಹೋದ ಯಜಮಾನ್ ಲಿಂಗೇಗೌಡರು ಪುನಃ ಆ ಮನೆಗೆ ಹಿಂದಿರುಗಲಿಲ್ಲ. ಮಲಗಿದ ಮೂರೇ ದಿನದಲ್ಲಿ ಕಣ್ಮುಚ್ಚಿದರು. ನನ್ನೂರಿನ ದೊಡ್ಡಮನೆಯ ಜ್ಯೋತಿ ನಂದಿಹೋಯಿತು. ನನ್ನೂರಿನ ಜನ ಗೌಡರ ಸಾವಿನ ಸುದ್ದಿ ಕೇಳಿ ಪ್ಲೇಗಿಗೂ ಹೆದರದೆ ಅಗಾಧವಾಗಿ ನೆರೆದರು. ಕಣ್ಣೀರ ಕರೆದರು. ಅವರ ಬಾಳಿನ ಬೆಳಕೇ ಆರಿಹೋದಂತೆ ಗೋಳಾಡಿದರು.

ಯಾವ ವ್ಯಕ್ತಿ ದೊಡ್ಡಮನೆಯ ಆಧಾರ ಸ್ತಂಭವಾಗಿ, ಹಣ ಆಸ್ತಿಯನ್ನು ಇಮ್ಮಡಿಗೊಳಿಸಿ, ದೊಡ್ಡಮನೆಯ ಘನತೆ ಗೌರವಗಳ ಕೀರ್ತಿ ಶಿಖರ ಮುಟ್ಟುವಂತೆ ಮಾಡಿ, ಬಡವರ ಬಂಧುವಾಗಿ ತಮ್ಮ ಕರ್ತವ್ಯವನ್ನು ಪೂರೈಸಿದರೋ ಅಂಥ ವ್ಯಕ್ತಿಯ ಬಾಳು ಹೀಗೆ ಪರ್ಯವಸಾನವಾಯಿತು. ವಿಚಾರಮಾಡಬೇಕಾದ ಸಂಗತಿಯೆಂದರೆ ಲಿಂಗೇಗೌಡರು ತಂದೆಯಂತೆ ಗುಣ ನಡತೆಯಲ್ಲಿ ಭೂಮಿ ತೂಕದ ವ್ಯಕ್ತಿ. ಬದುಕಿರುವವರೆಗೂ ಬೇರೊಬ್ಬರಿಗೆ ಕೇಡೆಣಿಸಲಿಲ್ಲ. ಜೀವನದಲ್ಲಿ ಎಂದೂ ಸುಳ್ಳಾಡಲಿಲ್ಲ, ಅನ್ಯಾಯ ಮಾಡಲಿಲ್ಲ. ಉಪಕಾರ ಮಾಡಿದರೇ ಹೊರತು ಪ್ರತ್ಯುಪಕಾರ ಬಯಸಲಿಲ್ಲ. ಸಂಸಾರದಲ್ಲಿಯಾದರೂ ಅಷ್ಟೆ. ಒಬ್ಬರಿಗೆ ಒಂದು ಮತ್ತೊಬ್ಬರಿಗೆ ಇನ್ನೊಂದು ಎಂದು ಭೇದವೆಣಿಸಲಿಲ್ಲ. ಕೆಂಗಣ್ಣನ ಮದುವೆಯೇ ಇದಕ್ಕೆ ಸಾಕ್ಷಿ. ಇಂಥ ಮನುಷ್ಯನಿಗೆ ಬಂದದ್ದು ಎಂಥ ಸಾವು? ನಗುನಗುತ್ತಾ ಹೋದರೇ? ಇಲ್ಲ. ಪ್ಲೇಗು ಮಾರಿಗೆ ಬಲಿಯಾಗಿ ಕೊನೆಯುಸಿರೆಳೆದರು. ಯಾವ ಪಾಪಕ್ಕೆ ಯಾವ ತಪ್ಪಿಗೆ ಈ ಶಿಕ್ಷೆ ? ಉತ್ತರ ನಿರುತ್ತರ.

ಪಟೇಲ್ ರಂಗೇಗೌಡರೇನೋ ಮನೆಮುರಿದರು. ಆದರೆ ಅವರೂ ಸುಖಪಡಲಿಲ್ಲ. ಕೆರೆಯ ನೀರನು ಕೆರೆಗೆ ಚೆಲ್ಲಿದಂತೆ ಅನ್ಯಾಯವಾಗಿ ಮಾಡಿದ್ದ ಆಸ್ತಿಯೆಲ್ಲ ದುಷ್ಟ ಮಕ್ಕಳಿಂದಾಗಿ ಹಾಳಾಯಿತು. ಸಾಲದುದಕ್ಕೆ ಹೆಣ್ಣೊಬ್ಬಳನ್ನು ಕೊಲೆಮಾಡಿ ಮಗ ಕೊಲೆಗಾರನಾದ. ಯಾವ ದೊಡ್ಡಮನೆಯನ್ನು ಚಿಕ್ಕಮನೆ ಮಾಡುವುದಾಗಿ ಹಠತೊಟ್ಟು ಮಾಡಿ ಮುಗಿಸಿದನೋ ಅದೇ ದೊಡ್ಡಮನೆಯ ಲಿಂಗೇಗೌಡರ ಮಗ ನಾಗುವಿನ (ಈಗವನು ಉನ್ನತ ಸರ್ಕಾರಿ ಅಧಿಕಾರಿ) ಕಾಲ್ಹಿಡಿಯುವ ಅವಸ್ಥೆ ಬಂತು. "ನನ್ನ ಮರ್ಯಾದೆ ಉಳಿಸಿ, ನನ್ನ ಮಗನ್ನ ಕಾಪಾಡಿ. ದೊಡ್ಡಮನೆಗೆ ಮಾಡಿದ್ದ ಈಗ ಅನುಭವಿಸ್ತಿದೀನಿ" ಎಂದು ಅಳಲಾರಂಭಿಸಿದರು. "ನಾನು ಮಹಾಪಾಪಿ. ಪಾಪಕ್ಕೆ ತಕ್ಕ ಪ್ರಾಯಶ್ಚಿತವಾಯ್ತು. ದೊಡ್ಡಮನೆ ಮುರದು ಚಿಕ್ಕಮನೆ ಮಾಡಿದ ಮಹಾಪಾಪ, ನಿಮ್ಮ ತಂದೆ ಕಣ್ಣಲ್ಲಿ ನೀರು ತಂದ ಪಾಪ, ನನಗೇ ಹಿಂದಿರುಗಿದೆ. ಗಳಿಸಿದ ಆಸ್ತಿ ಅನ್ಯರ ಪಾಲಾಯ್ತು. ಮಗ ಅಪಾಪೋಲಿಯಾದ. ಮಾಡಬಾರದ್ದು ಮಾಡಿದ. ಅವನ್ನ ಉಳಿಸಿ" ಎಂದು ಅಂಗಲಾಚಿದರು.

ನಾಗು ಉತ್ತರವಾಗಿ ಆಡಿದ್ದು ಮುತ್ತಿನಂಥ ನಾಲ್ಕೇ ಮಾತು "ಮನುಷ್ಯ ಮನುಷ್ಯನಾಗಿ ಬಾಳಬೇಕೇ ಹೊರತು ಬೇರೊಂದು ರೀತಿ ಬಾಳಬಾರದು. ಹಾಗೆ

ಬೇರೊಂದು ರೀತಿ ಬಾಳಿದರೆ ಪ್ರಾಯಶ್ಚಿತ್ತ ತಪ್ಪದು. ಹೊರಗಿನ ಬೆಂಕಿ ಮರಗಿಡ ಸುಟ್ಟರೆ, ಒಳಗಿನ ಬೆಂಕಿ ತನ್ನನ್ನೇ ಸುಡುತ್ತದೆ. ನಿಮ್ಮ ಹೊಟ್ಟೆಕಿಚ್ಚು ದೊಡ್ಡಮನೆ ಯನ್ನು ಒಂಬತ್ತು ಪಾಲುಮಾಡಲು ಸಾಧ್ಯವಾಯಿತು ಅಷ್ಟೆ. ಆದರೆ ಅದೇ ಕಿಚ್ಚು ನಿಮ್ಮ ಮನೆಯನ್ನೇ ಸುಟ್ಟಿತು. ಇನ್ನಿಂಥ ಕೆಲಸಕ್ಕೆ ಕೈ ಹಾಕಬೇಡಿ" ಅರಿತು ಕೊಳ್ಳು ವವರಾದರೆ ಇದಕ್ಕಿಂತ ಹೆಚ್ಚೇನು ಹೇಳಬೇಕು.

ಕಾದಂಬರಿಯ ಪ್ರಕಾರ ನಾಗು ದೊಡ್ಡಮನೆಯ ಮೂರನೆ ತಲೆಮಾರಿಗೆ ಸೇರಿದ ಸಂತಾನ. ಆದರೆ ಆತ ಪದ್ಮ ಪತ್ರ ಮಿಾವಾಂಬುದಂತೆ ದೊಡ್ಡಮನೆಯ ವ್ಯವಹಾರ ಗಳಿಗೆ ಅಂಟಿಕೊಳ್ಳಲೇಯಿಲ್ಲ. ಬಾಲ್ಯದಲ್ಲಿ ಕೂಡ ತಾತ ಅಜ್ಜಿಯರ ಶುಶ್ರೂಷೆಯಲ್ಲಿಯೇ ಹೆಚ್ಚಾಗಿ ಬೆಳೆದ ನಾಗು ವಿದ್ಯಾರ್ಜನೆಯ ಕಡೆ ಹೆಚ್ಚು ಗಮನ ಹರಿಸಿದ. ದೊಡ್ಡಮನೆಯ ಆಗುಹೋಗುಗಳ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳಲಿಲ್ಲ. ಚಿಕ್ಕವನಿರುವಾಗಲೇ ಪ್ರಾಕೃತಿಕ ಸಂಪತ್ತಿಗೆ ಮಾರು ಹೋಗಿದ್ದ. ಸೃಷ್ಟಿಯ ವಿಚಿತ್ರ ವ್ಯಾಪಾರಗಳಲ್ಲಿ ತಲ್ಲೀನ ನಾಗಿ ಮೈಮರೆಯುತ್ತಿದ್ದ. ವಿದ್ಯಾರ್ಥಿ ದೆಸೆಯಲ್ಲಾದರೂ ಅಷ್ಟೆ. ದುಂದು ವೆಚ್ಚ ಮಾಡದೆ ಆದರ್ಶ ವಿದ್ಯಾರ್ಥಿಯಾಗಿ ನಡೆದುಕೊಂಡ. ದೊಡ್ಡಮನೆಯವರ ಅಪೇಕ್ಷೆ ಯಂತೆ ದೊಡ್ಡ ಪದವಿ ಪಡೆದು ದೊಡ್ಡಮನೆಗೆ ಕೀರ್ತಿ ತಂದ.

ದೊಡ್ಡಮನೆಯ ದೊಡ್ಡವರ ಬಗೆಗೆ ಹೇಳುವಾಗ ಇಬ್ಬರು ತಾಯಂದಿರನ್ನು ಅಗತ್ಯವಾಗಿ ಹೆಸರಿಸಬೇಕು. ಒಬ್ಬರು ನಂಜೇಗೌಡರ ಹೆಂಡತಿ ಚಿಕ್ಕಮ್ಮ, ಮತ್ತೊಬ್ಬರು ಲಿಂಗೇಗೌಡರ ಹೆಂಡತಿ ಪುಟ್ಟಮ್ಮ. ನಂಜೇಗೌಡರ ಬಾಳಿಗೆ ಕಳಸವಿಟ್ಟಂತೆ ಚಿಕ್ಕಮ್ಮ ನವರಿದ್ದರೆ ಲಿಂಗೇಗೌಡರ ಧರ್ಮಪತ್ನಿ ಪುಟ್ಟಮ್ಮ ದೊಡ್ಡಮನೆಯ ಘನತೆ ಗೌರವ ಗಳನ್ನು ಕಾಪಾಡುವುದರಲ್ಲಿ ಗಂಡನಿಗೆ ನೆರವಾಗಿದ್ದಾಳೆ. ತಾನು ಯಜಮಾನಿಯೆಂಬ ಬಿಂಕ ವನ್ನು ಎಂದೂ ತೋರದ ಆ ತಾಯಿ ಎಲೆಮರೆಯ ಕಾಯಿಯಂತಿದ್ದು ದೊಡ್ಡಮನೆ ಗಾಗಿ ತನ್ನ ಜೀವಸವೆಸಿದಳು.

ದೊಡ್ಡಮನೆಯ ದೊಡ್ಡವರನ್ನು ವಿಶ್ಲೇಷಿಸ ಹೋಗಿ ಒಂದು ರೀತಿಯಲ್ಲಿ ಇಡೀ ಕಾದಂಬರಿಯನ್ನು ಸ್ಥೂಲವಾಗಿಯಾದರೂ ಪರಿಚಯ ಮಾಡಿಕೊಂಡಂತಾಯಿತು. ಕಾರಣ : ದೊಡ್ಡಮನೆಯ ಒಟ್ಟುಪಾಲು ಘಟನೆಗಳು ನಂಜೇಗೌಡರು ಹಾಗೂ ಲಿಂಗೇ ಗೌಡರು ಈ ಇಬ್ಬರಸುತ್ತಲೇ ಸುತ್ತುವುದರಿಂದಾಗಿ ಇದು ಅನಿವಾರ್ಯ. ಇಷ್ಟಾದರೂ ಇದು ಕಾದಂಬರಿಯ ಒಂದು ಮುಖದ ನೋಟ ಅಷ್ಟೆ. ಇಂಥ ಹಲವು ಮುಖಗಳು ಕಾದಂಬರಿಯಲ್ಲಿವೆ. ವಿವಿಧ ದೃಷ್ಟಿಕೋನಗಳಿಂದ 'ದೊಡ್ಡಮನೆ' ಕಾದಂಬರಿಯನ್ನು ಅಭ್ಯಾಸಮಾಡಲು ಸಾಧ್ಯವಿದೆ.

ಈ ಕೆಲವು ಪಾತ್ರಗಳನ್ನು ಪರಿಚಯಮಾಡಿಕೊಳ್ಳುವಲ್ಲಿ ಕಂಡುಬಂದ ಗಮನಾರ್ಹ ಸಂಗತಿಯೆಂದರೆ ಯಾವ ಪಾತ್ರವೂ ಕೂಡ ನಂಜೇಗೌಡರಾಗಲಿ, ಲಿಂಗೇಗೌಡರಾಗಲೀ, ರಂಗೇಗೌಡರಾಗಲೀ, ಕೆಂಗಣ್ಣನಾಗಲೀ, ಪುಟ್ಟಮ್ಮ ಅಥವಾ ಚಿಕ್ಕಮ್ಮನವರಾದರೂ ಸರಿ

ನಮಗೆ ಅನ್ಯರಂತೆ ಭಾಸವಾಗುವುದಿಲ್ಲ. ಅಂದರೆ ಇವರೆಲ್ಲ ನಮ್ಮ ಸಮಾಜದಲ್ಲಿ ಇರುವಂಥವರೆ, ನಮ್ಮೂರು ನಿಮ್ಮೂರು ಯಾವ ಊರಾದರೂ ಸರಿ ಇಂಥ ಜನ ಇರುವವರೆ. ಅಂದರೆ ಮಾನ್ಯ ಲೇಖಕರು ಅಷ್ಟು ಸಹಜವಾಗಿ ಇಲ್ಲಿನ ಪಾತ್ರಗಳನ್ನು ಕಂಡರಿಸಿದ್ದಾರೆ. ಆದರ್ಶದ ಅತಿರೇಕವಾಗಲೀ, ಅಸಹಜ ಪಾತ್ರಪೋಷಣೆಯಾಗಲೀ ಕಾದಂಬರಿಯಲ್ಲಿ ಕಂಡುಬಾರವು. ದೊಡ್ಡದು ಎಂದೇನಿಲ್ಲ, ತೀರ ಸಣ್ಣ ಪಾತ್ರಗಳಲ್ಲಿ ಕೂಡ ನೈಜತೆಯನ್ನು ಕಾಣಬಹುದಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿ ಬೆಳೆದು, ಆ ಜನರ ನಡುವೆ ಓಡಾಡಿ, ಅಲ್ಲಿನ ಸಂಸ್ಕೃತಿಯ ಪರಿಚಯ ನಾಗೇಗೌಡರಿಗೆ ಶ್ರೀಮಂತವಾಗಿರುವುದರಿಂದ 'ದೊಡ್ಡಮನೆ'ಯಂಥ ಕಾದಂಬರಿಯನ್ನು ಬರೆಯಲು ಸಾಧ್ಯವಾಗಿದೆ. ನನ್ನೂರಿನ ಕತೆ ಯಾವ ಊರಿನ ಕತೆಯಾದರೂ ಆಗಬಹುದು. ಅಂಥ ಸಾರ್ವತ್ರಿಕ ಮೌಲ್ಯ ನಾಗೇಗೌಡರ 'ದೊಡ್ಡಮನೆ'ಯಲ್ಲಿದೆ, 'ದೊಡ್ಡಮನೆ'ಯ ಮೂಲಕ ಬಯಲುಸೀಮೆಯ ಒಕ್ಕಲು ಮಕ್ಕಳ ಜೀವನವನ್ನು ಕನ್ನಡಕ್ಕೆ ಪರಿಚಯಿಸಿದ ಎಚ್. ಎಲ್. ನಾಗೇಗೌಡರು ಅಭಿನಂದನಾರ್ಹರು.

೧೪ ಸೊನ್ನೆಯಿಂದ ಸೊನ್ನೆಗೆ–ಒಂದು ವಿವೇಚನೆ

ಹಿ. ಶಿ. ರಾಮಚಂದ್ರೇಗೌಡ

ಸೊನ್ನೆಯಿಂದ ಸೊನ್ನೆಗೆ ಕಾದಂಬರಿಯ ಕಥೆ ಒಂದು ಐತಿಹ್ಯ. ಈಗಲೂ ದಟ್ಟವಾಗಿ ದಕ್ಷಿಣ ಕರ್ನಾಟಕದ ಎಲ್ಲ ಜನಪದದಲ್ಲಿ ಬಳಕೆಯಾಗುತ್ತಿದೆ. ಪ್ರಮುಖವಾಗಿ ಬೈಗುಳದಲ್ಲಿ ಕಾಣಿಸಕೊಳ್ಳುತ್ತದೆ. ಈ ಮಾತನ್ನು ಲೇಖಕರೂ ಸಹ ತಮ್ಮ "ಈ ಕಾದಂಬರಿ ಕುರಿತು' ಭಾಗದಲ್ಲಿ ಸ್ಪಷ್ಟಪಡಿಸಿದ್ದಾರೆ.[1] ಅಲ್ಲದೆ ಕಥೆಯ ತಿರುಳನ್ನೂ ಕೆಲವು ಸೂತ್ರಪ್ರಾಯವಾದ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ.[2] ಒಂದು ದೃಷ್ಟಿಯಿಂದ ಈ ಸೂತ್ರಪ್ರಾಯವಾದ ಮಾತುಗಳೇ ಈ ಕಾದಂಬರಿಯ ಕಥಾವಸ್ತುವೊಂದಕ್ಕೆ ಬಲಿಯಾಗಿರುವ ದರಿದ್ರನ ಮಗನೊಬ್ಬ ಧನಿಕನಾಗಿ ಮತ್ತೆ ಸನ್ಯಾಸತ್ವದ ಭಿಕ್ಷಾಟನೆಯನ್ನು ಅವಲಂಬಿಸುವುದೇ ಇಲ್ಲಿಯ ಕಥಾವಸ್ತುವಿನ ಸಾರ. ಧರ್ಮ–ಕರ್ಮದ ತೊಡಕು ಇಲ್ಲಿಯ ಮುಖ್ಯ ಪಾತ್ರಕ್ಕೆ ವಾಂಶಿಕವಾಗಿ ಪ್ರಾಪ್ತವಾಗಿದ್ದಿತಾದರೂ ಆ ವಂಶದ ಪ್ರಸ್ತುತ ವ್ಯಕ್ತಿಯನ್ನೇ ತಿನ್ನುತ್ತದೆ ಎನ್ನುವ ಜನಪದ ನಂಬಿಕೆಯೊಂದು ಇಲ್ಲಿಯ ಒಳಗುರಿಯಾಗಿ ಕೆಲಸ ನಿರ್ವಹಿಸಿವೆ. ಹಾಗೆ ನೋಡಿದರೆ ಧೂಪದ ಚೆನ್ನನ ಕಥೆಯು ಒಂದು ನಂಬಿಕೆಯೆ, ಹೆಚ್ಚಾಗಿ ಇದೊಂದು ಸಾಂಪ್ರದಾಯಿಕ ಸೂತ್ರವೂ ಹೌದು. ನಮ್ಮ ಎಲ್ಲ ಜನಪದ ಸಾಮಗ್ರಿಯ ಅಂತರಾಳದ ಕ್ರಿಯೆಯಲ್ಲಿ ಇವನ್ನು ಗುರುತಿಸುತ್ತೇವೆ. ತಪ್ಪು ಮಾಡಿದವನು ಶಿಕ್ಷೆಯನ್ನು ಅನುಭವಿಸದಿದ್ದರೂ ಅವನ ಮಕ್ಕಳು ಅಥವಾ ವಂಶಸ್ಥರು ಅನುಭವಿಸುತ್ತಾರೆ ಎನ್ನುವ ಸಾಮಾಜಿಕ ಶಾಪ ಇಂದಿಗೂ ಜೀವಂತವಾಗಿದೆ. ಇದರ ನೆರಳೇ ಈ ಕಾದಂಬರಿ.

---

1. ಪು. III.

2. 'ಮಾಡಿದ್ದುಣ್ಣೋ ಮಹಾರಾಯ' ಎಂಬ ಹಿರಿಯ ಸೂಕ್ತಿ ಉಂಟು. ಅದು ಈ ಕಾದಂಬರಿಯಲ್ಲಿ ವ್ಯಕ್ತಗೊಂಡಿರುವುದನ್ನು ಓದುಗರು ಅರಿಯಬಹುದು. ಇನ್ನೊಂದು, ನಾವು ನಿತ್ಯ ಕಾಣುವ ಸತ್ಯ ಸಂಗತಿ ಇದೆ. ಅದೇನೆಂದರೆ, ಬೆವರು ಸುರಿಸಿ ಯಾರೂ ಬಲ್ಲಿದನಾಗುವುದಿಲ್ಲ ; ಶ್ರೀಮಂತಿಕೆ ದುಡಿಮೆಯಿಂದ ಬರುವುದಿಲ್ಲ ಎಂಬುದು........ಹಾಲುಕುಡಿದ ಮಕ್ಕಳೇ ಬದುಕುವುದಿಲ್ಲ, ನೀರು (ವಿಷ) ? ಕುಡಿದ ಮಕ್ಕಳು ಬದುಕುವುವಂತೆ ? ಬದುಕುವುದಿಲ್ಲ. ಈ ಒಂದು ಮೂಲ ತತ್ವದ ಪ್ರತ್ಯಕ್ಷ ನಿದರ್ಶನ ಈ ಕಾದಂಬರಿಯಲ್ಲಿ ಬರುತ್ತದೆ.

ಕಾದಂಬರಿಕಾರರು ವಸ್ತುವನ್ನು ನಿರ್ವಹಿಸುವಲ್ಲಿ ಬಹಳ ಶ್ರಮವಹಿಸಿದ್ದಾರೆಂಬುದು ಅವರ ಮೊದಲ ಮಾತುಗಳಲ್ಲಿ ವ್ಯಕ್ತವಾಗಿದೆ. ಐತಿಹ್ಯವೊಂದನ್ನು ಕಾದಂಬರಿಯಾಗಿಸುವುದು ಕಷ್ಟದ ಕೆಲಸವಲ್ಲ. ಎಷ್ಟೋ ಐತಿಹ್ಯಗಳನ್ನು ಅವಲಂಬಿಸಿ ಹಲವರು ಚಾರಿತ್ರಿಕವೆನ್ನುವ ಕಾದಂಬರಿಗಳನ್ನು ಬರೆದಿದ್ದಾರೆ. ಆದರೆ ಇಲ್ಲಿಯ ಐತಿಹ್ಯವನ್ನು ಒಂದು ಕಾದಂಬರಿಯಲ್ಲಿ ನಿರ್ವಹಿಸಬೇಕಾದರೆ ಒಂದು ಐತಿಹ್ಯದಲ್ಲಿ ಸೇರಿಕೊಂಡಿರುವ ಕಟ್ಟು ಕಥೆಯ ಅಂಶಗಳಷ್ಟೆ ಅಂಶಗಳನ್ನು ಕಾದಂಬರಿಕಾರರು ಕಟ್ಟಬೇಕು. ಯಾಕೆಂದರೆ ಈ ಐತಿಹ್ಯ ಒಂದು ಕಥೆಯನ್ನು ಸುಲಭವಾಗಿ ಹೆಣೆದು ಬಿಡಲು ಅವಕಾಶಕೊಡುವಷ್ಟು ಮುಷ್ಟಿಗ್ರಾಹ್ಯವಲ್ಲ. ಕಟ್ಟುಕಥೆ ಅಂಶಗಳನ್ನು ಕಟ್ಟುವುದು ಸಹ ಬಹಳ ಕಷ್ಟದ ಕೆಲಸವೇನೂ ಅಲ್ಲ. ಆದರೆ ಕಟ್ಟಿದ್ದನ್ನು ವಸ್ತುನಿಷ್ಠಮಾಡುವುದು ಬಹಳ ಕಷ್ಟ. ಆ ಕಷ್ಟವನ್ನು ನಿವಾರಿಸಿಕೊಳ್ಳುವಲ್ಲಿ ಕಾದಂಬರಿಕಾರರು ತಮ್ಮದೇ ಆದ ಪ್ರಯತ್ನವನ್ನು ಮಾಡಿದ್ದಾರೆ. ಅದಕ್ಕಾಗಿ ಕಥೆಯು ವಸ್ತುವಿನಂಥ ಸಾಂಪ್ರದಾಯಿಕ ಮಾದರಿಯೊಂದನ್ನು ಆಯ್ದುಕೊಂಡು ಬರಬಹುದಾಗಿದ್ದ ಆಪತ್ತನ್ನು ಸುಲಭವಾಗಿ ನಿವಾರಿಸಿಕೊಂಡಿದ್ದಾರೆ. ಇದರಿಂದ ಕಥೆ ಬರೆಯುವುದು ಮತ್ತು ಪಾತ್ರಗಳನ್ನು ಸೃಷ್ಟಿಸಿಕೊಳ್ಳುವುದು ಸುಲಭವಾಗಿದೆ. ಹಾಗೆಯೆ ನಿವಾರಣೆ ಕೂಡ. ಮೊದಲೆ ಕಥೆಗೆ ಸೂತ್ರಪ್ರಾಯ ಶೀರ್ಷಿಕೆಯೊಂದನ್ನು ಕರೆದದ್ದರಿಂದ, ಕಥೆಯನ್ನು ಆ ಸೂತ್ರದ ಮೇಲೆ ಹೆಣೆದು ಮುಗಿಸುವುದು ಸಾಧ್ಯವಾಗಿದೆ. ನಿಜವಾಗಿ ತೊಂದರೆ ಎನಿಸಬೇಕಾಗಿದ್ದ ವಸ್ತುವಿನ ಸ್ಥಳೀಯತೆ ಮತ್ತು ಭಾಷೆ ಕಾದಂಬರಿಕಾರರ ನೈಪುಣ್ಯದಿಂದ ಸಮಗ್ರತೆಯನ್ನು ಪಡೆದುಕೊಂಡಿವೆ. ಒಂದು ಅದ್ಭುತವೂ ಮೋಜಿನ ಸಂಗತಿಯೂ ಎನಿಸುವಷ್ಟರ ಮಟ್ಟಿಗೆ ಪಾತ್ರ ಸೃಷ್ಟಿಯ ಕಲೆ ಶ್ರೀ ನಾಗೇಗೌಡರಿಗೆ ಕರಗತವಾಗಿದೆ. ಅಚ್ಚರಿ ಎನಿಸುವಷ್ಟರ ಮಟ್ಟಿಗೆ ಪಾತ್ರಗಳನ್ನು ಕ್ಷಣಾರ್ಧದಲ್ಲಿ ಸೃಷ್ಟಿಸಿ ಮೇಲಕ್ಕೆ ತಂದುಬಿಡುತ್ತಾರೆ. ಈವೊಂದು ಗುಣದಿಂದ ಕಾದಂಬರಿ ಪಾತ್ರಗಳಿಂದ ತುಂಬಿಹೋಗುವ ಅಪಾಯವೂ ಇಲ್ಲದಿಲ್ಲ. ಈ ಪಾತ್ರಗಳೆಲ್ಲ ಒಂದೊಂದು ಗುಣದ, ಆದರ್ಶದ ಪ್ರತೀಕಗಳು. ಇವುಗಳ ದೃಷ್ಟಿ ನೇರ ಮತ್ತು ಸೃಷ್ಟಿಯಲ್ಲಿ ತೊಳಲಾಟ ತಾಕಲಾಟಗಳು ಕಡಿಮೆ. ಕಷ್ಟ ಸುಖದ, ಪ್ರೇಮ-ದ್ವೇಷದ ಏರಿಳಿತದ ಕ್ರಿಯೆಯಾಗಿ ಅವು ಕಂಡುಬರುತ್ತವೆ. ಜಾನಪದರ ಬದುಕಿನಲ್ಲಿ ಪ್ರೇಮ-ದ್ವೇಷಗಳು ಬರಿಯ ಭಾವನೆಗಳ ಮಟ್ಟದಲ್ಲೇ ಕರಗಿ ಹೋಗುವ ಸಾಧ್ಯತೆಗಳು ಬಹಳ: ಅವು ಕ್ರಿಯೆಯಾಗುವುದು ವಿರಳ. ಕ್ರಿಯೆಯಾದಾಗ, ದುರಂತಮಯವಾಗುವುದುಂಟು. ಈ ರೀತಿಯ ಭಾವನಾ ಮಟ್ಟದ ಪ್ರೇಮ-ದ್ವೇಷಗಳ ಪಾತ್ರಗಳೇ ಇಲ್ಲಿ ಹೆಚ್ಚು. ಈ ಭಾವಗಳ ತುಡಿತಕ್ಕೆ ಕುದಿತಕ್ಕೆ ಅವಕಾಶವಿಲ್ಲದಿರುವುದು ಏನೊ ಒಂದು ಕೊರತೆ ಎನಿಸುತ್ತದೆ. ವಸ್ತು ಸ್ವೀಕಾರ ಜನಪದೀಯವಾದರೂ ನಿರ್ವಹಣೆ ಲಿಟರರಿ ಸ್ಟಾಂಡರ್ಡ್‌ನಲ್ಲಿರುವುದರಿಂದ ಈ ರೀತಿಯು ಸಪ್ಪೆ ಸಹಜವಾಗಿ ಗೋಚರಿಸುತ್ತದೆ. ಸಂತೋಷದ ಸಂಗತಿ ಎಂದರೆ, ಈ ಕಾದಂಬರಿಯ ಪಾತ್ರಗಳು-

ತಂತ್ರ-ಭಾಷೆ ಒಂದನ್ನೊಂದು ಸೇರಿಕೊಂಡಿರುವುದು. ವಸ್ತುವಿನಂತೆ ತಂತ್ರ, ತಾತ್ವಿಕತೆ ; ಭಾಷೆ ; ವಸ್ತುವಿನಂತೆ ಪರಿಸರ ಮತ್ತು ಕ್ರಿಯೆ-ಒಂದು ಒಪ್ಪಿತ ಒಪ್ಪಂದದ ಮೇಲೆ ನಡೆಯುತ್ತವೆ.

ಕಾದಂಬರಿಯ ತಂತ್ರವೊಂದು ಸಾಂಪ್ರದಾಯಿಕ ಸಹಜತೆ. ಆದ್ದರಿಂದ ವಸ್ತುವಿನ ಗುಣವನ್ನು ನಿರ್ವಹಿಸುವಲ್ಲಿ ಅಪಾಯವೇನೂ ಆಗಿಲ್ಲ. ಆದರೆ ಅಷ್ಟೇ ಹೆಚ್ಚು ಉಪಯೋಗವೂ ಆದಂತಿಲ್ಲ. ಎರಡು ಬೇರೊಂದು ಎರಡಕ್ಕೆ ಸಮಾನ ವಾದಂತಿದೆ. ಕೆಲವೊಮ್ಮೆ ತಂತ್ರ ವಸ್ತುವನ್ನು ಸಾಹಿತ್ಯಿಕವಾಗಿ ಮಹತ್ವಗೊಳಿಸುವ ಅಥವ ಹೆಚ್ಚು ಅರ್ಥವತ್ತಾಗಿಸುವ ಸಾಧ್ಯತೆಗಳಿರುತ್ತವೆ. ಆ ಒಂದು "ರೀತಿ" ಇಲ್ಲಿಲ್ಲ. ತಂತ್ರದಷ್ಟೆ ತಾತ್ವಿಕತೆ ಸಾಂಪ್ರದಾಯಿಕವಾದುದು. ಜಾನಪದೀಯವಾದುದು, ಒಂದು ಜನಪದ ಕಥೆಯ ತಂತ್ರದಷ್ಟು : ಒಂದು ಸಾಮಾನ್ಯ ಧಾರ್ಮಿಕ ಆಶಯದಷ್ಟು ರೂಢ ಮೂಲವಾದುದು. ಇವರಿಂದ ತಂತ್ರವೇ ಆಗಲಿ ತಾತ್ವಿಕತೆಯೆ ಆಗಲಿ ಕಾದಂಬರಿಯಲ್ಲಿ ಎದ್ದು ಕಾಣುವ ಪರಿಕರಗಳಲ್ಲಿ, ವಸ್ತುವಿಗಾಗಿ ದುಡಿಯುವ ಸರಕುಗಳು.

ಕಾದಂಬರಿ ವಸ್ತುವಿನ ನಿರ್ವಹಣೆಗೆ ಆಗತ್ಯಕ್ಕಿಂತ ವಿಸ್ತಾರವಾದಂತೆನಿಸುತ್ತದೆ. ಕಾದಂಬರಿಯ ಆರಂಭಕ್ಕೆ ಸಂಬಂಧಪಟ್ಟಂತೆ ಈ ಮಾತು ಸಹಜವೆನಿಸುತ್ತದೆ. ಇಲ್ಲಿ ವಸ್ತುವಿನ ವಿವರಣೆಗೆ ಪೀಠಿಕೆಯನ್ನು ಹಾಕಿದಂತಿದೆ. ಕಲ್ಲೇಗೌಡರು ಮತ್ತು ಗುರುಸಿದ್ಧಯ್ಯನವರ ಪೀಳಿಗೆ ಕಾದಂಬರಿಯ ಬಂಧದ ದೃಷ್ಟಿಯಿಂದ ಅನಾವಶ್ಯಕ ವೆನಿಸುತ್ತದೆ. ಮೈಲಾರಲಿಂಗನ ಪುನಃಪ್ರತಿಷ್ಠಾಪನೆಯು ಕಾದಂಬರಿಯ ಪರಮೋದ್ದೇಶ ವಾಗಿದ್ದಿದ್ದರೆ ಇವರ ಇರುವಿಕೆಗೆ ಹೆಚ್ಚಿನ ಅರ್ಥ ಬರುತ್ತಿತ್ತು. ಆಗ ಅವರ ಸಾಂಪ್ರದಾಯಿಕ ಜೀವನ ಒಂದು ಸಹಜ ಕ್ರಿಯೆಯಾಗಿ ಕಾದಂಬರಿಯನ್ನು ಇನ್ನೂ ಗಂಭೀರಗೊಳಿಸುತ್ತಿತ್ತು. ಅಲ್ಲದೆ ಅದೊಂದು ಗಂಭೀರ ತಳಹದಿಯಾಗುವುದು ಸಾಧ್ಯವಿತ್ತು. ಆದರೆ ವಸ್ತುವಿನ ದೃಷ್ಟಿ ನಿಜವಾಗಿ ಧೂಪದ ಚನ್ನನನ್ನು ಪ್ರತಿಷ್ಠಾಪಿಸುವುದಾಗಿರುವುದರಿಂದ ಆ ಒಂದು ತಲೆಮಾರು ಇಲ್ಲಿ ತಲೆ ಹೊರೆಯಾಗಿದೆ ಎನಿಸುತ್ತದೆ. ಆದರೆ, ಇದೇ ಮಾತನ್ನು ಕಾದಂಬರಿಯ ಕೊನೆಯಲ್ಲಿ ಬರುವ ದುಷ್ಟ ತ್ರಿಮೂರ್ತಿಗಳ ಭಾಗಕ್ಕೆ ಹೇಳಲು ಸಾಧ್ಯವಿಲ್ಲ. ಯಾಕೆಂದರೆ ಇದು ಕಾಲ ಮತ್ತು ಕಾದಂಬರಿಯ ಪರಿಸ್ಥಿತಿಯನ್ನು ಹೊಂದಿಕೊಂಡು ಸೃಷ್ಟಿಯಾದ ರೀತಿಯಾಗಿದೆ. ತಲೆಮಾರುಗಳ ಸ್ಥಿತಿ-ಪರಿಸ್ಥಿತಿ-ಮತ್ತು ಬೆಳವಣಿಗೆಗಳನ್ನು ಕೃತಿಕಾರರು ತುಂಬ ಸೂಕ್ಷ್ಮವಾಗಿ ಕಾದಂಬರಿಯ ಕ್ರಿಯೆಯಲ್ಲಿ ಹಿಡಿದಿಟ್ಟಿದ್ದಾರೆ. ಚನ್ನೇಗೌಡನ ನಿಜವಾದ ಕ್ರಿಯೆ ಸಹ ಜೀವನವನ್ನು ಮುಕ್ತ ಆವರಣದಲ್ಲಿ ಅನುಭವಿಸಬೇಕೆನ್ನುವುದೇ ಆಗಿತ್ತೆಂದು ಒಂದು ಕಡೆ ನಮಗೆ ಅನಿಸುತ್ತದೆ. ಹಾಗೆ ಸಂಸಾರಸ್ಥನಾಗಿ, ಆತ ಗುಪ್ತಗಾಮಿನಿಯಂತೆ ಬದುಕುವುದು ಸಾಮಾಜಿಕ ಪರಿಸ್ಥಿತಿಯಿಂದ ಎಂಬುದನ್ನು

ಅರ್ಥಮಾಡಿಕೊಳ್ಳುತ್ತೇವೆ. ಆದರೆ ಕಾದಂಬರಿಯ ಮೊದಲ ಪೀಳಿಗೆ, ಕಾದಂಬರಿಯ ಬಂಧದ ದೃಷ್ಟಿಯಿಂದ ಹೆಚ್ಚಾಯಿತೆನಿಸುತ್ತದೆ. ತಮ್ಮ ಸಂಪದ್ಭರಿತವಾದ ಭಾಷೆಯಿಂದ ಶ್ರೀ ಗೌಡರು ಏನನ್ನೂ ಹೇಳಬಲ್ಲ ಸಾಮರ್ಥ್ಯವಿರುವವರಾದ್ದರಿಂದ ಆ ಭಾಗಗಳೂ ಸಹ ಅಗತ್ಯವಾದುವುಗಳೆಂಬಷ್ಟರಮಟ್ಟಿಗೆ ಓದುಗನಿಗೆ ಹಿಡಿಸಿ ಬಿಡುತ್ತವೆ. ಮೌಲ್ಯ ಮಾಪನದ ದೃಷ್ಟಿಯಿಂದ ಅದು ಹೆಚ್ಚಾಯಿತೆನಿಸುತ್ತದೆ. ಧೂಪದ ಚನ್ನ ಧೂಪವನ್ನು ಬೆಳಗಿಸುವುದಕ್ಕೆ ಕಾರಣವಾದ ಹಿನ್ನೆಲೆಯನ್ನು ತರುವ ಕಾರಣಕ್ಕಾಗಿ ಚಾಜಗಾರಕುಳ ಚನ್ನಯ್ಯನ ಬಗ್ಗೆ ಹೇಳುವುದು ಅಗತ್ಯವಿತ್ತು, ಆ ಬಗ್ಗೆಯಾದ ಒಂದು ಭಾಗ ಅಗತ್ಯವಿದ್ದರೂ ಅದನ್ನು ಬೇರೆ ಪಾತ್ರ ಸೃಷ್ಟಿಯ ಮತ್ತೂ ಕೆಲವು ಭಾಗಗಳ ರಚನೆಯಿಂದ ತರುವುದರ ಅಗತ್ಯ ಕಾಣುವುದಿಲ್ಲ. ಹೆಚ್ಚಾಗಿ ಧೂಪದ ಚೆನ್ನನ ಹಿನ್ನೆಲೆಯಾಗಿ ಅಥವ ಆತ್ಮಗತ ಭಯವಾಗಿ ಈ ಕಥೆ ಬಂದಿದ್ದರೆ ಉತ್ತಮ ಸಾಧನೆಯಾಗುತ್ತಿತ್ತು. ಈ ವಿಷಯವನ್ನು ಬಿಟ್ಟರೆ ಐತಿಹ್ಯವೆಂಬ ವಸ್ತುವನ್ನು ಕಾದಂಬರಿಯ ಪರಿಸರದಲ್ಲಿ ಸಹಜಗೊಳಿಸಲು ಕಾದಂಬರಿಕಾರರು ತರುವ ಅನ್ಯ ವಿಷಯಗಳನ್ನು ತುಂಬ ಸಹಜವೆನಿಸುವಷ್ಟರಮಟ್ಟಿಗೆ ಕಾದಂಬರಿಯ ವಿಷಯಗಳೇ ಆಗಿಬಿಡುತ್ತವೆ. ಉದಾಹರಣೆಗೆ : ಮೈಸೂರಿನ ರಾಜಮನೆತನದ ರೀತಿ ನೀತಿ, ಅಲ್ಲಿ ಕೆಲಸದಲ್ಲಿದ್ದುವರು ಕೊಡುತ್ತಿದ್ದ ಸುದ್ದಿ ಚಾರಿತ್ರಿಕ ದಾಖಲೆಯನ್ನು ಸ್ಥಾಪಿಸಿದ ರೋಗ-ರುಜಿನಗಳು. ಇವೆಲ್ಲ ಎಲ್ಲಿಯೋ ನಡೆದ, ಯಾರಿಗಾಗಿಯೋ ನಡೆದ ಘಟನೆಗಳೆನಿಸದೆ ಕಾದಂಬರಿಗಾಗಿ ಕಾದಂಬರಿಯಿಂದ ಘಟಿಸಿದ ಸಂದರ್ಭಗಳಷ್ಟು ಗಟ್ಟಿಯಾಗಿವೆ. ಹಳ್ಳಿಯ ಪರಿಸರದಲ್ಲಿ ಹಳ್ಳಿಯವರಿಂದಲೇ ಕಥೆ ನಡೆದರೂ ಅನಗತ್ಯ ಆಕ್ರೋಶಗಳಾಗಲೀ, ಗೊಂದಲಗಳಾಗಲಿ, ಆಗದೆ ಒಂದು ನೈತಿಕ ನೈರ್ಮಲ್ಯವಿರುವ ವಾತಾವರಣದಲ್ಲಿ ಕಥೆ ನಡೆಯುತ್ತದೆ.

ಪಾತ್ರಗಳನ್ನು ಸೃಷ್ಟಿಸುವ ಮತ್ತು ಬೆಳೆಸುವ ಶಕ್ತಿ ಕಾದಂಬರಿಕಾರರಿಗೆ ಅಪಾರವಾಗಿದೆ. ಕೊನೆಯಲ್ಲಿ ಕೈ ಸೋತಂತೆ ಕೈ ಬಿಡುವ ಪ್ರಸಂಗಗಳೂ ಉಂಟು. ಹೀಗೆ ಸೃಷ್ಟಿಯಾದ ಪಾತ್ರಗಳಲ್ಲಿ ಏಕ ಭಾವಾಭಿನಯದ ಪಾತ್ರಗಳೇ ಹೆಚ್ಚು. ಸಾಂಪ್ರದಾಯಿಕ ಪ್ರೇಮ-ದ್ವೇಷಗಳಿಂದ ಅವು ತಮ್ಮನ್ನು ನಿರ್ಧರಿಸಿಕೊಂಡಿವೆ. ತಮ್ಮನ್ನು ತಾವೇ ತುಲನೆ ಮಾಡಿಕೊಳ್ಳುವ, ತೂಗಿನೋಡಿಕೊಳ್ಳುವ ಸಾಹಸವನ್ನು ಮಾಡುವುದಿಲ್ಲ. ಅನಿಸಿದ್ದನ್ನು ಅದರ ಯಥಾವತ್ತು ಅರ್ಥದಲ್ಲಿ ಬದುಕುವ ಮತ್ತು ಅದನ್ನೇ ಅನುಭವಿಸುವ ಸ್ವಭಾವ ಇವುಗಳದು. ಈ ಪಾತ್ರಗಳಿಗೆ ಹೆಚ್ಚು ಆಂತರಿಕ ಮುಖಗಳಿಲ್ಲ. ತಮ್ಮ ಗುಣದ ಬಗ್ಗೆಯೂ ಅವು ಚಿಂತಿಸಿದಂತೆ ಕಾಣುವುದಿಲ್ಲ. ಆರೋಚಿತ ಗುಣದಿಂದಲೇ ಮುಕ್ತಿ ಸಾಧಿಸುವ ಬಯಕೆ ಅವುಗಳದು. ಆದುದರಿಂದ ಒಂದು ಅಜ್ಜನೆಟ್ಟ ಆಲದಂತೆ, ಅರಳಿಯಂತೆ ಪರರಿಗೆ ಆಶ್ರಯವಾಗಿ ಬೆಳೆದು ಬದುಕನ್ನು ಮುಗಿಸುವುದು ತಮ್ಮ ಕರ್ತವ್ಯವೆಂದು ತಿಳಿದುಕೊಂಡಂತೆ ಕಾಣುತ್ತದೆ.

ಇದರಿಂದಾಗಿ ಓದುಗನ ತಲೆಯಲ್ಲಿ ಬಹಳಕಾಲ ಉಳಿಯದೆ ಅಥವ ಅವನ ಚಿಂತನೆಯ ವಸ್ತುಗಳಾಗದೆ ಅವನ ಸಾಂಪ್ರದಾಯಿಕ ಮೌಲ್ಯದಲ್ಲಿ ಕರಗಿಹೋಗುತ್ತವೆ.

ಈ ಕಾದಂಬರಿಕಾರರ ಪಾತ್ರಸೃಷ್ಟಿಯ ನೈಪುಣ್ಯದ ಬಗ್ಗೆ ಯೋಚಿಸುವಾಗಲೆಲ್ಲ ಮಾಡಿದ್ದುಣ್ಣೋ ಮಾರಾಯದ ಕಾದಂಬರಿಕಾರರ ನೆನಪು ಬರುತ್ತದೆ. ಒಂದೊಂದು ಭಾವಕ್ಕೆ ತಕ್ಕುದಾದ ಒಂದೊಂದು ಪಾತ್ರಗಳನ್ನು ಇವರು ಸೃಷ್ಟಿಸುತ್ತಾರೆ. ಆ ಪಾತ್ರಗಳನ್ನು ಪೂರ್ಣವಾಗಿ ಬೆಸಿಸಿ (ಕೊಬ್ಬಿಸಿ) ಬರುವ ಅವಸ್ಥಾಂತರಗಳನ್ನು ದಾಟಿಸಿ ಬಯಸಿದ ಅತ್ಯಂದ ಕಡೆಗೆ ಕಳಿಸುತ್ತಾರೆ. ಅವರ ಭಾವಗಳನ್ನು ಅಭಿವ್ಯಕ್ತಿಸುವ ಸಂದರ್ಭಗಳನ್ನು ಸೃಷ್ಟಿಸುವಾಗಿನ ಕಾದಂಬರಿಕಾರರ ಕಲಾತ್ಮಕತೆ ಮೆಚ್ಚುವಂಥದು. ಉದಾ : ಕುಂಡಪ್ಪ, ಗುರುಸಿದ್ಧಯ್ಯನವರು, ಸಂಗಣ್ಣ, ಚಿಕ್ಕೀರ, ಮಾರ್ತಾಂಡಚಾರಿ, ಕುರಿಕೆಂಚಯ್ಯ ಈ ಮುಂತಾದವರನ್ನು ಗಮನಿಸಬಹುದು. ಚಿಕ್ಕೀರನಂಥ ಪಾತ್ರಗಳನ್ನು ಈ ಕಾದಂಬರಿಯ ಪರಿಸ್ಥಿತಿಯಲ್ಲಿ ಕಡೆಗಣಿಸಬಹುದಾಗಿದ್ದರೂ, ಅದನ್ನು ಅದರ ಪರಿಸ್ಥಿತಿಯಲ್ಲೇ ವೈಚಿತ್ರ್ಯವರಿತು ಬೆಳೆಸಿರುವುದು ಕಾದಂಬರಿಕಾರರ ಜೀವನಾನುಭವದ ಆಳವನ್ನು ಮೆಚ್ಚುವಂತಾಗಿದೆ. ಪ್ರಾಸಂಗಿಕವೆನಿಸಿದರೂ ಕುರಿಕೆಂಚಯ್ಯನ ಪಾತ್ರ ಕಾದಂಬರಿಯಲ್ಲಿ ಒಂದು ಉಪಾಖ್ಯಾನದಂತೆ ಬೆಳೆದುನಿಂತಿದೆ. ಬಸವ ಪುರಾಣದಲ್ಲಿನ ಕೋಳೂರು ಕೊಡಗೂಸಿನ ಕಥೆಯ ರೀತಿಯಲ್ಲಿ ಕುರಿಕೆಂಚಯ್ಯ ಒಬ್ಬ ಮುಗ್ಧ ಭಕ್ತನಾಗಿ ಕಂಡುಬರುತ್ತಾನೆ. ಅವನ ಭಕ್ತಿಯ ಅತಿರೇಕವನ್ನು ವರ್ಣಿಸುವಾಗಿನ ಭಾಷೆ ಮತ್ತು ಭಾವದ ಆವೇಶಗಳು ಮನಮುಟ್ಟುವಂತಿವೆ. ಕುರಿಕೆಂಚಯ್ಯ ತನ್ನ ಭಕ್ತಿಯನ್ನು ಪ್ರದರ್ಶಿಸುವುದು ಒಂದು ಸಾಮಾಜಿಕ-ಧಾರ್ಮಿಕ ಮುಗ್ಧತನದಂತಿದ್ದರೂ ಪರಿಸರಸಾಮಾನ್ಯತೆಯಿಂದ ಮಹತ್ವದ ಸಂದರ್ಭವೇ ಆಗಿಬಿಡುತ್ತದೆ. ಗುರುಸಿದ್ಧಯ್ಯನವರ ಮಗ ಅಪ್ಪನಂಥ ಮಗನಾಗಲು ಒದಗುವ ಸಂದರ್ಭ ಸಾಧಾರಣವಾದುದಾದರೂ ಅಸಾಧಾರಣ ಮತ್ತು ಅದ್ಭುತ ಪವಾಡವೆನ್ನುವಷ್ಟರ ಮಟ್ಟಿಗೆ ಬೆಳೆದು ನಿಲ್ಲುತ್ತದೆ. ಇಲ್ಲಿ ಕಾದಂಬರಿಕಾರರು ಸಂದರ್ಭವನ್ನು ಪವಾಡವಾಗಿ ವರ್ಣಿಸದೆ ಅದರ ವಸ್ತುಸ್ಥಿತಿಯ ಎರಡು ಮುಖಗಳನ್ನೂ ಮುಕ್ತವಾಗಿ ವರ್ಣಿಸಿದ್ದಾರೆ. ಈ ಕಾದಂಬರಿಯ ಜನಪದದ ಜೀವನದ ಆಂತರ್ಯವನ್ನು ಅವರು ಚೆನ್ನಾಗಿ ಅರ್ಥ ಮಾಡಿಕೊಂಡಿರುವುದಕ್ಕೆ ಇಂಥ ಕೆಲವು ಸಂದರ್ಭಗಳು ಸಾಕ್ಷಿ ನೀಡುತ್ತವೆ. ಈ ಒಂದು ಸಂದರ್ಭದಿಂದ ಗುರುಮಲ್ಲಯ್ಯನ ಪಾತ್ರಕ್ಕೆ ಸಾಂಪ್ರದಾಯಿಕ ಘನತೆ ಹೆಚ್ಚುತ್ತದೆ. ಇಂಥ ಪರಿಸ್ಥಿತಿಗಳು ಜನಪದರಲ್ಲಿ ಆಕಸ್ಮಿಕವೆನಿಸಿದರೂ ಸಹಜ, ಅನಿವಾರ್ಯ ಅಂಶಗಳಾಗುವುದನ್ನು ಇಲ್ಲಿ ಗಮನಿಸುತ್ತೇವೆ.

ಮೈಸೂರಿನ ಮುಂಡಿ ಸಾಹುಕಾರ ಮತ್ತು ಅವನ ಸೂಳೆಯರು ಕೌತುಕದ ಪಾತ್ರಗಳಾಗಿ ನಮ್ಮ ಮನಸ್ಸಿನ ಮೇಲೆ ಆಗಾಗ ಮಿಂಚಿನಂತೆ ಸುಳಿದು ಮಾಯವಾಗುತ್ತಾರೆ. ಆದರೂ ನಮ್ಮ ಮನಸ್ಸಿನ ಒಂದು ಭಾಗದಲ್ಲಿ ಅವರು ಬೀಡು ಬಿಟ್ಟಿರುವಂತೆನಿಸುತ್ತದೆ.

ಅವರ ಬಣ್ಣನೆ ನಮ್ಮನ್ನು ಕಲಕಿದಂತೆ ಕಾಣುತ್ತದೆ. ಅವರ ಬದಕು ಕಾದಂಬರಿಯ ಪರಿಸರವನ್ನು ಕದಡಿದ ನೀರಿನಂತೆ ಮಾಡುತ್ತದೆ. ಆದರೆ ಇದು ಕಾದಂಬರಿಯಲ್ಲಿ ಬರುವ ಕಾವೇರಿಯಂತೆ ಹರಿಯುವ ನೀರಾದುದರಿಂದ ಆ ಧೂಳು ನೀರಿನ ಕೆಳಗೆ ಉಳಿಯುತ್ತದೆ. ಆದರೆ ಮತ್ತೆಲ್ಲಿ ನೀರನ್ನು ಈ ಧೂಳು ಕಲಕುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಮೈಸೂರಿನಲ್ಲಿ ಮಂಡಿ ಸಾಹುಕಾರನಿಗಾಗಿ ಹುಟ್ಟಿಕೊಂಡ ಈ ರೂಪಗಳು ಮತ್ತೆ ಧೂಪದ ಚನ್ನೇಗೌಡನ ಭೋಗಕ್ಕಾಗಿ ಮಂಡ್ಯದಲ್ಲಿ ಅವತರಿಸಿದಂತೆ ಕಾಣುತ್ತದೆ. ಕಾದಂಬರಿಯೆಂಬ ಹರಿಯುವ ನೀರಿಗೆ ಈ ಎಳೆಗಳು ಸೇರಿ—ಕರಗಿ ಮತ್ತೆ ಕಾಣಿಸಿ ಕೊಳ್ಳುತ್ತಾ ಹೋಗುವುದೆ ಕಾದಂಬರಿಗೆ ನಾವೀನ್ಯತೆಯನ್ನು ಒದಗಿಸಿದಂತಾಗಿದೆ. ಆದುದ ರಿಂದ ಧೂಪದ ಚನ್ನನಪ್ಪೆ ಶ್ರೀಕಂಠಿ ಸೂಳೆಯರು ಈ ಕಾದಂಬರಿಯ ಪ್ರಮುಖ ಸಾಮಗ್ರಿಗಳಾಗಿದ್ದಾರೆ. ನ್ಯಾಯ–ಅನ್ಯಾಯದ ಏಳು ಬೀಳು, ಚಕ್ರದ ಅರೆಕಾಲಿನ ರೀತಿಯಲ್ಲಿ ಏರಿಳಿಯುವ ಬದುಕಿನ ನಿತ್ಯಾತ್ಮಕ ಹೋಲಿಕೆ ಇಲ್ಲಿ ದೃಢೀಕರಣವನ್ನು ಪಡೆ ದಿದೆ.

ಈ ಕಾದಂಬರಿಯ ನೈತಿಕ ಸಾಧನೆಯ ಎರಡು ಧ್ರುವಗಳಾಗಿ ಓದುಗನ ಮನಸ್ಸಿನ ಮೇಲೆ ಉಳಿಯುವ ಪಾತ್ರಗಳೆಂದರೆ ಕುಂಡಪ್ಪ ಮತ್ತು ಸರ್ವಜ್ಞ ಸಂಗಣ್ಣ. ಕುಂಡಪ್ಪ ಪುನರುಜ್ಜೀವಿತ ಧಾರ್ಮಿಕ ತತ್ವಗಳ ಆಕಾಂಕ್ಷೆಯ ಸಂಕೇತವಾಗಿದ್ದರೆ, ಸಂಗಣ್ಣ ಮಾನವನ ಮೂಲಧರ್ಮದ ವೃತ್ತಿಯ ಪ್ರತಿನಿಧಿಯಾಗಿದ್ದಾನೆ. ಸಂಗಣ್ಣನ ದೇವರು ದುಡಿಮೆ ಯಾಗಿದ್ದರೆ, ಕುಂಡಪ್ಪನದು ಮೋಕ್ಷವಾಗಿದೆ, ಸಂಗಣ್ಣ ಕೆಲವೊಮ್ಮೆ ಅನಪೇಕ್ಷಿತವಾಗಿ ಬಂದು ತಮ್ಮ ತಲೆತಿನ್ನುತ್ತಿದ್ದಾನೆ ಎನಿಸಿದರೂ ಆತ ಈ ಕಾದಂಬರಿಯ ಒಂದು ಒಳ ಸೆಲೆಯಾಗಿ ಹರಿದು ಬರುತ್ತಾನೆ. ಇವನಿಗೆ ಸಾವು ಎಂಬುದು ಒಂದು ಲೌಕಿಕ ಸಂಭವ ಅಷ್ಟೆ. ಏಕೆಂದರೆ ಈತ ಆ ಸಮಾಜದ ಬದುಕಿನ ಜೀವನಾಡಿಯಾಗಿ ಸರ್ವಕಾಲಕ್ಕೂ ಇದ್ದಾನೆ. ಕಾದಂಬರಿಯ ಮೊದಲಿನಿಂದ ಕೊನೆಯವರೆಗೆ ಕಾಯಿ ಹಣ್ಣಾದಂತೆ ಜೀವನದ ವಿವಿಧ ಅನುಭವವಾಗುತ್ತಾ, ಅದನ್ನು ಕಾಣುತ್ತಾ, ಹೇಳುತ್ತಾ ಹೋಗುತ್ತಾನೆ. ಯುಗ ಬದಲಾವಣೆಯನ್ನು ಕುರುಕ್ಷೇತ್ರದ ಅಂತ್ಯದೊಂದಿಗೆ ಕಾಣುವ ಪೌರಾಣಿಕ ಹದ್ದೊಂದ ರಂತೆ, ಈತ ಯುಗ ಧರ್ಮವೊಂದರ ಭವಿಷ್ಯದ ಪ್ರತೀಕವೂ ಆಗಬಲ್ಲ. ಕಲ್ಲೇಗೌಡ— ಗುರುಸಿದ್ಧಯ್ಯ, ಮಲ್ಲೇಗೌಡ—ಗುರುಮಲ್ಲಯ್ಯನವರ ಬದುಕಿನ ಘಟ್ಟದೊಂದಿಗೆ ಗುರು ನಂಜಯ್ಯ—ಪುಟ್ಟೇಗೌಡ ಮತ್ತು ಧೂಪದ ಚನ್ನೇಗೌಡನ ಬಾಳಿನ ಬದಲಾವಣೆಯ ಬೆಳವಣಿಗೆಯನ್ನು ದ್ವಾಪರ ಮತ್ತು ಕಲಿಯುಗದ ಬದುಕಿನ ಅಂತರಂಗದಲ್ಲಿ ಕಾಣುತ್ತಾನೆ. ಆದುದರಿಂದ ಎರಡು ತಲೆಮಾರುಗಳ ಕಾಲ ಮಹಿಮೆಯ ವಿಮರ್ಶಕನೂ, ಅದೇ ಸಂದರ್ಭದಲ್ಲಿ ಒಂದು ಕಾಲಘಟ್ಟದ ಆದರ್ಶದ ಸಾತಿಕಲ್ಲೂ ಆಗಿದ್ದಾನೆ. ಒಂದು ಊರಿನ ಹುಟ್ಟಿನೊಂದಿಗೆ ಬಹಳ ಕಾಲಗಳ ಯಜಮಾನನಾಗಿರುವ 'ಕರೇಗಲ್ಲು' ಅಥವಾ ಊರ ಮುಂದಿನ ಅರಳಿಕಟ್ಟೆಯಂತೆ ಸಂಗಣ್ಣ ಮೈಲಾರದ ಮೂಲಪುರುಷನೂ, ಊರಿನ

ಏಳುಬೀಳುಗಳ ವೀಕ್ಷಕನೂ, ಒಂದು ವಿಧದಲ್ಲಿ ಆದರ ಪರೀಕ್ಷಕನೂ, ಪರಿಹಾರ ಸೂಚಕನೂ ಆಗಿದ್ದಾನೆ. ಈ ಪರಿಸ್ಥಿತಿಯನ್ನು ಅವನಿರುವ ರೀತಿ ಮತ್ತು ಆತ ಕುಳಿತುಕೊಳ್ಳುವ ಸ್ಥಳ, ದಿನನಿತ್ಯ ವೀಕ್ಷಿಸುವ ಸಂಧಿಸುವ ಜನಗಳ ಬಗ್ಗೆ ಹೇಳುವ ಮೂಲಕ ಕಾದಂಬರಿಕಾರರು ಸ್ಪಷ್ಟಪಡಿಸಿದ್ದಾರೆ.[3] ಮಾಗಿದಂತೆಲ್ಲ ಆತ ಎಷ್ಟು ಉತ್ತಮ ಅಥವಾ ಸಹಜ ಮನುಷ್ಯನಾಗುತ್ತಾನೆ ಎನಿಸುತ್ತದೆ. ಮನುಷ್ಯನ ಹುಟ್ಟು ಮನುಷ್ಯ ಸಹಜವಾಗಿ ಬದುಕುವುದಕ್ಕೆ. ಯಾವುದೊ ಒಂದು ಅವ್ಯಕ್ತ ಶಕ್ತಿಗೆ ಬಲಿಕೊಟ್ಟುಕೊಳ್ಳಲು ಅಲ್ಲ ಎನ್ನುವುದನ್ನು ಆತ ಸ್ಪಷ್ಟಪಡಿಸಿದ್ದಾನೆ. ಸನ್ಯಾಸಿ ಚನ್ನೇಗೌಡನನ್ನು ಖಂಡಿಸುವ ಅವನ ಮಾತುಗಳು ಮಾನವ ಕುಲಕ್ಕೆ ಮನನೀಯವಾಗಿ ಬಳಿಯುತ್ತವೆ[4]. ಮನುಷ್ಯನ ಬದುಕಿನ ಮೂಲಭೂತ ಅರ್ಥಗಳಾಗುತ್ತವೆ. ನಿಜವಾದ ಬದುಕಿನ ಅರ್ಥ ಹಾಳಾಗುತ್ತದೆ. ಎನ್ನುವುದನ್ನು ಕಾಣುವುದರೊಡನೆ ಅವನ ಸಾವು ಯೋಜಿತಗೊಂಡಿರುವುದು ಹೆಚ್ಚು ಅರ್ಥಪೂರ್ಣವಾಗಿದೆ. ಈ ಪಾತ್ರ ಸೃಷ್ಟಿಯಲ್ಲಿ ಕಾದಂಬರಿಕಾರರು ತಮ್ಮ ಸ್ವೋಪಜ್ಞತೆಯನ್ನು ಮೆರೆದಿದ್ದಾರೆ. ಬದುಕುವುದರ ಅನಿವಾರ್ಯತೆಯನ್ನು ಈ ಪಾತ್ರದ ಮೂಲಕ ಸ್ಪಷ್ಟಪಡಿಸಿದ್ದಾರೆ.

ಕುಂಡಪ್ಪ ಅಪ್ಪ ಚನ್ನಯ್ಯನ ಧರ್ಮ-ಕರ್ಮ ಸಂಯೋಗದ ಫಲ. ಈ ಒಂದು ಗೊಂದಲವನ್ನು ಅರಿತೆ ಬದುಕುತ್ತಿರುವುದರಿಂದ ಅವನ ಬದುಕು ಇಹ-ಪರಗಳ ಮಧ್ಯೆ ತೂಗುಯ್ಯಾಲೆಯಾಡುತ್ತದೆ. "ಇಲ್ಲಿ" ಬದುಕಿದ್ದರೂ "ಅಲ್ಲಿ"ದ್ದೇನೆನ್ನುವ ಭ್ರಮೆ

---

3 ಹೀಗೆ ಸಂಗಣ್ಣ ಮೈಲಾರದ ಪ್ರತಿಯೊಬ್ಬರಿಗೂ ಏನಾದರೂ ಒಂದು ಹೇಳುವ. ರಂಗದ ಮಧ್ಯೆ ಇದ್ದ ಕಲ್ಲು ಮಂಚದ ಮೇಲೆ ಅವನ ಪೀಠ. ಹೆಚ್ಚುಕಮ್ಮಿ ಸರ್ವಜ್ಞನಂತೆ ಬರಿ ಮೈ. ಊರಿನ ಯಾರು ಹೋದರೂ ಬಂದರೂ ರಂಗ ಹಾದೇ ಹೋಗಬೇಕು. ಅವರೆಲ್ಲರಿಗೂ ಒರಿಯನಾಗಿ, ಅವರೆಲ್ಲರ ಬಗ್ಗೆ ಏನಾದರೊಂದು ಹೇಳಿ, ಅದನ್ನೆಲ್ಲಾ ಊರಿಗೆ ಪ್ರಚಾರ ಮಾಡಿ, ಮೈಲಾರದ ಸರ್ವಜ್ಞನಾಗಿದ್ದ ಸಂಗಣ್ಣ. ಪು. 122.

4. ಕೊಟ್ಟ ದೇವರು ಕೊಂಡುಹೋದರೆ
ಕುಟ್ಟಿಕೊಂಡು ಅಳುವುದೇತಕೊ!

ಈ ಹಾಡನ್ನು ಕೇಳಿದ ಸರ್ವಜ್ಞ ಸಂಗಣ್ಣಗೆ ಅವನ—ಮೈಮೇಲೆ ಕಂಬಳಿ ಹಾಕಿದಂತಾಯಿತು; "ಲೇ ಹುಚ್ಚ, ಮುಚ್ಚು ಬಾಯಿ! ಚಿಂತೆ ಮಾಡ್ದೇ ಇದ್ರೆ ನೀ ನಡಸಿಯೇನೊ ಸಂಸಾರವಾ ? ಮುಕ್ತಿ ! ಮುಕ್ತಿ ! ಅಂತ ಮಾತು ಮುಕ್ಕ ಬ್ಯಾಡ. ಕಾವಿ ಹಾಕಿ ಸುಲಭವಾಗಿ ಸಾವಿಗೆ ಉಣ್ಣುವ ಬುದ್ಧಿಯ ಈ ಹಳ್ಳಿಯೋರಿಗೆ ಕಲಿಸಬ್ಯಾಡ! ಯಾರಿಗೆ ಮುಕ್ತಿ ಗೊತ್ತೇನೊ ?

"ಹೊಲವ ಉಳುವಗೆ ಮುಕ್ತಿ ಕುಳವ ಬಡಿವಗೆ ಮುಕ್ತಿ
ಛಲದಲಿ ನಾಡ ಕಾವಗೆ ಮುಕ್ತಿ—ಮತ್ತೆ
ಆಳದಲಿ ಹರಿಯ ನೆನೆವಗೆ ಮುಕ್ತಿ !"

ಅವನದು ಆ ಭ್ರಮೆಯನ್ನು ಸತ್ಯಮಾಡಿಕೊಳ್ಳುವ ಕಾರಣಕ್ಕಾಗಿ ಏನೆಲ್ಲ ಪ್ರಯತ್ನವನ್ನೂ ಆತ ನಡೆಸಲು ಸಿದ್ಧನಿದ್ದಾನೆ. ಸಂಗಣ್ಣನ ರೀತಿಯಲ್ಲಿ ಆತನೊಬ್ಬ ಕರ್ಮಯೋಗಿ, ಸಹಜವಾಗಿ ಅದರಿಂದಲೇ ಅವನ ಮುಕ್ತಿ ಇದೆ. ಆದರೆ ಕುಂಡಪ್ಪ ಅದನ್ನು ಅರಿತಿಲ್ಲ. ತಾನು ಕಾಯಾ–ವಾಚಾ–ಮನಸಾ–ಈಗ ಮಾಡುತ್ತಿರುವ ಕೆಲಸಕ್ಕಿಂತ ಬೇರೆಯಾದುದೇ ತನ್ನ ಬದುಕಿನ ಸಾರ್ಥಕತೆಯ ಸಾಧನವಾಗುತ್ತದೆಂಬುದನ್ನು ತಿಳಿದಿರುವುದರಿಂದ ಆತ ಅದಕ್ಕಾಗಿ ಹಂಬಲಿಸುತ್ತಾನೆ. ಅದರ ಸಾಧನೆಯಲ್ಲಿ ಸಿದ್ಧಿ ಪಡೆದರೆಂದು ಹೇಳಲಾರದವರ ಅನುಕರಣೆಯಾಗಲು ಪ್ರಯತ್ನಿಸುತ್ತಾನೆ. ವಾಸ್ತವತೆಯಿಂದ ಅಸಹ್ಯ ಕಲ್ಪನಾ ಪ್ರಪಂಚದ ಕಡೆಗೆ ಚಲಿಸುತ್ತ ಅಥವ ಚಲಿಸಿಕೊಳ್ಳುತ್ತ ಗುರು ಚರಣಕ್ಕೆ ಹಾತೊರೆದು ಹಂಬಲಿಸುತ್ತಾನೆ. ಗುರುಮಲ್ಲಯ್ಯ ಒಬ್ಬ ಕಾಯಕವಾದಿಯಾಗಿದ್ದರೂ ಅದನ್ನು ತಿಳಿಯದೆ ಅವನನ್ನು ಬರಿಯ ಗುರುವಾಗಿ ಮಾತ್ರ ಕಾಣುವ ಯುಗ್ಗತನವನ್ನು ಪ್ರದರ್ಶಿಸಿದ್ದಾನೆ. ಈಯೊಂದು ಯುಗ್ಗತನವೇ ಕೊನೆಯಲ್ಲಿ ಆತ ಜನಮನದ ಮೇಲೆ ಒಬ್ಬ ಭಾರಿ ಆದರ್ಶಯೋಗಿಯಂತೆ ಭಾವಿಸುವ ಸಂದರ್ಭವನ್ನು ಕಲ್ಪಿಸಿದೆ. ಹಿಂದು–ಮುಂದಿನ ಸಂಭವಗಳಿಗೆ ಕಾರಣನಾಗುವ ಈತ ಧೂಮಕೇತುವೊಂದರಂತೆ ಸಮಾಜ ಮತ್ತು ನಂಬಿಕೆಯ ನಡುವೆ ಒಂದು ಆವರಣವನ್ನು ಸೃಷ್ಟಿಸಿ ಮರೆಯಾಗುತ್ತಾನೆ. ಈ ಪರಿಣಾಮ, ಈ ಕಾದಂಬರಿಯ ಸಮಾಜಕ್ಕೆ ದೃಗ್ಗೋಚರವಲ್ಲ; ಓದುಗನಿಗೆ ಮಾತ್ರ ಮನನವಾಗುವಂಥದು.

ಸಂಗಣ್ಣ ಮತ್ತು ಕುಂಡಪ್ಪ ಬೇರೊಂದು ದೃಷ್ಟಿಯಿಂದ ಈ ಕಾದಂಬರಿಯ ಎರಡು ತಲೆಮಾರುಗಳ ಪ್ರತಿನಿಧಿಗಳಂತಿದ್ದಾರೆ. ಧೂಪದ ಚನ್ನ ಈ ಕಾದಂಬರಿಯ ಕಥಾನಾಯಕನಾಗಿದ್ದರೂ ಆತ ಈ ಎರಡು ತಲೆಮಾರುಗಳನ್ನು ಪ್ರತಿನಿಧಿಸುವುದಿಲ್ಲ. ಆತ ಕೊನೆಯ ಭೋಗಾಪೇಕ್ಷಿ ಸಮಾಜಕ್ಕೇ ಸೇರಿದವನು. ಕೆಲವು ಕಾಲ ಧಾರ್ಮಿಕ ಧುರಂಧರನಾಗಿ ಒದುಕುವ ಹವಣು ತೋರಿದ್ದರೆ ಆತ ಅದಕ್ಕೆ ಲೌಕಿಕವಾಗಿ ಪಡೆದು ಸಂಪತ್ತಿನ ಮೂಲಕವೇ ಆಗಿದೆ. ಕೊನೆಗೆ ಭೋಗವನ್ನು ಮೀರುತ್ತೇನೆಂದರೂ ಅದು ಸಾಧ್ಯವಾಗುವುದಿಲ್ಲ. ಕೊನೆಯಲ್ಲಿ ಅನಿವಾರ್ಯವಾಗಿ ಕೈಲಾಗದ ಮುದುಕ ಮೂಲೆ ಹಿಡಿಯುವಂತೆ ತಾಳ ತಂಬೂರಿಯನ್ನು ಹಿಡಿದಿದ್ದಾನೆ. ಏಕೋ, ಏನೊ ಆತ ಕಾದಂಬರಿಯಲ್ಲಿ ಬಹುಪಾಲು ಜಾಗವನ್ನು ಆವರಿಸಿದ್ದರೂ ಕಾದಂಬರಿಯೊಳಗೆ ಗಣನೀಯ ಸ್ಥಾನವನ್ನು ಪಡೆದುಕೊಂಡಿದ್ದಾನೆ ಎನಿಸುವುದಿಲ್ಲ. ಬಹುಶಃ ಅವನದಲ್ಲದ ಕ್ರಿಯೆಯಿಂದ ಆತ ವರ್ತಿಸಿರುವುದೇ ಇದಕ್ಕೆ ಕಾರಣವಿದ್ದಿರಲೂ ಬಹುದು. ಅವನು ಕಾದಂಬರಿಗಾಗಿಯೇ ಹುಟ್ಟಿದ ಪಾತ್ರವಾಗಿ ಓದುಗನ ಹೃದಯವನ್ನು, ಕುರಿಕುಂಡಯ್ಯನ ರೀತಿಯಲ್ಲಾಗಲೀ, ಗುರುಸಂಜಯ್ಯನ ರೀತಿಯಲ್ಲಾಗಲಿ ಗೆದ್ದುಕೊಳ್ಳದೆ ಹೋಗುತ್ತಾನೆ. ಅವನ ಸನ್ಯಾಸ ದೀಕ್ಷೆ ಸಹ ಇದರಿಂದ ಅವನ ಒಂದು ತೀರ್ವ ಬದಲಾ

ವಣೆಯಾಗದೆ, ತಂಬೂರಿ ತಾಳ ಹಿಡಿದ ಚನ್ನನೇ, ಅಥವಾ ಒಂದು ಕಾಲದಲ್ಲಿ ಪೋಲಿ ಹೊಡೆದ, ಈಗ ವಯಸ್ಸಷ್ಟೇ ಆಗಿರುವ ಚನ್ನನಂತೆ ಕಾಣುತ್ತಾನೆ.

ನಾಗೇಗೌಡರಲ್ಲಿ ವಸ್ತುವಿನಷ್ಟೆ ಅಥವ ಅದಕ್ಕಿಂತ ಹೆಚ್ಚಾಗಿ ಭಾಷೆ ಮುನ್ನುಗ್ಗುತ್ತದೆ. ಜನಪದ ಭಾಷೆಗಾಗಿ ತಿಣುಕುವ ನವ್ಯರಿಗೆ ನಾಗೇಗೌಡರ ಭಾಷೆ ಇದ್ದಿದ್ದರೆ ಅದರ ಮಜವೇ ಬೇರೆಯಾಗುತ್ತಿತ್ತೇನೋ ಎನಿಸುತ್ತದೆ. ನಾಗೇಗೌಡರ ಪ್ರಮುಖ ಬಂಡವಾಳ ಈ ಭಾಷೆ. ಇದನ್ನು ಕೆಲವೊಮ್ಮೆ ಅವರು ಹೆಚ್ಚು ಪ್ರೊಡೇಕ್ಟೀವ್ ಮಾಡದೆ ದುಂದು ವೆಚ್ಚಕ್ಕೂ ಬಳಸುತ್ತಾರೆ ಎನಿಸದಿರದು. ಭಾಷೆ ವಸ್ತುವಿಗನುಗುಣವಾಗಿ ಕೆಲಸ ಮಾಡಬೇಕು. ಆಗ ವಸ್ತು ಮತ್ತು ವಸ್ತುವಿನ ಪರಿಸ್ಥಿತಿಯು ಭಾಷೆಗಿರುವ ಸಂಬಂಧ ಸಹಜವಾದುದಾಗಿರುತ್ತದೆ. ಈ ಕಾದಂಬರಿಯಲ್ಲಿ ಹಳ್ಳಿ ಹಾಡು ಮತ್ತು ಅಲ್ಲಿಯ ಜನಪದ ವಸ್ತುವಾಗಿರುವುದರಿಂದ ಕಾದಂಬರಿಕಾರರ ಭಾಷೆ ಸಹಜವಾಗಿ ಹೊಂದಿಕೊಳ್ಳುತ್ತದೆ. ಆದರೂ ಅವರು ಹೆಚ್ಚು ಭಾಷೆಯನ್ನು ಬಳಸಿದ್ದಾರೆ ಎನಿಸುತ್ತದೆ. ಅವರು ಬಳಸಿರುವ ಗಾದೆಗಳ ಸಂಖ್ಯೆಯನ್ನು ಗಮನಿಸಿದರೆ ಗಾದೆಗಳಿಂದಲೇ ಒಂದು ಕಾದಂಬರಿಯನ್ನು ಶ್ರೀ ನಾಗೇಗೌಡರು ಬರೆಯಬಲ್ಲರೇನೊ ಎನಿಸುತ್ತದೆ. ಈ ಗಾದೆಗಳ ಬಳಕೆ ಔಚಿತ್ಯವರಿತು ಸಾಗಿದೆ. ಗಾದೆಯ ಜೊತೆಯಲ್ಲಿ ಬರುವ ಜೀವನ ವಿಡಂಬನೆ ಸೊಗಸಾಗಿದೆ. ಗಾದೆ ನುಡಿಗಟ್ಟುಗಳಿಂದ ಕೂಡಿದ ಈ ಭಾಷೆ ದಟ್ಟವಾದುದು, ಸಹಜವಾದುದು. ಈ ಕಾದಂಬರಿಯನ್ನು ಎಷ್ಟು ಚೆನ್ನಾಗಿ ಬರೆದ್ದಾರೆ ಎಂದು ಒಬ್ಬ ಓದುಗ ಅಂದರೆ ಅದು ಭಾಷೆಯನ್ನು ಕುರಿತ ಅನುಭವ.

೧೫ | ಸೊನ್ನೆಯಿಂದ ಸೊನ್ನೆಗೆ–ಸೀಳು ನೋಟ

ನಂ. ತಪಸ್ವೀಕುಮಾರ್

ಇದು ನಾಗೇಗೌಡರ ಎರಡನೆಯ ಕಾದಂಬರಿ. ಕಥನ ಕ್ರಮ, ಸನ್ನಿವೇಶ ನಿರ್ಮಾಣ, ಶೈಲಿ ಹಾಗೂ ಒಟ್ಟು ಪರಿಣಾಮದ ದೃಷ್ಟಿಯಿಂದ ಶ್ರೀಯುತರ ನನ್ನೂರು, ದೊಡ್ಡಮನೆಗಳ ಸಾಲಿಗೆ ಸುಲಭವಾಗಿ ಸೇರಿಬಿಡುತ್ತದೆ. ನಾಗೇಗೌಡರು ತಮ್ಮ ಕಾದಂಬರಿಗಳಲ್ಲೆಲ್ಲ ಗತಿಸಿದ ಕೆಲವು ವ್ಯಕ್ತಿಗಳು ಮತ್ತು ಘಟನೆಗಳನ್ನು ಬಲ್ಲವರಿಂದ ಕೇಳಿ ತಿಳಿದು, ಅವುಗಳನ್ನು ಪುನರ್‌ಸೃಷ್ಟಿಸಿ, ಹೊಸ ವಾತಾವರಣ ಕಲ್ಪಿಸುವ ಕಲೆಯಲ್ಲಿ ಗಟ್ಟಿಗರೆನ್ನಿಸುತ್ತಾರೆ. ಆದರೂ ಕಥನತಂತ್ರವನ್ನು ಸೂಕ್ತವಾಗಿ ಬಳಸದೆ ಕಾದಂಬರಿಗಳನ್ನು ಸಪ್ಪೆಯಾಗಿಸುತ್ತಾರೆ.

'ಸೊನ್ನೆಯಿಂದ ಸೊನ್ನೆಗೆ' ಕಥೆಯ ಮುಖ್ಯ ಆಶಯ ಜನಪದ ಕಥೆಯ ಆಶಯಗಳನ್ನು ಅನಾಮತ್ತಾಗಿ ಹೋಲುತ್ತದೆ. ಮೂಲತಃ ಜನಪದ ಕಥೆಯಾಗಿದ್ದುದನ್ನೇ ಹಿಂಜಿ ಕಾದಂಬರಿ ಮಾಡಿದಂತಾಗಿದೆ. ಒಂದು ಜನಪದ ಕಥೆ ಕಾದಂಬರಿಯಾಗಬಾರದು ಎಂದಲ್ಲ. ಆದರೆ ಒಂದು ಉತ್ತಮ ಕಾದಂಬರಿ ಜನಪದ ಕಥೆಗಿಂತ ಬೇರೆಯೇ ಆಗಿರುತ್ತದೆ. ಈ ಕಾದಂಬರಿಯಲ್ಲಿ ಪ್ರಧಾನವಾಗಿರುವುದು ನಮ್ಮ ಜಾನಪದರ ಶಾಸ್ತ್ರ ಶಕುನಗಳ ನಂಬಿಕೆ ; ಕೆಟ್ಟವರಿಗೆ ಕೊನೆಗೂ ಕೆಟ್ಟದ್ದೇ ಆಗುತ್ತದೆ, ಒಳ್ಳೆಯವರಿಗೆ ಒಳ್ಳೆಯದಾಗುತ್ತದೆ ಎಂಬ ನೀತಿ. ಈಗ್ಗೆ ಎರಡು ಮೂರು ತಲೆ ಮಾರಿನ ಹಿಂದಿನವರು ಗ್ರಾಮಗಳಲ್ಲಿ ನೀತಿವಂತರಾಗಿ ಬದುಕುತ್ತಿದ್ದ ಹಿರಿಯ ಜೀವಿಗಳಾಗಿದ್ದರು. ಆದರೆ ಅವರ ಮೊಮ್ಮಕ್ಕಳ ಕಾಲಕ್ಕೆ ತರಲೆ ತಗಲೂಫಿತನ ಹೆಚ್ಚಿ ಇಡೀ ಗ್ರಾಮೀಣ ಪರಿಸರವೇ ಹದಗೆಟ್ಟು ಹೋಯಿತು, ಎಂಬ ನಿಲುವು. ವಾಸ್ತವವಾಗಿ ಒಳ್ಳೆಯವರಿಗೆ ಅನ್ಯಾಯ, ಅನಾಹುತಗಳು ಒದೆಗುವುದನ್ನೂ ಕೆಟ್ಟವರಿಗೇ ಅನುಕೂಲಗಳಾಗುವುದನ್ನೂ ಕಾಣುತ್ತೇವೆ. ಇಂಥ ವಾಸ್ತವತೆಯ ಹಿನ್ನೆಲೆಯಲ್ಲಿ ವಿವೇಚಿಸುವಾಗ ಇದೊಂದು ಆದರ್ಶ ಕಥೆ ಎನ್ನಿಸಿಬಿಟ್ಟು ಉದ್ದಿಷ್ಟ ಪರಿಣಾಮ ಸಾಧಿಸದೆ ಹೋಗುತ್ತದೆ. ಇದನ್ನು ಒಂದು ಕಾದಂಬರಿಯಾಗಿ ವಿಸ್ತರಿಸದೆ, ನೀಳ್ಗತೆಮಾಡಿ ಹೇಳಿದ್ದರೆ ಸಾಕಾಗುತ್ತಿತ್ತು ಎನ್ನಿಸುತ್ತದೆ.

ನಾಗೇಗೌಡರ ವಿಶಿಷ್ಟತೆ ಇರುವುದು ಅವರು ಕಟ್ಟಿಕೊಡುವ ಜನಪದ ಸಂಸ್ಕೃತಿಯ ಚಿತ್ರಣದಲ್ಲಿ. ತಾವು ಕಂಡುಂಡ ಗ್ರಾಮೀಣ ಬದುಕನ್ನು ಅತ್ಯಂತ ಲವಲವಿಕೆಯಿಂದ ರಸವತ್ತಾಗಿ ವರ್ಣಿಸುವ ಕಲೆ ಅವರಿಗೆ ಸಿದ್ಧಿಸಿದೆ. ನಿದರ್ಶನಕ್ಕೆ 'ಸೊನ್ನೆಯಿಂದ ಸೊನ್ನೆಗೆ'ಯಲ್ಲಿ ಬರುವ ಕುಂಡಪ್ಪನ ಬದುಕು, ಕಾದಂಬರಿಯ ನಾಯಕನ ವಿವಿಧ ಅವ

ಸ್ಥಾಂತರಗಳ ಚಿತ್ರಣ, ವಲ್ಲೇಗೌಡರ ಗುಣದೋಷ ನಿರೂಪಣೆ-ಇಂಥ ಪ್ರಸಂಗಗಳನ್ನು ನಾವು ಅನುಭವಿಸಬಹುದಾದಷ್ಟು ದಟ್ಟವಾಗಿ ಚಿತ್ರಿಸುತ್ತಾರೆ, ದೊಡ್ಡಮನೆಯ ಮೇಟಿಯಾಗಿದ್ದ ಗೌಡರ ಗುಣ ಸ್ವಭಾವಗಳೂ ಹೀಗೆಯೇ. ಇಂಥ ಕಡೆಗಳಲ್ಲಿ ಅವರು ಕುವೆಂಪು, ಕಾರಂತ ಮುಂತಾದ ಶ್ರೇಷ್ಠ ಕಾದಂಬರಿಕಾರರನ್ನು ಎಟುಕಿಸಿಕೊಳ್ಳಬಲ್ಲರು. ಜನಪದ ಜೀವನಾನುಭವ, ಆ ಸಂಸ್ಕೃತಿಯ ಅನಂತ ಮುಖಗಳ ನೇರ ಪರಿಚಯ ಗೌಡರಿಗಿದೆ, ಆದರೆ ಅವರ ಕಾದಂಬರಿಗಳು ಶ್ರೇಷ್ಠವೆನ್ನಿಸಿಕೊಳ್ಳುವುದಿಲ್ಲ. ಒಂದರಂತೆಯೇ ಮತ್ತೊಂದನ್ನು ಓದಿದಾಗಲೂ ಅನ್ನಿಸುತ್ತದೆ. ಹೀಗೇಕೆ ?

ಶ್ರೀಯುತರು ಕಥೆಯ ಬಗೆಗಿನ ಕುತೂಹಲವನ್ನು ಕೊನೆಯುವವರೆಗೂ ಕಾಯ್ದುಕೊಂಡು ಹೋಗುವಂತೆ ಮಾಡುವ ಕಥನ ತಂತ್ರದ ಬಗೆಗೆ, ಮತ್ತು ಕಥನ ಕ್ರಮದಲ್ಲಿ ನವೀನತೆಯನ್ನು ತಂದು ಕೊಳ್ಳಬೇಕಾದುದರ ಬಗೆಗೆ ಲಕ್ಷ್ಯಕೊಡಬೇಕಾಗಿದೆ. ಈಗಿರುವಂತೆ, ಕಾದಂಬರಿಯ ನಾಲ್ಕು ಪುಟಗಳನ್ನು ಓದುತ್ತಿದ್ದ ಹಾಗೆಯೇ ಮುಂದೇನಾಗುತ್ತದೆಂಬುದನ್ನು ಯಾರಾದರೂ ಊಹಿಸಿಬಿಡಬಹುದು. ವ್ಯಾಖ್ಯಾನಗಳನ್ನು ಕೈಬಿಟ್ಟು, ನಾಟಕೀಯತೆಯನ್ನು ಬೆಳೆಸುವುದು ಅಪೇಕ್ಷಣೀಯ, ಶೈಲಿಯ ಬದಲಾವಣೆ ಸಾಧುವಲ್ಲದ ಪ್ರಯೋಗ.

ನಾಗೇಗೌಡರು ಕಾದಂಬರಿಯನ್ನು ಅಧ್ಯಾಯಗಳಿಗೆ ತಕ್ಕ ಶೀರ್ಷಿಕೆಕೊಟ್ಟು ಬೆಳೆಸುವ ಕ್ರಮವನ್ನು ಪ್ರಕೃತ ಕಾದಂಬರಿಯಲ್ಲಿಯೂ ಮುಂದುವರಿಸಿದ್ದಾರೆ, ಅವುಗಳನ್ನು ಓದಿದಾಕ್ಷಣ ಕಥೆಯ ಜಾಡುಸಿಕ್ಕಿಬಿಡುತ್ತದೆ. ಮೈಲಾರದ ಮೂಲ ಪುರುಷರ ಚರಿತ್ರೆಯ ಮೂಲಕ ತೊಡಗುವ ಕಾದಂಬರಿ, ಊರದೇವರ ಒಕ್ಕಲಾಗದಿದ್ದ, ಊರಿನ ಹುಟ್ಟುಗಾರನಾಗದಿದ್ದ ಜಾಜಗಾರ ಚನ್ನಯ್ಯನ ದುರಾಸೆಯ ದುಷ್ಫಲವಾಗಿ ಶಾಪಕ್ಕೊಳಗಾಗಿ, ಆತನ ವಂಶವೇ ನಿರ್ನಾಮವಾಗುವುದರೊಂದಿಗೆ ಮುಗಿಯುತ್ತದೆ. ನಮ್ಮ ಜಾನಪದರಿಗೆ ದೈವಭಕ್ತಿ ಮತ್ತು ಗುರುಹಿರಿಯರಲ್ಲಿದ್ದ ನಂಬಿಕೆ, ಬದುಕಿನಲ್ಲಿ ನೇಮ ನಿಯತ್ತುಗಳೇ ಪರಮ ಪ್ರಧಾನವಾದಂಥವು ಎಂಬುದೇ ಕಾದಂಬರಿಯ ನೆಲೆಗಟ್ಟು. ಎಂತಲೇ ಗ್ರಾಮದ ಹಿರಿಯ ವ್ಯಕ್ತಿ ದೊಡ್ಡ ಕೆಂಚೇಗೌಡ ಕೊಟ್ಟಶಾಪ-'ದ್ಯಾವರ ಗಂಟು ತಿಂದೋಗ ಮನೆ ಎಕ್ಕುಟ್ಟೋಗ್ಲಿ ! ಅವನ ಮನೆ ಹಾಳಾಗೋಗ್ಲಿ'-ಕೊನೆಗೂ ದಿಟವಾಗಿ ಬಿಡುತ್ತದೆ. ಚನ್ನಯ್ಯನ ಕುಟುಂಬ ಸರ್ವಸ್ವವೂ ನಾಲ್ಕು ತಲೆಗಳವರೆಗೆ ನಾನಾ ಕೋಟಲೆ, ಅಪಮಾನಗಳಿಗೆ ಸಿಕ್ಕಿ ನವೆದು ನೊಂದು, ಕೊನೆಗೆ ದುರಂತದಲ್ಲಿ ಪರ್ಯವಸಾನವಾಗುತ್ತದೆ. ಮರುಭೂಮಿಯಲ್ಲಿನ ಓಯಸಿಸ್‌ನಂತೆ ತೋರುವ ಬದುಕೆಂದರೆ ತಿರುಕ ಚನ್ನ ಸದಾಚಾರದಿಂದ, ಹಿರಿಯರ ಆಶೀರ್ವಾದ ಬಲದಿಂದ, ಛಲವಹಿಸಿ ದುಡಿದಿದ್ದರ ಫಲವಾಗಿ, ಆತನಿಗೆ ತಕ್ಕಂತೆ ಸಿಕ್ಕಿದ್ದ ದೃಢವಂತೆ ಚೌಡಮ್ಮನ ಸಹಕಾರದ ಬೆಂಬಲದಿಂದ, ಎಲ್ಲಕ್ಕಿಂತ ಮಿಗಿಲಾಗಿ ಆತನ ಬಗೆಗೆ ಜೋಯಿಸರು ನುಡಿದಿದ್ದ ಭವಿಷ್ಯದ ಸತ್ಫಲಗಳ ಪ್ರಭಾವದಿಂದ ದಿನದಿನಕ್ಕೆ

ಅಭಿವೃದ್ಧಿ ಹೊಂದಿ, ಗ್ರಾಮದಲ್ಲಿ ಹೊಂದಾಣಿಕೆಯ ಶ್ರೀಮಂತ ಜೀವನ ನಡೆಸುವಾಗಿನ ಸ್ವಲ್ಪ ಕಾಲದ ಅವಧಿ. ಅದರದೂ ದುರಂತವೇ.

ನಮ್ಮ ಹಳ್ಳಿಗರ ಬದುಕಿನ ಇತಿಮಿತಿಗಳನ್ನು, ಆದರೆ ಅವರು ಸಮಯ ಸಂದರ್ಭ ಒದಗಿದಾಗ ಯಾವೆಲ್ಲ ತಂತ್ರ ಮಂತ್ರ ಹೂಡಿ, ಹೇಗೆ ನಾಗರಿಕರಾಗಿ ಬಾಳಲು ಹೆಣಗುತ್ತಾರೆ ಎಂಬುದನ್ನು ನಾಗೇಗೌಡರು ಸೊಗಸಾಗಿ ಚಿತ್ರಿಸುತ್ತಾರೆ. ನಾಗರಿಕತೆಯೊಂದಿಗೆ ಜೀವನ ನಿಷ್ಠೆ ಮತ್ತು ದಾನ, ಪ್ರಾಮಾಣಿಕತೆ ಗುರುಹಿರಿಯರಲ್ಲಿ ಭಕ್ತಿ ಮುಂತಾದ ಆದರ್ಶಗಳನ್ನು ನಮ್ಮ ಜನ ರೂಢಿಸಿಕೊಂಡರೆ ಇದ್ದುದರಲ್ಲಿಯೇ ಸಂತೃಪ್ತರಾಗಿರಬಹುದಲ್ಲ, ಎಂಬ ಸದಾಶಯ ಅವರದು. ಆದರೆ ವಾಸ್ತವವಾಗಿ ಜನಪದರೂ ಮನುಷ್ಯರೇ,ಅವಕಾಶ ಸಿಕ್ಕಿದರೆ ರಾಜರಾಗಿ, ಅರಮನೆಯ ಸುಖಭೋಗಗಳನ್ನು ಪಡೆಯಲು ಅವರಾರು ಹಿಂಜರಿಯುವವರಲ್ಲ ಎಂಬುದನ್ನು ನಿತ್ಯವೂ ಕಾಣುತ್ತೇವೆ. ನಾಗೇಗೌಡರೂ ಅಂಥ ಧೋರಣೆಯನ್ನು ಗುರುತಿಸಿದ್ದಾರೆ. ಆದರೂ ಜನಪದರು ಸಾಮಾನ್ಯವಾಗಿ ನೀತಿವಂತರೆಂಬ ನಂಬಿಕೆ ತಳೆದಿದ್ದಾರೆ. ತಿರುಕ ಚನ್ನ ಅದೃಷ್ಟದ ಬೆಂಬಲದಿಂದ ಐಶ್ವರ್ಯವಂತನಾಗಿ ಬದುಕುತ್ತಿದ್ದರು ನೀತಿ ನಿಯಮ, ಸದಾಚಾರನಿರತನಾಗಿರುವಷ್ಟು ಕಾಲವೂ ಏಳಿಗೆಯಾಯಿತು. ಪರಸ್ತ್ರೀ ಕಡೆಗೆ ಮನ ಹರಿಸಿದ ಮರುಕ್ಷಣವೆ ಅನಾಹುತಗಳೊದಗಿ, ಆತನ ಮನೆ ಹಾಳಾಯಿತು ; ಅದರಿಂದ ಜಿಗುಪ್ಸೆಗೊಂಡ ಸಾಹುಕಾರ ಚನ್ನೇಗೌಡ ಮುಂದಿನ ಜೀವನವನ್ನು ಸ್ವೇಚ್ಛಾಚಾರಿಯಾಗಿ ಕಳೆದು, ಜನಪದರ ಬಯ್ಗುಳಿಗೆ ಶಾಶ್ವತ ಮೂಲವೂ ನಿದರ್ಶನವೂ ಆಗಿಹೋದ, ಎಂಬುದಾಗಿ ವರ್ಣಿಸಿದ್ದಾರೆ.

'ಇಂಗಿದ್ದಿದ್ದು ಇಂಗೇ ಇರಾಕಿಲ್ಲ; ಕಾಲಾಂಚಿತ ಎಂತೆಂತೋರೊ ಆಂತ್ರಿಸಿ ಓಯ್ತಾರೆ' ಎಂದು ಮುಂತಾಗಿ ಜನ ಆಡಿಕೊಳ್ಳುವುದನ್ನು ಕೇಳುತ್ತೇವೆ. ಇಂಥ ಘಟನೆಗಳನ್ನು ಕಥೆ, ಕಾದಂಬರಿ ಮಾಡುವಾಗ ವಾಸ್ತವತೆಯ ಮೂಲವನ್ನಾಧರಿಸಿ ಕಲ್ಪನೆಯ ಬಳ್ಳಿ ಹಬ್ಬಿಸುವುದು ಜಾಣ್ಮೆ. ಇಲ್ಲದಿದ್ದರೆ ಅವು ಕೇವಲ ನೀತಿ ಕಥೆಗಳಾಗಿಬಿಡುತ್ತವೆ.

ಸೊನ್ನೆಯಿಂದ ಸೊನ್ನೆಗೆ ಸಾಗುವ ಚನ್ನಯ್ಯನ ಕುಟುಂಬದ ಚರಿತ್ರೆಯ ಕಥೆಯಲ್ಲಿ ಯಾರೂ, ಮರೆಯಲಾಗದಂಥ ದಾರುಣ ಹಾಗೂ ವಾಸ್ತವವೆನ್ನುವಷ್ಟರ ಮಟ್ಟಿನ ಪರಿಣಾಮಕಾರಿ ವ್ಯಕ್ತಿಚಿತ್ರಣಗಳ ಪೈಕಿ ಕುಂಡಪ್ಪನದು ಕರುಣೆ ಉಕ್ಕಿಸುವಂತಿದೆ. ತಿರುಕ ಚನ್ನ–ತಂಟರದಲೆ ಚೌಡಿಯರ ಹಿನ್ನೆಲೆಯ ಜೀವನ, ಅವರು ಮುಂದೆ ಕಂಡ ಅಷ್ಟೈಶ್ವರ್ಯ ಸಂತೃಪ್ತಿಗಳೂ ಹಾಗೆಯೇ. ನಿಷ್ಠಾವಂತರಾದ ಹೊಲೆಯರ ಕುಲವಾಡಿ ಹುಚ್ಚೀರಯ್ಯ, ಮಠದಯ್ಯ, ಮಲ್ಲೇಗೌಡ ಇಂಥವರದೊಂದು ಪಂಗಡವಾದರೆ, 'ತಲೆ ಕೆಳಕಿನ' ವ್ಯಕ್ತಿಗಳಾದ 'ದುಷ್ಟ ತ್ರಿಮೂರ್ತಿಗಳ' ತಂಡದ ದುರ್ವರ್ತನೆಯ ವರ್ಣನೆ ಮತ್ತೊಂದು ಬಗೆಯಲ್ಲಿ ಸೊಗಸಾಗಿದೆ. ಹೀಗೆ ವ್ಯಕ್ತಿ ಚಿತ್ರಣ, ಸನ್ನಿವೇಶ ನಿರ್ಮಾಣ ಸಹಜವೆನ್ನಿಸಿದರೂ ಒಟ್ಟು ಪರಿಣಾಮದಲ್ಲಿ ಒಂದು ಆದರ್ಶ ಕಥೆ ಎನ್ನಿಸಿ, ಹಳ್ಳಿಯ ಓದುಗರಿಗೆ ಇಷ್ಟವಾಗುವಂತಿದೆ ಈ ಕೃತಿ. ಆದರೆ ಅವರ ಕಥೆ ಅವರಿಗೆ ರುಚಿಸುವುದಿಲ್ಲ.

೧೬ | ನಾಗೇಗೌಡರ ಕಲಾವಿದ: ಭೈರವಿ ಕೆಂಪೇಗೌಡರು

ಸತ್ಯನಾರಾಯಣ

ಕಲಾವಿದನ ಜೀವನ ಸಾಮಾನ್ಯ ಜನರ ಜೀವನಕ್ಕಿಂತ ಭಿನ್ನವಾಗಿರುತ್ತದೆ. ವಿಶೇಷವಾದುದಾಗಿರುತ್ತದೆ ಎಂಬ ನಂಬಿಕೆ ಅಥವಾ ಅನುಭವ ಕನ್ನಡದಲ್ಲಿ ಕಲಾವಿದರನ್ನು ನಾಯಕರನ್ನಾಗಿ ಮಾಡಿಕೊಂಡು ರಚಿತವಾದ ಕಾದಂಬರಿಗಳು ಬಂದಿರಬಹುದು. ಒಬ್ಬ ಕಲಾವಿದನ ಸೃಜನಶೀಲ ಶಕ್ತಿ ಸಾಮಾನ್ಯ ಜನಕ್ಕಿಂತ ಅವನನ್ನು ಭಿನ್ನವಾಗಿಸುವುದು ಸಹಜ, ಏಕೆಂದರೆ ಸೃಜನಶೀಲ ವ್ಯಕ್ತಿ ತನ್ನ ಅನುಭವಗಳಿಗೆ ಇತರರಿಗಿಂತ ತ್ವರಿತವಾಗಿ, ತೀಕ್ಷ್ಣವಾಗಿ ಸ್ಪಂದಿಸುತ್ತಾನೆ. ಈ ಶಕ್ತಿ ಆತನನ್ನು ಇತರರಿಗಿಂತ ಭಿನ್ನವಾಗಿ ಚಿಂತಿಸಲೂ ನಡೆಯಲೂ ಕಾರಣವೂ ಆಗುತ್ತದೆ.

ಕನ್ನಡದಲ್ಲಿ ಕಲಾವಿದರನ್ನು ನಾಯಕರನ್ನಾಗಿ ಒಳಗೊಂಡ ಕಾದಂಬರಿಗಳು ಅದರ ಪ್ರಾರಂಭದ ದಿನಗಳಿಂದ ಇಂದಿನವರೆವಿಗೂ ರಚಿತವಾಗುತ್ತಾ ಬಂದಿವೆ. ನಾಗೇಗೌಡರ 'ಭೂಮಿಗೆ ಬಂದ ಗಂಧರ್ವ' ಈ ಸಂಪ್ರದಾಯದಲ್ಲಿ ಇತ್ತೀಚಿನದು. ಅದು ಸಂಗೀತಗಾರ ನೊಬ್ಬನನ್ನು ನಾಯಕನನ್ನಾಗಿ ಮಾಡಿಕೊಂಡಿದೆ. ಈ ದೃಷ್ಟಿಯಿಂದ ಕನ್ನಡದಲ್ಲಿ ಸಂಗೀತಗಾರರನ್ನು ನಾಯಕರನ್ನಾಗಿಟ್ಟುಕೊಂಡು ರಚಿತವಾದ, ಪ್ರಮುಖವೆನಿಸುವ ಕೆಲವು ಕಾದಂಬರಿಗಳನ್ನೂ ಇಲ್ಲಿ ಗಮನಿಸಲಾಗಿದೆ.

ಸಂಗೀತಗಾರನನ್ನು ಕುರಿತ ಪ್ರಥಮ ಕಾದಂಬರಿ ಮಾಸ್ತಿಯವರ 'ಸುಬ್ಬಣ್ಣ' ಮುಂದೆ ಸಂಗೀತಗಾರರನ್ನೇ ನಾಯಕರನ್ನಾಗಿಸಿ ರಚಿಸಿದ ಪ್ರಮುಖ ಕಾದಂಬರಿಕಾರರು ಅ. ನ. ಕೃ ಹಾಗೂ ತ. ರಾ. ಸು. ಅನಕೃ ಅವರ 'ಸಂಧ್ಯಾರಾಗ' 'ಮಿಯಾ ಮಲ್ಹಾರ್' ಹಾಗೂ ತ. ರಾ. ಸು ಅವರ 'ಹಂಸಗೀತೆ' ಕನ್ನಡ ಕಾದಂಬರಿ ಪ್ರಪಂಚದಲ್ಲಿ ಪ್ರಮುಖ ವೆನಿಸಿಕೊಂಡ ಕಾದಂಬರಿಗಳು. ಈ ಸಂಪ್ರದಾಯದಲ್ಲಿ ಮುಂದೆ ಮ. ನ. ಮೂರ್ತಿ ಕಾದಂಬರಿಗಳನ್ನು ರಚಿಸಿದರು. ಇತ್ತೀಚೆಗೆ ನಾಗೇಗೌಡರ ಕಾದಂಬರಿ ಬೆಳಕು ಕಂಡಿದೆ. ಈ ಕಾದಂಬರಿಗಳಲ್ಲಿ ಕೆಲವು ಕಾಲ್ಪನಿಕ ಮತ್ತೆ ಕೆಲವು ಚಾರಿತ್ರಿಕ. ಕಾಲ್ಪನಿಕದಲ್ಲಿ ಸಂಗೀತಗಾರನ ಜೀವನದ ರೇಖುಗಳನ್ನು ಬಿಡಿಸುವುದು ಉದ್ದೇಶವಾದರೆ ಚಾರಿತ್ರಿಕದಲ್ಲಿ ಸಂಗೀತದಲ್ಲಿ ಗಣನೀಯವೆನಿಸುವ ಸಾಧನೆ ಮಾಡಿದ ವ್ಯಕ್ತಿಯನ್ನು (ಈತ ಪ್ರಸಿದ್ಧನಿರ ಬಹುದು ಅಲ್ಲದಿರಬಹುದು) ಚಿತ್ರಿಸುವುದು ಉದ್ದೇಶವಾಗಿದೆ. ಮಾಸ್ತಿಯವರ 'ಸುಬ್ಬಣ್ಣ' ಜೀವಿಸಿದ್ದ ವ್ಯಕ್ತಿ. ಹಾಗೆಯೇ ತ. ರಾ. ಸು ರವರ ವೆಂಕಟಸುಬ್ಬಯ್ಯ ಮತ್ತು ನಾಗೇಗೌಡರ ಕೆಂಪೇಗೌಡರೂ ಜೀವಿಸಿದ್ದ ವ್ಯಕ್ತಿಗಳು. ಇದರಲ್ಲಿ ಮೂರನೆಯ

ವ್ಯಕ್ತಿಯಷ್ಟು ಉಳಿದಿಬ್ಬರು ಪ್ರಸಿದ್ಧರಲ್ಲ. ಅ. ನ. ಕೃ. ಅವರ ಇಬ್ಬರು ನಾಯಕರೂ ಕಾಲ್ಪನಿಕ ವ್ಯಕ್ತಿಗಳು. ಈ ಕಾದಂಬರಿಗಳನ್ನು ಓದಿದಾಗ ಕೆಲವೊಂದು ಸಾಮಾನ್ಯ ವೆನಿಸುವ ಸಂಗತಿಗಳು ಎಲ್ಲ ಕಾದಂಬರಿಗಳಲೂ ದೊರಕುತ್ತದೆ. ಇದಕ್ಕೆ ಮಾಸ್ತಿಯವರ 'ಸುಬ್ಬಣ್ಣ'ದ ಪ್ರಭಾವ ಉಳಿದ ಕಾದಂಬರಿಗಳ ಮೇಲೆ ಆಗಿರುವುದೂ ಕಾರಣವಿರ ಬಹುದು. ಚಾರಿತ್ರಿಕ ಸಂಗತಿಗಳಿಂದ ರೂಪಿತವಾದ ಕೆಂಪೇಗೌಡರ ಚಿತ್ರಣದಲ್ಲೂ ಈ ಅಂಶಗಳು ಕಾಣಬರುತ್ತವೆ. ಈ ಎಲ್ಲ ಕಾದಂಬರಿಗಳ ನಾಯಕರು ಚಿಕ್ಕಂದಿನಲ್ಲಿ ತಾವು ಕಲಿತ ಶ್ಲೋಕವನ್ನೋ ಹಾಡನ್ನೋ ರಾಗವಾಗಿ ಹಾಡುತ್ತಾರೆ. ಮಕ್ಕಳು ಸಂಗೀತ ಕಲಿಯುವುದು ಅವರ ಮನೆತನಕ್ಕೆ ವಿರುದ್ಧವಾಗಿರುತ್ತದೆ. ಅದಕ್ಕೆ ಪ್ರಾಯಶಃ ಹಿರಿಯರ ವಿರೋಧವೂ ಇರುತ್ತದೆ. ಮಾಸ್ತಿಯವರ ಸುಬ್ಬಣ್ಣ, ತ. ರಾ. ಸು. ಅವರ ವೆಂಕಟ ಸುಬ್ಬಯ್ಯ ವೈದಿಕ ಮನೆತನದಲ್ಲಿ ಹುಟ್ಟಿ ಸಂಸ್ಕೃತ ಕಲಿಯದೆ, ಸಂಗೀತ ಕಲಿಯುತ್ತಾರೆ, ಇದಕ್ಕೆ ಅವರ ಹಿರಿಯರ ವಿರೋಧವೂ ಇದೆ. ಅ. ನ. ಕೃ. ರವರ ಪೀರು ('ಮಿಯಾ ಮಲ್ಹಾರ್) ತನ್ನ ವಂಶವೃತ್ತಿಯಾದ ಜಟಕ ಹೊಡೆಯುವುದನ್ನು ಬಿಟ್ಟು ಸಂಗೀತ ಕಲಿಯುತ್ತಾನೆ. ಅವರ ತಂದೆ ಅದನ್ನು ವಿರೋಧಿಸುತ್ತಾನೆ, ನಾಗೇಗೌಡರ ಕೆಂಪುವಿನ ತಂದೆಗೆ ಆತ ಸಂಗೀತ ಕಲಿತರೆ ಗೌಡಿಕೆ ಮರೆಯುತ್ತಾನೆ, ಹಾದಿಗೆಡುತ್ತಾನೆ ಎಂಬುದರಿಂದ, ವಿರೋಧವಿದೆ. ಇದರಿಂದಾಗಿ ಈ ಕಾದಂಬರಿಗಳ ನಾಯಕರು ತಮ್ಮ ಹಿರಿಯರಿಗೆ ತಿಳಿಯದಂತೆ ಕದ್ದು ಸಂಗೀತ ಕಲಿಯುತ್ತಾರೆ. ಹಿರಿಯರ ಸಂಗೀತದ ಬಗೆಗಿನ ಅಸಡ್ಡೆಯ ಭಾವನೆ ಇದಕ್ಕೆ ಕಾರಣ ; ಸುಬ್ಬಣ್ಣನ ಹಿರಿಯರ ದೃಷ್ಟಿಯಲ್ಲಿ ಸಂಗೀತ 'ಸೂಳೆಯರು' ಕಲಿಯುವ ವಿದ್ಯೆಯಾದರೆ ಕೆಂಪುವಿನ ತಂದೆಯ ದೃಷ್ಟಿಯಲ್ಲಿನ ಅಸಡ್ಡೆಗೆ 'ಆ ಕಾಲದಲ್ಲಿ ಸಂಗೀತ ಸೂಳೆಯರ ಸೊತ್ತಾಗಿತ್ತು' ; ಹಾಗೂ 'ಸಂಗೀತ ಕಲಿತರೆ ಮಕ್ಕಳು ಸ್ವೇಚ್ಛೆಗೆ ಇಳಿಯುತ್ತಾರೆ' ಎಂಬ ಹೆದರಿಕೆ (ಭೂ. ಬಂ. ಗಂಧರ್ವ ಪು. 39) ಹೀಗಾಗಿ ಎಲ್ಲ ಸಂಗೀತಗಾರರೂ ಹೋರಾಟದಲ್ಲಿ ಸಂಗೀತ ಕಲಿಯುತ್ತಾರೆ.

ಸಂಗೀತವನ್ನು ಬಿಟ್ಟು ಜೀವಿಸುವುದು ಸಾಧ್ಯವಿಲ್ಲ ಎನ್ನುವುದು ಈ ಎಲ್ಲ ನಾಯಕರ ಸಾಮಾನ್ಯ ಗುಣವಾಗಿ ಕಾಣಬರುತ್ತದೆ. ತಂದೆಯ ಪೋಷಣೆ ಸಿಕ್ಕದಿದ್ದರೆ ಈ ನಾಯಕರು ಹಿರಿಯರಿಂದ ಮರೆಮಾಚಿ ಅಥವಾ ಓಡಿ ಹೋಗಿ ಸಂಗೀತ ಕಲಿಯು ತ್ತಾರೆ. ('ಸುಬ್ಬಣ್ಣ' 'ಮಿಯಾಮಲ್ಹಾರ್'ದ ಪೀರು, ಹಾಗೂ ನಾಗೇಗೌಡರ ಕೆಂಪು) ಈ ನಾಯಕರು ಸಂಗೀತ ಕಲಿಯಲು ಹೋರಾಟ ನಡೆಸಬೇಕಾಗುತ್ತದೆ. ಈ ಹೋರಾಟ ಹೆಚ್ಚು ವಿವರವಾಗಿ ಚಿತ್ರಿತವಾಗಿರುವುದು ತ. ರಾ. ಸು ಹಾಗೂ ನಾಗೇಗೌಡರ ಕಾದಂಬರಿ ಯಲ್ಲಿ. ನಾಗೇಗೌಡರ ಕಾದಂಬರಿಯ ನಾಯಕ ಕೆಂಪು ಉಳಿದ ಕಾದಂಬರಿ ನಾಯಕರು ಎದುರಿಸದ ಒಂದು ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಅದು : ಕೆಂಪು ಅಥವಾ ಕೆಂಪೇಗೌಡ ಶೂದ್ರನಾಗಿದ್ದು ಆತನ ಕಾಲದಲ್ಲಿ ಸಂಗೀತ ಕೇವಲ ಬ್ರಾಹ್ಮಣರ ಸ್ವತ್ತಾಗಿದ್ದುದು. ಉಳಿದ ನಾಯಕರಲ್ಲಿ, ಸುಬ್ಬಣ್ಣ, ಲಕ್ಷ್ಮಣ, ವೆಂಕಟ

ಸುಬ್ಬಯ್ಯ ಬ್ರಾಹ್ಮಣರಾಗಿದ್ದು ಅವರಿಗೆ ಸಂಗೀತ ಸುಲಭವಾಗಿ ಕಲಿಯಲು ಸಾಧ್ಯವಾಗುತ್ತದೆ. ಅ. ನ. ಕೃ. ರವರ ಹೀರು ಮುಸಲ್ಮಾನನಾದರೂ ಆತ ಹಿಂದೂಸ್ಥಾನಿ ಕಲಿತಿದ್ದುದರಿಂದಾಗಿ ಅದು ಅವನಿಗೆ ಸುಲಭವಾಗಿ ದಕ್ಕುತ್ತದೆ. ಆದರೆ ಕೆಂಪೇಗೌಡ ಪ್ರಾರಂಭದಿಂದಲೂ ಈ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಕೆಂಪುವಿನ ಪರವಾಗಿ ತಿಮ್ಮಪ್ಪಯ್ಯ ಎಂಬ ಸಂಗೀತಗಾರರನ್ನು ಕೇಳಹೋದ ಚನ್ನೇಗೌಡರಿಗೆ ಸಿಗುವ ಉತ್ತರ 'ಹಾರುವನ ಆರಂಭ ಶೂದ್ರನ ಸಂಗೀತ ಎರಡೂ ಒಂದೆ'............ 'ಸ್ವಧರ್ಮೇ ನಿಧನಂ ಶ್ರೇಯ : ಪರಧರ್ಮೋ ಭಯಾವಹ' : ಎಂದು ಕೇಳಿಲ್ಲವೇ ನೀನು ? ಅವರವರ ಕಸುಬು ಏನಿದೆಯೋ ಅದನ್ನು ಮಾಡಿಕೊಂಡು ಹೋಗಬೇಕಯ್ಯ' ಸಂಗೀತ ಕಲಿಯಲಷ್ಟೇ ಅಲ್ಲ ಮುಂದೆ ಸಂಗೀತವನ್ನು ಸಭೆಗಳಲ್ಲಿ ಹಾಡುವಾಗಲೂ ಈ ಟೀಕೆಗಳನ್ನು ಆತ ಎದುರಿಸುತ್ತಾನೆ. ಆದರೆ ಕೆಂಪೇಗೌಡರ ಕಂಠ ಹಾಗೂ ಹಾಡುಗಾರಿಕೆ ಇದನ್ನು ಮರೆಮಾಡಿಸುತ್ತದೆ. ಈ ಸಂಗೀತಗಾರರು ತಮ್ಮ ಹಾಡುಗಾರಿಕೆಯಿಂದಾಗಿ ಉಳಿದ ದೊಡ್ಡ ವಿದ್ವಾಂಸರನ್ನೆಲ್ಲಾ ಸೋಲಿಸುತ್ತಾರೆ. ಇದು 'ಸುಬ್ಬಣ್ಣ' ಹೊರತಾಗಿ ಉಳಿದೆಲ್ಲ ಕಾದಂಬರಿಗಳಲ್ಲಿ ಬರುತ್ತದೆ.

* * *

'ಭೂಮಿಗೆ ಬಂದ ಗಂಧರ್ವ'ದ ನಾಯಕ ಕೆಂಪೇಗೌಡನ ವ್ಯಕ್ತಿತ್ವದಲ್ಲಿ ಇರುವ ಮುಖ್ಯವಾದ ಅಂಶಗಳು ಮೂರು : ಶ್ರದ್ಧೆ, ಸಂಯಮ, ನಿರ್ಲಿಪ್ತತೆ. ಆತನ ಶ್ರದ್ಧೆ ಮೊದಲಿಂದ ಕೊನೆಯವರೆಗೂ ಕಾಣಬರುತ್ತದೆ. ಸುಬ್ರಮಣ್ಯಅಯ್ಯರ್ ಅವರ ಮನೆಯಲ್ಲಿ ದನಕಾಯ್ದು ಸಂಗೀತ ಕಲಿಯುವುದರಿಂದ ಪ್ರಾರಂಭವಾಗುವ ಈ ಶ್ರದ್ಧೆಯ ಗುಣ ಕಾದಂಬರಿಯ ಅಂತ್ಯದವರೆಗೂ ಮುಂದುವರೆದಿದೆ. ಬ್ರಹ್ಮಾನಂದ ಪರದೇಶಿಗಳಿಂದ ಸಂಗೀತ ಕಲಿಯಲು ಅವರಿಗೆ ಭಿಕ್ಷೆಯನ್ನು ಬೇಡಿ ತಂದು ಕೊಡುತ್ತಾನೆ. (ಸಂಗೀತಗಾರರೆಲ್ಲರಿಗೂ ಈ ಶ್ರದ್ಧೆಯ ಗುಣ ಮುಖ್ಯವಾದುದೆಂದೆನಿಸುತ್ತದೆ. ಕೆಂಪೇಗೌಡ ಬ್ರಹ್ಮಾನಂದ ಪರದೇಶಿಗಳ ಪ್ರಸಂಗದಂತಹ ಪ್ರಸಂಗವೇ 'ಹಂಸಗೀತೆ'ಯ ವೆಂಕಟಸುಬ್ಬಯ್ಯ ಹಾಗೂ ಸದಾನಂದ ಬೂವಾರರ ಸಂಬಂಧ ಚಿತ್ರಣದಲ್ಲಿ ಕಾಣುತ್ತೇವೆ) ಈ ಹಂತದಲ್ಲಿ ಪ್ರಾರಂಭವಾದ ಕೆಂಪೇಗೌಡರ ಹಾಗೂ ಮದ್ಯಪಾನದ ಸಂಬಂಧ ಕಾದಂಬರಿಯ ಅಂತ್ಯದವರೆಗೆ ಮುಂದುವರೆಯುತ್ತದೆ. ಆದರೆ, 'ಮಿಯಾಮಲ್ಹಾರ'ದ ಅಥವಾ 'ಹಂಸಗೀತೆ'ಯ ನಾಯಕರಂತೆ ವೇಶ್ಯೆಯರ ದಾಸನಾಗುವುದಿಲ್ಲ. ಇದಕ್ಕೆ ಹೆಂಡತಿಯ ಮೇಲೆ ಇದ್ದ ಶ್ರದ್ಧೆ ಮುಖ್ಯ 'ಚಿನ್ನಾ ನೀನೊಬ್ಬಳೇ ನನ್ನ ಪ್ರಾಣೇಶ್ವರಿ ಉಳಿದವರೆಲ್ಲ ಅಕ್ಕ ತಂಗಿಯರು' ಎಂದು ಹೆಂಡತಿ ಚಿನ್ನಮ್ಮಳಿಗೆ ಹೇಳಿದ ಮಾತನ್ನು ಆತ ಎಂದೂ ಮೀರುವುದಿಲ್ಲ. ಎಂತಹ ಸಂದರ್ಭದಲ್ಲೂ ಸಂಯಮದಿಂದ ವರ್ತಿಸುತ್ತಾರೆ. ನಾಗರತ್ನ ಹಾಗೂ ರಾಮನಾಡು ರಾಜರಾಜೇಶ್ವರಿಯರ ಪ್ರಸಂಗ ಇದಕ್ಕೆ ಆಧಾರ. ಅವರಿಗೆ ಮರುಳಾಗದೆ ಅವರನ್ನೇ ಪರಿವರ್ತಿಸುವ ಕೆಲಸದಲ್ಲಿ ತೊಡಗುತ್ತಾರೆ.

ಕೆಂಪೇಗೌಡರ ನಿರ್ಲಿಪ್ತತೆ ಮುಖ್ಯವಾಗಿ ಎರಡು ವಿಧದಲ್ಲಿ ಪ್ರಕಟವಾಗಿದೆ. ಕೀರ್ತಿಯ ಬಗೆಗೆ ತಳೆಯುವ ನಿರ್ಲಿಪ್ತತೆ ಮತ್ತೊಂದು ಐಶ್ವರ್ಯದ ಬಗೆಗಿನ ನಿರ್ಲಿಪ್ತತೆ. ಮೈಸೂರು ಸಂಸ್ಥಾನದ ಆಸ್ಥಾನದ ವಿದ್ವಾಂಸನಾಗಿ ಕೀರ್ತಿಗಳಿಸಬಹುದಾಗಿತ್ತಾದರೂ ಅದು ಬಂಧನವಾಗುತ್ತದೆಂದು ಬಿಟ್ಟು ಹೋಗುತ್ತಾರೆ. ಮತ್ತೆ ಎಲ್ಲಿಯೂ ಕೀರ್ತಿಗೆ ಆಸೆ ಪಡುವುದಿಲ್ಲ. ಹಾಗೆಯೇ ಅವರಿಗೆ ಬಂದ ಪದಕಗಳನ್ನು ಇತರರಿಗೆ ಹಂಚುತ್ತಾರೆ. ತಮಗೆ ಬಂದ ಹಣವನ್ನೆಲ್ಲಾ ಬಡವರಿಗೆ ದಾನಮಾಡುತ್ತಾರೆ.

* * *

ಮೇಲಿನ ಕಲ್ಪನೆಗಳಿಂದ ಕೆಂಪೇಗೌಡರ ಪಾತ್ರ ಉದಾತ್ತತೆಯ ಮಟ್ಟದಲ್ಲೇ ಕಾದಂಬರಿಯುದ್ದಕ್ಕೂ ಬೆಳೆದುಕೊಂಡು ಹೋಗುತ್ತದೆ. ಕೆಂಪೇಗೌಡರ ವ್ಯಕ್ತಿತ್ವ ಕಾದಂಬರಿಯಲ್ಲಿ ನಿರ್ಮಾಣಗೊಳ್ಳುವುದಿಲ್ಲ. ಅದು ಸಿದ್ಧವ್ಯಕ್ತಿತ್ವವಾಗಿಯೇ ರೂಪಿತ ವಾಗಿದೆ. ಇದಕ್ಕೆ ಲೇಖಕರಿಗೆ ಆ ಸಂಗೀತಗಾರನ ಮೇಲಿರುವ ಅಭಿಮಾನ ಕಾರಣ ವಾಗಿರಬಹುದು. ಕೆಂಪೇಗೌಡರು ಎದುರಿಸುವ ಸಂಗೀತಗಾರರು ತೀರಾ ಪ್ರಸಿದ್ಧ ರಾಗಿರುವುದಿಲ್ಲ. ಪ್ರಸಿದ್ಧರಾದ ವ್ಯಕ್ತಿಗಳು ವಾಸುದೇವಾಚಾರ್ಯ, ಶೇಷಣ್ಣ ಇತ್ಯಾದಿ ಅವರನ್ನು ದೊಡ್ಡವರೆಂದು ಒಪ್ಪಿಕೊಂಡು ಬಿಡುತ್ತಾರೆ. ಹೀಗಾಗಿ ಕೆಂಪೇಗೌಡರ ಸಂಗೀತದ ಒರೆಗಲ್ಲು ಕಾದಂಬರಿಯಲ್ಲಿ ಸಿದ್ಧವಾಗುವುದಿಲ್ಲ. ಹಾಗೆಯೇ ಇವರ ಸಂಗೀತ ಕೇಳಿದ ಸಂಗೀತಗಾರರೆಲ್ಲ–ತಾವೆಷ್ಟೆ ದೊಡ್ಡವರೆಂದುಕೊಂಡಿದ್ದರೂ–ಕೊನೆಯಲ್ಲಿ ಕೆಂಪೇಗೌಡರೇ ದೊಡ್ಡ ಸಂಗೀತಗಾರರೆಂದು ಒಪ್ಪಿ ಶರಣಾಗಿ ಬಿಡುತ್ತಾರೆ. ಇದರಿಂದಾಗಿ ಮನುಷ್ಯನಿಗೆ ಸಹಜವಾದ ಅಸೂಯೇ ಮರೆಯಾಗಿ ಎಲ್ಲಾ ಆದರ್ಶದಲ್ಲೇ ಮುಕ್ತಾಯ ವಾಗುತ್ತದೆ.

ಲೇಖಕರ ತಮ್ಮ ನಾಯಕನನ್ನು ಕುರಿತ ಈ ಅಭಿಮಾನ ಆತ ಪವಾಡಪುರುಷ ಎಂಬ ಮಟ್ಟಕ್ಕೂ ಏರಿಸುತ್ತದೆ. ದೇವಸ್ಥಾನದಲ್ಲಿ ತಂಬೂರಿ ತಾನೇತಾನಾಗಿ ನಾದ ಹೊಮ್ಮಿಸುವುದು, ಬಿ. ಪುಟ್ಟಸ್ವಾಮಯ್ಯನವರಿಗೆ ಪ್ರಭೆ ಕಾಣುವುದು ಅಪ್ಪಾಜಾ ಚಾರ್ಯರ ಮಗನಿಗೆ ಸಂಗೀತದಿಂದಲೇ ಖಾಯಿಲೆ ವಾಸಿಯಾಗುವುದು ಇತ್ಯಾದಿ ಪವಾಡಗಳು ಇಲ್ಲಿ ನಡೆಯುತ್ತವೆ. ಸಂಗೀತಗಾರರನ್ನು ನಾಯಕರನ್ನಾಗಿ ಹೊಂದಿದ ಈ ಮುಂಚೆ ಹೇಳಿರುವ ಇತರ ಕಾದಂಬರಿಗಳು ತಮ್ಮ ನಾಯಕರನ್ನು ಇಂಥ ಪವಾಡ ಪುರುಷರನ್ನಾಗಿಸಿಲ್ಲ. ನಾಗೇಗೌಡರ ಅಭಿಮಾನದಿಂದಾಗಿ ಕೆಂಪೇಗೌಡರ ಸಂಗೀತ–ಈ ಪವಾಡ ಪುರುಷರನಾದುದರಿಂದ–ದೇವರ ಕೊಡುಗೆ ಎಂಬ ಭಾವ ಹೊರಡುವುದೇ ಹೊರತು ಆತನ ಉಪಾಸನೆಯ ಫಲ ಎನಿಸದೇ ಹೋಗುವ ಸಾಧ್ಯತೆಯೂ ಇದೆ. ಹೀಗಾದಾಗ ಕೆಂಪೇಗೌಡರು ಅಲೌಕಿಕ ವ್ಯಕ್ತಿಯಾಗಿ ಉಳಿಯುತ್ತಾರೆ. ಆತ ಭೂಮಿ ಯಲ್ಲೇ ಹುಟ್ಟಿ ಬೆಳೆದು ಇಲ್ಲಿನ ಸಂಘರ್ಷದಲ್ಲಿ ಸಿಲುಕಿ ತನ್ನ ಶ್ರಮದ ಮೂಲಕ

ಸಂಗೀತಗಾರನಾದ ಭೂಮಿಯ ಗಂಧರ್ವನಾಗದೆ ದೇವಲೋಕದಲ್ಲೇ ಎಲ್ಲವನ್ನೂ ಪಡೆದುಕೊಂಡು ಬಂದು ಅದನ್ನು ಇಲ್ಲಿ ಚಿತ್ರಿಸುವ ದೇವಲೋಕದ ಗಂಧರ್ವನಾಗುತ್ತಾನೆ. ಇಲ್ಲಿನ ಮಣ್ಣಿಗೆ ದೂರದವನಾಗುತ್ತಾನೆ.

*   *   *

'ಸುಬ್ಬಣ್ಣ' ಹಾಗೂ 'ಹಂಸಗೀತೆ' ಇವೆರಡು ಕಾದಂಬರಿಗಳಲ್ಲಿ ಅದರದೇ ಆದ ತಂತ್ರವಿದೆ. ಸುಬ್ಬಣ್ಣದಲ್ಲಿ ನಾಯಕನಿಂದ ವಿಷಯ ಸಂಗ್ರಹಣೆ ಮಾಡಿದ ವ್ಯಕ್ತಿ ತನ್ನ ಅನುಭವದ ವಿವರಗಳನ್ನು ಮಾತ್ರ ನೀಡುತ್ತಾ, ಉಳಿದುದನ್ನು ಓದುಗರ ಅವಗಾಹನೆಗೆ ಬಿಡುತ್ತಾ ಹೋಗುವ ರೀತಿಯ ತಂತ್ರವಿದೆ. ಜೀವಂತವಾಗಿದ್ದ ವ್ಯಕ್ತಿಯ ಬಗೆಗೆ ತಿಳಿದ ವಿವರಗಳನ್ನು ಅದರ ಪಕ್ಕತನದಲ್ಲಿ ನೀಡುವುದು ಇಲ್ಲಿಯ ತಂತ್ರ, ಹಾಗೆಯೇ, ತ. ರಾ. ಸು. ರವರ ಹಂಸಗೀತೆಯೂ ಒಬ್ಬ ಚಾರಿತ್ರಿಕ ವ್ಯಕ್ತಿಯ ಚಿತ್ರಣವಾಗಿರುವುದರಿಂದ ಅಲ್ಲಿ ಕಾದಂಬರಿಕಾರರು ಅನ್ವೇಷಕನ ನಿಲುವಿನಲ್ಲಿಯೇ ಹೊರಡುತ್ತಾರೆ. ತಮ್ಮ ನಾಯಕನಿಗೆ ಸಂಬಂಧ ಪಟ್ಟವರಿಂದ ವಿಷಯ ಸಂಗ್ರಹಣೆಮಾಡುತ್ತಲೆ ಒಂದೊಂದು ವಿವರಗಳಿಗೂ ಸಂಬಂಧ ಕಲ್ಪಿಸುವುದು ಅಲ್ಲಿಯ ರೀತಿ. ಆದರೆ ಈ ತಂತ್ರವನ್ನು ಬಿಟ್ಟು ಪ್ರಥಮಪುರುಷ ಸರ್ವವ್ಯಾಪಿ ದೃಷ್ಟಿ ಕೋನದಲ್ಲಿ ರಚಿತವಾದ ಕಾದಂಬರಿ ನಾಗೇಗೌಡರದು. ಇದರಿಂದಾಗಿ ಮೇಲಿನ ಎರಡೂ ಕಾದಂಬರಿಗಳಲ್ಲಿ ಇಲ್ಲದ ಒಂದು ಅವಕಾಶ ಇಲ್ಲಿದೆ. ಜೀವನವನ್ನು ಅದರೆಲ್ಲ ಸಂಶ್ಲೇಷತೆಯೊಂದಿಗೆ ಇಲ್ಲಿ ಬಿಡಿಸಿಕೊಂಡು ಹೋಗಬಹುದಾದ ಸಾಧ್ಯತೆಯಿದೆ. ಆದರೆ ನಾಗೇಗೌಡರು ತಮಗೆ ಕೆಂಪೇಗೌಡರ ಜೀವನದ ಬಗೆಗೆ ಸಿಕ್ಕ ವಿವರಗಳನ್ನು ಬದಲಾಯಿಸದೆ ಇಟ್ಟಿದ್ದಾರೆ. 'ನಾನು ಸಂಗ್ರಹಿಸಿದ ಮಾಹಿತಿಯನ್ನು ಅನುಸರಿಸಿಯೇ ಗೌಡರ ಸತ್ಯಕತೆಯನ್ನು ನಿರೂಪಿಸಿದ್ದೇನೆ. ಸಾಹಿತಿಗೆ ಕಾದಂಬರಿಯನ್ನು ತನ್ನ ಇಷ್ಟಬಂದಂತೆ ಒಗ್ಗಿಸುವ ಸ್ವಾತಂತ್ರ್ಯವಿದ್ದರೂ ಹಾಗೆ ಮಾಡದೆ ನೈಜ ಚಿತ್ರಣವನ್ನೇ ನೀಡಿ ಗೌಡರ ವ್ಯಕ್ತಿತ್ವಕ್ಕೆ ಅಪಚಾರವಾಗದಂತೆ ಎಚ್ಚರಿಕೆ ವಹಿಸಿ ಕಾದಂಬರಿಯ ರಸವಂತಿಕೆಗಾಗಿ ಅಲ್ಲಿ ಇಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುತ್ತೇನೆ' (—ಎಚ್, ಎಲ್. ನಾಗೇಗೌಡ: 'ಮುನ್ನುಡಿ') ಈ ದೃಷ್ಟಿಯನ್ನು ಲೇಖಕರು ಹೊಂದಿರುವುದರಿಂದ ಚಾರಿತ್ರಿಕ ಅಂಶಗಳು ಇಲ್ಲಿ ಪ್ರಾಮುಖ್ಯತೆ ಪಡೆಯುತ್ತವೆ. ಕೆಂಪೇಗೌಡರ 'ಗಂಧರ್ವಗಾನ'ವನ್ನು ಓದುಗರಿಗೆ ಮನ ಮುಟ್ಟುವಂತೆ ಮಾಡುವ ಹಾಗೂ ಅವರೊಂದಿಗೆ ಅಪೂರ್ವವೆನಿಸುವ ಅವರ ವ್ಯಕ್ತಿತ್ವವನ್ನುನೀಡುವ ಕೆಲಸ ಇಲ್ಲಿ ಮಾಡಲಾಗಿದೆ. ಇದರಿಂದಾಗಿ ಲೇಖಕರು ತಮಗೆ ಸಿಕ್ಕ ಸಂಗತಿಗಳನ್ನೆಲ್ಲಾ ಉಪಯೋಗಿಸಿ ಕೆಂಪೇಗೌಡರ ವ್ಯಕ್ತಿತ್ವವನ್ನು ನಿರ್ಮಾಣಮಾಡುವ ಕಡೆಗೆ ಹೆಚ್ಚು ದೃಷ್ಟಿ ಇತ್ತಿದ್ದಾರೆ. ಇದರಿಂದ ಕಾದಂಬರಿಯಲ್ಲಿ ತಿರುತಿರುಗಿ ಬರುವ ಕೆಲವು ಸಂಗತಿಗಳನ್ನು ಕಾಣಬಹುದು. ಗೌಡರ ದಾನಶೀಲತೆ ಇದರಲ್ಲಿ ಮುಖ್ಯವಾದುದು. ಸಂಗೀತದಿಂದ ಬಂದ ಹಣವನ್ನಾಗಲೀ, ಬಂದ ಪ್ರಶಸ್ತಿರೂಪದ ಆಭರಣಗಳನ್ನಾಗಲೀ ಅವರು ಮತ್ತೊಬ್ಬರಿಗೆ ಧಾರೆಯೆರೆದ

ಸಂದರ್ಭಗಳು ಹಲವು ಬರುತ್ತವೆ. ನೂರು ರೂಪಾಯಿ ನೋಟನ್ನು ಭಿಕ್ಷುಕನಿಗೆ ಕೊಡುವುದು, (ಪುಟ : 282) ಬಾಳೆಹಣ್ಣು ಕೊಂಡು ರೂಪಾಯಿ ಕೊಟ್ಟ ಚಿಲ್ಲರೆಯನ್ನು ಅವನಿಗೇ ಬಿಡುವುದು (ಪುಟ 298) ಇದಕ್ಕೆ ಒಂದು ಉದಾಹರಣೆ. ಇವೆರಡೂ ಒಂದೇ ತೆರನಾದ ಸಂಗತಿಗಳು, ಆದರೆ ಗೌಡರ ವ್ಯಕ್ತಿತ್ವವನ್ನು ಓದುಗರ ಮನಸ್ಸಿನಲ್ಲಿ ಒತ್ತಿ ನಿಲ್ಲಿಸಲು ಈ ಸಂಗತಿಗಳು ತಿರುತಿರುಗಿ ಬರುವಂತೆ ಕಾಣುತ್ತವೆ. ಹಾಗೆಯೇ ಭೈರವಿ ರಾಗವನ್ನು ಒತ್ತೆಯಿಡುವ ಪ್ರಸಂಗವೂ ಸಹ. ಇನ್ನೊಬ್ಬರ ಮನೆಯ ಹೆಣ್ಣುಮಗಳ ಮದುವೆಗೆ ಹಣವಿಲ್ಲ ಎಂದು ತಿಳಿದಾಗ ತಮಗೆ ಪ್ರಸಿದ್ಧಿ ತಂದಿರುವ, ತುಂಬಾ ಮೆಚ್ಚುಗೆಯ ರಾಗವನ್ನು ಹಿಂದು ಮುಂದು ನೋಡದೆ ಒತ್ತೆಯಿಡುತ್ತಾರೆ. ಆದರೆ, ಈ ಒತ್ತೆ ಇಡಿಸಿಕೊಂಡ ರಾಮಸ್ವಾಮಿ ನಾಗಕರಿಗೆ ಅದರಿಂದ ಆಗುವ ಲಾಭ ತಿಳಿದು ಬರುವುದಿಲ್ಲ. ಈ ಪ್ರಸಂಗ ಗೌಡರ ವ್ಯಕ್ತಿತ್ವವನ್ನು ಉದಾತ್ತೀಕರಿಸಲೇ ಬಂದಂತೆ ಕಾಣಬರುತ್ತದೆ. ಇದೇ ರೀತಿಯ ರಾಗವನ್ನೂ ಒತ್ತೆಯಿಡುವ ಪ್ರಸಂಗ 'ಹಂಸಗೀತೆ'ಯಲ್ಲಿ ಬರುತ್ತದೆ ಅಲ್ಲಿ ಆತ ತನ್ನ ವೇಶ್ಯೆಗೆ ಹಣ ನೀಡಬೇಕಾಗುತ್ತದೆ. ಹಂಸಗೀತೆ ವೆಂಕಟಸುಬ್ಬಯ್ಯನ ವ್ಯಕ್ತಿತ್ವದಲ್ಲಿ ಹಠ, ಸ್ವಾಭಿಮಾನ, ನ್ಯಾಯನಿಷ್ಠುರ ಪ್ರವೃತ್ತಿ, ದುಡುಕುತನ ಇವು ಮುಖ್ಯವಾದವು. ಸಾಮಾನ್ಯಮಾನವ ಭಾವಗಳಿಗೆ ಸಮನಾಗಿ ಆತನ ನಡವಳಿಕೆಯಿದೆ. ಅದರಂತೆ ಆತ ರಾಗ ಒತ್ತೆಯಿಡುತ್ತಾನೆ. ಆದರೆ ಇಲ್ಲಿ ಕೆಂಪೇಗೌಡರ ವ್ಯಕ್ತಿತ್ವ ಮಾನವರಲ್ಲೇ ಅಪೂರ್ವವಾದುದಾದುದರಿಂದ ಆತನ ದಾನಶೀಲತೆಗೆ ಒಂದು ಉದಾಹರಣೆಯಾಗಿ ಇದು ಬಂದಿದೆ. ಇದರಂತೆಯೇ ತನ್ನ ಮಕ್ಕಳು ಮದುವೆಗೆ ಇದ್ದರೂ ಆತ ಮನೆಪಾಲು ಮಾಡಿದಾಗ ತನ್ನ ಪಾಲಿಗೆ ಬಂದ ಚರವಸ್ತುಗಳನ್ನು ತಂಗಿಯರಿಗೆ ನೀಡುತ್ತಾನೆ. ಈ ಎರಡೂ ಸಂದರ್ಭಗಳೂ ಒಂದೇ ಆವರಣವನ್ನು ಸೃಷ್ಟಿಸುತ್ತವೆ.

ಚಾರಿತ್ರಿಕ ವಸ್ತುವನ್ನು ಕಾದಂಬರಿಗೆ ಆರಿಸಿರುವುದರಿಂದಾಗಿ ಇಲ್ಲಿ ಹಲವು ಪಾತ್ರಗಳು ಕಾದಂಬರಿಗೆ ಅನಿವಾರ್ಯವಾಗಿಲ್ಲದಿದ್ದರೂ ಬರುತ್ತವೆ. ಆದರೆ, ಈ ಪಾತ್ರಗಳು ಚರಿತ್ರೆಯಲ್ಲಿ ಪ್ರಸಿದ್ಧ ಹೊಂದಿದ ಪಾತ್ರಗಳು. ಇವುಗಳಿಗೆ ಸ್ವತಂತ್ರ ಅಸ್ತಿತ್ವ ಕಾದಂಬರಿಯಲ್ಲಿ ಇಲ್ಲ. ಉದಾಹರಣೆಗೆ. ಬಿ. ಪುಟ್ಟಸ್ವಾಮಯ್ಯ, ವೀರಣ್ಣ ಗೌಡ, ಡಿ. ಜಿ. ಈ ಮುಂತಾದ ಪಾತ್ರಗಳು ಕಾದಂಬರಿಯಲ್ಲಿ ಕೇವಲ ಒಂದು ಕ್ಷಣ ಹಾದು ಹೋಗುವ ಪಾತ್ರಗಳಾಗಿ ಮಾತ್ರ ಇವೆ. ಇದರಿಂದಾಗಿ ಕಾದಂಬರಿ ಚಾರಿತ್ರಿಕ ವಾಗಿ ಪ್ರಧಾನವಾಗಿ ನಿಲ್ಲುತ್ತದೆ. ನಾಗೇಗೌಡರ ಚಿತ್ರವನ್ನು ಅಚ್ಚೊತ್ತಿದಂತೆ ನೀಡಬೇಕೆನ್ನುವ ಲೇಖಕರ ಉದ್ದೇಶ ಇಲ್ಲಿ ಬಹಳ ಮಟ್ಟಿಗೆ ಸಫಲವಾಗಿದೆ. ಇದರಿಂದಾಗಿಯೇ ಕಾದಂಬರಿ ವಿವರಗಳಲ್ಲಿ ಹರಡಿಕೊಂಡು ಬಿಟ್ಟಿದೆ.

* * *

ಕನ್ನಡದಲ್ಲಿ ಬಂದ ಸಂಗೀತಗಾರರನ್ನು ಕುರಿತ ಕಾದಂಬರಿಗಳಲ್ಲಿ ನಾಗೇಗೌಡರದು

ಇತರ ಎಲ್ಲ ಕಾದಂಬರಿಗಳಿಂದ ಭಿನ್ನವಾಗಿ ನಿಲ್ಲುತ್ತದೆ. ಚಾರಿತ್ರಿಕ ವ್ಯಕ್ತಿ, ಅದೂ ಸಾಕಷ್ಟು ಸಮಕಾಲೀನನಾದವರ ಚರಿತ್ರೆ ನೀಡುವಾಗ, ಪಡೆದ ವಾಸ್ತವಾಂಶಗಳನ್ನು ತಮಗೆ ತಿಳಿದ ಆ ವ್ಯಕ್ತಿತ್ವವನ್ನೂ ಅದಕ್ಕೆ ಕುಂದು ಒರದಂತೆ ನಾಗೇಗೌಡರು ಇಟ್ಟಿದ್ದಾರೆ ಜೊತೆಗೆ ಆ ವ್ಯಕ್ತಿಯ ಬಗೆಗೆ ವಿವರ ದೊರಕಿಸುವಾಗಲೇ ಮಾಡಿರಬಹುದಾದ ಅಭಿಮಾನ ಇಲ್ಲಿನ ಚಿತ್ರವನ್ನು ಉದಾತ್ತೀಕರಿಸಿದೆ.

೧೭ | ## ಭೂಮಿಗಿಳಿದ ಗಂಧರ್ವ

ಜಿ. ಬ್ರಹ್ಮಪ್ಪ

ಶ್ರೀ ಎಚ್. ಎಲ್. ನಾಗೇಗೌಡರು ಬರೆದಿರುವ ಈ ಕಾದಂಬರಿ ಕನ್ನಡದಲ್ಲಿ ಸಂಗೀತೋಪಾಸಕರನ್ನು ಕುರಿತು ಬರೆದಿರುವ ಕಾದಂಬರಿಗಳಲ್ಲಿ ವಿಸ್ತಾರವಾದುದೂ ವೈವಿಧ್ಯಮಯವಾದುದೂ ಆಗಿದೆ. ಅಡಿಯಿಂದ ಮುಡಿತನಕ ಅರಳಿದ ಹೂಗೊಂಚಲು ಗಳಿಂದ ಕಂಗೊಳಿಸುವ ಮಲ್ಲಿಕಾ ಲತೆಯಂತೆ ಈ ಕೃತಿ ಮನೋಹರವಾಗಿದೆ. ಎಲ್ಲಿ ನೋಡಿದರೂ ಸುಮಸುಮ, ಎಲ್ಲಿ ಮೂಸಿದರೂ ಗಮಗಮ! ನಾದಮಯವೂ ಕಾವ್ಯ ಮಯವೂ ಆದ ಈ ಕೃತಿ ಕನ್ನಡ ಕಾದಂಬರಿ ಲೋಕದ ಧ್ರುವತಾರೆಯಾಗಿ ವಿರಾಜಿಸುತ್ತಿದೆ. ಮಹಾಸಾಧನೆ, ಮಹಾಸಿದ್ಧಿ ಮತ್ತು ಮಹಾಪ್ರಸಿದ್ಧಿಗಳಿಂದ ಕೆಂಪೇಗೌಡರ ಜೀವನವು ಕನ್ನಡದ ಹೂದೋಟದಲ್ಲಿ ದವನವಾಗಿ ಬುಡದಿಂಡ ಸುಳಿಯುತನಕ ನರುಗಂಪನ್ನು ಬೀರುವುದು. ನಾನಾ ರಾಗಗಳ ಇಂಪನ್ನೂ ಪೆಂಪನ್ನೂ ಲೇಖಕರು ಓದುಗರ ಮನಮುಟ್ಟುವಂತೆ ಕಾವ್ಯಮಯವಾದ ಶೈಲಿಯಲ್ಲಿ ಬಣ್ಣಿಸಿರುವರು. ಸಂಗೀತದ ಸೊಬಗನ್ನು ಮತ್ತೆ ಮತ್ತೆ ವಿವರಿಸುವಾಗ ಕೆಲವೊಮ್ಮೆ ಪುನರಾವರ್ತನೆಯಾಗಿರುವುದು ದಿಟವಾದರೂ ಕಾದಂಬರಿ ಯಾವ ಭಾಗದಲ್ಲೂ ನೀರಸವಾಗಿಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆನು.

ಕೆಂಪೇಗೌಡರ ಬಾಲ್ಯವೆಲ್ಲ ಅವರ ಆಶೆ ಆಕಾಂಕ್ಷೆಗಳಿಗೆ ತಣ್ಣೀರು ಎರಚುವ, ಅಡ್ಡಿ ಆತಂಕಗಳ ಆಗರವಾಗಿರುವುದನ್ನು ಲೇಖಕರು ಓದುಗರ ಕರುಳು ಮಿಡಿಯುವಂತೆ ವಿವರಿಸಿರುವರು. ಗಾನಲೋಲನಾಗಲು ಹಾತೊರೆಯುತ್ತಿದ್ದ ಕೆಂಪೇಗೌಡರ ಗೀಳನ್ನು ಇವರ ಅಜ್ಜಿಯು 'ಗಾಳಿ' ಎಂದು ಭ್ರಮಿಸಿ ಅದನ್ನು ಬಿಡಿಸಲು ಪೂಜೆ ಪುನಸ್ಕಾರಗಳ ಮರೆ ಹೊಗುವಳು. ಗೌಡರ ತಂದೆ ಸಂಗೀತವನ್ನು ಸೂಳೆಯರ ಕಲೆಯೆಂದು ತುಚ್ಛವಾಗಿ ಕಾಣುವನು. ಬಾಲ್ಯದಲ್ಲಿ ಗೌಡರ ಇಂಪಾದ ಕಂಠವನ್ನು ಕಂಡು ಪುಟ್ಟಣ್ಣಗೌಡರೂ ಚನ್ನೇಗೌಡರು ಮೈಸೂರಿನ ಆಸ್ಥಾನದ ಸಂಗೀತಗಾರ ತಿಮ್ಮಪ್ಪಯ್ಯನವರ ಬಳಿ ಬಾಲಕನಿಗೆ ಸಂಗೀತ ಕಲಿಸುವ ಪ್ರಯತ್ನ ಮಾಡಿದರಾದರೂ ತಿಮ್ಮಪ್ಪಯ್ಯ ಶೂದ್ರರಿಗೆ ಸಂಗೀತ ಒಲಿಯದು ಎಂದು ಹೇಳಿ ನಿರಾಕರಿಸುವ ಸಂದರ್ಭವನ್ನು ಕಾದಂಬರಿಕಾರರು ಮಾರ್ಮಿಕವಾಗಿ ವಿವರಿಸಿರುವರು.

ಗೌಡರ ಅಜ್ಜ ಸಹೃದಯರಾಗಿದ್ದರು. ಮೊಮ್ಮಗನ ಹಂಬಲಕ್ಕೆ ಬೆಂಬಲವಾಗಿ ಗೌಡರನ್ನು ಮುಂಡೆಭಾಗವತರ ಬಳಿ ಬಿಟ್ಟು ಪಾಠ ಹೇಳಿಸಿದನು. ಸಾಯುವಾಗ

ಮೊಮ್ಮಗನಿಗೆ ಹತ್ತು ಸಹಸ್ರ ರೂಗಳನ್ನು ಕೊಟ್ಟು ಸಂಗೀತ ಕಲಿಯುವಂತೆ ಪ್ರೇರೇಪಿಸಿ ಸತ್ತನು. ಗೌಡರು ತಿರುವಯ್ಯಾರಿಗೆ ಬಂದರು. ತ್ಯಾಗರಾಜೋತ್ಸವದಲ್ಲಿ ಹಾಡಿದ ಸಂಗೀತಗಾರರಲ್ಲಿ ಸುಬ್ರಮಣ್ಯಯ್ಯರನ್ನು ಗುರುವೆಂದು ತೀರ್ಮಾನಿಸಿಕೊಂಡರು. ಅವರ ಸನ್ನಿಧಿಯನ್ನು ಪಡೆಯಲು ಇವರು ಪಟ್ಟ ಪಾಡು ಅಷ್ಟಿಷ್ಟೆ ? ಅವರ ಮನೆಯದನಗಾಹಿಯಾಗಿ ಸೇರಿದರು. ಮೈಯೆಲ್ಲ ಕಿವಿಯಾಗಿ ಬಾಳಿದನು. ಅಯ್ಯರ್ ವಿದ್ಯಾರ್ಥಿಗಳಿಗೆ ಹೇಳುವ ಪಾಠವನ್ನು ಆಲಿಸಿ ಆಲಿಸಿ ಗೌಡರು ಸಂಗೀತ ಪಾರಂಗತರಾದುದನ್ನು ಲೇಖಕರು ಮನಮುಟ್ಟುವಂತೆ ವಿವರಿಸಿರುವರು. ಕೊನೆಗೆ ಗುರುವಿನ ಅನುಗ್ರಹ ಪಡೆದು ಅವರ ಮನವನ್ನು ಗೌಡರು ತಮ್ಮ ವಿನಯದಿಂದಲೂ, ನಿಷ್ಠೆಯಿಂದಲೂ ಒಲಿಸಿಕೊಂಡು ಅವರ ಸಂಗೀತಕಲೆಯನ್ನು ಇವರು ಕರತಲಾಮಾಡಿಕೊಂಡರು. ಅಜ್ಜ ತಮಗೆ ಕೊಟ್ಟಿದ್ದ ಹತ್ತು ಸಹಸ್ರ ರೂಗಳನ್ನೂ ಎರಡು ಸಂದರ್ಭದಲ್ಲಿ ಗುರುಕಾಣಿಕೆಯಾಗಿ ಅರ್ಪಿಸಿ ಗೌಡರು ಕೃತಾರ್ಥರಾದರು. ಭಕ್ತಿಯಿಂದ ಗುರುಹಿರಿಯರ ಮುಂದೆ ಬಾಗಿ ಗೌಡರು ಶಕ್ತಿ ಸಂಪನ್ನರಾದುದನ್ನು ಕಾದಂಬರಿಕಾರರು ಸಹಜವಾಗಿ ವಿವರಿಸಿರುವರು, ಗೌಡರ ಸಾಧನೆಯನ್ನು ಲೇಖಕರು ಕಲೆಯ ನನೆಕೊನೆಯಾಗುವಂತೆ ಕಡೆದಿರುವರು.

ಗೌಡರ ಕೌಟುಂಬಿಕ ಜೀವನವನ್ನೂ ಲೇಖಕರು ಕಲಾಯುಕ್ತವಾಗಿ ಬಣ್ಣಿಸಿರುವರು. ಇವರ ಮಡದಿ ಚಿನ್ನಮ್ಮ. ಗೌಡರ ಕೈಯ ವೀಣೆಯಾಗಿ ಇವರ ಗುರಿಯ ಸಿರಿಯಾಗಿ, ಇವರ ಸಂಗೀತಕ್ಕೆ ಎಂದೂ ತಪ್ಪದ ತಾಳವಾಗಿ, ಇವರ ಸ್ಫೂರ್ತಿಯ ಸೆಲೆಯಾಗಿ ಬಾಳಿದಳು. ಗಂಡ ತನ್ನನ್ನು ಬಿಟ್ಟು ಸಂಗೀತ ಕಲಿಯಲು ಹೊರಟಾಗ ಶುಭವನ್ನು ಕೋರಿ ಬೀಳ್ಕೊಟ್ಟಳು. ವೇಶ್ಯೆಯ ಮಗಳಾದ ಪುಷ್ಪಳಿಗೆ ಗೌಡರು ಸಂಗೀತ ಕಲಿಸಲು ಒಪ್ಪಿಕೊಂಡಾಗಲೂ ಚಿನ್ನಮ್ಮ ಕಿಸಿಸನ್ನು ತೋರದೆ ಗಂಡನಲ್ಲಿ ನಂಬಿಕೆಯಿಟ್ಟು ಸುಮ್ಮನಾದಳು, ಗೌಡರ ಉತ್ಸಾಹದಲ್ಲಿ ಉಲ್ಲಾಸವಾಗಿ ಈಕೆ ಒಂದು ಗಂಡು ಒಂದು ಹೆಣ್ಣು ಈ ರೀತಿ ಎರಡು ಮಕ್ಕಳನ್ನು ಹೆತ್ತು ಕಾಲವಾದಳು. ಈ ದಂಪತಿಗಳ ಬಾಳ್ವೆಯಲ್ಲಿ ಲೇಖಕರು ಹಿತಮಿತವಾದ ಸರಸ ಸಲ್ಲಾಪವನ್ನೂ, ಸಾತ್ವಿಕ ಶೃಂಗಾರವನ್ನೂ ಹೃದಯಂಗಮವಾಗಿ ತಂದಿರುವರು.

ಗೌಡರ ಬಾಳಿನಲ್ಲಿ ಆಗಾಗ ತಪಸ್ವಿಗಳ ಅನುಗ್ರಹವನ್ನು ನಾವು ಕಾಣಬಹುದು. ಬಾಲ್ಯದಲ್ಲೇ ಮೈಸೂರಿನಲ್ಲಿ ಇವರನ್ನು ಕಂಬಳಿ ಸ್ವಾಮಿಗಳು ಹರಸಿದರು. ಮಡದಿ ಸತ್ತ ಮೇಲೆ ಗೌಡರು ಜೀವನದಲ್ಲಿ ಜುಗುಪ್ಸೆಗೊಂಡು ಮನೆಯನ್ನು ತೊರೆದರು. ಊರನ್ನು ತೊರೆದರು. ತಿರುವಯ್ಯಾರಿಗೆ ಬಂದರು. ಇಲ್ಲಿ ಬ್ರಹ್ಮಾನಂದ ಪರದೇಶಿಗಳ ದರ್ಶನವಾಯಿತು. ಸರ್ವಜ್ಞರಾದ ಪರದೇಶಿಗಳು ಗೌಡರ ಪರಿತಾಪವನ್ನು ಕಂಡು ಕರಗಿ ಹೋದರು. ತಮ್ಮ ತಂಬೂರಿಯನ್ನು ಇವರಿಗೆ ಕೊಟ್ಟು ರಾಗಾಭಿಮಾನ ದೇವತೆಗಳನ್ನು ಒಲಿಸಿಕೊಳ್ಳುವಂತೆ ಪ್ರೇರೇಪಿಸಿ ಏಕಾಂತವಾದ ಸ್ಥಳವನ್ನು ತೋರಿಸಿದರು. ಮದ್ಯಪಾನದ ದೀಕ್ಷೆಯನ್ನು ಪರದೇಶಿಗಳು ಗೌಡರಿಗೆ ಕೊಟ್ಟರು. ಈ ಸಂದರ್ಭದಲ್ಲಿ ಗೌಡರು

ಏಕಾಂತವಾಗಿ ಕುಳಿತು ತಂಬೂರಿಯನ್ನು ಮೀಟುತ್ತಾ ಅನೇಕ ದಿವಸ ಸಾಧನೆಯೆಸಗಿದರು ಹಿಂದೆಲ್ಲ ಇವರು ಕಲಿತುದು ಶಾಸ್ತ್ರೀಯ ಸಂಗೀತ. ಈಗ ಇವರು ಸಾಧಿಸಿದ್ದು ದೈವಿಕ ಸಂಗೀತ. ರಾಗಾಭಿಮಾನ ದೇವತೆಗಳಲ್ಲೇ ಗೌಡರಿಗೆ ದರ್ಶನ ಕೊಡಲು ನೂಕುನುಗ್ಗ ಲಾಯಿತು. ಲೇಖಕರು ಈ ಅಲೌಕಿಕ ಸನ್ನಿವೇಶವನ್ನು ಚಿತ್ರಿಸುವಾಗ ಭವ್ಯವಾದ ಭಾಷೆ ಯನ್ನು ಬಳಸಿರುವರು.

ಗೌಡರು ಪರಿವ್ರಾಜಕರಾಗಿ ಎಲ್ಲೆಲ್ಲೋ ಸುತ್ತಿದರು. ಮೈಸೂರಿನ ಚಾಮರಾಜರ ಸ್ನೇಹವನ್ನು ಪಡೆದರು. ಇಲ್ಲೇ ವಿವೇಕಾನಂದರ ಮೆಚ್ಚಿಗೆಯನ್ನೂ ಪಡೆದರು. ಚಾಮ ರಾಜರು ಸಾಯುವತನಕ ಅವರ ಜೊತೆಯಲ್ಲಿದ್ದು ಅನಂತರ ಸಂಕೋಲೆ ಕಳಚಿಕೊಂಡ ದಿಗ್ಗಜವಾಗಿ ಆ ಸೇತು ಹಿಮಾಚಲದ ತನಕ ಅಲೆದರು. ಕಲ್ಕತ್ತದಲ್ಲಿ ವಿವೇಕಾನಂದ ರನ್ನು ಕಂಡು ಅವರೊಡನೆ ಕೆಲವು ದಿವಸವಿದ್ದು ಅವರಿಂದ ಕಾವಿ ವಸ್ತ್ರದ ಉಡುಗೊರೆ ಯನ್ನು ಪಡೆದು ಧನ್ಯರಾದರು !

ಸಂಗೀತ ರಾಗರಸಿಕರಾದ ಗೌಡರು ಒಲಿಸಿಕೊಂಡ ರಾಗಗಳು ಒಂದೇ ಎರಡೇ ! ಭೈರವಿರಾಗ ಇವರ ಉಸಿರಾಗಿತ್ತು. ಮೈಸೂರು ಅರಮನೆಯಲ್ಲಿ ಸಾರಂಗವನ್ನು ಹಾಡಿ ಜೀವಂತ ಸಾರಂಗವನ್ನು ವಶೀಕರಣ ಮಾಡಿಕೊಂಡರು. ಬೇಗಡೆಯನ್ನು ಹಾಡುತ್ತಾ ಲೋಕದ ಬೇಸರವನ್ನು ನೀಗಿದರು. ಖರಹರಪ್ರಿಯ ರಾಗವು ಇವರ ಕಂಠದಲ್ಲಿ ಬಂದಾಗ ಶಶಿಧರ ಸುಳಿದಂತಾಗುತ್ತಿತ್ತು. ಜಾವಳಿಗಳನ್ನು ಇವರು ಉಲಿದಾಗ ತಾರಾಳಿಗಳು ಕುಣಿದಂತಾಗುತ್ತಿತ್ತು. ಶಂಕರಾಭರಣದಲ್ಲಿ ಶಂಕರನಾಗಿದ್ದ ಶಂಕರಪಿಳ್ಳೆಯು ಅದೇ ರಾಗ. ವನ್ನು ಗೌಡರು ಹಾಡಿದ್ದನ್ನು ಕೇಳಿ ಇವನು ಕಿಂಕರನಾದನು. ಕಲ್ಯಾಣಿ, ಕೇದಾರಗೌಳ, ಆನಂದಭೈರವಿ ರಾಗಗಳನ್ನು ಗೌಡರು ಹಾಡಿದಾಗ ಬೆಳುದಿಂಗಳು ಹರಿದಂತೆ, ಮಲ್ಲಿಗೆ ಹೂವನ್ನು ಎರಚಿದಂತೆ, ಮಿಂಚಿನ ಬಳಗ ಕುಣಿದಂತೆ ಆಗುತ್ತಿತ್ತು. ಗೌಡರು ಹಾಡಿದ ಒಂದೊಂದು ಸಂದರ್ಭವನ್ನೂ ಲೇಖಕರು ಹೃದಯಂಗಮವಾಗಿ ಇಂಪಿನ ಇಂಗಡಲಾಗು ವಂತೆ ಬಣ್ಣಿಸಿರುವರು. ನಾದಮಯವಾದ ಸಂಗೀತ ಈ ಕಾದಂಬರಿಯ ಉದ್ದಕ್ಕೂ ಆಮೋದವಾಗುವಂತೆ ಭಾಷಾಮಾಧ್ಯಮದಲ್ಲಿ ಬೆಡಗನ್ನು ಪಡೆದಿವೆ. ಇಂಥ ಚಿತ್ರಣ ಗಳನ್ನು ಕಾಣಬೇಕಾದರೆ ನಾವು ಭರತೇಶ ವೈಭವಕ್ಕೇ ಹೋಗಬೇಕು. ಭೂಮಿಗಿಳಿದ ಗಂಧರ್ವ ನಾದರತ್ನಾಕರವಾಗಿ ವಿಜೃಂಭಿಸುವುದು. ವಾದ್ಯಪರಿಕರಗಳನ್ನೆಲ್ಲ ಲೇಖಕರು ಸಂದರ್ಭೋಚಿತವಾಗಿ ಈ ಕೃತಿಯಲ್ಲಿ ಕಾಣಿಸಿರುವರು.

ಅಪರಿಗ್ರಹವು ಗೌಡರ ಬಾಳ್ವೆಗೆ ಬುನಾದಿಯಾಗಿ, ಸರಳತೆಯು ಸಂಸ್ಕಾರವಾಗಿ, ನಿರ್ಮತ್ಸರವು ನಿಷ್ಠೆಯಾಗಿ, ವಿಶ್ವಾನುಕಂಪವು ಶ್ವಾಸೋಚ್ಛ್ವಾಸವಾಗಿ, ಗಾನಕಲೆಯು ಅಧ್ಯಾತ್ಮಿಕವಾಗಿ ಎಲ್ಲಕ್ಕಿಂತ ಹೆಚ್ಚಾಗಿ ಸೂಳೆಯರ ನಡುವಿದ್ದೂ ಇಂದ್ರಿಯ ನಿಗ್ರಹ ಮಾಡಿದ ಇವರ ಸಂಯಮವು ಹಟಯೋಗವಾಗಿ ರಂಜಿಸಿರುವುದನ್ನು ಕಾದಂಬರಿಕಾರರು ಕಣ್ಣಿಗೆ ಕಟ್ಟುವಂತೆ ಕಾಣಿಸಿರುವರು. ತಮ್ಮ ಅಜ್ಜ ಕೊಟ್ಟಂಥ ಹಣವನ್ನೆಲ್ಲ ಗೌಡರು

ಗುರುಕಾಣಿಕೆಯಾಗಿ ಕೊಟ್ಟರು. ರಾಜಮಹಾರಾಜರು ಕೊಟ್ಟ ಧನಕನಕಗಳೆಲ್ಲ ಇವರಿಗೆ ಭಾರವಾಗಿ ತೋರಿ ಅಂದಂದಿನ ಆದಾಯವನ್ನು ಅಂದಂದೇ ಸತ್ಪಾತ್ರಗಳಿಗೆ ನೀಡಿ, ದೀನ ದಲಿತರನ್ನು ಸಂತೈಸುತ್ತಾ ಈ ಗಾನಯೋಗಿ ಒಳಗೂ ಹೊರಗೂ ಅಪರಿಗ್ರಹಿಯಾಗಿ ಬಾಳಿದರು. ಬಿರುದು ಬಾವಲಿಗಳನ್ನೆಲ್ಲ ನಿರಾಕರಿಸಿ ಕೆಲವೊಮ್ಮೆ ಒಪ್ಪಿಸಿಕೊಂಡರೂ ಇನ್ನಾರ ಕೊರಳಿಗೋ ಅವನ್ನು ಕಟ್ಟಿ ಇವರು ಕೈತೊಳೆದುಕೊಳ್ಳುತ್ತಿದ್ದುದನ್ನು ಲೇಖಕರು ಆಗಾಗ ವಿವರಿಸಿರುವರು. ತಮ್ಮ ಪಾಲಿಗೆ ಪಿತ್ರಾರ್ಜಿತವಾಗಿ ಬಂದ ಹಣವನ್ನೆಲ್ಲ ತನ್ನ ಸೋದರಿಯರಿಗೆಕೊಟ್ಟು ಭಾರ ಇಳಿಸಿಕೊಂಡರು. ದಿಗಂಬರ ಮುನಿಯ ನಿರ್ಲಿಪ್ತತೆಯನ್ನು ಇವರಲ್ಲೂ ನಾವು ಕಾಣಬಹುದು. ವಿಶ್ವಕುಟುಂಬಿಯಾದ ಗೌಡರು ಲೋಕದ ಮಕ್ಕಳನ್ನೆಲ್ಲ ತಮ್ಮ ಮಕ್ಕಳೆಂದೇ ಭಾವಿಸುವಾಗ ಸ್ವಂತ ಮಕ್ಕಳನ್ನು ಕಡೆಗಣಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಈ ಕರ್ತವ್ಯ ನಿರ್ವಹಣೆಯಲ್ಲಿ ಇವರು ಕುಂಟಿತರಾದರೊ ಏನೋ!

ಗೌಡರ ಸಾವೂ ಮಹಾತ್ಮರ ಸಾವಿನಂತೆ ಇದೆ. ಭೈರವಿಯನ್ನು ಹಾಡುತ್ತಾ ಇವರು ಸಂಗೀತ ಸಮಾಧಿ ಮರಣವನ್ನು ಪಡೆದ ಸಂದರ್ಭ ಹೃದಯ ಕಲಕುವಂತಹುದು. ಆಸ್ಪತ್ರೆಯ ರೋಗಿಗಳಲ್ಲ ಗೌಡರ ಸಂಗೀತವನ್ನು ಆಲಿಸಿ ತಮ್ಮ ಸಂಕಟವನ್ನು ಕ್ಷಣಕಾಲ ಮರೆತಿರುವಾಗ ಗೌಡರು ಕಣ್ಮುಚ್ಚಿದರು. ಇವರ ಪ್ರಾಣಭೈರವಿ ಇವರ ದೇಹವನ್ನು ತೊರೆದು ವಿದೇಹಿಯಾಯಿತು! ಗೌಡರಿಗೆ 'ಸಂಗೀತ-ಮೋಕ್ಷ' ಲಭಿಸಿರಬೇಕು.

ಈ ಕಾದಂಬರಿಯಲ್ಲಿ ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಹಲವಾರು ಸಂಗೀತ ಮಹಾಪುರುಷರ ವ್ಯಕ್ತಿ ಚಿತ್ರಣಗಳನ್ನು ಲೇಖಕರು ಸ್ವಾರಸ್ಯವಾಗಿ ತಂದಿರುವರು. ಇವರಲ್ಲಿ ಲೌಕಿಕರೂ ಇರುವರು, ಅಲೌಕಿಕರೂ ಇರುವರು. ಈ ಸಂಗೀತ ಮಹಾಪುರುಷರ ನಡುವೆ ಕೆಂಪೇಗೌಡರು ಸಂಗೀತ ಕೌಸ್ತುಭರತ್ನವಾಗಿ ರಾರಾಜಿಸುತ್ತಿರುವರು. ಸಂಗೀತಗಾರನ ಬದುಕನ್ನು ಚಿತ್ರಿಸಲು ಲೇಖಕರು ಹದವಾದ ಹಾಗೂ ಸಂದರ್ಭಕ್ಕೆ ಒಪ್ಪುವಂಥ ಭವ್ಯವಾದ ಭಾಷೆಯನ್ನು ಪಳಗಿಸಿ ಬಳಸಿರುವರು.

೧೮ ನಾಗೇಗೌಡರ ಜಾನಪದ ಕೃತಿಗಳು— ಸಾಂಸ್ಕೃತಿಕ ಮೌಲ್ಯ

ಬಿ. ಎ. ವಿವೇಕ ರೈ

ಎಚ್. ಎಲ್. ನಾಗೇಗೌಡರ ಜಾನಪದ ಕೃತಿಗಳು ಎರಡು : 'ಸೋಬಾನೆ ಚಿಕ್ಕಮ್ಮನ ಪದಗಳು[1] ಮತ್ತು 'ಪದವವೆ ನಮ್ಮ ಎದೆಯಲ್ಲಿ'[2] ಹೆಳವರು ಮತ್ತು ಅವರ ಹಾಡುಗಳು' ಎಂಬ ಜಾನಪದ ಕೃತಿಯೊಂದು ಪ್ರಕಟಣೆಗೆ ಸಿದ್ಧವಾಗಿದೆಯೆಂದು ಆವರು 'ಪದವವೆ ನಮ್ಮ ಎದೆಯಲ್ಲಿ' ಎಂಬ ಗ್ರಂಥದ ಆರಂಭದಲ್ಲಿ ಹೇಳಿಕೊಂಡಿದ್ದಾರೆ. ಪ್ರಕಟಿತ ಎರಡು ಜಾನಪದ ಕೃತಿಗಳಲ್ಲಿ ವ್ಯಕ್ತವಾಗುವ ಸಾಂಸ್ಕೃತಿಕ ಮೌಲ್ಯದ ವಿವೇಚನೆಗೆ ಈ ಲೇಖನವನ್ನು ಸೀಮಿತಗೊಳಿಸಿಕೊಂಡಿದೆ.

ಜನಪದ ಹಾಡುಗಳನ್ನು ಪ್ರಧಾನವಾಗಿ ಮೂರು ದೃಷ್ಟಿಗಳಿಂದ ಅಧ್ಯಯನ ಮಾಡಬೇಕಾಗುತ್ತದೆ. 1. ಸಾಹಿತ್ಯಿಕ ಮೌಲ್ಯ 2. ಸಾಂಸ್ಕೃತಿಕ ಮೌಲ್ಯ 3. ಸಂಗೀತ ಗುಣ. ಎಷ್ಟೋ ಜನಪದ ಹಾಡುಗಳು ಸಾಹಿತ್ಯಿಕವಾಗಿ ಸಾಮಾನ್ಯವಾಗಿದ್ದರೂ, ಒಂದು ಪ್ರದೇಶದ ಸಂಸ್ಕೃತಿಯ ಚಿತ್ರಣವನ್ನು ಕೊಡುವ ದೃಷ್ಟಿಯಿಂದ ಮಾನವವಿಜ್ಞಾನದ ಅಧ್ಯಯನದ ಪ್ರಮುಖ ಆಕರ ಸಾಮಗ್ರಿಗಳಾಗುತ್ತವೆ. ನಾಗೇಗೌಡರ ಎರಡು ಜಾನಪದ ಕೃತಿಗಳೂ ಸಾಂಸ್ಕೃತಿಕ ಮೌಲ್ಯದ ದೃಷ್ಟಿಯಿಂದ ಕನ್ನಡ ಜಾನಪದ ಕ್ಷೇತ್ರದಲ್ಲಿ ಪ್ರಮುಖವಾಗಿವೆ.

'ಸೋಬಾನೆ ಚಿಕ್ಕಮ್ಮನ ಪದಗಳು' ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹೆರಗನಹಳ್ಳಿಯ ಜಾನಪದ ಹಾಡುಗಾರ್ತಿ ಚಿಕ್ಕಮ್ಮ ಹಾಡಿದ ಬೇರೆ ಬೇರೆ ಜನಪದ ಹಾಡುಗಳ ಸಂಕಲನ' ಇಲ್ಲಿನ ಹಾಡುಗಳನ್ನು ಸಂಪಾದಕರು ವಸ್ತುವಿನ ದೃಷ್ಟಿಯಿಂದ ಆರು ದಳಗಳನ್ನಾಗಿ ವಿಂಗಡಿಸಿದ್ದಾರೆ : 1. ಸೋಬಾನೆ ಪದಗಳು. 2. ಒಸಗೆಯ ಪದಗಳು. 3. ರಾಗಿ ಬೀಸುವ ಪದಗಳು. 4. ತಿಂಗಳು ಮಾವನ ಪದಗಳು. 5. ದೇವರ ಪದಗಳು. 6. ಹಾಡ್ಗತೆಗಳು. ಗ್ರಂಥದ ಅನುಬಂಧ ಭಾಗದಲ್ಲಿ ಈ ಹಾಡುಗಳ ಅಧ್ಯಯನಕ್ಕೆ ಅಗತ್ಯವಾದ ವಿವರಣೆ, ಅರ್ಥವನ್ನು ಸುದೀರ್ಘವಾಗಿ ಕೊಟ್ಟಿದ್ದಾರೆ. ಈ ವಿವರಣೆ ಈ ಹಾಡುಗಳಲ್ಲಿ ಕಾಣಿಸಿಕೊಂಡಿರುವ ಸಾಂಸ್ಕೃತಿಕ ಮೌಲ್ಯವನ್ನು ಗುರುತಿಸುವಲ್ಲಿ ಬಹಳ ಸಹಾಯಕವಾಗಿದೆ.

---

1. ಪ್ರ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1972.
2. ಪ್ರ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1976,

1. ಸೋಬಾನೆ ಪದಗಳು : ಮದುವೆಯಲ್ಲಿ ಹಾಡುವವುಗಳು ಸೋಬಾನೆ ಪದಗಳು. ಮದುವೆಯಲ್ಲಿ ಆಚರಿಸುವ ಬೇರೆ ಬೇರೆ ಶಾಸ್ತ್ರಗಳನ್ನು ಹೊಂದಿಕೊಂಡು, ಸೋಬಾನೆ ಪದಗಳೂ ಬೇರೆ ಬೇರೆಯಾಗುತ್ತವೆ. ಈ ಕೃತಿಯಲ್ಲಿ ಬರುವ ಸೋಬಾನೆ ಪದಗಳಲ್ಲಿ ಸಂಪಾದಕರು ಗುರುತಿಸುವ ಮುಖ್ಯ ವಿಧಗಳು : ೧. ಶಾಸ್ತ್ರದ ನೀರು ತರುವಾಗ. ೨. ಶಾಸ್ತ್ರದ ಚಪ್ಪರ ಕಟ್ಟುವಾಗ ೩. ವೀಳೆಯ ಶಾಸ್ತ್ರ ಮಾಡುವಾಗ. ೪. ಅರಸಿನ ಎಣ್ಣೆ ಹಚ್ಚುವಾಗ. ೫. ಗಂಡು ನೆರೆ ಹೊರಡುವಾಗ. ೬. ಧಾರೆ ಎರೆಯುವಾಗ. ೭. ಬೂವ (=ಹೆಣ್ಣುಗಂಡುಗಳಿಗೆ ಶಾಸ್ತ್ರೋಕ್ತವಾಗಿ ಇಡುವ ಊಟ) ಇಕ್ಕುವಾಗ. ೮. ಗಂಧದ ಹುಡಿ ಎಸೆದಾಡುವಾಗ. ೯. ಬಾಗಿಲು ತಡೆಯುವಾಗ. ೧೦. ಹೆಣ್ಣೊಪ್ಪಿಸಿ ಕೊಡುವಾಗ. ೧೧. ಓಕಳಿ ಇಟ್ಟಾಡುವಾಗ. ೧೨. ಹೆಣ್ಣು ಕರೆಯಲು ಬಂದಾಗ.

ಈ ಸೋಬಾನೆ ಪದಗಳ ಅಧ್ಯಯನದಿಂದ ಮಂಡ್ಯಜಿಲ್ಲೆಯ ಅದರಲ್ಲೂ ನಾಗಮಂಗಲ ಪ್ರದೇಶದ ಮದುವೆಯ ಸಂದರ್ಭದಲ್ಲಿ ಅನುಸರಿಸುವ ಬೇರೆ ಬೇರೆ ಶಾಸ್ತ್ರಗಳ ಪರಿಚಯವಾಗುತ್ತದೆ. ಸಂಪಾದಕರು ಈ ಎಲ್ಲ ಶಾಸ್ತ್ರಗಳ ವಿವರಣೆಯನ್ನು ತಮ್ಮ ಗ್ರಂಥದ ಅನುಬಂಧದಲ್ಲಿ ಕೊಟ್ಟಿದ್ದಾರೆ.

2. ಒಸಗೆಯ ಪದಗಳು . ಹೆಣ್ಣಿನ ಬಾಳಿನಲ್ಲಿ ಮೈನೆರೆಯುವುದು ಒಂದು ಪ್ರಮುಖವಾದ ಸಂಕ್ರಮಣಕಾಲ. ಈ ದೈಹಿಕ ವ್ಯತ್ಯಾಸವನ್ನು ಜಾನಪದರು ಒಂದು ಸಾಂಸ್ಕೃತಿಕ ಸಂಗತಿಯನ್ನಾಗಿ ಪರಿಭಾವಿಸಿಕೊಂಡು ಆ ಸಂದರ್ಭದಲ್ಲಿ ಕೆಲವು ಆಚರಣೆಗಳನ್ನು ಪಾಲಿಸಿಕೊಂಡು ಬಂದಿದ್ದಾರೆ. ಇದಕ್ಕೆ ಒಸಗೆ ಅಥವಾ ಸೋಬನ ಎನ್ನುತ್ತಾರೆ. ಇಂತಹ ಒಸಗೆಯ ಕಾಲದಲ್ಲಿ ಹಾಡುವ ಪದಗಳು ಇಲ್ಲಿ ಸಿಗುತ್ತವೆ. ಇವುಗಳಲ್ಲಿ ಸಂದರ್ಭವನ್ನು ಗಮನಿಸಿಕೊಂಡು ಈ ಕೆಳಗಿನ ಪ್ರಕಾರಗಳನ್ನು ಸಂಪಾದಕರು ಗಮನಿಸಿದ್ದಾರೆ : ೧. ಗುಡ್ಲು ಕೂಡುವಾಗ. ೨. ತಾಯಿ ಮನೆ ಒಸಗೆ. ೩ ಬಳಗದ ಒಸಗೆ.

ಹೆಣ್ಣು ಮೈನೆರೆದಾಗ ಗುಡಿಸಲು ಹಾಕಿಸಿ, ಅದರೊಳಗೆ ಆಕೆಯನ್ನು ಮೂರುದಿನ ಇಡುತ್ತಾರೆ. ಆಕೆಯ ಸೋದರ ಮಾವಂದಿರಿಂದ ಅತ್ತಿ, ಆಲ, ಹಲಸಿನ ಸೊಪ್ಪುಗಳನ್ನು ಕಡಿಸಿ, ಈ ಗುಡಿಸಲು ಹಾಕಿಸುತ್ತಾರೆ. ಇಂತಹ ಗುಡಿಸಲು (ಗುಡ್ಲು) ಕೂಡಿದಾಗ ಹೇಳುವ ಒಸಗೆಯ ಪದಗಳು ಇಲ್ಲಿ ಕಾಣಸಿಕೊಂಡಿವೆ. ಆ ಹೆಣ್ಣಿಗೆ ಮತ್ತೆ ತಾಯಿಮನೆಯಲ್ಲಿಯೂ, ಬಳಗದಲ್ಲಿಯೂ ಒಸಗೆ ಮಾಡುತ್ತಾರೆ.

3. ರಾಗಿ ಬೀಸುವ ಪದಗಳು : ರಾಗಿ ಬೀಸುವ ಪದಗಳು ಕೆಲಸದ ಹಾಡುಗಳ ವರ್ಗಕ್ಕೆ ಸೇರಿದರೂ, ಅವುಗಳಲ್ಲಿ ಸಾಂಸ್ಕೃತಿಕ ಅಂಶಗಳು ಬೇರೆ ಬೇರೆ ರೀತಿಗಳಲ್ಲಿ ಗೋಚರವಾಗುತ್ತವೆ. ತಂಗಿ ಅಣ್ಣನ ಹೆಣ್ಣನ್ನು ತರುವ ಸಂಪ್ರದಾಯದ ಪರಿಚಯ ಇಲ್ಲಿ ಸಿಗುತ್ತದೆ. 'ತಮ್ಮಯ್ಯನ ಮೇಲಿನ ಪದ'ಗಳಲ್ಲಿ ಬೇಸಾಯದ ವಿಚಾರ

ಇದೆ. 'ಹಿರಿಯಕ್ಕನ ಮೇಲೆ' ಎನ್ನುವ ಹಾಡುಗಳನ್ನು ಮದುವೆಯಲ್ಲಿ ಹೆಣ್ಣಿಗೆ ಶಾಸ್ತ್ರದ ಬಳೆ ತೊಡಿಸುವಾಗಲೂ ಹಾಡುತ್ತಾರೆ.

4. **ತಿಂಗಳು ಮಾವನ ಪೂಜೆ ಪದಗಳು :** ಹಾಲು ಚೆಲ್ಲಿದಂಥ ಬೆಳದಿಂಗಳಿನಲ್ಲಿ ಹಾಡುಗಳನ್ನು ಹೇಳುತ್ತಾ, ತಿಂಗಳು ಮಾವನನ್ನು ಬರೆಯುತ್ತಾರೆ. ಮತ್ತೆ ಪೂಜೆ ಮಾಡುತ್ತಾರೆ. ಮಳೆ ಹೋದ ಸಂದರ್ಭಗಳಲ್ಲಿಯೂ ತಿಂಗಳು ಮಾವನನ್ನು ಬರೆಯುತ್ತಾರೆ. ಮೊದಲು ಮಳೆರಾಯನ ಮೇಲೆ ಪದ ಹೇಳಿ, ಬಳಿಕ ತಿಂಗಳು ಮಾವನ ಪದಗಳನ್ನು ಹೇಳುತ್ತಾರೆ.

5. **ದೇವರ ಪದಗಳು :** ಗ್ರಾಮದೇವತೆಗಳು ಜನಪದ ಜೀವನದಲ್ಲಿ ಬಹಳ ಮುಖ್ಯವಾದುವು. ಅಂತಹ ಪ್ರಮುಖ ಮೂರು ದೇವತೆಗಳ ಮೇಲೆ ಹಾಡುಗಳನ್ನು ಇಲ್ಲಿ ಕಾಣಬಹುದು : ಲಕ್ಕವ್ವ, ಕಗ್ಗಲಿಯಮ್ಮ ಅಥವಾ ಉಡುಸಲಮ್ಮ ಮತ್ತು ಪ್ಲೇಗಿನಮ್ಮ ಅಥವಾ ದೊಡ್ಡಮ್ಮ. ಹಾಗೆಯೇ ಜುಂಚನಗಿರಿ ಜುಂಜಪ್ಪನ ಮೇಲಿನ ಹಾಡುಗಳೂ ಇಲ್ಲಿ ಇವೆ. ಈ ದೇವತೆಗಳನ್ನು ಮೆರೆಸುವಾಗ ಸೊಗಸಾದ ಧಾಟಿಗಳಲ್ಲಿ ಹಾಡುವ ಪದಗಳು ಇಲ್ಲಿ ಸಂಗ್ರಹಿತವಾಗಿವೆ.

6. **ಹಾಡ್ಗತೆಗಳು :** ಹಾಡ್ಗತೆಗಳು ಅಂದರೆ ಕಥನ ಕವನಗಳು (Ballads). ಇಲ್ಲಿ ಕಥೆಗೆ, ಅದರಲ್ಲಿ ಸಂಭವಿಸುವ ಘಟನೆಗಳಿಗೆ ಪ್ರಾಧಾನ್ಯ. ಆದರೂ ಒಂದು ಪ್ರಾದೇಶಿಕ ಸಂಸ್ಕೃತಿಯ ಕೆಲವು ಅಂಶಗಳಲ್ಲಿ ಇಲ್ಲಿ ಕಾಣಬಹುದು. ಉದಾ :—'ಈ ರೋಬಿ'ಯಲ್ಲಿ ಶಕುನಗಳು, ಕೊಂಡವೇರುವ ಸಂಪ್ರದಾಯ ಇತ್ಯಾದಿ.

ನಾಗೇಗೌಡರ 'ಪದವವೆ ನಮ್ಮ ಎದೆಯಲ್ಲಿ' ಎಂಬುದು ವೈವಿಧ್ಯ ಮತ್ತು ವೈಶಿಷ್ಟ್ಯಗಳ ದೃಷ್ಟಿಯಿಂದ ಕನ್ನಡದಲ್ಲಿ ಒಂದು ಅಪೂರ್ವವಾದ ಜಾನಪದ ಸಂಕಲನ. ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದ ಇದು ವಿಪುಲ ಸಾಮಗ್ರಿಗಳನ್ನು ಒದಗಿಸಿಕೊಡುವ ಮಹತ್ವದ ಕೃತಿ. ವಸ್ತುವಿಗೆ ಅನುಗುಣವಾಗಿ ಸಂಪಾದಕರು ಈ ಗ್ರಂಥದಲ್ಲಿ ಕೆಲವು ವಿಭಾಗಗಳನ್ನು ಮಾಡಿಕೊಂಡಿದ್ದಾರೆ : 1. ಸೋಬಾನೆ ಪದಗಳು. 2. ಒಸಗೆ ಪದಗಳು. 3. ಲಾಲಿ ಪದಗಳು. 4. ಬಾಂಧವ್ಯದ ಹಾಡುಗಳು. 5. ದೇವಿ ಮತ್ತು ದೇವರು. 6. ಹಾಡ್ಗತೆಗಳು. 7. ಹೊಲೆಯರು ಹೊಗಳುವ ಪದಗಳು. 8. ಕೋಲಾಟದ ಪದಗಳು. 9. ಹಚ್ಚೆ ಹೊಯ್ಯುವ ಪದಗಳು. 10. ಮಕ್ಕಳ ಪದಗಳು. 11. ಪದವವೆ ನಮ್ಮ ಎದೆಯಲ್ಲಿ.

1. **ಸೋಬಾನೆ ಪದಗಳು :** 'ಸೋಬಾನೆ ಚಿಕ್ಕಮ್ಮನ ಪದಗಳು' ಸಂಗ್ರಹದಲ್ಲಿ ಸೇರದಿರುವ ಸೋಬಾನೆ ಪದಗಳು ಇಲ್ಲಿ ದೊರೆಯುತ್ತವೆ. ಮದುವೆಯ ಶಾಸ್ತ್ರಗಳಿಗೆ ಸಂಬಂಧಿಸಿದವು ಈ ಸೋಬಾನ ಪದಗಳು. ನಾಗಮಂಗಲ, ತಿಪಟೂರು, ಗುಬ್ಬಿ ತಾಲ್ಲೂಕುಗಳಲ್ಲಿ ಸಂಗ್ರಹಿತವಾದ ಈ ಪದಗಳು ಆಯಾ ಪ್ರದೇಶಗಳ ಸಂಸ್ಕೃತಿಗೆ ಕನ್ನಡಿ ಹಿಡಿಯುತ್ತವೆ. ಸಾಮಾನ್ಯವಾಗಿ ಒಕ್ಕಲಿಗ ಜನಾಂಗಕ್ಕೆ ಇವು ಸಂಬಂಧಪಟ್ಟವು.

ಆದರೆ ಸೋಬಾನೆ ಪದಗಳಲ್ಲಿ ಕೊನೆಯದು 'ಸೋಬನಂ ಸೋಬನ' ಎನ್ನುವ ಹಾಡುಗಳು ನಾಗಮಂಗಲ ತಾಲ್ಲೂಕಿನ ಹೊಲೆಯರ ಮದುವೆಯ ಶಾಸ್ತ್ರದ ಸಂದರ್ಭಗಳು.

2. **ಒಸಗೆ ಪದಗಳು :** ಹೆಣ್ಣು ಮೈನೆರೆಯುವ ಸಂದರ್ಭದಲ್ಲಿ ಆಚರಿಸುವ ಒಸಗೆಯ ಪದಗಳು—ಹಿಂದಿನ ಸಂಗ್ರಹದಲ್ಲಿ ಇಲ್ಲದವು—ಇಲ್ಲಿ ಸಿಗುತ್ತವೆ.

3. **ಲಾಲಿ ಪದಗಳು :** ತೊಟ್ಟಿಲು ತೂಗುವಾಗ ಅಥವಾ ಅಳುತ್ತಿರುವ ಮಗುವನ್ನು ತೊಡೆಯ ಮೇಲಾಗಲೀ ಹೆಗಲ ಮೇಲಾಗಲೀ ತಟ್ಟಿ ಮಲಗಿಸುವಾಗ ಹಾಡುವವುಗಳು 'ಲಾಲಿಯ ಪದಗಳು', ನಾಗಮಂಗಲ ಮತ್ತು ತಿಪಟೂರು ತಾಲೂಕುಗಳ ಒಕ್ಕಲಿಗರ ಜನಾಂಗದಲ್ಲಿ ಹಾಡುವ ಲಾಲಿಪದಗಳು ಇಲ್ಲಿ ಸಂಗ್ರಹಿತವಾಗಿವೆ.

4. **ಬಾಂಧವ್ಯದ ಹಾಡುಗಳು ;** 'ಬೀಸುವಾಗ, ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗ ಈ ಹಾಡುಗಳನ್ನು ಹಾಡುತ್ತಾರೆ' ಎಂದು ಸಂಪಾದಕರು ಹೇಳಿದ್ದಾರೆ. ಸಾಮಾನ್ಯವಾಗಿ ಈ ಬಾಂಧವ್ಯದ ಹಾಡುಗಳಲ್ಲಿ ತಾಯಿ-ಮಗಳ, ಅಣ್ಣ-ತಂಗಿಯರ, ಅಕ್ಕ-ತಂಗಿಯರ ಬೇರೆ ಬೇರೆ ಭಾವನೆಗಳು ಅಭಿವ್ಯಕ್ತಿಯನ್ನು ಪಡೆದಿವೆ. ಜನಪದ ಸಮಾಜದ ಬಂಧುತ್ವದ (kinship) ಬೇರೆ ಬೇರೆ ವಿಧಗಳನ್ನು, ಪದಗಳನ್ನು (kinship terms)ಇಲ್ಲಿ ಕಾಣಬಹುದು. ಅಣ್ಣ-ತಂಗಿಯರ, ಗಂಡ-ಹೆಂಡತಿಯರ, ಅತ್ತೆ-ಸೊಸೆಯರ, ಅತ್ತಿಗೆ-ನಾದಿನಿಯರ, ಅಳಿಯ- ಮಾವಂದಿರ, ಅಕ್ಕ-ತಮ್ಮಂದಿರ, ಅತ್ತಿಗೆ-ಮೈದುನರ, ಅಕ್ಕ-ತಂಗಿಯರ, ಸವತಿ ಹೆಣ್ಣುಗಳ, ಗಂಡ-ಸೂಳೆಯರ ಸಂಬಂಧಗಳ ವಿವಿದ ಮುಖಗಳು ಈ ಬಾಂಧವ್ಯದ ಹಾಡುಗಳಲ್ಲಿ ಎಡೆ ಪಡೆದಿವೆ. ಬಾಂಧವ್ಯದ ಸ್ವರೂಪವನ್ನು ಇಷ್ಟು ವೈವಿಧ್ಯಪೂರ್ಣವಾಗಿ ಚಿತ್ರಿಸುವ ಜನಪದ ಹಾಡುಗಳ ಸಂಕಲನ ಕನ್ನಡದಲ್ಲಿ ಬೇರೆ ಸಿಗುವುದಿಲ್ಲ.

5. **ದೇವಿ ಮತ್ತು ದೇವರು :** ಸಂಸ್ಕೃತಿಯ ಒಂದು ಪ್ರಧಾನ ಅಂಗ 'ಧರ್ಮ' (Religion). ಧರ್ಮದಲ್ಲಿ ನಂಬಿಕೆಗಳು ಮತ್ತು ಆಚರಣೆಗಳು ಎಂದು ಎರಡು ವಿಧ. ಜನಪದ ಜೀವನದಲ್ಲಿ ಗ್ರಾಮದೇವತೆಗಳ ಮತ್ತು ನಾಡದೇವತೆಗಳ ಪಾತ್ರ ವಿಶೇಷವಾದದ್ದು. ಆದ್ದರಿಂದ ಸಹಜವಾಗಿಯೇ ಅವರ ಜನಪದಸಾಹಿತ್ಯದಲ್ಲಿ ಅವು ದೊಡ್ಡ ಪಾಲನ್ನು ಪಡೆಯುತ್ತವೆ. ಇಲ್ಲಿನ ಹಾಡುಗಳಲ್ಲಿ ಹಟ್ಟಿ ಲಕ್ಕಮ್ಮ (ಗೊಲ್ಲರ ದೇವರು), ಕಾವೇಟಿ ರಂಗನಾಥ, ಕೆಂಪವ್ವ, ಹಡ್ಡಿನಕಲ್ಲು ಹನುಮಯ್ಯ, ದೇವೀರವ್ವ, ಮಾಯವ್ವ ಮುಂತಾದ ಗ್ರಾಮದೇವತೆಗಳೂ, ಚುಂಚನಗಿರಿ ಭೈರವ, ಮೇಲುಕೋಟೆ ಚೆಲುವಯ್ಯ, ತಿರುಪತಿ ತಿಮ್ಮಪ್ಪ, ಎಡೆಯೂರು ಸಿದ್ಧಲಿಂಗೇಶ್ವರ ಮುಂತಾದ ನಾಡದೇವತೆಗಳೂ ವರ್ಣಿತರಾಗಿದ್ದಾರೆ. ಈ ದೇವತೆಗಳನ್ನು ಕುರಿತ ಹಾಡುಗಳಲ್ಲಿ ಸಾಮಾನ್ಯವಾಗಿ ದೇವರ ಅಥವಾ ದೇವತೆಗಳ ಹುಟ್ಟು, ಮಹಿಮೆಗಳು ವಿವರವಾಗಿ ಬಂದಿವೆ. ಜನಪದ ಪುರಾಣ ಕಾವ್ಯಗಳ ಸ್ವರೂಪದ ಈ ರಚನೆಗಳು ಒಂದು ಪ್ರದೇಶದ ಧಾರ್ಮಿಕ ಆಚರಣೆಗಳ ಅಧ್ಯಯನಕ್ಕೆ ಉಪಯುಕ್ತ ಸಾಮಗ್ರಿಗಳಾಗಿವೆ.

6. **ಹಾಡ್ಗತೆಗಳು :** ಇಲ್ಲಿ ಪಾಪಿಗೇಡಿ ಅಣ್ಣಯ್ಯ, ಬಂಜೆ ಹೊನ್ನಮ್ಮ, ಕೋಣವೇಗೌಡ ಮುಂತಾದ ಹದಿನಾಲ್ಕು ಕಥನಕವನಗಳಿವೆ. ಕಥೆಗಳನ್ನು ಹೇಳುವುದೇ ಇವುಗಳ ಪ್ರಧಾನ ಉದ್ದೇಶವಾದರೂ, ವಿವರಣೆಗಳಲ್ಲಿ ಆಯಾ ಪ್ರದೇಶದ ಸಂಸ್ಕೃತಿಯ ಬಗ್ಗೆ ಕೆಲವು ವಿಚಾರಗಳು ದೊರೆಯುತ್ತವೆ.

7. **ಹೊಲೆಯರು ಹೊಗಳುವ ಪದಗಳು :** ಮನುಷ್ಯರನ್ನು ಮತ್ತು ದೇವರನ್ನು ಹೊಲೆಯರು ಹೊಗಳುವ ಪದಗಳು ಇಲ್ಲಿ ಇವೆ. ದೇವರನ್ನು ಮೆರೆಸುವಾಗ ವಾದ್ಯಗಳನ್ನು ಬಾರಿಸಿ, ಮಧ್ಯೆ ಮಧ್ಯೆ ನಿಲ್ಲಿಸಿ ಹಾಡುತ್ತಾರೆ. ರಂಗದಲ್ಲಿ, ಸುಗ್ಗಿ ಕುಣಿತ ಕುಣಿಯುವಾಗಲೂ ದೇವರ ಪದಗಳನ್ನು ಹೇಳುತ್ತಾರೆ. ಊರಿನ ದೇವತೆಯ ಹೆಸರಿನಲ್ಲಿ ಮಾಡುವುದು ಈ ಸುಗ್ಗಿ ಹಬ್ಬ, ಆ ದೇವತೆಯ ಬಗ್ಗೆ ಈ ಹಾಡುಗಳು ಇರುತ್ತವೆ. ಈ ಸಂಕಲನದಲ್ಲಿ 'ಜಾಣೆ ತೀರುತವ ಕೊಡುಬಾರೆ'ಯಲ್ಲಿ ಉಡುಸಲಮ್ಮ, 'ಸೋಲೋದು ಬ್ಯಾಡ ಗೆಲಸಯ್ಯ'ದಲ್ಲಿ ತಿಮ್ಮಪ್ಪ, 'ದೊಡ್ಡಮ್ಮ ಬರುವಲ್ಲೆ ನಮ್ಮ ಸ್ವಪನಾಕೆ'ಯಲ್ಲಿ ದೊಡ್ಡಮ್ಮ — ಇವರ ಬಗ್ಗೆ ಹೊಗಳುವ ಪದಗಳಿವೆ. ಹೊಲೆಯರು ಮನುಷ್ಯರನ್ನು ಹೊಗಳಿ ಹಾಡುವ ಸಂದರ್ಭಗಳು : (೧) ಹಬ್ಬದ ಮರುದಿನ ಮನೆಮನೆಗೆ ಹೋಗಿ, ಮನೆಯ ಯಜಮಾನನನ್ನು ಹೊಗಳಿ, ರಾಗಿ, ಬತ್ತ, ಬಟ್ಟೆ ಬರೆಗಳನ್ನು ಪಡೆಯುವಾಗ. (೨) ಮದುವೆಯಲ್ಲಿ ಹೆಣ್ಣುಗಂಡುಗಳು ಮೆರವಣಿಗೆಯಾಗುವಾಗ, (೩) ತೀರಿಹೋದವರನ್ನು ಹೊಗಳುವಾಗ,

'ಗೌಡರು ಇದ್ದತ್ತ ಉಂಟೆ ಉಂಟೆ ಬಡಸ್ತಾನ.' 'ಬಾಳೆಯ ಸುಳಿಯ ಹರಕೊಂಡ' ಈ ಹಾಡುಗಳಲ್ಲಿ ಹೊಲೆಯರು ಗೌಡರನ್ನು ಹೊಗಳಿ ತಮಗ ಬೇಕಾದ ವಸ್ತುಗಳನ್ನು ಪಡೆಯುತ್ತಾರೆ. 'ಈಗಿದ್ದ ಗೌಡರು ಈಗೆಲ್ಲಿ ಹೋದರು', 'ಯಾರಾನ ಹಾಡಲಿ ಯಾರಾನ ಪಾಡಾಲಿ' – ಈ ಹಾಡುಗಳಲ್ಲಿ ತೀರಿಹೋದ ಗೌಡರ ಗುಣಗಾನವಿದೆ. ಅದೇ ರೀತಿ 'ಅಯ್ಯೋ ಜಾಣರೋ ಜಾಣರೋ' ಎಂಬ ಹಾಡನ್ನು ತೀರಿಹೋದ ತಿಮ್ಮಯ್ಯ ಎಂಬುವನನ್ನು ಕುರಿತು ಹಾಡಲಾಗಿದೆ. ಈ ರೀತಿಯ ಹಾಡುಗಳು ಚರಮಗೀತೆಯ ಮಾದರಿಯವು. 'ಓಹೋ ಒಳ್ಳೆ ಸಾದ ಸಾದ'—ಮದುವೆಗಳಲ್ಲಿ ಹೆಣ್ಣುಗಂಡುಗಳ ಮೆರವಣಿಗೆ ಆಗುವಾಗ ಹೊಗಳುವುದಕ್ಕೆ ಈ ಹಾಡನ್ನು ಬಳಸುತ್ತಾರೆ. ಈ ಸಂದರ್ಭದಲ್ಲಿ ದುಡ್ಡು ಕೊಟ್ಟವರ ಹೆಸರುಗಳನ್ನೆಲ್ಲಾ ಹೇಳಲಾಗುತ್ತದೆ.

8. **ಕೋಲಾಟದ ಪದಗಳು :** ಕೋಲಾಟ ಕರ್ನಾಟಕದ ಒಂದು ಪ್ರಸಿದ್ಧ ಜನಪದ ಕಲೆ. ಆ ಸಂದರ್ಭದಲ್ಲಿ ಹೇಳುವ ಪದಗಳು ಸಾಂಸ್ಕೃತಿಕವಾಗಿಯೂ ವೈವಿಧ್ಯಪೂರ್ಣವಾಗಿವೆ. ನಾಗಮಂಗಲ ತಾಲೂಕಿನ ಅಣೇ ಚೆನ್ನಾಪುರದ ಯಾಲಕ್ಕಿಗೌಡರು ಮುಂತಾದವರು ಹಾಡಿದವು ಇಲ್ಲಿನ ಹೆಚ್ಚಿನ ಕೋಲಾಟದ ಪದಗಳು. ಆರಂಭದಲ್ಲಿ ಸಂಪಾದಕರು ಕೋಲಾಟದ ಸ್ವರೂಪವನ್ನು ಪರಿಚಯ ಮಾಡಿಕೊಟ್ಟಿದ್ದಾರೆ.

ಪ್ರತಿಯೊಂದು ಕೋಲಾಟದ ಪದಗಳ ಆರಂಭದಲ್ಲಿ ಅವುಗಳನ್ನು ಹಾಡುವ ಸಂದರ್ಭದ ಕೋಲಾಟದ ಸ್ವರೂಪವನ್ನು ವಿವರಿಸಿದ್ದಾರೆ.

ಉದಾ : ೧. 'ಪಾಲಿಸಮ್ಮಯ್ಯ ಮುದ್ದು ಶಾರದೆ.' ಇಲ್ಲಿನ ಕೋಲಾಟದ ಹಿನ್ನೆಲೆಯನ್ನು ಸಂಪಾದಕರು ಕೊಡುವ ರೀತಿ : 'ದಂಬಡಿ ಹಿಡಿದು ಮುಖಂಡನು ಬಾರಿಸುತ್ತ 'ಒಂದೊಂದು ಸಾಲನ್ನು ಹಾಡುತ್ತಾನೆ. ಅವನ ಜೊತೆಯಲ್ಲಿ ಉಳಿದವರೆಲ್ಲರೂ ಕೋಲು ಹುಯ್ಯುತ್ತಾ ಹಾಡುತ್ತಾರೆ. ಎರಡನೇ ಸಲ ಅಥವಾ ಮೂರನೇ ಸಲ ಅದೇ ಚರಣವನ್ನು ಹಾಡುವಾಗ ಮುಖಂಡ ಹಾಡದೆ ಉಳಿದವರು ಮಾತ್ರ ಹಾಡುತ್ತಾರೆ,' ಇದೇ ರೀತಿ 'ಹೊತ್ತು ಹುಟ್ಟಿತು ಹೂಡಯ್ಯ ರಥವನು', 'ಎಡಿಯಲಾರೆ ಮರುಗವಾ', 'ತಾನಾನೊ ತಾನಾನೊ ತಾನ ತಂದೇನಾನೊ'. 'ಶರಣುಮಾಡುವೆ ಸ್ವಾಮಿ', 'ಮುಂತಾದು ಕುಣಿಗಲ್ ಕೆರೆ' ಇತ್ಯಾದಿ ಒಟ್ಟು ಮೂವತ್ತಮೂರು ಕೋಲಾಟದ ಪದಗಳಿವೆ. ಪ್ರತಿಯೊಂದು ಪದದಲ್ಲೂ ವಿಶಿಷ್ಟ ಸ್ವರೂಪದ ಕೋಲಾಟದ ವಿಧಗಳನ್ನು ನೋಡಬಹುದು. ಕೊರವಂಜಿಯಿಂದ ಹಿಡಿದು ಪೌರಾಣಿಕ ಪಾತ್ರಗಳುಳ್ಳ ಶಿವಗೌರಿಯರವರೆಗೆ ಜಾನಪದ ಸಂಸ್ಕೃತಿಯ ಭಿನ್ನಪಾತ್ರಗಳು ಈ ಹಾಡುಗಳಲ್ಲಿ ಸ್ಥಾನಪಡೆದಿವೆ. ಬೇರೆಬೇರೆ ದೇವರುಗಳು. ಊರುಗಳು ನಾನಾರೀತಿಯಲ್ಲಿ ಇಲ್ಲಿ ಕಾಣಿಸಿಕೊಂಡಿವೆ.

೯. ಹಚ್ಚೆ ಹೊಯ್ಯುವ ಪದಗಳು : ಹಚ್ಚೆ ಹೊಯ್ಯಿಸಿಕೊಳ್ಳುವುದು ಅಥವಾ ಚುಚ್ಚಿಸಿಕೊಳ್ಳುವುದು ಜನಪದ ಸಂಸ್ಕೃತಿಯ ಒಂದು ವೈಶಿಷ್ಟ್ಯ. "ಹೆಂಗಸರಷ್ಟೇ ಅಲ್ಲ, ಗಂಡಸರೂ ಹಚ್ಚೆ ಚುಚ್ಚಿಸಿಕೊಳ್ಳುತ್ತಿದ್ದರು. ಹಣೆ, ಗಲ್ಲ, ಕೆನ್ನೆ, ತೋಳು, ಮುಂಗೈ– ಈ ಸ್ಥಳಗಳಲ್ಲಿ ಚಂದಕ್ಕಾಗಿ ಹಚ್ಚೆ ಹೊಯ್ಯಿಸಿಕೊಳ್ಳುವರು. ಹಸೆಮಣೆ, ಜೋಗಿ ಜಡೆ, ಗಿಣಿಸಾಲು, ತೋಪಿನ ಸಾಲು, ಬೊಟ್ಟು ಇನ್ನೂ ಮುಂತಾದ ಹಚ್ಚೆಗಳುಂಟು." "ಹಚ್ಚೆ ಚುಚ್ಚುವುದು ಹಲವಾರು ಸೂಜಿಗಳನ್ನು ಜೋಡಿಸಿ ಮಾಡಿಕೊಂಡ ಒಂದು ಸಾಧನದಿಂದ ಹಚ್ಚೆಗೆ ತಕ್ಕಂತೆ ಇದು ಬೇರೆ ಬೇರೆ ತರಹ ಇರುತ್ತದೆ. ಹಚ್ಚೆಗೆಂದೇ ಒಂದು ತರಹ ಕಪ್ಪು ಅಥವಾ ಹಸುರು ಬಣ್ಣದ ಮಸಿಯನ್ನು ತಯಾರಿ ಮಾಡಿಕೊಂಡು ಇಟ್ಟುಕೊಳ್ಳುತ್ತಾರೆ. ಈ ಮಸಿಯನ್ನು ಸಣ್ಣ ಕುಪ್ಪಿಗಳಲ್ಲಿ ಇಟ್ಟುಕೊಂಡು ಅದರಲ್ಲಿ ಸೂಜಿಯ ಸಾಧನವನ್ನು ಅದ್ದಿ ಹಚ್ಚೆ ಹೊಯ್ಯುವ ಸ್ಥಳವನ್ನು ಒಂದು ಗತ್ತಿನಲ್ಲಿ ಚುಚ್ಚುತ್ತಾರೆ. ಆ ಗತ್ತು ಆಗ ಹಾಡುವ ಗತಿಗೆ ತಕ್ಕಂತೆ ಇರುತ್ತದೆ. ಹಾಡದೆ ಯಾರೂ ಹಚ್ಚೆ ಚುಚ್ಚುವುದಿಲ್ಲ. ಚುಚ್ಚಬಾರದೆಂದಲ್ಲ, ಆದರೆ ಹಳ್ಳಿಗಳ ಕಡೆ ಮಾತ್ರ ಹಾಡದೆ ಹಚ್ಚೆ ಚುಚ್ಚಿದ್ದನ್ನು ಕಂಡಿಲ್ಲ. ಹೀಗೆ ಚುಚ್ಚಿಸಿಕೊಂಡ ಹಚ್ಚೆ ಶಾಶ್ವತವಾಗಿ ಉಳಿದುಬಿಡುತ್ತದೆ. ಏಕೆಂದರೆ, ಸತ್ತಾಗ ಇದೊಂದೇ ಸತ್ತವರ ಹಿಂದೆ ಹೋಗುವುದು"—ಇದು ಹಚ್ಚೆ ಹೊಯ್ಯುವ ರೀತಿ ಮತ್ತು ಪದಗಳ ಬಗ್ಗೆ ಸಂಪಾದಕರ ವಿವರಣೆ. 'ಬಾ ನನ್ನ ನಾದುನಿಯೆ' ಹಾಡಿನಲ್ಲಿ ಹಚ್ಚೆ ಹೊಯ್ಯುವ ಸಂಗತಿ ನೇರವಾಗಿ ಬಂದಿದೆ :

"ಬಾ ನನ್ನ ನಾದುನಿಯೆ
ಹಚ್ಚೆ ಹೋದೇನು ಬಾರೆ ಬಿತ್ರರಿ ತೋಳಿನ ವ್ಯಾಲೆ
ನಿನ್ನ ಪಚ್ಚೆಯ ವ್ಯಾಲೆ ಗಿಣಿರಾಮ–ಬಾ ನನ್ನ ನಾದುನಿಯೇ
ನಿನ್ನ ಹಚ್ಚೆಯ ಮೇಲೆ ಗಿಣಿರಾಮ್ನ-ಬರದೇನು
ಚುಚ್ಚಿಸಿಕೊಳ್ಳೋದು ನಿಮ ಭಾರ-ಬಾ ನನ್ನ ನಾದುನಿಯೆ"

10. **ಮಕ್ಕಳ ಪದಗಳು :** ಇಲ್ಲಿನ ಮಕ್ಕಳ ಪದಗಳು ಶಿಶುಪ್ರಾಸಗಳ (nursery rhyme) ವರ್ಗಕ್ಕೆ ಸೇರುತ್ತದೆ. ಮಕ್ಕಳು ಆಟ ಆಡುವಾಗ ಹೇಳುವ ಹಾಡುಗಳು ಈ ಶಿಶುಪ್ರಾಸಗಳು. ಕನ್ನಡದಲ್ಲಿ ಈಗಾಗಲೇ ಶಿಶುಪ್ರಾಸಗಳ ಸಂಕಲನಗಳು ಬಂದಿದ್ದರೂ, ಇಲ್ಲಿನ ಮಕ್ಕಳ ಪದಗಳು ಭಿನ್ನವಾಗಿವೆ.

11. **ಪದವವೆ ನಮ್ಮ ಎದೆಯಲ್ಲಿ :** ಗ್ರಂಥದ ಹೆಸರನ್ನೇ ಉಳ್ಳ ಈ ಸಂಕೀರ್ಣ ವಿಭಾಗದಲ್ಲಿ ಬರುವ ಹಾಡುಗಳು ಅನೇಕ ವಿಷಯಗಳನ್ನು ಒಳಗೊಂಡಿವೆ. ಹಲವಾರು ವೃತ್ತಿಗಾಯಕರೂ ಇತರರೂ ಹಾಡುವ ಹಾಡುಗಳು ಇಲ್ಲಿವೆ. ಇಲ್ಲಿನ ಅನೇಕ ಹಾಡುಗಳು ಅಸಂಪೂರ್ಣವಾಗಿವೆ. ಆದರೆ ಇಲ್ಲಿನ ಹಾಡುಗಳು ಸಾಂಸ್ಕೃತಿಕ ಮೌಲ್ಯದ ದೃಷ್ಟಿಯಿಂದ ಉಳಿದ ಎಲ್ಲ ವಿಭಾಗಗಳಲ್ಲಿನ ಹಾಡುಗಳಿಗಿಂತ ವಿಶಿಷ್ಟವಾಗಿವೆ :

'ಎಷ್ಟು ಸಾಹಸವಂತ ನೀ ಬಲವಂತ'—ಇವು ಭಾಗವಂತಿಕೆ ಮೇಳದ ವೈಷ್ಣವ ಸಂಪ್ರದಾಯದ ಹಾಡುಗಳು. 'ಬಾರೆ ಗಂಗಾ ನೀರಿಗೋಗಾನ'–ಗದ್ದೆ ಸಸಿ ಹಾಕುವಾಗ ಹಾಡುವ ಹಾಡು, 'ಜೋಕುಮಾರನೆಂಬನು ಕೂತು ಬಡ್ಡಿ ತೆರಗೇಡಿ'ಯು ಜೋಕುಮಾರನ ಪದ, 'ನೀನೆ ಹೀಂಗೆ ನಿನ್ನ ಮಕ್ಕಳೆಂಗೆ'–ಹೊಲೆಯರಲ್ಲಿ ಮದುವೆಗಳಲ್ಲಿ ಬೀಗರನ್ನು ಜರಿಯುವ ಹಾಡುಗಳು, 'ಪಲ್ಲವಿಗಳು'–ಭೈರಪ್ಪ, ಚೌಡಮ್ಮ ತಿಮ್ಮಪ್ಪ ಮುಂತಾದ ದೇವರ ಮೇಲೆ ರಚನೆಗೊಂಡವು. 'ಕೋಲು ರಣದ ಕೋಲು ಚಣದ'–ಇದು ಗೀರುಗಡ್ಡಿ ಕೋಲಾಟದ ಪದ.

ಬುಡುಬುಡಕೆ ಪದಗಳು : ಬುಡುಬುಡಿಕೆಯವರು ಮರಾಠಿ ಮಾತೃಭಾಷೆಯಾಗಿ ಉಳ್ಳ, ಭಿಕ್ಷಾಟನೆಯನ್ನು ಪ್ರಧಾನ ವೃತ್ತಿಯನ್ನಾಗಿಸಿಕೊಂಡ ಒಂದು ಜನಾಂಗ, ರಾತ್ರಿ ಹೊತ್ತು ಜಾವಕಟ್ಟಿ ಹಕ್ಕಿ ಶಕುನ ಹೇಳುವುದು ಇವರ ವಿಶಿಷ್ಟವಾದ ಕೆಲಸ. ಇಲ್ಲಿ 'ಜೈ ಜೈ ಜೈವಾಗಲಿ ಸ್ವಾಮಿ' ಮತ್ತು 'ರಾಮ ರಾಮನೇ ನುಡಿಯೋ ರಾಮ'–ಇಂತಹ ಬುಡುಬುಡಿಕೆಯವರ ಹಾಡುಗಳು.

ಹಕ್ಕಿಪಿಕ್ಕರ ಹಾಡು : ಹಕ್ಕಿಪಿಕ್ಕರು ತೆಲುಗುಮಿಶ್ರಿತ ಕನ್ನಡ ಮಾತಾಡುವ ಒಂದು ಜನಾಂಗ. ಇವರು ಕಾಡುಕೋಳಿ, ನವಿಲು ಮುಂತಾದ ಕಾಡುಹಕ್ಕಿಗಳನ್ನು ಹಿಡಿದು ತಿನ್ನುತ್ತಾರೆ. ಇವರ ಹೆಂಗಸರು ಹಳ್ಳಿಗಳಲ್ಲಿ ತಿರುಗಿ, ದಬ್ಬಳ, ಸೂಜಿ ಮುಂತಾದುವನ್ನು ಮಾರಿ ಜೀವನ ನಡೆಸುತ್ತಾರೆ.

ಗೊಲ್ಲರ ಹಾಡುಗಳು : ಗೊಲ್ಲರ ದೇವರು ಹಾಗಲವಾಡಿ ಜುಂಜಪ್ಪ, ಕೃಷ್ಣನೇ ಕಲಿಯುಗದಲ್ಲಿ ಜುಂಜಪ್ಪನಾಗಿ ಅವತಾರವೆತ್ತಿದನೆಂದು ಜುಂಜಪ್ಪನ ಭಕ್ತರ ನಂಬಿಕೆ. ಈ ಗೊಲ್ಲರ ಹಾಡುಗಳ ಆರಂಭದಲ್ಲಿ 'ಜುಂಜಪ್ಪ'ನ ಪುರಾಣವನ್ನು ಸಂಪಾದಕರು ಸುದೀರ್ಘವಾಗಿ ಕೊಟ್ಟಿದ್ದಾರೆ.

ಹೆಳವರ ಹಾಡುಗಳು : "ಗಂಟೆ ಬಾರಿಸಿಕೊಂಡು ಕಿಣಿ ಕಿಣಿ ನಾದ ಮಾಡುತ್ತ ಕುಲವನ್ನು ಹೊಗಳುವ ಜನರೇ ಹೆಳವರು. ಇವರು 'ಹೇಳವರು' ಎಂಬ ಮಾತೂ ಉಂಟು. ಬಸವಣ್ಣನವರ ಕಲ್ಯಾಣ ಪಟ್ಟಣದಲ್ಲಿ 'ಹೇಳುವ' ಒಂದು ಕಾಯಕವನ್ನು ವಹಿಸಲಾಗಿತ್ತೆಂದೂ, ಈ ಕಾರಣ 'ಹೇಳವರು' ಅಂದರೆ 'ಹೇಳುವವರು' ಎಂಬ ಹೆಸರಿತ್ತೆಂದೂ ಪ್ರತೀತಿ ಇದೆ. ಆದರೆ ಕರ್ನಾಟಕದ ರಾಜ್ಯದಲ್ಲೆಲ್ಲಾ ಸಿಕ್ಕುವ ಹೆಳವರು ತಮ್ಮ ಮೂಲವನ್ನು ಹೇಳುವಾಗ ತಮ್ಮ ಮೂಲಪುರುಷರು ಹೆಳವರು ಅಂದರೆ ಕೈಕಾಲು ಊನವಾದವರು ಎಂದೇ ಹೇಳುವುದು. ಇವರ ಮುಖ್ಯ ವೃತ್ತಿ, ಒಕ್ಕಲಿಗರು, ಕುರುಬರು ಲಿಂಗಾಯ್ತರು ಮುಂತಾದ ಗ್ರಾಮೀಣ ಮನೆತನಗಳ ಮೂಲ, ಅವರ ಸಂತಾನ ಬೆಳೆದ ಬಗೆ, ಅವರು ಮಾಡಿದ ಸಾಹಸಗಳು ಇತ್ಯಾದಿ ಸಂಗತಿಗಳನ್ನು ಗಂಟೆ ಬಾರಿಸಿಕೊಂಡು ಒಂದು ತರಹ ಕಣಿ ಹೇಳಿದ ಹಾಗೆ ಹೇಳಿ ಕಾಳುಕಡ್ಡಿ, ಹಸು ಕರು, ಬಟ್ಟೆಬರೆಗಳನ್ನು ಬೇಡಿ ಈಸಿಕೊಳ್ಳುವುದು.......ಈ ಹೆಳವರ ಮುಖ್ಯ ಹಾಡುಗಳು 'ಕುಲ ಕೊಂಡಾಡುವುದು' ಮತ್ತು 'ಸತ್ತು ಕೆಟ್ಟವರನ್ನು ಹೊಗಳುವುದು'. ಆದರೂ, ನಾಡಿನ ಬೇರೆಯವರು ಹಾಡುವ ಹಾಡುಗಳನ್ನೂ, ಹೇಳುವ ಕಥೆಗಳನ್ನೂ ಇವರು ಗಂಟೆ ಬಾರಿಸಿಕೊಂಡು ಸುಶ್ರಾವ್ಯವಾಗಿ ಹಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಈಗ ಇಲ್ಲಿ ಅವರ ಮೂಲ ಕಸುಬಿಗೆ ಸಂಬಂಧಪಟ್ಟ ಕೆಲವು ಹಾಡುಗಳನ್ನು ಕೊಡಲಾಗಿದೆ.' ಸಂಪಾದಕರ ಮೇಲಿನ ಮಾತುಗಳು ಹೆಳವ ಜನಾಂಗದ ಸ್ವರೂಪವನ್ನು ಸಂಕ್ಷಿಪ್ತವಾಗಿ ಸ್ಪಷ್ಟಪಡಿಸುತ್ತವೆ. 'ಕುಲಸ್ವಾಮಿ ಮಾದುವೆ'ಯಲ್ಲಿ ಹೆಳವರು ಕುಲದ ದೇವರುಗಳನ್ನೂ, 'ಕುಲವೆತ್ತಿ ಕೊಂಡಾಡವ್ವೊ'ದಲ್ಲಿ ಕುಲದ ಹಿರಿಯರನ್ನೂ, 'ಕಾಲಮೇ ಕಂಡುಂಬಲ್ಲ'ದಲ್ಲಿ ಹೆಳವರು ಅವರ ಕುಲಗಳನ್ನೂ ಕೊಂಡಾಡುತ್ತಾರೆ.

ಚೌಡಿಕೆ ಹಾಡುಗಳು : ಸೌದತ್ತಿ ಎಲ್ಲಮ್ಮನ ಸಂಪ್ರದಾಯಕ್ಕೆ ಸೇರಿದವರು ಚೌಡಿಕೆಯವರು. ಇವರು 'ಚೌಡಿಕೆ' ಎಂಬ ತಂತಿವಾದ್ಯವನ್ನು ಬಳಸಿ, ಎಲ್ಲಮ್ಮನ ಮಹಿಮೆಯನ್ನು ಹಾಡುವ ಪದಗಳೇ ಚೌಡಿಕೆ ಹಾಡುಗಳು. ಈ ಹಾಡುಗಳ ಪೂರ್ವದಲ್ಲಿ ಸಂಪಾದಕರು ಚೌಡಿಕೆ ಸಂಪ್ರದಾಯದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಮಲೆಕುಡಿಯರ ಹಾಡುಗಳು : ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಮಲೆಗಳಲ್ಲಿ ವಾಸಿಸುವ ಜನಾಂಗ ಮಲೆಕುಡಿಯರು. ಕನ್ನಡ ಮಾತಾಡುವ ಈ ಮಲೆಕುಡಿಯ ಜನಾಂಗದ ಪರಿಚಯವನ್ನು ಸಂಪಾದಕರು ಸಾಕಷ್ಟು ಸಂಶೋಧನಾತ್ಮಕವಾಗಿಯೇ ಮಾಡಿದ್ದಾರೆ. ಈ ಮಲೆಕುಡಿಯರಲ್ಲಿ ಮನೆದೇವರು 'ಭೈರವ'ನ ಪೂಜೆಯ ಹಾಡು-

'ಭೈರುವನ ಸೆನಿಯೋರೆ', ಮಂಡಲ ಬರೆದು ಅದರಲ್ಲಿ ಹೆಣ್ಣನ್ನು ಕುಳ್ಳಿರಿಸುವಾಗ ಹಾಡುವ ಹಾಡು—'ಒಂದು ಬರಿಯೆಂದರೆ ನಲುವತ್ತು ಬರುದಾರೆ', ಮುಹೂರ್ತಕ್ಕೆ ಸಿಲ್ಲಿಸುವಾಗ ಹಾಡುವ ಹಾಡು—'ಬಿತ್ತರಿ ಏನೆಂಬ ಶ್ರೀಗೌರಿ ಬರುವಾಳೆ ಮುಹೂರ್ತದ ಕಂಬಕ್ಕೆ 'ಮಣ್ಣೆ' ಇಡುವಾಗ ಹಾಡುವ ಹಾಡು—'ಸಪ್ಪರದ ಕಂಬಕ್ಕೆ ಮಣ್ಣೆನ್ನು ಇಡುವನ ಬಾರೆ', ಎಲೆ ಅಡಿಕೆ ಕೊಡುವಾಗ ತಮಾಷೆ ಮಾಡುವ ಹಾಡು—'ಹಾಡು ಹೇಳಿ ಹೇಳಿ ಬಾಯೆಲ್ಲ ಬಚ್ಚಿತು', ಗಂಡುಹೆಣ್ಣಿನ ತಾಳಿ ಕಟ್ಟುವಾಗ ಹೇಳುವ ಹಾಡು—'ರಾಯ ಕಟ್ಟುತಾನೆ ಮುಖ ನೋಡಿ,' ಮದುವೆಯಾದ ಮೇಲೆ ಹೆಣ್ಣನ್ನು ಗಂಡಿನ ಮನೆಗೆ ಕಳುಹಿಸಿಕೊಡುವಾಗ ಹಾಡುವ ಹಾಡು—'ಒಂದು ತೆಂಗಿನ ಕಾಯಿ ನಲುವತ್ತು ಬಾಳೆಹಣ್ಣು', ಮದುವೆಯಲ್ಲಿ ಚಪ್ಪರದ ಅಡಿಗೆ ನವದಂಪತಿಗಳು ಬರುವ ಸಂದರ್ಭದಲ್ಲಿ ಹೇಳುವ ಹಾಡು—'ಚಪ್ಪರದೊ ಕಂಬಕೆ ಮನ್ನಿಡುವನ ಬಾರೆ'.

ಲಂಬಾಣಿ ಹಾಡುಗಳು : ಕರ್ನಾಟಕದ ಒಂದು ವಿಶಿಷ್ಟ ಜನಾಂಗ 'ಲಂಬಾಣಿಗಳು' ಅವರ ಸಂಸ್ಕೃತಿಯ ಪರಿಚಯವನ್ನು ಸಂಪಾದಕರು ಇಲ್ಲಿ ಕೊಟ್ಟಿದ್ದಾರೆ. 'ಡಾವಲೋ' ಎಂದರೆ ಲಂಬಾಣಿ ಜನರು ಒಬ್ಬರನ್ನೊಬ್ಬರು ಅಗಲುವ ಪ್ರಸಂಗ ಬಂದಾಗ ಅತ್ತು ಕೊಂಡು ಹಾಡುವ ಹಾಡು. ಅಂತಹ 'ಡಾವಲೋ' ಹಾಡುಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಈ ರೀತಿ 'ಪದವವೆ ನಮ್ಮ ಎದೆಯಲ್ಲಿ' ಜಾನಪದ ಕೃತಿಯು ಅದೇ ಹೆಸರಿನ ಕೊನೆಯ ಅಧ್ಯಾಯದಲ್ಲಿ ಬುಡುಬುಡಿಕೆಯವರು, ಹಕ್ಕಿಪಿಕ್ಕರು, ಗೊಲ್ಲರು, ಹೆಳವರು, ಚೌಡಿಕೆಯವರು, ಮಲೆಕುಡಿಯರು, ಲಂಬಾಣಿಗಳು ಮುಂತಾದ ಕರ್ನಾಟಕದ ಕೆಲವು ವಿಶಿಷ್ಟ ಜನಾಂಗಗಳ ಜನಪದ ಹಾಡುಗಳನ್ನು ನಾಗೇಗೌಡರು ಸಂಗ್ರಹಿಸಿಕೊಟ್ಟಿದ್ದಾರೆ. ಆಯಾ ಜನಾಂಗಗಳ ಪರಿಚಯವನ್ನು ಹಾಡುಗಳ ಆರಂಭದಲ್ಲಿ ತಿಳಿಸಿದ್ದಾರೆ. ಇಷ್ಟು ವೈವಿಧ್ಯಪೂರ್ಣ ಜನಾಂಗಗಳ ಪರಿಚಯ ಮತ್ತು ಸಾಹಿತ್ಯ ಬೇರೆಲ್ಲೂ ಒಂದೆಡೆ ಸಿಗುವುದಿಲ್ಲ. ಸಂಸ್ಕೃತಿಯ ಅಧ್ಯಯನದಲ್ಲಿನ ಜನಾಂಗಗಳ ಅಧ್ಯಯನಕ್ಕೆ ವಿಶೇಷ ಸಾಮಗ್ರಿಗಳನ್ನು ಇಲ್ಲಿ ಕಲೆಹಾಕಿದ್ದಾರೆ.

ಮೇಲೆ ವಿವೇಚಿಸಿದ ಕಾರಣಗಳಿಂದಾಗಿ ನಾಗೇಗೌಡರ 'ಸೋಬಾನೆ ಚಿಕ್ಕಮ್ಮನ ಪದಗಳು' ಮತ್ತು 'ಪದವವೆ ನಮ್ಮ ಎದೆಯಲ್ಲಿ' ಎಂಬ ಜಾನಪದ ಕೃತಿಗಳು ಸಾಂಸ್ಕೃತಿಕ ಮೌಲ್ಯದ ದೃಷ್ಟಿಯಿಂದ ಕನ್ನಡಕ್ಕೆ ಅಪೂರ್ವವಾದ ಎರಡು ವಿಶಿಷ್ಟ ಕೊಡುಗೆಗಳಾಗಿವೆ.

೧೯ ಸೋಬಾನೆ ಪದಗಳು

ಬಿ. ಎಸ್. ಸರೋಜ

"ಸೋ ಎನ್ನಿರೆ ಸೋಬಾನವೆನ್ನಿರೆ
ಹೆಣ್ಣು ನಮಗಾಯ್ತು ಗಂಡು ನಿಮಗಾಯ್ತು
ಸಣ್ಣಕ್ಕಿ ಬಾನ ಸಭೆಗಾಯ್ತು"

ಇಂತಹ ಮೃದು ಮಧುರ ಸೋಬಾನೆಪದಗಳನ್ನು ಕೇಳಿ ಸಂತಸ ಪಡದವರಾರು ? ಮದುವೆ ಕೇವಲ ಲೈಂಗಿಕತೃಪ್ತಿಗಾಗಿ ಮಾಡಿಕೊಂಡಿರುವ ವ್ಯವಸ್ಥೆಯಲ್ಲ: ಎರಡು ಕುಟುಂಬಗಳ ನಡುವೆ ಪರಸ್ಪರ ಸ್ನೇಹಸೌಹಾರ್ದಗಳನ್ನು ಬೆಳೆಸುವ ಶಾಶ್ವತನಂಟು. ಸಮಾಜ ಸಂಘಟನೆಯಲ್ಲಿ ಮದುವೆಯ ಪಾತ್ರ ಹಿರಿದಾದ್ದು ಎಂಬುದನ್ನು ಮೇಲಿನ ತ್ರಿಪದಿ ಸರಳ ಸುಂದರವಾಗಿ ಮನದಟ್ಟು ಮಾಡುತ್ತದೆ.

ಮಗು ಹುಟ್ಟಿದಂದಿನಿಂದ ಹಿಡಿದು, ಅದರ ಬೆಳವಣಿಗೆಯ ಪ್ರಮುಖ ಹಂತಗಳಲ್ಲಿ ಕೆಲವು ವಿಧಿಗಳನ್ನು ತಪ್ಪದೆ ಆಚರಿಸುವ ಸಂಪ್ರದಾಯ ಭಾರತೀಯರಲ್ಲಿ ಕಂಡುಬರುತ್ತದೆ. ಮಗು ಹುಟ್ಟಿದಾಗ 'ಜಾತಕರ್ಮ'ವನ್ನಾಚರಿಸಿದರೆ, ಅದಕ್ಕೆ ಹೆಸರಿಡುವ ಸಂದರ್ಭದಲ್ಲಿ 'ನಾಮಕರಣ' ಮಾಡುತ್ತಾರೆ. ಮಗುವಿಗೆ ಕಿವಿಚುಚ್ಚುವುದು, ಮೊದಲಬಾರಿ ಅನ್ನ ತಿನ್ನಿಸುವುದು, ಅಕ್ಷರಾಭ್ಯಾಸ ಮಾಡಿಸುವುದು, ಜುಟ್ಟು ತೆಗೆಸುವುದು-ಇವೂ ವಿಶೇಷ ಸಮಾರಂಭಗಳೆನಿಸುತ್ತವೆ. ಹುಡುಗನಿಗೆ ಜನಿವಾರ ಹಾಕಿ ವೈಭವದಿಂದ ಉಪನಯನ ಮಾಡಿದರೆ, ಹುಡುಗಿ ಮೈನೆರೆದಾಗ ಅನೇಕ ವಿಧಿ, ನಿಷಿದ್ಧಗಳನ್ನಾಚರಿಸಿ ಸಂಭ್ರಮ ಪಡುತ್ತಾರೆ, ಈ ಆಚರಣೆಗಳು ಮದುವೆಯೊಡನೆ ಮುಗಿಯದೆ, ಮುಂದುವರಿಯುತ್ತವೆ. ಹೆಣ್ಣು ಗರ್ಭಿಣಿಯಾದಾಗ ಆಕೆಗೆ ಬಳೆತೊಡಿಸುವುದು, ಹೂ ಮುಡಿಸುವುದು, ಸೀಮಂತ ಮಾಡುವುದು ಮುಂತಾದ ಕ್ರಿಯೆಗಳು ನಡೆಯುತ್ತವೆ. ಇಂತಹ ಶುಭಸಮಾರಂಭಗಳಲ್ಲಿ ಸಂದರ್ಭಾನುಸಾರವಾಗಿ, ಸಾಂಪ್ರದಾಯಿಕಧಾಟಿಗಳಲ್ಲಿ ಅನೇಕ ಹಾಡುಗಳನ್ನು ಹಾಡುತ್ತಾರೆ ಇವು 'ಸೋಬಾನೆ ಪದಗಳು' ಎಂದು ಜನಪ್ರಿಯವಾಗಿವೆ. ಇವುಗಳನ್ನು ಸಾಮಾನ್ಯವಾಗಿ ಹೆಂಗಸರೇ ಹಾಡುತ್ತಾರೆ, ನಾಗರಿಕತೆಯ ಪ್ರಭಾವದಿಂದ ಈಗ ಮಸಕಾಗುತ್ತಿರುವ ಅನೇಕ ಸಂಪ್ರದಾಯಗಳ ಹಿನ್ನೆಲೆ, ಆಚರಣಾವಿಧಾನ ಹಾಗೂ ವೈಶಿಷ್ಟ್ಯಗಳನ್ನು ಸೋಬಾನೆ ಪದಗಳು ಸಮರ್ಥವಾಗಿ ಹಿಡಿದಿಟ್ಟಿವೆ. ಇವುಗಳಲ್ಲಡಗಿರುವ ತಿಳಿಹಾಸ್ಯ ಎಲ್ಲರನ್ನೂ ರಂಜಿಸುತ್ತದೆ. ಮಂಗಳವಾದ್ಯಗಳ ಹಿನ್ನೆಲೆಯಲ್ಲಿ ಅವಿರತವಾಗಿ ಕೇಳಿಬರುವ ಈ ಪದಗಳು ಶುಭಸಮಾರಂಭಗಳಿಗೆ ವಿಶೇಷ ಮೆರಗನ್ನುಂಟುಮಾಡುತ್ತವೆ. ಇವುಗಳಲ್ಲಿ

ಹೆಚ್ಚಿನವು ವಾಕ್ಸಂಪ್ರದಾಯದಲ್ಲಿ ಒಂದು ತಲೆಮಾರಿನಿಂದ ಮತ್ತೊಂದಕ್ಕೆ ದತ್ತವಾದವು. ಕೆಲವೊಮ್ಮೆ ಸಮಯಸ್ಫೂರ್ತಿಯಿಂದ ಹೊಸಹಾಡುಗಳು ಹುಟ್ಟುವುದೂ ಉಂಟು. ಉದಾಹರಣೆಗೆ ಬೀಗರ ಹಾಡುಗಳನ್ನು ಗಮನಿಸಬಹುದು. ಗಂಡಿನ ಕಡೆಯವರು ಹೆಣ್ಣಿನ ಕಡೆಯವರ ಲೋಪದೋಷಗಳನ್ನು ಹಾಡಿನ ಮೂಲಕ ಎತ್ತಿ ಹಿಡಿಯುತ್ತಾರೆ. ಆಗ ಹೆಣ್ಣಿನಕಡೆಯವರು ಅದಕ್ಕೆ ತಕ್ಕ ಸಮಾಧಾನವನ್ನರುಹುವ ಹಾಡು ಹೇಳು ತ್ತಾರೆ. ಹೀಗೆಯೇ ಹೆಣ್ಣಿನಕಡೆಯವರೆತ್ತುವ ಆಕ್ಷೇಪಕ್ಕೆ ಗಂಡಿನ ಕಡೆಯವರು ಉತ್ತರಿಸುತ್ತಾರೆ. ಇಂತಹ ಕಡೆಗಳಲ್ಲಿ ಹಾಡುಗಾರ್ತಿಯರು ಸ್ವಾತಂತ್ರ್ಯವಹಿಸಿ, ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ.

ಕರ್ನಾಟಕದಾದ್ಯಂತ ಎಲ್ಲ ಜಾತಿಮತಗಳಲ್ಲೂ ಸೋಬಾನೆ ಪದಗಳು ಪ್ರಚಲಿತ ವಾಗಿರುವುದನ್ನು ಕಾಣಬಹುದು. ಇವುಗಳ ವಿವರವಾದ ಅಭ್ಯಾಸ ನಡೆಯಬೇಕಾಗಿದೆ. ಪ್ರಕೃತ ಲೇಖನದಲ್ಲಿ ಬ್ರಾಹ್ಮಣ ಹಾಗು ಒಕ್ಕಲಿಗ ಸಮಾಜದಲ್ಲಿ ಪ್ರಚಲಿತವಾಗಿರುವ ಮದುವೆ ಹಾಗು ಒಸಗೆಯ ಪದಗಳನ್ನು ತೌಲನಿಕವಾಗಿ ಅಭ್ಯಾಸ ಮಾಡುವುದರ ಮೂಲಕ ಅವುಗಳ ಸಂಬಂಧ, ಸಾದೃಶ್ಯಗಳನ್ನು ಗುರುತಿಸುವ ಪ್ರಯತ್ನ ನಡೆದಿದೆ.

ಒಕ್ಕಲಿಗ ಹೆಂಗಳೆಯರು ಮದುವೆಯ ಸಂದರ್ಭದಲ್ಲಿ ಪೈಪೋಟಿಯಿಂದ ಸೋಬಾನೆ ಪದಗಳನ್ನು ಹಾಡುವುದನ್ನು ಹಳ್ಳಿಗಳಲ್ಲಿ ಇಂದಿಗೂ ಕಾಣಬಹುದು. ಇವುಗಳನ್ನು ಹಾಡುವವರಿಗೆ ಮದುವೆ ಮನೆಯಲ್ಲಿ ವಿಶೇಷ ಮನ್ನಣೆ ಉಂಟು. ಇವುಗಳನ್ನು ಸುಶ್ರಾವ್ಯವಾಗಿ ಹಾಡುವವರು ಕೆಲವರಾದರೆ, ಉಳಿದವರು 'ಸೋಬಾನೆ' ಎಂದೋ ಅಥವಾ ಆ ಹಾಡಿನ ಸೊಲ್ಲನ್ನೋ ಹಿಮ್ಮೇಳವಾಗಿ ಹಾಡುತ್ತಾರೆ. ಹಿಮ್ಮೇಳ ಕೇಳುವುದಕ್ಕೆ ಇಂಪಾಗಿರುವುದು ಮಾತ್ರವಲ್ಲದೆ, ಸೋಬಾನೆಪದ ಹಾಡುವವರಿಗೆ ಸ್ವಲ್ಪ ವಿಶ್ರಾಂತಿ ಯನ್ನು ಒದಗಿಸುತ್ತದೆ.

ನಾಗರಿಕತೆಯ ಪ್ರಭಾವದಿಂದ ಇಂದು ಬ್ರಾಹ್ಮಣ ಸಮಾಜದಲ್ಲಿ ಸೋಬಾನೆ ಪದಗಳು ಕಣ್ಮರೆಯಾಗುತ್ತಿವೆ. ಪಟ್ಟಣಗಳಲ್ಲಿರಲಿ, ಹಳ್ಳಿಗಳಲ್ಲಿ ಸಹ ಮದುವೆಯ ಸಂದರ್ಭದಲ್ಲಿ ಧ್ವನಿವರ್ಧಕಗಳ ಹಾವಳಿ ಹೆಚ್ಚುತ್ತಿದೆ. ಸೋಬಾನೆಪದಗಳ ಸೊಲ್ಲಡಗಿ, ಸಿನಿಮಾ ಸಂಗೀತ ಕಿವಿಗಪ್ಪಳಿಸುತ್ತದೆ. ಒಬ್ಬಿಬ್ಬರು ಹಾಡುತ್ತಿದ್ದರೂ ಅದು ವೈದಿಕ ಮಂತ್ರ ಘೋಷಗಳ ಆರ್ಭಟದಲ್ಲಿ ಮುಳುಗಿ ಹೋಗುತ್ತದೆ. ಸಂಪ್ರದಾಯಸ್ಥರ ಮದುವೆಗಳಲ್ಲಿ ಅಪೂರ್ವವಾಗಿ ಕೇಳಿಬರುವ ಸೋಬಾನೆ ಹಾಡುಗಳು ಸಂಕ್ಷಿಪ್ತವಾಗಿರುತ್ತವೆ. 'ಗಿರಿಜಾ ಕಲ್ಯಾಣ', 'ಶ್ರೀನಿವಾಸ ಕಲ್ಯಾಣ', 'ಲಕ್ಷ್ಮೀ ಕಲ್ಯಾಣ', ಇವೇ ಮುಂತಾದ ಕಥನ ಗೀತೆಗಳನ್ನು ಚೆನ್ನಾಗಿ ಹಾಡಬಲ್ಲ ಹೆಂಗಸರು ಮದುವೆ ಮನೆಯಲ್ಲಿದ್ದರು ಅವುಗಳನ್ನು ಹಾಡಲು ಅವರಿಗೆ ಅವಕಾಶ ಒದಗುವುದಿಲ್ಲ. ಇತ್ತೀಚೆಗೆ ಮದುವೆಗಳು 'ಚಟಿಕೆ ಚಪ್ಪರ' ಗಳಾಗಿ, ಕೇವಲ ಆಡಂಬರದ ಪ್ರದರ್ಶನಗಳಾಗುತ್ತಿವೆ.

ಹಿಂದೆ, ಬ್ರಾಹ್ಮಣ ಸಮಾಜದಲ್ಲಿ ಮದುವೆ ಐದು ದಿನಗಳಕಾಲ ನಡೆಯುವ ಸುವ್ಯ

ವಸ್ಥಿತ ಆಚರಣೆಯಾಗಿತ್ತು. ಆಗ ಸೋಬಾನೆ ಪದಗಳನ್ನು ಹೇಳಲು, ಕೇಳಲು ಸಾಕಷ್ಟು ವಿರಾಮವಿರುತ್ತಿತ್ತು. ಆಗ ಹಿಮ್ಮೇಳ, ಮುಮ್ಮೇಳಗಳೊಂದಿಗೆ ಹೆಂಗಸರು ಸೋಬಾನೆ ಪದಗಳನ್ನು ಹಾಡುತ್ತಿದ್ದರು. "ಬ್ರಾಹ್ಮಣೇತರರು ಸೋಬಾನೆ ಹಾಡು ಹೇಳುವಾಗ ಹಿಮ್ಮೇಳ ಮುಮ್ಮೇಳಗಳಿರುವಂತೆ ಬ್ರಾಹ್ಮಣರು ಹೇಳುವಾಗಲೂ ಹಿಮ್ಮೇಳ ಮುಮ್ಮೇಳ ಗಳಿದ್ದ ಕಾಲವೊಂದಿದ್ದಿತೆಂದು ತೋರುತ್ತದೆ. ಬ್ರಾಹ್ಮಣಸ್ತ್ರೀಯರು ಹೇಳುತ್ತಿದ್ದ ಸೋಬಾನೆ ಹಾಡಿನಲ್ಲಿ ನುಡಿಪೂರ್ಣವಾದಮೇಲೆ ಹಿರಿಯ ಮುತ್ತೈದೆಯರು "ಸೋಬಾನೆ" ಎಂದು ಹಿಮ್ಮೇಳ ಹಾಡುತ್ತಿದ್ದುದನ್ನು ನಾನು ಹುಡುಗನಾಗಿದ್ದಾಗ ಕೇಳಿದ್ದೇನೆ. ತ್ರಿಪದಿಯ ಹಾಡುಗಳೇ ಅಲ್ಲದೆ ಬೇರೆ ಛಂದಸ್ಸಿನ ಹಸೆಗೆ ಕರೆವ ಹಾಗು ಆರತಿ ಎತ್ತಿದ ಹಾಡುಗಳನ್ನು ಹೇಳಿದಾಗಲೂ ಇದೇ ಕ್ರಮ ಅನುಸರಿಸುತ್ತಿದ್ದರು."[1]

ಸೋಬಾನೆ ಪದಗಳನ್ನು ಹಾಡುವಲ್ಲಿ ಒಕ್ಕಲಿಗರು ಹಾಗು ಬ್ರಾಹ್ಮಣರು ಒಂದೇ ಕ್ರಮವನ್ನನುಸರಿಸುತ್ತಿದ್ದರೆಂಬುದು ಮೇಲಿನ ಹೇಳಿಕೆಯಿಂದ ಸ್ಪಷ್ಟಪಡುತ್ತದೆ. ಕಾಲ ಗತಿಯಿಂದ ಈಗ ಬ್ರಾಹ್ಮಣ ಸಮಾಜದಲ್ಲಿ ಮೇಲ್ಕಂಡ ರೀತಿಯಲ್ಲಿ ಸೋಬಾನೆ ಪದ ಹೇಳುವ ರೂಢಿ ತಪ್ಪಿದೆ. ಎಣ್ಣೆ ಒತ್ತುವುದು, ಹೆಣ್ಣು ಗಂಡನ್ನು ಹಸೆಗೆ ಕರೆತರುವುದು, ಆರತಿ ಎತ್ತುವುದು—ಈ ಸಂದರ್ಭಗಳಲ್ಲಿ ಮಾತ್ರ ಹಿರಿಯ ಮುತ್ತೈದೆಯರು ಮೆಲುದನಿ ಯಲ್ಲಿ ಹಾಡನ್ನು ಗುಣುಗುಣಿಸುತ್ತಿರುವುದನ್ನು ಕಾಣುತ್ತೇವೆ. ಇವುಗಳೆಲ್ಲ ಪಲ್ಲವಿ, ಅನುಪಲ್ಲವಿಗಳನ್ನು ಹೊಂದಿ, ಮೂರೋ ನಾಲ್ಕೋ ನುಡಿಗಳನ್ನುಳ್ಳ ಹಾಡು ಹೆಚ್ಚಾಗಿ ಕಂಡುಬರುತ್ತವೆ. ಬ್ರಾಹ್ಮಣ ಸಮಾಜದಲ್ಲಿ ಪ್ರಚಲಿತವಾಗಿರುವ ಇಂತಹ ಹಾಡುಗಳು 'ಸಂಪ್ರದಾಯದ ಹಾಡುಗಳು' ಎನಿಸಿವೆ. ಮದುವೆಯ ಸಂದರ್ಭದಲ್ಲಿ ಹಾಡುವ ಸಂಪ್ರದಾಯದ ಹಾಡಿನ ಸ್ಥಾನವನ್ನು ಕೆಲವೊಮ್ಮೆ ದಾಸರ ಪದಗಳು ಆಕ್ರಮಿಸಿ ಕೊಳ್ಳುತ್ತವೆ.

ಮದುವೆಯ ಪ್ರಮುಖ ಆಚರಣೆಗಳಾದ ಧಾರೆ, ಮಾಂಗಲ್ಯಧಾರಣೆ ಮುಂತಾದ ಕ್ರಿಯೆಗಳು ಬ್ರಾಹ್ಮಣ ಹಾಗೂ ಒಕ್ಕಲಿಗ ಸಮಾಜಗಳೆರಡರಲ್ಲೂ ಕಂಡುಬರುತ್ತದೆ. ಆದರೆ, ಬ್ರಾಹ್ಮಣರ ಮದುವೆಗಳಲ್ಲಿ ಕಂಡುಬರುವ ಹೋಮಹವನ ಮುಂತಾದ ಧಾರ್ಮಿಕವಿಧಿಗಳು ಒಕ್ಕಲಿಗರಲ್ಲಿಲ್ಲ. ಎರಡು ಸಮಾಜದ ಮದುವೆ ಹಾಗೂ ಒಸಗೆಯ ಸಂದರ್ಭದಲ್ಲಿ ಕಂಡುಬರುವ ಸಮಾನ ಆಚರಣೆಗಳನ್ನು ಗಮನಿಸಿ ; ಆಯಾಸಂದರ್ಭಗಳಲ್ಲಿ ಹಾಡುವ ಸೋಬಾನೆ ಹಾಗೂ ಒಸಗೆಯಪದಗಳನ್ನು ಈಗ ಅಭ್ಯಾಸಮಾಡೋಣ.

ಹುಡುಗಿ ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಕಾಲಿರಿಸುವ ಸಂದರ್ಭಕ್ಕೆ ನಮ್ಮ ಸಮಾಜದಲ್ಲಿ ವಿಶೇಷ ಮಹತ್ತ್ವವಿದೆ. ಆಕೆ ಋತುಮತಿಯಾದಾಗ

---

1 ನಂ. ಮತಿಘಟ್ಟ ಕೃಷ್ಣಮೂರ್ತಿ. "ಕನ್ನಡ ಜನಪದ ಸಾಹಿತ್ಯ ಭಂಡಾರ (ಸಂಪುಟ ೧) ಗೀತೆಗಳು" (1975) ಗುರುಮೂರ್ತಿ ಪ್ರಕಾಶನ, ಬೆಂಗಳೂರು 560019.

ಅನೇಕ ವಿಧಿ–ನಿಷಿದ್ಧಗಳನ್ನಾಚರಿಸುವುದು ಗೋಚರಿಸುತ್ತದೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳು "ಒಸಗೆಯ ಪದ" ಗಳೆನಿಸುತ್ತವೆ. ಬಾಲೆ ಋತುವತಿಯಾಗುವ ಸನ್ನಿವೇಶ, ಆ ಬಗ್ಗೆ ಆಕೆಯ ಹಾಗೂ ನೆರೆಹೊರೆಯವರ ಪ್ರತಿಕ್ರಿಯೆ, ಆ ಸಂದರ್ಭದಲ್ಲಿ ಆಚರಿಸುವ ವಿಧಿಗಳು ಇವೇ ಮುಂತಾದ ವಿವರಣೆಯನ್ನು ಒಸಗೆಯ ಪದಗಳು ಕಣ್ಣಿಗೆ ಕಟ್ಟುವಂತೆ ನಿರೂಪಿಸುತ್ತವೆ.

ಬಾಲೆ ಮೈನೆರೆದಿದ್ದಾಳೆಂಬುದು ತಾಯಿಯ ಗಮನಕ್ಕೆ ಬರುತ್ತದೆ. ಮೈಲಿಗೆ ಬಟ್ಟೆಯನ್ನು ಕಳಚಲು ಮಗಳಿಗೆ ಸೂಚಿಸುತ್ತಾಳೆ :

"ಸಾದಿಯ ಸೀರ್ಯಾಗೆ ತಾಯವ್ ಮೈನೆರೆತಾಳೆ
ಅವ್ವ ಹಿಡಿದವ್ವ ಕಂಡು ನಸುಗೆಂಪ–ನನಮಗಳೆ
ಪಟ್ಟೆ ಸಾಲೀ ಬಿಟ್ಟೆ ಆ ಕಡಿ ನಿಲ್ಲೆ ।"[1]

ತಾನು ಪುಷ್ಪವತಿಯಾಗಿರುವ ವಿಷಯ ತಿಳಿದು ಬಾಲೆ ಗೊಂದಲಕ್ಕೀಡಾಗುತ್ತಾಳೆ. ಆ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದ ಆಕೆ ತನಗೇನೋ ಆಗಿಬಿಟ್ಟಿದೆ ಎಂದು ಹೆದರಿ ಕಂಗೆಡುತ್ತಾಳೆ. ಸೀರೆಯಲ್ಲಿ ಕಂಡುಬಂದ ನಸುಗೆಂಪು ಕಲೆಯತ್ತ ಮಗಳ ಗಮನ ಸೆಳೆಯುವುದರ ಮೂಲಕ ತಾಯಿ ಆಕೆಗೆ ತಿಳುವಳಿಕೆ ನೀಡಲು ಪ್ರಯತ್ನಿಸುತ್ತಾಳೆ; ಅಣ್ಣ ಕೈಯಲ್ಲಿ ಹಿಡಿದಿದ್ದ ದಾಳಿಂಬೆ ಹಣ್ಣೊಡೆದು, ಆ ಹಣ್ಣಿನರಸ ತನ್ನ ಬಟ್ಟೆಯ ಮೇಲೆ ಸಿಡಿದು, ಕೆಂಪು ಕಲೆ ಉಂಟಾಯಿತೆಂದೂ, ತಾನು ಋತುವತಿಯಾಗಿಲ್ಲವೆಂದೂ ದೇವರ ಮೇಲೆ ಆಣೆಯಿಟ್ಟು ಹೇಳುವಲ್ಲಿ ಬಾಲೆಯ ಮುಗ್ಧತೆ ಸ್ಪಷ್ಟವಾಗಿ ಗೋಚರಿಸುತ್ತದೆ.

"ಇಲ್ಲ ಕಾಣೇ ಅವ್ವ ದೇವರಾಣೆಗಿಲ್ಲ
ಅಣ್ಣ ಹಿಡಿದಿದ್ದ ತನಿಹಣ್ಣು–ದಾಳಿಂಬರದ
ಹಣ್ಣೊಡದೆ ಮ್ಯಾಲೆ ಸಿಡುದಾವೆ"[2]

ಹುಡುಗಿ ಮೈನೆರೆದಳೆಂಬ ಸುದ್ದಿ ಮಿಂಚಿನವೇಗದಲ್ಲಿ ಊರೆಲ್ಲ ಹಬ್ಬುತ್ತದೆ. ತೋಟದಲ್ಲಿ ಕೆಲಸಮಾಡುತ್ತಿರುವ ಒಕ್ಕಲಿಗನಿಗೆ ಆತನ ಮಗಳು ಮೈನೆರೆದ ಶುಭಸಮಾಚಾರವನ್ನರುಹಿ, ಸಿಹಿ ಹಂಚಬೇಕೆಂದು ಕೇಳುತ್ತಾರೆ–ಹಿತೈಷಿಗಳು.

"ಕಟ್ಟೆಯ ಹಿಂದೆ ಬಟ್ಟಡಕೆ ಕುಯ್ಯೋನೆ
ಶೆಟ್ಟಿ ನಿನ ಮಗಳು ಋತುವಾಗಿ । ವಸಗೀಗೆ
ಸಕ್ಕರೆ ತಿದ್ದೊ ಸಭೆಗೆಲ್ಲ ।"[3]

---

1 ಅದೇ, ಪು. ೪೫೮ ; ಪ ೯.

2 ಅದೇ ; ಪು. ೪೫೮ ಪ. ೧೦.

3 ಸಂ. ಎಚ್. ಎಲ್. ನಾಗೇಗೌಡ–"ಸೋಬಾನೆ ಚಿಕ್ಕಮ್ಮನ ಪದಗಳು" (1972)ಪ್ರ. ಕನ್ನಡಸಾಹಿತ್ಯಪರಿಷತ್ತು, ಬೆಂಗಳೂರು, ಪು. 22, ಪ. 20

ಮಗಳು ಋತುಮತಿಯಾದಳೆಂಬ ಸುದ್ದಿ ತಿಳಿದ ಬ್ರಾಹ್ಮಣ ಹುಸಿನಗೆಯ ಮೂಲಕ ತನ್ನ ಪ್ರತಿಕ್ರಿಯೆ ತೋರುತ್ತಾನೆ. ಎಸಳು ಮಲ್ಲಿಗೆ ಕುಯ್ದು, ತಾನೇ ಅಂದವಾದ ಮಾಲೆ ಕಟ್ಟಿ. ಮಗಳಿಗೆ ಕಳುಹಿಸುತ್ತಾನೆ.

"ಹೊಸಸುದ್ದಿ ಕೇಳ್ಯಾನೆ ಹುಸಿನಗೆ ನಕ್ಕಾನೆ
ಎಸಳು ಮಲ್ಲಿಗೆಯ ಬಿಡಿ [ಸ್ಯಾನೆ]-ಸಿಮಾಲೇಕಟ್ಟಿ
ಮಗಳಿದ್ದ ಬಳಿಗೆ ಕಳಿವ್ಯಾನೆ"[1]

ಮೈನೆರೆದಂದಿನದ ವಾರ, ನಕ್ಷತ್ರಗಳ ಶುಭಾಶುಭಫಲಗಳು ಆಕೆಯ ವೈವಾಹಿಕ ಜೀವನದಲ್ಲಿ ಪ್ರತಿಫಲಿಸುತ್ತವೆಂಬ ನಂಬಿಕೆಯಿದೆ. ಮಂಗಳವಾರ ಮಧ್ಯಾಹ್ನ ಹಾಗೂ ಶುಕ್ರವಾರ ಸಂಜೆ ಮೈನೆರೆಯುವುದು ಶುಭಪ್ರದವಲ್ಲ ಎಂದು ಒಕ್ಕಲಿಗರು ಭಾವಿಸುತ್ತಾರೆ; ಆ ದಿನಗಳಲ್ಲಿ ಹುಡುಗಿ ಮೈನೆರೆದರೆ ತಾಯಿಗೆ ಚಿಂತೆ ಪ್ರಾರಂಭವಾಗುತ್ತದೆ. ಈ ಸುದ್ದಿ ಹರಡಿದರೆ, ಮಗಳನ್ನು ಮದುವೆಯಾಗಲು ಯಾರೂ ಮುಂದೆ ಬರುವುದಿಲ್ಲ ಎಂದು ಹೆದರಿದ ತಾಯಿ ಬಾಲೆಯ ಬಟ್ಟೆಯನ್ನು ಗುಪ್ತವಾಗಿ ಕೊಂಡೊಯ್ದು ಮಡಿಮಾಡುವಂತೆ ಮಡಿವಾಳನಿಗೆ ಸೂಚಿಸುತ್ತಾಳೆ. ಇದಕ್ಕಾಗಿ 'ಜಾಜದಿಳ್ಳೇವನು' ಕೊಡುವ ಆಸೆ ತೋರಿಸುತ್ತಾಳೆ.

"ಕಟ್ಟ ಮಂಗಳವಾರ ಕನ್ನೆ ಮೈನ್ಯರದವಳೆ
ಮುಚ್ಚಿಕೊಂಡ್ಹೋಗೊ ಮಡಿವಾಳಿ । ನಾವಿನ್ನ
ಜಾಜಾದಿಳ್ಳೇವ ಕೊಡಿಸೇವು ।
ಕಟ್ಟ ಶುಕ್ರವಾರ ನಿಸ್ತೆ ಮೈನ್ಯರದವಳ
ತೂರಿಕೊಂಡ್ಹೋಗೊ ಮಡಿವಾಳಿ । ನಾವಿನ್ನ
ಜಾಜಾದಿಳ್ಳೇವ ಕೊಡಿಸೇವು ।"[2]

ಮೇಲಿನ ಸಂದರ್ಭದಲ್ಲಿ ಬ್ರಾಹ್ಮಣಿ ತನ್ನ ಮಗಳ ಮೈಲಿಗೆ ಬಟ್ಟೆಯನ್ನು ಬಚ್ಚಿಟ್ಟು ಕೊಂಡುಹೋಗಿ 'ಸೂಳೆಕೆರೆ'ಯ ಒದಿಯಲ್ಲಿ ಮಡಿಮಾಡಿ ತಂದುಕೊಡಲು ಮಡಿವಾಳ ನಿಗರುಹುತ್ತಾಳೆ.

"ಸಾದಿಯ ಸೀರ್ಯಾಗೆ ತಾಯವ್ ಮೈನೆರತಾಳೆ
ಬಚ್ಚಿಕ್ಯಂಡ್ಹೋಗೋ ಮಡಿವಾಳ–ಸೂಳೇಕೆರೆಯ
ಒತ್ತೀಲೆ ಒಗದೆ ಮಡಿಮಾ[ಡೋ] ಡಿ ಈವೂರ
ನಿಸ್ತ್ರಿದ್ದ ಬಳಿಗೆ ಕಳುವಯ್ಯ ।"[3]

ಬ್ರಾಹ್ಮಣಿ ಹಾಡುವ 'ವಾರದ ಮಹಿಮೆ'ಯ ಹಾಡು ಕೌತುಕಪೂರ್ಣವಾಗಿದೆ.

---

1 ಕನ್ನಡ ಜನಪದ ಸಾಹಿತ್ಯಭಂಡಾರ (ಸಂಪುಟ ೧) ಪು. ೪೫೮, ಪ. ೪.

2 'ಸೋಬಾನೆ ಚಿಕ್ಕಮ್ಮನ ಪದಗಳು' ಪು. ೭೮. ಪ. ೨೬, ೭

3 ಕನ್ನಡ ಜನಪದ ಸಾಹಿತ್ಯ ಭಂಡಾರ (ಸಂಪುಟ ೧) ಪು. ೪೫೮. ಪ. ೮.

ಭಾನುವಾರ ಮೈನೆರೆದರೆ ಭಾಗ್ಯವತಿಯವಳು
ಸೋಮುವಾರ ಮೈನೆರೆದರೆ ಸ್ವಾಮಿಪತಿಭಕ್ತಿ
ಮಂಗಳವಾರ ಮೈನೆರೆದರೆ ಕೋಮಲಾಂಗಿಯಾಕೆ
ಬುಧುವಾರ ಮೈನೆರೆದರೆ ಸತಿಪತಿಸುಖವು
ಬ್ರೇಸ್ಪಾ್ವರ ಮೈನೆರೆದರೆ ಅಷ್ಟಪುತ್ರರು
ಶುಕ್ರವಾರ ಮೈನೆರೆದರೆ ಶುಭಲಗ್ನವೆಂದು
ಶನಿವಾರ ಮೈನೆರೆದರೆ ಪತಿ ಬಡವನು ![1]

ಮೈನೆರೆದ ಹೆಣ್ಣನ್ನು ಚಿತ್ತಾರದ ಹಸೆಯಲ್ಲಿ ಕುಳ್ಳಿರಿಸಿ, ಐದು ಬಗೆಯ-ಹಣ್ಣು, ಕೊಬ್ಬರಿ, ಬೆಲ್ಲ, ಚಿಗಳಿ, ತಂಬಿಟ್ಟುಗಳನ್ನು ಆಕೆಯ ಮಡಿಲಿಗೆ ತುಂಬುತ್ತಾರೆ. ಈ ಸಂದರ್ಭದಲ್ಲಿ ಹುಡುಗಿಯನ್ನು ಚಿತ್ತಾಕರ್ಷಕವಾಗಿ ಸಿಂಗರಿಸಿರುತ್ತಾರೆ. ಇದಕ್ಕಾಗಿ ಬೇಕಾಗುವ ಹೂವು, ಹಣ್ಣು, ಕಾಯಿಗಳು ದುರಗದಿಂದ ಬಂದ ವೃತ್ತಾಂತವನ್ನು ಒಕ್ಕಲಿಗರು ಹೀಗೆ ತಿಳಿಸುತ್ತಾರೆ.

"ಕಾಯ್ ಬಂದವು ಜಾಣೇ ಕಾಯಿ ತೆಂಗಿನಕಾಯಿ
ಕಾಯೋಜಿ ಕಾಯಿ ನಿಜಗಲ್ಲ-ದುರ್ಗಾದಿಂದ
ಕಾಯ್ಬಂದವು ಜಾಣೇ ಮಡಲಿಗೇ
ಹಣ್ಬಂದವು ಜಾಣೇ ಹಣ್ಣು ಬಾಳೇ ಹಣ್ಣು
ಹಣ್ಣೋಜಿ ಹಣ್ಣು ನಿಜಗಲ್ಲ-ದುರ್ಗಾದಿಂದ
ಹಣ್ಬಂದವೆ ಜಾಣೆ ಸೆರಗೀಗೆ ।
ಹೂವ್ ಬಂದವೆ ಜಾಣೇ ಹೂವು ಮಲ್ಲೀಗ್ಹೂವು
ಹೂವೋಜಿ ಹೂವು ನಿಜಗಲ್ಲ- ದುರ್ಗಾದಿಂದ
ಹೂವ್ ಬಂದವು ಕಾಣೇ ತುರುಬೀಗೆ" ।[2]

ಮೇಲಿನ ತ್ರಿಪದಿಗಳು ಒಂದೆರಡು ಪದಗಳು ವ್ಯತ್ಯಾಸಗೊಂಡು ಬ್ರಾಹ್ಮಣರ ಬಾಯಲ್ಲಿ ನಲಿಯುವುದನ್ನು ಕಾಣಬಹುದು.

"ಕಾಯಿ ಬಂದವೆ-ಕಾಯೀ ಕಾಯೀ ತೆಂಗಿನಕಾಯಿ
ಕಾಯೋಜಿ ಕಾಯಿ ದುರುಗದ-ತೆಂಗಿನಕಾಯೆ
ಕಾಯ್ ಬಂದವೆ ನಾರಿ ಮಡಲೀಗೆ ।
ಹಣ್ ಬಂದವೆ ನಾರೀ ಹಣ್ಣು ಬಾಳೇಹಣ್ಣು

---

1. ಹಾಡಿದವರು ಶ್ರೀಮತಿ ಕಪಿಲಮ್ಮ. ವಯಸ್ಸು ೫೫ ವರ್ಷ ಮಧ್ವ ಬ್ರಾಹ್ಮಣರು. ಹಂಪಾಪುರ, ಎಡತೊರೆ ತಾಲ್ಲೂಕು, ಮೈಸೂರು ಜಿಲ್ಲೆ.

2. ಕನ್ನಡ ಜನಪದ ಸಾಹಿತ್ಯ ಭಂಡಾರ (ಸಂಪುಟ ೧) ಪು. ೪೦೩. ಪ. ೧೯–೨೧

ಹಣ್ಣೋಜಿ ಹಣ್ಣೇ ದುರಗsದ–ಬಾಳೇಹಣ್ಣು
ಹಣ್ ಬಂದವೆ ನಾರೀ ಮಡಲಿಗೆ ।
ಹೂವು ಬಂದವೆ ನಾರಿ ಹೂವು ಸಂಪಿಗ್ಹೂವು
ಹೂವೋಜಿ ಹೂವು ದುರಗsದ–ಸಂಪಿಗ್ಹೂವು
ಹೂವ್ ಬಂದವೆ ನಾರಿ ಮಡಲಿಗೆ ।"[1]

ಒಸಗೆಗೆ ಬೇಕಾಗುವ ತಿಂಡಿಗಳನ್ನು ಹೆಂಗಸರು ಸಿದ್ಧಪಡಿಸುತ್ತಾರೆ. ಎಳ್ಳು ಬೆಲ್ಲವನ್ನಿಡಿದು ಚಿಗಳಿಯನ್ನೂ, ಅಕ್ಕಿ, ಬೆಲ್ಲ, ತೆಂಗಿನಕಾಯಿಯನ್ನಿಡಿದು ತಂಬಿಟ್ಟನ್ನೂ ತಯಾರಿಸುತ್ತಾರೆ. ಮೈನೆರೆದ ಬಾಲೆಯನ್ನು ಹಸೆಯಲ್ಲಿ ಕೂರಿಸಿ ಆರತಿ ಬೆಳಗುತ್ತಾರೆ. ಸಭಿಕರಿಗೆ ಚಿಗಳಿ, ತಂಬಿಟ್ಟು, ಎಲೆ ಅಡಿಕೆ ನೀಡುತ್ತಾರೆ. ಈ ಶಾಸ್ತ್ರವನ್ನು ಮಾಡಲು ಒಕ್ಕಲಗಿತ್ತಿಗೆ ಹಿರಿಯಳೊಬ್ಬಳು ನಿರ್ದೇಶನ ನೀಡುತ್ತಾಳೆ :

"ಬಾಲೆ ಮೈನ್ನೆರೆದು ಬಾಗ್ಲಲ್ಲಿ ನಿಂದವಳೆ
ಮಾಡವ್ಮ ಎಳ್ಳ ಚಿಗಳಿಯ । ತಂಬಿಟ್ಟನುಂಡೆ
ಕರಿಯಮ್ಮ ನೆರಿಯ ಗೆಳತೀರ । ಈ ಮನೆ
ಮಾಡವ್ಮ ಮಗಳ ಮಹಿಗೇಯ ।"[2]

ಈ ವೃತ್ತಾಂತವನ್ನು ಬ್ರಾಹ್ಮಣೆ ಹೀಗೆ ಹಾಡುತ್ತಾಳೆ :

"ಸುವ್ವಿ ಲೋಕನೈಕಪಾಲ ಸುವ್ವಿನೀಲ ಮೇಘಕಾಯ
ಸುವ್ವಿ ಬಾಲಗೋಪಾಲ ಸುವ್ವಾಲೇ ।
ಬೆಳ್ಳಿಯs ಒರಳನಿಟ್ಟು ಎಳ್ಳು ಬೆಲ್ಲವನ್ನೇ ಹಾಕಿ
ಬಣ್ಣದೊನಕೆಯನ್ನು ಹಿಡಿದು ಕುಟ್ಟುತಿದ್ದರು ।
ಚಿತ್ತಾರದs ಹಸೆಯ ಬರೆದು ರತ್ನದs ಪೀಠವಿರಿಸಿ
ಸುತ್ತನಾಲ್ಕು ಕಂಬಗಳನಿಟ್ಟರಾಗಲೇ ।
ಮಿತ್ರೆ ರುಕ್ಮಿಣೀದೇವಿ ಅರ್ತಿಯಿಂದ ಕುಳ್ಳಿರಲು
ಮುತ್ತೈದೆರೆಲ್ಲ ಪಾಡಿ ಪೊಗಳುತಿದ್ದರು ।"[3]

ಹೀಗೆ ಹೆಣ್ಣು ಮೈನೆರೆದಾಗ ಅನೇಕ ಆಚರಣೆಗಳನ್ನಾಚರಿಸಿ, ಸಂಭ್ರಮಪಡುವುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಹುಡುಗಿಯ ಬಂಧುಮಿತ್ರರು ಆಕೆಗೆ ಸೀರೆ,

---

3. ಅದೇ. ಪು. ೪೬೨. ಪ. ೪೦–೨

1 "ಸೋಬಾನೆ ಚಿಕ್ಕಮ್ಮನ ಪದಗಳು" ಪು. ೭೮, ಪ. ೨೯

2 ಹಾಡಿದವರು: ಶ್ರೀಮತಿ ಸೀತಮ್ಮ. ವಯಸ್ಸು ೯೩ ವರ್ಷ, ಸ್ಮಾರ್ತ ಬ್ರಾಹ್ಮಣರು. ಬಡಗನಾಡು, ಬನ್ನೂರು, ಮೈಸೂರು ಜಿಲ್ಲೆ.

ರವಿಕೆ ಮುಂತಾದ ಉಡುಗೊರೆಗಳನ್ನೀಯುತ್ತಾರೆ. ಚಟ್ಟು ಬಡಿಯುವುದು, ದಡಬ ಹಾಸುವುದು ಮುಂತಾದ ವಿಧಿಗಳನ್ನಾಚರಿಸುವುದೂ ಉಂಟು. ಮೈನೆರೆಯುವ ಮುನ್ನವೇ ಹುಡುಗಿಗೆ ಮದುವೆಯಾಗಿದ್ದರೆ, ಗಂಡಿನ ಕಡೆಯವರು ಆಕೆಯನ್ನು 'ಮನೆ ತುಂಬಿಸಿಕೊಳ್ಳಲು' ಸಡಗರದಿಂದ ಓಡಾಡುತ್ತಾರೆ. ಮದುವೆಯಾಗಿಲ್ಲ ದಿದ್ದರೆ, ಆಕೆಯ ತಂದೆ ವರನ ಬೇಟೆಗೆ ತೊಡಗುತ್ತಾನೆ. ನಾಲ್ಕಾರು ಕಡೆ ವಿಚಾರಿಸಿ ಹುಡುಗಿಯ ರೂಪ, ಅಂತಸ್ತಿಗೆ ಸರಿಯಾದ ವರನನ್ನು ಗೊತ್ತು ಮಾಡುತ್ತಾನೆ. ನಿಶ್ಚಿತಾರ್ಥವೂ ನೆರವೇರುತ್ತದೆ. ಮದುವೆಗೆ ಅನೇಕದಿನ ಮುಂಚೆಯೇ ಹೆಣ್ಣಿನ ಮನೆಯಲ್ಲಿ ಮದುವೆಯ ಸಡಗರ ಪ್ರಾರಂಭವಾಗುತ್ತದೆ. ಗಂಡಸರು ಮನೆಗೆ ಸಾಮಾನು ತಂದು ಹಾಕಿದರೆ, ಹೆಂಗಸರು ಅವುಗಳನ್ನು ಹಸನು ಮಾಡುವ ಕೆಲಸದಲ್ಲಿ ನಿರತ ರಾಗುತ್ತಾರೆ.

ಮದುವೆಯೂಟಕ್ಕೆ ಬೇಕಾಗುವ ಹಪ್ಪಳ ತಯಾರಿಸಲು ಉದ್ದನೊಡೆಯುತ್ತಾರೆ, ರವೆಗಾಗಿ ಗೋಧಿ ಕುಟ್ಟುತ್ತಾರೆ. ಅರಿಶಿನದ ಕೊನೆಗಳನ್ನು ಕುಟ್ಟಿ ಅರಿಶಿನದಪುಡಿ ತಯಾರಿಸುತ್ತಾರೆ. ಈ ಕೆಲಸಗಳಲ್ಲಿ ಊರ ಹೆಂಗಸರೆಲ್ಲ ಅವರಿಗೆ ನೆರವಾಗುತ್ತಾರೆ. ಹಿಂದೆ ವಿದ್ಯುತ್ ಚಾಲಿತ ಯಂತ್ರಗಳಿಲ್ಲದ ಕಾರಣ ಬೀಸಿ, ಕುಟ್ಟುವ ಕೆಲಸಗಳು ಶ್ರಮ ದಾಯಕವಾಗಿದ್ದವು. ಆದರೆ, ಊರ ಹೆಂಗೆಳೆಯರು ಒಟ್ಟಾಗಿ, ವಿನೋದಪದಗಳನ್ನೂ. ಶಾಸ್ತ್ರದ ಪದಗಳನ್ನೂ ಹಾಡುತ್ತ ಪೈಪೋಟಿಯಿಂದ ಕೆಲಸದಲ್ಲಿ ನೆರವಾಗುತ್ತಿದ್ದರು.

ಒರಳು, ಬೀಸುವ ಕಲ್ಲನ್ನು ಪೂಜಿಸಿ, ಧಾನ್ಯವನ್ನು ಕುಟ್ಟಿ ಬೀಸುವ ಪರಿಯನ್ನು ಒಕ್ಕಲಿಗಿತ್ತಿ ಹೀಗೆ ಹಾಡುತ್ತಾಳೆ :

"ಸುವ್ವಾ ಬಾ ಸುವ್ವಿ ಸುವ್ವಾ ಬಾ । ಪ ।
ಹಟ್ಟೀ ಕಲ್ಲೊಳ್ಳಿಗೆ ಒಟ್ಟು ಗಂಧವನಿಟ್ಟು
ಪುಟ್ಟ ಬಾಳೆಹಣ್ಣ ಸುಲಿದಿಟ್ಟು– ಸುವ್ವಾ ಬಾ
ಪುಟ್ಟ ಬಾಳೇಹಣ್ಣ ಸುಲಿದಿಟ್ಟು ಈ ಮನೆ
ನಾರೇರೊಳಕ್ಕಿ ತೊಳಸ್ಯಾರೇ–ಸುವ್ವಾ ಬಾ ।[1]

ನಾರೀರು ಕುಟ್ಯಾರೆ ಕೋರೀರು ತೂರ್‍ಯಾರೆ
ನಾರೀರು ಉದ್ದ ಒಡದಾರೆ
ನಾರೀರು ಉದ್ದ ಒಡದಾರಾಚೆ ಕೇರಿ
ಬಾಲಕಿಷ್ಣಯ್ಯನ ಮದವೀಗೆ ।[2]

---

1 ಕನ್ನಡ ಜನಪದ ಸಾಹಿತ್ಯ ಭಂಡಾರ (ಸಂಪುಟ ೧) ಪು. ೩೭೦, ಪ. ೧

2 "ಸೋಬಾನೆ ಪದಗಳು" ಪು. ೯. ಪ. ೪೭,

ಶುಭಮುಹೂರ್ತದಲ್ಲಿ ಪ್ರಾರಂಭಮಾಡಿ, ಹೆಂಗಸರು ಮದುವೆಗಾಗಿ ಗೋಧಿಯನ್ನು ಕುಟ್ಟಿ, ಕೇರುವ ರೀತಿಯನ್ನು ಬ್ರಾಹ್ಮಣಿ ಹಾಡುವ ಪರಿ ಹೀಗಿದೆ :

"ದಶರಥನ ಮಂದಿರದಿ ಅಸುರಾರಿ ರಾಘವಗೆ
ಕುಶಲದಲಿ ಗೋಧಿ ಕಲ್ಲಿಕ್ಕಲೆಂದು
ಬೆಸಗೊಂಡು ಜೋಯಿಸರು ಬೇಗ ಮುಹೂರ್ತಂಗಳಿಗೆ
ಶಶಿಮುಖಿಯರೊಲಿದು ಶೃಂಗರವಾದರು

ಚಪ್ಪರದ ಒಳಗೆಲ್ಲ ಎಪ್ಪತ್ತು ಕಲ್ಹೂಡಿ
ಮಿತ್ರೆಯರಿಬ್ಬಿಬ್ಬರ್ಹಿಡಿದು ಬೀಸಿ
ಎಪ್ಪತ್ತು ಚಿನ್ನದವೊರನ ಹಿಡಿದುಕೇರಿದರಾಗ
ರಾಮರಾಯರ ಮದುವೆ ಉತ್ಸಹದಲಿ ।"[1]

ಮದುವೆಗೆ ಸಿದ್ಧತೆಗಳು ನಡೆಯುತ್ತಿದ್ದಂತೆಯೇ ಬಂಧು ಬಳಗದವರನ್ನೂ ಇಷ್ಟ ಮಿತ್ರರನ್ನೂ ಮದುವೆಗೆ ಆಹ್ವಾನಿಸುವ ಕೆಲಸ ಪ್ರಾರಂಭವಾಗುತ್ತದೆ. ಮದುವೆಯ ಸಂದರ್ಭದಲ್ಲಿ ನೆಂಟರಿಷ್ಟರು ಒಟ್ಟಿಗೆ ಕಲೆತು ಸಂತಸದಿಂದರಬೇಕೆಂಬ ಆಸೆಯೊಡನೆ ಮಗಳ ಮದುವೆಗೆ ಕರೆಯಲಿಲ್ಲ ಎಂಬ ಆಕ್ಷೇಪಣೆ ಬಂಬಾರದೆಂಬ ಕಳಕಳಿಯೂ ಇರುತ್ತದೆ. ಕೆಲವರನ್ನು ತಾವೇ ಹೋಗಿ ಆಹ್ವಾನಿಸಿದರೆ, ಕೆಲವರಿಗೆ ಪತ್ರಬರೆದು ಕರೆಸಿಕೊಳ್ಳುತ್ತಾರೆ. ಬಂಟರ ಹತ್ತಿರ ಹಲವರಿಗೆ ಹೇಳಿಕಳುಹಿದರೆ, ಹತ್ತಿರದ ಬಳಗದವರಿಗೆ ಬರಲು ವಾಹನ ಕಳುಹಿಸುತ್ತಾರೆ. ಹೀಗೆ ಮದುವೆಗೆ ಕರೆಯುವ ಸಂದರ್ಭವನ್ನು ಕುರಿತು 'ಕೇರಿ ಕರೆಯುವ ಪದ'ಗಳೂ. 'ಬಳಗ ಕರೆಯುವ ಪದ'ಗಳೂ ಜನಪ್ರಿಯವಾಗಿವೆ. ಬೀಗರನ್ನು ಕರೆಯಲು ಬಿಲ್ಲಾಳುಗಳನ್ನು ಕಳುಹಿಸಿ, ಮಗಳನ್ನು ಕರೆತರಲು ಅಂದಣವನ್ನು ಕಳುಹಿಸಿದ್ದು, ಕೇರಿಯನ್ನು ಕರೆಯಲು ತಾಯಿ ತಾನೇ ಹೊರಟದ್ದು, ಮದುವೆಗೆ ಬರಬೇಕೆಂದು ಮದುವಣಗ ಅಕ್ಕನಿಗೆ ಪತ್ರ ಬರೆದದ್ದು—ಈ ವೃತ್ತಾಂತಗಳನ್ನು ಒಕ್ಕಲಿಗಿತ್ತಿ ಮನೋಜ್ಞವಾಗಿ ಹಾಡುತ್ತಾಳೆ :

"ಬೀಗರು ಬೀಗರಿಗೆಲ್ಲ ಬಿಲ್ಲಾಳ ಕಳುವ್ಯಾರೇ
ಪಿಲ್ಲಿಯ ಕಾಲ ಮಗ[ಳಿಗೆ]ಳು ಹನುಮಕ್ಕಗೆ
ಪಲ್ಲಕ್ಕಿ ಕೊಟ್ಟು ಕಳುವ್ಯಾರೆ
ಕಟ್ಟೆಯ ಮೇಲೆ ಒಪ್ಪಕೆ ಮದುಮಗ ಕುಂತು
ಅವರಕ್ಕಗೆ ವಾಲೇ ಬರೆದಾನೆ—ದೇವರ ಕಾರ್‍ಯ

---

1 ಹಾಡಿದವರು ಶ್ರೀಮತಿ ವೆಂಕಟಲಕ್ಷಮ್ಮ, ವಯಸ್ಸು ೭೩, ಸಂಕೇತಿ ಬ್ರಾಹ್ಮಣರು, ಹಾಸನ.

ಹೊತ್ತಿಗೆ ನಮ್ಮಕ್ಕ ಬರಬೇಕು
ಕೇರಿಕೇರಿ ಕೂಟೆ ಹೋದಾಳೆ ಅವರವ್ವ
ಕೇರ್‍ಯಳ ಮುತ್ತೈದೇರು ಬರಿರವ್ವ–ನಮ್ಮನೆಯ
ಪುತ್ರಯ್ಗುರುಶಣವೆ ಬಳುದೇವು"[1]

ಕೃಷ್ಣನ ವಿವಾಹ ಸಂದರ್ಭದಲ್ಲಿ ದೇವಕೀದೇವಿ ಅಕ್ಷತೆ ಕಲಸಿ, ಅಕ್ಷತೆ ನೀಡಿ ಆ ಬಾಲ ವೃದ್ಧರನ್ನು ಮದುವೆಗೆ ಕರೆದದ್ದು, ಸುಭದ್ರೆ ಶೃಂಗರಿಸಿಕೊಂಡು ಕೇರಿ ಕರೆಯಲು ಹೊರಟದ್ದು, ವಸುದೇವ ದೇವಾಧಿ ದೇವತೆಗಳನ್ನು ವಿವಾಹಕ್ಕೆ ಆಹ್ವಾನಿಸಿ ಓಲೆ ಕಳುಹಿಸಿದ್ದು–ಇವೇ ಮುಂತಾದ ವೃತ್ತಾಂತಗಳನ್ನು ಬ್ರಾಹ್ಮಣ ಸುದೀರ್ಘವಾಗಿ ಹಾಡುತ್ತಾಳೆ :

"ಹೂವಿನ ಹರಿವಾಣದಲಿ ಸಣ್ಣಕ್ಕಿ ತುಂಬಿದಳೆ
ಕುಂಕುಮ ಅರಿಶಿನ ಹದಮಾಡಿ–ದೇವಕೀ
ಅಕ್ಷತೆ ಕಲಶಿದಳೇ ಶುಭದಿಂದ ।
ಎಪ್ಪತ್ತು ವರ್ಷದ ಮುಪ್ಪಿನ ಮುತ್ತೈದೇರು
ಬಾಲರು ಸಹವಾಗಿ ಬರಬೇಕು–ಎಂದ್ಹೇಳಿ
ದೇವಕಿ ನಗುತ ನುಡಿದಳೆ ।
ಸೌಭದ್ರದೇವಿಯು ಆಭರಣಗಳನಿಟ್ಟು
ಗಜ್ಜರಿ ಗಂಬಿಯನೇ ನೆರಿದುಟ್ಟು–ಸೌಭದ್ರೆಯು
ಕೇರಿ ಕರಿವಲಿಕೇ ಹೊರಟಳೇ ।
ಕೈಲಾಸಕ್ಕೋಲೆಯ ಕಳುಹಿದ ವಸುದೇವ
ಪರಮೇಶ್ವರ ಪಾರ್ವತಿ ಸಹಿತಲೆ–ಬರಬೇಕೆಂದು
ಓಲೆ ಕಳುಹಿಸಿದ ಶುಭದಿಂದ ।[2]

ಬಂಧು ಬಳಗದವರನ್ನು ಕರೆಯಲು ಕಳುಹಿಸಿ, ಮದುವೆಗೆ ಸಕಲ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಾರೆ. ಮದುವೆ ಮನೆಯ ಮುಂದೆ ಚಪ್ಪರ ಹಾಕಿ, ತೋರಣ ಕಟ್ಟು ತ್ತಾರೆ, ಮದುವೆ ಮಂಟಪದಲ್ಲಿ ಹೆಂಗಸರು ನಯನ ಮನೋಹರವಾಗಿ ಹಸೆ ಬರೆಯು ತ್ತಾರೆ. ಹಸೆಯ ಮೇಲೆ ಮಣೆ ಹಾಕಿ, ಮಣೆಯ ಮೇಲೆಯೂ ಅಂದವಾದ ಹಸೆ ಬರೆಯುತ್ತಾರೆ. ಮದುವೆಯ ಸಮಯದಲ್ಲಿ ನಡೆಯುವ ವಿವಿಧ ಶಾಸ್ತ್ರಗಳನ್ನು ಮಾಡು ವಾಗ ವಧೂವರರು ಅಲಂಕರಿಸಲ್ಪಟ್ಟ ಹಸೆಮಣೆಯ ಮೇಲೆಯೇ ಕುಳಿತುಕೊಳ್ಳುತ್ತಾರೆ.

---

1 ಕನ್ನಡ ಜನಪದ ಸಾಹಿತ್ಯ ಭಂಡಾರ (ಸಂಪುಟ ೧) ಪು. ೩೭೧ ಪ. ೧, ೩, ಪು. ೭–೭೨ ಪ. ೪

2. ಅದೇ ; ೪೩೬. ಪ. ೮, ೧೧, ೧೩. ಪು. ೪೩೭. ಪ, ೨೧

ಇದರಿಂದ ಕೆಟ್ಟ ಶಕ್ತಿಗಳು ವಧೂವರರ ಮೇಲೆ ಪ್ರಭಾವ ಬೀರುವುದಿಲ್ಲವೆಂದು ನಂಬುತ್ತಾರೆ. ಹಸೆ ಬರೆಯುವ ಹಾಗೂ ಹಸೆಮಣೆಗೆ ಹೆಣ್ಣು, ಗಂಡುಗಳನ್ನು ಕರೆತರುವ ಸಂದರ್ಭದಲ್ಲಿ ಅನೇಕ 'ಹಸೆಗೆ ಕರೆಯುವ ಹಾಡು'ಗಳನ್ನು ಹಾಡುತ್ತಾರೆ.

ಸಗಣಿಯಿಂದ ನೆಲಸಾರಿಸಿ, ರಂಗವಲ್ಲಿಯನ್ನಿಡುವ ಬಗೆಯನ್ನು ಒಕ್ಕಲಗಿತ್ತಿ ಹೀಗೆ ಬಣ್ಣಿಸುತ್ತಾಳೆ :

"ಕರುವಿನ ಸಗಣಿಯ ಕಿರುದಂಗೇರು ತಕ್ಕೊಂಡು
ಅರಮನೆಯೊಳಗೆ ನೆಲಾ ಬಳದು-ಅದರಂಡಕೆ
ಆರುವತ್ತೆ ಗೀರ ಬರೆದರೆ ।
ಬಾಗಿಲೆದುರಿಗೆ ಬರೆಯವ್ವ ಚೌಕವ
ಬಾಗಿಲಿಗೆರಡು ಅರಗಿಳಿ-ಸುರಗಿಳಿ
ಸುವ್ವರದ ನಗೆಯ ನಗುತಾವೆ ।"[1]

ಅಂದವಾಗಿ ಹಸೆಬರೆದು ಅದರ ಮೇಲೆ ವಜ್ರವೈಢೂರ್ಯದಿಂದ ಅಲಂಕಾರಗೊಳಿಸಿದ ಮಣೆಯನ್ನು ಹಾಕಿರುವ ಪರಿಯನ್ನು ಬ್ರಾಹ್ಮಣ ಹೀಗೆ ಹಾಡುತ್ತಾಳೆ :

"ಅಚ್ಚಮುತ್ತಿನ ರಂಗವಲ್ಯಾ ಸುತ್ತ ಪಂಚ ಬಣ್ಣಗೇ
ನಡುವ್ಕೆಲ್ಲಾ ವಜ್ರ ವಯ್ಡೂರ್ಯ-ಕೆತ್ತಿಸಿದ
ಮಣೆಯ ನಿರುಶೀದ್ವರೇ ಹಸೀಮ್ಯಾಲೆ ।"[2]

ಶೃಂಗರಿಸಿದ ಹಸೆ ಜಗಲಿಯ ಸೊಬಗನ್ನು ನೋಡಿ ನೆರೆದವರು ಹೀಗೆ ಉದ್ಗರಿಸುತ್ತಾರೆ :

"ಎಂತಿಹುದೀ ಹಸೆಜಗುಲಿಯ ವಿಭವ
ಇದೇನಿದ್ದಸೆಗಳ್ಸ್ಮರನ ರಥದ ಗಿಳಿಗಳು"[3]

ಮದುವೆಯ ಸಂದರ್ಭದಲ್ಲಿ ವಧೂವರರಿಗೆ 'ಎಣ್ಣೆ ಶಾಸ್ತ್ರ' ಮಾಡುತ್ತಾರೆ. ಶೃಂಗರಿಸಿದ ಹಸೆಯಲ್ಲಿ ಕುಳ್ಳಿರಿಸಿ, ಮುತ್ತೈದೆಯರು ಸುಗಂಧಭರಿತವಾದ ತೈಲವನ್ನೊತ್ತುತ್ತಾರೆ. ಆರತಿ ಬೆಳಗಿದ ನಂತರ ಅಭ್ಯಂಜನಸ್ನಾನ ಮಾಡಿಸುತ್ತಾರೆ. ವರನಿಗೆ ಎಣ್ಣೆಯೊತ್ತುವಸಲುವಾಗಿ ವರನ ತಾಯಿ ಏಣಿ ಹತ್ತಿ ಅಟ್ಟದಲ್ಲಿಟ್ಟಿರುವ ಹರಳೆಣ್ಣೆಯ ಕೊಡವನ್ನು ತೆಗೆಯುವ ಪರಿಯನ್ನು ಒಕ್ಕಲಗಿತ್ತಿ ಹೀಗೆ ಹಾಡುತ್ತಾಳೆ.

---

1. ಅದೇ ; ಪು. ೩೭೩. ಪ. ೩,೬.
2. ಅದೇ ; ಪು. ೪೦೬. ಪ. ೨
3. ಹಾಡಿದವರು, ಶ್ರೀಮತಿ ಕಪಿಲಮ್ಮ

"ಅಟ್ಟಕೆ ಹಾತ್ಯಾಳೆ ಹತ್ತು ಕಾಲೇಣಿಯ
ಹರಳೆಣ್ಣೆ ಕೊಡನ ತೆಗೆದಳೆ-ಅವರವ್ವ
ಹಚ್ಚಿಂದೋ ತನ್ನ ಮಗನಿಗೆ ।"[1]

ಏಣಿಹತ್ತಿ ಉಪ್ಪರಿಗೆಯಲ್ಲಿಟ್ಟಿರುವ ಎಣ್ಣೆಯನ್ನು ತನ್ನ ಮಗನಿಗೆ ಹಚ್ಚಲು ಬ್ರಾಹ್ಮಣಿ ತೆಗೆಯುತ್ತಾಳೆ, ಆ ಎಣ್ಣೆ ಸಾಮಾನ್ಯವಾದುದಲ್ಲ. ತನ್ನ ಮಗನ ರಟ್ಟೆಗಟ್ಟಿಯಾಗ ಲೆಂದು ಮೃಗಗಳ ಕೋಂಬಿನಲ್ಲಿ ಶೇಖರಿಸಿಟ್ಟಿರುವ 'ಕೊಂಬೈಣ್ಣೆ'ಯನ್ನು ತೆಗೆದು ಮದು ಮಗನ 'ತೋಳ ಸುರುಳೀಗೆ' ನೀವಿ, ನೀರೆರೆಯುತ್ತಾಳೆ.

"ಹತ್ತೂ ಕಾಲೇಣೀಯ ಉಪ್ಪರಿಗ್ಗೆ ಸಾಚಿದಳೇ
ಅಕ್ಕ ಕೊಂಬೈಣ್ಣೆ ಮಗ [ದsಳೆ]-ದು ತಂದಳೆ ತನ್ನ
ಪುತ್ರನ ತೋಳ ಸುರುಳೀಗೆ "[2]

ಎಣ್ಣೆ ಹಚ್ಚಿದ ಮೇಲೆ ಕಡಾಯುಗಳಲ್ಲಿ ಕಾಸಿದ ನೀರಿನಿಂದ ಆತನಿಗೆ ಮಜ್ಜನ ಮಾಡಿಸು ತ್ತಾರೆ. ಮಗ ಸ್ನಾನಮಾಡಿದ ನೀರು ಮನೆಯ ಅಂಗಳವನ್ನು ದಾಟಿ, ಹೊರಗೆ ಹರಿ ಯಿತು. ಊರ ಹೊಳೆಯನ್ನೂ ದಾಟಿ ಮುಂದುವರೆದು ಹೊಳೆಯ ಆಚೆ ದಡದಲ್ಲಿರುವ ಬಾಳೆವನಕ್ಕೆ, ನಿಂಬೆವನಕ್ಕೆ ಹರಿದು, ಅವು ಬೆಳೆಯಲು ಸಹಾಯವಾಯಿತು ಎಂದು ಹೇಳುವುದರ ಮೂಲಕ ತನ್ನ ಮಗ ಸ್ನಾನಮಾಡಿದ ವೈಖರಿಯನ್ನು ಒಕ್ಕಲಗಿತ್ತಿ ಅರು ಹುತ್ತಾಳೆ.

"ಬಾಲಣ್ಣ ಮೀದ ನೀರು ಬಾಗಲಿಗೆ ಹರದವೆ
ಬಾಗಲ ಮೀರಿ ಹೊಳಿ ಮೀರಿ । ಹೊಳಿಯಾಚೆ
ಬಾಳೆ ವಾಲಾಡಿ ಬೆಳುದಾವೆ ।
ಕಂದಣ್ಣ ಮೀದ ನೀರು ಕಂದಲಕೆ ಹರದವೆ
ಕಂದಲ ದಾಟಿ ಹೊಳಿ ದಾಟಿ । ಹೊಳಿಯಾಚೆ
ಇಂಬಿವಾಲಾಡಿ ಬೆಳುದಾವೆ ।"[3]

ತನ್ನ ಮಗನ ಹಣೆಗೆ ಒತ್ತಿದ ಎಣ್ಣೆ ಹರಿಯುತ್ತ ಸಾಗಿ ಮನೆಯ ಹೊಸ್ತಿಲನ್ನು ದಾಟಿ ಅಂಗಳದಲ್ಲಿರುವ ಪುಷ್ಪವನವನ್ನು ಸೇರಿ ಪುಷ್ಪಗಳನ್ನು ಓಲಾಡಿಸಿತು ಎಂದು ಹೇಳುವುದರ ಮೂಲಕ ಬ್ರಾಹ್ಮಣಿ ಮದುಮಗನಿಗೆ ಮಾಡಿದ 'ಎಣ್ಣೆಶಾಸ್ತ್ರ'ದವೈಭವವನ್ನು ತಿಳಿಸು ತ್ತಾಳೆ.

---

1. "ಕನ್ನಡ ಜನಪದ ಸಾಹಿತ್ಯ ಭಂಡಾರ" (ಸಂಪುಟ ೧ ಪು. ೩೭೬. ಪ. ೨)
2. ಅದೇ ; ಪು. ೪೦೭ ; ಪ, ೭.
3. "ಸೋಬಾನೆ ಚಿಕ್ಕಮ್ಮನ ಪದಗಳು" ಪು. ೨೧ ; ಪ. ೧೩೧-೨

"ಪುತ್ರಾಗ್ಯನು ಸೀದೆಣ್ಣೆ ಹಸ್ತಿಲುಗುಂಟ್ಟರಿದಾವೆ
ಹಸ್ತಿಲು ದಾಟಿ ಮಿಗಿಲ್ ದಾಟಿ–ಮುಂದಣ
ಪುಷ್ಪವಲ್ಲಾಡಿ ಹರಿದಾವೇ ।
ಬಾಲಾಗ್ದನುಸೀದೆಣ್ಣೆ ಬಾಗಿಲುಗುಂಟ್ಟರಿದಾವೆ
ಬಾಗಿಲು ದಾಟೀ ಮಿಗಿಲ್ ದಾಟಿ–ಮುಂದsಣ
ಹೂವು ಓಲಾsಡಿ ಹರಿದಾವೇ ।"[1]

ಅಭ್ಯಂಜನವಾದ ಮೇಲೆ ವರನನ್ನು ಸರ್ವಾಭರಣಗಳಿಂದಲಂಕರಿಸಿ, ಮದುವೆಯ ಮಂಟಪಕ್ಕೆ ಕರೆತರುತ್ತಾರೆ. ಬಾಗಿಲಲ್ಲಿ ಮುತ್ತೈದೆಯರು ಕಲಶ, ಕನ್ನಡಿ ಹಿಡಿದು, ವರನ ಕಡೆಯವರನ್ನೆದುರುಗೊಂಡು, ಆತನಿಗೆ ಆರತಿ ಬೆಳಗಿ, ಇಡಗಾಯಿ ಒಡೆದು, ಒಳಗೆ ಕರೆತರುತ್ತಾರೆ. ಇಂತಹ ಶುಭಕಾರ್ಯಗಳು ಮೇಲಿಂದ-ಮೇಲೆ ನಡೆಯಲಿ ಎಂದು ಪ್ರಾರ್ಥಿಸಿ, ಕಲಶ ತೆಗೆದುಕೊಂಡು ಹೊರಡಿರಿ ಎಂದು ಹಿರಿಯರು ಹೇಳುತ್ತಾರೆ. ಹಾಗೆ ಕಲಶತೆಗೆದುಕೊಂಡು ಹೊರಟಾಗ ಗೌಳಿ ಶಕುನ ನುಡಿಯಿತೆಂಬ ವೃತ್ತಾಂತವನ್ನು ಬ್ರಾಹ್ಮಣಿ ಹೀಗೆ ಹಾಡುತ್ತಾಳೆ :

"ಕಲಶ ಕನ್ನಡಿ ಕೊಳ್ಳಿ ಅಡಿಕೆ ವೀಳ್ಯವಕೊಳ್ಳಿ
ವರುಷಕ್ಕೊಂದೆರಡು ಮದುವೇ [ಯು] ಯಾಗಲೆಂದು
ಹರಸಿ ತಕ್ಕೊಳ್ಳೀ ಕಲsಸವ
ಅಕ್ಕ ಕಲಶವ ಕೊಂಡು ಹಸ್ತೀಲಾ ಇಳಿವಾಗ
ಹಸ್ತೀsಲ ಗವುಳೀ ನುಡೀದಾವೇ-ನಿನಗ್ವೊಬ್ಬ
ಪುತ್ರ ಹುಟ್ಟದನೇ ಬಳsಗಕ್ಕೆ ।"[2]

ಈ ವೃತ್ತಾಂತವನ್ನು ಒಕ್ಕಲಗಿತ್ತಿ ಹಾಡುವ ಪರಿ :

"ಕಳಸಾ ತಕ್ಕೊಳ್ಳಿ ಕಳೆಯುಳ್ಳ ಮುತ್ತೈದೆ
ವರುಷಕೆ ನೂರು ಮದುವೆ [ಯು]–ಯಾಗಲೆಂದು
ಹರಸಿ ತಕ್ಕೊಳ್ಳಿ ಕಳಸವ ।
ಬಾಗಿಲ ಬಿಟ್ಟೊಳ್ಗುವಾಗ ಬಾಳೆ ಪಲ್ಲೈ ಸಾsವೇ
ಬಾಗಿಲ ಗೌಳಿ ನುಡಿದಾವೇ–ಮದಲಿಂಗನ
ತಂಗ್ಯಮಾ ತಕ್ಕೊಳ್ಳಿ ಕಳಸವ ।"[3]

---

1. ಅದೇ ; ಪು. ೪೦೮. ಪ. ೧೩–೪,
2. ಅದೇ ; ಪು. ೪೨೬. ಪ. ೫,೬.
3. ಅದೇ ; ಪು. ೩೮೧. ಪ. ೧,೩.

ವರನನ್ನು ಮದುವೆಯ ಮಂಟಪಕ್ಕೆ ಕರೆತಂದ ಬಳಿಕ ಅವರವರ ಪದ್ಧತಿಯಂತೆ ಅನೇಕ ವಿಧಿಗಳನ್ನಾಚರಿಸುತ್ತಾರೆ. ಅನಂತರ ಶುಭಮುಹೂರ್ತದಲ್ಲಿ ವಧುವನ್ನು ಧಾರಾಪೂರ್ವಕವಾಗಿ ವರನಿಗೊಪ್ಪಿಸುತ್ತಾರೆ. ವಧುವಿಗೆ ಹಾಲು ಅನ್ನವನ್ನು ತಿನ್ನಿಸಿ, ಸೋದರಮಾವ ಅವಳನ್ನು ಧಾರಾಮಂಟಪಕ್ಕೆ ಕರೆದುಕೊಂಡು ಬರುತ್ತಾನೆ. ಆಕೆಯ ಕೈಯಲ್ಲಿ ಎಲೆ ಅಡಿಕೆ, ತೆಂಗಿನಕಾಯಿ, ಚಿನ್ನ ಹಾಗೂ ತುಳಸೀದಳವನ್ನಿರಿಸಿ, ಆಕೆಯ ಕೈಯನ್ನು ವರನ ಕೈಯಲ್ಲಿರಿಸುತ್ತಾರೆ. ತಾಯಿ ಗಿಂಡಿಯಿಂದ ಗಂಗೋದಕವನ್ನೆರೆಯಲು, ತಂದೆ ಧರ್ಮಾರ್ಥಕಾಮ ಸಿದ್ಧಿಗಾಗಿ ಅವಳನ್ನು ವರನಿಗೊಪ್ಪಿಸುತ್ತಾನೆ.
ಈ ವೃತ್ತಾಂತವನ್ನು ಬ್ರಾಹ್ಮಣಿ ಹೀಗೆ ವಿವರಿಸುತ್ತಾಳೆ–

"ಕನ್ಯಾದಾನವ ನನ್ನಿಯಿಂ ಮಾಡಿದ
ಜನಕ ಭೂಪಾಲನು ಇನಕುಲತಿಲಕಗೆ । ಪ ।
ಹರಿಯ ಕರದ ಮೇಲೆ ಸಿರಿಯಕರವನಿಟ್ಟು
ಹರುಷದಿಂದಂಬೂ ಧಾರೆಯಿಂದಲಿ ತಾನು । ೧ ।
ವಧೂವರರನು ತಾನೊಟ್ಟಿಗೆ ನಿಲ್ಲಿಸಿ
ಕಾಶೀಗಂಗೆಯಿಂದ ಧಾರೆಯನೆರೆದ । ೨ ।
ಭೂಸುರವರ್ಗವು ಲೇಸುಲೇಸೆನುತಿರೆ
ಭೂಸುತೆಯನು ತಾ ಭಾಸ್ಕರ ಕುಲಜಗೆ । ೩ ।[1]"

ಒಕ್ಕಲಿಗರಲ್ಲಿ ತಾಯಿತಂದೆಗಳು ಮಾತ್ರವಲ್ಲದೆ ಹಿರಿಯರೆಲ್ಲರೂ ಧಾರೆನೀರೆರೆಯುವ ಸಂಪ್ರದಾಯವಿದೆ. ಧಾರೆ ಎರೆದ ಮೇಲೆ ವಧೂವರರ ತಲೆಗೆ ಅಕ್ಷತೆ ತಳಿದು ಅವರನ್ನು ಹರಸುತ್ತಾರೆ. ಒಕ್ಕಲಿಗರ ಮದುವೆಯ ಸಂದರ್ಭದಲ್ಲಿ ಬ್ರಾಹ್ಮಣ ಪುರೋಹಿತರು ಧಾರೆನೀರೆರೆವ ಪರಿಯನ್ನು ಕುರಿತು ಒಕ್ಕಲಗಿತ್ತಿ ಅನೇಕ ಪದಗಳನ್ನು ಹಾಡುತ್ತಾಳೆ :

ಮುಂದಿಂಗಳ ಬೆಳಕಲ್ಲಿ ಮುಂದಿಬ್ಬರ್ಹಾರುವರು
ತಾಮುರದ ಚೆಂಬ ಹಿಡಕಂಡು ।
ತಾಂಬುರದ ಚೆಂಬ ಹಿಡಕಂಡ್ಹಾರುವಯ್ಯ
ಬಾಲಿಗು ಕೈಧಾರೆ ಎರದಾನೆ ।"[2]

"ಹಾರೋರು ಬರಲೀ ಧಾರ್ನೀರ ಎರಿಯಾಲಿ
ಗಿಂಡ್ವಾಯ ಬರಲಿ ಕೈಎತ್ತಿ ಕೊಡಲಿ
ಕೈಯಾಗನಕ್ಕಿ ಮುಡಿಮ್ಯಾಲೆ ಬೀಳಾಲಿ

1 ಹಾಡಿದವರು ಶ್ರೀಮತಿ ವೆಂಕಟಲಕ್ಷಮ್ಮ
2 "ಸೋಬಾನೆ ಚಿಕ್ಕಮ್ಮನ ಪದಗಳು" ಪು. ಪು. ೪೦. ೨೮೪

ಮಂಡಿಮ್ಯಾಲಿನಕ್ಕಿ ಮುತ್ತಾಗಿ ಉದುರಲಿ
ನಾವಿಟ್ಟ ಸಾಸ್ವಿ ಗುರುಕೊಟ್ಟ ಭಾಷೀ
ಜಯಜಯಾ–ಸೋಬಾನವೇ ।"[1]

ಧಾರೆ ಎರೆದ ಮೇಲೆ ಮದುಮಗ ಸಭಿಕರ ಸಾಕ್ಷಿಯಾಗಿ ತಾನು ಮದುಮಗಳನ್ನು ವರಿಸಿದುದರ ಸಂಕೇತವಾಗಿ ಆಕೆಯ ಕೊರಳಿಗೆ 'ತಾಳಿ' ಕಟ್ಟುತ್ತಾನೆ. ಸೌಮಂಗಲ್ಯದ ಸಂಕೇತವಾದ ತಾಲಿಯನ್ನು ಗಂಡ ಬದುಕಿರುವವರೆಗೆ ಹೆಂಡತಿ ಧರಿಸಿರುತ್ತಾಳೆ. ಮಂಗಳ ವಾದ್ಯಗಳು ಮೊಳಗುತ್ತಿರಲು, ವರ ಮಾಂಗಲ್ಯಧಾರಣೆ ಮಾಡುವ ವಿಸ್ತಾರವನ್ನು ಬ್ರಾಹ್ಮಣಿ ಹೀಗೆ ಹಾಡುತ್ತಾಳೆ :

"ಕಟ್ಟಿsದ ಮಾಂಗಲ್ಯ ಸೂತ್ರವ । ದೇವ ।
ಕಟ್ಟಿsದ ಮಾಂಗಲ್ಯ ಸೂತ್ರವ । ಪ ।
ಬೆಟ್ಟsದೊಡೆಯ ಜಗಜಟ್ಟಿsವೆಂಕಟರಮಣ । ಅವ ।
ಅಷ್ಟsಲಕ್ಷ್ಮಿಯರ ಕೂsಟದಿ । ದೇವ ।
ಕೊಟ್ಟs ಕನ್ಯಾರತ್ನ ಭೂಪವು ।
ಅಪ್ಪsರೊಳಗೆ ಬಹುಶ್ರೇಷ್ಠsದಿಂ ಕೈ ಪಿಡಿದು । ೧ ।
ಅಂಗsನೆರೆಲ್ಲರು ಕೂsಡುತ ! ದೇವ ।
ಶೃಂಗಾರ ಕನ್ಯೆಯ ನೋಡುತ
ಮಂಗsಳಗರುಡ ಸಾರಂಗ ವೆಂಕಟರಮಣ । ೨ ।
ರಾಜಾಧಿರಾಜರು ನೋsಡುತ । ಪಾದ ।
ಕಾಣಿsಕೆ ಕಲ್ಪವನೀsಯಲು ।
ಪಾಣಿಗ್ರಹಣವಕೊಂಡ ವೇಣಾಂಕಕುಲತಿಲಕ ।೩।"[2]

ಕಡಬದಿಂದ ಅಕ್ಕಸಾಲಿಗನನ್ನು ಕರೆಸಿ, 'ಹರಿದಾಳಿ' ಮಾಡಿಸಿ ಸಭಿಕರ ಸಾಕ್ಷಿಯಾಗಿ ಅದನ್ನು ವಧುವಿಗೆ ಕಟ್ಟಿಸಿದ ವೃತ್ತಾಂತವನ್ನು ಒಕ್ಕಲಗಿತ್ತಿ ಹಾಡುವ ಪರಿ ಇಂತಿದೆ :

"ಕಡಲೆಕಾಯ್ರೊರ ಕಡದು ಹೋಯ್ತಾದೆಂದು
ಕಡಬದ ಅಗಸಾಲೆ ಕರಿಸ್ಯಾನೆ
ಕಡಬದ ಅಗಸಾಲೆ ಕರಿಸ್ಯಾನವರ ಮಾವ
ಕನ್ನಿಗೆ ಮಾಡಿಸ್ಕೊಂಡ್ಬರಿದಾಳಿ"[3]

---

1 "ಕನ್ನಡ ಜನಪದ ಸಾಹಿತ್ಯಭಂಡಾರ" (ಸಂಪುಟ ೧) ಪು. ೩೯೩. ಪ. ೧೧

2 ಹಾಡಿದವರು ಶ್ರೀಮತಿ ಅನ್ನಪೂರ್ಣಮ್ಮ, ೬೦ ವರ್ಷ ಸ್ಮಾರ್ತ ಬ್ರಾಹ್ಮಣರು, ಬೆಂಗಳೂರು

3. "ಸೋಬಾನೆ ಚಿಕ್ಕಮ್ಮನ ಪದಗಳು" ಪು ೪೩ ; ಪ. ೩೦೨

"ಕಲ್ಯಾಣವೆನ್ನಿರೆ ಕಮಲಕ್ಷ್ಮಿ ಲೋಲಗೆ
ಕಲ್ಯಾಣವೆನ್ನಿ ಜನರೆಲ್ಲ ।
ಅಂದಂದಳ ಸಾಕ್ಷಿ ಅಂದಳದ ಕೊನಿ ಸಾಕ್ಷಿ
ಅಂದಳದಲ್ಲಿರುವೊ ಜನಸಾಕ್ಷಿ-ಮುದವಣ್ಣ
ನೀ ಸಾಕ್ಷಿ ನಮ್ಮ ಮಗಳಿಗೆ ।"[1]

ತಾಲಿಕಟ್ಟಿದಮೇಲೆ, ವಧೂವರರು ಹಿರಿಯರಿಗೆ ವಂದಿಸುತ್ತಾರೆ. ಅವರು ಅಕ್ಷತೆಯನ್ನು ತಲೆಯಮೇಲೆ ಹಾಕಿ, ಸುಖವಾಗಿ ನೂರ್ಕಾಲ ಬಾಳಿ ಎಂದು ಹರಸುತ್ತಾರೆ. ಹಾಗೆ ಅವರ ತಲೆಮೇಲೆ ಹಾಕಿದ ಅಕ್ಕಿಯು ರಾಶಿ ಬೆಟ್ಟದ ಸಾಲಿನವರೆಗೆ ಪಸರಿಸಿತು ಎಂದು ಹೇಳುವುದರ ಮೂಲಕ ಒಕ್ಕಲಗಿತ್ತಿ ಮದುವೆ ಮಂಟಪದಲ್ಲಿ ನೆರೆದಿದ್ದ ಜನಸ್ತೋಮದ ಬಗ್ಗೆ ನಮ್ಮ ಗಮನಸೆಳೆಯಲು ಪ್ರಯತ್ನಿಸುತ್ತಾಳೆ.

"ಇಟ್ಟಟ್ಟ ಅಕ್ಕಿ ಬೆಟ್ಟದುದ್ದಕು ಬಿದ್ದೊ
ಪುಟ್ಟಕ್ಕಿ ನಂದನ ಘನವಾದೊ
ಪುಟ್ಟಕ್ಕಿ ನಂದನ ಘನವಾದೊ ನಿಮ್ಮ
ಪುತ್ರಗಿಟ್ಟೇವೆ ಚಿರಸಾಸ್ವೆ ।"[2]

ದೇವದೇವಿಯರಂತೆ ಸುಖವಾಗಿ ಬಾಳಿರೆಂದು ಹರಸುವ ಪರಿಯನ್ನು ಹೀಗೆ ಹಾಡುತ್ತಾಳೆ.

"ಹೊಂಬಾಳೆ ಸುಳಿಯ್ಹಂಗೆ ರಂಬೆ ತಾ ಬಳುಕುತ
ರಂಬೆ ಬರುತಾಳೆ ಸಭಿಗೆ ನಲಿವುತ–ತಮ್ಮಯ್ಯ
ಇಂಬ ಬಿಡಿ ನಿಮ್ಮ ಬಗಲಲ್ಲಿ–ನೀನೀಗ
ದೇವರು ದೇವೀರ್ಹಂಗೆ ಸುಖ ಬಾಳಿ"[3]

ದಂಪತಿಗಳು ಸಂತೋಷದಿಂದ ಚಿರಾಯುಗಳಾಗಲಿ ಎಂದು ಹರಸುವ ಸಂಗತಿಯನ್ನು ಬ್ರಾಹ್ಮಣಿ ಹಾಡುವ ಪರಿ :

"ನಿರುತಾನಂದದಿ ಬಾಳಲಿ । ದಂಪತಿಗಳು ।
ನಿರುತಾನಂದದಿ ಬಾಳಲಿ ।ಪ ।
ನಿರುತಾನಂದದಿ ಬಾಳಿ ನಿರುಪಮ ವಿಭವದಿ
ವರಪುತ್ರರನು ಪೊಂದಿ ಪರಮೋತ್ಸಾಹದಿಂದ । ಅಪ ।

1. ಅದೇ ; ಪು. ೪೨. ಪ. ೨೯೪, ೫.
2 ಅದೇ ; ಪು. ೨೩, ಪ. ೧೪೩
3 "ಕನ್ನಡ ಜನಪದ ಸಾಹಿತ್ಯ ಭಂಡಾರ (ಸಂಪುಟ೧) ಪು. ೩೯೫. ಪ. ೨

ಸುರುಚಿರ ತೇಜೋನಿಧಿ ಎಂದೆನಿಸುತ
ನೆರೆ ಲೋಕವನು ಬೆಳಗೆ
ನಿರುತವು ಕಾಲಚಕ್ರವು ತಿರುಗುತಿರೆ
ವರ ಸೂರ್ಯದೇವನು ಕರುಣಿಸೆ ಸುಖವನು"[1]

ಸಭಿಕರು ವಧೂವರರಿಗೆ ಅನೇಕ ಉಡುಗೊರೆಗಳನ್ನು ಹೊದಿಸುತ್ತಾರೆ. ನೂತನ ಸಂಸಾರ ಪ್ರಾರಂಭ ಮಾಡಲಿರುವ ವಧೂವರರಿಗೆ ಉಪಯುಕ್ತವಾದ ಪದಾರ್ಥಗಳನ್ನೀಯುತ್ತಾರೆ. ಬಂಡಿ, ರಥಗಳಲ್ಲಿ ಉಡುಗೊರೆ ತಂದು ಓದಿಸಿದ ಸಂಗತಿಯನ್ನು ಒಕ್ಕಲಗಿತ್ತಿ ಹೀಗೆ ಹಾಡುತ್ತಾಳೆ :

"ಹಳಿ ಅಡಕೆ ಬಂದಾವೆ ಆರವತ್ತು ಬಂಡೀಮ್ಯಾಲೆ
ಮುಯ್ಯಿ ಬಂದsವೆ ರಥಮೇಲೆ-ಗೌಡರ ಮನೆಗೆ
ರಾಣೀನೀಚೀಕೆ ಕರಸೀರಿ ।
ಶೃಂಗಾರದ ಪೆಟ್ಗೇಲಿ ಏನೇನು ಆಭರಣ
ಅಂಗಿ ಜೋಡಂಗಿ ಅಂತಾಳ-ಹಸ್ತಕಡಗ
ತಂದೆವಣ್ಣ ನಿಮ್ಮ ಮಗಳಿಗೆ-ಅಣ್ಣಯ್ಯ
ಒಂದೊಂದೆ ತೊಡಿಸಿ ಬೆಳಗಾಯ್ತು"[2]

ಪುರೋಹಿತರು ವೇದಮಂತ್ರ ಪುರಸ್ಸರವಾಗಿ ದಂಪತಿಗಳಿಗೆ ಉಡುಗೊರೆಯನ್ನು ಹೊದಿಸುವ ವಿಧಾನವನ್ನು ಬ್ರಾಹ್ಮಣಿ ಬಗೆಬಗೆಯಾಗಿ ವರ್ಣಿಸುತ್ತಾಳೆ :

"ಉಡುಗೊರೆ ಬಂದಿದೆ ಪೊಡವಿ ಪಾಲಕಗೆ
ಮಡದಿ ದ್ರೌಪದಿ ಪಾಂಡವರೈವರಿಗೆ
ಕಡೆಗೆ ಬೃಹಸ್ಪತಿ ಮಂತ್ರದಿ ಕರದೊಳು
ತಳಿದರು ಮುತ್ತಿನ ಸೇಸೆಯನ್ನುರಸುತ । ೧ ।

ಚಂದಚಂದದ ಶಾಲು ಧರ್ಮರಾಯರಿಗೇ
ಬಣ್ಣದ್ದುಚ್ಚಡ ಅವರ ತಮ್ಮ ಭೀಮನಿಗೆ
ಚಿನ್ನದಂಚಿನ ಸೀರೆ ಕನ್ಯೆ ದ್ರೌಪದಿಗೆ
ಮನ್ಮಥ ಪಿತ ಉಡುಗೊರೆಯನೋದಿಸಿದನು । ೨ ।

---

1 ಹಾಡಿದವರು ಶ್ರೀಮತಿ ಅನ್ನಪೂರ್ಣಮ್ಮ
2 ಕನ್ನಡ ಜನಪದ ಸಾಹಿತ್ಯ ಭಂಡಾರ (ಸಂಪುಟ ೧) ಪು. ೧, ೪೩

ಶ್ವೇತಪಟ್ಟೆಯ ಶಾಲು ಪಾರ್ಥನೆಂಬುವಗೇ
ಪೀತಾಂಬರ ನಕುಲ ಸಹದೇವರಿಗೆ
ಜಾತಿ ಪಟ್ಟೆಯ ಸೀರೆ ಕಾಂತೆ ದ್ರೌಪದಿಗೆ
ಈಶ್ವರ ತಂದುಡುಗೊರೆಯನೋದಿಸಿದನು ।"[1]

ಅನಂತರ ವಧೂವರರಿಗೂ ಸಭಿಕರಿಗೂ ಮೃಷ್ಟಾನ್ನಭೋಜನವಾಗುತ್ತದೆ. ವಧೂವರರನ್ನು ಹಸೆಮಣೆಯಲ್ಲಿ ಕೂರಿಸಿ, ನಾಲ್ಕು ಕಡೆಯೂ ದೀಪ ಹಚ್ಚಿಟ್ಟು, ಅವರಿಗೆ ಸಿಹಿ ತಿನಸನ್ನು ಬಡಿಸುತ್ತಾರೆ. ಅಂದು ಪರಸ್ಪರ ಎಂಜಲನ್ನು ತಿನ್ನಿಸುತ್ತಾರೆ, ಬ್ರಾಹ್ಮಣ ಹೆಂಗಸಿನ ಎಂಜಲನ್ನು ಗಂಡ ತಿನ್ನುವ ಅಪೂರ್ವ ಸಂದರ್ಭದೊಂದಿಗೆ ಆತನೊಡನೆ ಸಹ ಪಂಕ್ತಿಯೂಟ ಆಕೆಗೆ ಅಂದು ಮಾತ್ರ ಲಭ್ಯವಾಗುತ್ತದೆ. ಅನಂತರ 'ಪತಿಯುಂಡ ಶೇಷ' ವನ್ನು ಆಕೆ ತಿನ್ನಬೇಕು. ಪರಿಪರಿ ಶಾಖಪಾಕಗಳನ್ನು ವಧುವರರಿಗೆ ಅರ್ತಿಯಿಂದ ಉಣ ಬಡಿಸುವ ಪ್ರಸಂಗವನ್ನು ಬ್ರಾಹ್ಮಣಿ ಹೀಗೆ ವರ್ಣಿಸುತ್ತಾಳೆ.

"ಗೋಪಾಲಕೃಷ್ಣಗೆ ಭೂಮಕ್ಕೆ ಬಡಿಸಿದರ್ । ಪ ।
ಅಗ್ರ ಬಾಳೆಲೆಯ ಹಾಕಿ ಅಡ್ಡ ದೀವಿಗೆ ಹಚ್ಚಿ
ಸುತ್ತಲೂ ಪನ್ನೀರು ಚೆಲ್ಲುತ ಬೇಗ । ೧ ।
ಉಪ್ಪು ಉಪ್ಪಿನಕಾಯಿ ಹಪ್ಪಳ ಸಂಡಿಗೆ
ಪರಿಪರಿ ಪಲ್ಯಗಳ್ ನಗುತ ಬಡಿಸುತ । ೨ ।
ನಕ್ಷತ್ರಗಳಂತೆ ಹೊಳೆವೊ ಅಂದದ ಸಂಡಿಗೆ
ಸೂರ್ಯಮಂಡಲ ಪೋಲ್ವೋ ಅಂದದ ಹಪ್ಪಳ । ೩ ।
ಸಣ್ಣಕ್ಕಿ ಶಾಲ್ಯಾನ್ನ ಶಾಕಪಾಕಗಳು
ರಂಗನಾಥನಿಗೆ ಸಂಭ್ರಮದಿಂದಲಿ । ೪ ।"[2]

ವಧೂವರರು ಸರಸದಿಂದ ಪರಸ್ಪರ ಎಂಜಲಾಡಿಸುವ ವಿನೋದ ಪ್ರಸಂಗವನ್ನು ಒಕ್ಕಲ ಗಿತ್ತಿ ಕಣ್ಣಿಗೆ ಕಟ್ಟುವಂತೆ ಹಾಡುತ್ತಾಳೆ.

" ಆ ಕೈಯ ಎಂಜಲ ಈ ಕೈಗೆ ತಕ್ಕೊಂಡು
ಬಾಪುರಿತೋಳ ತಿರುವೂತ ಕಂದಣ್ಣ
ಆಕೆಗೆಂಜಲ ಬೆರಿಸ್ಯಾನೆ ।
ಅಂಗೈ ಎಂಜಲ ಮುಂಗೈಗೆ ತಕ್ಕೊಂಡು
ಬಂದಿಯ ತೋಳ ತಿರುವೂತ । ತಾಯಮ್ಮ
ಗಂಡಗೆಂಜಲ ಬೆರಿಸ್ಯಾಳೆ ।"[3]

---

1 ಹಾಡಿದವರು–ಶ್ರೀಮತಿ ಸೀತಮ್ಮ

2 ಹಾಡಿದವರು–ಶ್ರೀಮತಿ ಕಪಿಲಮ್ಮ

3 "ಸೋಬಾನೆ ಚಿಕ್ಕವ್ಮನ ಪದಗಳು" ಪು. ೪೭ ; ಪ. ೩೨೪-೫

ಮದುವೆಯ ಮನೆಯಲ್ಲಿ ಸ್ವಲ್ಪ ಬಿಡುವು ದೊರೆತರೆ ಸಾಕು 'ಬೀಗರ ಹಾಡು'ಗಳು ಪ್ರಾರಂಭವಾಗುತ್ತವೆ. ವಿನೋದಮಯವಾದ ಬೀಗರ ಹಾಡುಗಳು ಎಲ್ಲರನ್ನೂ ನಕ್ಕು ನಲಿಯುವಂತೆ ಮಾಡುತ್ತವೆ. ಹೆಣ್ಣು, ಗಂಡಿನ ಕಡೆಯವರು ಪರಸ್ಪರ ಜರಿದಾಡುವುದರಿಂದ ಇವಕ್ಕೆ 'ದೂರುವ ಪದಗಳು' ಎಂಬ ಹೆಸರೂ ಉಂಟು. ಗಂಡಿನವರು ಬಂದ ಘಳಿಗೆಯಿಂದಲೇ ಬೀಗರ ಹಾಡುಗಳ ಸುರಿಮಳೆ ಪ್ರಾರಂಭವಾಗುತ್ತದೆ. ಬಂದ ಬೀಗರನ್ನು ಎದುರುಗೊಂಡು, ಅವರು ಇಳಿದುಕೊಳ್ಳಲು ಮನೆ ತೋರಿಸುತ್ತಾರೆ–ಹೆಣ್ಣಿನವರು. ತಮಗಾಗಿ ಬಿಟ್ಟಿರುವ ಬಿಡಾರದಲ್ಲಿರುವ ಕುಂದು ಕೊರತೆಗಳನ್ನು ಗಂಡಿನವರು ಎತ್ತಿಆಡುತ್ತಾರೆ. ತಮ್ಮ ಬಿಡಾರದಲ್ಲಿ ಮಂಚಗಳಿಲ್ಲವೆಂದೂ, ಬಾ ಎಂದು ಆಹ್ವಾನಿಸುವ ಗಿಣಿಯೂ ಗತಿಯಿಲ್ಲವೆಂದೂ, ಅಂತಹ ಬಿಡಾರವನ್ನು ತಮಗಾಗಿ ಗೊತ್ತು ಮಾಡಿದವರಾರು' ತಿಳಿಸಬೇಕೆಂದು ಹಾರಾಡುವ ಪರಿಯನ್ನು ಬ್ರಾಹ್ಮಣಿ ಹೀಗೆ ಹಾಡುತ್ತಾಳೆ.

"ಬಿಟ್ಟS ಬಿಡಾರಕ್ಕೆ ಪಟ್ಟೆಮಂಚಗಳಿಲ್ಲ
ಅಕ್ಕ ಬಾರೆಂಬೊ ಗಿಣಿಯಿಲ್ಲದ ಬಿಡಾರವ
ಬಿಟ್ಟುಹೋದವರ ಹೆಸರೇನು"[1]

ತಮ್ಮನ್ನು ಸ್ವಾಗತಿಸಲು ಮನುಷ್ಯರಿರಲಿ, ಒಂದು ಗಿಣಿಯೂ ಗತಿಯಿಲ್ಲದ ಬಿಡಾರದಲ್ಲಿ ತಮ್ಮನ್ನು ಬಿಟ್ಟು ಹೋದವನ ಹೆಸರು ತಿಳಿದರೆ, ಅವನ'ಕುಟ್ಟೆ ಹೋರಿಗೆ ಹುಲ್ಲು ಹಿರಿಸುವು'ದಾಗಿ ಎಗರಾಡುವ ಸಂದರ್ಭವನ್ನು ಒಕ್ಕಲಿಗಿತ್ತಿ ಹಾಡುವ ಪರಿ :

"ಸಾಲ ಮಾಳಿಗೆಲಿ ಯಾರೆಂದರ್‍ಯಾರಿಲ್ಲ
ಬಾರಕ್ಕನೆಂಬೊ ಗಿಣಿಯಿಲ್ಲ
ಬಾರಕ್ಕನೆಂಬೊ ಗಿಣಿಯಿಲ್ಲದರಮನೆಯ
ತೋರಿ ಹೋದೋನ ಹೆಸರೇನೆ । ಅವನ ಕುಟ್ಟೆ
ಹೋರಿಗೆ ಹುಲ್ಲು ಹಿರಿಸೇವು"[2]

ಊಟದ ಸಮಯದಲ್ಲಿ ಬೀಗರ ಹಾಡು ಕಳೆಗಟ್ಟುತ್ತದೆ. ಮಾಡಿರುವ ಅಡಿಗೆಯಲ್ಲೆಲ್ಲ ದೋಷ ಹುಡುಕಿ, ಮದುಮಗಳ ಕಡೆಯವರು ಸರಿಯಾಗಿ ಉಣಬಡಿಸಲಿಲ್ಲವೆಂದು ದೂರುತ್ತಾರೆ, ಇದನ್ನು ಬ್ರಾಹ್ಮಣಿ ಹೀಗೆ ಹೇಳುತ್ತಾಳೆ :

"ಏನಿದು ಬೀಗರು ಎಂಥಾನಡತೆ
ಎಲ್ಲಿ ದೊರೆತರು ಸುಳ್ಳುಪುರುಕರು ।ಪ।

1. ಹಾಡಿದವರು–ಶ್ರೀಮತಿ ವೆಂಕಟಲಕ್ಷಮ್ಮ
2. "ಸೋಬಾನೆ ಚಿಕ್ಕಮ್ಮನ ಪದಗಳು", ಪು. ೬೧ ; ಪ. ೪೨೨

ಮೂರು ಗಂಟೆಗೆ ಊಟ ತಿಂಡಿ ಕಾಫಿಗಳ್ ಸೊನ್ನೆ
ಅಡಿಗೆಯ ರಚನೆಯನೆಷ್ಟು ವರ್ಣಿಸಲಿ ।೧।
ಅನ್ನವು ನೋಡಲು ಕಣ್ಣು ಕೋರೈಸುವುದು
ನುಂಗಲಾರೆನೆ ಅಕ್ಕ ಹ್ಯಾಂಗೈವುದೀಗ ।೨।
ಹರಕು ಎಲೆಯನ್ಹಾಕಿ ಕೊಳಕು ನೀರುಗಳ್ ಚೆಲ್ಲಿ
ಬಡಿಸಿದ ಬಗೆಯ ಎಷ್ಟುವರ್ಣಿಸಲಿ ।೩।
ಹಳಸಿದ ಚಟ್ಟುಣಿ ಮುಗ್ಗಿದ ಕೋಸಂಬ್ರಿ
ಹುಳುಕು ಸೊಪ್ಪಿನ ಪಲ್ಯ ಸರಸದಿ ಮಾಡಿದರ್ ।೪।
ಕಲ್ಲಿನ ಅಂಬೊಡೆ ತಿನ್ನಲಾರೆನೆ ಅಕ್ಕ
ಹಲ್ಲು ಮುರಿಯುತಿದೆ ತಿನ್ನಲಾರೆನೆ ।೫।
ಭಕ್ಷ್ಯವಮಾಡಲು ಅರಿಯರು ಇವರು
ಸಗಣಿಯ ಪೋಲುವ ಹೂರಣದ್ಹೋಳಿಗೆ ।೬।”[1]

ಅಚ್ಚೇರಕ್ಕಿ ತಂದು ಬೀಗಿತ್ತಿ ಒಲೆಮುಂದೆ ಕೊಚ್ಚುತ್ತಿರುವುದಾಗಿಯೂ ಆಕೆ ಉಣಲಿಕ್ಕುತ್ತಾಳೋ ಇಲ್ಲವೋ ಎನ್ನುವುದೇ ತಿಳಿಯದು ಎನ್ನುತ್ತಾಳೆ ಒಕ್ಕಲಗಿತ್ತಿ, ಬೀಗಿತ್ತಿಯ ಮನೆಯಲ್ಲಿ ಉಪ್ಪಿಗೂ ಗತಿಯಿಲ್ಲ ಎಂದು ಅವರ ಗುಣಗಾನಮಾಡುತ್ತಾಳೆ.

“ಆಯಿತಾರ ಸಂತೇಲಿ ಅಚ್ಚೇರಕ್ಕಿಯ ತಂದು
ಕೊಚ್ಚಾಡುತಾಳೆ ಒಲೆಮುಂದೆ । ಬೀಗಿತಿ
ಇಕ್ಕ್ಯಾಳೊ ಇಲ್ಲವೊ ಶಿವ ಬಲ್ಲ ।
ಚಪ್ಪರದ್ಹಟ್ಟೀಲಿ ಸೊಪ್ಪನೆ ಸೋಸೋಳೆ
ಉಪ್ಪಿಗು ಮನಿಮನಿಯ ತಿರುಗೋಳೆ । ಬೀಗಿತಿ
ಕೊರಮರಿಗು ನಿಮಗೂ ಮಕ ಮುನಿಸೆ ।”[2]

ಮದುವೆಯ ಸಂಭ್ರಮ ಮುಗಿದು, ಹೆಣ್ಣನ್ನು ಗಂಡನ ಮನೆಗೆ ಕಳುಹಿಸುವ ಸಮಯ ಒದಗುತ್ತದೆ. ಹೆಣ್ಣಿಗೆ ಮಡಿಲುತುಂಬಿ, ಅವಳಿಗೆ ಬೇಕಾದ ವಸ್ತು ಒಡವೆಗಳನ್ನಿತ್ತು ಕಳುಹಿಸುತ್ತಾರೆ. ಆಕೆ ಹೊರಡುವ ಸಮಯದಲ್ಲಿ ಅಗಲಿಕೆಯ ದುಃಖ ಉಕ್ಕುತ್ತದೆ. ನಮ್ಮ ಮಗಳನ್ನು ನಿಮಗೊಪ್ಪಿಸಿದ್ದೇವೆ. ಆಕೆಯನ್ನು ನಿಮ್ಮ ಮಗಳಂತೆಯೇ ತಿಳಿದು ಪಾಲಿಸಿ ಎಂದು ಬೀಗರನ್ನು ಕೇಳಿಕೊಳ್ಳುತ್ತಾರೆ. ತನ್ನ ಮಗಳು ಇಂದು ಪರರಿಗೆ ಎರವಾದಳು ಎಂದು ಒಕ್ಕಲಗಿತ್ತಿ ಶೋಕಿಸುತ್ತಾಳೆ.

---

1. ಹಾಡಿದವರು-ಶ್ರೀಮತಿ ಕಪಿಲಮ್ಮ
2. “ಸೋಬಾನೆ ಚಿಕ್ಕಮ್ಮನ ಪದಗಳು,” ಪು. ೬೪ ; ಪ, ೪೪೨. ಪು. ೬೫, ಪ. ೪೪೨

"ಇಂಬಿಯ ಹಣ್ಣ ಬಗದು ದಾಸವ ಮಾಡಿ
ಬಾಲೆಯ ನಿಮಕೈಲಿ ಕೊಡತೀವಿ । ಬೀಗರೆ
ಸಿಂಕಂದನ ಕಂಡಂಗೆ ಸಲವಿರಿ ।
ಅತ್ತಲಾಗೆ ಅವರಾದರು ಇತ್ತಲಾಗೆ ನಾವಾದೊ
ಸುತ್ತೇಳ ಗುಡ್ಡ ಮರಿಯಾದೊ । ಕಂದಮ್ಮ
ಇಲ್ಲಿಗೆ ನನ ಕಂದ ಎರವಾದ ।"[1]

ಹೆಣ್ಣನ್ನು ಪತಿ ಮನೆಗೆ ಕಳುಹಿಸುವಾಗ ಬ್ರಾಹ್ಮಣಿ ಆಕೆಗೆ ಬುದ್ಧಿ ಮಾತನ್ನು ಹೇಳುತ್ತಾಳೆ.

"ಪತಿ ಬಳಗ ಹಿರಿದೆಂದು ಕೇಳಿಹೆನು ನಾನು
ಸವಿನುಡಿಯ ಹಿರಿತನದಿ ಬಾಳಿ ಬದುಕಲೇ ಕಂದ
ಬೆಳೆದಿಹುದು ಈ ನಂಟು ಬಹು ಬಗೆಯ ಜನರುಂಟು
ಬೇವುಬೆಲ್ಲವನುಂಡು ಬಾಳಲೇ ಬೇಕಮ್ಮ"[2]

ಆದರೂ ಆಕೆ ಹೋಗುವಾಗ ಈಕೆಗೆ ದುಃಖ ತಡೆಯಲಾಗದೆ, ಮಗಳಿಲ್ಲದೆ ಬಣಗುಟ್ಟು ತ್ತಿರುವ ಮನೆಗೆ ಹೋಗಲಾರೆ ಎಂದು ಕಂಬನಿಗರೆಯುತ್ತಾಳೆ,

"ನವಮಾಸಗಳು ನಾ ಹೊತ್ತು ಹೆತ್ತೆನೆ ಭಾರವಾಗಲಿಲ್ಲ
ನವಸುಕುಮಾರಿ ನಡೆದೆಯೇ ಗೌರಿ ನಮ್ಮನಗಲಿ
ಕುವರಿ ಮನೆಗೆ ಹೋಗಲಾರೆನಮ್ಮ ಬಣ ಬಣವಾಗುವುದೇ ।"[3]

ಹುಡುಗಿ ಮೈನೆರೆದಂದಿನಿಂದ ಹಿಡಿದು, ಆಕೆಗೆ ಮದುವೆಮಾಡಿ, ಪತಿಮಂದಿರಕ್ಕೆ ಕಳುಹಿಸುವವರೆಗೆ ನಡೆಯುವ ವಿವಿಧ ಶಾಸ್ತ್ರಗಳ ಸಮಯದಲ್ಲಿ ಬ್ರಾಹ್ಮಣ ಹಾಗೂ ಒಕ್ಕಲಿಗ ಸಮಾಜದಲ್ಲಿ ಹೇಳುವ 'ಸೋಬಾನೆ ಪದಗಳನ್ನು' ಇದುವರೆಗೂ ಗಮನಿಸಿದೆವು. ಇದರಿಂದ ಜಾತಿ ಯಾವುದೇ ಇರಲಿ ನೀತಿ ಒಂದೇ ; ಹೇಳುವ ರೀತಿ ಭಿನ್ನವಾಗಿರ ಬಹುದು. ಭಾವ ಒಂದೇ ಎಂಬುದು ಸ್ಪಷ್ಟಪಡುತ್ತದೆ. ಆದ್ದರಿಂದಲೇ ಸೋಬಾನೆ ಪದಗಳು ಹುಟ್ಟಿ ಬೆಳೆದದ್ದು ಶಿವ-ಪಾರ್ವತಿಯರ ಮದುವೆಯಲ್ಲಿ ಎನ್ನುತ್ತಾರೆ ಜನಪದರು,

---

1 "ಸೋಬಾನೆ ಚಿಕ್ಕಮ್ಮನ ಪದಗಳು", ಪು, ೫೩. ಪ. ೩೭೦, ೩೭೨
2, 3 ಹಾಡಿದವರು-ಶ್ರೀಮತಿ ಕಪಿಲಮ್ಮ

"ಸೋಬಾನ ಹೇಳೋದ ಯಾರಮ್ಮ ಮಾಡಿದೊರು
ನಾರಾಯ್ಣ ಬಲ್ಲ ಶಿವ ಬಲ್ಲ
ನಾರಾಯ್ಣ ಬಲ್ಲ ಶಿವ ಬಲ್ಲ ಸೋಬಾನಗಳ
ಸ್ವಾಮಿ ಈಸ್ವರನ ಮದುವೇಲಿ । ಸೋಬಾನಗಳು
ಆಗ್ಹುಟ್ಟಿ ಆಗ ಬೆಳದವೆ ।"[1]

ಗಿರಿಜಾಕಲ್ಯಾಣದಲ್ಲಿ ಹುಟ್ಟಿ ಬೆಳೆದವೆಂದು ನಂಬುವ ಈ ಹಾಡುಗಳನ್ನು ಇಂದಿನವರೆಗೂ ಪರಂಪರಾಗತವಾಗಿ ವಾಕ್ಸಂಪ್ರದಾಯದಲ್ಲಿ ಉಳಿಸಿಕೊಂಡು ಬಂದಿರುವ ಜನಪದರು ಅವುಗಳನ್ನು ಗುರುವಿನ ಚರಣದಲ್ಲೊಪ್ಪಿಸಿ ಕೃತಕೃತ್ಯರಾಗುತ್ತಾರೆ.

"ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೀಸೊಂದು ಪದಮುಗುದೊ । ಚುಂಚನಗಿರಿಯ
ಗುರುವಿಗೊಪ್ಪಿಸುವೆ ಪದ ನೂರ ।[2]

1. "ಸೋಬಾನೆ ಚಿಕ್ಕಮ್ಮನ ಪದಗಳು", ಪು. ೨೨ ಪ. ೧೩೮
2. ಅದೇ ; ಪು. ೭೧ ; ಪ. ೪೯೧

೨೦ ಚಿಕ್ಕಮ್ಮನ ಪದಗಳು

ಎಲ್. ಆರ್. ಹೆಗಡೆ

ಶ್ರೀ ಎಚ್. ಎಲ್. ನಾಗೇಗೌಡರು ಸಂಗ್ರಹಿಸಿ ಪ್ರಕಟಿಸಿರುವ "ಸೋಬಾನೆ ಚಿಕ್ಕಮ್ಮನ ಪದಗಳು" ಕನ್ನಡ ಜನಪದ ಸಂಗ್ರಹಗಳಲ್ಲಿ ಅನೇಕ ದೃಷ್ಟಿಗಳಿಂದ ಅಗ್ರಗಣ್ಯವಾದ ಗ್ರಂಥವಾಗಿದೆ.

ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ ಇಲ್ಲಿನ ಎಲ್ಲ ಹಾಡುಗಳನ್ನು ಧ್ವನಿಮುದ್ರಣ ಮಾಡಿಕೊಂಡು, ಇಲ್ಲಿನ ಹಾಡುಗಳ ವಿವಿಧವಾದ ಧಾಟಿಗಳನ್ನು ಕಾದಿಡುವ ಮಹತ್ತರ ವಾದ ಕೆಲಸವನ್ನು ಶ್ರೀ ನಾಗೇಗೌಡರು ಇಲ್ಲಿ ಮಾಡಿದ್ದಾರೆ.

ಈ ಹಾಡುಗಳಿಗೆ ಸ್ವರಪ್ರಸ್ತಾರ ಹಾಕಿಸಿ, ಅವುಗಳನ್ನು ಶಾಸ್ತ್ರೀಯವಾದ ಧಾಟಿಗಳಲ್ಲಿ ಕ್ರಮಪಡಿಸಿ, ಸಂಗೀತಬಲ್ಲವರೆಲ್ಲರೂ ಒಂದೇ ಕ್ರಮದಲ್ಲಿ ಹಾಡುವ ಅನುಕೂಲವನ್ನು ಶ್ರೀ ಎಂ. ಬಿ. ಕೃಷ್ಣಪ್ಪನವರ ಮೂಲಕ ಕಲ್ಪಿಸಿರುವುದು ಈ ಗ್ರಂಥದ ಪ್ರಕಟಣೆಯ ಮೊದಲಿಗೂ ಆ ಮೇಲೆಯೂ ಇದುವರೆಗೂ ಯಾರೂ ಮಾಡದಿರುವ ಪ್ರಯತ್ನವಾಗಿದೆ.

ಈ ಗ್ರಂಥದಲ್ಲಿ ಒಬ್ಬಳೇ ಹೇಳಿದ ಹಾಡುಗಳು ಪ್ರಕಟವಾದದ್ದು ಅಲ್ಲಿಯ ವರೆಗೆ ಪ್ರಕಟವಾದ ಬೇರೆ ಯಾವ ಸಂಗ್ರಾಹಕರ ಸಂಗ್ರಹವನ್ನೂ ಮೀರುವಷ್ಟು ಎಂಬುದೂ ಇಲ್ಲಿಯ ಮದುವೆ ಹಾಡುಗಳ ಮಟ್ಟಿಗೆ ಇದೇ ಹೆಚ್ಚು ಸಮಗ್ರವಾದ ಸಂಗ್ರಹ ಎಂಬುದೂ ಒಪ್ಪತಕ್ಕ ವಿಷಯ. (ಇದೇ ವರ್ಷ ಪ್ರಕಟವಾದ ನನ್ನ ಸಂಗ್ರಹ "ಪರಮೇಶ್ವರಿಯ ಪದಗಳು" ಇಷ್ಟೇ ದೊಡ್ಡ ಸಂಗ್ರಹ. ಅಲ್ಲದೆ, ಇನ್ನೂ ನೂರಾರು ಪುಟಗಳ ಸಾಹಿತ್ಯ ಪರಮೇಶ್ವರಿ ಒಬ್ಬಳೇ ಹೇಳಿರುವುದು ಇನ್ನೂ ಪ್ರಕಟವಾಗಿಲ್ಲ.)

ಸೋಬಾನೆ ಚಿಕ್ಕಮ್ಮನ ಜೀವನಚರಿತ್ರೆಯನ್ನು ಅವಳ ಬಾಯಿಂದಲೇ ಹೇಳಿಸಿ, ಅವಳು ಹೇಳಿದಂತೆಯೇ ಕೊಟ್ಟಿರುವುದು ಸ್ವಾರಸ್ಯವಾಗಿದ್ದು, ಮುಂದಿನ ಅನೇಕ ಸಂಕಲನಕಾರರು ಈ ಪದ್ಧತಿಯನ್ನು ಅನುಸರಿಸಿರುತ್ತಾರೆ.

ಒಕ್ಕಲಿಗರಲ್ಲಿನ ಮದುವೆಯ ಪದ್ಧತಿಯು ಇಲ್ಲಿನ ಮದುವೆಯ ಹಾಡಿನೊಡನೆ ಹಾಸುಹೊಕ್ಕಾಗಿ ಸೇರಿಕೊಂಡಿರುತ್ತದೆ. ಆ ಹಾಡುಗಳ ಹಿನ್ನೆಲೆಯಾಗಿ ಒಕ್ಕಲಿಗರ ಮದುವೆಯ ಕ್ರಮವನ್ನು ವರ್ಣಿಸಿ ಒಂದು ಲೇಖನವನ್ನು ಸೇರಿಸಿರುವುದು ಅವಶ್ಯವಾದ ಕೆಲಸವಾಗಿದೆ.

ತಮ್ಮ ಕೆಲಸ ಆದಷ್ಟು ಮಟ್ಟಿಗೆ ಸಮಗ್ರ ಮತ್ತು ಪರಿಪೂರ್ಣವಾಗಿರಬೇಕು ಎಂಬ ದೃಷ್ಟಿಯಿಂದ ಶ್ರೀ ನಾಗೇಗೌಡರು ಶ್ರಮ ಮತ್ತು ವೆಚ್ಚದ ಪರಿವೆಯಿಲ್ಲದೆ ಕೆಲಸ ಮಾಡಿರುವರೆಂಬುದಕ್ಕೆ ಅವರು ಚಿಕ್ಕಮ್ಮನ ಮನೆಯ ಹಾಗೂ ಮದುವೆಯ ದೃಶ್ಯಗಳ ಫೋಟೋಗಳನ್ನು ತೆಗೆಯಿಸಿ ಗ್ರಂಥದಲ್ಲಿ ಒದಗಿಸಿರುವುದು ಸಾಕ್ಷಿಯಾಗಿದೆ.

ಈ ಗ್ರಂಥದ ಉಪಯುಕ್ತತೆಯನ್ನು ಎಲ್ಲಕ್ಕಿಂತಲೂ ಹೆಚ್ಚಾಗಿ ಹೆಚ್ಚಿಸಿದ ಸಂಗತಿಯೆಂದರೆ, ಮದುವೆಯ ಮತ್ತು ಇತರ ಬೇರೆ ಹಾಡುಗಳಿಗೆ ಇವರು ಒದಗಿಸಿರುವ ಟಿಪ್ಪಣಿಗಳು ಬಹುಮಟ್ಟಿಗೆ ಸಮರ್ಪಕವಾಗಿದ್ದು ಹಾಡುಗಳ ಅರ್ಥ ತಿಳಿಯಲೂ ಸಂಬಂಧಿಸಿದ ಜನರ ಜೀವನಕ್ರಮ ಮತ್ತು ನಂಬಿಕೆಗಳನ್ನು ತಿಳಿಯಲೂ ತುಂಬ ಉಪಯುಕ್ತವಾಗಿವೆ.

ಲೇಖಕರು ಸರ್ವಜ್ಞನ ಕಾಲ ಹದಿನೆಂಟನೆಯ ಶತಮಾನವೆಂದು ಹೇಳುವುದು ಇತ್ತೀಚಿನ ಸಂಶೋಧಕರ ತೀರ್ಮಾನದಂತೆ ಸಮಂಜಸವಲ್ಲ. ಈ ಗ್ರಂಥ ಪ್ರಕಟವಾಗುವುದಕ್ಕೂ ಮೂರುನಾಲ್ಕು ವರ್ಷ ಹಿಂದೆಯೇ ಪ್ರಕಟವಾದ "ಸರ್ವಜ್ಞ ; ಜೀವನ ಮತ್ತು ಕಾವ್ಯ" ಎಂಬ ಗ್ರಂಥದಲ್ಲಿ ಶ್ರೀ ಉಮಾಪತಿ ಶಾಸ್ತ್ರಿಯವರು[1] ಸರ್ವಜ್ಞನ ಕಾಲವನ್ನು 1500 ರೊಳಗೆ ಎಂದು ತಿಳಿಸಿದ್ದಾರೆ.

ವಿಷಯ ವಿವರಣೆಯಲ್ಲಿ ಸಂಗ್ರಾಹಕರು ನಿರೂಪಣೆಯ ಅನೇಕ ವಿವರಣೆಗಳನ್ನು ಉಪಯೋಗಿಸಿರುವುದು ಸಹಜವಾಗಿಯೇ ಇದೆ. ಆದರೆ ಪಲವು ಸಂದರ್ಭಗಳಲ್ಲಿ ಲೇಖಕರು ತಮ್ಮ ಗಾಢವಾದ ಜನಜೀವನದ ಜ್ಞಾನದಿಂದ ಅನೇಕ ಶಬ್ದಗಳಿಗೆ ಅರ್ಥ ಬರೆದಿದ್ದಾರೆ. ಇವರ ಭಾಷಾಜ್ಞಾನವಂತೂ ಸಂಗ್ರಾಹಕರಿಗೆ ಇರಬೇಕಾದದ್ದೇ. ಅದನ್ನು ಇವರ ಶಬ್ದವಿವರಣೆಗೆ ಬಹುಮಟ್ಟಿಗೆ ಸಮರ್ಪಕವಾಗಿದೆ.

ಉದಾ :—ಪಿಲ್ಲಿ ಎಂಬ ಕಾಲ್‌ಬೆರಳುಗಳ ಆಭರಣದ ಪ್ರಭೇದಗಳನ್ನು ಅವರು ಚಿಕ್ಕಮ್ಮನಿಂದಲೇ ತಿಳಿದುಕೊಂಡಿರಬಹುದು. (ಪು. ೨೩೯) ಬಾಗೂರು ಬೆಲವ ಇಲ್ಲಿ ಹೊಳೆನರಸೀಪುರದ ಕಡೆಯ ಬಾಗೂರ ಗಣಪ ಎಂಬುದೂ ಹಾಗೆಯೇ. (ಪು. ೨೪೨). ಹಣವಡ್ಡ ಎಂದರೆ ನಾಲ್ಕಾಣೆ ಮೇಲೆ ಆರುಕಾಸು ಎಂಬ ವಿವರಣೆಯಿಲ್ಲದೆ ಅದರ ಅರ್ಥ ತಿಳಿಯದು. ಇದು ಸಂಗ್ರಾಹಕರ ವಿವರಣೆಯಾಗಿದ್ದಿರಬಹುದು. ಅನೇಕ ಶಬ್ದಗಳ ಅರ್ಥ ನಿರೂಪಕರಿಗೂ ಸಂಗ್ರಾಹಕರಿಗೂ ಸಹ ಸರಿಯಾಗಿ ಅರ್ಥವಾಗುವುದಿಲ್ಲ. ಅಂಥ ಸಂದರ್ಭಗಳಲ್ಲಿ ತಾತ್ಕಾಲಿಕವಾಗಿ ಸಂಶೋಧಕರು ಅರ್ಥವನ್ನು ಪ್ರಶ್ನಾರ್ಥಕ ಚಿಹ್ನೆಯೊಡನೆ ಕೊಡಬೇಕಾಗುತ್ತದೆ. 'ಬಹುದು

---

1. ಸರ್ವಜ್ಞಕವಿ, ಜೀವನ ಮತ್ತು ಕಾವ್ಯ. ಪುಟ 22, 24. ಮತ್ತು ಶ್ರೀ ಉಮಾಪತಿ ಶಾಸ್ತ್ರಿಯವರ ಸರ್ವಜ್ಞಮೂರ್ತಿಯ ವಚನಗಳು. ಡಾ. ಆರ್. ಸಿ. ಹಿರೇಮಠರವರ ಪೀಠಿಕೆ ಮತ್ತು ಪುಟ 31.

ಗಿಹುದಿನ ಶಂಕಿ ವೀರನ ಹುದ್ದೆ' ಎಂದು ಶ್ರೀ ಅಂಜಿಕಾತನಯದತ್ತರು ಕೇಳಿದ್ದಾರೆ. ಆದರೆ ಸಂಶೋಧನ ಕ್ಷೇತ್ರದಲ್ಲಿ ಅವನು ವೀರನಲ್ಲದಿದ್ದರೂ ನಿಜವಾದ ಚಿಕಿತ್ಸಕ ಸಂಶೋಧಕನಾಗಿರುತ್ತಾನೆ. ಈ ಊಹಾಪೋಹ ಕೆಲವೊಮ್ಮೆ ಸರಿಯಿರಬಹುದು; ಕೆಲವೊಮ್ಮೆ ಸರಿಯಿರದಿರಬಹುದು. ಇದನ್ನು ಇತರ ಪಾಠಗಳ ನೆರವಿನೊಂದಿಗೆ ಅಲ್ಲದೆ ಜನಜೀವನದ ಜ್ಞಾನ-ಹಾಗೂ ವಿವೇಚನೆಯೊಂದಿಗೆ. ಇತರ ಸಂಶೋಧಕರ ನೆರವಿನೊಂದಿಗೆ ಅರ್ಥೈಸಲು ಪ್ರಯತ್ನಿಸಬೇಕಾಗುತ್ತದೆ.

ಗ್ವಾವೆನಾಡು ಎಂಬ ವಿಷಯ ವಿವರಣೆಯಲ್ಲಿ ಗೋವೆನಾಡು ಎಂಬುದು ಸರಿಯಾಗಿಯೇ ಇದೆ. ಆದರೆ ಹಿಂದಿನ ಕಾಲದಲ್ಲಿ ಗೋವೆಯ ಅರಸಿಣ ಮತ್ತು ಶೀಗೇಕಾಯಿ ಬಹಳ ಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿರಬೇಕು ಎಂಬ ಸಂಗ್ರಾಹಕರ ಊಹೆ ಸರಿಯಲ್ಲ. ಮುಂದೆ ಗುತ್ತಿಗನಾಡು ಎಂಬುದರ ವಿವರಣೆಯಲ್ಲಿ ಗುತ್ತಿಗೆ ಮಾಡಿಕೊಂಡ ನಾಡು (?) ಎಂದು ಊಹಿಸಿದ್ದೂ ಸರಿಯಲ್ಲ. (ಪು. ೨೩೧) ಗೋವೆ ಮತ್ತು ಗುತ್ತಿರಾಜ್ಯಗಳು ಇತಿಹಾಸಪ್ರಸಿದ್ಧ ರಾಜ್ಯಗಳು. ಅವುಗಳ ನೆನಪು ನಮ್ಮಲ್ಲಿಯ ಅನೇಕ ಜನಪದ ಗೀತೆಗಳಲ್ಲಿದೆ. ಗುತ್ತಿ, ಚಂದ್ರಗುತ್ತಿ ರಾಜ್ಯ. ಮದುವೆಯ ಹಾಡುಗಳಲ್ಲಿಯೂ ಹಬ್ಬಗಳ ಹಾಡುಗಳಲ್ಲಿಯೂ ಉತ್ತರ ಕನ್ನಡದ ಅನೇಕ ಹಾಡುಗಳಲ್ಲಿ ಗೋವೆ, ಗುತ್ತಿಗಳ ಸಾಮಗ್ರಿಗಳನ್ನು ತಂದ ಉಲ್ಲೇಖವಿದೆ. ಅಷ್ಟು ದೂರದಿಂದ ತರಿಸಿದ ವಸ್ತುಗಳು ; ಆ ರಾಜ್ಯಗಳಿಂದ ತರಿಸಿದ್ದು ಎಂಬುದು ಪ್ರತಿಷ್ಠೆಯ ವಿಷಯವಾಗುತ್ತದೆ.

ಅರುಣಗನ್ನಿಕ್ಕೀರು. ಸರಸ್ವತಿಯ ಮಕ್ಕಳು (?) (ಪು ೭೪೩) ಅರುಣ ಗನ್ನಿಕೆಯರು ಎಂಬುದು ಸರಿಯಾದ ಅರ್ಥ.

ಸಾಲಿಯ ಸೀರೆ ಚೆನ್ನಾಗಿರುವ ಸೀರೆ (?) (ಪು ೨೪೪) ಅರ್ಥ ಬಹುಮಟ್ಟಿಗೆ ಸರಿಯಾಗಿದೆ. 'ಸಾಲಿಗ'ದಿಂದ ಶಾಲಿ ಶಬ್ದ ಬಂದಿರಬಹುದು ಎಂಬ ಸಂಗ್ರಾಹಕರ ಅಭಿಪ್ರಾಯ ವಿಚಾರಣೀಯವಾಗಿದೆ. ನಮ್ಮ ಕಡೆಯ ಹಾಡುಗಳಲ್ಲಿ ಶಾಲೆ, ಸಾಲಿಸೀರೆ ಎಂಬ ಶಬ್ದಗಳ ಉಪಯೋಗ ಸಾಮಾನ್ಯವಾಗಿದೆ. ಶಲ್ಯ, ಶಾಲು, ಶಾಲಿ, ಇವೆಲ್ಲ ಒಂದೇ ಮೂಲದಿಂದ ಬಂದಿರಬಹುದಾಗಿದ್ದು, ನಯ ನುಣುಪುಳ್ಳ ನೂಲಿನ ಸೀರೆ ಎಂದಾದರೆ ಉತ್ತಮ ಸೀರೆ ಎಂದೇ ಅರ್ಥ ಬರುತ್ತದೆ. ಉತ್ತರ ಕನ್ನಡದಲ್ಲಿ ಶಾಲಿ, ಸಾಲಿ ಎಂಬ ಶಬ್ದಕ್ಕೆ ಸೀರೆಯೆಂದೇ ಅರ್ಥವಿದೆ. 'ಪದವವೆ ನಮ್ಮ ಎದೆಯಲ್ಲಿ' ಸಂಕಲನದಲ್ಲಿ ಶ್ರೀ ನಾಗೇಗೌಡರು ಸಾಲಿಸೀರೆ ಎಂದರೆ ಬಣ್ಣದ ಸೀರೆ ಎಂದು ಸಮರ್ಪಕ ಅರ್ಥ ನೀಡಿದ್ದಾರೆ. (ಪು 50) ಬಣ್ಣ ಅಂದರೆ ಆ ಸೀರೆಯೆಂದೇ ಅರ್ಥ. ಕಡಿರುಚಿಯ, ಕಡುರುಚಿಯ ಎಂಬ ಶಬ್ದದ ಆಡುರೂಪವಾಗಿದೆ. ಲೇಖಕರು ಕೊಟ್ಟ ಅರ್ಥ ಸರಿಯಾಗಿದೆ.

ವಿರಳವಾಗಿ, ಕೆಲವು ಶಬ್ದಗಳ ಅರ್ಥ ಕೊಟ್ಟಿರುವುದು ಪೂರ್ಣ ಸರಿಯಾಗಿಲ್ಲ.

ನಾಗವಳ್ಳಿ, ವೀಳೆಯದೆಲೆ ಎಂದು ಅರ್ಥಕೊಟ್ಟಿದ್ದಾರೆ (ಪು. ೨೩೭) ನಾಗವಳ್ಳಿ ವೀಳೆಯದೆಲೆಯಲ್ಲಿ ಶ್ರೇಷ್ಠ ಜಾತಿಯದು ; ಸಣ್ಣ ಆಕಾರದ ನಾಗವಳ್ಳಿ ಎಲೆ ; ತಿನ್ನಲು ರುಚಿ.

ಹಾಡುಗಾತಿ ಹೇಳಿದ ಕೆಲವು ಶಬ್ದಗಳ ರೂಪ ಸರಿಯಲ್ಲವೆಂದು ಸರಿಯಾದ ಶಬ್ದಗಳನ್ನು ಊಹಿಸಿ ಬರೆವುದರಲ್ಲಿ ಸಂಪಾದಕರ ನೈಪುಣ್ಯ ಚನ್ನಾಗಿ ವ್ಯಕ್ತವಾಗಿದೆ. ಉದಾ. ಬೆಟ್ಟಡಕೆ ತಪ್ಪು. ಬಟ್ಲಡಕೆ ಸರಿ. ಗೋಟಡಕೆ ತಪ್ಪು ; ಹೋಳಡಕೆ ಸರಿ (ಪು: ೨೫೧). ಮೂಗಳ ತಪ್ಪು, ಇಕ್ಕಳ ಸರಿ (೨೬೫) ಕುಟ್ಟೆ ತಪ್ಪು ;ಕುಂಟೆ ಸರಿ (ಪು. ೨೫೯)

ಗುಂಡಯ್ಯ, ಹೆಗ್ಗೆಯ ಕೊರತಿ, ದಾಸವಾಣದ ಹಕ್ಕಿ (ಮುತ್ತಿನ ಶೆಟ್ಟಿ ಹಕ್ಕಿ) ಇತ್ಯಾದಿಗಳ ಕುರಿತ ಅಂತೆ, ಕಂತೆ (Folksay)ಗಳನ್ನು ಒದವಿಸಿದುದು ಲೇಖಕರ ವಿಶೇಷ ಜಾನಪದ ಜ್ಞಾನಕ್ಕೆ ಸಾಕ್ಷಿಯಾಗಿವೆ.

ಹೀಗೆ ಸಂಪಾದಕನ ಕೆಲಸವನ್ನು ತುಂಬ ಅಚ್ಚುಕಟ್ಟಾಗಿ ನೆರವೇರಿಸಿದ ಶ್ರೀ ನಾಗೇಗೌಡರು ಸಂಗ್ರಹಿಸಿರುವ "ಚಿಕ್ಕಮ್ಮನ ಪದಗಳು" ಗ್ರಂಥದ ಗೀತಗಳ ಸ್ವಾರಸ್ಯವನ್ನೂ ಸಾಂಸ್ಕೃತಿಕ ಮೌಲ್ಯವನ್ನೂ ಕುರಿತು ಕೆಲವು ಮಾತು ಹೇಳಬಹುದು.

ಜಾನಪದ ಸಂಗ್ರಾಹಕನು ಸಂಗ್ರಹಿಸಿದ ಸರಕಿನ ವಿಷಯದಲ್ಲಿ ಚೆನ್ನಾಗಿದ್ದುದು ಚೆನ್ನಾಗಿಲ್ಲದಿದ್ದುದು ಎಂಬ ವಿಮರ್ಶೆ ಅಗತ್ಯವಿಲ್ಲ ; ಸಂಗ್ರಹಿಸಿ ಸಂಪಾದಿಸಿದ ವಿಧಾನ ವೈಜ್ಞಾನಿಕವಾಗಿದೆಯೇ, ಅದು ನಿಜವಾದ ಜಾನಪದ ಎನ್ನಬಹುದೇ ? ಎಂದಿಷ್ಟೇ ನೋಡಬೇಕು ಎಂಬ ಅಭಿಪ್ರಾಯವಿದೆ. ಜಾನಪದ ಜನತೆಯ ಸಂಸ್ಕೃತಿಯಿಂದ ಮೂಡಿ ಬಂದುದು, ಆ ಸಂಸ್ಕೃತಿಯ ಚಿತ್ರಣದಲ್ಲಿ ಆ ಸಂಸ್ಕೃತಿಯಿಂದ ಮೂಡಿ ಬಂದ ಜಾನಪದ ಎಷ್ಟು ಮಟ್ಟಿಗೆ ಸಫಲವಾಗಿದೆಯೆಂಬುದನ್ನು ನೋಡುವಾಗ ಅದರ ಸಾಹಿತ್ಯದ ಮೌಲ್ಯವೂ ವಿಚಾರಿಸಬೇಕಾದ ಒಂದು ಅಂಶವಾಗಿರುತ್ತದೆ. ಸಾಹಿತ್ಯಮೌಲ್ಯವೇ ಪ್ರಧಾನವೆಂದು ತಿಳಿದು, ಜಾನಪದದ ಮೌಲ್ಯವನ್ನು ನಾವು ಗೊತ್ತುಮಾಡಬೇಕಿಲ್ಲ ಎಂಬ ದೃಷ್ಟಿಯಲ್ಲಿ ತಥ್ಯವಿದೆ.

ಈ ಗ್ರಂಥದ ಮೊದಲನೆಯ ಭಾಗ ಸೋಬಾನೆ ಪದಗಳು ಎಂಬತ್ತುನಾಲ್ಕು ಪುಟಗಳ ಹರವಿರುವುವು. ಈ ಗೀತ ಭಾಗವು ಮದುವೆಯ ಚಡಂಗಗಳ ಒಂದು ಪೂರ್ಣವಾದ ಚಿತ್ರಣವನ್ನು ಕೊಡುತ್ತವೆ.

ಇಲ್ಲಿನ ಪ್ರತಿಯೊಂದು ಶಾಸ್ತ್ರದಲ್ಲಿಯೂ "ಸೋಬಾನವೆಲ್ಲ ಶಿವನಿಗೆ" ಎಂಬ ಪಲ್ಲವಿಯೂ ಇರುವುದು ಸಾಮಾನ್ಯವಾಗಿದೆ. ಇದರಿಂದ ನಮ್ಮ ಹಿಂದಿನ ಜನರು ವಿವಾಹ ಕುರಿತು ಎಂಥ ಗೌರವವನ್ನಿಟ್ಟಿದ್ದರೆಂಬುದನ್ನು ತಿಳಿಯಬಹುದು. ಶಿವ–ಪಾರ್ವತಿಯರು ಅನ್ಯೋನ್ಯ ಪ್ರೇಮದಿಂದ ಜೀವಿಸುವ ದಂಪತಿಗಳ ಆದರ್ಶವಾಗಿದ್ದಾರೆ. ಸೋಬಾನೆ ಚಿಕ್ಕಮ್ಮ "ಸೋಬಾನ ಈ ಹೊತ್ತು ಆದೋವಲ್ಲ ಶಿವನೂ ಪಾರ್ವತಿಯೂ ಮದುವೆಯಾದಾಗ ಹುಟ್ಟಿ ಬೆಳೆದೋವು !" ಎಂದು ಹೇಳಿದಳಂತೆ ! ಅದಕ್ಕೆ ಇಲ್ಲಿನ ಹಾಡಿನ

ಆಧಾರವಿದೆ. (ಪು.೨೨,೧೩೮) ಹಳ್ಳಿಯ ಅಶಿಕ್ಷಿತ ಹೆಂಗಸರಿಗೂ ಕೂಡ ಶಿವ-ಪಾರ್ವತಿ ಆದರ್ಶದಂಪತಿಗಳೆಂಬ ದೃಢನಿಷ್ಠೆಯಿದ್ದುದು ಇದರಿಂದ ವ್ಯಕ್ತವಾಗುತ್ತದೆ.

(ಆದರೆ, ಶಿವ, ನಂಜುಂಡನಾಗಿ ಚಾಮಾಯಿಯ ಸಂಬಂಧ ಹೊಂದಿದ ಕಥೆಯ ಗೀತದ ಸಂದರ್ಭದಲ್ಲಿ ಇದನ್ನು ಬೇರೆ ರೀತಿಯ ದೃಷ್ಟಿಕೋನದಿಂದ ನೋಡಬೇಕಾಗುತ್ತದೆ.)

ದೇವರನ್ನು ಸಹ ಮನುಷ್ಯರಿಗೆ ನೀಡುವ ಸಲಿಗೆಯಿಂದ ಮಾತಾಡಿಸುತ್ತಾರೆ. ಅಕ್ಕ ಅಣ್ಣ, ತಂಗಿ ಎಂದು ಸಂಬಂಧಿಕರಲ್ಲದವರನ್ನೂ ಆತ್ಮೀಯತೆಯಿಂದ ಕರೆವ ಹಳ್ಳಿಯ ಜನರ ಸಂಸ್ಕೃತಿಗೆ ತಕ್ಕುದಾಗಿದೆ. "ಲಕ್ಕ ಸರಸತಿಯೆ ನಿನಗೆ ರಾಯರ ಮನೆಯ ಪಟ್ಟೆ ಮಂಚದ ಮೇಲೆ ಪಗಡೆ ಆಡಲು ಇಂಬನ್ನು ಕೊಡುವೆ" ಎಂದು ಕರೆದು, ಅವಳ ಅನುಗ್ರಹವನ್ನು ಹಾರೈಸುತ್ತಾಳೆ ಹಾಡುಗಾತಿ.

'ಶಾಸ್ತ್ರದ ನೀರು ತರುವಾಗ' ಎಂಬುದು ತುಂಬ ಸುಂದರ ಗೀತ. ಇದರಲ್ಲಿ ಮದುವೆಯ ಮಂಗಲದ್ರವ್ಯ (ನೀರು, ನೆಲ್ಲಕ್ಕಿ, ನಾಗವಳ್ಳಿವೀಳ್ಯದೆಲೆ, ಹೊಂಬಾಳೆ ಅಡಿಕೆ ಗೊನೆಯ ಮೇಲೆ ಇರುವ ತೆಳ್ಳನ್ನ ಆವರಣ) ಹೂಗಳನ್ನು ಬಣ್ಣಿಸುವ ರೀತಿ ಬಹು ಸೊಗಸಾಗಿದೆ.

ನಾಗವಳ್ಳಿ ಎಲೆ ಬಳ್ಳಿಯನ್ನು ವರ್ಣಿಸುವಲ್ಲಿ,
ಅಗಲನೇ ಮಕದೋಳೆ ತಗುದ ಬಗುತಲೆಯೋಳೆ
ಮರದಿಂದ ಮರಕೆ ನುವೋಳೆ

ಎಂಬಲ್ಲಿ ನಾಗವಳ್ಳಿ ಉದ್ದವಲ್ಲ; ದುಂಡಗಿನ ಆಕಾರದ್ದಾದ್ದರಿಂದ ಅಗಲವಾದ ಮುಖವುಳ್ಳ ಚೆಂದ ಹೆಣ್ಣಿಗೆ ಹೋಲಿಕೆಯಾಗಿದೆ. ನಡುವಿನ ನೀಳು ಹಾಡುಗಾತಿಗೆ ತೆಗೆದ ಬೈತಲೆಯಂತೆ ಕಂಡಿದೆ.

ಯುರೋಪಿಯನ್ ದೃಷ್ಟಿಗೆ ಸ್ವಲ್ಪ ಉದ್ದವಾದ (oval) ಮುಖವೇ ಅಂದವಾದರೆ ಭಾರತೀಯರಿಗೆ ಬಟ್ಟಲು ಮೊಕ ಅಂದ.

ಗಂಗೆಯನ್ನು (ನೀರು) ಪೂಜಿಸುವಾಗ, ಒಮ್ಮೆ ಹಳ್ಳಕೊಳ್ಳ ತೆಳ್ಳಿಕೊಂಡು ಹರಿದರೆ ಸಿರಿಮೊಕದ ಚೆಲುವೆ ಎಂದೂ ಅಟ್ಟ ಬೆಟ್ಟ ಸುತ್ತಿ ಹರಿವಾಗಿನ ಗಂಗೆ ಬಟ್ಟಾನೆ ಮೊಕದ ಕರಿಚೆಲುವೆ ಎಂದೂ ಬಣ್ಣಿಸಿದುದುಂಟು.

ಗಂಗೆಯನ್ನು ಪೂಜಿಸಿ, ಗೌರಿಯನ್ನು ಮರೆತರೆ ಅವಳಿಗೆ ಬೇಸರ ಬಂದೀತೆಂದೋ ಏನೋ ಗಿರಿಜೆಯನ್ನು ಹೊಗಳಿ, ಗಂಗೆ-ಗೌರಿ ಕಥೆಯನ್ನು ಹಾಡಿನಲ್ಲಿ ಹೇಳಲಾಗಿದೆ. ಆದರೆ ಇಲ್ಲಿ ಹಾಡಿನ ಸೊಲ್ಲುಗಳು ಕೆಲವು ಮರೆಶಿವೆ; ಕೆಲವು ಹಿಂದುಮುಂದಾಗಿವೆ.

೨ ಶಾಸ್ತ್ರದ ಬತ್ತ ಕುಟ್ಟುವ ಬಣ್ಣನೆಯಲ್ಲಿ, 'ಬತ್ತಕೆ ಹೂವಿನ ಗುಬಚಿ, ಮುತ್ತಿನ ಗುಬಚಿ ಕವುದಾವೆ' ಬಣ್ಣಲ್ಲಿನ ಬಣ್ಣನೆಯ ಸೊಗಸೂ ಗುಬ್ಬಚ್ಚಿಗಳ ಕುರಿತಾದ ವಾತ್ಸಲ್ಯ ಭಾವವೂ ಹೃದಯಂಗಮವಾಗಿವೆ.

ಆಕಾಶದ ಮೇಲೆ ಕ್ಯಾಸಕ್ಕಿ ತೊಳಸುವ ಗಿರಿಜಮ್ಮ ಈಸುರ (ಶಿವ)ನ ಮಡದಿಯಾಗಿರಬಹುದು ; ಹಟ್ಟಿ ಕಲ್ಲಿನ ಮೇಲೆ ಪುಟ್ಟಕ್ಕಿ ತೊಳಸುವ ಈಸುರನ ಮಡದಿ ಗಿರಿಜಮ್ಮ ಆ ಗಿರಿಜಮ್ಮನ ಭೂಲೋಕದ ಆ ವೃತ್ತಿಯಾಗಿದ್ದಾಳೆ !

ರಾಜಣದ ಹಗೆಯನ್ನು ಬರೆದ ತಾಯಿ ಲಕ್ಕವ್ವ ; ಅವಳೇ ತಿಮ್ಮಪ್ಪನ ಪಟ್ಟದ ರಾಣಿ ಚೊಳಿಚವ್ವ (ತುಳಸಿ) ಎಂದು ದೇವರನ್ನು ನೆನೆವ ಸಂದರ್ಭವನ್ನು ಹಾಡುಗಾತಿ ಜೋಡಿಸಿಕೊಂಡಿದ್ದಾಳೆ.

ಸಾಸೆ ಹೊಡೆವಾಗ ದೇವರನ್ನು ನೆನೆಯುತ್ತ ಮುತ್ತೈದೆಯರು ವರನಿಗೆ ಅಥವಾ ವಧುವಿಗೆ ಅಕ್ಷತೆ ಹೊಡೆಯುತ್ತಾರೆ. ಅದರಲ್ಲಿ ಹಾರೈಕೆ, ಚಪ್ಪರ ಹೂ ಇತ್ಯಾದಿ ಬಣ್ಣನೆ ಇವೆಲ್ಲಾ ಇರುತ್ತವೆ. ಮಂತ್ರದಂತೆ ಹೇಳುತ್ತಾರಾದ್ದರಿಂದ ಸಾಸಿಮಂತ್ರ ಎನ್ನುವುದುಂಟು.

ಹಲವು ಹರಕೆಗಳಲ್ಲಿ ಮುಪ್ಪಿನಲ್ಲಿಯೂ ಮುತ್ತೈದೆತನ ಸ್ಥಿರವಾಗಲಿ ಎಂಬ ಹರಕೆ ವಧೂ-ವರರಿಬ್ಬರ ದೀರ್ಘಾಯುಷ್ಯಕ್ಕೆ ಕೋರಿಕೆಯಾಗಿದೆ.

ನಿಬ್ಬಣದ ಪಯಣ ಅತಿಶಯ ಉತ್ಸಾಹದ ಒಂದು ಸಂದರ್ಭ. ಆ ಸಂದರ್ಭದ ಸಂಭ್ರಮ, ದಿಬ್ಬಣಿಗರ ಉಡುಪು ತೊಡುಪುಗಳ ಶೋಭೆ, ಉಬ್ಬು, ವಾದ್ಯಗಳ, ಹಾಗೂ ಮದ್ದು ಹೊಡೆವ ಅಬ್ಬರ, ಇತ್ಯಾದಿ ಮದುವೆಯ ಹಾಡುಗಳಲ್ಲಿ ಪ್ರತಿಧ್ವನಿತವಾಗುವುದುಂಟು. ರಾತ್ರಿಪಯಣದ ನಿಬ್ಬಣವಾದರೆ ಅದಕ್ಕೆ ಇನ್ನಷ್ಟು ಶೋಭೆ.

ಇಲ್ಲಿನ ನಿಬ್ಬಣ ಹೊರಟ ಗೀತದಲ್ಲಿ 'ಗಂಗೇರ (ಹೆಂಗಳೆಯರ) ಕೊರಳ ಸರಗಳ ಮಣಿ ಬೆಳಕು ಅಂಗಂಗಡಿಗೆಲ್ಲ ಚಂದ್ರಸ್ವಾಮಿಯ ಬೆಳಕು' ಎಂದು ಸೊಗಸಾಗಿ ಬಣ್ಣಿಸಲಾಗಿದೆ. ದಿಬ್ಬಣದವರುಟ್ಟಿರುವುದು ಎಳ್ಳು ಹೂವಿನ ಸೀರೆ, ದೋತರಗಳು !

ಇದೇ ಸೌಂದರ್ಯ ದೃಷ್ಟಿ (ಮುದ್ರಿಕೆಗಳು ಪು ೩೦) ಗೀತದಲ್ಲಿನ ಹೀರೆ ಹೂವಿನಂಗೆ ತುಪ್ಪವ ಕಾಸಿ, ಸ್ವಾರೆ (ಸೋರೆ) ಹೂವಿನಂಗೆ ಅನ್ನಮಾಡಿ ಎಂಬಲ್ಲಿಯೂ ಎಳೆ ಹೆಣ್ಣನ್ನು ಎಳೆ ಬಾಳೆ ಸುಳಿ ಬಾಳೆ ಎಂಬಲ್ಲಿಯೂ ಕಾಣುತ್ತದೆ. ಮದುಮಗನ ಅಂದ ಚೆಂದ ಬಾಗೂರು ಅರಸು ಇವನೇ ಎಂಬಂತೆ ಹೇಳಿಸಿದೆ. ಅವನು ಹೊದ್ದ ಚೌಕ ಬಾಳೆ ಹೂವಿನಂತೆ, ಕೋಮಲತೆಯಲ್ಲಿ ಕೋಮಲವಾಗಿದೆ. ರಾಜಣದ ಹಸೆ ಬರೆದಾಗ ಅದರ ಸೊಗಸಿಗೆ ಗೀಜಗ ಪಾತ್ರವನ್ನಾಡಿತು; ಅಕ್ಕಿ ಹಸೆ ಬರೆದಾಗ ಕೊಕ್ಕರೆ ಪಾತ್ರವಾಡಿತು- ಎಂಬಲ್ಲಿ ಆ ಹಸೆಯ ಅಂದ ಚೆಂದವನ್ನು ಧ್ವನಿರೂಪದಿಂದ ಹೇಳಲಾಗಿದೆ. ಕುಣಿಯದ ಹಕ್ಕಿಗಳನ್ನು ಕುಣಯುವಂತೆ ಮಾಡುವ ಆ ಹಸೆಯ ಸೊಗಸು ಎಂಥದಿರಬೇಡ ! (ಪುಟ ೧೬)

ಧಾರೆಯೆರೆಯುವ ಗೀತದಲ್ಲಿ ಮದುವೆಯ ಶಾಸ್ತ್ರದ ರಿವಾಜಿನ ವರ್ಣನೆಗೆ ಹೆಚ್ಚಿನ ಲಕ್ಷ್ಯವಿರುತ್ತದೆ. ಕಲ್ಪನಾರಮ್ಯತೆ ಕಡಿಮೆ ಮದುವೆಯ ಹಾಡಿನಲ್ಲಿ ಇಂಥ ವಿವರಗಳು

ಅವಶ್ಯವಾಗಿ ಬರಬೇಕಾದದ್ದು ಆದರೆ, ಹಿಂದಿನ ಗೀತಗಳಲ್ಲಿ ಅವು ಕಲ್ಪನಾರಮ್ಯತೆಯ ಬೆಡಗನ್ನು ಹೊಂದಿ ಬಂದಂತೆ ಇಲ್ಲಿ ಬಂದಿಲ್ಲ.

ಬಾಗಿಲು ತಡೆ ನ ಗೀತೆ ಇತರ ಕಡೆಗಳ ಗೀತೆಗಳನ್ನು ಹೋಲುತ್ತದೆ. ಸೋದರದ ಹೆಣ್ಣನ್ನು ತಂದು ಕೊಳ್ಳಬೇಕೆಂಬ ಹೆಣ್ಣು ಮಕ್ಕಳ ತವರಿನ ಅಭಿಮಾನ, ಆಸೆ, ಏನೆಲ್ಲವನ್ನು ನಿರಾಕರಿಸುವ ಅಕ್ಕ (ತಂಗಿ) ನ ಮಾತಿನ ರೀತಿಯಲ್ಲೇ ಒಡಮೂಡುತ್ತದೆ.

ಇಲ್ಲಿ, ಮದು ಮಗನು ತಂಗಿಗೆ

'ಹೊತ್ತು ಹುಟ್ಟಿತು ನಿಸ್ಸೆಮುಕ ಬಾಡಿತು ಕತ್ತೊಳ್ಳ ಮಾಲೆ ಒಣಗಿತು'

ಎಂಬಲ್ಲಿ ಸೊಗಸಾದ ರೀತಿಯಲ್ಲಿ ತನ್ನ ಮಡದಿಯೊಡನೆ ಗೃಹಪ್ರವೇಶ ಮಾಡುವ ವರನ ಆತುರವನ್ನು ಬಣ್ಣಿಸಲಾಗಿದೆ.

ಹೆಣ್ಣೊಪ್ಪಿಸಿಕೊಡುವ ಉತ್ತರ ಕರ್ನಾಟಕದ ಹಾಡಿನ ಹಿರಿಮೆಗೆ ಇನ್ನಾವ ಹಾಡು ಸರಿದೂಗದು (ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರುಗೇನ । ಹಂಬಲಿಸಿ ನಿನ್ನ ಹಡದೇನ)

ಇಲ್ಲಿನ ಹಾಡಿನ ಭಾವನೆ 'ನಿಂಬಾಲೆ ಕಂಡುಂಗೆ ಕಾಣೀರಿ ಜಾಲದ್ದೂ ವಿನಂಗೆ ಜಾಣೆಯ ಸಾಕಿದೊ' ಇತ್ಯಾದಿ ಮಾತುಗಳಲ್ಲಿ ತಕ್ಕಮಟ್ಟಿಗೆ ವ್ಯಕ್ತವಾಗಿದೆ. ದುಃಖಿಸುವ ತಾಯಿಯ ಗೋಳಿನ ಬಣ್ಣನೆ ಚೆನ್ನಾಗಿದೆ.

ಮದುವೆಯ ಜರೆಯುವ ಹಾಡುಗಳು ಸಾಮಾನ್ಯವಾಗಿ ಎಲ್ಲ ಕಡೆಗೂ ಗಣನೀಯ ವಾಗಿಯೇ ಹೇಳಲ್ಪಡುತ್ತಿದ್ದವು. ಅವುಗಳಲ್ಲಿ ತಮ್ಮ ತಮ್ಮ ಪಕ್ಷದ ಹೆಚ್ಚುಗಾರಿಕೆಯನ್ನು, ಹೆಮ್ಮೆಯನ್ನು, ಎದುರು ಪಕ್ಷದವರನ್ನು ಹೀಯಾಳಿಸಿ, ತಮ್ಮವರನ್ನು, ತಮ್ಮ ಸಿದ್ಧತೆ, ಸರಂಜಾಮು, ಊಟ ಉಡಿಗೆ ಇತ್ಯಾದಿಗಳ ಘನತೆಯನ್ನು ಉಬ್ಬಿಸಿ ಹೇಳಿ ಹೊಗಳುವ ಕ್ರಮವಿರುವುದು ಕಾಣುತ್ತದೆ. ಇಲ್ಲಿ ದೃಷ್ಟಿದೋಷ (ವರ, ವಧುವಿಗೆ) ಪರಿಹಾರದ ಉದ್ದೇಶವೂ ಇರಬಹುದು.

ಇದರಲ್ಲಿ ವಿನೋದ, ವಿಡಂಬನೆ, ಕೆಣಕುವಿಕೆ ಇರುವುದರಿಂದ ಮದುವೆಯ ಮಾಧುರ್ಯದ ಊಟಕ್ಕೆ ಉಪ್ಪಿನ ಕಾಯಿಯಂತೆ ವೈವಿಧ್ಯದ ರುಚಿಯನ್ನು ತರುತ್ತಿದ್ದಿ ರಬೇಕು. ಆದರೆ, ಇದು ಅತಿಯಾದರೆ, ಖಾರ ಹೆಚ್ಚಿದರೆ, ಉಪ್ಪು ವಿಪರೀತವಾದರೆ ಸರಸವು ವಿರಸವಾಗುತ್ತದೆ; ವಿನೋದ ವಿಕಟವಾಗಬಹುದು. ಅಶ್ಲೀಲತೆಗೆ ಎಡೆಗೊಡು ವುದೂ ಉಂಟು.

ಗಂಡಿನವರು ಹೆಣ್ಣಿನ ಮನೆಗೆ ದಿಬ್ಬಣ ತಂದ ಸಂದರ್ಭದಿಂದ ಈ ಜರೆತದ ಹಾಡು ಗಳಿಗೆ ಅವಕಾಶ ಬರುತ್ತದೆ.

ಮದುವೆಯ ಹಾಡುಗಳಲ್ಲಿ ಎಷ್ಟೋ ಜರೆವ ಹಾಡುಗಳಲ್ಲಿ ಹೆಚ್ಚಿನ ಚಮತ್ಕಾರ ಕಾಣದು. ಇಂಥಿಂಥದು ಇಲ್ಲ ಎಂದಾಗ ಅನೇಕ ಮಾತುಗಳನ್ನು ತಿರುಗಿಸಿ ಅವೆಲ್ಲ ಇವು ಎಂದು ಉತ್ತರ ಬರುವದುಂಟು.

ನಮ ಬೀಗರು ಹಾವಾಡಿಗರಂಗೆ ಇಳಿದಾರೆ, ಬಿಂಗಿ ಅಂತೋರು ಮುಂತಾದ ನಿಂದನೆಯಲ್ಲಿ ಅಷ್ಟೇನೂ ಸ್ವಾರಸ್ಯವಿಲ್ಲ—

ಎತ್ತೆಲ್ಲಿ ಕಟ್ಟಿದಿರಿ ಬುತ್ತಿ ಎಲ್ಲುಂಡಿರಿ
ಸುಕ್ರ ನಿಮಗೆಲ್ಲಿ ಉದಿಯಾದ । ನಮ ಬೀಗರೆ
ಸುತ್ತೇಳು ಹರದಾರಿ ನಡದೀರ । ೪೩೪ ।

ಎಂಬ ಪದ್ಯದಲ್ಲಿ ಒಳ್ಳೆಯ ನೈಪುಣ್ಯ ಕಾಣುತ್ತದೆ. ಹಿಂದಿನ ಕಾಲದಲ್ಲಿ ನಡೆದು ದೂರ ಪ್ರಯಾಣ ಮಾಡುವವರ ಚರ್ಯೆ ಇಲ್ಲಿ ಚನ್ನಾಗಿ ಬಂದಿದೆ.

ಪುಟ ೬೫, ೬೬ ರಲ್ಲಿ ಕೆಲವು ಮಾತುಗಳು ಬಂದಿರುವುದು ಈ ಜರೆವ ಹಾಡುಗಳು ಒಮ್ಮೊಮ್ಮೆ ಅತಿರೇಕಕ್ಕೆ ಹೋಗುವುದರ ಉದಾಹರಣೆಗಳಾಗಿವೆ. (ಪ ೪೫೨-೪೫೩)

ಎಲ್ಲ ಕಡೆ ಈ ಪದ್ಧತಿ ನಷ್ಟವಾಗಿದ್ದು ನಿಂದೆಯೂ ಅದರ ಉತ್ತರವು ಸರಿಯಾಗಿರುವ ಹಾಡುಗಳು ಸಿಗುವುದು ಕಷ್ಟವಾಗಿದೆ.

ಈ ಹಾಡುಗಳು ಸಂಪ್ರದಾಯವನ್ನನುಸರಿಸಿ ಹೇಳಿದಂಥವು ಇವುಗಳಿಗಾಗಿ ಹಾಡುಗಾತಿಗಾಗಲಿ, ಸಂಪಾದಕರಿಗಾಗಲಿ ಯಾವ ದೋಷವಿಲ್ಲ

ಮದುವೆಯ, ಹಾಗು ಇತರ ಸಂಪ್ರದಾಯದ ಹಾಡುಗಳಲ್ಲಿ ಪುನರುಕ್ತಿ ಅನೇಕ ಕಡೆ ಬರುತ್ತದೆ. ಅವು ಆ ಕಾರ್ಯಗಳ ಸಂಭ್ರಮ-ಸಡಗರಗಳ ನಡುವೆ ಕೇಳತಕ್ಕವು. ಅವು ನಾಟಕದ ಹಾಡುಗಳಂತೆ. ಓದುವುದರಿಂದ ಮಾತ್ರ ಅವುಗಳ ಸೊಗಸು, ಔಚಿತ್ಯ ಪೂರ್ಣ ತಿಳಿಯುವುದಿಲ್ಲ. ಕೇವಲ ಸಾಹಿತ್ಯ ಗುಣವೌಲ್ಯವನ್ನು ಅರಸಿದರೆ, ಹಲವು ಹಾಡುಗಳಲ್ಲಿ ಕೇವಲ ಶಬ್ದಾಡಂಬರ ಕಂಡುಬರಬಹುದು.

ದೇವರ ಭಕ್ತಿ, ಗುರುಹಿರಿಯರ ಮೇಲಿನ ಗೌರವ, ಅನೇಕ ಶಿಷ್ಟಾಚಾರಗಳನ್ನು ಪಾಲಿಸುವಲ್ಲಿನ ಹಿಂದಿನ ಜನರ ಆಸಕ್ತಿ, ವೇಷಭೂಷಣ, ಆಗಿನ ಕಾಲದ ಜನಜೀವನ, ನಂಬಿಕೆಗಳು. ಭಾವಾಭಿವ್ಯಕ್ತಿಯಲ್ಲಿನ ಜಾನಪದರ ವೈಶಿಷ್ಟ್ಯ, ಭಾಷಾಕ್ರಮ, ಪ್ರಾಸಪ್ರಿಯತೆ ಇವನ್ನೆಲ್ಲ ಕುತೂಹಲದಿಂದ ಅಭ್ಯಸಿಸಬೇಕಾಗುತ್ತದೆ.

ಜರೆವ ಹಾಡುಗಳನ್ನು ಬಿಟ್ಟು ಉಳಿದೆಡೆಗಳಲ್ಲೆಲ್ಲ ನಂಬಿಕೆಗಳ ಶ್ರದ್ಧೆ, ದೇವರ ಮೇಲಿನ ನಿಷ್ಠೆ, ಭಕ್ತಿಯ ಭಾವಕೋಶದಿಂದ ಹೊರಟ ಬೆಳಕು ಸಾಮಾನ್ಯ ಗೀತಗಳನ್ನು ಅಸಾಮಾನ್ಯವನ್ನಾಗಿ ಮಾಡಿರುವುದುಂಟು. 'ಹಟ್ಟಿ ಬಿಟ್ಹೋಗುವಾಗ ಕಿತ್ತಲೆ ಪಲ್ಲೈಸಿದೋ....(ಪ. ೨೨೦)

ಹಿಂದೆ ಗಂಡಿನವರು ಸಾಕಷ್ಟು ಕನ್ಯಾಶುಲ್ಕ ಕೊಟ್ಟು ಹೆಣ್ಣನ್ನು ನಿಶ್ಚಯ ಮಾಡಿಕೊಂಡು ಮದುವೆ ಮಾಡುತ್ತಿದ್ದರು. ಸಿರಿವಂತರಲ್ಲಿ, ಒಂಟೆ, ಆನೆ, ಕುದುರೆ, ಮೇನೆ ಏರಿಕೊಂಡು ಹೋಗುತ್ತಿದ್ದಂತೆ ತಿಳಿಯುತ್ತದೆ. ಎತ್ತಿನ ಮೇಲೆ ಹೇರು ಹೇರುತ್ತಿದ್ದರು.

ಈ ಹಾಡುಗಳಿಂದ ಮದುವೆಯ ಕ್ರಮಗಳ ಅನೇಕ ವಿವರಗಳು ದೊರೆಯುವುದ

ರೊಂದಿಗೆ, ಹಾಡುಗಳಲ್ಲಿ ಪೂರ್ಣ ವಿವರ ಬರದಿದ್ದಾಗ ಹೆಚ್ಚಿನ ಮಾಹಿತಿಯನ್ನು ಸಂಪಾದಕರು ಒದಗಿಸಿ ಉಪಕಾರ ಮಾಡಿದ್ದಾರೆ.

"ಒಸಗೆಯ ಪದಗಳು" ಒಕ್ಕಲಿಗರ ಹೆಣ್ಣುಮಕ್ಕಳು ಮೈನೆರೆದಾಗ ಮಾಡುವ ಕ್ರಮಗಳನ್ನು ಬಣ್ಣಿಸುವ ವೈಶಿಷ್ಟ್ಯಯುತ ಗೀತಗಳು. ಅತ್ತಿ, ಗುಡಲು(ಗುಡಿಸಲು) ಆಲದ ಗುಡಲುಗಳಲ್ಲಿ ಮೂರು ದಿನ ಮೈನೆರೆದವಳನ್ನು ಇಡುವ ಇಲ್ಲಿನ ಕ್ರಮ ಉತ್ತರ ಕನ್ನಡ ದಲ್ಲಿ ಇಲ್ಲ.

ನೆನಗಡಲೆ, ಅಕ್ಕಿ, ಕಾಯಿ, ಹಣ್ಣು, ಹೂವುಗಳು, ಎಳ್ಳುಚಿಗುಳಿ, ಹೊಂಬಾಳೆಅಕ್ಕಿ, ತಂಬಿಟ್ಟಿನ ಉಂಡೆ ಇತ್ಯಾದಿಗಳಿಂದ ನೆರೆದವಳ ಮಡಿಲು ತುಂಬಲು ಉಪ ಯೋಗಿಸುವ ಕ್ರಮ ಬೇರೆಡೆಯ ಕ್ರಮಗಳಿಗಿಂತ ಸ್ವಲ್ಪ ವಿಶಿಷ್ಟವಾಗಿದೆ.

'ರಾಗಿ ಬೀಸುವ ಪದಗಳು' ಭಾಗದ "ಧರ್ಮರ ಪದಗಳು" ಭಾಗದಲ್ಲಿ ಜನಪದ ಗೀತಕಾರ್ತಿಯರು ಹೇಗೆ ಭಾವಪೂರ್ಣವಾಗಿ ಹಾಡಬಲ್ಲರು ಎಂಬುದನ್ನು, ಅಲ್ಲದೆ ಹೇಗೆ ಬೀಸುವ ಕಾಲದ ಬೇಸರವನ್ನು ಹಾಡಿ ಹಗುರವಾಗಿಸಿಕೊಳ್ಳಲು ಪದ್ಯ ಬೆಳೆಸಲು ಉಪಯೋಗಿಸುವ ವಿಶಿಷ್ಟ ತಂತ್ರವನ್ನು ಬಳಸಿ ಗೀತಗಳನ್ನು ಹೊಸೆಯುವರೆಂಬುದನ್ನು ಜೊತೆ ಜೊತೆಯಾಗಿಯೆ ಕಂಡುಕೊಳ್ಳಬಹುದು. ದ್ರೌಪದಿಯನ್ನು (ಹೆಣ್ಣನ್ನು) ಹಣ್ಣು ಎನ್ನುವಲ್ಲಿನ ಆಶಯ ಜಾನಪದ ಭಾರತದಲ್ಲಿ ಪ್ರಸಿದ್ಧವಾದುದು. ಬಡತನ ಬಂದರೂ ಶಿವ ಕೊಟ್ಟಿದ್ದೆಂಬ ಸಮಾಧಾನ ತಾಳಬೇಕು. ಎಂಬುದನ್ನು ಈಗಿನ ಜನ ಒಪ್ಪುವುದಿಲ್ಲ ಆದರೆ ಚಿಂತೆಗೆ ಮನಸ್ಸು ಕುಗ್ಗುತ್ತದೆ ಎಂಬುದನ್ನು ಒಪ್ಪದಿರಲಾರರು.

"ತಿಂಗಳು ಮಾವನ ಪದಗಳು" ಮಳೆಯಿಲ್ಲದ ಸಮಯದಲ್ಲಿ ಮಾಡುವ ಪರ್ಜನ್ಯ ಪೂಜೆಯ ಕ್ರಮದ ಗೀತಗಳೆಂದು ಅನಿಸುತ್ತದೆ. ತಿಂಗಳು ಮಾವ ಚಂದ್ರ ; ಚಂದ್ರನ ತಿಂಗಳು ಮಳೆಗಾಲದ ಮುಗಿಲಿನಲ್ಲಿ ಇದ್ದರೆ ಮಳೆ ಹಿಂದಾದ ಲಕ್ಷಣ. ಅದರಿಂದ ಮದುವೆ ಯಾಗದಿರುವ ತಿಂಗಳುಮಾವನನ್ನು ಕಲ್ಪಿಸಿಕೊಂಡು, ಅವನಿಗೆ ಪ್ರಸನ್ನತೆಯನ್ನುಂಟು ಮಾಡಲು ಅವನನ್ನು ಪೂಜಿಸುವ.ಮದುವೆ ಮಾಡುವ ಕ್ರಮವನ್ನು ರೂಢಿಗೆ ತಂದರೆಂದು ಕಾಣುತ್ತದೆ, ಉತ್ತರ ಕನ್ನಡದ ತಾರ್ಲೆ (ತಾರಲೆ) ಪದಗಳು ಸಹ ಮಳೆಯಿಲ್ಲದಾಗ ಮಳೆ ಹೊಯ್ಯುವವರೆಗೆ ಹಲದಿನ ಪರ್ಯಂತ ಸಹ ಹೇಳಿ ಕುಣಿಯುವಪದಗಳು- ತಾರ್ಲೆ ಎಂದರೆ ಮಳೆ ತಾರಲೀ ಎಂಬ ಅರ್ಥವಿರಬಹುದು. ಆ ತಾರಲೆ ಪದಗಳಲ್ಲಿ ಚಿಕ್ಕಮಕ್ಕಳ ಮದುವೆಯ, ಇತರ ಮದುವೆಯ ಹಾಡುಗಳಿರುವುದು ತಿಂಗಳುಮಾವನ ಪದಗಳಿಗೆ ಅವನ್ನು ಹೋಲಿಸುವ ಇಂಬನ್ನೀಯುತ್ತವೆ.

ಮದುವೆ ಇರಲಿಲ್ಲದ ಚಂದ್ರನಿಗೆ ಮದುವೆ ಮಾಡುವ ಸಂಸ್ಕಾರವೇ ತಿಂಗಳು ಮಾವನ ಹಸೆ ಬರೆವ, ಕ್ರಮದಿಂದ ಪ್ರಾರಂಭವಾಗುವ ಪೂಜೆ, ಮತ್ತು, ಪದಗಳಲ್ಲಿದೆ. ಪ್ರತ್ಯಕ್ಷ ಮದುವೆ ಮಾಡಿದ ಪದಗಳು ನಷ್ಟವಾಗಿರಬಹುದು. ತಿಂಗಳುಮಾವಗೆ

ಮದುವೆ ನಿಚ್ಚಲು ಸೋಬಾನವೆ (ಪುಟ ೧೧೯) ಎಂಬಲ್ಲಿ ಅವನ ಮದುವೆ ಮಾಡುವುದರ ಸೂಚನೆಯಿದೆ.

ಮಳೆರಾಯನ ಹಾಡಿನಲ್ಲಿ ಮಳೆರಾಯನು ದೇವೇಂದ್ರನೇ ಎಂಬ ಅರ್ಥ ಕಾಣುತ್ತದೆ ; ಆದರೆ ಮಳೆರಾಯನು ದೇವೇಂದ್ರನ ಬಳಿ ಸಾಲಕ್ಕೆ ಹೋದ, ಮತ್ತು ದೇವೇಂದ್ರ ಬಾಣ ಬಿಟ್ಟು, ಸಿಡ್ಲು ಉಂಟಾಗುವ ಕಥೆಯನ್ನು ಸೋಬಾನೆ ಚಿಕ್ಕಮ್ಮನೇ ಹೇಳಿದ್ದೆಂದು ಸಂಪಾದಕರು ಕೊಟ್ಟಿದ್ದಾರೆ. (೨೫೮) ಆದರೆ ಈ ತ್ರಿಪದಿಗಳಲ್ಲಿ ಸಾಲ ತಕ್ಕೊಂಡಿದ್ದು ಇಲ್ಲ.

ತಿಂಗಳು ಮಾವನ ಪೂಜೆ ಮಾಡಿದ ಅನಂತರ ಒಬ್ಬ ಹುಡುಗನಿಗೆ ಸೀರೆ ಉಡಿಸಿ, ಹೆಣ್ಣು–ಗಂಡು ಮಾಡಿಕೊಂಡು ಮದುವೆ ಮಾಡುತ್ತಾರೆ–ಊರು ಕೇರಿಯಲ್ಲೆಲ್ಲಾ ತಮಟೆ ಬಡಿದುಕೊಂಡು ಹೋಗಿ ಬರುತ್ತಾರೆ ಎಂದು ಲೇಖಕರು ಟಿಪ್ಪಣಿಯಲ್ಲಿ ಕೊಟ್ಟಿರುವ ಅಂಶ ಸ್ವಾರಸ್ಯವಾಗಿದೆ (೨೫೭)

ಇಲ್ಲಿನ "ದೇವರ ಪದಗಳು" ಎಂಬ ಭಾಗದಲ್ಲಿ ಭಕ್ತಿಯ ಭಾವನೆಯ ಹಿನ್ನೆಲೆಯಲ್ಲಿ ಆಯಾ ದೇವರ ಪದಗಳನ್ನು ನೋಡಬೇಕು. ಲಕ್ಕವ್ವ, ದೊಡ್ಡಮ್ಮ, ಉಡುಸಲವ್ವ ಈ ದೇವರುಗಳ ವೈಶಿಷ್ಟಗಳನ್ನು ಕುರಿತು ಗೀತಗಳಲ್ಲಿ ಅಲ್ಪ ಸ್ವಲ್ಪ ಸೂಚನೆಗಳು ಉಂಟು. ಆ ದೇವರ ಕುರಿತು ಹೆಚ್ಚಿನ ವಿವರಣೆ ಬೇಕಾಗಿತ್ತು. ದೊಡ್ಡಮ್ಮನ ಮೇಲಿನ ಗೀತಗಳಲ್ಲಿ ಬೇವಿನ ಸೊಪ್ಪನ್ನು ಕುರಿತ ಗೀತ ಒಂದಿದೆ (೧೨೯.) ೧೪ನೇ ಪದ್ಯ. ಆ ದೇವತೆಗೆ ಬೇವಿನ ಸೊಪ್ಪಿನ ಉಡಿಗೆಯ ಹರಕೆ ಹೇಳಿಕೊಳ್ಳುವರೋ ಏನೆಂದು ಓದು ಗರಿಗೆ ಸಂದೇಹ ಬರುತ್ತದೆ.

ಬೆಲ್ಲ, ಮತ್ತು ಬೇವಿನ ಸೊಪ್ಪುಗಳನ್ನು ಒಂದೇಕಡೆ ಸೇರಿಸಿ ಹೇಳಿದ್ದು ಯಾಕೆಂಬುದು ತಿಳಿಯುವುದಿಲ್ಲ.

ಲಕ್ಕವ್ವ ಎಂಬ ಗೀತದಲ್ಲಿ 'ಹೂವರಳಿ ಬಾಯ ಬಿಡುತಾದೆ' ಎಂಬುದು ಚಂದ ವಾದ ಬಣ್ಣನೆ. ಲಕ್ಕವ್ವನ ಮುಡಿ ಸೇರಲು ಅವುಗಳ ತವಕ, ಆ ಆಸೆಯಿಂದ ಬಾಯಿ ಬಿಡುತ್ತವೆ, ಲಕ್ಕಮ್ಮ ಮಾಸ್ತ್ಯಮ್ಮ ದೇವರು ಎಂದು ಕೊಟ್ಟಿದ್ದಾರೆ.

ಇಲ್ಲಿನ ದಂಡಿಗೆ ಆಳ ಕಳಿಬ್ಯಾಳೆ ಎಂಬ ಮಾತಿನ ಅರ್ಥ ಮಾಡುವಲ್ಲಿ ದಂಡಿಗೆ ತುಂಬ ಆಳ (?) (ಆಳುಗಳನ್ನು) ಎಂದು ಸಂದೇಹವನ್ನು ವ್ಯಕ್ತಮಾಡಲಾಗಿದೆ. ಆದರೆ ಇಲ್ಲಿ ಅರ್ಥ ಸ್ಪಷ್ಟವಿದೆ. ಹೂಗಳನ್ನು ದಂಡಿಗೆಯಲ್ಲಿ ತುಂಬಿ ತರಲು ದಂಡಿಗೆ ಹೊತ್ತ ಆಳುಗಳನ್ನು ಕಳಿಸಲಾಗಿದೆ.

'ಉಡುಸಲವ್ವ' ಗೀತದ ಉಡುಸಲವ್ವನಿಗೆ ಈ ಹೆಸರು ಹೇಗೆ ಬಂತು ? ಈ ಉಡುಸಲವ್ವ ದೇವತೆಯಾಗುವುದಕ್ಕೆ ಹಿನ್ನೆಲೆಯಾಗಿ ಕಥೆಯೊಂದಿದ್ದಿರಬೇಕು ಎಂಬ ಸೂಚನೆ ಗೀತದಲ್ಲಿದೆ. (ಪು ೧೩೦) ಹಾರುವರ ಮಗಳು ಮೀನಂ ವರಾರೋನಿಗೆ ಒಲಿದು ಬಂದಳು. ಆದರ ಫಲವಾಗಿ ಮೇಲ್ಜಾತಿಯವರು ಹೋರಾಟಕ್ಕೆ ಬಂದಿರಬೇಕು ;

ಉಡುಸಲವ್ವ ಕುದುರೆಯೇರಿ, ಹೋರಾಟ ಮಾಡಿ, ಮಡಿದು ದೇವತೆಯಾಗಿರಬೇಕು ಎಂಬುದು ಕೊನೆಯ ಪದ್ಯದಿಂದ (ಪು ೧೩೨) ಊಹಿಸಬರುವಂತಿದೆ. ಈ ಕುರಿತು ಸಂಪಾದಕರು ಹೆಚ್ಚಿನ ತಿಳುವಳಿಕೆ ನೀಡಬಹುದಾಗಿದೆ,

ಇಲ್ಲಿನ 'ಜುಂಜನ ಗಿರಿ ಭೈರಪ್ಪ'ನ ಕುರಿತ ಪದಗಳಲ್ಲಿ ಭೈರವನ ಭಕ್ತರು ಮಾಡುವ ವಿವಿಧ ಸೇವೆಗಳ ಚಿತ್ರಣವೂ ಮಕ್ಕಳ ಫಲ ಬಯಸಿ ಹರಕೆ ಹೇಳಿಕೊಳ್ಳುವ, ಸಲ್ಲಿಸುವ ಹೆಂಗಳೆಯರ ಚಿತ್ರಣವೂ ಸಿರಿಗಂಗೆಯರು, ಲಲ್ಲೆಯರು ಆಡುವ ಸಿರಿಗಂಧದೋಕುಳಿಯ ಚಿತ್ರವೂ ಭೈರವನು ಮಾಳವ್ವನನ್ನು ಒಲಿದು, ಕೋಟೆಯಲ್ಲಿ ಕನ್ನ ಹಾಕಿ ಅವಳನ್ನು ತಂದನೆಂಬ ಸೂಚನೆಯ ಕಥಾಚಿತ್ರಣವೂ ಈ ಗೀತದ ಕೆಲವು ವೈಶಿಷ್ಟಗಳು. ಇಲ್ಲಿ ಪದ್ಯಗಳಲ್ಲಿ ಹೆಚ್ಚಿನವು ಭಾವಪೂರ್ಣವಾಗಿವೆ.

ಜಾರಿಬಿದ್ದಾವೆ ಬಿಳಿ ಎಲೆ । ಸೂಳೇರವ್ವ
ಜಾಲದ್ಹೂವೆಂದು ಮುಡಿದಾಳೆ (ಪು ೧೪೦.)

ಎಂಬ ಭ್ರಮಾಲಂಕಾರದ ಕಲ್ಪನೆಯನ್ನು ಹೋಲುವ ಕೇದಿಗೆ ಹೂವೆಂದು ಬಿಳಿ ಎಲೆಯನ್ನು ಮುಡಿಯುವ ಕಲ್ಪನೆಯ ನನ್ನ ಸಂಗ್ರಹದ ತ್ರಿಪದಿಯೊಡನೆ ಹೋಲಿಸಬಹುದು. ಬಿಳಿ ಎಲೆಗೆ ಕೇದಿಗೆ ಹೂವಿನ ಹೋಲಿಕೆಯೇ ಹೆಚ್ಚಿದೆ. ಜುಂಜಪ್ಪನ ಕುರಿತ ಪದ್ಯಗಳಲ್ಲಿ ಡಾ. ಜೀಶಂಪ ಅವರ ಸಂಗ್ರಹದ ವಿಸ್ತಾರವಾದ ಹಾಡಿನ ಸಂಕ್ಷಿಪ್ತ ರೂಪ ಕಾಣುತ್ತದೆ. ಕಂಬಿಗೊಲ್ಲರು ಅವನಿಗೆ ವಿಷವೂಡಿ ಅವನಿಂದ ಮಡಿವ ಕಥೆಯಲ್ಲಿ ಇದು ಸೂಚಿತವಾಗಿದೆ.

ಕೊನೆಯ ದಳ "ಹಾಡ್ಗತೆಗಳು"ನಂಜುಂಡ ಲಿಂಗಾ, ಮೇಲುಕೋಟೆ ಚೆಲುವಯ್ಯ, ಈರೋಬಿ ಗಂಗೆ-ಗೌರಿ, ನಾಗರಗನ್ನೆ ಮೊದಲಾದ ಹಾಡುಗತೆಗಳ ಪಾಠಾಂತರಗಳೂ ಜವರಾಯ ಎಂಬ ಹಾಡಿನ ಪಾಠವೂ ರವಿಕಣ್ಣ ಮತ್ತು ಮಾದೇವಿ ಎಂಬ ಹೊಸ ಪದಗಳೂ ಇಲ್ಲುಂಟು.

ಚೆಲುವಯ್ಯ, ನಂಜುಂಡಲಿಂಗ ಹಾಡುಗಳು ಕರಾಕೃ ಅವರ ಪಾಠಗಳಷ್ಟು ವಿಸ್ತೃತವಲ್ಲ. ಕರಾಕೃ ನಂಜುಂಡಲಿಂಗ ಪಾಠವೇ ಹೆಚ್ಚು ಸ್ವಾರಸ್ಯವಾಗಿದೆ. ಇದರಲ್ಲೂ ಭಾವಪೂರ್ಣವಾದ ಅನೇಕ ತ್ರಿಪದಿಗಳುಂಟು. ಆದರೂ ಸರಿಯಾಗಿ ಕಥೆ ವಿಕಾಸ ಹೊಂದಿಲ್ಲ. ಮೊದಲು ನಂಜಯ್ಯ-ದೇವೀರಿ ಮದುವೆಯಾದ ಉಲ್ಲೇಖವಿದ್ದು, ಆಮೇಲೆ ಜಂಗಮರು ಸೇರಿ ದೇವೀರಮ್ಮನ ನಂಜಯ್ಯಗೆ ಧಾರೆ ಎರೆದಾರೆ ಎಂದು ಬರುವ ತ್ರಿಪದಿಯ ಹಿಂದಿನ ಕೆಲವು ತ್ರಿಪದಿಗಳಲ್ಲಿ ನಂಜುಂಡ-ಚಾಮುಂಡಿಯರ ಸಂಬಂಧದ ವಿಷಯ ಬಂದು, ಕ್ರಮ ತಪ್ಪಿದೆ. ನಿರೂಪಕಿಯು ಹೇಳುವಲ್ಲಿ ಕ್ರಮ ಹಿಂದು ಮುಂದಾಗಿದೆ.

ಜುಂಜನಗಿರಿಯ ಗುರುವಿಗೊಪ್ಪಿಸುವೆ ಪದನೂರ ಎಂದು ಮುಗಿದ ತ್ರಿಪದಿ 40 ನೆ ಪದ್ಯ, ಅರ್ಧಕ್ಕಿಂತ ಹೆಚ್ಚು ಭಾಗ ಮರೆತುಹೋದಂತಿದೆ.

ಇಲ್ಲಿ ದೇವರು ಮನುಷ್ಯರ ಹಾಗೂ ದೇವತೆಗಳ ಬಾಹಿರಪ್ರಣಯ ಮಾಡುವ ಕಥೆಗಳು ಹೇಗೆ ಪ್ರಚಾರ ಹೊಂದಿದವೆಂಬುದರ ಕುರಿತು ವಿಚಾರ ಮಾಡಬಹುದು. ಆಯಾ ದೇವತೆಗಳ ಹೆಸರಿರುವ ವ್ಯಕ್ತಿಗಳ ಇಂಥ ಪ್ರಣಯ ಕಥೆಗಳ ಹಾಡುಗಳು ಮೊದಲು ಪ್ರಚಾರದಲ್ಲಿದ್ದು, ಆಮೇಲೆ ವ್ಯಕ್ತಿಗಳು ಮರೆಯಾಗಿ ಅವೇ ಹೆಸರಿನ ದೇವತೆಗಳು ಕಥಾಪಾತ್ರಗಳಾಗಿ ಪ್ರಚಾರಪಡೆದಿರಬೇಕು—ಎಂದು ತಾತ್ಪೂರ್ವಿಕವಾಗಿ ಊಹೆ ಮಾಡಬಹುದು.

ಇಲ್ಲಿಯ ವರನಂದಿ ತುರುವೇಕೆರೆಯವಳು. ಚೆಲುವಯ್ಯ ದಾಸರ ವೇಷ ಹಾಕಿದ ಕರಾಕೃಗ್ರಂಥದ ವಿಸ್ತಾರವರ್ಣನೆ ಇಲ್ಲಿಲ್ಲ. ಪ್ರೀತಿ ಜಾತಿಯನ್ನು ಮೀರಿ ಹರಿಯುವುದನ್ನು ಇಂಥ ದೇವರ ಕಥೆಗಳಲ್ಲಿಯೂ ನೋಡಬಹುದು. ವರನಂದಿಯ ತಂದೆ ಸುರತಾಳನು ಚೆಲುವಯ್ಯ ಬರುವ ಸುದ್ದಿ ಕೇಳಿಯೇ ನಾಡಗೊಂಬೆಗಳನ್ನೆಲ್ಲ ಕೀಳಿಸಿ, ಮೂಟೆ ತುಂಬಿಸಿ ತಂದು ಅರಮನೆಯಲ್ಲಿಟ್ಟು ಬೀಗ ಹಾಕಿದನಂತೆ. ವರನಂದಿ ಚಿತ್ರದ ಗೊಂಬೆಯನ್ನು ಕೇಳುವುದೂ ಚೆಲುವಯ್ಯನು ಗೊಂಬೆಯ ರೂಪದಲ್ಲಿ ಅವಳ ಮುಂದೆ ಹೊಳೆಯುವುದೂ ಚೆಲುವಾದ ಕಲ್ಪನೆಗಳು. ಕತೆಯ ವಿವರ ಕೆಲವೆಡೆ ಹಾರಿಹೋದಂತೆ ಕಾಣುತ್ತದೆ. ಪದ್ಯಗಳು ಕೆಲವು ಕಡೆ ಹಿಂದುಮುಂದಾಗಿವೆ. ಪದ್ಯ (೧೧೭–೧೨೩ ಈ ಪದ್ಯಗಳು ಕೊನೆಗೆ ಬರಬೇಕು.)

ವರನಂದಿಯ ಸ್ವಪ್ನದಲ್ಲಿ ಚೆಲುವಯ್ಯನು ಕಾಣಿಸಿಕೊಳ್ಳುವುದೂ ಚೆಲುವಯ್ಯ ತನ್ನ ಮದುವೆಗೆ ಬೇರೆಬೇರೆ ದೇವತೆಗಳನ್ನು ಆಮಂತ್ರಿಸುವಲ್ಲಿನ ಸ್ವಾರಸ್ಯ ಸಂಭಾಷಣೆಗಳೂ ಇಲ್ಲಿಯೂ ಇವೆ.

"ಗಂಗೆ–ಗೌರಿ" ಗೀತದಲ್ಲಿ ಗೌರಿಗೆ ಬಿದ್ದ ವಿಶಿಷ್ಟ ಸ್ವಪ್ನವಿದೆ. ಗೀತವು ಅವರ ಜಗಳದಲ್ಲಿ ಮುಗಿದಿದೆ. ಬೇರೆ ಪಾಠಗಳಲ್ಲಿ ಗಂಗೆ ಮುನಿದು ನೀರನ್ನೆಲ್ಲ ಬತ್ತಿಸುವುದೂ ಗೌರಿಯು ಗಣಪ (ಅಥವಾ ವೀರಭದ್ರ) ನನ್ನು ಅವಳಿದ್ದಲ್ಲಿ ಕಳಿಸಿ ಅವಳನ್ನು ಸಾಂತ್ವನಗೊಳಿಸಿ ಮತ್ತೆ ನೀರು ಬರುವಂತೆ ಮಾಡುವುದೂ ಇಲ್ಲಿಲ್ಲ.

ಚಿಕ್ಕತಂಗಿಯನ್ನು ಬಿಟ್ಟು ಹೊರಟ ರವಿಕಣ್ಣನು ಸಿರಿವಂತನಾಗಿ ಅವಳು ತರುಣಿಯಾದಾಗ, ಬಂದು ಕಾಮಿಸಿದ ಪದ ಚಿಕ್ಕದಾದರೂ ನಾಟಕೀಯವಾಗಿ ಸೊಗಸಾಗಿದೆ.

ಇಲ್ಲಿಯ 'ನಾಗರಕನ್ಯೆ' ಕರಾಕೃ ಅವರ ಪಾಠಕ್ಕಿಂತ ಕೆಲವೆಡೆ ಭಿನ್ನವಾಗಿದೆ. ಅಲ್ಲವಳು ಅಣ್ಣಂದಿರು ಬೇಟೆಗೆ ಹೋಗುವಾಗ ಏಳು ಮಂಡಲ ಬರೆದರೆ ಇಲ್ಲಿ ಜೋಗಿಯೇ ಭಿಕ್ಷೆಗೆ ಬಂದವನು ಬಾಗಿಲಲ್ಲಿ ಏಳು ಮಂಡಲ ಬರೆಯುತ್ತಾನೆ. ಇದಕ್ಕೆ ಸಮಂಜಸತೆಯಿಲ್ಲ. ಏಳು ಅಣ್ಣಂದಿರಿಗೂ ಜೋಗಿಗೂ ಆದ ಸಂಭಾಷಣೆ ಸ್ವಾರಸ್ಯವಾಗಿದೆ. ಇದು ಶ್ರೀ ಕರಾಕೃ ಅವರ ಪಾಠದಲ್ಲಿಲ್ಲ. ಕರಾಕೃ 'ನಾಗರಗನ್ನೆ' ಹನ್ನೆರಡು ವರ್ಷ ತನ್ನ ಪಾಠದ ಮನೆಯಲ್ಲಿ ಮಲಗಿದ ಪ್ರಸ್ತಾಪ ಇಲ್ಲಿಲ್ಲ. ಇಲ್ಲಿ ಜೋಗಿಯು ಜೀವ

ಮರದ ಮೇಲಿನ ಗಿಣಿಯಲ್ಲಿದೆ. ಅಲ್ಲಿ ಬಾವಿಯಲ್ಲಿನ ಈಶ್ವರನ ಹಕ್ಕಿಯಲ್ಲಿದೆ. ಇಲ್ಲಿ ನಾಗರಗನ್ನೆ ಹಾಗೂ ಅವಳ ಮಗನ ಭೇಟಿಯ ಸನ್ನಿವೇಶ ಉತ್ತಮವಾಗಿದೆ.

'ಈ ರೋಜಿ' ಗೀತದಲ್ಲಿ ಗಟ್ಟದ ಕೆಳಗಿನ ಪರಿವಾರವನ್ನು ತರಲು (ನಡೆದು ಅಡವಿಯಲ್ಲಿ ಹೋಗಿ) ಹೋಗಿ ಮಲಗಿದ್ದ ವ್ಯಾಘ್ರವನ್ನು ಕೆಣಕಿ ಮರಣಹೊಂದಿದನು ಶಂಕರರಾಯ. ಇಲ್ಲಿಯ ದುಃಸ್ವಪ್ನದಲ್ಲಿ 'ಮೂಗುತಿ ಮುರಿದುಹೋದ ಕಂಡೆ' ಅವಳ ವೈಧವ್ಯ ಸೂಚಿಸಿದರೆ ಮುಂಬಲ್ಲು ಉದುರುವ ಸ್ವಪ್ನಕ್ಕೆ ಅರ್ಥ ತಿಳಿವುದು ಕಠಿಣ ಅವನು ಮಲಗುವ ಮಂಚ ಕತ್ತಿ (ಹೊತ್ತಿ) ಉರಿದುದು ಈರೋಜಿಯ ಸಹಗಮನದ ಉರಿಯನ್ನು ಸಹಜವಾಗಿ ಸೂಚಿಸಿ ಕಲಾತ್ಮಕವಾಗಿದೆ. ಕೊಂಡಕ್ಕೆ ಹೋಗುವವರಿಗೆ ಸಂಬಂಧಿಕರು ತರುವ ಸಾಮಗ್ರಿಗಳೂ ಲಿಂಬೆಹಣ್ಣು ಹಿಡಿದು ಕೊಂಡ ಹಾರುವ ವಿಷಯವೂ ಲಕ್ಷಿಸತಕ್ಕ ವಿಷಯಗಳು. "ಮಾದೇವಿ" ಕಥೆಯಲ್ಲಿ ಮೈಸೂರ ಮೊವಲರಾಯನ ಸಂಬಂಧ ಹೊಂದಿದಳು ಮಾದೇವಿ. ಇದರ ಪರಿಣಾಮ ಇಬ್ಬರ ಕೊಲೆಯಲ್ಲಿ ಬೇರೆ ಬೇರೆ ರೀತಿ ಆಗುತ್ತದೆ. ಇದನ್ನು ನಾಟಕೀಯವಾಗಿ ಈ ಗೀತದಲ್ಲಿ ವರ್ಣಿಸಲಾಗಿದೆ.

"ಜವರಾಯ" ಪ್ರಸಿದ್ಧಗೀತದ ಪಾಠ. ವಿಷಯ ಹೆಚ್ಚು ಕಡಿಮೆ ಅದರಂತೆಯೇ ಇದ್ದು, ಕೊನೆಯ ನಾಲ್ಕೆಂಟು ಪದ್ಯಗಳು ಹೆಚ್ಚಿನ ವಿಷಯ ಉಳ್ಳವು. ಈ ಹಾಡಿನ ಪ್ರಾರಂಭದ ಸೊಗಸಾದ ಜವರಾಯನ ಆಗಮನ ವರ್ಣನೆಯೂ ಅವನನ್ನು ಸಲಿಗೆಯಿಂದ ಉಪಚರಿಸುವ ಮಾತೂ ಇಲ್ಲಿಲ್ಲ.

ಇಷ್ಟೆಲ್ಲ ಗೀತಗಳನ್ನು ಹೇಳಿದ ಚಿಕ್ಕಮ್ಮನ ನಿರೂಪಣೆಯಲ್ಲಿ ಕೆಲವು ಪದ್ಯಗಳು ಹಾರಿಹೋಗಿರುವುದೂ ಕೆಲವು ಹಿಂದುಮುಂದಾಗಿರುವುದೂ ಸಹಜವಾದ ಸಂಗತಿ. ಇಷ್ಟು ಉತ್ತಮವಾದ ಹಾಡುಗಳನ್ನು ಹೇಳಿದ್ದಾಳಲ್ಲಾ ಇದು ಅಚ್ಚರಿಯ ಸಂಗತಿ. ಅವಳು ಮುಡಿ ಎಂದು ಹೇಳುವಲ್ಲೆಲ್ಲಾ ಮಡಿ ಎಂದು ಹೇಳುವಂತೆ ಕಾಣುತ್ತದೆ. (ಕೆಲವು ಪದ್ಯಗಳನ್ನು ಚಿಕ್ಕಮ್ಮ ನೆನಪುಮಾಡಿಕೊಂಡು ಹೇಳಿದ್ದನ್ನು ಸಂಪಾದಕರು ಟಿಪ್ಪಣಿಯಲ್ಲಿ ಸೇರಿಸಿದ್ದಾರೆ (ಪು. ೨೬೪, ೨೬೮)

ನೂರಾರು ಪ್ರಾದೇಶಿಕ ನುಡಿಗಳು ಈ ಗೀತಸಂಕಲನದಿಂದ ಬೆಳಕಿಗೆ ಬಂದಿವೆ. ಉದಾ : ಇಲ್ಲಿನ ಪನ್ನಂಗ ಬಾಳೆಗುಬ್ಬ ; ಇನ್ನೊಂದೆಡೆ ಉಡುವ, ತೊಡುವ ಬಟ್ಟೆ. (ನಮ್ಮ ಜಿಲ್ಲೆಯಲ್ಲಿ ಕನ್ನಡಿ)

ಸಂಪಾದಕರ "ಮದುವೆ ನಮ್ಮ ಮನೆಯಲ್ಲಿ" ಎಂಬ ದೊಡ್ಡ ಗೀತಸಂಕಲನದಲ್ಲಿ ಸಂಪಾದಕರು ಹಟ್ಟಿಹೊಯ್ಯುವ ಪದಗಳ ಹೋಲಿಯರು ಹೊಗಳುವ ಪದಗಳು ಹಕ್ಕಿ ಪಿಕ್ಕಿ ಮುಂತಾದ ಹೆಚ್ಚು ವೈಶಿಷ್ಟ್ಯವುಳ್ಳ ಗೀತಗಳನ್ನು ಪ್ರಕಟಿಸಿ, ಹೇಳಿದವರ ಪರಿಚಯವನ್ನು ಮೊದಲೇ ಆಯಾ ಗೀತ ಬರುವಲ್ಲಿ ಕೊಟ್ಟು, ನಿರೂಪಕರ ಹಾಗೂ ಅವರು ಹೇಳಿದ ಗೀತಗಳ ಸ್ಪಷ್ಟ ತಿಳವಳಿಕೆ ನೀಡಿದ್ದಾರೆ (ಅದರಲ್ಲಿಯೂ ಧರ್ಮರ ಪದಗಳಿವೆ.)

ಹೆರಗನ ಹಳ್ಳಿಯ ಸೋಬಾನೆ 'ಚಿಕ್ಕಮ್ಮನ ಪದಗಳು' ಗ್ರಂಥದ ಸಂಪಾದನೆಯ ಕೆಲಸ ಬಹುಮಟ್ಟಿಗೆ ಸಮರ್ಪಕವಾಗಿದೆ. ಈ ಗ್ರಂಥದಲ್ಲಿ ಕ ತೆತನಕ ಬಂದ ಲೇಸಿಗೆ ತಲೆದೂಗಲೇ ಬೇಕು.

ಹಿಂದೆ ಹೇಳಿದ ಹಲವು ವೈಶಿಷ್ಟ್ಯಗಳಲ್ಲಿ, ಇದುವರೆಗೆ ಕನ್ನಡದಲ್ಲಿ ಬಂದ ಯಾವ ಗೀತಸಂಕಲನಕ್ಕೂ ಇಷ್ಟು ಬೆಲೆಯುಳ್ಳ ಜಾನಪದ ಟಿಪ್ಪಣಿಗಳಿಲ್ಲವೆಂದರೆ ಈ ಗ್ರಂಥದ ಹಿರಿಮೆಯ ಸ್ಪಷ್ಟ ಕಲ್ಪನೆಯಾದೀತು.

೨೧ | ಸೋಬಾನೆ ಚಿಕ್ಕಮ್ಮನ ಹಾಡ್ಗತೆಗಳು

ಕಾಳೇಗೌಡ ನಾಗವಾರ

೧

ತಾವು ಹುಟ್ಟಿದ ಜನ ಹಳ್ಳಿಯ ಜನಪದ ಕಲಾವಿದೆಯಾದ ಸೋಬಾನೆ ಚಿಕ್ಕಮ್ಮ ಹಾಡಿದ ಗೀತೆಗಳನ್ನು ಸಂದರ್ಭ, ಅರ್ಥ ಹಾಗೂ ವಿವರಣೆಯ ಸಮೇತ ತುಂಬಾ ಎಚ್ಚರಿಕೆಯಿಂದ ಕಲೆಹಾಕಿ ಪ್ರಕಟಿಸುವ ಕಾರ್ಯವನ್ನಾಗಿ ಹೆರಗನಹಳ್ಳಿ ನಾಗೇಗೌಡರು ತಾನು ಚೈತನ್ಯ, ತುಂಬಿಕೊಳ್ಳಲು ಕಾರಣವಾದ ಸಮಾಜಕ್ಕೆ ಸಲ್ಲಿಸಬಹುದಾದ ಆತ್ಯಂತಿಕ ಋಣ ಅನ್ನುವಷ್ಟು ಗೌರವಭಾವದಿಂದ ಕೈಗೊಂಡು ನೆರವೇರಿಸಿದರು. ಸ್ವಯಂ ಸಾಹಿತಿಯೂ ಆದ ಇವರ ಈ ಸಂಬಂಧದ ನೆನಪುಗಳು ಅಧಿಕಾರ ಹಾಗೂ ಸಂಪತ್ತಿನ ಮೆಟ್ಟಿಲುಗಳ ಪರಾಕ್ರಮದಲ್ಲೂ ನಾಶವಾಗದೆ ಉಳಿದುಕೊಂಡವು ಎಂಬುದೂ ಕೂಡ ಗಮನಾರ್ಹವಾದ ಸಂಗತಿಯಾಗಿದೆ. ಯಾವುದೇ ಜಾನಪದ ಸಂಗ್ರಾಹಕನಿಗೆ ಅನೇಕ ವಿಚಾರಗಳಲ್ಲಿ ಮಾದರಿಯಾಗಬಹುದಾದ ರೀತಿಯಲ್ಲಿ "ಸೋಬಾನೆ ಚಿಕ್ಕಮ್ಮನ ಪದಗಳು" ಕೃತಿಯನ್ನು ನಾಗೇಗೌಡರು ಹೊರತಂದಿದ್ದಾರೆ. ಅಲ್ಲಿನ ಹಾಡ್ಗತೆಗಳ ಕೆಲವು ವೈಶಿಷ್ಟ್ಯಗಳನ್ನು ಕುರಿತು ವಿವೇಚಿಸುವುದು ಈ ಲೇಖನದ ಉದ್ದೇಶವಾಗಿದೆ.

೨

ಸೋಬಾನೆ ಪದಗಳ ಹಾಡುಗಾರಿಕೆಯಲ್ಲಿ ಎತ್ತಿದ ಕೈಯಾದ ಚಿಕ್ಕಮ್ಮ ತನ್ನಲ್ಲಿ ಉಳಿಸಿಕೊಳ್ಳಲು ಸಾಧ್ಯವಾದ ನಂಜಯ್ಯ, ಚೆಲುವಯ್ಯ, ಗಂಗೆ–ಗೌರಿ, ರವಿಕಣ್ಣ, ಈರೋಬಿ, ಜವರಾಯ, ಮಾದೇವಿ, ನಾಗರಗನ್ನೆ—ಈ ಎಂಟು ಹಾಡ್ಗತೆಗಳು ಇಲ್ಲಿ ಸೇರಿವೆ. ಈ ಎಲ್ಲ ಹಾಡ್ಗತೆಗಳು ನಾಡಿನ ಬೇರೆ ಬೇರೆ ವಲಯಗಳಲ್ಲಿ ರೂಢಿಯಲ್ಲಿದ್ದು ತಮ್ಮ ಹಲವಾರು ಪಾಠಾಂತರಗಳ ಸಮೇತ ದೊರೆಯುತ್ತವೆ. ಕಳೆದ ದಿನಗಳ ತಮ್ಮ ಬದುಕಿನ ಅನುಭವದ ಹಿನ್ನೆಲೆಯಲ್ಲಿ ಹೆಣ್ಣಾಗಿ ಹುಟ್ಟಿದ ವಿಶಿಷ್ಟ ಕಾರಣಕ್ಕಾಗಿ ಈ ನೆಲದಲ್ಲಿ ತಾವು ತುಳಿದ ಹೆಜ್ಜೆಗಳ ಗುರುತುಗಳನ್ನು ವಿವಿಧ ಸ್ತ್ರೀಚೇತನಗಳು ಹಲವಾರು ತಲೆಮಾರುಗಳ ಕಾಲ ಸ್ಪಷ್ಟಗೊಳಿಸುತ್ತ ನಡೆದ ಪ್ರಧಾನ ಸಂಗತಿ ಇಲ್ಲೆಲ್ಲಾ ಆತ್ಮೀಯವಾಗಿ ದಾಖಲಾಗಿದೆ. ಕಟ್ಟಿಕೊಂಡ ಹೆಂಡಿರ ಜೊತೆಗೆ ಕದ್ದು ಇಟ್ಟುಕೊಂಡ ಪ್ರೇಯಸಿಯ ಒಡನಾಟದ ಗಂಡಿನೊಟ್ಟಿಗೆ ಹೆಣ್ಣುಜೀವಗಳು ಇರಬೇಕಾದ ರೀತಿಯನ್ನು ಚಿತ್ರಿಸುವ ವಸ್ತು ಆರಂಭದ ಮೂರು ಹಾಡ್ಗತೆಗಳಲ್ಲಿ ಕಂಡು ಬರುತ್ತದೆ. ಮೇಲುಜಾತಿಯ ಗಂಡು ಕೀಳುಜಾತಿಯ ಹೆಣ್ಣಿನ ಸಂಬಂಧ ಹೊಂದುತ್ತಿದ್ದು ಈ ಸಂಬಂಧ ಕಂಡೂ ಕಾಣ

ವಂತೆ, ಬಹಿರಂಗವಾಗಿ ಹಾಗೂ ಉಪಪತ್ನಿಯನ್ನಾಗಿ ಸ್ವೀಕರಿಸುವ ವಿವಿಧ ಘಟ್ಟಗಳಲ್ಲಿನ ತೊಡಕಾಗಿರುತ್ತಿದ್ದ ಚಿತ್ರ ಜೀವಂತ ವಿವರಗಳ ಜೊತೆಗೆ ತಂತಮ್ಮ ಪ್ರಿಯ ದೈವಗಳನ್ನೇ ನಾಯಕರನ್ನಾಗಿಸಿ ನಗುವ ಚೋದ್ಯಗುಣವನ್ನೊಳಗೊಂಡಿದೆ. ನಂಜನಗೂಡ ನಂಜಯ್ಯ ಚಾಮುಂಡಿಗೆ ಆಸೆಪಟ್ಟು ದೇವೀರಿಯ ಸಿಟ್ಟಿಗೆ ಬಲಿಯಾದರೆ, ಮೇಲು ಕೋಟೆಯ ಚೆಲುವಯ್ಯ ಮುಸಲ್ಮಾನರ ವರನಂದಿಯನ್ನು ಮೋಹಿಸಿ ಕರೆತರುತ್ತಾನೆ. ಹಾಗೆಯೇ ಚೆನ್ನಯ್ಯ ಬೇಡರ ಹೆಂಗಸನ್ನು ತಿರುಪತಿ ತಿಮ್ಮಪ್ಪ ತಿಗಳ ಹೆಣ್ಣನ್ನು, ಚುಂಚನಗಿರಿಯ ಭೈರವ ಕುರುಬರ ಮಾಳವ್ವನನ್ನು ತಂತಮ್ಮ ಉಪಪತ್ನಿಯರನ್ನಾಗಿಟ್ಟು ಕೊಂಡು ಕೂಡ — "ಕುಲಕ್ಕೆ ಹೀನ ತಂದ"ನೆಂದು ಚೆಲುವಯ್ಯ—ವರನಂದಿಯರ ಮದುವೆಗೆ ಬರಲು ಅವರೇ ಹಿಂದೆಮುಂದೆ ನೋಡಿದಾಗ, ಚೆಲುವಯ್ಯ ಅವರೆಲ್ಲರ ಗುಟ್ಟನ್ನೂ ರಟ್ಟುಮಾಡಿ ತಾನು ಮಾತ್ರ ಈ ಕಸುಬಿಗೆ ಹೊಸಬನೆನ್ನುವ ಆರೋಪ ವನ್ನು ಹೆಮ್ಮೆಯಿಂದ ತಳ್ಳಿಹಾಕಿ ಗೇಲಿಮಾಡುತ್ತಾನೆ. ಹಾಡ್ಗತೆಗಳ ಇಂಥ ಬದುಕು ಚಿರಪರಿಚಿತ ದನಿಯಲ್ಲಿ ಉದ್ದಕ್ಕೂ ಕೇಳಿಬರುತ್ತದೆ.

ಹಳೆಯ ವರ್ಣವ್ಯವಸ್ಥೆಯ ಚೌಕಟ್ಟಿನಲ್ಲಿ ಕೆಳಜಾತಿಯ ಗಂಡು ಮೇಲು ಜಾತಿಯ ಹೆಣ್ಣಿನ ಸಂಗಕ್ಕೆ ಹಾತೊರೆಯುವ ಆಶಯವನ್ನು ಹೊಂದಬಂತೆಯೂ ಇರಲಿಲ್ಲವೆನ್ನುವುದರ ಸಾಕ್ಷಿಯಾಗಿ ನಿಂತಂತೆ ಇಲ್ಲಿನ ಘಟನೆಗಳು ಸಾಗುತ್ತವೆ. ಹೆಣ್ಣು, ಗಂಡಿನ ಕಣ್ಣಿನ ಆಸಕ್ತಿಯ ಕೇಂದ್ರವಾಗಿದ್ದುಕೊಂಡು, ತಾನು ಮಾತ್ರ ಮಾನಸಿಕವಾಗಿ ಪಕ್ವಗೊಳ್ಳುವ ಕಡೆಗೆ ನಡೆಯದೆ ಕುರುಡು ದಾರಿಯನ್ನು ಸಾಮಾನ್ಯವಾಗಿ ಅನುಸರಿಸಿರುವ ಚಿತ್ರ ಎದ್ದು ಕಾಣುತ್ತದೆ. ಕೇಡು ಕಟ್ಟಿಕೊಂಡು ಹುಟ್ಟಿದ ಹೆಣ್ಣುಮಗುವೆಂದು ಕಲ್ಪಿಸಿಕೊಂಡು ಹೊಳೆಗೆ ಎಸೆದು ನಿಟ್ಟುಸಿರುಡುತ್ತಾ, ತಣ್ಣಗಾಗುವ ದುರಂತ ಈ ಸಾಲುಗಳಲ್ಲಿ ಕಂಡುಬರುತ್ತದೆ ;

ಕಟ್ಟಾಯ್ರಾರ ಹುಟ್ಟಾಳೆ ಗಂಗಮ್ಮ
ಅವರಪ್ಪ ಹಾರುವು ಕರಿಸ್ಯಾನೆ
ಅವರಪ್ಪ ಹಾರುವು ಕರಿಸಿ ಸಾಸ್ತ್ರವ ಕೇಳಿ
ಗಂಗ್ಹುಟ್ಟಿದ ಗಳಿಗೆ ಇಸಗಳಿಗೆ ! ಸಂಗಮ್ಮ
ಬಿಟ್ಟು ಬಲ್ಲಿ ಹರಿಯೋ ಜಲಧೀಗೆ
ಬ್ಯಾಲೆ ತಕ್ಕೊಂಡೋರಿಗೆ ಬಾಲ ಸಂತಾನಿಲ್ಲ
ಜೋಳಿಗೆ ಹೊನ್ನು ಮೊದಲಿಲ್ಲ ! ಗಂಗಮ್ಮ
ಬಿಟ್ಟು ಬಲ್ಲಿ ಕಾವೇರಿ ಹೊಳೆಗಾಗಿ

ಎಷ್ಟೋ ಮಕ್ಕಳಿಗೆ ಈ ಗತಿ ಕಾಣಿಸಿರುವ ನಮ್ಮ ಪೂರ್ವಜರ ಹಳೆಯ ಈ ಸಂಗತಿ ಹಾಗು ಅಂಥದ್ದೂ ಕೂಡ ಬದುಕಿನಲ್ಲಿ ಹೊಸತಿರುವಿನೊಡನೆ ಸಮೃದ್ಧ ಸ್ಥಿತಿ

ಯೊಡನೆ ತಲುಪಬೇಕೆನ್ನುವ ಒಳಮನಸ್ಸಿನ ಮಾನವ ಬಯಕೆಯು ಸುಂದರ ಪ್ರತೀಕವಾಗಿ ಮಗು ಕಲಾಕೃತಿಯಲ್ಲಿ ಬದುಕುತ್ತದೆ. "ಹೆಳಗೆ ಹಾಲ್ನಲ್ಲಿ, ಅಂಗೈ ತುಪ್ಪದಲಿ ಅಂದವಾಗಿ ಈ ಮುದ್ದ" ಸಲಹುವ ಅಂಬುಗರಣ್ಣನ ಕೈ ಸೇರುತ್ತದೆ. ಅಲ್ಲಿಂದ ಉತ್ಸರ್ಪಿಣಿ ಕಾಲದ ಹಲವು ಹಂತಗಳು ಅರಂಭವಾಗುತ್ತವೆ. ಕಟ್ಟಿಕೊಂಡ ಹೆಂಡತಿ ಗೌರಿಗೆ ಹೆದರಿ ಕದ್ದು ಗೋಣಗಾಡಿ, ಅಂಗಲಾಚಿ ಪ್ರೇಯಸಿ ಗಂಗೆಯನ್ನು ತಂದಿಟ್ಟುಕೊಂಡೂ ಕೂಡ ಹಸಿ ಹಸಿಸುಳ್ಳು ಹೇಳುವ ಪ್ರಸಂಗ ಬರುತ್ತದೆ ;

ಬಾಳೆ ತಂದಿದ್ದರೆ ಬಾಳ ಚಂದುರನಾಣೆ
ನಮ್ಮ ಬಾಲನಾಣೆ ಗಂಗೆ ತರಲಿಲ್ಲ
ಗಂಗೆ ತಂದಿದ್ದರೆ ತುಂಗಾಭದ್ರೇರಾಣೆ
ನಮ್ಮ ಲಿಂಗದಾಣೆ ಗಂಗೆ ತರಲಿಲ್ಲಿ.

ಪ್ರೇಮದ ವಿಚಾರವೆಲ್ಲ ಎಲ್ಲವೂ ಸರಿ ಎನ್ನುವಂತೆ ಶಿವ ವಿಫಲಪ್ರಯತ್ನದಲ್ಲಿರುವಾಗ ಗೌರಿ ಒರಟಾಗಿ, ಅಸೂಯೆಯಿಂದ ನಿಸ್ಸಹಾಯಕ ದನಿಯಲ್ಲಿ ಗುಡುಗುತ್ತಾಳೆ.—

ಗುಂಡುಕಲ್ಲಿನಂಗೆ ದುಂಡು ಮಲ್ಲೇಸ್ವರ
ಹೆಂಡರ್ಬಿಟ್ಟುಗಂಡು ತಿರಗೋನೆ
ಹೆಂಡರ್ಬಿಟ್ಟುಗಂಡು ತಿರುಗೋ ಮಲ್ಲೇಸನ
ದಂಡವ ತೆಗಿ ದೊರಿ ಇಲ್ಲವೆ ?

ಮುಂದೆ ಶಿವನು ತನ್ನ ಕೆಂಜೆಡೆಯಲ್ಲಿ ಅಡಗಿಸಿಟ್ಟುಕೊಂಡ ಗಂಗೆ ಕ್ರಮ ಕ್ರಮವಾಗಿ ಎಲ್ಲರೆದುರಿಗೆ ಇಳಿದು ನಿಲ್ಲುವುದರ ಜೊತೆಯಲ್ಲೇ ಆತ ನಾಚಿ ನೀರಾಗುತ್ತಿದ್ದರೂ ತನ್ನ ಸಾಹಸ ಕಾರ್ಯದ ಬಗ್ಗೆ ಒಳಗೊಳಗೇ ಹೆಮ್ಮೆ ಪಟ್ಟುಕೊಳ್ಳುತ್ತಾನೆ. ಹಾಗೆಯೇ ಅಕ್ಕತಂಗೇರು ಪರಸ್ಪರ ಕಾದಾಟ ನಡಸುವಿಕೆ, ಹುಟ್ಟು ತವರು ವೃತ್ತಿಗಳನ್ನು ಲೀಲಾಜಾಲವಾಗಿ ಹಂಗಿಸುತ್ತಾ ಬೈದು ಹಗುರಾಗುವ ದೈನಂದಿನ ಜೀವನದ ಘಟನೆಗಳು ಕಣ್ಣಿಗೆ ಕಟ್ಟುತ್ತವೆ.

೩

"ರವಿಕಣ್ಣ", "ಮಾದೇವಿ" ಮತ್ತು "ನಾಗರಗನ್ನೆ" ಹಾಡ್ಗತೆಗಳು—ಹೆಣ್ಣು ಜೀವವು ಗಂಡಿನ ಆಸೆಯಕಣ್ಣುಗಳ ಹಿನ್ನೆಲೆಯಲ್ಲಿ ನಿಂತಾಗಲೆಲ್ಲ ಕಟ್ಟುಕಟ್ಟಳೆ ಹಾಗು ವೈಯಕ್ತಿಕ ಮನಸ್ಸನ್ನು ಹಾಳುಗೆಡವಿ ಪದೇ ಪದೇ ದಾಳಿಗೊಳಗಾಗುವ ಇನ್ನೊಂದು ವಿಶಿಷ್ಟ ಮುಖವನ್ನು ಕುರಿತು ಚಿತ್ರಿಸುತ್ತವೆ.

ರವಿಕಣ್ಣ ಎನ್ನುವ ಅಣ್ಣ ತನ್ನ ಒಡಹುಟ್ಟಿದ ತಂಗಿ ತೊಟ್ಟಿಲಲ್ಲಾಡುವ ಮಗುವಾಗಿದ್ದಾಗ ಮುತ್ತಿನ ವ್ಯಾಪಾರಕ್ಕೆ ಹೋಗಿದ್ದವನು ಎಷ್ಟೋ ವರ್ಷದ ಮೇಲೆ ಹಿಂದಿರಿಗಿ ಬಂದು ಊರ ಹೊರಗಿನ ಮರದ ಕೆಳಗೆ ಕೂತು, ದಾರಿಯಲ್ಲಿ ಹೊರಟ

ಚೆಲುವೆಯೊಬ್ಬಳಿಗೆ ಮನಸೋತು ಅವಳನ್ನು ತನ್ನೆಡೆಗೆ ಸೆಳೆದುಕೊಳ್ಳುವ ಪ್ರಯತ್ನದಲ್ಲಿ ಮುಂದಾಗಿ ಬಿಳಿಯೆಲೆಯ ವೀಳಿಯ ನೀಡುತ್ತಾನೆ. ಆ ಯುವತಿ ಅಂಗಲಾಚಿ ಬೇಡುತಿದ್ದ ಈತನನ್ನೂ ಕಡೆಗಣಿಸಿ, ತಳ್ಳುತ್ತಾ ತಾನು ಕಾಣದ, ತನ್ನ ನಿತ್ಯದ ಮನವರಿಕೆಯ ರವಿಕಣ್ಣನ ಮೇಲೆ ಆಣೆಯಿಡುತ್ತಾಳೆ. ರವಿಕಣ್ಣನಿಗೆ ಮೈಮನಸ್ಸುಗಳಲ್ಲಿ ನಡುಕ ಹುಟ್ಟಿ ಅರೆಹುಚ್ಚನಾಗಿ ತಾನು ಪ್ರಾಣವುಳಿಸಿರಬಾರದೆಂದು ರೌರವ ನರಕದ ಸ್ಥಿತಿಯಲ್ಲಿ ಒಂದೇ ಸಮನೆ ನರಳಾಡುತ್ತಾನೆ :

ಕತ್ತಿ ತತ್ತಾರೆ ತಂಗೆ ಕಡುಕೊಂಡೇನು
ಚೂರಿ ತತ್ತಾರೆ ತಂಗೆ ತೀರಿಕೊಂಡೇನು
ಭರಜಿ ತತ್ತಾರೆ ತಂಗೆ ಬಕ್ಕೊಂಡೇನು
ಬಾಕ ತತ್ತಾರೆ ತಂಗೆ ಸಿಕ್ಕೊಂಡೇನು
ಕುಡಲ ತತ್ತಾರೆ ತಂಗೆ ಕುಯ್ಕೊಂಡೇನು
ಕೊಡಲಿ ತತ್ತಾರೆ ತಂಗೆ ಕಡುಕೊಂಡೇನು..........

ಯಾವುದೇ ಹೆಣ್ಣು, ಕಣ್ಣಿಗೆ ಹಿತವೆನಿಸಿದಾಗ ಹಿಂದೆ ಮುಂದೆ ನೋಡದೆ ಹಾಗೆ ಅವರ ಮನಸ್ಸನ್ನರಿಯದೆ ಗಂಡು ಹೇಗೆ ಮುನ್ನುಗ್ಗುತ್ತದೆನ್ನುವ ಬಗ್ಗೆ "ರವಿಕಣ್ಣ" ಹಾಡ್ಗತೆ ನಾಂದಿಯನ್ನು ಹಾಡುತ್ತದೆ. ಅದೇ ಬಗೆಯ ಸಂಬಂಧದ ಹೆಚ್ಚಿನ ಬೆಳವಣಿಗೆಯನ್ನೂ "ಮಾದೇವಿ" ಎನ್ನುವ ಹಾಡ್ಗತೆ ಮುಂದುವರಿಸುತ್ತದೆ. ಇಲ್ಲಿನ ಕೂಡು ಕುಟುಂಬದ ಪರಿಸರದಲ್ಲಿನ ಮೈದುನ ಮಾದುಲರಾಯ ಅತ್ತಿಗೆ ಮಾದೇವಿಯ ಮೇಲೆ ಕಣ್ಣಿಟ್ಟು ಅವಕಾಶ ಸಿಕ್ಕಲ್ಲೆಲ್ಲಾ ಒತ್ತಾಯ ತಂದು ಹಿಂಸಿಸುತ್ತಾನೆ ; ಇದನ್ನು ತಿಳಿದ ಅಣ್ಣ, ತಮ್ಮನನ್ನು ಮೋಸದಿಂದ ಅಡವಿಗೆ ಕರೆದುಕೊಂಡು ಹೋಗಿ ರೊಚ್ಚಿನಿಂದ ಕೈ ಕಾಲು ಕತ್ತರಿಸಿ ಕೊಲ್ಲುತ್ತಾನೆ. ಅಮಂಗಳದಮೂರ್ತಿಯೆನ್ನುವಂತೆ ಮಾದೇವಿ, ಅತ್ತೆ ಹಾವು ಕೊಂದು ಕತ್ತರಿಸಿ ಮೀನೆಂದು ತಂದಾಗ ಗೊತ್ತಿಲ್ಲದೆ ವಿಷದ ಅಡಿಗೆಮಾಡಿ ಕೊನೆಯಲ್ಲಿ ತಾನೊಬ್ಬಳೇ ತಿಂದು ಕಣ್ಮುಚ್ಚುತ್ತಾಳೆ ; ಈ ದುರಂತದ ಹೊಳೆಯನ್ನು ಸುತ್ತುವರಿದ ಮತ್ತೊಂದು ದಡವಾದ ಆಕೆಯ ಗಂಡ ಈಗ ಯಾವ ರೊಚ್ಚೂ ಇಲ್ಲದೆ ವೃದ್ಧಿಯಾಗುತ್ತಾ ಸಾಗಿದ ಭೀಕರ ನೋವಿನ ಉಗ್ರಾಣವಾಗಿದ್ದು ಅನಾಥ ಸ್ಥಿತಿಯಲ್ಲಿ ತತ್ತರಿಸುತ್ತಾನೆ. ಈ ಎಲ್ಲಾ ಮಜಲುಗಳ ಮೇಳೈಕೆ ವಿವಿಧ ಆರ್ತನಾದಗಳ ಗೋಳ ಗುಮ್ಮಟದಂತಾಗುತ್ತದೆ. ಇಲ್ಲಿನ ನಾಯಕಿ ಇಂಥ ಎಷ್ಟೋ ಹೆಣ್ಣು ಜೀವಗಳ ಪ್ರತಿನಿಧಿಯಾಗಿದ್ದು ಗೋರಿಯ ಆಳದ ಮೌನದಲ್ಲಿ ಬೆರೆಯುತ್ತಾಳೆ.

"ನಾಗರಗನ್ನೆ" ತುಂಬಾ ಜನಪ್ರಿಯವಾದ ಜನಪದ ಕಥೆಯೊಂದರ ಹಾಡ್ಗತೆಯ ರೂಪ. ಮಂತ್ರವಾದಿಯೊಬ್ಬ ಚಲುವಿಯಾದ ನಾಯಕಿಯನ್ನು ನಾಯಿಯನ್ನಾಗಿ ಮಾಡಿ ಮೋಸದಿಂದ ಕರೆದೊಯ್ಯುತ್ತಾನೆ. ಮುಂದೆ ಆಕೆಯ 'ಸತ್ವ'ದಿಂದಲೇ ಎನ್ನುವಂತೆ ಅವಳ ಹೊಟ್ಟೆಯಲ್ಲಿ ಹುಟ್ಟಿದ್ದ ಮಗ ಬೆಳೆದು ದೊಡ್ಡವನಾಗಿ

ಮಂತ್ರವಾದಿಯನ್ನು ಕೊಂದು ಕಲ್ಲಾಗಿದ್ದ ಏಳುಮಂದಿ ತಂದೆಗಳನ್ನು ಬದುಕಿಸಿ, ತಾಯಿಯನ್ನು ಕರೆತಂದು ಆಕೆಯ ಪಾತಿವ್ರತ್ಯವನ್ನು ತಾನೇ ಅಗ್ನಿಪರೀಕ್ಷೆಯ ಮೂಲಕ ಲೋಕಕ್ಕೆ ಸಾರಿ ತಂದೆಗಳಿಗೆ ಒಪ್ಪಿಸುತ್ತಾನೆ. ನಾಯಕಿಯನ್ನು ಉರಿಯುವ ಬೆಂಕಿಯಲ್ಲಿ ನಿಲ್ಲಿಸಿ ಪರೀಕ್ಷಿಸುವ ದೃಶ್ಯ ಬೇರೆ ಬೇರೆಯ ಸಂದರ್ಭಗಳಲ್ಲಿ ಹೆಣ್ಣನ್ನು ಅಂತಿಮ ಶೃಂಗಾರದೊಡನೆ ಜೀವಂತವಾಗಿ ಸುಡುತ್ತಿದ್ದ ಚಿತ್ರಣವನ್ನು ವಿವರಪೂರ್ಣವಾಗಿ ನೀಡುತ್ತದೆ—

ಗುಡಿಯ ಮುಂದೆ ಸಿರಿಗಂಧದ ಕೊಂಡ್ಹಾಕಿ
ಸಿರಿಗಂಧದ ಕಿಚ್ಚಿನೆ ಗುಡಿಮುಂದೆ ಹಾಕ್ಸಾರೆ
ಬೊಗುಸೆ ಭಂಗಾರವೆಲ್ಲ ನಾಗರಗನ್ನಿಗೆ ಧರಿಸ್ಸಾರೆ
ಮಂಡೆ ತುಂಬ ಹೂವನೆ ಮುಡಿಸಾರೆ ನಾಗರಗೆನ್ನಿಗೆ
ಕೊಂಡಕ್ಕೋದ ನಾಗರಗನ್ನೆ ಚೆನ್ನಾಗಿ ಬೆಳುದಾಳೆ
ಕೊಂಡಕ್ಹೋಗೋಳ ಕೈಲಿ ಇಂಬಿಯ ಹಣ್ಣುಂಟು
ಒನಕೇಲಿ ನಾರೆತ್ತಿ ವಂದರೀಲಿ ನೀರೆತ್ತಿ
ಅಲ್ಲಿದ್ದ ಸಭೆಗೆಲ್ಲ ತೋರಾಳೆ ಸತ್ಯವ।........
ಮಂಡೆಹೂ ಬಾಡಲಿಲ್ಲ, ಇಂಬಿ ಹಣ್ಣು ಬಾಡಲಿಲ್ಲ
ಅಲ್ಲಿದ್ದ ಸಭೆಯಲ್ಲಿ ಒಪ್ಪೀತು ಸತ್ಯವ.

ವಿವಿಧ ಕಾರಣಗಳಿಗಾಗಿ ಹೆಣ್ಣಿನ ಪ್ರೈಮನಗಳೆರಡನ್ನು ಸುಡುತ್ತಿದ್ದ ಸುತ್ತಲ ಸಂಗತಿಗಳು ಇಂಥ ಕಥೆ ಆ ಸಂಬಂಧದ ಆಚರಣೆಗಳ ಸಮೇತ ವಿವರಿಸಲ್ಪಡುತ್ತದೆ. ಮುಡಿದ ಹೂ ಬಾಡದೆ, ಕೂದಲೂ ಕೊಂಕದೆ ನಾಯಕಿ ಹೊರ ಬರುತ್ತಾಳೆನ್ನುವುದು ಎಲ್ಲೂ ವಾಸ್ತವಿಕ ಸಂಗತಿಯಾಗಿರದೆ—ಕಣ್ಣು ಕುಕ್ಕುವ ಆಗಿನ ಚೀತ್ಕಾರವನ್ನು ಕಂಡು ಹೊರಬರುವ ಸಮಷ್ಟಿಯ ಹಾಗೂ ಅದರ ಸೂಕ್ಷ್ಮಗಳನ್ನೆಲ್ಲಾ ಪರಿಗಣಿಸಿ ರೂಪುಕೊಡಲು ಹಾತೊರೆಯುವ ಕಲಾವಿದ ಮನಸ್ಸಿನ ಉತ್ಕಟ ಜೀವನಪ್ರೇಮದ ಆಶಯವಾಗಿ ಮಾತ್ರ ಕಡೆಯಲ್ಪಟ್ಟಿದೆ.

೪

ಒಳ್ಳೊಳ್ಳೆಯ ಮರಗಳನ್ನು ಹುಡುಕಿ, ಎಷ್ಟೋಸಲ ಫಲಬಿಟ್ಟ ಮರಗಳನ್ನೂ ಕೂಡ ಕತ್ತರಿಸಿ ನಡೆಯುವ ಕುಡುಗೋಲು ಕೊಡಲಿಯ ಒಡೆಯ ಜವರಾಯನನ್ನು ಕುರಿತ ಭಾವಗೀತೆಯು ಅಂತಹದೇ ಪ್ರಧಾನವಾಗುಳ್ಳ ಶ್ರೇಷ್ಠ ಹಾಡ್ಗತೆಯ ಒಂದು ಸಾಧಾರಣ ಪಾಠ "ಜವರಾಯ" ಹೆಣ್ಣಾಗಿ ಹುಟ್ಟುವುದಕ್ಕಿಂತ ಮಣ್ಣಾಗಿ, ಮಣ್ಣಿನ ಮೇಲೊಂದು ಮರವಾಗಿ ಹುಟ್ಟಬೇಕೆನ್ನುವಂಥ ಸಿಟ್ಟು ಹಾಗು ನೋವಿನ ಹೇಳಿಕೆಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ. ಅವೆಲ್ಲವುಗಳ ಮೂರ್ತಿರೂಪವೆನ್ನುವಂತೆ ಜವರಾಯ,

ತುಂಬುಬಾಳಿಗೆ ಅಡ್ಡಿಯಾಗಿ ನಿಲ್ಲುವ ವಸ್ತು ಇಲ್ಲಿ ಅಸಾಧಾರಣ ರೀತಿಯಲ್ಲಿ ನಿರ್ವಹಿಸಲ್ಪಟ್ಟಿದೆ. ವಾಲೆ, ಸಣ್ಣಗುಂಡು, ಮೂಗುತಿ, ಉಂಗುರಗಳನ್ನು ತೊಟ್ಟು ನಾಲ್ಕುಗಳಿಗೆಯಾದರೂ ಸುಖವಾಗಿರಬಾರದೆ ? ನಾನು ಹೋದರೆ ನನ್ನ ಗಂಡನ ಗತಿಯೇನು ? ಎನ್ನುವ ಹಲವಾರು ಬಯಕೆಗಳನ್ನು ಕ್ರೂರಿಯಾದ 'ತೀರ್ಪುಗಾರ' ನೊಬ್ಬನ ಏಕಮುಖ ಹೇಳಿಕೆಯು ನಾಶ ಮಾಡುವಂತೆ ಇಲ್ಲಿ ಜವರಾಯ ತನ್ನ ಮೂಗಿನ ನೇರದ ತರ್ಕವನ್ನೇ ಮುಂದುವರಿಸುತ್ತಾನೆ. ನೀನು ನನ್ನ ಜೊತೆಗೆ ಬಂದಲ್ಲಿ ಇನ್ನೂ ಎಳೆಯಪ್ರಾಯದ ಯುವತಿಯೊಬ್ಬಳು ನಿನ್ನ ಗಂಡನ ಮನಸ್ಸು ತುಂಬಲು ಬರುತ್ತಾಳೆಂದು ತನ್ನ ಹಿಡಿದ ಪಟ್ಟನ್ನು ಬಿಗಿಗೊಳಿಸುತ್ತಾನೆ. ಇಡೀ ಪರಿಸರವೇ ತನ್ನನ್ನು ಇಕ್ಕಟ್ಟಿಗೆ ಸಿಕ್ಕಿಸಿಕೊಂಡು ಬೇಟೆಯಾಡುವ ; ಗಾಯಗೊಳಿಸುವ, ದಿಕ್ಕುತಪ್ಪಿಸಿ ಮೂಕವಾಗಿಸುವ ತನ್ನ ಕಠಿಣ ಸಂಕೋಲೆಗಳನ್ನು ಈ ಹಾಡ್ಗತೆಯ ನಾಯಕಿ ಸೂಕ್ಷ್ಮವಾಗಿ ಗುರುತಿಸಿಕೊಳ್ಳುತ್ತಾಳೆ.

ಗಂಡನನ್ನು ಕಳೆದುಕೊಂಡು ಅಕಾಲದಲ್ಲಿ ಅಗ್ನಿಗಾಹುತಿಯಾದ ಹೆಣ್ಣಿನ ಮನಸ್ಥಿತಿಯ ಚಿತ್ರಣ "ಈರೋಬಿ" ಹಾಡ್ಗತೆಯ ವಸ್ತು. ಈ ಬಗೆಯ ಹಲವಾರು ಹಾಡ್ಗತೆಗಳು ಕರ್ನಾಟಕಾದ್ಯಂತ ದೊರೆಯುತ್ತವೆ.[1] ಎಳೆಯ ಪ್ರಾಯದ ಬದುಕಿನ

---

1 (i) ಡಾ. ಜೀ.ಶಂ. ಪರಮಶಿವಯ್ಯನವರು ಸಂಪಾದಿಸಿರುವ "ಜಾನಪದ ಖಂಡಕಾವ್ಯಗಳು" ಕೃತಿಯಲ್ಲಿನ ಈರೋಬಿ, ನಾಗವ್ವ, ಹುಳಿಮಾರು ಕೆಂಚಮ್ಮ, ಚಿಕ್ಕೋಳು ಹಿರಿದಿಮ್ಮವ್ವ—ಎಂಬ ಕಥಾನಕಗಳು ಇದೇ ವಸ್ತುವಿನ ಬೇರೆ ಬೇರೆ ಮುಖಗಳನ್ನು ಹೇಳುತ್ತವೆ. ಅಲ್ಲಿನ ಗೊಲ್ಲರ ಯುವತಿ ನಾಗವ್ವನಿಗೆ (ಪು 25-31) ಮದುವೆ ಗೊತ್ತಾಗಿದ್ದು, ಹೆಣ್ಣು ಗಂಡಿಗೆ ಮದುವೆಯ ಸಂಬಂಧದ ಆರಂಭದ ಕೆಲವು 'ಶಾಸ್ತ್ರ' ಗಳು ನಡೆಯುತ್ತಿದ್ದಾಗ, ಜೇಡು ಕಪ್ಪೊಯ್ದು ಆಡುಗಳನ್ನು ಬಿಡಿಸಲು ಹೋದ ಗಂಡು ಚಿಂದಯ್ಯ ಲಗ್ನಕ್ಕೆ ಮುನ್ನವೇ ಕತ್ತರಿಸಲ್ಪಡುತ್ತಾನೆ. ಇನ್ನೂ ಸೀರೆ ಉಡಲರಿಯದ, ಒಟ್ಟಲು ಬೆಳಗಲು ಕಲಿಯುವ ನಾಗವ್ವನನ್ನು ಕೊಂಡ (ಅಗ್ನಿಕುಂಡ)ಕ್ಕೇ ಧಾರೆಯೆರೆಯುತ್ತಾರೆ ;

ನೀ ಹೊನ್ನು ಕೊಟ್ಟರೆ ನನ್ನ ವಾಲೆಯ ಬೆಲೆಯಿಲ್ಲ
ಮಾವನ ಮಗನೆ ಚೆಂದಯ್ಯ । (ನಾ) ಕುಟ್ಟಿ
ನಾ ಹತ್ತೋದೆ ಲೇಸು ಒಡಗಿಚ್ಚ
ಹೆಣ್ಣೀಗೆ ಮಣ್ಣು ಬಿದ್ದೊ ಕಣ್ಣಿಗೆ ಸೆತ್ತೆ ಬಿದ್ದೊ
ಸಣ್ಣ ಸೀರೆ ಮ್ಯಾಲೆ ಕಿಡಿಬಿದ್ದೊ । ನಾಗವ್ವನ
ಹೆಣಗಂಟು ನಲುಗಿ ಉರಿದೋದೊ

(ii) "ಬಯಲು ಸೀಮೆಯ ಲಾವಣಿಗಳು" (ಸಂ. ಕಾಳೇಗೌಡ ನಾಗವಾರ ಗ್ರಂಥದಲ್ಲಿನ 'ಏಸ್ದಗೆರೆ ನಾಗಮ್ಮ' (ಪು. 73–88) ಕೂಡ ಇಂಥದೇ ಅರಿಯದ ಕಂದಮ್ಮನೊಂದನ್ನು ಬೆಂಕಿಯಲ್ಲಿ ಜೀವಂತ ಸುಟ್ಟ ಹೃದಯವಿದ್ರಾವಕ ಸಂಗತಿಯನ್ನೇ ನಿರೂಪಿಸುತ್ತದೆ : ಅಲ್ಲಿನ ಕೆಲವು ಸಾಲುಗಳನ್ನು ಗಮನಿಸಬಹುದು ;

ಆಸೆಆಕಾಂಕ್ಷೆಗಳ ಸವಿ ನೋಡುವ ಮೊದಲೇ ಕನಸು, ಮನಸು, ದೇಹವನ್ನೇ ಬಲವಂತವಾಗಿ ಮಣ್ಣುಗೂಡಿಸಿಕೊಳ್ಳುತ್ತಿದ್ದ ಜೀವಿಗಳ ತೊಳಲಾಟ, ಇತಿಹಾಸದ ಪರಮಾವಧಿ ಕಾರ್ಯವನ್ನು ಬಣ್ಣಿಸುವ ಪ್ರಸಂಗಗಳಿಂದ ಅಮೃತವಾಗಿರುವುದನ್ನು ನಾವು ಕಾಣುತ್ತೇವೆ. ಬಾಣಂತಿಯಾಗಿದ್ದ ಪತ್ನಿ ಈರೋಬಿ. ಬಟ್ಟಲಲ್ಲಿ ಉಣ್ಣುವುದನ್ನು ನೋಡಲಾರದೆ ಘಟ್ಟದ ಕೆಳಗಲ ಹರಿವಾಣ ತರಲು ಹೋದ ಶೆಟ್ಟಿ ಶಂಕರರಾಯ, ಬರುವಾಗ ನಿಂತಿದ್ದ ಹುಲಿಯನ್ನು ಕೆಣಕಿ ಸಾಯುತ್ತಾನೆ. ಈರೋಬಿಗೆ ಬಿದ್ದ ದುಃಸ್ವಪ್ನ ಮಾಸುವ ಮುನ್ನವೇ ಗಂಡನ ಕತ್ತಿ, ರಕ್ತಸಿಕ್ತವಾಗಿದ್ದ ಬಟ್ಟೆ ಮುಂತಾದುವು ಬರುತ್ತವೆ. ಗಂಡ ಸತ್ತಮೇಲೆ ಇನ್ನೇಕೆ ಬದುಕಬೇಕೆನ್ನುತ್ತ ಬದುಕಬಾರದೆನ್ನುವವರ, ಅಪರೂಪಕ್ಕೆ ತಡೆಯುವವರ, ಸಂತೈಕೆ ಹಾಗೂ ದೂಡಿದ ನಡುವೆ ಜೀವಂತವಾಗಿ ಸುಟ್ಟುಕೊಳ್ಳುವ ತೀರ್ಮಾನಕ್ಕೆ ಬರುತ್ತಾಳೆ. ಅವಳ ಮಾವ ಅದನ್ನೇ ಸಮರ್ಥಿಸುತ್ತಾನೆ :

ಮಾವನ ಮನಿಗೆ ವ್ಯಾದಾಳೆ ಈರೋಬಿ
ಮಾವಯ್ಯ ನನಿಗೆ ಗತಿಯೇನೊ । ಅನ್ನೋವತ್ತಿಗೆ
ಗಂಡ ಸತ್ತೋರೆ ಇಲ್ಲವವ್ವ

ಪೊಕ್ಕಳ್ಹೊವ ಹಾಸುವಲ್ಲೆ ಪೊಕ್ಕಳ್ಹೊ ಪೊದಿವಲ್ಲೆ
ದಿಂಡೊತ್ತದೇದು ಮಲಗುವಲ್ಲೆ । ಆಕ್ಕನಾಗು
ಈ ಕೊಂಡದೇಲಂಗೆ ಬೇಯುತ್ತೀಯೆ............

ಆರೊರುಷದ ಮಗಳು ತಿಳಿಯಾದ ಕಂಡಮ್ಮನ
ಕೊಂಡಾಕೆ ಧಾರೆ ಎರದಾರು । ಮಾಶಿವನೆ
ಕೊಟ್ಟೋರ ಮನೆಯೆ ಉರಿಯಾಲಿ...........

ತಿರಿದುಂಬು ಜೋಗೀಗೆ ನನ್ನ ಕೊಟ್ಟಿದ್ದಾರೆ
ತಿರಿದುಂಡು ನಾನು ಇರುತಿದ್ದೆ.
ವಡ್ಡಗೆರೆಂಬೋದು ದೊಡ್ಡ ಪಟ್ಟಣವೆಂದು
ಪತ್ರೆಮಣಸೇಯನೆರಳೀಗೆ । ನನ್ನೀಗ
ಕೊಂಡಾಕೆ ಧಾರೆ ಎರದವರೆ । ನನ್ನತವರೋರು
ನನ್ನ ಕೊಟ್ಟೋರ ಮನೆಯೆ ಉರಿಯಾಲಿ । ಬೇಯಾಲಿ
ನನ್ನ ಇಲ್ಲೀಗೆ ನಿಲಿಸ್ಯಾರು

ಕೊಂಡಾದ ತಾವ ತಾನು ಕೂತುಕೊಂಡು ನಾಗವ್ವ
ಕಂಡುಗದುಕ್ಕ ಮಾಡಿಕೊಂಡು । ಅವಳೀಗ
ಬಾಸೆ ಕೊಡುತಾಳೆ ಆಗಿನ್ನ.

ಕೊನೆಗೆ ಮೃತ್ಯುವನ್ನು ಅಪ್ಪಲೇಬೇಕಾದ ದಾರಿಯಲ್ಲಿ ಹೊರಟ ಈರೋಬಿಗೆ ಉಳಿದೆಲ್ಲ ವಿಚಾರಗಳೂ ಕಡೆಗಣಿಸಲ್ಪಟ್ಟು ತನ್ನ ಬದುಕಿನ ಚೈತನ್ಯವನ್ನೇ ಕಿತ್ತುಕೊಂಡ ಕ್ರೂರಶಕ್ತಿಗಳು ಯಾವುದೆಂದು ಸ್ಪಷ್ಟವಾಗಿ ಗುರುತಿಸಲು ಆಗದಿದ್ದರೂ ತನ್ನ ಅದಮ್ಯ ನೋವು ಮತ್ತು ಸಿಟ್ಟನ್ನು ಪ್ರಕಟಿಸುತ್ತಾಳೆ :

ನಮ್ಮಪ್ಪ ಬಂದರೆ ಬರಲಿ ತುಪ್ಪತಂದರೆ ತರಲಿ
ನನ್ನ ತುಪ್ಪದಂತೆ ಬದುಕು ಅಡವೀಲಿ
ನನ್ನ ತುಪ್ಪದಂತೆ ಬದುಕು ಅಡವೀಲಿಟ್ಟಾಡುವಾಗ
ನಮ್ಮಪ್ಪನಗೊಡವೆ ನನಗೇನೆ ?

ಹಾಗೆಯೇ "ನನ್ನ ಹಾಲಿನಂತೆ ಬದುಕು", "ನನ್ನಕ್ಕರುಳ್ಳೇ ಬದುಕು" ಎನ್ನುವ ಇತರ ಗುಣವಾಚಕಗಳೂ, ಅವ್ವ, ಅಕ್ಕ, ಅಣ್ಣ ಮತ್ತಿತರರೂ ಮುಂದಿನ ತ್ರಿಪದಿಗಳಲ್ಲಿ ಕೂಡಿಕೊಳ್ಳುತ್ತಾರೆ. ಬೆಂಕಿಯ ಜಳ ಹತ್ತಿರವಾಗುತ್ತಾ ಬಂದಂತೆ ಎಲ್ಲರನ್ನೂ ಎಲ್ಲವನ್ನೂ ಶಪಿಸುತ್ತಾ ಮುನ್ನುಗ್ಗುತ್ತಾಳೆ :

ನಿಸ್ವಾದಿ ಹಾಳಾಗಲೊ ನಿನ್ನ ಬೀದೆಲ್ಲ ಬರುದಾಗಲೊ
ಬಾಲರಾಡೋದೆ ಪಡಸಾಲೆ । ಒಳಗೆಲ್ಲ
ಬ್ಯಾಲದ ಮುಳ್ಳು ಎಳಿಯಾಲಿ

೨೨ ಕರ್ನಾಟಕ ಜನಪದ ಕಥೆಗಳು–ಒಂದು ಅಧ್ಯಯನ

ಅಂಬಳಿಕೆ ಹಿರಿಯಣ್ಣ

ಕರ್ನಾಟಕದಲ್ಲಿ, ಕಳೆದೆರಡು ದಶಕಗಳಿಗಿಂತ ಈಗ, ಜಾನಪದ ಚಟುವಟಿಕೆಗಳು ಹೆಚ್ಚು ವ್ಯಾಪಕವಾಗಿ ಕಂಡುಬರುತ್ತಿವೆ. ಜಾನಪದ ಗ್ರಂಥಗಳು ದೊಡ್ಡ ಸಂಖ್ಯೆಯಲ್ಲಿ ಬೆಳಕು ಕಾಣುತ್ತಿವೆ. ಸಂಗ್ರಹ ಅಧ್ಯಯನಗಳು ಕೈಕೈ ಹಿಡಿದು ಸಾಗುತ್ತಿವೆ. ಎಲ್ಲಕ್ಕಿಂತ ವಿಶೇಷವಾಗಿ ಜಾನಪದವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ವಿಮರ್ಶಿಸುವ ಮತ್ತು ವಿಶ್ಲೇಷಿಸುವ ಕಡೆಗೂ ಜಾನಪದ ಆಸಕ್ತರ ಲಕ್ಷ್ಯ ಹರಿದಿರುವುದು ಹರ್ಷದ ಸಂಗತಿಯಾಗಿದೆ.

ಜನಾಂಗಗಳ ಅಧ್ಯಯನಕ್ಕೆ ನೆರವಾಗುವ ಜಾನಪದದ ಪ್ರಮುಖ ಅಂಗವಾದ ಜನಪದ ಕಥೆಗಳ ಬಗೆಗೆ ಇತ್ತೀಚೆಗೆ ನಮ್ಮಲ್ಲಿ ಆಸಕ್ತಿ ಮೂಡಿದ್ದು ಈವರೆವಿಗೂ ಸುಮಾರು ನಲವತ್ತೈದಕ್ಕೂ ಹೆಚ್ಚು ಕಥಾಸಂಕಲನಗಳು ಪ್ರಕಟಗೊಂಡಿವೆ. ಈ ಜನಪದ ಕಥಾ ಸಂಗ್ರಹ ಕಾರ್ಯವನ್ನು ಕೈಗೊಂಡ ಉತ್ಸಾಹಿಗಳಲ್ಲಿ ಅನೇಕರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಮಾರ್ಗದರ್ಶನ ಪಡೆದವರೇ ಆಗಿದ್ದಾರೆ. ಕಳೆದ ದಶಕದಲ್ಲೇ, ಜಾನಪದವನ್ನು ಭಾರತದಲ್ಲೇ ಪ್ರಪ್ರಥಮ ಬಾರಿಗೆ ವಿಶ್ವವಿದ್ಯಾನಿಲಯದ ಮಟ್ಟಕ್ಕೇರಿಸಿದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಜನಪದ ಕಥೆಗಳ ಸಂಗ್ರಹ-ಅಧ್ಯಯನಗಳಿಗೆ ಆದ್ಯತೆ ನೀಡಿದೆ. ಕರ್ನಾಟಕದ ಪ್ರತಿಯೊಂದು ಜಿಲ್ಲೆಯ ಎಲ್ಲ ಬಗೆಯ ಜಾನಪದ ಪ್ರಕಾರಗಳನ್ನು ಸಂಗ್ರಹಿಸುವ ತನ್ನ ಯೋಜನೆಯಂತೆ ಈಗಾಗಲೆ ಕನ್ನಡ ಅಧ್ಯಯನ ಸಂಸ್ಥೆ ಹಲವು ಜಿಲ್ಲೆಗಳ ಪ್ರಾತಿನಿಧಿಕ ಜನಪದ ಕಥಾ ಸಂಕಲನಗಳನ್ನು ಹೊರತಂದಿದೆ. ಕನ್ನಡ ಜನಪದ ಕಥೆಗಳ ಪ್ರಾದೇಶಿಕ ವೈವಿಧ್ಯವನ್ನೂ ಸೊಗಸನ್ನೂ ಪರಿಚಯಿಸುವ ಆಯ್ದ ಜನಪದ ಕಥೆಗಳು, ಕನ್ನಡ ಜನಪದ ಕಥೆಗಳು, ಬೆಳಗಾಂ ಜಿಲ್ಲೆಯ ಜನಪದ ಕಥೆಗಳು, ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು, ಧಾರವಾಡ ಜಿಲ್ಲೆಯ ಜನಪದ ಕಥೆಗಳು, ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು, ರಾಯಚೂರು ಜಿಲ್ಲೆಯ ಜನಪದ ಕಥೆಗಳು, ಸಂಕೀರ್ಣ ಜನಪದ ಕಥೆಗಳು, ನಮ್ಮ ಜನಪದ ಕಥೆಗಳು—ಇತ್ಯಾದಿ ಸಂಕಲನಗಳು ಅಧ್ಯಯನ ಸಂಸ್ಥೆಯ ಪ್ರಕಟಣೆಗಳು. ಬೆಂಗಳೂರು ವಿಶ್ವವಿದ್ಯಾನಿಲಯವೂ 'ಒಬ್ಬನೇ ಹೇಳಿದ ಇಪ್ಪತ್ತೆರಡು ಜನಪದ ಕಥೆಗಳು' ಮುಂತಾದ ಹೆಬ್ಬೊತ್ತಗೆಗಳನ್ನು ಹೊರತಂದಿದೆ. ಕರ್ನಾಟಕ ವಿಶ್ವವಿದ್ಯಾನಿಲಯ

ಮೊದಲಿಗಿಂತ, ಈಗೀಗ ಈ ದಿಸೆಯಲ್ಲಿ ಹೆಚ್ಚು ಹೆಚ್ಚು ಕೆಲಸ ನಿರ್ವಹಿಸುತ್ತಿದೆ. ಜಾನಪದದ ಬಗ್ಗೆ ಮೊನ್ನೆ ಮೊನ್ನೆ ಆಸಕ್ತಿ ತಳೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯವೂ ಇಲ್ಲಿ ಉಲ್ಲೇಖಾರ್ಹ.

ಜನಪದ ಕಥೆಗಳ ಸಂಗ್ರಹ-ಅಧ್ಯಯನದಲ್ಲಿ ದಕ್ಷಿಣ ಕರ್ನಾಟಕ ಭಾಗ* ತೋರಿಸಿದ ಆಸಕ್ತಿ ಉತ್ತರ ಕರ್ನಾಟಕ ಭಾಗ ತೋರಿಸಿಲ್ಲ. ಅಂತೆಯೇ ಆ ಭಾಗದಲ್ಲಿ ಪ್ರಕಟಗೊಂಡ ಕಥಾಸಂಗ್ರಹಗಳ ಸಂಖ್ಯೆ ಕಡಿಮೆ. ಸದ್ಯ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಕಥಾಸಂಗ್ರಹ ಕಾರ್ಯಗಳು ನಡೆದಿವೆ-ನಡೆಯುತ್ತಿವೆಯಾದರೂ ಸರಿಯಾದ ಮಾಹಿತಿ, ಪ್ರಸ್ತಾವನೆ, ಟಿಪ್ಪಣಿಗಳಿಲ್ಲದ ನಿರರ್ಥಕ ಸಂಗ್ರಹಗಳೇ ಹೆಚ್ಚಿನ ಸಂಖ್ಯೆಯಲ್ಲಿ ಹೊರಬಂದಿವೆ. ಅದಕ್ಕೆ ಕಾರಣ ಬಹುಶಃ ನಮ್ಮ ಸಂಗ್ರಹಕರಲ್ಲಿ ಜನಪದ ಸಾಹಿತ್ಯವನ್ನು ಹಾಳಾಗಗೊಡದಂತೆ ಸಾಧ್ಯವಾದಷ್ಟೂ ಗ್ರಂಥಗಳ ರೂಪದಲ್ಲಿ ಹಿಡಿದಿಡಬೇಕೆಂಬ ಉದ್ದೇಶ ಮಾತ್ರ ಇದ್ದುದು. ಜಾನಪದ ಸಂಗ್ರಹದ ಆರಂಭದ ದಿನಗಳಲ್ಲಿದ್ದ ಆ ಧೋರಣೆ ಸಂಪೂರ್ಣ ಮಾಯವಾಗಿಲ್ಲದಿದ್ದರೂ ಈಗಿನ ಉತ್ಸಾಹಿ ಸಂಗ್ರಹಕರಲ್ಲಿ ಜನಪದ ಸಾಹಿತ್ಯ ಸಂಸ್ಕೃತಿಯ ಒಂದು ಅಂಗವೆಂಬ ಕಲ್ಪನೆ ಮೂಡಿದ್ದು ಅದನ್ನು ಶಾಸ್ತ್ರೀಯ ಹಾಗೂ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡುವ ಹವಣಿಕೆಯಿದೆ ; ಸಾಂಸ್ಕೃತಿಕ ಅಧ್ಯಯನಕ್ಕೆ ವಿಶೇಷ ಗಮನ ಹರಿಸಬೇಕೆಂಬ ನಿಲುವು ಮೂಡಿದೆ.

ಎಚ್. ಎಲ್. ನಾಗೇಗೌಡ ಅವರು ಇಂದಿನ ಪ್ರತಿಭಾವಂತ ಬರಹಗಾರರಲ್ಲಿ ಒಬ್ಬರು. ಅವರು ತಮ್ಮ ಪ್ರತಿಭಾವಲಯವನ್ನು ಕೇವಲ ಸೃಜನಾತ್ಮಕ ಸಾಹಿತ್ಯ ಸೃಷ್ಟಿಗಷ್ಟೇ ಸೀಮಿತಗೊಳಿಸಿಕೊಳ್ಳದೆ ಜಾನಪದ ಕ್ಷೇತ್ರಕ್ಕೂ ವಿಸ್ತರಿಸಿ ಸಾಕಷ್ಟು ಕೆಲಸ ಮಾಡಿ ಹೆಸರುಗಳಿಸಿದ್ದಾರೆ. ಅವರ ಮೊದಲ ಜಾನಪದ ಸಂಗ್ರಹ 'ಸೋಬಾನೆ ಚಿಕ್ಕಮ್ಮನ ಪದಗಳು' ಕನ್ನಡ ಜಾನಪದದ ಬಹು ದೊಡ್ಡ ಸಾಧನೆ ಎಂಬ ಮುಕ್ತ ಪ್ರಶಂಸೆಗೆ ಪಾತ್ರವಾಗಿದ್ದರೆ 'ಪದವವೆ ನಮ್ಮ ಎದೆಯಲ್ಲಿ' ಎಂಬ ಇನ್ನೊಂದು ಸಂಗ್ರಹ ವೈವಿಧ್ಯಪೂರ್ಣ ಗೀತೆಗಳನ್ನೊಳಗೊಂಡ ಒಂದು ವಿಶಿಷ್ಟ ಜನಪದ ಗೀತ ಸಂಗ್ರಹವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಕರ್ನಾಟಕ ಜನಪದ ಕಥೆಗಳು' ಸಂಗ್ರಹ ಶ್ರೀಯುತರ ಮೂರನೆಯ ಸಂಕಲನವಾಗಿದೆ.

ಗೌಡರಿಂದ ಸಂಪಾದಿತವಾದ 'ಕರ್ನಾಟಕ ಜನಪದ ಕಥೆಗಳು' ಕನ್ನಡ ಜನಪದ ಕಥೆಗಳ ವೈವಿಧ್ಯ ಮತ್ತು ವ್ಯಾಪ್ತಿಯನ್ನು ಸಮರ್ಥವಾಗಿ ಪರಿಚಯಿಸುವ ಒಂದು ಕಥಾಸಂಕಲನ. ಸಮಗ್ರ ಕರ್ನಾಟಕದ ಸಂಸ್ಕೃತಿಯನ್ನು ಅಧ್ಯಯನ ಮಾಡುವ

---

* ಕೆಲವು ಖಾಸಗಿ ಪ್ರಕಟಣೆಗಳು : ಜಾನಪದ ಕಥಾಮೃತ-ಸಂ : ಧವಳಶ್ರೀ ಕರ್ನಾಟಕ ಜಾನಪದ ಕಥೆಗಳು. ಸಂ. ರಾಗೌ ; ಗ್ರಾಮಾಂತರ ಕಥೆಗಳು-ಸಂ. ಡಿ. ಬೋರೇಗೌಡ ಬಳದರೆ ; ಜಾನಪದ ಕಥಾವಳಿ-ಸಂ. ಎಚ್. ಜೆ.ಲಕ್ಕಪ್ಪಗೌಡ ; ಹಾವಾಗಿ ಹರಿದ ಅಣ್ಣಯ್ಯ-ಸಂ. ಜಿ ವಿ ಡಿ

ದೃಷ್ಟಿಯಿಂದ ಈ ಸಂಗ್ರಹ ಮಹತ್ವದ್ದಾಗಿದೆ. ಗೌಡರೇ ಹೇಳಿಕೊಂಡಿರುವಂತೆ 'ಇಡೀ ಕರ್ನಾಟಕ ವ್ಯಾಪ್ತಿಯುಳ್ಳ ಕಥಾಸಂಗ್ರಹ ಇದೊಂದೆ.' ಈ ಸಂಕಲನದಲ್ಲಿ ಕರ್ನಾಟಕದ ಹತ್ತೊಂಬತ್ತು ಜಿಲ್ಲೆಗಳನ್ನು ಪ್ರತಿನಿಧಿಸುವ ಸುಮಾರು ನೂರು ಕಥೆಗಳಿವೆ. ಜಿಲ್ಲೆಗೆ ಐದರಂತೆ ಕಥೆಗಳನ್ನು ತರಿಸಿಕೊಂಡು ಅವುಗಳನ್ನು ಸಂಪಾದಿಸುವ ಕೆಲಸ ನಡೆದಿದೆ'.

'ಸಂಪಾದಕರ ಮುನ್ನುಡಿ'ಯಲ್ಲಿ ಗೌಡರು ಜನಪದ ಸಾಹಿತ್ಯ, ಕಲೆ ಇತ್ಯಾದಿಗಳು ಹುಟ್ಟಿ ಬೆಳೆಯುವುದಕ್ಕೆ ಹಳ್ಳಿಯ ಬಾಳಿನ ರೀತಿ ಹೇಗೆ ಪೋಷಕವಾಗಿದೆ, ಎಂಬುದನ್ನು ವಿವರಿಸಿ ಕಥೆಯ ವಲಸೆ ಕಥೆ ಹೇಳುವ ಸಂದರ್ಭ ಸಮಯಗಳ ಕುರಿತು ವಿವೇಚಿಸಿದ್ದಾರೆ; ಜನಪದ ಕಥೆಗಳ ಪ್ರಯೋಜನಗಳನ್ನು ಹೇಳಿದ್ದಾರೆ. ಆದರೆ ಪ್ರತಿ ಜಿಲ್ಲೆಯ ಚಾರಿತ್ರಿಕ ಮತ್ತು ರಾಜಕೀಯ ಪ್ರಭಾವಗಳನ್ನು ಅವರು ಕುರಿತು ಏನನ್ನೂ ಹೇಳಿಲ್ಲ.

ಹೆಚ್ಚು ಸಂಖ್ಯೆಯ ಕಥೆಗಳನ್ನು ಸಂಕಲಿಸಿಕೊಡುವಾಗ ಕಥಾವಸ್ತು ಮತ್ತು ತಂತ್ರಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ವಿಭಜನೆ ನೀಡುವ ಪ್ರಯತ್ನವನ್ನು ಸಂಪಾದಕರು ಅಗತ್ಯವಾಗಿ ಮಾಡಬೇಕು. ಆದರೆ ಪ್ರಕೃತ ಸಂಗ್ರಹದ ಸಂಪಾದಕರು ಸ್ಟಿತ್ ಥಾಮ್ಸನ್ ಅವರು ಹೇಳಿರುವ ಪ್ರಧಾನವರ್ಗವನ್ನಾಗಲಿ ಉಪವರ್ಗವನ್ನಾಗಲಿ ಅಥವಾ ಬೇರಾವ ಕ್ರಮವನ್ನೇ ಆಗಲಿ ಅನುಸರಿಸಿ ಕಥಾವಿಭಜನೆಯ ಕೆಲಸವನ್ನು ಮಾಡಲು ಯತ್ನಿಸಿಯೇ ಇಲ್ಲ.*

---

* ಸ್ಟಿತ್ ಥಾಮ್ಸನ್ ಅವರ ವಿಭಜನೆಯ ಕ್ರಮವನ್ನನುಸರಿಸಿ ಇಲ್ಲಿನ ಕಥೆಗಳನ್ನು ವಿಭಜಿಸ ಹೊರಟರೆ ಪ್ರಧಾನವಾಗಿ ಸಂಕೀರ್ಣ ಮತ್ತು ಸರಳ ಕಥೆಗಳೆಂದು ವರ್ಗೀಕರಿಸಿಕೊಳ್ಳಬಹುದಾಗಿದೆ ; ರಮ್ಯ, ಅತಿಮಾನುಷ, ಮಾಂತ್ರಿಕ, ಬುದ್ಧಿಮಂತಿಕೆ, ವಿನೋದ, ವಾಸ್ತವಿಕ ಮತ್ತು ಒಗಟು ಕಥೆಗಳೆಂದು ಸ್ಥೂಲವಾಗಿ ಒಟ್ಟು ಏಳು ವಿಭಾಗಗಳಾಗಿ ವಿಭಜಿಸಿಕೊಳ್ಳಬಹುದಾಗಿದೆ.

ರಮ್ಯ ಕಥೆಗಳು : ಗರುಡ ಪಕ್ಷಿಯ ಮಾತು, ಹೆಣ್ಣಿಗೆ ಪತಿಯೋ ಸಂತಾನವೋ, ಪಂಚ ಪ್ರಾಣ ? ಜೀವದ ಗೆಳೆಯರು, ಸಾಹುಕಾರನ ಸೊಸೆ, ನೀನು ಮೂರ್ತಿಯಾದರೆ ನಾನು ಹೇಗೆ ಬದುಕಲಿ ? : ಕಳ್ಳ, ರಾಮಪ್ಪೈರೋಜಿ, ನಾಯಿ, ಅನುಭವವಂತೆ ಸುಖಿ, ಅಣ್ಣ–ತಂಗಿ, ಶೆಟ್ಟಸೊಸೆ, ಅಕ್ಕ ಮಿಂಚಕ್ಕ, ಕುಂಟಕುಂಬಾರಗಿತ್ತಿ, ಅಡಕ್ರಾಜನ ಮಗಳು, ವಜ್ರಕುಮಾರ, ಲೀಲಾವತಿ ರಾಣಿ, ನೂರೊಂದು ಮಕ್ಕಳು–ಮಾರನಕಟ್ಟೆ ಆಟ, ಮಂಜಗ ಮತ್ತು ಅವಳ ಮಾವ.

ಅತಿಮಾನುಷ ಕಥೆಗಳು : ಮಾತು ನಡೆಯಿಸದ ಮುದುಕಿ, ಶಿವನ ಆಟ, ಸಾಹುಕಾರ ಶಂಕ್ರೆಪ್ಪ, ಪಾಪ ಪುಣ್ಯ, ತಾಳೆ ಹೂವು, ನಂದಿಸಿ, ಕೂಡ್ಲಿರಾಜ, ಕದ್ದವನ ಬಾಳು ಇದ್ದೊಟ್ಟೆ, ಸುಂದರಿ, ಮಲ್ಲಮ್ಮನ ರೊಟ್ಟಿ, ರಾಜಕುಮಾರ, ದೀಪರತ್ನ, ಮಸಣದ ಮಗು, ಹೆಣ್ಣಾದ ಇಲಿ, ಶಕುನದ ಹಕ್ಕಿ, ಸೆರ್ದಾಸೆರ್ದಿ, ಸಿವಸೆಂಕ್ರರಾಮ್ನ ಕತೆ, ಉಪಕಾರ ಸ್ಮರಣೆ, ಮಹಾಶೇಷ, ತಮ್ಮನ ಜಾಣತನ, ಪ್ರಪಂಚದ್ಮೇಲೆ ಪಾಪ ಎಷ್ಟೈತೊ ?

ಕನ್ನಡ ಜನಪದ ಕಥೆಗಳ ಕೆಲವು ಉತ್ತಮ ಮಾದರಿಗಳಷ್ಟೇ ಅಲ್ಲದೆ ವಿಶ್ವ ಜನಪದ ಕಥೆಗಳ ವರ್ಗೀಕರಣದ ಎಲ್ಲ ಭಾಗಗಳಿಗೂ ಈ ಸಂಕಲನದ ಕಥೆಗಳಲ್ಲಿ ಸಾಕಷ್ಟು ಉತ್ತಮ ಭಿನ್ನರೂಪಗಳು ಲಭ್ಯವಾಗುತ್ತವೆ. ಪ್ರಪಂಚದ ಜನಪದ ಕಥೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಭ್ಯಾಸ ಮಾಡಹೊರಟರೆ ಇಲ್ಲಿಯ ಹಲವಾರು ಕಥೆಗಳು ಪರಸ್ಪರ ಸಂಬಂಧ ಹೊಂದಿರುವುದನ್ನು ಗುರುತಿಸಬಹುದು ; ಒಂದೊಂದು ಕತೆಯೂ ಒಂದೊಂದು ದೃಷ್ಟಿಯಿಂದ ಪ್ರಮುಖವೆನಿಸುತ್ತದೆ. ವಿಶ್ವಜನಪದ ಕಥಾಶ್ರೇಣಿಯಲ್ಲಿ ಇಲ್ಲಿನ ಕತೆಗಳು ಹೇಗೆ ಶ್ರೇಷ್ಠ ಕಾಣಿಕೆಗಳಾಗಿ ನಿಲ್ಲಬಲ್ಲವು ಎಂಬುದಕ್ಕೆ ಕೆಲವು ನಿದರ್ಶನಗಳನ್ನು ಇಲ್ಲಿ ಪರಿಶೀಲಿಸಬಹುದಾಗಿದೆ.

ಮಾಂತ್ರಿಕ ಕಥೆಗಳು : ತಾಣಾದೀವಿಗೆ, ಸಹೋದರಿಯ ಸಾಹಸ, ಜಯವತಿ, ಬಾರಗರು ಬೂಡು ಮತ್ತು ಬೂತ, ಗುರುಶಿಷ್ಯ, ಸಾಪ್ಕಾರಿ ಮಗ, ಪತಿವ್ರತೆ ಪವಾಡ, ಆರುಜನ ಅಣ್ಣ ತಮ್ಮಂದಿರು, ಗರುಢಗಂಭ, ಗಿಳಿಯ ಜಾಣತನ.

ಬುದ್ಧಿವಂತಿಕೆಯ ಕಥೆಗಳು : ವಿದ್ಯಾಮಂಜರಿ–ಕಥಾಮಂಜರಿ, ಆಲೂರು ಹಾಲಪ್ಪ ; ಮತ್ತೋಡು ಚನ್ನಬಸಪ್ಪ, ಮಂತ್ರಿಯ ಮಗಳು, ಮೂಗರು ದೋಸ್ತರು, ಮುತ್ತಿನ ಮುಸುಕಿನ ಜೋಳ, ಬೆಳ್ಳಿ ಚುಕ್ಕೆ ಮೂಡಿತು, ಸೋಟಿ ಮಲ್ಲಣ್ಣ, ಕಳ್ಳರ ಬಾಳ್ವೆ ಕಲ್ಲಾ ಬಿಲ್ಲಿ, ರಾಜ ಹೇಳಿದ ಮೂರು ಮಾತುಗಳು.

ವಿನೋದಕಥೆಗಳು : ಅರಸನ ಹೆಂಡತಿ, ಕುಡ್ಡಳ್ಯಾನಕಥೆ, ಶೂರ–ಧೀರ, ಕಡಬಿನಕತೆ, ಡಾಸಯ್ಯ, ಕಡಬಿನ ಕತೆ, ಮುದುಕ ಸಾಧುವಿನ ಆಶೀರ್ವಾದ. ತೀಸ್ ಮಾರಖಾ–ಜಂಬದಕೋಳಿ, ಮಗಳಗಂಡ ಅಳೇಮ್ಯೆಯ, ದಡ್ಡಹುಡುಗ ಹೆಣ್ಣು ತಂದದ್ದು, ಗುರುವ ಗುರುವಾದ, ಎಮ್ಮೆ ಬೆಣ್ಣೆ ಎಮ್ಮೆ ಕಣ್ಣಿಗೆ ಸೈ.

ವಾಸ್ತವಿಕ ಕಥೆಗಳು : ಗರತಿ–ಸೂಳೆ, ಗಂಡ–ಹೆಂಡ್ತಿ, ತಂದೆ ಹೇಳಿದ ಮಾತು, ನಾಯಿ ನಾರಾಯಣ, ಗಟ್ಟುಳ್ಳ ಗಂಡಸು, ಶಕ್ತಿ–ಧನ-ಯುಕ್ತಿ, ಕುರುಬರ ಬೀರಪ್ಪ, ಸೆಟಗೊಂಡವನಿಗೆ ಅಟ ಗೋಲು, ಬಡವರೇ ದೇವರು.

ಒಗಟು ಕಥೆಗಳು : ಹೆಣ್ಣು ಮತ್ತು ಹಾವು, ಹಣತೆ, ಸತ್ತ ಮೀನು ನಗೆಯಾಡಿತು, ಪರದಾನಿಸೊಸೆ.

'ಗುಡುಂಗಡೆ ಹಕ್ಕಿ' ಪ್ರಾಣಿಕಥೆಗಳ ವಿಭಾಗವನ್ನು ಪ್ರತಿನಿಧಿಸುವ ಏಕಮಾತ್ರ ಕತೆ.

'ದಿಕ್ಕಿಲ್ಲದ ಮಕ್ಕಳು ದಿಕ್ಕುಗಾಣದ ದೇಶಕ್ಕೆ' 'ಕೂಸಿಗೆ ಮೂರು ಕುತ್ತು'–ಈ ಎರಡು ಲಾವಣಿ ಸ್ವರೂಪದ ಕತೆಗಳು.

ವಿವರಣಾತ್ಮಕ ಸ್ವರೂಪದ ಐತಿಹ್ಯಗಳೂ ಈ ಸಂಕಲನದಲ್ಲಿ ಸೇರ್ಪಡೆಗೊಂಡಿವೆ : (1) ಪುಗ್ಗೆರ ಮೊಂಣಯ್ಯ (2) ಪೊಳ್ಳದೇವಿರ ಅಪ್ಪಯ್ಯನಕಥೆ (3) ಪನ್ನಂಗಾಲ ತಮ್ಮೆ (4) ಎರಡು ಹಣ್ಣು.

ಮಾಂತ್ರಿಕ ಕಥೆಗಳ ಸಾಲಿನಲ್ಲಿ ಬರುವ 'ಸಾಮ್ರಾರಿ ಮಗ' ಎಂಬ ಕತೆ ವಿಶ್ವ ಜನಪದ ಕಥೆಗಳ ವರ್ಗದಲ್ಲಿ ಚರ್ಚಿತವಾಗಿರುವ ಒಂದು ಪ್ರಮುಖ ಕತೆ. ಸ್ಟಿತ್ ಥಾಮ್ಸನ್ ಅವರು ಸೂಚಿಸಿರುವ ವರ್ಗ 560 'The Magic Ring' ಎಂಬ ಜನಪ್ರಿಯ ಕತೆಯ ಕನ್ನಡ ಅವತರಣಿಕೆ ಇದು. ವಿನೂತನ ಆಶಯಗಳಿಲ್ಲದಿದ್ದರೂ ಇದೊಂದು ಗಮನಾರ್ಹ ರಚನೆಯಾಗಿದೆ. ಇಲ್ಲಿ ನಾಯಕನು ಉಂಗುರ ಪಡೆದು ಕೊಳ್ಳುವ ಬಗೆ ಇನ್ನೆಲ್ಲಿಗಿಂತ ಸ್ವಾರಸ್ಯಕರವಾಗಿದೆ. ತನ್ನನ್ನು ಸಾಕಿ ಪೋಷಣೆಗೈದು ತನ್ನವರ ಬಳಿಗೆ ತಂದುಬಿಟ್ಟ ಉಪಕಾರಕ್ಕಾಗಿ ಹಾವೊಂದು ನಾಗರಾಜನ ಬೆರಳಲ್ಲಿದ್ದ ಉಂಗುರವನ್ನು ನಾಯಕನಿಗೆ ಕೊಡಿಸುತ್ತದೆ. ಕೇಳಿದ್ದನ್ನು ಕೊಡುವ ಆ ಉಂಗುರದಿಂದ ಮಾಂತ್ರಿಕ ಅರಮನೆಯೊಂದು ಸಿದ್ಧವಾಗುವುದು. ನಾಯಕನು ಮೂವರು ರಾಜಕುಮಾರಿಯರನ್ನು ಲಗ್ನವಾಗುವನು, ಉಂಗುರದ ಮಹಿಮೆಯಿಂದ.

ಇನ್ನೆಲ್ಲಿಯಂತೆ ಮಾಂತ್ರಿಕ ಉಂಗುರವನ್ನು ಕಳೆದುಕೊಂಡು ಪರಿತಪಿಸುವುದು, ಉಪಕಾರಿ ಪ್ರಾಣಿಗಳಿಂದ ಅದನ್ನು ಪುನಃ ದೊರಕಿಸಿಕೊಳ್ಳುವ ಸಾಮಾನ್ಯ ಕಥಾಸೂತ್ರ ಇಲ್ಲಿಯೂ ಉಳಿದುಕೊಂಡು ಬಂದಿದೆ.

ಈಗಾಗಲೆ ಲಭ್ಯವಾಗಿರುವ ಕತೆಗಳಲ್ಲಿ ಆಚಾರಿಯೊಬ್ಬನು ಮಾಂತ್ರಿಕ ಉಂಗುರ ಕದಿಯುವ ಸಾಹಸಕ್ಕೆ ಇಳಿದರೆ ಪ್ರಕೃತ ಕತೆಯಲ್ಲಿ ಮುದುಕಿಯೊಬ್ಬಳು ಆ ಕೆಲಸವನ್ನು ನಿರ್ವಹಿಸುತ್ತಾಳೆ. ಅವಳು ಆ ಉಂಗುರ ಕದಿಯಲು ಉಪಯೋಗಿಸುವ ತಂತ್ರ, ಚಮತ್ಕಾರಗಳು ಅಸಾಮಾನ್ಯವಾದವು.

ಮುದುಕಿಯ ವರಸೆ ಇದು : '........ಗಂಡ ಹೆಂಡ್ತಿ ಅಂದ್ಮೇಲೆ ಗಂಡನ ಕೈಯಾಗಿರದು ಹೆಂಡ್ತಿ ಕೈಯಲ್ಲೂ ಇರ್ಬೇಕು, ಹೆಂಡ್ತಿ ಕೈಲಿರೋದು ಗಂಡ್ನಕೈಲಿರಬೇಕು. ಹಾಗಿದ್ರೆ ಗಂಡ ಹೆಂಡ್ತಿ ಅನ್ನೋದು ಸರಿ. ನೀವು ರಾತ್ರಿಗೆ ನಿಮ್ಮ ಗಂಡನ ಕೈಲಿರೊ ಉಂಗ್ರನ ಕೇಳಿ ಈಸ್ಗಂಡು ನಿಮ್ಮ ಕೈಯಾಗೆ ಇಸ್ಕೋಬೇಕು.'

ನಾಯಕನ ಹೆಂಡಂದಿರನ್ನು ಪುಸಲಾಯಿಸುವ ಈ ಸನ್ನಿವೇಶ ಮುದುಕಿಯ ಕುಟಿಲ ವ್ಯಕ್ತಿತ್ವವನ್ನು ಅತ್ಯಂತ ಸಮರ್ಥವಾಗಿ ಬಣ್ಣಿಸುತ್ತದೆ.

ಉಂಗುರ ಕಳುವಾದ ಮೇಲೆ ಮಾಂತ್ರಿಕ ಅರಮನೆ ಸ್ಥಳಾಂತರಗೊಳ್ಳುವುದು. ನಾಯಕನ ಪರಿಸ್ಥಿತಿ ಹದಗೆಡುತ್ತದೆ.

ನಾಯಕನು ಉಪಕಾರಿ ಪ್ರಾಣಿಗಳಾದ ಕೀರ ಮತ್ತು ಗಿಣಿಗಳಿಂದ ಉಂಗುರವನ್ನು ಪಡೆಯುವ ರೀತಿ ಅತ್ಯಂತ ಕುತೂಹಲಕರವಾಗಿ ಇಲ್ಲಿ ನಿರೂಪಣೆಗೊಂಡಿದೆ. ಕೀರ ಮತ್ತು ಗಿಣಿಗಳು ನದಿಯಲ್ಲಿ ಈಜಿ ಹೋಗಿ ಮುದುಕಿಯ ಬಾಯೊಳಗಿದ್ದ ಉಂಗುರವನ್ನು ಕದ್ದುತರುವವು.

ಕೊನೆಯಲ್ಲಿ ಉಂಗುರವನ್ನು ಕಳುವು ಮಾಡಿದ್ದ ಮುದುಕಿ ನೀರು ಪಾಲಾಗುವುದು ಜನಪದ ಕತೆಯ ಸಹಜ ಅಂತ್ಯವಾಗಿದೆ.

ಈ ಕತೆಗೆ ದೊರಕುವ ಭಿನ್ನರೂಪಗಳಲ್ಲಿ ನಾಯಿ ಮತ್ತು ಬೆಕ್ಕುಗಳು ಉಪಕಾರಿ ಪ್ರಾಣಿಗಳಾಗಿದ್ದರೆ ಇಲ್ಲಿ ಕೀರ ಮತ್ತು ಗಿಣಿಗಳು ಆ ಸ್ಥಾನವನ್ನು ಆಕ್ರಮಿಸಿವೆ.

ಈ ಕತೆಯ ಕೆಲವು ಆಶಯಗಳು :

1. ಹಾವೊಂದರಿಂದ ಮಾಂತ್ರಿಕ ವಸ್ತು ಲಭ್ಯವಾಗುವುದು (D 812)
2. ಕೇಳಿದ್ದನ್ನು ಕೊಡುವ ಮಾಂತ್ರಿಕ ವಸ್ತು (D 1470.1)
3. ಉಂಗುರದಿಂದ ಮಾಂತ್ರಿಕ ಅರಮನೆಯ ನಿರ್ಮಾಣ (D 1131.1)
4. ಮಾಂತ್ರಿಕ ಉಂಗುರ ಕಳೆದು ಹೋಗುವುದು (D 860)
5. ಮಾಂತ್ರಿಕ ಅರಮನೆ ಸ್ಥಳಾಂತರಗೊಳ್ಳುವಿಕೆ (K 2136.2)
6. ಮಾಂತ್ರಿಕ ಉಂಗುರವನ್ನು ಮರಳಿ ಗಳಿಸುವಿಕೆ (D 882)
7. ಕಳುವಾದ ಮಾಂತ್ರಿಕ ಉಂಗುರ ಉಪಕಾರಿ ಕೀರ ಮತ್ತು ಗಿಣಿಗಳಿಂದ ಕದಿಯಲ್ಪಡುತ್ತವೆ, ಮುದುಕಿಯ ಬಾಯಿಂದ ಉಂಗುರ ಕದಿಯುತ್ತವೆ (D 882.1.1)

ಈ ಕತೆಯ ಭಿನ್ನರೂಪಗಳು : ಡಾ. ಜೀ. ಶಂ. ಪರಮಶಿವಯ್ಯನವರು ಸಂಗ್ರಹಿಸಿ ಸಂಪಾದಿಸಿರುವ 'ಕನ್ನಡ ಜನಪದ ಕಥೆಗಳು' ಸಂಕಲನದ 'ನಾಗಮಾಣಿಕ್ಯ' ಕತೆ ಮತ್ತು ಎ. ಹಿರಿಯಣ್ಣ ಅವರ 'ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು' ಸಂಕಲನದ 'ಹಾವು ಕೊಟ್ಟ ಉಂಗುರ' ಎಂಬ ಕತೆ.

'ತಂದೆ ಹೇಳಿದ ಮಾತು' ಬುದ್ಧಿವಂತಿಕೆಯ ಕತೆಗಳ ಸಾಲಿಗೆ ಸೇರ ಬಹುದಾದ ಕತೆ. ಇದು ಆರ್ನೆ ಆಂಟಿ ಮತ್ತು ಸ್ಟಿತ್ ಥಾಮ್ಸನ್ The Types of the Folktale' ಗ್ರಂಥದಲ್ಲಿ ಸೂಚಿತವಾಗಿರುವ ವರ್ಗ 911 ಮತ್ತು ವರ್ಗ 1381 ಕತೆಗಳಿಗೆ ಸಂವಾದಿಯಾಗಿದೆ. ಮರಣ ಶಯ್ಯೆಯಲ್ಲಿದ್ದ ತಂದೆ ಮಗನಿಗೆ ಹೀಗೆ ಉಪದೇಶಿಸುತ್ತಾನೆ : 'ನಿನ್ನ ಒಳಗುಟ್ಟನ್ನು ಹೆಂಡತಿಗೆ ಹೇಳಬೇಡ ; ಪೋಲಿಸರ ಸಹವಾಸ ಮಾಡಬೇಡ ; ಚಿಲ್ಲರೆ ಅಂಗಡಿಗಳಲ್ಲಿ ವ್ಯವಹರಿಸಬೇಡ ; ಕನಿಷ್ಠ ಶುಲ್ಕ ಪಡೆಯುವ ವೇಶ್ಯೆಯರ ಸಹವಾಸಕೂಡದು.'

ತಂದೆಯ ಮರಣಾನಂತರ ಮಗನು ತಂದೆಯ ಮಾತಿನ ಸತ್ಯವನ್ನು ತಿಳಿಯಬೇಕೆಂದು ಕೆಲವು ಪ್ರಯೋಗ ಮಾಡಿ ನೋಡಿದನು.

ಹೆಂಡತಿ ಹೇಗೆ ಗುಟ್ಟನ್ನು ಉಳಿಸಿಕೊಳ್ಳುವಳು ಎಂಬುದನ್ನು ಪರೀಕ್ಷಿಸಲು ಚಿನ್ನದೊಡವೆ ಧರಿಸಿದ್ದ ಹೆಣ್ಣುಮಗಳೊಬ್ಬಳ ತಲೆಹೊಡೆದು ತಂದೆನೆಂದು ಹೇಳಿ ರೋಲ್ಡ್‌ಗೋಲ್ಡ್' ಚಿನ್ನವನ್ನೂ, ಕುರಿಯ ತಲೆಯನ್ನೂ ಹೆಂಡತಿಗೆ ತೋರಿಸಿ ನೆಲದಲ್ಲಿ ಹೂಳಿಟ್ಟನು. ಹೆಂಡತಿ ಅದನ್ನು ನೆರಮನೆಯವರಿಗೆ ತಿಳಿಸಿ ರಹಸ್ಯವನ್ನು ಬಯಲು ಮಾಡಿದಳು. ಬೇಕೆಂದೇ ಯಾವ ಪೋಲಿಸರೊಂದಿಗೆ ಸಂಪರ್ಕ ಏರ್ಪಡಿಸಿಕೊಂಡಿದ್ದನೊ ಅವರೇ ಒಂದು ಸಾಯುಕಸಿಗೆ ಕೋಳ ಹಾಕಿದರು. ಚಿಲ್ಲರೆ ಅಂಗಡಿಯವನು ದಾರಿಯಲ್ಲೇ ಒಂದು ಗದರಿಸಿ ಹಣ ವಸೂಲಿ ಮಾಡಿದನು. ಹೆಚ್ಚು ಶುಲ್ಕ ತೆಗೆದುಕೊಂಡ ವೇಶ್ಯೆ

ಮತ್ತು ದೊಡ್ಡ ಅಂಗಡಿಯವರು ನಾಯಕನಿಗೆ ಜಾಮೀನಾಗಲು ಮುಂದಾದರು. ತನಿಖಾಧಿಕಾರಿಗಳು ನಾಯಕನ ಮನೆಗೆ ಬಂದು ಅಗೆದು ನೋಡುವಾಗ ಕುರಿಯ ತಲೆ ಮತ್ತು 'ರೋಲ್ಡ್‌ಗೋಲ್ಡ್' ಚಿನ್ನ ಸಿಕ್ಕಿದವು.

ಹೀಗೆ ತಂದೆಯ ಬುದ್ಧಿವಾದ ಪ್ರಯೋಗದ ಮೂಲಕ ನಿಜವಾಗುವುದು.

ಈ ಕತೆಯಲ್ಲಿ ರೋಲ್ಡ್‌ಗೋಲ್ಡ್ ಚಿನ್ನ ಮತ್ತು ಪೋಲಿಸರು ಪ್ರವೇಶ ಹೊಂದಿರುವುದು ಕಾಲೋಚಿತ ಕಲ್ಪನೆಗೆ ಅಡ್ಡಿಯುಂಟಾಗಿದೆ. ಉಳಿದಂತೆ ಕತೆ ಸುಂದರವಾಗಿದೆ,

ಆಶಯಗಳು :

1. ಸಾಯುತ್ತಿರುವ ತಂದೆಯ ಬುದ್ಧಿವಾದ
2. ಅಗೆದು ನೋಡಿದಾಗ ಕುರಿಯತಲೆ (H 427.1)

'ಕನ್ನಡ ಜನಪದ ಕಥೆಗಳು' ಸಂಕಲನದ 'ಹೆಂಡತಿಗೆ ಹೇಳಿದ ಗುಟ್ಟು' ಈ ಕತೆಯ ಒಂದು ಭಿನ್ನರೂಪ.

'ತಮ್ಮನ ಜಾಣತನ' ಕನ್ನಡ ಜನಪದ ಕಥಾಕೋಶದ .ಅತಿಮಾನುಷ ಕಥೆಗಳ ಸಾಲಿನ ಒಂದು ಗಮನಾರ್ಹ ರಚನೆ. ಈ ಕತೆ ಸ್ಟಿತ್ ಥಾಮ್ಸನ್ ಅವರ ವರ್ಗಸೂಚಿಯಲ್ಲಿ ಸೂಚಿತವಾಗಿರುವ ವರ್ಗ 1152, ರಕ್ಕಸ ಭ್ರಮೆಗೊಳಗಾಗುವ ಕತೆಯನ್ನು ಹೋಲುತ್ತದೆ. ರಕ್ಕಸನಿಂದ ಅಪಹರಿಸಲ್ಪಟ್ಟ ತಂಗಿಯನ್ನು ಹುಡುಕಿಕೊಂಡು ಬಂದ ಅಣ್ಣತಮ್ಮಂದಿರಿಬ್ಬರು ದಾರಿಯಲ್ಲಿ ಸಿಕ್ಕಿದ ಕತ್ತೆ, ಉಘಸಿ, ನೂಲಿನಹಗ್ಗ, ಕೇರುವ ಮೊರ ಮುಂತಾದುವನ್ನು ತೆಗೆದುಕೊಂಡು ರಕ್ಕಸನ ಮನೆಗೆ ಹೋಗುವರು. ಅಲ್ಲಿ ತಂಗಿಯ ಸೂಚನೆಯಂತೆ ಅಟ್ಟದ ಮೇಲೆ ಕುಳಿತು ರಕ್ಕಸನಿಗೆ ಆ ವಸ್ತು ಮತ್ತು ಪ್ರಾಣಿಗಳನ್ನು ತೋರಿಸಿ ಆತನಿಗಿಂತಲೂ ದೊಡ್ಡವನಾದ ರಕ್ಕಸನೊಬ್ಬ ಬಂದಿದ್ದಾನೆಂದು ಭ್ರಮೆ ಹುಟ್ಟಿಸಿ ಅವನನ್ನು ಅಲ್ಲಿಂದ ಓಡಿಸುವರು.

ತಮ್ಮನು ರಕ್ಕಸನನ್ನು ಓಡಿಸಲು ಹೂಡಿದ ಉಪಾಯ ಆತನ ಜಾಣತನವನ್ನು ಸೂಚಿಸುತ್ತದೆ.

ಮುಖ್ಯ ಆಶಯಗಳು :

1. ನೂಲಿನ ಹಗ್ಗವನ್ನು ಬಾಲವೆಂದು ಬಗೆಯುವುದು (K 1711.1)
2. ದೊಡ್ಡ ಮೊರವೊಂದನ್ನು ಹೊಸ ರಾಕ್ಷಸನ ಕಿವಿಯೆಂದು ತಿಳಿಯುವುದು (K. 1715.12)
3. ಉಘಸಿಯನ್ನು ಹೊಸ ರಾಕ್ಷಸನ ತಲೆಯೆಂದು ಭ್ರಮಿಸುವುದು
4. ಕತ್ತೆಯ ಬಾಲವನ್ನು ತಿರುವಿದಾಗ ಅದು ಕಿರುಚಿಕೊಳ್ಳಲು ಅದನ್ನು ಹೊಸ ರಾಕ್ಷಸನ ಕೂಗು ಎಂದು ತಿಳಿದುಕೊಳ್ಳುವುದು (K. 2324.1)

ಈ ಕತೆಯ ಭಿನ್ನರೂಪಗಳು : 'ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು' ಸಂಕಲನದ

'ಕುಂಬಳಿ' ಮತ್ತು 'ಕನ್ನಡ ಜನಪದ ಕಥೆಗಳು' ಸಂಕಲನದ 'ಕುಂಟನ ಸಾಹಸ' ಎಂಬ ಕತೆಗಳು.

ಹಾಸ್ಯಕತೆಗಳ ಸಾಲಿಗೆ ಸೇರುವ 'ಶೂರ–ಧೀರ' ಕತೆ ಹೆಡ್ಡರ ಕತೆಗಳ ಸಾಲಿನ ಒಂದು ಅತ್ಯುತ್ತಮ ರಚನೆ. ಈ ಕತೆ ಆರ್ನೆ ಆಂಟಿ ಮತ್ತು ಸ್ಟಿತ್‌ಥಾಮಸ್ ಅವರು ಹೇಳಿರುವ ವರ್ಗ 1287 ತಮ್ಮನ್ನು ತಾವೇ ತಪ್ಪು ತಪ್ಪಾಗಿ ಎಣಿಸಿಕೊಂಡ ದಡ್ಡರು ಕತೆಯನ್ನು ಸಂಪೂರ್ಣವಾಗಿ ಹೋಲುತ್ತದೆ. ದಡ್ಡರಿಬ್ಬರು ಶೂರ–ಧೀರರೆಂದು ಇಟ್ಟುಕೊಂಡ ಹೆಸರುಗಳ ಕಾರಣದಿಂದ ಹೆಸರಿಗೆ ತಕ್ಕಂತೆ ಪರಾಕ್ರಮಿಗಳೆಂದು ಭಾವಿಸಿ ಮಂತ್ರಿಯು ಅವರನ್ನು ರಾಜಧಾನಿಗೆ ಕರೆದುಕೊಂಡು ಹೋಗಿ ಮರ್ಯಾದೆ ಕೊಡಿಸಿದನು. ಒಂದು ಸಲ ಏಳುಮೆಟ್ಟಿನ ಹುಲಿಯೊಂದು ರಾಜಧಾನಿಯ ಮೇಲೆ ಧಾಳಿ ಮಾಡಿದಾಗ ರಾಜನು ಆ ಹುಲಿಯನ್ನು ಕೊಲ್ಲುವಂತೆ ಶೂರಧೀರರಿಗೆ ಆಜ್ಞೆ ಮಾಡಿದನು. ಯಾವ ವಿದ್ಯೆಯನ್ನೂ ಕಲಿತಿರದ ಇವರು ಅಲ್ಲಿಂದ ಕಾಲು ಕೀಳಲು ತೀರ್ಮಾನಿಸಿ ಅಲ್ಲಿಯವರೆಗೆ ಸಂಪಾದಿಸಿಟ್ಟಿದ್ದ ಹಣವನ್ನು ಹೇರಿಕೊಂಡು ಹೋಗಲು ಕತ್ತೆಯೊಂದನ್ನು ಎಳೆದು ತರಲು ಹೋಗಿ ಆಕಳ ರಕ್ತ ಕುಡಿದು ಬಿದ್ದಿದ್ದ ಹುಲಿಯನ್ನು ಕತ್ತೆಯೆಂದು ಭ್ರಮಿಸಿ ಅದರ ಬಾಯಿಗೆ ಲಗಾಮು ಹಾಕಿ ಕಾಲಿಗೆ ಹಗ್ಗ ಹಾಕಿ ಎಳೆದು ತಂದು ನೋಡಿದಾಗ ಹುಲಿ ಎಂದು ಗೊತ್ತಾಗುವುದು.

ಇನ್ನೊಂದು ಸಲ ಶೂರಧೀರರು ಸತ್ವಪರೀಕ್ಷೆಗೆ ಒಳಗಾಗಬೇಕಾಯಿತು. ಹನ್ನೆರಡು ಮಂದಿ ಕಳ್ಳರು ರಾಜಧಾನಿಯ ಭಂಡಾರವನ್ನು ಕೊಳ್ಳೆಹೊಡೆಯಲು ಬಂದಾಗ ರಾಜನು ಆ ಕಳ್ಳರನ್ನು ಹಿಡಿದುಕೊಡುವಂತೆ ಆಜ್ಞೆ ಹೊರಡಿಸಿದ. ಇವರು ಅದು ತಮ್ಮಿಂದ ಸಾಧ್ಯವಾಗದ ಕೆಲಸವೆಂದು ಅಲ್ಲಿಂದ ಹೊರಡಲು ಯೋಚಿಸಿ ಎಲ್ಲ ಸಿದ್ಧತೆ ನಡೆಸಿಕೊಂಡು ಸ್ವಲ್ಪ ಸ್ವಲ್ಪ ಊಟಮಾಡಿ ಕ್ಷಣ ಹೊತ್ತು ನಿದ್ದೆಹೋದರು. ಅವರು ನಿದ್ದೆಹೋದ ವೇಳೆಯಲ್ಲಿ ಸರ್ಪವೊಂದು ಅಲ್ಲಿಗೆ ಬಂದು ಅವರು ತಿಂದು ಮಿಗಿಸಿಟ್ಟಿದ್ದ ಅನ್ನ ತಿಂದು ಹೋಯಿತು. ಕನ್ನ ಹಾಕಲೆಂದು ಬಂದಿದ್ದ ಕಳ್ಳರು ಆ ಅನ್ನವನ್ನು ತಿಂದು ವಿಷವೇರಿ ಉರುಳಿಬಿದ್ದರು.

ಮತ್ತೊಂದು ಸಲ ಶೂರಧೀರರು ಭಾರೀ ಸಂದಿಗ್ಧಕ್ಕೆ ಒಳಗಾದರು. ಪರರಾಜರು ರಾಜಧಾನಿಯ ಮೇಲೆ ಮುತ್ತಿಗೆ ಹಾಕಿದಾಗ ಇವರು ಅಲ್ಲಿಂದ ತಪ್ಪಿಸಿಕೊಂಡು ಹೋಗುವ ಉದ್ದೇಶದಿಂದ ಎರಡು ರಣಗುದುರೆಗಳನ್ನೇರಿ ಹೊರಡಲು ಆ ಕುದುರೆಗಳು ಬರುವ ಸದ್ದು ಕೇಳಿ ವೈರಿಗಳು ಜೀವಭಯದಿಂದ ನಾಗಾಲೋಟ ಕಿತ್ತರು.

ಹೀಗೆ ಶೂರ–ಧೀರರು ತಮ್ಮ ಹೆಸರುಗಳನ್ನು ಉಳಿಸಿಕೊಂಡರು.

ಇದುವರೆಗೆ ದೊರೆತಿರುವ ಈ ಬಗೆಯ ಕತೆಗಳಲ್ಲೆಲ್ಲಾ ಅತ್ಯಂತ ಸುಂದರವಾದ ರಚನೆಯಿದು, ಕಥಾನಿರೂಪಣೆಯ ವೈಖರಿ, ಸಮಸ್ಯೆ ಸುಲಭವಾಗಿ ಬಗೆಹರಿಯುವುದು, ಸಹಜವಾಗಿ ಒದಗಿ ಬರುವ ವಿನೋದ ಪೂರ್ಣ ಸನ್ನಿವೇಶಗಳು–ಇವೆಲ್ಲವೂ ಈ ಕತೆಯಲ್ಲಿ

ಆಶ್ಚರ್ಯಕರ ರೀತಿಯಲ್ಲಿ ರೀತಿಯಲ್ಲಿ ಪ್ಯೆದಾಳಿದ್ದು ಕತೆಯ ಸೌಂದರ್ಯವನ್ನು ಹೆಚ್ಚಿಸಿವೆ.

ಕೆಲವು ಆಯಾಶಗಳು :

1. ಹುಲಿಯನ್ನು ಕತ್ತೆಯೆಂದು ಭ್ರಮಿಸಿ ಹಿಡಿದು ತರುವುದು

(2) ಸರ್ಪ ತಿಂದು ಬಿಟ್ಟಿದ್ದ ಅನ್ನ ತಿಂದು ಕಳ್ಳರು ಸಾಯುವುದು

(3) ಕುಂಟು ಕುದುರೆಗಳ ಕಾಲಿಗೆ ಸಿಕ್ಕು ಸಾಯುತ್ತೇವೆಂಬ ಜೀವ ಭಯದಿಂದ ವೈರಿಗಳು ನಾಗಾಲೋಟ ಕೀಳುವುದು.

ಇದೇ ಸಂಕಲನದ 'ತೀಸ್ ಮಾರಖಾ–ಜಂಬದ ಕೋಳಿ' ಕತೆ ಮೇಲಿನ ಕತೆಯ ಆಶಯವರ್ಗಗಳನ್ನೇ ಹೊಂದಿರುವ ಮತ್ತೊಂದು ಕತೆಯಾಗಿದೆ. ಕನ್ನಡ ಜನಪದ ಕಥೆಗಳು' ಸಂಕಲನದ 'ಜಾತ್ರೆಗೆ ಹೋದ ಶೂರರು' ಈ ಕತೆಗೆ ದೊರಕುವ ಮತ್ತೊಂದು ಉತ್ತಮ ಭಿನ್ನರೂಪ.

ವಿನೋದ ಕಥೆಗಳ ವಿಭಾಗದಲ್ಲೇ ಬರುವ ಇನ್ನೊಂದು ಕತೆ 'ಕುಡ್ತ್ಯಾನ ಕತೆ' ಸ್ಟಿತ್ ಥಾಮ್ಸನ್ ಅವರ ಗ್ರಂಥದಲ್ಲಿ ಸೂಚಿತವಾಗಿರುವ ವರ್ಗ 1685 ರ ಕತೆಯನ್ನು ಹೋಲುತ್ತದೆ. ಇಳಿಗಣ್ಣಿನ ಮೂರ್ಖನೊಬ್ಬ ಎಮ್ಮೆಯ ಬಾಲ ಹಿಡಿದು ಅತ್ತೆ ಮನೆಗೆ ಬರುವನು. ಬೆಕ್ಕು ತನ್ನ ಊಟದ ತಟ್ಟೆಗೆ ಬಾಯಿ ಹಾಕುತ್ತಿದೆಯೆಂದು ತಿಳಿದು ತುಪ್ಪ ಬಡಿಸುತ್ತಿದ್ದ ಅತ್ತೆಯ ಕಪಾಳಕ್ಕೆ ಹೊಡೆದು ಪ್ರಮಾದವೆಸಗುವನು. ಕೊನೆಯಲ್ಲಿ ತನ್ನ ಅಚಾತುರ್ಯಕ್ಕೆ ಅತ್ತೆಯ ಕ್ಷಮೆ ಕೋರಿ ನಿಜ ಸಂಗತಿಯನ್ನು ಪ್ರಕಟಿಸುವನು.

ಆದರೆ ಈ ಕತೆಯ ಭಿನ್ನರೂಪಗಳಲ್ಲಿ ಅತ್ತೆಯ ಕ್ಷಮೆ ಕೋರುವ ಪ್ರಸಂಗ ಬರುವುದಿಲ್ಲ; ತಾನು ಮೂರ್ಖನೆಂಬುದನ್ನು ಒಪ್ಪಿಕೊಳ್ಳುವುದಿಲ್ಲ.

ಇಲ್ಲಿ ಕುಡ್ತ್ಯಾನು ಎಸಗುವ ಚಮತ್ಕಾರಗಳು ನಗೆಪಾಟಲಿಗೀಡಾಗುತ್ತವೆ. ಹಾಸ್ಯ ಸಹಜವಾಗಿ ಉಕ್ಕಿದೆ.

ಆಶಯಗಳು :

(1) ಇಳಿಗಣ್ಣಿನ ಮೂರ್ಖ ಎಮ್ಮೆಯ ಬಾಲ ಹಿಡಿದು ಸಾಗುವುದು.

(2) ಬೆಕ್ಕು ತನ್ನ ತಟ್ಟೆಗೆ ಬಾಯಿ ಹಾಕುತ್ತಿದೆಯೆಂದು ಭಾವಿಸಿ ಅತ್ತೆಗೆ ಹೊಡೆಯುವುದು.

'ಕನ್ನಡ ಜನಪದ ಕಥೆಗಳು' ಸಂಕಲನದ 'ಮುಂಜುಗಣ್ಣಿನ ಮಾಯಣ್ಣ' ಕತೆ ಪ್ರಕೃತ ಕತೆಗೆ ದೊರಕುವ ಒಂದು ಒಳ್ಳೆಯ ಭಿನ್ನರೂಪ.

ಜನಪದ ಕಥೆಗಳನ್ನು ಶಾಸ್ತ್ರೀಯ ವಿಷಯವಾಗಿ ಪರಿಗಣಿಸುವಾಗ ಬೇರೆಡೆಯಲ್ಲಿ ಸಂಗ್ರಹಿತವಾಗಿ ತುಸು ವ್ಯತ್ಯಾಸದೊಡನೆಯೊ ಇಲ್ಲವೆ ಯಾವ ವ್ಯತ್ಯಾಸವೂ ಇಲ್ಲದೆಯೊ ಪ್ರಕಟವಾದ ಕತೆಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಪುನಃ

ಸಂಗ್ರಹಿಸುವ ಅಗತ್ಯವಿದೆ. ಯಾವುದೇ ಕತೆಯ ಮೂಲರೂಪವನ್ನು ನಿರ್ಧರಿಸಲು, ಚಾರಿತ್ರಿಕ-ಭೌಗೋಳಿಕ ವಿಧಾನವನ್ನನುಸರಿಸಿ ಅದರ ಇತಿಹಾಸವನ್ನು ರೂಪಿಸಲು, ಶ್ರೇಷ್ಠ ಅಭಿವ್ಯಕ್ತಿಯ ಉತ್ತಮ ಮಾದರಿಗಳನ್ನು ನಿರ್ಣಯಿಸಲು ಹೆಚ್ಚು ಹೆಚ್ಚು ಭಿನ್ನ ರೂಪಗಳಿದ್ದಷ್ಟೂ ಒಳ್ಳೆಯದು. ಈ ಅರ್ಥದಲ್ಲಿ ಒಂದೇ ಕತೆಯ ಹಲವು ರೂಪಗಳನ್ನು ಮತ್ತೆ ಮತ್ತೆ ಸಂಗ್ರಹಿಸುವುದರ ಔಚಿತ್ಯವಿದೆ. ಆದರೆ ಒಂದೇ ಕತೆಯ ಬೇರೆ ಬೇರೆ ಪಾಠಗಳನ್ನು ಹೆಚ್ಚು ಕಡಿಮೆ ಏಕಕಾಲದಲ್ಲಿ ಸಂಗ್ರಹಿಸಿ ಒಂದೇ ಸಂಕಲನದಲ್ಲಿ ಪ್ರಕಟಿಸುವುದರ ಸಾರ್ಥಕ್ಯವೇನೆಂಬುದು ತಿಳಿಯುವುದಿಲ್ಲ. ಈ ಸಂಕಲನದ ಕೆಲವು ಕತೆಗಳಿಗೆ ಇದೇ ಸಂಕಲನದಲ್ಲಿ ಒಂದೊಂದು ಕತೆಗೆ ಮೂರು, ಎರಡು, ಒಂದು ಭಿನ್ನರೂಪಗಳು ದೊರಕುತ್ತವೆಯೆಂದರೆ ಸೋಜಿಗಪಡಬೇಕಾಗಿಲ್ಲ :

(1) 'ಮುತ್ತಿನ ಮುಸುಕಿನ ಜೋಳ' ಕತೆಯ ಆಶಯ ಮತ್ತು ವರ್ಗಗಳನ್ನು ಹೋಲುವ ಇತರ ಕಥೆಗಳೆಂದರೆ 'ಆಲೂರು ಹಾಲಪ್ಪ ಮುತ್ತೊಡು ಚನ್ನಬಸಪ್ಪ' ; ಬೆಳ್ಳಿ ಚುಕ್ಕೆ ಮೂಡಿತು ; ಮಂತ್ರಿಯ ಮಗಳು.

(2) 'ಜೀವದ ಗೆಳೆಯರು' ಕತೆಯ ಭಿನ್ನರೂಪಗಳು : ಸೆಟ್ಟಿಸೊಸೆ ; ಸಾಹುಕಾರನ ಸೊಸೆ ; ರಾಮ ಬೈರೋಜಿ

(3) 'ಶೂರ-ಧೀರ' ಕತೆಗೆ ಸಂವಾದಿಯಾದ ಕಥೆಗಳು : 'ತೀಸ್ ಮಾರಖಾ-ಜಂಬದ ಕೋಳಿ' ; ಅನುಭವದಂತೆ ನುಡಿ.

(4) 'ಗರತಿ ಸೂಳೆ'ಯ ಆಶಯ ಮತ್ತು ವರ್ಗಗಳನ್ನೇ ಹೋಲುವ ಕತೆ 'ರಾಜ ಹೇಳಿದ ಮೂರು ಮಾತುಗಳು.'

(5) 'ಹೆಣ್ಣಾದ ಇಲಿ' ಕತೆಯನ್ನು ಭಾಗಶಃ ಹೋಲುವ ಕತೆ 'ಮಾತುನಡೆಯಿಸದ ಮುದುಕಿ.'

(6) 'ಸತ್ತಮೀನು ನಗೆಯಾಡಿತು' ಕತೆಯ ಭಿನ್ನರೂಪ 'ಪರದಾನಿ ಸೊಸೆ'

(7) 'ದಡ್ಡ ಹುಡುಗ ಹೆಣ್ಣು ತಂದದ್ದು' ಕತೆಯ ಭಿನ್ನರೂಪ 'ಮಗಳ ಗಂಡ ಆಳೀ ಮೈಯ'

(8) 'ಹೆಣ್ಣು ಮತ್ತು ಹಾವು' ಕತೆಯ ಭಿನ್ನರೂಪ 'ಹಣತೆ'

(9) 'ಕುಂಟಕುಂಬಾರಗಿತ್ತಿ' ಕತೆಯನ್ನು ಮುಕ್ಕಾಲು ಪಾಲು ಹೋಲುವಕತೆ ಅಡಕ್ರಾಜುನ ಮಗಳು'

(10) 'ಮಹಾಶೇಷ' ಕತೆಯ ಭಿನ್ನರೂಪ 'ಆರುಜನ ಅಣ್ಣ ತಮ್ಮಂದಿರು'

(11) 'ನಾಯಿ' ಕತೆಯನ್ನು ಭಾಗಶಃ ಹೋಲುವ ಕತೆ 'ಹೆಣ್ಣಿಗೆ ಪತಿಯೊ ಸಂತಾನವೊ ಪಂಚಪ್ರಾಣ ?'

(12) 'ಸುಂದರಿ'-ಕತೆಯ ಭಿನ್ನರೂಪ 'ನೀನು ಮೂರ್ತಿಯಾದರೆ ನಾನು ಹೇಗೆ ಬದುಕಲಿ ?'

ಈ ಸಂಕಲನದ ಕಥೆಗಳ ಹೆಸರು	ಭಿನ್ನರೂಪಗಳು	ಭಿನ್ನರೂಪಗಳು ದೊರಕುವ ಸಂಕಲನಗಳ ಹೆಸರು	ಸಂಪಾದಕರು
1) ಜೀವದಗೆಳೆಯರು	ಪರದಾನಿ ಮಗ ಮತ್ತು ಅರಸನ ಮಗ	ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು	ಎ. ಹಿರಿಯಣ್ಣ
2) ಪಾಪಪುಣ್ಯ	ಒಂದು ಮನೆ ನೀರು ಒಂದು ರೊಟ್ಟಿ	,,	,,
3) ತಾಳಿಹೂವು	ಹೊಸ ಬಂಟ್ರಾಯ	,,	,,
4) ಕಳ್ಳ	ಸೋಮಸೇಕರ–ಚಂದ್ರಾಮುಕಿ	,,	,,
5) ನಾಯಿ	ನಾಯಿಯ ಮಕ್ಕಳು ನಾಯಿಯಾದರೂ ತಾಯಿ	ಕನ್ನಡ ಜನಪದ ಕಥೆಗಳು	ಡಾ.ಜೀ.ಶಂ. ಪರಮಶಿವಯ್ಯ
6) ಮಗಳಗಂಡ ಅಳೀಮೈಯ	ಹೆಣ್ಣಿನ ಗಂಡ	ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು	ಎ. ಹಿರಿಯಣ್ಣ
7) ಪ್ರಪಂಚದ್ಮೇಲೆ ಪಾಪ ಎಷ್ಟೈತೊ	ಹುಳುಕುನಾಯಿ ಕಜ್ಜಿದಗಲೆ	,,	,,
8) ಹೆಣ್ಣು ಮತ್ತು ಹಾವು	ಸಾವಿರೆತ್ತಿನ ಸರದಾರ	,,	,,
9) ವಿದ್ಯಾಮಂಜರಿ–ಕಥಾಮಂಜರಿ	ಪ್ರಚಂಡ ಹುಡುಗ ತಕ್ಕೊಂಡಪ್ಪನ ಕಥೆ	ಆಯ್ದ ಜನಪದ ಕಥೆಗಳು	ಡಾ.ಜೀ.ಶಂ. ಪರಮಶಿವಯ್ಯ
10) ಹೆಣ್ಣಾದ ಇಲಿ	ಸಾವಿತ್ರಮ್ಮ	ಕನ್ನಡ ಜನಪದ ಕಥೆಗಳು	,,
11) ಅರಸನ ಹೆಂಡತಿ	ಕುರುಡನ ಮಡದಿ ಪಟೇಲನ ಹೆಂಡತಿ	ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು	ಎ. ಹಿರಿಯಣ್ಣ
12) ಆಲೂರು ಹಾಲಪ್ಪ ; ಮತ್ತೊಬ್ಬ ಚನ್ನಬಸಪ್ಪ	ತಂದೆಯನ್ನು ಕಟ್ಟಿದ ಮಗ	ಕನ್ನಡ ಜನಪದ ಕಥೆಗಳು	ಡಾ.ಜೀ.ಶಂ. ಪರಮಶಿವಯ್ಯ

(13) 'ಕಳ್ಳ' ಕತೆಯನ್ನು ಭಾಗಶಃ ಹೋಲುವ ಕತೆ 'ಸೆರ್ದಾ-ಸೆರ್ದಿ'

ಹೀಗೆ ಒಂದೇ ಕತೆಯ ಬೇರೆ ಬೇರೆ ರೂಪಗಳನ್ನು ಸ್ವತಂತ್ರ ಕಥೆಗಳೆಂಬ ತಪ್ಪು ಗ್ರಹಿಕೆಯಲ್ಲಿ ಇಲ್ಲಿ ಸಂಕಲಿಸಲಾಗಿದೆ. ಈ ಭಿನ್ನಪಾಠಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಅವನ್ನು ಪ್ರತ್ಯೇಕವಾಯೇ ಪ್ರಕಟಿಸಿದ್ದರೆ ಗ್ರಂಥದ ಮೌಲ್ಯ ಹೆಚ್ಚುತ್ತಿತ್ತು.

ಈ ಸಂಕಲನದ ಹಲವಾರು ಕತೆಗಳಿಗೆ ಈಗಾಗಲೇ ಪ್ರಕಟಗೊಂಡಿರುವ ಬೇರೆ ಬೇರೆ ಸಂಕಲನಗಳಲ್ಲಿಯೂ ಭಿನ್ನರೂಪಗಳು ದೊರಕುತ್ತವೆ. ಇಲ್ಲಿ ಪ್ರಾತಿನಿಧಿಕವಾಗಿ ಮೂರು ಸಂಕಲನಗಳಲ್ಲಿ ದೊರಕುವ ಭಿನ್ನರೂಪಗಳನ್ನು ಪಟ್ಟಿಮಾಡಿದೆ.

ಈ ಸಂಕಲನದ ಕೆಲವು ಕಥೆಗಳು ಅಪೂರ್ಣವೆನಿಸಿವೆ : ಉದಾಹರಣೆಗಾಗಿ 'ಕುಡ್ಡಲ್ಯಾನ ಕತೆ,' 'ಬಾರಗರು ಬೂಡು ಮತ್ತು ಬೂತ' ಮುಂತಾದವು : ಈ ಕಥೆಗಳು ಅಪೂರ್ಣವಾಗಿದ್ದರೂ ಸಂಪಾದಕರು ಇವನ್ನು ಇಲ್ಲಿ ಉಳಿಸಿಕೊಂಡಿದ್ದಕ್ಕೆ ವಿವರಣೆ ನೀಡಿಲ್ಲ.

ಮೂಲತಃ ಒಂದೇ ಕತೆಯಾಗಿದ್ದು ಒಂದೇ ಹೆಸರು ಹೊತ್ತು ಎರಡು ಜಿಲ್ಲೆಗಳನ್ನು ಪ್ರತಿನಿಧಿಸಿರುವ ಕತೆ 'ಕಡಬಿನ ಕತೆ.'

ಇಲ್ಲಿನ ಕೆಲವು ಕಥೆಗಳಿಗೆ ಸಂಗ್ರಹ ವಿವರಗಳಿಲ್ಲದಿರುವುದು ಬಹು ದೊಡ್ಡ ಕೊರತೆಯೆನಿಸಿದೆ. ಕಥಾನಿರೂಪಕನನ್ನೇ ಕೇಂದ್ರವಾಗಿಟ್ಟುಕೊಂಡು ಅವನ ಸಾಮಾಜಿಕ ಸಂಸ್ಕೃತಿಯ ಪರಂಪರೆಯ ಹಿನ್ನೆಲೆಯಲ್ಲಿ ಅವನು ಹೇಳುವ ಕಥೆಗಳಲ್ಲಿ ಕಂಡು ಬರುವ ಸಮಾಜದ ರೂಪು ರೇಶೆಗಳನ್ನು ಗುರುತಿಸುವ ಉದ್ದೇಶದಿಂದ ಸಂಗ್ರಹ ವಿವರಗಳು ಆತ್ಮಗತ್ಯವೆನಿಸಿವೆ.

ಸಂಗ್ರಹ ವಿವರಗಳಿಲ್ಲದ ಕಥೆಗಳು : ಆರು ಜನ ಅಣ್ಣ ತಮ್ಮಂದಿರು ; ಗಿಳಿಯ ಜಾಣತನ ; ತಮ್ಮನ ಜಾಣತನ ; ಶೀಸ್ ಮಾರಯಾ-ಜಂಬದ ಕೋಳಿ ; ಮುದುಕ ಸಾಧುವಿನ ಆಶೀರ್ವಾದ ; ಮೂಗರು ದೋಸ್ತರು ; ಪನ್ನಂಗಾಲ ತಮ್ಮೆ ; ಪೊಳ್ಳದೇವಿರ ಅಪ್ಪಯ್ಯನ ಕಥೆ ; ಪುಗ್ಗೆರ ಪೊಣಯ್ಯ ಇತ್ಯಾದಿ.

ಕತೆಯ ಕಲಾತ್ಮಕ ಅಭಿವ್ಯಕ್ತಿ-ಮೌಲ್ಯವನ್ನು ಕಾಯ್ದುಕೊಳ್ಳಬೇಕಾದರೆ ಕಥೆಗಳ ಸ್ವರೂಪವನ್ನಾಗಲಿ ಭಾಷೆಯನ್ನಾಗಲಿ ಪರಿಷ್ಕರಿಸಬಾರದು. ಆದರೆ ಈ ಸಂಕಲನದಲ್ಲಿ ಮೂಲಕ್ಕೆ ನಿಷ್ಠವಾಗಿ ಸಂಗ್ರಹಿಸುವ ಪ್ರಾಮಾಣಿಕತೆಯನ್ನು ತೋರಿರುವ ಸಂಗ್ರಾಹಕರ ಸಂಖ್ಯೆ ಬಹು ಕಡಿಮೆ. ಕತೆಗಾರನ ಭಾಷೆ, ವಾಕ್ಯರಚನೆ, ನಿರೂಪಣೆಗಳನ್ನು ಯಥಾ ವತ್ತಾಗಿ ಉಳಿಸಿಕೊಂಡಿರುವ ಕಥೆಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದಾಗಿದೆ : ಲೀಲಾವತಿರಾಣಿ ; ಸೆರ್ದಾ-ಸೆರ್ದಿ ; ಸಿವಸೆಂಕ್ರರಾಯ್ನ ಕತೆ ; ಗುರುವ ಗುರುವಾದ ; ಗಿಳಿಯ ಜಾಣತನ ; ಮುದುಕ ಸಾಧುವಿನ ಆಶೀರ್ವಾದ ; ರಾಜಕುಮಾರ ; ರಾಮು ಬೈರೋಜಿ ; ಕುಡ್ಡಲ್ಯಾನಕತೆ ಇತ್ಯಾದಿ.

ಕಥಾವಕ್ತೃವಿನ ಭಾಷೆ, ನಿರೂಪಣೆ, ಶೈಲಿಗಳನ್ನು ಯಥಾವತ್ತಾಗಿ ಉಳಿಸಿಕೊಂಡಿರುವ ಒಂದು ಕತೆಯಲ್ಲಿ ಬರುವ ವೈಗುಳದ ರೀತಿಯನ್ನು ಇಲ್ಲಿ ಉದಾಹರಿಸಿದರೆ ಸಂಗ್ರಹಕರ ಪ್ರಾಮಾಣಿಕತೆ ಎಷ್ಟೆಂಬುದು ತಿಳಿಯುತ್ತದೆ : "...........ಚಾಂಡಾಲ್ಮುಂಡೆ ಚಿನಾಲ್ಮುಂಡೆ ಎಂತ ಸೂಳೆಮುಂಡೆ ನೀನು. ಯಾವಾಗ್ಲಾವಾಗ ಆ ಹೂವಿನ ಗಿಡಕ್ಕೆ ಓಗ್ತಾ ಇದ್ಯೊ ಬರ್‍ತಾ ಇದ್ಯೋ, ಇಂತ ಕೈಕಾಲು ಇಲ್ದ ಅಥವ್ನ ಇವ್ಳು ಎಷ್ಟು ದಿನದಿಂದ ಇಟ್ಕೊಂಡಿದ್ಳೊ. ಇವ್ಳು ಸೂಳ್ಮುಂಡೆ ನೋಡು ಅವ್ರು ಎಷ್ಟು ಸಂದಾಗವ್ರೆ ಅವರ್‍ನ ಮದ್ವೆ ಮಾಡ್ತೀನಿ ಅಂದಾಗ್ಳೆ ಮುಂಡೆ ಕಿಲಾಡಿ ಮುಂಡೆ ಅಂತ ಅವ್ರಪ್ಪ ಏಳ್ತಾ ಇದ್ರೆ ನಾನು ಅವರ್‍ನ ಆಗಾಕಿಲ್ಲ. ನಾನೇನೊ ಇನ್ನೂ ಮೂರು ತಿಂಗ್ಳು ಯಾರ್‍ನೂ ಆಗಾಕಿಲ್ಲ ಅಂದ್ನು ಒಸ್ಟಿಮುಂಡೆ, ನೋಡು ಎಂತ ಕೆಲ್ಸ ಮಾಡವ್ಳೆ. ಚಿನಾಲ್ಮುಂಡೆ ಇವ್ಳು" (ಪ್ರಪಂಚದ್ಮೇಲೆ ಪಾಪ ಎಷ್ಟೈತೋ ? ! –ಪು. ೨೫೮)

ಗ್ರಾಮ್ಯ ಭಾಷೆಯನ್ನು ಉಳಿಸಿಕೊಂಡು ಕೃತಕವಾದ ರೀತಿಯಲ್ಲಿ ಕತೆಯನ್ನು ನಿರೂಪಿಸಲು ಪ್ರಯತ್ನಿಸಿರುವುದಕ್ಕೂ ಕಥೆಗಳ ಸ್ವರೂಪ ಮತ್ತು ಭಾಷೆಯನ್ನು ಸಂಪೂರ್ಣ ಪರಿಷ್ಕರಿಸಿರುವುದಕ್ಕೂ ಇಲ್ಲಿ ಕೆಲವು ನಿದರ್ಶನಗಳಿವೆ : ಪುಗ್ಗರ ಮೊಣಯ್ಯ ಪನ್ನಂಗಾಲತಮ್ಮೆ ; ಪ್ರೇಮ ದೇವರ ಅಪ್ಪಯ್ಯನಾತೆ ; ಶಕ್ತಿ-ಧನ-ಯುಕ್ತಿ ; ಕೂಸಿಗೆ ಮೂರು ಕುತ್ತು ; ಜಾರಗರು ಬೂಡು ಮತ್ತು ಬೂತ ; ನೂರೊಂದು ಮಕ್ಕಳು-ಮಾರನ ಕಟ್ಟೆ ಆಟ ; ಗರುಡ ಪಕ್ಷಿಯ ಮಾತು : ಹೆಣ್ಣಿಗೆ ಪತಿಯೊ ಸಂತಾನವೊ ಮಾತಪ್ರಾಣ ? ಪತಿವ್ರತೆ ಪವಾಡ ಮುಂತಾದವು.

ಬಹಳಷ್ಟು ಕತೆ ಕಥೆಗಳ ಭಾಷೆ ಗ್ರಾಂಥಿಕವಾಗಿರುವುದರ ಜೊತೆಗೆ ಇಂಗ್ಲಿಷ್ ಶಬ್ದಗಳು ಕನ್ನಡದ ಧೋರಣೆಯಲ್ಲಿ ಹೇರಳವಾಗಿ ಬಂದು ಸೇರಿಕೊಂಡಿವೆ. ಸುಲಲಿತವಾದ ಕನ್ನಡ ಶೈಲಿಗೆ ಅವು ಒಗ್ಗದೆ, ಕಥೆಯ ಸುಭಗತೆಗೂ ಕಾಲೋಚಿತ ಕಲ್ಪನೆಗೂ ಅಡ್ಡಿಯಾಗಿದೆ. ಉದಾಹರಣೆಗೆ : ಬಸ್ಟಾಂಡ್ (ಪು. ೨೫೯) ಹಾಲ್ (ಪು. ೨೬೬) ಲೀವ್ (ಪು. ೨೭೦) ಬುಕ್ (ಪು. ೨೭೭) ಗ್ಲಾಸ್ನಲ್ಲಿ (ಪು. ೨೭೫) ಜೈಲು (ಪು. ೩೪೯) ಪೋಲಿಸ್ರು (ಪು. ೩೫೬) ಪ್ರಿಂಟ್ (ಪು. ೩೦೬) ಮಟನ್ನು (ಪು. ೫೩೪) ರೋಲ್ಡ್ ಗೋಲ್ಡ್ (ಪು. ೫೩೪) ವಾರಂಟು (ಪು. ೫೩೬) ಪಬ್ಲಿಕ್ (ಪು. ೫೩೮) ಟಾಯಮ್ಮಿಗೆ (ಪು. ೫೫೨) ಟ್ರಂಕ್ (ಪು. ೫೩೮)

ಸಮಗ್ರ ಕರ್ನಾಟಕ ಸಂಸ್ಕೃತಿಯ ಅಧ್ಯಯನಕ್ಕೆ ಮೂಲಸಾಮಗ್ರಿಯನ್ನು ಒದಗಿಸುವ ಈ ಸಂಕಲನದ ಕಥೆಗಳಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ರೂಢಿಯಲ್ಲಿರುವ ಆಹಾರ ಪದ್ಧತಿ, ಆಚಾರ ವಿಚಾರಗಳನ್ನು ಗುರುತಿಸಬಹುದಾಗಿದೆ. ಕತೆಗಾರ ತನ್ನ ಸಮಾಜದ ಮತ್ತು ತನ್ನ ಜೀವನದಲ್ಲಿ ನಂಬಿರುವ ಆಚಾರವಿಚಾರಗಳನ್ನು ತನ್ನ ಕಥೆಗಳಲ್ಲಿ ವ್ಯಕ್ತಪಡಿಸುವುದು ಸಹಜ. ಬೆಳಗಾಂ ಜಿಲ್ಲೆಯ 'ಶಿವನ ಆಟ' ಎಂಬ ಕತೆಯಲ್ಲಿ ಆ ಜಿಲ್ಲೆಯ ಕೆಲವು ವಿಶೇಷ ತಿನಿಸು ಅಡುಗೆಗಳ ಉಲ್ಲೇಖ ಬರುತ್ತದೆ : ತಾಬಾಣ,

ಪೋಳಿಗೆ, ತುಪ್ಪ, ಸಾರ, ಚೆಲ್ಲಿ ದಾರ... ಮುಂತಾಗಿ, ಕೊಡಗು ಜಿಲ್ಲೆಯ 'ಪೊಳ್ಳದೇವಿರ ಅಪ್ಪಯ್ಯನ ಕತೆ'ಯಲ್ಲಿ ಜನ್ಮಾಂತರದ ಬಗೆಗಿನ ಕಲ್ಪನೆ, ಸಾವಿನನಂತರ ಸಂಭವಿಸಬಹುದಾದ ಘಟನೆಗಳ ಬಗೆಗಿನ ವಿಚಿತ್ರ ನಂಬಿಕೆಗಳು ವ್ಯಕ್ತಗೊಂಡಿವೆ.

ಒಂದೇ ಸಂಕಲನದಲ್ಲಿ ಸುಮಾರು ತೊಂಬತ್ತಕ್ಕೂ ಹೆಚ್ಚು ಕಥೆಗಳನ್ನು ಏಕಕಾಲದಲ್ಲಿ ಒದಗಿಸುವುದು ಒಂದು ಸ್ತುತ್ಯಾರ್ಹ ಪ್ರಯತ್ನವಾದರೂ ಈ ಕೆಳಕಂಡ ಕಾರಣಗಳಿಗಾಗಿ ಈ ಸಂಕಲನ ಅಸಮರ್ಪಕವೆನಿಸಿದೆ. ಸಂಪಾದಕರು ಕಥೆಗಳ ಸ್ವರೂಪ, ಭಾಷೆಗಳ ಕಡೆಗೆ ಹೆಚ್ಚು ಗಮನ ಕೊಟ್ಟಂತೆ ಕಾಣುವುದಿಲ್ಲ. ಕೆಲವೆಡೆ ಭಾಷೆ ತೀರಾ ಗ್ರಾಂಥಿಕವಾಗಿದ್ದು ಇಂಗ್ಲಿಷ್ ಶಬ್ದಗಳು ಹೇರಳವಾಗಿ ಬಂದಿದ್ದರೂ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಬಹಳಷ್ಟು ಕಥೆಗಳನ್ನು ಮೂಲರೂಪದಲ್ಲಿ ಸಂಗ್ರಹಿಸಿ ಕೊಡದಿದ್ದುದು ಈ ಸಂಕಲನದ ಬಹು ದೊಡ್ಡ ಕೊರತೆಯೆನಿಸಿದೆ. ಕೆಲವು ಕಥೆಗಳು ಅಪೂರ್ಣವಾಗಿದ್ದರೂ ಇಲ್ಲಿ ಅವನ್ನು ಉಳಿಸಿಕೊಳ್ಳಲಾಗಿದೆ. ಈವರೆಗೆ ಪ್ರಕಟವಾಗಿರದ ಹೊಸ ಆಶಯ ಮತ್ತು ವರ್ಗಗಳನ್ನು ಒಳಪಡಿಸಿಕೊಂಡ ಕಥೆಗಳಿಗೆ ಆದ್ಯತೆ ನೀಡಬೇಕಾಗಿತ್ತು. ಇಲ್ಲಿಯವರೆಗೆ ಪ್ರಕಟವಾಗಿರುವ ಜನಪದ ಕಥಾಸಂಕಲನಗಳ ಕಥೆಗಳನ್ನು ಎದುರಿಗಿಟ್ಟುಕೊಂಡು ಇಲ್ಲಿನ ಕಥೆಗಳನ್ನು ಅವುಗಳೊಂದಿಗೆ ತೂಗಿ ಅಳೆದು ನೋಡಿ ಅತ್ಯುತ್ತಮವೆನಿಸಿದ ರೂಪಗಳನ್ನು ಮಾತ್ರ ಇಲ್ಲಿ ಉಳಿಸಿಕೊಂಡಿದ್ದರೆ ಸಂಕಲನದ ಮಹತ್ವ ಹೆಚ್ಚುತ್ತಿತ್ತು. ಅಧ್ಯಯನಕ್ಕೆ ಬೇಕಾದ ಎಲ್ಲ ಸಲಕರಣೆಗಳನ್ನು, ಮುಖ್ಯವಾಗಿ ಕಥೆಗಾರರ ಬಗ್ಗೆ ಇನ್ನೂ ಹೆಚ್ಚಿನ ಉಪಯುಕ್ತ ಮಾಹಿತಿಗಳನ್ನು ಶಾಸ್ತ್ರೀಯವಾಗಿ ಒದಗಿಸಿಕೊಟ್ಟಿದ್ದರೆ ಇಲ್ಲಿನ ಸಂಪಾದನಾ ಕಾರ್ಯ ಸಾರ್ಥಕವಾಗುತ್ತಿತ್ತು. ಇಷ್ಟಾದರೂ, ಕಥೆಗಳ ಸಾಂಸ್ಕೃತಿಕ ಪರಿಸರದ ದೃಷ್ಟಿಯಿಂದ, ಭಾಷಾ ವೈವಿಧ್ಯದ ದೃಷ್ಟಿಯಿಂದ, ಸಮಗ್ರ ಕರ್ನಾಟಕ ವ್ಯಾಪ್ತಿಯುಳ್ಳ ಸಂಗ್ರಹವೆಂಬ ದೃಷ್ಟಿಯಿಂದ ಈ ಸಂಗ್ರಹ ಕನ್ನಡ ಜನಪದ ಕಥೆಗಳ ಒಂದು ಗಮನಾರ್ಹ ಸಂಕಲನವೆನಿಸುತ್ತದೆ.

೨೩ ಜಾನಪದ ಬಿಡಿಲೇಖನಗಳು

ಪರಮೇಶ

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಶ್ರೀ ನಾಗೇಗೌಡರ ಕೊಡುಗೆ ಅಪೂರ್ವವೂ, ಅದ್ಭುತವೂ ಆದುದೆಂಬುದರಲ್ಲಿ ಸಂಶಯವಿಲ್ಲ. ಈ ನನ್ನ ಅಭಿಪ್ರಾಯವನ್ನು ಸಮರ್ಥಿಸಿ ಕೊಳ್ಳಲಿಕ್ಕೆ ನಾನು ಹೆಸರಿಸುವ ಕೃತಿಯೆಂದರೆ ಅವರ "ಪ್ರವಾಸಿ ಕಂಡ ಇಂಡಿಯಾ" ಎಂಬ ಉದ್ಗ್ರಂಥದ ಹಲವು ಸಂಪುಟಗಳು ಈ ಗ್ರಂಥವೊಂದರಿಂದಲೇ ಕನ್ನಡ ಸಾರಸ್ವತ ಪ್ರಪಂಚದಲ್ಲಿ ಶ್ರೀ ನಾಗೇಗೌಡರ ಹೆಸರು ಅನಂತವಾಗಿ ನಿಲ್ಲುತ್ತದೆ. ಇದಲ್ಲದೆ ಇನ್ನೂ ಹತ್ತಾರು ಗ್ರಂಥಗಳು ಅವರ ಲೇಖನಿಯಿಂದ ಮೂಡಿ ಬಂದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಶ್ರೀ ನಾಗೇಗೌಡರು ಸರ್ಕಾರದ ನಾನಾ ಇಲಾಖೆಗಳಲ್ಲಿ ಉನ್ನತ, ಗೌರವಾನ್ವಿತ ಹುದ್ದೆಗಳಲ್ಲಿ ಸೇವೆಸಲ್ಲಿಸಿ ದಕ್ಷತೆ ಹಾಗೂ ಪ್ರಮಾಣಿಕತೆಗಳಿಗೆ ಹೆಸರಾದ ವ್ಯಕ್ತಿಯಾಗಿದ್ದರು. ಕರ್ತವ್ಯದಲ್ಲಿ ಕೇವಲ ದಕ್ಷತೆ ಹಾಗೂ ಪ್ರಮಾಣಿಕತೆಯನ್ನು ಮೆರೆಯುವ ಅಧಿಕಾರಿಯಾಗಿದ್ದಲ್ಲಿ, ಅಂಥ ಹಲವಾರು ಅಧಿಕಾರಿಗಳಲ್ಲಿ ನಾಗೇಗೌಡರು ಒಬ್ಬರಾಗಿ ನಿವೃತ್ತರಾದನಂತರವೇ ಜನಮನದ ನೆನಪಿನಿಂದ ಮರೆಯಾಗಿ ಹೋಗುತ್ತಿದ್ದರು. ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯಾಗಿದ್ದುದಲ್ಲದೆ, ತಮ್ಮ ಅಧಿಕಾರದ ಅವಧಿಯಲ್ಲಿ ಶ್ರೀಸಾಮಾನ್ಯನ ಹಿತೈಷಿಯಾಗಿ, ಸಾಹಿತಿಯಾಗಿ ಹಲವು ಮುಖಗಳ ವ್ಯಕ್ತಿತ್ವವನ್ನು ಪಡೆದವರು ಶ್ರೀ ನಾಗೇಗೌಡರು. ಇವೆಲ್ಲಕ್ಕಿಂತ ಮಿಗಿಲಾದ ಮತ್ತೊಂದು ಗುಣ ಶ್ರೀ ನಾಗೇಗೌಡರಲ್ಲಿ ಪ್ರಧಾನವಾಗಿ ಕಂಡುಬರುತ್ತದೆ ಅದೆಂದರೆ ಅವರ "ಜಾನಪದ ಪ್ರೇಮ".

ಹಳ್ಳಿ ಗಾಡಿನಲ್ಲಿ ಹುಟ್ಟಿ, ಹಳ್ಳಿ ಗಾಡಿನಲ್ಲೇ ಬೆಳೆದು ; ಹಳ್ಳಿಯ ಬಾಳಿನ ಹಲವು ಮುಖಗಳ ದರ್ಶನವನ್ನು ಪಡೆದು, ಅದರ ಸವಿಯನ್ನು, ಸುಖವನ್ನು ಉಂಡು, ಗ್ರಾಮಜೀವನದ ದಿಟ್ಟವಾದ ಅನುಭವವನ್ನು ಮೈಗೂಡಿಸಿಕೊಂಡ ವ್ಯಕ್ತಿತ್ವ ಅವರದು. 'ದೊಡ್ಡಮನೆ', 'ನಮ್ಮೂರು' ಮೊದಲಾದ ಕೃತಿಗಳಲ್ಲಿ ತಾವು ಕಂಡುಂಡ ಜನಪದ ಜೀವನವನ್ನು ಚಿತ್ರಿಸುವ ಸಾಹಸಮಾಡಿ ಕೃತಾರ್ಥರಾಗಿದ್ದಾರೆ, ಈ ಕೃತಿಗಳನ್ನು ಓದಿದರೆ ಹಳ್ಳಿಯ ಜನರೊಂದಿಗೆ ಅವರಿಗೆ ಎಂಥ ನಿಕಟವಾದ ಸಂಪರ್ಕವಿದೆಯೆಂಬುದರ ಅರಿವಾಗುತ್ತದೆ. ತಮ್ಮ ಬಾಲ್ಯದಲ್ಲಿ ತಾವು ಕಂಡುಂಡ ಹಳ್ಳಿಯ ಬಾಳಿನ ಸವಿ, ಸೊಬಗು, ಈಗೀಗ ಮರೆಯಾಗಿ ನಂದನವನದಂತಿದ್ದ ಹಳ್ಳಿಗಳು ಕ್ಷುದ್ರವಾದ ರಾಜಕೀಯದ ಸೋಂಕಿನಿಂದ, ಹಾಗೂ ಆಧುನಿಕ ನಾಗರಿಕತೆಯ ಪ್ರವಾಹದ ಭರಕ್ಕೆ ಸಿಕ್ಕು ತನ್ನ ವೈವಿಧ್ಯವನ್ನೂ, ಸೊಬಗನ್ನೂ, ಸೊಗಡನ್ನೂ ಕಳೆದುಕೊಂಡು ಹಿಂಡಿ ಹಿಪ್ಪೆಯಾದ

ಕಬ್ಬಿನ ಸಿಪ್ಪೆಯಂತಾಗಿರುವುದನ್ನು ಕಂಡು ದುಃಖಿತರಾಗುತ್ತಾರೆ. ಗ್ರಾಮೀಣ ಜೀವನದ ಬಗ್ಗೆ, ಹಳ್ಳಿಗಳ ದುಃಸ್ಥಿತಿಯ ಬಗ್ಗೆ, ಜನಪದರ ಉದ್ಧಾರದ ಬಗ್ಗೆ ಅಪಾರವಾದ ಕಾಳಜಿ, ಕಳಕಳಿಯನ್ನು ಹೊಂದಿರುವ ವ್ಯಕ್ತಿ ಶ್ರೀ ನಾಗೇಗೌಡರು ಎಂಬುದನ್ನು ಅವರ ಕೃತಿಗಳಿಂದಲೇ ಅರಿಯಬಹುದಾಗಿದೆ. ಅಲ್ಲದೆ ಜನಪದರ ಉಸಿರಾಗಿದ್ದ, ಅವರ ಬಾಳಿಗೆ ಸಲವನ್ನು ನೀಡಿ ಚೈತನ್ಯವನ್ನು ತುಂಬಿ, ಗ್ರಾಮೀಣ ಜೀವನದ ಜೀವನಾಡಿಯಂತಿದ್ದ ಜನಪದ ಸಾಹಿತ್ಯ, ಜಾನಪದ ಕಲೆಗೆ ಒದಗಿರುವ ದುರ್ಗತಿಯನ್ನು ಕಂಡು ಮಮ್ಮಲ ಮರುಗುತ್ತಾರೆ. ಆ ಜಾನಪದದ ಉದ್ಧಾರದ ಬಗೆಗೆ, ಏಳ್ಗೆಯ ಬಗೆಗೆ ಚಿಂತಿಸುವ ನಾಡಿನ ಅಗ್ರಗಣ್ಯರಲ್ಲಿ ನಾಗೇಗೌಡರು ಎತ್ತರದ ವ್ಯಕ್ತಿಯಾಗಿ ತೋರಿಬರುತ್ತಾರೆ.

ಪ್ರಕೃತ ಅಲ್ಲಲ್ಲಿ ಚದುರಿಹೋಗಿರುವ ಶ್ರೀ ನಾಗೇಗೌಡರ ಜಾನಪದೀಯ ಲೇಖನ[1]ಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಜನಪದ ಸಾಹಿತ್ಯ, ಜನಪದ, ಕಲೆ, ಜನಪದ ಕಲಾವಿದರ ಬಗ್ಗೆ ಅವರಲ್ಲಿ ಎಂತಹ ಕಳಕಳಿಯಿದೆ. ಜನಪದ ಸಾಹಿತ್ಯ ಸಂಗ್ರಹ ಹಾಗೂ ಸಂರಕ್ಷಣೆಯನ್ನು ಕುರಿತು ಅವರ ಅಭಿಪ್ರಾಯಗಳೇನು ? ಜಾನಪದ ಕಲೆ ಹಾಗೂ ಕಲಾವಿದರ ಉಳಿವು, ಪುರೋಭಿವೃದ್ಧಿಯ ಬಗೆಗೆ ಅವರಿಗಿರುವ ಕಾಳಜಿ ಎಂಥದು ಎಂಬುದನ್ನು ಕಂಡರಿಸುವುದರ ಮೂಲಕ ಅವರ "ಜಾನಪದ ಪ್ರೇಮ"ವನ್ನು ಗುರುತಿಸುವುದಷ್ಟೆ ಈ ಲೇಖನದ ಉದ್ದೇಶ.

---

1. ನಾಗೇಗೌಡರ ಜಾನಪದೀಯ ಲೇಖನಗಳು

ಅ ಜನಪದ ಸಾಹಿತ್ಯದ ಪುನರುಜ್ಜೀವನ

(ಶ್ರೀ ಜಿಶಂಪ ಅವರ ನಮ್ಮ ಜನಪದ ಸಾಹಿತ್ಯ/ಜಾನಪದ ಸಂಗ್ರಹಕ್ಕೆ ಬರೆದ ಮುನ್ನುಡಿ.)

ಆ ಜಾನಪದ ಜಾಹ್ನವಿಯನ್ನು ಬತ್ತಿಸಬೇಡಿ !

(5-10-75 ರಂದು ಕಲ್ಬುರ್ಗಿಯಲ್ಲಿ ನಡೆದ ಅಖಿಲ ಕರ್ನಾಟಕ ಗೀಗೀ ಮತ್ತು ಲಾವಣಿ ಸಮ್ಮೇಳನದಲ್ಲಿ ಮಾಡಿದ ಭಾಷಣ—"ತರಳ ಬಾಳುವಿ"ಯಿನಲ್ಲಿ ಪ್ರಕಟವಾಗಿದೆ.)

ಇ ಜಾನಪದ ಕಲೆಗೆ ಪ್ರೋತ್ಸಾಹ

(3-2-69 ರಂದು ಮಂಗಳೂರಿನಲ್ಲಿ ನಡೆದ ಎರಡನೆಯ ಜಾನಪದ ಸಮ್ಮೇಳನದಲ್ಲಿ ಮಾಡಿದ ಭಾಷಣ)

ಈ ಜನಪದ ಭಾಷೆಯ ಸ್ವರೂಪ

(48 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಜಾನಪದ ಗೋಷ್ಠಿಯಲ್ಲಿ ಮಾಡಿದ ಭಾಷಣ —ಅಪ್ರಕಟಿತ)

ಉ ಶ್ರೀಮತಿ ಗೌರಮ್ಮ ಬಸವಯ್ಯನವರ ದೇಶ ವಿದೇಶದ ಜನಪದ ಕತೆಗಳು ಗ್ರಂಥಕ್ಕೆ ಬರೆದ ಮುನ್ನುಡಿ

ಊ ಕನ್ನಡ ಹಾಗೂ ಜಾನಪದ—ಒಂದು ಯೋಜನೆ (ಅಪ್ರಕಟಿತ)

ಎ —ಹೊನ್ನ ಬಿತ್ತೆವು ಹೊಲಕೆಲ್ಲ.

ಶ್ರೀಗೌಡರು ತಮ್ಮ "ಸೋಬಾನೆ ಚಿಕ್ಕಮ್ಮನ ಪದಗಳು" ಎಂಬ ಗ್ರಂಥದಲ್ಲಿ "ಚಿಕ್ಕ ಬಾಲ್ಯದಿ ಕೇಳಿ ಚೊಕ್ಕ ನಿನ್ನಾದ. ಅಕ್ಕ ನಾ ಸೋತೆ ನಿನ್ನ ಸೋಬಾನಕೆ" ಎಂದು ಹಾಡಿ ಹಿಗ್ಗುತ್ತಾರೆ. ಬಾಲ್ಯದಿಂದಲೂ ಜಾನಪದ ಕಾವ್ಯಶ್ರೀಯ ಮಧುರ ನಿನಾದಕ್ಕೆ ಮನಸೋತ ಜೀವ ಅವರದು. ಈ ಜಾನಪದ ಸಾಹಿತ್ಯ ಸಂಸ್ಕಾರವೇ ಮುಂದೆ ಅವರನ್ನು ಶಿಷ್ಟ ಸಾಹಿತ್ಯರಚನೆಗೆ ಪ್ರೇರೇಪಿಸಿತೆಂದರೆ ಆ ಮಾತು ಅತಿಶಯೋಕ್ತಿಯಾಗಲಾರದು. ಇಂತಹ ಜಾನಪದ ಸಂಸ್ಕಾರದಿಂದ ಸಂಪನ್ನರಾದ ಗೌಡರ ಚೇತನ ಹಲವಾರು ಬಗೆಯ ಸಾಹಿತ್ಯ ಕೃತಿಗಳನ್ನು ರಚಿಸುವುದರಲ್ಲೇ ತೃಪ್ತಿಪಡದೆ; ತಮ್ಮ ವ್ಯಕ್ತಿತ್ವವನ್ನು ರೂಪಿಸಿದ ಬಾಳಿಗೆ ಬೆಳಕನ್ನು ನೀಡಿದ, ಅಪೂರ್ವವಾದ ಈ ಜನಪದ ಸಾಹಿತ್ಯದ ಸಂಗ್ರಹಣೆ, ಧ್ವನಿಮುದ್ರಣ; ಸಂಪಾದನೆ ಹಾಗೂ ಸಂರಕ್ಷಣೆಯ ಕಡೆಗೆ ಗಮನ ಹರಿಸಿದ್ದು ವಿಶೇಷವೇನಲ್ಲ. ಈವರೆಗೆ ಅವರು ಪ್ರಕಟಿಸಿರುವ ಜನಪದ ಗ್ರಂಥವೆಂದರೆ "ಸೋಬಾನೆ ಚಿಕ್ಕಮ್ಮನ ಪದಗಳು" ಎಂಬ ಒಂದೇ ಒಂದು ಅಪೂರ್ವ ಸಂಗ್ರಹ–ಆದರೆ ಅಪಾರವಾದ ಸಾಹಿತ್ಯ ಸಂಗ್ರಹ ಅವರಲ್ಲಿದೆ. ಅಷ್ಟು ಮಾತ್ರವಲ್ಲ ಹಲವಾರು ಉತ್ತಮ ಕಲಾವಿದರಿಂದ ಅಪೂರ್ವವಾದ ಹಾಡುಗಳನ್ನು ಧ್ವನಿಮುದ್ರಿಸಿಕೊಂಡಿದ್ದಾರೆ. ಇತ್ತೀಚಿಗೆ ಹೆಳವರ ಸಂಪ್ರದಾಯವನ್ನು ಕುರಿತ ಸಂಶೋಧನೆಯಲ್ಲಿ ತೊಡಗಿರುವುದಲ್ಲದೆ, ಜನಪದ ಕತೆಗಳು, ಬಿಡಿಹಾಡುಗಳು ಮೊದಲಾದುವನ್ನು ವಿಪುಲವಾಗಿ ಸಂಗ್ರಹಿಸಿ, ಅಚ್ಚಿಗೆ ಸಿದ್ಧಪಡಿಸುತ್ತಿದ್ದಾರೆಂದು ಕೇಳಿದ್ದೇನೆ. ಇಷ್ಟಾದರೂ ಕೇವಲ ಜಾನಪದ ಸಾಹಿತ್ಯದ ಸಂಗ್ರಹಣೆ ಹಾಗೂ ಪ್ರಕಟಣೆಯಿಂದ ಅವರ ಜೀವಕ್ಕೆ ತೃಪ್ತಿಯಿಲ್ಲ, ಮನಸ್ಸಿಗೆ ನೆಮ್ಮದಿಯಿಲ್ಲವೆಂಬುದನ್ನು ಅವರ ಈ ಮಾತುಗಳು ಸ್ಪಷ್ಟಪಡಿಸುತ್ತವೆ. "ಈ ಕಲೆ ಹಾಗೂ ಕಲಾವಂತರು ಬದುಕಬೇಕೆಂದರೆ ಹಳ್ಳಿಯ ಬಾಳು ಬರಡು, ಬಂಜರು, ನಿರ್ವೀರ್ಯ, ನಿಸ್ತೇಜ. ಅಂತಹ ಪರಿಸ್ಥಿತಿಗೆ ನಾವು ಕಾರಣರಾಗಬಾರದು. ಜನಪದ ಸಾಹಿತ್ಯ ಸಂಗ್ರಹಮಾಡಿ, ಅದರ ಅಂದ ಚಂದಗಳನ್ನು ಬರೆದು ಪುಸ್ತಕ ಪ್ರಕಟಮಾಡಿದರೆ ಸಾಲದು. ಅದರಿಂದ ಬರೆದವನಿಗೆ ಮಾನ, ಮರ್ಯಾದೆ, ಡಾಕ್ಟರೇಟ್ ಸಿಕ್ಕಬಹುದು. ಆದರೆ ಕಲಾವಂತರಿಗೆ ಮೂರುಕಾಸಿನ ಪ್ರಯೋಜನವೂ ಇಲ್ಲ"[2] ಎನ್ನುತ್ತಾರೆ. "ಸ್ವಾತಂತ್ರ್ಯದನಂತರ ಜನಜೀವನ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ನೈತಿಕವಾಗಿ ತೀವ್ರವಾಗಿ ಬದಲಾವಣೆಯಾಗುತ್ತಿದೆ ಇನ್ನೂರು ಮುನ್ನೂರು ವರ್ಷಗಳಲ್ಲಿ ಆಗದ 'ಅನಾಹುತ' ಕೇವಲ ಇಪ್ಪತ್ತು, ವರ್ಷಗಳಲ್ಲಿ ಆಗಿದೆ ಎನ್ನಬಹುದು. ಜನಪದ ಸಾಹಿತ್ಯವಾಹಿನಿ ಈಗ ಬರುತ್ತಿರುವಷ್ಟು ಹಿಂದೆಂದೂ ಬರುತ್ತಿರಲಿಲ್ಲ."[3] ಎಂಬುದು ಶ್ರೀಗೌಡರ ಅಭಿಪ್ರಾಯ. ಹಾಗಾಗಿ ಈ ಜಾನಪದ ರಸಗಂಗೆ ಇಂಗಿಹೋಗುವ ಮುನ್ನ ಅದನ್ನು ಹಿಡಿದಿಡಬೇಕೆಂಬ

---

2. ಜಾನಪದ ಜಾಹ್ನವಿಯನ್ನು ಬತ್ತಿಸಬೇಡಿ !
3. ಜನಪದ ಸಾಹಿತ್ಯದ ಪುನರುಜ್ಜೀವನ.

ಪಂಬಲ ಅವರದು. "ಜನಮನದಿಂದ ತೇಲಿಬಂದ ಬೆಣ್ಣೆ ಕೈಗೆ ಸಿಕ್ಕುವ ಮೊದಲೇ ಕರಗಿ ಹರಿದು ಮಣ್ಣು ಪಾಲಾಗುತ್ತಿದೆ. ಹಾಡುವ ತಾಯಂದಿರು ಕಣ್ಮರೆಯಾದರೆ ಜನಪದ ಸಾಹಿತ್ಯವೂ ಕಣ್ಮರೆಯಾದಂತೆ. ಹಾಗೆ ಕಣ್ಮರೆಯಾಗುವ ಮುನ್ನ ಅದನ್ನು ಶೇಖರಿಸುವುದು ಜನತೆಯ ಆದ್ಯ ಕರ್ತವ್ಯ. ಜನಪದ ಸಾಹಿತ್ಯವನ್ನು ಕಳೆದುಕೊಂಡ ಕನ್ನಡ ಭಾಷೆ ಹಾಗೂ ಸಾಹಿತ್ಯ ತಾಯಿ ತಂದೆಗಳನ್ನು ಕಳೆದುಕೊಂಡ ತಬ್ಬಲಿಯಂತಾಗುತ್ತದೆ..........ಮುಂದೆ ಹಣಕೊಟ್ಟರೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು. ಆದರೆ ಜನಮನದಲ್ಲಿ ಮೂಡಿಬಂದ ಜನಪದ ಸಾಹಿತ್ಯ ಶರಾವತಿ, ಮನಮೋಹಿಸುವ ಆ ಭವ್ಯ ಭಾಗ್ಯವತಿ ಮತ್ತೊಮ್ಮೆ ಹುಟ್ಟಲಾರಳು.[4] ಆದ್ದರಿಂದ ಸರ್ವರೂ ಎಚ್ಚೆತ್ತು ಜನಪದ ಸಾಹಿತ್ಯದ ರಕ್ಷಣೆ ಮಾಡಬೇಕಾಗಿದೆ. ಎಂದು, "ಜನಪದ ಸಾಹಿತ್ಯ ಎಷ್ಟು ಅಮೂಲ್ಯವಾದುದು, ಈ ಅಮೂಲ್ಯವಾದ ಸಾಹಿತ್ಯ ಶ್ರೀಯನ್ನು ಕಾಲ ಮಿಂಚುವುದರೊಳಗೆ ಸಂಗ್ರಹಿಸದಿದ್ದಲ್ಲಿ ನಾಡು ನುಡಿಗಳು ಎಂತಹ ಅಪಾರವಾದ ನಷ್ಟಕ್ಕೆ ಗುರಿಯಾಗುತ್ತವೆಂಬುದನ್ನು ಮನವರಿಕೆಯಾಗುವಂತೆ ವಿವರಿಸುತ್ತಾರೆ.

"ಜಾನಪದ ಜಾಹ್ನವಿಯನ್ನು ಬತ್ತಿಸದಿರಿ" ಎಂಬ ಮತ್ತೊಂದು ಲೇಖನದಲ್ಲಿ "ಜಾನಪದ ಸಂಸ್ಕೃತಿಯ ಪುನರುತ್ಥಾನಕ್ಕೆ ಒಂದು ಆಂದೋಳನವೇ ನಡೆಯಬೇಕು. ಆಗಲೀಗ ಜಾನಪದ ಶ್ರೀ ಉಳಿಯಲು ಸಾಧ್ಯ. ಬೆಳೆಯಲು ಸಾಧ್ಯ. ಒಂದು ದೊಡ್ಡ ನೀರಾವರಿ ಯೋಜನೆಗೆ ನೂರಿನ್ನೂರು ಕೋಟಿ ಖರ್ಚು ಮಾಡುತ್ತೇವೆ. ಒಂದು ದೊಡ್ಡನದಿಗೆ ಅಡ್ಡಗಟ್ಟಿ ಹಾಕಿ ನೀರನ್ನು ತಡೆದು ಅದನ್ನು ನೀರಾವರಿಗೆ ಉಪಯೋಗಿಸಿಕೊಳ್ಳುತ್ತೇವೆ. ಎಲ್ಲೆಲ್ಲೂ ಹಸಿರು ಹೊಲಗದ್ದೆಗಳು ಕಾಣುವಂತೆ ಮಾಡುತ್ತೇವೆ. ಒಳ್ಳೆಯ ಕೆಲಸವೇ, ಅದೆಲ್ಲವನ್ನು ಒಂದು ಪಕ್ಷ ಈಗ ಮಾಡಲಿಲ್ಲವೆನ್ನಿ. ಇನ್ನು ಹತ್ತು ವರ್ಷದನಂತರ ಮಾಡೋಣವೆಂದು ಮುಂದಕ್ಕೆ ಹಾಕಿದೆವೆನ್ನಿ. ಅದರಿಂದ ಅಂಥ ಅನಾಹುತವೇನೂ ಆಗುವುದಿಲ್ಲ. ಹತ್ತು ವರ್ಷವಲ್ಲ ನೂರುವರ್ಷದ ನಂತರವೂ ಆ ನದಿ ಹರಿದೇ ಹರಿಯುತ್ತದೆ ಆದರೆ ಜಾನಪದ ಜಾಹ್ನವಿ ಬತ್ತಿದರೆ ಮತ್ತೆ ಹರಿಯುವುದೇ ? ಒಬ್ಬ ಪ್ರಸಿದ್ಧ ಲಾವಣಿಕಾರನೋ, ಗೀಗೀ ಹಾಡುಗಾರನೋ ಸತ್ತರೆ ಅವನ ಸಂಗಡವೇ ಅವನ ಕಲೆಯೂ ಸತ್ತಂತೆ ! ಈ ಅಪಾಯವನ್ನು ನಾವು ಅರಿತುಕೊಳ್ಳದೆ, ಜನಪದ ಸಾಹಿತ್ಯ, ಕಲೆ ಮುಂತಾದುವನ್ನು ಅಳಿಯಲು ಬಿಟ್ಟರೆ ಎಂತಹ ಮಹಾಪರಾಧ ಮಾಡಿದಂತಾಗುತ್ತದೆ. ಆಲೋಚನೆಮಾಡಿ. ಈ ದೃಷ್ಟಿಯಿಂದ ಇಂತಹ ಪುನರುತ್ಥಾನದ

---

4. ದೇಶ ವಿದೇಶದ ಜನಪದ ಕಥೆಗಳು—ಮುನ್ನುಡಿ

ಕೆಲಸಗಳು ಬಹಳ ಅವಶ್ಯಕ"ವೆಂದು ಜನತೆಯು ಹಾಗೂ ಸರ್ಕಾರದ ಕರ್ತವ್ಯಲೋಪದತ್ತ ಬೆರಳುಮಾಡಿ, ಆ ದಿಸೆಯಲ್ಲಿ ಯೋಜನೆಗಳನ್ನು ಹಾಕಿಕೊಂಡು ಕೆಲಸಮಾಡದೆ ಹೋದರೆ ಎಂತಹ ಅಪಾಯ ಕಾದಿದೆಯೆಂಬುದನ್ನು ತಿಳಿಸಿ ಕಾರ್ಯ ತತ್ಪರರಾಗುವಂತೆ ನಮ್ಮನ್ನು ಜಾಗ್ರುತಗೊಳಿಸುತ್ತಾರೆ.

ಜಾನಪದ ಸಮ್ಮೇಳನಗಳಲ್ಲಿ, ಗೋಷ್ಠಿಗಳಲ್ಲಿ, ಸಭೆ, ಸಮಾರಂಭಗಳಲ್ಲಿ, ಎಲ್ಲಿ, ಯಾವಾಗ ಮಾತನಾಡಲಿಕ್ಕೆ ಅವಕಾಶ ಸಿಕ್ಕಿದರೂ ಸಾಕು, ಜನಪದ ಸಾಹಿತ್ಯದ ಬಗ್ಗೆ ತಮಗಿರುವ ಪ್ರೇಮ ಹಾಗೂ ಜನಪದ ಕಲೆ ಕಲಾವಿದರ ಬಗೆಗೆ ತಮಗಿರುವ ಆಸ್ಥೆ, ಅನುಕಂಪೆಯನ್ನು ವ್ಯಕ್ತಪಡಿಸುವುದಲ್ಲದೆ. ಅವುಗಳ ಸಂರಕ್ಷಣೆಗೆ, ಸಂವರ್ಧನೆಯಲ್ಲಿ ಜನತೆಯು, ಪರಿಷತ್ತಿನಂಥ ಸಂಸ್ಥೆಗಳ ಹಾಗೂ ಸರ್ಕಾರದ ಕರ್ತವ್ಯವೇನು ಎಂದು ಎಷ್ಟು ಬಾರಿ ಎಚ್ಚರಿಸಿದರೂ ಅವರಿಗೆ ಸಮಾಧಾನವಿಲ್ಲ. ಅವರ ಮಾತಿಗೆ ಯಾರೂ ಕಿವಿಗೊಡದಿರುವುದನ್ನು, ಪ್ರತಿಕ್ರಿಯಿಸದಿರುವುದನ್ನು ಗಮನಿಸಿ ಬೇಸರಗೊಂಡ ಅವರು, ಸರ್ಕಾರದ ಅಲಕ್ಷ್ಯವನ್ನು ಕುರಿತು "ಜನಮನದ ಅನರ್ಘ್ಯ ಆಸ್ತಿಯಾದ ಜಾನಪದಕ್ಕೆ ಕೊಟ್ಟಿರುವ ಹಣವೆಷ್ಟು ? ಯಾರಾದರೂ ಹೇಳಬಲ್ಲರೆ ?..........ಕರ್ನಾಟಕ ಸರ್ಕಾರದ ಬಡ್ಜೆಟ್ 500 ಕೋಟಿ ರೂಪಾಯಿಗಳಷ್ಟಾಗುತ್ತದೆ. ಇದರಲ್ಲಿ ಒಂದು ಕೋಟಿಯಾದರೂ ಮುಕ್ಕೋಟಿ ಜನರ ಆತ್ಮಶ್ರೀಯ ಉದ್ಧಾರಕ್ಕೆಂದು ಬೇಡವೆ ? ಒಂದು ಕೋಟಿ ಹೋಗಲಿ, ಒಂದು ಲಕ್ಷವಾದರೂ ಸರ್ಕಾರ ಕೊಟ್ಟಿದೆಯೆ ? ಕೇಳುವವರು, ಹೇಳುವವರು ಯಾರೂ ಇಲ್ಲವೆ ಈ ನತದೃಷ್ಟ ಹಳ್ಳಿಯ ಕಲಾವಿದರನ್ನು"[5] ಎಂದು ಗುಡುಗುತ್ತಾರೆ, "ಹತ್ತು ನೀರಾವರಿ ಯೋಜನೆಗಳಿಗೆ ಸಮ ಈ ಕೆಲಸ ; ಇಪ್ಪತ್ತು ಸಾಮಾಜಿಕ ಹಾಗೂ ಆರ್ಥಿಕ ಕಾರ್ಯಕ್ರಮಗಳಲ್ಲಿ ಮಿಗಿಲು ಈ ಸಾಧನೆ. ಇದು ಇಂದು ಫಲಕೊಡಲಾರದು, ನಾಳೆ ಕೊಡುತ್ತದೆ–ಕಲ್ಪವೃಕ್ಷವಾದ ತೆಂಗಿನ ಮರದಂತೆ." ಎಂಬುದಾಗಿ ಜಾನಪದ ಸಾಹಿತ್ಯಶ್ರೀಯ ಸಂರಕ್ಷಣೆಯಿಂದ ಮುಂದಿನ ಪೀಳಿಗೆಯ ಜನತೆಗೆ ಎಂತಹ ಪ್ರಯೋಜನವಿದೆಯೆಂಬುದನ್ನು ಸಾರಿ ಹೇಳುತ್ತಾರೆ. ಜಾನಪದ ಕಲಾವಿದರ ದುಃಸ್ಥಿತಿಯನ್ನು ಕಂಡು ಅವರ ಬಾಳು ಹಸನಾಗಬೇಕು. ಅವರಿಗೆ ಜೀವನದಲ್ಲಿ ನೆಮ್ಮದಿ ಶಾಂತಿ ಲಭಿಸಬೇಕು. ಕೊನೆಯ ಪಕ್ಷ ಎರಡು ಹೊತ್ತಿನ ಊಟ ಮೈಮುಚ್ಚಲು ಬಟ್ಟೆಯಾದರೂ ಇಲ್ಲದಿದ್ದಲ್ಲಿ ಅವರಲ್ಲಿ ಅಡಗಿರುವ ಅಪೂರ್ವವಾದ ಸಾಹಿತ್ಯ, ಕಲೆ ಬಾಡಿ ಹೋದೀತು ಎಂದು ಎಚ್ಚರಿಸುತ್ತಾರೆ. ಸಂಗೀತ, ನಾಟಕ ಮತ್ತು ನೃತ್ಯ ಮೊದಲಾದ ಕಲೆಗಳಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ಸರ್ಕಾರ ಒಂದೊಂದು ಪ್ರತ್ಯೇಕ ಅಕಾಡೆಮಿಗಳನ್ನೇ ತೆರೆದಿದೆ. ಆದರೆ ಜಾನಪದ ಕಲೆಯ ಉಳಿವಿಗೆ,

---

5. ಜಾನಪದ ಜಾಹ್ನವಿಯನ್ನು ಬತ್ತಿಸಬೇಡಿ,
6. ಅದೇ ,,

ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು ? ಎಂದು ಪ್ರಶ್ನಿಸುತ್ತಾರೆ. ನಾಡಿನ ಜನಸಂಖ್ಯೆಯಲ್ಲಿ ಶೇಕಡ ೭೦ ರಷ್ಟಿರುವ ನಗರ ವಾಸಿಗಳನ್ನು ತೃಪ್ತಿಪಡಿಸುವ ಈ ಕಲೆಗಳಿಗೆ ; ಒಂದೊಂದಕ್ಕೂ ಪ್ರತ್ಯೇಕ ಅಕಾಡೆಮಿಗಳಿರುವುದಾದರೆ, ಹಳ್ಳಿಗಳಲ್ಲಿ ವಾಸಿಸುವ ಶೇಕಡ ೮೦ ರಷ್ಟು ಗ್ರಾಮೀಣ ಜನತೆಯ ಬಾಳಿಗೆ ರಸವುಣಿಸಿ, ಅವರ ಮನಸ್ಸನ್ನು ತಣಿಸುವ ಈ ಜಾನಪದ ಕಲೆ, ಸಾಹಿತ್ಯಗಳಿಗೆ ಒಂದು ಅಕಾಡೆಮಿ ಬೇಡವೆ ? ಎಂದು ಕೇಳುವ ರೋಷ್ಚು, ಗೌಡರದು. ಜಾನಪದದ ಪುನರುತ್ಥಾನವನ್ನು ಕುರಿತು ಅವರು ಒಂದು ಬೃಹತ್ ಯೋಜನೆಯನ್ನೇ ತಯಾರಿಸಿದ್ದಾರೆ. ಆ ಲೇಖನದಲ್ಲಿ ಅಡಕ ವಾಗಿರುವ ವಿಷಯಗಳೇ ನಿಜವಾಗೂ ಒಂದು ಮಹಾಪ್ರಬಂಧ (theris) ಕ್ಕೆ ವಸ್ತುವಾಗ ಬಲ್ಲುವು ಎನಿಸುತ್ತದೆ. ಕನ್ನಡ ಹಾಗೂ ಜಾನಪದ–ಒಂದು ಯೋಜನೆ ಎಂಬ ಆ ಲೇಖನದಲ್ಲಿ ನಾಡಿನ ಮೂರು ವಿಶ್ವವಿದ್ಯಾನಿಲಯಗಳಾಗಲಿ, ರಾಜ್ಯವ್ಯಾಪ್ತಿಯುಳ್ಳ ಸಾಹಿತ್ಯ ಪರಿಷತ್ತಾಗಲೀ, ಸಂಗೀತ, ಸಾಹಿತ್ಯ ಹಾಗೂ ನಾಟಕ ಅಕಾಡೆಮಿಗಳಾಗಲಿ ತಮ್ಮ ಕಾರ್ಯ ಬಾಹುಳ್ಯದಿಂದ ಜಾನಪದ ಪುನರುಜ್ಜೀವನಕ್ಕೆ ಸಾಕಷ್ಟು ಗಮನಕೊಡಲು ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸಿ, "ನಾಡಿನ ಜನತೆಯ ಆಗು ಹೋಗುಗಳ ಸಾಂಸ್ಕೃತಿಕ ಜೀವನವನ್ನು ಪುನಶ್ಚೇತಗೊಳಿಸುವ ಅಗಾಧವಾದ ಕೆಲಸ ಆಗಬೇಕಾಗಿರುವಾಗ ಪ್ರತ್ಯೇಕ ವಾದ ಒಂದು ಜಾನಪದ ಅಕಾಡೆಮಿ ಆಗಬೇಕಾದುದು ಅವಶ್ಯಕ" ಎಂಬ ಒತ್ತಾಯ ಪೂರ್ವಕವಾದ ಅಭಿಪ್ರಾಯವನ್ನು ಸಾಧಾರವಾಗಿ ಚರ್ಚಿಸಿ, ಸರ್ಕಾರದ ಮುಂದಿರಿ ಸಿದ್ದಾರೆ.

ಹೀಗೆ ಶ್ರೀ ನಾಗೇಗೌಡರು ಜಾನಪದವನ್ನು ಕುರಿತು ನಾಲ್ಕಾರು ಬಿಡಿಲೇಖನಗಳಲ್ಲಿ ಜಾನಪದದ ಬಗೆಗೆ ತಮಗಿರುವ ಒಲವು, ಜಾನಪದ ಕಲೆ ಹಾಗೂ ಕಲಾವಿದರ ಬಗ್ಗೆ ತಮಗಿರುವ ಕಳಕಳಿ ಇವುಗಳನ್ನು ಸ್ಪಷ್ಟವಾದ ಮಾತುಗಳಲ್ಲಿ ವ್ಯಕ್ತಪಡಿಸಿ ಮುಂದೆ ಈ ಬಗೆಗೆ ಜನತೆಯ ಹಾಗೂ ಸರ್ಕಾರದ ಕರ್ತವ್ಯವೇನೆಂಬುದನ್ನು ಸೂಚಿಸಿ ಜಾನಪದ ಮಹತ್ವದ ಬಗ್ಗೆ ಎಲ್ಲರ ಗಮನ ಸೆಳೆಯುವ ಪ್ರಯತ್ನ ಮಾಡುತ್ತಾರೆ. ಮೇಲೆ ಸೂಚಿಸಿರುವ ಈ ಲೇಖನಗಳೆಲ್ಲವೂ ಬೇರೆ ಬೇರೆ ಸಂದರ್ಭಗಳಲ್ಲಿ, ಬೇರೆ ಬೇರೆ ಕಾರಣ ಗಳಿಗಾಗಿ ಬರೆದವುಗಳಾದ್ದರಿಂದ ಅವುಗಳ ವಿಷಯ ನಿರೂಪಣೆಯಲ್ಲಿ ಏಕಸೂತ್ರತೆ ಯಿಲ್ಲದಿರಬಹುದು, ಹಲವು ಹೇಳಿಕೆಗಳ, ಅಭಿಪ್ರಾಯಗಳ ಪುನರುಕ್ತಿ, ಕಂಡು ಬರಬಹುದು. ಆದರೆ ವಿಷಯವನ್ನು ಪ್ರತಿಪಾದಿಸುವಲ್ಲಿ ಅವರಲ್ಲಿರುವ ಖಚಿತತೆ ಮತ್ತು ತಮ್ಮ ಅಭಿ ಪ್ರಾಯಗಳನ್ನು ಮಂಡಿಸುವಲ್ಲಿ ತೋರುವ ತಮ್ಮದೇ ಆದ ವಿಶಿಷ್ಟ ಧೋರಣೆ ಓದುಗರ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಬಲ್ಲುವು. ಈ ಲೇಖನದಲ್ಲಿ ನಾನು ಶ್ರೀ ನಾಗೇಗೌಡರ ಎಲ್ಲ ಜಾನಪದೀಯ ಲೇಖನಗಳನ್ನು ವಿಮರ್ಶಿಸಿ, ಅವುಗಳ ಬೆಲೆ ಕಟ್ಟುವ ಪ್ರಯತ್ನಕ್ಕೆ ಕೈ ಹಾಕದೆ, ಆ ಲೇಖನಗಳಲ್ಲಿ ಅವರ ಅಗಾಧವಾದ 'ಜಾನಪದ ಪ್ರೇಮ' ಹೇಗೆ ಅಭಿವ್ಯಕ್ತಿಗೊಂಡಿದೆಯೆಂಬುದನ್ನು ಗುರುತಿಸುವ ಪ್ರಯತ್ನ

ಮಾಡಿದ್ದೇನೆ. ಒಟ್ಟಿನಲ್ಲಿ ಗ್ರಾಮೀಣ ಪರಿಸರದಲ್ಲಿ ಹುಟ್ಟಿ, ಸುಮಾರು ಮುವ್ವತ್ತು ವರ್ಷಗಳ ಕಾಲ ಆ ಜೀವನದ ಗಾಢ ಸಂಪರ್ಕವನ್ನು ಪಡೆದ ಶ್ರೀ ಗೌಡರು ನಿವೃತ್ತಿಯ ನಂತರದ ಪ್ರಶಾಂತ ಜೀವನವನ್ನು ಆರಾಮವಾಗಿ ಕಳೆಯಲಿಚ್ಛಿಸದೆ, ಜಾನಪದದ ಜೀವಾಳವಾದ ಸಾಹಿತ್ಯ, ಕಲೆಗಳ ಬಗೆಗೆ ಹುಚ್ಚು ಹಚ್ಚಿಕೊಂಡು, ಅವುಗಳ ಪುನರುಜ್ಜೀವನದ ಕನಸು ಕಾಣುತ್ತಾ, ಅಹರ್ನಿಶಿ ದುಡಿಯುತ್ತಿರುವುದಕ್ಕೆ ಕಾರಣ ಅವರಲ್ಲಿ ರಕ್ತಗತವಾಗಿ ಬಂದಿರುವ ಜಾನಪದ ಸಂಸ್ಕಾರವೆಂದರೆ ಆಶ್ಚರ್ಯವಲ್ಲ.

ಜಾನಪದ ಸಾಹಿತ್ಯ, ಕಲೆಗಳ ಸಂರಕ್ಷಣೆ, ಕಲಾವಿದರಿಗೆ ಪ್ರೋತ್ಸಾಹವನ್ನು ಕುರಿತು ಜನತೆಯನ್ನು, ಸರ್ಕಾರವನ್ನು ಎಚ್ಚರಿಸುವ ಮಾತುಗಳನ್ನು ಆಡಿದವರಲ್ಲಿ ಶ್ರೀ ನಾಗೇಗೌಡರೇನು ಮೊದಲಿಗರಲ್ಲ. 1933 ಕ್ಕಿಂತಲೂ ಮೊದಲೇ ಕನ್ನಡದಲ್ಲಿ "ಪಾಮರ ಸಾಹಿತ್ಯವನ್ನು ನಿರ್ಲಕ್ಷಿಸಬೇಡಿ" ಎಂಬ ಲೇಖನವೊಂದು ಪ್ರಕಟವಾಗಿತ್ತೆಂದು ಕೇಳಿ ತಿಳಿದಿದ್ದೇನೆ. ಅಂದಿನಿಂದ ಇಂದಿನವರೆಗೆ ಹಲವಾರು ಸಾಹಿತಿಗಳು ಇಂಥ ಮಾತುಗಳನ್ನು, ಎಚ್ಚರಿಕೆಗಳನ್ನು ಸಲಹೆ, ಸೂಚನೆಗಳನ್ನು ಕೊಡುತ್ತಲೇ ಬಂದಿದ್ದಾರೆ. ಆದರೆ ನಾಗೇಗೌಡರಂತೆ ಆ ಹುಚ್ಚನ್ನು ಹಚ್ಚಿಕೊಂಡು, ಅದಕ್ಕಾಗಿ ಸಭೆ, ಸಮ್ಮೇಳನಗಳನ್ನು ನಡೆಸಿ, ಸರ್ಕಾರದ ನೇತಾರರನ್ನು, ಮಂತ್ರಿ ಮಹೋದಯರನ್ನು ಸಭೆಗೆ ಬರಮಾಡಿಕೊಂಡು ಅವರ ಕಿವಿ ತೂತು ಬೀಳುವಂತೆ, ತಮ್ಮ ಗಂಟಲು ನೋವಾಗುವಂತೆ ಕೂಗಿದವರು ಬಹಳ ವಿರಳ. ದಿಕ್ಕೆಟ್ಟು, ನಿರ್ವಿಣ್ಣರಾಗಿ, ನಿಸ್ತೇಜರಾಗಿರುವ ಗ್ರಾಮೀಣ ಕಲಾವಿದರನ್ನು ಸಭೆ, ಸಮಾರಂಭಗಳಿಗೆ ಕರೆಸಿ ಅವರನ್ನು ಹುರಿದುಂಬಿಸಿ, ತಮಗೂ, ತಮ್ಮ ಕಲೆಗೂ ಈ ಆಧುನಿಕ ವೈಜ್ಞಾನಿಕ ಯುಗದಲ್ಲೂ ಬೆಲೆಯಿದೆ, ಗೌರವವಿದೆಯೆಂಬ ನಂಬಿಗೆಯನ್ನುಂಟುಮಾಡಿ ಅವರ ಮನಸ್ಸನ್ನು ಗೆದ್ದು ತಮ್ಮ ಕಲಾಸಾಧನೆಯಲ್ಲಿ ತೊಡಗುವಂತೆ ಧೈರ್ಯ ಸ್ಥೈರ್ಯಗಳನ್ನು ತುಂಬಿದವರಲ್ಲಿ ನಾಗೇಗೌಡರು ಒಬ್ಬರು. ಈ ದಿಸೆಯಲ್ಲಿ ಎಷ್ಟು ಗಂಭೀರ (Seiour) ವಾಗಿ ಅವರು ಯೋಚಿಸಿದ್ದಾರೆಂದರೆ ನಾಡಿನಾದ್ಯಂತ ಪ್ರತಿಯೊಬ್ಬ ಗ್ರಾಮೀಣ ಕಲಾವಿದನನ್ನೂ ಗುರುತಿಸಿ ಸರ್ಕಾರದಿಂದ ಅವರಿಗೆ ಮಾಸಾಸನ ಕೊಡಿಸಬೇಕೆಂಬುದು ಅವರ ಮಹತ್ವಾಕಾಂಕ್ಷೆ. ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿ 50–60 ವರ್ಷಗಳಾಗಿದ್ದರೂ ಜಾನಪದದ ಕಡೆಗೆ ಕಣ್ಣೆತ್ತಿಯೂ ನೋಡಿರಲಿಲ್ಲ. ಈ ಬಗ್ಗೆ ಪರಿಷತ್ತಿನ ಕಣ್ತೆರೆಸಿ, ಕಳೆದ ಕೆಲವು ವರ್ಷಗಳಲ್ಲಿ ಜಾನಪದ ಕ್ಷೇತ್ರದಲ್ಲಿ ಅತ್ಯುತ್ತಮವಾದ, ಬಹುಕಾಲ ನಿಲ್ಲುವಂಥ ಕೆಲಸ ಮಾಡಿಸಿದ ಕೀರ್ತಿ ಬಹುಪಾಲು ಶ್ರೀ ಗೌಡರಿಗೆ ಸಲ್ಲಬೇಕೆಂಬುದರಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ. ಇಷ್ಟಾದರೂ ಇದೆಲ್ಲದರಿಂದ ಆಗಿರುವ ಪ್ರಯೋಜನವೇನು ? ಈ ಎಲ್ಲ ಪ್ರಯತ್ನಗಳಿಗೆ, ಶ್ರಮಕ್ಕೆ ದೊರೆತ ಫಲವೇನು ? ಎಂದರೆ ಅದಕ್ಕೆ ನಮ್ಮಲ್ಲಿ ಉತ್ತರವಿಲ್ಲ. ಈ ಎಲ್ಲರ ಕೂಗು ಅರಣ್ಯರೋಧನವಾಗಿದೆ. ಇನ್ನಾದರೂ ಸರ್ಕಾರ ಈ ಮಾತುಗಳಿಗೆ ಕಿವಿಗೊಡಬೇಕು, ಕಣ್ತೆರೆಯಬೇಕು. ಈ ಜಾನಪದ ಪ್ರೇಮಿಗಳ ಎಚ್ಚರಿಕೆಯ ಮಾತನ್ನು ಎಚ್ಚರದಿಂದ

ಆಲಿಸಬೇಕು. ಅವರೆಲ್ಲರ ಕಳಕಳಿಯ ಬಿನ್ನಹದಲ್ಲಿ ಅಡಗಿರುವ ದಾರುಣವಾದ ವ್ಯಥೆ, ನೋವು ಎಂಥವೆಂಬುದನ್ನು ಅರ್ಥಮಾಡಿಕೊಂಡು ಆ ದಿಕ್ಕಿನಲ್ಲಿ ಕಾರ್ಯ ತತ್ಪರರಾಗಬೇಕು. ಇಲ್ಲದಿದ್ದಲ್ಲಿ ಅದರಿಂದಾಗುವ ಅನಾಹುತ ವೆಂಥದೆಂಬುದನ್ನು ನಾಗೇಗೌಡರ ಮಾತಿನಲ್ಲಿಯೇ ತಿಳಿಸುತ್ತಾ ಈ ಲೇಖನವನ್ನು ಮುಗಿಸುತ್ತೇನೆ.[7]

"ಜನತಾ ಪ್ರಭುತ್ವ, ಜನತೆಯ ಪ್ರತೀಕವಾದ ಅವರ ಸಾಹಿತ್ಯವನ್ನು ಉಳಿಸುವುದು ಮಹಾ ಪವಿತ್ರ ಕರ್ತವ್ಯ. ಹಾಗೆ ಮಾಡದಿದ್ದರೆ ಅದರಿಂದಾಗುವ ಸಾಂಸ್ಕೃತಿಕ ಅನಾಹುತ ಅಪಾರ."

---

7. ದೇಶ ವಿದೇಶದ ಜನಪದ ಕಥೆಗಳು—ಮುನ್ನುಡಿ.

೨೪ | ಪದವವೆ ನಮ್ಮ ಎದೆಯಲ್ಲಿ–ಹಾಡ್ಗತೆಗಳು

ಡಿ. ಕೆ. ರಾಜೇಂದ್ರ

೧

'ಪದವವೆ ನಮ್ಮ ಎದೆಯಲ್ಲಿ'ಯ ಆರನೆಯ ದಳ—'ಹಾಡ್ಗತೆಗಳು.' ಜಾನಪದ ಕ್ಷೇತ್ರದಲ್ಲಿ ಕೆಲವು ಉತ್ತಮ ಸಂಕಲನಗಳನ್ನು ಹೊರತಂದಿರುವ ಎಚ್. ಎಲ್. ನಾಗೇಗೌಡರು 1976ರಲ್ಲಿ ಸಂಪಾದಿಸಿ ಪ್ರಕಟಿಸಿದ ಈ ಕೃತಿ ಒಂದು ಉತ್ತಮ ಸಂಕಲನ. ಜನಪದ ಗೀತೆಗಳ ಹಲವು ಪ್ರಮುಖ ಪ್ರಕಾರಗಳು ಇದರಲ್ಲಿ ಪರಿಚಯಗೊಂಡಿವೆ—ಸೋಬಾನೆ ಪದಗಳು, ಒಸಗೆ ಪದಗಳು, ಲಾಲಿ ಪದಗಳು, ಬಾಂಧವ್ಯದ ಹಾಡುಗಳು, ದೇವಿ ಮತ್ತು ದೇವರು, ಹೊಲೆಯರು ಹೋಗುವ ಪದಗಳು, ಕೋಲಾಟದ ಪದಗಳು, ಹಚ್ಚೆ ಹೊಯ್ಯುವ ಪದಗಳು, ಮಕ್ಕಳ ಪದಗಳು—ಮುಂತಾದುವುಗಳಂತೆಯೇ 'ಹಾಡ್ಗತೆಗಳೂ' ಇದರಲ್ಲಿಯ ಒಂದು ದಳ. ಇವೆಲ್ಲವೂ ಕತೆಗಳನ್ನು ಹೇಳುವ ಹಾಡುಗಳು. ಇವುಗಳಲ್ಲಿ ಕೆಲವು ಹೆಂಗಸರು ಹೇಳುವ ಹಾಡುಗಳಾದರೆ, ಉಳಿದುವು ಗಂಡಸರು ಹೇಳುವ ಹಾಡುಗಳು. ಗಂಡಸರಲ್ಲಿ ವೃತ್ತಿಗಾಯಕರಾಗಿರಬಹುದು ಇಲ್ಲವೇ ಸಾಮಾನ್ಯ ಗಾಯಕರು ಆಗಿರಬಹುದು. ಇವರು ವಾದ್ಯದ ಹಿನ್ನೆಲೆಯಲ್ಲಿ ಹಾಡುವ ಹಾಡ್ಗತೆಗಳು ಕೆಲವಾದರೆ, ಮತ್ತೆ ಕೆಲವು ಯಾವ ವಾದ್ಯದ ಹಿನ್ನೆಲೆಯೂ ಇಲ್ಲದೆ ರಾಗಿ ಬೀಸುವಾಗಲೋ, ಕಳೆ ಕೀಳುವಾಗಲೋ ಹಾಡುವ ಹಾಡ್ಗತೆಗಳು ಮತ್ತೆ ಕೆಲವು.

'ಹಾಡ್ಗತೆಗಳು' ಭಾಗದಲ್ಲಿ ಒಟ್ಟು ಹದಿನಾಲ್ಕು ಹಾಡ್ಗತೆಗಳಿವೆ : ಪಾಪಿಗೇಡಿ ಅಣ್ಣಯ್ಯ, ಬಂಜೆ ಹೊನ್ನಮ್ಮ, ಕಾಟಿ ವಕ್ಕಲು ಕೊಣಮೇಗೌಡ ಕಲಿಯುಗವೊಳಗೆ ಕರ್ಮ ವೆಚ್ಚಿತು, ಬಾಳಿಗಂಜಿ ಬಂಜೆ ಹೊನ್ನಮ್ಮ, ಸತ್ಯವಂತ ನಾಗಾಮಣಿ, ಗೌರಮ್ಮನ ಮೇಲೆ, ಕತ್ತಲೆರಾಯ. ಕುಸುಮಾಲೆ, ಕೆಂಗಪ್ಪನ ಹಟ್ಟಿ ತಿಮ್ಮಮ್ಮ, ಎಳೆಯಾಸು ಕೆಂಗಪ್ಪ, ಎಳೆಗ ನಾತಗರ ಸಾಕಿ, ತುಂಬಿದ ಬಳ್ಳಾರಿಪಕಿಗೆ, ಮಕ್ಕಳಿಲ್ಲದ ಬಂಜೆ ಹೊಕ್ಕಳು ನಂಜನಗೂಡ, ಎತ್ತಿದೆ ನಾಗವ್ವನಾ ಸ್ಮರಣೆಯಾ—ಈ ಕಥನ ಗೀತೆಗಳಲ್ಲಿ ಕೆಲವು ಈಗಾಗಲೇ ಹೆಚ್ಚು ಜನಪ್ರಿಯವಾಗಿದ್ದು, ಬೇರೆ ಬೇರೆ ಸಂಕಲನಗಳಲ್ಲಿ ಬೆಳಕು ಕಂಡಿದೆಯಾದರೂ ಒಂದೆರಡು ಸಣ್ಣಪುಟ್ಟ ಪಾಠಾಂತರಗಳೊಡನೆ ಇಲ್ಲಿ ಕಂಡು ಬರುವುದು ಗಮನಾರ್ಹ.

ಇಲ್ಲಿಯ ಮೊದಲ ಹಾಡ್ಗತೆಯಾದ—'ಪಾಪಿಗೇಡಿ ಅಣ್ಣಯ್ಯ' ಅದೇ ಹೆಸರಿನಲ್ಲಿಯೇ ಡಾ॥ ಜೀ. ಶಂ. ಪರಮಶಿವಯ್ಯ ಅವರು ಸಂಪಾದಿಸಿರುವ 'ದೊಂಬಿದಾಸರ ಲಾವಣಿಗಳು' ಸಂಕಲನದಲ್ಲಿಯೂ ದೊರೆಯುತ್ತದೆ. 'ಘಾತುಕ ಅಣ್ಣಯ್ಯ' ಎಂಬ

ಮತ್ತೊಂದು ಪಾಠಾಂತರವನ್ನು ಅವರು ಕೊಟ್ಟಿದ್ದಾರೆ. ಸಂ. ನಾರಾಯಣ ಗೌಡರು ಸಂಪಾದಿಸಿರುವ 'ಜೌಡಿಕೆ ಕಾವ್ಯಗಳು ಸಂಕಲನದಲ್ಲಿ 'ಅಣ್ಣ-ತಂಗಿ' ಎಂಬ ಶೀರ್ಷಿಕೆ ಯಲ್ಲಿಯೂ ಈ ಕಥನಗೀತೆ ಕಂಡು ಬರುತ್ತದೆ, ಕರ್ನಾಟಕದಾದ್ಯಂತವೂ ಕಂಡುಬರುವ ಈ ಕಥನಗೀತೆ ಸಾಕಷ್ಟು ಬದಲಾವಣೆಗಳೊಂದಿಗೆ ಕಾಣಿಸಿಕೊಳ್ಳುತ್ತದೆ. ಹಾಗೆಯೇ ಬೇರೆ ಬೇರೆ ಸಂಪ್ರದಾಯಕ್ಕೆ ಸೇರಿದ ಗಾಯಕರೂ ಇದನ್ನು ಹಾಡುತ್ತಾರೆ ಪ್ರಸ್ತುತ ಲೇಖನದಲ್ಲಿ ಮೂವರು ಸಂಗ್ರಹಕಾರರೂ ಎರಡು ಸಂಪ್ರದಾಯದವರಿಂದ ಸಂಗ್ರಹಿಸಿರು ವುದನ್ನು ಪರಿಶೀಲಿಸಿದೆ.

* * * * * *

ಡಾ. ಜೀ. ಶಂ. ಪರಮಶಿವಯ್ಯನವರು ಹಾಗೂ ಎಚ್. ಎಲ್. ನಾಗೇ ಗೌಡರು, ದೊಂಬಿದಾಸರಿಂದ ಈ ಹಾಡ್ಗತೆಯನ್ನು ಸಂಗ್ರಹಿಸಿದ್ದಾರೆ. ಒಬ್ಬರು ತುರುವೇ ಕೆರೆ ಭಾಗದಲ್ಲಿ ಸಂಗ್ರಹಿಸಿದ್ದರೆ ಮತ್ತೊಬ್ಬರು ಚನ್ನರಾಯ ಪಟ್ಟಣ ಭಾಗದಲ್ಲಿ ಸಂಗ್ರ ಹಿಸಿದ್ದಾರೆ. ಭೌಗೋಳಿಕವಾಗಿ ಅಂತಹ ಅಂತರ ಕಂಡು ಬರದಿದ್ದರೂ ಕಥೆಯಲ್ಲಿ ಅಂತರ ಬಹಳವಿದೆ. ಎಚ್. ಎಲ್, ನಾಗೇಗೌಡರ 'ಹಾಡ್ಗತೆಗಳು' ಭಾಗದಲ್ಲಿ ಬರುವ ಕಥೆಯನ್ನು ಹೀಗೆ ಸಂಗ್ರಹಿಸಬಹುದು :

ವರ್ಷಕ್ಕೊಂದು ಸಾರಿ ಬರುವ ದೀಪಾವಳಿಗೆ,ತನ್ನನ್ನು ಕರೆದುಕೊಂಡು ಹೋಗಲು ಅಣ್ಣ ಬರುವನೆಂಬ ಕನಸನ್ನು ಕಾಣುತ್ತಾಳೆ—ಗಂಡನ ಮನೆಯಲ್ಲಿರುವ ಹೆಣ್ಣುಮಗಳು. ಅದಕ್ಕಾಗಿ ಸಂತೋಷಿಸಿ—

ಅಣ್ಣ ರಾಜನು ಬರುತಾನೆ
ಈಡುಗಾಯ ಒಡುದೇನೊ
ಜೋಡುಗಾಯ ಒಡುದೇನೊ
ಊರು ಮುಂದಲ ದೇವರಿಗೆ
ಹರಕೆನಾದರು ಮಾಡುತಾಳೆ

ಅಣ್ಣನ ಬರುವನ್ನು ಇಷ್ಟೊಂದು ಸಂಭ್ರಮದಿಂದ ನೀರೀಕ್ಷಿಸುತ್ತಿರುವಂತೆಯೇ ಅಣ್ಣ ಬರುತ್ತಾನೆ. ಅವಳ ಸಂತೋಷಕ್ಕೆ ಎಣೆಯಿಲ್ಲದಾಗುತ್ತದೆ. ಅಪರೂಪಕ್ಕೆ ಬಂದ ಅಣ್ಣನಿಗಾಗಿ —

ಹಾಲಿನಲ್ಲಿ ಅಕ್ಕಿ ತೊಳೆದು
ಅಣ್ಣನಿಗಡಿಗೆ ಮಾಡ್ಯವೈ

ಮಾರನೆಯ ದಿನ ಅತ್ತೆ, ಮಾವ, ಗಂಡನ ಅಪ್ಪಣೆಯನ್ನು ಪಡೆದು ಅಣ್ಣನೊಂದಿಗೆ ತೌರಿಗೆ ಹೊರಡುತ್ತಾಳೆ. ಹೋಗುತ್ತ ಹೋಗುತ್ತ ಅಣ್ಣ, ಊರುದಾರಿಯನ್ನು ಬಿಟ್ಟು ಕಾಡುದಾರಿಯನ್ನು ಹಿಡಿದಿದ್ದಾನೆ; ತಂಗಿ ತೊಟ್ಟಿದ್ದ ಒಡವೆ, ವಸ್ತ್ರ, ಅಣ್ಣನನ್ನು ರಾಕ್ಷಸನನ್ನಾಗಿ ಮಾಡುತ್ತವೆ. ಸ್ವಾರ್ಥದ ಮುದ್ದೆಯನ್ನಾಗಿಸಿವೆ—

ತಂಗಿ ತೊಟ್ಟ ಆಭರಣ
ನನ್ನ ಹೆಂಡ್ತೀಗಾದರೆ ಇಲ್ಲವಲ್ಲೊ
ಕಾಡಿಗೆ ಕರದುಕೊಂಡು ಹೋಗಬೇಕು
ತಂಗಿ ತಲೆಯ ಹುಯ್ಯಾಬೇಕು
ಬೆಟ್ಟದ ಪುರದ ಕಾಡಿನಲ್ಲಿ
ಮಾನಭಂಗ ಮಾಡಬೇಕು.

ಎಂದು ಮನಸದಲ್ಲಿಯೇ ಆಲೋಚಿಸಿದ್ದಾನೆ. ಅದರಂತೆ ಕಾಡಿನ ಮಧ್ಯೆ ಕರೆತಂದಿದ್ದಾನೆ.

ನೀ ತೊಟ್ಟಿರೋ ಸೀರೆ ಒಡವೆ
ಬಿಚ್ಚು ಮಡಗೆ ಹೊಲೆರಂಡೆ

ಎಂದು ಕೆಟ್ಟ ಮಾತುಗಳಿಂದ ಮಾತನಾಡಿಸಿದ್ದಾನೆ. ಅವಳು ಎಷ್ಟು ಅಂಗಲಾಚಿ ಬೇಡಿದರೂ ಕೇಳುವಂತಿಲ್ಲ. 'ಎಂಟು ತಿಂಗಳ ಬಿಮ್ಮನಿಸೆ ಮಾನಭಂಗ ಮಾಡಬೇಡ' ಎಂದು ಕಾಲನ್ನು ಹಿಡಿದು ಬೇಡಿದರೂ ಅವನು ಕೇಳುವಂತಿಲ್ಲ ಸೀರೆಯ ಕೊಡದಿದ್ರೆ ಎಳೆಗೊಂದು ಕಂಡ ಮಾಡೆನು' ಎಂದು ಕ್ರೂರವಾಗಿ ನುಡಿಯುತ್ತಾನೆ. ಆಗ ಅವನೇ ಮುಂದಾಗಿ—

ಕಣ್ಣಿಗೆ ಬಟ್ಟೆ ಬಿಗಿದಾನೆ
ಸೀರೆ ಒಡವೆ ಬಿಚ್ಯಾನೆ
ಪಾಪಿಗೇಡಿ ಅಣ್ಣಯ್ಯ
ಕಾರೆ ಮುಳ್ಳು ತತ್ತಾನೆ
ಕಣ್ಣಿಗಾದರೂ ಹೊಡಿತಾನೆ
ಈಚಲು ಮುಳ್ಳು ತತ್ತಾನೆ
ಬಾರಿ ಹಿಂಸೆ ಮಾಡುತ್ತಾನೆ

ಆಗ ತಾಳಲಾರದೆ ಅವಳ ಗರ್ಭದಲ್ಲಿಯ ಪಿಂಡವೇ ಮಾವನನ್ನು ಕುರಿತು—

ಬೇಡ ಬೇಡ ಮಾವಯ್ಯ
ಆಸೆಯಿಂದ ಕರುತಂದ
ತಂಗಿಗೆ ಮೋಸ ಮಾಡುಬೇಡ
ಅತ್ಯಮ್ಮ ಸತ್ರರೆ
ಇನ್ನೊಬ್ಬಳ ತರಬಲ್ಲೆ
ಒಡುಟ್ಟಿದ ತಂಗಿ ಕೊಂದರೆ
ಇನ್ನೊಂದು ಸಾರಿ ಸಿಕ್ಕುವಳೆ

ಎಂದು ಬುದ್ಧಿ ಹೇಳುತ್ತದೆ. ಆದರೆ, ಈತ ಯಾವುದಕ್ಕೂ ಜಗ್ಗುವವನಲ್ಲ. ಅವಳು ತೌರಿಗೆ ಬಂದರೆ ಎಲ್ಲವನ್ನೂ ಹೇಳುತ್ತಾಳೆಂದು, ಅವಳನ್ನು ಕೊಲ್ಲಲು ಮುಂದಾಗುತ್ತಾನೆ.

ತನ್ನ ಕೈಲಿದ್ದ ಕತ್ತಿ ಮಾಯಕಾರ ಶಿವನಿಂದ ಕಣ್ಮರೆಯಾಗಲು, ಬಳಿಯಿದ್ದ ಕಲ್ಲನ್ನು ತಲೆಯ ಮೇಲೆ ಹಾಕಲು ಕೈಗೆತ್ತಿಕೊಳ್ಳಲು ಹೋಗಿದ್ದಾನೆ. ಆಗ ಕಲ್ಲಿನಡಿ ಮಲಗಿದ್ದ ಸರ್ಪ ಅವನ ಕೈಕಚ್ಚಿದೆ. ತನ್ನ ಪ್ರಾಣ ಉಳಿಸುವಂತೆ ತಂಗಿಯನ್ನು ಬೇಡಿದ್ದಾನೆ. 'ಕೈ ಕಾಲು ಕಟ್ಟಿದೀಯ, ಹ್ಯಾಗೆ ಬರಲೋ ಅಣ್ಣಯ್ಯ' ಎಂದು ತನ್ನ ಅಸಹಾಯ ಕತೆಯನ್ನು ತೋರಿದ್ದಾಳೆ. ಅಣ್ಣನ ಸ್ಥಿತಿಯನ್ನು ಕಂಡು ದುಃಖಿಸಿದ್ದಾಳೆ. ಈಕೆಯ ಸತ್ಯವನ್ನು ಪರೀಕ್ಷಿಸಲು ಶಿವನು ಬರುತ್ತಾನೆ. ದುಃಖಕ್ಕೆ ಕಾರಣವನ್ನು ಕೇಳುತ್ತಾನೆ. ತಂಗಿ ಅಣ್ಣನನ್ನು ಬಿಟ್ಟು ಕೊಡುವುದಿಲ್ಲ. ಅಣ್ಣನ ಸಾವಿಗೆ ನಿಜವಾದ ಕಾರಣವನ್ನು ಹೇಳದೆ—

ಕಾಡಿನಲಿ ಬರುವಾಗ
ಏಳು ಜನ ಕಳ್ಳರು
ಸೀರೆ ಒಡವೆ ಕದ್ದರು
ಜಲ್ಮ ಖಾಲಿ ಮಾಡಿದರು
ಇಷ್ಟು ಕೊಲೆಯ ಕೊಟ್ಟರು

ಎಂದು ಹೇಳುತ್ತಾಳೆ. ಇವಳು ಅಣ್ಣನ ಆಸೆಯನ್ನು ಬಿಡದ ಸತ್ಯವಂತ ಎಂದು ತಿಳಿದು, ಅವಳ ಕೈಕಾಲುಗಳನ್ನು ಬಿಚ್ಚಿ ಸೀರೆ ಒಡವೆಗಳನ್ನು ಕೊಡುತ್ತಾನೆ. 'ಅವನು ಮಾಡಿದ ಕರ್ಮ ಅನುಭವಿಸಲಿ ನನ್ನ ಜೊತೆ ಬಾ ತೌರಿಗೆ ಬಿಡುತ್ತೇನೆ' ಎಂದು ಕರೆದರೂ ಆಕೆ ಒಪ್ಪುವುದಿಲ್ಲ. ಅಣ್ಣನನ್ನು ಬದುಕಿಸಿಕೊಳ್ಳುತ್ತಾಳೆ. ಬದುಕಿಕೊಂಡ ಅಣ್ಣ ತಂಗಿಯ ಕಾಲನ್ನೂ ಹಿಡಿದು ಕ್ಷಮೆ ಯಾಚಿಸುತ್ತಾನೆ. ತಾಯಿ-ತಂದೆ, ಅತ್ತೆ–ಮಾವರಿಗೆ ಹೇಳ ಬೇಡವೆಂದು ಭಾಷೆ ಪಡೆಯುತ್ತಾನೆ. ಅದರಂತೆ ಅವಳು ನಡೆಯುತ್ತಾಳೆ. ತೌರಿಗೆ ಬಂದ ಮಗಳು ಬಳಲಿರುವುದನ್ನು, ಸೀರೆ ಮಾಸಿರುವುದನ್ನು ಕಂಡು ತಾಯಿ ಕೇಳಿದಾಗ, ಬೇರೆ ಕಾರಣವನ್ನು ಹೇಳುತ್ತಾಳೆ. ತನ್ನ ಒಡವೆ ವಸ್ತ್ರವನ್ನೆಲ್ಲಾ ಅತ್ತಿಗೆಗೆ ಕೊಡುತ್ತಾಳೆ. ಬೇಡವೆಂದರೂ, ಒಪ್ಪಿಸುತ್ತಾಳೆ. ತಂದೆ–ತಾಯಿಯರನ್ನು ಕರೆದುಕೊಂಡು ಗಂಡನ ಮನೆಗೆ ಹಿಂತಿರುಗುತ್ತಾಳೆ. ಸೀರೆ ಒಡವೆಗಳಿಲ್ಲದಿದ್ದನ್ನು ಕಂಡು, ಅತ್ತೆ–ಮಾವ ಪ್ರಶ್ನಿಸುತ್ತಾರೆ, ದಾರಿಯಲ್ಲಿ ಕಳ್ಳರು ಕಿತ್ತುಕೊಂಡರೆಂದು ಸುಳ್ಳು ಹೇಳುತ್ತಾಳೆ. ಸೊಸೆ ಸುಖವಾಗಿ ಹಿಂತಿರುಗಿದ್ದಕ್ಕೆ ಸಂತೋಷಿಸಿ, ಅದನ್ನು ಮರೆಯುತ್ತಾರೆ.

ಕೈಲಾಸದ ಶಿವ ಈಕೆಯ ಸತ್ಯಕ್ಕೆ ಮೆಚ್ಚಿ, ನರಲೋಕದಲ್ಲಿ ಇಂಥವಳು ಇರಬಾರದೆಂದು ತೀರ್ಮಾನಿಸಿ, ಅವಳನ್ನು ದೇವಲೋಕಕ್ಕೆ ಕರೆದೊಯ್ಯುತ್ತಾನೆ. 'ಹೂವಿನಿಂದ ನಾರು ಸ್ವರ್ಗ ಸೇರುವಂತೆ' ಅವಳ ಪತಿ ಹಾಗೂ ಅತ್ತೆ–ಮಾವಂದಿರೂ ಜೊತೆಯಲ್ಲಿ ಕೈಲಾಸಕ್ಕೆ ಹೋಗುತ್ತಾರೆ.

* * * * * *

ಡಾ. ಜೀ. ಶಂ. ಪರಮಶಿವಯ್ಯನವರ 'ದೊಂಬಿದಾಸರ' ಲಾವಣಿಗಳು'

ಸಂಕಲನದಲ್ಲಿ ಸಂಗ್ರಹಿಸಿ ಕೊಟ್ಟಿರುವ, ಇದರ ಎರಡು ಪಾಠಾಂತರಗಳೂ ಇದರಿಂದ ಸಂಪೂರ್ಣವಾಗಿ ಅಲ್ಲಲ್ಲಿ ಬೇರೆಯಾಗಿರುವುದು ಗಮನಾರ್ಹ.

'ಘಾತುಕ ಅಣ್ಣಯ್ಯ' ಪಾಠಾಂತರದಲ್ಲಿ ಅಣ್ಣ, ತಂಗಿಯ ಮನೆಗೆ ಬಂದು ತಂಗಿಯನ್ನು ಕರೆದುಕೊಂಡು ಹೊರಡುವವರೆಗಿನ ಕಥೆ ಒಂದೇ ರೀತಿ ಇದೆ. ತಂಗಿ' ಅಣ್ಣನ ಬರುವಿಗಾಗಿ ಕಾಯುವುದು, ದೇವರಲ್ಲಿ ಹರಕೆ ಹೊರುವುದು ಈ ಎಲ್ಲ ಪ್ರಸಂಗವೂ ಉಂಟು. ಆದರೆ, ಪ್ರಯಾಣ ಹೊರಟು ಅಣ್ಣ ಊರುದಾರಿಯನ್ನು ಬಿಟ್ಟು ಕಾಡುದಾರಿಯನ್ನು ಹಿಡಿಯುವ, ಅವಳಿಂದ ಒಡವೆಗಳನ್ನು ಪಡೆಯುವ ಪ್ರಸಂಗಗಳು ಬೇರೆಯಾಗಿಯೇ ಚಿತ್ರಿತವಾಗಿವೆ.

ದಾರಿಬಿಟ್ಟು ಕಾಡು ಮಾರ್ಗವ
ಹಿಡಿದನು ಅವರಣ್ಣ
ಯಾಕೋ ಅಣ್ಣ ದಾರಿಯಬಿಟ್ಟು
ಕಾಡಿಗೆ ಕರೆತಂದೆ
ಏನು ಮಾಡಲಿ ತಂಗಿ ನಮಗೆ
ದಾರಿಯು ತಪ್ಪಿತಲ್ಲ
ಮುಂದೆ ದಾರಿಯು ತಪ್ಪಿತಲ್ಲ
ಕಾಡಿನೊಳಗೆ ಕಳ್ಳರ ಕಾಟ
ಬಹಳ ಉಂಟಮ್ಮ
ನಮಗೆ ಬಹಳ ಉಂಟಮ್ಮ
ವಡವೆ ವಸ್ತ್ರವ ಗಂಟು ಕಟ್ಟಿ
ತಾ ನನ್ನ ಕೈಗೆ
ತಂಗಿ ತಾ ನನ್ನ ಕೈಗೆ

ಎಂದು ಹೇಳಿ ಉಪಾಯವಾಗಿ ಬಿಚ್ಚಿಸಿ ಇಟ್ಟುಕೊಳ್ಳುತ್ತಾನೆ. ಕೆಟ್ಟ ಮಾತುಗಳನ್ನು ಆಡುವುದಾಗಲೀ, ಮಾನಭಂಗ ಮಾಡುವ ಪ್ರಸಂಗವಾಗಲಿ ಇಲ್ಲಿ ಬರುವುದಿಲ್ಲ. ಆದರೆ, ಅವಳನ್ನು ಕೊಲ್ಲಲು ಮುಂದಾಗುವುದು, ತಾನೇ ಹಾವು ಕಚ್ಚಿ ಸಾಯುವುದು, ಮತ್ತೆ ಶಿವನ ಕರುಣೆಯಿಂದ ಅಣ್ಣನನ್ನು ಪಡೆಯುವುದು ಇದೆಲ್ಲ ಒಂದೇ ರೀತಿ ಇದೆ. ತಂದೆ ತಾಯಿಗಳಿಗೆ, ಅತ್ತೆ-ಮಾವಂದಿರಿಗೆ ಹೇಳಬೇಡವೆಂದು ಭಾಷೆಯನ್ನು ತೆಗೆದು ಕೊಳ್ಳುವ, ಅತ್ತಿಗೆಗೆ ಒಡವೆ ವಸ್ತ್ರಗಳನ್ನು ಬಿಚ್ಚಿಕೊಡುವ, ಸಂದರ್ಭಗಳು ಇಲ್ಲಿ ಬರುವುದಿಲ್ಲ. ಆದಕ್ಕೆ ಬದಲಾಗಿ—

ತಂದೆ ತಾಯಿ ಮುಂದೆ ನಿಂತು
ಒಂದೊಂದ ಹೇಳಿದಳು

ಬರುವ ವರ್ಷಕ್ಕೆ ಬರುವುದಿಲ್ಲ
ಕಳುಹ ಬೇಡಿರಿ
ಕರೆಯಲು ಅಣ್ಣನ ಕಳುಹಬೇಡಿರಿ
ಅಣ್ಣನ ಮಾಡಿದ ಗಾತುಕತನವ
ಎಷ್ಟೆಂದು ಹೇಳಲಿ
ನಾನು ಎಷ್ಟೆಂದು ಹೇಳಾಲಿ
ನೀವು ಮಾಡಿದ ದಾನ ಧರ್ಮಕೆ
ಪ್ರಾಣ ಉಳಿದೀತು
ಅಣ್ಣನ ಪ್ರಾಣ ಉಳಿದೀತು
ನಮ್ಮ ನಿಮ್ಮ ಋಣವು ಈಗ
ಇಲ್ಲಿಗೆ ತೀರೀತು
ತಾಯಿ ಇಲ್ಲಿಗೆ ಎರವಾಯ್ತು
ಬರುವ ವರ್ಷಕೆ ಬರುವುದಿಲ್ಲ
ಕಳುಹಲು ಬೇಡಿರಿ
ಅಣ್ಣನ ಕಳುಹಲು ಬೇಡಿರಿ

ಎಂದು ತಂದೆ-ತಾಯಿಗಳಿಗೆ ಹೇಳಿ ಗಂಡನ ಮನೆಗೆ ಹೊರಟು ಹೋಗುತ್ತಾಳೆ. ಶಿವನು ಬಂದು ಕೈಲಾಸಕ್ಕೆ ಕರೆದುಕೊಂಡು ಹೋಗುವ ಸನ್ನಿವೇಶವೂ ಇಲ್ಲಿ ಬರುವುದಿಲ್ಲ.

* * * * * *

ಮತ್ತೊಂದು ಪಾಠವೂ ಇವೆರಡರಿಂದಲೂ ಭಿನ್ನವಾಗಿದೆ : ಇದರಲ್ಲಿ ಮೇಲಿನ ಎರಡು ಪಾಠಗಳಿಗಿಂತ ವರ್ಣನೆ, ವಿವರಣೆ ಹೆಚ್ಚಾಗಿದ್ದರೂ ಅಣ್ಣ ಬಂದು ತಂಗಿಯನ್ನು ದೀಪಾವಳಿಗೆ ಕರೆದು, ಅಲ್ಲಿಂದ ಹೊರಡುವವರೆಗೂ ಯಾವ ವ್ಯತ್ಯಾಸವೂ ಇಲ್ಲ. ಆದರೆ, ಮುಂದೆ ಕಾಡುದಾರಿಯನ್ನು ಅಣ್ಣ ಹಿಡಿದಾಗ, ತಂಗಿ ಆ ಬಗ್ಗೆ ಪ್ರಶ್ನಿಸಿದಾಗ—ದಾರಿ ತಪ್ಪಿತೆಂದು ಸುಳ್ಳನ್ನೇ ಹೇಳಿದರೂ, ಮುಂದೆ ನಡೆಯುವ ಘಟನೆಗಳಲ್ಲೂ ಹೆಚ್ಚಾಗಿ, ನಾಗೇಗೌಡರು ಸಂಗ್ರಹಿಸಿಕೊಟ್ಟಿರುವ ಪಾಠವನ್ನೇ ಹೋಲುತ್ತವೆ. ಇಲ್ಲಿಯೂ ಅಣ್ಣ ಅಷ್ಟೇ ಕ್ರೂರಿಯಾಗಿ ಕಂಡು ಬರುತ್ತಾನೆ. ಮಾನಭಂಗ ಮಾಡಲೂ ಮುಂದಾಗುತ್ತಾನೆ. ಅವಳನ್ನು ಕೊಲ್ಲಲು ಮುಂದಾಗುವ, ಹಾವು ಅವನನ್ನೇ ಕಚ್ಚುವ ಅಣ್ಣನನ್ನು ಬದುಕಿಸಿಕೊಳ್ಳುವ ಪ್ರಸಂಗಗಳು ಇಲ್ಲಿಯೂ ಬರುತ್ತವೆ. ಅಣ್ಣನ ಮೇಲೆ ದೂರನ್ನು ಹೇಳುವ ಪ್ರಸಂಗ ಇಲ್ಲಿ ಬರದಿದ್ದರೂ ಹಿಂತಿರುಗಿ ಹೋಗುವಾಗ ಅಣ್ಣನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವ ಇಚ್ಛೆಯಿಲ್ಲದಿರುವುದು ವ್ಯಕ್ತವಾಗುತ್ತದೆ.

ಅಣ್ಣನ ಜೊತೆಯಲಿ ಹೋದರೆ ಕಾಡುದಾರೀಲಿ ಹೋಗುತಾನೆ
ಊರು ದಾರಿ ಬಿಡುತಾನೆ ಕಾಡುದಾರೀಲಿ ಹೋಗುತಾನೆ
ಕಾಡಿನಲ್ಲಿ ಕಲ್ಲುಮುಳ್ಳ ತುಳಿಯಲಾರೆ ನಮ್ಮಪ್ಪ
ನೀನು ಆದರೆ ಬೇಗ ಬೇಗ ಕರೆಕೊಂಡಾದರೂ ಹೋಗಪ್ಪ

ಎನ್ನುವಲ್ಲಿ ಈ ಅಂಶವನ್ನು ಗುರುತಿಸಬಹುದು. ಕೈಲಾಸಕ್ಕೆ ಕರೆದುಕೊಂಡು ಹೋಗುವ ಪ್ರಸಂಗ ಇಲ್ಲಿಯೂ ಬರುವುದಿಲ್ಲ.

ಚೌಡಿಕೆ ಸಂಪ್ರದಾಯದವರು ಹಾಡುವ 'ಅಣ್ಣ-ತಂಗಿ', ದೊಂಬಿದಾಸರು ಹಾಡುವ ಹಾಡ್ಗತೆಗಿಂತ ಸಂಪೂರ್ಣ ಬೇರೆಯಾದುದು. ಇಲ್ಲಿ ಆರಂಭದಿಂದ ಅಂತ್ಯದವರೆವಿಗೂ, ಎಲ್ಲ ಸಂದರ್ಭಗಳೂ ಬೇರೆ ಬೇರೆಯಾಗಿಯೇ ಬರುತ್ತವೆ. ಚೌಡಿಕೆ ಕಾವ್ಯದಲ್ಲಿ ಬರುವ ಅಣ್ಣ-ತಂಗಿಯರ ಕಥೆ ಹೀಗಿದೆ :

ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದನೆಂಬ ಕಾರಣದಿಂದ ಹುಟ್ಟುತ್ತಲೇ ತಂದೆ ತಾಯಿಗಳು ದೂರಮಾಡಿದ್ದ ಅಣ್ಣನ ಗುರುತನ್ನು ಹಿಡಿದ ತಂಗಿ ಮಾತನಾಡಿಸಿ, ಅಂಬಿಗ, ಅಣ್ಣನನ್ನು ಹೊಳೆದಾಟಿಸುವಂತೆ ಕೇಳಿಕೊಳ್ಳುತ್ತಾಳೆ. 'ಅಣ್ಣ' ಎಂದು ಸಂಭೋದಿಸಿದ ಅವಳನ್ನು ಕುರಿತು :

ಕೇಳೆ ಕೇಳೆ ಸೀಲವಂತರ್ಹೆಣ್ಣೆ
ಮಾತು ಮಾತು ಇದ್ದಗೆ ನೀನು
ಯಣ್ಣ ಯಪ್ಪ ಅನ್ನಲಿ ಬೇಡ
ನನ್ಗೆ ನಿಮ್ಮಪ್ಪ ಮಾವಾಗಬೇಕು
ನನ್ಗೆ ನಿಮ್ಮವ್ವ ಅತ್ತ್ಯಾಗಬೇಕು
ನನ್ಗೆ ನಿಮ್ಮಕ್ಕಾರು ಅತಿಗಾಗಬೇಕು
ನಿಮ್ಮಾಣ್ಣರು ಬಾಮೈದ್ರು ಕಾಣೆ
ಕನ್ನೆ ಪ್ರಾಯ್ದ ಬಾಲೆ !

ಎಂದು ಹೇಳುತ್ತಾನೆ. 'ತಂಗಿ ಮೇಲೆ ಅಣ್ಣನು ಕಾಮಿಸದುಂಟೆ'—ಬೇಡ ಅಣ್ಣ ಎಂದು ಅಂಗಲಾಚುತ್ತಾಳೆ. ಆದರೆ, ಅವನು ಅದಕ್ಕೆ ಕಿವಿಗೊಡುವುದಿಲ್ಲ. ಬದಲಾಗಿ ಅವಳ ಗಂಡನ ಒಂದೊಂದು ಅಂಗವನ್ನೂ ಜರಿದು, ತನ್ನೊಂದಿಗಿರುವಂತೆ ಪ್ರೇರೇಪಿಸುತ್ತಾನೆ. ಆದರೆ, ಅದಕ್ಕೆ ಬದಲಾಗಿ ಅವಳು ಅಣ್ಣನಿಗೆ ಬೇರೆ ಆಸೆಯನ್ನು ಹುಟ್ಟಿಸುತ್ತಾಳೆ—

ತಂಗಿ ಮೇಲೆ ಮನಸಿಡಬೇಡ
ನಾಲ್ಕುರಾಜ್ಯವ ತಿರ್ಗ್ಗೀ ನಾನು
ಕನ್ನಡಿಗೆ ಕೆಡುಜಾಣೆ ತಂದು

ಬಿದಿರೆಗಳ ಚದುರೆಯು ತಂದು
ನನ್ನ ರೂಪಿನ ಪಟವಾನೆ ತಿದ್ದಿ
ಗ್ವಾಡೆ ಮೇಗಲು ಚಿತ್ತಾರ ಬರೆದು
ಚಿತ್ತುರದ ಗೊಂಬೇಯು ತಿದ್ದಿ
ನಿನ್ನ ಕೈಗೆ ನಾ ಕೊಡುತೀನಿ
ಬಳೆಯು ಒಂಗಾರವೆಲ್ಲ ಹುಡಿಸಿ
ಸೀರೆ ಕುಪ್ಪಸ ಎಲ್ಲಾ ತೊಡಿಸಿ
ಒಪ್ಪ ಲಗ್ನವ ನಿನಗೆ ಮಾಡುತೀನಿ
ನಮ್ಮಣ್ಣ ಕೇಳೋ !

ಎಂದು ಅಣ್ಣನನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ, ಅವನು ಅಷ್ಟಕ್ಕೆ ಬಗ್ಗುವವನಲ್ಲ—

ಚಿತ್ತಾರದ ಗೊಂಬೆಯು ಒಲ್ಲೆ
ನಿನ್ನ ಮಂಡೆ ಕೂದಲ ಬರಬಾರಿ ಬಂದಾರೆನೆ
ಎಲ್ಲೆಲ್ಲೋದರೆ ನಿನುಗಂಡ ನಾನೆ ಕಾಣೆ
ಕನ್ನಪ್ರಾಯ್ದ ಬಾಲೆ
ಕಾಲು ನೋಡೆ ಕದಿಲೀಯ ಕಂಬ
ತೋಳು ನೋಡೆ ಬಾಳೀಯ ದಿಂಡು
ಬೆನ್ನು ನೋಡೆ ಬೆತ್ತದ ಹಲಗೆ
ಹುಬ್ಬು ನೋಡು ಚಂದ್ರನ ರೇಖೆ
ಕಣ್ಣು ನೋಡು ಗಜನಿಂಬೆ ಹಣ್ಣು
ಮೂಗು ನೋಡು ಸಂಪಿಗೆ ಎಸಳು

ಎಂದು ಅವಳ ಒಂದೊಂದು ಅಂಗವನ್ನು ಬಣ್ಣಿಸುತ್ತಾನೆ. ಅವಳ ಯಾವ ಬುದ್ಧಿವಾದವೂ ಅವನಿಗೆ ಹಿತವೆನಿಸುವುದಿಲ್ಲ. ಸಂಜನಗೂಡಿಗೆ ಹೋಗಿ, ದೇವರ ಹರಕೆಯನ್ನು ತೀರಿಸಿ ಬರಬೇಕೆಂದು ಹೇಳಿ, 'ನಾಳೆ ಬರುವಾಗ ಇಲ್ಲಿಯೇ ಬರುತೀನಣ್ಣ'—ನಮ್ಮಣ್ಣ ಕೇಳೋ ಎಂದು ಆಸೆಯನ್ನು ಹುಟ್ಟಿಸುವ ಉಪಾಯವನ್ನು ಹೂಡುತ್ತಾಳೆ. ಅದಕ್ಕೂ ಅಣ್ಣ ಜಗ್ಗುವುದಿಲ್ಲ ; ಕೊನೆಗೆ ಗಂಗಮ್ಮನ ಪೂಜೆಯು ಮಾಡಿ ನಿನ್ನ ವಾಸ ನಾನಾಗುತೀನಿ' ಎಂದು ಹೇಳಿ ಗಂಗೆ ಪೂಜೆಯನ್ನು ಮಾಡಿ,—'ಧರ್ಮ ಕರ್ಮ ನಿಮ್ಮೊಳಗಿಲುವೇನಮ್ಮ ಜಲಧಿ ಗಂಗಮ್ಮ ತಾಯಿ !' ಎಂದು ಗಂಗೆಯ ಮೇಲೆ ಭಾರ ಹಾಕುತ್ತಾಳೆ. ಕೊನೆಗೆ ಅವನು ಮೈ ಕೈ ಮುಟ್ಟಲು ಮುಂದಾದಾಗ ಹೊಳೆಗೆ ಹಾರಿಕೊಳ್ಳುತ್ತಾಳೆ. ಹಾರಿದ ಕೂಡಲೇ—

ಅತ್ತಲ್ಗಂತೆ ಅತ್ತಾದಳಣ್ಣ
ಇತ್ತಲ್ಗಂತೆ ಇತ್ತಾದಳಣ್ಣ
ನಟ್ಟ ನಡುವೇಲಿ ಗಂಗಮ್ಮ ತಾಯಿ
ಮಾರ್ಗವನ್ನೆ ಬಿಡುತಾಳಲ್ಲೊ
ಜಲಧಿ ಗಂಗಮ್ಮ ತಾಯಿ !
ಆಚೆ ದಡದಲ್ಲಿ ತಂಗ್ಯಾದಳಣ್ಣ
ಈಚೆ ದಡವಲ್ಲಿ ಅಣ್ಣಾದನಂತೆ
ಶೀಲವಂತರ್‍ಹೆಣ್ಣು ಹೋಗುತಾಳೊ
ಪತಿವ್ರತೆ ಬಾಲೆ !

ನೀರಿಗೆ ಹಾರಿದ ಆ ಹೆಣ್ಣನ್ನು ರಕ್ಷಿಸಲು ಗಂಗೆ ಮುಂದಾಗುತ್ತಾಳೆ. ಅಣ್ಣ-ತಂಗಿಯರು ಬೇರೆ ಬೇರೆಯಾಗುವಂತೆ ನೀರನ್ನೇ ಇಬ್ಭಾಗವಾಗಿಸುತ್ತಾಳೆ. ಅಣ್ಣ-ತಂಗಿಯರು ಬೇರೆ ಬೇರೆ ದಡದಲ್ಲಿ ಉಳಿಯುತ್ತಾರೆ. ಇನ್ನು ಅವಳು ತನಗೆ ದಕ್ಕುವುದಿಲ್ಲವೆಂದು ಬಗೆದು ಆ ದಡಕ್ಕೆ ಹಾರಲು ಹೋಗಿ ಯಾವ ದಡವನ್ನೂ ಸೇರಲಾಗದೆ—

ತೇಲುತಾನೆ ಮುಳುಗುತಾನೆ
ಗುಟುಕು ನೀರ ಕುಡಿಯುತಾನೆ
ಕೊಚ್ಚಿಂಗೆ ತಾನೆ ಹೋಗುತಾನೆ
ಅನ್ಯಿಕಾರ ಪಾಪಿ

ನೀರಿನಲ್ಲಿ ಹೀಗೆ ತೇಲಿಕೊಂಡು ಹೋಗುತ್ತಾನೆ. ಆಗಲೂ ಅಣ್ಣನಿಗಾಗಿ, ಗಂಗೆಯಲ್ಲಿ ತಂಗಿಯ ಪ್ರಾರ್ಥನೆ ಕರುಳು ಮಿಡಿಯುತ್ತದೆ :

ಕೇಳು ಕೇಳೆ ಗಂಗಮ್ಮ ತಾಯಿ
ಕಲ್ಲು ಮುಳ್ಳಿಗಾಕಲಿ ಬೇಡ
ಮುಳ್ಳು ಕಲ್ಲೀಗಾಕಲಿ ಬೇಡ
ನಟ್ಟ ನಡುವೇಲಿ ನಮ್ಮಣ್ಣನನ್ನು
ತಕ್ಕಂಡೆ ಹೋಗೆಯಮ್ಮ
ಜಲಧಿ ಗಂಗಮ್ಮ ತಾಯಿ !

ಹೀಗೆಂದು ಪ್ರಾರ್ಥಿಸಿ ಗಂಡನ ಮನೆಗೆ ಹಿಂದಿರುಗುತ್ತಾಳೆ. ಅತ್ತೆ-ಮಾವಂದಿರಿಗೆ ನಮಸ್ಕರಿಸಿ, ಗಂಡನ ಪಾದಕ್ಕೆ ನಮಸ್ಕರಿಸಲು ಹೋದಾಗ ಅವನು :

ನಿಲ್ಲುನಿಲ್ಲೇ ಪರಮ ಗಯ್ಯಾಳಿ
ಅಣ್ಣನಿಗೆ ಸೆರಗಾಸಿದ್ದೀಯ
ನೀನು ನನ್ನ ಮುಟ್ಟಬೇಡ

ಎಂದು ದೂರ ತಳ್ಳುತ್ತಾನೆ. ಆದರೆ, ಅವನಿಗೆ ಬಂದಿದ್ದ ಕುಷ್ಠರೋಗ ಇವಳ ಸ್ಪರ್ಶದಿಂದ ನಿವಾರಣೆಯಾಗಲು ಇವಳ ಪಾತಿವ್ರತ್ಯ ಉಳಿದಂತಾಗುತ್ತದೆ. ಪತಿಗೆ ಇವಳ ಮೇಲಿನ ನಂಬಿಕೆ ಉಳಿಯುತ್ತದೆ. ಇದೂ ಕೂಡ ಶಿವನಿಂದಲೆ ಆಗಿದ್ದ ವ್ಯವಸ್ಥೆ.

* * * * * *

ಈ ಹಾಡ್ಗತೆಗೆ ಸಂಬಂಧಿಸಿದ ಈ ನಾಲ್ಕು ಪಾಠಾಂತರಗಳನ್ನು ಗಮನಿಸಿದಾಗ, ಮೊದಲ ಮೂರು ಪಾಠಗಳಲ್ಲಿ ಕೆಲವು ವ್ಯತ್ಯಾಸಗಳು ಕಂಡು ಬರುವಂತೆಯೇ ಹಲವು ಸಾಮ್ಯಗಳೂ ಇರುವುದು ಗಮನಾರ್ಹ. ಅಣ್ಣ, ತಂಗಿಯನ್ನು ದೀಪಾವಳಿ ಹಬ್ಬಕ್ಕೆ ಕರೆದುಕೊಂಡು ಹೋಗಲು ಬರುವುದು, ತಂಗಿ ಅಣ್ಣನ ಬರುವಿಗೆ ಆಸೆಯಿಂದ ಕಾಯುತ್ತಿರುವುದು ಮೂರು ಪಾಠಗಳಲ್ಲಿಯೂ ಒಂದೇ ಆಗಿ ಕಂಡುಬರುತ್ತದೆ. ನಂತರದ ಘಟನೆಗಳ ನಿರೂಪಣೆಯಲ್ಲಿ ವ್ಯತ್ಯಾಸಗಳು ಕಾಣಿಸಿಕೊಂಡು ಪಾಠ ಭೇದಗಳನ್ನು ಹೆಚ್ಚಿಸಿವೆ. ಅಣ್ಣನ ಕ್ರೂರವರ್ತನೆ ಇಲ್ಲಿಯ ಮೊದಲ ಹಾಗೂ ನಾಲ್ಕನೆಯ ಪಾಠಗಳಲ್ಲಿ ದಟ್ಟವಾಗಿ ಕಾಣಬರುತ್ತದೆ. ಆದರೆ, ನಾಲ್ಕು ಪಾಠಗಳಲ್ಲಿಯೂ ತಂಗಿಯ ಅಪರಿಮಿತವಾದ ಪ್ರೇಮ, ವಾತ್ಸಲ್ಯ ಅಷ್ಟೇ ದಟ್ಟವಾಗಿ ಅಣ್ಣನ ಮೇಲಿರುವುದು ಗಮನಾರ್ಹ. ತನ್ನ ಪ್ರಾಣವನ್ನೂ, ಶೀಲವನ್ನೂ ಕಳೆಯಲು ಬಂದ ಅಣ್ಣನ ಮೇಲೆ ಆಕೆ ಇನ್ನಿಲ್ಲದ ಮಮತೆಯನ್ನು ತೋರುತ್ತಾಳೆ. ಸತ್ತ ಅಣ್ಣನನ್ನು ಬದುಕಿಸಿಕೊಳ್ಳುವುದನ್ನು ಇಲ್ಲಿ ಮೊದಲ ಮೂರು ಪಾಠಗಳಲ್ಲಿ ಕಾಣುತ್ತೇವೆ. ಹೆಂಡತಿಯ ಮುಂದೆ, ತಂದೆ-ತಾಯಿಗಳ ಮುಂದೆ, ಕೊನೆಗೆ ಸಾಕ್ಷಾತ್ ಭಗವಂತನ ಮುಂದೆಯೂ ಅಣ್ಣನ ಮರ್ಯಾದೆಯನ್ನು ಉಳಿಸಲು ತಂಗಿ ಸುಳ್ಳು ಹೇಳುವುದನ್ನು ಗಮನಿಸುತ್ತೇವೆ. ಚೌಡಿಕೆ ಸಂಪ್ರದಾಯದಲ್ಲಿ ಬರುವ ಇಲ್ಲಿಯ ನಾಲ್ಕನೆಯ ಪಾಠವಾದ 'ಅಣ್ಣ–ತಂಗಿ' ಮೊದಲ ಮೂರು ಪಾಠಗಳಿಗಿಂತ ಬೇರೆಯಾಗಿ ಕಂಡರೂ, ಆ ಮೂರು ಪಾಠಗಳಲ್ಲಿ ಕಂಡುಬರುವ 'ಧನಕನಕ' ವಸ್ತುಗಳಿಗೆ ಬದಲಾಗಿ ಇಲ್ಲಿ 'ಕಾಮ' ಪ್ರಧಾನವಾಗಿ ಕಂಡು ಬರುತ್ತದೆ. ಮೊದಲ ಮೂರು ಪಾಠಗಳ ಕಥೆಯೂ ಸುಖಾಂತವಾಗಿದ್ದರೆ, ಇದು ದುಃಖಾಂತವಾಗಿರುವುದು ಗಮನಾರ್ಹ. ಇದು ದುರಂತದಲ್ಲಿ ಕೊನೆಗೊಳ್ಳುತ್ತದೆ. ಅಣ್ಣನ ಸ್ವಾರ್ಥ, ಕ್ರೌರ್ಯ, ದೌರ್ಜನ್ಯ, ತಂಗಿಯ ನಿರ್ವಿಕಾರ ಪ್ರೇಮ, ವಾತ್ಸಲ್ಯ, ಅಭಿಮಾನ ಇವುಗಳ ನಡುವಣ ಹೋರಾಟದಂತೆ ಕಂಡು–ನಿರ್ವಿಕಾರ ಪ್ರೇಮ, ವಾತ್ಸಲಕ್ಕೆ ಜಯ ಎಂಬುದನ್ನು ಇಲ್ಲಿ ಮನಗಾಣುತ್ತೇವೆ. 'ಹಾಡ್ಗತೆಗಳ'ಲ್ಲಿಯೇ ಬರುವ 'ಸತ್ಯವಂತೆ ನಾಗಮಣಿ' ಮೊದಲ ಮೂರು ಪಾಠಗಳನ್ನು ಹೆಚ್ಚಾಗಿ ಹೋಲುತ್ತದೆ.

ಕರುಳನ್ನು ಹಿಂಡಿ ಕಣ್ಣೀರನ್ನು ಕರೆಯುವಂತೆ ಕಲಾವಿದರ ಪ್ರತಿಭಾ ಮೂಸೆಯಲ್ಲಿ ಮೂಡಿಬರುವ ಈ 'ಹಾಡ್ಗತೆ' ಇಂದಿಗೂ ಜನಪ್ರಿಯವಾಗಿ ಎಲ್ಲೆಡೆಯೂ ಹರಡಿ

ಕೊಂಡಿದೆ. ಹಾಗಾಗಿಯೇ ಇದರ ಹಲವಾರು ಪಾಠಾಂತರಗಳು ದೊರೆಯಲು ಕಾರಣ ವಾಗಿರುವುದು.

೨

ಇಲ್ಲಿಯ ಎರಡನೆಯ ಹಾಡ್ಗತೆ—'ಬಂಜೆ ಹೊನ್ನಮ್ಮ'. ಬಂಜೆತನದ ನಿಸ್ಕೃಷ್ಟತೆಯನ್ನು ನಿರೂಪಿಸುವ ಕರುಣಾಜನಕ ಕಥೆ. ತಾಯ್ತನದ ಮಹತ್ವ, ಬಂಜೆತನದ ಹೀನತೆ—ಇವುಗಳ ಚಿತ್ರಣ ಕಲಾವಿದನ ಪ್ರತಿಭಾ ಮೂಸೆಯಲ್ಲಿ ಮನಮುಟ್ಟುವಂತೆ ಮೂಡಿಬಂದಿದೆ. ವೃತ್ತಿಗಾಯಕರೂ, ಸಾಮಾನ್ಯ ಗಾಯಕರೂ ಹಾಡುವ ಈ ಹಾಡ್ಗತೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯೂ ದೊರೆಯುವು ದಲ್ಲದೆ ಬೇರೆ ಬೇರೆ ಪಾಠಗಳೂ ದೊರಕುತ್ತವೆ. ಪ್ರಸ್ತುತ ಲೇಖನದಲ್ಲಿ ಆರು ಅಂತಹ ಪಾಠಗಳನ್ನು ಗಮನಿಸಿದ್ದು ಆರು ಗಮನಾರ್ಹ ರೀತಿಯಲ್ಲಿ ಪಾಠ ಭೇದಗಳನ್ನು ಹೊಂದಿರುವುದು ಗಮನೀಯ.

ಎಚ್. ಎಲ್. ನಾಗೇಗೌಡರ 'ಪದಪದೆ ನಮ್ಮ ಎದೆಯಲ್ಲಿ' ಸಂಕಲನದಲ್ಲಿಯೇ ಇದರ ಮೂರು ಪಾಠಗಳು ದೊರೆಯುತ್ತವೆ. ಮೊದಲನೆಯದು—ದೊಂಬಿದಾಸರಿಂದ ಸಂಗ್ರಹಿಸಿದ 'ಬಂಜೆ ಹೊನ್ನಮ್ಮ.' ಎರಡನೆಯದು ದೊಂಬಿದಾಸರ ಹೆಣ್ಣುಗಾಯಕಿ ಯಿಂದ ಸಂಗ್ರಹಿಸಿದ—'ಬಾಳುಗೇಡಿ ಬಂಜೆ ಹೊನ್ನಮ್ಮ,' ಮೂರನೆಯದು ಸಾಮಾನ್ಯ ಗಾಯಕಿಯಿಂದ ಸಂಗ್ರಹಿಸಿದ 'ಮಕ್ಕಳಿಲ್ಲದ ಬಂಜೆ ಹೊಕ್ಕಳು ನಂಜನಗೂಡ.'

ಇಲ್ಲಿ ಮೊದಲನೆಯ ಪಾಠದ ಕಥೆಯನ್ನು ಸಂಗ್ರಹಿಸಿಕೊಟ್ಟು ಉಳಿದವುಗಳನ್ನು ಅದರೊಂದಿಗೆ ತೌಲನಿಕವಾಗಿ ಗಮನಿಸಲಾಗಿದೆ.

ಏಳು ಜನ ಹೆಣ್ಣುಮಕ್ಕಳಲ್ಲಿ ಕೊನೆಯವಳು ಹೊನ್ನಮ್ಮ. ಆರು ಜನ ಅಕ್ಕಂದಿರೂ ಮಕ್ಕಳನ್ನೂ ಪಡೆದು ಗಂಡನ ಮನೆಯಲ್ಲಿ ಸುಖವಾಗಿದ್ದಾರೆ. ಆದರೆ ಹೊನ್ನಮ್ಮನಿಗೆ ಮಾತ್ರ ಮಕ್ಕಳಾಗದೆ ಬಂಜೆ ಎನಿಸಿಕೊಂಡು ಹೀನ ಬಾಳನ್ನು ಬಾಳು ವಂತಾಗಿದೆ. ಮಕ್ಕಳಿಗಾಗಿ ಶಿವನನ್ನು ಕಾಡಿದ್ದಾಳೆ, ಬೇಡಿದ್ದಾಳೆ. ಕೊನೆಗೆ ಕೋಪದಿಂದ ಸಿಡಿದಿದ್ದಾಳೆ, ಮಿಡಿದಿದ್ದಾಳೆ. ಅಕ್ಕಂದಿರೂ ಅವಳ ದರ್ಶನ ಪಡೆಯಲು ಇಚ್ಛಿಸುವು ದಿಲ್ಲ. ಕೆರೆ, ಕಟ್ಟೆ, ಭಾವಿ, ಮರ, ಗಿಡ, ಬಳ್ಳಿಗಳೂ ಅವಳ ಸ್ಪರ್ಶದಿಂದ ದೂರಾಗು ತ್ತವೆ. ಸಾಯುವುದಕ್ಕೂ ಅವಕಾಶವಾಗದೆ, ಬದುಕುವುದಕ್ಕೂ ಸಾಧ್ಯವಾಗದೆ ಭೂಲೋಕದಲ್ಲಿಯೇ ನರಕಯಾತನೆಯನ್ನು ಅನುಭವಿಸುತ್ತಾಳೆ. ಶಿವನನ್ನು ಎಡಬಿಡದೆ ಪ್ರಾರ್ಥಿಸುತ್ತಾ ಬಂದವಳು ಬಂಜೆಯ ಪಟ್ಟವನ್ನು ತೊಲಗಿಸಿಕೊಳ್ಳಲು ಶಿವನಲ್ಲಿ—

ಕುಂಟನಾದರು ಶಿವರಾಯ
ಕುರುಡನಾದರು ಶಿವರಾಯ
ಹೆಡ್ಡನಾಗಲೊ ಶಿವರಾಯ
ಪೆಳವನಾಗಲೊ ಶಿವರಾಯ

ಈವತ್ತು ಹುಟ್ಟಲೊ
ನಾಳೀಕೆ ಸಾಯಲೊ
ಬಂಜೆ ಎನಿಸಿಕೊಂಡು ನಾನು
ಬಾಳಲಾರೆ ಧರೆಯಲ್ಲಿ

ಎಂದು ಪ್ರಾರ್ಥಿಸಿ ಶಿವನಲ್ಲಿ ಗೋಳಿಟ್ಟಿದ್ದಾಳೆ. ಸಕಲ ಪ್ರಾಣಿ, ಪಕ್ಷಿ, ವೃಕ್ಷಗಳಿಗೆ ಸಂತಾನ ಫಲ ಕೊಟ್ಟಿದ್ದೀಯ ಶಿವನೆ, ನನಗೇಕೆ ಕೊಟ್ಟಿಲ್ಲ ? ಎಂದು ಪ್ರಶ್ನಿಸಿದ್ದಾಳೆ.

ಬಂಜೆ ಹೊನ್ನಮ್ಮ ಭೂಲೋಕದಲ್ಲಿ ಬದುಕಿದ್ದೂ ಹೆಣದಂತಾಗುತ್ತಾಳೆ. ಅವಳ ಬಾಳೂ ಬರಡಾಗುತ್ತದೆ. ಅವಳು ಮುಟ್ಟಿದ್ದೆಲ್ಲ ಮಣ್ಣು, ಸರ್ವನಾಶ. ನೆರೆಹೊರೆ ಯವರಿರಲಿ, ಒಡಹುಟ್ಟಿದ ಅಕ್ಕಂದಿರು, ಕೊನೆಗೆ ಹೆತ್ತ ತಾಯಿಗೂ ಅವಳು ಬೇಡವಾಗು ತ್ತಾಳೆ—

ಹೆತ್ತಂತ ತಾಯಿತಂದೆ
ಕೆಟ್ಟ ಮಾತುಗಳಾಡ್ಯಾರೆ
ಅಯ್ಯೊ ಅಯ್ಯೊ ಗೊಡುಮುಂಡೆ
ನೀನ್ಯಾಕೆ ಬಂದೆ ನಮ್ಮನೆಗೆ ?
ಹೊಟ್ಟೆಲಿ ಮಕ್ಕಿಲ್ಲ
ಕೊಳದಲ್ಲಿ ನೀರಿಲ್ಲ
ಇಂತ ಪಾಪಿಗೇಡಿ ಗೊಡುಮುಂಡೆ
ನಮ್ಮನಿಗೆ ಬರಬ್ಯಾಡ
ಹೆತ್ತಂತ ತಾಯಿತಂದೆ
ಕತ್ತಿಡಿದು ನೂಕಿದರು

ನೊಂದು ಬೇದು ನಿರಾಶಳಾದ ಹೊನ್ನಮ್ಮ. ಮಕ್ಕಳನ್ನು ತೋರಿಸದೆ ಮರೆಮಾಡಿದ ಅಕ್ಕಂದಿರ ಮೇಲಿನ ಕೋಪದಲ್ಲಿ ಅಕ್ಕನ ಮಕ್ಕಳಿಗೆ—

ಕ್ವಾಣೆಲ್ಲಿರೋ ಮಕ್ಕಳು
ಕೊಳೆತೇ ಹೋಗಲೋ ಜಗದೀಶ
ಸಾಪೆಲ್ಲಿರೋ ಮಕ್ಕಳು ಜಗದೀಶ
ಹುತ್ತವಾಗಿ ಬೆಳೆಯಾಲೊ
ಬೀದಿಲ್ಲಾಡೋ ಮಕ್ಕಳು
ಸಂತೋಷದಿಂದ ನಲಿಯಾಲೊ

ಎಂದು ಶಾಪವಿತ್ತು ಹುಚ್ಚಿಯಂತೆ ವರ್ತಿಸುತ್ತಾಳೆ. ಬೇಕಾದ ಬೇಡವಾದ ಕಡೆಗಳಲ್ಲೆಲ್ಲ ಅಲೆಯುತ್ತಾಳೆ. ಸಾಯುವುದಕ್ಕೂ ದಾರಿಕಾಣದೆ ದಿಕ್ಕೆಟ್ಟು ತಿರುಗುತ್ತಾಳೆ. ಅತ್ತೆ

ಮಾವ ಗಳಿಸಿದ್ದ ಆರು ಕೋಟಿ ಹಣದಲ್ಲಿ ತಂದೆ ತಾಯಿ ಗಳಿಸಿದ್ದ ಮೂರು ಕೋಟಿ ಹಣದಲ್ಲಿ ದಾನಧರ್ಮ ಮಾಡುತ್ತಾಳೆ. ಯಾವುದೂ ಪ್ರಯೋಜನಕ್ಕೆ ಬರುವುದಿಲ್ಲ. ಅವಳ ಬಂಜೆತನ ನೀಗುವುದಿಲ್ಲ. ಅವಳ ಹೊಯ್ದಾಟ ತೊಳಲಾಟ ಬಳಲಾಟವನ್ನು ನೋಡಲಾರದೆ ಕೊನೆಗೆ ಶಿವ ಕಾಣಿಸಿಕೊಳ್ಳುತ್ತಾನೆ—

ನಿನ್ನ ಸತ್ಯಾಕೆ ಮೆಚ್ಚಿರುವೆ
ಭಾಗ್ಯನಾದರು ಕೊಟ್ಟಿರುವೆ
ಪುತ್ರ ಭಾಗ್ಯವ ಕೊಟ್ಟೇನು
ನೀ ಬದುಕುಹೋಗೆ ಹೊನ್ನಮ್ಮ

ಎಂದು ಆಶೀರ್ವದಿಸಿ ಕಳುಹಿಸುತ್ತಾನೆ. ಅದರಂತೆ ಹೊನ್ನಮ್ಮ ಮುತ್ತಿನಂತ ಏಳು ಹೆಣ್ಣುಮಕ್ಕಳನ್ನು ಪಡೆಯುತ್ತಾಳೆ. ಮಕ್ಕಳು ಹುಟ್ಟಿದ ಮೂರೇ ದಿನಕ್ಕೆ ಹೊನ್ನಮ್ಮನ ಧರ್ಮ ಕರ್ಮವನ್ನು ತಿಳಿಯಬೇಕೆಂದು ಹುಟ್ಟಿದಂತಹ ಮಕ್ಕಳಿಗೆ ಶಿವನು—

ಕಜ್ಜಿ ಕುರ ಕೊಟ್ಟವನೆ
ಕಜ್ಜಿ ಕುರ ಕಂಡವಳೆ
ಅಸಹ್ಯವನ್ನೆ ಪಟ್ಟವಳೆ
ತೂಗಡಿಸಿ ತೂಗಡಿಸಿ
ಏಳು ಮಕ್ಕಳ ಕೊಂದಳು

ಕುಂಟನಾಗಲಿ, ಕುರುಡನಾಗಲಿ, ಸತ್ತನಾಗಲಿ, ಹೆಳವನಾಗಲಿ : ಇಂದು ಹುಟ್ಟಿ ಇಂದು ಸಾಯುವಂತಹ ಮಗುವನ್ನಾಗಲಿ ಕೊಟ್ಟು ಬಂಜೆತನವನ್ನು ನೀಗು ಎಂದು ಅಂಗಲಾಚಿದ ಹೊನ್ನಮ್ಮ, ಚರ್ಮದ ಮೇಲೆ ಕಾಣಿಸಿಕೊಂಡು ವಾಸಿಯಾಗುವ ಚರ್ಮರೋಗಕ್ಕೆ ಅಸಹ್ಯಪಟ್ಟು, ಮುದ್ದುಮಕ್ಕಳನ್ನು ಕೊಲ್ಲುತ್ತಾಳೆ. ಶಿವ ಪ್ರತ್ಯಕ್ಷನಾಗಿ—'ಹುಟ್ಟು ಹುಟ್ಟಿದ ಮಕ್ಕಳ ನೀ ಹುತ್ತಾಕ್ಕೆ ತುಂಬೆ ಎಲೆ ಬಂಜೆ' ಎಂದು ಶಾಪವೀಯುತ್ತಾನೆ. ನಂತರ ಅವಳಿಗೆ ಜ್ಞಾನೋದಯವಾಗಿ ಹಲವು ಪುಣ್ಯ ಕಾರ್ಯಗಳನ್ನು ಮಾಡಿ ಕರ್ಮ ಕಳೆದುಕೊಳ್ಳುತ್ತಾಳೆ.

ಎರಡನೆಯ ಪಾಠ ದೊಂಬಿದಾಸರಿಂದಲೇ ಸಂಗ್ರಹಿಸಿದ್ದು, ಆದರೆ-ಹೆಂಗಸೊಬ್ಬಳಿಂದ ಸಂಗ್ರಹಿಸಿರುವುದಾಗಿ ಸಂಗ್ರಹಕಾರರು ತಿಳಿಸಿದ್ದಾರೆ. ಆದರೆ ಇಲ್ಲಿಯ ಕಥೆಯ ತಿರುವುಗಳೇ ಬೇರೆ ಬೇರೆ.

ಏಳು ಜನ ಅಕ್ಕ ತಂಗಿಯರಲ್ಲಿ ಹೊನ್ನಮ್ಮ ಕೊನೆಯವಳು. ಮಕ್ಕಳಿಲ್ಲದ ಬಂಜೆ. ಮಕ್ಕಳಿಗಾಗಿ ಹಂಬಲಿಸುವುದು, ಒಡಹುಟ್ಟಿದವರು, ಹಾಗೂ ಇಡೀ ಸಮಾಜ ಅವಳ ಬಗ್ಗೆ ತೋರುವ ನಿರ್ಲಕ್ಷ್ಯ, ಇವೆಲ್ಲವೂ ಕರುಳುಮಿಡಿಯುವಂತೆ ಮೊದಲ ಪಾಠದಲ್ಲಿಯಂತೆಯೇ ಇಲ್ಲಿಯೂ ಇದೆ. ಆದರೆ ಮುಂದಿನ ಭಾಗ ಅತ್ಯಂತ ಸ್ವಾರಸ್ಯವಾದ ರೀತಿಯಲ್ಲಿ ಇಲ್ಲಿ ಕಂಡುಬರುತ್ತದೆ :

ಜೀವನದಲ್ಲಿ ರೋಸಿದ ಹೊನ್ನಮ್ಮ ಗಂಡನಿಗೆ ತಾಳಿಯನ್ನು ಬಿಚ್ಚಿ ಒಪ್ಪಿಸಿ ಸಾಯಲು ಸಿದ್ಧಳಾಗಿ ಹೊರಡುತ್ತಾಳೆ. ಮೊದಲು ನಾಗರಾಜನ ಪಟ್ಟಣಕ್ಕೆ ಹೋಗುತ್ತಾಳೆ. ಆದರೆ ನಾಗರಾಜ ಅವಳನ್ನು ಕಚ್ಚಿ ಸಾಯಿಸಲು ಒಪ್ಪುವುದಿಲ್ಲ. ನಂತರ ಹುಲಿರಾಜನ ಪಟ್ಟಣಕ್ಕೆ ಹೋಗುತ್ತಾಳೆ. ಅಲ್ಲಿಯೂ ಅವಳಿಗೆ ಅದೇ ಉತ್ತರ ದೊರೆಯುತ್ತದೆ.* ನಂತರ ಅವಳು ನೇರವಾಗಿ ದೇವಲೋಕಕ್ಕೆ ಹೋಗುತ್ತಾಳೆ. ಅಲ್ಲಿ ತಪಸ್ಸಿಗೆ ಕುಳಿತುಕೊಳ್ಳುತ್ತಾಳೆ. ಆದಾದರೂ ಅತ್ಯಂತ ಭಯಂಕರವಾದ ತಪಸ್ಸು. ಒಂದು ಕಲ್ಯಾಣಿಯ ಒಳಿ, ಸೂಜಿಯ ಮೇಲೆ ಸೂಜಿಯನ್ನು ನಿಲ್ಲಿಸಿ, ಆ ಸೂಜಿಯ ತುದಿಗೆ ನಿಂಬೆ ಹಣ್ಣನ್ನು ಚುಚ್ಚಿ, ಅದರ ಮೇಲೆ ತಪಸ್ಸಿಗೆ ಕೂರುತ್ತಾಳೆ. ಅಲ್ಲಿ ನೀರಿಗಾಗಿ ಬಂದ ಪಾರ್ವತಿ ಆಕೆಯನ್ನು ಕಂಡು, ಅವಳ ತಪಸ್ಸಿಗೆ ಆಶ್ಚರ್ಯಪಟ್ಟು ಬಂದ ಕಾರಣವನ್ನು ವಿಚಾರಿಸುತ್ತಾಳೆ. ಹೊನ್ನಮ್ಮ ತನ್ನ ದುಃಖವನ್ನೆಲ್ಲ ಹೇಳಿಕೊಳ್ಳುತ್ತಾಳೆ. ಪಾರ್ವತಿ ಕನಿಕರಪಟ್ಟು ಅವಳನ್ನು ಒಂದು ಪಲ್ಲಿಯನ್ನಾಗಿ ಮಾಡಿಕೊಂಡು, ಭರಣಿಯಲ್ಲಿಟ್ಟುಕೊಂಡು ಬಾಳೆಕಾಯಿಗೆ ಸಿಕ್ಕಿಸಿಕೊಂಡು–ಶಿವನೊಡನೆ ತಾನು ಪಗಡೆಯಾಡುತ್ತಿರುವಾಗ ಗೋಡೆಯಿಂದ ಬಂದು ಶಿವನ ಪಾದವನ್ನು ಬಿಡದೆ ಹಿಡಿದುಕೊಳ್ಳುವಂತೆ ತಿಳಿಸಿ, ತೆಗೆದುಕೊಂಡು ಹೋಗುತ್ತಾಳೆ. ಅದರಂತೆ ಅವಳು ಶಿವನ ಪಾದವನ್ನು ಹಿಡಿದು, ಸಂತಾನ ಫಲವನ್ನು ಕೊಡುವಂತೆ ಬೇಡುತ್ತಾಳೆ, ಶಿವ ಒಪ್ಪಿ, ಆಶೀರ್ವದಿಸಿ 'ಮಗುಟ್ಟಿದ ಮೂರು ತಿಂಗಳಿಗೆ ಬತ್ತೀನಿ' ಎಂದು ಹೇಳಿ ಕಳುಹಿಸಿಕೊಡುತ್ತಾನೆ. ಹೊನ್ನಮ್ಮನಿಗೆ ಗಂಡುಮಗುವಾಗುತ್ತದೆ. ಹೇಳಿದ ಮಾತಿನಂತೆ ಈಶ್ವರ ಪರೀಕ್ಷಾರ್ಥವಾಗಿ ಹೊನ್ನಮ್ಮನಲ್ಲಿಗೆ ಬರುತ್ತಾನೆ. ಮಗನೊಡನೆ ಚಕ್ಕಂದವಾಡುತ್ತಿದ್ದ ಹೊನ್ನಮ್ಮ ಜಂಗಮರೂಪದ ಈಶ್ವರನನ್ನು ತೃಣವಾಗಿ ಕಾಣುತ್ತಾಳೆ, ಭಿಕ್ಷ ಬೇಡಿ ಬಂದವನನ್ನು ಅವಮಾನಗೊಳಿಸಿ, ಕೆಂಡವನ್ನು ತಂದು ಸುರಿಯುತ್ತಾಳೆ. ಆದರೆ ಅದು ಚಿನ್ನದ ಗಟ್ಟಿಯಾಗುತ್ತದೆ. ಆಗಲೂ ಹೊನ್ನಮ್ಮನಿಗೆ ಅರಿವಾಗುವುದಿಲ್ಲ. ಅವಳಿಗೆ ಅರಿವನ್ನು ಮೂಡಿಸಬೇಕೆಂಬ ದೃಷ್ಟಿಯಿಂದ ಶಿವ ಅಲುಗದೆ ನಿಲ್ಲುತ್ತಾನೆ. ಆಗ ಹೊನ್ನಮ್ಮ ಪಳೇಪರಕೆಯಿಂದ ಹೊಡೆದು ಪಳ್ಳಕ್ಕೆ ತಳ್ಳುತ್ತಾಳೆ. ಪಾರ್ವತಿ ಇದನ್ನು ಕಂಡು ಓಡಿಬಂದು 'ಸಂತಾನಫಲ ಕೊಟ್ಟ ಶಿವನನ್ನೇ ಹೀಗೆ ಮಾಡಿದೆಯ' ಎಂದು ಕೋಪದಿಂದ–'ನಿನಗೆ ವರ್ಷಕ್ಕೊಂದು ಮಗು ಹುಟ್ಟಿ ಸಾಯಲಿ, ಸತ್ತ ಮಕ್ಕಳನ್ನೆಲ್ಲ ಹುತ್ತಕ್ಕೆ ತುಂಬು' ಎಂದು ಶಾಪ ಕೊಡುತ್ತಾಳೆ. ತನ್ನ ತಪ್ಪು ಅರಿವಾಗಿ, ಹೊನ್ನಮ್ಮ ಕ್ಷಮೆ ಯಾಚಿಸಿದಾಗ–'ನೀನು ದಂಡಿನ ಶಿವರದ ಬೆಟ್ಟಕ್ಕೋಗಿ ಸೇರಿಕೋ. ವರ್ಷಕ್ಕೊಂದು ಸಾರಿ ನಿನಗೆ ಅನ್ನ, ಧೂಪ ಹಾಕುತ್ತಾರೆ. ನಿನ್ನ ಗಂಡ 'ಕರಗಲ್ಲು' ಆಗಿ ವರ್ಷಕ್ಕೊಂದು ದಿವ್ಯ ಅನ್ನ ಹಾಕಿಸಿಕೊಳ್ಳಲಿ' ಎಂದು ಆಶೀರ್ವದಿಸಿ ಮಾಯವಾಗುತ್ತಾರೆ. ಇಲ್ಲಿ ಹೊನ್ನಮ್ಮ ದೇವತೆಯಾಗಿ ಹೋಗುತ್ತಾಳೆ.

---

* ಮೊದಲ ಪಾಠದಲ್ಲಿ ಅವಳು ಹುತ್ತಕ್ಕೆ ಕೈಯಿಡುತ್ತಾಳೆ ಎಂದು ಬರುತ್ತದೆ.

ಇಲ್ಲಿ ಎರಡನೆಯ ಪಾಠದ ಉತ್ತರಾರ್ಧ ಸಂಪೂರ್ಣ ಬೇರೆಯ ತಿರುವನ್ನೇ ಪಡೆದುಕೊಂಡಿದೆ. ಮೊದಲನೆಯ ಪಾಠದ ಪೂರ್ವಾರ್ಧದಲ್ಲಿ ಕಂಡುಬರುವ ಸ್ವಲ್ಪ ಮಟ್ಟಿನ ತೊಡಕು ಇಲ್ಲಿ ಪರಿಹಾರವಾದಂತೆ ಕಂಡುಬರುತ್ತದೆಯಾದರೂ ಸಂಪೂರ್ಣ ವಾಗಿ ಅಲ್ಲ. ಮೊದಲ ಪಾಠದಲ್ಲಿ ಹೊನ್ನಮ್ಮ ಕಜ್ಜಿಗೆ ಜಿಗುಪ್ಸೆಗೊಂಡು ಏಳುಮಕ್ಕಳನ್ನು ತೂಗಡಿಸಿಕೊಂದೇ ಸಾಯಿಸುವುದು ತೀರ ಅಸಹಜವಾಗಿ, ಆಶ್ಚರ್ಯಕರವಾಗಿ ತೋರಿ ದರೂ ; ಅಷ್ಟೊಂದು ಕ್ರೂರವಾಗಿ ನಡೆದುಕೊಂಡ ಅವಳಿಗೆ—

ಹುಟ್ಟುಬಾರದ ಹೊನ್ನಮ್ಮ
ಹೊನ್ನಾಲುದೇವಿ ಕಥೆಯನ್ನು
ಕೇಳಿದಂತ ಜನಗಳಿಗೆ
ಮಾಡಿದಂತ ಕರ್ಮವೇ
ಹರಿಯಲೋ ಜಗದೀಶ

ಎಂದು ಹೇಳುವಲ್ಲಿ ಸ್ಪಷ್ಟತೆಯಾಗಲಿ, ಔಚಿತ್ಯವಾಗಲಿ ಕಾಣುವುದಿಲ್ಲ. ಸತ್ತಂತಹ ಮಗು ವನ್ನು ಹುತ್ತಕ್ಕೆ ಹಾಕುವ ಪ್ರಸ್ತಾಪ ಈ ಎರಡೂ ಪಾಠಗಳಲ್ಲಿಯೂ ಬರುತ್ತದೆ ಯಾದರೂ, ಮೊದಲನೆಯದರಲ್ಲಿ ಅದಕ್ಕೆ ಸ್ಪಷ್ಟತೆ ದೊರೆಯುವುದಿಲ್ಲ. ಅಲ್ಲಿಯ ನಿರೂಪಣೆಯಲ್ಲಿ ಏನೋ ತೊಡಕಿದ್ದಂತೆ ಅನಿಸುತ್ತದೆ. ವಿಕೃತ ಪಾಠಾಂತರಕ್ಕೆ ಒಳ್ಳೆಯ ಉದಾಹರಣೆಯೆನಿಸುತ್ತದೆ.

ಎರಡನೆಯ ಪಾಠದಲ್ಲಿ ಅಲೌಕಿಕತೆಯ, ಅಸಹಜತೆಯ ಅಂಶ ಹೆಚ್ಚಾಗಿದ್ದರೂ, ಕಾಲ್ಪನಿಕ ದೃಷ್ಟಿ ಚೆನ್ನಾಗಿದೆ. ಈಶ್ವರ ಪರೀಕ್ಷಿಸಲು ಬರುವುದು, ಹೊನ್ನಮ್ಮ ಇಡೀ ಜಗತ್ತನ್ನೇ ಮರೆತು ವರ್ತಿಸುವುದು, ಅದಕ್ಕೆ ತಕ್ಕ ಶಾಸ್ತಿ ಎಂಬಂತೆ ಶಾಪಕ್ಕೆ ಗುರಿಯಾಗು ವುದು, ಇಲ್ಲೆಲ್ಲ ಸ್ಪಷ್ಟತೆ ಇದೆ. ಮೊದಲನೆಯ ಪಾಠದ ಪೂರ್ವಾರ್ಧದ ಕೆಲವು ತೊಡಕು ಗಳು ಇಲ್ಲಿ ಬಗೆಹರಿಯುವುದು ಗಮನಾರ್ಹ.

ಇದೇ ಸಂಕಲನದ ಮತ್ತೊಂದು ಪಾಠ, ಸಾಮಾನ್ಯ ಗಾಯಕಿಯಿಂದ ಸಂಗ್ರಹಿ ಸಿದ್ದು, ತ್ರಿಪದಿ ರೂಪದಲ್ಲಿದೆ. ಹೆಚ್ಚಿನ ವಿವರಣೆ ಇಲ್ಲದೆ, ವ್ಯಾಪ್ತಿಯಲ್ಲಿ ಅತ್ಯಂತ ಚಿಕ್ಕದಾಗಿ ಕಂಡುಬಂದರೂ, ಮೇಲಿನ ಎರಡು ಪಾಠಗಳಿಗಿಂತ ಸಂಪೂರ್ಣ ಭಿನ್ನವಾಗಿದೆ. ಈ ಹಾಡ್ತತೆಯ ಉತ್ತರಾರ್ಧ ಬಂಜೆಯ ಬೇಗೆಯನ್ನು ಬಣ್ಣಿಸುವಂತಹದೇ. ಆದರೂ ಇದರ ರೀತಿಯೇ ಬೇರೆ. ತನ್ನ ಹೀನಸ್ಥಿತಿಗೆ ತಾನೇ ಕೊರಗುತ್ತಾಳೆ, ಮರುಗುತ್ತಾಳೆ. ಇವಳ ದುಃಖವನ್ನು ಕಂಡು ಶಿವ ಬರುತ್ತಾನಾದರೂ, ಅವಳಿಗೆ ಮಕ್ಕಳ ಫಲವನ್ನು ಕರುಣಿಸುವುದಿಲ್ಲ. ಅದಕ್ಕೆ ಬದಲಾಗಿ ಇರುವ ಸ್ಥಿತಿಯನ್ನೂ ಅದಕ್ಕಿರುವ ಕಾರಣವನ್ನು ತಿಳಿಸಿಬಿಡುತ್ತಾನೆ—

ತಾಯಿ ತಂದೆಯ ನಿಂದಿಸಿ ಬೈಯ್ಯಿಸಿ
ಪುತ್ರಾಜ ಫಲ ನಿನಗಿಲ್ಲ

ಅತ್ತೆ ಮಾವದೀರ ನಿಂದಿಸಿ ಬೈಯ್ಯಿಸಿ
ಈ ಲೋಕದ ಫಲ ನಿನಗಿಲ್ಲ

ಈ ಕಾರಣಗಳಿಂದಾಗಿ ಈ ಜನ್ಮದಲ್ಲಿ ನಿನಗೆ ಮಕ್ಕಳಿಲ್ಲ, ಎಂದು ಸ್ಪಷ್ಟವಾಗಿ ಹೇಳಿ ಬಿಡುತ್ತಾನೆ. ಅಷ್ಟೇ ಅಲ್ಲ ; ಮುಂದಿನ ಜನ್ಮದಲ್ಲಾದರೂ ಮಕ್ಕಳನ್ನು ಪಡೆಯಬೇಕೆಂದಿದ್ದರೆ ಈಗಿನಿಂದಲೇ ಮಾಡಬೇಕಾದುದನ್ನು ಈಶ್ವರನೇ ಸೂಚಿಸುತ್ತಾನೆ—

ಹಸುವಿಗುಲ್ಲನಾಕಿ ಸಿಸವಿಗ್ಹಾಲನಾಕೆ
ಮುಂದಾರು ಫಲ ದೊರಿಕ್ಯಾವು ।
ಹಾಲು ದಾನವ ಮಾಡೆ ಅನ್ನದಾನವ ಮಾಡೆ
ಮ್ಯಾಲೇಳು ಫಲ ದೊರಿಕ್ಯಾವು ।

ಮೊದಲ ಎರಡು ಪಾಠಾಂತರಗಳಲ್ಲಿ, ಕೊನೆಯಲ್ಲಿ ಹೊನ್ನಮ್ಮ ಮಕ್ಕಳನ್ನು ಪಡೆದರೂ ಅವು ವಿಕಾರಕ್ಕೆ ಒಳಗಾಗುತ್ತವೆ. ದುರಂತಕ್ಕೆ ಕಾರಣವಾಗುತ್ತವೆ. ಆದರೆ ಇಲ್ಲಿ ಅವಳಿಗೆ ಮಕ್ಕಳ ಫಲವೇ ದೊರೆಯುವುದಿಲ್ಲ: ಜೊತೆಗೆ, ಅವಳು ಮಕ್ಕಳನ್ನು ಪಡೆಯಲಾಗದಿರಲು ಕಾರಣವೇನೆಂಬುದು ಮೊದಲ ಎರಡು ಪಾಠಗಳಲ್ಲಿ ನಮಗೆ ತಿಳಿಯುವುದಿಲ್ಲ. ಆದರೆ ಇಲ್ಲಿ, ಅವಳು ತಂದೆ ತಾಯಿಗಳಿಗೆ, ಅತ್ತೆಮಾವಂದಿರಿಗೆ ಮಾಡಿದ ದ್ರೋಹ ಎಂಬುದು ವ್ಯಕ್ತವಾಗುತ್ತದೆ. ಅದಕ್ಕೆ ಪರಿಹಾರವೆಂಬಂತೆ—ಹಸು, ಕರು, ಶಿಶುವಿಗೆ, ಹುಲ್ಲು, ಹಾಲು ದಾನಮಾಡಬೇಕೆಂಬಲ್ಲಿ—ಇದುವರೆವಿಗೆ ಅವಳಲ್ಲಿದ್ದ ಈ ಎಲ್ಲ ಕೊರತೆಗಳನ್ನು ಸೂಚಿಸುತ್ತದೆ. ಈ ಎಲ್ಲ ಕೊರತೆಯಿಂದಾಗಿ ಕೊನೆಗೂ ಅವಳು ಮಕ್ಕಳನ್ನು ಪಡೆಯದೇ ಹೋಗುವುದು ಇಲ್ಲಿಯ ವೈಶಿಷ್ಟ್ಯವಾಗಿದೆ.

ಪದವವೆ ನಮ್ಮ ಎದೆಯಲ್ಲಿ' ಸಂಕಲನದಲ್ಲಿ ಕಂಡುಬರುವ ಈ ಮೂರೂ ಪಾಠಗಳೂ ಮೂರು ಬಗೆಯವಾದರೆ, ಡಾ. ಜೀ. ಶಂ. ಪರಮಶಿವಯ್ಯ ಅವರು—'ದೊಂಬಿದಾಸರ ಲಾವಣಿಗಳು' ಹಾಗೂ 'ಜನಪದ ಕಾವ್ಯ ಕಥೆಗಳ'ಲ್ಲಿ ಸಂಗ್ರಹಿಸಿಕೊಟ್ಟಿರುವ ಎರಡು ಪಾಠಗಳು ಎರಡು ರೀತಿಯವಾಗಿದ್ದು, ಶ್ರೀ ನಾಗೇಗೌಡರು ಸಂಗ್ರಹಿಸಿಕೊಟ್ಟಿರುವ ಈ ಮೂರು ಪಾಠಗಳಿಗಿಂತ ಭಿನ್ನವಾಗಿರುವುದು ಪರಿಶೀಲನಾರ್ಹವಾಗಿದೆ.

'ದೊಂಬಿದಾಸರ ಲಾವಣಿಗಳು' ಸಂಕಲನದಲ್ಲಿ ಬರುವ 'ಬಂಜೆ ಹೊನ್ನಮ್ಮ'ನ ಕಥೆಯ ಸಾರ ಹೀಗಿದೆ :

ಉತ್ತರಾರ್ಧ ಹೆಚ್ಚು ಕಡಿಮೆ ಒಂದೇಯಾಗಿ ಕಂಡುಬರುತ್ತದೆ. ಬಂಜೆಯ ಘೋರ ದುಃಖ ಅಷ್ಟೇ ಘೋರ ರೀತಿಯಲ್ಲಿ ವರ್ಣಿತವಾಗಿದೆ. ಆದರೆ ಈ ಭಾಗದಲ್ಲಿ ಹೊನ್ನಮ್ಮನ ಗಂಡನಾದ ಕರಿಯಣ್ಣಗೌಡನ ಪಾತ್ರ ಹೆಚ್ಚಾಗಿ ಬರುವುದು ಗಮನೀಯ. ಗಂಗೆಪೂಜೆಗೆ ಪೋದ ಹೊನ್ನಮ್ಮ ಎಷ್ಟುಹೊತ್ತಾದರೂ ಹಿಂತಿರುಗಿ ಬಾರದಿರಲು, ಅವಳನ್ನು ಹುಡುಕಿಕೊಂಡು ಹೋಗುವ ಸನ್ನಿವೇಶ ಹಾಗೂ ಅವಳು ಮಕ್ಕಳ ಫಲಕ್ಕಾಗಿ ಕಡುದುಃಖಮಾಡುತ್ತಿರುವುದನ್ನು ಕಂಡು....

ಹೊನ್ನಿಕೇಳೇ ಹೊನ್ನಾಲದೇವಿ
ಹಡದ ಮಕ್ಕಳು ದುಡಿದ ಬಂಗಾರ ।
ಎಲ್ಲಿಯು ತನಕ ಬರಬಲ್ಲವು
ಏಕೆ ನೀನು ದುಃಖಪಡುತೀಯಾ ।

ಎಂದು ಸಮಾಧಾನ ಹೇಳುವುದು ಮೊದಲ ಮೂರು ಪಾಠಗಳಲ್ಲಿಯೂ ಕಾಣಬರುವುದಿಲ್ಲ.

ಹೊನ್ನಮ್ಮನ ಆರುಮಂದಿ ಅಕ್ಕಂದಿರು, ಹೊನ್ನಮ್ಮನ ಬರುವನ್ನು ಕಂಡು ಅವಳ ದೃಷ್ಟಿ ತಮ್ಮ ತಮ್ಮ ಮಕ್ಕಳ ಮೇಲೆ ಬೀಳದಿರಲೆಂದು ಮನೆಯೊಳಗೆ ಕೂಡಿಹಾಕುವ ಸನ್ನಿವೇಶ ನಾಗೇಗೌಡರು ಸಂಪಾದಿಸಿರುವ ಮೊದಲೆರಡು ಹಾಡ್ಗತೆಗಳಲ್ಲಿಯೂ ಬರುತ್ತದೆಯಾದರೂ. ಡಾ. ಜೀಶಂಪ ಅವರು ಸಂಪಾದಿಸಿರುವ ಈ ಹಾಡ್ಗತೆಯಲ್ಲಿ ಬರುವ ರೀತಿಯೆ ಬೇರೆ. ಇಲ್ಲಿ ಆ ಸಂದರ್ಭ ಒಟ್ಟು ಕಥೆಗೇ ಒಂದು ತಿರುವನ್ನು ಕೊಟ್ಟಿದೆ. ಮಕ್ಕಳನ್ನು ಹಡೆದ ಅಹಂಭಾವದಲ್ಲಿ ತಂಗಿಯೆಂಬುದನ್ನು ಮರೆತು ಹೀನಾಯವಾಗಿ ಕಾಣುತ್ತಿದ್ದ ಅವರಿಗೆ ದೊಡ್ಡ ತೇಜೋವಧೆಯನ್ನುಂಟುಮಾಡುವ ಸಾಧನವಾಗಿ ಮಾರ್ಪಡುತ್ತದೆ. ಮಕ್ಕಳನ್ನು ಕಳೆದುಕೊಂಡು ದುಃಖಿಸುತ್ತಿದ್ದ ಈ ಆರೂಮಂದಿಯ ಮನೆಗೆ ಜಂಗಮವೇಷದಲ್ಲಿ ಭಿಕ್ಷೆ ಕೇಳಲು ಬಂದ ಪರಮೇಶ್ವರ ಅವರುಗಳಿಗೆ ಮಕ್ಕಳನ್ನು ಬದುಕಿಸಿಕೊಳ್ಳುವ ದಾರಿಯನ್ನು ತೋರುತ್ತಾನೆ—

ಬಂಜೆಯಾದ ಹೊನ್ನಮ್ಮನನ್ನು
ಗಂಡಾ ಹೆಂಡಿರ ಕರ್‍ಕಂಡು ಬಂದು
ನಿಮ್ಮ ಮನೆಯಲ್ಲಿ ಪೂಜೆಯ ಮಾಡಿದರೆ
ನಿಮ್ಮ ಮಕ್ಕಳಿಗೆ ಜೀವ ಬರುತ್ತೈತ
ಬಂಜೆ ಹೊನ್ನಮ್ಮನ ಕರೆಸಿ ನೀವಾದರೆ
ಅವಳ ಪೂಜೆಯನೆ ಮಾಡಿದರೆ
ಎಂದಿನಂತೆ ಆಗುತವೆ ಎಂದ ಆವಾಗ
ಮೂರು ಮಾತ ಹೇಳಿ ಮಾಯವಾದ ಶಿವನು

ಅದರಂತೆ ಹೊನ್ನಮ್ಮನ ಅಕ್ಕಂದಿರೆಲ್ಲರೂ ಸೇರಿ ಹೊನ್ನಮ್ಮನನ್ನು ಅವಳ ಗಂಡನನ್ನೂ ಮನೆಗೆ ಕರೆತಂದು, ಮನೆದೇವರ—ಕುಲದೇವರ ಹಬ್ಬವನ್ನು ಆಚರಿಸುತ್ತಾರೆ. ಮಕ್ಕಳೆಲ್ಲರೂ ಮೊದಲಿನಂತೆ ಆಡಿಕೊಂಡಿವೆ. ಕೆಲಕಾಲದಲ್ಲಿಯೇ ಹೊನ್ನಮ್ಮ ಗಂಡು ಮಗುವೊಂದಕ್ಕೆ ಜನ್ಮಕೊಟ್ಟು ಆ ಕೂಡಲೇ ಅಸುನೀಗುತ್ತಾಳೆ. ತೀರ ಅನಿರೀಕ್ಷಿತವಾದ, ಅಷ್ಟೇ ಭಿನ್ನವಾದ ಮುಕ್ತಾಯ. ಇಲ್ಲಿಯ ಮೊದಲ ಮೂರು ಪಾಠಗಳಲ್ಲಿಯೂ ಈ ಬಗೆಯ ಮುಕ್ತಾಯ ಇಲ್ಲ. ಕೊನೆಗೆ ಹೊನ್ನಮ್ಮನನ್ನು ಮಣ್ಣುಮಾಡಿ ಅಕ್ಕಂದಿರೆಲ್ಲರೂ ಸೇರಿ ಹಿಪ್ಪೇ ತೋಪಿನಲ್ಲಿ ಹೊನ್ನಮ್ಮನ ದೇವಸ್ಥಾನವನ್ನು ಕಟ್ಟಿಸುತ್ತಾರೆ. ಹೊನ್ನಮ್ಮ

ದೇವಾಂಶ ಸಂಭೂತಳಾಗುತ್ತಾಳೆ. ಈ ಅಂಶ ಮೊದಲ ಎರಡು ಪಾಠಗಳಲ್ಲಿಯೂ ಮಿಂಚಿ ಮಾಯಾವಾದಂತಾಗುತ್ತದೆಯಾದರೂ, ಇಲ್ಲಿ ಸ್ವಲ್ಪ ಅದು ಹಿಡಿತಕ್ಕೆ ಸಿಕ್ಕಿದಂತೆ ಗೋಚರಿಸುತ್ತದೆ.

ಜೀವನದುದ್ದಕ್ಕೂ ಪಡಬಾರದ ಪಾಡನ್ನು ಪಟ್ಟು ತಾಯ್ತನಕ್ಕೆ ಹಂಬಲಿಸಿ ಕೊನೆಗೂ ಗೆಲುವನ್ನು ಕಂಡು, ದೇವತಾ ಸ್ಥಾನವನ್ನು ಪಡೆಯುತ್ತಾಳೆ. ಹೊನ್ನಮ್ಮನ ಬದುಕಿನ ಅಂತ್ಯ ಕೆಲವು ಕಡೆಗಳಲ್ಲಿ ವಿಚಿತ್ರವಾಗಿ ಕಾಣುವುದೂ ಉಂಟು.

ಡಾ. ಜೀಶಂಪ ಅವರೇ ತಮ್ಮ 'ಜನಪದ ಕಾವ್ಯ ಕಥೆಗಳ'ಲ್ಲಿ ಸಂಗ್ರಹಿಸಿ ಕೊಟ್ಟಿರುವ ಪಾಠ ಮತ್ತೊಂದು ಬಗೆಯದು. ಅದು ಇವೆಲ್ಲಕ್ಕಿಂತಲೂ ಭಿನ್ನವಾದುದು—ಅಷ್ಟೇ ವಿಶಿಷ್ಟ ರೀತಿಯದು. ಇದನ್ನು 'ದೇವರ ಗುಡ್ಡ'ರಿಂದ ಸಂಗ್ರಹಿಸಿರುವುದಾಗಿ ಹೇಳಿಕೊಂಡಿದ್ದಾರೆ. ಇದರ ಕಥಾರೀತಿಯೇ ಆರಂಭದಿಂದ ಅಂತ್ಯದವರೆಗೂ ಬೇರೆ—

ಅಪ್ಪಭಾಗ್ಯವ ತಂದರೇನು
ಮಕ್ಕಳ ಭಾಗ್ಯವ ತರಲಿಲ್ಲ
ಸಾಲು ಸೀರೆಯ ಉಟ್ಟರೇನು
ತೋಳಲಿ ಒರಗೋ ಮಗನಿಲ್ಲ

ಎಂಬ ಕೊರಗು ಹೊನ್ನಮ್ಮನನ್ನು ಹಿಂಡಿದೆ. ಅದಕ್ಕಾಗಿ ಹಂಬಲಿಸಿದ್ದಾಳೆ, ಹರಕೆ ಹೊತ್ತಿದ್ದಾಳೆ, ತನ್ನ ತೊಡೆಯಮೇಲೆ ಮುದ್ದಾದ ಕಂದ ಮಲಗಿ ಲಲ್ಲೆಗರೆಯುತ್ತಿರುವುದನ್ನು ಕಂಡು ಎದ್ದು ಕುಳಿತಿದ್ದಾಳೆ, ಆದರೆ ಅದು ಬರಿಯ ಕನಸು. ಮತ್ತೆ ದುಃಖ ಉಮ್ಮಳಿಸಿ ಹಾಗೇ ಬೆಳಕು ಹರಿಸಿದ್ದಾಳೆ.

ಹೊನ್ನಮ್ಮನ ದುಃಖಕ್ಕೆ ಮುಕ್ತಾಯ ಹಾಡಬೇಕೆಂಬ ದೃಷ್ಟಿಯಿಂದ ಶಿವ–ನಾರಾಯಣ ಇಬ್ಬರು–ಜೋಗಯ್ಯ–ದಾಸಯ್ಯರ ವೇಷಧರಿಸಿ ಬೆಳಗಾಗುತ್ತಲೇ ಹೊನ್ನಮ್ಮನ ಮನೆಬಾಗಿಲಿಗೆ ಭಿಕ್ಷಕ್ಕಾಗಿ ಬಂದಿದ್ದಾರೆ. ಹೊನ್ನಮ್ಮ ಮಡಿಯುಟ್ಟು ಚಿನ್ನ–ಬೆಳ್ಳಿ ಬಟ್ಟಲುಗಳ ತುಂಬ ಮುತ್ತು, ರತ್ನಗಳನ್ನು ತುಂಬಿಕೊಂಡು ಭಿಕ್ಷೆನೀಡಲು ಬಂದಿದ್ದಾಳೆ. ಜೋಗಯ್ಯನಿಗೆ ಚಿನ್ನದ ಬಟ್ಟಲನ್ನು ಇತ್ತು. ಕಾಲಿಗೆ ನಮಸ್ಕರಿಸಿದ್ದಾಳೆ. ದಾಸಯ್ಯನಿಗೆ ಬೆಳ್ಳಿಯ ಬಟ್ಟಲನ್ನಿತ್ತು ನಮಸ್ಕಾರನ್ನೂ ಮಾಡದೆ ಸುಮ್ಮನಾಗಿದ್ದಾಳೆ. ಹೊನ್ನಮ್ಮನ ವರ್ತನೆ ನಾರಾಯಣನಿಗೆ ಕೋಪತರುತ್ತದೆ. ಹೊನ್ನಮ್ಮನಿಂದ ಭಿಕ್ಷೆಯನ್ನು ಪಡೆಯದಂತೆ ಶಿವನನ್ನು ತಡೆದು ಎಲ್ಲವನ್ನು ಅಲ್ಲಿಯೇ ಚೆಲ್ಲಾಡಿ ಬಂದ ವೇಗದಲ್ಲಿಯೇ ಹಿಂತಿರುಗುತ್ತಾರೆ. ಮನೆಯ ಬಾಗಿಲಿಗೆ ಬಂದ ಭಾಗ್ಯ ಇಲ್ಲವಾಗುತ್ತದೆ. ಹೊನ್ನಮ್ಮ ತನ್ನ ಅವಿವೇಕಕ್ಕಾಗಿ ತಾನೇ ಪೇಚಾಡಿಕೊಳ್ಳುತ್ತಾಳೆ.

ಮುಂದೆ ಹುಟ್ಟಿದ ಕಂದನ
ತೇರಿಗೆ ಆಹುತಿ ಕೊಡುತೀನಿ

ಎಂದು ನಂಜನಗೂಡಿನ ನಂಜುಂಡೇಶ್ವರನನ್ನೇ ಆಶ್ರಯಿಸುತ್ತಾಳೆ. ತನ್ನತ್ತ ಬರುತ್ತಿರುವ ಹೊನ್ನಮ್ಮನನ್ನು ಕಂಡು ಅವಳನ್ನು ಪರೀಕ್ಷಿಸುವುದಕ್ಕೋಸ್ಕರ—ಮೈತುಂಬ ಕಜ್ಜಿ, ತುರಿ, ಕೀವು, ರಕ್ತ ತುಂಬಿದ ಮಗುವನ್ನು ಅಡ್ಡವಾಗಿಸುತ್ತಾನೆ. ಹೊನ್ನಮ್ಮ ಅದನ್ನು ನೋಡಿ ಅಸಹ್ಯಪಟ್ಟುಕೊಳ್ಳುತ್ತಾಳೆ. ಆ ಮಗು ಇವಳ ಬಳಿ ಬರಲು ಹಾತೊರೆದರೂ ಇವಳು ದೂರವಾಗುತ್ತಾಳೆ. ಕೊನೆಗೆ ನಂಜಯ್ಯ ತನ್ನ ನಿಜರೂಪದಲ್ಲಿಯೇ ಹೊನ್ನಮ್ಮನಿಗೆ ದರ್ಶನಕೊಡುತ್ತಾನೆ. ಮಕ್ಕಳನ್ನು ಬೇಡಿದ ಅವಳಿಗೆ, ಅವಳ ಹಿಂದಿನ ಜನ್ಮದ ಕರ್ಮದ ಪಟ್ಟಿಯನ್ನೇ ಮುಂದಿಡುತ್ತಾನೆ—ಮಕ್ಕಳಿಗೆ ಮೊಂಡಗೈಯ್ಯಲಿತ್ತಿ ಹೋಗಿದ್ದಳು, ಹಸುಳೆಗೆ ಹಾಲೆರೆಯೆಂದರೆ ಕಳ್ಳಿಯ ಹಾಲು ನೀಡಿದ್ದಳು, ಶಿಶುವಿಗೆ ಬೆಣ್ಣೆ ನೀಡೆಂದರೆ ಸುಣ್ಣವನ್ನು ಬಾಯಿಗೆ ಹಾಕಿದ್ದಳು, ತುಂಬಿದ ಬಾವಿಗೆ ಬಾಗಿ ನೋಡಿ ಬಾಯ ತಂಬುಲ ಉಗಿದಿದ್ದಳು—

ಇಂಥ ಕರ್ಮವ ಮಾಡಿದ ಚಾಂಡಾಳಿ
ಬಾಲನ ಭಾಗ್ಯವು ನಿನಗಿಲ್ಲ
ಅಲ್ಲಿ ತರದ ಭಾಗ್ಯವನು
ಇಲ್ಲೆಲ್ಲಿ ತರಲೆ ಹಣ್ಣುಮಗಳೆ

ಎಂದು ನಿರ್ದಾಕ್ಷಿಣ್ಯವಾಗಿ ಹೇಳಿ ಕಳುಹಿಸುತ್ತಾನೆ. ಹೊನ್ನಮ್ಮ ನಿರುತ್ತರಳಾಗಿ ನಿರಾಶೆಯಿಂದ ಹಿಂತಿರುಗುತ್ತಾಳೆ. ದುಃಖ ಒತ್ತಿ ಬರುತ್ತದೆ.

ಹೊನ್ನಮ್ಮ ಹಿಂತಿರುಗಿ ಬಂದು ಮತ್ತೊಂದು ಲಗ್ನವಾಗುವಂತೆ ಗಂಡನಿಗೆ ತಿಳಿಸುತ್ತಾಳೆ. ಅವಳ ಮಕ್ಕಳನ್ನಾದರೂ ಮುದ್ದಾಡಬಹುದೆಂಬುದು ಹೊನ್ನಮ್ಮನ ಆಸೆ. ಆದರೆ ಪತಿಯ ಅನುಮತಿ ಅದಕ್ಕಿಲ್ಲ. ಕೊನೆಗೆ ಕೋಡುಗಲ್ಲೊಂದನ್ನೇರಿ ತಪಸ್ಸು ಮಾಡಲಾರಂಭಿಸುತ್ತಾಳೆ, ಬಂಜೆಯ ದುಃಖವನ್ನರಿತ ಪಾರ್ವತಿ ಪ್ರತ್ಯಕ್ಷಳಾಗಿ ಮೂಗು ಬೆಕ್ಕೊಂದನ್ನು ಹೊನ್ನಮ್ಮನ ಕೈಗಿತ್ತು—

ಮಕ್ಕಳ ಗ್ಯಾನ ಆದಾಗ
ಬೆಕ್ಕನೆ ನೀನು ಮುದ್ದಾಡು
ಮಕ್ಕಳ ಸಂತಾನ ಆಗುತದೆ

ಅದರಂತೆ ಕಾಲಾನಂತರದಲ್ಲಿ ಹೊನ್ನಮ್ಮನಿಗೆ ಗಂಡುಮಗುವಾಗುತ್ತದೆ. ಆದರೆ ಕೋಪಗೊಂಡಿದ್ದ ಶಿವ-ನಾರಾಯಣರಿಗೆ ಮತ್ತಷ್ಟು ಸಿಟ್ಟೇರುತ್ತದೆ. ಹೊನ್ನಮ್ಮನ ಮೇಲೆ ಕೋಪ ತೀರಿಸಿಕೊಳ್ಳಲು ಅವರು ಮುಂದಾಗುತ್ತಾರೆ. ಹೊನ್ನಮ್ಮ ನೀರಿಗೆ ಹೋಗಿದ್ದ ಸಂದರ್ಭವನ್ನು ನೋಡಿ ಘಟಸರ್ಪ ಒಂದನ್ನು ಮಗುವಿನ ಬಳಿ ಬಿಡುತ್ತಾರೆ. ಆದರೆ ಪಾರ್ವತಿ ಕೊಟ್ಟಬೆಕ್ಕು ಸರ್ಪವನ್ನು ಕೊಂದು ಮಗುವನ್ನು ಉಳಿಸುತ್ತದೆ. ಬೆಕ್ಕಿನ ಬಾಯಿ-ಮೈಯೆಲ್ಲಾ ರಕ್ತವಾಗಿರುವುದನ್ನು ದೂರದಿಂದ ಕಂಡ ಹೊನ್ನಮ್ಮ, ಬೆಕ್ಕು ಮಗುವನ್ನು ಕೊಂದಿರಬೇಕೆಂದು ತಿಳಿದು ಹೊತ್ತಿದ್ದ ಕೊಡವನ್ನು ಅದರ ಮೇಲೆ ಹಾಕು

ತ್ತಾಳೆ. ಬೆಕ್ಕು ಅಲ್ಲಿಯೇ ಪ್ರಾಣಬಿಡುತ್ತದೆ. ಒಳಗೆ ಬಂದ ನಿಜಸಂಗತಿಯನ್ನು ತಿಳಿದ ಮೇಲೆ ಬೆಕ್ಕಿನ ಸಾವಿಗಾಗಿ ಮರುಗಿ—ಮಗು ಹಾಗೂ ಬೆಕ್ಕು ಸಮೇತ ಬೆಂಕಿಗೆ ಹಾರಲು ಮುಂದಾಗುತ್ತಾಳೆ. ಅಷ್ಟರಲ್ಲಿ ಶಿವ—ನಾರಾಯಣರು ಬಂದು ಬೆಕ್ಕನ್ನು ಬದುಕಿಸಿ ಕೊಟ್ಟು ಎಲ್ಲರನ್ನೂ ಕೈಲಾಸಕ್ಕೆ ಕರೆದೊಯ್ಯುತ್ತಾರೆ.

ಇದಿಷ್ಟು ಇಲ್ಲಿಯ ಕತೆ. ಆದರೆ ಮೇಲೆ ಗಮನಿಸಿದ ನಾಲ್ಕು ಪಾಠಗಳಿಂತ ಇದು ತೀರ ಭಿನ್ನವಾದುದು. ಇಲ್ಲಿ ಶಿವನ ಜೊತೆಗೆ ನಾರಾಯಣನು ಹೊನ್ನಮ್ಮನಿಗೆ ವರ ಕೊಡಲು ಬರುವುದರ ಜೊತೆಗೆ, ಹೊನ್ನಮ್ಮನ ಒಂದು ಅಚಾತುರ್ಯದಿಂದ ಅವರಿಬ್ಬರೂ ಕೋಪಗೊಂಡು ಹೋಗುವುದು ಒಂದು ಅಪೂರ್ವ ಘಟನೆಯಾದರೆ ; ಹೊನ್ನಮ್ಮ ಶಿವನ ಭಕ್ತಳೆಂಬುದೂ ಇದರಿಂದ ಸ್ಪಷ್ಟವಾಗುವಂತಹುದು. ಅಲ್ಲದೆ, ಜನಪದರಿಗೆ ಬೇಗ ನೆನಪಿಗೆ ಬರುವವನು ಶಿವ. ಎಲ್ಲರೂ, ಎಲ್ಲದಕ್ಕೂ ಶಿವನನ್ನೇ ಆಶ್ರಯಿಸುವುದು ಜನಪದ ಕಥೆ-ಗೀತೆಗಳಲ್ಲಿ ಸಾಮಾನ್ಯ. ಆದರೆ ಇಲ್ಲಿ ನಾರಾಯಣನ ಪ್ರವೇಶವೂ ಆಗಿರುವುದು, ಜೊತೆಗೆ ಅದನ್ನು ಹೆಚ್ಚು ಪರಿಣಾಮಕಾರಿಯಾಗಿ, ಔಚಿತ್ಯ ಪೂರ್ಣವಾಗಿ ಬಳಸಿಕೊಂಡಿರುವುದೂ ವೈಶಿಷ್ಟ್ಯವಾಗಿದೆ.

ಶಿವ-ನಾರಾಯಣರಿಬ್ಬರ ಕೋಪಕ್ಕೂ ತುತ್ತಾಗಿದ್ದೇನೆಂಬುದನ್ನರಿತ ಹೊನ್ನಮ್ಮ, ಶಿವನೊಬ್ಬನನ್ನೇ ಆಶ್ರಯಿಸಿದಾಗಲೂ ಅವನೂ ಕೋಪಗೊಂಡು ಅವಳ ಪಾಪದ ಪಟ್ಟಿಯನ್ನು ಪಟಿಸಿದಾಗ, ಪಾರ್ವತಿ ಹೊನ್ನಮ್ಮನ ನೆರವಿಗೆ ಬರುವುದೂ ಒಂದು ವಿಶೇಷವಾಗಿದೆ. ಅಷ್ಟೇ ಅಲ್ಲದೆ ವಿಶೇಷ ಬಗೆಯಲ್ಲಿ ಅವಳಿಗೆ ಸಂತಾನ ಫಲವನ್ನು ಕೊಡುವುದೂ ಗಮನಾರ್ಹ. ಬೆಕ್ಕು ಮಗುವನ್ನು ಉಳಿಸಿ, ಸರ್ಪವನ್ನು ಕೊಲ್ಲುವ ಸನ್ನಿವೇಶ ಕೂಡ ಅಪೂರ್ವವಾದುದು. ಕೊನೆಗೆ ಶಿವ-ನಾರಾಯಣರಿಬ್ಬರೂ ಬಂದು ಸುಖಾಂತವಾಗಿಸುವುದೂ ಅಷ್ಟೇ ಮಹತ್ವದ್ದಾಗಿ ತೋರುತ್ತದೆ. ಬೆಕ್ಕು ಇಲ್ಲೊಂದು ಪ್ರಮುಖ ಪಾತ್ರವೆಂಬಂತೆ ನಮ್ಮ ಮನಸ್ಸಿನಲ್ಲಿ ನಿಲ್ಲುತ್ತದೆ. ಹೊನ್ನಮ್ಮ ಮೂಕ ಪ್ರಾಣಿಯನ್ನು ಕೊಂದ ಪಾಪಕ್ಕೆ ಪ್ರಾಯಶ್ಚಿತ್ತ ಅನುಭವಿಸಲು ಸಿದ್ಧವಾಗುವುದು, ಅವಳ ಪರಿವರ್ತಿತ ಪುನರ್ಜನ್ಮದ ಜೀವನಕ್ಕೆ ಸ್ವಚ್ಛ ಉದಾಹರಣೆಯಾಗುತ್ತದೆ.

ಹೀಗಾಗಿ ಗುಡ್ಡರು ಹಾಡುವ ಈ ಹಾಡ್ಗತೆ, ದೊಂಬಿದಾಸರು ಹಾಗೂ ಸಾಮಾನ್ಯ ಗಾಯಕರು ಹಾಡುವ ಹಾಡ್ಗತೆಗಿಂತ ಭಿನ್ನಪಾಠಭೇದಗಳನ್ನು ಹೊಂದಿರುವುದು ಗಮನಿಸಬೇಕಾದ ಅಂಶ.

ಕರಾಕೃ ಅವರು, ದೊಂಬಿದಾಸರಿಂದಲೇ ಸಂಗ್ರಹಿಸಿರುವುದಾಗಿ ಹೇಳಿ 'ಜಾನಪದ ಕಥನ ಗೀತೆಗಳು' ಸಂಕಲನದಲ್ಲಿ ಕೊಟ್ಟಿರುವ 'ಬಂಜೆ ಹೊನ್ನಮ್ಮ' ಕಥೆಯ ಪೂರ್ವಾರ್ಧ ಅಂತಹ ವ್ಯತ್ಯಾಸಗಳನ್ನೇನೂ ಹೊಂದಿರದಿದ್ದರೂ, ಉತ್ತರಾರ್ಧ ಬೇರೆಯಾಗಿದೆ. ಮಕ್ಕಳಿಲ್ಲದ ಹೊನ್ನಮ್ಮ ಶಿವನನ್ನು ಬೇಡಲು 'ನೂರುಮಂದಿ ಮಕ್ಕಳ ಫಲ' ಕೊಡುತ್ತಾನೆ ಶಿವ. ಆದರೆ ಇದನ್ನು ಕಂಡು ಸಹಿಸದ ಅಕ್ಕಂದಿರು ವಿಷದ ಕಜ್ಜಾಯವನ್ನಿತ್ತು.

ಸಾಯಿಸಿಬಿಡುತ್ತಾರೆ. ಹೊನ್ನಮ್ಮ ಗೋಳಾಡಿಕೊಂಡು ಬಂದು ಮತ್ತೆ ಶಿವನಲ್ಲಿ ಬೇಡುತ್ತಾಳೆ. ಸತ್ತು ಹೋದ ಮಕ್ಕಳನ್ನೆಲ್ಲ ಶಿವ ಮತ್ತೆ ಬದುಕಿಸಿಕೊಡುತ್ತಾನೆ.

ಈ ಆರೂ ಪಾಠಗಳನ್ನು ಒಟ್ಟಾರೆ ಗಮನಿಸಿದಾಗ, ಮೂಲ ಕಥೆಯೊಂದು ಜನಪದರ ಬಾಯಲ್ಲಿ ಯಾವ ಯಾವ ರೂಪವನ್ನು ಹೇಗೆ ಹೇಗೆ ತಾಳಬಹುದೆಂಬುದು ವೇದ್ಯವಾಗುತ್ತದೆ. ವೃತ್ತಿಗಾಯಕರಲ್ಲಿ ಹೆಚ್ಚು ವಿಸ್ತಾರವಾಗಿ ಅದು ಕಂಡು ಬಂದರೆ ಸಾಮಾನ್ಯ ಗಾಯಕರಲ್ಲಿ ಅದು ಸಂಕ್ಷಿಪ್ತವಾಗಿ ಸಂಗ್ರಹಿತವಾಗಿರುವುದನ್ನು ಕಾಣುತ್ತೇವೆ. ಇಲ್ಲಿ ಹಲವು ಘಟನೆಗಳು ಬಿಟ್ಟು ಹೋಗುತ್ತವೆ. ಸಾಮಾನ್ಯ ಗಾಯಕರಿಗೆ ಮುಖ್ಯ ಕಥೆಯಷ್ಟೇ ಪ್ರಮುಖವಾಗಿ ತೋರಿದರೆ, ವೃತ್ತಿಗಾಯಕರಿಗೆ ಅದನ್ನು ಬೆಳೆಸಲು, ವಿವರಿಸಲು ಹೆಚ್ಚು ಘಟನಾವಳಿಗಳಿರುವುದು ಅಗತ್ಯವಾಗಿ ತೋರುತ್ತದೆ.

ಇಲ್ಲಿ ಮೂಲ ಪಾಠವನ್ನು ಗುರುತಿಸುವ ಪ್ರಶ್ನೆ ಬಂದಿದ್ದರೂ, ಹೊನ್ನಮ್ಮನ ಕಥೆಯಲ್ಲಿ ತೊಡಕಿರುವುದಂತೂ ಸ್ಪಷ್ಟ. 'ಹೊನ್ನಾಲಿ ದೇವಿಯ ಕಥೆ'ಗೂ 'ಬಂಜೆ ಹೊನ್ನಮ್ಮನ ಕಥೆ'ಗೂ ಕಥೆಯ ಉತ್ತರಾರ್ಧದಲ್ಲಿ ತೊಡರುಂಟಾಗಿರುವುದನ್ನು ಇಲ್ಲಿಯ ಕೆಲವು ಪಾಠಗಳಲ್ಲಿ ಗುರುತಿಸಬಹುದು. ಬಹುತೇಕ ಪಾಠಗಳಲ್ಲಿ ಆಕೆಗೆ ದೇವಸ್ಥಾನವನ್ನು ಕಟ್ಟಿಸಿದರು ಎಂಬ ಪ್ರಸ್ತಾಪ ಬರುವಲ್ಲಿ ಅನುಮಾನವಿದೆ. ನಾಗೇಗೌಡರು ಸಂಗ್ರಹಿಸಿರುವ 'ಬಾಳುಗಂಚಿ ಬಂಜೆ ಹೊನ್ನಮ್ಮ'ನಲ್ಲಿ ಸ್ಪಷ್ಟವಾಗಿ– 'ದಂಡಿನ ಶಿವರದ ಹೊನ್ನಮ್ಮ' ಆಗಿದೆ. ವರ್ಷಕ್ಕೊಂದು ದಿನ ನಿನಗೆ ಅನ್ನ ಹಾಕ್ತಾರೆ' ಎಂದಿದೆ. ಆದರೆ ಇದು ಹೊನ್ನಾಲ ದೇವಿಗೆ ಸಂಬಂಧಿಸಿದ್ದು. ಅಲ್ಲಿ ಈಗಲೂ ವರ್ಷಕ್ಕೊಂದು ಸಾರಿ ಆ ದೇವಿಯ ಜಾತ್ರೆ ನಡೆಯುತ್ತಿದ್ದು, 'ಮಡೆ'* ಹೊರುವ ಪದ್ಧತಿ ಇದೆ. ಆದ್ದರಿಂದ ಈ ಕಥೆಯ ಭಾಗ ಅಲ್ಲಿ ಸೇರಿಕೊಂಡಿರಲೂ ಸಾಧ್ಯ.

---

* ಹೊಸ ಗಡಿಗೆಯಲ್ಲಿ ಅಕ್ಕಿಯನ್ನು ಹಾಕಿ ಸಾಲಾಗಿ 8–10 ಗಡಿಗೆಗಳನ್ನು ಒಂದರ ಮೇಲೆ ಒಂದನ್ನು ಸೇರಿಸಿ ಕೆಳಗಡೆ ಉರಿ ಹಾಕುತ್ತಾರೆ. ಆದರೆ ಅಷ್ಟೂ ಗಡಿಗೆಗಳಲ್ಲಿಯೂ ಹದವಾಗಿ ಅನ್ನ ಬೆಂದಿರುತ್ತದೆ. ಹೀಗೆ ನೂರಾರು ಗಡಿಗೆಗಳಿರುತ್ತವೆ. ಇವನ್ನು ಹೊಸದಾಗಿ ಮದುವೆಯಾದ ಹೆಣ್ಣು–ಗಂಡುಗಳು ತಲೆಯ ಮೇಲೆ ಹೊತ್ತು ನಡೆ ಮಡಿಯ ಮೇಲೆ ಬಂದು ಹೊನ್ನಾದೇವಿಯ ದೇವಸ್ಥಾನದಲ್ಲಿ ಬೆಳಗಿನ ಜಾವದ ಹೊತ್ತಿಗೆ ಇಟ್ಟಿರುತ್ತಾರೆ. (ಎರಡು ಫರ್ಲಾಂಗ್‌ದೂರವನ್ನು ಇಡೀ ರಾತ್ರಿ ನಡೆದಿರುತ್ತಾರೆ) ನಂತರ ಬೆಳಗ್ಗೆ 8–9 ಗಂಟೆಗೆ ಅವರವರ ಮನೆಯವರು ಹೋಗಿ ಒಂದೊಂದು ಗಡಿಗೆಯನ್ನು ತಮ್ಮ ತಮ್ಮ ಮನೆಗಳಿಗೆ ತಂದು ಊಟಮಾಡುತ್ತಾರೆ. ದೇವಸ್ಥಾನದಲ್ಲಿ ಇಟ್ಟಿದ್ದಾಗ ಆ ಗಡಿಗೆಯ ಅನ್ನದಲ್ಲಿ ಮೂರು ಬೆರಳನ್ನು ಇಟ್ಟ ಗುರುತು ಬಿದ್ದಿರುತ್ತದೆ. ಅದು ಹೊನ್ನಾದೇವಿ ಎಲ್ಲದರಲ್ಲೂ ಸ್ವಲ್ಪ ಅನ್ನ ತೆಗೆದು ಊಟಮಾಡಿದ್ದಾಳೆ ಎಂದು ಹಿಂದಿನಿಂದಲೂ ನಂಬಿಕೆಯಾಗಿ ಬಂದಿದೆ.

'ಬಯಲುಸೀಮೆಯ ಲಾವಣಿಗಳು' ಸಂಕಲನದಲ್ಲಿ ಕಾಳೇಗೌಡ ನಾಗವಾರ ಅವರು ದೊಂಬಿದಾಸರಿಂದಲೇ ಸಂಗ್ರಹಿಸಿ ಕೊಟ್ಟಿರುವ ಹಾಡ್ಗತೆ ಯಾವ ಹೆಚ್ಚಿನ ಅಲೌಕಿಕತೆಯ ಅಂಶವನ್ನು ಒಳಗೊಂಡಿರದೆ ಸರಳವಾಗಿ ರೂಪು ತಳೆದಿದೆ. ಮಕ್ಕಳಿಲ್ಲದ ಆಕೆ ಬಹಳ ನೊಂದು, ನಿಟ್ಟುಸಿರುಬಿಟ್ಟು ಕೊನೆಗೆ ಶಿವನತ್ತ ನೋಡುತ್ತಾಳೆ. ನೀರನ್ನು ಮೊಗೆಯಲು ಹೋದಾಗ ಅಲ್ಲಿ ಅವಳಿಗೆ ಎರಡು ಗಂಡು ಮಕ್ಕಳು ಕಾಣಸಿಕೊಳ್ಳುತ್ತವೆ. ಜೊತೆಗೆ-

"ಕೇಳು ಕೇಳೆ ಎಲೆ ಬಂಜೆ ನೀನು
ನಿನ್ನ ಕರ್ಮವು ಇಲ್ಲಿಗೆ ತೀರಿಸ್ತೀವಿ
ಇಬ್ಬರ ಮಕ್ಕಳ ಸಂತಾನ ಕೊಟ್ಟಿದ್ದೀವಿ
ನೀನಾದರೆ ಹೋಗಮ್ಮ ಈಗ"

ಎಂದು ಆಶೀರ್ವದಿಸಿ ಕಳುಹಿಸಿಕೊಡುತ್ತಾರೆ. ಆಗ ಎಲ್ಲರೂ ಹತ್ತಿರವಾಗುತ್ತಾರೆ. ಬಂಜೆ ತನವನ್ನು ಕಳೆದುಕೊಂಡ ಹೊನ್ನಮ್ಮನನ್ನು ಸಂಭ್ರಮ ಸಡಗರಗಳಿಂದ ಆದರಿಸುತ್ತಾರೆ. ಹುಟ್ಟಿದ ಮಕ್ಕಳಿಗೆ ಸೂರ್ಯ ಚಂದ್ರರೆಂದು ಹೆಸರಿಟ್ಟು ಕರೆಯುತ್ತಾರೆ.

ಈ ಏಳೂ ಪಾಠಾಂತರಗಳ ಒಟ್ಟು ಹಿನ್ನೆಲೆಯಲ್ಲಿ ಹೊನ್ನಮ್ಮನ ಬದುಕನ್ನು ಪರಿಶೀಲಿಸುವುದಾದರೆ—ಮಕ್ಕಳ ಭಾಗ್ಯವಿಲ್ಲದ ಹೆಣ್ಣೊಬ್ಬಳು ಸಮಾಜದ ಅನಿಷ್ಟ ವೆನಿಸಿಕೊಂಡು, ಯಾರಿಗೂ ಬೇಡವಾಗಿ, ನೊಂದು ಬೆಂದು ಬೆಂಡಾಗಿ ಬಗೆ ಬಗೆಯಲ್ಲಿ ಮಕ್ಕಳ ಫಲಕ್ಕಾಗಿ ಭಗವಂತನನ್ನು ಪ್ರಾರ್ಥಿಸುವ ಸತ್ಯಾಂಶ ಇಲ್ಲಿ ವ್ಯಕ್ತವಾಗುತ್ತದೆ. ಇದು ಇಲ್ಲಿಯ ಮೊದಲ ಅಂಶ.

ಎರಡನೆಯದಾಗಿ,—ಭಾರತೀಯ ಧರ್ಮದಂತೆ, ಜನಪದರ ನಂಬಿಕೆಯಂತೆ, ಆಕೆ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮ—ಮಕ್ಕಳು ಮರಿಗಳನ್ನು, ಪಕ್ಷಿ ವೃಕ್ಷಗಳನ್ನು ಹೀನಾಯವಾಗಿ ಕಂಡ ಫಲ, ತಂದೆ ತಾಯಿಗಳನ್ನು ಅತ್ತೆಮಾವಂದಿರನ್ನು ಕಡೆಗಣಿಸಿದ ಕಾರಣ ಈ ಜನ್ಮದಲ್ಲಿ ಸಂತಾನ ಹೀನಳಾದಳೆಂಬುದು ಸ್ಪಷ್ಟ.

ತನ್ನ ಪ್ರಾಯಶ್ಚಿತ್ತದಿಂದಾಗಿ ಶಿವನ ಕರುಣೆಯನ್ನು ಮತ್ತೆ ಗಳಿಸಿ ಮಕ್ಕಳ ಫಲ ವನ್ನು ಪಡೆದರೂ, ಇನ್ನೂ ಸಂಸ್ಕಾರ ಸಾಲದೆಂಬಂತೆ ಮತ್ತೆ ಶಾಪಕ್ಕೆ ಒಳಗಾಗುವುದು.

ಅವಳ ಹುಟ್ಟೇ ಒಂದು ಘೋರಪಾಪ ಎಂಬಂತೆ ಇಡೀ ಸಮಾಜ ಅವಳನ್ನು ಕಡೆಯಾಗಿ ಕಾಣುವುದು—ಒಡಹುಟ್ಟಿದವರೂ, ತಂದೆ ತಾಯಿಗಳೂ ತೃಣವಾಗೆಣಿಸು ವುದು ; ಹೊನ್ನಮ್ಮನ ಬದುಕನ್ನು ಕರಕಷ್ಟವಾಗಿಸಿ ಕೊನೆಗೆ ಅವಳು ದೈವಬಲದಿಂದ ಗೆಲುವನ್ನು ಪಡೆಯುವುದು. ಅಷ್ಟೆ ಅಲ್ಲದೆ, ಮಕ್ಕಳನ್ನು ಕಳೆದುಕೊಂಡ ಅಕ್ಕಂದಿರೇ ಹೊನ್ನಮ್ಮನ ಮರೆಹೊಕ್ಕು ತಮ್ಮ ತಮ್ಮ ಮಕ್ಕಳನ್ನು ಬದುಕಿಸಿಕೊಳ್ಳುವುದು, ಇವ ನ್ನೆಲ್ಲ ನೋಡಿದರೆ ಬಹುಶಃ ಈ ಕಾರಣಗಳಿಂದಾಗಿ ಅವಳಿಗೆ 'ಸತ್ಯವಂತೆ ಹೊನ್ನಮ್ಮ' ಎಂಬ ಹೆಸರು ಬಂದಿರಬೇಕು. ಶಿವನ ಕೃಪೆಗೆ ಪಾತ್ರಳಾದ ಅವಳಿಗೆ ಸಮಾಜದಲ್ಲಿ ಮನ್ನಣೆ, ಮಹತ್ವ ದೊರೆತಿರಬೇಕು. ಅವಳನ್ನು ಪೂಜನೀಯ ವ್ಯಕ್ತಿಯನ್ನಾಗಿ ಕಂಡಿರ

ಬೇಕು. ತಾಯ್ತನದ ಅವಳ ಹಂಬಲ ಹಲವರ ಮನಕರಗಿಸಿರಬೇಕು. ಅವಳ ನಿರಂತರ ಸಾಧನೆಗೆ ಮೆಚ್ಚಿಗೆ ವ್ಯಕ್ತಪಡಿಸಿರಬೇಕು. ಜನಪದ ಮನದಲ್ಲಿ ಮೂಡಿದ ಅವಳ ಬಗೆಗಿನ ಬಗೆಬಗೆಯ ಚಿತ್ರ ಹೀಗೆ ವೈವಿಧ್ಯವನ್ನು ತಾಳಿರಬೇಕು.

೩

ಈ ಸಂಕಲನದ ಮತ್ತೊಂದು ಹಾಡ್ಗತೆ-'ಕಾಟಿವಕ್ಕಲ ಕೊಣವೇಗೌಡ'. 'ಜಿಪುಣಾಗ್ರೇಸರ ಚಕ್ರವರ್ತಿ. ಜಿಪುಣತನಕ್ಕೆ ಮತ್ತೊಂದು ಹೆಸರಾಗಿ ಕೊಣವೇಗೌಡ ಇಂದಿಗೂ ಜನರಬಾಯಲ್ಲಿ ಉಳಿದಿದ್ದಾನೆ. ಪಾರೇಗೌಡ ಎಂಬ ಹೆಸರೂ ಅವನಿಗಿದೆ.

ಬಚ್ಚಲು ಕಲ್ಲೆ ಬೆಳ್ಳಿ ಬಂಗಾರ
ಹಸಿಯ ಕಲ್ಲೆ ನವರತ್ನ
ರನ್ನದ ಕಣಜ ಚಿನ್ನದ ಕಣಜ
....
ನಲವತ್ತೆರಡು ಆಡಿನ ಸಾಲು
ಹತ್ತು ಒಂಡು ದನಗಳ ಸಾಲು
ಇಪ್ಪತ್ತೆರಡು ಎಮ್ಮೆಯ ಸಾಲು

ಇಷ್ಟೆಲ್ಲ ಇದ್ದರೂ, ದಾನಧರ್ಮದ ಹೆಸರನ್ನೇ ಕೇಳದವನು. ಕೈಯೆತ್ತಿ ಕೊಟ್ಟದ್ದು ಅವರ ವಂಶಕ್ಕೇ ಬಂದದ್ದಲ್ಲ. 'ಕುಡಿಯುಲು ನೀರಕೊಟ್ಟವನಲ್ಲ,' ಅಷ್ಟೇ ಅಲ್ಲ. ಜನರ ಕಾಟದಿಂದ ದೂರವಿರಲು ಅವನು ಹೆಂಡತಿಗೆ ಹೇಳಿಕೊಡುವ ಉಪಾಯುವಾದರೂ ಎಂಥದು—

ಕಡಿಯೋ ನಾಯ ಮನೆಮುಂದೆ ಕಟ್ಟಿ
ಹಾಯೋ ಹಸವ ಬಾಕ್ಲಲಿ ಕಟ್ಟಿ
....
ಓತ್ಲಲಿಗೆ ಹೋಗಿ ಚಿತ್ಲಲಿ ಬಾರೆ
ನಾಚಿಕಂಡೆ ಓಡೋಯ್ತಾರೆ

ಇಷ್ಟೇ ಅಲ್ಲ. ಅಡಿಗೆ ಮಾಡುವ ವಿಧಾನವನ್ನು ಹೆಂಡತಿಗೆ ಹೇಳಿಕೊಡುತ್ತಾನೆ :

ಮೂರು ವರ್ಷದ ಮುಗ್ಗಿನ ಜೋಳ
ಆರು ವರ್ಷದ ಬುರುಡೆ ರಾಗಿ
ಆಳೆದು ಮೂರು ಪಾವು ತಕ್ಕೊಳ್ಳೆಣ್ಣೆ
ಮಾಡಲಿ ಬೇಡ ಕೇರಲಿ ಬೇಡ
ಬಿಸಲಿಗಾಕಿ ಒಣಗಿಸಬೇಡ
ಗಾಳಿಗಾಕಿ ತೂರಲುಬೇಡ

ಗುಬ್ಬಿಕ್ಕರ್ಧ ತಿಂದೋಯ್ತುವೆ

………………………………

ಸೊಪ್ಪುಗಿಪ್ಪು ಸೋಸಿಯು ಜೋಕೆ

ಮಳಗಿಳ ತಗದಿಯು ಜೋಕೆ

ಸೊಪ್ಪಿಗೆ ಉಪ್ಪೋದಾಕಿಯು ಜೋಕೆ

ಹೆಂಡತಿಯಾದರೂ ಅಪನಿಗೆ ತಕ್ಕವಳೇ. ಚಾಚೂ ತಪ್ಪದೆ ನಡೆಯುವಂತಹವಳು. ಊರಿನ ಹತ್ತಿರ ಜವಿಾನು ಮಾಡಿದರೆ ಕಂದಾಯ ಕೊಡಬೇಕಾಗುತ್ತದೆಯೆಂದು ಕಾಡು ಮೇಡಿನಲ್ಲಿ ಭೂಮಿಮಾಡಿದ್ದಾನೆ. ಹೆಚ್ಚು ಬೀಜಬಿತ್ತಿ ಮಳೆಹೋದರೆ ನಷ್ಟವಾಗುತ್ತದೆ ಯೆಂದು ಮೂರು ಪಾವು ಜೋಳವನ್ನ ನೂರೆಕರೆಗೆ ಬಿತ್ತುತ್ತಾನೆ. ಊಟಮಾಡುವಾಗ ಕೈಯಲ್ಲಿ ತಿಂದರೆ ಕೈಗಾಗುತ್ತದೆಯೆಂದು ನಾಯಿಯಂತೆ ಬಗ್ಗಿ ನಾಲಗೆಯಲ್ಲಿಯೇ ನೆಕ್ಕು ತ್ತಾನೆ. ಕುಡಿಯುವ ಗಂಜಿಗೆ ನೊಣ ಬಿದ್ದರೆ, ಅಷ್ಟು ನಷ್ಟವಾಗುತ್ತದೆಯೆಂದು—

ನೊಣವನಾದರೆ ಹಿಡಕೊಂಡನು

ಒಂದು ಜಬ್ಬಾಟ ಜಬ್ಬಿದನು

ಒಂದು ಜಬ್ಬಾಟ ಜಬ್ಬಿದ ಗೌಡ

ಒಂದು ಸೀಪಾಟ ಸೀಪಿದ ಗೌಡ

ಇಂತಹ ಜಿಪ್ಪುಣಗೌಡನನ್ನು ಪರೀಕ್ಷಿಸಿ ನೋಡಬೇಕೆಂದು ಪರಮೇಶ್ವರನು ಮುದುಕ ವೇಷವನ್ನು ಧರಿಸಿ ಬರುತ್ತಾನೆ. ಹೊಲದಲ್ಲಿದ್ದ ಕೋಣವೇಗೌಡನನ್ನು ಒಂದು ಜೋಳದ ತೆನೆ ಕೊಡುವಂತೆ ಕೇಳಿದ್ದಾನೆ. “ಈ ಜೋಳದ ಹೊಲ ನನ್ನದಲ್ಲ ಊಟದ ವೇಳೆಗೆ ಬಂದರೆ ಊಟವನ್ನಾದರೂ ಕೊಡಿಸಬಹುದು” ಎಂದು ಉತ್ತರಿಸಿದ್ದಾನೆ. ಮುದುಕ ಅದಕ್ಕೇ ಗಂಟುಬಿದ್ದಿದ್ದಾನೆ. ಗೌಡ ತನ್ನ ಆಲೋಚನೆ ತಪ್ಪಾಯಿತೆಂದು ಭಾವಿಸಿ ಮನೆಗೆ ಬಂದವನೇ ಸತ್ತವನಂತೆ ಬಿದ್ದವನೆ. ಅಪನ ಹೆಂಡತಿ ಕೈಕಾಲು ಮುರಿದು, ತುಂಬ ಬಟ್ಟೆ ಹೊದಿಸಿ, ಅದರ ಮೇಲೆ-ಬೆಲ್ಲದ ನೀರನ್ನು ಚಲ್ಲಿದ್ದಾನೆ—ನೊಣ ಮುತ್ತಿ ಕೊಳ್ಳಲು. ಆದರೆ ಪರೀಕ್ಷಿಸಲೆಂದೇ ಬಂದ ಪರಮೇಶ್ವರ ಅಷ್ಟಕ್ಕೇ ಬಿಡದೆ ಹಟತೊಟ್ಟು ಅವನನ್ನು ಬದುಕಿಸುವುದಾಗಿ ಅಲ್ಲಿಯೇ ಉಳಿದಿದ್ದಾನೆ. ಕೊನೆಗೆ ತನ್ನ ಪ್ರಯತ್ನದಲ್ಲಿ ತಾನೇ ಸೋತು ಕೋಣವೇ ಗೌಡನಿಗೆ

ನೀನು ಎಷ್ಟು ಬೆಳೆದ ಕಾಲಕು

ಪರಮು ಲೋಭಿ ಆಗಯ್ಯ ನೀನು !

ಎಂದು ಶಾಪವನ್ನಿತ್ತಿದ್ದಾನೆ.

ಪರಮು ಲೋಭಿಯೊಬ್ಬನ ಕಥೆ ಇಲ್ಲಿ ಅತ್ಯಂತ ಸ್ವಾರಸ್ಯಕರವಾಗಿ ನಿರೂಪಿತ ವಾಗಿದೆ. ಪರಮೇಶ್ವರನಿಗೂ ಜಗ್ಗದ ಅವನು ಕೊನೆಗೆ ಶಾಪಕ್ಕೆ ಗುರಿಯಾಗುತ್ತಾನೆ.

ಇದರ ಇನ್ನೂ ಹಲವು ಪಾಠಗಳು ದೊರೆಯುತ್ತವೆಯಾದರೂ, ಅವನ ಜಿಪುಣ ತನವನ್ನು ಬಣ್ಣಿಸುವ ವಿವರಗಳನ್ನು ಬಿಟ್ಟರೆ ಅಂತಹ ಮಹತ್ವದ ಬದಲಾವಣೆಗಳನ್ನುಳ್ಳ ಪಾಠಗಳು ಕಾಣುವುದಿಲ್ಲ. ಡಾ. ಜಿ. ಶಂ. ಪರಮಶಿವಯ್ಯನವರೂ ದೊಂಬಿದಾಸ ರಿಂದಲೇ ಸಂಗ್ರಹಿಸಿರುವ 'ಮಾರೇಗೌಡ' ಶೀರ್ಷಿಕೆಯ ಪಾಠದ ಅಂತ್ಯ ಹೆಚ್ಚು ಸ್ಪಷ್ಟತೆ ಯಿಂದ ಕೂಡಿದೆ :

ದಾನಧರ್ಮವ ಮಾಡದ ಪಾಪಿ
ಕಲಿಯುಗದಲ್ಲಿ ಇರಲು ಬಾರ್ದು
ಎಂದು ಕೈಲಾಸಕೆ ಕಳುಸ್ದ ಸ್ವಾಮಿ

ಎಂದಿದೆ. ಆದರೆ ಮೊದಲ ಪಾಠದ ಮುಕ್ತಾಯವೇ ಬೇರೊಂದು ರೀತಿ ಇದೆ. ಅಂತಹವರಿಗೆ ಸಮಾಜದಲ್ಲಿ ಸ್ಥಾನವಿಲ್ಲ ಎಂಬುದು ಇಲ್ಲಿ ವ್ಯಕ್ತವಾಗುವ ಅಂಶ.

ಕಾಳೇಗೌಡ ನಾಗವಾರ ಅವರು 'ಬಯಲು ಸೀಮೆಯ ಲಾವಣಿಗಳು' ಸಂಕಲನದಲ್ಲಿ ಸಂಗ್ರಹಿಸಿಕೊಟ್ಟಿರುವ 'ಕೋಣವೇಗೌಡ', ಹಾಡ್ಗತೆಯ ಮುಕ್ತಾಯವೇ ಬೇರೊಂದು ರೀತಿ. ಕೋಣವೇಗೌಡನ ಜಿಪುಣ್ತನವನ್ನು ಬಿಡಿಸಲು ಸಾಧ್ಯವೇ ಇಲ್ಲ ಎಂದು ನಿರ್ಧರಿಸಿದ ಶಿವನು—

ಪ್ರಪಂಚದಲ್ಲಿ ನೀನಿರಬ್ಯಾಡ
ನಿನ್ನ ನಡತೆಯ ಕಲಿಯುತ್ತಾರೆ
ಮೂರು ದಿವಸದ ಮಧ್ಯಾನಕ್ಕೆ
ಕೈಲಾಸಕ್ಕೆ ಬಾರೋ ಗೌಡ

ಎಂದು ಆಹ್ವಾನಿಸಿ ಮಾಯವಾಗುತ್ತಾನೆ.

ಇದರ ಎಷ್ಟೋ ಪಾಠಗಳು, ಪಾಠಾಂತರಗಳು ದೊರೆತರೂ ಮೂಲ ಅಂಶ ಮಾತ್ರ ಒಂದೇ—ಅವನೊಬ್ಬ ಪರಮ ಲೋಭಿ ಅವನ ಲೋಭಿತನವನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂಬುದು. ಅದನ್ನು ಮನದಟ್ಟು ಮಾಡಲು ಕೆಲವು ಪಾಠಗಳಲ್ಲಿ ಬೇರೆ ಬೇರೆ ಘಟನೆಗಳ ವಿವರ ಬರುತ್ತದೆ ಅಷ್ಟೆ. ಇಷ್ಟನ್ನು ಬಿಟ್ಟರೆ, ಅಂತಹವರಿಗೆ ಸಮಾಜದಲ್ಲಿ ಸ್ಥಾನವಿಲ್ಲವೆಂದು ನಿರ್ಣಯಿಸಿ ಅಲ್ಲಿಂದ ಇಲ್ಲವಾಗಿಸುವ ತಂತ್ರ ಕೆಲವೆಡೆ ಗೌಣವೆನಿಸಬಹುದಾದ ರೀತಿಯಲ್ಲಿ ಅಂತರ ಕಾಣಬರುತ್ತದೆ ಅಷ್ಟೆ.

೪

ದೊಂಬಿದಾಸರು ಹಾಡುವ ಹಾಡ್ಗತೆಗಳಲ್ಲಿ ಮನಸೆಳೆಯುವ ಮತ್ತೊಂದು ಹಾಡ್ಗತೆ–'ಕಲಿಯುಗದೊಳಗೆ ಕರ್ಮವೆಚ್ಚಿತು.' ಇದೇ ಹಾಡ್ಗತೆ ಡಾ. ಜೀಶಂಪ ಅವರ 'ದೊಂಬಿದಾಸರ ಲಾವಣಿಗಳು' ಸಂಕಲನದಲ್ಲಿ 'ತಟವಾಣಿ ಹೆಣ್ಣು' ಎಂಬ ಶೀರ್ಷಿಕೆ ಯಲ್ಲಿಯೂ ಕರಾಕೃ ಅವರ 'ಜಾನಪದ ಕಥನ ಗೀತೆಗಳು' ಎಂಬ ಸಂಕಲನದಲ್ಲಿ 'ಕಲಿಯುಗದ ಬಾಲೆ' ಎಂಬ ಶೀರ್ಷಿಕೆಯಲ್ಲಿಯೂ ಪ್ರಕಟವಾಗಿವೆ. ಇವೂ ಕೂಡ

ದೊಂಬಿದಾಸರಿಂದಲೇ ಸಂಗ್ರಹಿಸಲಾದುವುಗಳು. ಮೂಲ ಕಥೆಯಲ್ಲಿ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ. ವರ್ಣನೆಗೆ ಸಂಬಂಧಿಸಿದಂತೆ ಅಲ್ಲಲ್ಲಿ ಒಂದೆರಡು ಸಣ್ಣಪುಟ್ಟ ವ್ಯತ್ಯಾಸಗಳಿವೆ.

ಆರು ಜನ ಅಕ್ಕತಂಗಿಯರಲ್ಲಿ ಮಕ್ಕಳಿಲ್ಲದ ಕೊನೆಯುವಳು ಮಲ್ಲಿಕಾರ್ಜುನನನ್ನು ಬೇಡಿ ಮಕ್ಕಳನ್ನು ಪಡೆಯುತ್ತಾಳೆ—ಎಂದು ನಾಗೇಗೌಡರು ಸಂಗ್ರಹಿಸಿರುವ ಪಾಠದಲ್ಲಿ ಕಂಡುಬಂದರೆ, ಡಾ ಜೀಶಂಪ ಹಾಗೂ ಕರಾಕೃ ಅವರುಗಳು ಸಂಗ್ರಹಿಸಿರುವ ಪಾಠಗಳಲ್ಲಿ—

ಕಲಿಯುಗದೊಳಗೊಂದು ಕೌತುಕಾದೀತು
ಕುಂತು ಕೇಳಿರಣ್ಣ
ನೀವು ತಿಳಿದು ನೋಡಿರಣ್ಣ
ನೆಲೆಯ ತಿಳಿಯದ ಹೆಣ್ಣನು ಮೆಚ್ಚಿದರೆ
ಬಾಯಲಿ ಮಣ್ಣಣ್ಣ
ಶಿವನೆ ಬಾಯಲಿ ಮಣ್ಣಣ್ಣ

ಎಂದು, ಒಂದು ಸಣ್ಣ ಪೀಠಿಕೆಯೊಂದಿಗೆ ಕಥೆ ಆರಂಭವಾಗುತ್ತದೆ. ದೇವರನ್ನು ಬೇಡಿ ಪಡೆದ ಇಬ್ಬರು ಮಕ್ಕಳಿಗೆ–ಸೂರ್ಯ, ಚಂದ್ರ ಎಂದು ಹೆಸರಿಡುತ್ತಾರೆ. ಮುಂದೆ ಗಂಡನಿಗೆ ದಂಡಿಗೆ ಹೋಗಲು ಕರೆಬರುತ್ತದೆ. ಮಕ್ಕಳ ಮೇಲಿನ ಪ್ರೀತಿ ಅವನನ್ನು ಸ್ವಲ್ಪ ತಡೆಯುತ್ತದೆ—

ಮಕ್ಕಳ ಬಿಟ್ಟು ದಂಡಿಗೆ ಹೋಗಕೆ
ಮನಸೆ ಬರುದಲ್ಲೆ
ಹ್ಯಾಗೆ ಹೋಗಲೆಣ್ಣೆ
ನಾನ್ಯಂಗೆ ಹೋಗಲೆಣ್ಣೆ
ನಾನ್ಯಾವ ರೀತಿ ಹೋಗಲೆಣ್ಣೆ

ಎಂದು ಪೇಚಾಡಿಕೊಳ್ಳುತ್ತಾನೆ. ಕೊನೆಗೂ ಕರ್ತವ್ಯದ ಕಡೆ ಗಮನ ಕೊಟ್ಟು ಹೋಗಲು ಸಿದ್ಧವಾಗುತ್ತಾನೆ. ಆದರೆ ಹೋಗುವ ಮುನ್ನ ಮಕ್ಕಳ ಬಗೆಗೆ ಎಚ್ಚರದಿಂದಿರುವಂತೆ ಹೆಂಡತಿಗೆ ಮೇಲಿಂದ ಮೇಲೆ ತಿಳಿಸಿ ಹೋಗುತ್ತಾನೆ—

ನಾನಾದರು ದಂಡಿಗೆ ಹೊರಟೆ
ಮಕ್ಕಳು ಬಲು ಜೋಕೆ
ಮನೆ ಕಡೆ ಬಲು ಜೋಕೆ
ಕಂದರು ಬಲು ಜೋಕೆ
ನನ್ನ ಬಾಲರು ಬಲು ಜೋಕೆ

ಆದರೆ, ಗಂಡ ದಂಡಿಗೆ ಹೊರಟ ಕೂಡಲೇ ಈ ಬಾಲೆ ಶೃಂಗರಿಸಿಕೊಂಡು ನೀರಿಗೆ ಹೊರಡುತ್ತಾಳೆ. ಇವಳ ಬೆಡಗು ಬಿನ್ನಾಣವನ್ನು ಕಂಡ ಕಾಮಣ್ಣನೊಬ್ಬ. "ಯಾವ್ಹೊಳೆ ಬಾಲೆ ನೀರಿಗೋಗೋಳು ನಿಂತು ಮಾತಾಡೆ" ಎಂದು ತನ್ನತ್ತ ಗಮನ ಸೆಳೆಯುವಂತೆ ಮಾಡುತ್ತಾನೆ. ಅದಕ್ಕೆ ಅವಳು, "ಕೂಡಿದ ಗಂಡ ದಂಡಿಗೆ ಹೋದ ಸಂಜೆಕು ಬಾಗೆಣೆಯ" ಎಂದು ಮನೆಗೆ ಆಹ್ವಾನಿಸಿ ಅಲ್ಲಿ ನಿಲ್ಲದೆ ಹೊರಟು ಹೋಗುತ್ತಾಳೆ. ಅದರಂತೆ ಸಂಜೆ ಮನೆಗೆ ಬರುತ್ತಾನೆ. ಊಟೋಪಚಾರವೆಲ್ಲ ಮುಗಿದು ಚಕ್ಕಂದದಲ್ಲಿ ತೊಡಗಿದ್ದಾಗ ಆಡಲು ಹೋಗಿದ್ದ ಮಕ್ಕಳಿಬ್ಬರು ಮನೆಗೆ ಬರುತ್ತಾರೆ. ಈ ದೃಶ್ಯವನ್ನು ಕಂಡು ಚಕಿತರಾಗಿ—

> ಅಪ್ಪನಾದರೆ ದಂಡಿಗೆ ಹೋದ
> ಯವ್ವ ಇವನ್ಯಾರೆ ?

ಎಂದು ಪ್ರಶ್ನಿಸುತ್ತವೆ. ತನ್ನ ಗುಟ್ಟು ಬಯಲಾಗುತ್ತದೆಯೆಂದರಿತ ಅವಳು ಮಕ್ಕಳಿಬ್ಬರನ್ನು ಕ್ರೂರ ರೀತಿಯಲ್ಲಿ ಕೊಂದು ಕೊಟ್ಟಿಗೆಯಲ್ಲಿಡುತ್ತಾಳೆ. ದಂಡಿನಲ್ಲಿದ್ದ ತಂದೆಗೆ ಮಕ್ಕಳಿಬ್ಬರೂ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಕೂಡಲೇ ಅವನು ಹೊರಟು ಬರುತ್ತಾನೆ. ಗಂಡನಿಗೂ ವಿಷ ಹಾಕುತ್ತಾಳೆ. ಅವನ ಕಣ್ಣುಗಳು ಮೊದಲು ಹೋಗುತ್ತವೆ. ಅವನನ್ನೂ ಕೊಟ್ಟಿಗೆಗೆ ನೂಕುತ್ತಾಳೆ ; ಅಲ್ಲಿ ಮಕ್ಕಳಿಬ್ಬರ ದೇಹವನ್ನು ನೋಡುತ್ತಾನೆ. ಆಗ ಇವಳು ಆ ಕೊಟ್ಟಿಗೆಗೆ ಬೆಂಕಿ ಹಚ್ಚುತ್ತಾಳೆ. ಶಿವ ಹೂಮಳೆಗರೆದು ಅವರನ್ನೆಲ್ಲ ಬದುಕಿಸಿ ಇವಳನ್ನು ಸಾಯಿಸಿದ್ದಾನೆ.

ಇಷ್ಟು ಇಲ್ಲಿಯ ಕಥೆ. ಆದರೆ ಕಲಾವಿದ ಅದನ್ನು ಸೊಗಸಾಗಿ ನಿರೂಪಿಸಿದ್ದಾನೆ. ಕಲಿಗಾಲದ ಮಹಿಮೆ ಏನೆಂಬುದನ್ನು ಕಲಿಯುಗದ ಹೆಣ್ಣು ಎಂತಹವಳೆಂಬುದನ್ನು ಚಿತ್ರಿಸಲು ಹೊರಟಿದ್ದಾನೆ. ಆದರೆ ಆ ಹೆಣ್ಣಿನ ಪಾತ್ರಕ್ಕೆ ಸಂಬಂಧಿಸಿದಂತೆ ತಕ್ಕ ಹಿನ್ನೆಲೆ ಬರುವುದಿಲ್ಲ. ಮಕ್ಕಳಿಲ್ಲದ ಅವಳು, ಉಪವಾಸವಿದ್ದು, ಮಲ್ಲಿಕಾರ್ಜುನನನ್ನು ಬೇಡಿ ಮಕ್ಕಳನ್ನು ಪಡೆಯುತ್ತಾಳೆ. ಪ್ರೀತಿಯಿಂದ ಸಾಕಿ ಸಲಹುತ್ತಾಳೆ. ಆದರೆ ಗಂಡ ದಂಡಿಗೆ ಹೊರಟ ಮರುಕ್ಷಣವೇ ಆಕೆ ಹಾದರಗಿತ್ತಿಯಾಗಿ, ಮಕ್ಕಳನ್ನು ನಿಷ್ಕರುಣೆಯಾಗಿ ಕೊಲ್ಲುತ್ತಾಳೆ. ಹಾಗೆಯೇ ದಂಡಿನಿಂದ ಹಿಂತಿರುಗಿದ ಗಂಡನನ್ನೂ ವಿಷವಿಕ್ಕಿ ಕೊಲ್ಲುತ್ತಾಳೆ. ಈ ಘಟನೆಗಳಿಗೆ ಸಾಕಷ್ಟು ಹಿನ್ನೆಲೆ ಇದ್ದಿದ್ದರೆ ಮತ್ತಷ್ಟು ಪುಷ್ಟಿಗೊಳ್ಳುತ್ತಿದ್ದುವು. ಮಿಂಡನಾಗಿ ಬಂದವನು, ಅವಳ ಹಿಂದಿನ ಪ್ರೇಮಿಯಾದರೂ ಆಗಿದ್ದಿದ್ದರೆ ಅಥವಾ ಅವಳ ಸ್ವಭಾವಕ್ಕೆ ತಕ್ಕಂತೆ ಬಯಸದೆಯೇ ಮಕ್ಕಳು ಆಗಿ ಅವರುಗಳ ಬಗೆಗೆ ಪ್ರೀತಿಯ ಲವಲೇಶವೂ ಇಲ್ಲದಂತೆ ಚಿತ್ರಿತವಾಗಿದ್ದಿದ್ದರೆ ಮತ್ತೂ ಪರಿಣಾಮಕಾರಿಯೆನಿಸುತ್ತಿತ್ತು. ಒಂದು ಹೆಣ್ಣು ಇದ್ದಕ್ಕಿದ್ದಂತೆಯೇ ಕಾಳಿಯ ರೂಪವನ್ನು ತಾಳುವುದು ವಿಚಿತ್ರವಾಗಿ ತೋರುತ್ತದೆ.

ಈ ಹಿನ್ನೆಲೆಯನ್ನು ಮರೆತು ನೋಡಿದಾಗ ಇನ್ನುಳಿದ ಘಟನೆಗಳ ಚಿತ್ರಣ ನಮ್ಮನ್ನು ಸ್ಪಂದಿಸುತ್ತದೆ. ವಾಸ್ತವವಾದ ಕ್ರೂರ ಹಿನ್ನೆಲೆಯಲ್ಲಿಯೇ ಬಂದಂತಹ 'ಕಲಿ ಯುಗದ ಬಾಲೆಯ' ಮನಸ್ಥಿತಿಯಾದರೂ ಹೇಗಿರಬಹುದೆಂಬುದರ ಚಿತ್ರಣ ಸೊಗಸಾಗಿ ಮೂಡಿಬಂದಿದೆ. ಕಾಮಣ್ಣ ನನ್ನು ಮನೆಗೆ ಕರೆದ ಬಾಲೆಯನ್ನು ಕುರಿತು 'ನಾನು ನಿನ್ನ ಮನೆಗೆ ಬಂದರೆ, ಮಕ್ಕಳವರಲ್ಲೆ' ಎಂದು ಪ್ರಶ್ನಿಸಿದಾಗ ಅದಕ್ಕೆ ಅವಳು ಕೊಡುವ ಉತ್ತರ ಮೈ' ರಝಂ' ಎನ್ನಿಸುತ್ತದೆ—

ಇಬ್ಬರ ಮನಸು ಒಂದಾಗಿದ್ರೆ
ಕುತಿಗೆ ಕುಯಿಸೇನು
ಗೆಣೆಯ, ಪೆಟಿಗೇಲಿ ತುರಿಕೇನು
ಮಕ್ಕಳ ಕತ್ತೆಮುರಿದೇನು.
ನಿಮ್ಮಂತ ಗೆಣೆಯರು ಮನಿಗೆ ಬಂದರೆ
ಏನು ಆನಂದ
ಗೆಣೆಯ, ಯಾವ ಸಂತೋಷ
ಏನು ಐಭೋಗ !

ಎಂದು ಚಪ್ಪರಿಸುತ್ತಾಳೆ.

ಮತ್ತೊಂದು ಘಟನೆ ಹೃದಯ ಹಿಂಡುವಂತಹುದು : ಶರೀರದ ನರನಾಡಿ ಗಳನ್ನೂ ಮಿಡಿಯುವಂತಹುದು : ತಾಯಿ, ಮಕ್ಕಳನ್ನು ಹಿಂಸಿಸುವ, ಕೊಲ್ಲುವ ದೃಶ್ಯ. ಅದಕ್ಕಿಂತ ಹೆಚ್ಚಾಗಿ, ಆ ಮಕ್ಕಳಿಬ್ಬರ ಪರಸ್ಪರ ಪ್ರೀತಿ ಇನ್ನಿಲ್ಲದ ರೀತಿಯಲ್ಲಿ ವ್ಯಕ್ತ ಕೊಂಡಿದೆ—

ನನ್ನನಾದರೆ ಕೊಲ್ಲೆಯವ್ವ
ಅಣ್ಣನ ಕೊಲುಬ್ಯಾಡ
ಅಣ್ಣಯನ ಕೊಲುಬ್ಯಾಡ

ಎಂದು ತಮ್ಮ ತಾಯಿಯನ್ನು ಕೇಳಿಕೊಳ್ಳುವುದು,

ನನ್ನನಾದರೆ ಕೊಲ್ಲೆ ಯವ್ವ—
ತಮ್ಮನ ಕೊಲುಬ್ಯಾಡ
ತಮ್ಮಯ್ಯನ ಕೊಲು ಬ್ಯಾಡ

ಎಂದು ಅಣ್ಣ ತಾಯಿಯನ್ನು ಬೇಡಿಕೊಳ್ಳುವುದು ಮನಸ್ಸನ್ನು ಕಲಕುತ್ತದೆ. ಆದರೆ, ಅದಕ್ಕೆ ಅವಳು—

ಇಬ್ಬರಲಿ ಒಬ್ಬನ ಬಿಟ್ಟರೆ
ಒಬ್ಬನ ಬಿಡಲಾರೆ
ನನ ಪ್ರಾಣಕೆ ಬತ್ತೈತೆ !

ಎಂದು ಹೇಳಿ ಇಬ್ಬರನ್ನೂ ತೀರಿಸುತ್ತಾಳೆ. 'ಕಲಿಯುಗದೊಳಗೆ ಕರ್ಮವೆಚ್ಚಿತು ಲಾಲಿಸಿ ಕೇಳಿರಣ್ಣ, ತಿಳಿದು ನೋಡಿರಣ್ಣ' ಎಂದು ಹೇಳಿ, ಅಂತ ಹೆಣ್ಣೊಬ್ಬಳ ಚಿತ್ರ ವನ್ನು ಚಿತ್ರಿಸಿದ್ದಾನಾದರೂ, ಅದಕ್ಕೆ ತಕ್ಕ ಪರಿಸರವನ್ನು ಕಲ್ಪಿಸುವಲ್ಲಿ, ಪ್ರಕ್ಷಿ ಗೊಳಿಸುವಲ್ಲಿ ವಿಫಲನಾಗಿದ್ದಾನೆ. ಆದರೆ ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದು ಆಗುತ್ತದೆ ಎಂಬ ಉದಾತ್ತ ತತ್ತ್ವವೂ ಕೊನೆಯಲ್ಲಿ ಪ್ರತಿಪಾದಿತವಾಗಿದೆ.

೫

'ಗೌರಮ್ಮನ ಮೇಲೆ' — ದೋಂಬಿದಾಸರಿಂದಲೇ ಸಂಗ್ರಹಿತವಾದುದಾದರೂ ಅಷ್ಟೊಂದು ಸ್ಪಷ್ಟತೆ ಇಲ್ಲ. ಮಧ್ಯೆ ಮಧ್ಯೆ ತೊಡಕಿದೆ. ಕರೆಯಲು ಬಂದ ಅಣ್ಣ ನೊಂದಿಗೆ ತೌರಿಗೆ ಹೋಗಲು ಗೌರಮ್ಮ, ಪರಮೇಶ್ವರನ ಅಪ್ಪಣೆ ಬೇಡಲು ಬರು ತ್ತಾಳೆ. ಶಿವರಾಯ, ಏಕೆ ? ಏನು ? ನನಗೇನು ತರುತ್ತೀಯ ? ಮುಂತಾಗಿ ರೇಗಿ ಸುತ್ತಾನೆ. ತೌರಿನವರು ಬಡವರು, ಏನೂ ಗತಿಯಿಲ್ಲದವರು ಎಂಬುದು ಶಿವನ ಅಭಿ ಪ್ರಾಯ :

ಅಕ್ಕಿಯ ನುಚ್ಚಿಗೆ ಅರಿಶ್ನದ ದೂಳಿಗೆ
ಯಾವ ತವರಂತ ಮರೆದೀಯಲ್ಲೆ, ನೀನು
ಎಂತ ತವರಂತ ಬಗಸೀದಲೆ ?

ಎಂದು ಹೀಯಾಳಿಸುತ್ತಾನೆ ಶಿವ. ಅದಕ್ಕೆ ಗೌರಿಯ ಉತ್ತರವಾದರೂ ಎಂತಹುದು—

ಅಕ್ಕಿಯ ನುಚ್ಚು ಸಾಕು ಅರಿಶ್ನದ ದೂಳು ಸಾಕು
ಅರಗಳಿಗೆ ನಾನಿದ್ದು ಬರುವೇನಲ್ಲ ಶಿವನೆ
ಚಣ ಹೊತ್ತು ನಾನಿದ್ದು ಬರುವೇನಲ್ಲ

ಎಂದು ನುಡಿಯುತ್ತಾಳೆ. 'ಹೆಣ್ಣುಮಕ್ಕಳಿಗೆ ತೌರಾಸೆ' ಎಂಬುದನ್ನು ದೃಢವಾಗಿ ತೋರಿ ಕೊಡುವುದೇ ಇದರ ಮುಖ್ಯ ಉದ್ದೇಶವಾಗಿದೆ. ಅದು ದೇವತೆಗಳಿಗೂ ಬಿಟ್ಟದ್ದಲ್ಲ. ಗೌರಮ್ಮನಿಗೆ ಭೂಲೋಕವೇ ತೌರುಮನೆ ಎಂಬ ಹಳ್ಳಿಗರ ಕಲ್ಪನೆಯೂ ಇಲ್ಲಿ ಗಮ ನಾರ್ಹ. ಗೌರಿಯು ತೌರಾಸೆಯನ್ನು ಕಂಡು, ಅವಳು ಬರುವಾಗ—ತೌರಿನವರು ಬಡವ ರಾದರೂ ಹೊತ್ತು ತಂದುದನ್ನು ಕಂಡು :

ವರ್ಷಕೆ ಒಂದು ಸಾರಿ ಹೋಗಿಬಾರೆ ಗೌರಮ್ಮ
ಹುಟ್ಟಿದ ಮಕ್ಕಳಿಗಿನ್ನ ತೌರನೆನಸೆ, ನೀನು
ಹುಟ್ಟೋಮಕ್ಕಳಿಗಿನ್ನ ತೌರ ನೆನಸೆ

ಎಂದು ಹೇಳಿ, ಮುಂದೆ ಎಂದೆಂದೂ ಹೋಗಿ ಬರುವಂತೆ ಅಪ್ಪಣೆ ನೀಡುತ್ತಾನೆ. ಗೌರಿ ಹಬ್ಬಕ್ಕೆ ಸಂಬಂಧಿಸಿದಂತೆ, ಆ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಈ ಹಾಡ್ಗತೆ ರಚನಾ ದೃಷ್ಟಿಯಿಂದಲೂ ಸೊಗಸೆನಿಸುತ್ತದೆ.

೬

'ಕರ್ತಿರಾಯ'—'ಕಾಳಿಂಗರಾಯ', 'ಕತ್ತಲೆರಾಯ' ಎಂಬ ಶೀರ್ಷಿಕೆಗಳಲ್ಲಿ ದೊರೆತಿರುವುದು ಕಾಳಿಂಗರಾಯನೆಂಬುವನ ಕಥೆ ಇದುವರೆವಿಗೂ ಇದರ 3-4 ಪಾಠಗಳು ದೊರೆತಿವೆ. ಕರೀಂಖಾನ್, 'ಕತ್ತಲೆರಾಯನ ಕತೆ' ಎಂಬ ಶೀರ್ಷಿಕೆಯಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕತ್ತಲೆರಾಯ, ಕಾಳಿಂಗರಾಯನ ತಂದೆ. ಕರಾಕೃ ಅವರು ಚಿತ್ರದುರ್ಗ ಜಿಲ್ಲೆಯಲ್ಲಿ ಸಂಗ್ರಹಿಸಿರುವ 'ಕಾಳಿಂಗರಾಯ', ಮತಿ ಘಟ್ಟ ಮೂರ್ತಿಯವರೂ, ಮಲೆನಾಡು ಭಾಗದಲ್ಲಿ ಇದರ ಒಂದು ಪಾಠವನ್ನು ಸಂಗ್ರಹಿಸಿರುವುದಾಗಿ ತಿಳಿಯುತ್ತದೆ. ಇಪಲ್ಲದೆ. ಕುಮಾರರಾಮ ಸಾಂಗತ್ಯದಲ್ಲಿ— 'ಕಾಳಿಂಗರಾಯ' 'ಸಾರಂಗಧರ' ಹಾಗೂ 'ಕರಿಭಂಟ' ಈ ಮೂರೂ ಕಥೆಗಳನ್ನು ಹೆಸರಿಸಲಾಗಿದೆ.*

'ಕಾಳಿಂಗರಾಯ' ಸುವಿಸ್ತಾರವಾದ ವರ್ಣನೆಗಳಿಂದ ಕೂಡಿದ ದೀರ್ಘಕಾವ್ಯ. ಒಂದೊಂದು ಘಟ್ಟವೂ ವರ್ಣನಾಪ್ರಧಾನವಾಗಿದ್ದು ಹೆಚ್ಚು ಆಕರ್ಷಕವೆನಿಸುತ್ತದೆ. ತಾಯ್ತನದ ಹಂಬಲವನ್ನೂ, ಪುತ್ರವಾತ್ಸಲ್ಯವನ್ನೂ, ಪತಿಯೇ ಪರದೈವವೆಂದು ನಂಬಿದ ಸತಿಯ ಸದ್ಗುಣ ಹಾಗೂ ವೀರನಿಷ್ಠೆಯನ್ನೂ,—ಮನಮುಟ್ಟುವಂತೆ ಇಲ್ಲಿ ಚಿತ್ರಿಸಲಾಗಿದೆ. ವೃದ್ಧಾಪ್ಯದಲ್ಲಿಯೂ ವರಬೇಡಿ ಮಗನನ್ನು ಪಡೆದು ಕೊನೆಗೆ ಅಲ್ಪಾಯುವಾಗಿ ಕಳೆದುಕೊಂಡ ತಾಯಿ, ಸತ್ತವನನ್ನು ಗಂಡನನ್ನಾಗಿ ಪಡೆದು ಕೊನೆಗೆ ಬದುಕಿಸಿಕೊಂಡ ಚೆನ್ನವ್ವೆ—ಇವರುಗಳ ಮಧ್ಯೆ ಸಿಲ್ಲುವ ಕಾಳಿಂಗರಾಯ—ಈ ಮೂರೂ ಪ್ರಧಾನ ಪಾತ್ರಗಳನ್ನಾಗುಳ್ಳ ಈ ಹಾಡ್ಗತೆ ಮನಸೆಳೆಯುತ್ತದೆ.

ಇಲ್ಲಿಯ ಕಥೆ ಇಷ್ಟು : ಬಹಳಕಾಲದ ಮೇಲೆ—ಕತ್ತಲರಾಯ, ಮದುರಂಬೆಯರು, ಕಾಳಿಂಗರಾಯನನ್ನು ಮಗನನ್ನಾಗಿ ಪಡೆಯುತ್ತಾರೆ. ಮೊದಲೇ ಅವನು ಅಲ್ಪಾಯುಸ್ಸಿನವನೆಂಬುದು ತಿಳಿಯುತ್ತದೆ. ತಂದೆ ತಾಯಿ ಬಹಳ ಎಚ್ಚರ ವಹಿಸುತ್ತಾರೆ. ಆದರೆ ವಿಧಿ ಸಂಚನ್ನು ಅವರು ವಂಚಿಸಲಾಗುವುದಿಲ್ಲ. ಮಗ ಬೇಟೆಗೆಂದು ಹಟಹಿಡಿದು ಹೊರಡುತ್ತಾನೆ. ಜೊತೆಯಲ್ಲಿ ಮಂತ್ರಿಯೇ ಮೊದಲಾಗಿ ಹಿಂಬಾಲಿಸುತ್ತಾರೆ. ಆದರೂ ಮರಣ ಸಂಭವಿಸುತ್ತದೆ. ತಾಯಿ, ಸತ್ತ ಮಗನಿಗೇ ಮದುವೆ ಮಾಡಲು, ಹೆಣ್ಣು ಕರೆದುಕೊಂಡು ಬರುವಂತೆ ಮಂತ್ರಿಗೆ ಹೇಳುತ್ತಾಳೆ. ಹಣದ ಆಸೆಯಿಂದ ಹೆಣ್ಣು ದೊರೆಯುತ್ತದೆ. ಹಾಗೆಯೇ ಅವಳ ಬಲದಿಂದ ಕಾಳಿಂಗರಾಯನೂ ಜೀವ ತಳೆಯುತ್ತಾನೆ.

ನಾಗೇಗೌಡರು ಸಂಗ್ರಹಿಸಿಕೊಟ್ಟಿರುವ 'ಕರ್ತಿರಾಯ' ಅಸಮಗ್ರವಾಗಿದೆ. ಕರಾಕೃ ಅವರು ಸಂಗ್ರಹಿಸಿಕೊಟ್ಟಿರುವ 'ಕಾಳಿಂಗರಾಯ'ದಲ್ಲಿ ಇದರ ಪೂರ್ಣಪಾಠ ದೊರೆಯುತ್ತದೆ. ನಾಗೇಗೌಡರು ಸಂಗ್ರಸಿರುವ ಕಥೆಯಲ್ಲಿ ಬಹಳ ಕಾಲ ಮಕ್ಕಳಾಗದ ಕತ್ತಲ

---

* ಡಾ. ಜಿ. ವರದರಾಜರಾವ್—ಕುಮಾರರಾಮ ಸಾಂಗತ್ಯಗಳು—ಪು. ೧೮೧.

ರಾಯ—ಮದುರಂಬೆ ದಂಪತಿಗಳು ಅದಕ್ಕಾಗಿ ಹಂಬಲಿಸುವ ಚಿತ್ರ ಬರುವುದೇ ಇಲ್ಲ. ಆದರೆ ಕರಾಕೃ ಅವರು ಸಂಪಾದಿಸಿರುವ ಪಾಠದಲ್ಲಿ ಇದು ದೀರ್ಘವಾಗಿ ವರ್ಣಿತವಾಗಿದೆ :

ವೃದ್ಧಾಪ್ಯ ಸಮೀಪಿಸಿದರೂ ಲೆಕ್ಕಿಸದೆ ಮದುರಂಬೆ ಶಿವನಲ್ಲಿ ಪುತ್ರಭಿಕ್ಷೆಯನ್ನು ಬೇಡುತ್ತಾಳೆ, ಆದಕ್ಕೆ ಶಿವನು—

ಅಣ್ಣೆ ಹೂವಿನಂಗೆ ಕೆನ್ಯಾಗೆ ನೆರೆ ಬಂದೊ
ಕಂದಾನ ಸಂತಾನ ನಿನಗ್ಯಾಕೆ ॥ತಾ॥
ಹತ್ತಿ ಹೂವಿನಂಗೆ ನೆತ್ಯಾಗೆ ನೆರೆ ಬಂದೊ
ಪುತ್ರನ ಸಂತಾನ ನಿನಗ್ಯಾಕೆ ॥ತಾ॥

ಎಂದು ಪ್ರಶ್ನಿಸುತ್ತಾನೆ. ಆದರೆ ಮದುರಂಬೆ ಅಷ್ಟಕ್ಕೇ ಬಿಡುವುದಿಲ್ಲ. 'ಬಂಜೆಂಬ ಸೊಲ್ಲ ಬಿಡಿಸಯ್ಯಾ' ಎಂದು ಅಂಗಲಾಚಿ ಬೇಡುತ್ತಾಳೆ. ಕೊನೆಗೆ ಅವಳ ಬಯಕೆ ಈಡೇರುತ್ತದೆ. ಅವಳು ತಾಯಿಯಾಗುತ್ತಾಳೆ. ಇಲ್ಲೆಲ್ಲ ಸುದೀರ್ಘವಾದ ವರ್ಣನೆ ಬರುತ್ತದೆ. ಅವನು ಅಲ್ಪಾಯು ಎಂಬ ಸೂಚನೆ ಶಿವನಿಂದಲೂ ತಿಳಿದಿರುತ್ತದೆ. ಅರಮನೆಯ ಜೋಯಿಸರೂ ಅದನ್ನೇ ಹೇಳುತ್ತಾರೆ. ಆದರೆ ಅವೆಲ್ಲವನ್ನೂ ಮರೆತು ಬೇಕಾದ ರೀತಿಯಲ್ಲಿ ಮಗನಿಗೆ ಸರ್ವವಿಧದ ಸೌಕರ್ಯಗಳನ್ನು ಮಾಡಿಕೊಡುತ್ತಾರೆ.

ಒಂದು ದಿನ ಕಾಳಿಂಗರಾಯ ಗೆಳೆಯರೊಂದಿಗೆ ಚೆಂಡಾಟವಾಡುತ್ತಿರುವಾಗ ವಿಧಿಮಾಯೆಯ ಕಣ್ಣು ಅವನ ಮೇಲೆ ಬೀಳುತ್ತದೆ—

ರಾಜನ ಮಗನಾದ್ರೆ ಬೀದ್ಯಾಗೆ ಸೆಂಡಾಡಬೇಕು
ನಾಳೋಗಬೇಕು ಹುಲಿಬೇಟೆ । ಹೋಗಿದಿದ್ರೆ ।
ಸ್ವಾರಿ ಕರೆಕೊಂತ ಇರಬೇಕು ॥ ೮॥

ವಿಧಿ ಅವನಲ್ಲಿ ಹುಲಿಬೇಟೆಯ ಬೀಜವನ್ನು ಬಿತ್ತುತ್ತಾಳೆ. 'ನಾರ್ಕಂದ ಮಾತು ಉಕ್ಕುತದೆ ನಮ್ಮ ಒಡಲಾಗೆ' ಎಂದು ತಾಯಿಯನ್ನು ಒಪ್ಪಿಸಿ ಬೇಟೆಗೆ ಹೊರಡಲು ಸಿದ್ಧವಾಗುತ್ತಾನೆ.

ಇದಿಷ್ಟು ಭಾಗ, ನಾಗೇಗೌಡರು ಸಂಪಾದಿಸಿರುವ ಭಾಗದಲ್ಲಿ ಬರುವುದಿಲ್ಲ. ಕಾಳಿಂಗರಾಯ ಬೇಟೆಗೆ ಹೊರಡುವಲ್ಲಿಂದ ಕತೆ ಆರಂಭವಾಗುತ್ತದೆ. ಇಲ್ಲಿಯೂ ಕೂಡ ಈ ಎರಡು ಪಾಠಗಳಲ್ಲಿ ಸಾಕಷ್ಟು ಭೇದಗಳು ಕಂಡುಬರುತ್ತವೆ. ಕರಾಕೃ ಅವರ ಪಾಠದಲ್ಲಿ ವಿಧಿಯೇ ನೇರವಾಗಿ ನಿಂತು ಕಾಳಿಂಗರಾಯನನ್ನು ಸಾವಿನತ್ತ ಕೊಂಡೊಯ್ಯಲು ಸತತ ಪ್ರಯತ್ನ ನಡೆಸುವುದನ್ನು ಕಾಣುತ್ತೇವೆ. ಮಾಯದ ಗುಡಿಯನ್ನು ಮಾಡಿ, ಅದರಲ್ಲಿ ಹುಲಿಯ ಚಿತ್ರವನ್ನು ಗೀಜಗನ ಹಿಂಡಿನ ಚಿತ್ರವನ್ನು ಕೊರೆದು ವಿಧಿಯಮ್ಮನ ಮೂಲಕ ಕಳುಹಿಸಿಕೊಡುತ್ತಾನೆ ಶಿವರಾಯ. ವಿಧಿಯೇ, ತನ್ನ ಕೈವಾಡದಿಂದ ಕಾಳಿಂಗರಾಯ ಅದನ್ನು ಪ್ರವೇಶಿಸುವಂತೆ ಮಾಡುತ್ತಾಳೆ. ಗೀಜಗನ ಹಿಂಡನ್ನು ಕಂಡು ಒಳನುಗ್ಗಿದ ಕಾಳಿಂಗರಾಯ ಅಲ್ಲಿಯ ಮಾಯದ ಹುಲಿಯ ಬಾಯಿಗೆ ಬಲಿಯಾಗುತ್ತಾನೆ—

ಕೆಂಡದಂಥ ಕಣ್ಣು ಕೊಕ್ಕಾರದಂಥ ಮೀಸೆ
ಪಟ್ಟಿ ಬಂದ ಹುಲಿಯೆ ಎಟ್ಟಿದಂಗಾಯ್ತು ॥
ಅರೆಬಂದ ಹುಲಿಯ ಇರಿಯೋನ ಹೊತ್ತಿಗೆ
ನನ್ನ ಬಾಲ ಕಾಳಿಂಗ ಸಿಗ್ದೆಬಿದ್ದ

ಕಾಳಿಂಗ ಮಾಡಿದ ಸುದ್ದಿಯನ್ನು ತಿಳಿದು ತಾಯಿಯೇ ಅಲ್ಲಿಗೆ ಧಾವಿಸಿ ಬರುತ್ತಾಳೆ, ಹುಚ್ಚಿಯಂತೆ ಅಲೆಯುತ್ತಾಳೆ. ಅವಳು ಬರು ಬರುವ ಬರದಲ್ಲಿಯೇ ಅವಳ ದುಃಖ. ಆವೇಶಗಳನ್ನು ಕವಿ ಚಿತ್ರಿಸುತ್ತಾನೆ :

ಮಡಿದ ಕಾಳಿಂಗನ ಹಡೆದವ್ವ ಬರುತಾಳೆ
ಕಡೆಯೋಳು ಸಮುದ್ರಾವು ಕಲಿಕ್ಯಾವು ॥ ಹೇ ॥
ಹಡೆದವ್ವ ಅಡವಿ ಹೋಗುತಾಳೆ ॥ ಹೇ ॥
ಸತ್ತ ಕಾಳಿಂಗನ ಹೆತ್ತವ್ವ ಬರುತಾಳೆ
ಸುತ್ತೇಳು ಸಮುದ್ರಾವೆ ಕಲಿಕ್ಯಾವು । ಕಾಳಿಂಗನ । ಹೇ ॥
ಹೆತ್ತವ್ವ ಅಡವಿ ಹೋಗುತಾಳೆ ॥ ಹೇ ॥

ಏಳು ಸಮುದ್ರ ಕಲಕಿ ಕುಲುಕುವಷ್ಟು ರಭಸದಲ್ಲಿ ಅವಳ ಬರವು. ಅವಳ ದುಃಖ ಹೇಳ ತೀರದು. ಈ ಸಂದರ್ಭಗಳೂ ನಾಗೇಗೌಡರು ಸಂಗ್ರಹಿಸಿರುವ ಪಾಠದಲ್ಲಿ ಬರುವುದಿಲ್ಲ. ಬದಲಾಗಿ, ಸತ್ತ ಕಾಳಿಂಗನನ್ನು ಮಂತ್ರಿಯೇ ಹೊತ್ತು ತರುತ್ತಾನೆ. —'ಸತ್ತಿದ್ದ ಶವವ ಹೊತ್ತುಕೊಂಡು ಪರದಾನಿ ಬಂದನು ಊರಿಗೆ ಪರದಾನಿ' ಎಂದು ಚಿತ್ರಿತವಾಗಿದೆ.

ಸತ್ತ ಕಾಳಿಂಗನಿಗೇ ಮದುವೆ ಮಾಡಿಸುವ ಸಂದರ್ಭ, ಗಂಡನನ್ನು ಮರಳಿ ಪಡೆಯುವ ಸಂದರ್ಭ–ಇವುಗಳಲ್ಲಿ ಎರಡು ಪಾಠಗಳಲ್ಲಿಯೂ ಹೆಚ್ಚುಕಡಿಮೆ ಒಂದೇ ಆಗಿ ಬರುತ್ತದೆ. ಆದರೂ ಕರಾಕ್ಯ ಅವರ ಪಾಠದಲ್ಲಿಯ ವಿಸ್ತಾರ ವರ್ಣನೆ ನಾಗೇಗೌಡರ ಪಾಠದಲ್ಲಿ ಕಾಣುವುದಿಲ್ಲ.

ಹಲವು ದೃಷ್ಟಿಯಿಂದ 'ಕಾಳಿಂಗರಾಯ' ಒಂದು ಉತ್ತಮ ಕಾವ್ಯ. ವರ್ಣನೆ, ಪಾತ್ರಸೃಷ್ಟಿ ಹಾಗೂ ಪಾತ್ರ ಪೋಷಣೆಯ ದೃಷ್ಟಿಯಿಂದಂತೂ ಆಕರ್ಷಕ. ಮದುರಂಬೆ, ಚೆನ್ನವ್ವ, ಕಾಳಿಂಗರಾಯ ಮತ್ತು ಪ್ರಧಾನಿಯ ಪಾತ್ರಗಳು ಮನಸ್ಸಿನಲ್ಲಿ ಉಳಿಯುತ್ತವೆ. ಕಾಳಿಂಗರಾಯ ಇಡೀ ಕಥೆಯ ಕೇಂದ್ರಬಿಂದು. ಅತ್ತ ಪುತ್ರವಾತ್ಸಲ್ಯದ ಪರಮ ನಿಧಿಯೆನಿಸಿದ ಮದುರಂಬೆಯು, ಇತ್ತ ಪತಿಯೇ ಪರದೈವವೆಂದು' ಪರಮನಿಷ್ಠೆಯುಳ್ಳ ಸಾಧ್ವೀಮಣಿ ಚೆನ್ನವ್ವ–ಇವರುಗಳ ಮಧ್ಯೆ ನಿಲ್ಲುವ ಕಾಳಿಂಗರಾಯನ ಪಾತ್ರ ಒಂದು ಅದ್ಭುತ ಚಾಲಕ ಶಕ್ತಿಯಾಗಿ ನಮ್ಮ ಗಮನವನ್ನು ಸೆಳೆಯುತ್ತದೆ.

೭

ಬಹುಶಃ ನಡೆದ ಘಟನೆಯೊಂದರ ಮೇಲೆಯೇ ನಿರೂಪಿತವಾಗಿರುವ ಲಾವಣಿ— 'ತುಂಬಿದ ಬಳ್ಳಾರಿ ವಳಗೆ' ಇದರದ್ದೇ ಇನ್ನೊಂದು ಪಾಠ ಚೌಡಿಕೆ ಸಂಪ್ರದಾಯದವರಿಂದ 'ಬಳ್ಳಾರಿ ತತ್ತ್ವ' ಎಂಬ ಶೀರ್ಷಿಕೆಯಲ್ಲಿ ದೊರೆಯುತ್ತದೆ. ನಂ. ನಾರಾಯಣಗೌಡರು ಸಂಪಾದಿಸಿ ಪ್ರಕಟಿಸಿರುವ 'ಚೌಡಿಕೆ ಕಾವ್ಯಗಳು' ಕೃತಿಯಲ್ಲಿ ಈ ಪಾಠವನ್ನು ಕಾಣಬಹುದು. ಬಳ್ಳಾರಿಯಲ್ಲಿಯೇ ಸಂಭವಿಸಿದ ಘಟನೆಯಿದೆಂದು ಕಲಾವಿದರು ಹೇಳುತ್ತಾರೆ. ಈ ಘಟನೆಗೆ ಸಂಬಂಧಿಸಿದ ಮಗುವಿನ ಸಮಾಧಿಯೊಂದನ್ನು ಅವರು ಅಲ್ಲಿ ತೋರುತ್ತಾರೆ. ಹಾಗಾಗಿ ಆ ಸ್ಥಳದಲ್ಲಿಯೇ ನಡೆದ ಘಟನೆ ಇದೆಂಬುದೂ ವೇದ್ಯ.

ಇದೊಂದು ಸಣ್ಣ ಘಟನೆ. ಆದರೆ, ಹೃದಯ ಕಲಕುವಂತಹುದು. ಮಗುವಿನ ಮೈಮೇಲಿದ್ದ ವಸ್ತ್ರಾಭರಣಗಳ ಆಸೆಯಿಂದಾಗಿ ಸ್ವಂತ ಸೋದರಮಾವ, ಶಾಲೆಗೆ ಹೊರಟಿದ್ದ ಮಗುವನ್ನು ತಿಂಡಿಯ ಆಸೆ ಹುಟ್ಟಿಸಿ ಕರೆತಂದು, ಎಲ್ಲವನ್ನೂ ಕಿತ್ತುಕೊಂಡು ಬಾವಿಗೆ ತಳ್ಳುತ್ತಾನೆ. ಇಷ್ಟು ಕಥೆ. ಆದರೆ ನಿರೂಪಣೆಯಲ್ಲಿ–ಮನವನ್ನು ತಟ್ಟುವ, ಮುಟ್ಟುವ ಹೊಳಪಿದೆ, ಮೊನಚಿದೆ ; ಹೃದಯವನ್ನು ಕಲಕುವ, ಕರಗಿಸುವ ಶಕ್ತಿಯಿದೆ, ಯುಕ್ತಿಯಿದೆ.

ಈ ಎರಡೂ ಪಾಠಗಳನ್ನು ಗಮನಿಸುವಾಗ–ಹುಡುಗನ ಸಾವು ಸಂಭವಿಸುವವರೆಗಿನ ಘಟನೆಗಳು ಎರಡು ಪಾಠಗಳಲ್ಲಿಯೂ ಒಂದೆಯಾಗಿ ಬರುತ್ತದೆ. ನಾಗೇಗೌಡರು ಸಂಗ್ರಹಿಸಿರುವ ಪಾಠವಲ್ಲಿ ಅಷ್ಟಕ್ಕೇ ಮುಕ್ತಾಯವೂ ಆಗುತ್ತದೆ. ಆದರೆ, ಚೌಡಿಕೆಯವರು ಹಾಡುವ ಪಾಠದಲ್ಲಿ ಅದು ಮುಂದುವರಿಯುತ್ತದೆ. ಅಲ್ಲದೆ ಇತರ ವರ್ಣನೆಗಳೂ ಇವರಲ್ಲಿ ಹೆಚ್ಚಾಗಿಯೇ ಬರುತ್ತವೆ. ಸೊಂಟಕ್ಕೆ ಕಲ್ಲನ್ನು ಕಟ್ಟಿ ಏಳಾಳುದ್ದ ಬಾವಿಗೆ ಹಾಕಲು ಬಂದ ಸೋದರಮಾವನನ್ನು ಕುರಿತು ಆ ಬಾಲಕ ಕರುಳು ಮಿಡಿಯುವಂತೆ—

ಯಾಕೋ ಸೋದರಮಾವ
ಬ್ಯಾಡ ಸೋದರಮಾವ
ಕೈಯೆತ್ತಿ ಮುಗಿಯುತೀನಿ
ನಿನ ಕಾಲಿಗೆ ಬೀಳುತೀನಿ
ನಿನ್ನ ಏಳ್ಬಾನ ಮಕ್ಕಳೊಳಗೆ
ನಾನೊಬ್ಬ ಮಗನೆ ಕಾಣೊ
ನನ್ನ ಪ್ರಾಣನಾದರೆ ಕಳಬ್ಯಾಡ
ಮಾವಯ್ಯ–ಅಯ್ಯೊ ಸೋದರಮಾವ !
....
ಒಡವೆ ವಸ್ತ್ರಗಳ ಕೊಳ್ಳೊ

ಬದ್ದು ಬಳೆಗಾಳ ಕೊಳ್ಳೊ
ಎಲ್ಲಾ ಒಡವೇಯ ಕೊಳ್ಳೊ
ನಮ ತಂದೆ ತಾಯಿ ಕಾಣದಾಂಗೆ
ವಂಬೈನೂರು ರೂಪಾಯ ನಿನಗೆ
ತಂದು ಕೊಡುತೀನಿ
    ಅಯ್ಯೊ ಸೋದರು ಮಾವ
ನಾನು ಸತ್ತ್ಹೋದ ಮೇಲೆ
ನನ್ನ ವಂಶಾಕೆ ಶಿವನೆ
ಯಾರು ದಿಕ್ಕಿಲ್ಲ ಕಾಣೊ
ನನ್ನ ಪ್ರಾಣನಾದರೆ ಕಳಿಯ ಬ್ಯಾಡ
ಮಾವಯ್ಯ–ಅಯ್ಯೊ ಸೋದರು ಮಾವ !

ಎಂದು ಬಗೆ ಬಗೆಯಲ್ಲಿ ಬೇಡಿಕೊಳ್ಳುತ್ತಾನೆ, ಆದರೆ ಇದಾವುದು ಅವನ ಮಾನ ವನ್ನು ತಟ್ಟುವುದಿಲ್ಲ. ಇಂತಹ ಮನತಟ್ಟುವ ಭಾವನೆಗಳು ಮೊದಲ ಪಾಠದಲ್ಲಿ ಇಲ್ಲ ವಾಗಿವೆ. ಸತ್ತಮಗನ ಕುಡಃ ತಾಯಿ ಗೋಳಿಡುವ ಕರುಣಾಜನಕ ದೃಶ್ಯವೂ ಅಲ್ಲಿ ಇಲ್ಲ ವಾಗಿದೆ. ಸೋದರಮಾವ ಎಸಗಿದ ಕೃತ್ಯವನ್ನೆಲ್ಲ ಕಣ್ಣಾರೆ ಕಂಡವರೊಬ್ಬರು ಅದನ್ನೆಲ್ಲ ಬೆಳಕಿಗೆ ತಂದು ನಿರಪರಾಧಿಯೊಬ್ಬಳನ್ನು ಪಾರುಮಾಡಿದ್ದಲ್ಲದೆ, ಅಪರಾಧಿಗೆ ಗಲ್ಲುಶಿಕ್ಷೆ ದೊರೆಯುವಂತೆ ಮಾಡುತ್ತಾರೆ.

ಸಣ್ಣದೊಂದು ಘಟನೆ, ಜನಪದ ಕವಿಯ ಪ್ರತಿಭಾಮೂಸೆಯಲ್ಲಿ ಅರಳಿ ಹೂವಾಗಿ ಕಾವ್ಯ ದೃಷ್ಟಿಯಲ್ಲಿ ಕಂಪನ್ನು ಸೂಸಿದೆ.

೮

'ಎತ್ತಿದೆ ನಾಗವ್ವನಾ ಸ್ಮರಣೆಯಾ' ಇಲ್ಲಿಯು ಒಂದು ಅಪೂರ್ಣ ಸಂಗ್ರಹ. ಇದರ ಎರಡು ಪಾಠಾಂತರಗಳು ದೊರೆತಿವೆ. ಡಾ. ಜೀಶಂಪ ಅವರು ತಮ್ಮ 'ಜನಪದ ಖಂಡ ಕಾವ್ಯಗಳ'ಲ್ಲಿ ಇದರ ಇನ್ನೊಂದು ಪಾಠವನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಮೊದಲ ಪಾಠದ ಕಥೆಯ ಸಾರಾಂಶ ಇಷ್ಟು : ದಂಡಿಗೆ ಹೊರಡಲಿರುವ ನಾಗಣ್ಣ ನಿಗೆ ಮದುವೆ ಮಾಡಬೇಕೆಂದು, ನಾಗವ್ವನನ್ನು ಕೇಳಲು ಬರುತ್ತಾರೆ. ಆದರೆ ಆ ಸಂದರ್ಭದಲ್ಲಿ ಆದ ಅಪಶಕುನಗಳಿಂದಾಗಿ, ಮದುವೆಯಾಗಲು ನಾಗವ್ವ ಒಪ್ಪುವುದಿಲ್ಲ ವಾದರು,'ಮಾತಿಗೆ ತಪ್ಪೋರು ನಾವಲ್ಲ' ಎಂಬ ತಂದೆಯ ಹಟದಿಂದಾಗಿ ಮದುವೆ ನಡೆದು ಹೋಗುತ್ತದೆ. ನಾಗವ್ವನಲ್ಲಿ ಮೊದಲಿನಿಂದ ಕೊನೆಯವರೆವಿಗೂ ಅಸಮಧಾನ ಇದ್ದೇ ಇರುತ್ತದೆ. ಮದುವೆ ಮುಗಿದ ಕೂಡಲೇ ನಾಗಣ್ಣ ಯುದ್ಧದಕ್ಕೆ ಹೊರಡುತ್ತಾನೆ. ಆಗಲೂ ಅಪಶಕುನಗಳು ಎದುರಾಗುತ್ತವೆ. ಆದರೆ, ಅವಾವನ್ನು ಲಕ್ಷಿಸದೆ ಅವನು ಮುನ್ನಡೆ ಯುತ್ತಾನೆ. ಇಲ್ಲಿಗೆ ನಾಗೇಗೌಡರು ಸಂಗ್ರಹಿಸಿರುವ ಪಾಠದ ಕಥೆ ಮುಕ್ತಾಯವಾಗುತ್ತದೆ.

ಮುಂದೆ ಅವರೇ ಅಡಿ ಟಿಪ್ಪಣಿಯಲ್ಲಿ "ಹಾಡು ಅಪೂರ್ಣವಾದಂತಿದೆ. ಆಯುಧ ಮುರಿದ ಮೇಲೆ ನಾಗಣ್ಣ ಯುದ್ಧದಲ್ಲಿ ಮಡಿದು ನಾಗವ್ವನ ಬಾಳಿಗೆ ಕೊನೆಯಾಗಿ ಆಕೆ ಚಿತೆಯನ್ನೇರಿ ಸತಿಯಾಗಿರಬೇಕು. ಎಂದು ಹೇಳಿದ್ದಾರೆ. ವರ್ಣನೆಯೇ ಹೆಚ್ಚಾಗಿ ಬರುವ ಈ ಹಾಡ್ಗತೆಯಲ್ಲಿ ಕಥೆ ಕಡಿಮೆ.

ಡಾ. ಜೀಶಂಪ ಅವರು ಸಂಗ್ರಹಿಸಿರುವ ಪಾಠ ಇದರಿಂದ ಸಂಪೂರ್ಣ ಭಿನ್ನವಾದುದು: ಮೊದಲ ಪಾಠದಲ್ಲಿ ನಾಗಣ್ಣ ಎಂಬ ಹೆಸರಿನಲ್ಲಿ ಬರುವವನೇ ಇಲ್ಲಿಯು ಚಿಂದಯ್ಯ. ಎಷ್ಟೇ ಅಡೆತಡೆಗಳು ಬಂದರೂ, ನಾಗವ್ವನನ್ನು ತಂದುಕೊಳ್ಳುವ ಸಂದರ್ಭ ಒದಗಿಬರುತ್ತದೆ. ಲಗ್ನ ನಿಶ್ಚಯವಾಗುತ್ತದೆ. ಆದರೆ ಹೆಜ್ಜೆ ಹೆಜ್ಜೆಗು ಅಪಶಕುನಗಳು ಕಾದಿರುತ್ತವೆ. ಮದುವೆಯ ಶಾಸ್ತ್ರಗಳು ಇನ್ನು ನಡೆಯುತ್ತಿರುವಾಗಲೇ ಚಿಂದಯ್ಯ ತನ್ನ ತಂಗಿಯಿಂದ–'ಬೇಡರು ತಮ್ಮ ಮೇಕೆಗಳನ್ನೆಲ್ಲ ಕದ್ದು ಹೊಡೆಯುತ್ತಿದ್ದಾರೆಂಬ ಸುದ್ದಿಯನ್ನು ತಿಳಿದು ಕಟ್ಟಿದ ಕಂಕಣದಲ್ಲಿಯೇ ಬಿಲ್ಲನ್ನು ಹಿಡಿದು ಹಿಂಬಾಲಿಸುತ್ತಾನೆ. ಅವರಿಂದ ಮೇಕೆಗಳನ್ನೆಲ್ಲ ಬಿಡಿಸಿಕೊಂಡು ಹಿಂತಿರುಗುತ್ತಾನೆ. ಆದರೆ ಮನೆಗೆ ಬಂದು ನೋಡಿದಾಗ. ಕುಂಟಾಡಿನ ಮರಿಯೊಂದು ಇಲ್ಲವೆಂಬುದನ್ನು ತಿಳಿದು, ಮತ್ತೆ ಅದನ್ನು ಹುಡುಕಿ ಹಿಡಿದು ತರಲು ಧಾವಿಸುತ್ತೇನೆ. ಆದರೆ ಮತ್ತೆ ಆತ ಮನೆಗೆ ಹಿಂತಿರುಗುವುದಿಲ್ಲ.

ಮುಂಗೋಳಿ ಕೂಗಿತು ಮೂಡು ಕೆಂಪೇರಿತು
ಸೀಗೆಯ ಮೆಳೆಯಲ್ಲಿ ಮಲಗವನೆ । ಚಿಂದಯ್ಯ
ಹಾಳು ಬೇಡರು ಅವನ ಕಡಿದರು.

ಸೀಗೆಯ ಮೆಳೆಯ ಬಳಿ ಕಾದು ಕುಳಿತಿದ್ದ ಬೇಡರು ಚಿಂದಯ್ಯನನ್ನು ಮೋಸದಿಂದ ಕೊಲ್ಲುತ್ತಾರೆ. ಇತ್ತ ಸಾವಿನ ಸುದ್ದಿಯನ್ನು ತಿಳಿದ ನಾಗವ್ವ ಮದುವೆಗೆ ಮುನ್ನವೇ ಮಡಿದ ಚಿಂದಯ್ಯನಿಗಾಗಿ ಗೋಳಿಡುತ್ತಾಳೆ: ಚಿಂದಯ್ಯನ ಶವಸಂಸ್ಕಾರಕ್ಕೆ ಸಿದ್ಧತೆ ನಡೆಯುತ್ತದೆ. ನಾಗವ್ವನು ಚಿಂದಯ್ಯನ ಜೊತೆ ಚಿತೆ ಏರಲು ಸಿದ್ಧವಾಗುತ್ತಾಳೆ. ಲಗ್ನ ನಿಶ್ಚಯವಾದಂದೇ ಅವನು ತನ್ನ ಪತಿಯೆಂದು ಅವಳು ಸಾರುತ್ತಾಳೆ. ಯಾರ ಹಿತೋಪದೇಶವೂ ಅವಳ ದೃಢ ನಿಲುವನ್ನು ಕದಲಿಸಲು ಸಾಧ್ಯವಾಗುವುದಿಲ್ಲ. ಗಂಡನಾಗಬೇಕಾಗಿದ್ದವನೊಡನೆಯೇ ಸಾಯುವುದೇ ಸರಿಯೆಂದು ನಿರ್ಧರಿಸುತ್ತಾಳೆ ಯಾರ ಯಾವ ಆಸೆಯೂ ಅವಳನ್ನು ತಡೆಯಲಾಗುವುದಿಲ್ಲ–

ನೀ ನೂರ ಕೊಟ್ಟರೆ ನನ್ನ ಕೊಪ್ಪಿನ ಬೆಲೆಯಿಲ್ಲ
ಅತ್ತೆಯ ಮಗನೆ ಚಿಂದಯ್ಯ । (ನಾ) ಕುಟ್ಟೆ
ನಾ ಹತ್ತೋದೆ ಲೇಸು ಒಡಗಿಚ್ಚ
ನೀ ಹೊನ್ನು ಕೊಟ್ಟರೆ ನನ್ನ ವಾಲೆಯ ಬೆಲೆಯಿಲ್ಲ
ಮಾವನ ಮಗನೆ ಚಿಂದಯ್ಯ । (ನಾ) ಕುಟ್ಟೆ
ನಾ ಹತ್ತೋದೆ ಲೇಸು ಒಡಗಿಚ್ಚ

ಒಂದೇ ಮನದಲ್ಲಿ ಚಿತೆಯನ್ನು ಏರಿ ನಿಲ್ಲುತ್ತಾಳೆ. ಮದುವೆಯಾಗದೆಯೇ ಸಹ್ಯ ಗಮನವನ್ನು ಅನುಸರಿಸುತ್ತಾಳೆ ನಾಗವ್ವ :

ಹೆಣ್ಣೀಗೆ ಮಣ್ಣುಬಿದ್ದೊ ಕಣ್ಣಿಗೆ ಸೆತ್ತಬಿದ್ದೊ
ಸಣ್ಣ ಸೀರೆಮ್ಯಾಲೆ ಕಿಡಿಬಿದ್ದೊ । ನಾಗವ್ವನ ।
ಎಣೆಗಂಟು ನಲುಗಿ ಉರಿದ್ಹೋದೊ ।

ಎಂದು ಕವಿ ಮುಕ್ತಾಯ ಹಾಡುತ್ತಾನೆ.

ಈ ಎರಡು ಪಾಠಗಳನ್ನು ಪರಿಶೀಲಿಸಿದಾಗ, ಕಥೆಯ ಹೊರಪದರದ ಸಾಮ್ಯ ವೊಂದನ್ನುಳಿದು ಏಕೈಲ್ಲದರಲ್ಲಿಯೂ ಸಾಕಷ್ಟು ಭೇದವಿರುವುದನ್ನು ಕಾಣುತ್ತೇವೆ. ಮೊದಲ ಪಾಠದಲ್ಲಿ, ನಾಗಣ್ಣ ಮದುವೆಯಾದ ನಂತರ ಯುದ್ಧಕ್ಕೆ ಹೋಗಿ–

ಆರು ಸಾವಿರ ದಂಡ ಹಾರಾರಿ ಕಡಿದನೊ
ಮೇಲೊಂದು ಸಾವಿರವ ಕೈಬಳಸಿ ಕಡಿಯೋವತ್ತಿಗೆ
ಅವನು ಹಿಡಿದಿದ್ದ ಆಯುಧವೆ ಮುರಿದ್ಹೋದೊ

ಎಂದು ಕಥೆ ಅಪೂರ್ಣ ರೀತಿಯಲ್ಲಿ ಮುಕ್ತಾಯವಾಗುತ್ತದೆ. ಆದರೆ ಇಲ್ಲಿ, ಚಿಂದಣ್ಣ ಮದುವೆಗೆ ಮುಂಚೆಯೇ ಬೇಡರೊಡನೆ ಅದು ಬಿಡಿಸಿಕೊಂಡು ಬರಲು ಹೋಗಿ ಮೋಸ ದಿಂದ ಕೊಲೆಗೀಡಾಗುತ್ತಾನೆ. ಮೊದಲ ಪಾಠದಲ್ಲಿ ವರ್ಣನೆ ಅತಿಯಾಗಿ ಕಂಡು ಬಂದರೆ ಎರಡನೆಯ ಪಾಠದಲ್ಲಿ ಸಂಕ್ಷಿಪ್ತತೆಯೇ ವಿಶೇಷವಾಗಿ ಕಾಣಬರುತ್ತದೆ. ಸಂಕೇತಗಳ ಮೂಲಕ ಹೆಚ್ಚಿನ ಕಲ್ಪನೆಗೆ ಅವಕಾಶ ಮಾಡಿಕೊಡುವ ಸಂದರ್ಭಗಳೇ ಇಲ್ಲಿ ಹೆಚ್ಚು. ವಿಧಿಯ ಚೆಲ್ಲಾಟವನ್ನು ಎರಡು ಕಡೆಯೂ ದಟ್ಟವಾಗಿ ಕಾಣುತ್ತೇವೆ. ದುರಂತದ ಮಡು ಎರಡರಲ್ಲಿಯೂ ಇದೆಯಾದರು, ಎರಡನೆಯ ಪಾಠದಲ್ಲಿ ಅದು ಭೋರ್ಗರೆದು ಹರಿಯು ತ್ತದೆ. ಅಲ್ಲಿ ನಾಗವ್ವ ಮದುವೆಯ ನಂತರ ದುರಂತಕ್ಕೀಡಾದರೆ, ಇಲ್ಲಿ ಮದುವೆ ಮುಗಿಯದೆಯೇ ದುರಂತಕ್ಕೀಡಾಗಿ, ಕೊಡಕ್ಕೇ ಧಾರೆ ಎರೆಸಿಕೊಂಡು ಅಸುನೀಗುತ್ತಾಳೆ. ಮುಗ್ಧ ಹೆಣ್ಣೊಬ್ಬಳ ದುರಂತ ಚಿತ್ರ, ಎಲ್ಲರ ಸಹಾನುಭೂತಿಯನ್ನೂ ಗಳಿಸಿ ಅಚ್ಚಳಿಯದೆ ಮನದಲ್ಲಿ ನಿಲ್ಲುತ್ತದೆ.

ಸ್ವತಂತ್ರ ಕೃತಿಗಳ ರಚನೆಯಷ್ಟೇ ಅಲ್ಲದೆ, ಅನುವಾದ ಮುಂತಾದ ಕೃತಿಗಳ ರಚನೆ ಯಲ್ಲಿಯೂ ತಮ್ಮ ಸಾಮರ್ಥ್ಯವನ್ನು ಸಮರ್ಥವಾಗಿಯೇ ತೋರಿರುವ ನಾಗೇಗೌಡರು ಜನಪದ ಸಾಹಿತ್ಯ ಸಂಗ್ರಹಣೆ–ಸಂಪಾದನೆಯಲ್ಲಿಯೂ ಶಾಸ್ತ್ರೀಯ ದೃಷ್ಟಿಯನ್ನು ತೋರಿ ರುವುದು ಗಮನಾರ್ಹ. ಈ ದೃಷ್ಟಿಯಿಂದ ಅವರ 'ಪದವವೆ ನಮ್ಮ ಎದೆಯಲ್ಲಿ' ಒಂದು ಉತ್ತಮ ಸಂಕಲನ. ಅದರಲ್ಲಿಯ 'ಹಾಡ್ಗತೆಗಳು' ಭಾಗ ಈಗಾಗಲೇ ಪರಿಶೀಲಿಸಿರುವಂತೆ ಉತ್ತಮ ಹಾಡ್ಗತೆಗಳನ್ನೊಳಗೊಂಡದ್ದು. ಸಂಗ್ರಹಕಾರ್ಯದಲ್ಲಿ ಅವರು ತೋರಿರ ಬಹುದಾದ ನಿಷ್ಠೆಯನ್ನು, ಪಟ್ಟಿರಬಹುದಾದ ಶ್ರಮವನ್ನು ಅಲ್ಲಿಯ ಪಾಠಗಳೇ ಹೇಳು

ತ್ತವೆ. ಬಗೆ ಬಗೆಯ ಧಾಟಿಗಳಿಂದ, ಕಥೆಗಳಿಂದ, ಛಂದೋರೂಪಗಳಿಂದ ಕೂಡಿ ವೈವಿಧ್ಯದ ಸೀಮೆಯನ್ನು ಮುಟ್ಟಿದೆ.

ಪ್ರಸ್ತುತ ಲೇಖನದಲ್ಲಿ ಇಲ್ಲಿಯ ಬಹುತೇಕ ಹಾಡ್ಗತೆಗಳಿಗೆ ಬೇರೆ ಬೇರೆ ಪಾಠಾಂತರಗಳನ್ನು ಗುರುತಿಸಿ ತೌಲನಿಕವಾದ ಒಂದು ಅಧ್ಯಯನವನ್ನು ನಡೆಸಲಾಗಿದೆ. ಹಾಗೆ ಅಧ್ಯಯನ ನಡೆಸುವಲ್ಲಿ ಪ್ರಸ್ತುತ ಕೃತಿಯು ಹಾಡ್ಗತೆಗಳ ನಿರ್ದೇಶನವನ್ನು ಮಾಡುವ ಪ್ರಯತ್ನ ಮಾಡಲಾಗಿದೆ. ಜನಪದರ ವೈವಿಧ್ಯಮಯ ಬದುಕಿನ, ವೈಶಿಷ್ಟ್ಯಪೂರ್ಣ ನಿರೂಪಣೆ ಇಲ್ಲಿದೆ. ಅದು ಕಾಲ ಕಾಲಕ್ಕೆ ಹಿಗ್ಗುತ್ತ-ಕುಗ್ಗುತ್ತ, ಬಗ್ಗುತ್ತ-ಬಳಕುತ್ತ ಬಂದು ರೀತಿಯನ್ನು ಅದರ ನೀತಿಯನ್ನು ಇಲ್ಲಿಯ ಪಾಠಾಂತರಗಳಲ್ಲಿ ಗುರುತಿಸಬಹುದಾದ ಸಾಧ್ಯತೆಗಳಿವೆ.

೨೫ ಪದವನೆ ನಮ್ಮ ಎದೆಯಲ್ಲಿ-ಬಿಡಿ ಹಾಡುಗಳು

ಟಿ. ಎಸ್. ರಾಜಪ್ಪ.

"ಪದವವೆ ನಮ್ಮ ಎದೆಯಲ್ಲಿ" ಎಂಬ ಸಂಕಲನದಲ್ಲಿ ಹನ್ನೊಂದು ದಳಗಳಿದ್ದು, ಒಂದೊಂದು ದಳದಲ್ಲಿ ಒಂದೊಂದು ಪ್ರಕಾರಕ್ಕೆ ಸಂಬಂಧಿಸಿದ ಹಾಡುಗಳಿವೆ. ಐದನೂರ ಇಪ್ಪತ್ತ ನಾಲ್ಕು ಪುಟಗಳಿರುವ ಈ ಸಂಕಲನದಲ್ಲಿ ಕ್ರಮವಾಗಿ ಸೋಬಾನೆ ಪದಗಳು, ಒಸಗೆ ಪದಗಳು, ಲಾಲಿ ಪದಗಳು, ಬಾಂಧವ್ಯದ ಹಾಡುಗಳು, ದೇವಿ ಮತ್ತು ದೇವರು, ಹಾಡ್ಗತೆಗಳು. ಹೊಲೆಯರು ಹೊಗಳುವ ಪದಗಳು, ಕೋಲಾಟದ ಪದಗಳು, ಹಚ್ಚಿ ಹೊಯ್ಯುವ ಪದಗಳು, ಮಕ್ಕಳ ಪದಗಳು ಮತ್ತು ಪದವವೆ ನಮ್ಮ ಎದೆಯಲ್ಲಿ ಎಂಬ ಭಾಗಗಳಿದ್ದು, ಪುಸ್ತಕದ ಶೀರ್ಷಿಕೆಯನ್ನು ದಳ ಏಳು "ಹೊಲೆಯರು ಹೊಗಳುವ ಪದಗಳು" ಭಾಗದಿಂದ ಆರಿಸಲಾಗಿದೆ—

ಪದವ ಕಾಣದ ಮರುವ ಅದನ್ಯಾಕೆ ಹೇಳಿಯೋ
ಪದವವೆ ನಮ್ಮ ಎದೆಯಲ್ಲಿ-ಶ್ರೀರಾಮರು ಕೊಟ್ಟಂತ
ಪದಕದೆ ನಮ್ಮ ಕೊರಳಲ್ಲಿ

ಈ ಸಂಕಲನದಲ್ಲಿರುವ ಸಾಹಿತ್ಯವನ್ನು ಗಂಡಸರು, ಹೆಂಗಸರು ಮತ್ತು ಮಕ್ಕಳಿಂದ ಬೇರೆ ಬೇರೆ ಸ್ಥಳಗಳಲ್ಲಿ ವಿವಿಧ ಕಾಲದಲ್ಲಿ ಸಂಗ್ರಹಿಸಿದ್ದಾರೆ. ವಕ್ತೃಗಳು ವಿಭಿನ್ನ ಸಂಸ್ಕೃತಿಯವರಾಗಿದ್ದು, ಅವರ ವಯೋಮಿತಿಯಲ್ಲಿಯೂ ಸಾಕಷ್ಟು ಅಂತರಗಳಿರುವುದರಿಂದ, ಅವರು ಹಾಡಿರುವ ಸಾಹಿತ್ಯದಲ್ಲಿಯೂ ಅದರ ಪರಿಣಾಮವುಂಟಾಗಿದೆ.

ಸೋಬಾನೆ ಪದಗಳು —ಮದುಮಕ್ಕಳನ್ನು ಮತ್ತು ಮದುವೆಯಲ್ಲಿ ಮಾಡುವ ವಿವಿಧ ಶಾಸ್ತ್ರಗಳನ್ನು ಕುರಿತು ಹೇಳತಕ್ಕವು. ಸೋಬಾನೆಪದಗಳು ಒಂದು ರೀತಿಯಲ್ಲಿ ಆ ಶಾಸ್ತ್ರಗಳನ್ನು ಪರಿಚಯ ಮಾಡಿಕೊಡುವಂಥ ರೀತಿಯಲ್ಲಿವೆ. ಆದ್ದರಿಂದ ವಸ್ತು ವೈವಿಧ್ಯ ಸಾಕಷ್ಟು ಇದೆ. ಹಿಂದೆ ಮದುವೆ ಮನೆಯಲ್ಲಿ ಸೋಬಾನೆ ಪದಗಳನ್ನು ಹೇಳಲು ವಿಶೇಷ ವೀಳ್ಯೆಗಳನ್ನು ಕೊಟ್ಟು ನುರಿತ ಜನಪದ ಗಾಯಕಿಯರನ್ನು ಆಹ್ವಾನಿಸುತ್ತಿದ್ದರು ಈಗಲೂ ಅಲ್ಲಲ್ಲಿ ವಿರಳವಾಗಿ ಈ ಪದ್ಧತಿಯನ್ನು ನಾವು ಕಾಣಬಹುದು. ಹೆಣ್ಣಿನವರು ಮತ್ತು ಗಂಡಿನವರು ಪೈಪೋಟಿಯಿಂದ ಸೋಬಾನೆಪದಗಳನ್ನು ಹೇಳುತ್ತಿದ್ದುದನ್ನು ಹಿಂದೆ ಕೇಳಿದವರು ಆ ಒಂದು ಸ್ಮರಣೀಯವಾದ ಅನುಭವವನ್ನು ಎಂದಿಗೂ ಮರೆಯಲಾರರು.

ಈಗಾಗಲೇ ಸೋಬಾನೆ ಪದಗಳಿಗೆ ಸಂಬಂಧಿಸಿದ ಕೆಲವು ಸಂಗ್ರಹಗಳು ಹೊರ ಬಂದಿವೆ. ಶ್ರೀ ಎಚ್. ಎಲ್. ನಾಗೇಗೌಡರು ಸಂಗ್ರಹಿಸಿ ಪ್ರಕಟಿಸಿರುವ "ಸೋಬಾನೆ ಚಿಕ್ಕಮ್ಮನ ಪದಗಳು" ಅವುಗಳಲ್ಲಿ ಅತ್ಯುತ್ತಮ ಕೃತಿ. ಪ್ರಸ್ತುತ ದಳದಲ್ಲಿರುವ ಸೋಬಾನೆ ಪದಗಳಲ್ಲಿ ಗಿರಿಜಾ ಶಂಕರ, ನಂಜುಂಡ ಪಾರ್ವತಿ ಮುಂತಾದ ದೇವತೆಗಳನ್ನು ಕುರಿತು ಹಾಡುವುದು ವಾಡಿಕೆ. ಮದುವೆಯ ಸಮಯದಲ್ಲಿ ಪ್ರತಿಯೊಂದು ಹಂತದಲ್ಲಿಯೂ ಅಂಥ ಹಲವಾರು ಹಾಡುಗಳನ್ನು ಹಾಡುತ್ತಾರೆ. ಜನಸಾಮಾನ್ಯರಲ್ಲಿಯೂ ದೈವತ್ವವನ್ನು ಕಾಣುವುದು, ಮತ್ತು ಎಲ್ಲವನ್ನೂ ಮಂಗಳದೃಷ್ಟಿಯಿಂದ ನೋಡಿ ಶುಭ ಹಾರೈಸುವುದು ನಮ್ಮ ಸಂಸ್ಕೃತಿಯ ಲಕ್ಷಣ.

ನಿರ್ವಿಘ್ನವಾಗಿ ಶುಭಕಾರ್ಯ ನೆರವೇರಲೆಂದು ಮತ್ತು ವಿದ್ಯೆಯನ್ನು ಕೊಡು ಎಂದು ಗಣಪತಿಯನ್ನು ಆರಂಭದಲ್ಲಿ ಪೂಜಿಸುವುದು ಪದ್ಧತಿ. ಇಲ್ಲಿ ಸೋಬಾನೆ ಪದಗಳನ್ನು ಹಾಡುವ ಮುಂಚೆ ಗಣಪತಿಯನ್ನು ಈ ರೀತಿ ಪ್ರಾರ್ಥಿಸಿದ್ದಾರೆ—

ಬರದಂತ ಪದನ ಬರದು ಕೊಟ್ಟಯ್ಯನಿಗೆ
ಬಾಳೆಯ ಹಣ್ಣೆ ವಳಲಂಚ ಹೊರ್ಲಂಚ–ಬಾಗೂರ
ಬಸವ ಕೊಡು ಮತಿಯ

ಒಸಗೆ ಪದಗಳು–ಹೆಣ್ಣುಮಕ್ಕಳು ಮೈನೆರೆದ ಸಂದರ್ಭದಲ್ಲಿ ಗುಡ್ಲು ಕೂಡಿ ಹಸೆ ಮೇಲೆ ಕುಳ್ಳಿರಿಸಿ, ಆರತಿಮಾಡಿ ಬಗಳಿ ತಂಬಿಟ್ಟು ಕೊಡುವುದು ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿರುವ ಪದ್ಧತಿ. ಆಗ ಮುತ್ತೈದೆಯರು ಒಸಗೆ ಪದಗಳನ್ನು ಹಾಡುತ್ತಾರೆ. ಬಹುಪಾಲು ಇಲ್ಲಿರುವ ಪದಗಳು ಮೈನೆರೆದ ಹುಡುಗಿಗೆ ಮತ್ತು ಆ ಸಂದರ್ಭದಲ್ಲಿ ಆಚರಣೆಯನ್ನು ಕುರಿತಂತೆ ಆಗಿರುತ್ತವೆ. ಅಣ್ಣ, ಅತ್ತೆ ಮಾವ, ಗಂಡ, ತಂದೆ ತಾಯಿ, ಬಳಗ ಮುಂತಾದವರು ಮಾಡುವ ಉಪಚಾರ, ಸಂಭ್ರಮ ಹಾಗೂ ಹುಡುಗಿಯ ಭಾವನೆಗಳನ್ನು ಕುರಿತ ಈ ಪದಗಳು ಸೊಗಸಾಗಿವೆ. ಹಿಂದೆ ಮೈನೆರೆಯುವ ಮೊದಲೇ ಮದುವೆಯಾಗುತ್ತಿತ್ತು. ಈಗ ಪರಿಸ್ಥಿತಿ ಬದಲಾಗಿ ಹೆಣ್ಣುಮಕ್ಕಳಿಗೆ ಬಹಳ ವರ್ಷಗಳಾದರೂ ಮದುವೆಯಾಗದೆ ಮನೆಯಲ್ಲಿರುವ ಸಂದರ್ಭಗಳು ಬಂದಿರುವುದರಿಂದ ಮೈನೆರೆದ ವಿಷಯವನ್ನು ಗುಪ್ತವಾಗಿಡಲಾಗುತ್ತಿದೆ. ಅವುಗಳು ಸಂಪೂರ್ಣವಾಗಿ ಮಾಯವಾಗುವ ಮೊದಲು ಹಿಡಿದಿಡುವ ಕಾರ್ಯ ಬಹಳ ತ್ವರಿತವಾಗಿ ಆಗಬೇಕಾಗಿದೆ. ಮುಂದೆ ನಾವು ಇಂಥ ಪದಗಳಿಗಾಗಿ ಸಂಕಲನಗಳ ಮೊರೆ ಹೋಗಬೇಕಾಗುವ ಕಾಲ ಬಹಳ ದೂರವಿಲ್ಲ. ಒಸಗೆ ಪದಗಳಲ್ಲಿ ಗುಡಲು ಕೂಡಿ ಸೂತಕ ಕಳೆದ ಮೇಲೆ, ಒಸಗೆ ಹಾಕಲು ಕುಳ್ಳಿರಿಸಿದಾಗ, ಹಣ್ಣ ತುಂಬೇವು ಮಡಿಲಿಗೆ ಎಂಬ ಭಾಗ ಮಾಡಿ, ಒಳ್ಳೆಯ ತ್ರಿಪದಿಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಲಾಲಿಪದಗಳನ್ನು, ಜೋಗುಳವೆಂದೂ ಕರೆಯುವುದುಂಟು. ವಿಶೇಷವಾಗಿ ಮಕ್ಕಳಿಗೆ ನಿದ್ದೆಮಾಡಿಸುವ ಸಲುವಾಗಿ ಇಲ್ಲವೇ ಮಲಗದೆ ಅಳುತ್ತಾ ರಗಳೆ ಮಾಡು

ವಾಗ ಅಲ್ಲಲ್ಲಿ 'ಜೋ ಜೋ' ಎಂಬ ಸ್ವರವನ್ನು ಸೇರಿಸಿ ನಿಧಾನವಾಗಿ ಹೇಳುವ ಈ ಪದಗಳನ್ನು ಸಾಮಾನ್ಯವಾಗಿ ಒಬ್ಬರೇ ತೊಟ್ಟಿಲು ಅಥವಾ ನ್ಯಾಕೆಯಲ್ಲಿ ಇಲ್ಲವೇ ತೊಡೆಯ ಮೇಲೆ ಮಗುವನ್ನು ಮಲಗಿಸಿ ಹೇಳುತ್ತಾರೆ. ಕೇಳಲು ಇಂಪಾಗಿರುವ ಈ ಪದಗಳು ಮಕ್ಕಳ ಹಾವಭಾವ, ಅಂದಚೆಂದ, ಆಟಪಾಟ ಮತ್ತು ಅವರ ತುಂಟತನ ಮತ್ತು ಅಲಂಕಾರ ಮುಂತಾದ ವರ್ಣನೆಗಳಿಂದ ಕೂಡಿರುತ್ತವೆ. ಪ್ರಾಸಂಗಿಕವಾಗಿ ಗೋಪಾಲ ಕೃಷ್ಣ, ರಾಮಲಕ್ಷ್ಮಣ ಮುಂತಾದವರ ಹೆಸರುಗಳನ್ನು ಸೇರಿಸಿ ಹಾಡುತ್ತಾರೆ—

ಯಾಕತ್ತನು ಗೋಪುದೇವಿಯ ಕಂದಮ್ಮ
ಗೋಪಾಲಕೃಷ್ಣ ಸಿರಿಹರಿಯೆ–ನೀನ್ಹುಟ್ಟಿ
ನ್ಯಾಕೆ ನಮ್ಮನಿಗೆ ಘನವಾದೊ

ತಾಯಂದಿರ, ಅಜ್ಜಿಯರ, ಸಹೋದರಿಯರ ವಾತ್ಸಲ್ಯ ಸರಳ ನುಡಿಗಳು ಕೇಳುಗರನ್ನು ಮುಗ್ಧರನ್ನಾಗಿ ಮಾಡುತ್ತವೆ.

ಬಾಂಧವ್ಯದ ಹಾಡುಗಳಲ್ಲಿ ತಾಯಿ ಮಗಳು, ಅಣ್ಣ ತಂಗಿ, ಅಕ್ಕ ತಂಗಿ, ಅತ್ತಿಗೆ ನಾದಿನಿ, ಗಂಡ ಹೆಂಡತಿ ಮತ್ತು ಸ್ನೇಹಿತರು–ಇವರ ಸುಖ ಸಂತೋಷ, ಸರಸವಿರಸ, ಕಷ್ಟಕಾರ್ಪಣ್ಯ, ಸುಖ ಸಂಪತ್ತುಗಳನ್ನು ಕುರಿತಾಗಿವೆ. ಇಲ್ಲಿ ಬರುವ ಸನ್ನಿವೇಶಗಳು ಬಹಳ ಸೂಕ್ಷ್ಮವಾಗಿದ್ದು ಹೃದಯಂಗಮವಾಗಿರುತ್ತದೆ. ನಾನಾ ಸಂದರ್ಭಗಳಲ್ಲಿ ತಮಗುಂಟಾದ ಅನುಭವಗಳನ್ನು ಅಭಿವ್ಯಕ್ತಿಸಿದಾಗ ಹೊರಹೊಮ್ಮಿದ ಈ ರಸನಿಧಿಗಳನ್ನು ಒಬ್ಬರಿಗೊಬ್ಬರು ಹೇಳಿಕೊಂಡು ಸುಖಿಸುತ್ತಾರೆ ಇಲ್ಲವೆ ಸಮಾಧಾನಪಟ್ಟುಕೊಳ್ಳುತ್ತಾರೆ. ಅವುಗಳು ಹಾರೈಕೆಯಾಗಿರಬಹುದು, ಸುಖದುಃಖಗಳ ಹಂಚಿಕೆಯಾಗಿರಬಹುದು, ಇಲ್ಲವೇ ಕುಶಲಪ್ರಶ್ನೆಯಾಗಿರಬಹುದು ಅಥವಾ ಸರಸ ಸಂಭಾಷಣೆಯಾಗಿರಬಹುದು. ದಾರಿ ತಪ್ಪಿದವರನ್ನು ಎಚ್ಚರಿಸುವ, ತಿದ್ದುವ ಬುದ್ಧಿಮಾತು–ಹೀಗೆ ಹಲವಾರು ವಿಷಯ ವೈವಿಧ್ಯವನ್ನೊಳಗೊಂಡಿದೆ. ಬಾಂಧವ್ಯದ ಹಾಡುಗಳಿಂದ ಹಲವಾರು ಪದಗಳನ್ನು ಉದಾಹರಣೆಯಾಗಿ ಕೊಡಬಹುದು. "ಇಲ್ಲಿ ಬರುವ ಒಂದೊಂದು ಪದ್ಯ ಒಂದೊಂದು ರಸನಿಧಿ" ಎನ್ನುವ ಸಂಪಾದಕರ ಮಾತು ಸಂಪೂರ್ಣ ಸತ್ಯ—

ಕತ್ತಲಾದ ಮನೆಗೆ ಎತ್ತಮ್ಮ ಜ್ಯೋತಿಯ
ಮುತ್ತಿನ ಹಣತಿಗೆ ಹವಳದ–ಬತ್ತಿಯನಾಕಿ
ನಾವು ಹತ್ತು ಬೆಳ್ಳುಡ್ಡಿ ಕೈಯ ಮುಗದೇವು

ದೇವಿ ಮತ್ತು ದೇವರು ಶೀರ್ಷಿಕೆಯಲ್ಲಿ ಚುಂಚನಗಿರಿ ಭೈರವ, ಮೇಲುಕೋಟೆ ಚೆಲುವರಾಯ, ತಿರುಪತಿ ತಿಮ್ಮಪ್ಪ, ಹದ್ದಿನಕಲ್ಲು ಹನುಮಂತ, ನಂಜನಗೂಡಿನ ನಂಜುಂಡ ಮತ್ತು ಆಯಾ ಊರಿನ ಗ್ರಾಮದೇವತೆಗಳನ್ನು ಕುರಿತ ಗೀತೆಗಳಿವೆ. ಜನಪದರು ದೇವರೊಡನೆ ಆತ್ಮೀಯ ಸಂಬಂಧವನ್ನು ಹೊಂದಿದವರು. ಸರಳವಾದ ಮಾತಿನಲ್ಲಿ ತಮ್ಮ ಅನಿಸಿಕೆಗಳನ್ನು, ಬೇಡಿಕೆಗಳನ್ನು ದೇವರ ಮುಂದಿಟ್ಟು ಅವುಗಳನ್ನು ನೆರವೇರಿಸಿಕೊಡುವಂತೆ

ಪ್ರಾರ್ಥಿಸಿಕೊಳ್ಳುತ್ತಾರೆ. ಜಯವಾದರೆ ಆನಂದದ ಉಬ್ಬುತ್ತಾರೆ. ತಮ್ಮ ಅಂತರಂಗವನ್ನು ದೇವರ ಮುಂದೆ ನಿವೇದಿಸಿಕೊಂಡು ತೃಪ್ತರಾಗುತ್ತಾರೆ. ದೇವಿ ಮತ್ತು ದೇವರನ್ನು ಕುರಿತು ನಿರ್ದಿಷ್ಟವಾದ ಇಂಥ ಸಂದರ್ಭದಲ್ಲಿಯೇ ಹಾಡಬೇಕೆಂಬ ನಿಯಮವೇನಿಲ್ಲ. ಯಾವಾಗಬೇಕಾದರೂ, ಎಲ್ಲಿಬೇಕಾದರೂ ದೇವರ ಮಹಿಮೆ, ವರ್ಣನೆ, ಆ ದೇವತೆಗಳು ನೆಲೆಸಿರುವ ಸ್ಥಳ, ಆ ದೇವರ ವೈಶಿಷ್ಟ್ಯಗಳನ್ನು ಹತ್ತು ಹಲವು ರೀತಿಯಲ್ಲಿ ಹಾಡಿ ಹೊಗಳುತ್ತಾರೆ.

ಇಲ್ಲಿರುವ ಹಾಡುಗಳಲ್ಲಿ ಬಹುಪಾಲು ತ್ರಿಪದಿಯಲ್ಲಿವೆ. ತ್ರಿಪದಿಗಳನ್ನು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬಹುದು. ಇಲ್ಲಿರುವ ಸರಳವಾದ ಭಾವಗಳು ಸೊಗಸಾಗಿ ಪ್ರಕಟವಾಗಿವೆ.

ಈ ಸಂಕಲನದಲ್ಲಿ ಅತಿ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುವುದು 'ಹೊಲೆಯರು ಹೊಗಳುವ ಪದಗಳು'. ಏಕೆಂದರೆ ಇಂಥ ವಿಶಿಷ್ಟವಾದ ಒಂದು ಪ್ರಕಾರ ಈವರೆಗೆ ಎಲ್ಲಿಯೂ ತನ್ನದೇ ಆದ ಒಂದು ಶೀರ್ಷಿಕೆಯಲ್ಲಿ ಪ್ರಕಟವಾಗಿರಲಿಲ್ಲ. ಸಾಮಾನ್ಯವಾಗಿ ಹಬ್ಬವಾದ ಮಾರನೆಯ ದಿವಸ ಗ್ರಾಮದೇವತೆಯನ್ನು ಹಾಗೂ ಊರಿನ ಪ್ರಮುಖರನ್ನು ದೇವಸ್ಥಾನದ ಮುಂದೆ ಮತ್ತು ಪ್ರಮುಖರ ಮನೆಗಳ ಮುಂದೆ ನಿಂತು ಹರಿಜನರು ಹೊಗಳುತ್ತಾರೆ. ಅವುಗಳ ಪ್ರಶಂಸೆಯ ರೂಪದಲ್ಲಿವೆ. ದೊಡ್ಡಮ್ಮ, ಕಗ್ಗಲಿಯಮ್ಮ, ಉಡುಸಲಮ್ಮ, ಕೆಂಪುರಾಯ, ಧೂತರಾಯ ಮುಂತಾದ ದೇವತೆಗಳನ್ನು ಕುರಿತ ಪದಗಳು ಇಲ್ಲಿವೆ.

ಉತ್ತರ ಕರ್ನಾಟಕದ ಕೆಲವು ಭಾಗದಲ್ಲಿ ಹರಿಜನರು ಗ್ರಾಮದೇವತೆಯ ಹಬ್ಬವಾದ ಮಾರನೆಯ ದಿವಸ ಗ್ರಾಮದೇವತೆಯ ಗುಡಿಯ ಮುಂದೆ ನಿಂತು ಬಾಯಿಗೆ ಬಂದಂತೆ ಅಶ್ಲೀಲವಾಗಿ ಬೈದು ಅನಂತರ ಊರಿನವರ ಮನೆ ಮನೆಗೆ ಹೋಗಿ ದವಸ ಧಾನ್ಯಗಳನ್ನು ಕಾಣಿಕೆಯಾಗಿ ಪಡೆಯುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಈ ಬೈಯುವ ಹಕ್ಕು ಕೆಲವೊಂದು ಮನೆತನದವರಿಗೆ ಮಾತ್ರ ಇರುತ್ತದೆ. ಇವರಿಗೆ ಅಸಾದಿ ಎಂದು ಕರೆಯುತ್ತಾರೆ.

ಇವೆರಡೂ ಪದ್ಧತಿಗಳನ್ನು ಗಮನಿಸಿದಾಗ, ಒಂದೇ ಸಂಪ್ರದಾಯ, ಬೇರೆ ಬೇರೆ ಪ್ರದೇಶಗಳಲ್ಲಿ ಹೇಗೆ ಆಚರಿಸಲ್ಪಡುತ್ತವೆಂಬುದನ್ನು ತಿಳಿದಾಗ ಆಶ್ಚರ್ಯವಾಗುತ್ತದೆ.

ಸತ್ತವರನ್ನು ಹೊಗಳುವ ಪದವು ಸಹ ಒಂದು ಒಳ್ಳೆಯ ಸಂಪ್ರದಾಯವನ್ನು ಪ್ರತಿನಿಧಿಸುತ್ತದೆ. ಕೊಡವರಲ್ಲಿ ಮಾತ್ರ ಈ ಪದ್ಧತಿಯನ್ನು ನಾವು ಇಂದಿಗೂ ವ್ಯಾಪಕವಾಗಿ ಕಾಣಬಹುದು, ಅವರಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದ್ದು ಅಪೂರ್ವವಾಗಿದೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನಲ್ಲಿ ಇಲ್ಲಿರುವ ಪದಗಳನ್ನು ಸಂಗ್ರಹಿಸಿರುವುದರಿಂದ ಬಹುಶಃ ಕೊಡಗಿನವರ ಪ್ರಭಾವದಿಂದ ಇಲ್ಲಿಯೂ ಅಂಥ ಪದ

ಗಳು ಹುಟ್ಟಿಕೊಂಡಿರುವ ಸಾಧ್ಯತೆಯುಂಟು. ಮೃತ ವ್ಯಕ್ತಿಯ ಗುಣಗಾನ ಮಾಡುವುದೇ ಈ ಪದಗಳಲ್ಲಿರುವ ಪ್ರಧಾನ ಅಂಶ.

ಹೊಲೆಯನೆಂದು ಅವನ ಕುಲವೆತ್ತಿ ಬಯ್ಯದಿರೊ
ಕುಲಮೇಲು ಅವನ ಚಲ ಮೇಲು–ಹೊಲೆಯರೊನ್ನಯ್ಯನ
ಕುಲವ ಕೊಂಡಾಡೊ ಮಗಮೇಲು

ಸಮಾಜದಲ್ಲಿ ಅತ್ಯಂತ ಕೆಳವರ್ಗದವರೆಂದು ಪರಿಗಣಿಸಲ್ಪಟ್ಟ ಜನರನ್ನು ಹೀಗಳೆಯುವ ಪ್ರವೃತ್ತಿಯವರಿಗೆ, ಸಂಕುಚಿತ ಮನೋಭಾವವನ್ನು ಬಿಟ್ಟು ಎಲ್ಲರೂ ಸಮಾನರು ಎಂಬ ಸಾಮಾಜಿಕ ಪ್ರಜ್ಞೆಯನ್ನು ಅತ್ಯಂತ ಸಮರ್ಥ ರೀತಿಯಲ್ಲಿ ಮೇಲ್ಕಂಡ ತ್ರಿಪದಿ ತಿಳಿಸಿ ಕೊಡುತ್ತದೆ. ಸಾಮಾಜಿಕ ಪ್ರಜ್ಞೆಗಳನ್ನು ಪರಿಚಯಿಸಿ ಕೊಡುವ ಹಲವಾರು ತ್ರಿಪದಿಗಳು ಈ ವಿಭಾಗದಲ್ಲಿದ್ದು ಅತ್ಯಂತ ಮನೋಜ್ಞವಾಗಿವೆ.

ಕರ್ನಾಟಕದಲ್ಲಿ ಕೋಲಾಟ ಬಹಳ ಪ್ರಸಿದ್ಧವಾದ ಜನಪದ ನೃತ್ಯ. ಕೋಲಾಟ ಆಡುವಾಗ ಹೇಳುವ ಪದಗಳಿಗೆ ಕೋಲುಪದಗಳು ಅಥವಾ ಕೋಲಾಟ ಪದಗಳೆಂದು ಕರೆಯುತ್ತಾರೆ. ಈಗಾಗಲೇ ಕೋಲಾಟದ ಪದಗಳ ಕೆಲವು ಸಂಕಲನಗಳು ಪ್ರಕಟವಾಗಿವೆ. ಹತ್ತಾರು ಸಂಗ್ರಹಗಳಲ್ಲಿ ಕೋಲುಪದಗಳು ಬೆಳಕು ಕಂಡಿವೆ. ಹಲವಾರು ರೀತಿಯ ಕೋಲಾಟಗಳಿದ್ದು ಒಂದೊಂದು ರೀತಿಯ ಕೋಲು ಹುಯ್ಯುವಾಗ ಒಂದೊಂದು ಧಾಟಿಯ ಮತ್ತು ಬೇರೆ ಬೇರೆಯ ಪದಗಳನ್ನು ಹೇಳುತ್ತಾರೆ. ಯಾವ ಯಾವ ಪದ ಹಾಡಬೇಕು ಮತ್ತು ಅದರ ಧಾಟಿ ಮುಮ್ಮೇಳ ಹಿಮ್ಮೇಳ ಮುಂತಾದ ವಿವರಗಳನ್ನು ಇಲ್ಲಿ ಕೊಟ್ಟಿದ್ದು "ಕೋಲಾಟದ ಪದಗಳು" ಸಶಕ್ತವಾಗಿ ಕೋಲಾಟದ ಪರಿಚಯ ಮಾಡಿಕೊಡುವುದರೊಂದಿಗೆ ಅನೇಕ ಉತ್ತಮ ಗೀತೆಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಹತ್ತುದಪ ಕುಂತು ಕೇಳಿರಿ ಮಾಡುವೆ ನಮಸ್ಕಾರಾ
ಕಡ್ಲೆಮಾರೊ ಟೇರ್ಪದೊಳಗೊಂದಾದ ಮಜಕೂರಾ ॥ ಪ ॥

ಉತ್ತರ ಕರ್ನಾಟಕದಲ್ಲಿ ಈ ಲಾವಣಿ ಅತ್ಯಂತ ಪ್ರಸಿದ್ಧವಾಗಿದೆ. ಇದನ್ನು ಹೇಳಿರುವ ವಕ್ತೃ ದಾವಣಗೆರೆಯಲ್ಲಿದ್ದಾಗ ಲಾವಣಿಯ ಸ್ವಲ್ಪ ಭಾಗವನ್ನು ಕಲಿತು ಕೋಲಾಟದ ಗತ್ತಿಗೆ ಹೊಂದಿಸಿಕೊಂಡಂತೆ ಕಂಡುಬರುತ್ತದೆ. ಕೆಲವೊಮ್ಮೆ ಹೇಗೆ ವಕ್ತೃಗಳು ತಮಗರಿವಿಲ್ಲದೆಯೇ ಪರಿವರ್ತನೆಗಳನ್ನು ಮಾಡಬಲ್ಲರೆಂಬುದನ್ನು ಇದರಿಂದ ತಿಳಿಯಬಹುದು. ಕೋಲಾಟದ ಪದಗಳಲ್ಲಿ ದೇವರನ್ನು ಕುರಿತ ಹಾಡುಗಳ ಸಂಖ್ಯೆಯೇ ಜಾಸ್ತಿ. ಕೆಲವು ತ್ರಿಪದಿಗಳನ್ನು ಸಹ ಕೋಲಾಟದ ಪದಗಳಿಗೆ ಹೊಂದಿಸಿಕೊಂಡಿರುವುದನ್ನು ನಾವು ಇಲ್ಲಿ ಕಾಣಬಹುದು.

ಹಚ್ಚೆ ಹೊಯ್ಯುವ ಪದಗಳು—ಗ್ರಾಮೀಣ ಹೆಣ್ಣುಮಕ್ಕಳು ಹಚ್ಚೆಹಾಕಿಸಿ ಕೊಳ್ಳುವುದು ಮೊದಲು ವ್ಯಾಪಕವಾಗಿತ್ತು. ಈಗ ಅದರ ಬಗ್ಗೆ ಅಂಥ ಹೇಳಿಕೊಳ್ಳುವ

ಆಸಕ್ತಿ ಕಂಡುಬರುತ್ತಿಲ್ಲ. ಆದರೂ ವಿರಳವಾಗಿ ಹಳ್ಳಿಗಾಡಿನ ಹೆಣ್ಣುಮಕ್ಕಳು ಹಚ್ಚೆ ಹಾಕಿಸಿಕೊಳ್ಳುತ್ತಿದ್ದಾರೆ. "ಹಸುರು ಇಲ್ಲದವಳ ಕೈಯಲ್ಲಿ ನೀರು ಕುಡಿಯಬಾರದೆಂಬ" ನಂಬಿಕೆಯೂ ಕೆಲವು ಕಡೆ ಪ್ರಬಲವಾಗಿತ್ತು. ನೆನಪಿಗಾಗಿ ಅಥವಾ ಸತ್ತಾಗ ನಮ್ಮ ಜೊತೆಯಲ್ಲಿ ಶಾಶ್ವತವಾಗಿ ಬರುವುದು ಹಸುರು ಮಾತ್ರ ಎಂಬ ದೃಷ್ಟಿಯಿಂದ ಹೆಣ್ಣು ಮಕ್ಕಳು ಹಚ್ಚೆ ಹಾಕಿಸಿಕೊಳ್ಳುತ್ತಿದ್ದರು. ಇವರ ಹಿನ್ನೆಲೆಯಲ್ಲಿ ಹೆಣ್ಣುಮಕ್ಕಳಿಗೆ ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಬೇಕೆಂಬ ಉದ್ದೇಶವಿತ್ತು. ಹಚ್ಚೆ ಹಾಕುವಾಗ ಉಂಟಾಗುವ ನೋವಿನ ತೀವ್ರತೆಯು ಗೊತ್ತಾಗದಿರಲೆಂಬ ಮುಖ್ಯ ಉದ್ದೇಶದಿಂದ ಹಚ್ಚೆ ಹುಯ್ಯುವ ಹೆಂಗಸರು ಈ ಸಮಯದಲ್ಲಿ ಪದಗಳನ್ನು ಹಾಡುತ್ತಾರೆ.

ಹಚ್ಚೆ ಹುಯ್ಸೀದಮ್ಮ ಹಾಡ ಕಲಿಸೀದಮ್ಮ
ಹಸುಮಕ್ಕಳ್ಗಾಲ ಎರದಮ್ಮ—ಬರಾಳೆ
ಕುಸಲಾದ ಸತ್ತಿಗೆಯ ನೆರಳಾಗೆ

ಹಚ್ಚೆ ಹಾಕಿಸಿಕೊಳ್ಳುವವರು ತಮ್ಮ ಸ್ವಂತ ಖರ್ಚಿನಿಂದ ಹಚ್ಚೆಯನ್ನು ಹಾಕಿಸಿಕೊಳ್ಳಬಾರದು. ಯಾರಾದರೂ ಬೀಗದವರು ಅಥವಾ ಸ್ನೇಹಿತೆಯರು ಖರ್ಚುಕೊಟ್ಟು ಹಚ್ಚೆ ಹಾಕಿಸಿಕೊಡಬೇಕೆಂಬ ಒಂದು ಪ್ರಬಲವಾದ ನಂಬಿಕೆ ಇಂದಿಗೂ ಇದೆ. ಇದಕ್ಕೆ ಮೇಲ್ಕಂಡ ತ್ರಿಪದಿಯನ್ನು ನಿದರ್ಶನವನ್ನಾಗಿ ಕೊಡಬಹುದು.

"ಹಸಿರು ಹಾಕುತೀನಿ ಉಘೇ ಅನ್ನಿ" ಎಂಬುದು ಗದ್ಯರೂಪದಲ್ಲಿದ್ದು ಶ್ರೀ ಮಲೆ ಮಹದೇಶ್ವರರ ಭಕ್ತರು ಬೆಟ್ಟಕ್ಕೆ ಹೋಗುವ ಸಮಯದಲ್ಲಿ ಹೇಳುವುದನ್ನು ಇಲ್ಲಿನ ವಕ್ತೃ ಹಚ್ಚೆ ಹುಯ್ಯುವಾಗ ಬಳಸಿಕೊಂಡಿರುವುದು ಸ್ಪಷ್ಟ. ಕೆಲವು ವೇಳೆ ವಕ್ತೃಗಳು ತಾವು ಏನಾದರೊಂದು ಹೇಳಬೇಕೆಂಬ ಉದ್ದೇಶದಿಂದ ಯಾವುದಾದರನ್ನೂ ಸರಿಯೋ ಎಲ್ಲಿಗಾದರೂ ಜೋಡಿಸುವ ಪ್ರಯತ್ನ ಮಾಡುತ್ತಾರೆ. ಅಂಥ ವೇಳೆಯಲ್ಲಿ ಎಚ್ಚರ ವಹಿಸುವುದು ಅಗತ್ಯ. ಸಂಪಾದಕರು ಇದನ್ನು ಕೈಬಿಡಬಹುದಾಗಿತ್ತು.

"ಮಕ್ಕಳ ಪದಗಳಿಗೆ" ಶಿಶು ಪ್ರಾಸಗಳೆಂದು ಈಗ ವ್ಯಾಪಕವಾಗಿ ಬಳಸುತ್ತಾರೆ. ಮಕ್ಕಳ ಪದಗಳು ಅತ್ಯಂತ ಸರಳವಾಗಿದ್ದು ಮಕ್ಕಳು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳುವಂತಿರುತ್ತಿದ್ದು, ಪ್ರಾಸಬದ್ಧವಾಗಿದ್ದು ಅರ್ಥ ಗೌಣವಾಗಿರುತ್ತವೆ. ಸುಮಾರು ಮೂರು ವರ್ಷಕ್ಕಿಂತ ಮೇಲ್ಪಟ್ಟ ಹತ್ತು ವರ್ಷದ ಮಕ್ಕಳು ಈ ಪದಗಳನ್ನು ಹಾಡಿಕೊಂಡು ಆಟವಾಡುತ್ತಾರೆ. ಕೆಲವು ಪದಗಳು ಸಂಭಾಷಣೆಯ ರೂಪದಲ್ಲಿಯೂ ಇರುತ್ತವೆ. ಆದರೆ ಹಾಡುವವರು ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹಾಡುವ ಆವಶ್ಯಕತೆಯಿಲ್ಲ,

ವಾಟ್ ಸಾರ್
ಹುಳ್ಳಿ ಸಾರ್
ಎಂಥ ಹುಳ್ಳಿ—ನಿಂಬೆ ಹುಳಿ
ಎಂಥ ನಿಂಬೆ-ಗಜನಿಂಬೆ

ಈ ಪದಗಳಲ್ಲಿ ಬಳಸಿರುವ ಶಬ್ದಗಳನ್ನು ಗಮನಿಸಿದಾಗ ಇತ್ತೀಚೆಗೆ ಕಲಿತವರು ಯಾರೋ, ಪ್ರಜ್ಞಾಪೂರ್ವಕವಾಗಿ ರಚಿಸಿದ್ದಾರೆಂದು ಅಭಿಪ್ರಾಯಪಡಬಹುದು. "ರಘುಪತಿ ರಾಘವ ರಾಜಾರಾಮು', ಎಂಬ ಪ್ರಸಿದ್ಧ ಪ್ರಾರ್ಥನಾ ಪದ್ಯ ಹೇಗೆ ಇಲ್ಲಿ ಮಾರ್ಪಟ್ಟಾಗಿದೆಯೆಂಬುದನ್ನು ತಿಳಿಯಬಹುದು. ಫೇಕ್‌ಲೋರ್‌ಗೆ ಒಂದು ಸಮರ್ಥ ಉದಾಹರಣೆಯಾದರೆ, ಮಾರ್ಪಾಟಿಗೂ ಒಳ್ಳೆಯ ಉದಾಹರಣೆಯಾಗುತ್ತದೆ. ಸದ್ಯಕ್ಕೆ ಇದು ಫೇಕ್‌ಲೋರ್ ಆದರೂ, ಮುಂದೆ ಜನಪದವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ದೂರಿ ಪದಗಳನ್ನು ಒಂದು ವರ್ಷದ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಿನ ವಯಸ್ಸಿನ ಸಣ್ಣ ಮಕ್ಕಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಹಿಂದಕ್ಕೂ ಮುಂದಕ್ಕೂ ಮೃದುವಾಗಿ ಕೈಯಿಂದ ನೂಕುತ್ತಾ, ತಟ್ಟುತ್ತಾ—

ದೂರಿ ದೂರಿ ದೂರಿ ದೂರಿ
ನಾರಿ ಕಂದ ದೂರಿ ದೂರಿ
ನಾಗರಮರಿ ದೂರಿ ದೂರಿ
ಎಳ್ಳೆ ಹೋರಿ ದೂರಿ ದೂರಿ

ಹೀಗೆ ಪದ ಮುಂದುವರಿಯುತ್ತಾ ಹೋಗುತ್ತದೆ. ಲಾಲಿ ಪದಕ್ಕಿಂತ ವಿಭಿನ್ನ ಧಾಟಿಯಲ್ಲಿ ದೂರಿ ಪದಗಳನ್ನು ಹಾಡುತ್ತಾರೆ. ಆಗ ಎಳೆಯ ಮಕ್ಕಳು ರಚ್ಚೆ ಬಿಟ್ಟು ಖುಷಿಯಿಂದ ಆಡುತ್ತವೆ. ಇಂಥ 'ಪದಗಳ' ಸಂಖ್ಯೆ ಕಡಮೆ ಆದರೆ ಅವುಗಳನ್ನು ಶೀಘ್ರವಾಗಿ ಸಂಗ್ರಹಿಸಿ ಪ್ರಕಟಿಸುವ ಆವಶ್ಯಕತೆ ಬಹಳವಾಗಿದೆ.

"ಪದವವೆ ನಮ್ಮ ಎದೆಯಲ್ಲಿ" ಎಂಬ ಭಾಗದಲ್ಲಿ ಧಾರ್ಮಿಕ, ಲೌಕಿಕ ಮತ್ತು ಜನ ಸಾಮಾನ್ಯರು ಹಾಡಿರುವ ಅನೇಕ ಬಗೆಯ ಮತ್ತು ಕೆಲವು ಸಂಪ್ರದಾಯದ ಗೀತೆಗಳಿವೆ. ಜೊತೆಗೆ ಇಲ್ಲಿ ಕೆಲವು ಒಡಚು ಕತೆಗಳನ್ನು ಸಹ ಸೇರಿಸಿದ್ದಾರೆ. ಆದರೆ ಅವುಗಳನ್ನು ಈ ಸಂಕಲನದಲ್ಲಿ ಸೇರಿಸುವ ಆವಶ್ಯಕತೆ ಇರಲಿಲ್ಲ. ಹತ್ತಾರು ಬಗೆಯ, ಹಲವಾರು ಸುಂದರವಾದ ಗೀತೆಗಳಿರುವ ಈ ಭಾಗ ಸಂಕೀರ್ಣವಾಗಿದೆ.

"ಯಾಕಾಲ ಗರುಡಾಳ ಶೋಕವ ಮಾಡುತೀಯ" ಗೀತೆ ಏಕತಾನತೆಯನ್ನು ಪಡೆದುಕೊಂಡಂತೆ ಕಾಣಲಿಲ್ಲ. ಅದರ ಕೊನೆಯ ಭಾಗ ಈ ರೀತಿಯಿದೆ.—

ಗಾಡಿ ಗಾಡಿಯಂತದು ಗಾಡಿ
ತಂತು ಪರಂಗೇರು ತಂದವರೆ ನೋಡಿ
ಶಿವನ ಸಮುದ್ರವ ಸಿಂಬಿಯ ಮಾಡಿ
ಕನ್ನಂಬಾಡಿ ಕಟ್ಟೆ ಕಟ್ಟವರೆ ನೋಡಿ

ಮೈಸೂರ್‌ಗೆ ಬೆಂಗಳೂರಿಗೆ ರೋಡನ್ನ ಮಾಡಿ
ರೋಡೀಗೆ ಒಂದನ್ನೆ ಬಸ್ಸನ್ನೆ ಮಾಡಿ
ಬಸ್ಸೀಗೆ ಒಬ್ಬನೇ ಡ್ರೈವರನೆ ಮಾಡಿ

ಇದನ್ನು ಗಮನಿಸಿದಾಗ ಜನಪದ ರಚನೆಗಿಂತ ತೀರಾ ಭಿನ್ನವಾಗಿದ್ದು, ಯಾವ ಪರಿಣಾಮವನ್ನು ಬೀರದೆ ನೀರಸವಾಗಿದೆ. "ಕಂಡೆ ಕಂಡೆ ಶಿವಪುರವ" ಮತ್ತು "ಯಾಕಾಲ ಗರುಡಾಳ ಶೋಕವ ಮಾಡುತೀಯ,' 'ಹಾಡುಗಳನ್ನು ಹಾಡಿರುವ ವಕ್ತೃಗಳ ಬಗ್ಗೆ ನಮಗೆ ಇಲ್ಲಿ ಸರಿಯಾದ ಯಾವ ಮಾಹಿತಿಯೂ ದೊರೆಯುವುದಿಲ್ಲ. ಇತ್ತೀಚಿನ ರಚನೆಗಳಾಗಿದ್ದು, ಇವುಗಳನ್ನು ಈಗ ಜನಪದ ಸಾಹಿತ್ಯದ ಗುಂಪಿಗೆ ಸೇರಿಸಲು ಕಷ್ಟವಾಗುತ್ತದೆ.

ಬುಡುಬುಡುಕೆ ಪದಗಳು ಈವರೆಗೆ ಎಲ್ಲಿಯೂ ಸಂಗ್ರಹಗೊಂಡು ಪ್ರಕಟವಾದಂತಿಲ್ಲ. ಬುಡುಬುಡುಕೆಯವರು ಹೇಳುವುದು ಸಂಪೂರ್ಣ ಪದಗಳಲ್ಲ ಗದ್ಯವನ್ನು ಸ್ವಲ್ಪ ರಾಗವಾಗಿ ಬಿರುಸಿನಿಂದ ಹೇಳಿದಾಗ ಹೊರಡುವ ಧ್ವನಿಯ ಧಾಟಿಯನ್ನು ಹೋಲುತ್ತದೆ. ಹಾಡಿನಂತೆ ಕೇಳಿದರೂ ಅವುಗಳು ಹಾಡುಗಳಾಗಿರುವುದಿಲ್ಲ. ಬುಡು ಬುಡುಕೆ ಪದಗಳಲ್ಲಿ ಮನೆಯ ಹತ್ತಿರ ಬಂದಾಗ ಕಂಡ ವ್ಯಕ್ತಿಯ ಮುಖಲಕ್ಷಣ ಗುಣಗಳನ್ನು ವರ್ಣಿಸಿ, ಹೊಗಳಿ ಅನಂತರ ಮುಂದೆ ಬರಬಹುದಾದ ತೊಂದರೆಗಳನ್ನು ಹೇಳಿ ಅದಕ್ಕೆ ಪರಿಹಾರವನ್ನು ಸಹ ಹೇಳುತ್ತಾರೆ. ಇದರಿಂದಾಗಿ ಜನರಲ್ಲಿ ಒಂದು ರೀತಿಯ ಸಮ್ಮಿಶ್ರ ಭಾವವನ್ನುಂಟುಮಾಡಿ ಜನರಿಂದ ದವಸ ಧಾನ್ಯ, ಹಳೆಯ ಬಟ್ಟೆ ಮತ್ತು ಹಣಗಳನ್ನು ವಸೂಲು ಮಾಡುತ್ತಾರೆ. ಇವರು ಹೇಳುವ ಪದಗಳು ವರ್ಣನಾತ್ಮಕವಾಗಿದ್ದು ಕುತೂಹಲವನ್ನುಂಟು ಮಾಡುತ್ತವೆ.

ಹಕ್ಕಿ ಪಿಕ್ಕರ ಹಾಡುಗಳು ಸಹ ಈವರೆಗೆ ಪ್ರಕಟವಾದಂತಿಲ್ಲ. ಅವರು ತೆಲುಗು ಮಾತಾಡುವ ಜನಾಂಗವಾಗಿದ್ದು, ಅವರು ಹಾಡುವ ಹಾಡುಗಳಲ್ಲಿ ಬಹಳಷ್ಟು ತೆಲುಗು ಶಬ್ದಗಳನ್ನು ಪ್ರಯೋಗಿಸುತ್ತಾರೆ. ಹಿಂದೆ ಅವರು ಆಂಧ್ರದಿಂದ ಇಲ್ಲಿಗೆ ವಲಸೆ ಬಂದಿರಬಹುದು. ಇಲ್ಲವೇ ಗಡಿ ಪ್ರದೇಶದವರಾಗಿದ್ದು ಇತ್ತ ಕಡೆ ಬಂದಿರಬಹುದು. ಹೆಂಗಸರು ಊರೂರಿನ ಮೇಲೆ ಹೋಗಿ ಸೂಜಿ, ದಬ್ಬಳ, ಮಣಿ ಮುಂತಾದವುಗಳನ್ನು ಮಾರಿ ಜೀವಿಸುತ್ತಾರೆ. ಗಂಡಸರು ಬೇಟೆಯಾಡಿ ಹಕ್ಕಿಗಳನ್ನು ಹಿಡಿದು ಅದರಿಂದ ಜೀವನ ಮಾಡುತ್ತಾರೆ. ಇವರು ಒಂದು ಹಾಡನ್ನು ಹೇಳಿದ್ದು ಅದರಲ್ಲಿ ಬಹುಪಾಲು ಸೂಜಿ, ದಬ್ಬಳ, ಜಾತಿಯ ಹೆಸರು ಮುಂತಾದವುಗಳ ವರ್ಣನೆ ಇದೆ.

ಗೊಲ್ಲರು ಧಾರ್ಮಿಕ ಹಾಗೂ ಲೌಕಿಕ ಎರಡೂ ಪ್ರಕಾರಗಳನ್ನೂ ಕುರಿತು ಚೆನ್ನಾಗಿ ಹಾಡಬಲ್ಲರು. ಗೊಲ್ಲರ ದೇವರು 'ಜುಂಜಪ್ಪ'. ಆ ದೇವರನ್ನು ಕುರಿತು ವಿಪುಲವಾಗಿ ಹಾಡುತ್ತಾರೆ. ಇಲ್ಲಿ ಜುಂಜಪ್ಪನಿಗೆ ಸಂಬಂಧಿಸಿದ ಒಂದೆರಡು ಗೀತೆಗಳಿವೆ. ಗೊಲ್ಲರು ಅನೇಕ ಒಳ್ಳೆಯ ಕತೆಗಳನ್ನು ಹೇಳುತ್ತಾರೆ. ಹಾಗಲವಾಡಿ ಜುಂಜಪ್ಪನಲ್ಲದೆ ಬೇರೆ

ದೇವತೆಗಳನ್ನು ಕುರಿತು ದೀರ್ಘವಾಗಿ ಹಾಡುತ್ತಾರೆ. ಕಾಡುಗೊಲ್ಲರು ಜನಪದ ಸಾಹಿತ್ಯ ಅತ್ಯಂತ ಶ್ರೇಷ್ಠವಾದುದು. ಇಲ್ಲಿ ಮಾಗುಡಿ ಕೆಂಪೇಗೌಡ, ಬಾಲನಾಗಮ್ಮನಂಥ ಜನಪ್ರಿಯ ಕಥನ ಗೀತೆಗಳನ್ನು ಕೊಡಲಾಗಿದ್ದು ಅವು ಅಪೂರ್ಣವಾಗಿವೆ.

ಹೆಳವರು ಗಂಟೆ ಬಾರಿಸಿಕೊಂಡು ಮನೆ ಮನೆ ಮುಂದೆ ಬಂದು ವಂಶಾವಳಿಗಳನ್ನು ಹೇಳಿ ಭಿಕ್ಷೆ ತೆಗೆದುಕೊಂಡು ಹೋಗುತ್ತಾರೆ, ವಂಶಾವಳಿಗಳನ್ನು ಹೇಳುವ ಮುಂಚೆ ಕುಲದ ದೇವರನ್ನು ನೆನೆಯುತ್ತಾರೆ. ಅನಂತರ ಆ ವಂಶದ ಹಿರಿಯರನ್ನು ಗುಣಗಾನ ಮಾಡುತ್ತಾರೆ. ಅವರ ಹಾಡುಗಳಲ್ಲಿ ವರ್ಣನೆಯ ಭಾಗವೇ ಪ್ರಧಾನವಾಗಿರುತ್ತದೆ.

ಚೌಡಿಕೆಯವರು ಕರ್ನಾಟಕದಲ್ಲಿ ಬಹಳ ಪ್ರಸಿದ್ಧರಾದ ಧಾರ್ಮಿಕ ವೃತ್ತಿಗಾಯಕರು. ಆದರೆ ಲೌಕಿಕ ಕಾವ್ಯಗಳನ್ನೂ ಸೊಗಸಾಗಿ ಹಾಡಬಲ್ಲರು. ದಕ್ಷಿಣ ಕರ್ನಾಟಕದಲ್ಲಿ ವಿರಳವಾಗಿಯೂ, ಉತ್ತರ ಕರ್ನಾಟಕದಲ್ಲಿ ವ್ಯಾಪಕವಾಗಿ ನೆಲೆಸಿದ್ದಾರೆ. ಇವರು ಮುಖ್ಯವಾಗಿ ಏಳು ಕೊಳದ ಎಲ್ಲಮ್ಮನನ್ನು ಕುರಿತು ಹಾಡುತ್ತಾರೆ. ಚೌಡಿಕೆಯವರ ಜನಪದ ಸಾಹಿತ್ಯ ಬಹಳ ಉನ್ನತಮಟ್ಟದ್ದು, ಇಲ್ಲಿ ತರೀಕೆರೆ ಸರ್ಜಪ್ಪ ನಾಯಕರಿಗೆ ಸಂಬಂಧಿಸಿದ ಲಾವಣಿಯ ಒಂದು ಭಾಗವನ್ನು ಅವರಿಂದ ಸಂಗ್ರಹಿಸಿ ಮಾದರಿಗಾಗಿ ಕೊಡಲಾಗಿದೆ.

ಮಲೆ ಕುಡಿಯರು ಪಶ್ಚಿಮ ಘಟ್ಟದ ತುದಿಯಲ್ಲಿ ವಾಸಿಸುತ್ತಿದ್ದಾರೆ. ಇವರ ಮೂಲದ ಬಗ್ಗೆ ಭಿನ್ನಾಭಿಪ್ರಾಯವಿದೆ. ಇವರು ಇಲ್ಲಿ ವಾಸವಾಗಿದ್ದರೂ ಮಾತನಡುವುದು ಕನ್ನಡ. ಇವರು ಹಾಡಿರುವ ಜನಪದ ಸಾಹಿತ್ಯ ಮಂಡ್ಯ ಮತ್ತು ಹಾಸನ ಜಿಲ್ಲೆಯ ಕೆಲವು ಭಾಗಗಳಲ್ಲಿ ಹಾಡುವ ಗೀತೆಗಳಿಗೆ ಬಹಳ ಸಮೀಪವಾಗಿದೆ. ಮದುವೆಯ ಸಮಯದಲ್ಲಿ ಹೇಳುವ ಹಾಡುಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ, ಮಲೆ ಕುಡಿಯರನ್ನು ಕುರಿತು ವಿಶೇಷ ಅಭ್ಯಾಸ ನಡೆಸುವವರಿಗೆ ಇದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆ.

ಲಂಬಾಣಿ ಜನರನ್ನು ಬೇರೆ ಬೇರೆ ಹೆಸರಿನಿಂದಲೂ ಕರೆಯುತ್ತಾರೆ, ಕರ್ನಾಟಕದ ಕೆಲವು ಭಾಗಗಳಲ್ಲಿ ಈ ಜನರು ನೆಲೆಸಿದ್ದಾರೆ. ಇವರಿಗೆ ಇರದೇ ಆದ ಭಾಷೆ ಇದೆ, ಆದರೆ ಸ್ವತಂತ್ರ ಲಿಪಿಯಿಲ್ಲ. ಇವರಿಂದ ಸಂಗ್ರಹಿಸಿರುವ ಸಾಹಿತ್ಯಕ್ಕೆ ಕನ್ನಡದ ಅನುವಾದವನ್ನು ಕೊಟ್ಟಿರುವುದರಿಂದ ಆ ಮೂಲಕ ಲಂಬಾಣಿಗಳ ಸಂಸ್ಕೃತಿಯನ್ನು ಸ್ವಲ್ಪ ಮಟ್ಟಿಗೆ ಅರಿತುಕೊಳ್ಳಲು ಸಹಾಯಕವಾಗುತ್ತದೆ. ಪ್ರಸ್ತುತ ಸಂಕಲನದಲ್ಲಿ ಗಂಡನ ಮನೆಗೆ ಹೆಣ್ಣು ಹೋಗುವಾಗ ತನ್ನ ಅಳಿಲನ್ನು ತೋಡಿಕೊಳ್ಳುವುದು. ಹೆಣ್ಣು ತನ್ನ ಬಾಳಿನ ಬಗ್ಗೆ ನಿರಾಶೆ ಹೊಂದಿದಾಗ ದೇವರಲ್ಲಿ ಮೊರೆ ಹೋಗುವುದು ಮುಂತಾದವುಗಳು ಮನ ಕರಗುವಂತಿವೆ. ಅಲ್ಲದೆ ಬೇರೆ ಬೇರೆ ಸಮಯದಲ್ಲಿ ಹೇಳುವ ಒಂದೆರಡು ಹಾಡುಗಳಿವೆ. ಲಂಬಾಣಿ ಜನರಲ್ಲಿ ಅದ್ಭುತವಾದ ಜನಪದ ಸಾಹಿತ್ಯದ ಭಂಡಾರವಿದ್ದರೂ, ಅವರಿಂದ ಹೆಚ್ಚಿಗೆ ಸಂಗ್ರಹಿಸಿ ಪ್ರಕಟಿಸಿರುವುದು ಎಲ್ಲಿಯೂ ಅಷ್ಟಾಗಿ ಕಂಡು ಬಂದಿಲ್ಲ.

ಲಂಬಾಣಿಗರ ಜನಪದ ಸಾಹಿತ್ಯವೂ ಅಮೂಲ್ಯವಾಗಿದೆ. ತನ್ನದೇ ವೈಶಿಷ್ಟ್ಯವನ್ನು ಪಡೆದಿದೆಯೆಂಬುದು ಇಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ.

"ಪದವವೆ ನಮ್ಮ ಎದೆಯಲ್ಲಿ" ಒಂದು ಮಹತ್ವಪೂರ್ಣ ಸಂಕಲನ. ಸಂಕಲನದ ಪ್ರತಿಯೊಂದು ದಳದಲ್ಲಿಯೂ ಸಂಶೋಧಕರ ಕುತೂಹಲವನ್ನು ಕೆರಳಿಸುವ, ಸಾಹಿತ್ಯ ಸ್ವಾರಸ್ಯದಿಂದ ಕೂಡಿದ ಅನೇಕ ಬಗೆಯ ಗೀತೆಗಳು, ಬಿಡಿ ಹಾಡುಗಳು, ತ್ರಿಪದಿಗಳು ದೊರೆಯುತ್ತವೆ. ಈವರೆಗೆ ಇಷ್ಟು ವ್ಯಾಪಕವಾದ ವಸ್ತುವೈವಿಧ್ಯದಿಂದ ಕೂಡಿರುವ ಸಂಕಲನ ಪ್ರಕಟವಾಗಿರಲಿಲ್ಲವೆಂದು ಹೇಳಿದರೆ ಬಹುಶಃ ತಪ್ಪಾಗಲಾರದು. ಗಾತ್ರದಲ್ಲಿಯು, ಗುಣದಲ್ಲಿಯೂ ಅತ್ಯಂತ ಶ್ರೇಷ್ಠವಾಗಿರುವ ಈ ಸಂಕಲನದಿಂದ ಜನಪದ ಸಾಹಿತ್ಯ ಪ್ರೇಮಿಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಕೆಲವು ಅಪೂರ್ಣವಾಗಿದ್ದರೂ, ಮುಂದಿನವರು ಕೈಗೊಳ್ಳುವ ಸಂಗ್ರಹ ಕಾರ್ಯಕ್ಕೆ ಕೈಮರವಾಗುತ್ತವೆ. ಆದ್ದರಿಂದ ಅವುಗಳ ಸೇರ್ಪಡೆಯೂ ಉಚಿತವಾಗಿದೆ. "ಪದವವೆ ನಮ್ಮ ಎದೆಯಲ್ಲಿ" ಎಂಬ ಸಂಕಲನವನ್ನು ಸಮರ್ಥವಾಗಿ ಸಂಪಾದಿಸಿಕೊಟ್ಟಿರುವ ಶ್ರೀ ಎಚ್. ಎಲ್. ನಾಗೇಗೌಡರು ಅಭಿನಂದನಾರ್ಹರು.

೨೬ | ಕಥೆ–ವ್ಯಥೆ

ಸೋಮಶೇಖರ ಇಮ್ರಾಪೂರ

ಶ್ರೀ ಎಚ್. ಎಲ್ ನಾಗೇಗೌಡ–ಅವರು 'ಪ್ರವಾಸಿಕಂಡ ಇಂಡಿಯಾ' ಸಂಪುಟಗಳಿಂದ ತಮ್ಮ ಸಾಹಿತ್ಯಿಕ ಕೀರ್ತಿ ಧ್ವಜ ನಟ್ಟಿರುವುದರೊಂದಿಗೆ ಕಾದಂಬರಿ, ಜೀವನ ಚರಿತ್ರೆ, ಆತ್ಮಚರಿತ್ರೆ, ಸಣ್ಣಕಥೆ, ಪ್ರವಾಸಕಥನ, ಜನಪದ ಸಂಗ್ರಹ ಹೀಗೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಗೈದುದಲ್ಲದೆ ನಾನಾಗುವೆ ಗೀಜಗನಹಕ್ಕಿ, ಕಥೆ-ವ್ಯಥೆಗಳೆಂಬ ಎರಡು ಕವನ ಸಂಗ್ರಹಗಳನ್ನು ಕೊಟ್ಟು ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಸ್ಥಾನ ಪಡೆದಿರುವುದು ಗಮನಾರ್ಹ.

ಪ್ರಸ್ತುತ ಕಥೆ–ವ್ಯಥೆಯಲ್ಲಿ ಎಂಟು ನೀಳ್ಗವನಗಳಿದ್ದು ಅವುಗಳಲ್ಲಿ ಒಂದೆರಡು ಕಥನಕವನಗಳೂ (Narrative poems) ಕೆಲವು ಭಾವಗೀತಾತ್ಮಕವಾದವುಗಳೂ ಸೇರಿಕೊಂಡು ಒಟ್ಟಿನಲ್ಲಿ ಅವೆಲ್ಲವೂ ಕವಿಯ ಆಂತರಿಕ–ಮನೋಭಾವನೆಯ ಪ್ರತೀಕವೆನಿಸುತ್ತವೆ. ಕವಿಗಳೇ ಮುನ್ನುಡಿಯಲ್ಲಿ ಹೇಳುವ ಹಾಗೆ ಅವೆಲ್ಲವೂ ಒಂದಲ್ಲ ಒಂದು ರೀತಿಯಿಂದ ಕಥಾಂಶವನ್ನೇ ಹೊಂದಿವೆ. ಸಂಗ್ರಹದ ಮೊದಲಿನ ನಾಲ್ಕು ಕವನಗಳು ಅಂದರೆ ರಾಜರ್ಷಿ ಮೇಣ್ ಹರಿಣ (1940), ಕೊನೆಗುಳಿದ ಕುರಿಮರಿ (1938), ವೃದ್ಧಭಿಕ್ಷುಕ (1938) ; ಕುರುಬ ದೊಡ್ಡಯ್ಯ (1938) ಇವು ಕ್ರಮವಾಗಿ ತೋರುದತ್ತಳ "Royal Hermit and the Deer" ವರ್ಡ್ಸ್‌ವರ್ತ್ ಮಹಾಕವಿಯ "The Last of the Folek" "The oldcumberland Beggar" ಮತ್ತು 'Michael' ಎಂಬ ಕವನಗಳ ಅನುವಾದ, ಭಾವಾನುಗಳಾಗಿದ್ದು, ಅವೆಲ್ಲವುಗಳಲ್ಲೂ ಶ್ರೀ ನಾಗೇಗೌಡರ ಕಾವ್ಯ ಸ್ವಂತಿಕೆ ಎದ್ದು ಕಾಣುತ್ತದೆ. ಇಡೀ ಬದುಕಿನ ಕ್ಷಣ ಭಂಗುರತೆಗೆ ಅನುಕಂಪೆ ತೋರುವ ಕವಿಗಿರುವ ಕಳವಳ, ಕಳಕಳಿಗೆ ಅನುವಾದಕ್ಕಾಗಿ ಆರಿಸಿಕೊಂಡ ಅಂಥ ಪ್ರಸಿದ್ಧ ಕವನ ವಸ್ತುಗಳೇ ಸಾಕ್ಷಿಯಾಗಿವೆ. ಶ್ರೀ ನಾಗೇಗೌಡರ ಹೃದಯ ಸರಳ, ಮಾತು ಸರಳ, ಜೀವನ ಪರಿಶುದ್ಧ ಹಾಗೆಯೇ ಅವರ ಕವನಗಳಲ್ಲೂ ಅವೇ ಗುಣ ದೃಷ್ಟಿ ಸ್ಥಾನ ಪಡೆದಿರುವುದು ಗಮನಾರ್ಹವಾಗಿದೆ. ಅನುವಾದಗಳು ಕೇವಲ ಅನುವಾದಗಳಾಗಿರದೇ ಕವಿಯ ಜೀವನ ನಿಷ್ಠೆ, ಜೀವನ ದರ್ಶನಗಳ ಪ್ರತಿ ಫಲನವೂ ಅವುಗಳೊಂದಿಗೆ ಸೇರಿಕೊಂಡು ಸ್ವತಂತ್ರ ಕೃತಿಗಳೆನ್ನುವಷ್ಟರ ಮಟ್ಟಿಗೆ ಕನ್ನಡ ನೆಲ ಜಲ ವರ್ಣನಸ್ಪರ್ಶ ಪಡೆದಿರುವುದನ್ನು ಯಾರಾದರೂ ಗಮನಿಸಬಹುದು.

ರೆವಿನ್ಯೂ ದೊಡ್ಡ ಅಧಿಕಾರಿಯಾಗಿ ಯಾವ ಹಮ್ಮು ಬಿಮ್ಮುಗಳಿಗೂ ಒಳಗಾಗದ ಶ್ರೀ ನಾಗೇಗೌಡರ ಸಾಹಿತ್ಯ ಶ್ರದ್ಧೆ ಅನುಪಮವಾದುದು. ಅವರ ಬದುಕಿನ ಸಂಕೀರ್ಣತೆಯನ್ನು ಅರ್ಥೈಸಿಕೊಂಡವರು ನೋವು ನಲಿವುಗಳನ್ನೆಲ್ಲ ಗುರುತಿಸುವರು. ಸಾಮಾಜಿಕ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಗಳ ಅಪಾರ ಪರಿಚಯ ಹೊಂದಿದ ಅವರ ಕರ್ತೃತ್ವಶಕ್ತಿಗೆ ಸಾಹಿತ್ಯವೊಂದು ವರದಾನವಾಗಿ ಬಂದಿರುವುದು ನಿಜಕ್ಕೂ ಮಹತ್ವದ ಸಂಗತಿಯಾಗಿದೆ. ಈ ಗುಣವನ್ನು ಅವರ ಮುಂದಿನ ನಾಲ್ಕು ಕವನಗಳಲ್ಲೂ ಗುರುತಿಸಬಹುದಾಗಿದೆ. ಸುಮಾರು 1940 ರ ಆಚೆಗೇ ಬರೆದ ನಿತ್ಯಾನಿತ್ಯ (1938) ; ಹಳ್ಳಿಯಮ್ಮ (1939) ಮತ್ತು 1966 ರಲ್ಲಿ ಬರೆದ ತುಳುನಾಡಿಗೆ ಸ್ವಾಗತ ; 1968 ರಲ್ಲಿ ಬರೆದ ಅಧಿಕಾರಿಗೇಕೆ ಕವನ ಕಟ್ಟುವ ಪಟ್ಟು ಎಂಬ ನಾಲ್ಕೂ ಕವನಗಳಲ್ಲಿ ಅಂಥ ಕಾವ್ಯೋನ್ನತಗುಣವಿಲ್ಲದಿದ್ದರೂ, ಅವೆಲ್ಲವೂ ಭಾವನಾ ಶ್ರೀಮಂತಿಕೆಯಿಂದ ಮಿಗಿಲೆನಿಸಿವೆ. ಸಾಮಾಜಿಕ ಅನಿಷ್ಟಗಳ ಬಗೆಗಿರುವ ಕವಿಯ ಅನುಕಂಪ, ಕಥೆ-ವ್ಯಥೆಗಳೇ ಆ ಕವನಗಳ ಮುಖ್ಯ ಆಶಯವಾಗಿದೆ.

"ಅಧಿಕಾರಿಗೇಕೆ ಕವನಕಟ್ಟುವ ಪಟ್ಟು" ಎಂಬುದು ಮುದ್ದಣ್ಣನ ಶತಮಾನೋತ್ಸವದ ಅಂಗವಾಗಿ ನಡೆದ ಕವಿಸಮ್ಮೇಳನದಲ್ಲಿ ಓದಿದ ಕವನ ಕವಿಯ ಸ್ವಪ್ರಜ್ಞೆಗೆ ಸಾಕ್ಷೀ ಭೂತವಾದ ಕವನ. ಬೆಳ್ತಂಗಡಿಯ ಪ್ರವಾಸಮಂದಿರದ ಭೌಗೋಲಿಕ ಪರಿಸರದ ಸೂಕ್ತವರ್ಣನೆಯೊಂದಿಗೆ ಪ್ರಾರಂಭವಾದ ಈ ಕವನದಲ್ಲಿ ಸೋರಿ ಹೋಗುವ ಸೂರ್ಯೋದಯದ ಸವಿಯನ್ನು ಪಡೆಯದೆ ಕಣ್ಮುಚ್ಚಿ ಮಲಗಿದ ಸೋಮಾರಿಗಳನ್ನು ಎಚ್ಚರಿಸಿ, "ಕೋಟಿ ಕೋಟಿ ಮಾನವರೆಲ್ಲ ಕವಿಗಳಾದರೂ, ಘಾಟಿ ಘಾಟಿಯಲ್ಲಿ ಹಾಡಿದರೂ ಇದ ಮುಗಿಸಲಾರರು' ಎಂದು ಸೂರ್ಯೋದಯ ಸೌಂದರ್ಯದ ಪರಾಕಾಷ್ಠತೆಯನ್ನು ಸೂಚಿಸಿದ್ದಾರೆ. ಕೊನೆಗೆ ಸೂರ್ಯಾಸ್ತವನ್ನಾದರೂ ನೋಡೆಂದು ಹೇಳುವಲ್ಲಿ ಬದುಕಿನ ಸಿತಾಂತಸತ್ಯ ಅಡಗಿದೆ. ಕಾರಣ ಸುಖ-ದುಃಖ, ನೋವು-ನಲಿವು-ಏಳು-ಬೀಳುಗಳೆಲ್ಲ ಬಂದರ್ಭದಲ್ಲಿ ಬದುಕಿನ ಪರಿಪೂರಕ ಸಮಾನ ಭಾಗಗಳೇ ಆಗಿರುವಾಗ-ದುಃಖದಲ್ಲೂ ಸುಖದ ಕ್ಷಣ ಅರಸುವುದು ಜೀವನ ಧರ್ಮವಾಗಿದೆ. ಕವನ ಹಾಗೆಯೇ ಕುದುರೆಮುಖ ಯೋಜನೆಯ ವಿವರಗಳನ್ನೊಳಗೊಂಡು ರಾಜಕೀಯ ವಿದ್ಯಮಾನ ಫಲಶ್ರುತಿಗಳನ್ನು ಸಾರುತ್ತದೆ. ಸುಖಕ್ಕಾಗಿ ಸೌಂದರ್ಯದ ಬಲಿಕೊಡಲು ಕವಿಗೆ ಇಷ್ಟವಿಲ್ಲದಾಗ್ಯೂ ಆರ್ಥಿಕ ಸಂಪತ್ತಿನೇಳ್ಗೆಗೆ ಹೆಮ್ಮೆ ಪಡುತ್ತಾನೆ. ಕವನದ ಕೊನೆಯ ಭಾಗ ಅತ್ಯಂತ ಮಹತ್ವದ್ದಾಗಿದೆ. ರೆವಿನ್ಯೂ ಅಧಿಕಾರಿಯಾದವನಿಗೆ ಕಾವ್ಯ ಬರೆವ ಹಟವೇಕೆ ? ಎಂದು ಫೈಲುಗಳಿಂದಲೇ ಪ್ರಶ್ನಿಸಿರುವುದು ಔಚಿತ್ಯಪೂರ್ಣವಾಗಿದೆ.

"ಅಧಿಕಾರಿ ಬೇಡವೋ ನಿನಗೆ ಕಾವ್ಯದ ಥಾಸಿ
ಆಗಲಿ ಬಂದರು ಸಿಡಿಯಲಿ ಕುದುರೆಮುಖ
ಆದರೆ ನೀನಾಗಬೇಡ ಕವಿ !

....

ರುಜು ಹಾಕುವುದು ಕಲಿತಾಗಲೇ

ಕಟ್ಟಿತು ನಿನ್ನ ಕಾವ್ಯದ ಕೋಗಿಲೆ

....

ನಿನಗ್ಯಾಕೊ ಕವನದ ಹಂಬಲು ?

ಹೇಳಿದ ಕಡೆ ಹಾಕು ರುಜು.

ತೋರಿದ ಕಡೆ ಕಟ್ಟು ಕುರ್ಜು

ಇದ ಮೀರಿ ನಡೆದರೆ ?

ಫೈಲುಗಳೇ ಹೊ ಬಾಗಿ

ಹೆಣವ ಕಾಯುವ ಹದ್ದಿನ ಕಣ್ಣಾಗಿ

ಕಾಡಿಸುವವೋ ನಿನ್ನ ಹೇ ಪೆದ್ದು ! "

ಹೀಗೆ ಕವಿಗೆ ಫೈಲುಗಳೇ ಹೇಳುವ ಈ ಕಾವ್ಯ ಸೃಷ್ಟಿ ಸಂದರ್ಭ ನಿಷ್ಕ್ರಿಯರಾಗಿರುವ ಇತರ ರೆವಿನ್ಯೂ ಅಧಿಕಾರಿಗಳನ್ನೂ ಕೊಂಕಿಸುವುದು ಗಮನಾರ್ಹ, ಅದಲ್ಲದೆ ತಾವೇ ಕವಿ-ರವಿ ಎಂದು ಪುಚ್ಚ ಚುಚ್ಚಿಕೊಂಡ ಇತರ ಕವನಗಳನ್ನು ಕೊಂಕಿಸಿ ಪದ್ಯದಲ್ಲಿ ಕಥೆಯ ಹೇಳಲು ಹೋದ ಮುದ್ದಣನಿಗೆ 'ಗದ್ಯಂ ಹೃದ್ಯಂ ಪದ್ಯಂ ವಧ್ಯಂ" ಎಂದು ಹೇಳಿದ ಮನೋರಮೆಯ ಮಾತನ್ನು ಪ್ರಾಸಂಗಿಕವಾಗಿ ಬಳಸಿಕೊಂಡಿರುವುದು ಯೊಥೋಚಿತ ವಾಗಿದೆ. 'ಸಂತೆ ಹೊತ್ತಿಗೆ ಮೂರು ಮೊಳನೆಯ್ದು' ಶತಮಾನೋತ್ಸವದಲ್ಲಿ, ಓದಿ ಶಹಭಾಸಗಿರಿ ಪಡೆದು ಕವಿಗಳನ್ನು ಬಿಡದ ಕವಿ ಕೊನೆಗೆ—

"ಅಧಿಕಾರಿಯಾದರೇನಂತೆ-

ಕಳೆದುಕೊಂಡಿಲ್ಲ ಸ್ವಾತಂತ್ರ್ಯವನು

ಮಾರಿಕೊಂಡಿಲ್ಲ ತನ್ನಾತ್ಮವನು

ಅಂದಳವ ಇಳಿಸಿದರೂ ಪಾಡುವೆನು ದಟ್ಟಾಗಿ"

ಎಂಬ ಪ್ರಜ್ವಲಿಪ ಕಾವ್ಯನಿಷ್ಠೆ ತೊಟ್ಟದ್ದು ಮೆಚ್ಚುವಂಥದು ಆದರೂ ಕವಿಯ ವಿಧೇಯತೆಗೆ ಕುಂದಿಲ್ಲ. ಇತರ ಕವಿಗಳ ಬಗ್ಗೆ ರೊಚ್ಚು ಇದ್ದರೂ ಗೌರವ ಭಾವ ಅಳಿದಿಲ್ಲ.

"ಬರಲಿ ನಮ್ಮ ಹೂವಿನೊಡನೀನಾರೂ

ಹೊಟ್ಟೆಯನು ಸೇರಲಿ ಅನ್ನ ದೊಡನೀ ಸಾರೂ"

ಎಂಬಲ್ಲಿ ಕವಿಯ ಆ ಮನೋಗತವನ್ನೂ ಅರಿಯಬಹುದು. ತನ್ನ ಕಾವ್ಯದ ಬಗ್ಗೆ ಕವಿಗಿರುವ ಅಭಿಮಾನ ಅಪಾರವಾದರೂ

"ಇದು ಪದ್ಯ ಅಲ್ಲ ಮಾರಾಯರಾ,

ಗದ್ಯವನೆ ಅಧಿಕಾರಿ ಹೇಳಿದ ರೀತಿ ಮಾರಾಯರಾ"

ಎಂದು ಕೊನೆಗೆ ಸೂಚಿಸಿರುವುದು—ಕವಿಹೃದಯವಿದ್ದವನ ಗದ್ಯವೂ ಪದ್ಯವೇ ಎಂಬುದುಕ್ಕೆ ಒತ್ತುಕೊಡುತ್ತದೆ. ಇಂದಿನ ನವ್ಯಕಾವ್ಯ ಸಂಪ್ರದಾಯದಲ್ಲಂತೂ ಶ್ರೀ ನಾಗೇಗೌಡರು ಹೇಳಿದ ಮಾತೇ ಹೆಚ್ಚು ಸೂಕ್ತವೆಂದರೆ ತಪ್ಪಿಲ್ಲ.

'ಹಳ್ಳಿಯಮ್ಮ' ಪದ್ಯ ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಪೂರ್ವದಲ್ಲೇ ರಚಿತವಾಗಿದ್ದು–ಭಾರತದ ಅಂದಿನ ಸಾಮಾಜಿಕ ಪರಿಸ್ಥಿತಿಯ ಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ. ಬೇಂದ್ರೆಯವರಿಗೆ ಕನ್ನಡಾಂಬೆಯೇ ಮುಂದೆ ಬಂದು ನಿಂತು ಛಾಲೆಂಜ್ ಕೊಟ್ಟಂತೆ ಶ್ರೀ ನಾಗೇಗೌಡರಿಗೆ ಭಾರತದ ಹೃದಯವೇ ಆದ ಹಳ್ಳಿಯೊಂದು 'ಹಳ್ಳಿಯಮ್ಮ'ನಾಗಿ ತನ್ನ ಕಥೆ–ವ್ಯಥೆಗಳನ್ನೆಲ್ಲ ಹೇಳಿಕೊಂಡಿರುವುದು ವಾಸ್ತವಪೂರ್ಣವಾಗಿದೆ. ರಾಜಕಾರಣಿಗಳು, ಅಧಿಕಾರಿಗಳು ಹಳ್ಳಿಯನ್ನು, ಹಳ್ಳಿಯವರನ್ನು ಅಸಡ್ಡೆ ರೀತಿಯಿಂದ ಕಂಡು, ದರ್ಪದಿಂದಲೇ ಲಂಚರು ಪ್ರತ್ಯಗಳನ್ನು ಕಿತ್ತುಕೊಂಡು ಹರಿದು ತಿನ್ನುವ ದಾರುಣ ಸ್ಥಿತಿಯೂ ಅಲ್ಲಿ ವ್ಯಕ್ತವಾಗಿದೆ. ಹಳ್ಳಿಯ ಕರಾಳ ರೂಪಕ್ಕೆ ಮೇಲಧಿಕಾರಿಗಳೇ ಕಾರಣರು ಎಂಬುದನ್ನು ಕಾವ್ಯದಲ್ಲಿ ಸ್ಪಷ್ಟ ಪಡಿಸಿದೆ.

> ಆಡುವ ನೂರ್ಮಾತಿನಲಿ ಮಾಡಿದ್ದರೊಂದು ಭಾಗ
> ಬರುತಿರಲಿಲ್ಲವೆಂದಿಗೂ ಹಳ್ಳಿಗೆ ಹಿಂದುಳಿದೀರೋಗ

ಎಂಬ ಮಾತಿನಲ್ಲಿ ದೇಶೋದ್ಧಾರಕ್ಕೆ ಭಾಷಣ ಬಿಗಿದು ಹೋಗುವ ರಾಜಕಾರಣಿಗಳ ಅಧಿಕಾರಿಗಳ ಕುಹಕ ನಡವಳಿಕೆಯೂ ವ್ಯಕ್ತವಾಗಿದೆ.

ನಿತ್ಯಾನಿತ್ಯ ಕವನದಲ್ಲಿ ಪುಣೆಯ ಲಾ ಕಾಲೇಜ ಗುಡ್ಡದ ಮೇಲಿಂದ ಪಡೆದ 1938ರ ಸಂಜೆಯ ಅನುಭವದ ವಿವರವಿದ್ದಷ್ಟು, ಐತಿಹಾಸಿಕ ಸ್ಥಳವಿವರ ಮಹತ್ವವನ್ನು ಸೂಚಿಸುತ್ತಾ—ಬದುಕಿನ ಗಂಭೀರ ಸತ್ಯಾಸತ್ಯತೆಯತ್ತ ತುಡುಕುತ್ತದೆ. ಹುಟ್ಟು ಸಾವಿನ ದ್ವಂದ್ವ ಕವಿಯನ್ನು ದಿಗ್ಭ್ರಮೆಗೊಳಿಸಿದೆ. ಸೌಂದರ್ಯ ಕಳೆದು ಕತ್ತಲಾವರಿಸಿದಾಗ ಕವಿಗೆ ಭಯ ಒಂದೆಡೆ–ನದಿಯ ದಡದ ಮೇಲೆ ಉರಿವ ಹೆಣ. ಮತ್ತೊಂದೆಡೆಗೆ ಉರಿಯ ಕಿಡಿಗಳಂತಿರುವ ಮನೆಯ ಸೊಡರುಗಳು. ಮೈಬಿವೆತು ಹೋಗುವ ಕಾರಿರುಳ ಭೀಕರ ದೃಶ್ಯ ಅಂತೆಯೇ ಕವಿಗೆ ವಿನಸುತ್ಯೆತೆ ವಿಸ್ಮೃತೆ' ಎಂದು ಬದುಕಿನ ಬಗ್ಗೆ ತಳಮಳ, ವಿಸ್ಮಯ ಏನಿದ್ದರೂ ಕೊನೆಗೆ ಬೂದಿಯಾಗುವದು ಕಂಡು ಭೀತಿ. ಹಾಗೆಯೇ ಮದುವೆಯಾಗಿ ಮಕ್ಕಳ ತಂದೆಯಾಗಿ ಹರೆಯ ತನದ ಸುಖವನ್ನು ಅನುಭವಿಸುವ ಮುನ್ನವೇ ಮಣ್ಣೊಳಗೆ ಮಣ್ಣಾದ ಗೆಳೆಯನ ನೆನಪು ಬಾಳು ಬರಿ ಸುಖವೋ ದುಃಖವೋ ಎಂಬುದನ್ನು ಅರಿಯದ ಮೂಕ ವಿಸ್ಮಿತ ಕವಿ. ಜೀವನದ ತತ್ವಗಳ ಗುಟ್ಟನ್ನರಿಯದ ಅಸಹಾಯತೆಯಲ್ಲಿಯೇ ಬದುಕಿನ ನಿಗೂಢ ರಹಸ್ಯ ಅಡಗಿದೆ. ಕೊನೆಗೆ ಗಾಜಿನ ದೀಪಗಳೇ ಕವಿಯ ಕಡೆಗೆ ಗಹಗಹಿಸಿ ನಗುವುದು ಅರ್ಥಪೂರ್ಣವಾಗಿದೆ. ಬಾಳಿನ ಪ್ರಲೋಭನೆಗಳಿಗೆಲ್ಲ ಪ್ರತಿ–ಸ್ಪಂದಿಯಾಗಿ ನಿಲ್ಲಬೇಕಾದುದು ಅನಿವಾರ್ಯವೆಂಬ ಅಂಶವನ್ನು ಅದು ಸೃಷ್ಟಿಗೊಳಿಸುತ್ತದೆ.

'ತುಳು ನಾಡಿಗೆ ಸ್ವಾಗತ' ಎಂಬುದು 1966ರ ಅಖಿಲ ಕರ್ನಾಟಕ ಮಕ್ಕಳ ಕೂಟದಲ್ಲಿ ಅವರ ಸ್ವಾಗತಕ್ಕಾಗಿಯೇ ಬರೆದ ಸರಳ ಸ್ವಾಗತ-ಕವನ. ತುಳು ನಾಡಿನ ಪ್ರಕೃತಿಯ ಸೌಂದರ್ಯ, ಸ್ಥಳ ಮಹಾತ್ಮೆಗಳ ವಿವರಗಳನ್ನು ಪರಿಚಯಿಸುವ ಸಾಮಾನ್ಯ ಪದ್ಯ.

ಒಟ್ಟಿನಲ್ಲಿ ಶ್ರೀ ಎಚ್. ಎಲ್. ನಾಗೇಗೌಡರು ಕವಿಯಾಗಿ ಅಲ್ಲದಿದ್ದರೂ ಇತರ ಸಾಹಿತ್ಯ ಕೃಷಿಯಿಂದ ಗಣ್ಯರಾಗಿದ್ದಾರೆಂಬುದು ಮುಖ್ಯ. ಇವರ ಕಾವ್ಯದ ಅಭಿವ್ಯಕ್ತಿ ಸರಳ, ಸ್ಪಷ್ಟ ಮತ್ತು ನೇರ. ಕಾವ್ಯದಲ್ಲೆಲ್ಲ ಕರ್ನಾಟಕ ಭಾರತದ ಜನಜೀವನದ ಏಳ್ಗೆಯನ್ನು ಕುರಿತ ಉಜ್ವಲ ನಾಡಪ್ರೇಮ ಎದ್ದುಕಾಣುತ್ತದೆ. ಇನ್ನೊಂದು ಅತ್ಯಂತ ಮಹತ್ವದ ಸಂಗತಿಯೆಂದರೆ-ಭಾಷೆ ಹಾಗೂ ಅಭಿವ್ಯಕ್ತಿಗೆ ಸಂಬಂಧಿಸಿದ್ದು, ಸರಳ ರಗಳೆಯ ಓಟದಲ್ಲಿ ಸಾಗುವ ಇವರ ಕೆಲವು ಅನುವಾದ ಕವನಗಳು 1940 ಆಚೆಗೇ ರಚಿತವಾದವುಗಳೆಂದು ಗಮನಿಸಿದಾಗ ಗದ್ಯಕಾವ್ಯ ಸಂಪ್ರದಾಯದ ಮುಕ್ತ ಛಂದದ ಹದ ಆ ಕಾಲಕ್ಕೆ ಇವರಿಗೆ ಕರಗತವಾಗಿತ್ತು ಎಂಬದು ಸ್ಪಷ್ಟ ಮತ್ತು ಮಹತ್ವದ್ದೆನಿಸುತ್ತದೆ.

೨೭ 'ನಾನಾಗುವೆ ಗೀಜಗನ ಹಕ್ಕಿ'

ಸಿ. ಪಿ. ಕೆ.

ಎಚ್. ಎಲ್. ನಾಗೇಗೌಡರ 'ನಾನಾಗುವೆ ಗೀಜಗನ ಹಕ್ಕಿ' ಸಂಕಲನದಲ್ಲಿ ಹತ್ತಿರ ಹತ್ತಿರ ಅರ್ಧ ಶತಮಾನದ ಹಿಂದೆ ರಚಿತವಾದ ಹದಿನೇಳು ಸ್ವತಂತ್ರ ಕವನಗಳೂ ಇತ್ತೀಚಿನ ಕೆಲವು ಅನುವಾದಿತ ಕವನಗಳೂ ಸಂಚಿತವಾಗಿವೆ.

ಇಲ್ಲಿನ ಸ್ವತಂತ್ರ ಕವನಗಳು ಕನ್ನಡ ನವೋದಯ ಕಾವ್ಯದ ಮತ್ತು ನಾಗೇಗೌಡರ ಕಾವ್ಯ ಜೀವನದ ಆರಂಭಕಾಲದಲ್ಲಿ ರೂಪುಗೊಂಡವಾದ್ದರಿಂದ, ಇವಕ್ಕೊಂದು ಗಟ್ಟಿಯಾದ ಚಾರಿತ್ರಿಕ ಮೌಲ್ಯವಿದೆ. ನವೋದಯ ಕಾವ್ಯದ ಒಂದು ಮಜಲು ಹಾಗೂ ಮುಖ ಇವುಗಳಲ್ಲಿ ಪ್ರಾತಿನಿಧ್ಯಗೊಂಡಿದೆ. ಇಂದು ಈ ಕವಿತೆಗಳು ಓದುಗರಿಗೆ ಕುತೂಹಲವುಂಟುಮಾಡುವ ಪ್ರಮಾಣದಲ್ಲಿ ಸಮಾಧಾನವುಂಟುಮಾಡದಿದ್ದರೆ ಆಶ್ಚರ್ಯವಿಲ್ಲ. "ಕಾವ್ಯರಚನೆಯಲ್ಲಿ ಮತ್ತು ಭಾವನೆಗಳಲ್ಲಿ ಪಕ್ವತೆಯನ್ನು ಕಾಣದಿರುವುದು ಸಂಭವ" ಎಂದು ಕವಿಯೇ ಹೇಳಿಕೊಂಡಿದ್ದಾರೆ. ಆದರೂ ಈ ಕವನಗಳಲ್ಲಿ ಸಾಕಷ್ಟು ಆಕರ್ಷಕತೆಯಿದ್ದರೆ, ಅದಕ್ಕೆ ಕಾರಣ ಈ ಮಾತುಗಳಲ್ಲಿ ಸಿಗುತ್ತದೆ: "ಬೇಕೆಂತ ಬರೆದವುಗಳಲ್ಲ ಈ ಕವನಗಳು ; ಅವೇ ಬೇಕೆಂತ ಬಂದವುಗಳು ನನ್ನ ಮನಸ್ಸಿನಲ್ಲಿ."

ಹಕ್ಕಿಹಾಡಿನಂತೆ ಅಯತ್ನ ಪುರಸ್ಸರವಾಗಿ ಹಿಗ್ಗಿನಿಂದ ಸ್ಫುರಿಸಿದ ಈ ಪದ್ಯಗಳಲ್ಲಿ ಸಹಜತೆ, ಸರಳತೆ, ಮುಗ್ಧತೆಗಳು ಧಾರಾಳವಾಗಿ ಗೋಚರಿಸುತ್ತವೆ. ಇವು ನಾಗೇಗೌಡರ ಕಾವ್ಯದ ವೈಶಿಷ್ಟ್ಯಗಳೂ ಹೌದು, ಪರಿಮಿತಿಗಳೂ ಹೌದು. 'ಭಾವದೆಳನಗೆ'ಯನ್ನು ತಮ್ಮ ಹೃದಯದಲ್ಲಿ ಬೀರುವಂತೆ ಅವರು ಕಾವ್ಯದೇವಿಯನ್ನು ಪ್ರಾರ್ಥಿಸಿಕೊಂಡಿದ್ದಾರೆ; ಅವರ ಸೀಮಿತ ಪ್ರಾರ್ಥನೆ ಫಲಿಸಿದೆ. ವೈಚಾರಿಕತೆಯ ಬೆಂಬಲ ಸಾಕಷ್ಟಿಲ್ಲದ ಸರಳ ಸುಂದರ ಭಾವೋದ್ಗಾರಗಳಾಗಿ ಪರಿಣಮಿಸಿವೆ ಅವರ ರಚನೆಗಳು. ಇವುಗಳಲ್ಲಿ ನಾವು ಪ್ರಬುದ್ಧತೆಯನ್ನು ನಿರೀಕ್ಷಿಸಲಾಗದು ; ಹಾಗೆಯೆ ಅವುಗಳ ಪರಿಮಿತ ಸಿದ್ಧಿಯನ್ನು ಅಲ್ಲಗಳೆಯಲಾಗದು.

ವಸ್ತು, ಧಾಟಿ, ಧೋರಣೆಗಳಲ್ಲಿ ಜನಪದ ಕಾವ್ಯಕ್ಕೆ ಹತ್ತಿರವಾದದ್ದು ನಾಗೇಗೌಡರ ಕವಿತೆ ; ಈ ಅಂಶದಿಂದ ನಿಷ್ಪನ್ನವಾದದ್ದು ಅದರ ಚೆಲುವು. 'ನಾನಾಗುವೆ ಗೀಜಗನ ಹಕ್ಕಿ' ಎಂಬ ಶೀರ್ಷಿಕೆಯಲ್ಲಿ ಕವಿಮನೋಧರ್ಮ ಮಾತ್ರವಲ್ಲದೆ ಜಾನಪದ ದೃಷ್ಟಿಯೂ ವ್ಯಕ್ತವಾಗುತ್ತದೆ. (ಗೀಜಗನ ಹಕ್ಕಿಯನ್ನು ಕಂಡವರು ಜನಪದ ಕವಿಗಳೇ ಹೊರತು ಪ್ರೌಢ ಕವಿಗಳಲ್ಲ). "ಒಣಮರದ ನೇಗಿಲನು ಹಿಡಿದು ನುಡಿಸುವೆನು ನಾಗ

ಸ್ವರವನದರಲ್ಲಿ" ಎನ್ನುವಲ್ಲಿಯೂ ನಾಗೇಗೌಡರ ಜಾನಪದ ನಿಲುವು ಮಿಂಚುತ್ತದೆ. ಕಾಯಕವನ್ನೆ ಕಾವ್ಯ ಮಾಡುವ ವಿರಳ ಪ್ರವೃತ್ತಿ–ಹಿಂದೆ ವಚನಕಾರರು ಮತ್ತು ಹರಿದಾಸರು ತೋರಿದಂಥದು–ಇಲ್ಲಿ ಪ್ರಕಟವಾಗಿದೆ. 'ನೇಗಿಲಯೋಗಿ' ಎಂಬ ಕಾವ್ಯನಾಮ ಇದಕ್ಕೆಲ್ಲ ಸಂಗತವಾಗಿದೆ.

ಇಲ್ಲಿನ ಬಹುಪಾಲು ಕವನಗಳು ಪ್ರಕೃತಿ ಸಂಬಂಧವಾದವು. ಆದ್ದರಿಂದ ಇವುಗಳ ವಸ್ತುಸ್ವರೂಪವೆ ಕಾವ್ಯಾತ್ಮಕವಾಗಿದೆಯೆನ್ನಬಹುದು. ತಾವು ಹುಟ್ಟಿ ಬೆಳೆದ, ಬಾಲ್ಯದಲ್ಲಿ ತಮಗೆ ಸಂತೋಷ ಕೊಟ್ಟ ಹಳ್ಳಿ ಹೊಲ ಹಕ್ಕಿ ಹೂವು ಗದ್ದೆ ತೋಟ ಕೆರೆ ಇತ್ಯಾದಿ ಗ್ರಾಮೀಣ ಪರಿಸರದ ಚಿತ್ರಗಳನ್ನು ಕವಿ ತೆರೆತೆರೆಯಾಗಿ ತರುತ್ತಾರೆ ; ತನ್ಮೂಲಕ ಓದುಗರ ಎದೆಯನ್ನು ಸೆರೆಹಿಡಿಯುತ್ತಾರೆ.

> ಹಬ್ಬಿದೆ ಹಸುರಿನ ಜೋಳದ ಬೈಲೂ ;
> ಉಬ್ಬಿದೆ ಮನದಲಿ ಅಲೆಯುವ ಹೈಲು

ಎನ್ನುವಲ್ಲಿ ಕಂಡುಬರುವ ಉತ್ಸಾಹ, ಉಲ್ಲಾಸಗಳು ಇಲ್ಲಿನ ಕವನಗಳನ್ನೆಲ್ಲ ಸುತ್ತುವರಿದಿವೆ.

ಕಾವ್ಯವನ್ನು ಸ್ವರ್ಣಮೃಗಕ್ಕೆ ಹೋಲಿಸಿದ್ದಾರೆ ಕವಿ, 'ಬಾ, ಎನ್ನನೊಲಿಯ ಬಾರ' ಎಂಬ ಕವಿತೆಯಲ್ಲಿ. ಈ ಹೋಲಿಕೆ ಹೊಸದೆನಿಸುತ್ತದೆ. ಕಾವ್ಯವೆಂಬ ಚಿನ್ನದ ಜಿಂಕೆಗೆ ಮರುಳಾಗದವರಿಲ್ಲ ; ಎಲ್ಲರೂ ಅದನ್ನು ಬೆನ್ನಟ್ಟುವವರೇ. ಆದರೆ ಅದನ್ನು ಹಿಡಿದವರಿಲ್ಲ ; ಹೊಡೆದವರು ಎಲ್ಲೋ ಕೆಲವರು.

'ಬಾಲ್ಯದ ನೆನಪು' ಪದ್ಯದಲ್ಲಿ, ಬಾಲ್ಯಕ್ಕೆ ಕೊಟ್ಟಿರುವ ಉಪಮಾವಳಿ ಬಾಯಲ್ಲಿ ನೀರೂರಿಸುತ್ತದೆ ಮಾತ್ರವಲ್ಲದೆ ಮನಸ್ಸನ್ನು ಆರ್ದ್ರಗೊಳಿಸುತ್ತದೆ :

> ಕಾರದ ಮೆಣಸಿನಕಾಯಿ
>   ಕರಚಲು ಉಪ್ಪು ;
> ಬಾಯ್ಗೆಡಿಸಿ ಕಣ್ಣಿನಲಿ ನೀರ್ಬರಿಸುವ
>   ನೀರುಳ್ಳಿ ಪಪ್ಪು ;
> ಇವೆಲ್ಲವೂ ಸೇರೆ ರುಚಿ ರುಚಿ
>   ಬುತ್ತಿಯ ಮೊಸರನ್ನ
> ಅಂತೆಯೆ ಇರುವುದು
>   ಮುದ್ದಿನ ಬಾಲ್ಯವೆನ್ನ

ಇಲ್ಲಿ ಉಪಮಾನ ಉಪಮೇಯಗಳಿಗೆ ಅವಿನಾಭಾವ ಸಂಬಂಧವಿದೆ.

ನಾಗೇಗೌಡರ ಸ್ವೋಪಜ್ಞ ಚಿತ್ರಕಶಕ್ತಿಗೆ ಒಳ್ಳೆಯ ನಿದರ್ಶನಗಳಾಗುತ್ತವೆ ಮುಂದಿನ ಸೊಗಸಾದ ಸಾಲುಗಳು ;

ಜೋಳದ ಬಾಲೇಕ ಮೇಲೆ
ತೆನೆ ದೀಪ ಹೊರಿಸಿ

('ಮೂಡಲು ಮಿನುಗಿತು')

ಕಲಕಲರವದಲಿ
ಸ್ವರ್ಣ ಪುಷ್ಪಗಳ
ನೀರ ಮೊರದಲಿ ಒಸೆವ
ಕೆರೆ ಬಲಗಡೆ
ಹಸುರನೇ ಭಟ್ಟಿಯಿಳಿಸಿ
ಬಿಲ್ಲೆ ಕೊಯ್ದಂತಿರ್ಪ
ಕಣ್ಮಂಜುಗೈವ ತಂಪಿನ
ಬತ್ತದ ಗದ್ದೆ

('ಹಳ್ಳಿಯಲಿ ಸಂಜೆ')

"ಸ್ವರ್ಣಪುಷ್ಪಗಳ ನೀರ ಮೊರದಲಿ ಒಸೆವ ಕೆರೆ' ಎಂಬ ವರ್ಣನೆ ಅಪೂರ್ವವಾದುದು.

'ಹಳ್ಳಿಯಲ್ಲಿ ಸಂಜೆ' ಈ ಸಂಕಲನದ ಅತ್ಯುತ್ತಮ ಕವನವೆನ್ನಬಹುದು. ಸಂಧ್ಯಾ ಕಾಲದ ಹಳ್ಳಿಯ ವಿವಿಧ ದೃಶ್ಯಗಳನ್ನು ಬಣ್ಣಿಸಿದ ಕವಿ ಕಡೆಯಲ್ಲಿ ಇದೇ ಹಳ್ಳಿಯ ಚಿತ್ರವನ್ನು ಹೀಗೆ ಧ್ವನಿಪೂರ್ಣವಾಗಿ ಕೊಡುತ್ತಾರೆ :

ಹಳ್ಳಿ ಆಯಾಸದಲಿ
ಉಸಿರೆಳೆದು ಕುಸಿಯುತಿದೆ
ತುಸುಬೆಳಕಿನ ಮುಸಿಮುನೆಯಲ್ಲಿ.

ಹಳ್ಳಿಯೆಂದರೆ ಸ್ವರ್ಗ, ಅದರಲ್ಲಿ ಯಾವ ಕುಂದುಕೊರತೆಗಳೂ ಇಲ್ಲ ಎಂದೇನೂ ಭಾವಿಸುವುದಿಲ್ಲ ಈ ಕವಿ ; ಹಳ್ಳಿಯ ದಾರುಣ ದಾರಿದ್ರ್ಯ, ಗೋಳುಗಳ ಪರಿಚಯ ಅವರಿಗಿದೆ. ಅವರು ಕಲ್ಪನೆಯ ಮೋಡವನ್ನು ಹತ್ತಿ ಕುಳಿತು ವಾಸ್ತವಿಕತೆಯನ್ನು ನಿರ್ಲಕ್ಷಿಸುವುದಿಲ್ಲ. ಈ ದೃಷ್ಟಿಯಿಂದ 'ಬಡತನ-ಸೌಂದರ್ಯ' ಎಂಬ ಕವನವನ್ನು ಗಮನಿಸಬಹುದು. ಕವಿ ಹೇಳುತ್ತಾರೆ :

ಸೌಂದರ್ಯವನಾಸ್ವಾದಿಸಲು
ಬೇಕು ತುಂಬು ಹೊಟ್ಟೆ ;
ಇಲ್ಲದಿರೆ ಎಲ್ಲವೂ ಅಶ್ವತ್ಥವಿಲ್ಲದ
ಬರಿ ಬೋಳು ಕಟ್ಟೆ !

ಇದೊಂದು ಕಟುಸತ್ಯ. ಮಳೆಯನ್ನು ಕಾಣದೆ ಸಂಕಷ್ಟಕ್ಕೀಡಾಗಿ ಬೆಂದು ಬೇಸತ್ತ ಜನರ ಪಾಲಿಗೆ ಚಂದ್ರ ಹೇಗೆ ತೋರುತ್ತಾನೆಂಬುದನ್ನು ಹೊಸ ಬಗೆಯಲ್ಲಿ ಹೀಗೆ ಹೇಳಲಾಗಿದೆ :

ನೀನು ತಾರೆ ಈ ತಂಗಾಳಿ
   ಎಲ್ಲರೂ ಪರವು ಹಗೆ
ಪಿಸುರೆ ನೀನು ಕಣ್ಬನಿ ತಾರೆ
   ತಂಗಾಳಿ ಸುಡುವ ಬೇಗೆ.

ಇಲ್ಲಿ ಕವಿಯು ಪ್ರಾಮಾಣಿಕತೆಯಿದೆ ; ಆವೇಶವಿದೆ, ದ್ವೇಷವಿಲ್ಲ. ಇಂಥದೇ ಆವೇಶ ಭರವನ್ನು 'ಶಾಂತಿಗೆ ಮೊರೆ' ಕವನದಲ್ಲೂ ಕಾಣಬಹುದು. ಅಲ್ಲಿಯೂ ಚಂದ್ರನಿಗೆ ಕವಿ ನುಡಿಯುತ್ತಾರೆ :

ಮತ್ತೇನ ನೋಡುತಿಹೆ
   ಹೇ ಚಂದ್ರ !
ಸತ್ತವರ ಮೊರೆ ಕೇಳದೆ
   ಕರುಣೇಂದ್ರ !
ಪ್ರಳಯಾಗ್ನಿಯ
   ಕೆಂಗೆಂಡ ಕಿಡಿಯಾಗು !
ದೇಶ ದೇಶವನೆಲ್ಲ
   ಸುಡುತಲಿ ಸಾಗು !

'ರೈತ' ಕವನ ರೈತನ ಹಿರಿಮೆಗರಿಮೆಗಳ ಸ್ತವನವಾಗಿದೆ. ಆರಂಭದಲ್ಲಿ ಕರ್ಮದ ನೇಗಿಲು, ತ್ಯಾಗದ ಗುಳ, ದೈವಭಕ್ತಿಯು ಈಚು ಇತ್ಯಾದಿ ರೂಪಕಮಾಲಿಕೆಗಳನ್ನು ಕಟ್ಟಲಾಗಿದೆ. ರೈತನ ಪವಾಡವಿದು :

ಜಡವಾದ ಬೀಜವ ಬಿತ್ತಿ ಚೇತನದ
   ಬೆಳೆಯನೆತ್ತುವ ರೈತ ;
ಮೂಲಕರ್ತನ ಬಿಟ್ಟರೆ ಅವನಲ್ಲವೆ
   ಎರಡನೇ ಸೃಷ್ಟಿಕರ್ತ !
ಕೆಸರಿನಲಿ ಮುಳುಗೆತ್ತುವ ಸಿರಿಸುತ-
   ರುಣ್ಣುವ ಮಲ್ಲಿಗೆ ಅನ್ನ.

ಜಡದಿಂದ ಚೈತನ್ಯವನ್ನು ಹೊಮ್ಮಿಸುವ ಕೃಷಿಕ ಕವಿಯೂ ಹೌದು, ಬ್ರಹ್ಮನೂ ಹೌದು. ಅವನು ಕೆಸರಿನಲ್ಲಿ ಮುಳುಗಿ 'ಸಿರಿಸುತರುಣ್ಣುವ ಮಲ್ಲಿಗೆ ಅನ್ನ'ವನ್ನು ಎತ್ತಿ ತರುತ್ತಾನೆ ಎಂಬ ಕಲ್ಪನೆ ಚೆನ್ನಾಗಿದೆ. 'ಮಲ್ಲಿಗೆ ಅನ್ನ' ಎಂಬ ಚಿತ್ರ ಸಹಜ ಬಂಧುರವಾದುದು : ಬಿಳಿಯ ಅನ್ನದ ಅಗುಳು ಮಲ್ಲಿಗೆ ಹೂವಿನಂತೆ ಕಾಣುವುದಿಲ್ಲವೆ ?

ರೈತನ ಸುಖದುಃಖಗಳಿಗೊಂದು ನಿಖರವಾದ ಮಾನದಂಡವನ್ನೊದಗಿಸಿದ್ದಾರೆ ಕವಿ :

ರೈತರಿಗೆ ಕಷ್ಟವೋ ಸುಖವೋ
  ಎಂದರಿಯಬೇಕಾದರೆ
ತಿಳಿಯುವುದು ಆ ವರ್ಷವೆಲ್ಲ ಹೊಯ್ದ
  ಮಳೆಯನಳೆದರೆ.

ಕವಿ ತನ್ನ ದೃಷ್ಟಿಯನ್ನು ಪ್ರಕೃತಿಗಷ್ಟೆ ಸಂಕೋಚಗೊಳಿಸಿ ಮಾನವ ಜೀವನವನ್ನು ಮರೆಯುವುದಿಲ್ಲ. 'ಭಾವೀ ಭಾರ್ಯೆಯ ಚಿತ್ರ'ದಲ್ಲಿ ಕಂಡುಬರುವ ಕಲ್ಪನಾವಿಲಾಸ ಮನಸೆಳೆಯುವಂಥದು. ತನ್ನ ಭಾವೀ ಪತ್ನಿ ಹೇಗಿರಬಹುದೆಂಬ ಊಹೆಯಲ್ಲಿ ಮಗ್ನನಾದ ಕವಿಗೆ, ಅವಳೂ ನಲ್ಲನ ಚಿತ್ರವನ್ನು ಊಹಿಸಿಕೊಳ್ಳುತ್ತಿರುವುದರ ಅರಿವಿದೆ. ಕಡೆಗೆ ಅವರು ಹೇಳುತ್ತಾರೆ :

ಹೋಲಿಸಿ ನೋಡುವ ನಮ್ಮಿಬ್ಬರ ಚಿತ್ರವನು
  ನಾವಿಬ್ಬರೂ ಸೇರಿದಾಗ.

ಈ ತಿರುವಿನಲ್ಲಿ ವಿನೋದವಿದೆ ; ಯಥಾರ್ಥತೆಯ ಪ್ರಜ್ಞೆಯಿದೆ.

'ಭಗ್ನ ಪ್ರೇಮ'ದಲ್ಲಿ ಕರುಣದ ಜಿನುಗನ್ನು ನೋಡಬಹುದು. ಆರಂಭದ ಈ ಸಾಲುಗಳು ಚೇತೋಹಾರಿ :

ಉರಿಬಿಸಿಲಿನಲಿ ಅಲೆದಲೆದು
ದಣಿದಾಯಾಸಗೊಂಡು
ತಳಿತ ಹೊಂಗೆಯ ತಂಪುನೆಳಲು ಸಾರ್ದು
ತಿಳಿದ ತಣ್ಣನೆಯ ನೀರ ಬೊಗಸೆಯಲಿ ಹೀರ್ದು
ಮೆಲ್ಲನೆ ತೀಡುತಲಿರುವ ತಣ್ಣೆಲರಿಗೆ
ಮೈಯೊಡ್ಡಲುಗುವ ಸಂತಸದಂತಾಯ್ತು
ನಿನ್ನ ಪ್ರಥಮ ಬೇಟ !

"ಕ್ರೂರ ವಿಧಿಯ ಕರವೊಂದು ......ಬೇರುಸಹಿತ ಕಿತ್ತೆಸೆಯಿತು ಪ್ರೇಮದೆಳಲತೆಯ" ಎಂಬ ಉದ್ಗಾರ, "ಹಾ ಹಂತ ಹಂತ ನಲಿನೀಂ ಗಜಮುನ್ಮಮೂಲ" ಎಂದು ಕೊನೆಗೊಳ್ಳುವ ಸಂಸ್ಕೃತ ಸುಭಾಷಿತವೊಂದನ್ನು ನೆನಪಿಗೆ ತರುತ್ತದೆ.

ಸರೋಜಿನೀದೇವಿಯವರ ಕೆಲವು ಕವನಗಳನ್ನೂ ವೆರಿಯರ್ ಎಲ್ವಿನ್ ಸಂಗ್ರಹಿಸಿದ ಕೆಲವು ಛತ್ತೀಸ್‌ಘರ್ ಜನಪದ ಗೀತೆಗಳನ್ನೂ ನಾಗೇಗೌಡರು ಕನ್ನಡಿಸಿ ಈ ಸಂಗ್ರಹದಲ್ಲಿ ಸೇರಿಸಿದ್ದಾರೆ. ಇವು ಆಸ್ವಾದನೀಯವಾಗಿವೆ ; ನಾಗೇಗೌಡರ ಅನುವಾದ ಸಾಮರ್ಥ್ಯಕ್ಕೂ ಸಾಕ್ಷಿಯಾಗಿವೆ.

ಎಸ್. ವಿ. ಪರಮೇಶ್ವರ ಭಟ್ಟರು ಈ ಸಂಕಲನದ ಮುನ್ನುಡಿಯಲ್ಲಿ ಆಡಿರುವ ಮಾತುಗಳು ಇಲ್ಲಿ ಉದ್ಧರಣಯೋಗ್ಯವಾಗಿವೆ : "ಈ ಕವನಸಂಕಲನದಲ್ಲಿ ಸ್ವತಂತ್ರವಾಗಿ ರಚಿಸಿದ ಕವನಗಳೂ ಇವೆ, ಅನುವಾದ ಮಾಡಿದ ಕವನಗಳೂ ಇವೆ.

ಇಪ್ಪತ್ತೈದು ವರ್ಷಗಳ ಹಿಂದೆ ರಚಿತವಾದವೂ ಇವೆ. ಇತ್ತೀಚೆಗೆ ನಿನ್ನೆ ಮೊನ್ನೆ ರಚಿತವಾದವೂ ಇವೆ. ಭಾಷೆ, ಶೈಲಿಗಳ ವಿಷಯದಲ್ಲಿಯೂ ಹೀಗೆಯೇ. ಗ್ರಾಂಥಿಕವಾದ ಭಾಷೆ, ಶೈಲಿಗಳಲ್ಲಿ ರಚಿತವಾದ ಗೀತೆಗಳೂ ಉಂಟು. ಜನಪದ ಸಾಹಿತ್ಯದ ಭಾಷೆ ಶೈಲಿಗಳಲ್ಲಿ ರಚಿತವಾದುವೂ ಉಂಟು. ವಸ್ತುವಿನಲ್ಲಿಯೂ ವೈವಿಧ್ಯವಿದೆ. ಹೀಗಾಗಿ ಈ ಕವನದ ಹೊತ್ತಿಗೆ ಭಿನ್ನರುಚಿಯ ಭಿನ್ನಸ್ವಭಾವದ ಜನರಿಗೆ ಅವರವರ ರುಚಿಗೆ ಸಂಸ್ಕಾರಕ್ಕೆ ತಕ್ಕ ಹಾಗೆ ಶಾಂತಿಯನ್ನೂ ಆನಂದವನ್ನೂ ನೀಡುವ ಒಂದು ರಮ್ಯ ಸಂಕಲನವಾಗಿದೆ.” (ಇಲ್ಲಿ ‘ರಮ್ಯ’ ಎಂಬುದು ‘ರೊಮ್ಯಾಂಟಿಕ್ ಎಂಬರ್ಥದಲ್ಲೂ ಆಗಬಹುದು.)

ಇಲ್ಲಿನ ಕವನಗಳಲ್ಲಿ ಭಾವವಿಹಾರದ ಜೊತೆಗೆ ವಿಚಾರದ ಎಳೆಗಳಿವೆ ; ಆದರ್ಶ ಪರತೆಯೊಡನೆ ವಾಸ್ತವಿಕತೆಯ ಅಂಶಗಳಿವೆ. ಆದರೆ ಅವುಗಳ ಅಭಿವೃದ್ಧಿಯ ಹಂತಕ್ಕೆ ಮೊದಲೇ ನಾಗೇಗೌಡರು ತಮ್ಮ ಕಾವ್ಯ ಕೃಷಿಯನ್ನು ನಿಲ್ಲಿಸಿದ್ದು ನಷ್ಟವೇ ಸರಿ. ‘ನೇಗಿಲಯೋಗಿ’ ಪರಮಾವಧಿ ಬೆಳೆ ತೆಗೆಯಲಿಲ್ಲ, ಪದ್ಯಪ್ರಾಂತದಲ್ಲಿ.

ಒಟ್ಟಿನಲ್ಲಿ, ನಾಗೇಗೌಡರು Idyll ಮಾದರಿಯ ಕೆಲವು ಪದ್ಯಗಳನ್ನು ಇಲ್ಲಿ ಕೊಟ್ಟಿದ್ದಾರೆಂಬುದು ಮುಖ್ಯವಾದ ಸಂಗತಿ. ಕುವೆಂಪು ಅವರ ‘ಕೊಳಲು’ ಸಂಕಲನವನ್ನು ಇವು ಜ್ಞಾಪಿಸುತ್ತವೆ. ಆದರೆ ನಾಗೇಗೌಡರ ಕವಿತೆ ಯಾರ ಪ್ರಭಾವಕ್ಕೂ ಅಷ್ಟಾಗಿ ಗುರಿಯಾಗಿಲ್ಲವೆಂಬುದನ್ನು ಒತ್ತಿ ಹೇಳಬೇಕು.* ಅವರ ಗುಣ, ದೋಷ ಎರಡೂ ಅವರವೇ.

---

* ಕುವೆಂಪು ಅವರ ಪ್ರಕೃತಿಗೀತಗಳಲ್ಲಿ ಕಂಡುಬರುವ ಆಧ್ಯಾತ್ಮಿಕ ಚಿತ್ತವೃತ್ತಿ ಇಲ್ಲಿಲ್ಲ ವೆಂಬುದು ಗಮನಾರ್ಹ.

೨೮ | ಕಂಡು ಕೇಳಿದ ಕಥೆಗಳು

ಕೆ. ಆರ್. ಶೇಷಗಿರಿ

ಎಚ್. ಎಲ್. ನಾಗೇಗೌಡರು ನಾಡಿನಲ್ಲಿ ಹೆಸರಿಸಬಹುದಾದ ಕೆಲವೇ ಪ್ರಮುಖ ಲೇಖಕರಲ್ಲಿ ಒಬ್ಬರೆನಿಸಿದ್ದಾರೆ. ಅವರ ಹಸ್ತದಿಂದ ಕವಿತೆ, ಕಾದಂಬರಿ, ಪ್ರಬಂಧ, ಪ್ರವಾಸಸಾಹಿತ್ಯ, ಜಾನಪದ ಸಂಕಲನ, ಜೀವನ ಚರಿತ್ರೆಗಳೇ ಅಲ್ಲದೆ, ಕಥೆಗಳೂ ಹೊರ ಬಂದಿವೆ. ಅವರಿಗೆ ಕಥೆಗಳನ್ನೂ ಸೊಗಸಾಗಿ ಹೇಳುವ ಕೌಶಲವಿದೆ. ಮುಂದೆ ಬರಲಿರುವ ಇನ್ನೂ ಅನೇಕ ಕಥೆಗಳಲ್ಲಿ ಮೊಟ್ಟಮೊದಲಿಗೆ ಪ್ರಕಟವಾಗಿರುವ ಕಥಾಸಂಕಲನ 'ಕಂಡು ಕೇಳಿದ ಕಥೆಗಳು'. ಈ ಪುಸ್ತಕದ ಮುನ್ನುಡಿಯಲ್ಲಿ ಕಥೆಗಾರರು 'ಸುಮಾರು ಐವತ್ತು ವರ್ಷಗಳಿಂದ ಆಗಾಗ್ಗೆ ಬರೆದುಕೊಂಡು ಬಂದ ಎಂಟು ಕಥೆಗಳು ಈ ಸಂಕಲನದಲ್ಲಿ ಇವೆ. ಇದು ನನ್ನ ಮೊದಲ ಕಥಾಸಂಗ್ರಹ. ಈ ತರಹ ಕಥೆಗಳು ನಿಧಾನವಾಗಿ ಮುಂದೆ ಬರಲಿವೆ' ಎಂದು ಹೇಳಿಕೊಂಡಿದ್ದಾರೆ. ಕಂಡು 'ಕೇಳಿದ ಕಥೆಗಳು' ಎಂಟು ಕಥೆಗಳಿಂದ ಕೂಡಿದ ಒಂದು ಸಂಕಲನ. ಇವು ಅವರ ಕಲ್ಪನಾ ಪ್ರಪಂಚದ ಮೂಸೆಯಿಂದ ರಚಿತ ವಾದುವಲ್ಲ. ಆಗಿ ಹೋದ ಘಟನೆಗಳು ಅವು. ಕಥೆಗಾರರ ಹಸ್ತದ ಮೂಲಕ ಸುಂದರವಾದ ಕಥೆಗಳಾಗಿ ಪರಿಣಮಿಸಿವೆ. ಇಲ್ಲಿ ತಮ್ಮ ಪ್ರತಿಭೆಗೇನೂ ಅಧಿಕ ಅವಕಾಶ ವಿಲ್ಲದಿದ್ದರೂ ಕಂಡು ಇಲ್ಲವೇ ಕೇಳಿದ ಕಥೆಗಳನ್ನು ಎಲ್ಲರಿಗೂ ರುಚಿಸುವಂತಹ ಚೌಕಟ್ಟಿನಲ್ಲಿ ಸವಿವರವಾಗಿ ಒಪ್ಪವಾಗಿ ರಚಿಸುವುದು ಸುಲಭದ ಮಾತಲ್ಲ. ಇಲ್ಲಿರುವ ಕಥೆಗಳು ಬರೀ ವಾರ್ತೆಗಳಾಗಲೀ ವರದಿಗಳಾಗಲೀ ಆಗಿಲ್ಲ. ಅವುಗಳನ್ನು ನಿರೂಪಿಸು ವಾಗ ಲೋಕಸತ್ಯವು ಕಾವ್ಯಸತ್ಯವಾಗಿರುವುದನ್ನು ಗುರುತಿಸುತ್ತೇವೆ. ಕಥೆಯು ದೈನಂದಿನ ವಿವರಣೆ ಮಾತ್ರ ಆಗಿರದೆ ನಿತ್ಯಸತ್ಯವನ್ನೂ ಸಾದರಪಡಿಸುತ್ತದೆ. ಸಿದ್ದಣ್ಣನ ಸಂಸಾರ, ತಪ್ಪು ಯಾರದು, ಪ್ರೇಮದ ಬೆಳೆ ಕಥೆಗಳಲ್ಲಿ ಸಮಾಜದಲ್ಲಿ ಕಾಣುವ ನಾನಾ ಮುಖ ಗಳನ್ನೂ ಕಂಡರಿಸಿದ್ದಾರೆ. ಅವರು ಮೊದಮೊದಲು ಕಾಣುವ ಸತ್ಯವು ವ್ಯಕ್ತಿಗತವಾಗಿದ್ದು ಕ್ರಮೇಣ ಸಾರ್ವತ್ರಿಕವಾಗಿ ಸಾಧಾರಣೀಕರಣವಾಗುತ್ತದೆ. ಅವರ ಕಲ್ಪನೆಗೆ ಇತಿಮಿತಿ ಇರುವುದಿಲ್ಲ. ಒಂದು ಸಾಧಾರಣ ಛಾಯಾಚಿತ್ರ ಯಥಾವತ್ ಚಿತ್ರವಾಗಿರುವುದಾದರೂ ಒಂದು ಚೌಕಟ್ಟಿನಲ್ಲಿ ಬರುವುದರಿಂದ ಸುಂದರವಾಗಿರುತ್ತದೆ. ಹೊರೆಸನು ಕಾವ್ಯ ಎನ್ನುವುದು ಸತ್ಯಮಿಥ್ಯಗಳ ಸುಂದರ ಮಿಶ್ರಣ ಎಂದಿದ್ದಾನೆ. ಇಂತಹ ಗುಣಗಳನ್ನು ಪಡೆದಿರುವ ಈ ಕಥೆಗಳಲ್ಲಿ ಕಲ್ಪನೆಗಳು ಗರಿಗೆದರಿ ಬರುತ್ತವೆ.

ಕಂಡು ಕೇಳಿದ ಕಥೆಗಳಲ್ಲಿ ಬರುವ ಸಂಗತಿಗಳೆಲ್ಲವೂ ವರದಿಗಳಾಗದೆ ಸಾಹಿತ್ಯಿಕ ಕೃತಿಗಳಾಗಿವೆ. ಕವಿಪ್ರತಿಭೆಯ ಸಂಸ್ಪರ್ಶದಿಂದಾಗಿ ಎಚ್. ಎಲ್. ನಾಗೇಗೌಡರ ಈ ಕೃತಿಯು ಸಾಹಿತ್ಯಿಕ ಮೌಲ್ಯವನ್ನು ಪಡೆದುಕೊಂಡು ಯಶಸ್ವಿಯಾಗಿರುವುದನ್ನು ಕಾಣ ಬಹುದು.

ಅಲ್ಲಲ್ಲಿ ಹಾಸ್ಯವಾಗಿ ಪ್ರಶ್ನಿಸುವುದು ಹಾಸ್ಯದಲ್ಲಿ ಬರಹವನ್ನು ಕ್ವಚಿತ್ತಾಗಿ ತರುವು ದರಲ್ಲಿ ಕಥೆಗಾರರು ಪಳಗಿದ್ದಾರೆ. ಇಂತಹ ಕಥೆಗಳು ಕಲ್ಪನಾಲಹರಿಯಿಂದ ಹೊರಬರುವ ಕಥೆಗಳಿಗಿಂತ ಉತ್ತಮವೆಂದು ಈ ಸಂಕಲನ ಸಾರುತ್ತದೆ. ಈ ಸಂಕಲನದಲ್ಲಿ ಲೇಖಕರ ಪ್ರಯಾಸವೇನಿಲ್ಲ; ಕೇಳಿದ ಕಥೆಗಳನ್ನು ಬರೆದಿದ್ದಾರಷ್ಟೆ ಎನ್ನಲೂ ಅವಕಾಶವಿದೆಯಾದರೂ ಕಥೆಯ ನೆಪದಲ್ಲಿ ಬರುವ ಕಥೆಗಾರರ ಅಭಿರುಚಿಯೇನೆಂಬುದು ಕಥಾವಸ್ತುವನ್ನು ಅನುಸರಿಸಿ ಬರುತ್ತದೆ. ಪ್ರಕೃತಿಯ ವರ್ಣನೆ, ಸೂರ್ಯೋದಯ, ಸೂರ್ಯಾಸ್ತ, ಹಳ್ಳಿಯ ಸೌಂದರ್ಯ, ಬತ್ತದ ಗದ್ದೆಯ ಸೊಬಗು, ಗದ್ದೆಗೆ ಮುತ್ತುವ ಗೀಜಗನ ಹಕ್ಕಿಗಳ ಕಾಟ, ಹಳ್ಳಿಯ ಬಡರೈತರ ಆದಾಯ ವೆಚ್ಚದ ಗೋಳು, ಅವರಲ್ಲಿರುವ ಮಾತಿನ ನಿಷ್ಠೆ, ಪ್ರಾಣಹೋದರೂ ನಾಲಗೆ ಮುಖ್ಯ ಎಂಬ ಭಾವನೆ, ಗ್ರಾಮೋದ್ಧಾರದ ಬಗ್ಗೆ ಇರುವ ಅಭಿಪ್ರಾಯ, ಪೋಲೀಸರು ನಡೆಸುವ ದುರ್ ದರ್ಬಾರು, ಸಮಾಜದಲ್ಲಿ ಸಭ್ಯರೆನಿಸಿದವರು ತಪ್ಪುಮಾಡಿ ತಪ್ಪಿಸಿಕೊಳ್ಳುವ ಮಾರ್ಗ, ವ್ಯಾಪಾರದಲ್ಲಿ ಅನ್ಯಾಯ, ಮೋಸ, ಸಮುದ್ರದ ತೀರದ ವರ್ಣನೆ, ಹೆಂಡದ ಮಹತ್ವ, ಹಳ್ಳಿಯ ಹಾಡುಗಳ ಬಗ್ಗೆ ಆಸಕ್ತಿ, ಅಲ್ಲಲ್ಲಿ ಪ್ರಾಸಂಗಿಕವಾಗಿ ಬರುವ ಹಾಸ್ಯ, ಇನ್ನೂ ಅನೇಕ ಅಂಶಗಳನ್ನು ಈ ಕಥಾಸಂಕಲನದಲ್ಲಿ ಕಾಣಬಹುದು. ಕಥೆಯಲ್ಲಿ ಬರುವ ಪಾತ್ರಚಿತ್ರಣ, ಕಥಾರಂಭಕ್ಕೆ ನೀಡುವ ಪೀಠಿಕೆ ಎಲ್ಲವೂ ಕಾವ್ಯಮಯವಾಗಿಯೇ ಹೊರಮೂಡುತ್ತವೆ.

ಈ ಸಂಕಲನದಲ್ಲಿ ಬರುವ ಕಥೆಗಳಲ್ಲಿ ಯಾವುದು ಶ್ರೇಷ್ಠ ಎಂಬುದನ್ನು ಗುರುತಿ ಸುವುದು ಕಷ್ಟ ; ಏಕೆಂದರೆ ಒಂದೊಂದು ಕಥೆ ಒಂದೊಂದು ವಸ್ತುವನ್ನು ಹೊಂದಿದ್ದು ಪ್ರಮುಖವೆನಿಸುತ್ತದೆ. ಆದರೂ ಎಂಟು ಕಥೆಗಳಲ್ಲಿ 'ಸಿದ್ಧಣ್ಣನ ಸಂಸಾರ' ಅನೇಕ ದೃಷ್ಟಿಗಳಿಂದ ಅತ್ಯುತ್ತಮ ಕಥೆಯಾಗಿದೆ ಎಂದು ಹೇಳಬಹುದು.

'ಸಿದ್ಧಣ್ಣನ ಸಂಸಾರ'ದಲ್ಲಿ ಆತನ ಒಂದು ತಲೆಮಾರಿನ ಘಟನೆಗಳೆಲ್ಲ ಬಂದು ಹೋಗಿವೆ. 'ತಪ್ಪು ಯಾರದು' ಎಂಬುದರಲ್ಲಿ ಬಲವಂತಕ್ಕೆ ಮನಸೋತು ಗರ್ಭಧರಿಸಿದ ವಿಧವೆ ತಿಮ್ಮಿಯ ಹೃದಯ ವಿದ್ರಾವಕ ಪ್ರಸಂಗ. ಪ್ರೇಮ ಎಷ್ಟು ಪರಿಶುದ್ಧವಾದುದು ಒಂದು ಕಡೆ ಒಪ್ಪುಮಾತನ್ನು ಬಿಟ್ಟು, ಮಗನ ಅಭೀಷ್ಟದಂತೆ ತಿಮ್ಮಾಜಿಯನ್ನು ಮನೆ ತುಂಬಿಸಿಕೊಂಡ 'ಪ್ರೇಮದ ಬೆಳೆ'ಯ ಕಥೆ. ಏಡಿಯ ಬೇಟೆಯಲ್ಲಿ ಪೂಜಾರಿ ಪುಟ್ಟಯ್ಯ ಕೈನ ಬೆರಳೊಂದನ್ನು ಕಳೆದುಕೊಂಡ ಕಥೆ 'ಏಡಿ ಕಚ್ಚಿದ ಕೈ'ಯಲ್ಲಿದೆ. ಮೂರು ರೂಪಾಯಿಯಿಂದ ಆರಂಭಿಸಿದ ಸೀಮೆಎಣ್ಣೆ ವ್ಯಾಪಾರ ಬೆಟ್ಟೇಗೌಡನನ್ನೂ ಸಾಹುಕಾರನ ನ್ನಾಗಿಸಿತು. ಅದರಲ್ಲಿ ಅಡಗಿರುವ ದಗಾ ಮೋಸಗಳ ವರ್ಣನೆ 'ಮೂರು ರೂಪಾಯಿ

ಮಾಡಿದ ಕೆಲಸ'ದಲ್ಲಿ ಬರುತ್ತದೆ. ಕಳ್ಳಭಟ್ಟಿಯನ್ನೂ ಪತ್ತೆಹಚ್ಚಲು ಹೋಗಿ, ಅಲ್ಲಿ ನಡೆವ ಅವ್ಯವಹಾರವನ್ನು ತಿಳಿಯುವುದೇ 'ಕಡಲು ತೀರದಲ್ಲಿ ಒಂದು ಸಂಜೆ'ಯಲ್ಲಿ. 'ಚಂದ್ರಮುಖಿ' ಎಂಬ ಕಥೆಯು ಗಂಜಾಂ ಗಣೇಶನಿಂದ ಹೊರಬಂದ ಕಲ್ಪನೆಯ ಕಥೆ ; ಪ್ರೇಮ ಕಥೆಯೊಂದನ್ನು ಹೆಣೆದು ಗಿರಾಕಿಗಳಿಗೆ ಹೇಳುತ್ತಾ ತಾಯತದಲ್ಲಿ ಕೂದಲೊಂದನ್ನಿರಿಸಿ ನೂರು ರೂಪಾಯಿಗೆ ಮಾರುತ್ತಿದ್ದ ಗಣೇಶನ ಮೋಸದಲ್ಲಿಯೂ ಚತುರತೆ ಅಡಗಿದೆ. ಹಳ್ಳಿಯ ಹಾಡುಗಳನ್ನು ಹಾಡುತ್ತಾ ಹೂವುಗಳನ್ನು ಆಯ್ದುಕೊಳ್ಳುತ್ತಿದ್ದ ಒಬ್ಬ ಹುಚ್ಚಿಯ ಬಗ್ಗೆ ಕೊಡುವ ಚಿತ್ರ 'ಅವಳಲ್ಲ, ಹುಚ್ಚರು ನಾವು' ಎಂಬ ಕಥೆಯಲ್ಲಿದೆ.

ಮೊದಲ ಮೂರು ಕಥೆಗಳು ಗಾತ್ರದಲ್ಲಿಯೂ ವಸ್ತುವಿನಲ್ಲಿಯೂ ಉತ್ತಮ ಕಥೆಗಳಾಗಿವೆ. ಸಮಾಜದಲ್ಲಿ ಆಗುತ್ತಿರುವ ಅನ್ಯಾಯ, ಬಡರೈತರು ಅನುಭವಿಸುವ ಕಷ್ಟ, ತಾವು ತಪ್ಪುಮಾಡಿ ನಿರಪರಾಧಿಯಾದವರಲ್ಲಿ ತಪ್ಪನ್ನು ಹೊರಿಸುವುದು, ಪರಿಶುದ್ಧ ಪ್ರೇಮಗಳು ವರ್ಣಿತವಾಗಿವೆ. 'ಚಂದ್ರಮುಖಿ' ಯಲ್ಲಿ ಕಲ್ಪನೆಯ ಕಥೆಯೆಂದು ತಿಳಿದಾಗ ಇದರ ಮಹತ್ವ, ಬೆಲೆ ಈ ಮೂರು ಕಥೆಗಳಿಂದ ಸ್ವಲ್ಪ ದೂರದಲ್ಲಿ ನಿಲ್ಲುತ್ತದೆ. ಉಳಿದ ಕಥೆಗಳಲ್ಲಿ ಸ್ವಾರಸ್ಯವಿಲ್ಲವೆಂದಲ್ಲ. ಅವುಗಳಲ್ಲಿಯೂ ಗುರುತಿಸಬಹುದಾದಂತಹ ಅಂಶಗಳಿವೆಯೆಂದು ಸ್ಥೂಲವಾಗಿ ಮೊದಲೇ ಹೇಳಲಾಗಿದೆ.

ಸಿದ್ಧಣ್ಣನ ಸಂಸಾರ- ಹಳ್ಳಿಯಲ್ಲಾಗುವ ಅಪೂರ್ವ ಘಟನೆಯೇನಲ್ಲ. ಆದರೆ ಇಂತಿಂತಹ ಘಟನೆಗಳು ಆಗುವುದು ನಿಜವೇ ಎಂಬುದು ಹಳ್ಳಿಯ ವಿಚಾರವನ್ನೇ ತಿಳಿಯದ ಪಟ್ಟಣಿಗ ಅಚ್ಚರಿಪಡುತ್ತಾನೆ. ಹಳ್ಳಿಯಲ್ಲಿ ಸಾಲವನ್ನು ಕೊಟ್ಟು ಶೂಲಕ್ಕೆ ಏರಿಸುವ ಮಂದಿಗಳು ಸಾಲಿಗನನ್ನು ಕೊಂದುಬಿಡುವರು ಅಕ್ಕಪಕ್ಕದವರಿಗೆ ಸಭ್ಯರಂತೆ ಕಂಡು ಸಿಕ್ಕಿದವನನ್ನು ನುಂಗಿಬಿಡುವರು. ಒಮ್ಮೆ ಅಂತಹ ಸಾಲಗಳಿಗೆ ಸಿಕ್ಕಿಬಿದ್ದನೆಂದರೆ ಆ ಪ್ರಾಮಾಣಿಕನಾದ ರೈತ ಪುನಃ ಬಿಡಿಸಿಕೊಳ್ಳುವಂತಹ ಪರಿಸ್ಥಿತಿ ಬರುವುದೇ ಇಲ್ಲ. ಆತನ ಆಸ್ತಿಗೂ ಮಿತ್ತು ಬಂದೊದಗುತ್ತದೆ.

ಸಿದ್ಧಣ್ಣ ತನ್ನ ಮಗಳ ಮದುವೆಗೆ ತೆಗೆದಿದ್ದ ಸಾಲ ಐದು ನೂರು ರೂಪಾಯಿ. ಐದು ವರ್ಷಕ್ಕೆ ಆ ಸಾಲದ ಮೊತ್ತ ಎಂಟುನೂರು ಆಗಿತ್ತು ಎಂದರೆ ದುಡ್ಡುಳ್ಳವರು ಹಾಕುತ್ತಿದ್ದ ಬಡ್ಡಿ ಲೆಕ್ಕಾಚಾರ ಹಾಗಿತ್ತು. ಇನ್ನು ಸಾಲ ತೀರಿಸುವುದೆಂತು ? ಹಾಗಾಗಿ ಸಾಲವೆಂದರೆ ರೈತರಿಗೆ ನೀರು ಕುಡಿದಂತೆ ; ವಿಧಿಯಿಲ್ಲದೆ ಸಾಲಕ್ಕಾಗಿ ಕೈ ಹಚ್ಚುತ್ತಿದ್ದರು. ಆದರೆ ಸಾಲಕ್ಕಾಗಿ ಯೋಚಿಸುತ್ತಿರಲಿಲ್ಲ.

ಸಿದ್ಧಣನ ಸಂಸಾರದಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಆತನ ಪ್ರಾಮಾಣಿಕತೆ. ಎಲೆ ಹಂಬನ್ನು ಎಂಟು ರೂಪಾಯಿಗೆ ಮಾದಳ್ಳಿ ರಂಗಪ್ಪನಿಗೆ ಗುತ್ತಿಗೆ ಕೊಟ್ಟಿದ್ದರಿಂದ ಆದರಲ್ಲಿ ಎಲೆ ಮುಟ್ಟುವಂತಿರಲಿಲ್ಲ. 'ಕದ್ದು ಎಲೆ ಕುಯ್ಯೋದು

ಮಹಾ ಪಾಪ ಕೊಟ್ಟವ್ನ್ಯಾಲೆ ಅವರದಾಯ್ತು. ನಂದೇಂಗಾದತ್ತು ?' ಈಗಿನ ಕಾಲದಲ್ಲಿಯೂ ಅಂತಹವರಿದ್ದಾರೆಯೆ ಎನ್ನಿಸುತ್ತದೆ.

ತಳ್ಳೂರು ಶಾಂತರಾಜಯ್ಯ ದಾವಾ ಹಾಕಿದ. ಅಮೀನ ರುಜು ಹಾಕಿಸಿಕೊಳ್ಳಲು ಸಿದ್ಧಣ್ಣನ ಬಳಿಗೆ ಬಂದ. ರುಜು ಹಾಕಿಸಿಕೊಂಡ ವಿಷಯವೇನೆಂದು ಸಿದ್ಧಣ್ಣನಿಗೆ ಗೊತ್ತಾಗದಿರಲಿಲ್ಲ. ಆದರೂ ಆ ನೋಟೀಸು ತಂದವನಿಗೆ ಆರು ತೆಂಗಿನಕಾಯಿ, ಬದನೆಕಾಯಿಗಳನ್ನು ಕೊಟ್ಟು ಕಾಲುವೆಯವರೆಗೂ ಕಳುಹಿಸಿ ಬಂದುದು ಆತನ ಉದಾರತ್ವವನ್ನು ತೋರಿಸುತ್ತದೆ.

ಸಿದ್ಧಣ್ಣ ಬಡರೈತ. ಅವನ ಸ್ವರೂಪದ ವರ್ಣನೆ ಕಥೆಗಾರರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಆದನ್ನೇ ಇಲ್ಲಿ ಉದ್ಧರಿಸಿದೆ: 'ಮುಖದ ಮೇಲೆ ಮೂರು ತಿಂಗಳ ಬಳೀಗಡ್ಡ. ಅಲ್ಲಲ್ಲಿ ಹರಿದ ಕರೀಚೆಕ್ಕಿನ ಅಂಗಿ. ಲಂಗೋಟಿಕಟ್ಟಿ ಮೇಲೆ ಸೊಂಟಕ್ಕೆ ಸುತ್ತಿದ ಆರುಮೊಳದ ದಟ್ಟಿ. ಮಾಗಿಯ ಕೊರೆತಕ್ಕೆ ಕೆರೆಯ ಅಂಗಳ ಬೀಟೆ ಸೆಳೆದಂತೆ ಬಿರಿದ ಒರಟು ಅಂಗಾಲುಗಳು. ಸೊರಗಿ ಕೊರಗಿ ಸುಸ್ತಾದ ದೇಹ. ಕಾಂತಿಹೀನಕಣ್ಣುಗಳು.' ಇಂತಹ ರೈತ ಕಷ್ಟದ ಬಾಳನ್ನು ಅನುಭವಿಸಿ ಕಲ್ಲಾಗಿದ್ದ. 'ಇಂಥವರಿಗೆ ದೇವರೇ ಊರೆಗೋಲು ?' ಎಂಬ ಕಥೆಗಾರರ ನುಡಿ ಸಹೃದಯರಲ್ಲಿ ಸದಾ ಗುಯ್‌ಗುಟ್ಟುತ್ತಿರುತ್ತದೆ.

'ತಪ್ಪು ಯಾರದು ?' ಎಂಬ ಕಥೆ ಕಥೆಗಾರರ ಊರಿನ ಮೇಗಲ ಮನೆ ತಿಮ್ಮಿಯನ್ನು ಕುರಿತದ್ದು. ತಿಮ್ಮಿಯ ಜೀವನದಲ್ಲಾದ ಒಂದು ಅಹಿತಕರವಾದ ಘಟನೆ.

ತಿಮ್ಮಿ ಇಪ್ಪತ್ತೈದು ವರುಷದ ವಿಧವೆ. ಗಂಡ ಸಾಯುವಾಗ ತುಂಬು ಬಸಿರಿ. ಈಗ ಎಂಟು ವರ್ಷ ಕಳೆದುದರಿಂದ ಹುಟ್ಟಿದ ಮಗಳಿಗೂ ಎಂಟು ವರ್ಷ. ಗಂಡ ಸತ್ತಾಗ ಆಕೆಯ ತಂದೆ ತಾಯಿಗಳು ಕೂಡಾವಳಿಗೆ ಒಪ್ಪಿಸಿ ವಿಫಲರಾದರು. ಅವಳಿಗೆ ತನ್ನ ಗಂಡನಿಗೆ ದ್ರೋಹ ಬಗೆಯಲು ಇಷ್ಟವಿರಲಿಲ್ಲ. ಅವಳನ್ನು ಕಂಡರೆ 'ಇಂತಾ ಕಷ್ಟ ಕೊಡಬಾರ್ದು ದೇವರು' ಎಂದು ಊರಿನವರು ಮರುಗಿದರು, ಆಕೆ ಗುಣವಂತೆ. ಇನ್ನೂ ಯುವತಿಯಾದುದರಿಂದ ಕೆಲವರ ಮನಸ್ಸು ಅವಳತ್ತ ಹರಿದಾಡುತ್ತಿತ್ತು. ಅವಳ ಪಾಡಿಗೆ ನಿರ್ಮಲವಾಗಿ ಬಾಳಲು ಜನ ಬಿಡಲಿಲ್ಲ. ಇದ್ದಕ್ಕಿದ್ದಂತೆ ತಿಮ್ಮಿಗೆ ಮೈ ಬರತೊಡಗಿತು. ಅದೂ ಗಂಡ ಸತ್ತ ಏಳು ವರ್ಷದ ಮೇಲೆ. 'ನಂದು ಬಾನಬಸುರು' ಎಂದು ಕೇಳಿದವರಿಗೆಲ್ಲ ಬಾಯಿಕಟ್ಟಿದಳು. ಆದರೆ ಎಷ್ಟುದಿನ ಹೀಗೆ ನಿಜಾಂಶವನ್ನು ಬಚ್ಚಿಡಲು ಸಾಧ್ಯ ? ಹೆರಿಗೆಯ ದಿನ. ಹುಲ್ಲುಕೊಪ್ಪಲಿಗೆ ಹೋಗಿ ಹುಟ್ಟಿದ ಮಗುವನ್ನು ಸಾಯಿಸದೆ ಒಂದು ಮಡಕೆಯಲ್ಲಿಟ್ಟು ಹುಲ್ಲು ಮುಚ್ಚಿ ತಿಪ್ಪೆಯಲ್ಲಿ ಇಟ್ಟು ಮನೆಗೆ ಬಂದು ಬಿಟ್ಟಳು. ಪಟೇಲರ ಹೆಂಡತಿ ಕೆಂಪಕ್ಕ ಆ ಕಡೆ ಬಂದಾಗ ಮಗುವಿನ ಅಳುವಿನ ದನಿಕೇಳಿ ಮಗುವನ್ನು ಪತ್ತೆ ಹಚ್ಚಿ ನೇರವಾಗಿ ತಿಮ್ಮಿಯ ಮನೆಗೆ ಬಂದು ತನಿಖೆ ನಡೆಸಿದಳು. ಅಳುತ್ತಾ ತಿಮ್ಮಿ ಆದುದನ್ನು ಹೇಳಿಬಿಟ್ಟಳು. ತನ್ನ ಕಿರಿಯ

ಮಗನೇ ತಿಮ್ಮಿಯನ್ನು ಕೆಡಿಸಿದನೆಂಬುದನ್ನು ಕೇಳಿದ ಕೆಂಪಕ್ಕ ನೇರವಾಗಿ ಮನೆಗೆ ಬಂದು ಗಂಡನಿಗೆ ನಡೆದ ವೃತ್ತಾಂತವನ್ನು ವಿವರಿಸಿದಳು. ಮಾರನೆಯ ದಿನವೇ ತಿಮ್ಮಿ ಹಾದರಗಿತ್ತಿ ಎಂದು ಊರಿಗೇ ಊರೇ ಸಾರಿತು.

ಹಿಂದೆ ಮುದ್ದೇಗೌಡನು ತಿಮ್ಮಿಯನ್ನೂ ಎತ್ತರವಾಗಿ ಬೆಳೆದಿದ್ದ ಜೋಳದ ಗದ್ದೆಯಲ್ಲಿ ರಮಿಸಿದ್ದ. ಬಸಿರಿಯಾಗಿದ್ದು ತಿಳಿದುದರಿಂದ ಸಂಪೂರ್ಣವಾಗಿ ಅವಳ ಕೈಬಿಟ್ಟ. ಅವನಿಗೆ ಈಗ ಮನೆತನದ ಮಾನ ಮರ್ಯಾದೆಗಳು ನೆನಪು ಮಾಡಿದುವು. ತಿಮ್ಮಿಯ ಈ ನಡತೆಯಿಂದ ಅವಳ ಸಂಬಂಧೀಕರಿಗೆ ತುಂಬಾ ಕೊರಗು ತಂದಿತ್ತು. ಈ ವಿಷಯವನ್ನು ನ್ಯಾಯವಾಗಿ ಪೋಲೀಸ್ ಪಟೇಲರು (ಮುದ್ದೇಗೌಡನ ತಂದೆ) ಪೋಲೀಸಿನವರ ಗಮನಕ್ಕೆ ತರಬೇಕಾಗಿತ್ತು. ಆದರೆ ತಿಳಿಸಲಿಲ್ಲ. ಹೇಗೋ ತಿಳಿದು ಪೋಲೀಸಿನವರು ಹಾಜರಾದರು. ಆದರೆ ಹೆಚ್ಚು ವಿಚಾರಣೆಗೆ ಅವಕಾಶ ಕೊಡದೆ ತಿಮ್ಮಿಯ ಮಾವ ಪೋಲೀಸಿನವರಿಗೆ ಭರ್ಜರಿ ಔತಣ. ನೂರು ರೂಪಾಯಿ ತೆತ್ತನು. ಮೂಗರ್ಜಿ ಬರೆದಿದ್ದ ಕೊಂಬಲ್ಲನಿಗೆ ಹತ್ತು ರೂಪಾಯಿ ಕೊಟ್ಟನು. ಪೋಲೀಸಿನವರಿಂದ ಕೊಂಬಲ್ಲ ಹತ್ತು ರೂಪಾಯಿ ಗಿಟ್ಟಿಸಿದ. ಅಲ್ಲಿಗೆ ವಿಚಾರಣೆ ಮುಗಿಯಿತು.

ಹತ್ತು ವರ್ಷ ಕಳೆಯಿತು. ತಿಮ್ಮಿಯು ಊರಿನಲ್ಲಿ ಹೆಚ್ಚಾಗಿ ಓಡಾಡುವುದಿಲ್ಲ. ಓಡಾಡಿದರೂ ತನ್ನ ಕೆಲಸವೆಷ್ಟೋ ಅಷ್ಟು. ಆದರೆ ಅವಳಿಗೆ ಜನಿಸಿದ ಮಗು ಈಗ ಮೈತುಂಬಿ ಬೆಳೆಯುತ್ತಿದೆ. ಜನ ಮಾತ್ರ ಅದನ್ನು 'ಹಾದರಕ್ಹುಟ್ಟಿದ್ದು' ಎನ್ನುವುದು ತಪ್ಪಲಿಲ್ಲ. ಇದಕ್ಕೆ ಯಾರು ಹೊಣೆ, ತಪ್ಪು ಯಾರದು ? ಎಂಬ ಪ್ರಶ್ನೆಯೊಂದಿಗೆ ಕಥೆ ಮುಕ್ತಾಯವಾಗುತ್ತದೆ.

ಇಂತಹ ಕಥೆ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ನಡೆಯುವುದು ಕಂಡು ಬರುತ್ತದೆ; ಆದರೆ ನಡೆಯುವ ವಿಧಾನಗಳು ಬೇರೆಯಾಗಿರುತ್ತವೆ. ಕೋತಿ ತಿಂದು ಮೇಕೆ ಬಾಯಿಗೆ ಒರೆಸಿದಂತಾಗಿತ್ತು ಮುದ್ದನ ಗುಪ್ತ ಕೆಲಸ. ತಿಮ್ಮಿಯನ್ನು ಅವಳ ಪಾಡಿಗೆ ಬಿಟ್ಟಿದ್ದರೆ ಬಹುಶಃ ಹಾದರಗಿತ್ತಿ ಎನಿಸುತ್ತಿರಲಿಲ್ಲ. ಆಕೆಯನ್ನು ಹಾದಿ ತಪ್ಪಿಸಿ ಅವನೇ ಅವಳ ಬಗ್ಗೆ ಕೆಟ್ಟ ಮಾತುಗಳನ್ನಾಡುವುದು ಚೋದ್ಯವೆನಿಸುತ್ತದೆ, ಮಾನ ಮರ್ಯಾದೆಗಳನ್ನು ಗಾಳಿಗೆ ತೂರಿದವರು ಮಾಡುವ ಕೆಲಸವೇ ಅಂತಹುದು.

"ಹ್ಯಂಗಯ್ಯ ನಂಬೋದು ಈ ಕಾಲ್ದಲ್ಲಿ ಹೆಂಗ್ಸರನ್ನ ! ಇಂತಾ ಹಾದರಗಿತ್ತೀರ್ಗೆ ಊರಲ್ಲಿ ಬೆಂಕಿ ಬಿಸ್ನೀರು ಸಿಕ್ಕದಂಗ್ಮಾಡಿ ಕುಲದಿಂದ ಹೊರಕ್ಹಾಕದಿದ್ರೆ ಊರಿನ ಮರ್ಯಾದೆ ಉಳಿವತ್ತೇನ್ರಯ್ಯಾ !" ಎನ್ನುವಾಗ ಅವನ ನಡತೆ ಬಗ್ಗೆ ಕಥೆಗಾರರೇ 'ಮಹಾಶರಣ'ನೆಂದು ವ್ಯಂಗ್ಯವಾಗಿ ಕರೆದಿರುವುದು ಯಥಾಯೋಗ್ಯವಾಗಿದೆ. ಇಂತಹ 'ಮಹಾಶರಣ, ಸತ್ಯಸಂದರು' ಸಮಾಜದಲ್ಲಿ ಎಷ್ಟು ಮಂದಿಯಿಲ್ಲ ? ದುಷ್ಟತನದ ಪ್ರತೀಕನೆನಿಸಿದ್ದಾನೆ ಮುದ್ದ. ಊರಿನ ಜನ ತಿಮ್ಮಿಯ ಮಗುವನ್ನು 'ಹಾದರಕ್ಹುಟ್ಟಿದ್ದು' ಅನ್ನುವುದು ತಪ್ಪಲಿಲ್ಲ. ಆದರೆ ಮುದ್ದ ಅವಳ ನಡತೆಯ ಬಗ್ಗೆ ಆಡಲು ಹಕ್ಕೇನಿದೆ ?

ಆಕೆಯನ್ನು ಕುಲದಿಂದ ಹೊರ ಹಾಕಬೇಕು ಎನ್ನುವುದರಲ್ಲಿ ಅರ್ಥವಿದೆಯೇ ? ತನ್ನ ತಪ್ಪನ್ನು ಮುಚ್ಚಿಡಲು ದುಷ್ಟಮಾರ್ಗವನ್ನೇ ಹಿಡಿದು ಸಮಾಜದಲ್ಲಿ ಅವಳನ್ನು ತುಳಿದು, 'ಏನೂ ಅರಿಯದ ಆ ಹುಡುಗಿಗೆ ಅವಳ ಮುಂದಿನ ಬಾಳೇನು ? ಅವಳು ಹಾಳಾದರೆ ಯಾರು ಹೊಣೆ ?' ಎಂದು ಸಮಾಜದ ಮುಂದೆ ಈ ಪ್ರಶ್ನೆಯನ್ನಿಟ್ಟು ಬಿಡಿಸಲು ಕಥೆಗಾರರು ಕೇಳುತ್ತಾರೆ. ಆದರೆ ಉತ್ತರಿಸುವುದಕ್ಕೆ ಸಮಾಜಕ್ಕೆ ತಿಳಿದಿದ್ದರೂ ತಪ್ಪಾಗುತ್ತದೆ, ದುಷ್ಟಶಕ್ತಿಯ ವಿರುದ್ಧ ಹೋರಾಡಲು ಸಮಾಜಕ್ಕೆ ಇನ್ನೂ ಧೈರ್ಯ ಬಂದಿಲ್ಲ. ಇದೇ ಪರಂಪರೆಯಾಗಿ ಮುಂದುವರಿಯುತ್ತಿದೆ. ಕಾರಣ ತಪ್ಪೆಸಗಿದವರಿಗೆ ತುಂಬಾ ಬೆಂಬಲವಿರುತ್ತದೆ.

'ಪ್ರೇಮದ ಬೆಳೆ' ಹೆಸರಿಗೆ ತಕ್ಕಂತೆ ಇದೊಂದು ಪ್ರೇಮದ ಕಥೆ. ತಿಮ್ಮೇಗೌಡನ ಜಮೀನಿನಲ್ಲಿ ಜೋಳದ ಕಾಳು ಬಿತ್ತಿದಾಗ ಅಣ್ಣಪ್ಪ ತಿಮ್ಮಾಜಿಯರ ಪ್ರೇಮದ ನೋಟಗಳು ಪರಸ್ಪರ ಬಿತ್ತಲ್ಪಟ್ಟುವು. ಜೋಳದ ಬೆಳೆ ಕೊಯ್ಲಿಗೆ ಬರುವ ವೇಳೆಗೆ ಅವರಿಬ್ಬರ ಪ್ರೇಮದ ಬೆಳೆಯೂ ಹದಕ್ಕೆ ಬಂದು ಮದುವೆಯಾಯಿತು. ಇಂತಹ ಪರಿಶುದ್ಧವಾದ ಪ್ರೇಮಕ್ಕೆ ಅಡ್ಡಿಗಳು ಬಂದೊದಗಿದರೂ ಪ್ರೇಮಿಗಳು ಧೈರ್ಯ ಗುಂದದಿರುವುದರಿಂದ ಹಲವು ಸಾರಿ ಸುಖಾಂತವಾಗುತ್ತದೆ. ಪ್ರೇಮಿಗಳು ದೃಷ್ಟಿ ಹಾಯಿಸುವುದು, ಪರಸ್ಪರ ಭರವಸೆಗಳನ್ನಾಡುವುದು, ಅನುಕೂಲವಾಗುವವರೆಗೂ ಸುಖವನ್ನು ಅನುಭವಿಸುವುದು, ಕಡೆಗೆ ಕ್ಷುಲ್ಲಕ ಕಾರಣಗಳಿಂದಾಗಿ ಪರಸ್ಪರ ದೂರವಾಗುವುದು, ಮರೆಯುವುದು, ಪುನಃ ಅನ್ಯರಲ್ಲಿ ಅನುರಾಗ ಹೊಂದುವುದು ಇವೆಲ್ಲ ಪಟ್ಟಣದಲ್ಲಿ ಕಾಣಬರುವ ಸಂಗತಿಗಳು. ಇಂತಹ ಪ್ರೇಮಕ್ಕೆ ಬೆಲೆ ಇದೆಯೆ ? ಇದ್ದರೆ ಅರ್ಥವಿದೆಯೆ ? ಈ ರೀತಿಯ ನಡವಳಿಕೆ ಸರಿಯೆ ? ಅಥವಾ ಪ್ರಸ್ತುತ ಕಥೆಗಾರರ ಊರಿನಲ್ಲಾದ 'ಪ್ರೇಮದ ಬೆಳೆ'ಯ ಕಥೆಯನ್ನು ಮೆಚ್ಚಲು ಆತಂಕವೇನಿದೆ ? ಇಂತಹ ವ್ಯತ್ಯಾಸಗಳೇನೂ ಕಥೆಯಲ್ಲಿ ಕಾಣುವುದಿಲ್ಲ. ಆದರೆ 'ಪ್ರೇಮದ ಬೆಳೆ' ಸೊಗಸಾದ ಚೌಕಟ್ಟಿನಲ್ಲಿ ನಿರೂಪಿತವಾಗಿರುವ ಆದರ್ಶಕಥೆ, ಸುಂದರ ಕಥೆ, ಅವಿವಾಹಿತರಾಗಿ ಪ್ರೇಮಸಲ್ಲಾಪದ ಮೊದಲ ಪುಟದಲ್ಲಿರುವವರಿಗೆ ಅನುಕರಣೀಯ ಕಥೆಯೂ ಆಗಿದೆ.

'ಏಡಿ ಕಚ್ಚಿದ ಕೈ' ಒಂದು ಸಣ್ಣ ಘಟನೆಯನ್ನೇ ಕಥೆಯಾಗಿ ನಿರೂಪಿಸಲಾಗಿದೆ. ಮಾರಮ್ಮನಗುಡಿಯ ಪೂಜಾರಿಗೆ ನಳ್ಳಿ ಎಂದರೆ ಪ್ರಾಣ. ಮೀನು ಗುಂಡಿಯಲ್ಲಿ ಸದಾ ಅಲೆಯುತ್ತಾ ಏಡಿಯನ್ನು ಹಿಡಿಯುವುದರಲ್ಲಿಯೇ ತನ್ನ ಜೀವಮಾನವನ್ನು ಕಳೆದ ಪುಟ್ಟಯ್ಯನಿಗೆ 'ಮೀನುಗುಂಡಿ' ಎಂಬ ಹೆಸರು ಅನ್ವರ್ಥನಾಮವಾಗಿ ಬಂದಿತ್ತು. ಏಡಿಯನ್ನು ಹಿಡಿವ ಹವ್ಯಾಸದಲ್ಲಿ ಒಂದು ಬೆರಳನ್ನು ಕಳೆದುಕೊಂಡದ್ದರಿಂದ 'ಮೀನುಗುಂಡಿ ಮೋಟ'ನೆಂಬ ನಾಮಾಂಕಿತವೂ ದೊರೆಯಿತು, ಹಾಸ್ಯಮಯವಾಗಿ ಹೊರಬಂದಿದೆ ಈ ಕಥೆ.

ಯಾವ ರೀತಿಯ ಚಟಕ್ಕೂ ಒಂದು ಇತಿ ಮಿತಿ ಬೇಕಾಗುತ್ತವೆ. ಅತಿ ಯಾವಾಗಲೂ ತ್ಯಾಜ್ಯವಾದದ್ದು ಎಂಬ ನೀತಿವಾಕ್ಯವನ್ನು ಮೀರಿದ ಮೀನು ಗುಂಡಿ ಪುಟ್ಟಯ್ಯ ತನ್ನ ಕೈಯಲ್ಲಿ ಅರ್ಧ ಬೆರಳನ್ನು ಕಳೆದುಕೊಂಡು ಪೂಜಾರಿ ಕೆಲಸದಿಂದ ವಿರಮಿಸಬೇಕಾದ ಪ್ರಸಂಗದಲ್ಲಿ ಸೊಗಸಾಗಿ, ಹಾಸ್ಯಭರಿತವಾಗಿ ನಿರೂಪಿತವಾಗಿದೆ. ಬಿಲದ ಬಳಿ ತೊಪ್ಪೆ ಗಾತ್ರದ ಮಣ್ಣಿನ ಮುದ್ದೆ ಕಂಡಾಗಲೆ ಆ ನಳ್ಳಿಯ ಸಹವಾಸ ಬೇಡವೆನಿಸಬೇಕಾಗಿತ್ತು ಪುಟ್ಟಯ್ಯನಿಗೆ. ಆದರ ಬದಲು ಅವನ ಬಾಯಲ್ಲಿ ನಿರೂರಲಾರಂಭಿಸಿತು. ಇದೊಂದು ಮಹಾಸಾಹಸ ಕಾರ್ಯವೆಂಬಂತೆ ಹಟ ಬೇರೆ. ಕಚ್ಚಿಕೊಂಡಿದ್ದ ನಳ್ಳಿಯ ಕೊಂಡಿಗಳನ್ನು ಬೇರ್ಪಡಿಸಬೇಕಾದರೆ ಮೀನುಗುಂಡಿಯ ಬಂಧು ಬಳಗ ಪಟ್ಟ ಪ್ರಯಾಸ ಬಹಳ ಚೆನ್ನಾಗಿ ವಿವರಿಸಲಾಗಿದೆ. ಕೊಂಡಿಗಳನ್ನು ಬಿಡಿಸಿಕೊಳ್ಳಲು ಪುಟ್ಟಯ್ಯ ಪಟ್ಟ ಯಾತನೆಯನ್ನು ಸ್ಮರಿಸಿಕೊಂಡರೆ ಮತ್ತೊಮ್ಮೆ ನಳ್ಳಿಯ ವಿಚಾರವನ್ನೇ ದೂರದಲ್ಲಿರಿಸಬೇಕೆನಿಸುತ್ತದೆ. ಮೀನುಗುಂಡಿಯ ಮತ್ತು ನಳ್ಳಿ ಬೇಟೆಯ ವರ್ಣನೆ ಕಥೆಗಾರರ ಮಾತುಗಳಲ್ಲಿಯೇ ಅನುಭವಿಸಬೇಕು.

ವ್ಯಾಪಾರದಲ್ಲಿ ಜಾಣ್ಮೆ, ಚತುರತೆ, ತಟವಟ, ಅನ್ಯಾಯ ಇವೆಲ್ಲಕ್ಕೂ ಸ್ಥಾನವಿದೆ. 'ಮೋಸ ಇಲ್ದ ವ್ಯಾಪಾರ ಇಲ್ಲಾ'. ಇದು ನರೀ ಹಳ್ಳಿ ಬೆಟ್ಟೇಗೌಡನ ದೃಷ್ಟಿ. ಬರಿಯ ಕೈಯಲ್ಲಿದ್ದ ಬೆಟ್ಟೇಗೌಡನಿಗೆ ವ್ಯವಸಾಯ ಮಾಡಲಿಷ್ಟವಿರಲಿಲ್ಲ. ಆದರೆ ಮನೆಯಲ್ಲಿ ಹುಚ್ಚೆಳ್ಳು ತುಂಬಿದ ಹಾಸಾಲೇಲಿ ಮೂರು ಬೆಳ್ಳಿ ನಾಣ್ಯ ದೊರಕಿದುದರಲ್ಲಿಯೇ ವ್ಯಾಪಾರ ಆರಂಭ-ಒಂದು ಟಿನ್ ಬಿಳೀ ಎಣ್ಣೆಯಿಂದ. ಬೆಟ್ಟೇಗೌಡನ ಕಥೆ ಕಥೆಗಾರರ ಊರಿನಲ್ಲಾದ ಒಂದು ಮದುವೆಯಲ್ಲಿ ಹೊರಬಂದಿತು. ಮದುವೆ ವಿಜೃಂಭಣೆಯಿಂದ ಸಾಗಿತ್ತು. ಧಾರೆ ಮುಗಿದಿತ್ತು. ಊಟಕ್ಕೆ ಸಿದ್ಧತೆ ನಡೆದಿತ್ತು. ಆದರೆ ಸ್ವಲ್ಪ ಸಮಯ ಬೇಕಾಗಿತ್ತು. ಮಲ್ಲು ಪಂಚೆ, ಕರೀಕೋಟು, ಜರತಾರಿ ಪೇಟ, ಕೈಗೆ ಚಿನ್ನದ ಕಪ್ಪ, ಬೆರಳಿಗೆ ಚಿನ್ನದುಂಗುರಗಳಿಂದ ಅಲಂಕೃತನಾಗಿದ್ದವನೇ ಬೆಟ್ಟೇಗೌಡ. ಸಾಹುಕಾರರಾಗಿರಬಹುದೆಂದು ಅವನನ್ನು ಮಾತನಾಡಿಸಿದ ಕಥೆಗಾರರು ಪರಿಚಯ ಮಾಡಿಕೊಂಡರು. ಬೇಸಾಯವನ್ನು ಬಿಟ್ಟು ಕೊಪರಿ ಮಂಡಿ ಇಟ್ಟಿದ್ದ ಬೆಟ್ಟೇಗೌಡ ತನ್ನ 'ಮೂರು ರೂಪಾಯಿ' ಮಾಡಿದ ಕೆಲಸವನ್ನು ವಿಸ್ತರಿಸತೊಡಗಿದ.

ಸಾಮಾನ್ಯ ಹಳ್ಳಿಯ ರೈತನೊಬ್ಬನ ಮಗ ಕೇವಲ ಮೂರು ರೂಪಾಯಿ ಬೆಳ್ಳಿ ನಾಣ್ಯವೊಂದರಿಂದ ಸಾಹುಕಾರನಾದನೆಂದರೆ ಆತನು ನಡೆಸಿದ ವ್ಯಾಪಾರದ ಮಾರ್ಗವೇನು, ಅನುಸರಿಸಿದ ರೀತಿ ಯಾವುದು, ಎಂಬುದನ್ನು ವಿವರಿಸುತ್ತದೆ ಈ ಚಿತ್ರಕಥೆ. 'ಮೋಸ ಸುಳ್ಳು ತಟವಟ ಮಾಡ್ದೇ ವ್ಯಾಪಾರ ಮಾಡಕಾಗಲ್ಲ' ಎಂಬುದು ಬೆಟ್ಟೇಗೌಡನ ದೃಢ ನಂಬಿಕೆ. 'ಮೋಸ ಮಾಡುವವನು ತಾನೊಬ್ಬನೇ ಅಲ್ಲ, ಲೋಕವೆ ಮಾಡ್ತದೆ' ಎಂಬ ಸಮಾಧಾನ-ಲಾಭವಿಲ್ಲದೆ ವ್ಯಾಪಾರ ಮಾಡುವುದಾದರೆ, ಆ ವ್ಯವಹಾರವಾದರೂ ಏಕೆ ?

ಬೆಟ್ಟೇಗೌಡ ಊಟಕ್ಕೆ ಹೋಗುವಾಗ ಕಥೆಗಾರರು ಹಾಕುವ 'ಈಗ ವ್ಯಾಪಾರದಲ್ಲಿ

ಮೋಸ ಇಲ್ಲ ತಾನೆ?' ಎಂಬ ಪ್ರಶ್ನೆ ಅವನಿಗೆ ಮಾತ್ರ ಅನ್ವಯಿಸದೆ ಜಗತ್ತಿನಲ್ಲಿರುವ ಸಮಸ್ತ ವ್ಯಾಪಾರಸ್ತರನ್ನೂ ಕುರಿತದ್ದಾಗಿತ್ತು. ಅಷ್ಟೇ ಸಲೀಸು ಉತ್ತರ ಬೆಟ್ಟೇ ಗೌಡನದು; 'ನಾನಾಗ್ಲೆ ಹೇಳ್ಲಿಲ್ಲವೇ ಸ್ವಾಮಿ, ಮೋಸ ಇಲ್ದ ವ್ಯಾಪಾರ ಇಲ್ಲಾ; ಆದ್ರೂ ಮೋಸದಲ್ಲೂ ಧರ್ಮ ಕರ್ಮ ಉಂಟಲ್ಲ. ನೀರಾಕ್ದೆ ಕಲ್ಲು ಸೇರಸ್ದೆ ಮಾಲು ಮಾರಿದ್ರೆ ಎಷ್ಟೋ ಪುಣ್ಯ ಬರ್ತದೆ. ಅಂತಾದ್ದ ನಾನು ಮಾಡೋದಿಲ್ಲ. ಆದೇ ಎಷ್ಟೋ ಪುಣ್ಯ ಬರ್ತಾದೆ ಇನ್ನು ಪಾಪವೆಲ್ಲಿ ಬರಬೇಕು ಹೇಳಿ.?' ಇದ್ದುದರಲ್ಲಿ ಒಬ್ಬ ಪ್ರಾಮಾಣಿಕ ವ್ಯಾಪಾರಿಯ ಚಿತ್ರಣ ಈ ಕಥೆಯಾಗಿದೆ.

'ಕಡಲ ತೀರದಲ್ಲಿ ಒಂದು ಸಂಜೆ'. ಇಲ್ಲಿ ಕಥೆಗಾರರು ತಮ್ಮ ಅನುಭವದ ಒಂದು ಘಟನೆಯನ್ನು ಸಹೃದಯರ ಮುಂದಿಟ್ಟಿದ್ದಾರೆ. ಒಂದು ಜಿಲ್ಲೆಗೆ ಉನ್ನತಾಧಿಕಾರಿಯಾಗಿದ್ದುದರಿಂದ ಸರ್ಕಾರದ ಆದೇಶವನ್ನು ಪಾಲಿಸಬೇಕಾಗಿತ್ತು. ಪಾನನಿರೋಧವು ರಾಜ್ಯದಲ್ಲಿ ಜಾರಿಯಲ್ಲಿದ್ದ ಕಾಲ. ಅದರ ಬಗ್ಗೆ ಎಚ್ಚರಿಕೆ ವಹಿಸಬೇಕಾದುದರಿಂದ, ಪತ್ತೆದಾರೀ ಕೆಲಸವನ್ನು ಆಗಾಗ್ಗೆ ಕೈಗೊಳ್ಳಬೇಕಾಗಿತ್ತು. ಮಂಗಳೂರಿಂದ ಉಡುಪಿಗೆ ಕಾರಿನಲ್ಲಿ ಹೊರಟು ಕಾಪುದಾಟಿದ ಮೇಲೆ ಕಾರನ್ನು ಬಲಗಡೆಗೆ ತಿರುಗಿಸಲು ಡ್ರೈವರನಿಗೆ ಆದೇಶವಿತ್ತು ಕೊಂಚದೂರ ಹೋದನಂತರ ಕಾರಿನಿಂದ ಇಳಿದು ಪರೀಕ್ಷಣಾ ಕಾರ್ಯವಾರಂಭಿಸಿದರು. ಡ್ರೈವರನಿಗೆ ಯಾರಾದರೂ ಕೇಳಿದರೆ ಚಿಕ್ಕಮಗಳೂರ ನಾಟಾ ವ್ಯಾಪಾರಿ ನಾಗೇಂದ್ರಪ್ಪ ಎಂದು ತಿಳಿಸಲು ಹೇಳಿ ಹೊರಟರು. ಆಗಲೇ ಸೂರ್ಯಾಸ್ತವಾಗುತ್ತಿದ್ದ. ಸೂರ್ಯೋದಯಕ್ಕೆ ಮುಂಚೆ ಸಮುದ್ರದಲ್ಲಿ ಮೀನು ಹಿಡಿವ ಕೆಲಸ. ಈಗ ಸಂಜೆಯಾಗುತ್ತಿದ್ದುದರಿಂದ ಪೇಟೆಯ ಕಡೆಗೆ ಹೊರಟಿದ್ದರು. ಒಬ್ಬ ಮೊಗವೀರನು ಕಥೆಗಾರರನ್ನು ಸಂಧಿಸಿದ ಮೊಗವೀರನು ಹೆಂಡ ಕುಡಿಯಲು ಹೋಗುತ್ತಿದ್ದಾನೆಂದೂ ಕಾಪುವಿನಲ್ಲಿ ಹೆಂಡವಲ್ಲದೆ ಸರಾಪು ಸಿಗುವುದಿಲ್ಲವೆಂದೂ ಗ್ರಹಿಸಿದರು, ಆತನೊಡನೆ ತಾವು ವ್ಯಾಪಾರಿ, ಒಳ್ಳೆ ಮಾಲು ಕೊಡಿಸಬೇಕು ಎಂದೂ ತಿಳಿಸಿದರು. ತೆಂಗಿನ ಮರಗಳು ಒತ್ತಾಗಿದ್ದ ಒಂದು ಗುಡಿಸಲಿನ ಕಡೆಗೆ ಮೊಗವೀರ ಕರೆದುಕೊಂಡು ಹೋದ. ಹೋಟೆಲಿನ ಕೆಲಸ ಸಾಗುತ್ತಿತ್ತು. ಅದಕ್ಕೊಬ್ಬ ಯಜಮಾನ ; ಡೊಳ್ಳು ಹೊಟ್ಟೆ ಗಿರಿಜೆ ಮೀಸೆ ಕೆನ್ನೆಯ ಅಕ್ಕಪಕ್ಕಗಳಲ್ಲಿ ದಟ್ಟವಾದ ಕೂದಲು. ನೋಡಿದವರಿಗೆ ಭಯವಾಗುವಂತಹ ವ್ಯೆಮಾಟ. ಗುಡಿಸಲಿನ ಸನಿಹಕ್ಕೆ ಹೋಗಿ 'ನನಗೆ ಗಂಗಸರ ಬ್ಯಾಡ, ಕಳ್ಳು ಬೇಕು' ಎಂದು ಕೇಳಿದರು. ಆತ 'ಇಲ್ಲಿ ಇಜ್ಜಿ–ಇಲ್ಲಿ ಇಲ್ಲ' ಎಂದು ಉತ್ತರಿಸಿದೊಡನೆ ಆ ಜಾಗ ಬಿಟ್ಟು ಸೂರ್ಯಾಸ್ತವನ್ನು ಕಾಣಲು ಸಮುದ್ರ ತೀರಕ್ಕೆ ಹೋದರು. ಸೂರ್ಯ ಮುಳುಗುವಾಗ ಗಣಗಣ ಕಾಯುವ ಕಬ್ಬಿಣದುಂಡೆಯಂತೆ ಕಾಣುತ್ತಿದ್ದ, ಕಾದ ಕಬ್ಬಿಣದ ದೊಡ್ಡ ಚೆಂಡನ್ನು ನೀರಿನಲ್ಲಿ ಮುಳುಗಿಸಿದಂತೆ. ಕ್ಷಣಕ್ಕೊಂದು ತರಹ ಆಕಾಶ ರಂಗೇರುತ್ತಿತ್ತು. ಅದೇ ಸಮಯಕ್ಕೆ ಬಿಳೀ ಅಂಗಿ ಬಿಳೀ ಲುಂಗಿ ಧರಿಸಿದ ಒಬ್ಬ ಗಿರಾಕಿ ಬಂದು ಮಾತನಾಡಿಸಿದ. ಅವನಿಗೂ ಹಿಂದೆ ಹೇಳಿದ ಉತ್ತರವೇ ಕೊಟ್ಟರು.

ಆತನಿಂದ ಹೆಂಡದ ಮಹಿಮೆಯನ್ನು ತಿಳಿದರು ; 'ಸಮುದ್ರದ ಮೇಲೆ ಮೈಮುರಿಯ ಹುಟ್ಟುಹಾಕಿ ಮೀನು ಹಿಡಿದು ಮನೆಗೆ ಬಂದ ಮೊಗವೀರನಿಗೆ ಹೆಂಡಕ್ಕಿಂತ ಇನ್ನೇನು ಬೇಕು?....ಸರ್ಕಾರ ಇದ ಕುಡೀ ಬಾರ್ದು ಅಂತ ಮಾಡಿದ್ದು ತಪ್ಪುಸ್ವಾಮಿ. ಇದ ಕುಡಿದೇ ಹೋದ್ರೆ, ನಾವು ಮೊಗವೀರರು ಬದುಕೋಕಾಗುತ್ತಾ....ಹೆಂಡದ ಮುಂದೆ ಯಾವುದೂ ಇಲ್ಲ.'

ಈ ಮಧ್ಯೆ ಡ್ರೈವರ್ ಅದೇ ಅಂಗಡಿಯಲ್ಲಿ ಕುಡಿಯಲು ಹೋಗಿದ್ದಾಗ ಅವನ ವಿಚಾರಣೆಯು ಅಲ್ಲಿ ನಡೆದಿತ್ತು. ಕತ್ತಲೆಯಲ್ಲಿ ಗುಡಿಸಲಿನ ಕಂಡಿಯಲ್ಲಿ ಇಣಿಕಿ ನೋಡಿದಾಗ ಹೆಂಡ ಸಾರಾಯಿ ಎರಡು ಟೇಬಲಿನ ಮೇಲಿದ್ದುದನ್ನು ಕಂಡರು. ಅನಂತರ ಕಾರಿನ ಬಳಿಗೆ ಹೋಗಿ ಹಾರನ್ ಮಾಡಿದಾಗ ಡ್ರೈವರ್ ಧಾವಿಸಿ ಬಂದ. ಮಂಗಳೂರಿನ ಕಡೆಗೆ ಕಾರು ಚಲಿಸಿತು. ದಾರಿಯಲ್ಲಿ 'ಪಾನ ನಿರೋಧ ಎಂದೂ ಯಶಸ್ವಿಯಾಗುವುದಿಲ್ಲ. ಅದರಿಂದ ಸರ್ಕಾರಕ್ಕೆ ಹಣದ ನಷ್ಟ ಜನರಿಗೆ ಆರೋಗ್ಯ ನಷ್ಟ' ಎಂಬ ತೀರ್ಮಾನಕ್ಕೆ ಬಂದರು.

ಈ ಕಥೆಯ ಆರಂಭದಲ್ಲಿ ಒಬ್ಬ ಉನ್ನತಾಧಿಕಾರಿಗೆ ಜನ ನೀಡುತ್ತಿದ್ದ ಗೌರವ ಆದರಣೆಗಳನ್ನು ತಿಳಿಸಲಾಗಿದೆ. ಡೀಸಿ ಸಾಹೇಬರ ಬಗ್ಗೆ ಪಟೇಲ್, ಶ್ಯಾನುಭೋಗ, ತಹಸಿಲ್ದಾರರವರೆಗೆ ತೋರುತ್ತಿದ್ದ ವಿನಯ ಭಯಭಕ್ತಿಗಳು ವರ್ಣನಾತೀತ. ಡೀಸಿ ಯವರು ಸ್ಥಳ ಪರೀಕ್ಷೆಗಾಗಿ ಹೊರಟರೆ ಅಲ್ಲಿ ನಡೆವ ಅದ್ದೂರಿ ಸಮಾರಂಭವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. (ಪುಟ, ೬೭, ೬೮, ೬೯).

ಪಾನನಿರೋಧದ ಅಂಶ ಸರ್ಕಾರಕ್ಕೆ ಸೇರಿದ್ದರಿಂದ ಡೀಸಿಯವರು ಅದರ ಬಗ್ಗೆ ಆಸಕ್ತಿ ವಹಿಸಬೇಕಾಗಿತ್ತು. ಕಥೆಗಾರರು ಅಂತಹ ಅಧಿಕಾರಿಗಳಾಗಿದ್ದರಿಂದ ಅನೇಕ ಸಾರಿ ಪತ್ತೇದಾರನ ಕೆಲಸ ಮಾಡಬೇಕಾಗಿತ್ತು. ಪ್ರಾಣದ ಭೀತಿಯು ಒಮ್ಮೊಮ್ಮೆ ಆಗುತ್ತಿತ್ತು. ಡೀಸಿಯಾದರೆ ಆತನು ಮನುಷ್ಯನೇ ತಾನೆ ? ಕಾರು ಇನ್ನೇನು ಹೊರಡಬೇಕು ಮಂಗಳೂರಿಗೆ. ಒಮ್ಮೆ ಮಾತನಾಡಿ ಹೋಗಿದ್ದ ಮೊಗವೀರ ಕುಡಿದು ಕಾರಿನ ಬಳಿ ಬಂದಾಗ 'ಮತ್ತೇನು ಬಂದಪ್ಪಾ !' ಎಂದು ಭೀತಿಗೊಂಡರು. 'ಡೀಸಿಯಾದರೆ ಏನು, ಆ ಕತ್ತಲಿನಲ್ಲಿ ಏನು ಬೇಕಾದರು ಆಗಬಹುದು' ಎಂದು ಹೆದರಿದರು. ಹೌದು ಹೆದರಬೇಕಾದ್ದೇ ಏಕೆಂದರೆ ಅವರಿರುವ ಜಾಗ ಅಂತಾದ್ದಾಗಿತ್ತು ! ಕುಡುಕರ ಕೈಗೆ ಸಿಕ್ಕಿ ಹಾಕಿಕೊಂಡರೆ ಅದರಲ್ಲಿ ತನಿಖೆಗಾಗಿ ಬಂದಿದ್ದಾನೆಂಬುದು ತಿಳಿದರೆ ಸಾಕು ವಾಪಸ್ಸು ಹೋಗುವ ಹಾಗೇ ಇಲ್ಲ. ಇಂತಹ ಕಾರ್ಯವನ್ನು ನಯನಾಜೋಕಿನಿಂದಲೂ ಅತಿಶಯ ವಾದ ಬುದ್ಧಿಯಿಂದ ಕೂಡಿದ ತಂತ್ರದಿಂದಲೂ ನಿಭಾಯಿಸಬೇಕು.

ಕಳ್ಳಭಟ್ಟಿಯನ್ನು ಕಂಡುಹಿಡಿಯಲು ಹೋಗಿ ಸದ್ಯ ಬಚಾವಾದರೆ ಸಾಕು ಎಂಬ ಭಾವನೆ ಬಂದುದು ಅಚ್ಚರಿಯೇನಲ್ಲ. ಈ ಘಟನೆಯಿಂದ ಕಳ್ಳಭಟ್ಟಿ ಹೇಗೆ ಕಳ್ಳತನದಲ್ಲಿ ತಯಾರಾಗುತ್ತದೆ, ಮಾರಾಟವಾಗುತ್ತದೆ ಎಂಬುದನ್ನು ಸ್ವತಃ ತಿಳಿದುಕೊಂಡು ಮೊಗವೀರ

ನೊಬ್ಬನ ಹೆಂಡದ ಮಹಿಮೆಯನ್ನು ಕೇಳಿದ ಮೇಲೆ ಪಾನ ನಿರೋಧದ ಜಾರಿ ಅಸಾಧ್ಯ ವಾದುದೆಂದು ಇದರಿಂದ ಸರ್ಕಾರಕ್ಕೆ ಹಣ ನಷ್ಟ ಜನರಿಗೆ ಆರೋಗ್ಯ ನಷ್ಟವೆಂಬ ತೀರ್ಮಾನಕ್ಕೆ ಬರುವರು. ಪಾನ ನಿರೋಧವನ್ನು ಜಾರಿಗೆ ತರಬೇಕೆನ್ನುವುದರಲ್ಲಿ ಅರ್ಥ ವಿಲ್ಲವೆಂದು ಕೊನೆಯಲ್ಲಿ ತಿಳಿಯುವರು.

ಸಂಜೆಯಲ್ಲಿಯೇ ಕುಡಿಯುವ ಪದ್ಧತಿ. ಕಡಲು ತೀರದಲ್ಲಿ ಸೂರ್ಯಾಸ್ತದ ರಮ್ಯ ಸುಂದರ ನೋಟ. ಪಡಖಾನೆಯಲ್ಲಿಯೂ ಹೆಂಡಕುಡಿಯುವವರ ದೃಶ್ಯ. ಸೂರ್ಯ ತನ್ನ ಕೆಲಸ ಮುಗಿಸಿ ಸಮುದ್ರದಲ್ಲಿ ಮುಳುಗಿದರೆ ಮೊಗವೀರರು ಬೆಳಗಿನಿಂದ ದುಡಿದು ಸಂಜೆ ಮನೆಗೆ ಹಿಂದಿರುವ ಮೊದಲು ಪಡಖಾನೆಗೆ ಭೇಟಿ ನೀಡಿ, ಅಲ್ಲಿ ಬೇಕಾದಷ್ಟು ಕುಡಿವರು. ಇವೆಲ್ಲಾ ಸಂಜೆಯಾದಾಗ. ಸಂಜೆಗೂ ಈ ವ್ಯವಹಾರಕ್ಕೂ ಎಷ್ಟು ನಂಟು !

'ಚಂದ್ರಮುಖಿ' ಎಲಿಟಾ ವಿಲ್ಸನ್ ಎಂಬಾಕೆ ಬರೆದ 'Face in the Moonlight' ಎಂಬ ಕಥೆಯ ರೂಪಾಂತರ. ಇದೇ ವಸ್ತುವನ್ನಿಟ್ಟುಕೊಂಡು ತಾವು ಕಂಡು ಕೇಳಿದ ಕಥೆಗೆ ಅನ್ವಯಿಸಲಾಗಿದೆ. ಪುರಾತನ ಒಡವೆಗಳ ವ್ಯಾಪಾರಿ ಗಂಜಾಂ ಗಣೇಶನ ಕಥೆಯಾಗಿದೆ. ಗಣೇಶ ಒಂದು ಕಾಲ್ಪನಿಕ ಕಥೆಯೊಂದನ್ನು ಹೆಣೆದು ಬಂದ ಗಿರಾಕಿಗಳನ್ನು ಮೋಸಗೊಳಿಸಿ ತಾಯಿತವನ್ನು ಮಾರಾಟ ಮಾಡುತ್ತಿದ್ದ.

'ಚಂದ್ರಮುಖಿ' ಒಂದು ರಮಣೀಯ ಕಥೆಯಾಗಿ ಕಥೆಗಾರರಿಂದ ಮೂಡಿ ಬಂದಿದೆ. ಗಣೇಶನು ಹೇಳಿದ ಕಥೆಯಷ್ಟೇ ಇಲ್ಲಿ ನಿರೂಪಿತವಾಗಿದ್ದರೆ ಇದರ ಸ್ಥಾನ ಇನ್ನೂ ಹೆಚ್ಚು ತ್ತಿತ್ತು. ಆದರೆ ಇದೊಂದು ಕಟ್ಟು ಕಥೆ ಎಂದೊಡನೆಯೇ ಓದುತ್ತಿದ್ದಾಗ ಆಗುತ್ತಿದ್ದ ಭಾವನೆಗಳೆಲ್ಲ ಇದ್ದಕ್ಕಿದ್ದಂತೆ ತಣ್ಣಗಾಗಿ ಬಿಡುತ್ತವೆ. ಇಂತಹ ಕಾಲದಲ್ಲಿಯೂ ಗಣೇಶನು ಹೇಳಿದ ಕಥೆಯನ್ನು ನಂಬುತ್ತಾರೆಯೆ ಎಂಬ ಭಾವನೆ ಮೂಡದಿರದು; ಆದರೆ ಕಥೆ ಹೇಗಿ ದ್ದರೂ ಇರಲಿ, ಇದರಲ್ಲಿ ಬರುವ ಬೆಳುದಿಂಗಳಲ್ಲಿ ಕಂಡ ಯುವತಿಯ ವರ್ಣನೆ, ಅವಳ ಬಗ್ಗೆ ನಡೆಸಿದ ಶೋಧನೆಗಳು ಓದುಗರಿಗೆ ಕುತೂಹಲವನ್ನು ಹುಟ್ಟಿಸುತ್ತವೆ. ಏನೋ ಕೊಳ್ಳಲು ಬಂದ ಗಿರಾಕಿಯೊಬ್ಬ ನಂಬಿ ಆ ತಾಯಿತವನ್ನು ನೂರು ರೂಪಾಯಿಗೆ ಕೊಂಡು ಹೋದನೆಂದರೆ ಕಥೆ ಎಷ್ಟು ಪ್ರಭಾವವನ್ನುಳ್ಳದ್ದು ಎಂದು ಅರ್ಥವಾಗದಿರದು. ವ್ಯಾಪಾರಿಯ ಕಲ್ಪನಾವಿಲಾಸದಿಂದ ಬಂದ ಕಥೆ, ಜೀವನ ನಡೆಸಲು ಅನುಸರಿಸಿದ ವಿಧಾನ ಗಳಲ್ಲಿ ಅವ್ಯವಹಾರ, ಮೋಸ ಮಾರ್ಗಗಳೂ ಒಂದು ಬಗೆ.

ಈ ಸಂಕಲನದಲ್ಲಿರುವ ಎಂಟು ಕಥೆಗಳಲ್ಲಿ 'ಅವಳಲ್ಲ ನಾವು ಹುಚ್ಚರು' ಎಂಬುದು ತುಂಬಾ ಚಿಕ್ಕ ಕಥೆ. ಶ್ರೀಯುತರು ತಾವು ಬೆಳಗಿನ ವ್ಯಾಯಾಮಕ್ಕಾಗಿ ಹೊರಟಿದ್ದಾಗ ಆದ ಒಂದು ಘಟನೆಯನ್ನು ಚಿತ್ರಿಸಿದ್ದಾರೆ. ಇದರಲ್ಲಿ ಉತ್ಪ್ರೇಕ್ಷೆ ಇಲ್ಲ. ಸಹಜವಾದ ದೃಷ್ಟಿಯಿಂದ ಕಂಡರಿಸಿದ್ದಾರೆ, ಕೆಸರಿನಲ್ಲಿ ಕಮಲವನ್ನು ಗುರುತಿಸುವಂತೆ ನೋಡಿದವ ರೆಲ್ಲರೂ ಒಬ್ಬಾಕೆಯನ್ನು ಹುಚ್ಚಿ ಎಂದು ಕರೆಯುತ್ತಿದ್ದವಳ ವಿವರ, ಹಸ್ತದಲ್ಲಿ ಆಕೆಯು

ಹುಚ್ಚಿಯಾಗಿರದೆ ಅವಳನ್ನು ಹುಚ್ಚಿ ಎಂದು ಕರೆವವರು ಹುಚ್ಚರು ಎಂಬ ತೀರ್ಮಾನ ಮೂಡಿಬರುತ್ತದೆ.

ಜನರು ಆಕೆಯನ್ನು ಹುಚ್ಚಿಯೆಂದೇ ಗುರುತಿಸಿದ್ದರು. ಆದರೆ ಕಥೆಗಾರರು ಹಾಗೆ ತಿಳಿಯದೆ ಹಳ್ಳಿಯ ಹಾಡುಗಳನ್ನು ಹಾಡಿಕೊಂಡು ತಿರುಗುವ ಆಕೆ ಹುಚ್ಚಿಯಲ್ಲ, ಆ ಹಾಡುಗಳನ್ನು ಕೇಳಿ ಮೆಚ್ಚದ ನಾವುಗಳು ಹುಚ್ಚರು ಎಂಬ ತೀರ್ಮಾನಕ್ಕೆ ಬರುತ್ತಾರೆ.

ಪುಟ್ಟ ಸನ್ನಿವೇಶದಲ್ಲಿ ಹೃದಯ ಮುಟ್ಟುವಂತೆ ಚಿತ್ರಿಸಿರುವ ಚಿಕ್ಕ ಕಥೆಯೊಂದರೆ ಇದೇ. ಕೇವಲ ಇಪ್ಪತ್ತು ಮೂವತ್ತು ನಿಮಿಷಗಳಲ್ಲಿ ಆಗಿ ಹೋದ ಘಟನೆ ಇರಬಹುದು. ಜನ ಅವಳನ್ನು ಹುಚ್ಚಿ ಎಂದರು. ಅವರು ಹೇಳುವುದು ನಿಜವಿರಬಹುದೆಂದು ಶ್ರೀಯುತರಿಗು ಮೊದ ಮೊದಲು ನಂಬಿಕೆ. ಆಕೆಯನ್ನು ಕಂಡು ಮಾತನಾಡಿದಾಗ ಅವಳಲ್ಲ ನಾವೇ ಹುಚ್ಚರು ಎಂಬುದು ದೃಢಪಟ್ಟಿತು. ಬಾಳಿನಲ್ಲಿ ಬೇಸರಗೊಂಡು ಹಳ್ಳಿಯ ಹಾಡುಗಳನ್ನು ಹಾಡುವವರು ಹುಚ್ಚರೆಂದೇ ತಿಳಿಯುವವರೇ ಕಡೆಗೆ ಹುಚ್ಚರಾಗುವುದರಲ್ಲಿ ಸಂದೇಹವಿಲ್ಲ. ಆ ಹಾಡುಗಳಲ್ಲಿ ತಮ್ಮ ನೋವನ್ನು ತುಂಬಿಸಿಕೊಂಡು ಅರ್ಥಭರಿತವಾಗಿ ಹಾಡುತ್ತಾರೆ. ಅರ್ಥಮಾಡಿಕೊಳ್ಳುವ ಶಕ್ತಿ ಸಾಲದೆ ಅಥವ ಪ್ರಯತ್ನಿಸದೆ ಬಹುಬೇಗ ಅಂತಹ ತೀರ್ಮಾನಕ್ಕೆ ಬಂದು ಬಿಡುವುದು ಸ್ವಭಾವ. ಕೊನೆಗೆ ಅಂತಹ ತೀರ್ಮಾನ ತಪ್ಪು ಆಗುತ್ತದೆ.

ಶ್ರೀ ಎಚ್. ಎಲ್. ನಾಗೇಗೌಡರ 'ಕಂಡು ಕೇಳಿದ ಕಥೆಗಳು' ಅವರ ಮೊದಲ ಕಥಾ ಸಂಕಲನ. ಅಲ್ಲಲ್ಲಿ ಅವರ ಸ್ವವಿಷಯಗಳು ಬಂದಿವೆ. ಇವರಿಗಿರುವ ಪ್ರಕೃತಿ ಪ್ರೇಮ, ಪ್ರಕೃತಿಯನ್ನು ಅರ್ಥೈಸಿಕೊಂಡಿರುವ ಶಕ್ತಿಗಳನ್ನು ಈ ಸಣ್ಣ ಕಥೆಗಳಲ್ಲಿ ಸಂದರ್ಭಾನುಸಾರ ಬರುವ ಪ್ರಸಂಗಗಳಲ್ಲಿ ಕಾಣುತ್ತೇವೆ. ಕಥೆಗಳಲ್ಲಿ ಬರುವ ಈ ವಾಕ್ಯಗಳನ್ನು ಗಮನಿಸಬಹುದು.

'ಗಾಳಿ ಸೇವನೆಗಾಗಿ ಗದ್ದೆಯ ಬೈಲು ಕಡೆ ಹೊರಟೆ. ವಸಂತ ಆಗ ತಾನೇ ಕಾಲಿಡುತ್ತಿದ್ದ. ಹೊಂಗೆ, ಬೇವು, ಬೂರುಗ, ಅರಳೆ ಮುಂತಾದ ಮರಗಳಿಗೆ ಚೆಲುವಿತ್ತಿದ್ದ. ಅರಳಿ ಮರವಂತೂ ಪಡುಗಡೆಯ ಸೂರ್ಯನ ಕಿರಣಗಳಿಗೆ ಬಂಗಾರದ ಎಲೆಗಳನ್ನು ಬಿಟ್ಟ ಮರದಂತೆ ಥಳ ಥಳಿಸುತ್ತಿತ್ತು. ಚಿಗುರಿದ ಮರಗಳಲ್ಲಿ ಕುಳಿತ ಕೋಗಿಲೆಗಳು ಇನಿದಾಗಿ ಉಲಿಯುತ್ತಿದ್ದುವು....(ಪು. ೧) ತೀರಕ್ಕೆ ಹೋಗಿ ದಕ್ಷಿಣದಿಂದ ಉತ್ತರಕ್ಕೆ ನಡೆಯುತ್ತಿದ್ದ ನನಗೆ ಎಡಗಡೆಯಿಂದ ತೀಡುವ ಗಾಳಿ ಮತ್ತು ಅಲೆಗಳು ಅಪ್ಪಳಿಸುವ ಶಬ್ದ ಮತ್ತು ಬಲಗಡೆಗೆ ಅಂಕು ಡೊಂಕಾದ ತೀರದ ಉದ್ದಕ್ಕು ಬೆಳೆದು ನಿಂತು ಸಮುದ್ರದ ಕಡೆಗೆ ತಲೆಬಾಗಿ ತಮ್ಮ ಗೌರವ ಸೂಚಿಸುತ್ತಿವೆಯೋ ಎಂಬಂತೆ ಇರುವ ತೆಂಗಿನ ಮರಗಳ ನಂದನವನ.' (ಪು ೭೩).

ಸರ್ಕಾರದ ಉನ್ನತಾಧಿಕಾರಿಗಳಿಗೆ ಜನರು ನೀಡುತ್ತಿದ್ದ ಗೌರವ ಭಯ ಭಕ್ತಿ ಪೂರ್ವಕವಾದದ್ದು. ಅವರಿಗೆ ಸಲ್ಲುತ್ತಿದ್ದುದು ರಾಜಮರ್ಯಾದೆಯೇನೆಂಬುದು ಕಡಲು ತೀರದಲ್ಲಿ ಒಂದು ಸಂಜೆ (ಪುಟ. ೯೯–೬೯) ಯಲ್ಲಿದೆ. ಪಾನ ನಿರೋಧದ ಬಗ್ಗೆ ತಾಳಿರುವ ಸರ್ಕಾರದ ನೀತಿಯನ್ನು ಮೊಗವೀರನೊಬ್ಬ ತಪ್ಪೆಂದು ಕರೆದಿರುವ ರೀತಿ, ಕೊಡುವ ಕಾರಣ ಹೀಗಿದೆ :

'ಹೊತ್ತಿನಂತೆ ದೋಣಿ ಹತ್ತಿ, ಸಮುದ್ರದ ಮೇಲೆ ಮೈಮುರಿಯ ಹುಟ್ಟುಹಾಕಿ ಮೀನುಹಿಡಿದು ಮನೆಗೆ ಬಂದ ಮೊಗವೀರನಿಗೆ ಹೆಂಡಕ್ಕಿಂತ ಇನ್ನೇನು ಬೇಕು? ಒಂದೆರಡು ಲೋಟಾ ಹೆಂಡ ಕುಡಿದು, ಗಂಜಿ ಉಂಡು, ತಿಂಗಳು ಬೆಳಗಿನಲ್ಲಿ ಮರಳಿನ ಮೇಲೆ ಮಲಗಿದರೆ ಸ್ವರ್ಗವೇ ಕೈಗೆ ಸಿಕ್ಕಿದಂತೆ, 'ಸರ್ಕಾರ ಇದ ಕುಡೀಬಾರ್ದು ಅಂತ ಮಾಡಿದ್ದು ತಪ್ಪು ಸ್ವಾಮಿ. ಇದ ಕುಡೀದೆ ಹೋದ್ರೆ ನಾವು ಮೊಗವೀರರು. ಬದುಕೊಕಾಗುತ್ತಾ, ಹೇಳಿ. ಆಗೋದಿಲ್ಲ. ಏನು ತಿಂದ್ರೆ ತಾನೆ ಏನು ? ಏನು ಕುಡದ್ರೆ ತಾನೆ ಏನು ? ಹೆಂಡದ ಮುಂದೆ ಯಾವುದೂ ಇಲ್ಲ' (ಪು. ೭೬-೭೭). ಹಳ್ಳಿಯ ಉದ್ಧಾರದ ಬಗೆಗೆ ಸಿದ್ಧಣ್ಣನು ಸರ್ಕಾರದ ನೀತಿಯಲ್ಲಿ ಆಗುತ್ತಿರುವ ತಪ್ಪನ್ನು ಸುಟ್ಟಿ ತೋರಿಸಿದ್ದಾನೆ (ಪುಟ. ೧೪). ರೈತರ ಕೆಲಸಕ್ಕೆ ಎಷ್ಟು ಜನಿದ್ರೂ ಸಾಲ್ದು ಎಂದು ವಿವರಿಸುವುದನ್ನು ಒಪ್ಪಲೇ ಬೇಕಾಗುತ್ತದೆ (ಪು. ೧೧). ಮೋಸ, ಅನ್ಯಾಯಗಳೇ ಈ ಕಾಲದಲ್ಲಿ ಅಧಿಕವಾಗಿರುವಾಗ ಗ್ರಾಮೋದ್ಧಾರದ ಹೆಸರಿನಲ್ಲಿ ಹಣ ಲಪಟಾಯಿಸುವವರೇ ಜಾಸ್ತಿಯಾಗಿದ್ದಾರೆ. ಹಳ್ಳಿಗಳ ಉದ್ಧಾರಕ್ಕೆ ಪಟ್ಟಣ ಸೇರುವ ಮಕ್ಕಳು ವಿದ್ಯಾವಂತರಾಗಿ ಅಲ್ಲಿಯೇ ನೆಲಸಿ ಬಿಡುತ್ತಾರೆ. ಹಳ್ಳಿಗೆ ಬಂದಾಗ ತನ್ನ ಸಹವಾಸಿ ಹಾಗೂ ಹಿರಿಯರನ್ನು ಲೆಕ್ಕಿಸದೆ ಅವರನ್ನು ' ಹಳ್ಳಿ ಗಮಾರ್' ಎಂದು ಕರೆಯುತ್ತಾರೆ. ಕೈಗೆಲಸಗಳನ್ನು ನಂಬಿರುವವರ ಬಾಯಿಗೆ ಯಂತ್ರ ಸಾಮಾಗ್ರಿಗಳು ಬಂದು ಮಣ್ಣು ಬೀಳುತ್ತಿದೆ ಎಂಬ ಸಿದ್ಧಣ್ಣನ ಮಾತುಗಳಲ್ಲಿ ಅರ್ಥವಿಲ್ಲದೆ ಇಲ್ಲ.

ಈ ಕಥೆಗಳು ಕೆಲವು ಕಡೆಗಳಲ್ಲಿ ಹಾಸ್ಯವನ್ನುಣಿಸುತ್ತವೆ.

ಎಲೆ ಅಡಿಕೆ ಗಮ್ಮತ್ತು ಹೇಗಿರುತ್ತದೆಂಬುದನ್ನು ಲೇಖಕರು ಗುರುತಿಸಿದ್ದಾರೆ. ಗೋಟಡಕೆಯಾಗಿದ್ದರೆ ಇನ್ನೂ ಚೆನ್ನ. ಅಗಿದಾನ ನಾಲಗೆ ಒರಟಾಗುತ್ತದೆ. ಮಾತೂ ಅಷ್ಟೇ ಒರಟು. ಕಷ್ಟಪಟ್ಟು ಅರ್ಥಮಾಡಿಕೊಳ್ಳಬೇಕು. 'ಇಡಪ್ಪಾ ಇಡು. ಚೆನ್ನಾಗಿ ಓಡಪ್ಪ, ಣೇಣಾಡುವೆ. ಓಡಿ ಣಮ್ಮೂರಿಗೆ ಕೀರ್ಟಿ ಟ್ಯಾಡಪ್ಪಾ, ಗೌಡ್ರೂ ಬಾಳ ಕಟ್ಟಪಟ್ಟಾಡಪ್ಪಾ ಣಿಣ್ಣೋಸ್ಕಾಕೆ. ಒಳ್ಳೇಡೋಟ್ಟೇಳಿ ಹುಟ್ಟಿದ್ದೀ. ಒಳ್ಳೆ ಹೆಟಡಂ ಟ್ಯಾಡಪ್ಪಾ' (ಪು. ೧೫) ಮಿಾನು ಗುಂಡಿ ಕೈಗಳಿಗೆ ಕಚ್ಚಿದ್ದ ಕೊಂಡಿಗಳನ್ನು ಬಿಡಿಸ ಬೇಕೆಂದು ಆಚಾರಿಯ ಬಳಿಗೆ ಬಂದಾಗ ನಡೆದ ಸಂಭಾಷಣೆ ಸ್ವಾರಸ್ಯವಾಗಿದೆ. ಕಚ್ಚಿದ್ದ ಕೊಂಡಿಗಳನ್ನು ನೋಡಿ ಆಚಾರಿಯು 'ಇದ್ರಲ್ಲಿ ಯಾವೊಡವೆ ಮಾಡಿಸ್ಬೇಕು ಅಂತಾ ? ಅಸ್ಸೋ' ಎಂಬ ನುಡಿಯಿಂದಲೇ ಹಾಸ್ಯ ಆರಂಭ. ಮುಂದಿನ ಭಾಗವನ್ನು (ಪುಟ

೫೧–೫೩ ರಲ್ಲಿ) ಸಹೃದಯರು ಓದಿ ಆನಂದಿಸಬಹುದು. ಬೆಟ್ಟೇಗೌಡನ ಅವ್ಯವಹಾರ. ವ್ಯಾಪಾರ ಕಂಡು ತಂದೆ ಬುದ್ಧಿ ಹೇಳಿದ. "ಲೋ ಮಗಾ, ನೀರಿನ ಲಾಭ ಬ್ಯಾಡ ಕಣೋ, ಅದು ಪಾಪ. ಆ ದುಡ್ಡಿನಲ್ಲಿ ಒಂದು ತ್ವಾಟ ತೆಗೆದು ಧರ್ಮಕ್ಕೆ ಬುಡು ಅಂದರು ಅವರು ಹೇಳಿದಂತೆ ನಾನು ಐದು ಸಾವಿರ ರೂಪಾಯಿಗೆ ಒಂದು ಕೈತೋಟ ತೆಗೆದೆ. ಆದ್ರೆ ಧರ್ಮಕ್ಕೆ ಬುಡ್ಲಿಲ್ಲ, ಅದರ ಕಾಯಿ ನಾವೇ ಕೆಡವಿಕೋತ್ತಿದ್ದೊ" (ಪುಟ. ೬೩.) ಮೋಸದ ಬಗ್ಗೆ ಬೆಟ್ಟೇಗೌಡನ ಸಮಾಧಾನ "ಮೋಸ ಮಾಡಾಕೆ ಹೊರಟ್ರೆ ಮಿತಿ ಉಂಟೆ, ದೇವರು ? ಇಲ್ಲ. ಉಸುಬು ಮುಳ್ಳಿನಲಿ ಕಾಲಿಟ್ಟಂಗಾಯ್ತು-ದಿನಾ ದಿನಾ ಮೋಸ ಹೆಚ್ಚಾಯ್ತು ಒಂದೇ ಸಮಾಧಾನ, ನಾನೊಬ್ನೇ ಅಲ್ಲ ಮಾತ್ಮಾ ಇರೋನು ಲೋಕವೇ ಮಾಡ್ತದೆ ಅಂತ" (ಪುಟ ೬೩).

ಈ ಸಂಕಲನದಲ್ಲಿ ಸಮಯಕ್ಕನುಸಾರವಾಗಿ ಗಾದೆಗಳೂ ಪ್ರಯೋಗವಾಗಿವೆ. ವಿಧಿಯಿಲ್ಲದೆ ಸಾಲ ಹೆಚ್ಚಾದಾಗ ಸಾಲದ ಯೋಚನೆಯನ್ನೇ ಸಿದ್ಧಣ್ಣ ಬಿಟ್ಟುಬಿಟ್ಟಿದ್ದ. ಸಾಲದ ಬಗ್ಗೆ ಪ್ರಶ್ನಿಸಿದಾಗ 'ತಲೆ ಮುಳುಗಿದೋನಿಗೆ ಚಳಿಯೇನು ಮಳೆಯೇನು' ಎಂಬ ಗಾದೆಯುತ್ತರ. ಹಾಗೆಯೇ 'ಹುಟ್ಟಿಸಿದ ದೇವ್ರು ಹುಲ್ಲು ಮೇಯ್ಸಾಕಿಲ್ಲ' (ಪು–೮) ಅರಸನ ಹಂಗಿಲ್ಲ ದೆವ್ವದ ಕಾಟವಿಲ್ಲ (ಪು. ೯) ಸುಂಡಕೆ ಸಿರಿ ಬಂದು ಗಂಜಿ ಗುಂಡೀಲಿ ಬಿತ್ತಂತೆ (ಪು. ೧೨) ಪಟ್ನ ಸೂರೆಯಾದ ಮೇಲೆ ದಿಡ್ಡಿ ಬಾಗ್ಲ ಹಾಕ್ಕೊಂಡಂಗೆ (ಪು. ೧೪) ಬಡವನ ಕ್ವಾಪ ದವಡಿಗೆ ಮೂಲ (ಪುಟ. ೧೫) ಮೂಸೆ ಬಂದವನಿಗೆ ದೇಶ ಕಾಣದು (ಪು. ೨೯). ಖಾರ ಅರೆದ ಮೇಲೆ ಅಡುಗೆಯಾಯ್ತು, ತಾಲಿ ಕಟ್ಟಿದ ಮೇಲೆ ಮದುವೆಯಾಯ್ತು (ಪು. ೫೭) ಒಳ್ಳೇರ ಮಾನ ಹಳ್ಳಿಲ್ಹೋಯ್ತು (ಪು ೨೫)

ಕಥೆಗಾರರು ಬಳಸುವ ಭಾಷೆ ತಿಳಿಯಾಗಿದೆ. ಹಳ್ಳಿಯವರ ಮಾತಿನಲ್ಲಿಯೇ ಕಥೆಗಳನ್ನು ವಿವರಿಸಿದ್ದಾರೆ ಕೊನೆಯ ಎರಡು ಕಥೆಗಳನ್ನು ಬಿಟ್ಟರೆ ಸಿದ್ಧಣ್ಣನ ಸಂಸಾರದ ಕಥೆಯಂತೂ ಕಣ್ಣಿಗೆ ಕಟ್ಟುವಂತೆ ನಿರೂಪಿಸಲಾಗಿದೆ, ಸೋಟೆ, ಪಟ್ಟಿ, ವಾರು ಚೌಟಿ, ನಡುಪಟ್ಟಿ, ಲಪಾಜಮೆ, ನಾಟಿ, ಕಳೆ, ಮಂಕರಿ, ಕವೆ, ಬೊಗಸೆ, ಗತ್ತು, ಓಮ್ಮಣ್ಣೆ, ಪಜ್ಜಿಗೆ, ಎಡವಟ್ಟು, ಚುಳ್ಳಿಸು, ಸಟಾ, ತರಕಟಾಲು, ಚಂದಚಾರ, ತಟಪಟ ಇತ್ಯಾದಿ ಪದಗಳು ಕಥೆಗಳಲ್ಲಿ ಹುದುಗಿದ್ದು ಕಂಪನ್ನು ಹೊರಸೂಸುತ್ತಿವೆ. ಇವೆಲ್ಲ ಪದಗಳು ಹಳ್ಳಿಯ ಜನ ಸಾಮಾನ್ಯರಲ್ಲಿ ದಿನ ಬಳಕೆಯಲ್ಲಿವೆ. ಲೇಖಕರು ಯಾವ ಘಟನೆಯನ್ನಾದರೂ ಮನಂಬುಗುವಂತೆ ಚಿತ್ರಿಸಬಲ್ಲರೆಂಬುದನ್ನು ಕಥೆಗಳನ್ನು ಓದಿದವರಿಗೆ ವೇದ್ಯವಾಗುತ್ತದೆ. ಇವರ ಭಾಷೆಯಾದರೋ ಸರಳ ಹಾಗೂ ಕಾವ್ಯಮಯ. ಉದಾಹರಣೆಗೆ ಕೊನೆಯ ಕಥೆಯಲ್ಲಿ ಹುಚ್ಚಿ ಬಹು ಸೊಗಸಾದ ಧಾಟಿಯಲ್ಲಿ ಹಾಡಿದಾಗ— 'ಅಲ್ಲೊಂದು ಮರದ ಮೇಲೆ ಕುಳಿತಿದ್ದ ಗಿಳಿಗಳ ಹಸಿರು ಹಿಂಡು ಹಾರಿತು. ಧನಿ, ವಿಧಾನ ಸೌಧದ ಕಡೆ ಸಾಗಿತು. ಬಹುಭಾಗ ಬೆಂಗಳೂರು ಇನ್ನೂ ಮಲಗಿತ್ತು. ಆಕಾಶದ ಬಣ್ಣ ಬಣ್ಣದ ಚೆಲ್ಲಾಟ ನಡೆದಿತ್ತು. ಗಾಳಿಯಲ್ಲಿ ಹಾಡಿನ ಸವಿ ಸೊಲ್ಲು ತೇಲಿತ್ತು. ನೆಲದ ಮೇಲೆ

ಕುಣಿತದ ಮಾಟ ಸಾಗಿತ್ತು' (ಪುಟ. ೯೫) ಈ ವಾಕ್ಯಗಳು ಗದ್ಯವೇ–ಪದ್ಯವೇ ? ಸನ್ನಿವೇಶವನ್ನನುಸರಿಸಿ ಹೊರ ಹೊಮ್ಮಿದ ಭಾವಗೀತೆಯೆಂದೇ ಭಾವಿಸಬೇಕಷ್ಟೆ. ಒಟ್ಟಿನಲ್ಲಿ ಇಲ್ಲಿರುವ ಕಥೆಗಳು ಸಮಾಜದಲ್ಲಿ ಆಗುತ್ತಿರುವ ಅನ್ಯಾಯಗಳನ್ನು ತಡೆಗಟ್ಟಿ ಅನೇಕ ಸುಧಾರಣ ಕಾರ್ಯಗಳನ್ನು ಸಂಬಂಧಿಸಿದವರು ತೆಗೆದು ಕೊಳ್ಳಬೇಕಾದುದು ಅತ್ಯಗತ್ಯವೆಂದು ನಿರ್ದೇಶಿಸುತ್ತವೆ.

ಪ್ರವಾಸಿ ಕಂಡ ಇಂಡಿಯಾ–ಒಂದು

ಎಚ್. ಎಂ. ನಾಗರಾಜರಾವ್

ಯಾವುದೇ ಒಂದು ದೇಶದ ಇತಿಹಾಸದ – ಅದು ರಾಜಕೀಯವಾಗಿರಲಿ ಅಥವಾ ಸಾಂಸ್ಕೃತಿಕವಾಗಿರಲಿ—ಪರಿಚಯಕ್ಕೆ, ಪುನರ್‍ರಚನೆಗೆ ದೊರೆಯುವ ಆಕರಗಳು ಸ್ಥೂಲವಾಗಿ ಎರಡು ಬಗೆಯವು ; ಬರೆಹಗಳು ಮತ್ತು ಪುರಾತತ್ತ್ವ ಆಧಾರಗಳು. ಬರೆಹಗಳನ್ನು ಮತ್ತೆ ಎರಡು ವಿಧಗಳನ್ನಾಗಿ ವರ್ಗೀಕರಿಸಬಹುದು. ದೇಶೀಯ ಬರೆಹಗಳು ಹಾಗೂ ವಿದೇಶೀಯ ಬರೆಹಗಳು, ಸಹಜವಾಗಿಯೆ ಭಾರತದ ಇತಿಹಾಸದ ಬಗೆಗೂ ಈ ವಿಂಗಡಣೆ ಅನ್ವಯವಾಗುತ್ತದೆ. ವಿದೇಶೀ ಪ್ರವಾಸಿಗಳು ವಿವಿಧ ಉದ್ದೇಶಗಳಿಂದ ಈ ದೇಶವನ್ನು ಸಂದರ್ಶಿಸಿದ್ದಾರೆ. ಅವರಿಗೆ ಇದು ಬುದ್ಧನ ನಾಡಾಗಿ, ಕೌತುಕದ ಬೀಡಾಗಿ, ಅಮಾನುಷ–ವಿಚಿತ್ರವೆನಿಸುವ ಪದ್ಧತಿಗಳ ತವರಾಗಿ; ಅಪಾರ ಐಶ್ವರ್ಯಗಳ ತಾಣವಾಗಿ ಕಾಣಿಸಿದೆ. ಹೀಗಾಗಿ ಅವರ ಬರೆಹಗಳಲ್ಲಿ ಅವರು ಕಂಡದ್ದು ಕೇಳಿದ್ದು ಎಲ್ಲವೂ ಸೇರಿ ಈ ದೇಶದ ಬಗ್ಗೆ ಸ್ವಾರಸ್ಯಕರ, ಕೆಲವು ಸಲ ಹಾಸ್ಯಾಸ್ಪದವೆನಿಸುವ ಚಿತ್ರಣವಿದೆ, ನಿರೂಪಣೆಯಿದೆ. ಎಲ್ಲವನ್ನೂ ಅವರು ವಸ್ತುನಿಷ್ಠವಾಗಿಯೇ ನಿರೂಪಿಸಿದ್ದಾರೆಂದು ಹೇಳಲು ಸಾಧ್ಯವಿಲ್ಲ. ಅವರು ಬರೆದದ್ದೆಲ್ಲವನ್ನೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸತ್ಯ–ಮಿಥ್ಯೆ ಬೆರೆತುಹೋಗಿವೆ. ಇವನ್ನು ಬೇರ್ಪಡಿಸಿ ಅವರ ಬರೆಹಗಳಿಂದ ಗ್ರಾಹ್ಯವಾದದ್ದನ್ನು ಗಮನೀಯವಾದುದ್ದನ್ನು ಆರಿಸಿಕೊಳ್ಳಬೇಕಾಗುತ್ತದೆ. ಈ ಅಂಶವನ್ನು ಸದಾ ಗಮನದಲ್ಲಿರಿಸಿಕೊಂಡೇ ಪ್ರವಾಸಿಗಳ ವೃತ್ತಾಂತ–ವರ್ಣನೆಗಳನ್ನು ಪರಿಶೀಲಿಸಬೇಕಾಗುತ್ತದೆ. ಶ್ರೀಯುತ ಎಚ್.ಎಲ್. ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ' ಗ್ರಂಥ ಸಂಪುಟಗಳಲ್ಲಿನ ಮೊದಲ ಸಂಪುಟದಲ್ಲಿರುವ ಪ್ರವಾಸಿಗಳ ವರ್ಣನೆಗಳ ಒಂದು ಸಾಮಾನ್ಯ ಸಮೀಕ್ಷೆಯನ್ನು ನಡೆಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಸುಮಾರು ಐದುನೂರು ಪುಟಗಳಷ್ಟು ಗಾತ್ರದ ಪ್ರಸ್ತುತ ಸಂಪುಟದಲ್ಲಿ ಕ್ರಿ.ಪೂ. 5ನೆಯ ಶತಮಾನದಿಂದ ಕ್ರಿ.ಶ. 14ನೆಯ ಶತಮಾನದವರೆಗಿನ ಒಟ್ಟು 38 ಗ್ರೀಕ್, ರೋಮನ್, ಚೀನಾ ಮತ್ತು ಅರಬ್ ಪ್ರವಾಸಿಗಳ, ಭೂಗೋಳಶಾಸ್ತ್ರಜ್ಞರ ಮತ್ತು ಇತಿಹಾಸಕಾರರ ಭಾರತದ ಬಗೆಗಿನ ವರ್ಣನೆ–ವೃತ್ತಾಂತಗಳನ್ನು ಅನುವಾದಿಸಿಕೊಟ್ಟಿದೆ. ಇಲ್ಲಿನ ಮರಗಿಡಗಳ ಪಶುಪಕ್ಷಿಗಳ, ವಿವಿಧ ಜನಾಂಗಗಳ, ಆಚಾರ–ವಿಚಾರಗಳ ವರ್ಣನೆಗಳು ನಮಗೆ ಈ ಸಂಪುಟದಲ್ಲಿ ಕಾಣಸಿಗುತ್ತವೆ. ಈ ಪ್ರವಾಸಿಗಳ ಬರೆಹಗಳಲ್ಲಿ ಕಂಡುಬರುವ ಸ್ವಾರಸ್ಯಕರ, ವಿಶಿಷ್ಟ ವಿಷಯಗಳ ಕೆಲವೇ ಕೆಲವು ಮಾದರಿಗಳನ್ನು ಮಾತ್ರ ಇಲ್ಲಿ ಕೊಡಬಹುದು.

ಭಾರತದಲ್ಲಿ ಹಣ್ಣುಗಳ ಬದಲು 'ಉಣ್ಣೆ' (ಮರಪತ್ತಿ) ಕೊಡುವ ಕೆಲವು ಕಾಡು ಮರಗಳಿವೆ ; ಎಣ್ಣೆಕೊಡುವ ಕೊಳವಿದೆ ; ಜೇನುತುಪ್ಪ ಹರಿಯುವ ಕಲ್ಲುಬಂಡೆ ಇದೆ ; ಅಂಬರ್ ಒಂದನ್ನು ಬಿಟ್ಟು ಚಿನ್ನಬೆಳ್ಳಿ, ತಾಮ್ರ ಮುಂತಾದ ಲೋಹಗಳನ್ನೂ ಕುರಿಮರಿ ಹಕ್ಕಿ ಮುಂತಾದ ಪ್ರಾಣಿಗಳನ್ನೂ ಆಕರ್ಷಿಸಬಲ್ಲ, ನೀರನ್ನೂ ಹೆಪ್ಪುಗೊಳಿಸುವಂಥ 'ಪರೇಬಾನ್' ಎಂಬ ಮರಗಳಿವೆ ; ಬೃಹದ್ಗಾತ್ರದ ಈಚಲುಮರಗಳಿವೆ (ತೆಂಗು) ; ಮಾಡಿದ ಅಪರಾಧಗಳನ್ನೆಲ್ಲ ಒದರಿ ಬಹಿರಂಗಗೊಳಿಸುವ ಮಹಿಮೆಯುಳ್ಳ ನೀರಭಾವಿ ಇವೆ ; ಬೆಂಕಿ ಇಲ್ಲದೆ ಸುರಿದರೂ ಧಗ್ ಎಂದು ಹತ್ತಿಕೊಂಡು ಉರಿಯುವ (ಪ್ರಾಣಿಯೊಂದರ ಕೊಬ್ಬಿನಿಂದ ತೆಗೆದ) ಎಣ್ಣೆ ದೊರೆಯುತ್ತದೆ ; ಇಬ್ಬರು ತಬ್ಬುವುದಕ್ಕಾಗದಷ್ಟು ದಪ್ಪವಿರುವ, ಗಂಡು ಜಾತಿ ಮತ್ತು ಹೆಣ್ಣು ಜಾತಿ ಎಂದು ವರ್ಗೀಕರಿಸಬಹುದಾದ, ಬಿದಿರು ಇವೆ ; ತುಂಬ ಸುವಾಸನೆಯುಳ್ಳ, ನೀರಿಗಿಂತ ಮಂದವಾದ ರಸವನ್ನು ತೊಟ್ಟು ತೊಟ್ಟಾಗಿ ಜಿನುಗಿಸುವ 'ಕರ್ಪಿಯಾನ್' (ದಾಲ್ಚಿನ್ನಿ) ಮರಗಳಿವೆ ; ಎಸೆದ ಎಲ್ಲ ವಸ್ತುಗಳನ್ನೂ ತಳಮುಟ್ಟಿಸುವ ಸಿಲಸ್ ಸರೋವರ ಅಥವಾ ಸಿಲಾಸ್ ನದಿ ಇದೆ ; ಚರ್ಮರೋಗಗಳನ್ನು ನಿವಾರಿಸುವ ಸಿಹಿ ನೀರಿನ ಭಾವಿ ಇದೆ ; ಜೇನುತುಪ್ಪ ಕೊಡುವ ಒಂದು ತರಹದ ಜೊಂಡು (ಕಬ್ಬು) ಬೆಳೆಯುತ್ತದೆ ; ಅನೇಕ ಕಂಬಗಳುಳ್ಳ ಲತಾ ಮಂಟಪದಂತೆ ಕಂಗೊಳಿಸುವ, ಐವತ್ತರಿಂದ ನಾನೂರು ಕುದುರೆಗಳು ಒಟ್ಟಿಗೆ ದಣಿವಾರಿಸಿ ಕೊಳ್ಳುವಷ್ಟು ನೆರಳು ನೀಡುವ ಮರ (ಆಲ)ಗಳಿವೆ ; ಮೆಣಸನ್ನು ಹೋಲುವ, ಆದರೆ ಖಾರವಾದ, ಮತ್ತೊಂದು ಪದಾರ್ಥ ಬೆಳೆಯುವ ಕುರುಚಲುಗಿಡ (ಮೆಣಸಿನಗಿಡ)ಗಳಿವೆ; ತಿನ್ನಲು ರುಚಿಯಾದ ಕಮಲಗಳು ದೊರೆಯುತ್ತವೆ ! ಸುವಾಸನೆಯಿಂದ ಕೂಡಿದ ಮತ್ತು ಬಹಳ ರುಚಿಯಾದ 'ಶ್ರೀಮಂತರ ಅಕ್ಕಿ' ಎಂದು ಕರೆಯಲಾಗುವ ದಪ್ಪ ಭತ್ತ ಬೆಳೆಯುತ್ತದೆ ; ಮಾವು, ಬಾಳೆ, ಹಲಕ್ಕಿ, ದಾಳಿಂಬೆ, ಭತ್ತ, 'ಬೊಸ್ಪರಮ್', ಎಳ್ಳು, ಜೋಳ, ಗೋಧಿ ಮುಂತಾದವು ಇಲ್ಲಿನ ಇತರ ಕೆಲವು ಬೆಳೆಗಳು ; ಇಲ್ಲಿ ಕರಗಿದ ಚಿನ್ನವಿರುವ ಬಾವಿ ಇದೆ. ಚಿನ್ನ, ಬೆಳ್ಳಿ, ವಜ್ರ, ಪಚ್ಚೆ, ಗೋಮೇಧಿಕ ಮುಂತಾದವೆಲ್ಲ ಈ ದೇಶದಲ್ಲಿ ಸಮೃದ್ಧವಾಗಿ ದೊರೆಯುತ್ತವೆ.

ಈ ದೇಶದ ಪಶುಪಕ್ಷಿಗಳ ವರ್ಣನೆಗಳೂ ಪ್ರವಾಸಿಗಳ ಬರೆಹಗಳಲ್ಲಿ ಕಾಣಸಿಗುತ್ತವೆ. ಹೆಚ್ಚಿನವರು ಭಾರತವನ್ನು ಆನೆಗಳ ಬೀಡಾಗಿ ಗುರುತಿಸಿದ್ದಾರೆ. ಪ್ರತಿಯೊಬ್ಬ ರಾಜನನ್ನು ಕುರಿತು ಹೇಳುವಾಗಲೂ ಅವನ ಸೈನ್ಯದಲ್ಲಿ ಆನೆಗಳಿದ್ದ ವಿಚಾರವನ್ನು ಹೇಳಿಯೇ ಮುಂದೆ ಸಾಗುತ್ತಾರೆ. ಇತರ ಪಶುಪಕ್ಷಿಗಳ ವಿವರಣೆಗಳನ್ನೂ ಗಮನಿಸಬಹುದು : ಭಾರತದಲ್ಲಿ ನಾಯಿಗಿಂತ ಚಿಕ್ಕದಾದ ಆದರೆ ನರಿಗಿಂತ ದೊಡ್ಡದಾದ, ನೆಲವನ್ನು ಕೊರೆದು ಚಿನ್ನಬೆರೆತ ಮರಳನ್ನು ಹೊರಗಡೆ ಗುಡ್ಡೆಹಾಕುವ, ಜನರನ್ನು ಕಂಡರೆ ವೇಗವಾಗಿ ಅಟ್ಟಿಸಿಕೊಂಡು ಹೋಗಿ ಸಾಯಿಸುವ, ಇರುವೆಗಳಿವೆ ; ಮೊಲ ಮತ್ತು ನರಿಗಳನ್ನು ಬೇಟೆಯಾಡಲು ನೆರವಾಗುವ ಡೊಂಬಕಾಗೆ. ಡೇಗೆ, ಕಾಗೆ ಮತ್ತು

ರಣಹದ್ದುಗಳಿವೆ : ಹಗಲು ನೀರಿನೊಳಗೆ ಮುಳುಗಿದ್ದು ರಾತ್ರಿ ಹೊತ್ತು ದಡಕ್ಕೆ ಬಂದು ದನ, ಒಂಟೆ, ಮುಂತಾದ ಸಿಕ್ಕಿದ ಪ್ರಾಣಿಗಳನ್ನು ಹಿಡಿದು ನುಂಗುವ ಏಳು ಮೊಳ ಉದ್ದದ 'ಸ್ಕೋಲೆಕ್ಸ್' ಎಂಬ ಪ್ರಾಣಿ (ಮೊಸಳೆ ?)ಗಳಿವೆ ; ನಾಲ್ಕು ಮೊಳ ಉದ್ದದ ಬಾಲವುಳ್ಳ ಕೋತಿಗಳೂ ಭಾರಿಗಾತ್ರದ ಹುಂಜಗಳೂ ಕಲಿಸಿದರೆ ಮಾತನಾಡಬಲ್ಲ ಕೆಂಪು ಕೊಕ್ಕಿನ ಗಿಣಿಗಳೂ ಇವೆ.

ಮನುಷ್ಯನ ಮುಖದಂಥ ಮುಖವುಳ್ಳ, ಸಿಂಹದಷ್ಟು ಭಾರಿಯಾದ, ಮೂರು ಸಾಲು ಹಲ್ಲುಗಳುಳ್ಳ, ರಕ್ತಸಿಂಧೂರಬಣ್ಣದ, ಒಂದು ಮೊಳದಷ್ಟು ಉದ್ದದ ಬಾಲವಿರುವ 'ಮರ್ತಿಖೋರಾ' ಎಂಬ ಪ್ರಾಣಿ ಈ ದೇಶದಲ್ಲಿದೆ. ಇದರ ಬಾಲದಲ್ಲಿ ಚೇಳಿಗಿರುವಂತೆ ಒಂದು ಅಡಿ ಉದ್ದದ ಕೊಂಡಿಗಳಿವೆ. ಈ ಕೊಂಡಿಗಳನ್ನು ಬಾಣಬಿಟ್ಟಂತೆ ನೂರಡಿಯ ವರೆಗೂ ಎಸೆಯಬಲ್ಲ ಈ ಪ್ರಾಣಿಯ ತಲೆಯ ಮೇಲೂ ಒಂದು ಕೊಂಡಿ ಇದೆ. ಇದು ಕಚ್ಚಿದರೆ ಸಾವು ಖಂಡಿತ. ಜಿಂಕೆಯಷ್ಟು ವೇಗವಾಗಿ ಓಡಬಲ್ಲ ಇದು ಮನುಷ್ಯರನ್ನೂ ಹಿಡಿದು ತಿನ್ನುತ್ತದೆ. ಈ ವರ್ಣನೆಯಲ್ಲಿ ಕೆಲವಂಶ ಹುಲಿಗೆ ಅನ್ವಯವಾದರೆ ಮತ್ತೆ ಕೆಲವಂಶ ಮುಳ್ಳುಹಂದಿಗೆ ಅನ್ವಯವಾಗುತ್ತದೆ. ತನ್ನ ಹಿಕ್ಕೆ ಯಾರಿಗೂ ಸಿಕ್ಕದಿರಲೆಂದು ಅದನ್ನು ನೆಲದಲ್ಲಿ ಹೂಳುವ 'ದಿಕೈರಾನ್' ಎಂಬ ಹಕ್ಕಿ ಇಂಡಿಯಾದಲ್ಲಿದೆ. ಅದರ ಹಿಕ್ಕೆ ಪ್ರಜ್ಞೆತಪ್ಪಿಸುತ್ತದೆ. ಸುಖವಾದ ಸಾವನ್ನು ಬಯಸುವವರು ಇದನ್ನು ತೆಗೆದುಕೊಳ್ಳಬಹುದು.

ಗೇಣುದ್ದದ, ಕಡುಕೆಂಪಿನ ಬಣ್ಣದ, ಹಲ್ಲಿಲ್ಲದ ಹಾವುಗಳು ಇಲ್ಲಿವೆ. ಇವುಗಳ ತಲೆ ಮಾತ್ರ ಬೆಳ್ಳಗಿರುತ್ತದೆ. ಇವು ಕಚ್ಚುವುದಿಲ್ಲ. ಆದರೆ ಇದರ ವಿಷ ಶರೀರದ ಮೇಲೆ ಬಿದ್ದರೆ ಆ ಭಾಗ ಕೊಳೆತುಹೋಗುತ್ತದೆ. ಇದು ಕೊಳಕುಮಂಡಲ ಇರಬಹುದೇನೋ. ಹಾಗೆಯೇ ರೆಕ್ಕೆ ಇರುವ, ರಾತ್ರಿಹೊತ್ತು ಹಾರಾಡುವ ಎರಡು ಮೊಳ ಉದ್ದದ ಹಾವುಗಳ ಮಲಮೂತ್ರವೇನಾದರೂ ಚರ್ಮದ ಮೇಲೆ ಬಿದ್ದರೆ ಚರ್ಮಸುಟ್ಟು ಹುಣ್ಣಾಗುತ್ತದೆ. 70 ಮೊಳ ಉದ್ದದ ಗುರಾಣಿಯಷ್ಟು ದುಂಡಗಿನ ಕಣ್ಣುಳ್ಳ ಹಾವು, 244 ಅಡಿ ಉದ್ದ 120 ಅಡಿ ಅಗಲದ ತಿಮಿಂಗಿಲ, 200 ಮೊಳ ಉದ್ದದ ಶಾರ್ಕ್ ಮೀನು, 300 ಅಡಿ ಉದ್ದದ ಹಾವು ಮೀನು, 80-100 ಮೊಳ ಉದ್ದದ ಹಾವುಗಳು ಇಲ್ಲಿವೆ. ಹಾಗೆಯೇ ಭಾರೀ ಆಮೆ, ತಿಮಿಂಗಿಲ, ಮಾತನಾಡಬಲ್ಲ ಗಿಳಿ-ನವಿಲುಗಳು, ರೆಕ್ಕೆಯ ಚೇಳು, ಬೇಟೆನಾಯಿ, ಜಿಂಕೆಗಳನ್ನೂ ಎತ್ತುಗಳನ್ನೂ ನುಂಗಬಲ್ಲ ಹಾವುಗಳು, ಘೇಂಡಾಮೃಗ, ಜಿಂಕೆ, ಒಂಟೆ, ಕುದುರೆ, ಕತ್ತೆ, ಕುರಿ, ನಾಯಿ, ಕಾಡೆತ್ತು, ಕಾಡುಕೋಣ, ಚಿರತೆ, ಸಿಂಹ, ಮಧುರ ಕಂಠದಿಂದ ಹಾಡುವ ಓರಿಯನ್ ಹಕ್ಕಿ, ರಣಹದ್ದಿಗಿಂತ ಭಾರಿಯಾದ ಕಪುಜಗಹಕ್ಕಿ, ತೋಳ, ಕಪ್ಪುಚಿರತೆ ಮುಂತಾದ ಪ್ರಾಣಿಗಳು ಈ ದೇಶದಲ್ಲಿವೆ. ಕಸ್ತೂರಿಮೃಗವನ್ನು ವರ್ಣಿಸಿರುವುದೂ ಕಂಡುಬರುತ್ತದೆ.

ಚಮರೀ ಮೃಗದ ವಿವರಣೆ ಹೀಗಿದೆ : ಇದು ಕುದುರೆಗಿಂತ ಎರಡು ಪಟ್ಟು

ದೊಡ್ಡದಾದ ಪ್ರಾಣಿ. ಇದರ ಬಾಲದ ಕೂದಲು ತುಂಬ ನುಣುಪು. ಇದರಿಂದ ಚಾಫಾ ಎಂಬ ಚೌರಿಗಳನ್ನು ಮಾಡುತ್ತಾರೆ. ಇಂಡಿಯಾದ ಸ್ತ್ರೀಯರಿಗೆ ಈ ಚೌರಿ ಬಹಳ ಇಷ್ಟ. ಬಾಲವನ್ನು ಪೊದೆಯಲ್ಲಿ ಬಚ್ಚಿಟ್ಟುಕೊಂಡು ಹಿಡಿಯಲು ಬಂದವರನ್ನು ದುರುಗುಟ್ಟಿಕೊಂಡು ನೋಡುತ್ತಾ ನಿಂತುಕೊಳ್ಳುವ ಸಾಧು ಸ್ವಭಾವದ ಪ್ರಾಣಿ ಇದು. ಅಕಸ್ಮಾತ್ ತನ್ನ ಬಾಲ ಮರಗಿಡಗಳಿಗೆ ಸಿಕ್ಕಿಕೊಂಡರೆ ಬಿಡಿಸಿಕೊಳ್ಳಲು ಪ್ರಯತ್ನ ಪಡದೆ ಸುಮ್ಮನೆ ನಿಂತುಬಿಡುತ್ತದೆ. ಆಗ ಬೇಟೆಗಾರರು ಬಂದು ಇದರ ಬಾಲವನ್ನು ಕತ್ತರಿಸಿಕೊಂಡು ಹೋಗುತ್ತಾರೆ. ಮೃಗವು ಮೋಟು ಬಾಲ ಅಲ್ಲಾಡಿಸುತ್ತಾ ಹೊರಟುಹೋಗುತ್ತದೆ.

ಇಲ್ಲಿರುವ ಪಾರಿವಾಳದಂಥ ಒಂದು ಪಕ್ಷಿಗೆ ವಿಷ ಬೆರಸಿದ ಆಹಾರವನ್ನು ತಿನ್ನಿಸಿದರೆ ಅದರ ಕಣ್ಣಿನಿಂದ ಕಣ್ಣೀರು ಹರಿದು ಕಲ್ಲಾಗುತ್ತದೆ. ಆ ಕಲ್ಲನ್ನು ಒಡೆದು ಪುಡಿಮಾಡಿ ಗಾಯಕ್ಕೆ ಹಚ್ಚಿದರೆ ಗಾಯ ವಾಸಿಯಾಗುತ್ತದೆ. ಈ ಪಕ್ಷಿ ಬೇರೆಲ್ಲೂ ಬದುಕುವುದಿಲ್ಲ.

ಇಲ್ಲಿನ ಮರಗಿಡಗಳೂ ಪಶುಪಕ್ಷಿಗಳೂ ವಿಚಿತ್ರ ಸೃಷ್ಟಿಗಳೆಂದು ವಿದೇಶೀ ಪ್ರವಾಸಿಗರಿಗೆ ತೋರಿದ ಮೇಲೆ ಇಲ್ಲಿನ ಜನಾಂಗಗಳೂ, ಆಚಾರ ವಿಚಾರಗಳೂ ಕೌತುಕವನ್ನುಂಟುಮಾಡಿದ್ದರಲ್ಲಿ ಆಶ್ಚರ್ಯವೇನೂ ಕಾಣುವುದಿಲ್ಲ. ತೀರಾ ವ್ಯಾಪಕವಾದ ಈ ಅಂಶಗಳನ್ನು ಸಂಗ್ರಹಿಸಿಕೊಡುವುದು ತುಂಬ ಕಷ್ಟ. ಆದ್ದರಿಂದ ಇಲ್ಲಿ ಕೊಟ್ಟಿರುವ ಕೆಲವು ನಿದರ್ಶನಗಳ ಜಾಡಿನಲ್ಲೇ ಅವರ ವಿವರಣೆಗಳಿವೆ ಎಂದು ಹೇಳಿ ಕೈಬಿಡುವುದುಚಿತ : ಶರೀರ ವ್ಯರ್ಥವಾಗಿರಬಾರದೆಂದು ಕಾಯಿಲೆ ಬಂದವರನ್ನು ಕೊಂದು ತಿನ್ನುವ 'ಪತೀನ' ಎಂಬ ಜನಾಂಗವಿಲ್ಲಿದೆ ; ಯಾವ ಪ್ರಾಣಿಯನ್ನೂ ಕೊಲ್ಲದ ಗೆಡ್ಡೆ ಗೆಣಸುಗಳನ್ನು ತಿಂದು ಜೀವಿಸುವ ಜನಾಂಗಗಳೂ ಇಲ್ಲಿವೆ.

'ಕೈನೊಕೆಫಲಾಯ್ಸ್' ಎಂಬ ಜನ ಗುಹೆಗಳಲ್ಲಿ ವಾಸಿಸುತ್ತಾರೆ ; ಇವರು ಬೇಟೆಯಾಡಿ ಬದುಕುತ್ತಾರೆ. ಇವರ ಹೆಂಗಸರು ಮುಟ್ಟಾದಾಗ ಮಾತ್ರ ಸ್ನಾನ ಮಾಡುತ್ತಾರೆ. ಗಂಡಸರು ಸ್ನಾನ ಮಾಡುವುದೇ ಇಲ್ಲ. ಕೈಗಳನ್ನು ಮಾತ್ರ ತೊಳೆದು ಕೊಳ್ಳುತ್ತಾರೆ. ನಾಯಿಗಳಂತೆ ಗಂಡು ಹೆಣ್ಣೆಗೆಲ್ಲ ಗುದಸ್ಥಾನದ ಬಳಿ ಬಾಲವಿರುತ್ತದೆ. ನೂರೆಪ್ಪತ್ತರಿಂದ ಇನ್ನೂರು ವರ್ಷಗಳ ಕಾಲ ಬದುಕುವ ಈ ಜನ ನ್ಯಾಯಪರರು. 'ಪಂಡೋರೆ' ಎಂಬ ಜನ ಇನ್ನೂರು ವರ್ಷಗಳ ತನಕ ಬದುಕುತ್ತಾರೆ. ನಲವತ್ತು ವರ್ಷಗಳಿಗಿಂತ ಹೆಚ್ಚಾಗಿ ಬದುಕದ ಇನ್ನೊಂದು ಜನಾಂಗಕ್ಕೆ ಸೇರಿದ ಹೆಂಗಸರು ತಮ್ಮ ಜೀವಮಾನದಲ್ಲಿ ಒಂದು ಸಲ ಮಾತ್ರ ಗರ್ಭಿಣಿಯರಾಗುತ್ತಾರೆ. ತಲೆಗೂದಲು ಮೊದಲು ಬೆಳ್ಳಗಿದ್ದು ವಯಸ್ಸಾದಂತೆ ಕಪ್ಪಗಾಗುತ್ತ ಹೋಗುತ್ತದೆ. ಇವರ ಕೈಕಾಲುಗಳಲ್ಲಿ ಎಂಟೆಂಟು ಬೆರಳುಗಳು. ಇವರ ಕಿವಿಗಳು ಎಷ್ಟು ಉದ್ದವಾಗಿವೆ ಯೆಂದರೆ ಅವು ಭುಜದ ಮೇಲೆ ಇಳಿಯುಬಿದ್ದು ಮೊಳಕೈವರೆಗೂ ಬರುತ್ತವೆ ;

ಬೆನ್ನನ್ನು ಆವರಿಸಿಕೊಂಡು ಒಂದು ಕಿವಿ ಇನ್ನೊಂದು ಕಿವಿಯನ್ನು ಮುಟ್ಟುತ್ತದೆ. ಈ ನಾಡಿನಲ್ಲಿ ಅನೇಕ ಕುಳ್ಳಜನರಿದ್ದಾರೆ, ತಾಯಿಗೆ ಬದಲು ತಂದೆ ಹಾಲು ಕುಡಿಸುವ ಜನರಿದ್ದಾರೆ ; ನಾಯಿಮುಖದ, ಮಾತುಬರದೆ ಬೊಗಳುವ ಜನರಿದ್ದಾರೆ ; ಹಾವಿನಂತೆ ನುಲಿದುಕೊಂಡ ಕಾಲುಳ್ಳ ಜನರಿದ್ದಾರೆ; ಬಾಯಿಯೇ ಇಲ್ಲದ, ಬರೀ ರೋಮಭರಿತ ಜನರಿದ್ದಾರೆ : ಹೂಹಣ್ಣುಗಳ ನಾರುಬೇರುಗಳ ವಾಸನೆಯಿಂದಲೇ ಬದುಕುವವರಿದ್ದಾರೆ ; ನರಭಕ್ಷಕ ಕ್ರೂರಿಗಳಿದ್ದಾರೆ.

ಈ ದೇಶದ ಜನಾಂಗಗಳು, ಅವರ ವೇಷಭೂಷಣಗಳು, ಅವರ ಆಹಾರ-ವ್ಯವಹಾರ, ವಿವಾಹ, ಸತಿ, ದಾಸ್ಯ ಮುಂತಾದ ಪದ್ಧತಿಗಳು, ವಿದ್ಯಾಭ್ಯಾಸ ಸಂಗೀತ ವಾದ್ಯಗಳು, ಉತ್ಸವ, ವೈದ್ಯಚಿಕಿತ್ಸೆ, ಹಟಯೋಗ, ಆತ್ಮತ್ಯಾಗ, ಪೂಜಾ ವಿಧಾನ, ವ್ಯಾಪಾರ, ನದಿ-ಬೆಟ್ಟಗಳು, ನಗರಗಳು, ಕ್ರೀಡೆಗಳು, ಬೇಟೆ, ಪಟ್ಟಾವಿಧಾನ, ಬೌದ್ಧಧರ್ಮ, ಅಪರಾಧ ನಿರ್ಣಯವಿಧಾನ, ಬೌದ್ಧಕ್ಷೇತ್ರಗಳು, ಶವಸಂಸ್ಕಾರ, ಪವಾಡಗಳು, ಬೌದ್ಧಮಹಾಸಮ್ಮೇಳನಗಳು, ಅಳತೆಯರೀತಿ ಇತ್ಯಾದಿ ಬದುಕಿನ ಎಲ್ಲ ಅಂಶಗಳೂ ಒಂದಿಲ್ಲೊಂದು ರೀತಿಯಲ್ಲಿ ಒಂದಿಲ್ಲೊಂದು ರೂಪದಲ್ಲಿ ಈ ಪ್ರವಾಸಿಗರ ಬರಹಗಳಲ್ಲಿ ಇಣುಕಿವೆ. ಕೆಲವನ್ನು ಗಮನಿಸಬಹುದಷ್ಟೆ.

ತಕ್ಷಿಲದಲ್ಲಿ ವಿಚಿತ್ರ ಪದ್ಧತಿಯೊಂದಿದೆ. ಬಡತನದಿಂದ ತಮ್ಮ ಹೆಣ್ಣುಮಕ್ಕಳನ್ನು ಮದುವೆಮಾಡಿಕೊಡಲು ಸಾಧ್ಯವಿಲ್ಲದವರು ಅವರನ್ನು ಪೇಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಕೊಳ್ಳುಗರು ಹುಡುಗಿಯ ಬೆತ್ತಲೆ ಬೆನ್ನು ಭುಜಗಳನ್ನು ಪರೀಕ್ಷಿಸಿ ಕೊಳ್ಳುತ್ತಿದ್ದರು.

ಗಂಡಸತ್ತಾಗ ಹೆಂಡತಿಯರು ಅವರೊಡನೆ ಚಿತೆಯಲ್ಲಿ ಬಿದ್ದು ಸಂತೋಷದಿಂದ ಪ್ರಾಣನೀಗಿಕೊಳ್ಳುತ್ತಿದ್ದರು ಎಂದೊಬ್ಬ ಪ್ರವಾಸಿ ತಿಳಿಸಿದರೆ ಮತ್ತೊಬ್ಬ ವಿಧವೆಯ ಅಸಹ್ಯ ಜೀವನ ಬಾಳುವುದಕ್ಕಿಂತ ಗಂಡನೊಡನೆ ಸಾಯುವುದು ಲೇಸೆಂದು ಭಾವಿಸಿದರು? ಎಂದು ಹೇಳಿ ಸತಿಪದ್ಧತಿಯ ಇನ್ನೊಂದು ಮುಖವನ್ನು ತೋರಿಸಿಕೊಡುತ್ತಾನೆ.

ಕಳಿಂಗೇ ಎಂಬ ಇಂಡಿಯದ ಮತ್ತೊಂದು ಜನಾಂಗದಲ್ಲಿ ಹುಡುಗಿಯರು ಐದು ವರ್ಷಕ್ಕೇ ಗರ್ಭಿಣಿಯರಾಗುತ್ತಾರೆ. ಹೆಚ್ಚೆಂದರೆ ಎಂಟುವರ್ಷ ಬದುಕುತ್ತಾರೆ.

ಇಲ್ಲಿಯ ಜನ ನೂರಾರು ವರ್ಷ ಬದುಕುತ್ತಾರೆ. ಯಾವಾಗಲೂ ಯೌವನದಿಂದ ಕೂಡಿದ್ದು ರೋಗರುಜಿನ ಮುಪ್ಪುಗಳನ್ನು ಕಾಣರು. ಇಂಡಿಯಾದಲ್ಲಿ ಇಷ್ಟೆಲ್ಲ ಸುಖಸಂತೋಷಗಳಿದ್ದರೂ ಬ್ರಾಮನರೆಂಬ ಜನರು (ಬ್ರಹ್ಮಧ್ಯಾನಿಗಳು) ಜನಸಂಪರ್ಕ ವನ್ನು ತೊರೆದು ಅನೇಕ ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತ ದೇವರ ಧ್ಯಾನದಲ್ಲಿ ನಿರತರಾಗಿರುತ್ತಾರೆ. ಇಲ್ಲಿ ಬೆತ್ತಲೆ ತಿರುಗುವ ಸತ್ಯೋಪಾಸಕರಿದ್ದಾರೆ. ಯಾವ ಜಾತಿ ಪಂಥದವರಾದರೂ ಶ್ರಮಣರಾಗಬಹುದು. ಇವರಿಗೆ ಸಾವೆಂಬುದು ಸಂತೋಷದ ಸಂಗತಿ. ಜೀವಿಸುವುದೇ ಒಂದು ಹೊರೆ. ಸಾಯುವುದು ಹೊರೆಯಿಂದ ಮುಕ್ತಿ

ಪಡೆದಂತೆ ಎಂದು ಇವರು ಭಾವಿಸುತ್ತಾರೆ. ಸತ್ಯಾನ್ವೇಷಣೆಯಲ್ಲಿ ಗೌರವವಿದೆಯೇ ಹೊರತು ಭಿಕಾರಿಯಾಗುವುದರಲ್ಲಿ ಇವರಿಗೆ ಅವಮಾನವಿಲ್ಲ.

ಈರುಳ್ಳಿ, ಬೆಳ್ಳುಳ್ಳಿಗಳನ್ನು ಇವರು ತಿನ್ನುವುದಿಲ್ಲ ; ಹೆಚ್ಚಿನವರು ಮಾಂಸವನ್ನು ಮುಟ್ಟುವುದಿಲ್ಲ, ಮದ್ಯವನ್ನೂ ಕುಡಿಯುವುದಿಲ್ಲ.

ಇಂಡಿಯಾದಲ್ಲಿ ಗಂಡಸರು ಜತೆಯಲ್ಲಿ ಬಿದ್ದು ಸಾಯುವುದನ್ನು ನೋಡಬಹುದು. ರಾಜನ ಸೇವೆಗೆ ಕಂಕಣತೊಟ್ಟು ಅವನು ಸತ್ತಾಗ ಅವರೂ ಅವರೊಡನೆ ಸಾಯುವುದುಂಟು (ಗರುಡಪದ್ಧತಿ ?).

ರಾಜರು ದರ್ಬಾರು ಮಾಡುವಾಗ ಅವರ ಸ್ತ್ರೀಯರು ಎಲ್ಲರಿಗೂ ಕಾಣುವಂತೆ ಕುಳಿತುಕೊಳ್ಳುತ್ತಾರೆ. ಅವರು ಮುಖಕ್ಕೆ ಬುರುಕಿ ಹಾಕಿಕೊಳ್ಳುವುದಿಲ್ಲ.

ಇಂಡಿಯಾ ದೇಶದ ಯಾವ ರಾಜನೂ ನಲವತ್ತು ವರ್ಷ ವಯಸ್ಸಿಗೆ ಮುಂಚೆ ಸಿಂಹಾಸನವನ್ನು ಏರುವಂತಿಲ್ಲ.

ಇವರು ಸತ್ಯಸಂಧರೆಂಬುದಕ್ಕೂ ಪಾಪಭೀರುಗಳೆಂಬುದಕ್ಕೂ ಒಂದು ಉದಾಹರಣೆ ಕೊಡಬಹುದು. ಒಬ್ಬನು ಮತ್ತೊಬ್ಬನಿಗೆ ಸಾಲಕೊಡಬೇಕಾಗಿದ್ದರೆ ಸಾಲಕೊಟ್ಟವನು ಸಾಲಗಾರನ ಸುತ್ತ ನೆಲದಮೇಲೆ ಒಂದು ಪಟ್ಟೆ ಎಳೆದರೆ ಸಾಕು, ಸಾಲಗಾರನು ತಾನು ಕೊಡಬೇಕಾದುದೆಲ್ಲವನ್ನೂ ಕೊಟ್ಟು ಮುಂದೆಹೋಗುತ್ತಾನೆ.

ಬಲ್ಹರಾನ ರಾಜ್ಯದಲ್ಲಿ ಸೂಳೆಗಾರಿಕೆಗೆ ಅನುಮತಿಯುಂಟು. ಆದರೆ ಮದುವೆಯಾದ ಸ್ತ್ರೀಗೆ ಅನುಮತಿಯಿಲ್ಲ, ಅಂದರೆ ಒಬ್ಬನು ಮದುವೆಯಾಗದ ತನ್ನ ಮಗಳು, ತಂಗಿ, ಚಿಕ್ಕಮ್ಮ, ದೊಡ್ಡಮ್ಮ ಇವರೊಡನೆ ಸಂಭೋಗಮಾಡಬಹುದು.

ಸೋಮನಾಥ ಎಂಬುದು ಇಂಡಿಯಾದಲ್ಲಿ ಪ್ರಸಿದ್ಧವಾದ ನಗರ. ಇಲ್ಲಿರುವ ಆಶ್ಚರ್ಯಗಳಲ್ಲಿ ಒಂದೆಂದರೆ ಯಾವ ಆಧಾರವೂ ಇಲ್ಲದೆ ನಿಂತಿರುವ ಸೋಮನಾಥ ವಿಗ್ರಹ. ಮಹಮ್ಮದನು ದಂಡೆತ್ತಿ ಹೋದಾಗ ಇಂಡಿಯಾದವರು ದೇವರ ಬಳಿಗೆ ಹೋಗಿ ದೇವರೇ ಕಾಪಾಡು ಕಾಪಾಡೆಂದು ಅತ್ತು ಕರೆದು ದೇವರಲ್ಲಿ ಮೊರೆಯಿಟ್ಟು ಹೊರಗಡೆ ಬಂದು ಶತ್ರುವಿನ ಮೇಲೆ ಬಿದ್ದು ಹೋರಾಡಿ ಪ್ರಾಣಾರ್ಪಣೆ ಮಾಡಿದರು. ಹೀಗೆ ಸತ್ತವರ ಸಂಖ್ಯೆ ಐವತ್ತು ಸಾವಿರಕ್ಕೂ ಹೆಚ್ಚಾಗಿತ್ತು.

ಕಳ್ಳತನ ಅಪರೂಪ. ಮನೆಮಠಗಳಿಗೆ ಕಾವಲಿಡುವುದಿಲ್ಲ ಎಂದ ಪ್ರವಾಸಿಗಳಿದ್ದಾರೆ; ಹಾಗೆಯೇ ಇತರ ಕೆಲವರು ದರೋಡೆಕೋರರ ಕೈಗೆ ಸಿಕ್ಕು ಬಿದ್ದು ಪಾರಾದ ಘಟನೆಗಳನ್ನೂ ಹೇಳಿದ್ದಾರೆ.

ಪ್ರಾಪ್ತವಯಸ್ಕರಾದ ಹೆಣ್ಣುಮಕ್ಕಳನ್ನು ಅವರ ತಂದೆ ತಾಯಿಗಳು ಬಹಿರಂಗ ಸ್ಥಳಕ್ಕೆ ಕರೆದು ತಂದು ಪಂದ್ಯಗಳನ್ನೇರ್ಪಡಿಸುತ್ತಾರೆ. ಕುಸ್ತಿ, ಓಟ ಮುಂತಾದ ಪಂದ್ಯಗಳಲ್ಲಿ ಗೆದ್ದವರು ಆಕೆಯ ಕೈಹಿಡಿಯಬಹುದು. ಇಲ್ಲಿಯ ಜನರು ಅನೇಕ ಸ್ತ್ರೀಯರನ್ನು ಮದುವೆಯಾಗುತ್ತಾರೆ.

ಇಂಡಿಯಾದ ಜನರ ವರ್ಣಮಾಲೆ ಬ್ರಹ್ಮದೇವನಿಂದ ಬಂದದ್ದು. ಈ ವರ್ಣಮಾಲೆಯಲ್ಲಿ ನಲವತ್ತೇಳು ಅಕ್ಷರಗಳಿವೆ. ನಲಂದ ವಿಶ್ವವಿದ್ಯಾನಿಲಯದಲ್ಲಿ ಪ್ರತಿಯೊಬ್ಬನಿಗೂ ಆಹಾರ ಧಾನ್ಯಗಳ ಪಡಿ ದೊರೆಯುತ್ತಿತ್ತು. ನಾಲಂದವೆಂದರೂ ಒಂದೇ, ತಡೆಯಿಲ್ಲದೆ ನಡೆಯುವ ಸತ್ಕಾರವೆಂದರೂ ಒಂದೇ. ಇಲ್ಲಿ ಬೇರೆ ಬೇರೆ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಚರ್ಚೆ, ಸ್ಪರ್ಧೆ ನಡೆಯುತ್ತಿರುತ್ತವೆ. ವಿಶ್ವವಿದ್ಯಾನಿಲಯದ ಬಾಗಿಲು ಕಾಯುವವರೇ ಪ್ರವೇಶಿಸಬಯಸುವವರಿಗೆ ಕೆಲವು ಪ್ರಶ್ನೆಗಳನ್ನು ಹಾಕುತ್ತಾರೆ. ಸೂಕ್ತ ಉತ್ತರವನ್ನು ಕೊಟ್ಟವರಿಗೆ ಮಾತ್ರ ಒಳಗೆ ಪ್ರವೇಶ ದೊರೆಯುತ್ತದೆ. ಕೆಲವರು ನಾಲಂದದಲ್ಲಿ ಉತ್ತೀರ್ಣರಾದವರೆಂದು ಸುಳ್ಳು ಹೇಳಿಕೊಂಡು ಹೋದ ಕಡೆಯಲ್ಲೆಲ್ಲ ಗೌರವ ಪಡೆಯುತ್ತಾರೆ.

ಕೆಲವು ಕಡೆ ವೈದ್ಯಚಿಕಿತ್ಸೆಗಾಗಿ ಮನುಷ್ಯರ ಮಲಮೂತ್ರವನ್ನು, ಕೆಲವುವೇಳೆ ಹಂದಿ ಅಥವಾ ಬೆಕ್ಕುಗಳ ಮಲವನ್ನು ಉಪಯೋಗಿಸುವ ಹೊಲಸು ವಿಧಾನವುಂಟು.

ಇಂಡಿಯಾದವರು ಇಂದ್ರಿಯ ಭೋಗಾಸಕ್ತಿಯನ್ನು ಖಂಡಿಸುತ್ತಾರೆ. ಬೆಟ್ಟ ಗುಡ್ಡಗಳಲ್ಲಿಯೂ ಕಾಡುಗಳಲ್ಲಿಯೂ ಅಲೆಯುವ ಸನ್ಯಾಸಿಗಳಲ್ಲಿ ಕೆಲವರು ಸ್ತ್ರೀ ಸಂಭೋಗ ಮಾಡಬಾರದೆಂದು ಪುರುಷಾಂಗಕ್ಕೆ ಕಬ್ಬಿಣದ ಬಳೆಯನ್ನು ಹಾಕಿಕೊಂಡಿರುತ್ತಾರೆ.

ಇಂಡಿಯಾದ ಜನರಲ್ಲಿ ಏಳು ವರ್ಗಗಳುಂಟು, ನಲವತ್ತೆರಡು ಪಂಗಡಗಳುಂಟು, ನೂರುಹದಿನೆಂಟು ಜನಾಂಗಗಳುಂಟು. ಚಂಡಾಲರೆಂಬುವರು ಊರಿನೊಳಕ್ಕೋ, ಅಂಗಡಿ ಬೀದಿಗೋ ಬರುವಾಗ ಶಬ್ದ ಮಾಡುತ್ತಾ ಬರುತ್ತಾರೆ.

ಅಲೆಗ್ಸಾಂಡರ್, ಚಂದ್ರಗುಪ್ತಮೌರ್ಯ, ಹರ್ಷವರ್ಧನ, ಇಮ್ಮಡಿಪುಲಕೇಶಿ, ಮುಹಮ್ಮದ್ ಮುಂತಾದವರ ಕಾಲದ ಇತಿಹಾಸವನ್ನು ಪುನರ್‌ರಚಿಸುವಲ್ಲಿ ಈ ಪ್ರವಾಸಿ ಬರೆಹಗಳು ಅಮೂಲ್ಯವಾದ ಉಪಯುಕ್ತ ಮಾಹಿತಿ ನೀಡುವುದುಂಟು. ವಿರೋಧಾಭಾಸದ ಹೇಳಿಕೆಗಳು ಕಂಡುಬಂದರೂ ನಾಡಿನ ಸಾಂಸ್ಕೃತಿಕ ಇತಿಹಾಸದ ಪುನರ್‌ರಚನೆಗೂ ಇವು ಅಮೂಲ್ಯ ಆಕರಗಳಾಗಿ ಪರಿಣಮಿಸಿವೆ. ಆದರೆ ಅವುಗಳ ಸರಿಯಾದ ಮೌಲ್ಯನಿರ್ಣಯವನ್ನು ಸೂಕ್ಷ್ಮ ಅಧ್ಯಯನದಿಂದ ಮಾಡಬೇಕಾಗುತ್ತದೆ. ಇಲ್ಲಿ ಕೆಲವು ಸ್ವಾರಸ್ಯಕರ ಹೇಳಿಕೆಗಳನ್ನು ಪಟ್ಟಿಮಾಡಿದೆ, ಅಷ್ಟೇ.

ಸಾಂಸ್ಕೃತಿಕಲೋಕದ ವಿವಿಧ ಕ್ಷೇತ್ರಗಳಲ್ಲೊಂದಾದ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಳ್ಳುವ ಪ್ರತಿಭೆಯನ್ನು ಎರಡು ಸ್ವರೂಪಗಳಲ್ಲಿ ಸಾಮಾನ್ಯವಾಗಿ ಗುರುತಿಸಬಹುದು. ಸಾಹಿತ್ಯ ಸೃಷ್ಟಿ ಮತ್ತು ಸಾಹಿತ್ಯದ ಪುನಸ್ಸೃಷ್ಟಿ ಅಥವಾ ಭಾಷಾಂತರ. ಇವೆರಡೂ ಮಹತ್ತಿನಲ್ಲಿ ಸರಿಸಮಾನವಾದವೆನ್ನಬೇಕಾಗುತ್ತದೆ. ಪ್ರತಿಭೆ ಇಲ್ಲದೆ ಇವೆರಡರಲ್ಲಿ ಯಾವುದೂ ಸರಿಯಾಗಿ ಸಮರ್ಪಕವಾಗಿ ನಡೆಯದು. ಭಾರತಕ್ಕೆ ಸಂಬಂಧಿಸಿದಂತೆ ವಿವಿಧ ದೇಶದ, ವಿವಿಧ ಉದ್ದೇಶದ ಪ್ರವಾಸಿಗಳ ವರದಿ-ವೃತ್ತಾಂತಗಳನ್ನು ಬೇರೆ

ಬೇರೆ ಆಕರಗಳಿಂದ ಸಂಗ್ರಹಿಸಿ, ಕನ್ನಡಿಸಿ, ಅವಶ್ಯವಾದೆಡೆ ಅಡಿ ಟಿಪ್ಪಣಿಗಳನ್ನು ಕೊಟ್ಟು ಪ್ರವಾಸಿಗಳ ಹೇಳಿಕೆ ಸರಿಯಾದುದೇ ಅಲ್ಲವೇ ಎಂಬುದನ್ನು ವಿಶ್ಲೇಷಿಸಿ, ಶ್ರೀಯುತ ಎಚ್. ಎಲ್. ನಾಗೇಗೌಡರು ಕನ್ನಡಿಗರಿಗೆ ಮಹದುಪಕಾರಮಾಡಿದ್ದಾರೆ ಎಂದು ಹೇಳಿದರೆ ಅದು ಕ್ಲೀಷೆಯೆಂದು ತೋರಬಹುದಾದರೂ ಅದೇ ಅತ್ಯಂತ ಸೂಕ್ತ ಸಮರ್ಥ ಮಾತಾಗುತ್ತದೆ. ಇತಿಹಾಸವಾಗಲೀ ಸಾಹಿತ್ಯವಾಗಲೀ ತಮ್ಮ ಅಭ್ಯಾಸ ವಿಷಯವಾಗಿರಲಿಲ್ಲವೆಂದೂ ತಮ್ಮ ಕೆಲಸದಲ್ಲಿ ಅನೇಕ ಲೋಪದೋಷಗಳನ್ನು ಕಾಣಲುಸಾಧ್ಯವೆಂದು ತಿಳಿಸುತ್ತ ತಮ್ಮ ಕ್ಷೇತ್ರವಲ್ಲದ ಕ್ಷೇತ್ರದಲ್ಲಿ ಕೆಲಸಮಾಡಿದ್ದಕ್ಕೆ 'ಆ ಕ್ಷೇತ್ರ ತಜ್ಞರ ಕ್ಷಮೆ' ಬೇಡಿರುವುದು ಅವರ ವಿನಯದ ಸೌಜನ್ಯದ ಸಂಕೇತವಷ್ಟೇ. ಅನುವಾದ ಕಾರ್ಯದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಭಾಷೆ ಸರಳವೂ ಸುಲಲಿತವ ಆಗಿದ್ದು ನಿರೂಪಣೆ ಸಾಂಗವಾಗಿದೆ. ಇಂಥದ್ದೊಂದು ಸಂಗ್ರಹಕಾರ್ಯ ಕನ್ನಡದಲ್ಲಿ ನಡೆದಿರುವುದು ನಿಜಕ್ಕೂ ಹೆಮ್ಮೆಯ ವಿಚಾರ.

ಪ್ರವಾಸಿ ಕಂಡ ಇಂಡಿಯಾ-ಎರಡು

ಜಿ. ಎಸ್. ಭಟ್ಟ

ಭಾರತದ ಸಂಸ್ಕೃತಿ, ಜನಜೀವನವನ್ನು ಅರಿಯಲು, ಇಲ್ಲಿ ವ್ಯಾಪಾರ ಮಾಡಿ ಸಂಪತ್ತು ಗಳಿಸಲು, ಹಾಗೂ ಧರ್ಮಪ್ರಚಾರ, ತೀರ್ಥಯಾತ್ರೆ ಮಾಡಲು ಅನೇಕ ವಿದೇಶೀ ಪ್ರವಾಸಿಗರು ಭಾರಕ್ಕೆ ಬಂದಿದ್ದರು. ಇವರಲ್ಲಿ ಬೌದ್ಧ ಭಿಕ್ಷುಗಳು, ಕ್ರೈಸ್ತ ಪಾದ್ರಿಗಳು, ಅನ್ವೇಷಕರು, ಭೂಗೋಳ ಶಾಸ್ತ್ರಜ್ಞರು ಇವರೆಲ್ಲ ಸೇರಿದ್ದಾರೆ. ಇವರು ಬರೆದಿರುವ ಕಥನಗಳು, ದಿನಚರಿಗಳು ಭಾರತದ ಐತಿಹಾಸಿಕ, ಸಾಮಾಜಿಕ ರಾಜಕೀಯ ಜೀವನದ ಮೇಲೆ ಬೆಳಕು ಚೆಲ್ಲುತ್ತವೆ. ಭಾರತಕ್ಕೆ ಬಂದು ಇಲ್ಲಿಯ ಜನರೊಂದಿಗೆ ಸಂಪರ್ಕಹೊಂದಿ ಅವರ ನಡೆನುಡಿ ಮತ್ತು ಜೀವನವನ್ನು ಕುತೂಹಲದ ಕಣ್ಣುಗಳಿಂದ ನೋಡಿದ ವಿದೇಶೀ ಪ್ರವಾಸಿಗರ ಕಥನವನ್ನು ಸೊಗಸಾದ ಕನ್ನಡದಲ್ಲಿ ತಂದಿದ್ದಾರೆ ಶ್ರೀ ಎಚ್. ಎಲ್. ನಾಗೇಗೌಡರು. ಮಾರ್ಕೊಪೋಲೋನ ಪ್ರವಾಸ ಕಥನವನ್ನು ಮೊದಲಿಗೆ ಪ್ರಕಟಿಸಿದ ಅವರು ಭಾರತಕ್ಕೆ ಪ್ರಾಚೀನ ಕಾಲದಿಂದ ಆಧುನಿಕ ಯುಗದ ವರೆಗೆ ಭೇಟಿ ನೀಡಿದ ಪ್ರವಾಸಿಗಳ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಿ ಸಮಗ್ರವಾಗಿ ಅಧ್ಯಯನ ನಡೆಸಿ 'ಪ್ರವಾಸಿ ಕಂಡ ಇಂಡಿಯಾ' ಎಂಬ ಅಪೂರ್ವ ಕೃತಿಯನ್ನು ಹಲವು ಭಾಗಗಳಾಗಿ ಪ್ರಕಟಿಸಿ ಕನ್ನಡ ಸಾರಸ್ವತ ಲೋಕದ ಸಂಪತ್ತನ್ನು ಹೆಚ್ಚಿಸಿದ್ದಾರೆ ; ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ಸಂಪತ್ತನ್ನೂ ಹೆಚ್ಚಿಸಿದ್ದಾರೆ. ಭಾರತದ ಮಾಜಿ ಪ್ರಧಾನಿ ದಿ. ಜವಾಹರಲಾಲ್ ನೆಹರೂ ಒಂದೆಡೆ ಹೀಗೆ ಹೇಳಿದ್ದಾರೆ– "ಪ್ರವಾಸ ಮಾಡುವುದು ಒಳ್ಳೆಯದು, ಹಾಗೆ ಪ್ರವಾಸ ಮಾಡಲಾರದೇ ಹೋದಾಗ ಪ್ರವಾಸದ ಬಗೆಗೆ ಬಂದಿರುವ ಸಾಹಿತ್ಯವನ್ನಾದರೂ ಓದುವುದು ಉತ್ತಮ." ಶ್ರೀ ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ' ಓದುವುದರಿಂದ ಪ್ರಾಚೀನ ಕಾಲದಿಂದ ಆಧುನಿಕ ಕಾಲದ ವರೆಗಿನ ಭಾರತದ ಸಮಗ್ರ ಪರಿಚಯ ನಮಗಾಗುತ್ತದೆ. ಅಂದಿನ ಅನೇಕ ಸ್ವಾರಸ್ಯಕರ ಸಂಗತಿಗಳು ಈ ಪ್ರವಾಸ ಕಥನಗಳಿಂದ ಬೆಳಕಿಗೆ ಬಂದಿವೆ.

ಇತಿಹಾಸವನ್ನು ಬರೆದಿಡುವ ಇಲ್ಲವೆ ಬರೆಯಿಸುವ ಪದ್ಧತಿ ಇಲ್ಲದಾಗ ನಾವು ನಮ್ಮ ಪ್ರಾಚೀನ ಇತಿಹಾಸ, ಭವ್ಯ ಸಾಂಸ್ಕೃತಿಕ ಪರಂಪರೆ ಇವುಗಳನ್ನು ಅರಿಯಲು, ಅಂದಿನ ಕಾಲದ ಶಾಸನಗಳು, ಪುರಾಣಗಳು, ಶಿಲಾಲೇಖಗಳು ಇವುಗಳ ಮೊರೆ ಹೋಗ ಬೇಕಾಗುತ್ತದೆ. ಕೆಲವು ರಾಜರ ಆಸ್ಥಾನದಲ್ಲಿದ್ದ ಇತಿಹಾಸಕಾರರು ತಮ್ಮ ರಾಜರ ಚರಿತ್ರೆಯನ್ನು ಬರೆದಿದ್ದಾರಾದರೂ ಅದರಲ್ಲಿ ತಮ್ಮ ದೊರೆಗಳ ಪ್ರಶಂಸೆಗೆ ಹೆಚ್ಚಿನ ಮಹತ್ವ ನೀಡಿದ್ದು ಕಂಡುಬರುತ್ತದೆ. ಭಾರತದ ಇತಿಹಾಸವನ್ನು ಪುನರ್ರಚಿಸಲು

ನಮಗೆ ವಿದೇಶೀಯರು ಬರೆದಿರುವ ದಿನಚರಿಗಳು, ಪ್ರವಾಸ ಕಥನಗಳು ಅತ್ಯುಪಯುಕ್ತ ಸಾಮಗ್ರಿಗಳಾಗಿವೆ.

ವಿದೇಶೀ ಪ್ರವಾಸಿಗರು ಭಾರತೀಯರ ಬಗ್ಗೆ ಮತ್ತು ಭಾರತದ ಬಗ್ಗೆ ಬರೆದುದೆಲ್ಲ ಸತ್ಯಸಂಗತಿಗಳಲ್ಲ. ಆದರೆ ಅವರು ಬರೆದಿರುವ ಪ್ರವಾಸ ಕಥನಗಳಲ್ಲಿ ಹಲವಾರು ಸಾಮಾಜಿಕ, ಧಾರ್ಮಿಕ ಆಚರಣೆ, ವ್ಯಾಪಾರ–ವಾಣಿಜ್ಯ, ಅರ್ಥವ್ಯವಸ್ಥೆ, ನಗರಗಳ ವೈಭವ, ದೊರೆಗಳ ಚರಿತ್ರೆ ಇವುಗಳ ಮೇಲೆ ಬೆಳಕು ಚೆಲ್ಲುತ್ತವೆ. ಭಾರತದ ಸಾಮಾಜಿಕ ಪದ್ಧತಿಗಳನ್ನು ಅರ್ಥ ಮಾಡಿಕೊಳ್ಳಲು ವಿಫಲರಾದ ಅನೇಕ ಪ್ರವಾಸಿಗರು ಪೂರ್ವಾಗ್ರಹ ಪೀಡಿತರಾಗಿ ಬರೆದಿರುವುದು ಅವರ ಕಥನಗಳಿಂದ ಸ್ಪಷ್ಟವಾಗುತ್ತದೆ. ಅನೇಕ ಪ್ರವಾಸಿಗಳು ಕೇವಲ ಭಾರತವನ್ನಷ್ಟೇ ಅಲ್ಲ ಬೃಹತ್ ಇಂಡಿಯ ಎಂದು ಕರೆಯಲ್ಪಡುವ ಇಡೀ ಭಾರತದ ಉಪಖಂಡದ ಬಗ್ಗೆ ಉಲ್ಲೇಖಿಸಿದ್ದಾರೆ. ಪ್ರವಾಸಿಗಳ ಕಥನಕ್ಕೆ ಅಲ್ಲಲ್ಲಿ ಅಡಿಟಿಪ್ಪಣಿ ನೀಡಿರುವ ಶ್ರೀ ನಾಗೇಗೌಡರು ಅವುಗಳಲ್ಲಿ ಯಾವ ಸಂಗತಿಗಳು ಸತ್ಯಕ್ಕೆ ದೂರವಾದದ್ದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರ ಈ ಪುಸ್ತಕ ಮಹಾಪ್ರಬಂಧಕ್ಕಾಗಿ ನಡೆಸಿದ ಸಂಶೋಧನೆಗೆ ಸಮನಾಗಿದೆ.

ಶ್ರೀ ರಂಗನಾಥ ದಿವಾಕರರು ಪ್ರವಾಸಿ ಕಂಡ ಇಂಡಿಯಾ ಮೊದಲ ಸಂಪುಟದ ಬಗ್ಗೆ ಹೀಗೆ ಬರೆದಿದ್ದಾರೆ—"ಭಾರತದ ಬಗೆಗೆ ನೂರಾರು ಪ್ರವಾಸಿಗಳು ಆಯಾ ಕಾಲಕ್ಕೆ ಬಂದು ವರ್ಣನೆಗಳನ್ನು ಬರೆದಿದ್ದಾರೆ. ಆದರೆ ಅವು ಆಯಾ ಭಾಷೆಗಳಲ್ಲಿವೆ. ನಮ್ಮ ಸುದೈವದಿಂದ ಅವೆಲ್ಲ ಬಹು ಅಂಶದಿಂದ ಈಗ ಇಂಗ್ಲಿಷ್ ಭಾಷೆಗೆ ಅನುವಾದಿಸಲ್ಪಟ್ಟಿವೆ. ಅವನ್ನು ಕನ್ನಡಿಸುವ ಮಹಾಕಾರ್ಯವನ್ನು ಶ್ರೀ ಎಚ್. ಎಲ್. ನಾಗೇಗೌಡರು ಬಹು ಪರಿಶ್ರಮ ಪೂರ್ವಕವಾಗಿ ಮಾಡುತ್ತ ಬಂದಿದ್ದಾರೆ. 'ಪ್ರವಾಸಿ ಕಂಡ ಇಂಡಿಯಾ' ಎಂಬ ಈ ಕನ್ನಡ ಪುಸ್ತಕವು ಓರ್ವ ಐ. ಎ. ಎಸ್. ಅಧಿಕಾರಿ ಕನ್ನಡಿಗರಿಗೆ ಕೊಡುವ ಕೊಡುಗೆ ಎಂದು ಹೇಳಿದರೆ ಎಲ್ಲರಿಗೂ ಆಶ್ಚರ್ಯವಾಗಬಹುದು. ಅವರು ಪಟ್ಟ ಪರಿಶ್ರಮ ಅಪಾರವಾದುದು. ಆದರೆ ಇದು ಅತಿಪ್ರೀತಿಯಿಂದ ಕೈಗೊಂಡ ಕೆಲಸ. ಆದುದರಿಂದ ಆ ಪ್ರೇಮಭಾವದ ಸೌರಭ ಅದರಲ್ಲಿದೆ....ಭಾಷೆಯಲ್ಲಿ ಸರಳತೆ ಸುಲಭತೆ ಇವೆ....ಈ ಪುಸ್ತಕವನ್ನು ಆಸ್ಥೆಯಿಂದ ಓದಿ ಕನ್ನಡಿಗರು ಗೌಡರ ಉಪಕಾರ ಸ್ಮರಣೆ ಮಾಡಲಿ."

"ಪ್ರವಾಸ ಸಾಹಿತ್ಯಕ್ಕೆ ಕೈಹಾಕಿದ ನನಗೆ ಜೇನುತುಪ್ಪ ತುಂಬಿದ ಹಟ್ಟಿಗಳೇ ಕೈಗೆ ಸಿಕ್ಕುವಂತಾಯಿತು. ಆ ಹಟ್ಟಿಗಳನ್ನು ಹಿಂಡಿ 'ಪ್ರವಾಸಿ ಕಂಡ ಇಂಡಿಯಾ' ಎಂಬ ಸಾವಿರಾರು ಪುಟಗಳ ಉದ್ಗ್ರಂಥ ಸಿದ್ಧಪಡಿಸಿದೆ" ಎಂದು ಒಂದೆಡೆ ಹೇಳಿರುವ ಶ್ರೀ ನಾಗೇಗೌಡರು ತಮಗೆ ಸಿಕ್ಕಿದ ಜೇನು ಹಟ್ಟಿಗಳನ್ನು ಹಿಂಡಿ ಓದುಗರಿಗೂ ರಸದೌತಣ ನೀಡಿದ್ದಾರೆ.

ಪುಸ್ತಕದ ಮುನ್ನುಡಿಯಲ್ಲಿ ರಾಷ್ಟ್ರಕವಿ ಕುವೆಂಪು ಹೀಗೆ ಬರೆದಿದ್ದಾರೆ–"ಕ್ರಿಸ್ತ ಪೂರ್ವ

ಐದನೆಯ ಶತಮಾನದಿಂದ ಹಿಡಿದು ಕ್ರಿಸ್ತಶಕ ಹದಿನೆಂಟನೆಯ ಶತಮಾನದ ವರೆಗಿನ ಅವಧಿಯಲ್ಲಿ ಆಗಾಗ್ಗೆ ಇಂಡಿಯಾ ದೇಶಕ್ಕೆ ಬಂದು ಇಲ್ಲಿಯ ಸಾಂಸ್ಕೃತಿಕ ವ್ಯಾಪಾರಗಳನ್ನೂ ರಾಜಕೀಯ ಸಾಮಾಜಿಕ ಜೀವನವನ್ನೂ ಕಣ್ಣಾರೆ ಕಂಡು ಹೋದ ವಿದೇಶೀಯ ಪ್ರವಾಸಿಗರು ತಮ್ಮ ಅನುಭವಗಳನ್ನು ಬರೆದಿಟ್ಟಿದ್ದಾರೆ. ಅವರ ಆ ಅನುಭವಗಳಲ್ಲಿ ಒಮ್ಮೊಮ್ಮೆ ನಿರ್ಲಕ್ಷಿಸಬಹುದಾದ ತಪ್ಪು ಕಲ್ಪನೆ ನುಸುಳಬಹುದು. ಅತಿರೇಕಗಳು ಕಾಣಿಸಬಹುದು ; ಆದರೆ ಒಟ್ಟಿನಲ್ಲಿ ಅವರ ಕಣ್ಣಿಗೆ ಕಂಡ ಆಯಾ ಕಾಲದ ಇಂಡಿಯಾ ದೇಶದ ನೈಜ ಚಿತ್ರವನ್ನು ಅವರು ನಿರೂಪಿಸಿದ್ದಾರೆ. ಅಂಥ ಚಿತ್ರಗಳನ್ನು ನಮ್ಮ ಮುಂದೆ ಇಟ್ಟಿರುವ 'ಪ್ರವಾಸಿ ಕಂಡ ಇಂಡಿಯಾ' ಎಂಬ ಈ ಗ್ರಂಥದ ಪ್ರತಿಗಳನ್ನು ತಿರುಹುವಾಗ ಗತಕಾಲದ ಭಾರತೀಯ 'ಸಂಸ್ಕೃತಿಯ ವೈಭವದ ಚಿತ್ರಪಟವನ್ನು ನಮ್ಮ ಕಣ್ಮುಂದೆ ಸುರಳಿ ಬಿಚ್ಚಿ ಹರಡಿದಂತೆ ಭಾಸವಾಗುತ್ತದೆ.

ಎಲ್ಲ ಪ್ರವಾಸಿಗಳ ಲೇಖನ ಮಾಲೆಗಳ ಸಾರಸಂಗ್ರಹ ರೂಪದ ಈ ಬೃಹದ್ಗ್ರಂಥವನ್ನು ಕನ್ನಡ ಜನಕ್ಕೊದಗಿಸಿ ಶ್ರೀಮಾನ್ ನಾಗೇಗೌಡರು ಕೃತಾರ್ಥರಾಗಿರುವುದಲ್ಲದೆ ತಮ್ಮ ಕಲಾಭಿರುಚಿಯನ್ನೂ ಸಾಹಿತ್ಯ ಶಕ್ತಿಯನ್ನೂ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಕಾರ್ಯಕ್ಷೇತ್ರದಲ್ಲಿ ನುರಿತ ಜಾಣ್ಮೆಯ ಆಡಳಿತಗಾರರೆಂದು ಹೆಸರು ಪಡೆದುಕೊಂಡು ಸಾಹಿತ್ಯಕ್ಷೇತ್ರದಲ್ಲಿಯೂ ಯಶಸ್ವಿಯಾಗಿ ಪ್ರಶಂಸಾರ್ಹವಾಗಿ ಕೈಯಾಡಿಸುತ್ತ ಕನ್ನಡದ ಭಂಡಾರವನ್ನು ಬೆಳೆಸುತ್ತಿರುವ ಕೆಲವೇ ಕೆಲವರು ಸಾಹಿತಿಗಳಲ್ಲಿ ಶ್ರೀಮಾನ್ ನಾಗೇಗೌಡರೊಬ್ಬರು. ಕನ್ನಡ ಸಾಹಿತ್ಯ ವಾಹಿನಿಗೆ ಒಂದು ಹೊಸ ಹೊಳೆ ಸಂಗಮಿಸುವಂತೆ ಮಾಡಿ ಕನ್ನಡಿಗರ ಹೃದಯಶ್ರೀ ನೆರೆಯುಕ್ಕುವಂತೆ ಮಾಡಿದ್ದಾರೆ ; ಈ ಪ್ರವಾಸಿ ಕೃತಿಯ ಮೂಲಕ."

ಶ್ರೀ ಎಚ್. ಎಲ್. ನಾಗೇಗೌಡರು 'ಪ್ರವಾಸಿ ಕಂಡ ಇಂಡಿಯಾ' ಮೊದಲನೆಯ ಸಂಪುಟದಲ್ಲಿ ಕ್ರಿ. ಪೂ. 5ನೆಯ ಶತಮಾನದಿಂದ 12ನೆಯ ಶತಮಾನದ ಕೊನೆಯವರೆಗೆ ಭಾರತವನ್ನು ಸಂದರ್ಶಿಸಿದ ಪ್ರವಾಸಿಗಳ ಕಥನವನ್ನು ನೀಡಿದ್ದಾರೆ. ಮೊದಲ ಸಂಪುಟ ಪ್ರಾಚೀನ ಕಾಲದ ಭಾರತದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ಆ ಕಾಲದಲ್ಲಿ ಭಾರತಕ್ಕೆ ಆಗಮಿಸಿದ ಗ್ರೀಕ್, ಚೀನೀ ಮತ್ತು ಅರಬ್ಬೀ ಪ್ರವಾಸಿಗಳ ಕಥನವನ್ನು ಅವರು ಈ ಸಂಪುಟದಲ್ಲಿ ನೀಡಿದ್ದಾರೆ.

ಎರಡನೆಯ ಸಂಪುಟದಲ್ಲಿ ಕ್ರಿ. ಶ. 13ನೆಯ ಶತಮಾನದಿಂದ 17ನೆಯ ಶತಮಾನದ ಕೊನೆಯವರೆಗೆ ಭಾರತವನ್ನು ಸಂದರ್ಶಿಸಿದ ಪ್ರವಾಸಿಗಳ ಕಥನವಿದೆ. ಈ ಸಂಪುಟ ಕನ್ನಡಿಗರಿಗೆ ಬಹು ಮುಖ್ಯವಾದದ್ದು. ಕರ್ನಾಟಕದ ಇತಿಹಾಸವನ್ನು ಕುರಿತ ಸಾಕಷ್ಟು ವಿಷಯಗಳನ್ನು ಈ ಕಾಲದಲ್ಲಿ ಭಾರತಕ್ಕೆ ಬಂದು ಹೋದ ಪ್ರವಾಸಿಗಳ ಕಥನದಿಂದ ತಿಳಿಯಬಹುದು. ಬಹುಮುಖ್ಯವಾದ ಘಟನೆಗಳು ಈ ಕಾಲದಲ್ಲಿ ನಡೆದಿವೆ. ವಿಜಯನಗರದ ಸ್ಥಾಪನೆ, ಅಭ್ಯುದಯ, ಅವನತಿ, ವಾಸ್ಕೋ-ಡ-ಗಾಮಾ ಭಾರತಕ್ಕೆ

ಸಮುದ್ರ ಮಾರ್ಗವನ್ನು ಕಂಡು ಹಿಡಿದದ್ದು, ಪೋರ್ಚುಗೀಸ್ ಸಾಮ್ರಾಜ್ಯ ಗೋವಾದಲ್ಲಿ ಸ್ಥಾಪನೆಗೊಂಡಿದ್ದು– ಇತ್ಯಾದಿ ಮಹತ್ತರ ಅಂಶಗಳು ಎರಡನೆಯ ಸಂಪುಟದಲ್ಲಿವೆ. ಈ ಅವಧಿಯಲ್ಲಿ ಭಾರತವನ್ನು ಸಂದರ್ಶಿಸಿದ 23 ಪ್ರವಾಸಿಗಳ ಕಥನವನ್ನು ಶ್ರೀ ನಾಗೇಗೌಡರು ನಮ್ಮ ಮುಂದಿರಿಸಿದ್ದಾರೆ. ಪುಸ್ತಕದ ಕೊನೆಯಲ್ಲಿ ವಿಜಯನಗರದ ಅರಸರ ವಂಶಾವಳಿಯನ್ನೂ ನೀಡಿದ್ದಾರೆ. ಈ ಸಂಪುಟದಲ್ಲಿ 22 ಚಿತ್ರಗಳನ್ನೂ 3 ಭೂಪಟಗಳನ್ನೂ ಅಳವಡಿಸಿದ್ದಾರೆ. ಕರ್ನಾಟಕದ ಖ್ಯಾತ ಕಲಾವಿದ ಶ್ರೀ ಆರ್. ಎಸ್. ನಾಯ್ಡು ಅವರಿಂದ ಬರೆಯಿಸಿದ ಚಿತ್ರಗಳು ಈ ಸಂಪುಟಕ್ಕೆ ಶೋಭೆ ತಂದಿವೆ. ಈ ಚಿತ್ರಗಳನ್ನು ನೋಡಿದಾಗ ಅಂದಿನ ಕಾಲದ ಅನೇಕ ಘಟನೆಗಳು ನಮ್ಮ ಕಣ್ಣು ಮುಂದೆ ಬಂದು ನಿಲ್ಲುತ್ತವೆ.

ಪ್ರತಿಯೊಬ್ಬ ಪ್ರವಾಸಿಯ ಪ್ರಾರಂಭದಲ್ಲೂ ಶ್ರೀ ನಾಗೇಗೌಡರು ಪ್ರವಾಸಿಯ ಜೀವನ ಮತ್ತು ವ್ಯಕ್ತಿತ್ವವನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಪ್ರವಾಸಿಗಳ ಹೇಳಿಕೆಗಳನ್ನು ಅಲ್ಲಲ್ಲಿ ಸರಿಯೋ ತಪ್ಪೋ ಎಂಬುದನ್ನು ಆಧಾರಸಹಿತ ಅಡಿಟಿಪ್ಪಣಿಗಳಲ್ಲಿ ವಿವರಿಸಿದ್ದಾರೆ. ಅವರು ಕೈಗೆತ್ತಿ ಕೊಂಡಿರುವ ಮೊದಲ ಪ್ರವಾಸಿ ಮಾರ್ಕೋಪೋಲೋ. ಈತನ ಪ್ರವಾಸದ ಹಿನ್ನೆಲೆಯನ್ನು ವಿವರಿಸಿದ ಶ್ರೀ ಗೌಡರು ಅವನ ಬಗ್ಗೆ ಬರೆಯುತ್ತ– ಹೀಗೆ ಹೇಳಿದ್ದಾರೆ "ಅದ್ಭುತವಾದ ಪ್ರವಾಸ ಕಥನವನ್ನು ಬಿಟ್ಟು ಹೋಗಿರುವವರಲ್ಲಿ ಮಾರ್ಕೋಪೋಲೋ ಮುಖ್ಯನಾದವನು. ಅವನನ್ನು ಮಧ್ಯಯುಗದ ಪ್ರವಾಸಿಗಳ ಚಕ್ರವರ್ತಿ ಎಂದು ಕರೆಯುತ್ತಾರೆ. ಅವನಿಗಿಂತ ಎಷ್ಟೋ ಜನರು ಪ್ರವಾಸ ಮಾಡಿದ್ದರು. ಆದರೆ ಅವನಷ್ಟು ವಿಶಾಲವಾಗಿ, ವಿಪುಲವಾಗಿ ಪ್ರವಾಸ ಮಾಡಿದವರು ಬಹಳ ಕಡಿಮೆ. ಇಲ್ಲಿಗೆ ಏಳು ಶತಮಾನಗಳ ಹಿಂದೆ ಈ ಪ್ರಪಂಚದ ಭೂಪಟವನ್ನೇ ಇನ್ನೂ ಬರೆಯದಿದ್ದಾಗ 'ಪ್ರಪಂಚದ ರೂಪರೇಷೆಗಳನ್ನೇ ಸ್ಥೂಲವಾಗಿಯಾದರೂ ತಿಳಿಯದಿದ್ದಾಗ ಪ್ರಯಾಣಕ್ಕೆ ಕಾಲ್ನಡಿಗೆ, ಒಂಟೆ, ಕತ್ತೆ, ಕುದುರೆಗಳಲ್ಲದೆ ಬೇರೆ ಸೌಕರ್ಯವೂ ಇಲ್ಲದಿರುವಾಗ ಅಪಾರ ಕಷ್ಟಗಳನ್ನನುಭವಿಸಿ, ಇಟಲಿ ದೇಶದಿಂದ ಹೊರಟು ಈಗಿನ ತುರ್ಕಿ, ಇರಾನ್, ಅಫ್ಘಾನಿಸ್ಥಾನ, ಟಿಬೆಟ್, ರಷ್ಯ, ಮಂಗೋಲಿಯ, ಚೀನ, ಜಾವಾ, ಸುಮಾತ್ರಾ, ಸಿಲೋನ್, ಇಂಡಿಯಾ—ಮುಂತಾದ ದೇಶಗಳನ್ನೂ ಗೋಬಿ ಮರುಭೂಮಿಯಂಥ ಮರಳುಗಾಡುಗಳನ್ನೂ ಹಿಂದೂಸಾಗರದಂಥ ಮಹಾಸಾಗರಗಳನ್ನೂ ಸುತ್ತಿ ಬಂದ ಪ್ರವಾಸಿ ಮಾರ್ಕೊಪೋಲೊನನ್ನು ಪ್ರವಾಸಿಗಳ ಪ್ರಮುಖ ಅಥವಾ ಚಕ್ರವರ್ತಿ ಎಂದಲ್ಲದೇ ಮತ್ತೇನೆಂದು ಕರೆಯಬೇಕು ?"

ಮಾರ್ಕೋಪೋಲೋನ ಪ್ರವಾಸದ ಮುಖ್ಯಾಂಶಗಳನ್ನು ವಿವರಿಸಿದ ಶ್ರೀ ಗೌಡರು ಅವನ ಜನ್ಮದಿಂದ ಮರಣದವರೆಗೂ ವಿವರಣೆ ನೀಡಿ ಅವನು ಇಂಡಿಯಾದ ಬಗ್ಗೆ ಬರೆದುದನ್ನು ಮಾತ್ರ ಪ್ರಸ್ತಾಪಿಸಿದ್ದಾರೆ. ಮಾರ್ಕೋಪೋಲೊ ತನ್ನ ಚಿತ್ರಣದಲ್ಲಿ ಅಂದಿನ ಇಂಡಿಯಾವನ್ನಷ್ಟೇ ಅಲ್ಲ ಬೃಹತ್ ಇಂಡಿಯಾವನ್ನೆಲ್ಲ ಬಣ್ಣಿಸಿದ್ದಾನೆ. ಚೀನ ಮತ್ತು

ಜಪಾನ್ ದೇಶಗಳ ದ್ವೀಪಗಳ ಬಗ್ಗೆಯೂ ಬರೆದಿದ್ದಾನೆ. ಇಂಡಿಯ ಪ್ರಪಂಚದಲ್ಲೆಲ್ಲಾ ಶ್ರೇಷ್ಠವೂ ಐಶ್ವರ್ಯವಂತವೂ ಆದ ದೇಶ ಎಂದು ಬಣ್ಣಿಸುತ್ತಾನೆ. ಈತ ವಿಗ್ರಹಾರಾಧನೆ, ಸಹಗಮನ, ಬೆಳಿ, ಅಪರಾಧಿಗಳಿಗೆ ವಿಧಿಸುವ ಶಿಕ್ಷೆ ಮುಂತಾದವನ್ನು ಬಣ್ಣಿಸಿದ್ದಾನೆ. ದಿನದಲ್ಲಿ ಒಂದು ಗಂಟೆ ಅಶುಭ ಇರುವ (ರಾಹುಕಾಲ) ಕಾಲದ ಬಗ್ಗೆ ಮತ್ತು ಜ್ಯೋತಿಷ್ಯ ಶಾಸ್ತ್ರದ ಬಗ್ಗೆ ಶಕುನಗಳ ಬಗ್ಗೆ—ಕೂಡ ಬರೆದಿದ್ದಾನೆ. ಇಂಡಿಯಾದ ಮಸ್ಲಿನ್ ಬಟ್ಟೆ ಬಹಳ ಪ್ರಸಿದ್ಧಿ ಪಡೆದಿತ್ತು. ಅದರ ಬಗ್ಗೆ ಹೀಗೆ ಬರೆಯುತ್ತಾನೆ—"ಈ ರಾಜ್ಯದಲ್ಲಿ ಅತ್ಯಂತ ಉತ್ತಮವಾದ ಮತ್ತು ನವುರಾದ ಹತ್ತಿ ಬಟ್ಟೆಗಳನ್ನು ತಯಾರಿಸುತ್ತಾರೆ. ಇವು ಜೇಡನ ಬಲೆಯಷ್ಟು ಸೂಕ್ಷ್ಮವಾಗಿವೆ. ಇಂಥ ಬಟ್ಟೆಯನ್ನು ತೊಡಲು ಯಾವ ರಾಜ ರಾಣಿಯರು ತಾನೆ ಆಸೆ ಮಾಡವುದಿಲ್ಲ !"

ಚೋಳದೇಶದ ಬಗ್ಗೆ ಬರೆಯುತ್ತ "ಸೋಲಿ ಎಂಬುದು ಇಂಡಿಯಾದಲ್ಲಿ ಅತ್ಯುತ್ತಮವೂ ಮಹೋನ್ನತವೂ ಆದ ರಾಜ್ಯ. ರಾಜನ ಬಳಿ ಅಪಾರ ಮಹೋನ್ನತವೂ ಆದ ಅಪಾರ ಐಶ್ವರ್ಯವಿದೆ" ಎಂದಿದ್ದಾನೆ.

"ಇಂಡಿಯಾ ದೇಶದ ಬೇರೆ ಕಡೆಗಳಲ್ಲಿ ಮತ್ತು ಇಲ್ಲಿಯ ಜನರಲ್ಲಿ ಯಾವಾಗಲೂ ತೆಂಬೂಲ್ '(ತಾಂಬೂಲ್) ಎಂಬ ಎಲೆಯನ್ನು ಅಗಿಯುವ ಪದ್ಧತಿಯಿದೆ. ಇದನ್ನು ಯಾವಾಗಲೂ ಅಗಿಯುತ್ತಾ ರಸವನ್ನು ಉಗಿಯುತ್ತಾ ಇರುತ್ತಾರೆ. ಅನುಕೂಲಸ್ಥರು ಈ ಎಲೆಗೆ ಪಚ್ಚಕರ್ಪೂರ, ಏಲಕ್ಕಿ, ಲವಂಗ ಮುಂತಾದ ಸಾಮಾನುಗಳನ್ನು ಸೇರಿಸಿ ಹಾಕಿಕೊಳ್ಳುತ್ತಾರೆ. ಇದು ಆರೋಗ್ಯಕ್ಕೆ ಬಹಳ ಒಳ್ಳೆಯದೆಂದು ಹೇಳುತ್ತಾರೆ. ಮತ್ತೊಬ್ಬನನ್ನು ತುಚ್ಛವಾಗಿ ಕಾಣಬೇಕಾದರೆ ತಾಂಬೂಲದ ರಸವನ್ನು ಅವನ ಮೇಲೆ ಉಗಿದು ಅವಮಾನ ಮಾಡುತ್ತಾರೆ. ಹೀಗೆ ಅವಮಾನಗೊಂಡವನು ರಾಜನ ಮುಂದೆ ಹೋಗಿ ದೂರು ಹೇಳಿಕೊಳ್ಳುತ್ತಾನೆ. ಈ ದೂರನ್ನು ಕೇಳಿದ ರಾಜ ಇಬ್ಬರಿಗೂ ಕತ್ತಿ ಗುರಾಣಿಗಳನ್ನು ಕೊಟ್ಟು, ಕಾದಾಡುವಂತೆ ಹೇಳುತ್ತಾನೆ. ಆಗ ಇಬ್ಬರೂ ನೆರೆದ ಜನರ ಮುಂದೆ ತಮ್ಮಲ್ಲಿ ಒಬ್ಬನು ಸಾಯುವ ವರೆಗೆ ಕಾದಾಡುತ್ತಾರೆ. ಕಾದಾಟದಲ್ಲಿ ಕತ್ತಿಯ ಮೊನೆಯನ್ನು ಉಪಯೋಗಿಸಕೂಡದೆಂದು ರಾಜನ ಅಪ್ಪಣೆ."

ಮಲಬಾರ್‌ನಲ್ಲಿ ಬೆಳೆಯುವ ಶುಂಠಿ, ಮೆಣಸು ಬೆಳೆಗಳ ಬಗ್ಗೆಯೂ ಈತ ಉಲ್ಲೇಖಿಸಿದ್ದಾನೆ. ಇದಲ್ಲದೇ ಇಂಡಿಯದಲ್ಲಿರುವ ಅಚ್ಚಕಪ್ಪುಬಣ್ಣದ ಹುಲಿ, ನಾನಾತರದ ಗಿಳಿಗಳು, ನವಿಲುಗಳ ಬಗ್ಗೆಯೂ ವಿವರಿಸಿದ್ದಾನೆ. ಈಚಲು ಮದ್ಯದ ಬಗ್ಗೆ ಪ್ರಸ್ತಾಪವೂ ಇಲ್ಲಿದೆ. ಕಡಲುಗಳ್ಳರ ವಿಚಾರವಾಗಿ ಮಾರ್ಕೋಪೋಲೋ "ಈ ದೇಶದಲ್ಲಿ ಅನೇಕ ಕಡಲುಗಳ್ಳರಿದ್ದಾರೆ. ಇವರು ಪ್ರತಿವರ್ಷವೂ ಸಮುದ್ರದಲ್ಲಿ ಹೋಗುವ ಹಡಗುಗಳನ್ನು ಕೊಳ್ಳೆ ಹೊಡೆಯುತ್ತಾರೆ. ಮಲಬಾರ್ ಮತ್ತು ಇದಕ್ಕೆ ಹತ್ತಿರವಿರುವ ಗೊಜುರಾತ್ (ಗುಜರಾತ್) ಎಂಬ ರಾಜ್ಯಗಳಲ್ಲಿ ನೂರಕ್ಕಿಂತಲೂ ಹೆಚ್ಚು ಕಡಲುಗಳ್ಳರ ಹಡಗುಗಳಿವೆ."

ಹೀಗೆ ಮಾರ್ಕೊಪೋಲೋ ಇಂಡಿಯುವ ಅಂದಿನ ಸಮಾಜದ, ಆಚಾರವಿಚಾರ, ರಾಜಕೀಯು ವ್ಯಾಪಾರ, ಬೆಳೆ ಪ್ರಾಣಿಗಳ ಬಗ್ಗೆಲ್ಲ ವಿವರಿಸಿದ್ದು ಅವನ ಕಥನ ತುಂಬ ಉಪಯುಕ್ತವಾಗಿರುವಷ್ಟೆ ಸಮಗ್ರ ಮಾಹಿತಿಯುನ್ನೂ ನೀಡುತ್ತದೆ.

ಫ್ರೈಯರ್ ಒಡೋರಿಕ್ ಪವಾಡ ಪುರುಷನೆಂದು ಹೆಸರಾಗಿದ್ದ ಕ್ರೈಸ್ತ ಸಂನ್ಯಾಸಿ. ಕ್ರಿ.ಶ. 1321ರಲ್ಲಿ ಪಶ್ಚಿಮ ಇಂಡಿಯಕ್ಕೆ ಬಂದ. ಈತ ಸಾಯುವುದಕ್ಕೆ ಮುನ್ನ ಫ್ರೈಯರ್ ವಿಲಿಯಂ ಎಂಬವನಿಗೆ ಹೇಳಿ ತನ್ನ ಪ್ರವಾಸ ಕಥನವನ್ನು ಬರೆಯಿಸಿದನಂತೆ. ಮಾರ್ಕೊಪೋಲೋ ಬಿಟ್ಟಿರುವ ಅನೇಕ ವಿಚಾರಗಳು ಇವನ ಪ್ರವಾಸ ಕಥನದಲ್ಲಿ ದೊರೆಯುತ್ತವೆ. ಮಲಬಾರ್ ಸಾಂಬಾರ್ ಬೆಳೆ ಮೆಣಸಿನ ಬಗ್ಗೆ ಉಲ್ಲೇಖಿಸಿದ ಈತ ಸತ್ತವರನ್ನು ಸುಡುವ ಮತ್ತು ಸಹಗಮನವನ್ನು ಹೇಯು ಪದ್ಧತಿ ಎಂದು ಬಣ್ಣಿಸಿದ್ದಾನೆ. ಇದಲ್ಲದೆ ವಿಗ್ರಹಾರಾಧನೆಯ ಬಗ್ಗೆಯೂ ಉಲ್ಲೇಖಿಸಿದ್ದಾನೆ.

ಸರ್ ಜಾನ್ ಮಾಂಡವಿಲ್ಲೆ ಬರೆದ ಪ್ರವಾಸ ಕಥನವೊಂದಿವೆ ಎಂದು ಹೇಳಿದ ಶ್ರೀ ನಾಗೇಗೌಡರು ಈತ ಫ್ರೈಯರ್ ಒಡೊರಿಕ್‌ನ ಪ್ರವಾಸ ಕಥನವನ್ನೇ ಅನುಸರಿಸಿ ಬರೆದಿದ್ದಾನೆಂದು ಹೇಳಿದ್ದಾರೆ. ಮಾಂಡವಿಲ್ಲೆ ವ್ಯಕ್ತಿ ಇದ್ದನೇ ಎಂಬುದರ ಬಗ್ಗೆ ಇರುವ ಸಂದೇಹವನ್ನು ಶ್ರೀ ಗೌಡರು ಪ್ರಸ್ತಾಪಿಸಿದ್ದಾರೆ. ಈತ ಹೇಳಿರುವ ಬಹು ವಿಚಾರಗಳು "ಉತ್ಪ್ರೇಕ್ಷೆಯಿಂದಲೂ ಅಜ್ಞಾನದಿಂದಲೂ ಕೂಡಿವೆ" ಎಂದು ಹೇಳಿರುವ ಲೇಖಕರು ಅವನ ಕಥನದಲ್ಲಿ ಭಾರತಕ್ಕೆ ಸಂಬಂಧಿಸಿದ ಭಾಗವನ್ನು ಮಾತ್ರ ಇಲ್ಲಿ ನೀಡಿದ್ದಾರೆ. ಇಂಡಿಯಾ ಎಂಬ ಹೆಸರಿನ ಬಗ್ಗೆ ಪ್ರಸ್ತಾಪಿಸಿದ ಮಾಂಡವಿಲ್ಲೆ ಇಂಡೇ (ಇಂಡಸ್) ನದಿಯಿಂದ ಆ ಹೆಸರು ಬಂತೆಂದು ಹೇಳಿದ್ದಾನೆ. ಈತನೂ ವಿಗ್ರಹಾರಾಧನೆ ಸೂರ್ಯಾರಾಧನೆಯ ಬಗ್ಗೆ ಬರೆದಿದ್ದಾನೆ. ಉಳಿದ ವಿವರಣೆಗಳೆಲ್ಲಾ ಒಡೋರಿಕ್‌ನ ಪ್ರವಾಸ ಕಥನದಂತೆ ಇರುವುದರಿಂದ ಲೇಖಕರು ಅದನ್ನು ಹೆಚ್ಚಾಗಿ ಪ್ರಸ್ತಾಪಿಸಿಲ್ಲ.

ಇಬ್–ನೆ–ಬತೂತಾ ಭಾರತಕ್ಕೆ ಬಂದ ಪ್ರವಾಸಿಗಳಲ್ಲಿ ಬಹುಮುಖ್ಯನಾದವ. ಈತ ಮೊರಾಕೋ ದೇಶದವ. 1333ರಿಂದ 1347ರ ವರೆಗೆ ಈತ ಇಂಡಿಯದಲ್ಲಿದ್ದ ಬೇರೆ ಬೇರೆ ದೇಶಗಳಲ್ಲಿರುವ ಇಸ್ಲಾಮೀ ಉಪದೇಶಕರನ್ನೂ ಫಕೀರರನ್ನೂ ನೋಡುವುದೇ ಇವನ ಪ್ರವಾಸದ ಉದ್ದೇಶವಾಗಿತ್ತಂತೆ. ಈತ ಇಸ್ಲಾಂ ಪಂಡಿತ, ಆದ್ದರಿಂದ ಸಂದರ್ಶಿಸಿದ ರಾಷ್ಟ್ರಗಳಲ್ಲೆಲ್ಲ ಅಪೂರ್ವ ಗೌರವಕ್ಕೆ ಪಾತ್ರನಾದ. ಈತ ಭಾರತದಲ್ಲಿ ಹದಿನಾಲ್ಕು ವರ್ಷಗಳ ಕಾಲ ಇದ್ದ. ಇಬ್–ನ–ಬತೂತನ ಪ್ರವಾಸಿ ಕಥನದಲ್ಲಿ ದೆಹಲಿಯ ಸುಲ್ತಾನ ಮಹಮದ್ ಬಿನ್ ತುಘಲಕನ ಕಾಲದ ಆಡಳಿತ, ಜನಜೀವನ, ವಿಜಯನಗರದ ಇತಿಹಾಸ ಇವುಗಳನ್ನು ಕುರಿತ ಉಪಯುಕ್ತ ಮಾಹಿತಿಗಳಿವೆ. ಇಬ್–ನ–ಬತೂತನನ್ನು ದಿ. ಜವಾಹರಲಾಲ್ ನೆಹರೂ 'ಅದ್ಭುತ ಪ್ರವಾಸಿ' ಎಂದು ಬಣ್ಣಿಸಿದ್ದಾರೆ.

ಇಬ್–ನೆ ಬತೂತ ತಾನು ಯಾವ ಮಾರ್ಗವಾಗಿ ಭಾರತಕ್ಕೆ ಬಂದನೆಂಬುದನ್ನು ಪ್ರಾರಂಭದಲ್ಲಿ ವಿವರಿಸಿದ್ದಾನೆ. ಭಾರತದಲ್ಲಿನ ದಕ್ಷ ಅಂಚೆಯ ವ್ಯವಸ್ಥೆಯ ಬಗ್ಗೆ

ಹೀಗೆ ಬರೆದಿದ್ದಾನೆ "ಸಿಂಧ್‌ನಿಂದ ದಿಲ್ಲಿ (ದೆಹಲಿ) ನಗರಕ್ಕೆ ಹದಿನೈದು ದಿನಗಳ ಪ್ರಯಾಣ. ಆದರೆ ಅಧಿಕಾರಿಗಳು ಕಳುಹಿಸಿದ ಸುದ್ದಿ ಸುಲ್ತಾನನಿಗೆ ಅಂಚೆ ಮೂಲಕ ಕೇವಲ ಐದು ದಿವಸಗಳಲ್ಲಿ ತಲುಪುತ್ತದೆ. ಇಂಡಿಯಾದಲ್ಲಿ ಅಂಚೆ ವ್ಯವಸ್ಥೆ ಎರಡು ವಿಧವಾಗಿದೆ. ಸುಲ್ತಾನನಿಗೆ ಸೇರಿದ ಹರಿಕಾರರು ಕುದುರೆಗಳ ಮೇಲೆ ಸವಾರಿ ಮಾಡಿ ಅಂಚೆ ಸಾಗಿಸುವುದು ಒಂದು ವಿಧ. ಈ ವಿಧದಲ್ಲಿ ಪ್ರತಿ ನಾಲ್ಕು ಮೈಲಿಗೆ ಟಪ್ಪಾಲು ಕುದುರೆಗಳ ಒಂದು ತಂಡವಿರುತ್ತದೆ. ಇನ್ನೊಂದು ವಿಧ ಕಾಲ್ನಡಗೆಯ ವ್ಯವಸ್ಥೆ. ಈ ವ್ಯವಸ್ಥೆ ಹೀಗಿದೆ : ಪ್ರತಿ ಮೂರು ಮೈಲಿಗೆ ಒಂದು ಹಳ್ಳಿ ಇರುತ್ತದೆ. ಈ ಹಳ್ಳಿಯ ಹೊರಗಡೆ ಮೂರು ಮಂಟಪಗಳಿರುತ್ತವೆ. ಇವುಗಳಲ್ಲಿ ಒಬ್ಬೊಬ್ಬ ಟಪಾಲು ವಾಹಕನು ಸಿದ್ಧನಾಗಿ ಕುಳಿತಿರುತ್ತಾನೆ. ಇವರ ಬಳಿ ಒಂದುವರೆ ಗಜ ಉದ್ದದ ದೊಣ್ಣೆ ಇರುತ್ತದೆ. ಈ ದೊಣ್ಣೆಯ ತುದಿಗೆ ಹಿತ್ತಾಳೆಯ ಗಂಟೆಗಳನ್ನು ಕಟ್ಟಿರುತ್ತಾರೆ. ಪಟ್ಟಣವನ್ನು ಬಿಟ್ಟು ಪತ್ರವಾಹಕನು ಒಂದು ಕೈಯಲ್ಲಿ ಪತ್ರವನ್ನೂ ಇನ್ನೊಂದು ಕೈಯಲ್ಲಿ ಗಂಟೆಯ ದೊಣ್ಣೆಯನ್ನೂ ಹಿಡಿದುಕೊಂಡು ತನ್ನ ಶಕ್ತಿ ಮೀರಿ ಓಡುತ್ತಾನೆ. ಹಳ್ಳಿಯ ಬಳಿ ಮಂಟಪದಲ್ಲಿ ಕುಳಿತಿರುವವರು ಗಂಟೆಯ ಶಬ್ದ ಕೇಳಿ ಸಿದ್ಧರಾಗಿ ನಿಂತುಕೊಳ್ಳುತ್ತಾರೆ. ಪತ್ರವಾಹಕನು ಬಂದ ತಕ್ಷಣವೇ ಇವರಲ್ಲಿ ಒಬ್ಬನು ಪತ್ರವನ್ನು ಈಸಿಕೊಂಡು ಗಂಟೆ ಕಟ್ಟಿದ ತನ್ನ ದೊಣ್ಣೆಯನ್ನು ಅಲ್ಲಾಡಿಸುತ್ತಾ ಓಡುತ್ತಾನೆ. ಓಡಿ ಮುಂದಿನ ನಿಲ್ದಾಣವನ್ನು ಸೇರುತ್ತಾನೆ. ಹೀಗೆ ಪತ್ರವು ಮನುಷ್ಯನಿಂದ ಮನುಷ್ಯನಿಗೆ ರವಾನೆಯಾಗಿ ಕೊನೆಗೆ ತನ್ನ ಗುರಿಯನ್ನು ಮುಟ್ಟುತ್ತದೆ. ಈ ರೀತಿ ಕಳುಹಿಸಿದ ಅಂಚೆಯು ಕುದುರೆ ಮೇಲೆ ರವಾನೆ ಮಾಡುವ ಅಂಚೆಗಿಂತ ಜಾಗ್ರತೆ ತಲುಪುತ್ತದೆ."

ಹಿಂದೂ ಸ್ತ್ರೀಯರ ಸಹಗಮನ, ಗಂಗಾನದಿಯಲ್ಲಿ ಮುಳುಗಿ ಜೀವನವನ್ನು ಕೊನೆಗೊಳಿಸಿಕೊಳ್ಳುವ ಪದ್ಧತಿ ಇವೆಲ್ಲವೂ ಇವನ ಬರೆವಣಿಗೆಯಲ್ಲಿ ಪ್ರಾಸಂಗಿಕವಾಗಿ ಬರುತ್ತವೆ. ದೆಹಲಿ ಇವನ ಕಣ್ಣಿಗೆ ಭವ್ಯವೂ ದೊಡ್ಡದೂ ಆಗಿ ಕಾಣಿಸಿತು. ದೆಹಲಿಯ ಸುಲ್ತಾನ ತುಘಲಕ್ ದೆಹಲಿಯಿಂದ ದೌಲತಾಬಾದಿಗೆ ರಾಜಧಾನಿಯನ್ನು ಸ್ಥಳಾಂತರಿಸಿದ್ದನ್ನು ಈತ ಹೀಗೆ ಬಣ್ಣಿಸಿದ್ದಾನೆ—"ಅರಸು (ಸುಲ್ತಾನ) ದೆಹ್ಲಿಯನ್ನೇ ನಿರ್ನಾಮ ಮಾಡಬೇಕೆಂದು ತೀರ್ಮಾನಿಸಿದನು. ಅಲ್ಲಿಯ ನಿವಾಸಿಗಳ ಮನೆಮಠಗಳನ್ನೆಲ್ಲ ದುಡ್ಡು ಕೊಟ್ಟು ಕೊಂಡುಕೊಂಡು ಅವರೆಲ್ಲಾ ದೌಲತಾಬಾದಿಗೆ ಹೋಗಬೇಕೆಂದು ಆಜ್ಞೆ ಮಾಡಿದನು. ಜನ ಹಾಗೆ ಮಾಡಲು ತಿರಸ್ಕರಿಸಿದರು. ಮೂರು ರಾತ್ರಿ ವಾಯಿದೆ ಕೊಟ್ಟು ಆ ವಾಯಿದೆ ಕಳೆದ ಮೇಲೆ ನಗರದಲ್ಲಿ ಒಂದು ಹಿಳ್ಳೆಯೂ ಇರಕೂಡದೆಂದು ಡಂಗುರ ಹೊಡೆಸಿದನು. ಬಹುಮಂದಿ ಈ ಕಠೋರ ಆಜ್ಞೆಯಂತೆ ನಡೆದುಕೊಂಡರು. ಆದರೆ ಕೆಲವರು ಮನೆಗಳಲ್ಲಿ ಅವಿತುಕೊಂಡರು. ಸುಲ್ತಾನ ಅಷ್ಟಕ್ಕೇ ಬಿಡಲಿಲ್ಲ. ಮನೆಮಠಗಳನ್ನು ಹುಡುಕುವಂತೆ ಆಜ್ಞೆ ಮಾಡಿದನು.

ಅವನ ಸೈನಿಕರು ಊರನ್ನೆಲ್ಲ ಹುಡುಕಿ ಬೀದಿಯಲ್ಲಿದ್ದ ಒಬ್ಬ ಕುಂಟನನ್ನೂ ಒಬ್ಬ ಕುರುಡನನ್ನೂ ಹಿಡಿದುಕೊಂಡು ಬಂದರು. ಕುಂಟನನ್ನು ಕಲ್ಲುಗಳನ್ನು ಎಸೆಯುವ ಒಂದು ಯಂತ್ರದೊಳಗೆ ಇಟ್ಟು ಕಲ್ಲನ್ನು ಎಸೆದಂತೆ ಎಸೆಯಬೇಕೆಂದು ಸುಲ್ತಾನ ಆಜ್ಞೆ ಮಾಡಿದನು. ಕುರುಡನನ್ನು ದಿಲ್ಲಿಯಿಂದ ದೌಲತಾಬಾದಿಗೆ ಎಳೆದುಕೊಂಡು ಹೋಗಬೇಕೆಂದು ಆಜ್ಞೆ ಮಾಡಿದನು. ದಿಲ್ಲಿಯಿಂದ ದೌಲತಾಬಾದಿಗೆ ನಲವತ್ತು ದಿವಸಗಳ ಪ್ರಯಾಣ. ಇಷ್ಟು ದಿವಸಗಳ ಕಾಲ ಎಳೆದುಕೊಂಡು ಹೋದ ಆ ಕುರುಡನ ಶರೀರ ಚಿಂದಿ-ಚಿಂದಿಯಾಗಿ ಹರಿದುಹೋಯಿತು. ಕೇವಲ ಅವನ ಕಾಲು ಮಾತ್ರ ದೌಲತಾಬಾದ್ ತಲುಪಿತು. ಇದನ್ನು ಕಂಡು ಹೆದರಿದ ಪ್ರತಿಯೊಬ್ಬರೂ ತಮ್ಮ ಆಸ್ತಿಪಾಸ್ತಿಗಳನ್ನು ತೊರೆದು ದೌಲತಾಬಾದಿಗೆ ಹೊರಟರು. ದಿಲ್ಲಿ ಹಾಳು ಬಿದ್ದು ಬಿಕೋ ಎನ್ನಿಸುತ್ತಿತ್ತು. ನನ್ನ ಆಪ್ತನಾದ ಒಬ್ಬನು ಹೇಳಿದ ಪ್ರಕಾರ ಒಂದು ರಾತ್ರೆ ಸುಲ್ತಾನನು ತನ್ನ ಅರಮನೆಯ ಮೇಲೆ ನಿಂತು ದಿಲ್ಲಿಯನ್ನು ನೋಡಿದಾಗ ಬೆಂಕಿಯಾಗಲಿ ಹೊಗೆಯಾಗಲಿ ಕಾಣಿಸುತ್ತಿರಲಿಲ್ಲ. ಒಂದು ದೀಪವೂ ಉರಿಯುತ್ತಿರಲಿಲ್ಲ. ಆಗ ಸುಲ್ತಾನನು 'ಈಗ ನನ್ನ ಮನಸ್ಸಿಗೆ ಶಾಂತಿಯಾಯಿತು' ಎಂದನಂತೆ. ಹಾಗೆ ಮಾಡಿದ ಮೇಲೆ ಬೇರೆ ನಗರದ ಜನರು ದಿಲ್ಲಿಗೆ ಬಂದು ವಾಸ ಮಾಡಬೇಕೆಂದು ಆಜ್ಞೆ ಮಾಡಿದನು. ಇದರಿಂದ ಬೇರೆ ಪಟ್ಟಣಗಳೂ ಹಾಳಾದವು. ದಿಲ್ಲಿಯೂ ಹಾಳುಬಿತ್ತು. ಏಕೆಂದರೆ ಪ್ರಪಂಚದಲ್ಲೆಲ್ಲ ಅತ್ಯಂತ ದೊಡ್ಡ ನಗರಗಳಲ್ಲಿ ಒಂದಾದ ದಿಲ್ಲಿ ನಗರವನ್ನು ತುಂಬುವಷ್ಟು ಜನ ಇರಲಿಲ್ಲ. ನಾನು ನನ್ನ ಸಹಪಾಠಿಗಳೂ ದಿಲ್ಲಿಗೆ ಬಂದಾಗ ನಗರ ಈ ಸ್ಥಿತಿಯಲ್ಲಿತ್ತು. ಜನಗಳಿಲ್ಲದೆ ಪಾಳು ಬಿದ್ದಿತ್ತು." ಶ್ರೀ ನಾಗೇಗೌಡರ ಸಿದ್ಧ ಲೇಖನಿಯಿಂದ ಇಬ್ನ್-ನ-ಬತೂತನ ವರ್ಣನೆ ಅತ್ಯಂತ ಸುಂದರವಾಗಿ ಕನ್ನಡಕ್ಕೆ ಬಂದಿದೆ. ಕರ್ನಾಟಕವನ್ನು ಕುರಿತು ಇಬ್ನ್-ನ-ಬತೂತಾ ಬರೆದಿರುವ ಸಂಗತಿಗಳು ತುಂಬ ಸ್ವಾರಸ್ಯವಾಗಿದೆ. ಮಲಬಾರಿನ ಮೆಣಸು. ಮಂಗಳೂರು ಬಂದರೂ ಇವೆಲ್ಲವೂ ಇಬ್ನ್-ನ-ಬತೂತನನ್ನು ಆಕರ್ಷಿಸಿದ್ದುವು. ಶ್ರೀ ನಾಗೇಗೌಡರು ಅಡಿಟಿಪ್ಪಣಿಯಲ್ಲಿ ಮಂಗಳೂರು ನಗರದ ಪ್ರಾಚೀನತೆಯ ಬಗ್ಗೆ ವಿವರಗಳನ್ನು ನೀಡಿರುವುದು ತುಂಬ ಉಪಯುಕ್ತವಾಗಿದೆ. ಇಬ್ನ್-ನ-ಬತೂತಾ ಭಾರತದಿಂದ ಮುಂದೆ ಚೀನಕ್ಕೆ ಪ್ರಯಾಣ ಬೆಳೆಸಿದ.

ನಿಕೊಲೊ–ದೆ-ಕೊಂತಿ–ವೇನಿಸ್ ನಗರದ ಪ್ರವಾಸಿ. ಅರಬ್ಬೀ ಭಾಷೆಯನ್ನು ಕಲಿತು ಪೌರಸ್ತ್ಯ ದೇಶಗಳಿಗೆ ಪ್ರಯಾಣ ಬೆಳೆಸಿದ. ತನ್ನ ಸಂಸಾರ ಸಹಿತ ಇಂಡಿಯಕ್ಕೆ ಬಂದ ಮೊದಲ ಪ್ರವಾಸಿ. ಈತ ಭಾರತದ ಮಲಬಾರ್ ತೀರ, ವಿಜಯನಗರ ಮುಂತಾದ ಸ್ಥಳಗಳಿಗೆ ಭೇಟಿ ನೀಡಿದ. ಕರ್ನಾಟಕದ ಇತಿಹಾಸದ ದೃಷ್ಟಿಯಿಂದ ನಿಕೊಲೊನ ಕಥನ ಅತ್ಯಮೂಲ್ಯವಾಗಿದೆ. ಈತ ವಿಜಯನಗರಕ್ಕೆ ಬಂದಾಗ ಎರಡನೆಯ ದೇವರಾಯ ರಾಜ್ಯವನ್ನಾಳುತ್ತಿದ್ದ. ಕ್ಯಾಂಬೆಯಲ್ಲಿ ದೊರೆಯುತ್ತಿದ್ದ ಅಮೂಲ್ಯ

ವಜ್ರಗಳ ಬಗ್ಗೆ ಈತ ಪ್ರಸ್ತಾಪಿಸಿದ್ದಾನೆ. ಸಮುದ್ರ ತೀರದಲ್ಲಿದ್ದ ಪಿಕಮೂರಿಯಕ್ಕೆ ಈತ ಬಂದಿಳಿದ. ಪಿಕಮೂರಿಯು ಬಾರ್ಕೂರು ಇರಬಹುದೆಂದು ಶ್ರೀ ನಾಗೇಗೌಡರು ಊಹಿಸಿದ್ದಾರೆ. ಇದಕ್ಕೆ ಆಧಾರವಾಗಿ ಅಡಿಟಿಪ್ಪಣಿಯಲ್ಲಿ ಕೆಲವು ಪ್ರವಾಸಿಗಳ ಅಭಿಪ್ರಾಯಗಳನ್ನು ಉಲ್ಲೇಖಿಸಿದ್ದಾರೆ. ಬಾರಕೂರಿನಿಂದ ಮುಂದಕ್ಕೆ ಅನಂತರ ಬಿಜೆನೆಗಾಲಿಯಕ್ಕೆ (ವಿಜಯನಗರ) ಬಂದ. ಉಳಿದ ಪ್ರವಾಸಿಗಳಂತೆ ಸತಿ ಪದ್ಧತಿಯನ್ನು ಈತ ಉಲ್ಲೇಖಿಸಿದ್ದಾನೆ. ಆ ಕಾಲದಲ್ಲಿ ಭಾರತದಲ್ಲಿ ಸತಿ ಪದ್ಧತಿ ಸಾರ್ವತ್ರಿಕವಾಗಿತ್ತೆಂದು ಇದರಿಂದ ಸ್ಪಷ್ಟವಾಗುತ್ತದೆ. ವಿಜಯನಗರದ ರಾಜನ ಬಗ್ಗೆ ಹೀಗೆ ಬರೆದಿದ್ದಾನೆ. "ಇಲ್ಲಿಯ ರಾಜನು ಇಂಡಿಯಾ ದೇಶದ ರಾಜರೆಲ್ಲರಿಗಿಂತ ಬಹಳ ಬಲಾಢ್ಯನಾಗಿದ್ದಾನೆ. ಇವನಿಗೆ ಹನ್ನೆರಡು ಸಾವಿರ ಹೆಂಡತಿಯರಿದ್ದಾರೆ. ಇವರಲ್ಲಿ ನಾಲ್ಕು ಸಾವಿರ ಜನ ಅವನು ಹೋದೆಡೆಯಲ್ಲೆಲ್ಲಾ ಕಾಲ್ನಡಗೆಯಲ್ಲಿ ಹೋಗುತ್ತಾರೆ. ಇವರದು ಮುಖ್ಯವಾಗಿ ಅಡುಗೆಯ ಕೆಲಸ. ಇವರಿಗಿಂತಲೂ ಹೆಚ್ಚು ರೂಪವತಿಯರಾದ ನಾಲ್ಕು ಸಾವಿರ ಹೆಂಡತಿಯರು ಕುದುರೆಗಳ ಮೇಲೆ ಸವಾರಿ ಮಾಡುತ್ತಾ ಹೋಗುತ್ತಾರೆ. ಉಳಿದವರನ್ನು ಪಲ್ಲಕ್ಕಿಗಳ ಮೇಲೆ ಗಂಡಸರು ಹೊತ್ತುಕೊಂಡು ಹೋಗುತ್ತಾರೆ. ಇವರಲ್ಲಿ ಎರಡು ಮೂರು ಸಾವಿರ ಹೆಂಡತಿಯರು ರಾಜನು ಸತ್ತಾಗ ತಮ್ಮ ಆತ್ಮಸಂತೋಷದಿಂದ ಚಿತೆಯೊಳಗೆ ಬಿದ್ದು ಪ್ರಾಣ ತ್ಯಾಗ ಮಾಡುತ್ತೇವೆಂಬ ವಾಗ್ದಾನ ಮಾಡಿ ರಾಜನ ಕೈ ಹಿಡಿಯುತ್ತಾರೆ."

ಈತ ಶ್ರೀಗಂಧದ ಮರದ ಸುಗಂಧವನ್ನು ಉಲ್ಲೇಖಿಸಿದ್ದಾನೆ. ವೇಶ್ಯೆಯರ ಶೃಂಗಾರವನ್ನು ಕೂಡ ವರ್ಣಿಸದೆ ಬಿಟ್ಟಿಲ್ಲ. ಮಧ್ಯ ಇಂಡಿಯಾದಲ್ಲಿ ರೂಢಿಯಲ್ಲಿದ್ದ ಏಕಪತ್ನೀತ್ವವನ್ನೂ ಉಳಿದೆಡೆ ಇದ್ದ ಬಹುಪತ್ನೀತ್ವವನ್ನೂ ಇವನು ಬಣ್ಣಿಸಿದ್ದಾನೆ. ಜ್ಯೋತಿಷ್ಯಶಾಸ್ತ್ರ ಮತ್ತು ಬ್ರಾಹ್ಮಣರ ಬಗ್ಗೆ ಬರೆಯುತ್ತ "ಇಂಡಿಯಾ ದೇಶದಲ್ಲಿ ಎಲ್ಲ ಕಡೆಗೂ ಬ್ರಾಹ್ಮಣರೆಂಬ ತತ್ತ್ವಜ್ಞಾನಿಗಳಿದ್ದಾರೆ. ಇವರು ಜ್ಯೋತಿಷ್ಯ ಮತ್ತು ಭವಿಷ್ಯ ಹೇಳುವ ಕೆಲಸದಲ್ಲಿ ನಿರತರಾಗಿದ್ದಾರೆ." ಎಂದಿದ್ದಾನೆ ಅನಂತರ ಇಲ್ಲಿಯ ದೇವಾಲಯಗಳು ಪೂಜೆಯ ವಿಧಾನ ಇವುಗಳನ್ನು, ಇವನ ಬರೆವಣಿಗೆಯಿಂದ ಅರಿಯಬಹುದು. ಈತ ಭಾರತದ ಮೂರು ಪ್ರಮುಖ ಹಬ್ಬಗಳನ್ನು ಉಲ್ಲೇಖಿಸಿದ್ದಾನೆ. ಅವುಗಳ ವರ್ಣನೆಯಿಂದ ಅವು ದೀಪಾವಳಿ, ನವರಾತ್ರಿ ಮತ್ತು ಯುಗಾದಿ ಇರಬಹುದೆಂದು ಶ್ರೀ ನಾಗೇಗೌಡರು ಊಹಿಸಿದ್ದಾರೆ. ಇದಲ್ಲದೆ ಓಕುಳಿಯ ಬಗ್ಗೆಯೂ (ಹೋಳಿ) ವಿವರಣೆ ಇಲ್ಲಿದೆ. ಹೀಗೆ ನಿಕೊಲೊ–ದೆ–ಕೊಂತಿ ಬಣ್ಣಿಸಿದ ಇಂಡಿಯಾ ದೇಶದ ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳನ್ನು ಕಣ್ಣಿಗೆ ಕಟ್ಟುವಂತೆ ಶ್ರೀ ನಾಗೇಗೌಡರು ಕನ್ನಡಿಸಿದ್ದಾರೆ.

ಭಾರತವನ್ನು ಸಂದರ್ಶಿಸಿದ ಇನ್ನೊಬ್ಬ ಪ್ರವಾಸಿ ಅಬ್ದುರ್ ರಜಾಕ್. ಇವನು ವಿಜಯನಗರದ ರಾಯನ ಬಳಿಗೆ ರಾಯಭಾರಿಯಾಗಿ ಬಂದ. ಕ್ರಿ. ಶ. 1442ರಲ್ಲಿ

ಹೆರಾತಿನಿಂದ ಭಾರತಕ್ಕೆ ಹೊರಟ ಅಬ್ದುರ್ ರಜಾಕ್ ಕಲ್ಲಿಕೋಟೆ ಮಂಗಳೂರು ಮಾರ್ಗವಾಗಿ ವಿಜಯನಗರವನ್ನು ಸೇರಿದ. ಇವನು ಹಿಂದಿರುಗುವಾಗ ಕರ್ನಾಟಕದ ಹೊನ್ನಾವರದಿಂದ ಸಮುದ್ರಯಾನ ಮಾಡಿದನೆಂದು ತಿಳಿದು ಬರುತ್ತದೆ. ಈತನ ಪ್ರವಾಸಕಥನ ಪುಸ್ತಕದ ಹೆಸರು ಮತ್ಲ್-ಅಸ್-ಸಾ-ದೈನ್. ಪ್ರವಾಸಕಥನವನ್ನಲ್ಲದೆ ಷಾ ರುಖ್‌ನ ಮತ್ತು ತೈಮೂರನ ಉತ್ತರಾಧಿಕಾರಿಗಳ ಚರಿತ್ರೆಯನ್ನು ಇವನು ಬರೆದಿದ್ದಾನೆ. ಇತರ ಪ್ರವಾಸಿಗಳ ಬಗ್ಗೆ ಬರೆದಂತೆ ಅಬ್ದುರ್ ರಜಾಕ್‌ನ ಜನನ, ಕೈಗೊಂಡ ಪ್ರಯಾಣದ ವಿವರಗಳನ್ನು ಪ್ರಾರಂಭದಲ್ಲಿ ಶ್ರೀ ನಾಗೇಗೌಡರು ನೀಡಿದ್ದಾರೆ. ಅಬ್ದುರ್ ರಜಾಕನ ಪ್ರವಾಸ ಕಥನ ಕರ್ನಾಟಕದ ದೃಷ್ಟಿಯಿಂದ ಮಹತ್ತ್ವಪೂರ್ಣ ವಾದುದಾಗಿದೆ. ವಿಜಯನಗರದ ಕಾಲದ ಇತಿಹಾಸ, ಜನಜೀವನ ಸಂಸ್ಕೃತಿ ಇವುಗಳ ಮೇಲೆ ಅಧ್ಯಯನ ನಡೆಸುವವರಿಗೆ ಅಬ್ದುರ್ ರಜಾಕನ ಕಥನಗಳು ತುಂಬ ಉಪಯುಕ್ತವಾಗಿವೆ. ವಿಜಯನಗರವನ್ನು ಈತ ಹೀಗೆ ಬಣ್ಣಿಸಿದ್ದಾನೆ—"ವಿಜಯನಗರ ಬಹಳ ದೊಡ್ಡದಾದ ಜನವಸತಿಯುಳ್ಳ ಊರು. ರಾಜನ ಖ್ಯಾತಿ ಮತ್ತು ಅವನ ಪ್ರಭುತ್ವ ಮಹೋನ್ನತವಾಗಿದೆ. ರಾಜ್ಯ ಸೆರೆನ್ ದಿಬ್ (ಸಿಂಹಳ) ಗಡಿಯಿಂದ ಕಲ್ಬರ್ಗದ ಕೊಟ್ಟಕೊನೆಯವರೆಗೆ ಬಂಗಾಳದಿಂದ ಮೆಲಿಬಾರ್ (ಮಲಬಾರ್) ಕೊನೆಯವರೆಗೆ ಕೃಷ್ಣನದಿಯಿಂದ ಕೇಪ್ ಕಾಮೊರಿನ್‌ವರೆಗೆ ಸಾವಿರ ಫರ್ಲಾಂಗುಗಳಷ್ಟು ವಿಸ್ತರಿಸಿದೆ. ದೇಶದ ಬಹುಭಾಗ ಸಾಗುವಳಿಯಲ್ಲಿದ್ದು ಬಹು ಫಲವತ್ತಾಗಿದೆ. ಈ ದೇಶದಲ್ಲಿ ಮುನ್ನೂರು ಬಂದರುಗಳಿವೆ. ಪರ್ವತದೋಪಾದಿಯಲ್ಲಿರುವ ಮತ್ತು ಪೆಡಂಭೂತಗಳಂತಿರುವ ಸಾವಿರಕ್ಕೂ ಮೀರಿದ ಆನೆಗಳನ್ನು ಇಲ್ಲಿ ನೋಡಬಹುದು. ಸೈನ್ಯದಲ್ಲಿ ಹನ್ನೊಂದು ಲಕ್ಷದಷ್ಟು ಯೋಧರಿದ್ದಾರೆ.

ವಿಜಯನಗರದಂಥ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳೂ ಏಳು ಕೋಟೆಗಳು ಒಂದನ್ನೊಂದು ಆವರಿಸಿಕೊಂಡಿವೆ.

ಈ ರಾಯನ ಶ್ರೇಷ್ಠತೆಯನ್ನು ಮೀರಿಸುವ ದೊರೆ ಇಡೀ ಹಿಂದೂಸ್ಥಾನದಲ್ಲಿ ಎಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಹಿಂದೂಸ್ಥಾನದ ರಾಜರುಗಳನ್ನು ರಾಯ್ ಎಂದು ಕರೆಯುತ್ತಾರೆ.

ಅಲ್ಲಿಯ ನಗರ ವ್ಯಾಪಾರದ ಬಗ್ಗೆ ಹೀಗೆ ಬರೆದಿದ್ದಾನೆ "ಅಂಗಡಿ ಬೀದಿಗಳು ಬಹು ಉದ್ದವಾಗಿಯೂ ಅಗಲವಾಗಿಯೂ ಇವೆ. ಗುಲಾಬಿ ವ್ಯಾಪಾರಿಗಳು ತಮ್ಮ ಅಂಗಡಿಗಳ ಮುಂದೆ ಎತ್ತರವಾದ ವೇದಿಕೆಗಳನ್ನು ರಚಿಸಿಕೊಂಡಿದ್ದಾರೆ. ಈ ವೇದಿಕೆಗಳ ಎರಡೂ ಕಡೆ ಹೂಗಳನ್ನು ರಾಶಿ ಹಾಕಿ ವ್ಯಾಪಾರ ಮಾಡುತ್ತಾರೆ. ಬೀದಿಗಳಲ್ಲೆಲ್ಲಾ ಗುಲಾಬಿ ಹೂವಿನ ವಾಸನೆಯೋ ವಾಸನೆ. ಹೊಸ ಗುಲಾಬಿ ಹೂಗಳ ನೋಟವೋ ನೋಟ. ಈ ಜನಗಳು ಗುಲಾಬಿ ಹೂಗಳು ಇಲ್ಲದಿದ್ದರೆ ಬದುಕುವಂತೆಯೇ ಕಾಣುವುದಿಲ್ಲ. ಹೊಟ್ಟೆಗೆ

ಹಿಟ್ಟು ಎಷ್ಟು ಅವಶ್ಯಕವೋ ಜುಟ್ಟಿಗೆ ಗುಲಾಬಿಯೂ ಅಷ್ಟೇ ಅವಶ್ಯಕವೆಂದು ಭಾವಿಸುತ್ತಾರೆ."

ಬೇರೆ ಬೇರೆ ಕಸುಬಿಗೆ ಸೇರಿದ ವರ್ತಕರ ಅಂಗಡಿಗಳು ಬೇರೆ ಬೇರೆ ಇವೆ. ರತ್ನಪಡಿ ವ್ಯಾಪಾರಿಗಳು ಅಂಗಡಿ ಬೀದಿಗಳಲ್ಲಿ ಬಹಿರಂಗವಾಗಿ ವಜ್ರವೈಡೂರ್ಯಗಳನ್ನೂ ಮುತ್ತುಗಳನ್ನೂ ಮಾರುತ್ತಾರೆ.

ಈ ಮನೋಹರವಾದ ಪ್ರದೇಶದಲ್ಲಿಯೂ ರಾಜನ ಅರಮನೆಯಲ್ಲಿಯೂ ಸೊಗಸಾಗಿ ಗುಪ್ಪ ಕಲ್ಲಿನಿಂದ ನಿರ್ಮಿಸಿದ ಕಾಲುವೆಗಳಲ್ಲಿ ಹರಿಯುವ ನೀರಿನ ಝರಿಗಳನ್ನು ನೋಡಬಹುದು.

ಅಬ್ದುಲ್ ರಜಾಕ್ ವಿಜಯನಗರಕ್ಕೆ ಬಂದಾಗ ವಿಜಯನಗರ ಸುವರ್ಣಯುಗದಲ್ಲೇ ಇತ್ತೆಂಬುದು ಸ್ಪಷ್ಟವಾಗುತ್ತದೆ. ಈತ ವಿಜಯನಗರದ ಟಂಕಸಾಲೆ, ರಾಯನ ದಿವಾನ್‌ಖಾನೆ, ಹಜಶಾಲೆ, ರಾಜನನ್ನು ಸಂದರ್ಶಿಸುವ ಬಗೆ-ಇವುಗಳನ್ನು ಸೊಗಸಾಗಿ ಬಣ್ಣಿಸಿದ್ದಾನೆ. ದೇಶೀಯರ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿತ್ತೆಂಬುದನ್ನು ಇವನೂ ಹೇಳಿದ್ದಾನೆ.

ಅಥನೇಸಿಯಸ್ ನಿಕಿಟಿನ್ ರಷ್ಯದೇಶದಿಂದ ಭಾರತಕ್ಕೆ ಬಂದ ಪ್ರವಾಸಿಗಳಲ್ಲಿ ಬಹುಶಃ ಮೊದಲನೆಯವನು. ಕ್ರಿ. ಶ. 1470ರಲ್ಲಿ ಭಾರತಕ್ಕೆ ಆಗಮಿಸಿದ. ಈತನ ಕಥನಗಳಲ್ಲಿ ಬರುವ ಹಲವು ಸಂಗತಿಗಳು ನೋಡದೆ ಬರೆದವುಗಳಾಗಿವೆ. ಈತ ತನ್ನ ಪ್ರವಾಸದಲ್ಲಿ ಕರ್ನಾಟಕದ ಬೀದರ್-ಗುಲ್ಬರ್ಗಾ ನಗರಗಳಿಗೂ ಭೇಟಿ ನೀಡಿದ್ದ. ಬೀದರ್ ಬಗ್ಗೆ ಹೀಗೆ ಬರೆದಿದ್ದಾನೆ. "ಬೀದರ್‌ನಲ್ಲಿ ಕುದುರೆ ರೇಷ್ಮೆ ಮತ್ತು ಇತರ ನಾನಾ ಸಾಮಾನುಗಳ ಹಾಗೂ ಕಪ್ಪು ಜನರ ವ್ಯಾಪಾರ ನಡೆಯುತ್ತವೆ. ಇಂಡಿಯಾದೇಶದ ಸಾಮಾನುಗಳಲ್ಲದೆ ಬೇರೆ ಯಾವ ಸಾಮಾನುಗಳೂ ಸಿಗುವುದಿಲ್ಲ." ಆದರೆ ಈತ ಬಣ್ಣಿಸಿದಂತೆ ಇಲ್ಲಿಯ ಜನರೆಲ್ಲ ಕರಿಯರೂ ಕೆಟ್ಟವರಲ್ಲ. ಇಡಿ ಮಹಮದೀ ಇಂಡಿಯಾದಲ್ಲಿ ಬೀದರ್ ಮುಖ್ಯ ನಗರ. ಇದು ಬಹಳ ದೊಡ್ಡದಾಗಿದ್ದು ಜನಭರಿತವಾಗಿದೆ. ಬೀದರ್ ಸುಲ್ತಾನ 20 ವರ್ಷ ವಯಸ್ಸಿನ ಚಿಕ್ಕ ಹುಡುಗ. ಶ್ರೀಮಂತ ಸರದಾರರ ಹಿಡಿತದಲ್ಲಿದ್ದಾನೆ. ಇವನು ಯುದ್ಧಕ್ಕೆ ಹೋಗುವಾಗ ತನ್ನ ಮೂರು ಲಕ್ಷ ಸೈನ್ಯ ಸಮೇತ ಹೋಗುತ್ತಾನೆ.

"ಬೀದರ್ ಪಟ್ಟಣವನ್ನು ರಾತ್ರಿಯ ಕಾಲದಲ್ಲಿ ಶಸ್ತ್ರಸಜ್ಜಿತರಾದ ಸಾವಿರ ಕೊತ್ವಾಲರು ಕಾಯುತ್ತಾರೆ. ಬೀದರ್ ನಾಡು ಜನಭರಿತವಾಗಿದೆ. ಪಟ್ಟಣಗಳಲ್ಲಿ ವಾಸ ಮಾಡುವ ಶ್ರೀಮಂತರೂ ಅಷ್ಟೈಶ್ವರ್ಯದಲ್ಲಿ ಮೆರೆಯುತ್ತಿದ್ದಾರೆ. ಶ್ರೀಮಂತರು ಬೆಳ್ಳಿಯ ತಾಸುಗೆಗಳಲ್ಲಿ (ಪಲ್ಲಕ್ಕಿಗಳಲ್ಲಿ) ಕುಳಿತು ಹೊರಿಸಿಕೊಂಡು ಹೋಗುತ್ತಾರೆ. ಹಿಂದೆ ಚಿನ್ನದ ಹೊದಿಕೆಯ 20 ಅಶ್ವಗಳೂ, 300 ಅಶ್ವಾರೋಹಿಗಳೂ, 500 ಪದಾತಿಗಳೂ

ಹೋಗುತ್ತಾರೆ. ಅಲ್ಲದೆ ಕೊಂಬು ಕಹಳೆಯುವರೂ ಹತ್ತು ಜನ ದೀವಟಿಗೆಯುವರೂ ಮತ್ತು ಹತ್ತು ಜನ ವಾದ್ಯಗಾರರೂ ಇರುತ್ತಾರೆ."

ರಾಯಚೂರಿನಲ್ಲಿ ವಜ್ರಗಳು ದೊರೆಯುತ್ತವೆಂದು ಈತ ಉಲ್ಲೇಖಿಸಿದ್ದಾನೆ.

ಯೆರೋನಿಮೋ ದಿ ಸಾಂತೋ ಸ್ತಿಫಾನೊ : ಇಟಲಿ ದೇಶದ ಜಿನೀವದ ಪ್ರವಾಸಿ ತನ್ನ ಪ್ರವಾಸ ಕುರಿತಂತೆ ಮೆಸ್ಸರ್ ಜಿಯೊಲಿನ್ ಜಕೊಬೊ ಮೈನರ್ ಎಂಬವನಿಗೆ ಬರೆದ ಪತ್ರ ಈ ಕಥನಕ್ಕೆ ಆಧಾರವಾಗಿದೆ. ಇತರ ಪ್ರವಾಸಿಗಳಂತೆ ಈತನೂ ವಿಗ್ರಹಾರಾಧನೆ, ಇಲ್ಲಿ ಬೆಳೆಯುವ ದಾಲ್ಚಿನ್ನಿ, ಶುಂಠಿ, ಮೆಣಸು ಇವುಗಳ ಬಗ್ಗೆ ಪ್ರಸ್ತಾಪಿಸಿದ್ದಾನೆ.

ಭಾರತಕ್ಕೆ ಭೇಟಿ ನೀಡಿದ ಪ್ರವಾಸಿಗಳಲ್ಲಿ ವಾಸ್ಕೊಡಿಗಾಮ ಮತ್ತು ಇತರ ಪೋರ್ಚುಗೀಸ್ ಪ್ರವಾಸಿಗಳು ಭಾರತಕ್ಕೆ ಬಂದರು. ಆದರೆ ಗಾಮಾನೇ ಬರೆದ ಪ್ರವಾಸಿ ಕಥನವು ಇಲ್ಲವಾದ್ದರಿಂದ ಬಹಳ ಶ್ರಮಪಟ್ಟು ಅವನ ಮತ್ತು ಇತರ ಪ್ರವಾಸಿಗಳ ಬಗ್ಗೆಯೂ ಶ್ರೀ ನಾಗೇಗೌಡರು ವಿಷಯ ಸಂಗ್ರಹಿಸಿಕೊಟ್ಟಿದ್ದಾರೆ. ಪ್ರವಾಸಿಗಳ ನೇರ ಕಥನಗಳಿಗಿಂತ ಇಲ್ಲಿಯ ನಿರೂಪಣೆ ಭಿನ್ನವಾಗಿದೆ. ಇತರ ಪ್ರವಾಸಿಗಳು ಆದರೇ ತಮ್ಮ ಪ್ರವಾಸಕಥನವನ್ನು ಬಣ್ಣಿಸಿದ್ದಾರೆ. ಆದರೆ ಇಲ್ಲಿ ಶ್ರೀ ನಾಗೇಗೌಡರು ವಾಸ್ಕೊಡಿಗಾಮಾನ ಜನನ, ಬಾಲ್ಯ ವಿದ್ಯಾಭ್ಯಾಸಗಳನ್ನಲ್ಲದೇ ಅವನು ಸಂದರ್ಶಿಸಿದ ದೇಶಗಳನ್ನೂ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಈತ ಸಮುದ್ರಮಾರ್ಗವಾಗಿ ಭಾರತಕ್ಕೆ ಆಗಮಿಸಿದ. ಪ್ರಥಮಬಾರಿ ಕ್ಯಾಲಿಕಟ್ ಬಂದರಿಗೆ ಬಂದಿಳಿದಾಗ ಇಲ್ಲಿಯ ಜನರನ್ನು ಕ್ರೈಸ್ತ ಧರ್ಮೀಯರೆಂದು ತಪ್ಪಾಗಿ ಭಾವಿಸಿದ. ತಾನು ಪೋರ್ಚುಗಲ್ ರಾಜನ ಪ್ರತಿನಿಧಿಯೆಂದು ಹೇಳಿಕೊಂಡು-ಪೋರ್ಚುಗಲ್ ರಾಜ ಹೇಳು ಎಂದು ಹೇಳಿ ಕಳಿಸಿದ್ದಾನೆ. "ಅದೇದರೆ ಸ್ನೇಹ ಮತ್ತು ಸಹೋದರರ ಪ್ರೀತಿ" ಎಂದು ಹೇಳಿದುದನ್ನು ಶ್ರೀ ನಾಗೇಗೌಡರು ಉಲ್ಲೇಖಿಸಿದ್ದಾರೆ. ಗಾಮಾ, ಸ್ವದೇಶಕ್ಕೆ ತೆರಳಿದಾಗ ಭಾರತದಲ್ಲಿ ದೊರೆಯುವ ಸಾಂಬಾರ ಜಿನಿಸುಗಳು, ಚಿನ್ನ, ವಜ್ರವೈಢೂರ್ಯಗಳ ಬಗ್ಗೆ ಬಣ್ಣಿಸಿ ಭಾರತದ ಬಗ್ಗೆ ಅಪರ ಆಸಕ್ತಿಯನ್ನು ಕೆರಳಿಸಿದೆ. ಗಾಮಾ, ಭಾರತಕ್ಕೆ ಬಂದಿದ್ದು ಮತ್ತು ಪೋರ್ಚುಗೀಸರು ಭಾರತದೊಂದಿಗೆ ಪಡೆದ ಸಂಪರ್ಕ ಇವುಗಳನ್ನು ಕಣ್ಣಿಗೆ ಕಟ್ಟುವಂತೆ ಶ್ರೀ ನಾಗೇಗೌಡರು ವಿವರಿಸಿದ್ದಾರೆ.

ದುಆರ್ತೆ ಬಾರ್ಬೊಸಾ ಪೋರ್ಚುಗೀಸರು ವಸಾಹತು ಸ್ಥಾಪಿಸಿದಾಗ ಮೊದಲಿಗೆ ಬಂದ ಪ್ರವಾಸಿ. ಇವನು ಕ್ರಿ. ಶ. 1500ರಲ್ಲಿ ಭಾರತಕ್ಕೆ ಬಂದ. ಇತರ ಪ್ರವಾಸಿಗರಿಗೆ ನೀಡಿದಂತೆ ಬಾರ್ಬೊಸಾನ ಸಂಕ್ಷಿಪ್ತ ಜೀವನಚರಿತ್ರೆಯನ್ನು ಶ್ರೀ ನಾಗೇಗೌಡರು ಪ್ರಾರಂಭದಲ್ಲಿ ನೀಡಿದ್ದಾರೆ. ಈತ ಪೋರ್ಚುಗೀಸ್ ಭಾಷೆಯಲ್ಲಿ ಬರೆದ. ಅಲ್ಲಿಂದ ಅದು ಇಟಾಲಿಯನ್, ಸ್ಪ್ಯಾನಿಷ್ ಮತ್ತು ಇಂಗ್ಲಿಷ್ ಭಾಷೆಗಳಿಗೆ ಭಾಷಾಂತರಗೊಂಡಿದೆ. ಈತ ತನ್ನ ಕಥನವನ್ನು ಹೀಗೆ ಪ್ರಾರಂಭಿಸುತ್ತಾನೆ "ಭವ್ಯ ನಗರವಾದ ಲಿಸ್ಬನ್ನಿನ

ಮರ್ಯಾದಸ್ಥನಾದ ದುಆರ್ತೆ ಬಾರ್ಬೋಸಾ ಎಂಬ ನಾನು ನಮ್ಮ ದೊರೆಯ ಹೆಸರಿನಲ್ಲಿ ಕಂಡುಹಿಡಿದ ಇಂಡಿಯಾ ಸಮುದ್ರಗಳ ಮೇಲೆ ನನ್ನ ಯೌವನದ ಬಹುಕಾಲ ಅಲೆದಾಡಿದ್ದೇನೆ....ಅಲ್ಲದೆ ಸಮುದ್ರತೀರದ ಅನೇಕ ಪ್ರದೇಶಗಳಲ್ಲಿಯೂ ಸುತ್ತಾಡಿದ್ದೇನೆ. ಆ ಸಂದರ್ಭಗಳಲ್ಲಿ ನಮ್ಮ ಪೂರ್ವಿಕರು ಕಂಡು ಕೇಳದಂತಹ ಅದ್ಭುತ ಮತ್ತು ಆಶ್ಚರ್ಯ ವಿಚಾರಗಳನ್ನು ಕಂಡು ಕೇಳಿದೆ. ಅವನ್ನೆಲ್ಲ ಎಲ್ಲರ ಉಪಯೋಗಕ್ಕಾಗಿ ಬರೆದಿಡಬೇಕೆಂದು ನಿರ್ಧರಿಸಿರುವೆ." ಈತ ಭಾರತದ ಜನರ ನಡೆ ನುಡಿ ಆಚಾರ ವ್ಯವಹಾರಗಳ ಬಗ್ಗೆ ಬರೆಯುತ್ತೇನೆಂದು ಹೇಳಿದ್ದಾನೆ. ಗುಜರಾತ್ ರಾಜ್ಯ ಪ್ರವೇಶಿಸಿದ ಈತ ಗುಜರಾತನ್ನು ಬಣ್ಣಿಸಿದ್ದಾನೆ. ಅಲ್ಲಿ ಅಹಿಂಸಾ ವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸುವ ಸಂನ್ಯಾಸಿಗಳ ಬಗ್ಗೆ ಬರೆಯುತ್ತಾನೆ. ಅಫೀಮನ್ನು ಬಳಸುತ್ತಿರುವುದರ ಬಗ್ಗೆ ಉಲ್ಲೇಖಿಸಿದ್ದಾನೆ. ಗುಜರಾತಿನಿಂದ ಹತ್ತಿಬಟ್ಟೆ, ಮಸ್ಲಿನ್ ಬಟ್ಟೆಗಳು, ರೇಷ್ಮೆ, ಪ್ರಶಸ್ತಿಶಿಲೆ, ಎಳ್ಳೆಣ್ಣೆ, ದವನ, ತಪಸ್ವಿನೀ ಗಿಡದ ತೈಲ ಬಿಳಿಯ ಮಿಶ್ರಲೋಹ, ಅಫೀಮು, ನೀಲಿ, ಕಾಚು, ಗೇರಿ ಮತ್ತು ಇತರ ಧಾನ್ಯಗಳು ಅಕ್ಕಿ, ಎಳ್ಳು, ಕಡಲೆ, ಹುರುಳಿ ಬೀಜ-ಇತ್ಯಾದಿ ರವಾನೆಯಾಗುತ್ತವೆಂದು ಹೇಳಿದ್ದಾನೆ ನಾಣ್ಯರೂಪದಲ್ಲಿ ಬೆಳ್ಳಿ ಮತ್ತು ಚಿನ್ನ ದೊರೆಯುವುದನ್ನು ಉಲ್ಲೇಖಿಸಿದ್ದಾನಲ್ಲದೆ ವಿಜಯನಗರ ರಾಜ್ಯದ ಪರ್ತಾಬ್ ನಾಣ್ಯಗಳೂ ಚಲಾವಣೆಯಲ್ಲಿ ಇವೆಯೆಂಬುದನ್ನು ಬಣ್ಣಿಸುತ್ತಾನೆ. ಅನಂತರ ದಖನ್ನನ್ನು ಬಣ್ಣಿಸುತ್ತಾನೆ. ಕರ್ನಾಟಕದ ಭಟ್ಕಳದ ಬಗ್ಗೆ ಬರೆಯುತ್ತ "ಇಲ್ಲಿ ಭಾರೀ ವ್ಯಾಪಾರ ನಡೆಯುತ್ತದೆ. ಅನೇಕ ಮೂರರೂ ಜೆಂಟೈಲರೂ ಇಲ್ಲಿ ನೆಲೆಸಿದ್ದಾರೆ. ಇವರದು ವ್ಯಾಪಾರದಲ್ಲಿ ಎತ್ತಿದ ಕೈ. ಭಟ್ಕಳ ಬಹಳ ಶ್ರೀಮಂತಿಕೆಯ ಊರು. ರಾಜನಿಗೂ ಇಲ್ಲಿರುವ ಜಂಟೈಲ್ ರಾಜ್ಯಪಾಲನಾದ ದಾಮಾ ಚೇತಿಗೂ ಬಹಳ ಆದಾಯ ಬರುತ್ತದೆ.

ಪ್ರತಿವರ್ಷ ಇಲ್ಲಿ ತಾಮ್ರ ಮಾರಾಟವಾಗುತ್ತದೆ. ತಾಮ್ರವನ್ನು ಹಣ ಮಾಡಲು, ಕಡಾಯಿ ಮುಂತಾದ ಪಾತ್ರೆಗಳನ್ನು ಮಾಡಲು ಒಳನಾಡಿಗೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲದೆ ಇಲ್ಲಿ ಪಾದರಸ, ಸಿಂಧೂರ, ಹವಳ, ಸ್ಫಟಿಕ ಮತ್ತು ದಂತ ಇವು ಮಾರಾಟವಾಗುತ್ತವೆ. ಮುಂದೆ ಈತ ಬೈಂದೂರು, ಬಾರ್ಕೂರು ಮುಂತಾದ ಊರುಗಳನ್ನು ಬಣ್ಣಿಸುತ್ತಾನೆ. ಬೇರೆ ಬೇರೆ ಜಾತಿ ಅವರ ಪದ್ಧತಿ, ಕರ್ನಾಟಕದ ಸ್ತ್ರೀಯರು—ಹೀಗೆ ಬಹಳ ವಿಷಯಗಳನ್ನು ಬಣ್ಣಿಸುತ್ತಾನೆ. ಮಲಬಾರಿನ ನಾಯರ್ ಜನಾಂಗ ಮತ್ತು ಅವರ ಸಂಪ್ರದಾಯಗಳೂ ಇಲ್ಲಿ ವರ್ಣಿತವಾಗಿವೆ. ಇವೆಲ್ಲವೂ ಸಮಾಜಶಾಸ್ತ್ರಜ್ಞರಿಗೆ ತುಂಬ ಉಪಯುಕ್ತವಾದ ಮಾಹಿತಿಗಳು.

ಡೊಮಿಂಗೋ ಪಾಯೀಸ್ :—ಕರ್ನಾಟಕದ ಇತಿಹಾಸದ ದೃಷ್ಟಿಯಿಂದ ಡೊಮಿಂಗೋ ಪಾಯೀಸ್ ಮತ್ತು ಫೆರ್ನಾಂವ ನೂನಿಜ ಇವರ ಪ್ರವಾಸ ಕಥನಗಳು–ತುಂಬ ಮಹತ್ತರ ದಾಖಲೆಗಳು. ಕನ್ನಡಿಗರು ಈ ಪ್ರವಾಸಿಗಳಿಬ್ಬರಿಗೂ ಕೃತಜ್ಞರಾಗಿರಬೇಕಾಗುತ್ತದೆ. ವಿಜಯನಗರದ ಉಚ್ಛ್ರಾಯ ಕಾಲದಲ್ಲಿ (ಎರಡನೆಯ ಕೃಷ್ಣದೇವ

ರಾಯನ ಕಾಲ) ಪಾಯೇಸ್ ಇಲ್ಲಿಗೆ ಬಂದ (ಕ್ರಿ. ಶ. 1520). ಶ್ರೀ ಕೃಷ್ಣದೇವರಾಯನ ವೈಭವದ ಬಗ್ಗೆ ಈತ ಬಣ್ಣಿಸಿದ್ದಾನೆ. ಪಾಯೇಸ್‌ನ ಅನಂತರ ಬಂದ ಇನ್ನೊಬ್ಬ ಪ್ರವಾಸಿ ನೂನಿಜ್. ಈತ ವಿಜಯನಗರದ ಸ್ಥಾಪನೆಯಿಂದ ಪ್ರಾರಂಭಿಸಿ ಅಚ್ಯುತ ರಾಯನ ಕಾಲದವರೆಗಿನ ವಿಜಯನಗರದ ಸ್ಥಿತಿಯನ್ನೂ ವಿವರಿಸಿದ್ದಾನೆ. ಈತ ಬರೆದಿರುವ ಕಥನವೇ ವಿಜಯನಗರ ಇತಿಹಾಸಕ್ಕೆ ಆಧಾರವಾಗಿವೆ. ಇವರಿಬ್ಬರ ಪ್ರವಾಸ ಕಥನವು ಕರ್ಣಾಟಕದ ದೃಷ್ಟಿಯಿಂದ ಮಹತ್ತ್ವದ್ದಷ್ಟೆ ಅಲ್ಲ ಅಮೂಲ್ಯವೂ ಆಗಿದೆ. ಇವರಿಬ್ಬರ ಬಗ್ಗೆಯೂ ಶ್ರೀನಾಗೇಗೌಡರು ಪ್ರಸ್ತಾಪಿಸಿದ್ದಾರೆ. ಅರಬ್ಬೀ ವಿದ್ವಾಂಸ ಡೇವಿಡ್ ಲೋಪ್ ಎಂಬವರು ಪಾಯೇಸ್ ಮತ್ತು ನೂನಿಜರ್ ಮೂಲಗ್ರಂಥ ಪ್ರಕಟಿಸಿದ್ದಾರೆ. 1897ರಲ್ಲಿ ಪ್ರಕಟಿಸಿದ 'ಡೋಸ್ ರೈಸ್-ದೆ ಬಿಸ್ನಾಗ' ಎಂಬ ಪುಸ್ತಕದಲ್ಲಿ ಈ ಇಬ್ಬರು ಪ್ರವಾಸಿಗಳ ಬಗ್ಗೆ ಬರೆದಿದ್ದಾರೆ. ಆ ಪುಸ್ತಕದ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ. ಇವರು ("ಪಾಯೇಸ್ ಮತ್ತು ನೂನಿಜ) ಬರೆದಿರುವುದು ಚರಿತ್ರಾ ದೃಷ್ಟಿಯಿಂದ ಲಾಗಲೀ ಅಥವಾ ಆ ದೇಶದ ಅದರಲ್ಲಿಯೂ ರಾಜಧಾನಿಯ ಅದರ ಉತ್ಪನ್ನ ವಸ್ತುಗಳ ಅಲ್ಲಿಯ ಪದ್ಧತಿಗಳ ಮತ್ತು ಇತರ ಸಂಗತಿಗಳ ವರ್ಣನೆಯ ದೃಷ್ಟಿಯಿಂದಲಾಗಲೀ ಯಾವ ಭಾಷೆಯಲ್ಲಿ ಬರೆದಿರುವುದನ್ನಾದರೂ ಮೀರಿಸುತ್ತದೆ. ಇಟಲಿ ದೇಶದ ಪ್ರವಾಸಿ ಗಳಾದ ನಿಕೊಲೊ-ದೆ-ಕೊಂತಿ ಮತ್ತು ಫ್ರೆಡರಿಕ್ ಇವರುಗಳು ಕಂಡು ಬರೆದ ಚಿತ್ರ ಇವುಗಳಷ್ಟು ವಿವರವಾಗಿಲ್ಲ." ಈ ಕಾರಣಗಳಿಂದ ಪಾಯೇಸ್ ಮತ್ತು ನೂನಿಜ ವೃತ್ತಾಂತಗಳು, ವಿಜಯನಗರ ಸಾಮ್ರಾಜ್ಯ ಸ್ಥಿತಿಗಳನ್ನು ಅರಿಯಲು ತುಂಬ ಸಹಾಯಕ ವಾಗಿವೆ.

ವಿಜಯನಗರದಲ್ಲಿ ನಡೆಯುತ್ತಿದ್ದ ನವರಾತ್ರಿ ಉತ್ಸವವನ್ನು ಪಾಯೇಸ್ ಬಣ್ಣಿಸಿ ದ್ದಾನೆ. ಆ ಕಾಲದಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಕೂಟಗಳ ವರ್ಣನೆಯೂ ಇಲ್ಲಿವೆ, ಆಡಳಿತಬಗ್ಗೆ ಹೀಗೆ ಬರೆಯುತ್ತಾನೆ : "ಶ್ರೀಮಂತ ಸರದಾರರನ್ನು ಮತ್ತು ದಳವಾಯಿ ಗಳನ್ನು ಬಿಟ್ಟರೆ ಐದು ರಾಜರು ಈ ರಾಜನಿಗೆ ಅಧೀನರಾಗಿದ್ದಾರೆ. ಇವರ ರಾಜ್ಯ ವಿಸ್ತಾರವಾಗಿದ್ದು ಆದಾಯ ಅಪಾರವಾಗಿದೆ. ರಾಜನಿಗೆ ಹೆಣ್ಣು ಮಗುವೋ ಗಂಡುಮಗುವೋ ಹುಟ್ಟಿದಾಗಲೆಲ್ಲ ರಾಜ್ಯದ ಶ್ರೀಮಂತರೆಲ್ಲ ಬೆಲೆಯಾದ ಆಭರಣ ಗಳನ್ನೂ ಹಣವನ್ನೂ ನಜರ್ ಒಪ್ಪಿಸುತ್ತಾರೆ. ಹಾಗೆಯೇ ರಾಜನ ವರ್ಧಂತಿ ದಿನವೂ ಮಾಡುತ್ತಾರೆ. ಮೇಲೆ ಹೇಳಿದ ಹಬ್ಬ ಮುಗಿದಮೇಲೆ ಅಕ್ಟೋಬರ್ ತಿಂಗಳಿನ ಪ್ರಾರಂಭದಲ್ಲಿ ನಡೆಯುವ ಈ ಜನಗಳ ಹೊಸ ವರ್ಷದ ದಿನವೂ ಇದೇ ರೀತಿ ರಾಜನಿಗೆ ನಜರು ಒಪ್ಪಿಸುತ್ತಾರೆ."

ವಿಜಯನಗರದ ನಾಣ್ಯದ ಬಗ್ಗೆ ಪ್ರಸ್ತಾಪಿಸಿರುವ ಪಾಯೇಸ್ "ಪಾರ್ಡಾವ್ ನಾಣ್ಯ ದುಂಡಾಗಿದೆ. ಅದನ್ನು ಚಿನ್ನದಿಂದ ಮಾಡಿದ್ದಾರೆ. ಈ ರಾಜ್ಯದಲ್ಲಿ ಅಲ್ಲದೆ ಬೇರೆ ಕಡೆ ಚಿನ್ನದ ನಾಣ್ಯವನ್ನು ಟಂಕೆ ಒತ್ತುವುದಿಲ್ಲ. ನಾಣ್ಯಗಳ ಒಂದು ಕಡೆ ಎರಡು ವಿಗ್ರಹಗಳೂ

ಮತ್ತೆರಡು ಕಡೆ ರಾಜನ ಹೆಸರೂ ಇದೆ. ಈಗಿರುವ ರಾಜನ ಆಜ್ಞೆಯಂತೆ ಟಂಕ ಒತ್ತಿಸಿದ ನಾಣ್ಯಗಳ ಒಂದು ಕಡೆ ಒಂದೇ ಒಂದು ವಿಗ್ರಹವಿದೆ. ಈ ನಾಣ್ಯ ಇಂಡಿಯಾ ದಕ್ಷಿಣ ಚಲಾವಣೆಯಲ್ಲಿದೆ. ಪಾಯೇಸ್ ವಿಜಯನಗರದ ಅರಮನೆಯ ವೈಭವವನ್ನು ಬಣ್ಣಿಸಿದ್ದಾನೆ. ಅಲ್ಲಿಯ ಸ್ತ್ರೀಯರು ತೊಡುವ ಆಭರಣಗಳ ಬಗ್ಗೆಯೂ ಪ್ರಸ್ತಾಪಿಸಿದ್ದಾನೆ. ವಿಜಯನಗರ ಭಾರೀ ಜನವಸತಿಯುಳ್ಳ ನಗರವಾಗಿತ್ತೆಂಬುದು ಇವನ ಕಥನದಿಂದ ಸ್ಪಷ್ಟವಾಗುತ್ತದೆ. ಇವನು "ಈ ನಗರದಲ್ಲಿ ಒಂದು ಲಕ್ಷ ಮನೆಗಳಿಗಿಂತಲೂ ಹೆಚ್ಚು ವಾಸದ ಮನೆಗಳಿವೆ" ಎಂದಿದ್ದಾನೆ.

ಫೆರ್ನಾಂವ್ ನೂನಿಜ ವಿಜಯನಗರದ ಇತಿಹಾಸದ ಬಹು ಮುಖ್ಯ ಚರಿತ್ರಕಾರ. ಈತ ವಿದ್ಯಾರಣ್ಯರ ನೆರವಿನಿಂದ ಹಕ್ಕಬುಕ್ಕರು ರಾಜ್ಯವನ್ನು ಸ್ಥಾಪಿಸಿದ್ದನ್ನೂ ಉಲ್ಲೇಖಿಸಿದ್ದಾನೆ. ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ನಡೆದ ಯುದ್ಧಗಳ ವರ್ಣನೆಯೂ ಇಲ್ಲಿದೆ. ಶ್ರೀಕೃಷ್ಣದೇವರಾಯ ಮತ್ತು ಚಿನ್ನಾದೇವಿಯರ ನಡೆದ ಪ್ರಣಯ ಪ್ರಸಂಗಗಳೂ ಸ್ವಾರಸ್ಯವಾಗಿವೆ. ನೂನಿಜ ವಿವರಿಸಿ ಹಲವು ಸಂಗತಿಗಳನ್ನು ಶ್ರೀನಾಗೇಗೌಡರು ಮೂಲಕ್ಕೆ ವ್ಯತ್ಯಯ ಬಾರದಂತೆ ಕನ್ನಡಕ್ಕೆ ತಂದಿದ್ದಾರೆ. ನೂನಿಜ ವಿಜಯನಗರದ ಆಡಳಿತದ ಬಗ್ಗೆ ಹೀಗೆ ಬರೆಯುತ್ತಾನೆ "ಈ ದೇಶದ ರಾಜರುಗಳು ಯಾವಾಗ ಬೇಕಾದರೆ ಆಗ ಸಾಕಷ್ಟು ಸೈನ್ಯವನ್ನು ಶೇಖರಿಸಬಹುದು. ಇವನ್ನು ಇಟ್ಟುಕೊಂಡು ಸಲಹುವ ಜವಾಬ್ದಾರಿ ಶ್ರೀಮಂತ ಸರದಾರರುಗಳದು. ಈ ಕಾರಣಗಳಿಂದ ಸಾಮಾನ್ಯ ಜನರು ಬಹಳ ಕಷ್ಟಕ್ಕೀಡಾಗುತ್ತಾರೆ. ಯಾವ ಮುಲಾಜೂ ಇಲ್ಲದೆ ಭೂಮಿಯ ಒಡೆಯರು ರೈತರಿಂದ ತೆರಿಗೆಯನ್ನು ವಸೂಲು ಮಾಡುತ್ತಾರೆ, ಇವನು ವಿಜಯನಗರದ ನವರಾತ್ರಿ ಉತ್ಸವವನ್ನೂ ಬಣ್ಣಿಸಿದ್ದಾನೆ. ವಿಜಯನಗರದ ದೊರೆಗಳ ಕುದುರೆ ಹವ್ಯಾಸದ ಬಗ್ಗೆ ಹೀಗೆ ಬರೆದಿದ್ದಾನೆ "ವಿಜಯನಗರದ ಅರಸುಗಳಿಗೆ ಕುದುರೆಗಳನ್ನು ಸಾಕುವುದೆಂದರೆ ಬಹು ಆಸೆ. ಯಾವಾಗಲೂ ಇವರ ಲಾಯಗಳಲ್ಲಿ ಎಂಟುನೂರು ಒಂಬೈನೂರು ಕುದುರೆಗಳೂ ನಾನೂರು ಐನೂರು ಆನೆಗಳೂ ಇರುತ್ತವೆ. ಈಗ ಆಳುವ ಅಚ್ಯುತ ರಾಯನ ಲಾಯದಲ್ಲಿ ಏಳುನೂರು ಕುದುರೆಗಳೂ ನಾನೂರು ಆನೆಗಳೂ ಇವೆ. ಇವನ್ನು ಸಾಕಲು ದಿನಕ್ಕೆ ಎರಡು ಸಾವಿರ ಚಿನ್ನದ ಪಾರ್ಡಾಂವ್‌ಗಳು ಖರ್ಚಾಗುತ್ತವೆ. ಆರು ಸಾವಿರ ಜನ ಕುದುರೆ ಸವಾರರನ್ನು ರಾಜನು ಸಂಬಳ ಕೊಟ್ಟು ಇಟ್ಟುಕೊಂಡಿದ್ದಾನೆ" ಪ್ರತಿ ಶನಿವಾರವೂ ವಿಜಯನಗರದಲ್ಲಿ ಉಪವಾಸ ಮಾಡುವುದನ್ನೂ ಉಲ್ಲೇಖಿಸಿದ್ದಾನೆ. ರಾಜನ ನ್ಯಾಯ ಪದ್ಧತಿಯ ಬಗ್ಗೆಯೂ ನೂನಿಜ್ ಬರೆದಿದ್ದಾನೆ' "ಯಾರಾದರೊಬ್ಬ ಮನುಷ್ಯ ತನಗೆ ಅನ್ಯಾಯವಾಗಿದ್ದ ಪಕ್ಷದಲ್ಲಿ ಅದನ್ನು ಹೇಳಿಕೊಳ್ಳುವ ಮುನ್ನ ರಾಜನ ಮುಂದೆ ಮುಖಾಡೆ ಮಲಗಿಬಿಡುತ್ತಾನೆ. ರಾಜನು ಅಹವಾಲನ್ನು ಕೇಳುವವರೆಗೂ ಹಾಗೆಯೇ ಮಲಗಿರುತ್ತಾನೆ. ರಾಜನು ಕುದುರೆಯ ಮೇಲೆ ಹೋಗುತ್ತಿದ್ದರೆ ಫಿರ್ಯಾದಿ ಭರ್ಜಿ ತುದಿಗೆ ಸೊಪ್ಪನ್ನು ಸಿಕ್ಕಿಸಿಕೊಂಡು ಕೂಗುತ್ತಾ ಬರುತ್ತಾನೆ. ಆಗ

ರಾಜನ ಪರಿವಾರದವರು ದಾರಿ ಬಿಟ್ಟುಕೊಡುತ್ತಾರೆ. ರಾಜನು ಅಹವಾಲನ್ನು ಕೇಳಿ ಆ ಗಳಿಗೆಯಲ್ಲೇ ತೀರ್ಮಾನ ಕೊಡುತ್ತಾನೆ.

ಯಾರಾದರೂ ಒಬ್ಬ ತನ್ನ ಮಾಲು ಕಳುವಾಗಿದೆ ಎಂದು ದೂರು ಕೊಟ್ಟರೆ ರಾಜ ಆ ಪ್ರಾಂತದ ದಳವಾಯಿಗೆ ಹೇಳಿ ಕಳುಹಿಸಿ ಅವನ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾನೆ. ಗುಪ್ತಚಾರರಿಂದ ಬಹು ಶೀಘ್ರದಲ್ಲಿ ಕಳ್ಳರನ್ನು ಹಿಡಿಯಿಸಿ ಅವರನ್ನೂ ಬಲಿ ಹಾಕುತ್ತಾನೆ. ಈ ಕಾರಣ ಈ ದೇಶದಲ್ಲಿ ಕಳ್ಳಕಾಕರು ಬಹಳ ಕಡಿಮೆ.

ರಾಜನು ತಪ್ಪುಗಳಿಗೆ ವಿಧಿಸುವ ಶಿಕ್ಷೆಗಳನ್ನೂ ಈತ ವಿವರಿಸಿದ್ದಾನೆ—

"ಎಷ್ಟೇ ಸಣ್ಣ ಕಳ್ಳತನವಾಗಲಿ ಕಳ್ಳನ ಒಂದು ಕೈ ಮತ್ತು ಕಾಲನ್ನು ಕತ್ತರಿಸಿ ಹಾಕುತ್ತಾರೆ. ದೊಡ್ಡ ಕಳ್ಳತನವಾದರೆ ಕಳ್ಳನ ಕೆಳ ದವಡೆಗೆ ಕಬ್ಬಿಣದ ಕೊಕ್ಕೆಯನ್ನು ಸಿಕ್ಕಿಸಿ ನೇತು ಹಾಕುತ್ತಾರೆ. ಗೌರವಸ್ಥ ಹೆಂಗಸು ಅಥವಾ ಅವಿವಾಹಿತ ಹುಡುಗಿಯ ಮೇಲೆ ಅತ್ಯಾಚಾರಮಾಡಿದರೂ ಇದೇ ಶಿಕ್ಷೆ ವಿಧಿಸುತ್ತಾರೆ. ರಾಜದ್ರೋಹ ಮಾಡಿದ ಶ್ರೀಮಂತ ಸರದಾರರ ಹೊಟ್ಟೆಗೆ ಮರದ ದಸಿಯನ್ನು ತಿವಿಯುತ್ತಾರೆ. ಅವರಿಗಿಂತ ಕಡಮೆ ದರ್ಜೆಯ ಜನಗಳು ಎಂತಹ ತಪ್ಪುಮಾಡಿರಲಿ ರಾಜಬೀದಿಯಲ್ಲಿ ಅವರ ತಲೆಯನ್ನು ಕತ್ತರಿಸಿ ಹಾಕುತ್ತಾರೆ. ಕೊಲೆಪಾತಕರಿಗೆ ಇದೇ ತರ ಶಿಕ್ಷೆ ವಿಧಿಸುತ್ತಾರೆ.

ದ್ವಂದ್ವ ಯುದ್ಧ ಮಾಡುವಾಗ ಮರಣ ಹೊಂದಿದರೆ ಯಾವ ಶಿಕ್ಷೆಯೂ ಇಲ್ಲ. ದ್ವಂದ್ವ ಯುದ್ಧ ಮಾಡುವವರಿಗೆ ಬಹಳ ದೊಡ್ಡ ಗೌರವ. ಈ ಯುದ್ಧದಲ್ಲಿ ಸತ್ತವನ ಆಸ್ತಿಯನ್ನು ಗೆದ್ದವನಿಗೆ ಕೊಡುತ್ತಾರೆ. ಆದರೆ ದ್ವಂದ್ವ ಯುದ್ಧ ಮಾಡುವ ಮುನ್ನ ಮಂತ್ರಿಯ ಅಪ್ಪಣೆ ಪಡೆಯಬೇಕು.

ಇವಲ್ಲದೇ ಇನ್ನು ಕೆಲವು ವಿಚಿತ್ರ ರೀತಿಯ ಶಿಕ್ಷೆಗಳಿವೆ. ರಾಜನು ಮನಸ್ಸು ಮಾಡಿದರೆ ಅಪರಾಧಿಯನ್ನು ಆನೆಗಳಿಗೆ ಕೊಟ್ಟು ಚಿಂದಿ ಚಿಂದಿಯಾಗಿ ಸಿಗಿಯುವಂತೆ ಮಾಡಿಸುತ್ತಾನೆ. ಕೆಲವರಿಗೆ ಬೆನ್ನಿನ ಮೇಲೆ ಕಲ್ಲು ಹೊರಿಸಿ ಬೀದಿಯಲ್ಲಿ ದಿನವೆಲ್ಲಾ ನಿಲ್ಲಿಸುತ್ತಾನೆ."

ವಿಜಯನಗರದ ಸಮಗ್ರ ಇತಿಹಾಸ ರಚನೆಗೆ ಈತ ನೀಡಿದ ವಿಷಯಗಳು ಅತ್ಯ ಮೂಲ್ಯವಾಗಿವೆ. ವಿಜಯನಗರದ ಬಗ್ಗೆ ಅಧ್ಯಯನ ನಡೆಸುವ ವಿದ್ಯಾರ್ಥಿಗಳಿಗೂ ಸಂಶೋಧಕರಿಗೂ ಈ ವಿಷಯಗಳು ಕನ್ನಡದಲ್ಲಿ ದೊರೆಯುವಂತೆ ಮಾಡಿದ ಶ್ರೀ ನಾಗೇಗೌಡರು ಅವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಸೈದ್‌ಅಲಿ ರೆಯಿಸ್ ಎಂಬುವನು ಬರೆದಿರುವ ಗ್ರಂಥದ ಹೆಸರು 'ದೇಶಗಳ ದರ್ಪಣ' ಈತ ತುರ್ಕಿಯ ನೌಕಾಧಿಪತಿ. ಈತ ಇಂಡಿಯಕ್ಕೆ ನೀಡಿದ ಭೇಟಿಯ ಕಾಲದಲ್ಲಿ ಮುಸ್ಲಿಂ ಆಡಳಿತಗಾರರೇ ಹೆಚ್ಚಾಗಿದ್ದುದರಿಂದ ಹಿಂದೂಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯುವುದಿಲ್ಲ. ಇವನು ಭಾರತಕ್ಕೆ ಬರುವಾಗಿನ ಹಿನ್ನೆಲೆಯನ್ನು ಶ್ರೀ ನಾಗೇಗೌಡರು ಪ್ರಾರಂಭದಲ್ಲಿ ನೀಡಿದ್ದಾರೆ. ಹುಮಾಯೂನ ಚಕ್ರವರ್ತಿಯ ಸಂಗೀತ ಪ್ರೇಮ, ಅವನು

ನಿಧನನಾದಾಗ ಆ ವಾರ್ತೆಯನ್ನು ಗೌಪ್ಯವಾಗಿರಿಸಿದ ಸಂಗತಿ ಈ ವಿಚಾರಗಳು ಇವನ ಕೃತಿಯಲ್ಲಿವೆ. ಭಾರತದ ಪ್ರಾಣಿಗಳು, ಸಹಗಮನ ಪದ್ಧತಿ ಇವೆಲ್ಲವುಗಳ ಉಲ್ಲೇಖವೂ ಇಲ್ಲಿವೆ. ಈ ದೇಶದಲ್ಲಿ ಜಿಂಕೆಗಳನ್ನು ಹಿಡಿದು ಒಗ್ಗಿಸುವ ಒಂದು ವಿಚಿತ್ರ ಪದ್ಧತಿಯಿದೆ. ಒಗ್ಗಿದ ಸಾರಂಗದ ಕೋಡಿಗೆ ಸಡಿಲವಾದ ಕುಣಿಕೆಯನ್ನು ಸಿಕ್ಕಿಸಿ ಕಾಡುಜಿಂಕೆಗಳೊಡನೆ ಬೆರೆಯಲು ಬಿಡಿಸುತ್ತಾರೆ. ತನ್ನಂಥವು ತನ್ನಂತೆ ಕಾಣುತ್ತವೆ. ಕಾಡುಜಿಂಕೆಗಳು ಪಳಗಿದ ಸಾರಂಗದೊಡನೆ ಹೊಂದಿಕೊಂಡು ತಮ್ಮ ತಲೆಯನ್ನು ಸಾರಂಗಗಳ ತಲೆಯ ಬಳಿಗೆ ತರುತ್ತವೆ. ಸಾರಂಗದ ಕೋಡಿಗೆ ಸಿಕ್ಕಿಸಿರುವ ಕುಣಿಕೆಯೊಳಕ್ಕೆ ಜಿಂಕೆಯ ತಲೆ ಸಿಕ್ಕಿಕೊಳ್ಳುತ್ತದೆ. ಬಿಡಿಸಿಕೊಳ್ಳಲು ಪ್ರಯತ್ನಪಟ್ಟಂತೆಲ್ಲ ಕುಣಿಕೆ ಬಿಗಿಕೊಂಡು ತಪ್ಪಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಈ ರೀತಿ ಜಿಂಕೆಗಳನ್ನು ಹಿಡಿಯುವ ವಿಧಾನ ಇಂಡಿಯಾ ದೇಶಲ್ಲೆಲ್ಲಾ ಇದೆ.

ಗರ್ಸಿಯಾ-ದ-ವರ್ತ ಪೋರ್ಚುಗಲ್ಲಿನವ. ಇವನು ಇಂಡಿಯಾದಲ್ಲಿದ್ದ ಆಯುರ್ವೇದ ಪದ್ಧತಿ ಮತ್ತು ಔಷಧಿಗಳ ಬಗ್ಗೆ ಉಲ್ಲೇಖಿಸಿದ್ದಾನೆ. ವಿದೇಶೀ ಪ್ರವಾಸಿಯೊಬ್ಬನ ದೃಷ್ಟಿಯಲ್ಲಿ ನಮ್ಮ ಆಯುರ್ವೇದ ಹೇಗೆ ಕಾಣಿಸಿತು ಎಂಬುದು ಈತನ ಗ್ರಂಥದಿಂದ ಅರಿವಾಗುವುದು ಎಂದು ಶ್ರೀ ನಾಗೇಗೌಡರು ಹೇಳಿರುವುದು ಉಚಿತವಾಗಿದೆ. ಪ್ರಶ್ನೋತ್ತರ ರೂಪಗಳಲ್ಲಿರುವ ಇವನ ಕಥನವನ್ನು ಇಲ್ಲಿ ಶ್ರೀ ನಾಗೇಗೌಡರು ಸಂಗ್ರಹಿಸಿಕೊಟ್ಟಿದ್ದಾರೆ.

ಸೀಜರ್ ಫ್ರೆಡರಿಕ್–ಇವನು ವೆನಿಸಿನ ಪ್ರವಾಸಿ. ಈತ ದಳ್ಳಾಳಿಗಳ ಮೂಲಕ ನಡೆಯುವ ವ್ಯಾಪಾರವನ್ನು ಪ್ರಸ್ತಾಪಿಸಿದ್ದಾನೆ. ಇವನು ವಿಜಯನಗರಕ್ಕೂ ಭೇಟಿ ನೀಡಿದ್ದ. 1505ರಲ್ಲಿ ನಡೆದ ತಾಳಿಕೋಟೆ ಯುದ್ಧದ ಬಗ್ಗೆ ಬರೆದಿದ್ದಾನೆ—"ಬಿಜೆನೇಗರ್ ನಗರವನ್ನು 1565ರಲ್ಲಿ (ತಾಳಿಕೋಟೆ) ಯುದ್ಧದಲ್ಲಿ ಮೂರರ ಶಕ್ತಿವಂತರಾದ ನಾಲ್ಕು ರಾಜರು ಧ್ವಂಸ ಮಾಡಿದರು. ಶಕ್ತಿಗಿಂತ ಹೆಚ್ಚಾಗಿ ಮೋಸದಿಂದ ಈ ನಗರವನ್ನು ವಶಪಡಿಸಿಕೊಂಡರು ಎಂದು ಹೇಳಬೇಕು. ಬಿಜೆನೇಗರ್ ರಾಜನ ಬಳಿ ಇದ್ದ ಇಬ್ಬರು ಮೂಲ ದಳವಾಯಿಗಳು ತಮ್ಮ ಅಧೀನದಲ್ಲಿದ್ದ ಎಪ್ಪತ್ತು ಎಂಬತ್ತು ಸಾವಿರ ಸೈನ್ಯ ಸಮೇತ ಮೂರ್ ರಾಜರ ಕಡೆ ಸೇರಿಕೊಂಡುಬಿಟ್ಟರು. ಶತ್ರುಸೈನ್ಯವನ್ನು ಲೆಕ್ಕಕ್ಕೆ ತಾರದೆ ಬಿಜೇನೇಗರದ ರಾಜ ನಗರವನ್ನು ಬಿಟ್ಟು ಹೊರಗಡೆ ಬಂದು ಬಯಲಿನಲ್ಲಿ ಯುದ್ಧ ಆರಂಭಿಸಿದನು. ಆದರೆ ಯುದ್ಧ ನಾಲ್ಕು ಗಂಟೆಗಳಿಗಿಂತ ಹೆಚ್ಚು ಕಾಲ ನಡೆಯಲಿಲ್ಲ. ಏಕೆಂದರೆ ಆ ಇಬ್ಬರು ರಾಜ ದ್ರೋಹಿ ದಳವಾಯಿಗಳು ತಮ್ಮ ದಳ ಸಮೇತ ತಮ್ಮ ರಾಜನ ಸೈನ್ಯದ ಮೇಲೆಯೇ ಬಿದ್ದರು."

ಸೀಜರ್ ಫ್ರೆಡರಿಕ್ ಉಲ್ಲೇಖಿಸಿದ ತಾಳಿಕೋಟೆ ಯುದ್ಧದ ವಿವರಗಳನ್ನು ಅಡಿಟಿಪ್ಪಣಿಯಲ್ಲಿ ಶ್ರೀ ನಾಗೇಗೌಡರು ನೀಡಿದ್ದಾರೆ. ಗೋವೆಗೆ ಹೋಗುವ ಮುನ್ನ ಇವನು ಅಂಕೋಲೆಯಲ್ಲೂ ತಂಗಿದ್ದ.

"ನಾಯರುಗಳೂ ಅವರ ಹೆಂಗಸರೂ ಕಿವಿಗಳನ್ನು ದೊಡ್ಡದಾಗಿ ತೂತು ಮಾಡಿಕೊಳ್ಳುತ್ತಾರೆ. ತೂತು ದೊಡ್ಡದಿದ್ದಷ್ಟು ತಮ್ಮ ಸ್ಥಾನಮಾನ ಹೆಚ್ಚೆಂದು ಭಾವಿಸುತ್ತಾರೆ. ನಾನು ಕುತೂಹಲಕ್ಕಾಗಿ ಒಬ್ಬನ ಕಿವಿಯ ತೂತು ಎಷ್ಟು ಅಗಲವಾಗಿರುವುದೆಂದು ನೋಡಲು ದಾರದಿಂದ ನನ್ನ ಕೈಯನ್ನು ಅಳೆದಾಗ ಕಿವಿಯ ತೂತು ತೋಳನ್ನು ತೂರಿಸುವಷ್ಟು ದೊಡ್ಡದಾಗಿದ್ದುದು ಕಂಡುಬಂತು" ಎಂದು ಫ್ರೆಡರಿಕ್ ಹೇಳಿದ್ದಾನೆ.

ಡಾಂ ದು ಆರ್ತ್ ದ ಮೆನೇಜಿಸ್—ಇವನು ಗೋವಾಕ್ಕೆ ಪೋರ್ಚುಗಲ್‌ನಿಂದ ವೈಸರಾಯ್ ಆಗಿ ಬಂದಿದ್ದ. ಇವನು ಗೋವಾದಲ್ಲಿದ್ದ ಗ್ರಾಮಾಡಳಿತ, ಕಂದಾಯ, ನ್ಯಾಯಾಂಗ ಇವುಗಳ ವಿಷಯ ಬರೆದಿದ್ದಾನೆ.

"ಗೋವಾ ದ್ವೀಪಗಳ ಪ್ರತಿ ಊರಿನಲ್ಲಿಯೂ ಗಾಂವಕಾರ್ ಎಂಬ ಗ್ರಾಮಾಧಿಕಾರಿಗಳಿದ್ದಾರೆ. ಮೊಟ್ಟಮೊದಲಿಗೆ ಭೂಮಿ ಸಾಗುವಳಿ ಮಾಡಿ ಊರು ಕಟ್ಟಿದ ಜನ ಇವರು. ಇವರ ಕಾರಣದಿಂದಲೇ ಊರುಗಳಲ್ಲಿ ಜನರು ಹೋಗಿ ನೆಲಸಿದ್ದು—ಆಮೇಲೆ ರಾಜ ಮಹಾರಾಜರುಗಳು ಬಂದು ಇವರನ್ನು ತಮ್ಮ ಅಧೀನರನ್ನಾಗಿ ಮಾಡಿಕೊಂಡು ಕಪ್ಪ ಕಾಣಿಕೆ ಕಂದಾಯ ಕವಳಿಗೆ ಕೊಡುವಂತೆ ಮಾಡಿದರು.

ಪತ್ರಬರೆಸಿಕೊಂಡು ಸಾಲ ಕೊಟ್ಟಾಗ ಸಾಲವನ್ನು ಸಾಲಗಾರ ತೀರಿಸದೇ ಹೋದರೆ ಅಥವಾ ಸಾಲ ತೆಗೆದುಕೊಂಡೇ ಇಲ್ಲ ಎಂದರೆ ಸಾಲ ಕೊಟ್ಟವನು ದೇವಸ್ಥಾನದಲ್ಲಿ ಪ್ರಮಾಣ ಮಾಡಬೇಕು. ಐವತ್ತು ತಾಂಗಗಳಿಗಿಂತ ಹೆಚ್ಚು ಸಾಲವನ್ನು ಪತ್ರ ಇಲ್ಲದೆ ಕೊಡಕೂಡದು. ಅದಕ್ಕಿಂತ ಕಡಿಮೆ ಹಣವನ್ನು ಸಾಲ ಕೊಟ್ಟರೆ ಇಬ್ಬರು ಪಂಚಾಯ್ತಿ ಮೂಲಕ ಪರಿಹರಿಸಿಕೊಳ್ಳಬೇಕು. ಆರು ತಾಂಗಗಳಿಗೆ ತಿಂಗಳಿಗೆ ಒಂದು ಬಾರ್ಗಾನಿಗಿಂತ ಹೆಚ್ಚು ಬಡ್ಡಿ ಹಾಕಕೂಡದು. ಬಡ್ಡಿ ಎಷ್ಟೇ ಆದರೂ ಒಟ್ಟು ಅಸಲಿಗಿಂತ ಹೆಚ್ಚಾಗಿರಕೂಡದು." ಈತ ಆಸ್ತಿಯ ಹಕ್ಕಿನ ಬಗ್ಗೆ ಬರೆದಿದ್ದಾನೆ. ಗ್ರಾಮಾಧಿಕಾರಿ ನೀಡುವ ನ್ಯಾಯ, ಹಣದ ವ್ಯವಸ್ಥೆ–ಇವುಗಳ ಬಗ್ಗೆಯೂ ವಿವರಣೆಗಳಿವೆ. ಇವಲ್ಲದೆ ಗುಮಾಸ್ತನಿಂದ ಹಿಡಿದು ವೈಸರಾಯನವರೆಗೂ ಕೊಡುವ ಸಂಬಳದ ಬಗ್ಗೆ ಉಲ್ಲೇಖಿಸಿದ್ದಾನೆ.

ಜಾನನ್ ಹ್ಯೂಫೆನ್ ಫನ್ ಲಿನ್ ಷಾತಿನ್—ಇವನು ಡಚ್ ಭೂಗೋಳ ಶಾಸ್ತ್ರಜ್ಞ. ಗೋವಾದ ಬಗ್ಗೆ ಬಣ್ಣಿಸಿದ್ದಾನೆ. ಇವನ ಪ್ರವಾಸ ಕಥನ ಗ್ರಂಥದ ಹೆಸರು 'ಐಟಿನೆರೇರಿಯೊ'. ಇದರಲ್ಲಿ ಗೋವೆಯ ಸೊಗಸಾದ ವರ್ಣನೆ ಇದೆ. 16ನೆಯ ಶತಮಾನದ ಗೋವಾದ ನೈಜ ಚಿತ್ರಣ ದೊರೆಯುವ ಏಕೈಕ ಪ್ರವಾಸ ಕಥನ ಇದು.

"ಗೋವಾ ನಗರದಲ್ಲಿ ಸುಂದರವಾದ ಮನೆಗಳೂ ಬೀದಿಗಳೂ ಇವೆ. ಇವನ್ನು ಪೋರ್ಚುಗಲ್ ಮಾದರಿಯಲ್ಲಿ ಕಟ್ಟಿದ್ದಾರೆ. ಸಾಮಾನ್ಯವಾಗಿ ತೋಟ ತುಡಿಕೆಗಳು ಮನೆಯ ಹಿತ್ತಲಿನಲ್ಲಿ ಇರುತ್ತವೆ. ಈ ಹಿತ್ತಲುಗಳಲ್ಲಿ ಮತ್ತು ಬೇರೆ ಕಡೆ ಇರುವ ತೋಟಗಳಲ್ಲಿ ಇಂಡಿಯಾದ ನಾನಾ ತರ ಹಣ್ಣುಹಂಪಲುಗಳನ್ನು ಬೆಳೆಸುತ್ತಾರೆ.

"ಇಂಡಿಯಾದಲ್ಲಿರುವ ಅನೇಕ ಪೋರ್ಚುಗೀಸರು ಈ ದೇಶದಲ್ಲಿ ಹುಟ್ಟಿದ ಹೆಂಗಸರನ್ನು ಮದುವೆಯಾಗಿದ್ದಾರೆ. ಇವರಿಗೆ ಹುಟ್ಟಿದ ಮಕ್ಕಳನ್ನು ಮೆಸ್ಟಿಸುಗಳೆಂದು ಅಥವಾ ಅರ್ಧ ದೇಶೀಯರೆಂದು ಕರೆಯುತ್ತಾರೆ. ಈ ಮೆಸ್ಟಿಸುಗಳ ಬಣ್ಣ ಹಳದಿ. ಆದರೂ ಇವರಲ್ಲಿ ಅನೇಕರು ಅಂದಚಂದವಾಗಿರುತ್ತಾರೆ. ಇಂಡಿಯಾದಲ್ಲಿ ಹುಟ್ಟಿದ ಪೋರ್ಚುಗಲ್ಲರ ಮಕ್ಕಳನ್ನು ಕಸ್ಟಿಸುಗಳೆಂದು ಕರೆಯುತ್ತಾರೆ. ಈ ಮಕ್ಕಳು ಪೋರ್ಚುಗಲ್ಲರಂತೆಯೇ ಇರುತ್ತಾರೆ. ಬಣ್ಣ ಮಾತ್ರ ಸ್ವಲ್ಪ ಹಳದಿಯಾಗಿರುತ್ತದೆ. ಕಸ್ಟಿಸುಗಳ ಬಣ್ಣ ಹಳದಿ-ಮೆಸ್ಟಿಸುಗಳ ಬಣ್ಣದಂತೆ." ಈತ ಗೋವಾದಲ್ಲಿ ನಡೆಯುವ ನಿತ್ಯ ಸಂತೆಯನ್ನೂ ಅಲ್ಲಿಗೆ ಅರೇಬಿಯದಿಂದ ಕುದುರೆಗಳು ಬರುತ್ತಿದ್ದುದನ್ನೂ ಬಣ್ಣಿಸಿದ್ದಾನೆ, ಇವನ ಕೆಲವು ಕಥನಗಳು ಸ್ವಾರಸ್ಯಕರವಾಗಿವೆ. ತಮ್ಮ ಕಾಮತೃಪ್ತಿಗಾಗಿ ಸಿಪಾಯಿಗಳನ್ನು ಇಟ್ಟುಕೊಂಡು ಹೆಂಡಂದಿರು ಗಂಡಂದಿರಿಗೆ ದತ್ತೂರ ತಿನ್ನಿಸುತ್ತಿದ್ದರೆಂಬುದು ತಿಳಿಯುತ್ತದೆ, ಇಲ್ಲಿ ಬೆಳೆಯುವ ಅನಾನಸ್, ಮಾವು, ಹಲಸು, ಪಪಾಯಿ, ಕಿತ್ತಳೆ, ನಿಂಬೆ ಇವುಗಳ ಬಗ್ಗೆಯೂ ಹೇಳಿದ್ದಾನೆ.

ಮಾರ್ಕೊಪೋಲೊನ ಅನಂತರ ಬಂದ ಮೂವರು ಕ್ರೈಸ್ತ ಸಂನ್ಯಾಸಿಗಳು ನೀಡಿದ ಕಥನವೂ ಈ ಪುಸ್ತಕದಲ್ಲಿವೆ. ಇವರಲ್ಲಿ ಮೊದಲನೆಯದು ಮೋಂಟೆ ಕೊರ್ವಿನೊ ಜಾನ್ ಈತ ನಮ್ಮ ಜನತೆಯ ಗುಣ ಬಣ್ಣ ಅರ್ಹತೆ ಇವುಗಳ ಬಗ್ಗೆ ವರ್ಣನೆ ಮಾಡಿದ್ದಾನೆ,

ಫ್ರೈ ಆರ್ ಜೋರ್ದಾನಸ್ ಇನ್ನೊಬ್ಬ ಕ್ರೈಸ್ತ ಸಂನ್ಯಾಸಿ, ಈತ "ಇಂಡಿಯದಲ್ಲಿರುವುದೆಲ್ಲಾ ಅಚ್ಚರಿ, ಇದೇ ಬೇರೆ ಒಂದು ಪ್ರಪಂಚವೋ ಎನ್ನುವಂತಿದೆ" ಎಂದು ತಿಳಿದಿದ್ದ.

ಇನ್ನೊಬ್ಬ ಪ್ರವಾಸಿ ಜಾನ್‌ದ ಮರಿಗ್ನೊಲ್ಲಿ-ಪ್ರಪಂಚದ ಮೆಣಸು ಬೆಳೆಯುವುದು ಇಂಡಿಯದಲ್ಲಿ ಎಂಬುದು ಇವನ ಭಾವನೆ.

ವಾಂಗ್ ತ-ಯುಅನ್ ಇವನು ಚೀನೀ ವರ್ತಕ. ೧೪-ನೆ-ಶತಮಾನ ಭಾರತಕ್ಕೆ ಬಂದಾಗ ಇವನೂ ಬಂದಿದ್ದ. 'ದ್ವೀಪಗಳ ಅನಾಗರಿಕರು' ಎಂಬುದು ಇವನ ಗ್ರಂಥದ ಹೆಸರು. ಕಲ್ಲಿಕೋಟೆಯಲ್ಲಿ ನೀಡುತ್ತಿದ್ದ ಕ್ರೂರ ಶಿಕ್ಷೆಯ ವರ್ಣನೆ ಇವನ ಕೃತಿಯಲ್ಲಿದೆ, ಅಲ್ಲಿ ತಪ್ಪು ಮಾಡಿದವನ ಸುತ್ತ ಸುಣ್ಣದ ಪಟ್ಟಿ ಹಾಕಿ ಅದರೊಳಗೆ ನಿಲ್ಲುವಂತೆ ಮಾಡುತ್ತಾರೆ. ಇದು ಇವರ ಅತ್ಯಂತ ಕ್ರೂರದಾದ ಶಿಕ್ಷೆ ಎಂದು ಇವನು ಬಣ್ಣಿಸಿದ್ದಾನೆ.

ಫೈಹ್ಸಿನ್-ನಲ್ವತ್ತು ದೇಶಗಳನ್ನು ಬಣ್ಣಿಸಿದ ಚೀನೀ ಪ್ರವಾಸಿ. 1436ರ ಈತ ತನ್ನ ಕಥನವನ್ನು ಬರೆದ ಕಾಲ. ಇವನು ಕೊಚ್ಚಿನ್‌ನಲ್ಲಿದ್ದ. ಮುರುವಾ ಜನರನ್ನು ಕುರಿತು ಇವನು ನೀಡಿರುವ ವಿಷಯಗಳು ಸ್ವಾರಸ್ಯವಾಗಿವೆ. ಅವರಿಗೆ ಇರಲು ಮನೆ ಇಲ್ಲವೆಂದೂ ಅವರು ಗುಹೆಗಳಲ್ಲಿ ಅಥವಾ ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದರು ಎಂದಿದ್ದಾನೆ,

ಮಾ ಹುಆನ್-ಇವನ ಪುಸ್ತಕದ ಹೆಸರು 'ಸಮುದ್ರತೀರದ ವರ್ಣನೆ.' (1451) ಇವನೂ ಚೀನೀ ಯಾತ್ರಿಕ. ಈತ ಇಲ್ಲಿಯ ಬೆಳೆ ಮೆಣಸು, ತೆಂಗು ಇವುಗಳ ಬಗ್ಗೆ ಬರೆದಿದ್ದಾನೆ.

ಹೀಗೆ 28 ಪ್ರವಾಸಿಗಳ ಕಥನವನ್ನು ಅತ್ಯಂತ ಸೊಗಸಾದ ಶೈಲಿಯಲ್ಲಿ ನಿರೂಪಿಸಿದ್ದಾರೆ ಶ್ರೀ ನಾಗೇಗೌಡರು.

ಕನ್ನಡದಲ್ಲಿ ಪ್ರವಾಸಿ ಸಾಹಿತ್ಯಕ್ಕೆ ಶ್ರೀ ನಾಗೇಗೌಡರ ಅಪೂರ್ವ ಕೊಡುಗೆ 'ಪ್ರವಾಸಿ ಕಂಡ ಇಂಡಿಯಾ' ಅವರ ಎರಡನೆಯ ಸಂಪುಟವಂತೂ ಕರ್ನಾಟಕದ ದೃಷ್ಟಿಯಿಂದ ಮಹತ್ತರವಾದದ್ದು. ಈ ಸಂಪುಟ ಕರ್ನಾಟಕದ ವಿಶೇಷತೆ ; ವಿಜಯನಗರದ ಚರಿತ್ರೆಗೆ ಸಂಬಂಧಿಸಿದಂತೆ ಆಕರ ಗ್ರಂಥವಾಗುವಂತೆ ಶ್ರೀ ನಾಗೇಗೌಡರು ಶ್ರಮಿಸಿದ್ದಾರೆ.

ಪ್ರವಾಸಿ ಕಂಡ ಇಂಡಿಯಾ–ನೂರು

ಎಚ್. ಆರ್. ರಘುನಾಥ ಭಟ್

'ಮನುಷ್ಯನ ಮನಸ್ಸು ಅಂದಂದಿನ ವಿಷಯಗಳಲ್ಲಿ ತೃಪ್ತವಾಗದೆ ಹಿಂದೆ ಹೇಗಿತ್ತು ಮುಂದೆ ಹೇಗಿರಬಹುದು ಎಂದು ತಿಳಿಯಲು ಆಶಿಸುತ್ತದೆ. ಮುಂದೆ ಹೇಗಿರಬಹುದು ಎಂಬುದು ಕೇವಲ ಊಹೆಯಲ್ಲಿಯೇ ಕೊನೆಗೊಳ್ಳುತ್ತದೆ ; ಅದಕ್ಕೆ ಪ್ರಮಾಣದ ಅಥವಾ ಸಾಕ್ಷ್ಯದ ಆಧಾರವಿರುವುದಿಲ್ಲ. ಆದರೆ ಹಿಂದೆ ಹೇಗಿತ್ತು ಎಂಬುದನ್ನು ಬಹು ಮಟ್ಟಿಗೆ ವಾಸ್ತವವಾಗಿ ಹೇಳಬಹುದು ; ಅದಕ್ಕೆ ಪ್ರಮಾಣದ ಅಥವಾ ಸಾಕ್ಷ್ಯದ ಆಧಾರವಿರುತ್ತದೆ. ಅಂಥ ಪ್ರಮಾಣಗಳನ್ನು ಒದಗಿಸಿಕೊಡುವುದರಲ್ಲಿ ಪ್ರವಾಸಿಗಳ ಸಾಹಿತ್ಯವೂ ಒಂದು'.[1]

ಪ್ರಾಚ್ಯ ಸಂಶೋಧನೆಗಳಿಂದ, ಮುಖ್ಯವಾಗಿ ಉತ್ಖನನ, ಶಾಸನ, ವಾಸ್ತುಶಿಲ್ಪ, ನಾಣ್ಯ, ಚಿತ್ರಕಲೆಗಳಿಂದ, ತಿಳಿದು ಬರುವ ಮಾಹಿತಿಗಳ ಜೊತೆಗೆ ಪ್ರವಾಸಿಗಳ ಅರ್ಥ ಪೂರ್ಣ ಕಥನಗಳೂ ಭಾರತದ ಇತಿಹಾಸದ ಪುನರ್ರಚನೆಗೆ ಅಮೂಲ್ಯವಾಗಿವೆ. ಇವಿಲ್ಲದೆ ಹೋಗಿದ್ದರೆ ಈಗ ನಮಗೆ ತಿಳಿದುಬರುವ ಮಟ್ಟಿನ ಚರಿತ್ರೆ ಕೂಡ ತಿಳಿಯದೆ ಹೋಗು ತ್ತಿತ್ತೇನೊ. ಕೆಲವೊಮ್ಮೆ ವಿದೇಶಿಯರ ಬರವಣಿಗೆಗಳಿಂದ ಅನ್ಯಸಾಧನಗಳಿಂದ ತಿಳಿಯದೆ ಹೋಗಬಹುದಾದ ಅನೇಕ ವಿಷಯಗಳನ್ನು ಕುರಿತ ವಿವರಗಳು ಲಭ್ಯವಾಗುತ್ತವೆ. ಇವು ಭಾರತ ಚರಿತ್ರೆಯ ಪುನರ್ರಚನೆಯಲ್ಲಿ ಕೆಲವು ನ್ಯೂನತೆಗಳನ್ನು ದೂರಮಾಡಬಲ್ಲವು. ಕಾರಣ ಪ್ರವಾಸಿಗರು ಪ್ರವಾಸ ಮಾಡಿದ ದೇಶದಲ್ಲಿ ತಿರುಗಾಡಿ, ತಾವು ಪ್ರತ್ಯಕ್ಷವಾಗಿ ಕಂಡದ್ದನ್ನು ಪರಿಶೀಲಿಸಿದ್ದನ್ನು ಸ್ವಾನುಭವದಿಂದ ಅವರ ಕಾಲದಲ್ಲೇ ಬರೆದಿಟ್ಟು ಕೊಳ್ಳುತ್ತಿದ್ದುದರಿಂದ ಅವುಗಳಿಗೆ ಒಂದು ರೀತಿಯಲ್ಲಿ ವಿಮರ್ಶಾಪೂರ್ವಕವಾಗಿ, ತುಲ ನಾತ್ಮಕವಾಗಿ, ಹೆಚ್ಚಿನ ಮೌಲ್ಯವಿರುತ್ತದೆ. ಪ್ರವಾಸ ಸಾಹಿತ್ಯ ವಾಸ್ತವವಾಗಿ ರಸಾನು ಭವವನ್ನು ನೀಡುವುದಷ್ಟೇ ಅಲ್ಲ ಪ್ರವಾಸಮಾಡಿದ ನಾಡಿನ ಜನಪದ ಜೀವನ ಸಂಸ್ಕೃತಿಯ ನಿಜ ಚಿತ್ರಣವನ್ನು ನೀಡಬಲ್ಲದು. ಕೆಲವೊಮ್ಮೆ ವಸ್ತುನಿಷ್ಠವಾಗಿ ಅಂಕೆ ಸಂಖ್ಯೆಗಳಿಂದ ಕೂಡಿದ ವರದಿಯ ರೂಪವನ್ನು ತಾಳಿರುವುದನ್ನು ನೋಡಬಹುದು. ಆದರೆ ಇವೆರಡರ ಸಮನ್ವಯದಲ್ಲೇ ಸ್ವಾರಸ್ಯವಿರುವುದು. ಪ್ರವಾಸ ಸಾಹಿತ್ಯದ ಮೌಲ್ಯ ಹೆಚ್ಚುವುದು ಪ್ರವಾಸಿ ಸಂವೇದನಾ ಶೀಲತೆ, ಸೂಕ್ಷ್ಮ ಪರೀಕ್ಷಣಾ ಪ್ರವೃತ್ತಿ, ಆಯಾ ದೇಶಭಾಷೆಯ ಕಲಿತು ಜನಪದರೊಡನೆ ಬೆರೆತು ಮಾಹಿತಿ ಸಂಗ್ರಹಿಸುವ ಚತುರತೆ, ಮುಂತಾದವು ಗಳನ್ನು ಅವಲಂಬಿಸಿರುತ್ತದೆ.

ಭಾರತಕ್ಕೆ ಸಂಬಂಧಪಟ್ಟಂತೆ ಲಭ್ಯವಿರುವ ಪ್ರವಾಸಿ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರದ ಐನೂರು ವರ್ಷಗಳ ದೀರ್ಘ ಇತಿಹಾಸವೇ ಇದೆ. ಕ್ರಿ. ಪೂ. ಸುಮಾರು ಐದನೆಯ ಶತಮಾನದಿಂದ ಕ್ರಿ. ಶ. ಹದಿನೆಂಟನೆಯ ಶತಮಾನದ ದೀರ್ಘಾವಧಿಯಲ್ಲಿ ನಮ್ಮ ದೇಶಕ್ಕೆ ಬಂದು ಇಲ್ಲಿಯ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ವಾಣಿಜ್ಯ ಜೀವನ ವೈವಿಧ್ಯವನ್ನು ಕಂಡು ಬರೆದಿಟ್ಟು ಹೋದ ಪ್ರವಾಸಿಗಳೊ ನೂರಾರು ! ಅವರಲ್ಲಿ ರಾಜ್ಯಾಕಾಂಕ್ಷಿ, ಹವ್ಯಾಸಿ ಪ್ರವಾಸಿ, ವಾಣಿಜ್ಯೋದಮಿ, ವ್ಯಾಪಾರಿ, ವಿದ್ವಾಂಸ, ಎಂದು ಮುಂತಾಗಿ ನಾನಾ ಬಗೆಯ ಜನರಿದ್ದಾರೆ. ಈ ಜನರ ಬರವಣಿಗೆಗಳಲ್ಲಿ ಕೆಲವೊಮ್ಮೆ ತಪ್ಪು ಕಲ್ಪನೆಗಳು ನುಸುಳಿಕೊಂಡಿರುವುದುಂಟು ; ಅತಿರೇಕಗಳೂ ಕಾಣಿಸಿಕೊಂಡಿರುವು ದುಂಟು. ಆದರೂ ಅವರ ಕಥಾನಕಗಳ ವಿವೇಚನಾಯುತ ವಿಮರ್ಶಾತ್ಮಕ ವಿಶ್ಲೇಷಣೆ ಯಿಂದ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ರಚಿಸುವಲ್ಲಿ ಸಹಾಯಕವಾಗಿವೆಯೆಂಬು ದರಲ್ಲಿ ಸಂಶಯವಿಲ್ಲ. ಈ ಬಗೆಯ ಪ್ರವಾಸಿ ಕಥನಗಳನ್ನು ಒಂದೆಡೆ ಸೇರಿಸಿ, ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿದ್ದು ಕಂಡು ಬರುತ್ತದೆ. ಆದರೆ ಕನ್ನಡಕ್ಕೆ ಅಷ್ಟೇ ಸಮರ್ಥವಾಗಿ, ಸ್ವಾರಸ್ಯಪೂರ್ಣವಾಗಿ ಸಂಗ್ರಹಾನುವಾದ ಮಾಡಿಕೊಡುವ ಸಾಹಸ ಕೆಲಸ ಬಹು ದಿನ ಗಳಿಂದ ಉಳಿದಿತ್ತು. ಈಗ ಆ ಕ್ಷೇತ್ರದಲ್ಲೂ ಗಣನೀಯ ಕೆಲಸ ಆಗಿದೆ, ಆಗುತ್ತಿದೆ.

ಕನ್ನಡ ಭಾಷೆಯಲ್ಲಿ ಪ್ರವಾಸ ಸಾಹಿತ್ಯದ ಮುಂಬೆಳಗು ಮೂಡಿದ್ದು ಸುಮಾರು ಮುಕ್ಕಾಲು ಶತಮಾನಗಳ ಹಿಂದೆ (ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ). ಈ ಸಾಹಿತ್ಯ ಪ್ರಕಾರದ ಪ್ರವರ್ತಕರು ಕನ್ನಡದ ಮೊಟ್ಟಮೊದಲನೆಯ ಸಾಮಾಜಿಕ ನಾಟಕವೆಂದು ಪರಿಗಣಿಸಲಾದ "ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ" ವನ್ನು ನೀಡಿ ಕೀರ್ತಿಶೇಷರಾದ ಸೂರಿ ವೆಂಕಟರಮಣ ಶಾಸ್ತ್ರಿಗಳು. "ದಕ್ಷಿಣ ಭಾರತದ ಯಾತ್ರೆ" ಎಂಬ ಅವರ ಕೃತಿಯನ್ನು ಇಲ್ಲಿ ಹೆಸರಿಸಬೇಕು.[2] ಅಲ್ಲಿಂದ ಮೊದಲುಗೊಂಡು ಇಂದಿನವರೆಗೆ ಈ ಕ್ಷೇತ್ರದಲ್ಲಿ ಚಟುವಟಿಕೆ ಸಾಗಿದೆ ; ಈಗೀಗ ಚುರುಕಾಗಿಯೇ ಸಾಗಿದೆ ಯೆನ್ನಬಹುದು. ಇಷ್ಟಾದರೂ ಕನ್ನಡದಲ್ಲಿ ವಿದೇಶಿ ಪ್ರವಾಸ ಕಥನಸಾಹಿತ್ಯ ಓದುಗರು ಅಪೇಕ್ಷಿಸುವಷ್ಟು ವಿಪುಲವಾಗಿಲ್ಲವೆಂದೇ ಹೇಳಬೇಕು. ಈ ಹಿನ್ನೆಲೆಯಲ್ಲಿ ಶ್ರೀ ಎಚ್. ಎಲ್. ನಾಗೇಗೌಡರ "ಪ್ರವಾಸಿ ಕಂಡ ಇಂಡಿಯಾ" ಸಂಪುಟಗಳು ನಿಜಕ್ಕೂ ಮಹತ್ಪೂರ್ಣ ಕೊಡುಗೆಯಷ್ಟೇ ಅಲ್ಲ, ಬೃಹತ್ತಾದ ಕಾಣಿಕೆಗಳೇ ಆಗಿವೆ.

ವಿದೇಶಿ ಪ್ರವಾಸಿಗರ ಸುದೀರ್ಘಪ್ರವಾಸಕಥನವನ್ನು ಕನ್ನಡಿಗರ ಮುಂದಿಡು ವುದನ್ನು ಒಂದು ಭಾಗ್ಯವೆಂದು ತಿಳಿದ ನಾಗೇಗೌಡರು ಕಳೆದ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಈ ಕ್ಷೇತ್ರದಲ್ಲಿಯೂ ಪರಿಶ್ರಮಿಸುತ್ತ ಬಂದಿದ್ದಾರೆ. "ಮಾರ್ಕೊ ಪೋಲೊ ಪ್ರವಾಸಕಥನ"ವನ್ನು ಇವರು ಬರೆಯ ಹೊರಟಾಗ ಪ್ರವಾಸಿಗಳ ಪರಿಚಯ ಮೊದಲಬಾರಿಗೆ ಆಯಿತಂತೆ.[3] ಅದ್ದೇ ತಡ ಅವರ ಸಹವಾಸವನ್ನು ಬಿಡಬಾರದೆಂದು ಭಾವಿಸಿ ಅವರ ಒಡನಾಡುತ್ತಿದ್ದಾರೆ ! ಇದರ ಪರಿಣಾಮವಾಗಿಯೆನ್ನುವಂತೆ 'ಮೂಲದಲ್ಲಿ

ಸುಮಾರು ಇಪ್ಪತ್ತು ಮೂವತ್ತು ಸಾವಿರ ಪುಟಗಳಾಗುವಷ್ಟು ವಿಪುಲ ವಿಷಯವನ್ನು ಸಂಗ್ರಹಿಸಿ ತಮಗೆ ಉಪಯುಕ್ತವೆಂದು ಅನ್ನಿಸಿದ ವಿಷಯಗಳನ್ನೆಲ್ಲ ಆರಿಸಿಕೊಂಡು ಕನ್ನಡದಲ್ಲಿ ಹಂತಹಂತವಾಗಿ ಸಂಪುಟಗಳಲ್ಲಿ ಹೀಗೆ ಹೊರಡಿಸಿದ್ದಾರೆ.[4] ಈಗಾಗಲೇ ಆರು ಸಂಪುಟಗಳ ಸುಮಾರು ಮೂರು ಸಾವಿರದ ನೂರಮೂವತ್ತು ಪುಟಗಳ ಬೃಹತ್ ಪ್ರವಾಸಿ ಸಾಹಿತ್ಯವನ್ನೇ ಕನ್ನಡಿಗರಿಗೆ ಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ದೊಡ್ಡ ಕೆಲಸಕ್ಕೆ ಕೈಹಾಕಿದ್ದೇನೊ ನಿಜವೆಂದೇ ಅನ್ನಿಸುತ್ತದೆ. 'ಪ್ರವಾಸಿಕಂಡ ಇಂಡಿಯಾ' ಕೃತಿಶ್ರೇಣಿ ಇನ್ನೂ ಮುಗಿಯಲಿಲ್ಲ. ಇನ್ನೂ ನಾಲ್ಕು ಸಂಪುಟಗಳಾದರೂ ಬರಬೇಕಾಗಿವೆಯಂತೆ.[5] ಪ್ರಸ್ತುತದಲ್ಲಿ ಈ ಕೃತಿಮಾಲೆಯ ಮೂರನೆಯ ಪುಷ್ಪವನ್ನು ಸ್ಥೂಲವಾಗಿ ಪರಿಚಯಮಾಡಿಕೊಡುವ ಒಂದು ಪ್ರಯತ್ನ ಇಲ್ಲಿದೆ.

ಇಲ್ಲಿಯವರೆಗೆ ಸರಾಸರಿ ಎರಡು ವರ್ಷಗಳಿಗೆ ಒಂದರಂತೆ ಪ್ರಕಟಗೊಂಡ ಆರು ಸಂಪುಟಗಳಲ್ಲಿ[6] ಪುಟಗಳ ಸಂಖ್ಯೆಯ ದೃಷ್ಟಿಯಿಂದ ಎರಡನೆಯ ದೊಡ್ಡ ಹೊತ್ತಿಗೆಯೆಂದರೆ ತೃತೀಯ ಸಂಪುಟ. (ಅತ್ಯಂತ ದೊಡ್ಡ ಸಂಪುಟವೆಂದರೆ 'ದ್ವಿತೀಯ ಸಂಪುಟ', ಪುಟಗಳು 576) ಉಳಿದ ಸಂಪುಟಗಳಂತೆ ಡೆಮ್ಮಿ ಆಕಾರದ 566 ಪುಟಗಳುಳ್ಳ ಮೂರನೆಯ ಸಂಪುಟವಾದರೊ ವಿಷಯ ವೈವಿಧ್ಯ, ನಿರೂಪಣೆಯ ದೃಷ್ಟಿಯಿಂದಲೂ ಸ್ವಾರಸ್ಯಕರವಾಗಿದೆ. ಕ್ರಿ.ಶ. ಸುಮಾರು 1579ರಿಂದ ಕ್ರಿ.ಶ. 1619ರವರೆಗಿನ ಸುಮಾರು ನಲವತ್ತು ವರ್ಷಗಳ ಅವಧಿಯಲ್ಲಿ ಭಾರತಕ್ಕೆ ಭೇಟಿನೀಡಿದ ಹದಿನಾರು ಜನ ಐರೋಪ್ಯ ಪ್ರವಾಸಿಗಳ ಕಥನಗಳು ಇಲ್ಲಿ ರೂಪಾಂತರಗೊಂಡು ಸಂಗ್ರಹಿತವಾಗಿವೆ. 'ಇಂಡಿಯಾಕ್ಕೆ ಬಂದ ಇಂಗ್ಲೀಷಿನವರಲ್ಲಿ ಮೊಟ್ಟಮೊದಲಿಗನೆಂದು ಹೇಳಲಾದ ಫಾದರ್ ಥಾಮಸ್ ಸ್ಟೀವನ್ಸ್ (Father Thomas Stevens-1579-1619) ನಿಂದ ಹಿಡಿದು[7] ಇಂಡಿಯಾ ಬಗ್ಗೆ ಬರೆದಿರುವ ಮೊಟ್ಟಮೊದಲನೆಯ ಫ್ರೆಂಚ್ ಪ್ರವಾಸಿ ಎಂದು ಹೇಳಲಾದ ಫ್ರಾನ್ಸ್ವಾ ಪಿರಾರ್ಡ್ ದೆಲವಲ್‌ನ[8] (Francois Pyrad de Laval-1601-1608) ವರೆಗಿನ ಈ ಕಥನ ಪ್ರಧಾನವಾಗಿ ಹದಿನಾರು ಹದಿನೇಳನೆಯ ಶತಮಾನದ 'ಮಧ್ಯಯುಗಕ್ಕೆ ಸಂಬಂಧಿಸಿದೆ. ಅನುಬಂಧದಲ್ಲಿ ಎರಡನೆಯ ಸಂಪುಟದಲ್ಲಿ 'ಜಾನ್ ಹ್ಯೂಗನ್ ಫನ್ ಲಿನ್' ಷಾಟನ್ ಎಂಬ ಶಿರೋನಾಮೆಯಲ್ಲಿ (ಪುಟಗಳು 488-513) ಆಗಲೇ ಬಂದ ಕೆಲವು ವಿಷಯಗಳ ಜೊತೆಗೆ ಇನ್ನೂ ಕೆಲವು ಮುಖ್ಯ ಅಂಶಗಳನ್ನು ನೀಡಲಾಗಿದೆ. ಈಗ ಈ ಪ್ರವಾಸಿಯ ಸಂಪೂರ್ಣ ಕಥನ ದೊರಕಿರಲಿಲ್ಲವಂತೆ[9] ಈಚೆಗೆ ಅದು ಗೌಡರಿಗೆ ದೊರೆಕಿದ ಕಾರಣ ಅದನ್ನು ಅನುಬಂಧದಲ್ಲಿ ಸಂಗ್ರಹಿಸಲಾಗಿದೆ, ('ಲಿನ್‌ಸ್ಕೊಟೆನ್' ಎಂಬ ಶಿರೋನಾಮೆಯಲ್ಲಿ). ಫಾದರ್ ಥಾಮಸ್ ಸ್ಟೀವನ್ಸ್ (ಪು 2), ಅಕ್ಬರ್ ಮತ್ತು ಜೆಸೂಯಿಟ್ ಪಾದ್ರಿಗಳು (ಪು 28), ಜಾನ್ ಎಲ್ಡ್ರೆಡ್ (ಪು 115), ಸೂರತ್ (ಪು 137), ಸರ್‌ಥಾಮಸ್‌ರೋ (ಪು. 205), ಎಡ್ವರ್ಡ್ ಟೆರ್ರಿ (ಪು. 290), ಥಾಮಸ್ ಕೊರ್‍ಯಾಟ್ (ಪು 330) ಮತ್ತು ಲಿನ್‌ಸ್ಕೊಟೆನ್ (ಪು. 514) ಎಂಬ ಎಂಟು

ರೇಖಾ ಚಿತ್ರಗಳನ್ನು ಸುದೀರ್ಘವಾದ ಉಪಯುಕ್ತ ಪ್ರಸ್ತಾವನೆಯನ್ನೂ (ಪು. VII-XXVII), ಅಲ್ಲಲ್ಲಿ ಯಥೋಚಿತವಾದ ಅಡಿಟಿಪ್ಪಣಿಗಳನ್ನೂ ಪುಸ್ತಕದ ಕೊನೆಗೆ ಗ್ರಂಥ ಋಣ (ಪು. 539-541) ಹಾಗೂ ಅಕ್ಷರಾನುಕ್ರಮಣಿಕೆಯನ್ನೂ (ಪು. 545-565) ಕೊಡಲಾಗಿದೆ. ಇವುಗಳಿಂದಾಗಿ ಗ್ರಂಥದ ಉಪಯುಕ್ತತೆ ಹೆಚ್ಚಿದೆ. ಇದರೊಟ್ಟಿಗೆ ಆ ಕಾಲದ ವ್ಯಾಪಾರವರ್ಗವನ್ನು, ಸಮುದ್ರಮಾರ್ಗವನ್ನು, ಬಂದರುಕಟ್ಟೆಗಳನ್ನು ಸೂಚಿಸುವ ನಕಾಶೆಗಳನ್ನು ಪ್ರಮುಖ ಪಾರಿಭಾಷಿಕ ಪದಕೋಶಗಳನ್ನು ಸೇರಿಸಿದ್ದರೆ ಇನ್ನೂ ಹೆಚ್ಚು ಉಪಯುಕ್ತವಾಗಿರುತ್ತಿತ್ತು. ಮಂಗಳೂರು ಶಾರದಾ ಛಾಪಾಖಾನೆಯಲ್ಲಿ ಸುಂದರವಾಗಿ ಮುದ್ರಣಗೊಂಡ (1969) ಈ ಸಂಪುಟದಲ್ಲಿರುವ ಸಣ್ಣ ಪುಟ್ಟ ದೋಷ ಗಳಿಗಿಂತ ಹೆಚ್ಚಾಗಿ ಗುಣಗಳೇ ಪ್ರಧಾನವಾಗಿರುವುದರಿಂದ ನಿಜಕ್ಕೂ ಉಪಯುಕ್ತವಾಗಿದೆ. ಕ್ರಿ.ಶ. 16-17ನೆಯ ಶತಮಾನದ ಮಧ್ಯಯುಗೀನ ಭಾರತದ ದರ್ಶನ ಪಡೆಯುವಲ್ಲಿ ಈ ಕೃತಿ ಸಹಾಯಕವಾಗಬಲ್ಲದು. 'ವಿಶಾಲ ಲೋಕ ಪ್ರಜ್ಞಾಮತಿ'ಯನ್ನು ಉದ್ದೀಪನ ಗೊಳಿಸುವಲ್ಲಿ ಉಳಿದ ಸಂಪುಟಗಳಂತೆ ಇದೂ ಪ್ರಯೋಜನಕಾರಿಯಾಗಿದೆ.

ಭಾರತದ ಇತಿಹಾಸದ ಅಧ್ಯಯನದ ಸೌಕರ್ಯದ ದೃಷ್ಟಿಯಿಂದ "ಮಧ್ಯಯುಗ" ಎಂದು ಕರೆಯಲಾದ ಈ ಅವಧಿಯ ಕೊನೆಯ ಎರಡು ಶತಮಾನಗಳಂತೂ (16-17 ನೆಯ ಶತಮಾನ) ಐತಿಹಾಸಿಕವಾಗಿ ಹೇಳುವುದಾದರೆ, ಭಾರತದ ಸ್ವಾಮ್ಯಕ್ಕಾಗಿ ಪಾಶ್ಚಾತ್ಯರು ನಡೆಸಿದ ಪೈಪೋಟಿಯ ಕಾಲಖಂಡದ ಪೂರ್ವರಂಗವೆಂದೇ ಬಣ್ಣಿಸಬಹುದು. ಪೋರ್ಚುಗೀಸರು ಭಾರತದಲ್ಲಾಗಲೇ ತಳವೂರಿ ಆಗಿತ್ತು. ಗೋವಾವನ್ನು ಒಳಗೊಂಡಂತೆ ಪಶ್ಚಿಮ ಕರಾವಳಿ ತೀರದ ಮೇಲೆ ಸಾಕಷ್ಟು ಹಿಡಿತವನ್ನು ಹೊಂದಿದ್ದ ಕಾಲ ; ಗೋವೆ ತನ್ನ ಔನ್ನತ್ಯವನ್ನು ಮುಟ್ಟಿ "ಚಿನ್ನದಗೋವೆ" ಯಾಗಿ (Golden Goa) ಮೆರೆಯುತ್ತಿದ್ದ ಕಾಲ. ಆಗ ರಾಜ್ಯಸ್ಥಾಪನೆ, ವ್ಯಾಪಾರ, ಕ್ರೈಸ್ತಮತ ಪ್ರಚಾರವೇ ಮುಂತಾದವು ಗಳು ಉದ್ದೇಶಿತವಾಗಿದ್ದುದು ಸ್ಪಷ್ಟವಾಗಿತ್ತು. ಇಂಗ್ಲಿಷರೂ ಭಾರತದ ನೆಲದ ಮೇಲೆ ಹುಷಾರಾಗಿ ಕಾಲೂರಲು ಅವಕಾಶವನ್ನು ಕಾಯುತ್ತ, ನೆಪಹುಡುಕುತ್ತಾ ಇದ್ದ ಕಾಲ ಅದಾಗಿತ್ತು. ಡಚ್ಚರೂ ಭಾರತಕ್ಕೆ ಬಂದು ಪೋರ್ಚುಗೀಸರೊಡನೆ ಜಗಳ ಕಾಯುತ್ತಿದ್ದರು ಫ್ರೆಂಚರಂತೂ ಭಾರತಕ್ಕೆ ಬರುವ ಹಾದಿಗಾಗಿ ತಡಕಾಡುತ್ತಿದ್ದರು. ಇವರಿಗೆಲ್ಲ' ದೂರದಬೆಟ್ಟ ಕಣ್ಣಿಗೆ ನುಣ್ಣಗೆ ಕಾಣುತ್ತಿದ್ದಿರಬೇಕು. ಭಾರತದಂತಹ ದೂರದ ಸ್ಥಳಗಳ ವಿಚಾರಕೇಳಿ ಜನಸಾಮಾನ್ಯರೂ ಬಾಯಿಬಾಯಿ ಬಿಡುತ್ತಿದ್ದಿರಬೇಕು. ಸರ್ ಥಾಮಸ್ ರೋ ಸೂಚಿಸಿರುವಂತೆ "ಸ್ಥಳಗಳು ದೂರ ಇದ್ದಷ್ಟೂ ಅವುಗಳ ಹಿರಿಮೆ ಹೆಚ್ಚುತ್ತದೆ,"[10] ಇದು ಹೇಗೆ,ಏಕೆ,ಎಂಬುದರ ಪರಿಚಯ ಪ್ರವಾಸಿಕಂಡ ಇಂಡಿಯಾದ ಮೂರನೆಯ ಸಂಪುಟ ದಿಂದಲೂ ತಿಳಿಯಲು ಸಾಧ್ಯವಾಗುತ್ತದೆ. ಇದು ಮುಖ್ಯವಾಗಿ ಮುಸ್ಲಿಮ್ ಅರಸರ, ಅದರಲ್ಲೂ ವಿಶೇಷತಃ ಅಕ್ಬರ್ ಮತ್ತು ಜಹಾಂಗೀರ್ ಎಂಬ ಪ್ರಸಿದ್ಧ ಮೊಗಲರಸರ, ಆಳಿಕೆಗಳ ಕಾಲವನ್ನು ಒಳಗೊಂಡಿದೆಯಷ್ಟೆ. 16-17ನೆಯ ಶತಮಾನದಲ್ಲಿ ಭಾರತವು

ಹೆಚ್ಚು ಕಡಿಮೆ ಈ ಅರಸರ ಆಧಿಪತ್ಯದಲ್ಲಿ ಬಾಳಬೇಕಾಯಿತು. ಅದೇನಿದ್ದರೂ ಮೊಗಲರು ಆಳಿದ ಈ ಯುಗವನ್ನು 'ಅಧಿಕೃತ ಚರಿತ್ರೆಗಳಯುಗ'ವೆಂದು ಹೇಳಬಹುದು.[11] ಆ ಕಾಲದ ರಾಜಕೀಯ ಆಡಳಿತ, ಸೈನ್ಯ, ಭೌಗೋಲಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಮತೀಯ ವಿಷಯಗಳನ್ನು ಹೊರಗೆಡಹುವುದರಲ್ಲಿ ಅಸಂಖ್ಯಾತ ದಾಖಲೆಗಳು ಲಭ್ಯ; ಶಾಸನ, ನಾಣ್ಯ ವಾಸ್ತುಶಿಲ್ಪಗಳಲ್ಲದೆ ಜೀವನ ಚರಿತ್ರೆಗಳೂ, ಅಧಿಕೃತ ಪತ್ರವ್ಯವಹಾರಗಳೂ, ಇತರ ಚಾರಿತ್ರಿಕದಾಖಲೆಗಳೂ ಸಿಗುವುದರ ಜೊತೆಗೆ ವಿದೇಶಿ ಪ್ರವಾಸಿಗಳ ಕಥಾನಕಗಳೂ ಹೇರಳವಾಗಿ ಸಿಗುತ್ತವೆ. ಇವು ಗತಭಾರತದ ಚಿತ್ರಪಟವನ್ನು ನಮ್ಮ ಕಣ್ಮುಂದೆ ಸುರುಳಿ ಬಿಚ್ಚಿ ಹರಡುತ್ತವೆ. ವ್ಯಕ್ತಿ ನಿಷ್ಠದೋಷಗಳು ಅಲ್ಲಲ್ಲಿ ನುಸುಳಿಕೊಂಡಿರಬಹುದಾದರೂ ಇವು ಸಮಕಾಲೀನ ದಾಖಲೆಗಳಾಗಿರುವುದರಿಂದ, ಅಷ್ಟು ಪ್ರಾಮಾಣಿಕವಾಗಿರುವುದರಿಂದ, ನಂಬಲರ್ಹವಾದುವೆಂದು ಹೇಳಬಹುದು. ಇಂಥ ಪ್ರವಾಸ ಕಥನದ ಉದ್ದೇಶವನ್ನು ಫ್ರಾನ್ಸ್ವಾ ಪಿರಾರ್ಡ್ ದೆಲವೆಲ್ ಈ ರೀತಿ ತಿಳಿಸುತ್ತಾನೆ :

"ಹೀಗೆ ಕಂಡುದುದನ್ನೆಲ್ಲ ನನ್ನ ದೇಶಬಾಂಧವರಿಗೆ ಹೇಳುವ ಸದುದ್ದೇಶದಿಂದ ನನ್ನೀಪ್ರವಾಸಕಥನವನ್ನು ಬರೆಯುವ ಮನಸ್ಸು ಮಾಡಿದ್ದೇನೆ. ಈ ನನ್ನ ಕಥನ ಮುಂದೆ ನನ್ನಂತೆ ಸಮುದ್ರಯಾನ ಮಾಡುವವರಿಗೆ ಒಂದು ಎಚ್ಚರಿಕೆ ಯಾಗಬಹುದು. ಅವರು ನಾನು ಪಟ್ಟ ಕಷ್ಟಗಳನ್ನು ಕೇಳಿ ಅದರಿಂದ ಪಾಠಕಲಿತು. ತಮ್ಮ ಸಾಹಸಕಾರ್ಯದಲ್ಲಿ ಹೆಚ್ಚು, ಎಚ್ಚರಿಕೆ ವಹಿಸಲು ಅನುಕೂಲವಾಗಬಹುದು.'[12]

ವಾಸ್ತವವಾಗಿ, ಸದುದ್ದೇಶಪೂರಿತವಾದ ದಲವೆಲ್ ಪ್ರವಾಸಕಥನವೇ ಮೂರನೆಯ ಸಂಪುಟದಲ್ಲಿ ಸಿಂಹಪಾಲನ್ನು ಪಡೆದಿದೆ. (ಪುಟಗಳು 342–511). 'ಭಾರತದ ಬಗೆಗೆ ಬರೆದಿರುವ ಮೊಟ್ಟಮೊದಲನೆಯ ಫ್ರೆಂಚ್ ಪ್ರವಾಸಿ'[13]ಯೆಂದು ಹೇಳಲಾದ ಪಿರಾರ್ಡ್ ನಮಗೆ ಬಹೂಪಯುಕ್ತವಾದ ಹಾಗೂ ಸುದೀರ್ಘವಾದ ಪ್ರವಾಸಕಥನವನ್ನು ಬಿಟ್ಟು ಹೋಗಿದ್ದಾನೆ, ದಕ್ಷಿಣ ಭಾರತದ ಬಗೆಗೆ ಅದರಲ್ಲೂ ಮಲಬಾರ್ ತೀರ ಮತ್ತು ಗೋವೆಗಳ ಬಗೆಗೆ ಅತ್ಯಮೂಲ್ಯವಾದ ಹಾಗೂ ಸ್ವಾರಸ್ಯಕರ ವರ್ಣನೆಗಳು ಈತನ ಕಥನದಿಂದ ಸಿಗುತ್ತವೆ. ಭಾರತದಲ್ಲಿ ಪೋರ್ಚುಗೀಸರ ಚಟುವಟಿಕೆಗಳನ್ನು ಚಿತ್ರಿಸುವಲ್ಲಿ ಹಾಗೂ ಮಾಲ್ದೀವ್ ದ್ವೀಪಗಳ ನಿಜಚಿತ್ರಣ ನೀಡುವಲ್ಲಿ ಕೂಡ ಈತ ಸಮರ್ಥನಾಗಿದ್ದಾನೆಂದು ಹೇಳಬಹುದು. ಪೋರ್ಚುಗೀಸರಂತೆ, ಇಂಗ್ಲೀಷರಂತೆ ಫ್ರೆಂಚರ ಮನಸ್ಸು ಸಮುದ್ರದ ಕಡೆಗೆ ಹರಿಯದಿರುವುದಕ್ಕೆ ಕಾರಣ ಫ್ರಾನ್ಸಿನ ಶ್ರೀಮಂತಿಕೆ ಮತ್ತು ಅದರ ಫಲವತ್ತಾದ ಭೂಮಿ-ಎಂದು ಭಾವಿಸಿರುವ ಈ ಫ್ರೆಂಚ್ ಪ್ರವಾಸಿ 1601 ರಿಂದ 1608 ರವರೆಗೆ ಪ್ರವಾಸಮಾಡಿ ಬರೆದ ಕಥನವನ್ನು ಅಷ್ಟೇ ಸ್ವಾರಸ್ಯವಾಗಿ, ಕನ್ನಡದ ಜಾಯಮಾನಕ್ಕೊಪ್ಪುವಂತೆ, ಈ ಸಂಪುಟದ ಉತ್ತರಾರ್ಧದಲ್ಲಿ ಮೂಡಿಬಂದಿದೆ. ದೆಲವೆಲ್ ಸೂಕ್ಷ್ಮ ಸಂವೇದನಾಶೀಲವುಳ್ಳ ಪ್ರವಾಸಿಯಾಗಿ ಮಾಲ್ದೀವ್ ಮತ್ತು ದಕ್ಷಿಣ ಭಾರತದ ಅದರಲ್ಲೂ ಮುಖ್ಯವಾಗಿ ಮಲಬಾರಿನ ಜನಪದ ಜೀವನವನ್ನು ಎಷ್ಟು ಚೆನ್ನಾಗಿ ಅರ್ಥಪೂರ್ಣ

ವಾಗಿ ಬಣ್ಣಿಸಿದ್ದಾನೆಂಬುದನ್ನು ಒಂದೆರಡು ಉದಾಹರಣೆಗಳಿಂದ ಸಮರ್ಥಿಬಹುದು. "ನನ್ನ ಅಭಿಪ್ರಾಯದಲ್ಲಿ ಇಲ್ಲಿಯ ಸುಲಭ ಜೀವನವೇ ಇವರ ಸೋಮಾರಿತನಕ್ಕೆ ಮತ್ತು ಬೇಕು ಬೇಡಿಲ್ಲದ ಜೀವನಕ್ಕೆ ಕಾರಣವಾಗಿದೆ. ಶ್ರೀಮಂತರಾಗದಿರುವುದಕ್ಕೆ ಇದೇ ಕಾರಣ. ಬಹಳ ಜನ ಹೊಟ್ಟೆಬಟ್ಟೆಗಾದರೆ ಸಾಕು ಉಳಿದ ಯಾವ ಯೋಚನೆಯೂ ಇಲ್ಲದೆ ಇದ್ದು ಬಿಡುತ್ತಾರೆ,"[14] (ಪು. 376) ಮಾಲ್ದೀವಿಗಳಿಗೆ ಸಂಬಂಧಿಸಿದಂತೆ ಮುನ್ನೂರು ವರ್ಷಗಳ ಹಿಂದೆ ಆಡಿದ ಈ ಮಾತು ಇಡೀ ಭಾರತೀಯರಿಗೆ ಅನ್ವಯಿಸು ವಂತಿದೆ !

"ನಾನು ಮಾಲ್ದೀವ್ ದ್ವೀಪಗಳಲ್ಲಿದ್ದಾಗ ಐದಾರು ವರ್ಷಗಳ ಕಾಲದಲ್ಲಿ ಹಾದರ, ಕಳ್ಳತನ ಮುಂತಾದ ಅಪರಾಧಗಳಿಗೆ ಶಿಕ್ಷೆ ವಿಧಿಸಿದ್ದನ್ನು ಕಂಡೆ. ಆದರೆ ಏನೇ ಶಿಕ್ಷೆ ವಿಧಿಸಲಿ, ಮಾಡುವುದನ್ನು ಮಾಡದೇ ಬಿಡುವುದಿಲ್ಲ....ಹಾದರ ಮಾಡಿದರೆಂದು ಮೂವತ್ತುಜನ ಮದುವೆಯಾದ ಹೆಂಗಸರಿಗೂ ಶಿಕ್ಷೆಯಾದುದನ್ನು ಕಂಡೆ. ಆದರೆ ಅವರು ಕಲಿತ ಚಾಳಿಯನ್ನು ಬಿಡಬೇಕಲ್ಲ ! ಈ ಹವೆ ಗಂಡು ಹೆಣ್ಣುಗಳನ್ನು ಬಹು ಕಾಮುಕರನ್ನಾಗಿ ಮಾಡುತ್ತದೆ. ಮಾತೆತ್ತಿದರೆ ಅದೇ ವಿಚಾರ. ಎಲೆ ಅಡಿಕೆ ಅಗಿ ಯುತ್ತಾ ಸೋಮಾರಿಗಳಾಗಿ ಹರಟೆ ಹೊಡೆಯುತ್ತಾ ಇರುತ್ತಾರೆ !"[15] (ಪು 388).

ಮಲಬಾರಿಗೆ ಬಂದವನೆ ಕ್ಯಾಲಿಕಟ್ ಜನಜೀವನಕ್ಕೆ ಬೆರಗಾಗಿ ಈತ ಹೀಗೆ ಉದ್ಗಾರ ತೆಗೆಯುತ್ತಾನೆ; "ಕ್ಯಾಲಿಕಟ್‌ನಲ್ಲಿ ಕಾಣುವ ಸಂತೃಪ್ತಿ, ಸಮೃದ್ಧಿಗಳನ್ನು ಇಡೀ ಇಂಡಿಯಾ ದಲ್ಲೆಲ್ಲಿಯೂ ಕಾಣುವಂತಿಲ್ಲ. ಅಷ್ಟು ಸೊಗಸು ಹಾಗೂ ಫಲವತ್ತಾದ್ದು ಈ ನಾಡು ಅಲ್ಲದೆ ಎಲ್ಲಾ ಜನಾಂಗಗಳೊಡನೆ ಇರುವ ವ್ಯವಹಾರವೂ ಇವರ ಸುಖಕ್ಕೆ ಕಾರಣ ವಾಗಿದೆ."[16] ಈ ರೀತಿಯ ಉದ್ಗಾರಕ್ಕೆ ಕಾರಣ ಬಹುಶಃ ಈತ ಸ್ಥಳೀಯ ಜನಪದ ಜೀವನವನ್ನು ಒಳ ಹೊಕ್ಕುನೋಡುವ ಪ್ರವೃತ್ತಿಯುಳ್ಳವನಾಗಿದ್ದ. ಅಲ್ಲಿಯ ದೊಂಬರಾಟದಲ್ಲೂ ಈತನಿಗೆ ಎಷ್ಟೋಂದು ಆಸಕ್ತಿ ! ಈ ಮಾತು ಕೇಳಿ :

"ನಾನೊಂದು ದಿನ ಒಬ್ಬ ದೊಂಬರವಳ ಆಟ ನೋಡಿದೆ. ಎಷ್ಟೋ ದೊಂಬರಾಟ ಗಳನ್ನು ನೋಡಿದ್ದೇನೆ. ಆದರೆ ಆ ದೊಂಬರವಳು ಆಡಿದ ಆಟಕ್ಕೆ ಎಣೆಯಿರಲಿಲ್ಲ."[17]

ಇದೇ ರೀತಿಯಾಗಿ ಗೋವೆಯ ಜೀವನ, ಅದರಲ್ಲೂ ಆಸ್ಪತ್ರೆಯ ನಿಜಚಿತ್ರಣ ವನ್ನು ಬಹಳ ಸ್ವಾರಸ್ಯಕರವಾಗಿ ನೀಡುತ್ತಾನೆ—ದೆಲೆವಲ್. ಹೀಗೆ ಪ್ರತಿಯೊಂದನ್ನೂ ರಂಜನೀಯವಾಗಿ, ಮನಸ್ಸಿಗೆ ಹಿಡಿಸುವಂತೆ ಬಣ್ಣಿಸುವಲ್ಲಿ ಈತನದು ಎತ್ತಿದ ಕೈಯೆಂದೇ ಹೇಳಬಹುದು. ಯಾವುದನ್ನೂ ಮುಲಾಜಿಲ್ಲದೆ ಹೇಳುವ ಈತನ ಕಥನ ದೀರ್ಘ ವಾಗಿದ್ದರೂ ಓದಿಸಿಕೊಂಡು ಹೋಗುತ್ತದೆ. ಓದಿದನಂತರ ನಮಗೆ ಅರಿವಿಲ್ಲ ದಂತೆಯೇ ನಾವು ಎಷ್ಟೊಂದು ವಿಷಯಗಳನ್ನು ತಿಳಿದುಕೊಂಡೆವಲ್ಲಾ ಎಂದೆನ್ನಿಸುತ್ತದೆ. ನಿಜವಾದ ಪ್ರವಾಸಿ ಸಾಹಿತ್ಯ ಪ್ರಕಾರದ ಗುಣ ಇಲ್ಲಿದೆಯೆಂದು ಹೇಳಬಹುದು. ಇದಕ್ಕೆ ಪ್ರಧಾನ ಕಾರಣ ಅವನ ಮಾತಿನಲ್ಲೇ ಹೇಳುವುದಾದರೆ :

“...ನಾಲ್ಕು ಭೂಖಂಡಗಳನ್ನು ಕಂಡೆ. ಹತ್ತುವರ್ಷಗಳಕಾಲ ವಿವಿಧ ಜನಾಂಗಗಳ ಜನರ ಮಧ್ಯೆ ಬಾಳಿದೆ. ನನ್ನ ದೀರ್ಘಪ್ರವಾಸಕಾಲದಲ್ಲಿ ಜನರ ನಡೆನುಡಿ ಪದ್ಧತಿಗಳನ್ನು ಇತರ ಫ್ರೆಂಚರಿಗಿಂತ ಅಷ್ಟೇ ಏಕೆ ಪೋರ್ಚುಗೀಸ್ ಅಥವಾ ಹಾಲೆಂಡ್ ನವರಿಗಿಂತ ಚೆನ್ನಾಗಿ ಅರಿತುಕೊಂಡೆ”[18] (ಪು. 346).

ಡಲಪೆಲ್ ಪ್ರವಾಸ ಕಥನ ಬಿಟ್ಟರೆ ಮೂರನೆಯ ಸಂಪುಟದಲ್ಲಿ ಅತ್ಯಂತ ಸುದೀರ್ಘವಾದ ಕಥನವನ್ನು ಸರ್‌ಥಾಮಸ್‌ರೋ ನೀಡಿದ್ದಾನೆ. ಗೌರವಯುತ ನಡೆನುಡಿಯುಳ್ಳವನಾದ ಈತ ಈಸ್ಟ್ ಇಂಡಿಯಾ ಕಂಪೆನಿಯ ರಾಯಭಾರಿಯಾಗಿದ್ದ. ಈತ ಐತಿಹಾಸಿಕವಾಗಿ ಅತ್ಯಂತ ಅಮೂಲ್ಯವಾದ ಮಾಹಿತಿಗಳನ್ನು ತನ್ನ ಕಥನದಲ್ಲಿ ನೀಡಿದ್ದಾನೆ. ಈತನು ದಿನದಿನವೂ ತಾನು ಕಂಡು ಕೇಳಿದ್ದನ್ನು ಬರೆದುಕೊಳ್ಳುತ್ತಿದ್ದ. ಹಾಗೆ ಬರೆದ ದಿನಚರಿ ಮತ್ತು ಪತ್ರಗಳೇ ಈತನ ಪ್ರವಾಸ ಕಥನಕ್ಕೆ ಮೂಲಾಧಾರವಾಗಿದ್ದರಿಂದ ಅದರ ಮೌಲ್ಯ ಹೆಚ್ಚುತ್ತದೆ.

“ಪೋರ್ಚುಗಲ್ಲರನ್ನು ಮಟ್ಟಹಾಕದೆ ನಾವು ಇಲ್ಲಿ ಸುರಕ್ಷಿತವಾಗಿ ವ್ಯಾಪಾರ ಮಾಡುವುದು ಸಾಧ್ಯವಿಲ್ಲ. ಈಗಲೇ ಪೋರ್ಚುಗಲ್ ರಾಜ ಮುಗ್ಗರಿಸುತ್ತಿದ್ದಾನೆ. ಮುಗ್ಗರಿಸುವಾಗ ಅವನ ಮೇಲೆ ಕಾಲು ಹಾಕಿ ಅಮುಕಿಕೊಳ್ಳುವುದು ಸರಿಯಾದ ರಾಜನೀತಿ”[19] (ಪು. 220) ಎಂದು ನಂಬಿದ ಈತ ರಾಜಕೀಯವಾಗಿ ಪರಿಣತ ಪ್ರವಾಸಿಯಾಗಿದ್ದನೆಂದೇ ಹೇಳಬೇಕು. ರೋ ಪ್ರತ್ಯಕ್ಷವಾಗಿ ಕಂಡದ್ದರ ಪರಿಣಾಮವಾಗಿ ಎಷ್ಟೋ ಅರೆಕೊರೆಗಳನ್ನು ಹೇಗೆ ತಿದ್ದಲು ಸಾಧ್ಯ—ಆದರಲ್ಲೂ ರೋ ನಂಥ ಸೂಕ್ಷ್ಮಮತಿಗೆ—ಎಂಬುದಕ್ಕೆ ಆತ ಜನವರಿ 17 ರಂದು ಲಾರ್ಡ್‌ಕರ್ರ್ಯೂ ಎಂಬುವವರಿಗೆ ಬರೆದ ಪತ್ರದ ಈ ಭಾಗವನ್ನು ಗಮನಿಸಬೇಕು :

“ನಮ್ಮ ಭೂಪಟಗಳು ಸುಳ್ಳು. ಮೊದಲನೆಯದಾಗಿ, ಹೆಸರಾದ ಇಂಡಸ್‌ನದಿ ಕಾಂಬಿಯಾ (ಕ್ಯಾಂಬೆ) ಬಳಿ ಸಮುದ್ರಕ್ಕೆ ಬೀಳುವುದಿಲ್ಲ—ನಮ್ಮ ಭೂಪಟದಲ್ಲಿ ತೋರಿಸಿರುವಂತೆ. ಅದು ಸಿಂಧೆ (ಸಿಂಧು) ಬಳಿ ಸಮುದ್ರಕ್ಕೆ ಬೀಳುತ್ತದೆ. ಲಾಹೋರ್ ಇರುವ ಸ್ಥಳವನ್ನು ತಪ್ಪಾಗಿ ತೋರಿಸಿದೆ. ಮೊಗಲ್ ರಾಜ ಸಾಮಾನ್ಯವಾಗಿ ಇರುವುದು ಆಗ್ರಾದಲ್ಲಿ.[20] (ಪು. 225) ಸರ್‌ಥಾಮಸ್‌ರೋ ಸೂರತ್‌ನಲ್ಲಿ ಮಳಿಗೆ ಇಡಲು ಮೊಗಲರಿಂದ ‘ಫರ್ಮಾನ್’ ಪಡೆದ ಕಥನ ಈ ಸಂಪುಟದಲ್ಲಿರುವ ಅಮೂಲ್ಯ ಐತಿಹಾಸಿಕ ದಾಖಲೆಯಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇಂಗ್ಲೆಂಡಿನೊಡನೆ ಆದ ಕೆಲವು ಪ್ರಮುಖ ಪತ್ರಗಳ ಯಥಾ ನಕಲಿದೆ. (ಪು. 234) ಏಪ್ರಿಲ್ 23ನೆಯ ತಾರೀಖಿನಂದು ಸೂರತ್ತಿನ ಫ್ಯಾಕ್ಟರಿಯಲ್ಲಿ ಚಾಪ್ಲೈನ್ ಆಗಿದ್ದ ಮಿಸ್ಟರ್ ಲಿಸ್ಕೆಗೆ (Leske) ಬರೆದ ಕಾಗದದ ಒಂದು ಭಾಗ, ಥಾಮಸ್‌ರೋನ ಸಹಿಯೊಂದಿಗೆ, ಇಲ್ಲಿ ಪಡಿಮೂಡಿದೆ. ಇದರಿಂದ ಆತನ ಹಸ್ತಾಕ್ಷರವಲ್ಲದೆ, ಆ ಕಾಲದ ಇಂಗ್ಲೀಷ್ ಭಾಷೆ ಶೈಲಿಯ ಪರಿಚಯವೂ ಕೆಲಮಟ್ಟಿಗೆ ಆದೀತು.[21]

ಅಂತೂ ರೋನ ಕಥನದಿಂದ ಉತ್ತರ ಭಾರತದ ರಾಜಕೀಯ ಇತಿಹಾಸದ ಪುನರ್ರಚನೆ, ಅದರಲ್ಲೂ ಭಾರತದ ಸ್ವಾಮ್ಯಕ್ಕಾಗಿ ಪಾಶ್ಚಾತ್ಯರ ಪೈಪೋಟಿಯ ಚಿತ್ರಣ ಸುಲಭಸಾಧ್ಯವೆಂದು ತಿಳಿಯಬಹುದು. ಈ ಪೈಪೋಟಿಯ ರೋಷ ಎಷ್ಟು ತೀವ್ರವಾಗಿತ್ತೆಂಬುದು ಕ್ಯಾಂಟರ್‌ಬರಿಯ ಲಾರ್ಡ್‌ಬಿಷಪ್ಪಿಗೆ ರೋ ಬರೆದ ಪತ್ರದ ಮೂಲಕ ತಿಳಿದೀತು :

"ತಾವೇ ಶೂರರು, ಧೀರರೆಂದು ಜಂಭ ಕೊಚ್ಚಿಕೊಳ್ಳುತ್ತಿದ್ದ ಪೋರ್ಚುಗೀಸರ ಸೊಕ್ಕನ್ನು ಈಗ ಮುರಿದಿದ್ದೇವೆ. ಅವರನ್ನು ಸೋಲಿಸಿ ಯಾವ ಮಟ್ಟಕ್ಕಿಳಿಸಿದ್ದೇವೆಂದರೆ, ಅದರ ಬಗ್ಗೆ ಒಂದು ಗಾದೆಯೇ ಆಗಿಬಿಟ್ಟಿದೆ : ಒಬ್ಬ ಪೋರ್ಚುಗೀಸ ಮೂರು ಮೂರರಿಗೆ ಸಮ ; ಒಬ್ಬ ಇಂಗ್ಲೀಷಿನವ ಮೂರು ಪೋರ್ಚುಗೀಸರಿಗೆ ಸಮ ಎಂದು."[22] (ಪು. 253) ಆಗ ಭಾರತದ ಪರಿಸ್ಥಿತಿ ಹೇಗಿತ್ತೆಂದರೆ—ರೋನ ವಾಣಿಯಲ್ಲಿ ಬಣ್ಣಿಸುವುದಾದರೆ—

"ಒಬ್ಬರನ್ನೊಬ್ಬರು ಕಿತ್ತು ತಿನ್ನುವುದೇ ಇಲ್ಲಿಯ ಜನಗಳ ನಡೆವಳಿಕೆ. ಶ್ರೀಮಂತ ಸರದಾರರು ಜನಗಳನ್ನು ಹಿಂಸೆಮಾಡಿ ಧನಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಕೊಡದಿದ್ದವರನ್ನುತಲೆಕೆಳಗಾಗಿ ನೇತು ಹಾಕುತ್ತಾರೆ."[23] (ಪು.271) ಇದಕ್ಕೆ ಪೂರಕವಾಗಿ ಎಂಬಂತೆ 1617ರಲ್ಲಿ ಒಕ್ಸ್‌ಪೋರ್ಡನು ಇಂಗ್ಲೆಂಡಿಗೆ ಓಗೆಂದು ಪತ್ರ ಬರೆದಿದ್ದ :

"ಈ ದೇಶದ ಜನ ಬಹಳ ಹೀನ ಮನುಷ್ಯರು ಭಿಕ್ಷುಕನಿಂದ ಹಿಡಿದು ರಾಜನವರೆಗೆ ಎಲ್ಲರೂ ಕಳ್ಳರೇ. ಸಮುದ್ರದಲ್ಲಿರುವ ಮೀನುಗಳಂತೆ ದೊಡ್ಡವು ಸಣ್ಣವನ್ನು ತಿನ್ನುತ್ತವೆ. ಸಣ್ಣ ರೈತನನ್ನು ದೊಡ್ಡ ರೈತ ಕೊಳ್ಳೆ ಹೊಡೆಯುತ್ತಾನೆ. ಸರದಾರ ದೊಡ್ಡ ರೈತನನ್ನು ಮತ್ತು ದೊಡ್ಡ ಸರದಾರ ಚಿಕ್ಕ ಸರದಾರನನ್ನು ಕೊಳ್ಳೆ ಹೊಡೆಯುತ್ತಾನೆ. ರಾಜ ಎಲ್ಲರನ್ನೂ ಕೊಳ್ಳೆ ಹೊಡೆಯುತ್ತಾನೆ."[24] (ಪು. 271) ಈ ಪರಿಸ್ಥಿತಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಂಡ ಇಂಗ್ಲೀಷನವರಾದ ರೋ ಬಹಳ ಹುಷಾರಾಗಿ, ಸತತ ಪ್ರಯತ್ನದಿಂದ, ಜಹಾಂಗೀರನೊಡನೆ ಅಲೆದಾಡಿ, ಇಂಗ್ಲೀಷರು ಇಂಡಿಯಾದಲ್ಲಿ ವ್ಯಾಪಾರ ಮಾಡುವುದಕ್ಕೆ ಬೇಕಾದ ಅನುಮತಿಯನ್ನು ಪಡೆದನು. ಆತ ಇಂಡಿಯಾಕ್ಕೆ ಬಂದು ಸುಮಾರು ಮೂರು ವರ್ಷಗಳ ಸತತ ಪ್ರಯತ್ನದಿಂದ ಹೇಗೆ ಈ ಫರ್ಮಾನನ್ನು ಪಡೆದನೆಂಬುದು ಈ ಕಥನದಲ್ಲಿ ವರ್ಣಿತವಾಗಿದೆ ; ಚರಿತ್ರೆಯ ಅಧ್ಯಯನಕ್ಕೆ ತುಂಬ ಉಪಯುಕ್ತವಾದ ಕಥಾನಕವಿದು.

ಸರ್ ಥಾಮಸ್ ರೋನ ಸ್ವಂತಪಾದ್ರಿಯಾಗಿ ಭಾರತಕ್ಕೆ ಬಂದ ಎಡ್ವರ್ಡ್ ಟೆರ್ರಿ (Edward Terry) ಇಲ್ಲಿ ತಾನಿದ್ದ ಎರಡೂವರೆ ವರ್ಷಗಳಕಾಲದ ಅನುಭವಗಳನ್ನು ತುಂಬಾ ಸ್ವಾರಸ್ಯವಾಗಿ, ರಂಜನೀಯವಾಗಿ ಬರೆದಿಟ್ಟು ಉಪಕರಿಸಿದ್ದಾನೆ. ಪರ್ಚಾಸ್ ಎಂಬ ಖ್ಯಾತ ಪ್ರವಾಸ ಸಾಹಿತ್ಯ ಸಂಪಾದಕ ಹೇಳುವಂತೆ ಈತನ ಕಥನ

"ಇಂಗ್ಲೀಷ್-ಇಂಡಿಯನ್-ಪಾನೀಯದ ಬೀಳ್ಕೊಡುವಾಗ ಕುಡಿಯುವ ಕೊನೆಯ ಗುಟುಕು"[25] ಟೆರ್ರಿಯ ಪ್ರವಾಸ ಕಥನ ಸರ್ ಥಾಮಸ್ ರೋನ ಕಥನಕ್ಕಿಂತ ಎಷ್ಟೋ ಉತ್ತಮವಾಗಿದೆಯೆಂಬುದು ಖ್ಯಾತ ಇತಿಹಾಸಜ್ಞ ವಿ. ಎ. ಸ್ಮಿತ್‌ರವರ ಅಭಿಮತವಾಗಿದೆ.[26] ಈತ 1615 ರಿಂದ 1619ರವರೆಗೆ ಪ್ರವಾಸ ಮಾಡಿದ. ಪ್ರತ್ಯಕ್ಷವಾಗಿ ಕಂಡದ್ದರ ಆಧಾರದ ಮೇಲೆ ಭೂಗೋಳ ಶಾಸ್ತ್ರಜ್ಞರು ಮಾಡಿರುವ ತಪ್ಪನ್ನು ಸರಿಪಡಿಸಲು ಸೂಚಿಸಿದ. ಪ್ರತಿಯೊಂದನ್ನು ಕಣ್ಣಿಟ್ಟು ನೋಡಿ, ವಿವರವಾಗಿ ಬಣ್ಣಿಸಿದ್ದಾನೆ. ಪ್ರಾಣಿಪಕ್ಷಿ, ಹಣ್ಣುಹಂಪಲು, ಪಾನೀಯಾ, ಹವಾಮಾನ, ಕೃಷಿ, ಕೈಗಾರಿಕೆ, ಪ್ರಕೃತಿ, ನದಿ, ನಾಲೆ, ಕಟ್ಟಡ— ಒಂದನ್ನು ಬಿಡದೆ ಎಲ್ಲವನ್ನೂ ವಿವರವಾಗಿ ಬಣ್ಣಿಸುತ್ತಾನೆ. ಉತ್ತರಭಾರತದ (ಮೊಗಲಭಾರತದ) ಜನಜೀವನದ ಒಂದು ಇಣುಕು ನೋಟವನ್ನೂ ಎಷ್ಟು ನೈಜವಾಗಿ ಕೊಡುತ್ತಾನೆ ನೋಡಿ :

"ಇಟಾಲಿಯನರು ಹೇಳುವಂತೆ ಇಲ್ಲಿಯ ಜನ ಕಟ್ಟಡಗಳನ್ನು ಕಟ್ಟುವ ರೋಗಕ್ಕೆ ಸಿಲುಕಿಲ್ಲ. ಅನಾವಶ್ಯಕವಾಗಿ ತಲೆಯಮೇಲೆ ಮೇಲ್ಛಾವಣಿ ಕಪ್ಪಚಿ ಹಾಕಿಕೊಳ್ಳುವುದಿಲ್ಲ. ಕಟ್ಟಿರುವ ಮನೆಗಳು ಎತ್ತರವಾದವುಗಳಲ್ಲ, ನಾನು ಪಟ್ಟಣಗಳಲ್ಲಿ ಮಾತ್ರ ಮಹಡಿಮನೆಗಳನ್ನೂ ನೋಡಿದೆ. ಮನೆಯ ಮೇಲ್ಭಾಗವನ್ನೂ ಮಟ್ಟವಾಗಿ ಮಾಡಿಕೊಂಡು, ಅಲ್ಲಿ ತಂಗಾಳಿಗಾಗಿ ಮಲಗಿಕೊಳ್ಳುತ್ತಾರೆ. ಮನೆಗಳಿಗೆ ಹೊಗೆಯ ಕೊಳವೆಗಳಿಲ್ಲ. ಏಕೆಂದರೆ ಅಡಿಗೆಗಲ್ಲದೆ ಬೇರೆ ಕೆಲಸಕ್ಕೆ ಉರಿಹಾಕುವುದಿಲ್ಲ ಮನೆಯಲ್ಲಿರುವ ಉಪಕರಣಗಳೂ ಬಹಳ ಕಡಮೆ. ಗೋಡೆಗಳಿಗೆ ಸರಳವಾದ ರೀತಿಯಲ್ಲಿ ಸುಣ್ಣ ಹಚ್ಚಿ ಬೆಳ್ಳಗೆ ಇಟ್ಟುಕೊಳ್ಳುತ್ತಾರೆ, ಒಂದಿಷ್ಟು ಚಿತ್ತಾರ ಮಾಡುತ್ತಾರೆ. ಅನಾವಶ್ಯಕವಾದ ಬಣ್ಣಗಿಣ್ಣ ಹಚ್ಚುವುದಿಲ್ಲ. ಇವರು ಕುಳಿತುಕೊಳ್ಳುವುದೂ ಮಲಗುವುದೂ ನೆಲದ ಮೇಲೆ. ಜಮಖಾನ ಮತ್ತು ದಿಂಬುಗಳಿದ್ದುಬಿಟ್ಟರೆ ಸಾಕು. ಕೆಲವರು ತಗ್ಗಾದ ಮಂಚಗಳ ಮೇಲೊ ತೂಗುಮಂಚಗಳ ಮೇಲೊ ಮಲಗುತ್ತಾರೆ. ಕೀಳಬಡವರು ಬರಿಯ ನೆಲದ ಮೇಲೆ ತಲೆದಿಂಬುಗಿಂಬೂ ಏನೂ ಇಲ್ಲದೆ, ಬಿಳೀಬಟ್ಟೆ ಹೊದೆದು ಹಾಯಾಗಿ ಮಲಗಿಬಿಡುತ್ತಾರೆ. ಹೀಗೆ ಮಲಗಿದವರು ಹೂಳಲಿಕ್ಕೆ ಸಿದ್ಧಮಾಡಲ್ಪಟ್ಟ ಹೆಣಗಳೋಪಾದಿಯಲ್ಲಿ ಕಾಣುತ್ತಾರೆ. ಮನೆಗಳ ಸುತ್ತಮುತ್ತ ಗಿಡಮರಗಳನ್ನೂ ಬೆಳೆಸಿರುತ್ತಾರೆ.[27] (ಪು. 301) ಈ ರೀತಿಯ ಶಬ್ದಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಚಮತ್ಕಾರವನ್ನು ಬಲ್ಲವನೆಂದರೆ ಟೆರ್ರಿ.

ಅಂದಿನ ಭಾರತದ ಸಂಸ್ಕೃತಿಯ ಚಿತ್ರಣವನ್ನು ಈ ಭಾಗದಲ್ಲಿ ಬಹಳ ಮಾರ್ಮಿಕವಾಗಿ ಟೆರ್ರಿ ಕೊಡುತ್ತಾನೆ ;

"ಇಲ್ಲಿಯ ಭಾಷೆಯನ್ನು 'ಇಂದೂಸ್ತಾನ್' ಎಂದು ಕರೆಯುತ್ತಾರೆ, ಇದು ಆಡಲು ಸುಲಭವಾದ ಭಾಷೆ. ನಮ್ಮಂತೆ ಎಡದಿಂದ ಬಲಕ್ಕೆ ಬರೆಯುತ್ತಾರೆ. ಪಂಡಿತರು ಪರ್ಷಿಯನ್ ಮತ್ತು ಅರೇಬಿಯನ್ ಭಾಷೆಗಳನ್ನಾಡುತ್ತಾರೆ. ಈ ಭಾಷೆಗಳನ್ನು

ಬಲದಿಂದ ಎಡಕ್ಕೆ ಬರೆಯುತ್ತಾರೆ. ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳ ಪರಿಚಯವೇ ಇಲ್ಲ ಇವರಿಗೆ. ಈ ಕಾರಣದಿಂದಾಗಿ ಇವರಲ್ಲಿ ಪಾಂಡಿತ್ಯ ಕಡಿಮೆಯೆಂದು ಹೇಳಬೇಕು."

"ಆದರೆ ಇಲ್ಲಿ ಯಾವ ವಿಷಯದ ಮೇಲೂ ಸೊಗಸಾಗಿ ಮಾತನಾಡಬಲ್ಲ ಜನರುಂಟು ....ಇಷ್ಟು ಮಾತ್ರ ಹೇಳಬಲ್ಲೆ : ಇಲ್ಲಿ ದಡ್ಡರನ್ನಾಗಲೀ ಬೆಪ್ಪರನ್ನಾಗಲೀ ಅಥವಾ ವಕ್ರವಾಗಿರುವವರನ್ನಾಗಲೀ ನಾನು ಕಾಣಲಿಲ್ಲ. ಇವರು ಇಷ್ಟು ಅಜ್ಞಾನಿಗಳಾಗಿದ್ದರೂ ಇನ್ನೊಬ್ಬರ ಅಭಿಪ್ರಾಯ ಕೇಳುವುದಕ್ಕೆ ಹೋಗುವುದಿಲ್ಲ"....[28](ಪು.309)

ಇಂಡಿಯನ್ನರು ಬಹಳ ನಂಬಿಕಸ್ತರೆಂಬ ಮಾತನ್ನು ಇಲ್ಲಿ ಹೇಳದಿದ್ದರೆ ತಪ್ಪಾದೀತು. ಪರವೂರಿನ ಸಾಮಾನು ಸರಂಜಾಮುಗಳ್ಯಾವುವೂ ಇವರಿಂದ ಕಳವಾಗುವುದಿಲ್ಲ. ನಮ್ಮ ಸಹಾಯಕ್ಕೆ ಇಟ್ಟುಕೊಂಡವರು ನಂಬಿಕೆಗೆ ದ್ರೋಹವಮಾಡುವುದಿಲ್ಲ. ಪ್ರಾಣಕ್ಕೆ ಪ್ರಾಣ ಕೊಡಬಲ್ಲ ಜನ ಇವರು."[29] (ಪು. 311)

ಆದರೆ ಎಡ್ವರ್ಡ್ ಟೆರ್ರಿ ಹೇಳಿರುವುದೆಲ್ಲ ವಾಸ್ತವ ಸಂಗತಿಯಲ್ಲ ಎಂಬುದನ್ನು ಕಾಲ್ಪನಿಕ ವೃತ್ತಾಂತಗಳೂ ಅಲ್ಲಲ್ಲಿ ಸಾಕಷ್ಟಿವೆಯೆಂಬುದನ್ನು ಇಲ್ಲಿ ನೆನಪಿಡಬೇಕು. ಪರದೇಶಗಳಿಂದ ಬಂದ ಪಾದ್ರಿಗಳಲ್ಲಿ ಪಲವರು ಇಲ್ಲಿಯ ಸ್ಥಿತಿಗತಿಗಳನ್ನು ಅವರವರ ದೃಷ್ಟಿಕೋನಗಳಿಂದ ನೋಡಿದರೇ ಹೊರತು, ನಮ್ಮ ಸಂಸ್ಕೃತಿ, ಧರ್ಮ, ಭಾಷೆಗಳನ್ನು ಆಳವಾಗಿ ಅಧ್ಯಯನಮಾಡಿ ಅರ್ಥಮಾಡಿಕೊಳ್ಳಲಿಲ್ಲ. ಅಲ್ಲದೆ ಅವರಿಗೆ ತಮ್ಮ ಮತಾಭಿಮಾನ ಬೇರೆ ಇತ್ತು. ಈ ಕಾರಣದಿಂದ ಅವರು "ಭಾರತೀಯರೆಲ್ಲರೂ ಭ್ರಷ್ಟರೆಂದೂ, ಇಂಥ ಜನರನ್ನು ಕ್ರೈಸ್ತಮತಕ್ಕೆ ಮತಾಂತರಿಸಿ ಆತ್ಮೋದ್ಧಾರಮಾಡುವುದೇ ತಮ್ಮ ಪವಿತ್ರ ಕರ್ತವ್ಯವೆಂದೂ"[30] ಭಾವಿಸಿದ್ದಂತೆ ತೋರುತ್ತದೆ. ಈ ಮಾತನ್ನು ಈ ಸಂಪುಟದ ಕೆಲವು ಪಾದ್ರಿಪ್ರವಾಸಿಗಳ ಕಥನಗಳಿಂದ, ಮುಖ್ಯವಾಗಿ ಫಾದರ್ ಅಂತೋಣಿ ಮೊನ್ಸೆರೆಟ್ ಕಥನಗಳಿಂದ ಸ್ಪಷ್ಟವಾಗುವುದು. ಅಲ್ಲದೆ ಇನ್ನು ಕೆಲವು ಪೋರ್ಚುಗೀಸ್ ಪಾದ್ರಿಗಳು ಅಕ್ಬರನ ಪರಮತಸಹಿಷ್ಣುತೆಯನ್ನು ಬಹುಶಃ ತಪ್ಪಾಗಿ ತಿಳಿದೊ, ತಾವೇ ಕಲ್ಪಿಸಿಕೊಂಡೊ ಅವನನ್ನೂ ಮತಾಂತರಗೊಳಿಸುವ ಹುಚ್ಚು ಆಸೆಯಿಂದ ನಡೆಸಿದ ವ್ಯರ್ಥ ಯತ್ನಗಳು ಈ ಸಂಪುಟದಲ್ಲಿ ಚೆನ್ನಾಗಿ ವರ್ಣಿತವಾಗಿವೆ. ಸಂಪುಟದ ಆರಂಭದಲ್ಲಿ ಇಂಡಿಯಾಕ್ಕೆ ಬಂದ ಇಂಗ್ಲೀಷಿನವರಲ್ಲಿ ಮೊಟ್ಟಮೊದಲಿಗನೆಂದು ಹೇಳಲಾದ ಫಾದರ್ ಥಾಮಸ್ ಸ್ಟೀವೆನ್ಸ್‌ನು ಬರೆದ ಎರಡು ಪತ್ರಗಳನ್ನು ನೀಡಲಾಗಿದೆ. ಆ ಕಾಲದಲ್ಲಿ ಕ್ರೈಸ್ತಮತಕ್ಕಿದ್ದ ಪ್ರತಿಕ್ರಿಯೆ, ತಕ್ಕಮಟ್ಟಿಗೆ ತಿಳಿಯುತ್ತದೆ. ಕ್ರಿ.ಶ. 1542 ರಲ್ಲಿ ಸೇಂಟ್‌ಫ್ರಾನ್ಸಿಸ್ ಸಾವಿಯರ್‌ನ ಆಗಮನದಿಂದ ಭಾರತದಲ್ಲಿ ಸ್ಥಾಪಿತಗೊಂಡ ಜೆಸೂಯಿಟ್ ಸಂಘವು ಇಡೀ ಪ್ರಪಂಚವನ್ನೇ ಕ್ರೈಸ್ತಮತಕ್ಕೆ ಪರಿವರ್ತಿಸಬೇಕೆಂಬ ದೊಡ್ಡ ಆಸೆಯಿಟ್ಟುಕೊಂಡಿತ್ತು. ದಕ್ಷಿಣ ಭಾರತವನ್ನೊಳಗೊಂಡಂತೆ ಇಡೀ ಭರತಖಂಡದಲ್ಲೇ ಈ ಮತಾಂತರ ಕಾರ್ಯಮಾಡಬೇಕೆಂದು ಇಚ್ಛಿಸಿತ್ತು. ಕ್ರೈಸ್ತ ಪಾದ್ರಿ

ಗಳ ಕಣ್ಣು ಮೊಗಲ ಸಾಮ್ರಾಜ್ಯದತ್ತ ಹೊರಳಿತು. ಫಾದರ್ ಮೊನ್ಸೆರೇಟ್ ಪ್ರವಾಸ ಕಥನದಲ್ಲಿ ಈ ವಿಷಯ ಕಂಡುಬರುತ್ತದೆ, ದುರದೃಷ್ಟವಶಾತ್ ಈತನ ಪ್ರವಾಸಕಥನ ಭಾಗದ ಮೊದಲ ಕೆಲವು ಪುಟಗಳು ಕಳೆದುಹೋಗಿವೆ. ಉಳಿದುಳಿದದ್ದನ್ನು ಬಂಗಾಳದ ಏಷಿಯಾಟಿಕ್ ಸೊಸೈಟಿಯವರು 1914ರಲ್ಲಿ ಪ್ರಕಟಿಸಿದರು.[31] ನಾಗೇಗೌಡರು ಈ ಭಾಗವನ್ನು ಕನ್ನಡಕ್ಕೆ ರೂಪಾಂತರಿಸಿಕೊಟ್ಟಿರುತ್ತಾರೆ. ಅಷ್ಟೇ ಅಲ್ಲ ಫಾದರ್ ಮೊನ್ಸೆರೇಟ್ ಹೇಳಿರುವ ವಿಷಯಗಳನ್ನು ವಿಮರ್ಶೆಯ ಹಾಗೂ ಐತಿಹಾಸಿಕ ಸತ್ಯದ ಒರೆಗಲ್ಲಿಗೆ ಹಚ್ಚದೆ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡೇ ಈ ಪ್ರವಾಸ ಕಥನವನ್ನಾಗಲೀ ಇತರ ಪ್ರವಾಸ ಕಥನಗಳನ್ನಾಗಲೀ ನಾವು ಓದಬೇಕಾಗಿದೆಯೆಂಬ ಒಂದು ಸಂದರ್ಭೋಚಿತವಾದ ಎಚ್ಚರಿಕೆಯನ್ನು ನೀಡಿದ್ದಾರೆ.[32] (ಈ ಮಾತನ್ನು 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳನ್ನು ಓದುವಾಗ ಮರೆಯದೆ ನೆನಪಿಟ್ಟುಕೊಳ್ಳುವಂಥದ್ದಾಗಿದೆ.) ಈ ಹಿನ್ನೆಲೆಯಲ್ಲಿ ಜೆಸ್ಯೂಟ್ ಗೋಯೆಸ್‌ನ (1563-1607) ರೋಮಾಂಚಕರವೂ, ರಮ್ಯವೂ ಆದ ಪ್ರವಾಸ ಕಥನವನ್ನಾಗಲಿ, ನಿಕೋಲಾಸ್ ಪಿಮೆಂಟಾ (1599-1617) ಕ್ರೈಸ್ತಮತ ಪ್ರಸಾರಕ್ಕೆ ಸಂಬಂಧಿಸಿದಂತೆ ಬರೆದ ಪತ್ರಗಳನ್ನಾಗಲೀ ರಾಲ್ಫ್ ಫಿಚ್‌ನ ಪ್ರವಾಸಕಥನವನ್ನಾಗಲೀ ಗಮನಿಸಬೇಕಾಗುವುದು (ವಿದೇಶಿಯರು ಹೇಳುವ ವಿಷಯಗಳನ್ನು ಬಹು ಎಚ್ಚರಿಕೆಯಿಂದ ಸ್ವೀಕರಿಸಬೇಕಾಗುತ್ತದೆಯೆಂಬ ಬೇನೀ ಪ್ರಸಾದರ ಮಾತು ಕೂಡ ಇಲ್ಲಿ ಸ್ಮರಣೀಯ). ರಾಲ್ಫ್ ಫಿಚ್‌ನ ಪ್ರವಾಸಕಥನ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸ್ಥಾಪನೆಗೆ ಪೂರ್ವದ್ದೆಂದು ನೆನಪಿಡಬೇಕು. ಈತ ಸಾಕಷ್ಟು ದೀರ್ಘಕಾಲ (ಸುಮಾರು ಹದಿನೆಂಟು ವರ್ಷಗಳ ಕಾಲ) ಪ್ರವಾಸ ಮಾಡಿದ್ದರೂ ಅವನ ಕಥನ ಬಹಳ ಚಿಕ್ಕದಾಗಿದೆ. ಆದರೂ ತನ್ನ ಕಥನದಲ್ಲಿ ಕರ್ನಾಟಕದ ಬೆಳಗಾಂ (ಬೆಳ್ಳರ್‌ಗಾನ್) ಮತ್ತು ಬಿಜಾಪುರ (ಬಿಸಾಪುರ)ಗಳನ್ನು ಉಲ್ಲೇಖಿಸಿರುವುದು ಸ್ವಾರಸ್ಯಕರವಾಗಿದೆ. ಗೋವಾದಿಂದ ಹೊರಟ ಈತನಿಗೆ ಕರ್ನಾಟಕದಲ್ಲಿ ಮೊದಲು ಸಿಕ್ಕ ಊರೇ ಬೆಳ್ಳರ್‌ಗಾನ್ (ಬೆಳಗಾಂವ್). ಅಲ್ಲಿ ಆತ ಹೇಳುವ ಪ್ರಕಾರ ವಜ್ರವೈಢೂರ್ಯಗಳ ಮುತ್ತುರತ್ನಗಳ ದೊಡ್ಡ ಮಾರುಕಟ್ಟೆಯೇ ಇತ್ತಂತೆ. ಅನಂತರ ಅಲ್ಲಿಂದ ಬಿಸಾಪುರಕ್ಕೆ (ಬಿಜಾಪುರ) ಹೋದ. ಆ ಪಟ್ಟಣದ ವರ್ಣನೆಯನ್ನು ಆತನ ಮಾತಿನಲ್ಲೇ ಬಣ್ಣಿಸುವುದಾದರೆ :

"ಇದು ದೊಡ್ಡ ಪಟ್ಟಣ. ಇಲ್ಲಿ ರಾಜನ ಆಸ್ಥಾನವಿದೆ. ಆಸ್ಥಾನದಲ್ಲಿ ಅನೇಕ ಜೆಂಟೈಲರಿದ್ದಾರೆ. ಇವರು ವಿಗ್ರಹಾರಾಧಕರು. ಕಾಡಿನಲ್ಲಿ ಕಟ್ಟಿದ ದೇವಸ್ಥಾನಗಳಲ್ಲಿ- ಇವುಗಳನ್ನು 'ಪಗೋಡಾ' ಎಂದು ಕರೆಯುತ್ತಾರೆ. ನಿಲ್ಲಿಸಿದ ಇವರ ವಿಗ್ರಹಗಳು ಕೋತಿಗಳು, ಕೋಣಗಳು, ನವಿಲುಗಳು ಮತ್ತು ಭೂತಗಳಂತೆ ಕಾಣುತ್ತವೆ. ಇಲ್ಲಿ ಯುದ್ಧಕ್ಕೆ ಉಪಯೋಗಿಸುವ ಅನೇಕ ಆನೆಗಳಿವೆ. ಚಿನ್ನ ಬೆಳ್ಳಿ ತುಂಬಾ ಇವೆ. ಮನೆಗಳನ್ನು ಕಲ್ಲುಗಳಿಂದ ಅಚ್ಚುಕಟ್ಟಾಗಿ ಮತ್ತು ಎತ್ತರವಾಗಿ ಕಟ್ಟಿದ್ದಾರೆ."[33] (ಪು 105) ಈರೀತಿಯಾಗಿ

ಕಾಶಿಯ (ಬನಾರಸ್) ವರ್ಣನೆ, ಪಾಟ್ನಾ, ಬಂಗಾಲ,ಒರಿಸ್ಸಾ ಮುಂತಾದುವುಗಳ ವರ್ಣನೆಗಳನ್ನೊಳಗೊಂಡಿದೆ-ಈತನ ಪ್ರವಾಸ ಕಥನ. ಈತನ ಜೊತೆಗೆ ಭಾರತಕ್ಕೆ ಬಂದ ಜಾನ್ ಎಲ್ಡ್ರೆಡ್, ಜಾನ್ ನ್ಯೂ ಬೆರ್ರಿ ಮತ್ತು ಲಿನ್ ಸ್ಕೊತೆನರು ಬರೆದಿರುವ ಕೆಲವು ಪತ್ರಗಳಲ್ಲಿ ಕೆಲವನ್ನು ಫಿಚ್‌ನ ಪ್ರವಾಸ ಕಥನಕ್ಕೆ ಪೂರಕವಾಗಿ, ಪೋಷಕವಾಗಿ, ಗೌಡರು ಅನುವಾದಿಸಿ ಕೊಟ್ಟಿದ್ದಾರೆ.

ರಾಲ್ಫ್ ಫಿಚ್ ಭಾರತಕ್ಕೆ ಬಂದು ಹೋದ ಸುಮಾರು ಇಪ್ಪತ್ತು ವರ್ಷಗಳ ತರುವಾಯ ಜಾನ್ ಮಿಲ್ಡೆನ್ ಹಾಲ್ (ಮಿಡ್ನಾಲ್) ಎಂಬಾತ ಈ ದೇಶಕ್ಕೆ ಪ್ರವಾಸ ಬಂದನು. ಇಲ್ಲಿ ವ್ಯಾಪಾರ ಮಾಡಲು ಅನುಮತಿಯನ್ನು ಮೊಗಲ್ ಚಕ್ರವರ್ತಿ ಅಕ್ಬರ್‌ನಲ್ಲಿ ಕೇಳಿಕೊಂಡ ಸಂಗತಿ ಆತನು ಬಿಟ್ಟುಹೋದ ಪ್ರವಾಸ ಕಥನ ಪತ್ರವ್ಯವಹಾರಗಳಿಂದ ತಿಳಿದು ಬರುತ್ತದೆ.

ಮೊಗಲರಸ ಜಹಾಂಗೀರ್‌ನ ಆಸ್ಥಾನದ ವರ್ಣನೆಯನ್ನು ಮಾಡಿರುವ ಇಂಗ್ಲಿಷರಲ್ಲಿ ಮೊದಲನೆಯವನೆಂದು ಹೇಳಲಾದ[34] ವಿಲಿಯಂ ಹಾಕಿನ್ಸ್ ಬರೆದಿಟ್ಟ ದಿನಚರಿ, ಪ್ರವಾಸಕಥನ ಬಹು ಉಪಯುಕ್ತವಾಗಿದೆಯೆಂದು ಹೇಳಲಾಗಿದೆ. ಈಸ್ಟ್ ಇಂಡಿಯಾ ಕಂಪನಿಯು ಸ್ಥಾಪನೆಯಾದನಂತರ (1600) ಕೆಲಕಾಲ ಇಂಗ್ಲೆಂಡ್, ಸ್ಪೇನ್ ಮತ್ತು ಪೋರ್ಚುಗಲ್ ರಾಜ್ಯ (ಸಂಯುಕ್ತ ರಾಜ್ಯ) ಗಳೊಡನೆ ಯುದ್ಧ ಮಾಡಬೇಕಾಗಿ ಬಂತು. 1604 ರಲ್ಲಿ ಯುದ್ಧ ನಿಂತಿತು; ಕರಾರು ಮಾಡಿಕೊಂಡಿತು. ಭಾರತದೊಡನೆ ವ್ಯಾಪಾರ ಸಂಪರ್ಕ ಪುನಃಮುಂದುವರೆಯಿತು. ಈ ಕಾಲದಲ್ಲಿ ಭಾರತಕ್ಕೆ ಹೊರಟ ಹಡಗು ಪಡೆಯ ಲೆಫ್ಟಿನೆಂಟ್ ಆಗಿ, ಹಡಗಿನ ಕ್ಯಾಪ್ಟನ್ ಆಗಿ ಬಂದವನೇ ವಿಲಿಯಂ ಹಾಕಿನ್ಸ್ (William Hawkins) (1608–1613). ಈತನ ಪ್ರವಾಸ ಕಥನದಲ್ಲಿ ಜಹಾಂಗೀರನ ರಾಜದರ್ಬಾರು ಜೀವನದ ಶಬ್ದ ಚಿತ್ರಣ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಈತ ಹೇಳುವಂತೆ ಅಂತಃಪುರದ ಸ್ತ್ರೀಯರಿಗಾಗಿ ದಿನಕ್ಕೆ ಮೂವತ್ತು ಸಾವಿರ ರೂಪಾಯಿ, ರಾಜನ ಸ್ವಂತ ಖರ್ಚಿಗೆ ದಿನಕ್ಕೆ ಐವತ್ತು ಸಾವಿರ ರೂಪಾಯಿ ಖರ್ಚಾಗುತ್ತಿತ್ತೆಂದರೆ ಆತನ ವೈಭವೋಪೇತ ಜೀವನ ಎಷ್ಟೊಂದು ದುಬಾರಿಯದಾಗಿತ್ತೆಂದು ಊಹಿಸಿಕೊಳ್ಳಬಹುದು !

ವಿಲಿಯಂ ಹಾಕಿನ್ಸ್‌ನ ಜೊತೆ ಬಂದ ವಿಲಿಯಂ ಫಿಂಚ್ ಎಂಬ ವರ್ತಕನೂ ದಿನಚರಿಯನ್ನು ಬರೆದಿಟ್ಟಿದ್ದು ಈಸ್ಟ್ ಇಂಡಿಯಾ ಕಂಪನಿಯ ಹಳೆಯ ಕಾಗದ ಪತ್ರಗಳನ್ನು ಹುಡುಕುತ್ತಿರುವಾಗ ಅದು ಸಿಕ್ಕಿತಂತೆ. ಅದನ್ನು ಈ .ಸಂಪುಟದಲ್ಲಿ ಪ್ರಕಟಿಸಲಾಗಿದೆ. ಅದನ್ನು ಆಧರಿಸಿ ಈ ಕಥನ ಭಾಗವನ್ನು ರೂಪಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ಸೂರತ್, ಆಗ್ರಾ, ಲಾಹೋರಿನ ಸುತ್ತಮುತ್ತಲಿನ ಅನೇಕ ಊರುಗಳ ವರ್ಣನೆ ಕಂಡು ಬರುತ್ತದೆ.

ಈಸ್ಟ್ ಇಂಡಿಯಾ ಕಂಪನಿಯ ನೌಕರನಾಗಿ ಭಾರತಕ್ಕೆ ಬಂದವರಲ್ಲಿ ಜಾನ್

ಜೋರ್ಡೈನ್ (John Jourdian) (1608–1617) ಒಬ್ಬನಾಗಿದ್ದ. ದಿನವೂ ತಾನು ನಡೆದದ್ದು, ಕೇಳಿದ್ದನ್ನು ದಿನಚರಿಗಳಲ್ಲಿ ಗುರುತು ಹಾಕಿ ಕೊಳ್ಳುತ್ತಿದ್ದ. ಈ ದಿನಚರಿಯು ಪ್ರತಿಯೊಂದನ್ನೂ ಧರಿಸಿ ಅವನ ಪ್ರವಾಸ ಕಥನವನ್ನು ರಚಿಸಲಾಗಿದೆ.

ಮೊಗಲ್ ಚಕ್ರವರ್ತಿಯಿಂದ ವ್ಯಾಪಾರಾ ಫರ್ಮಾನು ಪಡೆಯಲು ಹೋದವರಲ್ಲಿ ನಿಕೊಲಸ್ ವಿದಿಂಗ್ಟನ್ (1612-1614) ಒಬ್ಬ. ಈ ಕಾರ್ಯದಲ್ಲಿ ಕೃತಕೃತ್ಯನಾಗದೆ 1612 ರಲ್ಲಿ ಇಂಗ್ಲೆಂಡಿಗೆ ಮರು ಪ್ರಯಾಣ ಹೊರಟು ದಾರಿಯಲ್ಲಿಯೇ ತೀರಿಕೊಂಡ. ಈತ ತನ್ನ ಕಥನದಲ್ಲಿ ತನಗಾದ ಅನ್ಯಾಯವನ್ನು ತೋಡಿಕೊಂಡಿದ್ದಾನೆ. ಈ ಬಗೆಯ ಪ್ರವಾಸ ಕಥನಗಳ ಜೊತೆಯಲ್ಲಿಯೇ ಥಾಮಸ್ ಕೊರ್ಯಾತ್‌ನ (Thomas Coryat 1612–1617) ಕೆಲವು ಪತ್ರಗಳು ಈ ಸಂಪುಟದಲ್ಲಿ ಸೇರಿಕೊಂಡಿವೆ. "ಈತ ಬರೆದುದೆಲ್ಲವನ್ನು ಪ್ರಕಟಿಸಿದ್ದರೆ ಅದೊಂದು ಉತ್ಕೃಷ್ಟ ಪ್ರವಾಸ ಸಾಹಿತ್ಯವಾಗುತ್ತಿತ್ತೆಂದು"[35] ಅವನ ಸಮಕಾಲೀನನಾದ ಟೆರ್ರಿ ಹೇಳಿರುವ ಮಾತು ಈ ಕೆಲವು ಪತ್ರಗಳನ್ನು ಓದಿದರೆ ಹೌದೆಂಬುದು ತಿಳಿದೀತು. ಈತ ಎಲ್ಲವನ್ನು ಸೂಕ್ಷ್ಮವಾಗಿ ನೋಡಿ ಚೆನ್ನಾಗಿ ಬರೆಯುವುದರಲ್ಲಿ ನೈಪುಣ್ಯತೆಯನ್ನು ಪಡೆದವನಾದ್ದರಿಂದಲೇ ಆತನ ಪ್ರವಾಸ ಕಥನ ನಿಜಕ್ಕೂ ಸೊಗಸಾಗಿದೆ. ಈತನ ಪತ್ರದಲ್ಲಿ ಬರುವ ಆಗ್ರಾದ ವರ್ಣನೆ, ಮೊಗಲ್ ಆಸ್ಥಾನದ ಬಣ್ಣನೆ, ಹಾಸ್ಯ ರಸಪೂರಿತ ಹೇಳಿಕೆಗಳು ಆಗಾಗ ಮೆಲುಕು ಹಾಕುವಂತಿವೆ. ಈತನು ಜಹಾಂಗೀರನ ಆಸ್ಥಾನದಲ್ಲಿ ನಡೆಯುತ್ತಿದ್ದ ಆನೆಯ ಕಾಳಗವನ್ನು ಬಣ್ಣಿಸಿದ್ದನ್ನು ಇಲ್ಲಿ ಉದಾಹರಿಸಬಹುದು:

"....ವಾರಕ್ಕೆರಡು ಸಲ ಇವನ ಮುಂದೆ ಆನೆಗಳ ಕಾಳಗ ನಡೆಯುತ್ತದೆ. ಈ ಕಾಳಗ ಪ್ರಪಂಚದಲ್ಲೇ ಅದ್ಭುತವಾದ್ದೆಂದು ಹೇಳಬಹುದು. ಆನೆಗಳು ಸಾಮಾನ್ಯವಾಗಿ ಹದಿಮೂರುವರೆ ಅಡಿ ಎತ್ತರವಿರುತ್ತವೆ. ಇವು ಕಾದಾಡಿದರೆ ಎರಡು ಪರ್ವತಗಳೇ ಡಿಕ್ಕಿ ಹೊಡೆದಂತೆ ಕಾಣುತ್ತದೆ. ಇವುಗಳನ್ನು ಬೇರ್ಪಡಿಸಲು ಬಾಣ ಬಿರುಸುಗಳನ್ನು ಹಾರಿಸುತ್ತಾರೆ. ಹಾಗೆ ಮಾಡದೆ ಹೋದರೆ ಸಾಯುವವರೆಗೂ ಕಾದಾಟವನ್ನು ನಿಲ್ಲಿಸುವುದಿಲ್ಲ."[36] (ಪು. 311)

ಪುಸ್ತಕದ ಕೊನೆಯಲ್ಲಿ ಅನುಬಂಧ ರೂಪದಲ್ಲಿ ನೀಡಿದ ಲಿನ್‌ಸ್ಕೊತೆನ್ ಪ್ರಸ್ತಾಪವನ್ನು ಈಗಾಗಲೇ ಮಾಡಲಾಗಿದೆ. ಈತ ದಕ್ಷಿಣ ಭಾರತದ ಕೊಂಕಣ ತೀರದ ಪ್ರಸ್ತಾಪವನ್ನೂ ಮಾಡಿರುವುದಲ್ಲದೆ ಒನೋರ್ (ಹೊನ್ನಾವರ), ಬರ್ಸೆಲೋರ್ (ಬಸರೂರು), ಮಂಗಳೋರ್ (ಮಂಗಳೂರು) ಮುಂತಾದ ಬಂದರುಗಳನ್ನು ಉಲ್ಲೇಖಿಸಿದ್ದಾನೆ. ಹೊನ್ನಾವರ ಬಂದರಿನ ಚಟುವಟಿಕೆಗಳನ್ನು, ಮೆಣಸಿನ ವ್ಯಾಪಾರವನ್ನು ಕುರಿತ ಈತನ ವರ್ಣನೆ ಸ್ವಾರಸ್ಯವಾಗಿದೆ:

"ಒನೋರ್‌ನಿಂದ ಪ್ರತಿವರ್ಷ ಹೇರಳವಾಗಿ ಮೆಣಸನ್ನು ಹಡಗುಗಳಲ್ಲಿ ತುಂಬಿ ಕಳಿಸುತ್ತಾರೆ. ಮಲಬಾರ್ ಅಥವಾ ಇಂಡಿಯಾದಲ್ಲೆಲ್ಲ ಒನೋರಿನ ಮೆಣಸು ಅತ್ಯುತ್ತಮ

ವಾದದ್ದು. ಒನೋರ್‌ನಿಂದ ಸ್ವಲ್ಪದೂರ ಒಳನಾಡಿನಲ್ಲಿರುವ ಬಟಕೊಳ (Batycola =ಭಟ್ಕಳ) ಎಂಬ ಹೆಸರಿನ ರಾಣಿಗೆ ಸೇರಿದ್ದು, ಆ ಬಟಿಕೊಳದಲ್ಲಿ ಆಕೆಯ ಆಸ್ಥಾನ ವಿದೆ. ಆಕೆಯೇ ಒನೋರ್‌ನಲ್ಲಿರುವ ವರ್ತಕರಿಗೆ ಮೆಣಸನ್ನು ಮಾರುವವಳು. ಆರು ತಿಂಗಳ ಮುಂಚೆಯೇ ವರ್ತಕರು ಆಕೆಗೆ ಹಣವನ್ನು ಮುಂಗಡವಾಗಿ ಕೊಡಬೇಕು. ಇಲ್ಲ ದಿದ್ದರೆ ಮೆಣಸು ಸಿಕ್ಕುವುದಿಲ್ಲ. ಕೊಂಡ ಮೆಣಸನ್ನು ವರ್ತಕರು ತಂದು, ಒನೋರ್ ಕೋಟೆಯಲ್ಲಿ ದಾಸ್ತಾನು ಮಾಡಿಟ್ಟು ಕೊಂಡು, ಪೋರ್ಚುಗಲ್‌ನಿಂದ ಹಡಗುಗಳು ಬಂದಾಗ ಅವುಗಳಲ್ಲಿ ತುಂಬಿ ಕಳುಹಿಸಿ ಕೊಡುತ್ತಾರೆ. ವರ್ಷಕ್ಕೆ ಏಳು ಅಥವಾ ಎಂಟು ಸಾವಿರ ಕ್ವಿಂಟಾಲಿನ ಮೆಣಸು ಒನೋರ್‌ನಿಂದ ರವಾನೆಯಾಗುತ್ತದೆ"

'ಅಕ್ಕಿಯೂ ಒನೋರ್‌ನಲ್ಲಿ ಹೇರಳವಾಗಿ ಸಿಗುತ್ತದೆ.'[37] (ಪು. 519) ಇದಲ್ಲದೆ ತನ್ನ ಪ್ರವಾಸಕಥನದಲ್ಲಿ ಲಿನ್‌ಸ್ಕೊಟೆನ್ ಬಣ್ಣಿಸುವ ಪ್ರಾಣಿಪ್ರಪಂಚ, ಸಸ್ಯಪ್ರಪಂಚ ಸ್ವಾರಸ್ಯಕರವಾಗಿದೆ. ಲವಂಗ, ದಾಲ್ಚಿನ್ನಿ, ದತ್ತೂರ, ಮುಂತಾದವುಗಳ ಉಲ್ಲೇಖ ಉಪಯುಕ್ತವಾಗಿದೆ. ಈತ ಹೇಳುವ ಪ್ರಕಾರ "ಮೆಣಸಿನಲ್ಲಿ ನಾನಾ ತರ ಇವೆ. ಕರೀ ಮೆಣಸೇ ಹೆಚ್ಚು. ಮಲಬಾರಿಗಳು ಮೆಣಸಿಗೆ "ಮೊಲಂಗಾ" ಎಂದೂ, ಮಲಕ್ಕಾದಲ್ಲಿ 'ಲಡಾ' ಎಂದು, ಅರೇಬಿಯಾದಲ್ಲಿ 'ಫಿಲ್ ಫಿಲ್' ಎಂದೂ, ಕ್ಯಾಂಬೆ ಮತ್ತು ಬಲ್ಲಾ ಗಟ್ಟೆ, ಗುಜರಾತಿಗಳು ಮತ್ತು ಡೆಕನೀನರು 'ಮೆರಿಫ' ಎಂದೂ, ಬೆಂಗಾಳದವರು 'ಪೊರೊ ಯಿಸ್' ಎಂದೂ ಕರೆಯುತ್ತಾರೆ. ಬೆಂಗಾಳ ಮತ್ತು ಜಾವಾದಲ್ಲಿ ಮಾತ್ರ ಬೆಳೆಯುವ ಬಾಲಮೆಣಸಿಗೆ 'ಪೆಲ್‌ಕ್ಲಿಂ' (ಪಿಪ್ಪಲಿ) ಎಂಬ ಹೆಸರಿದೆ".[38] (ಪು. 528)

ಗೋವೆಯಲ್ಲಿ ನಡೆದ ಅಚ್ಚರಿಯ ಕೊಲೆಯ ವರ್ಣನೆಯನ್ನು ರೋಮಾಂಚಕರ ವಾಗಿ ವರ್ಣನೆ ಮಾಡಿ ಕೊನೆಯಲ್ಲಿ ಹೇಳುವ ಮಾತು ಸ್ವಾರಸ್ಯವಾಗಿದೆ "ಈ ವಿಚಾರ ವನ್ನು ನಾನು ಇಷ್ಟು ವಿಸ್ತಾರವಾಗಿ ಏಕೆ ಹೇಳಿದೆನೆಂದರೆ ಇಂಡಿಯಾದ ಹೆಂಗಸರ ಧೈರ್ಯ ಹಾಗೂ ಅವರ ಸ್ವಭಾವ ಎಂಥದ್ದು ಎಂದು ತಿಳಿದು ಕೊಳ್ಳಿರಿ ಎಂದು"[39] (ಪು. 537)

ಒಟ್ಟಿನಲ್ಲಿ ನಾಗೇಗೌಡರು ರಚಿಸಿ ಕೊಟ್ಟ 'ಪ್ರವಾಸಿ ಕಂಡ ಇಂಡಿಯಾ' ಕೃತಿ ಶ್ರೇಣಿಯ ಮೂರನೆಯ ಸಂಪುಟವನ್ನು ಉಳಿದ ಐದು ಸಂಪುಟಗಳನ್ನು ಸಮಗ್ರವಾಗಿ ಓದಿಯಾದ ಮೇಲೆ ಅನ್ನಿಸುವುದೇನೆಂದರೆ ವಿದೇಶಿ ಪ್ರವಾಸಿಗಳ ಅರ್ಥಪೂರ್ಣ ಕಥನಗಳು ಭಾರತದ ಇತಿಹಾಸದ ಪುನರ್ರಚನೆಯಲ್ಲಿ ಅನೇಕ ಕಾಣದ ಕೊಂಡಿಗಳನ್ನು ಪೂರೈಸಿ ಅದೊಂದು ಸುಸಂಬದ್ಧವಾದ ಕಥಾನಕವಾಗುವಂತೆ ಮಾಡಲು ತುಂಬಾ ಸಹಾಯಕ ವೆಂದು. ವಿದೇಶಿ ಪ್ರವಾಸಿಗರ (ಗ್ರೀಕ್, ಚೀನಿ, ಅರಬ್ ಮತ್ತು ಐರೋಪ್ಯ) ಭಾರತದ ಬಗೆಗಿನ ಉಪಯುಕ್ತ ಕಥನಗಳನ್ನು ಒಂದೆಡೆ ಸಂಗ್ರಹಿಸಿ ಕೊಡುವ ಭಾರೀ ಮಹತ್ವದ ಹೊಣೆಗಾರಿಕೆಯನ್ನು ಹೊತ್ತುಕೊಂಡ ಶ್ರೀ ನಾಗೇಗೌಡರು ನಾಡಿಗೆ, ನುಡಿಗೆ, ಮಹ ದುಪಕಾರ ಮಾಡಿದ್ದಾರೆಂದರೆ ಅತಿಶಯೋಕ್ತಿಯೆಂದು ಭಾವಿಸಬಾರದು. ಈ ಬಗೆಯ

ಎಷ್ಟೊ ವಿದೇಶಿ ಪ್ರವಾಸಿಗಳ ಮೂಲ ಕಥಾನಕಗಳು ಉಪಲಬ್ಧವಾಗುವುದಿಲ್ಲವೆಂಬ ಒಸ್ನೆಲೆಯಲ್ಲಂತು ಈ ಮಾತು ಹೌದೆನಿಸುತ್ತದೆ.

ಉಳಿದ ಸಂಪುಟಗಳಲ್ಲಿ ಕಂಡು ಬರುವಂತೆ ಮೂರನೆಯ ಸಂಪುಟದಲ್ಲೂ ಪ್ರವಾಸಿಯ ಪರಿಚಯ, ಅವನ ಪ್ರವಾಸ ಕಥನದ ಮಹತ್ವ, ಕಥನದಲ್ಲಿಯ ಸಂಗತಿಗಳ ಸತ್ಯಾಸತ್ಯತೆಗಳ ಸಮೀಕ್ಷೆ ಮಾಡಿಕೊಡುವ ವಿಧಾನ-ಇವೆಲ್ಲವುಗಳನ್ನೊಳಗೊಂಡ ಉಪ ಯುಕ್ತವಾದ ಪ್ರಾಸ್ತಾವಿಕ ಟಿಪ್ಪಣಿ ಪ್ರತಿಯೊಂದು ಕಥನದ ಆರಂಭದಲ್ಲಿ ಸಣ್ಣ ಅಕ್ಷರ ಗಳಲ್ಲಿ ಮುದ್ರಿತವಾಗಿದೆ. ಇನ್ನೂ "ಮೂಲ ಕಥನಗಳಲ್ಲಿರುವ ಸೌಂದರ್ಯ ಸರಳತೆಗೆ ಕುಂದು ಬರದಂತೆ ವಸ್ತುಯೋಗ್ಯವಾದ ಭಾಷೆಯನ್ನೇ ಬಳಸಿ ಭಾಷಾಂತರಿಸಿದ್ದಾರೆ" ಎಂಬುದಾಗಿ ಡಾ.ಸೂರ್ಯನಾಥ ಕಾಮತರು ಹೇಳಿರುವುದು ಹೌದೆನ್ನಿಸುತ್ತದೆ.[40] ಹೀಗಾಗಿ ಇವು ಕೇವಲ ಇತಿಹಾಸತಜ್ಞರಿಗೆ, ಸಂಶೋಧಕರಿಗೆ ಮಾತ್ರ ಮೀಸಲಾಗಿರದೆ ಜನಸಾಮಾನ್ಯ ಓದುಗ ರಿಗೂ ಅರ್ಥವಾಗುವ, ಕುತೂಹಲ ಕೆರಳಿಸುವಷ್ಟು ರಂಜಕ ಗುಣಗಳಿಂದ ಕೂಡಿದೆ. ಆದರೆ ಸ್ಥಳನಾಮ, ವ್ಯಕ್ತಿನಾಮ ಹಾಗೂ ಕೆಲವು ಪಾರಿಭಾಷಿಕ ಪದಗಳ ಉಚ್ಚಾರಣೆಗೆ ಸಂಬಂಧಿಸಿದಂತೆ ಇನ್ನೂ ಶಾಸ್ತ್ರೀಯ ಕ್ರಮವನ್ನು ಅನುಸರಿಸಿದ್ದರೆ ಸೂಕ್ತವಾಗಿರುತ್ತಿತ್ತು. ಆದರೂ ಅಲ್ಲಲ್ಲಿ ಕಂಸಿನಲ್ಲಿ ಇಂಗ್ಲೀಷಿನಲ್ಲಿ, ರೋಮನ್ ಲಿಪಿಯಲ್ಲಿ, ಅವುಗಳನ್ನು ನೀಡಿರು ವುದರಿಂದ ತಿದ್ದಿಕೊಂಡು ಓದಲನುಕೂಲವಿದೆ. ಗ್ರಂಥಋಣ ಭಾಗದಲ್ಲಿ ಕೆಲವೇ ಪುಸ್ತಕ ಗಳ ಪಟ್ಟಿಯನ್ನು ನೀಡಿದ್ದರೂ, ಅವು (ಈಗ) ಇರುವ ಪುಸ್ತಕ ಭಂಡಾರವನ್ನು ಕಂಸಿನಲ್ಲಿ ಕೊಟ್ಟಿರುತ್ತಾರೆ. ಇಷ್ಟೆಲ್ಲ ಪರಿಶ್ರಮಪೂರ್ಣ ಕಾರ್ಯ ಮಾಡಿಯೂ "ಈ ಕೆಲಸದಲ್ಲಿ ನಾನು ತಜ್ಞನಲ್ಲ. ಇತಿಹಾಸವಾಗಲೀ ಸಾಹಿತ್ಯವಾಗಲೀ ನನ್ನ ಅಭ್ಯಾಸದ ವಿಷಯವಾಗಿರಲಿಲ್ಲ. ಹೀಗಿರುವಾಗ ಈ ನನ್ನ ಕೆಲಸದಲ್ಲಿ ಅನೇಕ ಲೋಪದೋಷಗಳನ್ನು ಕಾಣಲು ಸಾಧ್ಯ"[41] ಎಂದು ವಿನಮ್ರರಾಗಿ ವಿನಯಸಂಪನ್ನತೆಯನ್ನು ಮೆರೆದಿದ್ದಾರೆ.

ಎಷ್ಟೋ ಜನ ತಮ್ಮ ತಮ್ಮ ಕಾರ್ಯಕ್ಷೇತ್ರವನ್ನು ಮೀರಿ ದೊಡ್ಡ ಕೆಲಸವನ್ನು ಮಾಡಿದ್ದಾರೆ, ಮಾಡುತ್ತಿದ್ದಾರೆ. ಅಂಥವರಲ್ಲಿ ನಾಗೇಗೌಡರೂ ಒಬ್ಬರು. ಇದಕ್ಕಾಗಿ ಆ ಕ್ಷೇತ್ರದ ತಜ್ಞರ ಕ್ಷಮೆ ಬೇಡಬೇಕಾಗಬಹುದೇನೊ ಎಂಬ ಶಂಕೆಯನ್ನೂ ವ್ಯಕ್ತಪಡಿಸಿ ದಂತೆ ತೋರುತ್ತದೆ. ಖಂಡಿತವಾಗಿಯೂ ಹಾಗೆ ಶಂಕಿಸುವ ಕಾರಣವಿಲ್ಲ. ಅವರು ಪಟ್ಟ ಸತತ ಪರಿಶ್ರಮ ಅಪಾರವಾದದ್ದು. ಪ್ರವಾಸ ಸಾಹಿತ್ಯ ಪ್ರಕಾರದ ಮೇಲಿನ ತುಂಬುಪ್ರೇಮದಿಂದಲೇ ಕೈಕೊಂಡಿರುವ ಈ ಕಾರ್ಯ ಅದ್ವಿತೀಯವಾದ್ದು. ಇಂಥ ಅಪೂರ್ವ ಪ್ರವಾಸ ಕಥನ ಸಂಗ್ರಹವನ್ನು, ಸಂಪುಟ ಸಂಪುಟಗಳಾಗಿ ಕನ್ನಡಿಗರಿಗೆ ನೀಡಿದ ಅಸಾಮಾನ್ಯ ಸಾಹಸ-ಸಾಧನೆ ಶ್ರೀ ಎಚ್. ಎಲ್. ನಾಗೇಗೌಡರದಾಗಿದ್ದು. ಈ ಸಂಪುಟ ಗಳಿಗೆ ಓದುವವರನ್ನು "ವಿಶಾಲಲೋಕ ಪ್ರಜ್ಞಾವಂತಿ"ಗಳನ್ನಾಗಿಸುವ ಸಾಮರ್ಥ್ಯವಿದೆ ಯೆಂದು ಧಾರಾಳವಾಗಿ ಹೇಳಬಹುದು.

ಅಡಿಟಿಪ್ಪಣಿಗಳು

1. ನಾಗೇಗೌಡ, ಎಚ್. ಎಲ್., ಮಾರ್ಕೊ ಪೋಲೊ ಪ್ರವಾಸಕಥನ, ಮೈಸೂರು, 1956 (ಪ್ರಸ್ತಾವನೆ).
2. ನಾಗರಾಜರಾವ್, ಹ. ಮ. ನವರಪ್ಪದ ನೋಟ, ಬೆಂಗಳೂರು, 1974 (ಮುನ್ನುಡಿ).
3. ನಾಗೇಗೌಡ, ಎಚ್. ಎಲ್., ಪ್ರವಾಸಿ ಕಂಡ ಇಂಡಿಯಾ I, ಮೈಸೂರು, 1964 ಪು. XVI.
4. ಅದೇ, ಪು. XVI.
5. ನಾಗೇಗೌಡ, ಎಚ್. ಎಲ್., ಪ್ರವಾಸಿಕಂಡ ಇಂಡಿಯಾ–VI, ಮೈಸೂರು, 1977. ಪು. XI.
6. ಅದೇ
7. ನಾಗೇಗೌಡ, ಎಚ್. ಎಲ್., ಪ್ರವಾಸಿ ಕಂಡ ಇಂಡಿಯಾ-III, ಮೈಸೂರು, 1969, ಪು. 3.
8. ಅದೇ, ಪು. 344.
9. ಅದೇ, ಪು. 515.
10. ಅದೇ, ಪು. 230.
11. ಕನ್ನಡ ವಿಶ್ವಕೋಶ–ಸಂ. II, ಮೈಸೂರು, 1970, ಪು. 368–69.
12. ಪೂರ್ವೋಕ್ತ, ಪು. 346.
13. ಅದೇ, ಪು. 344.
14. ಅದೇ, ಪು. 376.
15. ಅದೇ, ಪು. 388.
16. ಅದೇ, ಪು. 399.
17. ಅದೇ,
18. ಅದೇ, ಪು. 346.
19. ಅದೇ, ಪು. 220.
20. ಅದೇ, ಪು. 225.
21. ಅದೇ, ಪು. 234.
22. ಅದೇ, ಪು. 253.
23. ಅದೇ, ಪು. 271.

24. ಅದೇ, ಪು. 271, (ಅಡಿಟಿಪ್ಪಣಿ)

25. ಅದೇ, ಪು. 291.

26. ಅದೇ, ಪು. 292.

27. ಅದೇ, ಪು. 301.

28. ಅದೇ, ಪು. 309.

29. ಅದೇ, ಪು. 311.

30. ಅದೇ, ಪು. 20.

31. ಅದೇ,

32. ಅದೇ,

33. ಅದೇ, ಪು. 105.

34. ಅದೇ, ಪು. 139.

35. ಅದೇ, ಪು. 327.

36. ಅದೇ, ಪು. 331.

37. ಅದೇ, ಪು. 519.

38. ಅದೇ, ಪು. 528.

39. ಅದೇ, ಪು. 537.

40. ಕನ್ನಡಪ್ರಭ, 22–9–1969.

41. ನಾಗೇಗೌಡ. ಎಚ್. ಎಲ್. ಪ್ರವಾಸಿಕಂಡ ಇಂಡಿಯಾ–1, ಮೈಸೂರು. 1964, ಪು. XVII.

ಪ್ರವಾಸಿ ಕಂಡ ಇಂಡಿಯಾ — ನಾಲ್ಕು

ಹ. ಕ. ರಾಜೇಗೌಡ

ಪ್ರವಾಸಕ್ಕೆ ಹಲವಾರು ಕಾರಣಗಳುಂಟು. ಹೊಸ ಹೊಸದನ್ನು ಕಂಡು ಆನಂದಿಸಬೇಕೆಂಬ ಪ್ರವೃತ್ತಿಯಿಂದಲೂ, ಜೀವನದಲ್ಲಿ ಜುಗುಪ್ಸೆಗೊಂಡ ವ್ಯಕ್ತಿಯೊಬ್ಬ ಬದುಕು ನೀರಸವಾಗಿರುವಾಗಲೂ, ಎಲ್ಲಾದರೇನು ಎಂದು ದೇಶ ವಿದೇಶಗಳತ್ತ ಹೊರಡಬಹುದು. ಹೀಗೆ ನಾನಾ ಕಾರಣಗಳಿಗಾಗಿ ಪ್ರವಾಸ ಕೈಗೊಳ್ಳುವ ಜನ ತಾವು ಕಂಡ ಹೊಸ ಜಗತ್ತಿನ ಬಗ್ಗೆ ಬರೆದಿಡುತ್ತಾರೆಂದು ಹೇಳಲು ಬರುವುದಿಲ್ಲ. ಅದರಲ್ಲಿಯೂ ಜೀವನದಲ್ಲಿ ಬೇಸರ ಉಂಟಾಗಿ ಹೊರಟವನು ಬರೆಯುವುದು ಅಪರೂಪವೆಂದೇ ಹೇಳಬೇಕು. ಏಕೆಂದರೆ ಮುದುಡಿದ ಅವನ ಮನಸ್ಸಿಗೆ ಸೌಂದರ್ಯವನ್ನು ಕಾಣುವ ತಾಳ್ಮೆ, ಅದನ್ನು ಹಿಡಿದಿಡುವ ಆಸಕ್ತಿ ಈ ಎರಡೂ ಇರುವುದಿಲ್ಲ. ಹೀಗಾಗಿ ಸಾಹಸಪ್ರವೃತ್ತಿಯವನೂ ಬೇರೆಯವರು ಬರೆದವನ್ನು ಓದಿ ತಾನೂ ಅದನ್ನು ಕಾಣಬೇಕು ಎಂಬ ಕುತೂಹಲದಿಂದ ಹೊರಟವನು ತಾನು ಕಂಡದ್ದನ್ನು ಬರೆದಿಡಲು ಪ್ರಯತ್ನಿಸುತ್ತಾನೆ. ಏಕೆಂದರೆ ತಾನು ಸ್ಫೂರ್ತಿ ಪಡೆದಂತೆ ತನ್ನ ಪ್ರವಾಸ ಕಥನವನ್ನು ಓದಿ ಬೇರಾರಾದರೂ ಸ್ಫೂರ್ತಿ ಪಡೆಯಲಿ ಎಂದು. ಆನೆಯ ವರ್ಣನೆಯನ್ನು ಎಷ್ಟೇ ಹತ್ತಿರದಿಂದ ಕಂಡು ವರ್ಣಿಸಿದರೂ ಅದರ ಪ್ರತ್ಯಕ್ಷದರ್ಶನದಿಂದ ಆಗುವಷ್ಟರ ಮಟ್ಟಿನ ಅನುಭವ ಓದುವುದರಿಂದ ಆಗುವುದಿಲ್ಲ. ಹೀಗೆ ಪರ್ಯಟನ ಪ್ರವೃತ್ತಿಯ, ಸಾಹಸ ಬದುಕಿನ ಪ್ರವಾಸಿಗಳು ಕಂಡು ಚಿತ್ರಿಸಿದ ಅನುಭವಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ಪ್ರವಾಸಿ ಕಂಡ ಇಂಡಿಯ ಎಂಬ ಆರು ಸಂಪುಟಗಳಲ್ಲಿ ಕನ್ನಡಿಗರಿಗೆ ಒದಗಿಸಿದ್ದಾರೆ.

ಪಾಶ್ಚಿಮಾತ್ಯ ದೇಶದವರು ವಿಶೇಷವಾಗಿ ಫ್ರಾನ್ಸ್, ಇಟಲಿ, ಡಚ್ ಮತ್ತು ಇಂಗ್ಲೀಷರು ಇಂಡಿಯ, ಚೈನ ಮತ್ತಿತರ ದೇಶಗಳಿಗೆ ಪ್ರಧಾನವಾಗಿ ವ್ಯಾಪಾರದ ಕಾರಣದಿಂದಲೂ ಸಾಮಾನ್ಯವಾಗಿ ಪ್ರವಾಸ ಕುತೂಹಲದಿಂದಲೂ ವಿದೇಶ ಪ್ರವಾಸ ಕೈಗೊಂಡ ಅನೇಕ ಉದಾಹರಣೆಗಳುಂಟು. ವ್ಯಾಪಾರಕ್ಕಾಗಿ ಇಂಡಿಯಾ, ಚೈನಾಗಳಿಗೆ ಹೊರಡುತ್ತಿದ್ದ ಹಡಗುಗಳಲ್ಲಿ ತಮ್ಮ ಹಿಂದಿನವರು ಬರೆದಿಟ್ಟ ಪ್ರವಾಸ ಕಥನ ಓದಿ ಸ್ಫೂರ್ತಿ ಪಡೆದ ಯುವಕರು ಹೊರಡುತ್ತಿದ್ದರು. ಇಂತಹ ಹೊಸ ವಿಷಯಗಳನ್ನು ಕಂಡು ಬರೆದು ತಂದರೆ ರಾಜ ಸನ್ಮಾನಿಸಿ ಪದವಿಗಳನ್ನು ನೀಡುತ್ತಿದ್ದುದು ಒಂದು ಕಾರಣವಾದರೆ ಈ ಪ್ರಪಂಚದ ವಿಚಾರಗಳನ್ನು ತಿಳಿಯಲು ಈಗಾಗಲೇ ಅನೇಕರು ಪ್ರಯತ್ನ ಪಟ್ಟಿದ್ದಾರೆ. ಗ್ರಂಥಗಳ ಮೂಲಕ, ಪ್ರವಾಸದಿಂದ, ಕಂಡವರಿಂದ ಕೇಳಿ

ತಮ್ಮ ಆಸಕ್ತಿಯನ್ನು ಪೂರ್ತಿ ಮಾಡಿಕೊಂಡಿದ್ದಾರೆ. ಕೆಲವರಿಗೆ, ಉದಾಹರಣೆಗೆ ಕಾಲ್ಡಿಯನರು (CHALDEANS) ಮತ್ತು ಫಿನಿಷಿಯನರು (PHOENICIA-NS) – ಇವರಿಗೆ ಈ ಲೋಕ ಸಾಲದೆ ಪರಲೋಕವನ್ನೂ ಅರಿಯುವ ಆಸೆಯಾಗಿ ಆ ಆಸೆಯನ್ನು ಸ್ವಲ್ಪಮಟ್ಟಿಗೆ ಪೂರ್ತಿಮಾಡಿಕೊಂಡಿದ್ದಾರೆ. ಅಂಥವರು ಬೇರೆಯವರ ಹೊಗಳಿಕೆಗೆ ಪಾತ್ರವಾಗಿರುವುದಷ್ಟೇ ಅಲ್ಲದೆ, ತಮ್ಮ ಯಶಸ್ಸಿಗೆ ತೃಪ್ತಿಯನ್ನೂ ಪಡೆದು ಕೊಂಡಿದ್ದಾರೆ. ಈ ಕಾರಣ ಅಂಥದೇ ಕೆಲಸ ಮಾಡಬೇಕೆಂಬ ಆಸೆಯಿಂದ ಪರಲೋಕದ ಚಿಂತೆಯನ್ನು ಅಟ್ಲಾಸ್ ಮತ್ತು ಹರ್ಕ್ಯುಲಿಸರ ಭಾರಿಭುಜಗಳಿಗೆ ವಹಿಸಿ ಈ ಲೋಕದ ಸಣ್ಣ ಭಾಗವನ್ನು ನೋಡಲು ನಿರ್ಧರಿಸಿದೆ. ಟಿಡಿಯೋ ಅಥವಾ ಊಹಿಸಿಯೋ ನನ್ನ ಆಸೆಯನ್ನು ಪೂರ್ತಿ ಮಾಡಿಕೊಳ್ಳುವಷ್ಟು ಸೂಕ್ಷ್ಮ ಬುದ್ಧಿಯವನಲ್ಲದ ಕಾರಣ ನಾನೇ ಈಜಿಪ್ಟ್, ಸಿರಿಯ, ಅರೇಬಿಯಾ ಮರುಭೂಮಿ ಮತ್ತು ಫೆಲಿಕ್ಸ ಪರ್ಷಿಯಾ ಇಂಡಿಯಾ ಹಾಗು ಇಥಿಯೋಪಿಯಗಳನ್ನು ಸ್ವತಃ ಕಂಡು, ಅಲ್ಲಿಯ ಜನರು ಎಂಥವರೆಂಬುದನ್ನು ಅರಿತು, ಖಗ ಮೃಗ ಹಾಗೂ ಸಸ್ಯ ವರ್ಗಗಳ ವೈವಿಧ್ಯತೆಯನ್ನು ತಿಳಿಯಬೇಕೆಂದು ಮನಸ್ಸು ಮಾಡಿದೆ, ಹತ್ತು ಜನರು ಹೇಳುವುದನ್ನು ಕೇಳುವುದಕ್ಕಿಂತ ಒಂದು ಬಾರಿ ಕಣ್ಣಿಂದ ನೋಡುವುದು ಉತ್ತಮವಲ್ಲವೆ !" ಎಂಬ ಅಭಿಪ್ರಾಯದಿಂದ ಪ್ರವಾಸ ಹೊರಟ ಇಟಲಿಯ ಲೊಡೊವಿಕೊದಿವರ್ತ್ತಿಮಾ (1506-1508)ನಿಂದ ಜರ್ಮ ನಿಯ ಮಂಡೆಲ್ ಸ್ಲೊ (1638-1640) ವರೆಗಿನ ಹದಿನೈದು ಮಂದಿ ಕಂಡ ವಿಷಯ ಗಳನ್ನು ನಾಲ್ಕನೆಯ ಸಂಪುಟ ಒಳಗೊಂಡಿದೆ.

ಪ್ರವಾಸದ ಗುರಿ ಇಂಡಿಯಾ ಆದರೂ ದಾರಿಯಲ್ಲಿ ತಾವು ಕಂಡ ಎದುರಿಸಿದ ಕಷ್ಟ ನಷ್ಟಗಳು, ಅಲ್ಲಿನ ಜನರ ರೀತಿ ನೀತಿ ವರ್ತನೆಗಳನ್ನು ಬಹುತೇಕ ಎಲ್ಲಾ ಪ್ರವಾಸಿ ಗರೂ ಕೊಡುತ್ತಾರೆ. ಇದರಿಂದ ಆಯಾದೇಶದ ರಾಜಕೀಯ, ಸಾಮಾಜಿಕ, ಧಾರ್ಮಿಕ ಜನಜೀವನದ ಚಿತ್ರ ನಮಗೆ ದೊರೆಯುತ್ತದೆ ಅರೇಬಿಯಾ ಕುರಿತ ಅಂತಹ ಎರಡು ಚಿತ್ರಗಳನ್ನು ಇಲ್ಲಿ ಕಾಣಬಹುದು "ಇಲ್ಲಿರುವ ಮಮೇಲುಕರು ಜಾತಿಭ್ರಷ್ಟರಾದ ಕ್ರೈಸ್ತರು. ಇವರು ಬೀದಿಯಲ್ಲಿ ಒಂಟೊಂಟಿಯಾಗಿ ಹೋಗುವುದು ತಮ್ಮ ಗೌರವಕ್ಕೆ ಕಡಿಮೆ ಎಂದು ಭಾವಿಸಿ. ಇಬ್ಬರು ಮೂವರು ಒಟ್ಟೊಟ್ಟಿಗೆ ಹೋಗುತ್ತಾರೆ. ಅಕ ಸ್ಮಾತ್ ಇಬ್ಬರು ಮೂವರು ಹೆಂಗಸರು ಬೀದಿಯಲ್ಲಿ ಹೋಗುತ್ತಿದ್ದಲ್ಲಿ ಅವರಿಗಾಗಿ ಗುಟ್ಟಾಗಿ ಕಾಯುತ್ತಿದ್ದು ಅವರನ್ನು ತಮ್ಮ ವಶಮಾಡಿಕೊಳ್ಳುತ್ತಾರೆ. ಬುರುಕಿ ಹಾಕಿಕೊಂಡಿರುವ ಹೆಂಗಸರು ತಮ್ಮ ಗುರುತನ್ನು ಹೇಳುವುದಿಲ್ಲ. ಮಮೇಲುಕರು ಶ್ರೀಮಂತ ಹೆಂಗಸರು ಸಿಕ್ಕಿದರೆಂದು ಹಿಗ್ಗಿ ಹೀರೇಕಾಯಾಗುತ್ತಾರೆ. ಆದರೆ ವಾಸ್ತವವಾಗಿ ಅವರಿಗೆ ಅವರ ಹೆಂಡತಿಯರೇ ಸಿಕ್ಕಿಬಿಡುತ್ತಾರೆ." ಪ್ರಯಾಣದ ಸಮ ಯದಲ್ಲಿ ಎದುರಿಸಬೇಕಾದ ಹೋರಾಟದ ಚಿತ್ರ ಹೀಗಿದೆ "ದಮಾಸ್ಕಸ್ಸಿನಿಂದ ಮೆಕ್ಕಕ್ಕೆ ನಲವತ್ತು ಹಗಲು ನಲವತ್ತು ರಾತ್ರಿಗಳ ಪ್ರಯಾಣ ಇಪ್ಪತ್ತೆರಡು ಗಂಟೆಗಳು ಒಂದೇ

ಸಮನೆ ಹಗಲೂ ರಾತ್ರಿ ಪ್ರಯಾಣ. ಆಮೇಲೆ ಇಪ್ಪತ್ತು ನಾಲ್ಕು ಗಂಟೆಗಳ ವಿಶ್ರಾಂತಿ ಹೀಗೆ ಎಂಟು ದಿನಗಳು ಪ್ರಯಾಣ ಮಾಡಿದರೆ ಒಂದು ಬಾವಿಯೊ ಕೊಳವೊ ಸಿಕ್ಕುತ್ತಿತ್ತು. ಇಂಥ ಸ್ಥಳದಲ್ಲಿ ಒಂದೆರಡುದಿನ ನಿಂತು ದಣಿವಾರಿಸಿಕೊಂಡು ಮುಂದೆ ಪ್ರಯಾಣ. ಒಂಟೆಗಳಿಗೆ ಮೂರು ದಿನಕ್ಕೊಂದು ಸಲ ನೀರು ಕುಡಿಸುತ್ತಿದ್ದೆವು. ಹೀಗೆ ನೀರಿಗೆ ನಿಂತ ಕಡೆಗಳಲ್ಲೆಲ್ಲಾ ನಮಗೆ ಅರಬರ ಕಾಟ. ಆ ಅಸಂಖ್ಯಾತ ಅರಬರೊಡನೆ ನಾವು ಹೋರಾಡಬೇಕಾಗುತ್ತಿತ್ತು. ನಲವತ್ತು ಐವತ್ತು ಸಾವಿರ ಅರಬ್ಬರನ್ನು ನಾವು ಎದುರಿಸುತ್ತಿದ್ದೆವು." ಮೇಲಿನ ವರ್ಣನೆಗಳನ್ನು ಅದರಲ್ಲಿಯೂ ಎರಡನೆಯ ವರ್ಣನೆಯನ್ನು ಓದಿದ ಮೇಲೆ ಪ್ರವಾಸ ಹೊರಡುವುದು ಅತ್ಯಂತ ಅಪಾಯಕಾರಿಯಾದ ಕೆಲಸ ಎಂದು ಅಧೈರ್ಯಿಗಳಿಗೆ ಅನ್ನಿಸದಿರದು, ಆದರೆ ಇದಕ್ಕಿಂತಲೂ ದುರ್ಭರವಾದ ಪ್ರಸಂಗಗಳನ್ನು ಧೈರ್ಯದಿಂದ ಎದುರಿಸಿದ ಪ್ರವಾಸಿಗಳುಂಟು. ಕೆಲವೊಮ್ಮೆ ಸ್ಥಳೀಕರು ಸಣ್ಣಪುಟ್ಟ ವಿಷಯಗಳಿಗೆ ಕಾಲು ಕೆರೆದು ಜಗಳ ತೆಗೆಯುವುದುಂಟು, ಅಂತಹ ಒಂದು ಪ್ರಸಂಗ "ಮಾರನೆಯ ದಿನ ಬೆಳಿಗ್ಗೆ ೨೪,೦೦೦ ಅರಬರು ಬಂದು ತಕರಾರು ಹೂಡಿದರು. ಅವರ ಪ್ರಕಾರ ನಾವು ನೀರು ಕುಡಿದುದೇ ನಮ್ಮ ತಪ್ಪಾಗಿತ್ತು. ನೀರಿಗೆ ದುಡ್ಡು ಕೊಡಬೇಕೆಂದರು. ಅದಕ್ಕೆ ನಾವು ನೀರು ದೇವರು ಕೊಟ್ಟದ್ದೆಂದು ಉತ್ತರಿಸಿದೆವು. ಸರಿ ನಮ್ಮಿಬ್ಬರಿಗೂ ಹೋರಾಟ ಆರಂಭವಾಯಿತು." ಇಂತಹ ಪರಿಸ್ಥಿತಿಯಲ್ಲಿ ಧೃತಿಗೆಡದೆ ತಮ್ಮ ಉದ್ದೇಶದ ಗುರಿಯತ್ತ ಧೈರ್ಯದಿಂದ ಮುಂದಡಿಯಿಡುವ ಈ ಪ್ರವಾಸಿಗರ ಬದುಕು ಸ್ಫೂರ್ತಿದಾಯಕವಾದುದು.

ವಿದೇಶೀ ಪ್ರವಾಸಿಗರು ಅಥವಾ ಅವರನ್ನು ಹೊತ್ತು ತರುತ್ತಿದ್ದ ಹಡಗುಗಳು ಪ್ರಧಾನವಾಗಿ ವ್ಯಾಪಾರದ ದೃಷ್ಟಿಯಿಂದ ಇಂಡಿಯಾಕ್ಕೆ ಬರುತ್ತಿದ್ದಂಥವು. ಆದುದರಿಂದಾಗಿ ಈ ಪ್ರವಾಸಿಗರು ಕೇವಲ ತೀರ ಪ್ರದೇಶಗಳಲ್ಲಿ ಮಾತ್ರ ಹಾದು ಹೋಗುತ್ತಾರೆ. ಈ ಕಾರಣದಿಂದಾಗಿ ಒಳಭಾರತದ ಹಳ್ಳಿಯ ಚಿತ್ರಗಳು ನಮಗೆ ದೊರೆಯುವುದಿಲ್ಲ. ಆದರೆ ಕೆಲವರು ಪ್ರವಾಸಿಗರು ಕೆಲವು ದೂರದವರೆಗೆ ಒಳದೇಶಗಳಿಗೂ ಹೋಗಿರುವುದು ಕಂಡು ಬರುತ್ತದೆ. ಸೂರತ್, ಗೋವ, ಉಲ್ಲಾಳ, ಹೊನ್ನಾವರ, ಮಂಗಳೂರು ಹೀಗೆ ಸಮುದ್ರತೀರದ ಈ ಕೊನೆಯಿಂದ ಆ ಕೊನೆಯವರೆಗೆ ನಗರಗಳ ವಿವರ ದೊರೆಯುತ್ತದೆ. ಇದು ಎಷ್ಟೋ ಬಾರಿ ಪುನರುಕ್ತಿಯಾಗುವುದೂ ಉಂಟು. ಲೊಕೆವಿಕೊದಿವತ್ತಿಮಾ ಎಂಬೊಬ್ಬ ಪ್ರವಾಸಿ ಬಿಜಾಪುರದ ಚಿತ್ರವನ್ನು ಕೊಟ್ಟಿದ್ದಾನೆ. "ಇಲ್ಲಿ ಮಹಮದೀಯ ರಾಜನೊಬ್ಬ (ಯೂಸುಫ್ ಆದಿಲ್ ಷಾ) ಆಳುತ್ತಾನೆ. ನಗರವು ಬಹುಸುಂದರವಾಗಿದೆ. ರಾಜನ ಬಳಿ ಎಲ್ಲಾ ಸೇರಿ ೨೫,೦೦೦ ಪದಾತಿಯೂ ಅಶ್ವದಳವೂ ಇದೆ. ಇಲ್ಲಿರುವ ಸುಂದರವಾದ ಅರಮನೆಯಲ್ಲಿ ನಲವತ್ನಾಲ್ಕು ಕೋಣೆಗಳಿವೆ. ನಗರದ ಸುತ್ತಲೂ ನಮ್ಮಲ್ಲಿರುವಂತೆ ಕೋಟೆಯಿದೆ. ಮನೆಗಳು ಬಹಳ ಅಂದವಾಗಿವೆ. ರಾಜ ಬಹಳ ಅದ್ದೂರಿಯಲ್ಲಿದ್ದಾನೆ. ಅವನ ಅನುಚರರೂ ತಮ್ಮ ಪಾದ

ರಕ್ಷೆಗಳಿಗೆ ವಜ್ರವೈಢೂರ್ಯಗಳನ್ನು ಉಪಯೋಗಿಸುತ್ತಾರೆಂದರೆ ಇಲ್ಲಿಯ ಸಂಪತ್ತು ಎಷ್ಟೆಂದು ನೀವೇ ಊಹಿಸಬಹುದು. ಈ ರಾಜ್ಯದಲ್ಲಿ ಎಲ್ಲವೂ ಸಮೃದ್ಧಿ" ಪ್ರಾಯಃ ಈ ಪ್ರವಾಸಿ ರಾಜನ ಅತಿಥಿಯಾಗಿ ಅರಮನೆಯಲ್ಲಿ ತಂಗಿ ಜನಸಾಮಾನ್ಯರ ಸಂಪರ್ಕ ಪಡೆಯಲಾರದೇ ಹೋಗಿದ್ದಾನೆ. ಏಕೆಂದರೆ ಅನೇಕ ಪ್ರವಾಸಿಗರು ಜನರ ಬಡತನ ಕಷ್ಟ ಕಾರ್ಪಣ್ಯಗಳನ್ನು ಕಂಡು ಅವರ ಸುಲಿಗೆಯಾಗುತ್ತಿರುವುದರ ಬಗ್ಗೆ ಮರುಗಿದ ಚಿತ್ರಗಳೂ ದೊರೆಯುತ್ತವೆ. ಉದಾಹರಣೆಗೆ "ಆಡಳಿತ ಗೌರ್ನರುಗಳ ಮೂಲಕ ನಡೆಯುತ್ತದೆ. ಇವರು ಜನರನ್ನು ಹಿಂಸಿಸಿ ಹಣ ಸುಲಿಯುತ್ತಾರೆ.......ಹಳ್ಳಿಗಳ ಕಡೆ ನಾನು ಹೋದಾಗ ಆ ಜನರ ಕಡುಬಡತನ ಕಂಡು ಅಚ್ಚರಿಪಟ್ಟಿದ್ದೇನೆ. ಜನಗಳನ್ನು ಹಿಂಡಿಯೇ ಹಣ ಸಂಪಾದನೆ ಮಾಡುವುದು.......ಪಾಪ ಆ ಬಡಪಾಯಿ ರೈತರು ಪಡುವ ಕಷ್ಟ ಹೇಳತೀರದು. ಗುತ್ತಿಗೆಯನ್ನು ನಾಲ್ಕು ತಿಂಗಳಿಗೊಂದರಂತೆ ಮೂರು ಕಂತುಗಳಲ್ಲಿ ಕೊಡಬೇಕು. ವರ್ಷದ ಕೊನೆಯಲ್ಲಿ ಕೊಡಬೇಕಾದ ಗುತ್ತಿಗೆಯನ್ನೆಲ್ಲಾ ಕೊಡಲು ತಪ್ಪಿದರೆ ಅವರಿಗೆ ಛಡೀ ಏಟಿನ ಶಿಕ್ಷೆ ವಿಧಿಸಲಾಗುತ್ತದೆ. ಈ ಛಡೀ ಏಟುಗಳನ್ನು ತಿಂದವರು ಮತ್ತೆ ಚೇತರಿಸಿಕೊಳ್ಳುವುದೇ ಕಷ್ಟ." ಪ್ರವಾಸಿಯೊಬ್ಬನ ಬಿಜಾಪುರದ ಚಿತ್ರಕ್ಕೂ ಮತ್ತೊಬ್ಬನ ಗ್ರಾಮಾಂತರ ಜನರ ಬವಣೆಯ ಚಿತ್ರಕ್ಕೂ ಅಂತರ ಎಷ್ಟು ಎಂಬುದನ್ನಿಲ್ಲಿ ಕಾಣಬಹುದು.

ಈ ವಿದೇಶೀ ಪ್ರವಾಸಿಗರು ಪ್ರಧಾನವಾಗಿ ವ್ಯಾಪಾರಿಗಳಾದುದರಿಂದ ಸಾಮಾಜಿಕ ಸ್ತರಗಳ ಬಗ್ಗೆ ಅಷ್ಟಾಗಿ ಗಮನ ಹರಿಸಿದಂತೆ ಕಾಣುವುದಿಲ್ಲ. ಭಾರತದಲ್ಲಿ ಇವರಿಗೆ ಅತ್ಯಂತ ಕುತೂಹಲದ ಸಂಗತಿಯಾಗಿ ಕಂಡಿರುವುದೆಂದರೆ ಸಹಗಮನ ಪದ್ಧತಿ. ಇದರ ಬಗ್ಗೆ ಕೆಲವರು ಇದು ಅತ್ಯಂತ ಹೀನವೂ ಕ್ರೂರವೂ ಆದ ಘಟನೆ ಎಂದರೆ ಮತ್ತೆ ಕೆಲವರು ಇಂತಹ ಪ್ರೀತಿ ನಮ್ಮ ದೇಶದ ಹೆಂಗಸರಿಗಿಲ್ಲವಲ್ಲಾ ಎಂದು ಮರುಗಿದ್ದಾರೆ, "ಗಂಡ ಸತ್ತ ಹೆಂಗಸೊಬ್ಬಳು ಚಿತೆಯಲ್ಲಿ ಬೀಳಲು ಸಿದ್ಧತೆ ಮಾಡಿಕೊಳ್ಳುತ್ತಿರುವುದನ್ನು ಕಂಡೆವು. ಇಂಡಿಯಾದ ಅನೇಕ ಹೆಂಗಸರು ಈ ಪದ್ಧತಿಯನ್ನು ಅನುಸರಿಸುತ್ತಾರೆ. ಆಕೆ ಕುದುರೆಯಮೇಲೆ ಕುಳಿತಿದ್ದಳು. ಮುಖ ಮುಚ್ಚಿಕೊಂಡಿರಲಿಲ್ಲ. ಆಕೆಯ ಒಂದು ಕೈಯಲ್ಲಿ ನಿಂಬೇಹಣ್ಣು ಮತ್ತೊಂದು ಕೈಯಲ್ಲಿ ಕನ್ನಡಿ. ಅವು ಏತಕ್ಕೆ ಎಂದು ನನಗೆ ಗೊತ್ತಾಗಲಿಲ್ಲ. ಆಕೆ ಗೋಳೋ ಎಂದು ಅಳುತ್ತಾ ಕನ್ನಡಿಯಲ್ಲಿ ನೋಡುತ್ತಿದ್ದಳು. ಇನ್ನೂ ಏನೇನೋ ಹಾಡು ಮತ್ತು ಮಾತು ಗೀತು ಸಾಗುತ್ತಿತ್ತು....... ಈ ಸತಿ ಪದ್ಧತಿ ಕ್ರೂರ ಹಾಗೂ ಅನಾಗರಿಕವಾದುದು ನಿಜ. ಆದರೆ ಹೆಂಗಸರ ಈ ಪಾತಿವ್ರತ್ಯ ಹಾಗೂ ಸತೀತ್ವ ಬಹಳ ಮೆಚ್ಚತಕ್ಕದ್ದು....ಸ್ತ್ರೀಯರ ಬಗ್ಗೆ ಇಷ್ಟು ನಿರ್ದಯವಾದ ಈ ಪದ್ಧತಿಯನ್ನು ಮನಸ್ಸಿನಲ್ಲಿಯೇ ಶಪಿಸಿದೆ. ಗಿಯಕಮ್ಮನಿಗೆ ಮೂವತ್ತು ವರ್ಷ ವಯಸ್ಸು. ಹೆಚ್ಚು ಕಡಿಮೆ ಕಪ್ಪುಬಣ್ಣದ ಎತ್ತರದ ನಿಲುವಿನ, ಸರ್ವಾಂಗಸುಂದರಳಾದ ಆ ಹೆಣ್ಣಿಗೆ ಇದೋ ನನ್ನ ಕಾವ್ಯರೂಪದ ಗೌರವ ಕಾಣಿಕೆ". ಭಾರತೀಯ ಜನಜೀವನದಲ್ಲಿ ಅತ್ಯಂತ

ಹೇಯವೂ, ದಾರುಣವೂ ಆದ ಈ ಪದ್ಧತಿಯು ರಾಜಾರಾಂ ಮೋಹನರಾಯ್ ಮತ್ತು ಲಾರ್ಡ್ ಕಾರ್ನವಾಲೀಸನ ಕಾಲದಲ್ಲಿ ನಿಂತಿತು. ಈ ನಾಡಿಗೆ ಬಂದ ಅನೇಕ ಪ್ರವಾಸಿಗರು ಇದನ್ನು ಕಂಡು ಹೌಹಾರಿದ್ದಾರಾದರೂ ಇದು ಪತಿವ್ರತಾ ಧರ್ಮದ ಪ್ರತೀಕ ಎಂದಿರುವುದು ಆಶ್ಚರ್ಯದ ಸಂಗತಿ.

ಜನಜೀವನದ ಸಾಂಪ್ರದಾಯಿಕ ಒಳ ಅಂಗಗಳಾದ ಮದುವೆ, ಮಗು ಹುಟ್ಟಿದಾಗ, ಯಾರಾದರೂ ಸತ್ತಾಗ ಆಚರಿಸುವ ಸೂತಕ ಇತ್ಯಾದಿ ವಿವರಗಳ ಬಗ್ಗೆ ಪ್ರವಾಸಿಗರು ಹೆಚ್ಚು ಗಮನ ಹರಿಸಿಲ್ಲ. ಅದು ಅವರ ಉದ್ದೇಶವೂ ಅಲ್ಲ. ಆದರೂ ಕೆಲವರು ತಾವು ಕಂಡ ಇಂತಹ ಪದ್ಧತಿಗಳ ಬಗ್ಗೆ ಕೆಲವು ವಿಷಯಗಳನ್ನು ಗುರುತುಮಾಡಿದ್ದಾರೆ. ಪಿಯತ್ರೊ ದಲ್ಲಾವೆಲ್ಲೆ ಎಂಬುವನು ಸಾವಿನ ಬಗ್ಗೆ ಕೊಡುವ ಚಿತ್ರವೊಂದು ಹೀಗಿದೆ. "ಮನೆಗೆ ಬರುವಾಗ ಹೆಣವೊಂದನ್ನು ಊರಹೊರಗಡೆ ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಿದ್ದುದನ್ನು ಕಂಡೆ. ವಾದ್ಯಗಳನ್ನು ಬಾರಿಸುತ್ತಿದ್ದರು. ಶವವನ್ನು ಕುರ್ಚಿಯಂತಹ ಪೀಠದಲ್ಲಿ ಕುಳ್ಳಿರಿಸಿ ಬೀಳದಂತೆ ಕಟ್ಟಿದ್ದರು. ಸಾಯುವ ಮುನ್ನ ಯಾವ ಉಡುಪು ಧರಿಸುವ ಕ್ರಮವಿತ್ತೋ ಅದೇ ತರಹ ಉಡುಪನ್ನು ಈಗ ತೊಡಿಸಿದ್ದರು. ಯಾರು ಸತ್ತರೂ ಹೀಗೇ ತೆಗೆದುಕೊಂಡು ಹೋಗುವುದೆಂದು ಜನರು ಹೇಳಿದರು. ಹೂಳುವ ಮತ್ತು ಸುಡುವ ಇತರ ಜನರ ಶವಗಳನ್ನೂ ಇದೇ ರೀತಿ ಕೊಂಡೊಯ್ಯುತ್ತಾರೆಂದು ಗೊತ್ತಾಯಿತು." ಸಮುದ್ರತೀರದುದ್ದಕ್ಕೂ ಸೂರತ್ತಿನಿಂದ ಆಂಧ್ರದ ನಾಗಪಟ್ಟಣದ ವರೆಗೂ ತಾವು ಕಂಡ ಭಾರತೀಯ ವಿವಿಧ ಜನಾಂಗದ ಸಾವಿನ ಸಂಸ್ಕಾರ ಪದ್ಧತಿಯನ್ನು ಕುರಿತು ಈ ಪ್ರವಾಸಿಗಳು ಹೇಳಿದ್ದಾರೆ. ನೂರಾರು ವರ್ಷಗಳ ನಂತರವೂ ಆ ಪದ್ಧತಿಗಳು ಭಾರತೀಯ ಸಮಾಜದಲ್ಲಿ ಹಾಗೆಯೇ ನಡೆದುಕೊಂಡು ಬಂದಿವೆ ಎಂದು ಹೇಳಬಹುದು.

ಮದುವೆ ಸಂಪ್ರದಾಯದ ಬಗ್ಗೆ ಹೆಚ್ಚು ವಿವರಗಳಿಲ್ಲದಿದ್ದರೂ ಕೆಲವು ತುಣುಕುಗಳು ಕಂಡು ಬರುತ್ತವೆ. ಒಂದು ಅಥವಾ ಎರಡು ಮಾತುಗಳಲ್ಲಿ ಹೇಳಿ ಮುಂದೆ ಹೋಗುತ್ತಾರೆ. ಉದಾಹರಣೆಗೆ ಗಾಸ್ಪಾರೊಬಾಲ್ಬಿ ಎಂಬ ಪ್ರವಾಸಿಗ ಹೇಳುವ ಈ ಮಾತುಗಳು ಗಮನಾರ್ಹ "ಇಲ್ಲಿಯ ಜನ ತಮ್ಮ ತಮ್ಮ ಜಾತಿಯವರನ್ನೇ ಮದುವೆಯಾಗುತ್ತಾರೆ, ಹಸುಗಳನ್ನು ಸರ್ಪಗಳನ್ನೂ ಪೂಜಿಸುತ್ತಾರೆ, ಬ್ರಾಮಿನಿ ಎಂಬ ಜನ ಹಸುವಿನ ಸಗಣಿಯನ್ನು ಸುಟ್ಟು ಬೂದಿಮಾಡಿ ಹಣೆಗೂ ಮೂಗಿಗೂ ಹಚ್ಚಿಕೊಳ್ಳುತ್ತಾರೆ. ಇವರು ಅನೇಕ ಹಬ್ಬಗಳನ್ನು ಆಚರಿಸುತ್ತಾರೆ....ಮಕ್ಕಳಿಗೆ ಹೆಣ್ಣುನೋಡಿ ಮದುವೆ ಮಾಡುವುದು ಹೆತ್ತವರ ಕೆಲಸ. ತಾನು ಹೆಣ್ಣನ್ನು ನೋಡದೆ ತಂದೆ ತಾಯಂದಿರು ನೋಡಿದ ಹೆಣ್ಣನ್ನು ಗಂಡು ಮದುವೆಯಾಗಿಬಿಡುತ್ತಾನೆ. ಚಿಕ್ಕವಯಸ್ಸಿನಲ್ಲಿ ತಮ್ಮ ಮಕ್ಕಳನ್ನು ಮದುವೆಮಾಡಿಬಿಡುತ್ತಾರೆ....ವಿಧವೆಯಾದವಳು ಎಷ್ಟೇ ಚಿಕ್ಕವಳಾದರೂ ಪುನಃ ಮದುವೆಯಾಗುವಂತಿಲ್ಲ" ಹೀಗೆಯೇ ನೂರಾರು ಸಂಪ್ರದಾಯಗಳು, ಆಚರಣೆ

ಗಳು ದೊರೆಯುತ್ತವೆ. ಭಾರತೀಯರ ಪ್ರಾಚೀನ ಸಾಮಾಜಿಕ ಪದ್ಧತಿಗಳ ಅಧ್ಯಯನಕ್ಕೆ ಇವು ತುಂಬಾ ಅನುಕೂಲ ಆಕರಗಳಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಭಾರತೀಯ ಜಾತಿಪದ್ಧತಿಯ ಬಗೆಗೆ ಈ ಪ್ರವಾಸಿಗರು ತುಂಬಾ ಕುತೂಹಲಿಗರಾಗಿ ನೋಡಿದಂತೆ ಕಾಣುತ್ತದೆ. ಏಕೆಂದರೆ ಪಾಶ್ಚಿಮಾತ್ಯ ಜಗತ್ತಿನಲ್ಲಿ ಕ್ರೈಸ್ತಮತವೊಂದೇ ಪ್ರಧಾನವಾದುದರಿಂದ ಇಲ್ಲಿನ ಮತ ಪದ್ಧತಿಗಳು ಅವರಿಗೆ ಆಶ್ಚರ್ಯದ ಸರಕುಗಳಾಗಿವೆ. ಆದರೆ ಈ ಜಾತಿಗಳ ಬಗ್ಗೆ ಅವುಗಳ ಸಂಖ್ಯೆಯ ಬಗ್ಗೆ ವಿವಿಧಾಭಿಪ್ರಾಯಗಳು ಕಂಡು ಬರುತ್ತವೆ. ವರ್ತಿಮಾ ಎಂಬ ಪ್ರವಾಸಿ "ಪೇಗನ್ ಜನರಲ್ಲಿ ಆರು ಜಾತಿಗಳಿವೆ. ಅವು ಯಾವುವೆಂದರೆ ಬ್ರಾಹ್ಮಣ, ನಾಯಿರಿ, ತಿವ (ತೀಯ = ಬಿಲ್ಲವ) ಮುಖುವಾ, ಪೊಲಿಯರ್ ಮತ್ತು ಹಿರವಾ. ಬ್ರಾಹ್ಮಣರ ಅನುಮತಿಯಿಲ್ಲದೆ ರಾಜನೂ ಗೌರವಸ್ಥರಾದವರೂ ಮಾಂಸ ತಿನ್ನುವುದಿಲ್ಲ. ಉಳಿದ ಜಾತಿಯವರು ದನದ ಮಾಂಸ ತಿನ್ನುತ್ತಾರೆ. ಹಿರವಾ ಮತ್ತು ಪೊಲಿಯರುಗಳು ಇಲಿ ಮತ್ತು ಮೀನುಗಳನ್ನು ಬಿಸಿಲಿನಲ್ಲಿ ಒಣಗಿಸಿ ತಿನ್ನುತ್ತಾರೆ." ಎಂದರೆ, ಒಬ್ಬ ಅನಾಮಧೇಯ ಪ್ರವಾಸಿಯು "ಜೆಂಟೂಗಳಲ್ಲಿ ಹದಿನೆಂಟು ಜಾತಿಗಳಿವೆ. ಒಂದು ಜಾತಿಯವರು ಇನ್ನೊಂದು ಜಾತಿಯವರೊಡನೆ ಮದುವೆ ಸಂಬಂಧ ಬೆಳೆಸುವುದಿಲ್ಲ. ಮದುವೆ ಮಾಡುವಾಗ ಹೆಣ್ಣಿಗೆ ತೆರ ಕೊಡಬೇಕು. ನಾಲ್ಕರಿಂದ ಒಂಬತ್ತು ವರ್ಷದ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಬಿಡುತ್ತಾರೆ. ಹನ್ನೆರಡಕ್ಕಿಂತ ಹೆಚ್ಚು ವಯಸ್ಸಾದರೆ ಗಂಡು ಸಿಗುವುದು ಕಷ್ಟ. ಅಷ್ಟು ವಯಸ್ಸಾದ ಹೆಣ್ಣನ್ನು ಮದುವೆಯಾಗುವುದು ನಾಚಿಕೆಗೇಡು. ನನಗೆ ತಿಳಿದಂತೆ ಯಾವ ದೇಶದಲ್ಲಿಯೂ ಇಲ್ಲಿರುವಂಥ ಜಾತಿಯ ಕಟ್ಟುಪಾಡುಗಳು ಇಷ್ಟು ಕಟ್ಟುನಿಟ್ಟಾಗಿಲ್ಲ. ಗಂಡು ಹುಡುಗರು ವಯಸ್ಸಾದಮೇಲೂ ಮದುವೆಯಾಗಬಹುದು. ಆದರೆ ಮದುವೆಯಾಗುವವರೆಗೆ ಮುಖಕ್ಷೌರಮಾಡಿಸಿಕೊಳ್ಳುವಂತಿಲ್ಲ. ನಾನು ಹಲವಾರು ಮದುವೆಗಳಿಗೆ ಹೋಗಿದ್ದೆ. ನೂರೆಂಟು ಶಾಸ್ತ್ರಗಳಿಲ್ಲದೆ ಮದುವೆಯಾಗುವಂತೆಯೇ ಇಲ್ಲ. ಮಕ್ಕಳಿಲ್ಲದಿದ್ದರೆ ಗಂಡ ಇನ್ನೂ ಒಬ್ಬಳು ಅಥವಾ ಇಬ್ಬರನ್ನು ಮದುವೆಮಾಡಿಕೊಳ್ಳಬಹುದು. ಆದರೆ ಹಿರಿಯ ಹೆಂಡತಿ ಹಿರಿಯಳಾಗಿಯೇ ಇರುತ್ತಾಳೆ." ಕೆಲವರು ಪ್ರವಾಸಿಗರು ಹೀಗೆಯೆ ಜನ ಜೀವನದ ಅಂತರ್ಯವನ್ನು ಕಂಡು ತಮಗನ್ನಿಸಿದ್ದನ್ನು ಬರೆದಿಟ್ಟಿದ್ದಾರೆ.

ಇದು ಪ್ರವಾಸಿ ಕಂಡ ಭಾರತ ಅಂದರೆ ಕೇವಲ ತೀರಪ್ರದೇಶ. ಆದರೆ ಕೆಲವರು ವಿಶೇಷವಾಗಿ ಮೊಗಲ್ ರಾಜ್ಯದೊಳಗೆ ಹೋದವರುಂಟು. ಕನ್ನಡನಾಡಿಗೆ ಸಂಬಂಧಿಸಿದಂತೆ ಈ ಸಂಪುಟದಲ್ಲಿ ಇಬ್ಬರು ಪ್ರವಾಸಿಗಲು ಮಾತ್ರ ಒಳಭಾಗಗಳಿಗೆ ಅದೂ ಸ್ವಲ್ಪ ದೂರ ಮಾತ್ರ ಹೋಗಿದ್ದಾರೆ. ಒಬ್ಬ ದಲ್ಲಾವೆಲ್ಲಾದಿವರ್ತಿಮಾ. ಈತ ಇಕ್ಕೇರಿ ಸಂಸ್ಥಾನದ ರಾಜಧಾನಿಯವರೆಗೆ ಹೋಗಿ ಬಂದವನು. ಕಾರಣಾಂತರದಿಂದ ರಾಜಧಾನಿಯಲ್ಲಿ ಹೆಚ್ಚು ಕಾಲ ನಿಲ್ಲಬೇಕಾಗಿಬಂದುದರಿಂದ ಅಲ್ಲಿನ ಜನ ಜೀವನವನ್ನು ಅಧ್ಯಯನ ಮಾಡುವುದು ಸಾಧ್ಯವಾಯಿತು. ರಾಜ್ಯಭಾರಕ್ರಮ,

ಹಬ್ಬಹರಿದಿನಗಳು, ಮತಪಥನ್ಯಗಳನ್ನು ಕುರಿತು ಈತ ಹೇಳುತ್ತಾನೆ. ಈ ಪ್ರವಾಸಿ ಕಂಡ ಇಕ್ಕೇರಿ ಹೀಗಿದೆ. “ಇಕ್ಕೇರಿ ಸೊಗಸಾದ ಮೈದಾನ ಪ್ರದೇಶದಲ್ಲಿದೆ. ನಗರವನ್ನು ಪ್ರವೇಶಿಸುವಾಗ ನಮಗೆ ಮೂರು ಹೆಬ್ಬಾಗಿಲುಗಳು ಸಿಕ್ಕಿದವು. ಆ ಹೆಬ್ಬಾಗಿಲುಗಳ ಆಕಡೆ ಈಕಡೆ ಸಣ್ಣಕೋಟೆಗಳು ಮತ್ತು ಅಗಳುಗಳು. ಮೊದಲ ಎರಡು ಕೋಟೆಗಳು ಮಣ್ಣಿನಿಂದ ಕಟ್ಟಿದವುಗಳಲ್ಲ ; ಅವು ಎತ್ತರವಾದ ಬೊಂಬುಗಳಿಂದ ಮಾಡಿದವುಗಳು ಬೊಂಬುಗಳನ್ನು ಬಹಳ ಒತ್ತಾಗಿ ಹತ್ತಿರ ಹತ್ತಿರ ನೆಟ್ಟು ಗೋಡೆಯಂತೆ ಮಾಡಿದ್ದರು. ಕಾಲ್ದಳ ಮತ್ತು ಅಶ್ವದಳವನ್ನು ತಡೆಯುವಷ್ಟು ಭದ್ರವಾಗಿದ್ದುವು ಅವು. ಬೊಂಬುಗಳ ಮೇಲೆ ಹಬ್ಬಿಸಿದ ಬಳ್ಳಿ ಬೆಳೆದು ಎಲೆಗಳಿಂದ ಆವರಿಸಿಕೊಂಡಿದ್ದ ಕಾರಣ ಅದು ನೋಡಲು ಬಹಳ ಅಂದವಾಗಿತ್ತು. ಮೂರನೆಯ ಕೋಟೆ ಮಣ್ಣಿನಿಂದ ಕಟ್ಟಿದ್ದು. ಅದರೆ ಅದೇನು ಅಷ್ಟು ಭದ್ರವಾಗಿರಲಿಲ್ಲ. ಈ ಮೂರು ಕೋಟೆಗಳನ್ನು ದಾಟಿದರೆ. ಎಲ್ಲಾ ಕೋಟೆಗಳನ್ನು ದಾಟಿದಂತಾಯಿತು. ಆದರ ಒಳಗೆ, ಅಂದರೆ ಅರಮನೆ ಇರುವ ದುರ್ಗದೊಳಗೆ, ಬೇರೆ ಕೋಟೆಗಳಿವೆಯೆಂದು ಗೊತ್ತಾಯಿತು. ಏಕೆಂದರೆ ಇಕ್ಕೇರಿ ಬಹಳ ವಿಸ್ತಾರವಾದ ಪಟ್ಟಣ. ಒಟ್ಟಿನಲ್ಲಿ ನಗರ ನೋಡಲು ಬಹು ಸುಂದರವಾಗಿತ್ತು.”

ಇಕ್ಕೇರಿಯ ಬಗೆಗೆ ದಲ್ಲಾವೆಲ್ಲ ಇನ್ನೂ ಅನೇಕ ವಿವರಗಳನ್ನು ಕೊಟ್ಟಿದ್ದಾನೆ. ಈ ದೇಶದ ಭಾಷೆ ‘ಕನರ’ (ಕನ್ನಡ) ತುಂಬಾ ಸುಂದರವಾದ ಭಾಷೆ. ಅನೇಕ ಗ್ರಂಥ ಗಳನ್ನು ರಾಜನ ಪುಸ್ತಕ ಭಂಡಾರದಲ್ಲಿ ಕಂಡ ಈತ ತನಗೆ ಒಂದನ್ನು ಕೊಡಿ ಎಂದು ಕೇಳಿದನಂತೆ. “ಹೊರಡುವ ಮುನ್ನ ವಿಟಲಿನಾಯಕ್ ನನಗೊಂದು ಪುಸ್ತಕವನ್ನು ಬಹುಮಾನವಾಗಿ ಕೊಟ್ಟ ಅದನ್ನು ಕನರಾ ಭಾಷೆಯಲ್ಲಿ ಬರೆಯಲಾಗಿತ್ತು. ಅದು ಓಲೆಗರಿಗಳ ಮೇಲೆ ಬರೆದ ಪುಸ್ತಕವಾಗಿತ್ತು. ಇಕ್ಕೇರಿ ರಾಜ್ಯದ ಭಾಷೆ ಕನರಾ.” ಇದರೊಂದಿಗೆ ಸಿಡಿ ಆಡುವುದು, ದೊಂಬರಾಟ, ಹೆಣ್ಣು ಮಕ್ಕಳ ಕೋಲಾಟ, ನರ್ತನ ಹೀಗೆ ಅನೇಕ ವಿಚಾರಗಳನ್ನು ಈತ ಕಂಡು ಅವುಗಳ ಸೊಗಸನ್ನು ಮೆಚ್ಚಿಕೊಂಡಿದ್ದಾನೆ.

ವಿಲಿಯಂ ಮೆಥ್ವೊಲ್ಡ್ ವಿಜಯನಗರ ಕಂಡವನು. ಆದರೆ ಅದನ್ನು ಅವನು ಅದರ ಅವನತಿಯ ಕಾಲದಲ್ಲಿ ಕಂಡಿದ್ದಾನೆ. “ಸಿಲೋನನ್ನು ಬಿಟ್ಟರೆ ಭೂಭಾಗದಲ್ಲಿರುವ ಮೊದಲ ರಾಜ್ಯ ಬಿಸ್ನಾಗರ್ (ವಿಜಯನಗರ). ಇದು ಈಗ ಹರಿದು ಹಂಚಿಹೋಗಿದೆ. ರಾಜ ಹದಿನೈದು ವರ್ಷಗಳ ಕೆಳಗೆ ಕಾಲವಾದನಂತರ ಸಿಂಹಾಸನಕ್ಕೆ ನಾನು ತಾನೆಂಬ ಕಿತ್ತಾಟ ನಡೆದು ನಾಯಕರುಗಳೆಂಬ ಸಣ್ಣಪುಟ್ಟ ಪಾಳೆಗಾರರು ಸ್ವತಂತ್ರ ರಾಜ್ಯಗಳನ್ನು ಮಾಡಿಕೊಂಡಿದ್ದಾರೆ.” ವಿಜಯನಗರದ ದೇವಾಲಯಗಳನ್ನು ಕುರಿತು “ಜೆಂತಿಲರ ಕೆಲವು ದೇವಸ್ಥಾನಗಳನ್ನು ನೋಡಲು ಬಹಳ ಅಚ್ಚರಿಯಾಗುತ್ತದೆ. ಹಬ್ಬಗಳಲ್ಲಿ ಜಾತ್ರೆ ಸೇರುತ್ತದೆ. ಅಸಂಖ್ಯಾತ ಜನ ಸೇರಿ ನಾನಾ ತರಹ ವಾದ್ಯಮೇಳ ಮಾಡಿಕೊಂಡು ತೇರು ಎಳೆಯುತ್ತಾರೆ, ವಿವಿಧ ಆಟಪಾಟ ಬಾಣ ಬಿರುಸು ಹೇಳತೀರದು” ಕನ್ನಡ ನಾಡಿನ ಜನರು ಅದರಲ್ಲೂ ವಿಶೇಷವಾಗಿ ಒಕ್ಕಲಿಗರು ಯುದ್ಧ ಮತ್ತು ವ್ಯವಸಾಯ

ಮಾಡುವ ಜನ ಎಂಬುದು ಬಹುತೇಕ ಪ್ರವಾಸಿಗರ ಅಭಿಪ್ರಾಯ. ಬೇಸಾಯ, ಸಿಪಾಯಿತನ ಮಾಡಿಕೊಂಡು ಅಧಿಕ ಸಂಖ್ಯೆಯಲ್ಲಿರುವ ಜನರೆಂದರೆ ಒಕ್ಕಲಿಗರು ಎಂದು ಇವರು ಹೇಳಿದ್ದಾರೆ. ಇವರು "ಅಕ್ಕಿ ಮತ್ತಿತರ ದವಸಧಾನ್ಯಗಳನ್ನು ಬೆಳೆಯುತ್ತಾರೆ. ಒಂದೇ ಭೂಮಿಯಲ್ಲಿ ವರ್ಷಕ್ಕೆ ಎರಡು ಮೂರು ಬೆಳೆ ತೆಗೆಯುತ್ತಾರೆ." ಹೀಗೆ ಕರ್ನಾಟಕದ ಜನ ಜೀವನದ ವರ್ಣನೆ ಸ್ವಲ್ಪಮಟ್ಟಿಗೆ ಬಂದಿದೆ. ಈ ಪ್ರವಾಸಿ ಕನ್ನಡದ ಪ್ರಸಿದ್ಧ ವೀರ ಚಿಕ್ಕಮಾನಾಯಕನನ್ನು ಕಂಡವನು. ಅವನ ಶೌರ್ಯದ ಕಥೆಯನ್ನು ನಾನಾ ವಿಧವಾಗಿ ವರ್ಣಿಸಿದ್ದಾನೆ. ಇಂತಹ ಒಬ್ಬ ಶೂರನಾದ ನಾಯಕ ನಮ್ಮ ದೇಶದಲ್ಲಿ ಇದ್ದರೆ ಪ್ರಪಂಚವನ್ನೆ ಆಳಬಹುದೆಂಬುದು ಅವನ ಖಚಿತ ಅಭಿಪ್ರಾಯ.

ಸಾವಿರಾರು ವರ್ಷಗಳಿಂದ ಭಾರತದ ಮೇಲೆ ವಿದೇಶೀಯರ ಆಕ್ರಮಣ ನಡೆದಿದೆ. ಇಂದಿಗೂ ಅಂತಹ ಜನರೇ ಈ ದೇಶದ ಬಹುಸಂಖ್ಯಾತರನ್ನು ಹೆದರಿಸುತ್ತಿದ್ದಾರೆ. ಇದಕ್ಕೆ ಮೂಲಕಾರಣ ಈ ದೇಶದ ಜನರ ಮೂಢನಂಬಿಕೆಗಳು. ವೈದಿಕ ಸಂಪ್ರದಾಯದ ಗೊಡ್ಡುತನ. ಇದು ಜನರನ್ನು ವೀರರನ್ನಾಗಿ ಮಾಡುವ ಬದಲು ಹೇಡಿಗಳನ್ನಾಗಿ ಮಾಡಿದೆ. ಈ ಬಗ್ಗೆ ಒಬ್ಬ ಪ್ರವಾಸಿ ಹೇಳುತ್ತಾನೆ. ಈ ಜನಕ್ಕೆ ಕರ್ಮದಲ್ಲಿ ನಂಬಿಕೆ. ಈ ಜನ್ಮದಲ್ಲಿ ಒಳ್ಳೆಯದು ಅಥವಾ ಕೆಟ್ಟದ್ದನ್ನು ಮಾಡಿದರೆ ಮುಂದಿನ ಜನ್ಮದಲ್ಲಿ ಅದಕ್ಕೆ ತಕ್ಕಫಲ ಸಿಗುವುದೆಂದು ನಂಬುತ್ತಾರೆ. ಇವರ ಮತಧರ್ಮವನ್ನು ಕುರಿತು ನಾನೆಷ್ಟೋ ಸಲ ಬ್ರಾಹ್ಮಣರ ಜೊತೆ ವಾದಿಸಿದ್ದೇನೆ. ಆದರೆ ಅವರು ಹೇಳುವ ವಾದವೇ ನನಗೆ ಅರ್ಥವಾಗಲಿಲ್ಲ. ಕಟ್ಟು ಕಥೆ ಮತ್ತು ಜಾಣ ಚುಟುಕೆಗಳನ್ನು ಬಿಟ್ಟರೆ ಅವರು ಹೇಳುವುದೇನೂ ನನಗೆ ತಿಳಿಯಲಿಲ್ಲ." ಅವನೇ ಮುಂದುವರಿದು "ಪಕ್ಷಿಶಕುನ, ರಾಹುಕಾಲ, ಗುಳಿಕಕಾಲ, ಸೀನು–ಇವುಗಳಲ್ಲಿ ಜನಗಳಿಗೆ ಬಹಳ ನಂಬಿಕೆ. ಯಾವ ಕೆಲಸ ಮಾಡಬೇಕಾದರೂ ಶಕುನ ನೋಡುತ್ತಾರೆ. ಈ ರೀತಿ ಕಗ್ಗತ್ತಲಲ್ಲಿ ತೊಳಲುತ್ತಿರುವ ಈ ಮುಗ್ಧರಿಗೆ ಕ್ರೈಸ್ತಧರ್ಮದ ಬೆಳಕು ತೋರಬಾರದೇ ಎಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ" ಎಂದಿದ್ದಾನೆ. ನಮ್ಮ ಜನರ ಮೂಢನಂಬಿಕೆಗಳಿಗೆ ದಲ್ಲಾವಲ್ಲೆ ಕೊಟ್ಟಿರುವ ಪಟಂತೂ ಎಂದೆಂದೂ ಮರೆಯಲಾರದಂಥದು. ಗುಡಿಯೊಳಗೆ ಇದ್ದುದನ್ನೆಲ್ಲಾ ನೋಡಿ, ವಿಗ್ರಹದ ಮುಖದ ಮೇಲೆ ಹಲವಾರು ಸಲ ಉಗುಳಿ, ಹಿಂದಿರುಗಿ ಬಂದೆ. ಪುಕ್ಕಲ ಬ್ರಾಹ್ಮಣರನ್ನು ಹಂಗಿಸಿದೆ. ನನ್ನ ಧರ್ಮವೊಪ್ಪದೋ ಅಲ್ಲವೋ ಎಂಬುದನ್ನು ನೀನು ನೋಡಬೇಕಾಗಿತ್ತು ಎಂದು ಹೀಯಾಳಿಸಿದೆ. ಆತ ಹೆದರಿಕೊಂಡು ಬಿಟ್ಟ. ಭೂತ ತನಗೇನೂ ಮಾಡಲಿಲ್ಲವೆಂದು ಹೇಳಿದೆ. ಬ್ರಾಹ್ಮಣನಿಗೆ ಏನು ಹೇಳಬೇಕೊ ತಿಳಿಯದಾಯಿತು." ಇಂತಹ ನೂರಾರು ಉದಾಹರಣೆಗಳು ಈ ಸಂಪುಟದಲ್ಲಿ ದೊರೆಯುತ್ತವೆ. ಇವನ್ನೆಲ್ಲಾ ಓದಿಯಾದರೂ ನಮ್ಮವರು ಬುದ್ಧಿ ಕಲಿತಿಲ್ಲದಿರುವುದು ಆಶ್ಚರ್ಯದ ಸಂಗತಿ. ಈ ಜನರ ಹೇಡಿತನ ಕುರಿತು ಮತ್ತೊಂದು ಮಾತನ್ನು ಒಬ್ಬ ಪ್ರವಾಸಿ ಹೀಗೆ ಹೇಳಿದ್ದಾನೆ "ಮುಸ್ಲಿಮರಿಗೆ ಜೆಂಟೂಗಳು ಬಹಳವಾಗಿ ಹೆದರುತ್ತಾರೆ. ಅವರೇನು

ಕಷ್ಟ ಕೊಟ್ಟರೂ ಸಹಿಸುತ್ತಾರೆ. ಒಬ್ಬ ಮುಸ್ಲಿಮನಿದ್ದರೆ ಸಾಕು-ಸಾವಿರ ಜಂಟೂಗಳು ಬಾಯಿಮುಚ್ಚಿಕೊಂಡಿರುತ್ತಾರೆ. ಪುಕ್ಕಲರಾದ ಜಂಟೂಗಳು ಅವರಿಗೆ ಗುಲಾಮರಾಗಿ ದುಡಿದೂ ದುಡಿದೂ ಸಾಯುತ್ತಾರೆ" ಎಂದಿದ್ದಾನೆ. ಈ ಪರಿಸ್ಥಿತಿ ಇಂದಿಗೂ ನಮ್ಮ ದೇಶದಿಂದ ಹೋಗಿಲ್ಲವೆಂಬುದು ಈ ಜನರ ಕರ್ಮದ ನಂಬಿಕೆಯ ಮೂಢತೆಯ ಆಳವನ್ನು ಸೂಚಿಸುತ್ತದೆ.

ಅರಸುಗಳಿಗಿದು ವೀರ ಎಂದು ನಾರಣಪ್ಪ ಭಾರತ ಕುರಿತು ಹೇಳಿದ. ಅದರಲ್ಲಿ ಅವೆಲ್ಲವೂ ಇವೆಯೋ ಇಲ್ಲವೋ ತಿಳಿಯದು. ಆದರೆ ಪ್ರವಾಸಿಕಂಡ ಇಂಡಿಯಾದ ಈ ಸಂಪುಟಗಳನ್ನು ನಮ್ಮ ಜನ ಓದಬೇಕು. ಓದಿ ಕಲಿಯಬೇಕಾದುದೇ ಬಹಳವಿದೆ. ಈ ದೃಷ್ಟಿಯಿಂದ ಶ್ರೀ ನಾಗೇಗೌಡರು ಕನ್ನಡನಾಡಿಗೆ, ನುಡಿಗೆ ಮಹದುಪಕಾರಮಾಡಿದ್ದಾರೆ. ಈ ದೊಡ್ಡ ಸಂಪುಟದ ಕೆಲವು ತುಣುಕುಗಳನ್ನು ಮಾತ್ರ ಇಲ್ಲಿ ಉದಾಹರಿಸಲಾಗಿದೆ. ಇದರ ಆನಂದ, ಪೂರ್ಣವಾಗಿ ದೊರೆಯಬೇಕಾದಲ್ಲಿ ಮೂಲ ಸಂಪುಟಗಳನ್ನೇ ಓದಿ ಸವಿಯಬೇಕು. ಇನ್ನಾದರೂ ನಮ್ಮ ಜನ ಆ ಕೆಲಸ ಮಾಡಿದರೆ ನಾಗೇಗೌಡರಿಗೆ ಗೌರವ ಸೂಚಿಸುವುದರ ಜೊತೆಗೆ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಂತಾಗುತ್ತದೆ.

ಪ್ರವಾಸಿಕಂಡ ಇಂಡಿಯಾ—ಐದು

ಜಿ. ಜಿ. ಮಂಜುನಾಥನ್

‘ಗಂಗಸ್ನಾನ-ತುಂಗಾಪಾನ’, ‘ಬಹೂದಕ ಕುಟೀಚಕ’ ಎನ್ನುವ ನುಡಿಗಟ್ಟುಗಳು ಭಾರತೀಯರ ಪ್ರವಾಸೋತ್ಸುಕತೆಯನ್ನು ಸೂಚಿಸುತ್ತವೆ. ‘ಪ್ರವಾಸ’ ಎನ್ನುವುದಕ್ಕಿಂತ ‘ತೀರ್ಥಯಾತ್ರೆ’ ಎನ್ನುವುದು ಭಾರತೀಯರಿಗೆ ಹೆಚ್ಚು ಪ್ರಿಯವಾದ ಶಬ್ದ. ‘ಪ್ರವಾಸ’ ಲೌಕಿಕ ಕುತೂಹಲವನ್ನು ತಣಿಸಿದರೆ ‘ತೀರ್ಥಯಾತ್ರೆ’ ಲೌಕಿಕ ಕುತೂಹಲದ ಜೊತೆಗೆ ಪಾರಮಾರ್ಥಿಕ ಸಾಧನೆಗೂ ದಾರಿಯಾಗುತ್ತಿತ್ತು. ಆದುದರಿಂದಲೆ ಭಾರತೀಯರು ಒಂದು ವ್ರತದ ರೀತಿಯಲ್ಲಿ ತೀರ್ಥಯಾತ್ರೆಯನ್ನು ನಡೆಸುತ್ತಿದ್ದರು. ವಿದ್ಯಾಭ್ಯಾಸಕ್ಕಾಗಿ ಬ್ರಹ್ಮಚರ್ಯಾಶ್ರಮದಲ್ಲಿ ನಡೆಸುತ್ತಿದ್ದ ಪ್ರಯಾಣಗಳು, ಧಾರ್ಮಿಕ ವಾದವಿವಾದಗಳಿಗೆ ವಿದ್ವಾಂಸರು ನಡೆಸುತ್ತಿದ್ದ ಪ್ರಯಾಣಗಳು, ಗೃಹಸ್ಥರು ನಡೆಸುತ್ತಿದ್ದ ಕ್ಷೇತ್ರ ಪರ್ಯಟನೆಗಳು ಇದಕ್ಕೆ ಸಾಕ್ಷಿಯಾಗಿವೆ. ರಾಮೇಶ್ವರದ ಮರಳನ್ನು ಗಂಗೆಯಲ್ಲಿ ಬಿಡಬೇಕು, ಗಂಗಾಸ್ನಾನ ಮಾಡಿದವನು ತುಂಗಾಪಾನ ಮಾಡಬೇಕು ಮೊದಲಾದ ನಿಯಮಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಭಾರತೀಯ ಸಂಸ್ಕೃತಿಯು ರಕ್ತಗತವಾಗಿರುವ ನಮ್ಮವರಿಗೆ ವಿದೇಶೀಯರಿಗೆ ವಿಶಿಷ್ಟವಾಗಿ ಕಾಣಬರುವ ಸಂಗತಿಗಳಾದ “ಅವರು ನನಗೆ ವೀಳೆಯದೆಲೆ ಮರ್ಯಾದೆ ಮಾಡಿಕಳುಹಿಸಿಕೊಟ್ಟರು” “ವಿಗ್ರಹದ ಹತ್ತಿರ ಹೋದಾಗ ತೂಗು ಹಾಕಿರುವ ಗಂಟೆಯನ್ನು ಮೊರಸಲು ಬಾರಿಸುತ್ತಿದ್ದರು” “ಇಂಡಿಯಾದಲ್ಲಿ ಕೋಲುಗೀಲುಗಳಿಂದ ಹೊಡೆಯುತ್ತೇವೆಂದು ಹೇಳುವುದಿಲ್ಲ. ಎಕ್ಕಡದಲ್ಲಿ ಹೊಡೆಯುತ್ತೇನೆ ! ಎಂದೇ ಹೇಳುವುದು” “ಬ್ರಾಹ್ಮಣರು ಒಂದು ಸಲ ಅನ್ನ ಮಾಡಿದ ಮಡಿಕೆಯಲ್ಲಿ ಮತ್ತೊಂದು ಸಲ ಅನ್ನ ಮಾಡುವುದಿಲ್ಲ. ಆದರೆ ತಾಮ್ರದ ಪಾತ್ರೆಯಲ್ಲಿ ಎಷ್ಟುಸಲಬೇಕಾದರೂ ಮಾಡಬಹುದು” ಎನ್ನುವವು ವಿಶಿಷ್ಟವಾಗಿರುವುದಿಲ್ಲ. ಹಾಗಾಗಿ ಅವರು ಅಂತಹ ಯಾವುದನ್ನೂ ಬರೆದಿಡುವ ಗೋಜಿಗೆ ಹೋಗದುದರಿಂದ ಭಾರತೀಯರು ಅಪರೂಪಕ್ಕೆ ಬರೆದ ತೀರ್ಥಯಾತ್ರಾ ಕಥನಗಳು ಅಲ್ಲಲ್ಲಿ ದೊರೆತರೂ ಪ್ರವಾಸ ಸಾಹಿತ್ಯ ದೊರೆಯುವುದಿಲ್ಲ. ಅಲ್ಲದೆ ಭಾರತೀಯರಿಗೆ ಸಮುದ್ರಪ್ರಯಾಣ ಧರ್ಮಬಾಹಿರವಾಗಿದ್ದುದರಿಂದ ಚೀನಾ ಟಿಬೆಟ್ ಯಾತ್ರಿಗಳಂತೆ, ಯೂರೋಪಿಯನ್ ಪ್ರವಾಸಿಗರಂತೆ ನಮ್ಮವರು ಹೊರ ದೇಶಗಳಿಗೆ ಪ್ರಯಾಣವನ್ನು ಮಾಡಲೇ ಇಲ್ಲ, ಅಲ್ಲಿ ಇಲ್ಲಿ ಒಂದೆರಡು ಅಪವಾದಗಳನ್ನು ಬಿಟ್ಟರೆ. ಆದುದರಿಂದ ಭಾರತೀಯರ ಹೊರದೇಶದ ಪ್ರವಾಸ ಕಥನಗಳೂ ಸಿಗುವುದಿಲ್ಲ.

ಪ್ರಸ್ತುತ, ಪ್ರವಾಸಿಕಂಡ ಇಂಡಿಯಾ-ಐದರಲ್ಲಿ ಫ್ರಾನ್ಸ್‌ದೇಶದ ಫ್ರಾನ್‌ಸ್ವಾಸ್ ಬೆರ್ನ್ಯೇ (1658-1667) ಮತ್ತು ಬಾಪ್ಟಿಸ್ಟ್ ಟಾವೆರ್ನ್ಯೇ (1641-1667) ಎನ್ನುವ ಇಬ್ಬರು ಪ್ರವಾಸಿಗರ ಕಥನಗಳಿವೆ. ಅವರಲ್ಲಿ ಬೆರ್ನ್ಯೇ ವೈದ್ಯ. ಟಾವೆರ್ನ್ಯೇ ವಜ್ರವ್ಯಾಪಾರಿ. ಬೆರ್ನ್ಯೇ ಉತ್ತರ ಭಾರತದಲ್ಲಿ ಹೆಚ್ಚು ಸಂಚರಿಸಿದರೆ, ಟಾವೆರ್ನ್ಯೇ ದಕ್ಷಿಣ ಮತ್ತು ಮಧ್ಯ ಭಾರತದಲ್ಲಿ ಹೆಚ್ಚು ವಾಸಿಸಿದವನು. ಬೆರ್ನ್ಯೇ ಮತ್ತು ಟಾರ್ನ್ಯೇ 5 ಡಿಸೆಂಬರ್ 1665 ರಿಂದ 6 ಜನವರಿ 1666ರ ವರೆಗೆ ಅಂದರೆ ಒಂದು ತಿಂಗಳ ಕಾಲ ಒಟ್ಟಿಗೆ ಪ್ರವಾಸ ಮಾಡಿದ್ದಾರೆ. ಹಾಗಾಗಿ ಅವರ ಬರವಣಿಗೆಗಳಲ್ಲಿ ಸಮಾನ ಅಂಶಗಳಿವೆ. ಆದರೆ ಈ ಇಬ್ಬರಲ್ಲಿಯೂ 'ಪ್ರವಾಸಿ'ಗೆ ಇರಬೇಕಾದ ಕುತೂಹಲ, ತಾಳ್ಮೆ, ಕಷ್ಟಸಹಿಷ್ಣುತೆಯು ಜೊತೆಗೆ ಪ್ರಾಮಾಣಿಕತೆಯೂ ಇದೆ.

'ಇದನ್ನು ನಾನು ಕಂಡಿದ್ದೇನೆ. ಇದನ್ನು ನಾನು ಕೇಳಿದ್ದೇನೆ' 'ನಾನು ಕೇಳಿದ ಕತೆಯನ್ನು ಕೇಳಿದಂತೆ ಹೇಳಿದ್ದೇನೆ' ಎನ್ನುವ ಮಾತುಗಳಲ್ಲಿ ಇವರು ಎಷ್ಟರ ಮಟ್ಟಿಗೆ. ನೈಜ ಸಂಗತಿಗಳನ್ನು ಹೇಳುತ್ತಿದ್ದಾರೆ ಎಂಬುದು ತಿಳಿದುಬರುತ್ತದೆ. ಬೆರ್ನ್ಯೇ ಬರಹಗಳಲ್ಲಿ ಜಸ್ವಂತಸಿಂಗ ರಣರಂಗದಲ್ಲಿ ಸೋತು ಹಿಂದಿರುಗಿ ಬಂದಾಗ ಆತನ ಹೆಂಡತಿ ಅವನ ಮುಖದರ್ಶನವನ್ನು ಮಾಡದೆ ಚಿತೆಯೇರಲು ಸಿದ್ಧಪಡಿಸಿ ಕೊಂಡ ವಿವರಗಳು ಸಾಕಷ್ಟು ಸ್ಪಷ್ಟವಾಗಿವೆ. ಟಾವರ್ನ್ಯೇನಲ್ಲಿ ಅದು "ಒಬ್ಬ ಯೋಧ ಇದ್ದ. ಅವನಿಗೊಬ್ಬಳು ಹೆಂಡತಿ. ಇಬ್ಬರೂ ಅಚ್ಚುಮೆಚ್ಚಾಗಿದ್ದರು" ಹೀಗೆ ಅಸ್ಪಷ್ಟವಾಗಿ ಮುಂದುವರಿಯುತ್ತದೆ. ಇದಕ್ಕೆ ಬೆರ್ನ್ಯೇ ಮತ್ತು ಟಾವೆರ್ನ್ಯೇ ಆ ಸಂಗತಿ ನಡೆದ ಸ್ಥಳಕ್ಕೆ ಇದ್ದ ಸಮೀಪ ಮತ್ತು ದೂರಗಳು ಕಾರಣವಾಗುತ್ತವೆ. ಇಂತಹುದೇ ಇನ್ನೊಂದು ಪ್ರಸಂಗ ಯಕ್ಷಿಣಿಯವನೊಬ್ಬ ಒಂದು ಸಣ್ಣ ಕೋಲನ್ನು ನೆಟ್ಟು ಅಲ್ಲಿ ನಿಂತಿದ್ದವನೊಬ್ಬನ ಅಪೇಕ್ಷೆಯಂತೆ ಅರ್ಧಗಂಟೆಯಲ್ಲಿ ಗಿಡದರೆಂಬೆ ಕೊಂಬೆ ಬರಿಸಿ, ಚಿಗುರು ಎಲೆ ಬರಿಸಿ, ಹೂವಾಗಿ-ಕಾಯಾಗಿ-ಹಣ್ಣಾಗುವಂತೆ ಮಾಡಿದುದನ್ನು ಆಗ್ರಾದಿಂದ ಸೂರತ್ತಿಗೆ ಬರುವಾಗ ಬ್ರೋಚ್ ಎಂಬಲ್ಲಿ ಕಂಡುದಾಗಿ ಟಾವೆರ್ನ್ಯೇ ಹೇಳುತ್ತಾನೆ. ಆದರೆ ಬೆರ್ನ್ಯೇ 'ಒಂದೇ ಒಂದು ಗಂಟೆಯಲ್ಲಿ ಮರದಕೊಂಬೆಯೊಂದು ಹೂಬಿಟ್ಟು ಕಾಯಾಗಿ ಹಣ್ಣಾಗುವಂತೆ ಮಾಡಬಲ್ಲರು' ಇವನ್ನೆಲ್ಲಾ ನಾನು ಕೇಳಿದ್ದೇನೆಯೇ ಹೊರತು ಕಣ್ಣಿಂದ ಕಾಣಲಿಲ್ಲ ಎಂದು ಹೇಳುತ್ತಾನೆ. ಹೀಗೆ ನಂಬಿಕೆಗೆ ಅರ್ಹವಾದ ಇವರ ಬರವಣಿಗೆಗಳಲ್ಲಿ ಅಂದಿನ ರಾಜಕೀಯ, ಸಾಮಾಜಿಕ, ವ್ಯಾಪಾರ ಸಾಪಾರ, ಪ್ರಾಣಿ ಪಕ್ಷಿಗಳು ಮುಂತಾದ ವಿವರಗಳು ಸಿಗುತ್ತವೆ.

ಈ ಇಬ್ಬರು ಪ್ರವಾಸಿಗರು ಭಾರತದಲ್ಲಿ ಸಂಚರಿಸುವ ಕಾಲ ಷಾಜಹಾನನ ಆಳಿಕೆ ಅಂತ್ಯಗೊಂಡು, ಆತನ ಮಕ್ಕಳಲ್ಲಿ ಸಿಂಹಾಸನಕ್ಕಾಗಿ ದಾಯಾದ್ಯ ಕಲಹ ನಡೆದು, ಔರಂಗಜೇಬ ಸಿಂಹಾಸನದ ಮೇಲೆ ಉಪಸ್ಥಿತನಾಗುವಕಾಲ. ಆ ಕಾಲದ ಪರಿಸ್ಥಿತಿ ಯಲ್ಲಿ ತಂದೆ ಮಗನನ್ನು, ಅಣ್ಣತಮ್ಮಂದಿರು ಪರಸ್ಪರರನ್ನು, ಅಳಿಯ ಮಾವನನ್ನು

ಹೀಗೆ ಯಾರು ಯಾರನ್ನೂ ನಂಬದಿರುವ ಕಾಲ. ಒಂದು ಘಟ್ಟದಲ್ಲಿ ಔರಂಗಜೇಬ ತನ್ನ ಮಗನನ್ನೆ ನಂಬದೆ ಸೊಸೆಯನ್ನು ಒತ್ತೆಯಾಳಾಗಿ ಇಟ್ಟುಕೊಂಡ, ಬೇರೆ ಯಾವುದೋ ಕಾರಣವನ್ನು ಹೇಳಿ. ಯಾರ ರಕ್ತಕ್ಕೇ ಆಗಲಿ ಯಾವ ಬೆಲೆಯೂ ಇಲ್ಲದ ಕಾಲ. ದಕ್ಷಿನ್ ಸುಮಾರು ನಲವತ್ತು ವರ್ಷಗಳ ಕಾಲ ರಣರಂಗವಾಗಿದ್ದಿತು. ಸುಮಾರು ಆರುನೂರಕ್ಕೂ ಹೆಚ್ಚು ವರ್ಷಗಳ ಕಾಲ ಯುದ್ಧವನ್ನೇ ಕಾಣದ ಅಸ್ಸಾಂ ಈ ಕಾಲದಲ್ಲಿ ರಕ್ತಪಾತಕ್ಕೆ ತುತ್ತಾಯಿತು. ಈ ಸಂದರ್ಭದಲ್ಲಿ ಬರ್ನ್ಯೇ ಕೊಡುವ ಅಂದಿನ ರಾಜಕೀಯ ಚಿತ್ರ ತುಂಬ ಸ್ಪಷ್ಟವಾಗಿದೆ. ವಸ್ತು ಸಂಗತಿಗಳನ್ನು ಕಾಲ ಹೇಗೆ ಮುಸುಕುಗೊಳಿಸುತ್ತದೆಯೋ ಹಾಗೆಯೇ ದೂರವೂ ಮುಸುಕುಗೊಳಿಸುತ್ತದೆ ಎನ್ನುವುದಕ್ಕೆ ಟಾವರ್ನ್ಯೇ ಬರೆದ ಈ ಸಂದರ್ಭದ ರಾಜಕೀಯ ಚಿತ್ರ ಸಾಕ್ಷಿ.

ಬರ್ನ್ಯೇ ತನ್ನ ಹಿತೈಷಿ ಆಗಾದನೇಪ್ ಮಂಡಖಾನನ ಮೂಲಕ, ಅರಮನೆ ಅಂತಃಪುರಗಳಲ್ಲಿ ಓಡಾಡಿದ್ದಾನೆ. ಅಲ್ಲಿಯ ವಿಚಾರಗಳನ್ನು ಕಂಡಿದ್ದಾನೆ. ಕೇಳಿದ್ದಾನೆ. ದಾರಾನ ದುಃಸ್ಥಿತಿಯಲ್ಲಿ ಆತನನ್ನು ಕಂಡಿದ್ದಾನೆ. ದಾರಾನ ಮಗ ಷಿಕೋನ ವಿಚಾರಣೆಯನ್ನು ಕಣ್ಣಾರೆ ಕಂಡಿದ್ದಾನೆ. ಅಂದಿನ ರಾಜ್ಯದಾಹದಲ್ಲಿ ಭಾಗವಹಿಸಿದ ದಾರ, ಮೊರಾದ್, ಸೂಜ, ಔರಂಗಜೇಬ ಎಲ್ಲರ ಪರಿಚಯವೂ ಈತನಿಗೆ ಇದೆ. ಔರಂಗಜೇಬ ಉಳಿದ ಸೋದರರಿಗೆ ಮಣ್ಣು ಮುಕ್ಕಿಸಿದ ರೀತಿ ರೋಮಾಂಚಕಾರಿಯಾಗಿ ಇಲ್ಲಿ ವರ್ಣಿತವಾಗಿದೆ. ತಾನು ಫಕೀರನೆಂದೂ, ತನಗೆ ಸಿಂಹಾಸನದ ಮೇಲೆ ಆಸೆಯೇ ಇಲ್ಲವೆಂದೂ, "ನನಗೆ ಮೂರಡಿ ಜಾಗ ಕೊಟ್ಟು ಫಕೀರನಂತೆ ದೇವರಧ್ಯಾನದಲ್ಲಿ ಕಾಲ ಕಳೆಯಲು ಅವಕಾಶ ಮಾಡಿಕೊಟ್ಟರೆ ಸಾಕು" ಎಂದು ಘೋಷಿಸಿದ, ನಟಿಸಿದ ಆತ ತನ್ನ ಅಣ್ಣತಮ್ಮಂದಿರ ರಕ್ತದಲ್ಲಿ ಕೈತೊಳೆದದ್ದು, ಅವರ ವಂಶದ ಒಂದು ಕುಡಿಯೂ ಉಳಿಯದಂತೆ ನೋಡಿಕೊಂಡದ್ದು ಆತನ ರಾಕ್ಷಸೀ ಮನೋಧರ್ಮವನ್ನು ಎತ್ತಿ ಹಿಡಿಯುತ್ತದೆ. ಬರ್ನ್ಯೇ ಹೇಳುವಂತೆ ಆ ಸಂದರ್ಭದಲ್ಲಿ "ಔರಂಗಜೇಬನ ತೀಕ್ಷ್ಣಬುದ್ಧಿ ಹಾಗೂ ಕಾರ್ಯಶಕ್ತಿಯನ್ನು ಯಾವುದೂ ವಿರೋಧಿಸುವಂತಿರಲಿಲ್ಲ."

ಇದು ಔರಂಗಜೇಬನ ಒಂದು ಮುಖ. ಅದೇ ಔರಂಗಜೇಬನ ಉನ್ನತ ಧ್ಯೇಯಾದರ್ಶಗಳಿಂದ ಕೂಡಿದ ಮತ್ತೊಂದು ಮುಖವೂ ಇದೆ. ಅದನ್ನು ಬರ್ನ್ಯೇ ಹೀಗೆ ವರ್ಣಿಸುತ್ತಾನೆ. ಸಿಂಹಾಸನ ಭದ್ರವಾಗುವವರೆಗೆ ಕುಟಿಲಕಾರಾಸ್ಥಾನದ ಯೋಜಕನಾಗಿದ್ದ ಔರಂಗಜೇಬ ಮುಂದೆ ನಿಜವಾಗಿಯೂ ಸಂನ್ಯಾಸಿಯಾದ. ಚಕ್ರವರ್ತಿಯಾಗಿ ಸಕಲ ಭೋಗಗಳನ್ನೂ ಅನುಭವಿಸಬಹುದಾಗಿದ್ದರೂ "ಸಿಂಹಾಸನವನ್ನೇರಿದ ದಿನದಿಂದ ಔರಂಗಜೇಬ ಮದ್ಯಮಾಂಸಗಳನ್ನು ತೊರೆದುಬಿಟ್ಟ. ಅನ್ನ ತರಕಾರಿಗಳೇ ಅವನಿಗೆ ಸಾಕಾಯಿತು. ತಾನು ಮಾಡಿದ ಪಾಪ ಕೃತ್ಯಗಳಿಗೆ ಆತ ವಿಧಿಸಿಕೊಂಡ ಶಿಕ್ಷೆ ಇದು."

ಔರಂಗಜೇಬ ತನ್ನ ಗುರು ಮುಲ್ಲಾಷಾನಿಗೆ ಹೇಳಿದ ಮಾತುಗಳು ತುಂಬ

ಮಾರ್ಮಿಕವಾಗಿವೆ. ಅದಕ್ಕೂ ಮಿಗಿಲಾಗಿ ತನಗೆ ಅಮೀರನೊಬ್ಬ "ರಾಜ್ಯದ ಕಾರ್ಯಕಲಾಪಗಳಲ್ಲಿ ಬಿಡುವಿಲ್ಲದೆ ತೊಡಗುವುದು ಆರೋಗ್ಯಕ್ಕೆ ಕೆಡುಕೆಂದೂ, ಅದರಿಂದ ಬುದ್ಧಿಶಕ್ತಿಗೆ ಅಪಾಯವೆಂದೂ ತಿಳುವಳಿಕೆ ಹೇಳಲು ಹೋದ" ಆ ಸಂದರ್ಭದಲ್ಲಿ ಅದನ್ನು ಕೇಳಿದ ಔರಂಗಜೇಬ ಮತ್ತೊಬ್ಬ ಅಮೀರನೊಂದಿಗೆ ಹೇಳಿದ ಸಂಗತಿಗಳು ಆತನ ಅಂತರಂಗವನ್ನು ತೆರೆದುತೋರುತ್ತವೆ. "ನಾನು ರಾಜನ ಮಗನಾಗಿ ಹುಟ್ಟಿ ಸಿಂಹಾಸನದ ಮೇಲೆ ಕುಳಿತಿರುವುದು 'ದುಡಿದುಬದುಕು' ಎಂಬ ದೇವರ ಉದ್ದೇಶವನ್ನು ಸಾರ್ಥಕ ಮಾಡಲು ಎಂಬುದನ್ನು. ನಾನು ಬದುಕಬೇಕಾದ್ದು ನನಗೋಸ್ಕರ ಅಲ್ಲ, ನನ್ನ ಪ್ರಜೆಗಳಿಗೊಸ್ಕರ. ಪ್ರಜೆಗಳ ಸುಖವೂ ನನ್ನ ಸುಖವೂ ಹಾಸುಹೊಕ್ಕಾಗಿರಬೇಕೇ ಹೊರತು ಅನ್ಯಥಾ ಇರಬಾರದು. ಪ್ರಜೆಗಳ ಸುಖ ಸಂತೋಷಗಳನ್ನೇ ನಾನು ಗಮನಿಸಬೇಕಾಗಿರುವುದು, ನ್ಯಾಯವನ್ನು ಎತ್ತಿ ಹಿಡಿಯುವುದ ಕ್ಕಾಗಿ, ರಾಜಾಜ್ಞೆಗಳ ಪರಿಪಾಲನೆಗಾಗಿ ಮತ್ತು ರಾಜ್ಯದ ರಕ್ಷಣೆಗಾಗಿ ಪ್ರಜೆಗಳ ಸುಖ ಸಂತೋಷಗಳನ್ನು ಬಲಿಕೊಡಬೇಕೇ ಹೊರತು, ಇನ್ನಿತರ ಕಾರಣಗಳಿಗಾಗಿ ಅಲ್ಲ." ಈ ಮಾತನ್ನು ನೋಡಿದಾಗ ಪುರಂದರದಾಸರ "ಆದದ್ದೆಲ್ಲಾ ಒಳಿತೇ ಆಯಿತು" ಎನ್ನುವ ಮಾತು ನೆನಪಿಗೆ ಬರುತ್ತದೆ.

ಅಂತಃಪುರದ ರೋಚಕ ಪ್ರಸಂಗಗಳೂ ರಾಜಕೀಯ ಚರಿತ್ರೆಯ ಜೊತೆಗೆ ಇಲ್ಲಿ ಚಿತ್ರಿತವಾಗಿದೆ. ಷಾಜಹಾನನು ತನ್ನ ಮಗಳು ರೋಷನಾರ ಬೇಗಮಳ ಪ್ರಿಯಕರನು ನೀರು ಕಾಯಿಸುವ ಹಂಡೆಯಲ್ಲಿ ಅವಿತುಕೊಂಡಿದ್ದಾಗ ಜೀವ ಸಹಿತ ಬೇಯಿಸಿದ್ದು. ಅದೇ ಬೇಗಮಳ ಇನ್ನೊಬ್ಬ ಪ್ರಿಯಕರನನ್ನು ಔರಂಗಜೇಬನ ಕಾಲದಲ್ಲಿ ಕೋಟೆಯ ಗೋಡೆಯ ಮೇಲಿನಿಂದ ಕೆಳಕ್ಕೆನೂಕಿ ಅವನ ಗತಿ ಮುಗಿಸಿದುದು. ಅಂತಃಪುರದಲ್ಲಿ ರಾಜ್ಯದಾಸೆಗಾಗಿ ಫೈಸ್ತಾಖಾನನ ಹೆಂಡತಿ ಒಂದು ತಿಂಗಳಲ್ಲಿ ತನ್ನ ಎಂಟು ಜನ ಸವತಿಯರ ಗರ್ಭಸ್ರಾವ ಮಾಡಿಸಿದುದು ಮುಂತಾದ ಸಂಗತಿಗಳು ಇಲ್ಲಿ ಸ್ಥಳ ಪಡೆದಿವೆ.

ಬೆರ್ನೈೀ ಮತ್ತು ಟಾವೆರ್ನೈೀ ಬರಹಗಳಲ್ಲಿ 'ಸಮಕಾಲಿನ ಸಾಮಾಜಿಕ ಪರಿಸ್ಥಿತಿ ಗಳು ಚಿತ್ರಿತವಾಗಿವೆ. ಬಸವಿ ಬಿಡುವುದು, ಸತಿ ಪದ್ಧತಿ, ಸೂರ್ಯಗ್ರಹಣ, ವರ್ಣಾ ಶ್ರಮ ಧರ್ಮಗಳು ಮುಂತಾದುವುಗಳ ವರ್ಣನೆ ಇದೆ. ಜಗನ್ನಾಥದೇವಸ್ಥಾನದ ರಥಕ್ಕೆ ಮೈಯೊಡ್ಡಿ ಸಾಯುವ ಭಕ್ತರ, ಜಗನ್ನಾಥನಿಗೆ ಬಿಡುವ ಬಸವಿಯರ ಪ್ರಸಂಗಗಳನ್ನು ಬೆರ್ನೈೀ, ಕ್ಯಾಂಬೆಯ ಸಮೀಪದ ದೇವಸ್ಥಾನದಲ್ಲಿ ಬಸವಿ ಬಿಡುವುದನ್ನು ಟಾವರ್ನೈೀ ವರ್ಣಿಸುತ್ತಾರೆ.

ರಾಜಾರಾಮ್ ಮೋಹನ್‌ರಾಯ್ ಮತ್ತು ಬೆಂಟಿಕ್‌ರ ಪ್ರಯತ್ನದಿಂದ ನಾಮಾವ ಶೇಷವಾದ ಸತಿಪದ್ಧತಿಗೆ ಮೊಗಲರ ಕಾಲದಿಂದಲೂ ವಿರೋಧವಿದ್ದಿತು. ಬೆರ್ನೈೀ ಕಂಡಂತೆ ಮೊಗಲರ ಕಾಲಕ್ಕಾಗಲೇ ಈ ಪದ್ಧತಿ ಕಡಿಮೆಯಾಗುತ್ತಾ ಬಂದಿತ್ತು. ಪ್ರಾಂತಾಧಿ ಕಾರಿಯ ಅನುಮತಿಯಿಲ್ಲದೆ ಯಾವ ಹೆಂಗಸೂ ಸತಿ ಹೋಗುವಂತಿರಲಿಲ್ಲ. ಮಕ್ಕಳಿಲ್ಲದ

ವಿಧವೆಯರಿಗೆ. ಒಂದು ಪಕ್ಷ ಅನುಮತಿ ಸಿಕ್ಕಿದರೂ ಮಕ್ಕಳಿದ್ದವರಿಗೆ ಖಂಡಿತ ಅನುಮತಿ ಸಿಕ್ಕುತ್ತಿರಲಿಲ್ಲ. ಸತಿ ಹೋಗುವ ಹೆಂಗಸರಿಗೆ ಅವರ ಮಕ್ಕಳಿಗೆ ಭತ್ಯಗಳನ್ನು ನೀಡುತ್ತೇವೆ ಎಂದು ಆಸೆ ಆಮಿಷಗಳನ್ನು ತೋರಿಸುತ್ತಿದ್ದರು. ಅದಕ್ಕೆ ಒಗ್ಗದಿದ್ದಾಗ ನಯಭಯಗಳ ಮೂಲಕ ಆಕೆ ಸತಿ ಹೋಗುವುದನ್ನು ತಡೆಯುತ್ತಿದ್ದರು. ಒಂದೊಂದು ವೇಳೆ ತಪ್ಪು ಅಂತಃಪುರದ ಸ್ತ್ರೀಯರಿಂದಲೂ ಹಿತವಾದಗಳನ್ನು ಹೇಳಿಸುತ್ತಿದ್ದುದು ಉಂಟು. ಆಗಾದ ನೇಷ್ ಮಂಡಟಾನನ ಗುಮಾಸ್ತ ಬೆಂದಿದಾಸನ ಹೆಂಡತಿಯನ್ನು ಹೀಗೆ ಸತಿ ಪದ್ಧತಿಯಿಂದ ಪಾರು ಮಾಡಿದ್ದಾರೆ.

ಸತಿ ಹೋಗುವ ಒಡತಿಯೊಡನೆ ಆಕೆಯ ಸೇವಕಿಯರು ಚಿತೆಗೆ ಬಿದ್ದ ಪ್ರಸಂಗಗಳಿವೆ. ಸತಿ ಬೀಳುವ ಹೆಂಗಸಿನ ಮೂಲಕ ಈಗಾಗಲೇ ಸತ್ತಿರುವ ಬಂಧುಗಳಿಗೆ ಕಾಗದ ಪತ್ರಗಳನ್ನು, ಹಣ್ಣು ಹಂಪಲುಗಳನ್ನು, ತಿಂಡಿತಿನಿಸುಗಳನ್ನು ಕಳಿಸುತ್ತಿದ್ದುದೂ ಉಂಟು. ಅನೈತಿಕ ಪ್ರಣಯದಲ್ಲಿ ತೊಡಗಿದವಳೊಬ್ಬಳು ತನ್ನ ಗಂಡನಿಗೆ ವಿಷವಿಕ್ಕಿ ಕೊಂದಳು. ಪ್ರಿಯಕರನನ್ನು ಓಡಿ ಹೋಗೋಣವೆಂದು ಪುಸಲಾಯಿಸಿದಳು. ಆತ ಒಪ್ಪಲಿಲ್ಲ. ಸತಿಗೆ ಸಿದ್ಧಳಾದ ಆಕೆ ಅದನ್ನು ನೋಡುತ್ತಾ ನಿಂತಿದ್ದ ತನ್ನ ಪ್ರಿಯಕರನನ್ನು ಆತನಿಗೆ ತಿಳಿಯದಂತೆ ಎಳೆದುಕೊಂಡು ಚಿತೆಗೆ ಬಿದ್ದಳು. ಈ ಪ್ರಸಂಗ ಆಗಿನ ಕಾಲಕ್ಕೆ ಕಿವಿಯಿಂದ ಕಿವಿಗೆ ಹಬ್ಬಿ ಯೂರೋಪನ್ನೂ ತಲುಪಿದಂತೆ ಕಾಣುತ್ತದೆ. ದೃಢ ಮನಸ್ಸಿನಿಂದ ಚಿತೆಗೆ ಬೀಳುವ ಸ್ತ್ರೀಯರ ಚಿತ್ರಣಗಳಂತೆಯೇ ಮಸಣದ ಸೇವಕರ ಸಹಾಯದಿಂದ ತಪ್ಪಿಸಿಕೊಂಡ ಸ್ತ್ರೀಯರ ಚಿತ್ರಗಳೂ ಇಲ್ಲಿವೆ. ಕೆಲವು ಕಡೆ ಸತಿ ಹೋಗುವ ಹೆಂಗಸನ್ನು ಸುಡುವ ಬದಲು ಜೀವಸಹಿತ ಹೂಳುತ್ತಿದ್ದುದೂ ಉಂಟು. ಸತಿ ಹೋಗುವುದಕ್ಕೆ ಬ್ರಾಹ್ಮಣರು ಪ್ರೇರೇಪಿಸುತ್ತಿದ್ದರೆಂದೂ ಇದಕ್ಕೆಲ್ಲ ಕಾರಣ ಸತಿ ಹೋಗುವ ಹೆಂಗಸರ ಮೈಮೇಲಿನ ಚಿನ್ನದ ಆಭರಣಗಳೆಲ್ಲ ತಮಗೆ ದೊರೆಯುತ್ತಿದ್ದುದೇ ಕಾರಣವೆಂದೂ ಈ ಪ್ರವಾಸಿಗರು ತಿಳಿಸಿದ್ದಾರೆ. ಬರ್ನ್ಯೇ ಅಂತೂ ತಾನು ಕಂಡ ಒಂದು ಸಹಗಮನವನ್ನು ಕುರಿತು ಬರೆಯುವಾಗ "ಈ ದೃಶ್ಯವನ್ನು ನಾನು ಹೇಗೆ ವರ್ಣಿಸಬೇಕೊ ಕಾಣೆ—ಲೇಖನಿಯಾಗಲಿ ಅಥವಾ ಬಣ್ಣದ ಕುಂಚವಾಗಲಿ ಆ ಅಪೂರ್ವ ಘಟನೆಯನ್ನು ಚಿತ್ರಿಸಲಾರದು ಎಂದು ವ್ಯಥೆ ಪಡುತ್ತೇನೆ. ಅದರ ನೆನಪು ಇನ್ನೂ ನನ್ನಲ್ಲಿ ಹಸಿಹಸಿಯಾಗಿದೆ ; ನಿನ್ನೆ ಮೊನ್ನೆ ಕಂಡೆನೋ ಎಂಬ ಭಾವನೆ ಬರುತ್ತಿದೆ. ಆ ಕರಾಳ ವಾಸ್ತವ ಘಟನೆ ಘೋರ ಸ್ವಪ್ನವೆಂದು ಭಾವಿಸಲು ನಾನು ಶತಪ್ರಯತ್ನ ಮಾಡುತ್ತಿದ್ದೇನೆ"

ಭಾರತೀಯರ ಸಂಪ್ರದಾಯಗಳನ್ನು ಕುರಿತು ಹೇಳುವಾಗ ಹಲವು ಸಂಗತಿಗಳನ್ನು ಬೊಟ್ಟುಮಾಡಿ ತೋರಿಸುತ್ತಾನೆ. ಅವರ ಮೌಢ್ಯಕ್ಕೆ ಮರುಗುತ್ತಾನೆ. ಆತನ ಕ್ರೈಸ್ತ ಮತಾಭಿಮಾನ ಇಲ್ಲಿ ಹಣಕಿಹಾಕುತ್ತದೆ. ಟಾವರ್ನ್ಯೇ ವರ್ಣಾಶ್ರಮ ಧರ್ಮಗಳ ವಿವರಗಳನ್ನು ನೀಡುವುದಲ್ಲದೆ "ಇಂಡಿಯಾದಲ್ಲಿ ಎಂಟು ಲಕ್ಷ ಮಹಮ್ಮದೀಯ ಫಕೀರರೂ, ಹನ್ನೆರಡು ಲಕ್ಷ ವಿಗ್ರಹಾರಾಧಕ ಗೋಸಾಯಿಗಳೂ ಇದ್ದಾರೆಂದು ಅಂದಾಜು

ಮಾಡಲಾಗಿದೆ” ಎಂದು ತಿಳಿಸುತ್ತಾನೆ. ಅವರ ಲೋಪದೋಷಗಳ ವಿವರಗಳನ್ನು ನೀಡುತ್ತಾನೆ. ಬೆರ್ನ್ಯೇ ಚಂದ್ರನ ಕಾಮನಬಿಲ್ಲನ್ನು ಕಂಡಿದ್ದಾನೆ. ಸೂರ್ಯಗ್ರಹಣದ ಬಗ್ಗೆ ಟಾವರ್ನ್ಯೇ ಮತ್ತು ಬೆರ್ನ್ಯೇ ಇಬ್ಬರೂ ಮಾಹಿತಿಗಳನ್ನು ನೀಡಿದ್ದಾರೆ. ಟಾವರ್ನ್ಯೇ “ಸೂರ್ಯಗ್ರಹಣವಾಗಲಿ, ಚಂದ್ರಗ್ರಹಣವಾಗಲಿ. ಎಲ್ಲರೂ ಮನೆಯಲ್ಲಿರುವ ಮಡಕೆ ಕುಡಿಕೆಗಳನ್ನು ಒಂದೂ ಬಿಡದಂತೆ ಒಡೆದುಹಾಕಬೇಕು. ಆಗ ಇಡೀ ಊರಿನಲ್ಲೆಲ್ಲಾ ಮಡಕೆ ಒಡೆಯುವ ಲಟಪಟ ಶಬ್ದ” ಎಂದು ತಾನು ಕಂಡ ಸೂರ್ಯಗ್ರಹಣದ ಆಚರಣೆಯನ್ನು ತಿಳಿಸುತ್ತಾನೆ. ಆದರೆ ಈ ಸಂದರ್ಭಕ್ಕೆ ಸೇರಿದಂತೆ ಬೆರ್ನ್ಯೇ ತಾನು 1654ರಲ್ಲಿ ಫ್ರಾನ್ಸ್‌ನಲ್ಲಿ ಕಂಡ ಸೂರ್ಯಗ್ರಹಣ ಮತ್ತು 1666 ರಲ್ಲಿ ದಿಲ್ಲಿಯಲ್ಲಿ ಕಂಡ ಸೂರ್ಯಗ್ರಹಣಗಳನ್ನು ವರ್ಣಿಸಿದ್ದಾನೆ. ಫ್ರಾನ್ಸ್‌ದೇಶದಲ್ಲಿ ಸೂರ್ಯಗ್ರಹಣವಾಗುವಾಗ ಅಲ್ಲಿನ ಜನ ವರ್ತಿಸಿದ ರೀತಿಯನ್ನು ನೋಡಿ—“ಮೊದಲ ಗ್ರಹಣದ ದೃಶ್ಯ ನನ್ನ ಕಣ್ಣಿಗೆ ಕಟ್ಟಿದಂತಿದೆ ಏಕೆಂದರೆ ಆಗ ಮಕ್ಕಳಂತೆ ಸುಲಭವಾಗಿ ನಂಬುವ ಫ್ರೆಂಚ್ ಜನರ ಸ್ವಭಾವವನ್ನು ಕಂಡೆ. ಅವರ ಹೆದರಿಕೆಗೆ ಆಧಾರವಾಗಲೀ ಸಕಾರಣವಾಗಲೀ ಇರಲಿಲ್ಲ. ಜನರು ಎಷ್ಟೊಂದು ಹೆದರಿಬಿಟ್ಟಿದ್ದಾರೆಂದರೆ, ಕೆಲವರು ಸೂರ್ಯಗ್ರಹಣದಿಂದಾಗುವ ಅಪಾಯದ ನಿವಾರಣೆಗೆ ಔಷಧಿ ತೆಗೆದುಕೊಂಡರು ; ಕೆಲವರು ಮನೆಯ ಕಿಟಕಿ ಬಾಗಿಲುಗಳನ್ನು ಮುಚ್ಚಿಕೊಂಡು ಒಂದಿಷ್ಟೂ ಬೆಳಕು ಬಾರದಂತಹ ಕೋಣೆಗಳಲ್ಲೋ ನೆಲಮಾಳಿಗೆಗಳಲ್ಲೋ ಸೇರಿಕೊಂಡರು ; ಸಾವಿರಾರು ಜನ ಅವರವರ ಚರ್ಚುಗಳಲ್ಲಿ ಗುಂಪುಗುಂಪಾಗಿ ಸೇರಿಕೊಂಡರು ; ಕೆಲವರು ಗ್ರಹಣದಿಂದ ಬಹು ಅಪಾಯದ ಪರಿಣಾಮಗಳಾಗುತ್ತವೆಯೆಂದು ಹೆದರಿದರು ; ಮತ್ತೆ ಕೆಲವರು ಪ್ರಪಂಚದ ಕೊನೆ-ಪ್ರಳಯ ಕಾದಿದೆಯೆಂದೇ ಭಾವಿಸಿದರು ; ಈ ರೀತಿಯ ನಮ್ಮ ದೇಶದ ಜನ ಅಸಂಗತ ಭಾವನೆಗಳನ್ನು ಹೊಂದಿದ್ದರು.” ಇದೇ ರೀತಿಯ ಮಾನವ ಸಹಜ ಆಚರಣೆಗಳನ್ನು ದೆಹಲಿಯಲ್ಲಿ ತನ್ನ ನಿವಾಸದ ಮಾಳಿಗೆಯ ಮೇಲೆ ನಿಂತು ಬೆರ್ನ್ಯೇ ಕಂಡಿದ್ದಾನೆ. ಅಷ್ಟೇ ಅಲ್ಲ ಅದರ ಕಾರಣಗಳನ್ನೂ ಸಂಗ್ರಹಿಸಿ ತಿಳಿಸಿದ್ದಾನೆ. ಹೀಗೆಯೇ ಬ್ರಾಹ್ಮಣೇತರನೊಬ್ಬ ಅಕಸ್ಮಾತ್ ಕೊಳದಲ್ಲಿ ಸ್ನಾನ ಮಾಡಿದರೆ ಇಡೀ ಕೊಳದ ನೀರನ್ನು ಹೊರಕ್ಕೆ ತೆಗೆದುಹಾಕುವುದನ್ನೂ ಬೆರ್ನ್ಯೇ ಗಮನಿಸಿದ್ದಾನೆ.

ಬೆರ್ನ್ಯೇ ಮತ್ತು ಟಾವರ್ನ್ಯೇ ಇಬ್ಬರೂ ತಮ್ಮ ಕಾಲದ ಆರ್ಥಿಕ ಸ್ಥಿತಿಗತಿಗಳನ್ನು ಚಿತ್ರಿಸುತ್ತಾರೆ. ಟಾವರ್ನ್ಯೇ ಪ್ರಧಾನವಾಗಿ ವ್ಯಾಪಾರಿ. ಆತ ಅಂದು ನಡೆಯುತ್ತಿದ್ದ ಮುತ್ತುರತ್ನಗಳ ವ್ಯಾಪಾರ, ಸಂಬಾರ ಪದಾರ್ಥಗಳ ವಿವರಗಳನ್ನು ನೀಡಿದ್ದಾನೆ. ಬೆರ್ನ್ಯೇ ಆದರೋ ಅಂದಿನ ಕಾಲದಲ್ಲಿದ್ದ ಅಮೀರ ಪದ್ಧತಿಯನ್ನು, ಅದರ ಲೋಪದೋಷಗಳನ್ನು ವರ್ಣಿಸಿದ್ದಾನೆ. ಫ್ರಾನ್ಸಿನ ಡ್ಯೂಕ್‌ಡಮ್ ಮತ್ತು ಮಾರ್ಕ್ವಿಸೇಟ್ ಪದವಿಗಳೊಡನೆ ಇಲ್ಲಿನ ಅಮೀರರ ಪದವಿಗಳನ್ನು ತುಲನಾತ್ಮಕವಾಗಿ ಅಭ್ಯಾಸಮಾಡಿ

ದ್ದಾನೆ." ರಾಜನೇ ಭೂಮಿಗೆ ಒಡೆಯ ಎನ್ನುವ ತತ್ವಕ್ಕೆ ಆತ ವಿರೋಧಿ. "ಖಾಸಗಿ ಆಸ್ತಿ ಇಲ್ಲದಿದ್ದರೆ ರಾಜನ ಹಿತಕ್ಕೆ ಧಕ್ಕೆ, ಇಂದು ದುಡಿದದ್ದು ನಾಳೆ ಇನ್ನೊಬ್ಬನ ಬಾಯಿಗೆ ಹೋಗುವುದಾದರೆ ನಾವೇಕೆ ದುಡಿಯಬೇಕು . . . ಆಸ್ತಿಯ ಮೇಲಿನ ಒಡೆತನವೇ ಪ್ರಪಂಚದ ಒಳ್ಳೆಯ ಹಾಗೂ ಉಪಯುಕ್ತವಾದ ಸಂಪತ್ತಿನ ಮೂಲ" ಮುಂತಾದ ಹೇಳಿಕೆಗಳನ್ನು ನೀಡುತ್ತಾನೆ. ಅಂದಿನ ಕಾಲದಲ್ಲಿದ್ದ "ಬರಾತ್" ಎಂದರೆ ಎಷ್ಟು ದುಡ್ಡು ಕೊಡಬೇಕೆಂಬ ಆಜ್ಞಾಪತ್ರ ಪ್ರಚಲಿತವಿದ್ದುದನ್ನು ತಿಳಿಸಿದ್ದಾನೆ. ಹೆಂಡದ ಮೇಲೆ ತೆರಬೇಕಾದ ತೆರಿಗೆಯಿಂದ ರಾಜನಿಗೆ ತುಂಬಾ ಆದಾಯವುಂಟು ಎಂದು ಟಾವರ್‌ನ್ಯೇ ಹೇಳಿದ್ದಾನೆ. ಬೆರ್‌ನ್ಯೇ ಪ್ರಕಾರ ಪ್ರಪಂಚದಲ್ಲೆಲ್ಲಾ ಸುತ್ತಾಡಿದ ಚಿನ್ನ ಬೆಳ್ಳಿಗಳು ಕೊನೆಗೆ ಹಿಂದೂಸ್ಥಾನದಲ್ಲಿ ನೆಲೆಯಾಗಿ ನಿಲ್ಲುತ್ತವೆ.

ಮೊಗಲರ ಕಾಲದ ಮಹೋನ್ನತ ಶಿಲ್ಪಕಲಾ ವೈಭವದ ಸಾಕ್ಷಿಯಾಗಿ ನಿಂತಿರುವ ತಾಜಮಹಲನ್ನು ಕಟ್ಟಲು 22 ವರ್ಷಗಳ ಕಾಲ ಪ್ರತಿದಿವಸ 22,000 ಜನರು ದುಡಿದುದನ್ನು ಟಾವರ್‌ನ್ಯೇ ತಿಳಿಸಿದ್ದಾನೆ. ಪರ್ಷಿಯಾ ರಾಯಭಾರಿ ಇಂಡಿಯಾದಿಂದ ತೆಗೆದುಕೊಂಡುಹೋಗಿದ್ದ ಉಷ್ಟ್ರಪಕ್ಷಿಯ ಮೊಟ್ಟೆಯಷ್ಟು ಗಾತ್ರದ ಚಿಪ್ಪಿಗೆ ಮುತ್ತುರತ್ನಗಳಿಂದ ಅಲಂಕರಿಸಿದ್ದುದು, ಅದರೊಳಗಿನಿಂದ 60 ಮಾರು ರುಮಾಲನ್ನು ಎಳೆದುದನ್ನು ಟಾವರ್‌ನ್ಯೇ ತಿಳಿಸುತ್ತಾನೆ. "ಏಳು ವರ್ಷಗಳ ಸತತ ಶ್ರದ್ಧೆಯಿಂದ ಗುರಾಣಿಯ ಮೇಲೆ ಅಕ್ಬರನ ಸಾಹಸಗಳನ್ನು ಚಿತ್ರಿಸಿರುವ ಒಬ್ಬ ಹೆಸರಾಂತ ಕಲಾವಿದನ ಅದ್ಭುತ ಕಲೆಗೆ ನಾನು ತಲೆದೂಗಿದ್ದೇನೆ" ಎಂದು ಬೆರ್‌ನ್ಯೆ ಹೇಳಿದ್ದಾನೆ. ಭಾರತೀಯ ಕಲೆ ಹೀಗೆ ನಿಪುಣವಾಗಿ ಅಚ್ಚರಿಯಾಗಿ ಇದ್ದರೂ ಕಲಾವಿದರ ಪರಿಸ್ಥಿತಿ ಶೋಚನೀಯವಾಗಿದ್ದಿತು. ಆ ಬಗ್ಗೆ ಬೆರ್‌ನ್ಯೇ ದುಃಖಿಸಿದ್ದಾನೆ. ಆತ ಕಂಡಂತೆ "ಅಮೀರರು ಮತ್ತು ಮನ್ಸಬ್‌ದಾರರು ತಮಗೆ ಕುಶಲ ಕೆಲಸಗಾರನಿಂದ ಏನಾದರೂ ಆಗಬೇಕಾದರೆ ಆತನನ್ನು ಕರೆತರಲು ಬಜಾರಿಗೆ ಕಳುಹಿಸುತ್ತಾರೆ. ಒಳ್ಳೆ ಮಾತಿಗೆ ಆತ ಬಂದರೆ ಸರಿ. ಇಲ್ಲವಾದರೆ ಒದ್ದು ಹಿಡಿದು ಕೊಂಡು ಬರುತ್ತಾರೆ. ಅವನಿಂದ ಬೇಕಾದ ಕೆಲಸ ಮಾಡಿಸಿಕೊಂಡು, ನಿಷ್ಕರುಣೆಯಾದ ಯಜಮಾನರು ಅವನ ಕೆಲಸಕ್ಕೆ ತಕ್ಕ ಕೂಲಿ ಕೊಡದೆ, ತಮ್ಮದೇ ಆದ ಲೆಕ್ಕಾಚಾರ ಮಾಡಿ, ಒಂದಿಷ್ಟು ದುಡ್ಡು ಕೈಗೆ ಹಚ್ಚಿ ಕಳುಹಿಸಿಬಿಡುತ್ತಾರೆ. ಸದ್ಯ ಕೊರಡೆ ಏಟು ಬೀಳಲಿಲ್ಲವಲ್ಲ ಎಂದು ಕೆಲಸಗಾರ ಸಮಾಧಾನಪಟ್ಟುಕೊಳ್ಳಬೇಕು ! ಹೀಗಿರುವಾಗ ಕುಶಲ ಕೆಲಸಗಾರನಾಗಲಿ ಅಥವಾ ಸಾಮಾನು ತಯಾರಿಸುವವನಾಗಲಿ ಯಾವ ಉತ್ತೇಜನದಿಂದ ಕೆಲಸ ಮಾಡಬೇಕು."

ಬೆರ್‌ನ್ಯೆ ಮತ್ತು ಟಾವರ್‌ನ್ಯೇ ಚಿತ್ರಿಸುವ ಪ್ರಾಣಿ ಪ್ರಪಂಚ ತುಂಬ ರೋಮಾಂಚಕವಾದುದು. ತನಗೆ ಆಗದವರನ್ನು 'ಮಸ್ತ್‌ನಲ್ಲಿದ್ದ ಆನೆ'ಯನ್ನು ಬಿಟ್ಟು ಕೊಲ್ಲುವ ಒಳಸಂಚು ಒಂದು ಕಡೆಯಾದರೆ, 'ಮಸ್ತ್‌ನಲ್ಲಿದ್ದ ಆನೆ'ಯ ಮೇಲಿನ ಒಡೆಯನನ್ನು ಕಾಪಾಡುವ ಸಲುವಾಗಿ ಆ ಆನೆಗೆ ಬಲಿಯಾದ ಮಾವಟಿಗನ ಚಿತ್ರ ಮತ್ತೊಂದು ಕಡೆ

ಸುಳಿಯುತ್ತದೆ. ಆನೆಯನ್ನು ಹಿಡಿಯಲು ಪ್ರಯತ್ನಿಸಿದಾಗ ತಪ್ಪಿಸಿಕೊಂಡ ಆನೆ ಅಪಾಯದಿಂದ ಪಾರಾಗಲು ಮರದ ದೊಡ್ಡರೆಂಬೆಯನ್ನು ಹಿಡಿದುಕೊಂಡು ನೆಲ ಬಡಿಯುತ್ತಾ ಬರುವುದರ ವಿವರಗಳಿವೆ. ಕಾಶ್ಮೀರದ ಕಣಿವೆಯಲ್ಲಿ ಸತ್ತ 16 ಆನೆಗಳು, ಆನೆ ಮಲಗಿದರೆ ಮೇಲೆ ಏಳುವುದಿಲ್ಲ ಎನ್ನುವ ಮಾತು ಸುಳ್ಳು ಎನ್ನುವ ಹೇಳಿಕೆಗಳು ಅಲ್ಲಲ್ಲಿ ಕಂಡುಬರುತ್ತವೆ. ಒಂದು ರಸ್ತೆಯ ಆಚೆ ಈಚೆ ಬದಿಯಲ್ಲಿದ್ದ ಎರಡು ಗುಂಪಿನ ಕೋತಿಗಳ ವೈರ, ಅವುಗಳು ಕೋಲು ಹಿಡಿದು ಹೊಡೆದಾಡುವುದನ್ನು ಟಾವರ್‌ನ್ಯೇ ವರ್ಣಿಸುತ್ತಾನೆ. ಡಚ್ ಸೈನಿಕನೊಬ್ಬ ಕೋತಿಯನ್ನು ಗುಂಡಿಟ್ಟು ಕೊಂದಾಗ ಬಂಡೆದ್ದ ಭಾರತೀಯರ ಪ್ರಸಂಗವೂ ಇಲ್ಲಿದೆ. ಇವೇ ಅಲ್ಲದೆ ಭಾರತದ ಮರಗಿಡಗಳು, ಹಣ್ಣು ಹಂಪಲುಗಳ ವಿವರಗಳೂ ದೊರೆಯುತ್ತವೆ. ಬೇಸಗೆಯಲ್ಲಿ ಉತ್ತರ ಭಾರತೀಯರು ಹಣ್ಣುಗಳ ಮೇಲೆ ಖರ್ಚುಮಾಡುವ ಸಂಗತಿಗಳನ್ನು ಬೆರ್‌ನ್ಯೇ ಹೇಳಿದ್ದಾನೆ. ಕರಬೂಜದ ಹಣ್ಣಿನ ಬಗ್ಗೆ ಅವನ ಅನಿಸಿಕೆ ಹೀಗಿದೆ–"ಒಂದು ಕರಬೂಜ ಹಣ್ಣಿಗೆ ಒಂದೂವರೆ ಕ್ರೌನ್‌ಗಳಷ್ಟು ಬೆಲೆ ! ಆದರೆ ತಿಂದರೆ ಈ ಹಣ್ಣು ತಿನ್ನಬೇಕು."

ತನ್ನ ಪ್ರವಾಸ ಕಾಲದಲ್ಲಿ ಕಂಡ ಪಟ್ಟಣಗಳ ಅಧ್ಯಯನವನ್ನು ನಡೆಸಿ, ಆಗ್ರಾ ಮತ್ತು ಕಾನ್‌ಸ್ಟಾಂಟಿನೋಪಲ್‌ಗಳ ಬಗ್ಗೆ ಹೇಳಿದಮೇಲೆ ಬೆರ್‌ನ್ಯೇ "ಪ್ಯಾರಿಸ್ಸಿನ ಬಗ್ಗೆ ಯಾವ ಪಕ್ಷಪಾತವೂ ಇಲ್ಲದೆ ಹೇಳಬಲ್ಲೆ. ಅದು ಪ್ರಪಂಚದಲ್ಲೇ ಅತಿಸುಂದರವಾದ, ಅತಿ ಶ್ರೀಮಂತವಾದ ಮತ್ತು ಒಟ್ಟಿನಲ್ಲಿ ಪ್ರಥಮದರ್ಜೆಯನಗರ" ಎಂದು ಫ್ರಾನ್ಸ್ ನಿವಾಸಿಯೊಬ್ಬನಿಗೆ ಪತ್ರಬರೆದಿದ್ದಾನೆ. ಅಷ್ಟೇ ಅಲ್ಲ ಅಲ್ಲಿನ ಹವಾಮಾನಕ್ಕೆ ತಕ್ಕಂತೆ ಅಲ್ಲಿನ ಕಟ್ಟಡಗಳ ರಚನೆ ಇದೆ, ಇಲ್ಲಿನ ಹವಾಮಾನಕ್ಕೆ ಅನುಗುಣವಾಗಿ ಇಲ್ಲಿನ ಕಟ್ಟಡಗಳ ರಚನೆ ಇದೆ ಎಂದು ಅಭಿಪ್ರಾಯ ಪಡುತ್ತಾನೆ. ಇಲ್ಲಿನ ಹವಾಮಾನ, ಮಳೆಗಳ ಬಗ್ಗೆಯೂ ತನ್ನ ಅನುಭವಗಳನ್ನು ಚಿತ್ರಿಸಿದ್ದಾನೆ.

ಇವೇ ಅಲ್ಲದೆ ಭಾರತೀಯರಿಗೆ ಕೂಡ ಅಚ್ಚರಿಯನ್ನು ನೀಡಬಹುದಾದ ಅಸ್ಸಾಂನ ಜನರು ನಾಯಿಮಾಂಸ ತಿನ್ನುತ್ತಾರೆ, ಸಯಾಂನ ರಾಜನಿಗೆ ಕ್ಷೌರಮಾಡುವವನು ಹಜಾಮನಲ್ಲ ಆತನ ಹೆಂಡಿರಲ್ಲಿ ಒಬ್ಬಳು, ಇವರಿಗೆ ಚಮಚಗಳ ಉಪಯೋಗ ಗೊತ್ತಿಲ್ಲ. ಫಕೀರರ ಮೂಲ ಪುರುಷರಾವಣ, ಒಂದೇ ಗಂಟೆಯಲ್ಲಿ ಬೇಸಗೆ ಮತ್ತು ಚಳಿಗಾಲ ಎರಡನ್ನೂ ಅನುಭವಿಸಿದ್ದು, ಇನ್ನೂರು ದಾಪುಗಳಷ್ಟು ಅಂತರದಲ್ಲಿ ಗಾಳಿ ಎದುರು ಬದುರಾಗಿ ಬೀಸುತ್ತಿದ್ದುದು, ಕರಿಯ ಶ್ರೀಮಂತರು ಕಾಲಚೀಲಗಳನ್ನು ಧರಿಸಲು ಪೋರ್ಚುಗೀಸರಿಗೆ ಹಣಕೊಡಬೇಕಾಗಿ ಬರುತ್ತಿದ್ದುದು, ಮಿರ್ ಜುಮ್ಲಾನ ಬಳಿಯಿದ್ದ ವಜ್ರಗಳ ಲೆಕ್ಕವನ್ನು ಒಂದು ಎರಡೆಂದು ಎಣಿಸದೆ ಇಷ್ಟು ಭರ್ತಿಚೀಲಗಳೆಂದು ಲೆಕ್ಕ ಹಾಕುತ್ತಿದ್ದುದು, ಕಾಗದವನ್ನು ಕೈಗೆ ಕೊಡುವುದು ಅಪಶಕುನ ಎನ್ನುವ ನಂಬಿಕೆ. ಮುಂತಾದ ಕುತೂಹಲಕರ ಸಂಗತಿಗಳ ಜೊತೆಗೆ ಇಸ್ಫಹಾನನ್ನು ನಿಮ್ಮ ದಿಲ್ಲಿಯ ಧೂಳಿಗೂ ಹೋಲಿಸಲಾಗುವುದಿಲ್ಲ ಎನ್ನುವಲ್ಲಿ ಇರುವ ವ್ಯಂಗ್ಯ, ಮೊಗಲ್ ಸಾಮ್ರಾಜ್ಯ

ಹುಣ್ಣಿಮೆಯ ಚಂದಿರನಂತಿದ್ದರೆ, ಪರ್ಶಿಯಾ ಸಾಮ್ರಾಜ್ಯ ಬಿದಿಗೆಯ ಚಂದ್ರನಂತಿದೆ ಎನ್ನುವಲ್ಲಿ ಇರುವ ಧ್ವನಿ, ಬ್ರಾಹ್ಮಣನೊಬ್ಬ ಆಗಾದನೇಷ್‌ಮಂದ್‌ಖಾನನ ಕುದುರೆಯನ್ನು ಹಿಡಿದರೆ ಭೂಮಿ ನಡುಗುತ್ತದೆ ಎಂದಾಗ ಆತ ಆದ್ದರಿಂದಲೇ ನಾನು ಪಲ್ಲಕ್ಕಿಯನ್ನು ಏರುತ್ತೇನೆ ಎನ್ನುವಲ್ಲಿ ಇರುವ ಹಾಸ್ಯ, ತಂದೆ ಸತ್ತಾಗ ಮಗ ತಾಯಿಯೊಡನೆ ಆಸ್ತಿಗೆ ಜಗಳವಾಡಿದಾಗ ಷಾಜಹಾನ ಆ ಆಸ್ತಿಯನ್ನು ವಶಪಡಿಸಿಕೊಳ್ಳಲು ಯತ್ನಿಸಿದಾಗ ಆತನ ತಾಯಿ ಆತನೇನೋ ನನ್ನ ಮಗ ಆಸ್ತಿಗೆ ಹಕ್ಕು ಕೇಳುವುದು ಸರಿ ನೀನು ನನ್ನ ಗಂಡನಿಗೆ ಏನಾಗಬೇಕು ಎಂದು ಪ್ರಶ್ನಿಸಿದಾಗ ಷಾಜಹಾನ ನಕ್ಕು ಆ ಸಮಯದಲ್ಲಿ ತೋರಿದ ಔದಾರ್ಯ ಮುಂತಾದ ಸಂಗತಿಗಳಿಂದ ಕೂಡಿ ಬರ್‌ನ್ಯೇ ಮತ್ತು ಟಾವರ್‌ನ್ಯೇ ಬರಹಗಳು ರೋಚಕವಾಗಿವೆ.

ಒಂದು ಮಾತಿನಲ್ಲಿ ಹೇಳುವುದಾದರೆ ಟಾವರ್‌ನ್ಯೇ ಬರಹಗಳಿಗಿಂತ ಬರ್‌ನ್ಯೇ ಬರಹಗಳು ಹೃದಯಸ್ಪರ್ಶಿಯಾಗಿವೆ. ಆತ ಇತಿಹಾಸವನ್ನು ಚಿತ್ರಿಸುವಲ್ಲಿ, ಸಂಪ್ರದಾಯಗಳನ್ನು ಗಮನಿಸುವಲ್ಲಿ, ತನ್ನ ದೇಶ ಮತ್ತು ಭಾರತದ ಕುರಿತಾದ ಹೋಲಿಕೆಯಲ್ಲಿ, ತಾನು ಕಂಡ ಜನರ ಸ್ವಭಾವ ಚಿತ್ರಣವನ್ನು ನೀಡುವಲ್ಲಿ ತುಂಬ ಮುತುವರ್ಜಿಯನ್ನು ವಹಿಸಿದ್ದಾನೆ. ಹಾಗಾಗಿಯೇ ಕಾಬೂಲಿನ ಸುಲ್ತಾನ ಮೊಹಬತ್‌ಖಾನ, ದನೇಷ್‌ಮುಂಡಖಾನ, ಷೈಸ್ತಾಖಾನ, ಶಿವಾಜಿ ಮುಂತಾದವರ ಸಂಗತಿಗಳನ್ನು ಚಿತ್ರಿಸುವಾಗ ತುಂಬ ಯಶಸ್ವಿಯಾಗಿದ್ದಾನೆ.

ಪ್ರವಾಸ ಸಾಹಿತ್ಯ ಒಂದು ರೀತಿಯಲ್ಲಿ ರೇಡಿಯೋ ನಾಟಕ ಇದ್ದಂತೆ. ರೇಡಿಯೋ ನಾಟಕದಲ್ಲಿ ದೃಶ್ಯಕ್ಕೆ ಆಸ್ಪದವಿಲ್ಲದೆ ಪ್ರತಿಯೊಂದನ್ನೂ ಶಬ್ದದ ಮೂಲಕವೇ ಸ್ಫುರಿತಪಡಿಸಬೇಕು. ಹಾಗೆಯೇ ತಾನು ಕಂಡು ಕೇಳದ ದೇಶದ ಸಂಗತಿಗಳನ್ನು ತಿಳಿಯುವಲ್ಲಿ ಪ್ರವಾಸ ಸಾಹಿತ್ಯದ ಓದುಗನೂ ಕೂಡ ಶಬ್ದಗಳಿಗೆ ಮೊರೆ ಹೋಗಬೇಕು. ಬರ್‌ನ್ಯೆ ವೀಳ್ಯದೆಲೆಯ ಬಗ್ಗೆ ತಿಳಿಸುವ ಸಂದರ್ಭದಲ್ಲಿ ಬರೆಯುವ "ಬೆಟ್ಲ್ ಎಂದರೆ ಅದು-ಇದು ವಸ್ತುಗಳನ್ನು ಹಾಕಿ ಸಿದ್ಧಮಾಡಿದ ಮೇಲೆ ತುರ್ಕಿಯಲ್ಲಿ ಕಾಫಿ ಕೊಟ್ಟಂತೆ ರಾಜಮರ್ಯಾದೆಯಾಗಿ ಕೊಡುವ ಒಂದು ತರಹ ಎಲೆ. ಇದನ್ನು ಅಗಿದಾಗ ಬಾಯಿ ಸುವಾಸನೆಯಾಗುತ್ತದೆ ಮತ್ತು ತುಟಿ ಕೆಂಪಾಗುತ್ತದೆ." ಇಷ್ಟಲ್ಲ ಇನ್ನೇನು ಬರೆದರೆ ತಾನೆ ವೀಳ್ಯದೆಲೆಯ ನಿಜವಾದ ಕಲ್ಪನೆ ಮೂಡಲು ಸಾಧ್ಯ ಅದನ್ನು ನೇರವಾಗಿ ಹಾಕದೆ. ಆದುದರಿಂದಲೆ ಆತ ಆಗಾಗ ಹೇಳುತ್ತಿರುತ್ತಾನೆ. "ನಿಮ್ಮ ಕಲ್ಪನೆಗೆ ಯಾವ ಮಿತಿಯೂ ಇಲ್ಲದಿರಲಿ."

ಬರ್‌ನ್ಯೇ ಮತ್ತು ಟಾವರ್‌ನ್ಯೇ ಅವರ ಅನುಭವ ಇಷ್ಟು ಶ್ರೀಮಂತವಾಗಲು ಅವರು ಪಟ್ಟ ಪಾಡುಗಳು ಅಪಾರ. ಬರ್‌ನ್ಯೇ ಪ್ರಯಾಣ ಕಾಲದಲ್ಲಿ ಬೇಸರವಾದಾಗ ಹೀಗೆ ಹೇಳಿಕೊಳ್ಳುತ್ತಾನೆ. "ಈ ಬಿಸಿಲ ಬೇಗೆ ಮತ್ತು ಸಾಕು ಬೇಕಾಗಿರುವ ಹಾಗೂ ಅಪಾಯಕರವಾಗಿರುವ ನಿತ್ಯ ಯಾತ್ರೆ ಯಾರಿಗೆ ಬೇಕು ? ಏತಕ್ಕಾಗಿ ಒಬ್ಬ ಯೂರೋ

ಪಿನ ಮನುಷ್ಯ ಇದನ್ನೆಲ್ಲಾ ಅನುಭವಿಸಬೇಕು ? ಇದರಿಂದ ಯಾವ ಪುರುಷಾರ್ಥ ? ಅತಿ ಕುತೂಹಲವೋ, ಇಲ್ಲ ಹಿಂದು ಮುಂದೆ ನೋಡದೆ ಮಾಡಿದ ತಪ್ಪೋ ಕಾರಣವೆ ಇದಕ್ಕೆ ? ನಾನು ಏನೆಂದು ಹೇಳಲಿ ? ಕಷ್ಟದ ತರುವಾಯ ಸುಖ ಬರಬಹುದು." ಇದೇ ಬಗೆಯ ಅನುಭವ ಟಾವರ್‌ನ್ಯೇಗೆ ಹಡಗಿನ ಪ್ರಯಾಣದ ಸಂದರ್ಭದಲ್ಲಿ ಒದಗಿದೆ. ಹಡಗಿನಲ್ಲಿ ಕುಡಿಯುವ ನೀರು, ಆಹಾರ ಪದಾರ್ಥಗಳು ತೀರಿಬಂದಾಗ ಆ ಹಡಗಿನಲ್ಲಿದ್ದವರ ಆಲೋಚನಾ ಧಾಟಿ ಅದರ ವರ್ಣನೆ ಹೀಗಿದೆ. "ಹಡಗಿನಲ್ಲಿ ಬಿಳಿಯರಲ್ಲದೆ ಕರಿಯರೂ ಇದ್ದರು. ಕರಿಯರನ್ನು ಸಮುದ್ರಕ್ಕೆ ಬಿಸಾಡಿದರೆ ಬಿಳಿಯರಿಗೆ ಮಿಗುವ ಅನ್ನ ನೀರು ಸಾಕಾಗಬಹುದೆಂದು ಆಲೋಚಿಸುತ್ತಿರುವಾಗ, ಇದ್ದಕ್ಕಿದ್ದಂತೆ ಒಂದು ದ್ವೀಪ ಕಾಣಿಸಿತು. ಇಂತಹ ದುರ್ಭರ ಪ್ರಸಂಗಗಳನ್ನು ಎದುರಿಸಿ ಅವರು ಪಡೆದ ಅನುಭವಗಳನ್ನು ಅವರು ತಮ್ಮ ಬರಹಗಳಲ್ಲಿ ಹಿಡಿದಿಟ್ಟರು. ಟೆರ್‌ನ್ಯೇಗೆ ತನ್ನ ಬರಹಗಳನ್ನು ಬರೆಯುವಾಗ ಇದ್ದದ್ದು ಪ್ಲುಟಾರ್ಕ್‌ನ "ಸಣ್ಣ ಪ್ರಸಂಗಗಳನ್ನು ಮರೆ ಮಾಚಬಾರದು ಮತ್ತು ಅವುಗಳಿಂದ ಅನೇಕ ವೇಳೆ ಜನರ ನಡೆ ನುಡಿ ಹಾಗೂ ಬುದ್ಧಿವಂತಿಕೆಗಳು ದೊಡ್ಡ ಪ್ರಸಂಗಗಳಿಗಿಂತ ಹೆಚ್ಚು ಕರಾರುವಾಕಾಗಿ ತಿಳಿದು ಬರುತ್ತವೆ" ಎನ್ನುವ ಮಾತುಗಳು. ಆದುದರಿಂದ ಈ ಬರಹಗಳು ಅಲ್ಲಲ್ಲಿ ಒಂದೆರಡು ಸಣ್ಣಪುಟ್ಟ ದೋಷಗಳಿದ್ದರೂ ಆ ಕಾಲದ ಅಧಿಕೃತ ದಾಖಲೆಗಳಾಗಿ ನಿಲ್ಲುತ್ತವೆ.

ಕನ್ನಡ ಸಾಹಿತ್ಯಕ್ಕೆ ಅಧಿಕಾರಿ ಸಾಹಿತಿಗಳಾಗಿ ಡಾ. ಮಾಸ್ತಿ ವೆಂಕಟೇಶಐಂಗಾರ್, ನವರತ್ನರಾಮರಾವ್, ಡಾ. ಸಿದ್ಧಯ್ಯಪುರಾಣಿಕ ಮುಂತಾದ ಮಹನೀಯರು ಸೇವೆಯನ್ನು ಸಲ್ಲಿಸಿದ್ದಾರೆ. ಆ ಪರಂಪರೆಗೆ ಶ್ರೀ ಎಚ್. ಎಲ್. ನಾಗೇಗೌಡರೂ ಸೇರಿರುತ್ತಾರೆ. ಆ ಅಧಿಕಾರದ ದೈನಂದಿನ ಗೊಂದಲ, ಗಲಿಬಿಲಿ, ಜವಾಬಂದಿಯ ಸಡಗರ, ಅಧಿಕಾರಿಯ ಸರ್ಕೀಟು, ಸಂದರ್ಶಕರ ಅವಾಂತರಗಳ ಮಧ್ಯೆಯೂ ಕಾವ್ಯ, ಕಾದಂಬರಿ ಅನುವಾದ, ಜನಪದ ಸಾಹಿತ್ಯ ಸಂಗ್ರಹ-ಹೀಗೆ ಅನೇಕ ಬಗೆಯ ಸೃಜನಶೀಲ ಸಾಹಿತ್ಯದಲ್ಲಿ ತೊಡಗಿದ ನಾಗೇಗೌಡರು "ಪ್ರವಾಸಿ ಕಂಡ ಇಂಡಿಯಾ" ಮಾಲೆಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ, ಅವರ ಷಷ್ಟ್ಯಬ್ದಿ ಸಮಾರಂಭದ ಸಮಯದಲ್ಲಿ ಅಭಿನಂದನೆಗಳು.

ಪ್ರವಾಸಿ ಕಂಡ ಇಂಡಿಯಾ–ಆರು

ಎನ್. ಜಿ. ಲಲಿತ

'ದೇಶ ತಿರುಗಿದವನ ಭಾಷೆ ನೋಡು' ಎಂಬುದು ಒಂದು ನುಡಿಗಟ್ಟು. ಅಂದರೆ ದೇಶ ಸುತ್ತುವವನು ಅರ್ಥಾತ್ ಪ್ರವಾಸಿಯು ಒಳ್ಳೆಯ ಮಾತುಗಾರನಾಗುತ್ತಾನೆ ಎಂಬುದು ಇದರ ಅಭಿಪ್ರಾಯವಾಗಿರಬೇಕು. ಬಹುಶಃ ಆತ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋದಂತೆಲ್ಲಾ ಅಲ್ಲಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನಗಳನ್ನು ಕಂಡಂತೆಲ್ಲಾ ಅವನ ಮಾತು ಮತ್ತು ನಡತೆ ಬೇರೆಯಾಗುತ್ತಾ ಹೋಗುತ್ತದೆ. ಮೇಲಿನ ಮಾತಿಗೆ ಪೋಷಕವಾಗಿ ಯಾವನಾದರೂ ತುಂಬಾ ಧೈರ್ಯವಾಗಿ, ಯುಕ್ತಿಯಿಂದ ನಡೆದುಕೊಂಡರೆ "ಅವನೇ ದೇಶ ತಿರುಗಿದವನಲ್ಲವೆ ?" ಎಂಬ ಮಾತೂ ಉಂಟು. ಆದರೆ ನಮ್ಮ ಜನರಿಗೂ ಸ್ವಲ್ಪಮಟ್ಟಿಗೆ ಪ್ರವಾಸಿಯ ವ್ಯಕ್ತಿತ್ವದ ಅನುಭವ ಇದ್ದಂತೆ ಕಾಣುತ್ತದೆ. ಆದರೆ ದೂರದ ವಿದೇಶಗಳಿಗೆ ಹೋಗಿ ಅಲ್ಲಿನ ಜನಜೀವನ, ಭಾಷೆ ಮತ್ತು ಸಂಸ್ಕೃತಿಗಳ ಬಗ್ಗೆ ಭಾರತೀಯ ಪ್ರವಾಸಿಯೊಬ್ಬ ಬರೆದಿಟ್ಟ ಬಗ್ಗೆ ಪುಸ್ತಕಗಳಿರುವಂತೆ ಕಾಣುವುದಿಲ್ಲ. ಬಹುಶಃ ಇದಕ್ಕೆ ಎರಡು ಪ್ರಬಲ ಕಾರಣಗಳಿದ್ದಂತೆ ಕಾಣುತ್ತದೆ. ಒಂದು ಭಾರತೀಯ ಧಾರ್ಮಿಕ ನಂಬಿಕೆ ಮತ್ತೊಂದು ಭಾರತೀಯರಿಗಿರುವ ಸಾಹಸಪ್ರವೃತ್ತಿಯ ಕೊರತೆ. ಭಾರತೀಯ ಧಾರ್ಮಿಕ ನಂಬಿಕೆಯಂತೆ ಸಮುದ್ರಯಾನ ನಿಷಿದ್ಧವಾದುದರಿಂದ ಈ ಜನ ಹೊರಗೆ ಹೋಗೇ ಇಲ್ಲವೆಂದು ಕಾಣುತ್ತದೆ.

ಪ್ರವಾಸಿಗೆ ಧೈರ್ಯ ಮತ್ತು ಕುತೂಹಲ ಬಹಳ ಮುಖ್ಯವಾದ ಗುಣಗಳು. ಹೊಸ ಹೊಸದನ್ನು ಕಾಣಬೇಕೆಂಬ ಆಸೆಯೊಂದಿಗೆ ಎಂಥದೇ ಸಂದರ್ಭದಲ್ಲಿಯೂ ಧೈರ್ಯ ಗುಂದದಂಥ ಎದೆಗಾರಿಕೆ ಇರಬೇಕು. ಪ್ರಸ್ತುತ ಪ್ರವಾಸಿ ಕಂಡ ಇಂಡಿಯಾ ಆರನೆಯ ಸಂಪುಟದ ಪ್ರವಾಸಿಯಾದ ಇಟಲಿ ದೇಶದ ಮನೂಚಿಗೆ ಇಂತಹ ಗುಣಗಳಿದ್ದುವು. ಅವನೇ ಹೇಳುತ್ತಾನೆ "ನಾನು ತೀರಾ ಚಿಕ್ಕವನಿರುವಾಗಲೆ ಪ್ರಪಂಚವನ್ನು ನೋಡಬೇಕೆಂಬ ತೀವ್ರ ಆಕಾಂಕ್ಷೆ ನನ್ನಲ್ಲಿ ಮೂಡಿತು. ನಾನು ಹುಟ್ಟೂರಾದ ವೆನಿಸ್ ನಗರವನ್ನು ಬಿಡಲು ನನ್ನ ತಂದೆ ಒಪ್ಪುತ್ತಿರಲಿಲ್ಲ. ಆದ್ದರಿಂದ ಹೇಗಾದರೂ ಸರಿ ಎಂತಾದರೂ ಸರಿ ಊರನ್ನು ಬಿಟ್ಟು ಹೊರಡಬೇಕೆಂದು ನಿರ್ಧರಿಸಿದೆ." ಪ್ರಪಂಚ ನೋಡಬೇಕೆಂಬ ಆಸೆ ತುಂಬಾ ಚಿಕ್ಕ ವಯಸ್ಸಿನಲ್ಲಿಯೇ ಈತನಿಗೆ ಇತ್ತು ಎಂಬುದನ್ನು ಕಾಣಬಹುದು. ಭಾರತಕ್ಕೆ ಬಂದ ಪ್ರವಾಸಿಗರು ತಮಗಿಂತ ಹಿಂದಿನವರು ಬರೆದಿಟ್ಟು ಹೋಗಿದ್ದ ಪ್ರವಾಸ ಕಥನಗಳನ್ನು

ಓದಿ ಸ್ಫೂರ್ತಿಗೊಂಡು ತಾವೂ ಪ್ರವಾಸ ಮಾಡಬೇಕೆಂದು ಹೊರಟವರು. ಆದರೆ ಮನೂಚಿಗೆ ಅಂತಹ ಸ್ಫೂರ್ತಿಯೇನೂ ಬೇಕಾಗಿರಲಿಲ್ಲ, ಪ್ರವಾಸ ಅವನ ಪ್ರವೃತ್ತಿಯೇ ಆಗಿದ್ದಿತು. ಅದು ಅವನಿಗೆ ಜೀವದೊಂದಿಗೆ ಬೆರೆತು ಬಂದಿತ್ತು. ಅಲ್ಲದೆ ಅನೇಕ ಪ್ರವಾಸಿಗರು ಇಲ್ಲಿ ಬಂದು ನೋಡಿ ಮತ್ತೆ ತಮ್ಮ ತಮ್ಮ ದೇಶಗಳಿಗೆ ಹಿಂತಿರುಗಿದವರು. ಆದರೆ ಮನೂಚಿ "ಕೇವಲ ೧೪ ವರ್ಷದ ಹುಡುಗನಾಗಿರುವಾಗಲೆ ಮನೆಯಿಂದ ಕದ್ದೋಡಿ ಬಂದವ ಮತ್ತೆ ಮನೆ ಸೇರಲಿಲ್ಲ." ಇಂಡಿಯಾಕ್ಕೆ ಬಂದವನು ಇಲ್ಲಿಯೇ ಬಾಳಿ ಬದುಕಿ ಮದ್ರಾಸಿನಲ್ಲಿ ಮನೆ ಮಾಡಿ ಕೊನೆಗೆ ಇಲ್ಲಿಯೇ ಕೊನೆಯುಸಿರೆಳೆದ ಪ್ರವಾಸಿ ಈತ. ಆದುದರಿಂದ ಬೇರಾವ ಪ್ರವಾಸಿಗಿಂತಲೂ ನಿಕಟವಾಗಿ, ಆಳವಾಗಿ ಭಾರತೀಯ ರಾಜಕೀಯ, ಸಾಮಾಜಿಕ, ಆರ್ಥಿಕ ಜೀವನ ವಿಧಾನಗಳನ್ನು ಕಂಡು, ಕೇಳಿ ಬರೆದಿದ್ದಾನೆ.

ಭಾರತದ ನೆಲದ ಮೇಲೆ ಕಾಲಿಟ್ಟೊಡನೆಯೆ ಮನೂಚಿ. "ಬಿಳಿಯ ಬಟ್ಟೆಗಳನ್ನು ಧರಿಸಿದ್ದ ಅಸಂಖ್ಯಾತ ಹೆಂಗಸರು ಹಾಗು ಗಂಡಸರನ್ನು" ಕಂಡು ಸಂತೋಷಪಟ್ಟಿದ್ದಾನೆ. ಇಲ್ಲಿನ ಹೆಂಗಸರು ತುರ್ಕಿದೇಶದ ಹೆಂಗಸರಂತೆ ಮುಖ ಮುಚ್ಚಿಕೊಂಡು ತಿರುಗದಿರುವುದು ಅವನಿಗೆ ಹೆಮ್ಮೆಯ ಸಂಗತಿ. ತನ್ನ ಪ್ರವಾಸದ ಮೊದಲ ಹಂತದಲ್ಲಿಯೇ ಆತ ಮೊಗಲ್ ಚಕ್ರವರ್ತಿಗಳ ಆಡಳಿತ, ಅಲ್ಲಿನ ಚಿತ್ರವಿಚಿತ್ರ ಸಂಪ್ರದಾಯಗಳು, ಅರಮನೆಯೊಳಗಿನ ದ್ವೇಷ, ಅಸೂಯೆ, ಕುಹಕ, ನಿಂದೆಗಳ ಚಿತ್ರ ಕೊಟ್ಟಿದ್ದಾನೆ. ಇದರಿಂದ ಮನೂಚಿ ತುಂಬಾ ಸೂಕ್ಷ್ಮಬುದ್ಧಿಯುಳ್ಳವನು ಎಂಬುದು ವ್ಯಕ್ತವಾಗುತ್ತದೆ. ಸರದಾರನೊಬ್ಬ ತನ್ನ ಮನೆಯಲ್ಲಿದ್ದುಬಿಡು ನೀನು ಕೇಳಿದುದನ್ನೆಲ್ಲಾ ಕೊಡುತ್ತೇನೆ ಎಂದಾಗ "ಯೂರೋಪಿಯನರು ಎಂದೂ ಗುಲಾಮರಾಗಿಲ್ಲ. ಮುಂದೆಯೂ ಆಗುವುದಿಲ್ಲ" ಎಂದು ಹೇಳಿದ ದಿಟ್ಟ ಮಾತುಗಳು ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಬಿಗಿಯಾದ ಅಡಿಗಲ್ಲುಗಳಂತೆ ಕಾಣುತ್ತವೆ. ಹದಿನಾಲ್ಕು ವರ್ಷದ ಈ ಹುಡುಗನ ಮಾತಿನಿಂದಲೂ ಭಾರತೀಯರು ಪಾಠ ಕಲಿಯದೆ ಹೋದುದು ದುರಂತದ ಸಂಗತಿಯೇ ಸರಿ. ಸರಿಸುಮಾರಿಗೆ ಇದೇ ಕಾಲದಿಂದ ಇಂಗ್ಲಿಷರ ಆಡಳಿತದ ಬೇರು ಭಾರತದ ನೆಲದಲ್ಲಿ ಇಳಿಯಲಾರಂಭಿಸಿತು.

ಮನೂಚಿ ಈ ನಾಡಿಗೆ ಬಂದಾಗ ಇಡೀ ಭಾರತದಲ್ಲಿ ವಿಜಯನಗರಾನಂತರ ಮುಸ್ಲಿಮರ ಆಡಳಿತ ಅಲ್ಲಲ್ಲಿ ಪ್ರಬಲಗೊಂಡಿದ್ದಿತು. ಆದುದರಿಂದ ಮನೂಚಿ ಈ ಸಂಪುಟದ ಕೊನೆಯವರೆಗೂ ಮೊಗಲ್ ಸಾಮ್ರಾಜ್ಯ ಮತ್ತು ಅದರ ಏಳುಬೀಳುಗಳೊಂದಿಗೆ, ಆ ರಾಜರ ನಡತೆಗಳೊಂದಿಗೆ ತನ್ನ ಕಥೆಯನ್ನು ಹೊಂದಿಸಿಕೊಂಡೇ ನಡೆಯುತ್ತಾನೆ. ಮೊಗಲ್ ಸಾಮ್ರಾಜ್ಯದ ಸ್ಥಾಪಕ ಬಾಬರನನ್ನು ಕುರಿತು "ಬಾಬರನ ಒಳ್ಳೆಯ ಗುಣಗಳಿಗಾಗಿ ಪ್ರಜೆಗಳು ಅವನನ್ನು ಬಹಳ ಪ್ರೀತಿಸುತ್ತಿದ್ದರು. ಅವನು ನ್ಯಾಯ ಪಕ್ಷಪಾತಿ. ಕೊಡುವಾಗಲೂ ಕೈತುಂಬಾ ಕೊಡುತ್ತಿದ್ದ." ಈ

ಕಾರಣದಿಂದಾಗಿಯೇ ಬಾಬರನಿಗೆ ಭಾರತದಂತಹ ಹಿಂದುಗಳ ನಾಡಿನಲ್ಲಿ ರಾಜನಾಗಿ ಆಳುವುದು ಸಾಧ್ಯವಾಯಿತೆಂದು ಕಾಣುತ್ತದೆ.

ಮನೂಚಿ ಮೊಗಲ್ ಅರಮನೆಯೊಳಗೆ ನಡೆಯುವಂತಹ, ನಂಬಲೂ ಅಸಾಧ್ಯವಾದಂತಹ ಅನೇಕ ಸಂಗತಿಗಳನ್ನು ಹೇಳಿದ್ದಾನೆ. ಇತಿಹಾಸಕಾರರು ಅಕ್ಬರ್ ತುಂಬಾ ಸಾತ್ವಿಕನಾದ ಚಕ್ರವರ್ತಿಯೆಂದು ಆತನ ಬಗ್ಗೆ ಇನ್ನಿಲ್ಲದ ಒಳ್ಳೆಯ ಗುಣಗಳನ್ನು ಆರೋಪಿಸಿದ್ದಾರೆ. ಆದರೆ ಮನೂಚಿ ಹೇಳುವ ಎರಡು ಪ್ರಸಂಗಗಳು ಗಮನಾರ್ಹವಾಗಿವೆ. "ಅಕ್ಬರ್ ತನ್ನ ಮಗಳನ್ನು ಸರದಾರನೊಬ್ಬನಿಗೆ ಕೊಟ್ಟು ಮದುವೆ ಮಾಡಿದ. ಅಳಿಯ ಮಾವನ ಸಿಂಹಾಸನಕ್ಕೆ ಕೈ ಹಾಕಿದ ಆದರೆ ಅವನ ಆಸೆ ಈಡೇರಲಿಲ್ಲ. ಅಕ್ಬರ್ ಅವನನ್ನು ಮೋಸದಿಂದ ಸೆರೆಹಿಡಿದು ಗಲ್ಲಿಗೆ ಹಾಕಿಸಿದ. ಇದರಿಂದ ಅಕ್ಬರ್ ತನ್ನ ಸಂತತಿಯವರಿಗೆ ಹೇಳಿಕೊಟ್ಟ ಪಾಠ, ನಿಮ್ಮ ಹೆಣ್ಣುಮಕ್ಕಳಿಗೆ ಮದುವೆ ಮಾಡಬೇಡಿ ಎಂಬುದು. ಈ ನಿಯಮ ಔರಂಗಜೇಬನ ಕಾಲದವರೆಗೂ ನಡೆಯಿತು" ರಾಜಕೀಯದಲ್ಲಿ ಏನಾದರೂ ಆಗಬಹುದು ತಂದೆ, ಮಗ, ಹೆಂಡತಿ, ಗಂಡ ಶತ್ರುಗಳಾಗಬಹುದು. ಈ ಕಾರಣದಿಂದಲೇ ರಾಜಕೀಯವನ್ನು ಅಯೋಗ್ಯರ ಕೊನೆಯ ಅಸ್ತ್ರ ಎಂದು ಕರೆದಿರಬೇಕು. ಅಕ್ಬರನ ವ್ಯಕ್ತಿತ್ವವನ್ನು ಅತ್ಯಂತ ಕೆಳಮಟ್ಟಕ್ಕಿಳಿಸುವ ಮತ್ತೊಂದು ಸಂಗತಿಯನ್ನು ಮನೂಚಿ ಹೇಳಿದ್ದಾನೆ. "ಅಕ್ಬರನು ತನಗಾಗದವರಿಗೆ ವಿಷ ಕೊಟ್ಟು ಸಾಯಿಸುತ್ತಿದ್ದ. ಶ್ರೀಮಂತ ಸರದಾರರ ಮೇಲೆ ಪ್ರೀತಿ ವಿಶ್ವಾಸವಿರುವಂತೆ ನಟಿಸಿ, ಅವರಿಗೆ ಬಹುಮಾನವಾಗಿ ಕೊಡುವ ವೀಳ್ಯದೆಲೆಗೆ ವಿಷವನ್ನು ಲೇಪಿಸಿಕೊಡುತ್ತಿದ್ದ, ಅದನ್ನು ಕೊಟ್ಟ ಶ್ರೀಮಂತ ಸರದಾರರು ವಿಷ ಮೈಗೇರಿ ಸತ್ತುಹೋಗುತ್ತಿದ್ದರು. ಹೀಗೆ ಅಕ್ಬರ್ ಅನೇಕ ರಾಜಕುಮಾರರನ್ನು ಕೊಲ್ಲಿಸಿದ." ತನಗಾಗದವರನ್ನು ವೀಳೆಯದಲ್ಲಿ, ಉಪಾಹಾರದಲ್ಲಿ, ಊಟದಲ್ಲಿ ವಿಷ ಹಾಕಿ ಕೊಲ್ಲಿಸುತ್ತಿದ್ದ ಅನೇಕ ವಿವರಗಳನ್ನು ಅವನ ಸಂತತಿಯವರು ಅವುಗಳನ್ನು ಮುಂದುವರಿಸಿದ ರೀತಿಯನ್ನು ಮನೂಚಿ ಹೇಳಿದ್ದಾನೆ.

ಭಾರತೀಯ ನಾರಿಯರ ಗೌರವಕ್ಕೆ ಬೆಲೆ ಹಚ್ಚುವಂತಹ ಎರಡು ಪ್ರಸಂಗಗಳನ್ನು ಮನೂಚಿ ಹೇಳಿದ್ದಾನೆ. ಒಂದು "ಚಿತ್ತೂರಿನ ರಾಣಾಜಯಮಲ್ಲನ ಹೆಂಡತಿ ಪದ್ಮಿನಿ ಬಹಳ ರೂಪವತಿ. ಇಡೀ ಪ್ರಪಂಚದಲ್ಲಿ ಇವಳಿಗಿಂತ ರೂಪವತಿಯಾದ ಹೆಣ್ಣು ಇರಲಿಲ್ಲವಂತೆ. ಪೋರ್ಚುಗೀಸ್ ಲೇಖಕನಾದ ಫರಿಯಾ ಇವಳ ವಿಚಾರ ಆಗಾಗ ಹೇಳುತ್ತಾನೆ. ಇಂಥ ತ್ರಿಪುರ ಸುಂದರಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂದು ಅಕ್ಬರನ ಹಿರಿಯಾಸೆಯಾಗಿತ್ತು. ರಾಣಾನು ತನಗೆ ಶರಣಾಗಬೇಕೆಂದು ಅಕ್ಬರ್ ಹೇಳಿದ' ಆದರೆ ರಾಣಾ ಒಪ್ಪದೆ 'ಒಂದು ಲಕ್ಷಜನರ ಪ್ರಾಣಹಾನಿಯಾದರೂ ಚಿಂತೆಯಿಲ್ಲ. ನಾನೆಂದೂ ಶರಣಾಗತನಾಗಲಾರೆ. ನನ್ನ ಮೇಲೆ ಯುದ್ಧಕ್ಕೆ ಬಂದರೆ ರಜಪೂತರು ಎಂತಹ ಶೂರರೆಂಬುದನ್ನು ತೋರಿಸಿಕೊಡುತ್ತೇನೆ ಎಂದು ಉತ್ತರಕೊಟ್ಟ." ಈ ಮಾತು ಕೇಳಿ ಅಕ್ಬರ್ ಚಿತ್ತೂರಿನ ಮೇಲೆ ಯುದ್ಧ ಸಾರಿದ. ಆದರೆ ಆ ಕೋಟೆಯ

ಪತ್ತಿರವೂ ಸುಳಿಯಲಾಗಲಿಲ್ಲ. ಕಡೆಗೆ ಸ್ನೇಹ ನಟಿಸಿ ಜಯಮಲ್ಲನನ್ನು ಸೆರೆಹಿಡಿದ. ಕೂಡಲೆ ಬಂದು ಶರಣಾಗದಿದ್ದರೆ ಗಂಡನ ತಲೆ ತೆಗೆಯುವುದಾಗಿ ಪದ್ಮಿನಿಗೆ ಹೇಳಿ ಕಳಿಸಿದ. "ರಾಣಾಜಯಮಲ್ಲನು ಸತ್ತನೆಂದೇ ನಾನು ಭಾವಿಸಿದ್ದೇನೆ. ಅವನ ಸ್ಥಾನ ವನ್ನು ಆಕ್ರಮಿಸಲು ಈ ದುರ್ಗದೊಳಗೆ ಬೆರೆ ಕೆಚ್ಚೆದೆಯ ವೀರರಿದ್ದಾರೆ. ಇಂದಿನಿಂದ ಮುತ್ತಿಗೆ ಆರಂಭವಾಯಿತೆಂದು ಭಾವಿಸಿ ಸಾವಿಗಂಜವೆ ಕಾದಾಡಲು ಸಿದ್ಧರಾಗಿದ್ದಾರೆ. ಅವರೆಂದಿಗೂ ಶರಣಾಗುವುದಿಲ್ಲ" ಈ ಉತ್ತರ ಕೇಳಿ ಅಕ್ಬರ್ ದಿಗ್ಭ್ರಾಂತನಾದ. ಅವನ ಆಟ ನಡೆಯಲಿಲ್ಲ. ಜಯಮಲ್ಲನೊಂದಿಗೆ ಹಿಂದಿರುಗಿದ. ಸೆರೆಯಲ್ಲಿದ್ದ ಜಯಮಲ್ಲನನ್ನು ಪದ್ಮಿನಿ ಚಿತ್ತೂರು ಕೋಟೆಯಲ್ಲೇ ಇದ್ದು ಬಿಡಿಸಿ ತಂದ ರೋಮಾಂಚಕಾರಿ ಕಥೆಯನ್ನು ಮನೂಚಿ ತುಂಬ ವರ್ಣಿಸಿದ್ದಾನೆ. ಮತ್ತೆ ಅಕ್ಬರ್ ಚಿತ್ತೂರು ಮುತ್ತಿದ. ಮೋಸ ದಿಂದ ಜಯಮಲ್ಲನನ್ನು ಕೊಂದ. ಇನ್ನು ಪದ್ಮಿನಿ ನನಗೆ ಸಿಕ್ಕಿದಂತೆಯೇ ಎಂದು ಹಿಗ್ಗಿದ. ಮಾರನೆಯದಿನ ಗೊತ್ತಾಯಿತು 'ಪದ್ಮಿನಿಯೂ ಪತಿಯ ಚಿತೆಯನ್ನೇರಿ ಸಹಗಮನ ಮಾಡಿದಳು' ಎಂದು. ಆಮೇಲೂ ಚಿತ್ತೂರು ಅಕ್ಬರನ ವಶವಾಗಲಿಲ್ಲ.

ಅಕ್ಬರನ ಪಾಪದ ಫಲವೊ ಎಂಬಂತೆ ಅವನ ಮಗ ಜಹಾಂಗೀರ್ ವರ್ತಿಸಿದ. "ಮಹಮದೀಯ ಮತಪದ್ಧತಿಗೆ ವಿರೋಧವಾಗಿ ನಡೆದುಕೊಂಡ. ಮಧ್ಯಪಾನ ಹಂದಿಯಮಾಂಸ ಇವೆಲ್ಲ ಮಹಮ್ಮದೀಯ ಮತಕ್ಕೆ ವಿರುದ್ಧ. ಆದರೆ ಜಹಾಂಗೀರ್ ಬೇಕಾಗಿಯೇ ತನ್ನ ಮತಕ್ಕೆ ವಿರುದ್ಧವಾಗಿ ವರ್ತಿಸಿ ಅವುಗಳನ್ನು ಸೇವಿಸತೊಡಗಿದ. ತಂದೆಯ ವಿಷಯಲೋಲುಪತೆ, ಪರಸ್ತ್ರೀ ವ್ಯಸನ ಮಗನ ಬೆನ್ನನ್ನೂ ಹತ್ತಿತು. "ಒಮ್ಮೆ ಜಹಾಂಗೀರ ಲಾಹೋರಿನ ಅರಮನೆಯ ಉಪ್ಪರಿಗೆಯಲ್ಲಿ ಕುಳಿತಿರುವಾಗ ರವಿ ನದಿಯಮೇಲೆ ಮುಚ್ಚಿದ ದೋಣಿಯಲ್ಲಿ ಸುಂದರ ಸ್ತ್ರೀಯೊಬ್ಬಳು ಹೋಗುತ್ತಿರು ವುದನ್ನ ಕಂಡ. ಆಕೆಯ ಅನುಪಮ ಸೌಂದರ್ಯಕ್ಕೆ ಮೋಹಗೊಂಡ ಆತ ಆಕೆಯ ಮೇಲೆ ಕಣ್ಣು ಹಾಕಿದ. ಅಪ್ಪರ ಕೂಡ ಆಕೆಗೆ ಹೇಳಿ ಕಳುಹಿಸಿದ. ಆಕೆ ಷೇಕ್ ಅಫ್ಘನ್ ಎಂಬ ಸಿಪಾಯಿಯ ಪತ್ನಿಯಾಗಿದ್ದಳು. ಗಂಡ ಬದುಕಿರುವ ತನಕ ಪರಪುರುಷನನ್ನು ಕಣ್ಣೆತ್ತಿಯು ಸಹ ನೋಡುವುದಿಲ್ಲಾ ಎಂದು ಆಕೆ ಹೇಳಿಬಿಟ್ಟಳು, ಜಹಂಗೀರನ ಕೋರಿಕೆ ಯನ್ನು ತಿರಸ್ಕರಿಸಿದಳು. ಆಕೆಯ ಗಂಡನಿದ್ದರೆ ತಾನೆ ಅಡ್ಡಿ ? ಎಂದು ಆಲೋಚಿಸಿದ ಜಹಾಂಗೀರ ಆತನನ್ನು ಮುಗಿಸಿಬಿಟ್ಟ. ಆಕೆಯನ್ನು ತನ್ನ ರಾಣೀವಾಸಕ್ಕೆ ಸೇರಿಸಿ ಕೊಂಡು ಪಟ್ಟದ ರಾಣಿಯನ್ನಾಗಿ ಮಾಡಿದ." ಚಿತ್ತೂರ ಪದ್ಮಿನಿ ಚಿತೆಯೇರಿ ಹೆಣ್ಣು ತನಕ್ಕೆ ಕಿರೀಟ ಪ್ರಾಯಳಾದರೆ ಈಕೆ ನೂರ್‌ಜಹಾನಾಗಿ ತನ್ನ ಗಂಡನನ್ನು ಕೊಂದವನ ಭೋಗದ ವಸ್ತುವಾದಳು.

ಕರ್ನಾಟಕ ಮುಂತಾದ ದಕ್ಷಿಣ ಭಾರತದ ಭಾಗಗಳ ಚರಿತ್ರೆಯನ್ನು ಮನೂಚಿ ಹೇಳಿದ್ದಾನೆ. ಆದರೆ ಈ ಹಿಂದೆಯೇ ಹೇಳಿದಂತೆ ಅವನು ಭಾರತಕ್ಕೆ ಬಂದಕಾಲ ಮೊಗಲರ ಆಡಳಿತ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ. ವಿಜಯನಗರದ ಪತನವಾದನಂತರ

ಇಂಗ್ಲೀಷರು ಭಾರತದ ಅಧಿಪತಿಗಳಾಗುವವರೆಗೆ ಭಾರತೀಯ ರಾಜಕೀಯ ಜೀವನ ಒಂದು ರೀತಿಯ ಗೊಂದಲದ ಸ್ಥಿತಿಯಲ್ಲಿದ್ದಿತು. ಹಿಂದೂ ರಾಜರ ಪರಸ್ಪರ ಅಸೂಯೆ ಮತ್ತು ಹಗೆತನಗಳ ಕಾರಣದಿಂದಾಗಿ ಮುಸಲ್ಮಾನರು ಎಲ್ಲೆಲ್ಲೂ ಪ್ರಬಲರಾಗಿದ್ದರು. ಮೈಸೂರಿನ ರಾಜ ಸಹ ಮೊಗಲರಿಗೆ ಪೊಗದಿಕೊಟ್ಟ ಪ್ರಸಂಗದ ಉಲ್ಲೇಖವೊಂದು ಹೀಗಿದೆ "ಮೈಸೂರಿನ ರಾಜ ಕಳಿಸಿದ ಅಪಾರ ಪೊಗದಿ ಹಣವನ್ನು" ಚಕ್ರವರ್ತಿ ಉತ್ತರ ಕನ್ನಡಜಿಲ್ಲೆಯ ಪೂಜಾದಲ್ಲಿ ಇಟ್ಟ ಪ್ರಸಂಗ ಬರುತ್ತದೆ. ಕರ್ನಾಟಕದ ಮೇಲೆ ಮುಸಲ್ಮಾನರ ದಾಳಿ ಮತ್ತು ಆಕ್ರಮಣವನ್ನು ಮನೂಚಿ ವಿವರವಾಗಿ ಹೇಳಿದ್ದಾನೆ.

ಭಾರತಕ್ಕೆ ಬಂದ ಇತರ ಪ್ರವಾಸಿಗರಂತೆ ಮನೂಚಿ ತನ್ನ ನಾಡಿಗೆ ಹಿಂದಿರುಗಲಿಲ್ಲ. ಆತ ಮದರಾಸಿನಲ್ಲಿ ನೆಲಸಿದ. ಅಲ್ಲಿದ್ದಾಗ ಸುತ್ತಮುತ್ತೀನ ಜೀವನವನ್ನು ಆತ ಚಿತ್ರಿಸಿದ್ದಾನೆ. ಮಾಟಮಂತ್ರಗಳ ಬಗ್ಗೆ ನಾನು ಬೇಕಾದಷ್ಟು ಹೇಳಬಲ್ಲೆ ಎಂದಿದ್ದಾನೆ. ಆಗಷ್ಟೆ ಪ್ರಬುದ್ಧಮಾನವಾಗುತ್ತಿದ್ದ ಕ್ರೈಸ್ತಮತ ಪರಿವರ್ತನೆಯ ಬಗ್ಗೆ ಹೇಳಿದ್ದಾನೆ. ಪ್ರಾಯಃ ಭಾರತದ ಭೂಭಾಗವನ್ನ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಕಂಡವನು ಮನೂಚಿ. ಇಷ್ಟದರೂ ತಾನು ಬರೆದ ಪ್ರವಾಸಕಥನ ತನ್ನ ತಾಯಿನಾಡ ಜನರಿಗೆ ದೊರೆಯಬೇಕೆಂಬುದು ಅವನ ಆಸೆ. ಮೊಗಲ್ ಸರದಾರನೊಬ್ಬನ ಮುಂದೆ ಯೂರೋಪಿನವರು "ಹಿಂದೆ ಈಗ ಮುಂದೆ ಯಾವ ಗುಲಾಮರೂ ಆಗುವುದಿಲ್ಲ" ಎಂಬ ಅವನ ಮಾತು ಯಾವುದೇ ದೇಶದ ಜನರಿಗಾದರೂ ಅನುಕರಣೀಯ ಈ ಸಂಪುಟದ ಓದು ನಮ್ಮ ಜನರಲ್ಲಿ ಅಂತಹ ರಾಷ್ಟ್ರಪ್ರೇಮವನ್ನು ಉದ್ದೀಪನಗೊಳಿಸಲಿ. ಆಗ ಮಾತ್ರ ಶ್ರೀ ನಾಗೇಗೌಡರ ಶ್ರಮ ಸಾರ್ಥಕ.

ಆಕರ ಗ್ರಂಥವಾಗಿ ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು

ಎಲ್. ಜಿ. ಭಟ್ಟ

ಒಂದು ದೇಶದ ಇತಿಹಾಸವನ್ನು ಅರಿಯಲು ಪ್ರಾಚ್ಯವಸ್ತುಗಳು, ಶಾಸನಗಳು, ನಾಣ್ಯಗಳು, ಸಾಹಿತ್ಯಕೃತಿಗಳು, ಕಲಾಕೃತಿಗಳು, ಮತ್ತು ವಿದೇಶೀಯರ ಬರಹಗಳು ಮುಖ್ಯ ಆಧಾರಗಳಾಗಿವೆ. ಈ ಆಧಾರಗಳ ಸಹಾಯದಿಂದ ಹಿಂದೆ ಹೀಗೆ ಆಗಿತ್ತು ಎನ್ನುವುದೇ ಇತಿಹಾಸದ ಗುರಿ. ವ್ಯಕ್ತಿಯ ಅಥವಾ ದೇಶದ ಸರ್ವತೋಮುಖ ಅಭಿವೃದ್ಧಿಗೆ ಇತಿಹಾಸದ ಜ್ಞಾನ ಅಗತ್ಯ. ಇತಿಹಾಸದ ಪುಟಗಳುದ್ದಕ್ಕೂ ಇತರರ ಅನೇಕ ತೆರೆದ ಅನುಭವಗಳು ತುಂಬಿವೆ. ಅನುಭವವಿರುವಲ್ಲಿ ಅಮೃತತತ್ವವಿದೆ. ವ್ಯಕ್ತಿ ಅಥವಾ ದೇಶ ಎಷ್ಟೋ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಪ್ರತಿ ಬಾರಿಯೂ, ನಮ್ಮದೇ ಆದ ಸ್ವಂತ ಅನುಭವವನ್ನು ಸಂಪಾದಿಸಿ ಮುಂದುವರಿಯುವುದು ಅಗತ್ಯ. ಆದ್ದರಿಂದ ನಾವು ಇತರರ ಅನುಭವಗಳೆಡೆ ನೋಡಬೇಕು. ಇತಿಹಾಸ ನಮಗೆ ಸಹಾಯಮಾಡುತ್ತದೆ.

"History as a subject of study is more or less completely at the mercy of sources" ಎನ್ನುವುದನ್ನು ನೆನೆದಾಗ, ವಿದೇಶಿಯರ ಪ್ರವಾಸ ಕಥನಗಳ ಮಹತ್ವ ತಿಳಿಯುತ್ತದೆ. "The accounts of any country and its people by foreign observers are of great interest, to the historian of the country. For, they enable him to know what impression it made upon the minds of such observers and to estimate with greater confidence the part played by it in the general history of the world. And where as in the case of India, the native sources of history fail him partly or altogcther at some paints. the writings ot foreigners gain great value in his eyes." ಎನ್ನುವಲ್ಲಿ, ಭಾರತದ ಇತಿಹಾಸಕಾರನಿಗೆ ವಿದೇಶೀಯರ ಪ್ರವಾಸ ಕಥನಗಳ ಮಹತ್ವ ಎಷ್ಟು ಎಂಬುದು ತಿಳಿಯುತ್ತವೆ.

"ಭಾರತದ ಬಗೆಗೆ ನೂರಾರು ಪ್ರವಾಸಿಗಳು ಆಯಾಕಾಲಕ್ಕೆ ಬಂದು ವರ್ಣನೆಗಳನ್ನು ಬರೆದಿದ್ದಾರೆ. ಆದರೆ ಅವು ಆಯಾ ಭಾಷೆಗಳಲ್ಲಿವೆ. ನಮ್ಮ ಸುದೈವದಿಂದ ಅವೆಲ್ಲ ಬಹು ಅಂಶದಿಂದ ಈಗ ಇಂಗ್ಲೀಷ್ ಭಾಷೆಗೆ ಅನುವಾದಿಸಲ್ಪಟ್ಟಿವೆ. ಅವನ್ನು ಕನ್ನಡಿಸುವ ಮಹಾಕಾರ್ಯವನ್ನು ಶ್ರೀ ಎಚ್.ಎಲ್. ನಾಗೇಗೌಡರು ಬಹಳ ಪರಿಶ್ರಮ ಪೂರ್ವಕವಾಗಿ ಮಾಡುತ್ತ ಬಂದಿದ್ದಾರೆ." ಎನ್ನುವ ಶ್ರೀ ಆರ್. ಆರ್.

ದಿವಾಕರರ ನುಡಿ, ಕನ್ನಡಕ್ಕೆ ಇಂಥ ಗ್ರಂಥಗಳ ಅಗತ್ಯತೆಯನ್ನು ಎತ್ತಿತೋರಿಸುತ್ತದೆ. ಶ್ರೀ ನಾಗೇಗೌಡರು, 1964ರಿಂದ ಈಚೆಗೆ 'ಪ್ರವಾಸಿ ಕಂಡ ಇಂಡಿಯಾ'ದ ಆರು ಬೃಹತ್ ಗ್ರಂಥಗಳನ್ನು ಕನ್ನಡಿಗರಿಗೆ ನೀಡಿ, ನಮ್ಮ ದೇಶದ ಪೂರ್ವೇತಿಹಾಸವನ್ನು ಅರಿಯಲು ಅನುವು ಮಾಡಿಕೊಟ್ಟಿದ್ದಾರೆ. ಈ ಸಂಪುಟಗಳಿಂದ್ದಕ್ಕೂ ಶ್ರೀ ನಾಗೇಗೌಡರು, ಇತಿಹಾಸಕಾರರಾಗಿ, ಭಾಷಾಂತರಕಾರರಾಗಿ, ವಿಮರ್ಶಕರಾಗಿ, ಸಾಹಿತಿಗಳಾಗಿ, ಕಾರ್ಯವೆಸಗಿದ್ದಾರೆ.

ಇತಿಹಾಸದ, ಸಮಾಜ ವಿಜ್ಞಾನದ, ಭೂಗೋಲದ, ಸಂಸ್ಕೃತಿಯ ಅಭ್ಯಾಸಕ್ಕೆ 'ಪ್ರವಾಸಿಕಂಡ ಇಂಡಿಯಾ'ದ ಒಂದೊಂದು ಸಂಪುಟವೂ, ಆಕರ ಗ್ರಂಥವಾಗಿದೆಯೆಂದು ಹೇಳಬಹುದು. ಕನ್ನಡದಲ್ಲಿರುವ ಈ ಕೊರತೆಯನ್ನು ತುಂಬಿದ ಶ್ರೇಯಸ್ಸು ಶ್ರೀ ನಾಗೇಗೌಡರಿಗೆ ಸಲ್ಲುತ್ತದೆ. ಇಂಥ ಬೃಹತ್ ಗ್ರಂಥದ ಆರು ಸಂಪುಟಗಳನ್ನು (ಇನ್ನೂ ನಾಲ್ಕು ಸಂಪುಟಗಳನ್ನು ಶ್ರೀಯುತರು ಸಿದ್ಧಪಡಿಸುತ್ತಿದ್ದಾರೆ) ಒಂದು ಲೇಖನದಲ್ಲಿ ಪರಿಚಯಿಸುವುದು ಅಸಾಧ್ಯವೇ ಸರಿ. ಅಲ್ಲಲ್ಲಿಯ ಕೆಲವು ಉದಾಹರಣೆಗಳೊಂದಿಗೆ ಪರಿಚಯಿಸುವ ಒಂದು ಪ್ರಯತ್ನ ಇಲ್ಲಿದೆ ಅಷ್ಟೆ,

ಭಾರತವು ಬಹಳ ಪ್ರಾಚೀನವಾದ ದೇಶ. ಭಾರತದ ಸಂಸ್ಕೃತಿ ಕ್ರಿ.ಪೂ. ಮೂರು ಸಾವಿರ ವರ್ಷಗಳಿಂದ ಬೆಳೆದುಬಂದಿದೆ. ಇಂದಿಗೆ ಐದು ಸಾವಿರ ವರ್ಷಗಳ ಹಿಂದೆಯೇ, ಭಾರತ ಮತ್ತು ಪರದೇಶಗಳ ನಡುವೆ ವ್ಯಾಪಾರೀ ಸಂಪರ್ಕವಿತ್ತು ಎಂಬುದು ಸಿಂಧೂ ಸಂಸ್ಕೃತಿಯ ಅಚ್ಚೆ ಮೆಸೊಪೊಟೆಮಿಯಾದಲ್ಲಿ ಸಿಕ್ಕಿರುವುದರಿಂದ ತಿಳಿಯುತ್ತದೆ.

ಚರಿತ್ರೆಯ 'ಪಿತಾಮಹ'ನಾದ ಗ್ರೀಸ್‌ದೇಶದ ಹಿರೋಡೋಟಸ್ ಇಂಡಿಯಾ ದೇಶದ ವಿಚಾರವನ್ನು ಅನ್ಯ ಕೇಳಿ, ತಿಳಿದು ಬರೆದನಂತೆ. ಭಾರತೀಯರಿಗೂ, ಪರ್ಷಿಯ ದೇಶಕ್ಕೂ ಇರುವ ಸಂಬಂಧವನ್ನು 'ಭಾರತೀಯರು ಪರ್ಷಿಯಾ ರಾಜನಿಗೆ ಮುನ್ನೂರ ಅರವತ್ತು ಟ್ಯಾಲೆಂಟುಗಳಷ್ಟು ಚಿನ್ನದ ಧೂಳನ್ನು ಪೊಗದಿಯಾಗಿ ನೀಡುತ್ತಿದ್ದರು (ಸಂಪುಟ 1 : ಪು 15) ಎಂಬ ಹಿರೋಡೋಟಸನ ಹೇಳಿಕೆಯಿಂದ ತಿಳಿದುಕೊಳ್ಳಬಹುದು. ಭಾರತೀಯರ ಯುದ್ಧಪದ್ಧತಿಯ ಬಗ್ಗೆ ಹಿರೋಡೋಟಸ್ ಹೇಳುತ್ತಾ' 'ನಿಂತು ಯುದ್ಧ ಮಾಡುವ, ಮತ್ತು ರಥದಲ್ಲಿ ಕುಳಿತು ಯುದ್ಧ ಮಾಡುವ' ಪದ್ಧತಿಗಳಿತ್ತೆಂದು ಹೇಳುತ್ತಾನೆ. (1:9)

ಅಲೆಕ್ಸಾಂಡರನು, ಭಾರತದಮೇಲೆ ದಂಡೆತ್ತಿಬರುವವರೆಗೆ, ಇಂಡಿಯಾ ದೇಶದ ಬಗೆಗೆ ಇದ್ದ ಒಂದೇ ಒಂದು ಗ್ರೀಕ್ ಗ್ರಂಥ 'ಟೀಸಿಯಸ'ನ 'ಇಂಡಿಕಾ' 'ಈಲಿಯನ್' ಮಹಾಶಯನ 'ಪ್ರಾಣಿಗಳ ವೈಚಿತ್ರ್ಯಗಳು' ಎಂಬ ಗ್ರಂಥದಲ್ಲಿ, ಇಂಡಿಯಾ ದೇಶದ ಆನೆಯ ವರ್ಣನೆಯಿದೆ. 'ಆನೆ ಬಹು ಒಳ್ಳೆಯ ಪ್ರಾಣಿ. ಅಲೆಕ್ಸಾಂಡರನಿಗೂ ಇಂಡಿಯಾದ ರಾಜನಾದ ಪೋರಸನಿಗೂ ಆದ ಯುದ್ಧದಲ್ಲಿ ಪೋರಸನು ಗಾಯಗೊಂಡ

ನಷ್ಟ. ಆಗ ಅವನನ್ನು ಹೊತ್ತಿದ್ದ ಆನೆ ತಾನೆಷ್ಟೋ ಗಾಯಗೊಂಡಿದ್ದರೂ, ಬಹು ಎಚ್ಚರಿಕೆಯಿಂದ ಪೋರಸನಿಗೆ ಚುಚ್ಚಿದ್ದ ಬಾಣಗಳನ್ನು ಕಿತ್ತು ಹಾಕಿತು.' (1 : 124) ಎಂದು ಹೇಳುತ್ತಾನೆ. ಸ್ಟ್ರಬೋ, ಅಲೆಕ್ಸಾಂಡರನ ಮರುಪ್ರಯಾಣದ ಬಗ್ಗೆ ಹೇಳುತ್ತಾನೆ. ಮೆಗಸ್ತನೀಸನು ಅಲೆಕ್ಸಾಂಡರನ ದಂಡೆಯಾತ್ರೆಯ ಬಗ್ಗೆ ಹೇಳುತ್ತಾ 'ಗಂಗರಿದೀ ನಾಡಿನಲ್ಲಿ ಅತ್ಯಂತ ಭಾರಿಯಾದ ಆನೆಗಳ ಸೈನ್ಯವಿದೆ. ಅಲೆಕ್ಸಾಂಡರನು ಇಲ್ಲಿಯವರೆಗೆ ಬಂದವನು, ಈ ನಾಲ್ಕು ಸಾವಿರ ಆನೆಗಳ ಸುದ್ದಿಯನ್ನು ಕೇಳಿ ಮುಂದಕ್ಕೆ ಹೋಗುವುದನ್ನು ಕೈಬಿಟ್ಟನು (1 : 26) ಎಂದು ಹೇಳುತ್ತಾನೆ. ಆ ಕಾಲದ ನಂದರಾಜನ ಸೈನ್ಯಬಲದ ಉದಾಹರಣೆಯಿದು. ಅಲೆಕ್ಸಾಂಡರನ ಮರುಪ್ರಯಾಣಕ್ಕೆ ಇಲ್ಲಿ ಕಾರಣ ತಿಳಿಯುತ್ತದೆ. ಮೆಗಾಸ್ತೆನೀಸನು ಚಂದ್ರಗುಪ್ತಮೌರ್ಯನ ಆಸ್ಥಾನದಲ್ಲಿ ರಾಯಭಾರಿಯಾಗಿದ್ದ. ಇವನ 'ಇಂಡಿಕಾ' ಮೌರ್ಯರ ನಗರಾಡಳಿತೆಯ ಬಗ್ಗೆ ತಿಳಿಸುತ್ತದೆ. 'ನಗರದ ಮೇಲ್ವಿಚಾರಣೆ ನೋಡಿಕೊಳ್ಳುವವರನ್ನು ಆರು ವಿಭಾಗಗಳಲ್ಲಿ ವಿಂಗಡಿಸಿದ್ದಾರೆ' (1 : 38) ಎಂದು 'ಇಂಡಿಕಾ'ದಲ್ಲಿದೆ. ಅದರಂತೆ ಸೈನ್ಯದ ಮೇಲ್ವಿಚಾರ ಮಂಡಳಿಗಳ ಬಗ್ಗೆಯೂ ಹೇಳುತ್ತಾನೆ. (1 : 39)

ಹೀಗೆ ಮೆಗಾಸ್ತೆನೀಸನ ಬರಹವು ಮೌರ್ಯರ ಆಡಳಿತ ಪದ್ಧತಿಯಮೇಲೆ ಬೆಳಕು ಚೆಲ್ಲುತ್ತದೆ. ಅಲೆಕ್ಸಾಂಡರನ ದಂಡೆಯಾತ್ರೆಯ ಸಮಯದಲ್ಲಿ, ಆತನೊಡನೆ ಬಂದ ಇತಿಹಾಸಕಾರರು ಭಾರತದಲ್ಲಿ ರೂಢಿಯಲ್ಲಿದ್ದ ಗಣರಾಜ್ಯದ ಬಗ್ಗೆ ಹೇಳುತ್ತಾರೆ. ಈ ಹೇಳಿಕೆಯೂ ನಮ್ಮ ಗಣರಾಜ್ಯ ಪದ್ಧತಿಗೆ ಭವ್ಯ ಪರಂಪರೆಯಿದೆ ಎಂಬುದನ್ನು ಸಿದ್ಧಪಡಿಸುತ್ತದೆ. ಬೆಬಿಲೋನಿಯಾದ 'ಬರ್ಡೆಸನೆಸ್' ಎನ್ನುವವನು, ಭಾರತದಲ್ಲಿ ಪ್ರಚಲಿತವಿದ್ದ ನ್ಯಾಯವಿಧಾನಗಳ ಬಗ್ಗೆ ಹೇಳುತ್ತಾನೆ. ಒಬ್ಬನು ತಪ್ಪಿತಸ್ಥನೇ, ಅಥವಾ ನಿರಪರಾಧಿಯೋ ಎಂಬುದನ್ನು ನಿರ್ಧರಿಸಲು ನೀರಿನಮೇಲೆ ನಡೆಯುವುದೇ ಮೊದಲಾದ ಪರೀಕ್ಷಾವಿಧಾನಗಳು ರೂಢಿಯಲ್ಲಿದ್ದವೆಂದು ಈತನ ಬರವಣಿಗೆಯಿಂದ ತಿಳಿದು ಬರುತ್ತದೆ' (1:132) 'ಬಸ್ಸರಿಕ' ಎಂಬ ಗ್ರೀಕ್ ಮಹಾಕಾವ್ಯದ ಕರ್ತ'ನೊನ್ನಸ'ನು 'ಬ್ಯಾರಸ್' ಇಂಡಿಯಾದೇಶವನ್ನು ಗೆದ್ದ ವರ್ಣನೆ ಮಾಡುತ್ತಾನೆ. ಭಾರತದಲ್ಲಿ 'ಡೇರಿಯಡಸ'ನೆಂಬ ರಾಜನು ಇದ್ದನೆಂದು ಈತನು ಹೇಳುತ್ತಾನೆ 'ಡೇರಿಯಡಸ' ನು ಮಹಾಭಾರತದ ದುರ್ಯೋಧನನಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ. (1:142). ಆ ಕಾಲದಲ್ಲಿ "ಇಂಡಿಯಾ ದೇಶದವರು ತಮ್ಮ ಚಕ್ರಾಧಿಪತ್ಯವನ್ನು ಮೆಡಿಟರೇನಿಯನ್ ಮತ್ತು ಕೆಂಪು ಸಮುದ್ರಗಳ ತೀರದವರೆಗು ವಿಸ್ತರಿಸಿದ್ದರು" ಎಂದು ಈತನು ಹೇಳುತ್ತಾನೆ.

ಚೀನಾದೇಶದ ಪ್ರವಾಸಿಗಳಾದ ಫಾಹಿಯಾನ್, ಹುಯೆನ್‌ತ್ಸಾಂಗ್ ಮತ್ತು ಇತ್ಸಿಂಗರು ಭಾರತದ ಜನಜೀವನದ ಬಗೆಗೆ ತಮ್ಮ ಅಮೂಲ್ಯವಾದ ಬರಹಗಳನ್ನು ನೀಡಿದ್ದಾರೆ. ಫಾಹಿಯಾನನು ಗುಪ್ತ ಅರಸು ಎರಡನೇ ಚಂದ್ರಗುಪ್ತನ ಕಾಲದಲ್ಲಿ ಭಾರತಕ್ಕೆ ಬಂದವನು. ಮಥುರಾದ ದಕ್ಷಿಣಕ್ಕಿರುವ ನಾಡನ್ನು ಮಧ್ಯದೇಶವೆಂದು ಕರೆದ

ಆತನು, ಇಲ್ಲಿಯ ಸರಕಾರದ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದ್ದಾನೆ. ಹುಯೆನ್ತ್ಸಾಂಗನು ಕ್ರಿ.ಶ. 630-644ರ ವರೆಗೆ ಭಾರತದಲ್ಲಿದ್ದವನು. ನಾಲಂದಾ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿದ ಈತನು, ಭರತಖಂಡದುದ್ದಕ್ಕು ಸಂಚರಿಸಿ, ಕಂಡಿದ್ದನ್ನು ಕೇಳಿದ್ದನ್ನು ಬರೆದನು. ಹರ್ಷವರ್ಧನನ ಬಗ್ಗೆ ಅಭ್ಯಾಸ ಮಾಡುವಾಗ, ಈತನ ಬರಹವು ಮುಖ್ಯ ಆಧಾರಗಳಲ್ಲಿ ಒಂದಾಗಿದೆ. The account of India left to us by Hiuen tsang reads like a gazeteer in the scope of its enquiry and its weather of detail' ಎಂಬ ಡಾ. ಆರ್. ಕೆ. ಮುಖರ್ಜಿಯವರ ಹೇಳಿಕೆ ನಮ್ಮ ದೇಶದ ಇತಿಹಾಸಕ್ಕೆ ಈತನು ನೀಡಿದ ಕೊಡುಗೆಯ ಮಹತ್ವವನ್ನು ತಿಳಿಸುತ್ತದೆ. ಹರ್ಷನ ಆಡಳಿತದ ಬಗ್ಗೆ ಹೇಳುತ್ತಾ "ಆಲಸ್ಯವೆಂಬುದನ್ನೇ ಇವನು ಕಾಣನು. ದಿನದ ಇಪ್ಪತ್ತುನಾಲ್ಕು ಗಂಟೆಗಳು ಇವನಿಗೆ ಸಾಕಾಗುವುದಿಲ್ಲ" (1:222-53) ಎಂದು ಹೇಳುತ್ತಾನೆ. ಆತನ ಸೈನ್ಯಬಲ ಮುಂತಾದುವುಗಳ ವರ್ಣನೆಗಳನ್ನು ಮಾಡಿದ್ದಾನೆ. ಶಿಲಾದಿತ್ಯನಿಗೆ ಸುತ್ತಮುತ್ತಲ ನಾಡುಗಳೆಲ್ಲ ಹೆದರಿ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದರೂ ಮಹಾರಾಷ್ಟ್ರದ ದೊರೆ ಮಾತ್ರ, ಜಗ್ಗಿಲ್ಲ (1:253) ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಚಾಲುಕ್ಯ ದೊರೆ ಎರಡನೇ ಪುಲಿಕೇಶಿಯ ಐಹೊಳೆ ಪ್ರಶಸ್ತಿಯು 'ಹರ್ಷನು ತನ್ನ ಹರ್ಷವನ್ನೇ ಕಳೆದುಕೊಂಡ' ಎಂಬ ಹೇಳಿಕೆಯನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕ್ರಿ. ಶ. 1030ರಲ್ಲಿ ಕನೋಜಿಗೆ ಬಂದ ಆಲ್ಬೆರುನಿ ಕೂಡ ಭಾರತದ ಇತಿಹಾಸಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾನೆ. "Alberuni, justly entitled the Master, a p ofoundly learned mathematician and astronomer, who entered India in the train of Mahmud of Gazni early in the eleventh century, applied his powerful intellect to the thorough study of the whole life of the Indians. He mastered the difficult Sanskrit language, and produced a truly scientific treatise, entitled 'An enquiry into India' (Tahkik-i-Hind) which is marvel of well-digested erudition." ಎಂದು ಇತಿಹಾಸಕಾರರಾದ ವಿ. ಎ. ಸ್ಮಿತ್‌ರವರು ಹೇಳಿದ್ದಾರೆ. ಹಿಂದೂಗಳು ವಿಷಯಗಳನ್ನು ಐತಿಹಾಸಿಕ ಕ್ರಮದಲ್ಲಿ ಬರೆಯಲು ಹೆಚ್ಚು ಆಸಕ್ತಿ ವಹಿಸುವುದಿಲ್ಲ, ಎಂಬುದಾಗಿ ಆಲ್ಬೆರುನಿ ಹೇಳುತ್ತಾನೆ. (1 : 323) ಇಂಡಿಯಾ ದೇಶದ ಪಶ್ಚಿಮ ಗಡಿಯ ಪರ್ವತಗಳಲ್ಲಿ ಅಫ್ಘಾನೀ ಬುಡಕಟ್ಟಿನ ಜನರು ವಾಸಮಾಡುವರೆಂದೂ, ದಕ್ಷಿಣದ ಗಡಿ ಸಮುದ್ರವೆಂದೂ ಉಲ್ಲೇಖಿಸಿದ್ದಾನೆ. (1 : 365) ಸಮುದ್ರಯಾನದಲ್ಲಿ ಹೆಸರುವಾಸಿಯಾದ ಮಾರ್ಕೊಪೋಲೋ ಮಲಬಾರ್ ದಂಡೆಗುಂಟ ಬಂದಿದ್ದನಂತೆ. ಮಲಬಾರ್ ನಾಡನ್ನು ಐದು ಜನ ರಾಜರು ಆಳುತ್ತಿದ್ದಾರೆ. ಅವರಲ್ಲಿ ಮುಖ್ಯನು

'ಬಂದಿ ದೇವರ್' (ಸುಂದರ ಪಾಂಡ್ಯ) ಎಂದು ಹೇಳಿದ್ದಾನೆ. (2 : 25) ಕ್ರಿ. ಶ. 1333 ರಿಂದ 1347ರ ವರೆಗೆ ಭಾರತದಲ್ಲಿದ್ದ ಇಬ್-ನೆ-ಬತೂತಾ ಆಗಿನ ದೆಲ್ಲಿಯ ದೊರೆ ಮಹಮದ್-ಬಿನ್-ತುಘಲಕನ ಆಸ್ಥಾನದಲ್ಲಿದ್ದ. ದೆಹಲಿಯ ಖಾಜಿಯೂ ಆಗಿದ್ದ 'ದಿಲ್ಲಿ ಸೈರಿ, ತುಗ್ಲಖಾಬಾದ್, ಜಹಾನ್, ಪನಾಹ್' ಈ ನಾಲ್ಕು ಪಟ್ಟಣಗಳು ಸೇರಿ ದೆಲ್ಲಿ ನಗರವಾಗಿದೆ (2 : 77) ಎಂದು ಹೇಳುತ್ತಾನೆ. ದೆಲ್ಲಿಯ ಬಗ್ಗೆ ವಿಸ್ತಾರವಾದ ಮಾಹಿತಿಯನ್ನು ಒದಗಿಸಿದ್ದಾನೆ. ಸುಲ್ತಾನನ ನಿಕಟವರ್ತಿಯಾಗಿ ಆತನ ಬಗೆಗೆ ಇವನು ಬರೆದಿರುವ ಬರಹ ಮಹತ್ವದ್ದಾಗಿದೆ. ಮಹಮ್ಮದ್ ತುಘಲಕನ ಮೇಲಿನ ಅತ್ಯಂತ ದೊಡ್ಡ ಆಪಾದನೆ ದೆಲ್ಲಿಯಿಂದ ದೇವಗಿರಿಗೆ ರಾಜಧಾನಿಯನ್ನು ಸ್ಥಳಾಂತರಿಸಿ, ಪುನಃ ದೇವಗಿರಿಯಿಂದ ದೆಲ್ಲಿಗೆ ಬಂದಿದ್ದು ಇದಕ್ಕೆ ಕಾರಣ. ಜನರು ಅವನನ್ನು ಹೀಯಾಳಿಸಿ, ಸಿಕ್ಕಾಪಟ್ಟೆ ಕಾಗದಗಳನ್ನು ಬರೆದುದು (2 : 82) ಎಂಬುದು ಈತನ ಹೇಳಿಕೆ.

ಪೋರ್ಚುಗೀಸ್ ಸಾಹಸಿ, ಸಮುದ್ರಯಾನಿ ವಾಸ್ಕೋಡಾ ಗಾಮಾ ತಾಲಿತತ್ ರಾಜ, ರಾಜ್ಯ, ಜನರ ಬಗ್ಗೆ ಹೇಳುತ್ತಾನೆ. ದು ಅರ್ತೆಬಾರ್ಬೊಸಾ ಡೆಕ್ಕನ್ ರಾಜ್ಯದ ಗಡಿಗಳನ್ನು ತಿಳಿಸುತ್ತಾನೆ. ಅಲ್ಲದೆ, ನರಸಿಂಗ ರಾಜ್ಯ (ವಿಜಯನಗರ) ಐದು ದೊಡ್ಡ ದೊಡ್ಡ ರಾಜ್ಯಗಳು ಕೂಡಿ ಆದ ಒಂದು ಮಹಾರಾಜ್ಯವೆಂದೂ, ಅವು—ತುಳಿನಾಟ್ (ತುಳಿನಾಡು) ಲೆಗ್ನಿ (ಬಂಕಾಪುರ ?), ಕನರಿ, ಚೋಮೆಂಡಲ್ (ಚೋಳಮಂಡಲ) ಗಳೆಂದೂ ಹೇಳುತ್ತಾನೆ. (2 : 480) ಕ್ರಿ ಶ. 1336ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ಬರೆಯಲು ಸಹಾಯಕವಾಗಿರುವ ದಾಖಲೆಗಳಲ್ಲಿ ಪೋರ್ಚುಗೀಸ್ ಪ್ರವಾಸಿ ಡೋಮಿಂಗೋ ಪಾಯೇಸ್ ಮತ್ತು ನ್ಯೂನಿಜ್ ಎಂಬ ಇಬ್ಬರ ಪ್ರವಾಸ ಕಥನಗಳು ಮುಖ್ಯವಾಗಿವೆ. The portuguese visitor Domingo Paes who was in Vijayanagara in the time of Krishnadevaraya (C. 1520 A,D.) furnishes many in teresting details about the king and the capital city in his narrative. They are highly useful to understand the human and personal aspects of Raya, apart from others" ಎಂದು, ಡಾ॥ ಪಿ.ಬಿ. ದೇಸಾಯಿಯವರು, ತಮ್ಮ 'A History of Karnataka' ಎಂಬ ಗ್ರಂಥದಲ್ಲಿ ಹೇಳಿದ್ದಾರೆ. ಕೃಷ್ಣದೇವರಾಯನ ವ್ಯಕ್ತಿತ್ವ, ನಗರ, ಸರಕು ಸಾಮಗ್ರಿಗಳು, ದೇಗುಲಗಳ ಬಗ್ಗೆ ವಿವರ ನೀಡುತ್ತಾನೆ. ಡೋಮಿಂಗೋ ಪಾಯೇಸ್, ಕೋಟೆಯ ವರ್ಣನೆ (2 : 372) ಹಬ್ಬಗಳನ್ನಾಚರಿಸುವ ರೀತಿ (2 : 374) ಮುಂತಾದುವು ಗಳನ್ನು ಬರೆದಿದ್ದಾನೆ. ನೂನಿಜ್ ಅಚ್ಯುತರಾಯನ ಕಾಲದಲ್ಲಿ ವಿಜಯನಗರಕ್ಕೆ ಬಂದವನು. ಈತನು ವಿಜಯನಗರದ ರಾಜರುಗಳ ಬಗ್ಗೆ ತಿಳಿಸಿದ್ದಾನೆ. ವಿದ್ಯಾರಣ್ಯ

ಗುರುವಿನ ಆಶೀರ್ವಾದ, ವಿದ್ಯಾರಣ್ಯ ನಗರ ಸ್ಥಾಪನೆಯ ಒಕ್ಕಲಿ (2 : 386-87)ಗಳ ಬಗ್ಗೆಯೂ ಹೇಳಿದ್ದಾನೆ. ಕೃಷ್ಣರಾಯನ ಯುದ್ಧಗಳು, ರಾಜ್ಯ ವಿಸ್ತರಣೆ, ವ್ಯಕ್ತಿತ್ವ, ಜನಹಿತ ಕಾರ್ಯಗಳ ಬಗ್ಗೆ ಹೇಳಿದ್ದಾನೆ. (2 : 392-412) ಅಚ್ಯುತರಾಯ ಮತ್ತು ಯಾದುಲ್‌ಖಾನರ ನಡುವಿನ ಯುದ್ಧವೇ ಮೊದಲಾದ ಸಂಗತಿಗಳ ಮೇಲೆ ಬೆಳಕು ಬೀರಿದ್ದಾನೆ. ಈ ಸಮಕಾಲೀನರ ಬರಹಗಳು, ಇತಿಹಾಸಕ್ಕೆ ಅಮೂಲ್ಯ ಆಧಾರಗಳೇ ಸರಿ. ಈ ನಿಟ್ಟಿನಲ್ಲಿ, ಇಟಲಿಯ ಪ್ರವಾಸಿಯಾದ ನಿಕೊಲೊ-ಡೆ-ಕೊಂಟಿಯ ಬರಹವನ್ನು ಮರೆಯುವಂತಿಲ್ಲ. ಈತನು ವಿಜಯನಗರದ ಅಧೀನವಾದ ಬಾರಕೂರು ರಾಜ್ಯದ ಬಗ್ಗೆ ಕೂಡ ಹೇಳುತ್ತಾನೆ. (2 : 125) ಪರ್ಷಿಯಾದ ಅಬ್ದುಲ್ ರಜಾಕ್, ಮಂಗಳೂರು ವಿಜಯನಗರದ ಗಡಿಯೆನ್ನುತ್ತಾನೆ. (2 : 152) ವಿಜಯನಗರದ ಸೌಂದರ್ಯಕ್ಕೆ ಮಾರುಹೋದ ಈತನು, 'ವಿಜಯನಗರದಂಥ ನಗರವನ್ನು ಕಣ್ಣು ಕಂಡಿಲ್ಲ ; ಕಿವಿ ಕೇಳಿಲ್ಲ' (2 : 155) ಎನ್ನುತ್ತಾನೆ. ಇಲ್ಲಿಯ ಕೋಟೆಯ ವರ್ಣನೆ (2 : 155) ಅರಮನೆ (2 : 156-57) ಆನೆ ಹಿಡಿಯುವ ವಿಧಾನ (2 : 158-59) ರಾಜನ ಗೃಹಪ್ರವೇಶ (2 : 163-65) ಮುಂತಾದುವುಗಳ ಬಗ್ಗೆ ಹೇಳುತ್ತಾನೆ. ಇಬ್-ನೆ-ಬತೂತಾನು, ಹೊನ್ನಾವರದ ರಾಜ ಜಲಾಲುದ್ದೀನನು, ಹರ್ಯಪನಿಗೆ (ಮೊದಲನೆ ಹರಿಹರ) ಅಧೀನನೆಂದೂ (2 : 96) ಹೇಳುತ್ತಾನೆ.

ಫಾದರ್ ಮೊನ್ಸೆರಿಟ್ ಮೊಗಲಚಕ್ರವರ್ತಿ ಅಕ್ಬರನ ಕಾಲದಲ್ಲಿ ಭಾರತಕ್ಕೆ ಬಂದಿದ್ದನು. ಅಕ್ಬರನ ಸೈನ್ಯದಲ್ಲಿ ಶಿಸ್ತು ನಿಯಮಗಳು (3 : 38-39) ಅಕ್ಬರನ ಕಾಬೂಲವಿಜಯ, (3 : 43) ಮುಂತಾದವುಗಳ ಬಗ್ಗೆ ಹೇಳುತ್ತಾನೆ. ಅಕ್ಬರನ ವ್ಯಕ್ತಿತ್ವ ನಿರೂಪಣೆಯಲ್ಲಿ, ಇವನ ಹೇಳಿಕೆಗಳು ಮಹತ್ವವಾದವುಗಳು. ಕ್ರಿ.ಶ. 1598 ರಲ್ಲಿ. ಅಕ್ಬರನ ಡೆಕ್ಕನ್ ದಂಡಯಾತ್ರೆಯಲ್ಲಿ ಜೊತೆಗಿದ್ದು, ವರ್ಣಿಸಿದ ವರ್ಣನೆ, ಜೆನಿಟೋ-ದೆ-ಗೊಯೆಜ್ ಎಂಬ ಪ್ರವಾಸಿಯ ಬರಹದಲ್ಲಿದೆ. (3 : 63) ಮೊಗಲ ಚಕ್ರವರ್ತಿಯ ಪ್ರಾಬಲ್ಯ, ಶ್ರೀಮಂತಿಕೆ, ಆಡಳಿತ ವಿಧಾನ ಮುಂತಾದವುಗಳ ಬಗ್ಗೆ ವಿಲಿಯಂ ಹಾಕಿನ್ಸನು ಹೇಳುತ್ತಾನೆ. (3 : 151-57) ಕ್ರಿಶ್ಚನ್ ಮಿಶನರಿಗಳ ಬರಹಗಳು ಅಕ್ಬರನ ವ್ಯಕ್ತಿತ್ವದ ವಿವಿಧ ಮುಖಗಳನ್ನು ಎತ್ತಿ ತೋರಿಸುತ್ತವೆ. ವಿಲಿಯಂ ಫಿಂಚ್, ತನ್ನ ಬರಹದಲ್ಲಿ, ಜಹಾಂಗೀರನು ಡೆಕ್ಕನ್ ದಂಡಯಾತ್ರೆಗಾಗಿ ಖಾನ ಅಜಂ, ಮತ್ತು ಮಹಬತ್‌ಖಾನರನ್ನು 10,000 ಅಶ್ವಬಲದೊಂದಿಗೆ ಕಳಿಸಿದನೆಂದು ಹೇಳಿದ್ದಾನೆ. (3 = 167) 'ಇಲ್ಲಿಯ ಸರಕಾರ ಬಹಳ ಅಭದ್ರ. ಬರೆದಿಟ್ಟ ಕಾಯಿದೆ ಕಟ್ಟಳೆಗಳಿಲ್ಲ. ಇಂಥದೇ ಧೋರಣೆ ಎಂಬುದಿಲ್ಲ. ಸುಂಕ ಸಾರಿಗೆಗಳ ನೀತಿಯೂ ಅನಾಗರಿಕ' ಎಂದು ಮುಂತಾಗಿ ಹೇಳಿದವನು ಜಹಾಂಗೀರನ ಆಸ್ಥಾನಕ್ಕೆ ಬಂದ ಸರ್ ಥಾಮಸ್ ರೋ. (3 = 230) ಅಕ್ಬರನ ಆಡಳಿತಕ್ಕೂ, ಜಹಾಂಗೀರನ ಆಡಳಿತಕ್ಕೂ ಇರುವ ಅಂತರ ಇಲ್ಲಿ ತಿಳಿಬರುವುದು. ಬರ್ನ್ಯೇ ಎಂಬ ವೃತ್ತಿಯಲ್ಲಿ ವೈದ್ಯನಾದ ಪ್ರವಾಸಿಗನು, ಔರಂಗಜೇಬ

ನೊಡನೆ ಕಾಶ್ಮೀರಕ್ಕೆ ಹೋಗಿದ್ದ. ಷಹಜಹಾನನ ಬಗ್ಗೆ ಕೂಡ ಈತನು ಹೇಳುತ್ತಾನೆ. ಷಹಜಹಾನ್ ಔರಂಗಜೇಬನ ತಂತ್ರಕ್ಕೆ ಮೋಸ ಹೋಗುತ್ತಾನೆ (5 = 46-49) ದಾರಾ ಮತ್ತು ಸೂಜಾ ಇವರು ಔರಂಗಜೇಬನೊಡನೆ ನಡಸಿದ ಹೋರಾಟದ ವಿವರಣೆ ಮತ್ತು ಪರಿಣಾಮಗಳನ್ನು ಈತನು ನೀಡುತ್ತಾನೆ. ದಾರಾ-ಔರಂಗಜೇಬರ ನಡುವಿನ ಸಮಾಘರ್ ಯುದ್ಧದ ಬಗ್ಗೆ ಹೇಳುತ್ತಾನೆ. (5 = 34-46) ಇಷ್ಟೇ ಅಲ್ಲ, ಷಹಜಹಾನ್ ಮತ್ತು ರಾಯಭಾರಿಗಳ ನಡುವೆ ನಡೆದ ಸಂಭಾಷಣೆ, ಶಿವಾಜಿ–ಔರಂಗಜೇಬರ ಸಂಬಂಧ, ಗೋಲ್ಕೊಂಡ, ವಿಜಾಪುರ ಮತ್ತು ದೆಲ್ಲಿಗಳ ನಡುವಿನ ಸಂಬಂಧ ಮುಂತಾದವುಗಳನ್ನು ಹೇಳುತ್ತಾನೆ. (5 = 104–8) ಮೊಗಲರ ಮಿಲಿಟರಿ ಪದ್ಧತಿ (5 = 146-50) ಸರಕಾರದ ಆಯ-ವ್ಯಯ (5 = 151–53) ದೆಹಲಿ ಕೋಟೆ (5 = 178-88) ಮುಂತಾದವುಗಳ ಸಮಗ್ರ ಚಿತ್ರಣ ನಮಗೆ ಇಲ್ಲಿ ಸಿಗುತ್ತದೆ.

ವಜ್ರ ವ್ಯಾಪಾರಿ ಟಾವರ್ನ್ಯೇ 1641 ರಿಂದ 66ರ ವರೆಗಿನ ಅವಧಿಯಲ್ಲಿ, ಆರು ಬಾರಿ ಭಾರತಕ್ಕೆ ಬಂದಿದ್ದನು. ಷಹಜಹಾನನ ಕೊನೆಯ ದಿನಗಳು, ರಾಜ್ಯಕ್ಕಾಗಿ ಆಂತರಿಕ ಕಲಹಗಳ ಬಗ್ಗೆ ಹೇಳುತ್ತಾನೆ.

ಇಟಲಿ ದೇಶದ ನಿಕೊಲೊ ಮನೂಚಿಯ ಬರಹವೊಂದೇ ಆರನೆಯ ಸಂಪುಟದ ವಿಷಯವಾಗಿದೆ. ಮೊಗಲ ಚಕ್ರವರ್ತಿಗಳು, ಮತ್ತು ಷೇರಷಹನ ಬಗ್ಗೆ ಹೇಳುತ್ತಾನೆ, ಮೊಗಲ ಸಿಂಹಾಸನಕ್ಕಾಗಿ ಹೋರಾಟ, ಔರಂಗಜೇಬನ ದರ್ಬಾರು, ಔರಂಗಜೇಬನ ದಂಡಯಾತ್ರೆಗಳು, ಮೊಗಲಚಕ್ರಾಧಿಪತ್ಯದ ಸ್ಥಿತಿಗತಿಗಳು ಮುಂತಾದವುಗಳ ಬಗ್ಗೆ ವಿವರವಾದ ಮಾಹಿತಿ ಇಲ್ಲಿ ದೊರೆಯುತ್ತದೆ.

ಹೀಗೆ, ಪ್ರಾಚೀನಭಾರತದ ಮತ್ತು ಮಧ್ಯಯುಗದ ಇತಿಹಾಸವನ್ನು ತಿಳಿಯಲು 'ಪ್ರವಾಸಿಕಂಡ ಇಂಡಿಯಾ'ದ ಈ ಆರು ಸಂಪುಟಗಳು ಕೈಗನ್ನಡಿಗಳಾಗಿವೆ. ಇನ್ನೂ ಅನೇಕ ಪ್ರವಾಸಿಗಳ ಪ್ರವಾಸ ಕಥನಗಳನ್ನು, ಮುಂದಿನ ನಾಲ್ಕು ಸಂಪುಟಗಳಲ್ಲಿ ಹೊರ ತರುವರೆಂದು, ಶ್ರೀ ನಾಗೇಗೌಡರೇ ಹೇಳಿದ್ದಾರೆ.

ಇದರಂತೆ ಈ ಅವಧಿಯ ಸಾಮಾಜಿಕ ಸ್ಥಿತಿಗತಿಗಳನ್ನೂ, ಇವುಗಳಿಂದ ತಿಳಿದು ಕೊಳ್ಳಬಹುದು. ಇಂಡಿಯಾದಲ್ಲಿ, ಸಮಾಜವು ಏಳು ಪಂಗಡಗಳಲ್ಲಿ ವಿಭಾಗಿಸಲ್ಪಟ್ಟಿವೆ ಯೆಂದು ಮೆಗಾಸ್ತನೀಸ್ ಹೇಳುತ್ತಾನೆ. (1 : 34) ಇಲ್ಲಿ ಆಗ ನೂರಾಹದಿನೆಂಟು ಜನಾಂಗಗಳು ಇದ್ದವಂತೆ. ಅಲ್ ಇದ್ರೀಸಿ ಎಂಬ ಮೊರಾಕ್ಕೊ ಪ್ರವಾಸಿ, ಶಾಕ್ರಿಯ ಬ್ರಾಹ್ಮಣ, ಕ್ಷತ್ರಿಯ, ಶೂದ್ರ, ವೈಶ್ಯ, ಚಂಡಾಲ, ಮತ್ತು ಜತ್ಯಾ ಎಂಬ ಏಳು ಪಂಗಡ ಗಳು ಸಮಾಜದಲ್ಲಿದ್ದವೆಂದು ಹೇಳಿದ್ದಾನೆ. (1 : 322) ಆಗ ಇಂಡಿಯಾದ ಒಳನಾಡು ಗಳಲ್ಲಿ ನಾಲ್ವತ್ತೆರಡು ಒಳಜಾತಿಗಳು ಇದ್ದವಂತೆ. (1 : 324) ಅಲ್ಬೆರುನಿ ನಾಲ್ಕು ಜಾತಿಗಳನ್ನು ಹೆಸರಿಸಿದ್ದಾನೆ. (1 : 324) ದುಆರ್ತೆ ಬಾರ್ಬೋಸಾ ಜಂಟೈಲರು, ಮೂರರು, ಬನಿಯನ್ನರು, ಬ್ರಾಮಿನರ ಬಗ್ಗೆ ಹೇಳಿದ್ದಾನೆ. (ಸಂ 2)

ಮೆಗಾಸ್ತನೀಸನು ಭಾರತೀಯ ಸಮಾಜದಲ್ಲಿರುವ ಮಂತ್ರ–ತಂತ್ರಗಳ ಕುರಿತು ನಂಬಿಗೆಯ ಬಗ್ಗೆ ಹೇಳಿದ್ದಾನೆ. (1 : 51) ಹಿಂದುಗಳಲ್ಲಿರುವ ಮೂಢನಂಬಿಕೆಗಳನ್ನು ಬರ್ನ್ಯೇ (5 : 227) ವಿವರಿಸಿದ್ದಾನೆ. ಹಿಂದುಗಳಿಗೆ ನಂಬಿಕೆಗಳಂತೆ ತತ್ವಗಳು ಇಪ್ಪತ್ತೈದು ಎಂದು ಅಲ್ಬೆರೂನಿಯ ಅಭಿಪ್ರಾಯ. ಪಂಚ ಕರ್ಮೇಂದ್ರಿಯಗಳ ಬಗ್ಗೆ, ಸ್ವರ್ಗ–ನರಕ–ಪಾತಾಳಲೋಕಗಳ ಬಗ್ಗೆ ಇರುವ ನಂಬಿಕೆಗಳನ್ನು ಹೇಳುತ್ತಾನೆ. (1 : 340) ಬ್ರಾಹ್ಮಣರ ಮಂತ್ರ–ತಂತ್ರಗಳ ಬಗ್ಗೆ ದುಅರ್ತೆ ಬಾರ್ಬೋಸಾ ಕೂಡ ಹೇಳುತ್ತಾನೆ. (2 : 25) ಕಾಡೆತ್ತಿನ ಬಾಲ ಅದೃಷ್ಟಕರವೆಂಬುದು ಹಿಂದುಗಳ ನಂಬಿಗೆಯೆಂದು ಮಾರ್ಕೊಪೋಲೋನ ಮತ (2 : 32) ಫಾದರ್ ಅಂತೋಣಿ ಮೊನ್ಸೆರೇಟ್, ಅಕ್ಬರನ ಅರಮನೆಯಲ್ಲಿ ದೆವ್ವದ ಕಾಟಗಳನ್ನು ಹೇಳುತ್ತಾನೆ. ದೆವ್ವಗಳು ಬಟ್ಟೆಬರೆಗಳನ್ನು ಹರಿದು ಚಿಂದಿ ಚಿಂದಿ ಮಾಡುತ್ತಿದ್ದವು. ಹೆಂಗಸರು ಮಕ್ಕಳನ್ನು ಹೆದರಿಸಿದುವು ; ಕಲ್ಲುಗಳನ್ನು ಎಸೆದವು. ಇಷ್ಟೇ ಆಗಿದ್ದರೆ ಚಿಂತೆ ಇರಲಿಲ್ಲ. ಹುಟ್ಟಿದ ಮಕ್ಕಳು ಒಂದೆರಡು ದಿನಗಳಲ್ಲಿಯೇ ಸತ್ತುಹೋಗುತ್ತಿದ್ದವು (3 : 31) ಎನ್ನುವಲ್ಲಿ, ದೆವ್ವ ಭೂತಗಳಲ್ಲಿ ನಂಬಿಗೆಯು ಕಂಡುಬರುತ್ತದೆ. ಹೀಗೆ ಅನೇಕ ಜನಪದ ನಂಬಿಕೆಗಳು 'ಪ್ರವಾಸಿ ಕಂಡ ಇಂಡಿಯಾ'ದಲ್ಲಿ ಇವೆ.

ಭಾರತೀಯ ಸಮಾಜದಲ್ಲಿದ್ದ 'ಸತಿ' ಪದ್ಧತಿಯ ಬಗ್ಗೆ ಡಿಯೊಡೋರಸ್ ಸಿಕ್ಯುಲಸ್ (1 : 75–77) ಇಬ್ನ್-ಬತೂತಾ (2 : 75–76) ಮುಂತಾದ ಅನೇಕ ಪ್ರವಾಸಿಗಳು ತಿಳಿಸಿದ್ದಾರೆ. ನಿಕೋಲೋ ಕೊಂಟಿಯು ಉತ್ತರಕ್ರಿಯೆಯ ಬಗ್ಗೆ ಹೇಳುತ್ತಾ 'ಮುಂಭಾಗದ ದೇಶದಲ್ಲಿ ಹೆಣವನ್ನು ಹೂಳುತ್ತಾರೆ. ಮಧ್ಯ ಇಂಡಿಯಾದಲ್ಲಿ ದಹನ ಮಾಡುತ್ತಾರೆ ಎಂದು ಹೇಳಿದ್ದಾನೆ. (2 : 137)

ನಿಕೋಲೋ ಕೊಂಟಿಯು ಹಿಂದುಗಳ ಹಬ್ಬಗಳಾದ, ಯುಗಾದಿ, ದೀಪಾವಳಿ, ನವರಾತ್ರಿಗಳ ಬಗ್ಗೆ ಹೇಳುತ್ತಾನೆ. (2 : 140) ಜನಪದ ಕೋಲಾಟದ ವರ್ಣನೆಯು ಇವನ ಬರಹದಲ್ಲಿವೆ. (2 : 141) ಅಬ್ದುರ್ ರಜಾಕನು ವಿಜಯನಗರದ ದೊಂಬರಾಟದ ಸೊಗಸನ್ನು ಸವಿಯುತ್ತಾನೆ. (2 : 165) ರಜಾಕನು ಸಮುದ್ರತೀರದ ಜನರ ಲಂಗೋಟಿಯ ಬಗ್ಗೆ ಹೇಳುತ್ತಾನೆ. (2 : 150) ಈ ಉಡುಪಿನ ಬಗ್ಗೆ ಪ್ರವಾಸಿಗಳ ಕಥನಗಳ ಉದ್ದಕ್ಕೂ ವರ್ಣನೆ ಸಿಗುತ್ತವೆ. ಇಂಡಿಯನ್ನರ ಸ್ವಭಾವದ ಕುರಿತು, 'ಅರೆಹೊಟ್ಟೆ ಉಂಡಾದರೂ ತಂದೆ ತಾಯಿಗಳನ್ನು ಸಾಕಿ ಸಲಹುತ್ತಾರೆ ; ಈ ಪಾಠವನ್ನು ಕ್ರೈಸ್ತಬಾಂಧವರು ಕಲಿಯಬೇಕು' ಎಂಬುದಾಗಿ ಎಡ್ವರ್ಡ್ ಟೆರ್ರಿ ಹೇಳಿದ್ದಾನೆ. (3 : 310) ಹ್ಯುಯೆನ್‌ತ್ಸಾಂಗನು ಕರ್ನಾಟಕದ ಜನತೆಯ ಸ್ವಭಾವವನ್ನು ವಿವರಿಸುತ್ತಾ, ಯಾಚಿಸಿದರೆ ವೈರಿಗಾದರೂ ಆಶ್ರಯ ನೀಡುವ ಕೆಚ್ಚೆದೆಯವರು ಎಂದು ಹೇಳುತ್ತಾನೆ.

ಬರ್ನ್ಯೇ ನೀಡುವ ಔರಂಗಜೇಬ ಮತ್ತು ಅವನ ಗುರು ಮುಲ್ಲಾಸಾಹೇಬ ಇವರ ನಡುವಿನ ಸಂಭಾಷಣೆ ಶಿಕ್ಷಣದ ಧ್ಯೇಯವನ್ನು ನಿರೂಪಿಸುತ್ತದೆ. (5–104–8)

ಕೇವಲ ವ್ಯಾಕರಣ ಮತ್ತು ಸಾಹಿತ್ಯವನ್ನು ಮಾತ್ರ ಕಲಿಸಿದ, ಧಾರ್ಮಿಕ ಶಿಕ್ಷಣ ನೀಡಿದ ಆ ಗುರುವಿನ ಮೇಲೆ ಔರಂಗಜೇಬನಿಗೆ ಕೋಪ. ತನಗೆ ಸೈನ್ಯ ಶಿಕ್ಷಣ, ಸಂಘಟನಾ ಚಾತುರ್ಯತೆ, ಹೊರನಾಡುಗಳಲ್ಲಿ ಆಗಿಹೋದ ವಿಚಾರಗಳು, ವೈಜ್ಞಾನಿಕ ಬೆಳವಣಿಗೆ ಮುಂತಾದುವುಗಳ ಬಗ್ಗೆ ಏನೂ ಕಲಿಸಲಿಲ್ಲವೆಂದು ಔರಂಗಜೇಬನ ಆರೋಪ.

ಆಲ್ಬೆರುನಿ ವರ್ಣಾಶ್ರಮ ಧರ್ಮ (1:378) ಬಾಲ್ಯವಿವಾಹ (1:384) ಮುಂತಾದುವುಗಳ ಬಗ್ಗೆ ಹೇಳುತ್ತಾನೆ. ಹೆಂಗಸರು, ಗಂಡಸರು ದಿನಕ್ಕೆರಡುಬಾರಿ ಸ್ನಾನ ಮಾಡುತ್ತಾರೆ. ಮದ್ಯಪಾನ ಮತ್ತು ಸಮುದ್ರಯಾನಗಳು ಹಿಂದುಗಳಿಗೆ ನಿಷಿದ್ಧ ಎಂದು ಮಾರ್ಕೋಪೋಲೋ ಹೇಳುತ್ತಾನೆ. (2 : 28) ಈತನು ದೇವದಾಸಿ ಪದ್ಧತಿಯ ಬಗ್ಗೆ ಬರೆದಿದ್ದಾನೆ. (2:31) ಇತರ ವಿದೇಶಿ ಪ್ರವಾಸಿಗಳಂತೆ ಮಾರ್ಕೋಪೋಲೋ ಕೂಡ ತಾಂಬೂಲದ ವರ್ಣನೆ ಮಾಡಿದ್ದಾನೆ. (2:38) ಇಬ-ನೆ-ಬತೂತ ಅಂಚೆ ಪದ್ಧತಿಯ ಬಗ್ಗೆ ಬರೆದಿದ್ದಾನೆ. (2:70)

ನರಮಾಂಸ ತಿನ್ನುವ ಪದ್ಧತಿಯನ್ನು ಹಿರೋಡೋಟಸ್ ಹೇಳುತ್ತಾನೆ. (1= 6) ಟೇಸಿಯಸ್ಸನು ಹೈಪಾರ್ನೋಸ್ (ಗಂಗಾನದಿ ?) ನ ಬಳಿ ನಾಯಿಮುಖಗಳಂಥ ಜನರು ಇರುವರೆಂದೂ, ಅವರು ನರಮಾಂಸ ಭಕ್ಷಕರೆಂದೂ ಹೇಳಿದ್ದಾನೆ. (1 =16) ಅವನ ಪ್ರಕಾರ ಗುಹೆಯಲ್ಲಿ ವಾಸಮಾಡುವ ಕೈನೊ ಕೆಫಲಾಯ್ ಜನರು ಮಾಂಸವನ್ನು ಒಣಗಿಸಿ ತಿನ್ನುತ್ತಿದ್ದರು. (1= 17) ಜನರು ಮೈಗೆ ಬೆಣ್ಣೆ ವರೆಸಿಕೊಳ್ಳುವ ಪದ್ಧತಿಯನ್ನು ಇವನು ಹೇಳಿದ್ದಾನೆ. (1 =17)

ಫಾಹಿಯಾನ್ ಹುಯೆನ್‌ತ್ಸಾಂಗರ ಬರಹಗಳುದ್ದಕ್ಕೂ ಸಾಮಾಜಿಕ ಜೀವನದ ಚಿತ್ರಣಗಳಿವೆ. ಹೀಗೆ ಅಂದಿನ ಸಮಾಜ ಜೀವನದ ರೀತಿ ನೀತಿಗಳನ್ನು ಈ ಸಂಪುಟಗಳಲ್ಲಿ ನಮಗೆ ಒದಗಿಸುತ್ತವೆ.

ಇದರಂತೆ, ವಿದೇಶೀ ಪ್ರವಾಸಿಗಳು, ತಮ್ಮ ಬರಹಗಳ ಉದ್ದಕ್ಕೂ, ಪ್ರಾಣಿಗಳು, ಹಕ್ಕಿಗಳು, ಮರ ಮುಟ್ಟುಗಳು, ಪರ್ವತಗಳು, ನದಿಗಳು, ಭೂಗುಣ, ವಾಯುಗುಣಗಳ ಬಗ್ಗೆ ಕೂಡ ಹೇಳುತ್ತಾರೆ.

ಈ ಪ್ರವಾಸಿಗಳು, ಪಟ್ಟಣಗಳು, ಬಂದರುಗಳು, ವ್ಯಾಪಾರ ಕೇಂದ್ರಗಳು ಮುಂತಾದವುಗಳ ಬಗ್ಗೆ ಕೂಡ ಹೇಳಿದ್ದಾರೆ. ಹೈಪಾರ್ನೋಸ್ ನದಿಯ ದಂಡೆಯ ಮೇಲೆ ಕಡುಗೆಂಪು ಬಣ್ಣದ ಹೂಗಳು ಬೆಳೆಯುತ್ತವೆ. ಅವುಗಳನ್ನು ಬಟ್ಟೆಗೆ ಬಣ್ಣ ಹಾಕಲು ಉಪಯೋಗಿಸುವರು ಎಂದು ಟೇಸಿಯಸ್ಸನು ಹೇಳುತ್ತಾನೆ. (1= 16) ಮಾರ್ಕೋಪೋಲೊ ಸಮುದ್ರ ತೀರದ ಪಟ್ಟಣಗಳಾದ ಮಟ್‌ಫಿಲಿ, ಕಾಯೆಲ್, ತಿರುವಾಂಕೂರು, ಕೇಪ್‌ಕೊಮೊರಿನ್, ಮಲಬಾರ, ಗುಜರಾತ್, ಟಾನಾ, ಕ್ಯಾಂಬೆ, ಮುಂತಾದವುಗಳ ಬಗ್ಗೆ ಹೇಳುತ್ತಾನೆ. (2= 1-45) ಸೆಣಬಿನಿಂದ ತಯಾರಿಸಿದ ಕಬ್ಬಿಣವನ್ನೇ ಉಪಯೋಗಿಸದ ಹಡಗುಗಳ ಬಗ್ಗೆ ಫ್ರೈಯರ್ ಒಡೊರಿಕ್ ಹೇಳುತ್ತಾನೆ.

(2 = 54) ಹೊನ್ನಾವರದ ಪಟ್ಟಣದ ಬಗ್ಗೆ ದುಆರ್ತೆಬಾರ್ಬೋಸಾ ಹೇಳುತ್ತಾನೆ. (2 = 281) ಅವನು ಭಟ್ಕಳವನ್ನು ಶ್ರೀಮಂತ ಊರೆಂದೂ, ಮಯಂದೂರು (ಬೈಂದೂರು) ಬಳಿಯ ಭತ್ತ ಬೆಳೆಯುವ ಸ್ಥಳವೆಂದೂ, ಹೇಳುತ್ತಾನೆ. (2 = 285) ಆಲ್ಬಿರೂನಿ ತೂಕ ಮತ್ತು ಅಳತೆಗಳ ಬಗ್ಗೆ ಹೇಳುತ್ತಾನೆ. (ತೊಲೆ, ಭಾರಾ, ಬೀಸೀ ಮುಂತಾದವುಗಳು) ದೂರದ ಅಳತೆಯನ್ನು 'ಅಂಗುಲ, ರಾಮ, ಮುಷ್ಟಿಹತ್ತಾ (ಗಜ) ಧನು, ನಲ್ವ ಕ್ರೋಶಗಳಿಂದ ಅಳೆಯುತ್ತಿದ್ದರಂತೆ (1 = 354) ದುಆರ್ತೆ ಬಾರ್ಬೋಸಾ, ಭಟ್ಕಳ, ಗೋವಾ, ಚೌಲ್ ದಾಬುಲ್ ಬಂದರುಗಳ ಮುಖಾಂತರ ವ್ಯಾಪಾರವು, ಮೆಕ್ಕಾ, ಏಡನ್, ಜೀಲಾ ಬರ್ಬರ, ಮಡಗಾಸ್ಕರ, ಮೊಂಬಾಸ್ ಮುಂತಾದ ದೇಶಗಳೊಡನೆ ನಡೆಯುತ್ತಿತ್ತೆಂದು ಹೇಳುತ್ತಾನೆ. (2 : 269) ಪೋರ್ಚುಗೀಸರ ಮತ್ತು ವಿಜಯನಗರದ ನಡುವಿನ ವ್ಯಾಪಾರವನ್ನು ಅನೇಕ ಪೋರ್ಚುಗೀಸ ಪ್ರವಾಸಿಕರು ವಿವರವಾಗಿ ಹೇಳಿದ್ದಾರೆ. ಟಾವರ್ನ್ಯೇ ಮೊಗಲರ ಆರ್ಥಿಕಸ್ಥಿತಿ, ನಾಣ್ಯಗಳ ವಿಚಾರ, ತೂಕ, ಅಳತೆ, ಭೂಮಾಲಿಕತ್ವ ಮುಂತಾದವುಗಳ ಬಗ್ಗೆ ಹೇಳಿದ್ದಾನೆ (5 : 143) ಪ್ಲಿನಿಯ ಪ್ರಾಕೃತಿಕ ಚರಿತ್ರೆ 37 ಭಾಗಗಳಲ್ಲಿವೆ. ಆರನೆಯ ಭಾಗದಲ್ಲಿ ಇಂಡಿಯಾದೇಶದ ಭೂಗೋಳದ ಬಗ್ಗೆ ಹೇಳಿದ್ದಾನೆ. ಇಲ್ಲಿಯ ಬಂದರುಗಳು, ಖನಿಜಸಂಪತ್ತು, ಪ್ರಶಸ್ತ ಶಿಲೆಗಳು, ಮೆಣಸು, ಶುಂಠಿಗಳ ಬಗ್ಗೆ ಹೇಳುತ್ತಾನೆ. 'ಎರಿತ್ರಿಯನ್ ಸಮುದ್ರಮಾರ್ಗದರ್ಶಕ'ದ ಲೇಖಕನು ಇಂಡಿಯಾದೇಶದ ಕಬ್ಬಿಣ, ಉಕ್ಕು, ಹತ್ತಿಬಟ್ಟೆಗಳ ರಫ್ತಿನ ವಿಷಯವಾಗಿ ಹೇಳುತ್ತಾನೆ. ಬಟ್ಟೆಗಳ ಬಗೆಗಳು, ವ್ಯಾಪಾರಿಕೇಂದ್ರಗಳು, ಸಮುದ್ರಗಳ ಬಗ್ಗೆ ವಿವರಣೆಯಿದೆ. ಇಲ್ಲಿ ಸುಪ್ಪಾರ, (ಸೋಪಾರ) ಕಲ್ಲೀಣ (ಕಲ್ಯಾಣ) ಮುಂತಾದ ಸಂತೆಯ ಸ್ಥಳಗಳನ್ನು ಈ ಬರವಣಿಗೆಯಲ್ಲಿ ಕಾಣಬಹುದು. (1 : 97) ಟಾಲೆಮಿಯು ಇಂಡಿಯಾದೇಶದ ಸಮುದ್ರತೀರದ ಸ್ಥಳಗಳನ್ನು ವರ್ಣಿಸಿ, ಅನಂತರ ಪರ್ವತಶ್ರೇಣಿಗಳನ್ನು ವರ್ಣಿಸಿದ್ದಾನೆ. ಅಕ್ಷಾಂಶ-ರೇಖಾಂಶಗಳನ್ನೂ ಸೂಚಿಸಿದ್ದಾನೆ. ಅಲ್ಲದೆ ನಾನಾನದಿಗಳ ಮೂಲಗಳು, ನದಿಗಳು ಸಂಧಿಸುವ ಸ್ಥಳಗಳನ್ನೂ ಹೇಳಿ, ಅಕ್ಕಪಕ್ಕದ ಜನರ ಕುರಿತು ಬರೆದಿದ್ದಾನೆ. (1-106-23) ಅಫನೇಸಿಯಸ್ ನಿಕಿಟಿನ್ ರಾಯಚೂರಿನಲ್ಲಿ ಸಿಗುವ ವಜ್ರಗಳ ಬಗ್ಗೆ ಹೇಳಿದ್ದಾನೆ. (2 : 185)

ಭಾರತೀಯರ ಧಾರ್ಮಿಕ ಜೀವನದ ಬಗ್ಗೆ ಕೂಡ ವಿದೇಶೀ ಪ್ರವಾಸಿಗಳು ಸಾಕಷ್ಟು ಬರೆದಿದ್ದಾರೆ. ಹಿಂದೂಗಳಾಗಲೀ, ಮಹಮ್ಮದೀಯರಾಗಲೀ, ತಮ್ಮ ಧರ್ಮ ಏನು ಹೇಳುವುದೋ ಅದರಂತೆ ನಡೆಯುತ್ತಾರೆ, ಎಂದು ಎಡ್ವರ್ಡ್ ಟೆರ್ರಿ ಹೇಳುತ್ತಾನೆ. (3:310) ಕ್ಲೆಮೆಂಟ್ ಅಲೆಕ್ಸಾಂಡ್ರಿನಸ್ ಬ್ರಾಹ್ಮಣ ಮತದ ಬಗ್ಗೆ, ಬೌದ್ಧ ಶ್ರಮಣರ ಬಗ್ಗೆ ಹೇಳುತ್ತಾನೆ. ಬೌದ್ಧ ಶ್ರಮಣರು ಜೀವಿತವೆಲ್ಲ ಬೆತ್ತಲೆಯಾಗಿಯೇ ತಿರುಗುತ್ತಾರೆ. ಇವರು ಸತ್ಯೋಪಾಸಕರು. ಸ್ತೂಪಗಳನ್ನು ಪೂಜಿಸುತ್ತಾರೆ. ಎಂದು ಮುಂತಾಗಿ ಹೇಳುತ್ತಾನೆ (1:28) ಬೌದ್ಧರ ಕುರಿತು ಮೊಟ್ಟ ಮೊದಲಿಗೆ

ಹೇಳುವ ವಿದೇಶೀ ಪ್ರವಾಸಿಗನು ಇವನೆಂದು ಡಾ. ಆರ್. ಸಿ. ಮುಜುಂದಾರರು ಹೇಳಿದ್ದಾರೆ. ಬರ್ಡ್ಡಿಸನೆಸನು ಬ್ರಹ್ಮಣರ ಮತ್ತು ಶ್ರಮಣರ ಬಗ್ಗೆ ಹೇಳುವವನು (1:31) ಫಾಹಿಯಾನ್, ಹುಯೆನ್‌ತ್ಸೆಂಗ್, ಮತ್ತು ಇತ್ಸಿಂಗರು ಬೌದ್ಧಧರ್ಮದ ಅಭ್ಯಾಸಕ್ಕಾಗಿಯೇ ಭಾರತಕ್ಕೆ ಬಂದವರು. ಬೌದ್ಧರ ಪವಿತ್ರ ಕ್ಷೇತ್ರಗಳನ್ನೆಲ್ಲಾ ಸಂಚರಿಸಿ, ಆ ಬಗೆಗೆ ಬರೆದಿದ್ದಾರೆ. ಅಂತೋನಿ ಮೊನ್ಸಿಟ್, ಅಕ್ಬರನ ಕಾಲಕ್ಕೆ ದೆಲ್ಲಿಗೆ ಬಂದವನು ಅಕ್ಬರನಿಗೆ ಕ್ರಿಶ್ಚನ್ ಧರ್ಮದ ಮಹತ್ವವನ್ನು ವಿವರಿಸಿದವನು. ಸರ್ವಧರ್ಮ ಪ್ರಿಯನಾದ ಅಕ್ಬರನು ಈ ಧರ್ಮದ ಬಗ್ಗೆ ಆಸಕ್ತಿ ತಳೆದನು. ಆಗ ರುಡಾಲ್ಫನು, ಚಕ್ರವರ್ತಿಯನ್ನು ಮತಾಂತರಕ್ಕೆ ಪ್ರೇರೇಪಿಸುತ್ತಾನೆ, , ಆದರೆ ಆತನು ಆಯಶಸ್ವಿಯಾದ ಎಂದು ಮೊನ್ಸೆಟ್ ತಿಳಿಸುತ್ತಾರೆ (3 : 43-44) ಔರಂಗಜೇಬನ ಮತಾಂಧತನವನ್ನು ಪ್ರವಾಸಿಗರು ಹೇಳಿದ್ದಾರೆ. ಬಹುತೇಕ ಎಲ್ಲಾ ಪ್ರವಾಸಿಗಳೂ, ಹಿಂದುಗಳ ವಿಗ್ರಹಾರಾಧನೆಯ ಬಗ್ಗೆ ಬರೆದಿದ್ದಾರೆ. ಅಲ್ಬೆರುನಿ, ಹಿಂದು-ಮುಸಲ್ಮಾನ ಮತಗಳಲ್ಲಿ ಇರುವ ಭೇದಗಳನ್ನು ಎತ್ತಿ ತೋರಿಸಿದ್ದಾನೆ. ಹಿಂದುಗಳ ಖಗೋಲಶಾಸ್ತ್ರಕ್ಕೂ, ಮತ ವಿಚಾರಗಳಿಗೂ ನಿಕಟ ಸಂಬಂಧವಿದೆಯೆಂದು ಅವನ ಅಂಬೋಣ. (1= 352

ವಿದೇಶೀ ಪ್ರವಾಸಿಗರು, ಹಿಂದುಗಳ ಜ್ಯೋತಿಷ್ಯಶಾಸ್ತ್ರವನ್ನು ಮೆಚ್ಚಿದ್ದುಂಟು. ಚರಕಸಂಹಿತೆ ವೈದ್ಯಶಾಸ್ತ್ರದ ಅತ್ಯುತ್ತಮ ಗ್ರಂಥವೆಂದು ಅಲ್ಬೆರುನಿ ಹೇಳಿದ್ದಾನೆ (1 : 353) ಗ್ರಹಣಗಳ ಬಗ್ಗೆ (1= 376) ಗ್ರಹಣದ ಬಣ್ಣ ವಿಚಾರದ ಬಗ್ಗೆ (1 : 377) ಕೂಡ ಅವನ ಹೇಳುತ್ತಾನೆ.

ಹಿಂದುಗಳ ಭಾಷೆಯ ವಿಶಾಲವ್ಯಾಪ್ತಿಯನ್ನು. ಛಂದೋಬದ್ಧ ರಚನೆಯನ್ನು ವಿದೇಶೀ ಪ್ರವಾಸಿಗರು ತಿಳಿದಿದ್ದರು. ಸಂಸ್ಕೃತ ಭಾಷೆಯಲ್ಲಿ ಪರಭಾಷೆಗಳಂತೆ ಎರಡು ಮೂರು ವ್ಯಂಜನಗಳು ಒಂದಾದ ಮೇಲೊಂದರಂತೆ ಬರುತ್ತವೆ ಎಂದು ಅಲ್ಬೆರೂನಿ ಹೇಳಿದ್ದಾನೆ. ಇವನು ಪಂಚತಂತ್ರದ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದ್ದಾನೆ. (1= 334)

ಹೀಗೆ ಭಾರತದ ರಾಜಕೀಯ, ಸಾಮಾಜಿಕ. ಧಾರ್ಮಿಕ, ಆರ್ಥಿಕ, ವೈಜ್ಞಾನಿಕ ಜೀವನಗಳನ್ನು ತಿಳಿಯಲು ಪ್ರವಾಸಿಕಂಡ ಇಂಡಿಯಾ ಸಂಪುಟಗಳು ಸಹಾಯವಾಡುತ್ತವೆ.

ಇನ್ನು ಈ ಸಂಪುಟಗಳಲ್ಲಿ ಅಡಕವಾಗಿರುವ ಕೆಲವು ಲಕ್ಷಣಗಳನ್ನು ಈ ರೀತಿಯಾಗಿ ಹೇಳಬಹುದು-

(1) ವಿದೇಶೀ ಪ್ರವಾಸಿಗಳ ಕಥನಗಳನ್ನು ಕನ್ನಡಕ್ಕೆ ಭಾಷಾಂತರಿಸುವಾಗ ; ಮೂಲದ ಸೊಗಸಿಗೆ ಒಂದಿಷ್ಟೂ ಕುಂದು ಉಂಟಾಗಲಿಲ್ಲ, ಮೂಲದ ಸೃಜತೆಯನ್ನೇ, ಇಲ್ಲಿಯೂ ಲೇಖಕರು ಉಳಿಸಿಕೊಂಡು ಬಂದಿದ್ದಾರೆ.

(2) ವಿದೇಶೀಯರು, ಭಾರತದ ಆಳರಸರ, ಪಟ್ಟಣಗಳ, ನದಿಗಳ, ಮತ್ತು

ಇನ್ನಿತರ ವಿಷಯಗಳ ಕುರಿತು ಬರೆಯುವಾಗ, ಅಲ್ಲಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳು ಆಗುವುದು ಸಹಜ. ಇಲ್ಲಿಯ ಉಚ್ಚಾರ ಸರಿಯಾಗಿ ತಿಳಿಯದೆ, ತಮ್ಮದೇ ಆದ ರೀತಿಯಲ್ಲಿ ಉಚ್ಚರಿಸಿ ಬರೆದಾಗ, ಅದನ್ನು ಓದುವ ನಮಗೆ ಅರ್ಥವಾಗದೆ ಇರಬಹುದು. ಆದರೆ ಪ್ರವಾಸಿ ಕಂಡ ಇಂಡಿಯಾದಲ್ಲಿ ಇದಕ್ಕೆ ಆಸ್ಪದವಿಲ್ಲ. ಶ್ರೀ ನಾಗೇಗೌಡರು ಅಡಿಟಿಪ್ಪಣಿಗಳನ್ನು ನೀಡಿ, ಎಲ್ಲ ಸಂದೇಹಗಳನ್ನೂ ನಿವಾರಿಸಿದ್ದಾರೆ. ಉದಾಹರಣೆಗಾಗಿ, ಇಂಡಿಯದ ದಕ್ಷಿಣದ ಕೊಟ್ಟ ಕೊನೆಯಲ್ಲಿ ತಪ್ರೋಬನೇ ಎಂಬ ದ್ವೀಪವಿದೆಯೆಂದು, ಹೇಳುತ್ತಾರೆ ಈ ದ್ವೀಪ ಕೊನಿಯ ಕೊಯ್ ಎಂಬ ಜನಗಳ ನಾಡಿನ ಪಕ್ಕದಲ್ಲಿರುವ ನಾಡುಗಳಿಗೆ ಏಳು ದಿನದಷ್ಟು ದೂರದಲ್ಲಿದೆ' ಎಂದು ಸ್ಟ್ರೆಬೋ ಬರೆದಿದ್ದಾನೆ. ಲೇಖಕರು ಅಡಿಟಿಪ್ಪಣಿಯಲ್ಲಿ "ತಪ್ರೋಬನೇ (ಸಿಲೋನ) : ಇದು ಸಂಸ್ಕೃತದ ತಾಮ್ರಪರ್ಣಿ ಅಂದರೆ ಕೆಂಪು ಎಲೆ ಅಥವಾ ತಾಮ್ರವರ್ಣದ ಮರಳು ಎಂಬ ಪದದ ಅಪಭ್ರಂಶವಿರಬೇಕೆಂದು ಹೇಳುತ್ತಾರೆ" ಅಲ್ಲದೆ "ಈ ಹೆಸರು ಮೊಟ್ಟಮೊದಲಿಗೆ ಈ ದ್ವೀಪಕ್ಕೆ ವಲಸೆ ಹೋದ ವಿಜಯನು ಕೊಟ್ಟ ತಾಮ್ರಪರ್ಣಿ ಎಂಬ ಹೆಸರಿನ ಅಪಭ್ರಂಶವೆಂದೂ, ತಾಮ್ರ ಪರ್ಣಿಯ ಪ್ರಾಕೃತ ರೂಪವಾದ ತಂಬಪಣ್ಣಿ ಎಂಬ ಹೆಸರು ಗಿರ್ನಾರ್ ಎಂಬ ಬಂಡೆಯ ಮೇಲಿರುವ ಅಶೋಕನ ಶಾಸನದಲ್ಲಿದೆಯೆಂದೂ ವಿದ್ವಾಂಸರ ಅಭಿಪ್ರಾಯ" ಎಂಬೂ ತಿಳಿಸುತ್ತಾರೆ. ಅದರಂತೆ 'ಕೊನಿಯ ಕೊಯ್' ಎಂಬುದಕ್ಕೆ ಕೂಡ ಅಡಿಟಿಪ್ಪಣಿ ನೀಡುತ್ತಾರೆ. ಅಂದರೆ ಕ್ರಮಬದ್ಧವಾದ ಅಭ್ಯಾಸಕ್ಕೆ ಈ ಅಡಿಟಿಪ್ಪಣಿಗಳು ಸಹಾಯಕಾರಿಯಾಗುತ್ತವೆ.

(3) ಅನೇಕಬಾರಿ, ಇಂಥ ಸಂದರ್ಭಗಳಲ್ಲಿ, ವಿದ್ವಾಂಸರು ಗುರುತು ಹಚ್ಚುವಲ್ಲಿ ಬೇರೆ ಬೇರೆ ಅಭಿಪ್ರಾಯ ನೀಡಬಹುದು. ಆಗ ಭಿನ್ನಾಭಿಪ್ರಾಯಗಳನ್ನೆಲ್ಲ ಅಡಿಟಿಪ್ಪಣಿಯಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಉದಾಹರಣೆಗಾಗಿ, ಟಾಲೆಮಿ 'ಕೋಸಬ' ಎಂಬ ಊರನ್ನು ಹೆಸರಿಸುತ್ತಾನೆ. ಈ ಊರಿನ ಗುರುತು ಹಚ್ಚುವಲ್ಲಿ ವಿದ್ವಾಂಸರುಗಳಲ್ಲಿ, ಒಮ್ಮತವಿಲ್ಲ ಇಂಥ ಕಡೆಗಳಲ್ಲಿ ಯಾವುದನ್ನೂ ಸಂದಿಗ್ಧ ರೀತಿಯಲ್ಲಿಡುವುದಿಲ್ಲ ಈ ಗ್ರಂಥ. ಅಡಿಟಿಪ್ಪಣಿಯಲ್ಲಿ 'ಕೋಸಬ' ಯೂಲರ ಪ್ರಕಾರ ಇದು ಬಲಸೋರ್ ಎಂಬ ಹೆಸರು. ಲಾಸೆನರ ಪ್ರಕಾರ ಸುವರ್ಣರೇಖಾನದಿಯ ಮುಖದಲ್ಲಿದ್ದ ಒಂದು ಊರು ಯಮುನಾ ನದಿಯ ಮೇಲಿದ್ದ ಕೋಸಾಂಬಿಯಿಂದ ಇಲ್ಲಿಗೆ ಬೌದ್ಧ ಸನ್ಯಾಸಿಗಳು ಬಂದು ನೆಲಸಿ, ಬೌದ್ಧ ಧರ್ಮದ ಘೋಷಣೆ ಮಾಡಿರಬೇಕೆಂದೂ, ಆ ಕಾರಣ ಕೋಸಂಬ ಎಂಬ ಹೆಸರು ಬಂದಿರಬೇಕೆಂದೂ ಮಕ್ರಿಂಡಲರ ಊಹೆ" ಎಂದಿದೆ. ಈ ಪ್ರಕಾರ, ಈ ಸಂಪುಟಗಳಲ್ಲಿ ಸಂದಿಗ್ಧತೆಗೆ ಅವಕಾಶವೇ ಇಲ್ಲ. ಇದು ಈ ಸಂಪುಟಗಳ ಉಪಯುಕ್ತತೆಯನ್ನು ಇನ್ನೂ ಹೆಚ್ಚಿಸಿದೆ.

(4) ಅನೇಕ ಬಾರಿ ವಿದೇಶಿಯರು ಅಕಸ್ಮಾತ್ ತಪ್ಪು ವಿವರಣೆಗಳನ್ನು ನೀಡಿರಬಹುದು. ಇಂಥ ಸಂದರ್ಭಗಳಲ್ಲಿ, ಅವುಗಳ ಸತ್ಯಾಸತ್ಯತೆಗಳನ್ನು ಅಡಿಟಿಪ್ಪಣಿಯಲ್ಲಿ

ಮನವರಿಕೆ ಮಾಡಿಕೊಡಲಾಗಿದೆ. ಉದಾಹರಣೆಗಾಗಿ ಟೇಸಿಯಸ್ ಹೇಳುತ್ತಾನೆ, 'ಇಂಡಿಯಾ ದೇಶದಲ್ಲಿ ಮಳೆಯಾಗಲೀ ಮಿಂಚುಗಳಾಗಲೀ ಇಲ್ಲ' ಎಂದು. ಅಡಿಟಿಪ್ಪಣಿಯಲ್ಲಿ 'ಈ ಹೇಳಿಕೆ' ತಪ್ಪು' ಎಂದಿದೆ. ಅದರಂತೆ ಮೆಗಾಸ್ತೆನೀಸನು 'ಯಾವ ಸಂದರ್ಭಗಳಲ್ಲಿಯೂ, ಯಾವ ಮನುಷ್ಯನೂ ಮತ್ತೊಬ್ಬನ ಗುಲಾಮನಾಗಿರಕೂಡದು' ಎಂಬುದು ಭಾರತದ ಗಮನಾರ್ಹ ಪದ್ಧತಿಗಳಲ್ಲಿ ಒಂದು' ಎಂದು ಹೇಳಿದ್ದಾನೆ. ಅಡಿಟಿಪ್ಪಣಿಯಲ್ಲಿ 'ಋಗ್ವೇದದಲ್ಲಿ ದಾಸದಾಸಿಯರನ್ನು ದಕ್ಷಿಣೆಯಾಗಿ ಕೊಟ್ಟ ಉದಾಹರಣೆಗಳಿವೆ. ಯಜುರ್ವೇದ ಮತ್ತು ಬ್ರಾಹ್ಮಣಗಳಲ್ಲಿ ಯಜ್ಞಶಾಲೆಯಲ್ಲಿ ದಾಸಿಯರು ನೃತ್ಯಮಾಡಬೇಕೆಂದಿದೆ. ಆದ್ದರಿಂದ ಮೆಗಾಸ್ತೆನೀಸನ ಹೇಳಿಕೆ, ಒಂದು ಪ್ರದೇಶಕ್ಕೆ ಸಂಬಂಧಪಟ್ಟ ವಿಷಯವಾಗಿರಬಹುದೆಂದು ಪಂಡಿತರ ಊಹೆ' ಎಂದಿದೆ. ಇವುಗಳನ್ನು ಕೇವಲ ಉದಾಹರಣೆಗೆಂದು ನೀಡಿದ್ದೇನೆ. ಪ್ರವಾಸಿಕಂಡ ಇಂಡಿಯಾದ ಆರೂ ಸಂಪುಟಗಳಲ್ಲಿಯೂ, ಲೇಖಕರು ಈ ಪದ್ಧತಿಯನ್ನು ಚಾಚೂ ತಪ್ಪದೆ ಅಳವಡಿಸಿಕೊಂಡಿದ್ದಾರೆ. ಇದರಿಂದ ಓದುಗರಿಗೆ ಕಡಿಮೆ ಶ್ರಮ ಮತ್ತು ಕಡಿಮೆ ಅವಧಿಯಲ್ಲಿ, ಹೆಚ್ಚಿನ ವಿಷಯವನ್ನು ತಿಳಿಯಲು ಅನುಕೂಲವಾಗುತ್ತದೆ.

(5) ಪ್ರತಿ ಪ್ರವಾಸೀಬರಹಗಾರನ ಜೀವನವನ್ನು, ಸಂಕ್ಷಿಪ್ತವಾಗಿ, ಅವರ ಬರವಣಿಗೆಯ ಪ್ರಾರಂಭದ ಮುನ್ನ ಹೇಳಿದ್ದಾರೆ.

(6) ಎಲ್ಲ ಸಂಪುಟಗಳೂ ಅಗತ್ಯವಾದ ನಕಾಶೆಗಳನ್ನೂ, ಚಿತ್ರಗಳನ್ನೂ ಒಳಗೊಂಡಿವೆ.

(7) ಪ್ರತಿಗ್ರಂಥದ ಕೊನೆಗೆ ಅಭ್ಯಾಸಕ್ಕೆ ಅಗತ್ಯವಾದ ಅಕ್ಷರಾನುಕ್ರಮಣಿಕೆಯನ್ನು ನೀಡಿದ್ದಾರೆ.

(8) ಬರಹವು ಸುಲಭವೂ, ಸುಲಲಿತವೂ ಆಗಿದೆ. ಶೈಲಿ ಆಕರ್ಷಕವಾಗಿದೆ. ಓದುತ್ತ ಹೋದಂತೆ ಆಸಕ್ತಿ ಕೆರಳುತ್ತವೆ.

(9) ಅಂದವಾದ ಮುಖಪುಟವನ್ನು ಒಳಗೊಂಡಿದೆ.

ಇವೆಲ್ಲ ಉತ್ಕೃಷ್ಟ ಗ್ರಂಥಕ್ಕೆ ಇರುವ ಲಕ್ಷಣಗಳು ಎಂದು ಹೇಳಬಹುದು. ಇವುಗಳನ್ನು ಒಳಗೊಂಡ ಪ್ರವಾಸಿಕಂಡ ಇಂಡಿಯಾ ಕನ್ನಡದಲ್ಲಿ ಒಂದು ಶ್ರೇಷ್ಠ ಆಕರ ಗ್ರಂಥವಾಗಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಶ್ರೀಮಾನ್ ನಾಗೇಗೌಡರು ಕನ್ನಡ ಸಾಹಿತ್ಯವಾಹಿನಿಗೆ ಒಂದು ಹೊಸ ಹೊಳೆ ಸಂಗಮಿಸುವಂತೆ ಮಾಡಿ, ಕನ್ನಡಿಗರ ಹೃದಯಶ್ರೀ ನೆರೆಯುಕ್ಕುವಂತೆ ಮಾಡಿದ್ದಾರೆ. ಈ ಬೃಹತ್ ಪ್ರವಾಸ ಕಥನಕೃತಿಯ ಮೂಲಕ, ಎಂದು ಶ್ರೀ 'ಕುವೆಂಪು' ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಭಾಷಾಂತರ ಕಲೆ

ಭಾಗ : ಮೂರು

೧ | ಭಾಷಾಂತರದ ಪರಿಭಾಷೆ

ಎಚ್. ಎಂ. ನಾಗರಾಜರಾವ್

ಪರಿಭಾಷೆ ಎಂಬುದು ಒಂದು ಶಾಸ್ತ್ರ ಅಥವಾ ವಿಜ್ಞಾನದ ಪ್ರಧಾನ ಉದ್ದೇಶವನ್ನು ಸೂಕ್ಷ್ಮವಾಗಿ ಸೂತ್ರರೂಪದಲ್ಲಿ ಪರಿಚಯಿಸಿಕೊಡುವಂಥದ್ದು. ಒಂದು ಶಾಸ್ತ್ರ ಅಥವಾ ವಿಜ್ಞಾನದ ಅಧ್ಯಯನಕ್ಕೆ ತೊಡಗುವ ಮೊದಲು ಪೀಠಿಕೆಯಾಗಿ, ಪ್ರಥಮ ಸೋಪಾನವಾಗಿ, ಅದರ ಪರಿಭಾಷೆಯನ್ನು ತಿಳಿದುಕೊಳ್ಳಬೇಕಾದುದು ಅಗತ್ಯವಾಗುತ್ತದೆ. ಕೆಲವು ಸಲ ಒಂದು ಶಾಸ್ತ್ರ ಅಥವಾ ವಿಜ್ಞಾನಕ್ಕೆ ನೀಡಿದ ಶೀರ್ಷಿಕೆಯೇ ಅದರ ಪರಿಭಾಷೆಯನ್ನೂ ಒಳಗೊಂಡಿರುವುದುಂಟು. ಈ ದೃಷ್ಟಿಯಿಂದ ಪರಿಶೀಲಿಸಿದಾಗ 'ಭಾಷಾಂತರ' ಎಂಬುದು ಭಾಷೆಯ ಅಂತರ ಏರ್ಪಟ್ಟಿರುವುದನ್ನು ಅಥವಾ ಏರ್ಪಡಿಸುವ ಪ್ರಕ್ರಿಯೆಯನ್ನು ಅಥವಾ ಅಂಥ ಪ್ರಕ್ರಿಯೆಯ ಫಲವನ್ನು ಸೂಚಿಸುತ್ತದೆ. ಭಾಷಾಂತರಕ್ಕೆ ಪರ್ಯಾಯವಾಗಿ 'ಅನುವಾದ' ಮತ್ತು 'ತರ್ಜುಮೆ' ಎಂಬ ಶಬ್ದಗಳನ್ನು, ಅರ್ಥವ್ಯತ್ಯಾಸವಿಲ್ಲದೆ, ಬಳಸಲಾಗುತ್ತಿದೆ. ಇವುಗಳ ಜೊತೆಗೆ 'ಕನ್ನಡಿಸು' ಎಂಬ ಶಬ್ದ ಬಳಕೆಯಲ್ಲಿರುವುದನ್ನು ಕಾಣಬಹುದು. ಇದೊಂದು ಅತ್ಯಂತ ಪ್ರಭಾವಶಾಲಿಯಾದ ಮಹತ್ತ್ವದ ಪದ. 'ಕನ್ನಡ' ಎಂಬ ಅಂಕಿತನಾಮಕ್ಕೆ ಕ್ರಿಯಾರ್ಥಕವಾದ 'ಇಸು' ಪ್ರತ್ಯಯವನ್ನು ಸೇರಿಸುವುದರ ಮೂಲಕ ಸೃಷ್ಟಿಸಲಾಗಿರುವ ಈ ಶಬ್ದ ಕನ್ನಡಕ್ಕೆ ತರುವುದು ಅಥವಾ ಕನ್ನಡವಾಗಿಸುವುದು ಎಂಬ ಅರ್ಥವನ್ನು ಸಮರ್ಥ ರೀತಿಯಲ್ಲಿ ವಿಶದಪಡಿಸುತ್ತದೆ. ಹಾಗೆಯೇ to mirror ಎಂಬ ಇಂಗ್ಲಿಷ್ ಪದಕ್ಕೆ ಇದೇ ಅತ್ಯಂತ ಉಚಿತ ಸಂವಾದಿ ಶಬ್ದವಾಗುತ್ತದೆ. ಕನ್ನಡೀಕರಣ ಎಂಬುದು ಅತ್ಯಂತ ಸೂಕ್ತಪದವೆನ್ನಿಸುತ್ತದೆ. ಮೂಲ ಬಿಂಬವಾದರೆ ಭಾಷಾಂತರ ಪ್ರತಿಬಿಂಬ.

ಭಾಷಾಂತರ ಇಂದು ಅತ್ಯಂತ ಮಹತ್ವದ ಜ್ಞಾನಶಾಖೆಗಳಲ್ಲೊಂದಾಗಿ ಬೆಳೆದಿದೆ; ಎಷ್ಟೋ ಸಲ ಅದು ಅನಿವಾರ್ಯವಾಗಿ ಪರಿಣಮಿಸುವಷ್ಟರಮಟ್ಟಿಗೆ ಅದರ ಅಗತ್ಯವಿದೆ. ಭಾಷಾಂತರಕಾರ್ಯ ಭಾರತದಲ್ಲಿ ಬೇರೆ ಬೇರೆ ರೂಪಗಳಲ್ಲಿ ಬಹಳ ಹಿಂದಿನಿಂದಲೂ ನಡೆಯುತ್ತಿದೆಯಾದರೂ ಅದೊಂದು ಶಾಸ್ತ್ರ ಅಥವಾ ವಿಜ್ಞಾನವಾಗಿ ಬೆಳೆಯಲಿಲ್ಲ. ಕಾವ್ಯಮೀಮಾಂಸೆಯ ಕೃತಿಗಳಲ್ಲಿ ಅನುವಾದಗಳ ಗುಣದೋಷಗಳ, ಬಳಸಿದ ಶಬ್ದದ ಔಚಿತ್ಯ ಅನೌಚಿತ್ಯಗಳ ಬಗ್ಗೆ ವಿಶ್ಲೇಷಣೆ ಕಾಣಸಿಗುತ್ತದೆಯಾದರೂ ಈ ಸಂಬಂಧವಾದ ಶಾಸ್ತ್ರೀಯ ಜಿಜ್ಞಾಸೆ ಸಂಸ್ಕೃತದಲ್ಲಿಯಾಗಲೀ, ದೇಶಭಾಷೆಗಳಲ್ಲಿಯಾಗಲೀ ನಡೆದಂತೆ ಕಾಣುವುದಿಲ್ಲ.

ಸಮೃದ್ಧವಾದ ಭಾಷಾಂತರ ಸಾಹಿತ್ಯರಾಶಿಯನ್ನು ಒಳಗೊಂಡಿರುವ ಪಾಶ್ಚಾತ್ಯ ಸಾಹಿತ್ಯದಲ್ಲಿ, ವಿಶೇಷವಾಗಿ ಇಂಗ್ಲಿಷಿನಲ್ಲಿ, ಈ ಸಂಬಂಧವಾದ ಆಲೋಚನೆ-ವಿವೇಚನೆ ಸ್ವಲ್ಪಮಟ್ಟಿಗೆ ಈಚಿನ ಶತಮಾನದಲ್ಲಿ ನಡೆದಿದೆ. ಆದ್ದರಿಂದ ಭಾಷಾಂತರದ ಪರಿಭಾಷೆಗೆ ಸಂಬಂಧಿಸಿದ ವಿವರಗಳಿಗೆ ಪಾಶ್ಚಾತ್ಯ ವಿದ್ವಾಂಸರ, ಕೋಶಕಾರರ, ಭಾಷಾಂತರಕಾರರ ಹೇಳಿಕೆಗಳನ್ನು ಅವಲಂಬಿಸಬೇಕಾಗಿದೆ. ಇಲ್ಲಿ ನಾವು ಪರಿಪೂರ್ಣ ಪರಿಭಾಷೆ ಎಂಬುವೂ ಆದರ್ಶ ಎಂಬುದನ್ನು ಗಮನದಲ್ಲಿಟ್ಟುಕೊಂಡೇ ಮುಂದುವರಿಯಬೇಕಾಗುತ್ತದೆ.

ಇಂಗ್ಲಿಷ್ ಭಾಷೆಯಲ್ಲಿ ಭಾಷಾಂತರ ಎಂಬರ್ಥದಲ್ಲಿ translation, version, rendering ಮುಂತಾದ ಶಬ್ದಗಳನ್ನು ಬಳಸಿರುವುದನ್ನು ಕಾಣುತ್ತೇವೆ. Version ಎಂಬುದು ಬೈಬಲ್ಲಿನ ವಿಶಿಷ್ಟ ಅರ್ಥವನ್ನೂ ಹೊಂದಿದೆ ಎಂಬುದು ಗಮನಾರ್ಹ. Translation ಎಂಬುದಕ್ಕೆ 'ಚಪ್ಪಲಿ ರಿಪೇರಿಮಾಡುವುದು' ಎಂಬುದರಿಂದ ಹಿಡಿದು 'ಸಜೀವ ಸ್ವರ್ಗಾರೋಹಣ' ಎಂಬುದರವರೆಗೆ ವಿವಿಧ ಅರ್ಥಗಳಿವೆ. ಕೆಲವನ್ನು ಸಂಗ್ರಹಿಸಿ *New Universal Encyclopaedia* ಹೀಗೆ ಸಾರುತ್ತದೆ: Literally, the act of moving across. The word is used for the act turning passages from one language into another. In an ecclesiastical sense it means the transfer of a bishop from one seat to another and also the removal of bones of a saint from one place to another. Eg. the feast of the translation of St. Martin is kept on July 4. ಧಾರ್ಮಿಕ ಕ್ಷೇತ್ರದಲ್ಲಿ ಒಂದು ಪೀಠದಿಂದ ಇನ್ನೊಂದು ಪೀಠಕ್ಕೆ ಧರ್ಮಾಧಿಕಾರಿಯ ವರ್ಗಾವಣೆ ಮತ್ತು ಸಂತನ ಅಸ್ಥಿಯನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯುವುದು ಸಹ ಇಲ್ಲಿ ಸೇರಿದೆ. ಕಾಲಕ್ರಮೇಣ ಈ ಶಬ್ದ ಸಾಹಿತ್ಯಕ್ಷೇತ್ರಕ್ಕೂ ಕಾಲಿಟ್ಟು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ 'ಕೊಂಡೊಯ್ಯುವ' ಕ್ರಿಯೆಯನ್ನೂ ಸೂಚಿಸತೊಡಗಿತು. ಏನನ್ನು ಕೊಂಡೊಯ್ಯುವುದು ಎಂಬ ಪ್ರಶ್ನೆಗೆ ನಾವೇ 'ಭಾವ'ವನ್ನು ಎಂಬ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ.

ಭಾಷಾಂತರ ಕ್ರಿಯೆ ಕೇವಲ ಲಿಖಿತ ಕ್ಷೇತ್ರಕ್ಕೆ ಸೀಮಿತವಲ್ಲ. ಮೌಖಿಕವಾಗಿಯೂ ಭಾಷಾಂತರ ಕ್ರಿಯೆ ನಡೆಯಲು ಸಾಧ್ಯ. ಆದ್ದರಿಂದ *Random House Dictionary* ಹೇಳುವ ಈ ಮಾತನ್ನಿಲ್ಲಿ ಗಮನಿಸುವುದು ಸೂಕ್ತ: (i) to turn something *written* or *spoken* from one language into another ; (ii) The rendering of something into another language ; (iii)A translation is a rendering of the same ideas in a different language from the original. ಒಂದು ಮೂಲಭಾಷೆಯ ವಿಚಾರಗಳನ್ನು ಅದೇ ಭಾವ, ಅದೇ ಅರ್ಥಗಳಲ್ಲಿ ಇನ್ನೊಂದು ಭಾಷೆಗೆ ತೆಗೆದುಕೊಂಡು ಹೋಗುವುದು ಭಾಷಾಂತರವಾಗುತ್ತದೆ. ಎಂದರೆ ಮೂಲದ

ಭಾವನೆಗಳು ಯಥಾವತ್ತಾಗಿ ಇನ್ನೊಂದು ಭಾಷೆಯಲ್ಲಿ ಮೈದಳೆಯಬೇಕು. ಭಾಷಾಂತರದ ಮೌಲ್ಯ ಅದು ಮೂಲದ ಭಾವನೆಗಳನ್ನು ಎಷ್ಟರಮಟ್ಟಿಗೆ ಬಿಂಬಿಸಿದೆ ಎಂಬುದನ್ನು ಅವಲಂಬಿಸುತ್ತದೆ.

ಭಾಷಾಂತರವನ್ನು The action or process of turning from one language into another ; also the product of this ; a version in a different language ಎಂಬುದಾಗಿ *Oxford University Dictionary* ವಿವರಿಸುತ್ತದೆ. ಎಂದರೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಪರಿವರ್ತಿಸುವ ಕಾರ್ಯ ಅಥವಾ ಪ್ರಕ್ರಿಯೆ ಭಾಷಾಂತರ ; ಅದರ ಫಲವಾಗಿ ದೊರೆಯುವಂಥದ್ದೂ ಭಾಷಾಂತರ ; ಒಟ್ಟಿನಲ್ಲಿ ಭಿನ್ನ ಭಾಷೆಯೊಂದರಲ್ಲಿ ಮೂಲದ ಅಭಿವ್ಯಕ್ತಿ. ಈ ಪರಿಭಾಷೆ ಭಾಷೆಯಲ್ಲಿನ ಭಿನ್ನತೆಯ ಬಗೆಗೇ ಒತ್ತುಕೊಡುತ್ತದೆಯೇ ವಿನಾ ಭಾಷಾಂತರದ ಇತರ ಅಂಶಗಳ ಬಗ್ಗೆ ನಮ್ಮ ಗಮನವನ್ನು ಸೆಳೆಯುವುದಿಲ್ಲ.

ಡಾ. ಜಾನ್‌ಸನ್ ಭಾಷಾಂತರದ ಬಗ್ಗೆ ಹೇಳುವುದು ಹೀಗೆ : To change into another language retaining sense. ಎಂದರೆ ಅರ್ಥವನ್ನುಳಿಸಿಕೊಂಡು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಬದಲಾಯಿಸುವುದೇ ಭಾಷಾಂತರ. ಭಾಷಿಕ ವ್ಯತ್ಯಾಸ, ಸಾಂಸ್ಕೃತಿಕ ತೊಡಕುಗಳಿಂದಾಗಿ 'ಅರ್ಥ'ವನ್ನು ಎಷ್ಟರಮಟ್ಟಿಗೆ ಉಳಿಸಿಕೊಳ್ಳಬಹುದೆಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಡಾ. ಜಾನ್‌ಸನ್ನನ ಹೇಳಿಕೆಯನ್ನೇ ಎ. ಎಲ್. ಸ್ಮಿತ್ ಎಂಬ ವಿದ್ವಾಂಸ ಸ್ವಲ್ಪಮಟ್ಟಿಗೆ ಪರಿಷ್ಕರಿಸಲು ಪ್ರಯತ್ನಿಸಿದ್ದಾನೆ. ಅವನ ಪರಿಭಾಷೆ ಹೀಗಿದೆ : Translation is to change into another language retaining as much of the sense as one can, for some of the original effect is almost always lost. ಅರ್ಥವನ್ನಾಗಲೀ ಭಾವವನ್ನಾಗಲೀ ಸಂಪೂರ್ಣವಾಗಿ ಯಾವಾಗಲೂ ಭಾಷಾಂತರದಲ್ಲಿ ತರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಎಷ್ಟರಮಟ್ಟಿಗೆ ಸಾಧ್ಯವೋ, ಅಷ್ಟರಮಟ್ಟಿಗೆ ಭಾಷಾಂತರದಲ್ಲಿ ಅರ್ಥವನ್ನುಳಿಸಿಕೊಳ್ಳಬೇಕು ಎಂದು ಈ ಪರಿಭಾಷೆ ತಿಳಿಸುತ್ತದೆ. ಇಲ್ಲಿ ಬಳಸಿರುವ 'ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ' ಎಂಬ ಮಾತು ಭಾಷಾಂತರಕಾರನ ವೈಯಕ್ತಿಕ ಸಾಮರ್ಥ್ಯ-ಅಸಾಮರ್ಥ್ಯಗಳನ್ನು ದೃಷ್ಟಿಯಲ್ಲಿರಿಸಿಕೊಂಡು, 'ಯಾರಿಗೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆಯೋ ಅಷ್ಟರಮಟ್ಟಿಗೆ' ಅರ್ಥವನ್ನು ಭಾಷಾಂತರದಲ್ಲಿ ಉಳಿಸಿಕೊಳ್ಳುವುದೆಂಬ ಅರ್ಥದಲ್ಲಿ ಬಳಕೆಯಾಗಿಲ್ಲ ಎಂಬುದನ್ನು ಗಮನಿಸಬೇಕಾದುದು ಮುಖ್ಯ. 'ಆದರ್ಶ'ವೆಂದು ಭಾವಿಸಬಹುದಾದ ಭಾಷಾಂತರವೊಂದರಲ್ಲಿ 'ಆದರ್ಶ ಭಾಷಾಂತರಕಾರ' ಎಷ್ಟರಮಟ್ಟಿಗೆ ಅರ್ಥವನ್ನು ಉಳಿಸಿಕೊಳ್ಳಲು ಸಾಧ್ಯವೋ ಅಷ್ಟರಮಟ್ಟಿಗೆ ಅರ್ಥವನ್ನು ಉಳಿಸಿಕೊಳ್ಳಬೇಕು ಎಂಬ ಅಭಿಪ್ರಾಯ ಈ ಪರಿಭಾಷೆಯಲ್ಲಿರುವುದು.

Webster Dictionary ಯಲ್ಲಿರುವ ಮಾಲ್ಕಮ್ ಕೌಲಿಯ ಈ ಹೇಳಿಕೆ ಮೇಲಿನ ಪರಿಭಾಷೆಗಳಿಗಿಂತ ಉತ್ತಮವೆನಿಸುವ ರೀತಿಯಲ್ಲಿ ಭಾಷಾಂತರದ ವಿವಿಧ ಅಂಶಗಳನ್ನು ವಿಶ್ಲೇಷಿಸುತ್ತದೆ. ಆತನ ಪ್ರಕಾರ Translation is an art that involves the recreation of a work in another language for readers with a different background. ಭಾಷಾಂತರದ ಲಕ್ಷ್ಯ, ಉದ್ದೇಶ ಮತ್ತು ಪ್ರಯೋಜನಗಳನ್ನೂ ತಿಳಿಸುವ ಈ ಪರಿಭಾಷೆ ಭಾಷಾಂತರ ಎಷ್ಟು ಮಹತ್ತ್ವಪೂರ್ಣ ಕಾರ್ಯ ಎಂಬುದನ್ನು ಉತ್ತಮವಾಗಿ ವಿಶದಪಡಿಸುತ್ತದೆ. ಮೂಲಕರ್ತೃವಿನ ಕಾರ್ಯ 'ಸೃಷ್ಟಿ'ಯಾದರೆ ಭಾಷಾಂತರಕಾರನ ಕಾರ್ಯ ಅಷ್ಟೇ ಮಹತ್ತ್ವದ 'ಪುನಸ್ಸೃಷ್ಟಿ'. ಈ 'ಪುನಸ್ಸೃಷ್ಟಿ' ಬೇರೊಂದು ಹಿನ್ನೆಲೆಯನ್ನು ಹೊಂದಿದ ಓದುಗರಿಗೆ ಬೇರೊಂದು ಭಾಷೆಯಲ್ಲಿ ನಡೆಯಬೇಕು. ಉದ್ದಿಷ್ಟ ಭಾಷೆಯ ಜಾಯಮಾನ ಮೂಲಭಾಷೆಯ ಜಾಯಮಾನಕ್ಕಿಂತ ವಿಭಿನ್ನವಾಗಿರುವುದರಿಂದ ಉಂಟಾಗುವ ವಿಶಿಷ್ಟ ಸಮಸ್ಯೆ-ತೊಡಕುಗಳನ್ನು ಎದುರಿಸಿ, ಪರಿಹಾರೋಪಾಯಗಳನ್ನು ಕಂಡುಹಿಡಿದು ಈ ಭಾಷಾಂತರಕಾರ ಈ 'ಪುನಸ್ಸೃಷ್ಟಿ' ಯನ್ನು ಮಾಡಬೇಕಾಗಿರುವುದರಿಂದ ಆತನ ಜವಾಬ್ದಾರಿ ಹಿರಿದು. 'ಭಾಷಾಂತರ ಪ್ರಜ್ಞಾಪೂರ್ವಕ ಕಲೆ' ಎಂಬ ಸಿ.ಪಿ.ಕೆ. ಅವರ ಪರಿಭಾಷೆಯನ್ನೂ ಇಲ್ಲಿಯೇ ಗಮನಿಸುವುದು ಉಚಿತ. ಮೂಲಕರ್ತೃ ಒಂದುವೇಳೆ ತೂಕಡಿಸಿ, ಎಚ್ಚರದಪ್ಪಿ ಅಥವಾ ಮೈಮರೆತು ತನ್ನ ಸೃಷ್ಟಿಕಾರ್ಯವನ್ನು ನಿರ್ವಹಿಸಬಹುದಾದರೂ ಭಾಷಾಂತರಕಾರ ಕ್ಷಣಮಾತ್ರವೂ ಎಚ್ಚರ ತಪ್ಪುವಂತಿಲ್ಲ. ಒಂದು ವೇಳೆ ಮೈಮರೆತರೆ ಪ್ರಮಾದ ಸಂಭವಿಸುತ್ತದೆ. ಮೂಲ ಕೃತಿಗೆ ದ್ರೋಹ ಬಗೆದಂತಾಗುತ್ತದೆ. ಆದ್ದರಿಂದ ಭಾಷಾಂತರ ಎಂಬುದು ಸದಾ ಜಾಗೃತ ಸ್ಥಿತಿಯಲ್ಲಿ ಮೈಯೆಲ್ಲ ಕಣ್ಣಾಗಿ ಮಾಡಬೇಕಾದ ಪುನಸ್ಸೃಷ್ಟಿ.

ಭಾಷಾಂತರದ ಬಗ್ಗೆ ಎಸ್.ವಿ. ರಘುನಾಥರಾಯರ ಹೇಳಿಕೆಯನ್ನು ಇಲ್ಲಿಯೇ ಪರಿಶೀಲಿಸಬಹುದು. ಅದರ ಪ್ರಕಾರ Translation is an art by which the ideas of an author are transferred vividly from one language into another so as to affect the mind of the reader in the way in which the original itself affects him. ಈ ಪರಿಭಾಷೆ ಹಂತ ಹಂತವಾಗಿ ಈ ಅಂಶಗಳನ್ನು ಸ್ಪಷ್ಟಪಡಿಸುತ್ತದೆ: ಭಾಷಾಂತರ ಒಂದು ಕಲೆ; ಈ ಕಲೆಯ ಮೂಲಕ ಒಬ್ಬ ಲೇಖಕನ ಭಾವನೆಗಳನ್ನು ವರ್ಗಾಯಿಸಬೇಕು; ಈ ವರ್ಗಾವಣೆ ಸ್ಪಷ್ಟವಾಗಿರಬೇಕು; ಈ ವರ್ಗಾವಣೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ನಡೆಯಬೇಕು. ಮೂಲಕೃತಿಯನ್ನು ಓದಿದಾಗ ಉಂಟಾಗುವ ಪರಿಣಾಮವನ್ನೇ ಭಾಷಾಂತರವೂ ಬೀರಬೇಕು. ಈ ಪರಿಭಾಷೆ ಭಾವದ ಹಾಗೂ ಸದೃಶ ಪರಿಣಾಮಗಳ ಬಗ್ಗೆ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿದೆ. ಭಾವಗಳ ಸ್ಪಷ್ಟ ವರ್ಗಾವಣೆಯೇ ಭಾಷಾಂತರ ಎಂಬ ಕಲೆಗೆ ಇರುವ ಏಕೈಕ ಉಪಾಧಿ.

Trnslation is not annotation ಎಂಬುದನ್ನಾಗಲೀ poetry is what gets lost in translation ಎಂಬುದನ್ನಾಗಲೀ ಅಥವಾ It is the reproduction of the original in all its essentials in another language ಎಂಬುದನ್ನಾಗಲೀ 'ಪರಿಭಾಷೆ' ಎಂದು ಕರೆಯಲಾಗುವುದಿಲ್ಲ. ಭಾಷಾಂತರ ಕ್ಷೇತ್ರದ ವಿದ್ವಾಂಸರಲ್ಲೊಬ್ಬನಾದ ಥಿಯೋಡರ್ ಸೇವರಿ ಭಾಷಾಂತರಕಾರ ಗಮನಿಸಬೇಕಾದ್ದನ್ನು ಹೀಗೆ ಹೇಳುತ್ತಾನೆ: What does the author say? What does he mean? How does he say it? ವಸ್ತು, ಭಾವ ಮತ್ತು ಶೈಲಿಗಳನ್ನು ಭಾಷಾಂತರಕಾರ ಗಮನಿಸಬೇಕಾಗುತ್ತವೆ; ತನ್ನ ಭಾಷಾಂತರದಲ್ಲಿ ಅವನ್ನು ಹಾಗೆಯೇ ತರಲು ಪ್ರಯತ್ನಿಸಬೇಕಾಗುತ್ತದೆ.

ಇಂದು ಭಾಷಾಂತರ ತೌಲನಿಕ, ವಿವರಣಾತ್ಮಕ ಮತ್ತು ಅನ್ವಯಿಕ ಭಾಷಾ ವಿಜ್ಞಾನದ ಅಂಗವಾಗಿ ಪರಿಣಮಿಸಿದೆ. ಆದ್ದರಿಂದ ಭಾಷಾವಿಜ್ಞಾನಿಗಳ, ಭಾಷಾಂತರದ ಬಗೆಗಿನ ದೃಷ್ಟಿಯನ್ನು ಪ್ರಾತಿನಿಧಿಕವಾಗಿ ಇಲ್ಲಿ ಗಮನಿಸುವುದು ಉಚಿತ. ಜೆ.ಸಿ. ಕ್ಯಾಟ್‌ಫರ್ಡ್ ಎಂಬ ವಿದ್ವಾಂಸನ ಪ್ರಕಾರ ಭಾಷಾಂತರ ಎಂಬುದು the replacement of textual material in one language by equivalent textual material in another language. ಒಂದು ಭಾಷೆಯಲ್ಲಿನ ಪಠ್ಯವಸ್ತುವಿಗೆ ಬದಲು ಇನ್ನೊಂದು ಭಾಷೆಯ ಸಮಾನ ಪಠ್ಯವಸ್ತುವನ್ನು ಹಾಕುವ ಪ್ರಕ್ರಿಯೆ ಭಾಷಾಂತರವೆನ್ನಿಸುತ್ತದೆ. 'ಪಠ್ಯವಸ್ತು' ಎಂಬುದರಲ್ಲಿಯೇ ವಸ್ತು, ರೀತಿ, ಶೈಲಿ ಎಲ್ಲವೂ ಅಡಕವಾಗಿವೆ; 'ಸಮಾನ' ಎಂಬ ಶಬ್ದದಲ್ಲಿಯೇ ಎಲ್ಲ ಗುಣಗಳೂ ಸೇರಿವೆ ಎಂದು ಭಾವಿಸಬೇಕಾಗುತ್ತದೆ.

ಭಾಷಾಂತರದ ಬಗೆಗಿನ ಹಲವು ವಿಚಾರಗಳ ಬಗ್ಗೆ 'ಅಧಿಕಾರವಾಣಿ' ಎನ್ನಿಸಿಕೊಂಡಿರುವ ಪೋಸ್ಟ್‌ಗೇಟ್ ಆದರ್ಶ ಭಾಷಾಂತರವನ್ನು ಕುರಿತು ಹೇಳುವ ಸಂದರ್ಭದಲ್ಲಿ ಹೀಗೆ ಹೇಳಿದ್ದಾನೆ: By translation we mean such a version as shall before all things make it plain that (i) the translator has grasped the sense of each individual word as used in the original, (ii) has selected to render it in the nearest equivalent which the genius of his language permits, (iii) and has so arranged and welded together those equivalents that the whole becomes an exact counterpart of t he passage equally careful in diction and equally elegant in style. ಈ ಪರಿಭಾಷೆ ಭಾಷಾಂತರದ ಎಲ್ಲ ಅಂಶಗಳನ್ನೂ, ಲಕ್ಷಣಗಳನ್ನೂ ಒಳಗೊಂಡಿದೆ ಎನ್ನಬಹುದು. ಇದು ಭಾಷಾಂತರದ ಪರಿಭಾಷೆಗಳಲ್ಲೆಲ್ಲ ಅದ್ವಿತೀಯವಾದ ಅಗ್ರಗಣ್ಯವಾದ ಪರಿಭಾಷೆ ಎನ್ನಿಸಿಕೊಂಡಿದೆ, ಸಮ್ಮತವೆನ್ನಿಸಿದೆ. ಭಾಷಾಂತರದ ಎಲ್ಲ ಪ್ರಕ್ರಿಯೆಗಳನ್ನೂ ಇದು ಗಮನಕ್ಕೆ ತೆಗೆದುಕೊಂಡಿದೆ: ಮೂಲದ ಭಾವ ಮತ್ತು ಅರ್ಥವನ್ನು ಗ್ರಹಿಸುವುದು; ಭಾಷೆಯ ಜಾಯಮಾನ ಅವಕಾಶ ನೀಡುವಷ್ಟು ಸ್ವಾತಂತ್ರ್ಯವನ್ನು

ಉಪಯೋಗಿಸಿಕೊಂಡು ಅಥವಾ ಭಾಷೆಯ ಜಾಯಮಾನಕ್ಕೆ ಸಹಜವಾದ, ಆದಷ್ಟು ಹತ್ತಿರವಾದ, ಸಮಾನಾರ್ಥಕ ಪದಗಳನ್ನು ಆರಿಸಿಕೊಳ್ಳುವುದು ಮತ್ತು ಆಯ್ದ ಪರ್ಯಾಯ ಶಬ್ದಗಳನ್ನು ಮೂಲದ ಪದವಿನ್ಯಾಸಕ್ಕೆ, ಶೈಲಿಯ ಸೊಬಗಿಗೆ ಅನುಗುಣವಾಗಿ ಬೆಸುಗೆಹಾಕುವುದು. ಒಟ್ಟಿನಲ್ಲಿ ಮೂಲದ ವಸ್ತು, ರೀತಿ ಮತ್ತು ಶೈಲಿಗೆ ಕುಂದುಂಟಾಗದಂತೆ ಅದರ ಯಥಾವತ್ತಾದ ಪ್ರತಿರೂಪವನ್ನು ಸಿದ್ಧಪಡಿಸುವುದು ಭಾಷಾಂತರಕಾರನ ಗುರಿಯಾಗಿರಬೇಕು.

True translation is metempsychosis ಎನ್ನುತ್ತಾನೆ ವಿಲಮೋವಿಟ್ಜ್. "ನಿಜವಾದ ಭಾಷಾಂತರ ಪರಕಾಯಪ್ರವೇಶವಿದ್ದಂತೆ" ಎಂಬ ಈ ಮಾತು ಮೂಲ ಲೇಖಕ ಮತ್ತು ಅವನ ಕೃತಿಗೂ ಭಾಷಾಂತರಕಾರನಿಗೂ ನಡುವೆ ಏರ್ಪಡಬೇಕಾದ ತಾದಾತ್ಮ್ಯವನ್ನು ಸಮರ್ಥವಾಗಿ ಸೂಚಿಸುತ್ತದೆ. ಕಾಯ ಬೇರೆಯದೇ ಹೊರತು ಆತ್ಮವಲ್ಲ. ಭಾಷೆ ಬೇರೆಯದೇ ಹೊರತು ವಸ್ತುವಲ್ಲ. ಆದ್ದರಿಂದ ಭಾಷಾಂತರ ಭವಾಂತರವೇ ಹೊರತು ಭಾವಾಂತರವಲ್ಲ.

ಎರಡು ದೇಶಗಳ, ಎರಡು ಜನಾಂಗಗಳ ಮತ್ತು ಎರಡು ಸಂಸ್ಕೃತಿಗಳ ಸಂಪರ್ಕಸೇತುವಾದ ಭಾಷಾಂತರಕ್ಕೆ ಸರ್ವಸಮರ್ಪಕ ಅಥವಾ ಆದರ್ಶ ಪರಿಭಾಷೆ ಎಂಬುದು ಬಹುಶಃ ಆದರ್ಶವಾಗಿಯೇ ಉಳಿಯುತ್ತದೆ. ಕಾವ್ಯದ ಪರಿಭಾಷೆಯ ಸಂದರ್ಭದಲ್ಲಿ ಡಾ. ಜಾನ್‌ಸನ್ ಹೇಳಿರುವ to circumscribe poetry by means of a definition shows only the narrowness of the critic ಎಂಬ ಮಾತನ್ನೇ ಭಾಷಾಂತರಕ್ಕೂ ಅನ್ವಯಿಸಬಹುದು. ಒಟ್ಟಿನಲ್ಲಿ ಭಾಷಾಂತರವು ಮೂಲದ ವಸ್ತು, ಭಾವ ಮತ್ತು ನಿರೂಪಣೆಗಳ 'ಪೂರ್ಣಾವತಾರ'ವಾಗಿರಬೇಕು. ಮೂಲದ ಸೌಂದರ್ಯ ಭಾಷಾಂತರದಲ್ಲೂ ಮೂಡಿರಬೇಕು—ಆದರೆ ಅದು ಸ್ವಲ್ಪವೂ ಕುಂದಿರಕೂಡದು, ಉಜ್ವಲವಾಗಿರಲೂ ಕೂಡದು. ಭಾಷಾಂತರ ಎಂಬುದು ಸೌಂದರ್ಯವನ್ನು ಎಲ್ಲ ಆಯಾಮಗಳಲ್ಲೂ ಸೆರೆಹಿಡಿದ ಕಲಾತ್ಮಕ ಛಾಯಾಚಿತ್ರದಂತೆ.

೨ ಭಾಷಾಂತರ ಪ್ರಕ್ರಿಯೆಯ ಒಂದು ಸ್ಪಷ್ಟೀಕರಣ: ಕ್ಯಾಟ್‌ಫರ್ಡನ ಭಾಷಾಶಾಸ್ತ್ರೀಯ ಸಿದ್ಧಾಂತ

ಎಡ್ವರ್ಡ್ ನೊರೋನ

ಭಾಷಾಂತರ ಪ್ರಕ್ರಿಯೆಯಲ್ಲಿ ಎಷ್ಟೋ ವೇಳೆ ಯಾವುದೇ ನಿಘಂಟು, ಸಮಾನಾರ್ಥಕ ಕೋಶಗಳನ್ನು ಆಶ್ರಯಿಸದೆ ತನಗೆ ಆ ಕ್ಷಣದಲ್ಲಿ ಸರಿ ಎಂದು ಕಾಣುವ ರೀತಿಯಲ್ಲಿ ಭಾಷಾಂತರಕಾರ ಅನುವಾದವನ್ನು ರೂಪಿಸಬೇಕಾಗುತ್ತದೆ. ಮೂಲಪಾಠವನ್ನು ಯಥಾವತ್ತಾಗಿ ಅನುವಾದಿಸಬಾರದು, ಮೂಲಪಾಠಕ್ಕೆ ಯಾವ ಬಗೆಯಲ್ಲೂ ಅಪಚಾರವಾಗಬಾರದು—ಇವೆರಡೂ ಉದ್ದೇಶಗಳನ್ನು ಚಾಕಚಕ್ಯತೆಯಿಂದ ನಿರ್ವಹಿಸುವ ಅವನ ಕೌಶಲವನ್ನು ಅನುವಾದಕನ ಪ್ರತಿಭೆ, ಧೀಶಕ್ತಿ ಇತ್ಯಾದಿಯಾಗಿ ಗುರುತಿಸುತ್ತೇವೆ. ಕೆಲವು ಸಂದರ್ಭಗಳಲ್ಲಿ ಭಾಷಾಂತರ ಅಸಾಧ್ಯವಾಗುತ್ತದೆ, ಕೆಲವು ಸಂದರ್ಭಗಳಲ್ಲಿ ಅಪೂರ್ಣವಾಗಿ ಉಳಿಯುತ್ತದೆ—ಇದು ಭಾಷೆಯ ಜಾಯಮಾನ ಹೇರುವ ಒಂದು ಮಿತಿ. ಇಂಥ ಪರಿಸ್ಥಿತಿಗಳನ್ನು ಯಾವ ಬಗೆಯಲ್ಲೂ ಸರಳಗೊಳಿಸುವುದಾಗಲಿ, ಇಲ್ಲಿ ಏಳುವ ಸಮಸ್ಯೆಗಳನ್ನು ಪರಿಹರಿಸುವುದಾಗಲಿ ಅಸಾಧ್ಯ ಎಂದು ಹೇಳುತ್ತೇವೆ. ಹೀಗೆ ಭಾಷಾಂತರ ಪ್ರಕ್ರಿಯೆಯ ಸುಮಾರು ಎಲ್ಲ ಹಂತಗಳಲ್ಲಿಯೂ ಪೂರ್ವನಿಯೋಜಿತ ಸಮಾನಾರ್ಥಕಗಳು, ನಿಯಮಗಳು ಅನ್ವಯವಾಗುವ ಜೊತೆಗೆ ಈ ನಿಯಮಗಳಿಗೆ ಒಳಪಡದ, ಈ ನಿಯಮಗಳನ್ನು ಮೀರಿ ನಿಲ್ಲುವ ಪ್ರಕ್ರಿಯೆಗಳು ಕ್ರಿಯಾಶೀಲವಾಗಿರುತ್ತವೆ ಎಂಬುದು ಸುವೇದ್ಯ. ಇಂಥ ಪ್ರಕ್ರಿಯೆಗಳು ಅನುವಾದಕನ ಪ್ರಯತ್ನ, ವ್ಯವಸ್ಥಿತ ಅಭ್ಯಾಸದ ನಿರ್ಜೀವ ಚೌಕಟ್ಟಿಗೆ ಒಳಪಡುವುದಿಲ್ಲ ಎಂಬುದು ಭಾಷಾಂತರಕಾರ್ಯದಲ್ಲಿ ಕೈಯಾಡಿಸಿದವರಿಗೆ ತಿಳಿದಿದ್ದ ವಿಷಯ. ಈ ಪರಿಸ್ಥಿತಿಯಲ್ಲಿ ಭಾಷಾಂತರ ಸಿದ್ಧಾಂತವನ್ನು ಸೂತ್ರೀಕರಿಸುವುದು ಆವಶ್ಯಕವಾಗುತ್ತದೆ. ಇದರಿಂದ ನಡೆಯಬೇಕಾದ ಎರಡು ಮುಖ್ಯ ಕಾರ್ಯಗಳು ಇವು: ಭಾಷಾಂತರ ಪ್ರಕ್ರಿಯೆಯನ್ನು ವಿವರವಾಗಿ ಚರ್ಚಿಸಲು ಅವಶ್ಯವಾಗಿ ಬೇಕಾದ ಪಾರಿಭಾಷಿಕ ಪದಗಳನ್ನು ಸೃಷ್ಟಿಸುವುದು ಮತ್ತು ಈ ಪದಗಳ ಮೂಲಕ ಅನುಕ್ತವಾಗಿ ಉಳಿದಿದ್ದ ಭಾಷಾಂತರ ಪ್ರಕ್ರಿಯೆಗಳನ್ನು ಶಾಸ್ತ್ರೀಯವಾಗಿ ವರ್ಣಿಸುವುದು ಮತ್ತು ವಿವರಿಸುವುದು. ಭಾಷಾಂತರ ಪ್ರಕ್ರಿಯೆಯನ್ನು ಒಂದಲ್ಲ ಒಂದು ಬಗೆಯ ಶಾಸ್ತ್ರೀಯ ವಿವೇಚನೆಗೆ ಒಳಪಡಿಸಿ, ಅಂಥ ಸಂದರ್ಭಗಳಲ್ಲಿ ಒಂದು ಪಾರಿಭಾಷಿಕ ಪದಕೋಶವನ್ನು ಸೃಷ್ಟಿಸಿದ್ದುದುಂಟು. ಇಲ್ಲೆಲ್ಲ ಭಾಷಾಂತರ ಪ್ರಕ್ರಿಯೆಯ ವರ್ಣನಾತ್ಮಕ ವಿಶ್ಲೇಷಣೆ ಮತ್ತು ತತ್ಪರಿಣಾಮವಾಗಿ ಕೆಲವು

ಸೂಕ್ತ ತತ್ತ್ವಗಳ ಮಂಡನೆ ಕಂಡುಬರುತ್ತದೆ. ಈ ಬಗೆಯ ಬರಹಗಳಲ್ಲಿ ಭಾಷಾಶಾಸ್ತ್ರದ ಚೌಕಟ್ಟನ್ನು ಭಾಷಾಂತರಕ್ಕೆ ಅಳವಡಿಸಿದ ಬರಹಗಾರ ಜೆ. ಸಿ. ಕ್ಯಾಟ್‌ಫರ್ಡ್[1]. ಫರ್ತ್ ಮತ್ತು ಹ್ಯಾಲಿಡೇ ಪ್ರತಿಪಾದಿಸಿದ ಭಾಷಾಶಾಸ್ತ್ರೀಯ ಸಿದ್ಧಾಂತವನ್ನು ಭಾಷಾಂತರ ಪ್ರಕ್ರಿಯೆಗೆ ಕ್ರಮಬದ್ಧವಾಗಿ ಅನ್ವಯಿಸಿ ಒಂದು ಭಾಷಾಂತರ ಸಿದ್ಧಾಂತವನ್ನು ಇವನು ಮಂಡಿಸಿದ್ದಾನೆ. ಈ ಕೆಲಸವನ್ನು ಮಾಡುವಾಗ ಭಾಷಾಂತರದ ಕೆಲವು ಹಿಡಿತಕ್ಕೆ ಸಿಗದ ಕಲ್ಪನೆಗಳಿಗೆ, ಪ್ರಕ್ರಿಯೆಗಳಿಗೆ ಸೂಕ್ತ ಹೆಸರನ್ನು, ವಿವರಣೆಯನ್ನು ನೀಡಿದ್ದಾನೆ.

2

ಫರ್ತ್ ಮತ್ತು ಹ್ಯಾಲಿಡೇ ಅವರ ಭಾಷಾಶಾಸ್ತ್ರೀಯ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ಹೀಗೆ ನಿರೂಪಿಸಬಹುದು :

ಕೆಲವು ಮೂಲದ್ರವ್ಯಗಳ ವ್ಯವಸ್ಥಿತ ರೂಪ ಭಾಷಾವರ್ತನೆ. ಧ್ವನಿದ್ರವ್ಯ (phonic-substance), ಲಿಪಿ (graphic) ದ್ರವ್ಯ, ಸನ್ನಿವೇಶ (situation) ದ್ರವ್ಯವೆಂದು ಇವುಗಳನ್ನು ನಿರ್ದೇಶಿಸಬಹುದು. ಇವುಗಳ ವ್ಯವಸ್ಥಿತ ರೂಪವನ್ನು ಧ್ವನಿವ್ಯವಸ್ಥೆಯಲ್ಲಿ (phonology), ಲಿಪಿವ್ಯವಸ್ಥೆಯಲ್ಲಿ (graphology) ಮತ್ತು ವ್ಯಾಕರಣ, ಕೋಶ ಪದಗಳನ್ನು (grammar and lexis) ಒಳಗೊಂಡಂತೆ ಒಟ್ಟು ಭಾಷೆಯಲ್ಲಿ ಕಾಣಬಹುದು. ಸನ್ನಿವೇಶಕ್ಕೂ ವ್ಯಾಕರಣ ಮತ್ತು ಕೋಶಪದಗಳಿಗೂ ಇರುವ ಸಂಬಂಧವನ್ನು ಸೂಚಿಸುವ ಹೇಳಿಕೆಗಳನ್ನು ಸಂದರ್ಭ (context) ಎನ್ನಬಹುದು. ಘಟಕ (unit), ರಚನೆ (structure), ವರ್ಗ (class) ಮತ್ತು ವ್ಯವಸ್ಥೆ (system)–ಇವು ಭಾಷೆಯ ಮೂಲಭೂತ ಪ್ರವರ್ಗಗಳು (categories). ಅರ್ಥಪೂರ್ಣ ಭಾಷಾವಿನ್ಯಾಸವನ್ನು ಒಳಗೊಂಡಿರುವ ಭಾಷಾಭಾಗ ಘಟಕಗಳು ಬೇರೆ ಬೇರೆ ದರ್ಜೆಯಲ್ಲಿ (rank)ಇರುತ್ತವೆ. ಮೇಲ್ದರ್ಜೆಯ ಘಟಕಗಳು ಕೆಳದರ್ಜೆಯ ಘಟಕಗಳನ್ನು ಒಳಗೊಂಡಿರುತ್ತವೆ. ಒಂದು ಘಟಕದಲ್ಲಿರುವ ಕೆಲವು ಅಂಶಗಳು (elements) ಮೇಲಿನ ಘಟಕದಲ್ಲಿ ವರ್ತಿಸುವ ರೀತಿಯಲ್ಲಿ ಸಮಾನತೆಯಿದ್ದರೆ, ಆ ಅಂಶಗಳನ್ನು ಒಂದು ವರ್ಗ ಎನ್ನುತ್ತೇವೆ.

ಇಂಗ್ಲಿಷ್ ವಾಕ್ಯದಲ್ಲಿ ವಾಕ್ಯ, ಉಪವಾಕ್ಯ (clause) ಮತ್ತು ಪದಪುಂಜ (group) ಹೀಗೆ ಮೂರು ಘಟಕಗಳಿವೆ. ಇವುಗಳಲ್ಲಿ ವಾಕ್ಯ ಉಪವಾಕ್ಯಗಳನ್ನೂ, ಉಪವಾಕ್ಯ ಪದಪುಂಜಗಳನ್ನೂ ಒಳಗೊಂಡಿರುವುದರಿಂದ ಇವುಗಳ ದರ್ಜೆ ಕ್ರಮವಾಗಿ ಅವರೋಹಣ ಪದ್ಧತಿಯಲ್ಲಿದೆ.

John loves Mary—ಈ ವಾಕ್ಯದ ರಚನೆಯನ್ನು SPC ಎಂದು ನಿರ್ದೇಶಿಸಿದರೆ ಈ ವಾಕ್ಯದಲ್ಲಿ ಕ್ರಮವಾಗಿ subject, predicator ಮತ್ತು complement ಎಂಬ ಅಂಶ

[1] J. C. Catford, *A Linguistic Theory of Translation* (London, Oxford University Press, 1965)

ಗಳಿವೆ. SPC ಎಂಬುದು ಈ ಅಂಶಗಳ ಕ್ರಮವನ್ನೂ ಸೂಚಿಸುತ್ತದೆ.

The boy you spoke of is my brother : ಈ ವಾಕ್ಯದಲ್ಲಿರುವ ಮೊದಲನೆ ಉಪವಾಕ್ಯ, the boy you spoke of, ನಾಮಪದದ ಕಾರ್ಯವನ್ನು ಒಟ್ಟು ವಾಕ್ಯದಲ್ಲಿ ನಿರ್ವಹಿಸುತ್ತದೆ. ಹೀಗೆ ನಾಮಪದದ ಕೆಲಸವನ್ನು ಮಾಡುವ ಉಪವಾಕ್ಯಗಳೆಲ್ಲವೂ ಒಂದು ವರ್ಗ, ಕ್ರಿಯಾಪದದ ಕೆಲಸವನ್ನು ಮಾಡುವ ಉಪವಾಕ್ಯಗಳು ಇನ್ನೊಂದು ವರ್ಗ, ಇತ್ಯಾದಿ. ಧ್ವನಿವ್ಯವಸ್ಥೆಯಲ್ಲಿಯೂ ಇದೇ ಬಗೆಯ ಉದಾಹರಣೆಗಳು ಸಿಗುತ್ತವೆ.

ಇಲ್ಲಿಯ ಭಾಷಾಶಾಸ್ತ್ರೀಯ ಸಿದ್ಧಾಂತದ ಒಂದು ಮುಖ್ಯ ಅಂಶವೆಂದರೆ 'ಅರ್ಥ'ದ ಪರಿಕಲ್ಪನೆ. ಅರ್ಥವೆಂದರೆ ಒಂದು ಭಾಷೆಗೆ ವಿಶಿಷ್ಟವಾಗಿರುವ ಒಂದು ಗುಣ. ಯಾವುದೇ ಭಾಷಿಕ ರೂಪ ಆ ಭಾಷೆಯೊಳಗೆ ಪಡೆದಿರುವ ಸಂಬಂಧಗಳ ಮೊತ್ತವೇ ಅರ್ಥ. ಇವುಗಳು ರೂಪ್ಯಕ (formal) ಸಂಬಂಧಗಳಾಗಬಹುದು, ಸಂದರ್ಭಮೂಲ (contextual) ಸಂಬಂಧಗಳಾಗಬಹುದು. ವ್ಯಾಕರಣ ವ್ಯವಸ್ಥೆಗಳಲ್ಲಿ ಕಂಡುಬರುವ ಸಂಬಂಧಗಳು ರೂಪ್ಯಕ ಸಂಬಂಧಗಳ ಉದಾಹರಣೆಗಳು. ವ್ಯಾಕರಣ ಮತ್ತು ಕೋಶ ಪದಗಳಿಗೆ, ಮತ್ತು ಅವು ಕ್ರಿಯಾಶೀಲವಾಗಿರುವ ಸನ್ನಿವೇಶದಲ್ಲಿ ಭಾಷಿಕವಾಗಿ ಪ್ರಸಕ್ತವಾಗಿರುವ ವೈಶಿಷ್ಟ್ಯಗಳಿಗೆ (linguistically relevant features of situation) ಇರುವ ಸಂಬಂಧವನ್ನು ಸಂದರ್ಭಮೂಲ ಅರ್ಥ ಎನ್ನುತ್ತೇವೆ. ರೂಪ್ಯಕ ಮತ್ತು ಸಂದರ್ಭಮೂಲ ಅರ್ಥಗಳೆರಡೂ ಆಯಾ ಭಾಷೆಗೆ ವಿಶಿಷ್ಟವಾದುವು. ಆದುದರಿಂದ ಒಂದೊಂದು ಭಾಷೆ ತನ್ನ ಸ್ವಂತ ಅರ್ಥಗಳನ್ನು ಪಡೆದಿರುತ್ತದೆ. ಬೇರೆ ಬೇರೆ ಭಾಷೆಗಳ ಸಮಾನಾರ್ಥಕ (equivalent) ಪದಗಳೇ ಇರಲಿ, ಇವುಗಳ ಅರ್ಥ ಖಚಿತವಾಗಿ ಒಂದೇ ಆಗಿರುವುದು ಸಾಧ್ಯವಿಲ್ಲ.

ಉದಾಹರಣೆಗೆ, ಅವನು ಬಂದನು ಎಂದಾಗ,

ಅವನು		ಬಂದನು	
	ಅವರು		ಬಂದರು
ಅವಳು		ಬಂದಳು	
ಅದು	ಅವು	ಬಂತು	ಬಂದವು

ಈ ವ್ಯವಸ್ಥೆಗಳ ದೆಸೆಯಿಂದ ಪ್ರಕೃತ ವಾಕ್ಯದ ಮೂಲಕ ಸರ್ವನಾಮ, ಪುಲ್ಲಿಂಗ, ಏಕವಚನ, ಭೂತಕಾಲ ಈ ರೂಪ್ಯಕ ವೈಶಿಷ್ಟ್ಯಗಳು ಸೂಚಿತವಾಗಿವೆ. He came ಎಂಬಲ್ಲಿಯೂ ಇವೇ ರೂಪ್ಯಕ ವೈಶಿಷ್ಟ್ಯಗಳು ಸೂಚಿತವಾಗಿವೆ ; ಆದರೆ came ಪದವನ್ನು ಮಾತ್ರ ನೋಡಿದರೆ ಬಂದನು ಸೂಚಿಸುವ ಎಲ್ಲಾ ವೈಶಿಷ್ಟಗಳನ್ನೂ ಅದು ಸೂಚಿಸುವುದಿಲ್ಲ. ಬಂದನು : ಭೂತಕಾಲ

ಪುಲ್ಲಿಂಗ

came : ಭೂತಕಾಲ

ಆದುದರಿಂದ ಬಂದನು, came ಇವು ಸಮಾನಾರ್ಥಕಗಳಾಗಿದ್ದರೂ, ಇವುಗಳು ಪಡೆದಿರುವ ರೂಪ್ಯಕ ಅರ್ಥ ಒಂದೇ ಅಲ್ಲ.

ಕೊಂಕಣಿಯ ಭಾಚೋ ಎಂಬುದಕ್ಕೆ ಇಂಗ್ಲಿಷ್ ಸಮಾನಾರ್ಥಕ nephew. ಕೊಂಕಣಿಪದ ಸೂಚಿಸುವ ಸನ್ನಿವೇಶದ ವೈಶಿಷ್ಟ್ಯಗಳನ್ನು ಹೀಗೆ ಪಟ್ಟಿ ಮಾಡಬಹುದು :

ಪುಲ್ಲಿಂಗ

ಸಹೋದರ ಅಥವಾ ಸಹೋದರಿಯ ಮಗ

ಮಾತಾಡುವ ವ್ಯಕ್ತಿ ಪುಲ್ಲಿಂಗವಾಗಿದ್ದರೆ ಸಹೋದರಿಯ ಮಗ

ಮಾತಾಡುವ ವ್ಯಕ್ತಿ ಸ್ತ್ರೀಲಿಂಗವಾಗಿದ್ದರೆ ಸಹೋದರನ ಮಗ.

ಇವುಗಳಲ್ಲಿ ಮೊದಲ ವೈಶಿಷ್ಟ್ಯಗಳಷ್ಟೆ ಇಂಗ್ಲಿಷ್ nephew ಪದದಿಂದ ಸೂಚಿತವಾಗಿವೆ. ಆದುದರಿಂದ ಭಾಚೊ, nephew ಇವುಗಳ ಸಂದರ್ಭಮೂಲ ಅರ್ಥ ಒಂದೇ ಅಲ್ಲ.

3

ಕ್ಯಾಟ್‌ಫರ್ಡನ ಭಾಷಾಂತರ ಸಿದ್ಧಾಂತದಲ್ಲಿ ಕೇಂದ್ರೀಯ ಪ್ರಾಮುಖ್ಯವನ್ನು ಭಾಷಾಂತರ ಸಮಾನಾರ್ಥಕತೆಯ ಪರಿಕಲ್ಪನೆಗೆ ಕೊಡಬೇಕು. ಮೂಲಭಾಷೆಯಲ್ಲಿರುವ ಪಾಠಕ್ಕೆ ಬದಲಾಗಿ ಉದ್ದಿಷ್ಟ ಭಾಷೆಯಲ್ಲಿ ಪ್ರತಿಸ್ಥಾಪಿತವಾಗುವ ಪಾಠವನ್ನು ಭಾಷಾಂತರ ಸಮಾನಾರ್ಥಕ ಎಂದು ಹೇಳಬಹುದು. ಸಮರ್ಪಕವಾದ ಭಾಷಾಂತರ ಸಮಾನಾರ್ಥಕ ದೊರಬೇಕಾದರೆ ಮೂಲಪಾಠ ನಿರ್ದೇಶಿಸುವ ಸನ್ನಿವೇಶದ ವೈಶಿಷ್ಟ್ಯಗಳನ್ನು ಸಾಧ್ಯವಾದಷ್ಟು ಹೆಚ್ಚು ಸಂಖ್ಯೆಯಲ್ಲಿ ಉದ್ದಿಷ್ಟ ಭಾಷೆಯ ಸಮಾನಾರ್ಥಕ ಸೂಚಿಸಬೇಕು. ಎರಡೂ ಪಾಠಗಳು ಎಲ್ಲಾ ವೈಶಿಷ್ಟ್ಯಗಳನ್ನು ಸೂಚಿಸುವುದು ಸಾಮಾನ್ಯವಾಗಿ ಅಸಾಧ್ಯ. ಭಾಚೋ, nephew ಪದಗಳು ಗರಿಷ್ಠ ಸಂಖ್ಯೆಯಲ್ಲಿ ಸನ್ನಿವೇಶದ ಸಮಾನ ವೈಶಿಷ್ಟ್ಯಗಳನ್ನು ಸೂಚಿಸುತ್ತವೆ. nephew ಪದವನ್ನು ಬಿಟ್ಟರೆ ಬೇರೆ ಯಾವ ಇಂಗ್ಲಿಷ್ ಪದ ಭಾಚೋ ಪದ ನಿರ್ದೇಶಿಸುವ ಸನ್ನಿವೇಶದ ವೈಶಿಷ್ಟ್ಯಗಳನ್ನು ಅಷ್ಟು ಹೆಚ್ಚಾಗಿ (ಎರಡು ವೈಶಿಷ್ಟ್ಯಗಳನ್ನು) ನಿರ್ದೇಶಿಸುವುದಿಲ್ಲ. ಆದುದರಿಂದ ಇವುಗಳಲ್ಲಿ ಕಂಡುಬರುವ ಭಾಷಾಂತರ ಸಮಾನಾರ್ಥಕತೆ ಸಮರ್ಪಕವಾಗಿದೆ. ಇದು ಸಂದರ್ಭಮೂಲ ಅರ್ಥದ ಮಾತಾಯಿತು.

ರೂಪ್ಯಕ ಅರ್ಥದ ವಿಷಯ ಹೇಳುವುದಾದರೆ ಕೆಲವೊಮ್ಮೆ ರೂಪ್ಯಕ ಸಂವಾದಿತ್ವವೇ (formal correspondence) ಭಾಷಾಂತರ ಸಮಾನಾರ್ಥಕತೆಯಾಗಿರುತ್ತದೆ. ಒಂದು ಭಾಷೆಯ ವ್ಯವಸ್ಥೆಯಲ್ಲಿ ಒಂದು ಪದ ಮಾಡುವ ಕೆಲಸವನ್ನೇ ಇನ್ನೊಂದು ಭಾಷಾ ವ್ಯವಸ್ಥೆಯಲ್ಲಿ ಇನ್ನೊಂದು ಪದ ಮಾಡಿದರೆ ಇವೆರಡು ಪದಗಳು ರೂಪ್ಯಕವಾಗಿ ಸಂವಾದಿಯಾಗಿವೆ. ರೂಪ್ಯಕ ಸಂವಾದಿತ್ವಗಳು ಭಾಷಾಂತರ ಸಮಾನಾರ್ಥಕಗಳಾಗಲೇಬೇಕೆಂದಿಲ್ಲ. ಉದಾಹರಣೆಗೆ the ಎಂಬ ಇಂಗ್ಲಿಷ್ ಪದಕ್ಕೆ ಕನ್ನಡದಲ್ಲಿ ರೂಪ್ಯಕವಾಗಿ ಸಂವಾದಿಯಾದ ಪದವಿಲ್ಲ.

the man ಒಬ್ಬ ಮನುಷ್ಯ
ಆ ಮನುಷ್ಯ

the (ದಿ) thing to be done ಮಾಡಬೇಕಾದ ಕೆಲಸ (ವಸ್ತು) ಅದೇ, ಈ ಸಮಾನಾರ್ಥಕಗಳು ಸಂದರ್ಭಮೂಲ ಅರ್ಥವನ್ನು ಅವಲಂಬಿಸಿವೆ. ನಿರ್ದಿಷ್ಟ ಸಂದರ್ಭವಿಲ್ಲದೆ ಒಬ್ಬ, ಆ, ಅದೇ— ಈ ಪದಗಳನ್ನು ಪರಿಶೀಲಿಸಿದರೆ ಅವುಗಳು ಕನ್ನಡ ಭಾಷೆಯಲ್ಲಿ ನಿರ್ವಹಿಸುವ ಕಾರ್ಯಕ್ಕೂ the ಪದ ಇಂಗ್ಲಿಷ್ ಭಾಷೆಯಲ್ಲಿ ನಿರ್ವಹಿಸುವ ಕಾರ್ಯಕ್ಕೂ ರೂಪ್ಯಕವಾಗಿ ಸಂಬಂಧವಿಲ್ಲವೆಂದು ಕಂಡುಬರುತ್ತದೆ ((one, that, same–ಇವು ಒಬ್ಬ, ಆ, ಅದೇ ಪದಗಳಿಗೆ ರೂಪ್ಯಕವಾಗಿ ಸಂವಾದಿಯಾಗಿವೆ).

ಮೂಲಭಾಷೆಯಿಂದ ಉದ್ದಿಷ್ಟ ಭಾಷೆಗೆ ಒಂದು ಪಾಠ ಬರುವಾಗ ರೂಪ್ಯಕ ಸಂವಾದಿತ್ವದ ಉಲ್ಲಂಘನೆಯಾಗಿದ್ದರೆ ಅದನ್ನು ಸರಿತ (shift) ಎನ್ನುತ್ತೇವೆ. ಸರಿತ ಎಂಬ ಪರಿಕಲ್ಪನೆ ಈ ಸಿದ್ಧಾಂತದಲ್ಲಿ ವ್ಯಾಪಕವಾಗಿ ಬಳಕೆಯಾಗಿದೆ. ಮಟ್ಟಗಳ (levels) ನಡುವೆ, ಪ್ರವರ್ಗಗಳ ನಡುವೆ ಸರಿತಗಳು ಏರ್ಪಡಬಹುದು. ವ್ಯಾಕರಣಮಟ್ಟ ಮತ್ತು ಕೋಶಪದಮಟ್ಟದ ನಡುವಿನ ಸರಿತಕ್ಕೆ ಉದಾಹರಣೆಯಾಗಿ ಈ ಪ್ರಯೋಗವನ್ನು ನೋಡಬಹುದು.

ಕಿತಿ ವಾಜ್ಲೆ ? (ಎಷ್ಟು ಬಾರಿಸಿತು, ಮರಾಠಿ)
ಗಂಟೆ ಎಷ್ಟು ? (ಕನ್ನಡ)

ಮರಾಠಿಯ ವಾಜ್ಲೆ ಕ್ರಿಯಾಪದ ಕನ್ನಡದಲ್ಲಿ ಗಂಟೆ ಎಂಬ ನಾಮಪದವಾಗಿ ಮಾರ್ಪಟ್ಟಾಗ ವ್ಯಾಕರಣಮಟ್ಟದಿಂದ ಕೋಶಪದದ ಮಟ್ಟಕ್ಕೆ ಸರಿತ ಏರ್ಪಟ್ಟಿದೆ.

ಪ್ರವರ್ಗಗಳ ನಡುವಿನ ಸರಿತಗಳನ್ನು ಹಲವೆಡೆ ಗುರುತಿಸಬಹುದು. ರಚನೆಯಲ್ಲಿ ಸರಿತಗಳಿರಬಹುದು. ಇಂಗ್ಲಿಷ್-ಕನ್ನಡ ಭಾಷಾಂತರದಲ್ಲಿ ಈ ಸರಿತ ಕಾಣಿಸಿಕೊಳ್ಳುತ್ತದೆ.

John loves Mary ರಚನೆ	ಕರ್ತೃ ಕ್ರಿಯೆ ಕರ್ಮ
ಜಾನ್ ಮೇರಿಯನ್ನು ಪ್ರೀತಿಸುತ್ತಾನೆ	ಕರ್ತೃ ಕರ್ಮ ಕ್ರಿಯೆ
ಮೇರಿಯನ್ನು ಜಾನ್ ಪ್ರೀತಿಸುತ್ತಾನೆ	ಕರ್ಮ ಕರ್ತೃ ಕ್ರಿಯೆ

ಇಂಗ್ಲಿಷ್ ಘಟಕದ (ವಾಕ್ಯದ) ರೂಪ್ಯಕ ಸಂವಾದಿತ್ವದ (ಕರ್ತೃ ಕ್ರಿಯೆ ಕರ್ಮ) ಉಲ್ಲಂಘನೆಯಾಗಿದೆ.

ಇಂಗ್ಲಿಷ್–ಕನ್ನಡ ಭಾಷಾಂತರದಲ್ಲಿ ಅನೇಕಾವರ್ತಿ ದೀರ್ಘವಾಕ್ಯಗಳನ್ನು ಒಡೆದು ಸಣ್ಣ ವಾಕ್ಯಗಳನ್ನು ಮಾಡುವ ಪರಿಪಾಠ ಉಂಟು. ಘಟಕಗಳ ನಡುವಿನ ಸರಿತದ ನಿದರ್ಶನವಿದು. ಮೂಲಪಾಠದಲ್ಲಿರುವ ಒಂದು ಘಟಕ ಉದ್ದಿಷ್ಟ ಪಾಠದಲ್ಲಿ ಬೇರೊಂದು ಘಟಕವಾಗುತ್ತದೆ.

"It is, I believe, a fairly common experience for those who have been engaged for a good many years in the profession of

literary criticism, to slip, almost unconsciously, into a condition of mistrust of all their most familiar and general terms''(*Problem of Style*, T. Middleton Murry, p. 1)

"ಸಾಹಿತ್ಯ ವಿಮರ್ಶೆಯಲ್ಲಿ ಪಾರಿಭಾಷಿಕ ಪದಗಳಲ್ಲಿ ಚಿರಪರಿಚಿತವಾದವೂ ಸ್ಥೂಲಾರ್ಥವುಳ್ಳವೂ ಆದ ಪದಗಳುಂಟು. ಹಲವು ವರ್ಷ ಈ ವೃತ್ತಿಯಲ್ಲಿ ನಿಧ್ಯುಕ್ತರಾದುದರಿಂದ ಪದಗಳನ್ನು ಸಂದೇಹದೃಷ್ಟಿಯಿಂದ ನೋಡುವ ಸ್ಥಿತಿಗೆ, ಪ್ರಾಯಃ ತಮಗರಿವಿಲ್ಲದೆ, ಬಂದಿರುವುದು ಸುಮಾರು ಸರ್ವೇಸಾಧಾರಣವಾಗಿರುವ ಒಂದು ಅನುಭವ ಎಂದು ನನ್ನ ಭಾವನೆ."

ಈ ಉದಾಹರಣೆಯಲ್ಲಿ ಮೂಲಪಾಠದಲ್ಲಿ ಒಂದೇ ಒಂದು ವಾಕ್ಯವಿದೆ. ಅದರೊಳಗೆ ಇತರ ಉಪವಾಕ್ಯಗಳು ಅಡಕವಾಗಿವೆ. ಉದ್ದಿಷ್ಟ ಪಾಠದಲ್ಲಿ ಎರಡು ವಾಕ್ಯಗಳಿವೆ. ಮೂಲದಲ್ಲಿ ಉಪವಾಕ್ಯವೂ ಆಗಿರದೆ ಕೇವಲ ಒಂದು ಪದಪುಂಜವಾಗಿದ್ದ ಘಟಕ, their most familiar and general terms, ಉದ್ದಿಷ್ಟ ಪಾಠದಲ್ಲಿ ಸ್ವತಂತ್ರವಾಕ್ಯವಾಗಿದೆ. ಘಟಕಗಳ ನಡುವಿನ ಸರಿತಕ್ಕೆ ಇದೊಂದು ಉದಾಹರಣೆ.

ವ್ಯವಸ್ಥೆಗಳಲ್ಲಿ ಆಂತರಿಕ ಸರಿತಗಳು ಏರ್ಪಡುತ್ತವೆ. ಎರಡು ಭಾಷೆಗಳಲ್ಲಿ ರೂಪ್ಯಕವಾಗಿ ವ್ಯವಸ್ಥೆಗಳಿರುತ್ತವೆ; ಆದರೆ ಭಾಷಾಂತರದಲ್ಲಿ ಸಂವಾದಿ ವ್ಯವಸ್ಥೆಯ ಒಂದು ಪದವನ್ನು(term) ಬಳಸಿದ್ದರೂ, ಆ ಪದ ಸಂವಾದಿಯಾಗಿರುವುದಿಲ್ಲ.

Orders were passed by the University

ವಿಶ್ವವಿದ್ಯಾನಿಲಯ ಆಜ್ಞೆಯನ್ನು ಹೊರಡಿಸಿತು. orders ಎಂಬಲ್ಲಿ -s ಎಂಬುದು ಬಹುವಚನ ಸೂಚಕವಾಗಿದೆ. ಸೊನ್ನೆ,-s—ಇವು ಈ ವಚನಸೂಚಿ ವ್ಯವಸ್ಥೆಯ ಎರಡು ಪದಗಳು. ಸೊನ್ನೆ ಎಂದರೆ ಮೂಲಪದಕ್ಕೆ ಏನನ್ನೂ ಸೇರಿಸದೆ ಒಂದು ಅರ್ಥವನ್ನು, ಏಕವಚನಾರ್ಥವನ್ನು, -s ಎಂದರೆ s ನ್ನು ಸೇರಿಸಿದರೆ ಇನ್ನೊಂದು ಅರ್ಥವನ್ನು, ಬಹುವಚನಾರ್ಥವನ್ನು ಪಡೆಯಬಹುದು. ಈ ವ್ಯವಸ್ಥೆಗೆ ರೂಪ್ಯಕವಾಗಿ ಸಂವಾದಿಯಾದ ಕನ್ನಡ ಭಾಷೆಯ ವ್ಯವಸ್ಥೆಯಲ್ಲಿಯೂ ಸೊನ್ನೆ, -ಗಳು (-ರು) ಹೀಗೆ ಎರಡು ಪದಗಳಿವೆ. ಆದರೆ ಈ ಉದಾಹರಣೆಯಲ್ಲಿ ಮೂಲದಲ್ಲಿ ವ್ಯವಸ್ಥೆಗೆ ಸಂವಾದಿಯಾಗಿರುವ ವ್ಯವಸ್ಥೆಯಿಂದಲೇ ಸಮಾನಾರ್ಥಕವನ್ನು ಆರಿಸಿದ್ದರೂ,ಹೀಗೆ ಆರಿಸಿದ ಪದ ಸಂವಾದಿ ಪದವಲ್ಲ -sಗೆ ಸಂವಾದಿಯಾಗಿ -ಗಳು ಪದವಿರಬೇಕಿತ್ತು; ಇಲ್ಲಿ ಸೊನ್ನೆ ಪದ ಇದೆ.

ಭಾಷಾಂತರದ ಪ್ರಭೇದಗಳನ್ನು ಹೇಳುವಲ್ಲಿಯೂ ಕ್ಯಾಟ್‌ಫರ್ಡನು ಭಾಷಾಂತರ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾನೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಪ್ರಭೇದಗಳೆಂದರೆ ಮುಕ್ತ (unbounded) ಭಾಷಾಂತರ ಮತ್ತು ದರ್ಜೆಗಳಿಗೆ ಸೀಮಿತವಾದ (rank-bound) ಭಾಷಾಂತರ. ಮೂಲದಲ್ಲಿನ ಘಟಕಗಳನ್ನು ಅವೇ ದರ್ಜೆಯ ಘಟಕಗಳಿಂದ ಭಾಷಾಂತರಿಸಿದರೆ ಅದು ದರ್ಜೆಗಳಿಗೆ ಸೀಮಿತವಾದ ಭಾಷಾಂತರವಾಗುತ್ತದೆ.

ಕಾಟಾಂತ್ ಪಡೊಂದ (ಕೊಂಕಣಿ)

ಇದನ್ನು ಪದಗಳ ದರ್ಜೆಯಲ್ಲಿ ಕನ್ನಡಕ್ಕೆ ಭಾಷಾಂತರಿಸಿದರೆ, ಕಟ್ಟೆಯಲ್ಲಿ ಬೀಳಲಿ, ಎಂದಾಗುತ್ತದೆ.

ವಾಕ್ಯದ ದರ್ಜೆಯಲ್ಲಿ ಭಾಷಾಂತರಿಸಿದರೆ, ಏನು ಬೇಕಾದರೂ ಮಾಡಲಿ ಎಂದಾಗುತ್ತದೆ.

ಮುಕ್ತಭಾಷಾಂತರದಲ್ಲಿ ಇಡೀ ಮೂಲಪಾಠ ಒಂದೇ ದರ್ಜೆಗೆ ಸೀಮಿತವಾಗಿ ಭಾಷಾಂತರವಾಗುವುದಿಲ್ಲ. ಒಂದೆಡೆ ಪದಗಳ ದರ್ಜೆಯಲ್ಲಿ ಆಗಬಹುದು, ಒಂದೆಡೆ ವಾಕ್ಯಗಳ ದರ್ಜೆಯಲ್ಲಿ ಆಗಬಹುದು, ಕೆಲವೊಮ್ಮೆ ವಾಕ್ಯಗಳನ್ನು ಮೀರಿದ ಪರಿಚ್ಛೇದದ ದರ್ಜೆಯಲ್ಲೂ ಸಮಾನಾರ್ಥಕಗಳು ಏರ್ಪಡಬಹುದು. ಮುಕ್ತಭಾಷಾಂತರದಲ್ಲಿ ಘಟಕಗಳ ನಡುವೆ ಸರಿತವಿರುತ್ತದೆ.

ಭಾಷಾಪ್ರಭೇದಗಳನ್ನು ಹೆಸರಿಸುವಲ್ಲಿಯೂ ಇಲ್ಲಿಯ ಹೇಳಿಕೆಗಳು ಗಮನಾರ್ಹ ವಾದುವು; ಉಪಭಾಷೆ (dialect), ಪ್ರಾದೇಶಿಕ ಉಪಭಾಷೆ, ವ್ಯಕ್ತಿಭಾಷೆ (idiolect), ಶೈಲಿ, ನೋಂದಣಿ (register), ಪರಿ (mode) ಇಂಥ ಒಂದೊಂದು ಪ್ರಭೇದದಲ್ಲಿ ಕೆಲವು ನಿರ್ದಿಷ್ಟ ವ್ಯಾಕರಣಾಂಶಗಳಾಗಲಿ, ಕೋಶಪದದ ಅಂಶವಾಗಲಿ, ಧ್ವನಿ ಅಥವಾ ಲಿಪಿ ವ್ಯವಸ್ಥೆಯ ವಾಕ್ಯ ಅಂಶವಾಗಲಿ ಅನೇಕಾವರ್ತಿ ಬರುವುದನ್ನು ಕಾಣಬಹುದು. ಇವುಗಳು ಆಯಾ ಭಾಷಾ ಪ್ರಭೇದದ ಮುದ್ರೆಗಳು (markers). ಉದಾಹರಣೆಗೆ, ಕನ್ನಡದಲ್ಲಿ ಆತ್ಮೀಯ, ಶೈಲಿಯಲ್ಲಿ ಏಕವಚನ ಪ್ರಯೋಗ ಇಂಥ ಒಂದು ಮುದ್ರೆ. ಧಾರವಾಡ ಕಡೆಯ ಕನ್ನಡದಲ್ಲಿ ಮಾಡುವದು, ಕೇಳುವದು ಎಂಬಲ್ಲಿಯ ವಕಾರ (ಇತರ ಕಡೆ ಮಾಡುವುದು, ಕೇಳುವುದು ಹೀಗಿರುತ್ತದೆ) ಇಂಥ ಇನ್ನೊಂದು ಮುದ್ರೆ. ಇಂಥ ಮುದ್ರೆಗಳಿಗೆ ರೂಪ್ಯಕವಾಗಿ ಸಂವಾದಿಯಾಗಿದ್ದ ಸಮಾನಾರ್ಥಕಗಳು ಉದ್ದಿಷ್ಟ ಭಾಷೆಯಲ್ಲಿ ಕೆಲವೊಮ್ಮೆ ಇರುತ್ತವೆ, ಕೆಲವೊಮ್ಮೆ ಇರುವುದಿಲ್ಲ. ಇದ್ದರೂ ಅವುಗಳನ್ನು ಬಳಸಲೇಬೇಕೆಂದಿಲ್ಲ—ಏಕೆಂದರೆ ಸಮಾನಾರ್ಥಕತೆಯನ್ನು ಸ್ಥಾಪಿಸುವುದು ಭಾಷಾಪ್ರಭೇದಗಳ ನಡುವೆ ಅಲ್ಲದೆ ಮುದ್ರೆಗಳ ರೂಪ್ಯಕತೆಗಳ ನಡುವೆ ಅಲ್ಲ. ಉದಾರಣೆಗೆ,

The flower girl : (springing up terrified) I ain't done nothing wrong by speaking to the gentleman. I've a right to sell flowers if I keep off the kerb. (Hysterically) I'm a respectable girl : so help me, I never spoke to him except to ask him to buy a flower off me.

(Bernard Shaw, *Pygmalion*, Act I)

ಹೂವಿನ ಹುಡುಗಿ : (ಹೆದರಿಕೆಯಿಂದ ಚಿಮ್ಮಿ ನಿಲ್ಲುತ್ತಾ) ಸಾಮಿಯೋರ ಕೂಡ ಮಾತಾಡಿ ನಾನು ತಪ್ಪೇನು ಮಾಡ್ನಿಲ್ಲ. ರಸ್ತೆ ಅಂಚುಕಲ್ಲಿಂದ ಆಚೆ

> ನಿಂತ್ಕೊಂಡಿರೋವರ್ಗೂ ವೂಮಾರೋ ಅಕ್ಕು ನಂಗ್ಯೈತೆ. (ಎತ್ತಿದ, ಚಿತ್ತೋದ್ರೇಕ ಧ್ವನಿಯಲ್ಲಿ) ನಾನ್ ಮರ್ಯಾದಸ್ಥ ವುಡ್ಗಿ. ನಂಗೆ ಯಾರೂ ಕೆಡಕ್ಮಾಡ್ಬಾರ್ದು. ಒಂದುವ್ವ ಕೊಂಡ್ಕಳ ಅಂತ ನಾನ ವನ್ನ ಮಾತಾಡ್ಸಿದ್ದು.
>
> (ವಿ. ಸೀ. ಅವರ ಭಾಷಾಂತರ)

ಇಲ್ಲಿ have not ಎಂಬುದನ್ನು ain't ಎಂದು, I have ಎಂಬುದನ್ನು I've ಎಂದು, I am ಎಂಬುದನ್ನು I'm ಎಂದು ಸಂಕುಚಿತಗೊಳಿಸಿದುದು; ಎರಡು ನಿಷೇಧಾರ್ಥಕಗಳ ಬಳಕೆ, ain't done nothing wrong— ಇವು ಮುದ್ರೆಗಳು. ಶಿಷ್ಟ ಉಚ್ಚಾರಕ್ಕೆ ದೂರವಿರುವ ಭಾಷಾಪ್ರಭೇದವನ್ನು ಇವು ಸೂಚಿಸುತ್ತವೆ. ಉದ್ದಿಷ್ಟ ಭಾಷೆಯಲ್ಲೂ ಇಂಥ ಒಂದು ಪ್ರಭೇದ ಏರ್ಪಡಬೇಕು—ಇದು ಮುಖ್ಯ ವಿಷಯ. ಈ ಪ್ರಭೇದವನ್ನು ಸೂಚಿಸುವ ಮುದ್ರೆಗಳು ಉದ್ದಿಷ್ಟ ಪಾಠದಲ್ಲಿ ಕಾಣಿಸಿಕೊಳ್ಳಬೇಕು. ಈ ಮುದ್ರೆಗಳು ಮೂಲಪಾಠದ ಮುದ್ರೆಗಳಿಗೆ ರೂಪ್ಯಕವಾಗಿ ಸಂವಾದಿಯಾಗಿವೆಯೋ ಇಲ್ಲವೋ ಎಂಬುದು ಗೌಣ. ಕನ್ನಡದಲ್ಲಿ ಶಿಷ್ಟ ಉಚ್ಚಾರಕ್ಕೆ ದೂರವಿದು. ಭಾಷಾಪ್ರಭೇದವನ್ನು ಸೂಚಿಸಲು ಹಕಾರ ಲೋಪವಾಗುವುದು (ವೂ, ವುಡ್ಗಿ, ಅಕ್ಕು) ಇಂಥ ಮುದ್ರೆಗಳು ಬಳಕೆಯಾಗಿವೆ. ಇವು ಮೂಲಪಾಠದ ಯಾವುದೇ ಮುದ್ರೆಗೆ ರೂಪ್ಯಕವಾಗಿ ಸಂವಾದಿಯಾದುವಲ್ಲ.

ಕೊನೆಯದಾಗಿ ಭಾಷಾಂತರಣೀಯತೆ ಮತ್ತು ಅದರ ಮಿತಿಗಳನ್ನು ಕುರಿತ ಭಾಗಗಳನ್ನು ನೋಡಬಹುದು. ಧ್ವನಿವ್ಯವಸ್ಥೆ ಮತ್ತು ಲಿಪಿವ್ಯವಸ್ಥೆಯ ನಡುವೆ ಭಾಷಾಂತರ ನಡೆಯುವುದು ಸಾಧ್ಯವಿಲ್ಲ. ಭಾಷಾಂತರದಲ್ಲಿ ಸಮಾನ ದ್ರವ್ಯಾಂಶಗಳು ಸೂಚಿತವಾಗಬೇಕು ಎಂಬ ಮೂಲಭೂತ ತತ್ತ್ವವನ್ನು ಅನುಸರಿಸಿದರೆ ನೇರವಾಗಿ ಲಭಿಸುವ ಫಲಿತವಿದು. ಇದಲ್ಲದೆ ಭಾಷೆಗೆ ಸಂಬಂಧಪಟ್ಟಂತೆ, ಸಂಸ್ಕೃತಿಗೆ ಸಂಬಂಧಪಟ್ಟಂತೆ ಅ ಭಾಷಾಂತರಣೀಯತೆ ತಲೆದೋರಬಹುದು. ಮೂಲಪಾಠದಲ್ಲಿ ಸಂಚಿತವಾದ, ಕಾರ್ಯಾತ್ಮಕವಾಗಿ ಪ್ರಸಕ್ತವಾದ (functionally relevant) ಸನ್ನಿವೇಶದ ವೈಶಿಷ್ಟ್ಯಗಳು ಆ ಭಾಷೆಯ ರೂಪ್ಯಕ ವೈಶಿಷ್ಟ್ಯಗಳಾಗಿದ್ದು, ಉದ್ದಿಷ್ಟ ಭಾಷೆಯಲ್ಲಿ ಇವುಗಳು ರೂಪ್ಯಕ ಸಂವಾದಿತ್ವವನ್ನು ಪಡೆಯದಿದ್ದರೆ, ಭಾಷಾಂತರ ಅಸಾಧ್ಯವಾಗುತ್ತದೆ.

How is life? It depends on the liver.

ಇಲ್ಲಿ liver ಎಂಬ ಪದ ಸೂಚಿಸುವ ಕಾರ್ಯಾತ್ಮಕವಾಗಿ ಪ್ರಸಕ್ತ ಸನ್ನಿವೇಶಾಂಶಗಳು:

ಶರೀರದ ಒಂದು ಅವಯವ

ಜೀವನವನ್ನು ನಡೆಸುವ ವ್ಯಕ್ತಿ

ಇವೆರಡೂ ಅಂಶಗಳನ್ನು ಒಂದೇ ಪದ ಸೂಚಿಸಿದೆ.

ಮೂಲಪಾಠ ಈ ಮೂರೂ ಅಂಶಗಳನ್ನು ಓದುಗನಿಗೆ, ಕೇಳುಗನಿಗೆ ಸಂವಹಿಸುವ

ಉದ್ದೇಶವನ್ನು ಇಟ್ಟುಕೊಂಡಿದೆ. ಮೊದಲು ಎರಡು ಅಂಶಗಳನ್ನು liver ಎಂಬ ಇಂಗ್ಲಿಷ್ ಪದದ ರೂಪ್ಯಕ ವೈಶಿಷ್ಟ್ಯಗಳು ಒಳಗೊಂಡಿವೆ. ಎಂದರೆ live ಕ್ರಿಯಾಪದಿಂದ ಸಾಧಿತ liver ನಾಮಪದ ಮತ್ತು liver ಕೋಶಪದ–ಇವೆರಡೂ ಇಂಗ್ಲಿಷ್ ಭಾಷೆಯ ರೂಪ್ಯಕ ವ್ಯವಸ್ಥೆಯಿಂದ ಹುಟ್ಟಿದವು. ಮೂಲಪಾಠ ಸಂವಹಿಸಲು ಉದ್ದೇಶಿಸಿದ ಧ್ವನಿ, ಈ ಪಾಠದ ಒಂದು ಮುಖ್ಯ ಉದ್ದೇಶ : liver ಅವಯವದ ಶರೀರಕ್ರಿಯೆಯಲ್ಲಿ ವಹಿಸುವ ಪಾತ್ರವನ್ನು ಹೇಳುವುದಾಗಲಿ, ಹೇಗೆ ಜೀವನ ಮಾಡುತ್ತೇವೋ, live, ಹಾಗೆ ಜೀವನ, life, ಇರುತ್ತದೆ ಎಂಬ ಸಂಬಂಧವನ್ನು ಹೇಳುವುದಾಗಲಿ, ಅಥವಾ ಇವೆರಡನ್ನು ಮಾತ್ರ ಹೇಳುವುದಾಗಲಿ ಈ ಪಾಠದ ಸಂಪೂರ್ಣ ಉದ್ದೇಶವಲ್ಲ. liver ಪದ ಇವೆರಡು ಅರ್ಥಗಳನ್ನೂ ಒಳಗೊಂಡಿರುವುದರಿಂದ ಉಂಟಾಗುವ ಧ್ವನಿ ಈ ಪಾಠದ ಉದ್ದೇಶವನ್ನು ಪರಿಪೂರ್ಣಗೊಳಿಸುತ್ತದೆ ಮತ್ತು ಪಾಠವನ್ನು ಸಮರ್ಪಕವಾಗಿ ವಿವರಿಸುತ್ತದೆ. liver ಪದದ ರೂಪದ ದೆಸೆಯಿಂದ ಈ ಸನ್ನಿವೇಶಾಂಶ ಸೂಚಿತವಾಗುವುದು ಮೂಲದಲ್ಲಿ ಸಾಧ್ಯವಾಗಿದೆ. ಆದರೆ ಕನ್ನಡದಲ್ಲಿ ಈ ಮೂರನೆಯ ಸನ್ನಿವೇಶಾಂಶವನ್ನು ಸೂಚಿಸುವ ಏಕೈಕ ಪದ ಇಲ್ಲ. ಮೊದಲ ಎರಡು ಸನ್ನಿವೇಶಾಂಶಗಳನ್ನು ಸೂಚಿಸುವ ಒಂದೇ ಪದವೂ ಇಲ್ಲ. ಆದುದರಿಂದ ಭಾಷಾಂತರ ಅಸಾಧ್ಯವಾಗುತ್ತದೆ.

ಮೂಲಪಾಠ ಸೂಚಿಸುವ ಸನ್ನಿವೇಶಾಂಶ ಉದ್ದಿಷ್ಟ ಭಾಷಾಸಂಸ್ಕೃತಿಯಲ್ಲಿ ಇಲ್ಲದಿದ್ದರೆ ಅಸಾಧ್ಯವಾಗುತ್ತದೆ. ತಿಂಡಿ ತಿನಸುಗಳ ಹೆಸರುಗಳು, ಕೆಲವು ವಿಶಿಷ್ಟ ಪದ್ಧತಿಗಳ ಹೆಸರುಗಳು ಆಯಾ ಭಾಷೆಗಳಲ್ಲಿ ಅಲ್ಲದೆ ಇತರ ಭಾಷೆಗಳಲ್ಲಿ ಇಲ್ಲದಿದ್ದುದರಿಂದ ಇತರ ಭಾಷೆಗಳಲ್ಲಿ ಅವುಗಳಿಗೆ ಸಮಾನಾರ್ಥಕಗಳೇ ಇರುವುದಿಲ್ಲ. ಭಾಷಾಂತರ ಸಾಧ್ಯವಾಗುವುದಿಲ್ಲ. ಕೆಲವು ವರ್ಷಗಳ ಹಿಂದೆ ಮಾಧ್ಯಮಿಕ ಶಾಲೆಗಳಲ್ಲಿ ಉಪಯೋಗಿಸುತ್ತಿದ್ದ ಕೆಲವು ಇಂಗ್ಲಿಷ್ ಪಠ್ಯ ಪುಸ್ತಕಗಳಲ್ಲಿ ದೋಸೆ ಎಂಬ ಪದಕ್ಕೆ rice cake ಎಂಬ ಸಮಾನಾರ್ಥಕವನ್ನು ಬಳಸುತ್ತಿದ್ದರು. Rajan eats a rice cake everyday ಎಂಬ ಪ್ರಯೋಗಗಳಿರುತ್ತಿದ್ದವು. Cake ಎಂದರೆ ಬಹಳ ಅಪೂರ್ವವಾಗಿ, ಹಬ್ಬದ ಸಂದರ್ಭದಲ್ಲಿ ಇಲ್ಲವೆ ಇತರ ಸಮಾರಂಭಗಳಲ್ಲಿ ಮಾತ್ರ ಸಿಗುತ್ತಿದ್ದ ಆಪ್ಯಾಯಮಾನವಾಗಿದ್ದ ಭಕ್ಷ್ಯವೊಂದೇ ಎಂದು ತಿಳಿದಿದ್ದ ನಮಗೆ ಈ ರಾಜನ್ ಬಗೆಗೆ ಬಹಳ ಅಸೂಯೆಯಾಗುತ್ತಿತ್ತು. ಆದರೆ ಇದು rice cake, ಎಲ್ಲರ ಮನೆಯಲ್ಲೂ ಸಿಗುವ ತೂತು–ದೋಸೆಯಷ್ಟೆ ಎಂದು ಒಂದು ದಿನ ಅಧ್ಯಾಪಕರು ವಿವರಿಸಿ ಹೇಳಿದಾಗ ರಾಜನ್ ಪರವಾಗಿ ಮರುಕ ಉಂಟಾಗಿತ್ತು ! ಇಂಗ್ಲಿಷ್ ಸಂಸ್ಕೃತಿಯಲ್ಲಿ ನಮ್ಮ ದೋಸೆಗೆ ಸಮಾನಾರ್ಥಕವಾಗಿರುವ ಸಾಂಸ್ಕೃತಿಕಾಂಶ ಇಲ್ಲ. ಆದುದರಿಂದ ಈ ಭಾಷಾಂತರ ಅಯಶಸ್ವಿಯಾಯಿತು, ಭಾಷಾಂತರ ಅಸಾಧ್ಯವಾಯಿತು.

ವಾಸ್ತವವಾಗಿ ಭಾಷಾಂತರ ಸಾಧ್ಯವೇ ಅಸಾಧ್ಯವೇ ಎಂದು ವಿಚಾರ ಮಾಡುವುದಕ್ಕಿಂತ ಭಾಷಾಂತರಣೀಯತೆಯ ಪ್ರಮಾಣ ಹೆಚ್ಚೋ ಕಡಿಮೆಯೋ ಎಂದು ವಿಚಾರ ಮಾಡುವುದು

ಹೆಚ್ಚು ಸೂಕ್ತವಾಗುತ್ತದೆ. ಸಾಂಸ್ಕೃತಿಕ ಅಥವಾ ಭಾಷಿಕ ಕಾರಣಗಳಿಂದ ಭಾಷಾಂತರ ಅಸಾಧ್ಯವಾಗುವ ಸಂದರ್ಭಗಳಲ್ಲಿ ವರ್ಗಾವಣೆಗಳ (transference) ಮೂಲಕ ಸಮಸ್ಯೆಯನ್ನು ತಕ್ಕಮಟ್ಟಿಗೆ ಬಗೆಹರಿಸಬಹುದು. Rajan eats a dosai everyday—ಈ ಪಾಠ ಇಂಥ ಒಂದು ಪ್ರಯತ್ನವಾಗುತ್ತದೆ. ವರ್ಗಾವಣೆ ಎಂದರೆ ಮೇಲು ನೋಟಕ್ಕೆ ತೋರುವಷ್ಟು ಸರಳ ಕ್ರಿಯೆಯಲ್ಲ; ಮೂಲಪಾಠದ ಸಾಂಸ್ಕೃತಿಕ ಪರಿಸರವನ್ನು ಉದ್ದಿಷ್ಟ ಪಾಠದಲ್ಲಿ ಉಂಟುಮಾಡುವುದರ ಜೊತೆಗೆ, ಸೂಕ್ತ ರೀತಿಯಲ್ಲಿ ಏರ್ಪಡಿಸಿದ ವರ್ಗಾವಣೆಗಳು ಎರಡೂ ಭಾಷೆಗಳ ಸೂಕ್ಷ್ಮ ವೈಶಿಷ್ಟ್ಯಗಳನ್ನು ಗುರುತಿಸುವುದರಲ್ಲಿ ಮತ್ತು ಸ್ಪಷ್ಟಪಡಿಸುವುದರಲ್ಲಿ ಗಮನಾರ್ಹ ಸಹಾಯವನ್ನು ನೀಡಬಲ್ಲುವು.

4

ಕ್ಯಾಟ್‌ಫರ್ಡ್ ಮಂಡಿಸಿದ ಭಾಷಾಂತರಸಿದ್ಧಾಂತ ಭಾಷಾಂತರಶಾಸ್ತ್ರಕ್ಕೆ ಹೊಸದೊಂದು ವರ್ಣನಾತ್ಮಕ ಖಚಿತತೆಯನ್ನು ತಂದುಕೊಟ್ಟಿದೆ: ಇಲ್ಲಿ ನಿರೂಪಿತವಾದ ಹಲವು ಪಾರಿಭಾಷಿಕ ಪರಿಕಲ್ಪನೆಗಳು ಮತ್ತು ಪದಗಳೇ ಇದಕ್ಕೆ ಕಾರಣ. ಉದಾಹರಣೆಗೆ, ಕೆಲವು ಮೂಲಪಾಠಗಳು ಭಾಷಾಂತರಣೀಯವಲ್ಲ–ಇದೊಂದು ಸ್ಥೂಲ ಹೇಳಿಕೆಯಾಯಿತು. ಈ ಹೇಳಿಕೆಯನ್ನು ಹೀಗೆ ಖಚಿತಗೊಳಿಸಲಾಗಿದೆ: ಅಭಾಷಾಂತರಣೀಯತೆಗೆ ಭಾಷಿಕ, ಸಾಂಸ್ಕೃತಿಕ ಕಾರಣಗಳಿವೆ; ಭಾಷಿಕ ಕಾರಣಗಳಲ್ಲಿ ಹಂಚಿಕೊಂಡ ನಿದರ್ಶಕತ್ವ (shared exponence), ಬಹ್ವರ್ಥತೆ (polysemy), ಅನೇಕಾರ್ಥತೆ (oligogemy)ಗಳಿವೆ; ಸಾಂಸ್ಕೃತಿಕ ಕಾರಣಗಳನ್ನು ವಿಚಿತ್ರ ಸಹಸ್ಥಾನತ್ವ (strange collocation) ಎಂಬ ದೃಷ್ಟಿಯಲ್ಲೂ ನೋಡಬಹುದು. ವರ್ಗಾವಣೆಯ ವಿಷಯದಲ್ಲೂ ಶುದ್ಧ (pure) ವರ್ಗಾವಣೆ ಮತ್ತು ಭಾಗಶಃ (partial) ವರ್ಗಾವಣೆ ಎಂದಾಗ ವರ್ಗಾವಣೆ ಎಂಬ ಪರಿಕಲ್ಪನೆಯನ್ನು ಹೆಚ್ಚು ಖಚಿತವಾಗಿ ಚರ್ಚಿಸುವ ಅವಕಾಶ ಮಾಡಿದಂತಾಯಿತು. ಭಾಷಾಂತರ ಸಮಾನಾರ್ಥಕ ಸಂಭಾವ್ಯತೆ (probability), ನಿರ್ಬಂಧಿತ (conditionals) ಸಂಭಾವ್ಯತೆ, ಅನಿರ್ಬಂಧಿತ ಸಂಭಾವ್ಯತೆ, ಸಮಾನಾರ್ಥಕ ಹೀನತೆ (nil equivalence), ಶೂನ್ಯ ಸಮಾನಾರ್ಥಕತೆ (zero equivalence) ಈ ಪರಿಕಲ್ಪನೆಗಳು ಸಮಾನಾರ್ಥಕಗಳಲ್ಲಿ ಎಷ್ಟೆಷ್ಟು ಬಗೆಗಳಿವೆ, ಸಮಾನಾರ್ಥಕತೆಯನ್ನು ಎಷ್ಟು ಖಚಿತವಾಗಿ ಚರ್ಚಿಸಬಹುದು ಎಂಬುದನ್ನು ತೋರಿಸಿಕೊಡುತ್ತವೆ.

ಮೇಲೆ ಹೇಳಿದ ಸಂದರ್ಭಗಳಲ್ಲಿ ವರ್ಣನಾತ್ಮಕ ಖಚಿತತೆ ಕಂಡುಬರುತ್ತದೆ. ವಿವರಣಾತ್ಮಕ ಖಚಿತತೆಗೆ ಉದಾಹರಣೆಯಾಗಿ ಈ ಸಿದ್ಧಾಂತದಲ್ಲಿ ಬರುವ ಸಹಸ್ಥಾನತ್ವದ (collocation) ಪರಿಕಲ್ಪನೆಯನ್ನು ನೋಡಬಹುದು. ಕೋಶಪದದ ಮಟ್ಟದಲ್ಲಿ ಕೆಲವು ಪದಗಳು ಇತರ ಕೆಲವು ನಿರ್ದಿಷ್ಟ ಪದಗಳ ಸಾಹಚರ್ಯದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ಈ ಪದಗಳನ್ನು ಸಹಸ್ಥಾನಿಗಳು (collocates) ಎನ್ನಬಹುದು. ಕನ್ನಡದಲ್ಲಿ

ದೋಸೆ, ಇಡ್ಲಿ, ಉಪ್ಪಿಟ್ಟು–ಇವು ಸಹಸ್ಥಾನಿಗಳ ಒಂದು ಗುಂಪು.
ಕೇಸರಿಬಾತ್, ಜಿಲೇಬಿ, ಜಾಮೂನು–ಇವು ಇನ್ನೊಂದು ಗುಂಪು.

Rajan eats a rice cake everyday ಎನ್ನುವ ಉದಾಹರಣೆಯಲ್ಲಿ ನಮಗೆ ಅಂದು ತಿಳಿದಿದ್ದ ಇಂಗ್ಲಿಷಿನಲ್ಲಿ cake ಪದ (rice ಪದದ ಜೊತೆಯಲ್ಲಿದ್ದರೂ) ದಿನ ನಿತ್ಯದ ತಿಂಡಿಗಳ ಸಹಸ್ಥಾನತ್ವವನ್ನು ಪಡೆದಿರಲಿಲ್ಲ. ಆದುದರಿಂದ ಈ ಇಂಗ್ಲಿಷ್ ವಾಕ್ಯ ಒಂದು ಕೌತುಕವೆಂದೆನಿಸಿತು, ನಮಗೆ. ಈ ರಾಜನ್ ದಿನನಿತ್ಯವೂ ತಿನ್ನುವುದು ಕೇಕನ್ನಲ್ಲ, ದೋಸೆಯನ್ನು ಎಂಬ ವಿವರಣೆ ನಮ್ಮ ಗೊಂದಲವನ್ನು ತಕ್ಕಮಟ್ಟಿಗೆ ಪರಿಹರಿಸಿ ತಾವರೂ ದೋಸೆಯನ್ನು cake ಎಂದುದೇಕೆ ಎಂಬ ಪ್ರಶ್ನೆ ನಮ್ಮಲ್ಲಿ ಉಳಿದಿತ್ತು. ಇಲ್ಲಿ ಪ್ರಯೋಗವಾದಂತೆ cake ಪದದ ವಿಚಿತ್ರ ಸಹಸ್ಥಾನತ್ವವೇ ಇಲ್ಲಿಯ ಅಯಶಸ್ವಿ ಭಾಷಾಂತರದ ಕಾರಣ.

ಖಚಿತತೆ ಇದ್ದುದರಿಂದ ಈ ಸಿದ್ಧಾಂತದಲ್ಲಿ ಆಂತರಿಕ ಸ್ವಸಾಂಗತ್ಯ ಕಂಡುಬರುತ್ತದೆ. ಇಲ್ಲಿಯ ಮುಖ್ಯ ತತ್ತ್ವಗಳನ್ನು ಕ್ರಮಬದ್ಧವಾಗಿ ಅನ್ವಯಿಸಿದುದರಿಂದ ಹಲವು ಕುತೂಹಲ ಕಾರಿ, ಹಾಗೂ ಅನಿರೀಕ್ಷಿತ ತೀರ್ಮಾನಗಳು ಲಭಿಸಿದುದನ್ನು ಕಾಣಬಹುದು. ಸಮಾನಾರ್ಥ ಕತೆ ಇರಬೇಕಾದರೆ ಪದಗಳು ಸಾಧ್ಯವಾದಷ್ಟು ಹೆಚ್ಚು ಸಂಖ್ಯೆಯಲ್ಲಿ ಸಮಾನ ದ್ರವ್ಯಾಂಶ ಗಳನ್ನು ಸೂಚಿಸಬೇಕು ಎಂಬುದು ಇಂಥ ಒಂದು ತತ್ತ್ವ. ಲಿಪಿವ್ಯವಸ್ಥೆಯ ದ್ರವ್ಯ ಲಿಪಿ ದ್ರವ್ಯ, ಎಂದರೆ ್ರ ್ತ ಿ ್ಗ ಇಂಥ ಲಿಖಿತ ಸಂಜ್ಞೆಗಳು ಲಿಪಿವ್ಯವಸ್ಥೆಯ ಮಟ್ಟದಲ್ಲಿ ಸಮಾ ನಾರ್ಥಕ ಬೇಕಿದ್ದರೆ ಉದ್ದಿಷ್ಟ ಭಾಷೆಯ ಪದ ಮೂಲಭಾಷೆಯ ಲಿಪಿವ್ಯವಸ್ಥೆ ಸೂಚಿಸುವ ಲಿಪಿ ದ್ರವ್ಯಾಂಶಗಳನ್ನು ಸೂಚಿಸಬೇಕು. ಈ ಸಮಾನಾರ್ಥಕ ಲಿಪಿಯಲ್ಲೇ ಇರತಕ್ಕದ್ದು. ಏಕೆಂದರೆ ಲಿಪಿದ್ರವ್ಯಾಂಶಗಳನ್ನು ಧ್ವನಿವ್ಯವಸ್ಥೆಯಾಗಲಿ, ವ್ಯಾಕರಣ, ಕೋಶಪದಗಳಾಗಲಿ ಸೂಚಿಸುವಂತಿಲ್ಲ. ಆದುದರಿಂದ ಲಿಪಿವ್ಯವಸ್ಥೆ ಮತ್ತು ಧ್ವನಿವ್ಯವಸ್ಥೆಗಳ ನಡುವೆ, ಲಿಪಿ ವ್ಯವಸ್ಥೆ ಮತ್ತು ವ್ಯಾಕರಣ, ಕೋಶಪದಗಳ ನಡುವೆ ಭಾಷಾಂತರ ಸಾಧ್ಯವಿಲ್ಲ. ಈ ಫಲಿತ ಮೇಲೆ ಹೇಳಿದ ಸಮಾನಾರ್ಥಕತೆಯ ಅರ್ಥವನ್ನು ಕುರಿತ ತತ್ವದಿಂದ ನೇರವಾಗಿ ಲಭಿಸುತ್ತದೆ.

ಭಾಷಾಂತರವೆಂದರೆ "ಒಂದು ಭಾಷೆಯಲ್ಲಿರುವ ಪಠ್ಯಸಾಮಗ್ರಿಗೆ ಬದಲಾಗಿ ಇನ್ನೊಂದು ಭಾಷೆಯ ಪಠ್ಯಸಾಮಗ್ರಿಯನ್ನು ಪ್ರತಿಸ್ಥಾಪಿಸುವುದು" ಎಂದು ಇಲ್ಲಿಯ ವ್ಯಾಖ್ಯೆ. ಪಠ್ಯ ಸಾಮಗ್ರಿ ಎಂದರೆ ಪಾಠದಲ್ಲಿರುವ ಸಾಮಗ್ರಿ: ಅದು ಲಿಪಿಗೆ ಸೀಮಿತವಾಗಬಹುದು, ಧ್ವನಿಗೆ ಸೀಮಿತವಾಗಬಹುದು, ವ್ಯಾಕರಣ, ಕೋಶಪದಗಳಿಗೆ ಸೀಮಿತವಾಗಬಹುದು. ಆದುದರಿಂದ ಲಿಪಿಯನ್ನಷ್ಟೇ ಬದಲಾಯಿಸಿದರೆ ಅದೂ ಭಾಷಾಂತರವೇ.

ಚೋಮನ ದುಡಿ

Choma's Drum ಎಂಬಲ್ಲಿ (*Illustrated Weekly* ಪತ್ರಿಕೆಯಲ್ಲಿ ಇದನ್ನು ಬಳಸಿದ್ದರು) ಲಿಪಿವ್ಯವಸ್ಥೆಯ ಮಟ್ಟದ ಭಾಷಾಂತರವನ್ನು ಮಾಡುವ ಪ್ರಯತ್ನ ನಡೆದಿದೆ. ' ೧ ಇವು ಎರಡೂ ಪಾಠಗಳು ಸೂಚಿಸುವ ಲಿಪಿಪ್ರವ್ಯದ ಕೆಲವು ಸಮಾನಾಂಶಗಳು. ಅದೇ ರೀತಿಯಲ್ಲಿ ಅನ್ಯಭಾಷೆಯನ್ನು ಕಲಿಯುವಾಗ ವಿದ್ಯಾರ್ಥಿಗಳು ಹೊಸ ಭಾಷೆಯ ಧ್ವನಿಗಳನ್ನು ಉಚ್ಚರಿಸಲು ಪ್ರಯತ್ನಿಸಿದರೂ, ಅನೇಕಾವರ್ತಿ ಉಚ್ಚಾರವಾಗುವುದು ಹಳೆಯ ಭಾಷೆಯ ಧ್ವನಿಯೇ. ಎಂದರೆ ಶುದ್ಧ ಹೊಸ ಭಾಷೆಯ (ಮೂಲ ಭಾಷೆ) ಧ್ವನಿಗಳಿಗೆ ಬದಲಾಗಿ ಮಾತೃಭಾಷೆಯ (ಉದ್ದಿಷ್ಟ ಭಾಷೆ) ಧ್ವನಿಗಳು ಬಂದಿವೆ. (ವ್ಯಾಕರಣ, ಕೋಶಪದಗಳು ಹೊಸ ಭಾಷೆಯವೇ; ಧ್ವನಿಯ ಪ್ರತಿಸ್ಥಾಪನೆಯೂ ಉದ್ದೇಶಪೂರ್ವಕವಲ್ಲವೆಂಬುದು ಇಲ್ಲಿ ಪ್ರಸ್ತುತವಲ್ಲ.) ಇಲ್ಲಿ ಧ್ವನಿ ವ್ಯವಸ್ಥೆಯ ಮಟ್ಟದಲ್ಲಿ ಭಾಷಾಂತರ ನಡೆಯುತ್ತದೆ. ಭಾಷಾಂತರದ ವ್ಯಾಖ್ಯೆಯನ್ನು ಕ್ರಮಬದ್ಧವಾಗಿ ಲಿಪಿವ್ಯವಸ್ಥೆಗೆ ಮತ್ತು ಧ್ವನಿವ್ಯವಸ್ಥೆಗೆ ಅನ್ವಯಿಸಿದರೆ ಇವೆರಡು ಭಾಷಾಂತರ ಪ್ರಭೇದಗಳು ನೇರವಾಗಿ ಫಲಿತವಾಗುತ್ತದೆ.

ಒಂದು ಶಾಸ್ತ್ರವನ್ನು ಅಣಿಗೊಳಿಸಬೇಕಾದರೆ ಕೆಲವು ಸ್ಪಷ್ಟ ಸಿದ್ಧಾಂತಗಳು, ಸೂತ್ರಗಳು, ವಾಕ್ಯಗಳು ಬೇಕು. ಆ ಶಾಸ್ತ್ರದ ಇತರ ಅಂಗಗಳು ಈ ಮೂಲ ಹೇಳಿಕೆಗಳೊಂದಿಗೆ ಸ್ವಸಾಂಗತ್ಯವನ್ನು ಪಡೆದಿರಬೇಕು. ಕ್ಯಾಟ್‌ಫರ್ಡ್ ಮಂಡಿಸಿದ ಸಿದ್ಧಾಂತ ಇಂಥ ಸ್ವಸಾಂಗತ್ಯವನ್ನು ಪಡೆದಿದೆ ಎಂದು ಮೊದಲೇ ನೋಡಿದೆವು. ಈ ಸ್ವಸಾಂಗತ್ಯದ ಫಲವಾಗಿ ಶಾಸ್ತ್ರದ ವಿಷಯವನ್ನು ಪರಿಪೂರ್ಣವಾಗಿ, ವಿಷಯದ ಯಾವುದೇ ಭಾಗವನ್ನು, ರೂಪವನ್ನು ಬಿಡದೆ ವಿವೇಚಿಸುವುದು ಸಾಧ್ಯವಾಗುತ್ತದೆ. ಮೇಲೆ ಹೇಳಿದ ಎರಡೂ ಉದಾಹರಣೆಗಳು ಈ ಮಾತನ್ನು ಪೋಷಿಸುತ್ತವೆ. ಸಾಮಾನ್ಯವಾಗಿ ಇವೆರಡನ್ನೂ ಭಾಷಾಂತರಗಳೆಂದು ನಾವು ಹೇಳುವುದಿಲ್ಲವಾದರೂ ಇಲ್ಲಿಯ ಸಿದ್ಧಾಂತದ ಚೌಕಟ್ಟಿನಲ್ಲಿ ಇವು ಯಥಾರ್ಥವಾಗಿ ಭಾಷಾಂತರಗಳು. ಈ ದೃಷ್ಟಿಯಲ್ಲಿ ಶಾಸ್ತ್ರೀಯ ವಿವೇಚನೆಯ ಪರಿಪೂರ್ಣತೆಯ ಒಂದು ನಿದರ್ಶನವಾಗಿ ನಿಂತಿದೆ ಕ್ಯಾಟ್‌ಫರ್ಡನ ಸಿದ್ಧಾಂತ.

೩ | # ಭಾಷಾಂತರದ ಪ್ರಭಾವ—ಪರಿಣಾಮಗಳು

ವಿ. ಜಿ. ಕೃಷ್ಣಮೂರ್ತಿ

ಭಾಷಾಂತರದ ಲಕ್ಷಣ, ಕ್ರಿಯೆ ಹಾಗೂ ಭಾಷೆಗಳ ಸಂಪರ್ಕಸಾಧನವಾಗಿ ಅದರ ಸ್ಥಾನ—ಇವುಗಳ ಪರಿಚಯದಿಂದ ಭಾಷಾಂತರದ ಪ್ರಭಾವ, ಪರಿಣಾಮಗಳನ್ನು ಸ್ವಲ್ಪ ಮಟ್ಟಿಗೆ ಗ್ರಹಿಸಲು ಸಾಧ್ಯ. ಈ ದೃಷ್ಟಿಯಿಂದ ಈ ಲೇಖನದ ವಿಷಯ ಹೆಚ್ಚು ವ್ಯಾಪ್ತಿಯುಳ್ಳದ್ದು.

1

ಡಾ. ಜಾನ್‌ಸನ್‌ನ ಅಭಿಪ್ರಾಯದಲ್ಲಿ ವಿಷಯದ ಅರ್ಥವನ್ನು ಉಳಿಸಿಕೊಂಡು ಅದನ್ನು ಮತ್ತೊಂದು ಭಾಷೆಗೆ ಪರಿವರ್ತಿಸುವುದು ಭಾಷಾಂತರ. ಇಲ್ಲಿ ಒಂದು ವಿಷಯಕ್ಕಿರುವ ಅರ್ಥ ಹಾಗೂ ಆ ವಿಷಯಕ್ಕೆ ಎರಡು ಭಾಷೆಗಳಲ್ಲಿರುವ ವ್ಯತ್ಯಾಸ ಪರೋಕ್ಷವಾಗಿ ಸೂಚಿತವಾಗಿವೆ. ಭಾಷಾಂತರ ಮೂಲಕೃತಿಯ ರೂಪ, ಸೊಗಡು ಮತ್ತು ಉಪಯುಕ್ತತೆಯನ್ನು ಹೊಂದಿದ್ದರೂ ಸಹ ಮೂಲಕೃತಿಯ ಸ್ಥಾನವನ್ನು ಪಡೆದುಕೊಳ್ಳಲಾರದು. ಭಾಷಾಂತರ ಎಷ್ಟೇ ಅಪೂರ್ಣವಾಗಿರಲಿ ಇದು ಮೂಲಕೃತಿಗೆ ಪ್ರತಿಯಾಗಿ ಉಪಯೋಗವಾಗಲು ಉದ್ದೇಶಿತವಾಗಿದೆ: ಮೂಲಕೃತಿಯ ಭಾಷೆಯನ್ನು ಓದಲಾಗದ ಕೊರತೆಯನ್ನು ನೀಗುವುದು ಭಾಷಾಂತರದ ಪ್ರಧಾನ ಕ್ರಿಯೆ. ಮೂಲಕೃತಿ ವಾಚಕರ ಮನಸ್ಸಿನ ಮೇಲೆ ಉಂಟುಮಾಡುವ ರಸಭಾವಗಳನ್ನೇ ಭಾಷಾಂತರಿತ ಕೃತಿಯು ಸಹ ಉಂಟುಮಾಡಬೇಕು.

ಆದರ್ಶ ಭಾಷಾಂತರ ಆದರ್ಶ ನಾಟಕಕ್ಕೆ ಸಮ: ಕಲಾವಿದರ ಪ್ರತಿಭೆಯಿಂದ ಪಾತ್ರಗಳು ಜೀವತಃ ಸಹಜವೆಂದೇ ತಿಳಿಯುವ ಪ್ರೇಕ್ಷಕನಂತೆ, ವಾಚಕನು ತಾನು ಓದುತ್ತಿರುವುದು ಮೂಲಕೃತಿಯೆಂದೇ ತಿಳಿಯುವಷ್ಟರ ಮಟ್ಟಿಗೆ ಭಾಷಾಂತರ ಶುದ್ಧವಾಗಿರಬೇಕು. ಅಂದರೆ, ಭಾಷಾಂತರ ಮೂಲಕೃತಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ನಿಷ್ಕೃಷ್ಟವಾಗಿರಬೇಕು. ಗ್ರಂಥ ಅನುವಾದಗೊಂಡ ಭಾಷೆಯ ಜಾಯಮಾನ ಹಾಗೂ ಮೂಲಕೃತಿಗೆ ಪದಶಃ ಅರ್ಥನೀಡಿಕೆ—ಇವುಗಳ ಸಾಮರಸ್ಯವನ್ನು ಭಾಷಾಂತರ ಉಳಿಸಬೇಕೆಂದು ಬೆಂಜಮಿನ್ ಜೊವೆಟ್ ತಿಳಿಸುತ್ತಾನೆ.[1]

Savory, Theodore: *The Art of Translation*, Jonathan Cape, (London 1968), p.25.

ಭಾಷಾಂತರವು ಸಹ ಒಂದು ಕಲೆ ಎಂದು ಸ್ವೀಕೃತವಾಗಿರುವುದರಿಂದ ಅದು ಎಲ್ಲ ಕಲೆಗಳಂತೆ ನಿರಂತರವಾಗಿ ಉಳಿಯಬಹುದು, ಮುಂದಿನ ಪೀಳಿಗೆಗಳ ಭಾಷಾಂತರಕಾರರಿಗೆ ಸ್ಫೂರ್ತಿದಾಯಕವಾಗುವ ಲಕ್ಷಣವನ್ನು ಹೊಂದಿದೆ. ವಾಸ್ತವಿಕವಾಗಿ, ಉತ್ತಮ ಭಾಷಾಂತರಿತ ಕೃತಿ ಬಹುಕಾಲ ಉಳಿಯಬಲ್ಲುತ್ತದೆ. ಕೆಲವು ಸಂದರ್ಭಗಳಲ್ಲಿ ಭಾಷಾಂತರಗೊಳ್ಳುವ ಭಾಷೆಯ ವೈಶಿಷ್ಟ್ಯಗಳಿಗೆ ಮೂಲಕೃತಿ ಹೊಂದಿಕೊಳ್ಳದೆಹೋಗುವ ಸಾಧ್ಯತೆ ಸಹ ಇದೆ. ಮಾರ್ಕ್ ಟ್ವೈನ್ ಮಕ್ಕಳಿಗಾಗಿ ಬರೆದ 'ದಿ ಜಂಪಿಂಗ್ ಫ್ರಾಗ್' (ಕುಪ್ಪಳಿಸುವ ಕಪ್ಪೆ) ಕಥೆ ಫ್ರೆಂಚ್ ಭಾಷಾಂತರದಲ್ಲಿ ತನ್ನ ಆಕರ್ಷಣೆಯನ್ನು ಕಳೆದುಕೊಂಡಿತು ಎಂದಿದ್ದಾನೆ.[2] ಹೀಗೆ ಭಾಷಾಂತರಕಾರನ ಅಸಾಮರ್ಥ್ಯದಿಂದ ಭಾಷಾಂತರ ನೀರಸವಾಗಿ ಪರಿಣಮಿಸುತ್ತದೆ ಇಲ್ಲವೆ ಅವನ ಸಾಮರ್ಥ್ಯದಿಂದ ಜನಪ್ರಿಯವಾಗುತ್ತದೆ.

ಜಾನ್ ಡ್ರೈಡನ್ ಕವಿ (1631–1700) ಭಾಷಾಂತರಗಳು ಮೂರು ವರ್ಗಗಳಿಗೆ ಸೇರುತ್ತವೆ ಎಂದಿದ್ದಾನೆ: ಮೊದಲನೆಯದು ಪದಶಃ ಭಾಷಾಂತರ (metaphrase or literal translation). ಹೊರೇಸ್ ಕವಿಯ 'ಆರ್ಟ್ ಆಫ್ ಪೊಯೆಟ್ರಿ' ಗ್ರಂಥವನ್ನು ಬೆನ್ ಜಾನ್ಸನ್ ಈ ರೀತಿ ಪದಶಃ ಭಾಷಾಂತರಿಸಿದ. ಎರಡನೆಯ ವಿಧಾನದಲ್ಲಿ ಭಾಷಾಂತರಕಾರ ಮೂಲ ಲೇಖಕನ ವಾಕ್ಯಗಳನ್ನು ಕಟ್ಟುನಿಟ್ಟಾಗಿ ಅನುಸರಿಸದಿದ್ದರೂ ಅವನ ಭಾವನೆಗಳನ್ನು ಗ್ರಹಿಸಿ ಒಂದಷ್ಟು ಸ್ವಾತಂತ್ರ್ಯದಿಂದ ಭಾಷಾಂತರಿಸುತ್ತಾನೆ. ಇಲ್ಲಿ ಮೂಲಗ್ರಂಥದ ವಿಷಯಕ್ಕೆ ಲೋಪಬಾರದಿದ್ದರೂ ಅದು ಒಂದಷ್ಟು ಮಟ್ಟಿಗೆ ಮಾರ್ಪಟ್ಟಿರುತ್ತದೆ. ಈ ಅನುವಾದ ವಿಧಾನವನ್ನು (ಸರಳಾನುವಾದ/ಭಾವಾನುವಾದ)— Paraphrase ಎಂದು ಕರೆಯಲಾಗಿದೆ. ಮೂರನೆಯ ವಿಧಾನ ಅನುಕರಣೆ ಅಥವಾ ರೂಪಾಂತರ (imitation) : ಈ ವಿಧಾನದಲ್ಲಿ ಭಾಷಾಂತರಕಾರ ಮೂಲಕೃತಿಯ ಶಬ್ದಗಳನ್ನು ಹಾಗೂ ಭಾವನೆಗಳನ್ನು ಇಷ್ಟಬಂದಂತೆ ಬದಲಾಯಿಸಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆದು ಮೂಲಗ್ರಂಥವನ್ನು ಬಳಸಿಕೊಳ್ಳುತ್ತಾನೆ.[3]

ಪದಶಃ ಭಾಷಾಂತರ ಕಷ್ಟಕರ, ಸುಲಭ ಶೈಲಿಯ ಸರಳಾನುವಾದವೇ ಉತ್ತಮ, ಇಂಥ ಭಾಷಾಂತರದಿಂದ ಕೃತಿಕಾರನ ಮೂಲ ಚಿಂತನೆಗಳನ್ನು ಉಳಿಸಿಕೊಳ್ಳಬಹುದು ಎಂಬ ಬಗ್ಗೆ, ಸರ್ ಜಾನ್ ಡೆನ್‌ಹಾಮ್ ತನ್ನ ಮಿತ್ರ ಸರ್ ರಿಚರ್ಡ್ ಫಾನ್‌ಷಾ ಎಂಬ ಸಾಹಿತಿ ಭಾಷಾಂತರಿಸಿದ ಕಾವ್ಯದ ಬಗ್ಗೆ ಬರೆಯುತ್ತಾ ಈ ರೀತಿ ಬರೆದಿದ್ದಾನೆ—

2. *Ibid*. p.29.

3 Dryden. John : "The preface to the Translation of Ovid's Epistles" : *English Prose of the XVII Century*, Selected and Ed. by R.F. Brinkley. Norton and Company (New York. 1951), P.756.

That servile path thou nobly dost decline,
Of tracing word by word and line by line:
A new and noble way thou dost pursue,
To make translations and translators too:
They but preserve the ashes, thou the flame
True to this sense, but true to his fame.

ಪದಶಃ ಭಾಷಾಂತರದಲ್ಲಿ ಮೂಲಕೃತಿಯನ್ನು ಏಕಕಾಲದಲ್ಲಿ ಪದಶಃ ಹಾಗೂ ಚೆನ್ನಾಗಿ ಭಾಷಾಂತರಿಸಲು ಸಾಧ್ಯವಿಲ್ಲ. ಮೂಲಕೃತಿಯ ಕೆಲವು ಮಾತುಗಳು ಗ್ರಹಿಕೆಗೆ ಬಾರದಷ್ಟು ಮಟ್ಟಿಗೆ ವಿಶಿಷ್ಟ ಕಲ್ಪನೆಗಳಿಂದ ಕೂಡಿರುತ್ತವೆ; ಒಂದು ಶಬ್ದಕ್ಕೆ ಭಾಷಾಂತರಕಾರ ಅನೇಕ ಶಬ್ದಗಳನ್ನು ತನ್ನ ಭಾಷೆಯಲ್ಲಿ ಬಳಸಬೇಕಾಗುವುದು. ಪದಶಃ ಭಾಷಾಂತರದಲ್ಲಿ ಕಷ್ಟಗಳು ಅನೇಕ. ಭಾಷಾಂತರಕಾರ ಗ್ರಂಥಕರ್ತನ ಚಿಂತನೆ ಮತ್ತು ಅವನು ಬಳಸಿರುವ ಶಬ್ದಗಳಿಗೆ ಗಮನಕೊಟ್ಟು ಆ ಶಬ್ದಗಳಿಗೆ ಸಮಾನ ಶಬ್ದಗಳನ್ನು ತನ್ನ ಭಾಷೆಯಲ್ಲಿ ಹುಡುಕಬೇಕು. ಕಾವ್ಯದ ಭಾಷಾಂತರದಲ್ಲಿಯಾದರೋ ಕಾವ್ಯನಿಯಮಗಳಿಗೆ ಗಮನ ನೀಡಬೇಕು. ಪದಶಃ ಭಾಷಾಂತರ ದೊಂಬರ ತಂತಿಯ ಮೇಲೆ ನಡೆದ ಹಾಗೆ.[4] ಭಾಷಾಂತರದಲ್ಲಿ ಆಯ ತಪ್ಪಿದರೆ ಕೆಳಗೆ ಬೀಳುವ ಸಂಭವವಿದೆ. ಈ ಬಗೆಯ ಭಾಷಾಂತರದಲ್ಲಿ ಮೂಲಕೃತಿಯ ಮುಂದೆ ಅದರ ಭಾಷಾಂತರ ಕೃತಕವೆಂದು ಅನಿಸುವುದೇ ಹೆಚ್ಚು.

ಇಂಗ್ಲೆಂಡಿನ ಲೇಖಕರು ಲ್ಯಾಟಿನ್ ಕಾವ್ಯಗಳನ್ನು ತಮ್ಮ ಭಾಷೆಗೆ ಪರಿವರ್ತಿಸಿಕೊಳ್ಳಲು ಪದಶಃ ಭಾಷಾಂತರಕ್ಕೆ ಪ್ರತಿಯಾಗಿ ಅನುಕರಣೆಯ ವಿಧಾನವನ್ನು (imitation) ಅನುಸರಿಸಿದರು. ಈ ವಿಧಾನದ ವೈಶಿಷ್ಟವೆಂದರೆ, ಪ್ರಾಚೀನ ಕವಿ ಭಾಷಾಂತರಕಾರನ ದೇಶದಲ್ಲಿ ಹಾಗೂ ಕಾಲದಲ್ಲಿ ಜೀವಿಸಿದ್ದರೆ ಯಾವ ರೀತಿ ಬರೆಯುತ್ತಿದ್ದನೋ ಆ ರೀತಿಯಲ್ಲಿ ಭಾಷಾಂತರಕಾರ ಅವನ ಕೃತಿಯನ್ನು ಆಧುನಿಕೀಕರಿಸುತ್ತಾನೆ. ಈ ವಿಧಾನದಲ್ಲಿ ಹಿಂದಿನ ಕವಿ ಬಳಸಿರುವ ಶಬ್ದಗಳನ್ನು ಭಾಷಾಂತರಿಸಬೇಕಾಗಿಯೂ ಇಲ್ಲ, ಅವನ ಭಾವನೆಗಳಿಗೆ ಭಾಷಾಂತರ ಒಳಪಡಬೇಕಾಗಿಯೂ ಇಲ್ಲ. ಇಂಥ ಸ್ವೇಚ್ಛಾ ಭಾಷಾಂತರದಲ್ಲಿ ಸಾಮಾನ್ಯ ಭಾಷಾಂತರಕಾರ ಯಶಸ್ವಿಯಾಗುವುದು ಕಷ್ಟ.[5] ಇಲ್ಲಿ ಮೂಲಲೇಖಕನು ಬಳಸಿರುವ ಪದಗಳಿಗೆ ಹಾಗೂ ಚಿಂತನೆಗೆ ಸರಿಯಾದ ಪ್ರಾತಿನಿಧ್ಯವಿಲ್ಲದ ಕಾರಣ, ಅವನು ರಚಿಸಿದ ಗ್ರಂಥಕ್ಕೆ ಪ್ರತಿಯಾಗಿ ಮತ್ತೊಂದು ನವಕೃತಿ ಭಾಷಾಂತರಕಾರನಿಂದ ಸೃಷ್ಟಿಯಾಗುತ್ತದೆ. ಅನುಕರಣೆ ಭಾಷಾಂತರಕಾರನಿಗೆ ತನ್ನ ಪಾಂಡಿತ್ಯ ಮತ್ತು ಪ್ರತಿಭೆಗಳನ್ನು ಪ್ರಕಟಿಸಲು ಅವಕಾಶ ನೀಡಬಹುದು. ಆದರೆ ಅದರ ಪರಿಣಾಮವಾಗಿ ಸತ್ತು ಸ್ವರ್ಗವಾಗಿರುವ ಪ್ರಾಚೀನ ಕವಿಯ ಸ್ಮರಣೆ ಮತ್ತು ಖ್ಯಾತಿಗೆ ಅವನು ತರುವ ನಷ್ಟ ಸಾಮಾನ್ಯವಾದುದಲ್ಲ.

4 *Ibid*, P.737.
5 *Ibid*, P.758.

ಅನುಕರಣೆ ಅಥವಾ ರೂಪಾಂತರದ ಬಗ್ಗೆ ಟಿ. ಎಸ್. ವೆಂಕಣ್ಣಯ್ಯನವರ ಅಭಿಪ್ರಾಯ ಇದು : "ಪರಭಾಷೆಯ, ಪರದೇಶದ ಕಾವ್ಯಗಳನ್ನು 'ಮಕ್ಕೀ ಕಾ ಮಕ್ಕೀ'ಯಾಗಿ ಅನುವಾದ ಮಾಡಬೇಕೆ ಅಥವಾ ಅವುಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿ, ಅವನ್ನು ನಮ್ಮವನ್ನಾಗಿ ಮಾಡಿಕೊಳ್ಳಬೇಕೇ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಪರಭಾಷೆಯ ಎಲ್ಲ ಕಾವ್ಯಗಳನ್ನೂ ನಮ್ಮವನ್ನಾಗಿ ಮಾರ್ಪಡಿಸಿಕೊಳ್ಳಲಾಗುವುದಿಲ್ಲ. ಮಾರ್ಪಡಿಸಿಕೊಳ್ಳಬಹುದಾದುವುಗಳಲ್ಲಿಯೂ ಅಲ್ಲಲ್ಲಿ ಕೆಲವು ಹೊಂದಿಕೊಳ್ಳದಿರುವ ಸಂಭವವೂ ಉಂಟು. ಆದರೂ ಹಾಗೆ ಮಾರ್ಪಡಿಸಿಕೊಳ್ಳುವುದರಿಂದ ಬಾಧಕವು ಅಲ್ಪವೆಂದೂ ಸಾಧಕವು ಹೆಚ್ಚೆಂದೂ ತೋರಿದಾಗ ಗ್ರಂಥಕರ್ತರು ಹಾಗೆ ಮಾಡಬಹುದು ; ಮಾಡಿಯೂ ಮಾಡುತ್ತಾರೆ.... ಮುಖ್ಯವಾಗಿ ಗಮನಿಸಬೇಕಾದ್ದು, ಮೂಲಕಾವ್ಯದ ಮುಖ್ಯ ಭಾವವು ಎಷ್ಟರಮಟ್ಟಿಗೆ ಅನುವಾದದಲ್ಲಿ ಪ್ರತಿಫಲಿಸಿದೆ ಎಂಬುದು."[6]

ಭಾಷಾಂತರ ಕಲೆಯಲ್ಲಿ ಪದಶಃ ಭಾಷಾಂತರ ಮತ್ತು ಅನುಕರಣೆ ಎರಡು ವೈಪರೀತ್ಯಗಳು — ಉತ್ತರ, ದಕ್ಷಿಣ. ಭಾಷಾಂತರಕಾರ ಇವುಗಳ ನಡುವೆ ಮಧ್ಯಮ ವಿಧಾನವನ್ನು ಅನುಸರಿಸುವುದು ಯುಕ್ತ. ಲೇಖಕನ ಮೂಲ ಭಾವನೆಗಳಿಗೆ ಲೋಪಬಾರದಂತೆ ಹಾಗೂ ಅವು ಕಳೆದುಹೋಗದಂತೆ ಭಾಷಾಂತರಕಾರ ತನ್ನ ಭಾಷೆಗೆ ಲೇಖಕನ ಕೃತಿಯನ್ನು ತಂದುಕೊಳ್ಳುವುದು ಉತ್ತಮ ಮಾರ್ಗ. ಗ್ರಂಥಕರ್ತನ ಭಾವನೆಗಳನ್ನು ಭಾಷಾಂತರಕಾರ ಅಲ್ಲಗಳೆಯುವಂತಿಲ್ಲ. ಮೂಲ ಚಿತ್ರವನ್ನು ಪ್ರತಿಮಾಡುವ ಚಿತ್ರಕಾರ ತನ್ನ ಚಿತ್ರ ಮತ್ತಷ್ಟು ಉತ್ತಮವಾಗಿರಲೆಂದು ಮೂಲ ಚಿತ್ರದ ಆಕಾರವನ್ನು ಮತ್ತು ಲಕ್ಷಣಗಳನ್ನು ಬದಲಾಯಿಸಲಾಗುವುದಿಲ್ಲ. ಬಹುಶಃ, ಕಣ್ಣುಗಳನ್ನು ಅಥವಾ ಮೂಗನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿದರೆ ಚಿತ್ರ ಮತ್ತಷ್ಟು ಚೆನ್ನಾಗಿಕಾಣಬಹುದು. ಆದರೆ ಮೂಲಚಿತ್ರಗಳನ್ನು ಹೋಲುವಂತೆಯೇ ಚಿತ್ರಿಸುವುದು ಅವನ ಕೆಲಸ. ಹೀಗೆಯೇ ಭಾಷಾಂತರಕಾರ ಗ್ರಂಥಕರ್ತನ ಭಾವನೆಗಳಿಗೆ ಪ್ರತಿಯಾದ ಭಾವನೆಗಳನ್ನು ತರುವಂತಿಲ್ಲ.

ಇಟಲಿ ಮೊದಲಾದ ಮೆಡಿಟರೇನಿಯನ್ ದೇಶಗಳಲ್ಲಿ ಪದಶಃ ಭಾಷಾಂತರ ರೂಢಿಗೆ ಬರುವುದಕ್ಕೆ ಮುಂಚೆ ಅನುವಾದ (ಭಾವಾನುವಾದ ಅಥವಾ ಸರಳಾನುವಾದ) ಪದ್ಧತಿ ಜಾರಿಯಲ್ಲಿತ್ತು. ಗ್ರೀಕ್ ಗಂಭೀರ ಮತ್ತು ಹಾಸ್ಯ ನಾಟಕಗಳು ಲ್ಯಾಟಿನ್ ಭಾಷೆಗೆ ಈ ವಿಧಾನದಲ್ಲಿ ಭಾಷಾಂತರಗೊಂಡವು. 19ನೆಯ ಶತಮಾನ ಮತ್ತು 20ನೆಯ ಶತಮಾನದ ಪ್ರಾರಂಭ ಕಾಲದಲ್ಲಿ ಯೂರೋಪಿನ ಕಥೆ ಕಾದಂಬರಿಗಳು ಅರಬ್ಬಿ ಭಾಷೆಗೆ ಭಾಷಾಂತರಕ್ಕಿಂತ ಭಾವಾನುವಾದ ರೂಪದಲ್ಲಿ ಪರಿವರ್ತನೆಗೊಂಡವು. ಹೀಬ್ರೂ ಭಾಷೆಯ ಬೈಬಲ್ ಗ್ರಂಥದಲ್ಲಿಯೂ ಪ್ರಾಚೀನ ಶಬ್ದಗಳೇ ಹೆಚ್ಚಾಗಿ ಆಡುಭಾಷೆಯಲ್ಲಿದ್ದುದರಿಂದ ಬಹಳ

6 ವೆಂಕಟಾಚಾರ್ಯ, ಬೆಂಬಾರ್., 'ಸಾವಿನ ಸಮಸ್ಯೆ' (1933) : ಟಿ. ಎಸ್. ವೆಂಕಣ್ಣಯ್ಯ ಅವರ ಮುನ್ನುಡಿ.

ಕಾಲದವರೆಗೆ ಇತರ ಭಾಷೆಯ ಗ್ರಂಥಗಳನ್ನು ಆಧುನಿಕ ಹೀಬ್ರೂ ಭಾಷೆಗೆ ತರ್ಜುಮೆ ಮಾಡಲು ಸರಳಾನುವಾದ ಕ್ರಮವೇ ಯುಕ್ತ ಕ್ರಮವೆಂದು ಪರಿಗಣಿಸಲಾಗಿತ್ತು. ಹೀಗೆ ಮೂಲವಿಷಯವನ್ನು ಸಾರಾಂಶಗೊಳಿಸುವ ವಿಧಾನ ಹಿಂದೆ ಭಾಷಾಂತರಕ್ಕೆ ನಿಕಟವಾಗಿತ್ತು. ಸಾರಾಂಶ ಸಂಕುಚಿತಗೊಂಡಿರಲು ಅಥವಾ ವಿಸ್ತಾರಗೊಂಡಿರಲು ಸಾಧ್ಯ. ಸಾರಾಂಶಗೊಳಿಸುವ ಕ್ರಿಯೆ ಭಾಷಾಂತರಕ್ರಿಯೆಯೊಂದಿಗೇ ಸಂಭವಿಸುತ್ತದೆ. ತತ್ಫಲವಾಗಿ ಸಾರಾಂಶೀಕರಣ ಭಾಷಾಂತರದಲ್ಲಿ ಎರಡು ಭಾಷೆಗಳ ಕ್ರಿಯೆಯಾಗಿ ಪರಿಣಮಿಸುತ್ತದೆ.[7]

2

ಮೂಲಕೃತಿಯ ಉದ್ದೇಶವೇನು, ಆದರ ಕರ್ತೃ ಆ ಉದ್ದೇಶವನ್ನು ಯಾವ ವಿಧಾನದಲ್ಲಿ ಸಾಧಿಸಿದ್ದಾನೆ ಎಂಬುದನ್ನು ವಿವೇಚಿಸಿದಾಗ, ತನ್ನ ಜ್ಞಾನಪರಿಮಿತಿಯಲ್ಲಿ ಅದೇ ವಿಧಾನದಲ್ಲಿ ಆ ಉದ್ದೇಶವನ್ನು ಸಾಧಿಸಲು ಸಾಧ್ಯವೇ ಎಂಬ ಚಿಂತನೆ ಭಾಷಾಂತರಕಾರನಲ್ಲಿ ಮೂಡುತ್ತದೆ. ಮೂಲ ಕೃತಿ ನಿರ್ದಿಷ್ಟ ವಿಚಾರವನ್ನು ತಿಳಿಸುವುದಾಗಿದ್ದು ವಿಷಯವು ಸ್ಪಷ್ಟವಾಗಿದ್ದರೆ ಭಾಷಾಂತರ ನಿರ್ದುಷ್ಟವಾಗಿರುತ್ತದೆ. ಭಾಷಾಂತರ ಮೂಲ ಕೃತಿಯ ಭಾಷೆ ಕ್ರಿಯೆಯನ್ನೇ ಮಾಡಿದಾಗ ಮೂಲ ಕೃತಿಯಷ್ಟೇ ಪರಿಣಾಮಕಾರಿಯಾಗುವುದು. ಮೂಲ ಕೃತಿಯ ಹಾಗೂ ಭಾಷಾಂತರವಾಗಬೇಕಾದ ಭಾಷೆಗಳ ಮೇಲೆ ಹತೋಟಿ, ವಿಷಯದ ಅರಿವು, ಅನುಭವ ಇವುಗಳಿಲ್ಲದ ಭಾಷಾಂತರ ಪರಿಪೂರ್ಣವಾಗದು. ಇವು ಶೂನ್ಯವಾದಾಗ ಭಾಷಾಂತರ ಕಳಪೆ ಎನಿಸಿಕೊಳ್ಳುತ್ತದೆ. ಮೂಲ ಕೃತಿಯ ವಾಸ್ತವಿಕತೆಯನ್ನು ಗ್ರಹಿಸಲು ಉತ್ತಮ ಭಾಷಾಂತರಕಾರ ಪಾರದರ್ಶಕ ಗಾಜಿನಂತೆ ವರ್ತಿಸುತ್ತಾನೆ. ಆಗ ಅವನ ಭಾಷಾಂತರ ಯಾವ ಲೋಪವೂ ಇಲ್ಲದೆ ಉತ್ತಮವಾಗಿ ಪರಿಣಮಿಸಿ ಆಕರ್ಷಣೀಯವಾಗುವುದು.

ಭಾಷಾಂತರ ಸ್ಪಷ್ಟವಾಗಿರಬಹುದು ಅಥವಾ ಅಸ್ಪಷ್ಟವಾಗಿರಬಹುದು. ಸ್ಪಷ್ಟ ಹಾಗೂ ಅಸ್ಪಷ್ಟ ಭಾಷಾಂತರಗಳನ್ನು ಕೂಲಂಕಷವಾಗಿ ವಿಚಾರ ಮಾಡಿರುವ ಜಾರ್ಜ್ ಮೌನಿನ್ ಅವುಗಳನ್ನು ಕ್ರಮವಾಗಿ ಹಾಗೂ ತಾಂತ್ರಿಕವಾಗಿ ಸ್ಪಷ್ಟಗಾಜಿನ ಭಾಷಾಂತರ (clear glass translation) ಮತ್ತು ಬಣ್ಣದಗಾಜಿನ ಭಾಷಾಂತರ (colour glass translation) ಎಂದು ಕರೆದು ಅವುಗಳ ಪ್ರಭಾವ–ಪರಿಣಾಮಗಳನ್ನು ತಿಳಿಸಿದ್ದಾನೆ.[8] ಸ್ಪಷ್ಟಗಾಜಿನ ಭಾಷಾಂತರದಲ್ಲಿ ವಿಷಯ ಪ್ರಸ್ತುತ ರೂಢಿಯಲ್ಲಿರುವ ಭಾಷೆಯಲ್ಲೇ ಇದ್ದು, ಭಾಷಾಂತರಕಾರ ಪ್ರಸ್ತುತ ಭಾಷೆಯ ಆಕಾರಗಳನ್ನೇ ನಮ್ಮ ಕಾಲಕ್ಕೆ ಮತ್ತು ಸ್ಥಳಕ್ಕೆ ದೂರವಾದ ವಿಷಯಗಳನ್ನು ತಿಳಿಸಲು ಬಳಸುತ್ತಾನೆ. ಭಾಷಾಂತರ ತನ್ನ ಉದ್ದೇಶವನ್ನು

---

7. Furley, D. J, "Translation from Greek Philosophy" in *Aspects of Translation*, Secker and Warburg, (Lopdon, 1958), p. 63.

8. Forest Leonard; "Translation: An Introduction", *Aspects of Tranrlation*, pp 16–20

ಸಾಧಿಸುವಷ್ಟರಮಟ್ಟಿಗೆ ಪ್ರಭಾವಯುತವಾಗಿಲ್ಲದಿದ್ದರೆ "ಭಾಷಾಂತರದಂತೆಯೇ ಓದಿಸಿಕೊಂಡು ಹೋಗುತ್ತದೆ" ಎಂದು ನಾವು ಅಸಮಾಧಾನ ಹೊಂದುತ್ತೇವೆ. ಭಾಷಾಂತರದಂತೆ ಓದಿಸಿಕೊಂಡು ಹೋಗುವುದೇ ಬಣ್ಣದ ಗಾಜಿನ ಭಾಷಾಂತರ. ಇಲ್ಲಿ ವಾಚಕ ತಾನು ಓದುತ್ತಿರುವುದು ಮೂಲ, ಅನ್ಯಕೃತಿ ಎಂಬುದನ್ನು ಮರೆಯುವಂತಿಲ್ಲ. ಬಣ್ಣದ ಗಾಜಿನ ಲಕ್ಷಣವೇ ಇದು.

ಸಮಕಾಲೀನ ಭಾಷೆ ಹಾಗೂ ಶೈಲಿಯ ರೂಪಿನಲ್ಲಿ ವಿದೇಶಿಕೃತಿಗಳನ್ನು ನೀಡುವುದೇ ಸ್ಪಷ್ಟಗಾಜಿನ ಭಾಷಾಂತರದ ಉದ್ದೇಶ. ಈ ಬಗೆಯ ಭಾಷಾಂತರದಲ್ಲಿ ಮೂಲಕೃತಿ ಸಮಕಾಲಿಕ ಗ್ರಂಥವಾಗಿದ್ದರೆ ಬಾಧಕವಿಲ್ಲ. ಆದರೆ ಅದು ಪ್ರಾಚೀನ ಸಾಹಿತ್ಯವಾಗಿದ್ದರೆ ಗತಿ ಏನು ? ಹಳೆಯ ಭಾಷೆ ಹಾಗೂ ಹಳೆಯ ಶೈಲಿಯನ್ನು ಹೊಸ ರೂಪಕ್ಕೆ ತಿರುಗಿಸಬಹುದೆ ? ಹಾಗೆ ತಿರುಗಿಸಿದರೆ ಭಾಷಾಂತರದ ಪರಿಣಾಮವೇನು ? ಪ್ರಾಚೀನ ಸಾಹಿತ್ಯ ಶತಮಾನಗಳಿಂದ ಉಳಿದುಬಂದದ್ದು. ಒಬ್ಬ ಪ್ರಾಚೀನ ಕವಿ ತನ್ನ ಸಮಕಾಲೀನ ವಾಚಕರ ಮೇಲೆ ಬೀರಿದ ಪ್ರಭಾವವನ್ನೇ ಭಾಷಾಂತರಿತ ಗ್ರಂಥ ಸಮಕಾಲೀನ ವಾಚಕರಮೇಲೆ ಬೀರಬೇಕು. ತನ್ನ ಸಮಕಾಲೀನ ವಾಚಕರಿಗಾಗಿ ಆ ಪ್ರಾಚೀನ ಕವಿಯ ಕೃತಿಯನ್ನು ಆಧುನೀಕರಿಸುವ ಸ್ಪಷ್ಟಗಾಜಿನ ಭಾಷಾಂತರಕಾರ ಪ್ರಾಚೀನ ಕಾಲಕ್ಕೂ ಆಧುನಿಕ ಕಾಲಕ್ಕೂ ಇರುವ ಅಂತರವನ್ನು ಕಳಚಿ, ಪ್ರಾಚೀನ ಕಾವ್ಯಕ್ಕೆ ನವೀನ ಲಕ್ಷಣಗಳನ್ನು ನೀಡುತ್ತಾರೆ. ಇದರಿಂದ ಕೆಲವು ವೇಳೆ ಮೂಲಕೃತಿಯ ಅಂದವೇ ಭಾಷಾಂತರದಲ್ಲಿ ಕೆಡಬಹುದು. ಫ್ರೆಂಚ್ ಭಾಷಾಶಾಸ್ತ್ರಿ ಹಾಗೂ ದಾರ್ಶನಿಕ ಲೀಟ್ರೆ (Littre) (1801–81). ಡಾಂಟೇ ಕವಿಯ (1265–1321) 'ಡಿವೈನ್ ಕಾಮಿಡಿ' ಕಾವ್ಯವನ್ನು ಡಾಂಟೇ ಜೀವಿಸಿದ್ದ 14ನೆಯ ಶತಮಾನದ ಫ್ರೆಂಚ್ ಭಾಷೆಗೆ ಪರಿವರ್ತಿಸಿ 19ನೆಯ ಶತಮಾನದ ತನ್ನ ಸಮಕಾಲೀನ ಫ್ರೆಂಚರಿಗೆ ಆ ಕಾವ್ಯ ಅರ್ಥವಾಗದಂತೆ ಮಾಡಿದ. ಲೀಟ್ರೆ ಈ ಮಹಾಕಾವ್ಯವನ್ನು ಭಾಷಾಂತರಿಸದಿದ್ದರೆ ಏನೂ ಪ್ರಮಾದವಾಗುತ್ತಿರಲಿಲ್ಲ ಅನಿಸುತ್ತದೆ. ಇಂಥ ಪರಿಣಾಮಗಳನ್ನು ನಿವಾರಿಸಲು 19ನೆಯ ಶತಮಾನದ ಸರ್ ಜಾರ್ಜ್ ವೆಬ್ ದಾಸೆಂಟ್ (Sir George Webb Dasent) ಮತ್ತು ಕವಿ ವಿಲಿಯಂ ಮಾರಿಸ್ (William Morris) ಪ್ರಾಚೀನ ಸಾಹಿತ್ಯವನ್ನು ಇಂಗ್ಲಿಷಿಗೆ ತರಲು ಕೊಳ್ಳಲು ವಿಶಿಷ್ಟ ಭಾಷೆಯನ್ನು ಕಲ್ಪಿಸಿದರು. ಈ ಭಾಷೆ ವ್ಯಾಪಕವಾಗಿ ಪ್ರಭಾವ ಬೀರಿದೆ. ಇವರು ಕಲ್ಪಿಸಿದ ವಿಶಿಷ್ಟಭಾಷೆ ಅರ್ಥವಾಗದಷ್ಟು ರೂಢಿಚ್ಯುತ ಪ್ರಾಚೀನ ಮಾದರಿಯದಲ್ಲ. ಆದರೆ, ಈ ಭಾಷೆ ಬಣ್ಣದ ಗಾಜಿನ ಭಾಷಾಂತರ ವಿಧಾನದಲ್ಲಿ ಮೂಲಕೃತಿಯ ಪ್ರಾಚೀನತೆ ಮತ್ತು ವೈಚಿತ್ರ್ಯಗಳನ್ನು ಉಳಿಸಿಕೊಂಡು ಬರುತ್ತದೆ. ವಿಲಿಯಂ ಮಾರಿಸನ 'Defence of Guenevere' ಕವನದಲ್ಲಿ ಈ ವೈವಿಧ್ಯವನ್ನು ಕಾಣಬಹುದು.

ಕೆಲವು ಸಂದರ್ಭಗಳಲ್ಲಿ ಒಂದು ಪೀಳಿಗೆಯ ಸ್ಪಷ್ಟಗಾಜಿನ ಶುದ್ಧ ಭಾಷಾಂತರ

ಮತ್ತೊಂದು ಪೀಳಿಗೆಯ ವಿಕೃತಗಾಜಿನ ಭಾಷಾಂತರವಾಗಿ (Distorted glass translation) ಪರಿಣಮಿಸಬಹುದು. ಕಾಲ ಮತ್ತೂ ಮೂರಸರಿದಾಗ ಸ್ಪಷ್ಟಗಾಜಿನ ಭಾಷಾಂತರ ಬಣ್ಣದ ಗಾಜಿನ ಭಾಷಾಂತರವಾಗಿ ಸಹ ಪರಿಣಮಿಸಬಹುದು. ಆದರೆ ಹೋಮರ್, ಷೇಕ್ಸ್‌ಪಿಯರ್ ಮೊದಲಾದವರ ಕೃತಿಗಳಲ್ಲಿನ ನಿತ್ಯ ಸತ್ಯ ಹಾಗೂ ಸೊಗಸಾದ ಭಾಷೆಯ ಕಾರಣ ಅವುಗಳ ಭಾಷಾಂತರಗಳು ಬಹುಕಾಲ ಉಳಿಯಬಲ್ಲವು. 19ನೆಯ ಶತಮಾನದಲ್ಲಿ ಜರ್ಮನಿಯ ಭಾಷಾಂತರಕಾರ ಪ್ಲೇಜೆಲ್ (1767–1845)ಮತ್ತು ಲೇಖಕ ಟೀಕ್ (1773–1853) ಭಾಷಾಂತರಿಸಿದ ಷೇಕ್ಸ್‌ಪಿಯರನ ನಾಟಕಗಳು ಜರ್ಮನಿಯ ಅಭಿಜಾತ ಸಾಹಿತ್ಯವರ್ಗಕ್ಕೆ ಸೇರಿಹೋಗಿವೆ.

ಸ್ಪಷ್ಟಗಾಜಿನ ಭಾಷಾಂತರವೆಂದರೆ ಹೊಸಭಾಷೆಯ ಪ್ರಾಚೀನ ಗ್ರಂಥಗಳಿಗೆ ಆಧುನಿಕ ಭಾಷೆಯನ್ನುಪಯೋಗಿಸಿದ ಭಾಷಾಂತರ; ಬಣ್ಣದಗಾಜಿನ ಭಾಷಾಂತರ ಅದೇ ಗ್ರಂಥಗಳಿಗೆ ಪ್ರಾಚೀನ ಶೈಲಿಯ ಭಾಷೆಯನ್ನುಪಯೋಗಿಸಿದ ಭಾಷಾಂತರ ಎಂದಾಯಿತು. ಸ್ಪಷ್ಟ ಗಾಜಿನ ಭಾಷಾಂತರವನ್ನು ಸಾಹಿತ್ಯಿಕ ಮತ್ತು ಪ್ರಾಸ್ತಾವಿಕ (allusive) ಕೃತಿಗಳ ವಿಷಯದಲ್ಲಿ ಸಾಧಿಸುವುದು ಸುಲಭವಲ್ಲ; ಪ್ರಾಚೀನ ಸಾಹಿತ್ಯದ ಭಾಷಾಂತರದಲ್ಲಿ ಭಾಷಾಂತರಕಾರನಿಗೆ ಪ್ರಸ್ತುತ ಕಾಲಕ್ಕೂ ಗತಕಾಲಕ್ಕೂ ಇರುವ ನಿರ್ದಿಷ್ಟ ವ್ಯತ್ಯಾಸಗಳನ್ನು ಗಮನಿಸಿ, ಗತಕಾಲವನ್ನು ಅದರ ವಾಸ್ತವಿಕ ಸ್ಥಾನದಲ್ಲಿ ವೀಕ್ಷಿಸುವ ನೋಟ ಅಗತ್ಯ. ಈ ನೋಟ ಸೃಷ್ಟ್ಯಾತ್ಮಕ ನೋಟ.

ಗದ್ಯಸಾಹಿತ್ಯದ ಭಾಷಾಂತರದಲ್ಲಿ ಸಹ ಸ್ಪಷ್ಟತೆಯನ್ನು ಸಾಧಿಸುವುದು ಸುಲಭವಲ್ಲ ವೆಂಬ ವಾದವಿದೆ. ಸ್ಪಷ್ಟ ಭಾಷಾಂತರ ತನ್ನ ಸಮಕಾಲಿಕ ಭಾಷೆಯೊಂದಿಗೆ ಮೂಲ ಲೇಖಕನ ಭಾವನೆಗಳನ್ನು ನೀಡುವಷ್ಟು ಪ್ರಭಾವಯುತವಾಗಿರಬೇಕು. ತನ್ನ ಭಾಷೆಗೆ ಮೂಲಕೃತಿಯನ್ನು ತರುವಾಗ ಭಾಷಾಂತಕಾರನು ಮೂಲ ಲೇಖಕನ ಶೈಲಿ, ಅವನು ಗ್ರಂಥವನ್ನು ಬರೆದ ಕಾಲ ಮತ್ತು ಯಾವ ವಿಶಿಷ್ಟ ಸಂದರ್ಭಗಳಲ್ಲಿ ಅವನು ಆ ಗ್ರಂಥವನ್ನು ಬರೆದ ಎಂಬ ವಿಷಯಗಳನ್ನು ಗಮನಿಸಬೇಕು. ಸ್ಪಷ್ಟ ಅಥವಾ ಶುದ್ಧ ಭಾಷಾಂತರವೆಂದರೆ ಇತರರು ಉತ್ತಮಗೊಳಿಸಲು ಹಾಗೂ ಅದಕ್ಕೆ ಪ್ರತಿಯಾಗಿ ವಾಚಕರು ಸ್ವೀಕರಿಸಬಹುದಾದಂಥ ಮತ್ತೊಂದು ಭಾಷಾಂತರವನ್ನು ತಯಾರಿಸಲು ಸಾಧ್ಯವಿಲ್ಲದಂಥ ಭಾಷಾಂತರ.

ಸ್ಪಷ್ಟ ಭಾಷಾಂತರದಲ್ಲಿ ಮೂಲಕೃತಿಯ ಭಾಷೆ ನಿರ್ವಹಿಸುವ ಕ್ರಿಯೆಯನ್ನೇ ಕೃತಿ ಪರಿವರ್ತನೆಗೊಳ್ಳುವ ಭಾಷೆ ನಿರ್ವಹಿಸುವುದು. ಒಳ್ಳೆಯ ಭಾಷಾಂತರಕಾರ ಸ್ವಾಭಾವಿಕವಾಗಿಯೇ ಮೂಲಕೃತಿಯನ್ನು ಸ್ಪಷ್ಟವಾಗಿ ತಿಳಿಯುವ ಮತ್ತು ನಯವಿಲ್ಲದ ಮಾತುಗಳನ್ನು ತೆಗೆದುಹಾಕುವ ಪರಿಷ್ಕರಣಕಾರ್ಯಕ್ಕೆ ಮೊದಲು ತೊಡಗಿ, ತರುವಾಯ ಭಾಷಾಂತರಕ್ರಿಯೆಗೆ ಕೈಹಾಕುತ್ತಾನೆ. ಇಂಥ ಸಂದರ್ಭದಲ್ಲಿ ಭಾಷಾಂತರ ಮೂಲಕ್ಕಿಂತಲೂ ಉತ್ತಮವಾಗಿ ಪರಿಣಮಿಸಬಹುದು. ಆದರೆ, ಭಾಷಾಂತರ ಮೂಲಕೃತಿಯನ್ನು

ಮೀರಿಸಬಾರದು ಎಂಬ ಡಾ. ಜಾನ್‌ಸನ್‌ನ ಹೇಳಿಕೆಗೆ ಉತ್ತರ ನೀಡುವುದು ಹೇಗೆ ?

ತಿಳಿದಿರುವ ವಿಷಯದ ಭಾಷಾಂತರ ಸುಲಭ. ಆದರೆ ಭಾಷಾಂತರ ಕ್ರಿಯೆಯಲ್ಲಿ ಹೊಸ ವಿಚಾರಗಳು ತಲೆದೋರಿದಾಗ ಬಳಕೆಯಲ್ಲಿರುವ ಪದಗಳನ್ನು ಹೊಸ ಸನ್ನಿವೇಶಕ್ಕೆ ಅಳವಡಿಸಿ ಕೊಳ್ಳಬೇಕಾಗುವುದು ಹಾಗೂ ರೂಢಿಯಲ್ಲಿಲ್ಲದ ಪದಗಳನ್ನು ಸೃಷ್ಟಿಸಬೇಕಾಗುವುದು. ಹೀಗೆ, ಎರಡನೆಯ ಮಹಾಯುದ್ಧ ಕಾಲದಲ್ಲಿ ದೇಶದ್ರೋಹಿ ಎಂಬುದಕ್ಕೆ, ನಾಜಿಪಕ್ಷವನ್ನು ವಹಿಸಿ ತನ್ನ ಜನ್ಮಭೂಮಿಯಾದ ನಾರ್ವೇ ರಾಷ್ಟ್ರವನ್ನು ಮಾರಲು ಪ್ರಯತ್ನಿಸಿದ ಕ್ವಿಜ್ಲಿಂಗ್ ಎಂಬಾತನ ಹೆಸರಿನಲ್ಲಿ *Quisling* ಶಬ್ದ ಸೃಷ್ಟಿಯಾಯಿತು. ಇಂದು ಈ ಶಬ್ದ ದೇಶದ್ರೋಹಿಗಳನ್ನು ಸೂಚಿಸಲು ಪರಿಣಾಮಕಾರಿಯಾದ ಪದವಾಗಿದೆ. ಕನ್ನಡ ಪ್ರತಿಕೆಗಳಲ್ಲಿ ಭಾಷಾಂತರಿಸುವ ಸಾಹಿತಿಗಳು ತ್ವರಿತಗತಿಯಲ್ಲಿ ಆಗಬೇಕಾದ ತರ್ಜುಮೆಯಲ್ಲಿ, ನಿಘಂಟುಗಳನ್ನು ನೋಡುವಷ್ಟು ಸಮಯವಿಲ್ಲದೆ, ಹೊಸ ಶಬ್ದಗಳನ್ನು ಸೃಷ್ಟಿಸಬೇಕಾದ ಅನಿವಾರ್ಯತೆ ಇದೆ. 'Instant Coffee' ಎಂಬಲ್ಲಿ 'Instant' ಭಾಷಾಂತರಿಸುವಾಗ 'ದಿಢೀರ್' ಶಬ್ದ ಸೃಷ್ಟಿಯಾಯಿತು. ಇಂಥ ಶಬ್ದಗಳು ಪ್ರಾರಂಭದಲ್ಲಿ ವಿಚಿತ್ರವೆಂದು ಕಂಡುಬಂದರೂ ತರುವಾಯ ಪರಿಣಾಮಕಾರಿಯಾಗಿ ಬಳಕೆಗೆ ಬರುತ್ತವೆ.

ಮೂಲಕೃತಿಯ ವಿಷಯ ಭಾವನಾತ್ಮಕವಾಗಿ ಇಲ್ಲವೆ ಪ್ರಾಸ್ತಾವಿಕವಾಗಿ (allusive) ಇದ್ದರೆ ಭಾಷಾಂತರವನ್ನು ತೃಪ್ತಿಕರವಾಗಿ ಮಾಡಲು ಸಾಧ್ಯವಾಗದು. ಮೂಲಕೃತಿ ಬಳಕೆಯಲ್ಲಿಲ್ಲದ ಅಥವಾ ಪಾರಿಭಾಷಿಕ ಶಬ್ದಗಳಿಂದ ಕೂಡಿದ್ದರೆ ಭಾಷಾಂತರ ಕ್ಲಿಷ್ಟವೆನಿಸುವುದು. ಇಂತಹ ಸಂದರ್ಭಗಳಲ್ಲಿ ಪ್ರತಿಯೊಂದು ಶಬ್ದಕ್ಕೂ ನಿಘಂಟಿನ ಹಾಳೆಗಳನ್ನು ತಿರುವಹಾಕುವುದು ಪ್ರಯಾಸದ ಕೆಲಸ. ಮೂಲಕೃತಿಯ ಲಕ್ಷಣ ಏನೇ ಇರಲಿ, ಭಾಷಾಂತರಕಾರ ಶಬ್ದವು ಹರಡುವ ಜಾಲದಿಂದ ಮುಕ್ತನಾಗಬೇಕು; ಮೂಲಕೃತಿಯ ವಾಸ್ತವಿಕ ಶಬ್ದವನ್ನೂ ಅದಕ್ಕೆ ಪಡಿರೂಪವಾದ ಹಾಗೂ ಅದಕ್ಕೆ ಸಂಬಂಧಿಸಿದ ಶಬ್ದಗಳನ್ನೂ ಪರಿಗಣಿಸದೆ, ಶಬ್ದವು ಸೂಚಿಸುವ ವಸ್ತುವಿನ ಮೇಲೆ ಗಮನವನ್ನು ಕೇಂದ್ರೀಕರಿಸಬೇಕು.

ಭಾಷಾಂತರವಾಗಬೇಕಾದ ಗ್ರಂಥದ ಒಂದು ಶಬ್ದ, ಒಂದು ವಾಕ್ಯ ಅಥವಾ ಇಡೀ ಗ್ರಂಥ ಒಂದು ಘಟ್ಟವಾಗಿರಬಹುದು. ಈ ಘಟಕಗಳು ತನ್ನ ಮುಂದಿರುವಾಗ ಭಾಷಾಂತರಕಾರನು ಕೃತಿಯ ಇಡೀ ರೂಪವನ್ನು ಗಮನದಲ್ಲಿಡಬೇಕು. ಭಾಷಾಂತರಗೊಳ್ಳಬೇಕಾದ ಭಾಷೆಯಲ್ಲಿ ಮೂಲಕೃತಿಯ ವಾಕ್ಯಗಳಲ್ಲಿನ ಪ್ರತಿಯೊಂದು ಶಬ್ದಕ್ಕೂ ಅರ್ಥಕಲ್ಪಿತವಾಗಿ ವಾಕ್ಯಗಳು ಭಾಷಾಂತರಗೊಳ್ಳಬೇಕು. ಭಾಷಾಂತರದಲ್ಲಿ ನಿರಿಸುಮಾರು ಅರ್ಥನೀಡಲು ಅವಕಾಶವೇ ಇಲ್ಲ.

ಸಾಹಿತ್ಯಿಕ ಭಾಷಾಂತರದಲ್ಲಿ ಶಬ್ದವನ್ನು ಬದಿಗಿಟ್ಟು ವಿಷಯವನ್ನು ಗ್ರಹಿಸಿ ವಾಕ್ಯವನ್ನು ಭಾಷಾಂತರಿಸುವ ಕ್ರಮ ಸಾಧ್ಯವಾಗಬಹುದು. ಈ ಪದ್ಧತಿಯಲ್ಲಿ ಅನುವಾದಕನ

ಸಾಮರ್ಥ್ಯದ ಮೇಲೆ ಭಾಷಾಂತರದ ಪರಿಣಾಮ ನಿಂತಿದೆ. ಈ ಬಗೆಯ ಭಾಷಾಂತರ ತತ್ತ್ವಶಾಸ್ತ್ರದ ಗ್ರಂಥಗಳ ಬಗ್ಗೆ ಸಾಧ್ಯವಾಗದು. ದಾರ್ಶನಿಕ ಕಲ್ಪನೆಗಳಿಗೆ ಅರ್ಥನೀಡುವುದು ಸುಲಭಸಾಧ್ಯವಾದ ಕೆಲಸವಲ್ಲ. ತತ್ತ್ವಶಾಸ್ತ್ರದಲ್ಲಿ ಪ್ರತಿಯೊಂದು ಶಬ್ದಕ್ಕೂ ಅದರದೇ ಭಾವನಾತ್ಮಕ ಅರ್ಥವಿದೆ.[9]

ಭಾಷಾಂತರದ ಮೇಲೆ ವಿಜ್ಞಾನಶಬ್ದಗಳ ಪ್ರಭಾವ ಗಮನಾರ್ಹ: ಅವು ಬಹುಮಟ್ಟಿಗೆ ಭಾಷಾಂತರಕ್ಕೆ ನಿಲುಕದ ಶಬ್ದಗಳು. ಸಾಮಾನ್ಯವಾಗಿ ಬಳಸುವ ಕೆಲವು ಶಬ್ದಗಳ ವಿನಾ ಉಳಿದೆಲ್ಲ ಶಬ್ದಗಳೂ ವಿಜ್ಞಾನಕ್ಕೆ ಸಂಬಂಧಪಟ್ಟವು. ಈ ಶಬ್ದಗಳು ನಿರ್ದಿಷ್ಟ ಉದ್ದೇಶಕ್ಕಾಗಿ ಸೃಷ್ಟಿಯಾಗಿರುವ ಕಾರಣ, ಪ್ರತಿ ಶಬ್ದಕ್ಕೂ ಅದರದೇ ಅರ್ಥವಿರುತ್ತದೆ. ಈ ಶಬ್ದಗಳನ್ನು ಭಾಷಾಂತರಿಸುವ ಅಗತ್ಯ ಬಹುಮಟ್ಟಿಗೆ ಕಡಮೆ.

ಭಾಷೆಯಲ್ಲಿ ಹೊಸ ಶಬ್ದಗಳ ಸೇರ್ಪಡೆಗೆ ಅನ್ಯಭಾಷೆಗಳಿಂದ ಶಬ್ದಗಳನ್ನು ಎರವಲು ಪಡೆಯುವ ಅಭ್ಯಾಸವೇ ಕಾರಣ. ಹೊರಗಿನ ಭಾಷೆಗಳ ವ್ಯಾಮೋಹದಿಂದ ಅವುಗಳಲ್ಲಿನ ಶಬ್ದಗಳನ್ನು ಪ್ರಯೋಗಿಸುವುದು ಒಂದು ಫ್ಯಾಷನ್ ('ಫ್ಯಾಷನ್' ಹೊರಗಿನವರ ಶಬ್ದ !). ಅನ್ಯಶಬ್ದಗಳನ್ನು ಸೇರಿಸದೆ ಬಳಕೆಯಲ್ಲಿರುವ ಶಬ್ದಗಳಿಂದಲೇ ಭಾಷಾಂತರಿಸುವುದು ಕಠಿಣವಲ್ಲ. ಆದರೆ ಈ ಕ್ರಿಯೆಗೆ ಸ್ಥಳೀಯ ಭಾಷೆಯ ಶಬ್ದಸಂಪತ್ತು ಭಾಷಾಂತರಕಾರನಿಗೆ ಅಧಿಕವಾಗಿರಬೇಕು. "ಅನ್ಯಶಬ್ದಗಳು ಗ್ರಂಥಗಳಲ್ಲಿ ನುಸುಳಿಕೊಳ್ಳಲು ಬಹುಮಟ್ಟಿಗೆ ಭಾಷಾಂತರಕಾರರೇ ಕಾರಣ."[10] ಅಭಿಜಾತ ಸಾಹಿತ್ಯದ ವಿಶಿಷ್ಟ ಚಿಂತನೆಗಳನ್ನು ಹಾಗೂ ವಿಜ್ಞಾನದ ಬೆಳವಣಿಗೆಯಲ್ಲಿ ಸೃಷ್ಟಿಯಾಗುವ ಹೊಸ ಕಲ್ಪನೆಗಳನ್ನು ಅಭಿವ್ಯಕ್ತಿಸಲು ಸಾಕಷ್ಟು ಶಬ್ದಗಳು ರೂಢಿಭಾಷೆಯಲ್ಲಿ ಇಲ್ಲದಿದ್ದರೆ ಭಾಷಾಂತರಕಾರನು ತುಂಬಿಕೊಳ್ಳಲು ಅನ್ಯಭಾಷೆಗಳಿಂದ ಶಬ್ದಗಳನ್ನು ಎರವಲು ಪಡೆದುಕೊಳ್ಳುವ ಚಾಪಲ್ಯಕ್ಕೆ ತುತ್ತಾಗುತ್ತಾನೆ.[11] ಸಾಹಿತ್ಯ ಮತ್ತು ಭಾಷಾಂತರಗಳಿಂದ 16 ಮತ್ತು 17ನೆಯ ಶತಮಾನದಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಶಬ್ದಗಳು ಇಂಗ್ಲಿಷ್ ಮತ್ತು ಯೂರೋಪಿನ ಭಾಷೆಗಳಲ್ಲಿ ಸೇರಿಹೋಗಿರುವಂತೆ, 19ನೆಯ ಮತ್ತು 20ನೆಯ ಶತಮಾನಗಳಲ್ಲಿ ಇಂಗ್ಲಿಷ್ ಶಬ್ದಗಳು ಕನ್ನಡ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಸೇರಿಹೋಗಿ ಪ್ರತ್ಯೇಕಿಸಲಾಗದಷ್ಟು ಮಟ್ಟಿಗೆ ಅಂಟಿಕೊಂಡಿವೆ.

ಭಾಷಾಂತರ ನಿಘಂಟುಗಳಿಂದ ಪ್ರಭಾವಿತವಾಗುವುದೇ, ನಿಘಂಟುಗಳನ್ನು ನೋಡುವುದು ಯುಕ್ತಕ್ರಮವೇ ಎಂಬ ಪ್ರಶ್ನೆಗಳಿವೆ. ಭಾಷಾಂತರಕಾರ ಎಷ್ಟೇ ಪಳಗಿದ್ದರೂ ಕೆಲವು

---

9. Furley, D. "Translation from Greek Philosophy" in *Aspects of Translation*, P. 54

10. Jesperson, Otto: *Language, Its Nature, Development and Origin*, The Norton Library, (New York, 1964), p. 210.

11. Bangh, Albert, C: *A History of the English Language*, Allied Publishers Private, Ltd., (Madras, 1977), p. 259.

ಗೊತ್ತಾಗದ ಹಾಗೂ ಪಾರಿಭಾಷಿಕ ಶಬ್ದಗಳಿಗೆ ನಿರ್ದಿಷ್ಟ ಅರ್ಥವನ್ನು ತಿಳಿಯಲು ನಿಘಂಟಿನ ನೆರವನ್ನು ಪಡೆಯಬೇಕಾಗುವುದು. ಕೆಲವು ಪದಸಮೂಹಗಳಿಗೆ ಸರಿಯಾದ ಅರ್ಥವನ್ನು ಗ್ರಹಿಸದಿದ್ದರೆ ಭಾಷಾಂತರ ಆಭಾಸವಾದೀತು. ಅಸ್ಪಷ್ಟತೆಯನ್ನು ನೀಗಲು ಹಾಗೂ ಶಬ್ದಗಳ ಮೂಲ ಅರ್ಥವನ್ನು ತಿಳಿಯಲು ನಿಘಂಟುಗಳ ನೆರವು ಅನಿವಾರ್ಯ.[12]

ಭಾಷಾಂತರದ ಬಗ್ಗೆ ವಿಧಾಯಕವಾದ ನಿಯಮಗಳಿಲ್ಲದ ಪ್ರಯುಕ್ತ ಅನು ಅನೇಕ ವಾದಗಳ ಪ್ರಭಾವಕ್ಕೆ ಸಿಕ್ಕಿದೆ. ಭಾಷಾಂತರದ ಕಲೆಯ ವಿಷಯದಲ್ಲಿ ಅಧಿಕಾರಯುತವಾಗಿ ಅಭಿಪ್ರಾಯಗಳನ್ನು ಸೂಚಿಸಬಲ್ಲ ಸಾಹಿತಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ಅಭಿಪ್ರಾಯಗಳ ಪ್ರಕಾರ ಆಧುನಿಕ ಭಾಷಾಂತರ ಪದ್ಧತಿಯಲ್ಲಿ ಸಾರ್ವತ್ರಿಕವಾಗಿ ಪದಶಃ ಭಾಷಾಂತರ (literal or faithful translation) ಮತ್ತು ಮುಕ್ತ ಭಾಷಾಂತರ (free or idiomatic translation) ಎಂದು ಎರಡು ವರ್ಗಗಳಿವೆ:

ಪದಶಃ ಭಾಷಾಂತರವನ್ನು ಪ್ರತಿಪಾದಿಸಿದವರ ಅಭಿಪ್ರಾಯಗಳು ಹೀಗಿವೆ: (1) ಭಾಷಾಂತರವು ಮೂಲಕೃತಿಯ ಶಬ್ದಗಳಿಗೆ ಸಮಾನಪದಗಳನ್ನು ಕೊಟ್ಟಿರಬೇಕು, (2) ಮೂಲಕೃತಿಯಂತೆಯೇ ಇರಬೇಕು, (3) ಮೂಲಲೇಖಕನ ಶೈಲಿಯಲ್ಲಿ ಇರಬೇಕು, (4) ಮೂಲಕೃತಿಯ ಕಾಲದ ಗ್ರಂಥದಂತೆಯೇ ಓದಿಸಿಕೊಂಡು ಹೋಗಬೇಕು, (5) ಕಾವ್ಯವ ಕಾವ್ಯರೂಪದಲ್ಲಿ ಭಾಷಾಂತರವಾಗಬೇಕು, ಮತ್ತು (6) ಭಾಷಾಂತರಕಾರ ಮೂಲಕೃತಿಗೆ ಯಾವುದನ್ನೂ ಸೇರಿಸಬಾರದು, ಅದರ ಯಾವ ಭಾಗವನ್ನೂ ತೆಗೆದು ಹಾಕಬಾರದು.

ಮುಕ್ತ ಭಾಷಾಂತರ ಸಿದ್ಧಾಂತವನ್ನು ಮಂಡಿಸಿದವರು (1) ಭಾಷಾಂತರವು ಮೂಲ ಕೃತಿಯ ಅಭಿಪ್ರಾಯಗಳನ್ನು ಕೊಟ್ಟರೆ ಸಾಕು, (2) ಭಾಷಾಂತರವು ಭಾಷಾಂತರದಂತೆ ಓದಿಸಿಕೊಂಡು ಹೋಗಬೇಕು, (3) ಭಾಷಾಂತರಕಾರನ ಶೈಲಿಯನ್ನು ಅಭಿವ್ಯಕ್ತಿಸಬೇಕು, (4) ಭಾಷಾಂತರಕಾರನ ಸಮಕಾಲೀನ ಭಾಷೆಯಲ್ಲಿರಬೇಕು, (5) ಭಾಷಾಂತರಕಾರ ಮೂಲ ಕೃತಿಗೆ ಹೊಸದನ್ನು ಸೇರಿಸಬಹುದು ಅಥವಾ ಅದರಿಂದ ಯಾವುದನ್ನಾದರೂ ತೆಗೆದುಹಾಕಬಹುದು, ಮತ್ತು (6) ಪದ್ಯವನ್ನು ಗದ್ಯರೂಪಕ್ಕೆ ಪರಿವರ್ತಿಸಬಹುದು ಎಂಬ ಅಭಿಪ್ರಾಯಗಳನ್ನು ಮುಂದಿಟ್ಟರು.

ಈ ಎರಡು ವಾದಗಳಲ್ಲಿ ಯಾವುದು ಅಂಗೀಕೃತವಾಗಲು ಯೋಗ್ಯವೆಂಬುವನ್ನು ನಿರ್ಧರಿಸಲಾಗುವುದಿಲ್ಲ. ಭಾಷಾಂತರವು ಮೂಲಕೃತಿಯಂತೆಯೇ ಇರಬೇಕು, ಶಬ್ದಶಃ ಭಾಷಾಂತರವಾಗಬೇಕು ಎಂಬುದು ಹಳೆಯ ಪದ್ಧತಿ: ಒಂದು ಭಾಷೆಯಲ್ಲಿಯ ಶಬ್ದಕ್ಕೆ ಅದರ ಅರ್ಥವಿರುವ ಶಬ್ದ ಭಾಷಾಂತರವಾಗಬೇಕಾದ ಭಾಷೆಯಲ್ಲಿ ಇರಲಾರದು. ಇಂಥ

---

12. Cartledge, *Translation from English for Advanced Students*, Orient Longmans, Ltd., (Madras, 1961), p. viii.

ಸಮಸ್ಯೆ ಉದ್ಭವಿಸಿದಾಗ ಆ ಶಬ್ದವನ್ನು ಹೋಲುವ ಅಥವಾ ಆ ಶಬ್ದದ ಕಲ್ಪನೆಯನ್ನು ನೀಡುವ ಪದವನ್ನೇ ತನ್ನ ಭಾಷೆಯಲ್ಲಿ ಇರಿಸಿಕೊಂಡು ಅನುವಾದಕ ಮೂಲಕೃತಿಯನ್ನು ತನ್ನ ಭಾಷೆಗೆ ಇಳಿಸಿಕೊಳ್ಳಬೇಕು.

ಭಾಷಾಂತಕಾರ ಮೂಲಕೃತಿಯ ಲೇಖಕನಲ್ಲ, ಆದ್ದರಿಂದ ಭಾಷಾಂತರ ಮೂಲಕೃತಿಗೆ ನಿಷ್ಠವಾಗಿರಬೇಕು ; ಅವನು ಗ್ರಂಥಕರ್ತನ ಮತ್ತು ಓದುಗನ ನಡುವೆ ಸಂಪರ್ಕ ಕಲ್ಪಿಸುವುದರಿಂದ ಅವನು ತನ್ನ ಸ್ವಂತಿಕೆಯನ್ನು ಮರೆತು ತಾನು ಭಾಷಾಂತರಿಸುವ ಭಾಷೆಯಲ್ಲಿ ಗ್ರಂಥಕರ್ತ ಮಾತನಾಡುವಂತೆ ಮಾಡಬೇಕು—ಎಂಬ ಅಭಿಪ್ರಾಯವಿದೆ. ಹೋಮರ್ ಕವಿಯ ಕೃತಿಯನ್ನು ಭಾಷಾಂತರಿಸುವಲ್ಲಿ 'ನಾನು ಮೂಲಕಾವ್ಯವನ್ನು ನಿಕಟವಾಗಿ ಅನುಸರಿಸಿದ್ದೇನೆ' ಎಂದು ವಿಲಿಯಂ ಕೂಪರ್ (1731-1800) ಹೇಳಿಕೊಂಡಿರಬಹುದು. ಆದರೆ ಮೂಲಕೃತಿಯನ್ನು, ವಿಶಿಷ್ಟವಾಗಿ ಕಾವ್ಯವನ್ನು, ಪದಶಃ ಅನುಸರಿಸಿ ಅನುವಾದಿಸುವ ವಿಧಾನದಲ್ಲಿ ತೊಡಕುಗಳಿವೆ. ಅದರಿಂದ ಭಾಷಾಂತರಿತ ಕೃತಿ ಗ್ರಂಥಕರ್ತನಿಗೂ ಓದುಗನಿಗೂ ನಡುವೆ ವಾಚನಸಾಧನವಾಗಿ ಹೆಚ್ಚು ಪರಿಣಾಮವನ್ನುಂಟುಮಾಡಲಾರದು. ವಿಷಯವನ್ನು ಸರಳವಾಗಿ ತಿಳಿಸಲು ಶಬ್ದಶಃ ಭಾಷಾಂತರ ಸುಲಭವಾಗಿ ಓದುವಂತಿದ್ದು ಅದರಿಂದ ವಾಚಕನಿಗೆ ಸಂತೋಷವಾಗಬೇಕು. ಈ ಬಗ್ಗೆ ಎಚ್. ಎಲ್ ನಾಗೇಗೌಡರ ಭಾಷಾಂತರದ ಕೆಲವು ವಾಕ್ಯಗಳನ್ನು ಇಲ್ಲಿ ಉಲ್ಲೇಖಿಸಬಹುದು—

"ಕೊನೆಯದಾಗಿ ಇನ್ನೊಂದು ಕತೆ : ಒಂದು ದಿನ ಷಾಜಹಾನ ರಾಯಭಾರಿಯನ್ನು ಒತ್ತಾಯಮಾಡಿ ಕೇಳಿದನಂತೆ 'ಹಿಂದೂಸ್ಥಾನದ ಮತ್ತು ಪರ್ಷಿಯದ ಚಕ್ರವರ್ತಿಗಳಲ್ಲಿ ಯಾರು ಹೆಚ್ಚು ಶೂರರು ?' ಎಂದು. ಇದಕ್ಕೆ ರಾಯಭಾರಿ, 'ಹಿಂದೂಸ್ಥಾನದ ಚಕ್ರವರ್ತಿಗಳು ಹದಿನೈದು ಹದಿನಾರು ದಿನಗಳ ಪೂರ್ಣ ಚಂದ್ರನಂತಿದ್ದರೆ, ಪರ್ಷಿಯದ ಚಕ್ರವರ್ತಿಗಳು ಎರಡು ಮೂರು ದಿನಗಳ ಬಾಲಚಂದ್ರನಂತಿದ್ದಾರೆ' ಎಂದು ಉತ್ತರಿಸಿದ. ಈ ಉತ್ತರ ಕೇಳಿ ಷಾಜಹಾನ ಮೊದಲಿಗೆ ಬಹಳ ಸಂತೋಷಪಟ್ಟುಕೊಂಡ. ಆದರೆ ಆ ಮೇಲೆ ಉತ್ತರವನ್ನು ಬಿಡಿಸಿ ನೋಡಿದಾಗ ಅರ್ಥ ಸ್ಪಷ್ಟವಾಯಿತು. ಹಿಂದೂಸ್ಥಾನದ ಚಕ್ರಾಧಿಪತ್ಯ ಕ್ಷೀಣದೆಸೆಗೆ ಕಾಲಿಡುತ್ತಿದೆ; ಪರ್ಷಿಯಾ ಚಕ್ರಾಧಿಪತ್ಯ ವೃದ್ಧಿಯಾಗುತ್ತಿದೆ —ಎಂದು ರಾಯಭಾರಿ ಚಮತ್ಕಾರದಿಂದ ಹೇಳಿದ್ದ.

"ಇಂಡಿಯಾದವರನ್ನು ಚುಡಾಯಿಸಲು ಪರ್ಷಿಯನರು ಇಂತಹ ತಮಾಷೆಯ ಕಥೆಗಳನ್ನು ಹೇಳಿದ್ದೂ ಹೇಳಿದ್ದೆ........[13]

ನಾಗೇಗೌಡರ ಭಾಷಾಂತರ ಭಾವಾನುವಾದ ವರ್ಗಕ್ಕೆ ಸೇರಿದ ಭಾಷಾಂತರ. ಸುಲಭ, ಮುಕ್ತ ಭಾಷಾಂತರ. ಪದಶಃ ಭಾಷಾಂತರ ಕಾನೂನು, ವಿಜ್ಞಾನ, ತಾಂತ್ರಿಕ ವಿಷಯ

---

13. ನಾಗೇಗೌಡ, ಎಚ್. ಎಲ್ : "ಪ್ರವಾಸಿ ಕಂಡ ಇಂಡಿಯಾ", ಸಂ. 5, ಮೈಸೂರು ವಿಶ್ವವಿದ್ಯಾನಿಲಯ, (ಮೈಸೂರು, 1975), ಪು. 103.

—ಇವುಗಳ ಭಾಷಾಂತರಕ್ಕೆ ಅಗತ್ಯ. ಸಾಹಿತ್ಯಿಕ ಭಾಷಾಂತರದಲ್ಲಿ ವಾಚಕನು ಮೂಲ ಲೇಖಕನ ಚಿಂತನೆಗಳನ್ನು ಗ್ರಹಿಸಬೇಕಾದರೆ ಭಾಷಾಂತರಕಾರನ ಚಿಂತನೆಯು ಸಹ ಒಂದಷ್ಟು ಸ್ವತಂತ್ರವಾಗಿರಬೇಕು.[14]

ಭಾಷಾಂತರ ಮೂಲಗ್ರಂಥಕ್ಕಿಂತ ಹೆಚ್ಚು ಶಬ್ದಗಳನ್ನು ಹೊಂದಿ ಅದರ ಗಾತ್ರ ಹೆಚ್ಚುವುದು ಭಾಷೆಗಳ ಸ್ವರೂಪ ವೈವಿಧ್ಯದಿಂದ. ಈ ಕಾರಣ ಮೂಲಕೃತಿ ತರ್ಜುಮೆಯಲ್ಲಿ ಸಂಕ್ಷಿಪ್ತಗೊಳ್ಳಬಹುದು ಅಥವಾ ವಿಸ್ತರಿಸಬಹುದು. ಸರಳಾನುವಾದದಲ್ಲಿ ಈ ವಿಸ್ತರಣೆಯನ್ನು ನಿರ್ದಿಷ್ಟವಾಗಿ ಕಾಣಬಹುದಾಗಿದೆ.

ಭಾಷಾಂತರಕಾರ ಮೂಲಕೃತಿಯ ವಾಕ್ಯಗಳ ಅರ್ಥವನ್ನು ಸ್ಪಷ್ಟೀಕರಿಸಲು ಪ್ರಯತ್ನಿಸಿದಾಗ ಅವನ ಸ್ವಾತಂತ್ರ್ಯದಿಂದ, ಅವನ ಕಲ್ಪನೆಗೆ ತಕ್ಕಂತೆ ಭಾಷಾಂತರ ಪರಿಣಮಿಸುತ್ತದೆ *veni, vidi, vici* ಲ್ಯಾಟಿನ್ ಶಬ್ದಗಳನ್ನು 'ಬಂದೆ' 'ನೋಡಿದೆ' 'ಗೆದ್ದೆ' ಎಂದು ಭಾಷಾಂತರಿಸುವಷ್ಟು ಮಾತ್ರ ಅನುವಾದಕನಿಗೆ ಸ್ವಾತಂತ್ರ್ಯವಿದೆ. ಅದರೆ, ಡಾ. ವೈಟ್‌ಹೆಡ್ ಅವರ ವಿಧಾನದಲ್ಲಿ ಭಾಷಾಂತರಿಸುವುದಾದರೆ ಈ ಶಬ್ದಗಳು "ಬಹಳ ದೂರ ಸೈನ್ಯವನ್ನು ನಡೆಸಿ ನಾನು ಈ ದೇಶಕ್ಕೆ ಬಂದೆ; ದಾಳಿ ನಡೆಸುವುದಕ್ಕೆ ಮುಂಚೆ ನಾನು ಇಲ್ಲಿಯ ಪರಿಸ್ಥಿತಿಯನ್ನು ನೋಡಿದೆ ಹಾಗೂ ಪ್ರತಿಭಟಿಸಿದ ಶತ್ರುಗಳನ್ನು ಸೋಲಿಸುವುದರಲ್ಲಿ ನಾನು ಯಶಸ್ವಿಯಾದೆ" ಎಂದಾಗುತ್ತವೆ. ಇಂಥ ಅರ್ಥವಿಸ್ತರಣೆ ಭಾಷಾಂತರವೆನಿಸದು. ದ್ವಿಭಾಷೆಯ ನಿಘಂಟನ್ನು ತಯಾರಿಸುವವರು ಸಹ ಭಾಷಾಂತರಕಾರರೇ ಆಗಿದ್ದಾರೆ. ಅವರು ಅನ್ಯಭಾಷೆಯ ಪದಕ್ಕೆ ದೇಶೀಯ ಭಾಷೆಯಲ್ಲಿ ಅರ್ಥ ನೀಡಲು ಎಷ್ಟು ಶಬ್ದಗಳು ಅತ್ಯಗತ್ಯವೊ ಅಷ್ಟೇ ಶಬ್ದಗಳನ್ನು ಉಪಯೋಗಿಸಿದರೆ ಭಾಷಾಂತರ ಪರಿಣಾಮಕಾರಿಯಾಗುತ್ತದೆ. Hare=ಮೊಲ, glass=ಗಾಜು ಎಂದರೆ ಜನರಿಗೆ ಸುಲಭವಾಗಿ ಅರ್ಥವಾಗುವುದು. ಆದರೆ, ಇಂಗ್ಲಿಷ್ Hare ಶಬ್ದಕ್ಕೆ "ಉದ್ದ ಕಿವಿಗಳೂ, ಮೊಂಡುಬಾಲವೂ, ಎರಡಾಗಿ ಸೀಳಿರುವ ಮೇಲ್ತುಟಿಯೂ ಉಳ್ಳ, ವಸ್ತುಗಳನ್ನು ಅಗಿದು ತಿನ್ನುವ ಸ್ವಭಾವದ ಒಂದು ಚತುಷ್ಪಾದಿ"[15] ಎಂಬ ಅರ್ಥ ನೀಡಿದಾಗ, glass ಪದಕ್ಕೆ "ಮರಳನ್ನು ಸೋಡ ಅಥವಾ ಪೊಟಾಷ್ ಅಥವಾ ಇವೆರಡರೊಡನೆಯೂ, ಮತ್ತು ಇತರ ಕೆಲವು ಪದಾರ್ಥಗಳೊಡನೆಯೂ ಬೆರೆಸಿ, ಶಾಖದಿಂದ ಕರಗಿಸಿ ತಯಾರಿಸಿದ ಸಾ., ಪಾರದರ್ಶಕವಾಗಿಯೂ ಹೊಳಪುಳ್ಳದ್ದಾಗಿಯೂ ಕಠಿಣವಾಗಿಯೂ ಭಿದುರವಾಗಿಯೂ ಇರುವ ಪದಾರ್ಥ"[16] ಎಂದು ವಿವರಿಸಿದಾಗ ಅದು ಭಾಷಾಂತರಕಾರನ ಕ್ರಿಯೆ ಆಗದುದಿಲ್ಲ. ಡಾ. ಜಾನ್‌ಸನ್ oats ಶಬ್ದಕ್ಕೆ a corn eaten by horses in England and

14. Savory, Theodore : *Op. cit.*, P. 54.
15. *English-Kannada Dictionary* : Mysore University, 1947, p. 531.
16. *Ibid.* p. 490.

by men in Ireland ಎಂದು ಅರ್ಥಮಾಡಿರುವಾಗ ಓಟ್ಸ್‌ಕಾಳಿನ ಅರ್ಥವನ್ನು ಕೊಟ್ಟಂತೆ ಆಗುವುದಿಲ್ಲ. ಐರ್ಲೆಂಡ್ ದೇಶದ ಬಗ್ಗೆ ಅವನಿಗಿದ್ದ ನಿಲವು ಮಾತ್ರ ಅದರಿಂದ ವ್ಯಕ್ತವಾಗುವುದು. ಭಾಷಾಂತರಕಾರ ಶಬ್ದದ ಅರ್ಥಕ್ಕೆ ಗಮನ ನೀಡದಿದ್ದರೆ ಭಾಷಾಂತರ ವಿಚಿತ್ರವಾಗಿ ಇಲ್ಲವೆ ಆಭಾಸವಾಗಿ ಪರಿಣಮಿಸುವುದು. 'ನಿನ್ನ ತಂದೆಗೆ ನೀನು ಎಷ್ಟನೆಯ ಮಗ ?' ಎಂಬುದನ್ನು ಇಂಗ್ಲಿಷಿಗೆ ಭಾಷಾಂತರಿಸುವುದು ಸ್ವಲ್ಪ ಪ್ರಯಾಸದ ಕೆಲಸ. ಇಂಥ ಸಂದರ್ಭಗಳಲ್ಲಿ ಭಾಷಾಂತರಕಾರ ಒಂದಷ್ಟು ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕಾಗುವುದು.

ಅರ್ಥ ಸಂಕ್ಷಿಪ್ತಗೊಂಡಿರುವ ಪದಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸಬೇಕಾದ ಅನಿವಾರ್ಯತೆ ಭಾಷಾಂತರಕಾರನಿಗೆ ಇಲ್ಲದಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಹಾಕಿರುವ "No Smoking" ಸೂಚನೆಯನ್ನು 'ಸಿಗರೇಟ್ ಸೇದಬಾರದು' ಎಂದು ಅನುವಾದಿಸಿ ಮೂಲದ ಅಭಿಪ್ರಾಯವನ್ನು ಕೊಡಬಹುದು. ಆದರೆ ಒಂದು ಪದ್ಯದಲ್ಲಿ ಸಂಕ್ಷಿಪ್ತಗೊಂಡಿರುವ ಮಾತುಗಳ ಅರ್ಥವನ್ನು ಸುಲಭವಾಗಿ ಗ್ರಹಿಸಲಾಗುವುದಿಲ್ಲ. ವಾಚಕರು ವಿಷಯ ಸರಳವಾಗಿ ಅರ್ಥವಾಗುವಂತೆ ಅಭಿವ್ಯಕ್ತಗೊಂಡಿರಬೇಕೆಂದು ಬಯಸುತ್ತಾರೆ. ಈ ಬಗ್ಗೆ ಅನುವಾದಕ ಎಚ್ಚರಿಕೆ ವಹಿಸಬೇಕು. ಮೂಲಗ್ರಂಥ ಮತ್ತು ಅದರ ಭಾಷಾಂತರ ಇವುಗಳನ್ನು ಹೋಲಿಸಿದರೆ ಯಾವುದು ಮೂಲಕೃತಿ, ಯಾವುದು ಭಾಷಾಂತರ ಎಂದು ತಿಳಿಯಲು ಭಾಷಾಂತರ ಯಾವ ಸಂಕೇತವನ್ನೂ ಕೊಡಬಾರದು. ಈ ನಿಯಮವನ್ನು ನಾವು ಸಾಹಿತ್ಯಿಕ ಭಾಷಾಂತರಕ್ಕೆ ಅನ್ವಯಿಸುವಂತೆ ವೈಜ್ಞಾನಿಕ ಗ್ರಂಥಗಳ ಭಾಷಾಂತರಕ್ಕೂ ಅನ್ವಯಿಸಬಹುದು.[17]

ಅಂಕಿತನಾಮ ಭಾಷಾಶಾಸ್ತ್ರೀಯ ಅಂಶ. ಹೆಸರಿನೊಂದಿಗೆ ಸಂಯೋಜಿತವಾಗಿರುವ ವಿಶೇಷಣವನ್ನು ಪರಿಗಣಿಸಿ ಹೆಸರನ್ನು ತನ್ನ ಕೃತಿಯಲ್ಲಿ ಬಳಸಿಕೊಳ್ಳುವ ಅವಕಾಶ ಗ್ರಂಥಕರ್ತನಿಗೆ ಇದೆ. 'ಗಾಂಪರೊಡೆಯ' 'ಡಾನ್ ಕ್ವಿಕ್‌ಜೋಟ್' ಇಂಥ ಹೆಸರುಗಳು ವ್ಯಕ್ತಿಲಕ್ಷಣಗಳನ್ನು ಸೂಚಿಸುತ್ತವೆ. ಜರ್ಮನ್ ಕಾದಂಬರಿಯೊಂದರಲ್ಲಿ ಕಥಾನಾಯಕ ಎಗ್ಬರ್ಟ್; ಅವನನ್ನು ಅವನ ಸ್ನೇಹಿತರು ಕಾದಂಬರಿಯ ಉದ್ದಕ್ಕೂ 'ಎಗ್' ಎಂದು ಕರೆಯುತ್ತಾರೆ. ಆದರೆ ಇಂಗ್ಲಿಷ್ ಭಾಷಾಂತರದಲ್ಲಿ ಈ ಪಾತ್ರವನ್ನು 'ಎಗ್' ಎಂದು ಕರೆದರೆ, ಇಂಗ್ಲಿಷಿನಲ್ಲಿ ಆ ಶಬ್ದಕ್ಕಿರುವ ಅರ್ಥದ ಪರಿಣಾಮವಾಗಿ ಗ್ರಂಥದ ಉದ್ದೇಶವೇ ಕೆಟ್ಟು, ಕಥಾನಾಯಕ ಹಾಸ್ಯಪಾತ್ರವಾಗುತ್ತಾನೆ.[18] ಈ ಸಂದರ್ಭದಲ್ಲಿ ಕಥಾನಾಯಕನನ್ನು 'ಎಗ್ಬರ್ಟ್' ಅಥವಾ 'ಬರ್ಟ್' ಎಂದು ಕರೆಯುವುದು ಯುಕ್ತ ಮಾರ್ಗ. ಸಾಧ್ಯವಾದಷ್ಟು ಮಟ್ಟಿಗೆ ಹೆಸರುಗಳನ್ನು ಬದಲಾಯಿಸದೆ ಭಾಷಾಂತರದಲ್ಲಿ ಉಳಿಸಿಕೊಳ್ಳ

17. Savory, Theodore : *Op. cit.*, p. 160.
18. Forester, Leonard : "Translation : An Introduction," *Aspects of Translation*, p. 26.

ಬೇಕು. 'ಒಥೆಲೋ' ಒಥೆಲೋ ಆಗಿಯೇ ಉಳಿಯಬೇಕು, 'ಶೂರಸೇನ'ನಾಗಬಾರದು ; 'ಮ್ಯಾಕ್‌ಬೆತ್' 'ಪ್ರತಾಪರುದ್ರದೇವ'ನಾಗಬಾರದು. ಕಾದಂಬರಿ 'ವಿಕಾರ್ ಆಫ್ ವೇಕ್‌ಫೀಲ್ಡ್' 'ವೇಕ್‌ಫೀಲ್ಡ್ ಪಾದ್ರಿ' ಆಗಬಹುದೇ ಹೊರತು 'ಪ್ರಿಂಬೋಜಿ ವಿಜಯಂ' ಆಗಬಾರದು. ಅನೇಕ ಸಂದರ್ಭಗಳಲ್ಲಿ ಗ್ರಂಥಶೀರ್ಷಿಕೆಗಳು ಭಾಷಾಂತರಕಾರರಿಂದ ಮಾರ್ಪಡುವುದರಿಂದ ಮೂಲಕೃತಿಗಳನ್ನು ಗುರುತಿಸಲಾಗುವುದಿಲ್ಲ.

ಮುಕ್ತ ಭಾಷಾಂತರ ಕ್ರಮದಲ್ಲಿ ಅಸಂಗತಗಳಿಗೆ ಹೆಚ್ಚು ಅವಕಾಶವಿದೆ. ಇದರಿಂದ ಮೂಲಕೃತಿಯ ಲಕ್ಷಣವನ್ನೇ ಭಾಷಾಂತರಕಾರ ಕೆಡಿಸುವ ಸಾಧ್ಯತೆಯುಂಟು. ಈ ಭಾಷಾಂತರ ವಿಧಾನದಲ್ಲಿ ಮೂಲಕೃತಿಯ ಕಾಲಕ್ಕೆ ವಿರುದ್ಧವಾದ ಅಂಶಗಳು ತಲೆದೋರಬಹುದು ಹಾಗೂ ಭಾಷಾಂತರದಲ್ಲಿ ಆಭಾಸಗಳುಂಟಾಗಬಹುದು. ಭಾಷಾಂತರವಾಗುವ ಕೃತಿಯಲ್ಲಿ ಇತರ ಮೂಲಗಳಿಂದ ಬಳಸಿಕೊಂಡಿರುವ ಪೂರ್ವಕಥೆಗಳು ಇಲ್ಲವೇ ಪ್ರಾಸಂಗಿಕ ಉಲ್ಲೇಖಗಳಿರುವ ಪಕ್ಷದಲ್ಲಿ, ಇಂಥ ಗ್ರಂಥದಿಂದ ಇಂಥ ವಿಷಯವನ್ನು ಲೇಖಕ ಉಲ್ಲೇಖಿಸಿದ್ದಾನೆಂದು ಸೂಚಿಸಿ ಭಾಷಾಂತರಕಾರ ವಾಚಕನ ಆಸಕ್ತಿಯನ್ನು ಕೆಡಿಸಬಹುದು. ಅಥವಾ ಗ್ರಂಥಕರ್ತ ಬಳಸಿರುವ ಉಲ್ಲೇಖನನ್ನು ಕಾವ್ಯಮಯವಾಗಿ ಇಳಿಸಿ ವಾಚಕನ ಉತ್ಸಾಹವನ್ನು ಹೆಚ್ಚಿಸಬಹುದು. ಮೊದಲನೆಯ ಕ್ರಿಯೆಯಲ್ಲಿ ಭಾಷಾಂತರಕಾರ ಓದುಗನ ಕಲ್ಪನೆಗಳಿಗೆ ಭಂಗತರುತ್ತಾನೆ. ಎರಡನೆಯ ಕ್ರಿಯೆಯಲ್ಲಿ ನಿಜವನ್ನು ಬದಿಗಿಟ್ಟು ತನ್ನವೇ ಕಲ್ಪನೆಗಳನ್ನು ವಾಚಕನ ಮುಂದಿಡುತ್ತಾನೆ. .ಭಾಷಾಂತರದ ಈ ಎರಡು ಕ್ರಿಯೆಗಳು ಓದುಗನ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತವೆ. ಸಾಹಿತ್ಯಿಕ ಭಾಷಾಂತರಕಾರ ಜೀವನದ ವಾಸ್ತವಿಕತೆಯನ್ನು ಮರೆಯಬಾರದು. ಮೂಲ ಗ್ರಂಥದಲ್ಲಿ ಚಿತ್ರಿತವಾಗಿರುವ ಪಾತ್ರಗಳ ಸಂಭಾಷಣೆ ಹಾಗೂ ಮಾತುಗಳಲ್ಲಿ ಸಮಾಜದ ಸಾಂಸ್ಕೃತಿಕ ಹಿನ್ನೆಲೆ, ಜನತೆಯ ಲಕ್ಷಣ ಅಭಿವ್ಯಕ್ತವಾಗುತ್ತವೆ. ಈ ವಿಷಯಗಳನ್ನು ಚಿತ್ರಿಸುವಾಗ, ಗ್ರಂಥಕರ್ತನ ಲೋಪದೋಷಗಳೇನೇ ಇದ್ದರೂ ಅವುಗಳನ್ನು ಭೂತಕನ್ನಡಿಯಲ್ಲಿ ಕಾಣದೆ ಅವನು ತಿಳಿಸುವ ವಿಷಯಗಳನ್ನು ಮಾತ್ರ ಭಾಷಾಂತರಕಾರ ಮುಂದಿಡಬೇಕು.

3

ಭಾಷಾಂತರ ಕ್ರಿಯೆ ಯಾಂತ್ರಿಕವೆಂಬ ಅಭಿಪ್ರಾಯವಿದೆ. ನಿಜಕ್ಕೂ ಭಾಷಾಂತರಕಾರನ ಕೆಲಸ ಮೂಲಲೇಖಕನ ಕೆಲಸಕ್ಕಿಂತಲೂ ಕಷ್ಟವಾದದ್ದು. ಉದ್ಯಮಶೀಲ ಭಾಷಾಂತರಕಾರ ಸ್ವತಃ ಸಾಹಿತಿಯಾಗಿದ್ದರೆ, ಭಾಷಾಂತರದ ಉದ್ಯಮಕ್ಕಿಂತ ಸ್ವಂತ ಬರವಣಿಗೆಯೇ ಲೇಸೆಂಬ ಅಭಿಪ್ರಾಯವನ್ನು ತಾಳುತ್ತಾನೆ. ತಾನು ಅನುವಾದಿಸುವ ಗ್ರಂಥ ಪ್ರಾಕಾರದಲ್ಲಿ ಸ್ವಂತ ಕೃತಿಗಳನ್ನು ರಚಿಸಿರುವವನು ಉತ್ತಮ ಭಾಷಾಂತರಕಾರನಾಗುತ್ತಾನೆ. ತನ್ನ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಗ್ರಂಥವನ್ನು ಭಾಷಾಂತರಿಸಬೇಕಾ

ದಾಗ ಅನುವಾದಕನ ಪ್ರಭಾವ ಮೂಲಕೃತಿಯ ಮೇಲೆ ಉಂಟಾಗುವುದರಿಂದ ಅವನು ಸೃಷ್ಟ್ಯಾತ್ಮಕ ಲೇಖಕನೂ ಹೌದು.

ಭಾಷಾಂತರಕಾರನಿಗೆ ಎರಡು ಭಾಷೆಗಳ ಮೇಲೆ ಪಾಂಡಿತ್ಯವಿದ್ದು ಮೂಲಕೃತಿಯನ್ನು ವಿಮರ್ಶಾತ್ಮಕವಾಗಿ ಗ್ರಹಿಸುವ ಸಾಮರ್ಥ್ಯ ಹಾಗೂ ತನ್ನ ಸ್ವಂತ ಭಾಷೆಯ ವಿಷಯದಲ್ಲಿ ಪ್ರಾಯೋಗಿಕ ಅನುಭವ ಇರಬೇಕು. ಇವುಗಳೊಂದಿಗೆ ಅವನಿಗೆ ಮೂಲಲೇಖಕನೊಂದಿಗೆ ಮಾನಸಿಕ ಬಾಂಧವ್ಯವಿದ್ದಾಗ ಭಾಷಾಂತರ ಉತ್ತಮವಾಗಿ ಪರಿಣಮಿಸುತ್ತದೆ. ಭಾಷಾಂತರ ಒಂದು ಬೌದ್ಧಿಕ ಕ್ರಿಯೆ. ಅದರಿಂದ ಹೆಚ್ಚು ತೃಪ್ತಿಪಡೆಯತಕ್ಕವನು ಭಾಷಾಂತರಕಾರ. ಅವನ ಕೆಲಸಕ್ಕೆ ತಕ್ಕ ಉತ್ತೇಜನ ಅವನಿಗೆ ಅಗತ್ಯ. ಎಲ್ಲ ಕಾಲಗಳಲ್ಲೂ ಎಲ್ಲ ದೇಶಗಳಲ್ಲೂ ಭಾಷಾಂತರಕ್ಕೆ ಪ್ರೇರಣೆ ಇದ್ದೇ ಇದೆ. "ನಮ್ಮಲ್ಲಿ ಒಳ್ಳೆಯ ಭಾಷಾಂತರಗಳು ವಿರಳವಾಗಿರುವುದಕ್ಕೆ ಮೂಲಲೇಖಕನ ಅಭಿಪ್ರಾಯಗಳನ್ನು ಬಹು ನಿಕಟವಾಗಿ ಅನುಸರಿಸಿ ಭಾಷಾಂತರ ಬಹಳ ಕಷ್ಟವಾದ ಕೆಲಸ ಎಂಬಂತೆ ಭಾಷಾಂತರಿಸುವ ವಿಧಾನ ಕಾರಣವಲ್ಲ ; ಭಾಷಾಂತರಿಸಲು ಅಗತ್ಯವಾದ ಪ್ರತಿಭೆಯುಳ್ಳವರು ವಿರಳವಾಗಿರುವುದು ಹಾಗೂ ಅವರ ವಿದ್ವತ್ತು ಮತ್ತು ಪ್ರತಿಭೆಗೆ ಸಾಕಷ್ಟು ಮೆಚ್ಚುಗೆ, ಪ್ರೋತ್ಸಾಹಗಳಿಲ್ಲದಿರುವುದೇ ಅದಕ್ಕೆ ಕಾರಣ" ಎಂದು ಡ್ರೈಡನ್ ಕವಿ ತಿಳಿಸುತ್ತಾನೆ.[19] ಮೂರು ಶತಮಾನಗಳ ಹಿಂದೆ ಅವನು ಹೇಳಿದ ಮಾತುಗಳೇ ಇಂದಿಗೂ ಅನ್ವಯಿಸುತ್ತವೆ. ಪ್ರತಿಭಾವಂತ ಭಾಷಾಂತರಕಾರರು ಇಂದಿಗೂ ವಿರಳ. ಅವರನ್ನು ಹುಡುಕಿ ಕನ್ನಡದಲ್ಲಿ ಅಗತ್ಯವಾಗಿ ಆಗಬೇಕಾದ ಸಾಹಿತ್ಯಿಕ ಹಾಗೂ ಜ್ಞಾನ–ವಿಜ್ಞಾನ ವಿಷಯಗಳ ಭಾಷಾಂತರವನ್ನು ಮಾಡಿಸಿಕೊಳ್ಳುವ ಗುರುತರ ಹೊಣೆ ಸಾಹಿತ್ಯ ಸಂಸ್ಥೆಗಳದು.

ಭಾಷಾಂತರದಲ್ಲಿ ಭಾಷಾಂತರಕಾರನ ಪ್ರಭುತ್ವ ಕೆಲವು ಸಂದರ್ಭಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅದರ ಪರಿಣಾಮಗಳು ತೀವ್ರವಾದವು: ಬರ್ಲಾಂ ಮತ್ತು ಜೋಸೆಫ್ ಚರಿತ್ರೆ ಇದಕ್ಕೆ ನಿದರ್ಶನ. ಇವರಿಬ್ಬರ ಚರಿತ್ರೆ ಭಾಷಾಂತರದ ಮೂಲಕ ಹರಡಿ ಅವರ ಧಾರ್ಮಿಕ ಜೀವನ ಜನರ ಮೇಲೆ ಪ್ರಭಾವ ಬೀರಿ ಕೊನೆಗೆ ಅವರನ್ನು ಕ್ರೈಸ್ತ ಸಂತರೆಂದು ಸ್ವೀಕರಿಸಬೇಕಾಯಿತು. ಬೈಬಲಿನ ಒಡಂಬಡಿಕೆ ರಚಿತವಾಗಿರುವ ಹಿಬ್ರೂ ಭಾಷೆಯ ಶಬ್ದಗಳ ಕ್ಲಿಷ್ಟತೆಯಿಂದ ತಪ್ಪು ಭಾಷಾಂತರಕ್ಕೆ ಅವಕಾಶವಿದೆ. ತಾನು ಉಪಯೋಗಿಸುವ ಶಬ್ದಗಳಿಂದ ಭಾಷಾಂತರಕಾರ ಮೂಲಕೃತಿಯ ಅರ್ಥವನ್ನು ಬದಲಾಯಿಸಿ ಕ್ರೈಸ್ತ ಧರ್ಮದ ವಿವಿಧ ಪಂಥಗಳ ಪೈಕಿ ತನಗೆ ಪ್ರಿಯವಾದ ಪಂಥಕ್ಕೆ ಅನುಗುಣವಾಗಿ ಮೂಲ ವಾಕ್ಯಗಳನ್ನು ಅರ್ಥೈಸಬಹುದು. ಇದನ್ನು ವ್ಯಾಖ್ಯಾ ಭಾಷಾಂತರ (interpretative translation) ಎಂದು ಕರೆದರೂ ತಪ್ಪಾಗಲಾರದು. ಈ ಬಗೆಯ ತರ್ಜುಮೆಯಿಂದ ಅನುವಾದಕ ತನ್ನ ಅಭಿಪ್ರಾಯಗಳನ್ನು ವಾಚಕರ ಮೇಲೆ ಹೊರಿಸುತ್ತಾನೆ.

19. Dryden, John : "The Preface to the Translation of Ovid's Epistles," in *English Prose of the XVII Century*, pp. 756–762.

ಭಾಷಾಂತರ ತಪ್ಪಾದರೆ ದುಷ್ಪರಿಣಾಮಗಳುಂಟಾಗುವ ಸಂಭವವೂ ಇದೆ: ಒಬ್ಬ ಭಾಷಾಂತರಕಾರನ ತಪ್ಪಿನಿಂದ ಒಂದು ಪಟ್ಟಣವೇ ನಾಶವಾದ ಪ್ರಸಂಗ ಎರಡನೆಯ ಮಹಾಯುದ್ಧ ಕಾಲದಲ್ಲಿ ನಡೆಯಿತು. ಶರಣಾಗತವಾಗಬೇಕೆಂದು ಜಪಾನ್ ಸರ್ಕಾರಕ್ಕೆ ಮಿತ್ರರಾಷ್ಟ್ರಗಳು ಸೂಚನೆ ಕೊಟ್ಟವು. ಜಪಾನ್ ಸರ್ಕಾರ "ಸಮಾಲೋಚನೆಯಿಂದ ಉತ್ತರ ನಿಧಾನ" ಎಂಬ ಅರ್ಥಬರುವ 'ಮೊಕುಸಟ್ಸು' (mokusatsu) ಜಪಾನಿ ಶಬ್ದವನ್ನು ಬಳಸಿ ಜಪಾನಿ ಭಾಷೆಯಲ್ಲಿ ಜವಾಬು ಕಳುಹಿಸಿತು. ಅನುವಾದಕ ಈ ಶಬ್ದಕ್ಕೆ ತಪ್ಪು ಅರ್ಥ ನೀಡಿ, "ಸಮಾಲೋಚನೆಯಿಂದ ಉತ್ತರ ತಳ್ಳಿಹಾಕಿದೆ" ಎಂದು ಭಾಷಾಂತರಿಸಿದ. ಇದರ ಪರಿಣಾಮವಾಗಿ ಹಿರೋಷಿಮಾ ಪಟ್ಟಣದ ಮೇಲೆ ಆಟಂ ಬಾಂಬ್ ಬಿದ್ದಿತು. ಲಕ್ಷಾಂತರ ಜನ ಸತ್ತರು.

ಭಾಷಾಂತರಕಾರನ ಹೊಣೆ ಗುರುತರವಾದದ್ದು ಎಂಬುದು ಇಂಥ ನಿದರ್ಶನಗಳಿಂದ ತಿಳಿಯುವುದು. ಮೂಲವಾಕ್ಯಗಳಲ್ಲಿಯ ವಿರಾಮ ಚಿಹ್ನೆಗಳನ್ನು ವ್ಯತ್ಯಾಸ ಮಾಡಿದರೂ ಅಪಾರ್ಥವಾಗುವುದರಲ್ಲಿ ಸಂದೇಹವಿಲ್ಲ. ಅದರಿಂದ ವ್ಯತಿರಿಕ್ತ ಪರಿಣಾಮಗಳುಂಟಾಗುತ್ತವೆ. ಒಬ್ಬ ಕೈದಿಯ ವಿಷಯದಲ್ಲಿ "Pardon, impossible to be transported to Siberia" ಎಂಬ ವಾಕ್ಯವನ್ನು ಭಾಷಾಂತರಿಸುವಾಗ Pardon ತರುವಾಯ ಇರುವ ಅರ್ಧ ವಿರಾಮ ಚಿಹ್ನೆಯನ್ನು impossible ತರುವಾಯ ಹಾಕಿದಂತೆ ಪರಿಗಣಿಸಿ ಭಾಷಾಂತರಮಾಡಿದರೆ ಕೈದಿಗೆ ಎಷ್ಟು ಅನ್ಯಾಯವಾಗುವುದೆಂಬುದನ್ನು ನಾವು ಗಮನಿಸಬಹುದು. ಭಾಷಾಂತರಕಾರನ ನೋಟ ಡೇಗೆಯ ನೋಟದಂತೆ ಸೂಕ್ಷ್ಮವಾಗಿದ್ದ ಹೊರತು ವಾಕ್ಯದ ನೈಜ ಅರ್ಥವನ್ನು ಗ್ರಹಿಸಲು ಸಾಧ್ಯವಾಗುವುದಿಲ್ಲ. ಅದರ ಪರಿಣಾಮವಾಗಿ ಭಾಷಾಂತರದಲ್ಲಿ ಆಭಾಸಗಳು ಎದ್ದು ಕಾಣುತ್ತವೆ.

4

ಒಂದು ಭಾಷೆಯ ಗ್ರಂಥದ ವಸ್ತು ಆ ಭಾಷೆಯನ್ನರಿಯದವನಿಗೆ ಮುಚ್ಚಿದ ಪೆಟ್ಟಿಗೆಯ ಐಶ್ವರ್ಯದಂತೆ. ತನ್ನ ಭಾಷೆಗೆ ಆ ಗ್ರಂಥ ತರ್ಜುಮೆಯಾದಾಗ ಮಾತ್ರವೇ ಅವನು ಅದರ ಮೌಲ್ಯವನ್ನು ತಿಳಿಯಬಲ್ಲವನಾಗುತ್ತಾನೆ. ಭಾಷಾಂತರ ಪರಭಾಷೆಗಳ ಜ್ಞಾನ ಭಂಡಾರವನ್ನು ದೊರಕಿಸಿಕೊಡುವ ಸಾಧನ. ಒಂದು ಭಾಷೆಗೆ ಅನುವಾದಗೊಂಡ ಗ್ರಂಥಗಳು ಆ ಭಾಷೆಯ ಸಾಹಿತ್ಯದ ಅಂಗವಾಗಿ ಉಳಿದುಬರುವುದು ಸಾಮಾನ್ಯ. ಒಡೆಸ್ಸಿ ಇಲಿಯಡ್, ಇನಿಯಡ್, ಕಥಾಸರಿತ್ಸಾಗರ, ಪಂಚತಂತ್ರ ಇಂಥ ಗ್ರಂಥಗಳು ಅವು ಭಾಷಾಂತರವಾದ ಭಾಷೆಗಳಲ್ಲಿ ಅಭಿಜಾತ ಸಾಹಿತ್ಯವರ್ಗಕ್ಕೆ ಸೇರಿಹೋಗಿವೆ. ಗ್ರೀಕ್ ಮತ್ತು ರೋಮನ್ ನಾಟಕಕಾರರು, ಸಾಹಿತಿಗಳು, ದಾರ್ಶನಿಕರು ಇವರೇ ಮೊದಲಾದವರ ಕೃತಿಗಳು ಯೂರೋಪಿನ ಸಾಹಿತ್ಯದ ಮೇಲೆ ಶತಮಾನಗಳ ಹಿಂದೆ ಪ್ರಭಾವಬೀರಿ, ಪ್ರಾಚ್ಯರಾಷ್ಟ್ರಗಳ ಭಾಷೆಗಳಿಗೆ ಸಹ ಭಾಷಾಂತರಗೊಳ್ಳುತ್ತಿವೆ. ಷೇಕ್ಸ್‌ಪಿಯರನ ಕಾಲ

ದಲ್ಲಿ ಲ್ಯಾಟಿನ್ ಭಾಷೆಯನ್ನು ಕಲಿಸುವ 'ಗ್ರಾಮರ್ ಸ್ಕೂಲ್'ಗಳು ಭಾರತದ ಸಂಸ್ಕೃತ ಪಾಠಶಾಲೆಗಳಂತೆ ಕಲಿಕೆಯಲ್ಲಿ ಪ್ರಧಾನ ಸ್ಥಾನಗಳಿಸಿದ್ದವು. ಅವುಗಳ ಪ್ರಭಾವದಿಂದ ಗ್ರೀಕ್ ಮತ್ತು ಲ್ಯಾಟಿನ್ ಕವಿಗಳ ಅನೇಕ ಕಾವ್ಯಗಳು ಇಂಗ್ಲಿಷ್ ಮತ್ತು ಯೂರೋಪ್ ಭಾಷೆಗಳಿಗೆ ಭಾಷಾಂತರಗೊಂಡವು. ವಿಶ್ವದ ಪ್ರಾಚೀನ ಸಾಹಿತ್ಯವನ್ನು ಭಾಷಾಂತರಗಳ ಮೂಲಕ ತಿಳಿಯುವ ಆಸಕ್ತಿ ನಮ್ಮಲ್ಲಿ ಸಹ ಹೆಚ್ಚುತ್ತಿದೆ.

ಗ್ರೀಕ್ ಸಾಹಿತ್ಯವನ್ನು ಸ್ವಭಾಷೆಗೆ ತಂದುಕೊಂಡ ಭಾಷಾಂತರಕಾರರಲ್ಲಿ ಗ್ರೀಕ್ ಪಂಥ ಮತ್ತು ಆಧುನಿಕ ಪಂಥ ಎಂದು ಎರಡು ಪಂಗಡಗಳಿವೆ. ಗ್ರೀಕ್ ಪಂಥದವರು (Hellenizers) ಭಾಷಾಂತರದ ಮೂಲಕ ಓದುಗರನ್ನು ಮೂಲ ಗ್ರೀಕ್ ಕೃತಿಯ ಪರಿಸರಕ್ಕೆ ತರಲು ಪ್ರಯತ್ನಿಸುತ್ತಾರೆ; ತಮ್ಮ ಭಾಷಾಂತರದಲ್ಲಿ ಮೂಲಕೃತಿಯ ಸಾಹಿತ್ಯಿಕ ಲಕ್ಷಣಗಳನ್ನು ಹಾಗೂ ವೈವಿಧ್ಯಗಳನ್ನು ಉಳಿಸಿಕೊಳ್ಳಬೇಕೆನ್ನುತ್ತಾರೆ. ಆಧುನಿಕ ಪಂಥದವರು (Modernizers) ಭಾಷಾಂತರದ ಮೂಲಕ ಮೂಲಕೃತಿಗೆ ಸಮನಾದ ಕೃತಿಯನ್ನು ಆಧುನಿಕ ಭಾಷೆಯಲ್ಲಿ ತರಲು ಪ್ರಯತ್ನಿಸುತ್ತಾರೆ. ಗ್ರೀಕ್ ಪಂಥದ ರಾಬರ್ಟ್ ಬ್ರೌನಿಂಗ್ ತನ್ನ 'ಅಗಮೆಂನನ್' ಕಾವ್ಯದಲ್ಲಿ ಗ್ರೀಕ್ ಭಾಷಾಂತರದ ಬಗ್ಗೆ "ನಮ್ಮ ಭಾಷೆಯ ಸಂಪ್ರದಾಯಕ್ಕೆ ಭಂಗಬಾರದಂತೆ ಸರ್ವವಿಧದಲ್ಲೂ ಭಾಷಾಂತರಕಾರ ಪದಶಃ ಭಾಷಾಂತರಿಸಬೇಕು" ಎಂದು ಹೇಳಿಕೊಂಡಿದ್ದಾನೆ. ಅವನ ಪ್ರಕಾರ ಆಧುನಿಕ ಕವಿಗಳನ್ನು ಜ್ಞಾಪಿಸುವಂತಹ ರೀತಿಯಲ್ಲಿ ಗ್ರೀಕ್ ಅಭಿಜಾತ ಕವಿ ಹೋಮರನ ಕೃತಿಗಳನ್ನು ಭಾಷಾಂತರಿಸುವುದು ಸರಿಯಲ್ಲ. ಏಕೆಂದರೆ ಹೋಮರ್ ಆ ರೀತಿ ಮಾಡಿದವನಲ್ಲ. ಹೋಮರನ ಕಾವ್ಯವನ್ನು ಓದಿದಾಗ ವಾಚಕನಿಗೆ ಹೋಮರ್ ಕವಿ ಕಾಣಿಸಿಕೊಳ್ಳಬೇಕೇ ಹೊರತು ಮತ್ಯಾವ ಕವಿಯ ಶೈಲಿಯಾಗಲಿ, ಪ್ರಭಾವವಾಗಲಿ ಕಾಣಿಸಿಕೊಳ್ಳಬಾರದು. ಬ್ರೌನಿಂಗನ ಹಾಗೂ ಅವನದೇ ರೀತಿಯ ಮಾಥ್ಯೂ ಆರ್ನಾಲ್ಡನ ಭಾಷಾಂತರ ನಿಷ್ಠೆಯನ್ನು ಇತರರು ಖಂಡಿಸಿದ್ದಾರೆ. ಗ್ರೀಕ್ ಭಾಷೆಯನ್ನು ಬಲ್ಲ ಹಾಗೂ ಗ್ರೀಕ್ ಕಾವ್ಯವನ್ನು ಮೆಚ್ಚಬಲ್ಲ ವಿದ್ವಾಂಸನ ಭಾಷಾಂತರದಲ್ಲಿ ಮೂಲಕೃತಿಯ ರಸಭಾವಗಳೇ ಮೂಡಿಬರುತ್ತವೆಯೆಂಬುದು ಆರ್ನಾಲ್ಡನ ನಿಲವು. ಆಧುನಿಕ ಪಂಥದವನಾದ ಜಾಕ್ ಅಮ್ಯೋಟ್, ((Jacques Amyot) ಗ್ರೀಕ್ ಜೀವನಚರಿತಕಾರ ಪ್ಲೂಟಾರ್ಕನ 'ಜೀವನ ಚಿತ್ರಗಳು' ಗ್ರಂಥವನ್ನು ಫ್ರೆಂಚ್ ಭಾಷೆಗೆ ಅನುವಾದಿಸಿದಾಗ ಅವನ ಸ್ವಂತಿಕೆ ಮತ್ತು ವಿಸ್ತೃತ್ ಪ್ರಭಾವಗಳಿಂದ ಭಾಷಾಂತರದಲ್ಲಿ ಗ್ರೀಕ್ ಪ್ಲೂಟಾರ್ಕ್ ಫ್ರೆಂಚರ ಜನಪ್ರಿಯ ಪ್ಲೂಟಾರ್ಕನಾದ. ಹೀಗೆ ಅನುವಾದಕನ ಸಾಮರ್ಥ್ಯಕ್ಕೆ ಅನುಸಾರವಾಗಿ ಮೂಲಕೃತಿಯ ಭಾಷಾಂತರ ಜನಪ್ರಿಯವಾಗಬಹುದು ಅಥವಾ ಮೂಲೆಗುಂಪಾಗಬಹುದು.

ಪ್ರಪಂಚದಾದ್ಯಂತ ವಿಜ್ಞಾನ ಕ್ಷೇತ್ರದಲ್ಲಿ ಆಗುತ್ತಿರುವ ಪ್ರಗತಿಯನ್ನು ತಿಳಿಯಲು

ವಿಜ್ಞಾನಿಗಳಿಗೆ ಭಾಷಾಂತರ ಹೆಚ್ಚು ಉಪಯುಕ್ತವಾಗಿದೆ. ವೈಜ್ಞಾನಿಕ ಗ್ರಂಥಗಳನ್ನು ಭಾಷಾಂತರಿಸುವಾಗ ಅನುವಾದಕ ಸ್ಪಷ್ಟ ನಿರೂಪಣೆಗೆ ಗಮನಕೊಡಬೇಕು. ಅವುಗಳ ರಚನೆಯಲ್ಲಿ ಲೇಖಕನ ಸ್ವಭಾವಗಳಿಗೆ ಹಾಗೂ ಶೈಲಿಗೆ ಪ್ರಾಧಾನ್ಯವಿಲ್ಲ. ವೈಜ್ಞಾನಿಕ ಶಬ್ದಗಳು ಭಾಷಾಂತರದ ಮೇಲೆ ಹೊಂದಿರುವ ಪ್ರಭಾವ ಗಣನೀಯ: ಬಳಕೆಯಲ್ಲಿರುವ ಕೆಲವು ಶಬ್ದಗಳ ವಿನಾ ಉಳಿದ ಶಬ್ದಗಳೆಲ್ಲಾ ವಿಜ್ಞಾನದ ಕಲ್ಪನೆಗಳಿಗೆ ನಿರ್ದಿಷ್ಟ ಅರ್ಥ ನೀಡುವ ಶಬ್ದಗಳೇ ಆಗಿವೆ. ವೈಜ್ಞಾನಿಕ ಗ್ರಂಥಗಳ ಭಾಷಾಂತರಗಳನ್ನು ವಿಜ್ಞಾನದಲ್ಲಿ ಆಸಕ್ತಿಯುಳ್ಳವರು ಓದುತ್ತಾರೆ; ಇತರರಿಗೆ ಅವರ ಬಗ್ಗೆ ಆಸಕ್ತಿ ಇರದು. ಮಾನವಿಕ ಶಾಸ್ತ್ರಗಳು, ವಿಜ್ಞಾನ, ತಾಂತ್ರಿಕ ವಿಷಯಗಳು—ಇವುಗಳ ಭಾಷಾಂತರ ವಿಧಾನಗಳಲ್ಲಿ ತರಬೇತಿನಡೆಯುವ ಅಗತ್ಯ ಆಧುನಿಕ ಭಾಷಾಂತರ ಕ್ಷೇತ್ರದಲ್ಲಿದೆ. ಶಿಕ್ಷಣಕ್ರಮದಲ್ಲಿ ವಿಶ್ವವಿದ್ಯಾನಿಲಯದ ಹಂತದವರೆಗೆ ಭಾಷಾಂತರವನ್ನು ಕಲಿಸಿಕೊಡುವ ಪದ್ಧತಿ ಕೆಲವು ರಾಷ್ಟ್ರಗಳಲ್ಲಿದೆ. ಭಾಷಾಂತರ ಕಲೆ ವಿದ್ಯಾರ್ಥಿಗಳ ಮೇಲೆ ಪ್ರಭಾವಬೀರಿ ಅವರಿಗೆ ಕನಿಷ್ಠ ಎರಡು ಮೂರು ಭಾಷೆಗಳನ್ನು ತಿಳಿಯಲು ಆಸಕ್ತಿ ಹುಟ್ಟಿಸುತ್ತದೆ ಎಂಬುದು ಶಿಕ್ಷಣತಜ್ಞರ ಅಭಿಮತ.

ಚಿಂತನೆಗಳ ವಿಶಿಷ್ಟ ಲಕ್ಷಣದಿಂದಾಗಿ ದಾರ್ಶನಿಕ ಗ್ರಂಥಗಳ ಭಾಷಾಂತರ ಹೆಚ್ಚು ತಾಂತ್ರಿಕವೆನಿಸಿಕೊಂಡಿದೆ. ಆಧುನಿಕ ದಾರ್ಶನಿಕರು ತತ್ತ್ವಶಾಸ್ತ್ರವು ವಿಶಿಷ್ಟ ರೀತಿಯಲ್ಲಿ ಭಾಷಾಶಾಸ್ತ್ರಕ್ಕೆ ಸಂಬಂಧಪಟ್ಟಿದೆ ಎಂದಿದ್ದಾರೆ. ತತ್ತ್ವಶಾಸ್ತ್ರಜ್ಞರು ತಮ್ಮ ಚಿಂತನೆಗಳ ಸಂಬಂಧದಲ್ಲಿ ಭಾಷೆಗೆ ವಿಶೇಷ ಸ್ಥಾನವನ್ನು ಕಲ್ಪಿಸುವುದರಿಂದ ತತ್ತ್ವಶಾಸ್ತ್ರದ ಭಾಷಾಂತರ ಅಸಾಮಾನ್ಯ ಸಮಸ್ಯೆಗಳನ್ನು ಎದುರಿಸುತ್ತದೆ. ಒಂದು ನಿರ್ದಿಷ್ಟ ಸಿದ್ಧಾಂತವನ್ನು ಭಾಷಾಂತರಿಸುವಾಗ ಆ ಸಿದ್ಧಾಂತವು ಪ್ರತಿಪಾದಿಸುವ ವಿಷಯಕ್ಕೆ, ವಿಷಯದ ವರ್ಣನೆ ಹೇಗೆ ಹೊಂದಿಕೊಳ್ಳುತ್ತದೆ ಮತ್ತು ತತ್ತ್ವಜ್ಞಾನಿಯ ತರ್ಕವಲ್ಲಿ ಆ ವಿಷಯದ ಸ್ಥಾನವೇನು ಎಂಬುದಕ್ಕೆ ಅನುವಾದಕ ಪೂರ್ಣ ಗಮನವನ್ನು ಕೊಡಬೇಕು. ತತ್ತ್ವಶಾಸ್ತ್ರದ ಅಮೂರ್ತ ಭಾವನೆಗಳನ್ನು ಹಿಡಿದು ನಿಲ್ಲಿಸುವುದರಲ್ಲಿ ಭಾಷಾಂತರಕಾರನ ಸಮಸ್ಯೆ ಕಠಿಣವೆನಿಸಿದರೂ, ಭಾಷಾಂತರಕಲೆಯ ಉಪಾಸಕನಿಗೆ ಈ ಕ್ರಿಯೆ ನೀಡುವ ಆಸಕ್ತಿ ಗಮನಾರ್ಹವಾದದ್ದು.[20]

ಕಾವ್ಯದಲ್ಲಿ, ವಿಶೇಷವಾಗಿ ಭಾವಗೀತೆಗಳಲ್ಲಿ, ಕಂಡುಬರುವ ಸಾಹಿತ್ಯಿಕ ಕಲೆಯ (*literary art*) ವೈವಿಧ್ಯದಿಂದ ಕಾವ್ಯ ಭಾಷಾಂತರದ ಸಮಸ್ಯೆಗಳು ಉದ್ಭವಿಸುತ್ತವೆ. ಭಾವಗೀತೆಗಳಲ್ಲಿನ ಕಲ್ಪನೆಗಳನ್ನು ಗ್ರಹಿಸಿ ಭಾಷಾಂತರಿಸಲು ಅನುವಾದಕನಿಗೆ ಕಾವ್ಯದೃಷ್ಟಿ ಅಗತ್ಯ. ಕಾವ್ಯದ ಉದ್ದೇಶ ರಸಾಭಿಜ್ಞತೆ, ರಂಜನೆ.

---

20. Furley, D. J.: "Translation from Greek Philosophy," in *Aspects of Translation*, p. 64.

ಕಾವ್ಯವನ್ನು ಭಾಷಾಂತರಿಸುವಾಗ ಭಾಷೆ, ವಸ್ತು ಮತ್ತು ಕಾವ್ಯದಲ್ಲಿನ ಕಲಾವೈಶಿಷ್ಟ್ಯ —ಇವುಗಳನ್ನು ಗಮನಿಸಬೇಕು. ಮೂಲಕಾವ್ಯವನ್ನು ಅದರ ಕಾವ್ಯಲಕ್ಷಣಗಳಿಗೆ ಅನುಗುಣವಾಗಿ ಪ್ರತಿರೂಪಿಸಲು ಸಾಧ್ಯವೆ ಎಂಬ ತಾಂತ್ರಿಕ ಪ್ರಶ್ನೆ ಕಾವ್ಯ ಭಾಷಾಂತರಕಾರನದು ; ಕವಿಯದು ಸ್ವಂತ ಸೃಷ್ಟಿಯಾಗಿರುತ್ತದೆ. ಇಂಥ ಕಾವ್ಯಾನುಭವದಲ್ಲಿ ಚಿಂತನೆಗೆ ಅರ್ಥ ಹಾಗೂ ರೂಪ ಇವೆರಡೂ ಪ್ರತ್ಯೇಕವಾಗಿರದೆ ಒಟ್ಟಿಗೆ ಕ್ರಿಯಾಶೀಲವಾಗುತ್ತವೆ. ಪ್ರತಿಧ್ವನಿತವಾದಂತೆ ಒಂದೇ ಚಿಂತನೆಗೆ ಎರಡು ಅಭಿವ್ಯಕ್ತಿಗಳಿರುತ್ತವೆ. ಹೀಗಿರುವಲ್ಲಿ ಕವಿಯ ಭಾವನೆಗಳನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಿಲ್ಲ. ಭಾಷಾಂತರಕಾರ ಕಾವ್ಯದ ಒಂದು ಶಬ್ದವನ್ನು ಬದಲಾಯಿಸಲು ಹೋದರೂ ಅದರ ಅರ್ಥವನ್ನು ಬದಲಾಯಿಸಿದಂತಾಗುತ್ತದೆ. ಪದಕ್ಕೆ ಪ್ರತಿಯಾಗಿ ಮತ್ತೊಂದು ಪದವನ್ನು ಉಪಯೋಗಿಸಲು ಅವನಿಗೆ ಸಾಧ್ಯವಿಲ್ಲ. ಮೂಲಪದ್ಯದ ಭಾವನೆಗಳನ್ನು ಪ್ರತಿಬಿಂಬಿಸುವ ಶಬ್ದಗಳನ್ನು ಬದಲಾಯಿಸದೆ ಕಾವ್ಯ ಭಾಷಾಂತರವನ್ನು ಮಾಡಿರುವುದಕ್ಕೆ ಬಿ. ಎಂ. ಶ್ರೀ ಅವರ ಒಂದು ಪದ್ಯವನ್ನೂ ನಿದರ್ಶಿಸಬಹುದು. ಕಾರ್ಡಿನಲ್ ನ್ಯೂಮನ್ ತಾನಿದ್ದ ಹಡಗು ನಡುಸಮುದ್ರದಲ್ಲಿ ಚಂಡಮಾರುತಕ್ಕೆ ಸಿಕ್ಕಿದ್ದಾಗ ಕಟ್ಟಿದ ಕವನ *Lead Kindly Light—*

Lead Kindly Light, amid the encircling gloom
  Lead thou me on !
The night is dark, and I am far from home—
  Lead thou me on !
Keep thou my feet ; I do not ask to see
The distant scene,— one step enough for me.

ಬಿ. ಎಂ. ಶ್ರೀ ಅವರ ಅನುವಾದ—

ಕರುಣಾಳು ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ
  ಕೈಹಿಡಿದು ನಡೆಸೆನ್ನನು,
ಇರುಳು ಕತ್ತಲೆಯ ಗವಿ ; ಮನೆ ದೂರ, ಕನಿಕರಿಸಿ
  ಕೈಹಿಡಿದು ನಡೆಸೆನ್ನನು.
ಹೇಳಿ ನನ್ನಡಿಯಿಡಿಸು ; ಬಲುದೂರ ನೋಟವನು
  ಕೇಳೆನೊಡೆಯನೆ—ಸಾಕು, ನನಗೊಂದು ಹೆಜ್ಜೆ.[21]

ಅನುವಾದದಲ್ಲಿ ಶ್ರೀ ಅವರು ಮೂಲ ಪದ್ಯಕ್ಕೆ ಯಾವ ಚ್ಯುತಿಯನ್ನೂ ತಂದಿಲ್ಲ. ಕನ್ನಡಕ್ಕೆ ಅದನ್ನು ಇಳಿಸಿಕೊಳ್ಳುವಾಗ ಭಾಷೆಯಲ್ಲಿ ಜಾಯಮಾನಕ್ಕೆ ತಕ್ಕಂತೆ 'ಬಾ'

---

21 "ಶ್ರೀ": ಇಂಗ್ಲಿಷ್ ಗೀತೆಗಳು", ಪು. 97.

'ಕನಿಕರಿಸಿ' 'ಹೇಳಿ' 'ಒಡೆಯನೆ'—ಈ ಶಬ್ದಗಳನ್ನು ಮಾತ್ರ ಹೆಚ್ಚಿಗೆ ಸೇರಿಸಿದ್ದಾರೆ. ಇಲ್ಲಿ Kindly Light ವ್ಯಕ್ತೀಕೃತವಾಗಿದೆ : ಭಗವಂತನೇ Kindly Light,—ಬಿ. ಎಂ. ಶ್ರೀ ಅವರ 'ಕರುಣಾಳು ಬೆಳಕು'.

ಸಾಮಾನ್ಯವಾಗಿ ಎರಡು ಭಾಷೆಗಳು ರಚನೆಯಲ್ಲಿ ಭಿನ್ನವಾಗಿರುವುದರಿಂದ, ಭಾಷಾಂತರದಲ್ಲಿ ಕೃತಿ ಹೊಸರೂಪ ತಾಳುವುದಲ್ಲದೆ ವಿಸ್ತಾರಗೊಳ್ಳಲೂಬಹುದು. ಕವನವನ್ನು ಹೊಸರೂಪಕ್ಕೆ ತರಲು ಸುಲಭ ಸಾಧನ ಭಾವಾನುವಾದ :

ಮೂಲ ಪದ್ಯ :

ಅರಸುಗಳಿಗಿದು ವೀರ ದ್ವಿಜರಿಗೆ
ಪರಮ ವೇದದ ಸಾರ ಯೋಗೀ
ಶ್ವರರ ತತ್ತ್ವ ವಿಚಾರ ಮಂತ್ರಿ ಜನಕ್ಕೆ ಬುದ್ಧಿಗುಣ ।
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕ್ಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ ॥

—ಉದಾಹರಣೆಗಾಗಿ ಈ ಪದ್ಯದ ವಿಸ್ತಾರ ಹಾಗೂ ಪದಶಃ ಭಾಷಾಂತರಗಳನ್ನು ನೀಡಿದ್ದೇನೆ:

(ಅ) ವಿಸ್ತಾರ ರೂಪದ ಅನುವಾದ—

For kings the story of valiant knights this epic is ;
For Brāhmans the *vedās* supreme ; for saints
A work of philosophy ; for ministers wisdom rich and lofty ;
For the love-lorn it is romance high ;
For the learn'd the figures of speech ;
For poetry it is the epic of epics : thus
Intending wrote Kumāravyāsa this *Bhārata*.

(ಆ) ಪದಶಃ ಅನುವಾದ—

Valour for kings this epic is ; for Brāhmans
The essence of *Vedas* supreme, for sages
Philosophy, wisdom for ministers,
Romance for the love-lorn, figures of speech
For the learned, master-piece for epics :
So intent wrote Kumāravyāsa this *Bhārata*.

ಕಾವ್ಯದ ಭಾಷಾಂತರದ ಬಗ್ಗೆ ಭಿನ್ನಾಭಿಪ್ರಾಯಗಳಿವೆ: ಗದ್ಯವನ್ನು ಗದ್ಯದಲ್ಲಿ ಭಾಷಾಂತರ

ವಾಗಬೇಕು, ಪದ್ಯವು ಪದ್ಯರೂಪದಲ್ಲಿ ಅನುವಾದಗೊಳ್ಳಬೇಕು ಎಂಬುದು ಪೋಸ್ಟ್ ಗೇಟ್ ಎಂಬಾತನ ವಾದ. ಮಾಥ್ಯೂ ಆರ್ನಾಲ್ಡ್, ಕಾವ್ಯವನ್ನು ಗದ್ಯದಲ್ಲಿ ಅನುವಾದಿಸಿದರೂ ಅದು ಕಾವ್ಯದ ಕಂಪನ್ನು ಉಳಿಸಿಕೊಳ್ಳಬಹುದು ಎಂದಿದ್ದಾನೆ. ಲಾರ್ಡ್ ಉಡ್ ಹೌಸ್ ಲೀ ಎಂಬಾತನ ಪ್ರಕಾರ ಭಾವಗೀತೆಯ ಗದ್ಯಾನುವಾದಕ್ಕೆ ಕೈಹಾಕಬಾರದು ಮತ್ತು ಕವಿ ಎನಿಸಿಕೊಂಡವನೇ ಕಾವ್ಯ ಭಾಷಾಂತರವನ್ನು ಕೈಕೊಳ್ಳಬೇಕು. ರೋಮನ್ ಕವಿ ವರ್ಜಿಲನ 'ಇನಿಯಡ್' (Aenied) ಕಾವ್ಯದ 4ನೇ ಕಾಂಡವನ್ನು ಭಾಷಾಂತರಿಸಿದ ಸರ್ ಜಾನ್ ಡೆನ್‌ಹ್ಯಾಮ್ ಈ ರೀತಿ ಹೇಳಿದ್ದಾನೆ: "ಕಾವ್ಯ ಅತಿಸೂಕ್ಷ್ಮ ಸತ್ತ್ವದಿಂದ ಕೂಡಿರುವುದರಿಂದ, ಅದನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಇಳಿಸುವಾಗ ಆ ಸತ್ವವೆಲ್ಲಾ ಇಮರಿ ಹೋಗುವುದು. ಈ ಪರಿವರ್ತನೆಯ ಕ್ರಿಯೆಯಲ್ಲಿ ಹೊಸ ಸತ ವನ್ನು ಸೇರಿಸದೆಹೋದರೆ ಪರಿವರ್ತನ ರೂಪದಲ್ಲಿ ಕಾವ್ಯದ ಯಾವ ಅಂಶವೂ ಉಳಿಯದೆ ಕೇವಲ ಗಸಿ ಮಾತ್ರ ಉಳಿದುಕೊಳ್ಳುತ್ತದೆ."[22]

ಅಲೆನ್ ಮಾಂಡೆಲ್ ಬೌಮ್ (Allan Mandel Baum) ಅವರ ಇತ್ತೀಚಿನ ಕಾವ್ಯ ಭಾಷಾಂತರದ ಬಗ್ಗೆ ಟೈಂಸ್ ಪತ್ರಿಕೆಯ ಸಾಹಿತ್ಯ ಪುರವಣಿಯಲ್ಲಿನ ಮಾತುಗಳಿವು: "ಪ್ರಾಚೀನ ಕಾವ್ಯಗಳ ಭಾಷಾಂತರಗಳು ಇತ್ತೀಚೆಗೆ ಬರಡು ಬರಡಾಗಿ ಬರುತ್ತಿವೆ. ಕವಿಯಂತೆ ಹತ್ತು ಸಾಲುಗಳನ್ನು ಬರೆಯಲಾಗದವನು ಹಾಗೂ ಭಾಷಾಂತರಿಸಬೇಕಾದ ಕವಿಯ ಪದ್ಯದ ಒಂದು ಸಾಲನ್ನು ಸಹ ಅರ್ಥಮಾಡಿಕೊಳ್ಳಲು ಸಾಮರ್ಥ್ಯವಿಲ್ಲದವನು ಕಾವ್ಯ ಭಾಷಾಂತರಕ್ಕೆ ಕೈಹಾಕಬಾರದು. ವರ್ಜಿಲ್ ಕವಿಯ ಇನಿಯಡ್ ಕಾವ್ಯವನ್ನು ಪದ್ಯದಲ್ಲಿ ಭಾಷಾಂತರಿಸುವುದೆಂದರೆ ಭಾಷಾಂತರಕಾರ ಡ್ರೈಡನ್ ಕವಿಗೆ ತಾನೇ ಹೋಲಿಸಿಕೊಂಡು ಅವನ ಕಾವ್ಯ ಭಾಷಾಂತರಕ್ಕೆ ಸವಾಲುಹಾಕಿದಂತೆ. ವರ್ಜಿಲ್ ಕವಿಯ ಇನಿಯಡ್ ಕಾವ್ಯವನ್ನು ಅನುವಾದಿಸಿರುವ ಅಲೆನ್ ಮಾಂಡೆಲ್ ಬೌಮ್ ಅವರು ತಾವು ತಾಂತ್ರಿಕವಾಗಿ ಪುನರ್ರೂಪಿಸಲಾಗದ ಶೈಲಿಯಿಂದ ಸರಿದಿರುವುದು ಅವರ ತರ್ಜುಮೆಯಲ್ಲಿ ಸ್ಪಷ್ಟವಾಗಿ ಕಾಣುತ್ತವೆ. ಅಂತಿಮವಾಗಿ ಅವರ ಭಾಷಾಂತರದ ಪ್ರಯತ್ನವನ್ನು ನಾಶ ಮಾಡಿರುವುದು ಅವರ ಅಯಾಂಬಿಕ್ (*iambic*) ಪಾದಗಳ ನೀರಸತೆ."[23]

ಭಾಷಾಂತರ, ಕಾವ್ಯದ ಬಗ್ಗೆ ಯಾವ ಪರಿಣಾಮವನ್ನೂ ಉಂಟುಮಾಡಲಾರದೆಂಬುದು ಡಾ. ಜಾನ್‌ಸನ್‌ನ ಅಭಿಪ್ರಾಯ. ಕಾವ್ಯ ಭಾಷಾಂತರದ ಬಗ್ಗೆ ಅವನು ಹೇಳಿರುವ ಮಾತುಗಳಿವು: "ನೀವು ವಿಜ್ಞಾನ ಗ್ರಂಥಗಳನ್ನು ಯಥಾವತ್ತಾಗಿ ಭಾಷಾಂತರಿಸಬಹುದು; ಇತಿಹಾಸ ಗ್ರಂಥಗಳಿಗೆ ಉಪನ್ಯಾಸದ ಬಣ್ಣವಿಲ್ಲದಿದ್ದರೆ ಅವುಗಳನ್ನೂ ನೀವು ತರ್ಜುಮೆ ಮಾಡ

---

22. Dryden, John : 'The Preface to the Translation of Ovid's Epistles' in *English Prose of the XVII Century*, p. 759.

23. Book Review: "Not a Patch of Dryden," in *Times Literary Supplement*, (London. dated May 12, 1972), p. 550.

ಬಹುದು. ಆದರೆ, ವಾಸ್ತವಿಕವಾಗಿ, ಕಾವ್ಯವನ್ನು ಭಾಷಾಂತರಿಸಲು ಸಾಧ್ಯವಿಲ್ಲ. ಏಕೆಂದರೆ, ಕಾವ್ಯವನ್ನು ಸೃಷ್ಟಿಸುವ ಕವಿಗಳೇ ಭಾಷೆಯನ್ನು ರಕ್ಷಿಸತಕ್ಕವರು; ಕಾವ್ಯದಲ್ಲಿರುವುದನ್ನೆಲ್ಲಾ ನಾವು ಭಾಷಾಂತರದಲ್ಲಿ ಪಡೆಯುವ ವಾದರೆ ಯಾವ ಭಾಷೆಯನ್ನೇ ಆಗಲಿ ಕಲಿಯುವ ಅವಕಾಶ ನಮಗಿಲ್ಲದೆ ಹೋಗುವುದು. ಕಾವ್ಯದ ಸೊಗಸನ್ನು ಅದು ಯಾವ ಭಾಷೆಯಲ್ಲಿ ರಚಿತವಾಗಿದೆಯೋ ಆ ಭಾಷೆಯಲ್ಲಿ ಹೊರತು ಮತ್ತೊಂದು ಭಾಷೆಯಲ್ಲಿ ರಕ್ಷಿಸಲು ಸಾಧ್ಯವಿಲ್ಲದ ಕಾರಣ ಆ ಕಾವ್ಯದ ಮೂಲಕವೇ ನಾವು ಅದರ ಭಾಷೆಯನ್ನು ಕಲಿಯುತ್ತೇವೆ.”[24]

4

ಸಾಹಿತ್ಯದ ವಿವಿಧ ಪ್ರಕಾರಗಳ ಇತಿಹಾಸದಂತೆ ಭಾಷಾಂತರಕ್ಕೂ ದೀರ್ಘ ಇತಿಹಾಸವಿದೆ. ಭಾಷಾಂತರ ತಾನು ನಡೆದುಬಂದ ದಾರಿಯಲ್ಲಿ ತನ್ನ ಪ್ರಭಾವವನ್ನು ವಿಶ್ವದ ವಿವಿಧ ಜನಾಂಗಗಳ ಮೇಲೆ ಬೀರಿದೆ: ಭಾಷಾಂತರಿತ ಗ್ರಂಥಗಳಿಂದ ಜ್ಞಾನ ಪ್ರಸಾರವಾಗಿದೆ, ಸಂಸ್ಕೃತಿ ಹರಡಿದೆ, ವಿಜ್ಞಾನ ಪ್ರಗತಿ ಹೊಂದಿದೆ, ವಿಚಾರವಿನಿಮಯಕ್ಕೆ ಅವಕಾಶವಾಗಿದೆ. ಕ್ರಿಸ್ತಪೂರ್ವಕಾಲದ ರೋಮನ್ ಕವಿಗಳಾದ ನೇವಿಯಸ್ (Naevius) ಮತ್ತು ಇನ್ನಿಯಸ್ (Ennius: ಕ್ರಿ. ಪೂ. 239–169) ಇವರು ಭಾಷಾಂತರಿಸಿದ ಗ್ರೀಕ್ ನಾಟಕಗಳ ಪ್ರಭಾವದಿಂದ, ವಿಶಿಷ್ಟವಾಗಿ ಯೂರಿಪಿಡೀಸನ ನಾಟಕಗಳ ಪ್ರಭಾವದಿಂದ, ರೋಮನ್ ಚಕ್ರಾಧಿಪತ್ಯದಲ್ಲಿ ಷಡ್ಗಣವೃತ್ತಗಳ (Hexametre) ರಚನೆ ರೂಢಿಗೆ ಬಂದಿತು. ಕ್ರಿ.ಶ. ಎಂಟು ಮತ್ತು ಒಂಬತ್ತನೆಯ ಶತಮಾನಗಳಲ್ಲಿ ಅರಬ್ಬಿ ಸಾಹಿತ್ಯದ ಅಭಿವೃದ್ಧಿಗೆ ಭಾಷಾಂತರ ನೆರವಾಯಿತು. ಅರೇಬಿಯಾದಲ್ಲಿ ಪಾಚೀನ ಗ್ರೀಕ್ ಗ್ರಂಥಗಳು ಭಾಷಾಂತರಗೊಂಡವು. ಗ್ರೀಕ್ ದಾರ್ಶನಿಕರಾದ ಅರಿಸ್ಟಾಟಲ್, ಪ್ಲೇಟೋ, ಗ್ರೀಕ್ ವೈದ್ಯರಾದ ಗಲೆನ್ ಮತ್ತು ಹಿಪೊಕ್ರಟೀಸ್ ಮೊದಲಾದವರ ಗ್ರಂಥಗಳು ಅನುವಾದಗೊಂಡು ಅರಬ್ಬರ ಜ್ಞಾನಭಂಡಾರ ಹೆಚ್ಚಿತು. ಚಿಂತನೆ ನವರೂಪ ತಾಳಿತು. ಬಾಗ್ದಾದ್ ನಗರ ಭಾಷಾಂತರಕಾರರ ಕೇಂದ್ರವಾಗಿ ಪರಿಣಮಿಸಿದ ಕಾರಣ ಅರಬ್ಬಿ ಪಂಡಿತರು ಅದರಿಂದ ಪ್ರಯೋಜನ ಹೊಂದಿದರು. ಮೂರು ಶತಮಾನಗಳ ತರುವಾಯ ಭಾಷಾಂತರ ಕೇಂದ್ರ ಬಾಗ್ದಾದ್ ನಗರದಿಂದ ಸ್ಪೈನ್ ದೇಶದ ಟೊಲೆಡೊ ಪಟ್ಟಣಕ್ಕೆ ವರ್ಗಾವಣೆಯಾಗಿ ಅಲ್ಲಿನ ಭಾಷಾಂತರ ಪಂಡಿತರು ಅರಬ್ಬಿ ಗ್ರಂಥಗಳನ್ನು ಲ್ಯಾಟಿನ್ ಭಾಷೆಗೆ ತರ್ಜುಮೆಮಾಡಿದರು. ಕ್ರಿ. ಶ. 1141–3ರ ನಡುವೆ ರಿಟನೆಸ್ ಎಂಬಾತ ಖುರಾನ್ ಪವಿತ್ರ ಗ್ರಂಥವನ್ನು ಮೊದಲಿಗೆ ಭಾಷಾಂತರಿಸಿದ. ಅರಬ್ಬಿ ಸಾಹಿತ್ಯ, ಗಣಿತ, ವಿಜ್ಞಾನ ಮೊದಲಾದವು ಆ ನಗರದಲ್ಲಿ ಭಾಷಾಂತರಗೊಂಡವು. ಇದೇ ಕಾಲದಲ್ಲಿ ಗ್ರೀಕ್ ಭಾಷೆಯಲ್ಲಿ ಐತಿಹ್ಯರೂಪದಲ್ಲಿದ್ದ ಬುದ್ಧನ ಕಥೆ ಧಾರ್ಮಿಕ ಕಥೆಯಂತೆ ‘ಬರ್ಲಾಂ ಮತ್ತು ಜೋಸೆಫ್’ ಎಂಬ ಹೆಸರಿನಲ್ಲಿ ರೂಪಾಂತರಗೊಂಡು ಯೂರೋಪಿನಲ್ಲಿ ಪ್ರಚಾರವಾಯಿತು. ಬರ್ಲಾಂ ಮತ್ತು

---

24. Boswell: *Life of Johnson*, (April 11, 1776).

ಜೋಸೆಫ್ ಇವರಿಬ್ಬರನ್ನು ಕ್ರೈಸ್ತಮತ ಸಂತರನ್ನಾಗಿ ಸ್ವೀಕರಿಸುವಷ್ಟರ ಮಟ್ಟಿಗೆ ಅವರ ಸಂಬಂಧವಾದ ಭಾಷಾಂತರಿತ ಕೃತಿಗಳು ಜನರ ಮೇಲೆ ಪ್ರಭಾವ ಬೀರಿದವು. 1584ರಲ್ಲಿ ಬರೋನಿಯಂ ಎಂಬಾತ ಈ ಸಂತರನ್ನು ರೋಮನ್ ಹುತಾತ್ಮರ ಚರಿತ್ರೆಯಲ್ಲಿ ಸೇರಿಸಿದ. ಭಾಷಾಂತರುಗಳು ಮಾಡಿದ ಪರಿಣಾಮಗಳಲ್ಲಿ ಈ ಪ್ರಸಂಗ ಅತ್ಯಂತ ವಿಚಿತ್ರವೆನಿಸಿಕೊಂಡಿದೆ.[25]

ಜರ್ಮನಿಯಲ್ಲಿ ಮಾರ್ಟಿನ್ ಲೂಥರ್ (1483–1546) ರೂಪಾಂತರಿಸಿದ ಬೈಬಲ್ ಗ್ರಂಥದ ಪ್ರಭಾವದಿಂದ ಜರ್ಮನ್ ಸಾಹಿತ್ಯಿಕ ಭಾಷೆ ನಿರ್ದಿಷ್ಟ ರೂಪವನ್ನು ತಾಳಿತು. 16ನೆಯ ಶತಮಾನದಲ್ಲಿ ಫ್ರಾನ್ಸ್ ದೇಶದಲ್ಲಿ ಭಾಷಾಂತರ ಚಕ್ರವರ್ತಿ ಎನಿಸಿಕೊಂಡಿದ್ದ ಜಾಕ್ ಅವ್ಯೋಟ್ 1559ರಲ್ಲಿ ಭಾಷಾಂತರಿಸಿದ ಪ್ಲೂಟಾರ್ಕನ 'ರೋಮನರ ಜೀವನ ಚಿತ್ರಗಳು' ಇಂಗ್ಲೆಂಡಿನ ಭಾಷಾಂತರಕಾರ ಸರ್ ಥಾಮಸ್ ನಾರ್ಥ್‌ನ (1535 1601) ಇಂಗ್ಲಿಷ್ ಭಾಷಾಂತರಕ್ಕೆ ನೆರವಾಯಿತು. ಷೇಕ್ಸ್‌ಪಿಯರ್ ಕವಿ ಈ ಗ್ರಂಥದಿಂದ ಪ್ರಭಾವಿತನಾಗಿ ತನ್ನ ರೋಮನ್ ನಾಟಕಗಳಿಗೆ ವಸ್ತುವನ್ನು ಅದರಿಂದ ಪಡೆದುಕೊಂಡಿದ್ದಾನೆ.

ವಿಶ್ವದ ಎಲ್ಲೆಡೆಯೂ ಭಾಷಾಂತರದಿಂದ ವಿಪುಲ ಸಾಹಿತ್ಯ ದೊರಕಿ, ಮಾನವ ಚಿಂತನೆಯ ಭಂಡಾರ ವಿವಿಧ ರಾಷ್ಟ್ರಗಳ ಹೊಸಲನ್ನು ಮುಟ್ಟಿದೆ. ಭಾರತಕ್ಕೆ ಬಂದ ಚೀನಿ ಯಾತ್ರಿಕರು ಬೌದ್ಧ ಗ್ರಂಥಗಳನ್ನು ತರ್ಜಮೆ ಮಾಡಿ ಚೀನಾದೇಶದ ಧಾರ್ಮಿಕ ಜೀವನವನ್ನೇ ಮಾರ್ಪಡಿಸಿದರು. 19ನೆಯ ಶತಮಾನದಿಂದೀಚೆಗೆ ಭಾರತೀಯ ಸಾಹಿತ್ಯ ವಿದೇಶಿ ಗ್ರಂಥಗಳ ಭಾಷಾಂತರದಿಂದ ಶ್ರೀಮಂತಗೊಂಡಿದೆ. ಇಂಗ್ಲೆಂಡಿನ ಮತ್ತು ಜರ್ಮನಿಯ ಪಂಡಿತರು ಸಂಸ್ಕೃತ ಗ್ರಂಥಗಳನ್ನು ಭಾಷಾಂತರಿಸಿ ಭಾರತೀಯ ಚಿಂತನೆಯಿಂದ ಪ್ರಭಾವಿತರಾದರು. ವೇದಗಳ ಮಹತ್ತ್ವ, ಧಾರ್ಮಿಕ ಗ್ರಂಥಗಳ ಬೋಧನೆ, ಭಾರತೀಯ ಸಾಹಿತ್ಯದ ಘನತೆ ಇವು ಪಾಶ್ಚಾತ್ಯರ ಹಾಗೂ ಪ್ರಾಚ್ಯರ ಮೇಲೆ ಪ್ರಭಾವಬೀರಿವೆ.

ರಷ್ಯಾದ ಪುಷ್‌ಕಿನ್, ಟಾಲ್‌ಸ್ಟಾಯ್, ನಾಟಕಕಾರ ನಿಕೊಲಾಯ್ ಲಿಸ್ಕೋವ್ ಮೊದಲಾದವರ ಕೃತಿಗಳು ಭಾಷಾಂತರದ ಮೂಲಕ ಇತರ ದೇಶಗಳನ್ನು ಮುಟ್ಟಿದವು. ಧಾರ್ಮಿಕ ಹಿನ್ನೆಲೆಯಲ್ಲಿನ ಟಾಲ್‌ಸ್ಟಾಯ್ ಕಥೆಗಳನ್ನು ಓದಿ ಪ್ರಭಾವಿತರಾಗದ ಜನರೇ ಇಲ್ಲ. ಫ್ರೆಂಚ್ ಸಾಹಿತ್ಯದಿಂದ ಇಂಗ್ಲೆಂಡಿನ ಅನೇಕ ಸಾಹಿತಿಗಳು ಪ್ರಭಾವಿತರಾದರು. ಸ್ಮಾಲೆಟ್ ಮತ್ತು ಫೀಲ್ಡಿಂಗ್, ಫ್ರೆಂಚ್ ಸಾಹಿತಿಗಳಾದ ಲಿ ಸೇಜ್ (Le Sagé) ಮತ್ತು ದಿದೆರೊ (Diderot) ಇವರ ಗ್ರಂಥಗಳಿಂದ ಪ್ರಭಾವಿತರಾಗಿ ಅವರನ್ನು ಅನುಕರಿಸಿದರು. ಅಬೆ ಪ್ರೊವೊ (1697–1763) ಇಂಗ್ಲೆಂಡಿನ ಕಾದಂಬರಿಗಳಲ್ಲಿ ಕೆಲವನ್ನು ಫ್ರೆಂಚ್ ಭಾಷೆಗೆ ಭಾಷಾಂತರಿಸಿದ. ರಿಚರ್ಡ್‌ಸನ್ (1689–1761) ಇಂಗ್ಲಿಷ್ ಸಾಹಿತ್ಯದಲ್ಲೇ ಅಲ್ಲದೆ ಫ್ರೆಂಚ್ ಸಾಹಿತ್ಯದಲ್ಲಿ ಸಹ ಗಣನೀಯ ಸ್ಥಾನಗಳಿಸಿದ.

---

25. Savory, Theodore: *The Art of Translation*, p. 39.

ಇಂಗ್ಲೆಂಡಿನ ಹೊರೇಸ್ ವಾಲ್‌ಪೋಲ್ ತನ್ನ ಫ್ರೆಂಚ್ ಸ್ನೇಹಿತೆ ಮದಾಮ್ ದೆಫಾನ್ (1697–1780) ಎಂಬಾಕೆಗೆ ಬರೆದ ವಿಚಾರಪೂರ್ಣ ಪತ್ರಗಳು ದಿವ್ಯಚಿಂತನೆಗಳಿಂದ ಕೂಡಿ ಫ್ರೆಂಚರ ಮೇಲೆ ಪ್ರಭಾವ ಬೀರಿವೆ. 19ನೆಯ ಶತಮಾನದಲ್ಲಿ ಫ್ರೆಂಚ್ ಸಾಹಿತಿ ಲೇ ಟರ್ನರ್ ಷೇಕ್ಸ್‌ಪಿಯರನ ನಾಟಕಗಳನ್ನು ಫ್ರೆಂಚ್ ಭಾಷೆಗೆ ಅನುವಾದಿಸಿದ ಮೇಲೆ ಫ್ರೆಂಚರು ಷೇಕ್ಸ್‌ಪಿಯರನನ್ನು ದೇವತಾಸ್ಥಾನಕ್ಕೇರಿಸಿದರು.[26]

19ನೆಯ ಶತಮಾನದ ಉತ್ತರಾರ್ಧದಿಂದ ಪ್ರಾರಂಭವಾದ ಕನ್ನಡ ಸಾಹಿತ್ಯದ ನವೋದಯ ಚಳುವಳಿಯಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಹಾಗೂ ಇಂಗ್ಲಿಷ್ ಗ್ರಂಥಗಳ ತರ್ಜುಮೆಗಳಿಂದ ಕನ್ನಡ ಸಾಹಿತ್ಯ ಹೊಸರೂಪತಾಳಿತು. ಭಾಷಾಂತರ, ಕೃತಿರಚನೆಯನ್ನು ಸಂಪ್ರದಾಯಬದ್ಧತೆಯಿಂದ ನವೀನ ಮಾರ್ಗಕ್ಕೆ ಸಾಗಿಸಿತು.[27] "ಇತರ ಭಾಷೆಗಳಲ್ಲಿನ ಗ್ರಂಥಗಳನ್ನು ಭಾಷಾಂತರಿಸಲು ತಕ್ಕ ಉತ್ತೇಜನಕೊಟ್ಟು ಭಾಷಾಭಿವೃದ್ಧಿ ಮಾಡಿಸಿ" ಎಂದು 'ಹಿತಬೋಧಿನಿ' ಪತ್ರಿಕೆ ಸೆಪ್ಟೆಂಬರ್ 1886ರಲ್ಲಿ ಚಾಮರಾಜ ಒಡೆಯರ ಅರಮನೆಯ ಅಧಿಕಾರಿಗಳಿಗೆ ಕರೆಕೊಟ್ಟಿತು.

ಇಂಗ್ಲಿಷ್ ಗ್ರಂಥಗಳ ಭಾಷಾಂತರದ ಮೂಲಕ ಕನ್ನಡ ಕಾವ್ಯರಚನೆಯಲ್ಲಿ ವಿಶೇಷ ಮಾರ್ಪಾಟುಗಳಾಗಿ ಚಂಪೂ ಮೊದಲಾದವುಗಳ ರಚನೆ ಕಡಮೆಯಾಯಿತು; ಭಾವಗೀತೆಗಳ ರಚನೆಗೆ ಉತ್ತೇಜನ ದೊರಕಿತು. ಹಟ್ಟಂಗಡಿ ನಾರಾಯಣರಾಯರು ಇಂಗ್ಲಿಷಿನಿಂದ ಕನ್ನಡಕ್ಕೆ ಕವಿತೆಗಳನ್ನು ಅನುವಾದಿಸಿದವರಲ್ಲಿ ಮೊದಲಿಗರು.[28] ಬಿ. ಎಂ. ಶ್ರೀ ಅವರ 'ಇಂಗ್ಲಿಷ್ ಗೀತಗಳು' (1921–26) ಹೊಸಗನ್ನಡ ಕವಿತೆಯ ಹೆದ್ದಾರಿಯನ್ನು ತೆಗೆಯಿತು.[29] ಇವು ಶ್ರೀ ಅವರು ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳಿಗೆ ಭಾಷಾಂತರ ಪಾಠ ಮಾಡುವಾಗ ಪ್ರಯೋಗಾರ್ಥವಾಗಿ ಅನುವಾದಿಸಿದ ಕೆಲವು ಇಂಗ್ಲಿಷ್ ಕವನಗಳು. ಅವರು ತಿಳಿಸಿರುವಂತೆ, "ಭಾಷಾಂತರಗಳೂ, ಅನುಕರಣಗಳೂ, ಸ್ವಂತ ಕೃತಿಗಳೂ, ಹೊಸ ಕಾವ್ಯ ಸ್ವರೂಪಗಳೂ, ಹೊಸ ಛಂದಸ್ಸುಗಳೂ, ಹೊಸ ಅಭಿಪ್ರಾಯಗಳೂ ಸಂಪ್ರದಾಯ

---

26. Emile Faguet: *A Literary History of France*. T. Fisher Unwin, Adelphi Terrace, (London, 1907), p. 9.

27. *Karnataka Through the Ages*: Ed. R. R. Diwakar, Govt. of Mysore, (Bangalore, 1968), p. 847.

28. ಅನಂತನಾರಾಯಣ, ಎಸ್: 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಪ್ರಭಾವ,' ಪ್ರಕಾಶನ: ಗಂಗಾತರಂಗ (ಮೈಸೂರು, 1962), ಪುಟ. 37.

29. ವೆಂಕಟಾಚಲಶಾಸ್ತ್ರೀ, ಟಿ.ವಿ.: 'ಬಿ. ಎಂ. ಶ್ರೀ: ವ್ಯಕ್ತಿ ಮತ್ತು ಸಾಹಿತ್ಯ', 48ನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ, ಸ್ವಾಗತ ಸಮಿತಿ, (ಮಂಡ್ಯ, 1974), ಪು. 239.

ವನ್ನು ಲಕ್ಷ್ಯಕ್ಕೆತಾರದೆ ಸ್ವಾತಂತ್ರ್ಯಪ್ರಿಯರಾದ ಗ್ರಂಥಕರ್ತರಿಂದ ದೇಶದಲ್ಲೆಲ್ಲಾ ಸುಲಭವಾದ ವ್ಯವಹಾರ ಭಾಷೆಯಲ್ಲಿ ಹರಡಿಕೊಳ್ಳುತ್ತಿವೆ.[30]

ಆಸ್ಥಾನ ಕವಿ ಕರಿಬಸಪ್ಪ ಶಾಸ್ತ್ರಿಗಳು (1843–91) ಅರಮನೆಯ ಪ್ರೋತ್ಸಾಹದಿಂದ 'ಶಾಕುಂತಲ','ವಿಕ್ರಮೋರ್ವಶೀಯ', 'ರತ್ನಾವಳಿ' ಮೊದಲಾದ ನಾಟಕಗಳನ್ನು ಕನ್ನಡಕ್ಕೆ ತಂದುದಲ್ಲದೆ ಒಥೆಲೋ ನಾಟಕವನ್ನು 'ಶೂರಸೇನ ಚರಿತ್ರೆ'ಯನ್ನಾಗಿ ಕನ್ನಡ ರಂಗ ಭೂಮಿಯ ಮೇಲೆ ತಂದರು. ಶ್ರೀಕಂಠೇಶಗೌಡರು (1852–1926) ಷೇಕ್ಸ್‌ಪಿಯರನ 'ಒಥೆಲೋ' 'ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್' ಮತ್ತು 'ರೋಮಿಯೋ ಅಂಡ್ ಜೂಲಿಯೆಟ್' ನಾಟಕಗಳನ್ನು 1896ರ ಹೊತ್ತಿಗೆ ರೂಪಾಂತರಿಸಿ ಅವುಗಳಿಗೆ ಕ್ರಮವಾಗಿ 'ಪ್ರತಾಪರುದ್ರದೇವ', 'ಪ್ರಮೀಳಾರ್ಜನೀಯಂ' ಹಾಗೂ 'ರಾಮವರ್ಮ ಲೀಲಾವತಿ' ಎಂಬ ಹೆಸರುಗಳನ್ನಿಟ್ಟರು. 19ನೆಯ ಶತಮಾನದ ನಾಟಕಗಳ ಕನ್ನಡ ಭಾಷಾಂತರದ ಬಗ್ಗೆ ಡಿ. ವಿ. ಗುಂಡಪ್ಪನವರು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ; "ಶ್ರೀಕಂಠೇಶ ಗೌಡರು ಅನುಸರಿಸಿದ ಅನುವಾದ ವಿಧಾನ ಆ ಕಾಲದಲ್ಲಿ ರೂಢಿಗೆ ಬಂದದ್ದು. ಇಂಗ್ಲಿಷ್ ಹೆಸರುಗಳಿಗೆ ಪ್ರತಿಯಾಗಿ ಸಂಸ್ಕೃತದ ಅಥವಾ ಕನ್ನಡದ ಹೆಸರುಗಳನ್ನು ನೀಡುವುದು, ಕಥಾ ಸನ್ನಿವೇಶಗಳನ್ನು ಕೊಂಚ ಕೊಂಚ ಮಾರ್ಪಡಿಸಿ ಪದ್ಯಗಳನ್ನು ಸೇರಿಸುವುದು–ಈ ಮೇಲ್ಪಂಕ್ತಿಯನ್ನು ನಾನೂ ಕೊಂಚ ಮಟ್ಟಿಗೆ ಅನುಸರಿಸಿದ್ದೇನೆ....ಆಗಿನವರ ಪ್ರಯತ್ನ ಕನ್ನಡಕ್ಕೆ ಒಂದು ಹೊಸ ಜಾತಿಯ ವಸ್ತುವನ್ನೂ, ಒಂದು ಹೊಸ ಪರಿಪಾಟಿಯನ್ನೂ ತಂದುಕೊಡಬೇಕೆಂಬುದು."

ಈಗ ಒಂದು ಶತಮಾನಕ್ಕೆ ಹಿಂದೆ ಪಾಶ್ಚಾತ್ಯ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿ ದವರಿಗೆ ಸಮಾಜದ ಸಂಪ್ರದಾಯಗಳ ಒತ್ತಡದಿಂದ ಅವುಗಳನ್ನು ನೇರವಾಗಿ ಹಾಗೂ ಯಥಾವತ್ತಾಗಿ ಅನುವಾದಿಸುವುದು ಕಷ್ಟವಾಗಿತ್ತು. ಆಗ ಕನ್ನಡಕ್ಕೆ ಅನುವಾದಗೊಂಡ ಇಂಗ್ಲಿಷ್ ನಾಟಕಗಳು ಕಂದ, ವೃತ್ತಗಳಿಂದ ಕೂಡಿ ಹೊಸ ಪೋಷಾಕನ್ನೇ ಧರಿಸಿ ಕೊಂಡವು. 'ರೋಮಿಯೋ ಅಂಡ್ ಜೂಲಿಯೆಟ್' ಭಾಷಾಂತರದ ಮೂಲಕ, 'ರಾಮ ವರ್ಮ ಮತ್ತು ಲೀಲಾವತಿ' ಆದಾಗ ಇಟಲಿ ಸಮಾಜದಲ್ಲಿ ಅವರು ಪರಸ್ಪರ ರಹಸ್ಯವಾಗಿ ಭೇಟಿಮಾಡಿದಂತೆ ಭೇಟಿಮಾಡಲು ಭಾಷಾಂತರಕಾರರು ಅವರಿಗೆ ಅವಕಾಶ ಕೊಡಲಿಲ್ಲ. ಆಗಿನ ಕಾಲದವರು ಲಿಲಾವತಿಯ ಶಯನಗೃಹಕ್ಕೆ ವಯಸ್ಕನಾದ ರಾಮವರ್ಮನಿಂದ ರಾತ್ರಿಯಲ್ಲಿ ನೂಲೇಣಿಯನ್ನು ಹಾಕಿಸಲಾರದೆ ಹೋದರು.[31]

ಗ್ರೀಕ್ ರುದ್ರನಾಟಕಗಳ ಪ್ರಭಾವದಿಂದ ಬಿ. ಎಂ. ಶ್ರೀ ಅವರು (1884–1946)

---

30. ಶ್ರೀ : 'ಕನ್ನಡ ಕೈಪಿಡಿ', ಸಂ. 2, ಪು. 469.

31. ಅನಂತನಾರಾಯಣ, ಎಸ್ : 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ', ನಾಟಕ ಭಾಷಾಂತರಗಳ ಬಗ್ಗೆ ಬಿ. ಎಂ. ಶ್ರೀ, ಪು. 20.

ಈಸ್ಕಿಲಸ್‌ನ 'ಪರ್ಷಿ' (ಪಾರಸಿಕರು) ನಾಟಕವನ್ನು ಕನ್ನಡಕ್ಕೆ ನೇರ ಅನುವಾದ ಮಾಡಿದರು. ಅದು ಶಬ್ದಶಃ ಭಾಷಾಂತರವಲ್ಲ. ಸೊಫೊಕ್ಲೀಸನ 'ಎಜಾಕ್ಸ್' ರುದ್ರನಾಟಕವು ಸಹ ಅವರಿಂದ 'ಅಶ್ವತ್ಥಾಮನ್' ನಾಟಕವಾಗಿ ಅನುವಾದಗೊಂಡಿತು. 1930ರ ದಶಕದ ಹೊತ್ತಿಗೆ ಭಾಷಾಂತರಿತ ಹಾಸ್ಯನಾಟಕಗಳಿಗೆ, ಇಂಗ್ಲಿಷ್ ಮತ್ತು ಫ್ರೆಂಚ್ ಮಾದರಿಯ ಪ್ರಹಸನಗಳಿಗೆ ಬೇಡಿಕೆ ಹೆಚ್ಚಿತು. ಫ್ರೆಂಚ್ ನಾಟಕಕಾರ ಮೊಲಿಯೇರನ (Moliere) ಹಲವು ನಾಟಕಗಳು ಕನ್ನಡಕ್ಕೆ ರೂಪಾಂತರಗೊಂಡವು. ಅವುಗಳಲ್ಲಿ ಕೆಲವು 'ಆಷಾಡ ಭೂತಿ' (ಎ.ಎನ್. ಮೂರ್ತಿರಾವ್),'ಹಣಹದ್ದು' (ಪರ್ವತವಾಣಿ), 'ಗಂಡನ ಗುಮಾನಿ' (ವಿ. ಜಿ. ಕೃಷ್ಣಮೂರ್ತಿ). ಭಾಷಾಂತರ ಕನ್ನಡ ನಾಟಕಗಳಿಗೆ ಹೊಸರೂಪ ತಂದಿತು. ನಾಟಕದಲ್ಲಿ ಸಮರಸಗಳು ಒಟ್ಟಿಗೆ ಇದ್ದೇ ಇರಬೇಕೆಂಬ ನಿಯಮ ಸಡಿಲವಾಯಿತು. ರಾಜನೊಂದಿಗೆ ಬರುತ್ತಿದ್ದ ವಿದೂಷಕ ರಂಗಮಂಚದಿಂದ ಕಣ್ಮರೆಯಾದ.

ಆಧುನಿಕ ಗದ್ಯ ಸಾಹಿತ್ಯವು ಸಹ ಬಹುಮಟ್ಟಿಗೆ ಭಾಷಾಂತರಗಳ ಪ್ರಭಾವದಿಂದ ಬೆಳೆದಿದೆ. ಭಾಷಾಂತರಿತ ಕಥೆ ಕಾದಂಬರಿಗಳ ಪ್ರಭಾವದಿಂದ ಜನರ ವಾಚನಾಭಿರುಚಿ ಹೆಚ್ಚಿತು. ಕೆಂಪುನಾರಾಯಣನು ಸಂಸ್ಕೃತ 'ಮುದ್ರಾರಾಕ್ಷಸ' ನಾಟಕವನ್ನು ಹಳೆಯ ಗದ್ಯಶೈಲಿಯೊಂದಿಗೆ ತನ್ನದೇ ಹೊಸ ಗದ್ಯಶೈಲಿಯನ್ನು ಬೆರೆಸಿ 'ಮುದ್ರಾ ಮಂಜೂಷ' ವನ್ನಾಗಿ ರೂಪಾಂತರಿಸಿದನು (1823). ಬಿ. ವೆಂಕಟಾಚಾರ್ಯರು (1845–1914) ತಮ್ಮ ಭಾಷಾಂತರಗಳಿಂದ ಕನ್ನಡ ಗದ್ಯವನ್ನು ಮತ್ತಷ್ಟು ಅಂದಗೊಳಿಸಿದರು. ಅವರು ಬಂಗಾಳದ ಈಶ್ವರಚಂದ್ರ ವಿದ್ಯಾಸಾಗರರು ತಮಗೆ ಕಳುಹಿಸಿದ ಇಂಗ್ಲಿಷಿನ 'ಕಾಮಿಡಿ ಆಫ್ ಎರರ್ಸ್' ಬಂಗಾಳಿ ಅನುವಾದವನ್ನು ಕನ್ನಡಕ್ಕೆ ತರ್ಜುಮೆ ಮಾಡಿದರು. ವೆಂಕಟಾಚಾರ್ಯರ ಬಹುಪಾಲು ಕಾದಂಬರಿಗಳು ಬಂಗಾಳಿಯಿಂದಲೇ ಕನ್ನಡಕ್ಕೆ ಅನುವಾದಗೊಂಡವು. ಬಂಗಾಳದ ಬಂಕಿಮಚಂದ್ರ, ಯೋಗೀಂದ್ರನಾಥ ಚಟ್ಟೋಪಾಧ್ಯಾಯ, ಹರಿಪ್ರಸಾದ ಶಾಸ್ತ್ರಿ, ವಿದ್ಯಾಸಾಗರ ಮೊದಲಾದವರ ಕಾದಂಬರಿಗಳನ್ನು ಅವರು ಕನ್ನಡಕ್ಕೆ ಅನುವಾದಿಸಿದರು.[32] ಗಳಗನಾಥ, ಕೆರೂರು ವಾಸುದೇವಾಚಾರ್ಯ ಮೊದಲಾದವರು ಕನ್ನಡ ಜನರಿಗೆ ಆಸಕ್ತಿ ಹುಟ್ಟಿಸುವಂಥ ಕಥೆಯ ಪುಸ್ತಕಗಳನ್ನು ಮರಾಠಿಯಿಂದ ಅನುವಾದಿಸಿದರು.

ಕನ್ನಡ ನಿಶ್ಚಿತ ಭಾಷಾಂತರಗಳಿಂದ ಪ್ರಭಾವಿತವಾಗಿದೆ. ಪಾಶ್ಚಾತ್ಯ ಕಾದಂಬರಿಗಳು ಹಾಗೂ ವಿಚಾರಪೂರ್ಣ ಗ್ರಂಥಗಳು ಬಹುಸಂಖ್ಯೆಯಲ್ಲಿ ಕನ್ನಡಕ್ಕೆ ಭಾಷಾಂತರವಾಗುತ್ತಿರುವುದಲ್ಲದೆ, ಭಾರತೀಯ ಭಾಷೆಗಳ ಕಾದಂಬರಿ ಹಾಗೂ ಇತರ ಗ್ರಂಥಗಳು ಪರಸ್ಪರ ಭಾಷಾಂತರಗೊಳ್ಳುತ್ತಿವೆ. ಭಾಷಾಂತರಿತ ಗ್ರಂಥಗಳಿಂದ ವಿವಿಧ ದೇಶಗಳ ಸಾಮಾಜಿಕ,

---

32. ಮಂಜುನಾಥನ್, ಜಿ.ಜಿ : 'ಬಿ. ವೆಂಕಟಾಚಾರ್ಯ : ವ್ಯಕ್ತಿ ಮತ್ತು ಸಾಹಿತ್ಯ', 'ಇಕ್ಷು ಕಾವೇರಿ', ಪು. 250–251.

ಧಾರ್ಮಿಕ ಹಾಗೂ ರಾಜಕೀಯ ಪರಿಸ್ಥಿತಿಗಳು, ಜನಜೀವನ ಮತ್ತು ಸಂಪ್ರದಾಯಗಳು ಜನರಿಗೆ ಪರಿಚಯವಾಗುತ್ತಿವೆ. ಆಧುನಿಕ ಕನ್ನಡ ಸಾಹಿತ್ಯದ ಮುನ್ನಡೆಯಲ್ಲಿ ಹಾಗೂ ಜ್ಞಾನ-ವಿಜ್ಞಾನ ಗ್ರಂಥಗಳ ಸೃಷ್ಟಿಯಲ್ಲಿ ಭಾಷಾಂತರ ಪ್ರಧಾನ ಪಾತ್ರ ವಹಿಸುತ್ತಿದೆ. ಕನ್ನಡದಲ್ಲಿ ಭಾಷಾಂತರ ನಡೆದುಬಂದ ದಾರಿ ಎಷ್ಟೆಂಬುವನ್ನು ಹಿಂತಿರುಗಿ ನೋಡಿ, ಮುಂದಿನ ಮೈಲಿಗಲ್ಲು ಎಲ್ಲಿದೆ ಎಂದು ಗಮನಿಸಿದಾಗ ಭಾಷಾಂತರದ ಮೂಲಕ ಆಗಬೇಕಾದ ಕೆಲಸ ಇನ್ನೂ ಎಷ್ಟೋ ಇದೆ ಅನಿಸುತ್ತದೆ.

೪ ಭಾಷಾಂತರ—ಸಿದ್ಧಾಂತ, ತಂತ್ರಗಳು ಮತ್ತು ವಿಧಾನಗಳು

ಲಕ್ಷ್ಮೀನಾರಾಯಣ ಅರೋರ

ಸಾಮಾನ್ಯವಾಗಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಯಾವುದೇ ಕೃತಿಯನ್ನು ಇಲ್ಲವೆ ಪಠ್ಯಭಾಗವನ್ನು ಭಾಷಾಂತರಿಸಬೇಕಾದರೆ ಕೆಲವಾರು ಸಮಸ್ಯೆಗಳು ಎದುರಾಗುತ್ತವೆ. ಮೂಲ ಭಾಷೆಯ ಪದಕೋಶ, ವಾಕ್ಯರಚನಾಕ್ರಮ, ವ್ಯಾಕರಣ ವಿಶೇಷಗಳು ಉದ್ದಿಷ್ಟ ಭಾಷೆಯ ಇಂಥ ಅಂಶಗಳ ದೃಷ್ಟಿಯಿಂದ ಬೇರೆಯಾಗಿರಬಹುದು. ಎರಡು ಭಾಷೆಗಳ ಭೌಗೋಳಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಿಸರಗಳು ಹಿನ್ನೆಲೆಗಳು ಭಿನ್ನವಾಗಿರಬಹುದಾದ್ದರಿಂದ ತತ್ಸಂಬಂಧವಾದ ಪ್ರಭಾವ ಭಾಷೆಗಳ ಮೇಲೂ ಬಿದ್ದಿರಬಹುದು. ಭಾಷಾಂತರಕಾರನ ಮುಂದೆ ಜರ್ಮನ್, ರಷ್ಯನ್ ಫ್ರೆಂಚ್ ಮುಂತಾದ ಪಾಶ್ಚಾತ್ಯ ಭಾಷೆಗಳಿಂದ ಕನ್ನಡಕ್ಕೆ ಅನುವಾದಿಸುವಂಥ ಪರಿಸ್ಥಿತಿ ಬರಬಹುದು, ಷೇಕ್ಸ್‌ಪಿಯರ್ ಅಥವಾ ಗಯಟೆಯಂಥ ಲೇಖಕರನ್ನು ಕನ್ನಡಿಸುವ ಸಮಸ್ಯೆ ಎದುರಾಗಬಹುದು, ವೇದೋಪನಿಷತ್ತುಗಳನ್ನೂ, ಬೈಬಲ್ ಖುರಾನ್‌ಗಳಂಥ ಧಾರ್ಮಿಕ ಕೃತಿಗಳನ್ನೂ ಬೇರೊಂದು ಭಾಷೆಗೆ ತರುವ ಸಂದರ್ಭ ಒದಗಬಹುದು. ಇವನ್ನೆಲ್ಲ ಉತ್ತಮವಾಗಿ ನಿರ್ವಹಿಸುವ ಚಾಕಚಕ್ಯತೆ, ಕೌಶಲ ಮತ್ತು ಕಲೆಗಾರಿಕೆ ಭಾಷಾಂತರಕಾರನಿಗಿರಬೇಕು.

ಇಂದಿನ ವಿಶ್ವಸಾಹಿತ್ಯದಲ್ಲಿ ಯಾವುದೇ ಭಾಷಾಸಾಹಿತ್ಯಗಳ ಬೆಳವಣಿಗೆಯಲ್ಲಿ ಭಾಷಾಂತರಗಳ ಪಾತ್ರ ತುಂಬಾ ಹಿರಿದೆನಿಸಿರುವುದರಿಂದ ಭಾಷಾಂತರದ ಕೆಲಸ ಸಹ ವೈವಿಧ್ಯಮಯವಾಗಿರುವುದು ಕಂಡುಬರುತ್ತದೆ. ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಒಂದು ಭಾಷೆಯಲ್ಲಿರುವ ಉತ್ತಮ ಗದ್ಯ, ಕವನ, ಕತೆ, ಕಾದಂಬರಿ, ನಾಟಕ, ಭಾಷಣಗಳು, ಏಕಾಂಕಗಳು ಇನ್ನೊಂದು ಭಾಷೆಯಲ್ಲಿ ಬೆಳಕು ಕಾಣಬೇಕು. ವೈಜ್ಞಾನಿಕ ಮುನ್ನಡೆ ನಾಗಾಲೋಟದಲ್ಲಿರುವ ಇಂದಿನ ಪ್ರಪಂಚದಲ್ಲಿ ಯಾವುದೇ ಮುಂದುವರಿಯುತ್ತಿರುವ ಇಲ್ಲವೆ ಮುಂದುವರಿದ ರಾಷ್ಟ್ರದ ಏಳಿಗೆಯ ದೃಷ್ಟಿಯಿಂದ ವೈಜ್ಞಾನಿಕ ಮತ್ತು ತಾಂತ್ರಿಕ ವಿಚಾರಗಳ ಭಾಷಾಂತರ ಎಷ್ಟು ಅತ್ಯಗತ್ಯ ಎಂದು ಒತ್ತಿ ಹೇಳಬೇಕಾಗಿಲ್ಲ.

ಈ ರೀತಿಯಾಗಿ ವೈವಿಧ್ಯಮಯವಾಗಿ ಕಂಡುಬರುವ ಜ್ಞಾನಸಂಪತ್ತನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಕೊಂಡೊಯ್ಯಬೇಕಾದರೆ ಭಾಷಾಂತಕಾರನ ಮುಂದೆ

ಯಾವುದೇ ನಿರ್ದಿಷ್ಟ ಮಾನದಂಡಗಳುಂಟೆ, ಇಂಥ ಕೆಲಸವನ್ನು ನಿರ್ವಹಿಸಬೇಕಾದರೆ ಯಾವುದಾದರೂ ಖಚಿತವಾದ ತಂತ್ರ-ವಿಧಾನಗಳುಂಟೆ ಎಂಬ ಪ್ರಶ್ನೆ ಈಗ ನಮ್ಮ ಮುಂದೆ ಏಳುತ್ತದೆ. ಗಣಿತ, ಭೌತವಿಜ್ಞಾನ, ಸಂಖ್ಯಾಶಾಸ್ತ್ರ ಮೊದಲಾದ ನಿರ್ದಿಷ್ಟ ವೆನಿಸಿದ ಶಾಸ್ತ್ರಗಳಂತೆ ಭಾಷಾಂತರ ನಿರ್ದಿಷ್ಟವಾದ ಶಾಸ್ತ್ರ ಅಥವಾ ವಿಜ್ಞಾನವಲ್ಲ. ಅನ್ವಯಿಕ ಭಾಷಾವಿಜ್ಞಾನದ ಒಂದು ಶಾಖೆ ಭಾಷಾಂತರ. ಹಾಗಾಗಿ $4+4=8$, $6\times2=12$ ಎಂದು ಯಾರೇ ಆಗಲಿ ಖಚಿತವಾಗಿ ಹೇಳುವ ರೀತಿಯಲ್ಲಿ ನಾವು ಭಾಷಾಂತರ ಮಾಡಲು ಸಾಧ್ಯವಾಗುವುದಿಲ್ಲ.

ಭಾಷಾಂತರ ಕಲೆ ಮತ್ತು ವಿಜ್ಞಾನ ಇವೆರಡು ಕ್ಷೇತ್ರಗಳಿಗೂ ವ್ಯಾಪಿಸುತ್ತದೆ. ಆದರೆ ಭಾಷಾಂತರಕಾರನ ದುರದೃಷ್ಟದಿಂದಲೋ ಎಂಬಂತೆ ಕಲೆಯನ್ನು ಅಭಿವ್ಯಕ್ತಗೊಳಿಸುವ ಸಂಪೂರ್ಣ ಸ್ವಾತಂತ್ರ್ಯ ಇಲ್ಲಿಲ್ಲ. ಹಾಗೆಯೇ, ವಿಜ್ಞಾನದ ಹಲವು ಕ್ಷೇತ್ರಗಳಲ್ಲಿ ಬಳಸಲಾಗುವಂತೆ ನಿರ್ದಿಷ್ಟ ನಿಯಮ ಮತ್ತು ಸೂತ್ರಗಳ ನೇರ ಅನ್ವಯ ಭಾಷಾಂತರದಲ್ಲಿ ಸಾಧ್ಯವಿಲ್ಲ. ಸ್ವಸಂತೋಷದಿಂದ, ಆತ್ಮತೃಪ್ತಿಗಾಗಿ ಈ ಕೃತಿಯ ಸೊಬಗನ್ನು ನನ್ನ ಓದುಗರಿಗೂ ಉಣಿಸಬೇಕು ಎಂಬ ಕಾಳಜಿಯಿಂದ ಭಾಷಾಂತರದ ಕೆಲಸವನ್ನು ಕೈಗೆತ್ತಿಕೊಳ್ಳುವ ವ್ಯಕ್ತಿಗೆ ಈ ಎರಡು ಹಾದಿಗಳ ನಡುವೆ ಸಮನ್ವಯ ಸಾಧಿಸದೆ ಗತ್ಯಂತರವಿಲ್ಲ. ಇದರಿಂದಾಗಿ ಭಾಷಾಂತರಕಾರ ಒಳ್ಳೆಯ ಸಮನ್ವಯ ಸಾಧಕನಾಗಬೇಕು, ಕತ್ತಿಯ ಅಲಗಿನ ಮೇಲೆ ನಡೆಯುವಂಥ ಚಾಕಚಕ್ಯತೆಯುಳ್ಳವನಾಗಬೇಕು.

ಭಾಷಾಂತರ ಮಾಡಬೇಕಾದರೆ ನಿರ್ದಿಷ್ಟವಾದ ತಂತ್ರಗಳು ಹಾಗೂ ವಿಧಾನಗಳು ಇವೆಯೆ ಎಂಬುದು ಬಹಳವಾಗಿ ಚರ್ಚೆಯನ್ನು ಎದುರಿಸಿರುವ ಒಂದು ಸಮಸ್ಯೆ. ಅನಿರೀಕ್ಷಿತವಾಗಿಯೊ ಅಥವಾ ಕೇವಲ ಹವ್ಯಾಸಕ್ಕಾಗಿಯೊ ಭಾಷಾಂತರದ ಕೆಲಸವನ್ನು ಕೈಗೆತ್ತಿಕೊಳ್ಳುವ ಇಲ್ಲವೆ ಸಂದರ್ಭವಶಾತ್ ಕೆಲವು ಸಾಲುಗಳನ್ನು ಅನುವಾದಿಸುವಂತಹ ಪರಿಸ್ಥಿತಿಗೆ ಒಳಗಾಗುವ ಭಾಷಾಂತರಕಾರನಿಗೆ ಇಂಥ ತಂತ್ರಗಳು ಮತ್ತು ವಿಧಾನಗಳು ಅಷ್ಟೇನೂ ಮಹತ್ತ್ವಪೂರ್ಣವಲ್ಲ ಎಂದೆನಿಸಬಹುದು. ಭಾಷಾಂತರ ಎಂದರೆ ಒಂದು ಭಾಷೆಯಲ್ಲಿರುವುದನ್ನು ಇನ್ನೊಂದು ಭಾಷೆಯಲ್ಲಿ ಬರೆಯುವುದಷ್ಟೆ ಎಂಬ ಸರಳವಾದ ಭಾವನೆ ಆತನಲ್ಲಿರಲು ಸಾಧ್ಯ. ಆದರೆ ಒಮ್ಮೆ ಸರಿಯಾಗಿ ಭಾಷಾಂತರ ಮಾಡಲು ಪಟ್ಟಾಗಿ ಕುಳಿತಾಗ ಸಮಸ್ಯೆಗಳು ಒಂದೊಂದಾಗಿ ಎದುರಾಗುವುವು. ಒಬ್ಬ ವೃತ್ತಿನಿರತ ಭಾಷಾಂತರಕಾರನ ದೃಷ್ಟಿಯಲ್ಲಿ ಇಂಥ ಕೆಲವು ನಿರ್ದಿಷ್ಟ ತಂತ್ರಗಳು ಮತ್ತು ವಿಧಾನಗಳು ಬಹಳ ಅಗತ್ಯವೆಂದು ಕಂಡುಬರುತ್ತದೆ.

ಒಂದು ಕೃತಿಯನ್ನು ರಚಿಸಲು ಅಥವಾ ವಿಮರ್ಶೆ ಮಾಡಲು ಹೇಗೆ ಕೆಲವು ನೀತಿನಿಯಮಗಳ ಚೌಕಟ್ಟನ್ನು ನಾವು ಹಾಕಿಕೊಳ್ಳುತ್ತೇವೆಯೊ, ಅದೇ ರೀತಿಯಲ್ಲಿ ಭಾಷಾಂತರಿಸಲು ಸಹ ಕೆಲವು ಇತಿಮಿತಿಗಳನ್ನು ವಿಧಿಸಿಕೊಳ್ಳಬೇಕಾಗುತ್ತದೆ. ಕೆಲವು ತಂತ್ರ ಮತ್ತು

ವಿಧಾನಗಳನ್ನು ರೂಪಿಸಿಕೊಂಡು ಅವುಗಳ ಮಾರ್ಗದರ್ಶನದಲ್ಲಿ ಕೆಲಸಮಾಡಬೇಕಾಗುತ್ತದೆ. ಇಲ್ಲವಾದಲ್ಲಿ ಭಾಷಾಂತರ ಒಂದು ವ್ಯವಸ್ಥಿತ ಪ್ರಕ್ರಿಯೆಯಾಗಿ ಬೆಳೆದುಬರಲು ಸಾಧ್ಯವಾಗಲಾರದು.

ಉತ್ತಮವಾದ ಭಾಷಾಂತರ ಕಾರ್ಯವನ್ನು ನಿರ್ವಹಿಸಬೇಕಾದರೆ ನಾವು ರೂಪಿಸಿಕೊಳ್ಳುವ ಅಥವಾ ಭಾಷಾಂತರ ನಡೆದುಬಂದಿರುವ ದಾರಿಯಲ್ಲಿ ತಾನಾಗಿಯೇ ರೂಪುಗೊಂಡಿರುವ, ಅನುಭವದ ತಳಹದಿಯ ಮೇಲೆ ನಿಂತಿರುವ ಕಟ್ಟುಪಾಡುಗಳನ್ನು ನಾವು ಸಮಯೋಚಿತವಾಗಿ ಮತ್ತು ಸಮರ್ಪಕವಾಗಿ ಬಳಸಿಕೊಳ್ಳಬೇಕೆ ವಿನಾ ಅವುಗಳಿಗೇ ನಮ್ಮನ್ನು ಒಪ್ಪಿಸಿಕೊಳ್ಳುವ ಅಪಾಯಕ್ಕೆ ಎಂದೂ ಸಿಲುಕಬಾರದು. ತನ್ನ ಕೆಲಸದ ಇತಿಮಿತಿಗಳನ್ನೂ ಬೇಕುಬೇಡಗಳನ್ನೂ ಸೂಕ್ತವಾಗಿ ತಿಳಿದಿರುವಂಥ ಭಾಷಾಂತರಕಾರನ ಸ್ವಂತ ವಿವೇಚನೆಯೆ ಎಲ್ಲ ತಂತ್ರ ವಿಧಾನಗಳಿಗಿಂತಲೂ ಒಂದು ಕೈ ಮೇಲೆ ನಿಲ್ಲುವಂತಹದು. ಆಧುನಿಕ ಭಾಷಾ ವಿಜ್ಞಾನದ ಆಧಾರದ ಮೇಲೆ ಕೆಲವಾರು ನಿಯಮಗಳನ್ನು ರೂಪಿಸಲು ಸಾಧ್ಯವಿದ್ದರೂ ಅವು ತುಂಬಾ ಯಾಂತ್ರಿಕವಾಗಿಬಿಡುವ ಅಪಾಯವೂ ಉಂಟು. ಓದುಗನ ಆನಂದ ತತ್ತ್ವ ಹಾಗೂ ಬೋಧಗಮ್ಯತೆಯನ್ನು ಎಂಥ ಸಂದರ್ಭದಲ್ಲಿಯೂ ಕಾಯ್ದಿರಿಸಿಕೊಳ್ಳುವ ಬಗ್ಗೆ ಸಾಕಷ್ಟು ಒತ್ತುಕೊಟ್ಟು ಇಲ್ಲಿ ಭಾಷಾಂತರದ ಕೆಲವು ತಂತ್ರ ಮತ್ತು ವಿಧಾನಗಳನ್ನು ಕುರಿತು ಚರ್ಚಿಸುವ ಪ್ರಯತ್ನಮಾಡಲಾಗಿದೆ.

ಯಾವುದೇ ಒಂದು ಕೃತಿಯನ್ನು ಅಥವಾ ಪಠ್ಯಭಾಗವನ್ನು ಭಾಷಾಂತರ ಮಾಡಲು ಕೊಟ್ಟರೆ ಹೇಗೆ ಮುಂದುವರಿಯಬೇಕು ? ಈ ಪ್ರಶ್ನೆ ಮೇಲ್ನೋಟಕ್ಕೆ ಸರಳವಾಗಿರಬಹುದು. ಮೂಲದ ಒಂದೊಂದೇ ವಾಕ್ಯವನ್ನು ಓದಿಕೊಂಡು ಅದನ್ನು ಉದ್ದಿಷ್ಟ ಭಾಷೆಯಲ್ಲಿ ಬರೆಯುತ್ತಾ ಹೋದರೆ ಭಾಷಾಂತರದ ಕೆಲಸ ನಡೆದಂತಾಗುತ್ತದೆ ಅನ್ನಬಹುದು. ಇದು ಜನಸಾಮಾನ್ಯರ ಪರಿಭಾಷೆ (layman's definition) ಆಗುತ್ತದೆ. ನಮ್ಮ ಮುಂದಿರುವ ಯಾವುದೇ ಒಂದು ಪ್ಯಾರಾದಲ್ಲಿ ಒಂದು ವಾಕ್ಯಕ್ಕೂ ಅದರ ಹಿಂದಿನ ಮತ್ತು ಮುಂದಿನ ವಾಕ್ಯಕ್ಕೂ ಸಾವಯವ ಸಂಬಂಧವಿರುತ್ತದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಮೂಲದ ಪ್ರತಿಯೊಂದು ವಾಕ್ಯವೂ ಇನ್ನೊಂದು ವಾಕ್ಯಕ್ಕೆ ಸಾಪೇಕ್ಷವಾಗಿ ಸಂಬಂಧವುಳ್ಳ ಘಟಕದಂತೆ ಕೆಲಸಮಾಡುತ್ತಿರುತ್ತದೆ. ಅವುಗಳ ನಡುವೆ ಪರಿಮಿತ ಅನುಕ್ರಮ ಸಂಬಂಧ (bounded sequence relation) ಇರುತ್ತದೆ.

ಉದಾಹರಣೆಗೆ, 'The *paper* was very good' ಎಂಬಂಥ ವಾಕ್ಯದಲ್ಲಿ paper ಅನ್ನುವುದಕ್ಕೆ ಯಾವ ಅರ್ಥ ಹೇಳಬೇಕು ? 'ಕಾಗದ ತುಂಬಾ ಚೆನ್ನಾಗಿತ್ತು' ಅಂದಾಗ ನಮ್ಮ ದೃಷ್ಟಿಯಲ್ಲಿರುವ ಕಾಗದದ ತಾಂತ್ರಿಕ ಗುಣಮಟ್ಟದ ಬಗ್ಗೆ ಹೇಳುತ್ತಿರುತ್ತೇವೆ. 'ಪ್ರಶ್ನಪತ್ರಿಕೆ ತುಂಬಾ ಚೆನ್ನಾಗಿತ್ತು' ಎಂದಾಗ ವಿದ್ಯಾರ್ಥಿ ತಾನು ಬರೆದ ಉತ್ತರಗಳ ಬಗ್ಗೆ ತೃಪ್ತಿಯ ಭಾವನೆಯನ್ನು ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತದೆ. '(ಮಂಡಿಸಿದ)

ಪ್ರಬಂಧ ತುಂಬಾ ಚೆನ್ನಾಗಿತ್ತು' ಎಂದು ಬರೆದಾಗ ನಾವು ಕೇಳಿದ ಪ್ರಬಂಧದ ಬಗ್ಗೆ ನಮ್ಮ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. paper ವೃತ್ತಪತ್ರಿಕೆಯನ್ನೂ ಪ್ರತಿನಿಧಿಸುತ್ತದಷ್ಟೆ. ಹೀಗೆ ಈ ಇಂಗ್ಲಿಷ್ ವಾಕ್ಯದ ಅರ್ಥ ಮೇಲಿನ ಮೂರರಲ್ಲಿ ಯಾವುದು ಬೇಕಾದರೂ ಆಗ ಬಹುದು. ಅದರ ಹಿಂದಿನ ಅಥವಾ ಮುಂದಿನ ಇಲ್ಲವೆ ಪರಿಸರದ ವಾಕ್ಯಗಳನ್ನು ಗಮನಿಸದೆ ನೇರವಾಗಿ ವಾಕ್ಯಕ್ಕೆ ವಾಕ್ಯ ಇಡುತ್ತಾ ಹೋದರೆ ಗೊಂದಲಕ್ಕೆ ಸಿಲುಕುತ್ತೇವೆ. ತಿದ್ದು ಪಡಿಯನ್ನು ಮಾಡುತ್ತಲೇ ಹೋಗಬೇಕಾಗುತ್ತದೆ. ಇದರಿಂದ ಭಾಷಾಂತರಕಾರನ ಸ್ಥೈರ್ಯ ಕುಂದುತ್ತದೆ, ಬರವಣಿಗೆಯ ಓಟಕ್ಕೆ ತಡೆಯೊಡ್ಡಿದಂತಾಗುತ್ತದೆ. ಭಾಷಾಂತರ ಕಾರ್ಯ ಕುಂಠಿತವಾಗುತ್ತದೆ.

ಹೀಗೆಯೆ, 'They can fish in this region.' 'I saw her peeping through the window.' 'They are flying planes.' ಮೊದಲಾದ ವಾಕ್ಯ ಗಳನ್ನು ನೇರವಾಗಿ ಭಾಷಾಂತರಿಸಲು ಹೋದಾಗ ಒದಗುವ ಸಮಸ್ಯೆಗಳನ್ನೂ ನಾವು ಚರ್ಚಿಸಬಹುದು. ಇಂಥ ವಾಕ್ಯಗಳಿಗೆ ಒಂದಕ್ಕಿಂತ ಹೆಚ್ಚು ಅರ್ಥಗಳನ್ನು ಹೇಳಲು ಸಾಧ್ಯ ವಾಗುತ್ತದೆ.

ಯಾವುದೇ ಒಂದು ಕೆಲಸವನ್ನು ವ್ಯವಸ್ಥಿತವಾಗಿ ಮಾಡಿದರೆ ಅದರಿಂದ ಸೂಕ್ತವಾದ ಫಲ ಶೀಘ್ರವಾಗಿ ದೊರೆಯುತ್ತದೆ ಎಂಬ ಮಾತು ಭಾಷಾಂತರಕ್ಕೆ ಚೆನ್ನಾಗಿ ಅನ್ವಯಿಸು ತ್ತದೆ. ನಾಲ್ಕೇ ವಾಕ್ಯಗಳನ್ನು ಭಾಷಾಂತರ ಮಾಡಬೇಕಾಗಿ ಬಂದರೂ ಅದನ್ನು ಚೊಕ್ಕ ವಾಗಿ ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಭಾಷಾಂತರಕಾರನ ಹಿನ್ನೆಲೆ ಅನುಭವಾದಿಗಳು ಏನೇ ಇದ್ದರೂ ಯಾವ ಪಠ್ಯಭಾಗವನ್ನೂ ಆತ ಉದಾಸೀನ ಭಾವನೆಯಿಂದ ನೋಡ ಬಾರದು. 'ಇದೇನು ಮಹಾ' ಎಂಬ ಅತಿಯಾದ ಆತ್ಮಪ್ರತ್ಯಯ ಉತ್ತಮ ಭಾಷಾಂತ ಕಾರನಿಗೆ ಸಲ್ಲ. ಶ್ರದ್ಧೆ, ಜಿಜ್ಞಾಸೆ, ನಮ್ರತೆ ಇವು ಮುಪ್ಪುರಿಗೊಂಡು ಶ್ರಮಸಾಧ್ಯವಾದ ಆತನ ಕಾರ್ಯದಲ್ಲಿ ಸೇರಿದರೆ ಮಾತ್ರ ಕೆಲಸ ಸುಗಮವಾಗುತ್ತದೆ.

ಭಾಷಾಂತರ ಪ್ರಕ್ರಿಯೆಯ ಒಂಬತ್ತು ಮಾರ್ಗದರ್ಶಕ ಸೂತ್ರಗಳು

ಒಂದು ಕೃತಿಯನ್ನು ಅಥವಾ ಪಠ್ಯಭಾಗವನ್ನು ಭಾಷಾಂತರ ಮಾಡಬೇಕಾದರೆ ಈ ಕೆಳಕಂಡ ಹಂತಗಳಲ್ಲಿ ಮುಂದುವರಿಯಬೇಕು :

1. ಕೃತಿಯನ್ನು ಅಥವಾ ಪಠ್ಯಭಾಗವನ್ನು ಸಂಪೂರ್ಣವಾಗಿ ಎರಡು ಅಥವಾ ಮೂರು ಬಾರಿ ಓದಿ, ವಿಷಯವನ್ನು ಚೆನ್ನಾಗಿ ಮನನಮಾಡಿಕೊಳ್ಳಬೇಕು. ಕೃತಿ ದೊಡ್ಡದಾದರೆ ಮೊದಲು ಸಂಪೂರ್ಣವಾಗಿ ಓದಿಕೊಂಡು, ಚೆನ್ನಾಗಿ ಗ್ರಹಿಸಿ ಭಾಷಾಂತರವನ್ನು ಅಧ್ಯಾಯ ವಾರು ಮೇಲೆ ಅಧ್ಯಾಯವಾಗಿ ಮಾಡುತ್ತಾ ಹೋಗಬೇಕು.

2. ಕೃತಿಯನ್ನು ಓದುತ್ತಿರುವಾಗಲೇ ಮೂಲಲೇಖಕನ ಆಶಯ, ಅಭಿವ್ಯಕ್ತಿ ವಿಧಾನ

ಮತ್ತು ಭಾಷೆಯ ಬಳಕೆಯನ್ನು ಎಚ್ಚರಿಕೆಯಿಂದ ಗಮನಿಸುತ್ತಾ ಹೋಗಬೇಕು.

3. ಕಠಿಣವಾದ ಮತ್ತು ಖಚಿತವಾಗಿ ಅರ್ಥ ಗೊತ್ತಿಲ್ಲದ ಪದಗಳನ್ನು ಪೆನ್ಸಿಲಿನಿಂದ ಗುರುತು ಮಾಡಿಕೊಳ್ಳಬೇಕು.

4. ವಿಶೇಷ ಪದಪ್ರಯೋಗಗಳು, ಸಂದಿಗ್ಧ ಪದಗಳು, ನುಡಿಗಟ್ಟುಗಳು, ಗಾದೆಗಳು, ವ್ಯಕ್ತಿ ಅಥವಾ ಸ್ಥಳಸೂಚಿ ಪದಗಳೇ ಮುಂತಾದುವನ್ನು ಬೇರೆಯಾಗಿಯೆ ಗುರುತು ಹಾಕಿಕೊಳ್ಳಬೇಕು.

5. ಅನಂತರ, ಮನನ ಮಾಡಿದಂಥ ಪಠ್ಯಭಾಗದ ಬೆಳಕಿನಲ್ಲಿ ಮೇಲಿನ (3) ಮತ್ತು (4) ರಲ್ಲಿ ಗುರುತು ಹಾಕಿಕೊಂಡ ಪದಗಳಿಗೆ ಯಾವ ಯಾವ ಸಮಾನಾರ್ಥಕಗಳನ್ನು ಬಳಸಬೇಕು, ಯಾವುದನ್ನು ಬಳಸಿದರೆ ಹೆಚ್ಚು ಸೂಕ್ತವಾಗುತ್ತದೆ ಎಂದು ಪರಿಗಣಿಸಿ ಗುರುತು ಹಾಕಿಕೊಳ್ಳಬೇಕು.

6. ಪಾರಿಭಾಷಿಕ ಪದಗಳು, ಅಂದರೆ ವಿಶಿಷ್ಟ ಶಾಸ್ತ್ರ-ವಿಜ್ಞಾನಗಳಿಗೆ ಸೇರಿದ ಪದಗಳು, ನಮಗೆ ಪರಿಚಿತವಾಗಿಲ್ಲದಿದ್ದರೆ ಅಂಥ ಪದಗಳ ವಿವರಣೆಯನ್ನು ಕೊಟ್ಟಿರುವ ಕೋಶಗಳನ್ನು ನೋಡಿ ಅವು ಏನೆಂಬುದನ್ನು ಅರ್ಥಮಾಡಿಕೊಳ್ಳಬೇಕು, ಅನಂತರ ಪಾರಿಭಾಷಿಕ ಪದಗಳ ಕೋಶ ಅಥವಾ ಕೋಶಗಳನ್ನು ನೋಡಿ ನಮಗೆ ಬೇಕಾದ ಸಂದರ್ಭಕ್ಕೆ ತಕ್ಕ ಪರ್ಯಾಯ ಪದ ಯಾವುದೆಂದು ನೋಡಿ ಗುರುತುಹಾಕಿಕೊಳ್ಳಬೇಕು.

7. ಇಷ್ಟೆಲ್ಲ ಪೂರ್ವಸಿದ್ಧತೆಗಳೊಡನೆ, ಭಾಷಾಂತರದ ಕೆಲಸವನ್ನು ಸಾಂಗವಾಗಿ ಪ್ರಾರಂಭಿಸಬೇಕು. ನಾವು ಏನನ್ನು ಭಾಷಾಂತರಿಸುತ್ತಿದ್ದೇವೆಯೊ, ಉದ್ದಿಷ್ಟ ಭಾಷೆಯಲ್ಲಿ ಅದರ ಸ್ಥೂಲ ಸ್ವರೂಪವನ್ನಾದರೂ ಮನಃಪಟಲದ ಮೇಲೆ ಸ್ಪಷ್ಟವಾಗಿ ಮೂಡಿಸಿಕೊಳ್ಳಬೇಕು. ಅನಂತರ ಒಂದೊಂದೇ ವಾಕ್ಯವನ್ನು ಅದರ ಹಿಂದಿನ ಮತ್ತು ಮುಂದಿನ ವಾಕ್ಯಗಳ ಸ್ವರೂಪಕ್ಕೆ ಸಾಪೇಕ್ಷವಾಗಿರುವಂತೆ ಭಾಷಾಂತರ ಮಾಡುತ್ತಾ ಹೋಗಬೇಕು.

8. ಒಂದು ವಾಕ್ಯ ಅಥವಾ ಚಿಕ್ಕ ಪಠ್ಯಭಾಗವನ್ನಷ್ಟೆ ಭಾಷಾಂತರ ಮಾಡುತ್ತಿದ್ದರೆ, ಕೆಲಸ ಮುಗಿದ ಅನಂತರ ಅದನ್ನು ಪುನರವಲೋಕಿಸುವುದೂ ಅಷ್ಟೇ ಅವಶ್ಯಕ. ಏಕೆಂದರೆ ಭಾಷಾಂತರ ಎರಡು ಭಾಷೆಗಳ ನಡುವೆ ನಡೆಯುವ ಕ್ರಿಯೆ. ಮೂಲಭಾಷೆಯ ಮತ್ತು ಉದ್ದಿಷ್ಟ ಭಾಷೆಯ ವಾಕ್ಯರಚನಾಕ್ರಮ ಮತ್ತು ಪದಸಂಪತ್ತು ಎರಡೂ ಭಾಷಾಂತರಕಾರನ ಮನಸ್ಸಿನಲ್ಲಿ ಕೆಲಸ ಮಾಡುತ್ತಿರುತ್ತವೆ. ಎರಡೂ ಭಾಷೆಗಳ ಜೊತೆಯಲ್ಲಿ ಅತ ವ್ಯವಹರಿಸುವುದರಿಂದ, ಮೂಲಭಾಷೆಯ ವಾಕ್ಯರಚನಾಕ್ರಮ ಮತ್ತು ಪದಗಳು ಉದ್ದಿಷ್ಟ ಭಾಷೆಯಲ್ಲೂ ಸ್ವರೂಪ ಬದಲಾಯಿಸದೆ ಇಳಿಯುವ ಸಂಭವ ಉಂಟಾಗಬಹುದು. ಭಾಷಾಂತರದ ಭಾಷೆ ಸಂಕರ (hybrid)ವಾಗಬಹುದು.

ಈ ಅಪಾಯದಿಂದ ದೂರವಾಗಲು ನಾವು ಮಾಡಿರುವ ಭಾಷಾಂತರವನ್ನೇ ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಿ ಉದ್ದಿಷ್ಟ ಭಾಷೆಯ ಜಾಯಮಾನಕ್ಕನುಗುಣವಾಗಿ

ಬರೆಯಬೇಕು. ಇನ್ನು ಕೆಲವು ವೇಳೆ ವಾಕ್ಯದ ಅನ್ವಯ ಸ್ಪಷ್ಟವಾಗಬೇಕಾದರೆ ಕರ್ತೃ, ಕರ್ಮ, ಕ್ರಿಯೆ ಮುಂತಾದವುಗಳ ಸಾಪೇಕ್ಷ ಸ್ಥಾನಗಳು ಯುಕ್ತವಾಗಿರಬೇಕು. ಇದರಿಂದ ವಿಷಯ ಸುಲಭವಾಗಿ, ಶೀಘ್ರವಾಗಿ ಅರ್ಥವಾಗುತ್ತಾ ಹೋಗುತ್ತದೆ. ಓದುಗ ಯಾವುದೇ ವಾಕ್ಯವನ್ನು ಪದೇ ಪದೇ ಓದಿ ಅರ್ಥಮಾಡಿಕೊಳ್ಳುವ ಪರಿಸ್ಥಿತಿಗೆ ಇಳಿಯುವಂತಾಗ ಬಾರದು.

೯. ಈ ಎಲ್ಲ ದೃಷ್ಟಿಗಳಿಂದ ಭಾಷಾಂತರವನ್ನು ಪರಿಶೀಲಿಸಿದ ಅನಂತರ ಅದರ ಉತ್ತಮ ಪ್ರತಿಯನ್ನು ತಯಾರಿಸಬೇಕು. ಕಡೆಯಲ್ಲಿ ಭಾಷಾಂತರವನ್ನು ನಾವೇ ಓದಿ ಅದು ತೃಪ್ತಿಕರವಾಗಿದೆ ಎಂಬ ಬಗ್ಗೆ ದೃಢಪಡಿಸಿಕೊಳ್ಳಬೇಕು. ಸಾಧ್ಯವಾದಲ್ಲಿ ಅದನ್ನು ಒಬ್ಬರು ಅಥವಾ ಇಬ್ಬರು ಆಸಕ್ತ ಓದುಗರಿಗೆ ತೋರಿಸಿ ಓದುಗರ ದೃಷ್ಟಿಯಿಂದ ಏನಾದರೂ ತೊಡಕುಗಳು ಕಂಡುಬಂದಲ್ಲಿ ಅವನ್ನು ನಿವಾರಿಸಲು ಪ್ರಯತ್ನಿಸಬೇಕು. ಓದುಗರಿಗಾಗಿಯೆ ನಾವು ಭಾಷಾಂತರವನ್ನು ಮಾಡುತ್ತಿರುವುದರಿಂದ ಅವರ ಹಿತಾಸಕ್ತಿಗಳನ್ನು ಕಡೆಗಣಿಸುವಂತಿಲ್ಲ.

ಭಾಷಾಂತರ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸುವುದಕ್ಕೆ ಪೂರ್ವಭಾವಿಯಾಗಿ ಭಾಷಾಂತರಕಾರ ಉತ್ತಮವಾದ ಕೋಶಗಳು ಮತ್ತು ಪರಾಮರ್ಶನ ಸಾಮಗ್ರಿಗಳನ್ನು ಒದಗಿಸಿಕೊಳ್ಳಬೇಕಾಗುತ್ತದೆ. ಕೋಶವೇ ನಮಗೆ ಸರ್ವಸ್ವವಲ್ಲ. ಅದು ಉತ್ತಮ ಸಲಹೆಗಾರನಂತೆ, ಮಾರ್ಗದರ್ಶಕನಂತೆ ಕೆಲಸ ಮಾಡಬೇಕು. ಆದರೆ ಭಾಷಾಂತರಕಾರನ ವಿವೇಚನೆ ಎಲ್ಲಕ್ಕಿಂತ ಮೇಲಿರಬೇಕು. ಏಕಭಾಷಾ ನಿಘಂಟುಗಳು,ದ್ವಿಭಾಷಾನಿಘಂಟುಗಳು, ಬಹುಭಾಷಾ ನಿಘಂಟುಗಳು, ವಿಶ್ವಕೋಶಗಳು, ವಿಷಯ ವಿಶ್ವಕೋಶಗಳು, ವ್ಯುತ್ಪತ್ತಿ ಕೋಶಗಳು, ವ್ಯಕ್ತಿ ಮತ್ತು ಸ್ಥಳನಾಮ ಸೂಚಿಗಳು, ಭೌಗೋಳಿಕ ನಕ್ಷೆಗಳು, ಪಾರಿಭಾಷಿಕ ಪದಸೂಚಿಗಳು, ವಿವರಣ ಪದಕೋಶಗಳು, ವೈಜ್ಞಾನಿಕ ಮತ್ತು ತಾಂತ್ರಿಕ ವಿವರಣ ಪದಕೋಶಗಳು, ಭಾಷಾಂತರ ಮಾಡುತ್ತಿರುವ ವಿಷಯಕ್ಕೆ ಸಂಬಂಧಪಟ್ಟ ಇತರ ಗ್ರಂಥಗಳು, ಮೂಲ ಮತ್ತು ಉದ್ದಿಷ್ಟ ಭಾಷೆಗಳ ವ್ಯಾವಹಾರಿಕ ವ್ಯಾಕರಣಗಳು, ಬರವಣಿಗೆ ಮಾರ್ಗದರ್ಶಕಗಳು ಇವೆಲ್ಲ ಸುಲಭವಾಗಿ ಭಾಷಾಂತರಕಾರನಿಗೆ ಕೈಗೆಟಕುವಂತೆ ಇರಬೇಕು. ಇವುಗಳನ್ನಾಧರಿಸಿ ಭಾಷಾಂತರಕಾರ ತನಗೆ ಯಾವ ವಿಷಯಗಳ ಪರಿಜ್ಞಾನವಿಲ್ಲವೊ, ಅಂಥ ವಿಷಯವನ್ನು ಕುರಿತು ಪರಾಮರ್ಶನ ನಡೆಸಿ ಅನಂತರ ಕೃತಿಯನ್ನು ಕೈಗೆತ್ತಿಕೊಳ್ಳಬೇಕು. ಭಾಷಾಂತರಕಾರನಿಗೆ ಅಗತ್ಯವಾದ ಮೇಲೆ ಹೇಳಿದ ಉಪಕರಣಗಳಲ್ಲಿ ಪರಾಮರ್ಶನಕ್ಕೆ ನೆರವಾಗುವ ವ್ಯಕ್ತಿಗಳನ್ನೂ, ಭಾಷಾಂತರವನ್ನು ಸಮರ್ಪಕವಾಗಿ ಹೊರತರುವಂತೆ ಸಹಾಯ ಮಾಡುವ ಆಧುನಿಕ ಯಂತ್ರೋಪಕರಣಾದಿಗಳನ್ನೂ ಸೇರಿಸಿಲ್ಲ.

Technique ಅಂದರೆ 'the manner and ability with which an artist, writer, dancer, athlete, or the like employs the technical skills

of his particular art or field of endeavour,' 'the body or specialised procedures and methods used in any specific field esp. in an area of applied science,' 'ability to apply procedures or methods so as to effect a desired result' (*The Random House Dictionary of the English Language*). ಯಾವುದೇ ಒಂದು ವಿಶಿಷ್ಟವಾದ ಸಾಧನಾ ಕ್ಷೇತ್ರದಲ್ಲಿ ಉದ್ದೇಶಪಟ್ಟ ಗುರಿಯನ್ನು ಮುಟ್ಟಲು ಬಳಸಲಾಗುವ ವಿಶಿಷ್ಟ ವಿಧಾನಗಳನ್ನೂ ಸಾಮರ್ಥ್ಯಗಳನ್ನೂ 'ತಂತ್ರ' ಎನ್ನಬಹುದು. ಭಾಷಾಂತರ ಸಹ ಅನ್ವಯಿಕ ಭಾಷಾವಿಜ್ಞಾನದ ಅಂಗವಾದ್ದರಿಂದ ತಂತ್ರಗಳು ಅದಕ್ಕೆ ಅಗತ್ಯ ಎಂಬ ಅಂಶ ಮನದಟ್ಟಾಗುತ್ತದೆ.

ಹಾಗೆಯೆ Method ಅಂದರೆ 'a manner or mode of procedure, especially an orderly, logical or systematic way of instruction, inquiry, presentation etc.', 'a way of doing something in accordance with a definite plan', 'order or system of doing anything' (*The Random House Dictionary of the English Language*) ಎಂಬಂಥ ಮಾತುಗಳನ್ನು ನೋಡಬಹುದು. ಅಂದರೆ ಕ್ರಮವಾದ, ವ್ಯವಸ್ಥಿತವಾದ, ತರ್ಕಬದ್ಧವಾದ ಅಭಿವ್ಯಕ್ತಿಯ ನಿರೂಪಣ ಕ್ರಮಕ್ಕೆ 'ವಿಧಾನ' ಎನ್ನಬಹುದು. ಈ ವಿಧಾನಕ್ಕೆ ನಿರ್ದಿಷ್ಟವಾದ ಯೋಜನೆ ಅಗತ್ಯವೆಂಬುದು ಸಹ ಸ್ಪಷ್ಟವಾಗುತ್ತದೆ.

ನಾವು ಮಾಡುವ ಭಾಷಾಂತರವನ್ನು ಸಾಮಾನ್ಯವಾಗಿ ಈ ಕೆಳಕಂಡಂತೆ ವಿಭಾಗಿಸಿಕೊಳ್ಳಬಹುದು ಮತ್ತು ಈ ವಿಂಗಡನೆಗೆ ಅನುಸಾರವಾಗಿ ತಂತ್ರ ಮತ್ತು ವಿಧಾನಗಳನ್ನು ರೂಪಿಸಿಕೊಳ್ಳಬಹುದು. ಥಿಯೊಡರ್ ಸೆವೊರಿ ಭಾಷಾಂತರವನ್ನು ನಾಲ್ಕು ರೀತಿಯಲ್ಲಿ ವಿಭಜಿಸಿದ್ದಾನೆ—(*i*) ಶುದ್ಧ ಮಾಹಿತಿಸೂಚಕ ಹೇಳಿಕೆಗಳು (purely informative statements) (*ii*) ಪರ್ಯಾಪ್ತ ಭಾಷಾಂತರ (adequate translation) (*iii*) ಸಂಯುಕ್ತ ಅಥವಾ ಮಿಶ್ರ ಭಾಷಾಂತರ (composite translation) ಮತ್ತು (*iv*) ಶಾಸ್ತ್ರೀಯ, ವೈಜ್ಞಾನಿಕ ಮತ್ತು ತಾಂತ್ರಿಕ ಭಾಷಾಂತರ (translation of learned, scientific & technlcal matter).

ಕೆಲವು ವೇಳೆ ಯಾವುದೇ ವಿಚಾರವನ್ನು ಸಾರ್ವಜನಿಕರ ಅವಗಾಹನೆಗಾಗಿ ತಿಳಿಯಪಡಿಸಲು ಭಾಷಾಂತರ ಮಾಡಬೇಕಾಗುತ್ತದೆ. ದಿನೇ ದಿನೇ ಬೆಳೆಯುತ್ತಿರುವ ನಮ್ಮ ನಾಗರಿಕತೆಗನುಗುಣವಾಗಿ ಹೊಸ ಹೊಸ ವಿಚಾರಗಳ, ಭಾವನೆಗಳ ಉದಯವಾಗುತ್ತಿರುತ್ತದೆ. ಇಂಥವುಗಳ ಭಾಷಾಂತರ ಮಾಡಲು ಸ್ವಲ್ಪ ಸರಾಗವಾಗಿ ಮಾಡುವ ತಂತ್ರವನ್ನು ಬಳಸಬೇಕು.

ಇಂಗ್ಲಿಷಿನಿಂದ ಕನ್ನಡಕ್ಕೆ ಇಂಥ ಕೆಲವು ವಾಕ್ಯಗಳನ್ನು ಅಥವಾ ಪದವೃಂದಗಳನ್ನು ತರಬೇಕಾದರೆ ಸಮಸ್ಯೆ ಹೇಗೆ ಎದುರಾಗುವುದೆಂದು ನೋಡೋಣ. ಉದಾಹರಣೆಗೆ,

No smoking	House Full
No throughfare	Dial 22549
No parking	All Electric Home
Silence please	Dine-n-dance
Halt and proceed	Sound Horn

ಎಂಬ ರೂಪಗಳನ್ನು ಪರಿಗಣಿಸೋಣ.

ಧೂಮಪಾನ ನಿಷೇಧಿಸಿದೆ	ಚಿತ್ರಮಂದಿರ ತುಂಬಿದೆ
ಸಾರ್ವಜನಿಕ ರಸ್ತೆ ಅಲ್ಲ	22549ಕ್ಕೆ ಫೋನ್ ಮಾಡಿ
ವಾಹನಗಳನ್ನು ನಿಲ್ಲಿಸಬೇಡಿ	ಸರ್ವವಿದ್ಯುತ್ ಗೃಹ
ನಿಶ್ಶಬ್ದತೆ ಕೋರಲಾಗಿದೆ	—
ನಿಂತು ಹೋಗಿ	ಶಬ್ದಮಾಡಿ

ಎಂಬಂತಹ ರೂಪಗಳನ್ನು ಕನ್ನಡದಲ್ಲಿ ನಾವು ಅಲ್ಲಲ್ಲಿ ಕಾಣಬಹುದು. ಇವನ್ನು ಅನುವಾದಗಳೆನ್ನುವುದಕ್ಕಿಂತ ಕನ್ನಡ ರೂಪಗಳು ಎನ್ನುವುದು ಉತ್ತಮ. ಇವು ನಾನು ಮಾಡಿದ ಅನುವಾದಗಳಲ್ಲ. ನನಗೆ ಅಲ್ಲಲ್ಲಿ ಕಂಡ ರೂಪಗಳು. ಬಹುಶಃ ಇವು ನಮ್ಮ ದಿನನಿತ್ಯದ ಅಗತ್ಯವನ್ನನುಸರಿಸಿ ಮೂಡಿಬಂದವು. ಇಂಗ್ಲಿಷಿನಲ್ಲಿ ಇವುಗಳ ಮೂಲ ಹೀಗಿದೆ, ಕನ್ನಡದಲ್ಲಿ ಹಾಗೆ ಬಂದಿಲ್ಲವಲ್ಲ ಎಂದು ಮೂಗೆಳೆಯುತ್ತಾ ಕುಳಿತುಕೊಳ್ಳುವ ವ್ಯವಧಾನ ಯಾರಿಗೂ ಇರುವುದಿಲ್ಲ. ಇವು ಭಾಷಾಂತರಕ್ಕಾಗಿ ಮಾಡಿದ ಭಾಷಾಂತರಗಳಲ್ಲ. ಮೂಲದ ಪದಗಳೆಲ್ಲ ಯಥಾವತ್ತಾಗಿ ಮೂಡಿಲ್ಲವಲ್ಲ ಎಂದು ಹವ್ಯಾಸಿ ಭಾಷಾಂತರಕಾರ ಈ ಬಗ್ಗೆ ಆಕ್ಷೇಪಣೆ ಎತ್ತುವಂತಿಲ್ಲ.

'No throughfare' ಎಂಬಲ್ಲಿ ವಾಹನಗಳಿಗೆ ಮಾತ್ರ ಎಂಬ ಭಾವನೆ ಅಡಕವಾಗಿದೆ. ನಾವು ಕನ್ನಡದಲ್ಲಿ 'ಪ್ರವೇಶವಿಲ್ಲ', 'ಹಾದು ಹೋಗುವಂತಿಲ್ಲ' ಮೊದಲಾಗಿ ಬರೆದರೆ ಅದು ಮನುಷ್ಯರಿಗೂ ಅನ್ವಯಿಸಿ ಸೂಚನೆಯ ಉದ್ದೇಶ ಸಾರ್ಥಕವಾಗುವುದಿಲ್ಲ. 'No entry', 'No admission' ಮತ್ತು 'No throughfare' ಇವುಗಳ ನಡುವೆ ಇರುವ ಅಂತರವನ್ನು ನಾವು ಮರೆಯುವಂತಿಲ್ಲ.

ಹಾಗೆಯೆ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಇಂಗ್ಲಿಷಿನಲ್ಲಿ ಎರಡು ಅಥವಾ ಮೂರು ಪದಗಳು ಸೇರಿ ಒಂದು ಸೂಚನೆಯನ್ನು ಹೊರಗೆಡಹುವಷ್ಟು ಸಮರ್ಥವಾಗಿವೆ. ಬಳಕೆಯಲ್ಲಿ ಅವು ಸಾರ್ವಜನಿಕರಿಂದ ಅಂಗೀಕಾರ ಮುದ್ರೆಯನ್ನು ಪಡೆದಿವೆ. ವಾಕ್ಯವಲ್ಲದ ರೀತಿಯಲ್ಲಿ ಎರಡು ಮೂರು ಪದಗಳು ಸೇರಿ ವಾಕ್ಯದ ಕೆಲಸವನ್ನು ನಿರ್ವಹಿಸುತ್ತವೆ. ಆದರೆ ಕನ್ನಡದಲ್ಲಿ ನಾವು ಇನ್ನೂ ವಾಕ್ಯದ ಹಂತದಲ್ಲೇ ಇದ್ದೇವೆ. 'ದಯವಿಟ್ಟು ನಿಶ್ಶಬ್ದ' 'ಚಿತ್ರಮಂದಿರ ಪೂರ್ತಿ', '22549 ತಿರುಗಿಸಿ' ಇಂಥ ಬಳಕೆಗಳು ನಮ್ಮಲ್ಲಿ ಸದ್ಯದಲ್ಲಿ ನಿಲ್ಲುವ ಹಾಗೆ ಕಾಣುವುದಿಲ್ಲ. ಒಂದುವೇಳೆ ಹಾಗೆ ಬರೆದರೂ ತುಂಬಾ ಕೃತಕ ಮತ್ತು

ಅಸ್ವಾಭಾವಿಕವೆನಿಸುವುದು. 'Dial' ಎಂಬ ಪದ ಒಳಗೊಂಡಿರುವ ಸಂಪೂರ್ಣ ಭಾವನೆಯನ್ನು ನಮ್ಮ ಭಾಷೆಯು ಯಾವುದೇ ಒಂದು ಧಾತುರೂಪ ನಿರ್ವಹಿಸಲಾರದು. 'Sound Horn' ಎಂಬುದಕ್ಕೆ 'ಕೊಂಬು ಕೂಗಿಸಿ', 'ಕಹಳೆ ಕೂಗಿಸಿ' ಎಂದು ಬರೆಯುವುದಕ್ಕಾಗುವುದಿಲ್ಲ. 'ಶಬ್ದ ಮಾಡಿ' ಎನ್ನುವುದೂ ಸರಿಯಲ್ಲ. 'ಹಾರ್ನ್‌ಮಾಡಿ' ಎಂದು ಹೇಳುವುದೇ ಉತ್ತಮ ಎಂದು ಕೆಲವರ ಅಭಿಪ್ರಾಯ.

ರೈಲು ಬಸ್ಸುಗಳ ನಿಲ್ದಾಣ ಅಥವಾ ವಿಮಾನ ನಿಲ್ದಾಣಗಳಲ್ಲಿ ಕಂಡುಬರುವ ಸೂಚನೆಗಳು ಆಗತ್ಯಕ್ಕನುಗುಣವಾಗಿ ಬೇರೆ ಬೇರೆ ಭಾಷೆಗಳಲ್ಲಿ ಇರಬಹುದಾದರೂ, ತ್ವರೆಯಾಗಿ ರೈಲು ಬಸ್ಸು ವಿಮಾನಗಳನ್ನು ಹಿಡಿಯಲು ಧಾವಿಸುತ್ತಿರುವ ಪ್ರಯಾಣಿಕರು ತಮ್ಮ ತಮ್ಮ ಅಥವಾ ತಾವು ಬಲ್ಲ ಭಾಷೆಯಲ್ಲಿ ಸೂಚನೆಯನ್ನು ಪಡೆದು ಮುಂದೆ ಹೋಗುತ್ತಿರುತ್ತಾರೆಯೆ ಹೊರತು ಭಾಷಾಂತರದ ಸೂಕ್ತತೆಯ ಬಗ್ಗೆ ವಿಚಾರಮಾಡುತ್ತಾ ನಿಲ್ಲುವುದಿಲ್ಲ. ಇಂಥ ಭಾಷಾಂತರಗಳನ್ನು ಸೆವೊರಿ ಸಂಪೂರ್ಣ ಭಾಷಾಂತರ (perfect translation) ಎಂದೇ ಹೆಸರಿಸುತ್ತಾನೆ. ಈ ರೀತಿಯ ಸಂದರ್ಭಗಳಲ್ಲಿ ನಾವು ಭಾಷಾಂತರದ ವ್ಯಾವಹಾರಿಕ ಅಂಶಗಳನ್ನು (functional aspects) ಗಮನಿಸಬೇಕೆ ಹೊರತು ಅದರ ಪದಬಂಧ, ನಿಯಮಬದ್ಧತೆ, ನಿಷ್ಕೃಷ್ಟತೆಗಳನ್ನಲ್ಲ.

ಸಾಮಾನ್ಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಲಾಗುವ ಭಾಷಾಂತರಗಳೇ ಪರ್ಯಾಪ್ತ ಭಾಷಾಂತರಗಳು. ಇವಕ್ಕೆ ತುಂಬಾ ಕಡುವಾದ ನೀತಿನಿಯಮಗಳ, ತಂತ್ರ ವಿಧಾನಗಳ ಚೌಕಟ್ಟನ್ನು ಹಾಕಿಕೊಂಡಿರುವುದಿಲ್ಲ. ಮೂಲದ ಒಟ್ಟು ಆಶಯಕ್ಕೆ ಧಕ್ಕೆ ಬರದಂತೆ ಹೋಗುತ್ತಿರಬೇಕಷ್ಟೆ. ಇಂಥ ಭಾಷಾಂತರಗಳ ನಿಷ್ಕೃಷ್ಟತೆಯ ಬಗ್ಗೆ ನಾವು ದೂರುವಂತೆಯೂ ಇಲ್ಲ. "...to translations that are so satisfactory in practice that a grumble at words or phrases here and there may be dismissed as a quibble" ಎಂಬ ಸೆವೊರಿ ಹೇಳಿಕೆಯನ್ನು ಈ ದಿಶೆಯಲ್ಲಿ ಗಮನಿಸಬಹುದು.

ಇಂಥ ಭಾಷಾಂತರಗಳಲ್ಲಿ ಸಾಮಾನ್ಯವಾಗಿ ಓದುಗ ಮೂಲಭಾಷೆಯ ಬಗ್ಗೆ, ಅದರಲ್ಲಿರುವ ಭಾಷಿಕ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ. ಹಾಗೂ ಭಾಷಾಂತರಕಾರ ಸಹ ಮೂಲದಲ್ಲಿರುವ ಅಸ್ಪಷ್ಟವಾದ ಕೆಲವು ಪದಗಳನ್ನು ಅಥವಾ ವಾಕ್ಯಗಳನ್ನು ಕೈಬಿಟ್ಟು ಮುಂದೆ ಹೋಗಬಹುದು. ಕೆಲವೆಡೆ ಸಂಗ್ರಹವಾಗಿಯೂ ಹೇಳಿಬಿಟ್ಟು ಮುಂದೆ ಹೋಗಬಹುದು. ಶೈಲಿಗಿಂತ ವಿಷಯನಿರೂಪಣೆಗೆ ಇಲ್ಲಿ ಹೆಚ್ಚು ಗಮನ ಕೊಡಬೇಕು. ಯಾವುದೇ ಒಂದು ವಿದೇಶಿ ಭಾಷೆಯನ್ನು, ಅದರ ಕೃತಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡುವ ಸಂಶೋಧನ ವಿದ್ಯಾರ್ಥಿಗಿಂತ ಸಾಮಾನ್ಯ ಓದುಗನಿಗೆ ಪರ್ಯಾಪ್ತ ಭಾಷಾಂತರಗಳು ಮನರಂಜನೆ ಒದಗಿಸುತ್ತವೆ.

ಸಂಯುಕ್ತ ಭಾಷಾಂತರ ಅಥವಾ ಮಿಶ್ರಭಾಷಾಂತರದಲ್ಲಿ ಗದ್ಯವನ್ನು ಗದ್ಯಕ್ಕೆ, ಪದ್ಯವನ್ನು ಗದ್ಯಕ್ಕೆ, ಪದ್ಯವನ್ನು ಪದ್ಯಕ್ಕೆ, ನಾಟಕವನ್ನು ಗದ್ಯಕ್ಕೆ, ನಾಟಕವನ್ನು ನಾಟಕಕ್ಕೆ ಅನುವಾದಿಸುವುದೇ ಮುಂತಾದ ಭಾಷಾಂತರ ಚಟುವಟಿಕೆಗಳು ಕಂಡುಬರುತ್ತವೆ. ನಮ್ಮ ಪ್ರಾಚೀನ ಭಾಷಾಂತರಗಳ ಸಿಂಹಕಾಲು ಈ ವರ್ಗಕ್ಕೆ ಸೇರುತ್ತವೆ. ಈ ಭಾಷಾಂತರಗಳಲ್ಲಿ ಕೃತಿಯ ದೇಶ, ಕಾಲ, ಪ್ರಕಾರ, ಓದುಗ ಮುಂತಾದ ಎಲ್ಲ ಪ್ರಾಚಲಗಳನ್ನೂ (parameters) ದೃಷ್ಟಿಯಲ್ಲಿಟ್ಟುಕೊಂಡು ವಿಶಿಷ್ಟವಾದ ತಂತ್ರ-ವಿಧಾನಗಳನ್ನು ರೂಪಿಸಿಕೊಳ್ಳಬೇಕು. ವಾಸ್ತವವಾಗಿ ಭಾಷಾಂತರಕಾರರಿಗೆ, ಭಾಷಾಂತರದ ವಿದ್ಯಾರ್ಥಿಗಳಿಗೆ, ವಿಮರ್ಶಕರಿಗೆ ಕಸರತ್ತನ್ನು ಒದಗಿಸುದು ಈ ವರ್ಗದ ಕೃತಿಗಳೇ. ಈ ಕೃತಿಗಳನ್ನು ಭಾಷಾಂತರ ಮಾಡುವಾಗ ಅಗತ್ಯವೆನಿಸುವ ಬೌದ್ಧಿಕ ಕಸರತ್ತಿನಿಂದಾಗಿ ಪ್ರಜ್ಞಾವಂತನಾದ ಭಾಷಾಂತರಕಾರನಿಗೆ ಓದುಗನಿಗೆ ವಿಮರ್ಶಕನಿಗೆ ವಿಶೇಷವಾದ ಬೌದ್ಧಿಕ ಆನಂದ ಉಂಟಾಗುತ್ತದೆ. ಲೇಖಕನ ಬಗ್ಗೆ ಅಥವಾ ಕೃತಿಯ ಬಗ್ಗೆ ವಿಶೇಷ ಆದರವನ್ನು ತಳೆದು ಆದರಿಂದ ತನಗೆ ಉಂಟಾದ ಆನಂದವನ್ನು ತನ್ನ ಭಾಷಾ ಸಮಾಜಕ್ಕೆ ಹಂಚುವ ಕಳಕಳಿ ತುಡಿತಗಳಿಂದ ಭಾಷಾಂತರಕಾರ ಇಲ್ಲಿ ಕೆಲಸಕ್ಕಿಳಿಯುತ್ತಾನೆ. ಹಾಗಾಗಿ ಈ ವರ್ಗದ ಭಾಷಾಂತರಗಳನ್ನು ಮಾಡುವಾಗ ನಿರ್ದಿಷ್ಟವಾದ ತಂತ್ರ ಮತ್ತು ವಿಧಾನಗಳನ್ನು ಅನುಸರಿಸುವುದು ಅಗತ್ಯ.

ನಮೂರಿ ಹೇಳುವ ನಾಲ್ಕನೇ ವರ್ಗ ಶಾಸ್ತ್ರೀಯ, ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳಿಗೆ ಸಂಬಂಧಪಟ್ಟ ಭಾಷಾಂತರಗಳನ್ನು ಒಳಗೊಳ್ಳುತ್ತದೆ. ಇಲ್ಲಿ ವಿಷಯ ಪ್ರತಿಪಾದನೆ, ವಸ್ತುನಿಷ್ಠತೆ ಮುಖ್ಯ. ಶೈಲಿ ಅಥವಾ ನಿರೂಪಣ ವಿಧಾನ ಗೌಣ. ಈ ರೀತಿಯ ಭಾಷಾಂತರಗಳನ್ನು ಮಾಡಬೇಕಾದರೆ ವಿಶೇಷ ಅರ್ಹತೆಗಳು ಅಗತ್ಯ. ಸಂಬಂಧಪಟ್ಟ ಶಾಸ್ತ್ರ ಅಥವಾ ವಿಜ್ಞಾನದ ಬಗ್ಗೆ ಆತನಿಗೆ ಜ್ಞಾನ ಇರಬೇಕು. ಇಂಥ ಬರವಣಿಗೆಗಳಿಗೇ ವಿಶಿಷ್ಟವಾದ ಭಾಷೆ ಮತ್ತು ನುಡಿಗಟ್ಟುಗಳ ಬಳಕೆಯನ್ನು ಅವನು ಬಲ್ಲವನಾಗಿರಬೇಕು. ಹೊಸದಾಗಿ ಎದುರಾಗುವ ಕಲ್ಪನೆಗಳನ್ನು ಕುರಿತು ಚೊಕ್ಕವಾಗಿ ನಿರೂಪಿಸುವ, ಅಗತ್ಯಕ್ಕನುಗುಣವಾಗಿ ಹೊಸ ಪದಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿರಬೇಕು.

ಭಾಷಾಂತರಕ್ಕೆ ಸಂಬಂಧಪಟ್ಟ ಮೂಲಭೂತ ತತ್ವಗಳನ್ನು ಮತ್ತು ಸಿದ್ಧಾಂತಗಳನ್ನು ಗಮನಿಸುತ್ತಾ ಹೋದರೆ ಅದಕ್ಕೆ ಅಗತ್ಯವಾದ ತಂತ್ರಗಳು ಮತ್ತು ವಿಧಾನಗಳು ನಮಗೆ ಎದುರಾಗುತ್ತಾ ಹೋಗುತ್ತವೆ. ತತ್ವಗಳನ್ನೂ ಸಿದ್ಧಾಂತಗಳನ್ನೂ ಅರಿಯುವ ಕಾಯ್ದುಕೊಳ್ಳುವ ಅಳವಡಿಸಿಕೊಳ್ಳುವ ನಮ್ಮ ಪ್ರಯತ್ನಗಳೆ ಭಾಷಾಂತರದ ತಂತ್ರ ಮತ್ತು ವಿಧಾನಗಳಿಗೆ ದಾರಿಮಾಡಿಕೊಡುತ್ತವೆ. ಪೋಸ್ಟ್‌ಗೇಟ್ ಹೇಳಿರುವ ಭಾಷಾಂತರ ತತ್ವಗಳನ್ನು ಗಮನಿಸಿದರೆ ಭಾಷಾಂತರ ತಂತ್ರ ವಿಧಾನಗಳಿಂದ ನಾವು ಏನನ್ನು ಸಾಧಿಸಬೇಕೆಂಬ ವಿಚಾರ ವಿದಿತವಾಗುತ್ತದೆ. ಆತನ ತತ್ವಗಳೆಂದರೆ ವಿಧೇಯತಾ ತತ್ವ

(principle of fidelity) 2 ಆನಂದ ತತ್ವ (principle of the pleasure of the reader) 3. ಅನುರೂಪತಾ ತತ್ವ (principle of commensurateness) 4. ಪರಿಹಾರ ತತ್ವ (principle of compensation) ಮತ್ತು 5. ಮೂಲಾಭಾಸ ತತ್ವ (principle of originalness).

ವಿಧೇಯತಾ ತತ್ವ ಹೆಚ್ಚು ಕಡಿಮೆ ಯಾವ ವಿವಾದವೂ ಇಲ್ಲದೆ ಎಲ್ಲರಿಂದಲೂ ಮಾನ್ಯವಾಗಿರುವ ತತ್ವ. ಆದರೆ ಇದು 'by general consent though not by universal practice' ಎನ್ನುವ ಮಾತನ್ನು ಗಮನದಲ್ಲಿಡಬೇಕು. ಫಾದರ್ ಬ್ಲ್ಯಾಸ್ ಹೇಳುವಂತೆ ಮೂಲವನ್ನು ತಪ್ಪಾಗಿ, ರೆಕ್ಕೆಪುಕ್ಕ ಕತ್ತರಿಸಿ ಅಥವಾ ಕೋಡು ಬಾಲಗಳನ್ನು ಸಿಕ್ಕಿಸಿ ಭಾಷಾಂತರಿಸಬಾರದು. ಭಾಷಾಂತರಕಾರ ಮತ್ತು ಮೂಲಲೇಖಕನ ನಡುವೆ ಇದರಿಂದ ಭಾವಿಸಲಾಗುವ ಅಲಿಖಿತ ಒಪ್ಪಂದಕ್ಕೆ ತಿಳಿದೊ ತಿಳಿಯದೆಯೋ ವಿಶ್ವಾಸದ್ರೋಹವನ್ನು ಎಸಗಬಾರದು. ಭಾಷಾಂತರಕಾರ ಮೂಲ ಮತ್ತು ಉದ್ದಿಷ್ಟ ಭಾಷೆಗಳೆರಡಕ್ಕೂ ವಿಧೇಯನಾಗಿ ಮುಂದುವರಿಯಬೇಕು. ಅಸಂಗತತೆಯಲ್ಲೂ (absurdity) ವಿಧೇಯನಾಗಿರಬೇಕೆಂದು ಫಿಲಿಮೋರ್ ಹೇಳಿರುವುದು ಸಹ ಗಮನಾರ್ಹ.

ಮೂಲಲೇಖಕನನ್ನು ಓದುಗನ ಮುಂದೆ ಎಷ್ಟು ಆಕರ್ಷಕವಾಗಿ ಸಾಧ್ಯವೊ ಅಷ್ಟು ಆಕರ್ಷಕವಾಗಿ, ಆತನ ಸ್ವಂತಿಕೆಯನ್ನು ಕಳೆಯದೆ ಇಡಬೇಕೆಂಬುದು ಡ್ರೈಡನ್ನನ ಅಭಿಪ್ರಾಯ. ಆದರೆ ಆನಂದವನ್ನು ಹೆಚ್ಚಾಗಿ ಉಂಟುಮಾಡುವ ಭರದಲ್ಲಿ ಮೂಲವನ್ನು ಇನ್ನೂ ಹೆಚ್ಚು ಚೆನ್ನಾಗಿ ಮಾಡುತ್ತೇನೆಂಬ ಸಾಹಸಕ್ಕೆ ಕೈಹಾಕಬಾರದು. ಮೂಲ ತೆವಳುತ್ತಿದ್ದರೆ ಭಾಷಾಂತರ ಹಾರುವಂತಿರಬಾರದು. ಹಾಗೆಯೆ, ಮೂಲಾಭಾಸತ್ವ ತತ್ವಕ್ಕನುಗುಣವಾಗಿ ಆದಷ್ಟು ಮಟ್ಟಿಗೆ ಓದುಗನಿಗೆ ತಾನೊಂದು ಭಾಷಾಂತರವನ್ನು ಓದುತ್ತಿದ್ದೇನೆಂಬ ಕಲ್ಪನೆ ಪದೇ ಪದೇ ಬರಬಾರದು. ಸ್ವತಂತ್ರ ಕೃತಿಯೇನೋ ಎಂಬಂತೆ ಓದಿಸಿಕೊಳ್ಳುವುದು ಉತ್ತಮ ಭಾಷಾಂತರದ ಲಕ್ಷಣ.

ಗಾತ್ರ, ಭಾವಾಭಿವ್ಯಕ್ತಿ, ಚಿಂತನ ಇವೆಲ್ಲ ಒಟ್ಟಾರೆಯಾಗಿ ಭಾಷಾಂತರದಲ್ಲಿ ಮೈದಳೆಯಬೇಕೆನ್ನುವುದು ಅನುರೂಪತಾ ತತ್ವದ ಆಶಯ. ಹಾಗೆಯೆ, ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಹೋಗಬೇಕಾದರೆ ಮೂಲದ ಎಲ್ಲ ಸೊಬಗೂ— ಭಾಷೆ, ಭಾವ, ಬಳುಕು, ಲಯ, ನಾದ—ಎಲ್ಲ ರೀತಿಯಲ್ಲಿ ಉದ್ದಿಷ್ಟ ಭಾಷೆಯಲ್ಲಿ ಭಟ್ಟಿಯಿಳಿಯದೆ ಸ್ವಲ್ಪ ಭಾಗ ಆವಿಯಾಗಿಹೋಗುವ ಸಂಭವವೇ ಹೆಚ್ಚು. ಅಂಥ ಸಂದರ್ಭದಲ್ಲಿ, ಉಳಿದ ತತ್ವಗಳ ವ್ಯಾಪ್ತಿಗೊಳಪಟ್ಟು, ಅನುವಾದ ಮೂಲದ '*caput mortuum*' ಆಗದಂತೆ ಉಳಿಸಲು ಏನನ್ನಾದರೂ ಸೇರಿಸಬೇಕೆಂದು ಪರಿಹಾರ ತತ್ವ ಸೂಚಿಸುತ್ತದೆ. (ಈ ಸ್ವಾತಂತ್ರ್ಯವನ್ನು ಎಂಥ ಸ್ಥಿತಿಯಲ್ಲೂ ದುರುಪಯೋಗ ಪಡಿಸಿಕೊಳ್ಳಬಾರದು!) ಈ ತತ್ವಗಳನ್ನೆಲ್ಲ ಯಾವುದೇ ಭಾಷಾಂತರ ಕಾರ್ಯದಲ್ಲಿ ಅನ್ವಯಿಸಬೇಕಾದರೆ ಅವು ಪರಸ್ಪರಾವಲಂಬಿಗಳಾಗಿರುವಂತೆ,

ಒಂದಕ್ಕೊಂದು ಇನ್ನೊಂದು ಪೂರಕವಾಗಿರುವಂತೆ ನೋಡಿಕೊಳ್ಳುವುದು ಅವಶ್ಯಕ.

ಭಾಷಾಂತರ ಪ್ರಕ್ರಿಯೆಯನ್ನು ನಾವು ಈಗ ಹಂತಹಂತವಾಗಿ ಪರಿಗಣಿಸಬಹುದು. ನಮಗೆ ಎದುರಾಗುವ ಸಮಸ್ಯೆಗಳನ್ನು ಕ್ರಮವಾಗಿ ಪರಿಹರಿಸಿಕೊಳ್ಳುತ್ತಾ ಹೋದರೆ ಅಗತ್ಯವಾದ ತಂತ್ರ ಮತ್ತು ವಿಧಾನಗಳು ಎದುರಾಗುತ್ತಾ ಹೋಗುತ್ತವೆ. ಇಲ್ಲಿ ನಾವು ಕ್ರಮವಾಗಿ ಧ್ವನಿ, ರೂಪ, ಪದ, ಪದವೃಂದ, ವಾಕ್ಯ ಈ ಹಂತಗಳಲ್ಲಿ ಚರ್ಚೆಯನ್ನು ಬೆಳೆಸಬೇಕಾಗುತ್ತದೆ. ಪ್ರತಿಯೊಂದು ಹಂತದಲ್ಲೂ ಮೂಲ ಮತ್ತು ಉದ್ದಿಷ್ಟ ಭಾಷೆಗಳ ನಡುವೆ ಗಮನಾರ್ಹವಾದ ವ್ಯತ್ಯಾಸಗಳು ತಲೆಹಾಕಬಹುದು. ಇವುಗಳಲ್ಲೆಲ್ಲ ಅರ್ಥ ವಿಶೇಷವಾದ ಪಾತ್ರವನ್ನು ವಹಿಸುತ್ತದೆ.

ಪ್ರಪಂಚದಲ್ಲಿರುವ ಭಾಷೆಗಳನ್ನು ಅವುಗಳು ಯಾವ ಯಾವ ಭಾಷಾಪರಿವಾರಗಳಿಗೆ ಸೇರುತ್ತವೆಂಬ ಆಧಾರದ ಮೇಲೆ ಜ್ಞಾತಿ ಭಾಷೆಗಳು (cognate languages), ಬಂಧು ಭಾಷೆಗಳು (related languages) ಮತ್ತು ಮಿತ್ರ ಭಾಷೆಗಳು (friendly languages) ಎಂದು ವಿಂಗಡಿಸಿದ್ದಾರೆ. ಕನ್ನಡ, ತಮಿಳು, ತೆಲುಗು, ಮಲಯಾಳಂ ಮುಂತಾದ ದ್ರಾವಿಡ ಪರಿವಾರದ ಭಾಷೆಗಳು ಜ್ಞಾತಿ ಭಾಷೆಗಳು. ಇಲ್ಲಿ ಪದಕೋಶ, ಅರ್ಥ, ವ್ಯಾಕರಣ ಪ್ರಕ್ರಿಯೆಗಳಲ್ಲಿ ಸಾಕಷ್ಟು ಸಾಮ್ಯ ಕಂಡುಬರುತ್ತದೆ. ಹಾಗೆಯೆ ಹಿಂದಿ, ಭೋಜಪುರಿ, ಅವಧಿ, ಬಂಗಾಳಿ, ಬಿಹಾರಿ ಮುಂತಾದ ಭಾಷೆಗಳೂ ಜ್ಞಾತಿ ಭಾಷೆಗಳು. ವ್ಯಾಕರಣ, ರಚನೆ ಮುಂತಾದ ದೃಷ್ಟಿಗಳಿಂದ ಬೇರೆಯಾದರೂ ಒಂದೇ ಸಾಂಸ್ಕೃತಿಕ ಹಿನ್ನೆಲೆಯನ್ನು ಹಂಚಿಕೊಂಡಿರುವ, ಪದಕೋಶ ಮತ್ತು ಅರ್ಥದ ದೃಷ್ಟಿಯಿಂದ ಸಾಕಷ್ಟು ಹೋಲಿಕೆಯನ್ನೂ ನಂಟನ್ನೂ ತೋರಿಸುವ ಭಾಷೆಗಳು ಬಂಧು ಭಾಷೆಗಳು. ಉದಾಹರಣೆಗೆ, ಕನ್ನಡ–ಹಿಂದಿ, ಬಂಗಾಳಿ–ಕನ್ನಡ ಇವೆಲ್ಲ ಬಂಧುಭಾಷೆಗಳು. ಪದಕೋಶ, ಅರ್ಥ, ವ್ಯಾಕರಣ, ಸಾಂಸ್ಕೃತಿಕ ಹಿನ್ನೆಲೆ, ಜಾನಾಂಗಿಕ ವ್ಯತ್ಯಾಸಗಳು ಇವೇ ಮುಂತಾದ ಕಾರಣಗಳಿಂದ ಸಂಪೂರ್ಣವಾಗಿ ಬೇರೆ ಬೇರೆಯಾಗಿದ್ದು ರಾಜಕೀಯ, ಧಾರ್ಮಿಕ, ವಿಜ್ಞಾನ, ಸಾಂಸ್ಕೃತಿಕ ಮುಂತಾದ ವಿಶೇಷ ಕಾರಣಗಳಿಂದಾಗಿ ಪರಸ್ಪರ ಸಮೀಪಿಸುತ್ತಿರುವ ಭಾಷೆಗಳನ್ನು ಮಿತ್ರ ಭಾಷೆಗಳು ಎನ್ನುತ್ತೇವೆ. ಕನ್ನಡ–ಇಂಗ್ಲಿಸ್, ಕನ್ನಡ–ಪಾರಸಿ, ಕನ್ನಡ-ಜರ್ಮನ್ ಇವೆಲ್ಲ ಮಿತ್ರ ಭಾಷೆಗಳು. ಜ್ಞಾತಿಭಾಷೆಗಳಲ್ಲಿ ಅನುವಾದ ಸಾಪೇಕ್ಷವಾಗಿ ಸುಲಭ, ಬಂಧು ಭಾಷೆಗಳಲ್ಲಿ ಅದಕ್ಕಿಂತ ಸ್ವಲ್ಪ ಕಷ್ಟ, ಆದರೆ ಮಿತ್ರಭಾಷೆಗಳಲ್ಲಿ ಸಾಕಷ್ಟು ಕಷ್ಟವಾಗಿರುತ್ತದೆ. ಮೇಲೆ ಹೇಳಿದ ಧ್ವನಿ, ರೂಪ ಮುಂತಾದ ಹಂತಗಳಿಗೆ ಸಂಬಂಧಪಟ್ಟಂತೆಯೂ ಜ್ಞಾತಿ' ಬಂಧು ಮತ್ತು ಮಿತ್ರ ಭಾಷೆಗಳಲ್ಲಿ ಕ್ರಮವಾಗಿ ಒಂದೋದು ಪಟ್ಟಿನ ಅಂತರ ಹೆಚ್ಚಾಗುತ್ತಾ ಹೋಗುತ್ತದೆ. ಆದರೆ ನಮಗೆ ತೀರ ಅಪರಿಚಿತವಾದ (ಉದಾ. ಆಫ್ರಿಕನ್ ಭಾಷೆಗಳು) ಭಾಷೆಗಳನ್ನು ಬೇರೆ ಯಾವ ಮೂಲದಿಂದ ಭಾಷಾಂತರಿಸಲು ಹೋದರೂ ಕಂದರ ಹೆಚ್ಚಾಗುತ್ತಿದ್ದಂತೆ ಕಾಣಿಸುತ್ತದೆ.

ಭಾಷಾಂತರ ಪ್ರಕ್ರಿಯೆಯನ್ನು ಕೋಶ ಮತ್ತು ವ್ಯಾಕರಣ ಎರಡು ದೃಷ್ಟಿಗಳಿಂದ ಗಮನಿಸಬೇಕು. ಇದಕ್ಕೆ 'lexis' ಮತ್ತು 'grammar' ಎನ್ನುತ್ತಾರೆ. ಯಾವುದೇ ಒಂದು ಪದದ ಅರ್ಥ ದೇಶ, ಕಾಲ, ಪರಿಸರ, ಸಂಸ್ಕೃತಿ ಮುಂತಾದ ಅಂಶಗಳನ್ನು ಅವಲಂಬಿಸಿರುತ್ತದೆ. ನಿರಂತರವಾಗಿ ಬದಲಾಗುತ್ತಿರುವುದೇ ಒಂದು ಜೀವಂತ ಭಾಷೆಯ ಸಲ್ಲಕ್ಷಣವಾಗಿರುವುದರಿಂದ ಯಾವುದೇ ಒಂದು ಪದಕ್ಕೆ ತತ್ಕಾಲದ ಅರ್ಥ (meaning in currency) ಏನು, ಅಭಿವ್ಯಕ್ತಿ ಸಾಮರ್ಥ್ಯ (expressiveness) ಎಷ್ಟಿದೆ ಎಂಬುದನ್ನು ನಿರ್ಧರಿಸಿಕೊಳ್ಳಬೇಕು. 'ಟೋಪಿ' ಎನ್ನುವ ಪದಕ್ಕೆ ಈಗ ಇರುವ ಅರ್ಥಕ್ಕೂ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಇದ್ದ ಅರ್ಥಕ್ಕೂ ಇರುವ ವ್ಯತ್ಯಾಸ ಎಲ್ಲರಿಗೂ ವಿದಿತ,

ಅರ್ಥವಿಜ್ಞಾನದಲ್ಲಿ (semantics) ಹೇಳುವಂತೆ ಪದಗಳು ಅರ್ಥದ ದೃಷ್ಟಿಯಿಂದ ವಿಸ್ತಾರ ಹೊಂದುತ್ತವೆ, ಸಂಕುಚಿತವಾಗುತ್ತವೆ, ಭಿನ್ನಾರ್ಥಕಗಳಾಗುತ್ತವೆ. ಚೆನ್ನಾಗಿ ವೀಣೆ ನುಡಿಸುತ್ತಿದ್ದವರು ಮಾತ್ರ ಒಂದು ಕಾಲದಲ್ಲಿ 'ಪ್ರವೀಣ'ರಾಗಿದ್ದರು. 'ಪಶು' ಯಾವುದೇ ಪ್ರಾಣಿಗೆ ಅನ್ವಯಿಸುವಂಥ ಪದವಾಗಿತ್ತು. ಕನ್ನಡದಲ್ಲಿ 'ಪಶು' → 'ಹಸು' ಆಗಿದೆ. 'ಮೃಗ' ಕೇವಲ ಜಿಂಕೆಯಾಗಿದ್ದು ಅನಂತರ ಎಲ್ಲ ಪ್ರಾಣಿಗಳಿಗೂ ಅನ್ವಯಿಸುವ ಪದವಾಯಿತು. ಸಿಂಹ ಹಾಗಾಗಿ 'ಮೃಗರಾಜ'ವಾಯಿತು.

ಪದಕ್ಕೆ ಅರ್ಥವಲಯವಿರುವಂತೆ ಭಾವವಲಯವೂ ಇರುತ್ತದೆ. ಭಾಷೆಯಲ್ಲಿ ಪದ ರೂಪುಗೊಂಡ ಅನಂತರ ಬೇರೆಬೇರೆ ಉದ್ದೇಶಗಳಿಗಾಗಿ ಪದದ ಅರ್ಥವ್ಯಾಪ್ತಿ ವಿಸ್ತಾರವಾಗುತ್ತಾ ಹೋಗುತ್ತದೆ. ಅದಕ್ಕೆ ಹೊಸ ಹೊಸ ಛಾಯೆಗಳು ಉಂಟಾಗುತ್ತಾ ಹೋಗುತ್ತವೆ. ಹೊಸ ಹೊಸ ಅರ್ಥಸಂಪತ್ತನ್ನು ತುಂಬಿ ಒಂದೇ ಪದವನ್ನು ಅನೇಕ ರೀತಿಗಳಲ್ಲಿ ದುಡಿಸಿಕೊಳ್ಳುತ್ತೇವೆ. ನಮ್ಮ ಕಾವ್ಯಮೀಮಾಂಸೆಯಲ್ಲಿ ಬಳಕೆಯಲ್ಲಿರುವ ಲಕ್ಷಣಾ, ವ್ಯಂಜನಾ, ಧ್ವನಿ ಮುಂತಾದುವೆಲ್ಲವೂ ಈ ವಲಯಕ್ಕೆ ಸೇರುತ್ತವೆ. ಇವು ಬರಹಗಾರನ ವಿಶಿಷ್ಟ ಅಭಿವ್ಯಕ್ತಿಗೆ ಸಹಕಾರಿಗಳಾಗುತ್ತವೆ. Tiger, Lionಗಳನ್ನು ಶೌರ್ಯಕ್ಕೆ, Fox, Jackalಗಳನ್ನು ಕುಟಿಲೋಪಾಯಕ್ಕೆ, Ass, Pigಗಳನ್ನು ತಿಳಿಗೇಡಿತನಕ್ಕೂ ಕೊಳಚುತನಕ್ಕೂ ಪ್ರತೀಕವನ್ನಾಗಿಟ್ಟುಕೊಂಡು ಉದಾಹರಿಸಿ ಹೇಳುತ್ತೇವಷ್ಟೆ. ಇಂಥ ಸಂದರ್ಭಗಳಲ್ಲಿ ನಾವು ಪದದ ಸಾಂದರ್ಭಿಕ ಮತ್ತು ವ್ಯಾವಹಾರಿಕವಾದ ಅರ್ಥವನ್ನು ಮಾತ್ರ ಗಮನಿಸಬೇಕು.

ಅಂಕಿತನಾಮಗಳು ಬಳಕೆಯಲ್ಲಿ ಹೆಚ್ಚಾಗುತ್ತಿದ್ದಂತೆ ರೂಢನಾಮಗಳಾಗುವ ಸಂದರ್ಭವನ್ನೂ ಇಂತೆಡೆಗಳಲ್ಲಿ ಭಾಷಾಂತರಿಸಬೇಕಾದರೆ ಅಗತ್ಯವಾಗುವ ವಿಶಿಷ್ಟ ತಂತ್ರವನ್ನೂ ಇಲ್ಲಿ ನೋಡಬಹುದು. ಪುರಾಣೇತಿಹಾಸಗಳಲ್ಲಿ, ಮಹಾಕೃತಿಗಳಲ್ಲಿ ಬರುವ ಕೆಲವು ವ್ಯಕ್ತಿಗಳನ್ನು ಅವರ ಶೌರ್ಯಸಾಹಸಗಳಿಗಾಗಿಯೊ, ಬುದ್ಧಿವಂತಿಕೆಗಾಗಿಯೊ, ಮೂರ್ಖತನಕ್ಕೊ

ಅಥವಾ ಇನ್ನಾವ ವಿಶಿಷ್ಟ ಲಕ್ಷಣಕ್ಕೋ ಸಂಕೇತಗಳನ್ನಾಗಿ ತೆಗೆದುಕೊಂಡು ಆ ವೈಶಿಷ್ಟ್ಯಕ್ಕೆ ಅವರ ಹೆಸರನ್ನೇ ಬಳಸುವ ಸಂದರ್ಭ ಉಂಟು.

ಉದಾಹರಣೆಗೆ, ಅತ್ಯಂತ ದೊಡ್ಡ ಭಾರವನ್ನು ಹೊರುವಾತನನ್ನು 'Atlas' ಎನ್ನುತ್ತಾರೆ. ನಮ್ಮಲ್ಲಿ ಆದಿಶೇಷನ ತಲೆಯ ಮೇಲೆ ಭೂಮಿಯಿದ್ದರೂ ಅಟ್ಲಾಸನಿಗೂ ಆದಿಶೇಷನಿಗೂ ವ್ಯತ್ಯಾಸವಿದೆ. 'Herculean effort' ಅಂದರೆ ಅತ್ಯಂತ ಶ್ರಮ ಸಾಧ್ಯವಾದ ಕೆಲಸ ಮಾಡುವಿಕೆ ಎಂಬರ್ಥದಲ್ಲಿ ನಾವು 'ಭಗೀರಥ ಪ್ರಯತ್ನ' ಎನ್ನಬಹುದು. ವಾಷಿಂಗ್‌ಟನ್ ಇರ್ವಿಂಗನ 'Rip van winkle' ನಮಲ್ಲಿ 'ಓಬೀರಾಯ' ನಾಗಬಹುದು. ಇಂಥ ಪದನಿರ್ಣಯ ತಂತ್ರವನ್ನು 'ಸಮೀಕರಣ ತಂತ್ರ' ಎನ್ನಬಹುದು. ಆದರೂ ಅನೇಕ ಪದಗಳಿಗೆ ಇತರ ಭಾಷೆಗಳಲ್ಲಿ ತೃಪ್ತಿಕರವಾದ ಪರ್ಯಾಯಗಳು ದೊರೆಯುವುದಿಲ್ಲ. Quixote, utopianನಂಥ ಇಂಗ್ಲಿಷ್ ಪದಗಳಿಗೆ ಕನ್ನಡ ರೂಪಗಳು ತೃಪ್ತಿಕರವಾಗಿ ಸಿಗದೆ ಹೋಗಬಹುದು. ಹಾಗೆಯೆ ನಮ್ಮಲ್ಲಿ 'ಕುಂಭಕರ್ಣ' ನಿದ್ದೆಗೂ 'ಬಕಾಸುರ' ಹೊಟ್ಟೆಬಾಕತನಕ್ಕೂ, 'ಉತ್ತರ' ಒಣಜಂಬಕ್ಕೂ, 'ವಿಶ್ವಾಮಿತ್ರ ಕೋಪಕ್ಕೂ, 'ಹರಿಶ್ಚಂದ್ರ' ಸತ್ಯಕ್ಕೂ 'ನಕ್ಷತ್ರಿಕ' ಬೆನ್ನುಬಿಡದಿರುವುದಕ್ಕೂ 'ನಾರದ' ಚಾಡಿಹೇಳುವುದಕ್ಕೂ 'ಚಾಣಕ್ಯ' ತಂತ್ರಕ್ಕೂ 'ಶಕುನಿ' ಮೋಸಕ್ಕೂ 'ಕರ್ಣ' ದಾನಕ್ಕೂ 'ಮಂಥರೆ' ಕುತಂತ್ರ ಹೂಡಿ ತಲೆಕೆಡಿಸುವುದಕ್ಕೂ ಪ್ರತೀಕಗಳಾಗಿ ನಿಲ್ಲುತ್ತಾರೆಂದುಕೊಳ್ಳೋಣ. ಈ ಪದಗಳನ್ನು ರೂಢನಾಮಗಳಾಗಿ ಬಳಸಿದಾಗ ಭಾಷಾಂತರಿಸುವುದಕ್ಕಾಗಿ ಯಾವ ತಂತ್ರ ಬಳಸಬೇಕು ?

ಇಂಥ ಪದಗಳನ್ನು ಭಾಷಾಂತರಿಸಬೇಕಾದರೆ ಮೂರು ವಿಧಗಳುಂಟು. ಮೊದಲನೆಯದಾಗಿ ಮೂಲಭಾಷೆಯಲ್ಲಿ ರೂಢನಾಮ ತನ್ನ ಯಾವ ಗುಣದಿಂದಾಗಿ ಅಂಕಿತನಾದ ವ್ಯಕ್ತಿಯನ್ನು ಕುರಿತು ಹೇಳುತ್ತಿರುತ್ತದೆಯೊ, ಅದಕ್ಕೆ ಪರ್ಯಾಯವಾಗಿ ಉದ್ದಿಷ್ಟ ಭಾಷೆಯ ಪುರಾಣೇತಿಹಾಸ ಅಥವಾ ಮಹಾಕೃತಿಗಳಲ್ಲಿ ಕಂಡುಬರುವ ಅದೇ ರೀತಿಯ ವ್ಯಕ್ತಿಯನ್ನು ತೆಗೆದುಕೊಳ್ಳಬೇಕು. ಆ ವ್ಯಕ್ತಿ ಆ ವಿಶಿಷ್ಟಗುಣಕ್ಕೆ ಆ ಭಾಷೆಯಲ್ಲಿ ಹೆಸರುವಾಸಿಯಾಗಿರಬೇಕು. ಈ ತಂತ್ರವನ್ನು ಬಳಸಬೇಕಾದರೆ, ಭಾಷಾಂತರಕಾರ ಎರಡೂ ಭಾಷೆಗಳ ಪುರಾಣ, ಇತಿಹಾಸ, ಮಹಾಕೃತಿಗಳನ್ನೆಲ್ಲ ಓದಿಕೊಂಡಿರಬೇಕಲ್ಲದೆ ತತ್ಕಾಲಕ್ಕೆ ಆ ಅಂಕಿತನಾಮಗಳ ರೂಢಾರ್ಥಗಳು ಏನಾಗಿವೆ ಎಂಬುದನ್ನು ಆಯಾ ಭಾಷೆ ಮತ್ತು ಜನರ ಸಂಪರ್ಕದಿಂದ ತಿಳಿದಿರಬೇಕು. ಉದಾಹರಣೆಗೆ, ಇಪ್ಪತ್ತು ವರ್ಷ ಮಲಗಿದ್ದರೂ ರಿಪ್‌ವಾನ್ ವಿಂಕಲ್ ತನ್ನ ನಿದ್ದೆಗಿಂತಲೂ ತನ್ನ ಹಳೆಯ ಭಾವನೆಗಳನ್ನೂ ವಿಚಾರಗಳನ್ನೂ ಪ್ರತಿನಿಧಿಸುತ್ತಾನೆ. ಹಾಗಾಗಿ ಕನ್ನಡದಲ್ಲಿ ಅವನು 'ಓಬೀರಾಯ'ನಾಗಬಹುದೆ ವಿನಾ 'ಕುಂಭಕರ್ಣ' ನಾಗಲಾರ. ಇಂಗ್ಲಿಷಿನ ಅಥವಾ ಗ್ರೀಕರ 'Helen of Troy' ಗೆ ಸಮಾನರು ನಮ್ಮ ಮಹಾಕೃತಿಗಳಲ್ಲಿ ಬರುವ ನಾಯಕಿಯರೆಲ್ಲರೂ ಆಗ

ಬಹುದು. ಅವರಲ್ಲಿ ಯಾರಿಗೆ ಈ ಪಟ್ಟ ಕಟ್ಟುವುದೆಂದು ಹೇಳುವುದು ಕಷ್ಟವಾಗುತ್ತದೆ. ನಮ್ಮಲ್ಲಿ ಸೌಂದರ್ಯದ ವರ್ಣನೆಗೇನೂ ಕೊರತೆಯಿಲ್ಲವಲ್ಲ! ಏನೇ ಆಗಲಿ, ಈ ರೀತಿಯ ಪರ್ಯಾಯಗಳನ್ನು ಹುಡುಕಿಕೊಂಡು ಅಷ್ಟೇ ಪ್ರಭಾವೋತ್ಪಾದಕವಾಗಿ ಹೇಳುವ ತಂತ್ರವನ್ನು ಬಳಸುವುದು ಮೊದಲನೇ ದರ್ಜೆ ಭಾಷಾಂತರ.

ಮೂಲದಲ್ಲಿರುವ ರೂಢ ಅಂಕಿತನಾಮದ ಸಂದರ್ಭ ಮತ್ತು ವ್ಯಾವಹಾರಿಕ ಅರ್ಥವನ್ನು ಗ್ರಹಿಸಿ ಅದನ್ನು ನಮ್ಮ ಭಾಷೆಯ ಅಂಥದೇ ಒಂದು ಪದದಿಂದ ಪ್ರತಿನಿಧಿಸುವುದು ಕಷ್ಟವಾದರೆ ಅದರ ಭಾವವನ್ನು ಬರೆಯುವುದು ಎರಡನೆಯ ತಂತ್ರ. ಉದಾಹರಣೆಗೆ 'Helen of Troy' ಎಂಬುದಕ್ಕೆ 'ಸುರಸುಂದರಿ', 'ಅನುಪಮ ಸುಂದರಿ' ಎಂದು ಭಾಷಾಂತರಿಸಿಕೊಳ್ಳಬೇಕು. ಇದರಿಂದಾಗಿ, ಮೂಲದ ಪದ ಪರ್ಯಾಯದ ಅವತರಣವಾಗದಿದ್ದರೂ ಆಶಯ ವ್ಯಕ್ತವಾಗುತ್ತದೆ. ಇದು ಎರಡನೆ ದರ್ಜೆಯ ಭಾಷಾಂತರ.

ಕೆಲವು ವೇಳೆ, ಭಾಷಾಂತರಕಾರ ಉತ್ತಮ ಭಾಷಾಂತರವನ್ನು ಕೊಡುವ ಭರದಲ್ಲಿ ಮೂಲದ ಪದದ ಆಶಯವನ್ನು ಸರಿಯಾಗಿ ಗ್ರಹಿಸದೆ ಬೇರೆ ಯಾವುದೋ ಪ್ರತೀಕವನ್ನುಳ್ಳ ಅಂಕಿತ ನಾಮಪದವನ್ನು ಬಳಸಿದರೆ ಮೂಲ ಲೇಖಕನ ಅಥವಾ ಕವಿಯ ಆಶಯಕ್ಕೇ ಧಕ್ಕೆಯೊದಗುತ್ತದೆ, ಓದುಗನನ್ನು ತಪ್ಪು ದಾರಿಯಲ್ಲಿ ನಡೆಸಿದಂತಾಗುತ್ತದೆ. ಭಾಷಾಂತರ ಸಂಹಿತೆಯಲ್ಲಿ ಇದು ಘೋರಾಪರಾಧ. ಇದನ್ನು ಭಾಷಾಂತರ ಎನ್ನುವುದೂ ತಪ್ಪಾಗುತ್ತದೆ. ಇದು ಮೂರನೆಯ ಮತ್ತು ಕನಿಷ್ಠ ದರ್ಜೆಯ ಪ್ರಯತ್ನ.

ಒಂದೇ ಮೂಲದಿಂದ ಎರಡು ಭಾಷೆಗಳು ಪದಗಳನ್ನು ಎರವಲು ಪಡೆದಿದ್ದರೂ ಅಂಥ ಅನೇಕ ಪದಗಳು ಎರಡು ಭಾಷೆಗಳಲ್ಲೂ ಬೇರೆ ಬೇರೆ ಅರ್ಥದೊಡನೆ ಬಳಕೆಯಾಗುತ್ತಿರುತ್ತವೆ. ಹಿಂದಿ ಮತ್ತು ಕನ್ನಡ ಭಾಷೆಗಳಲ್ಲಿ ಸಂಸ್ಕೃತದಿಂದ ಎರವಲಾಗಿ ಬಂದಿರುವ ಉಪನ್ಯಾಸ, ಆಹ್ವಾನ, ಸಾವಧಾನ, ಪ್ರಬಂಧ ಮುಂತಾದ ಪದಗಳನ್ನು ಪರಿಗಣಿಸಬಹುದು.

ಸಂಸ್ಕೃತದಿಂದ ಎರವಲು ಪಡೆದ ಪದ	ಕನ್ನಡದಲ್ಲಿ ಅರ್ಥ	ಹಿಂದಿಯಲ್ಲಿ ಅರ್ಥ	ಕನ್ನಡದ ಅರ್ಥಕ್ಕೆ ಹಿಂದಿ ಪದ
ಉಪನ್ಯಾಸ	ಭಾಷಣ	ಕಾದಂಬರಿ	ಭಾಷಣ್
ಆಹ್ವಾನ	ಆಮಂತ್ರಣ	ಸವಾಲು	ನಿಮಂತ್ರಣ್
ಸಾವಧಾನ	ನಿಧಾನವಾಗಿ	ಎಚ್ಚರಿಕೆ	ಆರಾಮ್‌ಸೆ
ಪ್ರಬಂಧ	ಬರವಣಿಗೆ ಪ್ರಕಾರ (essay)	ವ್ಯವಸ್ಥೆ	ನಿಬಂಧ್

ಈ ರೀತಿಯ ಪದಗಳ ಬಳಕೆಯಲ್ಲಿ ಭಾಷಾಂತರಕಾರ ಮೈಯೆಲ್ಲಾ ಕಣ್ಣಾಗಿಟ್ಟುಕೊಂಡಿರಬೇಕು. ಇವು ಗೋಮುಖ ವ್ಯಾಘ್ರಗಳಂತೆ. ಸುಲಭವಾಗಿ ತಪ್ಪುದಾರಿಗೆಳೆಯುತ್ತವೆ.

ಯಾವುದೇ ಭಾಷೆ ತನ್ನ ಐತಿಹಾಸಿಕ, ಭೌಗೋಳಿಕ, ಸಾಂಸ್ಕೃತಿಕ ಹಿನ್ನೆಲೆಯ ಮೇಲೆ ಬೆಳೆದುಬಂದಿರುತ್ತದೆ. ಇಂಗ್ಲಿಷಿಗಿರುವಂಥ ಅಂತರರಾಷ್ಟ್ರೀಯವಾದ ಮನ್ನಣೆ ಸಾಪೇಕ್ಷವಾಗಿ ತುಂಬ ಪ್ರಾಚೀನವಾದ ನಮ್ಮ ಕನ್ನಡಕ್ಕಿಲ್ಲ. ಒಂದು ಭಾಷೆಯ ಹಿರಿಮೆಗೆ ಈ ವ್ಯಾಪಕತೆಯೆ ಅಳತೆಗೋಲಲ್ಲ ಎಂಬುದು ಬೇರೆ ಮಾತು. ಪ್ರಪಂಚದ ದೈನಂದಿನ ಚಟುವಟಿಕೆಗಳ ಭಾಷಿಕ ಅವಶ್ಯಕತೆಗಳನ್ನು ಪೂರೈಸಲು ಇಂಗ್ಲಿಷ್ ದಿನೇ ದಿನೇ ಹೆಮ್ಮರದಂತೆ ಬೆಳೆಯುತ್ತಿದೆ. ಅತ್ಯಂತ ಸೂಕ್ಷ್ಮವಾದ ವಿಚಾರಗಳನ್ನೂ ಭಾವನೆಗಳನ್ನೂ ನಾಗರಿಕತೆಯ ಫಲವಾಗಿ ಬಂದಿರುವ ಕೈಗಾರಿಕೋತ್ಪನ್ನಗಳ ಹೆಸರುಗಳನ್ನೂ ಕುರಿತು ನಿರ್ದಿಷ್ಟವಾಗಿ ಇಂಗ್ಲಿಷಿನಲ್ಲಿ ಹೇಳಬಹುದಾಗಿದೆ. ಉದಾಹರಣೆಗೆ ಸೈಕಲ್, ಮೋಪೆಡ್, ಮೋಟಾರ್ ಸೈಕಲ್, ಸ್ಕೂಟರ್ ಎಲ್ಲಾ ದ್ವಿಚಕ್ರಿಗಳೆ; ಕಾರು, ವ್ಯಾನು, ಟ್ಯಾಕ್ಸಿ, ಜೀಪು, ಲಾರಿ, ಬಸ್ಸು ಎಲ್ಲವೂ ನಾಲ್ಕು (ಅಥವಾ ಆರು) ಚಕ್ರಗಳ ವಾಹನಗಳೇ. ಇವಕ್ಕೆಲ್ಲ ಬೇರೆ ಬೇರೆ ಪರ್ಯಾಯ ಪದಗಳನ್ನು ರೂಪಿಸುವುದು ನಮ್ಮಲ್ಲಿ ಕಷ್ಟ. ಇವುಗಳನ್ನು ಭಾಷಾಂತರ ಮಾಡಬೇಕಾದರೆ ಯಾವ ತಂತ್ರವನ್ನು ಬಳಸುವುದು ?

ನಾವು ಯಾವುದೇ ಪದವನ್ನು ರೂಪಿಸಿದರೂ ಅದು ಚಿಕ್ಕದಾಗಿ, ಚೊಕ್ಕವಾಗಿ, ಉಪಯೋಗಿಸಲು ಯೋಗ್ಯವಾಗುವಂತಿರಬೇಕು. ಅರ್ಥಪೂರ್ಣವಾಗಿರಬೇಕು ಇಲ್ಲವೆ ಕ್ಷಿಪ್ರವಾಗಿ ಅರ್ಥವನ್ನು ಮೈಗೂಡಿಸಿಕೊಂಡು ಸಾರ್ವಜನಿಕರ ಅಂಗೀಕಾರ ಮುದ್ರೆ ಅವುಗಳ ಮೇಲೆ ಬೀಳುವಂತಾಗಬೇಕು. 'Signal' ಎಂಬುವಕ್ಕೆ 'ಗಮನಾಗಮನ ಸೂಚನೆ ಪಟ್ಟಿ' ಎಂದು ಬರೆಯುವುದು ವ್ಯವಹಾರಯೋಗ್ಯವಲ್ಲ. Sign, Symbol, Signal, Code ಮುಂತಾದ ಪದಗಳೆಲ್ಲವೂ ಬೇರೆ ಬೇರೆ. ಸುಮ್ಮನೆ ಸಂಕೇತ, ಚಿಹ್ನೆ, ಗುರುತು ಎಂದು ಬರೆದರೆ ಸಾಲದು. Signal ಮೂರ್ತವಾಗಿರಬಹುದು. ಅಥವಾ ಕ್ಷಣಮಾತ್ರದಲ್ಲಿ ಕೊಟ್ಟು ಮಾಯವಾಗುವ ಸೂಚನೆಯಂತಿರಬಹುದು. ಇಂತೆಡೆಗಳಲ್ಲಿ 'ಸಿಗ್ನಲ್' ಎಂದು ಬರೆಯುವುದೇ ಹೆಚ್ಚು ವ್ಯವಹಾರ ಯೋಗ್ಯವಾದುದು. ನಮ್ಮಲ್ಲಿ ಪದಗಳಿಗೆ ಕೊರತೆಯಿಲ್ಲ, ಪದಗಳನ್ನು ಸೃಷ್ಟಿಸುವ ಶಕ್ತಿ ನಮ್ಮ ಭಾಷೆಗೆ ಕಡಮೆಯೆಂದಂತೂ ಖಂಡಿತ ಅಲ್ಲ. ಆದರೆ ಪರಬ್ರಹ್ಮರಾಗುವುದು ಭಾಷಾಂತರಕಾರರ ಉದ್ದೇಶವಲ್ಲ. ವ್ಯವಹಾರದಲ್ಲಿ ನಿಲ್ಲಬಲ್ಲಂಥ ಉಪಯುಕ್ತವಾದ ಪದಗಳ ಸೃಷ್ಟಿ ಮಾತ್ರ ಮಾಡಬೇಕು. ಪದಸೃಷ್ಟಿ ಭಾಷಾಂತರಕಾರನ ಶ್ರಮ ಮತ್ತು ಅಮೂಲ್ಯವಾದ ಸಮಯವನ್ನು ಕದಿಯುವ ಕಸರತ್ತಾಗಬಾರದು.

ಟೆಲಿಫೋನು, ಟೆಲಿವಿಷನ್, ರೇಡಿಯೊ, ಸಿನಿಮಾ, ಹೋಟೆಲು, ಫ್ಯಾನು ಮೊದಲಾದ ಪದಗಳಿಗೆ ನಮ್ಮಲ್ಲಿ ಪರ್ಯಾಯಗಳು ಸುಲಭವಾಗೇ ಸಿಗುತ್ತವೆ. ದೂರವಾಣಿ, ದೂರದರ್ಶನ, ಬಾನುಲಿ, ಚಲನಚಿತ್ರ, ಉಪಹಾರಗೃಹ, ಪಂಖ ಪದಗಳನ್ನು ಕ್ರಮವಾಗಿ ಬಳಸಬಹುದು. ಆದರೆ ಕಾಲಕ್ರಮೇಣ ಯಾವ ಪದ ಹೆಚ್ಚು ಚಾಲ್ತಿಯಲ್ಲಿ ಉಳಿಯು

ತ್ತದೆ. ಅವನ್ನು ಉಳಿಸಿಕೊಂಡು ಬೇರೆಯ ಪದವನ್ನು ಕೈಬಿಡುತ್ತಾ ಹೋಗಬಹುದು. ವಿಶೇಷ ಉದ್ದೇಶದಿಂದ ಯಾವುದಾದರೂ ಪದವನ್ನು ಚಾಲ್ತಿಗೆ ತರಬಯಸುವುದಾದರೆ, ಅದಕ್ಕೆ ಅಡ್ಡಿಯಿಲ್ಲ. ನಿತ್ಯ ಬಳಕೆಯ ಪರಭಾಷಾ ಪದಗಳನ್ನು ನಮ್ಮ ಭಾಷೆಗೆ, ಅಗತ್ಯವಾದಲ್ಲಿ ಅಲ್ಪಸ್ವಲ್ಪ ಮಾರ್ಪಾಡುಗಳೊಡನೆ ಸೇರಿಸಿಕೊಳ್ಳುತ್ತಾ ಹೋಗುವುದು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಸೂಕ್ತ. ಈ ರೀತಿಯಾಗಿ ಎರವಲು ಪಡೆಯುವುದರಲ್ಲಿ ಯಾವುದೇ ರೀತಿಯ ಮಡಿವಂತಿಕೆ ಅಥವಾ ಸಮೀಪದೃಷ್ಟಿ ಇಟ್ಟುಕೊಳ್ಳಬಾರದು.

ಪರ್ಯಾಯ ಪದಗಳನ್ನು ರೂಪಿಸಿಕೊಳ್ಳುವ ತಂತ್ರ ವಿಧಾನವನ್ನು ಇಲ್ಲಿ ಗಮನಿಸಬಹುದು. ಭಾಷಾಂತರದಲ್ಲಿ ಮೂಲದ ಪಠ್ಯಭಾಗವನ್ನು ಉದ್ದಿಷ್ಟ ಭಾಷೆಗೆ ತರಬೇಕಾದರೆ ಎದುರಾಗುವ ಮುಖ್ಯ ಸಮಸ್ಯೆಗಳಲ್ಲಿ ಪರ್ಯಾಯ ಪದಗಳ (equivalents) ಸಮಸ್ಯೆ ಒಂದು. ಇದು ಯಾವುದೇ ಭಾಷೆಯ ಮೂಲಭೂತ ಸಮಸ್ಯೆ. ಈಗಾಗಲೆ ಇಂಥ ಪರ್ಯಾಯ ಪದಗಳನ್ನು, ಪಾರಿಭಾಷಿಕ ಪದಗಳನ್ನು ಹೇಗೆ ಕಂಡುಕೊಳ್ಳಬೇಕು ಎಂಬ ಬಗ್ಗೆ ಅಲ್ಲಲ್ಲಿ ಪ್ರಾಸಂಗಿಕವಾಗಿ ಚರ್ಚಿಸಲಾಗಿದೆ.

ಪರ್ಯಾಯ ಪದಗಳಿಗಾಗಿ ಭಾಷಾಂತರಕಾರ ತಾನು ವ್ಯವಹರಿಸುತ್ತಿರುವ ಭಾಷೆಗಳಲ್ಲಿ ಅತ್ಯುತ್ತಮವೆನಿಸಿದ ದ್ವಿಭಾಷಾ ಕೋಶಗಳನ್ನು ಬಳಸಬೇಕು. ಕೋಶಗಳಿಗೆ ತಮ್ಮದೇ ಆದ ಇತಿಮಿತಿಗಳಿರುತ್ತವೆ. ಕೋಶಕಾರರು ಅಥವಾ ಸಂಪಾದಕ ವರ್ಗ ಸಾಮಾನ್ಯವಾಗಿ ಕೋಶ ತಯಾರಾದ ಕಾಲದಲ್ಲಿ ಚಾಲ್ತಿಯಲ್ಲಿದ್ದಂಥ ಅರ್ಥಗಳನ್ನೂ ಅರ್ಥಛಾಯೆಗಳನ್ನೂ ಕೊಟ್ಟಿರುತ್ತಾರೆ. ಮೂಲ ಯಾವ ಕಾಲದ್ದು, ಅದನ್ನು ಹಾಗೇ ಭಾಷಾಂತರಿಸಬೇಕೆ ಎಂಬೆಲ್ಲ ಪ್ರಶ್ನೆಗಳು ಬಂದಾಗ ಪದದ ಬೆಳವಣಿಗೆಯತ್ತ ಐತಿಹಾಸಿಕ ದೃಷ್ಟಿಯಿಂದಲೂ ಗಮನ ಹರಿಸಬೇಕು. ಒಂದು ವೇಳೆ ವ್ಯವಹಾರದಲ್ಲಿ ಹೊಸ ಅರ್ಥ ಮೂಡಿಬಂದಿದ್ದು, ಕೋಶಕ್ಕೆ ಅದು ಸೇರಿಲ್ಲವೆಂದ ಮಾತ್ರಕ್ಕೆ ನಾವು ಅದನ್ನು ದೂರೀಕರಿಸಬಾರದು.

ಕೋಶದಲ್ಲಿ ಒಂದು ಪದಕ್ಕೆ ಹಲವಾರು ಪರ್ಯಾಯಗಳು ದೊರಕಿದಾಗ, ಅವುಗಳ ಪೈಕಿ ತನ್ನ ಸಂದರ್ಭಕ್ಕೆ ಅಗತ್ಯವಾದ ಹಾಗೂ ಹೊಂದಿಕೊಳ್ಳುವ ಪದವನ್ನು ಹುಡುಕಿ ಹಾಕಬೇಕು. ಕೋಶದಲ್ಲಿ ಕೆಲವು ವೇಳೆ ಅಗತ್ಯವಾದ ವ್ಯುತ್ಪನ್ನ ರೂಪಗಳು ದೊರಕದೆ ಹೋದರೆ ಭಾಷಾಂತರಕಾರ ತನ್ನ ವ್ಯಾಕರಣ ಜ್ಞಾನದಿಂದ, ಸಾದೃಶ್ಯದಿಂದ ರೂಪವನ್ನು ರಚಿಸಿಕೊಳ್ಳಬೇಕು. Bank, Note, Table, Pole, Liver ಮುಂತಾದ ಪದಗಳಿಗೆ ನಿರ್ದಿಷ್ಟವಾಗಿ ಎರಡು ಅಥವಾ ಹೆಚ್ಚು ಅರ್ಥಗಳಿರಲು ಸಾಧ್ಯ. ಇಲ್ಲಿ ಆಯ್ಕೆ ಸುಲಭ. ಭಾಷಾಂತರಕಾರ ಎಷ್ಟು ಸಮರ್ಥನಾಗಿ ಸೂಕ್ತ ಛಾಯೆಯ ಪರ್ಯಾಯ ಪದವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ಎಂಬುದರ ಮೇಲೆ ಭಾಷಾಂತರದ ಸಾಫಲ್ಯ ಆಧಾರಗೊಂಡಿರುತ್ತದೆ.

ಅನೇಕವೇಳೆ ನಮ್ಮಲ್ಲಿ ಸದ್ಯದಲ್ಲಿ ಇಲ್ಲದಿರುವ ಯಾವುದೇ ವಸ್ತು, ಭಾವನೆ ಅಥವಾ

ವ್ಯವಹಾರಕ್ಕೆ ಸಂಬಂಧಪಟ್ಟ ಪದಗಳನ್ನು ಬೇರೆ ಮೂಲದಿಂದ ಸ್ವೀಕರಿಸಬೇಕಾಗುತ್ತದೆ. ಈ ರೀತಿ ಎರವಲು ಪಡೆಯುವುದರಲ್ಲಿ ಮೂರು ಬಗೆಯುಂಟು: (i) ಎರವಲು ಪಡೆದ ಪದಗಳು (borrowed words) (ii) ಸ್ಥಾನಾಂತರ ಎರವಲು (loan shift) ಮತ್ತು (iii) ಮಿಶ್ರ ಎರವಲು (loan blend).

ಸಂಸ್ಕೃತ, ಇಂಗ್ಲಿಷ್ ಮುಂತಾದ ಭಾಷೆಗಳಿಂದ ನಾವು ಸ್ವೀಕರಿಸಿರುವ ಪದಗಳು ಎರವಲು ಪದಗಳಿಗೆ ಉದಾಹರಣೆಗಳು. ಅಗತ್ಯಕ್ಕನುಗುಣವಾಗಿ ಇವನ್ನು ತತ್ಸಮ, ತದ್ಭವ ಗಳಾಗಿಯೋ ಅಲ್ಪಸ್ವಲ್ಪ ಮಾರ್ಪಾಟನೊಡನೆಯೋ ಬಳಸುತ್ತೇವೆ. ಅಮೃತ, ಆತ್ಮ, ಧರ್ಮ, ನರಕ, ಸ್ವರ್ಗ, ಯೋಗ, ತಪಸ್ಸು, ಕರ್ಮ ಮುಂತಾದ ನೂರಾರು ಪದಗಳನ್ನು ಸಂಸ್ಕೃತದಿಂದಲೂ cycle, car, bus, auto, taxi, bank, eheque, terylene, polyester, maxi, carrot, beet-root, hotel ಮುಂತಾದ ನೂರಾರು ಪದ ಗಳನ್ನು ಇಂಗ್ಲಿಷಿನಿಂದಲೂ ಕಚೇರಿ, ಫಿರ್ಯಾದು, ಕಿಮ್ಮತ್ತು, ತಾಕತ್ತು, ನಿಯತ್ತು, ಸಾಶ್ತಾ, ಮಜೂರಿ ಮುಂತಾದ ನೂರಾರು ಪದಗಳನ್ನು ಉರ್ದು ಪಾರಸಿಯಿಂದಲೂ ಎರವಲು ಪಡೆದುಕೊಂಡಿದ್ದೇವೆ. hospital → ಆಸ್ಪತ್ರೆ, hearing → ಹೀರಂಗು, time → ಟೇಮು, note → ಲೋಟು ಮುಂತಾದ ಮಾರ್ಪಾಟುಗಳನ್ನೂ ಗಮನಿಸ ಬಹುದು.

ಮೂಲಭಾಷೆಯಲ್ಲಿರುವ ಭಾವನೆ ಅಥವಾ ಪದಾರ್ಥದ ಬದಲಿಗೆ ನಮ್ಮಲ್ಲಿ ಈಗಾಗಲೆ ಅಸ್ತಿತ್ವದಲ್ಲಿರುವ ಬೇರೊಂದು ಪದವನ್ನು ಬಳಕೆಗೆ ತರುವ ಪ್ರಯತ್ನವನ್ನು ಸ್ಥಾನಾಂತರ ಎರವಲಿನಲ್ಲಿ ಕಾಣುತ್ತೇವೆ. ಉದಾಹರಣೆಗೆ, aeroplaneಗೆ 'ವಿಮಾನ', radioಗೆ 'ಆಕಾಶವಾಣಿ', atomಗೆ 'ಪರಮಾಣು', electricityಗೆ 'ವಿದ್ಯುಚ್ಛಕ್ತಿ' ('ವಿದ್ಯುತ್' ಅಂದರೆ ಮಿಂಚು ಎಂದರ್ಥ) ಎಂಬುದೇ ಮೊದಲಾಗಿ ನಮ್ಮಲ್ಲಿ ಈಗಾಗಲೆ ಅಸ್ತಿತ್ವ ದಲ್ಲಿರುವ ಪದಗಳನ್ನು ಬಳಸುತ್ತೇವೆ. ಸ್ಥಾನಾಂತರ ಎರವಲಿನಲ್ಲೂ ಎರಡು ಬಗೆ: (i) ಭಾಷಾಂತರ ಎರವಲು ಮತ್ತು (ii) ರೂಪಾಂತರ ಎರವಲು.

ಒಂದು ಭಾಷೆಯಲ್ಲಿ ಅಸ್ತಿತ್ವದಲ್ಲಿದ್ದು ನಮ್ಮ ಭಾಷೆಯಲ್ಲಿ ಇಲ್ಲದಿರುವ ಪದವನ್ನು ಪದಶಃ ಅಥವಾ ಭಾಗಶಃ ಅನುವಾದ ಮಾಡಿಕೊಂಡು ಅದೇ ಅರ್ಥದಲ್ಲಿ ಬಳಸುವುದಾದರೆ ಅದಕ್ಕೆ ಭಾಷಾಂತರ ಎರವಲು ಎನ್ನುತ್ತೇವೆ. ಉದಾಹರಣೆಗೆ, wrist watch–ಕೈಗಡಿಯಾರ, television–ದೂರದರ್ಶನ, telephone–ದೂರವಾಣಿ, vanity bag –ಜಂಬದ ಚೀಲ. open university–ಮುಕ್ತ ವಿಶ್ವವಿದ್ಯಾನಿಲಯ, top priority –ತುರ್ತು ಆದ್ಯತೆ, electroplating–ವಿದ್ಯುಲ್ಲೇಪನ, yellow journalism–ಪೀತ ಪತ್ರಿಕೋದ್ಯಮ ಪದಗಳನ್ನು ಕೊಡಬಹುದು.

ಮೂಲ ಭಾಷೆಯಲ್ಲಿರುವ ಪದಗಳನ್ನು ನಮ್ಮ ಭಾಷೆಯ ಜಾಯಮಾನಕ್ಕೆ ಹೊಂದಿ

ಕೊಳ್ಳುವಂತೆ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಬಳಸಿದಲ್ಲಿ ಅದನ್ನು ರೂಪಾಂತರ ಎರವಲು ಎನ್ನುತ್ತೇವೆ. ಸಂಸ್ಕೃತದಿಂದ ನಮ್ಮ ಭಾಷೆಗೆ ಎರವಲು ಪಡೆದುಕೊಂಡಿರುವ ತದ್ಭವ ಪದಗಳೆಲ್ಲ ಈ ವರ್ಗಕ್ಕೆ ಸೇರುತ್ತವೆ. ಬ್ರಹ್ಮ→ಬೊಮ್ಮ, ಆಕಾಶ→ಆಗಸ, ಆರ್ಯ→ಅಜ್ಜ, ಕಾರ್ಯ→ಕಜ್ಜ, ಹರ್ಷ→ಹರುಷ ಮುಂತಾದ ಸಂಸ್ಕೃತದಿಂದ ಬಂದ ರೂಪಗಳು lantern→ಲಾಂದ್ರ, hospital→ಆಸ್ಪತ್ರೆ, ರಿಯಾಯತ್→ರಿಯಾಯಿತಿ, ಮುಕ್ದಮಾ→ಮೊಕದ್ದಮೆ ಮುಂತಾದ ಇಂಗ್ಲಿಷ್ ಮತ್ತು ಉರ್ದು ಪದಗಳು ಇದಕ್ಕೆ ಉದಾಹರಣೆಗಳು.

ಮಿಶ್ರ ಎರವಲಿನಲ್ಲಿ ಭಾಷಾಂತರ ಎರವಲು ಮತ್ತು ರೂಪಾಂತರ ಎರವಲು ಎರಡೂ ಸೇರಿರುತ್ತವೆ. ಮೂಲ ಭಾಷೆಯ ವಸ್ತು, ಭಾವನೆಗಳನ್ನು ಶಬ್ದಸಹಿತವಾಗಿ ಪಡೆದುಕೊಂಡು ಉದ್ದಿಷ್ಟ ಭಾಷೆಯ ಜಾಯಮಾನಕ್ಕನುಗುಣವಾಗಿ ಪದಗಳನ್ನು ರೂಪಿಸಲಾಗುವುದು. ಉದಾಹರಣೆಗೆ, alpha-rays–ಆಲ್ಫ ಕಿರಣಗಳು nuclear reaction–ನ್ಯೂಕ್ಲೀಯ ಕ್ರಿಯೆ, x-ray–ಎಕ್ಸ್-ಕಿರಣ, bivalent-ದ್ವಿವೇಲೆನ್ಸೀಯ, fossilisation–ಫಾಸಿಲೀಕರಣ ಇತ್ಯಾದಿ.

ಪದಗಳನ್ನು ನಿರ್ಮಿಸುವ ಇನ್ನೊಂದು ತಂತ್ರವೆಂದರೆ ಸಾದೃಶ್ಯಸೃಷ್ಟಿ. ನಮ್ಮ ಭಾಷೆಯಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಪದಗಳ ಮಾದರಿಯಲ್ಲಿಯೆ ಸಾದೃಶ್ಯದ ಆಧಾರದ ಮೇಲೆ ಹೊಸ ಹೊಸ ಪದಗಳನ್ನು ಸೃಷ್ಟಿಸುತ್ತೇವೆ. ಉದಾಹರಣೆಗೆ, ತರ್ಕ→ತರ್ಕಿಸು, ನಿಲ್ಲು→ನಿಲ್ಲಿಸು ಎಂಬಂತೆ ಫೋನು→ಫೋನಿಸು, ಪ್ರಿಂಟು→ಪ್ರಿಂಟಿಸು, ಅಚ್ಚು→ಅಚ್ಚಿಸು, ಸಂಪರ್ಕ→ಸಂಪರ್ಕಿಸು ಇತ್ಯಾದಿ ರೂಪಗಳನ್ನು ಕೊಡಬಹುದು. ಹೀಗೆಯೆ –ಗಾರ, –ತನ ಮೊದಲಾದ ಪ್ರತ್ಯಯಗಳನ್ನು ಹಚ್ಚಿಯೂ ನವ್ಯರೂಪಗಳನ್ನು ಸೃಷ್ಟಿಸಿಕೊಳ್ಳಬಹುದು.

ವಿಜ್ಞಾನ ಮತ್ತು ಶಾಸ್ತ್ರಗಳಿಗೆ ಸಂಬಂಧಪಟ್ಟ ಪದಗಳನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ತರುವುದು ಸಹ ಕಷ್ಟದ ಮಾತು. ಹಿಂದೂಧರ್ಮದಲ್ಲಿ ಕಂಡು ಬರುವಂಥ ಯೋಗ, ಮಾಯೆ, ಲೀಲೆ, ಕುಂಡಲಿನಿ, ಧರ್ಮ, ಯಜ್ಞ, ಮಂತ್ರ, ಹವಿಸ್ಸು, ಪ್ರಸಾದ, ಬ್ರಹ್ಮ ಮುಂತಾದ ಪದಗಳನ್ನು ಇಂಗ್ಲಿಷಿನಂಥ ವಿದೇಶಿ ಭಾಷೆಗೆ ತರಬೇಕಾದರೆ ವಿಶೇಷವಾದ ತಂತ್ರದ ಬಳಕೆ ಆಗತ್ಯ. ಯೋಗಕ್ಕೆ 'combination', ಮಾಯೆಗೆ 'illusion', ಪ್ರಸಾದಕ್ಕೆ 'sacred remnant' ನಂಥ ಪದಗಳ ಬಳಕೆ ಸರಿಯಲ್ಲ. ಮೂಲದ ಆಶಯ ಸರಿಯಾಗಿ ಸಂವಹಿಸದೆ ಅನೇಕವೇಳೆ ಅಪಚಾರವೂ ಆಗಬಹುದು. ಇಂಥ ಪದಗಳನ್ನು ಹಾಗೆಯೆ ಲಿಪ್ಯಂತರಿಸಿ ಬರೆಯಬೇಕು.

ಈ ರೀತಿಯ ಪದಗಳನ್ನು ಅನುವಾದಿಸಲು ಎರಡು ತಂತ್ರಗಳುಂಟು. (i) ಮೊದಲನೆಯದೆಂದರೆ, ಪದವನ್ನು ಸುಮ್ಮನೆ ಲಿಪ್ಯಂತರ ಮಾಡಿ (ಉದಾ. ಯೋಗ–Yōga,

ಮಾಯಾ Māyā) ಅಡಿಟಿಪ್ಪಣಿಯಲ್ಲಿ ಅದರ ಅರ್ಥವನ್ನು ವಿವರಿಸುವುದು. (ii) ಎರಡನೆಯದೆಂದರೆ, ಪದವನ್ನು ಮೊದಲಬಾರಿ ಬಳಸುವಾಗ ಅದರ ವಿವರಣೆಯನ್ನು ಪೂರಕವಾಗಿ ನೀಡಿ ಅನಂತರ ಪದದ ಲಿಪ್ಯಂತರಿತ ರೂಪವನ್ನು ಬಳಸುತ್ತಾ ಹೋಗುವುದು. ಉದಾಹರಣೆಗೆ, 'ಮಂತ್ರ' ಎಂಬುದನ್ನು 'mantra' ಎಂದು ಲಿಪ್ಯಂತರಿಸಿ ಅದರ ಮುಂದೆ, 'a vedic hymn or sacred prayer (addressed to any deity)' ಎಂಬ ವಿವರಣೆ ಕೊಡಬಹುದು. 'ಸಮಾಧಿ' ಎಂಬ ಪದವನ್ನು 'samādhi' ಎಂದು ಲಿಪ್ಯಂತರಿಸಿ ಅದರ ಮುಂದೆ 'perfect absorption of thought into the one object of meditation viz., the supreme spirit' ಎಂಬ ವಿವರಣೆ ನೀಡಬಹುದು. ಇಲ್ಲಿ ಒಂದು ಅಂಶವನ್ನು ಗಮನಿಸುವುದು ಅಗತ್ಯ. ಸಾಧ್ಯವಾದಷ್ಟೂ ವಿವರಣೆ ಸ್ವಯಂಪೂರ್ಣವಾಗಿರಬೇಕು, ತಪ್ಪು ಕಲ್ಪನೆಗೆ ಎಡೆಕೊಡಬಾರದು. ವಿವರಣೆ ಉದ್ದವಾಗಿದ್ದರೆ ಮೊದಲನೆ ತಂತ್ರವನ್ನು ಅನುಸರಿಸಿ ಅಡಿಟಿಪ್ಪಣಿಯಲ್ಲಿ ಕೊಡುವ ವಿಧಾನ ಸೂಕ್ತ. ವಾಕ್ಯದಲ್ಲೇ ಪದದ ಜೊತೆಯಲ್ಲಿ ದೀರ್ಘವಾದ ವಿವರಣೆ ಬಂದಲ್ಲಿ ಓಟಕ್ಕೆ ಧಕ್ಕೆಯುಂಟಾಗಿ ಲಯ ತಪ್ಪಿದಂತಾಗುವುದು. ಕನ್ನಡ ಹಾಗೂ ಭಾರತೀಯ ಭಾಷೆಗಳ ಪದಗಳನ್ನು ವಿದೇಶಿ ಭಾಷೆಗಳಲ್ಲಿ ಓರೆ ಅಕ್ಷರಗಳಲ್ಲಿ (italics) ಕೊಟ್ಟು ಉಚ್ಚಾರಣ ಚಿಹ್ನೆಗಳನ್ನು (diacritical marks) ಹಾಕುವುದನ್ನು ಮರೆಯಬಾರದು.

ಕೆಲವು ವೇಳೆ ಸಾಹಿತ್ಯ ಕೃತಿಗಳಲ್ಲಿ ಕವಿ ಅಥವಾ ಲೇಖಕ ಯಾವುದೇ ಪದವನ್ನು ಉದ್ದೇಶಪೂರ್ವಕವಾಗಿ ಭಾವನೆಯೊಂದನ್ನು ಹೊರಗೆಡವಲು ಬಳಸಿರುವುದುಂಟು. ಅಂತೆಡೆಗಳಲ್ಲಿ ಭಾಷಾಂತರಕಾರ ತುಂಬಾ ಎಚ್ಚರಿಕೆಯಿಂದಿರಬೇಕು. ಈಶ್ವರನಿಗೆ ಶಿವ, ಪಿನಾಕಿ, ಚರ್ಮಾಂಬರಧಾರಿ, ಕಪಾಲಿ, ರುದ್ರ ಮುಂತಾದ ಪದಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬಳಕೆ ಮಾಡಲಾಗಿರುತ್ತದೆ. ಮಂಗಳಕರನಾಗಿದ್ದಲ್ಲಿ 'ಶಿವ' ಎಂದೂ, ಸ್ಮಶಾನವಾಸಿಯಾಗಿದ್ದಾಗ 'ಕಪಾಲಿ' ಎಂದೂ ತಾಂಡವನರ್ತನ ಮಾಡುತ್ತಿದ್ದಾಗ 'ರುದ್ರ' ಎಂದೂ ಕರೆದಿದ್ದಿರಬಹುದು. ಅಂಕಿತನಾಮ ವ್ಯಕ್ತಿಯ ಮನಃಸ್ಥಿತಿಯನ್ನು ವಾತಾವರಣವನ್ನು ಸೂಚಿಸುತ್ತಿರುತ್ತದೆ. ಲೇಖಕನ ಈ ಆಶಯವನ್ನು ಬಳಸಿಕೊಳ್ಳಬೇಕಾದರೆ ಭಾಷಾಂತರಕಾರ Siva, the auspicious Lord ಎಂತಲೊ Kapali, Lord with skull at hand ಎಂತಲೊ ಭಾಷಾಂತರಿಸಿಕೊಳ್ಳಬೇಕಾಗುತ್ತದೆ. ಪಾರ್ವತಿ ಪಂಚಾಗ್ನಿತಪಸ್ಸನ್ನು ಮಾಡುತ್ತಿರಬೇಕಾದರೆ ತರಗೆಲೆಗಳನ್ನೂ ತಿನ್ನದೆ ಬಿಟ್ಟುಬಿಟ್ಟದ್ದರಿಂದ ಆಕೆಯನ್ನು ಮುನಿಗಳು 'ಅಪರ್ಣಾ' ಎಂದು ಕರೆದರಂತೆ. ಕಾಳಿದಾಸನ 'ಕುಮಾರಸಂಭವ'ದ ಈ ಭಾಗವನ್ನು ಭಾಷಾಂತರಿಸಬೇಕಾದರೆ 'ಪಾರ್ವತಿ' ಎಂದಷ್ಟೆ ಬರೆದರೆ ಕವಿಯ ಆಶಯಕ್ಕೆ ಧಕ್ಕೆಯೊದಗಿದ ಹಾಗಾಗುತ್ತದೆ. ಹೆಂಡತಿಯನ್ನು ಪತ್ನೀ, ದಾರಾ, ಕಳತ್ರ ಎಂಬ ಮೂರು ಪದಗಳಿಂದ ಸ್ತ್ರೀಲಿಂಗ, ಪುಲ್ಲಿಂಗ ಮತ್ತು ನಪುಂಸಕಲಿಂಗಗಳಿಂದ ನಿರ್ದೇಶಿಸುತ್ತಾರೆ- ಹೆಣ್ಣಿಗೆ ಸ್ತ್ರೀ,

ಲಲನಾ, ಪ್ರಮದಾ, ಅಬಲಾ, ವನಿತಾ ಮುಂತಾದ ಪದಗಳನ್ನು ಬಳಸುವಾಗಲೂ ಕವಿ ಅದರ ಅರ್ಥ ಮತ್ತು ನಾದ ಮೌಲ್ಯಗಳತ್ತ ಗಮನಹರಿಸಿರುತ್ತಾನೆಂದು ಭಾಷಾಂತರಕಾರ ಮರೆಯಬಾರದು.

ಭಾಷಾಂತರದಲ್ಲಿ ಎದುರಾಗುವ ಇನ್ನೊಂದು ಮುಖ್ಯ ತೊಡಕೆಂದರೆ ಪಾರಿಭಾಷಿಕ ಪದಗಳದ್ದು. ಶಾಸ್ತ್ರೀಯ, ವೈಜ್ಞಾನಿಕ ಮತ್ತು ತಾಂತ್ರಿಕ ಬರವಣಿಗೆಗಳಲ್ಲಿ ಇವುಗಳ ಪಾತ್ರ ಹಿರಿದಾಗಿರುತ್ತದೆಂದು ಹಿಂದೆಯೆ ಹೇಳಿದೆ. ಈ ರೀತಿಯ ವಿಶಿಷ್ಟ ಬರವಣಿಗೆಗೆ ವಿಶಿಷ್ಟ ರೀತಿಯ ಶೈಲಿಯಿರುತ್ತದೆ, ಭಾಷೆ ಇರುತ್ತದೆ. ಆ ರೀತಿಯಲ್ಲಿ ಬರೆದರೇ ಆ ಬರವಣಿಗೆಗೆ ಬೆಲೆ. ಇಲ್ಲಿನ ಚರ್ಚೆಯನ್ನು ಪಾರಿಭಾಷಿಕ ಪದಗಳನ್ನು ಬಳಸುವ ತಂತ್ರಗಳಿಗಷ್ಟೇ ಸೀಮಿತಗೊಳಿಸಿಕೊಳ್ಳೋಣ.

ಪಾರಿಭಾಷಿಕ ಪದಗಳನ್ನು ಸಾಮಾನ್ಯವಾಗಿ ಮೂರು ರೀತಿಯಲ್ಲಿ ವಿಂಗಡಿಸುತ್ತಾರೆ. (i) ಪಾರಿಭಾಷಿಕ ಅರ್ಥದಲ್ಲಿ ಬಳಕೆಯಾಗುತ್ತಿರುವ ದಿನಬಳಕೆ ಪದಗಳು (ii) ಸಂಸ್ಕೃತ, ಗ್ರೀಕ್, ಲ್ಯಾಟಿನ್, ಇಂಗ್ಲಿಷ್ ಮುಂತಾದ ಭಾಷೆಗಳಿಂದ ಎರವಲು ಪಡೆದ ಪದಗಳು ಮತ್ತು (iii) ಸಂಸ್ಕೃತ, ಗ್ರೀಕ್, ಲ್ಯಾಟಿನ್ ಮುಂತಾದ ಪದಖಂಡಗಳಿಗೆ ನಮ್ಮ ಪ್ರತ್ಯಯಗಳನ್ನು ಹಚ್ಚಿರುವ ರೂಪಗಳು.

ಇಂಗ್ಲಿಷಿನಲ್ಲಿ work, capacity, energy, salt, solution ಮುಂತಾದ ದಿನಬಳಕೆಯ ಪದಗಳು ಪಾರಿಭಾಷಿಕ ಮಟ್ಟಕ್ಕೇರಿವೆ. ಇದಕ್ಕೆ ಪರ್ಯಾಯವಾಗಿ ನಾವು ಕೆಲಸ, ಸಾಮರ್ಥ್ಯ, ಶಕ್ತಿ, ಲವಣ, ದ್ರಾವಣ ಮೊದಲಾದ ಪದಗಳನ್ನು ಬಳಸಬಹುದು. ಆದರೆ ವೈಜ್ಞಾನಿಕ ಭಾಷೆಯಲ್ಲಿ ಇಂಥ ನಿತ್ಯಬಳಕೆಯ ಪದಗಳ ಸಂಖ್ಯೆ ಸಾಪೇಕ್ಷವಾಗಿ ಕಡಮೆ. ನಾವು ಧಾರಾಳವಾಗಿ ಇಂತೆಡೆಗಳಲ್ಲಿ ಪದಗಳನ್ನು ಎರವಲು ಪಡೆದು ನಮ್ಮದಾಗಿ ಮಾಡಿಕೊಳ್ಳಬೇಕು. ಅಚ್ಚ ಕನ್ನಡದ ಪದಗಳನ್ನೇ ಪಾರಿಭಾಷಿಕ ಪದಗಳಾಗಿ ಬಳಸುತ್ತೇವೆಂಬ ಹಠ ಹಿತಕರವಲ್ಲ.

ಪಾರಿಭಾಷಿಕ ಪದಗಳ ಗುಂಪಿನಲ್ಲಿ ಎರಡನೇ ಮತ್ತು ಮೂರನೇ ವಿಧದ ಪದಗಳೇ ಜಾಸ್ತಿ. Myopia, hydrophobia, myocardium, bacillum, streptococcus ಮುಂತಾದ ಪದಗಳು ಗ್ರೀಕ್ ಮತ್ತು ಲ್ಯಾಟಿನ್ ಮೂಲದಿಂದ ಬಂದಿವೆ. Intra-muscular, hyper-sensitivity, supra-temporal, cytoplasmic, hexamine, lymphatic ಮುಂತಾದ ಪದಗಳನ್ನು ನಾವು ಎರವಲುಪಡೆದು ಪದಕಾಂಡಗಳಿಗೆ ಪ್ರತ್ಯಯ ಹಚ್ಚಿ ರೂಪಿಸಿಕೊಂಡಿದ್ದೇವೆ.

ಬರ್ಮಿಂಗ್‌ಹ್ಯಾಂ ವಿಶ್ವವಿದ್ಯಾನಿಲಯದ ಡಾ. ಫ್ಲಡ್ ಅವರ ಅಭಿಪ್ರಾಯದಂತೆ ಬೇರೆ ಬೇರೆ ವಿಜ್ಞಾನ ವಿಭಾಗಗಳಲ್ಲಿ ಬಳಸಲಾಗುತ್ತಿರುವ ಪದಗಳೆಲ್ಲ ಸುಮಾರು 1,150 ಗ್ರೀಕ್ ಮತ್ತು ಲ್ಯಾಟಿನ್‌ಗಳ ಮೂಲ ಘಟಕಗಳಿಂದ ರೂಪುಗೊಂಡಿವೆ. ವೈದ್ಯವಿಜ್ಞಾನದ ಪಾರಿಭಾಷಿಕ ಪದಗಳೆಲ್ಲ ಇಂಥ ಸುಮಾರು 150 ಘಟಕಗಳಿಂದಾಗಿವೆ ಎಂದು ಅಂದಾಜು.

ಕನ್ನಡದಲ್ಲಿ ಪಾರಿಭಾಷಿಕ ಪದಗಳನ್ನು ರೂಪಿಸಬೇಕಾದರೆ ಇಂಗ್ಲಿಷಿನಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಮೂಲಗಳಿಂದ ಬಳಸಿಕೊಂಡಿರುವ ಪದಗಳನ್ನು ಹಾಗೆಯೆ ಬರೆಯುತ್ತಾ ಹೋದಲ್ಲಿ ಸಮಸ್ಯೆ ಹಗುರವಾಗುತ್ತದೆ ಎಂದು ಮೇಲ್ನೋಟಕ್ಕೆ ಅನಿಸಬಹುದು. ಆದರೆ ಇಲ್ಲಿರುವ ಎಡವಟ್ಟೆಂದರೆ ಕನ್ನಡ ಭಾಷೆಯ ಓಟಕ್ಕೆ ಈ ಪದಗಳ ರಚನೆ ಮುಳುವಾಗುತ್ತದೆ. ಇಂಥ ಪದಗಳಿಗಾಗಿ ಭಾಷೆಯ ಸೌಂದರ್ಯವನ್ನು ಬಲಿಗೊಡುವುದು ಸರಿಯಲ್ಲ. ಅಯಾನು, ಅಲರ್ಜಿ, ಎಂಟ್ರೊಪಿ, ಈಥರ್‌ನಂಥ ಪದಗಳನ್ನು ನಮ್ಮ ಭಾಷೆಯಲ್ಲಿ ಹೊಗಿಸಿದರೆ ರಚನೆಯ ದೃಷ್ಟಿಯಿಂದ ಅಂಥ ತೊಂದರೆ ಕಾಣುವುದಿಲ್ಲ. ಆದರೆ ಕ್ಯಾಲ್ಕ್ಯುಲಸ್, ಸ್ಟ್ಯಾಟಿಸ್ಟಿಕಲ್, ಸ್ಪೆಕ್ಟ್ರಂನಂಥ ಪದಗಳು ಕನ್ನಡ ಬರವಣಿಗೆ–ಉಚ್ಚಾರಣೆಯಲ್ಲಿ ತೊಡಕನ್ನುಂಟುಮಾಡುತ್ತವೆ. ಇಂತೆಡೆಗಳಲ್ಲಿ ನಾವು ಗ್ರೀಕ್ ಮತ್ತು ಲ್ಯಾಟಿನ್‌ಗಳಿಗೆ ಬದಲಾಗಿ ಸಂಸ್ಕೃತದಿಂದ ಪದಗಳನ್ನು ಎರವಲು ಪಡೆದುಕೊಂಡು ಕ್ರಮವಾಗಿ ಕಲನಶಾಸ್ತ್ರ, ಸಂಖ್ಯಾಶಾಸ್ತ್ರೀಯ, ರೋಹಿತ ಎಂದು ಬಳಸಿಕೊಳ್ಳಬಹುದು.

ಯಾವುದೇ ಪಾರಿಭಾಷಿಕ ಪದ ಇಂಗ್ಲಿಷ್ ಭಾಷೆಯಲ್ಲಿ ವ್ಯುತ್ಪನ್ನಗಳನ್ನು (derivatives) ಅಂದರೆ ಗುಣವಾಚಕ, ಕ್ರಿಯಾವಿಶೇಷಣ ಮುಂತಾದ ರೂಪಗಳನ್ನು ಹೊಂದಿದ್ದರೆ, ನಾವು ಸಹ ಕನ್ನಡದಲ್ಲಿ ಆ ರೀತಿಯಾಗಿ ವ್ಯುತ್ಪನ್ನಶೀಲವಾದ ಪದಗಳನ್ನೇ ಬಳಸಿಕೊಳ್ಳಬೇಕು. ಉದಾಹರಣೆಗೆ, valencyಯಿಂದ valent, monovalent, bivalent, tetravalent ಮುಂತಾದ ಪದಗಳು ವ್ಯುತ್ಪನ್ನವಾಗುವುದರಿಂದ ನಾವು 'ಸಂಯೋಗ ಸಾಮರ್ಥ್ಯ' ಎಂದು ಬಳಸಿಕೊಂಡರೆ ಈ ಎಲ್ಲ ರೂಪಗಳನ್ನು ನಿರ್ಮಿಸುವುದು ಕಷ್ಟವಾಗುತ್ತದೆ. 'ಏಕ ಸಂಯೋಗ ಶಕ್ತ್ಯೀಯ', 'ಏಕ ಸಂಯೋಗ ಸಾಮರ್ಥ್ಯೀಯ' ಎಂಬಂಥ ರೂಪಗಳು ಸಾಧುವಲ್ಲ. ಉಪಯುಕ್ತತೆಯ ದೃಷ್ಟಿಯಿಂದ ವೇಲೆನ್ಸಿ ಎಂದು ಬಳಸಿಕೊಳ್ಳುವುದೇ ಉತ್ತಮ. ಕನ್ನಡ ಜಾಯಮಾನಕ್ಕೆ ಇದು ಸರಿಹೋಗುವುದಲ್ಲದೆ ಏಕವೇಲೆನ್ಸೀಯ, ದ್ವಿವೇಲೆನ್ಸೀಯ ಎಂಬಂಥ ರೂಪಗಳನ್ನು ಸುಲಭವಾಗಿ ಸೃಷ್ಟಿಸಿಕೊಳ್ಳಬಹುದು. ಹೀಗೆಯೆ, 'ion' ಎಂಬುದಕ್ಕೆ 'ಅಯಾನು' ಎಂದು ಉಳಿಸಿಕೊಂಡಲ್ಲಿ ionise, ionised, ionisation ಎಂಬುವಕ್ಕೆ ಅಯಾನೀಕರಿಸು, ಅಯಾನೀಕೃತ, ಅಯಾನೀಕರಣ ಎಂದು ರೂಪಿಸಿಕೊಳ್ಳಬಹುದು.

ಪಾರಿಭಾಷಿಕ ಪದಗಳನ್ನು ರೂಪಿಸಿಕೊಳ್ಳಲು ಭಾರತ ಸರ್ಕಾರದ ವೈಜ್ಞಾನಿಕ ಮತ್ತು ತಾಂತ್ರಿಕ ಶಬ್ದಾವಳಿಯ ಸ್ಥಾಯಿ ಆಯೋಗ ಮುಂದಿಟ್ಟ ರೂಪರೇಖೆಗಳನ್ನೂ ಡಾ. ರಘುವೀರರು ತಮ್ಮ ಕೋಶದಲ್ಲಿ ವಿಸ್ತಾರವಾಗಿ ವಿವೇಚಿಸಿರುವ ಸಂಗತಿಗಳನ್ನು ಓದುಗರು ಈ ದಿಶೆಯಲ್ಲಿ ಪರಾಮರ್ಶಿಸಬಹುದು. ಸ್ಥಳಾಭಾವದಿಂದಾಗಿ ಇಲ್ಲಿ ಇವುಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗಿಲ್ಲ.

ಪಾರಿಭಾಷಿಕ ಪದಗಳನ್ನು ರೂಪಿಸುವಲ್ಲಿ ಒಂದು ಅಂಶ ಗಮನಾರ್ಹ, ಇಂಗ್ಲಿಷಿನಲ್ಲಿ

ಬಳಕೆಯಲ್ಲಿರುವ ಒಂದು ಪಾರಿಭಾಷಿಕ ಪದದ ಎಲ್ಲ ಛಾಯೆಗಳನ್ನೂ ನಮ್ಮ ಪದ ಸಂಪೂರ್ಣವಾಗಿ ಪ್ರತಿನಿಧಿಸದೆ ಹೋಗಬಹುದು. ಇಂಥ ಪದಗಳಲ್ಲಿರುವ ಸ್ವಂತ ಅರ್ಥ ಕ್ಕಿಂತ ನಾವು ತುಂಬುವ ಅರ್ಥವೇ ಜಾಸ್ತಿ. ಆದರಿಂದಾಗಿ, ನಾವು ಆದಷ್ಟು ಸುಲಭವಾಗಿ ಜನ್ಯಪದಗಳನ್ನು ಕೊಡುವಂಥ ಸರಳವಾದ ಪದಗಳನ್ನು ಬಳಸಿ ಅವುಗಳಲ್ಲಿ ಅಗತ್ಯವಾದ ಅರ್ಥವನ್ನು ತುಂಬುತ್ತಾ ಹೋಗಬೇಕು. ವಾಸ್ತವವಾಗಿ ಇಂಗ್ಲಿಷ್ ಮುಂತಾದ ಭಾಷೆಗಳ ಪಾರಿಭಾಷಿಕ ಪದಗಳ ಬೆಳವಣಿಗೆಯಲ್ಲಿ ನಡೆದಿರುವುದು ಹೀಗೆಯೆ.

ಸಾಮಾನ್ಯವಾಗಿ, ಪಾರಿಭಾಷಿಕ ಪದಗಳಿಗೆ ಅಗತ್ಯವೆಂದು ಹೇಳಲಾಗಿರುವ ಒಂಬತ್ತು ಲಕ್ಷಣಗಳನ್ನು ಪಟ್ಟಿಮಾಡಿ ನಾವು ಈ ಚರ್ಚೆಯನ್ನು ಮುಗಿಸಬಹುದು. ಇವು ಯಾವು ದೆಂದರೆ :

(i) ಅಸಾಮಾನ್ಯತೆ (uncommonness)

(ii) ಅಸ್ಪಷ್ಟತೆ (abstrusiveness)

(iii) ಪರಿಭಾಷಾರ್ಹತೆ (definability)

(iv) ವಿಶಿಷ್ಟ ನಿರೂಪಣ ಸಾಮರ್ಥ್ಯ (specific import)

(v) ಸಾಮಾನ್ಯ ಪದಗಳಿಂದ ಪಲ್ಲಟವಾಗದಿರುವಿಕೆ (irreplaceablity by synonyms)

(vi) ಕೃತಕ ನಿರ್ಮಾಣ (artificial coinage)

(vii) ಸಾಂಕೇತಿಕ ನಿರೂಪಣೆ (symbolic representation)

(viii) ಸಂಕೇತನ ನಿರೂಪಣೆ (notional representation)

(ix) ನಿರ್ದೇಶನ ಸಾಮರ್ಥ್ಯ (designational significance)

ಸಾಮಾನ್ಯವಾಗಿ ಬಳಕೆಯಲ್ಲಿದ್ದರೂ ಪಾರಿಭಾಷಿಕವಾಗಿ ಬಳಸಿದ ಪದಗಳ ಅರ್ಥ ಅಸಾಮಾನ್ಯವಾಗುವುದು. ಉದಾಹರಣೆಗೆ cell, frequency, moment ಮೊದಲಾದ ಪದಗಳ ಅರ್ಥ ವೈಜ್ಞಾನಿಕ ಹಿನ್ನೆಲೆಯಲ್ಲಿ ಅಸಾಮಾನ್ಯವಾದುದು. ಹಾಗೆಯೆ ನಿರ್ದಿಷ್ಟ ವಾದ ಶಾಸ್ತ್ರ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಪದಗಳ ಅರ್ಥಾಭಿವ್ಯಕ್ತಿ ಗೂಢವಾಗಿರುತ್ತದೆ. ಉದಾಹರಣೆಗೆ ಜೀವ, ಅಣು, ಬ್ರಹ್ಮ, wave, element, right angle, change, base ಇಂಥ ಪದಗಳ ವಿಶಿಷ್ಟಾರ್ಥಗಳು ಆಯಾ ಕ್ಷೇತ್ರಗಳಲ್ಲಿ ಕೈಯಾಡಿಸಿರುವವರಿಗೆ ಮಾತ್ರ ವಿದಿತ. ಪಾರಿಭಾಷಿಕ ಪದಗಳಿಗೆ ಖಚಿತವಾದ ಪರಿಭಾಷೆ ಕೊಡುವ ಹಾಗಿರಬೇಕು. ಉದಾಹರಣೆಗೆ volt, erg, hertz, entropy, ampere ಮುಂತಾದ ಪದಗಳಿಗೆ ವ್ಯಾಖ್ಯಾನವನ್ನು ನೀಡಿದ ಮೇಲೆ ಮಾತ್ರ ಅವುಗಳ ಅರ್ಥ ಸ್ಪಷ್ಟವಾಗುತ್ತದೆ. ಪಾರಿಭಾಷಿಕ ಪದಗಳು ಎಷ್ಟು ನಿರ್ದಿಷ್ಟವಾಗಿರಬೇಕೆಂದರೆ ಹೊರನೋಟಕ್ಕೆ ಹೆಚ್ಚು ಕಡಮೆ ಒಂದೇ ರೀತಿಯಾಗಿ ಕಾಣುವ ಪದಗಳ ವ್ಯತ್ಯಾಸವನ್ನು ಬಿಡಿಸಿ ತೋರಿಸುವಂತಿರಬೇಕು (ಉದಾ :

price, cost, rate, amount). ಹಾಗೆಯೇ, ಒಂದು ಪಾರಿಭಾಷಿಕ ಭಾವನೆಯನ್ನು ಸೂಚಿಸಲು ಒಂದು ಪದ ಇರಬೇಕಷ್ಟೆ. ಒಂದರ ಬದಲು ಇನ್ನೊಂದನ್ನು ಬಳಸುವಂತಿರಬಾರದು. ಪಾರಿಭಾಷಿಕ ಪದಗಳಲ್ಲಿ ಸಾಂಕೇತಿಕ ಅಭಿವ್ಯಕ್ತಿ ಸಹ ಉಂಟು. ಉದಾಹರಣೆಗೆ ಅಲೆದೂರಕ್ಕೆ λ (ಲ್ಯಾಂಬ್ಡ) ಕೋನೀಯ ವೇಗಕ್ಕೆ ω (ಒಮೆಗಾ), ವೃತ್ತದ ಸುತ್ತಳತೆ/ವ್ಯಾಸ ಈ ಪ್ರಮಾಣಕ್ಕೆ π (ಪೈ), ಗುರುತ್ವ ನಿಯತಾಂಕಕ್ಕೆ G ಎಂದೂ ಸಾಂಕೇತಿಕವಾಗಿ ಬಳಸಲಾಗುತ್ತದೆ. ಇವನ್ನು ಹಾಗೆಯೆ ಉಳಿಸಿಕೊಳ್ಳತಕ್ಕದ್ದು. d/dt, Σ, ▽, δ ಮುತಾದ ಸಂಕೇತನಗಳನ್ನೂ ಹಾಗೆಯೇ ಉಪಯೋಗಿಸಬೇಕು. ವಿಶಿಷ್ಟವಾದ ಸಂಸ್ಥೆ, ಸ್ಥಳ, ಸ್ಮಾರಕ ಇಂಥವನ್ನೆಲ್ಲ ನಿರ್ದೇಶಿಸುವಂತಹ ಪದಗಳನ್ನು ಪಾರಿಭಾಷಿಕಗಳೆಂದೇ ಪರಿಗಣಿಸಬೇಕು. ಉದಾಹರಣೆಗೆ, ಕನ್ನಡವನ್ನು ಅಧ್ಯಯನ ಮಾಡುವಂತಹ ಸಂಸ್ಥೆಗಳೆಲ್ಲ 'ಕನ್ನಡ ಅಧ್ಯಯನ ಸಂಸ್ಥೆ' ಅಲ್ಲ. Red fort ಗಳೆಲ್ಲ Red Fort ಅಲ್ಲ, White house, ಗಳೆಲ್ಲ White House ಅಲ್ಲ.

ಡಾ. ಡೇಸ್ ರೋಲರ್ (ಅಮೆರಿಕನ್ ಜರ್ನಲ್ ಆಫ್ ಸೈನ್ಸ್ ಪತ್ರಿಕೆಯ ಸಂಪಾದಕರು) ಹೊಸ ಪಾರಿಭಾಷಿಕ ಪದಗಳನ್ನು ರೂಪಿಸಲು ಕೆಳಕಂಡ ಐದು ಅಂಶಗಳನ್ನು ಮುಂದಿಟ್ಟಿದ್ದಾರೆ : 1. ಪದವನ್ನು ಸಾಮಾನ್ಯ ಭಾಷೆಯಿಂದ ತೆಗೆದುಕೊಳ್ಳಬೇಕು. 2. ಪದವನ್ನು ಇನ್ನೊಂದು ಜೀವಂತ ಭಾಷೆಯಿಂದ ಎರವಲು ಪಡೆಯಬೇಕು. 3. ಆದಷ್ಟು ಮಟ್ಟಿಗೆ ಸಂಶೋಧಕರ ಹೆಸರನ್ನು ಅಳವಡಿಸಿಕೊಳ್ಳಬೇಕು. 4. ಅಗತ್ಯಕ್ಕನುಗುಣವಾಗಿ ಹೊಸ ಪದಗಳನ್ನು ಸೃಷ್ಟಿಸಬೇಕು. 5. ಕ್ಲ್ಯಾಸಿಕಲ್ ಭಾಷೆಗಳಿಂದ ಪದಾಂಶಗಳನ್ನು ಎರವಲು ಪಡೆದು ಪದಗಳ ಸೃಷ್ಟಿ ಮಾಡಬೇಕು.

ಪದಪುಂಜಗಳು, ನುಡಿಗಟ್ಟುಗಳು ಮತ್ತು ಗಾದೆಗಳು : ಈವರೆಗೆ ಪದಗಳ ಅನುವಾದವನ್ನು ಹೇಗೆ ಮಾಡುವುದೆಂದು ಸ್ಥೂಲವಾಗಿ ಪರಿಶೀಲಿಸಿದ್ದಾಗಿವೆ. ಈಗ ಪದಪುಂಜಗಳ, ನುಡಿಗಟ್ಟುಗಳ ಮತ್ತು ಗಾದೆಗಳ ವಿಚಾರ ನೋಡೋಣ. ಗಾದೆಗಳೂ ಒಂದು ವಿಧದ ನುಡಿಗಟ್ಟುಗಳೇ. ಇವು ಭಾಷೆಯ ಬಳಕೆಯನ್ನು ಹೆಚ್ಚು ಶಕ್ತಿಯುತವನ್ನಾಗಿ ಮಾಡುತ್ತವೆ. ಇಂಥ ಬಳಕೆಗಳಿಂದ ಅಭಿವ್ಯಕ್ತಿ ತೀವ್ರವಾಗುತ್ತದೆ. 'ಮೋಸ ಮಾಡಿದ' ಎನ್ನುವುದರ ಬದಲು 'ಕೈಕೊಟ್ಟ' ಅಂತಲೂ, 'ಸಿಟ್ಟಾದ' ಎನ್ನುವುದರ ಬದಲು 'ಕಣ್ಣು ಕೆಂಪಗೆ ಮಾಡಿದ' ಅಥವಾ 'ಬೆಂಕಿಯಾದ' ಅನ್ನುವುದರಲ್ಲಿ ಹೆಚ್ಚು ಸ್ವಾರಸ್ಯ ಮತ್ತು ಧಾರಣ ಸಾಮರ್ಥ್ಯಗಳಿವೆ.

ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ನುಡಿಗಟ್ಟುಗಳನ್ನು ಭಾಷಾಂತರಿಸುವುದರಲ್ಲಿ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತವೆ. ಏಕೆಂದರೆ ಭಾಷೆಯ ಜನ ನಿತ್ಯವ್ಯವಹಾರದಲ್ಲಿ ಅನೇಕ ಇಂಥ ನುಡಿಗಟ್ಟುಗಳನ್ನು ಬಳಸುತ್ತಿರುತ್ತಾರೆ. ಜೀವಂತ ಭಾಷೆಯ ಶ್ರೀಮಂತಿಕೆಯ ಕುರುಹು ಈ ನುಡಿಗಟ್ಟುಗಳು, ಇವನ್ನು ಭಾಷಾಂತರಿಸಬೇಕಾದರೆ ಮೂಲದ ಭಾಷೆಯ

ಆಡುನುಡಿಯನ್ನು ಜಾರುನುಡಿಯನ್ನು ಭಾಷಾಂತರಕಾರ ಹತ್ತಿರದಿಂದ ಬಲ್ಲವನಾಗಿರಬೇಕು. ಇಲ್ಲದಿದ್ದರೆ ಅಪಾರ್ಥಕ್ಕೆ, ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ.

ಇಂಗ್ಲಿಷಿನ 'to take one to task', 'to lick one's, shoes 'at loggerheads','love in a cottage', 'hard nut to crack' 'to run with the hare and hunt with the hounds', 'to trob Peter and pay Paul' ಎಂಬ ನುಡಿಗಟ್ಟುಗಳನ್ನು ಕನ್ನಡದಲ್ಲಿ ನೇರವಾಗಿ ಪದಶಃ ಭಾಷಾಂತರಿಸಲಾಗುವುದಿಲ್ಲ. ಕನ್ನಡದಲ್ಲೂ ಇದಕ್ಕೆ ಅತ್ಯಂತ ಸಮಾಂತರವಾದ ಪರ್ಯಾಯಗಳು ದೊರಕಿದರೆ ಅವನ್ನು ಉಪಯೋಗಿಸಬೇಕು. ಇಲ್ಲದಿದ್ದರೆ ಅವುಗಳ ಆಶಯ ಏನೆಂದು ತಿಳಿದು ಸುಮ್ಮನೆ ಸರಳ ಪದಗಳಲ್ಲಿ ಭಾಷಾಂತರಿಸಿಕೊಳ್ಳಬೇಕು. ಮೇಲಿನ ನುಡಿಗಟ್ಟುಗಳಿಗೆ ಕ್ರಮವಾಗಿ 'ತರಾಟೆಗೆ ತೆಗೆದುಕೊಳ್ಳುವುದು', 'ದಾಸಾನುದಾಸನಾಗಿ ನಡೆದುಕೊಳ್ಳುವುದು', 'ಪರಸ್ಪರ ತಲೆಯೊಡೆದುಕೊಳ್ಳುತ್ತಾ', 'ಬಡತನದ ಮದುವೆ', 'ಕಬ್ಬಿಣದ ಕಡಲೆ', 'ತೊಟ್ಟಿಲನ್ನೂ ತೂಗು ಮಗುವನ್ನೂ ಜಿಗುಟು', 'ಹಾವನ್ನು ಹೊಡೆದು ಹದ್ದಿಗೆ ಹಾಕು' (ಅಥವಾ 'ಅಗಸರ ಕತ್ತೆ ದೊಂಬರಿಗೆ ತ್ಯಾಗ'). ಎಂದು ಬರೆಯಬಹುದು. ಈ ಸಮಾಂತರಗಳ ದೀರ್ಘ ವಿವೇಚನೆಯನ್ನು ಇಲ್ಲಿ ನಡೆಸಿಲ್ಲ. ಆದರೆ ಒಂದಕ್ಕಿಂತ ಹೆಚ್ಚು ಸಮಾಂತರ ನುಡಿಗಟ್ಟುಗಳು ಸಹ ಸಿಗಬಹುದು, ಇಲ್ಲವೆ ಸಮಾಂತರ ನುಡಿಗಟ್ಟು ಸಿಗದೆ ಹೋಗಬಹುದು. ಹೆಚ್ಚು ನುಡಿಗಟ್ಟುಗಳು ಸಮಾಂತರವಾಗಿ ಸಿಕ್ಕಿದಲ್ಲಿ ಅತ್ಯಂತ ಸಮರ್ಪಕವಾದುದು ಯಾವುದೆಂದು ತೀರ್ಮಾನಿಸಿ ಬಳಸಿಕೊಳ್ಳಬೇಕು. 'ಒಬ್ಬನ ಬೂಟನ್ನು ನೆಕ್ಕು', 'ಗುಡಿಸಿಲಿನಲ್ಲಿ ಪ್ರೇಮ', 'ಪೀಟರನ್ನು ಲೂಟಿ ಮಾಡಿ ಪಾಲಸಿಗೆ ಕೊಡು' ಇತ್ಯಾದಿಯಾಗಿ ನೇರ ಭಾಷಾಂತರವನ್ನು ಇಂತೆಡೆಗಳಲ್ಲಿ ಮಾಡಿದರೆ ತಪ್ಪಾಗುತ್ತದೆ.

ಹೀಗೆಯೆ ಹಿಂದಿಯಿಂದಲೂ ಕೆಲವು ನುಡಿಗಟ್ಟುಗಳನ್ನು ಉದಾಹರಿಸಬಹುದು. 'ದಾಂತೋಂ ತಲೆ ಉಂಗಲೀ ದಬಾನಾ', 'ಜಲೆ ಪರ್ ನಮಕ್ ಛಿಡ್‌ಕಾನಾ', 'ಆಗ್ ಬಬೂಲಾ ಹೋಜಾನಾ; 'ಆಂಖೆ ಚಾರ್ ಹೋನಾ', 'ಆಗ್ ಲಗೆ ತಬ್ ಖೋದೆ ಕುವಾಂ' ಮುಂತಾದ ನುಡಿಗಟ್ಟುಗಳನ್ನು ಪರಿಗಣಿಸಿದರೆ ಕನ್ನಡದಲ್ಲಿ ಇವುಗಳಿಗೆ ಸಂವಾದಿಯಾದ ನುಡಿಗಟ್ಟು ಅಥವಾ ಇತರ ರೂಪಗಳನ್ನು ಕ್ರಮವಾಗಿ ಕೆಳಗಿನಂತೆ ಬರೆಯಬಹುದು. 'ಆಶ್ಚರ್ಯದಿಂದ ತಲೆದೂಗು ಅಥವಾ 'ಮೂಗಿನ ಮೇಲೆ ಬೆರಳಿಟ್ಟುಕೊ' 'ಗಾಯದ ಮೇಲೆ ಬರೆ ಎಳೆದಂತೆ', 'ಬೆಂಕಿಯಾಗು', 'ಪರಸ್ಪರ ಪ್ರೇಮಿಸು', 'ಸಂಕಟ ಬಂದಾಗ ವೆಂಕಟರಮಣ' ಅಥವಾ 'ಊರು ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರು':

ಇಲ್ಲಿ ಗಮನಿಸಬೇಕಾದದ್ದು ಏನೆಂದರೆ ನೇರವಾಗಿ ಸುಲಭವಾಗಿ ಪರ್ಯಾಯವಾದ ನುಡಿಗಟ್ಟು ದೊರೆಯದಿದ್ದರೆ ಅದರ ಭಾವವನ್ನು ಸರಳಪದಗಳಲ್ಲಿ ಭಾಷಾಂತರಿಸಬೇಕೆ

ಹೊರತು ಓದುಗನನ್ನು ದಾರಿ ತಪ್ಪಿಸುವಂಥ ಬೇರೆ ಯಾವುವೇ ನುಡಿಗಟ್ಟನ್ನು ಭಾಷಾಂತರಕಾರ ತನ್ನ ಚಪಲಕ್ಕಾಗಿ ಬಳಸಬಾರದು. ಕಡೆಯ ಹಿಂದಿ ನುಡಿಗಟ್ಟಿಗೆ ಎರಡು ಪರ್ಯಾಯಗಳು ದೊರಕಬಹುದಾದರೂ ಮೊದಲನೆಯದು ಹೆಚ್ಚು ಸೂಕ್ತ ಎಂದು ಹೋಲಿಕೆಯಿಂದ ಗೊತ್ತಾಗುತ್ತದೆ.

ಇಂಥ ನುಡಿಗಟ್ಟುಗಳನ್ನು ಅಥವಾ ಪದಪುಂಜಗಳನ್ನು ಭಾಷಾಂತರಿಸಬೇಕಾದರೆ ಉದ್ದಿಷ್ಟ ಭಾಷೆಯಲ್ಲಿ ಅದಕ್ಕೆ ಪರ್ಯಾಯವಾದ ಇಂಥದೇ ಪದಪುಂಜಗಳನ್ನು ಬಳಸುವುದು ಉತ್ತಮ ತಂತ್ರ. ಒಂದು ವೇಳೆ ಪರ್ಯಾಯ ಪದಗಳು ಸಿಕ್ಕದಿದ್ದಲ್ಲಿ ಅವುಗಳ ಆಶಯವನ್ನು ಸರಳ ಪದಗಳಲ್ಲಿ ವ್ಯಕ್ತಪಡಿಸುವುದು ಮಧ್ಯಮ ತಂತ್ರ. ಅನೇಕ ವೇಳೆ ಅವುಗಳ ನೇರ ಭಾಷಾಂತರ ನಮ್ಮಲ್ಲಿಯೂ ಬಳಕೆಯಲ್ಲಿರಬಹುದು ಅಥವಾ ಅವನ್ನು ನೇರವಾಗಿ ಭಾಷಾಂತರಿಸಿದರೆ ಅವು ನಮ್ಮ ಜಾಯಮಾನಕ್ಕೆ ಹೊಂದಿಕೊಳ್ಳುವಂತಿದ್ದು ಅಸಹಜವೆನಿಸದೆ ಹೋಗಬಹುದು. ಮೂಲದ ನುಡಿಗಟ್ಟನ್ನು ಗ್ರಹಿಸದೆ ತಪ್ಪುತಪ್ಪಾಗಿ ಪರ್ಯಾಯಗಳನ್ನು ಹುಡುಕುವುದು ಇಲ್ಲವೆ ನಮ್ಮ ಜಾಯಮಾನಕ್ಕೆ ಹೊಂದದಿದ್ದರೂ ಹಾಗೇ ಭಾಷಾಂತರಿಸಲು ಹೋಗುವುದು ಕಳಪೆ ಭಾಷಾಂತರವೆನಿಸುತ್ತದೆ. ಉದಾಹರಣೆಗೆ, 'Between Scylla and Charybdis'ಎಂಬ ನುಡಿಗಟ್ಟನ್ನು 'ಅತ್ತ ದರಿ ಇತ್ತ ಪುಲಿ' ಎಂದು ಬರೆದರೆ ಉತ್ತಮ ಭಾಷಾಂತರ, 'ಎರಡು ಘೋರವಾದ ಅಪಾಯಗಳ ನಡುವೆ' ಎಂದು ಬರೆದರೆ ಮಧ್ಯಮ ಭಾಷಾಂತರ ಹಾಗೂ 'ಸ್ಕಿಲ್ಲಾ ಮತ್ತು ಚಾರಿಬ್ಡಿಸ್ ನಡುವೆ' ಅಂತ ಬರೆದರೆ ಕಳಪೆ ಭಾಷಾಂತರ.

ಈಗ ವಾಕ್ಯಗಳ ಹಂತದಲ್ಲಿ ಭಾಷಾಂತರದ ದೃಷ್ಟಿಯಿಂದ ಎದುರಾಗುವ ಸಮಸ್ಯೆಗಳನ್ನು ಪರಿಶೀಲಿಸೋಣ. ವಾಕ್ಯದ ರಚನೆ ಅಥವಾ ವ್ಯಾಕರಣದ ಕಾರಣದಿಂದಲೂ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಭಾಷಾಂತರಿಸಬೇಕಾದರೆ ಸಮಸ್ಯೆಗಳು ಎದುರಾಗುತ್ತವೆ. ಇಂಗ್ಲಿಷಿನಲ್ಲಿ ನಿರ್ದೇಶಕ ಅನಿರ್ದೇಶಕವಾಚಕ ಗುಣವಾಚಿಗಳು (article) ಸರ್ವೇಸಾಮಾನ್ಯ. 'a', 'an', 'the' ಗಳು ಇಂಗ್ಲಿಷ್ ವಾಕ್ಯಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತವೆ. ಜರ್ಮನ್ ಭಾಷೆಯಲ್ಲೂ der, die, das, ein ರೂಪಗಳು ಕಾಣಿಸಿಕೊಳ್ಳುತ್ತವೆ. ಫ್ರೆಂಚ್‌ನಲ್ಲಿಯೂ la, la, les ರೂಪಗಳುಂಟು. ರಷ್ಯನ್ ಭಾಷೆಯಲ್ಲಿ ಈ ತೊಡಕು ಇಲ್ಲವೇ ಇಲ್ಲ; ಹಾಗಾಗಿ ಇಂಥ ಗುಣವಾಚಿಗಳು ಇರುವಂಥ ವಾಕ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸಬೇಕಾದರೆ, ಕನ್ನಡದ ಜಾಯಮಾನಕ್ಕೆ ಸರಿಹೊಂದದಿದ್ದಲ್ಲಿ 'a', 'an, 'the' ಗಳನ್ನು ಕೈಬಿಡಬಹುದು. 'Krishna is good boy' ಎಂಬುದನ್ನು 'ಕೃಷ್ಣ ಒಬ್ಬ ಒಳ್ಳೆಯ ಹುಡುಗನಾಗಿದ್ದಾನೆ' ಎನ್ನುವುದಕ್ಕಿಂತ 'ಕೃಷ್ಣ ಒಳ್ಳೆಯ ಹುಡುಗ' ಎಂದು ಭಾಷಾಂತರಿಸುವುದು ಮೇಲು. ಇಲ್ಲಿ ಕ್ರಿಯಾರೂಪವೂ ಅಧ್ಯಾಹಾರವಾಗಿರುವುದನ್ನು ಗಮನಿಸಬಹುದು.

ವಿಭಕ್ತಿ ಪ್ರತ್ಯಯಗಳು. ಪೂರ್ವ ಮತ್ತು ಪರ ಪ್ರತ್ಯಯಗಳು (case-endings, prepositions and post-positions) ಭಾಷೆಯ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅಗತ್ಯವಿಲ್ಲದಿದ್ದರೆ ವ್ಯಾಕರಣಬದ್ಧವಾಗಿದ್ದರೂ ಪ್ರಥಮಾ ಮತ್ತು ದ್ವಿತೀಯಾ ವಿಭಕ್ತಿಯನ್ನು ಕೈಬಿಡುವುದು ಈಚೆಗೆ ಚಾಲ್ತಿಯಲ್ಲಿದೆ. "ನಿನ್ನ ಮನೆಯು ಎಲ್ಲಿದೆ ?" "ಈಗ ವಿಚಾರವನ್ನು ಮಾಡೋಣ" ಎಂಬ ವಾಕ್ಯಗಳನ್ನು "ನಿನ್ನ ಮನೆ ಎಲ್ಲಿದೆ ?" "ಈಗ ವಿಚಾರ ಮಾಡೋಣ" ಎಂದು ಬರೆಯುವ ಪರಿಪಾಟಿಯಿದೆ.

ಇಂಗ್ಲಿಷಿನ ಪೂರ್ವ ಪರ ಪ್ರತ್ಯಯಗಳು ಭಾಷಾಂತರಕಾರರಿಗೆ ಅನೇಕ ವೇಳೆ ತೊಡರುಕಾಲನ್ನು ಹಾಕುತ್ತವೆ. ಮುಗ್ಗರಿಸದಂತೆ ಮುಂದೆ ನಡೆಯಬೇಕಾದ್ದು ಭಾಷಾಂತರಕಾರನಿಗೆ ಬಿಟ್ಟದ್ದು. ಉದಾಹರಣೆಗೆ,

It can be done *at ease.*	ಅದನ್ನು ಹಾಯಾಗಿ ಮಾಡಬಹುದು.
Nothing is going to happen *at all.*	ಏನೇಆದರೂ ಎಂಥದೂ ಸಂಭವಿಸುವುದಿಲ್ಲ.
He had to surrender *at last.*	ಕಡೆಗೆ ಅವನು ಶರಣಾಗಬೇಕಾಯಿತು.
She was shocked *at this news.*	ಈ ಸುದ್ದಿ ಕೇಳಿ ಅವಳಿಗೆ ಆಘಾತವಾಯಿತು.
He got in *at the window.*	ಅವನು ಕಿಟಕಿಯಿಂದ ಒಳಹೊಕ್ಕನು.
What are you *at ?*	ನೀನು ಏನು ಉದ್ದೇಶಿಸಿರುವೆ ?
Get *at it.*	ಅದನ್ನು ಪಡೆ.
At times it happens like that.	ಆಗಾಗ ಹಾಗೆ ನಡೆಯುವುದುಂಟು.

ಎಂಬಂಥ ವಾಕ್ಯಗಳಲ್ಲಿ 'at' ಎಷ್ಟು ವೈವಿಧ್ಯಮಯವಾಗಿ ಬಳಕೆಯಾಗುತ್ತದೆಂದು ಗಮನಿಸಬೇಕು.

ಹೀಗೆಯೆ ಕ್ರಿಯಾಪದಗಳೊಡನೆ ಪ್ರತ್ಯಯಗಳು ಕ್ರಿಯಾತ್ಮಕ ರೂಪಗಳು ಸೇರಿ ಅರ್ಥದಲ್ಲಿ ಬದಲಾವಣೆ ಹೇಗಾಗುತ್ತೆಂಬುದನ್ನು ನೋಡೋಣ. ಉದಾಹರಣೆಗೆ,

Put about— ಬೇರೆ ದಿಕ್ಕಿಗೆ ತಿರುಗಿಸು,
Put across— ಜಯಶೀಲನಾಗು
Put by— ಉತ್ತರಿಸದೆ ನುಣುಚಿಕೊ
Put down— ಅಡಗಿಸು
Put forth— ಪ್ರಯೋಗಿಸು
Put forward— ಮುನ್ನುಗ್ಗು
Put off— ಮುಂದಕ್ಕೆ ಹಾಕು
Put on— ಹಾಕಿಕೊ
Put out— ತಪ್ಪಿಸು, ಆರಿಸು
Put over— ಪ್ರಭಾವ ಬೀರು
Put through— ಸಂಬಂಧ ಕಲ್ಪಿಸು
Put together— ಒಟ್ಟುಗೂಡಿಸು
Put up— ಸಲ್ಲಿಸು

ಮುಂತಾದ ಛಾಯೆಗಳನ್ನು ನೋಡಬಹುದು. ಇವಕ್ಕೆ ಇನ್ನೂ ಅನೇಕ ಅರ್ಥಗಳೂ

ಉಂಟು. ಕನ್ನಡಕ್ಕೆ ಇಂಥ ಪದವೃಂದಗಳನ್ನು ಭಾಷಾಂತರಿಸಬೇಕಾದರೆ ತುಂಬಾ ಎಚ್ಚರಿಕೆ ವಹಿಸಬೇಕು.

ಗುಣವಾಚಕಗಳನ್ನೂ–ತರ–ತಮ ಸೂಚಕಗಳನ್ನೂ (degrees of comparison) ಇಂಗ್ಲಿಷಿನಿಂದ ಕನ್ನಡದಲ್ಲಿ ಭಾಷಾಂತರಿಸಬೇಕಾದರೆ ಕೆಲವು ವೇಳೆ ಗುಣವಾಚಕವನ್ನು ಗುಣವಾಚಕವಾಗಿಯೆ ಭಾಷಾಂತರಿಸಬಹುದಾದರೂ, ಇನ್ನು ಕೆಲವು ವೇಳೆ ಅದನ್ನು ಪುರುಷವಾಚಕ ಸರ್ವನಾಮ (participle noun) ರೂಪದಲ್ಲಿ ಬರೆಯುವುದು ಉತ್ತಮ ವೆನಿಸುತ್ತದೆ. ''The arrangement is superb'' ಹಾಗೂ ''It is a superb movie'' ಎಂಬ ವಾಕ್ಯಗಳಲ್ಲಿ superb ಪದದ ಕಾರ್ಯಗಳು ಬೇರೆ ಬೇರೆಯಾಗಿವೆ. "ಇದು ಅತ್ಯುತ್ತಮ ವ್ಯವಸ್ಥೆ" ಹಾಗೂ "ಚಿತ್ರ ಅತ್ಯುತ್ತಮವಾಗಿದೆ" ಎಂದು ಇವನ್ನು ಭಾಷಾಂತರಿಸಿಕೊಳ್ಳಬಹುದು. –ತರ,–ತಮ ವಾಚಕಗಳನ್ನು ಭಾಷಾಂತರಿಸಬೇಕಾದರೆ ಹೋಲಿಕೆಯನ್ನು ವಿವರವಾಗಿ ನಮ್ಮ ಭಾಷೆಯಲ್ಲಿ ಸೂಚಿಸಬೇಕಾಗುತ್ತದೆ. ಉತ್ತಮ, ಉತ್ತಮತರ, ಉತ್ತಮತಮ ಪ್ರಯೋಗಗಳು ಹಾಗೂ ಅತ್ಯುತ್ತಮ, ಸರ್ವೋತ್ತಮ, ಉತ್ತಮೋತ್ತಮ ಎಂಬ ರೂಪಗಳಿಗಿಂತಲೂ 'ಕ್ಕಿಂತ'–'ಗಿಂತಲೂ' ರೂಪಗಳು ಕನ್ನಡ ಜಾಯಮಾನಕ್ಕೆ ಹೆಚ್ಚು ಹೊಂದಿಕೊಳ್ಳುತ್ತವೆ.

ಕ್ರಿಯಾಪದಗಳು ಪ್ರತಿಯೊಂದು ಭಾಷೆಗೂ ವಿಶಿಷ್ಟವಾಗಿರುತ್ತವೆ. ಇಂಗ್ಲಿಷ್ ಅಥವಾ ಬೇರೆ ಭಾಷೆಗಳಿಂದ ರಷ್ಯನ್‌ನಂಥ ಭಾಷೆಗಳಿಗೆ ಅನುವಾದ ಮಾಡಬೇಕಾದರೆ ತೊಡಕುಗಳು ಜಾಸ್ತಿ. ಏಕೆಂದರೆ ರಷ್ಯನ್‌ನಲ್ಲಿ ಸೂಕ್ಷ್ಮವಾದ ಕ್ರಿಯಾಭೇದಗಳನ್ನು ಬೇರೆ ಬೇರೆ ಕ್ರಿಯಾ ಪದಗಳಿಂದ ಸೂಚಿಸುತ್ತಾರೆ. ನಿಶ್ಚಲಸ್ಥಿತಿಯ ಕ್ರಿಯೆಗಳಿಗೆ ಬೇರೆ ಧಾತುರೂಪಗಳು, ಚಲನೆ ಯಲ್ಲಿರುವ ಕ್ರಿಯೆಗಳಿಗೆ ಬೇರೆ ಧಾತುರೂಪಗಳು ರಷ್ಯನ್ ಭಾಷೆಯಲ್ಲಿವೆ. 'He *goes* on foot', 'He *goes* by car', 'He *goes* by plane' ಎಂಬಲ್ಲಿ 'ಹೋಗು' ಎನ್ನುವ ಬೇರೆ ಬೇರೆ ಕ್ರಿಯೆಗಳಿಗೆಲ್ಲ ಬೇರೆ ಬೇರೆ ಧಾತುಗಳುಂಟು. ಜರ್ಮನ್ ಭಾಷೆಯಲ್ಲೂ '*gehen*' ಎಂದರೆ ನಡೆದು ಹೋಗಲು ಮತ್ತು *fahren* ಎಂದರೆ ವಾಹನದಲ್ಲಿ ಹೋಗಲು ಬೇರೆ ಬೇರೆಯಾಗಿಯೆ ಬಳಸುತ್ತಾರೆ. ರಷ್ಯನ್‌ನಲ್ಲಿ 'ತಿಂಡಿತಿನ್ನು', 'ಊಟಮಾಡು', 'ರಾತ್ರಿಯೂಟಮಾಡು' ಎಂಬುದಕ್ಕೆಲ್ಲ ಬೇರೆ ಬೇರೆ ಧಾತುಗಳುಂಟು. ಹಾಗಾಗಿ ರಷ್ಯನ್ ಭಾಷೆಗೆ ಬೇರೆ ಭಾಷೆಗಳಿಂದ ಭಾಷಾಂತರಿಸಬೇಕಾದರೆ ಕ್ರಿಯೆಯ ನಿರ್ದಿಷ್ಟ ಲಕ್ಷಣವನ್ನು ತಿಳಿಯದೆ ಭಾಷಾಂತರಿಸಬಾರದು. ರಷ್ಯನ್‌ನಿಂದ ಉಳಿದ ಭಾಷೆಗಳಿಗೆ ಭಾಷಾಂತರಿಸ ಬೇಕಾದರೆ ನಿರ್ದಿಷ್ಟ ಕ್ರಿಯಾರೂಪವನ್ನು ನಮ್ಮ ಸಾಮಾನ್ಯ ಕ್ರಿಯಾರೂಪಕ್ಕೆ ಬದ ಲಾಯಿಸಿಕೊಳ್ಳಬಹುದು.

ವಾಕ್ಯಗಳ ರಚನೆ ಸಹಜವಾಗಿಲ್ಲದಿದ್ದರೆ ಅವುಗಳಿಂದ ಅರ್ಥವನ್ನು ಹೊರಡಿಸುವುದು ಕಷ್ಟವಾಗುತ್ತದೆ. ಅನ್ವಯವನ್ನು ಮಾಡಿಕೊಳ್ಳಲು ಶ್ರಮಪಡಬೇಕಾಗುತ್ತದೆ. ಯಾವ

ಪದಗಳ ಅರ್ಥಪೂರ್ಣವಾದ ಮತ್ತು ಕ್ರಮಬದ್ಧವಾದ ಜೋಡಣೆಯಿಂದ ಭಾವವಹನತೆ ಅತ್ಯಂತ ಕನಿಷ್ಠ ಶ್ರಮದಿಂದ ಕನಿಷ್ಠ ಸಮಯದಲ್ಲಿ ಸಾಧ್ಯವಾಗುತ್ತದೋ, ಅಂಥ ವಾಕ್ಯ ರಚನೆಯನ್ನು ಉತ್ತಮ ವಾಕ್ಯರಚನೆ ಎನ್ನಬಹುದು. ಕರ್ತೃ, ಕರ್ಮ, ಕ್ರಿಯೆ ಮುಂತಾದ ಪದಗಳ ಪರಸ್ಪರ ಹೊಂದಾಣಿಕೆಯಿಂದ ಅರ್ಥ ಶೀಘ್ರವಾಗಿ ಸ್ಫುರಿಸುವಂತಿರಬೇಕು. ಸಾಮಾನ್ಯ ಬಳಕೆಯ ಭಾಷೆಯ ಭಾಷಾಂತರ ಉದ್ದಿಷ್ಟ ಭಾಷೆಯ ವ್ಯವಹಾರದ ಮಾತುಗಳಿಗೆ, ಆಡುನುಡಿಗೆ ಹತ್ತಿರವಾಗಿರಬೇಕು. ಇಂಗ್ಲಿಷಿನಲ್ಲಿ ಸಂಕೀರ್ಣ ವಾಕ್ಯಗಳು (complex sentences) ಮತ್ತು ಸಂಯುಕ್ತ ವಾಕ್ಯಗಳು (compound sentences) ಸಾಮಾನ್ಯವಾಗಿ ಎದುರಾಗುತ್ತವೆಯಷ್ಟೆ. ಅಂಥವನ್ನು ಕನ್ನಡದ ಜಾಯಮಾನಕ್ಕನುಗುಣವಾಗಿ ಸರಳವಾದ ವಾಕ್ಯಗಳನ್ನಾಗಿ ಬದಲಾಯಿಸಿ ಭಾಷಾಂತರಿಸಿಕೊಳ್ಳಬೇಕು. ಮೂಲದ ವಾಕ್ಯಗಳ ಆಶಯ ಮತ್ತು ಉಪಾದೇಯ ಏನೆಂಬುದನ್ನು ಪರಿಗಣಿಸಿ ಅದು ಅನುವಾದದಲ್ಲಿ ಮೂಡುವಂತೆ ಅಳವಡಿಸಿ ಬರೆಯಬೇಕು. ಹಾಗೆಯೇ, ಕನ್ನಡದಲ್ಲಿ ಕರ್ಮಣಿ ಪ್ರಯೋಗದ ಬಳಕೆ ವಿರಳವಾದುದರಿಂದ 'ಅಲ್ಪಡು' ರೂಪವನ್ನು ವರ್ಜಿಸಿ ಬೇರೆ ರೀತಿಯಲ್ಲಿ ಬರೆಯಬೇಕು. ಉದಾಹರಣೆಗೆ 'ತೇನ ಭಣಿತಮ್' ಎಂಬ ಸಂಸ್ಕೃತ ವಾಕ್ಯವನ್ನು 'ಅವನಿಂದ ಹೇಳಲ್ಪಟ್ಟಿತು' ಎಂಬುದಕ್ಕಿಂತ 'ಅವನು ಹೇಳಿದನು' ಎಂದೇ ಭಾಷಾಂತರಿಸಬೇಕು. ಹಿಂದಿ ಮೊದಲಾದ ಭಾಷೆಗಳಿಂದ ಭಾಷಾಂತರಿಸುವಾಗಲೂ ಆ ಭಾಷೆಗಳಲ್ಲಿನ ವಾಕ್ಯರಚನಾಕ್ರಮ, ಪದಗಳ ಅನ್ವಯ, ಪ್ರತ್ಯಯಗಳು, ನುಡಿಗಟ್ಟುಗಳು ಹೇಗಿವೆ ಎಂಬುದನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಭಾಷಾಂತರ ಮಾಡಬೇಕು. ಭಾಷೆಯಲ್ಲಿ ಕೃತಕರಚನೆಗಳನ್ನು ಅಳವಡಿಸುವತ್ತ ಭಾಷಾಂತರಕಾರ ಪ್ರಯತ್ನಿಸಬಾರದು. ಅಸ್ಪಷ್ಟತೆ, ಅಪಾರ್ಥ, ಅರ್ಥರಾಹಿತ್ಯ, ಅನ್ವಯ ಹೀನತೆ, ಸುತ್ತುಬಳಸಿ ಹೇಳುವಿಕೆ ಮುಂತಾದ ವಾಕ್ಯರಚನೆ ದೋಷಗಳಿಂದ ಮುಕ್ತನಾಗಲು ಆತ ಪ್ರಯತ್ನಿಸಬೇಕು.

ಭಾಷಾಂತರಗಳನ್ನು ಗದ್ಯ, ಪದ್ಯ, ನಾಟಕ, ಕಾದಂಬರಿ, ಸಣ್ಣಕತೆ, ಏಕಾಂಕನಾಟಕ, ಪ್ರವಾಸಕಥನ, ಪ್ರಹಸನ, ನಿಬಂಧ ಮೊದಲಾದ ಅನೇಕ ಪ್ರಕಾರಗಳನ್ನಾಗಿ ವಿಂಗಡಿಸಿ ಒಂದೊಂದರಲ್ಲೂ ಅಗತ್ಯವಾದ ತಂತ್ರವಿಧಾನಗಳನ್ನು ವಿವರವಾಗಿ ಪರಿಶೀಲಿಸುವ ಸಾಧ್ಯತೆಯುಂಟು. ಆ ಪ್ರಯತ್ನವನ್ನು ಇಲ್ಲಿ ನಡೆಸಲಾಗಿಲ್ಲ. ಹಾಗೆಯೆ ಭಾಷಾಂತರ ಪ್ರಕ್ರಿಯೆಯನ್ನು ಅನೇಕ ವಿಧವಾಗಿ ನಡೆಸಬಹುದು, ಉದಾಹರಣೆಗೆ, (i) ಶಬ್ದಾನುವಾದ (literal translation or metaphrase), (ii) ವಿಸ್ತಾರಾನುವಾದ (amplification), (iii) ನಿಕಟಾನುವಾದ (close rendering), (iv) ಭಾವಾನುವಾದ (paraphrase), (v) ಸಂಗ್ರಹಾನುವಾದ (bridgement), (vi) ರೂಪಾಂತರ ಅಥವಾ ಅಳವಡಿಕೆ (adaptation), (vii) ಸರಳಾನುವಾದ (basic translation), (viii) ಅರ್ಥಾನುವಾದ (vertical translation) ಮೊದಲಾದ ಭಾಷಾಂತರ ಪ್ರಕಾರ

ಗಳನ್ನು ಹೆಸರಿಸಬಹುದು. ಮೇಲ್ಕಂಡ ಪ್ರತಿಯೊಂದು ಸಾಹಿತ್ಯಪ್ರಕಾರವನ್ನೂ ವಿವಿಧ ಭಾಷಾಂತರ ಪ್ರಕಾರಗಳಿಗೆ ಅಳವಡಿಸುವುದು ಹೇಗೆಂಬ ಬಗ್ಗೆ ವಿವಿಧ ರೀತಿಯ ತಂತ್ರ ವಿಧಾನಗಳನ್ನು ಬೆಳೆಸುತ್ತಾ ಹೋಗಬಹುದು. ಲೇಖನದ ಮಿತಿಯಿಂದಾಗಿ ಈ ದಿಸೆಯಲ್ಲೂ ಚರ್ಚೆ ನಡೆಸಲಾಗಿಲ್ಲ.

ಭಾಷೆಗೆ ಸಂಬಂಧಪಟ್ಟ ಸಮಸ್ಯೆಗಳೇ ಭಾಷಾಂತರದ ಸಮಸ್ಯೆಗಳಲ್ಲ. ಭಾಷೆಗಿಂತ ಹೊರಗಿರುವ ಅನೇಕ ಸಮಸ್ಯೆಗಳೂ ಎದುರಾಗುತ್ತವೆ. ವಾಸ್ತವವಾಗಿ ಭಾಷೆ ಒಂದು ಜನಾಂಗದ, ಸಮುದಾಯದ ಸಂಸ್ಕೃತಿಯನ್ನೂ ಜೀವನವಿಧಾನವನ್ನೂ ಮಾತುಗಳಲ್ಲಿ ಹೊರಗೆಡವುತ್ತದೆ. ನಮ್ಮ ಮನಸ್ಸಿನ ಭಾವನೆಗಳು, ನೋವುನಲಿವುಗಳು, ಆಸೆಆಕಾಂಕ್ಷೆಗಳು ನಾವು ಬೆಳೆದುಬಂದ ಸಂಸ್ಕೃತಿಯ ಅಂಗವಾಗಿರುವುದರಿಂದ ಅವುಗಳನ್ನು ಇನ್ನೊಂದು ಭಾಷೆಯಲ್ಲಿ ವ್ಯಕ್ತಪಡಿಸಬೇಕಾದಲ್ಲಿ ಭಾಷಾಂತರಕಾರ ಎರಡು ಭಾಷೆಗಳ ಸಾಂಸ್ಕೃತಿಕ ಹಿನ್ನೆಲೆಯನ್ನು ಪಡೆದುಕೊಂಡಿರಬೇಕಾಗಿರುತ್ತದೆ. ಒಂದು ಜನಾಂಗದ ಆಟಪಾಟಗಳು, ತಿಂಡಿತಿನಿಸುಗಳು. ಬಟ್ಟೆಬರೆ, ಸಸ್ಯ ಮತ್ತು ಪ್ರಾಣಿ ವಿಶೇಷಗಳು, ನಡೆವಳಿಕೆಗಳು, ನಂಬಿಕೆಗಳು, ಹಬ್ಬ ಹರಿದಿನಗಳು, ಆಚರಣೆಗಳು, ಸಾಮಾಜಿಕ ಸಂಬಂಧಗಳು, ಗಾದೆಗಳು, ನುಡಿಗಟ್ಟುಗಳು, ನಾಣ್ಣುಡಿಗಳು. ಅಡುನುಡಿ, ಬೈಯ್ಗಳು, ಅಸಂಸ್ಕೃತ ಬಳಕೆ (slang) ಇವುಗಳ ಬಗ್ಗೆ ಸಾಕಷ್ಟು ಪರಿಚಯವಿಲ್ಲದೆ ಸಾಂಸ್ಕೃತಿಕ ಲೇಪನವುಳ್ಳ ಒಂದು ಕೃತಿಯನ್ನು ಇನ್ನೊಂದು ಭಾಷೆಗೆ ಸಮರ್ಥವಾಗಿ, ಸಮರ್ಪಕವಾಗಿ ಭಾಷಾಂತರ ಮಾಡಲು ಸಾಧ್ಯವಿಲ್ಲ.

ಭಾರತೀಯ ಸಂಸ್ಕೃತಿಯಲ್ಲಿ ಕಂಡುಬರುವ ವರ್ಣಾಶ್ರಮ ಧರ್ಮ ಪದ್ಧತಿಗಳು, ಸಂಸ್ಕಾರಗಳು,ವಿವಾಹಪದ್ಧತಿ ಇಂಥ ವಿಚಾರಗಳನ್ನೊಳಗೊಂಡ ಸಾಹಿತ್ಯವನ್ನು ಇನ್ನೊಂದು ಭಾಷೆಗೆ ಭಾಷಾಂತರಿಸಲು ಕಷ್ಟವಾಗುತ್ತದೆ. ನಮ್ಮ ಸಂಸ್ಕೃತಿಯ ವಿಶಿಷ್ಟ ಪದಗಳಾದ ತೌರು, ಪ್ರಸಾದ, ತಾಳಿ, ಜನಿವಾರ, ಶಿವದಾರ, ಜುಟ್ಟು, ಮಡಿ, ಮೈಲಿಗೆ, ಕಚ್ಚೆ, ಓಲೆ, ಡಾಬು, ಮೂಗುಬಟ್ಟು, ಗೊಜ್ಜು, ಹುಳಿ, ಹೋಳಿಗೆ, ತಿಳಿಸಾರು ಮುಂತಾದ ಪದಗಳನ್ನು ಇಂಗ್ಲಿಷಿಗೆ ತರುವುದು ಕಷ್ಟ. ಅತ್ತೆಯ ಮನೆ, ತೌರು, ಗಂಡ, ಹೆಂಡತಿ ಈ ಭಾವನೆಗಳಲ್ಲಿರುವ ಸೂಕ್ಷ್ಮತೆಗಳು ಎಲ್ಲ ಸಂಸ್ಕೃತಿಯಲ್ಲೂ ಒಂದೇ ಇರುವುದಿಲ್ಲ. ನಮ್ಮ ಹೆಣ್ಣಿಗೆ 'ತೌರು' ಕೇವಲ 'parcnt's home' ಹಾಗೂ 'ಅತ್ತೆಯ ಮನೆ' ಕೇವಲ 'mother-in-law's home' ಅಲ್ಲ. ಇಂಥ ಪದಗಳನ್ನು ಇಂಗ್ಲಿಷಿನಲ್ಲಿ ಹೇಳಬೇಕಾದರೆ ವಿಶೇಷ ತಂತ್ರ ಅಗತ್ಯ. ಇವುಗಳ ಪೈಕಿ ಕೆಲವು ಪದಗಳಿಗೆ ಇಂಗ್ಲಿಷಿನಲ್ಲಿ ಪರ್ಯಾಯಗಳು ದೊರಕಬಹುದು. ಆದರೆ ಅವು ನಮ್ಮ ಸಂಸ್ಕೃತಿ ಜನ್ಯಪದಗಳು ಬಿಂಬಿಸುವ ಭಾವಸಂಪತ್ತನ್ನೆಲ್ಲ ಹೊರಗೆಡವಲಾರವು. ಜುಟ್ಟಿಗೆ tuft ಎಂದೂ, ವ್ರತಕ್ಕೆ vow ಎಂದೂ ಪ್ರಸಾದಕ್ಕೆ remnant ಎಂದೂ ಬರೆದರೆ ಸಾಲದು. ಇಂತೆಡೆಗಳಲ್ಲಿ ವಿವರಣ ವಿಧಾನವನ್ನು ಬಳಸಬೇಕು.

ಇಂಗ್ಲಿಷ್ ಮತ್ತು ವಿದೇಶೀಯ ಭಾಷೆಗಳ ಇಂಥ ಪದಗಳನ್ನು ನಮ್ಮ ಭಾಷೆಗೆ ತರ

ಬೇಕಾದಾಗಲೂ ಇವೇ ಸಮಸ್ಯೆಗಳು ಎದುರಾಗುತ್ತವೆ. Bread and butter, baptism, fork, hat, tie, jeans, bell-bottom, hot pants, maxi ಇಂಥ ಪದಗಳನ್ನು ಭಾಷಾಂತರಿಸಿಕೊಳ್ಳಲು ಯಾವ ತಂತ್ರವನ್ನು ಬಳಸಬೇಕು ? ಇಂತೆಡೆಗಳಲ್ಲಿ ಏಕೈಕ ಪರಿಹಾರವೆಂದರೆ, ಸಾಮಾನ್ಯ ಜನರು ಬೇರೊಂದು ಭಾಷೆಯದೆಂಬ ಜಾಗೃತ ಪ್ರಜ್ಞೆಯಿಲ್ಲದೆ ತಮ್ಮ ನಿತ್ಯವ್ಯವಹಾರದಲ್ಲಿ ಬಳಸುವ ಎಲ್ಲ ಪದಗಳೂ ಕನ್ನಡದ್ದೆಂದೇ ಸ್ವೀಕರಿಸಬೇಕು. ಹ್ಯಾಟು, ಬೂಟು, ಟೈ, ಮ್ಯಾಕ್ಸಿ, ಜೀನ್ಸ್, ಪಾಲಿಯೆಸ್ಟರ್ ಎಲ್ಲ ನಮ್ಮ ಪದಗಳೇ ಆಗಬೇಕು.

ಎರಡು ಸಂಸ್ಕೃತಿ ಅಥವಾ ನಾಗರಿಕತೆಗಳ ನಡುವೆ ಸಂಬಂಧ ಇಲ್ಲವೆ ಘರ್ಷಣೆಯಾದಲ್ಲಿ ಹೆಚ್ಚು ಪ್ರಭಾವಶಾಲಿಯಾದ ಸಂಸ್ಕೃತಿಯ ಪ್ರಭಾವ ಕಡಮೆ ಪ್ರಭಾವಶಾಲಿಯಾದ ಸಂಸ್ಕೃತಿಯ ಮೇಲೆ ಬೀಳುತ್ತದೆ. ಇಂಥ ಸಮಯದಲ್ಲಿ ಧಾರಾಳವಾಗಿ ಪದಗಳನ್ನು ಎರವಲು ತೆಗೆದುಕೊಂಡು ನಮ್ಮದಾಗಿಸಿಕೊಳ್ಳುತ್ತಾ ಹೋಗಬೇಕು.

ಎಸ್ಕಿಮೊ ಜನರ ಬದುಕಿನಲ್ಲಿ ಮಂಜು ವಿಶೇಷ ಪಾತ್ರ ವಹಿಸುವುದರಿಂದ, ಅದರ ಬೇರೆ ಬೇರೆ ಸ್ಥಿತಿಗತಿಗಳನ್ನು ಸೂಚಿಸುವುದಕ್ಕಾಗಿ ಹತ್ತಾರು ಪದಗಳು ಆ ಭಾಷೆಯಲ್ಲಿ ದೊರೆಯಬಹುದು. ಟಿಬೆಟಿಯನ್ ಭಾಷೆಯಲ್ಲಿ ಬೇರೆಬೇರೆ ಜಾತಿಯ ಇರುವೆಗಳನ್ನು ಸೂಚಿಸಲು ಹಲವಾರು ಪದಗಳಿವೆಯಂತೆ. ಇದನ್ನು ಭಾಷಾಂತರಿಸುವ ತಂತ್ರ ಏನು ? ನಾವು ಸಾಧ್ಯವಾದಷ್ಟೂ ಪದಗಳ ಅರ್ಥವನ್ನು ನಮಗೆ ಗೊತ್ತಾದ ಮಟ್ಟಿಗೆ ವಿವರಿಸಿ (ಉದಾ. ಎಸ್ಕಿಮೋಗಳ x ಎಂಬ ಪದಕ್ಕೆ 'ಅರ್ಧ ಕರಗಿದ ಮಂಜುಗಡ್ಡೆ', ಪಾರದರ್ಶಕ, ಮಂಜುಗಡ್ಡೆ' ಎಂದೊ, y ಎಂಬ ಟಿಬೆಟಿಯನ್ ಪದಕ್ಕೆ 'ಚೂಪು ಮೂತಿಯ ಇರುವೆ', ಚಪ್ಪತಲೆಯ ಇರುವೆ' ಎಂದೊ) ಕೆಲಸ ಮುಂದುವರಿಸಬೇಕು, ನಮ್ಮಲ್ಲಿ ಬರುವ 'brahmin', 'lingayat' ಮುಂತಾದ ಪದಗಳಿಗೆ 'a seet called......', 'a caste called...' ಎಂದು ಬರೆಯಬಹುದು.

ನಂಬಿಕೆಗಳು, ಭಾವನೆಗಳು ಸಂಸ್ಕೃತಿಯಿಂದ ಸಂಸ್ಕೃತಿಗೆ ಬೇರೆಯಾಗಿರುತ್ತವೆ. ಬಿಳಿ ಬಣ್ಣ ನಮ್ಮಲ್ಲಿ ಶುಭ್ರತೆಯ ಸಂಕೇತವೂ, ಕರಿಯ ಬಣ್ಣ ದುಃಖದ ಸಂಕೇತವೂ ಆದರೆ ಬೇರೆ ಯಾವುದಾದರೂ ಸಂಸ್ಕೃತಿಯಲ್ಲಿ ಇವೇ ಸಂಕೇತಗಳಾಗದೆ ಹೋಗಬಹುದು. ನಮಗೆ ಬಲಭಾಗ ಶುಭವೂ ಎಡಭಾಗ ಅಶುಭವೂ ಆಗಿರುವಂತೆ ಎಲ್ಲರಿಗೂ ಆಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಚೀನಿ ಭಾಷೆಯವರಿಗೆ ಎಡಭಾಗವೇ ಪವಿತ್ರವಾದುದು. ಹಾಗೆ, ಗೂಬೆ ನಮಗೆ ಅಶುಭ ಪಕ್ಷಿಗಳಾದರೆ ಕೆಲವು ಜನಾಂಗಗಳಲ್ಲಿ ಅವೇ ಶುಭಸೂಚಕವಾಗಿರಬಹುದು. ಈ ರೀತಿಯ ಸಂದರ್ಭಗಳಲ್ಲಿ ಭಾಷಾಂತರಮಾಡಬೇಕಾದರೆ ಮೂಲ ಭಾಷೆಯ ನಂಬಿಕೆ, ಭಾವನೆಗಳಿಗೆ ಅನುಗುಣವಾಗಿ ಉದ್ದಿಷ್ಟ ಭಾಷೆಯ ನಂಬಿಕೆ, ಭಾವನೆಗಳನ್ನು ಸಂವಾದಿಯಾಗಿ ಇಡುವ ತಂತ್ರವೇ ಸರಿಯಾದುದು. ಇಲ್ಲಿ ಇವುಗಳ ಸಂವಾದಿತ್ವ ಅಗತ್ಯವೇ ಹೊರತು ಪದಗಳದ್ದಲ್ಲ. ಹೀಗಾಗಿ ಸಾಂಸ್ಕೃತಿಕ ಹಿನ್ನೆಲೆಯ ಪರಿಶೀಲನೆಯೂ ಭಾಷಾಂತರಕಾರನಿಗೆ ತುಂಬಾ ಅಗತ್ಯವಾದುದು.

೫೫ | ಭಾಷಾಂತರದ ಪರಿಮಿತಿಗಳು

ಬಾ. ವೇ. ಶ್ರೀಧರ

ಭಾಷಾಂತರ ಎನ್ನುವುದನ್ನು ಎ. ಎಲ್. ಸ್ಮಿತ್ ಎಂಬಾತ ಹೀಗೆ ವಿವರಿಸುತ್ತಾನೆ: 'Translation is to change into another language as much of the sense as one can, for some of the original effect is almost always lost.' ಅಂದರೆ ಅರ್ಥವನ್ನು ಕಾಯ್ದುಕೊಂಡು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಕೊಂಡೊಯ್ಯುವುದೇ ಭಾಷಾಂತರ; ಏಕೆಂದರೆ ಹಾಗೆ ಕೊಂಡೊಯ್ಯುವಾಗ ಮೂಲದ ಪ್ರಭಾವ ಒಂದಿಲ್ಲೊಂದು ಪ್ರಮಾಣದಲ್ಲಿ ನಷ್ಟವಾಗುತ್ತದೆ. ಆದರ್ಶ ಭಾಷಾಂತರದಲ್ಲಿ ಮೂಲಕೃತಿಯ ಉತ್ಕೃಷ್ಟತೆಯೆಲ್ಲ ಯಥಾವತ್ತಾಗಿ ಅವತರಿಸಬೇಕು—ಅಂದರೆ ಮೂಲಕೃತಿಯನ್ನು ಓದಿದಾಗ ಆಗುವ ಆನಂದ, ರೋಮಾಂಚ, ಪುಳಕಗಳೆಲ್ಲ ಅನುವಾದವನ್ನು ಓದಿದಾಗಲೂ ಆಗಬೇಕು—ಎಂಬುದು ಸರಿಯಷ್ಟೆ. ಆದರೆ ಮೂಲ ಮತ್ತು ಉದ್ದಿಷ್ಟ ಭಾಷೆಗಳ ನಡುವಣ ವ್ಯತ್ಯಾಸದಿಂದಾಗಿ ಜನರ ಆಚಾರ ವ್ಯವಹಾರ ಸಾಂಸ್ಕೃತಿಕ ಹಿನ್ನೆಲೆಗಳ ವ್ಯತ್ಯಾಸಗಳಿಂದಾಗಿ ಈ ಆದರ್ಶಸ್ಥಿತಿಯನ್ನು ಎಲ್ಲ ಸಂದರ್ಭಗಳಲ್ಲೂ ತಲಪುವುದು ಕಷ್ಟ ಎಂಬುದು ಸ್ಮಿತ್ತನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ.

ಭಾಷೆಗಳ ನಡುವಣ ವ್ಯತ್ಯಾಸ ಭಾಷಾಂತರದ ಪರಿಮಿತಿಗೆ ಕಾರಣವಾಗುತ್ತದೆಂದು ಹೇಳಿದೆವು. ಇಂಗ್ಲಿಷ್ ಭಾಷೆ ತುಂಬ ಶ್ರೀಮಂತವಾದ ಭಾಷೆ, ನಿಜ. ಆದರೂ ಅದರಲ್ಲಿ ಷಡ್ಡಕ, ಚಿಕ್ಕಪ್ಪ, ದೊಡ್ಡಪ್ಪ, ನಾದಿನಿ, ಸವತಿ, ಓರಗಿತ್ತಿ ಮೊದಲಾದ ನಂಟನ್ನು ಸೂಚಿಸುವ ಪದಗಳಿಗೆ ಸಂವಾದಿಯಾದ ಒಂದೊಂದು ಪದವಿಲ್ಲ. ಭಾವ, ಷಡ್ಡಕ, ಮೈದುನ ಎಲ್ಲಕ್ಕೂ brother-in-law ಎಂಬ ಪದವೇ. (Co-brother ಎಂಬ ಪದಕ್ಕೆ ಆಂಗ್ಲ ನಿಘಂಟುಗಳ ಪ್ರಕಾರ ಷಡ್ಡಕ ಎಂಬ ಅರ್ಥ ಇಲ್ಲ.) ಹೀಗಾಗಿ ಷಡ್ಡಕ ಎನ್ನಲು wife's sister's husband ಎಂದೂ, ಓರಗಿತ್ತಿ ಎನ್ನಲು husband's brother's wife ಎಂದೂ (ವಿಧಿ ಇಲ್ಲದೆ) ದ್ರಾವಿಡ ಪ್ರಾಣಾಯಾಮ ಮಾಡಿ ಹೇಳಬೇಕು. ಅಂತೆಯೇ uncle ಎಂಬ ಪದಕ್ಕೆ ಚಿಕ್ಕಪ್ಪ ದೊಡ್ಡಪ್ಪ, ಸೋದರಮಾವ, ಸೋದರತ್ತೆಯ ಗಂಡ ಮೊದಲಾದ ಅರ್ಥಗಳೆಲ್ಲ ಇವೆ. ಈ ಪದಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಪ್ರತ್ಯೇಕವಾದ ಒಂದೊಂದು ಪದ ಇಲ್ಲ. ಒಂದು ಜೀವನ ಚರಿತ್ರೆಯನ್ನೋ ಆತ್ಮಕಥನವನ್ನೋ ಅನುವಾದ

ಮಾಡುವಾಗ ಈ ರೀತಿಯ ಒಂದು ನಾನಾರ್ಥ ಪದದಿಂದ ನಂಟನ್ನು ಸೂಚಿಸಿದ್ದರೆ, ನಂಟು ಅರ್ಥವಾಗದೆ ಅನುವಾದಕ ಗೊಂದಲಕ್ಕೀಡಾಗುತ್ತಾನೆ. ಆಗ ಅವನು ಆ ಪುಸ್ತಕವನ್ನು ರಟ್ಟಿನಿಂದ ರಟ್ಟಿನವರೆಗೆ ಕೂಲಂಕಷವಾಗಿ ತಿರುವಿಹಾಕಬೇಕಾಗುತ್ತದೆ, ಹಾಗೂ ತಿಳಿಯದಿದ್ದರೆ ಬೇರೆ ಬೇರೆ ಕೃತಿಗಳ ಸಹಾಯದಿಂದ ಆ ನಂಟನ್ನು ಪತ್ತೆ ಹಚ್ಚಬೇಕಾಗುತ್ತದೆ. ಇಷ್ಟಾಗಿಯೂ ಆ ನಂಟು ಪತ್ತೆಯಾಗದೆ ಕಗ್ಗಂಟಾಗಿ ಉಳಿಯುವ ಸಂಭವವೇ ಹೆಚ್ಚು. ವಿಶಿಷ್ಟ ಧಾರ್ಮಿಕ ಅರ್ಥವುಳ್ಳ ಮಡಿ, ಪುಣ್ಯ, ಪಾಪ, ಮಾಯೆ, ಲೀಲೆ, ಮಂಗಳಾರತಿ, ತೀರ್ಥ ಮೊದಲಾದ ಪದಗಳನ್ನು ಇಂಗ್ಲಿಷ್‌ನಂತಹ ವಿದೇಶೀ ಭಾಷೆಗೆ ಅನುವಾದ ಮಾಡಲು ಸಾಧ್ಯವಿಲ್ಲ; ನಾಲ್ಕಾರು ಮಾತುಗಳಲ್ಲಿ ವಿವರಿಸಲು ಪ್ರಯತ್ನಿಸಬಹುದು, ಅಷ್ಟೆ.

ಪ್ರತಿಯೊಂದು ಭಾಷೆಯಲ್ಲೂ ಎರಡರ್ಥ, ಮೂರರ್ಥ, ಇಲ್ಲವೆ ನಾನಾರ್ಥ ಕೊಡುವ ಪದಗಳಿರುತ್ತವೆ. ಆ ಪದಗಳನ್ನು ಕವಿ (ಅಥವಾ ವ್ಯಕ್ತಿ) ಶ್ಲೇಷಾರ್ಥ ಬರುವಂತೆ ಚಮತ್ಕಾರವಾಗಿ ಬಳಸುತ್ತಾನೆ. ಉದ್ದೇಶಪೂರ್ವಕವಾಗಿ ಅವನು ಹಾಗೆ ಬಳಸಿರುತ್ತಾನೆ. ಆ ನಾನಾರ್ಥ ಶಬ್ದಗಳನ್ನು ಉದ್ದಿಷ್ಟ ಭಾಷೆಯಲ್ಲಿ ಹಾಗೆಯೇ ಅನುವಾದಿಸಲು ಅನೇಕ ವೇಳೆ ಸಾಧ್ಯವಾಗುವುದಿಲ್ಲ. ಉದಾ.ಗೆ ಇಂಗ್ಲಿಷ್‌ನ ಈ ಮಾತನ್ನು ನೋಡಿ ; 'Life depends on the liver' ಇಲ್ಲಿ liver ಅನ್ನುವ ಪದಕ್ಕೆ ಎರಡರ್ಥ ಇದೆ. ಒಂದು— ಬಾಳುವವ, ಇನ್ನೊಂದು ಪಿತ್ತಜನಕಾಂಗ. ಅಂದರೆ ಬದುಕು ಬಾಳುವವನನ್ನು ಅವಲಂಬಿಸಿರುತ್ತದೆ ಎಂದು ಒಂದು ಅರ್ಥ, ಬದುಕು (ಆಯುಸ್ಸು) ಪಿತ್ತಜನಕಾಂಗವನ್ನು (ಅದರ ಸುಸ್ಥಿತಿಯನ್ನು) ಅವಲಂಬಿಸಿರುತ್ತದೆ ಎಂದು ಇನ್ನೊಂದರ್ಥ ; ಮೂಲದಂತೆ ಸೂತ್ರಪ್ರಾಯವಾಗಿ ಪ್ರಾಸಯುಕ್ತವಾಗಿ ದ್ವಂದ್ವಾರ್ಥ ಸ್ಫುರಿಸುವಂತೆ ಕನ್ನಡದಲ್ಲಿ ಹೇಳಲು ಬಲು ಕಷ್ಟ (ಸಾಧ್ಯವಿಲ್ಲ ಎಂದೇ ಹೇಳಬಹುದೇನೋ). ತುಂಬ ಕಷ್ಟಪಟ್ಟು ತನ್ನ ಶಬ್ದರಚನಾ ಕೌಶಲವೆಲ್ಲವನ್ನೂ ಉಪಯೋಗಿಸಿ ಅಂಥ ಒಂದು ವಾಕ್ಯ ರಚಿಸಿದರೂ ಮೂಲದ ಸರಳ, ಸುಲಭ ಶೈಲಿ ಮಾಯವಾಗುವುದಂತೂ ಖಂಡಿತ. ಹಾಗೆಯೇ ಸಂಸ್ಕೃತದ ಮತ್ತೊಂದು ಮಾತನ್ನು ನೋಡಿ: 'ಕಂಬಲವಂತಂ ನ ಬಾಧತೇ ಶೀತಂ' ಒಂದರ್ಥ—ಕಂಬಳಿ ಹೊದ್ದಿರುವವನನ್ನು ಶೀತ ಬಾಧಿಸದು ; ಇನ್ನೊಂದರ್ಥ ಶೀತ ಯಾವ ಬಲಶಾಲಿಯನ್ನು ತಾನೆ ಬಾಧಿಸುವುದಿಲ್ಲ ? ಸಂಸ್ಕೃತದಲ್ಲಿ ಪದವಿಭಾಗ ಸೌಕರ್ಯವಿರುವುದರಿಂದ, ಬೇರೆ ಬೇರೆ ರೀತಿಯಲ್ಲಿ ಪದವಿಭಾಗ ಮಾಡಿ ಇಂಥ 'ಆಟ' ಆಡಬಹುದು. ಈ ಶ್ಲೇಷೆಯನ್ನು ಕನ್ನಡಕ್ಕಾಗಲಿ ಇಂಗ್ಲಿಷ್‌ಗಾಗಲಿ ತರುವುದು ಕನಸು. ಅಂಥಲ್ಲಿ ಮೂಲಭಾಷೆಯ ಜಾಯಮಾನ, ಮೂಲಕರ್ತೃವಿನ ಜಾಣ್ಮೆಗಳನ್ನು ಮೆಚ್ಚಿ, ವಿವರಣಾತ್ಮಕವಾಗಿ ಮೂಲದ ಆಶಯ ಹೇಳಬಹುದು, ಅಷ್ಟೆ.

ಪದಗುಚ್ಛಗಳು ನುಡಿಗಟ್ಟುಗಳು ಗಾದೆಗಳು ಭಾಷೆಗೆ ಹಿತ ಮಿತತ್ವವನ್ನೂ ಶಕ್ತಿಯನ್ನೂ ಹೊಳಪನ್ನೂ ತಂದುಕೊಡುತ್ತವೆ, 'ಎಂಜಲು ಕೈಯಲ್ಲೂ ಕಾಗೆ ಓಡಿಸದವ', 'ಮಂಗಳಾರತಿ

ಎತ್ತು', 'ಮೊಳೆ ಜಡಿದುಕೊಂಡಿರು', 'ಸಿಗಿದು ತೋರಣಕಟ್ಟು' ಮೊದಲಾದ ನುಡಿಗಟ್ಟುಗಳನ್ನು ಬೇರೆ ಭಾಷೆಗೆ ಪದಶಃ ಅನುವಾದ ಮಾಡಿದರೆ ಹಾಸ್ಯಾಸ್ಪದವಾಗುತ್ತದೆ. ಅವೇ ರೀತಿಯ ನುಡಿಗಟ್ಟುಗಳು ಇಂಗ್ಲಿಷ್ ಭಾಷೆಯಲ್ಲಿ ಇಲ್ಲದಿರುವುದರಿಂದ, ಅವುಗಳ ಅರ್ಥವನ್ನು ಮಾತ್ರ ಇಟ್ಟುಕೊಳ್ಳಬೇಕಾಗುತ್ತದೆ. ಆಗ ಮೂಲದ ಪ್ರಭಾವ, ತೀವ್ರತೆ ಅನುವಾದದಲ್ಲಿ ಖಂಡಿತ ಕಡಮೆಯಾಗುತ್ತದೆ. ಹೀಗೆಯೇ 'ಸುಮಂಗಲಿಯಾಗಿ ಸಾಯಬೇಕು' ಎಂಬುದನ್ನು 'I want to die when my husband is alive' ಎಂದು ಹೇಳಿದರೆ ನಗೆಪಾಟಲಿಗೆಡೆಗೊಡುವುದಲ್ಲದೆ ಆ ಮಾತಿನ ನಿಜವಾದ ಆಶಯ, ಪವಿತ್ರತೆ ಮಾಯವಾಗುತ್ತದೆ. ಇಂಥ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಮಾತುಗಳನ್ನು ಪದಗಳನ್ನು ಹಾಗೆಯೇ ಬಳಸಿ, ನಾಲ್ಕಾರು ಮಾತುಗಳಲ್ಲಿ ವಿವರಿಸಬೇಕಾಗುತ್ತದೆ.

ಕಾವ್ಯವನ್ನು ಭಾಷಾಂತರಿಸುವುದು ಕಷ್ಟ; ಹಾಗೆ ಭಾಷಾಂತರಿಸಿದರೂ ಆ ಭಾಷಾಂತರವು, ನಲ್ಲೆಯನ್ನು ಪರದೆಯ ಮೂಲಕ ಚುಂಬಿಸುವುದು ಎಷ್ಟು ಕೃತಕವೂ ಅ(ರೆ) ತೃಪ್ತಿದಾಯಕವೂ ಆಗಿರುತ್ತದೋ ಹಾಗೆ ಇರುತ್ತದೆಂಬ ಅಭಿಪ್ರಾಯವುಂಟು. ಇದರ ಬಗ್ಗೆ ಡಿವಿಜಿ ಹೀಗೆ ಹೇಳುತ್ತಾರೆ :

ಹಗುರಾದ ಮಾತುಗಳು, ನವುರಾದ ಭಾವಗಳು
ಚೈತ್ರ ಸಂಜೆಯಲಿ ತೋಟದಲಿ ಮೆಲು ಮೆಲನೆ
ಸುಳಿ ಸುಳಿದು ಸೋಕುವೆಲರಿನ ಲಘುವಿಲಾಸಗಳು
ತರ್ಜುಮೆಗೆ ಸಿಲುಕುವುವೆ ಬೇರೆ ಭಾಷೆಯಲಿ ?

[ಉಮರನ ಒಸಗೆಯ 'ಸಮಾಪನೆ'ಯಲ್ಲಿ]

ಕಾವ್ಯಾನುವಾದ ಸಕ್ಕರೆಯ ಸಿಹಿಯನ್ನು ಬೆಲ್ಲದ ಮೂಲಕ ತೋರಿಸಿಕೊಟ್ಟಂತೆ ಎಂದೂ ಹೇಳುತ್ತಾರೆ. ಈ ಮಾತುಗಳು ಕಾವ್ಯಾನುವಾದದ ಇತಿಮಿತಿಗಳನ್ನು, ಕಷ್ಟವನ್ನು (ಅ)ಸಾಧ್ಯತೆಯನ್ನು ಸಮರ್ಥವಾಗಿ ನಿರೂಪಿಸುತ್ತವೆ. ಏಕೆಂದರೆ ಕಾವ್ಯದ ಅನುವಾದ, ಗಳಲ್ಲಿ ಮೂಲದ ಭಾವ, ಲಯ, ಅರ್ಥಗಳನ್ನೆಲ್ಲ ಇಡಿಯಾಗಿ ಅನಾಮತ್ತಾಗಿ ತರುವುದು ಕಷ್ಟ, ಒಂದು ತರಲು ಹೋದರೆ ಇನ್ನೊಂದು ಕೈಬಿಟ್ಟು ಹೋಗುತ್ತದೆ; ಕೆಲವೆಡೆ ಮೂಲದ ಭಾವವನ್ನು ಬೇಕಾದರೆ ತರಬಹುದು, ಪ್ರಾಸಲಯಗಳನ್ನು ತರುವುದು ಸಾಧ್ಯವಾಗುವುದಿಲ್ಲ. ಪ್ರಾಸವೇ ಒಂದು ಪದ್ಯದ ಜೀವಾಳವಾಗಿರಬಹುದು, ಅಥವಾ ಶ್ಲೇಷೆಯೇ ಅದರ ಜೀವಾಳವಾಗಿರಬಹುದು, ಇಲ್ಲವೇ ಎಲ್ಲವೂ ಸೇರಿ ಮೂಲ ಪದ್ಯಕ್ಕೆ ಒಂದು ಶೋಭೆ ಬಂದಿರಬಹುದು. ಇದರಲ್ಲಿ ಯಾವುದೊಂದನ್ನು ಬಿಟ್ಟರೂ ಭಾಷಾಂತರ 'ಊನ'ವಾಗುವುದರಲ್ಲಿ ಸಂಶಯವಿಲ್ಲ. ಸಂಸ್ಕೃತದ ಒಂದು ಶ್ಲೋಕವನ್ನು ನೋಡಿ :

ನ ನೋನನುನ್ನೋ ನುನ್ನೋನೋ ನಾನಾ ನಾನಾನನಾ ನನು ।
ನುನ್ನೋಽನುನ್ನೋ ನನುನ್ನೇನೋ ನಾನೇನಾ ನುನ್ನನುನ್ನ ನುತ್ ॥

(ಕಿರಾತಾರ್ಜುನೀಯ 15–14)

ಈ ಒಂದೇ ಅಕ್ಷರದಿಂದ ರಚಿತವಾದ ಶ್ಲೋಕವನ್ನು ಕನ್ನಡಕ್ಕಾಗಲಿ ಯಾವುದೇ ಭಾಷೆಗಾಗಲಿ ತರಲು ಸಾಧ್ಯವೆ? ಸಂಸ್ಕೃತ ಗೊತ್ತಿದ್ದರೆ ಮಾತ್ರ (ವ್ಯಾಖ್ಯಾನವಿಟ್ಟುಕೊಂಡು) ಮೂಲದ ಡೊಂಬರಾಟವನ್ನು ಆನಂದಿಸಬಹುದು, ಕವಿಯ ರಚನಾ ಕೌಶಲವನ್ನು ಮೆಚ್ಚಬಹುದು. ಇಂಥ ಸಂದರ್ಭಗಳಲ್ಲಿ ಯಾವುದಾದರೊಂದನ್ನು (ಅರ್ಥ ಅಥವಾ ಪ್ರಾಸ) ಬಲಿಗೊಡಬೇಕಾಗುತ್ತದೆ; ಮತ್ತು ಸಾಧ್ಯವಾದ ಮಟ್ಟಿಗೂ ಉದ್ದಿಷ್ಟ ಭಾಷೆಯ ಜಾಯಮಾನಕ್ಕೆ ಹೊಂದುವಂತಹ ರೀತಿಯಲ್ಲಿ ನಷ್ಟಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ. ಕೆಲವೊಮ್ಮೆ ಕವಿಯು ತನ್ನ ಸ್ವಂತಿಕೆಯನ್ನು ಮೆರೆಸಲು ಭಾಷೆಯನ್ನು ವಿಶಿಷ್ಟ ರೀತಿಯಲ್ಲಿ ಪ್ರಯೋಗಿಸಿರುತ್ತಾನೆ. ಅದನ್ನು ಏನು ಮಾಡಿದರೂ ಇನ್ನೊಂದು ಭಾಷೆಗೆ ತರಲು ಸಾಧ್ಯವಾಗುವುದಿಲ್ಲ. ಉದಾ.ಗೆ ಪಂಪಭಾರತದಲ್ಲಿ ಭೀಮನು ತನ್ನ ಮಾತಿನ ರೀತಿಯನ್ನು (ಕಠಿಣ ವಾಕ್ಕು) ತಿಳಿಸಲು 'ಎನ್ನ ನುಡಿ ಟಾಠಡಾಢಣಂ' (6–26) ಎಂದು ಹೇಳುತ್ತಾನೆ. ಇಲ್ಲಿ ಕವಿ ಯಾವುದೇ ಒಂದು ಸಾಂಪ್ರದಾಯಿಕ ಪದವನ್ನೂ ಬಳಸದೆ ಕೇವಲ ಕೆಲವು ಪರುಷಾಕ್ಷರಗಳ ಸಂಯೋಜನೆಯಿಂದ, ಒಂದು ಪದ ಏನನ್ನು ಸಾಧಿಸಬಲ್ಲುದೋ ಅದಕ್ಕೆ ಹತ್ತರಷ್ಟನ್ನು ಸಾಧಿಸುವಂತೆ ಮಾಡಿದ್ದಾನೆ. ಇದನ್ನು ಜೋಳಾಗಿ ನೀರಸವಾಗಿ 'I am very harsh' ಎಂದೋ ಬೇರೆ ರೀತಿಯಲ್ಲೋ ಹೇಳಿದರೆ ಮೂಲದ ಗುಡುಗು ಸಿಡಿಲು ಆರ್ಭಟಗಳೆಲ್ಲ ಮಾಯವಾಗಿ ಅನುವಾದ ಟಪ್ಪೆನ್ನುತ್ತದೆ. ಆದರೆ ಹಾಗೆ ಮಾಡದೆ ವಿಧಿ ಇಲ್ಲ. ಬೆಲ್ಲ ಸಿಕ್ಕದಾಗ ಸಕ್ಕರೆಯಿಂದಲೇ ತೃಪ್ತಿಪಟ್ಟುಕೊಳ್ಳಬೇಕು. ಅದರಿಂದ ಮೂಲಕೃತಿಯಿಂದ ಸಂಪೂರ್ಣವಾಗಿ ವಂಚಿತರಾಗುವ ಬದಲು ಅದನ್ನು ಆದಷ್ಟು ಮಟ್ಟಿಗಾದರೂ ಸವಿಯುವುದು ಖಂಡಿತ ಒಳಿತು:

"ಕುರುಡಿಗಿಂತಲು ಮೆಳ್ಳೆಗಣ್ಣೆಯುಂ ಮೇಲಂತೆ!"

೬ ಭಾಷಾಂತರದ ಸಾಧನಗಳು ಮತ್ತು ಉಪಕರಣಗಳು

ಎಂ. ಜಯಂತಿ ಬಾಯಿ

ಭಾಷಾಂತರ ಒಂದು ಪ್ರಕ್ರಿಯೆ. ಪ್ರತಿಯೊಬ್ಬ ವ್ಯಕ್ತಿಯೂ ತಿಳಿದೋ ತಿಳಿಯದೆಯೋ ಭಾಷಾಂತರ ಮಾಡುತ್ತಲೇ ಇರುತ್ತಾನೆ. ಇಂದು ವಿಶ್ವದ ಅನೇಕ ರಾಷ್ಟ್ರಗಳು ವೈಜ್ಞಾನಿಕ ಪ್ರಗತಿಯನ್ನು ಸಾಧಿಸಿವೆ. ಇದರಿಂದಾಗಿ ಸಂಪರ್ಕಸಾಧನಗಳು ಹೆಚ್ಚಾಗಿವೆ. ಹೀಗಾಗಿ ಆಧುನಿಕ ಪ್ರಪಂಚವು ಅತ್ಯಂತ ಕಿರಿದಾಗಿರುವಂತೆ ಭಾಸವಾಗುತ್ತದೆ. ಇದರಿಂದಾಗಿ ಒಂದು ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಹಿತ್ಯಿಕ ಸ್ಥಿತಿಗತಿಗಳು, ವೈಜ್ಞಾನಿಕ ಮತ್ತು ಬೌದ್ಧಿಕ ಚಿಂತನೆಗಳು ಇತರ ದೇಶಗಳ ಮೇಲೂ ಪ್ರಭಾವ ಬೀರ ತೊಡಗಿವೆ. ಆದ್ದರಿಂದ ಸುರಕ್ಷಿತವೂ ಸಾರ್ಥಕವೂ ಆದ ಜೀವನವನ್ನು ನಡೆಸಲು ಅನ್ಯ ದೇಶಗಳ ಜ್ಞಾನವಿಜ್ಞಾನಗಳನ್ನು ತಾನು ಅರಿತುಕೊಳ್ಳಬೇಕೆಂಬ, ಹಾಗೂ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂಬ ತುಡಿತ ಪ್ರತಿಯೊಬ್ಬ ಬುದ್ಧಿಜೀವಿಯಲ್ಲೂ ಕಾಣಲಾರಂಭಿಸಿದೆ. ಈ ದಿಸೆಯಲ್ಲಿ ವೃತ್ತಪತ್ರಿಕೆಗಳು, ಪ್ರಸಾರ ಮಾಧ್ಯಮಗಳು, ಪ್ರಕಟಣೆಗಳು ಜನತೆಯ ಜ್ಞಾನದಾಹವನ್ನು ತಣಿಸುತ್ತವೆ. ಇವುಗಳಿಗೆಲ್ಲ ಉಪಯೋಗಿಸುವ ಸಮರ್ಥ ಮಾಧ್ಯಮವೇ ಭಾಷಾಂತರ.

ಯಾವುದೇ ಸಾಹಿತ್ಯ ವಿಶ್ವಸಾಹಿತ್ಯವಾಗುವುದು ಭಾಷಾಂತರದ ಮೂಲಕವೇ. ಟಾಗೋರರ ಗೀತಾಂಜಲಿ ಬಂಗಾಳಿಯಿಂದ ಇಂಗ್ಲಿಷಿಗೆ ಅನುವಾದವಾಗಿ ಇತರ ಭಾಷೆಗಳಲ್ಲೂ ಅನುವಾದಗೊಂಡುದರಿಂದ ಅದು ವಿಶ್ವಮಾನ್ಯತೆಯನ್ನು ಗಳಿಸಿತು. ನಾವು ಭಾಷಾಂತರಗಳನ್ನು ಜೀವನಕ್ಕೆ ಹೊಸತನವನ್ನು ಜೀವಂತಿಕೆಯನ್ನು ತುಂಬುವ ಸಾಧನಗಳೆಂದರೂ ಅತಿಶಯೋಕ್ತಿಯಲ್ಲ. ಹೆನ್ರಿ ಪೌಂಡ್‌ನ ಮಾತುಗಳಲ್ಲಿ ಹೇಳುವುದಾದರೆ ಭಾಷಾಂತರವೆಂಬುದು ಒಂದು ಉಪಕರಣ. ಅದರಿಂದಾಗಿ ಲೋಕಸಾಹಿತ್ಯದ ವಿಸ್ತಾರವಾದ ಪ್ರಾಂತ್ಯಗಳು ನಮಗೆ ಗೋಚರವಾಗಿದೆ. ಆದ್ದರಿಂದ ಭಾಷಾಂತರವನ್ನು ಹೊಸ ಸಾಹಿತ್ಯದ ಗ್ರಹಗಳನ್ನು ಪರಿಚಯಿಸುವ ದೂರದರ್ಶಕವೆನ್ನಬಹುದು. ಆದರೆ ಅದು ದೂರದರ್ಶಕವಷ್ಟೇ ಅಲ್ಲ; ಸೂಕ್ಷ್ಮದರ್ಶಕವೂ ಹೌದು. ಇಂದು ಭಾಷಾಂತರಗಳಿಂದ ಅಪಾರ ಪ್ರಯೋಜನವಾಗುತ್ತಿದೆ. ಭಾವೈಕ್ಯದಿಂದ ಹಿಡಿದು ಭಾಷೆ, ಸಾಹಿತ್ಯಗಳ ಸಂಬಂಧಗಳವರೆಗೆ ಇದರ

ಪ್ರಯೋಜನ ಅಪಾರ. ಇವು ಆಯಾ ದೇಶದ ಸಾಹಿತ್ಯಿಕ, ಸಾಂಸ್ಕೃತಿಕ, ವೈಚಾರಿಕ ಅಭಿವೃದ್ಧಿಯ ಸಾಧನಗಳೂ ಆಗಿವೆ.

ಭಾಷಾಂತರದ ಸಾಧನಗಳು

ಮೇಲುನೋಟಕ್ಕೆ ಭಾಷಾಂತರ ಒಂದು ಸಾಮಾನ್ಯ ಕೆಲಸ. ಮೂಲ ಇದೆ; ಕೋಶಗಳಿವೆ; ಆದ್ದರಿಂದ ಸ್ವತಂತ್ರ ಬರವಣಿಗೆಗಿಂತ ಇದು ಸುಲಭದ ಕೆಲಸ ಎಂದೇ ಜನಸಾಮಾನ್ಯರ ಭಾವನೆ. ಆದರೆ ವಾಸ್ತವವಾಗಿ ಮೂಲಕೃತಿ ರಚನೆಗಿಂತಲೂ ಭಾಷಾಂತರ ಕಾರ್ಯ ಕ್ಲಿಷ್ಟಕರವೆಂಬುದು ಭಾಷಾಂತರಕಾರರ ಅನುಭವ.

ಭಾಷಾಂತರ ಕಾರ್ಯದಲ್ಲಿ ಅನುವಾದಕನ ಪ್ರತಿಭೆ, ಪಾಂಡಿತ್ಯ, ವ್ಯುತ್ಪತ್ತಿ, ಅನುಭವಗಳೇ ನೆರವಾಗುವ ಸಾಧನಗಳಾಗಿವೆ. ಭಾಷಾಂತರವು ಮುಖ್ಯವಾಗಿ ಭಾಷೆಗಳ ನಡುವೆ ನಡೆಯುವುದರಿಂದ ಮತ್ತು ಕೋಶಗಳು ಇದಕ್ಕೆ ಬಹಳಷ್ಟು ಸಹಾಯಕವಾಗುವುದರಿಂದ ಕೋಶಗಳನ್ನು ಭಾಷಾಂತರದ ಉಪಕರಣಗಳೆಂದು ಪರಿಗಣಿಸಬಹುದು.

ಮೊದಲನೆಯದಾಗಿ ಭಾಷಾಂತರಕ್ಕೆ ಸಾಧನವಾಗುವುದು ಭಾಷಾಂತರಕಾರನ ಭಾಷಾಪ್ರಭುತ್ವ ಹಾಗೂ ಭಾವಗ್ರಹಣ ಸಾಮರ್ಥ್ಯಗಳು. ಅನುವಾದಕನಿಗೆ ಮೂಲಭಾಷೆಯಲ್ಲಿ ಪ್ರಭುತ್ವವಿದ್ದರೆ ಅದನ್ನು ನಿರ್ದುಷ್ಟವಾಗಿ ಗ್ರಹಿಸಲು ಸಾಧ್ಯವಾಗುತ್ತದೆ; ಉದ್ದಿಷ್ಟ ಭಾಷೆಯಲ್ಲಿ ಪ್ರಭುತ್ವವಿದ್ದರೆ ಅಭಿವ್ಯಕ್ತಿಸುವ ಕ್ರಿಯೆ ಸಮರ್ಥವಾಗಿ ನಡೆಯುತ್ತದೆ. ಭಾಷೆಯ ಜಾಯಮಾನಕ್ಕೆ ಅನುಗುಣವಾಗಿ ಅರ್ಥ ಮತ್ತು ಭಾವಗ್ರಹಣ ಸಮರ್ಥವಾಗಿ ನಡೆದರೆ ಅನುವಾದವೂ ಆದರ್ಶವಾಗಿರುತ್ತದೆ. ಭಾಷಾಪ್ರಭುತ್ವದ ಜೊತೆಗೆ ಅನುವಾದಕನಿಗೆ ನೆರವಾಗುವ ಮತ್ತೊಂದು ಸಾಧನವೆಂದರೆ ವಿಷಯದ ಪರಿಜ್ಞಾನ. ಭಾಷಾಂತರದಲ್ಲಿ ಸ್ಪಷ್ಟತೆ, ನಿರ್ದಿಷ್ಟತೆ, ಸರಳತೆ, ಶುದ್ಧತೆಗಳಿರಬೇಕಾದರೆ ಭಾಷಾಂತರಕಾರನಿಗೆ ವಿಷಯಜ್ಞಾನವೇ ಅಮೂಲ್ಯ ಸಾಧನವಾಗಿರುತ್ತದೆ. ಯುದ್ಧವಿದ್ಯೆಯ ಪರಿಜ್ಞಾನವೇ ಇಲ್ಲದ ಗ್ರೀಕ್ ಭಾಷಾಪಂಡಿತನೊಬ್ಬನ ಭಾಷಾಂತರವನ್ನು ಆಧಾರವಾಗಿಟ್ಟುಕೊಂಡು, ಪ್ರಾಚೀನ ಗ್ರೀಕರಿಗೆ ಆಧುನಿಕ ಯುದ್ಧ ತಂತ್ರಗಳೆಲ್ಲ ಗೊತ್ತಿತ್ತು ಎಂಬ ವಾದವನ್ನು ಮಂಡಿಸಿದ ವಿದ್ವಾಂಸನೊಬ್ಬನ ಸಿದ್ಧಾಂತಸೌಧ ಆತನ ದೋಷಪೂರ್ಣ ಭಾಷಾಂತರದಿಂದ ಕುಸಿಯಿತೆಂಬ ಸಂಗತಿ ನಮಗೆ ತಿಳಿದಿದೆ. ಹೀಗಾಗಿ ಭಾಷಾಜ್ಞಾನ ಮತ್ತು ವಿಷಯಜ್ಞಾನಗಳು ಭಾಷಾಂತರದ ಮುಖ್ಯ ಸಾಧನಗಳಾಗಿವೆ. ಏಕೆಂದರೆ ಭಾಷಾಪ್ರಭುತ್ವವಿಲ್ಲದೆ ಭಾಷಾಂತರಿಸತೊಡಗುವುದೆಂದರೆ ಈಜಲು ಗೊತ್ತಿಲ್ಲದಿರುವವರು ನೀರಿಗಿಳಿದಂತೆ; ಹಾಗೆಯೇ ವಿಷಯಜ್ಞಾನವಿಲ್ಲದೆ ಭಾಷಾಂತರಕ್ಕೆ ತೊಡಗುವುದೆಂದರೆ ನೀರೇ ಇಲ್ಲದಿರುವ ಪ್ರದೇಶದಲ್ಲಿ ಈಜಲು ಯತ್ನಿಸಿದಂತೆ ಆಗುತ್ತದೆ. ಆದರೂ ನಾವು ಇಲ್ಲಿ ಗಮನಿಸತಕ್ಕ ಅಂಶವೆಂದರೆ ಭಾಷಾಪ್ರಭುತ್ವದತ್ತ ಮನಸ್ಸನ್ನು ಕೇಂದ್ರೀಕರಿಸಿ ವಿಷಯದ ಸಮಾಧಿಯಾಗತಕ್ಕದ್ದಲ್ಲ.

ಕೋಶಗಳು

ವಿಶ್ವಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದಲೂ ಕೋಶಗಳಿವೆ: ಕೋಶಗಳು ಭಾಷಾಂತರದ ಉಪಕರಣಗಳಾಗಿರುತ್ತವೆ. ಕೋಶಗಳಿರುವುದರಿಂದ ಭಾಷಾಂತರದ ಕೆಲಸ ಸುಲಭ ಎನ್ನುವವರಿಗೆ ಕಡಿಮೆ ಇಲ್ಲ. ಒಂದು ದೃಷ್ಟಿಯಿಂದ ಕೋಶಗಳು ಭಾಷಾಂತರಕಾರನ ಸಂಗಾತಿಗಳೆಂಬುದು ನಿಜ; ಆದರೆ ಅವುಗಳೇ ಕೆಟ್ಟ ಮಾರ್ಗದರ್ಶಿಗಳೂ ಆಗುವ ಸಂಭವವಿದೆ; ಆಗಿರುವ ಪ್ರಸಂಗಗಳೂ ಇವೆ. ಶಬ್ದದ ರೂಪ, ಉಚ್ಚಾರಣೆ, ಅರ್ಥಗಳನ್ನು ಅರಿಯಲೂ ಕೋಶಗಳನ್ನು ಬಳಸಲೇ ಬೇಕಾಗುತ್ತದೆ. ಈಗಂತೂ ಭಾರತ ಸರ್ಕಾರದ ಶಿಕ್ಷಣ ಇಲಾಖೆಯು ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಹಿಂದಿ–ಇಂಗ್ಲಿಷ್ ದ್ವಿಭಾಷಾ ಕೋಶಗಳನ್ನು ಸಿದ್ಧಪಡಿಸಿ ಭಾಷಾಂತರಕಾರರ ಬಹುದಿನದ ಅರಕೆಯನ್ನು ತುಂಬಿಕೊಟ್ಟಿದೆ.

ಕೋಶಗಳಲ್ಲಿ ಅರ್ಥಗಳ ಜೊತೆಗೆ ಉಚ್ಚಾರಣೆ, ಪದಗಳ ಲಿಂಗ, ಏಕವಚನ, ಬಹುವಚನಗಳು, ಅವುಗಳಿಗೆ ಸಂಬಂಧಿಸಿದ ನುಡಿಗಟ್ಟುಗಳು ಜಾರುನುಡಿಗಳನ್ನು ಪಟ್ಟಿ ಮಾಡಲಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟು, ಕಸ್ತೂರಿಕೋಶ, ಕನ್ನಡ ಹಿಂದೀ ಆದರ್ಶಕೋಶ— ಇವೇ ಮೊದಲಾದುವುಗಳು ಕನ್ನಡದಲ್ಲಿ ಭಾಷಾಂತರಕಾರರಿಗೆ ಅತ್ಯವಶ್ಯಕವಾದ ಉಪಕರಣಗಳಾಗಿವೆ. ಇಷ್ಟಾದರೂ ಕೋಶವು ನೀಡುವ ಅರ್ಥಗಳು ಆ ಕೋಶಕಾರನು ಕೋಶ ರಚಿಸುತ್ತಿದ್ದ ಕಾಲದಲ್ಲಿ ಚಾಲ್ತಿಯಲ್ಲಿದ್ದ ಅಥವಾ ಆ ಅವಧಿಯವರೆಗೆ ಅಥವಾ ಶಬ್ದಗಳ ಪರಿಶೀಲನೆಯ ಅವಧಿಯವರೆಗೆ ಸಂಪಾದಕರು ಗಮನಿಸಿದ ಅರ್ಥಗಳ ಪಟ್ಟಿಯಾಗಿರುತ್ತದೆ. ಆದರೆ ಕಾಲಕಳೆದಂತೆ ಭಾಷೆ, ಶಬ್ದಗಳಲ್ಲಿನ ಅರ್ಥಗಳು ಬದಲಾಗುತ್ತ ಹೋಗುವುದರಿಂದ ಕೋಶಕಾರನು ಕೋಶಗಳಲ್ಲಿ ತನಗೆ ಸಾಧ್ಯವಾಗುವ ಎಲ್ಲ ಅರ್ಥಗಳನ್ನು ಪಟ್ಟಿಮಾಡಿರುತ್ತಾನೆ. ಕೆಲವೊಮ್ಮೆ ಕೋಶಕಾರನ ಅಥವಾ ಸಂಪಾದಕನ ಅತ್ಯಲ್ಪ ಅಜಾಗರೂಕತೆಯಿಂದಾಗಿ ಯಾವುದಾದರೊಂದು ಹಂತದಲ್ಲಿ ಪರಿಶೀಲನಕಾರ್ಯ ಸರಿಯಾಗಿ ನಡೆಯದೆ ಕೋಶಗಳಲ್ಲಿ ತಪ್ಪು ಅರ್ಥಗಳು ದಾಖಲಾಗುವ ಸಂಭವವಿದೆ; ದಾಖಲಾಗಿರುವ ಪ್ರಸಂಗಗಳೂ ಇವೆ. ಉದಾಹರಣೆಗೆ ಆಕ್ಸ್‌ಫರ್ಡ್ ನಿಘಂಟಿನಲ್ಲಿ 'Elephantiasis' ಎಂಬ ಪದಕ್ಕೆ ಕೊಟ್ಟ ವಿವರಣೆ ಹೀಗಿದೆ: the name given to various kinds of cutaneous diseases which produce in the part affected a resemblance to an elephant's hide.' ಇಲ್ಲಿ ಗಮನಿಸಬೇಕಾದ ಅಂಶವೆಂದರೆ 'cutaneous disease' ಎಂಬ ಪದಗಳು. ಈ ಎಲಿಫೆಂಟಾಸಿಸ್ ಎಂಬುದು ಚರ್ಮರೋಗವಲ್ಲ ಎಂಬುದು ಅನೇಕರಿಗೆ ಗೊತ್ತಿದೆ. ಆದರೆ ಅಷ್ಟು ಗೊತ್ತಿಲ್ಲದವರು ಈ ಅರ್ಥವನ್ನು ತೆಗೆದುಕೊಂಡು ಪೆಚ್ಚು ಬೀಳಬೇಕಾಗುತ್ತದೆ.

ಸಂದರ್ಭಕ್ಕೆ ಅನುಗುಣವಾದ ಅರ್ಥಗಳು ಕೋಶದಲ್ಲಿ ದೊರೆಯಲಾರವು. ಕೆಲವೊಮ್ಮೆ

ಅವರಲ್ಲಿ ಸೂಚಿಸಿದ ಪರ್ಯಾಯ ಪದವೂ ಸಮರ್ಪಕವೆಂದು ಅನ್ನಿಸದಿರಬಹುದು. ಕೆಲವು ಮೂಲ ಪದಗಳಿಗೆ ಉದ್ದಿಷ್ಟ ಭಾಷೆಯಲ್ಲಿ ಪರ್ಯಾಯ ಪದಗಳೇ ಇಲ್ಲದಿರಬಹುದು. ಉದಾಹರಣೆಗೆ ಕಾಂಗೋ ಭಾಷೆಯಲ್ಲಿ snow ಎಂಬ ಪದವಾಗಲಿ ಬ್ರೆಜಿಲ್‌ನ ಭಾಷೆಯಲ್ಲಿ spring ಎಂಬ ಪದವಾಗಲಿ ಇಲ್ಲ. ಏಕೆಂದರೆ ಅಲ್ಲಿ ಚಳಿಗಾಲ ಮತ್ತು ಬೇಸಿಗೆ ಕಾಲಗಳೇ ಇಲ್ಲ. ಕೆಲವೊಮ್ಮೆ ಮೂಲಲೇಖಕನೇ ಹೊಸದಾಗಿ ಕೆಲವು ಪದಗಳನ್ನು ಟಂಕಿಸಿರಬಹುದು. ಅಂಥ ಸಂದರ್ಭಗಳಲ್ಲಿ ಅವುಗಳಿಗೆ ಕೋಶಗಳಲ್ಲಿ ಅರ್ಥಗಳೇ ದೊರೆಯದೆ ಹೋಗಬಹುದು. ಆಗ ಭಾಷಾಂತರಕಾರ ವಿಶೇಷ ಶ್ರಮವಹಿಸಬೇಕಾಗುತ್ತದೆ. ಹಳೆಯ ಗ್ರಂಥಗಳಿಂದ ಅನುವಾದ ಮಾಡುವಾಗಲಂತೂ ಕೋಶಗಳಿಂದ ವಿಶೇಷ ನೆರವು ದೊರೆಯಲಾರದು. ಆಗ ಆತನು ಆ ಶಬ್ದಗಳಿಗೆ ಹಿಂದೆ ಯಾವ ಅರ್ಥಗಳಿದ್ದುವು ಎಂಬುದನ್ನು ತಿಳಿಯಬೇಕಾಗುತ್ತದೆ; ನಾನಾ ಆಕರಗಳನ್ನು ಶೋಧಿಸಬೇಕಾಗುತ್ತದೆ: ಟೀಕೆಗಳನ್ನು, ಭಾಷ್ಯಗಳನ್ನು, ಇತರ ಭಾಷೆಗಳಲ್ಲಿ ಬಂದ ಅವುಗಳ ಭಾಷಾಂತರಗಳನ್ನು ಓದಬೇಕಾಗುತ್ತದೆ. ಆ ಸಂದರ್ಭದಲ್ಲಿ ಭಾಷಾಂತರಕಾರನಿಗೆ ಅವುಗಳೆಲ್ಲ ನೆರವಾಗುತ್ತವೆ. ಗೊತ್ತಿಲ್ಲದಿರುವ, ಅಸ್ಪಷ್ಟವಾಗಿರುವ ವಿಷಯಗಳನ್ನು ಸ್ಪಷ್ಟವಾಗಿ, ವಿಷಯಪೂರ್ಣತೆಯಿಂದ ತಿಳಿದುಕೊಳ್ಳಬೇಕಾಗುತ್ತದೆ: ಈ ವಿಷಯದಲ್ಲಿ ಅನುವಾದಕ ಸ್ವಲ್ಪ ಮೈ ಮರೆತರೂ ಅನಾಹುತವಾಗುತ್ತದೆ; ಗ್ರಂಥಾನ್ವೇಷಿಗಳ ಟೀಕೆಗೆ ಒಳಪಡಬೇಕಾಗುತ್ತದೆ.

ಜ್ಞಾನಸಾಹಿತ್ಯದಲ್ಲಿ ಕೋಶಗಳಿಗೆ ಮಹತ್ವದ ಸ್ಥಾನ ಸಲ್ಲುತ್ತದೆ; ಅದರಲ್ಲಿಯೂ ದ್ವಿಭಾಷಾ ನಿಘಂಟುಗಳ ಪಾತ್ರ ಹಿರಿದು. "dictionaries form a wide and varied genre of the literature of knowledge of the main categories being comprised of bilingual dictionaries' ಎಂಬ ಮಾತು ಅವುಗಳ ಮಹತಿಯನ್ನು ಸಾರುತ್ತದೆ. ಹೀಗೆ ದ್ವಿಭಾಷಾ ಕೋಶಗಳು, ಬಹುಭಾಷಾ ಕೋಶಗಳು, ವಿಷಯ ಕೋಶಗಳು. ಇವೇ ಮೊದಲಾದುವುಗಳು ಪದಗಳ ಅರ್ಥ ಮತ್ತು ಮಹತ್ವ, ವಾಡಿಕೆಯ ಬಳಕೆಗಳು, ನುಡಿಗಟ್ಟುಗಳು, ಗಾದೆ ಮಾತುಗಳು ಇವುಗಳಿಗೆ ಬೇರೊಂದು ಭಾಷೆಯಲ್ಲಿ ತತ್ಸಮಾನ ನುಡಿಗಟ್ಟುಗಳಿದ್ದರೆ ತಿಳಿಸುತ್ತವೆ. ಕೆಲವು ಜಾಣನುಡಿಗಳು ಆಯಾ ಕ್ಷೇತ್ರದಲ್ಲಿ ಮಾತ್ರವೇ ವಿಕಾಸಲಾಗಿದ್ದು ಬೇರೆ ಕಡೆಗಳಲ್ಲಿ ಅಲಭ್ಯವಾಗಿರುತ್ತವೆ. ಇದಕ್ಕೆ ಸಂವಾದೀ ಜಾಣನುಡಿಗಳು ಕೆಲವು ಕೋಶಗಳಲ್ಲಿ ಸಿಗುತ್ತವೆ. ಉದಾಹರಣೆಗೆ ಇಂಗ್ಲಿಷಿನ cry in wilderness ಅರಣ್ಯರೋದನ, lion's share ಸಿಂಹಪಾಲು, crocodile tears–ಮೊಸಳೆ ಕಣ್ಣೀರು,herculian task ಭಗೀರಥ ಪ್ರಯತ್ನ; greek and latin–ಏನೂ ತಿಳಿಯದು; ಇಂಥ ನುಡಿಗಳು ನಮಗೆ ಇಂಗ್ಲಿಷ್–ಕನ್ನಡ ನಿಘಂಟಿನಲ್ಲಿ ಸಿಗುತ್ತವೆ. ಆದ್ದರಿಂದ ಇಂಥ ಸಂದರ್ಭದಲ್ಲಿ ಕೋಶಗಳು ಭಾಷಾಂತರಕಾರನ ನಿಜವಾದ ಸಂಗಾತಿಗಳಾಗುತ್ತವೆ. ಕೆಲವೊಮ್ಮೆ ಗಾದೆ ಮಾತುಗಳು ಭಾಷಾಂತರಕಾರನ

ಕೆಲಸದಲ್ಲಿ ಸವಾಲುಗಳನ್ನು ಒಡ್ಡುವುದುಂಟು. ಆದರೆ ಕೋಶಗಳಲ್ಲಿ ಇಂಥ ಕೆಲವು ಇಂಗ್ಲಿಷ್ ಗಾದೆಗಳಿಗೆ ಬಳಕೆಯಲ್ಲಿರುವ ಕನ್ನಡ ಗಾದೆಗಳನ್ನು ಕೊಟ್ಟು, ಭಾಷಾಂತರ ಕಾರನ ಸಂಕಟವನ್ನು ದೂರಗೊಳಿಸಿರುವುದುಂಟು. ಉದಾಹರಣೆಗೆ, reap what you have sown ಮಾಡಿದ್ದುಣ್ಣೊ ಮಹಾರಾಯ ; pay in one's own coin ಮುಯ್ಯಿಗೆ ಮುಯ್ಯಿ ತೀರಿಸು ; kill two birds with one stone ಒಂದು ಕಲ್ಲು ಎರಡು ಹಣ್ಣು ; still water runs deep ತುಂಬಿದ ಕೊಡ ತುಳುಕುವುದಿಲ್ಲ. ಇಂಥ ಗಾದೆ ಮಾತುಗಳನ್ನು ಅನುವಾದಿಸುವಾಗಲೂ ನಿಘಂಟುಗಳು ಭಾಷಾಂತರಕಾರನಿಗೆ ತುಂಬ ನೆರವಾಗುತ್ತವೆ.

ಕೆಲವೊಮ್ಮೆ ಕೋಶಗಳಲ್ಲಿನ ಯಾವುದೇ ಪ್ರಕೃತ ಅರ್ಥ ಪದಗಳಿಗೆ ಸರಿಹೊಂದದಿರ ಬಹುದು ; ಅನೇಕ ಪ್ರಕರಣಗಳಲ್ಲಿ ಸಂದರ್ಭಕ್ಕೆ ಸರಿಹೋಗುವ ಅರ್ಥಗಳು ಕೋಶಗಳಲ್ಲಿ ದೊರೆಯಲಾರವು. ಹೀಗಾಗಿ ಸಂದರ್ಭವೇ (Context) ಅರ್ಥನಿರ್ಣಯಕ್ಕೆ ಒರೆಗಲ್ಲಾಗಿರು ತ್ತದೆ. ಹೀಗಾಗಿ ಭಾಷಾಂತರಕಾರ ಕೇವಲ ಕೋಶಗಳನ್ನೆ ನೆಚ್ಚಿಕೊಂಡಿರಲು ಸಾಧ್ಯವಿಲ್ಲ. ಭಾಷಾಂತರಕಾರನು ಮೂಲದಲ್ಲಿನ ಶಬ್ದಗಳನ್ನು ಯಾವ ಅರ್ಥದಲ್ಲಿ ಬಳಸಲಾಗಿದೆಯೋ ಆ ಅರ್ಥವನ್ನು ಗ್ರಹಿಸಿರಬೇಕು. ಭಾಷೆಯ ಜಾಯಮಾನದ ದೃಷ್ಟಿಯಿಂದ ಆದಷ್ಟು ಹತ್ತಿರ ವಾದ ಸಮಾನಾರ್ಥಕ ಪದಗಳನ್ನು ಆಯ್ದುಕೊಂಡಿರಬೇಕು. ಆಯ್ದ ಪರ್ಯಾಯ ಶಬ್ದ ಗಳನ್ನು ಮೂಲದ ಶೈಲಿಗನುಗುಣವಾಗಿ ಪ್ರಯೋಗಿಸಿರಬೇಕು. ಅಂಥ ಭಾಷಾಂತರ ಆದರ್ಶ ವೆನ್ನಿಸುತ್ತದೆ.

ಗಣಕಯಂತ್ರಗಳು

ಈಚೆಗೆ ಗಣಕಯಂತ್ರಗಳ ಮೂಲಕ ಭಾಷಾಂತರವನ್ನು ಸಿದ್ಧಪಡಿಸುವ ಪ್ರಯತ್ನಗಳು ನಡೆಯುತ್ತಿವೆ. ಮಾನವನ ಬುದ್ಧಿವಂತಿಕೆ ಪ್ರವೇಶಿಸಬಹುದಾದ ಎಲ್ಲ ಕ್ಷೇತ್ರಗಳಲ್ಲೂ ಈಗ ಕಂಪ್ಯೂಟರ್‌ಗಳನ್ನು ಬಳಸುತ್ತಿದ್ದಾರೆ. ಹಾಗೆಯೇ ಭಾಷಾಂತರ ಕ್ಷೇತ್ರದಲ್ಲೂ ಇದೊಂದು ಹೊಸ ಉಪಕರಣ. ಸಂಗೀತ, ಕ್ರೀಡೆ, ಗಣಿತ–ಇವೇ ಮೊದಲಾದ ಕ್ಷೇತ್ರಗಳಲ್ಲೂ ಕಂಪ್ಯೂ ಟರ್‌ನ ಬಳಕೆ ಆರಂಭವಾಗಿದೆ. ಅನುವಾದ ಕ್ಷೇತ್ರದಲ್ಲೂ ಇದು ಬಳಕೆಗೆ ಬಂದಿದೆ. ಇಂದು ಭಾಷಾಂತರಕ್ಕೆ ವಿಶೇಷ ಮಹತ್ವ ದೊರೆತಿರುವುದರಿಂದ, ಅದರ ಪ್ರಾಮುಖ್ಯ ಮತ್ತು ಅಗತ್ಯಗಳಿಂದಾಗಿ ಅನುವಾದಕ್ಕೂ ಕಂಪ್ಯೂಟರ್ ಯಂತ್ರವನ್ನು ಉಪಕರಣವನ್ನಾಗಿ ಉಪಯೋಗಿಸಬಹುದೇ ಎಂಬ ವಿದೇಶಗಳಲ್ಲಿ ಪ್ರಯತ್ನಗಳು ನಡೆದಿವೆ, ನಡೆಯುತ್ತಲಿವೆ. ಈ ದಿಸೆಯಲ್ಲಿ ಭಾಷಾವಿಜ್ಞಾನಿಗಳು, ಭೌತವಿಜ್ಞಾನಿಗಳು, ತಂತ್ರಜ್ಞರು, ಎಂಜಿನಿಯರು ಗಳು ಸಾಕಷ್ಟು ಶ್ರಮವಹಿಸಿರುವುದರಿಂದಾಗಿ ಪಾಶ್ಚಾತ್ಯ ದೇಶಗಳಲ್ಲಿ ಯಂತ್ರಾನುವಾದ ಸ್ವಲ್ಪ ಮಟ್ಟಿಗೆ ಸಾಧ್ಯವಾಗಿದೆ. ಭಾರತದಂಥ ಬಹುಭಾಷಾ ರಾಷ್ಟ್ರದಲ್ಲಿ ಈ ಸಂಬಂಧವಾದ

ಅಧ್ಯಯನ ಸಂಶೋಧನೆಗಳು ನಡೆಯುತ್ತಿವೆ. ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ನಲ್ಲಿ ಕಂಪ್ಯೂಟರ್ ಯಂತ್ರದ ಮೂಲಕ ಕೆಲವು ವಾಕ್ಯಗಳ ಅನುವಾದ ಮಾಡಲಾಗಿದೆ ಎಂದು ವರದಿಯಾಗಿದೆ. ರಷ್ಯಾ, ಅಮೆರಿಕಾ ಮುಂತಾದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಏಕಕಾಲದಲ್ಲಿ ದ್ವಿಭಾಷಾ ಪ್ರಯೋಗ ಅಗತ್ಯವಾದುದರಿಂದ ಕಂಪ್ಯೂಟರ್‌ನ ಮೂಲಕ ಅನುವಾದ ಮಾಡಿಸಿಕೊಳ್ಳುವ ತಂತ್ರ ಬಹುಬೇಗ ಯಶಸ್ವಿಯಾಗಬಹುದೆಂದು ತೋರುತ್ತದೆ. ಮುಂದೆ ಈ ಗಣಿತಯಂತ್ರಗಳು ಮಾನವ ಭಾಷಾಂತರಕಾರನ ಸ್ಥಾನವನ್ನು ಗಳಿಸಬಹುದೆಂದು ಆಶಿಸಬಹುದು.

ಏಕಕಾಲಿಕ ಭಾಷಾಂತರಗಳು

ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರಗಳನ್ನು ಪ್ರತಿನಿಧಿಸುವ ಪ್ರತಿನಿಧಿಗಳು ಸಮಾವೇಶಗೊಂಡಿದ್ದಾಗ, ಆ ಸಭೆಗಳಲ್ಲಿ ನಡೆಯುವಂಥ ಕಾರ್ಯಕಲಾಪಗಳನ್ನು ಒಮ್ಮೆಗೆ ಬೇರೆ ಬೇರೆ ಭಾಷೆಗಳಲ್ಲಿ ತಿಳಿಸಿಕೊಡುವ ಏರ್ಪಾಡು ಉಂಟು. ಅದನ್ನು ಏಕಕಾಲಿಕ ಭಾಷಾಂತರ ಎನ್ನುತ್ತಾರೆ. ಇದರ ನಿರ್ವಹಣೆಯ ಹೊಣೆ ಹೊತ್ತವರನ್ನು ದ್ವಿಭಾಷಿ (Interpreter) ಅಥವಾ ದುಭಾಷಿ ಎನ್ನುತ್ತಾರೆ.

ಈ ದುಭಾಷಿಗೆ ಭಾಷಾಂತರದಲ್ಲಿ ನೆರವಾಗುವ ಸಾಧನಗಳೆಂದರೆ ಅಗಾಧವಾದ ಆತನ ವ್ಯಾವಹಾರಿಕಜ್ಞಾನ, ವಿಷಯಜ್ಞಾನ, ಭಾಷಾಜ್ಞಾನ, ಸಂಸ್ಕೃತಿಜ್ಞಾನ–ಇವೇ ಮೊದಲಾದುವುಗಳು.

ಏನೇ ಆದರೂ ಧೃತಿಗೆಡದಂಥ ಧೈರ್ಯ, ಏಕಾಏಕಿ ಬರುವಂಥ ಸ್ಮರಣಶಕ್ತಿ, ಸಂಪೂರ್ಣ ಅವಧಾನತೆ, ವೇಗ ಮತ್ತು ನಿಖರತೆಗಳ ಒಂದು ಸಂಯೋಜನೆ, ಪ್ರಜ್ಞಾಪೂರ್ವಕವಾಗಿ ಆರೋಪಿಸಿಕೊಂಡಂಥ ಇಚ್ಛಿತ್ತ—ಇವೇ ಮುಂತಾದ ದುಭಾಷಿಯ ವಿಶೇಷ ಗುಣಗಳೇ ಅವನನ್ನು ಯಶಸ್ಸಿನ ಹಾದಿಯಲ್ಲಿ ಕೊಂಡೊಯ್ಯುವ ಸಾಧನಗಳಾಗುತ್ತವೆ.

ಇಂದು ಭಾಷಾಂತರದ ವ್ಯಾಪ್ತಿ ವಿಶಾಲಗೊಳ್ಳುತ್ತಿದೆ; ಇದಕ್ಕೆ ಹೊಸ ಹೊಸ ಆಯಾಮಗಳು ಕೂಡಿಕೊಳ್ಳುತ್ತವೆ. ಭಾಷಾಂತರದ ಸಾಧನಗಳು, ಉಪಕರಣಗಳು ಹೆಚ್ಚುತ್ತಿವೆ.

೭ | # ಲಕ್ಷ್ಯ ಮತ್ತು ಭಾಷಾಂತರ

ಬಿ. ಶ್ಯಾಮಸುಂದರ

ಪ್ರತಿ ಬಾಣಕ್ಕೂ ಒಂದೊಂದು ಗುರಿ ಇರುವಂತೆ ಪ್ರತಿ ಭಾಷಾಂತರಕ್ಕೂ ಒಂದೊಂದು ಗುರಿ ಇರುತ್ತದೆ. ಗುರಿ ಅಥವಾ ಲಕ್ಷ್ಯವಿಲ್ಲದೆ ಯಾವ ಕಾರ್ಯವೂ ನಡೆಯುವುದಿಲ್ಲ. ಪ್ರತಿ ಹೆಜ್ಜೆಯೂ ಗುರಿಯತ್ತ ಸಾಗುವ ಪ್ರಯತ್ನ. ಗುರಿ ಸಾಧಿಸಲು, ನಾನಾ ಮಾರ್ಗಗಳನ್ನು ವ್ಯಕ್ತಿ ತನ್ನ ವೈಯಕ್ತಿಕ ಬಲದ ಮೇಲೆ ಅವಲಂಬಿಸುತ್ತಾನೆ. ಅವನ ಅನುಸರಣೆ ಅವನ ವ್ಯಕ್ತಿತ್ವದ ಮೇಲೆ ಅವಲಂಬಿತ. ಇದಕ್ಕೆ ಹೊರಗಿನ ಪ್ರಭಾವವೂ ಇರಬಹುದು. ಒಳ-ಹೊರಗಿನ ಶಕ್ತಿ ಒಟ್ಟುಗೂಡಿ ಒಂದು ಗುರಿ ಸಾಧಿಸಲು ವ್ಯಕ್ತಿಯನ್ನು ದೂಡುತ್ತವೆ. ವ್ಯಕ್ತಿ ನಾನಾ ಪ್ರಭಾವಗಳಿಗೆ ಗುರಿಯಾಗುವುದರಿಂದ ನಿರ್ದೇಶಿತ ಗುರಿ ಬದಲಾಗಬಹುದು; ಹಾಗೇ ಮಾರ್ಗ ಬದಲಾವಣೆಯೂ ಆಗಬಹುದು. ಪ್ರತಿಯೊಬ್ಬನ ಲಕ್ಷ್ಯವೂ ಅವನವನ ಮಟ್ಟಕ್ಕೆ ಅನುಗುಣವಾಗಿ, ಅದರ ಮಾರ್ಗ ಅವನ ಪರಿಸರದ ಹಿನ್ನೆಲೆಯ ಮೇಲೆ ಅವಲಂಬಿಸಿರುತ್ತದೆ. ಪ್ರತಿಯೊಂದು ಕಾರ್ಯದಲ್ಲೂ ಒಂದೊಂದು ಗುರಿ ಇರುವುದು ಎಲ್ಲರಿಗೂ ತಿಳಿದಿರುವ ವಿಷಯ. ಹಾಗೇ ಭಾಷಾಂತರದಲ್ಲೂ ಒಂದು ಗುರಿ ಇರುತ್ತದೆ. ಬೇರೊಂದು ಭಾಷೆಯಲ್ಲಿನ ಭಾವನೆಯನ್ನು ತನ್ನ ಭಾಷೆಯಲ್ಲಿ ತನ್ನದೇ ಆದ ರೂಢಿಯ ಆಡುಮಾತಿನಲ್ಲಿ ಸರಳವಾಗಿ ನೇರವಾಗಿ ಹೇಳುವುದು ಭಾಷಾಂತರದ ಗುರಿ.

ಯಾವ ಭಾಷಾಂತರವೂ ಪರಿಪೂರ್ಣವೆಂದಾಗಲಿ, ಅಂತಿಮವಾದದ್ದೆಂದಾಗಲಿ ಭಾವಿಸಿದರೆ ತಪ್ಪಾದೀತು. ಇಲ್ಲಿ ಲಕ್ಷ್ಯ ಒಂದೇ ತೆರವಾಗಿರುವುದಿಲ್ಲ. ಇದು ಯಾರಿಗಾಗಿ ಭಾಷಾಂತರ ಮಾಡುತ್ತಿದ್ದೇವೆ ಅಂದರೆ ನಮ್ಮ ಭಾಷಾಂತರ ಕೃತಿ ಯಾರಿಗಾಗಿ—ಯಾರ ಓದಿಗಾಗಿ? ಅದು ಮಕ್ಕಳಿಗೆ, ವಯಸ್ಕರಿಗೆ ಅಥವಾ ವಿದ್ವಾಂಸರಿಗೆ ಎಂಬುದರ ಜೊತೆಗೆ ಕಾಲ, ಅಭಿರುಚಿ ಇವುಗಳನ್ನು ಗಮನಿಸಬೇಕು—ಇವೆಲ್ಲವುಗಳನ್ನು ಅವಲಂಬಿಸಿ ಭಾಷಾಂತರದ ಲಕ್ಷ್ಯ ನಿರ್ಧಾರವಾಗುತ್ತದೆ. ಒಬ್ಬ ಕವಿಯ ಅಥವಾ ಒಬ್ಬ ಲೇಖಕನ ಕೃತಿ ಉತ್ತಮವಾಗಿದ್ದು ಅದನ್ನು ತನ್ನವರೊಡನೆ ಹಂಚಿಕೊಳ್ಳಬೇಕು, ತಾನುಂಡು ಸಂತೋಷಿಸಿದಂತೆ ತನ್ನವರೂ ಸಂತೋಷಪಡಬೇಕು ಎನ್ನುವ ಭಾಷಾಂತರಕಾರನ ಅಭಿಲಾಷೆ ಭಾಷಾಂತರಕ್ಕೆ ಪ್ರೇರಕವಾಗುವುದು. ಹಾಗೆ ಭಾಷಾಂತರಿಸುವಾಗ ಭಾಷಾಂತರಕಾರ ತನ್ನತನವನ್ನು ಮರೆಯಬೇಕಾಗುತ್ತದೆ. ಪರಕಾಯಪ್ರವೇಶಮಾಡಿದಂತೆ ಸಾಧನೆ ಮಾಡಿ ಮೂಲ ಕೃತಿಕಾರನ ಕೃತಿಯನ್ನು ಓದುವಾಗ ಅದರೊಳಗೆ ತನ್ಮಯನಾಗಿ ಅನುಭವಿಸಿ—ತಿಳಿದು, ಸಂತೋಷಿಸಿ ಮೂಲ ಭಾವನೆಯನ್ನು ತನ್ನ ಭಾಷೆಯಲ್ಲಿ ಹೇಳಬೇಕಾಗುತ್ತದೆ. ಇಲ್ಲಿ ಮುಖ್ಯ ಲಕ್ಷ್ಯ ಮೂಲ ಭಾವನೆಯತ್ತ. ಮೂಲ

ಭಾವನೆಯನ್ನು ಯಾವ ರೀತಿಯಲ್ಲೂ ಕೆಡಿಸಬಾರದು—ಹಾದಿತಪ್ಪಿಸಬಾರದು. ಮೂಲ ಕೃತಿ ಓದಿದಾಗ ಆಗುವ ಅನುಭವವೇ ಭಾಷಾಂತರ ಕೃತಿ ಓದಿದಾಗ ಆಗಬೇಕು—ಇದು ಅಸಾಧ್ಯವೇನಲ್ಲ, ಆಗಲೇ ಅದೊಂದು ಉತ್ತಮ ಭಾಷಾಂತರವೆನಿಸುವುದು. ನನ್ನ ಅನುಭವದಂತೆ ಭಾಷಾಂತರ ಎಲ್ಲರ ಕೆಲಸವಲ್ಲ. ಇದಕ್ಕೆ ಹೆಚ್ಚು ಶ್ರಮ, ಮನಸ್ಸು ಇರಬೇಕು. ಆ ಕಾರ್ಯದಲ್ಲಿ ಆಸಕ್ತಿಯಿರಬೇಕು. ಭಾಷಾಪರಿಣತಿ ಇದ್ದೇ ಇರಬೇಕು. ಮುಖ್ಯವಾಗಿ ಎರಡು ಭಾಷೆಗಳನ್ನಾದರೂ ತಿಳಿದಿರಲೇಬೇಕು. ಇಲ್ಲವಾದಲ್ಲಿ ಭಾಷಾಂತರ ಕಾರ್ಯ ನಡೆಯದು. ಭಾಷಾಂತರಕಾರರು ಹೆಚ್ಚು ಭಾಷೆಗಳನ್ನು ತಿಳಿದು ಅಭ್ಯಸಿಸುವುದು ಒಳ್ಳೆಯದು. ಆದರೆ ಎಲ್ಲ ತಿಳಿದುಕೊಳ್ಳುವ ಚಟದಲ್ಲಿ ಯಾವುದನ್ನೂ ಪೂರ್ತಿಮಾಡದಂತೆ ಆಗಬಾರದು.

ಒಂದು ಭಾಷಾಂತರ ಕೃತಿ ಮತ್ತೆ ಮತ್ತೆ ಭಾಷಾಂತರವಾಗಿ ಬರಬಹುದು. ಒಂದೇ ಕೃತಿಯನ್ನು ಅನೇಕರು ಭಾಷಾಂತರಿಸಬಹುದು. ಆಗ ಗುರಿಯೆಲ್ಲ ಒಂದೇ ಆಗಿದ್ದರೂ ಭಾಷಾಂತರದಲ್ಲಿ ವಿವಿಧತೆಯನ್ನು ಗುರುತಿಸಬಹುದು. ಪ್ರೌಢರಿಗಾಗಿ ಬರೆದಂತಹ ಕೃತಿಗಳನ್ನು ಮಕ್ಕಳಿಗೆ ಎಟುಕುವಂತೆ ಭಾಷಾಂತರಿಸಬಹುದು—ಅಥವಾ ರೂಪಾಂತರಗೊಳಿಸಬಹುದು. ಕೆಲವು ಉತ್ತಮ ಕೃತಿಗಳನ್ನು ಸಂಗ್ರಹಾನುವಾದ ಮಾಡಿ ಕಾಲವಿಲ್ಲದವರಿಗೂ ಓದಲು ಅನುವು ಮಾಡಿಕೊಡುವುದುಂಟು. ಭಾಷಾಂತರದ ಈ ಬಗೆಯ ವಿವಿಧ ಕಾರ್ಯಗಳನ್ನು ಮಾಡುವಾಗ ಔಚಿತ್ಯದ ಪ್ರಜ್ಞೆ ಇರಬೇಕು. ಗಾದೆ ಮತ್ತು ದೇಶಿ ನುಡಿಗಟ್ಟುಗಳನ್ನು ಭಾಷಾಂತರಿಸುವಾಗಂತೂ ಹೆಚ್ಚು ಎಚ್ಚರಿಕೆ ಅಗತ್ಯ. ಅಕ್ಷರಾನುಕ್ರಮ—ಪದಾನುಕ್ರಮವಂತೂ ಇಲ್ಲಿ ಅಸಂಬದ್ಧವೆನಿಸುವುದು. ಅವುಗಳ ಔಚಿತ್ಯವನ್ನರಿತು ಅನುವಾದಿಸಬೇಕು.

ಕೆಲವರ ಅಭಿಪ್ರಾಯವೆಂದರೆ ಮೂಲಕೃತಿಯಲ್ಲಿರುವಷ್ಟೇ ಶಬ್ದಗಳಲ್ಲಿ ಭಾಷಾಂತರಿಸುವುದು ಉತ್ತಮ ಕೃತಿ ಎನಿಸುವುದು. ನನ್ನ ಅಭಿಪ್ರಾಯದ ಪ್ರಕಾರ ಈ ಭಾವನೆ ತಪ್ಪು. ಭಾಷೆಗಳ ಪದಗಳ ಅಕ್ಷರ ಬಳಕೆ—ಉದ್ದ ಬೇರೆಬೇರೆಯಾಗಿರುತ್ತದೆ. ಒಂದು ಸಾಲಿನಲ್ಲಿ ಹೇಳುವುದನ್ನು ಎರಡು ಪದಗಳಲ್ಲೇ ಹೇಳುವುದೂ ಸಾಧ್ಯ. ಭಾಷಾಂತರಿಸುವುದು ಭಾವನೆಯನ್ನು, ಪದಗಳನ್ನಲ್ಲ..ಮೂಲಕೃತಿಗೆ ನಿಷ್ಠೆಯಿಂದಿರಬೇಕು ನಿಜ, ಆದರೆ ವಿಚಾರಶೂನ್ಯವಾಗಿರಬಾರದು. ಭಾಷಾಂತರ ಕೇವಲ ಬುದ್ಧಿಯ ಕ್ರಿಯೆಯಾಗಿರದೆ ಹೃದಯದ ಭಾವನೆಗಳನ್ನು ಪ್ರತಿಬಿಂಬಿಸುವ ಕಾರ್ಯವಾಗಬೇಕು. ಓದುಗನಿಗೂ, ಕೃತಿಕಾರನಿಗೂ ಸೇತುವೆಯಂತೆ ಭಾಷಾಂತರಕಾರ ಸಂಬಂಧ ಕಲ್ಪಿಸುವನು. ಅಂದರೆ ಒಬ್ಬನ-ಒಬ್ಬರ ಭಾವನೆಯನ್ನು ಮತ್ತೊಬ್ಬ, ಅಥವಾ ಮತ್ತೊಬ್ಬರು ಅರಿಯಲು ಭಾಷಾಂತರಕಾರ ಹೃದಯದ ಮಿಡಿತವನ್ನು ನೋಡಲು ಉಪಯೋಗಿಸುವ ವೈದ್ಯರ ಸ್ಟೆತಾಸ್ಕೋಪ್ ಇದ್ದಹಾಗೆ. ಹೃದಯ-ಹೃದಯಗಳನ್ನು ಬೆಸೆದು—ಒಂದು ರಾಷ್ಟ್ರ ಮತ್ತೊಂದನ್ನು ಅರಿತುಕೊಳ್ಳುವಂತೆಯೂ ಉತ್ತಮ ಭಾಷಾಂತರ ಸಹಕಾರಿ. ದೇಶದೇಶಗಳ ಹೃದಯವನ್ನು ಒಂದು

ಗೂಡಿಸುವುದರಲ್ಲಿ ಭಾಷಾಂತರದ ಪಾತ್ರ ಹಿರಿದೆನ್ನಬಹುದು. ಇಲ್ಲಿ ಭಾಷಾಂತರದ ಗುರಿ ಪರರನ್ನು ಅರಿಯುವುದು, ಅರಿತು ನಡೆಯುವುದು. ಉತ್ತಮ ಸಂಪ್ರದಾಯಗಳ ಬೆಸುಗೆಯಿಂದ ಉತ್ತಮ ಬಾಂಧವ್ಯ ಸ್ಥಾಪಿಸಿ ದೇಶದೇಶಗಳಲ್ಲಿ ಶಾಂತಿಗೆ ಬುನಾದಿ ಹಾಕುವುದೇ ಆಗಿದೆ.

೮ | ಭಾಷಾಂತರದಲ್ಲಿ ಸಂದಿಗ್ಧತೆಗಳು

ಜಿ. ಶ್ರೀದೇವಿ

‘ಸಂದಿಗ್ಧತೆ’ ಎಂದರೆ ಸಂದೇಹಕ್ಕೆ ಎಡೆಗೊಡುವ ಯಾವುದೇ ಲಕ್ಷಣ. ಒಂದು ಪದಕ್ಕೆ ಒಂದೇ ಅರ್ಥ ಇದ್ದಿದ್ದರೆ ಮಾತುಬರಹಗಳಲ್ಲಿ ಸಂದೇಹಕ್ಕೆ ಕಾರಣವೇ ಇರುತ್ತಿರಲಿಲ್ಲ. ಆದರೆ ಅಪ್ರಗಲ್ಭವಾದ ಭಾಷೆಗಳಲ್ಲೂ ಸಹ ಹೀಗಿರಲು ಸಾಧ್ಯವಿಲ್ಲ. ಭಾಷೆ ಎಷ್ಟೆಷ್ಟುಮಟ್ಟಿಗೆ ಬೆಳೆದಿದ್ದರೆ ಅಷ್ಟಷ್ಟುಮಟ್ಟಿಗೆ ಪದಗಳಿಗೆ ನಾನಾರ್ಥವಿರುತ್ತದೆ. ಒಂದೇ ಪದಕ್ಕೆ ಹಲವಾರು ಪರ್ಯಾಯಪದಗಳೂ ಇರುತ್ತವೆ. ಹೀಗೆಯೇ ಪದಗುಚ್ಛಗಳೂ (phrases) ನುಡಿಗಟ್ಟುಗಳೂ (idioms), ಅನೇಕಾರ್ಥವನ್ನು ಹೊಂದಿರುತ್ತವೆ. ಪ್ರತಿಯೊಂದು ಭಾಷೆಯಲ್ಲಿ ಈ ಸಂದಿಗ್ಧತೆ ಇರುವುದರಿಂದ ಭಾಷಾಂತರದಲ್ಲಿ ಉಂಟಾಗುವ ಸಂದಿಗ್ಧತೆಗೆ ಮೊಟ್ಟಮೊದಲ ಕಾರಣ ಇದೇ.

ಇಂಗ್ಲಿಷ್ ಅತ್ಯಂತ ಶ್ರೀಮಂತವಾದ ಭಾಷೆ. ಜಗತ್ತಿನ ಭಾಷೆಗಳಲ್ಲಿ ಇದಕ್ಕೆ ಅಗ್ರಸ್ಥಾನವಿದೆ. ಒಂದೇ ಪದಕ್ಕೆ ಹಲವಾರು ಅರ್ಥಛಾಯೆಗಳಿರುತ್ತವೆ. ಹಾಗೆಯೇ ಪದಗುಚ್ಛ ನುಡಿಗಟ್ಟುಗಳಿಗೂ ಸಹ. ಒಂದು ನಿರ್ದಿಷ್ಟ ಸಂದರ್ಭದಲ್ಲಿ ಯಾವ ಅರ್ಥ ಕೊಡಬೇಕೆಂಬುದೇ ಸಂದಿಗ್ಧತೆಗೆ ಕಾರಣವಾಗುತ್ತದೆ.

ಉದಾಹರಣೆಗೆ philosophy ಎಂಬ ಪದವನ್ನು ನೋಡೋಣ. ಇದು ಸಂದರ್ಭಾನುಸಾರವಾಗಿ ತತ್ತ್ವಶಾಸ್ತ್ರ, ಜ್ಞಾನಾಕಾಂಕ್ಷೆ, ವಿಶ್ಲೇಷಣೆ, ಸಂದೇಶ, ಜೀವನದೃಷ್ಟಿ ಯಾ ದರ್ಶನ, ತತ್ತ್ವಾನುಸಂಧಾನ ತತ್ತ್ವಾನ್ವೇಷಣೆ ಮೊದಲಾಗಿ ಅರ್ಥಕೊಡುತ್ತದೆ.

(a) A study of philosophy ತತ್ತ್ವಶಾಸ್ತ್ರದ ಅಧ್ಯಯನ.
(b) philosophy is a natural function of the human mind ಜ್ಞಾನಾಕಾಂಕ್ಷೆ ಎಂಬುದು ಮಾನವ ಮತಿಯ ಸಹಜಪ್ರವೃತ್ತಿ.
(c) philosophy of science ವಿಜ್ಞಾನದ (ತಾತ್ತ್ವಿಕ) ವಿಶ್ಲೇಷಣೆ.
(d) philosophy of history ಇತಿಹಾಸದ ಸಂದೇಶ.
(e) philosophy of life ಜೀವನದೃಷ್ಟಿ ಯಾ ಜೀವನದರ್ಶನ.
(f) the beginnings of Indian philosophy take us back to the dawn of time ಭಾರತೀಯ ತತ್ತ್ವಾನುಸಂಧಾನದ ಆರಂಭವನ್ನು ಕಾಣಲು ನಾವು ಅನಾದಿಕಾಲಕ್ಕೆ ಹೋಗಬೇಕು.

ಹೀಗೆಯೇ absolute ಎಂಬ ಪದದ ಅರ್ಥಭೇದವನ್ನು ಕೆಳಗಿನ ನಿದರ್ಶನಗಳಲ್ಲಿ ಗಮನಿಸಬಹುದು :

Absolute monarchy ನಿರಂಕುಶ ಪ್ರಭುತ್ವ.
Absolute opinion ಖಚಿತ ಅಭಿಪ್ರಾಯ.
Absolute knowledge ಪರಿಪೂರ್ಣಜ್ಞಾನ.
Absolute truth ಪಾರಮಾರ್ಥಿಕ ಸತ್ಯ.
Absolute freedom ಪೂರ್ಣ ಸ್ವಾತಂತ್ರ್ಯ.
Absolute alcohol ಶುದ್ಧ, ಅಪ್ಪಟ ಮದ್ಯಸಾರ.
An absolute lie ಶುದ್ಧ, ಪೂರ್ತಿ ಸುಳ್ಳು.

ಇದೇ ಪದ the absolute ಎಂಬ ಪದಗುಚ್ಛವಾದಾಗ ಪರತತ್ತ್ವ, ಪರವಸ್ತು, ಪರಾತ್ಪರವಸ್ತು ಎಂಬ ಅರ್ಥಕೊಡುತ್ತದೆ. ಭಾರತೀಯ ದರ್ಶನದಲ್ಲಿ the Absolute ಗೆ ಬ್ರಹ್ಮನ್ ಎಂದು ಅರ್ಥ.

Best-seller ಪದಕ್ಕೆ ಹೆಚ್ಚು ಮಾರಾಟವಿರುವ ಪುಸ್ತಕ ಮತ್ತು ಅಂಥ ಪುಸ್ತಕದ ಲೇಖಕ ಎಂಬ ಎರಡು ಅರ್ಥಗಳಿವೆ. ಆದರೆ ಈ ಎರಡು ಅರ್ಥಗಳೂ ಪ್ರಯೋಗದಲ್ಲಿ ಒಂದೇ ಅರ್ಥವನ್ನು ಕೊಡುತ್ತವೆ. ಹೇಗೆಂದರೆ

His new novel has now become a best-seller ಅವನ ಹೊಸ ಕಾದಂಬರಿ ಈಗ ಹೆಚ್ಚು ಮಾರಾಟವಿರುವ ಪುಸ್ತಕ.

Sometimes the worst writers are the best-sellers ಅತ್ಯಂತ ಕೀಳು ಮಟ್ಟದ ಲೇಖಕರ ಪುಸ್ತಕಗಳೇ ಕೆಲವೊಮ್ಮೆ ಅತ್ಯಂತ ಹೆಚ್ಚಾಗಿ ಮಾರಾಟವಿರುವ ಪುಸ್ತಕಗಳಾಗಿಬಿಡುತ್ತವೆ.

ಇಲ್ಲಿ ಎರಡು ಪ್ರಯೋಗಗಳಲ್ಲೂ 'ಪುಸ್ತಕಗಳು' ಎಂದೇ ಅರ್ಥ. ಇಂಥ ಪರಿಸ್ಥಿತಿಯೂ ಸಂದಿಗ್ಧತೆಗೆ ಎಡೆಗೊಡುತ್ತದೆ.

Moment ಎಂಬ ಪದಕ್ಕೆ 'ಕ್ಷಣ' ಎಂಬುದು ಎಲ್ಲರಿಗೂ ತಿಳಿದ ಅರ್ಥ. ಆದರೆ ಅದಕ್ಕೆ ಪ್ರಾಮುಖ್ಯ ಅಥವಾ ಮಹತ್ವ ಎಂಬ ವಿಶೇಷ ಅರ್ಥವೂ ಉಂಟೆಂಬುದನ್ನು ಅರಿತವರು ಬಹುಶಃ ವಿರಳ. It is a thing of no moment ಎಂಬ ವಾಕ್ಯಕ್ಕೆ, ನಿಜವಾದ ಅರ್ಥ 'ಅದು ಅಷ್ಟೇನೂ ಮಹತ್ವದ್ದಲ್ಲ' ಎಂದು. ಇಲ್ಲಿ moment ಶಬ್ದಕ್ಕೆ ಕ್ಷಣವೆಂಬ ಅರ್ಥಕೊಟ್ಟರೆ ತೀರ ಹಾಸ್ಯಾಸ್ಪದವಾಗುತ್ತದೆ.

ಒಂದೇ ಮೂಲಶಬ್ದದಿಂದ ಹುಟ್ಟಿದ ಪದಗಳೂ ಅರ್ಥದಲ್ಲಿ ಬೇರೆ ಬೇರೆಯಾಗ ಬಹುದು. ಉದಾಹರಣೆಗೆ It is a historical event ಮತ್ತು It is a historic event ಎಂಬ ಎರಡು ವಾಕ್ಯಗಳನ್ನು ತೆಗೆದುಕೊಳ್ಳೋಣ. ಎರಡನ್ನೂ 'ಅದೊಂದು ಐತಿಹಾಸಿಕ ಘಟನೆ' ಎಂದು ಅನುವಾದಿಸಬಹುದು. ಆದರೆ ಎರಡರ ಅರ್ಥಗಳೂ ಅಜಗಜಾಂತರ ಎಂಬುದು ಸ್ಪಷ್ಟ. ಮೊದಲನೆಯದು ಚರಿತ್ರೆಯ ಘಟನೆ ಅಂದರೆ ಚರಿತ್ರೆಗೆ ಸೇರಿದ ಘಟನೆ ಅಷ್ಟೆ. ಆದರೆ ಎರಡನೆಯದು ಇತಿಹಾಸ ಮಹತ್ವವುಳ್ಳ ಘಟನೆ. ಆದುದ ರಿಂದ 'ಇತಿಹಾಸಕ್ಕೆ ಸೇರಿದ ಘಟನೆ', 'ಐತಿಹಾಸಿಕ ಮಹತ್ವವುಳ್ಳ ಘಟನೆ' ಎಂದು

ಅನುವಾದಿಸದಿದ್ದರೆ ಈ ವಾಕ್ಯಗಳ ಅರ್ಥಭೇದ ವಾಚಕರಿಗೆ ತಿಳಿಯುವುದೇ ಇಲ್ಲ. ಹೀಗಾಗಿ ಅನುವಾದವನ್ನೇ ಓದುವವರು ಮೂಲಾರ್ಥವನ್ನೇ ತಪ್ಪಾಗಿ ತಿಳಿದುಕೊಳ್ಳುವ ಸಂಭವ ಉಂಟು.

Association ಮತ್ತು Associations ಒಂದೇ ಪದದಿಂದ ಬಂದಿವೆ. Association ಎಂದರೆ (a) ಸಂಘ, (b) ಜೊತೆ; ಸಂಗ (c) ಸಹವಾಸ, (d) ಸಾಹಚರ್ಯ ಎಂದು ಅರ್ಥ. Associationsಗೆ 'ಸಂಘಗಳು' ಎಂಬ ಅರ್ಥದ ಜೊತೆಗೆ Associationನಲ್ಲಿ ಇಲ್ಲದ ಇನ್ನೊಂದು ಅರ್ಥವೂ ಇದೆ. ಅದು 'ಆಲೋಚನೆ, ಭಾವನೆ, ನೆನಪು ಮೊದಲಾದವುಗಳ ಸಂಬಂಧ' ಎಂಬುದು. ಉದಾ : Mysore has always had pleasant associations for me ಮೈಸೂರು ಎಂದರೆ ನನಗೆ ಯಾವಾಗಲೂ ಸವಿನೆನಪುಗಳು ಮೂಡುತ್ತವೆ. ಹೀಗೆಯೇ attention ಎಂದರೆ ಗಮನ, ಲಕ್ಷ್ಯ ಎಂದು. ಆದರೆ attentions ಎಂದರೆ ಪ್ರಣಯಯಾಚನೆ. ಇಲ್ಲಿ ಮೊದಲ ಪದದ ಅರ್ಥಕ್ಕೂ ಎರಡನೆಯ ಪದದ ಅರ್ಥಕ್ಕೂ ಸಂಬಂಧವೇ ಇಲ್ಲ.

ಈಗ ಪದಗುಚ್ಛ, ನುಡಿಗಟ್ಟುಗಳನ್ನು ನೋಡೋಣ.

He laid his heart bare.
He laid his chest bare.

ಎರಡನ್ನೂ 'ಅವನ ಎದೆ ಬಿಚ್ಚಿ ತೋರಿಸಿದ' ಎಂದು ಭಾಷಾಂತರಿಸಬಹುದು. ಆದರೆ ಮೊದಲನೆಯದು ರೂಪಕಾರ್ಥ : ಎರಡನೆಯದು ವಾಚ್ಯಾರ್ಥ. 'ಅವನು ಹೃದಯದಲ್ಲಿದ್ದದ್ದನ್ನೆಲ್ಲ ತೋಡಿಕೊಂಡ' ಎಂಬುದು ಮೊದಲ ವಾಕ್ಯದ ನಿಜವಾದ ಅರ್ಥ. ಈ ವಾಕ್ಯದಲ್ಲಿ ನುಡಿಗಟ್ಟಿನ ಪ್ರಯೋಗವಿದ್ದರೆ ಎರಡನೆಯ ವಾಕ್ಯದಲ್ಲಿ ಪದಗುಚ್ಛದ ಪ್ರಯೋಗವಿದೆ.

ಒಂದೇ ಶಬ್ದಪುಂಜ ನುಡಿಗಟ್ಟು, ಪದಗುಚ್ಛ ಎರಡೂ ಆಗಿ ಬಳಕೆಯಾಗಬಹುದು. ಕೆಳಗಿನ ಉದಾಹರಣೆಗಳಲ್ಲಿ ಈ ವ್ಯತ್ಯಾಸವನ್ನು ಗಮನಿಸಬಹುದು.

His bill came to fifty rupees. ಎಲ್ಲ ಸೇರಿ ಅವನ ಬಿಲ್ಲು 50 ರೂಪಾಯಿ ಆಯಿತು.

He came to the river. ಅವನು ನದಿಯ ಹತ್ತಿರಕ್ಕೆ ಬಂದನು.

ಇಲ್ಲಿ came to ಎಂಬುದು ಪದಗುಚ್ಛವಾಗಿ ಪ್ರಯೋಗವಾಗಿದೆ.

1) That it should come to this! ಈ ಸ್ಥಿತಿಗೆ ಇಳಿಯಬೇಕೇ! ಈ ಸ್ಥಿತಿಗೆ ಬೀಳಬೇಕೇ!

2) If it comes to that, I shall resign. ಅಷ್ಟಕ್ಕೆ ಬಂದರೆ, ಆ ಹಂತ ಮುಟ್ಟಿದರೆ ನಾನು ರಾಜೀನಾಮೆ ಕೊಟ್ಟುಬಿಡುತ್ತೇನೆ.

3) His words never come to much. ಅವನ ಮಾತೆಲ್ಲ ಹುಡುಕಿದರೂ ಏನೇನೂ ಹುರುಳಿಲ್ಲ.

4) When it comes to making a decision he vacillates. ನಿರ್ಣಯದ ಹಂತ ಮುಟ್ಟಿದಾಗ ಆವನು ಹಿಂದುಮುಂದು ನೋಡಲು ಪ್ರಾರಂಭಿಸುತ್ತಾನೆ.

"ಇಲ್ಲಿ ಅದೇ come to ನುಡಿಗಟ್ಟಾಗಿ ಬಳಕೆಯಾಗಿದೆ."

ಒಂದು ಪದಕ್ಕೆ ಬೇರೆ ಬೇರೆ prepositionಗಳು ಸೇರುವುದರಿಂದ ಅರ್ಥಭೇದ ಉಂಟಾಗಿ ನುಡಿಗಟ್ಟುಗಳಾಗುತ್ತವೆ. Come ಎಂಬ ಪದಕ್ಕೆ prepositionಗಳು ಸೇರಿ ಹೇಗೆ ನುಡಿಗಟ್ಟುಗಳಾಗಿವೆ ಎಂಬುದನ್ನು ಕೆಳಗಿನ ನಿದರ್ಶನಗಳಿಂದ ತಿಳಿಯಬಹುದು.

1) To come about (ನೈಸರ್ಗಿಕ ಯಾ ಸಾಮಾಜಿಕ ಘಟನೆಗಳ ವಿಷಯದಲ್ಲಿ) ಆಗು, ಉಂಟಾಗು, ಸಂಭವಿಸು : The war came about for these reasons. ಯುದ್ಧ ಸಂಭವಿಸಿದ್ದು ಈ ಕಾರಣಗಳಿಂದ.

2) To come across ಅಕಸ್ಮಾತ್ತಾಗಿ ಸಿಕ್ಕು, ಕಣ್ಣಿಗೆ ಬೀಳು : I came across this ivory casket in the Arts Emporium. ಈ ದಂತದ ಪೆಟ್ಟಿಗೆಯು ಕುಶಲವಸ್ತುಗಳ ಮಳಿಗೆಯಲ್ಲಿ ನನ್ನ ಕಣ್ಣಿಗೆ ಬಿತ್ತು.

3) To come by (a) ಪಡೆ; ಹೊಂದು : He squandered away every thing as he had easily come by it. ಎಲ್ಲವನ್ನೂ ಸಲೀಸಾಗಿ ಪೋಲುಮಾಡಿದ ಏಕೆಂದರೆ ಅದನ್ನು ಸರಾಗವಾಗಿ ಪಡೆದಿದ್ದ. (b) ಸಂಪಾದಿಸು : Money is hard to come by. ಹಣವನ್ನು ಸಂಪಾದಿಸುವುದು ಕಷ್ಟ.

4) To come down (a) (ಬೆಲೆ ಮೊದಲಾದವು) ಇಳಿ, ತಗ್ಗು : The rent must come down ಬಾಡಿಗೆ ಇಳಿಯಬೇಕು ತಗ್ಗಬೇಕು, (b) (ಬೆಲೆ ಮೊದಲಾದವು ಏಕಾಏಕಿ) ಕುಸಿ, ಬಿದ್ದುಹೋಗು : prices came down ಬೆಲೆಗಳು ಕುಸಿದು ಬಿದ್ದುವು (c) ಹಿಡಿದ ಪಟ್ಟಿನಿಂದ, ನಿಲುವಿನಿಂದ ಇಳಿ; ಹಿಡಿದ ಪಟ್ಟನ್ನು, ನಿಲುವನ್ನು ಸಡಿಲಿಸು : He assumed a rigid posture, but he had to come down at last ಅವನು ಅತಿ ಬಿಗಿಯಾದ ನಿಲುವನ್ನು ತಳೆದಿದ್ದ, ಆದರೆ ಕೊನೆಗೂ ಅದನ್ನು ಸಡಿಲಿಸಬೇಕಾಯಿತು (d) ಕೆಳ ಅಂತಸ್ತಿಗೆ, ದರ್ಜೆಗೆ ಇಳಿ; ದುರ್ಗತಿಗೆ ಇಳಿ : They have come down in the world ಜನರೆದುರಿಗೆ, ಲೋಕದೆದುರಿಗೆ ಅವರು ದುರ್ಗತಿಗೆ ಇಳಿದಿದ್ದಾರೆ. (e) (ಆಡುಮಾತು) (ಕೊಡುಗೆ, ದಾನ ಮೊದಲಾದುವನ್ನು, ಕೊಡು, ನೀಡು : He came down with a rich donation ಆತ ಉದಾರವಾಗಿ ದತ್ತಿ ನೀಡಿದ. (f) (ಆಡುಮಾತು) (ಸಲ್ಲಿಸಬೇಕಾದ ಬಾಕಿ ಮೊದಲಾದುವನ್ನು) ಕೊಟ್ಟುಬಿಡು, ತೆತ್ತುಬಿಡು, ತೀರಿಸಿಬಿಡು : come down with your dues first ನೀನು ಕೊಡಬೇಕಾದ ಬಾಕಿಯನ್ನು ಮೊದಲು ಕೊಟ್ಟುಬಿಡು.

5) To come down upon ಉರಿದುರಿದು ಬೀಳು; ರೇಗಿ ರೇಗಿ ಬೀಳುವುದು; ಮೇಲೆ ಬೀಳು; ಮೇಲೆರಗು : Being ill tempered he comes down upon

his servants every moment ಸಿಡುಕುಸ್ವಭಾವದವನಾದ ಅವನು ಕ್ಷಣಕ್ಷಣಕ್ಕೂ ಸೇವಕರ ಮೇಲೆ ರೇಗಿ ರೇಗಿ ಬೀಳುತ್ತಾನೆ.

6) To come off (ಏರ್ಪಡಿಸಿದ ಕಾರ್ಯಕ್ರಮ, ಸಂದರ್ಭಗಳ ವಿಷಯದಲ್ಲಿ) ನಡೆ, ಆಗು, ಸಂಭವಿಸು : The examination came off ಪರೀಕ್ಷೆ ನಡೆಯಿತು.

7) To come out with ನಿಜ ಹೇಳು : He came out with the true story at last ನಿಜವಾದ ಕಥೆಯನ್ನು ಅವನು ಕಟ್ಟಕಡೆಗೆ ಹೇಳಿದ.

8) To come round (ವಾದ, ಚರ್ಚೆ ಮೊದಲಾದವುಗಳು ಆದ ಮೇಲೆ) ತನ್ನ ನಿಲುವನ್ನು ಬಿಟ್ಟು, ಬದಲಾಯಿಸಿ ಪ್ರತಿಪಕ್ಷಿಯ ನಿಲುವಿಗೆ ಬರು : He came round to our point at last ಕೊನೆಗೆ ಅವನು ನಮ್ಮ ನಿಲುವಿಗೆ ಬಂದನು.

9) To come upon (ವ್ಯಕ್ತಿಯನ್ನು ಯಾ ವಸ್ತುವನ್ನು ಯಾ ವಿಷಯವನ್ನು) ಅನಿರೀಕ್ಷಿತವಾಗಿ ಕಾಣು : He came upon them suddenly at the bend of the path ರಸ್ತೆಯ ತಿರುವಿನಲ್ಲಿ ಅವನು ಅವರನ್ನು ಇದ್ದಕ್ಕಿದ್ದಂತೆ ಕಂಡನು.

Come ಎಂಬ ಪದದಿಂದ ಬಂದಿರುವ ನುಡಿಗಟ್ಟುಗಳಲ್ಲಿ ಇವು ಕೆಲವು. ಇವುಗಳಲ್ಲಿ ಕೆಲವಕ್ಕೆ ಪದಗುಚ್ಛದ ಅರ್ಥವೂ ಇದೆ. ಆದರೆ ಇಲ್ಲಿ ಕೇವಲ ನುಡಿಗಟ್ಟುಗಳಾಗಿ ಅವುಗಳ ಅರ್ಥವನ್ನು ಗಮನಿಸಲಾಗಿದೆ.

ಒಂದೇ ನುಡಿಗಟ್ಟಿಗೆ ಹಲವಾರು ಅರ್ಥಗಳಿರಬಹುದು. 4ನೆಯ ನುಡಿಗಟ್ಟು To come down ಎಂಬುದನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ.

ಮೇಲೆ ಹೇಳಿದ ಸಂದಿಗ್ಧತೆಗಳು ಭಾಷಾಂತರದಲ್ಲಿ ತೊಡಕನ್ನುಂಟುಮಾಡುತ್ತವೆ. ಎರಡು ಭಾಷೆಗಳ ಮೇಲೂ ಪ್ರಭುತ್ವ ಇರುವ ಸಮರ್ಥ ಅನುವಾದಕ ಇವುಗಳನ್ನು ನಿವಾರಿಸಿಕೊಳ್ಳುತ್ತಾನೆ.

ಕೆಲವು ಗಾದೆ ನುಡಿಗಟ್ಟುಗಳು ಕಾವ್ಯ ಪುರಾಣಗಳಿಂದ ಬಂದಿರುತ್ತವೆ. ಇವು ನಿತ್ಯದ ಭಾಷೆಯಲ್ಲಿ ಬೆರೆತುಹೋಗಿವೆ. ಉದಾಹರಣೆಗೆ ರಾಮಬಾಣ, ರಾಮರಾಜ್ಯ, ಸುಗ್ರೀವಾಜ್ಞೆ, ಭೀಷ್ಮಪ್ರತಿಜ್ಞೆ, ಲಕ್ಷ್ಮಣರೇಖೆ ಮೊದಲಾದವು. ಇವನ್ನು ಅಕ್ಷರಶಃ ಅನುವಾದಿಸಿದರೆ, ಅಂದರೆ Rama's Arrow, Rama's Kingdom, Sugreeva's Command, Bhisma's Vow ಮೊದಲಾಗಿ ತರ್ಜುಮೆಮಾಡಿದರೆ, ಈ ನುಡಿಗಟ್ಟುಗಳ ಕಥಾಪ್ರಸಂಗ, ಹಿನ್ನೆಲೆಗಳನ್ನರಿಯದ ಜನಾಂಗದ ಮೇಲೆ ಇವು ಯಾವ ಪ್ರಭಾವವನ್ನೂ ಬೀರಲಾರವು. ಈ ಮಾರ್ಗವನ್ನು ಬಿಟ್ಟು a sure expedient etc., happy kingdom, a strict command, a firm vow ಮೊದಲಾಗಿ ಅವುಗಳ ಸಾರಾಂಶವನ್ನು ಕೊಟ್ಟುಬಿಟ್ಟರೆ ಅವುಗಳ ಸ್ವಾರಸ್ಯ ಸೌಂದರ್ಯ ಉಳಿಯುವುದಿಲ್ಲ. ಇಂಥ ಕಡೆಗಳಲ್ಲಿ ಬರುವ ಸಂದಿಗ್ಧತೆಯನ್ನು ನಿವಾರಿಸುವುದು ಕಷ್ಟ. ಅಕ್ಷರಶಃ ಭಾಷಾಂತರಿಸಿ ವಿವರಣೆ ಕೊಡಬಹುದು ಅಷ್ಟೆ. ಏನೇ ಆದರೂ ಇದು ಪೂರ್ಣ ಅನುವಾದವಾಗಲಾರದು.

ಇದೇ ರೀತಿ ಇಂಗ್ಲಿಷಿನ apple of Sodom, Job's comforter, to cross the Rubicon, Tantalus cup ಮೊದಲಾದ ನುಡಿಗಟ್ಟುಗಳು ಅವರ ಕಾವ್ಯಪುರಾಣ ಗಳಿಂದ ಬಂದವು. ಮೇಲೆ ಹೇಳಿದ ಸಂದಿಗ್ಧತೆಯನ್ನೇ ಇಲ್ಲೂ ಕಾಣುತ್ತೇವೆ.

ಆದರೆ ನಮ್ಮ ಕಾವ್ಯ ಪುರಾಣಗಳಲ್ಲಿ ನುಡಿಗಟ್ಟು ಹುಟ್ಟಿಬಂದಿರುವ ಸಂದರ್ಭ, ಕಥಾ ಸಂದರ್ಭ ಹಿನ್ನೆಲೆಗಳು, ಭಾಷಾಂತರಿಸುವ ಭಾಷೆಯಲ್ಲಿನ ಸಾಹಿತ್ಯದಲ್ಲಿ ಸಿಕ್ಕುವುದಾದರೆ ಅಲ್ಲಿಂದ ಹುಟ್ಟಿದ ನುಡಿಗಟ್ಟಿನೊಡನೆ ನಮ್ಮ ನುಡಿಗಟ್ಟನ್ನು ಸಮೀಕರಿಸಬಹುದು. ಇಂಥ ಸಾದೃಶ್ಯ ಕೆಲವೊಮ್ಮೆ ಕಾಣಬರುತ್ತದೆ.

Benjamin's messಗೆ 'ಭೀಮಪಾಲು' ಎಂದಿಟ್ಟುಕೊಳ್ಳಬಹುದು. Damon and Pythiasರನ್ನು ಕರ್ಣ ದುರ್ಯೋಧನರಿಗೋ, ಚಂದನದಾಸ ಅಮಾತ್ಯರಾಕ್ಷಸರಿಗೋ, ಹೋಲಿಸಬಹುದು. ರುಸ್ತುಂನನ್ನು ಭೀಮನನ್ನಾಗಿ ಮಾಡಿಕೊಳ್ಳಬಹುದು.

ಪ್ರಾಂತೀಯ ಭೇದಗಳ ಕಾರಣ ಒಂದೇ ಭಾಷೆಯಲ್ಲಿ ಭಿನ್ನತೆಗಳು ತಲೆದೋರುತ್ತವೆ. ಒಂದು ಪದಕ್ಕೆ ಅನೇಕಾರ್ಥಗಳಿರುವುದಷ್ಟೆ. ಒಂದೊಂದು ಪ್ರಾಂತದಲ್ಲಿ ಒಂದೊಂದು ಅರ್ಥ ಪ್ರಧಾನವಾಗಿರುತ್ತದೆ. ಆದುದರಿಂದ ಒಂದೇ ಪದ ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಬಳಕೆಯಲ್ಲಿರಬಹುದು. ಉದಾಹರಣೆಗೆ ಮೈಸೂರು, ಧಾರವಾಡ, ದಕ್ಷಿಣ ಕನ್ನಡಗಳ ಕೆಲವು ಪದಗಳನ್ನು ನೋಡಬಹುದು.

	ಧಾರವಾಡದಲ್ಲಿನ ಅರ್ಥ	ಮೈಸೂರಿನ ಅರ್ಥ
ಹಿಂದಾಗಡೆ	ಆಮೇಲೆ	ಹಿಂದೆ, ಹಿತ್ತಿಲಕಡೆ
ತಿಂಡಿ	ತುರಿಕೆ, ನವೆ	ತಿನಿಸು
ಅಮ್ಮ	ವಿಧವೆ ಆದೂ ಹೀನಾರ್ಥದಲ್ಲಿ	ತಾಯಿ
ಭಯಂಕರ	ತುಂಬಾ	ಭೀಕರ
ನೆಟ್ಟಗೆ	ಚೆನ್ನಾ	ನೇರವಾಗಿ
ಹತ್ತು	ಪ್ರಾರಂಭಿಸು	(ಮೇಲಕ್ಕೆ) ಹತ್ತು
ಸೋನೆ	ಜಡಿಮಳೆ	ಬಿಡದೆ ಸುರಿಯುವ ತುಂತುರುಮಳೆ

	ದಕ್ಷಿಣ ಕನ್ನಡದಲ್ಲಿನ ಅರ್ಥ	ಮೈಸೂರಿನ ಅರ್ಥ
ಆಯಿತು	ಆಗಲಿ	ಆಗಿಹೋಯಿತು
ಗುಡಿ	ಮುಸುಕು	ದೇವಸ್ಥಾನ
ಕೂಗು	ಅಳು	ಕರೆ
ಪ್ರಿಯ	ಹೆಚ್ಚು ಬೆಲೆ	ಇಷ್ಟ
ಹುಷಾರು	ಚಾತುರ್ಯ	ಆರೋಗ್ಯ

ಈ ಭೇದವನ್ನು ತಿಳಿದುಕೊಳ್ಳದೆ ಭಾಷಾಂತರಿಸಿದರೆ ಭಾಷಾಂತರ ದೋಷಪೂರ್ಣ ವಾಗಬಹುದು.

ಒಂದೇ ಮೂಲಭಾಷೆಯಿಂದ ಬೇರೆ ಬೇರೆ ಭಾಷೆಗಳಿಗೆ ಒಂದು ಪದ ಬಂದಿದ್ದರೂ, ಅದಕ್ಕೆ ಅರ್ಥಭೇದವುಂಟಾಗಬಹುದು. ಅಂದರೆ ಒಂದು ಭಾಷೆಯಲ್ಲಿ ಆ ಪದ ಒಂದು ಅರ್ಥ ಕೊಟ್ಟರೆ ಅದೇ ಪದಕ್ಕೆ ಇನ್ನೊಂದು ಭಾಷೆಯಲ್ಲಿ ಬೇರೆ ಅರ್ಥವಿರುವ ಸಂದರ್ಭ ಉಂಟು. ಇಂಥಲ್ಲಿ ಸಂದಿಗ್ಧತೆ ಉಂಟಾಗಬಹುದು.

	ಕನ್ನಡದಲ್ಲಿನ ಅರ್ಥ	ಹಿಂದಿಯಲ್ಲಿನ ಅರ್ಥ
ಉಪನ್ಯಾಸ	ಭಾಷಣ	ಕಾದಂಬರಿ
ಶಿಕ್ಷಾ	ಶಿಕ್ಷೆ	ಶಿಕ್ಷಣ
ಸಂಸಾರ	ಕುಟುಂಬ	ಪ್ರಪಂಚ
ಸಂಭಾವನಾ	ಸನ್ಮಾನ, ಗೌರವಧನ	ಸಂಭಾವ್ಯತೆ
ಚರಿತ್ರ	ಚರಿತ್ರೆ	ನಡತೆ
ವಿಪರೀತ	ಅತಿ	ವಿರುದ್ಧ

ಪದಕ್ಕೆ ನಾನಾರ್ಥವಿರುವುದರಿಂದ ಒಂದೊಂದು ಭಾಷೆಯಲ್ಲಿ ಒಂದೊಂದು ಅರ್ಥ ಪ್ರಧಾನಸ್ಥಾನ ಪಡೆದು ಬಳಕೆಯಲ್ಲಿರುತ್ತದೆ. ಭಾಷಾಂತರಿಸುವಾಗ ಇದನ್ನು ತಿಳಿದಿರುವುದು ಅಗತ್ಯವಾಗುತ್ತದೆ.

ಒಂದೇ ಭಾಷೆಯಲ್ಲಿ ಪದ ಕಾಲಕ್ರಮೇಣ ಅರ್ಥ ಬದಲಾಯಿಸಬಹುದು. ಆದುದರಿಂದ ಯಾವ ಕಾಲದ ಗ್ರಂಥವನ್ನು ಅನುವಾದಿಸುತ್ತಿದ್ದೇವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಆ ಕಾಲದಲ್ಲಿ ಆ ಪದಕ್ಕಿದ್ದ ಅರ್ಥವೇನು ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

'ಅಪ್ಪ' ಎಂಬ ಶಬ್ದ ಹಳೆಗನ್ನಡ ಸಾಹಿತ್ಯದಲ್ಲಿ ತಂದೆ ಎನ್ನುವ ಅರ್ಥ ಕೊಡುತ್ತಿತ್ತು. ಈಗ ತಾಯಿಯಾಗಿದೆ. 'ಕೂಳು' ಅನ್ನವಲ್ಲದೆ ಬೇರೆ ಆಗಿರಲಿಲ್ಲ. ಈಗ ಹೀನಾರ್ಥ ಕೊಡುತ್ತಿದೆ. 'ಕೂಸು' ಎಂದರೆ ಹೆಂಗುಸು ಎಂದರ್ಥವಿತ್ತು. ಈಗ ಮಗು ಎನ್ನುವ ಅರ್ಥ ಬಂದಿದೆ. 'ಪೀತಾಂಬರ' ಒಂದು ಕಾಲದಲ್ಲಿ ಹಳದಿ ಬಟ್ಟೆಯಾಗಿದ್ದರೂ ಈಗ ಜರಿಯಿರುವ ರೇಷ್ಮೆ ವಸ್ತ್ರವಾಗಿದೆ. 'ಸೀರೆ' ಬಟ್ಟೆ ಮಾತ್ರವಾಗಿದ್ದುದು ಈಗ ಸ್ತ್ರೀಯರು ಉಟ್ಟುಕೊಳ್ಳುವ ವಿಶಿಷ್ಟ ಉಡಿಗೆ.

ಇದೇ ರೀತಿ pater familias ಎಂಬ ಪದ ಕುಟುಂಬದ ಯಜಮಾನ, ತಂದೆ ಎಂಬ ಎಂಬ ಗಂಭೀರವಾದ ಅರ್ಥಕೊಡುತ್ತಿತ್ತು. ಈಗ ಕೇವಲ ಹಾಸ್ಯ ಪ್ರಯೋಗವಾಗಿದೆ. fond ಪದಕ್ಕೆ ಹಿಂದೆ ಮೂರ್ಖ ಎಂಬ ಅರ್ಥವಿತ್ತು. ಈಗ ಅರ್ಥದಲ್ಲಿ ಉನ್ನತಿ ಪಡೆದಿದೆ. silly ಎನ್ನುವ ಶಬ್ದಕ್ಕೆ ಸರಳ, ಮುಗ್ಧ ಎಂಬ ಅರ್ಥವಿದ್ದದ್ದು ಈಗ ಅವನತಿ ಹೊಂದಿದೆ. ಸುಂದರ, ಅಂದವಾದ ಎಂಬ ಅರ್ಥಕೊಡುತ್ತಿದ್ದ brave ಪದ ಧೈರ್ಯಶಾಲಿ ಎಂದು ಅರ್ಥ ಬದಲಾವಣೆ ಹೊಂದಿದೆ.

ಸಂಪ್ರದಾಯ, ಧಾರ್ಮಿಕ ಆಚರಣೆ, ವಿಧಿಗಳಿಂದ ಭಾಷೆಯಲ್ಲಿ ವಿಶಿಷ್ಟವಾದ ಶಬ್ದಗಳು ಬಂದಿರುತ್ತವೆ. ಉದಾಹರಣೆಗೆ: ಗೃಹಪ್ರವೇಶ, ನಾಮಕರಣ, ಪಾಣಿಗ್ರಹಣ, ಸಪ್ತಪದಿ, ಮಂಗಳಾರತಿ, ತೀರ್ಥ ಪ್ರಸಾದ ಮೊದಲಾದ ಶಬ್ದಗಳು. ಇವುಗಳನ್ನು ಭಾಷಾಂತರಿಸಬಹುದಾದರೂ ವಿವರಣೆಯಿಲ್ಲದೆ ಆ ಭಾಷೆಯ ಜನರಿಗೆ ಅರ್ಥವಾಗಲಾರವು. ಹೀಗೆಯೇ baptism, godfather, godmother ಮೊದಲಾದ ಪದಗಳಿಗೆ ಸಂವಾದಿಯಾಗಿ ಪದಗಳನ್ನು ಕೊಡಬಹುದಾದರೂ ವಿವರಣೆಯಿಲ್ಲದೆ ಅರ್ಥವಾಗುವುದಿಲ್ಲ.

ಒಂದೊಂದು ದೇಶಕ್ಕೇ ವಿಶಿಷ್ಟವಾದ ವಾದ್ಯ, ಭಕ್ಷ್ಯಭೋಜ್ಯ, ಆಟ, ಪಕ್ಷಿ, ಪ್ರಾಣಿ, ಸಸ್ಯ ಮೊದಲಾದವಿರಬಹುದು. ಅವುಗಳನ್ನರಿಯದ ಇನ್ನೊಂದು ದೇಶದ ಜನರಿಗೆ ಪರಿಚಯ ಮಾಡಿಕೊಡುವಾಗ ಅವನ್ನು ಹಾಗೆಯೇ ಉಳಿಸಿಕೊಂಡು ವಿವರಣೆ ಕೊಡಬೇಕಾಗುತ್ತದೆ. ಇಂಥ ಕಡೆಗಳಲ್ಲಿ ಸಂದಿಗ್ಧತೆಯನ್ನು ವಿವರಣೆಯಿಲ್ಲದೆ, ಸಂಪೂರ್ಣ ನಿವಾರಿಸಲು ಸಾಧ್ಯವಿಲ್ಲ.

ಸಾಮಾನ್ಯವಾಗಿ ಎಲ್ಲ ಭಾಷೆಯ ಸಾಹಿತ್ಯದಲ್ಲೂ ಚಮತ್ಕಾರಪೂರ್ಣವಾದ ಕಾವ್ಯಗಳಿರುತ್ತವೆ. ಇವು ಕೇವಲ ಪಾಂಡಿತ್ಯ ಪ್ರಧಾನವಾದ ಕಾವ್ಯಗಳು. ಉದಾಹರಣೆಗೆ ಹೇಳುವುದಾದರೆ ಸಂಸ್ಕೃತದಲ್ಲಿ ಶ್ಲೇಷಾಲಂಕಾರವನ್ನು ಬಳಸಿಕೊಂಡು ಇಡೀ ಕಾವ್ಯವನ್ನು ರಚಿಸಿದವರು ಇದ್ದಾರೆ. ಸಂಸ್ಕೃತದಲ್ಲಿ ನಾಮಪದಗಳಿಗೆ ಹಲವಾರು ಅರ್ಥಗಳಿರುವುದರಿಂದ ಈ ಚಮತ್ಕಾರ ಸಾಧ್ಯವಾಗುತ್ತದೆ.

ಧನಂಜಯನ 18 ಸರ್ಗಗಳ 'ರಾಘವಪಾಂಡವೀಯ' ಎಂಬ ದ್ವಿಸಂಧಾನಕಾವ್ಯದಲ್ಲಿ ಒಂದೊಂದು ಶ್ಲೋಕವೂ ರಾಮ ಮತ್ತು ಪಾಂಡವರನ್ನು ಕುರಿತ ಎರಡೆರಡು ಅರ್ಥಗಳನ್ನು ಒಳಗೊಂಡಿದ್ದು, ಎರಡು ಕಥೆಗಳೂ ಏಕಕಾಲದಲ್ಲಿ ನಿರೂಪಿತವಾಗಿವೆ. ಚಿದಂಬರನ 'ಪಂಚಕಲ್ಯಾಣ ಚಂಪೂಕಾವ್ಯ'ವು ರಾಮ, ಕೃಷ್ಣ, ವಿಷ್ಣು, ಶಿವ ಮತ್ತು ಸುಬ್ರಹ್ಮಣ್ಯ ಈ ಐದು ಜನರ ವಿವಾಹದ ಕಥೆಗಳನ್ನು ಏಕಕಾಲದಲ್ಲಿ ವಿವರಿಸುತ್ತದೆ. ಇಂದಿನ ನವ್ಯ ಕವಿತೆಗಳಲ್ಲೂ ಚಮತ್ಕಾರವನ್ನು ಕಾಣಬಹುದು.

ಇವುಗಳನ್ನು ಅನುವಾದಿಸುವುದು ಅಸಂಭವ, ಇವು ಭಾಷಾಂತರಕ್ಕೆ ಸವಾಲಾಗಿ ನಿಲ್ಲುತ್ತವೆ.

ಹೀಗೆ ಭಾಷಾಂತರಿಸುವಾಗ ಹಲವಾರು ರೀತಿಯ ಸಂದಿಗ್ಧತೆಗಳು ಎದುರಾಗುತ್ತವೆ. ಎರಡು ಭಾಷೆಗಳ ಮೇಲೂ ಪ್ರಭುತ್ವವನ್ನು ಪಡೆದಿರುವ ಸಮರ್ಥ ಭಾಷಾಂತರಕಾರ ಇವುಗಳನ್ನು ನಿವಾರಿಸಿಕೊಳ್ಳುತ್ತಾನೆ. ಕೆಲವೊಮ್ಮೆ, ಪೂರ್ಣವಾಗಿ ನಿವಾರಿಸಲು ಸಾಧ್ಯವಾಗದಿದ್ದಾಗ, ಅಂಶತಃ ಭಾಷಾಂತರಿಸಿಕೊಳ್ಳಬೇಕಾಗುತ್ತದೆ.

೯ | ದುಭಾಷಿತ್ವ ಮತ್ತು ಏಕಕಾಲಿಕ ದುಭಾಷಿಕತೆ

ಎನ್. ಎಸ್. ಶಾರದಾ ಪ್ರಸಾದ್

> "The ideal interpreter should be a living complete encyclopaedia, constantly kept up-to-date with all that is said and done in all kinds of human activity. That of-course is not possible in practice, but the conscientious interpreter should untiringly work towards the goal...the very practice of his profession will help him."
>
> —Prof. Jean Herbert, *Interpreter's Handbook*

ಎರಡನೆಯ ಮಹಾಯುದ್ಧ ಮುಕ್ತಾಯಗೊಂಡಂದಿನಿಂದ ಹುಟ್ಟಿಕೊಂಡಿರುವ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಂಘ-ಸಂಸ್ಥೆಗಳ ಸಂಖ್ಯೆ ಸಾಕಷ್ಟು ಅಧಿಕವಾಗಿವೆ. ಇಂಥ ಸಂಘಸಂಸ್ಥೆಗಳ ಕಾರ್ಯಚಟುವಟಿಕೆಗಳ ಮತ್ತು ಕಲಾಪಗಳ ಪರಿಣಾಮವಾಗಿ ತಲೆದೋರಿರುವ ಭಾಷಾಂತರಕಾರ್ಯವೂ, ದುಭಾಷಿಕತೆಯೂ ಅಧಿಕವಾಗಿಯೇ ಇವೆ. ಈ ಎಲ್ಲ ಸಂಘ-ಸಂಸ್ಥೆಗಳ ಕಾರ್ಯಗಳು ರಾಜಕೀಯ ಲಕ್ಷಣದ್ದವೇ ಅಲ್ಲವೂ ಅಲ್ಲ. ಇವುಗಳ ಕಾರ್ಯಕ್ಷೇತ್ರದತ್ತ ಗಮನಹರಿಸಿದರೆ ವೈವಿಧ್ಯದ ಅರಿವಾಗದಿರದು. ಉದಾ: ಕಬ್ಬಿಣ ಮತ್ತು ಉಕ್ಕು, ಕಲ್ಲಿದ್ದಲು, ವಿಮಾನ ಉತ್ಪಾದನೆ, ಆರೋಗ್ಯ, ಕೃಷಿ, ಧರ್ಮ ಮತ್ತು ಶಿಕ್ಷಣದಿಂದ ಅಪರಾಧಶಾಸ್ತ್ರ ಇತ್ಯಾದಿ.

ನಿರ್ದಿಷ್ಟ ಉದಾಹರಣೆಯೊಂದನ್ನು ನೀಡಬೇಕೆಂದರೆ ಜಿನೀವಾದಲ್ಲಿ ವಿಶ್ವಸಂಸ್ಥೆಯ ಯೂರೋಪಿಯನ್ ಕಾರ್ಯಾಲಯದಲ್ಲಿ 1957ರ ವಸಂತದಲ್ಲಿ ನಡೆದ ಅರವತ್ತು ಸಭೆಗಳಲ್ಲಿ ಕೆಲವು ಸಭೆಗಳ ಚರ್ಚಾವಿಷಯ ಈ ಕ್ಷೇತ್ರಗಳದಾಗಿದ್ದವು:

Sale of Citrus fruits ; Insulation Board, Hardboard and Particle Board ; Inland Water Transport Police Regulations and Signals ; Water Pollution ; Agricultural Machinery; Construction of Vehicles, Conditions of Sale for Solid Fuels ; Trade Arbitration.

ಇಂಥ ಸಭೆಗಳಲ್ಲಿ ಭಾಗವಹಿಸುವ ರಾಷ್ಟ್ರಗಳ ಸಂಖ್ಯೆ ಎರಡು ಅಥವಾ ಎರಡಕ್ಕಿಂತ ಅಧಿಕವಾಗಿದ್ದು, ಆ ರಾಷ್ಟ್ರಗಳ ರಾಷ್ಟ್ರಭಾಷೆಗಳೂ ಭಿನ್ನಭಿನ್ನವಾದಾಗ ದುಭಾಷಿಕತೆಯು ಅನಿವಾರ್ಯವಾಗುತ್ತದೆ. ಇದಕ್ಕಾಗಿ ನೇಮಕಗೊಳ್ಳುವ ದುಭಾಷಿಗಳ ನೇಮಕ ಪೂರ್ಣಕಾಲಿಕವಾಗಿರಬಹುದು ಅಥವಾ ಕ್ಲುಪ್ತಾರ್ಥಕವಾಗಿರಬಹುದಾಗಿದೆ. ಇಂಥವರ ಪೈಕಿ

ಹೆಚ್ಚಿನವರು ಇಂಗ್ಲೆಂಡಿನ ಹೊರಗೆ ವಿವಿಧ ಸಂಘಸಂಸ್ಥೆಗಳ ಕೇಂದ್ರಕಾರ್ಯಸ್ಥಾನ ಗಳಿರುವ ಸ್ಥಳಗಳಲ್ಲಿ ನೇಮಕಗೊಂಡಿರುವರು. ಉದಾ: ನ್ಯೂಯಾರ್ಕ್ (ವಿಶ್ವಸಂಸ್ಥೆ), ಸ್ಟ್ರಾಸ್‌ಬರ್ಗ್ (ಯೂರೋಪಿಯನ್ ಕೌನ್ಸಿಲ್), ರೋಮ್ (ಎಫ್.ಎ.ಒ.), ಬ್ರಸೆಲ್ಸ್ (ಇ.ಇ.ಸಿ–ಕಾಮನ್ ಮಾರ್ಕೆಟ್), ಪ್ಯಾರಿಸ್ (ಯುನೆಸ್ಕೊ), ಜಿನೀವಾ (ಡಬ್ಲ್ಯು.ಎಚ್.ಒ.)—ಈ ಮುಖ್ಯ ಕೇಂದ್ರಕಾರ್ಯಸ್ಥಾನಗಳಲ್ಲಿ ಕೆಲವಾಗಿವೆ. ಈ ಸಂಸ್ಥೆಗಳಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ಅಧಿಕೃತ ಮತ್ತು ವ್ಯಾವಹಾರಿಕ ಭಾಷೆ ಇದೆ. ದುಭಾಷಿಗಳ ಕಾರ್ಯ ಈ ಎರಡು ಭಾಷೆಗಳಲ್ಲಿ ವ್ಯವಹರಿಸುವುದಾಗಿದೆ. ಈ ಭಾಷೆಗಳ ಪೈಕಿ ಇಂಗ್ಲಿಷ್ ಒಂದಾಗಿರಲೇಬೇಕು ಎಂಬುದೇನೂ ಇಲ್ಲ.

ಯೂರೋಪಿಯನ್ ಸಮುದಾಯದ ಕೇಂದ್ರಕಾರ್ಯಸ್ಥಾನ ಬ್ರಸೆಲ್ಸ್‌ನಲ್ಲಿದೆ. ಇದರ ಅಧಿಕೃತ ಭಾಷೆಗಳು ಆರು. ಇದು ಈಗಾಗಲೇ 400 ಅಧಿಕೃತ ದುಭಾಷಿಗಳನ್ನು ನೇಮಿಸಿ ಕೊಂಡಿದೆ. (ಜಿನೀವಾ ಮತ್ತು ನ್ಯೂಯಾರ್ಕ್‌ಗಳೆರಡರಲ್ಲಿಯೂ ಸೇರಿದಂತೆ ವಿಶ್ವಸಂಸ್ಥೆ ಯಲ್ಲಿರುವ ದುಭಾಷಿಗಳ ಸಂಖ್ಯೆ 160). ಯೂರೋಪಿಯನ್ ಸಮುದಾಯದ ಈಗಿನ ಅಧಿಕೃತ ಭಾಷೆಗಳಾದ ಇಂಗ್ಲಿಷ್, ಫ್ರೆಂಚ್, ಇಟಾಲಿಯನ್, ಡೇನಿಷ್ ಮತ್ತು ಗೇಲಿಕ್‌ಗಳ ಜೊತೆಗೆ ಸಮುದಾಯದ ವಿಸ್ತರಣೆಯಲ್ಲಿ ಸ್ಪ್ಯಾನಿಷ್, ಗ್ರೀಕ್ ಮತ್ತು ಪೋರ್ಚುಗೀಸ್ ಭಾಷೆಗಳನ್ನು ಸೇರಿಸಲಾಗುತ್ತದಂತೆ. ಹಾಗಾಗಿ ಸಂಭವನೀಯ ಭಾಷಾ ಸಂಯೋಜನೆಗಳ ಸಂಖ್ಯೆ 72 ಆಗುತ್ತದೆ. ದುಭಾಷಿಗಳ ಸಂಖ್ಯೆ ಇಮ್ಮಡಿಯಾಗ ಬೇಕಾಗುತ್ತದೆ.

ಯೂರೋಪಿಯನ್ ಸಮುದಾಯದ ಮಾತೇ ಇದಾದರೆ 140ಕ್ಕೂ ಹೆಚ್ಚು ಸದಸ್ಯ ರಾಷ್ಟ್ರಗಳಿರುವ ವಿಶ್ವಸಂಸ್ಥೆಯಲ್ಲಿ ಉದ್ಭವಿಸಬಹುದಾದ ಭಾಷಾಸಮಸ್ಯೆಯ ಪರಿಮಾಣ ವನ್ನು ಊಹಿಸಬಹುದಾಗಿದೆ.

ಇಂಥ ಅಂತರರಾಷ್ಟ್ರೀಯ ಸಂಘಸಂಸ್ಥೆಗಳಲ್ಲಿ ದುಭಾಷಿಗಳಾಗಿ ಕಾರ್ಯನಿರ್ವಹಿಸಲು ಆಸಕ್ತರಾಗಿರುವಂಥ, ಬಹುಭಾಷಿಕ ಅಥವಾ ಅಂತರರಾಷ್ಟ್ರೀಯ ಪರಿಸರದಲ್ಲಿ ಕಾರ್ಯ ನಿರ್ವಹಿಸುವುದರಲ್ಲಿ ಆನಂದ ಪಡೆಯುವಂಥ, ಪೂರ್ಣಕಾಲಿಕವಾಗಿಯಾಗಲೀ ಸ್ವಲ್ಪಾವಧಿಕವಾಗಿಯಾಗಲೀ ವಿದೇಶಗಳಲ್ಲಿ ತಮ್ಮ ವೃತ್ತಿಯನ್ನು ಮುಂದುವರಿಸಲು ಅಪೇಕ್ಷಿಸುವ ವ್ಯಕ್ತಿಗಳಿಗೆ ಇದು ಆಕರ್ಷಕವಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಅತಿಯಾದ ಕೆಲಸವನ್ನೂ ಇವರು ಮಾಡಬೇಕಾಗುತ್ತದೆ. ಆದರೆ ಈ ಕ್ಷೇತ್ರ ವೃತ್ತಿಯನ್ನು ಆರಂಭಿಸಿರುವ ಆರಂಭಕಾರರಿಗಲ್ಲ. ಅತ್ಯಂತ ಕನಿಷ್ಠಮಟ್ಟದ ಮೇಲ್ವಿಚಾರಣೆ ಹಾಗೂ ನಿಯಂತ್ರಣಗಳೊಡನೆ ಕಾರ್ಯ ನಿರ್ವಹಿಸಬಲ್ಲ ಪ್ರೌಢ, ಪ್ರಬುದ್ಧ ಹಾಗೂ ನುರಿತವರಿಗೆ ಮಾತ್ರವೇ ಈ ಕ್ಷೇತ್ರದಲ್ಲಿ ಯಶಸ್ಸು ದೊರೆಯುವುದಾಗಿದೆ.

ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ದುಭಾಷಿಕತೆ ಎಂದರೆ ಏನು, ದುಭಾಷಿಯ ಲಕ್ಷಣಗಳೇನು, ದುಭಾಷಿಗಳ ಹಿನ್ನೆಲೆ ಹೇಗಿರಬೇಕು, ಕೈಗಾರಿಕಾ ಕ್ಷೇತ್ರದಲ್ಲಿ ದುಭಾಷಿಗಳ ಪಾತ್ರ, ದುಭಾಷಿಕತೆ ನಡೆಯಬೇಕಾದ ಭಾಷೆಗಳು, ದುಭಾಷಿಕತೆಯ ವರ್ಗಗಳು, ಸಭೆ-

ಸಮ್ಮೇಳನಗಳಲ್ಲಿ ದುಭಾಷಿಕತೆ, ಕೈಗಾರಿಕೆಯಲ್ಲಿ ದುಭಾಷಿಕತೆ, ವಸ್ತುಪ್ರದರ್ಶನ ಇತ್ಯಾದಿಗಳಲ್ಲಿ ದುಭಾಷಿಕತೆ, ಮಾರ್ಗದರ್ಶಕ ದುಭಾಷಿಕತೆ, ದುಭಾಷಿಕತೆಯ ಬಗೆಗಳು, ಕ್ರಮಾನುಗತ ದುಭಾಷಿಕತೆ, ಏಕಕಾಲಿಕ ದುಭಾಷಿಕತೆ, ದುಭಾಷಿಗಳ ಸೇವೆಯ ಸಂಪೂರ್ಣ ಉಪಯೋಗ, ದುಭಾಷಿಕತೆ-ತರಬೇತಿ—ಈ ಅಂಶಗಳ ಬಗ್ಗೆ ಸಂಕ್ಷೇಪವಾಗಿ ಪರಿಶೀಲಿಸಬಹುದು.

ಒಬ್ಬ ವ್ಯಕ್ತಿಗೆ ಗೊತ್ತಿರದ ಭಾಷೆಯಲ್ಲಿ ಹೇಳಲಾದ ವಿಷಯವನ್ನು ಆ ವ್ಯಕ್ತಿಗೆ ಗೊತ್ತಿರುವ ಭಾಷೆಗೆ—ಎಂದರೆ ಉದ್ದಿಷ್ಟ ಭಾಷೆಗೆ—ಪರಿವರ್ತಿಸಿ ಹೇಳುವ ಕಾರ್ಯ ದುಭಾಷಿಕತೆ: ಈ ಕಾರ್ಯನಿರ್ವಹಿಸುವ ವ್ಯಕ್ತಿಯೇ ದುಭಾಷಿ (Interpreter). ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ ದುಭಾಷಿ ಆಡುಮಾತನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಪರಿವರ್ತಿಸುವವನು.

ಭಾಷಾಂತರ ಲಿಖಿತ ವಿಷಯವನ್ನು-ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ—ಪರಿವರ್ತಿಸುವ ಕ್ರಿಯೆಯಾದರೆ, ದುಭಾಷಿಕತೆ ಆಡುಮಾತನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಪರಿವರ್ತಿಸುವ ಕ್ರಿಯೆಯಾಗಿದೆ.

ಭಾಷಾಂತರ-ದುಭಾಷಿಕತೆ—ಇವೆರಡೂ ಸಾಮಾನ್ಯವಾಗಿ ಸಂಪೂರ್ಣವಾಗಿ ಪ್ರತ್ಯೇಕವಾಗಿದ್ದು, ಇವೆರಡು ಕಾರ್ಯಗಳನ್ನೂ ಒಬ್ಬನೇ ವ್ಯಕ್ತಿ ಅಷ್ಟೇ ಸಮರ್ಥವಾಗಿ ನಿರ್ವಹಿಸುವ ಪ್ರಸಂಗಗಳು ವಿರಳವೇ. ಭಾಷಾಂತರವಲ್ಲಿ ಸಮಸ್ಯೆಗಳ ಮಹಾಪೂರ ಬಂದು ನಿಲ್ಲುತ್ತದೆ. ಆದರೆ ದುಭಾಷಿಯ ಮುಂದೆ ನಿಲ್ಲುವ ಸಮಸ್ಯೆಗಳು ಕೆಲವೊಮ್ಮೆ ವಿಚಿತ್ರವಾಗಿದ್ದು, ಚಾಕಚಕ್ಯತೆಯಿಂದಷ್ಟೇ ಅವುಗಳ ಪರಿಹಾರ ಸಾಧ್ಯ. ಭಾಷಾಂತರಕಾರನಿಗೆ ನಿಘಂಟುಗಳ ನೆರವಿರುತ್ತದೆ. ಕಾಲ ಅವನ ವಶವಾಗಿರುತ್ತದೆ. ಈ ನೆರವು ದುಭಾಷಿಗೆ ದೊರೆಯಲಾರದು.

ಇಲ್ಲಿ ಒಂದು ಉದಾಹರಣೆಯನ್ನು ಗಮನಿಸಬಹುದು. 1978ರ ಆದಿಭಾಗದಲ್ಲಿ ಅಮೆರಿಕದ ಅಧ್ಯಕ್ಷ ಕಾರ್ಟರ್ ವಿಶ್ವಪರ್ಯಟನೆ ಕೈಗೊಂಡದ್ದು ಸರಿಯಷ್ಟೇ. ವಾರ್ಸಾದಲ್ಲಿ ಸ್ವಲ್ಪ ಕಾಲ ತಂಗಿದರು. ಅಲ್ಲಿನ ವಿಮಾನನಿಲ್ದಾಣವಲ್ಲಿ ಭಾಷಣಮಾಡುತ್ತಾ ತಾವು ಅಂದಿನ ಬೆಳಿಗ್ಗೆ ಅ.ಸಂ.ಸಂ.ಗಳಿಂದ ಹೊರಟಿದುದಾಗಿ ತಿಳಿಸಿದರು. ಅದು ಪೋಲಿಷ್ ಭಾಷೆಯಲ್ಲಿ he had abandoned the U. S. for good ಎಂಬಂತೆ ಪರಿವರ್ತನೆಗೊಂಡಿತ್ತು. ಅ.ಸಂ.ಸಂ.—ಪೋಲ್ಯಾಂಡ್‌ಗಳ ನಡುವೆ ಉತ್ತಮ ಸಂಬಂಧಗಳ ಬಗ್ಗೆ ತಮ್ಮ 'ಅಪೇಕ್ಷೆ'ಯನ್ನು (desire) ಅವರು ವ್ಯಕ್ತಪಡಿಸಿದರು ಎಂಬುದನ್ನು ದುಭಾಷಿ 'ಅತ್ಯಾಶೆ' (lust) ಎಂದು ಪರಿವರ್ತಿಸಿದ್ದನು. ಇದರಿಂದ ಅಮೆರಿಕ ಸಂಯುಕ್ತ ಸಂಸ್ಥಾನಗಳ ಪತ್ರಿಕಾವಲಯದಲ್ಲಿ ದುಭಾಷಿಗಳ ಬಗ್ಗೆ ಹಾಸ್ಯದ ಚಟಾಕಿಗಳು ಹಾರಿದವು. ಒಂದು ವೃತ್ತಪತ್ರಿಕೆ 'Interpreter lacks Polish' ಎಂದರೆ ಮತ್ತೊಂದು ವೃತ್ತಪತ್ರಿಕೆ 'President and Interpreter poles apart' ಎಂದಿತ್ತು. ದುಭಾಷಿ ತನ್ನ ಕಾರ್ಯದಲ್ಲಿ ಎಡವಿದಾಗ ಆದ ಉದಾಹರಣೆ ಇದಾದರೆ ದುಭಾಷಿ ತನ್ನ ದುಭಾಷಿ

ಕತೆಯ ಕಾರ್ಯದಲ್ಲಿ ಸಂಗ್ರಹ ಮಾಡಿದ ಅಥವಾ ವಿಸ್ತರಿಸಿದ ಉದಾಹರಣೆಗಳೂ ಇಲ್ಲದಿಲ್ಲ.

1978ರ ಅಂತ್ಯಭಾಗದಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದ ದುಭಾಷಿಕತೆಯ ಸ್ವಾರಸ್ಯದ ಒಂದೆರಡು ತುಣುಕುಗಳು ಇಲ್ಲಿವೆ. ಈ ಅಂಶಗಳನ್ನು ಗಮನಿಸಿದಾಗ ದುಭಾಷಿಕತೆಯಲ್ಲಿ ಯಾವುದೋ ಅಂಶ ಹೆಚ್ಚಿದೆ ಅಥವಾ ಯಾವುದೋ ಅಂಶ ಮರೆಯಾಗಿದೆ ಎಂಬುದಾಗುತ್ತದೆ.

ದಕ್ಷಿಣ ಕೊರಿಯದ ಶಾಲಾಬಾಲಕಿ ಕಿಮ್ ಜಿನ್ ಹೋ ವೈಯಕ್ತಿಕ ಬಿಲ್ಲುಗಾರಿಕೆಯಲ್ಲಿ ಯಶಸ್ವಿಯಾದಳು. ಯಶಸ್ಸಿನ ಗುಟ್ಟಿನ ಬಗ್ಗೆ ಪ್ರಶ್ನಿಸಲಾಯಿತು. ಆ ಹದಿನಯಸ್ಸಿನ ಬಾಲಕಿ ಲಜ್ಜೆಯಿಂದ ಕೆಲವೇ ಕೆಲವು ಮಾತನ್ನಾಡಿದಳು. ಆದರೆ ಆಕೆಯ ಇಂಗ್ಲಿಷ್-ದುಭಾಷಿ-ಕೋಚ್ ದಕ್ಷಿಣ ಕೊರಿಯದ ಬಗ್ಗೆ ಸುದೀರ್ಘವಾದ ಭಾಷಣವನ್ನೇ ಬಿಗಿದು ಬಿಟ್ಟ.

ಮತ್ತೊಬ್ಬ ಸಂದರ್ಶಕ ಚೀನೀ ಷೂಟಿಂಗ್ ಪ್ರವೀಣನನ್ನು ಪ್ರಶ್ನಿಸಿದಾಗ ಅವನು ತನ್ನ ಸಾಧನೆಯ ಬಗ್ಗೆ ಸುದೀರ್ಘವಾಗಿ ವಿವರಿಸಿದ. ಆದರೆ ಅವನ ದುಭಾಷಿ "ಅವನು ಹೌದು ಎನ್ನುತ್ತಾನೆ" ಎಂದಷ್ಟೇ ಅವನ ವಿವರಣೆಯನ್ನು ಸಂಕ್ಷಿಪ್ತವಾಗಿ ಮೊಟಕುಗೊಳಿಸಿದನು.

ವೃತ್ತಿಪರ ಅನುವಾದಕನನ್ನು ತತ್ಪೂರ್ತ ದುಭಾಷಿಯನ್ನಾಗಿ ನೇಮಿಸಿಕೊಳ್ಳಬಹುದು ಮತ್ತು ವೃತ್ತಿಪರ ದುಭಾಷಿಯನ್ನು ತತ್ಪೂರ್ತ ಅನುವಾದಕನನ್ನಾಗಿ ಮಾತ್ರ ನೇಮಿಸಿಕೊಳ್ಳಬಹುದಾಗಿರುತ್ತದೆ. ಒಂದು ಕ್ಷೇತ್ರದಲ್ಲಿನ ವೃತ್ತಿಕುಶಲತೆಯನ್ನು ಮತ್ತೊಂದು ಕ್ಷೇತ್ರದಲ್ಲಿ ಅಪೇಕ್ಷಿಸಲಾಗುವುದಿಲ್ಲ.

ಭಾಷಾಂತರಕಾರ ಪ್ರಾಯಃ ಅಂತರ್ಮುಖಿಯಾದರೆ ದುಭಾಷಿ ಬಹುಮಟ್ಟಿಗೆ ಬಹಿರ್ಮುಖಿಯಾಗಿರುತ್ತಾನೆ ಎನ್ನಬಹುದು. ಇವರಿಬ್ಬರ ನಡುವೆ ನೀಡಬಹುದಾದ ಮತ್ತೊಂದು ಸಾದೃಶ್ಯ: ಭಾಷಾಂತರಕಾರನನ್ನು ಸಲಹಾವಕೀಲನಿಗೆ (solicitor) ಹೋಲಿಸಿದರೆ ದುಭಾಷಿಯನ್ನು ಬ್ಯಾರಿಸ್ಟರನಿಗೆ ಹೋಲಿಸಬಹುದಾದುದು. ಭಾಷಾಂತರ-ಕಾರ ತನ್ನ ಕಾರ್ಯವನ್ನು ಕಾರ್ಯಾಲಯದ ಎಲ್ಲೆಗಳೊಳಗೆ ನಿರ್ವಹಿಸಿದಲ್ಲಿ ದುಭಾಷಿ ಸಭಾಂಗಣದಲ್ಲಿ, ನ್ಯಾಯಾಸ್ಥಾನದಲ್ಲಿ ತನ್ನ ಕಾರ್ಯನಿರ್ವಹಿಸುತ್ತಾನೆ. ಇಬ್ಬರಿಗೂ ಅನುಕ್ರಮವಾಗಿ ಅವರವರ ಭಾಷಾ ಮತ್ತು ನ್ಯಾಯಪ್ರಪಂಚದಲ್ಲಿ ಅವರವರ ಸ್ಥಾನ-ಮಾನಗಳಿವೆಯಾದರೂ ಅವರ ಕಾರ್ಯಸ್ಥಳ, ಕಾರ್ಯವಿವರ ಮತ್ತು ಪ್ರಾಯಃ ಮನೋಧರ್ಮ ಕೂಡ ವ್ಯತ್ಯಾಸಗೊಳ್ಳುವುದರಲ್ಲಿ ಸಂದೇಹವಿಲ್ಲ.

ದುಭಾಷಿಯ ವೃತ್ತಿಕೌಶಲ್ಯಕ್ಕೆ ತನ್ನ ಮಾತೃಭಾಷೆಯಲ್ಲಿ ಅಥವಾ ಸ್ವಭಾವತಃ ಬಳಸುವ ಭಾಷೆಯಲ್ಲಿ ಪೂರ್ಣ ಕೌಶಲ ಮತ್ತು ಸರಾಗವಾಗಿ ಅದರಲ್ಲಿ ವ್ಯವಹರಿಸುವ ಜ್ಞಾನ, ಕನಿಷ್ಠಪಕ್ಷ ಒಂದಾದರೂ ವಿದೇಶೀ ಭಾಷೆಯಲ್ಲಿ ಮಾತನಾಡುವ ಮತ್ತು ಅದನ್ನು ಅರ್ಥಮಾಡಿಕೊಳ್ಳುವ ಮಟ್ಟಿಗೆ ವ್ಯಾಪಕವಾದ ಹಾಗೂ ಪೂರ್ಣ ಅರಿವು

ಅತ್ಯಗತ್ಯ. ಇವುಗಳ ಜೊತೆಗೆ ಒಂದು ನಿರ್ದಿಷ್ಟ ವಿಷಯದಲ್ಲಿ ಅವರ ವಿಶೇಷ ಶಬ್ದ ಸಂಪತ್ತಿಯನ್ನು ಅತ್ಯಲ್ಪ ಅವಧಿಯಲ್ಲಿ ಹಾಗೂ ಶೀಘ್ರವಾಗಿ ಗ್ರಹಿಸುವ ಸಾಮರ್ಥ್ಯವೂ ಇರಬೇಕು. ಎಂದ ಮಾತ್ರಕ್ಕೆ ದುಭಾಷಿಗಳು—ಅನುವಾದಕರ ಸಂಖ್ಯೆಗಿಂತ ಕಡಿಮೆ ಇರುವ ಕಾರಣ—ಅಷ್ಟೊಂದು ವಿಶೇಷವಾದ ಜ್ಞಾನಸಂಪಾದನೆ ಮಾಡಲಾಗುವುದಿಲ್ಲ.

ಆದರ್ಶಪ್ರಾಯವಾಗಿ ದುಭಾಷಿಗಳು ಎರಡು ಭಾಷೆಗಳಲ್ಲೂ ಸರಾಗವಾಗಿ ವ್ಯವಹರಿಸುವಂತಿರಬೇಕು. ಆದರೆ ಎಲ್ಲ ದುಭಾಷಿಗಳು ಈ ಸಾಮರ್ಥ್ಯ ಪಡೆಯಲಾರರು. ಈ ಸಾಧನೆಗೆ ಪರಿಸರ ಮತ್ತು ಶಿಕ್ಷಣಗಳು ಅತ್ಯಗತ್ಯ. ಕೇವಲ ಭಾಷಾಸಾಮರ್ಥ್ಯದಿಂದ ಮಾತ್ರವೇ ದುಭಾಷಿ ಯಶಸ್ವಿಯಾಗಲಾರ. ಇದರ ಜೊತೆಗೆ ಅಗತ್ಯವಾದ ಅಥವಾ ಅಪೇಕ್ಷಣೀಯವಾದಂಥ ಮನೋವೃತ್ತಿಯ ಹಾಗೂ ಇತರ ಲಕ್ಷಣಗಳೂ ಆತನಲ್ಲಿ ಮನೆ ಮಾಡಿರಬೇಕು. ಚಾಕಚಕ್ಯತೆಯ ಬುದ್ಧಿಶಕ್ತಿ, ಎಲ್ಲ ಕ್ಷೇತ್ರಗಳಲ್ಲಿಯೂ—ಅದರಲ್ಲಿಯೂ ವಿಶೇಷವಾಗಿ ಪ್ರಚಲಿತ ಸ್ಥಿತಿಗತಿಗಳ ಬಗ್ಗೆ—ವ್ಯಾಪಕವಾದ ಜ್ಞಾನಸಮಷ್ಟಿ, ಎಂಥವೇ ಪರಿಸ್ಥಿತಿಯಲ್ಲಿಯೂ ಗಾಬರಿಗೆ ಒಳಗಾಗದಿರುವುದು, ಸಾರ್ವಜನಿಕ ಸಭೆ-ಸಮಾರಂಭಗಳಲ್ಲಿ ಮಾತನಾಡಬಲ್ಲ ಕೌಶಲ, ಸಂಕೋಚಪ್ರವೃತ್ತಿ ಇಲ್ಲದಿರುವುದು, ಉತ್ತಮ, ಆಕರ್ಷಣೀಯ ದೇಹದಾರ್ಢ್ಯತೆ, ಒಳ್ಳೆಯ ಶ್ರವಣಶಕ್ತಿ, ಸಾಮಾಜಿಕ ಪ್ರಜ್ಞೆ, ಮತ್ತು ಅಗತ್ಯವಾದಾಗ ಮೌನದಿಂದಿರುವುದೂ ಸೇರಿವೆ. ಹಿಟ್ಲರನ ಪ್ರಮುಖ ದುಭಾಷಿಯಾಗಿದ್ದ ಪಾಲ್ ಷ್ಮಿಟ್—ಈ ಅಂಶವನ್ನು ನೆನಪಿನಲ್ಲಿಟ್ಟುಕೊಂಡೇ—*An Extra on the Diplomatic Stage* ಅನ್ನು ರಚಿಸಿದುದು.

ಇತರ ಎಲ್ಲ ಆಕರ್ಷಕ ಕ್ಷೇತ್ರಗಳಂತೆಯೇ ದುಭಾಷಿಕತೆಯ ಕ್ಷೇತ್ರದಲ್ಲಿಯೂ ವೃತ್ತಿಪರರಾಗಬಯಸುವವರು ಅನೇಕರಾದರೂ ಸಫಲರಾಗುವವರ ಸಂಖ್ಯೆ ಅತ್ಯಲ್ಪವೇ. ಭಾಷಾಸಂಬಂಧವಾದ ಮುಖ್ಯ ಕಾರ್ಯಚಟುವಟಿಕೆಗಳ ಪೈಕಿ—ವಿಶೇಷವಾಗಿ ಅಂತರರಾಷ್ಟ್ರೀಯ ಸಭೆ-ಸಮ್ಮೇಳನಗಳ ಮಟ್ಟದಲ್ಲಿ—ಪ್ರಾಯಃ ಅತ್ಯಂತ ಆಕರ್ಷಣೀಯವಾದುದು ಇದೇ ಎನಿಸುತ್ತದೆ. ಈ ಕ್ಷೇತ್ರಕ್ಕೆ ಆಹ್ವಾನಿತರಾಗುವವರು ಹಲವರಾದರೂ ಆಯ್ಕೆಯಾಗುವವರು ಕೆಲವರೇ. ಪ್ರಪಂಚದ ಎಲ್ಲೆಡೆಗಳಲ್ಲಿಯೂ ಸೇರಿದಂತೆ ಇರುವ ಹುದ್ದೆಗಳ ಸಂಖ್ಯೆ ಕಡಮೆಯಾಗಿರುವುದೂ ಇದಕ್ಕೆ ಕಾರಣವಾಗಿದೆ. ಅಂತರರಾಷ್ಟ್ರೀಯ ಸಭೆ-ಸಮ್ಮೇಳನಗಳ ವೈವಿಧ್ಯದ ಪೂರ್ಣಕಾಲಿಕ ದುಭಾಷಿಕತೆ ಅತ್ಯಂತ ವಿಶಿಷ್ಟವಾದ ಹಾಗೂ ಸುಯೋಜಿತವಾದ ವೃತ್ತಿಗಳ ಪೈಕಿ ಒಂದಾಗಿದೆ. ಪ್ರಾಯಃ ಇದಕ್ಕೆ ಪ್ರತಿಯಾಗಬಹುದಾದ ಏಕೈಕ ವೃತ್ತಿಯೆಂದರೆ ಪೂರ್ಣಕಾಲಿಕವಾಗಿ ವಾದ್ಯಗೋಷ್ಠಿ ನಡೆಸುವುದಾಗಿದೆ. ಬಹುಪಾಲು ಜನರಿಗೆ ದುಭಾಷಿಕತೆಯು ಒಪ್ಪೊತ್ತಿನ ಅಥವಾ ತತ್ಪೂರ್ತವಾದ ಕಾರ್ಯಚಟುವಟಿಕೆಯಾಗಿದ್ದು, ಇದು ಸಾಮಾನ್ಯವಾಗಿ ಭಾಷಾಸಂಬಂಧವಾದ ಅಥವಾ ಇನ್ನಿತರ ಕಾರ್ಯದೊಡನೆ ಸೇರಿದಂತಿರುತ್ತದೆ.

ಭಾಷಾಂತರಕಾರರಿಗಿಂತ ಬಹುಪಾಲು ದುಭಾಷಿಗಳು ಮಿಶ್ರ ಮಾತಾಪಿತೃತ್ವದಿಂದಾಗಿ, ಚಿಕ್ಕ ವಯಸ್ಸಿನಲ್ಲಿಯೇ ವಲಸೆಹೋಗುವುದರಿಂದಾಗಿ, ಅಥವಾ ವಿದೇಶಗಳಲ್ಲಿ

ಶಿಕ್ಷಣ ಪಡೆಯುವುದರಿಂದಾಗಿ ಒಂದಕ್ಕಿಂತ ಹೆಚ್ಚು ಭಾಷೆ ಅಥವಾ ಭಾಷೆಗಳಲ್ಲಿ ವ್ಯವಹರಿಸುವ, ಅವನ್ನು ಮಾತನಾಡುವ ಅಥವಾ ಅರ್ಥಮಾಡಿಕೊಳ್ಳುವ ಸಮಾನ ಸಾಮರ್ಥ್ಯಗಳಿಸಿರುವಂಥವರಾಗಿರುತ್ತಾರೆ. ವಲಸಿಗರು ಅಥವಾ ಅವರ ಮಕ್ಕಳೇ ಈ ವೃತ್ತಿಯಲ್ಲಿ ಅಧಿಕ ಸಂಖ್ಯೆಯಲ್ಲಿರುವವರು. ವಿದೇಶಗಳಲ್ಲಿ ಜನಿಸಿದವರು ಅಥವಾ ದೀರ್ಘಕಾಲ ವಿದೇಶಗಳಲ್ಲಿ ಇದ್ದವರು—ಅದರಲ್ಲಿಯೂ ವಿಶೇಷವಾಗಿ ತಮ್ಮ ಚಿಕ್ಕವಯಸ್ಸಿನಲ್ಲಿ—ತತ್ಪೂರ್ತ ದುಭಾಷಿಗಳಾಗಿ ಕಾರ್ಯನಿರ್ವಹಿಸುವುದು ಸಾಮಾನ್ಯವಾಗಿದೆ.

ಕೆಲವು ಬ್ರಿಟಿಷ್ ವಿಶ್ವವಿದ್ಯಾಲಯಗಳು—ಉದಾ: ಸ್ಯಾಲ್ಫೋರ್ಡ್ ಮತ್ತು ಬ್ರಾಡ್-ಫೋರ್ಡ್ ವಿಶ್ವವಿದ್ಯಾನಿಲಯಗಳು—ತಮ್ಮ ಪದವಿ ಶಿಕ್ಷಣಗಳಲ್ಲಿ ದುಭಾಷಿಕತೆಯಲ್ಲಿ ತರಪೇತು ನೀಡುವುವು. ಆದರೂ ಅವರು ಕ್ಲ್ ಪ್ರಾಥಮಿಕ ದುಭಾಷಿಗಳಾಗಿ ಕೆಲಸ ಮಾಡಬಲ್ಲರಷ್ಟೇ ಹೊರತು ಅಂತರರಾಷ್ಟ್ರೀಯ ಸಭೆಗಳಲ್ಲಿ ದುಭಾಷಿಗಳ ಕಾರ್ಯನಿರ್ವಹಿಸಲಾರರು. ಹಲವು ವರ್ಷಗಳಿಂದ ಫ್ರಾನ್ಸ್, ಜರ್ಮನಿ, ಮತ್ತು ಸ್ವಿಟ್ಸರ್ಲೆಂಡ್‌ಗಳಂಥ ಯೂರೋಪಿನ ದೇಶಗಳು ಭಾಷಾಂತರ ಕ್ಷೇತ್ರಕ್ಕಿಂತ, ಭಾಷಾಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಇತರರಿಗಿಂತ ಭಿನ್ನವಾದ ತರಪೇತಿಯನ್ನು ದುಭಾಷಿಗಳಾಗ ಬಯಸುವವರಿಗೆ ನೀಡುತ್ತಿದೆಯಾದರೂ ಈ ಶಿಕ್ಷಣಗಳು ಸ್ಥಳೀಯರನ್ನಷ್ಟೇ ಆಕರ್ಷಿಸಿವೆ.

ಕೈಗಾರಿಕಾ ಕ್ಷೇತ್ರಗಳಲ್ಲಿ ಭಾಷಾಂತರದ ಅಗತ್ಯಕ್ಕಿಂತ ದುಭಾಷಿಕತೆಯ ಅಗತ್ಯ ಕಡಮೆಯೇ. ಹಾಗಾಗಿ ಈ ಕ್ಷೇತ್ರದಲ್ಲಿ ದುಭಾಷಿಗಳ ಪೂರೈಕೆಯೂ ಸಮಸ್ಯೆಯೇ ಆಗಿದೆ. ಮುಖ್ಯವಾದ ಸಭೆಗಳಿಗೆ ವೃತ್ತಿನಿರತ ದುಭಾಷಿಗಳನ್ನು ನೇಮಕಮಾಡಿಕೊಳ್ಳುವುದು ಹೆಚ್ಚು ಸೂಕ್ತವಾಗಿರುವುದು. ಆದರೆ ಇಂಗ್ಲಿಷ್ ಹಾಗೂ ಸಂಬಂಧಪಟ್ಟ ವಿದೇಶೀ ಭಾಷೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅದರಲ್ಲಿ ಮಾತನಾಡಿ–ವ್ಯವಹರಿಸಬಲ್ಲ, ಸಿಬ್ಬಂದಿಯವರ ಪೈಕಿಯೇ ಇರುವವರನ್ನು ದುಭಾಷಿಗಳನ್ನಾಗಿ ನೇಮಿಸಿಕೊಳ್ಳಬಹುದಾದರೂ ಈ ಪರಿಹಾರ ಕೇವಲ ತಾತ್ಕಾಲಿಕವಾದುದಾಗಿರುತ್ತದೆ. ಕೇವಲ ಎರಡು ಭಾಷೆಗಳಲ್ಲಿ ವ್ಯವಹರಿಸಬಲ್ಲ ಜ್ಞಾನದಿಂದಲೇ ಉತ್ತಮ ದುಭಾಷಿಯಾಗುವುದು ಸಾಧ್ಯವಿಲ್ಲ.

ದುಭಾಷಿಕತೆಯಲ್ಲಿ ಬಹುಮಟ್ಟಿಗೆ ಇಂಗ್ಲಿಷ್ ಒಂದು ಭಾಷೆಯಾಗಿದ್ದು—ಇದೇನೂ ನಿಯಮವಲ್ಲ: ಪರಿಸ್ಥಿತಿ, ಸಂದರ್ಭಗಳೇ ನಿರ್ಧಾರಕಗಳು.—ಇತರ ಯಾವುದೇ ಒಂದು ಭಾಷೆ ಇರುತ್ತದೆ. ಇಂಗ್ಲಿಷಿನಲ್ಲಿ ಸಾಕಷ್ಟು ವ್ಯವಹಾರಜ್ಞಾನವಿಲ್ಲದ ವ್ಯಾಪಾರಿಗಳು ಅಥವಾ ತಂತ್ರಜ್ಞರು ವಿದೇಶಗಳಿಗೆ—ಉದಾಹರಣೆಗೆ ಬ್ರಿಟನ್ ಅಥವಾ ಅ. ಸಂ. ಸಂ.ಗಳು ಎನ್ನೋಣ—ಭೇಟಿ ನೀಡುವ ಸಂದರ್ಭಗಳು ಕಡಮೆಯಾದರೂ, ಈ ರೀತಿಯಲ್ಲದ ಅಥವಾ ಪರಿಸ್ಥಿತಿಗೆ ಸಾಕಷ್ಟು ಅಗತ್ಯವಾದ ಭಾಷಾಜ್ಞಾನವಿಲ್ಲದ ಅನಿವಾರ್ಯ ಪ್ರಸಂಗಗಳೂ ಎದುರಾಗಬಹುದು.

ಇಂಗ್ಲಿಷ್ ಭಾಷಾಜ್ಞಾನದ ಸಾರ್ವತ್ರಿಕ ಮಟ್ಟ ಅಧಿಕವಾಗಿರದ ದೇಶಗಳಿಂದ ಹೋಗುವ ಸಂದರ್ಶಕರಿಗೆ ದುಭಾಷಿಗಳ ಸೇವೆ ಅಗತ್ಯವಾಗುತ್ತದೆ ಎಂಬುದು ಅನುಭವ

ವೇದ್ಯವಾಗಿದೆ. ಇದರಲ್ಲಿ—ಪ್ರಾಮುಖ್ಯದ ದೃಷ್ಟಿಯಿಂದ ಇದೇನು ಕ್ರಮವಾಗಿಲ್ಲ—ಫ್ರಾನ್ಸ್, ಇಟಲಿ, ಸ್ಪೈನ್, ಪೋರ್ಚುಗಲ್, ಹೆಚ್ಚಿನ ಪೂರ್ವ ಯೂರೋಪಿನ ರಾಷ್ಟ್ರಗಳು, ಮತ್ತು ತುರ್ಕಿ ಸೇರಿವೆ. ಒಟ್ಟಿನಲ್ಲಿ ಲ್ಯಾಟಿನ್‌ಜನ್ಯಭಾಷೆಗಳು (ಫ್ರೆಂಚ್, ಇಟಾಲಿಯನ್, ಸ್ಪ್ಯಾನಿಷ್, ಮತ್ತು ಪೋರ್ಚುಗೀಸ್) ಮತ್ತು ಸ್ಲವಾನಿಕ್ ಭಾಷೆಗಳ (ರಷ್ಯನ್, ಪೋಲಿಷ್, ಮತ್ತು ಜೆಕ್) ಜನರಿಗಿಂತ ಜರ್ಮಾನಿಕ್ ಭಾಷೆಗಳ (ಜರ್ಮನ್, ಡಚ್, ನಾರ್ವೀಯನ್, ಮತ್ತು ಸ್ವೀಡಿಷ್) ದೇಶೀಯರ ಇಂಗ್ಲಿಷ್ ಭಾಷಾಜ್ಞಾನ ಒಟ್ಟಿನಲ್ಲಿ, ಉತ್ತಮವಾಗಿರುತ್ತದೆ.

ರಷ್ಯ ಮತ್ತು ಇತರ ಪೂರ್ವ ಯೂರೋಪಿಯನ್ ರಾಷ್ಟ್ರಗಳಿಂದ ತೆರಳುವ ನಿಯೋಗಗಳು ತಮ್ಮ ತಮ್ಮ ದುಭಾಷಿಗಳನ್ನು ತಾವೇ ಕರೆದುಕೊಂಡು ಹೋಗುವವು ಎಂಬ ಅಂಶ ಕುತೂಹಲಜನಕವಾಗಿದೆ. ಆದರೂ ಇವರು ತಾವು ನಿರ್ವಹಿಸಬೇಕಾದ ಕಾರ್ಯಕ್ಕೆ ಸಂಪೂರ್ಣರಾಗಿ ಸಿದ್ಧರಾಗಿರುವುದಿಲ್ಲ. ದುಭಾಷಿಕತೆಯಲ್ಲಿ ದಾರಿ ತಪ್ಪುವುದನ್ನು ಕಂಡುಹಿಡಿಯಲು ಅಥವಾ ದುಭಾಷಿ ತನ್ನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವನೇ ಎಂಬುದನ್ನು ಗಮನಿಸಲು ಸಂಬಂಧಪಟ್ಟ ವಿದೇಶೀಭಾಷೆಯನ್ನು ಅರ್ಥಮಾಡಿಕೊಳ್ಳಬಲ್ಲಂಥ ವ್ಯಕ್ತಿ ಯಾರಾದರೊಬ್ಬರು ಇರುವದು ಉಪಯುಕ್ತವೂ, ಅಪೇಕ್ಷಣೀಯವೂ ಆಗಿರುತ್ತದೆ.

ಸಾಮಾನ್ಯವಾಗಿ ವಿದೇಶೀ ಸಂಸ್ಥೆಗಳಿಂದ ಬರುವ ವ್ಯಕ್ತಿಯ ಹುದ್ದೆ ಉನ್ನತವಾದಷ್ಟೂ ಆತನಿಗೆ ಇಂಗ್ಲಿಷ್ ಭಾಷೆ ಬರುವ ಸಂಭವ ಅಧಿಕವಾಗಿರುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕಾದುದು ಮುಖ್ಯವೇ. ಸಂಪರ್ಕಕಾರ್ಯದಲ್ಲಿ ಭಾಷಾಸಂಬಂಧವಾದ ಜಟಿಲತೆಗಳು ಸಭಾಕೊಠಡಿಗಳಿಗಿಂತ ಕಾರ್ಖಾನೆಯಲ್ಲಿ ಹೆಚ್ಚು ಉದ್ಭವಿಸುತ್ತವೆ. ಹಾಗಾಗಿ ಹೊಸ ಮುದ್ರಣಯಂತ್ರವನ್ನು ಜೋಡಿಸಲು ಜರ್ಮನಿಯಿಂದ ಬರುವ ತಜ್ಞರು ಅಥವಾ ವಿಮಾನ ಜೋಡಣೆಯ ಕಾರ್ಯಕ್ಕಾಗಿ ಫ್ರಾನ್ಸ್‌ನಿಂದ ಬರುವ ವಿಮಾನಜೋಡಣೆ ತಂತ್ರಜ್ಞರ ಅಗತ್ಯತೆಗಳಿಗಾಗಿ ವಿಶೇಷ ಗಮನಹರಿಸಬೇಕು. ಯಾವವೇ ಭೇಟಿಗೆ ಸಾಕಷ್ಟು ಪೂರ್ವಭಾವಿಯಾಗಿಯೇ ದುಭಾಷಿಯ ಅಗತ್ಯತೆ ಇದೆಯೇ ಎಂಬುದನ್ನು ಮನಗಾಣಬೇಕಾದುದು ಉಚಿತ. ಎಷ್ಟೋ ಜನ ತಮ್ಮ ಭಾಷಾಪ್ರೌಢಿಮೆಯ ಬಗ್ಗೆ ಅತಿಯಾಗಿ ಭಾವಿಸುವುದೂ ಉಂಟು. ಸಾಮಾನ್ಯವಾಗಿ, ಭಾಷಾಸಾಮರ್ಥ್ಯ ಕಡಮೆ ಇದ್ದಷ್ಟೂ ಅದರ ಬಗ್ಗೆ ಅತಿಯಾಗಿ ಭಾವಿಸುವುದು ಹೆಚ್ಚಾಗಿರುತ್ತದೆ. ಅದೇ ರೀತಿಯಲ್ಲಿ, ಒಂದು ನಿರ್ದಿಷ್ಟ ಪ್ರದೇಶದಲ್ಲಿ ಎಲ್ಲರೂ ಒಂದೇ ಭಾಷೆಯನ್ನು–ಉದಾಹರಣೆಗೆ ಇಂಗ್ಲಿಷ್ ಎನ್ನೋಣ–ಮಾತನಾಡುವರೆಂಬುದಾಗಿ ಭಾವಿಸುವುದೂ ತಪ್ಪಾಗುತ್ತದೆ.

ದುಭಾಷಿಕತೆಯಲ್ಲಿ ವಿವಿಧ ವರ್ಗಗಳಿವೆ. ಇದರಿಂದಾಗಿ ದುಭಾಷಿಯ ಅಗತ್ಯತೆಗಳೂ ಭಿನ್ನಭಿನ್ನವಾಗಿರುತ್ತವೆ. ಸದ್ಯದ ಪರಿಸ್ಥಿತಿಯಲ್ಲಿ ಸಭೆಸಮ್ಮೇಳನಗಳಲ್ಲಿ, ಕೈಗಾರಿಕೆಗಳಲ್ಲಿ, ವಸ್ತುಪ್ರದರ್ಶನಗಳಲ್ಲಿ, ಮತ್ತು ಮಾರ್ಗದರ್ಶಕ ಕ್ಷೇತ್ರಗಳಲ್ಲಿ ದುಭಾಷಿಕತೆ ಹೆಚ್ಚು ಅಗತ್ಯವಾಗಿರುತ್ತದೆ. ಪ್ರತಿಯೊಂದರ ಬಗ್ಗೆಯೂ ಸ್ವಲ್ಪಮಟ್ಟಿಗೆ ಪರಿಶೀಲಿಸಬಹುದು.

ಇಂದು ಬಹುಪಾಲು ಚರ್ಚೆಗಳು ನಡೆಯುತ್ತಿರುವುದು ರಾಷ್ಟ್ರೀಯ ಮಟ್ಟದ ವ್ಯಾಪ್ತಿಯನ್ನು ಮೀರಿದ ಅಂತರರಾಷ್ಟ್ರೀಯ ಮಟ್ಟದಲ್ಲಾಗಿದೆ. ಹಲವು ಮುಖ್ಯ ಒಪ್ಪಂದಗಳಾಗುತ್ತಿರುವುದು ರಾಷ್ಟ್ರ-ರಾಷ್ಟ್ರಗಳ ನಡುವೆ, ಅಲ್ಲಿನ ಚರ್ಚೆಗಳ ಸಾಫಲ್ಯ-ವೈಫಲ್ಯಗಳು ಕೆಲವೊಮ್ಮೆ ದುಭಾಷಿಗಳನ್ನು ಅವಲಂಬಿಸಿರುತ್ತದೆ ಎಂದರೆ ತಪ್ಪಾಗಲಾರದು; ಉತ್ಪ್ರೇಕ್ಷೆಯೂ ಆಗಲಾರದು ಎನಿಸುತ್ತದೆ. ಬೃಹದ್ ಅಂತರರಾಷ್ಟ್ರೀಯ ಸಭೆಗಳಿಗೆ ದುಭಾಷಿಗಳ ತಂಡವೇ ಬೇಕಾಗಬಹುದು. ಅಂಥ ದುಭಾಷಿಗಳ ಸಂಖ್ಯೆ ಕಡಮೆಯೇ ಇದ್ದು, ಅವರಿಗೆ ಇರುವ ಬೇಡಿಕೆಯೂ ತುಂಬಾ ಇರುವುದರಿಂದ ಕನಿಷ್ಠ ಕೆಲವು ತಿಂಗಳ ಮೊದಲಾದರೂ ಅವರನ್ನು ಗೊತ್ತುಮಾಡಿಕೊಳ್ಳಬೇಕು. ದುಭಾಷಿಗಳ ಜೀವನ ಆಸಕ್ತಿಯದಾಗಿದ್ದರೂ, ತುಂಬಾ ಶ್ರಮಪೂರ್ಣವೂ ಆಗಿರುತ್ತದೆ. ಕಾರ್ಯನಿಮಿತ್ತವಾಗಿ ಪ್ರಪಂಚದ ಯಾವುದೇ ಮೂಲೆಗಾದರೂ ಅವರ ಹೋಗಲು ಸಿದ್ಧರಿರುತ್ತಾರೆ. ಅವರಲ್ಲಿ ಕೆಲವರು ಖಾಯಂ ಆಗಿ ಅಂತರರಾಷ್ಟ್ರೀಯು ಸಂಘಗಳಲ್ಲಿ ನೇಮಕಗೊಂಡಿರುವವರಾದರೆ, ಮತ್ತೆ ಕೆಲವರು ಸ್ವತಂತ್ರವಾಗಿ ಕೆಲಸಮಾಡುತ್ತಾರೆ. ಈ ಎರಡನೆಯ ವರ್ಗದವರಿಗೂ ನಿಯತವಾದ ಕಾರ್ಯಕ್ರಮ ಇದ್ದೇ ಇರುತ್ತದೆ.

ಸಮ್ಮೇಳನಗಳಲ್ಲಿ ಕಾರ್ಯನಿರ್ವಹಿಸುವ ದುಭಾಷಿಗಳು—ಪ್ರಾಯಃ ಇತರ ವರ್ಗಗಳಿಗಿಂತ ಅಧಿಕವಾಗಿ—ಸಭೆಯ ಕಾರ್ಯಕಲಾಪಗಳ ವಿಷಯಗಳ ಬಗ್ಗೆ ತಿಳಿದುಕೊಂಡಿರುವುದು ಅಗತ್ಯ. ಅದರಲ್ಲಿ ಬರುವ ಪಾರಿಭಾಷಿಕ ಶಬ್ದಗಳು ಮತ್ತು ವಿಶೇಷ ಶಬ್ದಗಳ ಬಗ್ಗೆ ಅರಿತಿರುವುದೂ ಅಗತ್ಯ. ಅಲ್ಲಿ ಚರ್ಚಿಸದಿರುವ ವಿಷಯವೇ ಇಲ್ಲವೆಂದರೂ ತಪ್ಪಾಗದು.

ಉದಾಹರಣೆಗೆ ಜಕಾತಿ ಪಟ್ಟಿಯಲ್ಲಿನ ಕಬ್ಬಿಣ ಮತ್ತು ಉಕ್ಕಿನ ಉತ್ಪನ್ನಗಳ ಪಟ್ಟಿಯನ್ನೇ ಗಮನಿಸೋಣ:

> Railway and tramway track construction material of iron or steel, the following: rails, check-rails, switch blades, crossings (of frogs), crossing pieces, point rods, rack rails, sleepers, fishplates, chairs, chair wedges, sole plates, rail chips, bedplates, and ties.

ಈ ಪಟ್ಟಿಯನ್ನು ಗಮನಿಸಿದಾಗ ಮನದಟ್ಟಾಗುವ ಅಂಶ: ದುಭಾಷಿಗೆ ಆಗುವ ತೊಂದರೆ ಹಾಗಾಗಿ ಸಮ್ಮೇಳನಗಳಿಗಾಗಿ ಪೂರ್ವಭಾವಿಯಾಗಿಯೇ ಸಿದ್ಧಪಡಿಸಿರುವ ಮಾಹಿತಿಗಳು, ವಿಶೇಷ ಶಬ್ದಕೋಶಗಳ ಪರಾಮರ್ಶನದಿಂದ ಸಮಸ್ಯೆಯ ಪರಿಹಾರ ಸುಲಭವಾಗಬಹುದು. ಅನೇಕವೇಳೆ ವಿವಾದಗಳಿಗೆ ಕಾರಣವಾಗುವಂಥ 'ಪೇಟೆಂಟು'ಗಳ ವ್ಯಾಖ್ಯೆಯಂಥ ಜಟಿಲವಾದ ತಾಂತ್ರಿಕ ಸಮಸ್ಯೆಗಳ ಕಾನೂನು ತೊಡಕುಗಳ ಬಗ್ಗೆ ಸಲಹೆ ಪಡೆಯುವಂತೆ ಇದಾಗುತ್ತದೆ.

ಹಾಗಾಗಿ ದುಭಾಷಿಗಳನ್ನು ಸಾಕಷ್ಟು ಮುಂಚಿತವಾಗಿ ನೇಮಕ ಮಾಡಿಕೊಂಡು

ಅವರಿಗೆ ಸಾರಸಂಗ್ರಹಣ ಟಿಪ್ಪಣಿ ದೊರಕಿಸಿಕೊಡುವುದು ಉತ್ತಮವೇ. ಭಾಷಾಸಂಬಂಧವಾದ ಚಟುವಟಿಕೆಗಳಿಗಿಂತ ಇಲ್ಲಿ ಮುಂದಾಲೋಚನೆ ಮತ್ತು ಯೋಜನೆಗಳೇ ಹೆಚ್ಚು ಮುಖ್ಯವಾಗಿರುತ್ತದೆ. ಹಲವು ಭಾಷೆಗಳಿಂದ ಮತ್ತು ಹಲವು ಭಾಷೆಗಳಿಗೆ ದುಭಾಷಿಕತೆ ನಡೆಯಬೇಕಾದ ಸಮ್ಮೇಳನಗಳಿಗೆ ದುಭಾಷಿಗಳ ತಂಡದ ಸಂಘಟನೆಯು ಅತಿ ಮುಖ್ಯವಾದುದೇ. ಅಲ್ಪಪರಿಶ್ರಮಿಗಳು ಈ ಕ್ಷೇತ್ರದಲ್ಲಿ ಕೈಹಾಕುವುದರಿಂದ ತಲೆದೋರಬಹುದಾದ ವಿಪತ್ತುಗಳನ್ನು ನಿವಾರಿಸಲು ಅಥವಾ ಗೊಂದಲದಲ್ಲಿ ಪರ್ಯವಸಾನಗೊಳ್ಳಬಹುದಾದುದನ್ನು ತಪ್ಪಿಸಲು ಮುಖ್ಯ ಸಮ್ಮೇಳನಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳೂ ಹಲವಿರುತ್ತವೆ. ಎಷ್ಟೋವೇಳೆ ಅವು ರಾಜತಾಂತ್ರಿಕ ಸಂಬಂಧದ ಮೇಲೂ ಪರಿಣಾಮ ಬೀರಬಹುದು.

ದುಭಾಷಿಯಾದವನು ರಾಜಕೀಯದ ದೃಷ್ಟಿಯಿಂದ ಅಥವಾ ರಾಜತಾಂತ್ರಿಕತೆಯ ದೃಷ್ಟಿಯಿಂದ ಅತಿ ಜಾಗರೂಕನಾಗಿರಬೇಕಾದುದೂ ಅಗತ್ಯ. ಮುಖ್ಯವಾದ ಒಂದು ಸಮ್ಮೇಳನದ ಒಂದು ಸಂದರ್ಭದಲ್ಲಿ ಪ್ರಮುಖ ಅಧಿಕಾರಿಯೊಬ್ಬರು ರಾಜೀನಾಮೆ ನೀಡಿದರು. ಸಭೆಯ ಅಧ್ಯಕ್ಷರು "ನಾವು ಮಾಡಬಹುದಾದುದೆಂದರೆ ಅವರ ರಾಜೀನಾಮೆಯನ್ನು ಅಂಗೀಕರಿಸುವುದಷ್ಟೇ" ಎಂದು ಉತ್ತರಿಸಿದರು. ದುಭಾಷಿ "nous ne pouvons qu'accepter sa résignation" ಎಂದು ಪರಿವರ್ತಿಸಿದನು. ವಾಸ್ತವವಾಗಿ, ಇದು ವಾಸ್ತವ ಸಂಗತಿಗೆ ಅನುಗುಣವಾಗಿರಲಿಲ್ಲ; ಸಂಬಂಧಪಟ್ಟ ಅಧಿಕಾರಿಯ ವರ್ತನೆ ಇದಕ್ಕೆ ಸಂಪೂರ್ಣವಾಗಿ ವಿರುದ್ಧವಾದುದಾಗಿತ್ತು.

ಮತ್ತೊಂದು ಸಂದರ್ಭದಲ್ಲಿ ಸಾಹಚರ್ಯದ ಸ್ವಾತಂತ್ರ್ಯದ ಬಗ್ಗೆ ಚರ್ಚೆಯಲ್ಲಿ ರಷ್ಯದ ನಿಯೋಗಿ ಅಮೆರಿಕದ ನಿಯೋಗಿಯನ್ನು ಖಂಡಿಸುತ್ತಿದ್ದ. ತನ್ನ ತರ್ಕದ ಒಂದು ಹಂತದಲ್ಲಿ ರಷ್ಯನ್‌ನಲ್ಲಿ "there's a dead dog hidden there" (ಅಲ್ಲೇ ಕಷ್ಟ ಅಡಗಿರುವುದು) ಎಂದು ಉದ್ಗರಿಸಿದ. ದುಭಾಷಿ "there's a nigger in the wood-pile" ಎಂದು ಹೇಳಿದರೆ ಸುಸ್ಪಷ್ಟವಾಗಿರುವುದು ಎಂದು ಭಾವಿಸಿ ಹಾಗೆ ಹೇಳಿಯೂ ಬಿಟ್ಟ. ದುರದೃಷ್ಟವಶಾತ್. ಅಮೆರಿಕದ ನಿಯೋಗದ ಮುಖಂಡ (the Under-Secretary of State for Labour) ನೀಗ್ರೋ ಎಂಬುದನ್ನು ದುಭಾಷಿ ಮನಗಾಣದಾದ...ಅದರಿಂದ ರಾಜತಾಂತ್ರಿಕ ಸಮಸ್ಯೆಯೇ ಉದ್ಭವಿಸಿತು.

ದುಭಾಷಿಗಳಲ್ಲಿ ನಾವು ಕಾಣುವ ಮತ್ತೊಂದು ಅಂಶವೆಂದರೆ ತಮ್ಮನ್ನು ತಾವು ಅತಿಯಾಗಿ ಭಾವಿಸುವುದು. ಕೆಲವು ದುಭಾಷಿಗಳ ತಮ್ಮ ಒಣಹೆಮ್ಮೆಗೆ ಹೆಸರಾಗಿಬಿಟ್ಟಿರುವರು. ಈ ಪ್ರವೃತ್ತಿ ಕಣ್ಮರೆಯಾಗಬೇಕು. ತಮ್ಮನ್ನು ತಾವೇ ಅತಿಯಾಗಿ ಭಾವಿಸಿಕೊಳ್ಳುವ ಇವರು ಸಭೆ-ಸಮ್ಮೇಳನದ ಮುಖ್ಯ ವಿಷಯಗಳ ಬಗ್ಗೆ ತಿಳಿದುಕೊಳ್ಳಲು ಯಾವ ಪ್ರಯತ್ನವನ್ನೂ ಮಾಡದೆ ಮಧ್ಯೆ ಪೇಚಿಗೆ ಸಿಲುಕಿಕೊಂಡ ಪ್ರಸಂಗಗಳೂ ಇಲ್ಲದಿಲ್ಲ.

ಒಂದು ಕೈಗಾರಿಕೆಯ ಸ್ಥಾವರ ಅಥವಾ ಕಾರ್ಖಾನೆಗೆ ವಿದೇಶೀ ಪರಿಣತರು ಭೇಟಿ

ನೀಡುವ ಪ್ರಸಂಗಗಳಲ್ಲಿ ಅಥವಾ ಬಹುರಾಷ್ಟ್ರೀಯ ಸಂಸ್ಥೆಗಳ ಕಾರ್ಯಾಲಯಗಳಲ್ಲಿ ಸಣ್ಣ ಸಭೆಗಳಲ್ಲಿನ ವ್ಯವಹಾರದ ಮಾತುಕತೆಗಳು ನಡೆಯುವ ಸಂದರ್ಭದಲ್ಲಿಯೂ ದುಭಾಷಿಕತೆಯ ಆವಶ್ಯಕತೆಯು ತಲೆದೋರುತ್ತದೆ. ಈ ಕಾರ್ಯದಲ್ಲಿ ನೇಮಕಗೊಳ್ಳು ವವರಿಗೆ ವ್ಯವಹಾರ ಸಂಬಂಧವಾದ ವಿಷಯದ ಹಿನ್ನೆಲೆಗಳನ್ನು ತಿಳಿಸಿರಬೇಕು. ಸಾಧ್ಯ ವಾದನುಟ್ಟಿಗೂ ಮುಂಚಿತವಾಗಿಯೇ ಟಿಪ್ಪಣಿ ಇತ್ಯಾದಿಗಳನ್ನು ಒದಗಿಸಿರಬೇಕು. ಅಷ್ಟೇ ಅಲ್ಲದೆ, ವಿದೇಶೀ ನಿಯೋಗಿಗಳ ಮತ್ತು ಸಂದರ್ಶಕರ ಆದರಾತಿಥ್ಯಗಳ ಬಗ್ಗೆಯೂ ಇವರು ಗಮನಿಸಬೇಕಾದ ಸಂದರ್ಭಗಳೂ ಒದಗುವುದರಿಂದ ಅಗತ್ಯವಾದ ಸಕಲ ಸಾಮಾಜಿಕ ನಡೆನಳಿಕೆ-ರೀತಿ-ನೀತಿಗಳ ಪರಿಚಯವೂ ಇರತಕ್ಕದ್ದು.

ಪ್ರಪಂಚದ ಅನೇಕ ದೇಶಗಳಲ್ಲಿ ವಾಣಿಜ್ಯ ಮೇಳಗಳು, ಕೃಷಿ ಮೇಳಗಳು, ಕೈಗಾರಿಕಾ ಮೇಳ ಹಾಗೂ ವಸ್ತುಪ್ರದರ್ಶನಗಳನ್ನು ನೋಡಲು ಬರುವ ಪ್ರೇಕ್ಷಕರಿಗಾಗಿ, ಪ್ರಪಂಚದ ವಿವಿಧ ಭಾಗಗಳಿಂದ ಬರುವ ಗಿರಾಕಿಗಳಿಗಾಗಿ ದುಭಾಷಿಕತೆಯ ಅಗತ್ಯ ತಲೆ ದೋರುತ್ತದೆ. ಅಂಥಲ್ಲಿ ಮಾರಾಟಗಾರ-ಗಿರಾಕಿಯ ನಡುವಣ—ಕೆಲವೊಮ್ಮೆ ತುಂಬಾ ಬೃಹತ್ಪ್ರಮಾಣದ ಒಪ್ಪಂದಗಳಿಗಾಗಿ—ಅತಿ ಮುಖ್ಯವಾದ ಸಂಪರ್ಕಸೇತುವೆಯಾಗುವವ ನೆಂದರೆ ದುಭಾಷಿಯೇ. ಅನೇಕ ಪ್ರಮುಖ ರಫ್ತು ಆದೇಶಗಳು ಇಂಥ ದುಭಾಷಿಗಳ ಕೌಶಲ ಹಾಗೂ ತಾಳ್ಮೆಯನ್ನು ಅವಲಂಬಿಸಿವೆ. ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಿರುವ ವಸ್ತುಗಳ ಬೆಲೆಗಳಿಗಿಂತ ಅವುಗಳ ಬಗ್ಗೆ ಹೆಚ್ಚು ತಿಳಿದಿರಬೇಕಾದ ಆವಶ್ಯಕತೆಯೂ ಇದೆ ಎಂಬುದನ್ನೂ ಮರೆಯುವಂತಿಲ್ಲ.

ಪ್ರದರ್ಶನ ವಾಣಿಜ್ಯ ಮೇಳಗಳಿಗೆ ಬರುವ, ವಸ್ತುಸಂಗ್ರಹಾಲಯ, ವಸ್ತುಪ್ರದರ್ಶನ ಗಳಿಗೆ ಭೇಟಿ ನೀಡಲೆಂದು ಬಂದಿರುವ ಅಥವಾ ಬೇರೆ ಯಾವುದೇ ಉದ್ದೇಶಗಳಿಗಾಗಿ ವಿವಿಧ ರಾಷ್ಟ್ರಗಳಿಂದ ಬರಬಹುದಾದವರ, ಪ್ರವಾಸಿಗಳ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸುವವರನ್ನು ಮಾರ್ಗದರ್ಶಿ ದುಭಾಷಿಗಳು ಎಂದು ಕರೆಯಬಹುದಾಗಿದೆ. ಭೇಟಿ ನೀಡಲಿರುವ ಸ್ಥಳ ಇತ್ಯಾದಿಗಳ ಬಗ್ಗೆ ಸ್ಪಷ್ಟವಾದ ಅರಿವಿರಬೇಕಾದುದಷ್ಟೇ ಅಲ್ಲದೆ ಅಪರಿಚಿತರು ಪೇಚಿನ-ಸಂಕೋಚದ ಪ್ರಸಂಗಗಳಿಗೆ ಗುರಿಯಾಗುವುದನ್ನು ತಪ್ಪಿಸುವ ಚಾಕಚಕ್ಯತೆಯೂ ಇರಬೇಕಾಗುತ್ತದೆ ಈ ವರ್ಗದ ದುಭಾಷಿಗಳಿಗೆ.

ಮೂಲಭೂತವಾಗಿ ದುಭಾಷಿಕತೆಯನ್ನು ಎರಡು ಬಗೆಗಳಾಗಿ ವಿಂಗಡಿಸಬಹುದು. ಪ್ರತಿಯೊಂದಕ್ಕೂ ತನ್ನದೇ ಆದ ಅನ್ವಯವಿರುತ್ತದೆ.

ಮೊದಲನೆಯ ಬಗೆಯನ್ನು ಕ್ರಮಾನುಗತ (ಅಥವಾ ಅವಿರತ–Simultaneous interpretaion) ದುಭಾಷಿಕತೆ ಎನ್ನಬಹುದು. ಇದು ಹಳೆಯದಾದ, ಹೆಚ್ಚು ಜಟಿಲ ವಾದ ಹಾಗೂ ಕಾಲ ತೆಗೆದುಕೊಳ್ಳುವ ವಿಧಾನ. ಈ ಬಗೆಯಲ್ಲಿ ಭಾಷಣಕಾರ ಯಾವುದೇ ಒಂದು ನಿರ್ದಿಷ್ಟ ಪ್ರಸಂಗದಲ್ಲಿ ಹೇಳಬಯಸುವ ಎಲ್ಲ ಅಂಶಗಳನ್ನು ಹೇಳಿ ಮುಗಿಸುವವರೆವಿಗೆ ಕಾಯುತ್ತಿದ್ದು—ಇದು ಎರಡೇ ನಿಮಿಷಗಳ ಕಾಲಾವಧಿಯದಾಗಿರ ಬಹುದು, ಅರ್ಧ ಗಂಟೆಯ ಕಾಲವಾಗಬಹುದು—ಅನಂತರ ಉದ್ದಿಷ್ಟ ಭಾಷೆಯಲ್ಲಿ

ಅದನ್ನು ಸಂಪೂರ್ಣವಾಗಿ ಪರಿವರ್ತಿಸುತ್ತಾನೆ. ಇದಕ್ಕಾಗಿ ದುಭಾಷಿ ತನ್ನದೇ ಆದ ರೀತಿಯ ವಿಶೇಷವಾದ ಹಾಗೂ ಶೀಘ್ರ-ಸಂಕ್ಷಿಪ್ತ ಲಿಪಿಯಲ್ಲಿ ಟಿಪ್ಪಣಿ ಮಾಡಿಕೊಂಡಿರುತ್ತಾನೆ. ಈ ಟಿಪ್ಪಣಿಯನ್ನು ಸಾಮಾನ್ಯವಾಗಿ ಉದ್ದಿಷ್ಟ ಭಾಷೆಯಲ್ಲಿ ಮಾಡಿಕೊಳ್ಳಲಾಗುವುದು.

ಪ್ರಸಕ್ತ ಲಭ್ಯವಿರುವ ಸೂಕ್ಷ್ಮಾತಿಸೂಕ್ಷ್ಮವಾದ ಎಲೆಕ್ಟ್ರಾನಿಕ್ ಸಾಧನ-ಸಲಕರಣೆಗಳೆಲ್ಲದರ ಅಭಿವೃದ್ಧಿಯಾಗುವುದಕ್ಕೆ ಮೊದಲು ಮೊದಲನೆ ಮಹಾಯುದ್ಧದನಂತರದ ಕಾಲದಲ್ಲಿ ಲೀಗ್ ಆಫ್ ನೇಷನ್ಸಿನ ಸಭೆಗಳಂಥ ಸಭೆಗಳಲ್ಲಿ ಈ ಬಗೆಯನ್ನು ಹೆಚ್ಚಾಗಿ ಉಪಯೋಗಿಸಲಾಗುತ್ತಿತ್ತು. ಈ ಬಗೆಯಿಂದ ಸಭೆಗಳ ಕಾರ್ಯಕಲಾಪಗಳ ಅವಧಿ ಅಧಿಕವಾಗುವುದಷ್ಟೇ ಅಲ್ಲದೆ ದುಭಾಷಿಯ ಕೌಶಲ್ಯ ಮತ್ತು ಜ್ಞಾಪಕಶಕ್ತಿಯು ಯಶಸ್ಸಿನ ನಿರ್ಧಾರಕ ಅಂಶಗಳಾಗಿರುತ್ತಿದ್ದುವು.

ಮತ್ತೊಂದು ಬಗೆಯ ದುಭಾಷಿಕತೆಯೆಂದರೆ ಏಕಕಾಲಿಕ ದುಭಾಷಿಕತೆ. ಇದು ಹೆಚ್ಚು ಈಚಿನ, ಸುಲಭವಾದ ಹಾಗೂ ಸಾಮಾನ್ಯವಾಗಿ ಬಳಕೆಯಲ್ಲಿರುವ ವಿಧಾನವಾಗಿದೆ. ಈ ಬಗೆಯ ದುಭಾಷಿಕತೆಯಲ್ಲಿ ಭಾಷಣಕಾರ ಭಾಷಣಮಾಡಲು ಅಥವಾ ಮಾತನಾಡಲು ಆರಂಭಿಸಿದ ಸ್ವಲ್ಪ ಹೊತ್ತಿನಲ್ಲಿಯೇ ದುಭಾಷಿ ಉದ್ದಿಷ್ಟ ಭಾಷೆಗೆ ಪರಿವರ್ತಿಸುವ ತನ್ನ ಕಾರ್ಯವನ್ನು ಆರಂಭಿಸುತ್ತಾನೆ. ಎಂದರೆ ಇಲ್ಲಿ ದುಭಾಷಿಕತೆಯ ಘಟಕ ವಾಕ್ಯವಾಗಿರಬಹುದು ಅಥವಾ ವಾಕ್ಯಭಾಗವಾಗಿರಬಹುದಾಗಿದೆ. ಕ್ರಮಾನುಗತ ಅಥವಾ ಅವಿರತ ದುಭಾಷಿಕತೆಯಲ್ಲಿ ಅನಿವಾರ್ಯವಾಗಿ ಎದುರಿಸಬೇಕಾಗಿ ಬರುವ ವಿಳಂಬಗಳಿಂದ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಯುಂಟಾಗುವ ತೊಂದರೆ ಇಲ್ಲಿ ಕಾಣದಾಗುತ್ತದೆ.

ಈ ಬಗೆ ಕನಿಷ್ಠಪಕ್ಷ ಆರಂಭಹಂತದಲ್ಲಿರುವ ಅಥವಾ ಕ್ಲಪ್ತಾರ್ಥಕವಾಗಿ ನೇಮಕಗೊಳ್ಳುವ ದುಭಾಷಿಗಳಿಗಾದರೂ, ಅನೇಕ ರೀತಿಗಳಲ್ಲಿ ಕಡಮೆ ಶ್ರಮದಾಯಕವಾಗಿರುತ್ತದೆ. ಅಷ್ಟೇ ಅಲ್ಲ ದುಭಾಷಿಕತೆಗೆ ತೊಡಗದಿರುವವರಿಗೆ ಆಕರ್ಷಕವಾಗಿಯೂ ಕಾಣುತ್ತದೆ. ಕ್ರಮಾನುಗತ ದುಭಾಷಿಕತೆಯಲ್ಲಿ ಕಾಣಬರದ ಮಧ್ಯವರ್ತಿತ್ವದ ಅಂಶ ಇಲ್ಲಿ ಎದ್ದು ಕಾಣುತ್ತದೆ. ಕಾರ್ಯನಿರತ ಅಥವಾ ವೃತ್ತಿಪರ ದುಭಾಷಿಗಳ ಸೇವೆಯು ದುಬಾರಿಯಾಗುತ್ತದೆ. ಏಕಕಾಲಿಕ ದುಭಾಷಿಗಳ ಸೇವೆಯನ್ನು ಬಳಸಿಕೊಳ್ಳುವುದು ಅಷ್ಟೊಂದು ದುಬಾರಿಯಾಗುವುದಿಲ್ಲ. ಏನೇ ಆಗಲಿ, ದುಭಾಷಿಯು ತಜ್ಞನಾಗಿರುವುದರಿಂದ ಅವನ ಕಾಲವನ್ನೂ ಇನ್ನೊಬ್ಬರ ಹಣವನ್ನೂ ವ್ಯರ್ಥಮಾಡುವುದೂ ಉಚಿತವೆನಿಸಲಾರದು.

ಏಕಕಾಲಿಕ ದುಭಾಷಿಕತೆಯ ಒಂದು ಬಗೆಯನ್ನು ಕಿವಿಮಾತಿನ ದುಭಾಷಿಕತೆ (whispering interpretation) ಎನ್ನಲಾಗುತ್ತದೆ. ಈ ಬಗೆಯಲ್ಲಿ ಮೂಲಹೇಳಿಕೆಯನ್ನು ಉದ್ದಿಷ್ಟ ಭಾಷೆಯಲ್ಲಿ ಮೆಲ್ಲಗೆ ಕಿವಿಯಲ್ಲಿ ಹೇಳುವ ಪ್ರಕ್ರಿಯೆ ನಡೆಯುತ್ತದೆ. ಹಾಜರಿರುವವರ ಸಂಖ್ಯೆ ಅತಿಕಡಿಮೆಯಾಗಿದ್ದು, ನಡೆಸಲಿರುವ ಸಣ್ಣ ಸಭೆಗಳಿಗೆ ಈ ಬಗೆ ಆದರ್ಶಪ್ರಾಯವಾಗಿದೆ.

ಬೇರೆ ವೃತ್ತಿಗಳಂತೆ ಈ ವೃತ್ತಿಯಲ್ಲಿ ತೊಡಗಿರುವವರೂ ಕೆಲವು ನೀತಿನಿಯಮಗಳನ್ನು ಪಾಲಿಸಬೇಕಾದುದು ಅಗತ್ಯವಾಗಿರುತ್ತದೆ. ದುಭಾಷಿಗಳು ತಮ್ಮ ಕಾರ್ಯನಿರ್ವಹಿಸುವ ಕಾಲದಲ್ಲಿ ತಮಗೆ ತಿಳಿಯುವ ಯಾವುದೇ ವಿಷಯವನ್ನು ಬಹಿರಂಗಪಡಿಸಕೂಡದು. ಲಭ್ಯ ವಾಗಬಹುದಾದ ಯಾವ ಮಾಹಿತಿಯನ್ನೇ ಆಗಲಿ ದುರುಪಯೋಗಪಡಿಸಿಕೊಳ್ಳಕೂಡದು. ತನ್ನ ಭಾಷಾಸಾಮರ್ಥ್ಯದ ಬಗ್ಗೆ ಅನುಮಾನವುಂಟಾದಲ್ಲಿ ಅಥವಾ ಸಂಬಂಧಪಟ್ಟ ವಿಷಯದಲ್ಲಿ ತನ್ನ ತಾಂತ್ರಿಕಜ್ಞಾನ ಸಾಕಷ್ಟು ಇಲ್ಲ ಎಂಬುದು ಮನದಟ್ಟಾದಲ್ಲಿ ಆ ಕಾರ್ಯವನ್ನು ಅಂಗೀಕರಿಸದಿರುವುದೇ ಸೂಕ್ತ. ಈ ಅಂಶಗಳು ಮನದಟ್ಟಾದಮೇಲೆ, ದುಭಾಷಿಯ ನೇಮಕ ಪೂರ್ಣಗೊಂಡ ತಕ್ಷಣವೇ ಆತನಿಗೆ ಸಭೆಯ ಬಗ್ಗೆ, ತನ್ನ ಕಾರ್ಯದ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸದಿರಲು ಯಾವ ಕಾರಣವೂ ಇಲ್ಲ. ವಿಷಯ, ಮಾಹಿತಿಗಳು ಪೂರ್ಣವಾಗಿ ಲಭ್ಯವಾಗದಿದ್ದಾಗ ದುಭಾಷಿ ತನ್ನ ಕಾರ್ಯ ವನ್ನು ಸಮರ್ಥವಾಗಿ ನಿರ್ವಹಿಸಲಾಗುವುದಿಲ್ಲ. ದುಭಾಷಿಗಳು ಗೂಢಚಾರರಾಗಿದ್ದದರ ವಿಷಯವನ್ನು ಕೇಳಿರುವ ಸಂದರ್ಭಗಳೂ ಇಲ್ಲದಿಲ್ಲ. ಆದರೆ ಈ ವೃತ್ತಿ ಕೈಗೊಳ್ಳುವವರ ಪೈಕಿ ಅಂಥವರ ಸಂಖ್ಯೆ ಕಡಮೆಯೆಂದೇ ಹೇಳಬೇಕು.

ಯಾವುದೇ ವೃತ್ತಿಯಲ್ಲಿ ತೊಡಗಿರುವವರಿಂದ ಪರಿಪೂರ್ಣ ಸೇವೆ ಪಡೆಯಲು ಅವರಿಗೆ ಸಕಲ ಮಾಹಿತಿಗಳನ್ನೂ ಒದಗಿಸುವುದರ ಮೂಲಕ ಮಾತ್ರ ಸಾಧ್ಯ. ಈ ಅಂಶ ಸಲಹಾ ವಕೀಲರು ಅಥವಾ ವೈದ್ಯರಮಟ್ಟಿಗೆ ಎಷ್ಟು ನಿಜವೋ ದುಭಾಷಿಗಳ ಮಟ್ಟಿಗೂ ಅಷ್ಟೇ ನಿಜವಾಗಿದೆ. ಸಾಧ್ಯವಾದಲ್ಲಿ ಸಮ್ಮೇಳನಪೂರ್ವ ಅಥವಾ ಸಂದರ್ಶನಪೂರ್ವ ಸಭೆಗಳಲ್ಲಿ ಕುಳಿತು ಚರ್ಚಿಸಲು ಅವಕಾಶ ಮಾಡಿಕೊಡಬೇಕು. ಸಭೆ-ಸಮ್ಮೇಳನಗಳು, ಸಂದರ್ಶಕರು, ಭೇಟಿ ನೀಡುವವರು—ಇಂಥ ಸಂದರ್ಭಗಳಲ್ಲಿ ಭಾಷೆಯು ಅಡ್ಡವಾಗಿ ನಿಂತ ಪ್ರಸಂಗ ಗಳಲ್ಲಿ ಸಂಪರ್ಕಸೇತುವೆಯಾಗುವವರೆಂದರೆ ದುಭಾಷಿಗಳೇ. ಅವರ ಯಶಸ್ಸು ಪೂರ್ಣ ಭಾವಿಯಾಗಿ ಅವರಿಗೆ ಎಷ್ಟರಮಟ್ಟಿಗೆ ಮಾಹಿತಿಯನ್ನು ಒದಗಿಸಲಾಗಿದೆ ಎಂಬುದನ್ನೇ ಅವಲಂಬಿಸಿರುತ್ತದೆ.

ಇಷ್ಟೆಲ್ಲ ಇದ್ದಮೇಲೆ ದುಭಾಷಿಗಳಿಗೆ ವ್ಯವಸ್ಥಿತ, ಸುಯೋಜಿತ ತರಪೇತಿಯ ಅಗತ್ಯವೂ ಇದೆ. ಭಾರತದಮಟ್ಟಿಗೆ ಹೇಳುವುದಾದರೆ ದುಭಾಷಿಕತೆಯಲ್ಲಿ ತರಪೇತಿ ನೀಡುತ್ತಿರುವ ಸಂಸ್ಥೆಗಳು ಇಲ್ಲವೇ ಇಲ್ಲವೆನ್ನಬಹುದು. ಈ ದಿಸೆಯಲ್ಲಿ ಯೋಜಿತ ಕಾರ್ಯಕ್ರಮದ ಅಗತ್ಯವಿದೆ. ಭಾರತದಲ್ಲಿ ದುಭಾಷಿಗಳ ನೇಮಕಾತಿ ಅಷ್ಟಾಗಿ ಇಲ್ಲವೇ ಇಲ್ಲವೆಂದರೂ ತಪ್ಪಾಗಲಾರದು. ಸಂಸತ್ತಿನಲ್ಲಿ ದುಭಾಷಿಗಳ ಕೆಲವು ಹುದ್ದೆಗಳಿಗೆ ನೇಮಕಾತಿಯಾಗಿರುವಂತೆ ಮಾತ್ರ ಕಾಣುತ್ತಿದೆ.

ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಭಾರತ ಪ್ರಮುಖ ಪಾತ್ರವಹಿಸುತ್ತಿದೆ. ಹಿಂದೆ ಬಹುಪಾಲು ಅಂತರರಾಷ್ಟ್ರೀಯ ಸಭೆ-ಸಮ್ಮೇಳನಗಳು ಯೂರೋಪಿನಲ್ಲಿ ನಡೆಯುತ್ತಿದ್ದವು. ಆದರೆ ಇಂದು ಅವುಗಳ ಪೈಕಿ ಹೆಚ್ಚಿನವು ಏಷ್ಯದ ಹಾಗೂ ಆಫ್ರಿಕದ ರಾಷ್ಟ್ರಗಳಲ್ಲಿ ನಡೆಯುತ್ತಿದ್ದು ಭಾರತದಲ್ಲಿಯೂ ಪ್ರತಿವರ್ಷ ಅಂತರರಾಷ್ಟ್ರೀಯ ಮಟ್ಟದ ಕೆಲವು ಸಭೆ

ಸಮ್ಮೇಳನಗಳು ನಡೆಯುತ್ತಿವೆ. ಭಾರತ ರಾಯಭಾರ ಸಂಬಂಧ ಪಡೆದಿರುವ ದೇಶಗಳ ಸಂಖ್ಯೆಯು ಕಡಮೆಯಿಲ್ಲ. ಇವು ತಮ್ಮ ದೂತಾವಾಸಗಳನ್ನಲ್ಲದೆ, ಕೆಲವು ದೇಶಗಳು ದೆಹಲಿ, ಬೊಂಬಾಯಿ, ಕಲ್ಕತ್ತ, ಮದ್ರಾಸು ಮುಂತಾದ ನಗರಗಳಲ್ಲಿ ಕಾನ್ಸುಲೇಟ್‌ಗಳನ್ನು, ವ್ಯಾಪಾರೀ ಕಾರ್ಯಾಲಯಗಳನ್ನು ಮತ್ತು ವಾಣಿಜ್ಯ ಸಂಸ್ಥೆಗಳ ಕಾರ್ಯಾಲಯಗಳನ್ನು ಸ್ಥಾಪಿಸಿವೆ. ಪ್ರತಿವರ್ಷ ಭಾರತಕ್ಕೆ ಭೇಟಿ ನೀಡುತ್ತಿರುವ ಪ್ರವಾಸಿಗರ ಸಂಖ್ಯೆಯೂ ಅಧಿಕವಾಗುತ್ತಿದೆ. ವಿದೇಶೀ ತಜ್ಞರು ಕಾರ್ಯನಿರ್ವಹಿಸುತ್ತಿರುವ ಕೈಗಾರಿಕಾ ಹಾಗೂ ಇತರ ಯೋಜನೆಗಳು ಇವೆ. ಹೊರಗಡೆಯ ರಾಷ್ಟ್ರಗಳೊಡನೆ ಅಧಿಕಗೊಳ್ಳುತ್ತಿರುವ ಈ ಸಂಪರ್ಕದಿಂದ ದುಭಾಷಿಗಳ ತರಪೇತಿಯ ಅತ್ಯಗತ್ಯತೆ ಎಂದಿಗಿಂತ ಇಂದು ಅಧಿಕವಾಗಿದೆ.

೧೦ | ಭಾಷಾಂತರಕಾರರು ದ್ರೋಹಿಗಳೆ?

ಎಚ್. ಗಣೇಶ ಐತಾಳ

ತಪ್ಪು ಭಾಷಾಂತರಗಳಿಂದ ಉಂಟಾಗುವ ಅನರ್ಥಗಳನ್ನು ಕುರಿತು ವಿವರಿಸುತ್ತಾ ಟಿಟ್ಲರ್ ಕೊಡುವ ಒಂದು ನಿದರ್ಶನ ಹೀಗಿದೆ: ಎಂ. ಪೊಲಾರ್ಡ್ ಎಂಬ ಯುದ್ಧ ವಿದ್ಯಾತಜ್ಞನೊಬ್ಬ, ಪ್ರಾಚೀನ ಗ್ರೀಕರಿಗೂ ರೋಮನರಿಗೂ ಆಧುನಿಕ ಯುದ್ಧವಿದ್ಯಾ ತಂತ್ರಗಳೆಲ್ಲ ತಿಳಿದಿದ್ದುವು ಎಂದು ವಿವರಿಸುವ ಒಂದು ಗ್ರಂಥವನ್ನು ಬರೆದನಂತೆ. ಈತ ತನ್ನ ಗ್ರಂಥಕ್ಕೆ ಬಳಸಿಕೊಂಡದ್ದು ಪಾಲಿಬಾನ್ಸ್‌ನ ಗ್ರೀಕ್ ಗ್ರಂಥದ ಭಾಷಾಂತರ ವೊಂದನ್ನು, ಭಾಷಾಂತರಿಸಿದವನು ಒಬ್ಬ ಪಾದ್ರಿ. ಪಾದ್ರಿ ಗ್ರೀಕ್ ಭಾಷೆಯಲ್ಲೇನೋ ವಿದ್ವಾಂಸ. ಆದರೆ ಯುದ್ಧವಿದ್ಯೆ ಅವನಿಗೆ ಹೇಗೆ ತಾನೇ ಗೊತ್ತಿದ್ದೀತು? ಅವನ ಭಾಷಾಂತರ ತಪ್ಪುತಪ್ಪಾಗಿತ್ತು, ಎಂದು ತಿಳಿದುಬಂದಾಗ ಪೊಲಾರ್ಡ್ ಅನೇಕ ವರ್ಷಗಳ ಪರಿಶ್ರಮದಿಂದ ಬರೆದ ಗ್ರಂಥ ಸಹ ನಿರುಪಯುಕ್ತವಾಯಿತು.

ಇನ್ನೊಂದು ನಿದರ್ಶನ: ಎತಿಯನ್ ದೋಲೆ (೧೫೦೯–೧೫೪೬) ಫ್ರಾನ್ಸಿನ ವಿದ್ವಾಂಸ. ಈತ ಪ್ಲೇಟೋವಿನ ಸಂವಾದಗಳನ್ನು ಫ್ರೆಂಚ್ ಭಾಷೆಗೆ ಭಾಷಾಂತರಿಸಿದ. ಈ ಭಾಷಾಂತರ ಮೂಲಕ್ಕೆ ವಿಧೇಯವಾಗಿಲ್ಲವೆಂಬ ಕಾರಣದಿಂದ ಈತನನ್ನು ಮರಣ ದಂಡನೆಗೆ ಗುರಿಪಡಿಸಲಾಯಿತಷ್ಟೇ ಅಲ್ಲ; ಇವನ ಕೃತಿಗಳನ್ನೂ ಸುಡಲಾಯಿತು.

ಹಿರೋಷಿಮಾ-ನಾಗಸಾಕಿಗಳ ಮೇಲೆ ಅಮೆರಿಕನರು ಪರಮಾಣು ಬಾಂಬು ದಾಳಿ ನಡೆಸಲು ಸಹ ಪದವೊಂದರ ತಪ್ಪು ಭಾಷಾಂತರವೇ ಕಾರಣವಾಯಿತೆಂದು ಹೇಳಲಾಗಿದೆ (ನೋಡಿ: 'ಶಾಸ್ತ್ರಸಾಹಿತ್ಯ ನಿರ್ಮಾಣ', ಪು. ೧೧೩). ಈ ಎಲ್ಲ ಅನಾಹುತಗಳಿಂದಲೇ 'ಭಾಷಾಂತರಕಾರರು ದ್ರೋಹಿಗಳು', 'ಭಾಷಾಂತರಕಾರರು ಹಂತಕರು' ಮುಂತಾದ ಹೇಳಿಕೆಗಳು ಪ್ರಚಲಿತವಾಗಿವೆ. ಮೂಲತಃ ಇದೊಂದು ಇಟಾಲಿಯನ್ ಹೇಳಿಕೆ ('Traduttari traditary') ಈ ಹೇಳಿಕೆ ಎಷ್ಟುಮಟ್ಟಿಗೆ ನಿಜ?

ವಾಸ್ತವವಾಗಿ ಯಾವುದೇ ಭಾಷಾಂತರ ಪರಿಪೂರ್ಣವಲ್ಲ. 'ಭಾಷಾಂತರವೇ ಒಂದು ರೀತಿಯ ನಾಜೂಕಾದ ಸುಳ್ಳು (po!ite lie)' ಎನ್ನುತ್ತಾನೆ ಪ್ರಸಿದ್ಧ ಇಂಗ್ಲಿಷ್ ಕವಿ ಹಾಗೂ ಕಾದಂಬರಿಕಾರನಾದ ರಾಬರ್ಟ್ ಗ್ರೇವ್ಸ್. ಒಂದು ಭಾಷಾಂತರ ಎಷ್ಟು ಮಟ್ಟಿಗೆ ಅಂಗೀಕಾರಾರ್ಹವಾಗಿದೆ ಎಂಬುದನ್ನು ಆಧರಿಸಿ ನಾವು ಅದಕ್ಕೆ ಬೆಲೆ ಕಟ್ಟ ಬೇಕಾಗುತ್ತದೆ. ಮೂಲಕೃತಿಯನ್ನು ಓದಿದವರ ಮನಸ್ಸಿನ ಮೇಲೆ ಉಂಟಾಗುವ ಪರಿಣಾಮವೇ ಭಾಷಾಂತರದ ಓದುಗನ ಮೇಲೂ ಉಂಟಾಗುವುದಾದರೆ ಅದೇ ಯಶಸ್ವಿ ಭಾಷಾಂತರವೆಂದು ಮ್ಯಾಥ್ಯೂ ಆರ್ನಾಲ್ಡ್ ಅಭಿಪ್ರಾಯಪಡುತ್ತಾನೆ. ಓದುವಾಗ

ಅಸ್ವಾಭಾವಿಕವಾಗಿ ಕಾಣದಿರುವುದೇ ಉತ್ತಮ ಭಾಷಾಂತರದ ಒರೆಗಲ್ಲು ಎನ್ನಲಾಗಿದೆ. ಮೂಲಭಾಷೆ ಉದ್ದಿಷ್ಟ ಭಾಷೆಗಳ ಮೇಲಣ ಪ್ರಭುತ್ವವಷ್ಟೇ ಅಲ್ಲದೆ ತಾನು ಭಾಷಾಂತರಿಸಲಿರುವ ಕೃತಿಯ ವಿಷಯವನ್ನು ಕುರಿತ ಸಂಪೂರ್ಣ ಪರಿಜ್ಞಾನವೂ ಭಾಷಾಂತರಕಾರನಿಗೆ ಇರಬೇಕು. ಸಾಹಿತ್ಯಿಕ ಕೃತಿಗಳ ಭಾಷಾಂತರಕಾರನಿಗೆ ಇವುಗಳ ಜೊತೆಗೆ ಸಹೃದಯತೆ, ಸಂವೇದನಶಕ್ತಿ ಹಾಗೂ ರಸಾನುಭವ ಸಾಮರ್ಥ್ಯಗಳೂ ಇರಬೇಕು.

ಭಾಷಾಂತರಗಳು ಕುಲಗೆಟ್ಟುಹೋಗಲು ಅನೇಕ ಕಾರಣಗಳಿವೆ. ಮೂಲಕೃತಿಗೆ ವಿಧೇಯತೆ ತೋರಿಸಿದ ಮಾತ್ರಕ್ಕೇ ಭಾಷಾಂತರ ಉತ್ತಮವಾಗಲಾರದು. ಕೆಲವು ಸಂದರ್ಭಗಳಲ್ಲಿ ಪದಶಃ ಭಾಷಾಂತರ ಮೂಲದ ವಿರುದ್ಧಾರ್ಥವನ್ನೇ ಕೊಡಬಹುದು. ಬೇರೆಬೇರೆ ಪ್ರದೇಶಗಳ ಸಂಸ್ಕೃತಿಗಳ ಆ ವೈಶಿಷ್ಟ್ಯಗಳೇ ಇದಕ್ಕೆ ಕಾರಣ. ಭಾಷೆ ಸಂಸ್ಕೃತಿಯೊಂದರ ಉತ್ಪಾದನೆಯಂತೆಯೇ ಆ ಸಂಸ್ಕೃತಿಯ ಅಭಿವ್ಯಕ್ತಿಸಾಧ್ಯಮವೂ ಹೌದು. ಉದಾಹರಣೆಗೆ, ಜಪಾನೀಯರಲ್ಲಿ ಬಿಳಿಯ ಬಣ್ಣ ಶೋಕಸೂಚಕ. ನಮ್ಮಲ್ಲಾದರೋ ಅದು ಶುಭ್ರತೆಯನ್ನು ಸೂಚಿಸುತ್ತದೆ. ಆದ್ದರಿಂದ ಜಪಾನೀ ಕೃತಿಯೊಂದರ ಶೋಕ-ಸೂಚಕ ಸನ್ನಿವೇಶದಲ್ಲಿ ಬರುವ 'ಸ್ತ್ರೀಯರೆಲ್ಲ ಬಿಳಿಯಬಟ್ಟೆ ಧರಿಸಿದ್ದರು' ಎಂಬ ವಾಕ್ಯವನ್ನು ಕನ್ನಡಕ್ಕೆ ಭಾಷಾಂತರಿಸುವಾಗ ನಾವು 'ಬಿಳಿ' ಎಂಬುವನ್ನು 'ಕಪ್ಪು' ಎಂದು ಬದಲಾಯಿಸಲೇಬೇಕಾಗುತ್ತದೆ. ಅಂತೆಯೇ ನಮ್ಮಲ್ಲಿ ಬಲಭಾಗ ಗೌರವದ ಸ್ಥಾನ. ಆದರೆ ಚೀನೀಯರಲ್ಲಿ ಎಡಭಾಗಕ್ಕೇನೇ ಪ್ರಾಶಸ್ತ್ಯತೆ. 'ಎದೆ ಹೊಡೆದುಕೊಳ್ಳುವುದು, (beating the breast) ನಮ್ಮ ಸಂಸ್ಕೃತಿಯಲ್ಲಿ ದುಃಖಸೂಚಕವಾದರೆ ಇದಕ್ಕೆ ಮಧ್ಯ ಆಫ್ರಿಕದ ಭಾಷೆಯೊಂದರಲ್ಲಿರುವ ಅರ್ಥ 'ಅಭಿನಂದಿಸುವುದು' ಎಂದು. ಸಂಸ್ಕೃತಿಗೆ ಸಂಬಂಧಿಸಿದ ಇಂಥ ಕೆಲವು ವಿಶಿಷ್ಟ ಅಂಶಗಳನ್ನು ತಿಳಿಯದೆ ಮಾಡಿದ ಭಾಷಾಂತರ ಮೂಲಕೃತಿಯ ಶವವಲ್ಲದೆ ಇನ್ನೇನಾದೀತು ?

ಭಾಷಾಂತರಕಾರನಿಗೆ ಮೂಲ ಹಾಗೂ ಉದ್ದಿಷ್ಟ ಭಾಷೆಗಳ ವ್ಯಾಕರಣಾಂಶಗಳೂ ಕೈಕೊಡುತ್ತವೆ. She has brothers ಎಂಬ ವಾಕ್ಯವನ್ನು ಸಂಸ್ಕೃತಕ್ಕೆ ಭಾಷಾಂತರಿಸಬೇಕಾದಾಗ ಸಂಸ್ಕೃತ ಭಾಷೆಯಲ್ಲಿ ದ್ವಿವಚನವೂ ಇರುವುದರಿಂದ ಸೋದರರು ಇಬ್ಬರೇ, ಇಬ್ಬರಿಗಿಂತ ಹೆಚ್ಚೇ ಎಂಬ ವಿವರಗಳು ಅಗತ್ಯವಾಗುತ್ತವೆ. ಸಂಸ್ಕೃತ ನಾಟಕಗಳನ್ನು ಭಾಷಾಂತರಿಸುವಾಗ ಕಂಡುಬರುವ ಇನ್ನೊಂದು ತೊಂದರೆಯೆಂದರೆ ಅವುಗಳಲ್ಲಿ ಉಪಯೋಗಿಸುವ ಎರಡು ಬಗೆಯ ಭಾಷೆಗಳು. ಶ್ರೇಷ್ಠ ವ್ಯಕ್ತಿಗಳು ಸಂಸ್ಕೃತವನ್ನಾಡಿದರೆ ಸ್ತ್ರೀಯರೂ ಕೀಳುಪಾತ್ರಗಳೂ ಪ್ರಾಕೃತವನ್ನಾಡುತ್ತಾರೆ. ಈ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸುವಾಗ ಮೂಲಕ್ಕೆ ವಿಧೇಯನಾಗಿರಬೇಕೆಂದು ರಾಜನಿಂದ ಶಿಷ್ಟ ಅಥವಾ ಗ್ರಾಂಥಿಕ ಭಾಷೆಯನ್ನೂ ರಾಣಿಯಿಂದ ಗ್ರಾಮ್ಯ ಭಾಷೆಯನ್ನೂ ಆಡಿಸಿದರೆ ಆ ಭಾಷಾಂತರ ಎಷ್ಟು ಹಾಸ್ಯಾಸ್ಪದವಾದೀತು ?

ಕಾವ್ಯದ ಭಾಷಾಂತರವಲ್ಲಂತೂ "Translation is among the riskiest of human operations—more hazardous than mountaineering or deep

–sea diving" ಎಂಬ ಮಾತು ಸರಿಹೋಗುತ್ತದೆ. ಕವಿತೆಗಳನ್ನು ಭಾಷಾಂತರಕ್ಕೆ ದಕ್ಕಿಸಿ ಕೊಳ್ಳುವುದು ತುಂಬ ಕಷ್ಟ. ಅವುಗಳ ಲಯ, ಛಂದಸ್ಸು, ಪ್ರಾಸಾನುಪ್ರಾಸಗಳೇ ಇದಕ್ಕೆ ಕಾರಣ. ಆದ್ದರಿಂದಲೇ ಭಾಷಾಂತರದಲ್ಲಿ ಕವಿತೆ ನಷ್ಟವಾಗುತ್ತದೆ ಎನ್ನುತ್ತಾನೆ ರಾಬರ್ಟ್ ಫ್ರಾಸ್ಟ್. ಮೂಲಕವಿತೆಯ ಸೊಗಸು ಮಾಧುರ್ಯಗಳನ್ನು ಭಾಷಾಂತರಿಸು ವುದು ಕಷ್ಟ. ಜಾನಪದ ಧಾಟಿಯ ಗೀತೆಗಳನ್ನೋ ಶಿವಶರಣರ ವಚನಗಳನ್ನೋ ಇಂಗ್ಲಿಷಿಗೆ ಭಾಷಾಂತರಿಸಹೊರಟಾಗ ಭಾಷಾಂತರಸಂಕಟ ಅರಿವಿಗೆ ಬರುತ್ತದೆ. *Modern Kannada Poetry* ಹಾಗೂ *60 Years of Kannada Poetry* ಮುಂತಾದ ಆ್ಯಂಥಾಲಜಿಗಳಲ್ಲಿನ 'ವೇದಾಂತ', 'ಪಟ್ಟೆಹಾವು', 'ಹೋರಿ' ಮೊದಲಾದ ಕೆಲವು ಕನ್ನಡ ಕವನಗಳ ಇಂಗ್ಲಿಷ್ ಭಾಷಾಂತರಗಳನ್ನು ಮೂಲದೊಂದಿಗೆ ಇರಿಸಿ ವಿಶ್ಲೇಷಿಸಿ ದಾಗ ಈ ಅಂಶ ವೇದ್ಯವಾಗುತ್ತದೆ. ಈ ಭಾಷಾಂತರಗಳು ಪೇಲವವಾಗಲು ಭಾಷಾಂತರ ಕಾರರ ಅಸಾಮರ್ಥ್ಯ ಕಾರಣವೆನ್ನಲಾಗದು. ಬದಲಾಗಿ ಮೂಲ ಕವನಗಳಿಗೆ ಬಳಸಲಾದ ಭಾಷಾರೀತಿಯೇ ಇದಕ್ಕೆ ಕಾರಣ. ಬಂಗಾಳಿ ಕವಿ ಪ್ರೀತೀಶ್‌ನಂದಿ ಹಾಗೂ ಕನ್ನಡ ಕವಿ ಎ. ಕೆ. ರಾಮಾನುಜನ್ ಅವರ ಕೆಲವು ಕವನಗಳನ್ನು ಮೂಲದಲ್ಲಿ ಅಚ್ಚಿಸಿರುವ ರೀತಿ ಸಹ ಭಾಷಾಂತರಕಾರನಿಗೆ ಅಪರಿಹಾರ್ಯ ಸಮಸ್ಯೆಯನ್ನೊಡ್ಡುತ್ತದೆ.

ಮೂಲಭಾಷೆಯನ್ನು ಸರಿಯಾಗಿ ತಿಳಿದವರು ಮಾಡಿದ ಭಾಷಾಂತರಗಳ ಸ್ಥಿತಿಯೇ ಹೀಗಾದಲ್ಲಿ, ಮೂಲಭಾಷೆ ಸರಿಯಾಗಿ ತಿಳಿಯದೆ ಇನ್ನೊಬ್ಬರಿಂದ ಓದಿಸಿ ಅರ್ಥ ಹೇಳಿಸಿ ಕೊಂಡು ಭಾಷಾಂತರ ಮಾಡಿದಾಗ ಅದು ಮೂಲದ ರಸರಹಿತ ಛಾಯೆಯಾಗುವುದು ಅನಿವಾರ್ಯ (ಉದಾಹರಣೆಗೆ, ಶ್ರೀ ಬಸವಪ್ಪಶಾಸ್ತ್ರಿ ಅವರು ಶ್ರೀ ಸಿ. ಸುಬ್ಬರಾಯರ ನೆರವಿನಿಂದ 'ಶೂರಸೇನಚರಿತ್ರೆ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದ ಷೇಕ್ಸ್‌ಪಿಯರ್ ಮಹಾಕವಿಯ *Othello* ನಾಟಕ). ಶ್ರೀ ಸಿ. ಆನಂದರಾಯರು ಷೇಕ್ಸ್‌ಪಿಯರನ *Romeo-Juliet* ನಾಟಕವನ್ನು 'ರಾಮವರ್ಮ ಲೀಲಾವತಿ' ಎಂಬ ಹೆಸರನಲ್ಲಿ ಕನ್ನಡಕ್ಕೆ ಭಾಷಾಂತರಿಸುವಾಗ ಮಾಡಿದಂತೆ, ಮೂಲದ ಅಂಕಿತನಾಮಗಳನ್ನು ವಿಕೃತವಾಗಿ ಪರಿವರ್ತಿಸುವುದರಿಂದಲೂ ಭಾಷಾಂತರಗಳನ್ನು—ಅಷ್ಟೇ ಅಲ್ಲ, ಮೂಲಲೇಖಕರನ್ನೂ– ಕೊಲ್ಲಬಹುದು (ಹೆಚ್ಚು ವಿವರಗಳಿಗೆ ನೋಡಿ: ತ. ಸು. ಶಾಮರಾಯರ 'ಕನ್ನಡ ನಾಟಕ').

ಇತರ ಭಾಷೆಗಳಿಂದಲೂ ಕೆಲವು ನಿದರ್ಶನಗಳನ್ನು ಕೊಡಬಹುದು. ಕಾರ್ಲೈಲ್ ಅವರ *Hero and Hero Worship* ಎಂಬ ಕೃತಿ ಮರಾಠಿಯಲ್ಲಿ 'ವಿಭೂತಿಪೂಜಾ' ಎಂಬ ಹೆಸರಿನಲ್ಲಿ ಭಾಷಾಂತರಗೊಂಡಿದೆ. ಈ ಶೀರ್ಷಿಕೆಯನ್ನು ಉತ್ತಮ ಭಾಷಾಂತರ ವೆಂದು ಅಂಗೀಕರಿಸುವುದು ಹೇಗೆ? ಅಂತೆಯೇ ಬೈಬಲ್ಲಿನ ಮರಾಠಿ ಭಾಷಾಂತರವೊಂದ ರಲ್ಲಿ ಮೂಲದ *mulgā* ಎಂಬ ಪದ ತಂದೆಯನ್ನು ನರಕದಿಂದ ಪಾರುಮಾಡುವ 'ಪುತ್ರ' ಎಂದು ಭಾಷಾಂತರಗೊಂಡು ತಪ್ಪು ಅರ್ಥಕ್ಕೆ ಕಾರಣವಾಗಿರುವುದನ್ನೂ ಇಲ್ಲಿ ನೆನಪಿಸಿ ಕೊಳ್ಳಬಹುದು.

ಶ್ರೀ ಪು.ತಿ.ನ. ಅವರ 'ಯದುಗಿರಿಯ ಮೌನವಿಕಾಸ' ಭಾಷಾಂತರಕಾರರ ಕೈಯಲ್ಲಿ *Silence on the Hills of Yadugiri* ಆಗಿ ತನ್ನ ಕೊನೆಯ ಭಾಗದ ಹತ್ತು ಸ್ಟ್ಯಾಂಜಾಗಳನ್ನೇ ಕಳೆದುಕೊಂಡು ನಿಶ್ಶಕ್ತವಾಗಿರುವುದನ್ನೂ ಇಲ್ಲಿ ಉಲ್ಲೇಖಿಸಬೇಕು.

ಭಾಷಾಂತರ ಮಾಡುವಾಗ ಮೂಲದ ಕೆಲವು ಭಾಗಗಳನ್ನು ಬಿಡುವುದು, ಮೂಲಕ್ಕೆ ಕೆಲವಂಶ ಸೇರಿಸುವುದು ಹಾಗೂ ಮೂಲವನ್ನು ತನ್ನ ಮೂಗಿನ ನೇರಕ್ಕೆ ಬದಲಾಯಿಸುವುದು—ಇವುಗಳನ್ನು ನಾವು ಸಾಮಾನ್ಯವಾಗಿ ಗಮನಿಸಬಹುದು. ಈ ಮೂರು ವಿಧಾನಗಳೂ ಮೂಲದಿಂದ ಭಾಷಾಂತರ ಉತ್ತಮವಾಗಲು ಅಥವಾ ಅಧಮವಾಗಲು ಕಾರಣವಾಗಬಲ್ಲವು. ಒಂದು ಉದಾಹರಣೆ ನೋಡೋಣ :

'ನಾನು ಬದುಕಿದ್ದೇನೆ; ಕೃಪೆ ಮಾಡಿ ತಿದ್ದುವಿರ?'
'ಹೌದೇನು? ಕ್ಷಮಿಸಿ, ಸರಿ, ನಾಳೆಯೇ ತಿದ್ದುವ'
'ನೀವು ಬದುಕಿರುವುದನು ಎಲ್ಲರಿಗೂ ತಿಳಿಸುವ'
ಎಷ್ಟು ನಿರ್ಲಿಪ್ತತೆ! ಎಂಥ ಸಮಾಧಾನ! ರಾಮರಾಮ (ಮೂಲ)

'I categorically assure you that I am alive,
Oblige me. please by correcting news'.
'Is that so, I am sorry, we will correct it tomorrow
The news of your living shall be announced' (ಭಾಷಾಂತರ)

ಮೂಲದ ಕೊನೆಯ ಪಂಕ್ತಿಯೇ ಭಾಷಾಂತರದಲ್ಲಿ ಅದೃಶ್ಯವಾಗಿರುವುದರಿಂದ ಒಟ್ಟಿನಲ್ಲಿ ಭಾಷಾಂತರ ಸಮರ್ಪಕವಾಗಿಲ್ಲ. ಕನ್ನಡದ ಕೆಲವು ಪದಗುಚ್ಛಗಳನ್ನೂ ನುಡಿಗಟ್ಟುಗಳನ್ನೂ ಇಂಗ್ಲಿಷಿಗೆ ಸಮರ್ಥವಾಗಿ ಭಾಷಾಂತರಿಸುವುದು ಕಷ್ಟಸಾಧ್ಯವಾದರೂ ಇದೇ ಕಾರಣದಿಂದ ಅವುಗಳಿಗೆ ಕತ್ತರಿಪ್ರಯೋಗಮಾಡದೆ, ಉಳಿಸಿಕೊಳ್ಳುವುದು ಲೇಸು. ಪ್ರತ್ಯೇಕ ಪಂಕ್ತಿಗಳನ್ನಷ್ಟೇ ಗಮನಿಸುವಾಗ, ಭಾಷಾಂತರ ಸರಿಯಾಗಿಲ್ಲವೆನಿಸಿದರೂ, ಒಟ್ಟು ಭಾಷಾಂತರದಲ್ಲಿ ತಮ್ಮನ್ನು ತಾವೇ ಸಮರ್ಥಿಸಿಕೊಳ್ಳುವ ಕೆಲವು ಪಂಕ್ತಿಗಳ ಭಾಷಾಂತರಗಳನ್ನು ಗಮನಿಸಿ :

'ಅರೆ ಎಂದು ಒಂದು ಕ್ಷಣ ಆಶ್ಚರ್ಯಪಟ್ಟೆ' (ಮೂಲ)
'I was surprised at first (ಭಾಷಾಂತರ)
'ಗಾಳಿಯಾಗಿ ಕಾಡುವ' (ಮೂ)
'Plaguing me like a ghost' (ಭಾ)
'ಇವಳಿಗೇನಾಗಿತ್ತಪ್ಪ ಧಾಡಿ?' (ಮೂಲ)
'What the devil was the matter with her any way? (ಭಾ)
'ಈ ಸಲವು ತಂದೆಯವರದು ಬರುವ ಶನಿವಾರ' (ಮೂ)
'This time, too, fathers death anniversary falls on saturday' (ಭಾ)

'ನೀನೇನು ಕೋತಿಯೋ ಕರಡಿಯೋ ಮಹಾರಾಯ?' (ಮೂ)

'What are you any way, a dancing monkey or a bear, my dear fellow?' (ಭಾ)

ಟೆಲಿಫೋನಿನಲ್ಲಿ 'ಸಂಪಾದಕರ ಕೊಡಿ' ಎಂದೆ (ಮೂ)

Blared in the telephone 'give me the editor' (ಭಾ)

'ಸಪ್ತಮಂ ದೈವಚಿಂತನಂ' (ಮೂ)

'The seventh way out is to turn to God' (ಭಾ)

'ತವರುಮನೆಯಿರುವ ಹೆಂಡತಿಯ ಪಾಡೇ ಹೀಗೆ' (ಮೂ)

Wives are always like this when visiting their natal home' (ಭಾ)

'ಈಗ ಎಲ್ಲಿಗೆ ಬಂತು?' (ಮೂ)

'Where are we now?' (ಭಾ)

ಮೂಲದಪದ, ಪದಗಳನ್ನೂ ವ್ಯಾಕರಣಾಂಶಗಳನ್ನೂ ಭಾಷಾಂತರದೊಂದಿಗಿಟ್ಟು ವಿಶ್ಲೇಷಿಸಿ ಬೆಲೆಕಟ್ಟಹೋದಾಗ ಪ್ರಾಯಃ ಮೇಲಿನ ಎಲ್ಲ ಭಾಷಾಂತರಗಳೂ 'ದ್ರೋಹ'ವಾಗಿಯೇ ಕಾಣುತ್ತವೆ. *Traduttari traditary* ಎಂಬ ಹೇಳಿಕೆ ಹೆಚ್ಚಾಗಿ ಅನ್ವಯಿಸುವುದು ಪದಶಃ ಭಾಷಾಂತರವಾದಾಗ ಮಾತ್ರ ಎಂದು ಇಲ್ಲಿ ಹೇಳಿದರೆ ತಪ್ಪಾಗಲಾರದೇನೋ.

ಭಾಷಾಂತರಗಳನ್ನು ಕೆಡಿಸಲು ಭಾಷಾಂತರಕಾರರ ಸ್ವಧರ್ಮಾಭಿಮಾನವೂ ಕಾರಣವಾದ ಪ್ರಸಂಗಗಳೂ (ನೇಮಿಚಂದ್ರನು 'ಲೀಲಾವತಿ'ಯನ್ನು ರಚಿಸುವಾಗ ಅದಕ್ಕೆ ಪ್ರಮುಖ ಮೂಲ ಆಕರವಾದ ಸುಬಂಧುವಿನ 'ವಾಸವದತ್ತಾ' ಕೃತಿಯ ವೈದಿಕ ಆವರಣವನ್ನು ಜೈನಧರ್ಮದ ಆವರಣವಾಗಿ ಪರಿವರ್ತಿಸಿಕೊಂಡುದು, ಶ್ರೀ ಎಂ. ರಾಮಶೇಷ ಶಾಸ್ತ್ರಿಗಳು 'ಮುದ್ರಾರಾಕ್ಷಸ'ದ ಅನುವಾದದಲ್ಲಿ ಜೈನನಾದ ಚಂದನದಾಸನ ಬಾಯಿಯಿಂದ 'ಶಾಂತಂ ಪಾಪಂ'ಗೆ ಬದಲಾಗಿ 'ಶಿವಶಿವಾ' ಎಂದು ಆಡಿಸಿದುದು ಇತ್ಯಾದಿ) ಇವೆ. ಇತ್ತೀಚಿನ ಭಾಷಾಂತರಕಾರರೊಬ್ಬರು ಮೂಲ ಇಂಗ್ಲಿಷ್ ಕೃತಿಯಲ್ಲಿ ಕೊಡಗಿನ ವಿಚಾರ ಬಂದಾಗ 'ಕೊಡಗು ದಕ್ಷಿಣ ಭಾರತದ ಸ್ವಿಟ್ಜರ್‌ಲ್ಯಾಂಡಿನಂತೆ' ಎಂದು ಮುಂತಾಗಿ ವರ್ಣಿಸಲು ಒಂದು ಚಿಕ್ಕ ಪ್ಯಾರಾವನ್ನೇ ಭಾಷಾಂತರದಲ್ಲಿ ಸೇರಿಸಿರುವ ಪ್ರಸಂಗವೂ ಇಲ್ಲಿ ನೆನಪಿಗೆ ಬರುತ್ತದೆ. ಭಾಷಾಂತರಕಾರರ ಇಂಥ ಪ್ರವೃತ್ತಿ ಮಾತ್ರ ಯೋಗ್ಯವಲ್ಲ.

ಒಟ್ಟನಲ್ಲಿ ಭಾಷಾಂತರದ ಗುಣದೋಷಗಳು ಭಾಷಾಂತರಕಾರರ ಅರ್ಹತೆ-ಅನರ್ಹತೆಗಳನ್ನು ಅವಲಂಬಿಸಿರುತ್ತವೆ. ತನ್ನ ಪ್ರತಿಭೆಯಿಂದ ಭಾಷಾಂತರಕಾರ ಮೂಲಕೃತಿಯನ್ನು ಇನ್ನಷ್ಟು ಉತ್ತಮಮಟ್ಟಕ್ಕೆ ಏರಿಸಲೂ ಬಲ್ಲ. ಫ್ರೆಂಚ್ ಮಹಾಕೃತಿಗಳಲ್ಲಿ ಒಂದಾದ ಪ್ರೌಸ್ತನ ಕಾದಂಬರಿಯೊಂದರ ಇಂಗ್ಲಿಷ್ ಭಾಷಾಂತರ ಮೂಲಕ್ಕೆ ನಿಷ್ಠವಾಗಿದ್ದೂ

ಸಾಹಿತ್ಯಿಕ ಗುಣದಲ್ಲಿ ಮೂಲವನ್ನು ಮೀರಿಸಿದೆ. ಇನ್ನೊಂದೆಡೆ ಮೂಲದಷ್ಟು ಪರಿಣಾಮ ಕಾರಿಯಾಗಿಲ್ಲವೆಂಬ ಕಾರಣದಿಂದ ಭಾಷಾಂತರಗಳನ್ನು ನಿರಾಕರಿಸುವುದೂ ಅಪೇಕ್ಷಣೀಯ ವಲ್ಲ. ಟಿ. ಎಸ್. ಎಲಿಯಟ್ಟನ *Wasteland*ನ ಒರಿಯಾ ಭಾಷಾಂತರವನ್ನು ಮೂಲ ದೊಂದಿಗೆ ಹೋಲಿಸುವಾಗ ಮೂಲಕ್ಕಿಂತ ಕೆಳದರ್ಜೆಯದಾಗಿ ಕಂಡುಬಂದರೂ ಅದಕ್ಕಿಂತ ಉತ್ತಮ ಭಾಷಾಂತರ ಒರಿಯಾ ಭಾಷೆಯಲ್ಲಿ ಬೇರೊಂದು ಇಲ್ಲದಿರುವುದರಿಂದ ಅದು ಆ ಪ್ರಾಂತದ ಜನರ ಅಪಾರ ಜನಪ್ರಿಯತೆ ಗಳಿಸಿದೆ. ಭಾಷಾಂತರಕಾರನ ಅಜ್ಞಾನ ಅಥವಾ ವಿಪರೀತ ಜ್ಞಾನಗಳಿಂದ ಮೂಲಕೃತಿ ಭಾಷಾಂತರದಲ್ಲಿ ನಿರ್ಜೀವ ನೆರಳಾಗದೆ ಇರುವುದು ಮುಖ್ಯ.

ಶ್ರೀ ಸಿ.ಪಿ.ಕೆ. ಅವರು ಒಂದೆಡೆ ಹೇಳಿದಂತೆ "ಪ್ರತಿಭೆ-ಕೌಶಲವಿಲ್ಲದವರ ಕೈಯಲ್ಲಿ ಭಾಷಾಂತರವಿರಲಿ, ಸ್ವತಂತ್ರ ಕೃತಿಯೂ ಕೊಲೆಯೇ ಆಗಬಹುದು. ದಕ್ಷ ಭಾಷಾಂತರಕಾರ ಮೂಲದ ಕೊಲೆ ಮಾಡುವುದಿಲ್ಲ; ಪುನರುತ್ಥಾನಗೊಳಿಸುತ್ತಾನೆ, ಪುನರ್ಜನ್ಮ ನೀಡು ತ್ತಾನೆ." ಆದ್ದರಿಂದ ಕೆಟ್ಟ ಭಾಷಾಂತರಗಳಿಗಷ್ಟೇ ಅನ್ವಯವಾಗುವ ಹೇಳಿಕೆಯನ್ನು ಎಲ್ಲ ಭಾಷಾಂತರಗಳಿಗೂ ಅನ್ವಯಿಸಿ, ಭಾಷೆ ಸಾಹಿತ್ಯಗಳ ಪ್ರಗತಿಗೆ ನೆರವಾಗುವ ಭಾಷಾಂತರ ಕಾರರ ವರ್ಗವನ್ನೇ ದ್ರೋಹಿಗಳು, ಹಂತಕರು ಎಂದು ಟೀಕಿಸುವುದು ಸರ್ವಥಾ ಸರಿ ಯಲ್ಲ!

೧೧ ಭಾಷಾಂತರ ಮತ್ತು ಸಂಸ್ಕೃತಿ

ಕೆ. ಜಿ. ಪ್ರಕಾಶ್

ಭಾಷಾಂತರ ಎರಡು ಭಾಷೆಗಳ ನಡುವೆ ನಡೆಯುವ ಕ್ರಿಯೆ. ಒಂದು ಭಾಷೆಯಲ್ಲಿನ ಎಲ್ಲವನ್ನೂ ಇನ್ನೊಂದು ಭಾಷೆಗೆ ಭಾಷಾಂತರಿಸುವುದು ಕಷ್ಟವಾಗುತ್ತದೆ. ಅಂದರೆ ಶಬ್ದಕ್ಕೆ ಸಮಾನವಾದ ಶಬ್ದವನ್ನು ಇಟ್ಟು ಭಾಷಾಂತರಿಸಬಹುದು. ಆದರೆ ಓದುಗನಲ್ಲಿ ಮೂಲದ ಪರಿಣಾಮವನ್ನು ಉಂಟುಮಾಡುವುದು ಅನೇಕ ವೇಳೆ ಕಷ್ಟವಾಗುತ್ತದೆ. ಉದಾಹರಣೆಗೆ ಜಪಾನಿ ಕಾದಂಬರಿಯಲ್ಲಿ ಬರುವ ಈ ವಾಕ್ಯವನ್ನು ನೋಡಿ. ''A young woman came in, dressed entirely in white.'' ಇದನ್ನು ಮೆಡಿಟರೇನಿಯನ್ ಭಾಷಾಂತರಕಾರನೊಬ್ಬ ತನ್ನ ಓದುಗರಿಗೆ ಶಬ್ದಕ್ಕೆ ಶಬ್ದವನ್ನಿಟ್ಟು 'ಯುವತಿಯೊಬ್ಬಳು ಸಂಪೂರ್ಣವಾಗಿ ಬಿಳಿಬಟ್ಟೆಯನ್ನು ಧರಿಸಿ ಬಂದಳು' ಎಂದು ಅರ್ಥಬರುವಂತೆ ತನ್ನ ಭಾಷೆಗೆ ಭಾಷಾಂತರಿಸಿದರೆ, ಅವನು ಕೇವಲ ಅರ್ಥವನ್ನು ಅಂತರಿಸಿದಂತೆ ಆಯಿತೇ ಹೊರತು ಮೂಲ ಲೇಖಕನ ಭಾವವನ್ನು ಒಯ್ದಂತೆ ಆಗಲಿಲ್ಲ. ಭಾಷಾಂತರದ ಓದುಗನಿಗೆ funeral impressionನ ಅರಿವೇ ಆಗುವುದಿಲ್ಲ. ಇದಕ್ಕೆ ಕಾರಣವಾದರೂ ಏನು. ಜಪಾನೀಯರಿಗೆ 'ಬಿಳಿ' ದುಃಖದ ಸಂಕೇತವಾದರೆ ಪಾಶ್ಚಾತ್ಯರಿಗೆ 'ಬಿಳಿ' ಪರಿಶುದ್ಧತೆಯ ಸಂಕೇತ. ಇದಕ್ಕೆ ಕಾರಣ ಅವರವರ ಆಚರಣೆಗಳು ಮತ್ತು ವರ್ತನೆಗಳು. ಆ ವರ್ತನೆಗಳು ಅಥವಾ ನಡವಳಿಕೆಗಳ ಮೊತ್ತವೇ ಸಂಸ್ಕೃತಿ.

ಭಾಷೆಗೂ ಸಂಸ್ಕೃತಿಗೂ ಬಹಳ ಹತ್ತಿರದ ನಂಟು. ಭಾಷೆ ಸಂಸ್ಕೃತಿಯನ್ನು ಉಳಿಸಿ ವರ್ಧಿಸುತ್ತದೆ. ಸಂಸ್ಕೃತಿ ಭಾಷೆಯ ಮೂಲಕ ಅಭಿವ್ಯಕ್ತವಾಗುತ್ತದೆ. ಸಂಸ್ಕೃತಿ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ. ಭಾಷೆ ಸಂಸ್ಕೃತಿಯ ಒಂದು ಅಂಗವಾಗಿದ್ದು ಅದರ ವಾಹಕವೂ ಆಗಿದೆ. ಆದ್ದರಿಂದ ಸಂಸ್ಕೃತಿಯನ್ನು ಬಿಟ್ಟು ಭಾಷೆ ನಿಲ್ಲಲಾರದು. ಒಂದು ಭಾಷೆಯ ಅಭಿವ್ಯಕ್ತಿ ಸಾಮರ್ಥ್ಯ ಅದರ ಸಂಸ್ಕೃತಿಗನುಗುಣವಾಗಿರುತ್ತದೆ. ಮಾನವನ ವರ್ತನೆಗಳು ಎಲ್ಲೆಡೆಗಳಲ್ಲೂ ಒಂದೇ ರೀತಿ ಇರದೆ ಇರುವುದರಿಂದ ಅದರ ಅಭಿವ್ಯಕ್ತಿಮಾಧ್ಯಮವಾದ ಭಾಷೆಗಳಲ್ಲೂ ಸಾರ್ವತ್ರಿಕತೆ ಕಂಡುಬರದೆ ವೈವಿಧ್ಯ ಮತ್ತು ವಿಶಿಷ್ಟತೆಗಳನ್ನು ಕಾಣುತ್ತೇವೆ. ಈ ಸಾಂಸ್ಕೃತಿಕ ವಿಭಿನ್ನತೆಯೇ ಭಾಷಾಂತರದಲ್ಲಿ ಅನೇಕ ತೊಡಕುಗಳನ್ನು ಉಂಟುಮಾಡುವುದು. ಮೇಲಿನ ಉದಾಹರಣೆಯಲ್ಲೂ ಮೂಲ ಲೇಖಕನ ಅಭಿಪ್ರಾಯವನ್ನು ಅರಿಯಬೇಕಾದರೆ ಪಾಶ್ಚಾತ್ಯ ಓದುಗರಿಗೆ ಮೂಲಕ್ಕೆ ತದ್ವಿರುದ್ಧವಾಗಿ ''dressed entirely in black'' ಎಂದು ಭಾಷಾಂತರಿಸಬೇಕಿತ್ತು.

ಇದೇ ರೀತಿಯಲ್ಲಿ 'Beating the breast' 'ಎದೆ ಬಡಿದುಕೊಳ್ಳುವುದು' ಇವು

ನಮ್ಮ ಸಂಸ್ಕೃತಿಗಳಲ್ಲಿ ದುಃಖದ ಸಂಕೇತವಾದರೆ ಆಫ್ರಿಕನ್ ಆದಿವಾಸಿಗಳ ಒಂದು ಭಾಷೆಯಲ್ಲಿ ಹರ್ಷವನ್ನು ಅಭಿವ್ಯಕ್ತಿಸುವ ಸಂಕೇತ. ಅಮಂಗಳವಾದುದನ್ನು ಆಡಬಾರದೆಂದು 'ಹಾವು ಕಚ್ಚಿತು' ಎನ್ನುವುದಕ್ಕೆ ಬದಲಾಗಿ 'ಹುಳ ಮುಟ್ಟಿತು' ಎಂದು ಹೇಳುವುದನ್ನು ಕೇಳಿರಬಹುದು. ಇದನ್ನು ಇಂಗ್ಲಿಷಿಗೆ 'The worm touched' ಎಂದು ಭಾಷಾಂತರಿಸಿದರೆ ಮೂಲದ ಅಭಿಪ್ರಾಯವನ್ನು ಭಾಷಾಂತರಿಸದೆ ಅಪದ್ಧವಾಗುತ್ತದೆ ಅಷ್ಟೆ.

ಸಾಹಿತ್ಯ ಸಮಾಜದ ಪ್ರತಿಬಿಂಬ ಎಂದರೆ ಆಯಾ ಸಮಾಜದ ಸಂಸ್ಕೃತಿಯನ್ನು ತಿಳಿಸುವ ಮಾಧ್ಯಮವೂ ಆಗಿರುತ್ತದೆ. ಪ್ರತಿಯೊಂದು ಸಮಾಜಕ್ಕೂ ತನ್ನದೇ ಆದ ಸಂಸ್ಕೃತಿ ಇರುತ್ತದೆ. ಸಾಂಸ್ಕೃತಿಕ ಅಗತ್ಯಗಳಿಗನುಗುಣವಾಗಿ ಆಯಾ ಭಾಷೆ ಪದಕೋಶವನ್ನು ಹೊಂದಿರುತ್ತದೆ. ಈ ಪದಕೋಶದ ವ್ಯತ್ಯಾಸ ಮತ್ತು ಅಭಿವ್ಯಕ್ತಿಯ ಭಿನ್ನತೆಗಳು ಭಾಷಾಂತರಕಾರನಿಗೆ ತೊಡಕನ್ನು ಒಡ್ಡುತ್ತವೆ.

ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಭಾಷಾಂತರಿಸುವಾಗ ಕಂಡುಬರುವ ತೊಡಕುಗಳೂ ಆಯಾ ಭಾಷೆಯ ಜಾಯಮಾನ ಮತ್ತು ಸ್ವಭಾವಗಳಿಗೆ ಅನುಗುಣವಾಗಿ ವಿಭಿನ್ನವಾಗಿರುತ್ತವೆ. ಉದಾಹರಣೆಗೆ ಕನ್ನಡದಿಂದ ತಮಿಳಿಗೊ ಅಥವಾ ತೆಲುಗಿಗೋ ಭಾಷಾಂತರಿಸುವಾಗ ಎದುರಾಗುವ ಸಮಸ್ಯೆಗಳಿಗಿಂತ ಕನ್ನಡದಿಂದ ಇಂಗ್ಲಿಷಿಗೆ ಭಾಷಾಂತರಿಸುವಾಗ ಎದುರಾಗುವ ಸಮಸ್ಯೆಗಳು ಹೆಚ್ಚು. ಇದಕ್ಕೆ ಕಾರಣ ಈ ಭಾಷೆಗಳು, ಅಂದರೆ ಕನ್ನಡ, ತಮಿಳು, ತೆಲುಗು ಇವು ಒಂದೇ ಭಾಷಾವರ್ಗಕ್ಕೆ (ದ್ರಾವಿಡ ಭಾಷಾವರ್ಗ) ಸೇರಿರುವುದು. ಒಂದೇ ಭಾಷಾವರ್ಗಕ್ಕೆ ಸೇರಿದ ಭಾಷೆಗಳಲ್ಲಿ ಭಾಷಾಂತರ ಕೆಲಸುಟ್ಟಿಗೆ ಸುಲಭವಾದಂತೆ ಒಂದೇ ಸಾಂಸ್ಕೃತಿಕ ಕ್ಷೇತ್ರದಲ್ಲಿನ ಭಾಷೆಗಳ ಭಾಷಾಂತರವೂ ಮೂರನೆಯದಾದ ವಿಭಿನ್ನ ಸಂಸ್ಕೃತಿಗೆ ಸಂಬಂಧಿಸಿದ ಭಾಷೆಗಳ ಭಾಷಾಂತರಕ್ಕಿಂತ ಸುಲಭ. ಉದಾಹರಣೆಗೆ ಕನ್ನಡ-ಹಿಂದಿ ಭಾಷೆಗಳು ಬೇರೆ ಬೇರೆ ಭಾಷಾವರ್ಗಕ್ಕೆ ಸೇರಿದ್ದರೂ ಅವು ಒಂದೇ ಸಾಂಸ್ಕೃತಿಕ ಕ್ಷೇತ್ರವಲ್ಲಿರುವುದರಿಂದ ಈ ಭಾಷೆಗಳ ನಡುವಣ ಭಾಷಾಂತರ ಕನ್ನಡ-ಜರ್ಮನ್ ಅಥವಾ ಕನ್ನಡ-ಇನ್ನಾವದೇ ವಿದೇಶಿ ಭಾಷೆಗಳ ನಡುವಣ ಭಾಷಾಂತರಕ್ಕಿಂತ ಸುಲಭ.

ಭಾಷಾಂತರಕಾರ Bilingual ಅಷ್ಟೇ ಆಗಿದ್ದರೆ ಸಾಲದು. ಆತ Bicultural ಕೂಡ ಆಗಿರಬೇಕಾಗುತ್ತದೆ. ಎರಡು ಭಾಷೆ ಮತ್ತು ಸಂಸ್ಕೃತಿಗಳಲ್ಲಿ ಸಾಕಷ್ಟು ಪರಿಶ್ರಮವಿದ್ದಾಗ ಮಾತ್ರ ಸಮರ್ಥವಾಗಿ ಭಾಷಾಂತರಿಸಬಲ್ಲ. ಸಾಂಸ್ಕೃತಿಕ ಅಂಶಗಳು ಭಾಷಾಂತರಕ್ಕೆ ಸಮಸ್ಯೆಯನ್ನು ಒಡ್ಡಿದರೂ ಸರಳ ಸಂಸ್ಕೃತಿಯಿಂದ ಸಂಕೀರ್ಣ ಸಂಸ್ಕೃತಿಗೆ ಭಾಷಾಂತರಿಸುವುದು ಸಂಕೀರ್ಣ ಸಂಸ್ಕೃತಿಯಿಂದ ಸರಳ ಸಂಸ್ಕೃತಿಗೆ ಭಾಷಾಂತರಿಸುವುದಕ್ಕಿಂತ ಕೆಲಸುಟ್ಟಿಗೆ ಸುಲಭ.

ಸಾಂಸ್ಕೃತಿಕ ಸಮಸ್ಯೆಗಳನ್ನು ವಿವರವಾಗಿ ಪರಿಶೀಲಿಸಿದ ಯೂಜಿನ್ ನೀಡಾ ಈ ಸಮಸ್ಯೆಗಳನ್ನು ಐದು ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಅವೆಂದರೆ: 1. ಪರಿಸರ (ecology),

2. ವಸ್ತು ಸಂಸ್ಕೃತಿ (material culture), 3. ಸಾಮಾಜಿಕ ಸಂಸ್ಕೃತಿ (social culture), 4. ಧಾರ್ಮಿಕ ಸಂಸ್ಕೃತಿ (religious culture), ಮತ್ತು 5. ಭಾಷಿಕ ಸಂಸ್ಕೃತಿ (linguistic culture). ಇವುಗಳನ್ನು ಸ್ವಲ್ಪ ವಿವರವಾಗಿ ಈಗ ಪರಿಶೀಲಿಸೋಣ.

1. **ಪರಿಸರ :** ಪರಿಸರ ಸಂಸ್ಕೃತಿಯಮೇಲೆ ವಿಶೇಷ ಪ್ರಭಾವವನ್ನು ಬೀರುತ್ತದೆ. 'ಓಯಸಿಸ್' ಮರಳುಗಾಡಿನಲ್ಲಿರುವ ನೀರ್ದಾಣ. ಬಯಲುನಾಡಿನವರಿಗೆ ಇದರ ಅರಿವು ಇರುವುದಿಲ್ಲ. ಅವರಿಗೆ ಈ ಕಲ್ಪನೆ ಮೂಡಿಸುವುದು ಕಷ್ಟ. ಹಾಗೆಯೇ ಪರ್ವತಗಳನ್ನೆ ಕಂಡರಿಯದ ಜನರಿಗೆ ಪರ್ವತಗಳ ವರ್ಣನೆ ಮಾಡಿದರೆ ಗ್ರಹಿಸುವುದು ಕಷ್ಟ. ಅಂತೆಯೇ ನದಿ, ಸರೋವರ, ಸಮುದ್ರ, ತೊರೆ, ಹಳ್ಳ, ಕೆರೆ ಇವುಗಳನ್ನು ಭಾಷಾಂತರಿಸುವುದೂ ಅಷ್ಟೇ ಕಷ್ಟವಾಗುತ್ತದೆ. ಇವುಗಳಿಗೆ ಪದಕ್ಕೆ ಪದವಿಡುವುದೂ ಬಹಳ ಕಷ್ಟ. ಹೀಗಾಗಿ ನದಿಯನ್ನು—flowing water ಎಂದೂ, ಸರೋವರವನ್ನು—large expanse of water ಎಂದೂ ಭಾಷಾಂತರಿಸಬೇಕಾಯಿತೆಂದು ನೀಡಾ ಹೇಳುತ್ತಾರೆ. ಇಂಥವುಗಳ ಭಾಷಾಂತರ ಉದ್ದಿಷ್ಟ ಭಾಷೆಯ ಸಾಂಸ್ಕೃತಿಕ ಪದಕೋಶ ಹಾಗೂ ಆದರ ಅರಗಿಸಿ ಕೊಳ್ಳುವ ಶಕ್ತಿಯನ್ನು ಅವಲಂಬಿಸಿರುತ್ತದೆ. ಬೈಬಲ್ ಭಾಷಾಂತರವೊಂದರಲ್ಲಿ 'ಮರುಭೂಮಿ'ಯನ್ನು 'ಏನೂ ಬೆಳೆದಿರದ ಪ್ರದೇಶ' ಎಂದು ಭಾಷಾಂತರಿಸಬೇಕಾಯಿತೆಂದು ಶ್ರೀ ಎಸ್. ಶ್ರೀಧರಮೂರ್ತಿಯವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

2. **ವಸ್ತು ಸಂಸ್ಕೃತಿ :** ಪ್ರತಿಯೊಂದು ಜನಾಂಗವೂ ಬಳಸುವ ವಸ್ತುಗಳು ಅವರ ಆಗತ್ಯ ಹಾಗೂ ಪರಿಸರಕ್ಕನುಗುಣವಾಗಿರುತ್ತದೆ. ಇದಕ್ಕನುಸಾರವಾಗಿ ಆವರ ಜೀವನ ವಿಧಾನ ಇರುವುದರಿಂದ ವಸ್ತುವೈವಿಧ್ಯ ಸಾಂಸ್ಕೃತಿಕ ತೊಡಕನ್ನು ಒಡ್ಡುತ್ತದೆ. ಕರಾವಳಿಯಲ್ಲಿ ವಾಸಿಸುವವರು ಮೀನುಗಳನ್ನು ಮತ್ತು ಅವರು ಬಳಸುವ ದೋಣಿಗಳನ್ನು ಅನೇಕ ವಿಧಗಳಲ್ಲಿ ಹೆಸರಿಸುತ್ತಾರೆ. ಬೇರೆ ಬೇರೆ ಭಾಷೆಯ ಮಾತಿರಲಿ, ಒಂದೇ ಭಾಷೆಯಲ್ಲಿ ಈ ವಿವಿಧ ಶಬ್ದಗಳು ಎಲ್ಲೆಡೆಯಲ್ಲೂ ಪ್ರಚಲಿತವಾಗಿರುವುದಿಲ್ಲ. ಒಳನಾಡಿನ ಜನರು ಆ ವಿವಿಧ ರೀತಿಯ ದೋಣಿಗಳನ್ನಾಗಲಿ ಮೀನುಗಳನ್ನಾಗಲಿ ಗುರುತಿಸಲಾರದೆ ಹೋಗುತ್ತಾರೆ. ಅಂಥ ಸಂದರ್ಭದಲ್ಲಿ ಅಂಕಿತನಾಮ ಬರೆದು ಒಂದು ರೀತಿಯ ಮೀನು ಎಂದು ವ್ಯಾಖ್ಯಾನಿಸಿ ಸಮಾಧಾನಪಟ್ಟುಕೊಳ್ಳಬೇಕಾಗುತ್ತದೆ. ಹಾಗೆಯೆ ಎಸ್ಕಿಮೊ ಜನ ಮಂಜಿನ ವೈವಿಧ್ಯಗಳನ್ನು ಗುರುತಿಸುವಷ್ಟು ನಾವು ಗುರುತಿಸಲಾರೆವು. ಹಳ್ಳಿಯಲ್ಲಿ ಸಾರು ಮಾಡಲು ಬಳಸುವ 'ಕಲ್ಲುಮರಿಗೆ' ನಗರಜೀವಿಗಳಾದ ನಮಗೇ ಪರಿಚಯವಿಲ್ಲ. ಉಕ್ಕು, ಪ್ಲಾಸ್ಟಿಕ್ ಪಾತ್ರೆಗಳು ಬಂದು ಅದು ಮರೆತೇ ಹೋಗಿದೆ. ಇದನ್ನು ಬೇರೆ ಸಂಸ್ಕೃತಿಯ ಜನರಿಗೆ ಪರಿಚಯಿಸುವುದು ಬಹಳ ತೊಡಕಿನ ಕೆಲಸ. stone vessel ಎಂದು ಹೇಳಿ ವ್ಯಾಖ್ಯಾನ ನೀಡಬೇಕಾಗುತ್ತದೆ. ನಮ್ಮ ಜೀವನ ವಿಧಾನದಲ್ಲಿ ವಸ್ತು ಸಂಸ್ಕೃತಿಯೇ ಬಹಳವಾಗಿ ವ್ಯಾಪಿಸಿರುವುದರಿಂದ ಇವುಗಳ ಭಾಷಾಂತರ ವಿಭಿನ್ನ ಸಂಸ್ಕೃತಿಗೆ ಸೇರಿದ ಭಾಷೆಗಳ ಭಾಷಾಂತರ ಕಾರ್ಯದಲ್ಲಿ ಅತ್ಯಂತ ತೊಡಕಿನ ಸಮಸ್ಯೆಯಾಗಿದೆ.

3. **ಸಾಮಾಜಿಕ ಸಂಸ್ಕೃತಿ:** ವ್ಯಕ್ತಿಗಳು ವಾಸಿಸುತ್ತಿರುವುದು ಸಮಾಜದಲ್ಲಿ. ಸಾಮಾಜಿಕ ವರ್ತನೆಯೇ ಸಂಸ್ಕೃತಿ. ಸಾಮಾಜಿಕ ವ್ಯವಸ್ಥೆಗನುಗುಣವಾಗಿ ಭಾಷೆ ಸಾಂಸ್ಕೃತಿಕ ಪದಕೋಶವನ್ನು ಹೊಂದಿರುತ್ತದೆ. ಭಾಷಾವಿಜ್ಞಾನಿಗಳು ಪ್ರತಿಯೊಂದು ಭಾಷೆಯ ಪದಸಂಪತ್ತನ್ನೂ ಎರಡು ಗುಂಪುಗಳಾಗಿ ವಿಂಗಡಿಸುತ್ತಾರೆ: 1. Intimate vocabulary, ಮತ್ತು 2. Cultural vocabulary. ಈ Intimate vocabularyಯ ಭಾಷಾಂತರ ತಕ್ಕಮಟ್ಟಿಗೆ ಸುಲಭ. ಏಕೆಂದರೆ ಶಬ್ದಕ್ಕೆ ಶಬ್ದವನ್ನು ಇಡುವುದರಿಂದ ಇದನ್ನು ಪರಿಹರಿಸಿಕೊಳ್ಳಬಹುದು. ಆದರೆ Cultural vocabulary ಸಮಸ್ಯೆ ಹಾಗಾಗುವುದಿಲ್ಲ. ಏಕೆಂದರೆ ಪ್ರತಿಯೊಂದು ಭಾಷೆಗೂ ತನ್ನದೇ ಆದ ಸಾಂಸ್ಕೃತಿಕ ಪದಕೋಶ ಇರುತ್ತದೆ. ಇದರಲ್ಲಿ ಸಾಮಾನ್ಯ ಅಂಶಗಳು ಸಿಗದೆ ಹೋಗುವ ಸಾಧ್ಯತೆಯೂ ಉಂಟು.

ಉದಾಹರಣೆಗೆ ಬಾಂಧವ್ಯ ಸೂಚಕ ಪದಗಳನ್ನು (kinship terms) ಗಮನಿಸೋಣ. ಕನ್ನಡದಲ್ಲಿ ಅಣ್ಣ ತಮ್ಮ ಎಂದು ಸ್ಪಷ್ಟಪಡಿಸಬಹುದು. ಆದರೆ ಇಂಗ್ಲಿಷಿನಲ್ಲಿ 'Brother' ಒಂದೇ ಶಬ್ದ ಇರುವುದು. ಅರ್ಥಸ್ಪಷ್ಟತೆಗಾಗಿ elder brother, younger brother' ಎಂದು ಆದಿಪ್ರತ್ಯಯ ಸೇರಿಸಿ ಸಮಸ್ಯೆ ನಿವಾರಿಸಬೇಕಾಗುತ್ತದೆ. ಅಂತೆಯೇ ಇಂಗ್ಲಿಷಿನ Brother ಶಬ್ದಕ್ಕೆ ಸಂವಾದಿಯಾದ ಅಣ್ಣ ತಮ್ಮ ಇಬ್ಬರನ್ನೂ ಒಳಗೊಳ್ಳುವಂಥ ಸಾಮಾನ್ಯ ಪದ ಕನ್ನಡದಲ್ಲಿಲ್ಲ. ಸಹೋದರ ಮುಂತಾದ ಪದಗಳು ಸಹ+ಉದರ ಸೇರಿ ಆಗಿರುವ ಸಂಸ್ಕೃತ ಪದ ಅಷ್ಟೆ. ಇದೇ ರೀತಿ ಅಕ್ಕ, ತಂಗಿ ಶಬ್ದಗಳ ಸಮಸ್ಯೆ ಕೂಡ.

'uncle' ಎಂದರೆ ಸೋದರಮಾವ, ಚಿಕ್ಕಪ್ಪ, ದೊಡ್ಡಪ್ಪ ಎಲ್ಲರೂ ಸೇರಿ ಹೋಗುತ್ತಾರೆ. ಇವನ್ನು ಸೂಚಿಸಲು ರಷ್ಯನ್ ಭಾಷೆಯಲ್ಲೂ ಕನ್ನಡದಂತೆಯೇ ಬೇರೆ ಬೇರೆ ಪದಗಳಿವೆ. ಇಂಗ್ಲಿಷಿಗೆ ರಷ್ಯನ್ ಕೃತಿಯೊಂದನ್ನು ಭಾಷಾಂತರಿಸುವಾಗ ಇದು ಸಮಸ್ಯೆಗಳ ಜಾಲವನ್ನೆ ಒಡ್ಡಿತು ಎಂದು ರಷ್ಯನ್ ಕೃತಿಯ ಅನುವಾದಕರೊಬ್ಬರು ತಿಳಿಸಿದ್ದಾರೆ. ಅವರು ಈ ಸಮಸ್ಯೆಯನ್ನು ದೊಡ್ಡಪ್ಪ—great father, ಚಿಕ್ಕಪ್ಪ—little father ಹೀಗೆ ಒಂದೊಂದು ಶಬ್ದವನ್ನು ರೂಪಿಸಿಕೊಂಡು ನಿವಾರಿಸಿಕೊಂಡರಂತೆ.

ಜಾತಿವ್ಯವಸ್ಥೆಯಿಲ್ಲದ ಸಮಾಜಕ್ಕೆ ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಆಚರಣೆಗಳ ವಿಷಯವನ್ನು ಅನುವಾದಿಸುವುದು ಬಹಳ ಕಷ್ಟವಾಗುತ್ತದೆ. 'ವಿವಾಹವಿಚ್ಛೇದನ'ವೂ ಈ ಪದ್ಧತಿಯಿಲ್ಲದ ಸಮಾಜಕ್ಕೆ ವಿಚಿತ್ರವಾಗಿ ಕಾಣುತ್ತದೆ. ಹೀಗೆ ಸಾಮಾಜಿಕ ಸಂಸ್ಕೃತಿ ಭಾಷಾಂತರದಲ್ಲಿ ಅನೇಕ ತೊಡಕನ್ನುಂಟುಮಾಡುತ್ತದೆ. ಇಲ್ಲೂ ವ್ಯಾಖ್ಯಾನ ವಿಧಾನವೊಂದೇ ಪರಿಹಾರಮಾರ್ಗ.

4. **ಧಾರ್ಮಿಕ ಸಂಸ್ಕೃತಿ:** ಪ್ರತಿಯೊಂದು ಜನಾಂಗಕ್ಕೂ, ಸಮಾಜಕ್ಕೂ ತನ್ನದೇ ಆದ ವಿಶಿಷ್ಟ ಧರ್ಮವಿಧಾನ ಇರುತ್ತದೆ. ಈ ಧಾರ್ಮಿಕ ರೀತಿ ನೀತಿಗಳು ಬಹಳ ಗೊಂದಲಮಯವಾದ ಸಮಸ್ಯೆಯನ್ನು ಒಡ್ಡುತ್ತವೆ. ಏಕೆಂದರೆ ಪ್ರತಿಯೊಂದು ಧಾರ್ಮಿಕ ಶಬ್ದಕ್ಕೂ ತನ್ನದೇ ಆದ ಪರಂಪರೆ ಇರುತ್ತದೆ. ಈ ಪರಂಪರೆ ಆ ಶಬ್ದಕ್ಕೆ

ವಿಶಿಷ್ಟವಾದ ಅರ್ಥಕೋಶವನ್ನು ಸೃಜಿಸಿರುತ್ತದೆ. ಈ ಅರ್ಥವನ್ನು ಬೇರೊಂದು ಭಾಷೆಯ ಆದರ ಅರಿವೇ ಇಲ್ಲದ ಸಂಸ್ಕೃತಿಯ ಜನರಿಗೆ ಅಭಿವ್ಯಕ್ತಿಸುವುದು ಬಹಳ ಕಷ್ಟದ ಕೆಲಸ. ಡಾ. ಯು. ಆರ್. ಅನಂತಮೂರ್ತಿಯವರ 'ಸಂಸ್ಕಾರ', ಕಾದಂಬರಿಯನ್ನು ಇಂಗ್ಲಿಷಿಗೆ ಅನುವಾದಿಸಿರುವ ಶ್ರೀ ಎ. ಕೆ. ರಾಮಾನುಜನ್ ಅವರು "ಶೀರ್ಷಿಕೆಯ ಅನುವಾದವೇ ಸಮಸ್ಯೆಗಳನ್ನು ಮುಂದಿಡುತ್ತದೆ. ಅದು ಶವ ಸಂಸ್ಕಾರ ಎಂಬರ್ಥದಿಂದ (ಕಾದಂಬರಿಯಲ್ಲಿ ನಾರಣಪ್ಪನ ಸಂಸ್ಕಾರದಿಂದ) ಸುಧಾರಣೀ ಕರಣ (ಪ್ರಾಣೇಶಾಚಾರ್ಯ) ಎಂಬರ್ಥದವರೆಗೂ ವಿಶಾಲ ವ್ಯಾಪ್ತಿಯುಳ್ಳಂಥಾದ್ದು. ಹಾಗಾಗಿ ಈ ಶೀರ್ಷಿಕೆಯನ್ನು ಅದೇರೀತಿ ಇಟ್ಟುಕೊಂಡು, ಅದಕ್ಕೆ ವಿವರಣಕ ನೀಡುವು ದೊಂದೇ ಇರುವ ಮಾರ್ಗವಾಗಿದೆ" ಎಂದು ಹೇಳಿದ್ದಾರೆಂದು ಶ್ರೀ ಎನ್. ಎಸ್. ಶಾರದಾ ಪ್ರಸಾದ್ ಅವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ನಮ್ಮ ಧಾರ್ಮಿಕ ಹೆಸರುಗಳಾಗಲಿ, ದೈವದ ಹೆಸರುಗಳಾಗಲಿ, ಧಾರ್ಮಿಕ ಕಾರ್ಯ ಗಳಾಗಲಿ ವಿದೇಶೀ ಸಂಸ್ಕೃತಿಯ ಜನರಿಗೆ ಅದೇ ಶಬ್ದವನ್ನು ಇಟ್ಟರೆ, ವಿದೇಶೀಯವಾಗಿ ಪರಿಣಮಿಸುತ್ತವೆಯೆ ಹೊರತು ಮೂಲದ ಅರ್ಥವಿಶೇಷವನ್ನು ತಿಳಿಸಲಾರದಾಗುತ್ತದೆ. ಅದಕ್ಕೆ ಬದಲಾಗಿ ಉದ್ದಿಷ್ಟ ಭಾಷೆಯ ಶಬ್ದವೊಂದನ್ನು ಹಾಕಿದರೆ ಇನ್ನೊಂದು ರೀತಿಯ ಗೊಂದಲವಾಗುತ್ತದೆ. ಧಾರ್ಮಿಕ ಸಂಸ್ಕೃತಿಯನ್ನು ಅನುವಾದಿಸುವುದು ಬಹಳ ಕಷ್ಟದ ಕೆಲಸ. ಇಲ್ಲೂ ವಿವರಣಕದ ಮೂಲಕ ವ್ಯಾಖ್ಯಾನಮಾಡುವುದೊಂದೇ ಇರುವ ಏಕೈಕ ಪರಿಹಾರ.

ಒಂದು ಉದಾಹರಣೆಯನ್ನು 'ಸಂಸ್ಕಾರ' ಕಾದಂಬರಿಯ ಅನುವಾದದಿಂದ ನೋಡ ಬಹುದು.

ಮೂಲ : ಜಾತಕದ ಪ್ರಕಾರ ಗಜಕೇಸರಿಯೋಗವಿದೆ. ಕಾಲಿಟ್ಟ ಮನೆಗೆ ಲಕ್ಷ್ಮಿ ಯಾಗುತ್ತಾಳೆ.

ಅನು : According to her horoscope, she has a rare Lion-Elephant combination for a good future· She will be the very goddess of Luck to any house she sets foot in.

ಇದು ಉತ್ತಮ ಅನುವಾದವೇ ಆದರೂ ಮೂಲದ crispness ಮತ್ತು ಬಿಗುವು ಅನುವಾದದಲ್ಲಿಲ್ಲ. ಸಾಂಸ್ಕೃತಿಕ ಅಂತರ ಈ ರೀತಿಯ ಸುತ್ತು ಬಳಸಿನ ಹೇಳಿಕೆಗೆ ಕಾರಣ ವಾಗುತ್ತದೆ.

"ಕಳಶವನ್ನು ಹೊತ್ತ ಕನ್ನೆಯರು ನಡೆಮುಡಿಯ ಮೇಲೆ ನಡೆದು ಬಂದರು, ದೇವರು ಹೊತ್ತವನು ಆವೇಶದಿಂದ ಕುಣಿಯುತ್ತಾ ಅವರನ್ನು ಹಿಂಬಾಲಿಸಿದನು"—ಈ ವಾಕ್ಯ ದಲ್ಲಿ ನಮ್ಮ ಸಂಸ್ಕೃತಿಯ ಅರಿವಿಲ್ಲದವನಿಗೆ ಅರ್ಥವಾಗುವ ಪದ ಒಂದೂ ಇಲ್ಲ. ಇಂಥ ವಾಕ್ಯಗಳ ಭಾಷಾಂತರ ವಿದೇಶೀಯರಿಗಾಗಿ ಮಾಡಿದಾಗ ಪ್ರತಿಯೊಂದು ಪದಕ್ಕೂ ವ್ಯಾಖ್ಯಾನ ನೀಡಬೇಕಾಗುತ್ತದೆ.'ಕಳಶ'ವನ್ನು ಅವರು ಕಾಣದಿರಬಹುದು.'ಕನ್ನೆ'ಯರಿಗೆ

ನಮ್ಮ ಸಂಸ್ಕೃತಿಯಲ್ಲಿರುವ ಪ್ರಾಮುಖ್ಯ ಅವರ ಸಂಸ್ಕೃತಿಯಲ್ಲಿಲ್ಲದಿರಬಹುದು. ಹೀಗೆ ಪ್ರತಿಯೊಂದು ಶಬ್ದವೂ ವಿವರಣಾಪೇಕ್ಷಿಯಾಗಬಹುದು.

5. ಭಾಷಿಕ ಸಂಸ್ಕೃತಿ: ಭಾಷೆಯ ವರ್ತನೆಯೇ ಭಾಷಿಕ ಸಂಸ್ಕೃತಿ. ಎಲ್ಲ ಭಾಷೆಗಳ ರಚನೆಯೂ ಒಂದೇ ರೀತಿ ಇರುವುದಿಲ್ಲ. ಅವುಗಳ ರಚನೆಗೆ ಅನುಸಾರವಾಗಿ ಅವು ಕೆಲಸ ನಿರ್ವಹಿಸುತ್ತವೆ. ಭಾಷೆಗಳ ವರ್ತನೆಯನ್ನು ನಿಯಂತ್ರಿಸಲು ವ್ಯಾಕರಣ ತೊಡಗುತ್ತದೆ. ಆದರೂ ಜೀವಂತ ಭಾಷೆ ಪರಿವರ್ತನೆಗೊಳ್ಳುತ್ತಲೇ ಇರುತ್ತದೆ. ಭಾಷೆ ಸಂಸ್ಕೃತಿಯ ಒಂದು ಭಾಗ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಭಾಷಾಂತರಿಸುವಾಗ ಇತರ ಸಾಂಸ್ಕೃತಿಕ ಸಮಸ್ಯೆಗಳ ಜೊತೆಗೆ ಆಯಾ ಭಾಷೆಗಳ ವಿಶೇಷ ಲಕ್ಷಣಗಳೇ ಅನೇಕ ಸಮಸ್ಯೆಗಳನ್ನು ಒಡ್ಡುತ್ತವೆ. ಈ ಸಮಸ್ಯೆಗಳನ್ನು ಸ್ಥೂಲವಾಗಿ ಎರಡು ರೀತಿಗಳಾಗಿ ವಿಂಗಡಿಸಬಹುದು. 1. ಪದಕೋಶ ಸಮಸ್ಯೆಗಳು, ಮತ್ತು 2. ವ್ಯಾಕರಣ ಸಮಸ್ಯೆಗಳು (grammatical categories)

1. ಪದಕೋಶ ಸಮಸ್ಯೆಗಳು: ಒಂದೇ ವಸ್ತು ಅಥವಾ ಪರಿಕಲ್ಪನೆ ಎರಡು ಭಾಷೆಗಳಲ್ಲೂ ಅಂದರೆ ಮೂಲ ಮತ್ತು ಉದ್ದಿಷ್ಟ ಭಾಷೆಗಳೆರಡರಲ್ಲೂ ಇದ್ದರೆ ಸಮಾನಾರ್ಥಕ ಶಬ್ದವನ್ನು ಹಾಕಬಹುದು. ಸಮಾನಾರ್ಥಕ ಶಬ್ದ ಸಿಗದೆ ಇದ್ದಾಗ ಅತ್ಯಂತ ಹತ್ತಿರದ ಸಮಾನಾರ್ಥಕ ಶಬ್ದವನ್ನು ಹಾಕಬೇಕಾಗುತ್ತದೆ. ಸಾರ್ವತ್ರಿಕ ಸಂಸ್ಕೃತಿಯೊಂದು ನಿರ್ಮಾಣವಾದಾಗ ಈ ಸಮಾನಾರ್ಥಕ ಶಬ್ದದ ಸಮಸ್ಯೆ ಉಳಿಯುವುದಿಲ್ಲ. ಹಾಗಿಲ್ಲದೆ ಇರುವುದರಿಂದ ಸಮಾನಾರ್ಥಕ ಶಬ್ದವನ್ನು ಒದಗಿಸುವುದೆ ಮೊದಲನೆಯ ಸಮಸ್ಯೆಯಾಗಿ ಉಳಿದಿದೆ. ಪಶುಪತಿ, ಶಿವ, ರುದ್ರ, ಕಾಪಾಲಿ, ನಟರಾಜ ಇವೆಲ್ಲವೂ ಶಿವನ ವಿವಿಧ ಹೆಸರುಗಳಾದರೂ Lord Shiva ಎಂದಷ್ಟೇ ಹೇಳಿ ತೃಪ್ತಿಪಟ್ಟುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಪ್ರತಿಯೊಂದು ಶಬ್ದದ ಹಿನ್ನೆಲೆಯಲ್ಲೂ ತನ್ನದೇ ಆದ ಭಾವಕೋಶ ವ್ಯಾಪಿಸಿರುತ್ತದೆ. ಆ ಭಾವ ಅಭಿವ್ಯಕ್ತವಾಗದೆ ನಿಂತುಹೋಗುತ್ತದೆ. ಆಗ ಭಾಷಾಂತರಕಾರ ಶಬ್ದಬ್ರಹ್ಮನಾಗಿ ಶಬ್ದಗಳನ್ನು ಸೃಷ್ಟಿಸಬೇಕಾಗುತ್ತದೆ. ಚಲಾವಣೆಯಲ್ಲಿ ನಿಂತು ಹೋಗಿರುವ ಪದಗಳನ್ನು ಚಲಾವಣೆಗೆ ತರಬೇಕಾಗುತ್ತದೆ. ಇರುವ ಶಬ್ದಕ್ಕೆ ಹೊಸ ಅರ್ಥನೀಡಿ ವ್ಯಾಪ್ತಿ ಹೆಚ್ಚಿಸಬೇಕಾಗುತ್ತವೆ. ಇಲ್ಲವೆ ಹೊಸ ಶಬ್ದವನ್ನೆ ಟಂಕಿಸಬೇಕಾಗುತ್ತದೆ. ಕೆಲವು ಭಾಷೆಯಲ್ಲಿ 'ಹೆಂಡತಿ' ಶಬ್ದಕ್ಕೂ 'ಹೆಂಗಸು' ಶಬ್ದಕ್ಕೂ ವ್ಯತ್ಯಾಸವಿಲ್ಲ. 'ಕಣ್ಣು' ಎನ್ನುವ ಶಬ್ದಕ್ಕೂ 'ನೋಡು' ಎನ್ನುವ ಕ್ರಿಯಾಪದಕ್ಕೂ ವ್ಯತ್ಯಾಸವಿಲ್ಲ.

ಟಿಬೆಟೊ ಬರ್ಮನ್ ಭಾಷೆಯೊಂದರಲ್ಲಿ ವಿವಿಧ ರೀತಿಯ ಇರುವೆಗಳನ್ನು ಸೂಚಿಸುವ 40 ಶಬ್ದಗಳಿವೆ. ಆದರೆ ಸಾಮಾನ್ಯಶಬ್ದವಾದ 'ಇರುವೆ'ಗೆ ಸಮಾನಾರ್ಥಕ ಶಬ್ದವಿಲ್ಲ. ಇದೇರೀತಿ ಬಣ್ಣಗಳ ಸಮಸ್ಯೆಕೂಡ. ಗಿಣಿಹಸುರು, ಎಲೆಹಸುರು, ಹೊಂಗೆ ಹಸುರು, ಪಾಚಿ ಹಸುರು ಧೂಳು ಹಸುರು ಈ ವಿವಿಧ ಹಸುರುಗಳಿಗೆ ಸಮಾನಾರ್ಥಕ ಹೊಂದಿಸುವುದು ಬಹಳ ಕಷ್ಟದ ಕೆಲಸ.

2. ವ್ಯಾಕರಣ ಸಮಸ್ಯೆಗಳು : ಎಲ್ಲ ಭಾಷೆಗಳ ರಚನೆಯೂ ಒಂದೇರೀತಿ ಇರುವುದಿಲ್ಲ. ಲಿಂಗ (gender)ವನ್ನೇ ಉದಾಹರಣೆಗೆ ಪರಿಶೀಲಿಸಿದರೂ ಕನ್ನಡದಲ್ಲಿ ಪುಲ್ಲಿಂಗ ಸ್ತ್ರೀಲಿಂಗ, ನಪುಂಸಕಲಿಂಗ ಎಂದು ಮೂರು ವಿಧವಾದರೆ ಹಿಂದಿ ಭಾಷೆಯಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಎರಡೇ ಲಿಂಗಗಳು. ಇಂಗ್ಲಿಷಿನಲ್ಲಿ ನಾಲ್ಕು ಲಿಂಗಗಳು. ಸಂಸ್ಕೃತದಲ್ಲಿ ಕನ್ನಡದಂತೆಯೇ ಮೂರು ಲಿಂಗಳು ಇದ್ದರೂ ಲಿಂಗವಿಭಜನೆ ಕನ್ನಡದಂತಿಲ್ಲ. ಹೆಂಡತಿಯನ್ನು ಸೂಚಿಸುವ ದಾರಾ, ಪತ್ನೀ, ಕಲತ್ರ ಮೂರು ಶಬ್ದಗಳೂ ಮೂರು ಲಿಂಗದಲ್ಲಿವೆ. 'Look at the moon. She is floating in the sky' ಎಂಬ ವಾಕ್ಯವನ್ನು 'ಚಂದ್ರನನ್ನುನೋಡು ಅವಳು ಆಕಾಶದಲ್ಲಿ ತೇಲುತ್ತಿದ್ದಾಳೆ' ಎಂದು ಭಾಷಾಂತರಿಸಿದರೆ ಕನ್ನಡಕ್ಕೆ ಎಷ್ಟು ಅಸಹಜವಾಗಿ ಕಾಣುತ್ತದೆ ಎಂಬುದನ್ನು ವಿವರಿಸಬೇಕಿಲ್ಲ.

ಇದೇ ರೀತಿ 'ವಚನ'ಗಳ ಸಮಸ್ಯೆ ಕೂಡ. ಸಂಸ್ಕೃತದಲ್ಲಿ ಏಕವಚನ, ದ್ವಿವಚನ, ಬಹುವಚನ ಎಂದು ಮೂರು ಬಗೆಗಳಿದ್ದರೆ ಕನ್ನಡದಲ್ಲಿ, ಇಂಗ್ಲಿಷಿನಲ್ಲಿ ಏಕವಚನ ಬಹುವಚನಗಳೆರಡೇ ಇರುವುವು, ದ್ವಿವಚನವಿಲ್ಲ. ಭಾಷಾಂತರಕಾರ ಈ ಎಲ್ಲ ವ್ಯಾಕರಣ ವಿಶೇಷಗಳನ್ನು ಗಮನಿಸಿ ಭಾಷಾಂತರಿಸಬೇಕಾಗುತ್ತದೆ.

'ಕಾಲ'ದ ಸಮಸ್ಯೆಯೂ ತೊಡಕನ್ನುಂಟು ಮಾಡುತ್ತದೆ. ಕನ್ನಡದಲ್ಲಿ ವರ್ತಮಾನ ಭೂತ, ಭವಿಷ್ಯತ್ ಎಂದು ಮೂರು ಕಾಲಗಳಿದ್ದರೆ ಇನ್ನು ಕೆಲವು ಭಾಷೆಗಳಲ್ಲಿ ಎರಡೇ ಕಾಲಗಳಿವೆ. ಭೂತ ಮತ್ತು ಅಭೂತ ರೀತಿಯಾಗಿ ವರ್ಗೀಕರಿಸಿರುತ್ತವೆ.

ವಾಕ್ಯರಚನೆ ದೃಷ್ಟಿಯಿಂದ ಹೇಳುವುದಾದರೆ ಕೆಲವು ಭಾಷೆಗಳಲ್ಲಿ ಒಂದೇ ಪ್ರಧಾನ ವಾಕ್ಯ ಅನೇಕ ಉಪವಾಕ್ಯಗಳನ್ನು ಹೊರುವ ಶಕ್ತಿ ಇದ್ದರೆ ಇನ್ನು ಕೆಲವು ಭಾಷೆಗಳಿಗೆ ಆ ಶಕ್ತಿ ಇರುವುದಿಲ್ಲ. ಕರ್ತರೀ ಪ್ರಯೋಗ ಕರ್ಮಣೀ ಪ್ರಯೋಗಗಳು ಆಯಾ ಭಾಷೆಗೆ ಅವು ಸಹಜವಾಗಿರುತ್ತವೆ. ಭಾಷಾಂತರಕಾರ ಆಯಾ ಭಾಷೆಯ ಜಾಯಮಾನವನ್ನು ಅರಿತು ಉದ್ದಿಷ್ಟ ಭಾಷೆಯ ಜಾಯಮಾನಕ್ಕನುಸಾರವಾಗಿ ಭಾಷಾಂತರಿಸಬೇಕು.

ಭಾಷಿಕ ಸಂಸ್ಕೃತಿಯ ತೊಡಕುಗಳನ್ನೆಲ್ಲ ಸೇರಿಸಿ ಯೂಜಿನ್ ನೀಡಾ ನಾಲ್ಕು ವರ್ಗಗಳಲ್ಲಿ ವಿಂಗಡಿಸುತ್ತಾರೆ. ಅವೆಂದರೆ 1. ಧ್ವನ್ಯಾತ್ಮಕ (phonological) 2. ಆಕೃತಿಮಾತ್ಮಕ (morphological) 3. ವಾಕ್ಯರಚನಾತ್ಮಕ (syntactic), ಹಾಗೂ 4. ಕೋಶಾತ್ಮಕ ಸಮಸ್ಯೆಗಳು (lexical factors). ಇವನ್ನು ಇಲ್ಲಿ ವಿವರವಾಗಿ ಪರಿಶೀಲಿಸುವುದು ನನ್ನ ಉದ್ದೇಶವಲ್ಲ.

ರೂಪಾಂತರ (Adaptation) ಗಳಲ್ಲಿ ಸಾಂಸ್ಕೃತಿಕ ತೊಡಕುಗಳು ನಿವಾರಣೆಯಾಗುತ್ತವೆಯೇ ಎಂದು ಪರಿಶೀಲಿಸಿ ನೋಡೋಣ. ಮಾನವ ಸಹಜ ಗುಣಾವಗುಣಗಳನ್ನು ಬಿಂಬಿಸುವ ಕೃತಿಗಳನ್ನು ರೂಪಾಂತರಗೊಳಿಸುವಾಗ ಈ ತೊಡಕು ಅಷ್ಟಾಗಿ ಬರುವುದಿಲ್ಲ. 'ಆಷಾಢಭೂತಿ'ಯಲ್ಲಿ ಕಂಡುಬರುವ ಮೋಸ, ವಂಚನೆ ಎಲ್ಲ ಸಮಾಜಗಳಲ್ಲೂ ಇರುವಂತಹುದೇ ಆಗಿರುವುದರಿಂದ ಇಂಥ ಕೃತಿಗಳ ರೂಪಾಂತರ ಒಂದು ದೃಷ್ಟಿಯಿಂದ ಕಷ್ಟವೇ ಅಲ್ಲ. ಆದರೆ ಸಾಂಸ್ಕೃತಿಕ ಅಂಶಗಳಿಂದ ಸಂಪದ್ಭರಿತವಾಗಿರುವ

ಕಾಳಿದಾಸಾದಿ ಕವಿಗಳ ಮಹಾಕಾವ್ಯ ಮತ್ತು ನಾಟಕಗಳು ರೂಪಾಂತರಕ್ಕೆ ಯೋಗ್ಯ ವಲ್ಲ. ಇವುಗಳ ರೂಪಾಂತರದಿಂದ ಸಹಜತೆಗಿಂತ ಆಭಾಸವೇ ಹೆಚ್ಚು. 'ಮ್ಯಾಕ್‌ಬೆತ್' ನಾಟಕದ ರೂಪಾಂತರವಾದ 'ಪ್ರತಾಪರುದ್ರದೇವ' ಈ ದೃಷ್ಟಿಯಿಂದ ಹೇಗೆ ವಿಫಲ ವಾಗಿದೆ ಎಂಬುದನ್ನು ತ. ಸು. ಶಾಮರಾವ್ ಅವರು 'ಕನ್ನಡ ನಾಟಕ'ದಲ್ಲಿ ಹೀಗೆ ವಿವ ಸುತ್ತಾರೆ: "Duncan ದೊರೆಯನ್ನು Macbethನಿಗೆ ಬದಲಾಗಿ Lady Macbeth ಎದುರುಗೊಂಡು, ಪ್ರತ್ಯುತ್ಥಾನಮಾಡಿ, ಕೈಹಿಡಿದು ಮನೆಗೆ ಕರೆತರುವುದು ಪಾಶ್ಚಾತ್ಯ ಪ್ರಪಂಚದ ಸದಾಚಾರಕ್ಕೆ ಉಚಿತವಾಗಿಯೇ ಇದೆ. ಆದರೆ ಓಢ್ರದೇಶದ ಮಹಾರಾಜ ನಾದ ವಿಜಯಧ್ವಜನನ್ನು ವೀರಸೇನನಿಗೆ ಬದಲಾಗಿ ಅವನ ಹೆಂಡತಿ ಕೈಹಿಡಿದು ಕರೆ ದೊಯ್ದಳೆಂಬುದು ಚಾರಿತ್ರಿಕ ಭಾರತಕ್ಕೆ ಇರಲಿ, ಆಧುನಿಕ ಭಾರತಕ್ಕೆ ಕೂಡ ಅನ್ವಯಿಸು ವಂತಿಲ್ಲ. ಮೂರನೆಯ ಅಂಕದಲ್ಲಿ ಬರುವ ಪಾನಸಹಿತವಾದ ಔತಣವೂ ನಮ್ಮ ಸಂಸ್ಕೃತಿ ಯಿಂದ ಬಹಿಷ್ಕೃತವಾದುದು."

ಹೀಗೆ ಭಾಷೆಗಳು ಮೂಲಭೂತವಾಗಿ ಸಂಸ್ಕೃತಿಯ ಒಂದು ಭಾಗ. ಸ್ಥಳೀಯ ಸಾಂಸ್ಕೃತಿಕ ಪ್ರಕ್ರಿಯೆಯಿಂದಾಗಿ ಪದಗಳು ಸುಲಭವಾಗಿ ಅರ್ಥವಾಗುವುದಿಲ್ಲ. ಪದ ಗಳು ಸ್ಥಳೀಯ ಪ್ರಕ್ರಿಯೆಗಳ ಸಂಕೇತಗಳು. ಆದ್ದರಿಂದ ಅರ್ಥಸಬುಸ್ಯೆಯನ್ನು ಪರಿಹರಿ ಸಲು ಉಪಯುಕ್ತವಾದ ಮಾರ್ಗವೆಂದರೆ ಸಾಂಸ್ಕೃತಿಕ ಅರಿವಿನಿಂದ ಮಾತ್ರ. ಇದನ್ನು ಅರಿಯಲು ವಿವಿಧ ಸಾಂಸ್ಕೃತಿಕ ಅಂಶಗಳ ಮತ್ತು ಅವನ್ನು ಪ್ರತಿನಿಧಿಸುವ ಶಬ್ದಗಳ ಬಗೆಗೆ ಸಂಶೋಧನೆ ಅಗತ್ಯ. ಆದ್ದರಿಂದ ಅರ್ಥವಿಜ್ಞಾನ (semantics)ದ ಪರಿಪೂರ್ಣ ಅಧ್ಯಯನಕ್ಕೆ ವಿವರಣಾತ್ಮಕ ಭಾಷಾವಿಜ್ಞಾನ ಹಾಗೂ ವಿಶ್ಲೇಷಣಾತ್ಮಕ ಸಾಮಾಜಿಕ ಮಾನವಶಾಸ್ತ್ರದ ಸಂಯುಕ್ತಜ್ಞಾನ ಅಗತ್ಯ. ಇವೆರಡೂ ಇದ್ದ ಭಾಷಾಂತರಕಾರ ಯಶಸ್ವಿ ಭಾಷಾಂತರಕಾರನಾಗಬಲ್ಲ.

ಪರಾಮರ್ಶನ ಆಕರಗಳು

1. "Linguistics and Ethnology in Translation—problems,"—(Eugene Nida) *Language in Culture and Society*", Dell Hymes

2. *Language, Culture, Communication*—Joseph Greenberg.

3. "Culture to Culture"—(Roger Caillois), Times Literary Supplement 25. 9. 70.

4. "Gaps in Grammar and Culture"—(Kenneth Hale), *Linguistics and Anthropology* (Ed.)—Dale Kinkade and others.

5. ಕನ್ನಡ ಡಿಪ್ಲೊಮಾ ಮಾರ್ಗದರ್ಶಕ ಪಾಠಗಳು—ಪ್ರಧಾನ್ ಗುರುದತ್ತ.

6. ಭಾಷಾಂತರದಲ್ಲಿ ಸಾಂಸ್ಕೃತಿಕ ತೊಡಕುಗಳು—ಎಸ್. ಶ್ರೀಧರಮೂರ್ತಿ, ಮಾನವಿಕ ಕರ್ಣಾಟಕ ೭-೪.

7. ಕಾದಂಬರಿ ಅನುವಾದ ಕೆಲವು ಸಮಸ್ಯೆಗಳು—ಎನ್. ಎಸ್. ಶಾರದಾಪ್ರಸಾದ್, ಮಾನವಿಕ ಕರ್ಣಾಟಕ ೮-೧.

8. ಅನುವಾದ ಕಲೆ: ಡಾ. ಜೆ. ಎಸ್. ಕುಳ್ಳಿ—ಶ್ರೀ ಜಿ. ಪಿ. ಮುರಡಿ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

9. ಭಾಷಾಂತರ ಪ್ರವೇಶಿಕೆ : ಮಹೇಶ್ವರಪ್ಪ, ರವೀಂದ್ರ ಪುಸ್ತಕಾಲಯ ಕಾರ್ಗಲ್, ಸಾಗರ.

೧೨ | ಭಾಷಾಂತರ ಮತ್ತು ಶಿಕ್ಷಣ ಮಾಧ್ಯಮ

ಡಿ. ಎಸ್. ಜಯಪ್ಪಗೌಡ

ಸಾಹಿತ್ಯ ಪ್ರಕಾರಗಳಲ್ಲೊಂದಾಗಿ, ಅಧ್ಯಯನ ವಿಷಯವಾಗಿ ಬೆಳೆದು ನಿಂತಿರುವ ಭಾಷಾಂತರ ಮಾನವನ ಸಾಹಿತ್ಯಿಕ ಚಟುವಟಿಕೆಯಷ್ಟೇ ಪ್ರಾಚೀನವಾದುದು. ಆಧುನಿಕ ಜ್ಞಾನ, ವಿಜ್ಞಾನಗಳು ಅಭಿವೃದ್ಧಿಗೊಂಡಂತೆ ಭಾಷಾಂತರದ ಮಹತ್ವವೂ ಹೆಚ್ಚಿದೆ. ಒಂದು ಭಾಷೆಯ ಜ್ಞಾನಸಂಪತ್ತನ್ನು, ಅಭಿವ್ಯಕ್ತಿಸಾಮರ್ಥ್ಯವನ್ನು ಬೆಳೆಸಲು ಸುವರ್ಣ ಸಾಧನದಂತಿರುವ ಭಾಷಾಂತರ ಶಿಕ್ಷಣ ಮಾಧ್ಯಮಕ್ಕೆ ಪೂರಕವಾಗಿದೆ. ಯಾವುದೇ ಶಿಕ್ಷಣ ಮಾಧ್ಯಮವೂ ಸಮಗ್ರವೆನಿಸಬೇಕಾದರೆ ಭಾಷಾಂತರ ಅನಿವಾರ್ಯ ಎನಿಸುವಷ್ಟರಮಟ್ಟಿಗೆ ಸರ್ವವ್ಯಾಪಿಯಾಗಿದೆ.

ಭಾಷಾಂತರ ಮತ್ತು ಶಿಕ್ಷಣ ಮಾಧ್ಯಮದ ಸಂಬಂಧ ಶಿಕ್ಷಣ ಅಥವಾ ಬೋಧನ ಕಾರ್ಯದಷ್ಟೇ ಹಳೆಯದು. ಭಾಷೆ ಮಾನವನ ಅಭಿವ್ಯಕ್ತಿ ಸಾಮರ್ಥ್ಯದಿಂದ ಹುಟ್ಟಿತು. ಆದರೆ ಎಲ್ಲ ಭಾಷೆಗಳೂ ಒಂದೇ ಬಗೆಯ ವಿಷಯ ಸಂಪತ್ತನ್ನು ಹೊಂದಲಿಲ್ಲ. ಇದಕ್ಕೆ ಆಯಾ ಭಾಷೆಗಳನ್ನು ಮಾತನಾಡುವ ಜನರು ಪಡೆದ ಅನುಭವ, ಅವರ ತಾತ್ವಿಕ ನಿಲುವು. ಜೀವನ ಪರಿಸರ ಭಿನ್ನವಾದುದೇ ಕಾರಣ. ಭಾಷೆ, ಸಾಹಿತ್ಯ, ಶಿಕ್ಷಣ ಮತ್ತು ಬೋಧನೆಗಳು ಬೆಳೆದಾಗ ಇತರ ಭಾಷೆಗಳಲ್ಲಿರುವ ವಿಜ್ಞಾನ ಸಂಪತ್ತನ್ನು ಅರಿಯುವ ಮತ್ತು ಸ್ವೀಕರಿಸುವ ಕುತೂಹಲ, ಶ್ರದ್ಧೆಗಳು ವಿದ್ವಾಂಸರಲ್ಲಿ ಮೂಡಿದವು. ಜೊತೆಗೆ ವಿವಿಧ ಭಾಷೆಗಳನ್ನಾಡುವ ಜನರು ಒಂದೆಡೆ ಕಲೆತು ಶಿಕ್ಷಣ ಕಲಿಯುವ ಸಂದರ್ಭಗಳು ಒದಗಿದವು. ಆಗ ಭಾಷಾಂತರಕಾರ್ಯ ಅನಿವಾರ್ಯವಾಯಿತು. ಉದಾಹರಣೆಗೆ, ಗ್ರೀಕ್, ಸಂಸ್ಕೃತ, ಲ್ಯಾಟಿನ್, ಅರೇಬಿಕ್ ಮೊದಲಾದ ಪ್ರಾಚೀನ ಭಾಷೆಗಳನ್ನು ಕಲಿಯುವುದು ಪ್ರಾಚೀನ ಶಿಕ್ಷಣ ವಿಧಾನದಲ್ಲಿ ಅನಿವಾರ್ಯವಾಗಿತ್ತು. ಜ್ಞಾನ ಸಂಪತ್ತು, ವಿವಿಧ ಧರ್ಮಗ್ರಂಥಗಳು ಈ ಭಾಷೆಗಳಲ್ಲಿದ್ದುದೇ ಇದಕ್ಕೆ ಪ್ರಮುಖ ಕಾರಣವಾಯಿತು. ಯೂರೋಪಿನ ವಿವಿಧ ದೇಶಭಾಷೆಗಳನ್ನಾಡುವ ವಿದ್ವಾಂಸರು ಗ್ರೀಕ್ ಮತ್ತು ಲ್ಯಾಟಿನ್‌ಗಳನ್ನು ಆಗತ್ಯವಾಗಿ ಕಲಿತು ತಮ್ಮತಮ್ಮ ಮಾತೃಭಾಷೆಗಳಿಗೆ ಬೈಬಲ್ ಇತ್ಯಾದಿ ಗ್ರಂಥಗಳನ್ನು ಅನುವಾದಿಸಿದರು. ಹಾಗೆಯೇ ಚೀನೀಯರು ಪಾಳಿ, ಸಂಸ್ಕೃತಗಳನ್ನೂ ಭಾರತದ ವಿದ್ಯಾಪೀಠಗಳಲ್ಲಿ ಕಲಿತರು; ಬೌದ್ಧಗ್ರಂಥಗಳನ್ನೂ ಅನುವಾದಿಸಿದರು. ಭಾರತದ ಸಂದರ್ಭದಲ್ಲಿಯೇ ಶಿಕ್ಷಣ ಮಾಧ್ಯಮ ಭಾಷಾಂತರವನ್ನು ಅನಿವಾರ್ಯವಾಗಿಸಿತ್ತು. ಭಾರತದಾದ್ಯಂತ ಸಂಸ್ಕೃತ ವ್ಯಾಪಿಸಿದಾಗ ವಿದ್ವಜ್ಜನರು ಅದನ್ನು ಆಶ್ರಯಿಸುವುದು ಅನಿವಾರ್ಯವಾಯಿತು. ವಿವಿಧ ಭಾರತೀಯ ಭಾಷೆಗಳಲ್ಲಿ

ವಿದ್ಯೆ ಕಲಿಯುವವರೂ ಕೂಡ ಸಂಸ್ಕೃತವನ್ನು ಅಭ್ಯಸಿಸಿದರು. ಈ ರೀತಿ ಎರಡು ಅಥವಾ ಹೆಚ್ಚಿನ ಭಾಷೆಗಳ ಸಂಪರ್ಕ ಉಂಟಾದಾಗ ಭಾಷಾಂತರ ಶಿಕ್ಷಣ ಮಾಧ್ಯಮದೊಂದಿಗೆ ಹಾಸುಹೊಕ್ಕಾಯಿತು.

ಶಿಕ್ಷಣ ಕ್ಷೇತ್ರದಲ್ಲಿ ಮುಖ್ಯವಾಗಿ ಎರಡು ದೃಷ್ಟಿಯಿಂದ ಭಾಷಾಂತರ ಅವಶ್ಯಕವಾಗುತ್ತದೆ. ಮೊದಲನೆಯದಾಗಿ ಒಂದು ಭಾಷೆಗೆ ಅಪರಿಚಿತವಾದ ವಿಷಯವೊಂದನ್ನು ಇನ್ನೊಂದು ಭಾಷಾ ಸಾಹಿತ್ಯದಿಂದ ತೆಗೆದುಕೊಂಡು ಬೋಧಿಸಬೇಕಾದಾಗ ಸಹಜವಾಗಿಯೇ ಭಾಷಾಂತರಕ್ಕೆ ಮೊರೆ ಹೋಗಬೇಕಾಗುತ್ತದೆ. ಏಕೆಂದರೆ ಎಲ್ಲ ಭಾಷೆಗಳಲ್ಲೂ ಪ್ರತಿ ಪದಕ್ಕೂ ಸಿದ್ಧಪಡಿಸಿದ ಸಮಾನಾರ್ಥ ಪದಗಳು ದೊರೆಯುವುದಿಲ್ಲ. ಇದರಿಂದ ಬೋಧಕ ಅಥವಾ ಅಧ್ಯಾಪಕ ಆ ಹೊಸ ವಿಚಾರಗಳಿಗೆ ಅಗತ್ಯವಾದ ಪದಗಳನ್ನು ತನ್ನ ಭಾಷೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಇಲ್ಲವೇ ಹೊಸದಾಗಿ ರೂಪಿಸಬೇಕಾಗುತ್ತದೆ. ಹಾಗೆಯೇ ಅಧ್ಯಾಪಕನಾಗಲಿ, ವಿದ್ಯಾರ್ಥಿಯಾಗಲಿ ಇತರ ಭಾಷೆಗಳ ಸಾಹಿತ್ಯದಲ್ಲಿರುವ ವಿಷಯ ಸಂಪತ್ತನ್ನು ತನ್ನದಾಗಿಸಿಕೊಳ್ಳಲು ಮತ್ತು ತಾನು ಕಲಿಯುತ್ತಿರುವ ಭಾಷೆಯಲ್ಲಿ ಅವನ್ನು ವ್ಯಕ್ತಪಡಿಸಲು ಭಾಷಾಂತರ ಅಗತ್ಯವಾಗುತ್ತದೆ. ಶಿಕ್ಷಣ ಮಾಧ್ಯಮದಲ್ಲಿ ಭಾಷಾಂತರ ನೇರವಾಗಿ ನಡೆಯುವ ಪ್ರಕ್ರಿಯೆಯಾಗಿರಬಹುದು ಇಲ್ಲವೆ ಅಪ್ರತ್ಯಕ್ಷವಾಗಿ ನಡೆಯುವ ಪ್ರಕ್ರಿಯೆಯಾಗಿರಬಹುದು. ಉದಾಹರಣೆಗೆ, ಉದ್ದೇಶಪೂರ್ವಕವಾಗಿ ಒಂದು ಪಠ್ಯಪುಸ್ತಕವನ್ನು ಅನುವಾದಿಸಿ ಅದನ್ನು ಭಾಷಾ ಮಾಧ್ಯಮದಲ್ಲಿ ಬಳಸಬಹುದು. ಹಾಗೆಯೇ ಇನ್ನೊಂದು ಭಾಷೆಯಲ್ಲಿರುವ ವಿಷಯಗಳನ್ನು ಮಾಹಿತಿಗಳನ್ನು ಅಭ್ಯಸಿಸಿ ಅದರ ಸಾರಸಂಗ್ರಹವನ್ನು ಬೋಧಿಸಬಹುದು ಅಥವಾ ಕಲಿಯಬಹುದು. ಈ ಎರಡೂ ಸಂದರ್ಭಗಳಲ್ಲೂ ಭಾಷಾಂತರದ ಪಾತ್ರವಿರುತ್ತದೆ. ಹೀಗೆ ಶಿಕ್ಷಣ ಮಾಧ್ಯಮದಲ್ಲಿ ಭಾಷಾಂತರ ಮಹತ್ವದ ಸ್ಥಾನ ಗಳಿಸಿದೆ.

ಭಾಷಾಶಾಸ್ತ್ರದ ದೃಷ್ಟಿಯಿಂದ ಯಾವ ಭಾಷೆಯೂ ಅಸಮರ್ಥ ಅಥವಾ ಕಳಪೆ ಭಾಷೆಯಲ್ಲ. ಎಲ್ಲ ಭಾಷೆಗಳೂ ಸಮಾನ ಸ್ವರೂಪ ಪಡೆದಿವೆ. ಆದರೆ ಒಂದು ಭಾಷೆಯ ಸಾಮರ್ಥ್ಯ ಹೆಚ್ಚುವುದು ಆ ಭಾಷೆಯನ್ನಾಡುವ ಜನರು ಅದನ್ನು ಯಾವ ಯಾವ ಕ್ಷೇತ್ರಗಳಲ್ಲಿ ಬಳಸಿದ್ದಾರೆ ಮತ್ತು ಹೇಗೆ ಬಳಸಿದ್ದಾರೆ ಎಂಬ ಸಂಗತಿಯನ್ನು ಅವಲಂಬಿಸುತ್ತದೆ. ಇಂದು ಇಂಗ್ಲಿಷ್, ಜರ್ಮನ್, ಫ್ರೆಂಚ್, ಜಪಾನೀ ಮೊದಲಾದ ಭಾಷೆಗಳಲ್ಲಿ ಅತಿಸೂಕ್ಷ್ಮ ವೈಜ್ಞಾನಿಕ ವಿಚಾರಗಳನ್ನು ಸುಲಭವಾಗಿ ಬೋಧಿಸಲು ಸಾಧ್ಯವಾಗುತ್ತಿರುವುದು ಆ ಭಾಷೆಗಳು ಸ್ವಭಾವತಃ ಸಮರ್ಥವೆಂಬ ಕಾರಣದಿಂದಲ್ಲ. ಆದರೆ ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿದರೆಂಬ ಕಾರಣದಿಂದ. ಆ ಭಾಷೆಗಳು ಇಷ್ಟು ಸಮರ್ಥ ಭಾಷಾ ಮಾಧ್ಯಮಗಳಾಗುವಲ್ಲಿ ಭಾಷಾಂತರದ ಪ್ರಭಾವವನ್ನು ಅಲಕ್ಷಿಸುವಂತಿಲ್ಲ. ಇತರ ಭಾಷೆಗಳಲ್ಲಿ ಪ್ರಕಟವಾಗುವ ಹೊಸ ಹೊಸ ಸಂಶೋಧನೆಗಳನ್ನೂ, ಪರಿಕಲ್ಪನೆಗಳನ್ನೂ ಸತತವಾಗಿ ಭಾಷಾಂತರಿಸುವ ವ್ಯವಸ್ಥೆ ಅನೇಕ ದೇಶಗಳಲ್ಲಿದೆ. ಇದರಿಂದ ಒಂದು ಭಾಷೆಗೆ ಪರಿಚಿತವಲ್ಲದ ಶಬ್ದವನ್ನು, ಪರಿಕಲ್ಪನೆಯನ್ನು ಆ ಭಾಷೆಯಲ್ಲಿ ಬಳಸುವಾಗ

ಉದ್ಭವಿಸುವ ಸಮಸ್ಯೆಗಳನ್ನು ಬಿಡಿಸಲು ಪ್ರಯತ್ನ ನಡೆಯುತ್ತಿರುತ್ತದೆ. ಈ ಭಾಷಾಂತರ ಕಾರ್ಯ ಅನೇಕ ಸಂವಾದಿ ಪದಗಳ ಸೃಷ್ಟಿಗೆ ಕಾರಣವಾಗುವುದಲ್ಲದೆ ಅನೇಕ ಪಾರಿಭಾಷಿಕ ಪದಗಳನ್ನು ಹಾಗೆಯೇ ಅಳವಡಿಸಿಕೊಳ್ಳಲು ಕಾರಣವಾಗುತ್ತದೆ. ಇದರಿಂದ ಭಾಷೆ ಬೆಳೆಯುತ್ತ ಹೋಗಿ ಅದನ್ನು ಶಿಕ್ಷಣ ಮಾಧ್ಯಮದಲ್ಲಿ ಹೆಚ್ಚು ಹೆಚ್ಚು ಪರಿಪೂರ್ಣವಾಗಿ ಬಳಸಲು ಸಾಧ್ಯವಾಗುತ್ತದೆ.

ಕನ್ನಡದ ಸಂದರ್ಭವನ್ನೇ ತೆಗೆದುಕೊಂಡರೆ ಅದು ಭಾಷಾಂತರದಿಂದ ಬಹಳಷ್ಟು ಉಪಕೃತವಾಗಿರುವುದು ಕಂಡುಬರುತ್ತದೆ. ಕನ್ನಡಕ್ಕೆ ಸಂಸ್ಕೃತ, ಪ್ರಾಕೃತ, ಅರೇಬಿಕ್, ಪರ್ಷಿಯನ್ ಮೊದಲಾದ ಭಾಷೆಗಳ ಪದಗಳು ಸೇರಿಕೊಂಡಿರುವುದಲ್ಲದೆ ಆಧುನಿಕ ಐರೋಪ್ಯ ಭಾಷೆಗಳ ಅನೇಕ ಪದಗಳೂ ಸೇರಿಕೊಂಡಿವೆ. ಜೊತೆಗೆ ಆ ಭಾಷೆಗಳಲ್ಲಿ ನಿರೂಪಿಸಲಾದ ಅನೇಕ ವಿಚಾರಗಳನ್ನೂ ಕನ್ನಡದಲ್ಲಿ ಹೇಳಲು ನಡೆದ ಪ್ರಯತ್ನದಿಂದಾಗಿ ಕನ್ನಡದಲ್ಲೂ ಹಲವಾರು ಹೊಸ ಪದಗಳು ಹುಟ್ಟಿಕೊಂಡವು. ಭಾಷಾಂತರ ವಾಕ್ಯ ರಚನಾ ಶೈಲಿಯ ಮೇಲೂ ಪ್ರಭಾವ ಬೀರಿತು.

ಮೂಲ ಭಾಷೆಯ ಪದಗಳನ್ನು ಹಾಗೆಯೇ ಸ್ವೀಕರಿಸಿದರೆ ಅದು ಹೇಗೆ ಭಾಷಾಂತರ ವಾಗುತ್ತದೆ ಎಂಬ ಪ್ರಶ್ನೆ ಏಳುತ್ತದೆ. ಪದಗಳ ಅಳವಡಿಕೆ ಭಾಷಾಂತರದಲ್ಲಿ ಅನಿವಾರ್ಯ ಕ್ರಿಯೆ. ಇಂದು ಇಂಗ್ಲಿಷಿನಲ್ಲಿರುವ ಸಾವಿರಾರು ಪದಗಳು ಹೊರ ಭಾಷೆಗಳಿಂದ ಸ್ವೀಕರಿಸಿದ ಪದಗಳಾಗಿವೆ. ಸಾಮಾನ್ಯವಾಗಿ ಪಾರಿಭಾಷಿಕ ಪದಗಳ ಸಂದರ್ಭದಲ್ಲಿ ಇದು ಅನಿ ವಾರ್ಯವಾಗುತ್ತದೆ. ಉದಾಹರಣೆಗೆ, ರಷ್ಯನ್ ಪದ 'ಸ್ಪೂಟ್ನಿಕ್' ಇಂಗ್ಲಿಷಿನಲ್ಲಿ ಸಹಜ ವಾಗಿ ಬಳಕೆಯಾಗುತ್ತಿದೆ. ಕನ್ನಡದಲ್ಲಿ ಕಾರು, ಲಾರಿ ಮೊದಲಾದ ಪದಗಳನ್ನು ಭಾಷಾಂತರ ಮಾಡುವುದಕ್ಕಿಂತ ಹಾಗೆಯೇ ಇಟ್ಟುಕೊಳ್ಳುವುದು ಉಚಿತವೆಂದು ಹೊಳೆಯುವುದು ಕಷ್ಟವಾಗಲಾರದು. ಒಂದು ಭಾಷೆಗೆ ಅನ್ಯಭಾಷೆಯ ಪದಗಳು ಎರಡು ರೀತಿಯಲ್ಲಿ ಪ್ರವೇಶಿಸುತ್ತವೆ. ಒಂದನೆಯದಾಗಿ ಭಾಷಾಂತರಕಾರರು ಉದ್ದೇಶಪೂರ್ವಕ ವಾಗಿ ಪಾರಿಭಾಷಿಕ ಪದಗಳನ್ನು ಮೂಲರೂಪದಲ್ಲಿಯೇ ಇಟ್ಟುಕೊಳ್ಳುತ್ತಾರೆ. ಎರಡನೆಯ ದಾಗಿ ಜನಸಾಮಾನ್ಯರು ಅಂದರೆ ಒಂದು ಭಾಷೆಯನ್ನು ದಿನನಿತ್ಯದ ವ್ಯವಹಾರಗಳಲ್ಲಿ ಬಳಸುವ ಜನರು ಇತರ ಭಾಷೆಗಳಿಂದ ಕೇಳಿದ ಪದಗಳನ್ನು ತಮ್ಮ ಭಾಷೆಯಲ್ಲಿಯೂ ಸೇರಿಸಿ ಬಳಸುತ್ತಾರೆ. ಇವು ವೈಜ್ಞಾನಿಕ ಪದಗಳಾಗಿರಬಹುದು ಇಲ್ಲವೆ ಸಾಂಸ್ಕೃತಿಕ ಮೌಲ್ಯದ ಪದಗಳಾಗಿರಬಹುದು ಅಥವಾ ವಾಣಿಜ್ಯ ವ್ಯವಹಾರಗಳ ಪದಗಳಾಗಿರ ಬಹುದು. ಈ ರೀತಿ ಭಾಷಾಂತರ ಮತ್ತು ಅಳವಡಿಕೆ ನಿರಂತರವಾಗಿ ನಡೆಯುವುದರಿಂದ ಒಂದು ಶಿಕ್ಷಣ ಮಾಧ್ಯಮ ಅಥವಾ ಭಾಷೆ ಹಸನಾಗುತ್ತದೆ.

ಅಭಿವೃದ್ಧಿಯಾದ ಭಾಷೆಗಳಾಗಲಿ, ಹಿಂದುಳಿದ ಅಂದರೆ ಸಾಕಷ್ಟು ಬೆಳೆಯದ ಭಾಷೆ ಗಳಾಗಲಿ ಅವು ಸಮರ್ಥ ಶಿಕ್ಷಣ ಮಾಧ್ಯಮಗಳಾಗಲು ಭಾಷಾಂತರ ಅನಿವಾರ್ಯ. ವಿಜ್ಞಾನದ ವಿಷಯಗಳಷ್ಟೇ ಅಲ್ಲದೆ ಭೂಗೋಳಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮೊದಲಾದ ಮಾನವಿಕ ವಿಷಯಗಳ ಬೋಧನೆಗೂ ಭಾಷಾಂತರ ಅಗತ್ಯ. ಈ ಕ್ಷೇತ್ರ

ಗಳಲ್ಲಿ ವಿವಿಧ ಭಾಷೆಗಳಲ್ಲಿ ಸಂಶೋಧನೆ ಮಾಡುತ್ತಿರುವ ವಿದ್ವಾಂಸರು ಹೊಸ ವಿಚಾರ ಗಳನ್ನು ನಿರೂಪಿಸುತ್ತಿರುತ್ತಾರೆ. ಈ ನಿರೂಪಣೆಯಲ್ಲಿ ಕೆಲವೊಮ್ಮೆ ಅವರು ಯಾವ ಭಾಷೆಯಲ್ಲಿ ಸಂಶೋಧನೆ ನಡೆಸುತ್ತಿರುತ್ತಾರೊ ಆ ಭಾಷೆಗೇ ಅಪರಿಚಿತವಾದ ಶಬ್ದ ಗಳನ್ನು ಟಂಕಿಸಿ ಬಳಸುವುದುಂಟು. ಒಂದು ಭಾಷೆಯಲ್ಲಿ ಬಳಕೆಯಲ್ಲಿಲ್ಲದ ಭೌಗೋಳಿಕ ಲಕ್ಷಣಗಳನ್ನು ನಿರೂಪಿಸುವ ಶಬ್ದಗಳು ಇರುವುದುಂಟು. ಹಾಗೆಯೇ ವಿವಿಧ ಸಮಾಜ ಗಳಲ್ಲಿ ಕಂಡುಬರುವ ಪದ್ಧತಿಗಳು ಮತ್ತು ಸಾಂಸ್ಕೃತಿಕ ಮೌಲ್ಯದ ಶಬ್ದಗಳನ್ನು ಸುಲಭ ವಾಗಿ ಇನ್ನೊಂದು ಭಾಷೆಯಲ್ಲಿ ಹೇಳುವುದು ಸಾಧ್ಯವಿಲ್ಲ. ಇಂತಹ ಸನ್ನಿವೇಶಗಳನ್ನು ಎದುರಿಸಲು ಎದುರಾಗುವ ಸಮಸ್ಯೆಗಳನ್ನು ಬಿಡಿಸಲು ಕ್ರಮಬದ್ಧ ಭಾಷಾಂತರ ಕಾರ್ಯ ಅಗತ್ಯವಾಗುತ್ತದೆ. ಹೀಗೆ ಭಾಷಾಂತರ ಕಾರ್ಯ ನಡೆದಾಗ ಅನ್ಯಭಾಷೆಗಳ ಪದಗಳಿಗೆ ನಿರ್ದಿಷ್ಟ ಭಾಷೆಯಲ್ಲಿ ಸಂವಾದಿ ಪದಗಳನ್ನು ಹೇಗೆ ಬಳಸಬೇಕು ಮತ್ತು ಯಾವ ಪದ ಗಳನ್ನು ಪಾರಿಭಾಷಿಕ ಪದಗಳೆಂದು ಸ್ವೀಕರಿಸಬೇಕು ಮತ್ತು ಅವನ್ನು ಲಿಪ್ಯಂತರಿಸಿ ಅಳವಡಿಸಬೇಕು ಎಂಬ ವಿಚಾರದಲ್ಲಿ ಒಂದು ಖಚಿತ ನಿಲುವು ತಳೆಯಲು ಸಾಧ್ಯವಾಗು ತ್ತದೆ. ಇದರಿಂದ ಬೋಧನೆಯಲ್ಲಿ ಒಂದು ಹೊರಭಾಷೆಯ ಶಬ್ದಕ್ಕೆ ಸಮಾನಾರ್ಥ ಪದ ಬಳಸುವಲ್ಲಿ ಎಲ್ಲೆಡೆ ಏಕರೂಪವನ್ನು ಇಟ್ಟುಕೊಳ್ಳಲು ಸಾಧ್ಯ. ಇದು ಒಂದು ಬೋಧನ ಭಾಷೆ ಕ್ರಮಬದ್ಧವಾಗಿ ರೂಪುಗೊಳ್ಳಲು, ಅಸ್ಪಷ್ಟತೆ ಮತ್ತು ಗೊಂದಲಗಳು ನಿವಾರಣೆ ಯಾಗಲು ನೆರವಾಗುತ್ತದೆ.

ಕನ್ನಡದಂತಹ ಭಾರತೀಯ ಭಾಷೆಗಳ ಸಂದರ್ಭದಲ್ಲಿ ಭಾಷಾಂತರ ಶಿಕ್ಷಣ ಮಾಧ್ಯಮಕ್ಕೆ ತೀರ ಅಗತ್ಯವಾದ ವಿಷಯವಾಗಿದೆ. ಇಲ್ಲಿ ವೈಜ್ಞಾನಿಕ ಅಧ್ಯಯನ ಮತ್ತು ಸಂಶೋಧನೆಗಳೆಲ್ಲ ಹೆಚ್ಚಾಗಿ ಇಂಗ್ಲಿಷಿನಲ್ಲೇ ನಡೆಯುತ್ತಿವೆ. ಜೊತೆಗೆ ಮೇಲ್ಪಟ್ಟದ ಆಡಳಿತ ಭಾಷೆಯೂ ಇಂಗ್ಲಿಷೇ. ಇದರಿಂದ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಅಥವಾ ಇನ್ನಾವುದೇ ಭಾರತೀಯ ಭಾಷೆಗಳಲ್ಲಿ ಈ ವಿಚಾರಗಳನ್ನು ಪರಿಣಾಮಕಾರಿ ಯಾಗಿ ಮತ್ತು ಯಶಸ್ವಿಯಾಗಿ ಬೋಧಿಸಲು ಸಿದ್ಧತೆ ಬೇಕಾಗುತ್ತದೆ. ಈ ಸಿದ್ಧತೆಗೆ ಭಾಷಾಂತರವೇ ಭೂಮಿಕೆಯಾಗಬೇಕು. ಭಾಷಾಂತರ ನಡೆದ ದಾರಿಯಲ್ಲಿ ತರುವಾಯ ಸ್ವತಂತ್ರ ಕೃತಿಗಳ ರಚನೆಯ ಕಾರ್ಯ ನಡೆದರೆ ಆಗ ಶಿಕ್ಷಣ ಮಾಧ್ಯಮ ಸಮಗ್ರವಾಗಲು ಸಹಾಯಕವಾಗುತ್ತದೆ. ಇಂದು ಕೇಂದ್ರ ಸರ್ಕಾರ, ರಾಜ್ಯಸರ್ಕಾರಗಳು, ವಿಶ್ವವಿದ್ಯಾ ನಿಲಯಗಳು ಭಾಷಾಂತರಕ್ಕೆ ನೀಡುತ್ತಿರುವ ಪ್ರೋತ್ಸಾಹ ಈ ದೃಷ್ಟಿಯಿಂದ ಅವಶ್ಯಕ.

ಈಗ ಭಾಷಾಂತರ ಒಂದು ಹವ್ಯಾಸ ಮಾತ್ರವಾಗಿರದೆ ಅದೊಂದು ಅಧ್ಯಯನ ವಿಷಯವೂ ಆಗಿದೆ. ಆಧುನಿಕ ಭಾಷಾಂತರ ವಿಧಾನದಲ್ಲಿ ಅನುಸರಿಸಬೇಕಾದ ನಿಯಮ ಗಳು ಮತ್ತು ಸಿದ್ಧತೆಗಳ ಬಗ್ಗೆ ಹಲವಾರು ಕೃತಿಗಳು ಪ್ರಕಟವಾಗಿವೆ. ಭಾಷಾಶಾಸ್ತ್ರ ಮತ್ತಿತರ ವಿಷಯಗಳ ಪರಿಜ್ಞಾನದಿಂದ ನಿಖರವಾದ ಮತ್ತು ಮೂಲಕ್ಕೆ ಯಥಾವತ್ತಾದ ಭಾಷಾಂತರವನ್ನು ಹೇಗೆ ಮಾಡಬಹುದೆಂದು ಅವು ತಿಳಿಸುತ್ತವೆ. ಅನೇಕ ವಿಶ್ವವಿದ್ಯಾ ನಿಲಯಗಳು ಭಾಷಾಂತರದಲ್ಲಿ ಡಿಪ್ಲೊಮಾ ಶಿಕ್ಷಣ ಪ್ರಾರಂಭಿಸಿವೆ. ಮೈಸೂರು ವಿಶ್ವ

ವಿದ್ಯಾನಿಲಯ ಸ್ನಾತಕೋತ್ತರ ಎಂ. ಫಿಲ್. ಶಿಕ್ಷಣವನ್ನೂ ಪ್ರಾರಂಭಿಸಿದೆ.

ಇಂದು ಪ್ರೌಢ ವಿಷಯಗಳ ಗ್ರಂಥಗಳು ಹೆಚ್ಚಾಗಿ ಇಂಗ್ಲಿಷಿನಲ್ಲಿರುವುದರಿಂದ ಅಧ್ಯಾಪಕರು, ವಿದ್ಯಾರ್ಥಿಗಳು ಅವನ್ನೇ ಆಶ್ರಯಿಸುತ್ತಾರೆ. ಆ ಗ್ರಂಥಗಳಿಂದ ಮಾಹಿತಿಗಳನ್ನು ತೆಗೆದುಕೊಂಡು ಕನ್ನಡ ಪಠ್ಯಪುಸ್ತಕಗಳನ್ನು ರಚಿಸುತ್ತಾರೆ, ಬೋಧನೆಗೆ ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತಾರೆ, ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಬರೆಯಲು ವಿದ್ಯಾರ್ಥಿಗಳು ಟಿಪ್ಪಣಿಗಳನ್ನು ತಯಾರಿಸುತ್ತಾರೆ. ಈ ಎಲ್ಲ ಸಂದರ್ಭದಲ್ಲೂ ಭಾಷಾಂತರ ಕಾರ್ಯ ಅಪ್ರತ್ಯಕ್ಷವಾಗಿ ನಡದೇ ಇರುತ್ತದೆ. ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರದ ದೃಷ್ಟಿಯಿಂದಲೇ ಬರೆದುಕೊಳ್ಳಬೇಕು.

ಈ ಕಾರಣಗಳಿಂದಾಗಿ ಇಂದು ಕನ್ನಡದ ಸಂದರ್ಭದಲ್ಲಿ ಭಾಷಾಂತರ ಹೆಚ್ಚು ಮಹತ್ವ ಪಡೆದಿದೆ. ಇದರಿಂದ ಈ ಕೆಲಸದಲ್ಲಿ ತೊಡಗಿರುವವರೆಲ್ಲ ಭಾಷಾಂತರದ ಮೂಲ ತತ್ತ್ವಗಳನ್ನು ಅರಿತಿರುವುದು ಅತ್ಯಾವಶ್ಯಕವಾಗಿದೆ. ಮೂಲ ಭಾಷೆಯಲ್ಲಿರುವ ವಿಷಯಗಳನ್ನು ಯಥೋಚಿತವಾಗಿ ಹೇಗೆ ಅದರ ಮೂಲ ಅರ್ಥ ಕೆಡದಂತೆ ಭಾಷಾಂತರಿಸಿಕೊಳ್ಳಬೇಕೆಂಬ ಬಗ್ಗೆ ಅರಿವು ಅಗತ್ಯ. ಇದರಲ್ಲಿ ಹೊಣೆಗೇಡಿತನ ತೋರಿದಷ್ಟೂ ಉದ್ದಿಷ್ಟ ಭಾಷೆಯ ಸಾಹಿತ್ಯ ತಪ್ಪು ವ್ಯಾಖ್ಯಾನಗಳಿಂದ ಮತ್ತು ಮಾಹಿತಿಗಳಿಂದ ತುಂಬಿ ಹೋಗುತ್ತದೆ. ಇಂತಹ ಬೆಳವಣಿಗೆ ಶಿಕ್ಷಣ ಮಾಧ್ಯಮಕ್ಕೆ ಹಾನಿಕರವಾಗುತ್ತದೆ. ಈಗಾಗಲೇ ಇಂತಹ ದೋಷಪೂರ್ಣ ಭಾಷಾಂತರ ರೂಪಗಳು ನಮ್ಮ ಭಾಷೆಯ ಅನುವಾದ ಕೃತಿಗಳಲ್ಲಿ ಮತ್ತು ಸ್ವತಂತ್ರ ಪಠ್ಯಗ್ರಂಥಗಳಲ್ಲಿ ಸಾಕಷ್ಟು ಕಂಡುಬಂದಿವೆ. ಈ ನಿಟ್ಟಿನಲ್ಲಿ ಸಂಪೂರ್ಣ ಯಶಸ್ಸು ಸಾಧಿಸಲಾಗದಿದ್ದರೂ ಜವಾಬ್ದಾರಿಯುತವಾದ ಮತ್ತು ಶ್ರಮಪೂರ್ಣವಾದ ಪ್ರಯತ್ನ ಅಗತ್ಯ.

ಭಾಷಾಂತರ ಶಿಕ್ಷಣ ಮಾಧ್ಯಮಕ್ಕೆ ಪೂರಕವಾಗಿರುವುದು ನಿಜ. ಆದರೆ ಭಾಷಾಂತರವನ್ನೇ ಯಾವ ಶಿಕ್ಷಣ ಮಾಧ್ಯಮವೂ ಸದಾಕಾಲ ಅವಲಂಬಿಸಿರಲಾರದು. ಒಂದು ಶಿಕ್ಷಣ ಮಾಧ್ಯಮ ಸತ್ವಶಾಲಿಯಾಗಬೇಕಾದರೆ ಆ ಭಾಷೆಯಲ್ಲಿ ಸ್ವತಂತ್ರ ಪ್ರಕಟಣೆಗಳು, ಸಂಶೋಧನಾ ಬರಹಗಳು ಹೆಚ್ಚಬೇಕು. ಆ ಜನರ ಆಡಳಿತ ಭಾಷೆಯೂ ಶಿಕ್ಷಣ ಮಾಧ್ಯಮವೂ ಒಂದೇ ಆಗಿರಬೇಕು. ಒಟ್ಟಿನ ಪರಿಸರದಲ್ಲಿ ಒಂದು ಭಾಷೆಯದೇ ಪ್ರಾಧಾನ್ಯವಿರಬೇಕು. ಅಂದರೆ ಅಂತಹ ಭಾಷೆ ಮಾತೃಭಾಷೆ ಅಥವಾ ಅಲ್ಲಿನ ಬಹುಸಂಖ್ಯಾತರ ಭಾಷೆಯಾಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ. ಇಲ್ಲದೆ ಅನ್ಯಭಾಷೆಯೊಂದರ ಮೂಲಕ ನಮ್ಮ ನಿತ್ಯಜೀವನ ವ್ಯವಹಾರ ನಡೆಯುವುದಾದರೆ, ಪ್ರೌಢ ವಿಷಯಗಳನ್ನು ಆ ಭಾಷೆಯ ಮೂಲಕ ಮಾತ್ರ ತಿಳಿದುಕೊಳ್ಳುವುದು ಸಾಧ್ಯವಿದ್ದರೆ ಯಾವ ಶಿಕ್ಷಣ ಮಾಧ್ಯಮವೂ ಭಾಷಾಂತರದಿಂದ ಹೆಚ್ಚಿನ ಪ್ರಯೋಜನ ಪಡೆಯದು.

ಭಾಷಾಂತರ ಶಿಕ್ಷಣ ಮಾಧ್ಯಮಕ್ಕೆ ನವಪುಷ್ಟಿಯನ್ನೂ ಚೇತನವನ್ನು ಕೊಡುತ್ತದೆ. ಅದು ಸದಾಕಾಲವೂ ಆವಶ್ಯಕವಾಗಿ ನಡೆಯಬೇಕಾದ ಚಟುವಟಿಕೆ. ಆದರೆ ಈ ಚಟುವಟಿಕೆ ಶಿಕ್ಷಣ ಮಾಧ್ಯಮದ ಅಭಿವೃದ್ಧಿಗೆ ಪೂರಕವಾಗಿದ್ದು ಪೋಷಕವಾರಬೇಕು.

೧೩ | ಕಾನೂನು ಅನುವಾದದ ತೊಡಕುಗಳು

ಎಚ್. ಜೆ. ಲಕ್ಕಪ್ಪಗೌಡ

ನಮ್ಮ ಮನಸ್ಸಿನ ಅಭಿಪ್ರಾಯಗಳನ್ನು ಅಭಿವ್ಯಕ್ತಿಸುವ ಒಂದು ಮಹತ್ತರ ಸಾಧನ ಭಾಷೆ. ಜನಜನದ ನಡುವೆ ಅರಿವು ಮೂಡುವುದು ಕೊಡುಕೊಳೆ ಸಾಧ್ಯವಾಗುವುದು ಮುಖ್ಯವಾಗಿ ಭಾಷೆಯ ಮೂಲಕ. ಈ ಭಾಷೆಯೆಂಬ ಜ್ಯೋತಿ ಬೆಳಗದಿದ್ದಲ್ಲಿ ಜಗತ್ತೆಲ್ಲ ಅಂಧಕಾರಮಯವಾಗುತ್ತಿತ್ತು ಎಂದು ಒಬ್ಬ ವಿದ್ವಾಂಸ ಉದ್ಗಾರತೆತ್ತಿದ್ದಾನೆ. ಮನುಷ್ಯನ ಬದುಕು ಹಸನಾಗುವುದಕ್ಕೆ ಈ ಭಾಷೆ ಎಂಬುದು ಕೊಟ್ಟ ಕೊಡುಗೆ ಸಾಮಾನ್ಯವಾದುದಲ್ಲ. ಇಲ್ಲದಿದ್ದರೆ ನಮ್ಮ ಬದುಕಿನ ಹಲವು ಅಂಗಗಳು ತುಂಬಿಕೊಂಡು ಬೆಳೆಯುತ್ತಿರಲಿಲ್ಲ. ನ್ಯಾಯ, ಆಡಳಿತ ಮತ್ತು ಶಿಕ್ಷಣಗಳು ನಮ್ಮ ಬದುಕಿನ ಮಹತ್ವದ ಮುಖಗಳಾಗಿವೆ. ಇವುಗಳ ಫಲ ನಮಗೆ ಇಂದು ಸಂಪೂರ್ಣವಾಗಿ ದೊರೆಯದಿದ್ದರೆ ಅದಕ್ಕೆ ಮುಖ್ಯ ಕಾರಣ, ನಮ್ಮ ಹೃದಯದೊಳಕ್ಕೆ ನೇರವಾಗಿ ಪ್ರವೇಶಿಸುವಂತಹ ನಮ್ಮ ಬುದ್ಧಿಯೊಡನೆ ನೇರವಾಗಿ ಸಂಪರ್ಕ ದೊರಕಿಸಿಕೊಳ್ಳುವಂತಹ ನಮ್ಮದೇ ಆದ ಭಾಷೆಯ ಮೂಲಕ ಇವು ಹಬ್ಬಿಕೊಳ್ಳದಿರುವುದು. ನ್ಯಾಯ ವಿತರಣೆ ನಡೆಯುವುದು ಇಂಗ್ಲಿಷಿನಲ್ಲಿ. ನಮ್ಮ ಶಿಕ್ಷಣ ನಡೆಯುತ್ತಿರುವುದು ಇಂಗ್ಲಿಷಿನಲ್ಲಿ. ಈ ಭಾಷೆಯ ಕರಟ ವನ್ನು ಕಚ್ಚುವುದರಲ್ಲೇ ನಾವು ಮಗ್ನವಾಗಿ, ಅದೇ ತಿರುಳೆಂದು ಭ್ರಮಿಸಿ ನಿಜವಾದ ತಿರುಳನ್ನು ತಿನ್ನುವುದೇ ನಮಗೆ ಮರೆತು ಹೋಗಿದೆ. ಹೀಗಾಗಿ ನಾವು ಯಾವ ಮೂಲಭೂತ ಶೋಧನೆಯನ್ನು ಮಾಡುವುದರಲ್ಲಿ, ವಿಷಯದ ಸಂಪೂರ್ಣ ಅರಿವನ್ನು ಪಡೆಯುವಲ್ಲಿ ವಿಫಲರಾಗಿದ್ದೇವೆ. ಈ ಸಂವಹನರಾಹಿತ್ಯದಿಂದಾಗಿ ಸಂಶಯ, ತಪ್ಪುಗ್ರಹಿಕೆ, ಅಜ್ಞಾನ ಗಳು ಮುಳ್ಳುಪೊದೆಗಳಾಗಿ ಬೆಳೆದಿವೆ.

"ನಮ್ಮ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆಯೇ ಕೇವಲ ಶೇಕಡ ೨೯.೫. ಇದರಲ್ಲಿ ಇಂಗ್ಲಿಷ್ ಬಲ್ಲವರ ಸಂಖ್ಯೆ ಶೇಕಡ ಒಂದರಷ್ಟು ಇಲ್ಲ. ಪ್ರೌಢಶಾಲಾ ಪರೀಕ್ಷೆಯಲ್ಲಿ ತೇರ್ಗಡೆ ಯಾದವರನ್ನು ಇಂಗ್ಲಿಷ್ ಬಲ್ಲವರೆಂದು ಭಾವಿಸಿದರೂ ಈ ಸಂಖ್ಯೆ ಇಷ್ಟು ಕಡಿಮೆ ಯಾಗಿದೆ. ಹೀಗಿರುವಾಗ ಕೇವಲ ಹಿಡಿ ಮಂದಿಗೆ ಅರ್ಧಂಬರ್ಧ ಗೊತ್ತಿರುವ ಭಾಷೆ ಯಲ್ಲಿ ಇಡೀ ನಾಡಿನ ವ್ಯವಹಾರಗಳನ್ನು ಸಾಗಿಸುವುದು ಅಸ್ವಾಭಾವಿಕ ಹಾಗೂ ಜನತಾ ದ್ರೋಹವಾಗುತ್ತದೆ. ದೇಶದ ಜನಸಾಮಾನ್ಯರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಸಲುವಾಗಿ ಆಂಗ್ಲರು ಅನುಸರಿಸಿದ ಈ ತಂತ್ರ ಸ್ವಾತಂತ್ರ್ಯ ಬಂದು ಮೂವತ್ತು ವರ್ಷ ಗಳಾದರೂ ಮುಂದುವರಿಯುತ್ತಿರುವುದು ದುರ್ದೈವದ ಸಂಗತಿಯಾಗಿದೆ."

ಕನ್ನಡವನ್ನು ನಮ್ಮ ಎಲ್ಲ ವ್ಯವಹಾರಗಳ ಮಾಧ್ಯಮವಾಗಿ ಮಾಡಬೇಕೆಂದಾಗ ಭುಗಿ

ಲೇಳುವ ಪ್ರಶ್ನೆ "ನಮ್ಮ ಭಾಷೆ ಅದಕ್ಕೆ ಸಿದ್ಧವಾಗಿದೆಯೇ? ಆ ಭಾಷೆಯ ಸೂಕ್ಷ್ಮತಮ ಅರ್ಥಛಾಯೆಗಳನ್ನು ಸಮರ್ಪಕವಾಗಿ ಅಭಿವ್ಯಕ್ತಿಸಬಲ್ಲ ಪಾರಿಭಾಷಿಕ ಪದಗಳು ನಮ್ಮಲ್ಲಿವೆಯೇ?" ಎಂಬುದು. ಯಾವ ಭಾಷೆಯ ಇತಿಹಾಸದಲ್ಲೂ ಇಂತಹ ಒಂದು ಕಾಲ ಜರುಗಿ ಹೋಗಿದೆ. ಪ್ರಸಿದ್ಧ ವಿದ್ವಾಂಸನಾದ ಬೇಕನ್ ತನ್ನ ಮುಖ್ಯ ಕೃತಿಗಳನ್ನೆಲ್ಲ ಬರೆದದ್ದು ಲ್ಯಾಟಿನ್‌ನಲ್ಲಿ. ಅವನು ಅಷ್ಟು ಪ್ರಮುಖವೆಂದು ಗಣಿಸದ ಪ್ರಬಂಧಗಳನ್ನು ಮಾತ್ರ ಇಂಗ್ಲಿಷ್‌ನಲ್ಲಿ ಬರೆದ. ಏಕೆಂದರೆ, ಅವನ ದೃಷ್ಟಿಯಲ್ಲಿ ಇಂಗ್ಲಿಷ್ ಶಾಶ್ವತವಾಗಿ ನಿಲ್ಲುವ ಭಾಷೆಯಲ್ಲ. ರಷ್ಯಾ ದೇಶದಲ್ಲಿ ಆ ಭಾಷೆಯೇ ಅಧಿಕೃತ ಭಾಷೆಯೆಂದು ಘೋಷಿಸಿದ ಕಾಲದಲ್ಲಿ ಫ್ರೆಂಚ್ ನ್ಯಾಯಾಲಯದ ಭಾಷೆಯಾಗಿತ್ತು. ಆ ಭಾಷೆಯ ನ್ನಾಡುವವರು-ಇಂದು ಇಂಗ್ಲಿಷ್ ಮಾತಾಡುವವರನ್ನು ನಾವು ಗಣಿಸುವಂತೆ-ಗಣ್ಯವ್ಯಕ್ತಿ ಗಳೆನಿಸಿದ್ದರು. ರಷ್ಯನ್ ಭಾಷೆ ಕೇವಲ ಕೆಳವರ್ಗದವರ ಭಾಷೆಯಾಗಿತ್ತು. ಆದರೆ ಅದು ಅಧಿಕೃತ ಭಾಷೆಯೆಂದು ಘೋಷಿತವಾದ ಕೂಡಲೇ ರಷ್ಯನರು ಆ ಭಾಷೆಯಲ್ಲೇ ವ್ಯವ ಹರಿಸಲು ಪ್ರಾರಂಭಿಸಿದರು. ಅದೀಗ ಸಮೃದ್ಧವಾಗಿ ಬೆಳೆದಿದೆ.

ಆದರೆ ಕನ್ನಡ ಭಾಷೆಗೆ ಆ ಕಷ್ಟವಿಲ್ಲ. ೧೫೦೦ ವರ್ಷಗಳಿಂದ ಸಮೃದ್ಧವಾಗಿ ಬೆಳೆದು ಬಂದಿರುವ ಭಾಷೆಯದು. ಕಾಲಕಾಲಕ್ಕೆ ಉರ್ದು, ಅರಾಬಿಕ್, ಸಂಸ್ಕೃತ, ಪರ್ಶಿಯನ್, ಇಂಗ್ಲಿಷ್ ಮುಂತಾದ ಭಾಷೆಗಳ ಸಂಪರ್ಕ ಪಡೆದು ತನ್ನ ಕೊರತೆಯನ್ನು ಅವುಗಳಿಂದ ತುಂಬಿಕೊಂಡು ಸತ್ವಶಾಲಿಯಾಗದೆ ಈ ಭಾಷೆ. ಇಷ್ಟೇ ಅಲ್ಲ ಕರ್ನಾಟಕವನ್ನು ಈಗಿನ ಕರ್ನಾಟಕಕ್ಕಿಂತ ವಿಶಾಲವಾದ ಕರ್ನಾಟಕವನ್ನು ಆಳಿದ ಹಲವಾರು ರಾಜರ ಆಡಳಿತ ಭಾಷೆ ಕನ್ನಡವಾಗಿತ್ತೆಂಬುದು ನಾಡಿನ ಎಲ್ಲೆಡೆ ದೊರೆತಿರುವ ಶಾಸನಗಳಿಂದ ಸುಸ್ಪಷ್ಟ ವಾಗುತ್ತದೆ. ಆಗಿನ ಕಾಲದ ಶಾಸನಗಳು ಬಹುಮಟ್ಟಿಗೆ ಈಗಿನ ಕಾನೂನು ಸಂಹಿತೆಗಳಿಗೆ ಸಮ. ಆ ಶಾಸನಗಳಲ್ಲಿ ಆ ರಾಜನ ವಂಶಾವಳಿಗಳು, ಸೋಲಿಸಿದ ರಾಜ್ಯಗಳು, ಕೊಟ್ಟ ಬಿರುದುಗಳು, ನಿರೂಪಗಳು, ಅರಸರಿಗಾಗಿ ಪ್ರಾಣತೆತ್ತ ಗರುಡರು—ಮುಂತಾದ ವಿಷಯ ಗಳು ನಿರೂಪಿತವಾಗಿವೆ. ಇದೆಲ್ಲ ಆ ಕಾಲದಲ್ಲಿ ಕನ್ನಡ ಆಡಳಿತ ಭಾಷೆಯಾಗಿತ್ತು ಎಂಬುದಕ್ಕೆ ಸ್ಪಷ್ಟ ನಿದರ್ಶನ. ಹೈದರ್, ಟಿಪ್ಪು ಮುಂತಾದವರ ಕಾಲದಲ್ಲಿ ಪಾರ್ಸಿ ಮತ್ತು ಕನ್ನಡದಲ್ಲಿ ಲೆಕ್ಕಪತ್ರಗಳನ್ನಿಡಲಾಗುತ್ತಿತ್ತು. ಹಿಂದಿನ ಮೈಸೂರರಸರ ಕಾಲದಲ್ಲಿ ಕನ್ನಡವೇ ಪ್ರಧಾನವಾಗಿತ್ತು. ಬ್ರಿಟಿಷರ ಕಾಲದಲ್ಲೂ ಸಹ ನ್ಯಾಯಾಲಯದಲ್ಲಿ ಕನ್ನಡ ವನ್ನು ಬಳಸಲು ಅವಕಾಶವಿತ್ತು. ತೀರ್ಪುಗಳನ್ನು ಕನ್ನಡದಲ್ಲಿಯೇ ಬರೆಯಲು ಅವಕಾಶ ಮಾಡಿಕೊಡಲಾಗಿತ್ತು. ವ್ಯವಹರಣೆಗಳೂ ಕನ್ನಡದಲ್ಲಿ ಜರುಗುತ್ತಿದ್ದವು. ಆದರೆ ಯಾವುದೋ ಒಂದು ದುರ್ಘಳಿಗೆಯಲ್ಲಿ ಈ ಕನ್ನಡದ ವ್ಯವಹಾರ ಸಂಪೂರ್ಣವಾಗಿ ನಿಂತು ಇಂಗ್ಲಿಷ್ ತನ್ನ ಕರಾಳಛಾಯೆಯನ್ನು ಹರಡಿ ಕನ್ನಡನಾಡಿನ ಇಡೀ ವ್ಯವಹಾರ ವನ್ನೇ ಕೃತಕವನ್ನಾಗಿ ಮಾಡಿಬಿಟ್ಟಿತು. ಇದಕ್ಕೆ ನಮ್ಮವರ ಪರಭಾಷಾ ವ್ಯಾಮೋಹ ಮತ್ತು ಸ್ವಭಾಷೆಯ ಬಗೆಗೆ ಅವರಿಗಿರುವ ಕೀಳರಿಮೆ ಪ್ರಬಲ ಕಾರಣವಾಗಿದೆ.

ಸ್ವಾತಂತ್ರ್ಯಾನಂತರದಲ್ಲಿ ಈ ಬಗ್ಗೆ ಅಲ್ಪಸ್ವಲ್ಪ ಪ್ರಯತ್ನಗಳು ನಡೆಯುತ್ತಿವೆ.

ಭಾರತ ಸಂವಿಧಾನದ ೧೮ನೇ ಭಾಗದ ೨ನೇ ಅಧ್ಯಾಯದಲ್ಲಿ 'ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ತನ್ನ ಪ್ರಾಂತ್ಯದ ಭಾಷೆಯನ್ನು ಸರ್ಕಾರಿ ಉದ್ದೇಶಗಳಿಗಾಗಿ ಬಳಸುವ ಭಾಷೆಯೆಂದು ಅಂಗೀಕರಿಸಬಹುದು'—ಎಂದು ಹೇಳಿದೆ. ಇದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳನ್ನು ನ್ಯಾಯಾಲಯದ ಭಾಷೆಗಳನ್ನಾಗಿ ಬಳಸುವ ಬಗ್ಗೆ ವಿವೇಚಿಸಲು ಕೇಂದ್ರ ಸರ್ಕಾರ ಒಂದು ಭಾಷಾ ಆಯೋಗವನ್ನು ನೇಮಿಸಿತು. ಆ ಆಯೋಗದಲ್ಲಿ ಎಲ್ಲ ಭಾಷೆಗಳ ಪ್ರತಿನಿಧಿಗಳೂ ಇದ್ದರು. ಕಾನೂನಿನಲ್ಲಿ ಉಪಯೋಗಿಸುವ ಪಾರಿಭಾಷಿಕ ಪದಗಳು ಸಮಗ್ರ ಭಾರತಕ್ಕೆ ಅನ್ವಯಿಸುವಂತೆ ಏಕರೂಪವಾಗಿರಬೇಕೆಂದೂ, ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಲ್ಲಿ ಅಥವಾ ಹಲವು ರೀತಿಗಳಲ್ಲಿ ಭಾಷಾಂತರಿಸಿದರೆ ಅರ್ಥ ಅನಿಶ್ಚಿತವಾಗಿ ಹಲವು ತಪ್ಪು ವ್ಯಾಖ್ಯಾನಗಳಿಗೆ ಕಾರಣವಾಗಿ ಮೂಲೋದ್ದೇಶ ಭಂಗವಾಗುವುದೆಂದೂ ನಿರ್ಣಯಿಸಿತು. ಇದರಿಂದಲೇ Law ವಿಧಿ, Power ಶಕ್ತಿ, Research ಅನುಸಂಧಾನ, Requisition ಅಧ್ಯಪೇಕ್ಷೆ, Amendment ಸಂಶೋಧನೆ Ministry ಮಂತ್ರಾಲಯ, Police ಆರಕ್ಷಕ, Application ಆವೇದನ ಪತ್ರ, Engineer ಅಭಿಯಂತರ, Additional ಅಪರ, Senior ಪ್ರವರ, Superinten-dent ಅಧೀಕ್ಷಕ, Junior ಅವರ, ಇತ್ಯಾದಿಯಾದ ಕನ್ನಡಕ್ಕೆ ವಿಚಿತ್ರವೆನ್ನಿಸಬಹುದಾದಂಥ ಪದಗಳು ಅಂದಿನ ಭಾಷಾಂತರದಲ್ಲಿ ಪ್ರಯೋಗವಾದವು. Point of Law ಎಂಬುದನ್ನು 'ವಿಧಿ ಬಿಂದು' ಎಂದು ಪತ್ರಿಕೆಗಳು ಪ್ರಯೋಗಿಸಿದಾಗ, Legislative Assembly ವಿಧಾನಸಭೆ ಆದಾಗ, legal ವಿಧಿಬದ್ಧ ಆದಾಗ ಅದರದೇ ರೂಪವಾದ Law ಎಂಬುದನ್ನು ವಿಧಿ ಎಂದು ಕರೆದರೆ ತಪ್ಪೇನು? ಎಂಬ ವಾದವೂ ಇದೆ. Power ಎಂಬುದನ್ನು 'ಶಕ್ತಿ' ಎಂದು ಉಪಯೋಗಿಸಿದಾಗ ನಗುವ ನೀವು authority ಎಂಬುದಕ್ಕೆ ಏನು ಹೇಳುತ್ತೀರಿ. Power ಅಧಿಕಾರವಾದರೆ authority ಎಂಬುದಕ್ಕೆ 'ಅಧಿಕಾರ' ಎಂದು ಉಪಯೋಗಿಸುವುದು ಸಮಂಜಸವೆ? Power ಮತ್ತು authority ಬೇರೆಬೇರೆಯಲ್ಲವೆ? Power ನಿಂದ authority ಉದ್ಭವಿಸುವುದಿಲ್ಲವೆ? ಎಂಬ ವಾದ ಏಳುತ್ತದೆ. ಈ ವಾದ ಸಂಪೂರ್ಣ ಆಧಾರರಹಿತ ಎಂದು ಹೇಳುವಂತಿಲ್ಲ. ಆದರೆ ಪ್ರತಿಯೊಂದು ಭಾಷೆಗೂ ತನ್ನದೇ ಆದ ಜಾಯಮಾನವಿದೆ, ನೈಸರ್ಗಿಕವಾದ ಅರ್ಥಪರಿಸರವಿದೆ. ಒಂದು ಭಾಷೆಯಲ್ಲಿ ಪ್ರಯೋಗವಾದ ಪದ ಮತ್ತೊಂದು ಭಾಷೆಯಲ್ಲಿ ಭಿನ್ನಾರ್ಥವನ್ನು ಕೊಡುತ್ತಿದ್ದಾಗ ಆ ಪದವನ್ನು ಬದಲಾಯಿಸುವುದು ಯುಕ್ತಿಯುಕ್ತವೂ ಸಹಜವೂ ಆಗಿದೆ. 'ವಿಧಿ' ಎಂಬುದಕ್ಕೆ ಕನ್ನಡದಲ್ಲಿ ದೈವ, ಅದೃಷ್ಟ ಎಂಬ ಅರ್ಥಗಳಿವೆ. ಆದುದರಿಂದ Law ಎಂಬುದನ್ನು ವಿಧಿ ಎಂದಾಗಲೀ, Law Ministry ಎಂಬುದು ವಿಧಿ ಮಂತ್ರಾಲಯ ಎಂದು ಹೇಳುವುದಾಗಲೀ ಸಾಧುವಾಗದು. ಆದರೆ ಕಾನೂನು ಎಂಬುದು ಒಂದು ಶಾಸ್ತ್ರ. ಕತೆಕಾದಂಬರಿಗಳನ್ನು ಅನುವಾದ ಮಾಡಿದಂತೆ ಸುಲಭವಾಗಿ ಅದನ್ನು ಅನುವಾದ ಮಾಡಲಾಗುವುದಿಲ್ಲ. ಅದರಲ್ಲಿ ಪ್ರಯೋಗಿಸಿರುವ ಒಂದೊಂದು ಪದವೂ ಒಂದೊಂದು ವಿಶಿಷ್ಟಾರ್ಥದಿಂದ ಕೂಡಿರುತ್ತದೆ. ಖಚಿತತೆ ಮತ್ತು ನಿಷ್ಕೃಷ್ಟತೆಗೆ ಅಲ್ಲಿ

ಪ್ರಾಧಾನ್ಯ. ಹಾಗಿಲ್ಲದೆ ತುಸು ಎಚ್ಚರ ತಪ್ಪಿ ಪದಪ್ರಯೋಗ ಮಾಡಿದರೆ ತಪ್ಪು ವ್ಯಾಖ್ಯಾನಗಳಿಗೆಡೆಕೊಟ್ಟು ಅನರ್ಥಪರಂಪರೆಗೆ ಕಾರಣವಾಗುತ್ತದೆ. ಕಾನೂನಿಗೆ ಸಾರಾಂಶವನ್ನು ಹೇಳುವಾಗ ಸರಳವಾಗಿ ಹೇಳುವುದು ಸಾಧ್ಯ. ಆದರೆ ಒಂದು ಅಧಿನಿಯಮವನ್ನು ಅಥವಾ ಪ್ರಕರಣವನ್ನು ಅನುವಾದ ಮಾಡುವಾಗ ಮೈಯೆಲ್ಲ ಕಣ್ಣಾಗಿರಬೇಕು. ಮೂಲದಲ್ಲಿನ ಒಂದು ಪದವೂ ಬಿಟ್ಟು ಹೋಗಬಾರದು, ಅನಗತ್ಯವಾದ ಒಂದು ಪದವೂ ಬಂದು ಸೇರಬಾರದು ಅನುವಾದದಲ್ಲಿ; ಮೂಲದ ಬಿಗಿ, ಖಚಿತತೆಗಳನ್ನು ಕಾಯ್ದುಕೊಂಡು ಸಂಪೂರ್ಣ ಅರ್ಥವನ್ನು ಛಟ್ಟೆಯಿಳಿಸಬೇಕಾಗುತ್ತದೆ. ಮೂಲವು ಕೊಡುವ ಅರ್ಥಕ್ಕಿಂತ ಕೂದಲೆಳೆಯಷ್ಟೂ ಅತ್ತಿತ್ತ ಜರುಗದಂತೆ ಕನ್ನಡಿಸಬೇಕಾಗುತ್ತದೆ. ಇಷ್ಟೇ ಅಲ್ಲ. ಪ್ರತಿಯೊಂದು ಅಧಿನಿಯಮದ ಪರಿಭಾಷಾ ಪ್ರಕರಣದಲ್ಲಿ ಆ ಅಧಿನಿಯಮದಲ್ಲಿ ಉಪಯೋಗಿಸಲಾಗುವ ಮುಖ್ಯ ಪಾರಿಭಾಷಿಕ ಪದಗಳ ಅರ್ಥವಿವರಣೆಯನ್ನು ಕೊಡಲಾಗಿದೆ. ಆ ಪ್ರಕರಣದಲ್ಲಿ ಒಂದು ವಿಶಿಷ್ಟ ಪದಕ್ಕೆ ಸಂವಾದಿಯಾಗಿ ನಾವು ಯಾವ ಪದವನ್ನು ಬಳಸುತ್ತೇವೆಯೋ ಅವೇ ಪದವನ್ನು ಆ ಅಧಿನಿಯಮದ ಉದ್ದಕ್ಕೂ ಬಳಸಬೇಕಾಗುತ್ತದೆ. ಮೂಲದ ಒಂದು ಕರ್ತೃಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಒಂದು ಪದ ದೊರಕದಿರಬಹುದು. ಆ ಪದದ ಸರ್ವ ಅರ್ಥವನ್ನೂ ಅನುವಾದದಲ್ಲಿ ತರಬೇಕಾದರೆ ಅದನ್ನು ವಿವರಿಸಬೇಕು, ಇಲ್ಲವೇ ಹೊಸಪದವೊಂದನ್ನು ಸೃಷ್ಟಿಸಬೇಕು. ಪ್ರತಿಬಾರಿಯೂ ಆ ಕರ್ತೃ ಪದ ಬಂದಾಗ ವಿವರಣೆಯನ್ನು ಕೊಡುವುದು, ನ್ಯಾಯಾಲಯದಲ್ಲಿ ವಾದ ಮಾಡುವವರ ದೃಷ್ಟಿಯಿಂದ ಸಮಂಜಸವಲ್ಲ. ಆಗ ಹೊಸಪದ ನಿರ್ಮಾಣ ಅಗತ್ಯ. ಅಂಥ ಸಂದರ್ಭದಲ್ಲಿ ಆ ಪದ ಸ್ವಲ್ಪ ಕ್ಲಿಷ್ಟವೆನಿಸಬಹುದಾದರೂ ಅನಿವಾರ್ಯ. ಹೀಗಿರುವಾಗ ಕಾನೂನುಭಾಷೆ ಕೆಲಮಟ್ಟಿಗೆ ಪೆಡಸಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಕೇವಲ ನೂಲೆಳೆಯಷ್ಟು ಅರ್ಥಂತರವಿರುವ ಪದಗಳು ಮೂಲದಲ್ಲಿ ಒಂದಾದರ ಮೇಲೊಂದು ಬರುವುದುಂಟು. ಈ ಎಲ್ಲ ಅರ್ಥಗಳನ್ನೂ ಬೇರೆಬೇರೆಯಾಗಿ ತರಬೇಕಾದರೆ ಬೇರೆಬೇರೆ ಪದಗಳನ್ನು ಉಪಯೋಗಿಸಬೇಕಾಗುತ್ತದೆ. ಆ ಎಲ್ಲ ಪದಗಳ ಬದಲಾಗಿ ಕನ್ನಡದಲ್ಲಿ ಒಂದೇ ಪದ ಬಳಕೆಯಲ್ಲಿದ್ದಾಗ ಈ ತೊಡಕು ಇನ್ನೂ ಬೆಳೆಯುತ್ತದೆ. ದಿನನಿತ್ಯದಲ್ಲಿ ನಾವು ಬಳಸುವ ಪದಗಳು ಬಹುಮಟ್ಟಿಗೆ ಸ್ಥೂಲಾರ್ಥವನ್ನು ಕೊಡುವಂಥವು; ಆದರೆ ಶಾಸ್ತ್ರಗ್ರಂಥಗಳಲ್ಲಿ ಪ್ರಯೋಗಿಸುವ ಪದಗಳು ವಿಶಿಷ್ಟವೂ ಸೂಕ್ಷ್ಮವೂ ಆದಂಥವುಗಳಾಗಿರುತ್ತವೆ. ಕೆಲವು ಉದಾಹರಣೆಗಳ ಸಮೇತ ಇವುಗಳನ್ನು ಸ್ಪಷ್ಟೀಕರಿಸಬಹುದು.

Public ಎಂಬ ಪದಕ್ಕೆ ಎರಡು ಅರ್ಥಗಳಿವೆ, ಸರ್ಕಾರೀ ಮತ್ತು ಸಾರ್ವಜನಿಕ ಎಂದು. Public Sector ಎನ್ನುವಾಗ ಸರ್ಕಾರೀ ವಲಯವೆನ್ನುವ ಅರ್ಥವಾದರೆ Public Speech ಬಹಿರಂಗ ಭಾಷಣ, ಸಾರ್ವಜನಿಕ ಭಾಷಣ ಎಂದರ್ಥವಾಗುತ್ತದೆ. ಈಗ Public Servant ಎಂಬ ಪದವನ್ನು ನೋಡಿ. ಇದು ಸರ್ಕಾರೀ, ಅರೆಸರ್ಕಾರೀ, ಸರ್ಕಾರೇತರ ಸಂಸ್ಥೆಗಳಲ್ಲಿ ಕೆಲಸಮಾಡುವ ನೌಕರರೆಲ್ಲರನ್ನೂ ಒಳಗೊಳ್ಳುತ್ತದೆ. ಪೌರ

ಸಭೆ, ಸಹಕಾರ ಸಂಘಗಳಲ್ಲಿ ಕೆಲಸ ಮಾಡುವವನೂ Public servant ಆದರೆ ಅವನನ್ನು ಸರ್ಕಾರೀ ನೌಕರ ಎನ್ನವಾಗದು ; ಸಾರ್ವಜನಿಕ ನೌಕರ ಎನ್ನಲಾಗದು. ಈ ಉಭಯ ಸಂಕಟದಿಂದ ಪಾರಾಗಲು 'ಲೋಕ ನೌಕರ' ಎಂಬ ಪದಪ್ರಯೋಗಿಸಿದಾಗ ಕೆಲವರ ಹುಬ್ಬು ಮೇಲೇರುತ್ತದೆ; ಆದರೆ Public Service Commission ಎಂಬುದನ್ನು 'ಲೋಕ ಸೇವಾ ಆಯೋಗ' ಎಂದಾಗ ಯಾರೂ ಬೆಚ್ಚಿ ಬೀಳುವುದಿಲ್ಲ. ಕಾರಣ, ಅದು ಈಗಾಗಲೆ ಬಳಕೆಗೆ ಬಂದಿದೆ. ಈಗ affidavit ಎಂಬ ಪದಕ್ಕೆ ನಮ್ಮ ನ್ಯಾಯಾಲಯ ಗಳಲ್ಲಿ 'ಪ್ರಮಾಣಪತ್ರ' ಎಂದು ಪದಪ್ರಯೋಗವಿದೆ. ಆದರೆ ಇದೇ ಪದವನ್ನೇ certificate ಎಂಬುದಕ್ಕೂ ನಾವ ಬಳಸುತ್ತೇವೆ. ಇವೆರಡರ ಖಚಿತ ವ್ಯತ್ಯಾಸವನ್ನು ತೋರಿಸಬೇಕಾದ ತೊಡಕು ಉದ್ಭವಿಸಿದಾಗ ಒಂದನ್ನು 'ಶಪಥಪತ್ರ'ವೆಂದೂ ಮತ್ತೊಂದನ್ನು 'ಪ್ರಮಾಣಪತ್ರ'ವೆಂದೂ ನಿಗದಿ ಮಾಡಬೇಕಾಗುತ್ತದೆ. Petition ಮತ್ತು Application ಎಂಬ ಪದಗಳಿವೆ. ನ್ಯಾಯಾಲಯಗಳಲ್ಲಿ Petition ಎಂಬುದೂ ಸರ್ಕಾರೀ ವ್ಯವಹಾರದಲ್ಲಿ Application ಎಂಬುದೂ ಹೆಚ್ಚು ಬಳಕೆಯಲ್ಲಿದೆ. ಇವೆರಡಕ್ಕೂ ಅರ್ಥವ್ಯತ್ಯಾಸವಿದೆ. ನ್ಯಾಯಾಲಯಗಳಲ್ಲಿ ವ್ಯವಹರಣೆಗಳು ಪ್ರಾರಂಭವಾಗುವುದಕ್ಕೆ ಮೊದಲು ಸಲ್ಲಿಸುವುದು Petition. ಅನಂತರ ಮಧ್ಯೆ ಮಧ್ಯೆ ಯಾವುದಾದರೊಂದು ಅಂಶದ ಬಗ್ಗೆ ಹಾಕುವುದು Application. ಇವೆರಡಕ್ಕೂ ಬಳಕೆಯಲ್ಲಿರುವ ಪದ ಅರ್ಜಿ. ಮೂಲದಲ್ಲಿ Petitions & Applications ಎಂದು ಬಂದಾಗ ಮಾಡುವುದೇನು? ಅರ್ಜಿಗಳು ಮತ್ತು ಅರ್ಜಿಗಳು ಎನ್ನೋಣವೆ? 'ಮನವಿ'ಯನ್ನು ಬಳಸೋಣವೆಂದರೆ Representationsಗೆ ಏನು? 'ದೂರು' ಪ್ರಯೋಗಿಸಲೆಂದರೆ complaint ಎನ್ನುವುದಕ್ಕೆ ಏನು? ಉತ್ತರ ಕರ್ನಾಟಕದಲ್ಲಿ ದರಖಾಸ್ತು ಎಂದರೆ petition ಆದರೆ ನಮ್ಮಲ್ಲಿ ದರಖಾಸ್ತು ಎಂದರೆ ಭೂಮಿಯ ಮಂಜೂರಾತಿ. ಈ ತೊಡಕಿನ ನಿವಾರಣೆ ಹೇಗೆ? Travelling allowance for the journey made by an officer on his tour. ಈ ವಾಕ್ಯದಲ್ಲಿ Travel, journey, tour ಎಂಬ ಮೂರೂ ಪದಗಳು ಬರುತ್ತವೆ. Travelಗೂ journeyಗೂ ವ್ಯತ್ಯಾಸವಿದೆ. Travel ಒಟ್ಟು ಪ್ರಯಾಣವೆನ್ನುವ ಅರ್ಥ ವಿದ್ದರೆ Journeyಗೆ ಒಂದು ಗೊತ್ತಾದ ಸ್ಥಳದಿಂದ ಮತ್ತೊಂದು ನಿರ್ದಿಷ್ಟ ಸ್ಥಳಕ್ಕೆ ಮಾಡಿದ ಪ್ರಯಾಣವೆನ್ನುವ ಅರ್ಥವಿದೆ. ಹೀಗಿರುವಾಗ ಮೂರಕ್ಕೂ 'ಪ್ರಯಾಣ' ಎಂದು ಪ್ರಯೋಗಿಸಿ 'ಅಧಿಕಾರಿಯು ತನ್ನ ಪ್ರಯಾಣದ ಸಂದರ್ಭದಲ್ಲಿ ಮಾಡಿದ ಪ್ರಯಾಣದ ಪ್ರಯಾಣಭತ್ಯ' ಎಂದು ಅನುವಾದಿಸಿದರೆ ಸರಿಯಾದೀತೆ? ಇದಕ್ಕೆ ಬದಲು Travel ಸಂಚಾರ, Journey ಪ್ರಯಾಣ, Tour ಪ್ರವಾಸ ಎಂದು ಅರ್ಥನಿಗದಿ ಮಾಡಿಕೊಳ್ಳಬೇಕಾಗುತ್ತದೆ. ಒಮ್ಮೆ ಹೀಗೆ ನಿಗದಿ ಮಾಡಿಕೊಂಡಾಗ ಎಲ್ಲದಕ್ಕೂ ಅವುಗಳನ್ನು ಆ ವಿಶಿಷ್ಟಾರ್ಥದಲ್ಲಿಯೇ ಪ್ರಯೋಗಿಸಬೇಕಾಗುತ್ತದೆ. ಈಗLeave, holiday, vacation ಈ ಪದಗಳನ್ನು ನೋಡಿ. ಇವುಗಳಿಗೆ ಸಂವಾದಿಯಾಗಿ ನಾವು 'ರಜೆ' ಎಂಬ ಒಂದೇ ಪದ ಉಪಯೋಗಿಸುತ್ತೇವೆ. ಆದರೆ ಕಾನೂನಿನ ಪ್ರಕಾರ ಇವುಗಳಿಗೆ ಬೇರೆ ಬೇರೆ ಅರ್ಥವಿದೆ.

ರಜೆ, ರಜಾದಿನ, ಬಿಡುವು ಎಂದು ವಿಂಗಡಿಸಿ ಅರ್ಥಕೊಡಬೇಕಾಗುತ್ತದೆ. Adjournment ಮತ್ತು postponement ಪದಗಳನ್ನು ಗಮನಿಸಿದಾಗ ಸಾಮಾನ್ಯ ಬಳಕೆಯಲ್ಲಿ ಇವೆರಡೂ ಒಂದೇ. ಆದರೆ Adjournment and postponement ಎಂದು ಒಂದೇ ಕಡೆ ಪ್ರಯೋಗಿಸಿದಾಗ ಮಾಡುವುದೇನು? 'ಮುಂದೂಡುವಿಕೆಗಳು' ಮತ್ತು 'ಮುಂದೂಡುವಿಕೆ'ಗಳು ಎಂದರೆ ಉಚಿತವೆ? ಸೂಕ್ಷ್ಮವಾಗಿ ಗಮನಿಸಿದಾಗ, ಒಂದು ಖಚಿತವಾದ ದಿನ ನಿಗದಿ ಮಾಡಿ ಸಭೆಯನ್ನೋ ವಿಚಾರಣೆಯನ್ನೋ ಮುಂದೂಡಿದಾಗ Adjournment ಎಂದೂ, ದಿನ ನಿಗದಿ ಮಾಡದೆ ಮುಂದೂಡಿದಾಗ postponement ಎಂದೂ ಅರ್ಥವಾಗುತ್ತದೆ. ಆದ್ದರಿಂದ ಇವೆರಡಕ್ಕೂ ಬೇರೆ ಬೇರೆ ಅರ್ಥ ಕೊಡುವುದು ವಿಹಿತವಲ್ಲವೆ? Harm, Hurt, Injury, damage, loss ಈ ಪದಗಳನ್ನು ನೋಡಿ. ಇವೆಲ್ಲ ಪಾರಿಭಾಷಿಕ ಶಬ್ದಗಳು. ಒಂದೊಂದಕ್ಕೂ ವಿಶಿಷ್ಟ ಅರ್ಥವಿದೆ. ಇವುಗಳಿಗೆ ಕ್ರಮವಾಗಿ ತೊಂದರೆ, ಗಾಯ, ಕ್ಷತಿ, ಹಾನಿ, ನಷ್ಟ ಎಂದು ನಾವು ಬಳಸುತ್ತೇವೆ. Injury ಎಂಬುದಕ್ಕೆ An infringment of the rights of another, in his person, reputation, or property for which an action lies in law. 'ಹಾನಿ' ಎಂಬುದನ್ನು ಬಳಸಿದರೆ damage ಎಂಬುದಕ್ಕೆ ಬೇರೆ ಪದವಿಲ್ಲ; ಅಲ್ಲದೆ Injury to the person ಎನ್ನುವಾಗ ದೇಹಕ್ಕೆ ಹಾನಿಯುಂಟಾಯಿತು ಎಂದು ಹೇಳಿದರೆ ಅರ್ಥವ್ಯಕ್ತಿ ಕೆಡುತ್ತದೆ. ಆದುದರಿಂದ 'ಕ್ಷತಿ' ಎಂಬ ಪದವನ್ನು ಕ್ಲಿಷ್ಟವೆನಿಸಿದರೂ ಅನಿವಾರ್ಯವಾಗಿ ಬಳಸಬೇಕಾಯಿತು. ಮಾನಕ್ಷತಿ, ಮನಕ್ಷತ, ದೇಹಕ್ಷತ ಮುಂತಾದ ಶಬ್ದಗಳು ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಬರುತ್ತವೆ. ಶ್ರೀ ಕೊ.ಚೆಯವರು ಈ ಪದಕ್ಕೆ 'ಅನ್ಯಾಯ' ಎಂಬ ಪದವನ್ನು ಸೂಚಿಸುತ್ತಾರೆ. ಹಾಗಾದರೆ injustice ಎಂಬ ಪದಕ್ಕೆ ಏನರ್ಥ. ಅಷ್ಟೇ ಅಲ್ಲ Injury to the reputation ಎಂದರೆ, ಗೌರವಕ್ಕೆ ಅನ್ಯಾಯವಾಯಿತು ಎನ್ನೋಣವೆ? Mistake, fault, guilt, defect, wrong, error, flow ಎಂಬ ಪದಗಳು ಮೇಲು ನೋಟಕ್ಕೆ ಒಂದೇ ಎಂಬಂತೆ ಕಾಣುತ್ತವೆ. 'ತಪ್ಪು' ಎಂಬುದು ಅವುಗಳಿಗೆ ಸಂವಾದಿಯಾಗಿ ಬಳಕೆಯಲ್ಲಿರುವ ಪದ. ಆದರೆ ಕಾನೂನಿನ ರೀತ್ಯಾ ಇವುಗಳಿಗೆಲ್ಲ ಬೇರೆ ಬೇರೆ ವ್ಯಾಖ್ಯಾನವಿದೆ. Indemnity, damages, compensation, relief ಈ ಪದಗಳನ್ನು ನೋಡಿದಾಗ ಸಾಮಾನ್ಯವಾಗಿ ಹೊಳೆಯುವ ಪದ 'ಪರಿಹಾರ'. ಇವುಗಳಿಗೆಲ್ಲ 'ಪರಿಹಾರ' ಎಂಬುದು ಸ್ಥೂಲಾರ್ಥ ನಿಜವಾದರೂ, ಈ ಪರಿಹಾರದಲ್ಲಿ ಪ್ರಭೇದಗಳಿವೆ. ಆದ್ದರಿಂದ ಇವುಗಳಿಗೆ ನಷ್ಟಭರ್ತಿ, ಹಾನಿಪರಿಹಾರ. ನಷ್ಟಪರಿಹಾರ, ಪರಿಹಾರ ಎಂಬ ಪರ್ಯಾಯ ಪದಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ Fraud, deceit, cheat, mischief ಪದಗಳಿಗೆ ಸಾಮಾನ್ಯವಾಗಿ ಕೊಡುವ ಅರ್ಥ 'ಮೋಸ'. ಆದರೆ ಕಾನೂನಿನ ದೃಷ್ಟಿಯಿಂದ ಬೇರೆ ಬೇರೆ—ಇವುಗಳಿಗೆ ಕ್ರಮವಾಗಿ ಮೋಸ, ಕಪಟ, ವಂಚನೆ, ಕಿಡಿಗೇಡಿತನ ಎನ್ನಬೇಕಾಗುತ್ತದೆ. Certify, authenticate, attest, authorise ಇವುಗಳು ವಸ್ತುಶಃ

ಬೇಬೇರೆಯೆಂಬುದು ಕಾನೂನು ವಿದ್ಯಾರ್ಥಿಗೆ ತಿಳಿದ ವಿಚಾರ. ಇವುಗಳಿಗೆ ತೀರಾ ಸರಳವಾದ ಪದಗಳನ್ನು ಸೃಷ್ಟಿಸುವುದು ಸಾಧ್ಯವಿಲ್ಲ. ಆದ್ದರಿಂದ ಅನಿವಾರ್ಯವಾಗಿ ಸಂಸ್ಕೃತದ ಮೊರೆ ಹೋಗಬೇಕಾಗುತ್ತದೆ. ಪ್ರಮಾಣೀಕರಿಸು, ಅಧಿಪ್ರಮಾಣಿಸು, ಅನುಪ್ರಮಾಣಿಸು, ಅಧಿಕೃತಗೊಳಿಸು—ಎಂದು ಪ್ರಯೋಗಿಸಬೇಕಾಗುತ್ತದೆ. disproved, not proved ಎರಡೂ ಸಾಮಾನ್ಯರಿಗೆ ಒಂದೇ. ಆದರೆ ಒಂದರ ಅರ್ಥ, ಸುಳ್ಳೆಂದು ರುಜುವಾತು ಮಾಡು (positive), ಮತ್ತೊಂದು ರುಜುವಾತು ಮಾಡದಿರುವುದು (negative). ಹಾಗೆಯೇ Encroach, Tresspas, Intrude, Infraction, Infringement, Contravene ಎಂಬ ಪದಗಳೂ ಸಹ ಮೋಟಾರು ವಾಹನಗಳ ಅಧಿನಿಯಮದಲ್ಲಿರುವ Sign (ಚಿಹ್ನೆ), Signal (ಸಂಜ್ಞೆ), Symbol (ಸಂಕೇತ), Mark (ಗುರುತು), Token (ಸೂಚಕ) ಎಂಬ ಪದಗಳನ್ನು ಗಮನಿಸಿದಾಗ ಇವುಗಳೊಂದೊಂದಕ್ಕೂ ಪ್ರತ್ಯೇಕ ಪ್ರತ್ಯೇಕ ಪದಗಳನ್ನು ಹೊಂದಿಸುವುದು ಹಾಗೂ ಉದ್ದಕ್ಕೂ ಅವುಗಳನ್ನು ಒಂದಕ್ಕೊಂದು ಬೆರೆಸದಂತೆ ಏಕಪ್ರಕಾರವಾಗಿ ಬಳಸಿಕೊಂಡು ಹೋಗುವುದು ಎಷ್ಟು ತೊಡಕಿನ ಸಮಸ್ಯೆ ಎಂಬುದು ವೇದ್ಯವಾಗುತ್ತದೆ. ಕೆಲವು ವೇಳೆ ಕೆಲವು ಇಂಗ್ಲಿಷ್ ಪದಗಳನ್ನು ಭಾಷಾಂತರಿಸಬೇಕಾದ ಉಪ್ಪನೆಯ ಪದಗಳನ್ನು ಪದಪುಂಜಗಳನ್ನು ಬಳಸಬೇಕಾಗುತ್ತದೆ. ಉದಾ: bailable ಇದಕ್ಕೆ 'ಜಾಮೀನಿನ ಮೇಲೆ ಬಿಡಬಹುದಾದ' ಎಂದರ್ಥ. ಪ್ರತಿಬಾರಿಯೂ ಹೀಗೆ ಬರೆಯಬೇಕಾದ ತಾಳ್ಮೆ ಪರೀಕ್ಷೆಯಾಗುತ್ತದೆ. ಇದಕ್ಕೆ ಬದಲಾಗಿ 'ಜಾಮೀನೀಯ' ಎಂಬ ಪದ ಬಳಸಿದ್ದೇವೆ. ಇದೇ ಸಾದೃಶ್ಯದ ಮೇಲೆ ವಸೂಲೀಯ, ಅಪೀಲೀಯ ಎಂಬ ಪದಗಳು. ಈ ತೊಡಕಿಗೆ ಕೆಲವು ಸೂಚಿಸುವ ಪರಿಹಾರವೆಂದರೆ, ಮೂಲ ಇಂಗ್ಲಿಷ್ ಪದಗಳನ್ನೇ ಬಳಸುವುದು. ಕಷ್ಟವಾದಾಗಲೆಲ್ಲ ಇಂಗ್ಲಿಷ್ ಪದಗಳನ್ನೇ ಬಳಸುತ್ತಾ ಹೋದರೆ ಇದೇ ಒಂದೇ ನೆಪವಾಗಿ ಕನ್ನಡ ಕಾನೂನಿನಲ್ಲಿ ಕೇವಲ ಕ್ರಿಯಾಪದಗಳಷ್ಟೇ ಕನ್ನಡದವಾಗಿ ಉಳಿಯಬಹುದು; ನಾವು ಹೊಸದಾಗಿ ಬಳಸಹೊರಡುವ ಪದಗಳಿಗಿಂತ ಸರಳವಾಗಿದ್ದು ಸುಲಭ ಸ್ಮರಣೀಯವಾಗಿ ಸಂಕ್ಷಿಪ್ತವಾಗಿ ಈಗಾಗಲೇ ಜನಮನದಲ್ಲಿ ಬೇರೂರಿರುವ ಇಂಗ್ಲಿಷ್ ಪದಗಳನ್ನು ಬಳಸಲು ಅಡ್ಡಿಯಿಲ್ಲ. ಉದಾ: ಡಿಕ್ರಿ, ಅಪೀಲು, ಸಮನು, ವಾರಂಟು, ಮೆಮೋ, ಸ್ಟ್ಯಾಂಪು, ಕಾರ್ಡು, ಗೆಜೆಟ್, ನೋಟೀಸು ಇತ್ಯಾದಿ ಪದಗಳನ್ನು ನಾವು ಮಡಿವಂತಿಕೆಯಿಲ್ಲದೆ ಬಳಸುತ್ತಿದ್ದೇವೆ, ಬಳಸಬೇಕು. ಹಾಗೆಯೇ ದಸ್ತಗಿರಿ, ಖುಷ್ಕಿ, ತರಿ, ಬಾಗಾಯಿತು, ಅಹವಾಲು, ಅಮಲ್ದಾರಿ, ಬಂದೀಖಾನೆ, ಖೈದು, ಬೇಸರಾಕ್, ಬೇನಾಮಿ, ಚಕ್‌ಬಂದಿ, ದಫ್ತರ, ದಾಖಲೆ, ದಾವಾಷಾ, ಛಾಪಾಕಾಗದ ಇತ್ಯಾದಿ ಅನ್ಯಭಾಷಾ ಪ್ರಯೋಗಗಳನ್ನೂ ಧಾರಾಳವಾಗಿ ನಾವು ತೆಗೆದುಕೊಂಡಿದ್ದೇವೆ.

ಈ ಅನುವಾದದಲ್ಲಿ ಮತ್ತೊಂದು ತೊಡಕೆಂದರೆ ಪ್ರಾದೇಶಿಕತೆಯದು. ಕನ್ನಡನಾಡು ವಿಶಾಲವಾದ ನಾಡಾದುದರಿಂದ ಪೂರ್ವದಿಂದಲೂ ಹಲವು ಭಾಷಾ ಪ್ರಭೇದಗಳು

ಇದರಲ್ಲಿವೆ. ಒಂದು ಪ್ರದೇಶದ ಕೆಲವು ಪದಗಳು ಮತ್ತೊಂದು ಪ್ರದೇಶದಲ್ಲಿ ವಿಪರೀತಾರ್ಥವನ್ನು ಕೊಡುತ್ತವೆ. ನಮ್ಮ 'ಹರಾಜು' ಶಬ್ದಕ್ಕೆ ಉತ್ತರ ಕರ್ನಾಟಕದಲ್ಲಿ ಲಿಲಾವು ಎಂದೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಏಲಂ' ಎಂದೂ ಹೇಳುತ್ತಾರೆ. ನಮ್ಮ ಅರ್ಜಿ ಅಲ್ಲಿ ದರಖಾಸ್ತು ಆಗುತ್ತದೆ. ನಮ್ಮಲ್ಲಿ 'ಸುಮಾರು' ಎಂದರೆ ordinary, approximately ಎಂದು ಅರ್ಥವಿದ್ದರೆ ಉತ್ತರ ಕರ್ನಾಟಕದಲ್ಲಿ bad ಎಂಬ ಅರ್ಥವಿದೆ. ನಮ್ಮಲ್ಲಿ 'ಚೆನ್ನಾಗಿಲ್ಲ' ಎಂಬ ಪದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಹಾಳಾಗಿದೆ' ಎನ್ನುತ್ತಾರೆ. ನಮ್ಮ ಸೀಮೆಎಣ್ಣೆ, ಅಲ್ಲಿ ಚಿಮಣಿ ಎಣ್ಣೆಯಾಗುತ್ತದೆ. ನಮ್ಮಲ್ಲಿಯ ಕ್ಷೌರ ಅಲ್ಲಿ 'ಕಷ್ಟ' ಆಗುತ್ತದೆ.

ಮೂಲದ ಪದಗಳಿಗೆ ಮತ್ತೊಂದು ಪದವನ್ನು ಸೇರಿಸಬಾರದು; ಅಥವಾ ಅದರಲ್ಲಿಂದ ಒಂದು ಪದವನ್ನು ಕೈಬಿಡಬಾರದು; ಮೂಲದ ಬಿಗಿಯನ್ನು ಸಡಿಲಿಸಬಾರದು; ಅದರ ವಿವಿಧ ಅರ್ಥಛಾಯೆಗಳು ಸೋರಿಹೋಗದಂತೆ ಸೆರೆಹಿಡಿಯಬೇಕು; ಅಪಾರ್ಥಕ್ಕೆ ಅವಕಾಶವಾಗದಂತೆ ನೋಡಿಕೊಳ್ಳಬೇಕು; ಪ್ರಯೋಗಿಸುವ ಪದಗಳು ಸಾಧ್ಯವಾದಷ್ಟು ಸರಳವಾಗಿರುವಂತೆ ಅನಗತ್ಯವಾಗಿ ಕ್ಲಿಷ್ಟವಾಗದಂತೆ ಎಚ್ಚರಿಕೆಯಿಂದಿರಬೇಕು; ಅವು ಕನ್ನಡದ ಜಾಯಮಾನಕ್ಕೆ ಪದಶಯ್ಯೆಗೆ ಹೊಂದುವಂತಿರಬೇಕು; ಬಳಕೆಯಲ್ಲಿರುವ ಪದಗಳಿಗೆ ಖಚಿತಾರ್ಥ ನಿಗದಿ ಮಾಡಿ ಶಾಸ್ತ್ರೀಯವಾಗಿ ಬೆಳಸಬೇಕು; ಏಕರೂಪತೆಯನ್ನು ಕಾಯ್ದುಕೊಂಡು ಹೋಗಬೇಕು. ಇಷ್ಟೆಲ್ಲಾ ಮಾಡಿದರೂ ಕಾನೂನಿನ ಅನುವಾದ ಸರಳ ಅನುವಾದವಾಗುವುದಿಲ್ಲ. ಇಂಗ್ಲಿಷ್ ಭಾಷೆಯ ಕಾನೂನಿನ ಕೃತಿಗಳು ಹೇಗೆ ಇಂಗ್ಲಿಷ್ ಎಂಬುದರಲ್ಲಿ ತೇರ್ಗಡೆ ಹೊಂದಿದವನಿಗೂ ಸುಲಭವಾಗಿ ಅರ್ಥವಾಗುವುದಿಲ್ಲವೋ ಹಾಗೆಯೇ ಕನ್ನಡದ ಅನುವಾದವೂ ಕನ್ನಡ ಬಲ್ಲವರಿಗೆಲ್ಲ ಸುಲಭವಾಗಿ ಅರ್ಥವಾಗುವುದೆಂದು ಹೇಳಲಾರೆ. ಏಕೆಂದರೆ ಕಾನೂನಿನ ಭಾಷೆ ಒಂದು ಶಾಸ್ತ್ರೀಯವಾದ ಭಾಷೆ. ಇಂಗ್ಲಿಷ್ ಕಾನೂನನ್ನು ಅರ್ಥಮಾಡಿಕೊಳ್ಳಲು ಹೇಗೆ ಬೇರೆಬೇರೆ ವ್ಯಾಖ್ಯಾನಗಳು ಆಗತ್ಯವೋ ಹಾಗೆಯೇ ಇದಕ್ಕೂ ವ್ಯಾಖ್ಯಾನಗಳು ಅಗತ್ಯ. ಆದ್ದರಿಂದ ಸಾಮಾನ್ಯರಿಗೆ ಕಾನೂನು ಎನ್ನುವ ಮಾತು ಪರಿಮಿತ ಸತ್ಯ. ಇದು ಶಾಸ್ತ್ರೀಯ ಅನುವಾದಕ್ಕೆ ಸಂಬಂಧಿಸಿದ ಮಾತು. ಆದರೆ ಸಾಮಾನ್ಯರ ದೃಷ್ಟಿಯಿಂದ ಸರಳಭಾಷೆಯ ಸಂಗ್ರಹಾನುವಾದಗಳು ಆವಶ್ಯಕ. ನಮಗೆ ಚೆನ್ನಾಗಿ ಬರದ ಬೇರೊಂದು ಭಾಷೆಯಲ್ಲಿ ಕಾನೂನುಗಳನ್ನು ರಚಿಸಿ, ಅದನ್ನು ಮತ್ತೆ ಕನ್ನಡಕ್ಕೆ ಭಾಷಾಂತರ ಮಾಡಿಸುವ ಮೂಲಕ ಭಾಷೆಯನ್ನು ಕೃತಕವಾಗಿಸಿ ಕಾನೂನಿನ ಅರ್ಥವನ್ನು ಮತ್ತಷ್ಟು ಅಸ್ಪಷ್ಟಗೊಳಿಸುವ ಬದಲು, ಹೊಸ ಕಾನೂನುಗಳನ್ನಾದರೂ ನೇರವಾಗಿ ಕನ್ನಡದಲ್ಲಿ ಬರೆಸುವ ಮೂಲಕ ಕಾನೂನು ಪರಿಭಾಷೆಯನ್ನು ಸಿದ್ಧಗೊಳಿಸಿ ಕನ್ನಡ ಜನರಲ್ಲಿ ಕಾನೂನಿನ ಪ್ರಜ್ಞೆಯನ್ನು ಮೂಡಿಸಲಿ ಎಂದು ಸರ್ಕಾರನನ್ನು ಪ್ರಾರ್ಥಿಸಿ ವಿರಮಿಸುತ್ತೇನೆ.

೧೪ | ಕಾನೂನು ಗ್ರಂಥಗಳ ಭಾಷಾಂತರ

ಕಂಠೀರಾವ್

ಕಾನೂನು ಒಂದು ರೂಪಕ ಶಕ್ತಿ. ಇದು ನಮ್ಮ ಅಂತರಂಗದ ಭಾವನೆ, ಧೋರಣೆ ಮತ್ತು ಮೌಲ್ಯ ಪ್ರಜ್ಞೆಗಳ ಅಭಿವ್ಯಕ್ತಿಯೊಂದಿಗೆ ನಿಕಟ ಸಂಪರ್ಕಹೊಂದಿದೆ. ಅಂತೆಯೇ ನಾವು ನಮ್ಮ ಶಾಸನಗಳನ್ನು ನಮ್ಮ ಆಡುಭಾಷೆಯಲ್ಲಿ ಬರೆದಿಡುವುದಷ್ಟೇ ಅಲ್ಲ, ಅವು ಇಂಗ್ಲಿಷಿನಲ್ಲಿಯೇ ಮುಂದುವರಿಯುತ್ತಿರುವುದರಿಂದ ಅವುಗಳ ಭಾಷಾಂತರವನ್ನು ತಯಾರಿಸುವುದೂ ಆವಶ್ಯಕವಾಗಿದೆ. ಭಾಷಾಂತರ ಕಾರ್ಯ ನಮಗೆ ಭಾರೀ ಸವಾಲನ್ನು ಒಡ್ಡಿದೆ. ಒಮ್ಮೊಮ್ಮೆ ದಿಗ್ಭ್ರಮೆಯನ್ನೂ ಉಂಟು ಮಾಡುತ್ತದೆ. ಇಂಗ್ಲಿಷ್ ಭಾಷೆಗೆ ಸಹಜವಾಗಿರುವ ಅನೇಕ ಸೂಕ್ಷ್ಮ ಕಾನೂನು ವಿಚಾರಗಳು ಭಾರತದ ಪ್ರಾದೇಶಿಕ ಭಾಷೆಗಳಿಗೆ ಅಪರಿಚಿತ. ಹೀಗಾಗಿ ನಾವು ನಮ್ಮ ಭಾರತೀಯ ಭಾಷೆಗಳ ಸಂಪನ್ಮೂಲಗಳನ್ನೂ ಬಹಳಷ್ಟು ಹೆಚ್ಚಿಸಿಕೊಳ್ಳಬೇಕಾಗಿದೆ.

ಕೆಲವು ಸಲ ಕಾನೂನಿನ ಒಂದೊಂದು ಪ್ರಕರಣ (ಸೆಕ್ಷನ್) ಒಂದೂವರೆ ಪುಟಗಳಷ್ಟು ಸುದೀರ್ಘವಾಗಿರುತ್ತದೆ. ಮತ್ತು ಸುತ್ತಿ ಬಳಸಿ ಹೇಳುವ ಕ್ರಮದಲ್ಲಿದ್ದು ಅಂಥ ಇಂಗ್ಲಿಷ್ ವಾಕ್ಯ ರಚನೆಯನ್ನು ಭಾರತೀಯ ಭಾಷೆಗಳಿಗೆ ಇಳಿಸುವಾಗ ಅನೇಕ ಭಾಷಾ ಸಮಸ್ಯೆಗಳು ಎದುರಾಗುತ್ತವೆ. ಆಂಗ್ಲ ಭಾಷೆಯ ಈ ದ್ರಾವಿಡ ಪ್ರಾಣಾಯಾಮದಿಂದ ಭಾಷಾಂತರ ಕಾರ್ಯದಲ್ಲಿ ತೊಂದರೆಯಾಗುವುದೆಂಬುವನ್ನು ಬೇರೆ ಹೇಳಬೇಕಾಗಿಲ್ಲ. ಸರ್ಕಾರಿ ಆದೇಶ, ವಿನಿಯಮ, ನಿಯಮ, ಅಧ್ಯಾದೇಶ ಮತ್ತು ವಿಧಾನ ಮಂಡಲದಿಂದ ರಚಿತವಾಗುವ ಕಾನೂನು ಇವು ಸರ್ಕಾರದ ಕಟ್ಟುನಿಟ್ಟಾದ ಇಚ್ಛೆಯನ್ನು ಜನರಿಗೆ ತಿಳಿಸುವ ಸಾಧನಗಳು. ಆದುದರಿಂದ ಕಾನೂನು ಸ್ವರೂಪದ ಎಲ್ಲ ಆದೇಶಗಳು ಸ್ಪಷ್ಟವಾದ ತರ್ಕಬದ್ಧವಾದ ಮತ್ತು ಗಂಭೀರವಾದ ಭಾಷೆಯಲ್ಲಿರಬೇಕೆಂದು ಸರ್ವವಿದಿತ. ಸ್ವಾತಂತ್ರ್ಯ ಘೋಷಣೆಯ ಒಂದು ಆದೇಶವನ್ನು ಹೊರಡಿಸಬೇಕಾದಾಗ ಜಫರ್ಸನ್ ಮಹಾಶಯನು 18 ದಿನಗಳ ಕಾಲ ಅದನ್ನು ಮತ್ತೆ ಮತ್ತೆ ತಿದ್ದಿದನಂತೆ. ವಾಲ್ಟೈರ್ ಮಹಾಶಯನು ಒಂದು ವಾಕ್ಯರಚನೆಗಾಗಿ ಇಡೀ ರಾತ್ರಿ ತಿಣಕಿದನೆಂದು ತಿಳಿದು ಬರುವುದು.

ಇಂಗ್ಲಿಷ್ ಪ್ರಾರೂಪಣ (ಡ್ರಾಫ್ಟಿಂಗ್) ಪದ್ಧತಿಯನ್ನೇ ನಾವು ಇನ್ನೂ ಅನುಸರಿಸುತ್ತಿರುವುದರಿಂದ ನಮ್ಮ ಕಾನೂನುಗಳ ಭಾಷೆ ಕ್ಲಿಷ್ಟವಾಗಿಯೇ ಉಳಿದಿವೆ. ಭಾರತೀಯ ಭಾಷೆಗಳಲ್ಲಿ ಮುಖ್ಯವಾಗಿ ಕಾನೂನು ರಚನೆಯನ್ನು ಪ್ರಾರಂಭಿಸಿದರೆ ನಮ್ಮ ಭಾಷೆಗಳ ಜಾಯಮಾನಕ್ಕೆ ತಕ್ಕಂತೆ ವಾಕ್ಯರಚನೆ ಮಾಡಬಹುದು ಮತ್ತು

ಕಾನೂನು ಭಾಷೆಯನ್ನು ಸುಲಭಗೊಳಿಸಬಹುದು. ಈ ನಿಟ್ಟಿನಲ್ಲಿ ರಾಷ್ಟ್ರಮಟ್ಟದಲ್ಲಿ ವಿಚಾರ ವಿನಿಮಯನಡೆದಿದೆ. ಉತ್ತರದ ಹಿಂದೀ ಮಾತನಾಡುವ ರಾಜ್ಯಗಳಲ್ಲಿ ಈ ಪದ್ಧತಿ ಪ್ರಾರಂಭವಾಗಿದೆ. ನಮ್ಮಲ್ಲೂ ಈ ಬಗ್ಗೆ ಕ್ರಮ ಕೈಕೊಳ್ಳುವ ನಿರೀಕ್ಷೆಯಿದೆ. ಕಾನೂನುಗಳ ಮೂಲ ರಚನೆ ನಮ್ಮ ಭಾಷೆಗಳಲ್ಲಿ ಪ್ರಾರಂಭವಾಗುವವರೆಗೆ ಇಂಗ್ಲಿಷ್‌ನಿಂದ ಭಾಷಾಂತರ ಮಾಡದೆ ವಿಧಿಯಿಲ್ಲ. ಭಾಷಾಂತರ ಮಾಡುವಾಗ ಮೂಲದ ಅರ್ಥ ಕೆಡಬಾರದು. ಜೊತೆಗೆ ನಮ್ಮ ಭಾಷೆಯ ಜಾಯಮಾನವೂ ಹಾಳಾಗಬಾರದು. ಕಾನೂನುಗಳನ್ನು ಭಾಷಾಂತರ ಮಾಡಬೇಕಾದರೆ ಭಾಷಾಂತರಕಾರನು ಉಭಯ ಭಾಷಾವಿಶಾರದನಾಗಿರಬೇಕು. ಅಷ್ಟೇ ಅಲ್ಲ ಉಭಯ ಭಾಷೆಗಳನ್ನು ಪ್ರತಿನಿಧಿಸುವ ಎಲ್ಲ ಸಾಂಸ್ಕೃತಿಕ ಅಂಶಗಳನ್ನು ಅವನು ಚೆನ್ನಾಗಿ ಬಲ್ಲವನಾಗಿರಬೇಕು. ಈ ಕಾರ್ಯಕ್ಕೆ ಕೇವಲ ಕಾನೂನು ಪಂಡಿತರನ್ನು ನೇಮಿಸಿದರೆ ಸಾಲದು. ಭಾಷಾಂತರವು ಸುಲಭವಾಗಿ ಓದಿಸಿಕೊಂಡು ಹೋಗುವಂತಿರಬೇಕು. ಈ ಅಂಶವನ್ನು ಗಮನಿಸಿಯೇ ಕೇಂದ್ರದಲ್ಲಿ ಮತ್ತು ವಿವಿಧ ರಾಜ್ಯಗಳಲ್ಲಿ ವಿವಿಧ ಭಾಷಾ ತಜ್ಞರಿಂದ ಕೂಡಿದ ರಾಜ್ಯ ಭಾಷಾ (ವಿಧಾಯೀ) ಆಯೋಗಗಳನ್ನು ರಚಿಸಿ ಪ್ರಾದೇಶಿಕ ಭಾಷೆಗಳಲ್ಲಿ ಕಾನೂನುಗಳ ಅಧಿಕೃತ ಪಾಠಗಳನ್ನು ತಯಾರಿಸಲು ಏರ್ಪಾಡು ಮಾಡಲಾಯಿತು.

ಭಾರತ ಸಂವಿಧಾನದ 8ನೇ ಅನುಸೂಚಿಯಲ್ಲಿ ವಿವರಿಸಿದ ಸುಮಾರು 15 ಭಾಷೆಗಳನ್ನು ರಾಷ್ಟ್ರ ಭಾಷೆಗಳಾಗಿ ಅಭಿವೃದ್ಧಿಪಡಿಸುವಲ್ಲಿ ಪ್ರಾಥಮಿಕವಾಗಿ ಸಂಸ್ಕೃತದಿಂದಲೂ ಅಗತ್ಯವಿದ್ದ ಮಟ್ಟಿಗೆ ಇತರ ಎಲ್ಲ ಭಾಷೆಗಳಿಂದಲೂ ಶಬ್ದಗಳನ್ನು ಬಳಸಿಕೊಳ್ಳಬಹುದೆಂದು ಸೂಚಿಸಲಾಗಿದೆ. ಈ ಅಂಶವನ್ನು ಗಮನಿಸಿ ರಾಜ ಭಾಷಾ ಆಯೋಗದವರು (ಖೇರ್ ಕಮಿಷನ್) ನಮ್ಮ ಪ್ರಾಚೀನ ಧರ್ಮಶಾಸ್ತ್ರ ಸಾಹಿತ್ಯದಿಂದ ನಾವು ಯಥೇಚ್ಛವಾಗಿ ಕಾನೂನು ಪಾರಿಭಾಷಿಕವನ್ನು ಪಡೆಯಬಹುದೆಂದು ಹೇಳಿದರು. ಧರ್ಮಶಾಸ್ತ್ರ ಸಾಹಿತ್ಯದಲ್ಲಿ ನಮಗೆ ಸಾವಿರಾರು ಕಾನೂನು ಪಾರಿಭಾಷಿಕಗಳು ಸಿಕ್ಕುತ್ತವೆ. ಆಡಳಿತಕ್ಕೆ ಸಂಬಂಧಿಸಿದ ನಮ್ಮ ಶಾಸನ ಸಾಹಿತ್ಯದಲ್ಲಿಯೂ ಕೂಡ ತೆರಿಗೆ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಅತ್ಯುತ್ತಮವಾದ ಮೂಲ ಕನ್ನಡ ಶಬ್ದಗಳು ಸಿಕ್ಕುತ್ತವೆ. ಈ ಅಂಶವನ್ನು ಮೈಸೂರಿನಲ್ಲಿ ನಡೆದ ದಕ್ಷಿಣ ರಾಜ್ಯಗಳ ರಾಜ ಭಾಷಾ ವಿಚಾರ ಸಂಕಿರಣದಲ್ಲಿ ನಾನು ಮಂಡಿಸಿದ ಒಂದು ಪ್ರಬಂಧದಲ್ಲಿ ತಿಳಿಸಿದ್ದೇನೆ. ಅದನ್ನು ಇಲ್ಲಿ ಮತ್ತೆ ಹೇಳುವುದು ಅನುಚಿತ. 'ಡೇಟ್', 'ವರ್ಬಲ್', 'ಪ್ರೊಟೆಸ್ಟ್' ಮೊದಲಾದ ಶಬ್ದಗಳಿಗೆ ಸಾಮಾನ್ಯ ಅರ್ಥದ ಜೊತೆಗೆ ವಿಶಿಷ್ಟ ಸನ್ನಿವೇಶಗಳಲ್ಲಿ ಬೇರೆ ಅರ್ಥಗಳುಂಟು ಎಂಬುದನ್ನು ತಮಿಳು ನಾಡಿನ ರಾಜ ಭಾಷಾ ಆಯೋಗದ ಅಧ್ಯಕ್ಷರಾದ ಶ್ರೀ ಎಸ್. ಮಹಾರಾಜನ್ ಅವರು ವಿಶದಪಡಿಸಿದ್ದಾರೆ. ಅಷ್ಟೇ ಅಲ್ಲ, ದಕ್ಷಿಣ ರಾಜ್ಯಗಳಲ್ಲಿ ಕೇರಳೀಯರು ಇಂಗ್ಲಿಷ್ ಪದಗಳನ್ನು ಬಳಸುವಲ್ಲಿ ಹೆಚ್ಚು ಸ್ವಾತಂತ್ರ್ಯ ವಹಿಸಿದ್ದಾರೆಂದೂ ಹೇಳಿದ್ದಾರೆ. ಅಪೀಲು, ಅವಾರ್ಡು, ಅರೆಸ್ಟ್, ಆ್ಯಕ್ಟ್, ಸರ್ಟಿಫಿಕೇಟ್, ಜಡ್ಜ್, ಮೆಜಿಸ್ಟ್ರೇಟ್, ನೋಟೀಸ್, ಪಾರ್ಲಿಮೆಂಟ್, ಪ್ರಾಸಿಕ್ಯೂಟರ್, ಸಮನ್ಸ್, ವಾರಂಟ್,

ಮೊದಲಾದ ಶಬ್ದಗಳನ್ನು ಮಲೆಯಾಳೀ ಕಾನೂನು ಭಾಷೆಯಲ್ಲಿ ಉಳಿಸಿಕೊಳ್ಳಲಾಗಿದೆ. ತಮಿಳುನಾಡಿನವರು ಕೂಡ ಸೆಷನ್ಸ್, ವಿಲ್, ಅಟರ್ನಿ, ನೋಟರಿ, ಕಾರ್ಪ್ಸ್, ಕಂಪೆನಿ ಮೊದಲಾದ ಚಿರಪರಿಚಿತ ಇಂಗ್ಲಿಷ್ ಶಬ್ದಗಳನ್ನು ಭಾಷಾಂತರಿಸುವುದು ಕೆಲಸಗೇಡು, ಆದುದರಿಂದ ಇವುಗಳನ್ನು ಉಳಿಸಿಕೊಳ್ಳುವುದು ವಿಹಿತ ಎಂದು ಅಭಿಪ್ರಾಯಪಟ್ಟಿದ್ದಾರೆ. ಕನ್ನಡದಲ್ಲೂ ಕೂಡ ಅಪೀಲು, ಸಿವಿಲ್, ಕ್ಲೇಮು, ಡಿಕ್ರಿ, ಪೊಲೀಸ್, ಸ್ಟ್ಯಾಂಪು, ವಾರಂಟು, ಮೊದಲಾದ ಇಂಗ್ಲಿಷ್ ಶಬ್ದಗಳನ್ನು ಉಳಿಸಿಕೊಳ್ಳಲಾಗಿದೆ. ಮರಾಠಿಯರು ಕೂಡ ಅಪೀಲು, ಚೆಕ್, ನೋಟೀಸ್, ವಾರಂಟು ಮೊದಲಾದ ಇಂಗ್ಲಿಷ್ ಶಬ್ದಗಳನ್ನು ಬಳಸಿಕೊಂಡಿದ್ದಾರೆ. ಆಂಧ್ರ ಪ್ರದೇಶದ ಕೆಲವು ಭಾಗಗಳಲ್ಲಿ ರಿಕಮೆಂಡೇಷನ್, ಎಕ್ಸಕ್ಯೂಜ್, ಅಡ್‌ಜುಡಿಕೇಶನ್, ವೇಜ್ ಬೋರ್ಡ್ ಇಂಪ್ಲಿಮೆಂಟ್, ಇವೇ ಮೊದಲಾದ ಆಂಗ್ಲ ಪದಗಳನ್ನು ಯಥೇಚ್ಛವಾಗಿ ಬಳಸಿರುವುದನ್ನು ಕಾಣಬಹುದಾಗಿದೆ. ಅಷ್ಟೇ ಏಕೆ ಉತ್ತರದ ಹಿಂದೀ ರಾಜ್ಯಗಳಲ್ಲಿಯೂ ಕೂಡ ಅಪೀಲು, ಕೌನ್ಸಿಲ್, ಡಿಕ್ರಿ, ಫೀಸ್, ಮ್ಯಾಜಿಸ್ಟ್ರೇಟ್, ನ್ಯೂಸೆನ್ಸ್, ಪೆನ್ಶನ್, ಕ್ವಾರಂಟೈನ್, ಸಮನ್ಸ್, ವಾರಂಟ್ ಮೊದಲಾದ ಇಂಗ್ಲಿಷ್ ಶಬ್ದಗಳನ್ನು ಪ್ರಯೋಗಿಸಿರುವುದನ್ನು ಗಮನಿಸಬಹುದು.

ಭಾರತೀಯ ಭಾಷೆಗಳಲ್ಲಿ ಇಂಗ್ಲಿಷ್ ಪದಗಳು ಬಳಕೆಗೆ ಬರುವದಕ್ಕೆ ಮುಂಚಿತ ವಾಗಿ ಜನಸಾಮಾನ್ಯರಿಗೆ ಚಿರಪರಿಚಿತವಾದ ಅನೇಕ ಅರಬ್ಬಿ, ಪಾರ್ಸಿ ಮೂಲದ ಉರ್ದು ಶಬ್ದಗಳು ಕೂಡ ಮೊಗಲರ ಕಾಲದಿಂದಲೂ ಬಳಕೆಯಲ್ಲಿವೆ. ದಾವೆ, ಮೊಕದ್ದಮೆ, ಸುಬೂತು, ಖುಲಾಸೆ, ನಜಾ, ಸಜ, ದಸ್ತಗಿರಿ, ಜಾವಿಸಾನು, ಜಪ್ತಿ, ಅಸಲು ನಕಲು, ಫಿರ್ಯಾದು, ಸುಪರ್ದು, ಇನ್‌ಕಾರು, ಜವಾಬು—ಇವೇ ಮೊದಲಾದ ನೂರಾರು ಪದಗಳು ಕನ್ನಡದಲ್ಲಿ ಮತ್ತು ಇತರ ಭಾಷೆಗಳಲ್ಲಿ ಸಾಕಷ್ಟು ಪ್ರಚಲಿತ ವಾಗಿವೆ. ಉರ್ದು ಮೂಲದ 'ಜಾಪ್ತಾ' ಮಲೆಯಾಳಿಯಲ್ಲಿ 'ಚಾಪ್ತಾ' ಆಗಿದೆ. ತೆಲಂಗಾಣ ವಿಭಾಗದ ತೆಲುಗು ಭಾಷೆಯಲ್ಲಿ ಮತ್ತು ಕರ್ನಾಟಕದ ಹಳೆಯ ಹೈದರಾಬಾದು ವಿಭಾಗದಲ್ಲಿ ದಫ್ತರ್, ತನಕ್ಕೀ, ರುಖ್ಸತ್, ಗೈರ್‌ಹಾಜರ್, ತರ್ಕೆ ಮುಸ್ತಖಿರ್ (Leaving the Head Quarters), ಮಾಲ್ಗುಜಾರಿ (Land Revenue) ಮೊದಲಾದ ಉರ್ದು ಮೂಲದ ನೂರಾರು ಶಬ್ದಗಳು ಈಗಲೂ ಬಳಕೆಯಲ್ಲಿವೆ. ಜನರಿಗೆ ಚಿರಪರಿಚಿತ ವಾದ ಇಂಥ ಎಲ್ಲ ಶಬ್ದಗಳನ್ನು ಉಳಿಸಿಕೊಳ್ಳಬೇಕೆಂಬ ವಾದವೂ ಕೆಲಮಟ್ಟಿಗೆ ಅರ್ಥ ಪೂರ್ಣವಾಗಿದೆ.

ಆಲ್ಟರ್‌ನೇಟಿವ್, ಆ್ಯಬ್ಸ್‌ಕಾಂಡ್, ಸಿವಿಲ್ ಸರ್ಜನ್, ರೆವಿನ್ಯೂ ಕೋರ್ಟ್, ಡಿಮಾಂಡ್, ಹ್ಯಾಬಿಚ್ಯುಯಲ್ ಅಫೆಂಡರ್ಸ್, ದಿ ಎಂಡ್ಸ್ ಆಫ್ ಜಸ್ಟಿಸ್, ಇಲ್ಲೆ-ಜಿಟಮೇಟ್, ಅಡಲ್ಟ್ರಿ, ಸೆಷನ್ ಜಡ್ಜ್, ಅಪಿಯರೆನ್ಸ್ ಇನ್ ಕೋರ್ಟ್—ಇಂಥ ಅನೇಕ ಇಂಗ್ಲಿಷ್ ಪದಗಳಿಗೆ ಮತ್ತು ಪದಪುಂಜಗಳಿಗೆ ಸಾಮಾನ್ಯವಾಗಿ ಸರಿಯಾದ ಶಬ್ದಗಳು ಮತ್ತು ಪ್ರಯೋಗಗಳು ತಮಿಳಿನಲ್ಲಿ ಸಿಕ್ಕುವುದು ಕಷ್ಟವಾದುದರಿಂದ ಅವು ಗಳನ್ನು ಸರಿಯಾಗಿ ಭಾಷಾಂತರ ಮಾಡುವುದೂ ಅಷ್ಟೇ ಕಷ್ಟದಾಯಕವಾಗಿದೆ ಎಂದಿ

ದ್ದಾರೆ. ತಮಿಳುನಾಡಿನ ವಿಧಾಯಿ ಆಯೋಗದ ಸದಸ್ಯರಾದ ಶ್ರೀ ಎ. ಚಿದಂಬರಂ ಅವರು. 'ಫ್ಯಾಕ್ಟ್' ಎಂಬ ಪದಕ್ಕೆ ತಮಿಳುನಾಡಿನವರು 'ಸಂಗತಿ', ಆಂಧ್ರದವರು 'ಸಂಗತುಲು' ಎಂಬ ಪದವನ್ನೇ ಬಳಸಿಕೊಂಡಿದ್ದಾರೆ. 'ಸಂಗತಿ' ಎಂಬುದನ್ನು ನಾವೂ ಅಂಗೀಕರಿಸಿದ್ದೇವೆ.

ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಮಾತ್ರವೇ ಹಿಂದೆ ಕಾನೂನುಗಳನ್ನು ರಚಿಸಲಾಗುತ್ತಿತ್ತು. ಆದರೆ ಈಗ ಅಭಿವೃದ್ಧಿಗತಿಯಲ್ಲಿರುವ ಭಾರತದಂಥ ದೇಶದಲ್ಲಿ ಸಾಮಾಜಿಕ, ಆರ್ಥಿಕ ಪರಿವರ್ತನೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರಗಳು ನಾನಾ ಬಗೆಯ ಆರ್ಥಿಕ ಸಾಮಾಜಿಕ ಕಾನೂನುಗಳನ್ನು, ಉದಾಹರಣೆಗೆ— ಮಹಿಳೆಯರ ಮತ್ತು ಬಾಲಕಿಯರ ಅನೈತಿಕ ವ್ಯವಹಾರಗಳ ದಮನ ಅಧಿನಿಯಮ, ಪ್ರಸೂತಿ ಸೌಲಭ್ಯ ಅಧಿನಿಯಮ, ವಧು–ವರ ದಕ್ಷಿಣೆ ನಿಷೇಧ ಅಧಿನಿಯಮ, ಜಾತಿ ಅನರ್ಹತಾ ನಿವಾರಣಾ ಅಧಿನಿಯಮ, ಮಹಿಳಾ ಸ್ವತ್ತಿನ ಅಧಿಕಾರ ಅಧಿನಿಯಮ, ಜೀತಗಾರಿಕೆ ನಿಷೇಧ ಅಧಿನಿಯಮ, ಋಣ ಪರಿಹಾರ ಅಧಿನಿಯಮ, ನಾಗರಿಕ ಹಕ್ಕುಗಳ ರಕ್ಷಣಾ ಅಧಿನಿಯಮ—ಇವೇ ಮೊದಲಾದ ಕಾನೂನುಗಳನ್ನು ಜಾರಿಗೆ ತಂದು ಈ ದಿಶೆಯಲ್ಲಿ ಒಂದು ಶಾಸನ ಕ್ರಾಂತಿಯನ್ನು ಪ್ರಾರಂಭಿಸಿವೆ. ಊಳಿಗಮಾನ್ಯಪದ್ಧತಿಯ ಸಮಾಜರಚನೆಯನ್ನು ಬದಲಾಯಿಸಿ ಸಮಾನತಾ ನೀತಿಯ ಸಮಾಜ ಪದ್ಧತಿಗೆ ನಾವು ಬಹುತೀವ್ರಗತಿಯಿಂದ ಹೊಂದಿಕೊಳ್ಳುತ್ತಿದ್ದೇವೆ. ಆದುದರಿಂದ ಶಾಸನ ಕ್ರಾಂತಿಗನುಗುಣವಾಗಿ ಭಾಷಾಕ್ರಾಂತಿಯಾಗುವುದೂ ಅಷ್ಟೇ ಅಗತ್ಯ. ಭಾಷಾ ಕ್ರಾಂತಿ ಎಂದ ಮಾತ್ರದಿಂದ ಕಾನೂನು ಜಟಿಲ ಭಾಷೆಯಲ್ಲಿರಬೇಕೆಂದು ಯಾರೂ ಹೇಳುವುದಿಲ್ಲ. ನ್ಯಾಯಯಾಚಿಸಿ ನ್ಯಾಯಾಲಯದ ಕಟ್ಟೆಯನ್ನು ಏರುವ ಕಕ್ಷಿದಾರನಿಗೆ ಸುಲಭವಾಗಿ ಅರ್ಥವಾಗುವ ಭಾಷೆಯನ್ನು ನಾವು ಕಾನೂನುಗಳಲ್ಲಿ ಬಳಸಬೇಕೆಂಬುದೇ ಮುಖ್ಯ ಉದ್ದೇಶ. ದೇಶದ ನ್ಯಾಯಾಡಳಿತದಲ್ಲಿ ಜನಸಾಮಾನ್ಯರು ಭಾಗವಹಿಸುವಂತಾಗಬೇಕು. ಅದೇ ನ್ಯಾಯದ ಮುಖ್ಯ ಗುರಿ. ಹಾಗಾದಾಗಲೇ ನ್ಯಾಯವು ಬಡವರ ಕೈಗೆ ಎಟುಕುವುದು ಎಂದಿದ್ದಾರೆ ನ್ಯಾಯಮೂರ್ತಿ ಶ್ರೀ ಎನ್. ಡಿ. ವೆಂಕಟೇಶ್ ಅವರು.

ಕಾನೂನು ಭಾಷೆ ಸಮಗ್ರ ಭಾರತದೇಶಕ್ಕೆ ಏಕರೂಪವಾಗಿರಬೇಕು. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಮತ್ತು ಗ್ರಾಮಪಂಚಾಯಿತಿಗಳಿಂದ ಉಚ್ಚತಮ ನ್ಯಾಯಾಲಯದವರೆಗೆ ವಕೀಲರು, ನ್ಯಾಯಾಧೀಶರು ಏಕರೂಪವಾಗಿ ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಕಾನೂನು ಭಾಷೆಯನ್ನು ರೂಪಿಸಬೇಕು ಎಂಬುದು ಮತ್ತೊಂದು ವಾದ. ಈ ವಾದವನ್ನು ಖೇರ್ ಆಯೋಗದವರೂ ಸಮರ್ಥಿಸಿದ್ದಾರೆ. ವಿಭಿನ್ನ ಪ್ರಾದೇಶಿಕ ಭಾಷೆಗಳು ಭಿನ್ನ ಭಿನ್ನ ಕಾನೂನು ಭಾಷೆಗಳನ್ನು ಬಳಸಿ, ಆಯಾ ಪ್ರದೇಶದ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಕಾನೂನು ಭಾಷೆಯನ್ನು ರೂಪಿಸುತ್ತಾ ಹೋದರೆ, ಅಖಿಲ ಭಾರತೀಯ ಮಟ್ಟದಲ್ಲಿ ಏಕರೂಪದ ಕಾನೂನು ಭಾಷೆ ರೂಪುಗೊಳ್ಳುವುದು ಅಸಾಧ್ಯ. ಅಷ್ಟೇ ಅಲ್ಲ, ವಿವಿಧ ನ್ಯಾಯಾಲಯಗಳ ತೀರ್ಪುಗಳನ್ನು ನೋಡಬಯಸುವವರು

ನ್ಯಾಯಕ್ಕಾಗಿ ಬೇರೆ ಬೇರೆ ಭಾಷೆಗಳ ಅಧಿಕೃತ ಭಾಷಾಂತರವನ್ನು ಪರಿಶೀಲಿಸುವ ಸಮಸ್ಯೆ ಭೂತಾಕಾರವಾಗಿ ಎದ್ದು ನಿಲ್ಲುತ್ತದೆ. ಸಾವಿರಾರು ಜನ ಭಾಷಾಂತರಕಾರರು ಈ ಕಾರ್ಯಕ್ಕೆ ಕೈಹಾಕಿದರೂ ಸಮರ್ಪಕವಾದ ಭಾಷಾಂತರಗಳು ಸಮಯೋಚಿತವಾಗಿ ದೊರೆಯದೇ ಹೋಗಬಹುದು. ಇದರಿಂದಾಗಿ ನ್ಯಾಯದಾನದ ಮಹತ್ವದ ಕ್ಷೇತ್ರದಲ್ಲಿ ಒಂದು ಬಗೆಯ ವಿಚಾರ ಕ್ಷಾಮವೇ ಉಂಟಾದೀತು ಎಂದು ಹಿಂದೆ ಕಾನೂನು ಆಯೋಗದ ಅಧ್ಯಕ್ಷರಾಗಿದ್ದ ಶ್ರೀ ಎಂ. ಸಿ. ಸೆಟಲವಾಡರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಎಲ್ಲ ರಾಜ್ಯಗಳಿಂದ ಭಾರತದ ಉಚ್ಚತಮ ನ್ಯಾಯಾಲಯಕ್ಕೆ ಬರುವ ಅಪೀಲುಗಳ ಸಂಖ್ಯೆಯನ್ನು ಗಮನಿಸಿದರೆ ಆಯಾ ರಾಜ್ಯದ ಉಚ್ಚ ನ್ಯಾಯಾಲಯದವರೆಗೆ ಪ್ರಾದೇಶಿಕ ಭಾಷೆಗಳನ್ನು ಬಳಸುವಲ್ಲಿ ತೊಂದರೆ ಇರಕೂಡದೆಂದೂ ಅದರಿಂದ ಬಡವರಿಗೆ ನ್ಯಾಯ ಸುಲಭವಾಗಿ ದೊರೆಯುವುದೆಂದೂ ಕೂಡ ಅಭಿಪ್ರಾಯಪಡಲಾಗಿದೆ. ಉಚ್ಚತಮ ನ್ಯಾಯಾಲಯಕ್ಕೆ ಅಪೀಲುಹೋಗುವ ಸಂದರ್ಭಗಳು ಬಹಳ ಕಡಿಮೆ. ಆ ಮಟ್ಟಿಗೆ ಅಧಿಕೃತ ಇಂಗ್ಲಿಷ್ ಅಥವಾ ಹಿಂದಿ ಪಾಠಗಳನ್ನು ಒದಗಿಸಿದರೆ ಸಾಕು. ಈ ದೃಷ್ಟಿಯಿಂದ ಭಾರತದ ಉಚ್ಚತಮ ನ್ಯಾಯಾಲಯ (ಸುಪ್ರೀಮ್‌ಕೋರ್ಟ್) ಮತ್ತು ಉಚ್ಚ ನ್ಯಾಯಾಲಯ (ಹೈಕೋರ್ಟ್) ಗಳಲ್ಲಿ ಇಂಗ್ಲಿಷ್ ಮತ್ತು ಹಿಂದಿ ಭಾಷೆ ಎರಡನ್ನೂ ಕೆಲವು ಕಾಲ ಬಳಸಬೇಕು. ಪ್ರಾದೇಶಿಕ ಹೈಕೋರ್ಟ್‌ಗಳವರೆಗೆ ಆಯಾಭಾಷೆಗಳನ್ನು ಬಳಸಬೇಕು ಎಂದೂ ವಿಧಿವೇತ್ತರು ಅಭಿಪ್ರಾಯಪಟ್ಟಿದ್ದಾರೆ.

ಈ ಎಲ್ಲ ಅಂಶಗಳನ್ನು ಮತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುವ ಭಾಷಾ ನೀತಿಯನ್ನು ಗಮನಿಸಿದರೆ ಸಂಪರ್ಕ ಭಾಷೆಯಾಗಿ 'ಹಿಂದಿ' ಮತ್ತು ಆಯಾ ರಾಜ್ಯಗಳಲ್ಲಿ ಬಹು ಜನರ ಪ್ರಾದೇಶಿಕ ಭಾಷೆ—ಇವು ಕಾನೂನು ಭಾಷೆಯಾಗುವುದರಲ್ಲಿ ಸಂದೇಹವಿಲ್ಲ. ಈ ಮಹತ್ವದ ಬದಲಾವಣೆಯನ್ನು ಗಮನದಲ್ಲಿಟ್ಟು ಕಾನೂನು ಭಾಷೆಯನ್ನು ರೂಪಿಸಬೇಕಾಗಿದೆ.

ಈ ಮಹತ್ಕಾರ್ಯವನ್ನು ಸಾಧಿಸಲು ಅಖಿಲಭಾರತ ಮಟ್ಟದಲ್ಲಿ ಒಂದು ರಾಜಭಾಷಾ (ವಿಧಾಯೀ) ಆಯೋಗವನ್ನು 1961ರಷ್ಟು ಹಿಂದೆಯೇ ರಚಿಸಲಾಯಿತು. ಈ ಆಯೋಗದಲ್ಲಿ ಭಾರತದ ಎಲ್ಲ ರಾಜ್ಯದ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಆಯೋಗವು ಅಖಿಲ ಭಾರತೀಯ ಮಟ್ಟದ ನೂರಾರು ಕಾನೂನುಗಳ ಅಧಿಕೃತ ಹಿಂದಿ ಪಾಠಗಳನ್ನು ತಯಾರಿಸುವುದರ ಜೊತೆ ಜೊತೆಗೆ ಒಂದು ಹಿಂದಿ ಕಾನೂನು ಪಾರಿಭಾಷಿಕ ಕೋಶವನ್ನು ತಯಾರಿಸಿತು. ಸಾಮಾನ್ಯವಾಗಿ ಈ ಕೋಶವನ್ನೇ ಎಲ್ಲ ರಾಜ್ಯಗಳಲ್ಲಿ ಬಳಸಿಕೊಳ್ಳಬೇಕೆಂದು ಅಪೇಕ್ಷಿಸಲಾಯಿತು. ಕನ್ನಡದ ಮಟ್ಟಿಗೆ ಹೇಳುವುದಾದರೆ ಸಾಧ್ಯವಿದ್ದ ಮಟ್ಟಿಗೂ ಈ ಅಖಿಲ ಭಾರತೀಯ ಪಾರಿಭಾಷಿಕಗಳನ್ನು ಕನ್ನಡ ಕಾನೂನು ಭಾಷಾಂತರಗಳಲ್ಲಿ ಬಳಸಿಕೊಂಡಿದ್ದೇವೆಂದು ಕರ್ನಾಟಕ ರಾಜಭಾಷಾ ಆಯೋಗದ ಅಧ್ಯಕ್ಷರು ಕೇಂದ್ರ ರಾಜಭಾಷಾ ಖಂಡದ ಜಾಯಿಂಟ್ ಸೆಕ್ರೆಟರಿಯವರಾದ ಶ್ರೀ ಬಿ. ಕೆ. ಶರ್ಮರವರಿಗೆ (ಇತ್ತೀಚೆಗೆ ಇಲ್ಲಿ ಚರ್ಚೆಗೆ ಬಂದಾಗ) ಮನದಟ್ಟು ಮಾಡಿಕೊಟ್ಟಿದ್ದಾರೆ.

ಸ್ಥಳೀಯ ಜನರಿಗೆ ಅರ್ಥವಾಗದ ಸಂದರ್ಭಗಳಲ್ಲಿ ಮತ್ತು ಪ್ರಾದೇಶಿಕ ಭಾಷೆಯ ಜಾಯಮಾನಕ್ಕೆ ಒಗ್ಗದ ಸಂದರ್ಭಗಳಲ್ಲಿ ಮಾತ್ರ ನಾವು ನಮ್ಮ ಭಾಷೆಯ ವಿಶಿಷ್ಟ ಪದಗಳನ್ನೇ ಬಳಸಿಕೊಂಡಿದ್ದೇವೆಂದೂ ಅವರಿಗೆ ಉದಾಹರಣೆಸಹಿತವಾಗಿ ತಿಳಿಸಿಕೊಟ್ಟಿದ್ದಾರೆ. ಹಿಂದಿ ಪಾರಿಭಾಷಿಕ ಕೋಶದಲ್ಲಿ 'ಪವರ್' ಎಂಬುದಕ್ಕೆ ಶಕ್ತಿ ಎಂದೂ, 'ಲಾ' ಎಂಬುದಕ್ಕೆ ವಿಧಿ ಎಂದೂ, 'Right' ಎಂಬುದಕ್ಕೆ ಅಧಿಕಾರ ಎಂದೂ, 'ಟೈಟಲ್' ಎಂಬುದಕ್ಕೆ ಹಕ್ಕು ಎಂದೂ ಇರುವ ಕಡೆಗಳಲ್ಲಿ ನಾವು ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದೇವೆ. ಅಂಥ ಎಲ್ಲ ಬದಲಾವಣೆಗಳನ್ನು ಕುರಿತು ಇಲ್ಲಿ ಚರ್ಚಿಸುವುದು ಅನವಶ್ಯಕ.

ಭಾರತೀಯ ಭಾಷೆಗಳಲ್ಲಿ ಕಾನೂನು ಸಾಹಿತ್ಯವನ್ನು ನಿರ್ಮಾಣ ಮಾಡುವವರು ಮೆರಿಯೋಪಿ, ಜೆ. ಜಿ. ಟಾಲ್‌ಪಿನ್, (ಯು.ಎಸ್.ಎ.) ಎಂ. ಮಿಗ್ಲಿಯೋನಿನಿ ಮೊದಲಾದ ಪಾಶ್ಚಾತ್ಯ ಭಾಷಾ ವಿಶಾರದರು ವ್ಯಕ್ತಪಡಿಸಿರುವ ಅಮೂಲ್ಯ ಅಭಿಪ್ರಾಯಗಳನ್ನು ಮತ್ತು ಹಿಂದೆ ಅಶೋಕನ ಕಾಲದಿಂದಲೂ ಭಾರತದ ಅನೇಕ ರಾಜ ಮಹಾರಾಜರುಗಳು, ಆಮೇಲೆ ಮೊಗಲ್ ಸಾಮ್ರಾಟರು ರಾಜಶಾಸನಗಳನ್ನು ಹೊರಡಿಸುವಾಗ ಬಳಸಿದ ಶಬ್ದಗಳನ್ನೂ, ಪ್ರಯೋಗಗಳನ್ನೂ ನಾವು ಸೂಕ್ಷ್ಮವಾಗಿ ಪರಿಶೀಲಿಸಿ ನಮ್ಮ ಆಧುನಿಕ ಪಾರಿಭಾಷಿಕಗಳನ್ನು ಆಯ್ದುಕೊಳ್ಳಬೇಕು. ಕಾನೂನು ಭಾಷೆಯನ್ನು ಪ್ರಜಾತಂತ್ರಾತ್ಮಕ ಸಮಾಜ ರಚನೆಯ ರೀತಿನೀತಿಗಳಿಗೆ ತಕ್ಕಂತೆ ರೂಪಿಸಿಕೊಳ್ಳಬೇಕೆಂಬುದನ್ನು ಆಂಧ್ರ ಸರ್ಕಾರದವರು ರಾಜಭಾಷಾ ವಿಚಾರವಾಗಿ 1968ರಷ್ಟು ಹಿಂದೆಯೇ ಪ್ರಕಟಿಸಿದ ಶ್ವೇತ ಪತ್ರದಲ್ಲಿ ತಿಳಿಸಿದ್ದಾರೆ. ಕದಂಬರ ಕಾಲದಿಂದ, ವಿಜಯನಗರದ ಆಳರಸರ ಕಾಲದವರೆಗೆ, ವಿಜಾಪುರದ ಆದಿಲಶಹರಿಂದ, ಹೈದರಾಬಾದಿನ ನಿಜಾಮುಶಹರ ಕಾಲದವರೆಗೆ ಮತ್ತು ಟಿಪ್ಪು-ಹೈದರಾಲಿಗಳ ಕಾಲದಲ್ಲಿ, ಇತ್ತೀಚೆಗೆ ಮೈಸೂರಿನ ಆಳರಸರ ಕಾಲದಲ್ಲಿ ರಾಜಭಾಷೆಯು ಹೇಗೆ ರೂಪುಗೊಂಡಿತೆಂಬುದನ್ನು ಸಂಕ್ಷೇಪವಾಗಿ ನನ್ನ 'ನ್ಯಾಯ ನಿಬಂಧನೆಗಳು' ಎಂಬ ಕಿರುಹೊತ್ತಗೆಯಲ್ಲಿ 'ರಾಜಭಾಷೆ—ಸಾಧನೆ ಮತ್ತು ಸಮಸ್ಯೆ' ಎಂಬ ಲೇಖನದಲ್ಲಿ ವಿವರಿಸಿದ್ದೇನೆ. ಕೆಲವು ಸಂದರ್ಭಗಳಲ್ಲಿ ಉಪಸರ್ಗಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಸೃಷ್ಟಿಮಾಡಿಕೊಳ್ಳಬೇಕಾಗುವುದೆಂದು ಉದಾಹರಣೆಸಹಿತವಾಗಿ ಆ ಲೇಖನದಲ್ಲಿ ಚರ್ಚಿಸಲಾಗಿದೆ. ಕೇಂದ್ರ ಕಾನೂನು ಪಾರಿಭಾಷಿಕಗಳನ್ನು ಬಳಸುವ ಮೂಲಕ ಅಖಿಲ ಭಾರತೀಯ ಸಂಪರ್ಕವನ್ನೂ ಮತ್ತು ದ್ರಾವಿಡ ಭಾಷೆ ಬಳಗಕ್ಕೆ ಸೇರಿದ ದಕ್ಷಿಣದ ವಿವಿಧ ಭಾಷೆಗಳಲ್ಲಿ ದೊರೆಯುವ ಏಕರೂಪವಾದ ಶಬ್ದಗಳನ್ನು ಬಳಸುವ ಮೂಲಕ ದಕ್ಷಿಣ ರಾಜ್ಯಗಳ ಭಾಷಾ ಬಾಂಧವ್ಯವನ್ನೂ ನಾವು ಕಾಪಾಡಿಕೊಂಡಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಆಡಳಿತ ಭಾಷೆಯಾಗಿ ಅಥವಾ ನ್ಯಾಯಾಡಳಿತ ಭಾಷೆಯಾಗಿ ಕನ್ನಡವನ್ನು ರೂಪಿಸುತ್ತಿರುವ ಈ ಹಂತದಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಆಡಳಿತ ಮತ್ತು ಕಾನೂನು ಗ್ರಂಥಗಳು ನಿರ್ಮಾಣವಾಗಬೇಕೆಂದು ಅನೇಕರು ಹೇಳುತ್ತಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರವೇ ಸರಿ. ಆದರೆ ಶಾಸ್ತ್ರ ಗ್ರಂಥಗಳನ್ನೂ ಜನ

ಸಾಮಾನ್ಯರ ಭಾಷೆಗೆ ಇಳಿಸುವುದು ಬಹಳ ಕಷ್ಟದ ಕೆಲಸ ಎಂಬುದನ್ನು ಭಾಷಾತಜ್ಞರೇ ಬಲ್ಲರು. ವಿಜ್ಞಾನದ ಭಾಷೆಯು ಖಚಿತವಾಗಿರುವುದರಿಂದಲೂ ಮತ್ತು ಕ್ಲಪ್ತವಾಗಿರುವುದರಿಂದಲೂ ಆ ಕ್ಷೇತ್ರದಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ಹಾಗೆ ಭಾಷೆಯನ್ನು ರೂಪಿಸಲು ಅವಕಾಶವೇ ಇಲ್ಲ. ಆ ಕ್ಷೇತ್ರಕ್ಕೆ ಸಂಬಂಧಪಟ್ಟ ಕೆಲವು ಶಬ್ದಗಳನ್ನು ಅರಿತುಕೊಳ್ಳದಿದ್ದರೆ ಗಣಿತ, ಅರ್ಥಶಾಸ್ತ್ರ, ಭೂಗರ್ಭಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಖಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜಾಮಿತಿಯ (ಜಾಮಿಟ್ರಿ) ಮತ್ತು ಬೀಜಗಣಿತ (ಆಲ್‌ಜೀಬ್ರಾ) ಇಂಥ ವಿಷಯಗಳನ್ನು ಅರಿತುಕೊಳ್ಳಲು ನಿರ್ದಿಷ್ಟವಾದ ಪಾರಿಭಾಷಿಕವನ್ನು ರೂಢಿಸಿಕೊಳ್ಳಲೇಬೇಕಾಗುವುದು. ಹೀಗಿರುವಾಗ ಅಷ್ಟೊಂದು ಖಚಿತವಲ್ಲದ ಮತ್ತು ಬಹು ವ್ಯಾಪಕವಾದ ಕಾನೂನು ಭಾಷೆಯ ಪಾರಿಭಾಷಿಕಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ಹಾಗೆ ರೂಪಿಸುವುದು ಈವರೆಗೆ ದೊರೆತ ಅನುಭವದಿಂದ ದುಃಸ್ಸಾಧ್ಯವೆಂದೇ ಹೇಳಬೇಕಾಗುವದು. ಈ ಹಿನ್ನೆಲೆಯಲ್ಲಿ 1968ರಲ್ಲಿ ಆಂಧ್ರ ಸರ್ಕಾರದವರು ಹೊರಡಿಸಿದ ಶ್ವೇತಪತ್ರದಲ್ಲಿ ತುಂಬ ವಿವರಗಳನ್ನು ನೀಡಿದ್ದಾರೆ. ಭಾಷೆಯನ್ನು ಜನರ ಮಟ್ಟಕ್ಕೆ ಇಳಿಸಬೇಕೋ ಅಥವಾ ಜನರು ಭಾಷೆಯ ಒಂದು ಕನಿಷ್ಠ ಮಟ್ಟವನ್ನು ತಲುಪುವಂತೆ ಸಾಕ್ಷರತೆಯನ್ನು ಹೆಚ್ಚಿಸಿಕೊಳ್ಳಬೇಕೋ ಎಂಬ ಸಮಸ್ಯೆ ಕಾನೂನು ಪಂಡಿತರನ್ನು, ಭಾಷಾ ತಜ್ಞರನ್ನು ಸಾಕಷ್ಟು ಕಾಡಿದೆ. ಕೇರಳದಲ್ಲಿ ಆಡಳಿತ ಭಾಷೆಯನ್ನು ರೂಪಿಸುವವರು ಸಂಸ್ಕೃತದಿಂದ ಹೇರಳವಾಗಿ ಶಬ್ದಗಳನ್ನು ಬಳಸಿಕೊಂಡಿದ್ದಾರೆ. ತಮಿಳಿನವರು ಈ ದಿಶೆಯಲ್ಲಿ ಅವರಿಗಿಂತ ಸ್ವಲ್ಪ ಹಿಡಿತದಿಂದ ವರ್ತಿಸಿದ್ದಾರೆ. ತಮಿಳು ಭಾಷಾ ಶಬ್ದಗಳಿಗೇ ಪ್ರಾಶಸ್ತ್ಯ ನೀಡಿದ್ದಾರೆ. ಕನ್ನಡ ಮತ್ತು ತೆಲುಗು ಭಾಷೆಗಳ ವಿಷಯದಲ್ಲಿ ಸ್ವಲ್ಪ ಹೆಚ್ಚುಕಡಿಮೆ ನಿಲುವು ಒಂದೇ ರೀತಿಯಾಗಿದೆಯೆನ್ನಬಹುದು. ಈ ಉಭಯ ಪ್ರದೇಶಗಳು ಬಹು ಕಾಲದಿಂದ ಏಕಾಧಿಪತ್ಯಕ್ಕೆ ಒಳಪಟ್ಟಿದ್ದರಿಂದ ಸುಮಾರು ಕ್ರಿ. ಶ. 7ನೇ ಶತಮಾನದಿಂದಲೇ ಈ ಉಭಯ ಭಾಷೆಗಳಲ್ಲಿ ಅಂದರೆ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಾಕಷ್ಟು ಶಬ್ದಸಾಮ್ಯತೆ ಕಂಡುಬರುತ್ತದೆ. ಈ ರಾಜ್ಯಗಳ ಕೆಲವು ಭಾಗಗಳು ದೀರ್ಘಕಾಲ ಮೊಗಲರ ಮತ್ತು ಸುಲ್ತಾನರ ಆಳ್ವಿಕೆಗೆ ಒಳಪಟ್ಟದ್ದರಿಂದ ಈ ಭಾಷೆಗಳಲ್ಲಿ ನೂರಾರು ಅರಬ್ಬಿ ಮತ್ತು ಪರ್ಶಿಯನ್ ಮೂಲದ ಪಾರಿಭಾಷಿಕಗಳು ಹಾಸುಹೊಕ್ಕಾಗಿ ತುಂಬಿಕೊಂಡಿವೆ. ಹಿಂದೆ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಭಾಷಾಂತರ ವಿಭಾಗದವರು ಕೋಟ್ಯಂತರ ರೂಪಾಯಿ ಖರ್ಚುಮಾಡಿ ಶಿಕ್ಷಣ, ಆಡಳಿತ ಮತ್ತು ನ್ಯಾಯಾಡಳಿತ ಈ ಎಲ್ಲ ಕ್ಷೇತ್ರಗಳಿಗೆ ಸಮರ್ಪಕವಾದ ಭಾಷೆಯನ್ನು ಒದಗಿಸುವಂಥ ಗ್ರಂಥಗಳನ್ನು ಶಬ್ದಕೋಶಗಳನ್ನು ಎಲ್ಲಾ ಕಾನೂನುಗಳನ್ನು ಉರ್ದು ಭಾಷೆಯಲ್ಲಿ ತಯಾರಿಸಿದರು. ಗಿರ್‌ದವಾರ್ (ರೆವಿನ್ಯೂ ಇನ್ಸ್‌ಪೆಕ್ಟರ್), ತಹಸೀಲ್ದಾರ್, ದೂಯಮ್ ತಹಸೀಲ್ದಾರ್ (ಅಸಿಸ್ಟೆಂಟ್ ಕಮೀಷನರ್), ಅವಲ್ ತಾಲೂಕ್‌ದಾರ (ಡೆಪ್ಯುಟಿ ಕಮೀಷನರ್), ಸುಬೇದಾರ್ (ಡಿವಿಜನಲ್ ಕಮಿಷನರ್), ಮುಂತಜಿಮ್ (ಸೂಪರಿಂಟೆಂಡೆಂಟ್), ಮದದಗಾರ್-ಮೋತಮದ್ (ಅಂಡರ್ ಸೆಕ್ರೆಟರಿ)

ನ್ಯಾಯಬ್ ಮೋತಮದ್ (ಡೆಪ್ಯೂಟಿ ಸೆಕ್ರೆಟರಿ), ಜಾಯಿದ್ ಮೋತಮದ್ (ಅಡಿಷನಲ್ ಸೆಕ್ರೆಟರಿ), ಮೋತಮದ್ (ಸೆಕ್ರೆಟರಿ), ಸದರ್ ಉಲ್ ಮಹಾಮ್ (ಮಿನಿಸ್ಟರ್), ಸದರೆ ಅಜುಮ್ (ಚೀಫ್ ಮಿನಿಸ್ಟರ್), ಸದರೆರಿಯಾಸತ್ (ಹೆಡ್ ಆಫ್ ದಿ ಸ್ಟೇಟ್) —ಇದೇ ಮೊದಲಾದ ಪದನಾಮಗಳು ಬಳಕೆಯಲ್ಲಿದ್ದುವು. ಅದೇ ರೀತಿಯಾಗಿ ಮುನ್ಸೀಫ್, ನಾಜುಮ್ ಜಿಲ್ಲಾ (ಡಿಸ್ಟ್ರಿಕ್ಟ್ ಜಡ್ಜ್), ಅದಾಲತ್ ದಿವಾನಿ (ಸಿವಿಲ್ ಕೋರ್ಟ್), ಅದಾಲತ್ ಫೌಜ್‌ದಾರಿ (ಕ್ರಿಮಿನಲ್ ಕೋರ್ಟ್), ಅದಾಲತ್ ಉಲ್ ಆಲಿಯಾ (ಹೈಕೋರ್ಟ್), ರುಕನೆ ಅದಾಲತ್ (ಹೈಕೋರ್ಟ್ ಜಡ್ಜ್) ಇವೇ ಮೊದಲಾದ ಪಾರಿಭಾಷಿಕಗಳು ಹಳ್ಳಿಹಳ್ಳಿಯಲ್ಲಿಯೂ ಸುಪರಿಚಿತವಾಗಿದ್ದುವು. ಶಿಕ್ಷಣ ಕ್ಷೇತ್ರದಲ್ಲೂ ಕೂಡ ತಬಯಿಯಾತ್ (ಫಿಜಿಕ್ಸ್), ಕೀಮಿಯಾ (ಕೆಮಿಸ್ಟ್ರಿ), ಅಸ್ಬಾಕ್ ಉಲ್ ಆಷಿಯಾ (ಲೆಸೆನ್ಸ್ ಇನ್ ನ್ಯಾಚುರಲ್ ಸೈನ್ಸ್‌ಸ್), ಮಾಷಿಯಾತ್ (ಎಕನಾಮಿಕ್ಸ್). ಇಲ್ಮೆಕಾನೂನ್ (ಜುರಿಸ್‌ಪ್ರುಡೆನ್ಸ್), ತಾಜೀರಾತ್ (ಅಫೆನ್ಸ್‌ಸ್ ಅಂಡ್ ಕ್ರೈಮ್ಸ್), ಕಾನೂನ್ ಮಾಹಿದಾ (ಲಾ ಆಫ್ ಕಾಂಟ್ರಾಕ್ಟ್), ಬಿನಾ ಬಿಜ್ಜಬರ್ (ರೇಪ್), ನಾನ್ ವನೆಷ್ಕಾ (ಮೆಂಟಿನೆನ್ಸ್ ಅಲೌನ್ಸ್) ಮೊದಲಾದ ಉರ್ದು ಪದಗಳನ್ನು ಜನಸಾಮಾನ್ಯರು ಬಳಸುತ್ತಿದ್ದರು. ಅಭ್ಯಾಸ ಕ್ರಮದಿಂದ ಉರ್ದು ಭಾಷೆಯು ಮಾತೃಭಾಷೆಯಾದ ಕನ್ನಡದಷ್ಟೇ ರೂಢಿಗತವಾಗಿತ್ತು. ಹೀಗಿರುವಾಗ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾಗಿ 30 ವರ್ಷ ಕಳೆದರೂ ಪಾರಿಭಾಷಿಕ ವಿಚಾರವಾಗಿ ಒಂದು ಖಚಿತ ಧೋರಣೆಯನ್ನು ಅನುಸರಿಸದೆ ಆಡಳಿತ ಭಾಷೆಯ ವಿಷಯದಲ್ಲಿ ಇನ್ನೂ ತ್ರಿಶಂಕು ಸ್ವರ್ಗದಲ್ಲಿದ್ದೇವೆಂದು ಹೇಳಲು ವಿಷಾದವೆನಿಸುತ್ತದೆ. ಆ್ಯಕ್ಟ್, ಲಾ, ಬೈ-ಲಾ, ಸೆಕ್ಷನ್, ಸಬ್‌ಸೆಕ್ಷನ್, ಕ್ಲಾಜ್, ಸಬ್‌ಕ್ಲಾಜ್, ಪ್ಯಾರಾ, ಸಬ್‌ಪ್ಯಾರಾ, ಚೇಂಜ್, ಮಾಡಿಫೈ, ಅಮೆಂಡ್‌ಮೆಂಟ್, ಮ್ಯಾಟರ್, ಸಬ್ಜೆಕ್ಟ್, ಟ್ರಾನ್ಸಿಷನಲ್, ಜಸ್ಟಿಸ್, ಜುರಿಸ್‌ಪ್ರುಡೆನ್ಸ್, ಸ್ಟೇಚ್ಯೂಟ್, ಬಿಲ್, ಈಕ್ವಿಟಿ, ರೆಸ್ಟೊರೇಷನ್, ಪ್ರಾಹಿಬಿಷನ್, ಅಬ್‌ಸ್ಟ್ರಕ್ಷನ್ ಇವೇ ಮೊದಲಾದ ಇಂಗ್ಲಿಷ್ ಶಬ್ದಗಳಿಗೆ ನಿರ್ದಿಷ್ಟ ಪಾರಿಭಾಷಿಕಗಳನ್ನು ನಾವು ಈಗ ಕೆಲವುಟ್ಟಿಗೆ ಸಂಸ್ಕೃತ ಮೂಲದಿಂದ ಮತ್ತು ಕೆಲವುಟ್ಟಿಗೆ ನಮ್ಮ ನಮ್ಮ ಪ್ರಾದೇಶಿಕ ಶಬ್ದಗಳಿಂದ ತುಂಬಿಕೊಂಡಿದ್ದೇವೆ. ಪ್ರಾದೇಶಿಕ ಭಾಷೆಗಳಲ್ಲಿ ಇನ್ನೂ ಈ ಬಗ್ಗೆ ಏಕರೂಪವಾದ ಪಾರಿಭಾಷಿಕವು ರೂಪುಗೊಂಡಿಲ್ಲವೆಂದೇ ಹೇಳಬೇಕಾಗಿದೆ. ನಾವು ಇಷ್ಟು ದೂರ ದಾರಿಯನ್ನು ಸಾಗಿದ್ದರೂ ಈ ವಿಚಾರದಲ್ಲಿ ಇನ್ನೂ ತಿಣುಕಾಡುತ್ತಿದ್ದೇವೆ ಎಂಬುದು ರಾಜ್ಯಮಟ್ಟದಲ್ಲಿ ಮತ್ತು ಕೇಂದ್ರ ಮಟ್ಟದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮತ್ತು ಸಮ್ಮೇಳನಗಳಲ್ಲಿ ನಡೆದ ಭಾಷಣಗಳಿಂದ ಅರಿತುಕೊಳ್ಳಬಹುದು.

ಆಡಳಿತ ಮತ್ತು ನ್ಯಾಯಾಡಳಿತಕ್ಕೆ ಬೇಕಾದ ಭಾಷೆಯನ್ನು ರೂಪಿಸುವವರು ಮೈತುಂಬ ಕಣ್ಣಿಟ್ಟುಕೊಂಡು ಎಚ್ಚರಿಕೆಯಿಂದ ಬಹು ಸಾವಧಾನವಾಗಿ ಹೆದರಿ ಹೆದರಿ ಹೆಜ್ಜೆ ಇಡುತ್ತಿದ್ದಾರೆ. ವೃತ್ತಪತ್ರಿಕೆಗಳಲ್ಲಿ ಅನೇಕ ಸಲ ನಮ್ಮ ಪ್ರಾದೇಶಿಕ ಭಾಷೆಗಳ ಮೇಲೆ ಹಿಂದಿಯನ್ನು ಹೇರುತ್ತಿದ್ದಾರೆಂಬ ದೂರುಗಳು ಕೇಳಿಬರುತ್ತಿವೆ. ವಿಷಯವನ್ನು

ಕೂಲಂಕಷವಾಗಿ ಅಭ್ಯಾಸಮಾಡಿದವರು ಹಾಗೆ ಹೇಳಲಾರರು. ಹಿಂದಿ ಭಾಷೆ ಬಹಳ ಇತ್ತೀಚೆಗೆ ಅಂದರೆ ೧೩–೧೪ನೇ ಶತಮಾನದಿಂದೀಚೆಗೆ ರೂಪ ತಾಳಿದ ಭಾಷೆ. ನಮ್ಮ ದ್ರಾವಿಡ ಗುಂಪಿಗೆ ಸೇರಿದ ಭಾಷೆಗಳಾದರೋ ಎರಡು ಸಾವಿರ ವರ್ಷಗಳ ಇತಿಹಾಸ ವನ್ನುಳ್ಳ ಸಂಪದ್ಭರಿತವಾದ ಭಾಷೆಗಳು. ಈ ಭಾಷೆಗಳಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಮೂಲದ ಶಬ್ದ ಪ್ರಯೋಗಗಳು ಓತಪ್ರೋತವಾಗಿ ಸೇರಿಕೊಂಡಿವೆ. ಮೊಗಲರಾಡಳಿತ ಕಾಲದಲ್ಲಿ ಮತ್ತು ಆಂಗ್ಲರ ಆಧಿಪತ್ಯದ ಕಾಲದಲ್ಲಿ ಉರ್ದು ಇಂಗ್ಲಿಷ್ ಶಬ್ದಗಳು ಕೂಡ ಅಷ್ಟೇ ಲೀಲಾಜಾಲವಾಗಿ ನಮ್ಮ ಭಾಷೆಗಳಿಗೆ ನುಗ್ಗಿವೆ. ಸಂಸ್ಕೃತ ಮೂಲ ಪದಗಳಿಗೆ ಉರ್ದು ಕ್ರಿಯಾಪದಗಳನ್ನು ಸೇರಿಸಿದರೆ ಹಿಂದಿ ಎಂದು ಹೇಳಬಹುದು. ಅದಕ್ಕೆ ಬದಲಾಗಿ ಪರ್ಷಿಯನ್ ಶಬ್ದಪ್ರಾಚುರ್ಯವಿದ್ದಾಗ ಅದನ್ನೇ ಉರ್ದು ಎಂದು ಕರೆಯ ಬಹುದು. ಆಪ್ ಪಧಾರಿಯೆ (ದಯವಿಟ್ಟು ಕುಳಿತುಕೊಳ್ಳಬೇಕು) ಎಂದರೆ ಹಿಂದಿ, ಆಪ್ ತಷರೀಫ್ ರಖಿಯೇ ಎಂದರೆ ಅದು ಉರ್ದು ಭಾಷೆಯಾಗುವುದು. ಹೀಗೆ ಹಿಂದಿ ಭಾಷೆಯಲ್ಲಿ ಯಥೇಚ್ಛವಾಗಿ ಸಂಸ್ಕೃತ ಉರ್ದು ಶಬ್ದಗಳು ಸೇರಿಕೊಂಡಿವೆ. ಅಂಥ ಅನೇಕ ಶಬ್ದಗಳು ದಕ್ಷಿಣದ ಪ್ರಾದೇಶಿಕ ಭಾಷೆಗಳಲ್ಲೂ ಕಾಣಸಿಕ್ಕುತ್ತವೆ. ಧರ್ಮಶಾಸ್ತ್ರ ಗ್ರಂಥಗಳು ಇಡೀ ಭಾರತಕ್ಕೆ ಅನ್ವಯಿಸುವ ಗ್ರಂಥಗಳಾಗಿದ್ದುದರಿಂದ ಸಾವಿರಾರು ಶಾಸ್ತ್ರ ಪಾರಿಭಾಷಿಕಗಳು ಹಿಂದಿಗೂ ನಮಗೂ ಸೇತುವೆಯನ್ನು ಕಲ್ಪಿಸಿವೆ. ಹೀಗಿರು ವಾಗ ನಾವು ಹಿಂದಿ ಶಬ್ದಗಳನ್ನು ಹೆಚ್ಚಾಗಿ ಬಳಸಿದ್ದೇವೆ ಎಂದರೆ ಅದು ಯಥಾರ್ಥ ವಾದ ಅಭಿಪ್ರಾಯವಾಗಲಾರದು. ಹಿಂದಿ ಕಾನೂನು ಪಾರಿಭಾಷಿಕ ಕೋಶದಲ್ಲಿ ಸಿಕ್ಕುವ ನೂರಕ್ಕೆ ಎಂಬತ್ತರಷ್ಟು ಪಾರಿಭಾಷಿಕಗಳು ನಮ್ಮ ಕನ್ನಡ ಭಾಷೆಯಲ್ಲಿಯೇ ಸಿಕ್ಕುತ್ತವೆ. ಅನಿವಾರ್ಯದಲ್ಲಿ ಮಾತ್ರ ಉಪಸರ್ಗ ಪ್ರಯೋಗದಿಂದ ಶಬ್ದಗಳನ್ನು ಸೃಷ್ಟಿ ಮಾಡಿ ಕೊಂಡದ್ದಾಗಿದೆ. ಈ ಸೂತ್ರವನ್ನು ಎಲ್ಲ ಭಾಷೆಗಳೂ ಅನುಕರಿಸಿವೆ. ಇನ್‌ವ್ಯಾಲಿಡ್, ಇನ್‌ಸಬಾರ್ಡಿನೇಷನ್, ಡೀಸೆಂಟ್ರಲೈಸೇಷನ್, ಡಿಬಾರ್, ಮೊದಲಾದ ಶಬ್ದಗಳನ್ನು ಹೇಗೆ ಇಂಗ್ಲಿಷಿನಲ್ಲಿ ಸೃಷ್ಟಿಸಿಕೊಳ್ಳಲಾಗಿದೆಯೋ ಅದೇ ವ್ಯಾಕರಣ ನಿಯಮವನ್ನು ಅನುಸರಿಸಿ ಹಿಂದಿ ಮತ್ತು ಇತರ ಪ್ರಾದೇಶಿಕ ಭಾಷೆಗಳಲ್ಲಿಯೂ ವಿನಿಯಮ, ವಿಸಂಗತ, ಅಸಂಗತ, ಅನೌಪಚಾರಿಕ, ಅಧಿಗ್ರಹಣ, ಅಧ್ಯಾದೇಶ, ಅಧಿಕರಣ, ಅಧಿಭಾರ, ಉಪ-ನಿಯಮ, ಉಪವಿಧಿ, ಉಪಧಾರಣ, ಉದ್ಘೋಷಣ, ಮೊದಲಾದ ಶಬ್ದಗಳನ್ನು ರೂಪಿಸಿ ಕೊಳ್ಳಲಾಗಿದೆ. ನವ ಶಬ್ದನಿರ್ಮಾಣ ಕ್ಷೇತ್ರದಲ್ಲಿ ಎಲ್ಲ ಭಾಷೆಗಳೂ ತೊಂದರೆಯನ್ನನು ಭವಿಸಬೇಕಾಗಿದೆ. ಭಾಷಾ ಕ್ರಾಂತಿಯ ಸಂಧಿಕಾಲದ ಈ ತೊಂದರೆಗಳನ್ನು ಅರಿತು ಜನ ಸಹಕರಿಸದಿದ್ದರೆ ಪ್ರಗತಿ ಕುಂಠಿತವಾಗುವುದರಲ್ಲಿ ಸಂದೇಹವಿಲ್ಲ. ನಮ್ಮ ದೇಶದಲ್ಲಿ ಈಗ ಹಸಿರು ಕ್ರಾಂತಿ, ಆರ್ಥಿಕ ಕ್ರಾಂತಿ, ಶಾಸನ ಕ್ರಾಂತಿ ನಡೆಯುತ್ತಿರುವ ಹಾಗೆ ಭಾಷಾ ಕ್ರಾಂತಿಯೂ ನಡೆದಿದೆ ಎಂಬುದನ್ನು ಸಾರ್ವಜನಿಕರು ಗಮನದಲ್ಲಿಡಬೇಕು. ಅಭಿವೃದ್ಧಿಶೀಲ ರಾಷ್ಟ್ರದ ಸರ್ವತೋಮುಖ ಕಲ್ಯಾಣ ದೃಷ್ಟಿಯಿಂದ ಜನತೆ ಸ್ವಲ್ಪ ತಾಳ್ಮೆಯಿಂದ ವರ್ತಿಸಬೇಕೆಂದು ಬೇರೆ ಹೇಳಬೇಕೆ? ಜನಸಾಮಾನ್ಯರ ಹಿತವನ್ನೇ

ಪರಮ ಧ್ಯೇಯವನ್ನಾಗಿಟ್ಟುಕೊಂಡ ರಷಿಯಾ ದೇಶದಲ್ಲೂ ಕೂಡ ಶಾಸ್ತ್ರ ಭಾಷೆಯನ್ನು ಶೈಶವಾವಸ್ಥೆಗೆ ಇಳಿಸದೆ ಜನಸಾಮಾನ್ಯರ ತಿಳಿವಳಿಕೆಯ ಮಟ್ಟವನ್ನು ಹೆಚ್ಚಿಸುವಲ್ಲಿ ವಿಕ್ರಮ ಸಾಧಿಸಲಾಯಿತೆಂಬುದನ್ನು ಪ್ರಗತಿಶೀಲ ರಾಷ್ಟ್ರಗಳು ಅರಿತುಕೊಳ್ಳಬೇಕು.

ಭಾಷೆ ನಿಂತ ನೀರಲ್ಲ. ಅದೊಂದು ಮಹಾ ಪ್ರವಾಹ. ಜಗತ್ತಿನ ಎಲ್ಲ ಆಗುಹೋಗುಗಳನ್ನು ಭಾಷೆಯ ಚೌಕಟ್ಟಿನಲ್ಲಿ ಅಳವಡಿಸಿದಾಗಲೇ ಭಾಷೆ ಜೀವಂತವಾಗಿ ಉಳಿಯುತ್ತದೆ. ಈ ಗತಿಯಲ್ಲಿ ಆಡು ಭಾಷೆಯ ಅನೇಕ ಸಾಮಾನ್ಯ ಪದಗಳೂ ಉದಾಹರಣೆಗೆ ಮಾರಿನೇಗಿಲು, ಸುಗ್ರೀವಾಜ್ಞೆ, ನುಡಿಸಾಕ್ಷ್ಯ, ಇಂಥ ಸಂಯುಕ್ತ ಪದಗಳು ಬೆಳೆಯುವ ಭಾಷೆಗಳಿಗೆ ಸೇರಿಕೊಂಡು ಭಾಷೆ ಸಮೃದ್ಧವಾಗುತ್ತದೆ. ಆಡಳಿತ ಸಾಹಿತ್ಯವನ್ನು ಮತ್ತು ಮೂಲಭೂತ ಕಾನೂನುಗ್ರಂಥಗಳನ್ನು ಭಾಷಾಂತರಿಸುವಾಗ ಈ ಎಲ್ಲ ಅಂಶಗಳನ್ನು ಗಮನಿಸಲಾಗುತ್ತಿದೆ. ನ್ಯಾಯಾಲಯಕ್ಕೆ ಮತ್ತು ಆಡಳಿತಕ್ಕೆ ಅಗತ್ಯವಾದ ಸಾಕಷ್ಟು ಕಾನೂನುಗಳನ್ನು ಮತ್ತು ಪ್ರಕ್ರಿಯಾ ಸಾಹಿತ್ಯವನ್ನು ಈಗಾಗಲೇ ಕನ್ನಡದಲ್ಲಿ ತಯಾರಿಸಿದ್ದಾಗಿದೆ. ಆಡಳಿತ ಪಾರಿಭಾಷಿಕ, ಕಾನೂನು ಪಾರಿಭಾಷಿಕ, ಇಲಾಖಾ ಪಾರಿಭಾಷಿಕ ಕೋಶಗಳೂ ಸಿದ್ಧವಾಗಿ ಬಳಕೆಗೆ ಬಂದಿವೆ. ಮೂಲಭೂತ ಕಾನೂನು ಗ್ರಂಥಗಳ ಅನುವಾದಕಾರ್ಯವನ್ನು ರಾಜ್ಯದ ಮೂರೂ ವಿಶ್ವವಿದ್ಯಾನಿಲಗಳಿಗೆ ವಹಿಸಿಕೊಡಲಾಗಿದೆ. ಇಷ್ಟರಲ್ಲೇ ಒಂದೆರಡು ಗ್ರಂಥಗಳು ಹೊರಬರುವ ನಿರೀಕ್ಷೆಯಿದೆ. ಇಸ್ಲಾಮಿ ನ್ಯಾಯ, ಭಾರತೀಯ ನ್ಯಾಯಪದ್ಧತಿ, ನ್ಯಾಯ ನಿಬಂಧಗಳು, ಪಾಟೀ ಸವಾಲು, ನ್ಯಾಯಾಲಯಗಳ ತೀರ್ಪು ರಚನಾ ವಿಧಾನ, ಕನ್ನಡ ತೀರ್ಪು, ಕನ್ನಡದಲ್ಲಿ ಕಾನೂನು ಸಾಹಿತ್ಯ ಇವೇ ಮೊದಲಾದ ಮೂಲ ಗ್ರಂಥಗಳು ಈಗ ಕನ್ನಡದಲ್ಲಿ ಪ್ರಕಟವಾಗಿ ಈ ದಿಶೆಯಲ್ಲಿ ನಾವು ಮುಂದಡಿಯಿಟ್ಟಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಒಟ್ಟಿನಲ್ಲಿ ಆಡಳಿತಕ್ಕೆ ಅಗತ್ಯವಾದ ಗ್ರಂಥಗಳನ್ನು ಮತ್ತು ಭಾಷಾಂತರಗಳನ್ನು ತಯಾರಿಸುವವರು ಬಹಳ ಗುರುತರವಾದ ಹೊಣೆಯನ್ನು ನಿರ್ವಹಿಸಬೇಕಾಗಿದೆ. ಇಂಥ ವಿಷಯಗಳನ್ನು ನಮ್ಮ ಭಾಷೆಗೆ ಭಟ್ಟಿ ಇಳಿಸುವಾಗ ಶಬ್ದದ ಮೂಲಪಾಠ ಮತ್ತು ಅರ್ಥಕ್ಕೆ ವ್ಯತ್ಯಾಸ ಬರಕೂಡದು; ಚಿರಪರಿಚಿತವಾದ ಶಬ್ದವನ್ನು ಕೈಬಿಡಕೂಡದು; ವಿವಿಧ ಅರ್ಥಗಳನ್ನು ಕೊಡುವ ಸಾಮರ್ಥ್ಯ ಶಬ್ದಕ್ಕೆ ಇದೆಯೇ ಎಂಬ ಅಂಶವನ್ನು ಕಡೆಗಣಿಸಕೂಡದು; ಅಗತ್ಯವಾದಲ್ಲಿ ಹೊಸ ಶಬ್ದಗಳನ್ನು ಸೃಷ್ಟಿಸಲು ಹೆದರಕೂಡದು; ರೂಢಿಗತವಾದ ಶಬ್ದಕ್ಕೆ ಪ್ರಾಧಾನ್ಯ ನೀಡಲು ಹಿಂಜರಿಯಕೂಡದು. ಭಾಷಾಂತರವು ಯಥಾವತ್ತಾಗಿರಬೇಕು ಎಂಬುದನ್ನು ಮರೆಯಕೂಡದು. ಅಷ್ಟೇ ಏಕೆ ಕಾನೂನು ಸಾಹಿತ್ಯದ ಆಧುನಿಕ ಬೆಳವಣಿಗೆಯನ್ನು ಗಮನಿಸಿದರೆ, ವಿರಾಮಚಿಹ್ನೆಗಳನ್ನೂ ಕೂಡ ನಿರ್ಲಕ್ಷಿಸುವಂತಿಲ್ಲ ಎಂಬುದನ್ನು ಸದಾ ನೆನಪಿನಲ್ಲಿಡಬೇಕು. ಇಂಥ ಅನೇಕ ಸೂತ್ರ

ಗಳನ್ನು ಮಹಾರಾಷ್ಟ್ರದ ಖ್ಯಾತ ವಿಧಿ ವಿದ್ವಾಂಸರಾದ ಶ್ರೀ ಹೆಚ್.ಎಸ್. ಉರ್ಸೇಕರ್ ಅವರು ರೂಪಿಸಿದ್ದಾರೆ. ನಾವು ಈ ಜಾಡಿನಲ್ಲಿ ನಡೆದರೆ ನಮ್ಮ ಕೆಲಸ ಸುಲಭ ಎಂದು ಹೇಳಿ ನನ್ನ ಲೇಖನವನ್ನು ಮುಗಿಸುತ್ತೇನೆ.

೧೫ | # ವಿಜ್ಞಾನ ವಾಙ್ಮಯದ ಭಾಷಾಂತರ —ವಿಶಿಷ್ಟ ಸಮಸ್ಯೆಗಳು

ಜಿ. ಟಿ. ನಾರಾಯಣರಾವ್

ಪೀಠಿಕೆ

'ವಿಜ್ಞಾನ ವಾಙ್ಮಯ' ಎಂದರೆ ವಿಜ್ಞಾನದ (science) ಹಾಗೂ ತಂತ್ರವಿದ್ಯೆಯ (technology) ಸಮಸ್ತ ಚಟುವಟಿಕೆಗಳನ್ನೂ ಪ್ರತಿಬಿಂಬಿಸುವ ಸಾಹಿತ್ಯ ಎಂದರ್ಥ.

ಯಾವುದೇ ಭಾಷೆಯಲ್ಲಿ ನಿರೂಪಿತವಾಗಿರುವ ವಿಷಯವನ್ನು ಇನ್ನೊಂದು ಭಾಷೆಯಲ್ಲಿ ಯಥಾವತ್ತಾಗಿ ನಿರೂಪಿಸುವ ಕ್ರಿಯೆಯೇ 'ಭಾಷಾಂತರ'. ಅನುವಾದ ಪರ್ಯಾಯಪದ. ಮೊದಲನೆಯ ಭಾಷೆಗೆ ಮೂಲಭಾಷೆ ಎಂದೂ ಎರಡನೆಯ ಭಾಷೆಗೆ ಉದ್ದಿಷ್ಟ ಭಾಷೆ ಎಂದೂ ಹೆಸರು.

ಇಂಗ್ಲಿಷಿನಲ್ಲಿರುವ ವಿಜ್ಞಾನ ವಾಙ್ಮಯವನ್ನು ಯಥಾವತ್ತಾಗಿ ಕನ್ನಡಕ್ಕೆ ಭಾಷಾಂತರಿಸುವಾಗ ನಾವು ಎದುರಿಸುವ ವಿಶಿಷ್ಟ ಸಮಸ್ಯೆಗಳನ್ನು ಗುರುತಿಸಿ ಸಾಧ್ಯವಾಗುವಲ್ಲಿ ಪರಿಹಾರಗಳನ್ನು ಸೂಚಿಸುವುದು ಪ್ರಕೃತ ಪ್ರಬಂಧದ ಉದ್ದೇಶ. ಅನ್ಯಥಾ ಹೇಳದಿದ್ದರೆ, ಈ ಲೇಖನದ ವ್ಯಾಪ್ತಿಯಲ್ಲಿ, 'ಮೂಲ ಭಾಷೆ' ಇಂಗ್ಲಿಷನ್ನೂ 'ಉದ್ದಿಷ್ಟ ಭಾಷೆ' ಕನ್ನಡವನ್ನೂ ಪ್ರತಿನಿಧಿಸುತ್ತವೆ.

ವಿಜ್ಞಾನದ ಭಾಷೆ

"ವಿಜ್ಞಾನ ಒಂದು ಸಂಸ್ಥೆ, ಒಂದು ವಿಧಾನ, ಜ್ಞಾನದ ಸಂಗೃಹೀತ ಪರಂಪರೆ, ಉತ್ಪಾದನೆಯ ಮಟ್ಟವನ್ನು ಕಾದಿಡುವುದರಲ್ಲಿಯೂ ಉತ್ಪಾದನೆಯನ್ನು ಅಭಿವೃದ್ಧಿಪಡಿಸುವುದರಲ್ಲಿಯೂ ಪ್ರಧಾನವಾದ ಒಂದು ಅಂಶ; ಮತ್ತು, ವಿಶ್ವ ಹಾಗೂ ಮಾನವನೆಡೆಗೆ ನಂಬಿಕೆಗಳನ್ನೂ ನಿಲವುಗಳನ್ನೂ ರೂಪಿಸುವ ಅತ್ಯಂತ ಸಾಮರ್ಥ್ಯವಂತ ಪ್ರಭಾವಗಳ ಪೈಕಿ ಒಂದು." ಶ್ರೇಷ್ಠ ವಿಜ್ಞಾನಿ ಜೆ. ಡಿ. ಬರ್ನಾಲ್ Science in History ಎನ್ನುವ ತಮ್ಮ ಗ್ರಂಥದಲ್ಲಿ ವಿಜ್ಞಾನವನ್ನು ಕುರಿತು ನೀಡಿರುವ ವಿವರಣೆ ಇದು. ಮಾನವನ ಅಸಂಖ್ಯಾತ ಸೃಜನಾತ್ಮಕ ಚಟುವಟಿಕೆಗಳ ಪರಿಧಿಯೊಳಗೆ ವಿಜ್ಞಾನವೂ ಸೇರಿದೆ. ವಿಶ್ವ ಒಡ್ಡುವ ಉದ್ದೀಪನೆಗೆ (stimulus) ಮಾನವಮನಸ್ಸಿನ ಅನುಕ್ರಿಯೆಯ (response) ಒಂದು ಪ್ರಕಾರ ವಿಜ್ಞಾನ. ಒಂದೊಂದು ಸೃಜನಾತ್ಮಕ ಚಟುವಟಿಕೆಯೂ ಅದರದೇ

ಆದ ವಿಶಿಷ್ಟ ಭಾಷೆಯ (ಮಾಧ್ಯಮದ) ಮೂಲಕ ಅಭಿವ್ಯಕ್ತಗೊಳ್ಳುವುದು ಸರಿಯಷ್ಟೆ. ಅಂತೆಯೇ ವಿಜ್ಞಾನಕ್ಕೂ ವಿಶಿಷ್ಟವಾದ ಒಂದು ಭಾಷೆ ಇದೆ.

ಇಂಗ್ಲಿಷಿನಲ್ಲಿ ವಿಜ್ಞಾನದ ಭಾಷೆಗೆ ಶಿಷ್ಟರೂಪ (standard form) ಬಂದಿರುವುದರಿಂದಲೂ ನಮ್ಮ ಅಧ್ಯಯನ ಚಿಂತನೆ ಬೋಧನೆ ಸಾಧಾರಣವಾಗಿ ಅದೇ ಭಾಷೆಯಲ್ಲಿ ಇಂದು ಕೂಡ (೧೯೭೭) ನಡೆಯುತ್ತಿರುವುದರಿಂದಲೂ ಅದರಲ್ಲಿರುವ ಶಿಷ್ಟ ಗ್ರಂಥಗಳನ್ನು (standard works) ಒಮ್ಮೆ ಅವಲೋಕಿಸುವುದು ಅಪೇಕ್ಷಣೀಯ. ಹೀಗೆ ಮಾಡಿದ್ದೇ ಆದರೆ ಇಂಗ್ಲಿಷಿನಲ್ಲಿ ವಿಜ್ಞಾನದ ಭಾಷೆಗೆ ಮೂರು ಬಾಹ್ಯ ಲಕ್ಷಣಗಳಿವೆ ಎಂದು ತಿಳಿಯುತ್ತದೆ:

ವಿವರಣಾತ್ಮಕ – ವಿಷಯವನ್ನು ವಾಕ್ಯಸಮೂಹಗಳ ನೆರವಿನಿಂದ ವಿಶದವಾಗಿ ವಿವರಿಸುವುದು.

ಪ್ರತೀಕಾತ್ಮಕ – ಶಿಷ್ಟ ಪ್ರತೀಕಗಳನ್ನೂ (standard symbols) ಚಿಹ್ನೆಗಳನ್ನೂ (signs) ನಿರ್ದಿಷ್ಟ ನಿಯಮಾನುಸಾರ ಬಳಸಿಕೊಂಡು ಭಾವನೆಗಳನ್ನು ಸ್ಪಷ್ಟೀಕರಿಸಿ ಚಿಂತನೆಯನ್ನು ಮುಂದುವರಿಸಿಕೊಂಡು ಹೋಗುವುದು.

ಚಿತ್ರಾತ್ಮಕ – ವಾಸ್ತವಿಕತೆಯನ್ನು ಬಿಂಬಿಸುವ ರೇಖಾಕೃತಿ, ಆಲೇಖ (graph), ಚಿತ್ರ ಮುಂತಾದ ದೃಷ್ಟಿಸಹಾಯಕಗಳ ನೆರವಿನಿಂದ ಸಂಕೀರ್ಣ ಭಾವನೆಗಳಿಗೆ ಮೂರ್ತ ರೂಪ ಕೊಡುವುದು.

ಆದ್ದರಿಂದ ವಿಜ್ಞಾನದ ಭಾವನೆಗಳನ್ನು ವಾಕ್ಯ ಮತ್ತು ಪ್ರತೀಕಗಳಿಂದ ನಿರೂಪಿಸಬಲ್ಲೆವು, ಚಿತ್ರ ಮತ್ತು ಆಲೇಖಗಳಿಂದ ಸ್ಪಷ್ಟೀಕರಿಸಬಲ್ಲೆವು. ಹೀಗೆ ವಿಕಸಿಸಿರುವ ವಿಜ್ಞಾನದ ಭಾಷೆಯಲ್ಲಿ ನಾವು ಗಮನಿಸುವ ಮುಖ್ಯ ಲಕ್ಷಣಗಳಿವು (ಇಂಗ್ಲಿಷಿನಲ್ಲಿರುವ ಉತ್ಕೃಷ್ಟ ವಿಜ್ಞಾನ ಗ್ರಂಥಗಳನ್ನು ಪರಿಶೀಲಿಸಬಹುದು):

ಪಾರಿಭಾಷಿಕ ಪದಗಳ (technical terms) ಖಚಿತ ಅರ್ಥನಿರೂಪಣೆ

ಪ್ರತೀಕಗಳೂ ಚಿಹ್ನೆಗಳೂ ಸೂಚಿಸುವ ಭಾವನೆಗಳ ವಿವರಣೆ

ಆದ್ಯುಕ್ತಿಗಳ (axioms) ಹಾಗೂ ಅಭ್ಯುಪಗತಗಳ (assumptions) ಸ್ಪಷ್ಟೀಕರಣ

ತಾರ್ಕಿಕ ಸಾಮಂಜಸ್ಯ

ಸಾಹಿತ್ಯ ಸೌಂದರ್ಯ

ವಿಜ್ಞಾನದ ಭಾಷೆಯಲ್ಲಿ ಇಂಥ ಜಟಿಲ ಬಂಧ ಹಾಗೂ ಆಂತರಿಕ ಸಂಬಂಧ ಇರುವುದರಿಂದಲೇ ಅದು ನಿಸರ್ಗದ ವಿವಿಧ ಸಂಕೀರ್ಣ ವಿದ್ಯಮಾನಗಳನ್ನು ಮಿತಭಾಷೆಯಲ್ಲಿ ತರ್ಕಬದ್ಧವಾಗಿಯೂ ಸಮರ್ಥವಾಗಿಯೂ ಸುಂದರವಾಗಿಯೂ ವಿವರಿಸಬಲ್ಲ ಮಾಧ್ಯಮವಾಗಿದೆ. ಸಹಜವಾಗಿ ಇದು ಬಿಗಿ. ಎಂದೇ ಇದರ ಓದುಗನಲ್ಲಿ ವಿಶೇಷ ಏಕಾಗ್ರತೆ ಮತ್ತು ಶಿಸ್ತು ಅತ್ಯಗತ್ಯ.

ನ್ಯೂಟನ್ನನ ಕಾಲದಲ್ಲಿ (1642–1727) ಇನ್ನೂ ಜಟ್ಕಾವಾಲಾಗಳ ಹಲ್ಕಾ ಭಾಷೆ ಆಗಿದ್ದ ಇಂಗ್ಲಿಷ್ (ಹಾಗೆಂದು ಲ್ಯಾಟಿನ್ ಹಾಗೂ ಗ್ರೀಕ್ ದೇವಭಾಷಾಪಂಡಿತ

ಇಂಗ್ಲಿಷ್ ಕುಲೀನರು ಭಾವಿಸಿದ್ದರು) ಇಂದು ಪ್ರಪಂಚದ ಸರ್ವ ಶ್ರೇಷ್ಠ ವಿಜ್ಞಾನ ಭಾಷೆಗಳ ಪೈಕಿ ಒಂದಾಗಿರುವುದರ (ನಮ್ಮ ದೃಷ್ಟಿಯಿಂದ ವಿಜ್ಞಾನದ ಭಾಷೆ ಎಂದರೆ ಇಂಗ್ಲಿಷ್ ಒಂದೇ) ಕಾರಣಗಳು ಮುಖ್ಯವಾಗಿ ಎರಡು : ಒಂದು, ಆ ಭಾಷೆಯ ಹವೆಯಲ್ಲಿ ಮಹೋನ್ನತ ವಿಜ್ಞಾನ ಸಂಶೋಧನೆಗಳು ಸಂಭವಿಸಿದುವು. ಹೀಗಾಗಿ ಕ್ರಮೇಣ ಇಂಗ್ಲಿಷಿಗೆ ಇವುಗಳ ಅಭಿವ್ಯಕ್ತಿಮಾಧ್ಯಮವಾಗಿ ವಿಕಸಿಸುವ ಸುಯೋಗ ಪ್ರಾಪ್ತವಾಯಿತು. ಎರಡು, ರಾಜಕೀಯವಾಗಿ ಗ್ರೇಟ್ ಬ್ರಿಟನ್ (ಭಾಷೆ ಇಂಗ್ಲಿಷ್) ಪ್ರಪಂಚಾದ್ಯಂತ ವರ್ಚಸ್ವೀ ಸ್ಥಾನವನ್ನು ಗಿಟ್ಟಿಸಿತ್ತು.

ಇಂಥ ಒಂದು ಭಾಷೆಯಲ್ಲಿ ಪಾರಿಭಾಷಿಕ ಪದಗಳ ಹಾಗೂ ಪದಗುಚ್ಛಗಳ ಸುತ್ತ ವಿಶಿಷ್ಟ ಭಾವನೆಗಳು ಕ್ರಮೇಣ ಹೆಪ್ಪುಗಟ್ಟಿ ಅವನ್ನು ಅಂಕಿತನಾಮಗಳ ಅಂತಸ್ತಿಗೆ ಏರಿಸಿಬಿಡುತ್ತವೆ. ಕೆಲವು ಸರಳ ಉದಾಹರಣೆಗಳನ್ನು ನೋಡಿ :

force, energy, power ; speed, momentum, velocity ; turning, rotation, revolution

ಈ ಒಂದೊಂದು ಗುಂಪಿನಲ್ಲಿರುವ ಪದಗಳನ್ನು ಸಾಹಿತ್ಯ ಭಾಷೆಯಲ್ಲಿ ಪರ್ಯಾಯಪದಗಳಾಗಿ ಬಳಸಿದರೆ ಒಟ್ಟರ್ಥಕ್ಕೆ ಭಂಗ ಬರದು. ವಿಜ್ಞಾನ ಭಾಷೆಯಲ್ಲಿ ಹಾಗಲ್ಲ — ಅನರ್ಥವಾದೀತು. ಉದಾಹರಣೆಗೆ speed ಎಂದರೆ ಚಲನದರ. ಇದೊಂದು ಪರಿಮಾಣ (magnitude) ಮಾತ್ರ. ಇದಕ್ಕೆ ದಿಶೆ (direction) ಇಲ್ಲ. momentum ಎಂದರೆ ರಾಶಿ (mass) ಹಾಗೂ ವೇಗ (velocity) ಇವುಗಳ ಗುಣಲಬ್ಧ. ಇದಕ್ಕೆ ಪರಿಮಾಣವಿದೆ, ದಿಶೆ ಇದೆ. ದಿಶಾಸಹಿತವಾದ ಜವವೇ ವೇಗ. ಇದೊಂದು ಸದಿಶ (vector).

ಇಂಗ್ಲಿಷಿನಲ್ಲಿ ವಿಜ್ಞಾನವನ್ನು ಅಭ್ಯಸಿಸಿದವರು, ತಿಳಿದೊ ತಿಳಿಯದೆಯೊ, ಪಾರಿಭಾಷಿಕ ಪದಗಳನ್ನು ಸರಿಯಾಗಿಯೇ ಬಳಸುತ್ತಾರೆ, ನಾವು ನಮ್ಮ ಅಂಕಿತನಾಮಗಳನ್ನು ಸರಿಯಾಗಿ ಬಳಸುವಂತೆ. ಇದರಲ್ಲಿ ಅಸಹಜತೆ ಏನೂ ಎದ್ದು ಕಾಣುವುದಿಲ್ಲ. ಏಕೆಂದರೆ ವಿಜ್ಞಾನದ ಅಭಿವರ್ಧನೆಯೂ ವಿಜ್ಞಾನದ ಭಾಷೆಯಾಗಿ ಇಂಗ್ಲಿಷಿನ ಅಭಿವರ್ಧನೆಯೂ ಕ್ರಮಶಃ ವಿಕಸಿಸಿವೆ.

ವಿಜ್ಞಾನಭಾಷೆಯಾಗಿ ಕನ್ನಡ

ಆಧುನಿಕ ವಿಜ್ಞಾನದ ಭಾಷೆಯಾಗಿ ಕನ್ನಡ — ಅಷ್ಟೇಕೆ ಯಾವುದೇ ಭಾರತೀಯ ಭಾಷೆ ಕೂಡ — ವಿಕಾಸಗೊಂಡಿಲ್ಲ ಎಂಬುದು ಕಂಡಂತೆಯೇ ಇದೆ. ಕರ್ನಾಟಕದಲ್ಲಿ ಇಂದು 'ಕುಲೀನ'ರ ದೃಷ್ಟಿಯಿಂದ ಕನ್ನಡ 'ಹಲ್ಕಾ' ಭಾಷೆ, ಅಡುಗೆಮನೆಯಿಂದ (ಅಥವಾ ಕಿಚ್ಚನ್ನಿನಿಂದ) ಹೊರಗೆ ಬರಲು ಯೋಗ್ಯವಾದದ್ದಲ್ಲ; ಇಂಗ್ಲಿಷ್ ಆದರೊ 'ದೇವಭಾಷೆ', ಸಾರ್ವತ್ರಿಕ ಮನ್ನಣೆ ಪಡೆಯಲು ಅರ್ಹವಾದದ್ದು.

ಕನ್ನಡಿಗರು ಕನ್ನಡದಲ್ಲಿ ವಿಜ್ಞಾನವನ್ನು ಯೋಚಿಸದೆ ಇದ್ದರೆ, ಕನ್ನಡದಲ್ಲಿ ವಿಜ್ಞಾನವನ್ನು ಬೋಧಿಸದೆ ಇದ್ದರೆ, ಕನ್ನಡದಲ್ಲಿ ವಿಜ್ಞಾನವನ್ನು ಓದದೆ ಇದ್ದರೆ, ಕನ್ನಡದಲ್ಲಿ

ವಿಜ್ಞಾನದ ಸಮಸ್ತ ಚಟುವಟಿಕೆಗಳನ್ನೂ ಎಸಗದೆ ಇದ್ದರೆ ಕನ್ನಡ ಎಂದೂ ವಿಜ್ಞಾನದ ಭಾಷೆಯಾಗಿ ಬಡ್ತಿ ಪಡೆಯಲಾರದು. ಸದ್ಯದ ಪರಿಸ್ಥಿತಿ ಹೇಗಿದೆ? ಕನ್ನಡ ವ್ಯವಸ್ಥಿತವಾಗಿ ವಿಜ್ಞಾನದ ಭಾಷೆಯಾಗಿ ಅಭಿವರ್ಧನೆ ಆಗಿರುವಂತೆ ತೋರುವುದಿಲ್ಲ. ಇಂಥ ಕನ್ನಡಕ್ಕೆ — ಆಧುನಿಕ ವಿಜ್ಞಾನದ ಅಭಿವ್ಯಕ್ತಿಮಾಧ್ಯಮವಾಗಿ ಸಹಜವಿಕಾಸ ಕ್ರಮದಲ್ಲಿ ರೂಪುಗೊಂಡಿರದ ಕನ್ನಡಕ್ಕೆ — ಇಂಗ್ಲಿಷಿನಿಂದ ವಿಜ್ಞಾನವಾಙ್ಮಯವನ್ನು ಆಮದು ಮಾಡುವಾಗ (ಅಂದರೆ ಭಾಷಾಂತರಿಸುವಾಗ) ಉದ್ಭವಿಸುವ ಸಮಸ್ಯೆಗಳಿಗೆ ಮುಖ್ಯತಃ ಎರಡು ಮುಖಗಳಿವೆ: ವ್ಯಕ್ತಿಮೂಲ, ಕೃತಿಮೂಲ.

ವ್ಯಕ್ತಿಮೂಲ ಸಮಸ್ಯೆಗಳು

ನಮ್ಮ ಅನೇಕ 'ವಿದ್ವಾಂಸರು' ಎಷ್ಟರಮಟ್ಟಿಗೆ ಇಂಗ್ಲಿಷ್ ಸಂಮೋಹನಾಸ್ತ್ರದಿಂದ ಸ್ವಂತತ್ವವನ್ನು ಕಳೆದುಕೊಂಡುಬಿಟ್ಟಿದ್ದಾರೆ ಎಂಬುದನ್ನು ಗಮನಿಸುವಾಗ ಖೇದವಾಗುತ್ತದೆ. ಇಂಥವರಿಂದ ದೇಶಕ್ಕೆ ಎರಡು ಬಗೆಯ ನಷ್ಟ ಉಂಟು: ಇವರ 'ವಿದ್ವತ್ತು' ಇಂಗ್ಲಿಷ್ ಮೂಲಕ ಹೊರಲೋಕವನ್ನೆಂದೂ ಸಂಪರ್ಕಿಸುವುದಿಲ್ಲ, ಆ ಭಾಷೆಯಲ್ಲಿ ಬರೆದಿರುವ ಹಾಗೂ ಬರೆಯಬಲ್ಲ ಪ್ರಪಂಚದ ಘಟಾನುಘಟಿಗಳ ಮುಂದೆ ಇವರಿಗೆ ಯಾವ ಸ್ಥಾನವೂ ದೊರೆಯದು; ಕನ್ನಡದಲ್ಲಿ ಬರೆಯಲು ಯಾ ಬೋಧಿಸಲು ಇವರಿಗೆ ಬರದು. ಏಕೆಂದರೆ ಈ ದಿಸೆಯಲ್ಲಿ ಇವರು ಏನೂ ಕೃಷಿ ಮಾಡಿಲ್ಲ (ಮಾಡುವ ಮನಸ್ಸೂ ಇಲ್ಲ).

ಈ ಖೋಟಾ ವಿದ್ವಾಂಸರು ಕನ್ನಡದಲ್ಲಿ ಪ್ರಕಟವಾಗುವ ಯಾವುದೇ ಭಾಷಾಂತರವನ್ನು (ಇಲ್ಲವೇ ಸ್ವತಂತ್ರ ಕೃತಿಯನ್ನು) ಕುರಿತಂತೆ ಪೂರ್ವಾಗ್ರಹಪೀಡಿತರಾಗಿ "ಇದು ವಿಜ್ಞಾನದ ಕೊಲೆ. ಅರ್ಥವಾಗುವುದಿಲ್ಲ. ಬರವಣಿಗೆ ಸರಳ, ಸುಂದರ, ಆಕರ್ಷಕವಾಗಿರದಿದ್ದರೆ ಅದರ ಪ್ರಯೋಜನವೇನು?" ಎಂಬ ಸಾರ್ವತ್ರಿಕ ಘೋಷಣೆ ತಳೆಯುತ್ತಾರೆ. ಉನ್ನತ ಸ್ಥಾನಗಳನ್ನು 'ಅಲಂಕರಿಸಿರುವ' ಇಂಥ ಶೂನ್ಯವಾದಿಗಳಿಂದ ಕನ್ನಡಕ್ಕೆ ಆಗಿರುವ ಹಾಗೂ ಆಗುತ್ತಿರುವ ಹಾನಿ ಅಪಾರ.

ಸ್ವತಃ ವಿಜ್ಞಾನಲೇಖಕರಾದವರೊಬ್ಬರಿಗೆ ರಿಚರ್ಡ್ ಕೂರಾಂಟನ (ಈತ ಪ್ರಸಿದ್ಧ ಗಣಿತವಿದ) ಬರೆಹವೊಂದರ ಕನ್ನಡ ಭಾಷಾಂತರವನ್ನು ಒಪ್ಪಿಸಲಾಯಿತು. ಅದರ ಆಯ್ದ ಭಾಗ ನೋಡಿ :

> ನಿಗಮನ ಹೇಗೆ ಅಂತರ್ಬೋಧೆಯಿಂದ ಪರಿಪುಷ್ಟಿಗೊಂಡಿರಬೇಕೋ ಹಾಗೆ ಕ್ರಮಾಗತ ಸಾರ್ವತ್ರೀಕರಣ ಮಾಡಬೇಕೆಂಬ ತೀವ್ರಾಕಾಂಕ್ಷೆ ವರ್ಣವೈವಿಧ್ಯಯುತ ವಿವರವನ್ನು ಕುರಿತ ಗೌರವ ಮತ್ತು ಪ್ರೀತಿಯಿಂದ ಪದಗೊಂಡಿರಬೇಕು ಮತ್ತು ಸಂತುಲಿತವಾಗಿರಬೇಕು. ಬಿಡಿ ಸಮಸ್ಯೆಯೊಂದನ್ನು ಉನ್ನತ ಸಾರ್ವತ್ರಿಕ ಸಿದ್ಧಾಂತಗಳ ವಿಶೇಷ ನಿದರ್ಶನವೆಂಬ ಕೀಳುದರ್ಜೆಗೆ ತಳ್ಳುವುದು ಸಲ್ಲ.

ತಿರಸ್ಕಾರ ಧೋರಣೆಯಿಂದ ಈ ಪರಿಚ್ಛೇದದ ಮೇಲೆ ಕಣ್ಣು ಹಾಯಿಸಿದ ಶ್ರೀಯುತರು "ಒಂದು ಸಾಲೂ ಅರ್ಥವಾಗುವುದಿಲ್ಲ. Communication fails" ಎಂದು ಇಂಗ್ಲಿಷಿನಲ್ಲಿ ಅಪ್ಪಣೆ ಕೊಡಿಸಿದರು. ಆಗ ಅವರಿಗೆ ಇದೇ ಬರಹದ ಇಂಗ್ಲಿಷ್ ಮೂಲದ ಪೂರ್ಣ ಪಾಠವನ್ನು ಒಪ್ಪಿಸಲಾಯಿತು. ಅದರ ಸಂವಾದೀ ಭಾಗ ನೋಡಿ :

Just as deduction should be supplemented by intuition, so the impulse to progressive generalization must be tempered and balanced by respect and love for colourful detail. The individual problem should not be degraded to the rank of special illustration of lofty general theories.

ಅವರ ಪ್ರತಿಕ್ರಿಯೆ ಅರ್ಥಹೀನ ಮೌನ ಮಾತ್ರ.

ನನ್ನ ಅಂಬೋಣವಿದು: ಇಂಗ್ಲಿಷಿನಲ್ಲಿರುವ ಎಲ್ಲ ವಾಙ್ಮಯವೂ ಇಂಗ್ಲಿಷ್ ಮಾತೃಭಾಷೆ ಆಗಿರುವ ಎಲ್ಲರಿಗೂ ಅರ್ಥವಾಗದು, ಅರ್ಥವಾಗಬೇಕಾಗಿಯೂ ಇಲ್ಲ. ಇದನ್ನು ಸುಲಭವಾಗಿ ಅನುಮೋದಿಸುವ ನಮ್ಮ 'ವಿದ್ವಾಂಸರು' ಕನ್ನಡಕ್ಕಾಗುವಾಗ (ಇವರು ಕನ್ನಡಿಗರೆಂಬುದನ್ನು ಮರೆಯಬಾರದು) ತದ್ವಿರುದ್ಧ ನಿಲವನ್ನು ತಳೆಯುತ್ತಾರೆ. ಕನ್ನಡದಲ್ಲಿರುವ ಎಲ್ಲ ವಿಜ್ಞಾನ ವಾಙ್ಮಯವೂ ಕನ್ನಡ ಮಾತೃಭಾಷೆಯಾಗಿರುವ ಎಲ್ಲರಿಗೂ ಅರ್ಥವಾಗಬೇಕು ಎಂದು ವಾದಿಸುತ್ತಾರೆ, "ಇದು ನನಗೆ ತಿಳಿಯುವುದಿಲ್ಲ, ಆದ್ದರಿಂದ ಗೋಟಾಳೆ" ಎಂದು ಸಾಧಿಸುತ್ತಾರೆ ! ಉಚ್ಚಸ್ಥಾನಗಳಲ್ಲಿ ಇಂಥ ಅವೈಜ್ಞಾನಿಕ ನಿಲವು ಇರುವುದು ಕನ್ನಡ ವಿಜ್ಞಾನ ವಾಙ್ಮಯ ಎದುರಿಸಬೇಕಾಗಿರುವ ಬಲು ದೊಡ್ಡ ವ್ಯಕ್ತಿಮೂಲ ಸಮಸ್ಯೆ. ತಿಳಿಯದಿದ್ದರೂ ತಿಳಿದಿದೆ ಎಂದು ತಿಳಿದಿರುವ ಇಂಥವರು ಖಂಡಿತ ಅಪಾಯಕಾರಿಗಳು.

ಇನ್ನೊಂದು ವ್ಯಕ್ತಿಮೂಲ ಸಮಸ್ಯೆಯನ್ನು ತಿಳಿಯುವ ಮೊದಲು ಈ ಮುಂದಿನ ಎರಡು ಉದಾಹರಣೆಗಳನ್ನು ಎಚ್ಚರಿಕೆಯಿಂದ ಗಮನಿಸುವುದು ಅವಶ್ಯ. (ಈ ಲೇಖನದಲ್ಲಿ ಉಲ್ಲೇಖಿಸಿರುವ ಎಲ್ಲ ಉದಾಹರಣೆಗಳನ್ನೂ ವಾಸ್ತವಿಕ ಲೇಖನ ಇಲ್ಲವೆ ಪುಸ್ತಕಗಳಿಂದ ಆಯಲಾಗಿದೆ.)

ಮೂಲ : Acid solutions turn blue litmus red. There are, however, a number of solutions which turn red litmus blue and which neutralize acids. These are the alkalis. There are four principal ones, of which ammonium hydroxide, commonly called 'house hold' ammonia, is probably the best known. The others are sodium hydroxide, potassium hydroxide and calcium hydroxide. Substances that are able to neutralize acids are known as bases. The alkalis are not the only bases : they are merely the ones which will dissolve in water to give a solution. The other bases are the

oxides and the (insoluble) hydroxide of metals. When a base neutralizes an acid it produces a salt and water only. This is how a chemist defines a base.

ಭಾಷಾಂತರ ೧ : ಆಮ್ಲ ದ್ರಾವಣಗಳು ನೀಲಿ ಲಿಟ್ಮಸನ್ನು ಕೆಂಪು ಬಣ್ಣಕ್ಕೆ ತಿರುಗಿಸುತ್ತವೆ. ಆದರೆ ಕೆಂಪು ಲಿಟ್ಮಸನ್ನು ನೀಲಿಬಣ್ಣಕ್ಕೆ ತಿರುಗಿಸುವ ಮತ್ತು ಆಮ್ಲಗಳನ್ನು ತಟಸ್ಥಗೊಳಿಸುವ ಅನೇಕ ದ್ರಾವಣಗಳಿವೆ. ಇವೇ ಕ್ಷಾರಗಳು. ನಾಲ್ಕು ಮುಖ್ಯ ಕ್ಷಾರಗಳಿವೆ. ಅವುಗಳಲ್ಲಿ ಸಾಮಾನ್ಯವಾಗಿ 'ಮನೆ ಬಳಕೆಯ ಅಮೋನಿಯಾ' ಎಂದು ಕರೆಯಲ್ಪಡುವ ಅಮೋನಿಯಮ್ ಹೈಡಾಕ್ಸೈಡ್ ಬಹುಶಃ ಎಲ್ಲವಕ್ಕಿಂತ ಚೆನ್ನಾಗಿ ಪರಿಚಿತವಾಗಿರುವುದು. ಸೋಡಿಯಮ್ ಹೈಡ್ರಾಕ್ಸೈಡ್, ಪೊಟ್ಯಾಸಿಯಮ್ ಹೈಡ್ರಾಕ್ಸೈಡ್ ಮತ್ತು ಕ್ಯಾಲ್ಸಿಯಮ್ ಹೈಡ್ರಾಕ್ಸೈಡ್‌ಗಳು ಇತರ ಮೂರು ಕ್ಷಾರಗಳು. ಆಮ್ಲಗಳನ್ನು ತಟಸ್ಥಗೊಳಿಸುವ ವಸ್ತುಗಳಿಗೆ ಪ್ರತ್ಯಾಮ್ಲಗಳೆಂದು ಹೆಸರು. ಪ್ರತ್ಯಾಮ್ಲಗಳೆಂದರೆ ಕ್ಷಾರಗಳು ಮಾತ್ರವಲ್ಲ. ನೀರಿನಲ್ಲಿ ಕರಗಿ ದ್ರಾವಣವನ್ನು ಕೊಡಬಲ್ಲ ಪ್ರತ್ಯಾಮ್ಲಗಳನ್ನು ಮಾತ್ರ ಕ್ಷಾರಗಳೆನ್ನುತ್ತಾರೆ. ಇತರ ಪ್ರತ್ಯಾಮ್ಲಗಳೆಂದರೆ ಲೋಹಗಳ ಆಕ್ಸೈಡುಗಳು ಮತ್ತು (ಕರಗದ) ಹೈಡ್ರಾಕ್ಸೈಡುಗಳು. ಪ್ರತ್ಯಾಮ್ಲವು ಆಮ್ಲವನ್ನು ತಟಸ್ಥಗೊಳಿಸಿದಾಗ ಒಂದು ಲವಣ ಮತ್ತು ನೀರು ಮಾತ್ರ ಉತ್ಪತ್ತಿಯಾಗುತ್ತವೆ. ರಸಾಯನಶಾಸ್ತ್ರಜ್ಞರು 'ಪ್ರತ್ಯಾಮ್ಲ' ಎಂಬ ಪದಕ್ಕೆ ವ್ಯಾಖ್ಯೆ ನೀಡುವುದು ಹೀಗೆ.

ಭಾಷಾಂತರ ೨ : ಆಮ್ಲ ದ್ರಾವಣಗಳು ನೀಲಿ ಲಿಟ್ಮಸನ್ನು ಕೆಂಬಣ್ಣಕ್ಕೆ ತಿರುಗಿಸುತ್ತವೆ. ಕೆಂಪು ಲಿಟ್ಮಸನ್ನು ನೀಲಿ ಬಣ್ಣಕ್ಕೆ ತಿರುಗಿಸುವ ಮತ್ತು ಆಮ್ಲಗಳನ್ನು ತಟಸ್ಥೀಕರಿಸುವ ಹಲವಾರು ದ್ರಾವಣಗಳಿವೆ ಎಂದರೆ ನಿಮಗೆ ಆಶ್ಚರ್ಯವಾದೀತು. ಇವು ಕ್ಷಾರಗಳು. ನಾಲ್ಕು ಪ್ರಧಾನ ಕ್ಷಾರಗಳಿವೆ. ಇವುಗಳ ಪೈಕಿ ಅತ್ಯಂತ ಸುಪರಿಚಿತವಾದದ್ದು ಅಮೋನಿಯಮ್ ಹೈಡ್ರಾಕ್ಸೈಡ್— ಗೃಹೋಪಯೋಗೀ ಅಮೋನಿಯಾ ಎಂದು ಇದು ಪ್ರಸಿದ್ಧವಾಗಿದೆ. ಸೋಡಿಯಮ್ ಹೈಡ್ರಾಕ್ಸೈಡ್, ಪೊಟ್ಯಾಸಿಯಮ್ ಹೈಡ್ರಾಕ್ಸೈಡ್ ಮತ್ತು ಕ್ಯಾಲ್ಸಿಯಮ್ ಹೈಡ್ರಾಕ್ಸೈಡ್ ಇತರ ಕ್ಷಾರಗಳು. ಆಮ್ಲಗಳನ್ನು ತಟಸ್ಥೀಕರಿಸಬಲ್ಲ ಪದಾರ್ಥಗಳಿಗೆ ವ್ಯಾಪಕವಾಗಿ ಪ್ರತ್ಯಾಮ್ಲಗಳೆಂದು ಹೆಸರು. ಕ್ಷಾರಗಳು ಮಾತ್ರವೇ ಪ್ರತ್ಯಾಮ್ಲಗಳಲ್ಲ — ಇವು ನೀರಿನಲ್ಲಿ ಲೀನವಾಗಿ ದ್ರಾವಣ ಕೊಡಬಲ್ಲ ಪ್ರತ್ಯಾಮ್ಲಗಳು, ಅಷ್ಟೆ. ಇತರ ಪ್ರತ್ಯಾಮ್ಲಗಳೆಂದರೆ ಲೋಹಗಳ ಆಕ್ಸೈಡುಗಳು ಹಾಗೂ (ಲೀನವಾಗದ) ಹೈಡ್ರಾಕ್ಸೈಡುಗಳು. ಪ್ರತ್ಯಾಮ್ಲ ಆಮ್ಲವನ್ನು ತಟಸ್ಥೀಕರಿಸಿದಾಗ ಲವಣ ಮತ್ತು ನೀರು ಮಾತ್ರ ಉತ್ಪತ್ತಿ ಆಗುತ್ತವೆ — ರಸಾಯನವಿಜ್ಞಾನಿಗಳು ಪ್ರತ್ಯಾಮ್ಲವನ್ನು ವ್ಯಾಖ್ಯಿಸುವುದು ಹೀಗೆ.

ಟೀಕೆ : ವಿಜ್ಞಾನ ಪರಿಕಲ್ಪನೆಯ ಸೂಕ್ಷ್ಮತಂತುಗಳನ್ನು ಗ್ರಹಿಸದೆ ಬೇಕಾಬಿಟ್ಟಿಯಾಗಿ ಮಾಡಿದ ಭಾಷಾಂತರ ಮೊದಲನೆಯದು. ಅದರ ಭಾಷೆಯೂ ಜಾಳುಜಾಳಾಗಿದೆ. ಮೂಲಕ್ಕೆ ಅತ್ಯಂತ ಸಮೀಪವಾಗಿದ್ದು ಕನ್ನಡದ ಜಾಯಮಾನವನ್ನೂ ಪಾರಿಭಾಷಿಕ ಪದಗಳ ಬಳಕೆಯಲ್ಲಿ ನಿಷ್ಕೃಷ್ಟತೆಯನ್ನೂ ಕಾಪಾಡಿಕೊಂಡಿರುವ ಭಾಷಾಂತರ ಎರಡನೆಯದು. ಮುಖ್ಯವಾಗಿ, ಭಾಷಾಂತರ ೧ರಲ್ಲಿನ ಎರಡನೆಯ ವಾಕ್ಯದ "ಆದರೆ"ಯ ಔಚಿತ್ಯವನ್ನು ಗಮನಿಸಿ. ಈ ತೊಂದರೆಯನ್ನು ಭಾಷಾಂತರ ೨ರಲ್ಲಿ ನಿವಾರಿಸಲಾಗಿದೆ. ಅಲ್ಲದೆ, ಕರಗು melt, ಲೀನವಾಗು dissolve — ಇವು ಎರಡು ಬೇರೆ ಬೇರೆ ರಾಸಾಯನಿಕ ಕ್ರಿಯೆಗಳು.

ಮೂಲ : It was the existence of electrons, and of subatomic particles generally, that was to bring a new degree of order into the table of elements.

ಭಾಷಾಂತರ ೧ : ಎಲೆಕ್ಟ್ರಾನುಗಳ — ಸಾರ್ವತ್ರಿಕವಾಗಿ ಉಪಪರಮಾಣವಿಕ ಕಣಗಳ — ಅಸ್ತಿತ್ವದ ಕಾರಣವಾಗಿ ಧಾತುಕೋಷ್ಟಕಕ್ಕೆ ಕ್ರಮಬದ್ಧತೆಯ ಹೊಸಮಟ್ಟ ಒದಗಿಬಂತು.

ಭಾಷಾಂತರ ೨ : ಎಲೆಕ್ಟ್ರಾನುಗಳೂ, ವ್ಯಾಪಕವಾಗಿ, ಉಪಪರಮಾಣ್ವಿಕ ಕಣಗಳೂ ಉಂಟೆಂದು ತಿಳಿದುಬಂದದ್ದರಿಂದ ಮೂಲವಸ್ತುಗಳ ಸಾರಣಿಗೆ ಹೊಸ ದರ್ಜೆಯ ವ್ಯವಸ್ಥೆ ಬಂದಿತು.

ಟೀಕೆ : ಭಾಷಾಂತರ ೨ ಅವಾಂತರವಾಗಿವೆ ಎಂದು ವಿವರಿಸಬೇಕಾಗಿಲ್ಲ. ಪಾರಿಭಾಷಿಕ ಪದಗಳ ಬಳಕೆಯಲ್ಲಿನ ಗೊಂದಲವೊಂದೇ ಇದರ ಕಾರಣ ಅಲ್ಲ. ಈ ಭಾಷಾಂತರಕಾರನಿಗೆ ಮೂಲ ನಿರೂಪಣೆಯ ಹಿನ್ನೆಲೆಯಲ್ಲಿರುವ ವಿಜ್ಞಾನ ಪರಿಕಲ್ಪನೆಗಳ ಪರಿಚಯವಿಲ್ಲದ್ದರಿಂದ ಭಾಷಾಂತರ ವಿಕಾರರೂಪಿ ಆಗಿದೆ.

ಈಗ ನೀವೇ ಈ ಮುಂದಿನ ಹೇಳಿಕೆಯನ್ನು ಮಂಡಿಸಬಲ್ಲಿರಿ : ಇಂಗ್ಲಿಷಿನಿಂದ ಕನ್ನಡಕ್ಕೆ ವಿಜ್ಞಾನ ವಾಙ್ಮಯವನ್ನು ಭಾಷಾಂತರಿಸುವುದೆಂದರೆ ಪರಭಾಷೆಯಲ್ಲಿ ಇರುವ ವಿಜ್ಞಾನದ ಸಾರ್ವತ್ರಿಕ ಪರಿಕಲ್ಪನೆಯನ್ನು ಸ್ವಭಾಷೆಯಲ್ಲಿ ನಿರೂಪಿಸುವುದು. ನಿದರ್ಶನಾರ್ಥ ಎರಡನೆಯ ಉದಾಹರಣೆಯನ್ನು ಇನ್ನೊಮ್ಮೆ ಪರಿಶೀಲಿಸಿ. ಎಲೆಕ್ಟ್ರಾನುಗಳ, ಅಂತೆಯೇ, ಇತರ ಉಪಪರಮಾಣವಿಕ ಕಣಗಳ, ಧಾತುಕೋಷ್ಟಕದ (ಅಥವಾ ಆವರ್ತಕೋಷ್ಟಕದ) ಏರ್ಪಾಡು — ಇವು ವಿಜ್ಞಾನದ ಸಾರ್ವತ್ರಿಕ ಪರಿಕಲ್ಪನೆಗಳು, ಎಲ್ಲ ಕಾಲಗಳಲ್ಲೂ ಎಲ್ಲ ದೇಶಗಳಲ್ಲೂ ಬದಲಾಗದೆ ಉಳಿಯುವಂಥವು. "ಮೂಲ"ದಲ್ಲಿ ಇವು ಇಂಗ್ಲಿಷ್ ಪೋಷಾಕು ಧರಿಸಿ ವಿಜೃಂಭಿಸಿದರೆ "ಭಾಷಾಂತರ ೧"ರಲ್ಲಿ ಕನ್ನಡದ ಉಡುಗೆ ತೊಟ್ಟು ಮೆರೆಯುತ್ತಿವೆ.

ಆದ್ದರಿಂದ ಭಾಷಾಂತರದ ಪ್ರಮುಖ ಆವಶ್ಯಕತೆಗಳು ಎರಡು : ಒಂದು, ವಿಜ್ಞಾನ ಪರಿಕಲ್ಪನೆಗಳನ್ನು ಅರ್ಥವಿಸಬಲ್ಲಷ್ಟು ವಿಷಯದ ಮೇಲೆ ಪ್ರಭುತ್ವ ; ಎರಡು, ಮೂಲ ಹಾಗೂ ಉದ್ದಿಷ್ಟ ಭಾಷೆಗಳೆರಡರಲ್ಲೂ ಪ್ರಾವೀಣ್ಯ. ವಾಸ್ತವವಾಗಿ ಭಾಷಾಂತರಕಾರ ಉದ್ದಿಷ್ಟ ಭಾಷೆಯಲ್ಲಿ ಒಬ್ಬ ಸೃಜನಾತ್ಮಕ ಲೇಖಕನೇ ಆಗಿರಬೇಕು. ಈ ಅಂಶವನ್ನು ಮುಂದೆ ವಿಶದೀಕರಿಸಿದೆ.

ಈಗ, ಇನ್ನೊಂದು ವ್ಯಕ್ತಿಮೂಲ ಸಮಸ್ಯೆಗೆ ಬರೋಣ. ನಮ್ಮ ಬಹು ಮಂದಿ ಭಾಷಾಂತರಕಾರರಲ್ಲಿ ಮೇಲಿನ ಎರಡು ಪ್ರಮುಖ ಆವಶ್ಯಕತೆಗಳ ಪೈಕಿ ಒಂದಾದರೂ ಗೈರುಹಾಜರಾಗಿರುವುದರಿಂದ ಈ ಸಮಸ್ಯೆ ಉದ್ಭವಿಸುತ್ತದೆ : ವಿಷಯ ಪ್ರಭುತ್ವವಿರುವಾತನಿಗೆ ಉದ್ದಿಷ್ಟ ಭಾಷೆಯಲ್ಲಿ ಕೈಯಾಡಿಸುವ ತಾಕತ್ತಿಲ್ಲ; ಭಾಷಾಪ್ರಭುತ್ವವಿರುವಾತನಿಗೆ ವಿಷಯದ ಬಗೆಗಿನ ತಿಳಿವಳಿಕೆ ಅತ್ಯಲ್ಪ. ಕೆಲವು ಉದಾಹರಣೆಗಳನ್ನು ನೋಡಿ.

ಮೂಲ : The earth rotates round itself and revolves round the sun.

ಭಾಷಾಂತರ ೧ : ಭೂಮಿ ತನ್ನ ಸುತ್ತ ತಿರುಗುತ್ತದೆ ಮತ್ತು ಸೂರ್ಯನ ಸುತ್ತ ಪ್ರದಕ್ಷಿಣೆ ಹಾಕುತ್ತದೆ.

ಭಾಷಾಂತರ ೨ : ಭೂಮಿ ತನ್ನ ಸುತ್ತ ಆವರ್ತಿಸುತ್ತದೆ ಮತ್ತು ಸೂರ್ಯನ ಸುತ್ತ ಪರಿಭ್ರಮಿಸುತ್ತದೆ.

ಟೀಕೆ : ಪ್ರಕೃತ ಸಂದರ್ಭದಲ್ಲಿ rotate (rotation) ಮತ್ತು revolve (revolution) ಎರಡು ವಿಭಿನ್ನ ಭೌತ ಕ್ರಿಯೆಗಳು. ಎಂದೇ ಅವನ್ನು ಪ್ರತಿನಿಧಿಸಲು ಎರಡು ಬೇರೆ ಬೇರೆ ಪದಗಳು ಇರುವುದಾಗಿದೆ. ಯಾವುದೇ ಭಾಷೆ ಸುಸ್ಪಷ್ಟವಾಗಿ ಸರ್ವಾಂಗ ಸುಂದರವಾಗಿ ಅಭಿವರ್ಧಿಸುವ ವಿಧಾನವೂ ಇದೇ. ಭಾಷಾಂತರ ೧ರಲ್ಲಿ 'ತಿರುಗು' ಮತ್ತು 'ಪ್ರದಕ್ಷಿಣೆ ಹಾಕು' ಪ್ರಯೋಗಗಳಿವೆ. ಆದರೆ ವಿಷಯದ ಮೇಲಿನ ಪ್ರಭುತ್ವದಿಂದ ಈ ಭಿನ್ನ ಪ್ರಯೋಗಗಳು ಬಂದಿವೆ ಎನ್ನುವುದಕ್ಕಿಂತಲೂ ಮೂಲದಲ್ಲಿ ಎರಡು ಬೇರೆ ಬೇರೆ ಪದಗಳಿರುವುದರಿಂದ ಭಾಷಾಂತರದಲ್ಲಿಯೂ ಹಾಗೆ ಇರುವುದು ಕ್ಷೇಮ ಎಂಬ ಅಳುಕಿನಿಂದ ಬಂದಿವೆ ಎನ್ನುವುದೇ ಹೆಚ್ಚು ಸಮಂಜಸವಾದದ್ದು. ಅಲ್ಲದೇ, ಸ್ಪಷ್ಟವಾಗಿ, 'ಪ್ರದಕ್ಷಿಣೆಹಾಕು' ಪದ ದೋಷಪೂರ್ಣವಾಗಿದೆ : 'ಪ್ರದಕ್ಷಿಣೆ' ಪದದಲ್ಲಿ ಚಲನದಿಶೆ ಅಧ್ಯಾಹಾರವಾಗಿದೆ. ಇದು ವಾಸ್ತವ ಪರಿಸ್ಥಿತಿಗೆ ವಿರುದ್ಧವಾದದ್ದು. ಭಾಷಾಂತರ ೨ ಈ ಸಂದಿಗ್ಧತೆಯನ್ನು 'ಆವರ್ತಿಸು' (ಆವರ್ತನೆ) ಮತ್ತು 'ಪರಿಭ್ರಮಿಸು' (ಪರಿಭ್ರಮಣೆ) ಪದಗಳ ಬಳಕೆಯಿಂದ ಯಶಸ್ವಿಯಾಗಿ ನಿವಾರಿಸಿದೆ.

ವಿಷಯದ ಮೇಲೆ ಪ್ರಭುತ್ವ ಹೇಗೆ ಅನಿವಾರ್ಯ ಎಂಬುದನ್ನು ಮೇಲಿನ ಉದಾಹರಣೆ ಸ್ಪಷ್ಟಪಡಿಸುತ್ತದೆ.

ಇಂಗ್ಲಿಷ್ ಭಾಷೆಯ ಜ್ಞಾನ ಚೆನ್ನಾಗಿಲ್ಲದಿರುವಾತನಿಂದ ಘಟಿಸುವ ಅಪಚಾರಗಳಿಗೆ ಕೆಲವು ಉದಾಹರಣೆಗಳನ್ನು ನೋಡಿ : Church's intervention in scientific matters ಎಂಬುದು 'ವೈಜ್ಞಾನಿಕ ವಿಚಾರಗಳಲ್ಲಿ ಚರ್ಚ್ ಎಂಬಾತನ ಹಸ್ತಕ್ಷೇಪ' ('ವೈಜ್ಞಾನಿಕ ವಿಚಾರಗಳಲ್ಲಿ ಇಗರ್ಜಿಯ ಹಸ್ತಕ್ಷೇಪ' ಎಂಬುದಕ್ಕೆ ಬದಲಾಗಿ) ಎಂದಾಗುತ್ತದೆ. The role played by the governor in the computer ಎಂಬುದು 'ರಾಜ್ಯಪಾಲರು ಗಣಕದಲ್ಲಿ ಅಭಿನಯಿಸುವ ಪಾತ್ರ' ('ಗಣಕದಲ್ಲಿ ನಿಯಂತ್ರಕದ ಪಾತ್ರ' ಎಂಬುದಕ್ಕೆ ಬದಲಾಗಿ) ಎಂದಾಗುತ್ತದೆ. All summer long Mendel was busy over his beds ಎಂಬುದು 'ಇಡೀ ಬೇಸಗೆ ಕಾಲ ನೀಳಕಾಯದ ಮೆಂಡಲನು ತನ್ನ ಹಾಸಿಗೆಗಳಲ್ಲಿ ಮಗ್ನನಾಗಿದ್ದ' ('ತಾನು ಮಾಡಿದ್ದ ಪಾತಿಗಳನ್ನು ಗಮನಿಸುವುದರಲ್ಲೇ ಮೆಂಡಲ್ ಇಡೀ ಬೇಸಗೆ ಪೂರ್ತಿ ಮಗ್ನನಾಗಿದ್ದ' ಎಂಬುದಕ್ಕೆ ಬದಲಾಗಿ) ಎಂದಾಗುತ್ತದೆ.

ಇನ್ನು ವಿಷಯಪ್ರಭುತ್ವ ಇಲ್ಲದ ಅಪದವೀಧರರಿಂದ ಘಟಿಸಿರುವ ಅಪರಾಧಗಳು ಅಲ್ಲ.

ಭಾಷಾಂತರ ಕ್ರಿಯೆಯನ್ನು ಕುರಿತು ಹೇಳುವುದಾದರೆ ಭಾಷಾಂತರಕಾರನಿಗೆ ಮೂಲ ಭಾಷೆಯಾದ ಇಂಗ್ಲಿಷನ್ನು ಸರಿಯಾಗಿ ಅರ್ಥವಿಸಿ ಆ ಭಾಷೆಯ ನಯ ನವುರುಗಳನ್ನು ಗ್ರಹಿಸಿ ಆನಂದಿಸುವಷ್ಟು ಜ್ಞಾನ ಅತ್ಯವಶ್ಯ. ಆತ ಆ ಭಾಷೆಯಲ್ಲಿ ಸಿದ್ಧ ಲೇಖಕನಾಗಿರ ಬೇಕಾಗಿಲ್ಲ. ಉದ್ದಿಷ್ಟ ಭಾಷೆಯಾದ ಕನ್ನಡಕ್ಕೆ ಬರುವಾಗ ಭಾಷಾಂತರಕಾರನಲ್ಲಿ ಭಾಷಾಸಂಪತ್ತು, ಸೃಜನಾತ್ಮಕ ಸಾಮರ್ಥ್ಯ, ಲೇಖನಕೃಷಿಯಲ್ಲಿ ಖಚಿತ ನಿಲವು ಮುಂತಾದವೆಲ್ಲವೂ ಚೆನ್ನಾಗಿ ಮೇಳೈಸಿಕೊಂಡು ಇರಬೇಕಾದದ್ದು ಅತ್ಯವಶ್ಯ. ಇಲ್ಲ ವಾದರೆ ಆತನ ಭಾಷಾಂತರ ಯಾಂತ್ರಿಕವೂ ನೀರಸವೂ ಆಗಿದ್ದು 'ಹರಕೆ ಒಪ್ಪಿಸುವ' ವಿಧಿ ಆದೀತು ಮಾತ್ರ. ಕನ್ನಡದ ಅಭಿಜಾತ ಹಾಗೂ ನವಜಾತ ಸಾಹಿತ್ಯವನ್ನು ಆಳ ವಾಗಿಯೂ ವ್ಯವಸ್ಥಿತವಾಗಿಯೂ ಅಭ್ಯಸಿಸುವುದರಿಂದ, ಲೇಖನಕೃಷಿಯನ್ನು ಶಿಸ್ತಿನಿಂದ ಮಾಡುವುದರಿಂದ ಮೇಲಾಗಿ ಕನ್ನಡ ಹಾಗೂ ಕನ್ನಡಿಗರ ಬಗ್ಗೆ ನಿಜವಾದ ಒಲವು ತಳೆಯುವುದರಿಂದ ಮಾತ್ರ ಭಾಷಾಂತರಕಾರನಿಗೆ ಆಕರ್ಷಕ ಮತ್ತು ಪಕ್ವ ಶೈಲಿ ಸಿದ್ಧಿಸೀತು. ಕೇವಲ ಡಿಪ್ಲೊಮಾ ಹಾಗೂ ಡಿಗ್ರಿಗಳ ಪರಂಪರೆಯನ್ನು ಗಳಿಸುವುದರಿಂದ ಅಲ್ಲ. ಇದೇನಿದ್ದರೂ ಹಾದಿ ಮಾತ್ರ. ಹಾದಿ ಗುರಿ ಅಲ್ಲ. ಒಂದು ಉದಾಹರಣೆ ನೋಡಿ.

ಮೂಲ : Two molecules of water split to give two molecules of hydrogen gas and one molecule of oxygen gas. This is because two oxygen atoms are needed to make an oxygen molecule. By pairing up and sharing two of each other's electrons both oxygen atoms gain complete outer electron-shells.

ಭಾಷಾಂತರ ೧ : ಎರಡು ನೀರಿನ ಅಣುಗಳು ಒಡೆದು ಎರಡು ಹೈಡ್ರೋಜನ್ ಅನಿಲದ ಅಣುಗಳನ್ನೂ ಒಂದು ಆಕ್ಸಿಜನ್ ಅಣುವನ್ನೂ ಕೊಡುತ್ತವೆ. ಏಕೆಂದರೆ ಒಂದು ಆಕ್ಸಿಜನ್ ಅಣುವಾಗಲು ಎರಡು ಆಕ್ಸಿಜನ್ ಪರಮಾಣುಗಳು ಬೇಕು. ಎರಡು ಆಕ್ಸಿಜನ್ ಪರಮಾಣು ಗಳೂ ಜೊತೆಗೂಡಿ ಎರಡು ಎಲೆಕ್ಟ್ರಾನುಗಳನ್ನು ಸಹಭೋಗಿಸುವುದರಿಂದ ಅವುಗಳ ಹೊರ ಎಲೆಕ್ಟ್ರಾನ್ ಚಿಪ್ಪುಗಳು ಪೂರ್ತಿಯಾಗಿ ತುಂಬಿಕೊಳ್ಳುತ್ತವೆ.

ಭಾಷಾಂತರ ೨ : ನೀರಿನ ಎರಡು ಅಣುಗಳು ಒಡೆದು ಹೈಡ್ರೋಜನ್ ಅನಿಲದ ಎರಡು ಅಣು ಗಳನ್ನೂ ಆಕ್ಸಿಜನ್ ಅನಿಲದ ಒಂದು ಅಣುವನ್ನೂ ಕೊಡುತ್ತವೆ. ಏಕೆಂದರೆ ಆಕ್ಸಿಜನ್ನಿನ ಒಂದು ಅಣುವಾಗಲು ಆಕ್ಸಿಜನ್ನಿನ ಎರಡು ಪರಮಾಣುಗಳು ಬೇಕು. ಆಕ್ಸಿಜನ್ನಿನ ಈ ಎರಡು ಪರಮಾಣುಗಳು ಎರಡು ಎಲೆಕ್ಟ್ರಾನುಗಳನ್ನು ಜಂಟಿಯಾಗಿ ಸಹಭೋಗಿಸುವುದರಿಂದ ಅವುಗಳ ಹೊರ ಎಲೆಕ್ಟ್ರಾನ್ ಚಿಪ್ಪುಗಳು ಪೂರ್ತಿ ತುಂಬಿಕೊಳ್ಳುತ್ತವೆ.

ಟೀಕೆ : ಭಾಷಾಂತರ ೧ರ ಅವಾಂತರ 'ಎರಡು ನೀರಿನ ಅಣು'ಗಳಿಂದಲೇ ತೊಡಗು ತ್ತದೆ. (ಗಂಗಾನದಿಯ ನೀರಿನ ಅಣು ಮತ್ತು ತುಂಗಭದ್ರಾ ನದಿಯ ನೀರಿನ ಅಣು!)

ಇಂಥ ಒಬ್ಬ ಭಾಷಾಂತರಕಾರ ಇಂಗ್ಲಿಷಿನಿಂದ ವಿಜ್ಞಾನದ ಯಾವುದೇ ಸೃಜನಾತ್ಮಕ ವಾಙ್ಮಯವನ್ನು — ಉದಾಹರಣೆಗೆ ಐನ್‌ಸ್ಟೈನರ ಜೀವನಚರಿತ್ರೆ ಹಾಗೂ ದರ್ಶನ — ಕನ್ನಡಕ್ಕೆ ಭಾಷಾಂತರಿಸಿದ್ದಾದರೆ ಆ 'ಜಗತ್ಕೌತುಕ'ವಾದ 'ಸತ್ಕೃತಿ' ದೇವರಿಗೇ ಪ್ರೀತಿ :

ಅವಸ್ರೋಷಣೆಯಿಂದ ಸೊರಗಿ ತೊಗಲುಗೊಂಬೆಯಾದ ಐನ್‌ಸ್ಟೈನರನ್ನು ಇವರಲ್ಲಿ 'ಕಂಡು ಧನ್ಯ'ರಾಗಬಹುದು ಓದುಗರು.

ಸಾರಾಂಶವಿಷ್ಟು : ವಿಷಯದ ಮೇಲೆ ಪ್ರಭುತ್ವ ಇಲ್ಲದವ ಮತ್ತು/ಅಥವಾ ಇಂಗ್ಲಿಷ್ ಭಾಷೆಯ ಖಚಿತ ಜ್ಞಾನ ಹಾಗೂ ಕನ್ನಡ ಭಾಷೆಯಲ್ಲಿ ಪಾಂಡಿತ್ಯಪೂರ್ಣ ಸೃಜನಾತ್ಮಕ ಶೈಲಿ ಇಲ್ಲದವ ವಿಜ್ಞಾನವಾಙ್ಮಯವನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಸಮರ್ಪಕವಾಗಿಯೂ ಆಕರ್ಷಕವಾಗಿಯೂ ಭಾಷಾಂತರಿಸಲಾರ. ಇಂಥ ಒಬ್ಬ ವ್ಯಕ್ತಿ ಈ ಕೆಲಸಕ್ಕೆ ಕೈಹಾಕದಿರುವುದೇ ಲೇಸು.

ಭಾಷಾಂತರದ ಕೃತಿಮೂಲ ಸಮಸ್ಯೆಗಳು ಏನೆಂದು ಪರಿಶೀಲಿಸುವ ಮುನ್ನ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಸಾಮಾನ್ಯವಾಗಿ ಪ್ರಚಲಿತವಾಗಿರುವ ಒಂದು ತಪ್ಪು ಕಲ್ಪನೆಯನ್ನು ತೊಡೆದುಹಾಕುವುದು ಅಗತ್ಯವೆನಿಸುತ್ತದೆ. ಇಂಗ್ಲಿಷಿನಿಂದ ವಿಜ್ಞಾನ ವಾಙ್ಮಯವನ್ನು ಕನ್ನಡಕ್ಕೆ ಭಾಷಾಂತರಿಸುವುದು ಇತರ ಬಗೆಯ ವಾಙ್ಮಯಗಳನ್ನು ಭಾಷಾಂತರಿಸುವುದಕ್ಕಿಂತ ಸುಲಭ ಎಂಬುದೇ ಆ ತಪ್ಪು ಕಲ್ಪನೆ. ಇದು ಸರಿಯೇ ಅಲ್ಲವೇ ಎಂದು ಪರೀಕ್ಷಿಸಲು ನಾನು ಡಿಕನ್ಸ್, ಹ್ಯೂಗೋ ಇವರ ಕಾದಂಬರಿಗಳ ಕೆಲವು ಅಧ್ಯಾಯಗಳನ್ನೂ ಜೀನ್ಸ್, ಗ್ಯಾಮೋ ಇವರ ಜನಪ್ರಿಯ ವಿಜ್ಞಾನ ಗ್ರಂಥಗಳ ಕೆಲವು ಅಧ್ಯಾಯಗಳನ್ನೂ ಕನ್ನಡಕ್ಕೆ ಅನುವಾದಿಸಿ ನೋಡಿದೆ. ಒಂದೊಂದು ಪ್ರಕಾರವಲ್ಲಿ ನಾನು ಎದುರಿಸಿದ ಸಮಸ್ಯೆ ಒಂದೊಂದು. ಆದ್ದರಿಂದ ಇಂಥ ಹೋಲಿಕೆ ಅವೈಜ್ಞಾನಿಕ ಎಂದು ಖಂಡಿತವಾಗಿ ಹೇಳಬಲ್ಲೆ.

ಕೃತಿಮೂಲ ಸಮಸ್ಯೆಗಳು

ನಮಗೊಬ್ಬ ಆದರ್ಶ ಭಾಷಾಂತರಕಾರ ದೊರೆತಿರುವನೆಂದು ಭಾವಿಸೋಣ : ಅಂದರೆ ಆತನಿಗೆ ವಿಷಯದ ಮೇಲೆ ಒಳ್ಳೆಯ ಹಿಡಿತವಿದೆ; ಇಂಗ್ಲಿಷ್ ಭಾಷೆಯನ್ನು ಆತ ಚೆನ್ನಾಗಿ ತಿಳಿದುಕೊಂಡಿದ್ದಾನೆ; ಕನ್ನಡ ಸಾಹಿತ್ಯವನ್ನು ಚೆನ್ನಾಗಿ ಅರಗಿಸಿಕೊಂಡು ಆ ಭಾಷೆಯಲ್ಲಿ ಸೃಜನಾತ್ಮಕ ಲೇಖಕನಾಗಿದ್ದಾನೆ. ಮೇಲಾಗಿ ಆತನಿಗೆ ತಾನು ಹಿಡಿದ ಕಾರ್ಯವನ್ನು ಕಷ್ಟಪಟ್ಟು ಶ್ರದ್ಧೆಯಿಂದ ನಿರ್ವಹಿಸಿ ಅನುವಾದಿತ ಕೃತಿ, ಕನ್ನಡದಲ್ಲಿ ಮೂಲಕೃತಿಯೇ ಮರುಹುಟ್ಟು ಪಡೆದುಬಂದಂತೆ ಇರಬೇಕು ಎಂಬ ಛಲವೂ ಇದೆ ಎಂದು ಭಾವಿಸೋಣ. ಇಂಥ ಸಾಚಾ ಭಾಷಾಂತರಕಾರನಿಗೆ ಎದುರಾಗುವ ಸಮಸ್ಯೆಗಳೇ ಕೃತಿ ಮೂಲ ಸಮಸ್ಯೆಗಳು.

ವಾಸ್ತವವಾಗಿ ಈ ಪ್ರಬಂಧ ಕೃತಿಮೂಲ ಸಮಸ್ಯೆಗಳನ್ನು ಮಾತ್ರ ಚರ್ಚಿಸಬೇಕು. ಆದರೆ ಕನ್ನಡದಲ್ಲಿರುವ ಬಹುತೇಕ ಖೋಟಾ ಭಾಷಾಂತರಗಳನ್ನು ಗಮನಿಸಿಯೂ ಅವುಗಳತ್ತ ದೃಷ್ಟಿಹರಿಸದೇ ಕೇವಲ ಕೃತಿಮೂಲ ಸಮಸ್ಯೆಗಳನ್ನು ಮಾತ್ರ ಎತ್ತಿಕೊಂಡದ್ದಾದರೆ ಇದೊಂದು ಅಮೂರ್ತ ಶೈಕ್ಷಣಿಕ ಕವಾಯತು ಮಾತ್ರ ಆದೀತು ಅಷ್ಟೆ. ಹೀಗಾಗ ಬಾರದು ಎಂಬ ಉದ್ದೇಶದಿಂದ ವ್ಯಕ್ತಿ ಮೂಲ ಸಮಸ್ಯೆಗಳತ್ತ ಗಮನ ಹರಿಸಿದ್ದಾಯಿತು.

I ನಮ್ಮ ಆದರ್ಶ ಭಾಷಾಂತರಕಾರನಿಗೆ ಎದುರಾಗುವ ಮೊದಲ ಸಮಸ್ಯೆ ಪಾರಿಭಾಷಿಕ ಪದಗಳ ಗೊಂದಲ. ಇದು ಏನು ಎಂಬುದರ ಅರಿವಾಗಲು ಈ ಮುಂದಿನ ಉದಾಹರಣೆಗಳನ್ನು ನೋಡಿ :

ಮೂಲ : Columbus **discovered** America.
ಭಾಷಾಂತರ : ಕೊಲಂಬಸ್ ಅಮೆರಿಕವನ್ನು ಕಂಡುಹಿಡಿದ.
ಮೂಲ : Thomas Alva Edison **invented** the phonograph.
ಭಾಷಾಂತರ : ತಾಮಸ್ ಆಲ್ವ ಎಡಿಸನ್ ಫೋನೋಗ್ರಾಫನ್ನು ಕಂಡುಹಿಡಿದ.
ಮೂಲ : **Find** the value of x from the following equation.
ಭಾಷಾಂತರ : ಈ ಮುಂದಿನ ಸಮೀಕರಣದಿಂದ xನ ಬೆಲೆ ಕಂಡುಹಿಡಿಯಿರಿ.
ಮೂಲ : **Calculate** the distance between Mysore and Bangalore.
ಭಾಷಾಂತರ : ಮೈಸೂರು ಮತ್ತು ಬೆಂಗಳೂರು ನಡುವಿನ ದೂರ ಕಂಡುಹಿಡಿಯಿರಿ.

ಟೀಕೆ : 'ಕಂಡುಹಿಡಿ' ಎನ್ನುವ ಪದ ಹೇಗೆ ಇಲ್ಲಿ ಕಿವಿಗೆ ಗುಂಡುಬಡಿವುದೆಂಬುದನ್ನು ಗಮನಿಸಿ. ಇಷ್ಟೇ ಅಲ್ಲ. Discover, invent, find, calculate ಎಂಬವು ನಿರ್ದಿಷ್ಟ ಬಗೆಯ ಕ್ರಿಯೆಗಳನ್ನು ಸೂಚಿಸುವ ಪದಗಳು. ಆದ್ದರಿಂದ ಕನ್ನಡದಲ್ಲಿ ಕೂಡ ಈ ಕ್ರಿಯೆಗಳ ವೈವಿಧ್ಯ ಎದ್ದುಕಾಣುವಂತೆ ಯುಕ್ತ ಪದಗಳನ್ನು ಆಯ್ದು, ಅವು ಇಲ್ಲವಾದಲ್ಲಿ ಭಾಷಾಮರ್ಯಾದೆಗೆ ಭಂಗ ಬರದಂತೆ ಯೋಗ್ಯ ಪದಗಳನ್ನು ಸೃಷ್ಟಿಸಿ, ಬಳಸಬೇಕು. ಇವೆರಡು ಹಾದಿಗಳೂ ಸಮರ್ಪಕವಾಗದಲ್ಲಿ ಇಂಗ್ಲಿಷ್ ಪದವನ್ನು ಹಾಗೆಯೇ, ಇಲ್ಲವೇ ಉಚ್ಚಾರಣೆಯ ದೃಷ್ಟಿಯಿಂದ ಅಲ್ಪಸ್ವಲ್ಪ ಬದಲಾವಣೆ ಮಾಡಿ, ಕನ್ನಡಕ್ಕೆ ಅಮದು ಮಾಡಿಕೊಳ್ಳಬೇಕು. ಪ್ರಕೃತದ ನಾಲ್ಕೂ ಉದಾಹರಣೆಗಳಲ್ಲಿ ನಾವು ಬಳಸಬಹುದಾದ ಕನ್ನಡ ಪದಗಳು ಈ ಕೆಳಗಿನಂತಿವೆ :

discover = ಆವಿಷ್ಕರಿಸು, invent = ಉಪಜ್ಞಿಸು, find = ಶೋಧಿಸು, calculate = ಗಣಿಸು.

ಅಂದಮಾತ್ರಕ್ಕೆ ಇಂಗ್ಲಿಷಿನ ಒಂದು ಪದಕ್ಕೆ ಸಂವಾದಿಯಾಗಿ ಕನ್ನಡದ ಒಂದು ಪದವಿರಬೇಕು ಎಂಬ ತೀರ್ಮಾನಕ್ಕೆ ಬರುವುದು ಸಾಧುವಾಗದು. ಯಾವ ಎರಡು ಜೀವಂತ ಭಾಷೆಗಳೂ ಇಂಥ ಒಂದು-ಒಂದು ಸಂಕೋಲೆಯಿಂದ ಬಂಧಿತವಾಗಿರುವುದಿಲ್ಲ. ಉದಾಹರಣೆಗೆ ಬಿತ್ತು = fell, sow ; ಹರಿ = tear, flow ; fret = ರೇಖಾಲಂಕಾರ, ಅಗಿ, ಸಾರಿಕೆ ; put = ಇಡು, ಗಾಂಪ.

ಪಾರಿಭಾಷಿಕ ಪದಗಳ ಸೃಷ್ಟಿ ಹಾಗೂ ಉಪಯೋಗದಲ್ಲಿ ಸಾಕಷ್ಟು ಗೊಂದಲ ತಲೆದೋರಿದೆ. ಕಾರಣ, ಈ ಸಮಸ್ಯೆಯನ್ನು ನಾವು (ಕನ್ನಡಿಗರು) ಇಂದಿನ ತನಕವೂ ವ್ಯವಸ್ಥಿತವಾಗಿ ಸ್ವೀಕರಿಸಿ ಪರಿಹರಿಸಲು ಪ್ರಯತ್ನಿಸಿಲ್ಲ. ರಾಜ್ಯದ ಪ್ರಮುಖ ವಿಜ್ಞಾನ ಗ್ರಂಥೋತ್ಪಾದಕ ಸಂಸ್ಥೆಗಳು ಐದು : ನಾಲ್ಕು ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ನಿರ್ದೇಶನಾಲಯ. ಈ ಒಂದೊಂದು "ಸಾಮ್ರಾಜ್ಯ"ದ ಒಳಗೆ ಕೂಡ ಯಾವುದೇ

ಪ್ರಯತ್ನ ನಡೆದಿಲ್ಲ. ಅಂದರೇನಾಯಿತು? ಆಯಾ ಲೇಖಕ ಭಾಷಾಂತರಕಾರ ತನಗೆ ಆಯಾ ಸಂದರ್ಭದಲ್ಲಿ ಖುಷಿ ಕಂಡ ಪದವನ್ನು ಚಾಲೂ ಮಾಡುವ ದೀನ ಹೀನಸ್ಥಿತಿಗೆ ಈ ಸಮಸ್ಯೆ ಕೆಡೆದಿದೆ. ಪಾರಿಭಾಷಿಕ ಪದಗಳ ಗೊಂದಲವನ್ನು ನಿವಾರಿಸಲು ರಾಜ್ಯಮಟ್ಟದಲ್ಲಿ ವ್ಯವಸ್ಥಿತ ಪ್ರಯತ್ನ ಮಾಡದಿದ್ದರೆ ಯಾವ ವಿಜ್ಞಾನದ ಗಹನ ಪರಿಕಲ್ಪನೆಗಳ ಖಚಿತ ಸಂವಹನತೆಗಾಗಿ ಆ ಪದಗಳ ಸೃಷ್ಟಿ ಆಗಿವೆಯೋ ಆ ವಿಜ್ಞಾನವನ್ನೇ ಪ್ರಥಮಾಹುತಿಯಾಗಿ ಬೇಡುವ ಭಸ್ಮಾಸುರರೂಪಿಗಳು ಅವು ಆಗುವುದಂತೂ ಖರೆ. ಒಂದೇ ಭೌತ ವಿಜ್ಞಾನದ ಗ್ರಂಥದ ಒಳಗೆ force ಎಂಬ ಪರಿಕಲ್ಪನೆಗೆ 'ಬಲ', 'ತ್ರಾಣ', 'ಶಕ್ತಿ'; 'ಸಾಮರ್ಥ್ಯ' ಎಂಬ ನಾಲ್ಕು ಪರ್ಯಾಯ ಪದಗಳ ಬಳಕೆ ಆಗಿದೆ. "ಇಂದ್ರ ಭಸ್ಮವಾಗಿ ಹೋಗಲಿ" ಎನ್ನುವುದರ ಬದಲಾಗಿ "ಇಂದ್ರಾರಿ ಭಸ್ಮವಾಗಿ ಹೋಗಲಿ" ಎಂದು ಹೇಳಿದಾಗ ಏನು ಅನಾಹುತ ಘಟಿಸಿತೊ ಅದೇ ಅನಾಹುತ ಬೌದ್ಧಿಕವಾಗಿ ಇಲ್ಲಿ ಘಟಿಸಿದೆ ಎಂಬ ಅರಿವು ಈ 'ಗ್ರಂಥ'ದ ಕರ್ತೃವಿಗೆ ಇದ್ದಂತಿಲ್ಲ. (ವಾಸ್ತವವಾಗಿ force ಪರಿಕಲ್ಪನೆಯೇ ಈತನಿಗೆ ಅರ್ಥವಾಗಿಲ್ಲವೊ ಏನೊ.)

ಸಾರ್ವತ್ರಿಕವೂ ಸರ್ವಸಮ್ಮತವೂ ಆದ ವಿಜ್ಞಾನಪಾರಿಭಾಷಿಕಕೋಶ ಜರೂರಾಗಿ ಸಿದ್ಧವಾಗಬೇಕು. ರಾಜ್ಯಸರ್ಕಾರ ಈ ದಿಶೆಯಲ್ಲಿ ಪ್ರವರ್ತನಶೀಲವಾಗಬೇಕು. ಹಾಗೆಂದು ಆ ಕೆಲಸ ಮುಗಿಯುವತನಕ (?) ಭಾಷಾಂತರಕಾರ್ಯವನ್ನು ತಡೆಹಿಡಿಯುವುದು ಅಸಾಧ್ಯ ಮತ್ತು ಅನಪೇಕ್ಷಣೀಯವಾದ್ದರಿಂದ ಸದ್ಯದಲ್ಲಿ ಭಾಷಾಂತರಕಾರರು ಅನುಸರಿಸಬಹುದಾದ ಪ್ರಾಯೋಗಿಕ ವಿಧಾನಗಳಿವು:

೧ ಮೂಲಗ್ರಂಥದಲ್ಲಿ ಬರುವ ಸಮಸ್ತ ಪಾರಿಭಾಷಿಕ ಪದಗಳನ್ನೂ ಪದಪುಂಜಗಳನ್ನೂ ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಪಟ್ಟಿಮಾಡಿ ಅವನ್ನು ಅಲಾಯಿದ ಚೀಟಿಗಳ ಮೇಲೆ ಬರೆದಿಡಬೇಕು.

೨ ಭಾರತ ಸರ್ಕಾರ ಪ್ರಕಟಿಸಿರುವ ವಿವಿಧ ವಿಜ್ಞಾನ ಪಾರಿಭಾಷಿಕ ಕೋಶಗಳು, ಕನ್ನಡ ವಿಶ್ವಕೋಶದ ಲಭ್ಯ ಸಂಪುಟಗಳು, ಕನ್ನಡದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಪ್ರಸಿದ್ಧ ವಿಜ್ಞಾನಗ್ರಂಥಗಳು, ಪತ್ರಿಕಾಲೇಖನಗಳು ಮೊದಲಾದವನ್ನು ಅವಲೋಕಿಸಿ ಸಮಾನ ಕನ್ನಡ ಪಾರಿಭಾಷಿಕ ಪದಗಳನ್ನು ಆಯ್ದು ಆಯಾ ಚೀಟಿಯ ಮೇಲೆ ನಮೂದಿಸಬೇಕು.

೩ ಪ್ರತಿಯೊಂದು ಇಂಗ್ಲಿಷ್ ಪಾರಿಭಾಷಿಕ ಪದಕ್ಕೂ ಸಮಾನವಾದ ಒಂದು ಪಾರಿಭಾಷಿಕ ಪದವನ್ನು ಹುಡುಕಲೇಬೇಕು ಯಾ ಸೃಷ್ಟಿಸಲೇಬೇಕು ಎನ್ನುವ ಹಠ ಸರ್ವತ್ರ ಸಲ್ಲದು. ಇಂಥ ದುಸ್ಸಾಹಸಕ್ಕೆ ಆರಂಭದಲ್ಲೇ ವೈಫಲ್ಯ ಶತಸ್ಸಿದ್ಧ. ಭಾಷಾಂತರಕಾರನ ವಿದ್ವತ್ತು, ಅನುಭವ ಮೊದಲಾದವನ್ನು ಅವಲಂಬಿಸಿ ಒಂದೊಂದು ಹಂತದಲ್ಲಿಯೂ ಶಿಷ್ಟೀಕರಣ ಸಾಧ್ಯವಿದೆ. ಅಂತಾರಾಷ್ಟ್ರೀಯ ಚಲಾವಣೆ ಮತ್ತು ಮನ್ನಣೆ ಪಡೆದಿರುವ ಹಾಗೂ ಭಾರತೀಯ ಹವೆಯಲ್ಲಿ ಆ ತನಕ ನೆಲೆ ಪಡೆಯದಿದ್ದ ಪರಿಕಲ್ಪನೆಯನ್ನು ಪ್ರತಿನಿಧಿಸುವ ಪಾರಿಭಾಷಿಕ ಪದಗಳು, ಪ್ರತೀಕಗಳು ಮುಂತಾದವನ್ನು ಹಾಗೆಯೇ

ಇರಗೊಡಿಸಬೇಕು. ಅವನ್ನು ಕನ್ನಡಿಸುವುದು ವ್ಯರ್ಥಶ್ರಮ. ಉದಾಹರಣೆಗೆ

(i) transistor = ಟ್ರಾನ್ಸಿಸ್ಟರ್ ಆಗಬೇಕೇ ಹೊರತು TRANsfer + reSISTOR = TRANSISTOR ಎಂಬುದು ಅದರ ಧಾತುರೂಪವಾದ್ದರಿಂದ ಅನುರೂಪವಾಗಿ ಕನ್ನಡದಲ್ಲಿ ವರ್ಗಾವಣೆ + ರೋಧಕ = ವರ್ಗಾಧಕ ಆಗಬಾರದು. ಇದೇ ವಿಕೃತರೂಪ ಕನ್ನಡದಲ್ಲಿ ತಯಾರಾಗಿಲ್ಲ ನಿಜ. ಆದರೆ ಅನರ್ಥ ಅಪಾರ್ಥಗಳಲ್ಲಿ ಇದನ್ನು ಮೀರಿಸುವ ವಿಕೃತರೂಪಗಳು ಸಾಕಷ್ಟು ಬೇರೆ ಬೇರೆ ಪ್ರಕಟಿತ ಗ್ರಂಥಗಳಲ್ಲಿ ಕಂಡು ಬರುತ್ತಿವೆ.

(ii) $\cos^2 x + \sin^2 x = 1$ ಎಂಬುದು ತದ್ವತ್ತಾಗಿ ಕನ್ನಡಕ್ಕೆ ಆಮದಾಗಬೇಕು. ಅಂತೆಯೇ $E = mc^2$, ${}^{14}_{7}\mathrm{N} + \mathrm{p} — 2\,{}^{4}_{2}\mathrm{He} + {}^{7}_{4}\mathrm{Be}$. ರಾಸಾನಿಯಕ ಕ್ರಿಯೆಗಳನ್ನು ಸೂಚಿಸುವ ವಿವಿಧ ಸಮೀಕರಣಗಳು ಎಲ್ಲವೂ ಯಾವ ಬದಲಾವಣೆಯೂ ಇಲ್ಲದೆ ಕನ್ನಡಕ್ಕೆ ಸ್ವೀಕರಿಸಲ್ಪಡಬೇಕು.

ಈ ತೆರನಾದ ಚಿಂತನ ಮಂಥನಗಳಿಂದ ಪಾರಿಭಾಷಿಕ ಪದಗಳ ಸಮಗ್ರ ಯಾದಿ ಸಿದ್ಧವಾದ ಬಳಿಕ ಮಾತ್ರವೇ ಭಾಷಾಂತರಕಾರ ಕಾರ್ಯೋದ್ಯುಕ್ತನಾಗತಕ್ಕದ್ದು. ಮುಂದಿನ ನೌಕಾಯನದ (navigation) ವೇಳೆ ಇಂಥ ಒಂದು ಯಾದಿ ಅವನಿಗೆ ಅದೆಂಥ ಉಪಯುಕ್ತ ನಾವಿಕ ದಿಕ್ಸೂಚಿ ಆಗಬಲ್ಲದು ಎಂಬ ಸಂಗತಿ ಈ ರೀತಿಯಾಗಿ ಶ್ರಮಿಸಿರುವವರೆಲ್ಲರಿಗೂ ತಿಳಿದಿದೆ.

II ಹೀಗೆ ಸರ್ವಸಜ್ಜಿತನಾಗಿ ನಮ್ಮ ಪರಿಣತ ಇಂಗ್ಲಿಷ್ ಹೊಲದಿಂದ ಕನ್ನಡ ನೆಲಕ್ಕೆ (ಬಲುಪಾಲು ಇದಿನ್ನೂ ಕನ್ನೆನೆಲ) ಜಿಗಿಯಲು ಸಿದ್ಧನಾಗುತ್ತಾನೆ. ಅವನ ಜಿಗಿತ ಇಳಿತಗಳಲ್ಲಿ ಒಟ್ಟಾಗಿ ಐದು ಪ್ರತ್ಯೇಕ ಹಂತಗಳಿವೆ.

೧ ಇಂಗ್ಲಿಷಿನಲ್ಲಿ **ವಾಕ್ಯವನ್ನೊ** ವಾಕ್ಯಪುಂಜವನ್ನೊ ಓದಿ ಅರ್ಥಲೀನನಾಗುತ್ತಾನೆ. ಆ ಸ್ಥಿತಿಯಲ್ಲಿ ಆತನ ಅನುಭವ ಭಾಷಾತೀತವಾಗಿರುತ್ತದೆ — ಉತ್ತಮ ಸಂಗೀತವನ್ನು ಆಲಿಸಿದಾಗ ಸಾಹಿತ್ಯಾತೀತವಾದ ನಾದರಸಾನಂದಾನುಭೂತಿ ಒದಗುವಂತೆ. ಒಂದು **ಉದಾಹರಣೆ ನೋಡಿ :**

The scientist does not study nature because it is useful; he studies it because he delights in it, and he delights in it because it is beautiful. If nature were not beautiful, it would not be worth knowing, and if nature were not worth knowing, life would not be worth living. Of course I do not here speak of that beauty that strikes the senses, the beauty of qualities and appearances; not that I undervalue such beauty, far from it, but it has nothing to do with science; I mean that profounder beauty which comes from the harmonious order of the parts, and which a pure intelligence can grasp.

ಆನ್ರೀ ಪ್ವಾನ್‌ಕ್ಯಾರೇ ಎಂಬ ಶ್ರೇಷ್ಠ ಗಣಿತವಿದನ ಮಾತುಗಳಿವು. ಇವನ್ನು ಮತ್ತೆ ಮತ್ತೆ ಓದಿ ಮನನ ಮಾಡಿಕೊಂಡು ಧ್ಯಾನಸ್ಥಿತಿಗೇರಿದಾಗ ಮನಸ್ಸಿನಲ್ಲಿ ಭಾಷಾತೀತ ವಾದ ಕಲಾತ್ಮಕ ಪ್ರತಿರೂಪವೊಂದು ಮೂಡುತ್ತದೆ. ಇದೊಂದು ವಿಧದ ತುರಿಯಾವಸ್ಥೆ. ಪರಕಾಯ (ಪರಮನ) ಪ್ರವೇಶವೆಂದರೆ ಇದೇ.

೨ ಎರಡನೆಯ ಹಂತದಲ್ಲಿ ಭಾಷಾಂತರಕಾರ ಈ ಮಾನಸಿಕ ಭಾಷಾತೀತ ಮತ್ತು ಭಾವಗಮ್ಯ ಪ್ರತಿರೂಪಕ್ಕೆ ಪ್ರಜ್ಞಾಪೂರ್ವಕವಾಗಿ ಕನ್ನಡದ ಉಡುಪನ್ನು ತೊಡಿಸಲು ತೊಡಗುತ್ತಾನೆ. ಈಗ ಅವನ ಚಿಂತನೆ ಕನ್ನಡ ಭಾಷೆಯಲ್ಲಿ ಸಾಗಿರುತ್ತದೆ. ಮಕರಂದ ಜೇನಾಗುವ ಈ ಪ್ರಕ್ರಿಯೆಯಲ್ಲಿ ಭಾವನೆ ಮತ್ತು ಭಾಷೆ ಎರಡೂ ಸಮಶ್ರುತಿ ಮತ್ತು ಸಮಗತಿಯಲ್ಲಿ ಸ್ಪಂದಿಸುತ್ತಿರುತ್ತವೆ. ವಾಸ್ತವಿಕ ಭಾಷಾಂತರಕಾರ್ಯ ಇಲ್ಲಿಗೇ ಮುಗಿದು ಹೋಗುತ್ತದೆ.

೩ ಹೀಗೆ ಮಾನಸಿಕವಾಗಿ ಕನ್ನಡದಲ್ಲಿ ಮೈದಳೆದ ಪ್ರತಿರೂಪವನ್ನು ಅವನೀಗ ಪ್ರತ್ಯಕ್ಷ ಲಿಪಿಗೆ ಇಳಿಸಿ ಅವಕ್ಕೊಂದು ಆಕಾರವನ್ನು ಒದಗಿಸುತ್ತಾನೆ. ಇದೇನಿದ್ದರೂ ಯಾಂತ್ರಿಕ ಕ್ರಿಯೆ, ಸೃಜನಾತ್ಮಕ ಕ್ರಿಯೆ ಅಲ್ಲ. ಆದರೆ ಹಾಗೆಂದು ಇದನ್ನು ಉಡಾಫೆ ಯಿಂದ ಕಾಣಬಾರದು, "ಇದೇನು ಮಹಾ" ಎಂದು ಕಡೆಗಣಿಸಲಾಗದು. ನೌಕಾಯಾನ ದಲ್ಲಿ ದಡ ತಲಪುತ್ತಿದ್ದಂತೆ ಹೆಚ್ಚಿನ ಎಚ್ಚರ ವಹಿಸದಿದ್ದರೆ ಸರ್ವನಾಶ ಖಾತ್ರಿ. ಭಾಷಾಂತರಕಾರನ ಅಗೋಚರ ಅಂತರಂಗದ ಪ್ರಕಟಿತ ರೂಪ ಈ ಬರವಣಿಗೆ. ಇದು ಸರಿ ಆಗಿರದಿದ್ದರೆ ಅಥವಾ ಹೊಲಸಾಗಿದ್ದರೆ ಅವನ ವಿದ್ವತ್ತು ಸಾಧನೆ ಪ್ರತಿಭೆ ಎಲ್ಲವೂ ಹೆಜ್ಜೇನು ಗೂಡಿನ ಎರಿಗಳಂತೆ ಉಪಯೋಗಾಲಭ್ಯವಾಗುತ್ತವೆ. ಈ ಹಂತದಲ್ಲಿ ನಡೆವ ಪ್ರಕ್ರಿಯೆಗೆ ಉದಾಹರಣೆಯಾಗಿ ಮೇಲೆ ನಮೂದಿಸಿರುವ ಇಂಗ್ಲಿಷ್ ಪರಿಚ್ಛೇದದ ಕಚ್ಚಾ ಅನುವಾದವನ್ನು ಪರಿಶೀಲಿಸೋಣ :

ನಿಸರ್ಗ ಉಪಯುಕ್ತವಾಗಿದೆ ಎಂಬ ಕಾರಣದಿಂದ ವಿಜ್ಞಾನಿ ಅದನ್ನು ಅಭ್ಯಸಿಸುವುದಲ್ಲ: ಅಂಥ ಅಭ್ಯಾಸ ಆತನಿಗೆ ಸಂತೋಷ ಕೊಡುವುದರಿಂದ ಆತ ಅದರಲ್ಲಿ ಉದ್ಯುಕ್ತನಾಗುತ್ತಾನೆ. ಆತನಿಗೆ ಅದು ಸಂತೋಷಕೊಡುವುದು ನಿಸರ್ಗ ಚೆಲುವಾಗಿರುವುದರಿಂದ. ನಿಸರ್ಗ ಚೆಲುವಾಗಿರ ದಿದ್ದಲ್ಲಿ ಅದನ್ನು ತಿಳಿಯುವುದು ವ್ಯರ್ಥವಾಗುತ್ತಿತ್ತು; ನಿಸರ್ಗವನ್ನು ತಿಳಿಯುವುದು ವ್ಯರ್ಥ ವಾಗಿದ್ದರೆ ಬದುಕು ವ್ಯರ್ಥವಾಗುತ್ತಿತ್ತು. ಅಂದಮಾತ್ರಕ್ಕೆ ನಾನಿಲ್ಲಿ ಇಂದ್ರಿಯಗೋಚರ ಸೌಂದರ್ಯವನ್ನು — ಗುಣಗಳೂ ಆಕಾರಗಳೂ ಒದಗಿಸುವ ಸೌಂದರ್ಯವನ್ನು — ಕುರಿತು ಪ್ರಸ್ತಾವಿಸುತ್ತಿಲ್ಲ. ಇಂಥ ಸೌಂದರ್ಯವನ್ನು ಕಡೆಗಣಿಸುವುದು ಎಂದೂ ನನ್ನ ಉದ್ದೇಶ ಅಲ್ಲ. ಆದರೆ ಇದಕ್ಕೆ ವಿಜ್ಞಾನದೊಡನೆ ಯಾವ ಸಂಬಂಧವೂ ಇಲ್ಲ. ನಾನು ಪ್ರಸ್ತಾವಿಸುತ್ತಿರುವ ಸೌಂದರ್ಯ ಶುದ್ಧ ಬುದ್ಧಿಗಮ್ಯವಾದದ್ದು; ಭಾಗಗಳ ಸಂಗತ ಹೊಂದಾಣಿಕೆಯಿಂದ ಲಭಿಸುವ ಸೌಂದರ್ಯವದು.

೪ ನಾಲ್ಕನೆಯ ಹಂತದಲ್ಲಿ ಈ ಕಚ್ಚಾ ಭಾಷಾಂತರ ಸಾಮಗ್ರಿಯನ್ನು ನಾನಾ ವಿಧದ ಪರೀಕ್ಷೆಗಳಿಗೆ ಒಳಪಡಿಸಿ — ಮುಖ್ಯವಾಗಿ ಮೂಲಸಾರದೊಡನೆ ಸವಿವರ ತುಲನೆ,

ಪಾರಿಭಾಷಿಕ ಪದಗಳ ಶಿಷ್ಟೀಕರಣ, ಪ್ರತೀಕ ಮುಂತಾದವುಗಳ ತಪಾಸಣೆ — ಮತ್ತೆ ಅದಕ್ಕೆ ಮೆರುಗು ನೀಡಿ ಪೂರ್ಣ ಹಾಗೂ ಸುಂದರ ವಸ್ತುವಾಗಿ ಒಪ್ಪ ಓರಣ ನೀಡುತ್ತಾನೆ. ಕಂಬಳಿಹುಳು ಈಗ ಪೂರ್ಣ ಪತಂಗವಾಗಿ ರೂಪಾಂತರಣಗೊಂಡಿರುವುದು. ಇದಕ್ಕೆ ನಿದರ್ಶನವಾಗಿ ಮೂರನೆಯ ಹಂತದಲ್ಲಿ ಬರೆದಿರುವ ಕಚ್ಚಾ ಸಾಮಗ್ರಿಯ ಒಪ್ಪ ರೂಪ ನೋಡಿ:

ನಿಸರ್ಗ ಪ್ರಯೋಜನಕಾರಿ ಎಂಬುದಕ್ಕಾಗಿ ವಿಜ್ಞಾನಿ ಅದನ್ನು ಅಧ್ಯಯಿಸುವುದಲ್ಲ: ಅವನು ಅದನ್ನು ಅಧ್ಯಯಿಸುವುದು ಅದರಲ್ಲಿ ಅವನಿಗೆ ಆನಂದ ಒದಗುವುದರಿಂದ; ಅದರಲ್ಲಿ ಅವನಿಗೆ ಆನಂದ ಒದಗುವುದು ಅದು ಸುಂದರವಾಗಿರುವುದರಿಂದ. ನಿಸರ್ಗ ಸುಂದರವಾಗಿರದಿದ್ದರೆ ಅದನ್ನು ತಿಳಿಯುವುದು ನಿಷ್ಪ್ರಯೋಜಕವಾಗುತ್ತಿತ್ತು; ನಿಸರ್ಗವನ್ನು ತಿಳಿಯುವುದು ನಿಷ್ಪ್ರಯೋಜಕವಾಗಿದ್ದರೆ ಬದುಕು ಅರ್ಥಹೀನವಾಗುತ್ತಿತ್ತು. ಇಂದ್ರಿಯಗಳಿಗೆ ಎದ್ದು ಕಾಣುವ ಸೌಂದರ್ಯವನ್ನು, ಅಂದರೆ ಗುಣಗಳ ಮತ್ತು ತೋರಿಕೆಗಳ ಸೌಂದರ್ಯವನ್ನು, ಕುರಿತು ನಾನಿಲ್ಲಿ ಪ್ರಸ್ತಾವಿಸುತ್ತಿಲ್ಲ ಎಂಬುದು ಸ್ಪಷ್ಟ. ಆ ಸೌಂದರ್ಯವನ್ನು ನಾನು ಕಡೆಗಣಿಸುವೆನೆಂದಲ್ಲ, ಅದೆಂದೂ ನನ್ನ ಉದ್ದೇಶ ಅಲ್ಲ; ಆದರೆ ಅದಕ್ಕೆ ವಿಜ್ಞಾನದೊಡನೆ ಏನೂ ವ್ಯವಹಾರವಿಲ್ಲ. ಬದಲು, ನನ್ನ ಮನಸ್ಸಿನಲ್ಲಿರುವುದು ಭಾಗಗಳ ಸುಸಂಗತ ಮೇಳನದಿಂದ ಲಭಿಸುವ ಮತ್ತು ಶುದ್ಧ ಪ್ರತಿಭೆ ಗ್ರಹಿಸಬಲ್ಲ ಆ ಗಭೀರ ಸೌಂದರ್ಯ.

೫ ಕೊನೆಯ ಹಂತದಲ್ಲಿ ಭಾಷಾಂತರಕಾರ ಪ್ರತಿಯೊಂದು ಪರಿಚ್ಛೇದವನ್ನೂ ಆಯಾ ಅಧ್ಯಾಯದ ಹಿನ್ನೆಲೆಯಲ್ಲಿ ಮತ್ತು ಪ್ರತಿಯೊಂದು ಅಧ್ಯಾಯವನ್ನೂ ಸಮಗ್ರ ಪುಸ್ತಕದ ಹಿನ್ನೆಲೆಯಲ್ಲಿ ತಾಳೆಮಾಡಿ ತೂಗಿನೋಡಿ ಒರೆಹಚ್ಚಿ ಪುತ್ಥಳಿತನವನ್ನು ಗಟ್ಟಿಮಾಡಿಕೊಂಡು ಭಾವಶುದ್ಧಿ ಲಯಶುದ್ಧಿ ಎಲ್ಲವನ್ನೂ ಸಾಧಿಸಿ "ಇದೊ ಮುಗಿಸಿ ತಂದಿಹೆನ್" ಎನ್ನುವ ನಿವೇದನಭಾವದಿಂದ ಪ್ರಕಟಣೆಗೆ ಒಪ್ಪಿಸುತ್ತಾನೆ. ಮುದ್ರಣದ ವೇಳೆಯಲ್ಲಿ ಕೂಡ ಇದನ್ನು ಇನ್ನಷ್ಟು ಶುದ್ಧೀಕರಿಸುವುದು ಸಾಧ್ಯ ಎಂಬುದು ಅವನಿಗೆ ತಿಳಿದಿದೆ.

III ಭಾಷಾಂತರಕಾರ ತನ್ನ ಕೃತಿಯಲ್ಲಿ ಈ ಮುಂದಿನ ಹತ್ತು ಮುಖ್ಯ ದೋಷಗಳು ನುಸುಳದಂತೆ ವಿಶೇಷ ಕಾಳಜಿ ವಹಿಸಬೇಕು. ಏಕೆಂದರೆ ಇವುಗಳ ಪೈಕಿ ಯಾವುದೇ ಒಂದು ಕೂಡ ಭಾಷಾಂತರ ಕೃತಿಯಲ್ಲಿ ವ್ಯಾಪಕವಾಗಿ ಕಂಡುಬಂದದ್ದೇ ಆದರೆ ಅದರ ದುರಸ್ತಿ ವ್ಯರ್ಥಶ್ರಮ; ಅದು ಭಾಷಾಂತರಕಾರನ ಮಿದುಳಿನ ಪ್ರತಿಸ್ಥಾಪನೆಗೆ ಸಮಾನವಾಗುತ್ತದೆ. ಈ ಅಸಾಧ್ಯ ಕಾರ್ಯವನ್ನು ಕೈಬಿಟ್ಟು ಇತರ ಸಮರ್ಥ ಭಾಷಾಂತರಕಾರರಿಂದ ತರ್ಜುಮೆ ಮಾಡಿಸುವುದೊಂದೇ ಸಫಲ ಪ್ರಾಯೋಗಿಕ ಮಾರ್ಗ.

೧ ಸಂಕಲನ ದೋಷ: ಮೂಲದಲ್ಲಿ ಇಲ್ಲದುದನ್ನು ಅನುವಾದದಲ್ಲಿ ಸೇರಿಸುವುದು.

೨ ವ್ಯವಕಲನ ದೋಷ: ಮೂಲದಲ್ಲಿ ಇದ್ದುದನ್ನು ಅನುವಾದದಲ್ಲಿ ಬಿಡುವುದು.

೩. ಮಕ್ಕಿಕಾಮಕ್ಕಿ ದೋಷ: ಮೂಲದ ಒಂದು ಪದಕ್ಕೆ ಅನುವಾದದಲ್ಲಿ ಒಂದು ಪದ ಇರಲೇಬೇಕು, ಪದಗಳು ಬರುವ ಅನುಕ್ರಮವೂ ಹೆಚ್ಚು ಕಡಿಮೆ ಒಂದೇ ಆಗಿರಬೇಕು ಎನ್ನುವ ಮೂರ್ಖಶ್ರದ್ಧೆ. ಒಂದು ಉದಾಹರಣೆ ನೋಡಿ:

ಮೂಲ: The cloud chamber is a device for letting charged atomic particles, too small to be seen, reveal their paths by producing a vapour trail in a chamber· This tool of nuclear physics was invented by Professor C. T. R. Wilson.

ಭಾಷಾಂತರ ೧: ಮೇಘಮಂದಿರ ನೋಡಲಾಗದಷ್ಟು ಸಣ್ಣಗಿರುವ ವಿದ್ಯುದಾವಿಷ್ಟ ಕಣಗಳು ಕೂಡ ಒಂದು ಕುಹರದಲ್ಲಿ ಬಾಷ್ಪ ಹಿಂಜೋಲನ್ನು ಉಂಟು ಮಾಡಿ ಪಥಗಳನ್ನು ತೋರಲು ಅವಕಾಶ ಮಾಡಿಕೊಡುವ ಒಂದು ನಿರ್ಮಾಣ. ನ್ಯೂಕ್ಲಿಯರ್ ಭೌತವಿಜ್ಞಾನದ ಈ ಸಾಧನವನ್ನು ಪ್ರೊಫೆಸರ್ ಸಿ. ಟಿ. ಆರ್. ವಿಲ್ಸನ್ ಉಪಜ್ಞೆಗೊಳಿಸಿದನು.

ಭಾಷಾಂತರ ೨: ಕಣ್ಣಿಗೆ ಕಾಣದಷ್ಟು ಅನಂತಾಲ್ಪ ಗಾತ್ರದ ವಿದ್ಯುದಾವಿಷ್ಟ ಪರಮಾಣವಿಕ ಕಣಗಳು ಬಾಷ್ಪ ಹಿಂಜೋಲನ್ನು ಉತ್ಪಾದಿಸುವುದರ ಮೂಲಕ ತಮ್ಮ ಜಾಡುಗಳನ್ನು ಪ್ರಕಟಪಡಿಸಲೋಸ್ಕರ ವಿಶೇಷವಾಗಿ ನಿರ್ಮಿಸಲಾಗಿರುವ ಸಾಧನವೇ ಮೇಘಕೋಷ್ಠ. ನ್ಯೂಕ್ಲಿಯರ್ ಭೌತವಿಜ್ಞಾನದ ಈ ಸತ್ಯವನ್ನು ಉಪಜ್ಞಿಸಿದಾತ ಪ್ರೊಫೆಸರ್ ಸಿ. ಟಿ. ಆರ್. ವಿಲ್ಸನ್.

೪ ನಿಘಂಟುವಿನ ಅಂಧಾನುಕರಣೆ ದೋಷ: ವಿವೇಕರಹಿತವಾಗಿ (ಭಾಷಾಂತರ ಕಾರ್ಯದಲ್ಲಿ ವಿವೇಕ ಬರುವುದು ವಿಷಯಪ್ರಭುತ್ವ ಹಾಗೂ ಉಭಯ ಭಾಷಾ ಪರಿಜ್ಞಾನಗಳಿಂದ ಮಾತ್ರ) ನಿಘಂಟುವಿನ ಪದಗಳನ್ನು ಆಯ್ದು ಪೋಣಿಸುತ್ತ ಹೋಗುವುದು. ಕೆಲವು ಉದಾಹರಣೆಗಳನ್ನು ನೋಡಿ.

instruction to computer = ಗಣಕಕ್ಕೆ ಉಪದೇಶ ('ಗಣಕಕ್ಕೆ ಸೂಚನೆ' ಅಥವಾ 'ಗಣಕಕ್ಕೆ ನಿರ್ದೇಶನ')

function of life = ಬದುಕಿನ ಹಬ್ಬ ('ಬದುಕಿನ ಕ್ರಿಯೆ' ಅಥವಾ 'ಜೀವದ ಕ್ರಿಯೆ')

sugar dissolves in water = ಸಕ್ಕರೆ ನೀರಿನಲ್ಲಿ ಕರಗುತ್ತದೆ ('ಸಕ್ಕರೆ ನೀರಿನಲ್ಲಿ ಲೀನವಾಗುತ್ತದೆ.')

೫ ಅನ್ವಯ ದೋಷ: ಮೂಲದಲ್ಲಿ ಅಪಾನ್ವಯ ಮಾಡುವುದರಿಂದ ಘಟಿಸುವ ಅಪಚಾರ (ಮೋಣ-ಸೂಜಿ-ರೀಗೆ ದೋಷ). ಒಂದು ಉದಾಹರಣೆ ನೋಡಿ:

ಮೂಲ: In serving science and business, the mathematics of probability has attained a status far above its origins, which were slightly on the suspect side.

ಭಾಷಾಂತರ: ವಿಜ್ಞಾನ ಮತ್ತು ವಾಣಿಜ್ಯ ಅಷ್ಟೇನೂ ಸಾಚಾ ಕ್ಷೇತ್ರಗಳು ಆಗಿಲ್ಲದಿದ್ದಾಗ ಸಂಭಾವ್ಯತಾಗಣಿತ ಅವುಗಳಿಗೆ ಸೇವೆ ಒದಗಿಸಿ ತನ್ನ ಮೂಲ ಅಂತಸ್ತಿಗಿಂತ ಅದೆಷ್ಟೋ ಪಟ್ಟು ಹೆಚ್ಚಿನ ಅಂತಸ್ತನ್ನು ಪಡೆಯಿತು.

ಟೀಕೆ: Which were slightly on the suspect side ಎಂಬ ಗುಣವಾಚಕೋಪವಾಕ್ಯ origins ಪದಕ್ಕೆ ಅನ್ವಯವಾಗುತ್ತದೆ ಎಂಬ ಅಂಶ ಈ 'ಅಪೂರ್ವ'

ಭಾಷಾಂತರಕಾರನಿಗೆ ಹೊಳೆಯದಿದ್ದುದರ ಕಾರಣ ಪ್ರಾಯಃ ಎರಡು : ಇಂಗ್ಲಿಷ್ ಭಾಷೆ ಸರಿಯಾಗಿ ತಿಳಿಯದಿರುವುದು, ವಿಷಯಪರಿಜ್ಞಾನ ಸಾಕಷ್ಟು ಇಲ್ಲದಿರುವುದು. ಸರಿಯಾದ ರೂಪ ಹೀಗಿರಬೇಕು : "ಸಂಭಾವ್ಯತಾ ಗಣಿತದ ಮೂಲ ಅಷ್ಟೇನೂ ಸಾಚಾ ಆಗಿರದಿದ್ದರೂ ವಿಜ್ಞಾನ ಹಾಗೂ ವಾಣಿಜ್ಯ ಕ್ಷೇತ್ರಗಳಿಗೆ ಅದು ಒದಗಿಸಿದ ಸೇವೆ ಅದಕ್ಕೆ ಅದೆಷ್ಟೊ ಪಟ್ಟು ಹೆಚ್ಚಿನ ಅಂತಸ್ತನ್ನು ನೀಡಿತು." ಅಥವಾ "ಸಂಭಾವ್ಯತಾಗಣಿತ ಅಷ್ಟೇನೂ 'ಮರ್ಯಾದೆ'ಯ ಹಿನ್ನೆಲೆಯಲ್ಲಿ ಉಗಮಿಸಿರಲಿಲ್ಲ. ಹಾಗಿದ್ದರೂ ವಿಜ್ಞಾನ ಮತ್ತು ಗಣಿತರಂಗಗಳಲ್ಲಿನ ಅದರ ಉಪಯುಕ್ತತೆಯಿಂದಾಗಿ ಅದಕ್ಕೆ ಅದೆಷ್ಟೊ ಪಟ್ಟು ಹೆಚ್ಚಿನ ಅಂತಸ್ತು ಲಭ್ಯವಾಗಿದೆ."

೬ ಅರ್ಥ ದೋಷ : ಪದಗಳ ಸಾಂದರ್ಭಿಕಾರ್ಥವನ್ನು ಸರಿಯಾಗಿ ಗ್ರಹಿಸದಿರುವುದು. ಯಾವುದೇ ಭಾಷೆಯಲ್ಲಿ "ಒಂದು ಪದ = ಒಂದು ಅರ್ಥ" ಎನ್ನುವ ಸರಳ ಸಂಬಂಧ ಇಲ್ಲ. ಇನ್ನು ಯಾವುದೇ ಎರಡು ಭಾಷೆಗಳ ನಡುವೆ "ಒಂದರ ಒಂದು ಪದ = ಇನ್ನೊಂದರ ಒಂದು ಪದ" ಎನ್ನುವ ಅತಿ ಸರಳ ಸಂಬಂಧವೂ ಇಲ್ಲ. ಇಂಗ್ಲಿಷಿನಲ್ಲಿ power ಎನ್ನುವ ಪದಕ್ಕೆ ವಿಜ್ಞಾನದಲ್ಲೇ ಕನಿಷ್ಠ ಪಕ್ಷ ಮೂರು ಭಿನ್ನಾರ್ಥಗಳಿವೆ :

(i) The *power* of a point with respect to a circle.
(ii) Horse *power*
(iii) Electric *power*

Grow ಮತ್ತು develop ಮೇಲುನೋಟಕ್ಕೆ ಪರ್ಯಾಯಪದಗಳಾಗಿ ತೋರುತ್ತವೆ. ಏಕೆಂದರೆ ಇವುಗಳಿಗೆ ನಿಘಂಟು ಕೊಡುವ ಅರ್ಥಗಳು ಹೀಗಿವೆ :

grow = to spring up and develop into maturity
develop = to set forth or make clear by degrees or in detail

ರೂಢಿಯ ಮಾತು ಬರವಣಿಗೆಗಳಲ್ಲಿ ಈ ಪದಗಳನ್ನು ಸಮಾನಾರ್ಥಕಗಳಾಗಿ ಬಳಸಿದಾಗ ಅರ್ಥಗ್ರಹಣಕ್ಕೆ ವಿಶೇಷ ತೊಂದರೆ ಏನೂ ಆಗುವುದಿಲ್ಲ. ಕನ್ನಡದಲ್ಲಿ ಸಾಧಾರಣವಾಗಿ 'ಬೆಳೆ' ಎಂಬ ಪದದಿಂದ grow ಮತ್ತು develop ಪದಗಳನ್ನು 'ಸುಧಾರಿಸುವುದು' ವಾಡಿಕೆ ಆಗಿಹೋಗಿದೆ. ಈಗ, as it grows the foetus develops new organs ಎಂಬ ವಾಕ್ಯವನ್ನು grow ಮತ್ತು develop ಪದಗಳ ನಡುವಿನ ಸ್ಪಷ್ಟ ವ್ಯತ್ಯಾಸ ತಿಳಿಯದವ ಅನುವಾದಿಸುವಾಗ ಆ ವಾಕ್ಯ ಹೀಗಿರುತ್ತದೆ :

ಭ್ರೂಣ ಬೆಳೆದಂತೆ ಅದರಲ್ಲಿ ಹೊಸ ಅಂಗಗಳು ಬೆಳೆಯುತ್ತವೆ. ಅಥವಾ, ಭ್ರೂಣ ಬೆಳೆದಂತೆ ಅದರಲ್ಲಿ ಹೊಸ ಅಂಗಗಳು ರೂಪುಗೊಳ್ಳುತ್ತವೆ.

ಸರಿಯಾದ ಅನುವಾದ ಹೀಗಿರಬೇಕು : ಭ್ರೂಣ ಬೆಳೆದಂತೆ ಅದರಲ್ಲಿ ಹೊಸ ಅಂಗಗಳು ಅಭಿವರ್ಧಿಸುತ್ತವೆ.

ಹೊಸ ಅಂಗಗಳ development ಎಂಬುದು growthನ (ಬೆಳವಣಿಗೆಯ) ವಿಶೇಷ

ಬಗೆ; ಎಂದೇ ಇದನ್ನು 'ಅಭಿವರ್ಧನೆ' (ಅಭಿವರ್ಧಿಸು) ಎಂಬ ಇತರ ಪದದಿಂದ ಸೂಚಿಸಲೇಬೇಕು. ಹೀಗೆ ಮಾಡಿದಾಗ ಮಾತ್ರ ಭಾಷೆಗೆ ಮೊನಚು ಒದಗುತ್ತದೆ.

೭ ಜಾಯಮಾನ ದೋಷ: ಭಾಷಾಂತರದಲ್ಲಿ ಕನ್ನಡತನದ ಗೈರುಹಾಜರಿ. ಕನ್ನಡದಲ್ಲಿ ಯೋಚನೆ ಮಾಡಿ ಕನ್ನಡದಲ್ಲಿ ಗಟ್ಟಿಯಾಗಿ ನುಡಿದು ತರುವಾಯ ಬರೆಯಲು ತೊಡಗುವುದರಿಂದ ಈ ದೋಷಕ್ಕೆ "ಶಾಂತಿ" ಮಾಡಬಹುದು. ಜೀವಂತ ಕನ್ನಡ ಸಾಹಿತ್ಯದಲ್ಲಿ ಆಳವಾದ ಆಸಕ್ತಿ, ಪ್ರವೇಶ ಮತ್ತು ಯಶಸ್ವಿಯಾಗಿ ಕೈ ಆಡಿಸಬಲ್ಲ ಸಾಮರ್ಥ್ಯ ಹಾಗೂ ಜನಜೀವನದಲ್ಲಿ ಮಿಳನ ತೀರ ಅವಶ್ಯಕ. ಒಂದು ಉದಾಹರಣೆ ನೋಡಿ:

ಮೂಲ: After years of intensive work examining all kinds of mosquitoes under a microscope, he discovered in one of them, a female *Anopheles*, an unusual kind of cell. On further investigation the cell was found to contain a few granules of black pigment, exactly like that of the malaria parasite in man.

ಭಾಷಾಂತರ ೧: ಎಲ್ಲ ರೀತಿಯ ಸೊಳ್ಳೆಗಳನ್ನೂ ಸೂಕ್ಷ್ಮದರ್ಶಕದ ಕೆಳಗೆ ಪರೀಕ್ಷಿಸುತ್ತಾ ಹಲವಾರು ವರ್ಷಗಳು ಸತತವಾಗಿ ದುಡಿದನಂತರ ಒಂದು ಹೆಣ್ಣು ಅನಾಫಿಲಿಸ್ ಸೊಳ್ಳೆಯಲ್ಲಿ ಹಿಂದೆಂದೂ ಕಾಣದಿದ್ದ ಒಂದು ಜೀವಕೋಶವನ್ನು ಅವರು ಕಂಡರು. ಮುಂದೆ ನಡೆಸಿದ ಪರೀಕ್ಷೆಗಳ ಫಲವಾಗಿ, ಮನುಷ್ಯನಲ್ಲಿ ಕಂಡುಬರುವ ಮಲೇರಿಯಾ ಪರೋಪಜೀವಿಯಲ್ಲಿ ಹೇಗೋ ಹಾಗೆ ಈ ಜೀವಕೋಶದಲ್ಲಿ ಕಪ್ಪು ವರ್ಣದ್ರವ್ಯದ ಹಲವು ಕಣಗಳಿದ್ದುದು ಕಂಡುಬಂತು.

ಭಾಷಾಂತರ ೨: (ಮಲೇರಿಯಕ್ಕೂ ಸೊಳ್ಳೆಗೂ ನಡುವೆ ಖಚಿತ ಕೊಂಡಿಯನ್ನು ಅರಸಲು ಸಾಕಷ್ಟು ಕಾಲವನ್ನೂ ಶಕ್ತಿಯನ್ನೂ ವ್ಯಯಿಸಿ) ಹಲವಾರು ವರ್ಷಗಳಕಾಲ ತೀವ್ರಾಧ್ಯಯನ ಮಾಡಿದ. ವಿವಿಧ ಬಗೆಯ ಸೊಳ್ಳೆಗಳನ್ನು ಸೂಕ್ಷ್ಮದರ್ಶಕದ ಮೂಲಕ ತಪಾಸಿಸಿದ. ಆಗ ಅವನಿಗೆ ಹೆಣ್ಣು ಅನಾಫಿಲೀಸ್ ಸೊಳ್ಳೆಯಲ್ಲಿ ವಿಶೇಷ ಬಗೆಯ ಕೋಶವಿರುವುದು ಕಂಡುಬಂದಿತು. ಕೋಶವನ್ನು ಮತ್ತಷ್ಟು ಸೂಕ್ಷ್ಮವಾಗಿ ಅನ್ವೇಷಿಸಿದಾಗ ಅದರಲ್ಲಿ ಕಪ್ಪು ವರ್ಣಕದ ಕೆಲವು ಹರಳುಗಳಿರುವುದು ಪತ್ತೆ ಆಯಿತು. ಇವು ಮನುಷ್ಯನನ್ನು ಪೀಡಿಸುತ್ತಿದ್ದ ಮಲೇರಿಯ ಪರೋಪಜೀವಿಗಳ ವರ್ಣಕಗಳಂತೆಯೇ ಇದ್ದುವು.

ಭಾಷಾಂತರ ೧ರ ಕನ್ನಡ ಜಾಯಮಾನಹೀನತೆಯ ಬಗ್ಗೆ ಟೀಕೆ ಅನಾವಶ್ಯಕ.

೮ ಪಾರಿಭಾಷಿಕ ಪದ ದೋಷ: ಒಂದೇ ಭಾಷಾಂತರದಲ್ಲಿ ಒಂದು ಇಂಗ್ಲಿಷ್ ಪಾರಿಭಾಷಿಕ ಪದಕ್ಕೆ ಹಲವು ಕನ್ನಡ ಪಾರಿಭಾಷಿಕ ಪದಗಳು ಬರುವಿಕೆ. ಇದಕ್ಕೆ ಪರಿಹಾರವೇನು ಎಂಬುದನ್ನು ಈ ಹಿಂದೆ ಚರ್ಚಿಸಲಾಗಿದೆ.

೯ ಉಷ್ಟ್ರಪಕ್ಷಿ ನಿಲವು ದೋಷ: ಆಧುನಿಕ ವಿಜ್ಞಾನ ನಮ್ಮ ನೆಲದಲ್ಲಿ ವಿಕಸಿಸಿಲ್ಲವಾದ್ದರಿಂದ ಖಚಿತ ಪಾರಿಭಾಷಿಕ ಪದಗಳು ಇಲ್ಲಿ ರೂಪುಗೊಂಡಿಲ್ಲ. ಇಂದು ವಿಜ್ಞಾನ ವಾಙ್ಮಯ ಬೆಳೆದು ಅಭಿವರ್ಧಿಸಬೇಕಾದರೆ ಯುಕ್ತ ಪಾರಿಭಾಷಿಕ ಪದಗಳ ಸೃಷ್ಟಿ ಹಾಗೂ ಬಳಕೆ ಅಗತ್ಯ, ಅನಿವಾರ್ಯ. ಭಾಷಾಂತರವಲ್ಲದ ವಿಜ್ಞಾನ ವಾಙ್ಮಯ

ನಿರ್ಮಾಣದಲ್ಲಿ — ಅಂದರೆ ಸ್ವಂತ ರಚನೆಯಲ್ಲಿ — ಪಾರಿಭಾಷಿಕ ಪದಗಳನ್ನು ಕುರಿತಂತೆ ನಮ್ಮ ಧೋರಣೆ ಬಹುತೇಕ ಉಷ್ಟ್ರಪಕ್ಷಿ ನಿಲವು — ಅವು ಬೇಡ ಅರ್ಥಾತ್ ಅವುಗಳ ಅಗತ್ಯ ಕನ್ನಡಕ್ಕೆ ಇಲ್ಲ ಎಂಬಂಥ ಅಂಧದೃಷ್ಟಿ! ಹೀಗಾಗಿ ಪ್ರತಿ ಸಲವೂ ನಿರ್ದಿಷ್ಟ ಪದ ಖಚಿತವಾಗಿಯೂ ಅಡಕವಾಗಿಯೂ ನಿರ್ವಹಿಸಬಲ್ಲ ಭಾವಸಂವಹನ ಕ್ರಿಯೆಯನ್ನು ನಾವು ಹಲವು ಪದಗಳ ವಿವರಣಾತ್ಮಕ ನಿರೂಪಣೆಯಿಂದ ಅಡ್ಡ ಹಾಯುತ್ತ ಬಂದಿದ್ದೇವೆ. ಬಹುಮಂದಿ ಬರೆಹಗಾರರು "ಇದು ಸರಳ ಕನ್ನಡ, ತಿಳಿಯುವ ಕನ್ನಡ" ಎಂಬುದಾಗಿ ಅಜ್ಞಾನದಿಂದ ಒದಗಿರುವ ತಮ್ಮ ಅವೈಜ್ಞಾನಿಕ ನಿಲವನ್ನು ಸಮರ್ಥಿಸಿಕೊಂಡಿರುವುದೂ ಉಂಟು; ಆಗ ಈಗ ಇಂಗ್ಲಿಷ್ ಪದಗಳನ್ನು ಆವರಣಗಳಲ್ಲಿ ಬರೆದು ಸಮಸ್ಯೆಯನ್ನು 'ಜಾರಿಸಿದ್ದೂ' ಉಂಟು. ಎರಡು ಉದಾಹರಣೆಗಳನ್ನು ನೋಡಿ:

ಮೂಲ: Any tangent to a circle cuts it in two coincident points.

ಭಾಷಾಂತರ ೧: ಯಾವುದೇ ವೃತ್ತವನ್ನು ಸ್ಪರ್ಶಿಸಲೆಂದೆಳೆದ ಯಾವುದೇ ಸರಳರೇಖೆ ಅದನ್ನು ಒಂದೇ ಆಗಿರುವ ಎರಡು ಬಿಂದುಗಳಲ್ಲಿ ಛೇದಿಸುತ್ತದೆ.

ಭಾಷಾಂತರ ೨: ಯಾವುದೇ ವೃತ್ತದ ಸ್ಪರ್ಶರೇಖೆ ಅದನ್ನು ಎರಡು ಐಕ್ಯಬಿಂದುಗಳಲ್ಲಿ ಛೇದಿಸುತ್ತದೆ.

ಮೂಲ: Pigments are responsible for the colour of skin.

ಭಾಷಾಂತರ ೧: ಚರ್ಮಕ್ಕೆ ಬಣ್ಣ ಕೆಲಬಗೆಯ ಕಣಗಳಿಂದ ಬರುವುದಾಗಿದೆ.

ಭಾಷಾಂತರ ೨: ವರ್ಣಕಗಳು ಚರ್ಮದ ಬಣ್ಣಕ್ಕೆ ಕಾರಣ.

ಟೀಕೆ: ಭಾಷೆ ಸುಪುಷ್ಟವಾಗಿ ವಿಕಸಿಸಬೇಕಾದರೆ "ಪರಿಕಲ್ಪನೆಗಳನ್ನು ವಿಸರಿಸಿ ಪರಿಹರಿಸುವ ನಿಲವ"ನ್ನು ಮೊದಲು ನಾವು ತೊರೆಯಬೇಕು. ನಾವು ಬಳಸಿದ ಪ್ರತಿಯೊಂದು ಹೊಸ ಪಾರಿಭಾಷಿಕ ಪದಕ್ಕೂ ವಿವರಣೆಯನ್ನೂ ಮತ್ತು/ಅಥವಾ ಇಂಗ್ಲಿಷ್ ಸಮಾನ ಪದವನ್ನೂ ಅದು ಮೊದಲ ಬಾರಿಗೆ ಬಂದಾಗ ಅಲ್ಲಲ್ಲೇ ಕೊಡುವುದು ಅಪೇಕ್ಷಣೀಯ. ಪುಸ್ತಕದ ಕೊನೆಯಲ್ಲಿ ಕೋಷ್ಟಕವನ್ನು ಸಹ ಸೇರಿಸಬಹುದು.

೧೦ ಉಚ್ಚಾರಣಾದೋಷ: ಹಲವಾರು ಇಂಗ್ಲಿಷ್ ಪಾರಿಭಾಷಿಕ ಪದಗಳನ್ನೂ ಎಲ್ಲ ಅಂಕಿತನಾಮಗಳನ್ನೂ ತದ್ವತ್ತಾಗಿ ಕನ್ನಡಕ್ಕೆ ಸಾಗಹಾಕಬೇಕಾಗುತ್ತದೆ. ಈ ಕೆಲಸದಲ್ಲಿ ನಮ್ಮ ವೈಯಕ್ತಿಕ ವಕ್ರತೆಗಳು ನುಸುಳದಂತೆ ಎಚ್ಚರ ವಹಿಸಬೇಕು. ಶಿಷ್ಟ ನಿಘಂಟುಗಳ ಆಧಾರದಿಂದ ಲಿಪ್ಯಂತರಣ ಮಾಡುವುದೊಂದೇ ಸರಿಯಾದ ಕ್ರಮ. ಕೆಲವು ಉದಾಹರಣೆಗಳನ್ನು ನೋಡಿ:

ಇಂಗ್ಲಿಷ್	ತಪ್ಪು ಲಿಪ್ಯಂತರಣ	ಸರಿ ಲಿಪ್ಯಂತರಣ
Henri Poincare	ಹೆನ್ರಿ ಪಾಯ್ಙ್ಕಾರೇ	ಆನ್ರೀ ಪ್ವಾನ್‌ಕ್ಯಾರೇ
Erwin Schrodinger	ಎರ್ವಿನ್ ಶ್ರೋಡಿಂಗರ್	ಎರ್ವಿನ್‌ಶ್ರೇಡಿಂಗರ್
radar	ರಾಡಾರ್	ರೇಡಾರ್
trinitro-toluene	ಟ್ರೈನೈಟ್ರೊ ಟಾಲಿನ್	ಟ್ರೈನೈಟ್ರೊಟಾಲ್ಯೀನ್

IV ಮೂಲಗ್ರಂಥದಲ್ಲಿ ವ್ಯಾಕರಣ ದೋಷಗಳೂ ತರ್ಕದೋಷಗಳೂ ಎದುರಾಗಬಹುದು; ಭಾಷೆ ತೀರ ನೀರಸವಾಗಿ ಸಾಗುತ್ತಿರಬಹುದು. ಇಂಥ ಸನ್ನಿವೇಶಗಳಲ್ಲಿ ಭಾಷಾಂತರಕಾರನ ಪಾತ್ರವೇನು? ಇವನ್ನೆಲ್ಲ ಸಮರ್ಥವಾಗಿ ನಿವಾರಿಸಿ ತರ್ಕಶುದ್ಧ ಹಾಗೂ ಆಕರ್ಷಕ ಸಂವಹನತೆ ಕನ್ನಡಾನುವಾದದಲ್ಲಿ ಒದಗುವಂತೆ ಎಚ್ಚರ ವಹಿಸುವುದು ಆತನ ನೈತಿಕ ಹೊಣೆ. ಅಂತಿಮವಾಗಿ ಜ್ಞಾನವೊಂದೇ ಸತ್ಯವಾದದ್ದು, ಅದರ ಮುಂದೆ ಮೂಲಕರ್ತೃವೂ ಭಾಷಾಂತರಕಾರನೂ ಶಿಶುಗಳು ಎಂಬುದನ್ನು ಮರೆಯಬಾರದು.

ಪರಿಕಲ್ಪನಾತ್ಮಕ ಸ್ಪಷ್ಟತೆ (conceptul clarity) ಎಂಬುದರ ಬಗ್ಗೆ ಇಲ್ಲಿ ಪ್ರಸ್ತಾವಿಸುವುದು ಅಗತ್ಯ.

ಒಂದು ಉದಾಹರಣೆ ನೋಡಿ. ನಮ್ಮ ದೇಹಕ್ಕೆ ದವಸ, ಧಾನ್ಯ, ಹಾಲು, ಮೊಟ್ಟೆ, ತರಕಾರಿ, ಹಣ್ಣು ಮುಂತಾದವು ಮಾತ್ರ ಆಹಾರ ಆಗಬೇಕು ಏಕೆ? ಕಲ್ಲು, ಮಣ್ಣು, ಮರ, ಲೋಹ, ಬಟ್ಟೆ ಕಾಗದ ಆಗಬಾರದು ಏಕೆ? "ದೇಹ ಮತ್ತು ಆಹಾರ" ಎಂಬುದನ್ನು ಕುರಿತ ಯಾವದೇ ಲೇಖನ ಈ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರವನ್ನು ಕೊಡುವುದು ಆದ್ಯ ಆವಶ್ಯಕತೆ. "ಆಹಾರ ಬದುಕಿಗೆ ಅವಶ್ಯ. ಅದಿಲ್ಲದಿದ್ದರೆ ನಮ್ಮ ಚಟುವಟಿಕೆಗಳಿಗೆ ಬೇಕಾಗುವ ಶಕ್ತಿ ಒದಗದು. ದೇಹ ಸೊರಗುತ್ತದೆ..." ಈ ಧಾಟಿಯಲ್ಲಿ ಹೋಗುವ ಲೇಖನ ಎಷ್ಟೇ ಸರಳವಾಗಿದ್ದರೂ ಆಕರ್ಷಕವಾಗಿದ್ದರೂ ಅದು ಕೇವಲ ಪದಗಳ ಅಪವ್ಯಯವಾದೀತು ಅಷ್ಟೆ. ಮೂಲತಃ ಈ ಲೇಖನ ಆಹಾರವೆಂದರೇನು ಎಂಬುದನ್ನು ಸ್ಪಷ್ಟಪಡಿಸಲೇಬೇಕು.

ದೇಹವೆಂಬುದು ರಾಸಾಯನಿಕವಾಗಿ ನೀರು, ಸಸಾರಜನಕ ಪದಾರ್ಥಗಳು, ಶರ್ಕರಗಳು ಹಾಗೂ ಕೆಲವೊಂದು ಲವಣಗಳು — ಇವುಗಳ ಕ್ರಮಬದ್ಧ ಸಂಯೋಜನೆ. ಇದೊಂದು ರಾಸಾಯನಿಕ ಕಾರ್ಖಾನೆ. ಈ ಕಾರ್ಖಾನೆ ಕಾರ್ಯನಿರ್ವಹಿಸಲು ಇಂಧನ ಅವಶ್ಯ. ಇವೇ ಪದಾರ್ಥಗಳನ್ನು ಒದಗಿಸುವ ವಸ್ತುಗಳು ಮಾತ್ರ ದೇಹಕಾರ್ಖಾನೆಗೆ ಇಂಧನವಾಗಬಲ್ಲವು. ಎಂದೇ ಸಸ್ಯ ಹಾಗೂ ಪ್ರಾಣಿಗಳು ಮಾತ್ರ ಮನುಷ್ಯದೇಹಕ್ಕೆ ಇಂಧನವಾಗಲು, ಅಂದರೆ ಆಹಾರವಾಗಲು, ಅರ್ಹತೆ ಪಡೆದಿರುವುದಾಗಿದೆ.

ಲೇಖನದಲ್ಲಿ ಈ ತೆರನಾಗಿ ಪರಿಕಲ್ಪನಾತ್ಮಕ ಸ್ಪಷ್ಟತೆಯನ್ನು ಮೊದಲು ಸಾಧಿಸಿ ತದನಂತರವೇ ಉಳಿದ ವಿವರಗಳತ್ತ ಲಕ್ಷ್ಯ ಹರಿಸಬೇಕು. ಇಂಥ ಲೇಖನ ಮಾತ್ರ ಗಟ್ಟಿ ನೆಲದ ಮೇಲೆ ನಿಂತಿರಬಲ್ಲದು.

ಭಾಷಾಂತರಕಾರನಾದರೂ ಮಾಡಬೇಕಾದದ್ದು ಪ್ರಧಾನತಃ ಇದೇ ಕಾರ್ಯವನ್ನು. ಮೂಲದ ಪರಿಕಲ್ಪನೆ ಅನುವಾದದಲ್ಲಿ ಅಷ್ಟೇ ಖಚಿತವಾಗಿ ಸ್ಪಷ್ಟವಾಗಿ ಪಡಿಮೂಡುವಂತೆ ಎಚ್ಚರ ವಹಿಸುವುದು ಅವನ ಹೊಣೆ. ಅನುವಾದಗ್ರಂಥವಿರುವುದು ಮೂಲವನ್ನು ಓದಿ ತಿಳಿಯಲಾರದವರಿಗೆ ಎಂದಮೇಲೆ ಭಾಷಾಂತರಕಾರನ ಮೇಲೆ ಎಂಥ ಗುರುತರ ಜವಾಬ್ದಾರಿ ಇದೆ ಎಂಬುದು ಸ್ಪಷ್ಟವಾಗುತ್ತದೆ. ಉದ್ದಿಷ್ಟ ಭಾಷೆಯ ಸೀಮಿತತೆ

ಯಿಂದಾಗಿ ಪರಿಕಲ್ಪನಾತ್ಮಕ ಸ್ಪಷ್ಟತೆಗೆ ಊನವಾದೀತೆಂದು ಈತನಿಗೆ ಅನ್ನಿಸಿದಲ್ಲೆಲ್ಲ ಸ್ವಲ್ಪ ಸ್ವಾತಂತ್ರ್ಯ ವಹಿಸಿ ಭಾಷಾಂತರವನ್ನು ಲಂಬಿಸುವುದು ಅಪೇಕ್ಷಣೀಯ.

ಪರಿಕಲ್ಪನಾತ್ಮಕ ಸ್ಪಷ್ಟತೆ ಎಂಬುದು ಲೇಖನದ/ಗ್ರಂಥದ ಭದ್ರ ಕಂಕಾಲ. ಇದರ ಸುತ್ತ ಹೆಣೆದ ವಿವರಣೆ ಮಾತ್ರ ಚೆಲುವನ್ನು ಪಡೆಯುತ್ತದೆ, ಓದುಗನಿಗೆ ಉಪಯುಕ್ತವಾಗುತ್ತದೆ. ಪರಿಕಲ್ಪನಾತ್ಮಕ ಸ್ಪಷ್ಟತೆ ಇಲ್ಲದ ಲೇಖನ/ಗ್ರಂಥ ಸ್ವತಂತ್ರ ರಚನೆಯೇ ಇರಲಿ, ಭಾಷಾಂತರ ಕೃತಿಯೇ ಇರಲಿ — ಅಂತಿಮವಾಗಿ ಅದೊಂದು ಗೊಂದಲದ ಸಂತೆ, ವ್ಯರ್ಥಾಲಾಪ ಪ್ರಲಾಪಗಳ ಬೊಂತೆ.

ಮುಕ್ತಾಯ

ಈ ತನಕದ ವಿಶ್ಲೇಷಣೆಯನ್ನು ಓದಿದ ನಿಮ್ಮಲ್ಲಿ ಒಂದು ಭಾವನೆ ಸ್ಫುರಿಸಿರಬಹುದು: ಆದರ್ಶ ಸನ್ನಿವೇಶದಲ್ಲಿ ಇದು ಸರಿಹೋದೀತೊ ಏನೊ; ಸದ್ಯ ಅತಿ ತುರ್ತಾಗಿ ಕನ್ನಡದಲ್ಲಿ ಆಧುನಿಕ ವಿಜ್ಞಾನ ವಾಙ್ಮಯದ ಭಾಷಾಂತರ ಮೈದಳೆಯಬೇಕಾಗಿವೆ; ಇಲ್ಲಿ ನಾವು ತುಂಬ ಬಿಗಿ ಯಾ ಜಿಗುಟಾದರೆ ತಪ್ಪು ಹುಡುಕಲು ಕೂಡ ಭಾಷಾಂತರ ಸಾಹಿತ್ಯ ದೊರೆಯಲಾರದು; ಆದ್ದರಿಂದ ಅಲ್ಪಸ್ವಲ್ಪ ರಿಯಾಯಿತಿಯಿಂದ ಸಾಧಾರಣ ದರ್ಜೆಯವನ್ನು ಮಂಜೂರು ಮಾಡಿ ಕ್ರಮೇಣ ಪರಿಪೂರ್ಣತೆಯತ್ತ ಸಾಗುವುದು ಸಾಧು ಅಲ್ಲವೇ?

ಈ ಪ್ರಶ್ನೆಗೆ ನನ್ನ ಉತ್ತರವಿದು. ಇವೆಲ್ಲ ಸಂದೇಹಾತಂಕಗಳೂ ಅತೀತಶೈಕ್ಷಣಿಕವಾದವು (extra-academic), ನಾನು ಚರ್ಚೆಗೆ ಆಯ್ದುಕೊಂಡಿರುವ ವಿಷಯದ ಪರಿಧಿಯೊಳಗೆ ಬರದವು. ಆದರೂ ಒಂದು ಎಚ್ಚರಿಕೆಯ ಮಾತು ಹೇಳಬಯಸುತ್ತೇನೆ. ಐತಿಹಾಸಿಕ ಕಾರಣಗಳಿಂದ ಕನ್ನಡ ಈ ತನಕ ಆಧುನಿಕ ವಿಜ್ಞಾನದ ಮಾಧ್ಯಮವಾಗಿ ಪಳಗಿರುವುದಿಲ್ಲ. ಸಮರ್ಥರ ಶಾಸ್ತ್ರೀಯ ಕೃಷಿಯಿಂದ ಕ್ರಮೇಣ ಈ ಪಳಗುವಿಕೆ ಸಾಧಿತವಾಗಬೇಕೇ ವಿನಾ ಬೇರೆ ಯಾವುದೇ ಒಳ ಯಾ ದಿಢೀರ್ ಕ್ರಮಗಳಿಂದ ಅಲ್ಲ. ಇದನ್ನು ಗಂಭೀರವಾಗಿ ಗಮನಿಸಿ ಅರಿತು ವೈಜ್ಞಾನಿಕವಾಗಿ ಕಾರ್ಯೋದ್ಯುಕ್ತರಾದೆವೊ ಕನ್ನಡ ಖಂಡಿತ ಸರ್ವಾಂಗ ಸುಂದರವಾಗಿ ಮೈತುಂಬಿ ವಿಕಸಿಸುತ್ತದೆ. ಹಾಗಲ್ಲದೆ ಭಾವುಕತೆ ರಾಗ ಭಾವಗಳಿಗೆ ಮತ್ತು ಇತರ ಅತೀತಶೈಕ್ಷಣಿಕ ಕಾರಣಗಳಿಗೆ ಪಕ್ಕಾಗಿ ಸಾಕಷ್ಟು ಹಣವನ್ನೂ ಪ್ರಕಟಣ ವ್ಯವಸ್ಥೆಯನ್ನೂ ಒದಗಿಸಿ "ಭಾಷಾಂತರಗಳು ಮೈದಳೆಯಲಿ" ಎಂಬುದಾಗಿ ಸುಗ್ರೀವಾಜ್ಞೆ ಹೊರಡಿಸಿವೆವೊ "ವೆಚ್ಚಕ್ಕೆ ಹೊನ್ನುಂಟು, ಅಚ್ಚುಸಾಲೆಗಳುಂಟು — ಕಚ್ಚಡವ ಪೇರಿಡಲು ಪತ್ತಾಯ ಹಿರಿದುಂಟು!" ಎಂಬುದಂತೂ ತಿಳಿದದ್ದೇ. ವೈಜ್ಞಾನಿಕ ವಿಧಾನ ಸ್ವತಃ ವಿಜ್ಞಾನಕ್ಕಿಂತಲೂ ವಿಜ್ಞಾನ ವಾಙ್ಮಯ ಭಾಷಾಂತರಕ್ಕೆ ಅತ್ಯಗತ್ಯ, ಅನಿವಾರ್ಯ ಕೂಡ. ಸಾವಿರ ವಿಕೃತಿಗಳಿಂದ ಎಂದೂ ಯಾವ ಸತ್ಕೃತಿಯೂ ರೂಪುಗೊಳ್ಳದು; ವಿಕೃತಿಗಳು ಉತ್ಪಾದಿಸುವ ವಿಪುಲ ಮಲಿನ ರಕ್ತ, ಸತ್ಕೃತಿಗಳು ಉತ್ಪಾದಿಸುವ ಅಲ್ಪ ಶುದ್ಧ ರಕ್ತವನ್ನು ಕೆಡಿಸುವುದು ಇಲ್ಲವೇ

ಹೊರತಳ್ಳಿಬಿಡುವುದು ನಿಸರ್ಗನಿಯಮ. ಸತ್ಕೃತಿಯ ಅವತಾರ ಆಗಬೇಕಾದರೆ ಮೊದಲಾಗಿ ಭಾಷಾಂತರಕಾರರು ತಪಸ್ಸು ಎಸಗಿ ಅರ್ಹತೆಯನ್ನು ಗಳಿಸಿಕೊಳ್ಳಬೇಕು. ಎರಡನೆಯದಾಗಿ ಅವರು ಕಠಿನ ಪರಿಶ್ರಮ ವಹಿಸಿ ಶ್ರದ್ಧಾಪೂರ್ವಕವಾಗಿ ಭಾಷಾಂತರವೆಂಬ ಪವಿತ್ರ ಕಾರ್ಯವನ್ನು ನಿರ್ವಹಿಸಬೇಕು. ಹೀಗೆ ಮಾಡಿದಾಗ ಮಾತ್ರ ಭಾಷಾಂತರಕಾರ ಮೂಲ ಲೇಖಕನ ವಿಶ್ವಾಸವನ್ನು ಉಳಿಸಿಕೊಳ್ಳುತ್ತಾನೆ. ಒಂದಿಗೆ ಉದ್ದಿಷ್ಟ ಓದುಗನ ಕೃತಜ್ಞತೆಗೆ ಪಾತ್ರನಾಗುತ್ತಾನೆ.

೧೬ ಶಾಸನಗಳ ಭಾಷಾಂತರ—ವಿಶಿಷ್ಟ ಸಮಸ್ಯೆಗಳು

ಬಾ. ರಾ. ಗೋಪಾಲ್

ಶಾಸನಗಳು ಮೂಲತಃ ದಾಖಲೆಗಳು. ಅರಸನೋ, ಅಧಿಕಾರಿಯೋ ತಾನು ಮಾಡಿದ ದಾನವನ್ನು ಈ ದಾಖಲೆಗಳಲ್ಲಿ ಉಲ್ಲೇಖಿಸುತ್ತಾನೆ. ನಾಡಿಗಾಗಿ, ಆಸ್ತಿಪಾಸ್ತಿಗಳ ರಕ್ಷಣೆಗಾಗಿ ಜೀವವನ್ನು ತೊರೆದ ವೀರರ, ಸಲ್ಲೇಖನ ಮುಂತಾದ ವ್ರತಗಳಿಂದ ಬಾಳನ್ನು ಅಂತ್ಯಗೊಳಿಸಿದ ಸನ್ಯಾಸಿಗಳ, ಭಕ್ತರ ಸ್ಮಾರಕಗಳಲ್ಲಿ, ಹಲವಾರು ಸಂದರ್ಭಗಳಲ್ಲಿ, ಅವರು ಮಾಡಿದ ತ್ಯಾಗದ ವರ್ಣನೆಗಳಿರುತ್ತವೆ. ಹೀಗೆ ವಿಧವಿಧದ ಶಾಸನಗಳಲ್ಲಿ ಅಂದಿನ ಘಟನೆಗಳ ಚಿತ್ರಣಗಳನ್ನು ಕಾಣುತ್ತೇವೆ. ಇವುಗಳಲ್ಲಿ ಉಪಯೋಗಿಸಿರುವ ಸಂಸ್ಕೃತ, ಕನ್ನಡ, ತಮಿಳು, ತೆಲುಗು ಭಾಷೆಗಳನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸುವುದು ಸುಲಭವಲ್ಲ. ಅನೇಕ ಸಂದರ್ಭಗಳಲ್ಲಿ ಪ್ರಸಿದ್ಧ ಪಂಡಿತರೇ ಇಂತಹ ಕಡೆ ಎಡವಿರುವುದೂ ಉಂಟು. ಇದಕ್ಕೆ ಹಲವಾರು ಕಾರಣಗಳನ್ನು ನೀಡಬಹುದು. ಮೊದಲನೆಯದು ಭಾಷಾಂತರಕ್ಕೊಳಗಾದ ಭಾಷೆಯನ್ನು ಕುರಿತಾದ ಅಜ್ಞಾನ. ಎರಡನೆಯದು ಸಾಂಸ್ಕೃತಿಕ ತೊಡಕುಗಳು—ಎಂದರೆ ಮೂಲಭಾಷೆಯಲ್ಲಿಯೇ ಭಾಷಾಂತರಿಸಲಿಕ್ಕಾಗದಂತಹ ತೊಡಕುಗಳಿರುವುದು. ಪ್ರಾಚೀನ ಶಾಸನಗಳ ಭಾಷೆ ಈಗ ಪ್ರಚಲಿತವಿಲ್ಲದೆ, ಭಾಷೆ ಬೆಳೆದಿರುವಾಗ, ಹಿಂದಿನ ಭಾಷೆಗೆ ಸಂಬಂಧಿಸಿದ ಮೌಲ್ಯಗಳು, ಅವುಗಳ ಅರ್ಥ ಸ್ಪಷ್ಟವಿಲ್ಲದೆ ಆ ಶಾಸನಗಳಲ್ಲಿನ ಹಲವಾರು ಮಾತುಗಳನ್ನು ಈಗ ಅರ್ಥೈಸಲು ಸಾಧ್ಯವಾಗದೇ ಹೋಗುತ್ತದೆ. ಇವುಗಳ ಜೊತೆಗೆ ಭಾಷಾಂತರಿಸಲು ಸರಳವಾಗದಂತಹ ಹಲವಾರು ಮಾತುಗಳನ್ನು ಶಾಸನಕೆಳಲ್ಲಿ ಕಾಣುತ್ತೇವೆ. ಆದುದರಿಂದ ಶಾಸನಗಳನ್ನು ಭಾಷಾಂತರಿಸುವಾಗ ಇಂತಹ ವಿಶಿಷ್ಟ ಸಮಸ್ಯೆಗಳನ್ನು ಭಾಷಾಂತರಕಾರ ಎದುರಿಸಬೇಕಾಗುತ್ತದೆ.

ಇಲ್ಲಿ ಕೆಲವು ಉದಾಹರಣೆಗಳನ್ನು ನೀಡುವುದರ ಮೂಲಕ ಮೇಲಿನ ಮಾತುಗಳನ್ನು ಸ್ಪಷ್ಟಪಡಿಸಬಹುದು. 1886ರಲ್ಲಿ ಎಪಿಗ್ರಾಫಿಯ ಕರ್ನಾಟಿಕದ ಮೊದಲ ಸಂಪುಟದಲ್ಲಿ ಕೊಡಗಿನ ಶಾಸನಗಳನ್ನು ಪ್ರಕಟಿಸಿದ ರೈಸ್‌ರವರು 1914ರಲ್ಲಿ ಅದರ ಪರಿಷ್ಕೃತ ಆವೃತ್ತಿಯನ್ನು ಭಾರತ ಸರ್ಕಾರಕ್ಕಾಗಿ ಪ್ರಕಟಿಸಿದರು. ಅದರಲ್ಲಿ ಮೂವರವಳ್ಳಿಯ ಶಾಸನವೂ ಒಂದು. ಕೈವಲ್ಯ ಎಂಬ ಯತಿಗೆ ಮೂವರವಳ್ಳಿ ಗ್ರಾಮವನ್ನು ಬೇಲೂರು ಕೃಷ್ಣಪ್ಪ ನಾಯಕನು ದತ್ತಿ ನೀಡಿದ ವಿಷಯ 18ನೆಯ ಶತಮಾನದ ಈ ಶಾಸನದಲ್ಲಿ ಉಕ್ತವಾಗಿದೆ ಶಾಸನದಲ್ಲಿ ಒಂದು ಪದ್ಯ ಹೀಗಿದೆ :

ಬೇಲೂರು ಕೃಷ್ಣಪಸ್ತು ಆಹೂಯ ಯತಿಕುಂಜರಂ
ಮೂದ್ರವಳ್ಳೀ ಚ ಗ್ರಾಮುಸ್ತು ದತ್ತಂ ಕೃಷ್ಣಾರ್ಪಣಂ ಶುಭಂ

ಈ ಪದ್ಯವನ್ನು ರೈಸ್‌ರವರು ಹೀಗೆ ಭಾಷಾಂತರಿಸಿದ್ದಾರೆ :[1]

Bēlūr king Kṛishṇa gave him an elephant, sending for him and the Mūdravaḷḷi village as an auspicious offering to Kṛishṇa. ಇಲ್ಲಿ ಯತಿಕುಂಜರಂ ಎಂಬ ಸಮಸ್ತಪದವನ್ನು ಬಿಡಿಸಿ ಕುಂಜರಂ ಎಂಬ ಪದಕ್ಕೆ ಆನೆ ಎಂಬ ಅರ್ಥ ನೀಡಿರುವುದರಿಂದ ಮೇಲಿನ ಅನರ್ಥ ಸಂಭವಿಸಿತು. ವಾಸ್ತವಿಕವಾಗಿ ಕುಂಜರಂ ಎಂಬ ಪದಕ್ಕೆ eminent ಎಂಬ ಅರ್ಥ ನೀಡಿದಾಗ "The Bēlūr king Kṛishṇa inviting that eminent sage(*yati*) gave the village Mūdravaḷḷi as an auspicious offering to lord Kṛishṇa" ಎಂಬುದು ಸರಿಯಾದ ಭಾಷಾಂತರವಾಗುತ್ತದೆ.[2] ಇಲ್ಲಿ ಅಜ್ಞಾನವೆಂಬುದರ ಜೊತೆಗೆ ಸಾಂಸ್ಕೃತಿಕ ತೊಡಕೂ ಕಾರಣವೆನ್ನಬಹುದು. ಯತಿಕುಂಜರ ಎಂಬ ಮಾತುಗಳನ್ನು ಪದಶಃ ಅರ್ಥಮಾಡುವಾಗ ನಮ್ಮಲ್ಲಿ ಯತಿಶ್ರೇಷ್ಠರಿಗೆ ಅನ್ವಯಿಸುವ ಸಾಮಾನ್ಯ ವಿಶೇಷಣವಿದೆಂಬ ಅಂಶವನ್ನು ಮನಗಾಣದಿರುವುದೂ ರೈಸ್‌ರವರು ನೀಡಿದ ಭಾಷಾಂತರಕ್ಕೆ ಕಾರಣವಾಗಿರಬಹುದು. ಅವರೂ ಅನೇಕ ಪಂಡಿತರ ನೆರವು ಪಡೆದಿದ್ದ, ಆ ವೇಳೆಗಾಗಲೇ ನಾಲ್ಕು ದಶಕಗಳಿಗೂ ಮೀರಿದ ಕಾಲವನ್ನು ಶಾಸನಾಭ್ಯಾಸದಲ್ಲಿ ತೊಡಗಿಸಿದ್ದ ರೈಸ್‌ರವರು ಇಂತಹ ಭಾಷಾಂತರವನ್ನು ಮಾಡಿದುದಕ್ಕೆ ಮೇಲಿನ ಕಾರಣಗಳನ್ನು ನಾವು ಮುಂದೂಡುವುದು ಸಮರ್ಥಕವಲ್ಲವೇನೋ ಎನಿಸುತ್ತದೆ.

ಹಿಂದೊಮ್ಮೆ ಡಾ. ಎಲ್. ಡಿ. ಬಾರ್ನೆಟ್‌ರವರು ಇಂತಹ ತಪ್ಪನ್ನು ಮಾಡಿದ್ದರೆಂಬುದನ್ನು ಇಲ್ಲಿ ಸ್ಮರಿಸಬಹುದು. ಧಾರವಾಡ ಜಿಲ್ಲೆಯ ಸೂಡಿಗ್ರಾಮದಲ್ಲಿ ದೊರೆತ ಕಲ್ಯಾಣದ ಚಾಲುಕ್ಯ ಮನೆತನದ ಅರಸನಾದ ಮೊದಲನೆಯ ಸೋಮೇಶ್ವರನ ಶಕ ಸಂವತ್ಸರ 981 (ಕ್ರಿ.ಶ. 1059-60)ನೆಯ ವರ್ಷದ ಶಾಸನವೊಂದರಲ್ಲಿನ ಪದ್ಯ ಹೀಗಿದೆ :

ಗೊರವರ್ಕ್ಕಳಾಮುಖನ್ನೃಷಿ ಕರೆಸಿಸದೊಡಂ ಭೋಗದೊಳಂ ಮೂರುಪೊತ್ತುಂ
ವರಕಾನ್ತಾಸಂಕುಳಂ ಬನ್ದಿರದೆ ತಡೆವಡಂ ವಿಶ್ವವಿದ್ಯಾರ್ಥಿಗಳ್ ಬಿ
ತ್ತರದಿಂದಾಪೊತ್ತುಮೋದುತ್ತಿರದೊಡಂ ಇರಿಸಲ್ಕಾಗದೆಂದುಂ ಪರಾಧೀ
ಶ್ವರರೆನ್ದೀಧರ್ಮ್ಮಮಂ ನಿರ್ಮ್ಮಿಸಿ ನಿಯಮಿಸಿದಂ ಸೂಡಿಯೊಳ್ ನಾಗದೇವಂ

ನಾಗದೇವ ಎಂಬಾತ ಗ್ರಾಮದಲ್ಲಿನ ದೇವಾಲಯದಲ್ಲಿರುವ ಸನ್ಯಾಸಿಗಳಿಗೆ, ಕೆಲಸಗಾರರಿಗೆ, ವಿದ್ಯಾರ್ಥಿಗಳಿಗೆ ಕೆಲವು ನಿಯಮಗಳನ್ನು ರೂಪಿಸಿ ಅವುಗಳನ್ನು ಅನುಸರಿಸಬೇಕೆಂದು ಮಾಡಿದ ವ್ಯವಸ್ಥೆ ಈ ಪದ್ಯದಲ್ಲಿದೆ. ಶಾಸನವನ್ನು ಸಂಪಾದಿಸಿದ ಡಾ. ಎಲ್. ಡಿ. ಬಾರ್ನೆಟ್‌ರವರು ಅದನ್ನು ಭಾಷಾಂತರಿಸಿದ್ದು ಹೀಗೆ :

It the Goravas and Kāḷāmukhas should not be devout, if they should be so neglectful that the company of fair women should not come for three days for enjoyment, or if all the students should fail to study actively always the worthy Superintendent must never allow them to stay; to this affect Nāgadēva established and regulated this pious foundation at Sūṇḍi.

ಇದರಿಂದಾದ ಅನರ್ಥ ಹೇಗಿದೆ ನೋಡಿ! ಕಾನ್ತಾ ಸಂಕುಳದ ಸಹವಾಸ ಮೂರು ದಿನಗಳಿಲ್ಲದಿರುವಷ್ಟು ಗೊರವರು ಕಾಳಾಮುಖರು ಅಜಾಗರೂಕರಾಗಿದ್ದಲ್ಲಿ—ಎಂಬ ಅರ್ಥ ಈ ಮೇಲಿನ ಭಾಷಾಂತರದಿಂದ ಉಂಟಾಗುತ್ತದೆ. ಇದು ನಿಜವಾಗಿಯೂ ಗುರುತರವಾದ ತಪ್ಪು. 'ನೈಷ್ಠಿಕರೆನಿಸಪೊಡಂ' ಎಂಬ ಮಾತನ್ನು ಮುಂದಿನ 'ಭೋಗದೊಳುಂ ಮೂರುಪೊತ್ತುಗಂ' ಎಂಬ ಮಾತಿನೊಡನೆ ಸೇರಿಸಿದುದರ ಕಾರಣ, ಹಾಗೂ ಇಂತಹ ನೈಷ್ಠಿಕರು ಕಾಂತಾ ಸಂಕುಳದೊಡನಿರಬಾರದೆಂಬುವರ ಅರಿವೇ ಇಲ್ಲದುದರ ಕಾರಣ ಈ ಭಾಷಾಂತರ ಬಂದಿತು. ವಾಸ್ತವವಾಗಿ ದೇವಸ್ಥಾನದಲ್ಲಿ ಮೂರು ಕಾಲದಲ್ಲಿ ನಡೆವ ಪೂಜೆಗೆ ಅಲ್ಲಿನ ನಿಯಮಿತರಾದ ಸೇವಕರು ಬಾರದೆ ಇರಬಾರದೆಂಬ ಕಟ್ಟಳೆಯನ್ನು ಇದು ಸೂಚಿಸುತ್ತದೆ. ಮೇಲಿನ ಭಾಷಾಂತರದಿಂದಾದ ತಪ್ಪನ್ನು ಮನಗಂಡ ಶ್ರೀ ಹೆಚ್. ಕೃಷ್ಣಶಾಸ್ತ್ರಿಗಳು ಈ ಪದ್ಯದ ಭಾಗದ ಭಾಷಾಂತರವನ್ನು ಹೀಗೆ ತಿದ್ದಿದ್ದಾರೆ.[4].... If the company of fair women (i. e. the temple servants) should be neglectful and not attend the three occasions of service of Bhōga....

ತಲಕಾಡಿನ ಗಂಗರ, ಬನವಾಸಿಯ ಕದಂಬರ ಕನ್ನಡ ಶಾಸನಗಳಲ್ಲಿ ಬಳಸಲಾದ ಭಾಷೆಯ ಸ್ವರೂಪ ಇಂದಿನದಕ್ಕಿಂತ ಭಿನ್ನವಾಗಿದ್ದು ಅನೇಕ ಸಂದರ್ಭಗಳಲ್ಲಿ ಅವುಗಳನ್ನು ಅರ್ಥೈಸುವುದು ಕಷ್ಟವೇ ಸರಿ. ನಂಜನಗೂಡು ತಾಲೂಕಿನ ಗಟ್ಟವಾಡಿ ಗ್ರಾಮದ ಒಂದು ಶಾಸನವನ್ನು ಇಲ್ಲಿ ಉಲ್ಲೇಖಿಸಬಹುದು. ನೀತಿಮಾರ್ಗಗಂಗನ ಆಳಿಕೆಯ ಐದನೆಯ ವರ್ಷಕ್ಕೆ ಸೇರಿದ ಈ ಶಾಸನದಲ್ಲಿ 'ತಾಯೂಶ ಪಱಕೆಱ ಬಸವಯ್ಯ ತನ್ನ ಪರದಿಯ ಜೋಳದ ಕೆಯ್ಯಪಱ ಕದ್ದುಳ ದೆಡಕೆಯ್ಯಿಸಿ ಮಾರಗವುಣ್ಡ ಸನ್ತಿಗವುಣ್ಡಗಂ ಏಪ್ಪದಿ ಜೋಗ್ಗ ಪಳಿ ಮರಿಗಕುವ್ಬಣ್ಣಗಂ ಎಳಮಕ್ಕಳ್ಗೆ ಮೆಚ್ಚಿ ಪೊಗೆವಗೆಯ ತೆಱಬಿಟ್ಟ"ನೆಂದಿದೆ.[5] ಇದನ್ನು ರೈಸ್‌ರವರು "ತಾಯೂರ ಪರೆಕೆರೆ ಬಸವಯ್ಯನು ಒಡ್ಡಿನ ಬಳಿಯ ತನ್ನ ಜೋಳದ ಹೊಲವನ್ನು....ಮಾಡಿ ಆ ನೀರುಳ್ಳ ಸ್ಥಳ (ಸಾಲುಹೊಳೆ–fords ?)ವನ್ನು ಮಾರಗವುಣ್ಡ, ಸಾನ್ತಿಗವುಣ್ಡ, ಎಪ್ಪತ್ತು (ಜನ), ಹಳ್ಳಿಮರಿಗಕುಂಬಣ್ಣ ಇವರಿಗೆ ಮತ್ತು ಬುಗವೆಯ ಚಿಕ್ಕಮಕ್ಕಳನ್ನು ಕಂಡು ಸಂತಸಪಟ್ಟು ಆಕೆಗೆ" ಕೊಟ್ಟನೆಂದು (Paṛekare Basavayya of Tāyūr making...his maize field at the embankment granted the (?) ford to Māra-gavuṇḍa, Sānti-gavuṇḍa, the Seventy, Haḷḷi

Mariga Kumbaṇṇa and being pleased with her children, also to Bugave"[6] ಎಂದು ಭಾಷಾಂತರಿಸಿದ್ದಾರೆ. 'ಎಳಮಕ್ಕಳ್ಗೆ ಮೆಚ್ಚಿ' ಎಂಬುದನ್ನು ಎಳೆಮಕ್ಕಳನ್ನು ಕಂಡು ಸಂತೋಷಪಟ್ಟು ಎಂದು ಅರ್ಥಬರುವಂತೆ ಮಾಡಿದ್ದಾರೆ. ವಾಸ್ತವಿಕವಾಗಿ ಎಳೆಮಕ್ಕಳ್ ಎಂಬುದು ಗ್ರಾಮದ ಸಭೆಗೆ ಅಂದಿನ ಹೆಸರು. ತಮಿಳು ಭಾಷೆಯಿಂದ ಎರವಲು ಪಡೆದ ಮಾತಿದು. "ತನ್ನ ಪರಂಬೆಯ ಜೋಳದ ಕೆಯ್ಯ ಬೆಳಸಿಕೆಯ್ಯುಳವಿದ ಕೆಯ್ಯಿಸಿ" ಎಂಬುದಕ್ಕೆ ನಾನು "ಬೀಳು ಬಿದ್ದಿದ್ದ ತನ್ನ ಜೋಳದ ಹೊಲವನ್ನು ಫಲವತ್ತಾದ ಭತ್ತದ ಗದ್ದೆಯಾಗಿ ಪರಿವರ್ತಿಸಿ" ಎಂಬ ಅರ್ಥ ನೀಡಿದ್ದೇನೆ. ಇಂತಹ ಭೂಮಿಯನ್ನು ಎಳ್ಪಡಿಬೊಗ್ಗಪಳ್ಳಿಯ ಮಾರಗವುಂಡ, ಶಾಂತಿಗವುಂಡ ಮತ್ತು ಮರಿಗಕುಂಬಣ್ಣಂಗೆ ದಾನಮಾಡಿದನೆಂದು ಇದರ ಅರ್ಥ. ಇದರಿಂದ ಈ ಶಾಸನವನ್ನು ಹೀಗೆ ಭಾಷಾಂತರಿಸಲಾಗಿದೆ.[7] *Paṛekeṛe* Basavayya of Tāyūr, having converted the fallow maize-field in his possession into a fertile rice land granted the same to Māragavuṇḍa, Sānti-gavuṇḍa and Mariga Kumbaṇṇa of Eḷpadiboggapaḷḷi, (and) made over to the *eḷamakkaḻoḷ* (the village body) ಇತ್ಯಾದಿ.

ಸರಗೂರು ಗ್ರಾಮದಲ್ಲಿ ದೊರೆತ ಗಂಗರ ಶ್ರೀಪುರುಷನ ತಾಮ್ರಶಾಸನದ ಭಾಷೆ ಕನ್ನಡ. ಆತನ ಪೃಥುವೀರಾಜ್ಯಂಗೆಯೆ ಕೆಸುಗೊಳಮೊಡೆಯ ಬಿಣಾಮ್ಮಂಗೆ ಧಣ್ಣಗವಾಡಿಯುಂ ಬ್ರಹ್ಮದೇಯಂ ಗೊಟ್ಟನ್ ಶ್ರೀಪುರುಷಮಹಾರಾಜನ್ ಭಟಾರರ ಶ್ರೀನಕ್ಷತ್ರದೊಳ್ ಪನ್ನಿರ್ವರ್ ಪಾರ್ವರುಣ್ಬರ್ ತಿಂಗಳ್ಗೆ ಏಕಭೋಗಂ ಮಿದಜಿಾಪದಿಯುಂ ವರ್ಷಕ್ಕೆ ಪತ್ತು ಗದ್ಯಾಣಂ ತೆಱುಗೆ'................ಎಂಬ ಶಾಸನ ಪಾಠವನ್ನು "Kesugoḷam-oḍeya gave Dhaṇṇagavāḍi to Binamma as a Brahman gift, at the *śrīnakshatra* of Śrīpurusha's *bhaṭara*. Twelve Brāhmaṇs will be fed for a month (The grant is) for one life. The tax on this is ten gadyāṇa a year"[9] ಎಂದು ಭಾಷಾಂತರಿಸಿದ್ದಾರೆ. ಶ್ರೀಪುರುಷನ ಭಟಾರ ಎಂಬುದನ್ನು chaplain ಎಂದೂ ಭಾಷಾಂತರಿಸಿದ್ದಾರೆ. ಇದರಿಂದ ರಾಜನ ಭಟಾರನ ತಿರುನಕ್ಷತ್ರದಂದು ಪ್ರತಿ ತಿಂಗಳೂ 12 ಜನ ಬ್ರಾಹ್ಮಣರ ಭೋಜನಕ್ಕೆ ಏರ್ಪಾಡುಮಾಡಿದಂತೆ ತೋರುತ್ತದೆ. ಆದರೆ ಅದು ಭಟಾರನ ಹುಟ್ಟುಹಬ್ಬವಾಗಿದೆ. ಶ್ರೀಪುರುಷಭಟಾರ ಎಂದರೆ ಅರಸನದೇ ತಿರುನಕ್ಷತ್ರವಾಗಿತ್ತು. ಆ ದಿನದಂದು ಪ್ರತಿ ತಿಂಗಳವರೆಗೆ 12 ಜನ ಬ್ರಾಹ್ಮಣರ ಭೋಜನಕ್ಕೆ ಏರ್ಪಾಡು ಶಾಸನದಲ್ಲಿದೆ. ಅಲ್ಲದೆ ಏಕಭೋಗ ಎಂಬ ಮಾತಿಗೆ ಆ ದಾನ 'for one life' ಎಂದಿರುವುದೂ ಸರಿಯಲ್ಲ. ದಾನಮಾಡಿದ ಗ್ರಾಮವನ್ನು ಸಂಪೂರ್ಣವಾಗಿ ಭೋಗಿಸುವ ಹಕ್ಕು ದಾನ ಪಡೆದಾತನಿಗೆ ಕೊಡಮಾಡಿತೆಂಬುದು ಅದರ ಅರ್ಥ. ಶಾಸನಪಾಠವನ್ನು ಈಗ ಹೀಗೆ ಭಾಷಾಂತರಿಸಲಾಗಿದೆ:[10] (The king) made a gift of Dhaṇṇa-

gavāḍi to Biṇāmma, the chief of Kesagoḷa as *brahmadēya*. (It was) an *ēkabhōga* (to be exclusively enjoyed by the donee) from out of the annual tax of 10 *gadyāṇas* of which twelve Brāhmaṇas were to be fed (once a day) for one month commencing from the day of the natal star (*śrīnakshatra*) of Śrīpurusha-mahārāja.

ಬಸರಾಳು ಗ್ರಾಮದ ಶಾಸನದಲ್ಲಿನ ಒಂದು ಪದ್ಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಸಿದ್ಧವಾದುದಾಗಿದೆ.

> ಮುಂನಂ ರೂಢಿಯ ಕೃಷ್ಣಕಂಧರನುಮಂ ಮಾರ್ಕೊಂತು ಚೋಳೋರ್ವ್ವಿಯಂ
> ನಿಂನಂತಾರೊಳಪೊಕ್ಕು ಸಾಧಿಸಿದರಾರ್ಪ್ಪಾಂಡ್ಯೇಶನಂ ಶೌರ್ಯ್ಯದಿಂ
> ಬೆನ್ನಂ ಪತ್ತಿಸಿ ಸೋವಿದೇವ ಘಂಟೆಯುಂ ಕೈಕೊಂಡರಾರ್ ಚೋಳನಂ
> ತಂನಾಮ್ನಾಯದ ರಾಜ್ಯದೊಳ್ ನಿಱಿಸಿದರ್ಸ್ವೋರ್ಪೂರ್ವಯೋರ್ವ್ವೀಶ್ವರರ್

ಎಂಬ ಈ ಪದ್ಯವಿರುವ ಶಾಸನವನ್ನು ರಚಿಸಿದಾತ ಚಿದಾನಂದ. ಈ ಪದ್ಯ ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ ಕಾಣಿಸಿಕೊಂಡಿದೆ. ಈ ಪದ್ಯದ ಮೊದಲ ಭಾಗವನ್ನು ರೈಸ್‌ರವರು "First fighting against the famous Kṛishṇa-Kandhara, who like you penetrated into the Chōḷa territory ? Who subdued the Pāṇḍya lord ?

ಎಂದು ಭಾಷಾಂತರಿಸಿ, ಈ ಕೃಷ್ಣಕಂಧರನನ್ನು ದೇವಗಿರಿ ಯಾದವರ ಅರಸನಾದ ಕನ್ನರನೆಂದು ಗುರುತಿಸಿದರು. ಪ್ರಸ್ತುತ ಶಾಸನದ ಕಾಲ ಕ್ರಿ.ಶ. 1237. ಕನ್ನರ ಅಧಿಕಾರಕ್ಕೆ ಬಂದುದು ಒಂದು ದಶಕದ ನಂತರ. ಆದುದರಿಂದ ಕನ್ನರ ಈ ವೇಳೆಗೆ ಯುವರಾಜನಾಗಿದ್ದು ಆ ಪದವಿಯಲ್ಲಿದ್ದಾಗಲೇ ಈ ವಿಜಯಗಳನ್ನು ಸಾಧಿಸಿದನೆಂದು ನಂತರ ಬಂದ ಪಂಡಿತರೆಲ್ಲ ವಾದಿಸಿದರು. ಇದನ್ನವಲಂಬಿಸಿ ಸೂಕ್ತಿಸುಧಾರ್ಣವದ ಕಾಲವನ್ನು ನಿರ್ಧರಿಸಲು ಯತ್ನಿಸಿದರು. ಅವುಗಳ ವಿವರ ಇಲ್ಲಿ ಅನವಶ್ಯಕ. ಆದರೂ ಇಷ್ಟಕ್ಕೆಲ್ಲ ಕಾರಣ ರೈಸ್‌ರವರು ನೀಡಿದ ಭಾಷಾಂತರ ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. 'ಮುಂನಂ' ಎಂಬ ಮಾತನ್ನು 'At first' ಎಂದು ಭಾಷಾಂತರಿಸಿ, ಮಾರ್ಕೊಂಡು ಎಂಬುವನ್ನು 'ಪ್ರತಿಭಟಿಸಿ, ವಿರೋಧಿಸಿ' ಎಂದು ಅರ್ಥೈಸಿದುದರಿಂದ ಮುಂದಿನ ವಾದ ವಿವಾದಗಳು ಎದ್ದುವು. ಆದರೆ ಮುಂನಂ ಎಂಬುದನ್ನು formerly ಎಂದೂ, ಮಾರ್ಕೊಂಡು ಎಂಬುವನ್ನು vying with ಎಂದೂ ಈಗ ನಾನು ಅರ್ಥೈಸಿದ್ದೇನೆ. ಈ ಪದ್ಯದ ಮೊದಲಭಾಗದ ಭಾಷಾಂತರ ಹೀಗಾಗುತ್ತದೆ:[13] Vying with the famous Kṛishṇakandhara of the past, who like you penetrated into and acquired the Chōḷa territory and pursuing with valour subdued the Pāṇḍya lord ?

ಇಲ್ಲಿನ ಕೃಷ್ಣಕಂಧರ ರಾಷ್ಟ್ರಕೂಟ ಮನೆತನದ ಮುಮ್ಮಡಿ ಕೃಷ್ಣ. ಈ ಮೊದಲು

13

ಖ್ಯಾತಿವೆತ್ತ ಈ ಕೃಷ್ಣನೊಡನೆ ಸ್ಪರ್ಧಿಸಿ ನಿನ್ನಂತೆ ಯಾರು ಚೋಳರಾಜ್ಯದ ಒಳ ಹೊಕ್ಕರು? ಯಾರು ಪಾಂಡ್ಯ ಅರಸನನ್ನು ಶೌರ್ಯದಿಂದ ಸಾಧಿಸಿದರು ಎಂಬೀ ಭಾಷಾಂತರ ಐತಿಹಾಸಿಕ ಘಟನೆಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಈ ಘಟನೆಗಳೆಲ್ಲ ಶಾಸನೋಕ್ತ ಕಾಲವಾದ ಕ್ರಿ.ಶ. 1237ರ ಮೊದಲೇ ನಡೆದಿದ್ದುವು. ಆದುದರಿಂದ ಕ್ರಿ.ಶ. 1235ರ ಸುಮಾರಿಗೆ ರಚಿತವಾದ ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿನ ಪದ್ಯ ಈ ಘಟನೆಗಳನ್ನು ನಿರೂಪಿಸಿದುವು. ಚಿದಾನಂದನೆನಿಸಿದ ಮಲ್ಲಿಕಾರ್ಜುನನೇ ಆ ನಂತರ, 1237ರಲ್ಲಿ ಈ ಪದ್ಯವನ್ನು ಬಸರಾಳು ಶಾಸನದಲ್ಲಿ ಸೇರಿಸಿದನು ಎಂಬುದು ಸ್ಪಷ್ಟವಾಗುತ್ತದೆ. ರೈಸ್‌ರವರು ನೀಡಿದ ಭಾಷಾಂತರ ನಂತರದ ನಾನಾ ವಿವಾದಗಳಿಗೆಡೆಮಾಡಿತು. ಐತಿಹಾಸಿಕ ಘಟನೆಗಳ ಪೂರ್ಣವಾದ ಅರಿವಿಲ್ಲದಿದ್ದುದು ಆ ಭಾಷಾಂತರದಲ್ಲಿನ ದೋಷ.

ಮೇಲ್ಕಂಡ ಉದಾಹರಣೆಗಳು ಶಾಸನಗಳ ಭಾಷಾಂತರದ ವಿಶಿಷ್ಟ ಸಮಸ್ಯೆಗಳನ್ನು ಸೂಚಿಸುತ್ತವೆ. ಆಯಾ ಕಾಲದ ಮೌಲ್ಯಗಳನ್ನು ತಿಳಿಯದಿರುವಿಕೆ, ಹಲವು ಸಂದರ್ಭಗಳಲ್ಲಿ ಇತಿಹಾಸದ ಘಟನೆಗಳ ಅಜ್ಞಾನ, ಸಾಂಸ್ಕೃತಿಕ ವಿಷಯಗಳನ್ನು ಕುರಿತ ಮೌಢ್ಯ–ತಪ್ಪು ಭಾಷಾಂತರಗಳಿಗೆ ಕಾರಣಗಳಾಗುತ್ತವೆ. ಕೇವಲ ಪ್ರತಿಪದಾರ್ಥ ಭಾಷಾಂತರವಾಗುವುದಿಲ್ಲ.

ಆದರೆ ಅನೇಕ ಸಂದರ್ಭಗಳಲ್ಲಿ ಕೆಲವು ಪದಗಳನ್ನು ಸಮರ್ಪಕವಾಗಿ ಭಾಷಾಂತರಿಸಲು ಆಗುವುದೇ ಇಲ್ಲ. ಇದಕ್ಕೆ ಉದಾಹರಣೆಯಾಗಿ 'ಧರ್ಮ' ಎಂಬ ಪದವನ್ನು ಉದಹರಿಸಬಹುದು. ಇದೊಂದು untranslatable ಪದ. ಇದಕ್ಕೆ ಸರಿಸಮನಾದ ಇಂಗ್ಲಿಷ್ ಪದವಿಲ್ಲ. ಸಂದರ್ಭಾನುಸಾರವಾಗಿ 'ಧರ್ಮ' ಎಂಬುದನ್ನು charity ಎಂದು ಭಾಷಾಂತರಿಸಿರುವುದುಂಟು. ಆದರೆ 'ಧರ್ಮಶಾಸನವನ್ನು' 'deed of charity' ಎಂದು ಭಾಷಾಂತರಿಸಿದ್ದರೂ ಅದು ಅಷ್ಟು ಉಚಿತವಲ್ಲವೆನಿಸುತ್ತದೆ.

ಇಂತಹ ಇನ್ನೊಂದು ಪದ 'ಅಂಗರಂಗಭೋಗ'. ದೇವರಿಗೆ ಸಲ್ಲಿಸುವ ಪೂಜೆಗೆ ಸಂಬಂಧಿಸಿದ ಪದವಿದು. ಇದನ್ನು 'decoration, services and worship' ಎಂದು ಭಾಷಾಂತರಿಸಲಾಗಿದ್ದರೂ ಆ ಮಾತುಗಳು ಅಂಗರಂಗಭೋಗ ಎಂಬ ಮೂಲಪದ ಸೂಚಿಸುವ ಧ್ವನಿಯನ್ನು ಪ್ರತಿಸ್ಪಂದಿಸುವುದಿಲ್ಲ. ನಾವು ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳನ್ನು ಪರಿಷ್ಕರಿಸುತ್ತಿರುವ ಈ ಸಮಯದಲ್ಲಿ ಆರಂಭದಲ್ಲಿ ಇಂತಹ ಅರ್ಥವನ್ನು ನೀಡಿದ್ದರೂ, ಆ ಬಳಿಕ ಭಾಷಾಂತರದಲ್ಲಿಯೂ ಮೂಲ ಪದಗಳನ್ನೇ ಉಳಿಸಿಕೊಂಡಿದ್ದೇವೆ. ಒಂದೆರಡು ಪದಗಳಲ್ಲಿ ಇವುಗಳ ಅರ್ಥವನ್ನು ಸಮಗ್ರವಾಗಿ ಭಾಷಾಂತರಿಸಲಾಗದು. ಇನ್ನು ಹಲವಾರು ತೆರಿಗೆ, ಸುಂಕ ಮುಂತಾದ ಹೆಸರುಗಳು ಬಂದಾಗಲೂ ಸಹ ಅರ್ಥ ಸ್ಪಷ್ಟವಿಲ್ಲದಿದ್ದಾಗ ಮೂಲಪದಗಳನ್ನೇ ಉಳಿಸಿದ್ದೇವೆ. ಒಂದು ವಿಧದಲ್ಲಿ ನಾವಿಲ್ಲಿ ಎದುರಿಸುವುದು ಸಾಂಸ್ಕೃತಿಕ ತೊಡಕುಗಳನ್ನು.

ಇವು, ಇಂತಹವು ಶಾಸನಗಳ ಭಾಷಾಂತರದ ಕೆಲವು ವಿಶಿಷ್ಟ ಸಮಸ್ಯೆಗಳು.

ಅಡಿಟಿಪ್ಪಣಿಗಳು

1. ಎ.ಕ. ಸಂಪುಟ 1, (ರೈಸ್‌ರವರಿಂದ ಪರಿಷ್ಕೃತ) 1914, ಶಾಸನಸಂಖ್ಯೆ 66, ಭಾಷಾಂತರದ ಪುಟ 71.
2. ನೋಡಿ : 1972ರ ಪರಿಷ್ಕೃತ ಆವೃತ್ತಿ, ಸಂಖ್ಯೆ 94, ಭಾಷಾಂತರ ಪುಟ 97.
3. ಎಪಿಗ್ರಾಫಿಯ ಇಂಡಿಕ, ಸಂಪುಟ XIV ಪು. 93
4. ಅದೇ ಸಂಪುಟದ ಆರಂಭದಲ್ಲಿ 'Additions and Corrections' ನಲ್ಲಿ.
5. ಎ.ಕ. ಸಂಪುಟ 3, (ಸಂಪಾದಕ : ಬಾ.ರಾ. ಗೋಪಾಲ್, 1974) ನಂಗೂ. 311
6. ಎ.ಕ. ಸಂಪುಟ III (ರೈಸ್ ಸಂಪಾದಿತ) ನಂಗೂ. 97, ಭಾಷಾಂತರ ಪುಟ 104
7. ಎ.ಕ. ಸಂಪುಟ III (ಸಂ:ಬಾ.ರಾ. ಗೋಪಾಲ್) ನಂಗೂ. 311, ಪುಟ 748
8. ಎ.ಕ. ಸಂಪುಟ III (ಸಂ:ರೈಸ್) ಹೆಕೋ 4
9. ಅದೇ, ಭಾಷಾಂತರ ಪುಟ 65
10. ಎ.ಕ. ಸಂಪುಟ 3 (ಸಂ : ಬಾ.ರಾ. ಗೋಪಾಲ್) ಹೆಕೋ. 90(ಭಾಷಾಂತರ ಪುಟ 815)
11. ಎ.ಕ. ಸಂ. III (ಸಂ.ರೈಸ್) Md.122
12. ಅದೇ, ಭಾಷಾಂತರ ಪು. 54
13. ಎ.ಕ. ಸಂ. ಪುಟ. 7 (ಸಂ:ಬಾ.ರಾ.ಗೋಪಾಲ್) Md. 30, ಭಾಷಾಂತರ ಪು. 568

೧೭ ಕಾದಂಬರಿಯ ಅನುವಾದ (ಇಂಗ್ಲಿಷ್‌ನಿಂದ)—ವಿಶಿಷ್ಟ ಸಮಸ್ಯೆಗಳು

ಎಂ. ರಾಮಕೃಷ್ಣ

ಅನುವಾದವನ್ನು ಅನುಸರಿಸಿಕೊಂಡು ಬರುವ ಎರಡು ಪ್ರಮುಖ ಸಂಗತಿಗಳೆಂದರೆ, ಮೂಲಕೃತಿಯ ಕೆಲವು ಅಂಶಗಳ ನಷ್ಟ, ಮತ್ತು ಹಲವು ಸಮಸ್ಯೆಗಳ ಸೃಷ್ಟಿ. ಮೂಲ ಮತ್ತು ಉದ್ದಿಷ್ಟ ಭಾಷೆಗಳು ಹೆಚ್ಚು ಹೆಚ್ಚು 'ಪರಕೀಯ'ವಾದಷ್ಟೂ ಇವುಗಳ ಸೀಮಾರೇಖೆ ಹಿಗ್ಗುತ್ತಾ ಹೋಗುತ್ತದೆ. ಜ್ಞಾತಿ ಭಾಷೆಗಳ ಕೃತಿಗಳ ನಡುವೆ ನಡೆಯುವ ಭಾಷಾಂತರಕ್ಕೂ, ಸಂಪೂರ್ಣ ಪರಕೀಯ ಭಾಷೆಗಳ ಮಧ್ಯೆ ನಡೆಯುವ ಭಾಷಾಂತರಕ್ಕೂ ಇರುವ ವ್ಯತ್ಯಾಸದ ವ್ಯಾಪ್ತಿ, ಆಯಾಮಗಳನ್ನು ಮೇಲಿನ ಸಂಗತಿಗಳು ಸಾದರಪಡಿಸುತ್ತವೆ. ಭಾಷಾಂತರವೆಂದರೆ ಒಂದು ಭಾಷೆಯಲ್ಲಿರುವ 'ವಸ್ತು ವಿಷಯ'ಗಳನ್ನು ಇನ್ನೊಂದು ಭಾಷೆಯಲ್ಲಿ ನಿರೂಪಿಸುವುದು ಎಂಬ ಸರಳೀಕೃತ ತಿಳುವಳಿಕೆ ಸಾಮಾನ್ಯರಿಗೆ ಮೂಡಿದರೆ, 'ಬೇರಾದುದು ಭಾಷೆಯ ಅಂತರ ಮಾತ್ರ'—ಎಂಬ ಎಚ್ಚರಿಕೆಯ ವಾಣಿ ತಜ್ಞರಿಗೆ ಕೇಳಿಸುತ್ತದೆ.

'ಕಾದಂಬರಿ'ಯು ಸೃಜನಶೀಲ, ಕಲ್ಪನಾತ್ಮಕ ಸಾಹಿತ್ಯದ ಒಂದು ಪ್ರಕಾರ. ಅದರ ಭಾಷೆ ಬಹುಪಾಲು ಭಾವೋಪಯೋಗಿಯಾದುದು. ಸಾಹಿತಿಯು ಭಾಷೆಯನ್ನು ಬಳಸಿಕೊಳ್ಳುವ ಲೇಖಕ ಮಾತ್ರವಲ್ಲ. ಅವನು ತನ್ನ ಆಶಯದ ಸಂವಹನಕ್ಕಾಗಿ ಭಾಷೆಯನ್ನು ತಿದ್ದಿ, ಮಿದ್ದಿ, ತಿರುಚಿ, ಸಾಧ್ಯವಾದ ರೀತಿಯಲ್ಲೆಲ್ಲಾ ದುಡಿಸಿಕೊಳ್ಳುತ್ತಾನೆ. ಇಂತಹ ಕಾರ್ಯಕ್ಕೆ ಮಾತೃಭಾಷೆಯಂತೆ, ಕಲಿತ ಭಾಷೆಗಳು ಒಗ್ಗಲಾರವು ಎನ್ನಬಹುದು. ಅತ್ಯಂತ ಅಪರೂಪದ ಪ್ರಸಂಗಗಳನ್ನು [ಇದ್ದರೆ] ಬಿಟ್ಟರೆ ಒಬ್ಬ ವ್ಯಕ್ತಿಗೆ ಎರಡು[1] ಮಾತೃಭಾಷೆಗಳಿರುವುದು ಅಸಂಭವ. ಆದ್ದರಿಂದಲೇ 'ಭಾಷಾಂತರಕಾರನಿಗೆ ಮೂಲ ಭಾಷೆಯ ವಿಮರ್ಶಾತ್ಮಕ ಜ್ಞಾನವೂ ಉದ್ದಿಷ್ಟ ಭಾಷೆಯಲ್ಲಿ ಪ್ರಾಯೋಗಿಕ ಕೌಶಲವೂ ಇರಬೇಕೆನ್ನುವಷ್ಟಕ್ಕೆ ವಿದ್ವಾಂಸರು ತೃಪ್ತರಾಗಬೇಕಾಗಿದೆ. ಭಾಷೆಗೆ ಸಂಬಂಧಿಸಿದ ಸಮಸ್ಯೆಗಳು ಒಂದು ಗುಂಪಾದರೆ, ಸಂಸ್ಕೃತಿಗೆ ಸಂಬಂಧಿಸಿದ ಸಮಸ್ಯೆಗಳು ಇನ್ನೊಂದು ಗುಂಪಾಗುತ್ತವೆ. ಇವೆರಡರ ಜೊತೆಗೆ ಸಾಹಿತಿಯ ವಿಶಿಷ್ಟ ವ್ಯಕ್ತಿತ್ವವೂ ಸಹ ಸಮಸ್ಯೆಗಳನ್ನು ಸೃಷ್ಟಿಸಬಲ್ಲದು.

1. 'ಪರಕೀಯ' ಭಾಷೆಗಳ ವಿಚಾರದಲ್ಲಿ ಇದು ಇನ್ನೂ ಹೆಚ್ಚು ಅಸಂಭವವಾದುದು.

ಶ್ರೇಷ್ಠ ಕಾದಂಬರಿಕಾರನು ಭಾಷೆಯ ಸಾಧ್ಯತೆಗಳನ್ನು ಚೆನ್ನಾಗಿ ಮನಗಂಡು ತನ್ನ ವರಸೆಗಳನ್ನೆಲ್ಲಾ ಪ್ರದರ್ಶಿಸುತ್ತಾನೆ. ಅಂತಹ ಸಂದರ್ಭಗಳಲ್ಲಿ ಅದುವರೆಗೆ ಆ ಭಾಷೆಯಲ್ಲಿ ಕಂಡುಬರದ ಪ್ರಯೋಗಗಳನ್ನೂ ಮಾಡಿ ತೋರಿಸುತ್ತಾನೆ. ಆದ್ದರಿಂದ ಆ ಭಾಷೆಯ ಶಬ್ದಕೋಶಕ್ಕೆ ಶ್ರೇಷ್ಠ ಸಾಹಿತಿಯಿಂದ ಅನೇಕ ನವೀನ ಶಬ್ದ, ಶಬ್ದರೂಪಗಳು ಸೇರ್ಪಡೆ ಹೊಂದಬೇಕಾದ ಸ್ಥಿತಿ ಒದಗುತ್ತದೆ. ಆದ್ದರಿಂದ ಭಾಷಾಂತರಕಾರನು ಮೂಲಭಾಷೆಯನ್ನು ಎಷ್ಟೇ ಚೆನ್ನಾಗಿ ತಿಳಿದಿದ್ದರೂ ಆ ಸಾಹಿತಿಯನ್ನು ಅನುಸರಿಸುವುದು ಕಷ್ಟವಾಗುತ್ತದೆ. ಏಕೆಂದರೆ ಮಹಾಸಾಹಿತಿಗಳಿಂದ ಭಾಷೆಯ ವ್ಯಾಪ್ತಿ, ಆಯಾಮಗಳು ವಿಸ್ತೃತವಾಗುತ್ತಲೇ ಇರುತ್ತವೆ. ಹತ್ತೊಂಬತ್ತನೆ ಶತಕದ ಕೊನೆಯ ದಶಕದ ಹೊತ್ತಿಗೆ ಇಂಗ್ಲಿಷ್ ಭಾಷೆಯು ಪ್ರಪಂಚದಲ್ಲೇ ಅತ್ಯಂತ ಪ್ರಬುದ್ಧ ಭಾಷೆಯಾಗಿ ಬೆಳೆದು ನಿಂತಿತು. ಅದರ ಶಬ್ದಸಂಪತ್ತು ಅಸದೃಶವಾದುದು ಎನ್ನುವುದರಲ್ಲಿ ಎರಡು ಮಾತಿಲ್ಲ. ಕಪ್ಪು ಮತ್ತು ಬಿಳಿಪು ಬಣ್ಣಗಳ ಮಧ್ಯೆ ಸುಮಾರು 76 ಮಾದರಿಗಳನ್ನು ಇಂಗ್ಲಿಷಿನಲ್ಲಿ ಹೇಳಬಹುದಾದರೆ ಕನ್ನಡದಲ್ಲಿ ಆರೇಳು ವಿಧಗಳನ್ನು ಗುರುತಿಸುವಷ್ಟೇ ಶಬ್ದಸಂಪತ್ತು. ಇಂಗ್ಲಿಷಿನಲ್ಲಿ grey ಬಣ್ಣಕ್ಕೆ ಸಂಬಂಧಿಸಿದಂತೆ coal-ash-grey ; cigar-ash-grey ; paper-ash-grey ; soft-grey ಇತ್ಯಾದಿ ಶಬ್ದಗಳನ್ನು ಕಾಣಬಹುದು ಮಾಂಸಾಹಾರದ ವಿವಿಧ ರೂಪಗಳ ಹೆಸರುಗಳಂತೂ ಆಶ್ಚರ್ಯವನ್ನು ಉಂಟುಮಾಡುತ್ತವೆ. ಅದರಲ್ಲಿ ಕೆಲವನ್ನು ಭಾರತದಲ್ಲಿಯೂ ಬಳಕೆಗೆ ತಂದಿರುವುದರಿಂದ ಅವುಗಳ ಪರಿಚಯವೂ ಆಗಿದೆ. ವಸ್ತುಗಳನ್ನು ಕುರಿತ ಹೆಸರುಗಳೇ ಇಷ್ಟೊಂದು ವಿವಿಧ ಪ್ರಮಾಣಗಳಲ್ಲಿರುವಾಗ, ರಾಗ ಭಾವಗಳಿಗೆ ಸಂಬಂಧಿಸಿದ ಶಬ್ದಗಳ ಪ್ರಮಾಣ ಇನ್ನೆಷ್ಟಿರಬೇಡ !

ಕಾದಂಬರಿಗಳಲ್ಲಿ ಭೌಗೋಳಿಕ ಹಾಗೂ ಪರಿಸರಾತ್ಮಕ, ಭೌತಿಕ, ಸಾಮಾಜಿಕ, ಮತ್ತು ಧಾರ್ಮಿಕ ಅಂಶಗಳಿಗೆ ಸಂಬಂಧಿಸಿದ ಸಮಸ್ಯೆಗಳು ಕಂಡುಬರುತ್ತವೆ. ಇಂಗ್ಲೆಂಡಿನಂತಹ ದೇಶಗಳಲ್ಲಿ ಕಂಡುಬರುವ ಚಳಿ, ಹಿಮಪಾತ, ಗಿಡಮರಗಳ ಮಾದರಿಗಳು, ವಿಶಿಷ್ಟ ಪಕ್ಷಿಗಳು, ಪ್ರಾಣಿಗಳು ದಕ್ಷಿಣ ಭಾರತದಲ್ಲಿ ಕಂಡುಬರುವುದಿಲ್ಲ. ಅಂತಹ ಸಂದರ್ಭ, ಸನ್ನಿವೇಶಗಳನ್ನು ವರ್ಣಿಸುವಾಗ ಭಾಷಾಂತರಕಾರನಿಗೇ ತಾದಾತ್ಮ್ಯ ಉಂಟಾಗದಿರುವ ಸಂಭವವಿರುವಾಗ ಇನ್ನು ಓದುಗರು ಎಷ್ಟರಮಟ್ಟಿಗೆ ಹೃದಯಸಂವಾದ ಪಡೆಯಬಲ್ಲರು ? ಅಲ್ಲಿ ಬೆಳೆಯುವ ಓಕ್ ಅಥವಾ ಫರ್ ಮರಗಳನ್ನು ಹೋಲುವಂತಹ ಮರಗಳನ್ನು ಭಾರತದಲ್ಲಿ ಗುರುತಿಸುವುದು ಸುಲಭವಲ್ಲ. ಹಿಮಾಲಯದ ಹತ್ತಿರ ಒಂದು ರೀತಿಯ ಫರ್ ಮರಗಳು ಬೆಳೆಯುತ್ತವೆ. ಆದರೆ ದಕ್ಷಿಣದವರಿಗೆ ಸರ್ವೆ ಮರಗಳ ಪರಿಚಯ ಮಾಡಿಸಬೇಕಾಗುತ್ತದೆ. ಕೆಲವು ಮರ, ಗಿಡ, ಲತೆಗಳ ಜೊತೆಯಲ್ಲಿ ಬೆಳೆದುಬಂದಿರುವ ಭಾವಕೋಶವನ್ನು ನಿರ್ಲಕ್ಷಿಸದೇ ಸಾಗುವಂತಿಲ್ಲ. ಪ್ರಾದೇಶಿಕತೆ ದಟ್ಟವಾಗಿ ಹಬ್ಬಿಕೊಂಡಿರುವ ಕಾದಂಬರಿಗಳನ್ನು ಅನುವಾದಿಸುವಾಗ, ಮರುಭೂಮಿ, ವಾಯುಗುಣ, ಸಮುದ್ರ ಮತ್ತು ಪರ್ವತಗಳ

ವರ್ಣನೆ ವಿಶಿಷ್ಟರೀತಿಯಲ್ಲಿ ಬರುತ್ತದೆ. ಇಂಥ ವರ್ಣನೆ ಅನೇಕ ಕಡೆ ಭಾಷಾಂತರಕ್ಕೆ ಸಿಕ್ಕದೆ ಸೋರಿಹೋಗುತ್ತವೆ. ಒಂದು ವೇಳೆ ದಕ್ಕಿದರೂ ಲಾವಣ್ಯ ಮಾಯವಾಗಿ ನೀರಸ ವಸ್ತುಲಾಭವಾಗಿರುತ್ತವೆ. ಹಳೆಯ ಮೈಸೂರಿನ ಜನರಿಗೆ ಕರಾವಳಿಯ ಭಾಗವೂ ಇರಲಿಲ್ಲ. ಎಷ್ಟೋ ಪ್ರಾಚೀನ ಕವಿಗಳು ಸಮುದ್ರವನ್ನು ಸ್ವತಃ ನೋಡದೆ ವರ್ಣಿಸಿರುವುದುಂಟು. ಇಂಗ್ಲೆಂಡಿನ ಜನರು ಎತ್ತ ಹೋದರೂ ಸಮುದ್ರವನ್ನೇ ಕಾಣುವವರು. ಇದರಿಂದ ಇಂಗ್ಲಿಷ್ ಕಾದಂಬರಿಗಳಲ್ಲಿ ಕಂಡುಬರುವ ಸಾಗರಸಂಬಂಧಿ ಸಾಹಿತ್ಯಭಾಗಗಳು ವ್ಯಕ್ತಿವಿಶಿಷ್ಟವಾಗಿಯೂ ಇರುವ ಸಾಧ್ಯತೆಯುಂಟು.

ಕಾದಂಬರಿ ಎಂದರೆ ಕಾದಂಬರಿಕಾರನ 'ಕಣ್ಣು'ಕಂಡ ಸಮಗ್ರ ಜನಜೀವನ. ಜನಜೀವನದಲ್ಲಿ ಭೌತಿಕ, ಸಾಮಾಜಿಕ, ಧಾರ್ಮಿಕ ಸಂಸ್ಕೃತಿಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಇಂಗ್ಲಿಷ್ ಕಾದಂಬರಿ ಎಂದಾಗ ಬಹುಪಾಲು ಪಾಶ್ಚಾತ್ಯ ಸಂಸ್ಕೃತಿಯ ಕಲ್ಪನೆ ಮೂಡುತ್ತದೆ. ಭಾರತೀಯರೇ ಬರೆದ ಕಾದಂಬರಿಗಳನ್ನು [ಇಂಗ್ಲಿಷ್ ಭಾಷೆಯಲ್ಲಿ] ಅನುವಾದಿಸುವುದರಲ್ಲಿ ಸಮಸ್ಯೆಗಳು ಅಷ್ಟಾಗಿ ಬರುವುದಿಲ್ಲ. ಆದ್ದರಿಂದ ಪಾಶ್ಚಾತ್ಯ ಸಂಸ್ಕೃತಿಯ ಮಡಿಲಿನಿಂದ ಮೂಡಿದ ಕೃತಿಯು ಸಾಂಸ್ಕೃತಿಕ ಕಾರಣಗಳಿಂದಾಗಿಯೇ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. 'ಮಾನವ ಜಾತಿ ತಾನೊಂದೆ ವಲಂ' ಎಂದು ಪಂಪ ಕವಿ ಹೇಳಿದ್ದರೂ, ಕರ್ನಾಟಕದ ಜನಜೀವನಕ್ಕೂ ಕೇರಳದ ಜನಜೀವನಕ್ಕೂ ಎಷ್ಟು ವ್ಯತ್ಯಾಸವಿದೆ ಎನ್ನುವುದನ್ನು ಮರೆಯುವಂತಿಲ್ಲ. ಅದಕ್ಕೆ ಏನು ಕಾರಣ ಎನ್ನುವುದು ಅಪ್ರಸ್ತುತ.

ಪಾಶ್ಚಾತ್ಯರಿಗೆ ಮಾತ್ರ ಸಲ್ಲುವ ಸಾಂಸ್ಕೃತಿಕ ವಿಚಾರಗಳನ್ನು ಸಾಧಾರಣ ಕನ್ನಡಿಗರಿಗೆ ಸಂಪೂರ್ಣವಾಗಿ ತಿಳಿಸುವುದು ಸುಲಭವಲ್ಲ. ಪಾಶ್ಚಾತ್ಯ ಸಿನಿಮಾಗಳು ಅಲ್ಲಿಯ ಜನಜೀವನವನ್ನು ಪ್ರದರ್ಶಿಸುವುದರಿಂದ ಆ ಮಾಧ್ಯಮಕ್ಕೆ ಹಲವು ಸೌಲಭ್ಯಗಳಿವೆ. ಆದರೆ ಭಾಷಾಂತರಕಾರನ ಸಮಸ್ಯೆಗಳನ್ನು ಸಿನಿಮಾ ಮಾಧ್ಯಮ ಬಗೆಹರಿಸಲಾರದು. ಕಾದಂಬರಿಯಲ್ಲಿ ಬರುವ ಉಡುಪುಗಳ ವರ್ಣನೆಯನ್ನು ನೋಡಿದರೆ, ಒಂದೊಂದಕ್ಕೂ ದೀರ್ಘ ವಿವರಣೆ ಬೇಕೆನಿಸುತ್ತದೆ. ಅವರು ತಮ್ಮ ದೇಶದ ಹವಾಗುಣಕ್ಕೆ ತಕ್ಕಂತೆ ಹಲವು ರೀತಿಯ ಪೋಷಾಕುಗಳನ್ನು ತಯಾರಿಸಿಕೊಂಡಿದ್ದಾರೆ. ಅದರ ಜೊತೆಗೆ ಕೆಲವು ವಿರೋಧಾಭಾಸಗಳೂ ಇವೆ. ಅಂತಹ ಚಳಿದೇಶಗಳಲ್ಲಿಯೂ ಪೂರ್ತ ಮೈಮುಚ್ಚದೆ ತಿರುಗಾಡುವ ಮಹಿಳೆಯರನ್ನು ಕಂಡಾಬಟ್ಟೆ ಬಟ್ಟೆ ಹೇರಿಕೊಂಡ ಪುರುಷರಿಗೆ ಹೋಲಿಸಿ ನೋಡಬಹುದು.

"...a stout old gentleman, in a blue coat and bright buttons, a corduroy breeches and top boots, two young ladies in soarfs and feathers..." [3]

"....ಅದರಲ್ಲಿ ಹೊಳೆಯುವ ಗುಂಡಿಗಳುಳ್ಳ ನೀಲಿಯ ಕೋಟು, ಕಾರ್ಡುರಾಯ್ ಬಿಗಿ

ಷರಾಯಿ, ಎತ್ತರದ ಬೂಟು ಧರಿಸಿದ ಒಬ್ಬ ದಪ್ಪನೆಯ ಮುದುಕ ; ಸ್ಕಾರ್ಫು ಮತ್ತು ಗರಿಗಳನ್ನು ಧರಿಸಿದ ಇಬ್ಬರು ಯುವತಿಯರು..."[17][2]

ಮಾಂಸಾಹಾರದ ವೈವಿಧ್ಯಕ್ಕೆ ನಿದರ್ಶನವಿದು—

"...Now the tongue–now the pigeon pie. Take care of that veal and ham–mind the lobsters..."[16]

"...ಹ್ಞ...ಎಲ್ಲಿ ನಾಲಗೆ? ಎಲ್ಲಿ ಪಾರಿವಾಳದ ಕಡುಬು....ಕರುವಿನ ಮಾಂಸ, ಹುಷಾರು! ಹಂದಿ ತೊಡೆ...."[21][3]

ಇಲ್ಲಿ lobstersಗೆ ಸಮುದ್ರ ನಳ್ಳಿಯ ಮಾಂಸ ಎನ್ನುವುದು ಬಿಟ್ಟುಹೋಗಿದೆ.

"...gigantic round of cold beef on the table...raised his fork to his lips...and insensibly released his hold of the carving knife..."[45]

"....ಮೇಜಿನ ಮೇಲೆ ತಣ್ಣನೆಯ ದನದ ಮಾಂಸದ ರಾಕ್ಷಸಾಕಾರದ ರಾಶಿಯಿತ್ತು.... ಅದನ್ನು ಫೋರ್ಕಿಗೆ ಚುಚ್ಚಿ ಮೇಲೆತ್ತಿ....ಸ್ವಲ್ಪ ತಡೆದು ಮಾಂಸದಲ್ಲಿಟ್ಟಿದ್ದ ಕೆತ್ತುವ ಚಾಕನ್ನು ಹಾಗೆಯೇ ಕೈಬಿಟ್ಟರು....[63][4] ಡಿಕನ್ಸನ 'ದಿ ಪಿಕ್‌ವಿಕ್ ಪೇಪರ್ಸ್' ಅತ್ಯಂತ ಹೆಚ್ಚು ಪ್ರಮಾಣದಲ್ಲಿ ದೇಶೀಯ ಸೊಗಡನ್ನು, 'ಬನಿ'ಯನ್ನು ಚಿತ್ರಮಯ ಶೈಲಿಯನ್ನು ಒಳಗೊಂಡಿರುವುದರಿಂದ ಭಾಷಾಂತರಕಾರನು ಅಗಾಧ ಪ್ರಮಾಣದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದರ ಶೈಲಿಯ ಪರಿಚಯವನ್ನು ಉದ್ದಿಷ್ಟ ಭಾಷೆಯ ಓದುಗರಿಗೆ ಮಾಡಿಕೊಡುವುದೇ ಒಂದು ಭಗೀರಥ ಪ್ರಯತ್ನ. ಸ್ವಲ್ಪ ಉದಾಸೀನ ಮಾಡಿದರೂ ಕೃತಿಯ ಮೈಯನ್ನು ಅಲಂಕರಿಸಿರುವ ಪ್ರಚ್ಛನ್ನ ಹಾಸ್ಯದ ಹೊನಲು ಒಣಗಿಹೋಗುತ್ತವೆ. ಮೂಲದಲ್ಲಿ ಇರುವ 'colloquial' ಅನ್ನು ಭಾಷಾಂತರದಲ್ಲಿಯೂ ತೋರಿಸಿದರೆ ಮಾತ್ರ ಅದರ ಸ್ವಾರಸ್ಯ ಉಳಿದುಕೊಳ್ಳುತ್ತದೆ. ಉದಾಹರಣೆಗೆ—"....ಮಾನ್ಯ ಪಿಕ್‌ವಿಕ್ ಅವರನ್ನೂ ಅವರ ಪೆಟ್ಟಿಗೆಯನ್ನೂ ಗಾಡಿಯೊಳಕ್ಕೆ ಎಸೆಯಲಾಯಿತು"[3]

"ಮಾನ್ಯ ಪಿಕ್‌ವಿಕ್ ಅವರು ತಮ್ಮ ದೇಹವನ್ನು ಬಟ್ಟೆಯೊಳಕ್ಕೂ, ಬಟ್ಟೆಗಳನ್ನು ತಮ್ಮ ಚರ್ಮದ ಪೆಟ್ಟಿಗೆಗೂ ತುರುಕಲು ತೊಡಗಿದರು"[2]

"ಮಾತಾಡುವಾಗ ಕೋಟಿನ ಬಾಲದ ಹಿಂದಕ್ಕೆ ತಮ್ಮ ಮೊಣಕೈ ತೂರಿಸುತ್ತಿದ್ದರು"[84]

ಇಂಗ್ಲಿಷ್ ಕಾದಂಬರಿಗಳಲ್ಲಿ'ಬಾಲ್' ಎಂಬ ನರ್ತನದ ಅಂಶ ಮೇಲಿಂದ ಮೇಲೆ ಕಾಣಿಕೊಳ್ಳುತ್ತದೆ. 'ಬಾಲ್' ಎಂದರೇನೇ ಸಾಮೂಹಿಕ ನರ್ತನ. ಅದಕ್ಕೆ ಡ್ಯಾನ್ಸ್ ಎನ್ನುವ ಇನ್ನೊಂದು ಶಬ್ದ ತಲೆಶಿರೋಭಾರವೇ ಸರಿ. ಭಾರತೀಯ ಸಂಸ್ಕೃತಿಯಲ್ಲಿ ಸಾಮೂಹಿಕ

---

2. *The Pickwick Papers:* Charles Dickens; ಅನು : ಡಾ. ಪ್ರಭುಶಂಕರ
3. ಅಲ್ಲೇ. ಮೂ 16–ಅನು 21
4. ಅಲ್ಲೇ. ಮೂ 45–ಅನು 63

ನೃತ್ಯ ಕಂಡುಬರುವುದಿಲ್ಲ (ಸುಗ್ಗಿ ಕುಣಿತ ಮುಂತಾದ ಜಾನಪದ ನೃತ್ಯಗಳನ್ನು ಬಿಟ್ಟು)[5] ಆದ್ದರಿಂದ 'ಬಾಲ್'ಗೆ ಸಲ್ಲುವ ಪರಿಭಾಷೆ ವಿಶಿಷ್ಟವಾಗಿಯೇ ರೂಪುಗೊಳ್ಳುತ್ತದೆ. ಅಂತಹ ವರ್ಣನೆಯನ್ನು ಅನುವಾದಿಸುವಾಗ ಸಂವಾದಿ ಪದಗಳು ಸಿಕ್ಕದೆ ತಪ್ಪು ಅರ್ಥಗಳು ಹೊರಡಬಹುದು. 'ಬಾಲ್'ನಲ್ಲಿ 'ಕುಣಿತ'ದ ಅಂಶಕ್ಕಿಂತ ನಿಧಾನವಾಗಿ ಚಲಿಸುವ, ತೇಲಿದಂತೆ ಕಾಣುವ ಅಂಶಗಳೇ ಅಧಿಕ. ಆಧುನಿಕ ಕಲಾವಿದರು, ಕಲೆಗಾರರು ಅಳವಡಿಸಿಕೊಂಡಿರುವ 'ಬ್ಯಾಲೆ'ಯಲ್ಲಿ 'ಕುಣಿತ'ವನ್ನು ಕಾಣಬಹುದು. ಆದರೆ ಕಥೆಯನ್ನು ಉಳ್ಳ 'ಬ್ಯಾಲೆ' ನಮ್ಮಲ್ಲಿ ಪ್ರಚಲಿತವಿರಲಿಲ್ಲ. ಅದಕ್ಕೆ ಬದಲು ನಾಟಕ ಅಥವಾ ರೂಪಕದ ಒಂದು ಅಂಗವಾಗಿ ನರ್ತನವಿರುತ್ತಿತ್ತು. ಆದ್ದರಿಂದ 'ಬಾಲ್' ಅನ್ನು ವರ್ಣಿಸುವಾಗ ಸಮಸ್ಯೆ ಹುಟ್ಟಿಕೊಳ್ಳುತ್ತದೆ. ಉದಾಹರಣೆಗೆ "He took her in his arms gently and moved slowly...." ಎನ್ನುವುದಕ್ಕೆ "ಅವನು ಅವಳನ್ನು ತಬ್ಬಿಕೊಂಡು ನಿಧಾನವಾಗಿ ಮುಂದುವರಿದನು"....ಎನ್ನುವುದರಲ್ಲಿ ಉಷ್ಣದೇಶದ ಜನರಿಗೆ ಸ್ವಾಭಾವಿಕವಾಗಿಯೇ ಅಪ್ರಸ್ತುತ ಅರ್ಥಛಾಯೆಗಳು ಮೂಡಿಬಿಡುತ್ತವೆ. ಇದೇ ಜಾತಿಗೆ ಸೇರುವ ಇನ್ನೊಂದು ಅಂಶವೆಂದರೆ 'ಕುಡಿತ'. ಕುಡಿಯುವುದು ಪಾಶ್ಚಾತ್ಯ ಜನಜೀವನದ ಅವಿಭಾಜ್ಯ ಅಂಗವೆನ್ನುವಂತೆ ಬೆಳೆದು ನಿಂತಿದೆ. ಪರಿಸರಾತ್ಮಕ ಅಂಶಗಳಿಂದಾಗಿ 'ಹಾಟ್ ಡ್ರಿಂಕ್ಸ್' ರೂಢಿಗೆ ಬಂದಿದೆ. ನಾಲ್ಕಾರು ಜನರು ಕುಳಿತು ಕಥೆ ಮಾತೆತ್ತಿದರೆ ಡ್ರಿಂಕ್ಸ್ ಅನಾಹೂತವಾಗಿಯೋ ಎಂಬಂತೆ ಹಾಜರಾಗುತ್ತದೆ. ಕಾದಂಬರಿಯಲ್ಲಿ ಇದರ ವರ್ಣನೆಗೆ ಸಾಕಷ್ಟು ಪುಟಗಳು ಮೀಸಲಾಗಿರುತ್ತವೆ. ಕರ್ನಾಟಕದ ಮಲೆನಾಡಿನ ಜನತೆ 'ಕಳ್ಳು' ಕುಡಿಯುವುದನ್ನು ರೂಢಿಸಿಕೊಂಡಿದ್ದುದಕ್ಕಿಂತಲೂ ಹೆಚ್ಚಾಗಿ ಪಾಶ್ಚಾತ್ಯ ಜನತೆ 'ಹಾಟ್ ಡ್ರಿಂಕ್ಸ್'ಗೆ ಜೋತುಬಿದ್ದಿದ್ದಾರೆ. ನಮ್ಮ ಆಧುನಿಕ ನಾಗರಿಕತೆಗೆ ಒಗ್ಗಿದ ಬಹುಪಾಲು ಜನರು 'ಕುಡಿ' ಯುವುದರಲ್ಲಿ ಶೀತದೇಶದವರನ್ನೂ ನಾಚಿಸುತ್ತಿರುವುದರಿಂದ, ಇಂತಹವರಿಗೆ ಡ್ರಿಂಕ್ಸ್‌ಗಳ ಹೆಸರು ಅಪರಿಚಿತವಲ್ಲ. ಆದರೆ ನಮ್ಮ ನಡುವೆ ಅನೇಕರು ದೈಹಿಕ, ಪರಿಸರಾತ್ಮಕ ಅವಶ್ಯಕತೆ ಇಲ್ಲದಿದ್ದರೂ ಕುಡಿದು ಕುಣಿದು ಕೆಡುತ್ತಿರುವುದನ್ನು ನೋಡುತ್ತಿರುವ 'ಇತರೆ ಸಾಮಾನ್ಯರಿಗೆ' ಪಾಶ್ಚಾತ್ಯರ ಪದ್ಧತಿ 'ಸಾಧು'ವಾಗಿ ಕಾಣುವ ರೀತಿಯಲ್ಲಿ ಅನುವಾದಿಸಲು ಭಾಷಾಂತರಕಾರ ಯುಕ್ತಿಸಬೇಕಾಗುತ್ತದೆ.

ಮೇಲೆ ಹೇಳಿದ ಎರಡು ಅಂಶಗಳು 'ರೂಪಾಂತರ'ಕ್ಕೆ ಮನಸ್ಸು ಮಾಡುವ ಸಾಹಿತಿಗಳಿಗೆ ಬಹು ದೊಡ್ಡ 'ದುರ್ಗ'ಗಳು. ಏಕೆಂದರೆ ಅದೇ ಕಥೆಯನ್ನು ನಮ್ಮ ಭಾಷೆಯಲ್ಲಿ 'ಯಥಾವತ್'ನಿರೂಪಿಸಲು ತೊಡಗಿ ಜನರ ಹೆಸರು, ಸ್ಥಳಗಳ ಹೆಸರುಗಳನ್ನು ಬದಲಾಯಿಸುವುದರಿಂದ ಒಂದು ರೀತಿಯ ಆತ್ಮೀಯತೆ ಮೂಡುತ್ತದೆಂದು ಭಾವಿಸಿ ರೂಪಾಂತರಕ್ಕೆ

5. 'ಸುಗ್ಗಿ ಕುಣಿತ ಮುಂತಾದ' ಎನ್ನುವುದೂ ಬೇಕಾಗಿಲ್ಲ [ಏಕೆಂದರೆ ಸುಗ್ಗಿ ಕುಣಿತ ಎನ್ನುವುದೇ ಹಲವು ರೂಪಗಳಲ್ಲಿ ಗೋಚರಿಸುತ್ತದೆ.]

ತೊಡಗುವವರು 'ಬಾಲ್' ಮತ್ತು 'ಹಾಟ್ ಡ್ರಿಂಕ್ಸ್'ಗಳನ್ನು ಬಳಸಿ ದಾಟಿಕೊಂಡು ನಡೆಯಬೇಕಾಗುತ್ತದೆ. ಜಾರ್ಜ್ ಆರ್‌ವೆಲ್ಲರ '*Animal Farm*' ಎಂಬ ಕೃತಿಯನ್ನು 'ಮೃಗಪ್ರಭುತ್ವ'[6] ಎಂಬ ಹೆಸರಿನಲ್ಲಿ ಸರಳವಾದ ರೀತಿಯಲ್ಲಿ ಭಾಷಾಂತರಿಸಲಾಗಿದೆ. ಭಾಷಾಂತರಕಾರರು ಹೆಚ್ಚು ಸ್ವಾತಂತ್ರ್ಯ ವಹಿಸಿರುವುದು ಪ್ರತಿಯೊಂದು ಪುಟದಲ್ಲಿಯೂ ಕಂಡುಬರುತ್ತದೆ. ಮೂಲದ ಅರ್ಥ, ಆಶಯಗಳು ಉಳಿದುಕೊಂಡಿರುವುದರಿಂದ 'ಸ್ವಾತಂತ್ರ್ಯ'ವು ಅನರ್ಥಕಾರಿಯಾಗಲಿಲ್ಲ. ಭಾಷಾಂತರ ತತ್ವಗಳಿಗೆ ಅಧೀನವಾಗಿರದಿದ್ದರೂ ಓದುಗರ ಮೇಲೆ ಪ್ರಭಾವ ಬೀರುವುದರಲ್ಲಿ ಯಶಸ್ವಿಯಾಗಿರುವುದನ್ನು ಕಾಣಬಹುದು. ಭಾಷಾಂತರಕಾರರ ಭಾಷೆ 'ಮಣ್ಣಿನ ವಾಸನೆ'ಯಿಂದ ಕೂಡಿ ಆಕರ್ಷಕವಾಗಿದೆ. ಮೂಲದಲ್ಲಿ ಪ್ರತಿ ಅಧ್ಯಾಯಕ್ಕೂ ಹೆಸರೇನೂ ಇಲ್ಲದಿದ್ದರೂ ಭಾಷಾಂತರಕಾರರು ಹೆಸರುಗಳನ್ನು ಕೊಟ್ಟಿದ್ದಾರೆ. ನಮ್ಮಲ್ಲಿ 'farm' ಎನ್ನುವುದು ವಿಶೇಷವಾಗಿ ಪಾಶ್ಚಾತ್ಯರಲ್ಲಿರುವ ಅರ್ಥದಲ್ಲಿ ಇಲ್ಲದಿರುವುದರಿಂದ 'ದೊಡ್ಡಿ' ಎಂದು ಕರೆಯಲಾಗಿದೆ. ಅದೇ ರೀತಿ ಬ್ರಾಂದಿ, ಬೀರುಗಳ ವಿಚಾರಗಳನ್ನು ಸಮಯೋಚಿತವಾಗಿ ಬಿಡಲಾಗಿದೆ ಹಾಗೂ ಬಳಸಿಕೊಳ್ಳಲಾಗಿದೆ. ಇಂಗ್ಲೆಂಡ್, ಐರ್‌ಲೆಂಡ್ ಮುಂತಾದ ಹೆಸರುಗಳನ್ನೂ ಬಿಡಲಾಗಿದೆ.

"...Napolean stood up and, casting a peculiar sidelong look at snowball, uttered a high-pitched whimper of a kind no one had ever heard him utter before." [47]

"....ಕಿಡಿಗಣ್ಣ ಎದ್ದು ನಿಂತು ತಿರಸ್ಕಾರದ ಕಡೆಗಣ್ಣಿನ ನೋಟದಿಂದ ಹಿಮವರ್ಣನನ್ನು ನೋಡಿ ಕೀಚು ಸ್ವರದಿಂದ ಶಿಳ್ಳೆ ಹಾಕಿದಂತೆ ಘಟ್ಟಿಯಾಗಿ ಕುಯ್ಯೆಂದಿತು. ಅದು ಹೀಗೆ ಕೂಗುವುದನ್ನು ಯಾವ ಪ್ರಾಣಿಯೂ ಕೇಳಿರಲಿಲ್ಲ." [48]

"Most of Animal Farm was within their view–the long pasture stretching down to the main road, the hayfield, the spinney, the drinking pool, the ploughed fields where the young wheat was thick and green and the red roofs of the farm building with the smoke curling from the chimneys. It was a clear spring evening. The grass and the bursting hedges were gilded by the level rays of the sun." [75]

"ಆ ಹೆದ್ದಾರಿಯ ತನಕ ಹಬ್ಬಿದ ಹಸುರುಕ್ಕುವ ಹುಲ್ಲುಗಾವಲು, ಆ ತಣ್ಣನೆಯ ತಿಳಿನೀರಿನ ಕೊಳ, ಹೊಂಬಣ್ಣದಿಂದ ಮಿರುಗುತ್ತಿದ್ದ ದಟ್ಟವಾದ ಎಳೆಯ ಗೋಧಿಯ ಪೈರು, ಎಲ್ಲೆಲ್ಲಿಯೂ ಆ ಹಸುರಿನ ಹಬ್ಬುಗೆ, ಹಸುರಿನ ಸಿರಿ. ಕಣ್‌ಕೋರೈಸಿ, ಹೃದಯ

6, ಹೆಚ್. ಹೆಚ್. ಅಣ್ಣಯ್ಯಗೌಡ.

ವನ್ನು ತುಂಬಿದುವು. ಸಾಯಂಕಾಲದ ಸೂರ್ಯನ ಅರುಣ ದೀಪ್ತಿ ಆ ಹಸುರಿನ ಸೊಬಗನ್ನು ನೂರ್ಮಡಿಗೈದಿತ್ತು." [7]

ಮೇಲಿನ ಎರಡು ಉದ್ಧೃತ ಭಾಗಗಳಲ್ಲಿ ಎರಡನೆಯದನ್ನು ಗಮನಿಸಿದರೆ ಭಾಷಾಂತರಕಾರರ 'ಸ್ವಾತಂತ್ರ್ಯ' ಮತ್ತು 'ಕೌಶಲ'ಗಳು ಕಂಡುಬರುತ್ತವೆ; ಸಮಸ್ಯೆಗಳನ್ನು ಪರಿಹರಿಸಲು ನಿಲ್ಲದೆ, ವೇಗವಾಗಿ ಪಕ್ಕದಲ್ಲಿ ನಡೆದಿರುವುದೂ ಕಂಡುಬರುತ್ತದೆ. ಕಾದಂಬರಿಗಳಲ್ಲಿ ಬರುವ ವಿವಾಹಚಿತ್ರಣವನ್ನು ಭಾಷಾಂತರಿಸುವಾಗ ಕೆಲವು ಸಮಸ್ಯೆಗಳು ಎದುರಾಗುತ್ತವೆ. ಪಾಶ್ಚಾತ್ಯರಲ್ಲಿ ವಿವಾಹವು ಬಹುತೇಕ ಸಾಮಾಜಿಕ ಒಪ್ಪಂದ ಎನ್ನಬಹುದು. ನಮ್ಮ ದೇಶದಲ್ಲಿ ವಿವಾಹಕ್ಕೆ ಕೊಡುವ ಧಾರ್ಮಿಕ, ಆಧ್ಯಾತ್ಮಿಕ ಮಹತ್ವವನ್ನು ಅವರು ಕೊಡುವಂತೆ ಕಾಣುವುದಿಲ್ಲ. ಸಾಂಪ್ರದಾಯಿಕವಾಗಿ ಚರ್ಚಿಗೆ ಹೋದರೂ ಹೊರಗೆ ಬಂದನಂತರ ಮಧುಚಂದ್ರಕ್ಕೆ ಹೊರಟು, ಹಿಂದಿರುಗಿದನಂತರ ಬೇರೆ ಮನೆಯಲ್ಲಿ ವಾಸಿಸುತ್ತಾರೆ. 'ಡೇಟಿಂಗ್' ಎನ್ನುವುದು ನಮ್ಮಲ್ಲಿ ಕಾಣದ ಅಂಶ. ಹಾಗೆಯೇ 'ಡೈವೋರ್ಸ್' ಕೂಡ ಪಾಶ್ಚಾತ್ಯರಷ್ಟು ಸಲೀಸಾಗಿಲ್ಲ. ಚರ್ಚಿಗೆ ಸಂಬಂಧಿಸಿದಂತೆ ಕಾರ್ಡಿನಲ್, ಆರ್ಚ್‌ಬಿಷಪ್, ಬಿಷಪ್, ಕ್ಲೆರಿಕ್, ಸೆಕ್ಸ್‌ಟನ್, ಪ್ರೀಸ್ಟ್, ಫಾದರ್, ಬ್ರದರ್, ಸಿಸ್ಟರ್, ಮದರ್....ಮುಂತಾದ ಪದವಿಗಳ ಕಲ್ಪನೆಯೂ ಹೊಸದು. ಈ ಅಧಿಕಾರಿಗಳ ಕರ್ತವ್ಯವ್ಯಾಪ್ತಿ, ಹಕ್ಕುಬಾಧ್ಯತೆ, ನಿರ್ವಹಣ ವಿಧಾನಗಳು ಖಚಿತವಾಗಿ ನಿರೂಪಿತವಾಗಿರುತ್ತವೆ. ಇಂತಹ ಸಂದರ್ಭ, ಸನ್ನಿವೇಶಗಳಲ್ಲಿ ಕೆಲವು ವಿಚಾರಗಳು ಅಸ್ಪಷ್ಟವಾಗಿ ಉಳಿದು ಬಿಡುವುದು ಆಶ್ಚರ್ಯವಲ್ಲ. ಭಾಷಾಂತರಕಾರನಿಗೆ ವಿವಾಹಕ್ಕೆ ಸಂಬಂಧಿಸಿದ ಪದ್ಧತಿಗಳು, ವಿಧಿಗಳು ಮುಂತಾದುವು ನೇರವಾಗಿ ಪರಿಚಯವಾಗಿದ್ದರೆ ಅವುಗಳನ್ನು ಅರ್ಥಮಾಡಿಕೊಂಡು ನಿರೂಪಿಸಬಲ್ಲನು.

ಪಾತ್ರಗಳನ್ನು ಚಿತ್ರಿಸುವಾಗ ವ್ಯಕ್ತಿಯ ವರ್ಣನೆ ಮಾಡುವುದು ಅನಿವಾರ್ಯ ಅಂಶ. ಕಾದಂಬರಿಕಾರನು ಕುಶಲಕಲೆಗಾರನಂತೆ ಸೂಕ್ಷ್ಮವಾಗಿ ಕಂಡರಿಸುತ್ತಾನೆ. ಅಂಗಾಂಗಗಳನ್ನು ವರ್ಣಿಸುತ್ತಾನೆ. ಭಾವಭಂಗಿಗಳನ್ನು ಚಿತ್ರಿಸುತ್ತಾನೆ. ಸಂಕೀರ್ಣತೆಯನ್ನು ಪ್ರದರ್ಶಿಸುತ್ತಾನೆ. ಉದ್ದಿಷ್ಟ ಭಾಷೆಯ ಓದುಗರು ವರ್ಣಿತ ವ್ಯಕ್ತಿಯ ಚಿತ್ರವನ್ನು ಕಣ್ಮುಂದೆ ತಂದುಕೊಳ್ಳಲು 'ಭಾಷಾಂತರ' ಸಹಾಯಕವಾಗಬೇಕು.

"...She was slender and apparently scarcely past girlhood; an admirable form and the most exquisite little face that I have ever had the pleasure of beholding; small features, very fair; flaxen ringlets or rather golden, hanging loose on her delicate neck; and eyes-had they been agreeable in expression, they would have been irresistible-fortunately for my susceplible

heart, the only sentiment they evinced hovered between scorn and a kind of desperation, singularly unnatural to be detected there—'' [13]

"....ಆಕೆ ನೀಳವಾಗಿದ್ದಳು ; ಬಾಲಿಶತೆ ಮಾಯವಾಗಿತ್ತಷ್ಟೇ. ನಾನು ಹಿಂದೆಂದೂ ನೋಡಿರದಂತಹ ಕೆತ್ತಿದಂತಹ ಮುಖಮಾಟ, ದಂತದಂತಹ ಮೈ ಬಣ್ಣ ; ಬಂಗಾರದ ಬಣ್ಣದ ತಲೆಗೂದಲು ನುಣುಪಾದ ಕುತ್ತಿಗೆಯ ಮೇಲೆ ಸಡಿಲವಾಗಿ ಬದ್ದಿತ್ತು. ಆ ಸುಂದರವಾದ ಕಣ್ಣುಗಳಲ್ಲಿ ಸ್ವಲ್ಪವಾದರೂ ಮಾರ್ದವತೆ ಇದ್ದಿದ್ದರೆ ಅವುಗಳ [7] ಹೃದಯವನ್ನು ಕಳೆದುಕೊಳ್ಳಬಹುದಾದ ನನ್ನಂಥವನಿಗೆ ಅದೃಷ್ಟವಶಾತ್ ಅಲ್ಲಿ ಕಂಡುದು ಕುಹಕತೆ ಮಾತ್ರ."[7][8]

ಮೇಲಿನ ಭಾಗವನ್ನು ನೋಡಿದರೆ ಭಾಷಾಂತರಕಾರರು ಮೂಲದಿಂದ ಸ್ವಲ್ಪ ಓಸರಿಸಿರುವುದರ ಜತೆಗೆ ಅನುವಾದದ ಕ್ಲಿಷ್ಟತೆಯೂ ಗೋಚರಿಸುತ್ತದೆ.

''...I have just returned from a visit to my landlord–the soeitary neighbour that I shall be troubled with''[1]

"....ನನ್ನ ಮನೆಯೊಡೆಯನನ್ನು ಭೇಟಿಮಾಡಿ ಈಗ ತಾನೆ ಹಿಂತಿರುಗಿದ್ದೇನೆ. ಆತನನ್ನ ಏಕಮಾತ್ರ ನೆರೆ." [1][9].

ಇದರಲ್ಲಿ ಕೊನೆಯ ಒಂದು 'clause' ಅನ್ನು ಬಿಡಲಾಗಿದೆ. 'ತೊಂದರೆ' ಎಂದೋ 'ಕಿರುಕುಳ' ಎಂದೋ ಮತ್ತೇನೋ ಬಳಸಬಹುದಾಗಿದ್ದರೂ ಕಾದಂಬರಿಕಾರರ ಆಶಯಕ್ಕೆ ಊನವುಂಟಾಗಬಹುದು. ಅದು ಒಂದು ರೀತಿಯ ಮಾನಸಿಕ ಕಳವಳ. ಭವಿಷ್ಯ ಸೂಚಕವಾದುದು. ಅದನ್ನು ಖಚಿತವಾಗಿ ಹೇಳಲಾಗದೆ ಅನುವಾದಕರು ಬಿಟ್ಟಿದ್ದಾರೆನ್ನಿಸುತ್ತದೆ.—ಇದೇ ರೀತಿಯ ಸಂದಿಗ್ಧತೆಗೆ ಇನ್ನೊಂದು ನಿದರ್ಶನವನ್ನು ಕೊಡಬಹುದು.

''The man mentally weighed the two inscriptions, and inclined to the former tent'' [5]

"....ಗಂಡಸು ಎರಡನ್ನೂ ಓದಿಕೊಂಡು ಮೊದಲ ಗುಡಾರದ ಕಡೆಗೆ ಕಾಲು ಹಾಕಿದ"[12] [10]

ಕಾದಂಬರಿಗಳಲ್ಲಿ ಕೆಲವು ಕಡೆ ಪಾತ್ರವೊಂದು ಮಾತನಾಡುವ ಧಾಟಿಯಲ್ಲಿಯೇ ಕಾದಂಬರಿಕಾರ ಬರೆಯುವುದನ್ನು ಕಾಣುತ್ತೇವೆ. ಅದರ ಧಾಟಿ ಮತ್ತು ದಿಕ್ಕುಗಳು

7. ಇಲ್ಲಿ ಏನೋ ಮುದ್ರಣ ದೋಷವಿರಬೇಕು.

8. *'Wathering Heights'*; Emile Bronte. ಅನು : ಪ.ಸು. ಭಟ್ಟ—"ವುದರಿಂಗ್ ಹೈಟ್ಸ್"

9. ಅಲ್ಲೇ.

10. *'Moyer of Casterbridge'*; Thomas Hardy ಅನು : ನಾಗರಾಜರಾವ್ "ಗಾಳಿ ಉರುಳಿತು."

ಆಯಾ ಭಾಷೆಯ ಜನರಿಗೆ ಸುಲಭವಾಗಿ ತಿಳಿಯುತ್ತವೆ. ಇಂಗ್ಲಿಷಿನಲ್ಲಿ ಅಂತಹ ಬರವಣಿಗೆ ಅನುವಾದಕನಿಗೆ ಕೆಲವು ಸಲ ತೊಂದರೆ ಕೊಡಬಹುದು.

"...Aw wonder hagh yah cam faishion tuh stand thear i' idleness un war, when all on 'em's goan aght! Bud yah're a nowt and it's noa use talking—yah'll niver mend uh yer ill ways bud goa raight tut t' divil, like yer mother afore ye'' (19)

....“ನೀವು ಅವರೆಲ್ಲರ ಆಲಸಿತನವನ್ನು ಹೇಗೆ ಸಹಿಸುತ್ತೀರೋ ಎಂದು ಆಶ್ಚರ್ಯವಾಗುತ್ತದೆ. ಮಾತನಾಡಿ ಏನೂ ಪ್ರಯೋಜನವಿಲ್ಲ. ಅವರ ಕೆಟ್ಟ ರೀತಿಗಳನ್ನು ಸಹಿಸಿ ಸಹಿಸಿ ನೀವೂ ನಿಮ್ಮ ತಾಯಿಯ ದಾರಿಯನ್ನೇ ಹಿಡಿಯುತ್ತೀರಿ” (11)[11],

ಈ ಭಾಗದಲ್ಲಿ ಕನ್ನಡ ಗ್ರಾಂಥಿಕವಾಗಿದೆ ಅಥವಾ ಶಿಷ್ಟರೂಪದಲ್ಲಿದೆ. ಇದನ್ನು ಆಡುವ ಭಾಷೆಯಲ್ಲಿಯೇ ಬರೆಯಬೇಕೇ ಎನ್ನುವುದನ್ನು ಸಂದರ್ಭ ನಿರ್ಧರಿಸುತ್ತದೆ. ಪಾತ್ರದ ದರ್ಜೆಯನ್ನು ನೋಡಿ ತಿಳಿಯಬೇಕಾಗುತ್ತದೆ. ಈ ಸಂದರ್ಭದಲ್ಲಿ ಆ ಮಾತುಗಳನ್ನಾಡಿದವನು ಸಾಮಾನ್ಯ ವ್ಯಕ್ತಿ.

ಕೆಲವು ಸಾರಿ ಇಂಗ್ಲಿಷ್ ನಿರೂಪಣೆ ಶಿಷ್ಟ ಅಥವಾ ಗ್ರಾಂಥಿಕ ರೂಪದಲ್ಲಿದ್ದರೂ ಪಾತ್ರದ ಯೋಗ್ಯತೆಗೆ ತಕ್ಕಂತೆ ಅನುವಾದಿಸಬೇಕಾಗುತ್ತದೆ.

"...Why, save the man, what wisdom's in him that 'a should come to weydon for a job of that sort this time of the year''(40)

“ಒಳ್ಳೆ ಬುದ್ವಂತ ಕಣಯ್ಯ ನೀನು! ಅಂತಾ ಕೆಲಸಕ್ಕೆ ಈ ಕಾಲದಾಗೆ ವೇಯ್ಡನ್‌ಗಾ ಬರಾದು” (11)

Then is these any house to let—a little small new cottage just a builded or such like''(4)

“ಹೋಗ್ಲಿ, ಮನೆಗಿನೆ ಬಾಡ್ಗೇಗೆ ಸಿಕ್ಕುತ್ತಾ, ಯಾವ್ದಾದ್ರು ಹೊಸಾದು, ಈಚೆಗೆ ಗೀಚೆಗೆ ಕಟ್ಟಿದ್ದು” (11)[12]

ಇಲ್ಲಿ ಸಂದರ್ಭವನ್ನು, ಪಾತ್ರವನ್ನು ಚೆನ್ನಾಗಿ ತಿಳಿದೇ ಭಾಷೆಯನ್ನು ಬಳಸಬೇಕಾಗುತ್ತದೆ. ಹಾಗೆ ಮಾಡಬೇಕಾದಾಗ ಯಾವ ರೀತಿಯಲ್ಲಿ ಬಳಸಬೇಕೆನ್ನುವುದು ಮುಖ್ಯವಾದುದು. ಮೂಲಕೃತಿಕಾರನ ಆಶಯಕ್ಕೆ ಧಕ್ಕೆ ಉಂಟಾಗಬಾರದು. ಯಾವ ಕೃತಿಯೇ ಆಗಲಿ ಮೂಲಭಾಷೆಯ ಶೈಲಿ ಉದ್ದಿಷ್ಟ ಭಾಷೆಯಲ್ಲಿಯೂ ಕಂಡುಬರುವುದು ಬಹಳ ಕಷ್ಟ; ಅಸಾಧ್ಯವೆಂದು ಹೇಳಬಹುದು. ಇದು ಜ್ಞಾತಿಭಾಷೆಗಳಲ್ಲದ ಭಾಷೆಗಳ, ಹಾಗೂ ಪರಕೀಯ ಭಾಷೆಗಳ ವಿಚಾರದಲ್ಲಿ ಹೆಚ್ಚಾಗಿ ಅನ್ವಯವಾಗುತ್ತದೆ. ಏಕೆಂದರೆ ಶೈಲಿಯು

---

11 “ವುದರಿಂಗ್ ಹೈಟ್ಸ್”

12 '*Mayor of Casterbridge*' ಅನು : “ಗಾಳಿ ಉರುಳಿತು”

'ಪದರಚನೆ'ಯನ್ನು ಅವಲಂಬಿಸಿವೆ. ಒಂದೇ ಭಾಷೆಯ ಬೇರೊಂದು ಪದವನ್ನು ಹಾಕಿದರೂ ಸ್ವಾರಸ್ಯ ಹೋಗಿಬಿಡುವ ಸ್ಥಿತಿ ಇರುವಾಗ ಸಾಂಸ್ಕೃತಿಕವಾಗಿ ಪರಕೀಯವಾದ ಭಾಷೆಯ ಪದವನ್ನು ಬಳಸುವುದು ತಾನೆ ಹೇಗೆ? ಆದ್ದರಿಂದ ಎಷ್ಟೇ ಅತ್ಯುತ್ತಮನುವಾದ ಸಂವಾದಿ ಪದಗಳನ್ನು ಆಯ್ಕೆಮಾಡಿಕೊಂಡು ಬಳಸಿದರೂ ಉದ್ದಿಷ್ಟ ಭಾಷೆಯಲ್ಲಿ ಮೂಲದ ಶೈಲಿಯನ್ನು ತರುವುದು ಅಸಾಧ್ಯವಾಗುತ್ತದೆ. ಇದು ಪ್ರಾಯಶಃ ಯಾರೂ ಪರಿಹರಿಸಲಾಗದ ಸಮಸ್ಯೆಯಾಗಿಯೇ ಉಳಿದುಬಿಡುತ್ತದೆ.

"...It was thus perhaps, from hearing marriage so often recommended that my eldest son, just upon leaving college fixed his affections upon the daughter of a neighbouring clergyman"(3)

"....ನಾನು ಮಾಡುತ್ತಿದ್ದ ಮದುವೆಯ ವಿಷಯದ ಗುಣಗಾನವನ್ನು ಸದೋದಿತವಾಗಿ ಕೇಳುತ್ತಿದ್ದುದರಿಂದಲೋ ಏನೋ, ನನ್ನ ಹಿರಿಯ ಮಗ ಜಾರ್ಜ ಕಾಲೇಜಿನಲ್ಲಿಯ ಶಿಕ್ಷಣವನ್ನು ಪೂರೈಸಿದೊಡನೆ ನಮ್ಮ ನೆರೆಹೊರೆಯ ಪಾದ್ರಿಯ ಮಗಳಲ್ಲಿ ಅನುರಕ್ತನಾದ"(5)[13]

"...There may too have been enough recklessness and resentment beneath her ordinary placidity to make her stifle any momentary doubts"(17)

"....ಸಾಧಾರಣವಾಗಿ ಅವಳಲ್ಲಿದ್ದ ಸೌಮ್ಯತೆಯ ಅಡಿಯಲ್ಲಿ ಸಾಕಷ್ಟು ಅಸಮಾಧಾನವೂ ಅಡಗಿದ್ದು ಮನಸ್ಸಿನಲ್ಲಿದ್ದ ಸಂದೇಹಗಳನ್ನೆಲ್ಲ ಅದುಮಿ ಹಾಕಿರಬೇಕು"(23)[14]

"...No mountains infringe on the curve. League after league the earth lies flat, heaves a little, is flat again"(3)

"....ಯಾವ ಪರ್ವತಗಳೂ ಇಲ್ಲಿ ಈ ಕ್ಷಿತಿಜಕ್ಕೆ ಅಡ್ಡಗಟ್ಟಿಲ್ಲ. ಗಾವುದ ಗಾವುದಗಳವರೆಗೆ ಭೂಮಿಯು ಸಮನಾಗಿ ಹರಹಿಕೊಂಡಿದೆ. ನಡುವೆಯಲ್ಲಿಯೋ ಸ್ವಲ್ಪ–ಉಸಿರಾಡಿಸುವಾಗ ಹೊಟ್ಟೆಯುಬ್ಬಿದಂತೆ—ಭೂಮಿಯು ಎದ್ದಿದೆ" (15)[15]

ಮೇಲಿನ ಮೂರು ನಿದರ್ಶನಗಳಲ್ಲಿ ಮೊದಲನೆಯದನ್ನು ಸೂಕ್ಷ್ಮವಾಗಿ ನೋಡಿದರೆ ಸಂವಾದಿ ಶಬ್ದಗಳನ್ನು ಹಾಕದಿರುವುದರ ಜೊತೆಗೆ ಮೂಲದ ಶಬ್ದಗಳ ಅರ್ಥಛಾಯೆಯನ್ನು ಮೂಡಿಸುವುದರ ಕಷ್ಟವೂ ಅರಿವಾಗುತ್ತದೆ. ಎರಡನೆಯದನ್ನು ಗಮನಿಸಿದರೆ ಒಂದೆರಡು ಶಬ್ದಗಳನ್ನು ಬಿಟ್ಟಿರುವುದು, ಮೂಲದ ಅರ್ಥಕ್ಕೆ ನ್ಯಾಯ ದೊರೆಯದಿರುವುದು, ಕಂಡು

13 '*The Vicar of Wakefield*'; Oliver Goldsmith: "ವೇಕ್‌ಫೀಲ್ಡಿನ ಪಾದ್ರಿ ಮಹಾಶಯ," ರಾಮಚಂದ್ರ ಕೊಟ್ಟಲಗಿ.

14 ನೋಡಿ10

15 '*A Passage to India*'; E. M. Forster: ಅನು: 'ಭಾರತಮಾರ್ಗ'; ಗುರುರಾಜ ಜೋಷಿ.

ಬರುತ್ತದೆ. ಕೊನೆಯಪದರ ಕಾವ್ಯಾತ್ಮಕತೆ, ಸಂಕ್ಷಿಪ್ತತೆಯನ್ನು ತ್ಯಜಿಸದೆ ಅನುವಾದ ಮಾಡಲಾಗಿಲ್ಲವೆನ್ನುವುದನ್ನು ಕಾಣುತ್ತೇವೆ. ಮೂಲಕೃತಿಯ ಕರ್ತೃವಿನಂತೆಯೇ ಅನುಭವಿಸಿ ಅದೇ ರೀತಿಯ ಗೇಯಾತ್ಮಕ ರಚನೆಯನ್ನು ಮಾಡಬೇಕಾಗುತ್ತದೆ. ಇಲ್ಲವಾದರೆ ಮೂಲದ ರಚನೆಯಲ್ಲಿಯೇ ಹುದುಗಿರುವ ಸ್ವಾರಸ್ಯ ಮಾಯವಾಗಿಬಿಡುತ್ತದೆ. ಕನ್ನಡಕ್ಕೆ ಇಂಗ್ಲಿಷಿನಲ್ಲಿರುವಂತೆ ಪ್ಯಾರೆಂಥಿಟಿಕ್ ವಾಕ್ಯಗಳು ಅನಿವಾರ್ಯವಲ್ಲ. ಏಕೆಂದರೆ ಭಾಷಾಂತರಕಾರರು ಕನ್ನಡದ ಜಾಯಮಾನವನ್ನು, ನಾಡಿ ಮಿಡಿತವನ್ನು ಅರಿತುಕೊಂಡು ಮೂಲದ ಆಶಯವನ್ನು, ಭಾವವನ್ನು ಹಿಡಿದಿಡಬೇಕಾಗುತ್ತದೆ. ಭಾಷೆಗಿಂತ ಕೃತಿಕಾರನ ಮನೋಕೋಶದಲ್ಲಿ ಸ್ಪಂದಿಸುವ ಭಾವವೇ ಮುಖ್ಯವೆನ್ನುವುದನ್ನು ಮರೆಯುವಂತಿಲ್ಲ. ಮೂಲಕೃತಿಕಾರನು ಉದ್ದಿಷ್ಟಭಾಷೆಯಲ್ಲಿ ಬರೆಯುವವನಾಗಿದ್ದರೆ ಅದೇ ಭಾವವನ್ನು ಉದ್ದಿಷ್ಟಭಾಷೆಯ ಜಾಯಮಾನಕ್ಕೆ ಹೊಂದಿಸಿ ನಿರೂಪಿಸುತ್ತಿದ್ದನು. ಮೂಲಭಾಷೆಯ ಒಂದು ಶಬ್ದಕ್ಕೆ ಅದೇ ಅರ್ಥಕೊಡುವ ಉದ್ದಿಷ್ಟಭಾಷೆಯ ಶಬ್ದವನ್ನು ಬಳಸಿಕೊಂಡರೂ ಭಾವಕ್ಕೆ ಕುಂದು ಉಂಟಾಗುವ ಸಂಭವವಿದೆ.

"....'Pooh!' rejoined Miss Pross "you were bachelor from your cradle!" [203]

"....'ಫೂ'! ಮಿಸ್ ಉತ್ತರ ಕೊಟ್ಟಳು "ತೊಟ್ಟಿಲಿನಿಂದಲೇ ಬ್ರಹ್ಮಚಾರಿ ನೀವು!" [274][16]

ಈ ಉದಾಹರಣೆಯಲ್ಲಿ ಮೂಲಭಾಷೆಯ ವಾಕ್ಯರಚನಾಕ್ರಮ ಮತ್ತು ಅಲ್ಲಿನವರ ಬರವಣಿಗೆಯ ಪದ್ಧತಿಯನ್ನು ಅನುಸರಿಸಿರುವುದನ್ನು ಕಾಣುತ್ತೇವೆ. ಆದರೆ ಇದು ಮಹತ್ತರ ಸಮಸ್ಯೆಯನ್ನೇನೂ ಒಡ್ಡುವುದಿಲ್ಲ. "ಓಹೋ, ಹುಟ್ಟಾ ಬ್ರಹ್ಮಚಾರಿ ನೀವು!" ಎಂದಳು ಮಿಸ್ ಪ್ರಾಸ್'—ಎಂದು ಹೇಳಿದ್ದರೂ ಆಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಶಬ್ದಗಳು ದೊರೆಯದೆ ಸಂದಿಗ್ಧ ಪರಿಸ್ಥಿತಿ ಒದಗುತ್ತದೆನ್ನುವುದನ್ನು ಯಾರೂ ತಿರಸ್ಕರಿಸುವಂತಿಲ್ಲ.

ಎಲಿಜಬೆತ್ ಕಾಲದ ಇಂಗ್ಲಿಷಿನಲ್ಲಿ ರಚಿತವಾದ ಕಾದಂಬರಿಗಳನ್ನು ಅನುವಾದಿಸುವಾಗ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅನೇಕ ಶಬ್ದಗಳು ಅರ್ಥಾಂತರ ಹೊಂದಿಬಿಟ್ಟಿರುವುದರಿಂದ ಎಚ್ಚರಿಕೆಯಿಂದ ಅನುವಾದ ಮಾಡಬೇಕಾಗುತ್ತದೆ. security ಎಂಬುದಕ್ಕೆ carelessness ಎಂಬ ಅರ್ಥವಿದ್ದಿತು; companion ಎನ್ನುವುದು Idiot, ಅನಿಷ್ಟವ್ಯಕ್ತಿ ಎಂದಾಗುತ್ತಿತ್ತು. ಕೆಲವು ಸಲ ಹಲವು ಅರ್ಥಗಳನ್ನು ಕೊಡುವ ಶಬ್ದಕ್ಕೆ ಯಾವುದು ಸಮಂಜಸ ಎನ್ನುವುದನ್ನು ಸಂದರ್ಭ ಮತ್ತು ಹಿನ್ನೆಲೆಯಿಂದ ತಿಳಿದುಕೊಳ್ಳಬೇಕಾಗುತ್ತದೆ. design ಎಂಬ ಶಬ್ದಕ್ಕೆ ಹಲವು ಅರ್ಥಗಳಿವೆ, ಅವುಗಳಲ್ಲಿ ಎಣಿಕೆ, ಸಂಚು

16. "A tale of two eities; Charles Dickens"
(ಅನು) "ಎರಡು ನಗರಗಳ ಕಥೆ"; ಎಲ್. ಎಸ್. ಶೇಷಗಿರಿರಾವ್.

ಎಂಬ ಎರಡು ಅರ್ಥಗಳನ್ನು ತೆಗೆದುಕೊಂಡಾಗ ಯಾವುದನ್ನು ಬಳಸಿಕೊಳ್ಳಬೇಕೆಂಬ ಯೋಚನೆ ಬಂದೇ ಬರುತ್ತದೆ. ಎರಡರಲ್ಲಿ ಯಾವುದನ್ನು ಬಳಸಿದರೂ ತೊಂದರೆಯಾಗುವು ದಿಲ್ಲವೆ ನೋಡಬೇಕು. ಕಾದಂಬರಿಯಲ್ಲಿ 'ಸಂಕೀರ್ಣತೆ' ಇರುತ್ತದಾದ್ದರಿಂದ, ತಟ್ಟನೆ ಒಂದು ಸರಳವಾದ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ.

"Is that his design in settling here"[12]

"ಅವರಿಲ್ಲಿ ನೆಲಸುವುದರ ಸಂಚು ಅವೆಯೊ ?" [4][17]

ಇಲ್ಲಿ 'ಅವರು' ಎಂಬ ವಚನಕ್ಕೆ 'ಎಣಿಕೆ' ಎಂಬುದೇ ಸರಿಹೋಗಬಹುದೆಂದು ಅನಿಸುತ್ತದೆ. ಆದರೆ "Design! nonsense, how can you talk so!" ಎಂದು ಎದುರು ಪಾತ್ರವು ಗಟ್ಟಿಯಾಗಿ ನುಡಿದಾಗ, ನಾವು "ಹಾಗಾದರೆ ಏನೋ 'ಸಂಚು' ಹೂಡಿರುವರೆಂದು" ಯೋಚಿಸಲು ತೊಡಗುತ್ತೇವೆ. ಆದರೆ ಒಬ್ಬ ಸುಂದರ, ಶ್ರೀಮಂತ ಯುವಕನು ಹೆಣ್ಣು ಮಕ್ಕಳಿರುವ ಸಂಸಾರವಂದಿಗರ ಮಧ್ಯೆ ಮನೆಯೊಂದನ್ನು ಬಾಡಿಗೆಗೆ ಹಿಡಿದರೆ.ಅದನ್ನು 'ಸಂಚು' ಎಂದು ಹೇಳುವುದಕ್ಕಾಗುತ್ತದೆಯೇ , ಎಂಬ ಕಳವಳವೂ ಹುಟ್ಟುತ್ತದೆ. ಇನ್ನೊಂದು ಪಾತ್ರವು ಗಟ್ಟಿಯಾಗಿ ಹೇಳಿದುದರಿಂದಲೇ 'design' ಗೆ 'ಸಂಚು' ಸರಿ ಎಂದು ಹೇಳಲಾಗದು. ಏಕೆಂದರೆ ಬಾಡಿಗೆಗೆ ಹಿಡಿದಾಕ್ಷಣ ಮದುವೆಯ 'ಎಣಿಕೆ ಅಥವಾ ಉಪಾಯ' ಅವನ ಮನಸ್ಸಿನಲ್ಲಿ ಇರಬೇಕೆಂದೇನೂ ಇಲ್ಲ. ಆದ್ದರಿಂದ ಆ ಪಾತ್ರವು ಹಾಗೆ ಝುಂಕಿಸಿರಬಹುದು.

ಇಂಗ್ಲಿಷ್ [ಭಾಷೆಯ] ಕಾದಂಬರಿಗಳನ್ನು ಭಾಷಾಂತರಿಸುವಾಗ, ಬಾಹ್ಯ ಮತ್ತು ಆಂತರಿಕ ; ಕೋಶಾತ್ಮಕ ಮತ್ತು ವ್ಯಾಕರಣಾತ್ಮಕ ಮುಂತಾದ ಸಮಸ್ಯೆಗಳು ಎದುರಾಗುತ್ತವೆ. ಉಭಯ ಭಾಷಾ ಪ್ರಭುತ್ವದ ಜೊತೆಗೆ ಭಾವಗ್ರಹಣ ಶಕ್ತಿ ಮತ್ತು ಸಮರ್ಥ ಅಭಿವ್ಯಕ್ತಿ ಕೌಶಲಗಳೂ ಸೇರಿದ್ದರೆ ಭಾಷಾಂತರ ಕಾರ್ಯದ ಕ್ಲಿಷ್ಟತೆ ಕೊಂಚ ಕಡಿಮೆಯಾಗುತ್ತದೆ. ಈ ಎಲ್ಲ ಕಾರಣಗಳಿಂದಾಗಿ, ಕಾದಂಬರಿಗಳನ್ನು [ಇಂಗ್ಲಿಷ್] ಅನುವಾದಿಸುವಾಗ, ಇಂಗ್ಲಿಷ್ ಜಾಯಮಾನಕ್ಕೆ ಒಗ್ಗುವಂತೆ ಇಡೀ ಪ್ಯಾರಾಗಳನ್ನೇ ಒಂದೊಂದು ಘಟಕಗಳನ್ನಾಗಿ ಭಾವಿಸುವುದು ಒಳ್ಳೆಯದು. 'ವಾಕ್ಯದ ನಂತರ ವಾಕ್ಯ' ಅನುವಾದ ಮಾಡುವುದರಿಂದ ಸಮಸ್ಯೆಗಳು ಹೆಚ್ಚಾಗುವುದರ ಜೊತೆಗೆ ಮೂಲದ ಭಾವ ಅಥವಾ ಆಶಯ ಮಾಯವಾಗುವ ಸಾಧ್ಯತೆಯೇ ಹೆಚ್ಚು. ಒಂದು ಪ್ಯಾರಾವನ್ನು ಘಟಕವನ್ನಾಗಿ ತೆಗೆದುಕೊಂಡರೆ ಅರ್ಥ ಮತ್ತು ಆಶಯಗಳನ್ನು ಕನ್ನಡದ ಜಾಯಮಾನಕ್ಕೆ ಒಗ್ಗುವಂತೆ ನಿರೂಪಿಸುವುದು ಸುಲಭವಾಗುತ್ತದೆ. ವಾಕ್ಯಗಳ ವಿಭಜನೆ, ಅದಲು ಬದಲು ಮಾಡುವುದು, ವಿರಾಮ ಚಿಹ್ನೆಗಳನ್ನು ಬದಲಿಸುವುದು, ಮೇಲ್ಭಾಗದ ವಿರಾಮ ಚಿಹ್ನೆಗಳನ್ನು ತೆಗೆದು

17. '*Pride and Prejudice*' ; Jane Austen. (ಅನು) 'ಹಮ್ಮು–ಬಿಮ್ಮು'–ದೇಜಗೌ.

ಹಾಕುವುದು ಮುಂತಾದುವುಗಳನ್ನು ಕಾರ್ಯರೂಪಕ್ಕೆ ತಂದು ಮೂಲಕ್ಕೆ ನ್ಯಾಯವನ್ನು ದೊರಕಿಸಬಹುದು.

'ಕೆನಿಲ್ ವರ್ತ್'[18] ಕಾದಂಬರಿ [ಅನು.]ಯನ್ನು ನೋಡಿದರೆ ಮೇಲೆ ಹೇಳಿದ ಕಾರ್ಯವನ್ನೆಸಗಿರುವುದು ಕಂಡುಬರುತ್ತದೆ. ಆದರೆ ಅಲ್ಲಿ ಅಂತಹ ಕಾರ್ಯ ಪ್ಯಾರಾಗಳಿಗೆ ನಿಲ್ಲದೆ ಪುಟಗಳಿಗೆ ಅನ್ವಯಿಸಿದಂತೆ ನಡೆದಿದೆ. ಆದ್ದರಿಂದ ಸಮಸ್ಯೆಗಳ ಪರಿಹಾರವೂ ಸುಲಭವಾಗಿದೆ. ಆದರೆ ಮೂಲ '*Kenilworth*'ನ ಸ್ಪಷ್ಟ ಭಾಷಾಂತರವೆನಿಸುವುದಿಲ್ಲ. ಒಂದೊಂದು 'ಪ್ಯಾರಾ'ವನ್ನು ಘಟಕವನ್ನಾಗಿ ಮಾಡಿಕೊಂಡು ಚೆನ್ನಾಗಿ ಅನುವಾದಿಸಿರುವುದನ್ನು 'ಹಮ್ಮು ಬಿಮ್ಮು' [*Pride and Prejudice*] ಕಾದಂಬರಿಯಲ್ಲಿ ಕಾಣಬಹುದು.

ಒಂದು ದೇಶದ ಸಂಸ್ಕೃತಿಗೂ ಅದರ ಭಾಷೆಗೂ ನಿಕಟಸಂಬಂಧವಿರುವುದರಿಂದ ಸಾಂಸ್ಕೃತಿಕ, ಜಾನಾಂಗಿಕ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹರಿಸುತ್ತೇವೆನ್ನುವುದು ಸರಿಯಲ್ಲ. ಆದ್ದರಿಂದಲೇ ಅವು ವಿಶಿಷ್ಟ ಸಮಸ್ಯೆಗಳಾಗಿ ಉಳಿಯುತ್ತವೆ.

---

18. '*Kenilworth*' : Sir Walter Scot (ಸಂಗ್ರಹಾನುವಾದ) 'ಕೆನಿಲ್ ವರ್ತ್' ; ಎಚ್. ಎಲ್. ನಾಗೇಗೌಡ.

೧೮ ಕಾವ್ಯದ ಅನುವಾದ—ವಿಶಿಷ್ಟ ಸಮಸ್ಯೆಗಳು

ಪ್ರಧಾನ್ ಗುರುದತ್ತ

ಕಾವ್ಯದ ಅನುವಾದಕ್ಕೆ ಸಂಬಂಧಿಸಿದ ಚರ್ಚೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಬಹುದು :

Johnson : "Poetry, Sir, cannot simply be translated."
Frost : "Poetry is what gets lost in translation."
A Hebrew poet : "Translation of poetry is like kissing one's sweet-heart through a veil."

ಕಾವ್ಯವನ್ನು ಅನುವಾದಿಸಲು ಸಾಧ್ಯವಿಲ್ಲ ; ಹಾಗೇನಾದರೂ ಅನುವಾದಿಸಿದರೆ ಅಥವಾ ಅನುವಾದಿಸಲು ಸಾಧ್ಯವಾದರೆ ಅದು ತನ್ನ ಮೂಲದ ಸತ್ವ-ಸೌಂದರ್ಯಗಳನ್ನು ಕಳೆದು ಕೊಂಡುಬಿಟ್ಟಿರುತ್ತದೆ ; ನಲ್ಲೆಯನ್ನು ಪರದೆಯ ಮೂಲಕ ಚುಂಬಿಸುವುದು ಎಷ್ಟು ಅಪ್ರಿಯವೂ, ಅಸಂತೋಷಕರವೂ ಆಗಿರುತ್ತದೆಯೋ ಅಷ್ಟೇ ಅಪ್ರಿಯ ಅಸಂತೋಷಕರ ಕಾವ್ಯವನ್ನು ಅನುವಾದದ ಮೂಲಕ ಓದುವುದು – ಈ ಅಭಿಪ್ರಾಯದ ಮಾತುಗಳು ಕಾವ್ಯಾನುವಾದದ ಅಸಾಧ್ಯತೆ ಹಾಗೂ ಅನಪೇಕ್ಷಣೀಯತೆಯ ವಿಚಾರವನ್ನು ಶ್ರುತಪಡಿಸುತ್ತವೆ. ಇಷ್ಟಾಗಿಯೂ, ಕಾವ್ಯದ ಅನುವಾದ ಸತತವಾಗಿ ಹಾಗೂ ತೃಪ್ತಿಕರವಾದ ಪರಿಣಾಮಗಳೊಂದಿಗೆ ನಡೆಯುತ್ತ ಬಂದಿದೆಯೆಂಬುದಕ್ಕೆ ಜೀವಂತ ಭಾಷೆಗಳ ಸಾಹಿತ್ಯೇತಿಹಾಸಗಳು ಸಾಕ್ಷಿಯನ್ನು ನುಡಿಯುತ್ತವೆ. ಕಾವ್ಯವನ್ನು ಭಾಷಾಂತರಿಸಿಕೊಳ್ಳುವ ವಿಚಾರ ಅತ್ಯಂತ ವಿವಾದಾಸ್ಪದವಾಗಿ ಪರಿಣಮಿಸಿದೆ ಎಂಬ ಹಾಗೂ ತೃಪ್ತಿಕರವಾದ ಅನುವಾದ ಕಷ್ಟಸಾಧ್ಯವಾದರೂ ಅಸಾಧ್ಯವೇನಲ್ಲ ಎಂಬ ವಿಚಾರ ಇದರಿಂದ ಸ್ಪಷ್ಟವಾಗುತ್ತದೆ.

ಕಾವ್ಯಾನುವಾದ ಇಷ್ಟೊಂದು ವಿವಾದಕ್ಕೆ ಕಾರಣವಾಗಿರುವುದು ಅದರಲ್ಲಿ ನಿಹಿತವಾಗಿರುವ ಹಲವಾರು ಸಮಸ್ಯೆಗಳಿಂದ. ಮೂಲಭೂತವಾಗಿ ಅದರಲ್ಲಿ ಇರುವುದು ಕೈಗೆ ಸಿಕ್ಕದ, ಸಿಕ್ಕಿದರೂ ಸಂಪೂರ್ಣವಾಗಿ ಸಿಕ್ಕದೆ ನುಣುಚಿಕೊಳ್ಳುವ ಭಾವಸಂಪತ್ತು ; ಇದಕ್ಕೆ ಪೋಷಕವಾಗಿ, ಪೂರಕವಾಗಿ ಬಂದಿರುವ ಲಯ, ಪ್ರಾಸ, ಅಲಂಕಾರಾದಿಗಳು ; ಈ ಎಲ್ಲದರ ನೆರವಿನಿಂದ ಕವಿ ಕಂಡ ವಿಶಿಷ್ಟ—ಮತ್ತೊಬ್ಬನಿಂದ ಅದೇ ರೀತಿಯಲ್ಲಿ ದರ್ಶನಾಸಾಧ್ಯವಾಗಿರುವ —ಕಾಣ್ಕೆ ; ಇವುಗಳನ್ನು ನೆಮ್ಮಿನಿಂತಿರುವ ವಿಶಿಷ್ಟ ಕಲ್ಪನೆ ; ಇತ್ಯಾದಿ. ಇಷ್ಟೊಂದು ಸಮಸ್ಯೆಗಳಿವೆ ಎಂಬ ವಿಚಾರ ನಮ್ಮನ್ನು ಎದೆಗೆಡಿಸಬೇಕಾಗಿಲ್ಲ. ಏಕೆಂದರೆ ಅನಾತೋಲೆ

ಫ್ರಾನ್ಸ್ ಹೇಳಿರುವಂತೆ, “ಈ ಸತ್ಯವನ್ನು ಕಂಡುಕೊಳ್ಳುವುದೇ ಈ ಕಲೆಯಲ್ಲಿನ ಯಶಸ್ಸಿಗೆ ಪೂರ್ವಭಾವೀ ಅಗತ್ಯ”ವಾಗುತ್ತದೆ. ಹಾಗಾದರೆ, ಅತ್ಯಂತ ಸಮರ್ಪಕವಾದ ಅನುವಾದ ಅಸಾಧ್ಯವೆಂದು ಹೇಳುವುದಾದರೂ ಏಕೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಭಾಷಾಂತರದಲ್ಲಿ ಯಾವುದಾದರೂ ಒಂದು ಅಂಶ ಎಲ್ಲಿಯಾದರೂ ಒಂದು ಕಡೆ ಅದೃಶ್ಯವಾಗಿಬಿಡುತ್ತದೆ; ಇದು ಮೂಲದ ಸೌಂದರ್ಯವನ್ನು ಕಡಿಮೆಯಾಗಿಸಿಬಿಡುತ್ತದೆ; ಅತ್ಯಂತ ಸಮರ್ಪಕವಾದ ಅನುವಾದವನ್ನು ಕೊಡುವುದು ಸಾಧ್ಯವೆಂಬ ಸಿದ್ಧಾಂತ ಮುಗ್ಗರಿಸಿ ಬಿಡುತ್ತದೆ ಎಂದೆಲ್ಲ ಹೇಳಲಾಗಿದೆ. ಈಗ ಕೆಲವೊಂದು ಉದಾಹರಣೆಗಳ ಮೂಲಕ ಈ ಅಂಶವನ್ನು ಚರ್ಚಿಸಬಹುದು.

ಮೊದಲಿಗೆ, ‘ಶಾಕುಂತಲ’ ನಾಟಕದ ಒಂದು ಪದ್ಯವನ್ನು ತೆಗೆದುಕೊಳ್ಳಬಹುದು:

“ಪಾತುಂ ನ ಪ್ರಥಮಂ ವ್ಯವಸ್ಯತಿ ಜಲಂ ಯುಷ್ಮಾಸ್ವಪೀತೇಷು ಯಾ
ನಾದತ್ತೇ ಪ್ರಿಯಮಂಡನಾಽಪಿ ಭವತಾಂ ಸ್ನೇಹೇನ ಯಾ ಪಲ್ಲವಮ್ ।
ಆದ್ಯೇ ವಃ ಕುಸುಮಪ್ರಸೂತಿಸಮಯೇ ಯಸ್ಯಾ ಭವತ್ಯುತ್ಸವಃ
ಸೇಯಂ ಯಾತಿ ಶಕುಂತಲಾ ಪತಿಗೃಹಂ ಸರ್ವೈರನುಜ್ಞಾಯತಾಮ್ ॥”

ಇದರ ಒಂದು ಅನುವಾದ ಹೀಗಿದೆ:

“ಜಲವನದಾವಳೀಂಟಳೆರೆದಲ್ಲದೆ ನಿಮ್ಮಯ ಪಾತೆಗಂಬುವಂ ।
ತಳಿರ್ಗಳ ಕೊಯ್ಯಳಾವಳೊಲವಿಂ ಪುಗೆ ಸಿಂಗರವಾಸೆಯುಳ್ಳೊಡಂ ॥
ಅಲರ್ಗಳ ತಾಳೆ ಮೊದಲುತ್ಸವಮಾಂತಪಳಾವಳಾ ಶಕುಂ ।
ತಳೆ ಪತಿಸದ್ಮಕ್ಕೈದಿದಪಳಾಕೆಗನುಜ್ಞೆಯನೀವುದೆಲ್ಲರುಂ ॥”

ಇದರ ಮತ್ತೊಂದು ಅನುವಾದ ಹೀಗಿದೆ:

“ಮೊದಲು ನಿಮಗೆಲ್ಲರಿಗುಮೆರೆದಲ್ಲದೆಂಬುವನು
ಜಲಪಾನಕಿನ್ನಾವಳೆಳಸದಿಹಳು
ಸಿಂಗಾರದೊಳಗರ್ತಿ ತನಗಿರ್ದುಮೆಳೆಕುಡಿಗಳನು
ಅಳ್ಕರಿಂದಿನ್ನಾವಳಾಯದಿಹಳು
ನೀವು ನನೆಕೋನೆವೋದ ಮೊದಲ ದಿವಸದೊಳೊಲಿದು
ಉತ್ಸವಂಗಳನಾವಳೆಸಗಿದಪಳು
ಆ ಶಕುಂತಳೆಯಿಂದು ಪತಿಯ ಮನೆಗೈವಳು
ನೀವೆಲ್ಲರೋಲಿದೀವುದನುಮತಿಯನು.”

ಅಥವಾ

“Twinkle, twinkle, little star
How I wonder what you are!
Up above the world so high
Like a diamond in the sky.”

ಇದರ ಒಂದು ಅನುವಾದ :

"ಮಿನುಗೆಲೆ ಮಿನುಗೆಲೆ ನಕ್ಷತ್ರ
ನನಗಿದು ಚೋದ್ಯವು ಬಲುಚಿತ್ರ.
ಘನಗಗನದಿ ಬಲು ದೂರದಲಿ
ಮಿನುಗುವೆ ವಜ್ರಾಕಾರದಲಿ."

ಇದರ ಇನ್ನೊಂದು ಅನುವಾದ :

"ಮಿರುಮಿರುಗುವೆ ಹಾ ಕಿರುತಾರಗೆಯೆ
ಅರಿಯೆನು ನಾನೆಲೆ ನಿನಾರೊ.
ಧರೆಗಿಳಿಯದೆ ನೀನಿರುತಿಹೆ ದೂರದಿ
ನೆರೆಹೊಳೆಯುವ ವಜ್ರದ ತೆರದಿ."

ಈ ಅನುವಾದಗಳಲ್ಲಿ ಯಾವುದರಲ್ಲೂ ಬಹುಮಟ್ಟಿಗೆ ಮೂಲದ ಸತ್ವ-ಸೌಂದರ್ಯಗಳು ಮಾಯವಾಗಿಲ್ಲ. ಒಂದೊಂದು ರೀತಿಯಲ್ಲಿ ಒಂದೊಂದೂ ಆಕರ್ಷಣೀಯವಾಗಿದೆ ಎಂದೆನಿಸುತ್ತದೆ. ಮೂಲದ ಭಾವ ಮೂರ್ತವೂ ಸರಳವೂ ಆಗಿರುವುದರಿಂದ ಭಾಷಾಂತರಕ್ಕೆ ವಿಶಿಷ್ಟವಾದ ತೊಡಕುಗಳೇನೂ ಉಂಟಾಗಿಲ್ಲ. ಹೀಗಾಗಿ ಭಾಷಾಂತರಗಳು ಸರಳವೂ, ಸುಂದರವೂ ಆಗಿವೆ. ಆದರೆ, ಕಾವ್ಯ ಎಲ್ಲ ಎಡೆಗಳಲ್ಲಿಯೂ, ಇಷ್ಟೇ ಮೂರ್ತವೂ, ಸರಳವೂ ಆಗುವುದು ಸಾಧ್ಯವಿಲ್ಲ.

ಶಬ್ದ ಮತ್ತು ಅವುಗಳ ಸಂಯೋಜನೆಯಿಂದ ಹೊರಡುವ ನಾದ—ಇವು ವಿಶಿಷ್ಟ ಆವರಣವೊಂದನ್ನು ಸೃಷ್ಟಿಸಲು ನೆರವಾಗುತ್ತವೆ. ಉದಾಹರಣೆಯಾಗಿ, ಈ ಪದ್ಯವನ್ನು ತೆಗೆದುಕೊಳ್ಳೋಣ :

"ಅಮೀ ವೇದಿಂ ಪರಿತಃ ಕ್ಲೃಪ್ತಧಿಷ್ಣ್ಯಾಃ ಸಮಿದ್ವಂತಃ ಪ್ರಾಂತ ಸಂಸ್ತೀರ್ಣ ದರ್ಭಾಃ ।
ಅಪಘ್ನಂತೋ ದುರಿತಂ ಹವ್ಯಗಂಧೈರ್ವೈತಾನಾಸ್ತ್ವಾಂ ವಹ್ನಯಃ ಪಾವಯಂತು ॥"

ಇದರ

"ವೇದಿಯ ಸುತ್ತಲ್ನೆಲೆಗೊಂ-
ಡಾದಂ ಸಮಿಧೆಗಳನಾಂತು ಪೊಣ್ಮುವ ಹವ್ಯಾ-
ಮೋದದಿನಘ ಪರಿಹಾರಕ
ಮಾದೀ ವೈತಾನವಹ್ನಿ ಸಲಹುಗೆ ನಿನ್ನಂ ॥"

ಎಂಬ ಭಾಷಾಂತರ ಸನ್ನಿವೇಶದ-ಅಂದರೆ ಶ್ರೋತ್ರೀಯ ಆವರಣದ-ಭವ್ಯತೆಯನ್ನು ತರಲಾರದೆ ಹಿಂದೆ ಬೀಳುತ್ತದೆ ಎಂಬುದನ್ನು ನಾವು ಗಮನಿಸಬಹುದು. ಯಾವ ರೀತಿಯಲ್ಲಿ ಭಾಷಾಂತರಿಸಿದರೂ ಇಲ್ಲಿ ಸೋಲು ಕಟ್ಟಿಟ್ಟ ಗಂಟು. ಹೀಗಾಗಿ, ಪರಮೇಶ್ವರಭಟ್ಟರು ಮೂಲವನ್ನು ಲಿಪ್ಯಂತರಗೊಳಿಸುವಷ್ಟರಿಂದಲೇ ತೃಪ್ತರಾಗಿಬಿಡುತ್ತಾರೆ.

ಸೂಕ್ಷ್ಮ ಸಂವೇದಿಯಲ್ಲದ ಭಾಷಾಂತರಕಾರ, ಮೂಲದ ಭಾವವನ್ನೇ ಗ್ರಹಿಸಲಾರದೆ ಹೋಗಿ ಎಂಥ ಘೋರ ಅಪಚಾರವನ್ನೆಸಗಬಹುದೆಂಬುದಕ್ಕೆ ಉದಾಹರಣೆಯಾಗಿ ಈ ಕೆಳಗಿನ ಪ್ರಸಂಗಗಳನ್ನು ಗಮನಿಸಬಹುದು :

(i) ಕೆ. ಎಸ್. ನರಸಿಂಹಸ್ವಾಮಿಯವರ 'ಗಾಂಧೀಜಿ ಪಾದಕ್ಕೆ' ಕವಿತೆಯ ಒಂದು ಸಾಲು ಹೀಗಿದೆ :

"ನವಖಲಿಯ ನೆತ್ತರಿನ ಕಣ್ಣ ತೊಳೆದು........"

ಇದರ ಅನುವಾದ ಹೀಗಿದೆ :

"ನೋಆಖಾಲೀ ಕೇ ರಕ್ತ್ ಸೇ ಆಂಖೇ ಧೋಕರ್.......
(ಅಂದರೆ "ನವಖಲಿಯ ರಕ್ತದಿಂದ ಕಣ್ಣುಗಳನ್ನು ತೊಳೆದುಕೊಂಡು......")

ನವಖಲಿಯ ಮಾರಣ ಹೋಮದಲ್ಲಿ ದುಃಖಾರ್ತರಾಗಿದ್ದ ವ್ಯಕ್ತಿಗಳ ಕಣ್ಣಿನಿಂದ ತೊಟ್ಟಿಕ್ಕುತ್ತಿದ್ದುದು ಕಣ್ಣೀರಲ್ಲ, ರಕ್ತ. ಹೀಗೆ ದುಃಖಾರ್ತರಾಗಿದ್ದವರು ಒಬ್ಬಿಬ್ಬರಲ್ಲ, ಇಡೀ ನವಖಲಿಯ ಜನತೆ. ಹೀಗಾಗಿ, "ರಕ್ತ ಸುರಿಸುತ್ತಿದ್ದ ನವಖಲಿಯ ಕಣ್ಣನ್ನು ತೊಳೆದು" ಗಾಂಧೀಜಿ ಉಪಕಾರವೆಸಗಿದರು. ಅಂಥ ಮಹಾತ್ಮನ ಶ್ರೀಚರಣಕ್ಕೆ ಶರಣು ಎನ್ನುತ್ತಾರೆ, ಕವಿ. ಆದರೆ, ಭಾಷಾಂತರಕಾರರು "ನವಖಲಿಯ ರಕ್ತದಿಂದ ಗಾಂಧೀಜಿ ಕಣ್ಣುಗಳನ್ನು ತೊಳೆದುಕೊಂಡರು" ಎಂದು ಹೇಳಿ ಮೂಲಕವಿಯನ್ನೂ, ಕವಿತೆಯನ್ನೂ ಕೊಲೆಗೈದಿದ್ದಾರೆ.

(ii) ಪು.ತಿ.ನ. ಅವರ 'ಗಾಂಧೀಸ್ಮರಣ' ಕವಿತೆಯ ಎರಡು ಪಂಕ್ತಿಗಳು ಇಂತಿವೆ :

"ನಡೆಸುವೊಲೆ ನಡೆವಂಥ ಕುರಿಗಳೆ ನೀವು ಭಾರತಪುತ್ರರೆ
ಪಡೆದುದನು ಪರುವಂಥ ದುರ್ಬಲ ದೈವದೇಹ ನಿರೀಹರೆ.... ..."

ಇದರ ಅನುವಾದ ಹೀಗಿದೆ :

"ಭೇಡೋಂ ಕೀ ತರಹ್ ನೇತಾ ಕೇ ಪೀಛೇ ಚಲನೇವಾಲೇ
ಭಾರತಪುತ್ರೋಂ, ಜೋ ಭಾಗ್ಯ ಮೇಂ ಹೈ ಉಸೇ ಭೋಗ್‌ನೇವಾಲೇ ದುರ್ಬಲ್
ದೇಹ್ ನಿರೀಹ್ ಲೋಗೋ........"

ಅಂದರೆ—"ಕುರಿಗಳಂತೆ ನಾಯಕನ ಹಿಂದೆ ನಡೆಯುವ ಭಾರತಪುತ್ರರೆ, ಅದೃಷ್ಟದಲ್ಲಿರುವುದನ್ನು ಭೋಗಿಸುವ ದುರ್ಬಲ ದೇಹ ನಿರೀಹ ಜನರೇ ...." ಎಂದು ಭಾಷಾಂತರಿಸಿದ್ದಾರೆ.

"ನಡೆಸಿದ ಹಾಗೆ ನಡೆಯುವಂಥ ಕುರಿಗಳೇ ನೀವು ? ಪಡೆದುಕೊಂಡು ಬಂದಿರುವುದನ್ನೂ ಬೇರೊಬ್ಬರಿಗೆ ಒಪ್ಪಿಸಿ, ಅವರೆದುರು ಕೈಯೊಡ್ಡಿ ನಿಲ್ಲುವಂಥ ದುರ್ಬಲರೇ ನೀವು ?"—ಎಂದು ಜನತೆಯನ್ನು ಕೆಣಕಿ, ಅವರ ಆತ್ಮಾಭಿಮಾನವನ್ನು ಬಡಿದೆಬ್ಬಿಸುವುದಕ್ಕೆ ಬದಲಾಗಿ

"ಕುರಿಗಳಂತೆ........ನಡೆಯುವ ಭಾರತಪುತ್ರರೇ......ಬನ್ನಿ" ಎಂದು ಅವಹೇಳನವನ್ನೂ ಆಭೂಷವಾಗಿಸಿಬಿಟ್ಟಿದ್ದಾರೆ ಈ ಭಾಷಾಂತರಕಾರರು.

ಇಂಥ ಭಾಷಾಂತರಗಳು 'ಭಾಷಾಂತರ ಕಾಯಕ'ಕ್ಕೇ ಅಪಮಾನಕಾರವಾದುವು. ಇಂಥ ಭಾಷಾಂತರಗಳನ್ನು ನೋಡಿದಾಗ ಕಾವ್ಯಾನುವಾದವಿರಲಿ, ಯಾವುವೇ ಅನುವಾದವೂ ಆಗುವುದು ಬೇಡ ; ಸಾಧ್ಯವಿದ್ದರೆ ಮೂಲದಲ್ಲಿಯೇ ಓದಲಿ, ಇಲ್ಲವಾದಲ್ಲಿ ಬಿಡಲಿ ಎಂದೆನ್ನಿಸುತ್ತದೆ.

ಆದರೆ, ಕೆಲವೊಮ್ಮೆ ಹಲವಾರು ಕಾರಣಗಳಿಂದಾಗಿ, ಭಾಷಾಂತರಕಾರನ ಪ್ರತಿಭಾ ಸಾಮರ್ಥ್ಯಗಳಿಗೂ ಭಾವ ಸಿಲುಕದೆ ಹೋಗಬಹುದು. 'ಶಾಕುಂತಲ' ನಾಟಕದಲ್ಲಿ ಬರುವ 'ಸಗಂಧಿ' ಶಬ್ದದ ವಿಚಾರವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ತನ್ನ ಕೈಯಿಂದ ನೀರು ಕುಡಿಯದೆ ಶಕುಂತಲೆಯು ಕುಡಿಸಿದಾಗ ಕುಡಿವ ಜಿಂಕೆಯಮರಿಯನ್ನು ಕಂಡು ದುಷ್ಯಂತ "ಎಲ್ಲರಿಗೂ ತನ್ನ ತಮ್ಮ ಜನರಲ್ಲೇ ವಿಶ್ವಾಸ; ನೀವಿಬ್ಬರೂ 'ಸಗಂಧಿ'ಗಳು ಎನ್ನುತ್ತಾನೆ. ಅಂದರೆ ಪ್ರಾಣಿಗಳು ವಾಸನೆಯ ಮೂಲಕ ತಮ್ಮವರನ್ನು ಗುರುತಿಸುವ ಸ್ವಭಾವದ ಉಲ್ಲೇಖ ಇಲ್ಲಿದೆ. ಇದನ್ನು ಬೇರೆ ಮಾತುಗಳಲ್ಲಿ ಹೇಳುವುದು ಕಷ್ಟ. ಹೀಗಾಗಿ, ಭಾವದ ವಿಚಾರವನ್ನು ಇಲ್ಲಿಗೆ ಕೈಬಿಡಬಹುದು.

ಲಯ ಮತ್ತು ಪ್ರಾಸಗಳ ವಿಚಾರವನ್ನು ತೆಗೆದುಕೊಳ್ಳೋಣ. ಲಯ ಆಂತರಿಕವಾಗಿ ವಿಸ್ತರಿಸಿಕೊಂಡಿರುವಂಥದು ; ಪ್ರಾಸ ಆದಿಯಲ್ಲಿ, ಮಧ್ಯದಲ್ಲಿ, ಅಂತ್ಯದಲ್ಲಿ ಕಾಣಿಸಿಕೊಳ್ಳುವಂಥದು ಹಾಗೂ ಪ್ರಯತ್ನಪೂರ್ವಕವಾಗಿಯೋ ಅಪ್ರಯತ್ನಪೂರ್ವಕವಾಗಿಯೋ ಸಿದ್ಧಿಸಿರಬಹುದಾದಂಥದು. ಇವುಗಳನ್ನು ಯಥಾವತ್ತಾಗಿ ತರಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ, ಇಂಥವನ್ನು

(i) "ಜನ।ಗಣ।ಮನ।ಅಧಿ।ನಾ।ಯಕ।ಜಯ।ಹೇ...." (ಎರಡು ಮಾತ್ರೆಯ ಲಯ)

(ii) ನಾಗರ।ಹಾವೇ। ಹಾವೊಳು। ಹೂವೇ। (ನಾಲ್ಕು ಮಾತ್ರೆಯ ಲಯ)

(iii) ಒಂದಿರುಳು। ಕನಸಿನಲಿ। ನನ್ನವಳ। ಕೇಳಿದೆನು। ಚಂದನಿನ। ಗಾವುದೆಂ।ದು ..." (ಐದು ಮಾತ್ರೆಯ ಲಯ)

ಇನ್ನೊಂದು ಭಾಷೆಗೆ—ಅದರಲ್ಲಿಯೂ ಬೇರೊಂದು ಪರಿವಾರದ ಭಾಷೆಗೆ—ಭಾಷಾಂತರಿಸುವಾಗ ಅದೇ ಲಯವನ್ನು ತರಲು ಸಾಧ್ಯವಾಗದೆ ಹೋಗಬಹುದು. ಆಗ, ಉದ್ದಿಷ್ಟ ಭಾಷೆಯ ಜಾಯಮಾನಕ್ಕೆ ಅನುಗುಣವಾಗಿ ಬೇರೊಂದು ಬಗೆಯ ಲಯವನ್ನಾದರೂ ತಂದು, ನಷ್ಟವನ್ನು ಸರಿದೂಗಿಸಬಹುದು—ಸಹಜವಾಗಿ ಅದು ಸಾಧಿತವಾಗುವಂತಿದ್ದರೆ. ಇಲ್ಲವಾದಲ್ಲಿ ಇದನ್ನು ಕೈಬಿಡಬೇಕಾಗುತ್ತದೆ.

ಪ್ರಾಸದ ವಿಚಾರದಲ್ಲಿ ಭಾಷಾಂತರಕಾರ ಕಾಳಜಿ ವಹಿಸಬೇಕಾಗಿಲ್ಲ. ಅನಾಯಾಸವಾಗಿ,

ಸಹಜವಾಗಿ ಸಾಧಿತವಾದಲ್ಲಿ ಮಾತ್ರ ಪ್ರಾಸವನ್ನು ಉಳಿಸಿಕೊಳ್ಳಬಹುದು. ಪ್ರಾಸಕ್ಕಾಗಿಯೇ ತ್ರಾಸಪಡುವ್ರಸಂತೂ ಕೊಡಲೇಕೂಡದು. ಇಲ್ಲವಾದಲ್ಲಿ

(i) "..............................ಕೃಷ್ಣ,
ಅನ್ಯಥಾ ಅಭೀ ಹೈ ಮೇರಾ ರಕ್ತ್ ಉಷ್ಣ."

ಅಥವಾ (ii) "....ಜಗದ ಜನ ಮುಂದನವ ನಾಡದಿದರೆ?
...ವೈಕುಂಠ ಸೇರ್ವುದೇಂ? ಭಾಪು! ಭಳಿರೆ!"

ಎಂಬಂಥ ಅಸಹಜ ಪ್ರಾಸಗಳನ್ನೂ ಸಹಿಸಿಕೊಳ್ಳಬೇಕಾಗುತ್ತದೆ. ಆದರೆ,

"ನನ್ನ ಕಣ್ಣೆದುರಿನಲಿ ನೀನು ಇರುವಾಗ,
ದಿಟವೆಂದೆ ತೋರುವುದು ಅನುರಾಗ!
ಕಣ್ಣು ಮರೆಯಾದಾಗ ಬೇರೆ ಅವತಾರ!
ಹೊಳೆಯುವುದೆ ಬಹುಕಾಲ ಕೃತಕ ಬಂಗಾರ?"

ಇಂಥ ಪ್ರಾಸಯೋಜನೆ ಸಹ್ಯವೂ, ಅಪೇಕ್ಷಣೀಯವೂ ಆಗುತ್ತದೆ. ಇದು ಸಾಧ್ಯವಾಗವೆ ಇದ್ದಾಗ—ಉದಾಹರಣೆಗೆ, ಇಂಥಲ್ಲಿ

"ಆತೀ ಹೈ ಶೂನ್ಯ ಕ್ಷಿತಿಜ್ ಸೇ
ಕ್ಯೋಂ ಲೌಟ್ ಪ್ರತಿಧ್ವನಿ ಮೇರೀ
ಟಕರಾತೀ ಬಿಲಖಾತೀ ಸೀ
ಪಗಲೀ ಸೀ ದೇತೀ ಫೇರೀ?

ಅನುವಾದ: ಬರುವುದೇಕೆ ಶೂನ್ಯ ಕ್ಷಿತಿಜದಿಂದೆ
ಹಿಂದಿರುಗಿ ನನ್ನ ಪ್ರತಿಧ್ವನಿಯು
ತಾಗುತಿರುವವೊಲು, ಬಿಕ್ಕಳಿಸುತಿರುವವೊಲು
ಏಕೆ ಮರಳನಂದವೆ ಶತಪದವ ಹಾಕುತಿದೆ—

—ಪ್ರಾಸಕ್ಕಾಗಿ ಪ್ರಯಾಸಪಡದಿರುವ್ರದೇ ಉತ್ತಮ.

ಪ್ರಾಸಕ್ಕೆ ತನ್ನದೇ ಆದ ದುರ್ಬಲತೆಯೂ ಇದೆ. ಕಿವಿಗೆ ಹಿತವಾಗಿ ಕೇಳುವ್ರದಾದರೂ, ಅದು ನಿರೀಕ್ಷೆಗೆ ಎಡೆಕೊಡುವ್ರದರಿಂದ (Rhyme leads to expectancy) ಭಾವ ಅಥವಾ ಕಲ್ಪನೆಯ ಕಡೆಗೆ ಗಮನಹೋಗದೆ ಪ್ರಾಸಶಬ್ದ ಅಥವಾ ಪ್ರಾಸಾಕ್ಷರವಲ್ಲಿಯೇ ಗಮನ ಕೇಂದ್ರೀಕೃತವಾಗಿ ಬಿಡುವ ಅಪಾಯವೂ ಉಂಟು.

ಅಂತ್ಯಪ್ರಾಸದ ವಿಚಾರವೇ ಹೀಗಿರುವಾಗ, ಆದಿಪ್ರಾಸದ ವಿಚಾರ ಮತ್ತಷ್ಟು ಕ್ಲಿಷ್ಟವಾದುದು. ಉದಾಹರಣೆಗೆ, ಕನ್ನಡದ ಹಳೆಯ ಛಂದಸ್ಸುಗಳನ್ನು ತೆಗೆದುಕೊಂಡರೆ ಅವುಗಳಲ್ಲಿ ದ್ವಿತೀಯಾಕ್ಷರ ಪ್ರಾಸ—ಇದನ್ನೇ ಆದಿಪ್ರಾಸವೆನ್ನುತ್ತಾರೆ—ಸಾಮಾನ್ಯ. ಅದೇ ರೀತಿ, ಅನುವಾದದಲ್ಲಿಯೂ ಅವುಗಳನ್ನು ತರಲು ಯತ್ನಿಸಿದರೆ ಕೃತಕತೆಗೆ, ಆಭಾಸಕ್ಕೆ ಎಡೆದೊರೆಯುತ್ತದೆ. ಅಂತೆಯೇ, ಮಧ್ಯಪ್ರಾಸಗಳ ವಿಚಾರವೂ.

ಅಲಂಕಾರಗಳ ವಿಚಾರವನ್ನು ತೆಗೆದುಕೊಂಡರೆ, ಅರ್ಥಾಲಂಕಾರಗಳನ್ನು—ಅಂದರೆ, ಉಪಮಾ, ರೂಪಕ ಇತ್ಯಾದಿಗಳನ್ನು—ಭಾಷಾಂತರಿಸಿಕೊಳ್ಳಲು ಸಾಧ್ಯವಾಗಬಹುದು. ಉದಾಹರಣೆಗೆ, 'ಶ್ರೀ ರಾಮಾಯಣದರ್ಶನ'ದ

"ಮಂಥರೆಯ ಮೋಹಸರಸಿಯೊಳಿಂತು, ತಾವರೆಯ
ತೆರದಿ, ಭರತಂ ಬಳೆದನಯ್"

ಎಂಬ ಅಲಂಕಾರಯುಕ್ತ ಪಂಕ್ತಿಯನ್ನು,

"ಮಂಥರಾ ಕೇ ಮೋಹ ಸರವರ್ ಮೇಂ
ಕಮಲ್ ಕೇ ಸಮಾನ್, ಪಲ್ ಉಠಾ ಭರತ್"

ಎಂದು ಭಾಷಾಂತರಿಸಿಕೊಳ್ಳಬಹುದು.

ಆದರೆ, ಶಬ್ದಾಲಂಕಾರಗಳನ್ನು ಭಾಷಾಂತರಿಸಿಕೊಳ್ಳುವುದು ಬಹುಮಟ್ಟಿಗೆ ದುಸ್ಸಾಧ್ಯವೇ ಆಗುತ್ತದೆ. ಉದಾಹರಣೆಗೆ,

"ಎಳೆವಾಸೆ ತೊಡರ್ದುದೆನೆ ಮಿಸು-
ಪೆಳೆವಾಸೆಯದೆಸೆಯೆ ನಿಂದಳಂ ಕೈವಿಡಿದೊ– ।
ಲ್ದೆಳೆವಾಸೆಯಮಾಂತನಂಬುಜ
ದೆಳೆವಾಸೆಡೆಗೊಂಡ ಪುಳಿನದೆಡೆಗವನೀಶಂ ॥"

'ಎಳೆವಾಸೆ'ಯೆಂಬುದನ್ನು ವಿವಿಧಾರ್ಥಗಳಲ್ಲಿ ಬಳಸಿರುವ ಈ ಕಂದಪದ್ಯವನ್ನು ಅಲ್ಲಿಯ 'ಯಮಕ' ಅಲಂಕಾರ ಉಳಿಯುವಂತೆ ಭಾಷಾಂತರಿಸಿಕೊಳ್ಳುವುದು ಸಾಧ್ಯವಿಲ್ಲ.

ಹೀಗೆ, ಕಾವ್ಯದ ಭಾಷಾಂತರದ ಸಂದರ್ಭದಲ್ಲಿ ಹಲವೊಂದು ಸಮಸ್ಯೆಗಳು ಎದುರಾಗುತ್ತವೆಯಾದರೂ ಕಾವ್ಯದ ಭಾಷಾಂತರದ ಪ್ರಯತ್ನ ಮತ್ತೆ ಮತ್ತೆ ನಡೆಯುತ್ತಲೇ ಬಂದಿದೆ. ಒಟ್ಟಿನಲ್ಲಿ, ಯಾವುದೇ ಭಾಷಾಂತರದಲ್ಲಿ ಅಗತ್ಯವಾಗಿ ಇರಬೇಕಾದ ಅಂಶಗಳು ಯಾವುವೆಂದರೆ: ಯಥಾರ್ಥತೆ, ವಾಚನೀಯತೆ, ಶೈಲಿ ಮತ್ತು ಅವಧಾರಣೆ. ಇವುಗಳ ವಿಚಾರವಾಗಿ ಕೆಲವೊಂದು ಮಾತುಗಳನ್ನು ಇಲ್ಲಿ ಹೇಳಬಹುದು:

ಯಥಾರ್ಥತೆ: ಯಥಾರ್ಥತೆ ಎಂಬ ಮಾತು, ತಪ್ಪಾಗಿ ಭಾಷಾಂತರಿಸಬಾರದೆಂಬ ಸೀಮಿತ ಅರ್ಥದಲ್ಲಿ ಮಾತ್ರ ಬಳಕೆಯಾಗಿಲ್ಲ. ಛಂದಸ್ಸು, ಪ್ರಾಸ ಅಥವಾ ಲಾಲಿತ್ಯಗಳ ವಿಚಾರ ಹೇಗಾದರೂ ಇರಲಿ, ಲೇಖಕ ಸೂಚಿಸದೆ ಇದ್ದ ಅಸಂಬದ್ಧ ವಿಚಾರಗಳನ್ನೆಲ್ಲ ಆತನಿಗೆ ಆರೋಪಿಸಲು ಹೋಗಬಾರದೆಂಬ ನಿಷೇಧಾತ್ಮಕ ವಿಧಿಯನ್ನೂ ಈ ಶಬ್ದ ಸೂಚಿಸುತ್ತದೆ. ಉದಾಹರಣೆಗೆ,

"ವಹ್ ಕೌನ್ ರೋತಾ ಹೈ ವಹಾಂ—ಇತಿಹಾಸ್ ಕೇ ಅಧ್ಯಾಯ್ ಪರ್,
ಜಿಸಮೇಂ ಲಿಖಾ ಹೈ, ನೌಜವಾನೋಂ ಕೇ ಲಹೂ ಕಾ ಮೋಲ್ ಹೈ
ಪ್ರತ್ಯಯ್ ಕಿಸೀ ಬೂಢೇ ಕುಟಿಲ ನೀತಿಜ್ಞ ಕೇ ವ್ಯಾಹಾರ್ ಕಾ
ಜಿಸಕಾ ಹೃದಯ್ ಉತನಾ ಮಲಿನ್ ಜಿತನಾ ಕಿ ಶೀರ್ಷ್ ವಲಕ್ಷ್ ಹೈ,

ಜೋ ಆಪ್ ತೋ ಲಡ್‌ತಾ ನಹೀಂ,
ಕಟವಾ ಕಿಶೋರೋಂ ಕೋ ಮಗರ್,
ಆಶ್ವಸ್ತ ಹೋಕರ್ ಸೋಚ್‌ತಾ,
ಶೋಣಿತ್ ಬಹಾ, ಲೇಕಿನ್ ಗಈ ಬಚ್ ಲಾಜ್ ಸಾರೇ ದೇಶ್ ಕೀ ?"

ಎಂಬ 'ಕುರುಕ್ಷೇತ್ರ' ಕಾವ್ಯದ ಪಂಕ್ತಿಗಳನ್ನು ಕನ್ನಡಕ್ಕೆ ಭಾಷಾಂತರಿಸುವಾಗ—

"ಶೀರ್ಷ ಪರ್ವತದಂತೆ ಕಠಿಣ ಹೃದಯದ ಮುದುಕ;
ಕುಟಿಲ ನೀತಿಜ್ಞ;
ಅವನ ಕಾರಣದಿಂದ ನವಯುವಕರೆಲ್ಲ ಬಿಸಿರಕುತವನ್ನು ಹರಿಸಿದರು;
ತಾನೋ! ಸುಮ್ಮನೆ ಕುಳಿತ; ಕೊಲ್ಲಿಸಿದ ಮಕ್ಕಳನು;
ಆಶ್ವಸ್ತನಾಗುಳಿದ ಯೋಚಿಸುತ; ಕುಟಿಲನ ಬಗ್ಗೆ ಬರೆದಿರುವ ಇತಿಹಾಸ
ಪುಟಗಳಲಿ,
ಯಾರದಳುತಿಹರಲ್ಲಿ,
ರಕುತ ಹರಿದಿಹುದು; ದೇಶಗೌರವವು ಮಣ್ಣಾಗಿ.

ಈ ರೀತಿ 'ಮಲಿನ ಹೃದಯ'ವನ್ನು 'ಕಠಿಣ ಹೃದಯ'ವಾಗಿಸುವುದು, 'ಅಧ್ಯಾಯ'ವನ್ನು ಪುಟವನ್ನಾಗಿ ಪರಿವರ್ತಿಸುವುದು, 'ಕುಟಿಲ ವ್ಯಾಹಾರ'ವನ್ನು 'ಕುಟಿಲನ ಬಗ್ಗೆ ಬರೆದಿರುವ ಇತಿಹಾಸ'ವಾಗಿಸುವುದು, ಇಷ್ಟೇ ಸಾಲದೆಂಬಂತೆ 'ಉಳಿಯಿತಲ್ಲವೇ ನಾಡಿನ ಮಾನ?' ಎಂಬುದನ್ನು 'ದೇಶದ ಗೌರವವು ಮಣ್ಣಾಗಿ' ಎಂದಾಗಿಸಿ ಕೃತಿಯನ್ನೂ, ಕೃತಿಕಾರನನ್ನೂ ಮಣ್ಣು ಮುಕ್ಕಿಸುವುದು ಅಪಚಾರವಾಗುತ್ತದೆ. ಹೀಗಾದಾಗ, ಭವ್ಯಕಲ್ಪನೆಯೂ ಮಣ್ಣುಗೂಡುತ್ತದೆ.

ಮೂಲವನ್ನು ಹೀಗೆ ಪರಿವರ್ತಿಸಿಬಿಡುವುದು ಹೇಗೆ ದೋಷವಾಗುತ್ತದೆಯೋ ಹಾಗೆಯೇ ಮೂಲದಲ್ಲಿ ಇರುವುದನ್ನು ಬಿಟ್ಟುಬಿಡುವುದು, ಇಲ್ಲದನ್ನು ತಂದು ಸೇರಿಸುವುದೂ ಕೂಡ ದೋಷವಾಗುತ್ತದೆ.

'ಕುವೆಂಪು' ಅವರ 'ಸಭ್ಯತಾ ದೇವತೆ' ಕವನದ ಈ ಕೆಲವು ಪಂಕ್ತಿಗಳನ್ನೂ, ಅವುಗಳ ಭಾಷಾಂತರವನ್ನೂ ಉದಾಹರಣಾರ್ಥವಾಗಿ ನೋಡಬಹುದು.

ಮೂಲ: "ಹಿಮಗಿರಿಯ ಭವ್ಯ ಸೌಂದರ್ಯವನು, ಗಗನವನೆ
ಚುಂಬಿಪ ತುಷಾರಮಯ ಗಿರಿಶಿರ ತರಂಗಗಳ
ರಮಣೀಯ ಕಮನೀಯ ಭೀಷ್ಮ ಸಂಮೋಹವನು
ಕುರಿತಿವನು ನುಡಿವನಲ್ಲ. ಅಥವಾ ಸಾಗರದ
ಸುಂದರ ಸುನೀಲ ಸಲಿಲದ ನೃತ್ಯ ಮಹಿಮೆಯನು
ಮಾತಿನಲಿ ತೋರಲೆಳಸುವ ವಾಗ್ಮಿಯಿವನಲ್ಲ.........
..................ಇವನು ಹೇಳುವ ವಿಷಯ,
ಇವನ ದೇಶ ಇವನ ಮಾತಿನ ತೆರದಿ, ದಿನದಿನದ
ಸರಳಸಾಧಾರಣದ ಬಡಹೊಟ್ಟೆ ಪಾಡಿನದು !"

ಅನುವಾದ: "ವಹ್ ಕೋಈ ಭವ್ಯ ಹಿಮಗಿರಿ
ಕೇ ಸೌಂದರ್ಯ, ಗಗನಚುಂಬೀ ಶಿಖರೋಂ, ಅಥಾಹ್ ಸಾಗರ್ ಕೀ
ಮಹಿಮಾ, ಲಹರೋಂ ಕಾ ತಾಂಡವ್ ಆದಿ ಕಾ ಯಾ ಪ್ರಕೃತಿ ಕೇ
ಅನ್ಯ ಅದ್ಭುತ್ ದೃಶ್ಯೋಂ ಕಾ ವರ್ಣನ್ ಕರ್‌ಕೇ ಅಪನೀ ವಾಣೀ
ಕಾ ಚಮತ್ಕಾರ್ ದಿಖಾನೇವಾಲಾ ಕಾವ್ಯ—ಋಷಿ ಭೀ ನಹೀಂ
ಯಹ್ ಅಪನೀ ಹೀ ತರಹ್ ಕೇ ಸೀಧೇ ಸಾದೇ ಗರೀಬೋಂ ಕೇ ವಿಷಯ್ ಮೇಂ
ಬೋಲ್‌ತಾ ಹೈ"

ಕಲ್ಪನೆಯ ಕಮನೀಯತೆಗೂ, ಭವ್ಯತೆಗೂ, ಮೋಹಕ ಲಯಕ್ಕೂ ಕಾರಣವಾಗಿರುವ 'ತುಷಾರಮ....ತರಂಗಗಳ ರಮಣೀಯ ಕಮನೀಯ ಭೀಷ್ಮ ಸಂಮೋಹವನು', 'ಸುಂದರ ಸುನೀಲ ಸಲಿಲದ....ಮಹಿಮೆಯನು' ಇವೇ ಮೊದಲಾದ ಮಾತುಗಳು ಭಾಷಾಂತರದಲ್ಲಿ ಅದೃಶ್ಯವಾಗಿವೆ. ಮೂಲದ ಕಲ್ಪನೆಯನ್ನು ನೆಮ್ಮಿಕೊಳ್ಳಲಾರದ ಭಾಷಾಂತರಕಾರರು ತಮಗೆ ತೋರಿದಂತೆ ಅರ್ಥೈಸಿದ್ದಾರೆ. ಇಂಥ ಕಾರ್ಯವೂ ಭಾಷಾಂತರದಲ್ಲಿ ನಿಂದ್ಯವಾಗುತ್ತದೆ.

ಮೂಲದಲ್ಲಿ ಇರುವುದನ್ನು ಬಿಟ್ಟು ತಮಗೆ ತೋಚಿದಂತೆ ಅರ್ಥೈಸುವುದು ಒಂದು ಬಗೆಯಾದರೆ, ಮೂಲದಲ್ಲಿ ಇಲ್ಲದಿರುವುದನ್ನೆಲ್ಲ ತಂದು ತಮ್ಮ ಪ್ರತಿಭೆಗೂ ವಿಹಾರ ಸೌಲಭ್ಯವನ್ನು ಕಲ್ಪಿಸುವುದು ಇನ್ನೊಂದು ತೆರ. ಇದೂ ನಿಂದನೀಯವೆ. ಉದಾಹರಣೆಗೆ ಈ ಪ್ರಸಂಗವನ್ನು ನೋಡಿ:

"ತಾಸು ದಸಾ ದೇಖಿ ಸಖಿನ್‌ಹಿ ಪುಲಕಗಾತ್ ಜಲು ನೈನ।
ಕಹುಕಾರನು ನಿಜ ಹರಷ್‌ಕರ್ ಪೂಛ್‌ಹಿಂ ಸಬ್ ಮೃದುಬೈನ।
ದೇಖನ ಬಾಗು ಕುಂಅರ್ ದುಈ ಆಏ। ಬಯ್ ಕಿಸೋರ್ ಸಬ್ ಭಾಂತಿ
ಸುಹಾಏ ॥
ಸ್ಯಾಮ್ ಗೌರ್ ಕಿಮಿ ಕಹೌ ಬಖಾನೀ। ಗಿರಾ ಅನಯನ್ ನಯನ್
ಬಿನು ಬಾನೀ ॥

ಈ ಪ್ರಸಂಗದ ಯಥಾವತ್ತಾದ ಅನುವಾದ ಈ ರೀತಿ ಆಗುತ್ತದೆ,

"ಅವಳಾ ಸ್ಥಿತಿಯನ್ನು ನೋಡಿ ಉಳಿದ ಸಖಿಯರ ಶರೀರಗಳು ಪುಳುಕಿತವಾಗಿ, ಕಣ್ಣುಗಳಲ್ಲಿ ಆನಂದಾಶ್ರುಗಳು ತುಂಬಿದವು. (ಆಗ) ಸಖಿಯರೆಲ್ಲರೂ 'ನಿನ್ನ ಹರ್ಷಕ್ಕೆ ಕಾರಣವಾವುದು' ಹೇಳೆಂದು ಮೃದುವಚನಗಳಿಂದ ಕೇಳಿದರು. ಆಗ ಸಖಿಯು—ಸಖಿಯರೇ, ಇಬ್ಬರು ರಾಜಕುವರರು ತೋಟವನ್ನು ನೋಡಲು ಬಂದಿರುವರು. ಅವರಿಬ್ಬರೂ ಕಿಶೋರ ವಯಸ್ಕರಾಗಿಯೂ ಸರ್ವಾಂಗಸುಂದರರಾಗಿಯೂ ಇರುವರು. ಅವರಲ್ಲಿ ಒಬ್ಬನು ಶ್ಯಾಮಾಂಗನಾಗಿಯೂ ಮತ್ತೊಬ್ಬನು ಗೌರಾಂಗನಾಗಿಯೂ ಇರುವರು. (ಅವರ ವರ್ಣನೆಯನ್ನು ನಾನು ಮಾಡಲಾರೆನು.) ಏಕೆಂದರೆ (ಅವರನ್ನು ನೋಡಿದ) ನನ್ನ ಕಣ್ಣಿಗೆ ವರ್ಣ

ಸುವ ಶಕ್ತಿಯಿಲ್ಲ. ನಾಲಿಗೆ(ಯ ಸಹಾಯದಿಂದ ವರ್ಣಿಸೋಣವೆಂದರೆ ಅವಕ್ಕೆ) ಅವರ ಸೌಂದರ್ಯವನ್ನು ನೋಡುವ ಶಕ್ತಿಯಿಲ್ಲ"—ಎಂದಳು.

ಇದನ್ನು ಮತ್ತೊಬ್ಬ ಅನುವಾದಕಾರರು ಈ ರೀತಿ ವಿಸ್ತರಿಸಿದ್ದಾರೆ:

"ಎನಲು ಮಾರುತ್ತರವ ಕೊಡದಿಹ
ಜನಕಜೆಯ ನೋಡುತ್ತ ಸಖಿಯರು
ವನಜನಯನೆಯ ನೋಟದೊಳು ನಿಜನೋಟವುಂ ಹರಿಸಿ ।
ಅನಘರಿರ್ವರ ಕಂಡು ಮೌನದಿ
ಮನಮುಳುಗಿದಂತಾಗೆ ಮಾರನ
ಕಣೆಗೆ ಹೃದಯವನೊಡ್ಡಿ ನಿಂದರು ಪರಸಖೀಜನರು ॥
ಅವರವರು ತಮತಮಗೆ ತೋರಿದ
ಸವಿಗುಣದ ರೂಪುಗಳ ಹೊಗಳುತ
ಕುವಲಯ **ಶ್ಯಾಮನನು** ಬಣ್ಣಿಸುತಿಹರು ನರರಲ್ಲ ।
ದಿವಿಜರೊಡೆಯನ ಸುತರೊ ಮನ್ಮಥ
ಕುವರರೋ ಸಿರಿಯಾತ್ಮಜರೊ ಮೇ-
ಣಿವರು ವಿದ್ಯಾಧರ ಕುಮಾರರೊ ಖೇಚರಾನ್ವಯರೋ ॥
ನಾಲಿಗೆಗೆ ಕಣ್ಣಿಲ್ಲ—ಕಣ್ಗಳು
ಪೇಳಲಾರವು ಹಲವು ಮಾತೇಂ
ವ್ಯಾಳಶಯನಂಗರಿದು ಚೆಲವು ಸ್ಮರನ ಬೆಡಗೇನು? ।
ಕೇಳಿ ಸಖಿಯರ ನುಡಿಯನಾಲಿಸಿ ಜಾನಕಿ
ನೀಲವರ್ಣನ ನೋಡಿ ಸಿಲ್ಕಿದ
ನಾಲಿಗಳು ಸೆರೆ ಹರುಷವೇರಲು ಮಾತು ಮರೆಯಾಯ್ತು ।

ದಪ್ಪ ಅಕ್ಷರಗಳಲ್ಲಿ ಅಚ್ಚಿಸಿರುವ ನಾಲ್ಕಾರು ಶಬ್ದಗಳನ್ನು ಬಿಟ್ಟರೆ, ಉಳಿದುವೆಲ್ಲ ಭಾಷಾಂತರಕಾರರ ಸ್ವಸೃಷ್ಟ ಕಲ್ಪನೆಯ ಫಲವೆಂಬುದು ಸ್ಪಷ್ಟವಾಗಿಯೇ ಇದೆ. ಭಾಷಾಂತರದಲ್ಲಿ ಇಂಥವಕ್ಕೆ ಎಡೆಯಿಲ್ಲ.

ಎರಡನೆಯದು ವಾಚನೀಯತೆ. ಎಷ್ಟೇ ಯಥಾವತ್ತಾಗಿ, ವಿಸ್ತೃತ್‌ಪೂರ್ಣವಾಗಿ ಭಾಷಾಂತರಿಸಿದರೂ, ಭಾಷಾಂತರ ಯಶಸ್ವಿಯಾಗುವುದು ವಾಚನೀಯತೆ ಸಾಧಿತವಾದಾಗಲೇ. ಓದುಗ ಮುಖ ತಿರುಗಿಸಿಕೊಂಡು ಹೋಗುವಂತಾದರೆ, ಉಳಿದ ಗುಣಗಳೇನೇ ಇರಲಿ, ಭಾಷಾಂತರ ಅಸಫಲವಾದಂತೆಯೆ. ಭಾಷಾಂತರಕಾರನ ವಿದ್ವತ್ತು ಸಾಮರ್ಥ್ಯಗಳು ಮೂಲವನ್ನು ಮತ್ತಷ್ಟು ಪೆಡಸಾಗಿಸಲು ವಿನಿಯೋಗಬಾರದು; ಬದಲಾಗಿ ಲಾಲಿತ್ಯಕ್ಕೆ ಸರಳತೆಗೆ ಅನುವಾಗಿ ಬರಬೇಕು. 'ಪೈಡ್‌ಪೈಪರ್ ಆಫ್ ಹ್ಯಾಮಿಲಾನ್' ರೂಪಾಂತರವಾದ 'ಬೊಮ್ಮನಹಳ್ಳಿ ಕಿಂದರಿಜೋಗಿ' ಅತ್ಯುತ್ತಮ ವಾಚನೀಯತೆಯನ್ನು ಹೊಂದಿರುವುದು, ಅದರ ಯಶಸ್ಸಿಗೆ ಕಾರಣವಾಗಿದೆಯೆಂಬುದನ್ನು ಇಲ್ಲಿ ಸ್ಮರಿಸಬಹುದು.

ಅಂತೆಯೇ, ವಾಚನೀಯತೆಯ ಅಭಾವಕ್ಕೆ ಎಡೆಗೊಟ್ಟಿರುವ ಈ ಉದಾಹರಣೆಯನ್ನು ನೋಡಿ:

ಮೂಲ: "Little drops of water, little grains of sand,
Make the mighty ocean and the pleasant land;
That 'unity is strength', men will understand."

ಅನುವಾದ: "ತುಂತುರ್ವನಿಯಿಂ ಬಲ
"ವಂತಾಬುಧಿಯಕ್ಕುಮಲ್ಪಸೈಕತಕಣದಿಂ।
ಸಂತಸದಿಳೆಯಕ್ಕು; ಜನ
ಮಿಂತಿಹುದೇ ಸಂಘಶಕ್ತಿ; ಕಲಿಯುಗಕ್ಕುಂ॥"

ಇಲ್ಲಿ ಗಮನಿಸಬೇಕಾಗಿರುವ ಸಂಗತಿಯೆಂದರೆ, ಇದು ಇಂದಿನ ಭಾಷೆಯೇ ಅಲ್ಲ; ಇವನ್ನು, ಆಡುವುದಿರಲಿ, ಓದುವುದೂ ಕಷ್ಟ. ಇಲ್ಲಿಯ ಸಂಧಿ ಸಮಾಸಗಳ ಬಾಹುಳ್ಯದಲ್ಲಿ ಸರಳತೆಯ, ವಾಚನೀಯತೆಯ ಸಮಾಧಿಯಾಗಿಬಿಟ್ಟಿದೆ. ಪಾಂಡಿತ್ಯ ಪ್ರದರ್ಶನಕ್ಕಾಗಿ ಅಥವಾ ಸಂಗೀತೋದ್ದೇಶಗಳಿಗಾಗಿ ಬರೆಯುವುದು ಬೇರೆಯ ವಿಚಾರ. ಸೇಯರ್ಸ್ ಹೇಳಿರುವಂತೆ "ಮೂಲ ಭಾವಗೀತೆಯನ್ನು ಮಾತ್ರವಲ್ಲ, ಗೀತಕಾರನನ್ನೂ ಅನುವಾದಿಸಬೇಕು" ("......not only the original lyric but the composer has to be translated..."). ಅಂದರೆ, ಗೀತಕಾರ ಮೂಲದ ರಚನೆಯಲ್ಲಿ ಮೆರೆದಿರುವ ಲಾಲಿತ್ಯ ಸರಳತೆಗಳು ಅನುವಾದದಲ್ಲಿಯೂ ಮೈದಳೆಯುವಂತೆ ಮಾಡಬೇಕು.

ಸರಳವಾಗಿರುವುದನ್ನು ಕ್ಲಿಷ್ಟವಾಗಿಸುವುದು ಹೇಗೆ ದೋಷವಾಗುತ್ತದೆಯೋ ಹಾಗೆಯೇ ಕ್ಲಿಷ್ಟವಾಗಿರುವುದನ್ನು ಸರಳವಾಗಿಸುವುದು, ಗಂಭೀರವೂ ಉದಾತ್ತವೂ ಆಗಿರುವುದನ್ನು, ಸುಲಭವೂ ಸರಳವೂ ಆಗಿಸುವುದೂ ಕೂಡ ಆಕ್ಷೇಪಾರ್ಹವಾಗುತ್ತದೆಂಬುದದನ್ನೂ ಗಮನಿಸಬೇಕು. ವಾಸ್ತವವಾಗಿ ಇದು."ಬರೆವಣಿಗೆಯ ಮಹಾರಹಸ್ಯ" ಹಾಗೂ "ಮಹಾಕವಿಗಳನ್ನು ಅನುಸರಿಸು"ವುದರಿಂದ ಅರಿಯಬಹುದಾಗಿರುವಂಥದು.

ಶೈಲಿ ಮೂರನೆಯ ಮುಖ್ಯ ವಿಚಾರ. ಕವಿಯ ವ್ಯಕ್ತಿತ್ವದ ಪ್ರತೀಕವಾಗಿರುವ ರಚನೆಯಾಗಿಯೇ ಭಾಷಾಂತರವೂ ಉಳಿಯಬೇಕಾದಲ್ಲಿ ಶೈಲಿಯನ್ನು ಕಾಯ್ದುಕೊಳ್ಳುವುದು ಅಗತ್ಯವಾಗುತ್ತದೆ. ಈ ದೃಷ್ಟಿಯಿಂದ ಪದ್ಯಾನುವಾದ ಕವಿಯ ಮನೋಧರ್ಮಕ್ಕೆ ಹತ್ತಿರ ಬರುವಲ್ಲಿ, ಗದ್ಯಾನುವಾದ ಅದರಿಂದ ದೂರವಾಗುವ ಸಂಭವಗಳು ಹೆಚ್ಚಾಗಿರುತ್ತವೆ. ಶೈಲಿಯ ಬಗೆಗೆ ಸೂಕ್ಷ್ಮಸಂವೇದಿಯಾಗಿರುವ ಭಾಷಾಂತರಕಾರ ಇತ್ತ ಗಮನಕೊಡುತ್ತಾನೆ. ಉದಾಹರಣೆಗೆ, ಭಾಸನ 'ಪ್ರತಿಮಾ ನಾಟಕ'ದ ಪದ್ಯದ ಅನುವಾದಗಳನ್ನು ನೋಡಿ:

"ಅನುಚರತಿ ಶಶಾಂಕಂ ರಾಹುದೋಷೇಽಪಿ ತಾರಾ
ಪತತಿ ಚ ವನವೃಕ್ಷೇ ಯಾತಿ ಭೂಮಿಂ ಲತಾ ಚ।
ತ್ಯಜತಿ ನ ಚ ಕರೇಣುಃ ಪಂಕಲಗ್ನಂ ಗಜೇಂದ್ರಂ
ವ್ರಜತು ಚರತು ಧರ್ಮಂ ಭರ್ತೃನಾಥಾ ಹಿ ನಾರ್ಯಃ॥"

ಮೈಸೂರು ಸೀತಾರಾಮಶಾಸ್ತ್ರಿಗಳ ಅನುವಾದ ಹೀಗಿದೆ:

"ಬಿಸು ಚಾಟಿಂ ನೊಂದೊಡಂ ತಾರಗೆಯವನನೆ ಬೆಂಗೊಂಡು ತಾನೆಯ್ದುಗುಂ ನಿ-
ಲ್ಲದೆ ಬೀಳ್ವಂ ಬಳ್ಳಿ ತಾನುಂ ವನದ ಮಹಿರುಹಂ ಭೂಮಿಯೊಳ್ ಬೀಳ್ದೊಡೆ ಪಂ.
ಕದ ಸಂಮರ್ದಕ್ಕೆ ಭಂ ಪಕ್ಕೆಸಿಸೆ ಪಿಡಿಯುವಂ ಬಿಟ್ಟು ಮುಂಪೆಯ ಮೊಲೀ
ಸಘುಪೀಗಳ್ ಬರ್ಕೆ ಧರ್ಮಂ ಚರಿಕೆ ಸತಿಗೆ ಭರ್ತಾರನೇ ನಾಥನೆಂದಿತ್ತೆ ॥"

ಇದನ್ನೇ ಡಾ. ಕೃಷ್ಣಮೂರ್ತಿಗಳು ಈ ರೀತಿ ಅನುವಾದಿಸಿದ್ದಾರೆ:

"ರಾಹುವೆ ಸೊಂಕೆಯುಂ ಶಶಿಯ ಬೆಂಬಳಿಯೊಳ್ ಚರಿಪಳ್ ಸುತಾರೆ ತಾಂ
ವೃಕ್ಷಮ ಕಾಡಿನೊಳ್ ಕೆಡೆಯಲಾ ಲತೆಯುಂ ತವೆ ಬೀಳ್ವುದಾನಗಂ।
ಆನೆಯುಮೆಂತೊ ಪಂಕದೊಳಗಳ್ದಿರೆಯುಂ ಪಿಡಿಬಿಟ್ಟು ಪೋಪುದೇ?
ಬರ್ಕೆಯಿನಳ್ ಸ್ವಧರ್ಮಮೆಸಗಲ್ ಪತಿನಾಥೆಯರಲ್ತೆ ಕಾಂತೆಯರ್ ॥"

ವೃತ್ತಲಕ್ಷಣದ ದೃಷ್ಟಿಯಿಂದ ಅಗತ್ಯವಾಗಿರುವ ದ್ವಿತೀಯಾಕ್ಷರ ಪ್ರಾಸವನ್ನು ಅನುವಾದಕರು ಕೈಬಿಟ್ಟದ್ದಾರಾದರೂ, ಮೂಲದ ಉಪಮೆಗಳು ಮನದ ಮೇಲೆ ಅಚ್ಚೊತ್ತುವಂತೆ ಮಾಡಿದ್ದಾರೆ. ಪಾದಾಂತ ಯತಿ, ಪ್ರಸಾದ ಗುಣ ಮತ್ತು ಅರ್ಥವ್ಯಕ್ತಿಯನ್ನು-ಈ ರೀತಿ ಮಾಡುವುದರ ಮೂಲಕ ಮೂಲದ ನಡೆಯನ್ನು, ಶೈಲಿಯನ್ನು,—ಉಳಿಸಿಕೊಂಡಿದ್ದಾರೆ. ಹೀಗಾಗಿ, ಶಾಸ್ತ್ರಿಗಳ ಅನುವಾದಕ್ಕಿಂತ ಕೃಷ್ಣಮೂರ್ತಿಗಳ ಅನುವಾದ ಹೃದ್ಯವಾಗಿ ಪರಿಣಮಿಸುತ್ತದೆ. ಅಷ್ಟೇ ಅಲ್ಲ, ಮೂಲದ ಶೈಲಿಗೆ ಹತ್ತಿರಬರುತ್ತದೆ. ಇದೇ ಕೃಷ್ಣಮೂರ್ತಿಗಳ ಅನುವಾದದ ಯಶಸ್ಸಿನ ರಹಸ್ಯ.

ಅವಧಾರಣೆ ಅಥವಾ ಒತ್ತು ಸಾಲ್ಪನೆಯ ಮುಖ್ಯ ಅಂಶ. ಅನೇಕ ವೇಳೆ ಕವಿ ಆಯ್ದುಕೊಳ್ಳುವ ಛಂದಸ್ಸು, ಅದರ ಲಯ, ಪ್ರಾಸಾನುಪ್ರಾಸಗಳು, ಶಬ್ದಸ್ಥಾನ ನಿರ್ಧಾರಣ (placement of the word) ಇವುಗಳಲ್ಲೆಲ್ಲ ಕವಿಯ ಅವಧಾರಣೆ ನಿಹಿತವಾಗಿರುತ್ತದೆ. ಅನುವಾದಕನ ಸೂಕ್ಷ್ಮ ಪರಿಶೀಲನೆ ಇಂಥ ಎಡೆಗಳನ್ನು ಭಾಷಾಂತರಕಾರನಿಗೆ ತೋರಿಸಿಕೊಡಬೇಕು. ಅಡಿಗರ 'ಹಿಮಗಿರಿಯ ಕಂದರ'ದ ಈ ಸಾಲುಗಳಲ್ಲಿ, ನಿಶ್ಶಬ್ದತೆ ಆವರಿಸಿಕೊಳ್ಳುವ ಭಾವ ಕ್ರಮೇಣ ಒಮ್ಮಗೆ ಮನಸ್ಸನ್ನು ಮುತ್ತುತ್ತದೆ:

"ಹಿಮಗಿರಿಯ ಕಂದರ
ಗಿರಿಯ ಕಂದರ
ಕಂದರ
ದರ
ರ"

ಇದನ್ನೇ ಹಿಂದಿಗೆ ಭಾಷಾಂತರಿಸಿದರೆ

"ಹಿಮಗಿರಿ ಕಾ ಕಂದರ್
ಗಿರಿ ಕಾ ಕಂದರ್
ಕಂದರ್
ದರ್
ರ್"

ಎಂದು ಮೂಲದ ಅವಧಾರಣೆ ಭಿನ್ನವಾಗದಂತೆಯೇ ತರಬಹುದು. ಇಂಗ್ಲಿಷ್ ಅಥವಾ ಬೇರಾವುದಾದರೂ ಭಾರತೀಯೇತರ ಭಾಷೆಗೆ ಅನುವಾದಿಸುವಾಗ ಇದೇ ಅವಧಾರಣೆಯನ್ನು ತರಲು ಸಾಧ್ಯವಾಗದೆ ಹೋಗಬಹುದು.

ಅಂತೆಯೇ "Bridge of Sighs"ನ ಈ ಕೆಳಗಿನ ಪಂಕ್ತಿಗಳಲ್ಲಿ

"Alas for the rarity
Of the chistian charity
Under the sun."

—ಅವಧಾರಣೆಯೆಲ್ಲ ಇರುವುದು 'christian charity' ಮತ್ತು 'sun' ಎಂಬ ಶಬ್ದಗಳಲ್ಲಿ. ಈ ಪಂಕ್ತಿಗಳನ್ನು

"ಅಹ ಎಲ್ಲತಗಿತೋ
ಆರ್ಯ ಧರ್ಮದ ಕರುಣ
ಆರ್ಯ ಜನಗಳ ಮರುಕ
ಉರಿಯುವನೆ ಬಲ್ಲ."

ಎಂದು ಅನುವಾದಿಸಿಕೊಳ್ಳುವಾಗ 'ಆರ್ಯ' ಮತ್ತು 'ಉರಿಯುವವನು' ಎಂಬ ಶಬ್ದಗಳನ್ನು ಪರ್ಯಾಯವಾಗಿ ಆಯ್ದುಕೊಂಡು, ಆ ಧ್ವನಿಪೂರ್ಣ ಪರ್ಯಾಯಗಳ ಮೂಲಕ ಮೂಲದ ಅವಧಾರಣೆಯನ್ನು ಪರಿಣಾಕಾರಿಯಾಗಿಯೇ ಉಳಿಸಿಕೊಂಡಿದ್ದಾರೆ. ತೀ. ನಂ. ಶ್ರೀಯವರು ಹಾಗೂ ಅನಂತನಾರಾಯಣ ಅವರು ಈ ಪರ್ಯಾಯಗಳನ್ನು ಮೆಚ್ಚಿ ಹೊಗಳಿದ್ದಾರೆ. "ಮೂಲದ ಉಕ್ತಿಯ ಸಾರ ಕನ್ನಡದಲ್ಲಿ ಎಷ್ಟು ಚೆನ್ನಾಗಿ ಊರಿದೆ? 'ಉರಿಯುವವನು' ಎಂದರೆ ಸೂರ್ಯ; ಹಳ್ಳಿಗರ ಮಾತಿನಲ್ಲಿ ಈಗಲೂ ಕೆಲವು ಕಡೆ ಇದು ಬಳಕೆಯಲ್ಲಿದೆ" ಎಂದು ತೀ. ನಂ. ಶ್ರೀ ಅವರೆಂದರೆ, "ಅಷ್ಟೇ ಸುಂದರವಾದ ಮತ್ತು ಧ್ವನಿಪೂರ್ಣವಾದ ಪ್ರಯೋಗ 'ಆರ್ಯ' ಎಂಬ ಪದದಲ್ಲಿದೆ. 'christian charity' ಎಂಬ ಮಾತು ಕ್ರಿಸ್ತಮತದ ತತ್ತ್ವಗಳನ್ನು ತಿಳಿದವರಿಗೆಷ್ಟು ಧ್ವನಿಪೂರ್ಣವಾಗಿದೆಯೋ 'ಆರ್ಯ' ಎಂಬ ಮಾತು ಭಾರತೀಯ ಸಂಸ್ಕೃತಿಯನ್ನು ಅರಿತವರಿಗೆ, ಅಷ್ಟೇ ಏಕೆ, ಇನ್ನೂ ಹೆಚ್ಚು ಧ್ವನಿಪೂರ್ಣವಾಗಿದೆ. ಶಾಕುಂತಲ ನಾಟಕದಲ್ಲಿ ಶಕುಂತಲೆ ದುಷ್ಯಂತನ ನೀಚ ನಡತೆಯನ್ನು ಹೀಗಳೆದಿದ್ದಾಳೆ, ಒಂದೇ ಒಂದು ಮಾತಿನಲ್ಲಿ. "ಅನಾರ್ಯ !" ಎಂಬುದೇ ಆ ಪದ. ಈ ಧ್ವನಿಯನ್ನು ಶ್ರೀಯವರ ಅನುವಾದದಲ್ಲಿ ಕಾಣಬಹುದು" ಎಂದಿದ್ದಾರೆ ಅನಂತನಾರಾಯಣ.

ಕಾವ್ಯವನ್ನು ಪದ್ಯರೂಪದಲ್ಲಿ ಅನುವಾದಿಸಬೇಕೆ ಅಥವಾ ಗದ್ಯರೂಪದಲ್ಲಿಯೇ ಎಂಬ ಪ್ರಶ್ನೆಯನ್ನೂ ಇಲ್ಲಿಯೇ ಪರಿಶೀಲಿಸಬಹುದು.

ಛಂದಸ್ಸು ಕಾವ್ಯದ ಅನಿವಾರ್ಯ ಅಂಗವಲ್ಲವೆಂಬ ಭಾವನೆ ಇಂದು ಪ್ರಬಲವಾಗಿದ್ದರೂ ಕಾವ್ಯ ತನ್ನದೇ ಆದ ಆಂತರಿಕ ಲಯವೊಂದನ್ನು ಹೊಂದಿರುತ್ತದೆ. ಉತ್ತಮ ಗದ್ಯದಲ್ಲೂ

ಇಂಥ ಆಂತರಿಕ ಲಯವೊಂದು ಇರಬಹುದಾದರೂ ಅದು ಕಾವ್ಯದಲ್ಲಿ ಎದ್ದು ಕಾಣುವಂತೆ ಗದ್ಯದಲ್ಲಿ ಸ್ಫುಟವಾಗಿ ಕಾಣುವುದಿಲ್ಲ. ಇಷ್ಟಾಗಿಯೂ, ಕಾವ್ಯದ ಅಂತರಿಕ ವೈಶಿಷ್ಟ್ಯದಿಂದಾಗಿ ಸಹೃದಯ ಚೇತನ ಗದ್ಯವನ್ನು ಪದ್ಯದಿಂದ ಪೃಥಕ್ಕರಿಸಬಲ್ಲದು. ಛಂದೋಬದ್ಧವಾದ ರಚನೆಯೆಲ್ಲವೂ ಹೇಗೆ ಕಾವ್ಯವಾಗುವುದಿಲ್ಲವೋ, ಹಾಗೆಯೇ, ಛಂದೋವಿರಹಿತವಾದ ರಚನೆಯೆಲ್ಲವೂ ಅಕಾವ್ಯವಾಗುವುದಿಲ್ಲವೆಂಬುದನ್ನೂ ಗಮನಿಸಬೇಕು. ಛಂದಸ್ಸಿನಿಂದ ಕಾವ್ಯಕ್ಕೆ ಕೆಲವೊಂದು ಸೌಕರ್ಯಗಳು ದೊರೆಯುತ್ತವೆಂಬುದೇನೋ ನಿಜ. ನದಿಯ ಪ್ರವಾಹಕ್ಕೆ ದಡಗಳು ಹೇಗೆ ಅಗತ್ಯವೋ, ಹಾಗೆಯೇ ಭಾವಪ್ರವಾಹಕ್ಕೂ ಛಂದಸ್ಸು ಅಗತ್ಯವೆಂದು ಹೇಳುವುದುಂಟು. ಈ ಛಂದಸ್ಸೆಂಬ ದಡಗಳು ಇಲ್ಲದೆ ಹೋದರೆ ಭಾವ ದಿಕ್ಕಾಪಾಲಾಗಿ ಹರಿಯುತ್ತದೆ; ಅದರಲ್ಲಿ ತೀವ್ರತೆಯಾಗಲೀ, ವೇಗವಾಗಲೀ, ಆಳವಾಗಲೀ ಇರುವುದಿಲ್ಲ. ಇದೇ ರೀತಿ, ಭಾವ ಮತ್ತು ಛಂದಸ್ಸುಗಳನ್ನು ಬಾಣ ಮತ್ತು ಬಿಲ್ಲುಗಳಿಗೆ ಹೋಲಿಸುವುದುಂಟು. ಬರಿಗೈಯಿಂದ ಎಸೆದ ಬಾಣ ನಿಶ್ಚಿತ ದೂರವನ್ನಾಗಲೀ, ಗುರಿಯನ್ನಾಗಲೀ ತಲುಪಲಾರದು; ಬಿಲ್ಲಿನಲ್ಲಿ ಹೂಡಿ, ಹೆದೆಯೇರಿಸಿಬಿಟ್ಟಾಗ ಅದು ಕರಾರುವಾಕ್ಕಾಗಿ ಗುರಿಯನ್ನು ತಲುಪುತ್ತದೆ, ನಿಶ್ಚಿತ ಪರಿಣಾಮವನ್ನುಂಟುಮಾಡುತ್ತದೆ. ಅಂತೆಯೇ, ಛಂದಸ್ಸೆಂಬ ಬಿಲ್ಲಿನಲ್ಲಿ ಹೂಡಿದ ಭಾವಬಾಣ ಸಹೃದಯಚೇತನವೆಂಬ ನಿಶ್ಚಿತಗುರಿಯನ್ನು ನಿಸ್ಸಂದೇಹವಾಗಿ ತಲುಪುತ್ತದೆ.

ಜೊತೆಗೆ ವಿಶೇಷ ಸಂದರ್ಭಗಳನ್ನುಳಿದು ದ್ವಿರುಕ್ತಿ, ಪುನರುಕ್ತಿಗಳನ್ನೆಲ್ಲ ತೊಡೆದುಹಾಕಿ, ವಿಷಯವನ್ನು ಸಾರವತ್ತಾಗಿ ನುಡಿಸುವುದರಿಂದ ಅಭಿವ್ಯಕ್ತಿ ಹಿತಮಿತವಾಗಿ ಸುಂದರವಾಗಿರುತ್ತದೆ. ಉಕ್ತಿಗಿಂತಲೂ, ಅನುಕ್ತಿಗೂ ಕಾವ್ಯದಲ್ಲಿ ಎಡೆಯಿರುವುದರಿಂದ ಓದುಗನ ಕಲ್ಪನೆ ಹಮ್ಮಿಕೊಳ್ಳಲು ಅವಕಾಶವಿರುತ್ತದೆ.

ಗದ್ಯದಲ್ಲಿ ಈ ಸೌಕರ್ಯಗಳಿರುವುದಿಲ್ಲ ಅನುಕ್ತಿಯ ಎಡೆಗಳನ್ನು ಬಹುಮಟ್ಟಿಗೆ ತುಂಬಬೇಕಾಗಿ ಬರುತ್ತದೆ. ಭಾವ ವಿವರಣೆಗೆ, ವಿಶದೀಕರಣಕ್ಕೆ ಭಾಷಾಂತರಕಾರ ಎಡೆಗೊಡಬೇಕಾಗುತ್ತದೆ. ಹೀಗಾಗಿ ಮೂಲದ ಹಿತ-ಮಿತತ್ವ, ಸೌಂದರ್ಯ-ಗಾಂಭೀರ್ಯಗಳ ಪ್ರಮಾಣ ಕಡಿಮೆಯಾಗುತ್ತದೆ. ಕಾವ್ಯ ಇರುವುದು ಸುಕುಮಾರ ಸಹೃದಯರಿಗಾಗಿಯಾದರೂ ಗದ್ಯ ರಚಿತವಾಗುವುದು ಆ ಎತ್ತರಕ್ಕೆ ಏರಲಾರದ ಸಾಧಾರಣ ಓದುಗರಿಗಾಗಿ. ಹೀಗಾಗಿ ಈ ವಿಚಾರದಲ್ಲಿ ವಾದವಿವಾದಗಳಿವೆ. ಒಂದು ಉದಾಹರಣೆಯನ್ನು ಗಮನಿಸಬಹುದು :

"ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥

ಇದನ್ನು,

"ನಮಿಸಿ ನಾರಾಯಣನ ನರನ ಪುರುಷೋತ್ತಮನ
ವ್ಯಾಸ ವಾಗ್ದೇವಿಯರ ಬಳಿಕ ಪೇಳ್ವುದು ಜಯವ."

ಎಂದು ಅನುವಾದಿಸಿದಾಗ ಮೂಲದ ಭಾವವೆಲ್ಲ ಹಿತಮಿತವಾಗಿ ಸಾರವತ್ತಾಗಿ ಬಂದಿದೆ ಎನ್ನಿಸುತ್ತದೆ. ಇಂಥ ವಸ್ತುಬದ್ಧ ಭಾಗದ ಅನುವಾದವೇ ಹೀಗಾದಾಗ, ಭಾವಪೂರ್ಣ ಭಾಗಗಳು ಮತ್ತಷ್ಟು ಸುಂದರವಾಗಿ ಕಂಗೊಳಿಸಬಹುದಲ್ಲವೆ ಎನ್ನಿಸುತ್ತದೆ.

ಗದ್ಯಾನುವಾದದಲ್ಲಿನ ಸ್ವಾತಂತ್ರ್ಯಗಳಿಂದಾಗಿ ಭಾಷಾಂತರ ಮೂಲವನ್ನು ಬಿಟ್ಟು ಹೇಗೆ ದೂರ ಸರಿಯಬಹುದೆಂಬುದಕ್ಕೆ ಹಾಗೂ ಭಾವಸಾಂದ್ರತೆಯ ಪ್ರಮಾಣ ಕಡಿಮೆಯಾಗುತ್ತದೆನ್ನುವುದಕ್ಕೆ ಸಾಕ್ಷಿಯಾಗಿ ಈ ಉದಾಹರಣೆಯನ್ನು ಗಮನಿಸಬಹುದು :

ಮೂಲ : "ಇವನೆಯೆ ಕಲ್ಕಿ ? ಬಡವರ ಬಾಳು !
ಮೂರ್ತಿವೆತ್ತಿಹ ಬಡವರ ಗೋಳು !

ಅನುವಾದ : ಕ್ಯಾ ಯಹೀ ದೀನಬಂಧು ಕಲ್ಕಿ ಹೈ ! ದರಿದ್ರೋಂಕಾ, ಕಂಗಾಲೋಂಕಾ
ಪ್ರಾಣ್ ಕ್ಯಾ ಯಹೀ ಹೈ ? ಕ್ಯಾ ಯಹೀ ಉನ್ ದೀನ್–ದಲಿತೋಂಕಾ
ತಥಾ ನಗ್ನ–ಭಗ್ನ ಮಾನವೋಂಕಾ ಮೂರ್ತಿಮಾನ್ ಕೃಷ್ಣ ಹೈ !

ಹೀಗಾಗಿ, ಪದ್ಯರೂಪದಲ್ಲಿ ಮೂಲದ ಭಾವವನ್ನು ತೀವ್ರವಾಗಿಯೂ, ಪರಿಣಾಮಕಾರಿಯಾಗಿಯೂ ಸಂವಹನಿಸಬಲ್ಲನೆಂಬುದರಲ್ಲಿ ಅನುಮಾನವಿಲ್ಲ.

ಕೊನೆಯದಾಗಿ, ಕಾವ್ಯವನ್ನು ಕವಿಯೇ ಅನುವಾದಿಸಬೇಕೆ, ಕವಿಯಲ್ಲದವನೂ ಅನುವಾದಿಸಬಹುವೇ ಅಥವಾ ಕವಿಯಲ್ಲದವನೇ ಅನುವಾದಿಸಬೇಕೆ ಎಂಬ ವಿವಾದದ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದು ಅಗತ್ಯ.

"ಕವಿಗೆ ಮತ್ತೊಬ್ಬ ಕವಿಯೇ ಅತ್ಯುತ್ತಮ ಭಾಷಾಂತರಕಾರನಾಗಬಲ್ಲ" ; "ಕವಿ ಹೊಂದಬಹುದಾದ ಭಾಷಾಂತರಕಾರರಲ್ಲಿ ಅತ್ಯಧಮನೆಂದರೆ ಮತ್ತೊಬ್ಬ ಕವಿಯೇ" ಎಂದೆಲ್ಲ ಹೇಳಲಾಗಿದೆ. ಅತ್ಯುತ್ತಮ ಅನುವಾದಗಳನ್ನು ಕೊಟ್ಟಿರುವ ಕವಿಗಳೂ, ಅತ್ಯಂತ ಅಸಮರ್ಪಕ ಅನುವಾದವನ್ನು ಕೊಟ್ಟಿರುವ ಕವಿಗಳೂ ಇರುವುದರಿಂದಲೇ ಇಂಥ ಹೇಳಿಕೆಗಳು ಹುಟ್ಟಿಕೊಂಡಿವೆ. ಸ್ವತಃ ಕವಿಯಾದವನು ಸಂವೇದನಶೀಲನಾಗಿರುತ್ತಾನೆ ; ಪಶ್ಯವಾಕ್ ಆಗಿರುತ್ತಾನೆ ; ಭಾಷೆ ಮತ್ತು ಅಭಿವ್ಯಕ್ತಿಯ ಮೇಲೆ ಪ್ರಭುತ್ವವನ್ನು ಹೊಂದಿರುತ್ತಾನೆ; ಹೀಗಾಗಿ ಅತ್ಯಂತ ಸಹೃದಯತೆಯಿಂದ ಮತ್ತೊಬ್ಬ ಕವಿಯನ್ನು ಅನುವಾದಿಸುತ್ತಾನೆ ; ಇನ್ನೊಬ್ಬರು ತನ್ನ ಕೃತಿಗೆ, ಕೃತಿಯಲ್ಲಿನ ಭಾವಗಳಿಗೆ ಹಿಂಸೆಯನ್ನುಂಟುಮಾಡಿದ್ದರೆ ಹೇಗೆ ತಾನು ನೊಂದುಕೊಳ್ಳುತ್ತಿದ್ದೆನೆಂಬುದನ್ನು ಅರಿತು, ತುಂಬ ಎಚ್ಚರಿಕೆಯಿಂದ ಭಾವಗಳ ಅವತರಣವನ್ನು ಸಮರ್ಪಕವಾದ ರೀತಿಯಲ್ಲಿ ಸಾಧಿಸುತ್ತಾನೆ—ಇವು ಕವಿಯ ಪರವಾಗಿ ಹೇಳಲಾಗುವ ಮಾತುಗಳು. ಆದರೆ, ಕವಿ ತನ್ನ ನೆರಳನ್ನು ತಾನು ಮೀರಿ ನಿಲ್ಲಲಾರ ; ತಾನು ಯಾರಿಗೂ ಕಡಮೆಯಲ್ಲವೆಂಬ ಅಹಂಭಾವ ಆತನಲ್ಲಿ ಮನೆಮಾಡಿಕೊಂಡಿರುತ್ತದೆ; ಕವಿಯಲ್ಲದವನು ಎಷ್ಟು ವಿನಯದಿಂದ, ಸಹೃದಯತೆಯಿಂದ ಮೂಲ ಕವಿಯನ್ನು ಅಭ್ಯಸಿಸುತ್ತಾನೋ ಅಷ್ಟು ವಿನಯ–ಸಹೃದಯತೆಗಳನ್ನು ಕವಿಯಾದವನ್ನು ಸಹಜವಾಗಿಯೇ

ತೋರಲಾರ; ಇದೇ ಭಾವವನ್ನು ಎಷ್ಟು ಸುಂದರವಾಗಿ ಹೇಳಬಹುದಾಗಿತ್ತೆಂದು ಭಾವಿಸುವ ಹಾಗೂ ಆ ಭಾವಗಳನ್ನು ಪರಿಷ್ಕರಿಸುವ ಪ್ರಲೋಭನೆಯನ್ನು ಕವಿಯಾದವನು ಮೆಟ್ಟಿ ನಿಲ್ಲಲಾರ; ಹೀಗಾಗಿ, ಕವಿಗೆ ಮತ್ತೊಬ್ಬ ಕವಿ ಎಂದಿಗೂ ಉತ್ತಮ ಭಾಷಾಂತರಕಾರನಾಗಲಾರ ಎಂದು ಕವಿಗೆ ವಿರೋಧವಾಗಿ ಹೇಳಲಾಗಿದೆ.

ಈ ಎರಡು ವಾದಗಳಲ್ಲಿಯೂ ತಿರುಳಿಲ್ಲದೆ ಇಲ್ಲ. ಕವಿಯಾದವನು ತನ್ನ 'ಅಹಂ' ಅನ್ನು ಮೆಟ್ಟಿನಿಂತು ತನ್ನ ಪ್ರತಿಭೆಯೆಲ್ಲವನ್ನು ಮೂಲ ಕವಿಗೆ ಅರ್ಪಿಸಿಕೊಂಡರೆ ಆಗ ನಿಜಕ್ಕೂ ಉತ್ತಮ ಭಾಷಾಂತರವನ್ನು ಕೊಡಬಲ್ಲ. ಈ ತಾದಾತ್ಮ್ಯ ಮತ್ತು ಸ್ವನಿರಾಕರಣ ಸಾಧ್ಯವಾಗದೆ ಹೋದರೆ ಆತ ಇತರ ಭಾಷಾಂತರಕಾರರಿಗಿಂತ ಯಾವ ವಿಧದಲ್ಲೂ ಉತ್ತಮನಾಗಲು ಸಾಧ್ಯವಾಗುವುದಿಲ್ಲ; ಅಪಾಯಗಳಿಗೆ ಎಡೆಗೊಡುವ ಸಂಭವಗಳೇ ಹೆಚ್ಚಾಗಿರುತ್ತವೆ. ಮೊದಲನೆಯ ರೀತಿಗೆ ಉದಾಹರಣೆಯಾಗಿ ಬೇಂದ್ರೆಯವರ 'ಮೇಘದೂತ'ದ (ಕಾಳಿದಾಸ) ಅನುವಾದವನ್ನೂ ಪು.ತಿ.ನ. ಅವರ 'ಫೌಸ್ಟ್'ನ (ಗಯಟೆ) ಅನುವಾದವನ್ನೂ ಹೆಸರಿಸಬಹುದು. ಎರಡನೆಯ ರೀತಿಗೆ ಅಡಿಗರ 'ಹುಲ್ಲಿನ ದಳಗಳು' (ವಾಲ್ಟ್ ವಿಟ್‌ಮನ್) ಅನುವಾದವನ್ನು ಹೆಸರಿಸಬಹುದು.

'ಕವಿ'ಯ ಪಟ್ಟಕ್ಕೆ ಏರದ, ಆದರೆ ಸಹೃದಯತೆಯಲ್ಲಿ, ಅಧ್ಯಯನ–ಅಭ್ಯಾಸ–ವ್ಯುತ್ಪತ್ತಿಗಳಲ್ಲಿ ಯಾರಿಗೂ ಕಡಮೆ ಇರದ ಕವಿಯಲ್ಲದ ವ್ಯಕ್ತಿ ಬೇರೆಯವರಿಗಿಂತಲೂ ಉತ್ತಮವಾದ ಅನುವಾದವನ್ನು ಕೊಡುವ ಸಾಧ್ಯತೆಯುಂಟು. ಹಾಗೆ ಮಾಡಿರುವುದೂ ಉಂಟು. ಇಂಥ ವ್ಯಕ್ತಿ 'ಅಹಂ' ಅನ್ನು ಬದಿಗಿರಿಸಿ, ವಿನಯದಿಂದ ತನ್ನನ್ನು ಮೂಲಕವಿಗೆ ಅರ್ಪಿಸಿಕೊಂಡು, ತನ್ನೆಲ್ಲ ಪ್ರತಿಭಾ–ಸಾಮರ್ಥ್ಯಗಳನ್ನೂ ಸದ್ವಿನಿಯೋಗಿಸಿ ಮೂಲಕ್ಕೆ ಸದೃಶವಾದ ಸೃಷ್ಟಿಯೊಂದನ್ನು ಕೊಡಬಲ್ಲ. ಇಂಥ ಉದಾಹರಣೆಗಳು, ವಿರಳವಾಗಿಯಾದರೂ, ನಮಗೆ ಕಾಣಸಿಗುತ್ತವೆ.

೧೯ | ಕನ್ನಡ ಕೃತಿಗಳ ಹಿಂದೀ ಭಾಷಾಂತರಗಳು

ತಿಪ್ಪೇಸ್ವಾಮಿ

೧

ಭಾರತದ ವಿಶಾಲ ಜನಸಮೂಹ ಅರ್ಥಮಾಡಿಕೊಳ್ಳುವ, ಮಾತನಾಡುವ, ಅಭಿವ್ಯಕ್ತಿಸುವ, ಆರು ರಾಜ್ಯಗಳ ರಾಜ್ಯಭಾಷೆಯಾಗಿರುವ ಹಿಂದಿ ಭಾರತದ ಇತರೆ ಭಾಷೆಗಳಂತೆ ಭಾರತೀಯ ಭಾಷೆಗಳಲ್ಲೊಂದಾಗಿದ್ದರೂ ಮೇಲೆ ಹೇಳಿದ ಕಾರಣಗಳಿಂದಾಗಿ ಅದು ಇಂದು ಅಖಿಲ ಭಾರತ ಮಟ್ಟದಲ್ಲಿ ಸಂಪರ್ಕಭಾಷೆಯ ಸ್ಥಾನಮಾನವನ್ನು ಪಡೆದು ವಿಕಾಸಪಥದಲ್ಲಿ ಸಾಗುತ್ತಿರುವ ಭಾಷೆಯಾಗಿದೆ. ಹಿಂದಿಯನ್ನು ಕುರಿತಂತೆ ರಾಜಕೀಯ ಮಟ್ಟದಲ್ಲಿ ಎಷ್ಟೇ ವಾದ-ವಿವಾದಗಳಿದ್ದರೂ ಅದು ಭಾವೈಕ್ಯದ ದೃಷ್ಟಿಯಿಂದ ಭಾರತದಂತಹ ಬೃಹತ್ ರಾಷ್ಟ್ರದ ವಿಭಿನ್ನ ಪ್ರದೇಶಗಳಲ್ಲಿನ ವೈವಿಧ್ಯಮಯ ಸಂಸ್ಕೃತಿಯನ್ನು, ಚಿಂತನೆಯನ್ನು, ಸೃಷ್ಟಿಕ್ರಿಯೆಯನ್ನು ಅಖಿಲ ಭಾರತ ಮಟ್ಟದಲ್ಲಿ ಅಭಿವ್ಯಕ್ತಿಗೊಳಿಸಲು ಇರುವ ಪ್ರಮುಖ ಭಾಷಾವೇದಿಕೆಯಾಗಿದೆ. ಈ ದೇಶದಲ್ಲಿನ ಎಲ್ಲ ಭಾಷೆಗಳನ್ನು ಎಲ್ಲರೂ ಕಲಿಯುವ, ಓದುವ, ಬರೆಯುವಷ್ಟು ಸಾಮರ್ಥ್ಯವನ್ನು ಸಂಪಾದಿಸಲು ವ್ಯವಧಾನ ಸೀಮಿತವಾಗಿರುವಾಗ ಹಿಂದಿ ನಮ್ಮೆಲ್ಲರ ನಡುವಿನ ಸೇತುವೆಯಾಗಿ, ಒಂದು ಪ್ರಾಂತದವರನ್ನು, ಇನ್ನೊಂದು ಪ್ರಾಂತದವರೊಟ್ಟಿಗಷ್ಟೇ ಅಲ್ಲ, ಇಡೀ ದೇಶದ ಜನರೊಡನೆ ಸಂಪರ್ಕಿಸುವ ಮಾಧ್ಯಮವಾಗಿ ದಿನೇ ದಿನೇ ತನ್ನ ಸಾರ್ಥಕತೆಯನ್ನು ತೀವ್ರಗೊಳಿಸಿಕೊಳ್ಳುತ್ತಿದೆ. ಭಾರತದ ಯಾವ ಭಾಷೆಯ ಸಾಹಿತ್ಯವೇ ಆಗಲಿ ಹಿಂದಿಯಲ್ಲಿ ಅನುವಾದಗೊಂಡು ಪ್ರಕಟವಾಯಿತೆಂದರೆ ಅದು ಭಾರತದ ಯಾವುದೇ ಭಾಷೆಯ ಜನರೊಡನೆ ಸಂವಾದಿಸಬಲ್ಲುದಾಗುತ್ತದೆ. ಹಿಂದಿ ಎಲ್ಲ ಭಾಷೆಗಳ ಸತ್ವವನ್ನೂ ತನ್ನಲ್ಲಿ ಮೈಗೂಡಿಸಿಕೊಂಡು ಎಲ್ಲರನ್ನು ಪುಷ್ಟಿಗೊಳಿಸುವ, ಯಾವುದೇ ಮೂಲೆಯವನನ್ನೂ ಎಲ್ಲ ಮೂಲೆಗಳಿಗೂ ಪರಿಚಯಿಸುವ ಸಂಪರ್ಕ ಸೇತುವೆಯಾಗಿದೆ.

ಇನ್ನು, ಭಾಷಾಂತರ ಇಂದಿನ ಆಧುನಿಕ ಪರಿಸರದಲ್ಲಿ ಒಂದು ವರದಾನದಂತಿದ್ದು ಭಾಷಾಂತರಕಾರ ಸಾಂಸ್ಕೃತಿಕ ರಾಯಭಾರಿಯಾಗಿದ್ದಾನೆ. ನಿತ್ಯಂಪ್ರತಿ ಕಲೆ, ಸಾಹಿತ್ಯ, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ವಿಶ್ವ ಸಾಧಿಸುತ್ತಿರುವ ಅಪೂರ್ವ ಸಿದ್ಧಿ-ಸಾಧನೆಗಳ ಪ್ರಯೋಜನಗಳನ್ನು ಎಲ್ಲರಿಗೂ ಸುಲಭಸಾಧ್ಯವನ್ನಾಗಿ ಮಾಡಿಕೊಡುತ್ತಿರುವ ಭಾಷಾಂತರಕಾರ ಜಗತ್ತಿನ ಚಾಲನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾನೆ, ಅವನು ಜಗತ್ತಿನ ಸಾಂಸ್ಕೃತಿಕ, ವೈಜ್ಞಾನಿಕ ಅರಿವಿನ ತೀವ್ರ ಪ್ರಸಾರಕನಾಗಿದ್ದಾನೆ. ಈ ದೃಷ್ಟಿಯಿಂದ ದೇಶದ ಅಥವಾ ವಿಶ್ವದ ಯಾವುದೇ ಎರಡು ಭಾಷೆಗಳಲ್ಲಿ ಆಳವಾದ ಪಾಂಡಿತ್ಯ

ವನ್ನು, ಅವುಗಳ ಅಭಿವ್ಯಕ್ತಿಯಲ್ಲಿನ ಎಲ್ಲ ಪದರು ಪದರುಗಳ ಮರ್ಮವನ್ನು ಬಲ್ಲ ಯಾವೊಬ್ಬ ಭಾಷಾಂತರಕಾರನೇ ಆಗಲಿ ತಾನು ಮಾಡುವ ಭಾಷಾಂತರದಿಂದ ಆ ಎರಡು ಭಾಷೆಗಳ ಜನರ ನಡುವಿನ ಅಂತರವನ್ನೂ ಕಡಿಮೆಮಾಡಿ ಅನ್ಯೋನ್ಯ ಪ್ರೀತಿ, ಪ್ರೇಮ, ಸೌಹಾರ್ದತೆಗೆ ಅನುವು ಮಾಡಿಕೊಡಬಹುದು. ಈ ಕಾರಣದಿಂದಾಗಿ ಅನುವಾದಕನ ಜವಾಬ್ದಾರಿ ಹಾಗೂ ಅವನ ಆವಶ್ಯಕತೆ ಎಷ್ಟು ಮಹತ್ವದ್ದಾಗುತ್ತದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಭಾರತದ ಪರಿಸರದಲ್ಲಿ ಅತ್ಯಂತ ವಿಷಾದದಿಂದ ಹೇಳಬೇಕಾದ ಒಂದು ಅಂಶವೆಂದರೆ, ನಾವುಗಳೆಲ್ಲ ಹೇಳಿಕೊಳ್ಳಲು ಒಂದೇ ದೇಶದವರಾಗಿದ್ದರೂ, ಈ ಒಂದು ದೇಶದಲ್ಲಿನ ನಾವುಗಳು ಎಷ್ಟು ಹತ್ತಿರದಲ್ಲಿದ್ದೇವೆಯೋ ಅಷ್ಟೇ ದೂರದಲ್ಲಿದ್ದೇವೆ. ಅಂದರೆ ನಮ್ಮಗಳ ನಡುವಿನ ಅಂತರ ಅಷ್ಟು ಗಾಢವಾಗಿದೆ. ಇಂದಿಗೂ ಕೂಡ ಕರ್ನಾಟಕದವರನ್ನು ಮದ್ರಾಸಿಗರೆಂದೇ ಗುರುತಿಸುವ ಉತ್ತರದ ಎಷ್ಟು ಮಂದಿಗೆ ಕರ್ನಾಟಕದ ಸೊಬಗಿನ, ಇಲ್ಲಿಯ ಶ್ರೀಗಂಧದ, ಇಲ್ಲಿಯ ಕಸ್ತೂರಿಯ, ಇಲ್ಲಿಯ ಕಲೆ, ಸಾಹಿತ್ಯ, ಸಂಸ್ಕೃತಿಯ, ಇಲ್ಲಿನ ಕುವೆಂಪು, ಬೇಂದ್ರೆ, ಕಾರಂತರ ಪರಿಚಯವಿದೆ? ಉತ್ತರಕ್ಕೆ ಹೋದಾಗ ನಾವು ಮದ್ರಾಸಿಗರಲ್ಲ; ಕರ್ನಾಟಕದವರು ಎಂದು ವಿವರಣೆ ಕೊಡುವ ದಿನ ಎಂದು ತಪ್ಪುತ್ತದೆ? ಅಂತೆಯೇ ನಮ್ಮಲ್ಲಿನ ಎಷ್ಟು ಜನಗಳಿಗೆ ಒರಿಯಾ, ಕಾಶ್ಮೀರಿ, ಪಂಜಾಬಿ ಭಾಷೆಗಳನ್ನಾಡುವ ಪ್ರದೇಶಗಳ ಸಂಸ್ಕೃತಿಯ, ಕಲೆಯ, ಸಾಹಿತ್ಯದ, ಅಲ್ಲಿನ ಕವಿಗಳ ಪರಿಚಯವಿದೆ? ಹಾಗೆ ನೋಡಿದರೆ ಇದು ಆತ್ಮಶೋಧ ಮಾಡಿಕೊಳ್ಳುವಂಥ ಕೆಲಸವಾಗಿದ್ದು, ಈ ಶೋಧನೆಯ ಫಲವಾಗಿ ನಾವು 'ನಮ್ಮದೆನ್ನು'ವುದನ್ನು ಪರಿಚಯಿಸುವ, 'ಅವರದ್ದೆನ್ನು' ವುದನ್ನು ಸ್ವೀಕರಿಸುವ ದಿಕ್ಕಿನಲ್ಲಿ ಇನ್ನಾದರೂ, ಸ್ವಾತಂತ್ರ್ಯ ಬಂದು ಸುಮಾರು 32 ವರ್ಷಗಳ ನಂತರವಾದರೂ ತೀವ್ರವಾಗಿ ಕ್ರಿಯಾತ್ಮಕವಾಗಬೇಕಾದ ಆವಶ್ಯಕತೆ ಇದೆ. 'ಭಾರತೀಯ ಸಾಹಿತ್ಯ'ವೆಂಬುದು ಬಹು ದೊಡ್ಡ ಸಿಂಧು. ಈ ಸಿಂಧುವಿನ ಬಿಂದುಗಳಾಗಿರುವಭಾರತೀಯ ಭಾಷೆಗಳ ಪರಸ್ಪರ ಆದಾನ-ಪ್ರದಾನವಾದಾಗ ಮಾತ್ರ ನಿಜವಾದ ಅರ್ಥದಲ್ಲಿ 'ಭಾರತೀಯ ಸಾಹಿತ್ಯ' ಎಂಬುದಕ್ಕೆ ಒಂದು ಅರ್ಥ ಬರುತ್ತದೆ.

ಕನ್ನಡ ಭಾಷೆ, ಸಾಹಿತ್ಯವನ್ನು ಹಿಂದೀ ಭಾಷೆಯ ಮೂಲಕ ಅಖಿಲ ಭಾರತ ಮಟ್ಟದಲ್ಲಿ ಪರಿಚಯಿಸುವ, ಪ್ರತಿನಿಧಿಸುವ ದಿಕ್ಕಿನಲ್ಲಿ ಗಣನೀಯ ಪ್ರಮಾಣದಲ್ಲಿ ಕೆಲಸ ಆಗಿರದಿದ್ದರೂ, ಆಗಿರುವಷ್ಟು ಕೆಲಸದಿಂದ ತೃಪ್ತಿಯಂತೂ ಪಡುವಂತಿಲ್ಲ. ಕಾರಣ—(1) ಕನ್ನಡವನ್ನು ಮಾತೃಭಾಷೆಯಾಗುಳ್ಳ ಕರ್ನಾಟಕದವರಿಗೆ ಹಿಂದಿ ಕಲಿತ, ರೂಢಿಸಿಕೊಂಡ ಭಾಷೆಯಾದುದರಿಂದ ಇವರು ಆ ಭಾಷೆಯ ಸಾಹಿತ್ಯದ ಎಷ್ಟೇ ವಿದ್ವಾಂಸರಾದರೂ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಹಿಂದೀ ಜಾಯಮಾನದ, ಆ ಭಾಷೆಯ ಒಳಪದರುಗಳೊಡನೆ ನಿಕಟ ಸಂಪರ್ಕ ಹೊಂದದೆ ಇರುವುದರಿಂದ, ಕನ್ನಡದ ಎಷ್ಟೋ ಮಹತ್ವದ ಕೃತಿಗಳನ್ನು ಅದರ ಮೂಲ ಸೌಂದರ್ಯದೊಂದಿಗೆ ಅಭಿವ್ಯಕ್ತಿಸಲು ಅಸಮರ್ಥರಾಗಿರುವುದು. ಹೀಗಾಗಿ ಇವರು ಹಿಂದಿಯಿಂದ ತಮ್ಮ ಭಾಷೆಯಾದ ಕನ್ನಡಕ್ಕೆ ಎಷ್ಟು

ಸಮರ್ಥರಾಗಿ ಅನುವಾದಿಸಿಕೊಳ್ಳಬಲ್ಲರೋ ಅಷ್ಟು ಸಮರ್ಥವಾಗಿ ಕನ್ನಡದಿಂದ ಹಿಂದಿಗೆ ಅನುವಾದಿಸಲು ತಮ್ಮಲ್ಲೇ ಧೈರ್ಯ ಕಳೆದುಕೊಂಡಿರುವುದು. (2) ಉತ್ತರದವರು, ಅಂದರೆ ಹಿಂದಿಯನ್ನು ಮಾತೃಭಾಷೆಯಾಗುಳ್ಳವರು ಕನ್ನಡವನ್ನು ಕಲಿತು ಈ ಭಾಷೆಯಲ್ಲಿನ ಸಾಹಿತ್ಯವನ್ನು ತಮ್ಮ ಭಾಷೆಗೆ ಅಂದರೆ ಹಿಂದಿಗೆ ಭಾಷಾಂತರಿಸಲು ತೋರಿರುವ ನಿರಾಸಕ್ತಿ. ಹಾಗೆ ನೋಡಿದರೆ, ಕರ್ನಾಟಕದಲ್ಲಿ ನೌಕರಿಗಾಗಿ ಬರುವವರು ಕನ್ನಡವನ್ನು ಕಲಿಯಬೇಕೆಂಬ ಕಡ್ಡಾಯವಿದ್ದರೂ, ಇವರು ತಮ್ಮ ಉದ್ದೇಶಪೂರ್ತಿಗಾಗಿ ಮಾತ್ರ ಕನ್ನಡ ಕಲಿತು, ಇಲ್ಲಿಯ ಸಾಹಿತ್ಯವನ್ನು ಕಡೆಗಾಣಿಸಿರುವ ಮನೋಭಾವ. (3) ನಮ್ಮ ಸರ್ಕಾರಗಳು ಸಹ ಭಾಷಾಂತರದ ಮಹತ್ವವನ್ನರಿಯದೆ ಇಲ್ಲಿಯ ಭಾಷಾಂತರಕಾರರನ್ನು ಹಿಂದಿ ಮಾತನಾಡುವ ಪ್ರದೇಶಗಳಿಗೆ, ಅಲ್ಲಿಯವರನ್ನು ಈ ಪ್ರದೇಶಕ್ಕೆ ಕಳುಹಿಸಿ ಆಯಾಯ ಭಾಷೆಯ ಸತ್ವವನ್ನು ಹೀರಲು, ರೂಢಿಸಿಕೊಳ್ಳಲು ಅವಕಾಶ ಮಾಡಿಕೊಡದೆ ಇರುವುದು. (4) ಬಹಳಷ್ಟು ಮಂದಿ ಹಿಂದಿ ಪ್ರಕಾಶಕರು ಕನ್ನಡ ಗ್ರಂಥಗಳ ಅನುವಾದದ ಪ್ರಕಟಣೆಗೆ ಮುಂದೆ ಬಾರದಿರುವುದು. ಈ ಅನುವಾದ ಗ್ರಂಥ ಪಠ್ಯ ಪುಸ್ತಕವಾದರೆ ಅದು ಬೇರೆ ಮಾತು.

ಇವೇ ಮುಂತಾದ ಕಾರಣಗಳ ಹಿನ್ನೆಲೆಯಲ್ಲಿ ಕನ್ನಡದ ಉತ್ಕೃಷ್ಟ ಕೃತಿಗಳೆನ್ನಿಸಿಕೊಂಡ ಬರಹಗಳೂ ಹಿಂದಿಗೆ ಏಕೆ ಅನುವಾದವಾಗಿಲ್ಲ? ಪ್ರಕಟವಾಗಿಲ್ಲ? ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಇಷ್ಟಾದರೂ ಸಾಹಿತ್ಯ ಅಕಾದೆಮಿ, ನ್ಯಾಷನಲ್ ಬುಕ್ ಟ್ರಸ್ಟ್‌ನಂಥ ಸರ್ಕಾರಿ ಸಂಸ್ಥೆಗಳು ಈ ದಿಕ್ಕಿನಲ್ಲಿ ಕೆಲಸವನ್ನು ಮಾಡುತ್ತಿವೆಯಾದರೂ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರಗಳಲ್ಲಾಗುತ್ತಿರುವ ಪ್ರಗತಿಯ ದೃಷ್ಟಿಯಿಂದ ಅದು ಏನೇನೂ ಸಾಲದಾಗಿದೆ. ಜೊತೆಗೆ ಈ ಸಂಸ್ಥೆಗಳ ಬಹಳಷ್ಟು ಅನುವಾದಗಳು ಸಹ ಸಮರ್ಪಕವಾಗಿಲ್ಲದಿರುವುದಕ್ಕೂ ನಮ್ಮಲ್ಲಿ ಭಾಷಾಂತರವನ್ನು ರಾಷ್ಟ್ರೀಯ ಅವಶ್ಯಕತೆ ಎಂದು ಭಾವಿಸಿ ನಮ್ಮ ಸರ್ಕಾರ ಇದರ ಬೆಳವಣಿಗೆಗೆ ಸಹಕರಿಸದೇ ಇರುವುದು ಕಾರಣವಾಗಿದೆ.

೨

ಹಿಂದಿಯಿಂದ ಕನ್ನಡಕ್ಕೆ ಬಂದಿರುವ ಭಾಷಾಂತರ ಕೃತಿಗಳಿಗೆ ಹೋಲಿಸಿದರೆ ಕನ್ನಡದಿಂದ ಹಿಂದಿಗೆ ಹೋಗಿರುವ ಭಾಷಾಂತರ ಕೃತಿಗಳ ಸಂಖ್ಯೆ ಕಡಿಮೆಯೇ. ನಮ್ಮಲ್ಲಿ ಈ ಬಗೆಯಾಗಿ ಬೇರೆ ಬೇರೆ ಭಾಷೆಗಳಿಂದ ಬಂದ, ಬೇರೆ ಭಾಷೆಗಳಿಗೆ ಹೋದ ಗ್ರಂಥಗಳ ಸೂಚಿಯನ್ನು, ಗ್ರಂಥಗಳನ್ನು ಸಂಗ್ರಹಿಸಿಡುವ ಭಾಷಾಂತರ ಸಂಗ್ರಹಾಲಯವಿಲ್ಲದಿರುವುದರಿಂದ ಕನ್ನಡದಿಂದ ಹಿಂದಿಗೆ ಇಷ್ಟೇ ಕೃತಿಗಳು ಅನುವಾದವಾಗಿವೆ ಎಂದು ನಿಖರವಾಗಿ ಹೇಳಲು ಸಾಧ್ಯವಾಗದಿದ್ದರೂ ಈ ಪಂಕ್ತಿಗಳ ಲೇಖಕ ತನ್ನ ಗಮನಕ್ಕೆ ಬಂದ, ತಾನು ನೋಡಿದ, ಪರಿಶೀಲಿಸಿದ, ಅಭ್ಯಸಿಸಿದ ಗ್ರಂಥಗಳನ್ನು ಈ ಲೇಖನದಲ್ಲಿ ಉಲ್ಲೇಖಿಸಿದ್ದಾನೆ—ಈ ಪಟ್ಟಿಯಲ್ಲಿ ಬರದೇ ಬಿಟ್ಟುಹೋಗಿರುವ ಕೃತಿಗಳ ಬಗೆಗೂ ಈ ಲೇಖಕ ಉಲ್ಲೇಖಿತವಾಗಿರುವ ಕೃತಿಗಳ ಬಗೆಗಿಟ್ಟುಕೊಂಡಂಥ ಗೌರವವನ್ನು ಹೊಂದಿದ್ದಾನೆ.

ಕಾವ್ಯ :

೧) ಪ್ರಭುದೇವ್ ಕೇ ವಚನ್—(ಕಾಶಿ ನಾಗರೀ ಪ್ರಚಾರಿಣಿ ಸಭೆಯ ಪ್ರಕಟಣೆ)
೨) ಪುರಂದರ್‌ದಾಸ್ ಕೇ ಭಜನ್—ಅನು : ಬಾಬುರಾವ್ ಕುಮಠೇಕರ್.
೩) ಸತೀಧರ್ಮ(ಸಂಚಿ ಹೊನ್ನಮ್ಮಳ 'ಹದಿಬದೆಯ ಧರ್ಮ'ದ ಹಿಂದೀ ಅನುವಾದ) -ಅನು : ಎಂ. ದೇವೇಗೌಡ.
೪) ಬಸವೇಶ್ವರ್ ಕೇ ಚುನೇ ಹುಯೇ ವಚನ್—ಅನು : ಡಾ. ಎಂ. ರಾಜೇಶ್ವರಯ್ಯ.
೫) ಮಹಾತ್ಮಾ ಬಸವೇಶ್ವರ್ ಕೇ ವಚನ್—ಅನು : ಆರ್. ಸಿ. ಭೂಸನೂರ್‌ಮಠ : ಶಕುಂತಲಾ ಭೂಸನೂರ್‌ಮಠ.
೬) ಬಸವೇಶ್ವರ್ ಕೇ ವಚನ್—(ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟಣೆ)
೭) ಶ್ರೀ ರಾಮಾಯಣದರ್ಶನಂ-(ಪೂರ್ವರಂಗ-ಒಂದು ಸಂಚಿಕೆಯ ಅನುವಾದ) ಅನು. ಡಾ. ಸರೋಜಿನಿ ಮಹಿಷಿ.
೮) ಮೂಢ್ ತಿಪ್ ಕಾ ದರ್ಶನ್—(ಡಿ. ವಿ. ಜಿ.ಯವರ 'ಮಂಕುತಿಮ್ಮನ ಕಗ್ಗ'ದ ಅನುವಾದ) ಅನು : ಡಾ. ಸರೋಜಿನಿ ಮಹಿಷಿ.
೯) ಕವಿ ಕುವೆಂಪು—(ಕುವೆಂಪುರವರ ಪರಿಚಯಸಹಿತ ಅವರ ಕೆಲವು ಕನ್ನಡ ಕವಿತೆಗಳ ಗದ್ಯಾನುವಾದ) ಅನು : ಡಾ. ಎಂ. ಎಸ್. ಕೃಷ್ಣಮೂರ್ತಿ.
೧೦) ಕವಿ ಬೇಂದ್ರೆ—(ಬೇಂದ್ರೆಯವರ ಪರಿಚಯಸಹಿತ ಅವರ ಕೆಲವು ಕನ್ನಡ ಕವಿತೆಗಳ ಗದ್ಯಾನುವಾದ) ಅನು : ಡಾ. ಎಂ. ಎಸ್. ಕೃಷ್ಣಮೂರ್ತಿ.
೧೧) ಜಯಗೀತ್—ಮೂಲ-ಜಯದೇವಿ ತಾಯಿ ಲಿಗಾಡೆ; ಅನು : ಎಸ್. ಶಿವಮೂರ್ತಿ ಶಾಸ್ತ್ರಿ.
೧೨) ಭಾರತೀಯ ಕವಿತಾ—೧೯೫೩, ೧೯೫೪-೧೯೫೫, ೧೯೫೮-೧೯೫೯ರ ಸಂಕಲನಗಳಲ್ಲಿ ಸೇರಿರುವ ಕವಿಗಳ ಕವಿತೆಗಳ ಹಿಂದೀ ಅನುವಾದ (ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಕಟಣೆ)

ಅ) ೧೯೫೩ರ 'ಭಾರತೀಯ ಕವಿತಾ'ಯಲ್ಲಿ ಬೇಂದ್ರೆ, ಕುವೆಂಪು, ಕೆ. ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಚನ್ನವೀರ ಕಣವಿ, ಜಯದೇವಿ ತಾಯಿ ಲಿಗಾಡೆ, ಜಿ. ಎಸ್. ಶಿವರುದ್ರಪ್ಪ, ಬಿ. ಎಚ್. ಶ್ರೀಧರ, ಆರ್. ಎಸ್. ಮುಗಳಿ, ವಿ. ಕೆ. ಗೋಕಾಕ ಅವರ ಕವಿತೆಗಳು ಸಂಕಲಿತವಾಗಿದ್ದು ಇವರ ಕವಿತೆಗಳನ್ನು ಡಾ. ಹಿರಣ್ಮಯಿ ಅವರು ಹಿಂದಿಗೆ ಅನುವಾದಿಸಿದ್ದಾರೆ.

ಆ) ೧೯೫೪-೫೫ರ 'ಭಾರತೀಯ ಕವಿತಾ' ಸಂಕಲನದಲ್ಲಿ ಬೇಂದ್ರೆ, ಕುವೆಂಪು, ಚನ್ನವೀರ ಕಣವಿ ಜಯದೇವಿ ತಾಯಿ ಲಿಗಾಡೆ, ಕೆ. ನರಸಿಂಹಮೂರ್ತಿ, ಕೆ. ಎಸ್. ನರಸಿಂಹಸ್ವಾಮಿ, ಪು. ತಿ. ನರಸಿಂಹಾಚಾರ್ಯ, ರಾಮಚಂದ್ರಶರ್ಮ, ವಿ. ಕೃ. ಗೋಕಾಕ

ಅವರ ಕವಿತೆಗಳಿದ್ದು ಇವುಗಳ ಹಿಂದಿ ಅನುವಾದವನ್ನು ಬಿ. ಆರ್. ನಾರಾಯಣ ಅವರು ಸಿದ್ಧಪಡಿಸಿದ್ದಾರೆ.

೯) ಗಾಹಲ-ಶಾರ ಸಂಕಲನದಲ್ಲಿ ಗೋಪಾಲಕೃಷ್ಣ ಅಡಿಗ, ಎಂ. ಗೋವಿಂದ ಪೈ, ಕೆ. ಎಸ್. ನರಸಿಂಹಸ್ವಾಮಿ, ಕುವೆಂಪು, ಗಂಗಾಧರ ಚಿತ್ತಾಲ, ಚನ್ನವೀರ ಕಣವಿ, ಜಿ. ಎಸ್. ಶಿವರುದ್ರಪ್ಪ, ಡಿ. ಎಸ್. ಕರ್ಕಿ, ದ. ರಾ. ಬೇಂದ್ರೆ, ದಿನಕರ ದೇಸಾಯಿ, ಪುತಿನ, ಆನಂದಕಂದ, ವಿ. ಜಿ. ಭಟ್ಟ, ಕಾವ್ಯಾನಂದರ ಕವಿತೆಗಳಿದ್ದು ಸೋಮಶೇಖರ್ 'ಸೋಮ' ಮತ್ತು ಬಿ. ವಿ. ಕಾರಂತ್ ಇವ್ರಗಳನ್ನು ಹಿಂದಿಗೆ ಅನುವಾದಿಸಿದ್ದಾರೆ.

೧೦) ಕೇಂದ್ರೀಯ ಹಿಂದಿ ನಿರ್ದೇಶನಾಲಯವು ಪ್ರಕಟಿಸಿರುವ 'ಸಂಕಲನ'ದಲ್ಲಿ ಬೇಂದ್ರೆ, ಡಿ. ಎಸ್. ಕರ್ಕಿಯವರ ಕವಿತೆಗಳು ಸೇರಿದ್ದು ಇವುಗಳ ಅನುವಾದನನ್ನು ಸೋಮ್‌ಶೇಖರ 'ಸೋಮ' ಹಾಗೂ ಎಚ್. ಬಿ. ಚೌಧರಿಯವರು ಮಾಡಿದ್ದಾರೆ.

೧೧) ಅಂತರಾತ್ಮಾ ಸೇ—ರಂಗನಾಥ ದಿವಾಕರರ ವಚನಗಳ ಅನುವಾದ.

—ಇಷ್ಟಲ್ಲದೆ ಯುಗಪ್ರಭಾತ್, ಹಿಂದೀ ಪ್ರಚಾರ್ ಸಮಾಚಾರ್, ಸಂದರ್ಭ ಭಾರತಿ, ಭಾಷಾ, ಭಾರತವಾಣಿ, ಮುಂತಾದ ಅನೇಕ ಹಿಂದೀ ಪತ್ರಿಕೆಗಳಲ್ಲಿ ಅನೇಕ ಕವಿಗಳ ಕನ್ನಡ ಕವಿತೆಗಳ ಅನುವಾದಗಳು ಪ್ರಕಟವಾಗಿವೆ.

ಪ್ರಸ್ತುತ ಸಮೀಕ್ಷೆಯಲ್ಲಿ ಮೇಲೆ ಸೂಚಿಸಿರುವ ಎಲ್ಲ ಕಾವ್ಯಸಂಕಲನಗಳ ಸಮೀಕ್ಷೆಯನ್ನು ಕೊಡದೆ ಸ್ಥಳಾಭಾವದ ಕಾರಣದಿಂದಾಗಿ ಅನುವಾದದ ದೃಷ್ಟಿಯಿಂದ ಹೆಚ್ಚು ಸೋಲನ್ನಪ್ಪಿರುವ ಕೃತಿಗಳನ್ನು ಮಾತ್ರ ಪರಿಶೀಲಿಸಲಾಗಿದೆ.

೩

ಈ ಯುಗದ ಮಹತ್ವಪೂರ್ಣ ಮಹಾಕಾವ್ಯಗಳಲ್ಲೊಂದಾದ ಶ್ರೀ ಕುವೆಂಪುರವರ 'ಶ್ರೀರಾಮಾಯಣದರ್ಶನ'ದ ಮೊದಲ ಅಧ್ಯಾಯದ ಹಿಂದಿ ಅನುವಾದವನ್ನು ಡಾ. ಸರೋಜಿನಿ ಮಹಿಷಿಯವರು ಪ್ರಸ್ತುತಪಡಿಸಿದ್ದು, ಈ ಅನುವಾದ ಮೂಲ ಕಾವ್ಯದ ಸೌಂದರ್ಯವನ್ನು ತನ್ನಲ್ಲಿ ಎಳ್ಳಷ್ಟೂ ಮೈಗೂಡಿಸಿಕೊಳ್ಳದೆ ತೀರ ಜಾಳುಜಾಳಾಗಿ ಬಿಟ್ಟಿರುವುದರಿಂದ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಕುವೆಂಪುರವರು ಬಹು ಕೆಟ್ಟ ರೀತಿಯಲ್ಲಿ ಹಿಂದಿ ಜನತೆಗೆ ಪರಿಚಿತರಾಗಿದ್ದಾರೆ. ಕನ್ನಡ ಜನಮನದಲ್ಲಿ ಚಿರಸ್ಥಾಯಿ ಸ್ಥಾನ ಪಡೆದುಕೊಂಡಿರುವ ಕುವೆಂಪುರವರ ಈ ಕೃತಿ ಬಹಳಷ್ಟು ಚರ್ಚಿತವಾಗಿರುವುದು ಹಾಗೂ ತನ್ನ ಭವ್ಯತೆ ಹಾಗೂ 'ದರ್ಶನ'ದಿಂದಾಗಿ ಮನೆಮಾತಾಗಿರುವುದು ನಿಜವಾದರೂ ಹಿಂದಿಯಲ್ಲಿ ಇಂಥ ಒಂದು ಕೃತಿ ಪ್ರಕಟವಾದಾಗ ಅದಕ್ಕೆ ಸಹಜವಾಗಿಯೇ ವಿಶೇಷ ಗೌರವ ಲಭ್ಯವಾಗಬೇಕಷ್ಟೇ ಅಲ್ಲದೆ ಚರ್ಚಿತವಾಗಬೇಕು. ಒಂದು ಭಾಗ

ಪ್ರಕಟವಾದರೆ ಇಡೀ ಕಾವ್ಯದ ಅನುವಾದಕ್ಕಾಗಿ ಜನ ಹಾತೊರೆಯಬೇಕು. ಆದರೆ 'ಶ್ರೀ ರಾಮಾಯಣದರ್ಶನ'ದ ಈ ಅನುವಾದ ಹಿಂದಿ ಜನರ ಗಮನವನ್ನು ಏಕೆ ಸೆಳೆಯಲಿಲ್ಲ? ಹಾಗೂ ಯಾವೊಬ್ಬ ವಿಮರ್ಶಕನ ಕಣ್ಣಿಗೂ ಏಕೆ ಬೀಳಲಿಲ್ಲ? ಎಂಬುದರ ಬಗೆಗೆ ಯೋಚಿಸಿದರೆ ಈ ಕೃತಿಯ ಒಳ್ಳೆಯ ಅನುವಾದದ ಅಭಾವವೇ ಇದಕ್ಕೆ ಕಾರಣ ಎಂದನ್ನಿಸುತ್ತದೆ.

'ಶ್ರೀ ರಾಮಾಯಣದರ್ಶನ'ವನ್ನು ಮೂಲದಲ್ಲಿ ಓದುವುದೇ ಒಂದು ವಿಶಿಷ್ಟ ಅನುಭವ. ಇಲ್ಲಿನ ಭಾಷಾಪ್ರೌಢಿಮೆ, ಶೈಲಿಯಲ್ಲಿನ ಪ್ರಾಂಜಲತೆ ಎಷ್ಟು ಶ್ರೇಷ್ಠಮಟ್ಟದೆಂದರೆ ಓದುಗರು ತಲ್ಲೀನರಾಗಿಬಿಡುತ್ತಾರೆ, ಸಮ್ಮೋಹಿತಗೊಂಡುಬಿಡುತ್ತಾರೆ. ಆದರೆ ಈ ಹಿಂದಿ ಅನುವಾದ ಮೂಲಕಾವ್ಯದ 'ಅಮೃತತ್ವ'ವನ್ನು ಕಳೆದುಕೊಂಡು ಗದ್ಯವೆನ್ನಬಹುದಾದ ಪದ್ಯದಲ್ಲಿ ಮೂಡಿ ಬಂದು ತೀವ್ರ ನಿರಾಶೆಯನ್ನುಂಟುಮಾಡುತ್ತದೆ. ಮೂಲದಿಂದ ದೂರ ಸರಿದು ಮೂಲದ ಭಾವಗಳನ್ನೇ ಕೈಬಿಟ್ಟು ಇಲ್ಲದ್ದನ್ನು ಪ್ರಕ್ಷೇಪಿಸಿದ, ವ್ಯಾಖ್ಯಾನಿಸಿದ ಅಂಶಗಳಿಂದಾಗಿ ಮೂಲ ಕಾವ್ಯ ಅನುವಾದದಲ್ಲೂ ಮೂಲದಂತೆಯೇ ಓದಿಸಿಕೊಳ್ಳದೆ ಬಹುಮಟ್ಟಿಗೆ ಶಬ್ದಾನುವಾದ ಮಾತ್ರವಾಗುತ್ತ ಹೋಗುತ್ತದೆ. ಭಾಷಾಂತರ ಕ್ರಿಯೆಯ ದೃಷ್ಟಿಯಿಂದ ಈ ಅನುವಾದದಲ್ಲಿ ಹಲವು ಬಗೆಯ ದೋಷಗಳಿದ್ದು ಕೆಲವು ದೋಷಗಳತ್ತ ಗಮನ ಹರಿಸಿ ಇಲ್ಲಿ ಉದಾಹರಿಸಲಾಗಿದೆ.

'ಶ್ರೀ ವೆಂಕಣ್ಣಯ್ಯನವರಿಗೆ' ಎಂಬ ಅರ್ಪಣಾಭಾಗದಲ್ಲಿ ಬರುವ ಮೂಲ ಪಂಕ್ತಿಗಳು:

ಮೂಲ : ಓ ಪ್ರಿಯಗುರುವೆ,
ಕರುಣಿಸಿಂ ನಿಮ್ಮ ಹರಕೆಯ ಬಲದ ಶಿಷ್ಯನಂ,
ಕಾವ್ಯಮಂ ಕೇಳ್ವೊಂದು ಕೃಪೆಗೆ ಕೃತಕೃತ್ಯನಂ"

ಅನುವಾದ : "ಓ ಗುರು
ಕರುಣಾ ಬರಸಾಓ ಇಸ್ ಶಿಷ್ಯ ಪರ್
ಜಿಸ್ ಕೇ ಲಿಏ ಆಶೀರ್ವಾದ್ ಬಲ್ ಹೈ."

'ಕರುಣಿಸಿಂ' ಎಂಬ ಶಬ್ದ ಕನ್ನಡದಲ್ಲಿ 'ಅನುಗ್ರಹಿಸಿ' ಎಂಬ ಅರ್ಥದಲ್ಲಿ ಪ್ರಯೋಗಗೊಂಡಿದ್ದರೆ ಹಿಂದಿಯಲ್ಲಿ 'ಕರುಣಾ' ಆಗಿ ಅರ್ಥ ವಿಪರ್ಯಾಸವಾಗಿದೆ. 'ಕರುಣಾ' ಶಬ್ದ ಹಿಂದಿಯಲ್ಲಿ ಈ ಅರ್ಥದಲ್ಲಿ ಪ್ರಯೋಗವಾಗುವುದಿಲ್ಲ. ಜೊತೆಗೆ 'ಕರುಣಿಸಿಂ'ಗೆ 'ಕರುಣೆಯನ್ನು ಸುರಿಸಿ' ಎಂದು ಹಿಂದಿಯಲ್ಲಿ ಅನುವಾದಿಸಲಾಗಿದೆ. 'ನಿಮ್ಮ ಹರಕೆಯ ಬಲದ ಶಿಷ್ಯನಂ' ಎಂಬ ಸಾಲು ಕೂಡ 'ಯಾರಿಗೆ ಆಶೀರ್ವಾದ ಬಲವಾಗಿದೆಯೋ' ಎಂದು ರೂಪಾಂತರಗೊಂಡು ಮೂಲದ ಅರ್ಥದಿಂದಲೇ ಜಾರಿಕೊಂಡಿದೆ. 'ಓ ಪ್ರಿಯ ಗುರುವೆ' ಶಬ್ದದಲ್ಲಿನ ಭಕ್ತಿ, ಆತ್ಮೀಯತೆ ಕೂಡ 'ಓ ಗುರು' ಶಬ್ದದಲ್ಲಿ ಮೂಡಿ ಬಂದಿಲ್ಲ.

ಮೂಲ : "ಬೈಗಾಯ್ತು, 'ಮತ್ತೆ ನಾಳೆ
ಬರುವೆ. ದಿನವೆಲ್ಲಮುಂ ಕೇಳ್ವೆನೋದುವೆಯಂತೆ;
ರಾಮಾಯಣಂ ಅದು ವಿರಾಮಾಯಣಂ ಕಣಾ!"'

ಅನುವಾದ : "ದೇರ್ ಹೋಗಯೀ ಬಹುತ್"
"ಮೈ, ಫಿರ್ ಆಊಂಗಾ, ದಿನಭರ್ ಸುನಾವೋ
ರಾಮಾಯಣ್ ಹೈ ಸಚ್ ವಿರಾಮಾಯಣ್ ಹೀ"

ಕನ್ನಡದ 'ಬೈಗಾಯ್ತು' ಹಿಂದಿಯಲ್ಲಿ 'ದೇರ್' ಅಂದರೆ 'ಹೊತ್ತಾಯಿತು' 'ಬಂದು ಬಹಳ ಸಮಯವಾಯಿತು' ಎಂದು ಅನುವಾದಗೊಂಡಿದ್ದು ಮೂಲದಲ್ಲಿ 'ಬೈಗು' ಶಬ್ದ ಧ್ವನಿಸುವ ಅರ್ಥ ಹಿಂದಿಯಲ್ಲಿ ಎಳ್ಳಷ್ಟು ಈ 'ದೇರ್' ಶಬ್ದ ಧ್ವನಿಸುವುದಿಲ್ಲ. ಬದಲಾಗಿ ಯಾವುದೋ ಕೆಲಸಕ್ಕೆ ಹೊರಟಿದ್ದ ವೆಂಕಣ್ಣಯ್ಯನವರು ಆಕಸ್ಮಿಕವಾಗಿ ಕುವೆಂಪುರವರಲ್ಲಿಗೆ ಬಂದು ಕುಳಿತು, ಸಮಯವಾಗುವವರೆಗೆ ಅವರ ಕವಿತೆಗಳನ್ನು ಕೇಳಿ ಕೊನೆಗೆ ಸಾಕಾಗಿ "ಹೊತ್ತಾಯಿತು, ನಾಳೆ ಬರುತ್ತೇನೆ" ಎಂದು ಹೇಳಿ ಹೊರಟರೇನೋ ಎಂಬ ಅರ್ಥ ಈ ಅನುವಾದದಿಂದ ಬರುತ್ತದೆ. ಇಲ್ಲಿ ಅನಾವಶ್ಯಕವಾಗಿ ನುಸುಳಿ ಬಂದಿರುವ 'ಬಹುತ್' (ಬಹಳ) ಶಬ್ದವೂ ಅನಾವಶ್ಯಕ. ಜೊತೆಗೆ ವೆಂಕಣ್ಣಯ್ಯನವರ ಮಾತುಗಳಲ್ಲಿನ ಆತ್ಮೀಯತೆಯ ಒಂದಂಶವೂ ಇಲ್ಲಿ ಸಾಕಾರವಾಗಿಲ್ಲ. 'ರಾಮಾಯಣಂ ಅದು ವಿರಾಮಾಯಣಂ ಕಣಾ' ಎಂಬ ಮಾತುಗಳಲ್ಲಿರುವ ರಾಮಾಯಣದ ಬೃಹತ್ತು ಹಾಗೂ ಮಹತ್ತುಗಳೆರಡು 'ರಾಮಾಯಣ್ ಹೈ ಸಚ್ ವಿರಾಮಾಯಣ್ ಹೀ'ನಲ್ಲಿ ಬಂದಿಲ್ಲ. ಇಲ್ಲಿನ 'ಸಚ್' (ನಿಜ) ಶಬ್ದ ಮೂಲದ 'ಅದು' ವಿನಲ್ಲಿರುವ ಒತ್ತನ್ನು ಸ್ವಲ್ಪವೂ ಪ್ರತಿಬಿಂಬಿಸದೆ ಸಪ್ಪೆಯಾಗಿದೆ. 'ಸಚ್' ಬದಲು 'ಸಚ್‌ಮುಚ್' ಶಬ್ದ ಇಲ್ಲಿ ಹೆಚ್ಚು ಉಪಯುಕ್ತವಾಗುತ್ತಿತ್ತೇನೋ. ಮೂಲದಲ್ಲಿರುವ ಆಶ್ಚರ್ಯಭಾವವೂ ಅನುವಾದದಲ್ಲಿ ಇಲ್ಲವಾಗಿದ್ದು, ಇಲ್ಲಿ ಸಾಮಾನ್ಯ ಹೇಳಿಕೆಯ ಮಟ್ಟದಲ್ಲಿ ಈ ಭಾವ ಅನುವಾದವಾಗಿದೆ.

ಮೂಲ : "ಇದೋ ಬಂದಿರುವೆನಿಂದು
ಮುಗಿಸಿ ತಂದಿಹೆನಾ ಮಹಾಗಾನಮಂ. ಪಿಂತೆ
ವಾಲ್ಮೀಕಿಯುಲಿದ ಕಥೆಯಾದೊಡಂ, ಕನ್ನಡದಿ
ಬೇರೆ ಕಥೆಯೆಂಬಂತೆ, ಬೇರೆ ಮೈಯಾಂತಂತೆ,
ಮರುವುಟ್ಟುವಡೆದಂತೆ ಮೂಡಿದೀ ಕಾವ್ಯಮಂ
ವಿಶ್ವವಾಣಿಗೆ ಮುಡಿಯ ಮಣಿಮಾಡಿಹೆನ್, ನಿಮ್ಮ
ಕೃಪೆಯಿಂದೆ.

ಮೂಲದ 'ಮುಗಿಸಿ'ಗೆ 'ಸಾಥ್ ಮೇ' (ಜತೆಯಲ್ಲಿ) ಎಂದೂ 'ಮಹಾಗಾನಮಂ'ಗೆ 'ಮಹಾಗಾನ್ ಕೀ ರಚನಾ' (ಮಹಾಗಾನದ ರಚನೆ) ಎಂದೂ ಆರಂಭದಲ್ಲೇ ತಪ್ಪಾಗಿ ಅನುವಾದಗೊಂಡಿರುವ ಇದರ ಮುಂದಿನ ಸಾಲುಗಳ ಅನುವಾದ ದಿಗ್ಭ್ರಮೆಯನ್ನುಂಟು ಮಾಡುತ್ತದೆ. ಅನುವಾದ ಹೀಗಿದೆ :

'ಲೀಜಿಏ, ಆಯಾ ಹೂಂ ಆಜ್,
ಸಾಥ್ ಲೇಕರ್ ಮಹಾಗಾನ್ ಕೀ ರಚನಾ

ಸಚ್, ವಾಲ್ಮೀಕಿ ನೇ ಗಾಯೀ ಯಹ್ ಕಥಾ
ಕಿಂತು ಲಗತೀ ಕನ್ನಡ್ ಮೇ ಅಲಗ್ ಹೀ
ಲಗತಾ, ಕಥಾ ನೇ ನಯಾ ರೂಪ್ ಧಾರಣ್ ಕಿಯಾ ;
ನಯಾ ಜನ್ಮ್ ಹೀ ಲೇ ಲಿಯಾ
ವಿಶ್ವವಾಣೀ ಕಾ ಶಿರೋರತ್ನ್ ಬನೀ ಹೈ
ಆಪ್ ಕೀ ಕೃಪಾ ಸೇ"

ಈ ಸಾಲುಗಳ ಮೊದಲ ಎರಡು ಪಂಕ್ತಿಗಳನ್ನು ಉಳಿದ ಸಾಲುಗಳ ಬಿಟ್ಟು ಕನ್ನಡ ಅನುವಾದ ಹೀಗೆ ಆಗುತ್ತದೆ:

"ನಿಜ, ವಾಲ್ಮೀಕಿ ಈ ಕಥೆಯನ್ನು ಹಾಡಿದ್ದಾನೆ.
ಆದರೆ ಕನ್ನಡದಲ್ಲಿ ಬೇರೆ ರೀತಿಯದೇ ಆಗಿದೆ.
ಕಥೆ ಹೊಸ ರೂಪವನ್ನು ಪಡೆದಿದೆ.
ಹೊಸ ಜನ್ಮವನ್ನೇ ಪಡೆದುಕೊಂಡಿದೆ
ವಿಶ್ವವಾಣಿಗೆ ಶಿರೋರತ್ನವಾಗಿದೆ,
ತಮ್ಮ ಕೃಪೆಯಿಂದ.

ಮೂಲ ಸಾಲುಗಳೊಡನೆ ಈ ಸಾಲುಗಳನ್ನು ಹೋಲಿಸಿದರೆ ಮೇಲುನೋಟಕ್ಕೆ ಆಗಿರುವ ಅನರ್ಥದ ಪರಿಚಯವಾಗುತ್ತದೆ. ಮೂಲದ 'ಕಥೆಯಾಮೊಡಂ'—'ಹಾಡಿದ್ದಾನೆ' ಎಂದು, 'ಕಥೆ ಎಂಬಂತೆ'—'ಬೇರೆ ರೀತಿಯದೇ ಆಗಿದೆ' ಎಂದು, 'ಮೈಯಾಂತಂತೆ'—'ರೂಪವನ್ನು ಪಡೆದಿದೆ' ಎಂದು, 'ಮರುಹುಟ್ಟು ಪಡೆದಂತೆ'—'ಹೊಸ ಜನ್ಮವನ್ನು ಪಡೆದುಕೊಂಡಿದೆ' ಎಂದು ಅನುವಾದವಾಗಿವೆ. ಹೀಗಾಗಿ ಇಲ್ಲಿಯ ಅನುವಾದ ಮೂಲದಲ್ಲಿ ಶಬ್ದಗಳ ಅಂತ್ಯದಲ್ಲಿ ಬರುವ 'ಅಂತೆ'ಯ ಒಂದಂಶವನ್ನು ಅಭಿವ್ಯಕ್ತಿಸುವುದಿಲ್ಲ. ಹಿಂದಿಯ 'ಮಾನೋ' ಶಬ್ದದ ಪ್ರಯೋಗ ಇಲ್ಲಿ ಅನಿವಾರ್ಯವಾಗಿತ್ತು. ಈ ಎಲ್ಲಕ್ಕೂ ಕಳಸವಿಟ್ಟಂತೆ 'ಕಾವ್ಯಮಂ ವಿಶ್ವವಾಣಿಗೆ ಮುಡಿಯ ಮಣಿ ಮಾಡಿಹೆನ್' ಎಂದು ಕುವೆಂಪು ಬರೆದರೆ 'ವಿಶ್ವವಾಣಿಗೆ ಶಿರೋರತ್ನವಾಗಿದೆ' ಎಂದು ಅನುವಾದಿಸಿದ್ದಾರೆ. ಈ ಪಂಕ್ತಿಗಳ ಮಧ್ಯೆ ಬರುವ 'ಕಿಂತು ಲಗತೀ ಕನ್ನಡ್ ಮೇ ಅಲಗ್ ಹೀ ಲಗತಾ' ಎಂದರೆ ಏನು? ಇದೆಂಥ ವಾಕ್ಯ? ಯಾವ ಅರ್ಥವನ್ನು ಸೂಚಿಸುತ್ತದೆ?

ಮೂಲ : "ಪೂರ್ವದ ಮಹಾಕವಿಗಳೆಲ್ಲರುಂ
ನೆರೆದ ಸಗ್ಗದ ಸಭೆಗೆ ಪರಿಚಯಿಸಿರೆನ್ನನುಂ
ಸಂಘಕೆ ಮಹಾಧ್ಯಕ್ಷರಲ್ತೆ ನೀಂ?"

ಅನುವಾದ : "ಪ್ರಾಚೀನ್ ಮಹಾಕವಿಯೋಂ ಸೇ
ಸ್ವರ್ಗ್ ಕೀ ಸಭಾ ಮೇ ಪರಿಚಯ್ ಕರಾಯಿಯೇ
ಸಂಘ್ ಕೇ ಹೈ ಅಧ್ಯಕ್ಷ್ ಆಪ್."

ಕನ್ನಡದಲ್ಲಿ 'ಪೂರ್ವದ ಮಹಾಕವಿಗಳೆಲ್ಲರೂ ನೆರೆದ ಸ್ವರ್ಗದ ಸಭೆಗೆ ನನ್ನನ್ನು ಪರಿಚಯಿಸಿರಿ' ಎಂದು ಇದ್ದರೆ ಅನುವಾದದಲ್ಲಿ ಇದಕ್ಕೆ ತದ್ವಿರುದ್ಧವಾಗಿ 'ಸ್ವರ್ಗದ ಸಭೆಯಲ್ಲಿ ಪ್ರಾಚೀನ ಮಹಾಕವಿಗಳಿಗೆ ನನ್ನನ್ನು ಪರಿಚಯಿಸಿ' ಎಂದು ತದ್ವಿರುದ್ಧವಾಗಿ ಅನುವಾದಿಸಿದ್ದಾರೆ.

ಮೂಲ : "ನುಡಿಯುತಿಹುದಾ ದಿವ್ಯ ಕವಿಸಭೆಗೆ ಗುರುವಾಣಿ, ಕೇಳ್
ಆಲಿಸಾ ಗುರುಕೃಪೆಯ ಶಿಷ್ಯಕೃತಿ ಸಂಕೀರ್ತಿಯಂ"

ಅನುವಾದ : "ದಿವ್ಯ ಕವಿ ಸಭಾ ಮೇ ಉದ್ಘೋಷಿತ್ ವಾಣಿ ಸುನೋ
ಗುರುಕೃಪಾ ಕಿತನೀ ಶಿಷ್ಯಕೃತಿ ಕೀರ್ತನ್ ಮೇ

ಇಲ್ಲಿ, ಮೂಲದ 'ಗುರುವಾಣಿ' ಹಿಂದಿಯಲ್ಲಿ ಕೇವಲ 'ವಾಣಿ'ಯಾಗಿದ್ದು 'ಗುರು' ಬಿಟ್ಟು ಹೋಗಿರುವುದರಿಂದ ಇದು ಅಶರೀರವಾಣಿ ಏನೋ ಎಂಬ ಸಂದೇಹಕ್ಕೆ ಎಡೆಮಾಡಿ ಕೊಟ್ಟರೆ 'ಕಿತನೀ' ಎಂಬ ಶಬ್ದ ಅನಾವಶ್ಯಕವಾಗಿ ನುಗ್ಗಿಬಂದಿದೆ. ಕುವೆಂಪುರವರು ಈ ಸಾಲುಗಳಲ್ಲಿ ಗುರುವಿನ ಅಪಾರ ಕರುಣೆಯ ಬಗೆಗೆ ಆತ್ಮೀಯ ಭಾವ ತುಳುಕಿದ್ದು ಅದು ಅನುವಾದದಲ್ಲೂ ಬರದೆ, ಶಬ್ದಕ್ಕೆ ಶಬ್ದಗಳನ್ನು ಮಾತ್ರ ಬದಲಾಯಿಸಲಾಗಿದ್ದು ಅದೂ ಕೂಡ ಸಮಂಜಸವಾಗಿಲ್ಲ.

ಮೂಲ : "ಬಹಿರ್ಘಟನೆಯಂ ಪ್ರತಿಕೃತಿಸುವಾ ಲೌಕಿಕ
ಚರಿತ್ರೆಯಲ್ತಿದು, ಅಲೌಕಿಕ ನಿತ್ಯಸತ್ಯಂಗಳಂ
ಪ್ರತಿಮಿಸುವ ಸತ್ಯಸ್ಯ ಸತ್ಯ ಕಥನಂ ಕಣಾ"

ಅನುವಾದ : "ಯಹ್ ನಹೀ ಲೌಕಿಕ್ ರಚನಾ, ಪ್ರತಿಬಿಂಬ
ನಹೀ ಬಾಹ್ಯ ಘಟನಾ ಕಾ, ಹೈ ಪ್ರತಿಬಿಂಬ
ಅಲೌಕಿಕ ನಿತ್ಯ ಸತ್ಯ ಕಾ. ಸುನೋ
ಸತ್ಯಸ್ಯ ಸತ್ಯ ಕಥನ್ ಹೈ ಯಹ್"

ಈ ಅನುವಾದದ ಕನ್ನಡ ಅನುವಾದ ಹೀಗಾಗುತ್ತದೆ.

"ಇದು ಅಲ್ಲ ಲೌಕಿಕ ರಚನೆ.
ಬಾಹ್ಯ ಘಟನೆಯ ಪ್ರತಿಬಿಂಬವಲ್ಲ.
ಅಲೌಕಿಕ ನಿತ್ಯ ಸತ್ಯದ ಪ್ರತಿಬಿಂಬ, ಕೇಳು
ಸತ್ಯಸ್ಯ ಸತ್ಯ ಕಥನವಿದು."

ಇಲ್ಲಿ 'ಬಹಿರ್ಘಟನೆಯಂ ಪ್ರತಿಕೃತಿಸುವಾ ಲೌಕಿಕ ಚರಿತ್ರೆಯಲ್ತಿದು' ಎಂಬ ಸಾಲು ಅನುವಾದದಲ್ಲಿ ಅನಾವಶ್ಯಕವಾಗಿ ಎರಡು ವಾಕ್ಯಗಳಾಗಿ ಒಡೆದು, ಸಡಿಲಬಂಧವಾಗಿರುವುದಷ್ಟೇ ಅಲ್ಲ, ಹಿಂದುಮುಂದಾಗಿ ಬರುವುದರ ಅಗತ್ಯವೂ ಗೊತ್ತಾಗುವುದಿಲ್ಲ. 'ಲೌಕಿಕ ಚರಿತ್ರೆಯಲ್ತು'ವಿನಲ್ಲಿ 'ಚರಿತ್ರೆ' ಶಬ್ದದ ಮೇಲಿರುವ ಒತ್ತು ಸಹ ಅನುವಾದ

ದಲ್ಲಿ ಇಲ್ಲವಾಗಿದ್ದು ಬರೀ 'ರಚನೆ'ಯಾಗಿದೆ. 'ಪ್ರತಿಕೃತಿಸು' ಮತ್ತು 'ಪ್ರತಿಮಿಸು' ಶಬ್ದಗಳು ಇಲ್ಲಿ 'ಪ್ರತಿಬಿಂಬ'ಗಳಾಗಿವೆ. ಈ 'ಪ್ರತಿಬಿಂಬ' ಶಬ್ದ ಮೂಲದ ಶಬ್ದಗಳ ಅರ್ಥ ವೈಶಾಲ್ಯತೆಯನ್ನೂ, ವ್ಯಾಪ್ತಿಯನ್ನೂ ತನ್ನಲ್ಲಿ ಒಳಗೊಳ್ಳದೇ ನೀರಸ್ತವಾಗಿದೆ.

ಮೂಲ : 'ಸೀತೆಯಂ ಪರಿಸುತಾಕೆಯ ನೆಪದಿ ಮೃಚ್ಛಕ್ತಿಯಂ
ಮರ್ದಿಸುತೆ, ಸಂವರ್ಧಿಸಿರ್ಪವೋಲ್ ಚಿಚ್ಛಕ್ತಿಯಂ"

ಅನುವಾದ : "ಸೀತಾ ಕೇ ಸಾಥ್ ವಿವಾಹ್ ಕಿಯಾ–
ಇಸ್ ಬಹಾನೇ ಸೇ ಮೃಚ್ಛಕ್ತಿ ಕಾ ಮಂಥನ್
ಹುವಾ. ಚಿಚ್ಛಕ್ತಿ ಕಾ ಸಂವರ್ಧನ್ ಭೀ"

ಮೃಚ್ಛಕ್ತಿಯ ಮರ್ಧನೆಗೆ ಸೀತೆಯೊಡನೆ ಆದ ವಿವಾಹ ಒಂದು ನೆಪ ಮಾತ್ರ. ಈ ಮೂಲಕ ಮೃಚ್ಛಕ್ತಿಯ ಸಂಹರಣ ಸಂಭವವಾಯ್ತು ಎಂಬ ಅರ್ಥದ ಮೂಲ ವಾಕ್ಯಗಳನ್ನು ಪೂರ್ಣ ಭೂತಕಾಲದಲ್ಲಿ, ಎಲ್ಲವೂ ಆಗಿಹೋಯಿತು ಎಂಬ ಅರ್ಥಬರುವಂತೆ ಅನುವಾದಿಸಲಾಗಿದೆ. ವಿಚಿತ್ರವೆಂದರೆ 'ಮರ್ಧನೆ'ಗೆ ಅನುವಾದಕಿ 'ಮಂಥನ' ಎಂದು ಅರ್ಥಮಾಡಿದ್ದಾರೆ. ಮರ್ಧನೆ ಎಲ್ಲಿ? ಮಂಥನ ಎಲ್ಲಿ?

ಹೀಗೆ ಮೂಲ ವಾಕ್ಯಗಳ ಕಾವ್ಯಾತ್ಮಕತೆ ಅನುವಾದದಲ್ಲಿ ಉಳಿದುಕೊಳ್ಳದೆ ಹೇಳಿಕೆಗಳಂತೆ ಅನುವಾದವಾಗಿದ್ದು 'ರಾಮಾಯಣದರ್ಶನಂ'ದ ಅರ್ಪಣಾ ಭಾಗದ ಈ ಅನುವಾದವೇ ಸಾಕಷ್ಟು ಬೇಸರ ತರಿಸುವಂತಿದೆ.

'ಕವಿಕ್ರತು ದರ್ಶನಂ' ಭಾಗದ ಅನುವಾದದಲ್ಲೂ ಇಂಥ ಹೇರಳವಾದ ದೋಷಗಳಿದ್ದು ಕೆಲವನ್ನು ಗಮನಿಸಬಹುದಾಗಿದೆ:

ಮೂಲ : "ಮುಂಬಿಸಿಲ ಹೊಂಬಣ್ಣಮಂ ಮಿಂದು ಕಳಕಳಿಸಿ
ನಗುತಿದ್ದ ಕಾಂತಾರ ಪಂಕ್ತಿ ವಿಸ್ತಾರದಲಿ
ಚೈತ್ರಋತು ಪಕ್ಷಿಯಿಂಚರವನಾಸ್ವಾದಿಸುತೆ"

ಅನುವಾದ : 'ಬಾಲ್ ಸೂರ್ಯ್ ಕೇ ಸುನಹರೇ ಕಿರಣ ಶೋಭಿತ್
ಕಾಂತಾರ್ ಮೇ
ವಸಂತ್ಋತು ಸೂಚಕ್ ಪಕ್ಷಿ ಕೂಜನ್ ಸುನತೇ ಸುನತೇ"

ಮೂಲದ ಈ ಅನುವಾದ ಎಷ್ಟು ಸಪ್ಪೆಯಾಗಿದೆ ಎಂದರೆ ಮೂಲವನ್ನು ಸರಳಗೊಳಿಸುವ ಪ್ರಯತ್ನ ಮಾಡಲಾಗಿದೆ, ಅಂದರೆ ಹಿಂದಿ ಅನುವಾದದ ವಾಕ್ಯಗಳ ಅರ್ಥ 'ಬಾಲ ಸೂರ್ಯನ ಹೊಂಬಣ್ಣದ ಕಿರಣಗಳಿಂದ ಶೋಭಿತವಾದ ಕಾಂತಾರದಲ್ಲಿ, ವಸಂತಋತು ಸೂಚಕ ಕೂಜನವನ್ನು ಕೇಳುತ್ತ ಕೇಳುತ್ತ' ಎಂದಾಗಿ ಮೂಲದಲ್ಲಿರುವ 'ಮಿಂದು ಕಳಕಳಿಸುವ' 'ನಗುವ'ದ ಹೊಳಪಾದರೂ ಅನುವಾದದಲ್ಲಿ ಬಂದಿಲ್ಲ. ಇನ್ನು 'ಆಸ್ವಾದಿಸುತೆ' ಎಂಬ ಶಬ್ದ 'ಕೇಳಕೇಳುತ್ತ' ಆಗಿರುವುದರಿಂದ ಆಸ್ವಾದನೆಯಲ್ಲಿನ ತಲ್ಲೀನತೆ,

ರಸಾಸ್ವಾದನೆ ಅನುವಾದದಲ್ಲಿ ಎಳ್ಳಷ್ಟೂ ಬರದೆ, ಮೂಲಪಂಕ್ತಿಗಳಿಂದ ಅರ್ಥದ ದೃಷ್ಟಿಯಿಂದಲೂ ದೂರ ಸರಿದಿದೆ.

ಮೂಲ : "ಬಿಯದನ ಕೈಗೆ ಸಿಲುಕಿದಿನಿಯಾಣ್ಮನಂ
ಕಂಡು ಚೀರ್ದಾರ್ದುದಯ್ ಚಕ್ರಗತಿಯಿಂ ಪಾರ್‍ದು,
ಗಿರಿವನಾಚಿಚ್ಚೇತನಮೆ ಚೀತ್ಕರಿಸುವಂತೆ"

ಅನುವಾದ : "ವ್ಯಾಧ್ ಕೇ ಹಾಥ್ ಮೇ ಪ್ರಿಯತಮ್ ಕೋ ದೆಖತೇ ಹೀ
ಲತಾ ಗಿರಿಗಹ್ವರ್ ಚೈತನ್ಯ ಸಬ್ ಕಾಂಪ್ ಉಠೇ

ಇದರ ಅನುವಾದ ಹೀಗಾಗುತ್ತದೆ: ವ್ಯಾಧನ ಕೈಲಿ ಪ್ರಿಯತಮನನ್ನು ನೋಡುತ್ತಿದ್ದಂತೆಯೇ ಗಿರಿಗಹ್ವರ ಎಲ್ಲ ಕಂಪಿಸಿದಂತೆ ಭಾಸವಾಯಿತು. ಮೂಲದಲ್ಲಿ ತನ್ನ ಪ್ರಿಯತಮ ಬೇಡನ ಕೈಗೆ ಸಿಕ್ಕಿದುದನ್ನು ಕಂಡ ಕ್ರೌಂಚಿಣಿಯ ಮನಸ್ಸಿನ ಭಯಂಕರ ಹೋರಾಟ, ತುಮುಲ, ಅದರ ಚೀರಾಟ, ಚಕ್ರದೋಪಾದಿಯಲ್ಲಿ ಗಿರ್‍ರನೆ ಸುತ್ತಿದ ರೀತಿ ಹಾಗೂ ಅದು 'ಗಿರಿವನ ಚಿತ್ ಚೇತನಗಳೆಲ್ಲ ಒಮ್ಮೆಗೆ ಚೀತ್ಕರಿಸಿದಂತೆ ಚೀತ್ಕಾರ ಮಾಡಿತು' ಎಂಬ ಭಾವವಿದ್ದರೆ ಹಿಂದಿಯಲ್ಲಿ ಗಿರಿಗಹ್ವರ ಚೈತನ್ಯಗಳೆಲ್ಲ ಕಂಪಿಸಿದಂತೆ ಆಯಿತು ಎಂದು ಭಾಷಾಂತರವಾಗಿದ್ದು, ಮೂಲದಲ್ಲಿನ 'ಚೀತ್ಕರಿಸು' ಅನುವಾದದಲ್ಲಿ 'ಕಂಪಿಸು' ಎಂದಾಗಿದೆ. ಮೂಲದ ಭೀಕರತೆ ಇಲ್ಲಿ ಇಲ್ಲವಾಗಿದೆ. ಈ ಸಾಲುಗಳಲ್ಲಿನ ಬಹಳ ಮುಖ್ಯ ಶಬ್ದವಾದ 'ಚಕ್ರಗತಿಯಿಂ'ನ ಅನುವಾದವೂ ಇಲ್ಲಿ ಮೂಡಿಬಂದಿಲ್ಲ.

ಮೂಲ : "ವೇದನೆಯ ಕರ್ಮುಗಿಲ್ ತೀವಿಬರೆ ಹೃದಯದೊಳ್
ಮರುಗಿದನು ಋಷಿ

ಅನುವಾದ : ಜುಟೇ ಥೇ ವೇದನಾ ಕೇ ಕಾಲೇ ಬಾದಲ್
ಹೃದಯ್ ಮೇ, ದುಃಖ್‌ತಪ್ತ ಬನಾ ಋಷಿ"

'ತೀವಿ ಬರೆ' ಎಂಬ ಕನ್ನಡ ಶಬ್ದದ ಅನುವಾದ ಹಿಂದಿಯಲ್ಲಿ 'ಒಟ್ಟಾಗಿದ್ದುವು' ಎಂದಾಗಿದೆ. 'ತೀವಿ ಬರೆ'ಯಲ್ಲಿರುವ ಒತ್ತಡ, ಉಮ್ಮಳಿಸಿಬರುವ ರೀತಿ 'ಜುಟೇ ಥೇ' ಎಂಬ ಶಬ್ದಗಳಲ್ಲಿ ಯಾವ ರೀತಿಯಲ್ಲಿ ಮೂಡಿಬಂದಿದೆ? 'ಮರುಗಿದನು' ಶಬ್ದ 'ದುಃಖ ತಪ್ತ' ಆಗಿದೆ 'ಮರುಗು'ವಿನಲ್ಲಿ ಇಡೀ ಘಟನೆಯ ಬಗೆಗೆ ಕವಿಯ ಮನಸ್ಸಿನಲ್ಲಿ ವಿಷಾದದ ಛಾಯೆ ಇದ್ದು, ಕರುಣೆ ಹೊರಹೊಮ್ಮುತ್ತಿದ್ದರೆ ಅನುವಾದದ 'ದುಃಖ'ದಲ್ಲಿ ಈ ಯಾವೊಂದು ಧ್ವನಿಯೂ ಹೊಮ್ಮದಂತಾಗಿದೆ.

ಮೂಲ : "'ಮಾಣ್, ನಿಷಾದನೆ, ಮಾಣ್! ಕೊಲೆ ಸಾಲ್ಗುಮಯ್ಯೋ ಮಾಣ್!
ನಲಿಯುತಿರೆ ಬಾನ್ ಬನದ ತೊರೆ ಮಲೆಯ ಭುವನಕವನಂ
ಸುಖದ ಸಂಗೀತಕೆ ವಿಷಾದಮಂ ಶ್ರುತಿಯೊಡ್ಡಿ
ಕೆಡಿಸುವೆಯ್"

ಅನುವಾದ : "ನಹೀಂ, ನಿಷಾದ, ಮತ್ ಮಾರೊ,
ಗಿರಿಧರಾ–ಕಾನನ್–ನದಿಯೋಂ ಕೇ ನಿಸ್ವನ್‌ರೂಪೀ
ಸಂಗೀತ್ ಮೇ ಕ್ಯೋಂ ಮಿಲಾತೇ ಹೋ ವಿಷಾದಶ್ರುತಿ ?

ಮೂಲದ ಮೊದಲ ಸಾಲಿನ ಅನುವಾದದಲ್ಲಿ ಬರುವ 'ನಹೀ ನಿಷಾದ್ ಮತ್ ಮಾರೋ' ಎಂಬಲ್ಲಿ 'ನಹೀಂ' ಶಬ್ದದ ಪ್ರಯೋಗವೇ ಅಸಾಧು. ಹಿಂದಿಯಲ್ಲಿ ನಿಷೇಧಾರ್ಥಕದಲ್ಲಿ ಪ್ರಯುಕ್ತವಾಗುವ ಬೇರೆ ಶಬ್ದಗಳನ್ನು ಇಲ್ಲಿ ಅಲಂಕರಿಸಬಹುದಿತ್ತು. ಕನ್ನಡದಲ್ಲಿ 'ಮಾಣ್' ಶಬ್ದ ಮೂರುಸಾರಿ ಹಂತ ಹಂತವಾಗಿ ಪ್ರಯೋಗಗೊಂಡಿದ್ದು ಕೊನೆಗೆ ತನ್ನೆಲ್ಲ ಕರುಣೆಯೊಂದಿಗೆ 'ಮಾಣ್' ಬಂದಿದೆ. ಆದರೆ ಹಿಂದಿಯಲ್ಲಿ ಈ ಒತ್ತು ಇಲ್ಲದಾಗಿರುವುದರಿಂದ ಋಷಿಯ ಮನಸ್ಸಿನ ವಿಷಾದ ಕರುಣೆಯಾಗಿ ಉಕ್ಕುವುದಿಲ್ಲ. ಮೂಲದ ಮುಂದಿನ ಮೂರು ಸಾಲುಗಳ ಅನುವಾದದ ಕತೆಯೂ ಇದೇ ಆಗಿದೆ. 'ನಲಿಯುತಿರೆ' 'ಭುವನ ಕವನಂ', 'ಸುಖದ ಸಂಗೀತಕೆ' 'ಕೆಡಿಸುವೆಯಾ'—ಈ ಮುಖ್ಯ ಶಬ್ದಗಳನ್ನಾಗಲಿ ಅಥವಾ ಇವುಗಳ ಭಾವವನ್ನಾಗಲಿ ಅನುವಾದದಲ್ಲಿ ಮೂರ್ತಗೊಳಿಸದೆ 'ಗಿರಿಧರಾ ಕಾನನ ನದಿಗಳ ನಿಸ್ವನರೂಪಿ ಸಂಗೀತವಲ್ಲಿ ವಿಷಾದದ ಶ್ರುತಿಯನ್ನೇಕೆ ಸೇರಿಸುವೆ' ಎಂದಾಗಿದೆ.

ಅನುವಾದಕರು ವ್ಯಾಖ್ಯಾನಕಾರರೂ ಆಗಿದ್ದಾರೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು—

ಮೂಲ : "ಬಾಳು, ವೀಣಾಪಾಣಿ : ಬಾಳು. ಬ್ರಹ್ಮನ ರಾಣಿ
ಗಾನಗೆಯ್, ಹೇಳು, ಓ ಭಾವ ಗಂಗಾವೇಣಿ"

ಅನುವಾದ : ಜುಗ್ ಜುಗ್ ಜೀಓ ವೀಣಾಪಾಣಿ ಸರಸ್ವತಿ
ಗಾಓ ಬ್ರಹ್ಮ ಕೀ ರಾಣಿ ಭಾವಗಂಗಾವೇಣಿ"

ಇಲ್ಲಿ 'ವೀಣಾಪಾಣಿ'ಯನ್ನು 'ವೀಣಾಪಾಣಿ ಸರಸ್ವತಿ' ಎಂದು ವಿಸ್ತಾರ ಮಾಡಿರುವುದಷ್ಟೇ ಅಲ್ಲದೆ 'ಬಾಳು ಬ್ರಹ್ಮನ ರಾಣಿ'ಯನ್ನು ಸ್ಥಳಾಂತರಿಸಿ 'ಗಾನಗೆಯ್ಯ್ ಬ್ರಹ್ಮನ ರಾಣಿ, ಭಾವ ಗಂಗಾವೇಣಿ' ಎಂದು ವಿರೂಪಗೊಳಿಸಿದ್ದಾರೆ.

ಮೂಲ : "ರಾಮಾಂಘ್ರಿ
ಸೋಂಕಿದೊಡನೆಯೇ ಕಲ್ಲು ಕಡು ಚೆಲ್ವುವೆಣ್ಣಾಗಿ
ಸಂಭವಿಸಿದೋಲ್, ಪಂಕದಿಂ ಕಲಾಪಂಕಜಂ
ಕಂಗೊಳಿಪುದಯ್"

ಅನುವಾದ : "ರಾಮ ಚರಣ್ ಸ್ಪರ್ಶ್ ಸೇ ಜೈಸೀ ಶಿಲಾರಮಣಿ
ಪಂಕ್ ಸೇ ಭೀ ನಿಕಲತಾ ಜೈಸೇ ಮೋಹಕ್ ಪಂಕಜ್"

ಮೂಲದ ತುಂಬಾ ಕೆಟ್ಟದಾದ, ಅಸಂಬದ್ಧವಾದ ಅನುವಾದ ಇದು. ಹಿಂದೀ ಸಾಲುಗಳನ್ನೇ ಅರ್ಥಮಾಡಿಕೊಳ್ಳಲು ಸಾಧ್ಯವಾಗದಂತಿರುವ, ಪದ್ಯಮಯವೆಂದು ಕರೆಸಿಕೊಳ್ಳುವ ಈ ಅನುವಾದ ಮೂಲವನ್ನೇ ಅರ್ಥಮಾಡಿಕೊಳ್ಳದೇ ಅದರಿಂದ ಸಂಪೂರ್ಣವಾಗಿ ಅಸಂಪೃಕ್ತವಾಗಿದೆ. ಹೀಗಾಗಿ ಇದರ ವ್ಯಾಖ್ಯೆ ಅನಗತ್ಯ.

ಕುವೆಂಪುರವರು ಕಾಲ, ದೇಶ, ನುಡಿ ಇತ್ಯಾದಿಗಳ ಎಲ್ಲ ಸೀಮೆಗಳನ್ನು ದಾಟಿ ವಿಶ್ವದ ಎಲ್ಲ ಚೇತನಗಳಿಗೆ ನಮಸ್ಕರಿಸುವ, ಅವರನ್ನು ನೆನೆಯುವ ಪಂಕ್ತಿಗಳಲ್ಲಿನ ಒಂದು ಸಾಲು ಹೀಗಿದೆ: "ಕಾಲ ದೇಶದ ನುಡಿಯ ಜಾತಿಯ ವಿಭೇದವಂ ಲೆಕ್ಕಿಸದೆ"

ಅನುವಾದ: "ಕಾಲ್ ದೇಶ್ ವಾಕ್-ಜಾತಿ ಭೇದ್ ಸಬ್ ಹಟಾ ದಿಯೇ"
ಅಂದರೆ ಇದರ 'ಅರ್ಥ ಕಾಲ, ದೇಶ, ವಾಕ್. ಜಾತಿ ಬೇಧ ಎಲ್ಲವನ್ನು ಇಲ್ಲವಾಗಿಸಿದೆ' ಎಂದಾಗುತ್ತದೆ. ಎಂಥವರಿಗೂ ಈ ಅನುವಾದದಲ್ಲಿರುವ ಆಭಾಸ ಅರ್ಥವಾಗುತ್ತದೆ.

ಹೀಗೆ 'ಶ್ರೀರಾಮಾಯಣದರ್ಶನ'ದ ಒಂದು ಅಧ್ಯಾಯದಲ್ಲಿನ ಈ ಅನುವಾದದಲ್ಲಿ ಪಟ್ಟಿಮಾಡಲಾಗದಷ್ಟು—ಬರೆದರೆ ಒಂದು ಪುಸ್ತಕವನ್ನೇ ಬರೆಯುವಷ್ಟು—ದೋಷಗಳಿದ್ದು ಈವರೆಗೆ ಇಲ್ಲಿನ ಕೆಲವು ದೋಷಗಳನ್ನು ಮಾತ್ರ ಉದಾಹರಿಸಿದ್ದೇನೆ. ಈ ದೋಷಗಳ ಜೊತೆಗೆ ವ್ಯಾಕರಣದ ದೃಷ್ಟಿಯಿಂದಲೂ ಸಹ ಇಲ್ಲಿ ತಪ್ಪುಗಳಿಲ್ಲದೆ ಇಲ್ಲ. 'ನೇ' ಪ್ರತ್ಯಯಗಳೇ ಬಿಟ್ಟುಹೋಗಿವೆ. ಎಲ್ಲಕ್ಕಿಂತ ಮುಖ್ಯವಾಗಿ 'ರಾಮಾಯಣದರ್ಶನಂ'ನಲ್ಲಿ ವಿರಾಮ ಚಿಹ್ನೆ, ಅರ್ಧವಿರಾಮ ಚಿಹ್ನೆ, ಆಶ್ಚರ್ಯಸೂಚಕ ಚಿಹ್ನೆ ಮುಂತಾದುವುಗಳತ್ತ ಕುವೆಂಪುರವರು ಪೂರ್ಣ ಗಮನಕೊಟ್ಟಿದ್ದು ಅನುವಾದಕರಾದ ಡಾ. ಮಹಿಷಿಯವರು ಈ ಚಿಹ್ನೆಗಳ ಬಳಕೆಯಲ್ಲೂ ಕೊಸರಾಡಿರುವುದರಿಂದ ವಾಕ್ಯಗಳ ಅರ್ಥಾನ್ವಯವೆ ಸಾಮಾನ್ಯ ಓದುಗನಿಗೆ ಕಷ್ಟಕರವಾಗುತ್ತದೆ ಎಂದೆನ್ನಿಸುತ್ತದೆ. ಈ ಎಲ್ಲ ಕಾರಣಗಳಿಂದಾಗಿ ಹಿಂದಿಯ ಈ ಅನುವಾದವನ್ನು ಓದುವುದೂ ಒಂದು ಕಷ್ಟಸಾಧ್ಯ ಕೆಲಸವೇ ಎಂದು ಹೇಳಿದರೆ ತಪ್ಪಾಗಲಾರದೇನೋ.

ಡಾ. ಸರೋಜಿನಿ ಮಹಿಷಿಯವರು ಡಾ. ಡಿ. ವಿ. ಗುಂಡಪ್ಪನವರ ಪ್ರಸಿದ್ಧ ಕಾವ್ಯವಾದ 'ಮಂಕುತಿಮ್ಮನ ಕಗ್ಗ'ದ ಹಿಂದಿ ಅನುವಾದವನ್ನೂ ಸಹ ಪ್ರಕಟಿಸಿದ್ದು, ಇದು ಕೂಡ 'ರಾಮಾಯಣದರ್ಶನಂ'ನಂತೆಯೇ ಕಾವ್ಯವಾಗಿರುವುದರಿಂದ ಹಾಗೂ ಇದರ ಅನುವಾದವನ್ನು ಸಹ ಕಾವ್ಯರೂಪದಲ್ಲಿಯೇ ಮಾಡಲು ಅನುವಾದಕಿಯವರು ಪ್ರಯತ್ನಿಸಿರುವುದರಿಂದ ಈ ಅನುವಾದ ಕೂಡ ಮೂಲದ ಎಲ್ಲ ಧ್ವನಿ ಹಾಗೂ ದರ್ಶನ, ಕೆಲವೊಮ್ಮೆ ಅರ್ಥವನ್ನೂ ಸಹ ಸರಿಯಾಗಿ ಮೈಗೂಡಿಸಿಕೊಳ್ಳದೆಹೋಗಿದೆ. ಇಲ್ಲಿನ ಅನುವಾದಗಳು ಹೇಗೆ ಮತ್ತು ಎಲ್ಲಿ ಸೋತು ಸೊರಗಿವೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ನೋಡಬಹುದು.

ಮೂಲ: "ದೇವರೆಂಬುದದೇನು ಕಗ್ಗತ್ತಲೆಯು ಗವಿಯೆ?
ನಾವರಿಯಲಾರದೆಲ್ಲದರೊಟ್ಟು ಹೆಸರೆ?

ಕಾವನೋರ್ವನಿರಲ್ಕೆ ಜಗದ ಕಥೆಯೇಕಿಂತು?
ಸಾವು-ಹುಟ್ಟುಗಳೇನು ?-ಮಂಕುತಿಮ್ಮ"

ತುಂಬ ಸರಳವಾದ ಮಾತುಗಳಲ್ಲಿ ದೇವರ ಇರವಿನ ಬಗೆಗೆ, ಹುಟ್ಟು-ಸಾವುಗಳ ಬಗೆಗೆ ಪ್ರಶ್ನಿಸುವ ಈ ಪದ್ಯದ ಅನುವಾದ ಬೆರಗನ್ನುಂಟುಮಾಡುತ್ತದೆ. ಏಕೆಂದರೆ ಮೂಲವನ್ನೆ ಇಲ್ಲಿ ಅನುವಾದಕರು ಅರ್ಥಮಾಡಿಕೊಂಡಿಲ್ಲ.

ಅನುವಾದ: "ದೇವ್ ಹೈ ಯಾ ಕೋಯಿ ಅಂಧ್ ಗುಫಾ?
ದೇವ್ ಹೈ ಕ್ಯಾ ವಹ್ ಜಿಸೇ ನಾ ಸಮಝ್ ಸಕೇಂ?
ರಕ್ಷಕ್ ಹೋತೇ ಹುಏ ಭೀ ಉಸ್ಕೇ ಕ್ಯೋಂ ಹೈ ಯಹ್ ಜಗ್ ದಶಾ?
ಕ್ಯಾ ಹೈ ಯಹ್ ಜನ್ಮ್-ಮರಣ್ ಕಥಾ-ಮೂಢತಿಮ್ಮ"

ಈ ಪಂಕ್ತಿಗಳ ಅನುವಾದ ಹೀಗಾಗುತ್ತದೆ—

"ದೇವರೋ ಅಥವಾ ಯಾವುದಾದರೂ ಕತ್ತಲೆಗವಿಯೋ?
ಯಾರೂ ಅರ್ಥಮಾಡಲಾಗದಿರುವ ದೇವರು ಇದ್ದಾನೇನು?
ಅವನು ರಕ್ಷಕನಿದ್ದಾಗ್ಯೂ ಸಹ ಈ ಜಗತ್ತಿನ ಸ್ಥಿತಿ ಏಕೆ ಹೀಗಾಗಿದೆ?
ಈ ಜನ್ಮ-ಮರಣದ ಕಥೆ ಏನು?-ಮಂಕುತಿಮ್ಮ"

'ದೇವರೆಂಬುದು ಕಗ್ಗತ್ತಲೆಯ ಗವಿಯೆ?' ಎಂಬ ಮೂಲವಾಕ್ಯ ವಿಕೃತವಾಗಿ ದೇವರನ್ನೇ ಬೇರೆ, ಕಗ್ಗತ್ತಲ ಗವಿಯನ್ನೇ ಬೇರೆಯಾಗಿ ಅರ್ಥಮಾಡಿರುವುದರಿಂದ ಇಲ್ಲಿ ಅನರ್ಥವಾಗಿದೆ. ಇನ್ನು, ನಾವಾರೂ ಅರ್ಥಮಾಡಿಕೊಳ್ಳಲು ಸಾಧ್ಯವಾಗದಿರುವುದನ್ನೇ ನಾವು ದೇವರೆಂದು ಕರೆದಿದ್ದೇವೆ ಎಂಬ ಎರಡನೇ ಸಾಲಿನಲ್ಲಿರುವ ಮನುಷ್ಯನ ಸೀಮಿತ ಶಕ್ತಿ, ಸೀಮಿತ ಗ್ರಹಿಕೆಯ ಬಗ್ಗೆ ಮೂಲದಲ್ಲಿ ಹೇಳಿ ದೇವರ ಅರ್ಥಾತೀತ ವ್ಯಕ್ತಿತ್ವದ ಬಗ್ಗೆ ಹೇಳಿದ್ದರೆ ಅನುವಾದದಲ್ಲಿ ಯಾರಿಂದಲೂ ಅರ್ಥಮಾಡಿಕೊಳ್ಳಲಾಗದಿರುವ ದೇವರು ಇದ್ದಾನೆಯೋ ಎಂದು ಅರ್ಥೈಸಿದ್ದಾರೆ. ಮೂರನೆಯ ಸಾಲಿನಲ್ಲಿ ಒಂದು ಶಕ್ತಿಯ ಬಗೆಗೆ ಇರುವ ಮೂಲ ಕವಿಯ ವಿಶ್ವಾಸ ಹಾಗೂ ಜಗತ್ತಿನ ಈ ದೆಸೆಯ ಬಗೆಗಿರುವ ಅನುಕಂಪ —ಈ ಎರಡು ಮಾಯವಾಗಿ ಅವನಿಗೆ ಬೇರೊಬ್ಬರು ರಕ್ಷಕರಿದ್ದಾರೆ. ಆದರೂ ಏಕೆ ಈ ಜಗತ್ತಿಗೆ ಈ ಗತಿ ಎಂದು ಅನುವಾದಿಸಿದ್ದಾರೆ. ಒಟ್ಟಿನಲ್ಲಿ ಈ ಅನುವಾದದಲ್ಲಿ ಮೂಲವನ್ನು ಗ್ರಹಿಸುವ ಪ್ರಯತ್ನವೇ ನಡೆದಿಲ್ಲ. ಮೂಲವನ್ನು ಅರ್ಥಮಾಡಿಕೊಳ್ಳದೇ ಮಾಡಿದ ಅನುವಾದದಿಂದ ಎಂಥೆಂಥ ಅನಾಹುತಗಳಾಗುತ್ತವೆ ಎಂಬುದಕ್ಕೆ ಇನ್ನೂ ಕೆಲವು ಉದಾಹರಣೆಗಳನ್ನು ನೋಡಬಹುದು.

ಮೂಲ: "ಒಗಟೆಯೇನೀ ಸೃಷ್ಟಿ? ಬಾಳಿಗರ್ಥವದೇನು?
ಬಗೆಯ ಬಿಡಿಸುವರಾರು ಸೋಜಿಗವನಿದನು?"

ಅನುವಾದ: "ಸೃಷ್ಟಿ ಏಕ್ ಸಮಝ್ ಜೀವನ್ ಹೈ ದೂಸರಿ
ಹೈ ಸಮಾಧಾನ್ ಇಸ್‌ಪರ್ ಕಿಸೀಕೇ ಪಾಸ್?"

'ಒಗಟು', 'ಒಗಟನ್ನು ಬಿಡಿಸುವುದು' ಶಬ್ದಗಳಿಗೆ ಹಿಂದೀ ಸಮಾನಾಂತರ ಶಬ್ದಗಳೇ ಭಾಷಾಂತರಕಾರರಿಗೆ ಗೊತ್ತಿಲ್ಲವೆಂದು ಕಾಣಿಸುತ್ತದೆ. 'ಒಗಟೆಯೇನೀ ಸೃಷ್ಟಿ ?' ಎನ್ನುವಾಗ ಸೃಷ್ಟಿಯಲ್ಲಡಗಿರುವ ನೂರು ಗಂಟುಗಳತ್ತ, ಅರ್ಥಮಾಡಿಕೊಳ್ಳಲಾಗದಷ್ಟಿರುವ ಅನೂಹ್ಯವಾದ ಸಮಸ್ಯೆಗಳತ್ತ ದೃಷ್ಟಿಯಿದೆ, 'ಒಗಟು' ಶಬ್ದಕ್ಕೆ ಹಿಂದಿಯಲ್ಲಿ 'ಪಹೇಲಿ' ಎಂಬ ಶಬ್ದವಿದ್ದರೂ ಅದನ್ನು ಬಳಸದೆ, 'ಸೃಷ್ಟಿ ಏಕ್ ಸಮಸ್ಯಾ' ಎಂದು ಅನುವಾದಿಸಿದ್ದು, ಹಾಗೆಂದರೇನು? ಎಂದು ತಲೆಕೆಡಿಸಿಕೊಳ್ಳಬೇಕಾಗುತ್ತದೆ. 'ಬಾಳಿಗರ್ಥವದೇನು?'ವಿನ ಅನುವಾದ 'ಜೀವನ್ ಹೈ ದೂಸರೀ' (ಬಾಳೇ ಬೇರೆ) ಎಂದು ಅನುವಾದಿಸಿ ಮೂಲವನ್ನು ವಿಕೃತಗೊಳಿಸಿದ್ದಾರೆ. ಮೂಲವಾಕ್ಯ ಮನುಕುಲದ ಕುತೂಹಲವನ್ನೇ ತನ್ನಲ್ಲಿ ಅಡಗಿಸಿಕೊಂಡು ಪ್ರಶ್ನಾರ್ಥಕವಾಗಿದ್ದರೆ ಅನುವಾದದಲ್ಲಿ ಪ್ರಶ್ನಾರ್ಥಕ ಭಾವವನ್ನೇ ಕಳೆದುಕೊಂಡು ಸಾಧಾರಣ ಹೇಳಿಕೆಯಾಗಿದೆ. ವ್ಯಾಕರಣದ ದೃಷ್ಟಿಯಿಂದಲೂ ಸಹ 'ಜೀವನ್' ಶಬ್ದ ಪುಲ್ಲಿಂಗವಾದ್ದರಿಂದ ಮುಂದೆ ಬಂದಿರುವ ಶಬ್ದ 'ದೂಸರಾ' ಆಗಬೇಕಿತ್ತು, 'ದೂಸರೀ' ಅಲ್ಲ. ಮೊದಲ ಸಾಲಿನಲ್ಲಿ ಬಂದಿರುವ ಒಗಟಿಗೆ ಉತ್ತರವನ್ನು ಹುಡುಕುವ ಪ್ರಯತ್ನವಾಗಿ 'ಬಗೆಯ ಬಿಡಿಸುವರಾರು ಸೋಜಿಗವನಿದನು' ಎಂದು ಬಂದಿರುವ ವಾಕ್ಯದ ಅನುವಾದವೂ ಸಹ ಮೂಲದಿಂದ ದೂರಾಗಿದೆ. 'ಬಿಡಿಸುವುದಕ್ಕೆ' 'ಸಮಾಧಾನ್' ಸಾರ್ಥಕ ಶಬ್ದವಲ್ಲ. ಇಲ್ಲಿ 'ಯಾರ ಬಳಿಯಾದರೂ ಉತ್ತರವಿದೆಯೇ ?' ಎಂಬ ಅರ್ಥ ಬರುತ್ತದೆ. 'ಸೋಜಿಗವನಿದನು'ವಿನ ಅರ್ಥವೆ ಇಲ್ಲದೇ, ಭಾವವೂ ಇಲ್ಲದೆ ಮೂಲ ಪಂಕ್ತಿಗಳು ವಿಕೃತಗೊಂಡಿವೆ. ವ್ಯಾಕರಣದ ದೃಷ್ಟಿಯಿಂದಲೂ 'ಸಮಾಧಾನ್ ಇಸ್‌ಪರ್' ಅಲ್ಲ, 'ಇಸ್ ಕಾ' ಆಗಬೇಕು.

ಡಿ.ವಿ.ಜಿ.ಯವರ ಬಹಳ ಪ್ರಸಿದ್ಧವಾದ ಒಂದು ಪದ್ಯದ ಅನುವಾದವನ್ನು ಗಮನಿಸಿ–

ಮೂಲ : "ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು
ಪದ ಕುಸಿಯೆ ನೆಲವಿಹುದು—ಮಂಕುತಿಮ್ಮ"

ಅನುವಾದ : "ಜೀವನ್ ಹೈ ಗಾಡಿ ವಿಧಿ ಸಾರಥೀ
ತುಮ್ ಘೋಡಾ, ಉಸಕೇ ನಿರ್ದೇಶಾನುಸಾರ್ ಮುಸಾಫಿರ್
ಚಲ್ತೆ ಬ್ಯಾಹ್ ಮೇ ಯಾ ಸ್ಮಶಾನ್ ಮೇ ದೌಡೋ ತುಮ್
ಥಕ್ ಜಾವೋಗೇ ಹೈ ಭೂ–ತಲ್—ಮೂಢತಿಮ್ಮ"

ಈ ಹಿಂದಿ ಅನುವಾದದಲ್ಲಿ ಮೂಲದ 'ಜಟಕಾಬಂಡಿ' ಬರಿ 'ಗಾಡಿ'ಯಾಗಿದ್ದು ಹಿಂದಿಯಲ್ಲಿ 'ಗಾಡಿ' ಶಬ್ದಕ್ಕೆ ವಿಶಾಲವಾದ ಅರ್ಥವಿದೆ. ಎಲ್ಲ ವಾಹನಗಳಿಗೂ 'ಗಾಡಿ' ಶಬ್ದವನ್ನೂ ಹಿಂದಿಯವರು ಬಳಸುತ್ತಾರೆ. ಮೂಲದಲ್ಲಿ 'ಜಟಕಾಬಂಡಿ'ಯನ್ನೇ ಬಳಸಿರುವುದಕ್ಕೆ ಒಂದು ವಿಶಿಷ್ಟ ಉದ್ದೇಶ, ಅರ್ಥವಿದೆ. ಜಟಕಾಬಂಡಿಯಲ್ಲಿ ಹೋದವರಿಗೆ

ಗೊತ್ತು ಅದರ ಅನುಭವ. 'ಜಟಕಾಬಂಡಿ' ಕೊಡುವ 'ಸ್ವೈರೋಪ'ನ್ನೂ ಗಾಡಿ ಕೊಡುವುದಿಲ್ಲ. ಹೀಗಾಗಿ 'ಜಟಕಾಬಂಡಿ'ಯನ್ನೇ ಉಳಿಸಿಕೊಂಡಿದ್ದರೆ ಚೆನ್ನಿತ್ತು. 'ಸಾಹೇಬ' ಶಬ್ದ ಅನುವಾದದಲ್ಲಿ 'ಸಾರಥಿ'ಯಾಗಿದೆ. ಸಾರಥಿಯೂ ಕೂಡ ಅವನ ಸಾಹೇಬನ ಇಂಗಿತದಂತೆಯೇ ಗಾಡಿ ನಡೆಸಬೇಕಾಗುತ್ತದೆ. ಈ ದೃಷ್ಟಿಯಿಂದ 'ಸಾಹೇಬ'ನನ್ನು 'ಸಾರಥೀ' ಮಾಡಿರುವುದು ಸರಿಯಲ್ಲವೇನೋ! 'ಕುದುರೆ ನೀನ್'ವಿನ ಶಬ್ದಾನುವಾದ ಇದ್ದು ವ್ಯಾಕರಣದ ದೃಷ್ಟಿಯಿಂದಲೂ ಇದು 'ಘೋಡೆ'ಯಾಗಬೇಕಿತ್ತು. ಮೂರನೆಯ ಸಾಲಿನಲ್ಲಿ ಬಂದಿರುವ 'ಚಲತೇ' ಶಬ್ದ ಅನಾವಶ್ಯಕ. ಏಕೆಂದರೆ ಮುಂದೆ 'ಓಡು'ಶಬ್ದಕ್ಕೆ 'ದೌಡೋ' ಶಬ್ದ ಬಂದಿದ್ದು ಇದು ಸರಿಯಾಗಿದೆ. ನಾಲ್ಕನೆಯ ಸಾಲಿನಲ್ಲಿ 'ಪದಕುಸಿಯೆ' ಶಬ್ದಕ್ಕೆ ಸಂವಾದಿಯಾಗಿ ಬಂದಿರುವ 'ಥಕ್ ಜಾವೋಗೇ' (ಬಳಲಿದರೆ) ಎಂಬ ಅನುವಾದ ಅಸಮರ್ಪಕವಾಗಿದ್ದು ಮೂಲದಲ್ಲಿನ ಭಾವವನ್ನೇ ಕಳೆದುಕೊಂಡಿದೆ. ಹೀಗಾಗಿ ಈ ಪದ್ಯದ ಅನುವಾದದಲ್ಲಿ ಕೊಂಚಮಟ್ಟಿಗೆ ಮೂಲದ 'ಆಶಯ' ಬಂದಿದ್ದರೂ ಪ್ರೇಕ್ಷಣೀಯತೆಯ ದೃಷ್ಟಿಯಿಂದಲಂತೂ ಸೊರಗಿದೆ.

ಮೂಲ: "ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು—ಮಂಕುತಿಮ್ಮ"

ಅನುವಾದ: "ಗಿರಿತಲ್‌ಮೇ ತೃಣ್‌ಸಮ್ ಬನೋ, ಘರ್ ಮೇ ಸುಮನ್
ವಿಧಿ ಕೇ ವಿಪದಾಓಂ ಮೇ ಪಾಷಾಣ್ ಬನೋ.
ಮಧುರ್ ಬನೋ ದೀನ್ ದುಃಖಿಯೋಂ ಕೇಲಿಏ
ಸಬಕೇ ಸಾಥ್ ಮಿಲ್‌ಕರ್ ರಹೋ–ಮೂರ್ಖ್‌ತಿಮ್ಮ"

ಈ ಅನುವಾದದಲ್ಲೂ ಮೂಲಭಾವ ಬೇರೆ ರೀತಿಯಲ್ಲಿ, ವಿಸ್ತಾರಗೊಂಡು ಅರ್ಥ ಕಳೆದುಕೊಂಡು ಅನುವಾದವಾಗಿದೆ. 'ಬೆಟ್ಟದಡಿ ಹುಲ್ಲಾಗು'ವಿನ ಅನುವಾದ 'ಹುಲ್ಲಿನಂತೆ ಆಗು' ಎಂದಾಗಿದೆ. ವ್ಯಕ್ತಿಯೇ ಹುಲ್ಲಾಗುವುದು ಬೇರೆ, ಹುಲ್ಲಿನಂತೆ ಬೇರೆ ಇನ್ನೊಂದಾವುದೋ ಆಗುವುದು ಬೇರೆ. ಅನುವಾದದಲ್ಲಿ ಈ ಅರ್ಥ ಬರುತ್ತದೆ. 'ಮಲ್ಲಿಗೆ'ಗೆ 'ಸುಮನ್' ಎಂಬ ಅನುವಾದ ತೀರ ಕೆಟ್ಟದ್ದಾಗಿದೆ. 'ಸುಮನ್' ಯಾವುದೇ ಎಂದರೆ, ಹೂ ಬೇಕಾದರೂ ಆಗಬಹುದು. ಆದರೆ ಮೂಲದಲ್ಲಿ 'ಮಲ್ಲಿಗೆ'ಗೆ ವಿಶೇಷವಾದ ಒತ್ತನ್ನು ಕೊಡಲಾಗಿದೆ. ಹಿಂದಿಯಲ್ಲೂ ಮಲ್ಲಿಗೆಗೆ ಸಂವಾದಿಯಾದ ಶಬ್ದವಿದ್ದು ಅದನ್ನೇಕೆ ತೆಗೆದುಕೊಳ್ಳದೇ ಬಿಟ್ಟರು? 'ಬೆಲ್ಲ ಸಕ್ಕರೆ' 'ಮಧುರ್ ಬನೋ' ಎಂದು ಅನುವಾದವಾಗಿದ್ದು ಬೆಲ್ಲ ಸಕ್ಕರೆಯಲ್ಲಿನ ರುಚಿಕೊಡುವ ಸಾಮರ್ಥ್ಯ ಇದಕ್ಕಿದೆಯೆ? ಹೀಗಾಗಿ ಮೂಲವನ್ನು ಸರಳಗೊಳಿಸುವ, ಅದರಿಂದ ದೂರ ಸರಿಯುವ ಪ್ರಯತ್ನಗಳೇ ಇಲ್ಲಿ ಹೆಚ್ಚಾಗಿರುವಂತೆ ತೋರುತ್ತವೆ.

ಮೂಲ : "ಹೆಸರು ಹೆಸರೆಂದು ನೀಂ ಬಸವಳಿವುದೇಕಯ್ಯಾ
ಕಸದೊಳಗೆ ಕಸವಾಗಿ ಹೋಹನಲೆ ನೀನು?
ಮುಸುಕಲೀ ಧರೆಯ ಮರೆವೆನ್ನನ್, ಎನುತ ಬೇಡು
ಮಿಸುಕದಿರು ಮಣ್ಣಿನಲಿ—ಮಂಕುತಿಮ್ಮ"

ಅನುವಾದ : "ಕ್ಯೋಂ ತಡಪತೇ ಹೋ ಇತನಾ ನಾಮ್ ಕಮಾನೆ
ನಿಷ್ಫಲೋಂ ಮೇ ನಿಷ್ಫಲ್ ಹೋಗೇ ತುಮ್?
ಮಾಂಗೋ, ಭೂಲ್ ಜಾನೇ ದೋ ಲೋಗ್‌ತುಂಹೇ
ಮಿಟ್ಟೀ ಮೇ ಮತ್ ತಡಪತೇ ರಹೋ—ಮೂಢತಿಮ್ಮ"

ಭಾಷಾಂತರಕಾರರು ಹೇಗೆ ಕಣ್ಣುಮುಚ್ಚಿಕೊಂಡು, ಅರ್ಥಕ್ಕೆ ಗಮನವನ್ನೇ ಕೊಡದೆ, ಮನಸ್ಸಿಗೆ ಬಂದಂತೆ ಅನುವಾದಿಸುತ್ತ ಒಬ್ಬ ಪ್ರಸಿದ್ಧ ಕವಿಗೆ, ಅವನ ಕಾವ್ಯಕ್ಕೆ ಅನ್ಯಾಯ ಮಾಡುತ್ತಾರೆ ಎಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ. 'ಕಸದೊಳಗೆ ಕಸವಾಗಿ ಹೋಹೆನಲೇ ನೀನು?', 'ನಿಷ್ಫಲೋಂ ಮೇ ನಿಷ್ಫಲ್' ಎಂದು ಅನುವಾದಿಸಿ 'ಕಸದ' ಅರ್ಥವನ್ನೂ ಮರೆಮಾಡಿದ್ದಾರೆ. 'ನಿಷ್ಫಲ್' ಎಂದರೇನು? ಕಸವೆ? ಮಣ್ಣೆ? ಅಥವಾ ಫಲವನ್ನು ಪಡೆದುಕೊಳ್ಳದವನೆ? ಏನಿದರ ಅರ್ಥ? 'ಹೋಹನಲೇ?'ಯಲ್ಲಿರುವ ತಿಳಿಹೇಳುವ ಭಾವವೂ ಅನುವಾದದಲ್ಲಿ ಮೂಡಿಬರದೆ 'ನಿಷ್ಫಲರಲ್ಲಿ ನಿಷ್ಫಲನಾಗುವೆಯಾ ನೀನು" ಎಂದು ಪ್ರಶ್ನಿಸಿ ಹೀಗಾಗಬೇಡ ಎಂದು ತಿಳುವಳಿಕೆ ನೀಡುವ ರೀತಿಯಲ್ಲಿದೆ ಈ ವಾಕ್ಯ. ಇನ್ನೂ ಆಶ್ಚರ್ಯವನ್ನು ಹುಟ್ಟಿಸುವ ಅನುವಾದ 'ಮುಸುಕಲೀ ಧರೆಯ ಮರೆವೆನ್ನನ್'ದು. 'ಜಗತ್ತಿನ ಎಲ್ಲ ಮರೆವು ನನ್ನನ್ನಾವರಿಸಲಿ' ಎಂದಾಗಬೇಕಾದ್ದು ಹಿಂದಿಯಲ್ಲಿ 'ಜನಗಳೆಲ್ಲ ನಿನ್ನನ್ನು ಮರೆಯಲಿಬಿಡು, ಇದನ್ನು ಬೇಡು' ಎಂದಾಗಿದೆ. 'ಮಿಸುಕದಿರು ಮಣ್ಣಿನಲಿ', 'ಮಣ್ಣಿನಲ್ಲಿ ಒದ್ದಾಡಬೇಡ' ಎಂದಾಗಿದೆ. ಈ ಎಲ್ಲ ಉದಾಹರಣೆಗಳಿಂದ ಅನುವಾದ ಯಾವ ರೀತಿ ಡಿ. ವಿ. ಜಿ.ಯವರನ್ನು ಪ್ರತಿನಿಧಿಸುತ್ತದೆ ಎಂಬುದು ಗೊತ್ತಾಗುತ್ತದೆ.

ಸಾಮಾನ್ಯ ಅರ್ಥಗಳನ್ನು ಗ್ರಹಿಸುವುದರಲ್ಲೂ ಹೇಗೆ ಭಾಷಾಂತರಕಾರರು ಹೆಜ್ಜೆ ಹೆಜ್ಜೆಗೂ ಸೋಲುತ್ತ ಹೋಗುತ್ತಾರೆ ಎಂಬುದಕ್ಕೆ ಕೆಲವು ನಿದರ್ಶನಗಳನ್ನು ಗಮನಿಸಬಹುದು :

೧ ಹಳ್ಳಿಗೆಲ್ಲ ಗೆಳೆಯನು—ಔರೋಂ ಕಾ ಮಿತ್ರ (ಬೇರೆಯವರ ಗೆಳೆಯ).

೨ ಮಗ್ಗಿ—ಲೇಖಾ ಜೋಖಾ (ಲೆಕ್ಕಪತ್ರ) ಆಗಿದೆ. ಮಗ್ಗಿಗೆ ಹಿಂದಿಯಲ್ಲಿ 'ಪಹಾಡಾ' ಎಂಬ ಶಬ್ದವಿದೆ.

೩ 'ಏಟು, ಪೆಟ್ಟು, ಬಯ್ಯು, ಗದರು'ಗೆ 'ಮಾರ್ ಪೀಟ್ ಶೋರ್' ಬಯ್ಯಲು–ಗದರಲು–ವಿನ ಅನುವಾದ 'ಶೋರ್' (ಶಬ್ದ) ಎಂದಾಗಿದೆ.

೪ ಏನು ಜೀವನದರ್ಥ? ಏನು ಪ್ರಪಂಚಾರ್ಥ? (ಮೂಲ) ಸ್ವದೃಷ್ಟಿಸೇ ಪರೇ ಹೈ

ಕುಛ್ ? ಕ್ಯಾ ಹೈ ? (ಅನುವಾದ) ಇದು ಮೂಲವಾಕ್ಯದ ಅನುವಾದವೆಂದೇ ಅನ್ನಿಸುವುದಿಲ್ಲ.

೫ ಹೊಲಿ ನಿನ್ನ ತುಟಿಗಳನು (ಮೂಲ) ತುಮ್ ಭೀ ಮತ್ ಬೋಲೋ (ಅನುವಾದ) (ನೀನೂ ಸಹ ಮಾತನಾಡಬೇಡ)

ಇದುವರೆಗೆ ಉದಾಹರಿಸುವ ಪದ್ಯಗಳನ್ನು ನಾನು ಹುಡುಕಿ-ಹುಡುಕಿ ಆಯ್ದುಕೊಂಡಿಲ್ಲ. ಡಾ. ಮಹಿಷಿಯವರು ಅನುವಾದಿಸಿರುವ 'ಶ್ರೀ ರಾಮಾಯಣದರ್ಶನ' ವನ್ನಾಗಲಿ ಅಥವಾ 'ಕಗ್ಗ'ವನ್ನಾಗಲೀ ಸ್ವಲ್ಪ ಗಮನವಿಟ್ಟು, ಜೊತೆಗೆ ಮೂಲಕೃತಿಗಳನ್ನು ಜೊತೆಯಲ್ಲಿಟ್ಟುಕೊಂಡು ಓದುವ ಯಾವೊಬ್ಬ ಓದುಗನಿಗೂ ಇಂಥ ಹೇರಳವಾದ ದೋಷಗಳು ಕಾಣಬರುತ್ತವೆ. ಡಾ. ಮಹಿಷಿಯವರು ಕಾವ್ಯವನ್ನು ಕಾವ್ಯರೂಪದಲ್ಲಿಯೇ ಭಾಷಾಂತರ ಮಾಡುವ ನಿಶ್ಚಯ ಮಾಡಿದ್ದರಿಂದಲೂ ಸಹ ದೋಷಗಳು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಆಗಲು ಸಾಧ್ಯವಾಯಿತೇನೋ ಎಂದನ್ನಿಸುತ್ತದೆ. ಅದರಲ್ಲೂ ಇಂಥ ಮಹತ್ವದ ಕಾವ್ಯಗಳನ್ನು ಭಾಷಾಂತರಿಸುವ ಮುನ್ನ ಯಾರೊಬ್ಬರೇ ಆಗಲಿ ಭಾಷಾಂತರಿಸುವ ಭಾಷೆಯ ಪರಂಪರೆಯನ್ನು, ಅಲ್ಲಿನ ಇಂಥವೇ ಆದ ಮಹತ್ ಗ್ರಂಥಗಳನ್ನು ತುಂಬ ನಿಷ್ಠೆಯಿಂದ ಅಧ್ಯಯನ ಮಾಡಬೇಕಾಗುತ್ತದೆ. ತುಲಸೀದಾಸ್, ಜಾಯಸೀ, ಕಬೀರ್ ಮುಂತಾದವರ ಅಧ್ಯಯನದಿಂದ ತುಂಬ ನೆರವಾಗುತ್ತದೆ ಎಂದು ಸೂಚಿಸಿದರೆ ಸಾಕೇನೋ ! ಶ್ರೀ'ರಾಮಾಯಣದರ್ಶನಂ'ದಲ್ಲಿನ ಮೊದಲಲ್ಲಿ 'ಅನುವಾದವನ್ನು ಕುರಿತು' ಹೇಳುವಾಗ ಡಾ. ಮಹಿಷಿಯವರು ತಮ್ಮ ಬಗ್ಗೆ "ವಾಗರ್ಥದಲಿ ದಾರಿದ್ರ್ಯ, ಅನುವಾದವೆಲ್ಲಿ?" ಎಂದು ಹೇಳಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಅನುವಾದಕ್ಕೆ ಕೈಹಾಕಬಾರದು. ಅನುವಾದ ತುಂಬ ಕಷ್ಟಕೊಡುವ ಕೆಲಸ.

೧೯೫೩ರ 'ಭಾರತೀಯ ಕವಿತಾ' ಸಂಪುಟಕ್ಕಾಗಿ ಕನ್ನಡ ಕವಿತೆಗಳನ್ನೂ ಹಿಂದಿಗೆ ಪ್ರಸ್ತುತಪಡಿಸಿರುವ ಡಾ. ಹಿರಣ್ಮಯ ಅವರು ಕನ್ನಡ ಕವಿತೆಗಳ ಹಿಂದೀ ಕಾವ್ಯಾನುವಾದವನ್ನು ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳುವುದಕ್ಕಿಂತ ಅವುಗಳ ಭಾವವನ್ನು ಶಬ್ದಾನುವಾದದಲ್ಲಿ ಗದ್ಯದ ಪದ್ಯದಲ್ಲಿ ನಿರೂಪಿಸುವ ಪ್ರಯತ್ನಪಟ್ಟಿದ್ದಾರೆ. ಶಬ್ದಾನುವಾದದ ದೃಷ್ಟಿಯಿಂದ ಅನುವಾದಕರಿಗೆ ಸ್ವಲ್ಪಮಟ್ಟಿನ ಯಶಸ್ಸು ದೊರತಿರುವುದಾದರೂ ಮೂಲ ಪದ್ಯಗಳ ಗಾಂಭೀರ್ಯ, ಮಾಧುರ್ಯ, ಲಯ, ಶೈಲಿ, ಪ್ರಾಂಜಲತೆ ಮುಂತಾದ ಸೊಗಸಿನ ಯಾವ ಲಕ್ಷಣಗಳೂ ಅನುವಾದದಲ್ಲಿ ಅದೇ ರೀತಿ ಉಳಿದುಕೊಳ್ಳದೆ ಕೆಲವೊಮ್ಮೆ ಸರಳವಾಗುತ್ತ, ಕೆಲವೊಮ್ಮೆ ಕ್ಲಿಷ್ಟವಾಗುತ್ತ ಹೋಗಿರುವ ಸಂದರ್ಭಗಳೇ ಹೆಚ್ಚಾಗಿವೆ. ನನ್ನ ಈ ಮಾತುಗಳ ಸಮರ್ಥನೆಗಾಗಿ ಮುಂದೆ ಉದಾಹರಿಸುವ ಕೆಲವು ಉದಾಹರಣೆಗಳನ್ನು ಗಮನಿಸಬಹುದು :

'ಬೀದಿ ನಾಯಿ ರಾಧಿಗೆ' ಬೇಂದ್ರೆಯವರ ಒಂದು ಸುಂದರ ಕವಿತೆ. ಈ ಕವಿಯ ಪ್ರತಿಯೊಂದು 'ನುಡಿ'ಯ ಮೊದಲ ಪಂಕ್ತಿಯಾಗಿ ಬರುವ 'ಬೀದಿ ನಾಯಿ ರಾಧಿಗೆ' ಮುಂದಿನ ಕ್ರಿಯೆಗಳನ್ನೆಲ್ಲ ತನ್ನೊಳಗಡಗಿಸಿಕೊಂಡು ಅದು ಓದುಗರ ಪ್ರೀತಿಯನ್ನು

ಗಳಿಸಿಕೊಳ್ಳುತ್ತ ಹೋಗಿ ಮನಮೋಹಕವಾಗಿದೆ. ಆದರೆ ಹಿಂದಿಯಲ್ಲಿ ಹೀಗಾಗದೆ ಇರುವುದರಿಂದ 'ಬೀದಿ ನಾಯಿ ರಾಧಿ' ಕನ್ನಡ ಓದುಗರ ಸಹಾನುಭೂತಿಯನ್ನು ಸಂಪಾದಿಸಿಕೊಳ್ಳುವಂತೆ ಹಿಂದಿಯ ರಾಧಿ ಸಂಪಾದಿಸಿಕೊಳ್ಳುವುದಿಲ್ಲ. ಇಲ್ಲಿನ ಅನುವಾದದ ಮುಖ್ಯ ಸೋಲೆಂದರೆ ಇದೇ.

ಮೂಲ : "ಬೀದಿ ನಾಯಿ ರಾಧಿಗೆ
ಹೊಟ್ಟೆ ತುಂಬ ಮೊಲೆಗಳು
ಹೊಟ್ಟೆ ತುಂಬ ಎದೆಯ ತುಂಬ
ಜೋಲು ಮೊಲೆಯ ಸಾಲುಗಳು"

ಅನುವಾದ : "ರಾಧೀ ಹೈ ಕುತಿಯಾ ರಾಹ್ ಕೀ
ಉಸಕೇ ಪೇಟ್ ಪರ್ ಭರೇ ಹೈಂ ಸ್ತನ್
ಲಟಕತೇ ಥನೋ ಕೀ ಕತಾರೇಂ
ಪೇಟ್ ಭರ್ ವಕ್ಷ್ ಪರ್ ಉಸಕೇ"

ಕನ್ನಡದಲ್ಲಿ ಸರ್ವನಾಮಗಳ ಪ್ರಯೋಗವಾಗಿಲ್ಲ. ಆದರೆ ಹಿಂದಿಯಲ್ಲಿ ಉಸಕೇ (ಅದರ) ಎಂಬ ಪ್ರಯೋಗ ಎರಡು ಬಾರಿ ಆಗಿದೆ. 'ಹೊಟ್ಟೆ ತುಂಬ' ಶಬ್ದಗಳು ಕನ್ನಡದಲ್ಲಿ ಎರಡು ಸಾರಿ ಪ್ರಯೋಗವಾಗಿದ್ದು ಈ ಶಬ್ದಗಳನ್ನೂ ಎರಡು ಬಗೆಯಲ್ಲಿ ಅನುವಾದಕರು 'ಪೇಟ್ ಪರ್ ಭರೇ' ಹಾಗೂ 'ಪೇಟ್ ಭರ್' ಎಂದು ಅನುವಾದಿಸಿದ್ದಾರೆ. ಈ ಎರಡರಲ್ಲಿ ಯಾವುದು ಉಚಿತವಾದದ್ದು ? ಅಂತೆಯೇ ಮೊಲೆಗೆ 'ಸ್ತನ್' ಹಾಗೂ 'ಥನ್' ಎಂಬ ಎರಡೂ ಶಬ್ದಗಳನ್ನು ಬಳಸಿದ್ದು, ಈ ಎರಡೂ ಸಂದರ್ಭಗಳಲ್ಲಿ ಒಂದೊಂದೇ ಪ್ರಯೋಗವನ್ನೂ ಉಳಿಸಿಕೊಂಡು, ಸರ್ವನಾಮದ ಅನಾವಶ್ಯಕ ಪ್ರಯೋಗಗಳನ್ನು ತಡೆದಿದ್ದರೆ ಚೆನ್ನಿರುತ್ತಿತ್ತೇನೋ ! ಈ ಎಲ್ಲ ಕಾರಣದಿಂದಲೇ ಮೂಲದಷ್ಟು ಸರಳವಾಗಿ ಅನುವಾದ ಮೂಡಿ ಬರದೆ ಕ್ಲಿಷ್ಟವಾಗಿದೆ.

ಮೂಲ : ಬೀದಿ ನಾಯಿ ರಾಧಿಗೆ
ಊರ ತುಂಬ ಗೆಳೆಯರು
ಸರ್ವ ಸಾಕ್ಷಿ ಇವಳ ಪ್ರಣಯ
ನೋಡುವವರು ಎಳೆಯರು."

ಅನುವಾದ : "ರಾಧೀ ಹೈ ಕುತಿಯಾ ರಾಹ್ ಕೀ
ಉಸಕಾ ಸ್ನೇಹೀ ಹೈ ಗಾಂವ್ ಭರ್
ಪ್ರಣಯ್ ಉಸಕಾ ಹೈ ಸಭ್ ಪರ್ ಪ್ರಕಟ್
ಛೋಟೇ ಲಡಕೇ ಹೈ ಜಿಸಕೇ ದರ್ಶಕ್"

'ಊರ ತುಂಬ ಗೆಳೆಯರು' ಅನುವಾದದಲ್ಲಿ ಏಕವಚನದಲ್ಲಿ 'ಸ್ನೇಹೀ ಹೈ' ಎಂದು ಪ್ರಯೋಗ ಮಾಡಿದ್ದು 'ಇಡೀ ಹಳ್ಳಿಗೆಲ್ಲ ಅವನು ಸ್ನೇಹಿತ' ಎಂಬ ಅರ್ಥ ಬರುವಂತೆ

ಅನುವಾದಿಸಿ ಮೂಲದ ರಾಧಿಯ ಸ್ನೇಹಸ್ವಭಾವವನ್ನೇ ಅನುವಾದದಲ್ಲಿ ಮುಚ್ಚಿಬಿಟ್ಟಿದ್ದಾರೆ. ಅಲ್ಲದೆ 'ಗೆಳೆಯರು' ಶಬ್ದಕ್ಕೆ ಸಂವಾದಿಯಾಗಿ ಅನುವಾದಕರು ಉಪಯೋಗಿಸಿರುವ 'ಸ್ನೇಹಿ' ಎಂಬ ಶಬ್ದ ಅಷ್ಟು ಉಚಿತವಾಗಿಲ್ಲ. ಏಕೆಂದರೆ ಗೆಳೆಯ ಶಬ್ದದ ಅರ್ಥವಂತಿಕೆಯನ್ನು ಈ ಶಬ್ದ ಸ್ಫುರಿಸುವುದಿಲ್ಲ. ಇನ್ನು 'ಸರ್ವಸಾಕ್ಷಿ ಇವಳ ಪ್ರಣಯ'ದ ಅನುವಾದವೂ ಮೂಲಕ್ಕೆ ವಿರುದ್ಧವಾಗಿದೆ. ಹಿಂದಿಯಲ್ಲಿ 'ಅವಳ ಪ್ರಣಯ ಕಟಾಕ್ಷ ಎಲ್ಲರ ಮೇಲೂ ಇತ್ತು' ಎಂದಾಗಿದೆ.

ಮೂಲ : "ಮೊನ್ನೆ ಹೇಗೋ ಸತ್ತಳು"
ಅನು : "ಹಾಲ್ ಮೇ ಹೀ ಹೋಗಯೀ ಮೃತ್ಯು."
(ಇತ್ತೀಚೆಗೆ ಅವಳು ಸತ್ತಳು)

ಮೂಲದ 'ಹೇಗೋ' ಅನುವಾದದಲ್ಲಿ 'ಇತ್ತೀಚೆಗೆ' ಎಂದಾಗಿದೆ. ಹೀಗೆ ಈ ಪದ್ಯಾನುವಾದದಲ್ಲಿ ಇಂಥ ಆಭಾಸಗಳು ದೊರೆಯುತ್ತವೆ.

ಕುವೆಂಪುರವರ ಒಂದು ಕವಿತೆಯಲ್ಲಿ ಬರುವ ಸಾಲುಗಳು—

ಮೂಲ : "ಮನೆ ಮನೆಯಲ್ಲಿ ನೀನಾಗಿಹೆ ಗೃಹಶ್ರೀ
ಹೆಸರಿಲ್ಲದ ಹೆಸರು ನಿನಗೆ ಗೃಹಸ್ತ್ರೀ"
ಅನುವಾದ : ಘರ್ ಘರ್ ಕೀ ತೂ ಹೀ ಗೃಹಶ್ರೀ
ತೇರಾ ನಾಮ್ ಅನಾಮ್ ಹೈ ಗೃಹಸ್ತ್ರಿ.

ಇಲ್ಲಿ ಆಗಿರುವ ಆಭಾಸವೆಂದರೆ ಮೂಲದ 'ನೀನಾಗಿಹೆ' ಅನುವಾದದಲ್ಲಿ 'ತೂ ಹೀ' (ನೀನೇ) ಆಗಿದೆ. 'ಮನೆ ಮನೆಯಲ್ಲಿ' 'ಮನೆ ಮನೆಯ' ಎಂದಾಗಿದೆ. ಎರಡನೆಯ ಸಾಲಿನಲ್ಲಿ ಹಿಂದಿ ಅನುವಾದದ ಅರ್ಥ 'ಗೃಹಸ್ತ್ರಿ ನಿನ್ನ ಹೆಸರು ಅನಾಮ' ಎಂದಾಗುತ್ತದೆ. ಹೆಸರಿಲ್ಲದ ಹೆಸರಿಗೆ 'ತೇರಾ ನಾಮ್ ಅನಾಮ್ ಹೈ' ಎಂಬ ಅನುವಾದ ಸರಿಯಲ್ಲ. ಮುಂದಿನ ಸಾಲುಗಳಲ್ಲಿ ಬರುವ 'ಹೆಸರಿಲ್ಲದ ಮಹಿಳೆ'ಗೆ 'ನಾಮರಹಿತ ಮಹಿಳಾ' (ಹೆಸರು ರಹಿತ) ಎಂದು ಬರೆದು ಅನುವಾದಿಸಿದ್ದಾರೆ. ಒಂದೇ ಶಬ್ದಕ್ಕೆ ಎರಡು ಸಂವಾದಿ ಶಬ್ದಗಳು! ಒಂದು ಪದ್ಯದಲ್ಲಿ ಒಂದೇ ರೂಪವನ್ನು ಉಳಿಸಿಕೊಂಡಿದ್ದಿದ್ದರೆ ಏಕರೂಪತೆ ಅನುವಾದದಲ್ಲಿ ಬರುತ್ತಿತ್ತು.

ಮೂಲ : "ಹಿಡಿಯದಿರಲಿ ನಿನಗವರ
ಹೊಗಳಿಕೆಯ ಕೀರ್ತಿ ಶನಿ" (ಕುವೆಂಪು)
ಅನು : "ತುಝೆ ನಾ ಲಗೇ ಉಸಕೀ
ಕೀರ್ತಿ ಯಾ ಪ್ರಶಂಸಾ ಶನಿ"

ಮೂಲದ 'ಹೊಗಳಿಕೆಯ ಕೀರ್ತಿ' ಹಿಂದಿಯಲ್ಲಿ 'ಅವರ ಕೀರ್ತಿ ಅಥವಾ ಪ್ರಶಂಸಾ ಶನಿ' ಯಾಗಿದೆ.

ಕೆ. ಎಸ್. ನರಸಿಂಹಸ್ವಾಮಿಯವರ 'ಅಹೋರಾತ್ರಿಗಳಲಿ ಬಿಡದು, ನನ್ನ ಬಿಡದು, ನಿನ್ನ ದನಿ' ಎಂಬ ಕವಿತೆಯಲ್ಲಿನ ಈ ಸಾಲುಗಳನ್ನೂ ಅರ್ಥಾಂತರದ ದೃಷ್ಟಿಯಿಂದ ಗಮನಿಸಬೇಕಾಗಿದೆ:

ಮೂಲ: "ಶಿಲುಬೆ ಹೊತ್ತು ಕ್ರಿಸ್ತನಾಗಿ
ಜ್ಞಾನಭಿಕ್ಷು ಬುದ್ಧನಾಗಿ"

ಅನುವಾದ: "ಚಘಾ ಕ್ರಾಸ್ ಪರ್ ಈಸಾ ಬನ್‌ಕರ್
ಜ್ಞಾನ್ ಭಿಕ್ಷು ಬುದ್ಧ್ ಬನಕರ್"

ಮೂಲ: "ನಿದ್ದೆಯಲಿ ನೂರು ಬಾರಿ ಕನವರಿಸಿತ್ತು ನಿನ್ನ ದನಿ"

ಅನು: "ನೀಂದ್ ಮೇ ಸೌಬಾರ್ ಆಯೀ ಸ್ವಪ್ನ್ ಬನಕರ್ ತೇರೀ ಧ್ವನಿ"

'ಕನವರಿಸುವಿನ' ಅನುವಾದ ಸ್ವಪ್ನ ಎಂದಾಗಿದೆ. ಕನವರಿಸು ಬೇರೆ. ಸ್ವಪ್ನ ಬೇರೆ.

ಮೂಲ: "ಬಿಟ್ಟುಕೊಟ್ಟ ರಾಜ್ಯಗಳಲಿ
ನಾನದೆಂತು ಅಡಿಯನಿಡಲಿ"

ಅನುವಾದ: "ಕೈಸೇ ಪಗ್ ಧರೂಂ ಉಸ್ ರಾಜ್ಯ್ ಪರ್
ಜಿಸ್ಕೋ ಮೈ ನೇ ಛೋಡ್ ದಿಯಾ ಥಾ"

'ರಾಜ್ಯಗಳಲ್ಲಿ'ನ ಬಹುವಚನ ಅನುವಾದದಲ್ಲಿ ಏಕವಚನವಾಗಿದೆ 'ಬಿಟ್ಟುಕೊಟ್ಟ' ಎಂಬುದಕ್ಕೆ ಹಿಂದಿಯಲ್ಲಿ 'ಛೋಡ್‌ದಿಯಾ' ಎಂಬ ಪದ ಬಂದಿದ್ದು ಇಲ್ಲಿನ ಸಂದರ್ಭ ದಲ್ಲಿ 'ಬಿಟ್ಟು ಕೊಡು'ವಿನ ಛಾಯೆ 'ಛೋಡ್‌ದಿಯಾ'ನಲ್ಲಿ ಬರುವುದಿಲ್ಲ.

ಗೋಪಾಲಕೃಷ್ಣ ಅಡಿಗರ 'ಗೊಂದಲಪುರ'ದಲ್ಲಿನ ಸಾಲುಗಳು—

"ಏನೇ ಬಂದರೂ ದಾರಿಗಡ್ಡ ಕತ್ತರಿಸಿ ಅದ,
ಅವನ, ಕರಕರ ಎಂದು ತರಿದು ಕೊರಳಲಿ ಧರಿಸಿ ರುಂಡಮಾಲೆ"

ಅನುವಾದ: ರಾಹ್ ಪರ್ ಜೋ ರೋಡಾ ಅಟಕಾಏ
ಉಸೇ ಹಟಾಕರ್, ಕಾಟ್ ಕರ್ ಕರ್ ಕರ್ ಗಲೇ ಮೇ
ಧಾರೆ ರುಂಡ ಮಾಲಾ"

ಇಲ್ಲಿ 'ಏನೇ ಬಂದರೂ ದಾರಿಗಡ್ಡ'ದ ಅನುವಾದ 'ಯಾವನು ದಾರಿಗೆ ತೊಂದರೆ ಮಾಡುತ್ತಾನೆಯೋ' ಎಂದಾಗಿದೆ. 'ಕತ್ತರಿಸಿ'ಗೆ 'ಹಟಾಕರ್' ಎಂದು ಅನುವಾದಿಸ ಲಾಗಿದೆ 'ಕತ್ತರಿಸಿ'ಯಲ್ಲಿನ ಕ್ರಿಯೆಯಾಗಲಿ ಹಾಗೂ ಕ್ರೂರತೆಯಾಗಲಿ 'ಹಟಾಕರ್' ನಲ್ಲಿ ಬರದೆ ಅನುವಾದ ಸರಳಗೊಂಡಿದೆ. ಹಿಂದಿಯಲ್ಲಿ ಬಂದಿರುವ 'ಉಸೇ' ಸರ್ವನಾಮ ಕನ್ನಡದ 'ಅದ' ಹಾಗೂ 'ಅವನ'ವನ್ನೂ ನಿರ್ದೇಶಿಸುವುದಿಲ್ಲ.

ಮೂಲ: "ಎ ಲೆ ಲೆ ಲೇ ರಸ್ತೆ, ಏನು ಅವ್ಯವಸ್ಥೆ"

ಅನು: ವಹ್ ರಾಸ್ತಾ, ಕೈಸೀ ಅವ್ಯವಸ್ಥಾ.

ಚೆನ್ನವೀರ ಕಣವಿಯವರ 'ನಿಯಮೋಲ್ಲಂಘನ'ದ ಈ ಸಾಲುಗಳನ್ನು ಗಮನಿಸಿ:

"ಏನು ಬಾನೋ ಎನಿತು ದೂರವಿದ್ದಂತಿಹುದು
ನಮಗು ಅದಕೂ ಮಾತುಕತೆಯೇ ಇಲ್ಲ."

ಅನು: "ದೀಖತಾ ಹೈ ಗಗನ್ ಹಮ್‌ಸೇ ಬಹುತ್ ದೂರ್
ಉಸಸೇ ಕಭೀ ನ ಹೋತೆ ಕುಛ್ ಬಾತ್‌ಚೀತ್"

'ಏನು ಬಾನೋ' ಎಂಬಲ್ಲಿ ಬಾನಿಗೂ ನಮಗೂ ಇರುವ ಅಂತರವನ್ನು ನೋಡಬಹುದಾದರೆ ಹಿಂದಿಯಲ್ಲಿ ನೇರ ಸರಳವಾಗಿ 'ಗಗನ ನಮಗಿಂತ ಬಹಳಷ್ಟು ದೂರವಿದ್ದಂತಿದೆ' ಎಂದು ಅರ್ಥ ಬರಿಸುವ ವಾಕ್ಯವಾಗಿದೆ.

ಮೂಲ: "ಚಳಿಗಾಲಕೋ ಕೊಂಚ ಬುದ್ಧಿಯಿಲ್ಲ."
ಅನುವಾದ: "ಅಕಲ್ ತೋ ಜರಾ ಭಿ ನಹೀಂ ಶೀತ್‌ಕಾಲ್ ಮೇ"
(ಶೀತ ಕಾಲದಲ್ಲಿ ಬುದ್ಧಿ ಸ್ವಲ್ಪವೂ ಇಲ್ಲ ಎಂದು ಅನುವಾದಗೊಂಡಿದೆ)

ಜಯದೇವಿತಾಯಿ ಲಿಗಾಡೆಯವರ 'ಹಸಿವು' ಕವಿತೆಯಲ್ಲಿನ ಈ ಪಂಕ್ತಿಗಳು—

"ಕುಳಿತೊಮ್ಮೆ ಏಕಾಂಗಿಯಾಗಿ ಜನದಾದಿಗಳ ಯೋಚಿಸುವೆ, ವಿಶ್ವ ವೈಶಾಲ್ಯವನೆ ನೆನೆದು."

ಅನುವಾದ: "ಬೈಠೀ ಅಕೇಲೀ ಮೈ ಕಿಸೀ ಸಮಯ್ ಬಾರ್ ಬಾರ್
ಸೋಚ್‌ತೀ ಹೂಂ ವಿಶ್ವ ಕೀ ವಿಶಾಲತಾ ಕಾ ಆರ್-ಪಾರ್"

ಇದು ವಿಸ್ತಾರಾನುವಾದ ಹಾಗೂ ಅರ್ಥಾಂತರಕ್ಕೆ ಒಂದು ಉದಾಹರಣೆಯಾಗಿ ನಿಲ್ಲುವ ಸಾಲು.

ಜೆ. ಎಸ್. ಶಿವರುದ್ರಪ್ಪನವರ 'ಕ್ರಾಂತಿಕಾರ'ದ ಒಂದು ಸಾಲು—"ಸಿಟ್ಟು ಬಂದರೆ ಇವನ ತಡೆಯುವವರಾರುಂಟು."

ಅನುವಾದ:

"ಕೌನ್ ಇಸ್‌ಕೋ ಕ್ರುದ್ಧ್ ಹೋನೇ ಸೇ ರೋಕ್ ಸಕತಾ ಹೈ?"—ಮೂಲದಿಂದ ಪೂರ್ಣವಾಗಿ ದೂರ ಸರಿದು ವಿರುದ್ಧಾರ್ಥದ ಅನುವಾದವಾಗಿದೆ. ಇದರ ಅರ್ಥ, ಇವನು ಕೋಪ ಮಾಡಿಕೊಳ್ಳುವುದನ್ನು ತಪ್ಪಿಸಲು ಯಾರಿಂದ ಸಾಧ್ಯವಾಗುತ್ತದೆ? ಎಂದಾಗುತ್ತದೆ.

—ಇಂಥ ದೋಷಗಳು 'ಭಾರತೀಯ ಕವಿತಾ'ದ ಹಿರಣ್ಮಯ ಅವರ ಅನುವಾದದಲ್ಲಿದ್ದು ಇನ್ನು ಸ್ವಲ್ಪ ಪರಿಶ್ರಮ ಪಟ್ಟಿದ್ದಿದ್ದರೆ ಇವುಗಳಿಂದ ತಪ್ಪಿಸಿಕೊಳ್ಳಬಹುದಿತ್ತು.

ಬಸವೇಶ್ವರರ ವಚನಗಳನ್ನು ಕನ್ನಡದ ನಾಲ್ಕಾರು ಮಂದಿ ವಿದ್ವಾಂಸರು ಅನುವಾದ ಮಾಡಿದ್ದು ಹಿಂದಿಗೆ ಬಸವೇಶ್ವರರು ಪರಿಚಯವಾಗಿರುವಷ್ಟು ಬೇರೆ ಯಾರೂ ಆಗಿಲ್ಲ. ಈ ಅನುವಾದಗಳಲ್ಲಿ ಆರ್.ಸಿ. ಭೂಸನೂರಮಠ್ ಹಾಗೂ ಶ್ರೀಮತಿ ಭೂಸನೂರಮಠ್

ಅವರು ಹಿಂದಿಯಲ್ಲಿ ಪ್ರಸ್ತುತಪಡಿಸಿರುವ 'ಮಹಾತ್ಮಾ ಬಸವೇಶ್ವರ್ ಕೇ ವಚನ್' ಎಂಬ ಸಂಗ್ರಹವೂ ಒಂದಾಗಿದ್ದು, ಇಲ್ಲಿ ಬಸವೇಶ್ವರರ ಒಟ್ಟು ೨೦೦ ವಚನಗಳ ಅನುವಾದವಿದೆ. ಈ ಅನುವಾದಿತ ಕೃತಿಗೆ ಭಾರತ ಸರ್ಕಾರದ ಬಹುಮಾನ ಸಹ ಬಂದಿದೆ.

ಮೂಲ ವಚನಗಳನ್ನು ಓದದೆ ಅಥವಾ ಅರ್ಥ ಮಾಡಿಕೊಳ್ಳದೆ ಕೇವಲ ಹಿಂದಿ ಅನುವಾದವನ್ನೇ ಓದುವ ಹಿಂದಿ ಓದುಗರಿಗೆ ಇಲ್ಲಿನ ಅನುವಾದಗಳು ನಿಜಕ್ಕೂ ತೃಪ್ತಿಯನ್ನೂ ಸಂತೋಷವನ್ನೂ ಕೊಡುತ್ತವೆಯಲ್ಲದೆ ಬಸವೇಶ್ವರರ ಬಗೆಗೆ ಕುತೂಹಲವನ್ನು ಹುಟ್ಟಿಸುತ್ತವೆ. ಈ ದೃಷ್ಟಿಯಿಂದ ಬಸವೇಶ್ವರರ ವಚನಗಳ ಅನುವಾದ ಸಾರ್ಥಕವಾಗಿದ್ದರೂ, ಮೂಲವನ್ನು ಜೊತೆಜೊತೆಯಲ್ಲಿ ಅರ್ಥಮಾಡಿಕೊಳ್ಳುತ್ತ ಹಿಂದಿ ಅನುವಾದವನ್ನು ಓದುತ್ತ ಹೋಗುವ ಓದುಗನಿಗೆ ಈ ಭಾಷಾಂತರದಿಂದ ಅಷ್ಟೇನೂ ತೃಪ್ತಿಯಾಗುವುದಿಲ್ಲ. ಏಕೆಂದರೆ ಮೂಲದ ಎಷ್ಟೋ ಅಂಶಗಳಿಂದ ದೂರಸರಿದು ನಿಲ್ಲುವ ಈ ಭಾಷಾಂತರಗಳು ಬಸವೇಶ್ವರರು ತಮ್ಮ ಒಂದೊಂದು ಶಬ್ದದಲ್ಲೂ ತುಂಬಿರುವ ಅರ್ಥವಂತಿಕೆಯನ್ನು ಅಷ್ಟೇ ಮಟ್ಟದಲ್ಲಿ ಓದುಗರಿಗೆ ನೀಡುವುದಿಲ್ಲ. ಉದಾಹರಣೆಗೆ ಒಂದೆರಡು ವಚನಗಳ ಅನುವಾದಗಳನ್ನು ಪರಿಶೀಲಿಸಬಹುದಾಗಿದೆ :

ಮೂಲ : "ವಿಷಯವೆಂಬ ಹಸರನೆನ್ನ ಮುಂದೆ ತಂದು ಪಸರಿಸದಿರಯ್ಯ
ಪಶುವೇನ ಬಲ್ಲದು ? ಹಸುರೆಂದೆಳಸುವುದು.
ವಿಷಯರಹಿತನ ಮಾಡಿ ಭಕ್ತಿರಸವ ದಣಿಯ ಮೇಯಿಸಿ,
ಸುಬುದ್ಧಿಯೆಂಬುದಕವನೆರೆದು,
ನೋಡಿ ಸಲಹಯ್ಯ, ಕೂಡಲಸಂಗಮದೇವ"

ಅನುವಾದ: ವಿಷಯ್ ಭೋಗ್ ಕೀ ಹರಿಯಾಲೀ ಹೈ ಮೇರೇ ಸಮ್ಮುಖ್.
ಮೈ ಹೂಂ ಪಶು ಹರಿಯಾಲೀ ಕೀ ಓರ್ ದೌಡತಾ ಹೂಂ !
ವಿಷಯರಹಿತ್ ಕರೋ ; ಭಕ್ತಿರಸ್ ಪಿಲಾಓ !
ಸುಬುದ್ಧೀ ಕಾ ಜಲ್ ಸೀಂಚ್‌ಕರ್
ರಕ್ಷಾ ಕರೋ ಮೇರಿ, ಕೂಡಲಸಂಗಮದೇವ್"

ಈ ವಚನದಲ್ಲಿನ ಮೊದಲ ಪಂಕ್ತಿಯಲ್ಲಿರುವ, ಹಾರ್ದಿಕ ವಿನಂತಿ ಅನುವಾದದಲ್ಲಿ ಇಲ್ಲವಾಗಿ ಬೇರೆ ರೂಪದಲ್ಲಿ, ಅಂದರೆ 'ನನ್ನ ಮುಂದೆ ವಿಷಯಭೋಗದ ಹಸುರು ಇದೆ' ಎಂದಿದೆ. ಮೂಲದಲ್ಲಿ ಮುಂದೆ ಬರಬಹುದಾದುದನ್ನು ಬಾರದೇ ಇರಲೆಂಬ ದೃಷ್ಟಿಯಿಂದ ಭಕ್ತ ಭಗವಂತನಲ್ಲಿ 'ತಂದು ಪಸರಿಸದಿರು' ಎಂದು ಬೇಡುತ್ತಾನೆ. ಆದರೆ ಅನುವಾದದಲ್ಲಿ ಈ ಆಶಯವೇ ಇಲ್ಲ. ಮೂಲದಲ್ಲಿನ 'ಪಶುವೇನು' ಬಲ್ಲದು ? ಹಿಂದಿಯಲ್ಲಿ 'ನಾನು ಪಶು' ಎಂದಾಗಿದೆ. ಕನ್ನಡದಲ್ಲಿ ಪ್ರಶ್ನಾರ್ಥಕ ವಾಕ್ಯ ಹಿಂದಿಯಲ್ಲಿ ಉತ್ತರ ರೂಪದಲ್ಲಿ ಸ್ವೀಕಾರಾತ್ಮಕವಾಗಿ ಬಂದಿದೆ. 'ಭಕ್ತಿರಸವ ದಣಿಯ ಮೇಯಿಸಿ' ಹಿಂದಿಯಲ್ಲಿ 'ಭಕ್ತಿರಸ

ಕುಡಿಸು' ಎಂದಾಗಿದೆ. ದಣಿಯ ಮೇಯಿಸುವುದಕ್ಕೂ, ಕುಡಿಸುವುದಕ್ಕೂ ಎಷ್ಟು ಅಂತರವಿದೆ! ಕೊನೆಯ ಪಂಕ್ತಿಯಲ್ಲಿ ಬರುವ 'ನೋಡಿ ಸಲಹಯ್ಯ' ಎಂಬ ಶಬ್ದಗಳಲ್ಲಿ ಎಲ್ಲವನ್ನು ನಿನಗೆ ಬಿಟ್ಟಿದ್ದೇನೆ, ನಿನ್ನಿಚ್ಛೆ ಎಂಬ ಭಾವವಿದ್ದರೆ ಅನುವಾದದಲ್ಲಿ 'ನನ್ನನ್ನು ರಕ್ಷಿಸು' ಎಂದು ಅರ್ಥೈಸಿದ್ದಾರೆ: ಹೀಗೆ ಈ ವಚನ ಮೂಲದ ಗಾಂಭೀರ್ಯ ಹಾಗೂ ಧ್ವನಿಯನ್ನು ತನ್ನಲ್ಲಿ ಒಳಗೊಳ್ಳದೆ ಬೇರೆ ವಚನವೆಂಬಂತೆ ಅನುವಾದಗೊಂಡಿದೆ. ಸಾಲದ್ದಕ್ಕೆ ಅನಾವಶ್ಯಕವಾಗಿ ಬಂದಿರುವ ಆಶ್ಚರ್ಯಸೂಚಕ ಚಿಹ್ನೆಗಳು ಬೇರೆ!

೨. ಮೂಲ: ಸುಡು! ಸುಡು!! ಮನವಿದು ವಿಷಯಕ್ಕೆ ಹರಿವುದು
ಮೃಡ, ನಿಮ್ಮನನುದಿನ ನೆನೆಯಲೀಯದು
ಎನ್ನೊಡೆಯ ಕೂಡಲಸಂಗಮದೇವ
ನಿಮ್ಮ ಚರಣವ ನೆನೆವಂತೆ ಕರುಣಿಸು
ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮ"

ಅನು: "ಭಕ್ಷಣ್ ದೇಖಾ ತೋ ಕೂದ್ ಪಡಾಬಾಹರ್
ಜಲಾವೋ ಇಸ್ ಮನ್‌ಕೋ. ಭೋಗ್ ಪರ್
ದೌಡತಾ ಹೈ ಪರ್ ತೇರಿ ಓರ್ ನಹೀ
ಮೇರೆ ದೇವ್ ಕೂಡಲ್‌ಸಂಗಮ್ ದೇವ್!
ಮೇರಾ ಮನ್ ಕರೇ ತೇರಾ ಚರಣ್ ಸ್ಮರಣ್
ಕೃಪಾಕರೋ ಭಗವನ್, ರಾಖೋ ಮೇರೀ ಲಾಜ್"

ಕನ್ನಡ ವಚನದ ಮೊದಲ ಮೂರು ಪಂಕ್ತಿಗಳ ಅನುವಾದ ಹಿಂದಿಯಲ್ಲಿ ನಾಲ್ಕು ಪಂಕ್ತಿಗಳಲ್ಲಿ ಬೆಳೆದು, ಮೂಲದಿಂದ ದೂರ ಹೋಗಿ ವಿಕೃತವಾಗಿ, ಅರ್ಥಾಂತರಗೊಂಡು ಅರ್ಥಹೀನವಾಗಿದೆ. ಅನುವಾದದಲ್ಲಿನ ಮೊದಲ ಸಾಲಿನ ಅರ್ಥ—ಭಕ್ಷಣೆಯನ್ನು ನೋಡಿದರೆ ಹೊರಗೆ ನೆಗೆಯಿತು ಎಂದು. ಇದರ ಅಭಿಪ್ರಾಯವಾದರೂ ಏನು? ಮೂಲದಲ್ಲಿ ಎಲ್ಲಿದೆ ಈ ಭಾವ? 'ವಿಷಯಕ್ಕೆ ಹರಿವುದು' ಎಂಬುದರ ಅನುವಾದ 'ಭೋಗದತ್ತ ಓಡುವುದು' ಎಂದಾಗಿದೆ. ಹಿಂದಿಯಲ್ಲಿ 'ಭೋಗ್' ಎಂದರೆ 'ನೈವೇದ್ಯ' ಎಂಬ ಅರ್ಥವೂ ಇದೆ. ಅನುವಾದಕರ ದೃಷ್ಟಿಯಲ್ಲಿ 'ಭೋಗ್' ಎಂದರೇನು ಎಂಬುದು ಸ್ಪಷ್ಟವಾಗುವುದಿಲ್ಲ. ಒಂದು ವೇಳೆ ಇವರು 'ವಿಷಯ'ಕ್ಕೆ 'ಭೋಗ್' ಎಂದು ಇಟ್ಟುಕೊಂಡಿದ್ದರೆ 'ವಿಷಯ'ದ ಅರ್ಥವೈಶಾಲ್ಯತೆಯನ್ನು ಅದು ಒಳಗೊಳ್ಳುವುದಿಲ್ಲ. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಈಗಾಗಲೇ ಉದಾಹರಿಸಿರುವ ವಚನದಲ್ಲಿ ಬಂದಿರುವ 'ವಿಷಯ'ಕ್ಕೆ 'ವಿಷಯ'ವೆಂದೇ ಅನುವಾದಿಸಿದ್ದು, ಸಮಗ್ರ ಅನುವಾದದಲ್ಲಿ ಏಕರೂಪತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದಲಾದರೂ ಇಂಥ ಕೆಲವು ವಿಶಿಷ್ಟ ಶಬ್ದಗಳತ್ತ ಭಾಷಾಂತರಕಾರರು ಗಮನಕೊಡಬೇಕಾಗುತ್ತದೆ. 'ನಿಮ್ಮನನುದಿನ ನೆನೆಯಲೀಯದು'

ಅನುವಾದದಲ್ಲಿ 'ನಿನ್ನ ಕಡೆಯಲ್ಲ' ಎಂದಾಗಿದೆ. ವಚನದ ಮೊದಲಲ್ಲಿಯೇ ಬರುವ "ಸುಡು! ಸುಡು!!"ವಿನಲ್ಲಿನ ಆಗ್ರಹವೂ 'ಜಲಾಪೋ' (ಸುಟ್ಟುಬಿಡು)ವಿನಲಿಲ್ಲ.

೩. ಮೂಲ: ಅಯ್ಯಾ ನೀನು ನಿರಾಕಾರವಾವಿಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿರ್ದೆ, ಕಾಣಾ"

ಅನುವಾದ: ಹೇ ದೇವ, ಜೋ ತೂ ಬನ್ ನಿರಾಕಾರ್
ಜ್ಞಾನ್ ಬನ್ ಮೈ ಹೋವೂಂ ತೇರಾ ವಾಹನ್"

ಇಲ್ಲಿ 'ವಾಗಿರ್ದಲ್ಲಿ' 'ವಾಗಿರ್ದೆ' ಶಬ್ದಗಳಿಗೆ ಅನುವಾದಕರು 'ತೂ ಬನ್', 'ಮೈ ಹೋ ವೂಂ' ಎಂದು ಬಳಸಿರುವುದು ಅಷ್ಟು ಉಪಯುಕ್ತವೆನಿಸುವುದಿಲ್ಲ. ಅಂದರೆ ನೀನು ಹೀಗೆ ಆಗಿದ್ದರೆ....ಎನ್ನುವುದಕ್ಕೆ ಬದಲಾಗಿ 'ನೀನು ಆಗು' ಎಂದು ಆದೇಶಿಸುವಂತಿದೆ.

ಪ್ರಸ್ತುತ ಮೂಲ ವಚನಗಳಲ್ಲಿನ ಆಡುಮಾತಿನ ಓಘವಾಗಲಿ ಅಥವಾ ನುಡಿಗಟ್ಟಾಗಲಿ ಅನುವಾದದಲ್ಲಿ ಸಮರ್ಪಕವಾಗಿ ಮೂಡಿಬಂದಿರದೇ ಇರುವುದು ಸಹ ಇಲ್ಲಿನ ಪ್ರಮುಖ ಸೋಲು. ಉದಾಹರಣೆಗಳು :

೧. "ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತಿಗಾಗಿ", (ಮೂಲ)
"ಹೇ ದೇವ ಸಪ್ತ ಸಪ್ತ ಜನ್ಮೋಂ ಮೇ.... (ಅನುವಾದ)
'ಸಪ್ತ್ ಸಪ್ತ್' 'ಏಳೇಳು'ವನ್ನು ಪ್ರತಿಬಿಂಬಿಸುವುದಿಲ್ಲ.

೨. "ಬಾರದಿರ್ದೊಡೆ ನಿಮ್ಮಾಣೆ, ನಿಮ್ಮ ಪ್ರಮಥ ರಾಣೆ (ಮೂಲ)
"ತೂ ಹೀ ಬನ್ ಇಸ್ಕಾ"ಗವಾಹ್
ತೇರೇ ಭಕ್ತ್‌ಗಣ್ ಇಸ್ಕಾ ಗವಾಹ್" (ಅನುವಾದ)

'ನಿಮ್ಮಾಣೆ'ಗೆ 'ಗವಾಹ್' ಎಂದು ಅನುವಾದಿಸಿರುವುದು ಬಹಳ ಅಸಂಬದ್ಧ. ಹಿಂದಿಯಲ್ಲಿ 'ಗವಾಹ್' ಎಂದರೆ ಸಾಕ್ಷಿ ಎಂದರ್ಥ; ಆಣೆಗೆ 'ಕಸಮ್' ಎಂಬ ಬೇರೆಯೇ ಶಬ್ದವಿದೆ.

ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ, (ಮೂಲ)
"ತೋ ಕ್ಯಾ ಕರೂಂ ದೇವ್ ; ಕ್ಯಾ ಕರೂಂ?
ಮೈ ಕ್ಯಾ ಕರೂಂ? ಮೈ ಕ್ಯಾ ಕರೂಂ" (ಅನುವಾದ)

ವಿಸ್ತಾರಾನುವಾದಕ್ಕೆ ಉತ್ತಮ ಉದಾಹರಣೆಯಾಗಿ ನಿಲ್ಲಬಲ್ಲ ಈ ಪಂಕ್ತಿಗಳು ಇಷ್ಟಾದರೂ ಮೂಲವನ್ನು ಹಾಗೆಯೇ ಹೇಳುವುದರಲ್ಲಿ ಅಸಮರ್ಥವಾಗಿವೆ. ಕನ್ನಡದ ಒಂದು ಅಭಿವ್ಯಕ್ತಿಯನ್ನು ಹಿಂದಿಯಲ್ಲಿ ತರುವಾಗ ಕೆಲವೊಮ್ಮೆ ಎಷ್ಟು ಕಷ್ಟವಾಗುತ್ತದೆ ಎಂಬುದಕ್ಕೆ ಅನುವಾದಕರು ಇಲ್ಲಿ ಪಟ್ಟಿರುವ ಪ್ರಯಾಸವನ್ನು ನೋಡಬಹುದು.

'ಭಾರತೀಯ ಕವಿತಾ' ೧೯೫೮–೫೯ರ ಸಂಪುಟಕ್ಕೆ ಕನ್ನಡ ಕವಿತೆಗಳ ಅನುವಾದವನ್ನು ಬಿ. ಆರ್. ನಾರಾಯಣ್ ಹಾಗೂ ಬಿ. ವಿ. ಕಾರಂತ ಅವರು ಸಂಯುಕ್ತವಾಗಿ

ಮಾಡಿದ್ದು ಇದು ಗದ್ಯಾನುವಾದವಾಗಿದೆ. ಗದ್ಯಾನುವಾದವಾಗಿರುವುದರಿಂದ ಅನುವಾದಕರಿಗೆ ಮೂಲವನ್ನು ಸ್ವಲ್ಪ ಸ್ವಲ್ಪ ಹಿಂಜಿಕೊಳ್ಳುವ ಅವಕಾಶ ಜಾಸ್ತಿ ಇರುವುದರಿಂದ ಇಲ್ಲಿನ ಅನುವಾದಗಳಲ್ಲೂ ಹಿಂಜಿರುವುದನ್ನು ಕಾಣಬಹುದಾದರೂ ಮೂಲದ ಭಾವಕ್ಕೆ ಕೊರತೆಯನ್ನುಂಟುಮಾಡದಂತೆ ಕನ್ನಡ ಅಭಿವ್ಯಕ್ತಿಯನ್ನು ರಕ್ಷಿಸಿರುವುದು ಇಲ್ಲಿನ ವಿಶೇಷತೆಯಾಗಿದ್ದು ತೃಪ್ತಿಕೊಡುತ್ತದೆ.

ಡಾ. ಎಂ. ಎಸ್. ಕೃಷ್ಣಮೂರ್ತಿಯವರು ತಮ್ಮ 'ಕುವೆಂಪು, ಬೇಂದ್ರೆ' ಎಂಬ ಎರಡು ಪುಸ್ತಕಗಳಲ್ಲಿ ಈ ಇಬ್ಬರು ಮಹಾಕವಿಗಳ ಕೆಲವು ಆಯ್ದ ಕವಿತೆಗಳ ಗದ್ಯಾನುವಾದ ಪ್ರಸ್ತುತಪಡಿಸಿದ್ದು ಇದು ಮುಕ್ತವಾದ ಗದ್ಯಾನುವಾದವಾಗಿದೆ. ಅನುವಾದಕರು ಇಲ್ಲಿ ಸ್ವಲ್ಪ ಸ್ವಾತಂತ್ರ್ಯವನ್ನು ತೆಗೆದುಕೊಂಡು ಮೂಲವನ್ನು ವರ್ಣಿಸುವ ಪ್ರಯತ್ನ ನಡೆಸಿದ್ದಾರೆ. ಒಟ್ಟಿನಲ್ಲಿ, ಹಿಂದೀ ಜಗತ್ತಿಗೆ ಮೊಟ್ಟಮೊದಲು ಕನ್ನಡ ಕವಿಗಳನ್ನು ಪರಿಚಯಿಸಿ ಕೊಟ್ಟ ಪ್ರಯತ್ನಗಳು ಇವು.

ಕನ್ನಡದಿಂದ ಹಿಂದಿಗೆ ಬಂದಿರುವ ಕೆಲವು ಒಳ್ಳೆಯ ಪದ್ಯಾನುವಾದಗಳಲ್ಲಿ ಜಯದೇವಿ ತಾಯಿ ಲಿಗಾಡೆಯವರ 'ಜಯಗೀತೆ'ಯ ಅನುವಾದವೂ ಒಂದು. ಎಸ್. ಶಿವಮೂರ್ತಿ ಸ್ವಾಮಿಯವರು ಬಹಳ ಸುಂದರವಾಗಿ ಈ ಅನುಭಾವಿ ಕವಯಿತ್ರಿಯ ಭಾವನೆಗಳನ್ನು ಹಿಂದಿಯಲ್ಲಿ ಅಭಿವ್ಯಕ್ತಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಹಿಂದೀತನ ಇವರ ಅನುವಾದಗಳಲ್ಲಿ ಎದ್ದು ಕಾಣುವ ಅಂಶ.

೪

ಕನ್ನಡ ಗದ್ಯಸಾಹಿತ್ಯದ ಅನುವಾದ ಹಿಂದಿಯಲ್ಲಿ ಕಾವ್ಯಕ್ಕೆ ಹೋಲಿಸಿದರೆ ಸಾಕಷ್ಟು ಪ್ರಮಾಣದಲ್ಲಾಗಿದ್ದು ಅವುಗಳನ್ನು ವಿಸ್ತೃತವಾಗಿ ಈಗ ಪರಿಶೀಲಿಸಲಾಗುತ್ತಿಲ್ಲವಾದರೂ ಹಿಂದಿಗೆ ಬಂದಿರುವ ಕೃತಿಗಳನ್ನು ಹೆಸರಿಸಿದ್ದೇನೆ.

ಕಾದಂಬರಿಗಳು :

೧. ಶಾಂತಲಾ : ಕೆ. ವಿ. ಅಯ್ಯರ್; ಅನು : ಡಾ. ಹಿರಣ್ಮಯ

೨. ರತ್ನಾಕರ : ಜಿ. ಬ್ರಹ್ಮಪ್ಪ, ಎಂ. ವಿ. ಶ್ರೀನಿವಾಸ್; ಅನು : ಡಾ. ಎಸ್. ಎಸ್. ದಕ್ಷಿಣಾಮೂರ್ತಿ.

೩. ಸಂಧ್ಯಾರಾಗ : ಅನಕೃ ;

೪. ಹಂಸಗೀತೆ : ತರಾಸು ; ಅನು : ಪ್ರತಾಪ್ ಸುಧಾಕರ್

೫. ನಾಯಿನೆರಳು : ಡಾ. ಎಸ್. ಎಲ್. ಭೈರಪ್ಪ.

೬. ವಂಶವೃಕ್ಷ : ಡಾ. ಎಸ್ ಎಲ್. ಭೈರಪ್ಪ; ಅನು : ಡಾ. ವಾಸು. ಬಿ. ಪುತ್ರನ್.

೭. ಗೃಹಭಂಗ: ಡಾ. ಎಸ್. ಎಲ್. ಭೈರಪ್ಪ; ಅನು: ಡಾ. ವಾಸು ಬಿ. ಪುತ್ರನ್.
೮. ಮರಳಿಮಣ್ಣಿಗೆ: ಡಾ. ಶಿವರಾಮ ಕಾರಂತ; ಅನು: ಬಾಬುರಾವ್ ಕುಮಠೇಕರ್.
೯. ಅಳಿದ ಮೇಲೆ: ಡಾ. ಶಿವರಾಮ ಕಾರಂತ; ಅನು: ಗುರುನಾಥ ಜೋಶಿ.
೧೦. ಚೋಮನ ದುಡಿ: ಡಾ. ಶಿವರಾಮ ಕಾರಂತ; ಅನು: ಇಂದಿರಾ ಕೃಷ್ಣಮೂರ್ತಿ. ಡಾ. ಹಿರಣ್ಮಯ.
೧೧. ಕಾಡು: ಶ್ರೀಕೃಷ್ಣ ಆಲನಹಳ್ಳಿ; ಅನು: ಚಂದ್ರಕಾಂತ ಕುಸನೂರ್
೧೨. ಸಂಸ್ಕಾರ: ಡಾ. ಯು. ಆರ್. ಅನಂತಮೂರ್ತಿ. ಅನು: ಚಂದ್ರಕಾಂತ ಕುಸನೂರ್.
೧೩. ಹಂಬಲ: ಅಶ್ವತ್ಥ, ಅನು: ಎಸ್. ರಾಮಚಂದ್ರ.
೧೪. ಕೃಷ್ಣದೇವರಾಯ: ಡಾ. ಸೂರ್ಯನಾಥ್ ಕಾಮತ್; ಅನು: ರಸಿಕ ಪುತ್ತಿಗೆ.
೧೫. ಅನಾದಿ ಅನಂತ: ಶ್ರೀರಂಗ; ಅನು: ಪ್ರೊ. ನಾ. ನಾಗಪ್ಪ.
೧೬. ಉದಯರವಿ: ಬಿ. ಪುಟ್ಟಸ್ವಾಮಯ್ಯ; ಅನು: ಎನ್. ಡಿ. ಕೃಷ್ಣಮೂರ್ತಿ.
೧೭. ಅಪಜಯ: ತ್ರಿವೇಣಿ; ಅನು: ಡಾ. ಎಸ್. ಎಂ. ರಾಮಚಂದ್ರಸ್ವಾಮಿ.
೧೮. ಅಪಸ್ವರ: ತ್ರಿವೇಣಿ; ಅನು: ಡಾ. ಎಸ್. ಎಂ. ರಾಮಚಂದ್ರಸ್ವಾಮಿ.

ಕಥಾ ಸಂಗ್ರಹಗಳು

೧. ಗಲ್ಪವಿಹಾರ: ಅಶ್ವತ್ಥರ ಏಳು ಕನ್ನಡ ಕತೆಗಳ ಅನುವಾದ; ಅನು: ಎಸ್. ರಾಮಚಂದ್ರ.
೨. ಕನ್ನಡ್ ಕೀ ಪ್ರತಿನಿಧೀ ಕಹಾನಿಯಾಂ: ಕನ್ನಡದ ಕೆಲವು ಪ್ರಮುಖ ಕತೆಗಾರರ ಕತೆಗಳ ಹಿಂದೀ ಅನುವಾದ; ಸಂಪಾದಕ. ಡಾ. ಎಂ. ರಾಜೇಶ್ವರಯ್ಯ.
೩. ಕನ್ನಡ್ ಕಹಾನಿಯಾಂ: ಸಂಪಾದಕರು: ಎಲ್. ಎಸ್. ಶೇಷಗಿರಿರಾವ್; ಅನು: ಗುರುನಾಥ್ ಜೋಶಿ.
೪. ಮಲೆನಾಡ ಚಿತ್ರಗಳು: ಕುವೆಂಪು ಅನು: ಎಸ್. ಶಿವಮೂರ್ತಿಸ್ವಾಮಿ.
೫. ತ್ರಿವೇಣೀ ಸಪ್ತಕ್: ತ್ರಿವೇಣಿಯವರ ಏಳು ಕತೆಗಳು; ಅನು: ಡಾ. ಎಸ್. ಎಂ. ರಾಮಚಂದ್ರಸ್ವಾಮಿ.

ನಾಟಕಗಳು:

೧. ತೊಗಲಕ್: ಗಿರೀಶ್ ಕಾರ್ನಾಡ್; ಅನು: ಬಿ. ವಿ. ಕಾರಂತ.
೨. ಕೇಳು ಜನಮೇಜಯ: ಶ್ರೀರಂಗ
೩. ಜಾಳೇಶ: ಡಾ. ಚಂದ್ರಶೇಖರ ಕಂಬಾರ; ಅನು: ರಸಿಕ ಪುತ್ತಿಗೆ.

೪. ಆದಿಜಿನತನಯ : ಜಿ. ಗುಂಡಣ್ಣ; ಅನು : ಎಂ. ಎಸ್. ಮೃತ್ಯುಂಜಯ–ಟಿ. ಜಿ. ಪ್ರಭಾಶಂಕರ್.
೫. ಅಂಗುಲೀಮಾಲ : ಡಾ. ಪ್ರಭುಶಂಕರ ; ಅನು : ಡಾ. ಎಂ. ರಾಜೇಶ್ವರಯ್ಯ, ಪ್ರಧಾನ್ ಗುರುದತ್ತ.
೬. ಮಹಾಶಿಲ್ಪಿ : ಎಚ್. ಬಿ. ಜ್ವಾಲನಯ್ಯ ; ಅನು. ಎಸ್. ರಾಮಚಂದ್ರ.
೭. ರಕ್ತಾಕ್ಷಿ : ಕುವೆಂಪು ; ಅನು : ಡಾ. ಹಿರಣ್ಮಯ.

ಇತರೆ :

೧. ಊರ್ಮಿಳಾ : ವಿಮರ್ಶೆ ; ಡಾ. ಎಂ. ರಾಜೇಶ್ವರಯ್ಯ, ಪ್ರಧಾನ್ ಗುರುದತ್ತ ಅನು : ಇವರಿಂದಲೇ.
೨. ಕರ್ನಾಟಕದ ಶಿವಶರಣೆಯರು : ಮೂಲ: ಸರಸ್ವತಿದೇವಿಗೌಡರ; ಅನು: ಶಂಕರ ರಾವ್ ಕೊಪ್ಪೀಕೇರಿ. ಎಸ್. ಶಿವಮೂರ್ತಿಸ್ವಾಮಿ.
೩. ಪ್ರಮುಥಾಚಾರ್ ದೀಪಿಕಾ : ಮೃತ್ಯುಂಜಯ ಮಹಾಸ್ವಾಮಿಗಳು ; ಅನು ; ಮಂಜಪ್ಪ ಹರ್ಡೇಕರ್.
೪. ವ್ಯಾವಹಾರಿಕ ಕನ್ನಡ : ಎಚ್. ಎಸ್. ಕೃಷ್ಣಸ್ವಾಮಯ್ಯಂಗಾರ್ ; ಅನು : ಪ್ರಧಾನ್ ಗುರುದತ್ತ.
೫. ಬೇಜಗಾ : ವ್ಯಕ್ತಿ, ಸಾಹಿತ್ಯ, (ಒಂದು ಭಾಗದ ಅನುವಾದ) ; ಅನು : ಬಿ. ಎಂ. ದಾಳಪ್ಪ. ಎ. ಎಂ. ರಾಮಚಂದ್ರ.
೬. ಪಂಪಾಯಾತ್ರೆ : (ಪ್ರವಾಸ), ವಿ. ಸೀತಾರಾಮಯ್ಯ; ಅನು : ಪ್ರೊ. ನಾಗಪ್ಪ

—ಇವುಗಳು ಪುಸ್ತಕರೂಪದಲ್ಲಿ ಪ್ರಕಟವಾಗಿರುವ ಗ್ರಂಥಗಳು. ಎಸ್. ಪ್ರಹ್ಲಾದ ರಾವ್ ಅವರ 'ಮಧುವ್ರತ'ದ ಎಲ್ಲ ಪ್ರಬಂಧಗಳನ್ನು ಭಾಲಚಂದ್ರ ಜಯಶೆಟ್ಟಿಯವರು ಅನುವಾದಿಸಿದ್ದು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಡಾ. ಯು. ಆರ್. ಅನಂತಮೂರ್ತಿಯವರ ಪ್ರಸಿದ್ಧ ಕಾದಂಬರಿಯಾದ 'ಭಾರತೀಪುರ'ದ ಹಿಂದೀ ಅನುವಾದವನ್ನು ಲಕ್ನೋದ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಭಾಲಚಂದ್ರ ಜಯಶೆಟ್ಟಿ ಹಾಗೂ ತಿಪ್ಪೇಸ್ವಾಮಿ ಅವರು ಪ್ರಕಟಿಸಿದ್ದಾರೆ. ಉತ್ತರದ ಪತ್ರಿಕೆಗಳಲ್ಲೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಮೊಟ್ಟಮೊದಲ ಕನ್ನಡ ಕಾದಂಬರಿ ಇದಾಗಿದ್ದು ಕನ್ನಡ ಕೃತಿಗಳ ಬಗೆಗೆ ಅಲ್ಲಿಯ ಓದುಗರ ಕುತೂಹಲವನ್ನು ಕೆರಳಿಸಿದೆ. ಪೂರ್ಣಚಂದ್ರ ತೇಜಸ್ವಿ, ಅನಂತಮೂರ್ತಿ, ಶ್ರೀ ಕೃಷ್ಣ ಆಲನಹಳ್ಳಿ, ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಕತೆಗಳನ್ನು, ಡಾ. ಹಾ.ಮಾ. ನಾಯಕ್, ಎಚ್ಚೆಸ್ಕೆ, ಹಾಗೂ ರಾಮರಾವ್‌ರವರ ಪ್ರಬಂಧಗಳನ್ನು ಬಿಡಿಬಿಡಿಯಾಗಿ ಪ್ರಕಟಿಸುವದರ ಮೂಲಕ ಭಾಲಚಂದ್ರ ಜಯಶೆಟ್ಟಿ ಹಾಗೂ ತಿಪ್ಪೇಸ್ವಾಮಿ ಅವರು ಇತ್ತೀಚಿನ ಕನ್ನಡ ಬರಹಗಳ ಬಗೆಗೆ ಹಿಂದಿ ಓದುಗರಲ್ಲಿ ಆಸಕ್ತಿ ಮೂಡಿಸಿದ್ದಾರೆ.

ಇಷ್ಟಲ್ಲದೆ ಹಿಂದಿಯ ಅನೇಕ ಪತ್ರಿಕೆಗಳಲ್ಲಿ ಕನ್ನಡದ ಕತೆಗಳು ಪ್ರಕಟವಾಗಿದ್ದು, ಸಂಗ್ರಹಗಳ ರೂಪದಲ್ಲಿ ಈವರೆಗೂ ಅವು ಬಂದಿಲ್ಲವಾದ್ದರಿಂದ ಕನ್ನಡದಿಂದ ಹಿಂದಿಗೆ ಆಗಿರುವ ಅನುವಾದಗಳನ್ನು ಇಷ್ಟೇ ಎಂದು ಲೆಕ್ಕಹಾಕುವುದು ಪ್ರಯಾಸದ ಕೆಲಸವಾಗಿದೆ.

ಅಶ್ವತ್ಥರ ಪ್ರಸಿದ್ಧ ಕಾದಂಬರಿ 'ಹಂಬಲ', 'ಹೌಸಲಾ' ಎಂಬ ಹೆಸರಿನಲ್ಲಿ ಹಿಂದಿಯಲ್ಲಿ ಸಾಕಷ್ಟು ಸುಂದರವಾಗಿ ಅನುವಾದವಾಗಿರುವ ಕೃತಿ. ಅನುವಾದಕರು ಪ್ರೊ. ಎಸ್. ರಾಮಚಂದ್ರ. ಮೂಲದ ವಾಕ್ಯಬಂಧಗಳನ್ನು ಹಿಂದಿಯಲ್ಲಿ ಸಾಕಷ್ಟು ಸರಳಗೊಳಿಸಿಕೊಂಡಿದ್ದರೂ ಭಾವವನ್ನು ಸುರಕ್ಷಿತವಾಗಿಟ್ಟುಕೊಂಡು ಹಿಂದಿಯ ಜಾಯಮಾನದ ರೀತಿಯಲ್ಲಿ ಸರಾಗವಾಗಿ ಓದಿಸಿಕೊಳ್ಳುವ ಕಾದಂಬರಿ ಇದಾಗಿದ್ದು ಮೂಲಕ್ಕೆ ಹತ್ತಿರವಾಗಿದೆ.

ಆದರೆ ಇಲ್ಲೂ ಕೆಲವು ದೋಷಗಳಾಗಿದ್ದು ಅವುಗಳನ್ನು ಗಮನಿಸಬಹುದಾಗಿದೆ—

೧ ಮೂಲ: "ಅವನ ಕೈ ಯಂತ್ರದಂತೆ ಪುಸ್ತಕ, ಮಡಿಕೆ ಬಟ್ಟೆ, ಕನ್ನಡಿ, ಬಾಚಣಿಗೆ, ಸಾಬೂನು, ಮೊದಲಾಗಿ ಹಲವಾರು ಹುಡಿಪುಡಿ ಸಾಮಾನುಗಳನ್ನು ಪೆಟ್ಟಿಗೆಗೆ ಭರ್ತಿ ಮಾಡುತ್ತಿತ್ತು; ಈಗ ಹಾಸಿಗೆಯನ್ನು ಸುತ್ತಿ ಪಟ್ಟೆ ಬಿಗಿದು ಕಟ್ಟುತ್ತಿತ್ತು. ಬೇಡವಾದ ಕಾಗದ ಪತ್ರಗಳನ್ನು ಹರಿದುಹಾಕುತ್ತಿತ್ತು."

ಅನುವಾದ: "ಮಶೀನೀ ಗತೀ ಸೇ ಉಸಕೇ ಹಾಥ್ ಚಲ್‌ರಹೇ ಹೈಂ. ಕಿತಾಬೇಂ, ಧೋಬಿ ಕೆ ಧುಲೇ ಕಪಡೇ, ಆಯಿನಾ, ಕಂಘಿ, ಸಾಬೂನ್, ಆದಿ ಬಕ್ಸೇ ಮೇ ಭರೀ ಜಾ ರಹೀ ಹೈಂ. ಬಿಸ್ತರ್ ಭೀ ಲಪೇಟಾ ಗಯಾ. ಫಾಲತೂ ಚಿಟ್ಠಿ—ಪತ್ರಿಯಾಂ ಫಾಡೀ ಜಾ ರಹೀಂ. ಯಾತ್ರಾಕೀ ತಯ್ಯಾರಿಯಾಂ ಜಾರೀ ರಹೀಂ."

ಮೂಲದಲ್ಲಿ ಕೈ ಕರ್ತೃ. ಮೂಲ ಲೇಖರು ಕೈ ಯಾಂತ್ರಿಕವಾಗಿ ಮಾಡುತ್ತಿದ್ದ ಎಲ್ಲ ಸಿದ್ಧತೆಗಳನ್ನು ನೇರವಾಗಿ, ಸ್ಪಷ್ಟವಾಗಿ ಹೇಳುತ್ತ ಹೋಗುತ್ತಾರೆ. ಇಲ್ಲಿನ ವಾಕ್ಯಗಳೆಲ್ಲ ಕರ್ತೃವಾಚ್ಯದಲ್ಲಿದ್ದು ಹಿಂದಿಯಲ್ಲಿ ಹೀಗೆಯೇ ಉಳಿಯದೇ ಕರ್ಮವಾಚ್ಯಗಳಾಗಿ ಬಿಟ್ಟಿರುವುದರಿಂದ 'ಕೈ'ನ ಯಾಂತ್ರಿಕತೆಗೆ ಮೂಲ ಲೇಖಕರು ಕೊಟ್ಟಿರುವ ಒತ್ತು ಇಲ್ಲಿ ಇಲ್ಲವಾಗಿದೆ. ಹಾಗೆ ನೋಡಿದರೆ ಮೂಲದಂತೆಯೇ ವಾಕ್ಯ ಸರಣಿಗಳನ್ನು ಹಿಂದಿಯಲ್ಲೂ ಉಳಿಸಿಕೊಳ್ಳುವ ಸಾಧ್ಯತೆಗಳು ಇಲ್ಲೂ ಇದ್ದುವು.

೨. ಅನುವಾದಕ ತನ್ನ ಅನುವಾದದಲ್ಲಿ ತನ್ನ ಪರವಾಗಿ ಯಾವ ಅಂಶವನ್ನೇ ಆಗಲೀ ಸೇರಿಸುವ—ಅವನು ಎಷ್ಟೇ ವಿದ್ವಾಂಸನಾಗಿರಲಿ—ಬಿಡುವ ಅಪಾಯಕಾರಿ ಕೆಲಸವನ್ನು ಮಾಡಬಾರದು. ಈ ಅನುವಾದದಲ್ಲೂ ಅಲ್ಲಲ್ಲಿ ಸೇರಿಸುವ, ಬಿಡುವ ತಪ್ಪುಗಳಾಗಿದ್ದು ಒಂದನ್ನು ನೋಡಬಹುದು—

ಮೂಲ: ನಿನ್ನದು ಅಜೇನಪ್ಪ ನಿಮ್ಮ ಕನ್ನಡದಲ್ಲೋ, ಸಂಸ್ಕೃತದಲ್ಲೋ....ಆ ಏಕಾಗ್ರಚಿತ್ತತೆ, ಅದು ನನಗಿದ್ದರೆ ಮೊದಲನೆಯ ರ್‍ಯಾಂಕನ್ನು ಯಾವ ಪರೀಕ್ಷೆಯಲ್ಲೂ ಬಿಟ್ಟು ಕೊಡ್ತಾ ಇರಲಿಲ್ಲ—ನೀನು ಆ ಬಂಗಾಳಿಗೆ ಹೋದವರ್ಷ ಬಿಟ್ಟುಕೊಟ್ಟ ಹಾಗೆ. ಆದರೆ ಹಾಳಾದ್ದು ಪುಸ್ತಕ ತೆರೆದರೆ ಸಾಕು...."

ಅನುವಾದ: ತುಮ್ಹಾರಿ ಏಕಾಗ್ರತಾ ಕೀ ಬಲಿಹಾರೀ ಹೈ. ಅಗರ್ ಮೈ ನಿಜೀ ವೃತ್ತಿಯೋಂ ಕೋ ಕುಮ್ಹಾರಿ ತರಹ್ ಕೇಂದ್ರಿತ್ ಕರ್‌ಪಾತಾ, ತೋ ಕಿಸೀ ಭೀ ಪರೀಕ್ಷಾ ಮೇ ಪ್ರಥಮ್ ಶ್ರೇಣಿ ದೂಸರಾ ನಹೀಂ ಮಾರ್ ಸಕತಾ. ಪಿಛಲೇ ವರ್ಷ್ ತುಮನೇ ಉಸ್ ಬಂಗಾಲೀ ಕೇ ಹಕ್ ಮೇ ಛೋಡ್ ದಿಯಾ ಥಾ. ತುಮ್ಹಾರಿ ಭೂಲ್ ನಾ ದುಹರಾತಾ. ಲೇಕಿನ್ ಕಬ್ ಕಿತಾಬ್ ಲೇ ಪನ್ನಾ ಉಲಟನೇ ಲಗತೇ ಹೀ...."

ಉದ್ಧರಿಸಿರುವ ವಾಕ್ಯಗಳ ಮೊದಲಲ್ಲಿ ಬರುವ 'ನಿಮ್ಮ ಕನ್ನಡದಲ್ಲೋ ಸಂಸ್ಕೃತ ದಲ್ಲೋ' ಹಿಂದಿಗೆ ಅನುವಾಗದೇ ಉಳಿದರೆ ಹಿಂದಿಯಲ್ಲಿರುವ 'ತುಮ್ಹಾರಿ ಭೂಲ್ ನಾದುಹರಾತಾ' ಕನ್ನಡದಲ್ಲಿಲ್ಲ....'ಹೋದವರ್ಷ ಬಿಟ್ಟುಕೊಟ್ಟ ಹಾಗೆ' ಎಂಬುದು ಹಿಂದಿಯಲ್ಲಿ ಪೂರ್ಣ ಭೂತಕಾಲದಲ್ಲಿ 'ಬಿಟ್ಟುಕೊಟ್ಟೆ' ಎಂದಾಗಿದೆ.

೩. ಮೂಲ: ಇನ್ನೇನೋ ನಿನ್ನ ಗೋಳು? ಕಡೇ ಪರೀಕ್ಷೆಗೆ ಕೂತು ಪ್ರಾಯ ಬಂದಿರುವ ಪುರುಷಾಧಮನಿಗಿರುವುದು? ಮುಂದೇನು ಅಂತ ಹೊಸ ಮುಂಡೆ ಹಾಗೆ ಮುಖ ಮುಚ್ಚಿಕೊಂಡು ಗುಳುಗುಳು ಅಂತ ಅತ್ತಾ ಇದಿಯೇನೋ ಮೂರ್ಖ?

ಅನುವಾದ: ಯಹ್ ಕೌನ್‌ಸಾ ನಯಾ ಪಚಡಾಹೈ; ಭಾಯಿ, ಅಂತಿಮ್ ಪರೀಕ್ಷಾ ಮೇ ಬೈಠೇ ಪ್ರಾಪ್ತ-ವಯ್ ಪುರುಷಾರ್ಥ್ ಕೀ ಪೀಡಾ, ಇಸಕೇ ಬಾದ್ ಆಗೇ ಕೇ ಬಾದಲ್ ಗಿರ್ ಆಯೇ ಹೈಂ ಕ್ಯಾ? ಅಸಹಾಯ್ ವಿಧವಾ ಕೀ ಭಾಂತಿ ಚೆಹರಾ ಛಿಪಾಯೇ ಸಿಸಕಿಯಾಂ ಭರ್ ರಹೇ ಹೋ? ವಾಹ್ ರೇ ಬುದ್ಧಿಮಾನೀ?

ಈ ಭಾಗದಲ್ಲಾಗಿರುವ ಒಂದೆರಡು ಅನರ್ಥಗಳನ್ನು ನೋಡಿ–ಕನ್ನಡದ 'ಪುರುಷಾಧಮ' ನನ್ನು ಹಿಂದಿಯಲ್ಲಿ 'ಪುರುಷಾರ್ಥ' ಎಂದು ಅರ್ಥೈಸಿದ್ದಾರೆ! ಮೂಲದ ಈ ವಾಕ್ಯದಲ್ಲಿ ಸೂಚ್ಯವಾಗಿರುವುದನ್ನು ಅನುವಾದದಲ್ಲಿ 'ಪೀಡಾ' ಶಬ್ದದ ಮೂಲಕ ವಾಚ್ಯಗೊಳಿಸ ಬೇಕಾಗಿರಲಿಲ್ಲ. 'ಮುಂದೇನು, ಅನ್ನುವುದಕ್ಕೆ ಇಸಕೇ ಬಾದ್ ಆಗೇ ಕೇ ಬಾದಲ್ ಘಿರ್ ಆಯೇ ಹೈಂ ಕ್ಯಾ' ಎಂದು ಇಷ್ಟು ಲಂಬಿಸುವ ಆವಶ್ಯಕತೆ ಇರಲಿಲ್ಲ. 'ಹೊಸ ಮುಂಡೆ'ಗೆ 'ಅಸಹಾಯಕ ವಿಧವೆ' ಎಂಬ ಅನುವಾದ ಎಷ್ಟು ಸಮಂಜಸ?

೪. "ಅವನ ವಿಶ್ವಾಸ ಹಾಗೆ" ಎಂಬ ವಾಕ್ಯದ ವಿಸ್ತಾರ ಅನುವಾದ ಹೀಗಿದೆ.

"ವಹ್‌ಭೀ ಬಡಾ ಅನುರಾಗಿ, ಬಡಾ ಮಿಲನ್‌ಸಾರ್‌ಥಾ."

ಅಶ್ವತ್ಥ ಅವರು ತಮ್ಮ ಮೂಲ ಕಾದಂಬರಿಯಲ್ಲಿ ಹೇರಳವಾದ ನುಡಿಗಟ್ಟುಗಳನ್ನು, ಬೈಗಳನ್ನು, ಆಧುನಿಕ ಯುವ ಸಮಾಜದಲ್ಲಿ ಪ್ರಯುಕ್ತಗೊಳ್ಳುವ ಶಬ್ದಾವಳಿಗಳನ್ನು, ಗಾದೆಗಳನ್ನು ಎಷ್ಟು ಸಹಜವಾಗಿ ನಿಸರ್ಗಳವಾಗಿ ಉಪಯೋಗಿಸುತ್ತ ಹೋಗುತ್ತಾರೆಂದರೆ, ಅವುಗಳನ್ನೆಲ್ಲ ಉಳಿಸಿಕೊಂಡು ಅನುವಾದ ಮಾಡುವುದೆಂದರೆ ನಿಜಕ್ಕೂ ಭಾಷಾಂತರಕಾರನಿಗೆ ಸವಾಲೇ ಸರಿ. ಆದರೆ ಈ ಕಾದಂಬರಿಯ ಮೂಲ ಸೊಗಡನ್ನು ಉಳಿಸಿಕೊಂಡು ಮೇಲೆ ಉಲ್ಲೇಖಿಸಿದ ಎಲ್ಲವನ್ನು ಹಿಂದೀ ಜಾಯಮಾನಕ್ಕೆ ತಕ್ಕಂತೆ ಉಪಯೋಗಿಸಿ ನಿಜಕ್ಕೂ ಭಾಷಾಂತರಕಾರರಾದ ರಾಮಚಂದ್ರ ಅವರು ಅಪೂರ್ವ

ಪ್ರಯೋಗವನ್ನೇ ಮಾಡಿದ್ದಾರೆ. ಅವರ ಭಾಷಾದಕ್ಷತೆಗೆ, ಅನುವಾದ ಕೌಶಲ್ಯಕ್ಕೆ ಒಂದೆರಡು ಉದಾಹರಣೆಗಳನ್ನು ನೋಡಬಹುದು :

೧. ಮೂಲ : "ಸರಕಾರ ಟನ್‌ಗಟ್ಲೆ ಹಣ ಚಲ್ತಾ ಇದೆ ಎಲ್ಲೆಲ್ಲೂ. ಸಿಕ್ಕಿದೋರಿಗೆ ಸೀರುಂಡ, ಹುಚ್ಚು ಮುಂಡೆ ಮದುವೇಲಿ ಉಂಡೋನೆ ಜಾಣ. ಹ್ಹಾಹ್ಹಹಾ !"

ಅನುವಾದ : "ಸರ್‌ಕಾರ್ ಭೀ ಚಾರೋಂ ಓರ್ ಅರಬೋಂ ರುಪಯೇ ಲಗಾ ರಹೀ ಹೈ. ಅಂಧೇ ಕೇ ಹಾಥ್ ಬಟೇರ್ ಲಗ್‌ಗಯೀ ಹೈ. ಬಹತೀ ಗಂಗಾ ಮೇ ಹಾಥ್ ಧೋ ಲೇನಾ ಹೀ ಅಕಲ್‌ಮಂದೀ ಹೈ."

೨. ಮೂಲ : "ನೀನೂ ಗಾಂಧೀ ಮರಿ ನೆಹರೂ ಮೊಟ್ಟೆಹಾಗೆ ಆಡಬೇಡ."

ಅನುವಾದ : "ತುಮ್ ಗಾಂಧೀ ಕಾ ಚೇಲಾ ಯಾ ನೆಹರೂ ಕೀ ಪೂಂಛ್ ಮತ್ ಬನೋ."

೩. ಮೂಲ : "ಚಿಂತೆ ಯಾಕೇ ಕಾಂತೆ ಪೇಳೌ, ತೋರು ಮುಖಾವನೂ"

ಅನುವಾದ : "ಖಾಮೋಶೀ ನ ಭಲೀ ಬಾಲಮಾ, ಸೂರತ್ ದಿಖಲಾ ದೇ."

೪. ಮೂಲ : "ಇಂಜನಿಯರ್ ಅಂತ ಮುದ್ರೆ ಬಿತ್ತು ಅಂದ್ರೆ ಆಯ್ತು ಮುಂದೆಲ್ಲ ಮಜವೇ."

ಅನುವಾದ : "ಇಂಜನಿಯರೀ ಕಾ ಠಪ್ಪಾ ಲಗ್ ಗಾಯಾ ತೋ ಬಸ್ ಪೀಛೇ ಪಾಂಚೋಂ ಉಂಗಲಿಯಾಂ ಘೀ ಮೇ."

೫. ಮೂಲ : "ಅವನು ಹಿಂತಿರುಗಿ ನಸುನಕ್ಕ."

ಅನುವಾದ : ವಹ್ ಜವಾಬ್ ಮೇಂ ಮುಸ್ಕುರಾನೇ ಲಗಾ.

ಹಂಬಲದ ಈ ಅನುವಾದದಲ್ಲಿರುವ ಇಂಥ ಅಭಿವ್ಯಕ್ತಿ ತುಂಬ ಖುಷಿಯನ್ನು ಕೊಡುತ್ತದೆ. ಮತ್ತೆ ಮತ್ತೆ ಓದಬೇಕೆನಿಸುತ್ತದೆ. ಈ ದೃಷ್ಟಿಯಿಂದ ಇಲ್ಲಿರುವ ಉತ್ತಮ ಗುಣಗಳಿಗೆ ಹೋಲಿಸಿದರೆ ತಪ್ಪುಗಳು ಮುಚ್ಚಿಕೊಂಡು ಬಿಡುತ್ತವೆ.

ಚಂದ್ರಕಾಂತ ಕುಸನೂರ್ ಅವರು ಶ್ರೀ ಕೃಷ್ಣ ಆಲನಹಳ್ಳಿಯವರ ಪ್ರಸಿದ್ಧವಾದ ಕಾದಂಬರಿ 'ಕಾಡು'ವನ್ನು 'ಜಂಗಲ್' ಎಂಬ ಹೆಸರಿನಿಂದ ಹಿಂದಿಗೆ ಅನುವಾದಿಸಿದ್ದು. ಇದು ತುಂಬ ಅಸಮರ್ಪಕವಾದ, ಅನುವಾದವಾಗಿರುವುದರಿಂದ ಕನ್ನಡದ ಒಂದು ಒಳ್ಳೆಯ ಕೃತಿಗೆ ಅನ್ಯಾಯವಾಗಿರುವುದಷ್ಟೆ ಅಲ್ಲ, ಒಬ್ಬ ಲೇಖಕನನ್ನು ಬಹಳ ಕೆಟ್ಟದಾಗಿ ಹಿಂದೀ ಜನಕ್ಕೆ ಪರಿಚಯಿಸಲಾಗಿದೆ. ಕುಸನೂರ್ ಅವರು ಅನುವಾದ ಕಾರ್ಯವನ್ನು ಒಂದು ಗಂಭೀರ ಕಾರ್ಯವೆಂದು ಬಹುಶಃ ಪರಿಗಣಿಸದೇ ಇರುವುದರಿಂದಲೋ ಏನೋ ಇಲ್ಲಿನ ಅನುವಾದ ಕೃತಕವಾಗಿ ತನ್ನದೇ ಆದ ವಿಚಿತ್ರಧಾಟಿಯಲ್ಲಿ ಸಾಗುತ್ತ ಹೋಗುತ್ತದೆ. 'ಜಂಗಲ್' 'ಕಾಡು'ವಿನ ತೀರ ಸರಳಾನುವಾದವಾಗಿದ್ದು ಮೂಲದ ಬಿಗಿ ಹಾಗೂ ಅಲ್ಲಿಯ ಭಾಷಾಬಂಧ ಸ್ವಲ್ಪವೂ ಉಳಿಯದೆ ಅನಾವಶ್ಯಕವಾಗಿ ವಾಕ್ಯಗಳನ್ನು ತುಂಡರಿಸಿ ಕೊಂಡು ಸರಳಗೊಳಿಸುತ್ತ ಹೋಗಿರುವುದು ಇಲ್ಲಿಯ ಅನುವಾದದ ಮುಖ್ಯ ಸೋಲಾಗಿದೆ. ಕನ್ನಡದ ಕೆಲವು ವಿಶಿಷ್ಟ ಪ್ರಯೋಗಗಳನ್ನು ಹಿಂದಿಯ ಜಾಯಮಾನಕ್ಕೆ ತಕ್ಕಂತೆ

ತಾರಪೇ ಇರುವುದರಿಂದಾಗಿ ಸ್ಪಷ್ಟತೆಯಾಗಿಯೂ ಮೂಲ ಕೃತಿಗೆ ಇಲ್ಲಿ ಬಹಳಷ್ಟು ಅನ್ಯಾಯವಾಗಿದೆ. ಮೂಲ ಕೃತಿ 'ಕಾಡು'ವಿನಿಂದ ಅನುವಾದಿತ ಕೃತಿ 'ಜಂಗಲ್' ಯಾವ ಯಾವ ಮಟ್ಟದಲ್ಲಿ ದೂರ ಸಂದಿದೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ನೋಡಬಹುದು—

೧. ಮೂಲ: 'ನಾಳೆಯ ಹಬ್ಬಕ್ಕೆ ಈಗಾಗಲೇ ಮನೆತುಂಬ ಸಡಗರದ ಸಿದ್ಧತೆ ನಡೆಯುತ್ತಿದ್ದುದು ಕಂಡ ಕಿಟ್ಟಿಗೆ ತುಂಬ ಖುಷಿಯಾಯಿತು.'

ಅನುವಾದ: 'ಕಲ್ ತ್ಯೋಹಾರ್ ಕಾ ದಿನ ಹೈ. ಘರ್ ಮೇ ಸಫಾಯಿ ಚಲ್ ರಹೀ ಹೈ. ಕಿಟ್ಟಿ ಕೋ ಯಹ್ ದೇಖ್‌ಕರ್ ಬಹುತ್ ಖುಷೀ ಹುಇ.'

ಇಲ್ಲಿ ಮೂಲದ ಒಂದು ವಾಕ್ಯ ಮೂರು ವಾಕ್ಯಗಳಾಗಿದ್ದು, ಸರಳವಾಗಿದೆ. "ಸಡಗರದ ಸಿದ್ಧತೆಗಳು" ಅನ್ನು "ಮನೆಯಲ್ಲಿ ಬಹಳ ಸಂಭ್ರಮದಿಂದ ಗುಡಿಸುವ-ಸಾರಿಸುವ ಕೆಲಸಗಳು ಸಾಗಿವೆ" ಎಂದು ಅನುವಾದಿಸಿದ್ದಾರೆ. ಅನುವಾದದಲ್ಲಿನ ಈ ಸಡಿಲ ಬಂಧದಿಂದಾಗಿ ಮೂಲದ ಪ್ರಭಾವ ಇವುಗಳಿಂದ ಆಗುವುದಿಲ್ಲ.

೨. ಮೂಲ: "ಹಜಾರವನ್ನೆಲ್ಲ ತೊಳೆದು ಅಕ್ಕಿ-ಹಿಟ್ಟಿನ ರಂಗೋಲೆ ಬರೆಯುತ್ತ ಕೂತಿದ್ದ ಅತ್ತೆಯ ಹತ್ತಿರ ಹೋಗುತ್ತಿದ್ದ ಹಾಗೆ 'ತುಳಿಬ್ಯಾಡ ಕಿಟ್ಟಿ, ವಸಿ ತಡಿ ಬಂದೆ' ಎಂದು ನುಗ್ಗುತ್ತಿದ್ದ ಕಿಟ್ಟಿಯನ್ನು ತಡೆದರು."

ಅನುವಾದ: "ಮಾಮೀ ದಾಲಾನ್ ಧೋಕರ್ ಚಾವಲ್ ಕೇ ಆಟೇಸೆ ರಂಗೋಲಿ ಪೂರ್ ರಹೀ ಥೀ. ಕಿಟ್ಟೀ ಕೋ ಪಾಸ್ ಆತೇ ದೇಖ್ ಮಾಮಿನೇ ಹಂಸತೇ ಹುಏ ಕಹಾ."

ಇಲ್ಲಿ 'ನುಗ್ಗುತ್ತಿದ್ದ ಕಿಟ್ಟಿಯನ್ನು' ಎಂಬುದು 'ಹತ್ತಿರ ಬರುತ್ತಿದ್ದ ಕಿಟ್ಟಿಯನ್ನು' ಎಂದಾಗಿದೆ. ಮೂಲದಲ್ಲಿ ಕಿಟ್ಟಿ ಎಲ್ಲಿ ರಂಗೋಲಿಯನ್ನು ತುಳಿದು ಬಿಡುತ್ತಾನೋ ಎಂಬ ಆತಂಕವಿದ್ದು ಅವನು ನುಗ್ಗಿ ಬರುವುದನ್ನು ಬೇಗ ತಡೆಯಲು ಪ್ರಯತ್ನಿಸಿದರೆ, ಅನುವಾದದಲ್ಲಿ ಆವಳಿಗೆ ತನ್ನ ರಂಗೋಲಿಯ ಬಗೆಗೆ ಯಾವ ಕಾಳಜಿಯೂ ಇಲ್ಲವೇನೋ ಎನ್ನುವಂತೆ 'ನಗುತ್ತ ಹೇಳಿದಳು' ಎಂಬುದನ್ನು ಅನುವಾದಕರು ತಮ್ಮ ಪರವಾಗಿ ಸೇರಿಸಿದ್ದಾರೆ.

೩. ಮೂಲ: "ನಾಗಿಯ ಜೊತೆ ಹೋಗಿ ಬರುತ್ತಿದ್ದ."

ಅನುವಾದ: 'ವಹ್ ನಾಗೀ ಕೇ ಸಾಥ್ ಸ್ಕೂಲ್ ಚಲಾ ಜಾತಾ ಥಾ'. 'ಹೋಗಿ ಬರುವ' ಕ್ರಿಯೆ ಮೂಲದಲ್ಲಿದ್ದರೆ ಹಿಂದಿಯಲ್ಲಿ 'ಹೋಗುತ್ತಿದ್ದ' ಎಂದಾಗಿದೆ.

೪. ಮೂಲ: "ಕೆಲಸ ಬಿಟ್ಟು ಕಿಟ್ಟಿಯ ಸಂಭ್ರಮವನ್ನ ಕಣ್ಣಲ್ಲಿ ತುಂಬಕೊಳ್ಳುತ್ತ ನಿಂತಿದ್ದ ಕಮಲಮ್ಮನಿಗೆ ಇನ್ನೂ ಹೂ ತರದೇ ಇದ್ದುದು...."

ಅನುವಾದ: ಕಾಮ್ ಕಾಜ್ ಛೋಡ್ ಕಮಲಾ ಉಸೇ ದೇಖ್ ರಹೀ ಥೀ.

(ಕೆಲಸಕಾರ್ಯವನ್ನೂ ಬಿಟ್ಟು ಕಮಲಾ ಅವನನ್ನು ನೋಡುತ್ತಿದ್ದಳು) ಮೂಲದ 'ಸಂಭ್ರಮ'ದಲ್ಲಿನ ಕಿಟ್ಟಿಯ ಸಂತೋಷವಾಗಲಿ, 'ಕಣ್ಣಲ್ಲಿ ತುಂಬಿಕೊಳ್ಳುತ್ತ'ದಲ್ಲಿರುವ

ಕಮಲಮ್ಮನ ತನ್ಮಯತೆ, ಪ್ರೀತಿಯಾಗಲಿ ಬಂದಿಲ್ಲ. ಕಣ್ಣಿನಲ್ಲಿ ತುಂಬಿಕೊಳ್ಳುವುದರಲ್ಲಿರುವ ಅವಳ ವಾತ್ಸಲ್ಯ 'ನೋಡುತ್ತಿದ್ದಳು'ವಿನಲ್ಲಿ ಮೂಡಲು ಸಾಧ್ಯವೇ ಇಲ್ಲ. 'ಕಣ್ಣಲ್ಲಿ ತುಂಬಿಕೊಳ್ಳುವುದು' ಒಂದು ನುಡಿಗಟ್ಟಾಗಿದ್ದು ಹಿಂದಿಯಲ್ಲೂ ಇಂಥದೇ ನುಡಿಗಟ್ಟೊಂದನ್ನು ಬಳಸಬೇಕಾಗಿತ್ತು.

೫. ಮೂಲ : "ಅತ್ತೆ ಎಷ್ಟು ಹೇಳಿದರೂ...."

ಅನುವಾದ : "ಮಾಮಿೀ ಕೇ ಮನಾ ಕರನೇ ಪರ್ ಭೀ"

(ಅತ್ತೆ ಬೇಡವೆಂದರೂ ಸಹ)

'ಎಷ್ಟು' ಶಬ್ದದಲ್ಲಿ ಬೇಡ ಬೇಡ ಎಂದು ನೂರುಸಾರಿ ಹೇಳಿದ ಛಾಯೆ ಇದ್ದರೆ ಅನುವಾದದಲ್ಲಿ ಅತ್ತೆ ಕಾಟಾಚಾರಕ್ಕೆ ಬೇಡವೆಂದು ಹೇಳಿದರೂ ಸಹ ಎಂದಾಗಿದ್ದು 'ಎಷ್ಟು' ತನ್ನ ಒತ್ತನ್ನು ಕಳೆದುಕೊಂಡಿದೆ. 'ಎಷ್ಟು'ಗೆ ಹಿಂದಿಯಲ್ಲಿ 'ಲಾಖ್ ಮನಾ ಕರನೇ ಪರ್‌ಭೀ' ಎಂದು ಅನುವಾದಿಸಬಹುದಾಗಿತ್ತು.

೬. ಮೂಲ : ಹೊತ್ತು ಮುಳುಗಿತ್ತು

ಅನು : ದಿನ್ ಢಲ್‌ರಹಾ ಥಾ. (ಹೊತ್ತು ಮುಳುಗುತ್ತಾ ಇತ್ತು) ಮೂಲದ ಪೂರ್ಣ ಭೂತಕಾಲ ಹಿಂದಿಯಲ್ಲಿ ಹಾಗೆಯೇ ಉಳಿದಿಲ್ಲ.

೭. ಮೂಲ : "ಕಿಟ್ಟಿಗೆ ಸಿಳ್ಳ 'ಸೆತ್ತೆಸೆದೆ, ಎಂದುದು 'ಹಾವು' ಎಂದು ತಿಳಿದಾಗ ಭಯವಾಯಿತು. ಹಾವು ಕಚ್ಚಿ ಸತ್ತ ಅಜ್ಜನನ್ನು ಸುಟ್ಟುಬಂದುದು ನೆನಪಾಯಿತು. ಅಂದು ಸಂಜೆ ಹೆಪ್ಪುಗಟ್ಟಿದ ಹಳದಿ ಕೆಂಪಿನ್ನೂ ಕಿಟ್ಟಿಯ ಕಣ್ಣಲ್ಲಿ ಕರಗದೆ ನಿಂತಿತ್ತು."

ಅನುವಾದ : "ಸಿಲ್ ನೇ 'ಫಾಸ್‌ಫೂಸ್' ಕಹಾ ತೋ ಕಿಟ್ಟೀಕೋ ಸಾಂಪ್ ಕಾ ಆಭಾಸ್ ಹುವಾ, ವಹ್ ಡರ್‌ಗಯಾ. ಸಾಂಪ್ ಕೇ ಕಾಟನೇ ಸೇ ಉಸ್‌ಕೇ ದಾದಾ ಕೀ ಮೃತ್ಯು ಹುಈ ಥೀ. ಇಸಕೇ ಸಾಥ್‌ಹೀ ಉನ್ಹೇಂ ಜಲಾನೇ ಕೀ ಬಾತ್ ಉಸೇ ಯಾದ್ ಹೋ ಆಯಿ. ಉಸ್ ಶಾಮ್‌ಕೆ ನಾ ಪಿಘಲನೇವಾಲೇ ಲಾಲ್-ಪೀಲೇ ರಂಗ್ ಕಿಟ್ಟೀ ಕೀ ಆಂಖೋಂ ಮೇ ಉತರ್ ಗಯೇ ಥೆ.

—ಮೂಲದ ಮೂರು ವಾಕ್ಯಗಳಲ್ಲಿ ಎಷ್ಟರ ಮಟ್ಟಿನ ಸಂಬಂಧವಿದೆ ಎಂದರೆ ಕಿಟ್ಟಿ ಅವೆಲ್ಲದರಿಂದ ಭಯಭೀತನಾಗುತ್ತ ಹೋಗುವ ಕ್ರಿಯೆ ಸಾಂದ್ರವಾಗುತ್ತ ಹೋಗಿ ಓದುಗರೂ ಸಹ ಅವನೊಡನೆ ಸಾಗುತ್ತಾರೆ. ಆದರೆ ಹಿಂದಿಯಲ್ಲಿ ಈ ಮೂರು ವಾಕ್ಯಗಳು ಒಂದಕ್ಕೊಂದು ಸಂಬಂಧವಿಲ್ಲದಂತೆ, ಹೇಳಿಕೆಗಳಂತೆ, ಸರಳವಾಕ್ಯಗಳಾಗಿ, ತಪ್ಪಾಗಿ ಅನುವಾದವಾಗಿದೆ. ಕನ್ನಡದಲ್ಲಿನ ಎರಡನೆ ವಾಕ್ಯ ಹಿಂದಿಯಲ್ಲಿ 'ಹಾವು ಕಚ್ಚಿದ್ದರಿಂದ ಅವನ ತಾತ ಸತ್ತು ಹೋಗಿದ್ದರು. ಇದರ ಜೊತೆಗೇ ಅವರನ್ನು ಸುಟ್ಟ ಸಂದರ್ಭವೂ ಅವನಿಗೆ ನೆನಪಾಯಿತು' ಎಂದಾಗಿದೆ. ಇನ್ನು ಮೂರನೆಯ ವಾಕ್ಯದ ಅನುವಾದವನ್ನಂತೂ ಕೇಳುವ ಹಾಗೇ ಇಲ್ಲ. ಹಿಂದಿ ಅನುವಾದದ ಈ ಅನುವಾದವನ್ನು (ಯಥಾವತ್) ಗಮನಿಸಿ 'ಆ ಸಂಜೆಯಲ್ಲಿ ಕರಗದೇ ಇದ್ದ ಕೆಂಪು, ಹಳದಿ ಬಣ್ಣಗಳು ಕಿಟ್ಟಿಯ ಕಣ್ಣುಗಳಲ್ಲಿ ಇಳಿದಿದ್ದುವು. ಎಷ್ಟು ವಿರೋಧಾರ್ಥಕ ಅನುವಾದ ಇದು ಅಂದರೆ 'ಆ

ನೆನಪು ಅಷ್ಟು ಗಾಢವಾಗಿ ಅವನ ಕಣ್ಣುಗಳಿಂದ ದೂರವೇ ಆಗಿಲ್ಲ' ಎಂಬ ಆಶಯದ ವಾಕ್ಯವನ್ನು ಹೀಗೆ ಅನುವಾದಿಸಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

೭. ಮೂಲ : "ಸ್ವಲ್ಪ ಹೊತ್ತು ಸುಮ್ಮನಿದ್ದು 'ಅಮ್ಯಾಕ್ಕೆ ಯೇಳ್ತೀನಿ ಇರು' ಎಂದ.

ಅನುವಾದ : ಕಿಟ್ಟೇ ಕೇ ಪಾಸ್ ಭೀ ಇಸ್ಕಾ ಕೋಯಿ ಉತ್ತರ್ ನಹೀಂ ಥಾ.

(ಕಿಟ್ಟಿಯ ಬಳಿಯೂ ಇದಕ್ಕೆ ಯಾವುದೊಂದು ಉತ್ತರವೂ ಇರಲಿಲ್ಲ.)

ಮೂಲದಿಂದ ಈ ಅನುವಾದ ಸರಿದಿರುವ ದೂರವನ್ನು ಗಮನಿಸಬೇಕು.

೮. ಒಂದೇ ಪ್ಯಾರದಲ್ಲಿ ಎರಡು ಸಾರಿ ಬಂದಿರುವ 'ತೋಪು' ಶಬ್ದಕ್ಕೆ ಅನುವಾದದಲ್ಲಿ ಎರಡು ವಿಭಿನ್ನ ಶಬ್ದಗಳನ್ನು. 'ಬಾಗ್' ಮತ್ತು 'ಅಮರಾಯಿ'ಯನ್ನು ಬಳಸುತ್ತಾರೆ. ತೋಪಿಗೆ ಯಾವ ಶಬ್ದ ಉಪಯುಕ್ತವಾದುದು? ಎಂಬುದನ್ನು ನಿರ್ಧರಿಸಲು ಅನುವಾದಕರು ಪ್ರಯತ್ನಿಸಿಲ್ಲ.

೯. ಮೂಲ : 'ದಯ್ಯಾನು ಮಾತಾಡ್ಸಿ, ಅಮ್ಯಾಲೆ ಅದು ಅವರು ಯೇಳ್ದಂಗೆಲ್ಲ ಮಾಡದಂತೆ'

ಅನುವಾದ : "ದೇವತಾವೋ ಸೇ ಬಾತೇಂ ಕರತೇ ಹೈಂ. ಜೈಸಾ ದೇವತಾ ಕಹೇಂಗೆ ವೇ ಸುನೇಂಗೆ ಔರ್ ಕರೇಂಗೆ."

(ದೇವತೆಗಳೊಡನೆ ಮಾತನಾಡುತ್ತಾರೆ. ದೇವತೆಗಳು ಹೇಳಿದಂತೆ ಅವರು ಕೇಳುತ್ತಾರೆ ಮತ್ತು ಮಾಡುತ್ತಾರೆ.)

ಕನ್ನಡದ 'ದಯ್ಯಾ' (ದೆವ್ವ) ಹಿಂದಿಯಲ್ಲಿ 'ದೇವತೆ'ಯಾಗಿದೆ. ಕನ್ನಡದಲ್ಲಿ, ಮಾಯ ಮಂತ್ರ ಮಾಡುವವರು ಹೇಳಿದ ಹಾಗೆ 'ದಯ್ಯಾ'ಗಳು ಕೇಳಿದರೆ ಹಿಂದಿಯಲ್ಲಿ ದೇವತೆಗಳು ಹೇಳಿದ ಹಾಗೆ ಮಾಯ ಮಂತ್ರ ಮಾಡುವವರು ಕೇಳುತ್ತಾರೆ.

೧೦. ಮೂಲ : "ಏನೂ ಮಾತನಾಡದೆ ಬಾಯಿಕಟ್ಟಿದವನ ಹಾಗೆ ಬಿಮ್ಮನೆ ಬಿಗಿದುಕೊಂಡು ಮನೆಗೆ ಬಂದ"

ಅನು : "ಚುಪ್ ಚಾಪ್ ಘರ್ ಲೌಟಾ. "(ಸುಮ್ಮನೆ ಮನೆಗೆ ಬಂದ) ಮೂಲದಿಂದ ಅನುವಾದ ಹೇಗೆ ಅಡ್ಡದಾರಿ ಹಿಡಿದಿದೆ ಎಂಬುದನ್ನು ಗಮನಿಸಬಹುದು.

೧೧) ಮೂಲ : "ಭಯಂಕರವಾಗಿ ನಾಲಿಗೆ ಚಾಚಿ ರಕ್ತ ಕಾರುವಂತಿರುವ ಮಣ್ಣಿನ ಗೊಂಬೆ." ಅನುವಾದ—"ಭಯಂಕರ ಜೀಭ್ ನಿಕಾಲೇ, ರಕ್ತ್‌ಸ್ನಾತ್ ಮಿಟ್ಟೀ ಕೀ ಮೂರತ್ ಥೀ"

(ಭಯಂಕರ ನಾಲಿಗೆ ಚಾಚಿ ರಕ್ತದಲ್ಲಿ ಸ್ನಾನಮಾಡಿದ್ದ ಮಣ್ಣಿನ ಮೂರ್ತಿ)

ಅನುವಾದದಲ್ಲಿ ನಾಲಗೆಯೇ ಭಯಂಕರವಾಗಿದೆ ಎಂದಾಗಿದೆ. 'ರಕ್ತ ಕಾರುವುದು' ಅನುವಾದದಲ್ಲಿ 'ರಕ್ತದಲ್ಲಿ ಸ್ನಾನ ಮಾಡಿದ್ದ' ಆಗಿದೆ.

೧೨) ಮೂಲ : "ಮಲಗಿದಾಗ ಮತ್ತೆ ಮತ್ತೆ ಎಲ್ಲ ನೆನಪಾದುವು. ಕಿಚುಗುಟ್ಟುವ ಬಾವಲಿ ಗುಡಿಯ ಹತ್ತಿರವೇ ನರಳುತ್ತಿದ್ದ ನೆಲಗುಮ್ಮ." ಇಲ್ಲಿ 'ಗುಡಿಯ....ನೆಲಗುಮ್ಮ'ದ ಅನುವಾದವೇ ಆಗಿಲ್ಲ. ಕೈಬಿಟ್ಟಿದ್ದಾರೆ.

೧೩) ಮೂಲ: "ಭಯವಾಗಿ ನಡುಗುತ್ತ ಅತ್ತೆಯನ್ನು ಗಟ್ಟಿಯಾಗಿ ತಬ್ಬಿದ."

ಅನು : -ಮಾಮೀ ನೇ ಉಸೇ ಅಪನೀ ಛಾತೀ ಕೀ ಓರ್ ಖೀಂಚ್ ಲಿಯಾ"

(ಅತ್ತೆಯು ಅವನನ್ನು ತನ್ನ ಎದೆಯತ್ತ ಎಳೆದುಕೊಂಡಳು) ಮೂಲದಲ್ಲಿ ಕಿಟ್ಟಿ ತಬ್ಬಿಕೊಂಡರೆ ಅನುವಾದದಲ್ಲಿ ಅತ್ತೆಯೇ ತಬ್ಬಿಕೊಳ್ಳಲು ಎಳೆದುಕೊಳ್ಳುತ್ತಾಳೆ.

೧೪) ಮೂಲ: 'ಬಟ್ಟೆ ಬಿಚ್ಚಿದಾಗ ಯಾಕೋ ನಾಚಿಕೆಯೆನಿಸಿತು'. —ಕಪಡೇ ಉತಾರನೇ ಮೇ ಕಿಟ್ಟಿ ಕೋ ಶರ್ಮ್ ಆನೇ ಲಗೀ

(ಬಟ್ಟೆಗಳನ್ನು ಬಿಚ್ಚುವಾಗ ಕಿಟ್ಟಿಗೆ ನಾಚಿಕೆಯಾಗತೊಡಗಿತು) ಮೂಲದಲ್ಲಿನ 'ಬಿಚ್ಚಿದಾಗ'ನಾಗಲೀ 'ಯಾಕೋ'ವಿನ ಧ್ವನಿಯಾಗಲಿ ಬರದೆ ಅನುವಾದ ಬೇರೆಯಾಗಿದೆ.

೧೫) ಮೂಲ : ...."ಕೆನ್ನೆಗಿಟ್ಟಾಗ ಅಪ್ಪನಿಗಿಂತ ಅತ್ತೆಯೇ ಚೆಂದ ಅನಿಸಿತು ಕಿಟ್ಟಿಗೆ"

ಅನುವಾದ—'ಕಾಲಾ ಟೀಕಾ ಲಗಾಯಾ ತೋ ಉಸೇ ಬಡಾ ಅಚ್ಛಾ ಲಗಾ.' (ಕಪ್ಪು ಬಟ್ಟನ್ನು ಇಟ್ಟಾಗ ಅದರಿಂದ ಅವನಿಗೆ ತುಂಬಾ ಖುಷಿಯಾಯಿತು). ಇಲ್ಲಿ ಮೂಲ ವಾಕ್ಯದ ಉತ್ತರಾರ್ಧವನ್ನ ಅನುವಾದಿಸದೇ ಬಿಟ್ಟಿದ್ದಾರೆ. ಮತ್ತು ಅನುವಾದಿಸಿದ್ದೇನೆ ಎಂದು ಭಾಷಾಂತರಕಾರರು ಭಾವಿಸಿರುವ ಭಾಗದ ಅನುವಾದವೂ ತಪ್ಪಾಗಿದೆ.

೧೬) ಮೂಲ: "ಯಾವ ಕಡೆ ನೋಡಿದರೂ ಮನೆಗಳೆ, ಇಲ್ಲಿಯ ಹಾಗೆ ಕಾಡೇ ಇಲ್ಲ." ಅನುವಾದದಲ್ಲಿ ಈ ವಾಕ್ಯವೇ ಇಲ್ಲ.

೧೭) ಮೂಲ : "ಇಲ್ಲಿನ ಹಳ್ಳದ ಕಾವಲು, ಕರಿಕಲ್ಲ ಬೆಟ್ಟ....ಇಂಥವೇನೂ ಇಲ್ಲ" ಎಂಬ ವಾಕ್ಯದಲ್ಲಿ ತನ್ನ ಊರನ್ನು ಜ್ಞಾಪಿಸಿಕೊಂಡು, ಅದು ಬರಡು, ಈ ಊರಿನಲ್ಲಿರುವುದು 'ಅಲ್ಲಿಲ್ಲ' ಎಂದು ಹೇಳಿದರೆ ಅನುವಾದಕರು ಇವೆಲ್ಲ "ಯಹಾಂ ಉನ್‌ಮೇ ಸೇ ಕುಛ್ ಭೀ ತೋ ನಹೀಂ ಹೈ" (ಇಲ್ಲಿ ಅವುಗಳಲ್ಲಿನ ಸ್ವಲ್ಪವೂ ಇಲ್ಲ.) ಆ ಊರಿನಲ್ಲಿಲ್ಲ ಎಂಬುದನ್ನು ಈ ಊರಿನಲ್ಲಿಲ್ಲ ಎಂದು ತದ್ವಿರುದ್ಧವಾಗಿ ಅನುವಾದಿಸಿದ್ದಾರೆ.

ಇದೇ ರೀತಿ ಪಟ್ಟಿಯನ್ನು ಬೆಳಸುತ್ತ ಹೋಗಬಹುದಾದರೂ ಇದೇ ನನ್ನ ಉದ್ದೇಶವಲ್ಲ- ಇಂಥ, ತಪ್ಪುಗಳೆನ್ನಬಹುದಾದ ದೋಷಗಳು ಹೇಗೆ ಒಂದು ಕೃತಿಯ ಮೂಲ ಸ್ವರವನ್ನೇ ಹಾಳು ಮಾಡಿಬಿಡುತ್ತವೆ ಎಂಬುದರತ್ತ ಗಮನ ಸೆಳೆಯುವುದಷ್ಟೆ ನನ್ನ ಉದ್ದೇಶವಾಗಿದೆ. ಇನ್ನು, ಮೇಲೆ ಹೇಳಿರುವ ದೋಷಗಳಷ್ಟೇ ಅಲ್ಲದೆ ದಸದಸ, ಚುರು ಚುರು, ಪಟಪಟನೆ, ಜುಳು ಜುಳು, ಹಾಗೂ ಎಷ್ಟೋ ಕನ್ನಡದ ನುಡಿಗಟ್ಟುಗಳು ತಪ್ಪು ಅನುವಾದವಾಗಿ ಇಲ್ಲವೇ ವಿಕೃತವಾಗಿ ಬಂದಿರುವುದರಿಂದ 'ಕಾಡು' ಹಿಂದಿಯಲ್ಲಿ ಅಸಫಲ ಶಾಬ್ದಿಕ ಅನುವಾದವಾಗಿ ಮೂಡಿಬಂದಿದೆ.

ಚಂದ್ರಕಾಂತ ಕೂಸನೂರರೇ ಅನುವಾದಿಸಿರುವ ಡಾ. ಯು. ಆರ್. ಅನಂತಮೂರ್ತಿಯವರ 'ಸಂಸ್ಕಾರ'ದ ಅನುವಾದದ ಪಾಡು ಇದೇ ಆಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

"ದಾಯರೇ ಆಸ್ಥಾವೋಂ ಕೇ" ಎಂಬ ಹೆಸರಿನಲ್ಲಿ ಹಿಂದಿಗೆ ಅನುವಾದವಾಗಿರುವ ಡಾ. ಎಸ್. ಎಲ್. ಭೈರಪ್ಪನವರ 'ನಾಯಿ ನೆರಳು' ನಿಜಕ್ಕೂ ಒಂದು ಉತ್ತಮ ಅನುವಾದ

ವೆಂದೆನ್ನಿಸಿಕೊಳ್ಳಲು ಯೋಗ್ಯವಾದ ಅನುವಾದ. ಆದರೆ ಇದರ ಅನುವಾದಕರಾರು ಎಂಬುದು ಗೊತ್ತಿಲ್ಲ. ಇಲ್ಲಿನ ಭಾಷೆ ಸಹಜವಾಗಿಯೂ ಹಿಂದಿಯ ಜಾಯಮಾನವನ್ನು ಪಡೆದುಕೊಂಡು ಹಿಂದಿಯಂತೆಯೇ ಓದಿಸಿಕೊಳ್ಳುತ್ತದೆ. ಶಬ್ದಾನುವಾದವಾಗದೆ, ಭಾವವನ್ನು ಬಿಡದೆ, ಎರಡನ್ನು ಒಗ್ಗೂಡಿಸಿಕೊಂಡು ರೂಪುಗೊಂಡಿರುವ ಈ ಅನುವಾದಿತ ಕೃತಿಯಲ್ಲಿ ಮೆಚ್ಚಬೇಕಾದ ಅಂಶಗಳಿವೆ.

ಅಂದರೆ, ಇದು ಸರ್ವಶ್ರೇಷ್ಠ ಅನುವಾದ ಎಂದು ನಾನು ಹೇಳುತ್ತಿಲ್ಲ. ಇಲ್ಲೂ ಕೂಡ ದೋಷಗಳಿದ್ದು, ಈ ದೋಷಗಳು ಆಗಿರುವುದು ಹೀಗೆ—

೧. ಮೂಲ–"ಆದರೆ ಜನರು ಬೇಕೆಂದೇ ಕೀಟಳೆಗೆ...."

ಅನು : ಲೇಕಿನ್ ಜಾನ್ ಜಾನ್ ಕರ್ ಮಜಾಕ್ ಮೇ ಪೂಛತೇ" ಇಲ್ಲಿ 'ಬೇಕೆಂದೇ'ನೆಗೆ ಆಗಿರುವ ಅನುವಾದ 'ಜಾನ್ ಜಾನ್‌ಕರ್' ತಪ್ಪು. 'ಜಾನ್ ಬೂಝ್‌ಕರ್' ಎಂದಾಗಬೇಕಿತ್ತು. 'ಕೀಟಳೆಗೆ' 'ಮಜಾಕ್' ಉಚಿತ ಶಬ್ದವಾಗುವುದಿಲ್ಲ.

೨. ಮೂಲ : "ಗುಣಾಕಾರ, ಭಾಗಾಕಾರ, ಸರಳ ಮಗ್ಗಿಗಳನ್ನು"

ಅನು : "ಗುಣಾ–ಭಾಗ ಔರ್ ಬಾರಾಖಡೀ...." 'ಮಗ್ಗಿ'ಗೆ ಬಾರಾಖಡೀ ಎನ್ನುತ್ತಾರೆಯೇ? ಬಾರಾಖಡೀ ಎಂದರೆ ಕಾಗುಣಿತ. 'ಮಗ್ಗಿಗೆ' 'ಪಹಾಡಾ' ಎಂದಿರಬೇಕಿತ್ತು.

೩. ಮೂಲ : "ಮರಳಿನ ಮೇಲೆ."

ಅನು : "ಶ್ಯಾಮ್‌ಪಟ್ ಪರ್." 'ಮರಳಿಗೆ ಹಿಂದಿಯಲ್ಲಿ 'ರೇತ್' ಎನ್ನುತ್ತಾರೆ. 'ಶ್ಯಾಮ್‌ಪಟ್' ಎಂದರೆ ಕಪ್ಪು ಹಲಗೆಯಾಗುತ್ತದೆ.

೪. ಮೂಲ : "ಊರಿನ ಅನೇಕ ಹಿರಿಯರು" "ಗಾಂವ್ ಕೇ ಬಡೇ ಬೂಢೋಂನೇ...." 'ಹಿರಿಯರಿಗೆ' ಹಿಂದಿಯ ಈ ಅನುವಾದ ಸಮರ್ಪಕವಾಗಿಲ್ಲ. 'ಬುಜುರ್ಗ್' ಶಬ್ದವನ್ನು ಪ್ರಯೋಗಿಸಬಹುದಾಗಿತ್ತು.

೫. ಮೂಲ : "ಅವನು ಯಾರ ಕೈಲೂ ತಾನಾಗಿಯೇ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ."

ಅನುವಾದ : "ಅಪನೇ ಸೇ ಕಭೀ ಕಿಸೀ ಸೇ ನಾ ಬೋಲ್ತಾ" 'ತಾನಾಗಿಯೇ' ಎನ್ನುವುದು 'ತನ್ನೊಂದಿಗೆ' ಎಂದಾಗಿದೆ. 'ಅಪನೀ ತರಫ್ ಸೇ' ಅಥವಾ 'ಅಪನೀ ಓರ್ ಸೇ' ಎಂದಾಗಬೇಕಿತ್ತು.

೬. ಮೂಲ : "ಏಳು ವರ್ಷವಾದರೂ ಕ್ಷೇತ್ರಪಾಲ ಅದನ್ನು...."

ಅನುವಾದ : "ಸಾತ್ ಬರಸ್ ಕಾ ಹೋಗಯಾ ಕ್ಷೇತ್ರ್‌ಪಾಲ್."

ಈ ತೆರನಾದ ದೋಷಗಳು ಈ ಅನುವಾದದಲ್ಲಿ ಇದ್ದು ಅಲ್ಲಲ್ಲಿ ಎಚ್ಚರದಿಂದ ಓದುವ ಓದುಗನಿಗೆ ಚುಚ್ಚುವಂತಾದರೂ ಸಾಮಾನ್ಯ ಓದುಗನಿಗೆ ಇವುಗಳ ಅರಿವಾಗದಿರುವ ಸಂಭವಗಳು ಹೆಚ್ಚಿವೆ.

ಡಾ. ವಾಸು. ಬಿ. ಪುತ್ರನ್‌ರವರು ಡಾ. ಎಸ್. ಎಲ್. ಭೈರಪ್ಪನವರ ಪ್ರಸಿದ್ಧ ಕಾದಂಬರಿ 'ಗೃಹಭಂಗ'ವನ್ನು ಇದೇ ಹೆಸರಿನಿಂದ ಹಿಂದಿಗೆ ಅನುವಾದಿಸಿದ್ದು, ಇದರಲ್ಲಿ ಅನುವಾದಕರಿಗೆ ಸಾಕಷ್ಟು ಸಫಲತೆ ಸಿಕ್ಕಿದೆ ಎಂದೇ ಹೇಳಬೇಕು. ಏಕೆಂದರೆ 'ಗೃಹಭಂಗ' ಒಂದು 'ಪ್ರಾದೇಶಿಕ' ಕಾದಂಬರಿಯಾಗಿರುವುದರಿಂದ ಇಲ್ಲಿನ ಭಾಷೆ, ಪದಪ್ರಯೋಗ ಗಳು, ಬೈಗಳು, ಗ್ರಾಮ್ಯಶೈಲಿ, ಸಂವಾದ—ಈ ಎಲ್ಲ ದೃಷ್ಟಿಯಿಂದಲೂ ಇದು ವಿಶಿಷ್ಟ ವಾಗಿರುವುದರಿಂದ, ಕನ್ನಡ ಜಾಯಮಾನದಲ್ಲಿ ಕನ್ನಡ ಓದುಗರಿಗೆ ಯಾವ ತಲ್ಲೀನತೆ ಯನ್ನು ಈ ವಿಶಿಷ್ಟತೆಗಳು ತಂದುಕೊಡುತ್ತವೆಯೋ ಅದೇ ಮಟ್ಟದ ತಲ್ಲೀನತೆಯನ್ನು ಹಿಂದೀ ಓದುಗರಿಗೂ ತಂದುಕೊಡುವುದು ಒಂದು ಮಟ್ಟದಲ್ಲಿ ಅಸಾಧ್ಯವೆಂಬುದು ಸತ್ಯ ವಾದ ಮಾತಾದರೂ, ಮೂಲ ಕಾದಂಬರಿಯ ಆಶಯವನ್ನು ಅನುವಾದದಲ್ಲಿ ಸಂಪೂರ್ಣ ವಾಗಿ ಕಾಯ್ದುಕೊಂಡು ಹಿಂದಿಯ ಜಾಯಮಾನಕ್ಕೆ ಹತ್ತಿರವಾಗಿ ಭಾಷಾಂತರ ಗೊಂಡಿರುವ ಈ ಕಾದಂಬರಿಯನ್ನು ಭಾಷಾಂತರಿಸುವ ಕಾರ್ಯವನ್ನು ಒಪ್ಪಿಕೊಳ್ಳುವುದೇ ಭಾಷಾಂತರಕಾರನಿಗೆ ಒಂದು ಸವಾಲಾಗಿ ಪರಿಣಮಿಸುತ್ತದೆ. ಇಂಥ ಕಾದಂಬರಿಗಳ ಅನುವಾದಕ ಸಾಮಾನ್ಯವಾಗಿ ಭಾಷೆಯ ಅಭಿವ್ಯಕ್ತಿಯ ಮಟ್ಟದಲ್ಲಿ ಸೋಲನ್ನಪ್ಪುತ್ತಾನೆ. ಡಾ. ಪುತ್ರನ್‌ರವರು ಈ ಬಗೆಯ ಸೋಲನ್ನಪ್ಪಿದ್ದರೂ ಸಹ, ಅಂದರೆ, ಮೂಲ ಕಾದಂಬರಿ ಯಲ್ಲಿ ಕನ್ನಡವನ್ನು ಭೈರಪ್ಪನವರು ದುಡಿಸಿಕೊಂಡಂತೆ, ಅದರ ಎಲ್ಲ ಸ್ತರಗಳನ್ನು, ಹಾಸು-ಬೀಸುಗಳನ್ನು, ಎಲ್ಲ ಸಂಭಾವ್ಯತೆಗಳನ್ನು ಎಕ್ಸ್‌ಪ್ಲಾಯ್ಟ್ ಮಾಡಿರುವಂತೆ (ಹಿಂದಿಯಲ್ಲಿ ಫಣೀಶ್ವರ್‌ನಾಥ್‌ರೇಣು ಹಾಗೂ ನಾಗಾರ್ಜುನ ಮುಂತಾದ ಲೇಖಕರು ತಮ್ಮ ಕಾದಂಬರಿಗಳಲ್ಲಿ ಭಾಷೆಯನ್ನು ದುಡಿಸಿಕೊಂಡಿರುವಂತೆ) ಈ ಹಿಂದೀ ಅನುವಾದ ದಲ್ಲಿ ಮಾಡಲಾಗದಿದ್ದರೂ (ಇದಕ್ಕೆ ಅನೇಕ ಕಾರಣಗಳುಂಟು) ಗ್ರಾಂಥಿಕ ಹಿಂದಿಯಲ್ಲಿ ಪುತ್ರನ್‌ರವರು ಸಾಕಷ್ಟು ಸುಂದರವಾಗಿಯೇ ಅನುವಾದಿಸಿದ್ದಾರೆ. ಕನ್ನಡದಿಂದ ಹಿಂದಿಗೆ ಚೆನ್ನಾಗಿ ಭಾಷಾಂತರಗೊಂಡಿರುವ ಕೈಬೆರಳುಗಳಲ್ಲೆಣಿಸುವಷ್ಟು ಕಾದಂಬರಿಗಳಲ್ಲಿ 'ಗೃಹ ಭಂಗ'ದ ಈ ಅನುವಾದವನ್ನು ನಿಸ್ಸಂದೇಹವಾಗಿ ಹೆಸರಿಸಬಹುದಾಗಿದೆ.

ಭಾಷೆಯ ಮೇಲೆ ಪೂರ್ಣ ಹತೋಟಿ ಇರುವ ಈ ಅನುವಾದಕರು ಹೇಗೆ ಒಮ್ಮೊಮ್ಮೆ ಮೂಲದಿಂದ ದೂರಸರಿದು, ಕನ್ನಡದಲ್ಲಿರುವುದಕ್ಕಿನ್ನ ಭಿನ್ನ ಅರ್ಥದಲ್ಲಿ ಹಿಂದಿಗೆ ಅನುವಾದಿಸುತ್ತಾ ಹೋಗುತ್ತಾರೆ ಎಂಬುದಕ್ಕೆ ಉದಾಹರಣೆಯಾಗಿ ಈ ವಾಕ್ಯಗಳನ್ನು ಗಮನಿಸಬಹುದಾಗಿದೆ—

೧. ಮೂಲ: "ತಿಪಟೂರು ಬಲಕಾಯಿಸದ ಮೇಲೆ ಹಿಂದೆ ಬಿತ್ತು. ತಾಲ್ಲೋಕ್ ಕಛೇರಿಯೂ ತಿಪಟೂರಿಗೆ ಹೋಯಿತು—ಚಿಕ್ಕಮಗಳೂರು ಕಡೂರನ್ನು ಬಡಕಲು ಮಾಡಿದ ಹಾಗೆ."

ಅನುವಾದ: "ಲೇಕಿನ್ ತಿಪಟೂರ್ ಕಾ ವಿಕಾಸ್ ಹೋನೇ ಸೇ ಇಸ್‌ಕಾ ಮಹತ್ವ್ ಘಟ್‌ಗಯಾ ಹೈ. ಚಿಕ್ಕಮಗಳೂರ್ ಔರ್ ಕಡೂರ್ ಕಾ ವಿಕಾಸ್ ಹೋನೇಪರ್ ತಹಸೀಲ್ ಕಾರ್ಯಾಲಯ್ ಭೀ ತಿಪಟೂರ್ ಚಲಾಗಯಾ ಹೈ."

(ಆದರೆ ತಿಪಟೂರಿನ ವಿಕಾಸದನಂತರ ಇದರ ಮಹತ್ವ ಕಡಿಮೆಯಾಗಿದೆ. ಚಿಕ್ಕಮಗಳೂರು ಮತ್ತು ಕಡೂರಿನ ವಿಕಾಸವಾದ ಮೇಲೆ ತಾಲ್ಲೋಕ್ ಕಛೇರಿಯೂ ತಿಪಟೂರಿಗೆ ಬಂದಿದೆ.)

ಬ್ರಾಕೆಟ್‌ನಲ್ಲಿರುವುದು ಅನುವಾದದ ಅನುವಾದವಾಗಿದ್ದು ಇಲ್ಲಿ ಆಗಿರುವ ಅನಾಹುತವನ್ನು ಗಮನಿಸಬೇಕಾಗಿದೆ. ಚಿಕ್ಕಮಗಳೂರು ಕಡೂರನ್ನು ಬಡಕಲು ಮಾಡಿತು. ಅನುವಾದದಲ್ಲಿ ಬೇರೆಯ ರೀತಿಯಲ್ಲೇ ಇದೆ.

೩. ಮೂಲ: "ಅದಕ್ಕೆ ತಕ್ಕ ವಿದ್ಯೆಬೇಕು, ಜೈಮಿನಿಯನ್ನಾದರೂ ಅರ್ಥಮಾಡಿಕೊಳ್ಳುವ ಮಟ್ಟಕ್ಕೆ ಬಂದರೆ ಖಾತೆ. ಬಿರ್ದಿ. ಸಹಣಿ, ಖಾನೀ ಮುಮಾರಿ ಲೆಕ್ಕಗಳು ತಿಳಿದಾವು."

ಅನುವಾದ: "ಇಸ್‌ಕೇ ಲಿಏ ಪ್ರಶಿಕ್ಷಣ್ ಚಾಹಿಏ. ಕಮ್ ಸೇ ಕಮ್ ಜೈಮಿನೀ ಭಾರತ್ ತೋ ಸಮಝ್ ಹೀ ಲೇನಾ ಚಾಹಿಏ. ಅನ್ಯಥಾ ಬಹೀಖಾತೆ. ರಾಯ್‌ಮುಮಾರಿ ಔರ್ ಅನ್ಯ ವ್ಯಾವಹಾರಿಕ್ ಬಾತೇಂ ಸಮಝ್ ಮೇ ನಹೀಂ ಆ ಸಕತೀಂ."

ಕನ್ನಡದ 'ವಿದ್ಯೆ' ಹಿಂದಿಯಲ್ಲಿ 'ತರಪೇತು' ಆಗಿದೆ. ಹಿಂದಿಯಲ್ಲಿ 'ಪ್ರಶಿಕ್ಷಣ' ಎಂದರೆ ವಿದ್ಯೆ ಅಲ್ಲ. 'ತರಪೇತು' ಎಂದರ್ಥ. "....ಅರ್ಥಮಾಡಿಕೊಳ್ಳುವ ಮಟ್ಟಕ್ಕೆ ಬಂದರೆ...." ಎಂಬ ವಾಕ್ಯ 'ಜೈಮಿನಿ ಭಾರತವನ್ನಂತೂ ಅರ್ಥಮಾಡಿಕೊಳ್ಳಲೇಬೇಕು" ಎಂದಾಗಿದೆ. ಮೂಲದ ಆಶಯ ಜೈಮಿನಿಯನ್ನು ಅರ್ಥಮಾಡಿಕೊಳ್ಳಬಲ್ಲವ ಗ್ರಾಮದ ಲೆಕ್ಕಪತ್ರಗಳನ್ನು ಅರ್ಥಮಾಡಿಕೊಳ್ಳಬಲ್ಲ ಎನ್ನುವದಾಗಿದ್ದರೆ ಅನುವಾದದಲ್ಲಿ ಅದನ್ನು ಒಂದು ಅನಿವಾರ್ಯ ಯೋಗ್ಯತೆ ಎಂಬ ಅರ್ಥ ಬರುವಂತೆ ಅನುವಾದಿಸಲಾಗಿದೆ. ಇನ್ನು ವಾಕ್ಯದ ಒಟ್ಟು ಆಶಯದಲ್ಲೂ ಅಲ್ಪ-ಸ್ವಲ್ಪ ಪರಿವರ್ತನೆಯಾಗಿರುವುದನ್ನು ಗಮನಿಸಬಹುದಾಗಿದೆ.

೪. ಮೂಲ: "ಗಂಡುಮಕ್ಕಳು ಬುದ್ಧಿವಂತರಾಗಿ ಮಾತು ಕೇಳುತ್ತಿದ್ದರೆ. ಅವಳನ್ನು ಹಿಡಿಯುವವರಿರುತ್ತಿರಲಿಲ್ಲ. ಜನದ ಬಾಯಿಗೆ ಎಕ್ಕಡವನ್ನೇ ತುರುಕಿಸುತ್ತಿದ್ದಳು."

ಅನುವಾದ: "ಅಗರ್ ಉಸ್‌ಕೇ ಬೇಟೇ ಅಕಲ್‌ಮಂದ್ ಹೋತೇ ಔರ್ ಕಹನಾ ಸುನ್ತೇ ಔರ್ ತೋ ಉಸೇ ಐಸಾ ಕರನೇ ಸೇ ಕೋಯೀ ಭೀ ರೋಕ್ ನಹೀ ಪಾತಾ, ವಹ್ ಲೋಗೋಂ ಕೇ ಮುಂಹ್ ಮೇ ಜರೂರ್ ಚಪ್ಪಲ್ ಠೂಂಸ್ ದೇತಿ."

ಕನ್ನಡದ "ಅವಳನ್ನು ಹಿಡಿಯುವವರಿರುತ್ತಿರಲಿಲ್ಲ" ಎಂಬುದು ಹಿಂದಿಯಲ್ಲಿ 'ಅವಳನ್ನು ಹೀಗೆ ಮಾಡುವುದರಿಂದ ಯಾರೂ ತಡೆಯುತ್ತಿರಲಿಲ್ಲ' ಎಂದೂ, 'ತುರುಕಿಸುತ್ತಿದ್ದಳು' ಎಂಬುದು 'ಅವಳೇ ತುರುಕುತ್ತಿದ್ದಳು' ಎಂದೂ ಆಗಿದೆ.

ಮೂಲವಾಕ್ಯಗಳ ವಿಸ್ತಾರಾನುವಾದ ಅಲ್ಲಲ್ಲೇ ಆಗಿದ್ದು, ಒಂದು ಉದಾಹರಣೆಯನ್ನು ನೋಡಬಹುದು—

ಮೂಲ: "ಹೋರಿಕರೀಗೆ ಬರೇ ಹಾಕ್‌ದೇ ಇದ್ರೆ ಎಲ್ಲಿ ಹೇಳಿದ್ ಮಾತು ಕೇಳುತ್ವೆ."

ಅನುವಾದ: "ಬಛಡೋಂ ಕೋ ಜಬ್‌ತಕ್ ದಾಗಾ ನಾ ಜಾಯ್ ತೋ ಕಹಾಂ ಮಾನತೇ ಹೈಂ. ಇಸಲಿಯೇ ತೋ ದಾಗತೇ ಹೈಂ ಕೀ ವೇ ಕಹನಾ ಮಾನೇಂ. ಆಜ್ಞಾ ಕಾ ಪಾಲನ್ ಕರೇಂ."

ಹಿಂದಿ ಅನುವಾದದಲ್ಲಿನ ಎರಡನೆ ವಾಕ್ಯ ಮೊದಲಿನ ವಾಕ್ಯದ ಪೂರ್ತಿ ವ್ಯಾಖ್ಯಾನವಾಗಿದ್ದು, ಅನಗತ್ಯ ವಿಸ್ತಾರವಾಗಿದೆ.

ಅನುವಾದವಾಗದೇ ನುಸುಳಿ ಹೋಗಿರುವ ವಾಕ್ಯಗಳೂ ಕೂಡ ಈ ಅನುವಾದದಲ್ಲಿದ್ದು, ಈ ಬಗೆಗೆ ಒಂದೆರಡು ಉದಾಹರಣೆಗಳು

(1) "ಕುರುಬರಹಟ್ಟಿ... ಹೇಳ್ತಿರ್ತಾನೆ; ದನುಕ್ ಬರೆ ಎಳೀದೆ ಇದ್ರೆ ಚಪ್ಪೆರ್‍ಬಾಗ್ ಬರುತ್ತಂತೆ."

(2) ನೀರುಗಂಟಿ, ಮಡಿಯಾದ ತಲೆ ಮೇಲೆ, ಸೂಳೆಮುಕ್ಳನ್ ತಂದು, ಕೋತಿ ತಿನ್ನಣ್ಣ—ಇಂಥ ಅನೇಕ ಶಬ್ದಗಳು ಅನುವಾದಕರ ಹಿಡಿತಕ್ಕೆ ಸಿಕ್ಕದೆ ನುಸುಳಿ ಹೋಗಿವೆ. 'ಮರಳು' ಎಂಬ ಕನ್ನಡ ಶಬ್ದ ಹಿಂದಿಯಲ್ಲಿ 'ಪಟ್ಟ' ಅಂದರೆ 'ಹಲಗೆ' ಯಾಗಿದೆ. ಈ ಕಾದಂಬರಿಯಲ್ಲಿ ಬರುವ ಅಸಂಖ್ಯ ಬೈಗುಳಗಳ ಅನುವಾದದಲ್ಲಂತೂ ಏಕರೂಪತೆ ಇಲ್ಲದೆ ಹೋಗಿರುವುದರಿಂದ ಒಂದೇ ಬೈಗಳು ನಾನಾ ರೀತಿಯಲ್ಲಿ ಅನುವಾದವಾಗಿವೆ. ಒಂದು ಕಡೆ, 'ಕತ್ತೆಮುಂಡೆ' ಎಂಬುದು 'ಗಧೀ, ಛಿನಾಲ್ ಕಹೀಂಕೀ' ಎಂದಾಗಿದ್ದರೆ ಮತ್ತೊಂದು ಕಡೆ ಬೇರೆ ರೀತಿಯಲ್ಲಿ ಅನುವಾದವಾಗಿರುವ ಪ್ರಸಂಗಗಳೂ ಉಂಟು. 'ಕಳ್ಳ ಸೂಳೇಮಕ್ಕಳು'ವಿನ ಅನುವಾದ 'ಹಂದಿ' ಎಂದಾಗಿರುವ ಸಂದರ್ಭವೂ ಉಂಟು.

ಈ ಬಗೆಯ ಸಣ್ಣಪುಟ್ಟ ದೋಷಗಳು ಇಷ್ಟು ದೊಡ್ಡ ಅನುವಾದದಲ್ಲಿ ಆಗುವುದು ಸಹಜವಾದರೂ ಭಾಷಾಂತರದ ನಿಜವಾದ ಸಮಸ್ಯೆಗಳನ್ನು ಅಧ್ಯಯನ ಮಾಡಲು ಇಂಥ ಅನುವಾದಗಳು ಅವಶ್ಯ ಸಹಕಾರಿಯಾಗುತ್ತವೆ. ಒಟ್ಟಿನಲ್ಲಿ ಹಿಂದೀ 'ಗೃಹಭಂಗ' ಓದಿಸಿಕೊಳ್ಳಬಲ್ಲಂಥ ಸುಂದರವಾದ ಅನುವಾದ.

೫

ಕನ್ನಡದಿಂದ ಹಿಂದಿಗೆ ಭಾಷಾಂತರವಾಗಿರುವ ಎಲ್ಲ ಕೃತಿಗಳ ಸಮೀಕ್ಷೆ ಈ ಲೇಖನದಲ್ಲಿ ಇಷ್ಟಪಟ್ಟರೂ ಸಾಧ್ಯವಾಗಿಲ್ಲ. ಸಮೀಕ್ಷಿಸಿರುವ ಐದಾರು ಪ್ರಮುಖ ಕೃತಿಗಳಲ್ಲಿ ತೋರಿಸಿರುವ ಬಗೆ ಬಗೆಯ ದೋಷಗಳು ಭಾಷಾಂತರ ಕಾರ್ಯ ಎಷ್ಟು ಕಷ್ಟಸಾಧ್ಯವಾದುದು ಎಂಬುದನ್ನು ಜಾಹಿರು ಪಡಿಸುತ್ತದೆ. ಭಾಷಾಂತರ ನಿರಂತರವಾಗಿ ಸಾಗಬೇಕಾದ ಕೆಲಸ. ಒಂದು ಮಹತ್ವದ ಕೃತಿಯ ಒಂದು ಭಾಷಾಂತರ ಏನೇನೂ ಸಾಕಾಗುವುದಿಲ್ಲ. ಅದರ ಎಷ್ಟೆಷ್ಟು ಭಾಷಾಂತರಗಳಾಗುತ್ತವೆಯೋ ಅಷ್ಟಷ್ಟು ಉತ್ತಮ ಭಾಷಾಂತರ ಬರುತ್ತಾ ಹೋಗುತ್ತದೆ. ನಾನು ಮೇಲೆ ಉಲ್ಲೇಖಿಸಿರುವ ದೋಷಗಳಿಂದ ತತ್ಸಂಬಂಧೀ ಭಾಷಾಂತರಕಾರರನ್ನು ಕೆಳಗಿಳಿಸುವ ಅಥವಾ ಅವರನ್ನು ನಿರುತ್ಸಾಹ

ಗೊಳಿಸುವ ಕೆಲಸ ಮಾಡಿಲ್ಲ. ಈ ಸಮೀಕ್ಷೆಯಿಂದ ಈ ಪಂಕ್ತಿಗಳ ಲೇಖಕನೂ ಸೇರಿದಂತೆ ಉಳಿದ ಭಾಷಾಂತರಕಾರರು ತಮ್ಮ ಭಾಷಾಂತರ ಕಾರ್ಯದಲ್ಲಿ ವಹಿಸಬೇಕಾದ ಎಚ್ಚರಿಕೆಯು ಅರಿವಾಗುತ್ತದೆ. ಮುಂದೆ ಆಗಬೇಕಾದ ಭಾಷಾಂತರಗಳಲ್ಲಿ ತೀವ್ರ ಆಸಕ್ತಿ, ಪ್ರೀತಿ ಇರುವುದರಿಂದ ಇಲ್ಲಿ ಕೆಲವು ಕೃತಿಗಳನ್ನು ಭಾಷಾಂತರದ ದೃಷ್ಟಿಯಿಂದ ನೋಡಿದ್ದೇನೆ, ಅಷ್ಟೆ.

೨೦ ವ್ಯಾಕರಣ ಪ್ರಕ್ರಿಯೆಗಳು ಮತ್ತು ಭಾಷಾಂತರ

ಎಚ್. ಎಸ್. ಹರಿಶಂಕರ್

೧

ಆಧುನಿಕ ಯುಗದಲ್ಲಿ ಭಾಷಾಂತರದ ಮಹತ್ವವನ್ನು ನಾವು ಅಲ್ಲಗಳೆಯುವಂತಿಲ್ಲ. ಭಾಷಾಂತರ ಕೇವಲ ಮಾನವಿಕ ವಿಷಯಗಳಿಗಷ್ಟೇ ಸೀಮಿತವಾಗಿಲ್ಲ. ಅದು ನಾಗರಿಕತೆಗೆ ಸಂಬಂಧಿಸಿದ ಬೇರೆ ಬೇರೆ ಮುಖಗಳನ್ನು ನಮಗೆ ಪರಿಚಯ ಮಾಡಿಸಿಕೊಡುತ್ತದೆ. ತಾಂತ್ರಿಕ ವಿಜ್ಞಾನ, ವಿಜ್ಞಾನ, ಕಲೆ, ಸಾಹಿತ್ಯ, ಇತ್ಯಾದಿ ಕ್ಷೇತ್ರಗಳಲ್ಲೆಲ್ಲ ಇದು ಆವರಿಸಿದೆ. ಇಂಗ್ಲಿಷ್ ರಷ್ಯನ್ ಭಾಷೆಗಳ ಕೆಲವೊಂದು ವ್ಯಾಕರಣ ಪ್ರಕ್ರಿಯೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಭಾಷಾಂತರದಲ್ಲಿ ಸಮಸ್ಯೆಗಳು ಹೇಗೆ ಎದುರಾಗುತ್ತವೆ ಎಂಬುದನ್ನು ತಿಳಿಸುವುದು ಈ ಲೇಖನದ ಉದ್ದೇಶವಾಗಿದೆ.

ಸಾಮಾಜಿಕ–ಐತಿಹಾಸಿಕ, ರಾಷ್ಟ್ರೀಯ–ಜನಾಂಗೀಯ, ಸಾಹಿತ್ಯಿಕ–ಭಾಷಿಕ ವಿಷಯಗಳ ಬಗೆಗೆ ಸಹಜವಾಗಿ ಉದ್ಭವಿಸುವ ಪ್ರಮುಖ ಸಮಸ್ಯೆಗಳನ್ನು ಬಗೆಹರಿಸುವುದು ಭಾಷಾಂತರದ ಇಂದಿನ ಮುಖ್ಯ ಕರ್ತವ್ಯವಾಗಿದೆ. ವೈಜ್ಞಾನಿಕ–ತಾಂತ್ರಿಕ ಕ್ರಾಂತಿ ನಮ್ಮ ಜೀವನದ ಎಲ್ಲ ಹೊಸ ಕ್ಷೇತ್ರಗಳನ್ನೂ ಆವರಿಸಿದೆ. ಅಷ್ಟೇ ಅಲ್ಲ, ಅಂತರರಾಷ್ಟ್ರೀಯ ವಿಜ್ಞಾನ ಕ್ಷೇತ್ರದಲ್ಲಿ ಹೊಸ ಮೈತ್ರಿಯನ್ನು ತಂದುಕೊಟ್ಟಿದೆ.

ಭಾಷಾಂತರ ಆಧುನಿಕ ಯುಗದಲ್ಲಿ ಎಂಥ ಮಹತ್ವಪೂರ್ಣ ಸ್ಥಾನವನ್ನು ಪಡೆದಿದೆ ಎಂಬುದು ಅಂತರರಾಷ್ಟ್ರೀಯ ಭಾಷಾಂತರ ಒಕ್ಕೂಟದ ಸದಸ್ಯ ಎಡ್ಮಂಡ್ ಕ್ಯಾರಿ ಎನ್ನುವವರ ಈ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ: "ಪ್ರತಿದಿನ ಸುಮಾರು 60 ಕೃತಿಗಳು ವಿವಿಧ ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿವೆ, ಮೂರು ನಾಲ್ಕು ಅಂತರರಾಷ್ಟ್ರೀಯ ಭೇಟಿಗಳು ನಡೆಯುತ್ತವೆ, ತಮ್ಮ ಭಾಷೆಗೆ ಡಬ್ ಆದ ಹತ್ತಾರು ಬಗೆಯ ಚಲನಚಿತ್ರಗಳು ರಜತಪರದೆಯ ಮೇಲೆ ಕಾಣಿಸಿಕೊಳ್ಳುತ್ತವೆ, ಬೆರಳಚ್ಚು ಯಂತ್ರಗಳು ಒಂದೇ ಸಮನೆ ಬೆರಳಚ್ಚಿಸುವ ಕಾರ್ಯದಲ್ಲಿ ತೊಡಗಿರುತ್ತವೆ, ಭಾಷಾಂತರಗೊಂಡ ಅನೇಕ ಪುಟಗಳಷ್ಟು ವಿಷಯಗಳು ರೇಡಿಯೊ ಮೂಲಕ ಪ್ರಸಾರಗೊಳ್ಳುತ್ತವೆ, ನಿರಂತರವಾಗಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನೇಕ ದಸ್ತೈವೇಜುಗಳು ಭಾಷಾಂತರಗೊಳ್ಳುತ್ತಿರುತ್ತವೆ."[1] ಎಂದರೆ "ನಾವು ಭಾಷಾಂತರ ಯುಗದಲ್ಲಿ ಜೀವಿಸುತ್ತಿದ್ದೇವೆ"[2]

---

[1] E. Cary: *Translation in Modern Times*, Geneva, 1956, ಪುಟ 62.

[2] Bad Godesberg: *Quality in Translation*, 1959, ಪುಟ v.

ಎಂದಾಯಿತು. ಎಂದ ಮೇಲೆ ಭಾಷಾಂತರ ಚಟುವಟಿಕೆಯಿಲ್ಲದೇ ಹೋಗಿದ್ದಲ್ಲಿ ಬಹು ಸಂಖ್ಯಾತ ಜನರ ನಡುವೆ ಬಹುಭಾಷೆಗಳ ನಡುವೆ, ಸಂಸ್ಕೃತಿ ಮತ್ತು ಧಾರ್ಮಿಕ ವಿಷಯ ಗಳ ಬಗ್ಗೆ ನಡೆಯುತ್ತಿದ್ದ ಐತಿಹಾಸಿಕ ಸಂಗತಿಗಳೇ ಬೆಳಕಿಗೆ ಬರುತ್ತಿರಲಿಲ್ಲ.

ಭಾಷಾಂತರ ಕ್ಷೇತ್ರದಲ್ಲೂ ಸಾವಿರಾರು ಮಂದಿ ಒಂದಲ್ಲ ಒಂದು ರೀತಿಯಿಂದ ದುಡಿಯುತ್ತಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ, ತಾವು ಭಾಷಾಂತರ ಕ್ಷೇತ್ರಕ್ಕೆ ತಮ್ಮ ಕಾಣಿಕೆ–ಅದು ಎಷ್ಟೇ ಅಲ್ಪವಾಗಿರಲಿ—ನೀಡುತ್ತಿದ್ದೇವೆ ಎಂಬ ಅರಿವೇ ಅವರಿಗಿರುವುದಿಲ್ಲ. ವಾಣಿಜ್ಯೋದ್ಯಮ ಕಾರಣಗಳಿಗಾಗಿ ಸಾವಿರಾರು ಮಂದಿ ಪ್ರತಿದಿನ ವಿದೇಶಗಳಿಗೆ ಹೋಗುತ್ತಾರೆ, ವ್ಯಾಸಂಗದ ಸಲುವಾಗಿ ಹೋಗುತ್ತಾರೆ, ಕೆಲಸದ ಸಲುವಾಗಿ ಹೋಗು ತ್ತಾರೆ. ಹೋಟೆಲು ಮೋಟೆಲುಗಳಲ್ಲಿ, ವಾಹನಗಳಲ್ಲಿ, ವ್ಯವಹಾರಗಳಲ್ಲಿ, ಶಾಲಾ ಕಾಲೇಜು ವಿಶ್ವವಿದ್ಯಾನಿಲಯಗಳಲ್ಲಿ ವ್ಯವಹರಿಸುವಾಗ ಒಂದಲ್ಲ ಒಂದು ರೀತಿ ಭಾಷಾಂತರ ಕಾರ್ಯ ಸಾಗಿರುತ್ತದೆ. ಬೇರೆ ಬೇರೆ ವಿದೇಶೀ ಭಾಷೆಗಳನ್ನು ಕಲಿಯು ವಾಗಲೂ, ಕಲಿಸುವಾಗಲೂ ಭಾಷಾಂತರದ ನೆರವು ಅಗತ್ಯವೆಂದು ಪ್ರತ್ಯೇಕವಾಗಿ ಹೇಳ ಬೇಕಾಗಿಲ್ಲ. ಕಳೆದ ಶತಮಾನದ ಮಧ್ಯಭಾಗದಲ್ಲಿ ಅಂತರರಾಷ್ಟ್ರೀಯ ಸಮ್ಮೇಳನಗಳು ವರ್ಷದಲ್ಲಿ ಒಮ್ಮೆ ನಡೆದರೆ ನಮ್ಮ ಕಾಲದಲ್ಲಿ ಪ್ರತಿವರ್ಷವೂ ಇಂಥ ಸಾವಿರಾರು ಸಮ್ಮೇಳನಗಳು ನಡೆಯುತ್ತವೆ, ಎಂಬುದಾಗಿ ಎ. ಸ್ವಾದರ್ಸ್ತ ಎಂಬ ಪ್ರಸಿದ್ಧ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[3]

ಕಳೆದ ಹತ್ತು ವರ್ಷಗಳಲ್ಲಿ ಭಾಷಾಂತರ ಚಟುವಟಿಕೆ ಎಷ್ಟು ಬೃಹತ್ಪ್ರಮಾಣದಲ್ಲಿ ಬೆಳೆದಿದೆಯೆಂದರೆ ಭಾಷಾಂತರದ ಇತಿಹಾಸದಲ್ಲಿ ಎಲ್ಲ ಪ್ರಮುಖ ಅಂಶಗಳು ಅಡಕವಾಗಿ ದೆಯೆಂದು ಹೇಳಬಹುದು. 20ನೆಯ ಶತಮಾನದ ಮಧ್ಯಭಾಗದಲ್ಲಿ ಅಂತರರಾಷ್ಟ್ರೀಯ ಸಂಪರ್ಕ ವ್ಯಾಪಕವಾಗಿ ಬೆಳೆಯಿತು. ಪ್ರಪಂಚದ ಭೂಪಟದಲ್ಲಿ ಅನೇಕ ಹೊಸ ರಾಷ್ಟ್ರ ಗಳು ಕಾಣಿಸಿಕೊಂಡವು, ಅಂತರರಾಷ್ಟ್ರೀಯ ಸಂಸ್ಥೆಗಳು ಹುಟ್ಟಿಕೊಂಡವು, ಇಡೀ ಜಗತ್ತಿನಲ್ಲಿಯೇ ಹೊಸ ಬಗೆಯ ಸಂಚಾರವುಂಟಾಯಿತು. ತಾಂತ್ರಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲುಂಟಾದ ಬಿರುಗಾಳಿಯಿಂದ ವಿಷಯ ವಿನಿಮಯದ ಆವಶ್ಯಕತೆಯುಂಟಾ ಯಿತು. ಅಂತರರಾಷ್ಟ್ರೀಯ ಸಹಕಾರದಿಂದ ಸಂಶೋಧನಾ ಕ್ಷೇತ್ರದಲ್ಲಿ ಜಂಟಿಕಾರ್ಯ ಕ್ರಮಗಳೇರ್ಪಟ್ಟು ಒಂದಾದ ಮೇಲೊಂದರಂತೆ ಪತ್ರಿಕೆಗಳು ಪ್ರಕಟವಾಗತೊಡಗಿದವು. ಭಾಷಾಂತರಕ್ಕೆ ಒಂದು ಮಹತ್ವಸ್ಥಾನ ಸಿಗಲಾರಂಭಿಸಿತು.

೨

ಸೂಕ್ಷ್ಮವಾಗಿ ಇದುವರೆಗೂ ನಾವು ಗಮನಿಸಿದ ಒಂದೆರಡು ಅಂಶಗಳಿಂದ ಭಾಷಾಂತರ ಜ್ಞಾನದ ವಿಶೇಷ ಅಂಗವೆನ್ನುವುದು ಗೊತ್ತಾಗುತ್ತದೆ; ಇವರಿಂದ ಭಾಷಾ

---

3 ಎ. ಸ್ವಾದರ್ಸ್ತ : ಕಾಕ್ ಪಿಸ್ಸಿಕೆತ್ಪ್ರಿತ್ ವ್ಸೆಂಪ್ರಿ ಇಡೆಕ್ ? ಮಾಸ್ಕೊ, 1968, ಪುಟ 20.

ವಿಜ್ಞಾನದಲ್ಲೂ ಭಾಷಾಂತರಕ್ಕೆ ಮಹತ್ವವಾದ ಸ್ಥಾನವಿದೆಯೆನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಭಾಷಾಂತರಕಾರ-ಸಿದ್ಧಾಂತಿ (Translator–Theorist), ಭಾಷಾಂತರಕಾರ–ಪ್ರಯೋಗಕಾರರು (Translator–Practitioner) ಸ್ವತಃ ತಾವೇ ಎರಡು ಭಾಷೆಗಳಲ್ಲಿರುವ ವೈಶಿಷ್ಟ್ಯಗಳನ್ನು ವರದಿಮಾಡಬೇಕಾಗುತ್ತದೆ. ಕನ್ನಡದ ಬಗ್ಗೆ ನಾವು ಮಾತನಾಡುವಾಗ ಸಾಮಾನ್ಯವಾಗಿ ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲಿಷನ್ನೆ ಬಳಸುತ್ತೇವೆ. ಹಾಗಾಗಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ನಡುವೆ ಇರುವ ಕೆಲವು ವೈಶಿಷ್ಟ್ಯಗಳನ್ನು ಗಮನಿಸಬೇಕು. ಇಂಗ್ಲಿಷ್ ಭಾಷೆ ಆಧುನಿಕ ಯುಗದಲ್ಲಿ ವಿಶ್ವವ್ಯಾಪಿಯಾಗಿ ಹರಡಿರುವುದರಿಂದ ಆ ಭಾಷೆಯ ಶ್ರೀಮಂತಿಕೆಯ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ.

ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳನ್ನು ಪರಸ್ಪರ ಹೋಲಿಸಿದಾಗ ವ್ಯಾಕರಣ, ವಾಕ್ಯರಚನೆ ಮುಂತಾದ ಅಂಶಗಳು ಎಲ್ಲ ಸಂದರ್ಭಗಳಲ್ಲೂ ಏಕರೀತಿಯಾಗಿರಬೇಕಿಲ್ಲ. ಆಯಾ ಭಾಷೆಯ ಜಾಯಮಾನಕ್ಕನುಗುಣವಾಗಿ ಭಾಷಾಂತರ ಬದಲಾವಣೆಗೊಳ್ಳುತ್ತದೆ. ಆದರೆ ಮೂಲಾರ್ಥಕ್ಕೆ ಭಂಗಬಾರದಂತೆ ನೋಡಿಕೊಳ್ಳಬೇಕು.

ಮೂಲ: i) To prevent a thermonuclear war should be the supreme duty of *every person*. (J. Endicott)

ಅನುವಾದ: i) ಅಣ್ವಸ್ತ್ರಯುದ್ಧವನ್ನು ತಡೆಗಟ್ಟುವುದು **ಎಲ್ಲರ** ಪರಮ ಕರ್ತವ್ಯವಾಗಿದೆ.

ಇಂಗ್ಲಿಷಿನಲ್ಲಿ ಏಕವಚನದಲ್ಲಿರುವುದು ಕನ್ನಡದಲ್ಲಿ ಬಹುವಚನವಾಗಿದ್ದರೂ ಅರ್ಥಚ್ಯುತಿ ಬಂದಿಲ್ಲ. 'ಪ್ರತಿಯೊಬ್ಬನ' ಎಂದು ಪದಶಃ ಭಾಷಾಂತರಮಾಡಬಹುದಾಗಿದ್ದರೂ 'ಎಲ್ಲರ' ಎಂಬ ಪದದಷ್ಟು ಧ್ವನಿ ಅಲ್ಲಿ ಕಾಣಿಸುವುದಿಲ್ಲ. ಇನ್ನೊಂದು ಉದಾಹರಣೆಯನ್ನು ಗಮನಿಸಬಹುದು.

ಮೂಲ: *Attentions* of the demonstrators against racialism later turned to South Africa House where most of the ground floor windows were smashed. (*Morning Star*, London 1969)

ಅನುವಾದ: i) ವರ್ಣಜನಾಂಗದ ವಿರುದ್ಧ, ಪ್ರದರ್ಶನಕಾರರ **ಗಮನ** ಅನಂತರ ದಕ್ಷಿಣ ಆಫ್ರಿಕಾಭವನದತ್ತ ತಿರುಗಿದ್ದರಿಂದ ಅದರ ಕೆಳ ಅಂತಸ್ತಿನ ಬಹುಪಾಲು ಕಿಟಕಿಗಳು ನುಚ್ಚುನುರಿಯಾದವು.

ಇಂಗ್ಲಿಷ್ ಭಾಷೆಯಲ್ಲಿ ಗುಣವಾಚಿಗಳ (artic!es) ಉಪಯೋಗ ಸಹಜ. ಆದರೆ ಕನ್ನಡದಲ್ಲಿ ಇದು ಅನಗತ್ಯ. ಭಾಷಾಂತರಕಾರ ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸುವಾಗ ಈ ಗುಣವಾಚಿಯನ್ನು ಕೈಬಿಟ್ಟರೂ ಅದರ ಅರ್ಥವನ್ನು ತರಬು ಪ್ರಯತ್ನಿಸು

ತ್ತಾನೆ. ಈ ಗುಣವಾಚಿಯ ಅರ್ಥವನ್ನು ಕನ್ನಡದಲ್ಲಿ ಒಮ್ಮೊಮ್ಮೆ ಪರ್ಯಾಯಪದದ ಮೂಲಕ ತೆಗೆದುಕೊಂಡು ಬರಬಹುದು. ಉದಾ :

ಮೂಲ : The assumption that there is *a* special relationship between London and Washington irritates the French. (*The Guardian*, London 1965)

ಅನು : ಲಂಡನ್ ಮತ್ತು ವಾಷಿಂಗ್‌ಟನ್‌ಗಳ ನಡುವೆ **ಯಾವುದೋ** ವಿಶೇಷ ಸಂಬಂಧವಿದೆಯೆಂಬ ಕಲ್ಪನೆ ಫ್ರೆಂಚರನ್ನು ಕಾಡಿಸುತ್ತಿದೆ.

ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಕರ್ಮಣಿ ಪ್ರಯೋಗ ಅತ್ಯಂತ ಸಹಜವಾದುದು ಎನ್ನುವ ಸಂಗತಿ ಎಲ್ಲರಿಗೂ ತಿಳಿದಿದೆ. ಆದರೆ ಕನ್ನಡದಲ್ಲಿ ಕರ್ಮಣಿ ಪ್ರಯೋಗವನ್ನು ಬಳಸಿ ರಚಿಸಿದ ವಾಕ್ಯಗಳು ಸೊಗಸಾದ ಸಣ್ಣಕ್ಕಿ ಅನ್ನದಲ್ಲಿ ದೊರೆತ ಕಲ್ಲುಗಳಂತಾಗುತ್ತವೆ. ಅಂಥ ಸಂದರ್ಭಗಳಲ್ಲಿ ಕನ್ನಡಕ್ಕೆ ಸಹಜವಾದ ರೀತಿಯಲ್ಲಿಯೇ ನಿರೂಪಿಸಬೇಕಾಗುತ್ತದೆ.

೧) ಮೂಲ : The roads *were sentinelled* by Oaks.

ಅನು : ಓಕ್ ಮರಗಳು ಹಾದಿಗಳಿಗೆ **ಪಹರೆನೀಡುತ್ತಿದ್ದುವು.**

೨) ಮೂಲ : *Stones and bottles were showered* upon a Negro demonstration in Milwokee by white racialists. (*The London News*, London 1969)

ಅನು : ಬಿಳಿಯ ವರ್ಣವಾದಿಗಳು ಮಿಲ್‌ವೋಕಿಯಲ್ಲಿ ನೀಗ್ರೊ ಪ್ರದರ್ಶನಕಾರರ ಮೇಲೆ **ಕಲ್ಲು ಮತ್ತು ಸೀಸೆಗಳ ಮಳೆಗರೆದರು.**

ಸಂಬಂಧಾವ್ಯಯಗಳು (conjunctions) ಮತ್ತು ಕ್ರಿಯಾವಿಶೇಷಣಗಳು (adverbs) ಭಾಷಾಂತರಕಾರ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಒಮ್ಮೊಮ್ಮೆ ಅವುಗಳಿಗೆ ಬಹ್ವರ್ಥಗಳು ಲಭಿಸುವುದೂ ಉಂಟು. ಉದಾಹರಣೆಗೆ ಇಂಗ್ಲಿಷಿನ once ಎಂಬ ಶಬ್ದ ಕೇವಲ ಕಾಲಸೂಚಕ ಅರ್ಥವನ್ನು ಮಾತ್ರ ಕೊಡದೆ ಸಂಭಾವನಾವಾಚಕ (conditional) ಅರ್ಥವನ್ನೂ ಕೊಡುತ್ತದೆ. ಹಾಗೆಯೇ ಕಾಲಸೂಚಕ ಅರ್ಥವನ್ನು ಕೊಡದ ಸಂಭಾವನಾ–ನಿಷೇಧಾರ್ಥದಿಂದ ಕೂಡಿದ ಸಂಬಂಧಾವ್ಯಯ Unless ಎಂಬುದು ಹಲವು ಸಂದರ್ಭಗಳಲ್ಲಿ Until ಎಂಬ ಕಾಲಸೂಚಕ ಸಂಬಂಧಾವ್ಯಯದ ಸ್ಥಾನವನ್ನು ಆಕ್ರಮಿಸುವುದೂ ಉಂಟು. ಉದಾ :

ಮೂಲ : We are confident peace can be maintained *once* the determination is there. (*Morning Star*, London 1969)

ಅನು : **ಒಂದು ವೇಳೆ** ನಾವು ನಿರ್ಧಾರವನ್ನು ಕೈಗೊಳ್ಳುವುದಾದಲ್ಲಿ ಶಾಂತಿಪಾಲನೆ ಮಾಡುವ ಬಗ್ಗೆ ನಮಗೆ ವಿಶ್ವಾಸವಿದೆ.

ಒಂದೇ ಬಗೆಯ ರೂಪಗಳು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಭಾಷಾಂತರಗೊಂಡಾಗ ಅಲ್ಪ ಸ್ವಲ್ಪ ಬದಲಾವಣೆ ಬೇಕಾಗಬಹುದು. ಸರಿಯಾದ ಎಚ್ಚರಿಕೆಯನ್ನು ಭಾಷಾಂತರಕಾರ ವಹಿಸದೆ ಹೋದರೆ ಅನೇಕ ವೇಳೆ ತಾರ್ಕಿಕ ಅಸಂಬದ್ಧತೆ ಉಂಟಾಗಬಹುದು.

ಮೂಲ : It was a little store on Grove street in the slums. The people who came to the store were all *interesting and poor*. (W. Saroyan : *A number of the Poor.*)

ಅನು : ಕೊಳಚೆಪ್ರದೇಶದ ಗ್ರೋವ್ ರಸ್ತೆಯ ಆದೊಂದು ಸಣ್ಣ ಅಂಗಡಿ. ಆ ಅಂಗಡಿಗೆ ಬರುತ್ತಿದ್ದ ಎಲ್ಲರೂ ಬಡವರು, **ಆದರೆ ಬಹಳ ಆಸಕ್ತಿ ಹುಟ್ಟಿಸುವಂಥವರು.**

ವಾಕ್ಯಗಳಲ್ಲಿ ಕೆಲವು ಸಲ ಆಡುಮಾತಿನ ಪ್ರಯೋಗ ಕಾಣಬರುವುದುಂಟು. ಅದು ಇಂಗ್ಲಿಷ್ ಭಾಷೆಯ ಸಹಜತೆಯಾಗಿರುತ್ತದೆ. ಇಂತಹ ನುಡಿಗಳು ಅಧ್ಯಾಹಾರಗಳಾಗಿ ಅಲ್ಲಿ ಕಾಣಸಿಗಬಹುದು, ಪ್ರತ್ಯೇಕಪದಗಳಾಗಿ ಬರಬಹುದು, ಇಲ್ಲವೆ ಪದಗುಚ್ಛಗಳಾಗಿ ಬರಬಹುದು, ಪರೆಂತಿಸಿಸ್ ವಾಕ್ಯಗಳಾಗಿರಬಹುದು. ಅಂಥ ಸಂದರ್ಭಗಳಲ್ಲಿ ಈ ವಾಕ್ಯವೇಷ್ಟನಗಳನ್ನು ನಮ್ಮ ಭಾಷೆಯ ಜಾಯಮಾನಕ್ಕನುಗುಣವಾಗಿ ಅನುವಾದಿಸಬೇಕಾಗುತ್ತದೆ.

ಮೂಲ : In the morning, if anything, it was colder. (Tenzing : *'Tiger of the snows.'* p. 42)

ಅನು : **ಬೆಳಿಗ್ಗೆ, ಅಲ್ಲಿ ಇನ್ನೇನಾದರೂ ಇದ್ದಿದ್ದರೆ,** ಮತ್ತಷ್ಟು ಚಳಿ ಅಷ್ಟೆ.

ಕೆಲವು ಸಂದರ್ಭಗಳಲ್ಲಿ ಪದಗಳು ಸ್ಥಾನಪಲ್ಲಟಗೊಳ್ಳುವುದುಂಟು, ಭಾಷಾಂತರದಲ್ಲಿ. ಆಗ ಮೂಲಾರ್ಥವನ್ನು ಗ್ರಹಿಸಿ ಉದ್ದಿಷ್ಟಭಾಷೆಯ ಸಹಜತೆಗನುಗುಣವಾಗಿ ಭಾಷಾಂತರಿಸಬೇಕಾಗುತ್ತದೆ. ಮುಂದಿನ ಉದಾಹರಣೆಯನ್ನು ಇದಕ್ಕೆ ನಿದರ್ಶನವಾಗಿ ಕೊಡಬಹುದು.

ಮೂಲ : While *they* talk about peace in Paris, the *Americans* continue to practise the vilest barbarities of modern war in Vietnam (*The Newyork Times :* Newyork 1969).

ಅನು : ಪ್ಯಾರಿಸ್‌ನಲ್ಲಿ **ಅಮೆರಿಕನ್ನರು** ಶಾಂತಿ ಮಾತುಕತೆಯ ಬಗ್ಗೆ ಮಾತನಾಡಿದರೂ ವಿಯಟ್ನಾಂನಲ್ಲಿ **ಅವರು** ಆಧುನಿಕ ಯುದ್ಧ ತಂತ್ರದ ಅಮಾನುಷ ಕ್ರೌರ್ಯವನ್ನು ಇನ್ನೂ ಮುಂದುವರಿಸುತ್ತಿದ್ದಾರೆ.

ಭಾಷಾಂತರ ಕಾರ್ಯದಲ್ಲಿ ಪ್ರವೃತ್ತರಾಗಿರುವಾಗ ಒಮ್ಮೊಮ್ಮೆ ಮೂಲಭಾಷೆಯ ಪದಕ್ಕೆ ಸಂವಾದಿಯಾದ ಪದ ಉದ್ದಿಷ್ಟಭಾಷೆಯಲ್ಲಿ ದೊರಕದೆ ಹೋಗಬಹುದು. ಆಗ

ಪದಶಃ ಭಾಷಾಂತರ ಮಾಡಿದರೆ ಅರ್ಥವ್ಯತ್ಯಾಸವಾಗುವುದರ ಜೊತೆಗೆ ಮೂಲದ ಆಶಯವೇ ನಷ್ಟವಾಗಿ ಹೋಗಬಹುದು.

೧. ಮೂಲ : Hot milk with *skin* on it.

ಈ ವಾಕ್ಯವನ್ನು ಭಾಷಾಂತರಿಸುವಾಗ skin ಪದಕ್ಕೆ ಸಂವಾದಿಯಾದ ಚರ್ಮ ಎಂಬ ಪದವನ್ನು ಬಳಸಿ ಅನುವಾದಿಸಿದರೆ ಮೂಲದ ಆಶಯವೇ ಕೆಟ್ಟುಹೋಗುತ್ತದೆ. ಆದರೆ ಇದನ್ನೇ–

ಅನು : ಕೆನೆಗಟ್ಟಿದ ಬಿಸಿಹಾಲು

ಎಂದು ಭಾಷಾಂತರಿಸಿದರೆ ಸರಿಹೋಗುತ್ತದೆ. ಹಾಗೆಯೇ :

೨. ಮೂಲ : The rain *came* in torrents.
ಅನು : ಜಡಿಮಳೆ ಸುರಿಯಿತು.

೩

ಇದುವರೆಗೆ ಕನ್ನಡ–ಇಂಗ್ಲಿಷ್ ಭಾಷೆಗಳ ನಡುವಣ ಸಾಮ್ಯವೈಷಮ್ಯಗಳನ್ನು ಕುರಿತು ಸ್ಥೂಲವಾಗಿ ವಿವೇಚಿಸಿದ್ದಾಯಿತು. ಈ ವಿವೇಚನೆಯಲ್ಲಿ ಎರಡು ಭಾಷೆಗಳ ನಡುವೆ ಇರುವ ಎಲ್ಲ ಬಗೆಯ ವ್ಯಾಕರಣ ವಿಶೇಷಗಳನ್ನು ಚರ್ಚಿಸದಿದ್ದರೂ ಆಗಾಗ ನಮಗೆ ಎದುರಾಗುವ ಸಮಸ್ಯೆಗಳ ಪೈಕಿ ಹಲವಾರನ್ನು ವಿವೇಚಿಸಲಾಗಿದೆ.

ಈಗ ಕನ್ನಡ ಮತ್ತು ರಷ್ಯನ್ ಭಾಷೆಗಳ ನಡುವೆ ಇರುವ ಸಾಮ್ಯವೈಷಮ್ಯಗಳ ಪೈಕಿ ಕೆಲವನ್ನು ಇಲ್ಲಿ ಹೇಳಲು ಪ್ರಯತ್ನಿಸುತ್ತೇನೆ. ಯೂರೋಪಿನ ಹಾಗೂ ಪ್ರಪಂಚದ ಭಾಷೆಗಳಲ್ಲಿ ರಷ್ಯನ್ ಭಾಷೆಯೂ ಗಮನಾರ್ಹ ಭಾಷೆಯೆಂದೇನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಂಗ್ಲಿಷ್, ಕನ್ನಡ ಮತ್ತಿತರ ಭಾಷೆಗಳಲ್ಲಿರದ ಕೆಲವು ಅಪೂರ್ವ ಅಂಶಗಳು ಈ ಭಾಷೆಯಲ್ಲಿವೆ.

ಪರಿಪೂರ್ಣಕ್ರಿಯೆ (perfect tense) ಮತ್ತು ಅಸಮಪೂರ್ಣಕ ಕ್ರಿಯೆ (imperfect tense)ಗಳನ್ನು ತೋರಿಸುವ ಕ್ರಿಯಾಪದಗಳ ಗುಂಪು ರಷ್ಯನ್ ಭಾಷೆಯ ವೈಶಿಷ್ಟ್ಯ. ಒಂದೊಂದು ಕ್ರಿಯಾಪದವೂ ತನ್ನ ಕ್ರಿಯೆ ಸಂಪೂರ್ಣಗೊಂಡಿದೆಯೆ ಇಲ್ಲವೆ ಎಂಬುದನ್ನು ತಕ್ಷಣ ತಿಳಿಸಿಕೊಡುತ್ತದೆ. ಈಗ ಒಂದೆರಡು ಉದಾಹರಣೆಗಳನ್ನು ನೋಡಬಹುದು.

ರಷ್ಯನ್ ಮೂಲ

i) ಯ ಕುಪೀಲ್ ಕಾಲೆಂದಾರ್ ii) ಯ ಕಾಷ್ದಿಗೋದ್ ಪಕುಪಾಯು ಕಾಲೆಂದಾರ್

iii) ಯ **ಕುಪ್ಲ್ಯು** ಛಸ್ಸಿ ಜಾಫ್ತ್ರ. iv) ಯ **ಪಕುಪಾಯು** ಓವಷಿ ಇ ಫ್ರೂಕ್ತಿ ಕಾಷ್ಡಿ ಜಿನ್.

ಮೇಲಿನ ನಾಲ್ಕು ವಾಕ್ಯಗಳನ್ನು ಕನ್ನಡಕ್ಕೆ ಅನುವಾದಿಸಿದಾಗ ಆಗುವ ಭಾಷಾಂತರ :

i) ನಾನು ಕ್ಯಾಲೆಂಡರ್ **ಕೊಂಡೆ.** ii) ಪ್ರತಿ ವರ್ಷ ನಾನು ಕ್ಯಾಲೆಂಡರ್ **ಕೊಳ್ಳುತ್ತೇನೆ.**

iii) ನಾನು ನಾಳೆ ಗಡಿಯಾರ **ಕೊಳ್ಳು**ತ್ತೇನೆ. iv) ನಾನು ಪ್ರತಿದಿನ ತರಕಾರಿ ಹಣ್ಣುಗಳನ್ನು **ಕೊಳ್ಳುತ್ತೇನೆ.**

ಕನ್ನಡದಲ್ಲಿ 'ಕೊಳ್ಳು' (to buy) ಎಂಬ ಕ್ರಿಯಾಪದ ಭೂತ, ವರ್ತಮಾನ ಹಾಗೂ ಭವಿಷ್ಯಕಾಲಗಳಲ್ಲಿ ಬಳಕೆಗೊಂಡಿದೆ. ಮೇಲುನೋಟಕ್ಕೆ ಎರಡು ಭಾಷೆಗಳ ಅನುವಾದ ಸಮರ್ಪಕವೆನಿಸಿದರೂ ರಷ್ಯನ್ ಭಾಷೆಯ ವೈಶಿಷ್ಟ್ಯವನ್ನು ಇಲ್ಲಿ ಗಮನಿಸಬೇಕು. ಮೊದಲನೆ ವಾಕ್ಯದ ಕ್ರಿಯಾಪದ 'ಕುಪೀಲ್' ಎನ್ನುವುದು ಪರಿಪೂರ್ಣಕ್ರಿಯೆಯನ್ನು ತೋರಿಸುತ್ತದೆ. ಎರಡನೆ ವಾಕ್ಯದ ಕ್ರಿಯಾಪದ 'ಪಕುಪಾಯು' ಎನ್ನುವುದು ಕ್ರಿಯೆ ಮತ್ತೆ ಮತ್ತೆ ನಡೆಯುವುದನ್ನು ಸೂಚಿಸುತ್ತದೆ. ಮೂರನೆ ವಾಕ್ಯದ ಕ್ರಿಯಾಪದ 'ಕುಪ್ಲ್ಯು' ಎನ್ನುವುದು ಮತ್ತೆ ಇಲ್ಲಿ ಪರಿಪೂರ್ಣ ಕ್ರಿಯೆಯನ್ನೇ ತೋರಿಸುತ್ತದೆ. ಇಲ್ಲಿ ಇನ್ನೊಂದು ಸ್ವಾರಸ್ಯವೆಂದರೆ ಈ ಪರಿಪೂರ್ಣ ಕ್ರಿಯೆಯನ್ನು ತೋರಿಸುವ ಕುಪ್ಲ್ಯು ಎಂಬ ಪದವನ್ನು ತೆಗೆದು ಅದರ ಸ್ಥಾನದಲ್ಲಿ 'ಪಕುಪಾಯು' ಎನ್ನುವದನ್ನು ಹಾಕುವಂತಿಲ್ಲ. ಏಕೆಂದರೆ ಅಂಗಡಿಯಲ್ಲಿ ನಾವು ಯಾರೊಬ್ಬರೂ ಪ್ರತಿದಿನವೂ ಹೊಸ ಗಡಿಯಾರಗಳನ್ನು ಕೊಳ್ಳುವುದಿಲ್ಲವಷ್ಟೆ! ಆದ್ದರಿಂದ ಇಲ್ಲಿ ಪರಿಪೂರ್ಣಕ್ರಿಯೆ ತೋರಿಸುವ **ಕುಪ್ಲ್ಯು** ಎಂಬ ಕ್ರಿಯಾಪದವನ್ನೇ ಬಳಸಬೇಕು. ಪ್ರತಿದಿನವೂ ನಾವು ಹಣ್ಣು ತರಕಾರಿಗಳನ್ನು ಕೊಳ್ಳುವುದರಿಂದ ಅಂಥ ಕಡೆ ಪಕುಪಾಯು ಎಂಬ ಕ್ರಿಯಾಪದವನ್ನೇ ಬಳಸಬೇಕು. ಅದು ಕ್ರಿಯೆ ಮೇಲಿಂದ ಮೇಲೆ ನಡೆಯುವುದನ್ನು ಸೂಚಿಸುತ್ತದೆ. ರಷ್ಯನ್ ಭಾಷೆಗೆ ಯಾವ ಪಠ್ಯವನ್ನೇ ಆಗಲಿ ಅನುವಾದಿಸುವಾಗ ಈ ಸೂಕ್ಷ್ಮ ಅಂಶಗಳನ್ನು ಗಮನಿಸಬೇಕಾಗುತ್ತದೆ. ಯ **ಗವರೀಲ್** ಇಮೂ "ದೋಬ್ರೆ ಊತ್ರ" ಮತ್ತು ಯ **ಸ್ಕಜಾಲ್** ಇಮೂ "ದೋಬ್ರೆ ಊತ್ರ" ವಾಕ್ಯಗಳನ್ನು ಕನ್ನಡಕ್ಕಾಗಲೀ ಇಂಗ್ಲಿಷಿಗಾಗಲೀ ಭಾಷಾಂತರಿಸಿದಾಗ ಎರಡು ವಾಕ್ಯಗಳ ಭಾಷಾಂತರವೂ ಕ್ರಮಶಃ ಇಂಗ್ಲಿಷಿನಲ್ಲಿ I told him "Good morning" ಎಂದೂ, ಕನ್ನಡದಲ್ಲಿ "ಶುಭ ಪ್ರಾತಃಕಾಲ (ನಮಸ್ಕಾರ)" ಎಂದು ನಾನು ಆತನಿಗೆ ಹೇಳಿದೆ ಎಂದೂ ಆಗುತ್ತದೆ. **ಗವರೀಲ್** ಎಂಬ ಕ್ರಿಯಾಪದದ ಕ್ರಿಯೆ ಪದೇ ಪದೇ ನಡೆಯುವುದನ್ನು ಸೂಚಿಸುತ್ತದೆ. ಎಂದರೆ ನಮಸ್ಕಾರ ಎಂದು ನಾನು ನಿನ್ನೆ ಹೇಳಿದೆ, ಮೊನ್ನೆ ಹೇಳಿದೆ, ಅದರ ಹಿಂದಿನ ದಿನವೂ ಹೇಳಿದೆ ಎಂದಾಗುತ್ತದೆ. ಎಂದರೆ ಪ್ರತಿದಿನ ನಡೆಯುವಂಥ ಕ್ರಿಯೆಯೆಂದಾಯಿತು. **ಸ್ಕಜಾಲ್** ಎಂಬಲ್ಲಿ

ಆ ಕ್ರಿಯೆ ಕೇವಲ ಒಂದು ಬಾರಿಗಷ್ಟೇ ಸೀಮಿತವಾಗಿರುತ್ತಲ್ಲದೆ ಕ್ರಿಯೆಯ ಪರಿಪೂರ್ಣತ್ವವನ್ನು ತೋರಿಸಿಕೊಡುತ್ತದೆ.

ಹಾಗೆಯೇ ರಷ್ಯನ್ ಕ್ರಿಯಾಪದಗಳು, ಅದರಲ್ಲೂ ಚಲನವಲನಗಳನ್ನು ತಿಳಿಸುವ ಕ್ರಿಯಾಪದಗಳು, ವಿಶಿಷ್ಟ ರೀತಿಯಲ್ಲಿ ಬಳಕೆಯಾಗುತ್ತವೆ. ಈಗ ಒಂದೆರಡು ಉದಾಹರಣೆಗಳನ್ನು ನೋಡಬಹುದು.

i) ಓನ್ ಇದ್ಯೋತ್ ವ್ ಬೆಂಗಳೂರ್.
ii) ಓನ್ ಏಜಿತ್ ವ್ ಬೆಂಗಳೂರ್.

ಈ ಎರಡು ವಾಕ್ಯಗಳನ್ನು ಇಂಗ್ಲಿಷಿಗಾಗಲಿ ಕನ್ನಡಕ್ಕಾಗಲಿ ಭಾಷಾಂತರಿಸಿದಾಗ ಹೀಗಾಗುತ್ತದೆ.

i) ಅವನು ಬೆಂಗಳೂರಿಗೆ ಹೋಗುತ್ತಾನೆ.
ii) ಅವನು ಬೆಂಗಳೂರಿಗೆ ಹೋಗುತ್ತಾನೆ.

iii) He *goes* to Bangalore.
iv) He *goes* to Bangalore.

ಇಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ರಷ್ಯನ್ ಕ್ರಿಯಾಪದಗಳಿಗೂ ಮತ್ತು ಕನ್ನಡ, ಇಂಗ್ಲಿಷ್ ಕ್ರಿಯಾಪದಗಳಿಗೂ ನಡುವೆ ಇರುವ ವ್ಯತ್ಯಾಸ ಗೊತ್ತಾಗುತ್ತದೆ. ರಷ್ಯನ್ ಭಾಷೆಯಲ್ಲಿನ ಮೊದಲ ವಾಕ್ಯದಲ್ಲಿನ ಕ್ರಿಯಾಪದ 'ಇದ್ಯೋತ್' ಎನ್ನುವುದು ಯಾವುದೇ ಬಗೆಯ ವಾಹನವನ್ನು ಬಳಸದೆ ನಡುಗೆಯಲ್ಲಿ ಹೋಗುವುದನ್ನು ಸೂಚಿಸುತ್ತದೆ. ಆದ್ದರಿಂದ ಇದನ್ನು ಕನ್ನಡಕ್ಕೆ ಭಾಷಾಂತರಿಸುವಾಗ ಆತನು (ನಡೆದುಕೊಂಡು) ಬೆಂಗಳೂರಿಗೆ ಹೋಗುತ್ತಾನೆ ಎಂದೇ ಬರೆಯಬೇಕು. ಎರಡನೆಯ ವಾಕ್ಯ ಆತನು (ವಾಹನದಲ್ಲಿ) ಬೆಂಗಳೂರಿಗೆ ಹೋಗುತ್ತಾನೆ ಎಂದು ಅನುವಾದಿಸಬೇಕು. ಬಹು ದೂರದ ಊರಿಗೆ ಹೋಗುವಾಗ ಮೊದಲನೆ ಕ್ರಿಯಾಪದ 'ಇದ್ಯೋತ್' ಹಾಕಿದರೆ ಅದು ಆಭಾಸವಾಗುತ್ತದೆ. ವ್ಯಾಕರಣ ರೀತಿಯಿಂದ ಅದು ಸರಿಹೋದರೂ ಅರ್ಥದ ದೃಷ್ಟಿಯಿಂದ ತಪ್ಪಾಗುತ್ತದೆ.

ಹಾಗೆಯೇ 'ಇದ್ಯೋತ್' ಮತ್ತು 'ಹಜೀಚ್' ಎಂಬ ಎರಡು ಕ್ರಿಯಾಪದಗಳನ್ನು ಬಳಸಿ ಹೇಳಲಾದ ಈ ಎರಡು ವಾಕ್ಯಗಳನ್ನು ಗಮನಿಸಿ.

i) ಓನ್ ಇದ್ಯೋತ್
ii) ಓನ್ ಹೋಜಿತ್

ಕನ್ನಡಕ್ಕೆ ಅಥವಾ ಇಂಗ್ಲಿಷಿಗೆ ಇವುಗಳನ್ನು ಹೀಗೆ ಭಾಷಾಂತರಿಸಬಹುದು.

i) He *goes*.
ii) He *goes*.
iii) ಅವನು **ಹೋಗುತ್ತಾನೆ**.
iv) ಅವನು **ಹೋಗುತ್ತಾನೆ**.

ಇಲ್ಲಿ ಈ ಭಾಷಾಂತರಗಳನ್ನು ಗಮನಿಸಿದಾಗ ಮೊದಲ ವಾಕ್ಯಕ್ಕೂ ಎರಡನೆಯ ವಾಕ್ಯಕ್ಕೂ ಯಾವ ಬದಲಾವಣೆಯೂ ಇಲ್ಲದಿರುವುದು ಗೊತ್ತಾಗುತ್ತದೆ. ಆದರೆ ಮೂಲದ ಆಶಯ ಹೀಗಿದೆ. ಓನ್ ಇದ್ಯೋತ್ ಎಂದಾಗ ಆ ವ್ಯಕ್ತಿ ಯಾವುದೋ ನಿರ್ದಿಷ್ಟ ಗುರಿಸಾಧನೆಗಾಗಿ, ಎಂದರೆ ಶಾಲೆಗೊ, ಮತ್ತೆಲ್ಲಿಗೊ ಕಾರ್ಯನಿಮಿತ್ತವಾಗಿ ಹೋಗುತ್ತಿದ್ದಾನೆ ಎಂದು ಅರ್ಥವಾಗುತ್ತದೆ. ಆದರೆ ಓನ್ ಹೋಜಿತ್ ಎಂಬಲ್ಲಿ ಆತನು ಯಾವ ಗುರಿಯೂ ಇಲ್ಲದೆ ಅಲೆದಾಡುತ್ತಿರುವುದು ರಷ್ಯನ್ ಮೂಲದಿಂದ ಗೊತ್ತಾಗುತ್ತದೆ. ಈ ಅಂಶಗಳನ್ನು ಸುತ್ತಿ ಬಳಸಿ ಹೇಳದೆ ಒಂದೇ ಮಾತಿನಲ್ಲಿ ಇಂಗ್ಲಿಷಿನಲ್ಲಾಗಲಿ ಅಥವಾ ಕನ್ನಡದಲ್ಲಾಗಲಿ ಹೇಗೆ ತಾನೆ ತರಲು ಸಾಧ್ಯ? ಇಂಥ ವ್ಯಾಕರಣ ವಿಶೇಷಗಳು ರಷ್ಯನ್ ಭಾಷೆಯ ವೈಶಿಷ್ಟ್ಯ. ಕನ್ನಡದಲ್ಲಾಗಲೀ ಅಥವಾ ಬೇರಾವ ಭಾಷೆಗಳಲ್ಲಾಗಲಿ ರಷ್ಯನ್ ಭಾಷೆಯಿಂದ ಅನುವಾದಿಸುವಾಗ ಈ ವೈಶಿಷ್ಟ್ಯಗಳನ್ನು ಅತ್ಯಂತ ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ.

೨೧ | ಯಂತ್ರಾನುವಾದ — ಈಚಿನ ಒಂದು ಬೆಳವಣಿಗೆ

ಪ್ರಧಾನ್ ಗುರುದತ್ತ

ಅನುವಾದದ ಕ್ಷೇತ್ರದಲ್ಲಿನ ಈಚಿನ ಗಮನಾರ್ಹ ಬೆಳವಣಿಗೆಯೆಂದರೆ ಯಂತ್ರಾನುವಾದ. ಈ ಬೆಳವಣಿಗೆ ಕಂಪ್ಯೂಟರುಗಳ ಮೂಲಕ ಅನುವಾದವನ್ನು ಸಿದ್ಧಪಡಿಸುವುದಕ್ಕೆ ಸಂಬಂಧಪಟ್ಟಿದೆ. ಮಾನವ ಮತಿ ಪ್ರವೇಶಿಸಬಹುದಾಗಿರುವ ಅನೇಕ ಕ್ಷೇತ್ರಗಳ ಮೇಲೆ ಕಂಪ್ಯೂಟರುಗಳು ದಾಳಿ ಮಾಡಿ ತಮ್ಮ ವೈಶಿಷ್ಟ್ಯಪೂರ್ಣ ಸಾಮರ್ಥ್ಯಗಳ ಮುದ್ರೆಯನ್ನು ಒತ್ತುತ್ತಿರುವುದನ್ನು ಕಾಣುತ್ತಿದ್ದೇವೆ. ಸಂಗೀತ ಮತ್ತು ಕ್ರೀಡೆಯಂಥ ಕ್ಷೇತ್ರಗಳೂ ಇದಕ್ಕೆ ಹೊರತಾಗಿಲ್ಲದಿರುವಾಗ ಅನುವಾದ ಕ್ಷೇತ್ರ ಮಾತ್ರ ಕಂಪ್ಯೂಟರಿನ ಕೈವಾಡದಿಂದ ದೂರವಾಗಿರಲು ಸಾಧ್ಯವೆ? ಆಧುನಿಕ ಯುಗದಲ್ಲಿ ಭಾಷಾಂತರಕ್ಕೆ ದೊರೆತಿರುವ ಮಹತ್ವ, ಪ್ರಾಧಾನ್ಯ ಮತ್ತು ಅಗತ್ಯತೆಯ ದೃಷ್ಟಿಯಿಂದಾಗಿ ಯಂತ್ರಗಳ ಮರೆಹೋಗುವ ಸಾಧ್ಯತೆಯನ್ನೂ ಪರಿಶೀಲಿಸುವ ಅಗತ್ಯ ಉಂಟಾಯಿತು. ಅದರ ಫಲವೇ ಯಂತ್ರಾನುವಾದ. ಭಾಷಾವಿಜ್ಞಾನಿಗಳೂ, ಭೌತವಿಜ್ಞಾನಿಗಳೂ, ಇಂಜಿನಿಯರುಗಳೂ, ತಂತ್ರಜ್ಞರೂ ಈ ದಿಕ್ಕಿನಲ್ಲಿ ದುಡಿದಿದ್ದಾರೆ. ಕಳೆದ ಎರಡೂವರೆ ದಶಕಗಳಿಂದ ರಷ್ಯಾ, ಇಂಗ್ಲೆಂಡ್, ಅಮೆರಿಕಾ, ಕೆನಡಾ, ಭಾರತ ಮೊದಲಾದ ದೇಶಗಳಲ್ಲಿ ಈ ಸಂಬಂಧವಾದ ಅಧ್ಯಯನ-ಸಂಶೋಧನ ಕಾರ್ಯಗಳು ನಡೆದಿವೆ. ಕೆನಡಾದಂಥ ಅಧಿಕೃತ ದ್ವಿಭಾಷಾ ರಾಷ್ಟ್ರಕ್ಕಂತೂ ಇಂಥ ಪ್ರಯೋಗ ವಿಶಿಷ್ಟ ಮಹತ್ವದ್ದಾಗಿತ್ತು. ಏಕೆಂದರೆ ಪಾರ್ಲಿಮೆಂಟ್ ಅಧಿವೇಶನದಲ್ಲಿ ಏಕಕಾಲದಲ್ಲಿ ದ್ವಿಭಾಷಾ ಪ್ರಯೋಗ ಅಗತ್ಯವಾಗಿ ಪರಿಣಮಿಸಿತ್ತು. ಆರಂಭಿಕ ಕಾರ್ಯಗಳು ನಡೆದದ್ದು ಇಂಗ್ಲೆಂಡ್‌ನಲ್ಲಿಯೇ. ಇದರ ವ್ಯಾವಹಾರಿಕತೆಯನ್ನು ಪರಿಶೀಲಿಸುವ ದೃಷ್ಟಿಯಿಂದ ರಷ್ಯಾದೇಶವೂ ಈ ಸಂಬಂಧವಾಗಿ ಕೆಲವೊಂದು ಪ್ರಯೋಗಗಳನ್ನು ನಡೆಸಿದೆ. ಅಮೆರಿಕಾ ಕೂಡ ತುಂಬ ಆಸಕ್ತಿಯಿಂದ ಅದರ ಸಾಧ್ಯಾಸಾಧ್ಯತೆಗಳ ಪರಿಶೀಲನೆಯನ್ನು ನಡೆಸಿದೆ. ಬಹುಭಾಷಾ ರಾಷ್ಟ್ರವಾದ ಭಾರತವೂ ಈ ವಿಚಾರದ ಬಗ್ಗೆ ಆಸಕ್ತಿ ತೋರಿದೆ. ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್' ಸಂಸ್ಥೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಸಂಶೋಧನೆಗಳು ನಡೆದಿವೆ. ಕೆಲವು ವಾಕ್ಯಗಳನ್ನು ಇಂಗ್ಲಿಷ್‌ನಿಂದ ಹಿಂದಿಗೆ ಭಾಷಾಂತರಿಸಲು ಸಾಧ್ಯವಾಗಿದೆ ಎಂದು ವರದಿಯಾಗಿದೆ. ಇಂಥ ಆಸಕ್ತಿ ಮತ್ತು ಕುತೂಹಲಗಳನ್ನು ಕೆರಳಿಸಿ, ಮಾನವ ಭಾಷಾಂತರಕಾರನ ಸ್ಥಾನವನ್ನು ಆಕ್ರಮಿಸುವ ಬೆದರಿಕೆಯನ್ನೊಡ್ಡಿರುವ ಈ ಬೆಳವಣಿಗೆಯ ಇತಿಹಾಸ ಹಾಗೂ ಈ ಕ್ಷೇತ್ರದಲ್ಲಿನ ಸಮಸ್ಯೆಗಳ ಪರಿಚಯಮಾಡಿಕೊಡುವುದು ಈ ಪ್ರಬಂಧದ ಮುಖ್ಯ ಉದ್ದೇಶ.

ಯಂತ್ರಾನುವಾದದ ಇತಿಹಾಸ

ಕಂಪ್ಯೂಟರುಗಳನ್ನು ಅನುವಾದಕಾರ್ಯಕ್ಕೂ ಬಳಸಬಹುದೆಂಬ ಸೂಚನೆಯನ್ನು ಮುಂದಿರಿಸಿದವರಲ್ಲಿ ಮೊದಲಿಗರಾದ ಶ್ರೇಯಸ್ಸು ಎ. ಡಿ. ಬೂತ್ ಅವರಿಗೆ ಲಭ್ಯವಾಗಿದೆ. ವಾಸ್ತವವಾಗಿ ಯಂತ್ರಾನುವಾದ ಯೋಜನೆಯ ಜನಕನೇ ಈತ. ೧೯೪೬ರ ಹೊತ್ತಿಗೆ ಅಸ್ಪಷ್ಟ ಕಲ್ಪನೆಯಂತಿದ್ದ ಈ ಯೋಜನೆಯನ್ನು ಲಿಪಿರೂಪದಲ್ಲಿ ಮಂಡಿಸಲು ಸಾಧ್ಯವಾದುದು ೧೯೪೭ರಲ್ಲಿ. ಬೂತ್ ಮತ್ತು ವ್ಯಾರೆನ್ ವೀವರ್ ಈ ಸಮಸ್ಯೆಗಳನ್ನು ಚರ್ಚಿಸಿದರು. ಮಾನವ ಭಾಷಾಂತರಕಾರ ಕೋಶಗಳನ್ನು ಪರಿಶೀಲಿಸಿ ಪರ್ಯಾಯಗಳನ್ನು ಕಂಡುಕೊಳ್ಳುವಂತೆ, ಕಂಪ್ಯೂಟರ್ ಮೂಲಕವೂ ಪರಿಶೀಲನ ಕಾರ್ಯವನ್ನು ನಡೆಸುವಷ್ಟರ ಪ್ರಗತಿ ಮಾತ್ರ ಆ ಹೊತ್ತಿಗೆ ಸಾಧ್ಯವಾಗಿತ್ತು. ಈ ಪ್ರಯತ್ನಗಳು ತುಂಬ ಆಶಾದಾಯಕವಾಗಿದ್ದು, ಅತೀವ ಭರವಸೆಗಳನ್ನು ಹುಟ್ಟಿಸಿದುವು. ಕೆಲವೇ ತಿಂಗಳುಗಳಲ್ಲಿ ಭಾಷಾಂತರ ಕಾರ್ಯದಲ್ಲಿ ತೊಡಗಬಹುದಾದಂಥ ಕಂಪ್ಯೂಟರ್ ಯಂತ್ರ ದೊರೆಯಬಹುದೆಂಬ ನಿರೀಕ್ಷೆಯುಂಟಾಗಿದ್ದರೂ ೧೯೫೦ರ ವರೆಗೆ ಇಂಥ ಯಂತ್ರ ರೂಪು ತಳೆಯಲಿಲ್ಲ. ಈ ಅವಧಿಯಲ್ಲಿ ಬೂತ್ ಮತ್ತು ರಿಚೆನ್ಸ್ ಅವರು ಕಂಪ್ಯೂಟರಿನಲ್ಲಿ ಬಳಸಬಹುದಾದ ಕೋಶದ ಸ್ವರೂಪ ಹೇಗಿರಬೇಕೆಂಬ ಬಗ್ಗೆ ಅಧ್ಯಯನ ನಡೆಸಿ ತಮ್ಮ ತಾತ್ಕಾಲಿಕ ಅನಿಸಿಕೆಗಳನ್ನು ಪ್ರಬಂಧರೂಪದಲ್ಲಿ ಮಂಡಿಸಿದ್ದರು. ಆಸಕ್ತ ಕ್ಷೇತ್ರಗಳಲ್ಲಿ ಈ ಪ್ರಬಂಧದ ಪರಿಶೀಲನೆ ನಡೆದಿತ್ತು.

ಅಮೆರಿಕದಲ್ಲಿ ವ್ಯಾರೆನ್ ವೀವರ್ ಈ ಯೋಜನೆಯನ್ನು ಮಂಡಿಸಿದಾಗ, ಭಾಷಾವಿಜ್ಞಾನಿಗಳು ಮಾತ್ರವಲ್ಲದೆ ನಾರ್ಬರ್ಟ್ ವೈನರ್ ಅವರಂಥ ಪ್ರಗತಿವಾದಿಗಳು ಕೂಡ ಅಪಸ್ವರದ ನುಡಿಯನ್ನು ಸೊಲ್ಲೆತ್ತಿದರು. ೧೯೪೯ರಲ್ಲಿ ವೀವರ್-ಪ್ರಬಂಧಕ್ಕೆ ವ್ಯಾಪಕ ಪ್ರಚಾರವನ್ನು ಕೊಡಲಾಯಿತು. 'ಮೆಸ್ಸಾಚ್ಯುಸೆಟ್ಸ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ'ಯ ಬಾರ್ ಹಿಲೇಲ್ ತುಂಬ ಆಸಕ್ತಿಯಿಂದ ಈ ಯೋಜನೆಯನ್ನು ಪರಿಶೀಲನೆಗೆ ಎತ್ತಿಕೊಂಡರು. ಆದರೆ, ಈ ಕ್ಷೇತ್ರದಲ್ಲಿ ತೀವ್ರಕಾರ್ಯ ನಡೆದದ್ದು ೧೯೫೦ರ ತರುವಾಯವೆ. ರೈಫ್ಲರ್ ಈ ಕ್ಷೇತ್ರದಲ್ಲಿ ನಡೆಸಿದ ಅಧ್ಯಯನಗಳ ಫಲವನ್ನು ಕೆಲವು ಏಕವಿಷಯ ಪ್ರಬಂಧಗಳ ರೂಪದಲ್ಲಿ ಮಂಡಿಸಲಾಯಿತು. ಸೂಕ್ತ ಪ್ರಚಾರ ಮಾಧ್ಯಮದ ಅಭಾವವಿದ್ದುದರಿಂದ ಖಾಸಗಿಯಾಗಿ ವಿಚಾರವಿನಿಮಯ ನಡೆಯಿತು. ಬೂತ್ ಮತ್ತು ರಿಚೆನ್ಸ್ ಅವರ ಆಲೋಚನೆಗಳನ್ನು ಕಾರ್ಯತಃ ಪರಿಶೀಲಿಸಿದ್ದು ೧೯೫೧ರಲ್ಲಿಯೇ. ಶಿಷ್ಟಪಂಚಿತ ಕಾರ್ಡು ಯಂತ್ರ (Standard Punched Card Machinery)ವನ್ನು ಈ ಕಾರ್ಯಕ್ಕೆ ಬಳಸಲಾಯಿತು. ಫಲಿತಾಂಶ ನಿರೀಕ್ಷಿಸಿದಂತೆಯೇ ಇತ್ತು; ಈ ವ್ಯವಸ್ಥೆಯಲ್ಲಿ ನಿರೀಕ್ಷಿಸಲಾಗಿದ್ದ ದೋಷಗಳೆಲ್ಲ ಅಲ್ಲಿ ಮೈದಳೆದಿದ್ದುವು. ಇಷ್ಟಾಗಿಯೂ ಹೆಚ್ಚಿನ ಸಂಶೋಧನೆ ಅಪೇಕ್ಷಣೀಯವೆಂಬ ಅಂಶವನ್ನು ಈ ಪ್ರಯೋಗಗಳು ಮನದಟ್ಟು ಮಾಡಿಕೊಟ್ಟವು. ಇಂಗ್ಲೆಂಡಿನಲ್ಲಿ ಈ ಯೋಜನೆಗೆ ಅಗತ್ಯವಾದಷ್ಟು ಬೆಂಬಲ ಇನ್ನೂ ದೊರೆಯದೆ ಇದ್ದುದರಿಂದ ಸಂಶೋಧನೆಗಳು ಮಂದಗತಿಯಲ್ಲಿ ಸಾಗಿದುವು.

೧೯೫೨ರಲ್ಲಿ ರಾಕೆಫೆಲರ್ ಪ್ರತಿಷ್ಠಾನ ಮತ್ತೊಂದು ಮಹತ್ವಪೂರ್ಣ ಹೆಜ್ಜೆಯನ್ನಿಡಲು ನೆರವಾಯಿತು. ಈ ಕ್ಷೇತ್ರದಲ್ಲಿ ಆಸಕ್ತಿಯಿಂದ ದುಡಿಯುತ್ತಿದ್ದ ವಿದ್ವಾಂಸರನ್ನು ಆಹ್ವಾನಿಸಿ ಅದು ಒಂದು ಸಮ್ಮೇಳನವನ್ನು ನಡೆಸಿತು. ಬಾರ್ ಹಿಲೇಲ್ ಯಂತ್ರಾನು-ವಾದದ ವಿಶಿಷ್ಟ ಸಮಸ್ಯೆಗಳನ್ನು ವಿಶ್ಲೇಷಿಸಿದ್ದು ಈ ಸಮ್ಮೇಳನದಲ್ಲಿನ ವಿಶೇಷ ಮಹತ್ವದ ಸಂಗತಿಯಾಗಿತ್ತು. ಈ ಸಮ್ಮೇಳನದ ನಡವಳಿಗಳನ್ನೇನನ್ನೂ ಪ್ರಕಟಿಸದಿದ್ದರೂ ಯಂತ್ರಾನುವಾದಕ್ಕೆ ಪೂರ್ವಭಾವಿಯಾಗಿ ವಿಷಯನಿಷ್ಠ ಕೋಶಗಳನ್ನು ಸಿದ್ಧಪಡಿಸ ಬೇಕೆಂಬ ಹಾಗೂ ಭಾಷಾಸಂಬಂಧವಾಗಿ ಭಾಷಾವಿಜ್ಞಾನಿಗಳು ಇದುವರೆಗೂ ಮುಂದಿ ರಿಸದಿದ್ದ ಸಂಖ್ಯಾಶಾಸ್ತ್ರೀಯ ವಿಶ್ಲೇಷಣಗಳನ್ನು ಮಾಡಬೇಕೆಂಬ ವಿಚಾರಗಳನ್ನು ಈ ಸಮ್ಮೇಳನ ಸ್ಪಷ್ಟಪಡಿಸಿತು. ಈ ಸಮ್ಮೇಳನ ನಡೆದ ತರುಣದಲ್ಲಿಯೇ ಐ. ಬಿ. ಎಂ. ಕಾರ್ಪೊರೇಷನ್ ಮತ್ತು ಜಾರ್ಜ್‌ಟೌನ್ ವಿಶ್ವವಿದ್ಯಾನಿಲಯ ನಡೆಸಿದ ಸಂಯುಕ್ತ ಪ್ರಯತ್ನವೊಂದು ತುಂಬ ಪ್ರಚಾರವನ್ನು ಪಡೆಯಿತು. ಈ ಪ್ರಯತ್ನದಲ್ಲಿ ೨೫೦ ಶಬ್ದಗಳ ಸೀಮಿತ ಶಬ್ದಕೋಶವನ್ನಿಟ್ಟುಕೊಂಡು ಆಯ್ದ ಕೆಲವು ರಷ್ಯನ್ ವಾಕ್ಯಗಳನ್ನು ಭಾಷಾಂತರಿಸಲಾಯಿತು. ಮುಂದೆ ಇದರ ವರದಿಯನ್ನು ಪ್ರಕಟಿಸಲಾಯಿತು.

ಲಂಡನ್ ವಿಶ್ವವಿದ್ಯಾನಿಲಯದ ಬಿರ್‌ಬೆಕ್ ಕಾಲೇಜಿಗೆ ನಫೀಲ್ಡ್ ಪ್ರತಿಷ್ಠಾನ ೧೯೫೫ ಉದಾರ ಸಹಾಯಧನವನ್ನು ಮಂಜೂರುಮಾಡಿ ಪ್ರಯೋಗಗಳನ್ನು ಮುಂದು ವರಿಸಲು ನೆರವಾಯಿತು. ಈಗ ಪ್ರಯೋಗಕ್ಕೆ ಫ್ರೆಂಚ್‌ಭಾಷೆಯನ್ನು ಆಯ್ದುಕೊಳ್ಳ ಲಾಗಿತ್ತು. ಯಾವುದೇ ಬಗೆಯ ಪೂರ್ವಾಗ್ರಹಗಳಿಗೆ ಒಳಗಾಗಿರದಂಥ ಭಾಷಾವಿಜ್ಞಾನಿ ಗಳು ಈ ಪ್ರಯೋಗದಲ್ಲಿ ನಿರತರಾದರು. ಫಲಿತಾಂಶ ಅತ್ಯಂತ ಉತ್ತೇಜಕವಾಗಿತ್ತು. ೧೯೫೭ರ ಹೊತ್ತಿಗೆ ಫ್ರೆಂಚ್ ಭಾಷೆಗೆ ಸಂಬಂಧಿಸಿದ ಸಮಸ್ಯೆಗಳೆಲ್ಲವನ್ನೂ ಬಹುಮಟ್ಟಿಗೆ ಪರಿಹರಿಸಲು ಸಾಧ್ಯವಾಯಿತೆಂದು ಹೇಳಲಾಯಿತು. ಹೀಗಾಗಿ, ಮತ್ತಷ್ಟು ಕ್ಲಿಷ್ಟ ಸಮಸ್ಯೆಗಳನ್ನು ಬಗೆಹರಿಸುವತ್ತ ಈ ತಂಡ ಗಮನ ಹರಿಸಿತು. ಜರ್ಮನ್ ಭಾಷೆಯನ್ನೂ ಪ್ರಯೋಗದ ಕಕ್ಷೆಗೆ ಒಳಪಡಿಸಲಾಯಿತು.

ಅಮೆರಿಕಾದಲ್ಲಿ ಸೈದ್ಧಾಂತಿಕ, ತಾರ್ಕಿಕ ವಿವೇಚನೆಗಳು ನಡೆಯುತ್ತಿದ್ದುವು. ರಾಕೆ ಫೆಲರ್ ಪ್ರತಿಷ್ಠಾನ ಮತ್ತೆ ನೆರವಿಗೆ ಬಂದಿದ್ದರಿಂದ ಮೆಸ್ಸಾಚ್ಯುಸೆಟ್ಸ್ ತಂತ್ರವಿಜ್ಞಾನ ಸಂಸ್ಥೆ ಪೂರ್ಣಕಾಲೀನ ಕಾರ್ಯಕರ್ತರನ್ನು ನೇಮಿಸಿಕೊಂಡು ಈ ವಿಷಯಕವಾದ ಅಧ್ಯಯನವನ್ನು ಮುಂದುವರಿಸಿತು. ಯಂತ್ರಾನುವಾದದ ಬಗೆಗಿನ ಮೊದಲ ಪುಸ್ತಕ ಪ್ರಕಟವಾದದ್ದು ಆಗಲೇ. ಜೊತೆಗೆ ಯಂತ್ರಾನುವಾದದ ಬಗೆಗಿನ ಲೇಖನಗಳಿಗೇ ಮೀಸಲಾದ ನಿಯತಕಾಲಿಕ ಪತ್ರಿಕೆಯನ್ನು ('ಎಂ. ಟಿ.') ಪ್ರಾರಂಭಿಸಲಾಯಿತು. ರೈಫ್ಲರ್, ಓಸ್‌ವಾಲ್ಡ್, ಫ್ಲೆಚರ್ ಮೊದಲಾದವರು ಸೈದ್ಧಾಂತಿಕ ಪಕ್ಷವನ್ನು ವಿವರಿ ಸುವ ಲೇಖನಗಳನ್ನು ಬರೆದರು. ಕಂಪ್ಯೂಟರುಗಳನ್ನು ಬಳಸುವ ದಿಕ್ಕಿನಲ್ಲಿ ಗಮನಹರಿಸದೆ ಹೋದುದರಿಂದ ಪ್ರಗತಿಯೇನೂ ಸಾಧಿತವಾಗಲಿಲ್ಲ. ಇಷ್ಟಾದರೂ ಅಮೆರಿಕದ ವಾಯುಪಡೆ ಕೋಶಸಂಗ್ರಹಣಾ ಯಂತ್ರದ ನಿರ್ಮಾಣದಲ್ಲಿ ತೊಡಗಿತ್ತು.

ರಷ್ಯನ್ನರೂ ಈ ವಿಚಾರದಲ್ಲಿ ಆಸಕ್ತರಾಗಿ ಪ್ರಯೋಗಗಳನ್ನು ನಡೆಸುತ್ತಿದ್ದರೆಂಬುದು ೧೯೫೫ರ ಹೊತ್ತಿಗೆ ಬೆಳಕಿಗೆ ಬಂದಿತು. ೧೯೫೬ರಲ್ಲಿ 'ಇನ್‌ಸ್ಟಿಟ್ಯೂಷನ್ ಆಫ್ ಎಲೆಕ್ಟ್ರಿಕಲ್ ಎಂಜಿನಿಯರ್ಸ್' ಸಂಸ್ಥೆಯ ಸಭೆಯೊಂದರಲ್ಲಿ ಮಂಡಿಸಲಾದ ಪ್ರಬಂಧ ಮಾಸ್ಕೋ ವಿಶ್ವವಿದ್ಯಾನಿಲಯದಲ್ಲಿ ಈ ಸಂಬಂಧವಾಗಿ ನಡೆದ ಪ್ರಯೋಗಗಳ ವರದಿಯನ್ನು ಒಳಗೊಂಡಿತ್ತು. ಫಲಿತಾಂಶಗಳನ್ನು ನೋಡಿದಾಗ ಯಂತ್ರಮಾತ್ರವೇ ಅದರಲ್ಲಿ ಭಾಗವಹಿಸಿರಲಾರದೆಂಬ ಸಂದೇಹ ಮೂಡುವಂತಿತ್ತು. ಇಷ್ಟಾಗಿಯೂ ರಷ್ಯನ್ನರ ವಿಶ್ಲೇಷಣೆಗಳು, ಅನುವಾದ ವಿಧಾನಗಳು ಉತ್ತಮ ಶ್ರೇಣಿಯವಾಗಿದ್ದುವೆಂದು ಪಾಶ್ಚಾತ್ಯ ಸಂಶೋಧಕರೂ ಅಭಿಪ್ರಾಯಪಟ್ಟರು.

೧೯೫೬ರಲ್ಲಿ ಅಪೆಕ್ಸ್‌ಸಿ (APEXC) ಕಂಪ್ಯೂಟರನ್ನು ಬಳಸಿಕೊಂಡು ಬಿರ್‌ಬೆಕ್ ಕಾಲೇಜಿನಲ್ಲಿ ಅನೇಕ ಪ್ರಯೋಗಗಳನ್ನು ನಡೆಸಲಾಯಿತು. ಫಲಿತಾಂಶಗಳು ಅಪೇಕ್ಷಣೀಯವಾದ ಎಲ್ಲ ಅಂಶಗಳನ್ನೂ ಒಳಗೊಂಡಿರದಿದ್ದರೂ, ಉತ್ತೇಜಕವೂ ಗಮನಾರ್ಹವೂ ಆಗಿದ್ದುವು.

ಈ ಅವಧಿಯ ಅನಂತರದಲ್ಲಿ ಅಮೆರಿಕೆಯಲ್ಲಿ ಕೆನಡಾದಲ್ಲಿ ಈ ಸಂಬಂಧವಾದ ವಿಶೇಷ ಅಧ್ಯಯನಗಳೂ, ಪ್ರಯೋಗಗಳೂ ನಡೆದುವು. ಕೆನಡಾದಲ್ಲಿನ ಸಂಶೋಧನೆಗಳು ಬೂತ್ ಅವರ ನೇತೃತ್ವದಲ್ಲಿಯೇ ನಡೆದುವು. ಈಚಿನ ಪ್ರಗತಿಯ ವಿವರಗಳನ್ನು ಒಳಗೊಂಡ ಗ್ರಂಥವೊಂದನ್ನು ಪ್ರಕಟಿಸಲಾಗಿದೆ. ಬೂತ್ ಅವರೇ ಅದರ ಸಂಪಾದಕರು. ಅಮೆರಿಕೆಯಲ್ಲೂ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಯಿತು. ಇಷ್ಟಾಗಿಯೂ ವಸ್ತುಬದ್ಧ ಭಾಗದ ಭಾಷಾಂತರದ ವಲಯದಲ್ಲೇ 'ಯಂತ್ರಾನುವಾದ'ದ ಕಾರ್ಯಗಳು ನಡೆಯುತ್ತಿವೆ. ಮಾನವಮತಿಗೆ ಇರುವ ಸೌಲಭ್ಯಾವಕಾಶಗಳಿಂದ ವಂಚಿತವಾಗಿರುವ ಕಂಪ್ಯೂಟರ್ ಮಾನವ ಭಾಷಾಂತರಕಾರರನ್ನು ಮೆಟ್ಟಿ ನಿಲ್ಲಲಾರದು ಎಂಬುದಂತೂ ಖಚಿತವಾಗಿದೆ. ಇತ್ತೀಚಿನ ಪ್ರಕಟಣೆಯೊಂದರಲ್ಲಿ ಬಾರ್ ಹಿಲೇಲ್ ಇಂಥದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬೂತ್ ಅವರೂ ಇದುವರೆಗೆ 'ಯಂತ್ರಾನುವಾದ' ಸಾಹಿತ್ಯ ಕೇಂದ್ರದಿಂದ ದೂರವಾಗಿಯೇ ಉಳಿದಿದೆ. ಹಾಗಿರುವುದೇ ನಮಗೂ ಅಪೇಕ್ಷಣೀಯ ಎಂಬ ಅರ್ಥದ ಮಾತುಗಳನ್ನಾಡಿದ್ದಾರೆ. ಅಂದರೆ ಇಂದೂ ಮುಂದೂ ಯಂತ್ರಾನುವಾದದ ಕ್ಷೇತ್ರ ಸೀಮಿತವಾಗಿಯೇ ಉಳಿಯುವ ಸಂಭವವೇ ಹೆಚ್ಚು.

ಅನುವಾದ ವಿಧಾನ ಮತ್ತು ಸಮಸ್ಯೆಗಳು

ಯಾವುದೇ ಅನುವಾದದ–ಅಂತೆಯೇ ಯಂತ್ರಾನುವಾದದ—ಮೂಲಭೂತ ಸಮಸ್ಯೆ ಕೋಶಕ್ಕೆ ಸಂಬಂಧಿಸಿದ್ದು. ಸಾಂಪ್ರದಾಯಿಕ ಕೋಶಗಳನ್ನು ಪರಿಶೀಲಿಸುವ ಮಾನವ ಭಾಷಾಂತರಕಾರ ಸಂದರ್ಭಕ್ಕೆ ಸೂಕ್ತವಾದ ಅರ್ಥವನ್ನು ಕಂಡುಕೊಳ್ಳಬಲ್ಲ. ಅವನ ವ್ಯುತ್ಪತ್ತಿ, ಅಧ್ಯಯನ ಅನುಭವಗಳು ಪ್ರಸಂಗಕ್ಕೆ ಸಂಗತವಾದ ಅರ್ಥವನ್ನು ಆಯುವಲ್ಲಿ ನೆರವಾಗುತ್ತವೆ. ಮಾನವ ಮತಿಯ ಈ ಸಹಜ ಲೀಲೆ, ಯಂತ್ರದ ದೃಷ್ಟಿಯಿಂದ

ನೋಡಿದಾಗ, ಪವಾಡಸದೃಶವಾಗಿರುತ್ತದೆ. ಯಂತ್ರಕ್ಕೆ ಈ ಸೌಲಭ್ಯಗಳಿರುವುದಿಲ್ಲ. ಹೀಗಾಗಿ, ಯಂತ್ರದ ದೃಷ್ಟಿಯಿಂದ ಮೊಟ್ಟಮೊದಲ ಆವಶ್ಯಕತೆಯೆಂದರೆ ಸೂಕ್ತ ಕೋಶ. ೧೯೪೬ರ ಹೊತ್ತಿಗೆ ಬೂತ್ ಇಂಥ ಕೋಶದ ಸ್ವರೂಪದ ಬಗ್ಗೆ ಅಧ್ಯಯನ ನಡೆಸಿದ್ದರು. ೧೯೪೮–೪೯ರಲ್ಲಿ ಬೂತ್ ಮತ್ತು ರಿಚೆನ್ಸ್ ಈ ಸಮಸ್ಯೆಯನ್ನು ಪರಿಶೀಲಿಸಿದರು. ಮೊದಲು ಸೂಚಿತವಾಗಿದ್ದ ಸಂಗತಿಯೆಂದರೆ ಕಂಪ್ಯೂಟರಿನ ಸ್ಮರಣಾಂಗ (memory organ)ದಲ್ಲಿ ಸಾಂಪ್ರದಾಯಿಕ ರೀತಿಯ ಕೋಶವೊಂದನ್ನು ಅಳವಡಿಸುವುದು. ಆದರೆ ಇಂಥ ಕೋಶ ಉಪಯುಕ್ತವಾಗಲಾರದೆಂಬುದನ್ನು ಬಹುಬೇಗನೆ ಕಂಡುಕೊಳ್ಳಲಾಯಿತು. ಹೊಸ ತತ್ತ್ವವೊಂದರ ಆಧಾರದ ಮೇಲೆ ರಚಿತವಾದ ಕೋಶವೊಂದನ್ನು ಅಳವಡಿಸಬೇಕೆಂದು ಯೋಜಿಸಲಾಯಿತು. ಧಾತುಗಳು, ನಾಮಪದಗಳ ಏಕವಚನ ರೂಪಗಳು ಇವೇ ಮೊದಲಾದವುಗಳಿಗೆ ಬದಲಾಗಿ ಈ ಶಬ್ದಗಳ 'ಗರಿಷ್ಠ ಘಟಕ'ವನ್ನು ಸಂಗ್ರಹಿಸಬೇಕೆಂದು ಯೋಜಿಸಲಾಯಿತು. ಶಬ್ದವೊಂದರ ಹಲವಾರು ರೂಪಗಳಲ್ಲಿ ಸಮಾನ ರೂಪದಲ್ಲಿ ಕಾಣದೊರೆಯುವ ಅಂಶವನ್ನು 'ಗರಿಷ್ಠ ಘಟಕ'ವೆಂದು ಭಾವಿಸಲಾಯಿತು.

ಈ ಸಲಹೆ ಯಂತ್ರಾನುವಾದದ ಸಾಧ್ಯತೆಯ ಆಯಾಮಗಳನ್ನು ಬಹುವಾಗಿ ವಿಸ್ತರಿಸಿತು. ಕಂಪ್ಯೂಟರ್ ಒದಗಿಸಬಹುದಾಗಿರುವ ಸೀಮಿತ ಅವಕಾಶದಲ್ಲಿ ಅತ್ಯಂತ ಹೆಚ್ಚು ಶಬ್ದಗಳ ಸಂಗ್ರಹವನ್ನಿಡುವುದು ಈ ಕಾಂಡ ವಿಧಾನದಿಂದ (stem-ending procedure) ಸಾಧ್ಯವಾಯಿತು. ಈ ವಿಧಾನ ಸಮಸ್ಯೆಯ ಉಗ್ರತೆಯನ್ನು ಕಡಿಮೆಮಾಡಿತು. ಆದರೆ, ಕೆಲವು ಶಬ್ದಗಳ ನಿರ್ದಿಷ್ಟಾನುವಾದ ಅನೇಕ ವೇಳೆ ಅಸಾಧ್ಯವಾಗಿರುತ್ತದೆ. ಇಂಥ ಸಂದರ್ಭಗಳಲ್ಲಿ ಸಮಸ್ಯೆ ಉಳಿಯುವ ವಿಧಿಯಿಲ್ಲವೇನೋ ಎಂಬಂತಾಯಿತು. ರಿಚೆನ್ಸ್ ಇದಕ್ಕೆ ಒಂದು ಉದಾಹರಣೆಯನ್ನು ಒದಗಿಸಿದ್ದಾರೆ. Desideremus ಶಬ್ದವನ್ನು ಕಾಂಡವಿಧಾನ 'desid-eremus' ಎಂದು ಅಥವಾ 'desider-emus' ಎಂದು ಬಿಡಿಸುತ್ತದೆ. ಮೊದಲ ರೀತಿಯಲ್ಲಿ ಬಿಡಿಸಿದರೆ 'ಅಪೇಕ್ಷಿತ' (desired) ಎಂಬ ಅರ್ಥವೂ, ಎರಡನೆಯ ರೀತಿಯಲ್ಲಿ ಬಿಡಿಸಿದರೆ 'ಸೋಮಾರಿಯಾಗಿರು' ಎಂಬ ಅರ್ಥವೂ ಸಾಧಿತವಾಗುತ್ತವೆ. ಆದರೆ, ಇಂಥ ಶಬ್ದಗಳ ಸಂಖ್ಯೆ ತುಂಬ ಸೀಮಿತವಾಗಿರುವುದರಿಂದ ವಿಶಿಷ್ಟ ಸಂದರ್ಭಗಳನ್ನು ಪರಿಗಣನೆಗೆ ತೆಗೆದುಕೊಂಡು, ಅವುಗಳ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದೆಂದು ಯೋಚಿಸಲಾಯಿತು. ಈ ವಿಧಾನದಲ್ಲಿ ಕಂಪ್ಯೂಟರ್ ನೇರ ಅನುವಾದವನ್ನು ಕೊಡದೆ ಮೂಲಾಂಶವನ್ನು ಮಾತ್ರ ಅನುವಾದಿಸಿ ಉಳಿದ ವ್ಯಾಕರಣಾಂಶಗಳಿಗೆ ಸಂಬಂಧಿಸಿದಂತೆ ಸೂಚನೆಗಳನ್ನು ದಾಖಲಿಸುತ್ತಿತ್ತು. ಉದಾಹರಣೆಗೆ, 'cherchais' ಶಬ್ದದ ಅನುವಾದ 'seek (IPSI)' ಎಂಬುದಾಗಿ ದೊರೆಯುತ್ತಿತ್ತು. ಇದಕ್ಕೆ ಅಭ್ಯಸ್ತನಾದ ವ್ಯಕ್ತಿ ಇದನ್ನು "ಪ್ರಥಮ ಪುರುಷ ಏಕವಚನ ಅಪೂರ್ಣ (ಕಾಲ) (first person singular imperfect)" ಎಂದು ಅನುವಾದಿಸಿಕೊಳ್ಳುತ್ತಿದ್ದ. ಬ್ರಾಂಡ್‌ವುಡ್ ಈ ಆಲೋಚನೆಯನ್ನು ಮತ್ತಷ್ಟು ಪರಿಷ್ಕರಿಸಿ, ವ್ಯಾಕರಣ ವಿವರಗಳಿಗೆ ಬದಲಾಗಿ ನೇರ

ಅನುವಾದನನ್ನೇ ಕೊಡುವಂಥ ಕ್ರಮವನ್ನು ರೂಪಿಸಿಸಿದರು (೧೯೫೬). ಪರಿಷ್ಕಾರ ಇಷ್ಟೆ: ವಿದೇಶಿ ಭಾಷೆಯ ಶಬ್ದಕಾಂಡದ ಎದುರಿಗೆ ಇಂಗ್ಲಿಷ್ ಅನುವಾದದ ಶಬ್ದಕಾಂಡವನ್ನು ಅಳವಡಿಸಿರುತ್ತದೆ. ವಿದೇಶಿ ಶಬ್ದದಿಂದ ಶಬ್ದಕಾಂಡವನ್ನು ಪ್ರತ್ಯೇಕಿಸಿದ ಬಳಿಕ ಪದಾಂತ್ಯ (ending) ಕೋಶದಲ್ಲಿ ಸೂಕ್ತ ಅರ್ಥವನ್ನು ಅರಸಲಾಗುತ್ತದೆ. ಇದರಲ್ಲಿ ಪೂರ್ವ ಹಾಗೂ ಪರಪ್ರತ್ಯಯಗಳು (prefixes and suffixes) ಇರುತ್ತವೆ. ಸರಿಯಾದ ಭಾಷಾಂತರ ವನ್ನು ಪಡೆಯಲು ಇವುಗಳನ್ನು ಸಂದರ್ಭಾನುಗುಣವಾಗಿ ಹಿಂದೋ ಮುಂದೋ ಸೇರಿಸಿ ಕೊಳ್ಳಲಾಗುತ್ತದೆ. ಉದಾಹರಣೆಗೆ 'amat' ಎಂಬ ಲ್ಯಾಟಿನ್ ಶಬ್ದ. ಇದರ ಕಾಂಡ 'am'; ಅರ್ಥ 'lov' (ಪ್ರೇಮಿಸು). 'at' ಪದಾಂತ್ಯ; ಪದ್ಯಾಂಶ ಕೋಶ ಪೂರ್ವದಲ್ಲಿ 'he' (ಅವನು) ಶಬ್ದವಿರುತ್ತದೆಂಬ, ಪರಪ್ರತ್ಯಯವಾಗಿ '—es' (—ತ್ತಾನೆ) ಅನ್ನು ಸೇರಿಸ ಬೇಕೆಂಬ ಸೂಚನೆ ಇರುತ್ತದೆ. ಹೀಗಾಗಿ ಇದನ್ನು 'he loves' (ಅವನು ಪ್ರೇಮಿಸು ತ್ತಾನೆ) ಎಂದು ಭಾಷಾಂತರಿಸಲಾಗುತ್ತದೆ. ಸ್ತ್ರೀಲಿಂಗ ಅಥವಾ ನಪುಂಸಕಲಿಂಗ ಪೂರ್ವ ಶಬ್ದ (ಅಥವಾ ಕರ್ತೃಪದ)ಗಳು ಏಕಿರಬಾರದೆಂಬ ಪ್ರಶ್ನೆಯನ್ನು ಸದ್ಯಕ್ಕೆ ಬದಿಗಿರಿಸ ಬಹುದು.

ಮುಂದಿನ ಮುಖ್ಯ ಅಂಶ ಕೋಶಶೋಧನ ತಂತ್ರಕ್ಕೆ ಸಂಬಂಧಿಸಿರುವಂಥದು. ವಿದೇಶೀ ಭಾಷೆಯ ಅಕ್ಷರಗಳಿಗೆ ವರ್ಣಮಾಲೆಯಲ್ಲಿನ ಅವುಗಳ ಸ್ಥಾನಕ್ಕೆ ಅನುಗುಣವಾಗಿ ಸಂಖ್ಯೆ ಗಳನ್ನು ಗೊತ್ತುಪಡಿಸಬಹುದೆಂಬ ಯೋಜನೆಯೊಂದಿತ್ತು. ಆದರೆ, ಇದು ಸಮಸ್ಯೆಯನ್ನು ಪರಿಹರಿಸುವುದಕ್ಕಿಂತ ಉಲ್ಬಣಿಸುವುದೇ ಹೆಚ್ಚು ಎಂದು ಕಂಡುಬಂದದ್ದರಿಂದ, ಇದನ್ನು ಕೈಬಿಡಲಾಯಿತು. ಏಕೆಂದರೆ ಶಬ್ದವೊಂದರಲ್ಲಿ ಅತಿ ಹೆಚ್ಚಿನ ಅಕ್ಷರಗಳ ಸಂಖ್ಯೆ ೧೦ ಎಂದು ಇಟ್ಟುಕೊಂಡರೂ—೧೦ ಇರಬೇಕೆಂದೇನೂ ನಿಯಮವಲ್ಲ; ಇನ್ನೂ ಹೆಚ್ಚಾಗಿ ಇರಬಹುದು—ಶಬ್ದಸಂಗ್ರಹಣಕ್ಕೆ ಅಗತ್ಯವಾಗುವ ಎಡೆ ೨೬^೧೦ ಆಗುತ್ತದೆ. ಇದು ಯಾವುದೆ ಕಂಪ್ಯೂಟರಿನಲ್ಲಿ ಕಲ್ಪಿಸಬಹುದಾಗಿರುವ ಸ್ಥಳಕ್ಕಿಂತ ಸುಮಾರು ೧೦^೫ ರಷ್ಟು ಹೆಚ್ಚಾಗಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಮತ್ತೊಂದು ಸೂಚನೆಯನ್ನು ಮುಂದಿಡ ಲಾಯಿತು. ಸೂಚನೆಯ ಸ್ವರೂಪ ಹೀಗಿದೆ. ಅಕ್ಷರಪ್ರಮಾಣದ ಕ್ರಮದಲ್ಲಿ (numerical magnitude) ಜೋಡಿಸಲಾದ ಕೋಶವನ್ನು ಮೇಲಿನ ಅರ್ಧ ಮತ್ತು ಕೆಳಗಿನ ಅರ್ಧ ಎಂದು ವಿಂಗಡಿಸಲಾಗಿರುತ್ತದೆ. ದತ್ತ ಶಬ್ದದಲ್ಲಿನ ಅಕ್ಷರಗಳ ಸಂಖ್ಯೆಯನ್ನು ಕಳೆದು ಶಬ್ದದ ಸ್ಥಾನವನ್ನು ಗೊತ್ತುಪಡಿಸಿಕೊಳ್ಳಬೇಕಾಗುತ್ತದೆ. ಉದಾರಣೆಗೆ ೧೦ ಅಕ್ಷರಗಳ ಗರಿಷ್ಠ ಮಿತಿಯ ಕೋಶದಲ್ಲಿ ೬ ಅಕ್ಷರಗಳ ಯಾವುದೋ ಒಂದು ಶಬ್ದದ ಸ್ಥಾನವನ್ನು ಗೊತ್ತುಪಡಿಸಲು ಪ್ರಯತ್ನಿಸುತ್ತೇವೆ ಎಂದಿಟ್ಟುಕೊಳ್ಳೋಣ. ಮೇಲಿನ ಅರ್ಧದ ಪರಿಶೀಲನೆಯಲ್ಲಿ (ಇದು ಒಂದರಿಂದ ಐದು ಅಕ್ಷರಗಳವರೆಗಿರುತ್ತದೆ) ಫಲಿತಾಂಶ ಋಣಾತ್ಮಕ (negative) ಆಗಿರುತ್ತದೆ. ಕೆಳ ಅರ್ಧದ ಪರಿಶೀಲನೆಯಲ್ಲಿ ಶೂನ್ಯ (zero) ಅಥವಾ ಧನಾತ್ಮಕವಾಗಿರುತ್ತದೆ. ಅಂದರೆ ಶಬ್ದದ ಸ್ಥಾನವನ್ನು ಗೊತ್ತುಹಚ್ಚಲು ಋಣ ದಿಂದ ಧನದತ್ತ ಹೊರಳುವ ಸ್ಥಳವನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಇದು ಶಬ್ದ

ಕಾಂಡದ ಸ್ಥಾನವನ್ನು ಸೂಚಿಸುತ್ತದೆ. ಶೂನ್ಯಸ್ಥಳ ಶಬ್ದದ ಎಡೆಯನ್ನು ಸೂಚಿಸುತ್ತದೆ. ಬಿರ್‌ಬೆಕ್ ಕಾಲೇಜಿನ ಅಪೆಕ್ಸ್‌ಸಿ (APEXC) ಕಂಪ್ಯೂಟರಿನಲ್ಲಿ ಇಂಥ ಒಂದು ಕ್ರಿಯೆಗೆ ಒಟ್ಟಿನಲ್ಲಿ ಸುಮಾರು ೧೦ ಸೆಕೆಂಡುಗಳು ಅಗತ್ಯವಾದುವು. ಆದರೆ ಮಾನವ ಭಾಷಾಂತರಕಾರ ಇನ್ನೂ ಬೃಹತ್ತಾದ ಕೋಶವನ್ನು ಇದಕ್ಕಿಂತಲೂ ಅಲ್ಪಾವಧಿಯಲ್ಲಿ ಪರಿಶೀಲಿಸಬಲ್ಲ. ಹೀಗಾಗಿ ಈ ಕಾಲಾವಧಿ ತುಂಬ ಹೆಚ್ಚಾಯಿತು.

ಕೋಶ ಶೋಧನ ಕಾಲವನ್ನು ಕಡಿಮೆಮಾಡುವ ದೃಷ್ಟಿಯಿಂದ ಬೂತ್ 'ಆವರಣ-ವಿಧಾನ'ವನ್ನು (Bracketing method) ಸೂಚಿಸಿದರು. ವ್ಯವಕಲನ ಕ್ರಮವನ್ನು (subtraction) ಅನುಸರಿಸಿದ ಬಳಿಕ ಅನಾವಶ್ಯಕ ಪರಿಶೀಲನೆಯನ್ನು ತಪ್ಪಿಸಿ, ಸಂಭಾವ್ಯ ಸ್ಥಳದಲ್ಲಿಯೇ ಶಬ್ದವನ್ನು ಅರಸುವಂತೆ, ಈ ಪರಿಶೀಲನೆಗೆ ಒಂದು ಆವರಣವನ್ನು ಕಲ್ಪಿಸುವ ಯೋಚನೆ ಇದರಲ್ಲಿ ಅಡಕವಾಗಿದ್ದುದರಿಂದ ಇದಕ್ಕೆ ಈ ಹೆಸರು ಬಂದಿದೆ.

ಶಬ್ದಕೋಶವನ್ನು ಪರಿಚಿತ ಶಬ್ದಕೋಶ ಮತ್ತು ಅಪರಿಚಿತ ಶಬ್ದಕೋಶವೆಂಬುದಾಗಿ ವರ್ಗೀಕರಿಸಿ, ಅವುಗಳನ್ನು ಮೇಲಣ ಅರ್ಧ ಹಾಗೂ ಕೆಳಗಣ ಅರ್ಧವೆಂಬುದಾಗಿ ವಿಭಜಿಸಿ, ಪರಿಶೀಲನಾವಧಿಯನ್ನು ಮತ್ತಷ್ಟು ಕಡಿಮೆ ಮಾಡಬಹುದೆಂದು ಟೋಶೆರ್ ಸೂಚಿಸಿದರು. ಆದರೆ, ಇದರಿಂದ ಆಗುವ ಕಾಲ ಉಳಿತಾಯ ತೀರ ಅಲ್ಪವಾಗಿದ್ದುದರಿಂದ ಈ ಸಲಹೆ ಮಾನ್ಯವಾಗಲಿಲ್ಲ.

ಇಷ್ಟಾಗಿಯೂ ಈ ಕ್ರಮದಿಂದ ದೊರೆಯುವ ಭಾಷಾಂತರ—ಪರಸ್ಪರ ಹೋಲಿಕೆಯುಳ್ಳ ಇಂಗ್ಲಿಷ್ ಮತ್ತು ಫ್ರೆಂಚ್‌ನಂಥ ಭಾಷೆಗಳ ವಿಷಯದಲ್ಲಿಯೂ—ತೀರ ಕಳಪೆಯಾಗಿರುತ್ತಿತ್ತು. ಇದಕ್ಕೆ ಕಾರಣ ವಿವಿಧ ಭಾಷೆಗಳಲ್ಲಿನ ಶಬ್ದಕ್ರಮದ (word order) ಭಿನ್ನತೆ. ಅಂದರೆ, ಈ ಹಂತದಲ್ಲಿ 'ಯಂತ್ರಾನುವಾದದ ವ್ಯಾಕರಣ ಸಮಸ್ಯೆ'ಗಳ ಕ್ಷೇತ್ರವನ್ನು ಪ್ರವೇಶಿಸಿದಂತಾಗುತ್ತದೆ.

ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳು, ನಾಮಪದ ಮತ್ತು ಗುಣವಾಚಕಗಳ ಬಳಕೆಯಲ್ಲಿ ಅನುಸರಿಸಿರುವ ಶಬ್ದಕ್ರಮ ಒಂದಕ್ಕಿಂತ ಒಂದು ಭಿನ್ನವಾಗಿದೆ. ಉದಾಹರಣೆಗೆ, ಫ್ರೆಂಚ್‌ಭಾಷೆಯ 'Une equation differentielle' ಇಂಗ್ಲಿಷ್‌ನಲ್ಲಿ 'a differential equation' ಆಗಬೇಕೇ ಹೊರತು 'an equation differential' ಆಗಕೂಡದು, ಆಗುವುದಿಲ್ಲ. ಇತರ ಜಟಿಲ ವ್ಯಾಕರಣ ಪ್ರಕ್ರಿಯೆಗಳನ್ನು ತೆಗೆದುಕೊಂಡಾಗ ಸಮಸ್ಯೆ ಮತ್ತಷ್ಟು ಗಂಭೀರವಾಗುತ್ತದೆ. ಈ ಸಮಸ್ಯೆಯನ್ನು ಪರಿಹರಿಸಲು ರಚನಾಕೋಶ (dictionary of structures) ವನ್ನು ಅಳವಡಿಸಬಹುದೆಂದೂ, ಇಂಥ ಸಂದರ್ಭಗಳಲ್ಲಿ ವ್ಯಾಕರಣ ಪ್ರಕ್ರಿಯಾ ಸಂಬಂಧವಾದ ಸೂಚನೆಗಳನ್ನು ಕೊಡಬಹುದೆಂದೂ ಹೇಳಲಾಗಿದೆ. ಫ್ರೆಂಚ್‌ನಂಥ ಭಾಷೆಗಳಲ್ಲಿ ರಚನಾಪ್ರಕಾರಗಳ ಸಂಖ್ಯೆ ಸೀಮಿತವಾಗಿರುವುದರಿಂದ, ಇದು ಅಂಥ ಸಮಸ್ಯೆಯೇನೂ ಆಗಲಾರದೇನೋ. ಆದರೆ, ಜರ್ಮನ್‌ನಂಥ ಭಾಷೆಯನ್ನು ತೆಗೆದುಕೊಂಡರೆ ಈ ಸಮಸ್ಯೆ ದುರ್ಲಂಘ್ಯವೇ ಆಗುತ್ತದೆ. ಸದ್ಯದಲ್ಲಿ ಲಭ್ಯವಾಗಿರುವ ಹಾಗೂ ನಿಕಟ ಭವಿಷ್ಯದಲ್ಲಿ ರೂಪಿಸಬಹುದಾಗಿರುವ ಕಂಪ್ಯೂಟರುಗಳಿಗೆ,

ಈ ಕಾರಣದಿಂದಾಗಿ, ಸೀಮಿತ ಸಂಖ್ಯೆಯ ರಚನೆಗಳನ್ನು ಮಾತ್ರ ಭಾಷಾಂತರಿಸಲು ಸಾಧ್ಯವಾಗಬಹುದೆಂದು ಬ್ರಾಂಡ್‌ವುಡ್ ತೋರಿಸಿಕೊಟ್ಟಿದ್ದಾರೆ. ಭಾಷಾಸಂಬಂಧವಾದ ಮತ್ತಷ್ಟು ಸಮರ್ಪಕ ವಿಶ್ಲೇಷಣೆ ಲಭ್ಯವಾಗುವವರೆಗೆ ಬೇರೆ ದಾರಿಯಿಲ್ಲವೆಂದು ಹೇಳಲಾಗಿದೆ. ಕಂಪ್ಯೂಟರುಗಳ ಸಂಗ್ರಹಣಾಂಗಗಳ ಸ್ವರೂಪದಲ್ಲಿಯೇ ಕ್ರಾಂತಿಕಾರಕ ಬದಲಾವಣೆ ಆಗುವವರೆಗೆ, ವಿಷಯನಿಷ್ಠ ಕೋಶಗಳನ್ನೂ ಉಪಯೋಗಿಸಲೇಬೇಕಾಗುತ್ತದೆಂದೂ ಹೇಳಲಾಗಿದೆ.

ಕೊನೆಯದಾಗಿ, ಸಂದಿಗ್ಧತೆಗಳ ಮತ್ತು ನುಡಿಗಟ್ಟುಗಳ ಸಂದರ್ಭದಲ್ಲಿ ಯಂತ್ರಾನುವಾದ ಎದುರಿಸಬೇಕಾಗಿರುವ ಸಮಸ್ಯೆಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬಹುದು. ಸಂದಿಗ್ಧತೆ ಅರ್ಥಕ್ಕೆ ಸಂಬಂಧಿಸಿದ ವಿಷಯ. ಇದು ಹಲವು ಬಗೆಯಾಗಿರಬಹುದು ; (i) ವಿಷಯಾನುಗುಣವಾಗಿ ಅರ್ಥ ಬದಲಾಗುವುದು ; (ii) ಇತರ ಶಬ್ದಗಳೊಡನೆ ಜೊತೆಗೂಡಿದಾಗ ಅರ್ಥ ಬದಲಾಗುತ್ತ ಬರುವುದು ; (iii) ಸಂದರ್ಭಾನುಗುಣವಾಗಿ ಅರ್ಥ ಬೇರೆಯಾಗುವುದು.

ಮೊದಲನೆಯ ಬಗೆಯ ಸಂದಿಗ್ಧತೆ ಒಂದು ರೀತಿಯಲ್ಲಿ ಸರಳವಾದುದು. ಅನೇಕ ಪಾರಿಭಾಷಿಕ ಶಬ್ದಗಳು ಈ ಜಾತಿಯವು. ಅವುಗಳಿಗೆ ಆಯಾ ಶಾಸ್ತ್ರದಲ್ಲಿ ವಿಶಿಷ್ಟ ಅರ್ಥಗಳಿರುತ್ತವೆ. ಈ ಸಂದಿಗ್ಧತೆಯನ್ನು ಬೂತ್ ಮತ್ತು ರಿಚೆನ್ಸ್ ಗಮನಿಸಿಯೇ ಇದ್ದರು. ಇಂಥ ಸಂದರ್ಭಗಳಲ್ಲಿ ಎರಡು ವಿಧವಾಗಿ ಪರಿಹಾರಗಳನ್ನು ಕಂಡುಕೊಳ್ಳುವುದು ಸಾಧ್ಯ : ಒಂದು, ಕಂಪ್ಯೂಟರಿನ ಮೂಲಕ ಎಲ್ಲ ಅರ್ಥಗಳನ್ನೂ ನಮೂದಿಸಿಬಿಟ್ಟು, ಸೂಕ್ತ ಅರ್ಥವನ್ನು ಆಯ್ದುಕೊಳ್ಳುವ ಹೊಣೆಯನ್ನು ಓದುಗನಿಗೇ ಬಿಡುವುದು ; ಎರಡು, ವಿಷಯನಿಷ್ಠ ಕೋಶಗಳನ್ನು ಬಳಸುವುದರ ಮೂಲಕ ಈ ಸಮಸ್ಯೆಯನ್ನು ಮೂಲದಲ್ಲಿಯೇ ಪರಿಹರಿಸಿಬಿಡುವುದು. ಅಂದರೆ, ವಿಷಯ ಗೊತ್ತಿದ್ದಾಗ ಎರಡನೆಯ ಕ್ರಮವನ್ನು ಅನುಸರಿಸಬಹುದು. ವಿಷಯ ಗೊತ್ತಿಲ್ಲದೆ ಇದ್ದಾಗ, ಅದರ ಬಗ್ಗೆ ಪೂರ್ವಭಾವಿ ವಿಶ್ಲೇಷಣೆ ಅಗತ್ಯವಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಲು ಬೇರೊಂದು ವಿಧಾನವನ್ನೂ ಸೂಚಿಸಲಾಗಿದೆ. ಅದೇ 'ಸಂದರ್ಭಾಂಕ ವಿಧಾನ'. ಉದಾಹರಣೆಗೆ 'noyau' ಶಬ್ದಕ್ಕೆ 'nut' (1), 'nucleus' (2), 'centre' (3), ಮತ್ತು 'kernel' (4) ಎಂಬ ವಿವಿಧಾರ್ಥಗಳು ಸಂಗತವಾಗುವಂತಿದ್ದರೆ, ಯಾವ ಸಂದರ್ಭಗಳಲ್ಲಿ ಈ ಅರ್ಥಗಳು ಸಂಗತವಾಗುತ್ತವೆಂಬುದನ್ನು ಕಂಡುಕೊಳ್ಳಲಾಗುತ್ತದೆ. ಉದಾಹರಣೆಗೆ, ಸಮಾಜಶಾಸ್ತ್ರೀಯ ಸಂದರ್ಭದಲ್ಲಿ 'centre' ಎಂಬ ಅರ್ಥ ಮಾತ್ರ ಸಂಗತವಾಗುತ್ತದೆಂದು ಇಟ್ಟುಕೊಳ್ಳೋಣ. ಆಗ ಯಂತ್ರ ಸೂಚನಾನುಗುಣವಾಗಿ ಉಳಿದ ಅರ್ಥಗಳನ್ನು ತಿರಸ್ಕರಿಸಿ, ಸಂಗತವಾದ ಅರ್ಥವನ್ನೇ ಆಯ್ದುಕೊಳ್ಳುತ್ತದೆ.

ಎರಡನೆಯ ಬಗೆಯ ಸಂದಿಗ್ಧತೆ ಶಬ್ದಗಳು ನುಡಿಗಟ್ಟಾಗಿ ಪರಿಣಮಿಸಿ ಅರ್ಥ ವ್ಯತ್ಯಾಸವನ್ನು ಹೊಂದುವುದಕ್ಕೆ ಸಂಬಂಧಿಸಿರುವುದು. ಇದಕ್ಕೆ ಒಂದು ಪರಿಹಾರವಾಗಿ ರಚನಾಕೋಶವನ್ನು ಬಳಸಬಹುದು. ಕೋಶದಲ್ಲಿನ ರಚನಾಂಕದ (structural

number) ಬಗ್ಗೆ ಯಂತ್ರಕ್ಕೆ ಸೂಚನೆ ಕೊಟ್ಟರೆ ಆಯಿತು. 'boite de nuit' ಎಂಬ ಫ್ರೆಂಚ್ ನುಡಿಗಟ್ಟಿನ ಶಬ್ದಶಃ ಅರ್ಥ 'box of night' ಎಂದು ; ಆದರೆ ನುಡಿಗಟ್ಟಾಗಿ ಪ್ರಯುಕ್ತವಾದಾಗ ಅದಕ್ಕೆ 'night club' ಎಂದು ಅರ್ಥವಾಗುತ್ತದೆ. ಇಂಥ ಸಂದರ್ಭದಲ್ಲಿ ಯಂತ್ರಕ್ಕೆ ಕೊಡುವ ಸೂಚನೆಗಳು ಈ ರೀತಿ ಇರುತ್ತವೆ : (i) 'boite' ಶಬ್ದ ಬಂದಾಗ ಕೂಡಲೇ ಅದನ್ನು ಭಾಷಾಂತರಿಸಕೂಡದು ; (ii) ಮುಂದಿನ ಶಬ್ದವನ್ನು ನೋಡಿ ಭಾಷಾಂತರಿಸಬೇಕು ; (iii) ಮುಂದಿನ ಶಬ್ದ ಕಾರಕವೋ ಪ್ರತ್ಯಯವೋ ಆಗಿದ್ದರೆ ಅದನ್ನೂ ಭಾಷಾಂತರಿಸದೆ, ಮೂರನೆಯ ಶಬ್ದವನ್ನು ಪರಿಶೀಲಿಸಬೇಕು. ಈ ಶಬ್ದ 'nuit' ಆಗಿದ್ದರೆ 'night club' ಎಂದೂ, 'chocolat' ಆಗಿದ್ದರೆ 'box of chocolate' ಎಂದೂ ಭಾಷಾಂತರಿಸಬೇಕು. ಮೊದಲ ನೋಟಕ್ಕೆ ಇದು ಸುಲಭವೆಂದು ತೋರಬಹುದಾದರೂ, ಭಾಷೆಯಲ್ಲಿ ಇಂಥ ನುಡಿಗಟ್ಟುಗಳ ಸಂಖ್ಯೆ ಅಪಾರವಾಗಿರುವುದರಿಂದ ಇದು ದುರ್ಲಂಘ್ಯ ಸಮಸ್ಯೆಯಾಗಿಯೇ ಉಳಿಯುತ್ತದೆ. ಆದರೆ ವೈಜ್ಞಾನಿಕ ಅಥವಾ ತಾಂತ್ರಿಕ ಬರಹದಲ್ಲಿ ಇಂಥ ನುಡಿಗಟ್ಟುಗಳ ಸಂಖ್ಯೆ ಸೀಮಿತವಾಗಿರುತ್ತದೆಂಬುದಷ್ಟೇ ಇದಕ್ಕಿರುವ ಸಮಾಧಾನ.

ಮೂರನೆಯ ಬಗೆಯ ಸಂದಿಗ್ಧತೆಯ ಸಮಸ್ಯೆಯಂತೂ ತುಂಬ ಸಂಕೀರ್ಣವಾದುದು. ಉದಾಹರಣೆಗೆ, "She cannot bear childern" ಎಂಬ ವಾಕ್ಯದಲ್ಲಿ 'bear' ಶಬ್ದಕ್ಕೆ ಇರುವ ಅರ್ಥವೇ ಬೇರೆ ಎಂಬುದನ್ನು ಮಾನವ ಮತಿ ಸುಲಭವಾಗಿ ಗ್ರಹಿಸಬಲ್ಲದು. ಆದರೆ ಯಂತ್ರ ಇಷ್ಟು ಲೀಲಾಜಾಲವಾಗಿ ಈ ಕಾರ್ಯವನ್ನು ಮಾಡಲಾರದು. ಹೀಗಾಗಿ, ಯಂತ್ರಕ್ಕೆ, ಇಲ್ಲಿ 'bear' ಶಬ್ದಕ್ಕೆ ಪ್ರಸವಶಾಸ್ತ್ರಸಂಬಂಧವಾದ ಅರ್ಥವಿದೆಯೆಂಬ ಸೂಚನೆಯನ್ನು ಕೊಡುವುದು ಅಗತ್ಯವಾಗುತ್ತದೆ. ಇಲ್ಲವಾದಲ್ಲಿ ತಪ್ಪು-ಕೆಲವೊಮ್ಮೆ ಮನೋರಂಜಕವಾದ ಅರ್ಥಗಳು ಅನುವಾದದಲ್ಲಿ ಕಾಣಿಸಿಕೊಳ್ಳಬಹುದು. ಇಂಥ ಕೆಲವು ಮನರಂಜನೆಯ ಉದಾಹರಣೆಗಳು ತುಂಬ ಪ್ರಸಿದ್ಧವಾಗಿವೆ. ಉದಾಹರಣೆಗೆ,

(i) "The *spirit* is willing but the *flesh* is weak"
ಯಂತ್ರಾನುವಾದ : "The *whisky* is agreeable but the *meat* had gone bad."
(ii) "hydraulic ram"
ಯಂತ್ರಾನುವಾದ : "aquatic male sheep."
(iii) "out of sight, out of mind."
ಯಂತ್ರಾನುವಾದ : "Invisible, imbecile".

ಇಂಥ ಸಂಭವಗಳಿಗೆ ಎಡೆಗೊಡಬಾರದೆಂಬ ದೃಷ್ಟಿಯಿಂದಲೇ, ರೈಫ್ಲರ್ ಯಂತ್ರಾನು-ವಾದಕ್ಕೆ ಒಬ್ಬ ಪೂರ್ವ ಸಂಪಾದಕ (pre-editor) ಮತ್ತು ಒಬ್ಬ ಉತ್ತರ-ಸಂಪಾದಕ

(post-editor) ಇರಬೇಕಾದುದು ಅಗತ್ಯವೆಂದು ಒಮ್ಮೆ ಸೂಚಿಸಿದ್ದುದು. ಸಂದಿಗ್ಧತೆಗಳಿಗೆ ಎಡೆ ದೊರೆಯುವಂಥ ಸಂಭವಗಳನ್ನು ದೂರಮಾಡುವುದು—ಅಂದರೆ, ಈ ದೃಷ್ಟಿಯಿಂದ ಮೂಲವನ್ನು ಪರಿಷ್ಕರಿಸುವುದು ಅಥವಾ ಸಂಪಾದಿಸುವುದು—ಪೂರ್ವ ಸಂಪಾದಕನ ಕಾರ್ಯವಾಗಿರುತ್ತದೆ. ಇದಕ್ಕೆ ಮೂಲಭಾಷೆಯ ಅರಿವಿರುವ ವ್ಯಕ್ತಿಯೇ ಸಾಕು. ಈತನಿಗೆ ಉದ್ದಿಷ್ಟ ಭಾಷೆ ತಿಳಿದಿರಬೇಕಾದ ಅಗತ್ಯವಿಲ್ಲ. ಯಂತ್ರ ನೀಡಿದ ಭಾಷಾಂತರದಲ್ಲಿನ ಸಂದಿಗ್ಧತೆಗಳನ್ನು ದೂರಮಾಡುವುದು ಉತ್ತರ–ಸಂಪಾದಕನ ಹೊಣೆಯಾಗಿರುತ್ತದೆ. ಈ ದೃಷ್ಟಿಯಿಂದ ಈತನಿಗೆ ಮೂಲ ಮತ್ತು ಉದ್ದಿಷ್ಟ ಭಾಷೆಗಳ ಬಗೆಗಿನ ಪರಿಜ್ಞಾನ ಅಗತ್ಯ. ಪೂರ್ವ ಅಥವಾ ಉತ್ತರ ಸಂಪಾದಕನ ಅಗತ್ಯ ಅಷ್ಟಾಗಿ ಇಲ್ಲವೆಂಬುದು ಇಂದು ಈ ಕ್ಷೇತ್ರದಲ್ಲಿ ಮೂಡಿರುವ ಭಾವನೆಯಾಗಿದೆಯಾದರೂ ಅನುವಾದದ ಸಮರ್ಪಕತೆಯ ದೃಷ್ಟಿಯಿಂದ ಕನಿಷ್ಠಪಕ್ಷ ಪೂರ್ವಸಂಪಾದಕನಾದರೂ ಇರಬೇಕು; ಅಂಥವನೊಬ್ಬನಿದ್ದಲ್ಲಿ ಭಾಷಾಂತರದ ಅನೇಕ ಅನಾಹುತಗಳನ್ನು ತಪ್ಪಿಸಬಹುದು ಎಂದು ಹೇಳಲಾಗಿದೆ.

ಒಟ್ಟಿನಲ್ಲಿ ಯಂತ್ರಾನುವಾದದ ಕ್ಷೇತ್ರ ಅನೇಕ ಸಮಸ್ಯೆಗಳಿಂದ ಇಡಿಕಿರಿದಿದೆ: ಸ್ವತಂತ್ರವಾಗಿಯೇ ಕಾರ್ಯನಿರ್ವಹಿಸಿ ಸಮರ್ಪಕವಾದ ಅನುವಾದವನ್ನು ಕೊಡುವ ದಿನಗಳು ಇನ್ನೂ ದೂರವಾಗಿಯೇ ಇವೆ.

ಲೇಖನದಾರರು

ಜೀವನ ಸಾಧನೆ–ಭಾಗ ಒಂದು

೧ ಎಚ್. ಎಲ್. ನಾಗೇಗೌಡ
ನಿವೃತ್ತ ಲೋಕ ಸೇವಾ ಆಯೋಗದ ಸದಸ್ಯರು, ಬೆಂಗಳೂರು

೨ ಜೀ. ಶಂ. ಪರಮಶಿವಯ್ಯ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೩ ಕೆ. ವಿ. ಶಂಕರಗೌಡ
ಮಾಜಿ ಶಿಕ್ಷಣ ಮಂತ್ರಿಗಳು, ಮಂಡ್ಯ

೪ ಜಿ. ವೆಂಕಟಸುಬ್ಬಯ್ಯ
ಪ್ರಧಾನ ಸಂಪಾದಕರು, ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫ ಸಿದ್ಧಯ್ಯ ಪುರಾಣಿಕ
ನಿವೃತ್ತ ಕಾರ್ಮಿಕ ಕಮಿಷನರ್, ಬೆಂಗಳೂರು

೬ ಸಿಂಪಿ ಲಿಂಗಣ್ಣ
ಪ್ರಸಿದ್ಧ ಸಾಹಿತಿ, ಚಡಚಣ, ಬಿಜಾಪುರ ಜಿಲ್ಲೆ

೭ ಹ. ಕ. ರಾಜೇಗೌಡ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೮ ಕೆ. ಆರ್. ಲಿಂಗಪ್ಪ
ಪ್ರಸಿದ್ಧ ಸಾಹಿತಿ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ

೯ ಏರ್ಯ ಲಕ್ಷ್ಮೀನಾರಾಯಣ ಆಳ್ವ
ಏರ್ಯ ಬೀಡು ಬಂಟ್ವಾಳ, ದ.ಕ. ಜಿಲ್ಲೆ

೧೦ ಎಚ್. ಟಿ. ಕೃಷ್ಣಪ್ಪ
ವಿಧಾನಸಭಾ ಸದಸ್ಯರು, ನಾಗಮಂಗಲ

೧೧ ಎಲ್. ಟಿ. ಕಾರ್ಲೆ
ರಾಜಕಾರಿಣಿ, ಬೆಂಗಳೂರು

೧೨ ಎಚ್. ಎಚ್. ಅಣ್ಣಯ್ಯಗೌಡ
ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು

೧೩ ಬಿ. ಎನ್. ರಂಗಪ್ಪ
ವೈದ್ಯರು, ತೀರ್ಥಹಳ್ಳಿ

೧೪ ಎಸ್. ಮಲ್ಲಿಕಾರ್ಜುನಯ್ಯ
ಭದ್ರಾವತಿ

೧೫ ಪಿ. ಎಸ್. ಜವರಪ್ಪಗೌಡ
ಪತ್ರಿಕೋದ್ಯಮಿ, ಮಂಡ್ಯ
೧೬ ಎಚ್. ಎಸ್. ಸಂಜರಾಜ್
ರಾಜುದ್ಯೋಗ್, ರಾಜಾಜಿನಗರ, ಬೆಂಗಳೂರು
೧೭ ಕೆಳದಿ ಗುಂಡಾಜೋಯಿಸ್
ಕೆಳದಿ, ಶಿವಮೊಗ್ಗ ಜಿಲ್ಲೆ
೧೮ ಪು. ತಿ. ನರಸಿಂಹಾಚಾರ್
ಪ್ರಸಿದ್ಧ ಕವಿಗಳು, ಮೈಸೂರು
೧೯ ಗೊರೂರು ರಾಮಸ್ವಾಮಿ ಅಯ್ಯಂಗಾರ್
ಪ್ರಸಿದ್ಧ ಬರಹಗಾರರು, ಬೆಂಗಳೂರು
೨೦ ಬಿ. ನಂಜುಂಡಪ್ಪ
ಜಮೀನುದಾರರು, ಕೋನೇಹಳ್ಳಿ, ತಿಪಟೂರು ತಾಲ್ಲೂಕು
೨೧ ಪಿ. ಆರ್. ತಿಪ್ಪೇಸ್ವಾಮಿ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೨೨ ಎಚ್. ಎಂ. ತಿಮ್ಮಶೆಟ್ಟಿಗೌಡ
ಜಮೀನುದಾರರು, ಹೆರಗನಹಳ್ಳಿ, ನಾಗಮಂಗಲ ತಾಲ್ಲೂಕು

ಕೃತಿ ಸಮೀಕ್ಷೆ–ಭಾಗ ಎರಡು

೧ ವೈ. ಸಿ. ಭಾನುಮತಿ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೨ ಹು. ಕಾ. ಜಯದೇವ್
ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತೀ, ಬೆಂಗಳೂರು
೩ ತೀ. ನಂ. ಶಂಕರನಾರಾಯಣ
ಸ್ನಾತಕೋತ್ತರ ಕೇಂದ್ರ, ಬಿ, ಆರ್. ಪ್ರಾಜೆಕ್ಟ್, ಶಿವಮೊಗ್ಗ
೪ ಟಿ. ವಿ. ಪದ್ಮಾವತಿ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೫ ಎಂ. ವಿ. ಸೀತಾರಾಮಯ್ಯ
ಪ್ರಸಿದ್ಧ ಸಾಹಿತಿಗಳು, ಬೆಂಗಳೂರು
೬ ಶ್ರೀಕಂಠಕೂಡಿಗೆ
ಸ್ನಾತಕೋತ್ತರ ಕೇಂದ್ರ, ಬಿ.ಆರ್. ಪ್ರಾಜೆಕ್ಟ್, ಶಿವಮೊಗ್ಗ
೭ ಡಿ. ಕೆ. ಈರೇಗೌಡ
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

೮ ಬಸವರಾಜ್ ನೆಲ್ಲೀಸರ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೯ ಚಂದ್ರು, ಕಾಳೇನಹಳ್ಳಿ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೦ ರಂಗಾರೆಡ್ಡಿ ಕೋಡಿರಾಂಪುರ
ಎಸ್ಸೂರಿ ಅಶ್ವತ್ಥಯ್ಯ ಕಾಲೇಜು, ಗೌರಿಬಿದನೂರು

೧೧ ಸುಶೀಲಾ ಸೊಂಡೂರು
ಸ್ನಾತಕೋತ್ತರ ಕೇಂದ್ರ, ಬಿ. ಆರ್. ಪ್ರಾಜೆಕ್ಟ್, ಶಿವಮೊಗ್ಗ

೧೨ ಸಿ. ಪಿ. ಸಿದ್ಧಾಶ್ರಮ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೩ ಸದಾಶಿವ ಎಣ್ಣೆಹೊಳೆ
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

೧೪ ಹಿ. ಶಿ. ರಾಮಚಂದ್ರೇಗೌಡ
ಕನ್ನಡ ಅಧ್ಯಯನ ಸಂಸ್ಥೆ. ಮಾನಸಗಂಗೋತ್ರಿ, ಮೈಸೂರು

೧೫ ನಂ. ತಪಸ್ವೀಕುಮಾರ್
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೬ ಸತ್ಯನಾರಾಯಣ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೭ ಜಿ. ಬ್ರಹ್ಮಪ್ಪ
ಮಹದೇಶ್ವರ ಕಾಲೇಜು, ಕೊಳ್ಳೆಗಾಲ, ಮೈಸೂರು ಜಿಲ್ಲೆ

೧೮ ಬಿ ಎ ವಿವೇಕ ರೈ
ಮಂಗಳ ಗಂಗೋತ್ರಿ, ಮಂಗಳೂರು

೧೯ ಬಿ. ಎಸ್. ಸರೋಜ
ವಾಣಿವಿಲಾಸಪುರಂ, ಮೈಸೂರು

೨೦ ಎಲ್. ಆರ್. ಹೆಗಡೆ
ಹೆಗಡೆ ಗ್ರಾಮ, ಉ. ಕ. ಜಿಲ್ಲೆ

೨೧ ಕಾಳೇಗೌಡ ನಾಗವಾರ
ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು

೨೨ ಅಂಬಳಿಕೆ ಹಿರಿಯಣ್ಣ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ. ಮೈಸೂರು

೨೩ ಪರಮೇಶ
ಮಹದೇಶ್ವರ ಕಾಲೇಜು, ಕೊಳ್ಳೆಗಾಲ, ಮೈಸೂರು ಜಿಲ್ಲೆ

೨೪ ಡಿ. ಕೆ. ರಾಜೇಂದ್ರ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೨೫ ಟಿ. ಎಸ್. ರಾಜಪ್ಪ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೨೬ ಸೋಮಶೇಖರ ಇಮ್ರಾಪುರ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

೨೭ ಸಿ. ಪಿ. ಕೃಷ್ಣಕುಮಾರ್
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೨೮ ಕೆ. ಆರ್. ಶೇಷಗಿರಿ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೨೯ ಎಚ್. ಎಂ. ನಾಗರಾಜರಾವ್
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೩೦ ಜಿ. ಎಸ್. ಭಟ್ಟ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೩೧ ಎಚ್. ಆರ್. ರಘುನಾಥ ಭಟ್
ಪ್ರಾಚ್ಯ ಇತಿಹಾಸ ವಿಭಾಗ, ಮಾನಸಗಂಗೋತ್ರಿ, ಮೈಸೂರು

೩೨ ಹ. ಕ. ರಾಜೇಗೌಡ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೩೩ ಜಿ. ಜಿ. ಮಂಜುನಾಥನ್
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೩೪ ಎನ್. ಜಿ. ಲಲಿತ
ನಂ. 2910, ಕಾಂತರಾಜಅರಸ್ ರಸ್ತೆ ಸರಸ್ವತೀಪುರಂ, ಮೈಸೂರು

೩೫ ಎಲ್. ಜಿ. ಭಟ್
ಭುವನೇಂದ್ರ ಕಾಲೇಜು, ಕಾರ್ಕಳ

ಭಾಗ : ಮೂರು

೧ ಎಚ್. ಎಂ. ನಾಗರಾಜರಾವ್
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೨ ಎಡ್ವರ್ಡ್ ನೊರೋನ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು

೩ ವಿ. ಜಿ. ಕೃಷ್ಣಮೂರ್ತಿ
೨೫, ಕೃಷ್ಣಾಲಯ, ೧೨ನೆಯ ಕ್ರಾಸು, ವಾಣಿವಿಲಾಸ ಮೊಹಲ್ಲ, ಮೈಸೂರು

೪ ಎಸ್. ಲಕ್ಷ್ಮೀನಾರಾಯಣ ಅರೋರ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೫ ಬಾ. ವೇ. ಶ್ರೀಧರ
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

೬ ಜಯಂತಿ ಬಾಯಿ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೭ ಬಿ. ಶ್ಯಾಮಸುಂದರ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೮ ಜಿ. ಶ್ರೀದೇವಿ
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

೯ ಎನ್. ಎಸ್. ಶಾರದಾ ಪ್ರಸಾದ್
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೦ ಎಚ್. ಗಣೇಶ ಐತಾಳ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೧ ಕೆ. ಜಿ. ಪ್ರಕಾಶ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೨ ಡಿ. ಎಸ್. ಜಯಪ್ಪಗೌಡ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೩ ಎಚ್. ಜೆ. ಲಕ್ಕಪ್ಪಗೌಡ
ಭಾಷಾ ಆಯೋಗ ಭಾಷಾಂತರ ನಿರ್ದೇಶನಾಲಯ, 34/3, ಹರಿರಾಂ ಕಟ್ಟಡ,
ಕೆಂಪೇಗೌಡರಸ್ತೆ, ಬೆಂಗಳೂರು

೧೪ ಕಂಠೀರಾವ್,
ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು

೧೫ ಜಿ. ಟಿ. ನಾರಾಯಣರಾವ್
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೬ ಬಾ. ರಾ. ಗೋಪಾಲ್
ಕನ್ನಡ ಅಧ್ಯಯನ ಸಂಸ್ಥೆ. ಮಾನಸಗಂಗೋತ್ರಿ, ಮೈಸೂರು

೧೭ ಎಂ. ರಾಮಕೃಷ್ಣ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು

೧೮ ಪ್ರಧಾನ್ ಗುರುದತ್ತ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೯ ತಿಪ್ಪೇಸ್ವಾಮಿ
ಹಿಂದೀ ವಿಭಾಗ, ಮಾನಸಗಂಗೋತ್ರಿ, ಮೈಸೂರು

೨೦ ಎಚ್. ಎಸ್. ಹರಿಶಂಕರ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ದಕ್ಷ ಆಡಳಿತಗಾರರಾಗಿದ್ದೂ ಸಾಹಿತ್ಯ ಕ್ಷೇತ್ರದಲ್ಲಿ ಅಜರಾಮರವಾದ ಕೀರ್ತಿಯನ್ನು ಸಂಪಾದಿಸಿರುವ ಅಪರೂಪ ವ್ಯಕ್ತಿಗಳಲ್ಲಿ ಶ್ರೀ ಎಚ್. ಎಲ್. ನಾಗೇಗೌಡರೊಬ್ಬರು. ಗ್ರಾಮೀಣ ಸಂಸ್ಕೃತಿಯ ಬಸಿರಲ್ಲಿ ಹುಟ್ಟಿ ಬೆಳೆದು, ಆಧುನಿಕ ಶಿಕ್ಷಣದಿಂದ ಪರಿಪುಷ್ಟಿಗೊಂಡು, ಸರ್ಕಾರದ ನಾನಾ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ್ದರ ಪರಿಣಾಮವಾಗಿ ಅವರ ಅನುಭವಕೋಶ ಶ್ರೀಮಂತವಾಗಿದೆ ; ಕೇವಲ ನಗರದಲ್ಲಿಯೇ ಹುಟ್ಟಿಬೆಳೆದವರಿಗೆ ದಕ್ಕದ ಅನುಭವವೈಶಾಲ್ಯ ಅವರಿಗೆ ವಶವಾಗಿದೆ. ಆ ಅನುಭವ ಭಾವದೀಪ್ತವಾಗಿ, ಪ್ರತಿಭಾಗ್ನಿಯಲ್ಲಿ ಮಿಂದಾಗ ಸಾಹಿತ್ಯ ರೂಪದಲ್ಲಿ ಮೂರ್ತಗೊಂಡು ಹೊರಹೊಮ್ಮುತ್ತದೆ. 'ನನ್ನೂರು' ಹೊತ್ತಗೆಯ ಚಿತ್ರಗಳೂ 'ದೊಡ್ಡಮನೆ' ಕಾದಂಬರಿಯ ಜೀವಂತ ದೃಶ್ಯಗಳೂ ಗ್ರಾಮೀಣ ಸಂಸ್ಕೃತಿಗೆತ್ತಿದ ಆರತಿಯಾದರೆ 'ಧರೆಗಿಳಿದ ಗಂಧರ್ವ' ಶ್ರೀಯುತರ ಕಲ್ಪನಾಪ್ರತಿಭೆಯ ಸುಂದರ ಸೃಷ್ಟಿಯಾಗಿದೆ.

'ಪ್ರವಾಸಿ ಕಂಡ ಇಂಡಿಯಾ' ನಾಗೇಗೌಡರ ವಿದ್ವತ್ತಿಗೂ, ಅವರ ಅನುಪಮ ಸಾಹಸಕ್ಕೂ ಕನ್ನಡಿಯಾಗಿದ್ದು; ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ಅದ್ವಿತೀಯ ಕೊಡುಗೆಯಾಗಿದೆ. ಸುಮಾರು ಒಂದೂವರೆ ಸಾವಿರ ವರ್ಷಗಳ ಬಹುವರ್ಣರಂಜಿತವೂ ನಾನಾವಿಧ ಮನೋಧರ್ಮ ಸಂಪ್ರದಾಯ ಸಮೃದ್ಧವೂ ಆದ ಭಾರತೀಯ ಜೀವನದ ಇತಿಹಾಸದ ಪುನಸ್ಸೃಷ್ಟಿ ಇಲ್ಲಿ ನಡೆದಿದೆ. ಇತಿಹಾಸಕಾರರಿಗೆ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೃಷಿಮಾಡುವವರಿಗೆ, ಸಮಾಜ ಹಾಗೂ ಜನಾಂಗ ವಿಜ್ಞಾನಿಗಳಿಗೆ, ಜಾನಪದ ವಿದ್ವಾಂಸರಿಗೆ, ಹಾಗೂ ಪುರಾತತ್ತ್ವ ಸಂಶೋಧಕರಿಗೆ, ಸಾಹಿತಿಗಳಿಗೆ ಇದೊಂದು ತವನಿಧಿ ರೂಪದ ಆಕರ ಗ್ರಂಥವಾಗಿದೆ. ಸೀಮಾಕೃತಿಯಂತಿರುವ ಈ ಅಮೂಲ್ಯ ಗ್ರಂಥ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ.

ಈಗ ಅಧಿಕಾರದಿಂದ ನಿವೃತ್ತರಾಗಿರುವ ಶ್ರೀ ನಾಗೇಗೌಡರು ಸಾಹಿತ್ಯೋಪಾಸನೆಯಲ್ಲಿಯೇ ಸದಾ ಪ್ರವೃತ್ತರಾಗಿ, ಸರಸ್ವತಿಯ ಕೈಂಕರ್ಯಕ್ಕಾಗಿ ತಮ್ಮ ಶಕ್ತಿಸಾಮರ್ಥ್ಯಗಳನ್ನು ನಿವೇದಿಸಿ, ಕನ್ನಡ ಸಾಹಿತ್ಯ ಕ್ಷೇತ್ರವನ್ನು ಹುಲುಸುಗೊಳಿಸಲೆಂದೂ, ಭಗವಂತ ಅವರಿಗೆ ಆಯುರಾರೋಗ್ಯಾದಿ ಭಾಗ್ಯಗಳನ್ನು ದಯಪಾಲಿಸಲೆಂದೂ ಹಾರೈಸುತ್ತೇನೆ.

ಕುವೆಂಪು